ಸಂಪುಟ ೨೫/೨೦೧೦

ಇತಿಹಾಸ ದರ್ಶನ

ರಜತ ಸಂಪುಟ









KARNATAKA ITIHASA ACADEMY
कर्नाटक इतिहास अकादमि





ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು





ಇತಿಹಾಸ ದರ್ಶನ

ಸಂಪುಟ ೨೫/೨೦೧೦

(ರಜತ ಸಂಪುಟ)

೨೦೧೦ರ ಅಕ್ಟೋಬರ್ ೧೦ ರಿಂದ ೧೨ರವರೆಗೆ ಬಾಳೆಹೊನ್ನೂರಿನಲ್ಲಿ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆಯ ಆಶ್ರಯದಲ್ಲಿ ಸಮಾವೇಶಗೊಂಡಿದ್ದ ಕರ್ನಾಟಕ ಇತಿಹಾಸ ಅಕಾದೆಮಿಯ ೨೫ನೆಯ ವಾರ್ಷಿಕ ಸಮ್ಮೇಳನದಲ್ಲಿ ಅಕಾದೆಮಿಯ ಸದಸ್ಯರು ಮಂಡಿಸಿದ ವಿದ್ವತ್ ಪ್ರಬಂಧಗಳ ಸಂಪುಟ.

ಸಂಪಾದಕರು

ಡಾ॥ ಎಂ.ಜಿ. ನಾಗರಾಜ್

ಡಾ॥ ಪಿ.ವಿ. ಕೃಷ್ಣಮೂರ್ತಿ

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು

ITIHĀSA DARŚANA

The Volume of the Scholarly papers presented and the General body Proceedings of the 23rd Annual Conference of

The Karnataka Ithihasa Academy (Regd.,)
held at Balehonnoor Srimad Rambhapuri Mahasamstana Peeta, Chikkamagalur Dt.
on 10th, 11th & 12th October 2009

Volume 25 / 2010

Pages : **504 + Lvi**

ಬೆಲೆ : ರೂ. ೪೦೦

ಪುಟಗಳು : ೫೦೪ + Lvi

Edited by : **Dr. M. G. Nagaraj**
Dr. P. V. Krishna murthy

Published by : Karnataka Itihasa Academy (Regd.)
B.M. Shri Kalabhavana premises
3rd Main, Narasimharaja Colony
Bangalore - 560 019

Price : ₹ **400/-**

ಪ್ರಬಂಧಕಾರರ ಗಮನಕ್ಕೆ

೧. ಈ ಸಂಪುಟದ ಯಾವುದೇ ಲೇಖನದಲ್ಲಿ ಮತ್ತು ಟಿಪ್ಪಣಿಗಳಲ್ಲಿ ವ್ಯಕ್ತಪಡಿಸಿರುವ **ಅಭಿಪ್ರಾಯಗಳಿಗೆ ಆಯಾ ಲೇಖಕರೇ ಹೊಣೆ.** ಅವು ಅಕಾದೆಮಿಯ ಪರವಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳಲ್ಲ.

೨. ಕರ್ನಾಟಕ ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲುವ ಬರಹಗಳಿಗೆ 'ಇತಿಹಾಸ ದರ್ಶನ' ಮೀಸಲಾಗಿದೆ.

೩. ಲೇಖನಗಳು **ಹಸ್ತಲಿಖಿತ ೧೦ ಪುಟಗಳ** ಪರಿಮಿತಿಯಲ್ಲಿ ಇರುವುದು ಸೂಕ್ತ. ಲೇಖನಗಳನ್ನು ಹಾಳೆಯ ಒಂದೇ ಮಗ್ಗುಲಲ್ಲಿ ಸ್ಫುಟವಾದ ಅಕ್ಷರಗಳಲ್ಲಿ ಬರೆದಿರಬೇಕು. ಬೆರಳಚ್ಚು ಮಾಡಿಸಿದ್ದರೆ ಅಗತ್ಯವಿರುವ ತಿದ್ದುಪಡಿ ಮಾಡಿರಬೇಕು. ಅಡಿಟಿಪ್ಪಣಿಗಳನ್ನು, **ಗ್ರಂಥಲೇಖನಾಧಾರ ವಿವರಗಳನ್ನು ಈಗಾಗಲೇ ಸಂಶೋಧನ ಬರಹಗಳಲ್ಲಿ ವ್ಯಾಪಕವಾಗಿ ಬಳಕೆಯಲ್ಲಿರುವ ಕ್ರಮದಲ್ಲಿ ನೀಡುವುದು ಉತ್ತಮ.**


೪. ಲೇಖನಕ್ಕೆ ಸಂಬಂಧಿಸಿದ ಛಾಯಾಚಿತ್ರಗಳನ್ನು ಕಳುಹಿಸುವಲ್ಲಿ, ಚಿತ್ರದ ಹಿಂಬದಿಯಲ್ಲಿ ಚಿತ್ರದ ಶೀರ್ಷಿಕೆ ಮತ್ತು ಲೇಖಕರ ಹೆಸರನ್ನು ಬರೆಯಬೇಕು. ಬರೆಯದೆ ಹೋದರೆ ಚಿತ್ರಗಳ ಪ್ರಕಟಣೆ ಕಷ್ಟವಾಗುತ್ತದೆ.

೫. ಈಗಿನ ೨೦ನೇ ಸಮ್ಮೇಳನದಲ್ಲಿ ಮಂಡಿತ ಪ್ರಬಂಧಗಳನ್ನು ಅನಿವಾರ್ಯ ಕಾರಣಗಳಿಂದ ಅಲ್ಲಿಯೇ ಕೊಡಲಾಗದಿರುವ ಅಕಾದೆಮಿಯ ಸದಸ್ಯ ಲೇಖಕರು, ದಯಮಾಡಿ **ತಮ್ಮ ಪೂರ್ಣ ವಿಳಾಸದೊಡನೆ** ಸಮ್ಮೇಳನ ಮುಗಿದ ಎರಡು ತಿಂಗಳ ಒಳಗಾಗಿ, ಸಂಪಾದಕರು, ಇತಿಹಾಸ ದರ್ಶನ, ಕರ್ನಾಟಕ ಇತಿಹಾಸ ಅಕಾದೆಮಿ, ಬಿ.ಎಂ.ಶ್ರೀ. ಕಲಾಭವನ ಆವರಣ, ೩ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು-೫೬೦ ೦೧೯, ಈ ವಿಳಾಸಕ್ಕೆ ಕಳುಹಿಸಬೇಕಾಗಿ ಕೋರಿದೆ.

೬ ಪ್ರಬಂಧದ ಲೇಖನದ ನಕಲು ಅಥವಾ ಜೆರಾಕ್ಸ್ ಪ್ರತಿಯ ಬದಲು ಲೇಖನದ ಪ್ರತಿಯನ್ನೆ ದುವಿಟ್ಟು ಕಳುಹಿಸಿ. ಹಾಗೆಯೇ ಲೇಖನಗಳಲ್ಲಿ **ಲೇಖಕರು ತಮ್ಮ ಈಚಿನ ಸರಿಯಾದ ವಿಳಾಸವನ್ನು ದಾಖಲಿಸಲು ದಯವಿಟ್ಟು ಮರೆಯಬಾರದೆಂದು ಪ್ರಾರ್ಥಿಸಿದೆ.**

೭. ಸಮ್ಮೇಳನದಲ್ಲಿ ಮಂಡಿಸಿದ ಲೇಖನಗಳನ್ನು ಬೇರೆಡೆ ಪ್ರಕಟ ಮಾಡಿದ್ದರೆ ಅಥವಾ ಬೇರೆಡೆ ಪ್ರಕಟನೆಗೆ ಕಳುಹಿಸಿದ್ದರೆ ದಯವಿಟ್ಟು ತಿಳಿಸಬೇಕೆಂದು ವಿನಂತಿ. ಮಂಡಿತ ಪ್ರಬಂಧಗಳು ಮೊದಲಿಗೆ ಅಕಾದೆಮಿಗೆ ಮೀಸಲು ಕಾಣಿಕೆ ಅಲ್ಲವೆ !

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨



ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನ ಮಹಾಸಂಸ್ಥಾನ ಪೀಠ

ಬಾಳೇಹೊನ್ನೂರು–೫೭೭ ೧೧೨ ಚಿಕ್ಕಮಗಳೂರು ಜಿಲ್ಲೆ

ಶ್ರೀಮದ್ ರಂಭಾಪುರಿ ವೀರಸಿಂಹಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು
ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು

ದಿನಾಂಕ : ೨೦೧೦

ಶುಭಾಶೀರ್ವಾದ ಸಂದೇಶ

ವಾಸ್ತವ್ಯ : ಬಾಳೆಹೊನ್ನೂರು

ಜೀವನದ ಉತ್ಕರ್ಷತೆಗೆ ಸಾಹಿತ್ಯ ಮತ್ತು ಸಂಸ್ಕೃತಿ ಅಗತ್ಯ. ಸಾಹಿತ್ಯವು ಮಾನವ ಸಮಾಜಕ್ಕೆ ಆತ್ಮ. ಜನಜೀವನದ ಉಸಿರು. ಜನಾಂಗದ ಅನುಭವಸಾರ. ಅಖಂಡ ಪ್ರಪಂಚಕ್ಕೆ ಶುದ್ಧ ಮಾನವೀಯ ದೀಕ್ಷೆ ಕೊಡುವುದು ಸಾಹಿತ್ಯದ ಮೂಲ ಗುರಿ. ಮಾನವೀಯತೆಯಿಂದ ದೇವತ್ವದ ಕಡೆಗೆ ಕರೆದೊಯ್ಯುವ ಮಾರ್ಗವೇ ಸಂಸ್ಕೃತಿ. ಮಾನವೀಯತೆಯನ್ನು ವಿಸ್ತರಿಸಿ ಜೀವಿತದ ಕುಂದು ಕೊರತೆಗಳನ್ನು ಕಳೆದು ಬದುಕನ್ನು ಶುದ್ಧಗೊಳಿಸಿ ಉದಾತ್ತಗೊಳಿಸುವುದೇ ಸಾಹಿತ್ಯ ಸಂಸ್ಕೃತಿಯ ಮುಖ್ಯ ಉದ್ದೇಶವಾಗಿದೆ.

ಇಡೀ ಮಾನವ ಕುಲಕೋಟಿಗೆ ಅನುಕಂಪ ಮತ್ತು ಪ್ರೀತಿ ತೋರಿಸುವುದೇ ನಿಜವಾದ ಧರ್ಮ. ನಿಜವಾದ ಧರ್ಮ ಎಲ್ಲರನ್ನು ಒಂದುಗೂಡಿಸುತ್ತದೆ. ಧರ್ಮದ ರಹಸ್ಯ ಇರುವುದು ತತ್ವಗಳಲ್ಲಿ ಅಲ್ಲ. ಆಚರಣೆಯಲ್ಲಿ ಇದೆ ಎಂಬುದನ್ನು ಯಾರೂ ಮರೆಯಬಾರದು. ಬುದ್ಧಿಯನ್ನು ಹಸನುಗೊಳಿಸಿ ಮನಸ್ಸನ್ನು ಶುದ್ಧಗೊಳಿಸಿ ಆತ್ಮವನ್ನು ವಿಕಾಸಗೊಳಿಸುವುದೇ ಧರ್ಮದ ಧ್ಯೇಯವಾಗಿದೆ. ಧರ್ಮ ಮತ್ತು ಧರ್ಮಾಚರಣೆಯಿಂದ ಸುಖ, ಶಾಂತಿ ಮತ್ತು ಸಂಪತ್ತು ಪ್ರಾಪ್ತಿ. ಧರ್ಮವಿಲ್ಲದ ಮನುಷ್ಯ ಚುಕ್ಕಾಣಿಯಿಲ್ಲದ ಹಡಗಿನಂತೆ ಎಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿಯಲ್ಲಿ ನಿರೂಪಿಸಿದ್ದಾರೆ. ಸಿರಿಸಂಪದ, ವಿದ್ಯೆಬುದ್ಧಿ, ಸ್ಥಾನಮಾನ ಗಳಿಸುವುದರಿಂದ ಬದುಕು ಸಮೃದ್ಧಗೊಳ್ಳಲು ಸಾಧ್ಯವಾಗುವುದಿಲ್ಲ. ಅದರೊಂದಿಗೆ ಮಾನವೀಯ ಆದರ್ಶ ಮೌಲ್ಯಗಳನ್ನು ಉಳಿಸಿ ಬೆಳೆಸಿಕೊಂಡು ಬಂದಾಗ ಮಾತ್ರ ಜೀವನ ಸಾರ್ಥಕಗೊಳ್ಳುವುದು.

ಬೆಳಕು ಬದುಕಿನ ಅವಿಭಾಜ್ಯ ಅಂಗ. ಬೆಳಕೆಂದರೆ ಅರಿವು; ಉಳಿವು. ಬೆಳಕೆಂದರೆ ಜೀವಂತಿಕೆ. ಬೆಳಕಿದ್ದರೆ ಯಾವ ಅಂಜಿಕೆ ಇಲ್ಲವೇ ಇಲ್ಲ. ಸುಖದುಃಖಗಳು ಬೆಳಕು ಕತ್ತಲೆ ಇದ್ದಂತೆ. ಯಾವುದೂ ಶಾಶ್ವತವಲ್ಲ. ಹೃದಯವಂತಿಕೆ ಇಲ್ಲದಿರುವಾಗ ಬುದ್ಧಿವಂತಿಕೆ ಎಷ್ಟೇ ಇದ್ದರೂ ಪ್ರಯೋಜನವಿಲ್ಲ. ಬುದ್ಧಿ ಸಂಸ್ಕೃತಿಗಿಂತ ಹೃದಯ ಸಂಸ್ಕೃತಿ ಅತ್ಯಂತ ಶ್ರೇಷ್ಠ. ಬುದ್ಧಿ ಮೆದುಳಿನ ಕೆಲಸವಾದರೆ ಭಾವನೆಗಳು ಹೃದಯದ ಸಂಕೇತ. ಬುದ್ಧಿ ಭಾವನೆಗಳೆರಡೂ ವಿಕಾಸಗೊಂಡರೆ ಬದುಕು ಸಾರ್ಥಕ. ನೀರಿಲ್ಲದ ನದಿ, ಸ್ನೇಹ ವಿಶ್ವಾಸವಿಲ್ಲದ ಬಂಧು ಬಳಗ, ಹಣ್ಣಿಲ್ಲದ ಮರ ವ್ಯರ್ಥವಾದಂತೆ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಗುರಿ ಮತ್ತು ಗುರು ಇಲ್ಲದಿದ್ದರೆ ಜೀವನ ವ್ಯರ್ಥ.

ಕರ್ನಾಟಕ ಇತಿಹಾಸ ಅಕಾದೆಮಿಯ ೨೩ನೆಯ ವಾರ್ಷಿಕ ಸಮ್ಮೇಳನ ಕಳೆದ ವರುಷ ಅಕ್ಟೋಬರ್ ೧೦, ೧೧ ಮತ್ತು ೧೨ ರಂದು ಬಾಳೆಹೊನ್ನೂರು ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನ ಮಹಾಸಂಸ್ಥಾನ ಪೀಠದ ಆಶ್ರಯದಲ್ಲಿ ಜರುಗಿತ್ತು. ಈ ವರುಷ ೨೪ನೆಯ ವಾರ್ಷಿಕ ಸಮ್ಮೇಳನವು ಆದಿಚುಂಚನಗಿರಿಯಲ್ಲಿ ನಡೆಯಲಿರುವುದು ಸನ್ನಿಧಿಗೆ ಪರಮ ಸಂತಸ ಉಂಟುಮಾಡಿದೆ. ಇತಿಹಾಸದ ಅರಿವು ಪ್ರಜ್ಞೆ ಭವಿಷ್ಯತ್ತಿನ ಜನಾಂಗಕ್ಕೆ ಅವಶ್ಯಕ. ಇತಿಹಾಸದ ಪ್ರಜ್ಞೆ ಇಲ್ಲದಿದ್ದರೆ ಭವಿಷ್ಯವನ್ನು ಕಟ್ಟಲು ಸಾಧ್ಯವಾಗುವುದಿಲ್ಲ. ಇತಿಹಾಸದ ತಜ್ಞರು ಬೆಳೆಯುವ ಯುವ ಜನಾಂಗಕ್ಕೆ ಅರಿವು ಉಂಟು ಮಾಡುವ ಅಗತ್ಯವಿದೆ. ಈ ದಿಶೆಯಲ್ಲಿ ಕರ್ನಾಟಕ ಇತಿಹಾಸ ಅಕಾದೆಮಿ (ರಿ) ಸಂಸ್ಥೆ ಉತ್ತಮವಾದ ಕಾರ್ಯ ಮಾಡುತ್ತ ಮುನ್ನಡೆದಿದೆ.

"ಇತಿಹಾಸ ದರ್ಶನ" ಪ್ರಕಟಣೆಗಾಗಿ ಪ್ರತಿ ವರುಷ ೨೫೦೦೦/– (ಇಪ್ಪತ್ತೈದು ಸಾವಿರ) ರೂಪಾಯಿಗಳನ್ನು ಆಶೀರ್ವದಿಸುತ್ತಾ ಬಂದಿದೆ. ಈ ವರ್ಷವೂ ಸಹ ಬಾಳೆಹೊನ್ನೂರು ಧರ್ಮಪೀಠದಿಂದ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಆಶೀರ್ವದಿಸಿ ಕಳಿಸಲಾಗಿದೆ. ಇತಿಹಾಸ ದರ್ಶನಕ್ಕಾಗಿ ಶ್ರಮಿಸಿದ ಸಂಪಾದಕರಿಗೂ ಮತ್ತು ಸಂಪಾದಕ ಮಂಡಳಿಗೂ ಶುಭ ಹಾರೈಕೆಗಳು. ಪರಮದಯಾಳು ಪಾರ್ವತಿಪರಮೇಶ್ವರರು ಮತ್ತು ಶ್ರೀ ಜಗದ್ಗುರು ರೇಣುಕಾಚಾರ್ಯರು ಕನಾಟಕ ಇತಿಹಾಸ ಅಕಾದೆಮಿ ಸಂಸ್ಥೆಯ ಅಧ್ಯಕ್ಷರನ್ನು ಮೊದಲ್ಗೊಂಡು ಸಕಲ ಸದಸ್ಯರಿಗೂ ಮಂಗಲ ಪರಂಪರೆಯನ್ನು ಅನುಗ್ರಹಿಸಲಿ.

ಇತ್ಯನಂತಶಿವಾಶಿಷಃ

'ಇತಿಹಾಸದರ್ಶನ' ಪ್ರಕಟಣೆಗೆ ಆಶೀರ್ವದಿತ ಪ್ರಪ್ರಥಮ
ನಿರಂತರ ವಾರ್ಷಿಕ ನಿಧಿ ಕೊಡುಗೆ ರೂ. ೨೫,೦೦೦

★ **ಪ್ರತಿ ವಾರ್ಷಿಕನಿಧಿ ಕೊಡುಗೆ ಆರಂಭಿಸಿದ ವರ್ಷ : ೨೦೦೫** ★

ಮಾನವ ಧರ್ಮಕ್ಕೆ ಜಯವಾಗಲಿ ।
ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ॥

॥ ಶ್ರೀ ಜಗದ್ಗುರು ರೇಣುಕಾಚಾರ್ಯಃ ಪ್ರಸೀಧತು ॥

ಸಾಹಿತ್ಯ–ಸಂಸ್ಕೃತಿ ಸಂವರ್ಧಿಸಲಿ ।
ಶಾಂತಿ–ಸಮೃದ್ಧಿ ಸರ್ವರಿಗಾಗಲಿ ॥



ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನ ಮಹಾಸಂಸ್ಥಾನ ಪೀಠ

ಬಾಳೇಹೊನ್ನೂರು–೫೭೭ ೧೧೨ ಚಿಕ್ಕಮಗಳೂರು ಜಿಲ್ಲೆ

ಶ್ರೀಮದ್ ರಂಭಾಪುರಿ ವೀರಸಿಂಹಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು
ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು

ದಿನಾಂಕ : ೨೦೧೦

ಶುಭಾಶೀರ್ವಾದ ಸಂದೇಶ

ವಾಸ್ತವ್ಯ : ಬಾಳೆಹೊನ್ನೂರು

ಜೀವನದ ಉತ್ಕರ್ಷತೆಗೆ ಸಾಹಿತ್ಯ ಮತ್ತು ಸಂಸ್ಕೃತಿ ಅಗತ್ಯ. ಸಾಹಿತ್ಯವು ಮಾನವ ಸಮಾಜಕ್ಕೆ ಆತ್ಮ. ಜನಜೀವನದ ಉಸಿರು. ಜನಾಂಗದ ಅನುಭವಸಾರ. ಅಖಂಡ ಪ್ರಪಂಚಕ್ಕೆ ಶುದ್ಧ ಮಾನವೀಯ ದೀಕ್ಷೆ ಕೊಡುವುದು ಸಾಹಿತ್ಯದ ಮೂಲ ಗುರಿ. ಮಾನವೀಯತೆಯಿಂದ ದೇವತ್ವದ ಕಡೆಗೆ ಕರೆದೊಯ್ಯುವ ಮಾರ್ಗವೇ ಸಂಸ್ಕೃತಿ. ಮಾನವೀಯತೆಯನ್ನು ವಿಸ್ತರಿಸಿ ಜೀವಿತದ ಕುಂದು ಕೊರತೆಗಳನ್ನು ಕಳೆದು ಬದುಕನ್ನು ಶುದ್ಧಗೊಳಿಸಿ ಉದಾತ್ತಗೊಳಿಸುವುದೇ ಸಾಹಿತ್ಯ ಸಂಸ್ಕೃತಿಯ ಮುಖ್ಯ ಉದ್ದೇಶವಾಗಿದೆ.

ಇಡೀ ಮಾನವ ಕುಲಕೋಟಿಗೆ ಅನುಕಂಪ ಮತ್ತು ಪ್ರೀತಿ ತೋರಿಸುವುದೇ ನಿಜವಾದ ಧರ್ಮ. ನಿಜವಾದ ಧರ್ಮ ಎಲ್ಲರನ್ನು ಒಂದುಗೂಡಿಸುತ್ತದೆ. ಧರ್ಮದ ರಹಸ್ಯ ಇರುವುದು ತತ್ವಗಳಲ್ಲಿ ಅಲ್ಲ. ಆಚರಣೆಯಲ್ಲಿ ಇದೆ ಎಂಬುದನ್ನು ಯಾರೂ ಮರೆಯಬಾರದು. ಬುದ್ಧಿಯನ್ನು ಹಸನಗೊಳಿಸಿ ಮನಸ್ಸನ್ನು ಶುದ್ಧಗೊಳಿಸಿ ಆತ್ಮವನ್ನು ವಿಕಾಸಗೊಳಿಸುವುದೇ ಧರ್ಮದ ಧ್ಯೇಯವಾಗಿದೆ. ಧರ್ಮ ಮತ್ತು ಧರ್ಮಾಚರಣೆಯಿಂದ ಸುಖ, ಶಾಂತಿ ಮತ್ತು ಸಂಪತ್ತು ಪ್ರಾಪ್ತಿ. ಧರ್ಮವಿಲ್ಲದ ಮನುಷ್ಯ ಚುಕ್ಕಾಣಿಯಿಲ್ಲದ ಹಡಗಿನಂತೆ ಎಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿಯಲ್ಲಿ ನಿರೂಪಿಸಿದ್ದಾರೆ. ಸಿರಿಸಂಪದ, ವಿದ್ಯೆಬುದ್ಧಿ, ಸ್ಥಾನಮಾನ ಗಳಿಸುವುದರಿಂದ ಬದುಕು ಸಮೃದ್ಧಗೊಳ್ಳಲು ಸಾಧ್ಯವಾಗುವುದಿಲ್ಲ. ಅದರೊಂದಿಗೆ ಮಾನವೀಯ ಆದರ್ಶ ಮೌಲ್ಯಗಳನ್ನು ಉಳಿಸಿ ಬೆಳೆಸಿಕೊಂಡು ಬಂದಾಗ ಮಾತ್ರ ಜೀವನ ಸಾರ್ಥಕಗೊಳ್ಳುವುದು.

ಬೆಳಕು ಬದುಕಿನ ಅವಿಭಾಜ್ಯ ಅಂಗ. ಬೆಳಕೆಂದರೆ ಅರಿವು; ಉಳಿವು. ಬೆಳಕೆಂದರೆ ಜೀವಂತಿಕೆ. ಬೆಳಕಿದ್ದರೆ ಯಾವ ಅಂಜಿಕೆ ಇಲ್ಲವೇ ಇಲ್ಲ. ಸುಖದು:ಖಗಳು ಬೆಳಕು ಕತ್ತಲೆ ಇದ್ದಂತೆ. ಯಾವುದೂ ಶಾಶ್ವತವಲ್ಲ. ಹೃದಯವಂತಿಕೆ ಇಲ್ಲದಿರುವಾಗ ಬುದ್ಧಿವಂತಿಕೆ ಎಷ್ಟೇ ಇದ್ದರೂ ಪ್ರಯೋಜನವಿಲ್ಲ. ಬುದ್ಧಿ ಸಂಸ್ಕೃತಿಗಿಂತ ಹೃದಯ ಸಂಸ್ಕೃತಿ ಅತ್ಯಂತ ಶ್ರೇಷ್ಠ. ಬುದ್ಧಿ ಮೆದುಳಿನ ಕೆಲಸವಾದರೆ ಭಾವನೆಗಳು ಹೃದಯದ ಸಂಕೇತ. ಬುದ್ಧಿ ಭಾವನೆಗಳೆರಡೂ ವಿಕಾಸಗೊಂಡರೆ ಬದುಕು ಸಾರ್ಥಕ. ನೀರಿಲ್ಲದ ನದಿ, ಸ್ನೇಹ ವಿಶ್ವಾಸವಿಲ್ಲದ ಬಂಧು ಬಳಗ, ಹಣ್ಣಿಲ್ಲದ ಮರ ವ್ಯರ್ಥವಾದಂತೆ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಗುರಿ ಮತ್ತು ಗುರು ಇಲ್ಲದಿದ್ದರೆ ಜೀವನ ವ್ಯರ್ಥ.

ಕರ್ನಾಟಕ ಇತಿಹಾಸ ಅಕಾದೆಮಿಯ 23ನೆಯ ವಾರ್ಷಿಕ ಸಮ್ಮೇಳನ ಕಳೆದ ವರುಷ ಅಕ್ಟೋಬರ್ 10,11 ಮತ್ತು 12 ರಂದು ಬಾಳೆಹೊನ್ನೂರು ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನ ಮಹಾಸಂಸ್ಥಾನ ಪೀಠದ ಆಶ್ರಯದಲ್ಲಿ ಜರುಗಿತ್ತು. ಈ ವರುಷ 24ನೆಯ ವಾರ್ಷಿಕ ಸಮ್ಮೇಳನವು ಆದಿಚುಂಚನಗಿರಿಯಲ್ಲಿ ನಡೆಯಲಿರುವುದು ಸನ್ನಿಧಿಗೆ ಪರಮ ಸಂತಸ ಉಂಟು ಮಾಡಿದೆ. ಇತಿಹಾಸದ ಅರಿವು ಪ್ರಜ್ಞೆ ಭವಿಷ್ಯತ್ತಿನ ಜನಾಂಗಕ್ಕೆ ಅವಶ್ಯಕ. ಇತಿಹಾಸದ ಪ್ರಜ್ಞೆ ಇಲ್ಲದಿದ್ದರೆ ಭವಿಷ್ಯವನ್ನು ಕಟ್ಟಲು ಸಾಧ್ಯವಾಗುವುದಿಲ್ಲ. ಇತಿಹಾಸದ ತಜ್ಞರು ಬೆಳೆಯುವ ಯುವ ಜನಾಂಗಕ್ಕೆ ಅರಿವು ಉಂಟು ಮಾಡುವ ಅಗತ್ಯವಿದೆ. ಈ ದಿಶೆಯಲ್ಲಿ ಕರ್ನಾಟಕ ಇತಿಹಾಸ ಅಕಾದೆಮಿ (ರಿ) ಸಂಸ್ಥೆ ಉತ್ತಮವಾದ ಕಾರ್ಯ ಮಾಡುತ್ತ ಮುನ್ನಡೆದಿದೆ.

"ಇತಿಹಾಸ ದರ್ಶನ" ಪ್ರಕಟಣೆಗಾಗಿ ಪ್ರತಿ ವರುಷ 25000/– (ಇಪ್ಪತ್ತೈದು ಸಾವಿರ) ರೂಪಾಯಿಗಳನ್ನು ಆಶೀರ್ವದಿಸುತ್ತಾ ಬಂದಿದೆ. ಈ ವರ್ಷವೂ ಸಹ ಬಾಳೆಹೊನ್ನೂರು ಧರ್ಮ ಪೀಠದಿಂದ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಆಶೀರ್ವದಿಸಿ ಕಳಿಸಲಾಗಿದೆ. ಇತಿಹಾಸ ದರ್ಶನಕ್ಕಾಗಿ ಶ್ರಮಿಸಿದ ಸಂಪಾದಕರಿಗೂ ಮತ್ತು ಸಂಪಾದಕ ಮಂಡಳಿಗೂ ಶುಭ ಹಾರೈಕೆಗಳು.

ಪರಮದಯಾಳು ಪಾರ್ವತಿಪರಮೇಶ್ವರರು ಮತ್ತು ಶ್ರೀ ಜಗದ್ಗುರು ರೇಣುಕಾಚಾರ್ಯರು ಕರ್ನಾಟಕ ಇತಿಹಾಸ ಅಕಾದೆಮಿ ಸಂಸ್ಥೆಯ ಅಧ್ಯಕ್ಷರನ್ನು ಮೊದಲ್ಗೊಂಡು ಸಕಲ ಸದಸ್ಯರಿಗೂ ಮಂಗಲ ಪರಂಪರೆಯನ್ನು ಅನುಗ್ರಹಿಸಲಿ.

ಬಾಳೆಹೊನ್ನೂರು
ದಿನಾಂಕ 23–8–2010.

ಬಾಳೆಹೊನ್ನೂರು
577 112

ಶುಭಾಶೀರ್ವಾದಗಳೊಂದಿಗೆ,

ಶ್ರೀ ರಂಭಾಪುರೀ ಜಗದ್ಗುರುಗಳು.

ಕರ್ನಾಟಕ ಇತಿಹಾಸ ಅಕಾದೆಮಿಯ
ಇಪ್ಪತ್ತಮೂರನೆಯ ವಾರ್ಷಿಕ ಸಮ್ಮೇಳನದ
ಪ್ರಾಯೋಜಕರು



ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ
ಜ॥ ಪ್ರಸನ್ನ ರೇಣುಕ ವೀರಸೋಮೇಶ್ವರ
ರಾಜದೇಶಿಕೇಂದ್ರ ಶಿವಚಾರ್ಯ ಮಹಾಸ್ವಾಮೀಜಿಯವರು



ಪ್ರೊ|| ಕೆ. ಅಭಿಶಂಕರ್ ಅವರ ಸ್ಮರಣಾರ್ಥ ಸಮ್ಮೇಳನಾಧ್ಯಕ್ಷರಿಗೆ ನೀಡುವ ನೆನಪಿನ ಶಿಲ್ಪ ಕಾಣಿಕೆ. ಪ್ರತಿವರ್ಷ ಇತಿಹಾಸ ಅಕಾದೆಮಿಯ ವಾರ್ಷಿಕ ಸಮ್ಮೇಳನಾಧ್ಯಕ್ಷರಿಗೆ ಈ ಕಾಣಿಕೆ ನೀಡಲು ಶ್ರೀಮತಿ ವಿಶಾಲಾಕ್ಷಿ ಆಭಿಶಂಕರ್ ಅವರು ಪುದುವಟ್ಟು ಇಟ್ಟಿದ್ದಾರೆ. (ಶಿಲ್ಪ ಕಲಾವಿದೆ : ಶ್ರೀಮತಿ ಕನಕಮೂರ್ತಿ)

ಬಾಳೆಹೊನ್ನೂರು ಶ್ರೀಮದ್ರಂಭಾಪುರಿ ಮಹಾಸಂಸ್ಥಾನ ಪೀಠದಲ್ಲಿ ನಡೆದ
ಇಪ್ಪತ್ತಮೂರನೆಯ ವಾರ್ಷಿಕ ಸಮ್ಮೇಳನದ ಅಧ್ಯಕ್ಷರು



ಡಾ. ಎಂ.ಜಿ. ನಾಗರಾಜ್

ಶ್ರೀಮದ್‌ರಂಭಾಪುರಿ ಪೀಠದಲ್ಲಿ ಕರ್ನಾಟಕ ಇತಿಹಾಸ ಅಕಾದೆಮಿಯ ೨೩ನೆಯ ವಾರ್ಷಿಕ ಸಮ್ಮೇಳನದ ಉದ್ಘಾಟನೆಯನ್ನು ಚಿಕ್ಕಮಗಳೂರು ಉಸ್ತುವಾರಿ ಸಚಿವ ಮಾನ್ಯ ಶ್ರೀ ಕೆ.ಎಸ್. ಈಶ್ವರಪ್ಪನವರು ನೇರವೇರಿಸುತ್ತಿರುವುದು. ಚಿತ್ರದಲ್ಲಿ ಮಹಾಸನ್ನಿಧಿಯವರು, ಸಂಸದ ಶ್ರೀ ಡಿ.ಬಿ. ಚಂದ್ರೇಗೌಡ, ಶಾಸಕ ಶ್ರೀ ಸಿ.ಟಿ. ರವಿ, ಡಾ. ಸೂರ್ಯನಾಥ ಕಾಮತ್, ಡಾ. ಷ,ಬ್ರ. ಕೊಟ್ಟೂರು ಬಸವೇಶ್ವರ ಶಿವಾಚಾರ್ಯ ಜುಕ್ತಿ ಹಿರೇಮಠ ಮುಂತಾದವರು.





ಸಮ್ಮೇಳನಾಧ್ಯಕ್ಷ ಡಾ. ಎಂ.ಜಿ. ನಾಗರಾಜ್ ಅವರಿಗೆ ಕ.ಇ. ಅಕಾದೆಮಿಯ ನೆನಪಿನ ಶಿಲ್ಪ ಕಾಣಿಕೆ.

ಲೋಕಸಭಾ ಸದಸ್ಯ ಶ್ರೀ ಡಿ.ಬಿ. ಚಂದ್ರೇಗೌಡ ಅವರು ಇತಿಹಾಸ ದರ್ಶನದ ೨೪ನೇ ವಾರ್ಷಿಕ ಸಂಪುಟವನ್ನು ಬಿಡುಗಡೆ ಮಾಡುತ್ತಿರುವುದು.







ಡಾ. ಎಂ.ಜಿ. ನಾಗರಾಜ್ ಅವರಿಂದ ಸಮ್ಮೇಳನಾಧ್ಯಕ್ಷ ಭಾಷಣ

ಡಾ. ಬಾ.ರಾ. ಗೋಪಾಲ್ ಶಾಸನ ಪ್ರಶಸ್ತಿಯನ್ನು ಮಹಾಸನ್ನಿಧಿಯವರು ಶ್ರೀಮತಿ ಹನುಮಾಕ್ಷಿ ಗೋಗಿಯವರಿಗೆ ಪ್ರದಾನ ಮಾಡುತ್ತಿರುವುದು





ಮಾನ್ಯ ಸಚಿವ ಶ್ರೀ ಕೆ.ಎಸ್. ಈಶ್ವರಪ್ಪನವರು ಸಚಿವರಿಂದ ಭಾಷಣ ಮತ್ತು ಸಚಿವರಿಗೆ ಮಹಾಸನ್ನಿಧಿಯವರಿಂದ ಆಶೀರ್ವಾದ ಸನ್ಮಾನ





ಸಂಸದ ಶ್ರೀ ಡಿ.ಬಿ. ಚಂದ್ರೇಗೌಡರಿಂದ ಭಾಷಣ ಮತ್ತು ಮಹಾಸನ್ನಿಧಿಯವರಿಂದ ಆಶೀರ್ವಾದ ಸನ್ಮಾನ

ಶ್ರೀಮದ್ರಂಭಾಪುರಿ ಮಹಾಸನ್ನಿಧಿಯವರಿಂದ ಆಶೀರ್ವಾದ ಸನ್ಮಾನ



ದಂಪತಿ ಸಹಿತ ಸಮ್ಮೇಳನಾಧ್ಯಕ್ಷರಿಗೆ



ಅಕಾದೆಮಿ ಅಧ್ಯಕ್ಷ ಡಾ. ಸೂರ್ಯನಾಥ ಕಾಮತ್ ಅವರಿಗೆ



ಪ್ರಧಾನ ಕಾರ್ಯದರ್ಶಿ ಡಾ. ಎಚ್.ಎಸ್. ಗೋಪಾಲರಾವ್



ಕೋಶಾಧ್ಯಕ್ಷ ಶ್ರೀ ಎಂ.ಬಿ. ಪಾಟೀಲ್ ಅವರಿಗೆ



ಕಾರ್ಯದರ್ಶಿ ಡಾ. ಪಿ.ವಿ. ಕೃಷ್ಣಮೂರ್ತಿ ಅವರಿಗೆ



ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಾದ ಶ್ರೀ ಆರ್
ನಾರಾಯಣಸ್ವಾಮಿ ಅವರಿಗೆ



ಸಮಾರಂಭದ ಸಮಾರೋಪ ಭಾಷಣ ಮಾಡಿದ ಡಾ. ಸಂಗಮೇಶ ಸವದತ್ತಿ ಮಠ ಅವರಿಗೆ ಮಹಾ ಸನ್ನಿಧಿಯವರಿಂದ ಆಶೀವಾದ ಸನ್ಮಾನ



ಸಮಾರೋಪ ಸಮಾರಂಭದಲ್ಲಿ ಮಹಾಸನ್ನಿಧಿಯವರ ಆಶೀರ್ವಚನ

ಸಮ್ಮೇಳನದ ವಿಚಾರಗೋಷ್ಠಿಯಲ್ಲಿ ಪ್ರಬಂಧ ಮಂಡಿಸಿದ ಅಕಾದೆಮಿಯ ಮಾನ್ಯ ಸದಸ್ಯರು



೧



೨




೩

ಇತಿಹಾಸ ಪರಂಪರೆ ಉಳಿಸಿ ಕಾರ್ಯಕ್ರಮದ ಚಿತ್ರಗಳು













ಬೆಂಗಳೂರು ನಗರ ಜಿಲ್ಲಾ ಘಟಕವು ವಿದ್ಯಾರ್ಥಿಗಳಿಗೆ ಏರ್ಪಡಿಸಿದ ಪ್ರಬಂಧ ಸ್ಪರ್ಧೆಯ ಚಿತ್ರಗಳು





ಅಧ್ಯಕ್ಷರ ನುಡಿ

ಕರ್ನಾಟಕ ಇತಿಹಾಸ ಅಕಾದೆಮಿಗೆ ಈಗ ೨೪ ವರ್ಷ ಮುಗಿದು ಅದು ೨೫ನೆಯ ವರ್ಷಕ್ಕೆ ಕಾಲಿಡುತ್ತಿದೆ. ಅಖಿಲ ಕರ್ನಾಟಕ ಮಟ್ಟದಲ್ಲಿ ಇತಿಹಾಸ ಸಂಶೋಧಕರಿಗೆ ಒಂದು ವೇದಿಕೆ ಸೃಷ್ಟಿಸಿ ತರುಣ ಸಂಶೋಧಕರಿಗೂ ಅವಕಾಶ ದೊರೆಯುವಂತೆ ಮಾಡಲು ಅಕಾದೆಮಿ ಸ್ಥಾಪಿಸಿದೆವು. ದಿನಾಂಕ : ೨೮-೬-೧೯೮೬ರಲ್ಲಿ ಬೆಂಗಳೂರಿನ ಮಿಥಿಕ್ ಸೊಸೈಟಿಯಲ್ಲಿ ನಡೆದ ೧೭ ಜನ ಉತ್ಸಾಹಿಗಳ ಸಭೆಯಲ್ಲಿ ಈ ನಿರ್ಣಯ ಕೈಗೊಂಡು ಸದಸ್ಯರನ್ನು ನೋಂದಾಯಿಸಲಾಯಿತು. ಅಕಾದೆಮಿಯ ನಿಬಂಧನೆಗಳನ್ನು ರೂಪಿಸಿ ಒಂದು ತಾತ್ಕಾಲಿಕ ಕಾರ್ಯಸಮಿತಿ ರಚಿಸಲಾಯಿತು. ಈ ನಿಬಂಧನೆಗಳನ್ನು ತಾತ್ಕಾಲಿಕ ಕಾರ್ಯಸಮಿತಿ ೨೬-೭-೧೯೮೬ರಲ್ಲಿ ಮಂಜೂರು ಮಾಡಿತು. ತಮ್ಮ ಮನೆಯಲ್ಲೇ ಅಕಾದೆಮಿಯ ಕಾರ್ಯಾಲಯವನ್ನು ತಾತ್ಪೂರ್ತಿಕವಾಗಿ ಇಡಲು ಒಪ್ಪಿದ (ಈಗ ಡಾ|| ಅ.ಲ. ನರಸಿಂಹನ್ ಅಕಾದೆಮಿಯ ಲಾಂಛನವನ್ನೂ ತಯಾರಿಸಿಕೊಟ್ಟರು. ಗಂಗ ಅರಸರ ಲಾಂಛನ ಆನೆಯನ್ನು ಪ್ರಧಾನವಾಗಿ ಇಟ್ಟು ಲಾಂಛನವನ್ನು ರೂಪಿಸಲಾಗಿತ್ತು. ಅಲ್ಲದೆ **ಇತಿಹಾಸ ದರ್ಶನ** ನಿಯತಕಾಲಿಕವನ್ನೂ ಪ್ರಕಟಿಸಲು ನಿರ್ಣಯಿಸಲಾಯಿತು.

ಎಲ್ಲ ನೋಂದಾಯಿತ ಸದಸ್ಯರನ್ನು ಆಮಂತ್ರಿಸಿ ೨೩-೧೧-೮೬ರಂದು ಹೊಸ ಕಾರ್ಯಸಮಿತಿಯನ್ನು ಆಯ್ಕೆ ಮಾಡಲಾಯಿತು. ಕಾಲಾಂತರದಲ್ಲಿ ಅಕಾದೆಮಿಯನ್ನು ನೊಂದಾಯಿಸಲಾಯಿತು. (ರಿಜಿಸ್ಟ್ರೇಶನ್) ಡಾ|| ಜಿ.ಎಸ್. ದೀಕ್ಷಿತ್ ಅಧ್ಯಕ್ಷರಾಗಿ, ಡಾ|| ಕೆ.ಆರ್. ಬಸವರಾಜ್ ಮತ್ತು ಡಾ|| ಎಂ.ಜಿ. ನಾಗರಾಜ್ ಉಪಾಧ್ಯಕ್ಷರಾಗಿ, ಲಕ್ಷ್ಮಣ್ ತೆಲಗಾವಿ ಪ್ರಧಾನ ಕಾರ್ಯದರ್ಶಿಯಾಗಿ, ಡಾ|| ಎಚ್.ಎಸ್. ಗೋಪಾಲ್‌ರಾವ್ ಮತ್ತು ಪ್ರೊ|| ಆರ್. ಪರಿಮಳ ಕಾರ್ಯದರ್ಶಿಗಳಾಗಿ ಹಾಗೂ ಕೆ.ಆರ್. ಗಣೇಶ ಕೋಶಾಧಿಕಾರಿಯಾಗಿ ಆಯ್ಕೆಯಾದರು. ಪ್ರಥಮ ಸಮ್ಮೇಳನ ೧೯೮೭ರಲ್ಲಿ ಬೆಂಗಳೂರಿನಲ್ಲಿ ಆಗಿ ಮುಂದೆ ೨೪ ಸಮ್ಮೇಳನಗಳು ಕರ್ನಾಟಕದ ನಾನಾ ಭಾಗಗಳಲ್ಲಿ ಆದ ವಿವರಗಳನ್ನು ಇದೇ ಸಂಪುಟದಲ್ಲಿ ಬೇರೆಡೆ ಕೊಟ್ಟಿದೆ. ನಾಡಿನಾದ್ಯಂತ ಈಗ ೧೫೩೬ ಆಜೀವ ಸದಸ್ಯರೂ, ೫೧ ಸಂಸ್ಥಾ ಸದಸ್ಯರೂ ಇದ್ದಾರೆ. ಇತಿಹಾಸದ ಜೊತೆ ಕನ್ನಡ ಭಾಷೆಯ ಅಧ್ಯಾಪಕರು ಹೆಚ್ಚು ಸದಸ್ಯತ್ವ ಹೊಂದಿದ್ದಾರೆ.

ಪದವಿಪೂರ್ವ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ಕರ್ನಾಟಕ ಇತಿಹಾಸದ ಬಗ್ಗೆ ಸತತ ೧೬ ವರ್ಷ ರಾಜ್ಯದ ಆರು ಕೇಂದ್ರಗಳಲ್ಲಿ ನಡೆಸಿದ್ದು ಒಂದು ದಾಖಲೆ. ಒಂದು ವರ್ಷ ಆರು ಕೇಂದ್ರಗಳಲ್ಲಿ ೭೦೦೦ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. **ಐತಿಹಾಸಿಕ ಪರಂಪರೆ ಉಳಿಸಿ** ಕಾರ್ಯಕ್ರಮ ವ್ಯಾಪಕವಾಗಿ ನಡೆದಿದೆ. ಈ ಕಾರ್ಯಕ್ರಮ ಅನೇಕ ಸ್ಮಾರಕಗಳ ರಕ್ಷಣೆ, ಅಭಿವೃದ್ಧಿಗಳಿಗೆ ಪ್ರೇರಣೆ ನೀಡಿದೆ.

ಮೊದಲ ಹತ್ತು ವರ್ಷ ಅಕಾದೆಮಿಯ ಅಧ್ಯಕ್ಷರಾಗಿ ಪ್ರೊ|| ಜಿ.ಎಸ್. ದೀಕ್ಷಿತರು ಸಂಸ್ಥೆಗೆ ಅಪೂರ್ವ ಮಾರ್ಗದರ್ಶನ ನೀಡಿದರು. ಆರಂಭದ ದಿನಗಳಲ್ಲಿ ಮಿಥಿಕ್ ಸೊಸೈಟಿ ಹಾಗೂ ಕರ್ನಾಟಕ ಗ್ಯಾಸೆಟಿಯರ್ ಇಲಾಖೆಗಳು ಅಕಾದೆಮಿಗೆ ಅತ್ಯವಶ್ಯವಾದ ಬೆಂಬಲ ನೀಡಿದವು. ಮುಂದೆ ಬೆಂಗಳೂರಿನ ಗೋಖಲೆ ಸಾರ್ವಜನಿಕ ಸಂಸ್ಥೆ, ಈಗ ಬಿ.ಎಂ.ಶ್ರೀ. ಪ್ರತಿಷ್ಠಾನಗಳು ಇದೇ ರೀತಿ ಬೆಂಬಲ ನೀಡುತ್ತಿವೆ.

ಅಕಾದೆಮಿಯಲ್ಲಿ ನೂರಾರು ತರುಣ ವಿದ್ವಾಂಸರು ಸದಸ್ಯರಾಗಿ ಸಂಸ್ಥೆಯನ್ನು ಉತ್ಸಾಹದಿಂದ ಮುಂದುವರಿಸುತ್ತಿದ್ದಾರೆ. ಶಿಕ್ಷಣ ಸಂಸ್ಥೆಗಳು (ರಾಯ್ಚೂರಿನ ತಾರಾನಾಥ ಶಿಕ್ಷಣಸಂಸ್ಥೆ ಮತ್ತು ಕರ್ನಾಟಕ ವಿಶ್ವವಿದ್ಯಾಲಯ ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯ) ಮತ್ತು ಎಲ್ಲಕ್ಕೂ ಹೆಚ್ಚಾಗಿ ಮಠಮಾನ್ಯಗಳು ಸಮ್ಮೇಳನಗಳ ಆತಿಥೇಯರಾಗಿ ವಿದ್ವಾಂಸರ ಈ ಮೇಳಕ್ಕೆ ವಿಶೇಷ ಬೆಂಬಲ ನೀಡಿದ್ದಾರೆ. ಸರಕಾರದ ನೆರವಿಲ್ಲದೆ, ಖಾಸಗಿ ಸಂಸ್ಥೆಗಳೂ ಸಹಾಯ ನೀಡುತ್ತ ಬಂದಿದ್ದು ಅಕಾದೆಮಿ ರಜತ ವರ್ಷದೆಡೆ ಹೆಜ್ಜೆ ಹಾಕುತ್ತಿದೆ. ಕರ್ನಾಟಕ ಇತಿಹಾಸದ ಅಧ್ಯಯನ, ಸಂಶೋಧನೆಗಳು ಇನ್ನೂ ವಿಸ್ತೃತವಾಗಿ ವ್ಯಾಪಕವಾಗಿ ನಡೆಯಲು ರಜತ ಮಹೋತ್ಸವದ ಕಾಲಕ್ಕೆ ನಿರ್ಣಯಗಳಾಗಲಿ ಎಂದು ಹಾರೈಸುತ್ತೇನೆ.

೦೮-೧೧-೨೦೧೦

ಸೂರ್ಯನಾಥ ಕಾಮತ್

ಖ್ಯಾತ ಪುರಾತತ್ವಜ್ಞರಾದ, ಇಂದಿಗೂ ಪುರಾತತ್ವ, ಇತಿಹಾಸ, ಸಂಶೋಧನೆಯಲ್ಲಿ ಸಕ್ರಿಯಶೀಲರಾದ ಡಾ. ಎಂ.ಎಸ್. ಕೃಷ್ಣಮೂರ್ತಿ ಅವರದಾಗಿದೆ. ತಂತ್ರಜ್ಞಾನ ಕ್ಷೇತ್ರದ ವೃತ್ತಿಯಲ್ಲಿ ಪರಿಣತರಾಗಿ, ಶಾಸನ ಶಾಸ್ತ್ರದ ಲಿಪಿವಿಜ್ಞಾನದಲ್ಲೂ ದೀರ್ಘಕಾಲ ಸೇವೆ ಸಲ್ಲಿಸುತ್ತ ಬಂದಿರುವ ಡಾ. ಪಿ.ವಿ. ಕೃಷ್ಣಮೂರ್ತಿ ಅವರು ಈ ಬಾರಿ ಡಾ. ಬಾ.ರಾ. ಗೋಪಾಲ್ ಶಾಸನ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಈರ್ವ ಮಹನೀಯರಿಗೂ ಹಾರ್ದಿಕ ಅಭಿನಂದನೆಗಳು.

ಕಳೆದ ವರ್ಷ ಶ್ರೀ ಮದ್ರಂಭಾಪುರಿ ಜ॥ ಪೀಠದ ಶ್ರೀ ವೀರಶೈವ ಸದ್ಬೋಧನಾ ಸಂಸ್ಥೆಯ ಆಶ್ರಯದಲ್ಲಿ ನಡೆದ ಅಕಾದೆಮಿಯ ೨೩ನೆಯ ವಾರ್ಷಿಕ ಸಮ್ಮೇಳನದಲ್ಲಿ ೨೦೦೯ರ ಅಕ್ಟೋಬರ್ ೧೧ ರಿಂದ ೧೨ ರವರೆಗೆ ಮಂಡನೆಯಾದ ಪ್ರಬಂಧಗಳ ಪೈಕಿ (೯೯+೨) ಪ್ರಬಂಧಗಳನ್ನು ಸದ್ಯ **ಇತಿಹಾಸ ದರ್ಶನದ ರಜತ** ಸಂಪುಟವಾದ ೨೫ನೇ ಸಂಪುಟದಲ್ಲಿ ಪ್ರಕಟಿಸಲಾಗಿದೆ. ಸಂಪುಟಕ್ಕೆ ಬಂದ ಮಂಡಿತ ಪ್ರಬಂಧಗಳ ಸಂಖ್ಯೆಯೂ ಹೆಚ್ಚಾಗುತ್ತಿರುವುದು ನಮ್ಮ ಪ್ರೀತಿಯ ಅಕಾದೆಮಿಯ ಸದಸ್ಯರ ಸಂಶೋಧನ ಕ್ರಿಯಾಶೀಲತೆಯ ಕುರುಹಾಗಿದೆ. ಈ ಸಂಖ್ಯಾವಸರದಲ್ಲಿ ವಿಳಂಬವಾಗಿ ಅನೇಕ ಪ್ರಬಂಧಗಳು ಬಂದರೂ ನಿಷ್ಠೆಯಿಂದ ಸಂಪಾದನ ಕಾರ್ಯದಲ್ಲಿ ತೊಡಗಿದರೂ ಕೈಲ ಮಟ್ಟಿಗೆ ಅಚ್ಚಿನ ದೋಷಗಳೂ ನುಸುಳಿರಬಹುದು. ಅದನ್ನು ಒಳಗು ಮಾಡಿಕೊಳ್ಳಬೇಕೆಂದು ವಿನಂತಿ. ಕೆಲವು ಮಾನ್ಯ ಸದಸ್ಯರು ವಿಳಾಸಗಳನ್ನು ನೀಡಿಲ್ಲವಾಗಿ, ಸಮಯಾಭಾವದಿಂದ ಅವನ್ನೆಲ್ಲ ಹುಡುಕಿ ಹಾಕುವುದು ಸಾಧ್ಯವಾಗದೆ, ನಮೂದಿಸಲಾಗಿಲ್ಲ. ಮಾನ್ಯ ಸದಸ್ಯರು ಲೇಖನದಲ್ಲಿಯ ತಮ್ಮ ಹೆಸರು ಮತ್ತು ವಿಳಾಸವನ್ನು ದಯವಿಟ್ಟು ತಪ್ಪದೆ ಸ್ಪಷ್ಟವಾಗಿ ನಮೂದಿಸಬೇಕೆಂದು ಪ್ರಾರ್ಥನೆ.

'ಇತಿಹಾಸ ದರ್ಶನ'ದ ಮುದ್ರಣಕ್ಕೆ ಕಳೆದ ೨೦೦೫ನೇ ಸಾಲಿನಿಂದ ೨೫ ಸಾವಿರ ರೂ.ಗಳ ನಿಧಿ ನೆರವನ್ನು ಅದರ ಸಾಂಸ್ಕೃತಿಕ ಹೆಚ್ಚಳಿಕೆಗೆ ಆಶೀರ್ವದಿಸುತ್ತಿರುವ ಶ್ರೀ ಮದ್ರಂಭಾಪುರಿ ಜ॥ ಮಹಾಸನ್ನಿಧಿಯವರಿಗೆ ಭಕ್ತಿಪೂರ್ವಕ ಪ್ರಣಾಮಗಳು. ರಾಜ್ಯ ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ನಿರ್ದೇಶಕರಾದ ಡಾ. ಆರ್. ಗೋಪಾಲ್ ಅವರು ಇಲಾಖೆಯ ವತಿಯಿಂದ 'ಇತಿಹಾಸ ಪರಂಪರೆ ಉಳಿಸಿ' ಕಾರ್ಯಕ್ರಮ ಹಾಗೂ 'ಇತಿಹಾಸ ದರ್ಶನ' ಸಂಪುಟದ ಪ್ರಕಟನೆಗೆ ಇಲಾಖಾ ಕೊಡುಗೆಯ ನೀಡುತ್ತಿರುವುದಕ್ಕೆ ನಾವು ಆಭಾರಿ.

ಈವರೆಗೆ ನಡೆದು ಬಂದಿರುವ ನಮ್ಮ 'ಇತಿಹಾಸ ದರ್ಶನ'ದ ಸಂಪಾದನ ಕಾರ್ಯದಲ್ಲಿ ಸಹಕಾರ ನೀಡಿರುವ ಅಕಾದೆಮಿಯ ಅಧ್ಯಕ್ಷರಾಗಿ ಕಾರ್ಯಕಾರಿ ಸಮಿತಿ ಹಾಗೂ ಸರ್ವ ಸದಸ್ಯರಿಗೂ ನಮ್ಮ ಕೃತಜ್ಞತೆಗಳು. ಸದ್ಯದ ಸಂಪುಟದ ಕೆಲವು ಪ್ರಬಂಧಗಳನ್ನು ಪರಿಶೀಲಿಸಿ, ಕರಡು ತಿದ್ದುಕೊಟ್ಟು, ಸಂಪಾದನ ಕಾರ್ಯದಲ್ಲಿ ನೆರವಾದ 'ಕರ್ನಾಟಕ ಗ್ಯಾಸೆಟಿಯರ್'ನ ಸಂಪಾದಕರಲ್ಲೊಬ್ಬರಾದ ಶ್ರೀ ಎಸ್. ರಾಜೇಂದ್ರಪ್ಪ ಅವರಿಗೆ ನಮ್ಮ ಅಭಿಮಾನಗಳಿವೆ.

ರಜತ ಸಂಪುಟದವರೆಗೆ ಸಂಪಾದನ ಕಾರ್ಯದಲ್ಲಿ ನಮ್ಮ ಸೇವೆಯನ್ನು ಸಲ್ಲಿಸಲು ಅವಕಾಶ ಮಾಡಿದ ಅಕಾದೆಮಿಯ ಕಾರ್ಯಕಾರಿ ಸಮಿತಿ ಹಾಗೂ ಸರ್ವ ಸದಸ್ಯರಿಗೆಲ್ಲ ನಾವು ಆಭಾರಿಯಾಗಿದ್ದೇವೆ.

ಸಂಪುಟವನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಲಕ್ಷ್ಮೀ ಮುದ್ರಣಾಲಯದ ಶ್ರೀ ಮಂಜುನಾಥ್, ಅಕ್ಷರ ಜೋಡಣೆ, ವಿನ್ಯಾಸ ಮಾಡಿದ ಸಿಬ್ಬಂದಿ ವರ್ಗದ ಪಿ.ಎಸ್. ಸುಬ್ರಮಣಿ, ಎ.ಎಸ್. ಪ್ರಸನ್ನಕುಮಾರ್ ಹಾಗು ಮುದ್ರಣ ಕಾರ್ಯದ ಸಿಬ್ಬಂದಿ ವರ್ಗದವರಿಗೆ ನಮ್ಮ ಅಭಿಮಾನಗಳಿವೆ.

೧೯೮೬ ರಿಂದಲೂ 'ಇತಿಹಾಸ ದರ್ಶನ'ದ ಮುದ್ರಣ ಕಾರ್ಯದಲ್ಲಿ ನೆರವಾಗಿ ಬಂದಿರುವ ಶ್ರೀ ಅಶೋಕ್‌ಕುಮಾರ್ ಅವರಿಗೂ ನಮ್ಮ ಕೃತಜ್ಞತೆಗಳಿವೆ.

ಬೆಂಗಳೂರು : ೧೧.೧೧.೨೦೧೦;
ಶ್ರೀ ವಿಕೃತಿ ಸಂವತ್ಸರ
ಕಾರ್ತಿಕ ಶುದ್ಧ ಪಂಚಮಿ ಗುರುವಾರ

ಡಾ॥ ಎಂ.ಜಿ. ನಾಗರಾಜ್
ಡಾ॥ ಪಿ.ವಿ. ಕೃಷ್ಣಮೂರ್ತಿ

ಕರ್ನಾಟಕ ಇತಿಹಾಸ ಅಕಾದೆಮಿ (ರಿ.)

ಬೆಂಗಳೂರು

ಕಾರ್ಯಕಾರಿ ಸಮಿತಿ

(೦೯.೦೯.೨೦೦೮ರಲ್ಲಿ ಆಯ್ಕೆಯಾದವರು)

ಅಧ್ಯಕ್ಷರು

ಡಾ॥ ಸೂರ್ಯನಾಥ ಕಾಮತ್

ಉಪಾಧ್ಯಕ್ಷರು

ಡಾ॥ ಬಿ. ರಾಜಶೇಖರಪ್ಪ

ಡಾ॥ ದೇವರಕೊಂಡಾರೆಡ್ಡಿ

ಪ್ರಧಾನ ಕಾರ್ಯದರ್ಶಿ

ಡಾ॥ ಎಚ್.ಎಸ್. ಗೋಪಾಲರಾವ್

ಕಾರ್ಯದರ್ಶಿಗಳು

ಡಾ॥ ಪಿ.ವಿ. ಕೃಷ್ಣಮೂರ್ತಿ

ಡಾ॥ ಕೆ.ಬಿ. ಸುದರ್ಶನ್

ಕೋಶಾಧ್ಯಕ್ಷರು

ಶ್ರೀ ಎಂ.ಬಿ. ಪಾಟೀಲ್, ಬೆಂಗಳೂರು

ಸದಸ್ಯರು

ಡಾ॥ ಹೆಚ್. ಚಂದ್ರಶೇಖರ್, ಬೆಂಗಳೂರು

ಡಾ॥ ಎಸ್.ಕೆ. ಜೋಶಿ, ಧಾರವಾಡ

ಡಾ॥ ಶ್ರೀಮತಿ ಸ್ಮಿತಾ ಸುರೇಬಾನಕರ, ಬೆಳಗಾವಿ

ಡಾ॥ ಡಿ.ಎನ್. ಯೋಗೀಶ್ವರಪ್ಪ, ತುಮಕೂರು

ಡಾ॥ ಪಿ.ಎನ್. ನರಸಿಂಹಮೂರ್ತಿ, ಮಂಡ್ಯ

ಶ್ರೀ ಕುಂ.ಬಾ. ಸದಾಶಿವಪ್ಪ, ಹರಪನಹಳ್ಳಿ

ಡಾ. ಎಚ್.ಎಸ್. ಉಷಾರಾಣಿ, ಮೈಸೂರು

ಡಾ॥ ಎಫ್.ಟಿ. ಹಳ್ಳಿಕೇರಿ, ಹಂಪಿ

ಶ್ರೀ ಶಿವಪ್ಪ ಎನ್. ನೀರಲಗಿ, ಬಾಗಲಕೋಟೆ

ಡಾ॥ ಶೀಲಾಕಾಂತ ಪತ್ತಾರ್, ಬಾದಾಮಿ

ಶ್ರೀ ಜಯದೇವಪ್ಪ ಜೈನಕೇರಿ, ಶಿವಮೊಗ್ಗ

ಡಾ॥ ಎಸ್.ಎಂ. ನಾಗಭೂಷಣ, ಧಾರವಾಡ

ಡಾ॥ ವೈ. ಉಮಾನಾಥಶೆಣೈ, ಉಜಿರೆ

ಡಾ॥ ಬೆಂ.ಶಾ. ಶ್ಯಾಮಲಾರತ್ನಕುಮಾರಿ, ಬೆಂಗಳೂರು

ಡಾ॥ ತುಳಸಿರಾಮನಾಯಕ್, ಬೆಂಗಳೂರು

ಪರಿವಿಡಿ

✧	ಶುಭಾಶೀರ್ವಾದ ಸಂದೇಶ		
✧	ಸಮ್ಮೇಳನಾಧ್ಯಕ್ಷರು ಹಾಗೂ ಹಿಂದಿನ ಸಮ್ಮೇಳನದ ಛಾಯಾಚಿತ್ರಗಳು		
✧	ಅಕಾದೆಮಿಯ ಅಧ್ಯಕ್ಷರ ನುಡಿ		
✧	ಸಂಪಾದಕೀಯ		
✧	ಕಾರ್ಯಕಾರಿ ಸಮಿತಿ		
✧	ವಾರ್ಷಿಕ ಅಧಿವೇಶನಗಳ ಸರ್ವಾಧ್ಯಕ್ಷರು ಮತ್ತು ಡಾ. ಬಾ.ರಾ. ಗೋಪಾಲ್ ಪ್ರಶಸ್ತಿ ವಿಜೇತರು		
✧	ಅಧ್ಯಕ್ಷ ಭಾಷಣ	ಡಾ. ಎಂ.ಜಿ. ನಾಗರಾಜ್	
✧	ಡಾ. ಬಾ.ರಾ. ಗೋಪಾಲ್ ಪ್ರಶಸ್ತಿ ದತ್ತಿ ಉಪನ್ಯಾಸ	ಹನುಮಾಕ್ಷಿ ಗೋಗಿ	
೧.	ಇತಿಹಾಸ ಆರಂಭಕಾಲದ ಕ್ಯಾವಲೀನ್ ಪ್ಯೆಂಟೆಡ್ ಮಡಿಕೆ ಚೂರುಗಳು	ಡಾ. ಎಸ್.ಜಿ. ರಾಮದಾಸರೆಡ್ಡಿ	೧
೨.	ದೇವರಬೆಟ್ಟ ಗ್ರಾಮ ಪರಿಸರದ ಪ್ರಾಗ್ಯೆತಿಹಾಸಿಕ ನೆಲೆಗಳು	ಡಿ. ಸ್ಮಿತಾರೆಡ್ಡಿ	೧೨
೩.	ಪಾವಗಡದ ಬಳಿಯ ಬೃಹತ್ ಶಿಲಾಯುಗ ಸಂಸ್ಕೃತಿಯ ತಾಣ	ಪಾವಗಡ ಚೆಲುವರಾಜ್	೧೬
೪.	ಕಾರ್ಕಳದ ವೀರಪಾಂಡ್ಯದೇವನ ಎರಡು ಶಾಸನಗಳು	ಡಾ. ಪಿ.ಎನ್. ನರಸಿಂಹಮೂರ್ತಿ	೨೧
೫.	ಪಲ್ಲವ ಶ್ರೀಕಂದವರ್ಮನ ತಾಮ್ರಪಟಗಳು	ಡಾ. ಪಿ.ವಿ. ಕೃಷ್ಣಮೂರ್ತಿ	೨೬
೬.	ದಾವಣಗೆರೆ ಜಿಲ್ಲೆ ಭೀಮನೆರೆ ಗ್ರಾಮದ ಒಂದು ಹೊಸ ತಾಮ್ರ ಶಾಸನ	ಸಂತೇಬೆನ್ನೂರು ಸುಮತೀಂದ್ರನಾಡಿಗ್	೨೯
೭.	ಸಖರಾಯಪಟ್ಟಣದ ಅಪ್ರಕಟಿತ ನಿಷಧಿ ಶಾಸನ	ಡಾ. ಕೆ. ವಸಂತಲಕ್ಷ್ಮಿ	೩೩
೮.	ಲಕುಮಾಪುರ ಹಿರೇಮಠದ ಹೊಸ ತಾಮ್ರಶಾಸನ ಮತ್ತು ಅನ್ವಯಿಕ ಸಂಗತಿಗಳು	ಶಿವಯೋಗಿ ಕಂಬಾಳಿಮಠ	೩೭
೯.	ಬಾಗಲೂರಿನ ಕಾಲಜ್ಞಾನ ಶಾಸನ	ಡಾ. ಡಿ.ಎಂ. ನಾಗರಾಜು	೪೩
೧೦.	ಕಡೂರು ತಾಲ್ಲೂಕಿನ ಕೆಲವು ವಿಶಿಷ್ಟ ವೀರಗಲ್ಲುಗಳು	ಡಾ. ಎಚ್. ಜಯಮ್ಮ ಕರಿಯಣ್ಣ	೪೬
೧೧.	ವೇಮಗಲ್ಲಿನ ಸ್ಮಾರಕ ಶಿಲ್ಪಗಳು ಹಾಗೂ ಶಾಸನಗಳು	ವೇಮಗಲ್ ಮೂರ್ತಿ	೫೧
೧೨.	ಪಂಚಮಳಗಿಯ ವೀರಗಲ್ಲು ಶಾಸನಶಿಲ್ಪ	ಡಾ. ಕರೆಪ್ಪಗೌಡ ಪಿ. ಪಾಟೀಲ	೫೬
೧೩.	ಅಮೃತೂರಿನ ಅಪ್ರಕಟಿತ ತುರುಗೋಳ್ ಶಾಸನ	ರಾ. ಶಶಿಧರ್	೫೭
೧೪.	ಅರಸೀಕೆರೆ ತಾಲ್ಲೂಕಿನ ಹೊಸ ವೀರಗಲ್ಲುಗಳು	ಡಾ. ಹನುಮನಾಯಕ	೬೦
೧೫.	ರೇನಾಡು ಚೋಳರಾಜರ ಶಾಸನಗಳು	ಹಿರೇಮಠ ವೀರಭದ್ರಯ್ಯ ಚನ್ನಬಸಯ್ಯ ಸಿಂಗಟಾಲೂರ	೬೪
೧೬.	ಪಾಶ್ಚಾಪುರದ ಪಾರ್ಶ್ವನಾಥ ಶಿಲ್ಪ ಮತ್ತು ಪಾದಪೀಠ ಶಾಸನ	ಡಾ. ಅಪ್ಪಣ್ಣ ಎನ್. ಹಂಜೆ	೭೩
೧೭.	ಕಲ್ಲೂರು ಗುಡ್ಡದ ಶಾಸನ	ಬಿ.ಎಸ್. ರಾಮಭಟ್ಟ	೭೫

೧೮.	ಆಂಧ್ರ ಪ್ರದೇಶದಲ್ಲಿ ಸದಾಶಿವರಾಯನ ಶಾಸನಗಳು	ಡಾ. ಚನ್ನಕ್ಕ ಪಾವಟೆ	೭೯
೧೯.	ದೀವರ ಶಾಸನಗಳು	ಡಾ. ಜಗದೀಶ	೮೩
೨೦.	"ಚಿಮ್ಮಲಗಿಯ ವಿಶಿಷ್ಟ ಶಿಲ್ಪಗಳು"	ಶಿವಪ್ಪ ಎನ್. ನೀರಲಗಿ	೮೬
೨೧.	ಹುನಗುಂದದಲ್ಲಿ ಶೋಧಿತ ಜೈನ ವಿಗ್ರಹಗಳು	ಡಾ. ಎಸ್.ಕೆ. ಮೇಲಕಾರ ಡಾ. ಆರ್.ಎಂ. ಷಡಕ್ಷರಯ್ಯ	೮೯
೨೨.	ಮಂಡಗದ್ದೆಯ ಅಪೂರ್ವ ಹರಿಹರಪಾದ ಶಿಲ್ಪ	ಜಿ.ಕೆ. ದೇವರಾಜಸ್ವಾಮಿ	೯೩
೨೩.	ಮಹಾಕೂಟದ ಮಹಾಕೂಟೇಶ್ವರ ದೇವಾಲಯದ ಅಭಿಮನ್ಯು ವಧಾಶಿಲ್ಪ	ರಂಗನಾಥ ವೈ. ಡಾ. ಆರ್.ಎಚ್. ಕುಲಕರ್ಣಿ	೯೬
೨೪.	ತಾಯಿ – ಮಗುವಿನ ಮೂರ್ತಿಶಿಲ್ಪ	ರಘು ಆರ್.	೯೮
೨೫.	ಚಾಮುಂಡಿ ಬೆಟ್ಟದ ಅಪರೂಪದ ಸಪ್ತಮಾತೃಕಾ ಶಿಲ್ಪಗಳು	ಪ್ರೊ. ಎಂ.ವಿ. ಕೃಷ್ಣಪ್ಪ ಫಾ॥ ಎಂ. ವಿನ್ಸೆಂಟ್	೧೦೨
೨೬.	ಶೂಲ ಬ್ರಹ್ಮಯ್ಯಗಳ ವಿಗ್ರಹ : ನವಶೋಧ	ಡಾ. ಸಿ.ಯು. ಮಂಜುನಾಥ್	೧೦೫
೨೭.	ಕರ್ನಾಟಕದಲ್ಲಿ ದಂಪತಿ (ಮಿಥುನ) ಶಿಲ್ಪಗಳ ಬೆಳವಣಿಗೆ	ಡಾ. ಎಂ.ಪಿ. ಮಹದೇವಯ್ಯ ಎ. ಶ್ರೀಧರಮೂರ್ತಿ	೧೦೭
೨೮.	ಬನದ ದೇವಿ, ಬನದ ಮಹಾಮಾಯಿ ಮತ್ತು ಬನಶಂಕರಿ	ಡಾ. ಶೀಲಾಕಾಂತ ಪತ್ತಾರ	೧೧೦
೨೯.	ತ್ರಿಪುರಾಂತಕ ಶಿವ : ಕೆಲವು ವೈವಿಧ್ಯಮಯ ದೃಶ್ಯ ನಿರೂಪಣೆ	ಡಾ. ಆರ್.ಎಚ್. ಕುಲಕರ್ಣಿ	೧೧೪
೩೦.	ಹೊಯ್ಸಳರಲ್ಲಿಯ ಕಥಾನಿರೂಪಣಾ ಶಿಲ್ಪಗಳು : ಪ್ರಹ್ಲಾದ ಚರಿತೆ ಶಿಲ್ಪಗಳು	ಲೋಕೇಶ್ ಸಿ.ಇ.	೧೨೦
೩೧.	ಮುರಗೋಡದ ಪ್ರಾಚ್ಯಾವಶೇಷಗಳು	ಮಂಜುಳಾ ತಿ. ಯಲಿಗಾರ ಎಸ್.ಬಿ. ಹಿರೇಮಠ	೧೨೪
೩೨.	ಹರಪನಹಳ್ಳಿ ತಾಲ್ಲೂಕು ಅರಸಿಕೆರೆ ಗ್ರಾಮದ ಪ್ರಾಚೀನ ಪರಿಸರ ಶೋಧ	ಕುಂ.ಬಾ. ಸದಾಶಿವಪ್ಪ	೧೨೯
೩೩.	ಆಗಮಗಳು ಮತ್ತು ದೇವಾಲಯಗಳ ಪ್ರಾಚೀನತೆ	ಎಂ.ಎನ್. ಪ್ರಭಾಕರ್	೧೩೬
೩೪.	ಜಾತವೇದ ಮುನಿಗದ್ದುಗೆ : ಇದೊಂದು ಈಶ್ವರ ದೇವಾಲಯ	ಡಾ. ಹೆಚ್. ಚಂದ್ರಶೇಖರ	೧೪೦
೩೫.	ನಿಜಗಲ್ಲು ಮತ್ತು ನಿಜಗಲ್ಲು ದುರ್ಗದ ದೇವಾಲಯಗಳು	ಬಿ. ಅರುಣಕುಮಾರಿ	೧೪೭
೩೬.	ಲೋಕದೊಳಲುವಿನ 'ಪ್ರಾಚೀನ ಸಿಡಿಲೇಶ್ವರ ದೇವಾಲಯ'	ಡಾ. ಎಸ್. ಹನುಮಂತ ಜೋಯಿಸ್	೧೫೦
೩೭.	ವಾಗಟದ ವರದರಾಜಸ್ವಾಮಿ ದೇವಸ್ಥಾನದ ವಾಸ್ತುಶಿಲ್ಪ ಮತ್ತು ಶಾಸನಗಳು	ಆದಪ್ಪ ಪಾಸೋಡಿ	೧೫೨
೩೮.	ಕೊಕ್ಕನೂರಿನ ಈಶ್ವರ ದೇವಾಲಯ	ಡಾ. ರಾಕೇಶ್. ಬಿ.ಸಿ.	೧೫೯
೩೯.	ಅರಸಿಕೆರೆಯ ಈಶ್ವರ ದೇವಾಲಯ	ಡಾ. ಕೆ.ಎಸ್. ಮೋಹನ್	೧೬೩
೪೦.	ಮುದಿಗೆರೆಯ ದೇವಾಲಯಗಳು	ಡಾ. ಬಿ.ಸಿ. ಸುರೇಶ	೧೬೭
೪೧.	ಹಸರಂಬಿಯ ಕಾನನದ ಸೋಮೇಶ್ವರ ದೇವಾಲಯ	ಪ್ರೊ. ಕೆ.ಸಿ. ಮಲ್ಲಿಗವಾಡ	೧೭೧
೪೨.	ಚಿತ್ರದುರ್ಗ ಜಿಲ್ಲೆಯ ಶಾಸನೋಕ್ತ ದೇವಾಲಯಗಳು	ಡಾ. ಬಿ. ಸುರೇಶ	೧೭೬
೪೩.	ಬೊಮ್ಮರಬೆಟ್ಟು ಪರಿಸರದ ಸಾಮಾಜಿಕ ಐತಿಹಾಸಿಕ ನೆಲೆಗಳು	ಕೆ. ನಾರಾಯಣ ನಾಯಕ್	೧೮೩
೪೪.	ಚಿತ್ರದುರ್ಗದ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠಕ್ಕೆ ಉಪ್ಪಾರ ಜನಾಂಗದವರ ಕಾಣಿಕೆ	ಡಾ. ಬಿ. ರಾಜಶೇಖರಪ್ಪ	೧೯೪

೪೫.	ಕೃಷ್ಣರಾಜಪೇಟೆ ತಾಲ್ಲೂಕಿನ ಶಾಸನೋಕ್ತ ಗಾವುಂಡರ ಚಟುವಟಿಕೆಗಳು	ಡಾ. ಆರ್. ರಂಗಸ್ವಾಮಿ	೨೦೧
೪೬.	ನಾಗದೇವ : ಶಾಸನ ಚಂಪುಕವಿ	ಡಾ. ಧನವಂತ ಹಾಜವಗೋಳ	೨೦೩
೪೭.	ಅರಸಿಕೆರೆ ತಾಲ್ಲೂಕು ಶಾಸನಗಳಲ್ಲಿ ಕಂದಾಯದ ಉಗಮ ಮತ್ತು ಬೆಳವಣಿಗೆ	ಪ್ರವೀಣ್ ಜಿ.	೨೦೯
೪೮.	ಹೊಳೆನರಸೀಪುರ ತಾಲ್ಲೂಕಿನ ಶಾಸನೋಕ್ತ ಭೂಮಾಲೀಕರ ಉಗಮ ಮತ್ತು ಬೆಳವಣಿಗೆ	ಮಹೇಂದ್ರಕುಮಾರ ಕೆ.ಸಿ.	೨೧೫
೪೯.	ಕುಣಿಗಲ್ ತಾಲ್ಲೂಕಿನ ಹಾಲಗೆರೆಯ ಶಾಸನೋಕ್ತ ಸ್ಥಳಗಳು	ಡಾ. ಶೋಭಾ ಮಹೇಶ್	೨೧೯
೫೦.	ದೇವಾಲಯದ ಹೊರ ಆವರಣದ ರಚನೆಗಳು	ಡಾ. ಕೂ.ಸ. ಅಪರ್ಣ	೨೨೫
೫೧.	ಕರ್ನಾಟಕದ ದೇವಾಲಯಗಳ ಸ್ತಂಬಗಳು	ಡಾ. ವಿ. ಅನುರಾಧ	೨೩೦
೫೨.	ಹೊಳಲಿಯ ಐತಿಹಾಸಿಕ ಪ್ರಾಮುಖ್ಯತೆ	ಡಾ. ಬೆಂ.ಶಾ. ಶ್ಯಾಮಲಾ ರತ್ನಕುಮಾರಿ	೨೪೧
೫೩.	ಶಿವಗಂಗೆಯ ತೀರ್ಥೋದ್ಭವ – ಒಂದು ವೈಜ್ಞಾನಿಕ ವಿಶ್ಲೇಷಣೆ	ವೇದಾವತಿ ಎಸ್. ಬಾಲು	೨೪೪
೫೪.	ಪ್ರಾಚೀನ ಐತಿಹಾಸಿಕ ನಗರಿ ಸಾಲಗುಂದೆ	ಶಾಶ್ವತಸ್ವಾಮಿ ಮುಕ್ಕುಂದಿಮಠ	೨೪೭
೫೫.	ಪ್ರಾಚೀನ ಅಗ್ರಹಾರ ಹಾವೇರಿ	ಡಾ. ಎಸ್.ಜಿ.ಚಲವಾದಿ ಶಕುಂತಲಾ ಹ. ಭಜಂತ್ರಿ	೨೪೯
೫೬.	ಕಣಂಬಡೆ ನಾಡಿನ ಅಗ್ರಹಾರಗಳು	ಬಿ.ಆರ್. ರಾಠೋಡ ಡಾ. ಎಸ್.ಕೆ. ಮೇಲಕಾರ	೨೫೩
೫೭.	ಸುಬ್ಬರಾಯ ದಾಸರು ಮತ್ತು ಸುಬ್ರಮಣ್ಯ ಅಗ್ರಹಾರ	ಡಾ. ಬಿ.ವಿ. ಸುಧಾಮಣಿ	೨೫೫
೫೮.	ವಿಜಯನಗರ ಆಡಳಿತ ಕಾಲದಲ್ಲಿ ಮಧುವಂಕ ನಾಡು	ಸುಂಕಂ ಗೋವರ್ಧನ	೨೫೯
೫೯.	ಎಕ್ಕಟಿಗ ವೀರಪಡೆ	ಡಾ. ಎನ್.ಆರ್. ಲಲಿತಾಂಬ	೨೬೩
೬೦.	ತುಳುನಾಡಿನ ಗರಡಿ ವಿದ್ಯೆ	ಡಾ. ಇಂದಿರಾ ಹೆಗಡೆ	೨೬೮
೬೧.	ಯಲಹಂಕ ನಾಡಪ್ರಭುಗಳ ರಾಣಿಯರು	ಕನ್ಯಾಕುಮಾರ್ ಪಿ.	೨೭೭
೬೨.	ರನ್ನನ 'ಗದಾಯುದ್ಧ' ತಿದ್ದಿದ "ಕೇಶಿ" ಯಾರು ?	ಡಾ. ಮಲ್ಲಿಕಾರ್ಜುನ ಕಂಬಾರ	೨೮೩
೬೩.	ಅಲಹಾಬಾದಿನಲ್ಲಿರುವ ಕೆಳದಿ ತಿರುಮಲಭಟ್ಟನ ಗೀತಗೌರೀವರ ಹಸ್ತಪ್ರತಿ	ಕೆಳದಿ ಗುಂಡಾಜೋಯಿಸ್	೨೮೫
೬೪.	'ಗುರು ಚರಿತ್ರೆ'ಯಲ್ಲಿ ಚಾರಿತ್ರಿಕ ಅಂಶಗಳು	ಡಾ. ಜ್ಯೋತ್ಸ್ನಾ ಕಾಮತ್	೨೯೭
೬೫.	ಚಿಕ್ಕಮಗಳೂರು ಜಿಲ್ಲೆಯ ಕೆಳದಿ ಅವಶೇಷಗಳು ಮತ್ತು ಕೆಳದಿ ಭದ್ರಪ್ಪನಾಯಕನ ಕಾಲದ ನಿರೂಪ	ಡಾ. ಕೆಳದಿ ವೆಂಕಟೇಶ್‌ಜೋಯಿಸ್	೩೦೨
೬೬.	ತಗರ ಪವಾಡ ಮತ್ತು ಸಿದ್ಧಮಂಕ ಚರಿತೆ	ಅನ್ನಪೂರ್ಣ ಗೋಸ್ಬಾಳ	೩೦೭
೬೭.	ರಾಘವಾಂಕನ ವೀರೇಶ ಚರಿತ್ರೆಯಲ್ಲಿ ಸಾಂಸ್ಕೃತಿಕ ಸಂಘರ್ಷ	ಮಮತಾ ರಾಣಿ	೩೧೩
೬೮.	ರಾಯಚೂರು ಜಿಲ್ಲೆಯ ಶಾಸನ ಕವಿಗಳು ಹಾಗೂ ರೂವಾರಿಗಳು	ಡಾ. ಎಸ್.ಎಂ. ನಾಗಭೂಷಣ	೩೧೬
೬೯.	ಕರ್ನಾಟಕ ರಾಜವಂಶಗಳ ಶಿರೋನಾಮಗಳ ವ್ಯುತ್ಪತ್ತಿ	ಡಾ. ಎಸ್.ಕೆ. ಜೋಶಿ	೩೨೦
೭೦.	ನೊಳಂಬಾಧಿರಾಜ ಒಂದನೇ ಮಹೇಂದ್ರನ ನಂದಿಗದ್ಯಾಣ	ಮಂದರ್ಕೆ ನಿತ್ಯಾನಂದ ಪೈ	೩೨೮
೭೧.	ಹೊಯ್ಸಳ ವೀರ ಸೋಮೇಶ್ವರನ ಕಾಲದ ಧಾರ್ಮಿಕ ಪಂಥಗಳು	ಡಾ. ಅಣ್ಣಯ್ಯ ತೈಲೂರು	೩೩೦

೭೨. ಹೊಯ್ಸಳ ಸಮಾಜದಲ್ಲಿ ಮಾತೆಯ ಸ್ಥಾನ — ಡಾ. ಎಸ್. ಮಾಲತಿ — ೩೩೨

೭೩. ಹೊಯ್ಸಳ, ಪಾಂಡ್ಯ, ಚೋಳರ ವೈವಾಹಿಕ ಸಂಬಂಧ — ಎಸ್. ಪರಶಿವಮೂರ್ತಿ — ೩೩೫

೭೪. ಕದಂಬರ ನೀರಾವರಿ ಚೌಕಟ್ಟು — ಡಾ. ಟಿ.ವಿ. ನಾಗರಾಜ್ — ೩೩೯

೭೫. ತುಮಕೂರು ಪರಿಸರದ ಐತಿಹಾಸಿಕ ಕೆರೆಗಳು — ಶ್ರೀಧರ — ೩೪೨

೭೬. ತೊನ್ನೂರು ಕೆರೆಯ ವಿಶಿಷ್ಟ ಇತಿಹಾಸ — ಲಿಂಗರಾಜು — ೩೪೬

೭೭. ಬಸವಣ್ಣನವರು ಪವಾಡ ಪುರುಷರೇ ? — ಜಯದೇವಪ್ಪ ಜೈನಕೇರಿ — ೩೫೨

೭೮. ತೋಂಟದ ಸಿದ್ಧಲಿಂಗಯತಿಗಳ ಕೊನೆಯ ದಿನಗಳು — ಡಾ. ಡಿ.ಎನ್. ಯೋಗೀಶ್ವರಪ್ಪ — ೩೫೫

೭೯. ಶ್ರೀ ಬೂದೀಶ್ವರ ಶಿವಯೋಗಿಗಳು — ಕೆ.ಎಂ. ಗರಗ — ೩೬೨

೮೦. ಅಲಿಖಿತ ಆಕರಗಳಲ್ಲಿ ರೇವಣಸಿದ್ಧ — ಡಾ. ಎಫ್.ಟಿ. ಹಳ್ಳಿಕೇರಿ — ೩೬೬

೮೧. ಜ॥ ರೇವಣಸಿದ್ಧ ಸಂಪ್ರದಾಯ ಮತ್ತು ಶಂಕರಾಚಾರ್ಯ ಪರಂಪರೆ – ಒಂದು ವಿಶ್ಲೇಷಣೆ — ಎಂ. ಶಿವಶಂಕರಯ್ಯ — ೩೭೩

೮೨. ರಂಗಾಪುರ ಸಂಸ್ಥಾನ ಮಠಾಧೀಶ್ವರ ಮಹಾದೇವಪ್ಪಯ್ಯ ಅವರಿಗೆ ಸನ್ಮಾನಗಳು, ಪತ್ರಗಳು — ವಸುಂಧರಾ ದೇಸಾಯಿ ಮಹಾಪುರುಷ — ೩೭೯

೮೩. ಅಮರಕಲ್ಯಾಣದ ಸ್ಥಾಪಕ ದಿಗ್ಗಿ ಸಂಗಮನಾಥ — ಡಾ. ಕೆ. ರವೀಂದ್ರನಾಥ — ೩೮೩

೮೪. ದಾಸಿವಾಸದ ದೊರೆಗಳು ಮತ್ತು ರಂಭಾಪುರಿ ಸಂಸ್ಥಾನ ಮಠ ಸಂಬಂಧ — ಡಾ. ಜಿ. ನಂಜುಂಡಸ್ವಾಮಿ — ೩೮೬

೮೫. ಭಿಷ್ಟಪ್ಪಯ್ಯನವರ ಮನೆತನದ ದಾಖಲೆಗಳಲ್ಲಿ ಇನಾಂ ಕಮಿಷನರ್ ಹೆಚ್. ಬರ್ಡ್‌ವುಡ್ — ಡಾ. ಹರಿಹರ ಶ್ರೀನಿವಾಸರಾವ್ — ೩೯೦

೮೬. ಮಾಗಡಿ ತಾಲ್ಲೂಕಿನಲ್ಲಿ ಇತಿಹಾಸ ಆರಂಭ ಕಾಲದ ಎರಡು ಕುರುಹುಗಳು — ಡಾ. ಎಚ್.ಎಸ್. ಗೋಪಾಲರಾವ್ — ೩೯೫

೮೭. ದಾನಿವಾಸ ನಾಯಕರು — ಡಾ. ಎಚ್.ಎಸ್. ಉಷಾರಾಣಿ — ೩೯೮

೮೮. ಸುರಪುರ ಪ್ರದೇಶದ ಕಂದಾಯ ಪತ್ರಗಳು — ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ — ೪೦೨

೮೯. ಮುಧೋಳದ ದೇಸಾಯಿ ಮನೆತನ — ಡಾ. ಜಿ.ವ್ಹಿ. ಶಿರೂರ — ೪೦೬

೯೦. ಅಪರಿಚಿತ ಹೈದರ್ — ಡಾ. ಶ್ರೀನಿವಾಸ ಹಾವನೂರ — ೪೧೦

೯೧. ಶೃಂಗೇರಿ ಮಠ ಮತ್ತು ಕಮಿಷನರ್ ಕಬ್ಬನ್ — ಡಾ. ಎ.ಕೆ. ಶಾಸ್ತ್ರಿ — ೪೧೫

೯೨. ಮೈಸೂರು ಸಂಸ್ಥಾನದ ತಾಂತ್ರಿಕ ಅಭಿವೃದ್ಧಿಯಲ್ಲಿ ಹೆರಾಲ್ಡ್ ಡಗ್ಲಸ್ ರೈಸರ ಪಾತ್ರ — ಡಾ. ಎಸ್.ಎಲ್. ಶ್ರೀನಿವಾಸಮೂರ್ತಿ — ೪೧೯

೯೩. ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಸೇನಾನಿ ಹಾಗೂ ಸಮಾಜ ಸುಧಾರಕ ವೆಂಕಟಕೃಷ್ಣಯ್ಯ (ತಾತಯ್ಯ) — ಡಾ. ನಿರ್ಮಲ್‌ರಾಜ್ — ೪೨೨


೯೪. ಕರ್ನಾಟಕ ಏಕೀಕರಣ ಮತ್ತು ಭಾಲ್ಕಿ ಹಿರೇಮಠ — ಡಾ. ಇಂದುಮತಿ ಪಿ. ಪಾಟೀಲ — ೪೨೪





೯೫. ಸ್ವಾತಂತ್ರ್ಯ ಹೋರಾಟಗಾರ್ತಿ ಹಾಗೂ ಸಮಾಜ ಸುಧಾರಕಿ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರ ರಚನಾತ್ಮಕ ಕಾರ್ಯಗಳು — ಡಾ. ಮಹಾದೇವಿ — ೪೩೩


೯೬. ಬೆಳಗಾವಿಯ ಶೈಕ್ಷಣಿಕ ಸಂಸ್ಥೆಗಳು — ಡಾ. ಸ್ಮಿತಾ ಸುರೇಬಾನಕರ — ೪೪೩

೯೭.	ಸಹಕಾರಿ ಚಳುವಳಿಯಲ್ಲಿ ಮಹಿಳೆಯ ಪಾತ್ರ	ಪ್ರೊ. ಶಕುಂತಲಾ ಸಿಂಧೂರ	೪೪೮
೯೮.	ಸ್ವಾತಂತ್ರ್ಯ ಪೂರ್ವ ಮೈಸೂರು ಸಂಸ್ಥಾನದಲ್ಲಿ ಇಂಗ್ಲಿಷ್ ಭಾಷೆ ಮತ್ತು ಸಾಮಾಜಿಕ ಪರಿವರ್ತನೆ – ೧೮೦೦ ರಿಂದ ೧೯೪೭	ಡಾ. ಎಂ.ಎಸ್. ಅನಿತ	೪೫೪
೯೯.	ದಿನಕರ ದೇಸಾಯಿ (೧೯೦೯–೧೯೮೨) ಮತ್ತು ಅವರ ಕೃತಿ ಕಲ್ಯಾಣಿ ಚಾಲುಕ್ಯರ ಕಾಲದ ಮಹಾಮಂಡಲೇಶ್ವರರು	ಡಾ. ಬಿ. ಲೀಲಾ	೪೬೧
✧	Title of the Papers		೪೬೯
✧	ಇತಿಹಾಸ ದರ್ಶನ : ಲೇಖಕ–ಲೇಖನ ಸೂಚಿ		೪೭೩
✧	೨೦೦೯ನೇ ಸಾಲಿನ ವಾರ್ಷಿಕ ವರದಿ		೪೮೧




ಈವರೆಗೆ ಕರ್ನಾಟಕ ಇತಿಹಾಸ ಅಕಾದೆಮಿಯ ವಾರ್ಷಿಕ ಅಧಿವೇಶನಗಳ ಸರ್ವಾಧ್ಯಕ್ಷರು ಹಾಗೂ ಇತರ ವಿವರಗಳು

ಸಂಖ್ಯೆ	ದಿನಾಂಕ-ವರ್ಷ	ಸ್ಥಳ	ಆಶ್ರಯ/ಸಹಯೋಗ	ಸರ್ವಾಧ್ಯಕ್ಷರು	
೧.	೧೫-೧೭ ಮೇ ೧೯೮೭	ಬೆಂಗಳೂರು	ಕರ್ನಾಟಕ ಇತಿಹಾಸ ಅಕಾದೆಮಿ	ಡಾ|| ಎಂ. ಚಿದಾನಂದಮೂರ್ತಿ	
೨.	೨೩-೨೪ ಅಕ್ಟೋಬರ್ ೧೯೮೮	ತುಮಕೂರು	ಸಿದ್ಧಗಂಗಾಕ್ಷೇತ್ರ : ಡಾ।। ಶಿವಕುಮಾರ ಸ್ವಾಮಿಗಳು ಮತ್ತು ತುಮಕೂರು ಜಿಲ್ಲಾ ಇತಿಹಾಸ ಪರಿಷತ್ತು	ಡಾ|| ಜಿ. ಎಸ್. ಗಾಯಿ	
೩.	೧೦-೧೧ ಜೂನ್ ೧೯೮೯	ಗದಗ	ಶ್ರೀ ಮ. ನಿ. ಪ್ರ. ಜ|| ಡಾ|| ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು, ಶ್ರೀ ತೋಂಟದಾರ್ಯ ಮಠದ ವೀರಶೈವ ಅಧ್ಯಯನ ಸಂಸ್ಥೆ, ಗದಗ	ಡಾ|| ಶ್ರೀನಿವಾಸ ರಿತ್ತಿ	
೪.	೨೧-೨೨ ಜುಲೈ ೧೯೯೦	ದಾವಣಗೆರೆ	ಡಾ|| ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ, ಹಿರೇಮಠ, ದಾವಣಗೆರೆ	ಡಾ|| ಎಸ್. ಆರ್. ರಾವ್	
೫.	೧೨-೧೪ ಜುಲೈ ೧೯೯೧	ಚಿತ್ರದುರ್ಗ	ಚಿನ್ಮೂಲಾದ್ರಿ ಶ್ರೀ ಮುರುಘ ರಾಜೇಂದ್ರ ಬೃಹನ್ಮಠ, ಚಿತ್ರದುರ್ಗ	ಡಾ|| ಬಾ. ರಾ. ಗೋಪಾಲ್	
೬.	೧೧-೧೩ ಜುಲೈ ೧೯೯೨	ರಾಯಚೂರು	ಪಂಡಿತ್ ತಾರಾನಾಥ ಶಿಕ್ಷಣ ಸಂಸ್ಥೆ ರಾಯಚೂರು	ಡಾ|| ಕೆ. ವಿ. ರಮೇಶ್	
೭.	೨೩-೨೫ ಜುಲೈ ೧೯೯೩	ಮೈಸೂರು	ಸುತ್ತೂರು ಮಠದ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಜೆ. ಎಸ್. ಎಸ್. ಸಂಸ್ಥೆ, ಮೈಸೂರು	ಡಾ|| ಅ. ಸುಂದರ	
೮.	೯-೧೦ ಜುಲೈ ೧೯೯೪	ಸೊಂಡೂರು	ಶ್ರೀ ಎಂ. ವೈ. ಘೋರ್ಪಡೆ ಕರ್ನಾಟಕ ಸೇವಾ ಸಂಘ, ಸೊಂಡೂರು	ಡಾ|| ಎಂ. ಎಂ. ಕಲಬುರ್ಗಿ	

ಸಂಖ್ಯೆ	ದಿನಾಂಕ-ವರ್ಷ	ಸ್ಥಳ	ಆಶ್ರಯ/ಸಹಯೋಗ	ಸರ್ವಾಧ್ಯಕ್ಷರು	
೯.	೯-೧೧ ಸೆಪ್ಟೆಂಬರ್ ೧೯೯೫	ಬೆಳಗಾವಿ	ಶ್ರೀ ಮ. ನಿ. ಪ್ರ. ಸಿದ್ಧರಾಮ ಮಹಾಸ್ವಾಮಿಗಳು - ಶ್ರೀ ನಾಗನೂರು ರುದ್ರಾಕ್ಷಿಮಠದ ವೀರಶೈವ ಅಧ್ಯಯನ ಅಕಾದೆಮಿ, ಬೆಳಗಾವಿ	ಡಾ|| ಎ.ವಿ. ನರಸಿಂಹಮೂರ್ತಿ	
೧೦.	೭-೯ ಜೂನ್ ೧೯೯೬	ಧಾರವಾಡ	ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಶ್ರೀ ಮ. ನಿ. ಪ್ರ. ಶಿವಯೋಗಿ ಮಹಾಸ್ವಾಮಿಗಳು ಶ್ರೀ ಮುರುಘಾಮಠ ಧಾರವಾಡ	ಡಾ|| ಜಿ. ಎಸ್. ದೀಕ್ಷಿತ್	
೧೧.	೨೫-೨೭ ಅಕ್ಟೋಬರ್ ೧೯೯೭		ಸಿರಸಿ ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನ ಮಠ ಹಾಗೂ ಸರ್ವಜ್ಞೇಂದ್ರ ಸರಸ್ವತೀ ಪ್ರತಿಷ್ಠಾನ, ಸಿರಸಿ	ಪ್ರೊ|| ಕೆ. ಅಭಿಶಂಕರ್	
೧೨.	೧೪-೧೬ ನವೆಂಬರ್ ೧೯೯೮	ಬೆಂಗಳೂರು	ಕರ್ನಾಟಕ ಇತಿಹಾಸ ಅಕಾದೆಮಿ	ಡಾ|| ಎಸ್. ನಾಗರಾಜು	
೧೩.	೧೧-೧೩ ಜೂನ್ ೧೯೯೯	ಹರಪನಹಳ್ಳಿ	ಮಾನ್ಯ ಸಚಿವ ಶ್ರೀ ಡಿ. ನಾರಾಯಣದಾಸ್ ಮತ್ತು ಆಯೋಜಕರಾದ ಶ್ರೀ ಕುಂ. ಬಾ. ಸದಾಶಿವಪ್ಪ, ಸ್ವಾಗತ ಸಮಿತಿ, ಹರಪನಹಳ್ಳಿ	ಡಾ|| ಶ್ರೀನಿವಾಸ ಹಾವನೂರ	
೧೪.	೮-೧೦ ಜುಲೈ ೨೦೦೦	ಹಂಪಿ	ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ	ಶ್ರೀ ಸಿ. ಟಿ. ಎಂ. ಕೊಟ್ರಯ್ಯ	
೧೫.	೧೩-೧೫ ಅಕ್ಟೋಬರ್ ೨೦೦೧	ಉಡುಪಿ	ಪೂಜ್ಯ ಶ್ರೀ ವಿಶ್ವೇಶ್ವರ ತೀರ್ಥ ಪಾದಂಗಳು ಪೇಜಾವರ ಮಠಾಧೀಶರು, ಉಡುಪಿ	ಡಾ|| ಜ್ಯೋತ್ಸ್ನಾ ಕಾಮತ್	
೧೬.	೨೨-೨೪ ಸೆಪ್ಟೆಂಬರ್ ೨೦೦೨	ಹೊಸನಗರ	ಪೂಜ್ಯಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳು ಶ್ರೀ ರಾಮಚಂದ್ರಾಪುರ ಮಠ	ಡಾ. ಎ.ಕೆ. ಶಾಸ್ತ್ರಿ	
೧೭.	೧೩-೧೫ ಸೆಪ್ಟೆಂಬರ್ ೨೦೦೩		ಬಾದಾಮಿ ವಿಶ್ವಚೇತನ ಸಂಸ್ಥೆ ಬಾದಾಮಿ	ಡಾ. ಎಸ್. ರಾಜಶೇಖರ್	

ಸಂಖ್ಯೆ	ದಿನಾಂಕ-ವರ್ಷ	ಸ್ಥಳ	ಆಶ್ರಯ/ಸಹಯೋಗ	ಸರ್ವಾಧ್ಯಕ್ಷರು	
೧೮.	೨೪-೨೬ ಸೆಪ್ಟೆಂಬರ್ ೨೦೦೪		ಹೊನ್ನಾಳಿ, ಶ್ರೀ ಚನ್ನಪ್ಪಸ್ವಾಮಿ ವಿದ್ಯಾಪೀಠ ಚನ್ನ-ಚೇತನ ಪ್ರಕಾಶನ ಮತ್ತು ಹಿರೇಕಲ್ಮಠ	ಶ್ರೀ ಕೆಳದಿ ಗುಂಡಾ ಜೋಯಿಸ್	
೧೯.	೧೧-೧೩ ಸೆಪ್ಟೆಂಬರ್ ೨೦೦೫	ಸೇಡಂ	ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಂಸ್ಥೆ	ಡಾ. ಬಿ.ವ್ಹಿ. ಶಿರೂರ	
೨೦.	೯-೧೧ ಸೆಪ್ಟೆಂಬರ್ ೨೦೦೬	ನಂಜನಗೂಡು	ಶ್ರೀ ರಾಘವೇಂದ್ರ ಸ್ವಾಮಿಗಳ ಮಠ	ಡಾ. ಸೂರ್ಯನಾಥ ಕಾಮತ್	
೨೧.	೮-೧೦ ಸೆಪ್ಟೆಂಬರ್ ೨೦೦೭	ರಾಮನಗರ	ಹಗರಿಬೊಮ್ಮನಹಳ್ಳಿಯ ಶ್ರೀರಾಮ ಯುವಕ ಸಂಘ	ಪ್ರೊ. ಲಕ್ಷ್ಮಣ್ ತೆಲಗಾವಿ	
೨೨.	೧೮-೨೧ ಸೆಪ್ಟೆಂಬರ್ ೨೦೦೮		ಧರ್ಮಸ್ಥಳ	ಡಾ. ವಸುಂಧರಾ ಫಿಲಿಯೋಜಾ	

ಡಾ|| ಬಾ.ರಾ. ಗೋಪಾಲ್ ಶಾಸನ ದತ್ತಿ ಪ್ರಶಸ್ತಿ ಸನ್ಮಾನಿತರು

ಸಂಖ್ಯೆ	ದಿನಾಂಕ-ವರ್ಷ	ಸ್ಥಳ	ಸನ್ಮಾನಿತರು	
೧	೧೫ನೇ ವಾರ್ಷಿಕ ಸಮ್ಮೇಳನ ಅಕ್ಟೋಬರ್ ೨೦೦೧	ಉಡುಪಿ	ಡಾ. ಕೆ.ವಿ. ರಮೇಶ	
೨	೧೬ನೇ ವಾರ್ಷಿಕ ಸಮ್ಮೇಳನ ಸೆಪ್ಟಂಬರ್ ೨೦೦೨	ಹೊಸನಗರ	ಡಾ. ಶ್ರೀನಿವಾಸ ರಿತ್ತಿ	
೩	೧೭ನೇ ಸಮ್ಮೇಳನದ ಸೆಪ್ಟಂಬರ್ ೨೦೦೩	ಬಾದಾಮಿ	ಡಾ. ದೇವರಕೊಂಡಾರೆಡ್ಡಿ	
೪	೧೮ನೇ ಸಮ್ಮೇಳನ ಸೆಪ್ಟಂಬರ್ ೨೦೦೪	ಹೊನ್ನಾಳಿ	ಡಾ. ಬಿ. ರಾಜಶೇಖರಪ್ಪ	
೫	೧೯ನೇ ಸಮ್ಮೇಳನ ಸೆಪ್ಟಂಬರ್ ೨೦೦೫	ಸೇಡಂ	ಡಾ. ಕೆ.ಆರ್. ಗಣೇಶ್	
೬	೨೦ನೇ ಸಮ್ಮೇಳನ ಸೆಪ್ಟೆಂಬರ್ ೨೦೦೬	ನಂಜನಗೂಡು	ಡಾ. ಎಂ.ಜಿ. ನಾಗರಾಜ್	

ಸಂಖ್ಯೆ	ದಿನಾಂಕ-ವರ್ಷ	ಸ್ಥಳ	ಸನ್ಮಾನಿತರು	
೭	೨೧ನೇ ಸಮ್ಮೇಳನ ಸೆಪ್ಟೆಂಬರ್ ೨೦೦೭	ಹಗರಿಬೊಮ್ಮನಹಳ್ಳಿ	**ಡಾ. ಎಚ್.ಎಸ್. ಗೋಪಾಲರಾವ್**	
೮	೨೨ನೇ ಸಮ್ಮೇಳನ ಸೆಪ್ಟೆಂಬರ್ ೨೦೦೮	ಧರ್ಮಸ್ಥಳ	**ಡಾ. ಪಿ.ಎನ್. ನರಸಿಂಹಮೂರ್ತಿ**	
೮	೨೩ನೇ ಸಮ್ಮೇಳನ ಅಕ್ಟೋಬರ್ ೨೦೦೯	ಬಾಳೇಹೊನ್ನೂರು	**ಶ್ರೀಮತಿ ಹನುಮಾಕ್ಷಿ ಗೋಗಿ**	
೯	೨೪ನೇ ಸಮ್ಮೇಳನ ನವೆಂಬರ್ ೨೦೧೦	ಆದಿಚುಂಚನಗಿರಿ	**ಡಾ. ಪಿ.ವಿ. ಕೃಷ್ಣಮೂರ್ತಿ**	

ಕರ್ನಾಟಕ ಇತಿಹಾಸ ಅಕಾದೆಮಿ ೨೩ನೆಯ ವಾರ್ಷಿಕ ಸಮ್ಮೇಳನ

ಶ್ರೀ ಜ॥ ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠ, ಬಾಳೆಹೊನ್ನೂರು : ದಿನಾಂಕ ೧೦ ಅಕ್ಟೋಬರ್ ೨೦೦೯

ಸಮ್ಮೇಳನಾಧ್ಯಕ್ಷರು : ಡಾ॥ ಎಂ.ಜಿ. ನಾಗರಾಜ್*

ಅಧ್ಯಕ್ಷ ಭಾಷಣ

ಇತಿಹಾಸವು ಸ್ಥಿತಿಶೀಲ ; ಗತಿಶೀಲ : ಸಂಸ್ಕೃತಿ ಶೀಲ

ಮೊದಲಿಗೆ ಮಾನವ ಉಚ್ಚರಿಸಿದ್ದು ಧ್ವನಿ ; ಮುಂದೆ ಶಬ್ದಗಳ ಕೂಡಿಕೆಗಳಾಗಿ ಅವು ಅರ್ಥದತ್ತ ಸಾಗಿದುವು. ಇದನ್ನು ಅಕ್ಷರ ಅಥವಾ ಬರೆಹದ ರೂಪದಲ್ಲಿಟ್ಟಾಗ ಇತಿಹಾಸಕ್ಕೆ ನೆರವಾಯಿತು ಉಳಿವಿಗೆ ಕಾರಣವಾಯಿತು. 'ಅಕ್ಷರ' ಎಂದರೇನೆ ನಾಶವಿಲ್ಲದ್ದು, ಶಾಶ್ವತ ದಾಖಲೆ ಎನಿಸಿತು. ಹೀಗಾಗಿ ಅಕ್ಷರ ಪೂರ್ವ ಪ್ರಾಚೀನತೆಯನ್ನು ಪ್ರಾಗಿತಿಹಾಸ ಎನ್ನುತ್ತೇವೆ. ಅಕ್ಷರದಲ್ಲಿ ಅಥವಾ ಲಿಪಿಯಲ್ಲಿ ಬರೆದಿಟ್ಟುದುದರ ಪ್ರಾಚೀನತೆಯನ್ನು, ಇತಿಹಾಸ ಎನ್ನುತ್ತೇವೆ. ಹೀಗೆ ಅಕ್ಷರ ಪೂರ್ವ, ಅಕ್ಷರ ಕಾಲದಲ್ಲಿ ನಡೆದ ಬದುಕಿನ ಮೇಲಿನ ಪರಿಣಾಮಕಾರಕ ಘಟನೆಗಳನ್ನು ಗವಿಚಿತ್ರ, ಮುದ್ರೆ, ಪ್ರತಿಮೆ, ಶಿಲ್ಪ, ಬರೆಹ, ಶಾಸನ, ತಾಡೋಲೆ, ಕಡತ, ವಾಸ್ತು, ಹಾಡು, ಪ್ರಾಕೃತಿಕ ಸಂಕೇತಗಳು ಇತ್ಯಾದಿಗಳ ಮೂಲಕ ಪ್ರಾಗಿತಿಹಾಸ ಪುರಾತತ್ವ ಹಾಗೂ ಇತಿಹಾಸವು ಬೆಳೆದ ವ್ಯಾಖ್ಯಾನಗಳನ್ನು ಪಡೆದಿವೆ. ಅಂತೇ ನಮ್ಮ ಗುರು ಪರಂಪರೆಯಲ್ಲಿ ಮೊದಲಿಗೆ ಏಕಾಕ್ಷರ, ಏಕವಕ್ತ್ರ ಪರಿಕಲ್ಪನೆ ಇದೆ. ಆ ನಂತರ ಮೂರ್ತರೂಪ ಕಲಾತ್ಮಕವಾಗಿ ವಿಕಸಿಸಿದೆ. ಅಮೂರ್ತದಿಂದ ಮೂರ್ತತ್ವದ ಗ್ರಹಿಕೆಗೆಳಸಲಾಗಿದೆ. ಇದು ಜನಮುಖಿಯಾಗುವ ವೈಶಿಷ್ಟ್ಯ.

ಪ್ರಾಗಿತಿಹಾಸವು ಅವಶೇಷಗಳು ತೋರುವ ಕಳೆದು ಹೋದ ಬದುಕಿನ ಪರಿಣಾಮಕಾರಿ ಜೀವನ ಘಟನೆಗಳ ಪ್ರತೀಕವಾಗಿದೆ ; ಅದು ಇಂದಿಗೂ ತನ್ನ ಯಾವುದೇ ಅವಸ್ಥೆಯಲ್ಲಿದ್ದರೂ ಕಣ್ಣಿಗೆ ಗೋಚರಿಸುವ ಸಾಕ್ಷ್ಯದ ದನಿ ಆಗಿದೆ. ಅದು ಗೋಚರವಿದ್ದೂ ಅಲಿಖಿತ ದಾಖಲೆ. ಆದರೆ ಇಂದು ಅದು ಅವಶೇಷಗಳ ಆರಾಧನಾ ಪುಟವಾಗದೆ ವ್ಯಾಖ್ಯಾನ ವಿಮರ್ಶೆಗಳಿಗೆ ತೆರೆದುಕೊಂಡ ಪ್ರೇರಕ ಮಾನಸಿಕ ಚಲನಶೀಲತೆ ಪಡೆದಿದೆ. ಅಂತೇ 'ಪ್ರಾಗಿತಿಹಾಸ' ಎಂದಾಗಲೂ 'ಇತಿಹಾಸ' ಎಂಬ ಶಬ್ದ ನಂಟಾಗಿಯೆ ಬಂದಿದೆ.

ಮುದ್ರೆಗಳ ಮೇಲೆ ಲಿಪಿಯನ್ನು ಹೊಂದಿದ್ದು ಲಿಪಿ ರಹಸ್ಯವನ್ನು ಖಚಿತವಾಗಿ ಬಿಟ್ಟು ಕೊಡಬೇಕಿರುವ ಸಿಂಧೂ ಸಂಸ್ಕೃತಿಯ 'ಇತಿಹಾಸ'ವು "ಪ್ರಾಗಿತಿಹಾಸ"ದ ಆಚೆ ಬಂದರೆ, ನಮ್ಮ ಶೋಧಗಳ ಶೃಂಗವಾದೀತಲ್ಲವೆ !

ಇತಿಹಾಸವು ಗೋಚರ ಘಟನೆಗಳನ್ನು ದಾಖಲಿಸಿ ತಲೆಮಾರುಗಳಿಗೆ ಸಾಗಿಸುವ ಲಿಖಿತ ದಾಖಲೆ. ಅದು ನಿಷ್ಕ್ರಿಯ ಇಡುಗಂಟು ಅಲ್ಲ. ಸಾಂಸ್ಕೃತಿಕ ಸವಕಳಿ ಅಲ್ಲ ; ಆಗಬಾರದು. ಅದು ವರ್ತಮಾನದ ಹೂಡಿಕೆಗೆ ಅನುವಾದ ಲಿಖಿತ ನಿಧಿ. ಭವಿಷ್ಯತ್ತಿನಲ್ಲಿ ತನ್ನ ಅಗತ್ಯಕ್ಕೆ ತಕ್ಕಂತೆ ಹೂಡಿಕೆಗೆ ಜಾಗೃತಿಗೊಳಿಸುವ, ಎಚ್ಚರದ ಹೆಜ್ಜೆ ಹಾಕಿಸುವ ಪರಂಪರೆಯ ಸಾಂಸ್ಕೃತಿಕ ದೇಣಿಗೆ ; ಅಂತಹ ಇತಿಹಾಸ ಭವಿಷ್ಯತ್ತಿನ ಮಾರ್ಗದರ್ಶನ ಮಾಡುವ ಸಂಚಲನ ಪಥ ಎನ್ನಬೇಕು. ಹೀಗೆ ಸ್ಥಿತಿಶೀಲತೆ, ಗತಿಶೀಲತೆಯನ್ನು ಒಳಗೊಂಡ ಸಾಮರಸ್ಯದಲ್ಲಿ ಆಧಾರಗುಣವಿರುತ್ತದೆ, ಸಂಚಲನ ಗುಣವಿರುತ್ತದೆ, ಸಂವಹನ ಗುಣವಿರುತ್ತದೆ. ಇದನ್ನೆ ಸ್ಥಾಯಿತ್ವದ ಸ್ಥಿತಿಬಿಂಬ – ಚಲನಶೀಲತೆಯ ಗತಿಬಿಂಬಗಳ ಸಾಮರಸ್ಯ ಎನ್ನಬಹುದು.

ಚಲನಶೀಲ ಇತಿಹಾಸ ನಮ್ಮ ಬದುಕಿನ ಪರಿಣಾಮಕಾರಿ ಘಟನೆಗಳ ನಿರಂತ ದಾಖಲೆ. ಅದು ನಿಂತ ನೀರಲ್ಲ. ನಡೆದು ಹೋದ ಘಟನೆಗಳ ಶುಷ್ಕ ವರದಿ ಅಲ್ಲ. ಅದು ಸತ್ಯದ ಸಂವಹನಶೀಲ ಸಂಹಿತೆ. ಅಂಥ ಸಂವಹನ ಶೀಲತೆ ಕಾಲದ ಹಂಗನ್ನು ಮೀರುತ್ತದೆ. ಆಗ ಇತಿಹಾಸ ಶೈಥಿಲ್ಯವಾಗುವುದಿಲ್ಲ; ಶೀಲವಾಗುತ್ತದೆ ; ಸವಕಳಿ ಆಗುವುದಿಲ್ಲ. ನಿರಂತರ ಚಲಾವಣೆಯಲ್ಲಿರುತ್ತದೆ. ಸಾಂಸ್ಕೃತಿಕ ಪರಂಪರೆಯ ಸಂವೇದನೆ ಆಗುತ್ತದೆ. ಅಂದರೆ ಇತಿಹಾಸ ಚಲಿಸುತ್ತಲೇ ಹೋಗುತ್ತದೆ.

ಇತಿಹಾಸವನ್ನು ಮರೆತರೆ ಭವಿಷ್ಯತ್ತಿಗೆ ಆಧಾರ ಇರುವುದಿಲ್ಲ. ಹಿಂದಿನವರ ಒಳಿತನ್ನು ಸ್ವೀಕರಿಸಿ ನಡೆದರೆ ಮುಂದಿನಕ್ಕೆ ಬೆಂಬಲವಿರುತ್ತದೆ. ವರ್ತಮಾನವನ್ನು ಅದು ಆಕ್ರಮಣ ಮಾಡುತ್ತದೆ ಎಂಬ ಅಭಿಪ್ರಾಯ ಬೆಳೆಸಿಕೊಂಡರೆ ವರ್ತಮಾನ ಹೇಳುವ ಹೊಸತಿಗೆ ಅನುಭವದ ಆಧಾರ

* 'ಅನರ್ಘ್ಯ' ೨೨೧, ೬೮ನೇ ಕ್ರಾಸ್, ೫ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – ೧೦. ದೂರವಾಣಿ : ೨೩೧೦ ೬೦೦೪

ಆದೀತು. ವರ್ತಮಾನವೇ ಹಿಂದಿನದದರ ಮೇಲೆ ಅಥವಾ ಇತಿಹಾಸದ ಮೇಲೆ ಆಕ್ರಮಣ ಮಾಡಿದರೆ, ಮರೆಮಾಚಿದೆ ಇತಿಹಾಸವಾಸುತ್ತದೆ. ಈಗ ನಡೆದುದೇ ಸತ್ಯ ಎಂಬ ಭ್ರಮಾತ್ಮಕ ನೆಲೆಯಲ್ಲಿ ವೈಭವಗೊಳ್ಳುವಂತಾಗುತ್ತದೆ. ಈ ಮಾದರಿಯನ್ನು ಭವಿಷ್ಯತ್ತು ಅನುಸರಿಸಿದರೆ, ವರ್ತಮಾನವೂ ಗುಡಿಸಿ ಹೋಗಿ 'ಬೂದಿಹಾಳು' ಎಂಬಂತೆ 'ವರ್ತಮಾನ ಹಾಳು' ಎಂಬ ಬೇಚಾರಕ್ ಸಂಗತಿ ಆಗುತ್ತದೆ.

ಇತಿಹಾಸದ ಘಟನೆಗಳು ಪುಳಕದ ಗಿಂಡಿಗಳಂತೆಯೂ ಇರಬಹುದು. ಆದರೆ ಇತಿಹಾಸ ದಾಖಲಿಸುವುದು, ದಾಖಲಿಸಬೇಕಾದ್ದು ವಸ್ತುನಿಷ್ಠವಾಗಿಯೆ. ಹೀಗೆ ಇತಿಹಾಸ ಚಲನಶೀಲವಾದಾಗ ಜನತೆ – ಯಾವುದೇ ವರ್ಗದಿಂದ ಬಂದಿರಲಿ, ಯಾವುದೇ ವ್ಯಕ್ತಿತ್ವವಿರಲಿ, ಆಳುವವರಿರಲಿ, ಸಾಮಾನ್ಯರಿರಲಿ, ಅಸಾಮಾನ್ಯರಿರಲಿ – ಆ ಇತಿಹಾಸದಲ್ಲಿ ಸಡಗರದಿಂದ ಪಾಲ್ಗೊಳ್ಳುತ್ತದೆ. ಇತಿಹಾಸವನ್ನು ಪರಿಸರದ ಪ್ರೇರಕ ಶಕ್ತಿಯನ್ನಾಗಿಯೂ ಕಾಣಬೇಕಾದ ಅಗತ್ಯವನ್ನು ಅದು ಮಂಡಿಸುತ್ತದೆ. ಅರ್ಥಾತ್ ಸ್ಥಳೀಯ ಇತಿಹಾಸವನ್ನು ಸಾಂಸ್ಕೃತಿಕ ಜತನದಿಂದ ಕಾಪಿಟ್ಟುಕೊಳ್ಳುವ ಸಂದರ್ಭ ವಾಗುತ್ತದೆ. ವ್ಯಾಖ್ಯಾನವನ್ನು ಸ್ಥಳೀಯ ಸಾಂಸ್ಕೃತಿಕ ಘಟನೆಗಳ ಅಂಗವಾಗಿಯೂ ಮಾಡಬೇಕಾಗುತ್ತದೆ. ಆಗ ಅದು ಜನಮುಖಿಯಾಗುತ್ತದೆ.

ಇತಿಹಾಸ, ಸ್ಥಳೀಯ ಬದುಕಿನ ಎಲ್ಲ ಘಟಕಗಳನ್ನು ರಾಜಕೀಯ ಸಾಮಾಜಿಕ, ಸಾಂಸ್ಕೃತಿಕ ಆರ್ಥಿಕ ಪರಿಶೀಲನೆಗೆ ಸದ್‌ವ್ಯಾಖ್ಯಾನಕ್ಕೆ ಅಳವಡಿಸಿಕೊಳ್ಳಬೇಕು. ಆಗಲೇ ತಲಸ್ಪರ್ಶಿ ಇತಿಹಾಸದ ಬೆಳಸಿಗೆ ಕಾರಣವಾಗುತ್ತದೆ. ಹಾಗೆ ಬೆಳೆದು ಕೊಂಡು ಬಂದ ಇತಿಹಾಸ ಕೇವಲ ಸ್ಥಳಪುರಾಣವಾಗ ಬಾರದು. ರಾಜಭೋಗ್ಯಮಾತ್ರವಾಗಿರಬಾರದು. ಇತಿಹಾಸವು ಜನ ಬದುಕಿನ ಅವಿಭಾಜ್ಯ ಅಂಗವಾಗಬೇಕು. ಆಗ ಇತಿಹಾಸ ಕೇವಲ ರಾಜರ ರಾಜಕೀಯ ಇತಿಹಾಸವಾಗುವುದು ತಪ್ಪುತ್ತದೆ. ಬದುಕಿನ ಸಮಗ್ರ ಇತಿಹಾಸವಾದಾಗಲೇ ಅದು ಮಾನವ ಇತಿಹಾಸದ ಅರಿವಿಗೆ ಜಾಗೃತಪಥವಾಗುತ್ತದೆ. ಜನಜೀವನ, ಸಾಹಿತ್ಯ, ಕಲೆ, ವಿಜ್ಞಾನ, ಆಧ್ಯಾತ್ಮ, ಸಿದ್ಧಾಂತ, ವೃತ್ತಿ ಯಾವುದೇ ಇರಲಿ ಎಲ್ಲದರಿಂದ ಮೂಡಿ ಬಂದ ಪರಂಪರೆ ಇತಿಹಾಸದ ಘನದನಿ ಆಗಿರುತ್ತದೆ. ಇತಿಹಾಸದ ವಕ್ತಾರ ಆಗಿರುತ್ತದೆ. ಬದುಕಿನ ಪರಿಣಾಮೀ ಯೋಜನೆಯ ನಿರಂತರ ಚಾಲನೆ ಇದು, ಚಾಲಕಶಕ್ತಿ ಇದು. 'ಮುಟ್ಟಿದರೆ ಮುನಿ' ಆಗದೆ ಮುಟ್ಟಿದರೆ ತೆರೆಯುವಂಥ ಇತಿಹಾಸವಾಗುತ್ತದೆ.

ಒಬ್ಬ ರಾಜನ ಅಥವಾ ಆಡಳಿತಗಾರನ ರಾಜಕೀಯ ಇತಿಹಾಸ, ಜನಜೀವನದ ಮೇಲೆ ಪರಿಣಾಮ ಬೀರುವ ಕಾರಣ ಅದರ ಅರಿವು ಅಗತ್ಯವಿದೆ, ದಿಟ. ಹಾಗೆಯೇ ಜನಜೀವನವೂ ರಾಜನ ಅಥವಾ ಆಡಳಿತಗಾರನ ಆಳ್ವಿಕೆಯ ಮೇಲೆ ತನ್ನ ಅಚ್ಚುಗಳನ್ನು ಒತ್ತಬಲ್ಲುದು ; ಪ್ರಭಾವ ಬೀರಬಲ್ಲದು. ಅಂತಿರುವಲ್ಲಿ ಸಿಂಧೂ ಸಂಸ್ಕೃತಿಯಿಂದ ಹಿಡಿದು ಈವರೆಗಿನ ಜನಜೀವನದ ಇತಿಹಾಸವೂ ಅಚ್ಚುಕಟ್ಟಾಗಿ ದಾಖಲಾಗುತ್ತ ಬರಬೇಕು. ಈ ದೃಷ್ಟಿಯಿಂದ ವಿಜಯನಗರದ ಇತಿಹಾಸವೂ ನಮಗೆ ಒಂದು ಸಾಂಸ್ಕೃತಿಕ ದೇಣಿಗೆ ; ಆ ಪ್ರಮಾಣವು ಎಷ್ಟು ಎಂಬುದನ್ನು ಕಾಲ, ಬುದ್ಧಿ ಹಾಗೂ ಭಾವನೆಗಳು ನಿರ್ಧರಿಸಬೇಕು. ಅಲ್ಲಿ ಬೌದ್ಧಿಕ, ನೈತಿಕಶೀಲದ ಇರಾದೆ ಇದ್ದರೆ ಪರಂಪರೆಯು ಸಾಂಸ್ಕೃತಿಕ ಮರ್ಯಾದೆಯಿಂದ ಮಾನಿತವಾಗುತ್ತದೆ.

ಹೀಗೆಲ್ಲ ಚಿಂತನೆಗೆಳಸುವಲ್ಲಿ, ಇದ್ದೂ ಇರದಿರುವವರು ಇರಬಹುದು ; ಸಂದು ಹೋದವರು ಇಂದೂ ಇರಬಹುದು. ಅಂತೇ ಇವರಲ್ಲಿ ಜಡಾತ್ಮಕ, ಋಣಾತ್ಮಕ ಹಾಗೂ ಧನಾತ್ಮಕ ಇತಿಹಾಸವಾದವರು, ಇತಿಹಾಸವಾಗುವವರು ಇರುತ್ತಾರೆ. ಅದಾಗಿ ನಿಶ್ಚಲರು, ದುಶ್ಶೀಲರು, ಸುಶೀಲರು ಇತಿಹಾಸ ವಾಗುವವರಲ್ಲಿ ಇರುತ್ತಾರೆ. ಆಗ ನಿಶ್ಚಲ ಇತಿಹಾಸ, ದುಶ್ಶೀಲ ಇತಿಹಾಸ, ಸೌಶೀಲ್ಯ ಇತಿಹಾಸವೆಂಬಂಥವುಗಳನ್ನು ಪರಿಭಾವಿಸಬೇಕಾಗುತ್ತದೆ.

ಸಮಾಜದ ಮಧ್ಯೆ ಇದ್ದೂ, ಇತಿಹಾಸದ ಯಾವ ಹೆಜ್ಜೆಯ ಗುರುತನ್ನು ಇಡಲಾಗದವರು ಅಥವಾ ಇಡಲು ಪ್ರಯತ್ನಿಸದವರೂ ಇದ್ದಾರೆ. ಸಾಮಾನ್ಯರಲ್ಲಿ ಅಸಾಮಾನ್ಯ ರಾಗುವ ಕಾಳಜಿ, ಛಲ, ಗುಣ ಇಂಥವರಲ್ಲಿ ಕಾಣಬರುವುದಿಲ್ಲ. ಇಂಥ ಪ್ರವೃತ್ತಿ ನಿಶ್ಚಲ ಇತಿಹಾಸದ್ದು, ಜಡಾತ್ಮಕವಾದ ಅಜ್ಞಾತ ಗೊಳ್ಳುವ ಇತಿಹಾಸದ್ದು.

ಇನ್ನು ಕೆಲವರು ತಾವೂ ಹಾಳಾಗುವುದಲ್ಲದೆ, ನೆರೆಯನ್ನು ಹಾಳುಮಾಡುತ್ತಾರೆ. ಅಂದರೆ ಇದ್ದಾಗಲೂ, ಹೋದ ಮೇಲೂ ಪ್ರೇರಕ ಸಂಘರ್ಷದ ಕೇಡನ್ನು, ವಿವಾದದ ಕಟ್ಟೆಗಳನ್ನು ಚಿತ್ರಿ ಬದುಕಿನ ನೆಮ್ಮದಿಯನ್ನು ಹಾಳು ಮಾಡುತ್ತಾರೆ. ಪ್ರಗತಿ ವಿರೋಧಿಗಳಾಗಿರುತ್ತಾರೆ. ವಿಚಾರಗಳನ್ನು ಅಪವ್ಯಾಖ್ಯಾನಿಸಿ ಕ್ಷೋಭೆಗೆಳೆಸುವುದರಲ್ಲಿಯೇ ಇವರಿಗೆ ರಾಕ್ಷಸೀ ಸಂತೋಷ. ಕ್ರೌರ್ಯತೃಪ್ತಿ. ಇದೊಂದು ದುಶ್ಶೀಲ ದುಶ್ಚಟ ಇತಿಹಾಸ. ಇದು ಋಣಾತ್ಮಕ ಇತಿಹಾಸದ ಮಾರ್ಗವಾಗಿ ಸಾಮಾಜಿಕ ದುಷ್ಪರಿಣಾಮಕ್ಕೆ ಕಾರಣವಾಗುತ್ತಲೇ ಸಾಗುವಂಥದ್ದು. ಇಲ್ಲಿ ಇತಿಹಾಸ, ಕುತ್ತು ಆಗುತ್ತದೆ ; ಸೊತ್ತಾಗುವುದಿಲ್ಲ ; ಸತ್ವವಾಗುವುದಿಲ್ಲ. ಅದೊಂದು ಸವಕಳಿ. ಇದನ್ನೆಲ್ಲ ಮೀರಿ ನಿಯಂತ್ರಿಸುವ, ತಿರುಚಿದ, ತಿರುಚುವ ಇತಿಹಾಸದ ನೇತ್ಯಾತ್ಮಕತೆ ಯನ್ನು, ದುಶ್ಚಟವನ್ನು ಸ್ಥಗಿತಗೊಳಿಸುವುದೇ ಧನಾತ್ಮಕ ಇತಿಹಾಸ, ಸತ್‌ಶೀಲ ಶಕ್ತಿಯ ಇತಿಹಾಸ.

ಬದುಕು ಮುಗಿಸಿ ಹೋದಂತಹವರು ಇಳೆಯ ಮೇಲೆ ಭೌತಿಕವಾಗಿ ಇರದೇ ಹೋಗಬಹುದು. ಆದರೆ ಅವರಲ್ಲಿ ಸಮಾಜಸ್ಮರಿತರಾಗಿ ಸದಾ ಇರುವಂಥವರು, ಸಮಾಜದ ಮೇಲೆ ಜೀವನದ ಎಲ್ಲ ಕ್ಷೇತ್ರಗಳಲ್ಲಿ ಪರಿಣಾಮ ಬೀರುವಂಥ ಧನಾತ್ಮಕ ಇತಿಹಾಸದವರು. ಇವರು ಮಾಡಿದ ಮಣಿಹ, ಸೇವೆ, ತ್ಯಾಗ, ಜನಹಿತ ಸಮಾಜೋಪಯೋಗಿ ಕಾರ್ಯ ಅವರನ್ನು ಐತಿಹಾಸಿಕ ಪುರುಷರನ್ನಾಗಿಸುತ್ತದೆ. ಮಾನವ ಬದುಕು ಪೂರ್ಣಾಯುಷ್ಯದ ನೂರಿಪ್ಪತ್ತೈದು ವರ್ಷಗಳಲ್ಲಿ ಅಥವಾ ಸಾಮಾನ್ಯವಾಗಿ ನೂರು ವರ್ಷಗಳಲ್ಲಿ ಮುಗಿದರೂ ಅದನ್ನು ಅನಂತವಾಗಿಸುವ ಐತಿಹಾಸಿಕ ಬದುಕು ಧನಾತ್ಮಕ ವಾಗಿರುತ್ತದೆ. ಅಂಥವರ ಸ್ಮರಣೆ ಸಾಧನೆ ಜನಮನದಲ್ಲಿ ನಿರಂತರ ಚಾಲನೆಗೊಳ್ಳುತ್ತ ಹೋಗುತ್ತದೆ ; ಪ್ರೇರಕ ಸಂವಹನಗೊಳ್ಳುತ್ತದೆ. ಇಂಥದವನ್ನು ಕಾಣುವ ಕಣ್ಣು ಬೇಕು. ಪರಿಶ್ರಮ ಬೇಕು, ಬಳಸಿಕೊಳ್ಳುವ ಬುದ್ಧಿ ಬೇಕು. ಇದು ಇಂದು ನಮ್ಮಲ್ಲಿ ರಾಷ್ಟ್ರೀಯ ಅಂತರಾಷ್ಟ್ರೀಯ ಕಾಳಜಿ ಯಾಗುವಂತೆ, ಸಾಮಾನ್ಯ ಗ್ರಾಮದಿಂದ ಹಿಡಿದು ದೇಶದ ಕೇಂದ್ರದವರೆಗೂ ಅರಳುತ್ತ ಮೊತ್ತವಾಗಬೇಕು

ಇತಿಹಾಸದಲ್ಲಿ ಒತ್ತಾಯ ಸಮ್ಮತಿಯ ಆವರಣ ನಿರ್ಮಾಣವಾದರೆ ಅದು ಬೌದ್ಧಿಕ ದಬ್ಬಾಳಿಕೆ ಆಗುತ್ತದೆ ; ಬೌದ್ಧಿಕ ಸ್ವಾರ್ಥವಾಗುತ್ತದೆ. ಇದನ್ನು ಹೊರಗೆ ತೋರಗೊಡದಿದ್ದಾಗ ಗುಪ್ತ ಬೌದ್ಧಿಕ ಅಪಚಾರವಾಗುತ್ತದೆ. ಹಿನ್ನೆಲೆ ಅರಿಯದವರಿಗೆ ಬೌದ್ಧಿಕ ಭ್ರಮೆ ಅಥವಾ ಬೌದ್ಧಿಕ ಸನ್ನಿ ಉಂಟು ಮಾಡಿದಂತಾಗುತ್ತದೆ. ಅಂತೇ ಪಂಥ ನಿಷ್ಠ ಚರಿತ್ರೆಯ ಕೃತಿ ಇತಿಹಾಸದ ದುರುಪಯೋಗಕ್ಕೆ ಎಡೆಕೊಡುತ್ತದೆ.

ಮಾನವ ಇತಿಹಾಸದಲ್ಲಿ ಕಳೆದ ೫–೬ ಸಾವಿರ ವರ್ಷದ ಇತಿಹಾಸ, ಲಿಪಿ ಬಳಕೆಗೆ ಬಂದ ಮೇಲೆ ಇಂಥ ಪ್ರಭಾವಿತ ನಿರೂಪಣೆ ಆಗಿರಬಹುದು. ಆ ಮುನ್ನಿನ ಅವಧಿಯಲ್ಲೂ ಬುಡಕಟ್ಟು ಪಂಗಡಗಳ ಮೇಲಾಟದಲ್ಲಿ ಇತಿಹಾಸ ವ್ಯಕ್ತವಾಗಿಲ್ಲ ಎನ್ನುವಂತಿಲ್ಲ ; ಆದರೆ ಅದು ಕಡಿಮೆ ಎಂಬ ಅಭಿಪ್ರಾಯವೂ ವಿದ್ವಾಂಸರಲ್ಲಿದೆ. ಈ ಕಾರಣದಿಂದಲೇ ಇತಿಹಾಸ ಸಾಂಸ್ಕೃತಿಕ ದಿವ್ಯಕ್ಕೆ, ತಾತ್ವಿಕ ದಿವ್ಯಕ್ಕೆ, ಸಾಮಾಜಿಕ ದಿವ್ಯಕ್ಕೆ ಒಳಗಾಗಬೇಕು. ಆಗ ಅದು ಧನಾತ್ಮಕವಾಗುತ್ತದೆ. ಇದೇ ಐತಿಹಾಸಿಕ ಶುದ್ಧಿ. ಅದು ಜನ ಜೀವನದ ಪರೀಕ್ಷೆಯೂ ಆಗಿರುತ್ತದೆ. ಅಲ್ಲಿ ಪಂಥೀಯ ಆಕ್ರಮಣಕ್ಕೆ, ವರ್ಗೀಯ ಆಕ್ರಮಣಕ್ಕೆ ಎಡೆ ಇರುವುದಿಲ್ಲ. ಅಲ್ಲಿ ಇತಿಹಾಸದ ಅಂಗಳ ನಿಷ್ಕಳಂಕವಾಗುತ್ತದೆ. ಇಂಥ ದಿವ್ಯದಿಂದ ನಿಶ್ಚಿತ ಸಾಕ್ಷಿ ಪುರಾವೆಗಳೊದಗಿ ಸರ್ವಸಮ್ಮತಿಗೆ ಕಾರಣವಾಗುತ್ತದೆ. ಇದು ಆಯಾಯ ವರ್ತಮಾನದ ಸಾಂಸ್ಕೃತಿಕ ಹಂಬಲಗಳನ್ನು ಪೂರೈಸುತ್ತದೆ ಎನ್ನಬೇಕು.

ಈ ದೃಷ್ಟಿಯಿಂದ ನಮ್ಮ ಇತಿಹಾಸ ನಡೆದು ಬಂದ ದಾರಿಯಲ್ಲಿ ಅಪೇಕ್ಷಿತ, ಅಗತ್ಯ ಮಾಹಿತಿಗಳೆಲ್ಲ ಪ್ರಕಟವಾದುವೆ? ಎಂಬ ಪ್ರಶ್ನೆಯೂ ನಮ್ಮ ಮುಂದೆ ನಿಲ್ಲುತ್ತದೆ. ವರ್ತಮಾನದ ಎಷ್ಟೋ ತಿಳಿಯಬೇಕಾದ ಪರಿಣಾಮಕಾರಿ ಘಟನೆಗಳ ಹಿನ್ನೆಲೆಗಳೂ ಮುಚ್ಚಲ್ಪಟ್ಟಿವೆಯಲ್ಲವೆ ? ಇತಿಹಾಸವನ್ನು ಮರೆಮಾಚುವ ನೈತಿಕ ಶಿಥಿಲ ಪ್ರವೃತ್ತಿ ಇಂದಾಗುತ್ತಿದೆ. ಸಲ್ಲದ ವಿವಾದಗಳನ್ನೆಬ್ಬಿಸಿ, ಜನತೆಯ ಗಮನಕ್ಕೆ ಅಪವ್ಯಾಖ್ಯಾನಗಳನ್ನು ಬಿಂಬಿಸುವ ಸುದ್ದಿ ಜಾಲಗಳೂ ಹರಡಿಕೊಂಡಿವೆ. ಸ್ವಾತಂತ್ರ್ಯ ಹೋರಾಟದ ದೇಶಪ್ರೇಮಿಗಳಿಗೆ, ಇತಿಹಾಸದ ಬರೆಹಗಳು ಸಾಕಷ್ಟು ನ್ಯಾಯವನ್ನು ಒದಗಿಸಿಲ್ಲವೆನಿಸುತ್ತದೆ. ಒಂದು ಸಮುದಾಯ ಅಥವಾ ಕುಟುಂಬದ ದೇಣಿಗೆಯಷ್ಟನ್ನೇ ವೈಭವೀಕರಿಸಿ, ಉಳಿದವನ್ನು ನಗಣ್ಯಗೊಳಿಸಿರುವ ಇತಿಹಾಸವೂ ಇದೆ. ಹೀಗಾಗಿ ಗುಪ್ತಇತಿಹಾಸವೆನ್ನಿ, ಒಳಗಿನ ಇತಿಹಾಸವೆನ್ನಿ, ಅದೂ ಇರುತ್ತದೆ ; ಚಾಲ್ತಿ ಇತಿಹಾಸವೆನ್ನಿ, ಚಾಚಿದ ಇತಿಹಾಸವೆನ್ನಿ ಅದೂ ಇರುತ್ತದೆ. ಆದರೆ ಒಂದಕ್ಕೆ ಸಿಕ್ಕ ಪ್ರಚಾರ ಮುಂದುವರಿದೇ ಹೋಗುತ್ತದೆ. ಇನ್ನೊಂದು ಮುರುಟಿ ಹೋಗಿ, ಗುಪ್ತವಾಗಿ ಬಿಡುತ್ತದೆ. ಎಷ್ಟೋ ವಿಷಯಗಳೂ ಬೆಳಕಿಗೆ ಬಾರದೆ ನಿಜವಾದ ಇತಿಹಾಸ ಮರೆತು ಹೋದ ಸಾಮ್ರಾಜ್ಯವಾಗಿ ಬಿಡುತ್ತದೆ. ಅಪಾತ್ರತೆಗೆ ವೈಭವ ಸಿಗುವಂತಾಗುತ್ತದೆ. ಇತಿಹಾಸದ ನೆಲಗಟ್ಟನ್ನು ಗಮನಿಸದಿದ್ದರೆ ಅದು ಆತ್ಮವಿಸ್ಮೃತಿ. ನಮ್ಮ ಸಾಂಸ್ಕೃತಿಕ ಜಾಯಮಾನ ಭೂತಾರಾಧನೆಯ ಅಂಕಣವಲ್ಲ, ಅವಶೇಷಗಳ ಆರಾಧನೆ ಅಲ್ಲ. ಬದಲು ಪ್ರಾಚೀನತೆಗೆ ತೋರುವ ಲಕ್ಷ್ಯ ಗೌರವ.

ನಾನು, ನನ್ನಷ್ಟಕ್ಕೆ ಎಂಬಂಥ ಆತ್ಮರತಿಯ ಇತಿಹಾಸವಾದರೆ, ಭವಿಷ್ಯತ್ತು ಸ್ವಾಗತಿಸುವುದಿಲ್ಲ. ಹೊಸತು ಮೂಡಿಬರಲು ನಿರಂತರ ಅಭಿಜಾತ ಶಕ್ತಿ ಬೇಕು. Any innovation rises from the womb of the old. ಸಂಶೋಧನೆಯಲ್ಲಿಯೂ ಸೃಜನಶೀಲತೆ ಇದೆ. ಇದು ಅನುಭವದ ನೆಲಗಟ್ಟಿನಲ್ಲಿ ಅರಳುತ್ತ ಬರುತ್ತದೆ. ಮಾಹಿತಿ ಸಂಗ್ರಹ ಪ್ರಕ್ರಿಯೆ ಇರುತ್ತದೆ ; ಒಳನೋಟಗಳ ಪ್ರಕ್ರಿಯೆಯೂ ಇರುತ್ತದೆ. ಎರಡರ ಸಮ್ಮಿಲನವೆ ಹೊಸತಿನ ಆವಿರ್ಭಾವಕ್ಕೆ ಕಾರಣವಾಗುತ್ತದೆ. ಐಸಕ್ ನ್ಯೂಟನ್ನಿಗೆ ಹೊಳೆದ ಗುರುತ್ವಾಕರ್ಷಣೆ ರಹಸ್ಯ, ಆರ್ಕಿಮಿಡೀಸನಿಗೆ ಹೊಳೆದ ಜಲತೋಲನ ರಹಸ್ಯ, ಮತ್ತು ವರ್ತಮಾನದವರೆಗೆ ನಡೆದು ಬಂದ ಅಗಾಧ ಸೃಜನ ಶೋಧಗಳು ಸೃಜನಶೀಲತೆಯ ಶಾಸ್ತ್ರೀಯ ಸಾಕ್ಷಿಗಳೆ ಆಗಿವೆ. ಹೀಗಾಗಿ ಸೃಜನಶೀಲತೆಗೆ ಹೊಸ ವ್ಯಾಖ್ಯಾನವನ್ನು ಕೊಡಬೇಕಾಗುತ್ತದೆ.

ಇತಿಹಾಸಕ್ಕೆ ಸ್ಥಾಯಿತ್ವ ಹಾಗೂ ಚಲನಶೀಲತೆ ಇವೆ. ಗಟ್ಟಿ ತಳಪಾಯದ ಮೇಲೆ ವ್ಯಕ್ತಗೊಂಡಾಗ ಕ್ಷಿತಿಜಿಂಬ

ವಾಗುತ್ತದೆ ; ಸ್ಥಾಯಿಗುಣ ಹೊಂದಿರುತ್ತದೆ. ಚಲಿಸುತ್ತ ವಿಕಸಿಸುತ್ತ ಬಂದಾಗ ಗತಿಬಿಂಬವಾಗುತ್ತದೆ ; ಚಾಲನಗುಣ ಹೊಂದಿರುತ್ತದೆ. ಈ ಸ್ಥಿತಿಬಿಂಬ ಗತಿಬಿಂಬಗಳ ಸಮನ್ವಯ ವಾದಾಗಲೇ ಇತಿಹಾಸ ಅರ್ಥಪೂರ್ಣವಾಗುತ್ತದೆ. ಅಂದರೆ ಇತಿಹಾಸವು ಕೂಡಿಟ್ಟ ಶಕ್ತಿಯನ್ನು (ಪೊಟೆನ್ಶಿಯಲ್ ಎನರ್ಜಿ), ಚಾಲನಶಕ್ತಿಯಾಗಿ (ಕೈನೆಟಿಕ್ ಎನರ್ಜಿ) ಪರಿವರ್ತಿಸಿದಾಗ ಜನಜೀವನವನ್ನು ಪರಿಣಾಮಿಸುವುದಾಗುತ್ತದೆ. ಆಗ ಕೇವಲ ರಾಜರ ಅಥವ ರಾಜಕೀಯಸ್ಥರ ರಾಜಕೀಯ ಪಠಣ ಎಂಬ ಆರೋಪ ಅದರ ಮೇಲಾಗುವುದಿಲ್ಲ.

ಸಮಗ್ರತೆಗೆ ಬಿಡಿ ಬಿಡಿ ಕೊಡುಗೆಗಳು ಕೂಡಿದಾಗಲೇ ಮಹತ್ವ, ಗೌರವ, ಘನತೆ ಎಲ್ಲ ಆವರಣ, ಆಚಾರಗಳಾಗುತ್ತವೆ. ನಮ್ಮ ರಾಷ್ಟ್ರೀಯ ಇತಿಹಾಸಕ್ಕೆ ನಮ್ಮ ರಾಜ್ಯ, ಜಿಲ್ಲೆ, ತಾಲ್ಲೂಕು, ಗ್ರಾಮಗಳ ನಿಖರ ಇತಿಹಾಸ, ಐಕ್ಯತೆಯ ಘನವನ್ನು ರೂಪಿಸಬಲ್ಲವು. ಅವು ಕೇವಲ ಸ್ಥಳೀಯ ಭಾವುಕ ತೃಪ್ತಿ ಆಗದೆ ಸರ್ವಕಾಲಕ್ಕೂ ನಮ್ಮ ರಾಷ್ಟ್ರೀಯ ಸಮಗ್ರತೆಗೆ ಮೊತ್ತವಾಗುವಂಥ ಇತಿಹಾಸಕಾರಕಗಳಾಗಬೇಕು. ಆಯಾ ವರ್ತಮಾನಗಳಿಗೆ ಪ್ರಸ್ತುತವಾಗುತ್ತ ಸಾಗಬೇಕು. ಅವು ಚಿತ್ರದ ದೀಪಗಳಂತಾಗಬಾರದು. ಕಾರಣ ಸಮಸ್ಯೆಗಳ ಕತ್ತಲನ್ನು ಅಂಥ ದೀಪ ಪರಿಹರಿಸಲಾರದು. ಅರ್ಥಾತ್ ಚಿತ್ರದ ದೀಪ ತಮದ ಮೊತ್ತವನ್ನು ಅಳಿಸಲಾರದು.

ಶಾಸನಗಳು, ದಾಖಲೆಗಳು, ತಾಳೆಗರಿಗಳು, ಕಾಗದ ಪತ್ರಗಳು, ಕಡತಗಳು ತಮ್ಮ ಶರೀರದ ಮೇಲಿನ ಬರಹದಲ್ಲಿ ಇತಿಹಾಸದ ಸಂಚಯನ ಮಾಡಿ ತೋರಿವೆ. ಇತಿಮಿತಿಗಳ ನಡುವೆಯೂ ತಮ್ಮ ನಿಖರತೆಯನ್ನು ಸಾಧ್ಯವಾದಷ್ಟು ಕಾಪಾಡಿಕೊಂಡಿವೆ. ಬಾಯ್ದೆರೆಗಳೂ, ಕೆಲವಾರು ಸಾಹಿತ್ಯ ಕೃತಿಗಳೂ ಈ ಪಥದಲ್ಲಿ ಕಾಣಬರುವುಂಟು. ಬರೆದವರ ತನ್ಮಯತೆ, ಬರೆಸಿದವರ ಹವಣುಗಳಿಗೂ ಅವುಗಳೆಲ್ಲ ಎಡೆಕೊಟ್ಟಿವೆ. ಆಗಿ ಹೋದದ್ದು, 'ಹಾಗಿತ್ತು' ಎಂಬಷ್ಟಕ್ಕೆ ಇತಿಹಾಸ ನಿಂತರೆ ಅದು ವರ್ಗೀಯ ಅಥವಾ ಸೀಮಿತ ಶೀಲವಾಗುತ್ತದೆ. ಅಂತಾಗಿ ದಾಖಲಾದ ಇತಿಹಾಸ ನೈಜ ಎಂಬ ನಂಬಿಕೆ ಸಮ್ಮತವೆನಿಸುವಷ್ಟು ಪರಿಣಾಮ ಬೀರುವಂತಿರಬೇಕು. ಇತಿಹಾಸದ ಹೊಸ ಆಯಾಮಗಳನ್ನು ತೋರಬೇಕು. ಅದಕ್ಕೆ ಶಾಸ್ತ್ರೀಯ ಶಾರೀರಕ ದೃಢತೆ ಬೆಳೆದಿರಬೇಕು. ಹೀಗೆ ಸಾಗುವ ಹಾದಿಯಲ್ಲಿ ಅನ್ಯಶಿಸ್ತುಗಳ ಬೆಳಕಿನಲ್ಲೂ ವ್ಯಾಖ್ಯಾನಿಸುವ ಪ್ರವೃತ್ತಿ ಬೆಳೆಯುತ್ತಿರುವುದು ಸ್ವಾಗತಾರ್ಹವಾಗಿದೆ ; ಅರ್ಥ ಪೂರ್ಣವಾಗಿದೆ. ಪರಿಶ್ರಮಕ್ಕೆ ಫಲ ಎಟುಕಿದಾಗ ರೋಚಕ ಪುಳಕ. ಇತಿಹಾಸಕಾರ ಈ ದೃಷ್ಟಿಯಿಂದ ಸರ್ವಾಂಗಮುಖಿಯಾಗಿರಬೇಕು. His action should result in the Potential Panoramic achivement. ಜೀವನದ ವಿವಿಧ ಮುಖಗಳನ್ನು ಐತಿಹಾಸಿಕವಾಗಿ ದಾಖಲಿಸುವ ಪ್ರಯತ್ನ ಅವನದಾದರೆ ಶತಶತಮಾನಗಳಿಗೆ ಚಿತ್ರಗೊಳ್ಳುವ ವಸ್ತುನಿಷ್ಠ ಸಾಕ್ಷಿ ಆಗುತ್ತದೆ. ಅಂದೂ ಇಂದೂ ಮುಂದೂ ಚಲಿಸಿದ, ಚಲಿಸುತ್ತಿರುವ ಚಲಿಸಬಲ್ಲ ಶೀಲವುಳ್ಳ ಇತಿಹಾಸವಾಗುತ್ತದೆ. ಅದೊಂದು ಪರಿತೋದರ್ಶನ. ಕರ್ನಾಟಕ ಅಕಾದೆಮಿಯ ಸದಸ್ಯರು ಈ ದಿಸೆಯಲ್ಲಿ ನಡೆಸುತ್ತಿರುವ ಹುಡುಕಾಟ ಒಂದು ಆತ್ಮೀಯ ತನ್ಮಯ ಪ್ರಯತ್ನವಾಗಿದೆ. ಸಾಂಸ್ಕೃತಿಕ ಯಶೋಗಾಥೆಯಾಗಿದೆ; ಐತಿಹಾಸಿಕ ದಿಟ್ಟ ವರಸೆ ಆಗಿದೆ ; ಚೇತೋಹಾರಿ ಆಗಿದೆ, ದಿಟ. ಇದು ಮತ್ತಷ್ಟು ವಿವಿಧ ಆಯಾಮಗಳಿಂದ ವಿಕಸನಗೊಳ್ಳಬೇಕು.

ಇತಿಹಾಸದ ಇಡುಗಂಟು ಇದ್ದಾಗ ಅದನ್ನು ವರ್ಗಾಯಿಸಲು ಪ್ರಸ್ತುತಗೊಂಡಿರಬೇಕು. ಪ್ರಸ್ತುತವಾಗದಿದ್ದರೆ ತಲೆಮಾರು ಅದನ್ನು ಅವಶೇಷವಾಗಿಸಿಬಿಡುತ್ತದೆ. ಆಯಾ ಕಾಲದ ಸನ್ನಿವೇಶಕ್ಕೆ ಮನಕ್ಕೆ ಹೋಗುವಂತೆ ಸಂವಹನಗೊಳಿಸುವ ಭಾಷೆ ಮತ್ತು ಶಕ್ತಿ ಇತಿಹಾಸಕಾರನಿಗೆ ಬೇಕು. ಇತಿಹಾಸ, ಪರಂಪರೆ ಉಳಿಸಲು ಅದೆಷ್ಟು ಪ್ರಸ್ತುತ ಎಂಬುದನ್ನು ಮನಗಾಣಿಸಬೇಕು. ಆಗ ತಿರುಚಿದ ಇತಿಹಾಸ ಜಾರಿಹೋಗುತ್ತದೆ ; ನೆಲೆ ಕಳೆದುಕೊಳ್ಳುತ್ತದೆ. ಒಂದು ತಿರುಚಿದ ಇತಿಹಾಸವು, ನೈಜ ಇತಿಹಾಸವನ್ನು ಅಶುಚಿಗೊಳಿಸುತ್ತದೆ ; ಇತಿಹಾಸವನ್ನು ಅವಹೇಳನಗೊಳಿಸುತ್ತದೆ. ತತ್ಕಾಲದ ಲಾಭಕ್ಕೆ ಪಂಥೀಯ, ವರ್ಗೀಯ ವೇದಿಕೆಯಲ್ಲಿ ಅದು ವಿಜೃಂಭಿಸಿರಬಹುದು. ಸತ್ಯ ತಿಳಿದಾಗ ವೇದಿಕೆಯಲ್ಲಿ ವಿಜೃಂಭಿಸಿದವರನ್ನೆಲ್ಲ, ವಿಜೃಂಭಿಸಿದುದನ್ನೆಲ್ಲ ಸಮುದಾಯ ಒತ್ತರಿಸಿ ಬಿಡುತ್ತದೆ. ಸಮುದಾಯಕ್ಕೆ ನಿಜ ಇತಿಹಾಸವನ್ನು ಮನಮುಟ್ಟಿಸಿದಾಗಲೆ ಪರಂಪರೆ ಮುಂದುವರಿಯುತ್ತದೆ.

ನಿಜ ಇತಿಹಾಸ ನೆಟ್ಟಕಲ್ಲೊಳಿಟ್ಟ ಬರೆಹದಂತೆ ನಿರಂತ ಸಾಕ್ಷಿಯ ನೆಲೆ ಆಗಿರುತ್ತದೆ. ಇದು ಸರ್ವರ ನೋಟಕ್ಕೆ ಸದಾ ಗೋಚರ ಚರಿತ್ರೆಯಾಗಿ ಸಂಪಥದಲ್ಲಿ ಸಾಗುತ್ತದೆ. ತಲೆಮಾರಿಗೆ ವರ್ಗಾವಣೆಗೊಳ್ಳುತ್ತ ಬರುತ್ತದೆ. ಪ್ರಸ್ತುತತೆ, ವರ್ಗಾವಣೆ ಎರಡೂ ಇತಿಹಾಸಕಾರನ ಒಳನೋಟಗಳಿಂದ ಉಕ್ಕಬೇಕು. ಹಿಂದಿನವರಲ್ಲಿ 'ಪುರಾಣ'ವು ಶ್ರದ್ಧಾಸಕ್ತಿಯ ಕುರುಹಾಗಿ ಆಯ್ಕೆಗೊಂಡಿತು. ಪಟಲಗಳಾಗಿ ಹರಡಿತು. ಇಂದು ಹೊಸರೂಪದಲ್ಲಿ ಇತಿಹಾಸದ ಅವತರಣವಾಗಲು, ಇದ್ದ ಇಡುಗಂಟನ್ನು ಸಂಸ್ಕರಿಸಿ, ಹೊಸ ವಿಧಾನಗಳಿಂದ ಬಿತ್ತಿ ಬೆಳೆದು ಹೊಸ ಇಳುವರಿಯನ್ನು ನೀಡಬೇಕು.

ಇತಿಹಾಸದ ಘಟನೆ ಆಧಾರಿತವಾದುದು, ಐತಿಹ್ಯ ; ಪುರಾಣಕ್ಕೆ ಐತಿಹ್ಯ ಆಧಾರ. ಹೀಗಾಗಿ ದೇಶಿ ಪುರಾಣ, ಮಾರ್ಗ ಪುರಾಣಗಳೂ ಮೂಡಿರುವುದೂ ಕಾಣಬರುತ್ತದೆ.

ಕ್ರಿ.ಶ. ೧೦೦೧ರ ಮಡಿಕೇರಿ (ಕೊಡಗು ಜಿಲ್ಲೆ) ಶಾಸನವು ತಲಕಾವೇರಿಗೆ **ಮೊದಲ್ಕಾವೇರಿಯಂ** ಎಂಬ ಶಬ್ದಗುಚ್ಛವನ್ನು ನೀಡಿದೆ. ಆದರೆ ೧೧ನೇ ಶತಮಾನದ ಮಾಲಂಬಿ ಶಾಸನವು (ಕ್ರಿ.ಶ. ೧೦೦೪!) 'ಕವೇರ ಕನ್ಯಕಾ' ಎಂಬ ಪದಗಳಲ್ಲಿ ಕವೇರ ಪುತ್ರಿ ಕಾವೇರಿ ಎಂದು ಅರ್ಥವನ್ನು ಕೊಡುತ್ತದೆ. ಸಂಗಂಸಾಹಿತ್ಯವೂ 'ಕವೇರ ಪುತ್ರಿ ಕಾವೇರಿ' ಎಂದಿದೆ. ಹೀಗಾಗಿ ಮಾಲಂಬಿ ಶಾಸನೋಕ್ತಿ, ಸಂಗಂ ಸಾಹಿತ್ಯೋಕ್ತಿಗಳು 'ಮಾರ್ಗ ಪುರಾಣ'ವನ್ನು ಹೆಣೆದಿವೆ ಅಥವಾ ದಾಖಲಿಸಿವೆ. ಅದೇ ಕೊಡಗಿನ ದಲಿತ ವರ್ಗದ ಕೆಂಬಟ್ಟಿ ಜನಾಂಗದವರಲ್ಲಿ, ಅಗಸ್ತ್ಯ, ಕಾವೇರಿಯನ್ನು ಸ್ಪರ್ಧೆಯಲ್ಲಿ ಗೆದ್ದ. ನಂತರ 'ಹೂ ಮದುವೆ' (ಬಿಳಿ ಹೂವನಿಟ್ಟು ಶುಭ ಸಮ್ಮತಿ ಸಂಕೇತವಾಗಿ ಮಾಡಿಕೊಂಡ ಸರಳ ಮದುವೆ) ಮಾಡಿಕೊಂಡ ಎಂಬ ಕತೆ ಬಂದಿದೆ. 'ದೇಸಿ ಪುರಾಣ' ವಾಗಿ ಹೆಣೆದು ಬಂದಿರುವುದಾಗಿದೆ. ಕ್ರಿ.ಶ. ೧೦೦೧ರ ಮಡಿಕೇರಿ ಶಾಸನದ 'ಮೊದಲ್ಕಾವೇರಿ' ಶಬ್ದ ಭೌಗೋಳಿಕ ಇತಿಹಾಸದೊಡನೆ ಮಂಡನೆ ಆಗಿ ಐತಿಹಾಸಿಕ ಅಸ್ತಿತ್ವವನ್ನು ತೋರಿಕೊಂಡಿದೆ. ಇದು ಶಾಸ್ತ್ರೀಯ ಐತಿಹಾಸಿಕತೆ.

ಇತಿಹಾಸ ಸಂಶೋಧನೆ ಒಂದು ವ್ಯವಸ್ಥಿತ ಪರಿಶ್ರಮದ ಫಲ : Research in History is a Systemised effective effort involvement for innovation. ಆದರೆ ಅದರ ವೈಭವೀಕರಣವೂ ಸಲ್ಲ. ಇತಿಹಾಸದ ನಿರೂಪಣೆ ಹೀಗೆ ವೈಜ್ಞಾನಿಕ ಸ್ವರೂಪ ತಳೆದರೆ ಮೌಲ್ಯ ಆಧಾರಿತ ಇತಿಹಾಸ ಆಗಬಲ್ಲುದು. ಇತಿಹಾಸಕಾರನ ಕನಸುಗಳೂ ಸತ್ಯದ ನೆಲೆಯಲ್ಲಿಯೇ ಉದ್ಭವಿಸಬೇಕು. ಇತಿಹಾಸದ ಪ್ರಯೋಜನವಾದರೋ ಜೀವನದ ಮೌಲ್ಯ ರೂಪಿಸಿಕೊಂಡು ಸಾಧಿಸುವ ಮುನ್ನಡೆ ಮಾರ್ಗ. ಬದುಕಿನ ಮೇಲೆ ಪರಿಣಾಮ ಬೀರುವಂಥ ವಲಯ ಅದಾಗಿರುವಲ್ಲಿ ಕೇವಲ ನೀತಿ ಪಾಠವೆನಿಸುವುದಿಲ್ಲ. ಅದು ಶಾಸನಗಳಲ್ಲಿ ವಿದಿತವಾಗಿದೆ, ನಮ್ಮಲ್ಲಿ ಶಾಸನವೆನ್ನಿ, ಶಾಸನಶಾಸ್ತ್ರವೆನ್ನಿ ಆ ಬಗೆಗಿನ ಪ್ರಜ್ಞೆ ನಮ್ಮಲ್ಲಿ ಹೆಚ್ಚು ಬೆಳೆದಿದೆ. ಸಾಹಿತ್ಯ, ಕಲೆ, ಶಿಲ್ಪ, ಸಂಗೀತ, ನೃತ್ಯ, ತಂತ್ರಜ್ಞಾನ, ವಿಜ್ಞಾನ ಇತ್ಯಾದಿ ವಿಷಯಗಳ ಇತಿಹಾಸದ ಜ್ಞಾನ ನಮಗಿರಬೇಕು. ಕರ್ನಾಟಕದ ಕೊಡುಗೆ ಆ ಬಗ್ಗೆ ಎಷ್ಟು ಎಂಬುದು ರಾಷ್ಟ್ರೀಯ ಮಾನದಂಡದಿಂದ ಅಳೆಯಬೇಕಾಗುತ್ತದೆ. ಅದಾಗಿ ಅವುಗಳ ನಿರಂತರ ಅಧ್ಯಯನ ಹೊಸ ಹಾದಿಗಳ ಆವಿಷ್ಕಾರಕ್ಕೆ ಎಡೆ ಆಗುತ್ತದೆ.

ಆದಿ ಹಳೆಶಿಲಾಯುಗದಿಂದ ಹೆಚ್ಚು ಕಡಿಮೆ ಈವರೆಗೆ ಜನಸಾಮನ್ಯರ ಜೀವನ ಸಂಬಂಧದ ಮೂಲಪ್ರಮಾಣಗಳ ಜೊತೆಗೆ ಕೆಲವು ವಿಶಿಷ್ಟ ಸಾಂಸ್ಕೃತಿಕ ಹೆಜ್ಜೆಯನ್ನು ತಿಳಿಯಬೇಕು ಅದು ಬಾಯ್ದರೆ, ಆಚರಣೆ ಸಾಹಿತ್ಯ, ಶಾಸನ, ದಾಖಲೆ ಹಾಗೂ ಇತರ ಮೂಲಗಳ ವಿವರಣೆಗಳಿಂದ ಅದು ಸಾಧ್ಯವಾಗಿದೆ. ಆದರೆ ಶಾಸನಗಳಷ್ಟೇ ಹಿನ್ನೆಲೆಯಲ್ಲಿ ಯೋಚಿಸುವಾಗ ಐತಿಹಾಸಿಕ ವಾಸ್ತವಾಂಶಗಳು ಪೂರ್ಣ ವೈರುಧ್ಯರಹಿತವೆನ್ನುವದು ಕಷ್ಟವಾಗುತ್ತದೆ. ಶಾಸನ ಸಾಮಗ್ರಿಯನ್ನು ಬಳಸಿಕೊಳ್ಳುವಲ್ಲಿ ಅದರ ಹಾಗೂ ಶಾಸನೇತರ ವ್ಯಾಖ್ಯಾನದ ವಿಪರೀತ ದೋಷದಿಂದ ಅಥವಾ ಅಸಂಗತ ವ್ಯಾಖ್ಯಾನದಿಂದ ದೂರ ಉಳಿಯಬೇಕು. ಶಾಸನ ಪಾಠವನ್ನು ಸರಿಯಾಗಿ ಓದದೆ ಅಥವಾ ಓದಲಾಗದಿದ್ದಾಗ, ಆತುರ ಇತಿಹಾಸ ಪ್ರತಿಪಾದನೆ ಆಗುತ್ತದೆ. ಅಂತಾಗಿ ಪುನರ್ ಪರಿಶೀಲನೆ ನಡೆಯಬೇಕು. ಆದರೆ ಅದು ಪೂರ್ವಗ್ರಹ ದೋಷದಿಂದ ವಿಮುಕ್ತವಾಗಿರಬೇಕು ; ಸಹನೆಯ ಪಾತಳಿಯಲ್ಲಿ ನಡೆಯಬೇಕು. ಆಯಾ ವರ್ತಮಾನದ ಅನುಭವಗಳನ್ನು ಅರ್ಥೈಸಿಕೊಳ್ಳದೆ ಇಂದಿನ ನಿಕಷಕ್ಕೆ ಒಡ್ಡಿದರೆ ಅಸಂಗತ ಟೀಕೆ ಆಗಬಲ್ಲುದು.

ಪರಂಪರೆಯ ಪ್ರಜ್ಞೆ ಇಲ್ಲದವರಿಗೆ ದೇಶದ ಸಂಸ್ಕೃತಿ ಅರ್ಥವಾಗುವುದಿಲ್ಲ. ಹೊಗಳಿಕೆ ಅವನ ಸ್ವಂತಿಕೆಯನ್ನು ಕಳೆದು ಬಿಡುತ್ತದೆ. ಅಂಥವನಿಗೆ ಇತಿಹಾಸವೂ ಇಲ್ಲ. ಭವಿಷ್ಯವೂ ಇಲ್ಲ. ಸಾಹಿತ್ಯದಲ್ಲಿ ಹೊಸ ಚಿಂತನೆಗಳು ಸ್ಫೋಟಗೊಂಡಂತೆ ಇತಿಹಾಸದಲ್ಲಿ ಸ್ಫೋಟಗೊಂಡಿತೆ ? ಎಂಬ ಪ್ರಶ್ನೆಯೂ ಇರಬಹುದು. ಅದಕ್ಕೆ ಇತಿಹಾಸ ಅಕಾದೆಮಿಯ ಸದಸ್ಯರ ಶೋಧಗಳು ಉತ್ತರಿಸಿವೆ. ವರ್ಗ, ಸ್ಥಾನ, ಪದವಿ ಮೀರಿ ಸಾಮಾನ್ಯರ ಬಳಿ ಇತಿಹಾಸ ಸಂವಹನಗೊಳ್ಳುತ್ತಿದೆ. 'ಇತಿಹಾಸ ಪರಂಪರೆ ಉಳಿಸಿ' ಕಾರ್ಯಕ್ರಮ ಜನಪ್ರಿಯವಾಗಿದೆ. ಪ್ರತಿ ವರ್ಷ ಆ ಕಾರ್ಯಕ್ರಮದ ಹೆಚ್ಚಳ ಸ್ವಯೇಚ್ಛೆಯಿಂದ ನಡೆದು ಬರುತ್ತಿದೆ. ಜನಕ್ಕೆ ಮುಟ್ಟುವ ಕಾರ್ಯವೆ ದಂತಗೋಪುರದಿಂದ ಇಳಿದು ನೆಲದ ನಡೆ ಆಗಿರುವುದೆ ಐತಿಹಾಸಿಕ ಸ್ಫೋಟ. ಸಾಹಿತ್ಯ ಧರ್ಮ, ಸಂಸ್ಕೃತಿ ಶಿಲ್ಪ, ಕಲೆ, ಸಮಾಜ, ಪುರಾತತ್ವ, ಕ್ರೀಡೆ, ವಿಜ್ಞಾನ ಇತ್ಯಾದಿ ಯಾವುದೇ ವಲಯದಿಂದ ಇತಿಹಾಸವನ್ನು ಹೆಕ್ಕಿ ಅಸ್ತಿತ್ವ ಪ್ರಜ್ಞೆ ಮೂಡಿಸಿದ ಪ್ರತಿಭಾ ಸ್ಫೋಟ ನಮ್ಮ ಸದಸ್ಯರಿಂದ ಆಗಿದೆ. ಅವರು ಇತಿಹಾಸವನ್ನು ಜನಮುಖಿಯಾಗಿಸಿದ್ದಾರೆ.

ಕ್ಷೇತ್ರಕಾರ್ಯ ಕೇವಲ ಮನರಂಜನಾ ಪ್ರವಾಸವಲ್ಲ. ಅನಗತ್ಯ ಪರಿಶ್ರಮವೂ ಅಲ್ಲ. ಅತಿ ಊಹೆಯ ಹೊಸ ಶೋಧವೂ ಅಲ್ಲ. ಕೇವಲ ಹೊಸ ಶೋಧಗಳ ಮಾಹಿತಿ ಅಲ್ಲ. ಅದು ತೌಲನಿಕ ನೋಟದಲ್ಲಿಯೂ ಗಟ್ಟಿಗೊಳ್ಳಬೇಕಾದ ನಿರ್ಧಾರದ ಕಾಯಕ. ಆದರೆ ತಮ್ಮ ನಿರ್ಧಾರಗಳೇ ಸರಿ, ಚಿಂತನೆಗಳೇ ಸರಿ ಎಂದು ಸರ್ವತ್ರ ಪ್ರಸಾರ ಮೂಡಿಸುವ ಒತ್ತಡದ ಆವರಣ ನಿರ್ಮಾಣವೂ ಸೂಕ್ತವಲ್ಲ ; ಇತಿಹಾಸ ರಚನೆ ದೃಷ್ಟಿಕೋನಗಳ ಅಂಬಾರಿ ಅಲ್ಲ. ಅವಧಾನ ಶೀಲತೆಗೆ

ಅದು ತೆರೆದ ಅಂಕಣವಾಗಬೇಕು. ಹಿಂದಿನ ತಪ್ಪುಗಳಿಂದ ಉಂಟಾದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಮಾರ್ಗವನ್ನು ಇತಿಹಾಸದ ಅರಿವು ತೋರಬೇಕು. ಇತಿಹಾಸ ಪ್ರೇಮಿ ತನ್ನ ಕ್ಷೇತ್ರದ ಬಗ್ಗೆ ಇತಿಹಾಸ ಕುತೂಹಲಿಗಳನ್ನಾಗಿ ಮಾಡಿದರೆ, ಪರಂಪರೆ ಸೊಗಸಾಗಿ ವಿಸ್ತರಿಸುತ್ತದೆ. ಸಂಸ್ಕೃತಿಯ ಯಶೋಗಾನ ಕೇಳಿಸುವಂತಾಗುತ್ತದೆ. ಬದುಕಿನ ಎಲ್ಲ ವಲಯಗಳ ಸಮಗ್ರ ಆಕರಗಳನ್ನು ಸೂಕ್ತಾನ್ವಯವಾಗಿ ಬಳಸಿಕೊಂಡರೆ ಇತಿಹಾಸವೂ ಸಮಗ್ರವಾಗುತ್ತದೆ. ಸಮುದಾಯ ನಿರ್ಮಿಸಿದ ಆವರಣ ಇತಿಹಾಸ ಸೃಷ್ಟಿಗೆ, ಸಂಸ್ಕೃತಿಗೆ ಪ್ರೇರಕವಾಗಿರಬಹುದು. ಸಮುದಾಯ ಸಮ್ಮತಿಗೆ, ಸಕಲರಿಗೂ ಲೇಸಾಗುವ ಆಚರಣಾ ಘಟನೆಗಳು ಜೀವನ ಪದ್ಧತಿಯಾದಾಗ ಜನರ ಸಂಸ್ಕೃತಿ ಐತಿಹಾಸಿಕವಾಗುತ್ತದೆ. ಇದೆ ಜನಮುಖಿತ್ವ

ಈ ಹಿನ್ನೆಲೆಗಳಲ್ಲಿ ಇತಿಹಾಸ ಪರಿಣಾಮಕಾರಿ ಘಟನೆಗಳ ನೇರ ನಮೂದಿನಷ್ಟಕ್ಕೆ ಸೀಮಿತಗೊಳ್ಳುವುದೆ ? ಎಂಬುದನ್ನು ಪರಿಶೀಲಿಸಬೇಕು. ನಡೆದ ಘಟನೆಗಳನ್ನು ಸಂದರ್ಭವನ್ನು ವಿವರಿಸುವ ಶಬ್ದಗಳನ್ನು ಬಿಡಿಸಿ ಬಿಡಿಸಿ ನೋಡಬೇಕು. ಒಟ್ಟಾರೆ ಘಟನಾ ಭಾವವನ್ನು, ಸೃಷ್ಟಿಕಾರಣವನ್ನು ತಿಳಿಯಬೇಕು. ಆಗ ಅವುಗಳು ಸಾಂದರ್ಭಿಕ ಅರ್ಥಗಳೊಡನೆ ದಾಖಲಾಗಿರುವುದು ಕಾಣಬರುತ್ತದೆ. ಆಯಾ ಕಾಲದಲ್ಲಿ ಆ ಶಬ್ದಗಳಿಗಿದ್ದ ಅರ್ಥದಿಂದಲೂ ಇತಿಹಾಸಿಕ ಒಳಸಂಗತಿಗಳು ತಿಳಿಯಲು ಸಾಧ್ಯವಾಗುತ್ತದೆ. ಅಲ್ಲದೆ ನಿಘಂಟು ಸಾಧಾರಿಸಿದ ಪ್ರಯೋಗಗಳಿಂದ ನೀಡಿರುವ ಅರ್ಥವನ್ನು ಹಿಂದೆ ಹಾಕುತ್ತದೆ. ಮುಂದೆ ಹೋಗಿ ಹೊಸ ಅರ್ಥಗಳನ್ನು ಇತಿಹಾಸ ನವೋನ್ಮೇಷವಾಗಿ ಪ್ರಕಟಿಸುತ್ತದೆ. ಉದಾಹರಣೆ ಎಂದರೆ ಕೊಡಗಿನ ಕ್ರಿ.ಶ. ೧೦೬೫ರ ಯಡೂರು ಶಾಸನದಲ್ಲಿ 'ಅಯ್ಯನಂಕಕಾರ' ಎಂಬ ಶಬ್ದ ದೊರೆ ದುದ್ದರಸನಿಗೆ ಅನ್ವಯಗೊಳಿಸಿ ಹೇಳಿದೆ. 'ಅಂಕಕಾಜಿ' ಎಂಬ ಶಬ್ದಕ್ಕೆ ನಿಘಂಟು 'ಯುದ್ಧವೀರ' ಎಂಬ ಶಬ್ದಕ್ಕೆ ನಿಘಂಟು 'ಯುದ್ಧವೀರ' ಎಂದು ಸಾಮಾನ್ಯ ಅರ್ಥವನ್ನು ನೀಡಿದೆ. ಆದರೆ ಈ ಸಂದರ್ಭಕ್ಕೆ ಅದು ಸಮರ್ಪಕ ಅರ್ಥವೆನಿಸುವುದಿಲ್ಲ. ಕಾರಣ ಈ ಶಾಸನವು ದೊರೆತಿರುವ ಪ್ರದೇಶವು ಮರೀಯ ನೆಲೆಯಲ್ಲಿ ಬೆಳೆದು ಬಂದಿರುವಂಥದು. ರೈಸರೇ ಹೇಳಿರುವಂತೆ ಕೊಡಗಿನ ಕದಂಬರ ವಂಶಿಕ ದುದ್ದರಸನು ಶಾಸನೋಕ್ತವಾಗಿ 'ಶಿವಪಾದಶೇಖರ, ಅಯ್ಯನಂಕಕಾರ' ನಾಗಿದ್ದಾನೆ. ಇಲ್ಲಿ 'ಅಯ್ಯ' ಮತ್ತು 'ಅಂಕಕಾರ' ಶಬ್ದಗಳನ್ನು 'ಶಿವಪಾದಶೇಖರ' ಎಂಬ ಆಚರಣಾ ನಿಷ್ಠೆಯ ಹಿನ್ನೆಲೆಯಲ್ಲಿ ಗಮನಿಸಿದರೆ ದುದ್ದರಸನು ಶಿವಧರ್ಮದ ಗುರುವೊಬ್ಬನ ನಿಷ್ಠಾವಂತ ವೀರಭಕ್ತನಾಗಿದ್ದ ಎಂಬ ಅರ್ಥ ಸ್ಫುರಿಸುತ್ತದೆ. ಅಲ್ಲದೆ ಯಡೂರಿಗೆ ಸುಮಾರು ಅರ್ಧಮೈಲಿ ದೂರದಲ್ಲಿರುವ ತೊರೆ ಬಳಿಯ ಜಯಮಲ್ಲಿಕಾರ್ಜುನ ಗುಡಿಯ ಇರುವ ಅಜ್ಜಿಮಠದ ಗುರುವಿನತ್ತ ಈ ಶಬ್ದ ಕೈದೋರುವಂತಿದೆ ; ಆ ಗುರುಮಠದ ಪ್ರಾಚೀನತೆಯನ್ನು ಸೂಚಿಸುವಂತಿದೆ. ಕ್ರಿ.ಶ. ೧೧೬೪ರ ವೀರಶೈವ ಜಂಗಾಳ್ವರ ಕಾಲದ ಹೊಸ ಶಾಸನವೂ ಜಯಮಲ್ಲಿಕಾರ್ಜುನ ಗುಡಿ ಬಳಿಯ ಈ ಮಠದ ಆವರಣ ಹಾಗು ರಾಜ ಗೌರವದ ಸಂಕೇತಗಳನ್ನು ನೀಡುತ್ತದೆ. ಹೀಗಾಗಿ ಶಬ್ದದ ಅರ್ಥೈಸುವಿಕೆಯೂ ಇತಿಹಾಸ ಪದರಗಳನ್ನು ಹರಡುತ್ತದೆ.

ನಂಜನಗೂಡು ತಾ. ನಗರ್ಲೆ ಗ್ರಾಮದ, ೧೦ನೇ ಶತಮಾನದ ಶಾಸನದಲ್ಲಿ 'ನಗರಲ' ಎಂಬ ಶಬ್ದವಿದೆ. (ನಂ. ಗೂ. ೨೩೯) 'ವಿದ್ಯಾದಾನಂ ದೇವಾರಂಗೆಯ್ವ ಬ್ರತಿಗಳುಣ್ಬನ್' ಎಂಬ ಸಾಲೂ ಇದೆ.

'ನ ಗರಲ' ಎನ್ನುವಲ್ಲಿ ಗರಲ = ವಿಷವು, ನ – ಇಲ್ಲದ, ಪರಿಹಾರವಾಗುವ ಪ್ರದೇಶ, ಅರ್ಥಾತ್ (ಪೌರಾಣಿಕ) 'ವಿಷಪ್ರಹರಣ ಕ್ಷೇತ್ರ' ಎಂಬ ಅರ್ಥ ಒದಗುತ್ತದೆ. ನಂಜನಗೂಡಿನಲ್ಲಿಯ ಪ್ರದೇಶವೊಂದಕ್ಕೂ (ಪರಶುರಾಮ ಕ್ಷೇತ್ರ) ಇದೇ ಹೆಸರಿದೆ. ಅಂದರೆ ೧೦ನೇ ಶತಮಾನದಲ್ಲಿ ನಂಜನಗೂಡು ಪ್ರದೇಶವು ಇಂದಿಗೆ ಸುಮಾರು ೩ ಮೈಲಿ ದೂರದಲ್ಲಿರುವ, ಕಪಿಲಾ ನದಿಯ ದಕ್ಷಿಣಕ್ಕೇ ಇರುವ 'ನಗರ್ಲೆ'ಯವರಿಗೆ ನಂಜನಗೂಡು ಎಂದು ಕರೆಸಿಕೊಳ್ಳುತ್ತಿದ್ದಿರಬೇಕು ಎಂಬ ಶಬ್ದಾರ್ಥ ಆಧಾರಿತ ಇತಿಹಾಸವೂ ಇಲ್ಲಿ ಸೂಚನೆಗೊಳ್ಳುತ್ತದೆ. ನಗರ್ಲೆಯಲ್ಲಿ 'ನನ್ನಯ್ಯ ದೇಗುಲ' ಎಂಬ ಶಾಸನೋಕ್ತ (ಕ್ರಿ.ಶ. ೧೦ನೆಯ ಶತಮಾನ) ಶಿವದೇಗುಲವೂ ಇದೆ. ನಂಜುಂಡನಿಗೆ ಅನ್ವಯವಾದ ಹೆಸರಾಗಿಯೂ ಕಾಣುವಂತಿದೆ.

ಎರಡನೆಯದಾಗಿ, ನಗರ್ಲೆಯಲ್ಲಿ ವಿದ್ಯಾದಾನಕ್ಕೆ ಹಾಗೂ ದೇಗುಲ ಕಟ್ಟುವ ಯತಿಗಳು ಉಣ್ಣುವುದಕ್ಕೆ ನೀಡಿರುವ ದಾನ ಎಂಬ ಅಭಿಪ್ರಾಯ ಶಾಸನ ಸಂಪುಟದ ವಿವರಣೆಯಲ್ಲಿ ಇದೆ. ವಿದ್ಯಾರ್ಥಿಗಳಿಗೆ ಆಶನ ವ್ಯವಸ್ಥೆ ಎಂದರೆ, ಅರ್ಥ ಹೊಂದಿಕೆ ಆಗುತ್ತದೆ. ಆದರೆ 'ದೇಗುಲ ಕಟ್ಟುವ ಯತಿಗಳಿಗೆ' ಉಣ್ಣಲು, ವ್ಯವಸ್ಥೆ, ಎಂದರೆ ತಾಳೆ ಆಗದ ಇತಿಹಾಸದ ಅರ್ಥವಾಗುತ್ತದೆ. ಕಾರಣ ತಮಿಳು ಶಾಸನವಾಗಿರುವಲ್ಲಿ 'ದೇವರಾಂ ಗೆಯ್ವ' ಅಂದರೆ ತೇವಾರಗಳನ್ನು (ತಮಿಳುನಾಡಿನ ಮಹಾತ್ಮಾಚಾರ್ಯರು ಶಿವಶರಣರು ಹಾಡಿದ ಭಕ್ತಿ ಸ್ತೋತ್ರಗಳೇ ತೇವಾರಗಳು) ಹಾಡುವ ಅರ್ಥಾತ್ ದೇಗುಲದಲ್ಲಿ ಶಿವಭಕ್ತಿಗೀತೆಗಳನ್ನು ಹಾಡುವ ಯತಿಗಳಿಗೆ ಅಶನ ವ್ಯವಸ್ಥೆ ಎಂದು ಅರ್ಥೈಸಿಕೊಂಡರೆ ಸೂಕ್ತವೆನಿಸುತ್ತದೆ. ಕಾರಣ ಶಾಸನದಲ್ಲಿ ನನ್ನಯ್ಯ ದೇಗುಲವೆಂಬ ಶಿವಾಲಯದಲ್ಲಿ ಈ

ಯತಿಗಳಿಂದ ವಿದ್ಯಾರ್ಥಿಗಳಿಗೆ ವಿದ್ಯಾದಾನವಾಗುತ್ತಿತ್ತು. ತಮಿಳು ಶಿವಶರಣರ ಗೀತೆಗಳನ್ನು ಹೇಳಿಕೊಡುತ್ತಿದ್ದ ಅವರಿಗೆ ಅಶನ ವ್ಯವಸ್ಥೆಗಾಗಿ ಭೂದಾನವಾಗಿತ್ತು ಎಂಬ ಅರ್ಥವೂ ಸೂಚಿತವಾಗುತ್ತದೆ.

ಇನ್ನು 'ಮೊದಲ್ಕಾವೇರಿಯಂ ಮಿನ್ದು ರಾಮೇಶ್ವರ ಮರ್ಚಿ' ಎಂಬ ಮಡಿಕೇರಿಯ ಶಾಸನದ ಸಾಲಿಗೆ first bathing in the Kaveri and worshipping Rameshwara ಎಂದು ಶಾಸನ ಸಂಪುಟದ ಅನುವಾದವಿದೆ ಕೊಡಗಿನ ಸಾಂಸ್ಕೃತಿಕ ಹಾಗೂ ಕಾವೇರಿಯ ಭೌಗೋಳಿಕ ಪರಿಸರದ ಹಿನ್ನೆಲೆಯಲ್ಲಿ ಇದನ್ನು ತಲಕಾವೇರಿಯಲ್ಲಿ ಮಿಂದು, ರಾಮೇಶ್ವರನನ್ನು ಅರ್ಚಿಸಿ, ಎಂದು ಅರ್ಥೈಸಿಕೊಳ್ಳುವುದೇ ಸೂಕ್ತ.

ಚಾಮರಾಜನಗರದ ಮಲೆಯೂರು ಬಸದಿಯ ಕ್ರಿ.ಶ. ೧೪೨೨ರ ತಾಮ್ರ ಶಾಸನವು ಕನಕಗಿರಯ ಚೆನ್ನಬಸದಿಯ ವಿಜಯನಾಥನಿಗೆ ಅರ್ಪಿಸುವ ಆದಾಯಕರವೊಂದನ್ನು 'ವೀರಣ್ಣ ವರ್ತನೆ ಗ ೧' ಎಂದು ಉಕ್ತಮಾಡಿದೆ. ಶಾಸನ ಸಂಪುಟದ ಆಂಗ್ಲನುವಾದದಲಿ **ವರ್ತನೆ** ಶಬ್ದಕ್ಕೆ regular supply ಎಂದು ನಿಯಮಿತ ಸಾಮಾನು ಸರಬರಾಜು, ಎಂಬ ಅರ್ಥ ನೀಡಿದೆ. ಆದರೆ ಇದು ವೀರಭದ್ರ ದೇವರಿಗೆ ವಡಬು ಹೇಳುವ ವೀರಗಾಸಿಗಳ ಉಗ್ಗಡನೆಯ ಸಂಬಂಧವಾಗಿದೆ. ವೀರಗಾಸಿಗಳಿಗೆ ಬರುವ 'ಆದಾಯದ' ಕರ ನೀಡಿಕೆಯ ಭಾಗ ಎಂದು ಅರ್ಥ ಮಾಡುವುದು ಸಂಗತವೆನಿಸುತ್ತದೆ. ಯಕ್ಕೋಟಿ ಜಿನಾಲಯಗಳಲ್ಲಿ ಕೆಲವು ಶೈವ ಚಿಹ್ನೆಗಳು, ಆಚಾರಗಳ ಅಳವಡಿಕೆಗಳು ಇವೆ. ಮಲೆಯೂರು ಬಸದಿ ಒಂದು ಯಕ್ಕೋಟಿ ಜಿನಾಲಯವಾಗಿ, ವೀರಭದ್ರನ ಆಚಾರವೊಂದನ್ನು ಅಳವಡಿಸಿಕೊಂಡಿತ್ತು ಎಂಬ ಐತಿಹಾಸಿಕ ಸೂಚನೆ ಇಲ್ಲಿ ದೊರಕುವಂತಾಗುತ್ತದೆ.

ಹೀಗೆಯೇ 'ವೀರಸಿಂಹಾಸನ' ಎಂಬ ಶಬ್ದಕ್ಕೆ ವಾಚಿಕವಾಗಿ 'Throne of heros' ಎಂದು ವೀರಶೈವ ಮಠವೊಂದರ ಸಂದರ್ಭದಲ್ಲಿ ಆಂಗ್ಲಭಾಷಾ ಅನುವಾದ ನೀಡಲಾಗಿದೆ. ಅದು ವಾಸ್ತವವಾಗಿ ಆ ವೀರಶೈವ ಪೀಠದ ಗೋತ್ರಪುರುಷನ ನಾಮಸಂಕೇತವಾಗಿ ಬಂದಿರುವ ಶಬ್ದ. ಸಾಂಸ್ಕೃತಿಕ ಇತಿಹಾಸದ ಅರಿವಿದ್ದಾಗ ಮಾತ್ರ ಈ ಅರ್ಥವನ್ನು ಬಿಡಿಸಲು ಅನುಕೂಲವಾಗುತ್ತದೆ.

ಮಹಾರಾಷ್ಟ್ರದ ಬೀಡ್ ಜಿಲ್ಲೆಯ ಅಂಬೆ ಜೋಗೈ ತಾ. ಧರ್ಮಪುರಿ ಶಾಸನದಲ್ಲಿ ಹೈಹಯ ವಂಶಕ್ಕೆ ಸಂಬಂಧಿಸಿದಂತೆ '.....ಮಧ್ಯದೇಶಾಧಿಪತಿ ಹೈಹಯಾನ್ವಯ ಪ್ರಸೂತಃ ಭದ್ರಕಾಳೀ ಲಬ್ಧವರ ಪ್ರಸಾದಂ ರಾಜ ಕನಕದಂಡ ಚಾಮರ ವಿರಾಜಿತಃ' ಎಂದಿದೆ. ಇಲ್ಲಿ ಹೈಹಯ ದೊರೆಗಳು, ಭದ್ರಕಾಳಿ ಆರಾಧಕರು, ಕನಕದಂಡ ವಿರಾಜಿತರು, ಎಂಬ ಐತಿಹಾಸಿಕ ವಿಷಯ ತಿಳಿಯುತ್ತದೆ. ಅಲ್ಲದೆ ಈ ವಂಶದ ದೊರೆ ರಾಜೇಂದ್ರಚೋಳ ಶ್ರೀಶೈಲ ನಿಡುಮಾಮಿಡಿ ಪೀಠದ ಜ॥ ಚಂದ್ರಗುಂಡ ಶಿವಾಚಾರ್ಯರ ಶಿಷ್ಯನೆಂದು ಪೀಠದ ಚರಿತ್ರೆಯಲ್ಲಿದೆ.

ಕೊಡಗಿನ ಶಾಸನಗಳಲ್ಲಿ ಬರುವ 'ಪೆಣ್ಣೆಕಡಜ್ಗ' ಶಬ್ದಕ್ಕೆ ಪಸ್ತ್ರ ಜಮೀನಿನ ಅರ್ಥಾತ್ ಜನ ಸಹಿತವಾದ ರಾಜಯೋಗ್ಯ ಕೃಷಿ ಜಮೀನಿನ ರಕ್ಷಣಾತ್ಮಕ ದಿಬ್ಬಗಳೆಂದು ಅರ್ಥೈಸಿ ಕೊಳ್ಳುವುದು ಅಲ್ಲಿನ ಭೌಗೋಳಿಕ ಹಾಗೂ ಪರಂಪರೆಯ ಹಿನ್ನಲೆಯಲ್ಲಿ ಸೂಕ್ತ. ಲಕ್ಷ್ಮಣತೀರ್ಥ ನದಿಯನ್ನು 'ಪೆದ್ದೊರೆಗಜ್' ಎಂದು ಕರೆದಿರುವುದು ; ಜಡಲ ಎಜೆಯಂಗ, ತ್ರಿನಮೇರ ದೇವಣ್ಣ (ಕ್ರಿ.ಶ. ೧೩೫೯), ಎಂಬ ಶಬ್ದಗಳಿಂದ ಅಲ್ಲಿನ ಮನೆತನದ ಹೆಸರಿನ ಇತಿಹಾಸ ತಿಳಿಯುವುದು, ಇತ್ಯಾದಿಗಳು. ಇತಿಹಾಸಕ್ಕೆ ಕುತೂಹಲಕಾರಿ ಅಂಶಗಳನ್ನು ಒದಗಿಸಿಕೊಡುತ್ತವೆ.

ಬಾಳೆಹಳ್ಳಿಯ (ಬಾಳೆಹೊನ್ನೂರು) ಶಾಸನಗಳಿಂದ ವಿಜಯನಗರದ ಸಂಗಮವಂಶಿಕ ದೊರೆ ಬುಕ್ಕಣ್ಣನ ಕಾಲದಲ್ಲಿಯೆ ಕ್ರಿ.ಶ. ೧೩೬೭ರಲ್ಲಿಯೆ ವೀರಭದ್ರನಿಗೆ ಭೂದಾನಗಳನ್ನು ನೀಡಿರುವುದರಲ್ಲಿ, ಅದರ ಪ್ರಸಿದ್ಧಿ ಹಾಗೂ ದೊರೆಗಳಿಗೆ ಬಾಳೆಹಳ್ಳಿ ಪೀಠದ ಮೇಲಿದ್ದ ರಾಜಭಕ್ತಿಯ ಅರಿವಾಗುತ್ತದೆ. ಓರಂಗಲ್ಲಿನ ಕಾಕತೀಯರಲ್ಲಿ ಹಕ್ಕಬುಕ್ಕರು ಭಂಡಾರಿಗಳಾಗಿದ್ದವರು. (ರಂಭಾಪುರಿ ಪೀಠದ ಆದಿ ಗುರುನೆಲೆ ಕೊಲ್ಲಿಪಾಕೆ ರಾಜೇಂದ್ರ ಚೋಳನ ಕಾಲದಲ್ಲಿಯೇ ಉಪರಾಜಧಾನಿ ಆಗಿತ್ತು.) ಹೀಗಾಗಿ ವಿಜಯನಗರ ಪೂರ್ವದಲ್ಲಿಯೇ ಪೀಠದಲ್ಲಿ ಭಕ್ತಿ ಗೌರವ ಹೊಂದಿದ್ದುದರ ಸೂಚನೆ ಈ ಚರ್ಯೆಗಳಿಂದ ಒದಗಬಹುದು. ಇಂತಿರುವಲ್ಲಿ ಅವು ಕ್ರಿ.ಶ. ೧೩೪೬ರ ವಿಜಯನಗರ ಸಾಮ್ರಾಜ್ಯೋತ್ಸವ ಸಂದರ್ಭದಲ್ಲಿ ಶೃಂಗೇರಿಗೆ ಗುರುಗಳಾಶೀರ್ವಾದ ಪಡೆಯಲು ಹೋದಂತೆ ಶ್ರೀಮದ್ರಂಭಾಪುರಿ ಪೀಠದ ಗುರುಗಳ ಆಶೀರ್ವಾದ ಪಡೆದು ಹೋಗಿರುವ ಸಾಧ್ಯತೆಗಳನ್ನು ಸೂಚಿಸುತ್ತವಲ್ಲವೆ !

ಪೀಠದಲ್ಲಿ ಶರನ್ನವರಾತ್ರಿ ದಸರಾ ದರ್ಬಾರ್ ನಿರಂತರವಾಗಿ ನಡೆದು ಬರುತ್ತಿದೆ. ಇದು ಪೀಠದ ನೆಲೆಯಷ್ಟಕ್ಕೆ ಸೀಮಿತವಾಗಿತ್ತು, ಕಳೆದ ೫೦ ವರ್ಷಗಳಲ್ಲಿ, ನಾಡಿನ ವಿವಿಧ ಕಡೆ ಪೀಠದ ಈ ಸಮಾರಂಭದ ಆಚರಣೆ ಭಕ್ತರ ಆಶಯದಿಂದ ವ್ಯಾಪಿಸಿದೆ. ಬಹುಶಃ ವಿಜಯನಗರಸರ ದಾನದ ಸಂದರ್ಭಗಳು, ಗುರುಗೌರವ ಪೀಠದಲ್ಲಿ ಶರನ್ನವರಾತ್ರಿಯ ನಿರಂತರತೆಗೆ ದಾನದ ಸಂದರ್ಭಗಳು, ಗುರುಗೌರವ ಪೀಠದಲ್ಲಿ ಶರನ್ನವರಾತ್ರಿಯ ನಿರಂತರತೆಗೆ ಕಾರಣವಾಗಿರಬಹುದೆ

ಎನ್ನಿಸುತ್ತಿದೆ. ಈ ಸಂಬಂಧವು ಕ್ಷೇತ್ರನಾಥ 'ವೀರಭದ್ರ'ನ ಕಾರಣವೂ ನಡೆದು ಬಂದಿರಬಹುದೆನಿಸುತ್ತದೆ.

ಶಿಲ್ಪಗಳ ದೃಷ್ಟಿಯಿಂದ ಕ್ರಿಪೂ. ಸು. ೩೦೦೦ ವರ್ಷಗಳ ಹಿಂದಿನ ಸಂಸ್ಕೃತಿಯ ಮಾತೃದೇವತೆ ಹಾಗೂ ನೃತ್ಯಬಾಲೆಗಳಂಥ ಟೆರಕೊಟ್ಟ ವಿಗ್ರಹಗಳು, ಪುಷ್ಪಗೂಳಿ, ರುದ್ರಪಶುಪತಿ ಮುದ್ರಿಕಾ ಶಿಲ್ಪಗಳು ನಮಗೆ ದೊರೆತಿವೆ. ಇವುಗಳ ನಂತರ ಆದರೆ ಕ್ರಿ.ಶ.ದ ಆರಂಭದ ವೇಳೆಗೆ ಆ ನಡುವಣ ಅವಧಿಯಲ್ಲಿ ಶಿಲ್ಪಗಳು ಒಡಮೂಡಲಿಲ್ಲವೆ ? ಜಾನಪದ ರೂಪಗಳೂ ಕಾಣಬರಲಿಲ್ಲವೆ ! ಎಂಬ ಬಗ್ಗೆಯೂ ನಾವು ಪರಿಶೀಲಿಸಬೇಕೆನಿಸುತ್ತದೆ.

ಕೊಡಗಿನ ಕೊಳತ್ತೋಡು ಬೈಗೋಡುವಿನಲ್ಲಿಯ ಭೀಮಾಕಾರದ ಆಕರ್ಷಕ ಪ್ರಾಗೈತಿಹಾಸಿಕ ನಿಲುವುಗಳಿಗೆ ಅಯ್ಯಪ್ಪ, ಸುಬ್ರಮಣ್ಯ ಎಂದು ಇಂದಿಗೂ ಪಾರಂಪರಿಕ ಪೂಜೆ ನಡೆಯುತ್ತಿದೆ. ಇಂಥ ಆಚರಣೆಗಳು ನಮ್ಮ ಕ್ರಿಪೂ. ಕಾಲದ ಆರಾಧನಾ ಶಿಲ್ಪ ಸ್ವರೂಪದ ಒಂದು ಮುಖವನ್ನು ಸೂಚಿಸುತ್ತವೆ ಎನ್ನಬಹುದು. ಗವಿ ಹಾಗೂ ಬಂಡೆಗಳ ಮೇಲಿನ ಪ್ರಾಗೈತಿಹಾಸಿಕ ಚಿತ್ರಗಳೂ ಇದಕ್ಕೆ ಪೂರಕವೆನ್ನಿಸಬಹುದು. ಇತಿಹಾಸ ಕಾಲದ್ದೆಂದರೂ ಜಗಳೂರು ತಾ. ಕೊಡದಗುಡ್ಡದ ವೀರಣ್ಣನ ಬಂಡೆ ಮೇಲಿನ, ರೇಖಾ-ಉಬ್ಬು ಶಿಲ್ಪ ಈ ಪಥದಲ್ಲಿ ಸಾಗಿಬಂದ ಕಾಲಾಂತರದ ಒಂದು ಆರಾಧನೆಯ ಕುರುಹಾಗಿ ಕಾಣುತ್ತದೆ.

ರೈತ ಹಾಗೂ ರೈತ ಚಳುವಳಿಯ ಕುರಿತಾದ ಉದಾಹರಣೆಗಳೂ ನಮ್ಮ ಪ್ರಾಚೀನ ಶಾಸನಳಗಲ್ಲಿವೆ. ಬಳ್ಳಿಗಾವೆಯ ಕ್ರಿ.ಶ. ೯೯೦ರ ದಾನಶಾಸನದ ಶಾಪಾಶಯದಲ್ಲಿ ದಾನವನ್ನು ಕೆಡಿಸಿದರೆ ಕೆಸರು ಗದ್ದೆಯಲ್ಲಿ ಒಕ್ಕಲುತನ ಮಾಡುವವನು ಬಿತ್ತಿದ ಬೆಳೆ, ಬೆಳೆಯಾಗದೆ ಕೆಡುತ್ತದೆ. ಕಾಯ್ದುವನಿಗೆ ಬೆಳೆದ ಬೆಳೆ ಕಳಕಳಿಯಾಗಿ ಬೆಳೆದು ಬಂದು ಕಲ್ಯಾಣಕರವಾಗುತ್ತದೆ ಎಂಬ ಅರ್ಥದಲ್ಲಿ ಹೇಳಿದೆ. ಒಲ್ಲಿ ರೈತರ ಹೊಣೆ, ನೈತಿಕ ಶೀಲತೆ ಕುರಿತು ಹೇಳಿ, ಕೃಷಿಯ ಪ್ರಾಮುಖ್ಯವನ್ನು ಸೂಚಿಸಿದಂತಿದೆ. ಕೊಡಗಿನ ಕೃಷಿ ಜಾನಪದ ಗೀತೆಗಳಲ್ಲಿ ಇಂಥದೇ ಮಾತು ಬರುತ್ತದೆ.

ಕ್ರಿ.ಶ. ೮ನೇ ಶತಮಾನದ ಮಾನವಳಿ ಶಾಸನದಲ್ಲಿ (ನಾಲ್ಕೆಟ್ಟಿನ ಬಳನ ಕೆಡಿಸಿ, ಅಜ್ಜೊಟ್ಟುಮಾಡಿ) ಬಿತ್ತಿದ ಭೂಮಿಯ ಬಾಳನ್ನು ಕೆಡಿಸಿ ಬಂದವನನ್ನು ಅಥವಾ ಕಂದಾಯ ಹೆಚ್ಚಿಸ ಬಂದ ಅಧಿಕಾರಿಯು ಆಕ್ರಮಣ ಧಾರ್ಷ್ಟ್ಯವನ್ನು ತೋರಿಸಿದಾಗ ಗ್ರಾಮೀಣ ರೈತರು ಪ್ರತಿಭಟಿಸಿದ ವಿಷಯವಿದೆ. ಈ ಶಾಸನೋಕ್ತ ಸಂಗತಿ ಬಹುಶಃ ಮೊದಲ ಪ್ರಾಚೀನ ರೈತ ಚಳುವಳಿಯ ಒಂದು ಆಯಾಮವೆನಿಸುತ್ತದೆ.

ಹೊಸ ಶೋಧಗಳ, ಚಿಂತನೆಗಳ ದೃಷ್ಟಿಯಿಂದ ಕೆಲವು ಉದಾಹರಣೆಗಳನ್ನು ಹೇಳಬಹುದು. ಡಾ. ಡಿ.ಪಿ. ಪರಶಿವಮೂರ್ತಿ ಅವರು, ನಾಗಮಂಗಲ ತಾಲೂಕಿನ ಕಾಮಿಡಿಹಳ್ಳಿಯಲ್ಲಿನ ಕಂಡು ಬಂದ ಕ್ರಿ.ಶ. ೧೫೨೧ರ ಹೊಸ ಶಾಸನದ ೩೧ ಸಾಲಿನ ಸಂಗತಿಯಾಗಿ : ಕೃಷ್ಣದೇವರಾಯನ ಕಾಲದಲ್ಲಿ ಯಡಿಯೂರು ತೋಂಟದ ಸಿದ್ದಲಿಂಗೇಶ್ವರರು ಹಂಪೆ ವಿರೂಪಾಕ್ಷ ಸನ್ನಿಧಿಗೆ ಬಂದದ್ದು ; ಸಿದ್ದಲಿಂಗೇಶ್ವರರಿಗೆ ಕೃಷ್ಣದೇವರಾಯನ ರಾಣಿ ಚಿನ್ನಾದೇವಿ ಕಾಮಿಡಿಹಳ್ಳಿಗೆ ಹಿಂದಿನ ಹೆಸರಾಗಿದ್ದ ಬಸವೋಜಯನ ಪುರವೆಂದು ಮತ್ತೆ ನಾಮಕರಣ ಮಾಡಿ ಅದನ್ನು ಅವರಿಗೆ ದಾನ ಮಾಡಿದ ವಿಷಯ ; ರಾಣಿ ಚಿನ್ನಾದೇವಿಯ ತಂದೆ ನಾಗಮಂಗಲದ ಪ್ರಭು ಸಾಳುವ ಗಜಸಿಂಹ ವೀರಪ್ಪ ಒಡೆಯ ಎಂದಿರುವುದು; ಶಾಸನದ ಮೇಲ್ತುದಿಯಲ್ಲಿ ಇಷ್ಟಲಿಂಗ ಪೂಜಾನಿರತ ಯತಿ ಇರುವುದು ಎಂದೆಲ್ಲ ಇರುವ ಬಗ್ಗೆ ಪ್ರಕಟಿಸಿರುವ ಶೋಧ ಒಂದು ಗಮನಾರ್ಹ ಶೋಧವಾಗಿದೆ. ಕಾರಣ, ತೋಂಟದ ಸಿದ್ಧಲಿಂಗರಿದ್ದ ಕಾಲ ಐತಿಹಾಸಿಕವಾಗಿ ಖಚಿತವಾಗಿ ತಿಳಿದದ್ದು ಆಗಿದೆ. ಇದಕ್ಕೆ ಪೋಷಕವಾಗಿ ಯಡಿಯೂರಿನಿಂದ ಸುಮಾರು ೧೦ ಕಿ.ಮೀ. ದೂರದಲ್ಲಿ ಕಾಮಿಡಿಹಳ್ಳಿ ಇದ್ದು, ಸಿದ್ಧಲಿಂಗರ ಪ್ರಭಾವ ಸಾಮೀಪ್ಯ ಸಾರಿರುವುದು, ಚಿನ್ನಮ್ಮಾಜಿಯ ವಂಶವು ದೃಢೀಕರಣಗೊಂಡದ್ದು ಇತ್ಯಾದಿ ವಿಶಿಷ್ಟ ಅಂಶಗಳಲ್ಲಿವೆ. ಈ ಶಾಸನೋಕ್ತ ಸಂಗತಿಗೆ ಹೇರಂಬ ಕವಿ ವಿರಚಿತ ಸಿದ್ದಲಿಂಗೇಶ್ವರ ಸಾಂಗತ್ಯವು (ಸಂಧಿ ೧೭, ಪ ೭೧–೭೯), ಈ ಸಿದ್ದೇಶ್ವರರು ಮಂಗಳವಿದ್ಯಾಪುರಿಗೆ ಬಂದಾಗ ವಿದ್ಯಾನಗರದಲ್ಲಿ ಸೋಮವಾರ ವ್ರತದ ನಿಜಶೀಲೆ ಬಸಮ್ಮನು ಸಿದ್ದೇಶರರಿಗೆ ಪಾದಪೂಜೆ ಮಾಡಿ ಅರ್ಚಿಸಿದ ಸಂಗತಿಯನ್ನು ಹೇಳಿ ಸಾಹಿತ್ಯ ಸಾಕ್ಷಿಯನ್ನು ಸೂಚಿಸುತ್ತದೆ. ಹೀಗೆ ಶೋಧಕ್ಕೆ ಸಮಗ್ರತೆ ಒದಗಲು ಅವಕಾಶವಾಗುತ್ತದೆ.

ಡಾ॥ ಸೂರ್ಯನಾಥ ಕಾಮತರು ಒಕ್ಕಲುತನದ ಕುರಿತು ಮಾಡಿರುವ ವಿಶ್ಲೇಷಣೆ ; ಪ್ರೊ॥ ಲಕ್ಷ್ಮಣ್ ತೆಲಗಾವಿ ಅವರು ಮೌರ್ಯ ಶಾತವಾಹನರಿಂದ ಹಿಡಿದು ವಿಜಯನಗರ ಕಾಲದ ಪಾಳೆಪಟ್ಟಿನವರಿಗೆ ವಿವೇಚನೆ ಮಾಡಿರುವುದು ಹಾಗೂ ವಿಜಯನಗರದ ವೈಭೋಗದ ಮಿತಿಗಳನ್ನು ತಿಳಿಸಿರುವುದು; ಶ್ರೀ ಸಿ.ಟಿ.ಎಂ. ಕೊಟ್ರಯ್ಯನವರು ವಿಜಯನಗರಕಾಲದ ಶಿಲ್ಪಗಳಲ್ಲಿ ಶಿವಶರಣರನ್ನು, ಪುರಾತನರನ್ನು ಗುರುತಿಸಿರುವುದು; ಡಾ. ದೇವರಕೊಂಡಾರೆಡ್ಡಿ ಅವರ ಲಿಪಿಗಳ ಕುರಿತ ವ್ಯಾಪಕ ಸಾಧಾರ ವಿಶ್ಲೇಷಣೆ ; ಡಾ. ಎಂ.ಎಸ್. ಕೃಷ್ಣಮೂರ್ತಿ, ಡಾ. ಆರ್. ಗೋಪಾಲ್, ಟಿ.ಎಸ್. ಗಂಗಾಧರ್ ಅವರು ಕೂಡಿ ಮಾಡಿರುವ ಈಚಿನ ತಲಕಾಡು ಉತ್ಖನನ ಹಾಗು ಪುನರ್ ಪರಿಶೀಲನೆ ; ಡಾ. ಬಿ. ರಾಜಶೇಖರಪ್ಪ ಅವರು ಮಯೂರ

ಶರ್ಮನ ಚಂದ್ರವಳ್ಳಿ ಶಾಸನದ ಪಾಠ ಸಂಸ್ಕೃತ ಪಾಠವೆಂದು ಮಾಡಿರುವ ದೃಢೀಕರಣ ; ಡಾ. ಪಿ.ವಿ. ಕೃಷ್ಣಮೂರ್ತಿ ಅವರ ಕುಣಿಗಲ್ ಕೆರೆ ರಾಷ್ಟ್ರಕೂಟರ ಕಾಲದ್ದೆಂಬ ಶಾಸನೋಕ್ತ ಶೋಧ ಹಾಗೂ ಆಡಳಿತ ವಿಭಾಗಗಳ ಕುರಿತ ಲೇಖನಗಳು; ಡಾ. ಎಚ್. ಚಂದ್ರಶೇಖರ್ ಅವರು ದೇವದುರ್ಗದ ಬಂಡೆಗಳಲ್ಲಿ ಮಾಡಿರುವ ಮತ್ಸ್ಯಹನುಮ ಮತ್ತು ಶ್ರೀರಂಗನಾಥನ ಉಬ್ಬು ಶಿಲ್ಪಗಳ ಶೋಧ ; ಡಾ. ಎಚ್.ಎಸ್. ಗೋಪಾಲರಾವ್ ಅವರು ಕವಿರಾಜಮಾರ್ಗದ ಶ್ರೀ ವಿಜಯ, ಮಣ್ಣೆಯವ ಎಂದಿರುವುದು ; ಡಾ. ಎಂ.ಜಿ. ಮಂಜುನಾಥ್ ಅವರ ಗಂಗರ ಕಾಲದ ರಕ್ತತಟಾಕದ ಕುರಿತ ಕ್ಷೇತ್ರ ಶೋಧ; ಡಾ. ಬಿ.ಸಿ. ರಾಕೇಶ್ ಅವರ ನಾಗರಹೆಡೆ ಆವೃತ ಭೈರವ ಪಾದವನ್ನು ಶಾಸನ ಸಹಿತವಾಗಿ ಕಂಡು ಹಿಡಿದಿರುವುದು; (ಆಂಧ್ರ, ಕರ್ನಾಟಕದಲ್ಲಿ, ವೀರಭದ್ರ, ಭದ್ರಕಾಳಿ ಪಾದಗಳ ನಾಗರಹೆಡೆಯ ಸುತ್ತುವರಿ ಇದ್ದು, ಬೌದ್ಧಸಿದ್ಧರ ಕಾರಣ ಮಚಲಿಂದನಾಗ ಶೈವೀಕರಣಕೊಂಡು ತಳೆದ ರೂಪವೂ ಪ್ರಚಲಿತವಾಗಿರುವ ಹಿನ್ನಲೆಯಲ್ಲಿ, ಈ ಶೋಧ ಗಮನಾರ್ಹವಾಗಿದೆ) ಡಾ. ಪಿ.ಎನ್. ನರಸಿಂಹಮೂರ್ತಿ ಅವರ ಸಾಂತರ ಕುರಿತ ಶಾಸನೋಕ್ತ ಹೊಸ ಇತಿಹಾಸ ವಿವರಣೆ ; ಡಾ. ಎ.ಕೆ. ಶಾಸ್ತ್ರಿ ಅವರ ಕಡತ ಪ್ರತಿಪಾದನೆಗಳು, ಗುಂಡಾಜೋಯಿಸರ ದಾಖಲೆಗಳು ; ಡಾ. ಜ್ಯೋತ್ಸ್ನಾ ಕಾಮತರ ಸಮಾಜಮುಖಿ ಸಾಂಸ್ಕೃತಿಕ ಪ್ರಬಂಧಗಳು ; ಡಾ. ಬಿ. ಲೀಲಾ ಅವರ ಅಧಿಕಾರಿ ವರ್ಗದ ವ್ಯಕ್ತಿಗಳ ಸೇವೆಯ ಕುರಿತ ಆಧಾರಯುಕ್ತ ವಿವರಗಳು ; ಡಾ. ವಸಂತಲಕ್ಷ್ಮಿ ಅವರ ಸರಸ್ವತಿ ಶಿಲ್ಪ ಹಾಗೂ ಜಾನಾಂಗಿಕ ಆಚಾರ ವಿಚಾರಗಳ ಕುರಿತ ಶಾಸ್ತ್ರೀಯ ಲೇಖನಗಳು ; ಎಂ.ಬಿ. ಪಾಟೀಲರ ಆರ್ಥಿಕ ಚಿಂತನಗಳ ಒಳನೋಟಗಳು, ಕಲ್ಲನಗೌಡ ತಿ. ಪಾಟೀಲರ ಗ್ರಾಮೀಣ ಬದುಕಿನ ಶೋಧಕ ಬರಹಗಳು ; ಡಾ. ಎಸ್.ಕೆ. ಜೋಶಿ ಅವರ ಕೋಟೆ ಕೊತ್ತಲಗಳ ನಕ್ಷಾಧಾರಿತ ವಿಶ್ಲೇಷಣೆ – ಹೀಗೆಯೆ ಅಕಾದೆಮಿಯ ಇತರ ಸದಸ್ಯರ ವಿವಿಧ ಶೋಧನೆಗಳು, ಚಿಂತನೆಗಳು ನಮ್ಮ ಗಮನ ಸೆಳೆಯುತ್ತವೆ.

ಶಾಸನ ಸಂಪುಟದಲ್ಲಿ ಸದ್ಯ ಬಾಳೆಹಳ್ಳಿ – ಬಾಳೆಹೊನ್ನೂರು ಪೀಠ, ವೀರಭದ್ರ ಇತ್ಯಾದಿ ಕುರಿತಾಗಿ ೧೮ ಶಾಸನಗಳು ಪ್ರಕಟವಾಗಿವೆ. ಇತ್ತೀಚೆಗೆ ವೀರಭದ್ರ ದೇವರಿಗೆ ದಾನದ ಹಾಗೂ ಗುರುಗಳನ್ನು ನಮಿಸಿರುವ ಸಂದರ್ಭದ ಹೊಸ ಶಾಸನವೊಂದು ಕಂಡು ಬಂದಿದೆ.

ಡಾ. ಎಫ್.ಟಿ. ಹಳ್ಳಿಕೇರಿ ಅವರು ಬಾಳೆಹೊನ್ನೂರು ಪೀಠದಲ್ಲಿರುವ ಎಸ್. ಶಿವಣ್ಣನವರು ಸಂಗ್ರಹಿಸಿದ ಹಸ್ತಪ್ರತಿ ಪುಷ್ಟಿಕೆಗಳ ಪಟ್ಟಿಯಲ್ಲಿದ್ದ ಲಕ್ಕಣ್ಣ ದಂಡೇಶನ ಶಿವತತ್ತ್ವ ಚಿಂತಾಮಣಿ, ಭಟ್ಟೋಜಿ ದೀಕ್ಷಿತನ ಸಿದ್ದಾಂತ ಕೌಮುದಿ ಚಾಮರಸನ ಪ್ರಭುಲಿಂಗಲೀಲೆ, ಷಡಕ್ಷರದೇವನ ರಾಜಶೇಖರ ವಿಳಾಸ, ವಿರೂಪಾಕ್ಷ ಪಂಡಿತನ ಚನ್ನಬಸವಪುರಾಣ, ವಾತುಲಾಗಮ, ಶಾಂತಮಲ್ಲ ಗುರುಗಳ ವ್ಯಾಖ್ಯಾನ, ಜಕ್ಕಣ್ಣನ ಸ್ವರ ಏಕೋತ್ತರ ಶತಸ್ಥಲ, ಮಗ್ಗೆ ಮಾಯಿದೇವನ ಶತಕತ್ರಯ, ಚನ್ನಬಸವಣ್ಣನ ವಚನಗಳು, ಶಿವಪೂಜಾವಿಧಿ, ಷಡ್ಚಕ್ರಸ್ತೋತ್ರ ಇತ್ಯಾದಿ ಕೃತಿಗಳನ್ನು ನಮೂದಿಸಿ, ಅವುಗಳ ಹಸ್ತಪ್ರತಿ ಲಿಪಿಕಾರರಾದ ಕೆಂಚವೀರಪ್ಪ ಸಂಗಪ್ಪದೇವರು, ರಾಚೋಟಪ್ಪ, ಸಿದ್ಧಲಿಂಗ ಗುರುಪಾದಸ್ವಾಮಿಗಳು, ಹುಚ್ಚಪ್ಪ ದೇವರು ಮುಂತಾದ ಹೆಸರುಗಳನ್ನು ದಾಖಲಿಸಿ, ಪೀಠದ ಪ್ರಾಚ್ಯಕಾವ್ಯ ಸಾಹಿತ್ಯಾಸಕ್ತಿ ಮತ್ತು ಲಿಪಿಕಾರರಿಗೆ ಕೊಟ್ಟ ಪ್ರೋತ್ಸಾಹದ ಬಗ್ಗೆ ತಮ್ಮ ಲೇಖನವೊಂದರ ಮೂಲಕ ಗಮನ ಸೆಳೆದಿದ್ದಾರೆ.

ಇಂದು ನೆಲ, ಜಲ, ನಾಡು, ನೆರೆ ಇವುಗಳ ಸಮಸ್ಯೆಗಳು ನಮ್ಮ ಮುಂದೆ ವರ್ತಮಾನದ ಹಂಗುಗಳಾಗಿ ಕಾಡುತ್ತಿವೆ. 'ನೆಲ'ದ ವಿಷಯದಲ್ಲಿ ಗಡಿತಂಟೆ ತಪ್ಪಿಲ್ಲ. ಅಚ್ಚಕನ್ನಡ ಪ್ರದೇಶಗಳು ಸೇರ್ಪಡೆಗಳು ಬಗ್ಗೆ ಸುಮುಖ ಪರಿಹಾರವಿಲ್ಲ. ಇತಿಹಾಸ ವಿದ್ದರೂ, ರಾಜಕೀಯ ಪರದೆಗಳು ಸೌಹಾರ್ದವನ್ನು ಮುಚ್ಚಿವೆ. ಕಾವೇರಿಯ ಬಗ್ಗೆ ನಮ್ಮ ಪಾರಂಪರಿಕ ಹಾಗೂ ಅನುಭೋಗಿಕ ಹಕ್ಕಿಗೆ ಪುರಾಣದ ಮಾಹಿತಿಯಲ್ಲದೆ ಇತಿಹಾಸದ ಸಾಕ್ಷಿಯೂ ಇದೆ. ಕ್ರಿಪೂ. ದಿಂದ ದೇಶಿಯ ಚರಿತ್ರೆಗಳು, ಕ್ರಿ.ಶ. ೫ನೇ ಶತಮಾನದಿಂದ ಶಾಸನೋಕ್ತ ಪುರಾವೆಗಳು ಕಾವೇರಿ ವಲಯದ ಬಗ್ಗೆ ನಮ್ಮಲ್ಲಿ ಸ್ಪಷ್ಟವಾಗಿವೆ. ಆದರೂ ಜಲದ ವಿಷಯದಲ್ಲಿ ಕಾವೇರಿ ಕುರಿತ ಐತೀರ್ಪು ನಮಗೆ ಪೂರ್ಣ ನ್ಯಾಯ ಒದಗಿಸಿಲ್ಲ, ತಕರಾರನ್ನು ತಪ್ಪಿಸಿಲ್ಲ. ಕೃಷ್ಣೆಯ ಜಲ ಸಮಸ್ಯೆಯೂ ನಮ್ಮನ್ನು ಕಾಡುತ್ತಿದೆ. ನುಡಿ ಸಮಸ್ಯೆಯಾಗಿ, ಶಾಸ್ತ್ರೀಯ ಭಾಷಾಮಾನ್ಯತೆಗೆ ಐತಿಹಾಸಿಕವಾಗಿ ಹೆಕ್ಕಿದ್ದರೂ ತಕರಾರುಗಳು ಕನ್ನಡ ಜನಮನ ತೆರಿಗೆ ನಿರಂತರ ಒತ್ತುಗಳನ್ನು ಹಾಕುತ್ತಿವೆ. ಅದನ್ನು ತಪ್ಪಿಸಬೇಕಿದೆ.

'ಬರ' ಹಾಗೂ 'ನೆರೆ' ಹಾವಳಿಗಳಿಗೆ ಮಾನವ ಸ್ಪಂದನ ಸಾಂಸ್ಕೃತಿಕವಾಗಬೇಕು. ನೈತಿಕ ಪ್ರಜ್ಞೆ ಉಕ್ಕಬೇಕು. ಆದರೆ ರಾಜಕೀಯ ಪಾರ್ಶ್ವ ಅದಕ್ಕೂ ಅಂಕೆ ಹಾಕಿದರೆ, ವರ್ತಮಾನದ ರಾಜಕೀಯ ಇತಿಹಾಸವನ್ನು ಮಂಕುಗೊಳಿಸು ವಂತಾಗುತ್ತದೆ. ಹೀಗೆಲ್ಲ ಶ್ರೀಸಾಮಾನ್ಯನಿಗೆ ಸರಳಿಕೆಯೆ ಗುತ್ತಿಗೆ ಆಗದಂತೆ, ಇತಿಹಾಸಕಾರರ ಸ್ವಯಂಸೇವೆ ಹಾಗೂ ಸಾಮೂಹಿಕ ಧ್ವನಿ, ಪಕ್ಷಪಾತವನ್ನು ಎದುರಿಸಬೇಕು. ಸ್ವಯಂ ಸೇವೆ ಹಾಗೂ ಪ್ರೇರಕ ಚರ್ಯೆಗಳಿಂದ ಸಾಮಾಜಿಕ ಹಿತೈಷಿ ಚಾಲಕರಾಗಬೇಕು.

ಕ್ಷೇತ್ರನಾಥ, ಗೋತ್ರಪುರುಷ ಶ್ರೀ ವೀರಭದ್ರನ ಪ್ರತಿಷ್ಠಿತ ನೆಲೆ ಬಾಳೆಹೊನ್ನೂರು. ಪೀಠದ ಹಾಲಿ ಶ್ರೀ ಜ॥

ಮಹಾಸನ್ನಿಧಿಯವರು, ಪೀಠಕ್ಕೆ ನೀರು ಸರಬರಾಜು ವ್ಯವಸ್ಥೆ ಮಾಡಿದ ಸಂದರ್ಭದಲ್ಲಿ ಊರಿನ ಜನತೆಗೂ ಹಂಚಿ ದೈನಂದಿನ ಬಳಕೆಗೆ ಅವಕಾಶ ಮಾಡಿ ಸಾಮಾಜಿಕ ಸೇವಾಸ್ಪಂದನ ತೋರಿದ್ದಾರೆ. ಕಷ್ಟ ಕಾಲಕ್ಕಾಗುವ ಈ ಕೃತಿ ಸಂದೇಶ ನಮಗೆಲ್ಲ ಒಂದು ಆದರ್ಶ.

ಬರ ಬಂದಾಗ, ಭೂಕಂಪವಾದಾಗ ಪಾದಯಾತ್ರೆ ಮಾಡಿ ನಿಧಿ ಸಂಗ್ರಹಿಸಿ ಹಾಗೂ ಪೀಠದ ವತಿಯಿಂದ ೧೦ ಲಕ್ಷ ರೂ. ದೇಣಿಗೆ ಸಂತ್ರಸ್ತರಿಗೆ ನೀಡಿದ್ದಾರೆ. ನೆರೆ, ಪ್ರವಾಹದ, ಸಂತ್ರಸ್ತರ ನೆರವಿಗಾಗಿ ಪಾದಯಾತ್ರೆ, ಮಾಡಿ ನಿಧಿ ಸಂಗ್ರಹಿಸಿ, ಪೀಠದಿಂದಲೂ ದೇಣಿಗೆ ನೀಡಿದ್ದಾರೆ. ನೆರೆ ಹಾವಳಿಯಿಂದ ಕಂಗೆಟ್ಟಿರುವ ಸಂತ್ರಸ್ತರು ಇರುವ ನೆಲೆಗೇ ಹೋಗಿ ಅವರಿಗೆ ಪೀಠದ ವತಿಯಿಂದ ರೊಟ್ಟಿಯನ್ನು ಸದ್ಯ ವಿತರಿಸಲಾಗಿದೆ.

ಶ್ರೀ ಮದ್ರಂಭಾಪುರಿ ಜ॥ ಮಹಾಸನ್ನಿಧಿಯವರು **'ಇತಿಹಾಸ ದರ್ಶನ'** ಸಂಪುಟದ ಪ್ರಕಟಣೆಗೆ ಕಳೆದ ಐದು ವರ್ಷಗಳಿಂದ ವಾರ್ಷಿಕವಾಗಿ ೨೫ ಸಾವಿರ ರೂ.ಗಳ ಆಶೀರ್ವಾದ ಮಾಡಿ ಅದಕ್ಕೆ ಆರ್ಥಿಕ ಸೌಲಭ್ಯವನ್ನು ಒದಗಿಸಿದ್ದಾರೆ. ಇದು ಅವರ ಇತಿಹಾಸ ಪ್ರೇಮಕ್ಕೆ ಸ್ಪಷ್ಟ ಸಾಕ್ಷಿ. ಶ್ರೀ ಪೀಠದ ಈ ಎಲ್ಲ ಆಶೀರ್ವಾದಕ್ಕೆ ನಮ್ಮ ನಮನ.

'ಇತಿಹಾಸ ದರ್ಶನ' ಸಂಪುಟಗಳನ್ನು ಸಂಪಾದಿಸುವಲ್ಲಿ ನನ್ನೊಡನೆ ಡಾ. ಪಿ.ವಿ. ಕೃಷ್ಣಮೂರ್ತಿ ಅವರು ಜೊತೆಯ ಸಂಪಾದಕರಾಗಿ ಸಮಸಮವಾಗಿ ಸಹಕರಿಸಿ ದುಡಿದಿದ್ದಾರೆ. ಅಧ್ಯಕ್ಷರಾಗಿ ಡಾ. ಕಾಮತ್ ಅವರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ನಮಗೆ ಪೂರ್ಣ ಒತ್ತಾಸೆ ನೀಡಿದ್ದಾರೆ. ಇವರಿಗೆಲ್ಲ ನಾನು ಋಣಿ. ನಮ್ಮ ಮಾನ್ಯ ಸದಸ್ಯರು ಕ್ಷೇತ್ರಕಾರ್ಯ ಮಾಡಿ, ಹೊಸ ಶಾಸನಗಳನ್ನು ಹಸ್ತಪ್ರತಿಗಳನ್ನು ಶಿಲ್ಪಗಳನ್ನು, ಇತಿಹಾಸವನ್ನು ಬೆಳಕಿಗೆ ತಂದಿದ್ದಾರೆ. ಅವುಗಳನ್ನು ಸಂಪಾದಿಸುತ್ತ, ಓದುತ್ತ ಆನಂದ ಪಟ್ಟಿದ್ದೇನೆ. ಕಾರಣ ಅವರ ಬರಹಗಳಲ್ಲಿ ಆಗಿರುವ ಪ್ರಗತಿ, ಬೆಳೆದಿರುವ ಎತ್ತರ ಕಂಡು ವಿಸ್ಮಿತನಾಗಿದ್ದೇನೆ. ಅಂಥ ಸಹಸ್ರರ ಸಂಖ್ಯೆ ಮತ್ತಷ್ಟು ಹೆಚ್ಚಲಿ.

ಇನ್ನು ೧೯೮೬ರಲ್ಲಿ ದಿ. ಡಾ. ಜಿ.ಎಸ್. ದೀಕ್ಷಿತ್ ಅವರ ಮಾರ್ಗದರ್ಶನದಲ್ಲಿ, ಡಾ. ಸೂರ್ಯನಾಥ ಕಾಮತ್ ಆರಂಭಿಸಿದ ಕರ್ನಾಟಕ ಇತಿಹಾಸ ಅಕಾಡೆಮಿಯ ಸದಸ್ಯ ತಂಡದಲ್ಲಿ ಇದ್ದ ನನಗೆ ಅದೊಂದು ಸುಯೋಗವೆನಿಸಿತ್ತು. ಅಕಾದೆಮಿಯ ಪ್ರಧಾನ ಕಾರ್ಯದರ್ಶಿಯಾಗಿ, ಉಪಾಧ್ಯಕ್ಷನಾಗಿ, 'ಇತಿಹಾಸ ದರ್ಶನದ' ಸಂಪಾದಕನಾಗಿ ಅಳಿಲು ಸೇವೆ ಸಲ್ಲಿಸಲು ನೀವೆಲ್ಲ ನನಗೆ ಅವಕಾಶ ಮಾಡಿಕೊಟ್ಟುದುದಕ್ಕಾಗಿ ನಾನು ಆಭಾರಿ. ಈ ಹಾದಿಯಲ್ಲಿ ನನಗೆ ಒತ್ತಾಸೆಯಾಗಿ ನಿಂತವರು, ಡಾ. ಜಿ.ಎಸ್. ದೀಕ್ಷಿತ್, ಡಾ. ಸೂರ್ಯನಾಥ ಕಾಮತ್, ಶ್ರೀ ಎಂ.ಬಿ. ಪಾಟೀಲ್, ಪ್ರೊ. ಲಕ್ಷ್ಮಣ್ ತೆಲಗಾವಿ, ಡಾ. ಎಚ್. ಚಂದ್ರಶೇಖರ್, ಡಾ. ದೇವರಕೊಂಡಾರೆಡ್ಡಿ, ಡಾ. ಎಚ್.ಎಸ್. ಗೋಪಾಲರಾವ್, ಡಾ. ಪಿ.ವಿ. ಕೃಷ್ಣಮೂರ್ತಿ, ಡಾ. ಬಿ. ರಾಜಶೇಖರಪ್ಪ, ಡಾ. ಕೆ. ವಸಂತಲಕ್ಷ್ಮಿ, ಎಸ್. ರಾಜೇಂದ್ರಪ್ಪ, ಡಾ. ಕೆ.ವಿ. ಸುದರ್ಶನ್ ಹೀಗೆ ಇವರಲ್ಲದೆ ಅಕಾದೆಮಿಯ ಸರ್ವಸದಸ್ಯರು ಇದ್ದಾರೆ. ಇವರೆಲ್ಲರಿಗೂ ನಾನೆಷ್ಟೊಂದು ಋಣಿ ! ನನಗೆ ಈ ವೀರಭದ್ರ ಕ್ಷೇತ್ರದಲ್ಲಿ ಇತಿಹಾಸ ಅಕಾದೆಮಿಯ ಇತಿಹಾಸ ಸಮ್ಮೇಳನಾಧ್ಯಕ್ಷರ ಸ್ಥಾನವನ್ನು ನೀಡಿ ಪ್ರೀತಿಯನ್ನು ತೋರಿದ ಅಕಾದೆಮಿಯ ಸರ್ವಸದಸ್ಯರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು, ಆಶೀರ್ವಾದಿಸಿದ ಪೂಜ್ಯ ಜಗದ್ಗುರು ಮಹಾಸನ್ನಿಧಿಯವರಿಗೆ ನನ್ನ ಅನಂತ ನಮನಗಳು.

ನಮ್ಮ ಅಕಾದೆಮಿಯ ಈ ಸದ್ ಪರಂಪರೆಯ ಶ್ರೀ ಸಂಪತ್ತು ನಿರಂತರವಾಗಿರಲಿ ಜೈ ವಿಶ್ವ, ಜೈ ಭಾರತ ಮಾತೆ, ಜೈ ಕರ್ನಾಟಕ ಭುವನೇಶ್ವರಿ.

ಸಂಕ್ಷಿಪ್ತ ಇತಿವೃತ್ತ

ಹೆಸರು : ಡಾ॥ ಎಂ.ಜಿ. ನಾಗರಾಜ್

ಜನನ : ೧೦-೮-೧೯೩೦

ತಾಯಿ : ಶ್ರೀಮತಿ ಗೌರಮ್ಮ

ತಂದೆ : ಮಠದ ಗಂಗಾಧರಯ್ಯ

ಧರ್ಮ ಪತ್ನಿ : ಶ್ರೀಮತಿ ಸುಲೋಚನ ನಾಗರಾಜ್

ವಿದ್ಯಾರ್ಹತೆ : ಎಂ.ಎಸ್ಸಿ., ಎಂ.ಎಡ್., ಎಂಎ(ಕನ್ನಡ)., ಡಿ.ಲಿಟ್., ಶಾಸನಶಾಸ್ತ್ರ, ನಾಟಕ ಶಾಸ್ತ್ರ

ವೃತ್ತಿ - ಅನುಭವ :

ಅ. ನಿವೃತ್ತ ಪ್ರಾಚಾರ್ಯರು.

ಆ. ಮುಕ್ತ ವಿಶ್ವವಿದ್ಯಾಲಯದ ಕನ್ನಡ ಎಂ.ಎ. ವಿದ್ಯಾರ್ಥಿಗಳ ತರಬೇತಿ ಶಿಬಿರದಲ್ಲಿ ಶಾಸನ ಶಾಸ್ತ್ರ ಬೋಧನೆ ೧೯೯೫-೯೮.

ಇ. ಚನ್ನಪಟ್ಟಣದ ಕುವೆಂಪು ಸ್ನಾತಕೋತ್ತರ ಕೇಂದ್ರದ ಕನ್ನಡ ಎಂ.ಎ. ತರಗತಿ ವಿದ್ಯಾರ್ಥಿಗಳಿಗೆ ಶಾಸನಶಾಸ್ತ್ರ ಭೋಧನೆ ೧೯೯೭-೨೦೦೩.

ಈ. ಕನ್ನಡ ಸಾಹಿತ್ಯ ಪರಿಷತ್ತಿನ ಶಾಸನಶಾಸ್ತ್ರ ತರಗತಿಗಳ ಉಪನ್ಯಾಸಕ ೧೯೯೮-೨೦೦೩.

ಉ. ಕನ್ನಡ ಸಾಹಿತ್ಯ ಪರಿಷತ್ತಿನ ಶಾಸನಶಾಸ್ತ್ರ ಸಂಶೋಧನ ಕೇಂದ್ರ ಶಾಸನಶಾಸ್ತ್ರ ಡಿಪ್ಲೋಮ ತರಗತಿಗಳ ಗೌರವ ನಿರ್ದೇಶಕ. ೨೦೦೬ ರಿಂದ ೨೦೧೦

ಊ. ರಾಷ್ಟ್ರೀಯ ನೂತನ ಶಿಕ್ಷಣ ನೀತಿಯ ಸಂಪನ್ಮೂಲ ವ್ಯಕ್ತಿಯಾಗಿ ಜ್ಯೂನಿಯರ್ ಕಾಲೇಜು ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ತರಬೇತಿ ನೀಡಿಕೆ : ೧೯೮೭ - ೮೯.

ಎ. ಬೆಂಗಳೂರು ನಗರ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಆಡಳಿತ ಪರಿಷತ್ ಸದಸ್ಯ ೨೦೦೪-೦೫.

ಏ. ಕಳೆದ ೩೦ ವರ್ಷಗಳಿಂದ ಶಾಸನ ಕ್ಷೇತ್ರದಲ್ಲಿ ತೊಡಗಿಕೊಂಡು ಕನ್ನಡ ಹಾಗೂ ತೆಲುಗು ಭಾಷೆಯ ೮ ರಿಂದ ೧೮ ಶತಮಾನದವರೆಗಿನ ಶಾಸನಗಳನ್ನು ಕಂಡು ಆ ಬಗ್ಗೆ ಪ್ರಬಂಧಗಳನ್ನು ಮಂಡಿಸಿದ್ದಾರೆ.

ಪ್ರಕಟಿತ ಕೃತಿಗಳು :

i. ಕೊಡಗು ಜಿಲ್ಲೆಯ ಸುಗ್ಗಿಕಟ್ಟೆಗಳು, ಕೆಂಬಟ್ಟಿ ಹೊಲೆಯರ ಸಂಸ್ಕೃತಿ, ಕೊಡಗಿನ ಕೈಮಡಗಳು, ಕೊಡಗಿನ ಅರಸರು, ಕೊಡಗಿನ ಹಾಲೇರಿ ರಾಜವಂಶವು, ಕೊಡಗ್‌ರ ಬೀರಂಗಲ್, ದೇವಡಕಾಡ್, ಪನ್ಯಭೂಮಿ. (ಕೊಡವ ಭಾಷೆಗೆ ಅನುವಾದಿತ)

ii. ಶಾಸನ ಶಿಲ್ಪಗಳು, ಮಹಾನ್ ನಟ ಮಹಾಮದ್ ಪೀರ್, ಬಹಾಉಲ್ಲಾ. (ಅನುವಾದಿತ)

iii, ಶಿವಸಂಸ್ಕೃತಿಯ ವಿಕಸನ ನೆಲೆಗಳು ; ಸಾಂಸ್ಕೃತಿಕ ಶ್ರೀ ವೀಭದ್ರಸ್ವಾಮಿ; ಸಾಹಿತ್ಯೋಕ್ತ ವೀರಭದ್ರ ; ಸಾಂಸ್ಕೃತಿಕ ವೀರಶೈವ ; ಬಸವಣ್ಣ. ಶ್ರೀಶೈಲ ನಿಡುಮಾಮಿಡಿ ಪೀಠದ ಚರಿತ್ರೆ : (ಕನ್ನಡದಿಂದ ತೆಲುಗಿಗೂ, ಇಂಗ್ಲಿಷ್‌ಗೂ ಅನುವಾದಿತ) ಶ್ರೀ ರಾಜಾಪುರ ವೀರಧರ್ಮ ಸಿಂಹಾಸನ ಮಠದ ಚರಿತ್ರೆ ; ಶಿವಶ್ರೀರಾಮಗಿರಿ ಕ್ಷೇತ್ರದರ್ಶನ; ಶ್ರೀ ಗೌರೀಶಂಕರ ದರ್ಶನ

iv. ಬಿಡುಗಡೆಯ ಮಡಿಲಲ್ಲಿ (ಸ್ವಾತಂತ್ರ್ಯ ಹೋರಾಟದ ಕೃತಿ)

v. ಕರ್ನಾಟಕದ ರೈತ ಚಳವಳಿಗಳು–ಸತ್ಯಾಗ್ರಹಗಳು : ಮೂರು ಸಂಪುಟಗಳು = ೨೫

೨೬. ಸಾಂಸ್ಕೃತಿಕ ನಂಜುಂಡ ಮತ್ತು ಶ್ರೀಕಂಠೇಶ್ವರ

೨೭. ವೀರಶೈವ ವಿದ್ಯಾಭಿವೃದ್ಧಿ ನಿಧಿ ಸಂಸ್ಥೆ

೨೮. ಡಾ. ಶ್ರೀ ಜಚನಿ ಮಹಾಸನ್ನಿಧಿ

೨೯. ಕಗ್ಗೆರೆ ಮತ್ತು ಯಡಿಯೂರು ಕ್ಷೇತ್ರ

೩೦. ಸಿದ್ಧಗಂಗಾ ಕ್ಷೇತ್ರ

೩೧. ವಚನಗಳಲ್ಲಿ ಶೀಲ ಮತ್ತು ಆಚಾರಗಳ ಕಲ್ಪನೆ

೩೨. ವಚನಧ್ವನಿ (ಆಧುನಿಕ ವಚನಗಳ ಸಂಕಲನ – ಸ್ವರಚಿತ)

೩೩. ಕೊಡಗಿನ ಸಾಂಸ್ಕೃತಿಕ ಜಾನಪದ ನೆಲೆಗಳು (೨೦೧೦)

೩೪. ಮಹಾವೀರಭದ್ರ

೩೫. ಕಲ್ಯಾಣ ನಾಡಿನಲ್ಲಿ ವೀರಭದ್ರ

ನಿಯತ ಕಾಲಿಕೆಗಳ ಸಂಪಾದಕತ್ವ :

೧. ಮಾಮಿಡಿ (ತ್ರೈಮಾಸಿಕ, ಪ್ರಧಾನ ಸಂಪಾದಕ (೧೯೭೨–೯೭)

೨. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ (ಕನ್ನಡ ಸಾಹಿತ್ಯ ಪರಿಷತ್ತು) (೧೯೯೬–೨೦೦೦)

೩. ಇತಿಹಾಸ ದರ್ಶನ (ವಿದ್ವತ್ ವಾರ್ಷಿಕ ಸಂಪುಟ) ೧೯೯೭ ರಿಂದ ಈವರೆಗೆ.

೪. ಮಹಾಮನೆ (ಅ.ಭಾ.ಶ.ಸಾ. ಪರಿಷತ್ತಿನ ಮಾಸಿಕ ಪತ್ರಿಕೆ) ೧೯೯೮ ರಿಂದ ೨೦೧೦ ಅಕ್ಟೋಬರ್ ಈವರೆಗೆ

ಸಂಪಾದಿತ ಸ್ಮರಣ ಸಂಪುಟಗಳು–ಸಂಚಿಕೆಗಳು

ಅಂಬಾರಿ; ಪ್ರಗತಿವಾಣಿ; ೧೯೮೧ (೧೯೮೨) ಶರಣತತ್ವ ಚಿಂತನ (೨೦೦೦ ಮತ್ತು ೨೦೦೬); ದೇಗುಲ ಸಂಪದ (೨೦೦೫); ವಿದ್ಯಾನಿಧಿ (೨೦೦೫); ವಿದ್ಯಾಶ್ರೀ (೨೦೦೫; ನಿರ್ವಾಣ ಶ್ರೀ (೨೦೦೫); ಶರಣತತ್ವಚಿಂತನ (೨೦೦೬) ಶಿವಗಂಗಾ ಪ್ರಭೆ (೨೦೦೬); ರಾಜಾಪುರ ಶ್ರೀ (೨೦೦೬); ಶಿವಪ್ರಭೆ (೨೦೦೬); ಸೇವಾಭಿನಂದನ ಅಧ್ಯಾತ್ಮ ಸಾಧನ (೨೦೦೮); ಸುವರ್ಣಸಿರಿ (೨೦೦೯); ಜ್ಞಾನಪ್ರಕಾಶ (೨೦೧೦)

೧. ಡಾ. ಶ್ರೀ ಶಿವಕುಮಾರ ಶತಮಾನೋತ್ಸವ ೧೦೮ ಕೃತಿಗಳ (ಜ್ಞಾನ ದಾಸೋಹ ಮಣಿಮಾಲೆ) ಸಂಪಾದಕ : ೨೦೦೮

೨. ಸುವರ್ಣಸಿರಿ ಪಟ್ಟಾಧಿಕಾರ ಸ್ಮರಣ ಸಂಪುಟ ಹೊನ್ನಮ್ಮ ಗವಿಮಠ ಶಿವಗಂಗೆ, ೨೦೦೯

ಸಂಪಾದಿತ ಕೃತಿಗಳು ಆಧುನಿಕ ವಚನಸಿರಿ (ವಚನ ಸಂಕಲನ) ; ಮದುಮಕ್ಕಳಿಗೆ.

ಪ್ರಶಸ್ತಿಗಳು – ಸನ್ಮಾನ – ಗೌರವ ಸ್ಥಾನ

i. ಸಾಹಿತ್ಯ ಸೇವಾ ಸನ್ಮಾನ (೧೯೭೮)

ii. ರಾಮನಗರ, ಬೆಂಗಳೂರಿನ ಸಂಘ ಸಂಸ್ಥೆಗಳಿಂದ ರಾಜ್ಯೋತ್ಸವ ಸನ್ಮಾನ (೧೯೯೩)

iii. 'ನಾಗಾಭಿನಂದನ' ಅಭಿನಂದನ ಗ್ರಂಥ (೧೯೯೪)

iv. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂಪಾದಕ ಸನ್ಮಾನ (೧೯೮೮)

v. ಸಮ್ಮೇಳನಾಧ್ಯಕ್ಷರು : ರಾಮನಗರ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ (೨೦೦೦)

vi. ರಾಜ್ಯ ಪುರಾತತ್ವ ಇಲಾಖೆಯ ವಿಜಯನಗರ ವಿಚಾರ ಸಂಕಿರಣದ ಸರ್ವಾಧ್ಯಕ್ಷರು (೨೦೦೩)

vii. ಜ॥ ಪಂಚಾಚಾರ್ಯ ಯುಗಮಾನೋತ್ಸವ ಜನಜಾಗೃತಿ ಧರ್ಮ ಸಮ್ಮೇಳನದ ಸರ್ವಾಧ್ಯಕ್ಷರು (೨೦೦೬)

viii. 'ಶಿವಾದ್ವೈತ ಸಾಹಿತ್ಯ ಸಂಶೋಧಕ' ಸನ್ಮಾನ, ಶ್ರೀ ಮದ್ರಂಭಾಪುರಿ ಪೀಠ, ೧೯೯೭.

ix. ಲೇಖಕ ಸನ್ಮಾನ ಕಡಪಾ ಜಿಲ್ಲೆ ರಾಜಚೋಟಿ (೨೦೦೦)

x. ಶಿವಲಿಂಗ ಪ್ರಶಸ್ತಿ (೨೦೦೧)

xi. ಸಾಹಿತ್ಯ ಸೇವಾ ಸನ್ಮಾನ, ಕೊಡಗು (೨೦೦೫)

xii. ಡಾ. ಬಾ.ರಾ. ಗೋಪಾಲ್ ಶಾಸನ ದತ್ತಿ ಪ್ರಶಸ್ತಿ (೨೦೦೬)

xiii. ಸುಜಯಶ್ರೀ ವಿಶೇಷ ಪ್ರಶಸ್ತಿ (ಶಾಸನಕ್ಷೇತ್ರ), ಮಂತ್ರಾಲಯದ ಶ್ರೀ ರಾಘವೇಂದ್ರಸ್ವಾಮಿ ಮಠ, ಆಂಧ್ರ, (೨೦೦೭)

xiv. ಜೆ.ಎಸ್.ಎಸ್. ಮಹಾ ಸಂಸ್ಥಾನದಿಂದ 'ಸಾಂಸ್ಕೃತಿಕ ವೀರಶೈವ' ಕೃತಿಗೆ ೨೦೦೫ರ 'ಶಿವರಾತ್ರೀಶ್ವರ ಪ್ರಶಸ್ತಿ' (೨೦೦೭)

xv. ರಾಜಾಜಿನಗರ ವಿಧಾನಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತಿನಿಂದ ೪ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತ್ಯ ಸೇವಾ ಸನ್ಮಾನ (೨೦೦೭)

೧. ಕಾಶಿಜ್ಞಾನ ಸಿಂಹಾಸನ ಜಗದ್ಗುರುಗಳಿಂದ ಪ್ರದಾನಿತ 'ಸಾಹಿತ್ಯ ಭೂಷಣ' ಪ್ರಶಸ್ತಿ (೨೦೦೮)

೨. ಕಾಶಿ ಜ್ಞಾನ ಸಿಂಹಾಸನ ಜಗದ್ಗುರುಗಳಿಂದ (ಶ್ರೀ ಬಿ.ಎಸ್. ಶಿವಪ್ಪಶೆಟ್ಟರ ಪ್ರಾಯೋಜಿತ) 'ಶಿವಕಮಲ ಸಾಹಿತ್ಯ ಪ್ರಶಸ್ತಿ' (೨೦೦೮)

೩. ಶ್ರೀ ಜ॥ ರಂಭಾಪುರಿ ಮಹಾಸಂಸ್ಥಾನ ಪೀಠ, ಬಾಳೆಹೊನ್ನೂರು ಇಂದ 'ಪ್ರಾಚ್ಯ ಇತಿಹಾಸ ಸಂಶೋಧನಾ ರತ್ನ' / ಪದವಿ ಪ್ರದಾನ (೨೦೦೯).

೪. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ ಮೈಸೂರು, ವ್ಯವಸ್ಥಿತ ತುಮಕೂರು ಜಿಲ್ಲಾ ಇತಿಹಾಸ ಮತ್ತು ಪುರಾತತ್ವ ವಿಚಾರ ಸಂಕಿರಣದ ಸರ್ವಾಧ್ಯಕ್ಷರು (ಏಪ್ರಿಲ್ ೨೦೦೯)

೫. ಶನಿವಾರ ಸಂತೆಯಲ್ಲಿ ನಡೆದ ಕೊಡಗು ಜಿಲ್ಲಾ ೬ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ. ಜನವರಿ ೨೦೧೦.

೬. ಶ್ರೀ ಮದ್ರಂಭಾಪುರಿ ಮಹಾಸಂಸ್ಥಾನದ ಶರನ್ನವರಾತ್ರಿ ಗಜೇಂದ್ರಗಡದ 'ದಸರಾ ದರ್ಬಾರ್'ನಲ್ಲಿ ಸತ್ಯ ಸಂಶೋಧನ ಚತುರ' ಪದವಿ ಪ್ರದಾನದ ಗುರುರಕ್ಷೆ, ೨೦೧೦.

ಸಂಘ ಸಂಸ್ಥೆಗಳ ಪಾತ್ರ

೧. ಪ್ರಧಾನ ಕಾರ್ಯದರ್ಶಿ, ಕನ್ನಡ ಸಾಹಿತ್ಯ, ಸಂಸ್ಕೃತಿ ಸಮಿತಿ, ಅಯನೂರು, ರಾಮನಗರ, ಪೊನ್ನಂಪೇಟೆ (೧೯೫೯, ೧೯೭೭–೮೪)

೨. ಗೌರವ ಕಾರ್ಯದರ್ಶಿ, ಬೆಂಗಳೂರು (ಗ್ರಾಮಾಂತರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು) (೧೯೭೭–೮೭)

೩. ಪ್ರಧಾನ ಕಾರ್ಯದರ್ಶಿ, ಶ್ರೀರಾಮಗಿರಿ ಜೀರ್ಣೋದ್ಧಾರ ಸಮಿತಿ (೧೯೮೨–೮೮)

೪. ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಗೌರವ ಕಾರ್ಯದರ್ಶಿ (೧೯೯೩–೯೫)

೫. ಕಾರ್ಯಾಧ್ಯಕ್ಷ, ಡಾ. ಸೂರ್ಯನಾಥ ಕಾಮತ್ ಅಭಿನಂದನ ಸಮಿತಿ (೨೦೦೦)

೬. ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಇತಿಹಾಸ ಅಕಾದೆಮಿ (೧೯೮೮-೯೦)

೭. ಉಪಾಧ್ಯಕ್ಷರು, ಕರ್ನಾಟಕ ಇತಿಹಾಸ ಅಕಾದೆಮಿ, ೧೯೮೬-೮೮ ಮತ್ತು ೧೯೯೦ ರಿಂದ ೨೦೦೮ರವರೆಗೆ

೮. ಗೌರವ ಕಾರ್ಯದರ್ಶಿ, ಮಿಥಿಕ್ ಸೊಸೈಟಿ, ೨೦೦೫ ರಿಂದ

೯. ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆ : ಸಲಹಾ ಸಂಪಾದಕ ಸಮಿತಿ ಸದಸ್ಯ, ಪ್ರಸಾರಾಂಗ, ಶ್ರೀಮದ್ರಂಭಾಪುರಿ ಪೀಠ, ೨೦೦೬.

– ಹೀಗೆಯೇ ಸುಮಾರು ೨೧ ಸಂಸ್ಥೆಗಳಲ್ಲಿ ಸದಸ್ಯತ್ವ ಸಹಯೋಗ.

ಅನೇಕ ವಿಚಾರ ಸಂಕಿರಣ, ಸಮ್ಮೇಳನ, ಸಾಹಿತ್ಯ ಹಾಗು ಕವಿ ಗೋಷ್ಠಿಯಲ್ಲಿ : ಉದ್ಘಾಟನೆ ಅಧ್ಯಕ್ಷತೆ, ಮುಖ್ಯ ಅತಿಥಿ.

ವಿಶ್ವವಿದ್ಯಾಲಯ ಹಾಗು ಪ್ರತಿಷ್ಠಿತ ವಿದ್ವತ್ ಸಂಶೋಧನೆ ಸಂಸ್ಥೆಗಳ ಆಹ್ವಾನಿತರಾಗಿ ಕೊಡಗಿನ ಹಾಲೇರಿ ಅರಸರ, ಕರ್ನಾಟಕದ ಪಾಳೆಗಾರರ ಚರಿತ್ರೆ, ಶೂನ್ಯಸಂಪಾದನೆ, ವೀರಭದ್ರ ಪಂಥ, ಜನಪದ ಜಲ ಆಕರಗಳು, ವೀರಶೈವ ಸಂಸ್ಕೃತಿ ಕುರಿತು ಉಪನ್ಯಾಸಗಳು ; ಸ್ವೀಡನ್ ದೇಶದ ವಿಶ್ವವಿದ್ಯಾಲಯದ ಸಂಶೋಧಕರಿಗೆ Coorg; ಕುರಿತು ಉಪನ್ಯಾಸ ; ಹಾಗೂ ಅಮೇರಿಕದ ಶಾಸಕರು ಮತ್ತು ಶಿಕ್ಷಣ ತಜ್ಞರಿಗೆ UGC Sponsered India's Nature worship UGC sponsered) Bangalore History, Culture of growth ಕುರಿತು ಉಪನ್ಯಾಸ ನೀಡಿದ್ದಾರೆ. ದೇವರ ಕಾಡುಗಳು, ಕರ್ನಾಟಕದ ಕೆರೆ ಕಟ್ಟೆಗಳು, ವೀರಶೈವ ಮಠಗಳು, ವೀರಭದ್ರ, ಡಾ. ಶ್ರೀ ಜ.ಚ.ನಿ. ಈ ವಿಷಯಗಳ ಬಗ್ಗೆ ಆಂಗ್ಲ ಭಾಷಾ ಸಂಪ್ರಬಂಧಗಳು ಪ್ರಕಟವಾಗಿವೆ ; ಆಕಾಶವಾಣಿ, ದೂರದರ್ಶನದಲ್ಲಿ ಚಿಂತನಗಳು, ಉಪನ್ಯಾಸಗಳು, ಸಂದರ್ಶನಗಳು ಪ್ರಸಾರಗೊಂಡಿವೆ.

ಅನೇಕ ವಚನ ಹಾಗೂ ಕಥೆ, ಕಾವ್ಯ ಸಂಕಲನಗಳಿಗೆ ಮುನ್ನುಡಿಯನ್ನು ಬರೆಯಲಾಗಿದೆ.

ಲೇಖನಗಳು

ಸುಮಾರು ೧೮೦ ಸಂಶೋಧನ ಲೇಖನಗಳು, ಸಾಹಿತ್ಯ, ಇತಿಹಾಸ, ಜಾನಪದ, ಸಂಸ್ಕೃತಿ, ಶಿಲ್ಪ, ಪರಿಸರ, ಕೃಷಿ, ರೈತ ಚಳವಳಿ, ನೆಲ-ಜಲ ಇತ್ಯಾದಿ ಕುರಿತು ಪ್ರಕಟವಾಗಿವೆ.

ವಿಶೇಷ ಅಧ್ಯಯನವನ್ನು ರಾಮನಗರ; ಕೊಡಗು; ಬೆಂಗಳೂರು ಇತಿಹಾಸ-ಸಂಸ್ಕೃತಿ; ವೀರಭದ್ರ ಮತ್ತು ರೈತ ಚಳವಳಿ ಕುರಿತು ಮಾಡಿದ್ದಾರೆ. ಆ ಸಂಬಂಧದ ಕೃತಿಗಳೆಲ್ಲವೂ ಪ್ರಕಟವಾಗಿವೆ.

೨೦೦೯ರ ಡಾ. ಬಾ.ರಾ. ಗೋಪಾಲ್ ಪ್ರಶಸ್ತಿ ಸ್ವೀಕರಿಸಿದ ಸಂದರ್ಭದಲ್ಲಿ ಮಾಡಿದ ಭಾಷಣ

ಹನುಮಾಕ್ಷಿ ಗೋಗಿ*

ನರೇಗಲ್ಲಿನ ಶಾಸನಗಳು

ಇಂದಿನ ಹಾವೇರಿ ಜಿಲ್ಲೆಯ ಹಾನಗಲ್ಲು ತಾಲೂಕಿನ ಸುಂದರ ಹಳ್ಳಿ ನರೇಗಲ್ಲು. ಹಿಂದೊಮ್ಮೆ ಇತಿಹಾಸ ಪ್ರಸಿದ್ಧ ಸಾಂಸ್ಕೃತಿಕ ನಗರವಾಗಿತ್ತೆಂದು ಇಂದಿಗೂ ಅಲ್ಲಿ ದೊರೆಯುವ ಸುಂದರ ದೇವಾಲಯಗಳು, ಶಿಲ್ಪಗಳು ಮತ್ತು ಶಾಸನಗಳು ಸೂಚಿಸುತ್ತವೆ.

ಧಾರವಾಡ ಜಿಲ್ಲೆಯ ಶಾಸನಸೂಚಿಯನ್ವಯ ಈ ಊರಿನಲ್ಲಿ ಗುರುತಿಸಿರುವ ಶಾಸನಗಳ ಸಂಖ್ಯೆ ೯. ಇದರಲ್ಲಿ ಕೇವಲ ಒಂದು ರಾಷ್ಟ್ರಕೂಟ ಚಕ್ರವರ್ತಿ ಧ್ರೋರನ ಶಾಸನ ಮಾತ್ರ ಪ್ರಕಟವಾಗಿದ್ದು, ಉಳಿದವುಗಳು ಇದುವರೆಗೆ ಪ್ರಕಟವಾಗದೆ ಉಳಿದಿವೆ. ತದನಂತರ ಇನ್ನೆರಡು ರಾಷ್ಟ್ರಕೂಟ ಶಾಸನಗಳನ್ನು ಗುರುತಿಸಿದ್ದರೂ ಅವುಗಳು ಕೂಡ ಪ್ರಕಟವಾಗದೆ ಉಳಿದಿವೆ. ಎರಡು ರಾಷ್ಟ್ರಕೂಟ ಶಾಸನಗಳನ್ನು ನಾನು ಓದಿದ್ದು, ಅವು ಈಗಾಗಲೇ ಇತಿಹಾಸ ದರ್ಶನದಲ್ಲಿ ಪ್ರಕಟವಾಗಿವೆ. ಅವುಗಳಲ್ಲಿ ಆರು ಶಾಸನಗಳ ಪಠ್ಯಗಳನ್ನು ಬೆಳಕಿಗೆ ತರುವುದು ಈ ಸಂಪ್ರಬಂಧದ ಆಶಯವಾಗಿದೆ.

೧. ನರೇಗಲ್ಲು ಸರ್ವೇಶ್ವರ ದೇವಸ್ಥಾನ – ಆವರಣದಲ್ಲಿಯ ಶಾಸನ

೩೫" ಎತ್ತರ ೨೦" ಅಗಲದ ಕರಿಕಲ್ಲಿನ ಶಾಸನವಿದಾಗಿದೆ. ಮೇಲಿನ ೧೨" ಭಾಗದಲ್ಲಿ ಚಂದ್ರ, ಕಂದಲಿ, ಕರುವಿಗೆ ಹಾಲೂಡುತ್ತಿರುವ ಆಕಳಿನ ಉಬ್ಬುಶಿಲ್ಪಗಳಿವೆ.

ರಾಷ್ಟ್ರಕೂಟ ಅಮೋಘವರ್ಷ ನೃಪತುಂಗನ ಕಾಲದ ಶಾಸನವಿದಾಗಿದ್ದು, ಐನೂರನಾಲ್ವರು ನರೇಗಲ್ಲ ಬಳರಿಗೆ ಕಡೆಯೂರ ಹಣವನ್ನು ದಾನವಾಗಿ ಕೊಟ್ಟುದನ್ನು ತಿಳಿಸುತ್ತದೆ. ಮುಂದುವರೆದು ಈ ಶಾಸನವನ್ನು ಚನ್ದನೆಂಬುವವನು ಬರೆದನೆಂದು ದಾಖಲಿಸುತ್ತದೆ.

೧ ಸ್ವಸ್ತಿ ಅಮೋಗವರಿಷ ಶ್ರೀ ಪ್ರಿತು–
೨ ವೀವಲ್ಲಭ ಮಹ(ಹಾ)ರ(ರಾ)ಜ(ಜಾ)ಧಿರಾ–
೩ ಜ ಪರಮೇಸ್ವ(ಶ್ವ)ರ ಬಳಾರರ ಪ್ರಿ–
೪ ತಿವೀ ರಾಜ್ಯಗೆಯೆ ಶಕ ಖ(ಕಾ)ಲ ಎ(ಏ)–
೪ ಟ್ನೂಱ ತೊ(ಂ)ಭತು ಒ(ಂ)ಬತ(ತ್ತ)ನೆಯ ಮ–
೫ ಮ(ನ್ಮ)ತ ಎನ್ಬ(ಂಬ) ಸನ್ಬಶ್ಚರಾ(ಂವತ್ಸರ) ಪ್ರವರ್ತ್ತಿಸೆ
೬ ಸ್ವಸ್ತಿ ಇನ್ದಪಯ ಬನವಸಿ ನ(ನಾ)ಡಾಳೆ
೭ ಐಯ್ಯಿನೂಱ ನ(ನಾ)ಲ್ವರು ನರೆಯಗಲ್ಲ
೮ ಬಳರಿಗೆ ಕಡೆಯೂರ ವಣವು ಕೊಟ್ವ
೯ ಇದ ಕದೊಂಗೆ ಅಸ್ವ(ಶ್ವ)ಮೇದ(ಧ)ದ ಪ(ಫ)–
೧೦ ಲ ಇದನಟಿದೊಂಗೆ ವ(ವಾ)ರಣ(ಣಾ)–
೧೧ ಸಿಯು ಸ(ಸಾ)ಸಿರ ಕವಿಲೆಯು–
೧೨ ವನಟಿದ ಪ(ಪಾ)ಪ
೧೩ ಸ್ವಸ್ತಿ ಶ್ರೀ ಚನ್ದನ ಲಿ[ಖಿ]ತಂ[॥*]

೨. ನರೇಗಲ್ಲು ಸರ್ವೇಶ್ವರ ದೇವಸ್ಥಾನ – ಆವರಣದಲ್ಲಿಯ ಶಾಸನ

೪೦" ಎತ್ತರ ೧೮" ಅಗಲದ ಕರಿಕಲ್ಲಿನ ಮೇಲೆ ಈ ಶಾಸನವನ್ನು ಕೆತ್ತಲಾಗಿದೆ. ಮೇಲಿನ ೧೨" ಭಾಗದಲ್ಲಿ ಚಂದ್ರ–ಸೂರ್ಯ, ಮಧ್ಯದಲ್ಲಿಯ ಕಂಬದ ಮೇಲೆ ಸ್ವಸ್ತಿಕವಿದ್ದು, ಎಡಬಲಗಳಲ್ಲಿ ಚಾಮರಗಳಿವೆ. ಮಧ್ಯದ ೧೨" ಪಟ್ಟಿಕೆಯಲ್ಲಿ ಕರುವಿಗೆ ಹಾಲೂಡುತ್ತಿರುವ ಆಕಳಿನ ಉಬ್ಬುಶಿಲ್ಪಗಳಿವೆ. ಕೆಳಗೆ ಕಂದಲಿಯಿದೆ.

ರಾಷ್ಟ್ರಕೂಟ ಚಕ್ರವರ್ತಿ ಗೋವಿಂದನ ಆಳ್ವಿಕೆಯಲ್ಲಿ, ಬಂಕೇಯರಸ ಬನವಾಸಿ ನಾಡನ್ನಾಳುತ್ತಿರುವಾಗ ನರೆಯಂಗಲ್ಲ ಮಹಾಜನರಿಗೆ ಬೊಜಂಗರಯ್ನೂರನಾಲ್ವರು ಸುಂಕದಾನ ಗಳನ್ನು ನೀಡಿದುದನ್ನು ಈ ಶಾಸನವು ತಿಳಿಸುತ್ತದೆ.

೧೧ ಸ್ವಸ್ತಿ ಶ್ರೀ ಗೋಇನ್ದರ ವಲ್ಲಹಂ
೧೨ ಪೃಥುವೀರಾಜ್ಯಂಗೆಯ್ಯೆ ಬಂಕೇಯರಸರ್ಬ್ಬನವಾಸಿ ನಾಡಾ–
೧೩ ಳೆ ಶಕಕಾಲಮೆಣ್ಬನೆ . . . . ತ್ತ ಮೂಱನೆಯ ನ–
೧೪ ನ್ದನ ಸಂವತ್ಸ[ರಂ ಪ್ರ*]ವರ್ತ್ತಿಸೆ ತದನ್ತದ್ಗತ ಶ್ರಾ–
೧೫ ವಣದಮವಾಸೆಯುಂ ಸೋಮವಾರದನ್ದು ನರೆಯಂ–
೧೬ ಗಲ್ಲ ಮಹಾಜನಕ್ಕೆ ಭೊಜಂಗರಯ್ನೂಱ ನಾಲ್ವ–
೧೭ ರುಂ ಸಮಸ್ತಮಿಟ್ಟು ಮೆಯ್ವಾಗಮುಂ ಸಂನ್ತರಾಸಿಯು–
೧೮ ಮಂ ಕೊಟ್ಟರ್ ಇದಂ ಕಾದೊಂಗೆ ಅಶ್ವಮೇದದ ಪಲಂ [॥]

* ಹನುಮಾಕ್ಷಿ ಗೋಗಿ, ನವನಗರ, ಹುಬ್ಬಳ್ಳಿ

೧೯ ಇದನಟಿದಂ ವಾರಣಾಸಿಯು ಸಾಸಿರ ಕಪಿಲೆಯುಂ
೨೦ ಪಾರ್ವ್ವರುಮಂ ಕೊನ್ದೋನ ಲೋಕಕ್ಕೆ ಸಲ್ವಾಂ ಇದಂ ಬರೆದಂ*

೩. ನರೇಗಲ್ಲು ಸರ್ವೇಶ್ವರ ದೇವಸ್ಥಾನ – ನವರಂಗದಲ್ಲಿಯ ಶಾಸನ

ಶಾಸನದ ಮೇಲ್ಭಾಗದ ೨೪"ನಲ್ಲಿ ಉಬ್ಬುಶಿಲ್ಪಗಳಿವೆ. ನಂತರದ ೪೦" ಅಗಲ ೭೪" ಎತ್ತರದ ಭಾಗದಲ್ಲಿ ಶಾಸನದ ಬರಹವಿದೆ. ಅರೆಗಂಬಗಳ ಮೇಲೆ ಆಮಲಕಾಕೃತಿಯ ಗೋಪುರಗಳು ಎಡಬಲಗಳಲ್ಲಿವೆ. ಮಧ್ಯದಲ್ಲಿ ಅರೆಗಂಬದ ಮೇಲೆ ನಿಂತಿರುವ ಐದು ಮಹಡಿಯ ಗೋಪುರದ ಮೇಲೆ ಆಮಲಕವಿದೆ. ಅದರ ಎಡಬಲಗಳಲ್ಲಿ ಸೂರ್ಯ–ಚಂದ್ರರಿದ್ದಾರೆ. ಮಧ್ಯದಲ್ಲಿ ಶಿವಲಿಂಗವಿದ್ದು, ಹಾಲೂಡಿಸುತ್ತಿರುವ ಆಕಳು–ಕರು, ಕೈಮುಗಿದು ನಿಂತಿರುವ ಪುರೋಹಿತನಿದ್ದು, ಲಿಂಗದ ಎದುರಿಗೆ ಪೀಠದ ಮೇಲೆ ಕುಳಿತ ನಂದಿಯಿದೆ.

ಈ ಶಾಸನವು ಕಲ್ಯಾಣಚಾಲುಕ್ಯ ಚಕ್ರವರ್ತಿ ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಹಾನಗಲ್ಲ ಕದಂಬ ಮಹಾಮಂಡಳೇಶ್ವರ ತೈಲಪನು ಬನವಾಸಿ ಪನ್ನಿರ್ಛಾಸಿರ ಮತ್ತು ಪಾನುಂಗಲ್ಲೈನೂರನ್ನು ಆಳುತ್ತಿದ್ದನಂತೆ. ಆ ಸಮಯದಲ್ಲಿ ಜೋಗಮರಾಣನ ಮಗಳು ಸಾವಳದೇವಿ ನರೇಗಲ್ಲನ್ನು ಆಳುವಾಗ, ಮಹಾಪ್ರಭು ಕಪ್ಪಿಮಯ್ಯನು ನರೇಗಲ್ಲಿನಲ್ಲಿ ಈಶ್ವರ ದೇವಾಲಯವನ್ನು ನಿರ್ಮಿಸಿ ಬಿಟ್ಟ ದತ್ತಿಯನ್ನು ವಿವರವಾಗಿ ತಿಳಿಸುತ್ತದೆ.

೧ ಸ್ವಸ್ತಿ ಶ್ರೀ ಜಯಸ್ವಾಭ್ಯುದಯಶ್ಚ ॥ ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಳೋಕ್ಯ ನಗರಾರಂಭ ಮೂಲಸ್ತಂಭಾಯ ಸಂಭವೇ ॥ ನಮಸ್ತಸ್ಯೈ ವರಾಹಾಯ ಲೀಲಯಾಚರತೇ ಮಹೀಂ ಖುರಾಂತರ ಗತೋ ಯಸ್ಯ ಮೇರುಃ ಕಣಕಣಾಯತೇ [॥*]

೨ ಶ್ರೀ ರಾಮಾರಮಣೀಶ ನಾಭಿಜಲ ಸತ್ಪೂರ್ಣಾಬ್ಜ ಜಾತಾನ್ವಯರ್ಶ್ಯರಾಮಾ ರಮಣರ್ಹರೀತಜಸುತ ಚ್ಚಾಳುಕ್ಯ ವಂಶೋದ್ಭವರ್ಶ್ಯರಾಮಾ ರಮಮಣೇಸ ದಿಬ್ಯ ಪದ ಪದ್ಮಾರಾಧಕರ್ಕ್ಕುಂತಳ ಶ್ರೀ ರಾಮಾ ರಮಣೀಯ ಭೂಪರಾ–

೩ ದರ್ಮ್ಮನ್ನಂ ಪಲದ್ಧಾರ್ತ್ರಿಯೊಳು ॥ ಶ್ರೀಮತ್ರಿಭುವನ ಮಲ್ಲ ಮಹಾ ಮಹಿಮಂ ಸಕಳ ರಾಜ್ಯಸಾಮ್ರಾಜ್ಯ ಜಯಶ್ರೀ ಮಹಿಮನೆನಿಸಿ ನೆಗಳ್ದಂ ಭೀಮಭುಜಂ ಚಕ್ರಿ ವಿಕ್ರಮಾದಿತ್ಯ ನೃಪಂ ॥ ಸ್ವಸ್ತಿ ಸಮಸ್ತ

೪ ಭುವನಾಶ್ರಯ ಶ್ರಿ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಸ್ವರ ಪರಮಭಟ್ಟಾರಕ ಸತ್ಯಾಶ್ರಯಕುಳತಿಳಕಂ ಚಾಳುಕ್ಯಾಭರಣಂ ಶ್ರೀಮತ್ರಿಭುವನಮಲ್ಲದೇವರ ಪಿಜಯರಾ–

೫ ಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ಧ್ದಮಾನವಾ ಚಂದ್ರಾರ್ಕ್ಕ ತಾರಂಬರಂ ಸಲುತ್ತಂ ಶ್ರೀಮತು ರಾಜಧಾನಿ ಕಲ್ಯಾಣಪುರದೊಳ್ಸುಖ ಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತಮಿರೆ । ತದವನೀಪಾಳಕ ವಿ–

೬ ೬ನೇ ಸಾಲು ಲೇಖನದಲ್ಲಿಲ್ಲ.

೭ ಷಾಳ ವಕ್ಷಸ್ಥಳ ನಿವಾಸ ವಾಸಿತಾದ್ಧಾಂಗಲಕ್ಷ್ಮೀ ಶ್ರೀಮತ್ಸಾವಳದೇವಿಯರ ಮಹನೀಯ ಗುಣಾನು ರೂಪಮಾದ ಪುಣ್ಯ ಪ್ರಭಾವಮೆಂತೆಂದಡೆ ॥ ವೃತ್ತ ॥ ಸಕಳೋರ್ವ್ವೀಪತಿಯಾಗಿ

೮ ರೂಪವಿದನುಂ ತೇಜಸ್ವಿಂಯುಂ ದಾನಿಂಯುಂ ಪ್ರಕಟೀಭೂತನೆನಿಪ್ಪ ಕೀರ್ತ್ತಿವಡೆದಿರ್ದ್ದೀ ರಾಯಸರ್ವ್ವಜ್ಞ ನೆಂಬಕಳಂಕಂಗೆ ಮನೋಜ್ಞೆಂಯಾದಳೆನಲೇಂ ಸಾಮಾನ್ಯೆಯೇ ಸದ್ಗುಣಾಧಿಕದೀ ಸಾವಳದೇ–

೯ ವಿ ದೇವಿಯೆನಿಸಿರ್ದ್ದಾ ಲಕ್ಷ್ಮಿ ತಾನಲ್ಲಳೇ ॥ ಸಲೆ ತಜಿಕಾಡು ನಾಡರಸು ಮಂಗಳಿವೇಡದ ಮಂಡಳೇಶ್ವರಂ ಕಲಿಗಳಿಗಂಕುಸಂ ಸುಭಟ ಜೋಗಮರಾಣನ ಪುತ್ರಿ ನೀತಿವೆತ್ತಲಘು ಪ–

೧೦ ರಾಕ್ರಮೋನ್ನತಿಯ ರಾಯರ್ಝುಳಪ್ಪನ ಕಾಂತೆಯೊಪ್ಪಳೇ ಸುಲಲಿತ ಸೂರ್ಯ್ಯವಂಸಜೆ ಮಹಾಸತಿ ಸಾವಳದೇವಿ ಧಾತ್ರಿಯೊಳು ॥ ಗದ್ಯ ॥ ಸ್ವಸ್ತ್ಯನವರತ ಪರಮ ಕಲ್ಯಾಣಾಭ್ಯು–

೧೧ ದಯ ಸಹಸ್ರಫಳ ಭೋಗಭಾಗಿನಿ ದ್ವಿತೀಯಲಕ್ಷ್ಮೀ ಸಮಾನೆ । ಕಳಹಂಸಯಾನೆ । ಸೂರ್ಯ್ಯ ವಂಶಾಬ್ಧಿವರ್ಧ್ದ ನೋದ್ಭವಿತ ಚಂದ್ರಿಕೆ । ಶೃಂಗಾರ ರತ್ನಕರಾಂಸು ಜಾಳಿಕೆ। ವಿಕ್ರಮಾದಿತ್ಯದೇವ ಮ–

೧೨ ನಸ್ಸರೋವರ ವಿರಾಜಿತ ರಾಜಹಂಸೆ। ಸರಸ್ವತಿ ಕಾರ್ಣ್ನಾ ವತಂಸೆ । ಗಾಯಕ ವಾದಕ ನರ್ತ್ತಕಾದ್ಯಭಿ ಲಷಿತ ದೀನಾನಾಥ ನಿಕುರುಂಬ ಸಂತರ್ಪ್ಪಣೆ ಸಮಸ್ತ ಗುಣ ಭೂಷಣೆ । ಕಲಿಗಳಂ–

೧೩ ಕುಸ ಮಂಡಳಿಕ ಜೋಗಮರಸರ ಕುಲ ಪವಿತ್ರೀಕ್ರಿ ತೋತ್ತಮಾಂಗೆ ಔದಾರ್ಯ್ಯತುಂಗೆ । ಚಂಡಿಕಾದೇವಿ ಲಬ್ಧವರ ಪ್ರಸಾದೆ । ಮೃಗಮದಾಮೋದೆ । ರಾಯ ನಾರಾಯಣ ಚಿತ್ತಹರ್ಷೆ ।

೧೪ ಅನವರತ ಕರ್ಪ್ಪೂರವರ್ಷೆ ! ಶ್ರೀಮತ್ರಿಭುವನಮಲ್ಲದೇವ ವಿಷಾಳ ವಕ್ಷಸ್ಥಳ ನಿವಾಸಿನಿಯರಪ್ಪ ಶ್ರೀಮತ್ಸಾವಳ ದೇವಿಯರ್ ಸ್ವಕೀಯ ವಲ್ಲಭ ಶ್ರೀ ಪ್ರಿಥ್ವೀವಲ್ಲಭ ಪ್ರಸಾದಾ ಸಾದಿ–

೧೫ ತೆಯರಾಗಿ ತಮ್ಮಂಗಭೋಗಕ್ಕೆಂದು ಪಡೆದನಾದಿಯ ಗ್ರಹಾರಂ ನರೆಯಂಗಲ್ಲನುದಿತೋದಿತಮಾಗಲಾಳ್ದು

* ಮುಂದಿನ ಸಾಲು ಸಿಮೆಂಟಿನಲ್ಲಿ ಮುಚ್ಚಿ ಹೋಗಿದೆ.

ಲೀಲಾವಿನೋದ ದರಸುಗ್ಗೆಯುತ್ತಮಿರೆ ॥ ಕಂದ ॥
ಆದಿಕ್ಷತ್ರರೊಳಗಿ-
೧೬ ಯರೆಂಬಾ ಅವರನ್ವಯಾವತಾರಮನದನಾಹ್ಲಾದದಿನಭಿ
ವರ್ಣ್ಣಿಸುವೆಂ ಮೇದಿನಿಯೊಳು ಸಿಂಹವಿಷ್ಣುರಾಧೀಸ್ವರರ
॥ ವೃತ್ತ ॥ ಧರಣೀಕಾಂತೆಗ ಪೀಶ್ವರಂಗವೊಗೆದಂ
ಬಾಳಾಂಬಕಂ ಸಾಹಸೋತ್ಕರನಂ-
೧೭ ತಾ ವಿಭುವ ಬಳಿಕ್ಕವೆಸೆದಂ ಕಾದಂಬವಂಶಾಂಬುಜಾಕರ
ರಾರಾಜಿತ ತಿಗ್ಮರೋಚಿ ಸುಚರಿತ್ರಾಧೀಶನೆಂಬಂ
ಮಹಾಪುರುಷಂ ಶ್ರೀಸ ಮಯೂರ ವರ್ಮ್ಮನವ
ನೀಪಾಳಂ ಜಗದ್ಭುಂಬುಕಂ ॥ ಸಕಳಾಸಾ ಪರಿವರ್ತ್ತಿತ
೧೮ ಕೀರ್ತ್ತಿನಿಳಯ ಕಾದಂಬ ವಂಶೋದ್ಭವ ಪ್ರಕಟೀಭೂತ
ಮಯೂರವರ್ಮ್ಮ ನೃಪನಿಂ ನಿತ್ಯೋದಯೋತ್ಕ ೃಷ್ಟ
ನಾಯಕರುದುವೃತ್ತ ನ್ರಿಪಾಳ ಗರ್ವ್ವಗರಿಮ ಪ್ರಖ್ಯಾತ
ವಾರಿರ್ದ್ದರನೇಕರಿಂದೀ . . .
೧೯ ಸೌರ್ಯ್ಯನೆಸೆದ ಶ್ರೀಸಾಂತ ಭೂಪಾಳಕ ॥ ವರ
ರುದ್ರಾನ್ವಯ ಸಪ್ತ ಸಪ್ತತಿ ಕಡಂಬಾಧೀಶ
ನೆಂಬೊಳ್ಪಿನೆಳ್ತರಮಂ ತಾಳ್ದಿದ ಮಂಡಳೇಶ ತಿಳಕಂಗೀ
ಸಾಂತ ಭೂಪಂಗವಾಳ್ವರಗ್ರಾತ್ಮಜಂಗೆ ಖೇಚರೇಂದ್ರ . .
.
೨೦ ಸಂಭೂತೆ . ದಿಂದೊಪ್ಪುವೀ ಸಿರಿಯಾದೇವಿಗವತ್ತ್ಯು
ದಾರನೊಗೆದಂ ಶ್ರೀ ತೈಲಭೂಪಾಳಕ ॥ ಗಿರಿಜಾ
ಕಾಂತೆಗವೀಶ್ವರಂಗವೊಗೆದಿರ್ದ್ದಾ ಕಾರ್ತ್ತಿಕೇಯಂ ಗವಾ
ಹರಿಗಂ ಲಕ್ಷ್ಮಿಗವಾದ ಮನ್ಮಥ . . . . ..
೨೧ ಖ್ಯಾತಿಗಂ ನೀತಿವೆತ್ತಿರಲಿಂದ್ರಾಣಿಜೀಷ್ಣು
ವಿಂಗವುದಯಂಗೆಯ್ದಾ ಜಯಂತಂಗ ವೀಸಿರಿಯಾ
ದೇವಿಯ ಸೂನು ನೂರ್ಮ್ಮಡಿ ಮಿಗಿಲ್ಸ್ಸ ತೈಲಭೂಪೋ
ತ್ತಮ ॥ ಕ್ಷತ್ರ ಕುಳಾಂಬುಜ ದ್ಯು . .-
೨೨ ಭೂ ಭುವನಾರ್ಚ್ಚಿತ ಸತ್ವವಿತ್ರಿತ ಕ್ಷತ್ರ ಕಡಂಬರಾಭರಣ
ತೈಲನ್ರಿಪಾಳನೆ ವಿಶ್ವಧಾತ್ರಿಯೊಳ್ಕ್ಷತ್ರಿಯನೀತನನ್ನರೆನಿಪಂ
ನರದೊರ್ನ್ನೆಗಳ್ದಾದಿ . . ಜನೋ ಕ್ಷತ್ರಿಯ ಮಾ . . .
೨೩ ಮೊ ಪೊಗಳಲೆನ್ನಳವೇ ನಹುಷೋಪಮಾನನ ॥
ದೊರೆಯಾರ್ಶ್ಯ ತೈಲ ಭೂಪಾಳಕನ ಗುಣಗಣಕ್ಕೀ ಗಳಾದಿ
ದುರಾತ್ಮಾಭರಣಸ್ಸಾಮಾನ್ಯನೇ ಕ್ಷತ್ರಿಯ ಕುಳತಿಳ-
೨೪ ಕಂ ರಾಜಸರ್ವ್ವಜ್ಞನೆಂಬೀ ಪುರುಷಾರ್ತ್ಥಾರ್ತ್ಥಾಭಿರಾಮಂ
ಕಲಿಯುಗ ನಳಮಾಂಧಾತನಾ ರಾಮನಾ ದುರ್ದ್ಧರ
ಭೀಮಂ ಸೂದ್ರಕಾಂಕಂ ನೃಗ ಸಗರ ಹರಿಶ್ಚಂದ್ರ
ತೇಜೋವಿಳಾಸ[ಂ] ॥
೨೫ ಇಂತು ಮಹಂತ ಭಾಗ್ಯಮಭಿರಂಜಿಪ ತೈಲ
ನೃಪಾಳಕಂಗವೊಳ್ಪಂ ತಳೆದಿರ್ದ್ದ ಪೆಂಪಿನ ಮಹಾಸತಿ
ಸುಗ್ಗಲದೇವಿಯೆಂಬಿದಾನಿಂತನ ಗೌರಿಗವವೆ
ಪುಟ್ಟುವವೊಲಮ್ರಿ-

೨೬ ತಾರ್ಚ್ಚಿಯೊಳ್ಸಮಂತೆಂತಮೃತಾಂಸುವಂತೆ ಕುವರಾಗ್ರಣಿ
ಪೆರ್ಮ್ಮನ್ರಿಪಾಳ ಪುಟ್ಟಿದ ॥ ವ ॥ ಆ ಪುಣ್ಯ
ಪುರುಷನುದಯಾರ್ಚಿ ವ್ರಿದ್ಧಿಕರವೆಂತಪ್ಪುದೆನೆ ॥
ಮುನ್ನೆರ್ಪ್ಪತ್ತೇಳು
೨೭ ಸಿಂಹಾಸನಮನದಟಿನಿಂದಾಳ್ದ ವಿಕ್ರಾಂತ ತುಂಗೋ
ತ್ಪಂನಂ ಶ್ರೀಮತ್ಕಡಂಬಾ ನ್ವಯ ಕುಳತಿಳಕಂ
ತೈಲಭೂಪಾತ್ಮಜಾತಂ ತನ್ನಿಂದೀ ಧಾತ್ರಿಗೆಲ್ಲಂ ಮುದ
ಮೊದವೆ ಧರಾಚಕ್ರದೊಳುರೂಢನಾ -
೨೮ ಗಿರ್ಪ್ಪನ್ನಂ ಸಾಮಾನ್ಯನೇ ಸಾಹಸಭುಜ ವಿಜಯಂ ನಮ್ಮ
ಪೆರ್ಮ್ಮಾಡಿದೇವ ॥ ಉದುವ್ರಿತ್ತಾರಾತಿ ಭೂಪಾಳಕರ
ತಲೆಗಳಂ ಸೆಂಡುವೊಯ್ದಾಡಿ ಗೆಲ್ವಮುದಿತ ಶೃ ಶ್ರೀಕರಂ
ಶ್ರೀಕ-
೨೯ ರ ರುಚಿರ ಯಶಂ ರಾಜಸರ್ವ್ವಜ್ಞ ಲೀಲಾಪದವಿ
ಪ್ರಾಭೈಕಯುಕ್ತಂ ನಿಖಿಳ ಭುವನ ಸಂಸ್ತೂಯಮಾನಾಭಿ
ಮಾನಂ ಪದುಳಂ ಕಾದಂಬರಾಜ್ಯಾಸ್ಪದನೆಸೆದಂ ನಮ್ಮ
ಪೆರ್ಮ್ಮಾಡಿ-
೩೦ ದೇವಂ ॥ ವಚ ॥ ಆ ಕುಮಾರ ತ್ರಿಣೇತ್ರನಂ ಪಡೆದುದಾರ
ವೀರಾವತಾರ ಶ್ರೀಮತ್ಕಾ ದಂಬಚಕ್ರಿ ತೈಲಭೂಪಾನ್ವಯಾ
ಗತ ಪ್ರಸಸ್ತಿಯೆಂತೆಂದಡೆ ॥ ಗದ್ಯ ॥ ಸ್ವಸ್ತಿ ಸಮಧಿಗ-
೩೧ ತ ಪಂಚಮಹಾಶಬ್ದ ಮಹಾಮಣ್ಡಳೇಸ್ವರಂ ಬನವಾಸೀ
ಪುರವರಾಧೀಶ್ವರಂ ಜಯಂತೀ ಮಧುಕೇಸ್ವರದೇವಲಬ್ಧ
ವರಪ್ರಸಾದಂ ಮೃಗಮದಾಮೋದಂ ತ್ರ್ಯಕ್ಷಕ್ಷ್ಮಾಸಂಭವಂ
ಚತುರಾ-
೩೨ ಸೀತಿ ನಗರಾಧಿಷ್ಠಿತ ಲಲಾಟ ಲೋಚನ ಚತುಬ್ಭುಜಂ
ಜಗದ್ವಿದಿತಾಷ್ಟಾ ದಸಾಸ್ವಮೇಧ ಯಜ್ಞದೀಕ್ಷಾದೀಕ್ಷಿತಂ
ಹಿಮವದ್ಗಿರೀಂದ್ರ ರುಂದ್ರ ಸಿಖಾಶಕ್ತಿ ಸಂಸ್ಥಪಿಸ್ಥಟಿ
೩೩ ಕ ಸಿಲಾಸ್ತಂಭ ಬದ್ಧ ಮದಗಜೇಂದ್ರ ಮಹಾಮಹಿಮಾಭಿ
ರಾಮಂ ಕಾದಂಬಚಕ್ರಮಯೂರವರ್ಮ್ಮ
ಮಹಾಮಹೀಪಾಳ ಕುಳಭೂಷಣಂ । ಪೆರ್ಮ್ಮಟ್ಟಿ
ತೂರ್ಯ್ಯ ನಿರ್ಗ್ಘೋಷಣಂ
೩೪ ಸಾಖಾಚರೇಂದ್ರಧ್ವಜ ವಿರಾಜಮಾನ ಮಾನೋತ್ತುಂಗ
ಸಿಂಹ ಲಾಂಛನಂ ದತ್ತಾರ್ತ್ಥಿ ಕಾಂಚನಂ । ಸಮರ
ಜಯಕಾರಣಂ । ಕಡಂಬರಾಭರಣಂ । ಮಾರ್ಕ್ಕೊಳು
ವರ ಗಂಡಂ ಪ್ರತಾಪ ಮಾರ್ತ್ತಂಡಂ
೩೫ ಮಂಡಳಿಕ ಗಂಡ ಬಂಗಾಜನಿತ್ಯಾಖಿಳ ನಾಮಾವಳೀ
ವಿರಾಜಮಾನಂ ಶ್ರೀಮನ್ಮಹಾಮಂಡಳೇಶ್ವರಂ
ತೈಲಪದೇವರ್ । ಬನವಾಸಿ ಪನ್ನಿರ್ಚ್ಛಾಸಿರಮುಂ
ಪಾನುಂಗಲ್ಲಯ್ನೂಱು ಮತ್ತಂ ಸ್ವಭುಜೋ-
೩೬ ಪಾರ್ಜ್ಜನದಿನಾದ ಪರಮಂಡಳಂಗಳುಮನುದಿತೋದಿತ
ವಾಗಿರಲೇಕಾಧಿಷ್ಠಿತದಿ ನಾಳ್ದು ಸುಕಸಂಕಥಾ
ವಿನೋದದಿಂ ರಾಜ್ಯಂಗೆಯ್ಯುತ್ತಮಿರೆ ॥ ವೃತ್ತ ॥ ಎಸೆವೀ

೩೭ ಸವಮುದ್ರ ವಮುದ್ರಿತದ ನಾನಾ ದ್ವೀಪದೊಳ್ತಾನೆ
ರಂಜಿಸುತತ್ತ್ಯುಂನತಿವೆತ್ತು ಸೋಭಿಸುವ ಜಂಬೂದ್ವೀಪ
ದೊಳ್ದೀಪದಂತೆ ಸಮೋಭಾವದೆ ಮೇರುವಿರ್ಪ್ಪ ದದಱಿಂ
ತೆಂಕಲ್ಜಗಖ್ಯಾ

೩೮ [ತಿ]ವೆತ್ತು ಶುಭಾಳಂಕ್ರಿತವಾಗಿ ತೋರ್ಪ್ಪ ಭರತಕ್ಷೇತ್ರಂ
ಪವಿತ್ರಕ್ರಿತಂ ॥ ವ ॥ ಆ ಭಾರತವರ್ಷಾಭ್ಯಂತರ ಪ್ರವರ್ತ್ತಿತ
ಶ್ರೀಕುಂತಳ ವಿಷಯಾಂಗನಾ ಘನಸ್ತನ ಸ್ಥಿ-

೩೯ ತ ಹಾರಮಣಿಯೆಂತಂತೆ ಬನವಾಸಿ ದೇಶಮೆಂತು
ಮೊಪ್ಪುವುದು ॥ ವೃತ್ತ ॥ ಪರಿವ್ರಿತಿಯಾಗಿ ನಿಳ್ದ
ಗಿರಿಕಂದರದಿಂ ರಸಪೂರವಾರಿ ನಿರ್ಜ್ಜರ ಬಹಳ ಪ್ರವಾಹ
ನಿ-

೪೦ ಟಾನ್ತರ ಮಲೆತ ಗಂಧ'ಸಾಳಿಯಿಂ ಮೊರೆವ
ಮದಾಳಿಯಿಂ ಪಿಕರವಂ ಗಳಿನೊಪ್ಪುವ ನಂದನಂಗಳಿಂ
ಕರಮೆ ಮನೋಹರಂ ಪೊಗಳದಿರ್ಪ್ಪವರಾರ್ವ್ವನ
ವಾಸಿದೇಶಮಂ ॥ ಅ

೪೧ ॥ ಕುಂದಮಂ ನಾಡೊಳ್ಕೆಂದುವಧಿಕೋತ್ಸವ ಲೀಲೆ
ಸರರಾಗದೆಳ್ತರಂ ಕುಂದಮ ಕುದವೊಪ್ಪುವ ಸುಸೋ
ಭವನವೆಲ್ಲಿಯುವೆತ್ತನೋರ್ಪ್ಪಡಂ ಕುಂದಮಾ ನಾಡ
ಪೆರ್ದ್ದಳ ಸುಧಾನ್ಯ ಸಮೃದ್ಧಿಯ-

೪೨ ಪ್ಪುಕೆಯ್ಯುದ್ವಿಂ ದುಂದುವೆುಗಾಲವಾರ್ಪ್ಪೊಗಳರುಂ
ನತಿಯಂ ಬನವಾಸಿ ದೇಸಮಂ ॥ ಬನವಸೆ ಪನ್ನಿಚ್ಛಾರ್ಛ
ಶಿರವನಿತಜೊಳಂ ಪಾನುಂಗಲ್ಲುನಾಡಂಯ್ಸೋಜಿಬಿ
ನೊಳೆಸೆಮದಲ್ಲಿ

೪೩ ಕುಂದಮ ಜನಜನಿತೋತ್ಸಾಹದೊದಮ ನಾಡೊಳ
ಗೆಂದುಂ ॥ ಆ ನಾಡೊಳಗ್ರಹಾರ ಭೂನಾರೀಕು
ಚತಟಾಗ್ರಹಾರಮೆನಲ್ವಿದ್ಯಾನಿಧಿ ನರೆಯುಂಗಲ್ಲು
ಸದಾನೋಂನತ

೪೪ . ಸೆಮದಗ್ರಹಾರೋತ್ತಂಸ ॥ ಅದು ॥ ಮುದದಿಂದಂ
ಜನಮೇಜಯ ಸ್ವರುಚಿಯಿಂಮುನ್ನಂದು ಪುಣ್ಯೋ
ದಯಾಸ್ಪದವಾಗಲ್ಮನದರ್ಕ್ಕೆಱೆದಂ ಭರಣಂಗೆಯ್ಯಲ್ಕೆ ಸಾ-

೪೫ ಶಿರ್ವ್ವರೆಂಬುದು ಮುಖ್ಯಗಣ ವೃತ್ತಿವೆತ್ತು
ನರೆಯಂಗಲ್ಲೆಂಬುದಂದಿಂ ಬಳಿಕ್ಕಿದು ತಾ ಮಿಕ್ಕ
ಮಹಾಗ್ರಹಾರತಿಳಕಂ ಪ್ರಖ್ಯಾತಮಾಯ್ತೆಲ್ಲಿಯುಂ ॥ ಇದು
ತಾ

೪೬ ಪುಣ್ಯನಿಕೇತನಂ ವಿನಮಿತ ಶ್ರೀ ವೇದ ವೇದಾಂಗ ತತ್ವದ
ಜನ್ಮಾಳಯವುದ್ಧ ಕೀರ್ತ್ತಿಯ ತವರ್ಸುಬ್ರಾಹ್ಮ್ಯತೇಜ
ಪ್ರಭಾವದ ಸಾರೋದಯ ಮೂಳ ಭೂತವಿದೆದಲು
ಚಾ-

೪೭ ತ್ರಪಾತ್ರ ಜಗಕ್ಕಿದೆ ವೈಕುಂಠವೆನಲ್ಗುಣೋಕ್ತಿ
ನರೆಯಂಗಲ್ಲಿಗಿದೆ ನೋರ್ಪ್ಪಡೆ ॥ ಎನೆತು ಧರ್ಮ್ಮ
ವಿನೋದಮಲ್ಲಿ ನಿರುತಂ ಸ್ವಾಹಾಸ್ವದಾ ಸ್ವಸ್ತಿವರ್ದ್ಧನ
ಸಂಭಾವಿತರಲ್ಲಿ ನೀತಿ-

೪೮ . ಚಿತ ಪ್ರಾಗಲ್ಭ್ಯ ಸಂಪಂನ ತತ್ವಸಿಯೋಜ್ಯಾತ್ರಕರಲ್ಲಿ
ವೇದವಮುಯುರೆ ಮೊತ್ತಾಕಾರದಿಂದಿರ್ಪ್ಪ ಪೆಂಪಿನ
ಸುಬ್ರಾಹ್ಮ್ಯ ಜನಂಗಳಲ್ಲಿ ನರೆಯಂಗಲ್ಲೊಪ್ಪದೆ ಸಂತತಂ ॥
ಒಂ-

೪೯ ಮೆ ಮತ್ತಿನವೀ ಗ್ರಾಮದ ದೊರೆಗೆ ಮಹಾಗ್ರಾಮಪೀ
ವಿಸ್ವಧಾತ್ರೀತಳಕೆಲ್ಲಂ ತಾನೆ ಪೂಜ್ಯಂ ಸುಚರಿತ
ಚಾರುತಾಳಂಕೃತ ಶ್ರೀಯು ಪೆರ್ಜ್ಜಂ ತಳೆದೊಪ್ಪಿರ್ಪ್ಪ ಗ್ರಹಾ-

೫೦ ರ ಜನನುತ ನರೆಯಂಗಲ್ಲೊಳಾವಗ್ರಹಾರಂಗಳುವೇಂ
ಸಾದೃಸ್ಯಮೆದೊಲವು ನಿಜಗುಣಮಂ ಪೋಲಿಸಲು
ಬಲ್ಲನಾವಂ ॥ ಸರಸಿ ಷಂಡ ಸಹಸ್ರದಿಂ ಬಹಳ ಪೂಗಿ
ನಾಗವಲ್ಲಿ ವೆ-

೫೧ . ತ್ವರದಿಂ ಚಂಪಕ ಕರ್ಣ್ನಿಕಾರ ಸಹಕಾರಾಸೋಕ
ಪುಂನಾಗ ಕೇಸರ ನಾಗ ದ್ರುಮ ರಾಜೀ ರಮ್ಯ
ಬಹಿರುದ್ಯಾನಾವಳಿ ಸೋಭೆಯಿಂ ನರೆಯಂಗಳಕ್ಕೆಸೆದಿ
ರ್ಪ್ಪುದಬ್ಜಜಪುರಕ್ಕೆ ತಾನೆ-

೫೨ [ಮಿಗಿ*]ಲೆಂಬಿನಂ ॥ ಆ ನಂದನಕ್ಕೆ ಪರಿಮುದು
ಸಾನಂದಿತಮೆನೆ ಸಹಸ್ರ ಮುಖದಿಂ ಗಂಗಾಸ್ಥಾನ
ದುದಕಕ್ಕೆ ದೊರೆಯೆನೆ ಭೂನುತ ದರದೊಱೆಯ ಕಟ್ಟೆ
ಪುಣ್ಯಾಜಲೌಘಂ ॥ ಬಳ-

೫೩ . ದರದೊಱೆಯ ಪರಿಕಾಲ್ಗಳಿನೊಪ್ಪಂಬಡೆದು ಬಳೆದ
ಕಳಮವನಂಗಳು ಗಿಳಿ ಮುಸುಕಿರಲೆಸೆದವಿಳಾ ಲಲನೆಯ
ಪೊದೆದಿರ್ದ್ದ ಹರಿತ ವಸನಚ್ಛವಿಯಿಂ ॥ ವೃತ್ತ ॥

೫೪ ಪುರಸೀಮಾ ಭೂಜಮಾಗಲ್ವೃಷಭನೊಗೆದಂತಿರ್ದ್ದ
ಬಂದಿರ್ದ್ದಡಂತಾ ವರದಾ ಸಿಂಧು ಪ್ರವಾಹಂ ಬಸವನ
ಪೊಳೆ ತಾನಾಂಯ್ತು ಮುಂ ಕೀಚಕರ್ಕೂಡಿರೆ
ಲಿಂಗೋದ್ಭಾಸಿ ರಾಮೇಶ್ವರನ

೫೫ ಸರಿ ಮಧ್ಯಾಂಬು ಪೊಂಬಳ್ಳಿ ಸರ್ವ್ವೇಸ್ವರವಲ್ಲಿಂ ಮೂಡ
ಕೂಡಲ್ಗೊಗಯಿಸಲೆಸಗುಂ ಪಂಚತೀರ್ತ್ಥಾಭಿದಾನಂ॥
ಪಂಚ ಮಹಾಪಾತಕಮವು ಪಂಚತ್ವಮನೆಯ್ದುಗುಂ
ತದಾಳೋಕನದಿಂ

೫೬ ಮಹಾಯಜ್ಞ ಫಳಂ ಸಂಚಿಸುಗುಂ ಪಂಚತೀರ್ತ್ಥಜಳ
ಸೇಚನದಿಂ ॥ ವ ॥ ಆ ಪಂಚತೀರ್ತ್ಥಾ ವೃತ್ತಿಯಿನೊ
ಳಗೆಲ್ಲಿಯುಂ ಸುಕೃತನಿವಾಸಂ ಪ್ರತ್ಯಕ್ಷೀಭೂತಂ
ಖ್ಯಾತಮೆಂತೆಂದಡೆ ॥ ಕಂ ॥

೫೭ ಭವನಾವಳಿಯಿಂದುದುಭವಿಸಿದ್ದೀ ಪಂಚತೀರ್ತ್ಥದಿಂ
ನರೆಯಂಗಲ್ಲವನಿ ದೇವಾಸ್ರಯ ಮೊಪ್ಪುಮದಭಿನವ
ವಾರಣಾಸಿಯಿದು ಕೇವಳಮೋ ॥ ಅಲ್ಲಿ ಶ್ರೀ ಸಾಸಿರ್ವ್ವರ
ನಿಜಗು-

೫೮ ಣ ಪ್ರಭಾವಮೆಂತೆಂದಡೆ ॥ ವೃತ್ತ ॥ ಧೃತ ನಾನಾ
ವೇದಶಾಸ್ತ್ರ ಪ್ರಕಟಿತ ಮತಿಗಳ್ಸತ್ಪುರಾಣ
ಪ್ರವೀಣನ್ನುರ್ಯುಕ್ತಿ ಪ್ರೌಢಿನಿಃ ಖಂಡಿತ ಪರಮತವಾದಿ
ಪ್ರಮಾಣ ಪ್ರ

೫೯ . . ಯರ್ಜ್ಜಿತ ಕೋಪಪರ್ಪ್ಪೂರ್ಣ್ಯ ರೂಪರ್ಸ್ಸಕಳ ಹಿತ
ನೃತಾಳೋಚರುಗ್ರ ಪ್ರತಾಪ ಚತುರಾಸ್ಯ ಪ್ರಖ್ಯರೆಂತುಂ
ಪರಿಕಿಸೆ ನರೆಯಂಗಲ್ಲ ಸಾಸಿರ್ವ್ವರೆಲ್ಲಂ ॥ ಸ್ವಸ್ತ್ಯನೇಕ
ಗುಣ

೬೦ [ಗಣಾ]ಳಂಕ್ರಿತ ಮುಖಕಮಳ ವಿನಿರ್ಗ್ಗತ ವೇದ
ವೇದಾಂಗೋಪಾಂಗಾನೇಕ ತತ್ವಜ್ಞಾನ ಮಾರ್ತ್ತಂಡ
ಜಾಲಾಮಣ್ಡಿತ ಹೃತ್ಪುಂಡರೀಕ ಬ್ರಹ್ಮದಂಡಂ ವಿಶಾಲ
ವಕ್ಷಸ್ಥಳ ಹಂಸೆಯು–

೬೧ . . ಸರಾಜಿ ವಿರಾಜಮಾನರ್ । ಯಮ ನಿಯಮ
ಸ್ವಾಧ್ಯಾಯ ಧ್ಯಾನ ಧಾರಣಮೋನಾನುಷ್ಠಾಣ
ಜಪಸಮಾಧಿ ಸೀಳಗುಣಸಂಪಂನರ್ । ಸುಜನ ಪ್ರಸನ್ನರು
ಯು–

೬೨ ಜುಸ್ಸಾಮಾಥರ್ವ್ವವೇದ ಪಾರಾವಾರಗರಸೇಷ ವೈಸೇಷಿಕ
ನೈಯ್ಯಾಯಿಕ । ಸಾಂಖ್ಯ ಬೌದ್ಧ ಲೋಕಾಯತಂ
ಮೀವಮಾಂಸಾದಿ ಶಬ್ದಶಾಸ್ತ್ರಪ್ರವೀಣರ್।
ಮನ್ವಾದ್ಯಷ್ಟಾದಶಧ–

೬೩ [ರ್ಮ್ಮ*]ರ್ ಶಾಸ್ತ್ರಕುಳರಗ್ನಿಷ್ಟೋಮಾದಿ ಸಪ್ತ ಸೋಮ
ಸಂಸ್ಥಾವಭೃತಾವಗಾಹನ ಪವಿತ್ರಿಕೃತಗೋತ್ರರಮಳ
ಚರಿತ್ರರ್ । ದ್ವಾತ್ರಿಂಸತ್ಸಹಸ್ರ ಸಮಯಾಗ್ರಗಣ್ಯ–

೬೪ ರಗಣಿತಪುಣ್ಯರ್ ಶ್ರೀ ಸ್ವಯಂಭು ಸರ್ವ್ವೇಸ್ವರದೇವ
ಪಾದಾರಾಧಕರಭೇದ್ಯ ಪದಭೇದಕರುಮಪ್ಪ ಶ್ರೀಮದ
ನಾದಿಯಗ್ರಹಾರಂ ನರೆಯಂಗಲ್ಲಸೇಷ ಮಹಾಜನಂ
ಶ್ರೀಸಾಸಿ–

೬೫ ರ್ವ್ವರುಂ ಸರ್ವ್ವವೆಳಸವಿಷ್ಠಾಣದೊಳಿರ್ದ್ದು ಧರ್ಮ್ಮ
ಚಿತ್ತೋತ್ಸವದಿಂ ಚತುಸ್ಸೀಮಾಂತ ರಂಗಳೊಳಾದ ಸಕಳ
ಧರ್ಮ್ಮಂಗಳ ತಂತಮ್ಮ ಧರ್ಮ್ಮಮೆಂದಾರಯ್ದು ಕಾರುಣ್ಯ
ಚಿತ್ತದಿಂ ಸುರಕ್ಷಿತಮಾಗೆ ರ ।

೬೬ [ಕ್ಷಿ*]ಸುತ್ತಮಿರಲಾ ಶ್ರೀ ಸಾಸಿರ್ವ್ವರೊಳಗೆ ॥ @ ॥ @
ವತ್ತಂ ॥ ॥ @ ಶ್ರೀಮತ್ಸಂತೇಜ ಸಂಭೂತ
ನಿನವಿರಳವಾಗಬ್ಯ ವಚ್ಛಿಂನ ಭಾವೋದ್ಭಾವಮಂ
ಕೊಗರ್ಮ್ಮೆ ರಾರಾಜಿತ ಸರಸಿ–

೬೭ . . ತ್ರಬೋಲಾಗಿಂತು ಲಕ್ಷ್ಮಿಪ್ರೇಮಶಾಂಡಿಲ್ಯಗೋತ್ರಂ
ಪ್ರಬಳಿಸಲೆಸೆದಂ ವೇದಮೂರ್ತ್ತಿ ಪ್ರಭಾವಾಧಾಮಂ ಶ್ರೀ
ಮುಕ್ಕುರಯ್ಯಾ ನಿಜಕುಳ ನಳಿನಿ ಷಂಡ ಚಂಡಾಂಸು
ತೇಜಂ ॥

೬೮ . ಮನಿದಾನನೆಂಬ ಮಹಿಮೋನ್ನತಿಯಿಂದೆಸೆದಿರ್ಪ್ಪ
ಮುಕ್ಕುರಯ್ಯನ ತನೆಯಂಗೆ । ಪುಣ್ಯಪುರುಷಾಗ್ರಣಿ
ಯೆಂಬೀ ನೆಗರ್ತ್ತೆವೆತ್ತ ಪೆಂಪಿನ ಕಣಿ ಕಾಡಿಮಯ್ಯ
ವಿಭುಗಾತ್ಮಜರಾದರು ಹಿ–

೬೯ ಟ್ಟಿಮಯ್ಯನುಂ ದಿನಕರ ಚಟ್ಟಿಮಯ್ಯನೆನಲಾ
ಪೂರ್ಗ್ಗಳರ್ದ್ದಯದಾನಸೀಳರ ॥ ಆ ಮೂವರೊಳಗೆ॥
ಜನತಾ ಸಂಸ್ತುತ ಹಿಟ್ಟಿಮಯ್ಯ ವಿಭುಗಂ ಸ್ತ್ರೀರತ್ನವೆಂ
ಬೊಳ್ಪನಿಂಬಿನೆ ತಾಳ್ದೊಪ್ಪುವ–

೭೦ ವಿಳಾಲೋಕೈಕ ಸಂಪ್ರಜ್ಯಾರಾದನರ್ಪ್ಪುಟ್ಟಿದರು
ತ್ತಮೋತ್ತಮ ಗುಣರ್ಶ್ಯ ವಿಪ್ರವಂಶಾಬ್ಜಿನೀವನಹಂಸ
ರ್ಸುಚರಿತ್ರ ಪಾತ್ರರಜುವರ್ ಪ್ರಖ್ಯಾತ ಪುಣ್ಯೋದಯರ್
॥ ಮ–

೭೧ . ರ್ಗ್ಗಾಗ್ರಣಿ ಚೌಂಡಮಯ್ಯನನುಜಂ ಶೃದೇವಿಮಯ್ಯಂ
ಜಗಜ್ಜನ ಸಂಪೂಜಿತ ಮದ್ದಿಮಯ್ಯನೆನಿತು ಪುಣ್ಯಾಧಿಕಂ
ದಾವಿಮಯ್ಯನಿಳಾ ಸಂಸ್ತುತ ಬಿಜ್ಜಮಯ್ಯ । ನುಚಿತ
ವ್ಯಾಪಾರದಿ ನಾಶಿಮ–

೭೨ . . ಔಂದಿಂ ತೊಡಮಟ್ಟಿದ ನೆಗಳ್ದರೀ ವಿಶ್ವಂಭರಾ
ಚಕ್ರದೊಳು ॥ ಅಂತಜುವಮ್ರ್ಮಹಾವುಹಿವು
ರಾದವರೊಳ್ಗುಣ ರತ್ನಭೈಷರೆಂಬಂತೆಸೆದಿರ್ಪ್ಪ ಪುಣ್ಯನಿಧಿ
ವಾರಿಧಿ ಕೋಜಿರ ದೇವಿಮಯ್ಯ

೭೩ . ಳ ದೇಸದೊಳು ನೆಗಳ್ದ ನಾಳ್ಪಭುಸಕ್ತಿಂಯೊ
ಳಾರ್ಗ್ಗವಗ್ರಿಯಂ ಸಂತತವೆಣ್ಬೆರಲ್ಗೆ ಜಿನವಂಸ ಸಿಖಾಮಣಿ
ಬಂಧುವತ್ಸಳಂ ॥ ಆ ಮಹಿಮಾರ್ಣ್ನ ವನರ್ದ್ಧಾಂಗ
ಮಹಿ–

೭೪ . . ಕದಿನೆಸೆವಳೂರ್ಜ್ಜಿತ ಗುಣಲಕ್ಷ್ಮಿ ಮಹಿಮೆ ಭೋಗಿಕವ್ವೆ
ಮಹಾ ಮಹಿಮಾಮೂರ್ತ್ತಿ ಭಾಗ್ಯವತಿ ವಸುಮತಿಯೊಳು
॥ ಅಂತೆನಿಪಾ ಮಹಾಮಹಿಮೆವೆತ್ತ ಮಹಾ–

೭೫ . . ಗಿಕವ್ವೆಗಂ ಸಂತತವುತ್ತರೋತ್ತರಮನಾಂತಭಿರಂಜಿಪ
ದೇವಿಮಯ್ಯನೆಂದಿಂತಿವರ್ಗ್ಗಾದರಾತ್ಮಭವರನ್ವಿತ ಭಾಗ್ಯದ
ಕಪ್ಪಿಮಯ್ಯನುಂ । ಕಂತುವಿಳಾಸ ಹಾಸಿ ಶುಭಲಕ್ಷಣ
ಲಕ್ಷಿತಮಾ–

೭೬ . ನುಂ ॥ ಗುಜುವಿಯರೆಂಬ ಮಾನ್ಯತೆ ಪೊಜಗಾಗಿರೆ
ಸಕಳ ವಸ್ತುವೃತ್ತಿಯೊಳೆಂತುಂ ನೆಜಿ ಸಕ್ಕಸವನೆ
ಗುಣಗಣದೇಜಿಯರ್ಕ್ಕೇವಳಮೆ ದೇವಿಮಯ್ಯನ
ತನೆಯರು ॥

೭೭ . ಯೀರ್ವ್ವರೊಳವಗ್ರಗಣ್ಯನುಂ ಗುಣಾಗ್ರಗಣ್ಯನುಮೆನಿಪ
ಪರಮ ಪರಹಿತೋಪಕಾರಿ । ಪ್ರಭು ಮಂತ್ರೋತ್ಸಾಹಶಕ್ತಿ
ತ್ರಯಾಧಿಕಾರಿ । ಧರ್ಮ್ಮಚಿತ್ತಪ್ರಯುಕ್ತನಾತ್ಮ ಪ್ರಸಂಸಾ
ವಿರಕ್ತಂ ।

೭೮ ಗೋತ್ರಪವಿತ್ರಿಕೃತಂ ಮಹಾಪ್ರಭು ಕಪ್ಪಿಮಯ್ಯನೇ
ಮೊರೆಯನೆನೆ ॥ ವೃ ॥ ಅರವಿಂದೋದ್ಭವನಸ್ತೆ ಸುಸ್ಥಿತತರಂ
ಸಾಕಲ್ಯನೆಂತಂತೆ ಸಂಸ್ಕರಿತಾ ಜ್ಞಾನನಿಧಿ ಗೌತಮಾಂಕ
ರಿಷಿಯಿನ್ನೆಂತಂ–

೭೯ ತೆ ಚಾರಿತ್ರದೊಳ್ಪಿರಿಯಂ ದೇವಧುನಿ ತನೂಜನವ
ನಿಂನೆಂತೆಂತುಂತೆದತ್ವಾಚಿ ಸತ್ಪುರುಷಂ ಕೇವಳನೆ ಮಹಂತ
ಮಹಿಮಂ ಕಪ್ಪಂ ಗುಣಾಗ್ರಾಹಕಂ ॥ ಆ ಪುಣ್ಯಪುರುಷನ

೮೦ . ಮಹಾಸತಿ ಗುಣವತಿ ಭಾಗ್ಯವತಿಯ ಪತಿಹಿತಬ್ರತಾ
ಚಾರವೆಂತೆಂದಡೆ ॥ ವೃತ್ತ ॥ ವೇದಂ ತಾನೆ
ನಿಯೋಜಿಸಲ್ಕೆ ನೆಗಳ್ದಿಲ್ಲಾ ತತ್ವಸಂಭಾವದಿಂದಾದಂ
ಸೋಭಿಸುವಳು ಪತಿಬ್ರ–

೮೧ . . ಣ ಪ್ರಖ್ಯಾತದಿಂ ನೀತಿಯಿಂ ಭೂದೇವಾನ್ವಯ ಲಕ್ಷ್ಮಿ ತಾನೆನೆ ಸುಭಪ್ರೋದ್ದಾಮೆ ಯೆಂದಂದಿಳಾ ಹ್ಲಾದೈಕಾರ್ಚ್ಚಿತೆ ರನ್ನಿಕವ್ವೆಯೆಂದಿ ಸ್ತ್ರೈರತ್ನವೇನಲ್ಲಳೆ ॥ ನೃತವಚನಾಳಂ ಕ್ರಿತಗು–

೮೨ . . ಯಿಂ ಶಾಂಡಿಲ್ಯೆ ಸತ್ಯಭಾವೆ ಸುಸೀಳಬ್ರತದೊಳರುನ್ನ ತಿಯೆನಲೂರ್ಜ್ಜಿತೆಯಾದಳು ರನ್ನಿಕವ್ವೆ ಕಾಂತಾರತ್ನ॥ ಆ ರನ್ನಿಕಬ್ಬೆಗಂ ಪ್ರಭುಸಾರತೆಯಿಂದೆಸೆವ ಕಪ್ಪಿ–

೮೩ . . ಗಂಭೀರ ರುಚಿತಜ್ಜ್ವಪೊಗೆದ ಶ್ರೈರಮಣಗ್ಗುಣಿ ಗಳೆನಲು ನಾಲ್ವರ್ಪುತ್ರರು ॥ ಅಲ್ಲಿಂ ॥ ಪರಿಯಂ ಮದ್ದಿಮಯ ಕ್ರಯಿಂತನನುಜಂ ಶ್ರೈ ನಾಣಿಮಯ್ಯಂ ಗುಣೇಸ್ವರನಂತಾ ವಿಭು

೮೪ . . ಯನಿಂ ಸಾಹಿತ್ಯ ವಿದ್ಯಧದಿಸಂಸ್ಫುರಿತಾಸೇಷ ಕಳಾವಿಳಾಸ ಕುಶಳಂ ಗೋವಿಂದನುದ್ಯತ್ಸುಭಾಚರಣಂ ತಮ್ಮನವಂಗೆ ಪುಣ್ಯಪುರುಷಂ ಭಾಗ್ಯಾಧೀಶಂ ದೇವಣಂ ॥ ವಚನಂ ॥

೮೫ . . ಮಿತ್ರ ಕಳತ್ರಾದಿ ಮನೋಭಿಲಷಿತ ಫಳಸಿದ್ಧಿಯುಂ ಪ್ರಸಿದ್ಧಿವಡೆದು ಸುಪುತ್ರಃ ಕುಲದೀಪಕಂ ಮಹಾಪ್ರಭು ಕಪ್ಪಿಮಯ್ಯಂ ಧರ್ಮ್ಮಚಿತ್ತೋತ್ಸಾಹ ಸಂಪನ್ನನಾಗಿ ॥ ವೃ ॥

೮೬ . ಟ್ಟಮನಸುಂಗೊಳೆ ಕಟ್ಟಿಸಿ ಜನ್ಮಭೂಮಿಯೊಳ್ಬಿತ್ತರ ದಿಂದೆ ರೂಢಿವಡೆದೊಪ್ಪಿರಲೀಸ ನಿವಾಸ ಮುಖ್ಯ ಮಾಗುತ್ತಿರೆ ಧರ್ಮ್ಮಮಂ ಫಲವನೂರ್ಜ್ಜಿತಮಾಗಿರೆ ಮಾಡಿದಂ ಬಬಾಪ್ಪುತ್ತಮರೀ

೮೭ . . ಕೌಱರ ಕಪ್ಪವೊಲ್ನಿರಂತರ ॥ ನರೆಯಂಗಲ್ಲಿದು ವಾರಣಾಸಿ ಸುಶ್ರುತ ಕ್ಷೇತ್ರಂ ಪವಿತ್ರಿಕೃತಾಚರಣಗ್ಗಿಂತಿದು ಗಂಗೆಯುಂಗಜ ಯುದಿದಂ ಶರವಣೀ ಸಂಗಂ ಮನೋಹರದಿಂ ಮಾ–

೮೮ . . ಮೆನೆನುತ್ತಾಹ್ಲಾದದಿಂ ಮಾಡಿದಂ ಪುರುಷಾರ್ತ್ಥಾಗ್ರಣಿ ಕಪ್ಪಿಮಯ್ಯನೆನಿತುಂ ಪ್ರಖ್ಯಾತ ಧರ್ಮ್ಮಂಗಳ ॥ ಪುರವರ ಲಕ್ಷ್ಮಿಗಿಂತಿವು ವಿಭೂಷಣವೆಂಬವೊಲಾಗೆ ಮಾಡಿದಂ ಪರಮ

೮೯ . . . ನಭಿರಂಜಿಸೆ ಕೌಱರ ಕಪ್ಪಿಮಯ್ಯನೀ ಧರೆ ಪೊಗಳಲ್ಕಿಹುಂ ಪರಹಿತಾರ್ತ್ಥ ಸುಸಂಚಿತ ಪುಣ್ಯಪುಂಜ ದಂತಿರೆ ಮರುತೋತ್ತರಾಸೆಯೊಳು ಸಾಸ್ವತಮಾಗೆ ವಿಶಿಷ್ಟ ಧರ್ಮ್ಮಮಂ ॥

೯೦ . . . ದಕದಿ ಹಿಂಗೆದೆಹವನ್ನವದು ತಾ ಪ್ರತ್ಯಕ್ಷ ಜೀವಂ ವಚೋವಿದಗಿಂ ವಾಗ್ವಧುದೆಯ್ವವೀಸನೇಸದಾನಂ ರಕ್ಷ ದಕ್ಷಂದಲೆಂಬುದನೆಂದಂತೆ ಸುತೀರ್ತ್ಥ ಸತ್ರಗ್ರಿಹಮಂ ವಾ–

೯೧ . . . ಮುದದಿಂ ಮಾಡಿಸಿದಂ ಶಿವಾಯತನಮಂ ಕಪ್ಪಂ ಯಶೋವಲ್ಲಭಂ ॥ ಇದು ಕನಕಾದ್ರಿಯೋ ತುಹಿನ ಪರ್ವ್ವತಮೊ

೯೨ . . . . ಮಹಿಮಾಸ್ಪದನಾದ ಸಂಭು ಸಂಪದಂ ದೊದೆದಿರ್ದ್ದ ಪುಣ್ಯಗಿರಿ ಯೊ ಪರಿಭಾವಿಸ ಲಿಂತಿದೆಂಬಿನಂ ಸದವಳಕಪ್ಪಿವಂಯ್ಯೆಂಭು ಮಾಡಿಸಲೊಪ್ಪಿದುದೀಶ ಮಂದಿರಿಂ ॥ ಅಲ್ಲಿಂ ॥

೯೩ . . . . . . ಉವಳಿಸಿ ಸುತ್ತಿದ ಪೆರ್ಗ್ಗೆಱ ಸೈಳಬಂಧನ ಪ್ರಸರ ದುಪಾತ ವಿಸ್ರುಮಣ ವಿಧಿಯ ಪೆಗ್ಗೆಱ ತಾಂ ಗಭೀರದಿಂದೆಸೆವ ಮಹಾಸಮುದ್ರದುಪವಾನದ ಪೆರ್ಗ್ಗೆಱ ಕಪ್ಪಿ–

೯೪ . . . . ವತೀರ್ತ್ಥಮಾದುದು ಮನೋಹರಮಾದುದು ಪಾವನೋದಕ ॥ ಇದು ಸಿವತೀರ್ತ್ಥ ಜಳನಿಧಿಯದು ರಾಕ್ಷಸ ಜನ ಸಮರ್ತ್ತನುಗ್ರ ವಿಷಾರ್ತ್ತಂ ಪದೆವೊಡಿದಮೃತಂ ಕಪ್ಪಂ

೯೫ . . . ಱಗೆ ದೊರೆ ಕೆಱೆಯೊಳವೆ ॥ ನೆಗಳ್ದಗ್ನಿಷ್ಟಗೆ ದೇವದೇವ ಭವನಂ ಸಾರಸ್ವತಾವಾಸಮೀ ಜಗತಿಂ ಸುತ ಸತ್ಪುರಾಣಕಥನಾಗಾರಂ ಮಠಂ ಸತ್ರಮೆರ್ಪ್ಪಗ ರಾರಾ–

೯೬ . . . . ಬ್ಯಕೀರ್ಣ್ನದಿಂ ಮಿಗೆ ಚೆಲುವಾದುದೂ ಪೂ . . . . . ಕ್ರಿತಂ . _ . . . . ದಿಂ ॥ ಕ್ರಿತ . . . . ೦ ಕಪ್ಪಿಮಯ್ಯ ಸುಚರಿತ ಚರಿತಂ

೯೭ . . . . . ಯ್ಯಂ ಹಿತನಾರ್ಗ್ಗಂ ಕಪ್ಪಿಮಯ್ಯಂ ಪ್ರಭು . . . . ಕದಿ . . . . ಪೆಂಪಿನೊಳ್ಕಪ್ಪಿಮ–

೯೮ . . . . ಯ್ಯಂ ಸಕಳ ಜನ ಮನೋಹ್ಲಾದಂ . . . . ತ್ತಿರೆ . . . . ಡಗ ಶ್ರೈಮಚ್ಚಾಳುಕ್ಯ ವಿಕ್ರಮ*] ವರ್ಷದ

೯೯ . . . . ತ್ಸರದ ಪುಷ್ಯದಮಾವಸ್ಯೆ ಆ . . . . ಯ ಬ್ಯತೀಪಾತಮಂದಾ ಪುಣ್ಯತಿಥಿ ನಿ . . . . ಕಪ್ಪಿ–

೧೦೦. . . . . ರಂ ನಡೆವನ್ನಿರೆ ಶ್ರೀ . . . . ನು ಕೆಱೆಯ ಕೆಳಗೆ ಬಡಗಣ ತುಂಬಿನ ಕಾಗೆಗೊಂ . . . . ॥–

೧೦೧ . . . . . . ವಿಗೆಗೆ ಮುಳ್ಳ ಹಸುಸಿ . . . . ರು ಬಿಟ್ಟ ವ್ರಿತ್ತಿ . . . . . ಪೂರ ದಾರಿಯಿಂ . . . . ತುದಿ

೧೦೨ . . . . ಳದಲು ಸತ್ರಕ್ಕೆ ಮ . . . . ತಮಂ . . ತಿ ದೇವಿಯ ನಿವೇದ್ಯಕ್ಕೆ

೧೦೩ . . . . ಡಲು ಹಸುಗೆಗೆಱ . . . . ದ್ಯಕ್ಕೆ ಹೊಸಪೂರ ದಾರಿಯಿಂ

೧೦೪ . . . . . . ಹಸುಗೆಯಿಂ ಮೂಡಲು ಹಂನಾಯ ಕೆಳಗೆ ಬಿಟ್ಟ ತೋಂಟ ಕಂಮ

೧೦೫ . . . . . ಮಾದಿಮಯ್ಯಂ ಶ್ರೀ ಮಾಧವದೇವರಂ ಪ್ರತಿಷ್ಠೆ ಮಾಡಿ ಹೊಸ . ಭೀಮಯ್ಯಂಗಳ . . . ಕೇಸಿಯಣ್ಣ

೧೦೬ . . . .
. . . ಯಿವರಂ
೧೦೭ . . . . . . ರನ್ನ . . . . ಸ್ವ ರತ್ನದಲುಂ ಕಟ್ಟಿಸಿ . .
. . . . ಪಾರಗರ್ಗ್ಗ . . . . ವಾರಣಾಸಿ
ಕುರುಕ್ಷೇತ್ರದೊಳು ಸಾಯಿರ . . . . . . ಣ್ಣ ಶಾಸನದ
ಕೆಳಗಿನ ಅಂಚಿನ ಪಟ್ಟಿಕೆಯಲ್ಲಿ
೧೦೮ . . . . ಕಪಿಲೆಗಳು
ಮನಾ ಬ್ರಾಹ್ಮಣರುಮ–
೧೦೯ . . . . ಕ್ಷೇತ್ರದಲ್ಲಳಿದ ಪಾತಕಂ ಸಾರ್ಗ್ಗುಂ ॥
ಸ್ವದತ್ತಂ ಪರದತ್ತಂ ವಾಯೋ ಹರೇತು ವಸುನ್ಧರಾ
೧೧೦ ಷಷ್ಟಿರ್ವ್ವರ್ಷ ಸಹಸ್ರಾಣಿ ವಿಷ್ಠಾಯಾಂ ಜಾಯತೇ
ಕೃಮಿ ॥ ಶ್ರೀಮ . . . .
ಚೂಡಾಮಣಿ
೧೧೧ ಲೋಚನ . . . ಯೊ . . . .
. . ಗಿ ವಸಿಷ್ಠಗೋತ್ರಾಭರಣ ಬ . . . .
. . . . ॥ @ ॥

೪ ನರೇಗಲ್ಲು ಸರ್ವೇಶ್ವರ ದೇವಸ್ಥಾನ – ಆವರಣದಲ್ಲಿಯ ಶಾಸನ ಸುಮಾರು ೧೩ನೆಯ ಶತಮಾನ

ಹೊಸತು

೧೭" ಅಗಲ ೨೦" ಎತ್ತರದ ಕರಿಕಲ್ಲಿನ ಮೇಲೆ ಈ ಶಾಸನವನ್ನು ಕೆತ್ತಲಾಗಿದೆ. ವೀರನೊಬ್ಬ ಕಾದುವ ಕ್ರಿಯೆಯಲ್ಲಿ ತೊಡಗಿದ ಭಂಗಿಯ ಉಬ್ಬುಶಿಲ್ಪವಿದೆ. ಕೆಳಗೆ ಮೂರು ಸಾಲಿನ ಶಾಸನದ ಭಾಗ ಮಾತ್ರ ಉಳಿದಿದ್ದು, ವೀರನ ಮೇಲ್ಭಾಗದಲ್ಲಿಯೂ ಶಾಸನವಿತ್ತೆಂದು ಊಹಿಸಬಹುದು. ಯುದ್ಧದಲ್ಲಿ ಮರಣ ಹೊಂದಿದ ವೀರನೊಬ್ಬನ ಮಕ್ಕಳಿಗೆ ಬಿಟ್ಟ ನೆತ್ತರುಕೊಡುಗೆಯನ್ನು ಶಾಸನ ವಿವರಿಸುತ್ತಿದ್ದು, ಮೇಲ್ಭಾಗ ಒಡೆದು ಹೋಗಿರುವುದರಿಂದ ವಿವರಗಳು ಲಭ್ಯವಿಲ್ಲ.

೧ ಯ್ಮಂ ಮರಚ್ಚಿ ಪಲರಂ ಕೊನ್ದು ಸ್ವರ್ಗ್ಗಕ್ಕೆ ಸಂದ ॥
ಅವನ ಮಕ್ಕಳಿಗೆ ನೆತ್ತರುಗೊಡಗೆಯಿ
೨ ಮಣ್ಣಳಿ ಗಟ್ದಿ ಕಮ್ಮ ೧೨ ಕರಿಯ ಕೆಯಿ ಕಮ್ಮ ೫೦
ಮನೆ ಕಯಿ ೬ ಈನ್ತಿನಿತ್ಮನಾಚಂದ್ರಾ–
೩ ಸಾಯಿವರ ಸಲುವುದು ॥ ಮಂಗಳ ಮಹ(ಹಾ) ಶ್ರೀ
ಶ್ರೀ

೫ ನರೇಗಲ್ಲು ಮಣ್ಣಬಸಪ್ಪನ ಗುಡಿಯ ಕಂಬದ ಮೇಲಿರುವ ಶಾಸನ

ಅಪ್ರಕಟಿತ

೧೨" ಎತ್ತರ ೧೨" ಅಗಲದ ಕಂಭದ ಭಾಗದಲ್ಲಿ ಈ ಶಾಸನವನ್ನು ಕೆತ್ತಲಾಗಿದೆ. ಮೇಲೆ ಯಾವುದೇ ಚಿತ್ರಗಳಿರುವುದಿಲ್ಲ. ಅಚಲೇಶ್ವರದೇವರ ವೃತ್ತಿಯಲ್ಲಿ ಸೋವಜೀಯ ರಾಜಜೀಯರೊಂದಿಗೆ ಕೇತಬೆ ದಾಸೆಯ ತನಗೂ ಭಾಗ ನೀಡಬೇಕೆಂದು ವ್ಯಾಜ್ಯ ಹೂಡಿದಾಗ, ಮಹಾಜನರಾದಿಯಾಗಿ ಸರ್ವರ ಸಮ್ಮುಖದಲ್ಲಿ ಆತನಿಗೆ ಭಾಗವಿಲ್ಲವೆಂದು ನಿರ್ಣಯಿಸಿದ ಪ್ರಸಂಗವನ್ನು ಈ ಶಾಸನ ಸುಮಾರು ೧೨ನೆಯ ಶತಮಾನದ ಅಕ್ಷರಗಳಲ್ಲಿ ಉಲ್ಲೇಖಿಸುತ್ತದೆ.

ಪೂರ್ವ ಮುಖ

೧ ೧ನೆಯ ಪ್ಲವಂಗ ಸಂವತ್ಸರದ ಫಾಲ್ಗು–
೨ ಣ ಸುದ್ಧ ಅಷ್ಟಮಿ ಶು[ಕ್ರ*]ವಾರದಂದು
೩ ಸ್ವಸ್ತಿ ಯಮ ನಿಯಮ ಸ್ವಾಧ್ಯಾಯ ಧ್ಯಾ–
೪ ನ ಧಾರಣ ಮೋನಾನುಷ್ಠಾನ ಜಪ ಸ–
೫ ಮಾಧಿ ಶೀಲಗುಣಸಮ್ಪನ್ನರುಂ ಶ್ರೀ ಸರ್ವೇ–
೬ ಶ್ವರದೇವರ ಪಾದಾರಾಧಕರುಮಪ್ಪ ಶ್ರೀ
೭ ನರೆಯಂಗಲ್ಲ ಅಚಲೇಶ್ವರದೇವರ ವ್ರಿತ್ತಿಯ
೮ ದೆಸೆಗೆ ಅನಾದಿಯಲು ಯಿಲ್ಲದೊದಕ್ಕೆ ಸೋವಜೀ–
೯ ಯ ರಾಜಜೀಯನ ವ್ರಿತ್ತಿಯಲ್ಲಿ ಕೇತಬೆ ದಾಸೆ–
೧೦ ಯ ತನಗೂ ಭಾಗ ಉಂಟೆಂದು ಸವ್ಯಾಜಿಸಿದರೆ
೧೧ ಅಶೇಷ ಮಹಾಜನ ನಾಲ್ಕಗ್ರಹಾರ ಎಕ್ಕೋಟಿಗ–
೧೨ ಳು ಅಸಂಖ್ಯಾತ ಗಣಂಗಳ ಸಮೀಪದಲು ಉತ್ತರ ಮುಖ
೧೩ ವ್ಯಾಜವ ನಿರ್ಣ್ನಯ್ಸಿ ಸೋಮಜೀಯಂಗೆ ರಾ–
೧೪ ಜ ಜೀಯಂಗೆ ವ್ರಿತ್ತಿ ಕೇಸಬೆಗೆ ದಾಸೆ–
೧೫ ಯಂಗೆ ಕಾರಣವಿಲ್ಲ ಯಿಂನಾವನಾಗಿ ಮೆ
೧೬ ಅಸಡಾಳಿಸಿದಡೆ ಚಕ್ರಿಯಾಣೆ ಕಾರ–
೧೭ ದೇವರ ಸನ್ತಾನಕೆ ಬೀರೆಯ ದಂಣಾಯಕನಾಣೆ
೧೮ ಸಾಸಿರ್ವ್ವ ಪ್ರಮುಖವಾಗಿ ಅಸಂಖ್ಯಾತರಾ–
೧೯ ಣೆ ಅಡೆದಾಣೆ ಎಕ್ಕೋಟಿ ಸಮಯದಾಣೆ
೨೦ ನಾಡಾಣೆ ಅಯ್ನೂರ್ವ್ವರಾಣೆ ಯಿಂನಾವನಾ–
೨೧ ಗಿ ಮ ಅಸಡಾಳ್ಸಿದಡೆ ಶಿವದ್ರೋಹಿ ಯಿ–
೨೨ ನ್ನಾವನಾಗಿಯೆ ಮಾಜಿದಡೆ ಕೊಂಡ ಕೋಲ ಪ–
೨೩ ರಿಹಾರ ಮಂಗಳ ಮಹಾ ಶ್ರೀ

೬ ನರೇಗಲ್ಲು ಹೊರಪೇಟೆ ಬಸವಣ್ಣ ದೇವಸ್ಥಾನದ ಎದುರು ನಿಲ್ಲಿಸಿದ ಶಾಸನ

ಅಪ್ರಕಟಿತ

೫೦" ಎತ್ತರ ೨೪" ಅಗಲದ ಕರಿಕಲ್ಲಿನ ಶಾಸನವಿದಾಗಿದೆ ಮೇಲಿನ ೧೬" ಭಾಗದಲ್ಲಿ ಗಂಟೆ ದೂಪಾರತಿಗಳೊಂದಿಗೆ ಶಿವಲಿಂಗವನ್ನು ಪೂಜಿಸುತ್ತಿರುವ

ಪೂಜಾರಿ, ಶಿವಲಿಂಗ ಮತ್ತು ಕುಳಿತ ನಂದಿಗಳ ಉಬ್ಬುಶಿಲ್ಪಗಳಿವೆ. ಕೆಳಗಿನ ೪" ಚಿಕ್ಕ ಪಟ್ಟಿಕೆಯಲ್ಲಿ ೫ ಸಾಲಿನ ಶಾಸನವಿದ್ದು, ಅದರ ಕೆಳಭಾಗದಲ್ಲಿ ಉಳಿದ ಶಾಸನವಿದೆ.

ಅನಾದಿಯ ಪಟ್ಟಣ ಪಿರಿಯಗ್ರಹಾರ ನರೇಗಲ್ಲ ಮಹಾಜನರು ಮತ್ತು ಪಂಚಮಠದವರ ಸಮಕ್ಷಮದಲ್ಲಿ ಜೋಯಿಸ ಮಧುವಯ್ಯ ದೇವರಿಗೆ ಬಿಟ್ಟ ಭೂದತ್ತಿಯನ್ನು ತಿಳಿಸುತ್ತದೆ.

೧ @ ನಮಸ್ತುಂಗ ಶಿರಸ್ತುಂಬಿ ಚಂದ್ರ ಚಾಮರ ತಾ(ಚಾ)ರವೇ ತ್ರೈಲೋಕ–
೨೮ ಕ್ಯ ನಗರಾರಂಭ ಮೂಲಸ್ತಂಭಾಯ ಸಂಭವೇ ॥ ಸ್ವಸ್ತಿ
೨೯ ಶ್ರೀಮತು ಯಾದವ ನಾರಾಯಣಂ
೩೦ . . . . ಪ್ರತಾಪ ಚಕ್ರವರ್ತ್ತಿ ಶ್ರೀವೀರರಾಮದೇವ ಪ–
೩೧ ಜಯ ರಾಜ್ಯೋದಯದ ಮೂಱನೆಯ ಶ್ರೀಮುಖ
೩೨ ಸಂವತ್ಸರದ ವಯಿಶಾಖ ಸುದ್ಧ ೧೩ ಸೋಮವಾರ ದಂದು ಸ್ವಸ್ತಿ
೩೩ ಯಮ ನಿಯಮ ಸ್ವಾಧ್ಯಾಯ ಧ್ಯಾನ ಧಾರಣ ಮೋನಾ–
೩೪ ನುಷ್ಟಾನ ಜಪ ಸಮಾಧಿ ಸೀಲಗುಣ ಸಂಪಂನ್ನರುಂ
೩೫ ಅಟವಾಸೆನಾಗ್ನಿಹೋತ್ರ ದ್ವಿಜಗುರು ದೇವತಾ ಪೂಜಾತತ್ಪರ–
೩೬ ರುಂ ಮಾರ್ತ್ತಂಡೋಜ್ವಳ ಕೀರ್ತಿಯುತರುಂ ಯಜನ ಯಾ–
೩೭ ಜನಾಧ್ಯಯನಧ್ಯಾಪನ ದಾನ ಪ್ರತಿಗ್ರಹ ಸಟುಕರ್ಮ್ಮ ನಿಯತ–
೩೮ ರುಂ ರುಗೆಜುಸುಸಾಮಾಯಥರ್ವ್ವಣ ವೇದವೇದಾಂತ ತರ್ಕ್ಕ ವ್ಯಾಕರಣ ಕಾ–
೩೯ ಬ್ಯ ನಾಟಕ ಸಕಳ ಸಾಸ್ತ್ರಪ್ರವೀಣರು ಶ್ರೀಮತು ಸ್ವಯಂಭು ಸರ್ವ್ವೇಸ್ವರದೇವ–
೪೦ ರ ದಿಬ್ಯ ಶ್ರೀಪಾದಪದ್ಮಾರಾಧನರುಅಪ್ಪ ಶ್ರೀಮದ ನಾದಿಯ ಪಟ್ಟಣ
೪೧ ಪಿರಿಯಗ್ರಹಾರಂ ನರೆಯಂಗಲ್ಲ ಸಾಸಿರ್ವ್ವ ಪಂಚ ಮಠದ ಸಮ–
೪೨ ಕ್ಷದಲು ಜೋಯಿಸ ಮದುವೆಯ್ಯ ಕೋಟಿಯದೇವ ಈ ಸ್ತಾನಯೊ ದೇವರವ್ರತ್ತಿ–
೪೩ ವಾರಳ ಕುಱುವದಲು ಕೊಟ ಕಂಬ ೪ ॥ ಬಾಪಿನ ಕುಱುವದಲು ಗದ್ದೆ ಚಿಕ ಕಂಬ ೫
೪೪ ಕಗ್ಗೆಱೆಯ ಕೋಡಿಯಲು ಗದ್ದೆ ಕಂಬ ೫ ಗೆರೆಯ ಬೀಡಿನ ನಡುಬಯಲಲು ಗ–
೪೫ ದ್ದೆ ಚಿಕ್ಕ ಕಂಬ ೧೪ ಕತ್ತೆಯ ಕಂಡಿಯಲು ಹಕ್ಕಲು ಚಿಕ್ಕ ಕಂಬ ೪ ॥ ಯಿಂ–
೪೬ ತ್ತೀ ತೋಂಟ ಗದ್ದೆ ಹಕ್ಕಲು ಮನೆಯ ಸೋವನು ಕೆಱವಳಿ ಚವುಡಯ–
೪೭ ನ ಕಯಲು ಬಿತ್ತವೊಟ್ಟಿ ಧಾರೆಯ ಕೊಂಡು ಕ್ರಯ ಕಾಲುಗರ್ಚ್ಚಿ ನಿನ್ನವಿ–
೪೮ ರಾಗಿ ಕೊಟ್ಟು ಯಾಮದಾವಯನು ಹಂನ್ನಸುಳೆವಂ ದತ್ತಿ ಭಾಗವೆ–
೪೯ ಯ ಮಕಳು ದೇವಯ್ಯ ಸಂಕೆಯ ವಗುಳಿಗೆ ದನ್ನ ಯಿಪ್ಪತು ಬಂ–
೫೦ ಧುಗಳ ಮುಂತಿಟ್ಟು ಯಂತುಗಳಿಗೆ ಯನ್ನುಗೆವನು ಕೊಟ್ಟಗೆಯಾ
೫೧ ಧಂರ್ಮವನು ಸಾಸಿರ್ವ್ವರು ಪ್ರತಿಪಾಳಿಸುವದು ಮಂಗಳ ಮಹಾ ಶ್ರೀ ಶ್ರೀ
೫೨ ಅಡ್ಡಗೆಯಲು ಮಾಧವ ಭಟ್ಟರಕ ಯುರಿ(ಲಿ) ಕೊಂದ ಮು–
೫೩ ಗೆ ಚವಯ್ಯ ಸಂಕಯ್ಯಗೆ*

---

* ಇಲ್ಲಿಗೆ ಶಾಸನ ಅಪೂರ್ಣಗೊಂಡಿದೆ.

ಸ್ವ-ವಿವರ

ಪೂರ್ಣ ಹೆಸರು : ಶ್ರೀಮತಿ ಹನುಮಾಕ್ಷಿ ಚಂದಪ್ಪ ಗೋಗಿ

ಮೂಲ ವಿಳಾಸ : ಮನೆ ಸಂಖ್ಯೆ ೧-೯/೧೧, ಖೂಬಾ ನಿವೇಶನಗಳು, ಕಲಬುರ್ಗಿ.

ಖಾಯಂ ವಿಳಾಸ : "ಕಾರ್ತಿಕಶ್ರೀ", ಹೆಚ್.ಐ.ಜಿ-೨೭, ನವನಗರ, ಹುಬ್ಬಳ್ಳಿ-೫೮೦ ೦೨೫.
ಸ್ಥಾವರ : ೦೮೩೬-೨೩೨೨೦೮೯, ಜಂಗಮ : ೯೪೪೮೨ ೭೨೦೮೯
ಇ-ಮೇಲ್ : hanumakshigogi@gmail.com

ಜನ್ಮದಿನಾಂಕ ಮತ್ತು ಸ್ಥಳ : ೦೧-೦೬-೧೯೫೫. ಹಿಂದು ಉಪ್ಪಾರ (ಗ್ರೂಪ್-೧) ಸಮುದಾಯದಲ್ಲಿ ಜನನ, ಲಿಂಗಸುಗೂರು, ರಾಯಚೂರು ಜಿಲ್ಲೆ.

ಶೈಕ್ಷಣಿಕ

೧೯೭೪ ಪ್ರಥಮ ಶ್ರೇಣಿಯಲ್ಲಿ ಬಿ.ಎ. ತೇರ್ಗಡೆ, ಶ್ರೀ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯ, ಕಲ್ಬುರ್ಗಿ.

೧೯೭೬ ಪ್ರಥಮ ಸ್ಥಾನ ಹಾಗೂ ಮೂರು ಸುವರ್ಣ ಪದಕಗಳೊಂದಿಗೆ ಕನ್ನಡ ಎಂ.ಎ. ತೇರ್ಗಡೆ, ಕ.ವಿ.ವಿ. ಧಾರವಾಡ.

೧೯೭೬ ಶಾಸನ ಶಾಸ್ತ್ರ ಡಿಪ್ಲೋಮಾ, ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ, ಕ.ವಿ.ವಿ. ಧಾರವಾಡ.

೧೯೮೭ ಸಹಕಾರ ಡಿಪ್ಲೋಮಾದಲ್ಲಿ ಪ್ರಥಮ ಶ್ರೇಣಿ, ಸಹಕಾರ ತರಬೇತಿ ಕಾಲೇಜು, ಬೆಂಗಳೂರು.

೨೦೦೧ ವಿಶ್ವವಿದ್ಯಾಲಯ ಧನಸಹಾಯ ಆಯೋಗದ ರಾಷ್ಟ್ರೀಯ ಅರ್ಹತಾ ಪರೀಕ್ಷೆ ತೇರ್ಗಡೆ.

ಪ್ರಕಟಿತ ಪುಸ್ತಕಗಳು

೧೯೮೩ ವ್ಯಾಸಂಗ (ಸಂಶೋಧನೆ)

೧೯೯೪ ಮುದ್ನೂರು ಮತ್ತು ಯಡ್ರಾಮಿ ಶಾಸನಗಳು (ಸಂಶೋಧನೆ)

೧೯೯೫ ಸುರಪುರ ತಾಲೂಕಿನ ಶಾಸನಗಳು (ಸಂಶೋಧನೆ)

೧೯೯೬ ಕಲ್ಬುರ್ಗಿ ಜಿಲ್ಲೆಯ ಶಾಸನಗಳು (ಸಂಶೋಧನೆ)

೨೦೦೨ ಕರ್ನಾಟಕ ಭಾರತಿ ಸೂಚಿ

೨೦೦೨ ಅನುಶಾಸನ (ಸಂಶೋಧನೆ)

೨೦೦೬ ಬೀದರ ಜಿಲ್ಲೆಯ ಶಾಸನಗಳು (ಸಂಶೋಧನೆ)

೨೦೦೭ ಕಾಳಾಮುಖ ಮತ್ತು ಪಾಶುಪತ ದೇವಾಲಯಗಳು (ಅನುವಾದ)

೨೦೦೮ ಡಂಬಳ : ಸಾಂಸ್ಕೃತಿಕ ಅಧ್ಯಯನ (ಸಂಶೋಧನೆ)

೨೦೦೮ ಲಕ್ಕುಂಡಿಯ ಶಾಸನಗಳು (ಸಂಶೋಧನೆ)

೨೦೦೯ ಶ್ರೀ ಜಗದ್ಗುರು ತೋಂಟದಾರ್ಯಮಠದ ದಾಖಲು ಸಾಹಿತ್ಯ (ಸಂಪಾದನೆ)

೨೦೦೯ ಡಾ. ಆರ್.ಎನ್. ಗುರವ ಪ್ರಬಂಧಗಳು (ಸಂಪಾದನೆ-ಅಚ್ಚಿನಲ್ಲಿ)

೨೦೦೯ ಅನುಸಂಧಾನ (ಪ್ರಬಂಧ ಸಂಕಲನ-ಅಚ್ಚಿನಲ್ಲಿ)

ಪುರಸ್ಕಾರಗಳು

೧೯೯೧ ಆಡಳಿತಾತ್ಮಕ ಸೇವೆಗೆ ಸನ್ಮಾನ, ೪ನೆಯ ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ, ನರಗುಂದ.

೧೯೯೩ "ಸುರಪುರ ತಾಲೂಕಿನ ಶಾಸನಗಳು" ಕೃತಿಗೆ ಕನ್ನಡ ಸಾಹಿತ್ಯ ಪರಿಷತ್ತಿನ 'ಮಲ್ಲಿಕಾ' ಪ್ರಶಸ್ತಿ.

೧೧೯೬ "ಕಲ್ಬುರ್ಗಿ ಜಿಲ್ಲೆಯ ಶಾಸನಗಳು" ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.

೨೦೦೪ "ಅನುಶಾಸನ" ಕೃತಿಗೆ ಕರ್ನಾಟಕ ವಿದ್ಯಾವರ್ಧಕಸಂಘ, ಧಾರವಾಡದ ಮಾತೋಶ್ರೀ ರತ್ನಮ್ಮ ಹೆಗ್ಗಡೆ ಪ್ರಥಮ ಬಹುಮಾನ.

೨೦೦೫ ನರೇಗಲ್ಲಿನ "ಬಾಲಕೃಷ್ಣ ಸಾಹಿತ್ಯ ಪ್ರಶಸ್ತಿ".

೨೦೦೫ ರಾಜೂರಿನ "ಡಾ. ಜ.ಚ.ನಿ. ಪ್ರಶಸ್ತಿ".

೨೦೦೫ ಬೆಂಗಳೂರಿನ "ಲೇಪಾಕ್ಷಸ್ವಾಮಿ ಪ್ರಶಸ್ತಿ".

೨೦೦೬ ಕಲ್ಬುರ್ಗಿಯ "ಡಾ. ಶೈಲಜಾ ಉಡಚಣ ಪ್ರಶಸ್ತಿ".

೨೦೦೬ ಬೆಂಗಳೂರಿನ "ರುಕ್ಮಿಣೀಬಾಯಿ ಸ್ಮಾರಕ ಪ್ರಶಸ್ತಿ".

೨೦೦೭ ಅಡ್ನೂರಿನ ಡಾ. ದ.ರಾ. ಬೇಂದ್ರ ಪ್ರಶಸ್ತಿ.

ಶೈಕ್ಷಣಿಕ ಕ್ಷೇತ್ರ ಸೇವೆ

೧೯೭೯-೮೦ ಕನ್ನಡ ಉಪನ್ಯಾಸಕಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೯೮೧-೮೨ ಕನ್ನಡ ಉಪನ್ಯಾಸಕಿ, ಕರ್ನಾಟಕ ಕಾಲೇಜು, ಧಾರವಾಡ.

೧೯೮೨-೮೩ ಕನ್ನಡ ಉಪನ್ಯಾಸಕಿ, ನೂತನ ವಿದ್ಯಾಲಯ ಪದವಿ ಮಹಾವಿದ್ಯಾಲಯ, ಕಲ್ಬುರ್ಗಿ.

೧೯೮೩-೮೬ ಕನ್ನಡ ಉಪನ್ಯಾಸಕಿ, ಸರಕಾರಿ ಕಿರಿಯ ಮಹಾವಿದ್ಯಾಲಯ, ಫರಹತಾಬಾದ್, ಕಲ್ಬುರ್ಗಿ ಜಿಲ್ಲೆ.

೨೦೦೨-೦೫ ಸದಸ್ಯೆ, ಶಾಸನಶಾಸ್ತ್ರ ವಿಭಾಗದ ಅಧ್ಯಯನ ಮಂಡಳಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಹಕಾರ ಇಲಾಖೆ

೧೯೮೬ ಕೆ.ಎ.ಎಸ್. ತೇರ್ಗಡೆ, ಸಹಕಾರ ಇಲಾಖೆಯ ಸಹಾಯಕ ನಿಬಂಧಕರ ಹುದ್ದೆ, ಧಾರವಾಡ, ಕಾರವಾರ, ಹಾವೇರಿ, ಉಪವಿಭಾಗಗಳಲ್ಲಿ ಸೇವೆ.

೧೯೯೫ ಗ್ರಾಮೀಣಾಭಿವೃದ್ಧಿ ತರಬೇತಿ ಕೇಂದ್ರದಲ್ಲಿ ಸಹಕಾರ ಉಪನ್ಯಾಸಕಿ.

೧೯೯೬ ಉಪನಿಬಂಧಕರೆಂದು ಪದೋನ್ನತಿ, ಗದಗ ಜಿಲ್ಲೆಯ ಜಿಂಕದಕಟ್ಟಿ ರೈತರ ಸಹಕಾರಿ ಎಣ್ಣೆಗಿರಣಿಯ ವ್ಯವಸ್ಥಾಪಕ ನಿರ್ದೇಶಕಿ.

೧೯೯೯ ಸಹಕಾರ ಸಂಘಗಳ ಉಪನಿಬಂಧಕರು, ಕಲ್ಬುರ್ಗಿ ಜಿಲ್ಲೆ.

೨೦೦೦ ಜುಲೈನಿಂದ ಕಾರ್ಯದರ್ಶಿ, ಮಲಪ್ರಭಾ ಸಹಕಾರಿ ಸಕ್ಕರ ಕಾರ್ಖಾನೆ ನಿ., ಎಂ.ಕೆ. ಹುಬ್ಬಳ್ಳಿ.

೨೦೦೨ ಪ್ರಭಾರ ವ್ಯವಸ್ಥಾಪಕ ನಿರ್ದೇಶಕರು, ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಎಂ.ಕೆ. ಹುಬ್ಬಳ್ಳಿ.

೨೦೦೩ ಸಹಕಾರ ಸಂಘಗಳ ಉಪನಿಬಂಧಕರು, ಧಾರವಾಡ ಜಿಲ್ಲೆ.

೨೦೦೬ ಸಹಕಾರ ಸಂಘಗಳ ಉಪನಿಬಂಧಕರು, ಗದಗ ಜಿಲ್ಲೆ.

೨೦೦೭ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರೆಂದು ಪದೋನ್ನತಿ. ವ್ಯವಸ್ಥಾಪಕ ನಿರ್ದೇಶಕರು, ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಬಾಗಲಕೋಟೆ.

೨೦೦೮ ವ್ಯವಸ್ಥಾಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಸಕ್ಕರೆ ಕಾರ್ಖಾನೆಗಳ ಮಹಾಮಂಡಳಿ ನಿ., ಬೆಂಗಳೂರು.

೨೦೦೯ ಭೂ ಅಭಿವೃದ್ಧಿ ಅಧಿಕಾರಿಗಳು (ಸಹಕಾರ), ಕಾಡಾ, ಬೆಳಗಾವಿ.

ಸಂಘಟನೆ

೧೯೭೬-೦೮ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಐತಿಹಾಸಿಕ ಮತ್ತು ಸಾಹಿತ್ಯಿಕ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಪ್ರಬಂಧ ಮಂಡನೆ.

೧೯೮೬-೦೮ ಸೇವೆ ಸಲ್ಲಿಸಿದ ಎಲ್ಲಾ ಜಿಲ್ಲೆಗಳ ಸಹಕಾರ ತರಬೇತಿ ಸಂಸ್ಥೆಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಉಪನ್ಯಾಸ ನೀಡಿಕೆ.

೧೯೮೬–೦೮ ಸಹಕಾರ ಚಳುವಳಿಗೆ ಸಂಬಂಧಿಸಿದ ಸಮಾರಂಭಗಳಲ್ಲಿ ಉಪನ್ಯಾಸ ನೀಡಿ, ಪ್ರೇರಣೆ ನೀಡಿಕೆ.

೧೯೯೪–೯೬ ಕಾರ್ಯಕಾರಿ ಸಮಿತಿ ಸದಸ್ಯೆ, ಕನ್ನಡ ಸಾಹಿತ್ಯ ಪರಿಷತ್ತು, ಧಾರವಾಡ.

೧೯೯೫–೦೮ "ಮಹಿಳಾ ಸಾಹಿತ್ಯಿಕಾ" ಸ್ಥಾಪನೆ. ಇದುವರೆಗೆ ಮಹಿಳೆಯರ ೩೬ ಕೃತಿಗಳ ಪ್ರಕಟಣೆ.

೨೦೦೨–೦೫ ಕಾರ್ಯಾಧ್ಯಕ್ಷೆ, ಉತ್ತರಕರ್ನಾಟಕ ಲೇಖಕಿಯರ ಸಂಘ, ಧಾರವಾಡ.

೨೦೦೨–೦೮ ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾಸಮಿತಿಯ ಕೋಶಾಧಿಕಾರಿ, ಸದ್ಯ ಕಾರ್ಯಕಾರಿ ಸಮಿತಿ ಸದಸ್ಯೆ.

೨೦೦೪–೦೮ ಧಾರವಾಡದ 'ಸಾಧನಾ' ಸರಕಾರೇತರ ಸಂಸ್ಥೆಯಲ್ಲಿ ಸಂವಿಧಾನಿಕ ಹಕ್ಕುಗಳು–ಜವಾಬ್ದಾರಿಗಳು, ಲಿಂಗ ತಾರತಮ್ಯಗಳ ಕುರಿತು ಸಂಪನ್ಮೂಲ ವ್ಯಕ್ತಿಯಾಗಿ ಉಪನ್ಯಾಸ, ತರಬೇತಿಗಳ ನೀಡಿಕೆ.

ಆಜೀವ ಸದಸ್ಯತ್ವ : ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು; ಪ್ಲೇಸ್ ನೇಮ್ಸ್ ಸೊಸೈಟಿ ಆಫ್ ಇಂಡಿಯಾ, ಎಪಿಗ್ರಫಿಕಲ್ ಸೊಸೈಟಿ ಆಫ್ ಇಂಡಿಯಾ, ಕರ್ನಾಟಕ ಇತಿಹಾಸ ಅಕಾಡೆಮಿ, ಸೌತ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್, ಕರ್ನಾಟಕ ಹಿಸ್ಟರಿ ಕಾಂಗ್ರೆಸ್ ಮುಂತಾದವುಗಳು.

ಡಾ. ಎಸ್.ಜಿ. ರಾಮದಾಸರೆಡ್ಡಿ*

ಇತಿಹಾಸ ಆರಂಭಕಾಲದ ಕ್ಯಾವಲೀನ್ ಪೈಂಟೆಡ್ ಮಡಿಕೆ ಚೂರುಗಳು

ಕರ್ನಾಟಕ ಪ್ರಾಗಿತಿಹಾಸ ಕಾಲದಿಂದಲೂ ಜನಭರಿತವಾದ ನೆಲೆವೀಡಾಗಿತ್ತೆಂದು ಪ್ರಾಚೀನ ನೆಲೆಗಳಲ್ಲಿ ದೊರಕಿರುವ ಅವಶೇಷಗಳು ಸ್ಪಷ್ಟವಾದ ಮಾಹಿತಿ ನೀಡುತ್ತಿವೆ. ಭೂ ಅನ್ವೇಷಣೆಯ ಮೂಲಕ ಮೊಟ್ಟ ಮೊದಲು ರಾಬರ್ಟ್ ಬ್ರೂಸ್‌ಫೂಟ್ ಅವರು ಆರಂಭಿಸಿ ಕರ್ನಾಟಕದ ವಿವಿಧೆಡೆ ಹಳೇ ಶಿಲಾಯುಗ, ಸೂಕ್ಷ್ಮ ಶಿಲಾಯುಗ ಸಂಸ್ಕೃತಿ, ನವಶಿಲಾಯುಗ ಸಂಸ್ಕೃತಿ, ಬೃಹತ್ ಶಿಲಾಯುಗ ಸಂಸ್ಕೃತಿ ಮತ್ತು ಇತಿಹಾಸ ಆರಂಭ ಕಾಲದ ಅವಶೇಷಗಳನ್ನು ಪತ್ತೆ ಹಚ್ಚಿದ್ದಾರೆ. ನಂತರ ಹಲವಾರು ಜನ ವಿದ್ವಾಂಸರು ಕರ್ನಾಟಕದ ಹಲವು ಕಡೆ ಭೂ ಅನ್ವೇಷಣೆ, ಭೂ ಸಂಶೋಧನೆ ಮೂಲಕ ಮಹತ್ವವಾದ ಮಾಹಿತಿಗಳನ್ನು ಸಂಗ್ರಹಿಸಿ ಇತಿಹಾಸದ ಮೇಲೆ ಹೊಸ ಬೆಳಕನ್ನು ಚೆಲ್ಲಿದ್ದಾರೆ.

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಗಡಿಭಾಗದ ಗೌರಿಪುರ ಗ್ರಾಮ ಮತ್ತು ಆಂಧ್ರಪ್ರದೇಶದ ಅನಂತಪುರ ಜಿಲ್ಲೆ ಕಲ್ಯಾಣದುರ್ಗ ತಾಲ್ಲೂಕಿನ ಗಡಿಭಾಗದ ನಾಗಪ್ಪನಹಳ್ಳಿ ಗ್ರಾಮ, ಈ ಎರಡು ಗ್ರಾಮಗಳ ಮತ್ತು ಎರಡು ರಾಜ್ಯಗಳ ಗಡಿಭಾಗದಲ್ಲಿ ಶಿಲಾಯುಗ ಕಾಲದ ಪ್ರಾಚೀನ ನೆಲೆಯಿದೆ.

ನೆಲೆಯು ಸುಮಾರು ೫ ಹೆಕ್ಟೇರು ಭೂಪ್ರದೇಶದಲ್ಲಿ ತಗ್ಗು ದಿನ್ನೆಗಳಿಂದ ಕೂಡಿದ, ಬೆಟ್ಟ ಗುಡ್ಡಗಳಿಲ್ಲದೆ ಅಲ್ಲಲ್ಲಿ ಕಣಶಿಲೆಯ ಕಲ್ಲು ಕುಪ್ಪೆಗಳಿರುವ ಕೆಂಪು, ಮರಳುಭೂಮಿ, ಬಂಜರು ಭೂಮಿಯ ಭೂಪ್ರದೇಶದಲ್ಲಿದೆ.

ಆಂಧ್ರಪ್ರದೇಶದ ಕಲ್ಯಾಣದುರ್ಗ ತಾಲ್ಲೂಕಿನ ಪ್ರಾಗೈತಿಹಾಸಿಕ ನೆಲೆಗಳ ಭೂಪ್ರದೇಶಗಳಾದ **ಕುಂದರ್ಪಿ ಬೆಟ್ಟದ ಸಾಲು**[೧], **ಮಲೆಯನೂರು**[೨] ಕಣಶಿಲೆಯ ಕಲ್ಲುಕುಪ್ಪೆಗಳ ಭೂಭಾಗದಿಂದ ಹರಿದು ಬರುವ ಹಳ್ಳ ನನ್ನ ಕ್ಷೇತ್ರ ಕಾರ್ಯದ ನೆಲೆಯ ಮುಖಾಂತರ ಹಾದು ಮುಂದೆ ಪಶ್ಚಿಮಕ್ಕೆ ೬ ಕಿ.ಮೀ. ದೂರದಲ್ಲಿ ಪರಶುರಾಮಪುರ (ಚಳ್ಳಕೆರೆ ತಾ॥) ಹೋಬಳಿಯ ಹತ್ತಿರ ವೇದಾವತಿ ನದಿ ಸೇರುತ್ತದೆ.

ಕರ್ನಾಟಕದ ಗಡಿಭಾಗದಲ್ಲಿ ಹಾದು ಹೋಗುವ ಹೆದ್ದಾರಿಯಿಂದ ಆಂಧ್ರಪ್ರದೇಶದ ೭. ಕಿ.ಮೀ. ದೂರದ ನಾಗಪ್ಪನಹಳ್ಳಿ ಗ್ರಾಮಕ್ಕೆ ರಸ್ತೆ ಸೌಕರ್ಯವನ್ನು ಕಲ್ಪಿಸಲು ಆಂಧ್ರ ಸರ್ಕಾರ ಜೆ.ಸಿ.ಬಿ. ಯಂತ್ರ ಬಳಸಿ ರಸ್ತೆಯ ಇಕ್ಕೆಲಗಳಲ್ಲಿ ಆಳವಾದ ಚರಂಡಿ ತೆಗೆದು ರಸ್ತೆಯ ಮಧ್ಯಕ್ಕೆ ಹಾಗೂ ಪಕ್ಕಕ್ಕೆ ಮಣ್ಣನ್ನು ಹಾಕಿದ್ದಾರೆ. ವಿದ್ಯಾರ್ಥಿಯಾದ ತಿಮ್ಮಾರೆಡ್ಡಿಯೊಡನೆ ಗ್ರಾಮದ ಬಗ್ಗೆ ಮಾಹಿತಿ ತಿಳಿಯಲು ಗ್ರಾಮಕ್ಕೆ ಹೋದಾಗ ರಸ್ತೆಯ ಬದಿಯಲ್ಲಿ ಬಿದ್ದ ಅವಶೇಷಗಳನ್ನು ನೋಡಿ ಆಶ್ಚರ್ಯವಾಯಿತು. ನಂತರ ಹಲವು ಬಾರಿ ಜಿ. ರಾಮಚಂದ್ರರೆಡ್ಡಿ ಅವರೊಡನೆ ನೆಲೆಯಲ್ಲಿ ಭೂಅನ್ವೇಷಣೆ ಮಾಡುವಾಗ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ, ನವಶಿಲಾಯುಗ ಸಂಸ್ಕೃತಿಯ, ಬೃಹತ್ ಶಿಲಾಯುಗ ಸಂಸ್ಕೃತಿಯ ಹಾಗೂ ಇತಿಹಾಸ ಆರಂಭ ಕಾಲದ ಅವಶೇಷಗಳು ದೊರಕಿದವು. ಜೊತೆಗೆ ಬೃಹತ್ ಶಿಲಾಯುಗ ಸಂಸ್ಕೃತಿಯ ಸಮಾಧಿಗಳು, ಸಮಾಧಿಗಳಲ್ಲಿ ಬಳಸುವ ಅವಶೇಷಗಳು ದೊರಕಿದವು.

ಸೂಕ್ಷ್ಮ ಶಿಲಾಯುಗ ಸಂಸ್ಕೃತಿ (Mesolithic Culture): ನೆಲೆಯಲ್ಲಿ ಸಿಕ್ಕುವ ಕ್ವಾರ್ಟ್ಜೈಟ್ ಕಲ್ಲಿನಲ್ಲಿ ತಯಾರಿಸಿ ಕೊಂಡಿರುವ ಚಕ್ಕೆಗಳು, ಶಿಲಾಗಟ್ಟಿಗಳು ಇತರೆ ಕಲ್ಲಿನಾಯುಧಗಳು ದೊರಕಿವೆ.

ನವಶಿಲಾಯುಗ ಸಂಸ್ಕೃತಿ (Neolithic Culture) : ನೆಲೆಯ ವಿಶಾಲವಾದ ಭೂಪ್ರದೇಶದಲ್ಲಿ ಕೈಯಿಂದ ತಯಾರಿಸಿದ, ಚಕ್ರದಿಂದ ತಯಾರಿಸಿದ ಬೂದುಬಣ್ಣದ, ಬೂದು ಮಿಶ್ರಿತ ಕಪ್ಪು ಬಣ್ಣದ, ಕೆಂಪು ಬಣ್ಣದ, ನಯಗೊಳಿಸಿದ ಬೂದುಮಿಶ್ರಿತ ಕಪ್ಪು ಬಣ್ಣದ ಮಡಿಕೆ ಭಾಗಗಳು, ಧಾನ್ಯದ ಕಣಜಗಳಿಗೆ ಬಳಸುವ ದಪ್ಪ ಮಡಿಕೆ ತುಂಡುಗಳು, ಅರೆಯುವ ಕಲ್ಲುಗಳು, ಕುಟ್ಟುವ ಕಲ್ಲುಗಳು, ಕವಣೆ ಕಲ್ಲುಗಳು, ಮುರಿದ ನಯಗೊಳಿಸಿದ ಕಲ್ಲಿನ ಕೊಡಲಿ, ಮಡಕೆಗಳ ಕಂಠಗಳ ಕೆಳಗೆ ಗೆರೆಗಳನ್ನು ಕೊರೆದಿರುವ, ಎಲೆಯಾಕಾರ, ಅರ್ಧ ಎಲೆಯಾಕಾರ, ಅಲಂಕಾರ ಮಾಡಿರುವ ಮಡಿಕೆ ಭಾಗಗಳು, ವಿವಿಧ ರೀತಿಯ ಕಂಠದ ಭಾಗಗಳು, ಬೂದು ಮಿಶ್ರಿತ ಕಪ್ಪು ಬಣ್ಣದ ಮಡಿಕೆ ತುಂಡಿನ ಮೇಲೆ ಪಟ್ಟಿ ಮಾಡಿ ಬೆರಳಿನ ಮೊನೆಯಿಂದ ಚಿವುಟಿ ಅಲಂಕಾರ ಮಾಡಿರುವ ೩ ಮಡಿಕೆ ಭಾಗಗಳು ದೊರಕಿವೆ ಈ ಅವಶೇಷಗಳು **ಟಿ. ನರಸೀಪುರ**[೩],

* ಆಯ್ಕೆ ಶ್ರೇಣಿ ಇತಿಹಾಸ ಉಪನ್ಯಾಸಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು.

ಚಂದ್ರವಳ್ಳಿ[೪], ಬ್ರಹ್ಮಗಿರಿ[೫] ನೆಲೆಯ ಅವಶೇಷಗಳ ಹಾಗೆ ಹೋಲಿಕೆಯಿವೆ.

ಬೃಹತ್ ಶಿಲಾಯುಗ ಸಂಸ್ಕೃತಿ : ನೆಲೆಯಲ್ಲಿ ಕೆಂಪು, ಕಪ್ಪು, ಕೆಂಪು ಮತ್ತು ಕಪ್ಪು ಬಣ್ಣದ ಮಡಿಕೆ ಭಾಗಗಳು, ಲೋಹದ ಪಾತ್ರೆಗಳ ಹಾಗೆ ತೆಳ್ಳಗೆ, ನುಣುಪಾಗಿ ಗಾಜಿನಂತೆ ಹೊಳೆಯುವ ಮಡಿಕೆ ಭಾಗಗಳು, ಮಂದ ಕೆಂಪು ಬಣ್ಣದ, ಕೆಂಪು ಬಣ್ಣದ, ನಯಗೊಳಿಸಿದ, ವರಟಾದ ಮೇಲ್ಮೈಯಿರುವ ಮಡಿಕೆ ಭಾಗಗಳು, ಚಿಕ್ಕ ಮಡಿಕೆ ತಳದ ಭಾಗಗಳು, ಕಂಠದ ಭಾಗಗಳು, ದೊಡ್ಡ, ಮಧ್ಯಮ ಗಾತ್ರದ ಮಡಿಕೆ ಭಾಗಗಳು, ಎಲೆಯಾಕಾರ, ಅರ್ಧ ಎಲೆಯಾಕಾರ, ವಿವಿಧ ನಮೂನೆ ಗೆರೆಗಳನ್ನು ಕೊರೆದಿರುವ ಹಾಗೂ ಇತರ ವಿವಿಧ ಅಲಂಕಾರಗೊಂಡಿರುವ ಮಡಿಕೆ ಭಾಗಗಳು, ಕಬ್ಬಿಣ ಕರಗಿಸಿದ ನಂತರ ಉಳಿಯುವ ಕೆಟ್ಟ, ಕಬ್ಬಿಣದ ಅದಿರು, ನೀರಿನ ಹೂಜಿಯ ಮೂತಿಗಳು, ದುಂಡಾದ ಕೆಂಪು ಬಣ್ಣದ, ಮಂದ ಕೆಂಪು ಬಣ್ಣದ ಬಿಲ್ಲೆಗಳು, ಕಪ್ಪು ಮತ್ತು ಕೆಂಪು ಬಣ್ಣ ಮಿಶ್ರಿತ ಬಿಲ್ಲೆಗಳು, ರಂಧ್ರವಿರುವ ಬಿಲ್ಲೆಗಳು ಸುಟ್ಟ ಮಣ್ಣಿನ ಮುರಿದ ಮಣಿ, ಮುರಿದ ಸುಟ್ಟ ಮಣ್ಣಿನ ಕೊಳವೆ ದೊರಕಿವೆ. ಹಾಗೂ **ಚಿಕ್ಕ ಕುಡಿಕೆ** ದೊರೆತಿದ್ದು ೪ ಸೆಂ.ಮೀ. ಉದ್ದ, ೫ ಇಂಚು ಕಂಠದ ಸುತ್ತಳತೆ, ೬ ೧/೪ ಇಂಚು ತಳದ ಸುತ್ತಳತೆ, ೨ ಇಂಚು ಮಡಿಕೆ ಆಳವಿದೆ. ಕಪ್ಪು ಬಣ್ಣವಿದ್ದು ಮಡಕೆ ವರಟಾಗಿದೆ. ಈ ಕುಡಿಕೆಯನ್ನು ತಾಮ್ರ, ಬಂಗಾರ ಲೋಹವನ್ನು ಕರಗಿಸಲು ಬಳಸಿರಬಹುದು ಜೊತೆಗೆ ಇನ್ನೊಂದು ಮಧ್ಯಮ ಪ್ರಮಾಣದ ಚಿಕ್ಕ ಕುಡಿಕೆ ದೊರಕಿದ್ದು ಸ್ವಲ್ಪ ತ್ರುಟಿತವಾಗಿದೆ. ಕಂಠದ ಭಾಗವು ೩ ಇಂಚು ಸುತ್ತಳತೆ, ಉದ್ದ ೮ ಸೆಂ.ಮೀ. ಮುರಿದ ಮಡಿಕೆ ತಳಭಾಗದ ಸುತ್ತಳತೆ ೫ ೩/೪ ಇಂಚುಯಿದೆ. ಗ್ರೇ ಬಣ್ಣದಿಂದಯಿದ್ದು ಚಿಕ್ಕ ಗೆರೆಗಳಿಂದ ಸುತ್ತಲೂ ಕೊರೆಯಲ್ಪಟ್ಟಿದೆ. ಈ ಕುಡಿಕೆಯನ್ನು ಲೋಹ ಬಳಸಲು ಬಳಸಿರಬಹುದು. ಕಬ್ಬಿಣದ ತುಂಡು ದೊರಕಿದ್ದು ೩ ೧/೪ ಇಂಚು ಉದ್ದ ೭ ಸೆಂ.ಮೀ. ಸತ್ತಳತೆ, ೧ ೩/೪ ಸೆಂ.ಮೀ. ದಪ್ಪವಿರುವುದು ಸಿಕ್ಕಿದ್ದು ಇದು ಖಡ್ಗದ ತುಂಡಿನ ಹಾಗೆ ಇದೆ ಈ ತರಹದ ಆಯುಧ ಬ್ರಹ್ಮಗಿರಿ[೬] ನೆಲೆಯಲ್ಲಿ ದೊರಕಿದೆ. ಹಾಗೂ ೭೦ ಗ್ರಾಪಿಟಿ ಗುರುತುಗಳಿರುವ ವಿವಿಧ ಬಣ್ಣಗಳ ಮಡಿಕೆ ತುಂಡುಗಳ ಮೇಲೆ ದೊರಕಿವೆ. ಈ ಗುರುತುಗಳು **ತಲಕಾಡು**[೭], **ಬ್ರಹ್ಮಗಿರಿ**[೮], **ಟಿ. ನರಸೀಪುರ್**[೯] ದ ಉತ್ಖನನದ ಮಡಿಕೆಗಳ ಮೇಲೆ ದೊರಕಿವೆ.

ಸಮಾಧಿಗಳು : ನೆಲೆಯಲ್ಲಿ ಸುಸ್ಥಿತಿಯಲ್ಲಿರುವ ೫ ಕಲ್ಲು ವೃತ್ತ ಸಮಾಧಿಗಳು ೭ ಕಲ್ಲು ಕುಪ್ಪೆ ಸಮಾಧಿಗಳು ಇವೆ. ಈ ತರಹದ ಸಮಾಧಿಗಳು ಬ್ರಹ್ಮಗಿರಿ[೧೦], ತಮಿಳುನಾಡಿನ **ಚಂಗಲ್‌ಪೇಟೆ**[೧೧] ಜಿಲ್ಲೆಯಲ್ಲಿ, **ಆಯ್ರಾಪಟ್ಟಿ**[೧೨] ನೆಲೆಯಲ್ಲಿ ದೊರಕಿವೆ.

ಪ್ರಸ್ತುತ ಲೇಖನದ ವಿಷಯ ಇತಿಹಾಸ ಆರಂಭ ಕಾಲದ ಕ್ಯಾವಲೀನ್ ಪೇಟೆಂಡ್ ಮಡಿಕೆ ಚೂರುಗಳ ಬಗ್ಗೆ ಚರ್ಚಿಸೋಣ. ಈ ನೆಲೆಯಲ್ಲಿ ಆಂಧ್ರಪ್ರದೇಶದ ಕರ್ನೂಲ್ ಮತ್ತು ಚಿತ್ತೂರ್‌ಗಳಂತೆ ಪೂರ್ವ ಇತಿಹಾಸ ಮತ್ತು ಇತಿಹಾಸ ಆರಂಭ ಕಾಲದ ಬಹಳ ಉತ್ತಮ ನೆಲೆಯಾಗಿದೆ.

ಇತಿಹಾಸ ಆರಂಭ ಕಾಲದ ಅವಶೇಷಗಳು : ನೆಲೆಯಲ್ಲಿ ಕೆಂಪು, ಕಪ್ಪು, ಕೆಂಪು ಮತ್ತು ಕಪ್ಪು ಬಣ್ಣದ ಕೋಟೆಡ್ ಕ್ಯಾವಲೀನ್ ಪೇಟೆಂಡ್ ಮಡಿಕೆ ಭಾಗಗಳು ಹೇರಳವಾಗಿ ದೊರಕಿವೆ. ಹಾಗೂ ಕಪ್ಪು ಬಣ್ಣದ ಗೋಲಾಕಾರ ತಳವಿರುವ ಮಡಿಕೆ ಭಾಗ, ಕೆಂಪು ಬಣ್ಣದ ಗೋಲಾಕಾರವಾಗಿರುವ ಆಕರ್ಷಕವಾದ ಮಡಕೆ ಭಾಗ ಮಡಕೆಗಳ ಕಂಠಗಳ ಭಾಗಗಳು, ತಳದ ಭಾಗಗಳು, ನೀರಿನ ಹೂಜಿಯ ಮೂತಿಗಳು ಮಂದ ಕೆಂಪು ಬಣ್ಣದ ಮಡಕೆಯ ಅರ್ಧ ಭಾಗ, ಚಿಕ್ಕ ರಂಧ್ರವಿರುವ ಕೆಂಪು ಬಣ್ಣದ ಮಡಕೆಯ ಅರ್ಧ ಭಾಗ, ಕೆಂಪು ಬಣ್ಣ ಲೇಪನ ಮಾಡಿರುವ ಮಡಕೆ ಭಾಗಗಳು, ಉದ್ದನೆಯ ಕುತ್ತಿಗೆಯಿರುವ ಕಂಠದ ಭಾಗಗಳು ಸುಟ್ಟ ಮಣ್ಣಿನ ದುಂಡಾದ ಚದುರ ಬಿಲ್ಲೆಗಳು, ರಂಧ್ರವಿರುವ ಬಿಲ್ಲೆಗಳು, ಅಲಂಕರಿಸಿದ ಚದುರ ಬಿಲ್ಲೆಗಳು, ಜಾಸ್ಪರ್ ಕೆಂಪು ಮಣಿ, ಕೃಸಿಬಲ್‌ಗಳು, ಆಕರ್ಷಕವಾದ ಕೆಂಪು ಮಡಕೆಯ ಭಾಗಗಳು, ಬೃಹತ್ ಶಿಲಾಯುಗ ಸಂಸ್ಕೃತಿಯಂತೆ ಶಾತವಾಹನರ ಕಾಲದಲ್ಲೂ ಉತ್ತಮ ಗುಣಮಟ್ಟದ ಕಪ್ಪು ಮತ್ತು ಕೆಂಪು ಬಣ್ಣದ ಮಡಕೆ ಚೂರುಗಳು, ನೆಲಕ್ಕೆ ಹಾಸುವ ಚದುರ ಬಿಲ್ಲೆಗಳು, ಸುಟ್ಟ ಮಣ್ಣಿನ ಇಟ್ಟಿಗೆಗಳು, ಕೆಂಪು ಮತ್ತು ಮಂದ ಕೆಂಪು ಬಣ್ಣದ ಮಡಕೆ ತುಂಡುಗಳ ಮೇಲೆ ನಾಣ್ಯಾದಾಕಾರ, ಎಲೆ ರೆಂಬೆಯಾಕಾರ, ೨, ೩, ೪, ೫ ಗೆರೆಗಳಿಂದ ಅಲಂಕರಿಸಿದ ಹಾಗೂ ಇನ್ನಿತರ ವಿವಿಧ ನಮೂನೆ ಅಲಂಕಾರದಿಂದ ಚಿತ್ರಿಸಿರುವ ಮಡಕೆ ಭಾಗಗಳು, ತಾಮ್ರದ ಕಾಲುಂಗರ (ಚಿತ್ರ) ಚಿಕ್ಕ ಕೆಂಪು ಬಣ್ಣದ ಬಟ್ಟಲು ಇತರೆ ಅವಶೇಷಗಳು ಜೊತೆಗೆ ತಾಮ್ರ ಅಥವಾ ಬಂಗಾರವನ್ನು ತಯಾರು ಮಾಡಿಕೊಳ್ಳಲು ಬಳಸಿರುವ ಸುಟ್ಟ ಮಣ್ಣಿನ ಚಿಕ್ಕ ಕೊಳವೆ, ಚಿಕ್ಕ ಕುಲುಮೆ, ಬೂದಿ ಇತರೆ ಅವಶೇಷಗಳು ಹೇರಳವಾಗಿ ದೊರಕಿವೆ. ಈ ತರಹದ ಅವಶೇಷಗಳು ಉತ್ಖನನ ನೆಲೆಗಳಾದ ಸನ್ನತಿ[೧೩], ತಲಕಾಡು[೧೪], ಚಂದ್ರವಳ್ಳಿ[೧೫], ಬ್ರಹ್ಮಗಿರಿ[೧೬], ಬನವಾಸಿ[೧೭] ಹಾಗೂ ಇನ್ನಿತರ ಕರ್ನಾಟಕದ ಇತರ ನೆಲೆಗಳ ಅವಶೇಷಗಳ ಹಾಗೆ ಹೋಲಿಕೆಯಿದೆ.

ಕ್ಯಾವಲೀನ್ ಪೇಂಟೆಡ್ ರಸ್ಸೆಟ್ ಕೋಟೆಡ್ ಮಡಕೆ ಚೂರುಗಳು : ನೆಲೆಯಲ್ಲಿ ಕೆಂಪು, ಕಪ್ಪು, ಕೆಂಪು ಮತ್ತು ಕಪ್ಪು ಬಣ್ಣದ, ಹಳದಿ ಬಣ್ಣದ, ಮಡಿಕೆ ಚೂರು, ಭಾಗಗಳ ಮೇಲೆ **೭೧ ನಮೂನೆಯ** ಅಲಂಕಾರಿಕ ಮಡಿಕೆ ಭಾಗಗಳು ದೊರಕಿವೆ.

ಕರ್ನಾಟಕದಲ್ಲಿ ಉತ್ಖನನಕ್ಕೊಳಗಾದ ನೆಲೆಗಳಲ್ಲಿ ಇತಿಹಾಸ ಆರಂಭ ಕಾಲದ ಪದರದಲ್ಲಿ ದೊರಕಿರುವ ಎಲ್ಲಾ ನಮೂನೆಯ ಕ್ಯಾವಲೀನ್ ಪೇಂಟೆಡ್ ರಸ್ಸೆಟ್ ಕೋಟೆಡ್ ಮಡಕೆ ಚೂರುಗಳು ಈ ನೆಲೆಯಲ್ಲಿ ದೊರಕಿರುವುದು ವಿಶೇಷವಾಗಿದೆ.

೭೧ ನಮೂನೆಯ ಅಲಂಕಾರಿಕ ಮಡಿಕೆಗಳು

೧. ಮಡಕೆಯ ಒಳಭಾಗ ಕಪ್ಪು ಬಣ್ಣ, ಹೊರಭಾಗ ಮಂದ ಕೆಂಪು ಬಣ್ಣ, ಕಂಠದ ಒಳಭಾಗ ಕೆಂಪುಗಿದೆ. ಮಡಕೆಯ ಮೇಲೆ ಓರೆಯಾಗಿ ಅಡ್ಡ ಬಿಳಿ ಗೆರೆಗಳನ್ನು ಕಂಠದಿಂದ ಕೆಳಗೆ ಎಳೆದಿದ್ದಾರೆ. ಗೆರೆಗಳ ಮಧ್ಯೆ ಬಿಳಿ ಚುಕ್ಕೆಗಳನ್ನು ಇಡಲಾಗಿದೆ. ಗೆರೆಯಿಂದ ಗೆರೆಗೆ ೧ ಸೆಂ.ಮೀ. ಅಗಲವಿದೆ. ಬಿಳಿಗೆರೆ, ಚುಕ್ಕೆಗಳ ಮೇಲೆ ಕೆಂಪು ಬಣ್ಣ ಲೇಪನ ಮಾಡಿದೆ.[೧೮, ೧೯]

೨. ಒಳಭಾಗ ಕಪ್ಪು ಬಣ್ಣ, ಕಂಠದ ಒಳಭಾಗ ಮಂದ ಕೆಂಪು, ಮಡಕೆ ಹೊರಭಾಗ ಮಂದ ಕೆಂಪು ಮಡಕೆ ತುಂಡು, ೧ ಸೆಂ.ಮೀ., ೨ ೧/೨ ಸೆಂ.ಮೀ.ನ ಚುಕ್ಕೆಗಳು ಓರೆಯಾಗಿ, ಅಡ್ಡಲಾಗಿ ಸಾಲಾಗಿವೆ.[೨೧, ೨೧]

೩. ಒಳಭಾಗ ಮಂದ ಕೆಂಪು ಚಿಕ್ಕ ಗೆರೆಗಳಿಂದ ಕೂಡಿದ ಒಳಭಾಗ ವರಟಾಗಿದೆ. ಹೊರಭಾಗ ಕೆಂಪು ಬಣ್ಣದಿಂದ ಕೂಡಿದ್ದು ಕಾಲುವೆಯಾಕಾರವಾಗಿ, ಗೆರೆಗಳಿಂದ ಕೂಡಿದ ಮಡಿಕೆ ಭಾಗ ೨ ರಿಂದ ೪ ಸೆಂ.ಮೀ. ಅಗಲದ ಚುಕ್ಕೆ ಚಂದ್ರನಕಾರ, ಅರ್ಧ ಚಂದ್ರಕಾರ, ಹಾವಿನ ತಲೆಯಾಕಾರ, ಕೋಳಿ ಮೊಟ್ಟೆಯಾಕಾರದಲ್ಲಿ ಅಲಂಕರಿಸಲಾಗಿದೆ.[೨೨]

೪. ಮಡಕೆಯ ಒಳ ಮತ್ತು ಹೊರಭಾಗ ಕೆಂಪುಯಿದ್ದು, ಮಡಕೆ ಮೇಲೆ ಓರೆಯಾಗಿ ಚಿಕ್ಕ ಗೆರೆಗಳಿಂದ ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಬರೆಯಲಾಗಿದೆ. ಚಿಕ್ಕ ಓರೆಯಾದ ಮನೆಗಳ ಹಾಗೆ ಹೆಣೆದಿದೆ. ಬಿಳಿ ಗೆರೆಗಳ ಮೇಲೆ ಕೆಂಪು ಬಣ್ಣ ಲೇಪನ ಆಗಿದೆ.[೨೩,೨೪,೨೫]

೫. ಮಡಕೆಯ ಒಳ ಮತ್ತು ಹೊರಭಾಗ ಕೆಂಪು ಬಣ್ಣವಿದ್ದು, ಕಂಠದಿಂದ ಓರೆಯಾಗಿ ಎಡಭಾಗದಿಂದ ಬಲಭಾಗಕ್ಕೆ, ಬಲಭಾಗದಿಂದ ಎಡಭಾಗಕ್ಕೆ ನೇರವಾಗಿ ಬಿಳಿಗೆರೆಗಳು ಛೇದಿಸಿಕೊಂಡು ಮುಂದುವರಿದಿವೆ. ಛೇದಿಸಿದ ಸ್ಥಳ ಓರೆಯಾದ ಆಯಾತಾಕಾರವಾಗಿದೆ. ಹಾಗೂ ದಪ್ಪ ಗೆರೆಗಳಿಂದ ಕಂಠದಿಂದ ಕೆಳಕ್ಕೆ ಎಳೆಯಲಾಗಿದೆ.[೨೬]

೬. ಮಡಕೆಯ ಒಳ ಮತ್ತು ಹೊರಭಾಗ ಕೆಂಪು ಬಣ್ಣವಿದ್ದು, ಕಂಠದಿಂದ ಕೆಳಕ್ಕೆ ಓರೆಯಾಗಿ ದಪ್ಪ ಬಿಳಿ ಗೆರೆಗಳನ್ನು ಎಳೆದಿದೆ. ೫ ಗೆರೆಗಳನ್ನು ಓರೆಯಾಗಿ ಮಧ್ಯ ಜಾಗ ಬಿಟ್ಟು ಮತ್ತೆ ಓರೆಯಾಗಿ ಗೆರೆಗಳನ್ನು ಎಳೆದಿದೆ. ಮಧ್ಯದ ಜಾಗದಲ್ಲಿ ೭ ಗೆರೆಗಳನ್ನು ಓರೆಯಾಗಿ ಅಡ್ಡಲಾಗಿ ಗೆರೆಗಳನ್ನು ಬರೆದಿದ್ದು ಆಯಾತಕಾರವಾಗಿ ಅಲಂಕಾರ ಗೊಂಡಿದೆ. ಮೇಲೆ ಕೆಂಪು ಬಣ್ಣ ಲೇಪನ ಮಾಡಿದೆ.[೨೭]

೭. ಹೊರಭಾಗ ಕೆಂಪು, ಒಳಭಾಗ ಕಪ್ಪು, ಕಂಠದ ಒಳಭಾಗ ಕಪ್ಪು ಮಿಶ್ರಿತ ಕಂದು ಬಣ್ಣವಿದೆ. ಕಂಠದಿಂದ ಕೆಳಕ್ಕೆ ಆಯುತಾಕಾರವಾಗಿ, ಚತುರ್ಭುಜಕಾರವಾಗಿ, ಓರೆಯಾಗಿ[೨೮] ಗೆರೆಗಳನ್ನು ಬರೆಯಲಾಗಿದೆ. ಮೇಲ್ನೋಟಕ್ಕೆ ಚಾಪೆಯಾಕಾರ, ವಜ್ರದಾಕಾರ ಕಾಣುತ್ತದೆ.

೮. ಒಳ ಮತ್ತು ಹೊರಭಾಗ ಕೆಂಪು ಬಣ್ಣ, ಕಂಠದಿಂದ ಕೆಳಕ್ಕೆ ಕಪ್ಪು ಬಣ್ಣವಿದೆ. ೯ ಅಡ್ಡಗೆರೆಗಳನ್ನು ಬರೆಯಲಾಗಿದೆ, ಓರೆಯಾಗಿ ೫ ಗೆರೆಗಳನ್ನು ಕಂಠದಿಂದ ಕೆಳಕ್ಕೆ ನೇರವಾಗಿ ಎಳೆಯಲಾಗಿದೆ.[೨೯]

೯. ಒಳಭಾಗ ಕಪ್ಪು, ಹೊರಭಾಗ ಕೆಂಪು ಬಣ್ಣವಿದ್ದು ಕಂಠದಿಂದ ಕೆಳಕ್ಕೆ ನೇರವಾದ ೧೧ ಗೆರೆಗಳನ್ನು ಎಳೆದಿದೆ. ಬಿಳಿ ಗೆರೆಗಳ ಮೇಲೆ ಕೆಂಪು ಬಣ್ಣ ಲೇಪನ ಮಾಡಿದೆ. ಗೆರೆಯಿಂದ ಗೆರೆಗೆ ೧ ಸೆಂ.ಮೀ. ಅಂತರವಿದೆ.[೩೦]

೧೦. ಒಳಭಾಗ ಕಪ್ಪು ಹೊರಭಾಗ ಕೆಂಪು ಬಣ್ಣವಿದ್ದು, ಅರ್ಧದಿಂದ ಕೆಳಕ್ಕೆ ಕಪ್ಪು ಬಣ್ಣವಿದೆ. ಕಂಠದಿಂದ ಕೆಳಕ್ಕೆ ೬ ನೇರ ಗೆರೆಗಳನ್ನು ೦.೫ ಸೆಂ.ಮೀ. ಅಗಲದಲ್ಲಿ ೪ ಸೆಂ.ಮೀ. ಉದ್ದದ ಗೆರೆಗಳನ್ನು ಎಳೆದಿದೆ. ೬ನೇ ಗೆರೆಯ ಒಂದು ಸಾಲು ತ್ರಿಭುಜಕಾರವಾಗಿ ಕಾಣುತ್ತದೆ. ತೆಳ್ಳಗೆ ಕೆಂಪುಬಣ್ಣ ಲೇಪನ ಮಾಡಿದೆ.[೩೧]

೧೧. ಒಳ ಮತ್ತು ಹೊರಭಾಗ ಕೆಂಪು ಬಣ್ಣವಿದ್ದು ಕಂಠದಿಂದ ಓರೆಯಾಗಿ ೧/೨ ಸೆಂ.ಮೀ., ೩/೪ ಸೆಂ.ಮೀ. ಅಗಲದ ಗೆರೆಗಳನ್ನು ಎಳೆದಿದೆ. ಓರೆಯಾದ ಆಯತಾಕಾರ ವಾಗಿದೆ ಕೆಂಪು ಬಣ್ಣ ಮೇಲೆ ಲೇಪಿಸಿದೆ.[೩೨]

೧೨. ಮಡಕೆಯ ಒಳ ಮತ್ತು ಹೊರಭಾಗ ಕೆಂಪು ಬಣ್ಣವಿದ್ದು, ಕಂಠದ ಕೆಳಗೆ ಅಲಂಕಾರ ಮಾಡಿದ್ದು ಕಂಠದಿಂದ ಕೆಳಕ್ಕೆ ಸ್ವಲ್ಪ ಓರೆಯಾಗಿ ಎಳೆದು, ಮಧ್ಯ ಪಟ್ಟಿಯಿಂದ ಕೆಳಕ್ಕೆ ನೇರವಾಗಿ ೧೨ ಬಿಳಿ ಗೆರೆಗಳನ್ನು ಸ್ಪಷ್ಟವಾಗಿ ಎಳೆದಿದ್ದಾರೆ. ಮೇಲೆ ಕೆಂಪು ಬಣ್ಣ ಲೇಪನ ಮಾಡಿದೆ.[೩೩]

೧೩. ಒಳ ಮತ್ತು ಹೊರಭಾಗ ಕೆಂಪು ಬಣ್ಣದ ಮಡಿಕೆಯಿದ್ದು ಕಂಠದಿಂದ ಕೆಳಕ್ಕೆ ಓರೆಯಾಗಿ ಬರೆದು ನಂತರ ಎಡದಿಂದ ಬಲಕ್ಕೆ ಓರೆಯಾಗಿ ಅಡ್ಡಲಾಗಿ ಎಳೆದಿದೆ. ಓರೆಯಾಗಿ ಆಯತಾಕಾರವಾಗಿದೆ.[೩೪]

೧೪. ಒಳಭಾಗ ಕಪ್ಪು, ಹೊರಭಾಗ ಕಂದು ಬಣ್ಣದಿಂದ ಕೂಡಿದೆ. ಕಂಠದಿಂದ ಕೆಳಕ್ಕೆ ನೇರವಾಗಿ ೭ ಗೆರೆಗಳನ್ನು, ಅಡ್ಡಲಾಗಿ ೪ ಗೆರೆಗಳನ್ನು ಕೊರೆಯಲಾಗಿದೆ. ಕೆಂಪು ಬಣ್ಣ ಲೇಪನ ಮಾಡಿಲ್ಲ[೩೫]

೧೫. ಒಳಭಾಗ ಕಪ್ಪು ಬಣ್ಣ, ಹೊರಭಾಗ ಕಂದು ಬಣ್ಣದಿಂದ ಕೂಡಿದ್ದು ಓರೆಯಾಗಿ ೪ ಗೆರೆಗಳ ಸಾಲು, ೨ ಗೆರೆಗಳ ಸಾಲನ್ನು ಎಳೆದಿದೆ. ಮತ್ತೆ ಕಂಠದಿಂದ ಎಡದಿಂದ ಬಲಕ್ಕೆ, ಕೆಳಗಡೆ ೪ ಗೆರೆ, ೭ ಗೆರೆಗಳ ಗುಂಪನ್ನು ಎಳೆಯಲಾಗಿದೆ. ಚಿಕ್ಕ ಚಿಕ್ಕ ಆಯತಕಾರದ ಗುಂಪುಗಳು ಕಂಡುಬರುತ್ತದೆ. ಕೆಂಪು ಬಣ್ಣ ಲೇಪಿಸಿಲ್ಲ.[೩೬]

೧೬. ಒಳಭಾಗ ಬೂದು ಮಿಶ್ರಿತ ಕಂದು, ಹೊರಭಾಗ ಕೆಂಪು ಬಣ್ಣದಿಂದ ಕೂಡಿದ ಮಡಕೆ ಕಂಠ ದೊರಕಿದ್ದು ಕಂಠದ ಸುತ್ತ ಚಿಕ್ಕ ಗೆರೆಗಳಿಂದ ಅಲಂಕಾರಗೊಂಡಿದೆ. ಅಡ್ಡಲಾಗಿ ಬಲದಿಂದ ಎಡಕ್ಕೆ, ಎಡದಿಂದ ಬಲಕ್ಕೆ ೦.೫ ಸೆಂ.ಮೀ. ಅಗಲದ ಬಿಳಿ ಗೆರೆಗಳನ್ನು ಎಳೆದಿದೆ. ಆಯತಾಕಾರವಾಗಿ ಕಾಣುತ್ತದೆ. ಬಿಳಿ ಗೆರೆಗಳ ಮೇಲೆ ಕೆಂಪು ಬಣ್ಣ ಲೇಪಿಸಿದೆ.[೩೭]

೧೭. ಮಡಕೆಯ ತಟ್ಟೆಯ ಅರ್ಧ ಭಾಗ ದೊರಕಿದ್ದು ಒಳ, ಹೊರಭಾಗ ಕೆಂಪು ಬಣ್ಣದಿಂದ ಕೂಡಿದೆ. ಕಂಠದ ಹೊರಭಾಗದಿಂದ ಓರೆಯಾಗಿ ೫ ಗೆರೆಗಳನ್ನು ಎಳೆದಿದ್ದು ಒಂದೊಂದು ಬಿಳಿಗೆರೆ ೫ ಸೆಂ.ಮೀ. ಉದ್ದ, ೦.೫ ಸೆಂ.ಮೀ. ಅಗಲವಿದೆ. ೫ ಗೆರೆಗಳ ಗುಂಪು ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಓರೆಯಾಗಿ ಎಳೆದಿದೆ. ತ್ರಿಭುಜಕಾರವಾಗಿ ಅಲಂಕಾರವಾಗಿದೆ. ತಳಭಾಗ ಮತ್ತು ಮೇಲ್ಭಾಗದ ಮಧ್ಯಭಾಗ ಕಪ್ಪಾಗಿದೆ. ಈ ಮಡಿಕೆಯನ್ನು ಗೃಹಕೃತ್ಯಕ್ಕಾಗಿ ಬಳಸಿರಬಹುದು.[೩೮]

೧೮. ಒಳ, ಹೊರಭಾಗ ಕಪ್ಪು ಬಣ್ಣದಿದ್ದು, ಕಪ್ಪು ಬಣ್ಣದ ಮಡಿಕೆ ಮೇಲೆ ಬಿಳಿಗೆರೆಗಳನ್ನು ನೇರವಾಗಿ, ಅಡ್ಡಲಾಗಿ ಎಳೆಯಲಾಗಿದೆ. ಈ ಗೆರೆಗಳು ಛೇದಿಸುವ ಭಾಗ ಆಯತಾಕಾರವಾಗಿದೆ. ನೇರವಾಗಿರುವ ಗೆರೆಗಳು ೦.೫ ಸೆಂ.ಮೀ. ಅಗಲವಿದ್ದರೆ, ಅಡ್ಡಲಾಗಿ ಬರೆದಿರುವ ಗೆರೆಗಳು ೧ ಸೆಂ.ಮೀ. ಅಗಲವಿದೆ. ಬಿಳಿ ಗೆರೆಗಳ ಮೇಲೆ ಕೆಂಪು ಬಣ್ಣ ಲೇಪನ ಮಾಡಿದೆ.[೩೯]

೧೯. ಒಳ ಮತ್ತು ಹೊರಭಾಗ ಕಪ್ಪು ಬಣ್ಣವಿದ್ದು, ಕಂಠದಿಂದ ಮಧ್ಯದವರೆಗೆ ಕೆಂಪು ಬಣ್ಣ, ಮಧ್ಯದಿಂದ ಕೆಳಕ್ಕೆ ಕಪ್ಪು ಬಣ್ಣ ಅಲಂಕಾರವಾಗಿದೆ. ಕಂಠದಿಂದ ಕೆಳಕ್ಕೆ ಓರೆಯಾಗಿ ಎಡದಿಂದ ಬಲಕ್ಕೆ, ಬಲದ ಎಡಕ್ಕೆ ಗೆರೆಗಳನ್ನು ಎಳೆದಿದ್ದು ಆಯತಾಕಾರವಾಗಿದೆ. ಕೆಂಪು ಬಣ್ಣ ಲೇಪಿಸಿದೆ.[೪೦]

೨೦. ಒಳ ಮತ್ತು ಹೊರ ಭಾಗ ಕಪ್ಪು ಬಣ್ಣದಿಂದಿದ್ದು ಕಂಠದಿಂದ ಕೆಳಕ್ಕೆ ನೇರವಾಗಿ ೫ ಬಿಳಿಗೆರೆಗಳನ್ನು ತಳದವರೆಗೆ ಎಳೆದಿದೆ. ೫ ಗೆರೆಗಳ ಮಧ್ಯೆ ಚಂದ್ರನಾಕಾರದಲ್ಲಿ ದೊಡ್ಡ ಚುಕ್ಕೆಗಳ ಸಾಲು ಇದೆ. ಕೆಂಪು ಬಣ್ಣ ಲೇಪಿಸಿದೆ. ಮಡಿಕೆಯ ತಳಭಾಗ ಕಪ್ಪಾಗಿದ್ದು ಗೃಹಬಳಕೆಗೆ ಬಳಸಿರುವ ಸಾಧ್ಯತೆಯಿದೆ.[೪೧]

೨೧. ಮಂದ ಕೆಂಪು ಬಣ್ಣದ ಮಡಕೆ, ೩ ಕಾಲುವೆಯಾಕಾರದ ಪಟ್ಟಿ ಕೊರೆದಿದೆ. ಕೆಳಭಾಗದಲ್ಲಿ ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಓರೆಯಾಗಿ ೬ ಗೆರೆಗಳನ್ನು ನೇರವಾಗಿ ಎಳೆದಿದೆ. ಛೇದಿಸಿರುವ ಜಾಗದಲ್ಲಿ ಆಯತಾಕಾರದಲ್ಲಿದೆ. ಬಿಳಿಗೆರೆಗಳ ಮೇಲೆ ಅಲ್ಲಲ್ಲಿ ಕೆಂಪು ಬಣ್ಣ ಲೇಪನ ಮಾಡಿದೆ.[೪೨]

೨೨. ಒಳಭಾಗ ಕಪ್ಪು, ಹೊರಭಾಗ ಕಪ್ಪು ಮಿಶ್ರಿತ ಕಂದು ಬಣ್ಣದ ಮೇಲೆ ಅಡ್ಡಲಾಗಿ ಚಿಕ್ಕ ಬಿಳಿ ಚುಕ್ಕೆಗಳ ಸಾಲುಯಿದೆ. ತಳಭಾಗ ವೃತ್ತಾಕಾರವಾಗಿದೆ. ಅಲ್ಲಲ್ಲಿ ಕೆಂಪು ಬಣ್ಣ ಲೇಪಿಸಿದೆ.[೪೩]

೨೩. ಒಳಭಾಗ ಕಪ್ಪು, ಹೊರಭಾಗ ಬೂದುಮಿಶ್ರಿತ ಕಪ್ಪು ಬಣ್ಣದ ಮೇಲೆ ಸೀಸ ಬಣ್ಣದಲ್ಲಿ ಡೈಮಂಡ್ ಆಕಾರದಲ್ಲಿ ಅಲಂಕಾರ ಮಾಡಿದೆ. ೬ ಗೆರೆಗಳ, ೫ ಗೆರೆಗಳ ಗುಂಪು ಇದೆ.

೨೪. ಒಳ ಮತ್ತು ಹೊರಭಾಗ ಮಡಿಕೆ ಕಪ್ಪು ಬಣ್ಣದಿಂದಿದೆ ಕಂಠದಿಂದ ಕೆಳಕ್ಕೆ ೭ ಬಿಳಿ ಗೆರೆಗಳನ್ನು ನೇರವಾಗಿ ಎಳೆದು ಪಕ್ಕದಲ್ಲೇ ಚಂದ್ರನಾಕಾರ ಚುಕ್ಕೆಗಳ ಸಾಲನ್ನು ಎಳೆದು ಮೇಲೆ ಕೆಂಪು ಬಣ್ಣವನ್ನು ಲೇಪಿಸಿದೆ.[೪೪]

೨೫. ಚಿಕ್ಕ ಮಡಿಕೆ ಅರ್ಧ ಭಾಗದ ಒಳಭಾಗದಲ್ಲಿ ಕೆಂಪು ಹೊರಭಾಗ ಅರ್ಧದವರೆಗೆ ಕೆಂಪು, ಉಳಿದ ಭಾಗ ಕಪ್ಪು ಬಣ್ಣದಿಂದ ಕೂಡಿದೆ. ಕಂಠದಿಂದ ಕೆಳಕ್ಕೆ ನೇರವಾಗಿ ಮಡಕೆಯ ಸುತ್ತಲೂ ಲಂಬವಾಗಿ ಬಿಳಿಗೆರೆಗಳನ್ನು ಎಳೆಯಲಾಗಿದೆ.[೪೫]

೨೬. ಕೆಂಪುಬಣ್ಣದಿಂದ ಕೂಡಿದ ಮಧ್ಯ[೪೬] ದಪ್ಪಗೆರೆ ಎಳೆದಿದೆ.[೪೭]

೨೭. ಒಳಭಾಗ ಕಪ್ಪು ಹೊರಭಾಗ ಕೆಂಪು ಬಣ್ಣದಿಂದಿದ್ದು, ಕಂಠದಿಂದ ನೇರವಾಗಿ/ಲಂಬವಾಗಿ ೭ ಬಿಳಿ ಗೆರೆಗಳನ್ನು ಎಳೆದಿದೆ. ೭ ಗೆರೆಗಳ ಪಕ್ಕದಲ್ಲಿ ಚಂದ್ರನ ಹಾಗೆ ದೊಡ್ಡ ಚುಕ್ಕೆಗಳನ್ನು ಇಡಲಾಗಿದೆ. ಕಂಠದ ಕೆಳಗೆ ಗಾಜಿನ ಹಾಗೆ ಹೊಳೆಯುವ ಚಿಕ್ಕ ಪಟ್ಟಿ ಮಡಿಕೆಯ ಸುತ್ತಯಿದೆ.[೪೮]

೨೮. ಒಳಭಾಗ ಕಪ್ಪು ಹೊರಭಾಗ ಕಪ್ಪು, ಕೆಂಪು ಬಣ್ಣದಿಂದ ಇದೆ. ಕಂಠ ೨ ಸೆಂ.ಮೀ. ಉದ್ದವಾಗಿದೆ. ಕಂಠದಿಂದ ನೇರವಾಗಿ/ಲಂಬವಾಗಿ ಬಿಳಿ ಗೆರೆಗಳನ್ನು ಎಳೆದಿದೆ. ಈ ಗೆರೆಗಳ ಮೇಲೆ ಚಂದ್ರನಾಕಾರದಲ್ಲಿ ದೊಡ್ಡ ಚುಕ್ಕೆಗಳನ್ನು ಇಡಲಾಗಿದೆ.

೨೯. ಮಡಿಕೆಯ ಒಳ, ಹೊರಭಾಗ ಕೆಂಪು ಬಣ್ಣದಿಂದ ಕೂಡಿದ್ದು, ಕಂಠದಿಂದ ಕೆಳಕ್ಕೆ ಬಿಳಿ ಗೆರೆಗಳನ್ನು ನೇರವಾಗಿ, ಅಗಲವಾದ ಗೆರೆಗಳನ್ನೂ ಎಳೆಯ ಲಾಗಿದೆ.[೪೯]

೩೦. ಕೆಂಪು ಬಣ್ಣದ ಮಡಕೆಯ ಮೇಲೆ ಓರೆಯಾಗಿ ಬಿಳಿ ಗೆರೆಗಳನ್ನು ಎಳೆದು ಕೆಂಪು ಬಣ್ಣ ಲೇಪಿಸಿದೆ.[೫೦]

೩೧. ಮಡಕೆಯ ಒಳ ಹೊರಭಾಗ ಕಪ್ಪು ಬಣ್ಣದಿಂದಿದ್ದು, ಮಧ್ಯದಿಂದ ಕೆಳಗೆ ಕೆಂಪು ಬಣ್ಣದಿಂದಯಿದೆ. ಲಂಬವಾಗಿ ಬಿಳಿಗೆರೆಗಳನ್ನು ಎಳೆದು ಕೆಂಪು ಬಣ್ಣ ಲೇಪಿಸಿದೆ.[೫೧]

೩೨. ಒಳಭಾಗ ಕಪ್ಪು, ಹೊರಭಾಗ ಕೆಂಪು ಬಣ್ಣವಿದ್ದು ೪ ಬಿಳಿ ನೇರ ಗೆರೆಗಳಿವೆ ಪಕ್ಕದಲ್ಲೇ ೧ ಸೆಂ.ಮೀ. ಅಗಲದ ಹಾವಿನ ತಲೆಗಳ ಹಾಗೆ ಮುಖಾಮುಖಿಯಾಗಿರುವ ಗೆರೆಗಳಿವೆ. ಕೆಂಪು ಬಣ್ಣ ಲೇಪಿಸಿದೆ.[೫೨]

೩೩. ಒಳಭಾಗ ಕಪ್ಪು, ಹೊರಭಾಗ ಕೆಂಪು ಬಣ್ಣವಿದ್ದು ಓರೆಯಾಗಿ ೫ ಗೆರೆಗಳನ್ನು ತ್ರಿಭುಜಾಕಾರವಾಗಿ, 'V' ಆಕಾರದಲ್ಲಿ ೫ ಗೆರೆಗಳ ಗುಂಪನ್ನು ಎಳೆದಿದೆ.

೩೪. ಒಳಭಾಗ ಕಪ್ಪು, ಹೊರಭಾಗ ಕೆಂಪು ಬಣ್ಣವಿದೆ. ಓರೆಯಾಗಿ ೫ ಬಿಳಿ ಗೆರೆಗಳ ಗುಂಪನ್ನು 'V' ಆಕಾರದಲ್ಲಿ ದೊಡ್ಡ ಗೆರೆಗಳನ್ನು ೦.೫ ಸೆಂ.ಮೀ. ಅಗಲದಲ್ಲಿ ಎಳೆದಿದೆ.

೩೫. ಹೊಳಪು ಕಪ್ಪು (Glaze Black) ಬಣ್ಣದಿಂದ ಕೂಡಿದ ಒಳಭಾಗ, ಹೊರಭಾಗ ಕಪ್ಪು ಬಣ್ಣದಿಂದ ಇದೆ. ಮಡಕೆಯ ಮೇಲೆ ೦.೫ ಸೆಂ.ಮೀ. ಅಗಲದ ಬಿಳಿಗೆರೆ ಎಳೆದು ಕೆಂಪು ಬಣ್ಣ ಲೇಪಿಸಿದೆ.

೩೬. ಕೆಂಪು ಬಣ್ಣದ ಮಡಿಕೆ ಮಧ್ಯಭಾಗದಲ್ಲಿ ೩ ಸ್ಪಷ್ಟವಾದ ಕಾಲುವೆಯಾಕಾರದ ಗೆರೆಗಳನ್ನು ಕೊರೆಯಲಾಗಿದೆ. ಕಂಠದಿಂದ ಕೆಳಕ್ಕೆ ೭ ಚಿಕ್ಕ ಬಿಳಿ ಗೆರೆಗಳನ್ನು ನೇರವಾಗಿ ಎಳೆದಿದೆ. ಗೆರೆಗಳ ಪಕ್ಕದಲ್ಲೇ ಸೂರ್ಯ ಇಲ್ಲವೆ ನಕ್ಷತ್ರದ ಹಾಗೆ ಇದ್ದು ದುಂಡಾಗಿ ಮಧ್ಯ ರಂಧ್ರವಿದೆ. ಸುತ್ತಲೂ ಬಿಳಿ ಬಣ್ಣ ಲೇಪಿಸಿದ್ದಾರೆ. ಮೇಲೆ ಕೆಂಪು ಬಣ್ಣವನ್ನು ಹಚ್ಚಿದ್ದಾರೆ.[೫೩]

೩೭. ಕೆಂಪು ಬಣ್ಣದ ಮಡಕೆಯು ಕಂಠದ ಕೆಳಗೆ ಚಿಕ್ಕಗೆರೆಗಳಿರುವ, ಮಧ್ಯೆ ಪಟ್ಟಿ, ಪಟ್ಟಿ ಮಧ್ಯೆದಲ್ಲಿ ರಂಧ್ರದಾಕಾರವಾಗಿ ಬೆರಳಿನ ಮೊನೆಯಿಂದ ಚಿವುಟಿರುವ ಗುರುತುಗಳಿವೆ. ಪಟ್ಟಿಯಿಂದ ಕೆಳಗೆ ಓರೆಯಾಗಿ ೭ ಬಿಳಿ ಚುಕ್ಕೆಗಳ ಸಾಲು, ಮಧ್ಯೆ ಓರೆಯಾಗಿ ಚುಕ್ಕೆಗಳ ೨ ಸಾಲಿದೆ.[೫೪]

೩೮. ಒಳಭಾಗ ಕಪ್ಪು, ಹೊರಭಾಗ ಕೆಂಪು ಬಣ್ಣದ ಮಡಕೆ ತುಂಡಿನ ಮಧ್ಯೆ ಕಾಲುವೆಯಾಕಾರದ ಗೆರೆಯಿದೆ. ಬಿಳಿ ಬಣ್ಣದ ಚುಕ್ಕೆಗಳ ಸಾಲುಯಿದ್ದು ಕೆಂಪು ಬಣ್ಣ ಲೇಪನ ಮಾಡಿದೆ.[೫೫]

೩೯. ಕಪ್ಪು ಬಣ್ಣದ ಮಡಿಕೆಯ ಮೇಲೆ ಬಿಳಿ ಬಣ್ಣದ ೫ ಚುಕ್ಕೆಗಳ ಸಾಲು, ಚುಕ್ಕೆಗಳ ಮಧ್ಯೆ ದುಂಡಾದ ಬಿಳಿ ಬಣ್ಣದ ಬಿಲ್ಲೆಯಾಕಾರ, ಚಿಕ್ಕ ಚುಕ್ಕೆಯಿಟ್ಟಿರುವ ಒಂದು ಸಾಲುಯಿದೆ.

೪೦. ಕೆಂಪು ಬಣ್ಣದಿಂದ ಕೂಡಿದ ಮಡಕೆ ಭಾಗ ಮಧ್ಯದಲ್ಲಿ ೪ ಗೆರೆಗಳನ್ನು ಕಾಲುವೆಗಳಾಗಿ ಕೊರೆದಿದ್ದು ಈ ಕಾಲುವೆಗಳ ಮೇಲೆ ಬಿಳಿ ಬಣ್ಣದ ಗೆರೆ, ಚುಕ್ಕೆಗಳನ್ನು ರಚಿಸಲಾಗಿದೆ.

೪೧. ಕಂದು ಬಣ್ಣದ ಒಳಭಾಗ, ಹೊರಭಾಗ ಕೆಂಪು ಬಣ್ಣಯಿದೆ ಕಂಠದಿಂದ ಕೆಳಗೆ 'V' ಆಕಾರ ಅಲಂಕರಿಸಿದ್ದು, ಕೆಳಗೆ ಎರಡು ಗೆರೆಗಳನ್ನು ಚಿಕ್ಕದಾಗಿ ಕೊರೆದಿದೆ. ಕೆಳಗೆ ದುಂಡಾದ ಬಿಳಿ ಬಣ್ಣದ ಚುಕ್ಕೆಗಳ ಸಾಲು (ಚಂದ್ರನ ಹಾಗೆ) ಬಿಳಿ ಗೆರೆಗಳನ್ನು ಓರೆಯಾಗಿ ರಚಿಸಿದೆ.

೪೨. ಒಳಗೆ ಕಪ್ಪು, ಹೊರಗೆ ಕೆಂಪು ಬಣ್ಣವಿದೆ. ಕಂಠದಿಂದ ಕೆಳಗೆ ಅಡ್ಡಲಾಗಿ, ಒಂದೇ ಸಮನಾಗಿ ೦.೫ ಸೆಂ.ಮೀ. ಅಗಲದ ಗೆರೆಗಳನ್ನು ಎಳೆಯಲಾಗಿದೆ. ಮೇಲೆ ಕೆಂಪು ಬಣ್ಣ ಲೇಪನ ಮಾಡಿದೆ.[೫೬]

೪೩. ಕೆಂಪು ಬಣ್ಣದಿಂದ ಕೂಡಿದ ಮಡಿಕೆ ಭಾಗದ ಕಂಠದ ಕೆಳಗೆ ಒಂದು ಗೆರೆಯನ್ನು ಕಾಲುವೆಯಾಕಾರ ಕೊರೆದಿದೆ. ಗೆರೆಯಿಂದ ಕೆಳಕ್ಕೆ ನೇರವಾದ ೩ ದೊಡ್ಡ ಬಿಳಿಗೆರೆಗಳನ್ನು ಸ್ವಲ್ಪ ಬಾಗಿಸಿದ್ದು ಈ ಗೆರೆಗಳ ಮೇಲೆ ೩ ಬಿಳಿಗೆರೆಗಳನ್ನು ಅಡ್ಡಲಾಗಿ ಎಳೆದಿದ್ದಾರೆ.[೫೭]

೪೪. ಕಪ್ಪು ಬಣ್ಣ ಒಳಭಾಗ, ಕೆಂಪು ಬಣ್ಣದಿಂದ ಹೊರಭಾಗ ಕೂಡಿದ್ದು ಕೆಂಪು ಬಣ್ಣದ ಭಾಗದ ಮೇಲೆ ೧೧ ಬಿಳಿ ಗೆರೆಗಳನ್ನು ಅಡ್ಡಲಾಗಿ, ಸಮತಟ್ಟಾಗಿ ಎಳೆದಿದೆ. ಕೆಂಪು ಮತ್ತು ಕಪ್ಪು ಬಣ್ಣಗಳ ಮಧ್ಯೆ ದುಂಡಾದ ಬಿಳಿ ಸಮತಟ್ಟಾಗಿ ಎಳೆದಿದೆ. ಕೆಂಪು ಮತ್ತು ಕಪ್ಪು ಬಣ್ಣಗಳ ಮಧ್ಯೆ ದುಂಡಾದ ಬಿಳಿ ಚುಕ್ಕೆ ಇಟ್ಟಿದ್ದಾರೆ. ಗೆರೆಗಳನ್ನು ಕೊನೆಗೆ ದಪ್ಪ ಮಾಡಿದ್ದಾರೆ.

೪೫. ಒಳಭಾಗ ಕಂದು ಬಣ್ಣ, ಹೊರಭಾಗ ಕೆಂಪು ಬಣ್ಣದಿಂದ ಇದ್ದು ಬಿಳಿಗೆರೆಗಳನ್ನು ನೇರವಾಗಿ ಅಡ್ಡಲಾಗಿ ರಚಿಸಲಾಗಿದೆ.[೫೮]

೪೬. ಮಂದ ಕೆಂಪು ಬಣ್ಣದ ಮಡಿಕೆಯ ಭಾಗದ ಮೇಲೆ ೦.೭ ಸೆಂ.ಮೀ. ಅಗಲದ ನೇರವಾದ ೩ ಗೆರೆಗಳಿದ್ದು, ಅಡ್ಡಲಾಗಿ ೩ ಗೆರೆಗಳಿವೆ. ಭೇದಿಸಿದ ಗೆರೆಗಳು ಓರೆಯಾದ ಆಯತಾಕಾರದಲ್ಲಿವೆ. ಬಣ್ಣಬಣ್ಣದ ಗೆರೆಗಳ ಮೇಲೆ ಕೆಂಪು ಬಣ್ಣ ಲೇಪಿಸಿದೆ.

೪೭. ಕೆಂಪು ಬಣ್ಣದ ಮಡಿಕೆ ಭಾಗದ ಮೇಲೆ ಕಂಠದಿಂದ ಕೆಳಗೆ ಮುಖಾಮುಖಿಯಾಗಿ, ಓರೆಯಾಗಿ ಬಿಳಿಗೆರೆಗಳನ್ನು ರಚಿಸಿದ್ದಾರೆ. ೧.೨ ಸೆಂ.ಮೀ. ಅಗಲದ, ೨ ಸೆಂ.ಮೀ. ಅಗಲದ ಗೆರೆಗಳು ಕಂಠದ ಕೆಳಗೆ ರಚಿತವಾಗಿವೆ. ಬಿಳಿಗೆರೆಗಳ ಮೇಲೆ ಕೆಂಪು ಬಣ್ಣ ಲೇಪನ ಮಾಡಲಾಗಿದೆ.[೫೯]

೪೮. ಕೆಂಪು ಬಣ್ಣದ ಮಡಿಕೆ ಭಾಗದಲ್ಲಿ ಕಂಠದಿಂದ ಕೆಳಗೆ ೫ ಬಿಳಿ ಗೆರೆಗಳ ಗುಂಪನ್ನು ಸ್ವಲ್ಪ ಓರೆಯಾಗಿ ಎಳೆದಿದ್ದಾರೆ. ಸ್ವಲ್ಪ ಜಾಗ ಬಿಟ್ಟು ಇನ್ನು ಸ್ವಲ್ಪ ಓರೆಯಾಗಿ ಮತ್ತೆ ಬಿಳಿಗೆರೆ ಎಳೆದಿದ್ದಾನೆ. ಮಧ್ಯೆ 'V' ಆಕಾರದ ಹಾಗೆಯಿದ್ದು. ಭೇದಿಸಿದ ಗೆರೆಗಳು ಆಯತಾಕಾರವಾಗಿ ಕಾಣುತ್ತವೆ.

೪೯. ಒಳಭಾಗ ಹಳದಿ ಕಪ್ಪು ಮಿಶ್ರಿತ, ಹೊರಭಾಗ ಕೆಂಪು ಬಣ್ಣ, ಕಂಠದಿಂದ ಕೆಳಗೆ ೭ ಅಡ್ಡ ಗೆರೆಗಳನ್ನು ೭ ಲಂಬ ಗೆರೆಗಳನ್ನು ಹಂತ ಹಂತವಾಗಿ ಸುತ್ತಲೂ ಅಲಂಕರಿಸಿದ್ದಾರೆ. ಮೇಲೆ ಕೆಂಪು ಬಣ್ಣ ಲೇಪನ ಮಾಡಿದೆ.[೬೦]

೫೦. ಒಳಭಾಗ ಕಪ್ಪು, ಹೊರಭಾಗ ಕೆಂಪು ಬಣ್ಣವಿದೆ. ಕಂಠದಿಂದ ಕೆಳಕ್ಕೆ ಬಿಳಿಗೆರೆಗಳನ್ನು ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಎಳೆದಿದ್ದಾರೆ. ಗೆರೆಗಳು ಭೇದಿಸುವ ಬಿಂದುಗಳು ಓರೆಯಾದ, ಆಯತಾಕಾರ, ವಜ್ರದಾಕಾರವಾಗಿ, ಚಾಪೆಯಾಕಾರವಾಗಿ ಕಾಣುತ್ತದೆ ಮೇಲೆ ಕೆಂಪು ಬಣ್ಣ ಲೇಪನ ಮಾಡಿದೆ.[೬೧]

೫೧. ಕೆಂಪು ಬಣ್ಣದ ಮಡಿಕೆಯ ಮೇಲೆ ಕಂಠದಿಂದ ಕೆಳಗೆ ನೇರವಾಗಿ ೬ ಗೆರೆಗಳನ್ನು, ಈ ಗೆರೆಗಳಿಗೆ ಛೇದಿಸಿಕೊಂಡು ಅಡ್ಡಲಾಗಿ ಎಡಕ್ಕೆ ಗೆರೆಗಳನ್ನು ರಚಿಸಿದೆ.

೫೨. ಒಳಭಾಗ ಕಪ್ಪು ಬಣ್ಣ, ಕಂಠದ ಭಾಗ ಕಪ್ಪು, ಕಂಠದ ಕೆಳಗೆ ಕೆಂಪು ಬಣ್ಣವಿದ್ದು ನೇರವಾಗಿ/ಲಂಬವಾಗಿ ಬಿಳಿಗೆರೆಗಳು ಇದ್ದು ಎಡದಿಂದ ಬಲಭಾಗಕ್ಕೆ ಗೆರೆಗಳನ್ನು ಓರೆಯಾಗಿ ಛೇದಿಸಿಕೊಂಡು ರಚಿಸಿದ್ದಾರೆ. ಓರೆಯಾಗಿ ಆಯತಾಕಾರವಾಗಿದೆ.

೫೩. ಕೆಂಪು ಮಿಶ್ರ ಕಪ್ಪು ಬಣ್ಣದ ಒಳಭಾಗ ಹೊರಭಾಗ ಕೆಂಪು ಬಣ್ಣ ಕಂಠದ ಕೆಳಗೆ ಎಲೆ ಬಳ್ಳಿಯ ಹಾಗೆ ಅಲಂಕಾರವಿದೆ. ಲಂಬವಾದ ಗೆರೆಗಳನ್ನು ಕೊರೆದು ಎಡದಿಂದ ಬಲಕ್ಕೆ ಓರೆಯಾಗಿ ಬಿಳಿಗೆರೆ ಛೇದಿಸುವಂತೆ ರಚಿಸಿದ್ದಾರೆ.

೫೪. ಕೆಂಪು ಬಣ್ಣದ ಮಡಿಕೆ ಭಾಗದ ಕಂಠದ ಕೆಳಗೆ ೦.೫ ಸೆಂ.ಮೀ. ಅಗಲದ ಬಿಳಿ ಬಣ್ಣದ ಓರೆಯಾದ ಗೆರೆ ಎಳೆದಿದ್ದಾರೆ. ಎಡದಿಂದ ಬಲಕ್ಕೆ ೪ ಗೆರೆಗಳು, ಬಲದಿಂದ ಎಡಕ್ಕೆ ೪ ಗೆರೆಗಳು ಭಾಗಿಸಿ ಅಲಂಕರಿಸಿದ್ದಾರೆ. ಮಧ್ಯ ತ್ರಿಭುಜಾಕಾರ, 'V' ಆಕಾರದ ಅಲಂಕಾರ ಕಂಡುಬರುತ್ತದೆ. ಹಣತೆಯಾಗಿ ಈ ಮಡಿಕೆಯನ್ನು ಬಳಸಿರಬಹುದು.[೬೨]

೫೫. ಒಳಗಡೆ ಕಪ್ಪು , ಹೊರಭಾಗ ಹಳದಿ ಕಪ್ಪು ಬಣ್ಣದಿಂದ ಇದ್ದು ನೇರವಾಗಿ, ಅಡ್ಡಲಾಗಿ ಬಿಳಿ ಗೆರೆಗಳನ್ನು ರಚಿಸಿದೆ. ೭ ಗೆರೆಗಳು ಛೇದಿಸಿದ ಜಾಗ ಆಯತಾಕಾರವಾಗಿದೆ. ಮಡಿಕೆಯ ಗೆರೆಗಳ ಮೇಲೆ ಕಪ್ಪು ಬಣ್ಣವಿದ್ದು 'V' ಆಕಾರ ಅಲಂಕಾರಗೊಂಡಿದೆ.

೫೬. ಕೆಂಪು ಬಣ್ಣದ ಮಡಿಕೆಯು ಕಂಠದ ಕೆಳಗೆ ಕಾಲುವೆಯಾಕಾರದ ಗೆರೆಯಿದೆ. ಗೆರೆಯಿಂದ ಕೆಳಗೆ ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ೯ ಗೆರೆಗಳ ಗುಂಪನ್ನು ಓರೆಯಾಗಿ ಚಿಕ್ಕ ಗೆರೆಗಳನ್ನು ರಚಿಸುವುದರ ಮೂಲಕ 'V' ಆಕಾರ ಬರುವಂತೆ ಮಾಡಿದ್ದಾರೆ. ಛೇದಿಸಿದ ಭಾಗ ಆಯತಾಕಾರವಾಗಿದೆ. 'V' ಆಕಾರದ ಜಾಗದಲ್ಲಿ ಅರ್ಧಚಂದ್ರಾಕೃತಿಯು ಅಲಂಕಾರ ಮಾಡಿದ್ದಾರೆ.[೬೩]

೫೭. ಒಳಭಾಗ ಕಪ್ಪು, ಹೊರಭಾಗ ಕೆಂಪು ಬಣ್ಣದಿಂದ ಕೂಡಿದ್ದು ೦.೮ ಸೆಂ.ಮೀ. ಅಗಲದ ಗೆರೆಯ ಗೆರೆಗಳನ್ನು ಕಂಠದಿಂದ ಕೆಳಗೆ ಅಡ್ಡಲಾಗಿ ರಚಿಸಲಾಗಿದೆ ಒಂದು ಗೆರೆಯಿಂದ ಇನ್ನೊಂದು ಗೆರೆಗೆ ೦.೫ ಸೆಂ.ಮೀ, ೦.೮ ಸೆಂ.ಮೀ. ಅಗಲದಲ್ಲಿ ಗೆರೆಗಳನ್ನು ಅಡ್ಡಲಾಗಿ ರಚಿಸಲಾಗಿದೆ.

೫೮. ಒಳಭಾಗ ಕಂದುಬಣ್ಣ, ಹೊರಭಾಗ ಕೆಂಪು ಬಣ್ಣದ ಕಂಠದ ಕೆಳಗೆ ಚಿಕ್ಕ ಗೆರೆಯನ್ನು ಕೊರೆದು, ೭ ಗೆರೆಗಳ ಗುಂಪನ್ನು ಲಂಬವಾಗಿ, ೭ ಬಿಳಿಗೆರೆ ಗುಂಪನ್ನು ಓರೆಯಾಗಿ, ೭ ಬಿಳಿಗೆರೆಗಳ ಗುಂಪನ್ನು ಅಡ್ಡಲಾಗಿ ಮಡಿಕೆಯ ತುಂಬ ಅಲಂಕಾರ ಮಾಡಿ ಮೇಲೆ ಕೆಂಪು ಬಣ್ಣ ಲೇಪನ ಮಾಡಿದೆ.[೬೪]

೫೯. ಕೆಂಪು ಬಣ್ಣದ ಮಡಿಕೆ ಭಾಗದಲ್ಲಿ ೬ ಗೆರೆಗಳನ್ನು ಲಂಬವಾಗಿ, ೬ ಗೆರೆಗಳನ್ನು ಓರೆಯಾಗಿ ಛೇದಿಸುವಂತೆ ಎಳೆದಿದೆ. ಛೇದಿಸಿದ ಜಾಗದಲ್ಲಿ ಓರೆ ಆಯತಾಕಾರವಾಗಿದೆ. ಮೇಲೆ ಕೆಂಪು ಬಣ್ಣದ ಲೇಪನ ಮಾಡಿದೆ.[೬೫]

೬೦. ಕೆಂಪು ಬಣ್ಣದ ಮಡಿಕೆಯ ಕಂಠದಿಂದ ಲಂಬವಾದ ಬಿಳಿಗೆರೆಗಳನ್ನು ೦.೫ ಸೆಂ.ಮೀ. ಅಗಲದಲ್ಲಿ ರಚಿಸಿ, ಈ ಗೆರೆಗಳ ಮೇಲೆ ಓರೆಯಾಗಿ ಗೆರೆ ಎಳೆದಿದೆ. ಈ ಗೆರೆಗಳು ವಜ್ರದಾಕಾರ, ಓರೆಯಾದ ಆಯತಾಕಾರ ವಾಗಿದ್ದು ಮೇಲೆ ಕೆಂಪು ಬಣ್ಣ ಲೇಪಿಸಿದೆ.

೬೧. ಕಪ್ಪು ಬಣ್ಣದ ಮಡಿಕೆ ಮೇಲೆ ಕಂಠದಿಂದ ತಳದವರೆಗೆ ನೇರ/ಲಂಬವಾಗಿ ೭ ಬಿಳಿಗೆರೆಗಳನ್ನು ರಚಿಸಲಾಗಿದೆ. ಕಂಠದಿಂದ ತಳದವರೆಗೆ ೪ ಚುಕ್ಕೆಗಳನ್ನು (ಚಂದ್ರನ ಹಾಗೆ) ಇಡಲಾಗಿದೆ.[೬೬]


೬೨. ಕೆಂಪು ಬಣ್ಣದ ಮಡಿಕೆ ಭಾಗವಿದ್ದು ಕಂಠದ ಮೇಲಿಂದ ಅಡ್ಡಲಾಗಿ ೦.೫ ಸೆಂ.ಮೀ. ಅಗಲದ ಮಧ್ಯ ಬಿಳಿಗೆರೆಗಳನ್ನು ಒಂದಾದ ಮೇಲೊಂದರಂತೆ ಮಡಿಕೆಯ ಸುತ್ತ ರಚಿಸಲಾಗಿದೆ. ಅಲ್ಲಲ್ಲಿ ಲಂಬವಾದ ಗೆರೆಗಳ ಗುಂಪು ಕಂಠದಿಂದ ಕೆಳಗಡೆ ರಚಿತವಾಗಿದೆ. ಕೆಂಪು ಬಣ್ಣ ಮೇಲೆ ಲೇಪಿತವಾಗಿದೆ.[೬೭]

೬೩. ಕೆಂಪು ಬಣ್ಣದ ಮಡಿಕೆಯು ಭಾಗ ಕಂಠದಿಂದ ಮಧ್ಯದವರೆಗೆ ಕೆಂಪು ಬಣ್ಣ, ನಂತರ ಕಪ್ಪು ಬಣ್ಣವಿದೆ. ಓರೆಯಾಗಿ ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಬಿಳಿಗೆರೆಗಳನ್ನು ಎಳೆದು ಛೇದಿಸುವಂತೆ ಮಾಡಿದೆ. ಛೇದಿಸಿದ ಜಾಗದಲ್ಲಿ ಆಯತಾಕಾರವಾಗಿದೆ. ಮೇಲೆ ಕೆಂಪು ಬಣ್ಣ ಲೇಪಿಸಿದೆ.


೬೪. ಒಳಭಾಗ ಕಪ್ಪು ಮೇಲ್ಭಾಗ ಕಪ್ಪು, ಕೆಂಪು ಬಣ್ಣದಿಂದ ಕೂಡಿದ ಮಡಿಕೆಯು ಭಾಗ, ಕಂಠದ ಕೆಳಗೆ ೩ ಕಾಲುವೆಯಾಕಾರವಾಗಿ ಕೊರೆದು ಮಧ್ಯ ಪಟ್ಟಿ ಮಾಡಿದೆ. ಹಾವಿನಾಕಾರ ಬಿಳಿ ಬಣ್ಣ ಬಳಿದು ಅದರ ಮೇಲೆ ಕೆಂಪು ಬಣ್ಣ ಲೇಪನ ಮಾಡಿದೆ.[೬೮]

೬೫. ಒಳಭಾಗ ಹಳದಿ, ಕಪ್ಪು ಬಣ್ಣ ಹೊರಭಾಗ ಹಳದಿ ಬಣ್ಣದಿಂದ ಕೂಡಿದೆ. ಕಂಠದಿಂದ ಕೆಳಗಿನವರೆಗೆ ಲಂಬವಾದ/ನೇರಗೆರೆಗಳನ್ನು ಎಳೆದಿದೆ. ಅಲ್ಲಲ್ಲಿ ಕೆಂಪು ಬಣ್ಣ ಲೇಪಿಸಿದೆ.[೬೯]

೬೬. ಕೆಂಪು ಬಣ್ಣದಿಂದ ಕೂಡಿದ ಮಡಿಕೆಯ ಭಾಗದ ಮೇಲೆ ನೇರವಾದ, ಅಡ್ಡಗೆರೆಗಳನ್ನು ಎಳೆದು ೭ ಸೆಂ.ಮೀ. ಚಚ್ಚೌಕಾರವಾಗಿ ಎಳೆದಿದೆ. ಮಧ್ಯೆ ೧೨ ಚುಕ್ಕೆಗಳನ್ನು ಇಟ್ಟು ಅಲಂಕರಿಸಿದ್ದಾರೆ. ಅಲ್ಲಲ್ಲಿ ಕಪ್ಪು ಕಲೆಗಳು ಕಂಡುಬರುತ್ತವೆ.




ರಸ್ಸೆಟ್‌ಕೋಟೆಡ್‌ಕ್ಯಾವಲೀನ್‌ಪೇಂಟೆಡ್‌ಮಡಿಕೆ ಭಾಗಗಳು, ನಾಗಪ್ಪನಹಳ್ಳಿ






ರಸ್ಸೆಟ್ ಕೋಟೆಡ್ ಕ್ಯಾವಲೀನ್ ಪೇಂಟೆಡ್ ಮಡಿಕೆ
ಭಾಗಗಳು, ನಾಗಪ್ಪನಹಳ್ಳಿ, ಕಲ್ಯಾಣದುರ್ಗ ತಾಲ್ಲೂಕು




ರಸ್ಸೆಟ್ ಕೋಟೆಡ್ ಕ್ಯಾವಲೀನ್ ಪೇಂಟೆಡ್
ಮಡಿಕೆ ಭಾಗಗಳು, ನಾಗಪ್ಪನಹಳ್ಳಿ, ಕಲ್ಯಾಣದುರ್ಗ ತಾಲ್ಲೂಕು




ರಸ್ಸೆಟ್ ಕೋಟೆಡ್ ಕ್ಯಾವಲೀನ್ ಪೇಂಟೆಡ್ ಮಡಿಕೆ ಭಾಗಗಳು,
ನಾಗಪ್ಪನಹಳ್ಳಿ, ಕಲ್ಯಾಣದುರ್ಗ ತಾಲ್ಲೂಕು



ನಾಗಪ್ಪನಹಳ್ಳಿಯಲ್ಲಿ ದೊರಕಿರುವ ಇಟ್ಟಿಗೆ




ನಾಗಪ್ಪನಹಳ್ಳಿಯಲ್ಲಿ ದೊರಕಿರುವ ಅಲಂಕಾರಿಕ ಮಡಿಕೆ



ಕ್ಯಾವಲೀನ್ ಪೇಟೆಂಡ್ ರಸ್ಸೆಟ್ ಕೋಟೆಡ್ ಮಡಿಕೆ



ತಾಮ್ರದ ಕಾಲುಂಗುರ ಜಾಸ್ಪರ್‌ಮಣಿ



ನಾಗಪ್ಪನಹಳ್ಳಿ ಮತ್ತು ಗೌರಿಪುರದಲ್ಲಿ ದೊರಕಿರುವ ಅವಶೇಷಗಳು

೬೭. ಒಳಭಾಗ ಮಂದ ಕೆಂಪು, ಹೊರಭಾಗ ಕೆಂಪು ಬಣ್ಣದ ಮಡಿಕೆ ಮೇಲೆ ಚುಕ್ಕೆಗಳ ಸಾಲು, ಮಧ್ಯಭಾಗದಲ್ಲಿ ಬಿಳಿಗೆರೆ ಸಾಲುಯಿದೆ. ಈ ತರಹ ತರಬಾನಹಳ್ಳಿ ನೆಲೆಯಲ್ಲಿ ದೊರಕಿದೆ.

೬೮. ಕಪ್ಪು ಮಿಶ್ರಿತ ಕೆಂಪು ಬಣ್ಣದ ಮಡಿಕೆಯ ಭಾಗದ ಮೇಲೆ ಚುಕ್ಕೆಗಳ ಸಾಲು ಕೆಳಗೆ ಹಾವಿನ ಎಡೆಯಾಕಾರ/ಬಾಚಣಿಕೆಯಾಕಾರ ಎಳೆದಿದೆ. ಮೇಲೆ ಕೆಂಪು ಬಣ್ಣ ಲೇಪಿಸಿದೆ.

೬೯. ಹಳದಿ ಬಣ್ಣದಿಂದ ಕೂಡಿದ ಮಡಕೆಯ ಮೇಲೆ ೪ ಗೆರೆಗಳ ಸಾಲನ್ನು ಲಂಬವಾಗಿ, ೪ ಗೆರೆಗಳ ಸಾಲನ್ನು ಓರೆಯಾಗಿ ಎಳೆದಿದ್ದಾರೆ. ಮಧ್ಯೆ 'V' ಆಕಾರದ ಅಲಂಕಾರವಾಗಿದೆ. ವಿಶೇಷ ಮಡಿಕೆ ಭಾಗವಾಗಿದೆ. ಈ ತರಹದ್ದು ಹಳ್ಳೂರು[೭೦] ನೆಲೆಯಲ್ಲಿ ದೊರಕಿದೆ.

೭೦. ಒಳಭಾಗ ಕಪ್ಪು, ಹೊರಭಾಗ ಕೆಂಪು ಬಣ್ಣದ ಮಡಿಕೆ ಭಾಗದ ಮೇಲೆ ೩ ಗೆರೆಗಳ ಸಾಲನ್ನು ನೇರವಾಗಿ ಎಳೆದು ಪಕ್ಕದಲ್ಲಿ ದುಂಡಾದ ಪೂರ್ಣಚಂದ್ರನಾಕಾರದ ಚುಕ್ಕೆಗಳ ಸಾಲಿದೆ.

೭೧. ಒಳಭಾಗ ಕಪ್ಪು ಹೊರಭಾಗ ಕಂದು/ಚಾಕಲೇಟ್ ಬಣ್ಣದಿಂದ ಕೂಡಿದ್ದು ಕಂಠದಿಂದ ಕೆಳಕ್ಕೆ ಮೂರು ಗೆರೆಗಳ ಲಂಬವಾದ ಸಾಲುಗಳು, ಪಕ್ಕದಲ್ಲಿ ೩ ಚುಕ್ಕೆಗಳ ಸಾಲು ಇದೆ ಮೇಲೆ ಕೆಂಪು ಬಣ್ಣ ಲೇಪಿಸಿದೆ.[೭೧]

ಈ ತರಹ ಮಡಿಕೆ ಚೂರುಗಳು ಕರ್ನಾಟಕದ ಹಲವು ಜಿಲ್ಲೆಗಳ ಹಲವಾರು ಕಡೆ ನನ್ನ ಕ್ಷೇತ್ರಕಾರ್ಯದ ಭೂಅನ್ವೇಷಣೆಯ ಸಂದರ್ಭದಲ್ಲಿ ದೊರಕಿದೆ. ವೇದಾವತಿ ನದಿಯ ಉಗಮ ಜಿಲ್ಲೆಯಾದ ಚಿಕ್ಕಮಗಳೂರಿನ ಕಡೂರು ತಾಲ್ಲೂಕಿನ ಮಲ್ಲೇಶ್ವರ, ಆಸಂದಿ, ತರೀಕೆರೆ ತಾಲ್ಲೂಕಿನ ಅನುವನಹಳ್ಳಿಯಲ್ಲಿ ಉತ್ಕೃಷ್ಟ ಮಟ್ಟದ ಅವಶೇಷಗಳು ದೊರಕಿದರೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ದೊಡ್ಡಉಳ್ಳಾರ್ತಿ, ನಾಗಗೊಂಡನ ಹಳ್ಳಿ, ಯಾದಲಗಟ್ಟೆ, ಗೌರಿಪುರ, ದೊಡ್ಡೇರಿ, ಗೋಸಿಕೆರೆ ಇನ್ನಿತರ ನೆಲೆಗಳಲ್ಲಿ ಹಾಗೂ ಹಿರಿಯೂರು ತಾಲ್ಲೂಕಿನ ಹರ್ತಿಕೋಟೆ, ಶಿಷ್ಟಯ್ಯನ ಕೋಟೆ ನೆಲೆ ಇದೇ ತಾಲ್ಲೂಕಿನಲ್ಲಿ ಸುವರ್ಣಮುಖಿ ನದಿ ಮತ್ತು ವೇದಾವತಿ ನದಿ ಸೇರುವ ಸಂಗಮ ಸ್ಥಳವಾದ ಕೂಡ್ಲಹಳ್ಳಿಯಲ್ಲಿ ಚಿತ್ರದುರ್ಗ ತಾಲ್ಲೂಕಿನ ಹಳೇ ಕಲ್ಲಹಳ್ಳಿ ನೆಲೆಯಲ್ಲಿ, ಮೊಳಕಾಲ್ಮೂರು ತಾಲ್ಲೂಕಿನ ಚಿನ್ನಹಗರಿ ನದಿ ತೀರದ ಹಾನಗಲ್ಲು ನೆಲೆಯಲ್ಲಿ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಕಲ್ಯಾಣದುರ್ಗ ತಾಲ್ಲೂಕಿನ ಕಡೆಯಿಂದ ಹರಿದುಬಂದು ವೇದಾವತಿ ನದಿಗೆ ಸೇರುವ ಹಳ್ಳದ ದಂಡೆಯ ನಾಗಪ್ಪನಹಳ್ಳಿ ಗ್ರಾಮದ ನೆಲೆಯಲ್ಲಿ ವಿಶೇಷವಾದ ಅವಶೇಷಗಳು[೭೨] ದೊರಕಿವೆ.

ಹಾಗೆಯೇ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಕುಂತಿಬೆಟ್ಟ[೭೩, ೭೪]ದ ಮೇಲೆ, ಕೆಳಗೆ ಹಾಗೂ ಕುಂತಿಬೆಟ್ಟಕ್ಕೆ ಹತ್ತಿ ಹೋಗುವ ಮಧ್ಯೆ ಅನ್ನಪೂರ್ಣೇಶ್ವರಿ ದೇವಾಲಯದ ಹತ್ತಿರ, ಹಿರೇಮರಿ ನೆಲೆಯಲ್ಲಿ, ನಾಗಮಂಗಲ ತಾಲ್ಲೂಕಿನ ಅಣಿಚನ್ನಾಪುರ, ನಾಗಮಂಗಲದ ಪಟ್ಟಣ ಸಮೀಪದ ನೆಲೆಯಲ್ಲಿ ಹಾಗೂ ಮೈಸೂರು ಜಿಲ್ಲೆಯ ಮೈಸೂರು ತಾಲ್ಲೂಕಿನ ಬೋಗಾದಿ ನೆಲೆಯಲ್ಲಿ, ಹೆಚ್.ಡಿ. ಕೋಟೆ ತಾಲ್ಲೂಕಿನ ಕೊತ್ತೇಗಾಲ ನೆಲೆಯಲ್ಲಿ ಈ ಸಂಸ್ಕೃತಿಯ ಅವಶೇಷಗಳು ದೊರಕಿವೆ.

ಜೊತೆಗೆ ವಿವಿಧ ವಿದ್ವಾಂಸರು ಬೆಂಗಳೂರು, ತುಮಕೂರು, ಚಿತ್ರದುರ್ಗ, ಮಂಡ್ಯ, ಮೈಸೂರು, ಬಳ್ಳಾರಿ, ಧಾರವಾಡ, ಗುಲ್ಬರ್ಗ, ಬೆಳಗಾಂ, ರಾಯಚೂರು, ಚಿಕ್ಕಮಗಳೂರು, ಶಿವಮೊಗ್ಗ, ಚಾಮರಾಜನಗರ, ಕೋಲಾರ, ಬಾಗಲಕೋಟೆ, ಹಾವೇರಿ, ಉತ್ತರ ಕನ್ನಡ ಜಿಲ್ಲೆಗಳ ವಿವಿಧ ನೆಲೆಗಳಲ್ಲಿ ವಿವಿಧ ನಮೂನೆಯ ಅವಶೇಷಗಳನ್ನು ಹಾಗೂ ರಸ್ಸೆಟ್ ಕೋಟೇಡ್ ಕ್ಯಾವಲೀನ್ ಮಡಿಕೆ ಚೂರುಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ.

ಒಟ್ಟಾರೆ ಈ ಎಲ್ಲ ಅಂಶಗಳನ್ನು ನೋಡಿದಾಗ ಕರ್ನಾಟಕದ ಉತ್ತರಭಾಗ ಮತ್ತು ದಕ್ಷಿಣ ಭಾಗದಲ್ಲಿ ಶಾತವಾಹನರ ಆಳ್ವಿಕೆಯಿತ್ತೆಂದು ಸಿಕ್ಕಿರುವ ಮಾಹಿತಿಗಳ ಆಧಾರದಿಂದ ಸ್ಪಷ್ಟವಾಗಿ ಹೇಳಬಹುದು.

ನಾಗಪ್ಪನಹಳ್ಳಿ ನೆಲೆಯಲ್ಲಿ ಸಿಕ್ಕಿರುವ ಅವಶೇಷಗಳು ಬ್ರಹ್ಮಗಿರಿ, ಚಂದ್ರವಳ್ಳಿ, ಬನವಾಸಿ, ಸನ್ನತಿ, ತಲಕಾಡು, ಪ್ರಮುಖ ನೆಲೆಗಳ ಹಾಗೆ ಹೋಲಿಕೆಯಾಗುತ್ತಿದ್ದು ಹೇರಳವಾಗಿ ಈ ನೆಲೆಯಲ್ಲಿ ಸಿಕ್ಕಿರುವ ಅವಶೇಷಗಳು ಇದು ಒಂದು ಪ್ರಮುಖ ನೆಲೆಯಾಗಿತ್ತೆಂದು ದೃಢೀಕರಿಸುತ್ತವೆ. ಹಾಗೆಯೇ ಮೇಲ್ಕಾಣಿಸುವ ಉತ್ಖನನಗೊಂಡ ನೆಲೆಗಳ ಹಾಗೆ ಈ ನೆಲೆಯು ಮಹತ್ವಪೂರ್ಣ ನೆಲೆಯೆಂದು ಹೇಳಬಹುದು. ಇಂದು ನೆಲೆ ಸುಸ್ಥಿತಿಯಲ್ಲಿದ್ದು ಹಾಳಾಗುವ ಮೊದಲು ನೆಲೆಯನ್ನು ಸಂರಕ್ಷಿಸಿ, ಉತ್ಖನನ ಮಾಡಿ ಸ್ಪಷ್ಟ ಮಾಹಿತಿಯನ್ನು ತಿಳಿಯಬೇಕಿದೆ.

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. ರಾಮಿರೆಡ್ಡಿ ವಿ., ಎ ಸ್ಟಡಿ ಆಫ್ ದಿ ನಿಯೋಲಿಥಿಕ್ ಕಲ್ಚರ್ ಆಫ್ ಸೌತ್ ವೆಸ್ಟರ್ನ್ ಆಂಧ್ರ ಪ್ರದೇಶ, ೧೯೭೫, ಪುಟ ೧.
೨. ರಾಮಚಂದ್ರರೆಡ್ಡಿ ಎಸ್. ಜಿ., ವೇದಾವತಿ ನದಿಯ ತೀರದ ಒಂದು ಸಾಂಸ್ಕೃತಿಕ ಅಧ್ಯಯನ, ೨೦೦೬ (ಅಪ್ರಕಟಿತ ಪ್ರೌಢ ಪ್ರಬಂಧ) ಪುಟ ೧೭೯.
೩. ಶೇಷಾದ್ರಿ ಎಂ., ರಿಪೋರ್ಟ್ ಆನ್ ದಿ ಎಕ್ಸ್‌ಕವೇಶನ್ ಅಟ್ ಟಿ. ನರಸೀಪುರ, ೧೯೭೧.
೪. ಕೃಷ್ಣ ಎಂ. ಹೆಚ್., ಎಕ್ಸ್‌ಕವೇಶನ್ ಅಟ್ ಚಂದ್ರವಳ್ಳಿ, ಬೆಂಗಳೂರು, ೧೯೩೧.
೫. ವೀಲರ್ ಆರ್.ಇ.ಎಂ. ಏನ್ಷಿಯಂಟ್ ಇಂಡಿಯಾ, ನಂ. ೪, ೧೯೪೭–೪೮.
೬. ಅದೇ., ಪುಟ ೨೬೦–೨೬೨.
೭. ದೇವರಾಜ್ ಡಿ.ವಿ. ಮತ್ತು ಇತರರು., ಎಕ್ಸ್‌ಕವೇಶನ್ಸ್ ಅಟ್ ತಲಕಾಡು, ೧೯೯೬, ಗ್ರಾಫಿಟಿ ೧೦೩.
೮. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಗ್ರಾಫಿಟಿ, ಪುಟ ೨೪೬.
೯. ಶೇಷಾದ್ರಿ ಎಂ., ಪೂರ್ವೋಕ್ತ, ೧೯೭೧, ಪುಟ ೧೬೬–೬೮, ನಂ. ೬೮, ೧೩೨,
೧೦. ವೀಲರ್ ಆರ್.ಇ.ಎಂ., ಪೂರ್ವೋಕ್ತ, ೧೯೪೭–೪೮.
೧೧. ಗುರುರಾಜರಾವ್ ಬಿ.ಕೆ., ದಿ ಮೆಗಲಿಥಿಕ್ ಕಲ್ಚರ್ ಇನ್ ಸೌತ್ ಇಂಡಿಯ, ಪುಟ ೨೪೨, ೧೯೭೨.
೧೨. ಇಂ.ಆ.ರಿ. ೧೯೬೮–೬೯, ಪುಟ ೨೩.
೧೩. ದೇವರಾಜ್ ಡಿ.ವಿ. ಮತ್ತು ಇತರರು., ಇನ್‌ಟ್ರೀಮ್ ರಿಪೋರ್ಟ್ ಆನ್ ದಿ ಎಕ್ಸವೇಶನ್ಸ್ ಅಟ್ ಸನ್ನತ್ತಿ, ೧೯೯೩–೯೫, ೧೯೯೬, ಪುಟ ೧೨.
೧೪. ದೇವರಾಜ್ ಡಿ.ವಿ. ಮತ್ತು ಇತರರು., ಪೂರ್ವೋಕ್ತ, ತಲಕಾಡು, ೧೯೯೬.
೧೫. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಚಂದ್ರವಳ್ಳಿ, ೧೯೪೭–೪೮.
೧೬. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಬ್ರಹ್ಮಗಿರಿ, ೧೯೪೭–೪೮.
೧೭. ನರಸಿಂಹಮೂರ್ತಿ ಎ.ವಿ. ಮತ್ತು ಇತರರು, ಎಕ್ಸ್‌ಕವೇಶನ್ ಅಟ್ ಬನವಾಸಿ, ೧೯೯೭.
೧೮. ವೀಲರ್ ಆರ್.ಇ.ಎಂ., ಪೂರ್ವೋಕ್ತ, CXXV, ನಂ. ೧೯.
೧೯. ದೇವರಾಜ್, ಗೋಪಾಲ್, ಶೇಷಚಂದ್ರಿಕ, ೧೯೯೫, ಚಿತ್ರ ೫ ಮಾಸ್ತಿ, ಇಟಗಿ, ನಂ. ೫.
೨೦. ಹನುಮಂತರಾವ್ ಎಂ. ನಾಗರಾಜು, ಎಸ್. ೧೯೭೪, ಎಕ್ಸ್‌ಕನವೇಶನ್ಸ್ ಅಟ್ ಹೆಮ್ಮಿಗೆ, ಮೈಸೂರು, ಪುಟ ೩೫, ಚಿತ್ರ ೯, ನಂ. ೪೫.
೨೧. ದೇವರಾಜ್, ಗೋಪಾಲ್, ಶೇಷಚಂದ್ರಿಕ, ೧೯೯೫, ಮಾನ್ವಿ, ಇಟಲಿ, ಚಿತ್ರ ೫, ನಂ. ೬.
೨೨. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಚಂದ್ರವಳ್ಳಿ, CXXV.
೨೩. ದೇವರಾಜ್ ಡಿ.ವಿ. ಇತರರು, ಎಕ್ಸ್‌ಕವೇಶನ್ ಅಟ್ ತಲಕಾಡು, ೧೯೯೬, ಪ್ಲೇಟು XLVI, ಪುಟ ೫೭.
೨೪. ನರಸಿಂಹಮೂರ್ತಿ ಎ.ವಿ., ಇತರರು, ಪೂರ್ವೋಕ್ತ, ೧೯೯೭, ಪುಟ ೧೨೦, ಪ್ಲೇಟು ೫೬–೫೭.
೨೫. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಪುಟ ೨೪೯, ಪ್ಲೇಟು CXII, ನಂ. ೩.
೨೩. ದೇವರಾಜ್ ಡಿ.ವಿ. ಇತರರು, ಎಕ್ಸ್‌ಕವೇಶನ್ ಅಟ್ ತಲಕಾಡು, ೧೯೯೬, ಪ್ಲೇಟು XLVI, ಪುಟ ೫೭.
೨೪. ನರಸಿಂಹಮೂರ್ತಿ ಎ.ವಿ., ಇತರರು, ಪೂರ್ವೋಕ್ತ, ೧೯೯೭, ಪುಟ ೧೨೦, ಪ್ಲೇಟು ೫೬–೫೭.
೨೫. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಪುಟ ೨೪೯, ಪ್ಲೇಟು CXII, ನಂ. ೩.
೨೬. ಹನುಮಂತರಾವ್ ಎಂ., ನಾಗರಾಜು ಎಸ್., ೧೯೭೪, ಪೂರ್ವೋಕ್ತ, ಪುಟ ೩೩–೩೪, ನಂ. ೨.
೨೭. ಹನುಮಂತರಾವ್ ಎಂ., ಅದೇ., ಪುಟ ೩೩–೩೪, ಚಿತ್ರ ೮, ನಂ. ೧.
೨೮. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಪುಟ ೨೭೮–೭೯, ಪ್ಲೇಟು CXXIV, ನಂ.೪, ಚಿತ್ರ ೪೫ ಎ.ಬಿ.
೨೯. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಪುಟ ೨೭೯, ಪ್ಲೇಟು CXXIV, ನಂ. ೭.
೩೦. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಪುಟ ೨೭೯, ಪ್ಲೇಟು CXXIV, ನಂ. ೬
೩೧. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಪುಟ ೨೪೯, ಪ್ಲೇಟು CXII, ನಂ. ೨, ೮.
೩೨. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಪುಟ ೨೪೯, ಪ್ಲೇಟು CXXIV, ನಂ. ೭.
೩೩. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಪುಟ ೨೩೮, ಪ್ಲೇಟು CXII, ಟಿ. ೧೪೦, ಚಿತ್ರ ೨೭.
೩೪. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಪುಟ ೨೭೯, ಪ್ಲೇಟು CXXIV, ನಂ. ೪.
೩೫. ಹನುಮಂತರಾವ್ ಎಂ. ನಾಗರಾಜು ಎಸ್., ಪೂರ್ವೋಕ್ತ, ಪುಟ ೩೩–೩೪, ನಂ. ೧–೨.
೩೬. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಪುಟ ೨೩೮, ಚಿತ್ರ ೨೭, ನಂ. ಟಿ. ೧೩೬.
೩೭. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಪುಟ ೨೩೮, ಚಿತ್ರ ೨೭, ನಂ. ಟಿ. ೧೪೦.
೩೮. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಪುಟ ೨೭೯, ೨೩೮, ಚಿತ್ರ ೪೫, ೨೭.

೩೯. ನರಸಿಂಹಮೂರ್ತಿ ಎ.ವಿ. ಮತ್ತು ಇತರರು, ಪೂರ್ವೋಕ್ತ, ೧೯೯೭, ಪ್ಲೇಟು ೫೭, ಪುಟ ೧೯೭.
೪೦. ದೇವರಾಜ್ ಡಿ.ವಿ. ಮತ್ತು ಇತರರು, ಪೂರ್ವೋಕ್ತ, ೧೯೯೬, ಪುಟ ೧೦, ಪ್ಲೇಟು ೬೮, ಚಿತ್ರ ೧೩.
೪೧. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಪ್ಲೇಟು CXII, ನಂ. ೪, ಚಿತ್ರ ೨೭, ಪುಟ ೨೩೮, ಟಿ. ೧೩೫.
೪೨. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಪುಟ ೨೩೮, ಚಿತ್ರ ೨೭, ಟಿ. ೧೪೦.
೪೩. ದೇವರಾಜ್, ಗೋಪಾಲ್, **ಶೇಷಚಂದ್ರಿಕ,** ೧೯೯೫, ಪುಟ ೨೨೯, ಪ್ಲೇಟು ೫, ತರಬಾನಹಳ್ಳಿ (ಬೆಂಗಳೂರು)
೪೪. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಪುಟ ೨೩೭-೩೮, ಚಿತ್ರ ೨೭, ಟಿ. ೧೩೫, ಪ್ಲೇಟು CXII.
೪೫. ಹನುಮಂತರಾವ್ ಎಂ., ನಾಗರಾಜು ಎಸ್., ಪೂರ್ವೋಕ್ತ, ೧೯೭೪, ಪುಟ ೩೪, ಚಿತ್ರ ೮, ನಂ. ೯-೧೦.
೪೬. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಚಂದ್ರವಳ್ಳಿ, ಪ್ಲೇಟು CXXIV. ನಂ. ೬.
೪೭. ದೇವರಾಜ್ ಡಿ.ವಿ. ಇತರರು, ಪೂರ್ವೋಕ್ತ, ತಲಕಾಡು, ೧೯೯೬, ಪುಟ ೧೨೯-೩೦, ಪ್ಲೇಟು XLVI.
೪೮. ಹನುಮಂತರಾವ್ ಎಂ. ನಾಗರಾಜು ಎಸ್., ಪೂರ್ವೋಕ್ತ, ೧೯೭೪, ಪುಟ ೩೬, ಚಿತ್ರ ೯, ನಂ. ೩೭.
೪೯. ನರಸಿಂಹಮೂರ್ತಿ ಎ.ವಿ. ಮತ್ತು ಇತರರು, ಪೂರ್ವೋಕ್ತ, ೧೯೯೭, ಪುಟ ೧೯೭, ಪ್ಲೇಟು ೫೭.
೫೦. ದೇವರಾಜ್, ಗೋಪಾಲ್, ಶೇಷಚಂದಿಕ, ೧೯೯೫, ಪುಟ ೨೨೮-೨೯, ಪ್ಲೇಟು VI, ನಂ. ೨, ಆನೇಕಲ್, ಬೆಂಗಳೂರು.
೫೧. ದೇವರಾಜ್, ಗೋಪಾಲ್, ಶೇಷಚಂದ್ರಿಕ, ೧೯೯೫, ಪುಟ ೨೨೮-೨೯, ಚಿತ್ರ ೭, ನಂ. ೧.
೫೨. ದೇವರಾಜ್, ಗೋಪಾಲ್, ಶೇಷಚಂದ್ರಿಕ, ೧೯೯೫, ಪುಟ ೨೨೮-೨೯, ಬೂದಿತಿಟ್ಟು (ಚಾಮರಾಜನಗರ), ಚಿತ್ರ ೩, ನಂ. ೧, ಪುಟ ೨೨೮-೨೨೯.
೫೩. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಚಂದ್ರವಳ್ಳಿ, ಪುಟ ೨೮೦, ಪ್ಲೇಟು CXXV, ನಂ. ೨೩.
೫೪. ದೇವರಾಜ್, ಗೋಪಾಲ್, **ಶೇಷಚಂದ್ರಿಕ,** ಇಟ್ಟಗಿ, ಪುಟ ೨೨೮-೨೯, ಚಿತ್ರ ೫, ನಂ. ೫.
೫೫. ದೇವರಾಜ್, ಗೋಪಾಲ್, **ಶೇಷಚಂದ್ರಿಕ,** ತರಬಾನಹಳ್ಳಿ, ಪ್ಲೇಟು V, ಪುಟ ೨೨೯.
೫೬. ದೇವರಾಜ್, ಗೋಪಾಲ್, **ಶೇಷಚಂದ್ರಿಕ,** ತರಬಾನಹಳ್ಳಿ, ಪುಟ ೨೨೯, ಚಿತ್ರ ೮.
೫೭. ಹನುಮಂತರಾವ್ ಎಂ. ನಾಗರಾಜು ಎಸ್. ಪೂರ್ವೋಕ್ತ, ಪುಟ ೩೫, ಚಿತ್ರ ೮, ನಂ. ೧೬.
೫೮. ದೇವರಾಜ್, ಗೋಪಾಲ್, **ಶೇಷಚಂದ್ರಿಕ,** ಇಟ್ಟಗಿ, ಪುಟ ೨೨೮-೨೯, ಚಿತ್ರ ೫. ನಂ. ೭.
೫೯. ದೇವರಾಜ್, ಗೋಪಾಲ್, **ಶೇಷಚಂದ್ರಿಕ,** ಬೂದಿತಿಟ್ಟು, ಪುಟ ೨೨೯, ಚಿತ್ರ ೩, ನಂ. ೧.
೬೦. ದೇವರಾಜ್, ಗೋಪಾಲ್, **ಶೇಷಚಂದ್ರಿಕ,** ಮಾನ್ವಿ, ಪುಟ ೨೨೮-೨೨೯, ಚಿತ್ರ ೫, ನಂ. ೧.
೬೧. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಚಂದ್ರವಳ್ಳಿ, ಪ್ಲೇಟು CXXIV, ನಂ. ೪, ಪುಟ ೨೭೯.
೬೨. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಚಂದ್ರವಳ್ಳಿ, ಪುಟ ೨೭೯, ಚಿತ್ರ ೪೫, ನಂ. ೯.
೬೩. ಹನುಮಂತರಾವ್, ನಾಗರಾಜು, ಪೂರ್ವೋಕ್ತ, ಪುಟ ೩೪, ಚಿತ್ರ ೮, ನಂ. ೭.
೬೪. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಚಂದ್ರವಳ್ಳಿ ಪ್ಲೇಟು CXXIV, ನಂ. ೧, ಪುಟ ೨೭೮.
೬೫. ದೇವರಾಜ್, ಗೋಪಾಲ್, **ಶೇಷಚಂದ್ರಿಕ,** ೧೯೯೫, ಚಿತ್ರ ೭, ನಂ. ೨೮೮೬-೬, ರಾಬರ್ಟ್, ಬ್ರೂಸಿಫೂಟ್ ಅವರು ತುಂಗಭದ್ರ ಎಡ ದಡದಲ್ಲಿ, ಹಂಪಾ ಸಾಗರದ ಎದುರುಗಡೆ ರಸ್ಸೇಟ್ ಕೊಟೇಂಡ್‌ನ ಕೆಂಪು ಬೌಲ್‌ಅನ್ನು ಪತ್ತೆ ಹಚ್ಚಿದ್ದಾರೆ.
೬೬. ವೀಲರ್ ಆರ್.ಇ.ಎಂ., ಪೂರ್ವೋಕ್ತ, ಬ್ರಹ್ಮಗಿರಿ, ಪುಟ ೨೩೮-೩೯, ಚಿತ್ರ ೨೭, ಪ್ಲೇಟು CXII, ನಂ. ೪.
೬೭. ದೇವರಾಜ್, ಗೋಪಾಲ್, **ಶೇಷಚಂದ್ರಿಕ,** ೧೯೯೫, ಚಿತ್ರ ೫, ನಂ. ೪, ಮಾಸ್ಕಿ ಮತ್ತು ಇಟಗಿ, ಪುಟ ೨೨೪-೨೨೯.
೬೮. ದೇವರಾಜ್, ಗೋಪಾಲ್, **ಶೇಷಚಂದ್ರಿಕ,** ೧೯೯೫, ಚಿತ್ರ ೪, ನಂ. ೪, ಪುಟ ೨೨೯, ತರಬಾನಹಳ್ಳಿ (ಬೆಂಗಳೂರು ಜಿಲ್ಲೆ)
೬೯. ಹನುಮಂತರಾವ್, ನಾಗರಾಜು ಎಸ್., ಪೂರ್ವೋಕ್ತ, ಪುಟ ೩೫, ಚಿತ್ರ ೮, ನಂ. ೧೦.
೭೦. ಹನುಮಂತರಾವ್, ನಾಗರಾಜು ಎಸ್., ಪೂರ್ವೋಕ್ತ, ಪುಟ ೩೬-೩೮, ಚಿತ್ರ ೮, ನಂ. ೪೨.
೭೧. ನಾಗರಾಜರಾವ್ ಎಂ.ಎಸ್., ಪ್ರಿಹಿಸ್ಟಾರಿಕ್ ಅಂಡ್ ಪ್ರೋಟೋ ಹಿಸ್ಟಾರಿಕ್ ಕಲ್ಚರ್ ಆಫ್ ದಿ ತುಂಗಭದ್ರಾ ವ್ಯಾಲಿ, ೧೯೮೪, ಪುಟ ೬೬-೬೭, ಚಿತ್ರ ೨೦-೯.
೭೨. ದೇವರಾಜ್, ಗೋಪಾಲ್., **ಶೇಷಚಂದ್ರಿಕ** ೧೯೯೫, ತರಬಾನಹಳ್ಳಿ, ಪ್ಲೇಟು ೫, (ಬೆಂಗಳೂರು).
೭೩. ಎಸ್.ಜಿ. ರಾಮದಾಸರೆಡ್ಡಿ., **ವೇದಾವತಿ ನದಿಯ ತೀರದ ಸಾಂಸ್ಕೃತಿಕ ಒಂದು ಅಧ್ಯಯನ.** (ಅಪ್ರಕಟಿತ ಪ್ರೌಢ ಪ್ರಬಂಧ), ಮೈ.ವಿ.ವಿ. ಮೈಸೂರು, ೨೦೦೬.
೭೪. ಡಾ. ಎಸ್.ಜಿ. ರಾಮದಾಸರೆಡ್ಡಿ., ‘ಲೋಕಪಾವನಿ ನದೀ ತೀರದಲ್ಲಿ ಪ್ರಾಗೈತಿಹಾಸಿಕ ಅವಶೇಷಗಳು’, **ಇತಿಹಾಸ ದರ್ಶನ,** ಸಂ. ೨೪, ೨೦೦೯, ಪುಟ ೧-೬.
೭೫. ಡಾ. ಎಸ್.ಜಿ. ರಾಮದಾಸರೆಡ್ಡಿ., ‘ಲೋಕಪಾವನಿ ನದೀ ತೀರದ ಪ್ರಾಕ್ತನಾವಶೇಷಗಳು ಒಂದು ಅಧ್ಯಯನ’ **ಅಭಿವ್ಯಕ್ತಿ,** ಸಂ. ೪, ಸ. ೨, ಏಪ್ರಿಲ್ ೨೦೦೯, ಪುಟ ೪೩-೫೫.

ಡಿ. ಸ್ಮಿತಾರೆಡ್ಡಿ*

ದೇವರಬೆಟ್ಟ ಗ್ರಾಮ ಪರಿಸರದ ಪ್ರಾಗೈತಿಹಾಸಿಕ ನೆಲೆಗಳು

ದೇವರಬೆಟ್ಟ ಗ್ರಾಮವು ಬೆಂಗಳೂರು ನಗರದಿಂದ ಸುಮಾರು ೫೫ ಕಿ.ಮೀ.ಗಳ ದೂರದಲ್ಲಿರುವ ಒಂದು ಕುಗ್ರಾಮ. ೧೯೫೬ರಲ್ಲಿ ರಾಜ್ಯಗಳ ಪುನಾರಚನೆಯ ತರುವಾಯ ಈ ಗ್ರಾಮವು ಇಂದು ಭೌಗೋಳಿಕವಾಗಿ ತಮಿಳುನಾಡಿಗೆ ಸೇರಿದ್ದರೂ, ಭಾವನಾತ್ಮಕವಾಗಿ, ಶೈಕ್ಷಣಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಕರ್ನಾಟಕದೊಂದಿಗೆ ಬೆಸೆದುಕೊಂಡಿರುವ ಅಚ್ಚಗನ್ನಡದ ನೆಲೆಯಾಗಿದೆ. ಕ್ರಿ.ಶ. ೧೫–೧೬ನೇ ಶತಮಾನದವರೆಗೆ ಪ್ರಸಿದ್ಧ ವೀರಶೈವ ಕೇಂದ್ರವಾಗಿದ್ದ ಗುಮ್ಮಳಾಪುರ ಗ್ರಾಮದಿಂದ ಸುಮಾರು ೩ ಕಿ.ಮೀ.ಗಳ ಅಂತರದಲ್ಲಿದ್ದು ಸನತ್ಕುಮಾರಾದ್ರಿ ಶ್ರೇಣಿಯ ಪಾದದಲ್ಲಿರುವ ಅರಣ್ಯದ ಅಂಚಿನಲ್ಲಿದೆ. ಈ ಗ್ರಾಮ ಮತ್ತು ಇದರ ಸುತ್ತಮುತ್ತಲಿನ ಅರಣ್ಯ ಪ್ರದೇಶ ಹಿಂದೊಮ್ಮೆ ಪ್ರಾಗೈತಿಹಾಸಿಕ ಕಾಲದ ಮಾನವನ ನೆಲೆಯಾಗಿತ್ತೆಂಬುದಕ್ಕೆ ಸಾಕ್ಷಿಯಾಗಿ ಇಲ್ಲಿ ಅಸಂಖ್ಯೆ ಕಲ್ಗೋರಿಗಳು ಕಂಡುಬರುತ್ತವೆ.

ಈ ಗ್ರಾಮದ ಪ್ರಧಾನ ದೇವರು ರುದ್ರಮುನೇಶ್ವರ ಅಥವಾ ಸನತ್ಕುಮಾರ. ಸನತ್ಕುಮಾರ ಮಹರ್ಷಿ ಇಲ್ಲಿ ತಪಸ್ಸು ಮಾಡಿದ್ದನೆಂಬ ಐತಿಹ್ಯವಿದೆ. ಈ ದೇವಾಲಯ ಗುಹಾಲಯದ ಮಾದರಿಯಲ್ಲಿದೆ. ಎರಡು ದೊಡ್ಡ ಕಲ್ಲು – ಬಂಡೆಗಳು ಪರಸ್ಪರ ತದ್ವಿರುದ್ಧವಾಗಿ ೪೫° ಕೋನದಲ್ಲಿ ತಾಗಿಕೊಂಡು ಬಾಗಿದಂತಿದೆ. ಅವುಗಳ ಕೆಳಗೆ ಎರಡು ಲಿಂಗಾಕೃತಿಯ ಕಲ್ಲುಗಳನ್ನಿಟ್ಟು ಪೂಜಿಸಲಾಗುತ್ತದೆ. ಈ ಕಲ್ಲುಗಳು ಶಿವಲಿಂಗಗಳಾಗಿರದೆ ಅಲ್ಲಿನ ಪರಿಸರದಲ್ಲಿ ದೊರೆತಿರುವಂತಹ ಕಲ್ಲುಗಂಡುಗಳಾಗಿವೆ. ಅಲ್ಲದೆ ಈ ಲಿಂಗಾಕೃತಿಯ ಕಲ್ಲುಗುಂಡುಗಳು ಈ ದೇವಾಲಯ ಜೀರ್ಣೋದ್ಧಾರವಾಗುವುದಕ್ಕೆ ಮೊದಲು ನೆಲಮಟ್ಟದಿಂದ ಸುಮಾರು ೫ ಅಡಿಗಳ ಕೆಳಭಾಗದಲ್ಲಿದ್ದವು. ಒಟ್ಟಾರೆಯಾಗಿ ಈ ದೇವಾಲಯದ ಆಂತರಿಕ ರಚನೆಯನ್ನು ಗಮನಿಸಿದಾಗ ಬಹುಶಃ ಈ ದೇವಾಲಯ ಹಿಂದೊಮ್ಮೆ ಆದಿ ಮಾನವನ ನೆಲೆಯಾಗಿದ್ದಿರಬಹುದೆಂಬ ಅನುಮಾನ ಮೂಡುತ್ತದೆ. ಸಾಮಾನ್ಯವಾಗಿ ಮುನೇಶ್ವರ ದೇವಾಲಯಗಳು ಎಲ್ಲಿ ಇರುತ್ತವೆಯೋ ಅವುಗಳ ಆಸುಪಾಸಿನಲ್ಲಿ ಎಲ್ಲಾದರೂ ಪ್ರಾಗೈತಿಹಾಸಿಕ ನೆಲೆ ಇರಬಹುದಾದ ಸಾಧ್ಯತೆ ಇರುವುದ ರಿಂದ, ರುದ್ರಮುನೇಶ್ವರ ಎಂಬ ಹೆಸರೂ ಸಹ ಬೃಹತ್ ಶಿಲಾಯುಗದ ಕಲ್ಗುಂಡುಗಳು ಅಥವಾ ಆಯುಧಗಳನ್ನಿಟ್ಟು ಪೂಜಿಸುವ ನೆಲೆಯನ್ನು ಸಂಕೇತಿಸುತ್ತದೆ.

ಮುನೇಶ್ವರ ದೇವಾಲಯಕ್ಕೆ ಹೊಂದಿಕೊಂಡಿರುವ ದೇವರಬೆಟ್ಟದ ಮೇಲೆಯೂ ಸಹ ಅಸಂಖ್ಯ ಕಲ್ಗೋರಿಗಳು ಕಂಡುಬರುತ್ತವೆ. ಅವು ಗಾತ್ರದಲ್ಲಿ ಮೂರು ಅಡಿಗಳ ಸಣ್ಣ ಕಲ್ಗೋರಿಗಳಿಂದ ಸುಮಾರು ಹನ್ನೆರಡು ಅಡಿಗಳವರೆಗೆ ಕ್ಯಾಪ್‌ಸ್ಟೋನ್ ಅಥವಾ ಟೋಪಿಕಲ್ಲು ಹೊಂದಿರುವ ಕಲ್ಗೋರಿಗಳು ಈ ಬೆಟ್ಟದ ಮೇಲೆ ಕಂಡುಬರುತ್ತವೆ. ಅಲ್ಲದೆ ಅವು ತುಂಬಾ ವೈವಿಧ್ಯಮಯವಾಗಿವೆ ಮತ್ತು ಬಹುತೇಕ ಶಿಲಾಗೋರಿಗಳು ಭಗ್ನಾವಸ್ಥೆಯಲ್ಲಿವೆ.

ಗ್ರಾಮದಿಂದ ದಕ್ಷಿಣಕ್ಕೆ ಸುಮಾರು ೪ ಕಿ.ಮೀ.ಗಳಷ್ಟು ಹಿಂದೆ ಕಾಡಿನ ದಾರಿಯಲ್ಲಿ ಸಾಗಿದರೆ ಒಂದೇ ಸಂಕೀರ್ಣದಲ್ಲಿ ೧೭ ಕಲ್ಗೋರಿಗಳಿವೆ. ಇವುಗಳಲ್ಲಿ ಅತಿ ಚಿಕ್ಕ ಕಲ್ಗೋರಿಯು ನಾಲ್ಕೂವರೆ ಅಡಿ ಅಗಲ ಮತ್ತು ನಾಲ್ಕೂವರೆ ಅಡಿ ಉದ್ದವಿದ್ದರೆ, ಅತಿ ದೊಡ್ಡ ಕಲ್ಗೋರಿಯ ಗಾತ್ರ ಹದಿಮೂರು ಅಡಿಗಳಾಗಿದ್ದು ವೈವಿಧ್ಯಮಯ ಅಳತೆ–ಆಕೃತಿಗಳಲ್ಲಿವೆ. ಮೇಲ್ಭಾಗದ ಕ್ಯಾಪ್‌ಸ್ಟೋನ್ ಆಯುತಾಕಾರ, ಚತುಷ್ಕೋನ, ತ್ರಿಭುಜಾಕಾರದಲ್ಲಿದೆ. ಕ್ಯಾಪ್‌ಸ್ಟೋನ್ ಒಂದು ಅಡಿಯಿಂದ ಎರಡು ಅಡಿಗಳಷ್ಟು ದಪ್ಪವಾಗಿದೆ. ಇವುಗಳ ಆಂತರಿಕ ವಿನ್ಯಾಸ ಚತುಷ್ಕೋನ ಅಥವಾ ಆಯತಾಕಾರದಲ್ಲಿದೆ. ಸಾಮಾನ್ಯವಾಗಿ ದಕ್ಷಿಣ ಭಾರತದಲ್ಲಿ ಕಂಡುಬರುವ ಕಲ್ಗೋರಿಗಳು ಮೂರು ಕಡೆ ದಪ್ಪವಾದ ಕಲ್ಲುಗಳನ್ನಿಟ್ಟು ಮೇಲ್ಭಾಗದಲ್ಲಿ ಕ್ಯಾಪ್‌ಸ್ಟೋನ್ ಹಾಕಿರುತ್ತಾರೆ. ಆದರೆ ಇಲ್ಲಿ ಚಕ್ಕಡಿ ಎದ್ದಂತಿರುವ ಸಣ್ಣ ಸಣ್ಣ ಕಲ್ಲುಗಳನ್ನು ಒಂದರ ಮೇಲೆ ಒಂದನ್ನು ಪೇರಿಸಿದ್ದು ಅದರ ಮೇಲೆ ಕ್ಯಾಪ್‌ಸ್ಟೋನನ್ನು ಇಡಲಾಗಿದೆ. ಹಾಗಾಗಿ ದಕ್ಷಿಣ ಭಾರತದ ಉಳಿದ ನೆಲೆಗಳಿಗಿಂತ ಇಲ್ಲಿನ ಬೃಹತ್ ಶಿಲಾಯುಗದ ಕಲ್ಗೋರಿಗಳು ಭಿನ್ನವಾಗಿವೆ. ಹಾಗೆಯೇ ಕೆಲವು ಗೋರಿಗಳ ಒಳಭಾಗದಲ್ಲಿ ಅಗಲವಾದ ದುಂಡಾದ ಬಂಡೆಯನ್ನು ಹಾಕಿದ್ದರೆ, ಇನ್ನು ಕೆಲವು ನೆಲೆಗಳಲ್ಲಿ ಸಣ್ಣ

* ಭಾಷಾಂತರಕಾರರು, ಭಾಷಾಂತರ ಶಾಖೆ, ೨೧೬–ಬಿ, ಕರ್ನಾಟಕ ವಿಧಾನ ಪರಿಷತ್ತು, ವಿಧಾನಸೌಧ, ಬೆಂಗಳೂರು.

ಸಣ್ಣ ಕಲ್ಲುಗಳನ್ನು ಒಂದರ ಪಕ್ಕದಲ್ಲೊಂದು ಹಾಸಲಾಗಿದೆ. ಬೆಟ್ಟದಲ್ಲಿ ನೈಸರ್ಗಿಕವಾಗಿ ಚಕ್ಕೆಗಳನ್ನೆಬ್ಬಿಸಿ ತೆಗೆಯಲಾದ ಕಲ್ಲುಗಳನ್ನು ಈ ಶಿಲಾಗೋರಿಗಳ ನಿರ್ಮಾಣಕ್ಕೆ ಬಳಸಲಾಗಿದೆ. ಒಟ್ಟಾರೆಯಾಗಿ ಹೇಳಬಹುದಾದರೆ, ಇಲ್ಲಿನ ಶವಕುಣಿ ಅಥವಾ ಕಲ್ಗೋರಿಗಳನ್ನು ಒರಟಾದ ಗ್ರಾನೈಟ್ ಚಪ್ಪಡಿಗಳಿಂದ ಕಟ್ಟಲಾಗಿದ್ದು ಇವುಗಳಲ್ಲಿ ಕೆಲವು ಉತ್ತರಾಭಿಮುಖವಾಗಿದ್ದರೆ, ಮತ್ತೆ ಕೆಲವು ದಕ್ಷಿಣಾಭಿಮುಖವಾಗಿವೆ.

ದೇವರಬೆಟ್ಟ ಗ್ರಾಮದಿಂದ ಅನತಿ ದೂರದಲ್ಲಿ ಎಡಕ್ಕೆ ಅರಣ್ಯದಲ್ಲಿ ಶಂಕರನ ಹಳ್ಳವೆಂದು ಕರೆಯಲ್ಪಡುವ ಸ್ಥಳದ ಕಡೆಗೆ ಹೋಗುವ ದಾರಿಯಲ್ಲೂ ಅಸಂಖ್ಯ ಕಲ್ಗೋರಿಗಳಿವೆ. ಆದರೆ ದಟ್ಟವಾದ ಅರಣ್ಯದ ಕಾರಣದಿಂದಾಗಿ ಒಳಭಾಗಕ್ಕೆ ಹೋಗಿ ಕ್ಷೇತ್ರಪರಿವೀಕ್ಷಣೆ ಕೈಗೊಳ್ಳಲಾಗಲಿಲ್ಲ. ಕಾಲುದಾರಿಯಲ್ಲಿ ಸುಮಾರು ಏಳು ಡಾಲ್ಮೆನ್‌ಗಳು ಪತ್ತೆಯಾದವು. ಇವೆಲ್ಲವೂ ಭಗ್ನಗೊಂಡ ಸ್ಥಿತಿಯಲ್ಲಿವೆ. ಮೂರು ಬದಿಗಳಲ್ಲಿ ದಪ್ಪವಾದ ಕಲ್ಲುಗಳನ್ನು ಜೋಡಿಸಿದ್ದು, ಮೇಲ್ಭಾಗದಲ್ಲಿ ಒಂದು ಕ್ಯಾಪ್‌ಸ್ಟೋನನ್ನು ಇಡಲಾಗಿದೆ. ಇವು ಚಚ್ಚೌಕಾರವಾಗಿದ್ದು ಸುಮಾರು ಮೂರುವರೆ ಅಡಿ ಉದ್ದ ಮತ್ತು ಅಷ್ಟೇ ಅಗಲವಾಗಿದ್ದು ಏಳೂ ಕಲ್ಗೋರಿಗಳು ಒಂದೇ ರೀತಿಯಲ್ಲಿವೆ. ಹಾಗೂ ಇವು ದೇವರಬೆಟ್ಟದ ಮೇಲೆ ಹಾಗೂ ಗ್ರಾಮದ ದಕ್ಷಿಣ ಭಾಗದ ಅರಣ್ಯದಲ್ಲಿರುವ ಡಾಲ್ಮೆನ್‌ಗಳಿಗಿಂತ ಭಿನ್ನವಾಗಿದೆ.

ಇಲ್ಲಿ ಪ್ರಸ್ತಾಪಿಸಲಾದ ಮೂರು ಬೇರೆ ಬೇರೆ ಸ್ಥಳಗಳಲ್ಲಿನ ಪ್ರಾಗೈತಿಹಾಸಿಕ ನೆಲೆಗಳ ಹಿನ್ನೆಲೆಯಲ್ಲಿ ಇದಕ್ಕೆ ಪೂರಕವಾಗಿ ಒಂದೆರಡು ವಿಷಯಗಳನ್ನು ಇಲ್ಲಿ ಪ್ರಸ್ತುತಪಡಿಸುತ್ತೇನೆ. ಬೃಹತ್ ಶಿಲಾಯುಗ ಸಂಸ್ಕೃತಿ ಭಾರತದಾದ್ಯಂತ ವಿಸ್ತರಿಸಿದ್ದರೂ ಸಹ ದಕ್ಷಿಣ ಭಾರತದಲ್ಲಿ ವ್ಯಾಪಕವಾಗಿ ಹರಡಿದೆ ಮತ್ತು ಇಲ್ಲಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭಿನ್ನವಾಗಿದೆ.

ಕಲ್ಗೋರಿಗಳ ನಿರ್ಮಾಪಕರ ಮೂಲ ಮತ್ತು ಕಾಲವನ್ನು ನಿರ್ಧರಿಸುವುದು ಅಸಾಧ್ಯವಾದರೂ ಸಹ ದಕ್ಷಿಣ ಭಾರತದಾದ್ಯಂತ ವ್ಯಾಪಕವಾಗಿ ಚದುರಿರುವ ಈ ಶಿಲಾಗೋರಿಗಳ ವೈಲಕ್ಷಣಗಳನ್ನಾಧರಿಸಿ ಇವು ಕ್ರಿ.ಪೂ. ೫ನೇ ಶತಮಾನಕ್ಕೆ ಸೇರುತ್ತವೆಂದು ಊಹಿಸಬಹುದು. ಮೃತ ವ್ಯಕ್ತಿಗಳ ಅಸ್ಥಿಗಳನ್ನು, ಧವಸ ಧಾನ್ಯಗಳನ್ನಿಟ್ಟು ಅವುಗಳನ್ನು ಮುಚ್ಚಿ ಅವುಗಳ ಮೇಲೆ ಸುತ್ತಲೂ ಸಣ್ಣ ಗುಂಡುಕಲ್ಲುಗಳನ್ನು ಅಥವಾ ಕಲ್ಲುಚಪ್ಪಡಿಗಳನ್ನು ಇಡುತ್ತಿದ್ದರೆಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಆದರೂ ಅದಕ್ಕೆ ಅಷ್ಟು ಬೃಹತ್ ಗಾತ್ರದ ಎಂದರೆ ಸುಮಾರು ೧೨ ಅಡಿಗಳಿಗಿಂತಲೂ ಹೆಚ್ಚಿನ ಉದ್ದಗಲದ ಹಾಗೂ ಒಂದು ಅಡಿಗೂ ಹೆಚ್ಚಿನ ಮಂದದ ಕಲ್ಲುಗಳ ಅಗತ್ಯವಿದೆಯೇ ಎಂಬ ಪ್ರಶ್ನೆ ಉದ್ಭವಿಸುತ್ತದೆ.


ಇದಕ್ಕೆ ಉತ್ತರವಾಗಿ ಕೆಲವು ವಿದ್ವಾಂಸರು "ಬೃಹತ್ ಗಾತ್ರದ ಕಲ್ಗೋರಿಗಳು ಆ ಸಮುದಾಯ ಅಥವಾ ಬುಡಕಟ್ಟಿನ ಹಿರಿಯ ನಾಯಕರಿಗೆ ಸಂಬಂಧಪಟ್ಟಿದ್ದು ಸಣ್ಣ ಶಿಲಾಗೋರಿಗಳು ಆ ಸಮುದಾಯ ಇತರ ಸದಸ್ಯರಿಗೆ ಸೇರಿರಬಹುದೆಂದು ಅಭಿಪ್ರಾಯಪಡುತ್ತಾರೆ. ಮತ್ತೆ ಕೆಲವು ವಿದ್ವಾಂಸರು ಇವು ಸಾಂಕೇತಿಕವಾದ ಸ್ಥಳ ನಿರ್ದೇಶಕ ನೆಲೆಗಳೆಂದೂ ಹಾಗೂ ಬೃಹತ್ ಶಿಲಾಯುಗದ ಕಾಲದ ವಿಘಟಿತ ಸಮುದಾಯದ ಜನರು ಸ್ಥಳೀಯ ಸಂಪನ್ಮೂಲಗಳ ಮೇಲೆ ತಮ್ಮ ಹಕ್ಕುಗಳನ್ನು ಸ್ಥಾಪಿಸಿಕೊಳ್ಳಲು ಹಾಗೂ ನೆರೆಯ ಆಕ್ರಮಣಕಾರರಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಪ್ರಾದೇಶಿಕ ಗುರುತುಗಳಾಗಿ ಈ ಕಲ್ಗೋರಿಗಳು ಹಾಕಿಸಿರಬಹುದೆಂದು ಅಭಿಪ್ರಾಯಪಡುತ್ತಾರೆ. ಇದರಲ್ಲಿ ಮೊದಲನೆ ವಾದವನ್ನು ಸಂಪೂರ್ಣವಾಗಿ ಅಲ್ಲಗಳೆಯಲಾಗದಿದ್ದರೂ, ಬೃಹತ್ ಶಿಲಾಗೋರಿಗಳಿರುವ ಪ್ರದೇಶದ ಭೌಗೋಳಿಕ ಪರಿಸರ, ಸಸ್ಯಸಂಪತ್ತು ಮುಂತಾದ ಬಾಹ್ಯ ಸಂಗತಿಗಳ ಆಧಾರದ ಮೇಲೆ ಎರಡನೆ ವಾದ ಸ್ವಲ್ಪಮಟ್ಟಿಗೆ ಸಮಂಜಸವಾಗಿದೆಯೆಂದು ಹೇಳಬಹುದು.

ಸಾಮಾನ್ಯವಾಗಿ ಈ ಕಲ್ಗೋರಿಗಳು ಬೆಟ್ಟದ ಮೇಲೆ ಅಥವಾ ಶಿಲಾಪ್ರದೇಶದಲ್ಲಿರುತ್ತವೆ. ಈ ಸ್ಥಳಗಳಲ್ಲಿ ಯಾವುದೇ ರೀತಿಯ ಅವಶೇಷಗಳು ಲಭ್ಯವಾಗುವುದಿಲ್ಲ. ಅಲ್ಲದೆ ಕಲ್ಗೋರಿಗಳ ಸಂಕೀರ್ಣದ ಬಳಿ ಹುಲ್ಲುಗಾವಲು ಪ್ರದೇಶವಿರುತ್ತದೆ. ಅಥವಾ ಈ ಪ್ರದೇಶದಲ್ಲಿ ಸಾಮಾನ್ಯವಾಗಿ ಪೊದೆಗಳ ದಟ್ಟ ಕಾಡುಗಳಿರುತ್ತವೆ. ಇದರ ಹೊರತು ಇಲ್ಲಿ ಸಾಮಾನ್ಯವಾಗಿ ಶುಷ್ಕ, ಅರೆಶುಷ್ಕ ವಾತಾವರಣವಿರುತ್ತದೆ ಮತ್ತು ಸ್ವಾಭಾವಿಕ ಚಿಲುಮೆಗಳು ದೋಣೆಗಳು ಅಥವಾ ಹೊಳೆಗಳ ರೂಪದಲ್ಲಿ ಹತ್ತಿರದಲ್ಲಿ ನೀರಿನ ಸಂಪನ್ಮೂಲಗಳಿರುತ್ತವೆ. ಈ ಕಲ್ಗೋರಿಗಳು ಸಾಮಾನ್ಯವಾಗಿ ಬೆಟ್ಟದ ತಳಭಾಗದಿಂದ ಕಾಣುವಂತೆ ಇರುತ್ತವೆ. ಈ ಎಲ್ಲ ಲಕ್ಷಣಗಳನ್ನು ನಾವು ದೇವರಬೆಟ್ಟ ಗ್ರಾಮದ ಪರಿಸರದಲ್ಲಿ ಕಂಡುಬರುವ ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಗಳಲ್ಲಿ ಕಾಣಬಹುದು.

ಬೃಹತ್ ಶಿಲಾಯುಗ ಸಂಸ್ಕೃತಿಯ ಜನರು ಅಲೆಮಾರಿ ಜೀವನವನ್ನು ಕೈಬಿಟ್ಟು ಒಂದು ಪ್ರದೇಶದಲ್ಲಿ ನೆಲೆನಿಂತು ಕಾಡುಗಳನ್ನು ಕಡಿದು ಅವನ್ನು ಕೃಷಿಯೋಗ್ಯ ನೆಲಗಳನ್ನಾಗಿ ರೂಪಿಸಿ ಕೃಷಿ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಕಲ್ಗೋರಿ ನಿರ್ಮಾಪಕರ ಸಾಮಾಜಿಕ ವ್ಯವಸ್ಥೆ ಸಣ್ಣ ಪ್ರಮಾಣದ ವಿಘಟಿತ ಸಮಾಜವಾಗಿತ್ತು. ಅವರು ಸಣ್ಣ ಸಣ್ಣ ಗುಂಪುಗಳಲ್ಲಿ ಒಂದೆಡೆ ವಾಸಿಸಲಾರಂಭಿಸಿದ್ದರು. ಹೀಗಾಗಿ ತಾವಿದ್ದ ಪ್ರದೇಶದ ಸಂಪನ್ಮೂಲಗಳ ಮೇಲೆ ಬೇರೊಂದು ಸಮಾಜ ಅಥವಾ ಸಮುದಾಯ ಹಕ್ಕು ಸ್ಥಾಪಿಸುವುದನ್ನು ತಡೆಯಲು ಅವರು ಈ ಕಲ್ಗೋರಿಗಳನ್ನು ಸ್ಮಾರಕಗಳಾಗಿ ಮಾತ್ರ ಬಳಸದೆ, ಆ



ದೇವರಬೆಟ್ಟ ಗ್ರಾಮದ ರುದ್ರಮುನೀಶ್ವರ ದೇವಾಲಯ




ಶಂಕರನಹಳ್ಳಿಕ್ಕೆ ಹೋಗುವ ದಾರಿಯಲ್ಲಿನ ಕಲ್ಗೋರಿ



ಅರಣ್ಯದಲ್ಲಿರುವ ಕಲ್ಗೋರಿಗಳ ಸಮುಚ್ಚಯ



ಅರಣ್ಯದಲ್ಲಿರುವ ಕಲ್ಗೋರಿ




ಅರಣ್ಯದಲ್ಲಿರುವ ಕಲ್ಗೋರಿ




ಹದಿಮೂರು ಅಡಿಗಳ ಕಲ್ಗೋರಿ



ಮಂದವಾದ ಕ್ಯಾಪ್‌ಸ್ಟೋನ್ ಇರುವ ಕಲ್ಗೋರಿ



ಮಂದವಾದ ಕ್ಯಾಪ್‌ಸ್ಟೋನ್ ಇರುವ ಕಲ್ಗೋರಿ



ಮಂದವಾದ ಕ್ಯಾಪ್‌ಸ್ಟೋನ್ ಇರುವ ಕಲ್ಗೋರಿ



ದೇವರಬೆಟ್ಟದ ಮೇಲಿರುವ ಕೃತಕ ಮನೆಗಳು

ಪ್ರದೇಶವನ್ನು ಸೂಚಿಸುವ ಗುರುತುಗಳಾಗಿ ಸಹ ನಿರ್ಮಿಸಿದರು. ಬೃಹತ್ ಶಿಲಾಯುಗದ ಕಾಲದಲ್ಲಿ ಶವಸಂಸ್ಕಾರ ಒಂದು ಕುಟುಂಬಕ್ಕೆ ಸೀಮಿತವಾಗದೆ ಆ ಇಡೀ ಬುಡಕಟ್ಟು ಅಥವಾ ಸಮುದಾಯಕ್ಕೆ ಸೇರಿರುತ್ತಿತ್ತು. ಈ ಆಚರಣೆಯ ಮುಂದುವರಿಕೆ ರೂಪವನ್ನು ಕರ್ನಾಟಕದ ಮೂಲ ನಿವಾಸಿಗಳಾದ ನೀಲಗಿರಿಯ 'ಬಡಗ' ಜನಾಂಗದ ಶವಸಂಸ್ಕಾರದಲ್ಲಿ ಕಾಣಬಹುದು. ಆ ಸಮುದಾಯದಲ್ಲಿ ಒಬ್ಬ ವ್ಯಕ್ತಿ ಮೃತನಾದರೆ, ಶವಸಂಸ್ಕಾರ ಕ್ರಿಯೆಯಲ್ಲಿ ಇಡೀ ಸಮುದಾಯ ಪಾಲ್ಗೊಳ್ಳಬೇಕಾಗುತ್ತದೆ. ಅಲ್ಲದೆ ಶವವನ್ನು ಬೆಟ್ಟದ ಮೇಲೆ ತೆಗೆದುಕೊಂಡು ಹೋಗಿ ಸಂಸ್ಕಾರ ಮಾಡಲಾಗುತ್ತದೆ.

ದೇವರಬೆಟ್ಟ ಗ್ರಾಮದಲ್ಲಿರುವ ಬೆಟ್ಟದಲ್ಲಿ ಮತ್ತೊಂದು ಆಚರಣೆ ಪ್ರಚಲಿತದಲ್ಲಿದೆ. ಬೆಟ್ಟ ಹತ್ತಿದ ವ್ಯಕ್ತಿಗಳು ಬೆಟ್ಟದ ಮೇಲಿರುವ ವಿವಿಧ ಗಾತ್ರದ ಕಲ್ಲುಗಳಿಂದ ಒಂದು ಮನೆಯನ್ನು ಕಟ್ಟಿದರೆ, ಅವರು ನಿಜಜೀವನದಲ್ಲಿ ಮನೆ ಕಟ್ಟುತ್ತಾರೆ ಅಥವಾ ಅವರಿಗೆ ಸಂತಾನ ಪ್ರಾಪ್ತಿಯಾಗುತ್ತದೆಂಬುದು ಆ ನಂಬಿಕೆ. ಮನೆ ಕಟ್ಟುವ ರೀತಿಯೂ ಕಲ್ಗೋರಿಗಳ ಸ್ವರೂಪದಲ್ಲೇ ಇರುತ್ತದೆ. ಇಂಥದೇ ಆಚರಣೆಯನ್ನು ನಾವು ಬನ್ನೇರುಘಟ್ಟ ಬೆಟ್ಟದ ಮೇಲೂ ಸಹ ಕಾಣಬಹುದು. ಅಲ್ಲದೆ ಅಲ್ಲಿರುವ ಕಲ್ಗೋರಿಗಳಿಗೂ, ದೇವರಬೆಟ್ಟ ಗ್ರಾಮದ ಕಲ್ಗೋರಿಗಳಿಗೂ ತುಂಬಾ ಸಾಮ್ಯತೆಯಿದೆ. ಬನ್ನೇರುಘಟ್ಟದ ಸುತ್ತಮುತ್ತಲಿನ ಗ್ರಾಮಗಳಲ್ಲೂ ಸಹ ಇಂಥ ನಿರ್ಮಿತಿಗಳು ಅಲ್ಲಲ್ಲಿ ಕಂಡುಬರುತ್ತವೆ (ಈ ಬಗ್ಗೆ ಡಾ. ದೇವರಕೊಂಡಾರೆಡ್ಡಿಯವರು ಸಂಶೋಧನೆ ನಡೆಸಿರುವರಾದರೂ, ಅವರು ಲೋಹಗಳಿಗೆ ಸಂಬಂಧಪಟ್ಟಂತೆ ಹೆಚ್ಚು ಒತ್ತು ಕೊಡುತ್ತಾರೆ.) ಇವರೆಲ್ಲ ಒಂದೇ ಸಂಸ್ಕೃತಿಗೆ ಸೇರಿದ ಜನರಾಗಿದ್ದು ಈ ಪರ್ವತ ಶ್ರೇಣಿಯುದ್ದಕ್ಕೂ ಎಂದರೆ ನೀಲಗಿರಿ ಪರ್ವತ, ಮಾದೇಶ್ವರ ಬೆಟ್ಟ, ಬನ್ನೇರುಘಟ್ಟ, ದೇವರಬೆಟ್ಟ ಶ್ರೇಣಿಯುದ್ದಕ್ಕೂ ಇವರು ಅಲ್ಲಲ್ಲಿ ಬೇರುಬಿಟ್ಟು ತಮ್ಮದೇ ಆದ ಒಂದೊಂದು ಪ್ರತ್ಯೇಕ ಸಮಾಜಗಳಲ್ಲಿ ವಾಸಿಸುತ್ತಿದ್ದರೆಂದು ಊಹಿಸಲಾಗಿದೆ. ಒಟ್ಟಾರೆ ಈ ಬಗ್ಗೆ ತೌಲನಿಕ ಅಧ್ಯಯನದ ಅಗತ್ಯವಿದೆ. ಅಲ್ಲದೆ ವಿದೇಶಗಳಲ್ಲಿಯಂತೆ ವೈಮಾನಿಕ ಸಮೀಕ್ಷೆ ಕೈಗೊಳ್ಳುವ ಮೂಲಕ ವ್ಯಾಪಕ ಪರಿವೀಕ್ಷಣಾ ಕಾರ್ಯ ಕೈಗೊಳ್ಳಬೇಕಾಗಿದೆ.

(ನನ್ನ ಜೊತೆ ಕ್ಷೇತ್ರಕಾರ್ಯಕ್ಕೆ ಬಂದು ಸಹಕರಿಸಿದ ಪತಿ ಎನ್.ಸಿ. ಬಾಬುರೆಡ್ಡಿಯವರಿಗೆ, ಮಗಳು ಎಸ್.ಬಿ. ಸೃಷ್ಟಿ ಹಾಗೂ ಚಿಕ್ಕಪ್ಪ ರಾಮರೆಡ್ಡಿಯವರಿಗೆ ಹಾಗೂ ಲೇಖನ ಬರೆಯುವಾಗ ಹಲವಾರು ಉಪಯುಕ್ತ ಮಾಹಿತಿಗಳನ್ನು ಒದಗಿಸಿದ ಐ.ಸಿ.ಹೆಚ್.ಆರ್‌ನ ಸಹಾಯಕ ನಿರ್ದೇಶಕರಾದ ಡಾ. ಅರುಣೆಯವರಿಗೆ ಕೃತಜ್ಞತೆಗಳು.)

ಪಾವಗಡ ಚೆಲುವರಾಜ್*

ಪಾವಗಡದ ಬಳಿಯ ಬೃಹತ್ ಶಿಲಾಯುಗ ಸಂಸ್ಕೃತಿಯ ತಾಣ

ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಬೃಹತ್ ಶಿಲಾಯುಗದ ಸಂಸ್ಕೃತಿ ಇದ್ದ ಬಗ್ಗೆ ಮಾಹಿತಿಗಳು ದೊರೆತಿವೆ. ಇವುಗಳ ಕಾಲ, ಸ್ವರೂಪ ಮತ್ತು ಅಂದಿನ ಜನಾಂಗ ಅಳವಡಿಸಿಕೊಂಡಿದ್ದ ಸಂಪ್ರದಾಯಗಳ ಬಗ್ಗೆ ಸಂಶೊಧನೆಗಳು ನಡೆದಿವೆ. ವಿವಿಧ ಬಗೆಯ ಶಿಲಾಸಮಾಧಿಗಳು ದೊರೆತಿದ್ದು ಅವುಗಳನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ೧) ನೆಲದಲ್ಲಿನ ಶಿಲಾಕೋಣೆಯು ಗೋರಿಗಳು, ೨) ಕೋಣೆಗಳಿಲ್ಲದ ಶವ ಹುಗಿದ ಗುಳಿಗಳು. ೩) ಬೃಹತ್ ಮುಚ್ಚುಗಲ್ಲುಗಳ ಗೋರಿಗಳು.

ಕರ್ನಾಟಕದಲ್ಲಿ ೮೨೦ ಶಿಲಾಯುಗ ಸಂಸ್ಕೃತಿಯ ನೆಲೆಗಳು ದೊರೆತಿದ್ದು ಅವುಗಳಲ್ಲಿ ೬೦೨ ಸಮಾಧಿ ಸ್ಥಳಗಳು ೨೨೦ ವಾಸದ ನೆಲೆಗಳು. ಕೋಲಾರ ಜಿಲ್ಲೆಯಲ್ಲಿ ಅತಿ ಹೆಚ್ಚು ನೆಲೆಗಳು ಕಂಡುಬಂದಿದ್ದು, ಧಾರವಾಡ ಜಿಲ್ಲೆಯಲ್ಲಿ ಒಂದು ಸಮಾಧಿ ಮಾತ್ರ ಕಂಡುಬಂದಿದೆ. ಈಗ ಕಂಡು ಬಂದಿರುವ ಸಮಾಧಿಗಳ ಜೊತೆಗೆ ಇತಿಹಾಸ ಸಂಶೋಧಕರು ಹೊಸ ನೆಲೆಗಳನ್ನು ಸೇರಿಸುತ್ತಲೇ ಇದ್ದಾರೆ.

ತುಮಕೂರು ಜಿಲ್ಲೆಯ ಪಾವಗಡ ಟವನ್ ಸುತ್ತಮುತ್ತ ಒಂದೊಂದು ಕಿ.ಮೀ. ಅಂತರದಲ್ಲಿ ೪ ಶಿಲಾಯುಗ ಸಂಸ್ಕೃತಿಯ ತಾಣಗಳು ಪತ್ತೆಯಾಗಿವೆ. ಪಾವಗಡ ಕೋಟೆಯು ಸದರೀ ಸಂಸ್ಕೃತಿಯ ತಾಣದ ಮೇಲೆ ನಿರ್ಮಿಸಲಾಗಿದೆ ಎಂಬ ಅಂಶ ಸಂಶೋಧನೆಯಿಂದ ತಿಳಿದುಬಂದಿದೆ.

ಪಾವಗಡದ ಸುತ್ತಲೂ ೯ ನಿಲುಸುಗಲ್ಲುಗಳು ಕಂಡು ಬಂದಿವೆ. ಅಲ್ಲಿಂದ ೨ ಕಿ.ಮೀ. ದೂರದಲ್ಲಿ ಹದಿನಾಲ್ಕು ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಸಮಾಧಿಗಳು ಕಂಡುಬಂದಿವೆ. ಇವುಗಳ ಜೊತೆಗೆ ಲೇಖಕರು ಪಾವಗಡ ತಾಲ್ಲೂಕಿನ ಕೋಟಗುಡ್ಡ, ಉದಂಡಪ್ಪನಪಾಳ್ಯ, ಹುಲಿಹರಾಪುರದ ಬಳಿ ಹೊಸ ನೆಲೆಗಳನ್ನು ಪತ್ತೆ ಮಾಡಿದ್ದಾರೆ.

ಪಾವಗಡ ತಾಲ್ಲೂಕು ಬೆಟ್ಟಗುಡ್ಡಗಳಿಂದ ಕೂಡಿರುವುದರಿಂದ ಬೃಹತ್ ಶಿಲಾಯುಗ ಸಂಸ್ಕೃತಿ ಇಲ್ಲಿ ವಿಕಾಸವಾಗಿ ನೆಲೆಯಾಗಿ ನಿಲ್ಲಲು ಸಹಕಾರಿಯಾಗಿದೆ. ಸಂಶೊಧನೆ. ಕ್ಷೇತ್ರ ಕಾರ್ಯಗಳು ನಡೆದಂತೆಲ್ಲಾ ಹೊಸ ಹೊಸ ಮಾಹಿತಿಗಳು ಲಭ್ಯವಾಗುತ್ತಲೇ ಇವೆ.

ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕು ಪ್ರಾಗೈತಿಹಾಸಿಕ ನೆಲೆಗಳನ್ನೊಳಗೊಂಡು ಪ್ರಮುಖ ಸ್ಥಾನವನ್ನು ಹೊಂದಿದೆ. ಈ ತಾಲ್ಲೂಕಿನಲ್ಲಿ ಹಿರಿಯ ಸಂಶೋಧಕರಿಂದ ಹಿಡಿದು ಇತಿಹಾಸ ವಿದ್ಯಾರ್ಥಿಗಳು ಹಲವು ಪ್ರಾಗೈತಿಹಾಸಿಕ ನೆಲೆಗಳನ್ನು ಬೆಳಕಿಗೆ ತಂದಿದ್ದಾರೆ.

ಶಾಸನ ಪಿತಾಮಹ ಬಿ.ಎಲ್. ರೈಸ್‌ರವರು ಕರ್ನಲ್ ಮೆಕಂಜಿಯವರು ತುಮಕೂರು ಜಿಲ್ಲೆಯಲ್ಲಿ ಸದರೀ ನೆಲೆಗಳನ್ನು ಕಂಡುಕೊಂಡ ಮಹನೀಯ ಪ್ರಥಮರು.

ಪಾವಗಡ ತಾಲ್ಲೂಕಿನ ಪ್ರಾಗೈತಿಹಾಸಿಕ ಸಂಶೋಧನೆಯನ್ನು ಕೈಗೊಂಡವರಲ್ಲಿ ಡಾ. ರಾಮಿರೆಡ್ಡಿ, ಡಾ. ಪೆದ್ದಯ್ಯ ಮೊದಲನೆಯವರು. ಎರಡನೆಯ ಸುತ್ತಿನಲ್ಲಿ ಡಾ. ಶಿವತಾರಕ್, ವಿ.ಆರ್. ಚೆಲುವರಾಜನ್ ಈ ದಿಸೆಯಲ್ಲಿ ಮುಂದು ವರಿದಿದ್ದಾರೆ. ಡಾ. ಶಿವತಾರಕ್ ರವರು ಹಿಂದಿನವರು ಗುರುತಿಸಿದ್ದ ನೆಲೆಗಳನ್ನು ಪುನಃ ಪರಿಶೀಲನೆ ಮಾಡಿದ್ದರೆ ಚೆಲುವರಾಜನ್‌ರವರು ಆರು ಹೊಸ ನೆಲೆಗಳನ್ನು ಹೊಸದಾಗಿ ಗುರುತಿಸಿದ್ದಾರೆ.

ಪಾವಗಡದ ಬೋದುಲ ಮಾರಮ್ಮನ ನಿವೇಶನ, ಕೋಟಗುಡ್ಡ, ಉದಂಡಪ್ಪನಪಾಳ್ಯದಲ್ಲಿ ಬೃಹತ್ ಶಿಲಾಯುಗದ ಸಮಾಧಿಗಳನ್ನು ಕಂಡುಹಿಡಿದ ಚೆಲುವರಾಜನ್‌ರವರು ಅನೇಕ ನಿಲುಸುಗಲ್ಲುಗಳನ್ನು ಪತ್ತೆಹಚ್ಚಿದ್ದಾರೆ. ಈ ಶೋಧನೆಯಿಂದ ತುಮಕೂರು ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯ ಪ್ರಾಗೈತಿಹಾಸಿಕ ನೆಲೆಗಳನ್ನು ಪಾವಗಡ ತಾಲ್ಲೂಕು ಹೊಂದಿದೆ ಎಂಬುದು ಗಮನಾರ್ಹವಾದ ಸಂಗತಿ.

ಬೃಹತ್ ಶಿಲಾಯುಗದ ಸಂಸ್ಕೃತಿಯೆಲ್ಲಾ ಬೆಟ್ಟಗುಡ್ಡಗಳ ಆಸುಪಾಸಿನಲ್ಲಿ ಕಂಡುಬಂದಿವೆ. ಸದರೀ ಸಮಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಡುಪ್ರಾಣಿಗಳು ಈ ಬೆಟ್ಟಗುಡ್ಡಗಳಲ್ಲಿ ವಾಸವಾಗಿದ್ದವು. ಅವುಗಳನ್ನು ಬೇಟೆಯಾಡುವುದರಿಂದ ಆಹಾರವನ್ನು ಸಂಗ್ರಹಿಸಿಕೊಳ್ಳುತ್ತಿತ್ತು. ಬೆಟ್ಟಗುಡ್ಡಗಳ ಮೇಲೆ

* ಮುನಿಸಿಪಲ್ ಕಛೇರಿ ರಸ್ತೆ, ಪಾವಗಡ.

ಸುರಿದ ಮಳೆ ನೀರು ಹರಿದು ಬಂದು ಹೊಂಡಗಳಲ್ಲಿ, ದೋಣೆಗಳಲ್ಲಿ ಸಂಗ್ರಹವಾದಾಗ ಅದನ್ನು ಸಣ್ಣ ಮಟ್ಟದ ವ್ಯವಸಾಯಕ್ಕೂ, ಕುಡಿಯುವುದಕ್ಕೂ ಅಂದಿನ ಜನ ಬಳಸುತ್ತಿದ್ದರು.

ಹೇರಳವಾಗಿ ಕಲ್ಲು ಚಪ್ಪಡಿಗಳು ಬೆಟ್ಟ ಗುಡ್ಡಗಳೆಲ್ಲ ಸಿಕ್ಕುವುದರಿಂದ ಅವುಗಳನ್ನುಪಯೋಗಿಸಿ ಬೃಹತ್ ಶಿಲಾ ಸಮಾಧಿಗಳನ್ನು ನಿರ್ಮಾಣ ಮಾಡುತ್ತಿದ್ದರು ಹೀಗೆ ನಿರ್ಮಾಣವಾದ ಗೋರಿ ಅಥವ ಸಮಾಧಿಗಳಲ್ಲಿ ಅಡಗಿಸಿಟ್ಟಿರುವ ವಸ್ತುಗಳೆಂದರೆ ಮಾನವನ ಅಸ್ತಿಪಂಜರಗಳು, ಸತ್ತ ಮನುಷ್ಯನನ್ನು ಸುಟ್ಟ ಬೂದಿಯನ್ನು ಮಡಕೆಗಳಲ್ಲಿ ತುಂಬಿ ಸ್ಥಾಪಿಸಿರುವುದು ಪ್ರಧಾನವಾಗಿ ಕಂಡರೆ ವಿವಿಧ ರೀತಿಯ ಕಬ್ಬಿಣದ ಚಿಕ್ಕ ಆಯುಧಗಳು, ಕುಲುಮೆಗಳಿಂದ ತೆಗೆದ ಕಿಟ್ಟ ಹಲವು ಬಗೆಯ ಸರಗಳಲ್ಲಿ ಉಪಯೋಗಿಸುವ ಮಣಿಗಳು, ಮಂಡೂರದ ಗಡ್ಡೆ (Ironoxide) ಕೆಂಪು ಮತ್ತು ಕಪ್ಪು ಬಣ್ಣದ ವಿವಿಧ ಅಳತೆಯ ಮಡಕೆಗಳೂ ಕಂಡುಬರುತ್ತವೆ.

ಇವರು ಪಶುಸಂಗೋಪನೆಯನ್ನು ಬಲ್ಲವ ರಾಗಿದ್ದರು ವ್ಯವಸಾಯದಲ್ಲಿ ತೊಡಗಿದ್ದರು. ಪಾವಗಡ ತಾಲ್ಲೂಕಿನ ನೆಲೆಗಳ ಹತ್ತಿರ ವ್ಯವಸಾಯ ಯೋಗ್ಯವಾದ ಫಲವತ್ತಾದ ಭೂಮಿಗಳು ಕಂಡುಬರುವುದಿಲ್ಲ. ಸ್ವಲ್ಪ ದೂರದಲ್ಲಿ ಒಣಬೇಸಾಯ ಯೋಗ್ಯವಾದ ಭೂಮಿಗಳಿವೆ.

ಬೃಹತ್ ಶಿಲಾಯುಗ ಸಂಸ್ಕೃತಿ ವಿಕಾಸವಾಗತೊಡಗಿದ ಕಾಲಕ್ಕಾಗಲೇ ಮಾನವ ಒಂದು ನಾಗರೀಕತೆಯ ಹಂತವನ್ನು ತಲುಪಲು ಪ್ರಯತ್ನ ಪಟ್ಟಿರುವುದು ತಿಳಿದುಬರುತ್ತದೆ. ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ನಿಲ್ಲದ ಪ್ರಯಾಣದಲ್ಲಿ ಅಲೆಮಾರಿಯಾಗಿದ್ದ ಮಾನವ ನಿರ್ದಿಷ್ಟವಾಗಿ ಒಂದು ಸ್ಥಳದಲ್ಲಿ ಮೊಕ್ಕಾಮ್ ಮಾಡುವ ಗುಣವನ್ನು ಬೆಳೆಸಿಕೊಂಡು, ವ್ಯವಸಾಯದಲ್ಲಿ ತೊಡಗಿದ; ಪ್ರಾಣಿಗಳನ್ನು ಸಾಕಿ ತನ್ನೊಂದಿಗೇ ಇಟ್ಟುಕೊಂಡು ಕೆಲಸಗಳಲ್ಲಿ ತೊಡಗಿಸಿಕೊಂಡ, ಕಲ್ಲಿನ ಗೂಡುಗಳ ನಿರ್ಮಾಣ, ಮಡಿಕೆಗಳ ನಿರ್ಮಾಣ, ತಿರುಗಣಿ ಚಕ್ರಗಳನ್ನು ಕಂಡುಕೊಂಡ.

ಶಿಲಾಸಮಾಧಿಗಳನ್ನು ನಿರ್ದಿಷ್ಟವಾದ ವಾಸ್ತುವಿನಲ್ಲಿ ನಿರ್ಮಿಸತೊಡಗಿದ. ಕಲ್ಲಿನ ಗಣಿಗಳಿಂದ ತನಗೆ ಬೇಕಾದ ಅಳತೆಗಳಲ್ಲಿ ಕಲ್ಲು ಚಪ್ಪಡಿಗಳನ್ನು ಒಡೆದು ತೆಗೆಯತೊಡಗಿದ, ಬಾರಿ ಗಾತ್ರದ ಬಂಡೆಗಳನ್ನು ಸಾಗಿಸಿಕೊಂಡು ಬಂದು ಶಿಲಾಕೋಣೆಗಳ ಮುಚ್ಚಿರುವ ಅವನ ವಿಶಿಷ್ಟ ತಾಂತ್ರಿಕತೆಯನ್ನು ಎಲ್ಲರೂ ಮೆಚ್ಚಬೇಕಾಗಿದೆ.

ಈ ಮೇಲಿನ ಎಲ್ಲಾ ಗುಣಗಳನ್ನೂ ಹೊಂದಿರುವ ತಾಣ ಪಾವಗಡದ ಹತ್ತಿರ ಕಂಡುಬಂದಿರುವ ಬೋದುಲ ಮಾರಮ್ಮನ ಗುಡಿಯ ಮುಂದಿರುವ ಬೃಹತ್ ಶಿಲಾಗೋರಿಗಳಿರುವ ನಿವೇಶನ.

ಪಾವಗಡ ತುಮಕೂರು ಹೆದ್ದಾರಿಯಲ್ಲಿ ೧.೫ ಕಿ.ಮೀ. ದೂರದಲ್ಲಿ ಕಣಿವೆ ನರಸಿಂಹಸ್ವಾಮಿಯ ಗುಡಿ ಇದೆ. ಅಲ್ಲಿಂದ ಸ್ವಲ್ಪ ಮುಂದೆ ರಸ್ತೆಯ ಬಲಬದಿಗೆ ಎತ್ತರವಾದ ದಿಬ್ಬದ ಮೇಲೆ ಬೋದುಲ ಮಾರಮ್ಮನ ಗುಡಿ ಇದೆ. ಗುಡಿಯ ಮುಂಭಾಗದ ಬಯಲಿನಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ೧೪ ಶಿಲಾ ಸಮಾಧಿಗಳು ಕಂಡುಬಂದಿವೆ. ಇದರಲ್ಲಿ ೧೨ ಸಮಾಧಿಗಳನ್ನು ಅಗೆದು ನಾಶ ಮಾಡಲಾಗಿದೆ. ಆದರೂ ನೆಲ ಕೋಣೆಗಳು ಹಾಳಾಗದೆ ಉಳಿದಿವೆ. ೨ ಸಮಾಧಿಗಳು ಉಳಿದುಕೊಂಡಿವೆ. ಸದರೀ ಸಮಾಧಿಗಳು ನಿಧಿ ಸಂಗ್ರಹವಾಗಿರುವ ತಾಣಗಳೆಂಬ ನಂಬಿಕೆಯ ಮೇಲೆ ನಿಧಿ ಶೋಧಕರು ಸಮಾಧಿಗಳ ಒಂದು ಭಾಗದ ಕಲ್ಲು ಚಪ್ಪಡಿಗಳನ್ನು ಅಗೆದು ಹಾಕಿ, ಒಳಗಿಡಲಾಗಿದ್ದ ಮೃತ್‌ಪಾತ್ರೆಗಳು, ಕಬ್ಬಿಣದ ಚೂರುಗಳು, ಮಡಕೆಗಳೇ ಮೊದಲಾದ ಪದಾರ್ಥಗಳನ್ನು ತೆಗೆದುಕೊಂಡು ಹೋಗಿದ್ದಾರೆ.

ಸಮಾಧಿಗಳ ಮೇಲೆ ಮುಚ್ಚಿರುವ ಬೃಹತ್ ಗಾತ್ರದ ಕಲ್ಲುಗಳನ್ನು ತೆಗೆಯಲಾಗದೆ ಕೆಳಕೋಣೆಯ ಒಂದು ಬದಿಯ ಕಲ್ಲನ್ನು ಕಿತ್ತುಹಾಕಿರುವುದರಿಂದ ಸಮಾಧಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಗೊಂಡೆಗಿಂಡಿಗಳು ಇಲ್ಲಿ ಕಂಡು ಬರುವುದಿಲ್ಲ. ಸೂಕ್ಷ್ಮವಾದ ಪರಿಶೀಲನೆಯಿಂದ ಸದರೀ ಸಮಾಧಿಗಳಲ್ಲಿ ಗಂಡಿಕಲ್ಲುಗಳ ಇಲ್ಲದೆ ಇರುವುದು ಕಂಡುಬರುತ್ತದೆ.

ಸಮಾಧಿಯ ಮೇಲಿನ ಮುಚ್ಚುಗಲ್ಲುಗಳು ಒಂದಡಿಗೂ ಹೆಚ್ಚು ದಪ್ಪವಿದ್ದು ೪೫ ಅಡಿ ಸುತ್ತಳತೆಯಿಂದ ಕೂಡಿದೆ. ಹಲವು ಬಂಡೆಗಳು ವರ್ತುಲಾಕಾರವಿದ್ದರೆ, ಇನ್ನು ಕೆಲವು ನಿರ್ದಿಷ್ಟವಾದ ಆಕಾರವನ್ನು ಹೊಂದಿಲ್ಲ. ಈ ಕಲ್ಲುಗಳು ಹಲವು ಟನ್ ಭಾರವಿದೆ. ಈ ಬೃಹತ್ ಬಂಡೆಗಳನ್ನು ಗಣಿಯಿಂದ ತೆಗೆದು ದೂರದ ಸಮಾಧಿಗಳಿಗೆ ಸಾಗಿಸಿರುವ ಬೃಹತ್ ಶಿಲಾಯುಗದ ಜನರ ಸಾಮರ್ಥ್ಯ ಮತ್ತು ತಂತ್ರಜ್ಞಾನಗಳು ಇಂದಿನ ಜನಾಂಗವನ್ನು ಬೆರಗುಗೊಳಿಸುವಂತಿದೆ.

ಈ ನಿವೇಶನದ ಪಶ್ಚಿಮ ಭಾಗಕ್ಕೆ ಒಂದು ಕಿ.ಮೀ. ದೂರದಲ್ಲಿ ಮತ್ತೊಂದು ಸಮಾಧಿ ಇದ್ದು, ಜಮೀನುಗಳನ್ನು ಉಳುಮೆ ಮಾಡಿ ವಿಸ್ತರಿಸುವಾಗ ಉಳಿದ ಸಮಾಧಿಗಳು ಸಂಪೂರ್ಣ ನಾಶವಾಗಿದೆ.

ಬೊದುಲ ಮಾರಮ್ಮನ ಗುಡಿಯು ಮುಂದೆ ಕಂಡುಬಂದಿರುವ ಸಮಾಧಿಗಳು ಮೇಲ್‌ನೋಟಕ್ಕೆ ಒಂದೇ

ವಿಧವಾಗಿ ಕಂಡುಬಂದರೂ ಒಂದಕ್ಕೊಂದು ಭಿನ್ನವಾಗಿದೆ. ಸಂಪ್ರದಾಯ ಭೇದ ಹೊಂದಿವೆ. ಇಲ್ಲಿಯವರೆಗೂ ಕಂಡುಬಂದಿರುವ ಏಕಶಿಲಾ ಮುಚ್ಚುಗಲ್ಲುಗಳು ಇಲ್ಲಿ ಇದ್ದರೂ ಹಲವು ಸಮಾಧಿಗಳ ಮೇಲೆ, ಎರಡು, ಮೂರು ಚಪ್ಪಡಿಗಳನ್ನು ಮುಚ್ಚಲಾಗಿದೆ.

ನೆಲದ ಒಳಭಾಗದಲ್ಲಿ ೫ ಅಡಿ X ೩ ಅಡಿ ಆಯತಾಕಾರದ ೩ ಅಡಿ ಆಳದ ಕಲ್ಲು ಚಪ್ಪಡಿಗಳಿಂದ ನಿರ್ಮಾಣವಾದ ತೊಟ್ಟಿಗಳಿದ್ದು ನಾವು ಮೊದಲೇ ತಿಳಿದಂತೆ ಅವುಗಳ ತೆರೆದ ಬಾಯಿಯನ್ನು ಬಂಡೆಗಲ್ಲಿನಿಂದ ಮುಚ್ಚಲಾಗಿದೆ. ನೆಲದೊಳಗಿನ ಕಲ್ಲು ತೊಟ್ಟಿಯನ್ನು ಶಿಲಾಸಂಪುಟ, ಸ್ವಸ್ತಿಕಾಕಾರದ ರಚನ, ನೆಲಕೋಣೆ ಎಂದು ಕರೆಯಲಾಗುತ್ತದೆ.

ಈ ತೆರನಾದ ಗೋರಿಗಳ ನೆಲ ಕೋಣೆಯನ್ನು ನಿರ್ಮಿಸಲು ಒಂದು ಪಕ್ಕಕ್ಕೆ ಒಂದೇ ಚಪ್ಪಡಿಯನ್ನು ಉಪಯೋಗಿಸಲಾಗುತ್ತದೆ. ಆದರೆ ಇಲ್ಲಿ ಕಂಡುಬಂದಿರುವ ಸಮಾಧಿಗಳಲ್ಲಿ ೨ ರಿಂದ ೩ ಕಲ್ಲು ಚಪ್ಪಡಿಗಳನ್ನುಪಯೋಗಿಸ ಲಾಗಿದೆ. ಇವುಗಳನ್ನು ನಿಲುವಾಗಿ ಹೂಳಲಾಗಿದೆ (Vertical).

ನೆಲಕೋಣೆಯ ತಳಭಾಗದಲ್ಲಿ ಕಲ್ಲು ಹಾಸನ್ನು ಹಾಸಿರುವುದಿಲ್ಲ. ಒಂದೊಂದು ಸಮಾಧಿಯೂ ಭಿನ್ನವಾದ ಅಳತೆಯಲ್ಲಿದೆ. ಸಮಾಧಿಗಳನ್ನು ನಿರ್ಮಿಸುವಾಗ ನಿರ್ದಿಷ್ಟವಾದ ಸಾಲಿನಲ್ಲಿ ನಿರ್ಮಿಸಿಲ್ಲ. ಚದರಿದಂತೆ ಎರಡು ಮೂರನ್ನು ಗುಂಪಾಗಿಸಿ ನಿರ್ಮಿಸಲಾಗಿದೆ. ಹೀಗೆ ನಿರ್ಮಾಣ ಮಾಡಿರುವ ಕಾರಣವನ್ನು ಪರಿಶೀಲನೆ ಮಾಡಿದಾಗ ಹಲವು ವಿಷಯಗಳು ಗಮನಕ್ಕೆ ಬರುತ್ತದೆ.

ಸದರೀ ಸಮಾಧಿಗಳನ್ನು ನಿರ್ಮಾಣ ಮಾಡಿರುವ ಪ್ರದೇಶ ವಿಶಾಲವಾದ ಕಲ್ಲು ಬಂಡೆಗಳನ್ನು ಹೊಂದಿದ್ದು ಅಲ್ಲಲ್ಲಿ ಮಣ್ಣಿನ ದಿಬ್ಬಗಳಿಂದ ಕೂಡಿದೆ. ಮಣ್ಣಿನ ಭಾಗವಿರುವ ಸ್ಥಳಗಳೆಲ್ಲ ಸಮಾಧಿಗಳನ್ನು ನಿರ್ಮಿಸಲಾಗಿದೆ. ಮಣ್ಣಿನ ಭಾಗ ಒಂದೇ ರೀತಿಯಲ್ಲಿ ಒಂದೇ ಸಾಲಿನಲ್ಲಿರುವುದಿಲ್ಲ. ಸಮಾಧಿಯ ಮೇಲೆ ಹಾಕಿರುವ ಬೃಹತ್ ಚಪ್ಪಡಿಗಳನ್ನು ಪಕ್ಕದಲ್ಲೇ ಇರುವ ಬಂಡೆಗಲ್ಲುಗಳಿಂದ ತೆಗೆದಿರುವುದನ್ನು ಕಾಣಬಹುದು.

ಮುಚ್ಚುಗಲ್ಲುಗಳ ಮೇಲು ಭಾಗದಲ್ಲಿ ತೆಂಗಿನಕಾಯಿ ಗಾತ್ರದ ಗುಂಡು ಕಲ್ಲುಗಳನ್ನು ವರಟು ಮಣ್ಣಿನೊಡನೆ ಸೇರಿಸಿ ಮುಚ್ಚುಗಲ್ಲುಗಳು ಕಾಣದಂತೆ ಪಿರಿಮಿಡ್ ಆಕಾರದಲ್ಲಿ ಸುರಿಯಲಾಗಿದೆ. ಬಹಳ ವರ್ಷಗಳಿಂದ ಸುರಿದ ಮಳೆ ಮತ್ತು ಪ್ರಕೃತಿಯ ಒತ್ತಡದಿಂದ ಈ ಗುಡ್ಡೆಗಳು ಅಗಲವಾಗಿ ಹರಡಿಕೊಂಡಿವೆ. ಇಲ್ಲಿ ಉಪಯೋಗಿಸಿರುವ ಗುಂಡು ಕಲ್ಲುಗಳನ್ನು ಪಕ್ಕದಲ್ಲಿರುವ ಕರಿಯ ಕಲ್ಲುಗುಡ್ಡದಿಂದ ಸಂಗ್ರಹಿಸಲಾಗಿದೆ. ಹಾಳಾದ ಸಮಾಧಿಗಳಿಂದ ಸಂಗ್ರಹಿಸಲಾದ ಕಲ್ಲು ಗುಂಡುಗಳನ್ನು ಪಕ್ಕದ ಜಮೀನಿನ ತಡೆಗೋಡೆ ನಿರ್ಮಿಸಲು ಬಳಸಲಾಗಿದೆ. ಹೀಗೆ ಕಲ್ಲು ಗುಂಡುಗಳನ್ನು ಸುರಿದಿರುವ ಸಮಾಧಿಗಳನ್ನು "ಕಲ್ಲುಗುಪ್ಪೆ" ಶಿಲಸಮಾಧಿಯ ವರ್ಗಕ್ಕೆ ಸೇರಿಸಲಾಗಿದೆ.[೨]

ಸಾಮಾನ್ಯವಾಗಿ ಸಮಾಧಿಗಳ ಸುತ್ತಲು ಅಂದರೆ ಪಿರಮಿಡ್ ಆಕಾರದ ಕಲ್ಲುಗುಪ್ಪೆಗಳ ಸುತ್ತಲೂ ವರ್ತಲಾಕಾರವಾಗಿ ಇಡಲಾಗುತ್ತಿದ್ದ ದೊಡ್ಡ ಅಳತೆಯ ಕಲ್ಲುಗಳು ಇಲ್ಲಿ ಕಂಡುಬರುವುದಿಲ್ಲ. ಪಕ್ಕದಲ್ಲಿರುವ ಜಮೀನುಗಳನ್ನು ವಿಸ್ತರಿಸುವಾಗ ಈ ಕಲ್ಲುಗಳು ಸ್ಥಳಾಂತರ ವಾಗಿರಬಹುದು.

ಈ ಸಮಾಧಿಗಳು ಹರಡಿಕೊಂಡಿರುವ ಪ್ರದೇಶ ಎತ್ತರವಾದ ದಿಬ್ಬ ಸುತ್ತಲೂ ಬೆಟ್ಟ ಗುಡ್ಡಗಳಿಂದ ಸುತ್ತುವರಿಯಲ್ಪಟ್ಟಿದೆ. ಈ ಬೆಟ್ಟಗಳಲ್ಲಿ ಇಂದಿಗೂ ಕಾಡುಪ್ರಾಣಿಗಳ ಸಂಚಾರವಿದೆ. ಇಲ್ಲಿ ಅನೇಕ ಬಂಡೆಗಳ ಪೊಟರೆಗಳನ್ನು, ಗುಹೆಗಳನ್ನೂ ಕಾಣಬಹುದು. ಸಮಾಧಿ ನಿವೇಶನಕ್ಕೆ ಅಂಟಿಕೊಂಡಂತೆ ಪಶ್ಚಿಮದ ಕಡೆಗೆ ಸುಮಾರು ಎರಡು ಎಕರೆ ವಿಸ್ತೀರ್ಣವಿರುವ ಏಕಶಿಲಾಹಾಡು ಬಂಡೆ ಇದೆ. ಇದು ಉತ್ತರದ ಕಡೆಗೂ ಹರಡಿಕೊಂಡಿದೆ. ಬಹಳ ಹಿಂದಿನಿಂದ ಮಳೆಯ ನೀರು ಈ ಬಂಡೆಗಳ ಮೇಲೆ ಹರಿದಿರುವುದರಿಂದ ಸ್ವಾಭಾವಿಕವಾದ ಕಾಲುವೆಗಳು ಮೂಡಿದೆ. ಹಾಗೆ ಹರಿದು ಬರುವ ನೀರು ದಕ್ಷಿಣ ಭಾಗದ ಅರ್ಧ ಎಕರೆ ವಿಸ್ತೀರ್ಣದ ತಗ್ಗಿನ ದೋಣೆಯಲ್ಲಿ ಶೇಖರವಾಗುತ್ತದೆ. ವರ್ಷವಿಡಿ ಇಲ್ಲಿ ನೀರಿನ ಸಂಗ್ರಹವಿರುತ್ತದೆ. ಈ ದೋಣೆಯನ್ನು "ಬೋದಲು" ಎಂದು ಕರೆಯುತ್ತಾರೆ. ಇದೇ ರೀತಿಯ ಚಿಕ್ಕ ದೋಣೆಗಳು ಇನ್ನೂ ಇಲ್ಲಿ ಇವೆ. ಇಲ್ಲಿ ಬಂಡೆಗಳ ಮೇಲೆ ಹುತ್ತುಗಳು ಬೆಳೆದಿವೆ. ಒಂದು ಹುತ್ತವನ್ನು ಮಾರಮ್ಮನೆಂದು ಪೂಜಿಸುತ್ತಾರೆ. ಇದಕ್ಕಾಗಿ ಕಲ್ಲಿನ ಗುಡಿಯನ್ನು ಕಟ್ಟಲಾಗಿದೆ.

ಶಿಲಾಸಮಾಧಿಗಳ ಪರಿಸರ

ಮೇಲಿನ ನಿವೇಶನಗಳಲ್ಲಿ ಸತ್ತ ಮಾನವರನ್ನು ದಫನ್ ಮಾಡಿದ ನೆಲೆಗಳು ಸ್ಪಷ್ಟವಾಗಿ ಕಂಡುಬಂದಿದೆಯೇ ಆಗಲೀ ಮಾನವರು ಬದುಕನ್ನು ಸಾಗಿಸಿದ್ದ ಮನೆಗಳಾಗಲೀ ಆಶ್ರಯ ತಾಣಗಳಾಗಲೀ ಕಂಡುಬಂದಿಲ್ಲ. ಈ ಪ್ರದೇಶದ ದಕ್ಷಿಣ ಭಾಗದಲ್ಲಿ ಪೂರ್ವ ಪಶ್ಚಿಮವಾಗಿ ಕಪ್ಪು ಕಲ್ಲು ಗುಂಡುಗಳಿಂದ ಕೂಡಿದ ಗುಡ್ಡದ ಸಾಲು ಹರಡಿಕೊಂಡಿದೆ. ಇದರಲ್ಲಿ ಹಲವು ಕೇಜಿಗಳ ತೂಕದಿಂದ ಟನ್‌ಗಟ್ಟಲೆ ಭಾರವಿರುವ ಗುಂಡುಕಲ್ಲುಗಳಿವೆ. ಈ ಕಲ್ಲುಗುಂಡುಗಳ ಮಧ್ಯಭಾಗದಲ್ಲಿ ಅನೇಕ ಗುಹೆಗಳಿವೆ. ರಹಸ್ಯವಾದ ಸ್ಥಳಗಳಿವೆ. ಕಾಡುಪ್ರಾಣಿಗಳು ಹಿಂಡು ಹಿಂಡಾಗಿ ಇಲ್ಲಿ ವಾಸವಾಗಿವೆ.



ಸಮಾಧಿಗಳ ಬಳಿ ಇರುವ ನೀರಿನ ಆಸರೆ



ಸಮಾಧಿಗಳ ಬಳಿ ಇರುವ ಮಾರಿ ಗುಡಿ



ತೆರೆದ ಸಮಾಧಿ ಮೇಲಿರುವ ಕಲ್ಲುಗುಪ್ಪೆ



ಸಮಾಧಿಯ ಮೇಲಿರುವ ಚೌಕಾಕಾರದ ಮುಚ್ಚುಕಲ್ಲು

ಇಲ್ಲಿರುವ ರಹಸ್ಯ ಸ್ಥಳಗಳಲ್ಲಿ ಇಂದಿಗೂ ಗುಂಡ್ಲುನಾಯಕ ಜನಾಂಗದವರು ರಂಗನಾಥಸ್ವಾಮಿಯ ಒಡವೆಗಳ ಗಂಟನ್ನು ಈ ಕರಿಯ ಗುಂಡುಗಳ ಗುಡ್ಡದಲ್ಲಿ ರಹಸ್ಯವಾಗಿ ಒಂದು ವರ್ಷ ಕಾಲ ಅಡಗಿಸಿಡುತ್ತಾರೆ. ಹೀಗೆ ಅಡಗುತಾಣಗಳಿರುವ ಈ ಗುಡ್ಡವನ್ನು ಶಿಲಾಯುಗದ ಜನ ತಮ್ಮ ವಾಸಸ್ಥಾನವನ್ನಾಗಿ ಮಾಡಿಕೊಂಡಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ನಿರ್ದಿಷ್ಟವಾದ ಗುರುತುಗಳು ಈ ಬಗ್ಗೆ ಕಂಡುಬಂದಿಲ್ಲ.

ಸಮಾಧಿಗಳ ಸ್ಥಳದಿಂದ ಹಿಂದೆ ಇರುವ ಮಾರೀಗುಡಿಯಿಂದ ಉತ್ತರದ ಕಡೆಗೆ ಬಂದರೆ ಸ್ವಲ್ಪ ಸಮತಟ್ಟಾದ ಪ್ರದೇಶವಿದೆ. ಅಲ್ಲಿಂದ ಮುಂದೆ ಸಾಗುವ ದಾರಿ ಕಣಿವೆ ಬೆಟ್ಟವನ್ನು ಸೇರುತ್ತದೆ. ಅಲ್ಲಿ ಸದಾ ನೀರು ಹರಿಯುವ ಝುರಿಗಳಿವೆ. ಮೇಲಿನ ಸಮತಟ್ಟಾದ ಪ್ರದೇಶದಲ್ಲಿ ಹಲವು ಮನೆಗಳ ತಳಪಾಯಗಳು ಕಂಡುಬಂದಿವೆ. ಇವೆಲ್ಲಾ ಚಿಕ್ಕ ಅಳತೆಯ ಮನೆಗಳಾಗಿವೆ. ಹಿಂದೆ ಇಲ್ಲಿ ಜನ ವಾಸವಾಗಿದ್ದರೆಂಬ ಅಂಶದ ಬಗ್ಗೆ ಮಾಹಿತಿಯನ್ನು ಕಲೆ ಹಾಕಿದಾಗ ಕೆಳಕಂಡ ಅಂಶಗಳು ತಿಳಿದುಬಂದಿದೆ.

ಸದರಿ ಸ್ಥಳದಿಂದ ಪಾವಗಡ ಕೋಟೆ ಸುಮಾರು ೨ ಕಿ.ಮೀ. ದೂರದಲ್ಲಿದೆ. ಕ್ರಿ.ಶ. ೧೬೦೦ರಲ್ಲಿ ಪಾವಗಡದ ಕೋಟೆಗಳನ್ನು ಪೆನುಗೊಂಡೆಯ ವೆಂಕಟಪತಿ ಮಹಾರಾಜನ ಸಹಾಯದಿಂದ ಬಾಲಪ್ಪನಾಯಕನೆಂಬುವನು ಕಟ್ಟಿಸಿದನು.

ಪಾವಗಡ ಕೋಟೆಯ ದಕ್ಷಿಣದ ಸರಹದ್ದು ಮಿಡಿಗೇಶಿ ಹೋಬಳಿಯ "ಚಿನ್ನೇನಹಳ್ಳಿ"ಯವರೆಗೂ ಹರಡಿತ್ತು.[೩] ಆ ಸಮಯದಲ್ಲಿ ಹಲವು ಬೇಡರ ಕುಟುಂಬಗಳು ಚಿನ್ನೆನಹಳ್ಳಿಯ ಕಡೆಯಿಂದ ವಲಸೆ ಬಂದು ಬೃಹತ್ ಶಿಲಾಸಾಮಧಿಗಳ ಬಳಿ ಗುಡಿಸಲುಗಳನ್ನು ಕಟ್ಟಿಕೊಂಡು ಉಳಿದರು. ಇವರ ಮೂಲ ಕಸುಬು ಬೇಟೆಯಾಡುವುದು. ಇವರನ್ನು ಗುಡಿಸಿಲು ನಾಯಕರು, ಗುಡ್ಲು ನಾಯಕರೆಂದು ಕರೆಯುತ್ತಿದ್ದರು. ಇವರು ನಾಯಕ ಜಾತಿಯ ಉಪಪಂಗಡಕ್ಕೆ ಸೇರಿದವರು.[೪] ಇವರು ಅನೇಕ ವೇಳೆಗಳಲ್ಲಿ ವಿವಿಧ ವೇಷಗಳನ್ನು ಧರಿಸಿ ಗೂಢಚಾರರಂತೆ ಕಾರ್ಯನಿರ್ವಹಿಸುತ್ತಿದ್ದರು. ಕಾಡಿನಲ್ಲಿ ದೊರೆಯುವ ಪದಾರ್ಥಗಳನ್ನು ಸಂಗ್ರಹಿಸುವುದು, ಪ್ರಾಣಿಗಳ ಮಾಂಸವನ್ನು ಇತರರಿಗೆ ಮಾರುವುದನ್ನು ಇವರು ರೂಢಿಸಿಕೊಂಡಿದ್ದರು.

ಹಲವು ಕಾಲದವರೆಗೆ ಸಮಾಧಿಗಳ ಬಳಿ ವಾಸವಾಗಿದ್ದ ಈ ಜನರು, ಸಮಾಧಿಗಳನ್ನು ಪಾಂಡವರು ವನವಾಸ ಕಾಲದಲ್ಲಿ ಸ್ಥಾಪಿಸಿರುವ ಚಿನ್ನದ ಭಂಡಾರಗಳೆಂದು ನಂಬಿ, ಅವುಗಳನ್ನು ಕಾಪಾಡುವ ದೃಷ್ಟಿಯಿಂದ ಅಲ್ಲಿ ಯಾರೂ ಓಡಾಡಲು ಬಿಡುತ್ತಿರಲಿಲ್ಲವಂತೆ. ಈ ಕಾರಣದಿಂದ ಸಮಾಧಿಗಳ ಸುತ್ತಲೂ ಮುಳ್ಳಿನಿಂದ ಕೂಡಿದ ಕಳ್ಳಿಮರಗಳು, ಪಾಪಸ್ಸುಕಳ್ಳಿ ಮರಗಳು ಬೆಳೆದು ಬಹಳ ಕಾಲ ಸಮಾಧಿಗಳು ಮುಚ್ಚಿ ಹೋಗಿದ್ದವು.

ಈಗ್ಗೆ ಸುಮಾರು ನೂರು ವರ್ಷಗಳ ಹಿಂದೆ ಗುಡ್ಲು ನಾಯಕರು ಪಾವಗಡ ಟವನ್‌ಗೆ ಬಂದು ಸೇರಿಕೊಂಡ ನಂತರ ಸಮಾಧಿಗಳನ್ನು ಹಾಳಗೆಡವಲಾಯಿತೆಂದು ಹಿರಿಯನಾಯಕರು ಇಂದಿಗೂ ಹೇಳುತ್ತಾ ಆ ಪ್ರದೇಶದ ಅನೇಕ ಜಾನಪದ ಮಹಿಮೆಗಳನ್ನು ವರ್ಣಿಸುತ್ತಾರೆ. ನಿಧಿಶೋಧಕರು ಪದೇ ಪದೇ ಸಮಾಧಿಗಳನ್ನು ಅಗೆದು ಅದರಲ್ಲಿ ಅಡಗಿಸಿಟ್ಟಿದ್ದ ಪದಾರ್ಥಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಅಲ್ಲಿ ಬೆಳೆದಿದ್ದ ಗಿಡ ಮರಗಳನ್ನು ಸೌದೆಗಾಗಿ ಜನ ಕಡಿದುಹಾಕಿರುವುದರಿಂದ ಅದೆಲ್ಲಾ ಬಯಲುಪ್ರದೇಶವಾಗಿದೆ.

ಆಧಾರಸೂಚಿ

೧. ಗುರುರಾಜರಾವ್., *Meghalithic Culutre in South India.*

೨. ಡಾ. ಶಿವತಾರಕ್., **ತುಮಕೂರು ಜಿಲ್ಲೆಯ ಪ್ರಾಗೈತಿಹಾಸಿಕ ನೆಲೆಗಳು.**

೩. ಹಯವದನರಾವ್., **ತುಮಕೂರು ಜಿಲ್ಲಾ ಗೆಜೆಟಿಯರ್.**

೪. ಹೆಚ್. ವೀರನಾಯಕ., **ಕರ್ನಾಟಕದಲ್ಲಿ ನಾಯಕ ಜನಾಂಗ.**

ಡಾ. ಪಿ.ಎನ್. ನರಸಿಂಹಮೂರ್ತಿ*

ಕಾರ್ಕಳದ ವೀರಪಾಂಡ್ಯದೇವನ ಎರಡು ಶಾಸನಗಳು

ಶಾಂತರ ಮೂಲದ ಕಾರ್ಕಳದ ಅರಸು ಮನೆತನ ಒಂದು ಭವ್ಯ ಇತಿಹಾಸ ಹೊಂದಿದೆ. ಚಿಕಮಗಳೂರು ಜಿಲ್ಲೆಯ ಮಲೆನಾಡು ಭಾಗವಾದ ಮೂಡಿಗೆರೆ ತಾಲೂಕಿನ **ಕಳಸ** ಇವರ ರಾಜ್ಯದ ಮೂಲ ರಾಜಧಾನಿಯಾದರೆ ಘಟ್ಟದ ಕೆಳಗಣ ಕಾರ್ಕಳ ತಾಲೂಕಿನ **ಕೆರವಾಸೆ** ನಂತರದ ರಾಜಧಾನಿಯಾಯಿತು. ಮೂಡಿಗೆರೆ, ಬಾಳೆಹೊನ್ನೂರು, ಕೊಪ್ಪ, ಶೃಂಗೇರಿ, ಭಾಗಶಃ ತೀರ್ಥಹಳ್ಳಿ ಮತ್ತು ಕಾರ್ಕಳ ತಾಲೂಕುಗಳಲ್ಲಿ ಹರಡಿದ್ದ ವಿಶಾಲವಾದ ರಾಜ್ಯ ಇವರದು. ಸಂಪೂರ್ಣವಾಗಿ ಮಲೆನಾಡಿನ ಕೇಂದ್ರ ಭಾಗದಲ್ಲಿ ಇದು ರೂಪುಗೊಂಡಿತ್ತು. ಇಂದಿನ ಉಡುಪಿ, ಶಿವಮೊಗ್ಗ ಮತ್ತು ಚಿಕಮಗಳೂರು ಜಿಲ್ಲೆಗಳಲ್ಲೆ ಈ ರಾಜ್ಯ ಹರಡಿಕೊಂಡಿತ್ತು. ಮಲೆನಾಡಿನ ಸೌಂದರ್ಯದೊಂದಿಗೆ ಅದರ ಸಂಪತ್ತೂ ಈ ರಾಜ್ಯ ಮತ್ತು ಅರಸರನ್ನು ಬಲಶಾಲಿಯನ್ನಾಗಿ ಮಾಡಿತ್ತು. ಅವಶ್ಯಕತೆಗೆ ತಕ್ಕಂತೆ ಆಡಳಿತ ಕೇಂದ್ರವಾಗಿ ಬೆಳೆದ ಕಾರ್ಕಳ ಸಹ ಈ ರಾಜ್ಯದ ರಾಜಧಾನಿಯಾಯಿತು.

ಕಳಸ–ಕಾರ್ಕಳ–ಈ ಎರಡೂ ನಗರಗಳಿಂದ ರಾಜ್ಯವಾಳಿದರೂ ಕಾರ್ಕಳದ ಭೈರರಸರೆಂದೇ ಇವರು ಖ್ಯಾತರಾದರು.[೧] ಇವರು ಮೂಲಶಾಂತರ ವಂಶದಿಂದ ರೂಪುಗೊಂಡ ಒಂದು ಶಾಖೆಯವರು. ಮೂಲ ವಂಶ **ಹೊಂಬುಚ**ದಲ್ಲಿದ್ದರೆ ಇವರು ಕಳಸದಿಂದ ತಮ್ಮ ರಾಜಕೀಯ ಭವಿಷ್ಯವನ್ನು ರೂಪಿಸಿಕೊಂಡರು. ಇವರ ಅತ್ಯಂತ ಪ್ರಾಚೀನ ಶಾಸನಗಳು ಕಳಸ ಮತ್ತು ಬಾಳೆಹೊನ್ನೂರುಗಳಲ್ಲಿ ದೊರೆತಿವೆ.[೨]

ಬಹಳ ದೀರ್ಘಕಾಲ ಆಳಿದ ಈ ವಂಶದ ಪ್ರತಿಯೊಬ್ಬ ರಾಜನೂ ತನ್ನದೇ ಆದ ಕೊಡುಗೆಗಳನ್ನು ನೀಡಿ ನಾಡಿನ ಇತಿಹಾಸದಲ್ಲಿ ಚಿರಸ್ಥಾಯಿಯಾಗಿದ್ದಾನೆ.[೩] ನಾಡಿನ ಜೈನ ಕಲಾ ಇತಿಹಾಸಕ್ಕೆ ಇವರ ಕೊಡುಗೆ ಅಪಾರ. ಇದರ ಕೀರ್ತಿ ನಾಡು ಮತ್ತು ರಾಷ್ಟ್ರಗಳ ಗಡಿಯನ್ನು ದಾಟಿ ವಿದೇಶೀಯ ತಜ್ಞರ ಗಮನವನ್ನು ಸೆಳೆದಿದೆ.[೪]

ಹೀಗೆ ಉನ್ನತ ಕಾಣಿಕೆ ಇತ್ತವರಲ್ಲಿ ವೀರಪಾಂಡ್ಯನೂ ಒಬ್ಬ. ಶಾಸನಗಳಲ್ಲಿ ವೀರಪಾಂಡ್ಯಪ್ಪೊಡೆಯ ಎಂದು ಉಲ್ಲೇಖಿತವಾಗಿರುವ ಈತ ಪಾಂಡ್ಯ ನಾಮಧೇಯ ಅರಸರಲ್ಲಿ ಆರನೆಯವನು.[೫] ಈತನ ಹಲವು ಶಾಸನಗಳನ್ನು ಕಾರ್ಕಳದ ಸುತ್ತಮುತ್ತ ನಾನು ಪತ್ತೆ ಮಾಡಿದ್ದೇನೆ.[೬] ತಮ್ಮದೇ ಆದ ಪ್ರಾಮುಖ್ಯತೆಯನ್ನು ಹೊಂದಿರುವ ಇವು ದಾನಶಾಸನಗಳು. ಪ್ರಸಕ್ತ ಅಧ್ಯಯನಕ್ಕೆ ಎರಡು ಶಾಸನಗಳನ್ನು ಆಯ್ಕೆ ಮಾಡಿಕೊಂಡಿದ್ದೇನೆ.

ವೀರ ಪಾಂಡ್ಯಪ್ಪೊಡೆಯನು ಕ್ರಿ.ಶ. ೧೫೪೦ ರಿಂದ ೧೫೫೫ ರವರೆಗೆ ರಾಜ್ಯವಾಳಿದ. ಇದಕ್ಕೆ ಮೊದಲು ೧೫೩೭ ರಿಂದ ೧೫೪೦ರವರೆಗೆ ತನ್ನ ಸೋದರಮಾವ ಇಮ್ಮಡಿ ಭೈರರಸವೊಡೆಯನೊಂದಿಗೆ ಜಂಟಿ ಆಳ್ವಿಕೆ ನಡೆಸಿದ.[೭] ಕಾರ್ಕಳದ ಒಂದು ಶಾಸನ ಈತನನ್ನು **"ಶ್ರೀ ಮದ್ಭೈರವ ರಾಜ ಪಟ್ಟ ಭಗಿನೀ ಶ್ರೀ ಚಂದಲಾಂಬಾಸುತಃ"** ಎಂದು ಉಲ್ಲೇಖಿಸಿದೆ.[೮] ಅಂದರೆ ಭೈರವ ರಾಜನ ಸೋದರಿ ಶ್ರೀ ಚಂದಲಾಂಬೆಯ ಮಗ. 'ಪಟ್ಟಭಗಿನಿ' ಎಂದರೆ ಪ್ರಾಯಶಃ ಸಿಂಹಾಸನಾಧಿಕಾರ ಹೊಂದಿದ (ಹಿರಿಯ ?) ಸೋದರಿ. ಈಕೆಯ ಮಗ ಪಾಂಡ್ಯಪ್ಪೊಡೆಯ. ಈತ ಕಾರ್ಕಳದ ಪಾಂಡ್ಯನಗರಿಯಲ್ಲಿ ಭವ್ಯವಾದ ಒಂದು ಚತುರ್ಮುಖ ಚೈತ್ಯಾಲಯವನ್ನು ಕಟ್ಟಿಸಿ ಅದರಲ್ಲಿನ ಪೂಜಾ ಕಾರ್ಯಗಳಿಗಾಗಿ ಭೂದಾನ ಮಾಡಿದ ಎಂದು ಈ ಶಾಸನ ತಿಳಿಸುತ್ತದೆ.[೯] ಈ ಕಾರ್ಯವನ್ನು ರಾಜ ತನ್ನ ಗುರುಗಳಾದ ಲಲಿತ ಕೀರ್ತಿಗಳ ಉಪದೇಶದಿಂದ ಮಾಡಿದ.

> **"ಶ್ರೀಮದ್ದೇಶೀಗಣೇ ಖ್ಯಾತೇ ಪನಸೋಕಾವಲೀಶ್ವರಃ(।*)**
> **ಯೋ ಭೂಲ್ಲಲಿತಕೀರ್ತ್ಯಾಖ್ಯ ಸನ್ಮುನೀಂದ್ರೋಪದೇಶತಃ॥"**

ಎಂದು ಶಾಸನದ ಸಂಸ್ಕೃತ ಭಾಷಾ ಭಾಗದಲ್ಲಿ ಹೇಳಿದೆ.[೧೦] ಕಾರ್ಕಳದ ಅರಸರು ಪ್ರಾರಂಭಿಕ ಕಾಲದಿಂದಲೂ ಯಾವುದೇ ಕೆಲಸವನ್ನು ಪ್ರಾರಂಭಿಸುವ ಮೊದಲು ತಮ್ಮ ಗುರುಗಳಾದ ಶ್ರೀ ಲಲಿತಕೀರ್ತಿ ಭಟ್ಟಾರಕರ ಸಲಹೆ, ಸೂಚನೆ ಮತ್ತು ಆಶೀರ್ವಾದವನ್ನು ಪಡೆದು ಮಾಡುತ್ತಿದ್ದರು. ಕಾರ್ಕಳ

*ಗುರುಕೃಪ, ನಂ. ೨೦೩೧, ೧೦ನೇ ಕ್ರಾಸ್, ಕಲ್ಲಹಳ್ಳಿ, ವಿ.ವಿ. ನಗರ, ಮಂಡ್ಯ.

ಜೈನ ಮಠದ ಭಟ್ಟಾರಕಣದ ಶ್ರೀ ಲಲಿತಕೀರ್ತಿಗಳ ಬಗ್ಗೆ ಅತ್ಯಂತ ಪ್ರಾಚೀನ ಉಲ್ಲೇಖ ಮುಂಡ್ಲಿ ಶಾಸನದಲ್ಲಿದೆ.[೧೫]

ಈ ಮುಂಡ್ಲಿಯ ಹೊಳೆಯ ಪಕ್ಕದ ಗ್ರಾಮ ದುರ್ಗ. ಇಲ್ಲಿ ವೀರಪಾಂಡ್ಯಪ್ಪವೊಡೆಯನ ಎರಡು ಶಾಸನಗಳು ದೊರೆತಿವೆ. **ಮಲೆಬೆಟ್ಟು** ಎಂಬಲ್ಲಿನ ಬಾಕ್ಯಾರು ಸ್ಥಳದಲ್ಲಿ (ಗದ್ದೆಯಲ್ಲಿ) ಮೊದಲ ಶಾಸನ ದೊರೆತರೆ **ಕೊಪ್ಪಲ** ಎಂಬ ಸ್ಥಳದಲ್ಲಿ ಎರಡನೆಯ ಶಾಸನ ದೊರೆತಿದೆ. ಅವುಗಳ ವಿವರ ಕೆಳಗಿನಂತಿದೆ.

೧. ಮಲೆಬೆಟ್ಟು ಶಾಸನ

ಶಕವರ್ಷ ೧೪೬೬ನೆಯ ಕ್ರೋಧಿ ಸಂವತ್ಸರದ ಫಾಲ್ಗುಣ ಬಹುಳ (೩ ಆದಿವಾರ)ದಂದು ಅರಿರಾಯ ಗಂಡರದಾವಣಿ ಶ್ರೀ ವೀರಚಂದಲ ದೇವಿಯರ ಕುಮಾರ ಪಾಂಡ್ಯಪ್ಪವೊಡೆಯನು **ಚತುರ್ಮುಖದ ಬಸ್ತಿಯ ಶಾಂತಿನಾಥನಿಗೆ** ನಡೆದ ದೇವಪೂಜೆಗೆ **ಮಲೆಬೆಟ್ಟು** ಗ್ರಾಮದಲ್ಲಿ ಹಾಗೆ ೩೦ರ ಲೆಕ್ಕದಲ್ಲಿ ೧೩೦ ಖಂಡುಗ ಅಕ್ಕಿ ಉತ್ಪತ್ತಿಯ ಭೂಮಿಯನ್ನು ಬಿಟ್ಟು, ಬಿಡಾರ ಎಂಬ ತೆರಿಗೆಗಳಿಂದ ಮುಕ್ತ ಮಾಡಿ ದಾನ ಮಾಡಿದ ಎಂದು ಶಾಸನ ತಿಳಿಸುತ್ತದೆ. ಈ ತೇದಿ ವಿವರ ಕ್ರಿ.ಶ. ೧೫೪೫ ಮಾರ್ಚ್ ೧ ಆದಿವಾರಕ್ಕೆ ಸರಿಹೊಂದುತ್ತದೆ.

೨. ಕೊಪ್ಪಲ ಶಾಸನ

ಶಕವರ್ಷ ೧೪೬೬ ನೆಯ ಕ್ರೋಧಿ ಸಂವತ್ಸರದ ಫಾಲ್ಗುಣ ಬ (೩) ಆದಿವಾರದಂದು ಶ್ರೀಮತು ಅರಿರಾಯಗಂಡರ ದಾವಣಿ ಶ್ರೀ ವೀರ **ಚಂದಾಲ**ದೇವಿಯರ ಕುಮಾರ ಶ್ರೀ ಪಾಂಡ್ಯಪ್ಪವೊಡೆಯನು ಚತುರ್ಮುಖ ಬಸ್ತಿಯ ಪಾರಿಶ್ವ (ಪಾರ್ಶ್ವ)ನಾಥ ಸ್ವಾಮಿಗೆ ನಡೆದ ದೇವಪೂಜೆಗಾಗಿ ಹಾನೆ ೩೦ರ ಲೆಕ್ಕದ ೧೩೦ ಖಂಡುಗ ಅಕ್ಕಿ ಉತ್ಪತ್ತಿಯ ಭೂಮಿಯನ್ನು ಬಿಟ್ಟು ಬಿಡಾರ ಎಂಬ ತೆರಿಗೆಗಳಿಂದ ಮುಕ್ತ ಮಾಡಿ ದಾನ ಮಾಡಿದ ಎಂದು ಈ ಶಾಸನ ತಿಳಿಸುತ್ತದೆ. ಈ ದಾನದ ಭೂಮಿ ಇರುವುದು **ಮಲೆಬೆಟ್ಟಿನ** ಗ್ರಾಮದಲ್ಲಿ ಎರಡು ಶಾಸನ ತಿಳಿಸುತ್ತದೆ. ಇದರ ತೇದಿ ವಿವರವು ಕ್ರಿ.ಶ. ೧೫೪೫ ಮಾರ್ಚ್ ೧ ಆದಿವಾರಕ್ಕೆ ಸರಿಹೊಂದುತ್ತದೆ.

ವಿಶ್ಲೇಷಣೆ

ಎರಡೂ ಶಾಸನಗಳು ೧೫-೧೬ ಸಾಲಿನ ಪುಟ್ಟ ಶಾಸನಗಳು; ಎರಡರ ಲಿಪಿ ಮತ್ತು ಭಾಷೆ-ಕನ್ನಡ. **ಮಲೆಬೆಟ್ಟು** ಶಾಸನ ಜಿನ ಶಾಸನ ಪದ್ಯದಿಂದ ಪ್ರಾರಂಭವಾದರೆ ಕೊಪ್ಪಲ ಶಾಸನದಲ್ಲಿ ಪ್ರಾರ್ಥನಾಶ್ಲೋಕವಿಲ್ಲ. ಎರಡೂ ಶಾಸನಗಳನ್ನು ಹಾಕಿಸಿದಾತ ಬಳ್ಳಾನೇ-ಚಂದಲದೇವಿಯ ಕುಮಾರಪಾಂಡ್ಯಪ್ಪ ವೊಡೆಯ. ಶಾಸನಗಳಲ್ಲಿ ನಮೂದಾಗಿರುವ ದಾನದ ಭೂಮಿಗಳು ಇದ್ದುದು **ಮಲೆಬೆಟ್ಟು** ಗ್ರಾಮದಲ್ಲಿ. ಆದರೆ ಶಾಸನ ಸಹಿತವಾಗಿ ಭೂಮಿಗಳಿಗಿದ್ದ ಅಂತರ ಸುಮಾರು ೫ ಕಿ.ಮೀ.ಗೂ ಹೆಚ್ಚು. ಪರ್ವತದ ತುದಿಯಲ್ಲಿ ಸಮತಟ್ಟು ಮಾಡಿದ ಗದ್ದೆ ಮಲೆಬೆಟ್ಟಿನದಾದರೆ ಪರ್ವತದ ನಡುವಿನ ಇಳಿಜಾರಿನಲ್ಲಿ ಗುಡ್ಡೆ ಕಡಿದು ಸಮತಟ್ಟು ಮಾಡಿದ ಸ್ಥಳ ಕೊಪ್ಪಲ. ಇವು ಮಳೆಯಾಶ್ರಿತವಾದರೂ ಸದಾ ನೀರಿನ ವರತೆ ಇದ್ದ ಫಲವತ್ತಾದ ಸ್ಥಳಗಳು. ಈಗಲೂ ಅದೇ ಪರಿಸ್ಥಿತಿ ಇದೆ.

ಎರಡೂ ಕಡೆಗಳಲ್ಲಿದ್ದ ದಾನದ ಭೂಮಿಗಳಿಂದ ಬರುತ್ತಿದ್ದ ಉತ್ಪತ್ತಿ ಪ್ರಮಾಣ ಒಂದೇ-ಹಾನೆ ೩೦ರ ಲೆಕ್ಕದ ೧೩೦ ಖಂಡುಗ ಅಕ್ಕಿ. ಎರಡರ ತೇದಿ ವಿವರವು ಒಂದೇ ಆಗಿದ್ದು ಇದು ಕ್ರಿ.ಶ. ೧೫೪೫ ಮಾರ್ಚ್ ೧ ಆದಿವಾರಕ್ಕೆ ಸರಿಹೊಂದುತ್ತದೆ. ಮತ್ತು ಈ ದಾನದ ವಿಷಯವನ್ನು ತಿಳಿಸುವ ಶಾಸನಗಳ ವಕ್ಕಣೆ ಒಂದೇ ರೀತಿಯಲ್ಲಿದೆ.

ಮೇಲ್ನೋಟಕ್ಕೆ ಇವು ಹೇಗಿವೆಯೆಂದರೆ ಒಂದರ ಪ್ರತಿ ಇನ್ನೊಂದು ಎಂಬಂತಿವೆ. ಎರಡೂ ಶಾಸನಗಳ ಪೂರ್ಣಪಾಠ ದೊರೆಯದೇ ಇದ್ದಿದ್ದರೆ ಇವನ್ನು ತಪ್ಪಾಗಿ ಅರ್ಥೈಸುವ ಸಾಧ್ಯತೆಯೂ ಇತ್ತು. ಒಂದರಲ್ಲಿ ಪ್ರಾರ್ಥನಾ ಶ್ಲೋಕವಿದ್ದು ಇನ್ನೊಂದರಲ್ಲಿ ಇಲ್ಲದಿರುವುದು ದೋಷ ಎಂದು ಪರಿಗಣಿತವಾಗದೆ ಅದು ಪ್ರತಿಕಾರ (ಶಾಸನ ಕಂಡರಸಿದಾತ)ನ ಚಾತುರ್ಯ ಎನ್ನುವುದಕ್ಕೆ ಅವಕಾಶವಿತ್ತು. ಇದರೊಂದಿಗೆ ಒಂದು ಅನುಮಾನಾಸ್ಪದ ಸೂಚನೆ ಕೊಡುವುದಕ್ಕೂ ಆಸ್ಪದವಿತ್ತು. ಅದೇನೆಂದರೆ ಶಾಸನ ಹಾಕಿಸುವಾಗ ದಾನದ ಭೂಮಿ ಎರಡೂ ಕಡೆಗಳಲ್ಲಿದ್ದು ಅವು ಪರಸ್ಪರ ಸಾಕಷ್ಟು ದೂರದಲ್ಲಿದ್ದ ಕಾರಣ ಒಂದೇ ರೀತಿಯ ಎರಡು ಪ್ರತಿಗಳನ್ನು ಜನರ ತಿಳುವಳಿಕೆಗಾಗಿ ಸಿದ್ಧಪಡಿಸಿ ಎರಡೂ ಸ್ಥಳಗಳಲ್ಲಿ ನೆಡಲಾಗಿದೆ ಎಂದು.

ಆದರೆ ಶಾಸನ ಹಾಕಿಸುವಾಗ ದಾನಿ ರಾಜ ವಹಿಸಿರುವ ಕಿಂಚಿತ್ ಎಚ್ಚರ ಈ ತೆರನಾದ ಸಂದೇಹಗಳಿಗೆ ಆಸ್ಪದ ನೀಡಿಲ್ಲ. ಯಾವ ಯಾವ ದೇವರುಗಳ ಪೂಜಾ ಕಾರ್ಯಗಳಿಗಾಗಿ ಈ ಭೂಮಿಗಳನ್ನು ದಾನ ಮಾಡಲಾಯಿತು ಎಂಬುದನ್ನು ಆಯಾ ಶಾಸನಗಳಲ್ಲಿ ತಿಳಿಸಲಾಗಿದೆ. ಮಲೆಬೆಟ್ಟಿನ ಶಾಸನ ಇರುವ ಗದ್ದೆಗಳನ್ನು **ಶಾಂತಿನಾಥ ದೇವರ** ಪೂಜೆಗಾಗಿಯೂ ಕೊಪ್ಪಲದ ಗದ್ದೆಗಳನ್ನು **ಪಾರಿಶ್ವ (ಪಾರ್ಶ್ವ)ನಾಥದೇವರ** ಪೂಜೆಗಾಗಿಯೂ ದಾನ ಮಾಡಲಾಯಿತು. ಶಾಸನಗಳ ಪಡಿಯಚ್ಚು ತೆಗೆದು, ಓದಿ ಅವುಗಳ ಪಾಠ ಸಿದ್ಧ ಮಾಡುವ ಕಾರ್ಯದಲ್ಲಿ ಸ್ವಲ್ಪ ಕ್ಷಮತೆ ತಪ್ಪಿದ್ದರೆ ಈ ಸುಳಿವು ದೊರೆಯುವುದು ಸಾಧ್ಯವಾಗು

ತ್ತಿರಲಿಲ್ಲ. ಈ ಶಾಸನಗಳು ಪ್ರತ್ಯೇಕ ಮತ್ತು ಸ್ವತಂತ್ರ ಶಾಸನಗಳು ಎಂದು ಪುಷ್ಟೀಕರಿಸಲು ಇರುವ ಕುರುಹು ಇಲ್ಲಿರುವ ದೇವರುಗಳ ಹೆಸರು ಮಾತ್ರ. ಅದೃಷ್ಟವಶಾತ್ ಅವು ನಮ್ಮ ವಿವೇಚನೆಗೆ ಲಭಿಸಿವೆ. ಸಾಮಾನ್ಯ ದರ್ಜೆಯ ಕಲ್ಲನ್ನು ಉಪಯೋಗಿಸಿ ಶಾಸನ ಸಿದ್ಧಪಡಿಸಿದ್ದರೂ ಕಾಲನ ಧಾಳಿಗೆ ಸಿಲುಕಿ ಇವುಗಳ ಅಕ್ಷರ ಮಾಸದಿರುವದು ಆಶ್ಚರ್ಯವಾದರೂ ಸತ್ಯ ಸಂಗತಿ. ಇಲ್ಲಿ ಈ ಎರಡು ದೇವರುಗಳ ಹೆಸರುಗಳು ಇಲ್ಲದಿದ್ದರೆ ಸಹಜವಾಗಿಯೇ ಎರಡು ಶಾಸನಗಳ ಅವಶ್ಯಕತೆ ಬಗ್ಗೆ ಸಂಶಯ ಮೂಡುತ್ತಿತ್ತು. ಒಂದೇ ವಿಷಯ ಕುರಿತಾದ ಎರಡು ಶಾಸನಗಳ ಅವಶ್ಯಕತೆಯ ಬಗೆಗಿನ ಸಂದೇಹ ಇದರಿಂದ ದೂರಾಗಿದೆ.

ಆದರೆ ಇಲ್ಲಿಗೆ ಈ ಶಾಸನಗಳ ಬಗೆಗಿನ ಸಮಸ್ಯೆ ದೂರವಾದಂತಾಗುವುದಿಲ್ಲ. ಮಲೆಬೆಟ್ಟಿನ ಶಾಸನದಲ್ಲಿ ರಾಜ **ಚತುರ್ಮುಖ ಬಸದಿಯ ಶಾಂತಿನಾಥ ದೇವರ** ಪೂಜಾ ಕಾರ್ಯಕ್ಕಾಗಿ ಎಂದಿದ್ದರೆ ಕೊಪ್ಪಲ ಶಾಸನದಲ್ಲಿ **ಚತುರ್ಮುಖ ಬಸದಿಯ ಪಾರಿಶ್ವನಾಥ ದೇವರ** ಪೂಜಾ ಕಾರ್ಯಕ್ಕಾಗಿ ದಾನ ಮಾಡಿದ್ದು ಎಂದಿದೆ. ಎರಡೂ ಶಾಸನಗಳಲ್ಲಿ ಚತುರ್ಮುಖ ಬಸದಿಯ ಉಲ್ಲೇಖವಿದ್ದು ಬೇರೆ ಬೇರೆ ದೇವರುಗಳ ಹೆಸರಿರುವುದನ್ನು ನೋಡಿದಾಗ ಪ್ರಾಯಶಃ **ಚತುರ್ಮುಖ ಬಸದಿ ಒಂದೆ. ಅಲ್ಲಿಯ ದೇವರುಗಳು ಮಾತ್ರ ಎರಡು** ಎಂಬ ನಿರ್ಧಾರಕ್ಕೆ ಆಸ್ಪದವಿದೆ.

ಯಾವ ಸ್ಥಳದಲ್ಲಿ ಈ ಚತುರ್ಮುಖ ಬಸದಿ ಇತ್ತು ಎಂಬುದಕ್ಕೆ ಶಾಸನದಲ್ಲಿ ಮಾಹಿತಿ ಇಲ್ಲ. ಶಾಸನಗಳು ದೊರೆತ ಸ್ಥಳಗಳ ಸಮೀಪ ಯಾವುದೇ ಬಸದಿ ಇಲ್ಲ. ಹಾಗಾಗಿ ಈ ಚತುರ್ಮುಖ ಬಸದಿ ಬೇರೆಲ್ಲೊ ಇದ್ದುದಾಗಿರುವಂತೆ ಕಾಣುತ್ತದೆ. ಚಂದಲದೇವಿಯ ಕುಮಾರ ವೀರಪಾಂಡ್ಯ ಪೊಡೆಯನು ಕಾರ್ಕಳದ ಪಾಂಡ್ಯನಗರಿಯಲ್ಲಿ ಚತುರ್ಮುಖ ಬಸದಿಯನ್ನು ಕಟ್ಟಿಸಿದ ಪ್ರಸ್ತಾಪ ಮೇಲೆ ಬಂದಿದೆ.

ಅಲ್ಲಿ **"ಪಾರಿಸ್ವನಾಥ ಮುಖ್ಯವಾದ ನೆಲೆ ಮೂರಜಿಲ್ಲು ನಡೆವ ದೇವಪೂಜೆಗೆ"** ಮಾಡಿದ ದಾನವನ್ನು ಶಾಸನಾಂಕಿತ ಮಾಡಿಕೊಟ್ಟ ಎಂದು ಅಲ್ಲಿಯ ಶಾಸನದಲ್ಲಿದೆ.[೨] ಈ ಶಾಸನದ ಕಾಲ ಶಕವರ್ಷ ೧೪೬೭ ಕ್ರೋಧಿ ಸಂವತ್ಸರ ಮಾಘ ಶುದ್ಧ ೪ ರವಿವಾರ. ಇದು **ಕ್ರಿ.ಶ. ೧೫೪೫ ಜನವರಿ ೧೬**ಕ್ಕೆ ಸರಿಹೊಂದುತ್ತದೆ. (ಕ್ರೋಧಿ ಸಂವತ್ಸರ ಇದ್ದುದು ಶಕವರ್ಷ ೧೪೬೬ರಲ್ಲಿ) ಮಂಜೇಶ್ವರ ಗೋವಿಂದ ಪೈಗಳು ಈ ತೇದಿ ವಿವರಕ್ಕೆ ಸಂಬಂಧಿಸಿದಂತೆ ದೀರ್ಘ ಲೇಖನವೊಂದನ್ನು **"ವಿಷಮವಾದೊಂದು ತೇದಿ"** ಎಂಬ ತಲೆಬರಹದಡಿ ಬರೆದಿದ್ದಾರೆ[೩] ಆದರೆ ವಿಷಮವಾದುದೇನೂ ಇಲ್ಲಿ ಇಲ್ಲ.

ಮಲೆಬೆಟ್ಟು ಮತ್ತು ಕೊಪ್ಪಲ ಶಾಸನಗಳ ಕಾಲ ಕ್ರಿ.ಶ. ೧೫೪೫ ಮಾರ್ಚ್ ೧. ಈ ಎರಡೂ ಶಾಸನಗಳಿಗೂ ಕಾರ್ಕಳದ ಶಾಸನಕ್ಕೆ ಇರುವ ಕಾಲದ ಅಂತರ ಕೇವಲ ಒಂದೂವರೆ ತಿಂಗಳು. ಮೂರೂ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಧರ್ಮ ಕಾರ್ಯಗಳ ಕರ್ತೃ ಒಬ್ಬನೆ ಚಂದಲದೇವಿಯ ಕುಮಾರ ವೀರಪಾಂಡ್ಯಪೊಡೆಯ. ಈ ಆಧಾರದಲ್ಲಿ ಮಲೆಬೆಟ್ಟು ಮತ್ತು ಕೊಪ್ಪಲ ಶಾಸನಗಳು ಉಲ್ಲೇಖಿಸಿರುವ **'ಚತುರ್ಮುಖ ಬಸದಿ'** ಕಾರ್ಕಳದ ಪಾಂಡ್ಯನಗರಿಯಲ್ಲಿನ **ಚತುರ್ಮುಖ ಬಸದಿ** ಎಂದು ನಿರ್ಧರಿಸಬಹುದು. ಇಲ್ಲಿದ್ದ **ಶಾಂತಿನಾಥ** ಮತ್ತು ಪಾರಿಶ್ವ (ಪಾರ್ಶ್ವ)ನಾಥ ದೇವರುಗಳ ಪೂಜಾ ಕಾರ್ಯಗಳಿಗಾಗಿ ಕ್ರಮವಾಗಿ ಮಲೆಬೆಟ್ಟು ಮತ್ತು ಕೊಪ್ಪಲಗಳಲ್ಲಿ ವಿಶಾಲವಾದ ಭೂಮಿಗಳನ್ನು ದಾನ ಮಾಡಲಾಯಿತು. ಈ ಭೂಮಿಗಳು ಇದ್ದುದು ರಾಜಧಾನಿಗಳಾದ **ಕೆರವಾಸೆ ಮತ್ತು ಕಾರ್ಕಳ**ಗಳ ನಡುವೆ ಇದ್ದ **ಮಲೆಬೆಟ್ಟು** ಗ್ರಾಮದಲ್ಲಿ. ಹಾಗಾಗಿ ಇಲ್ಲಿನ ಉತ್ಪತ್ತಿ ಬಸದಿಗೆ ನಿರಂತರವಾಗಿ ಸಂದಾಯವಾಗುತ್ತಿತ್ತು.

ಸ್ಥಳನಾಮ

೧. ಕಾರ್ಕಳದ ಪಾಂಡ್ಯ ನಗರಿಯಲ್ಲಿ ನಿರ್ಮಾಣಗೊಂಡ ಈ ಚತುರ್ಮುಖ ಬಸದಿಯನ್ನು ಈಗ **ಕೆರೆ ಬಸದಿ** ಎಂದು ಕರೆಯುತ್ತಾರೆ. ಕಾರಣ **ಆನೆಕೆರೆ** ಎಂದು ಕರೆಯಲಾಗುವ ಹಿರಿದಾದ ಕೆರೆಯ ನಡುವೆ ಸುಂದರ ವಾತಾವರಣದಲ್ಲಿ ಈ ಬಸದಿ ಈಗ ಇದೆ. ಈ ಬಸದಿಯ ಶಾಸನದಲ್ಲಿ ಕೆರೆಯ ಉಲ್ಲೇಖ ಇಲ್ಲ. ರಾಜ ಬಸದಿಯನ್ನು ಕೆರೆಯ ಮಧ್ಯವೇ ಕಟ್ಟಿದ್ದರೆ ಆ ವಿಷಯ ಶಾಸನದಲ್ಲಿ ಪ್ರಸ್ತಾಪಿತವಾಗುತ್ತಿತ್ತು. ಪ್ರಾಯಶಃ ಆಗ ಆ ಕೆರೆ ನಿರ್ಮಾಣಗೊಂಡಿರಲಿಲ್ಲ ಎಂದು ಕಾಣುತ್ತದೆ. ಆದರೆ ಬಸದಿಯ ದಕ್ಷಿಣ ಮತ್ತು ಪೂರ್ವ ಭಾಗಗಳಿಂದ ನೀರು ಹರಿಯುವ ತೋಡುಗಳಿದ್ದುವು. ಮಳೆಗಾಲದಲ್ಲಿ ಹೆಚ್ಚಿನ ಪ್ರಮಾಣದ ನೀರಿನೊಂದಿಗೆ ರಭಸದಿಂದ ಹರಿದು ಸುಂದರ ನೋಟವನ್ನು ಸೃಷ್ಟಿಸಿದ್ದವೆಂದು ಕಾಣುತ್ತದೆ.

   ಕಾರ್ಕಳ ಶಾಸನದಲ್ಲಿ ಪಾರ್ಶ್ವನಾಥ ಮುಖ್ಯರಾಗಿ ನೆಲೆ ಮೂರರಲ್ಲಿ ನಡೆವ ದೇವಪೂಜೆಗೆ ದಾನ ಎಂದಷ್ಟೆ ಇದೆ. ಇನ್ನುಳಿದ ತೀರ್ಥಂಕರರ ಹೆಸರಿಲ್ಲ. **ಮಲೆಬೆಟ್ಟು** ಮತ್ತು **ಕೊಪ್ಪಲ** ಶಾಸನಗಳು **ಶಾಂತಿನಾಥ** ಮತ್ತು ಪಾರ್ಶ್ವನಾಥರನ್ನು ಹೆಸರಿಸಿವೆ.

೨. ಮೇಲೆ ಅವಲೋಕಿಸಿರುವ ಶಾಸನಗಳಲ್ಲಿ **ಮಲೆಬೆಟ್ಟು** ಗ್ರಾಮ ಉಲ್ಲೇಖವಾಗಿದೆ. **ಮಲೆಬೆಟ್ಟು** ಪರ್ವತದ

ಶಿರೋಭಾಗದಲ್ಲಿರುವ ಸ್ಥಳ. ಈ ಗ್ರಾಮ ಈಗ ಹರಡಿದ್ದುದು ಪರ್ವತ ಭಾಗದಲ್ಲಿ. **ಮಲೆಬೆಟ್ಟು**[3] ಎಂಬ ಹೆಸರಿನ ಸ್ಥಳ ಈಗಲೂ ಇಲ್ಲಿದೆ. ಇದು ಗ್ರಾಮದ ಅತಿ ಎತ್ತರವಾದ ಸ್ಥಳವೇ ಆಗಿದೆ. ಬಹಳ ವಿಶಾಲವಾಗಿ ಮಲೆಗಳಲ್ಲಿ ಹುದುಗಿದ್ದ ಈ ಗ್ರಾಮ ಈಗ ಇಲ್ಲ. **'ದುರ್ಗ'** ಎಂಬ ಗ್ರಾಮದ ಒಂದು ಉಪಗ್ರಾಮವಾಗಿ ಈಗ ಇದು ಮಾರ್ಪಟ್ಟಿದೆ.

ಶಾಸನ ಕಾಲಕ್ಕೆ ದುರ್ಗ ಗ್ರಾಮ ಇರಲಿಲ್ಲ. ಆದರೆ ದುರ್ಗ ಅರ್ಥಾತ್ ಕೋಟೆಯೊಂದು ಇಲ್ಲಿತ್ತು. ಪರ್ವತ ಶ್ರೇಣಿಯ ಒಂದೆಡೆ ಈ ದುರ್ಗ (ಕೋಟೆ) ಇತ್ತು. ಇದರ ಅವಶೇಷಗಳನ್ನು ಈಗಲೂ ನೋಡಬಹುದು.

ಇದೇ ರೀತಿಯಲ್ಲಿ **ಕೊಪ್ಪಲ** ಎಂಬ ಸ್ಥಳನಾಮ ಶಾಸನ ಕಾಲಕ್ಕೆ ಇರಲಿಲ್ಲ. ಪ್ರಾಯಶಃ ದುರ್ಗ ಗ್ರಾಮದ ಹುಟ್ಟಿನೊಂದಿಗೆ ಕೊಪ್ಪಲ ಸ್ಥಳನಾಮವೂ ಬೆಳೆದಿರಬೇಕು. ಈಗ **ಮಲೆಬೆಟ್ಟು** ಮತ್ತು **ಕೊಪ್ಪಲ**ಗಳೆರಡೂ **ದುರ್ಗ** ಗ್ರಾಮದಲ್ಲಿವೆ.

ಶಾಸನ ಪಾಠಗಳು

೧. ಮಲೆಬೆಟ್ಟು ಶಾಸನ

೧ ಶ್ರೀಮತ್ಪರಮಗಂಭೀರ ಶದ್ವಾ (ಸ್ಯಾದ್ವಾ)ದಾ ಮೋಘಲಾಂಚ (ಛ) ನಂ ಜೀ

೨ ಯಾತ್ತ್ರೈಲೋಕ್ಯನತ (ನಾಥ) ಸ್ಯ ಶಶ (ಶಾಸ)ನಂ ಜಿನಸತ (ಶಾಸ)ನಂ [ii *] ಸ್ವಸ್ತಿ ಶ್ರೀಜ-

೩ ಯಾಭ್ಯುದಯ ಶಾಲಿವಾಹನ ಶಕವರುಷ ೧೪೬೬ ನೆಯ

೪ ವರ್ತಮಾನ ಕ್ರೋಧಿ ಸಂವತ್ಸರದ ಫಾಲ್ಗುಣ ಬ (೩ ಆದಿವಾರ ಶ್ರೀ)

೫ ಮತು ಅರಿರಾಯ ಗಂಡ ದಾವಣಿ ಶ್ರೀ ವೀರ ಚ-

೬ ಂದಲದೇವಿಯರ ಕುಮಾರ ಪಾಂಡ್ಯಪ್ಪವೊ-

೭ ಡೆಯರು ಚತುರ್ಮುಖದ ಬಸ್ತಿಯ **ಶಾಂತಿನಾಥ**

೮ (ನಲ್ಲಿ) ನಡೆವ ದೇವಪೂಜೆಗೆ ಗ್ರಾಮ ೧

೯ ಗಡಿ ಅಕ್ಕಿ ಹಾನೆ ೩೦ ಲೆಕ್ಕದ ಖಂಡುಗ ೧೩(೦)

೧೦ ಆ ಸೀಮೆಯನು ಜಲಪಾಷಾಣ ಮುಂತಾಗಿ ಧಾ-

೧೧ ೦ ರಾ ಪೂರ್ವಕವಾಗಿ ಬಿಡ(ಟ)ದು ಬಿಟ್ಟು ಬಿಸಾ-

೧೨ ೦ ರ ಬಿಲ್ಲ ಯ ಧಂರ್ಮ್ಮಕ್ಕೆ ತಪ್ಪಿದವರು ಯೇಳ್ಗಳಿ

೧೩ ೦ ಘಟ್ಟದಲ್ಲಿ ಬೆಳೆದ ಯತ್ತಿನ ದೋಶ ಗಂಗೆ ರಾಮೇ

೧೪ ೦ ಶ್ವರದಲ್ಲಿ ಕಪಿಲೆಯ ಕೊಂದ ದೋಷ ಪಾರಿಶ್ವ

೧೫ ೦ ನಾಥನ ಶಿಲೆಯ ಭಿಂನವ ಮಾಡಿದವರೂ

೧೬ ೦ ಸೂರ್ಯ ಚಂದ್ರಾದಿಗಳ ಸಾಕ್ಷಿ ಶ್ರೀ ಶ್ರೀ ಶ್ರೀ [೧೧*]

೨. ಕೊಪ್ಪಲ ಶಾಸನ

೧ ೦ ಸ್ವಸ್ತಿಶ್ರೀ ಜಯಾಭ್ಯುದಯ ಶಾಲಿವಾಹ-

೨ ೦ ನ ಶಕ ವರುಷ (೧೪೬೬ನೆಯ) ವರ್ತಮಾ-

೩ ೦ ನ ಕ್ರೋಧಿ ಸಂವತ್ಸರದ ಫಾಲ್ಗುಣ ಬ (೩) ಆ

೪ ೦ ಶ್ರೀಮತು ಅರಿರಾಯ ಗಂಡರ ದಾವಣಿ ಶ್ರೀ ವೀ-

೫ ೦ ರ ಚಂಗಲದೇವಿಯರ ಕುಮಾರ (ಶ್ರೀ) ಪಾಂಡ್ಯಪ್ಪ ವೊ-

೬ ೦ ಡೆಯರು ಚತುರ್ಮುಖ(ದ) ಬಸ್ತಿಯ ಪಾರಿಶ್ವನಾಥನಲ್ಲು ನ

೭ ೦ ಡವ ದೇವಪೂಜೆಗೆ ಮಲೆಬೆಟ್ಟಿನ ಗ್ರಾಮ

೮ ೦ ೧ಕ್ಕೆ ಗದ್ದೆ ಅಕ್ಕಿ ಹಾನೆ ೩೦ ಲೆಕ್ಕದ ಖ ೧೩೦ ಆ

೯ ೦ ಸೀಮೆಯನು ಜಲಪಾಷಾಣ ಮುಂತಾಗಿ ಧಾ-

೧೦ ೦ ರಾ ಪೂರ್ವಕವಾಗಿ ಬಿಟುದು ಬಿಟು ಬಿಡಾರ ಯಿ-

೧೧ ೦ ಲ್ಲ ಯಿ ಧಂರ್ಮ್ಮದ ತಪ್ಪಿದವರು ಯೇಳು ಯೇಳು ಘಟ್ಟದ-

೧೨ ೦ ಲ್ಲಿ ಯೆಳೆದ ಯೆತ್ತಿನ ದೋಶ ಗಳಿಂಗೆ ರಾಮೇಶ್ವ

೧೩ ೦ ರದಲ್ಲಿ ಕಪಿಲೆಯ ಕೊಂದ ದೋಷ ಪಾರಿಶ್ವ-

೧೪ ೦ ನಾಥನ ಶಿಲೆಯ ಭಿಂನ ಮಾಡಿದ (ವರೂ)

೧೫ ೦ ** ** ** ** ** ** ** [ii *]

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. i) P.N. Narasimha Muthy : *"Jainism on the Karana Coast"*, (1983) Thesis, unpublished P. 136 **[P.N.N. - JKC]**.
ii) ಪಿ.ಎನ್. ನರಸಿಂಹಮೂರ್ತಿ, ಕಾರ್ಕಳ ಒಂದು ಪ್ರಾದೇಶಿಕ ಅಧ್ಯಯನ (೧೯೮೫), ಪುಟ ೧೩.

೨. Ep. Carn, Vol. VI (Rice) Mg : 37, 65, 66, 67 etc i kp. 1, 2, 3, and 10.

೩. ಹಲವಾರು ಮಂದಿ ರಾಜರು ಈ ವಂಶದಲ್ಲಿ ಆಗಿಹೋದರು. ಇವರಲ್ಲಿ ಪ್ರಮುಖರಾದ ಕೆಲವರು – ೧) ವೀರಪಾಂಡ್ಯ (I) ಈತ ಪಾಂಡ್ಯ **ಮರಕಾಳನನ್ನು** ಸೋಲಿಸಿ ಖಾಂಡ್ಯದ ಅಗ್ರಹಾರವನ್ನು ರಕ್ಷಿಸಿದ ಮತ್ತು ಹೊಯ್ಸಳ ನಾಡಿಗೆ ಬಂದಿದ್ದ ಆಪತ್ತನ್ನು ನಿವಾರಿಸಿದ. (ಕ್ರಿ.ಶ. ೧೨೮೬–೧೩೦೦). ೨) **ಲೋಕನಾಥದೇವ** (೧೩೩೪–೪೪) ಈತನ ಕಾಲದಲ್ಲಿ ಕಾರ್ಕಳದ ಹಿರಿಯಂಗಡಿಯಲ್ಲಿ ಗುರುಗಳ ಬಸದಿ ನಿರ್ಮಾಣ. ೩) **ವೀರಚೆನ್ನರಸ** ಮತ್ತು **ಪಾಂಡ್ಯ ದೇವರಸ** (II) (೧೩೭೫–೧೩೯೦) ಇವರ ಕಾಲದಲ್ಲಿ ಕೆರವಾಸೆಯಲ್ಲಿ ವರ್ಧಮಾನಸ್ವಾಮಿ ಬಸದಿ ನಿರ್ಮಾಣ. ೪) ವೀರಭೈರರಸವೊಡಿಯರ (೧೩೯೦–೧೪೨೦) ಹಿಡಿಯಂಗಡಿಯಲ್ಲಿ ನೇಮಿನಾಥ ಮತ್ತು ಬಾರಕೂರಿನಲ್ಲಿ ಪಾರ್ಶ್ವನಾಥ ಬಸದಿಗಳ ನಿರ್ಮಾಣ. ೫) ವೀರಪಾಂಡ್ಯದೇವ (III) (೧೪೨೦–೧೪೫೪) ಅಭಿನವ **ಚಾಮುಂಡರಾಯ**ನೆಂದು ಬಿರುದಾಂಕಿತನಾದ ಈತ ಕಾರ್ಕಳದಲ್ಲಿ ಬಾಹುಬಲಿ ವಿಗ್ರಹ ಮತ್ತು ಬ್ರಹ್ಮದೇವ ಸ್ತಂಭ ಸ್ಥಾಪಿಸಿದ. ೬) ವೀರಪಾಂಡ್ಯದೇವರಸ (IV) ೧೪೫೫–೧೪೭೫ ಈತ ಹಿರಿಯಂಗಡಿಯಲ್ಲಿ ಅತಿ ತುಂಗವೂ ಮತ್ತು ಸುಂದರವೂ ಆದ ಮಾನಸ್ತಂಭವನ್ನು ಸ್ಥಾಪಿಸಿ **ಅಭಿನವ ಪಾಂಡ್ಯ ದೇವವೊಡೆಯ** ನೆಂದು ಬಿರುದು ಪಡೆದ. ೭) ಇಮ್ಮಡಿ ಭೈರರಸವೊಡೆಯ (ಭೈರವ IV) ೧೫೦೫–೧೫೪೦. ಈತ ಜೀರ್ಣವಾಗಿದ್ದ ಕಳಸದ ಕಳಸನಾಥ ದೇವಾಲಯವನ್ನು ಸಂಪೂರ್ಣ ಶಿಲಾಮಯವಾಗಿ ಅತಿ ಸುಂದರವಾಗಿ ನಿರ್ಮಿಸಿದ. ಈಗ ಇರುವ ಕಳಸನಾಥ ದೇವಾಲಯ ಇವನ ಕೊಡುಗೆ. ೮) ವೀರಪಾಂಡ್ಯವೊಡೆಯ (ಪಾಂಡ್ಯ VI) ಈತ ಕಾರ್ಕಳದ ಪಾಂಡ್ಯನಗರಿಯಲ್ಲಿ ಚತುರ್ಮುಖ ಬಸದಿ ನಿರ್ಮಿಸಿದ. ಬಸದಿ, ದೇವಾಲಯಗಳ ನಿರ್ಮಾಣ, ಜೀರ್ಣೋದ್ಧಾರ ಮತ್ತು ಅವುಗಳಿಗೆ ದಾನಗಳನ್ನು ಮಾಡುವುದು ಈ ವಂಶದ ಪ್ರಮುಖ ಕಾರ್ಯಗಳು. ಈ ಪಟ್ಟಿ ಇನ್ನೂ ಬೆಳೆಯುತ್ತದೆ.

೪. S.R. Sarma : *Jainism and Karnataka Culture,* (1940), **pp. 102-119.**
P. Gururaja Bhatt : *Studies in Tulura History and Culture* (1976) Chaps. on Jaina art.
P.N.N. murthy : **JKC** p. 457-535.
ಕಾರ್ಕಳ ಪ್ರಾದೇಶಿಕ ಅಧ್ಯಯನ (ಕಾಪ್ರಾಅ), ಪುಟ ೪೪–೪೮.

೫. ಕಾ.ಪ್ರಾ.ಅ. ಪುಟ ೧೨–೧೬.
P.N.N. J.K.C. p. 128-136, 168-69.

೬ ವಿನಾಯಕಬೆಟ್ಟು, ಕಾಬೆಟ್ಟು, ಮಲೆಬೆಟ್ಟು, ಕೊಪ್ಪಲ, ಕೆರವಾಸೆ, ಮಾಳ ಇತ್ಯಾದಿ.

೭. ಕಾ.ಪ್ರಾ.ಅ. ೧೬–೧೭.
P.N.N. J.K.C. p. 154-56.

೮. *South Indian Inscriptions,* Vol. VII No. 248.

೯. ಅದೇ.,

೧೦. ಅದೇ., ಶಾಸನಪಾಠ, ಸಾಲು ೩–೪.

೧೧. **ಶಾಸನ ಅಧ್ಯಯನ.,** ಕೆ.ಜಿ. ಭಟ್‌ಸೂರಿ (ಸಂ), ಸಂ. ೨, ಸಂಚಿಕೆ–೧, ಪುಟ ೨೫–೨೮.

೧೨. *South Indian Inscriptions,* Vol. VII No. 248.
ಶಾಸನಪಾಠ ಸಾಲು ೧೩–೧೪.

೧೩. **ಗೋವಿಂದಪೈ ಸಂಶೋಧನ ಸಂಪುಟ,** (೧೯೯೫), ಹೆರಂಜೆ ಕೃಷ್ಣಭಟ್ಟ, ಮುರಳೀಧರ ಉಪಾಧ್ಯಾಯ (ಸಂ) ಪುಟ ೬೮೨.

೧೪. ಸ್ಥಳೀಯ ಮಾತಿನಲ್ಲಿ **ಬೆಟ್ಟು** ಎಂಬ ಪದ ಸ್ಥಳವಾಚಕವಾಗಿ ಈಗಲೂ ಪ್ರಯೋಗದಲ್ಲಿದೆ. ಎತ್ತರವಾದ ಸ್ಥಳಕ್ಕೆ **ಬೆಟ್ಟು** ಎಂದು ಕರೆಯುತ್ತಾರೆ. ಇಲ್ಲಿ ನೀರು ನಿಲ್ಲುವುದು ಕಷ್ಟ. ಮಳೆ ಇದ್ದಾಗ ಮಾತ್ರ ಇಲ್ಲಿ ಕೃಷಿ ಸಾಧ್ಯ. "ಮಲೆಬೆಟ್ಟು' ಎಂಬ ಹೆಸರು ಅತ್ಯಂತ ರೋಚಕವಾಗಿದೆ. ಇಲ್ಲಿ **ಮಲೆ** ಎಂದರೆ ಬೆಟ್ಟ–ಪರ್ವತ ಪ್ರದೇಶ. **ಬೆಟ್ಟು**–ಎತ್ತರವಾದ ಸ್ಥಳ. ಅಂದರೆ ಪರ್ವತದ ಶಿಖರ ಭಾಗದ ಸ್ಥಳ. ದುರ್ಗ ಒಂದು ಬೆಟ್ಟ ಪ್ರದೇಶದಲ್ಲಿರುವ ಗ್ರಾಮ. ಇದರ ಒಂದು ಉಪಗ್ರಾಮವಾಗಿ ಬೆಟ್ಟದ ಉನ್ನತ ಸ್ಥಳದಲ್ಲಿದೆ **'ಮಲೆಬೆಟ್ಟ'**.

ಡಾ. ಹಿ.ವಿ. ಕೃಷ್ಣಮೂರ್ತಿ*


ಪಲ್ಲವ ಶ್ರೀಕಂದವರ್ಮನ ತಾಮ್ರಪಟಗಳು

ದಕ್ಷಿಣ ಭಾರತದ ಇತಿಹಾಸದಲ್ಲಿ ಪಲ್ಲವರ ಆಳ್ವಿಕೆಯ ಕಾಲ ಮಹತ್ವಪೂರ್ಣವಾದುದು. ಆದರೆ ಅವರ ಇತಿಹಾಸದ ಮೂಲಚೂಲಗಳು ಇನ್ನೂ ಅಸ್ಪಷ್ಟ. ಆ ರಾಜವಂಶದ ಆಳ್ವಿಕೆಗೆ ಕರ್ನಾಟಕದ ಹಲವು ಭಾಗಗಳು ಒಳಪಟ್ಟಿದ್ದಿತು. ಅದಕ್ಕೆ ಹಿರೇಹಡಗಲಿ ಮುಂತಾದ ಸ್ಥಳಗಳಲ್ಲಿ ದೊರೆತಿರುವ ಪ್ರಾಕೃತ ಭಾಷೆಯ ತಾಮ್ರಪಟಗಳೇ ಸಾಕ್ಷಿ. ಪ್ರಸ್ತುತ ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲ್ಲೂಕಿಗೆ ಸೇರಿದ ಗ್ರಾಮವೊಂದರ ವ್ಯಕ್ತಿಯೊಬ್ಬರು ಈಗ್ಗೆ ಸುಮಾರು ೩ ತಿಂಗಳ ಹಿಂದೆ ನನ್ನ ಗಮನಕ್ಕೆ ತಂದ ಪ್ರಸ್ತುತ ತಾಮ್ರಪಟಗಳ ಕಾರ್ಬನ್ ಪ್ರತಿಗಳು ಸುಮಾರು ೨೦ ಸೆಂ.ಮೀ. ಉದ್ದ, ೭ ಸೆಂ.ಮೀ. ಅಗಲ ಅಳತೆಯುಳ್ಳವಾಗಿವೆ. ದಾಕ್ಷಿಣಾತ್ಯ ಬ್ರಾಹ್ಮಿಮೂಲದಿಂದ ರೂಪುಗೊಂಡ ಕನ್ನಡ ಲಿಪಿಯಲ್ಲಿರುವ ಈ ಶಾಸನದ ಭಾಷೆ ಸಂಸ್ಕೃತ. ಮೂರು ಫಲಕಗಳಿಂದ ಕೂಡಿರುವ ಈ ತಾಮ್ರಶಾಸನದ ಮೊದಲ ಫಲಕದ ಹಿಂಭಾಗ, ಎರಡನೆಯ ಫಲಕದ ಎರಡೂ ಬದಿಗಳಲ್ಲಿ ಮತ್ತು ಮೂರನೆಯ ಫಲಕದ ಮುಂಭಾಗದಲ್ಲಿ ಮಾತ್ರ ಕೊರೆಯಲಾಗಿದೆ. ಮತ್ತು ನಂದಿ ಲಾಂಛನವನ್ನು ಹೊಂದಿದೆ ಎಂದು ತಿಳಿದುಬರುತ್ತದೆ. ಒಟ್ಟು ೨೯ ಸಾಲುಗಳಲ್ಲಿರುವ ಈ ಶಾಸನದ ೨ನೆಯ ಫಲಕದ ಹೊರತು ಎಲ್ಲಾ ಫಲಕಗಳಲ್ಲಿ ತಲಾ ೭ ಸಾಲುಗಳಿವೆ. ೨ನೆಯ ಫಲಕದಲ್ಲಿ ಮಾತ್ರ ೮ ಸಾಲುಗಳಿವೆ. ಎರಡನೆಯ ಫಲಕದ ಹಿಂಬದಿಯ ಪಾಠ ದೊರೆತಿಲ್ಲ. ಮೂರನೆಯ ಫಲಕದ ೨೩ ನೆಯ ಸಾಲಿನ ಭಾಷೆ ಸಂಸ್ಕೃತವಿದ್ದಂತಿಲ್ಲ. ಆದರೂ ಈ ವಿಷಯದಲ್ಲಿ ಖಚಿತತೆ ಕಷ್ಟ.


ಈ ಶಾಸನವು ಪಲ್ಲವ ಕಂದವರ್ಮನದಾಗಿದ್ದು, ಈತನ ಆಳ್ವಿಕೆಯ ೨ ನೆಯ ವರ್ಷದಲ್ಲಿ (ಚೈತ್ರಮಾಸ, ಶುಕ್ಲಪಕ್ಷ, ಸಪ್ತಮಿ, ಸ್ವಾತಿ ನಕ್ಷತ್ರ, ಬುಧವಾರ) ರಚಿತವಾಗಿದೆ. ಕಂದವರ್ಮನ ಮರಿಮಗನೂ ದೇವ ಬ್ರಾಹ್ಮಣ ವೃದ್ಧರಲ್ಲಿ ಗೌರವವುಳ್ಳವನೂ ಅನೇಕ ಗೋವುಗಳು ಮತ್ತು ಸುವರ್ಣ ದಾನದಲ್ಲಿ ಸಂಪನ್ನನಾಗಿರುವವನು ಧರ್ಮದ ರಕ್ಷಕನೂ ಪ್ರಜಾಪಾಲನೆಯಲ್ಲಿ ದಕ್ಷನೂ ಲೋಕವನ್ನು ಪಾಲಿಸುವವನೂ ದೇವರಲ್ಲಿ ಭಕ್ತಿಯುಳ್ಳವನೂ ಸತ್ಯವನ್ನೇ ದೀಕ್ಷೆಯಾಗಿ ಉಳ್ಳವನೂ ಕಲಿಯುಗದಲ್ಲಿನ ದೋಷಗಳನ್ನು ಪರಿಹರಿಸುವುದರಲ್ಲಿ ಶಕ್ತನೂ ರಾಜರ್ಷಿಯೂ, ಸಿಂಹವರ್ಮನ ಮೊಮ್ಮಗನೂ ಆದ ಕಂದವರ್ಮನು ರಾಜ್ಯವಾಳುತ್ತಿದ್ದಾಗ, ಸಸಿಲ ಗ್ರಾಮವಾಸಿಯಾದ ಆತ್ರೇಯ ಗೋತ್ರದ ಯಜ್ಞಶರ್ಮನೆಂಬ ಬ್ರಾಹ್ಮಣನಿಗೆ ದಾನವನ್ನು ನೀಡಲಾಗಿದೆ. ದಾನದ ಸ್ವರೂಪ ತಿಳಿದು ಬಂದಿಲ್ಲ. ಈ ಶಾಸನವು ಪಲ್ಲವರದಾಗಿದ್ದು ಕ್ರಿ.ಶ.ಸು. ೮ ನೆಯ ಶತಮಾನದ ಕನ್ನಡ ಲಿಪಿಯಲ್ಲಿ ರಚಿತವಾಗಿದೆ. ಈ ಶಾಸನ ದೊರೆತಿರುವ ಪ್ರದೇಶವು ಪಲ್ಲವರ ಆಳ್ವಿಕೆಗೆ ಒಳಪಟ್ಟಿತ್ತೇ ಅಥವಾ ಈ ಪ್ರದೇಶದಲ್ಲಿ ಆಳುತ್ತಿದ್ದ ಪಲ್ಲವರ ಶಾಖೆಯೊಂದರ ಶಾಸನವೇ ಎಂಬುದನ್ನು ಖಚಿತವಾಗಿ ಹೇಳಲು ಆಧಾರಗಳ ವ್ಯಾಪಕ ಕೊರತೆ ಇದೆ. ಜೊತೆಗೆ ಶಾಸನ ಪಾಠವೂ ಪೂರ್ಣವಾಗಿ ದೊರೆತಿಲ್ಲ. ದೊರೆತಿರುವ ಪಾಠವೂ ಅಧಿಕ ಲಿಪಿಕಾರ ಸ್ಖಾಲಿತ್ಯಗಳಿಂದ ಕೂಡಿದೆ. ಈ ಶಾಸನ ಪಾಠವನ್ನು ಮತ್ತಷ್ಟು ತೃಪ್ತಿಕರವಾಗಿ ನೀಡಲು ಉತ್ತಮ ಛಾಯಾಚಿತ್ರಗಳು ಮತ್ತು ಇತರ ಬಾಹ್ಯಾಧಾರಗಳ ಅಗತ್ಯವಿದೆ. ಈಗ ದೊರೆತಿರುವ ಸ್ಖಾಲಿತ್ಯಗಳಿಂದ ಕೂಡಿರುವ ಪಾಠವನ್ನು ಗಮನಿಸಿದರೆ ಇದು ಕೂಟಶಾಸನವಾಗಿರಬಹುದು ಎಂಬ ನಿಲುವನ್ನು ಸಹ ತಳೆಯಲು ಅವಕಾಶವಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಇಲ್ಲಿ ಉಕ್ತವಾಗಿರುವ ಪಲ್ಲವ ವಂಶವೃಕ್ಷದ ಅಸಮರ್ಪಕತೆ ಮತ್ತು ಎಂಟನೆಯ ಶತಮಾನದ ಲಿಪಿ ಪೋಷಕವಾಗಿವೆ ಅಥವಾ ಹಿಂದಿನ ಶಾಸನದ ನಕಲು ಪ್ರತಿ ಸಹ ಆಗಿರಬಹುದು. ಈ ಶಾಸನದಲ್ಲಿ ಬರುವ ಕಯ್ವಾರವೆಂಬ ಸ್ಥಳವು ಇಂದಿನ ಕೈವಾರವೆಂಬ ಊರೇ ಆಗಿದೆ. ಸಾವಿರ ವರ್ಷಗಳ ನಂತರವೂ ಸ್ಥಳನಾಮ ಒಂದೇ ಆಗಿರುವುದು ಗಮನಿಸಬೇಕಾದ ಅಂಶ. ಸಸಿಲವೆಂಬ ಸ್ಥಳವನ್ನು ಸದ್ಯದಲ್ಲಿ ಗುರುತಿಸಲು ಸಾಧ್ಯವಾಗಿಲ್ಲ. ಇದರ ಬಗೆಗೆ ಕ್ಷೇತ್ರ ಕಾರ್ಯ ಅಗತ್ಯವಿದೆ.

[ಈ ಶಾಸನದಲ್ಲಿ ಅನೇಕ ಕಡೆ ಅರ್ಥವು ತಿಳಿಯುವುದಿಲ್ಲ. ಲಿಪಿಕಾರ ಸ್ಖಾಲಿತ್ಯಗಳೂ ಅಧಿಕವಾಗಿವೆ. ಇತರ ಬಾಹ್ಯಾಧಾರಗಳಿಂದ ಕೆಲವು ಸ್ಖಾಲಿತ್ಯಗಳ ಶುದ್ಧಪಾಠವನ್ನು ಶಾಸನ ಪಾಠದ ನಂತರ ನೀಡಲಾಗಿದೆ]


* # ೩೭, 'ಶ್ರೀಕೃಷ್ಣ ಕೃಪ' ೩ನೇ ಕ್ರಾಸ್, ಸುಬ್ಬಣ್ಣ ಲೇಔಟ್, ಹರಿನಗರಕ್ರಾಸ್, ಬೆಂಗಳೂರು - ೫೬೦ ೦೬೨.



ಮೊದಲನೆಯ ಫಲಕದ ಹಿಂಭಾಗ



ಎರಡನೆಯ ಫಲಕದ ಮುಂಭಾಗ



ಮೂರನೆಯ ಫಲಕದ ಮುಂಬದಿ

ಶಾಸನ ಪಾಠ

ಮೊದಲನೆಯ ಫಲಕದ ಹಿಂಭಾಗ

೧ ಸ್ವಸ್ತಿ ಜಿತಮ್ಭಗವತಾ ಅಭ್ಯುತ್ತತ್ತರದಕ್ರಿಸಿದಮ್ವಾಸ್ಯಸ್ತ್ರಪಸ್ವರ ಜಯಾಲಸ್ಯ

೨ ಚ ಶೂತಾತನೇಕ ಚಿರಸ್ಯಾಮಹರಜ ಶ್ರೀ ಕನ್ದವರ್ಮ್ಮಣಃ ಪ್ರಪುತ್ರೋದೇವ[೧]ದ್ವಿ[ಜ]ಗು

೩ ರು ವೃದ್ಧೋಪಸೇವಿಲಾಧಿ ವೃದ್ಧಧಿಗಯಸ್ಯನೇಕ[೧] ಗೋಹಿರಣ್ಯೋಪಚಾರ ಗುಣ

೪ ತಿ.[೨]ಪ್ರಧಾಲೇ[೨] [೩]ಪ್ರವಿದ್ಧ[೩] ಧ'ರ್ಮ್ಮರಜಸ್ಯ ಪ್ರಜಾಪಾಲ[೪]ವಾದಾಕ್ಷತ್ರಸ್ಯ[೪] ರಿಶಲ (ಕುಶಲ–?)

೫ [ಲೋ]ಕಪಾಲಸ್ಯ ಯದ್ಯಾವ್ಯಕ ಮಹಾರಜ ಶ್ರೀ ಸಿಂಹವರ್ಮ್ಮಣಃ ಪ್ರ[ಪೌ]ತ್ರಾ

೬ ಭಗವತ್ಥ(ದ್ಧ)ಕ್ತಿ [೫]ಸಂ. ಭವತ[೫] ಸರ್ವ್ವಕಲ್ಯಾಣಸ್ಯಧಿ ರಾಜಃ ಪುತ್ರದ್ವಿಗುಣ[೬]ಸ್ವರ

೭ . . ಯಸ್ಯ[೬]ಪ್ರಜದರೇ ಮಹಿತ ಪರಿಪಾಲನದೇವ [೭]ಪರಿಪಾಲಣದ್ಯೋಗಸತಃ[೭]

ಎರಡನೆಯ ಫಲಕದ ಮುಂಭಾಗ

೮ [೮]ಸತ್ಯವ್ರತ ವಿಕ್ಷತ್ರಿಯನ[೮] ವರಸಾಹಸವಮದ್ವಿಲಬ್ಧ ವಿಜಯಯಶಾ(ಶಃ)[೯]ಕನಿಯಂ

೯ ಗದೋಷ[೯] ಶಕ್ತಧರ್ಮ್ಮೋದ್ಧರಣ ನಿತ್ಯ ಸನ್ನದ್ಧಸ್ಯ ರಾಜರಿಷಿ[೧೦]ಗುಣಪಾರ್ವ್ವ ಸನ್ದೋಹ[೧೦] [೧೧]ವಿಜಿಗಿಶಿ[೧೧] [ವಿ]

೧೦ ಷ್ಣುವರ್ಮ ವಿಜಿಗೀಷು [೧೨]ಭಗವಾತ್ಪದಾನುಧ್ಯತ[೧೨] ಪರಮಭಗವತಾಧಿ ಕಳ್ದೊಕೊ [೧೩]ಬಪ್ಪಭ

೧೧ ಟ್ಟರರ ಪೊದಭಕ್ತಃ[೧೩] [೧೪]ಸ್ವನಿಕ್ರ[೧೪] ಪಲ್ಲವ[ಸ] ಧರ್ಮ್ಮ ಮಹಾರಾಜಃ ಶ್ರೀ ಕನ್ದವರ್ಮ್ಮಣಃ ಪ್ರ

೧೨ ವರ್ದ್ಧಮಾನ ವಿಜಯರಾಜ್ಯ ದ್ವಿತೀಯ ಸಂವತ್ಸರೇ ಚಧಮ್ಮಮಾನಿ(?) [೧೫]ಕಯ್ವಾರ ರಾ

೧೩ [ಷ್ಟ್ರೇ]ಸಿ ಪಿತ್ತಿ[೧೫]ಸ್ಕನ್ದವಾರ ತತ್ರ ಚೈತ್ರ ಮಾಸೆಸುಕ್ಲಪಕ್ಷಂ ಸಪ್ತಮೇ ದಿವಸೇ

೧೪ ಸ್ವತಿ ನಕ್ಷತ್ರಂ ಬುಧವಾರೇ ಆತ್ರೇಯ ಗೋತ್ರಂ । ಅತ್ರಿಯ ಚರಣಂ ಪ್ರವಚನ್ನ

೧೫ . ಲ್ಪ । ಯಜ್ಞಶರ್ಮ್ಮಣದ್ವಿಜಯ ಸಸಿಲ ವಸ್ತಾವ್ಯ ತತ್ತಮೇ

ಎರಡನೆಯ ಫಲಕದ ಹಿಂಬದಿ

೧೬–೨೨ (ಪಾಠ ದೊರೆತಿಲ್ಲ)

ಮೂರನೆಯ ಫಲಕದ ಮುಂಬದಿ

೨೩ ಸಮಲ್ತಯಜ್ಞ ಶಮ್ಮನವುಸಿಬತ್ತಿಯ್ಯ ಚಯ್ದನೇಯಲನ . ಮಕರತಸಧಿ

೨೪ ಪಯ್ಯತ್ತರ ಧಾನನುಭೂತಭವಿಷ್ಯತಿ ತಸ್ಯೈ ಹರಣತ್ಪಪನ ಭೂತನ್ನನ್ನುಮ್ಯತಂ

೨೫ ಬ್ರಹ್ಮದ್ವನಾದಿಷಪೌರ ಆ ವಿಷ ವಿಷಮುಚ್ಯತ ವಿಷಮೇಕಾಕಿನ ದಾನನ್ತಿ ಪ್ರಹ್ಮಶ್ವಂದ . .

೨೬ ರ । ಸ್ವದತ್ತಜ್ಪರದತಂನ್ವಯೋಹರೇತಿವಶುನ್ಧ ರಾಷಷ್ಟಿವರ್ಷ ಸಹಶ್ರಾಣಿ

೨೭ ವಿಶ್ಟಾಯಾಂ ಜಾಯತೆ ಕ್ರಿಮಿಃ । ಬಹುಭರ್ವ್ವಶ್ಯವವತ್ರ ರಾಜಭಿಃ । ಶ್ಯಕರೊಪಿಂತ

೨೮ ಯಸ್ಯಯಸ್ಯ ಯದಾಫಲಂ ತಸ್ಯ ತಸ್ಯ ತದ ಫಲಂ . ಲೇಕಸಿಲೇ . . . . .

೨೯ ಲೊತ್ಸವಂ ಯಸ್ಯ ಯಸ್ಯ ತಥರಾಜ ತಸ್ಯ ತಸ್ಯ ತದಾ ಪಲ ಶ್ರಮಲವ್ಮಿ

---

೧ ದೇವದ್ವಿಜಗುರು ವೃದ್ಧೋಪ ಚಾಯಿನೋ ವಿವೃದ್ವ್ಯಾ ವಿನಯಾನೇಕ
೨ ಪ್ರಧಾನೇ
೩ ಪ್ರವೃದ್ಧ
೪ ನಾದಕ್ಷಸ್ಯ
೫ ಸದ್ಭಾವ ಸಂಭಾವಿತ
೬ ಸಮದ
೭ ಪರಿಪಾಲನೋದ್ಯೋಗ ಸತತ
೮ ಸತ್ಯ ವ್ರತ ದೀಕ್ಷಿತಸ್ಯ (ಸತ್ಯವ್ರತ ದೀಕ್ಷಾಪರಸ್ಯ, ಸತ್ಯವ್ರತ ದೀಕ್ಷಾವ್ರತಸ್ಯ)
೯ ಕಲಿಯುಗ ದೋಷ ವಸನ್ನ
೧೦ ಗುಣ ಸರ್ವಸನ್ದೋಹ
೧೧ ವಿಜಿಗೀಷೋ
೧೨ ಭಗವತ್ಪಾದಾನುದ್ಯ ತಸ್ಯ
೧೩ ಬಪ್ಪ ಭಟಾರಕ ಮಹಾರಾಜ ಪಾದ ಭಕ್ತಸ್ಯಃ
೧೪ ಸ್ವವಿಕ್ರಮ (ಸ್ವವಿಕ್ರಮಾಕ್ರಾಂತ)
೧೫ ಕಯ್ವಾರ ರಾ[ಷ್ಟ್ರೇ] ಪ್ರಪತ್ತಿ ?

ಸಂತೇಬೆನ್ನೂರು ಸುಮತೀಂದ್ರ ನಾಡಿಗ್*


ದಾವಣಗೆರೆ ಜಿಲ್ಲೆ ಭೀಮನೆರೆ ಗ್ರಾಮದ ಒಂದು ಹೊಸ ತಾಮ್ರ ಶಾಸನ

ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲೂಕು ಸಂತೇಬೆನ್ನೂರು ಹೋಬಳಿ ಕೇಂದ್ರದ ವಾಯವ್ಯಕ್ಕೆ ೫ ಕಿ.ಮೀ. ದೂರ ಇರುವ ಭೀಮನೆರೆ ಎಂಬ ಗ್ರಾಮವಿದೆ. ಅಲ್ಲಿ ಈಚೆಗೆ ರೈತ ವೆಂಕಪ್ಪ ಎಂಬುವರು ಜಮೀನು ಉಳುಮೆ ಮಾಡುತ್ತಿರುವಾಗ ಗಂಗ ವಂಶದ ಚಿನ್ಹೆಯಾದ ಆನೆ ಮುದ್ರೆಯಿಂದ ಬಂಧಿತವಾದ ೭ ಹಲಗೆ ಉಳ್ಳ ಒಂದು ತಾಮ್ರದ ಶಾಸನದ ಗೊಂಚಲು ದೊರೆಯಿತು. ಈ ಶಾಸನದ ಹಲಗೆಯ ಎರಡೂ ಬದಿಯಲ್ಲಿ ನಾಗರಿ ಲಿಪಿಯಲ್ಲಿ ಅಕ್ಷರ ಕೊರೆಯಲಾಗಿದ್ದು, ಹಲಗೆಗಳು ೯" ಉದ್ದ ೫" ಅಗಲವಾಗಿದ್ದು, ಒಂದೊಂದು ಪತ್ರದಲ್ಲೂ ೬-೮ ಸಾಲು ಬರಹವಿದೆ.ಶಾಸನದ ಬಹುಪಾಲು ಭಾಷೆ ಸಂಸ್ಕೃತದಲ್ಲಿದ್ದು, ಕೆಲ ಪದಗಳು ಕನ್ನಡದ್ದಾಗಿವೆ. ಪ್ರಾರಂಭದಲ್ಲಿ ಸಾಮಾನ್ಯವಾಗಿ ಎಲ್ಲಾ ಶಾಸನಗಳಲ್ಲಿರುವಂತೆ ಈ ಶಾಸನದಲ್ಲೂ ಬಾಣನ ನಮಸ್ತುಂಗ ಶಿರಶ್ಚುಂಬಿ......ಶ್ಲೋಕ ಬರೆಯಲಾಗಿದೆ. ಕೊನೆಯ ಶಾಪಾಶಯವೂ ಸಂಸ್ಕೃತದಲ್ಲಿದೆ.ಈ ಶಾಸನದಲ್ಲಿ ಒಟ್ಟು ೮೬ ಸಾಲುಗಳ ಬರಹವಿದ್ದು ಒರಟು ರೀತಿ ಕಂಡರಿಸಿರುವುದು, ಒಂದು ಪತ್ರದ ಲಿಪಿಗೂ ಇನ್ನೊಂದು ಪತ್ರದ ಲಿಪಿಗೂ ಭಿನ್ನತೆಯಿರುವುದನ್ನು ನೋಡಿದರೆ ಈ ಶಾಸನ ಇರ್ವರು ವ್ಯಕ್ತಿಗಳು ಕಂಡರಿಸಿದಂತಿದೆ. ಪ್ರತಿಕಾರನ ದೋಷದಿಂದಲೋ ಏನೋ ಬಹಳಷ್ಟು ಲಿಪಿದೋಷಗಳು ಹಾಗೇ ಉಳಿದುಕೊಂಡಿವೆ. ಭೂಮಿಯಲ್ಲಿ ಶಾಸನ ಬಹಳಕಾಲ ಇದ್ದುದರಿಂದಲೂ ಅಕ್ಷರಗಳು ಸವೆದು ಸಲಿಸಾಗಿ ಶಾಸನ ಓದಲುಬರುವಂತಿಲ್ಲ.

ಪ್ರಾಚೀನ ಅರಸು ಮನೆತನಗಳಲ್ಲಿ ಬಹುಶಃ ಗಂಗವಂಶದವರು ಶಾಸನ ಬರೆಸಿದಷ್ಟು ಬೇರೆಯಾವ ರಾಜವಂಶದವರೂ ಶಾಸನ ಹಾಕಿಸಿಲ್ಲವೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ, ಆದರೆ ದುರಾದೃಷ್ಟ ಇವುಗಳಲ್ಲಿ ಹೆಚ್ಚಿನವು ಕೂಟ ಶಾಸನಗಳೆಂದು ಪರಿಗಣಿತವಾಗಿವೆ. ಆ ಸಾಲಿಗೆ ಈ ತಾಮ್ರಶಾಸನವೂ ಸೇರಬಹುದೇನೊ ? ಲಿಪಿ, ಭಾಷೆ, ಶೈಲಿ ಲಕ್ಷಣಗಳಿಂದ ಈ ಶಾಸನ ೧೪-೧೫ ನೇ ಶತಮಾನಕ್ಕೆ ಸೇರಿಸಬಹುದಾಗಿದ್ದು, ಈ ಶಾಸನದಿಂದ ಕೆಳಕಂಡ ಅಂಶಗಳನ್ನು ತಿಳಿಯಬಹುದಾಗಿದೆ.


ಇದೊಂದು ದಾನಶಾಸನದಂತಿದ್ದು, ಸಮಸ್ತ ಭುವನಾಶ್ರಯ, ಪೃಥ್ವಿವಲ್ಲಭ ಮಹಾರಾಜಾಧಿರಾಜ, ರಾಜಪರಮೇಶ್ವರ, ಪರಮಭಟ್ಟಾರಕ, ಗಂಗಕುಲತಿಲಕ, ಕದನಪ್ರಚಂಡ, ಏಕಾಂಗವೀರ, ರಣರಾಗವೀರ, ಅಶ್ವಪತಿ. ಗಜಪತಿ, ನರಪತಿ ಮೂರುರಾಯ, ನಿಸ್ಸಂಕಮಲ್ಲ............ ಮಿಗಬೇಟೆಕಾರ, ಗಿರಿದುರ್ಗಮಲ್ಲ, ಅಸಾಹಸುರಪರ ಚಕ್ರರಾಮ, ವೀರವಿಪ್ರವರ್ಧನ, ಕೋಲಾಲ ಪುರಾವದೀಶ್ವರ... ರಿಪುರಾಯ ಕಾಂತದತ್. ವೈರಿಧಬ್ಯ. ಈಶ್ವರಮುಖಕಮಲ ವೀಣಾದಿ ಭರತಶಾಸ್ತ್ರ ಪ್ರವೀಣ, ವಿದ್ಯಾವಿನೋದ, ಹಸ್ತಿಲಾಂಛನ ಧ್ವಜ, ಸಮಸ್ತ ರಾಜಾವಲಿ ವಿರಾತ, ಸಮಾಲಂಕ್ರಿತ, ಶ್ರೀ ಸೋಮವಂಶೋದ್ಭವ ಇತ್ಯಾದಿ ಬಿರುದಾಂಕಿತ ದಡಿಯಗಂಗ ತಸ್ಯಪುತ್ರ ಮಾಧವಗಂಗ ಚಕ್ರವರ್ತಿ ಕೋಲಾಲ ನೆಲೆವೀಡಿನಲ್ಲಿ ಸುಖಸಂಕಥಾ ವಿನೋದದಿಂ ರಾಜ್ಯವಾಳುತ್ತಿರಲು ಶಕ ೪೪೫ನೇ ಚಿತ್ರಭಾನು ಸಂವತ್ಸರದ ವೈಶಾಖ ಕೃಷ್ಣ ಸೋಮವಾರ ಅಮವಾಸ್ಯೆಯಂದುನೊಳಂಬವಾಡಿ ೩೬,೦೦೦, ಗಂಗವಾಡಿ, ದುಮ್ಮ-೧೨, ಎಮ್ಮಿಗನೂರು-೧೨ ಕ್ಕೆ ಸೇರಿದ ಬೆಲ್ಲಿಗನಕೆರೆಯ ಕೆಳಗಣ ಭೂಮಿಯನ್ನು ದಾನ ಕೊಟ್ಟಿರುವುದಾಗಿ ಶಾಸನ ತಿಳಿಸುತ್ತದೆ. ಆದರೆ ಈ ದಾನ ಯಾರು ಕೊಟ್ಟರು, ಏತಕ್ಕಾಗಿ ಕೊಟ್ಟರು, ಯಾರು ಪಡೆದರು ಎಂಬಬಗ್ಗೆಯೇ ತಿಳಿಸುವುದಿಲ್ಲ, ತಾಮ್ರಶಾಸನದ ಕೊನೆಯಲ್ಲಿ ಇರಬೇಕಾದ ಅಂಕಿತವು ಇರುವುದಿಲ್ಲ. ಆದ್ದರಿಂದ ಇದನ್ನು ಕೂಟಶಾಸನವೆಂದೇ ಪರಿಗಣಿಸಬೇಕಾಗುತ್ತದೆ. ಈ ಶಾಸನದಲ್ಲಿ ಉಲ್ಲೇಖಿತ ಭೂಗಡಿಯನ್ನು ಗುರುತಿಸಲು ಕೆಲಗ್ರಾಮಗಳನ್ನು ಉಲ್ಲೇಖಿಸಲಾಗಿದೆ. ಅವುಗಳೆಂದರೆ ಕೋಗಿಲುರ,ಮದಕೇರಿ. ಕಂದೆಗಲ್ಲ, ಮೊರಡಿ, ಹಿರಿಯಬೆಂನುರ, ಚಿಕ್ಕಬೆಂನುರ, ಬಿಲಚೆ, ನೆಲಕುದರೆ, ನವಿಲೆ, ಜಕ್ಕಲೆ, ದುಗನಕೆರೆ, ಗುದೆಗನಹಲ್ಲ, ಸರುವಿನಹಳ್ಳ, ಇತಾದಿಗಳನ್ನು ಉಲ್ಲೇಖಿಸಲಾಗಿದೆ. ಶಾಸನದಲ್ಲಿ ಉಲ್ಲೇಖಿತ ಸ್ಥಳಗಳು ಈಗಲೂ ಶಾಸನ ದೊರೆತ ಸ್ಥಳದ ಅಸುಪಾಸಿನಲ್ಲಿ ಇವೆ. ದಾನ ಕೊಡಲುದ್ದೇಶಿತ ಬೆಲಿಗನಕೆರೆ ಜಮೀನು ಈಗಿನ ಬೆಳ್ಳಿಗನೂಡು ಗ್ರಾಮದ ಕೆರೆಯಾಗಿರಬೇಕು.

*ಪತ್ರಿಕಾ ವರದಿಗಾರ, ಸಂತೇಬೆನ್ನೂರು, (ದಾವಣಗೆರೆ ಜಿಲ್ಲೆ).



ಭೀಮನೆರೆಯ ತಾಮ್ರ ಶಾಸನ

ಹಾಗೆಯೇ ಶಾಸನದಲ್ಲಿ ಉಲ್ಲೇಖಿಸಿದ ಹಿರಿಯಬೆಂನುರು ಈಗಿನ ಸಂತೇಬೆನ್ನೂರೆಂದು, ಬಿಳಚೆ, ಕೆರೆಬಿಳಚಿ ಇರಬಹುದೆಂದು ಊಹಿಸಬಹುದಾಗಿದೆ. ಅಲ್ಪ ಸಲ್ಪ ಬದಲಾವಣೆಗೆ ಒಳಪಟ್ಟಂತೆ ಇದ್ದು ಇತರ ಹೆಸರುಗಳನ್ನುಳ್ಳ ಗ್ರಾಮಗಳು ಈಗಲೂ ಇದ್ದು ಈ ದೃಷ್ಟಿಯಿಂದ ಶಾಸನದಲ್ಲಿ ಉಲ್ಲೇಖಿತ ಈಗಿನ ಗ್ರಾಮಗಳ ಸ್ಥಳನಾಮಗಳ ಅಧ್ಯಯನಕ್ಕೆ ಈ ಶಾಸನ ಸಹಕಾರಿಯಾಗಿದೆ. ಶಾಸನದಲ್ಲಿ ಉಲ್ಲೇಖಿತ ಸರುವಿನ ಹಲ, ಗುದೆಗಿನಹಲಗಳನ್ನು ಈಗ ಶಾಗಲೆ ಹಳ್ಳ. ಕರಲಹಳ್ಳ ಎಂದು ಕರೆಯಲಾಗುತಿದೆ.



ತಾಮ್ರ ಶಾಸನದ ಮೊದಲ ಹಲಗೆಯ ಹಿಂಭಾಗ

ಶಾಸನೋಕ್ತ ಕಾಲ ಶಕ ೪೪೫ ನೇ ಚಿತ್ರಭಾನು ಸಂವತ್ಸರ ಎಂದಿದ್ದು ಚಿತ್ರಭಾನು ಸಂವತ್ಸರ ೪೪೫ ರಲ್ಲಿ ಬರುವುದಿಲ್ಲ,ಬದಲಿಗೆ ಬಂದರೆ ೪೨೪ಕ್ಕೆ ಬರಬೇಕು. ಹಾಗೆಯೇ ಮಾಧವಗಂಗನ ಕಾಲಕ್ಕೂ ಈ ಶಾಸನದ ಕಾಲಕ್ಕೂ ತಾಳೆಯಾಗುವುದಿಲ್ಲ, ಅಲ್ಲದೆ ದಡಿಯ ಗಂಗನ ಉಲ್ಲೇಖವೂ ಇತರ ಅವರ ವಂಶದ ಯಾವ ಶಾಸನದಲ್ಲಾಗಲೀ, ಗಂಗ ವಂಶಾವಳಿಯಲ್ಲಾಗಲೀ ಬರುವುದಿಲ್ಲ.ಹಾಗಾಗಿ ಇದೊಂದು ಕೃತ್ರಿಮ ಶಾಸನವೇ ಹೊರತು ನೈಜ ಶಾಸನವಲ್ಲವೆಂಬ ನಿರ್ಣಯಕ್ಕೆ ಬರಬಹುದಾಗಿದೆ.

ಶಾಸನದ ಪಾಠ

ಮೊದಲ ಹಲಗೆ ಹಿಂಭಾಗ

೧ (೧)ನಮಃಸ್ತುಂಗ ಸಿರ[ಸ್ಚು]ಂಬಿ ಚಂದ್ರಚಾಮರಚಾರವೇ ತ್ರೈಲೋಕ್ಯ ನ

೨ ಗರಾರಂಭ ಮುಲಸ್ತಂಭಾಯ ಸಂಭವೇ॥ ಸ್ವಸ್ತಿ ಸಮಸ್ತ ಭುವನಾ

೩ ಸ್ರಯ ಸ್ರೀ ಪ್ರಿಥ್ವೀವಲ್ಲಭ ಮಹಾರಾಜಾಧೀರಾಜ ಪರಮೇ

೪ ಸ್ವರ ಪರಮಭಟ್ಟಾರಕಂ ಗಂಗ ಕುಲತಿಲಕಂ ಕ
೫ ದನ [ಪ್ರಚಡ್ಡ] ಏಕಾಂಗ ವಿರ ರಣರಗ ವೀ
೬ ರ ಅಸ್ವಪತಿ ಗ[ಜ]ಪತಿ ನರಪತಿ ಮುರು ರಾಯ
೭ ನಿಸ್ಸಂಕಮಲ್ಲ ಮಂಡಲಿಕ ಗಂಡತಲ ಪ್ರಹಾ
೮ ರಿ ಸಾಮಂತ ಮಿಗಬೇಟೆಕಾರ ಮಂನೆಯ ಸ

ಎರಡನೆಯ ಹಲಗೆ ಮುಂಭಾಗ

೯ ೦ಬ ಸ್ವ ಸುರೆಕಾರ ಗಿರಿದುರ್ಗಮಲ್ಲ ಆಸಾಹ ಸಾಹಿತ್ಯ
೧೦ ಆಸಾಹ ಸಾವಿರ ಸುರ ಪರ ಚಕ್ರ ರಾಮ ವಿ
೧೧ ರ ವಿಪ್ರ ವರ್ಧನ ಕೋಲಲಪುರವರಾದೀಸ್ವ
೧೨ ರ ಶ್ರೀರೇಹೇಕ ಭಗದತ್ತ ರಿಪು ರಾ
೧೩ ಯ ಕಾಂತಾ ದತ್ತ ವ್ಯೆರಿವಧಬ್ಯ ಚಚ್ಚಪು
೧೪ . ಚಾಚೂಪುಟ ಈಶ್ವರಮುಖ ಕಮಲ
೧೫ ವಿನಿಗತಸ ವಂಸಾಲಂಬಕಪದ್ಮ ವಿಣಾ

ಎರಡನೆಯ ಹಲಗೆ ಹಿಂಭಾಗ

೧೬ (೨) ದಿ ಭರತಸಾಸ್ತ್ರ ಪ್ರಸಿಧ ಅನೇಕ ಸಾಸ್ತ್ರ
೧೭ ಪ್ರವಿಣ ವಿರವಿತರಣ ವಿದ್ಯಾವಿನೋದ ಹಾ
೧೮ ಸ್ತಿ ಲಾಂಛನ ಧ್ವಜ ಸಮಸ್ತ ರಾಜಾವ
೧೯ ಲಿ ವಿರಾತ ಸಮಾಲಂಂಕ್ರಿತ ಸ್ರಿ ಸೊ
೨೦ ಮವಂಸೋದ್ಭವ ಸಿ ವಿರ ತಲಪ್ರಹಾರಿ ದ
೨೧ ಡಿಗಂಗ ತಸ್ಯ ಪುತ್ರ ಮಾಧವಗಂಗ ಚಕ್ರ

ಮೂರನೆಯ ಹಲಗೆ ಮುಂಭಾಗ

೨೨ ವ್ರರ್ತ್ತಿ ಕೋಲಲನೆಲವಿಡಿನಲು ಸುಖಸಂ
೨೩ ಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರೆ
೨೪ ಶಕ ವರುಷಂ ೪೪೪೫ ಚಿತ್ರಭಾನು ಸಂವಛ
೨೫ ರೇ ವೈಸಾಖ ಮಾಸೇ ಕ್ರಿಷ್ಣ ಪಕ್ಷೆ ಸೋ
೨೬ ಮ ದಿನೇ ಅಮಾವಸ್ಯಂ ಯಾಂ ತಿಥ್ಯೆ ನೋ
೨೭ ಲಾಂಬವಾಡಿ ಮುತ್ತೆಛಾಸಿರಮಧ್ಯ ಕೋಗಿ

ಮೂರನೆಯ ಹಲಗೆ ಹಿಂಭಾಗ

೨೮ (೩) ಲುರ ಗ್ರಾಮಾ ಮಲಿಕಾ ಗಂಗವಾಡಿ ಕಾ
೨೯ ... . ಸಹೇಯನಾಯಕಾ ರಾಯ ದರಿಸನ
೩೦ ಹಸ್ತಿ ಪಾಯದಲ ಯುಧಕರೋತಿರಾಯ
೩೧ . . . . ಪಂಚಾಂಗ ಪಸಾಯ ಛತ್ರ ಸುಖಾಸ
೩೨ ನ . ಗದದ್ವಿ ಅಂಕ ದಂಡ ಖಂಡಣಾ ಕಣಿಯ
೩೩ ಕಲ್ಲ ಮನರಯ ಮಂನಯ ದುಂಮಿ ಹಂನೆರಡರ ಮಂನೆ

ನಾಲ್ಕನೆಯ ಹಲಗೆ ಮುಂಭಾಗ

೩೪ ಯ ಎಮೆಗನುರ ಹಂನೆರಡರ ಮಂನೆಯ ಆಷ್ಟಭೋಗತೇಜ [ಸ್ವಾ]
೩೫ ಮ್ಯ ಸರ್ಬನಮಸ್ಯ ದತ್ತ ಭುಮಿ ಮತ್ತರು ಬೆಲ್ಲಿಗನ ಕೆರ್‍ರೆಯ ಕೆ
೩೬ ಲಗೆ ೧೦ ದುಷ್ಟರಗಂಡ ನೆಂಬಚುತವ್ರಿಜ ತಥಾ ಭುಮ ಮತ್ತರು ೧
೩೭ . . ಹಸ್ತ ೧೦೦ ಸುಥಿಸ್ವರದೇವಾ ಭುಮಿ ಮತ್ತರು ೪ ಥ್ರಿ
೩೮ ಟ್ಮಪುರಿ ಥಾದ್ಮಣಾಭುಮಿ ಮತ್ತರು ಹೆಗ್ಗಡೆಗೆ ಭು
೩೯ ಮಿ ಮತ್ತರು ೨ ಕರುಂಗಲತಿಗೆ . ಭುಮಿ ಮತ್ತರು ೨ ಸುವರ್ಣ
೪೦ ಕಾ ಭುಮಿ ಮತ್ತರು ೧ ದಿಸಾ ಕೀರ್ತ್ತಿ ಭುಮಿ ಅರೆವತ್ತರು [ಜ] ತ್ತಾ
೪೧ ಥಡಗಿ ಮತ್ತರು ೧ ದ್ವಾರಪಾಲಿ ಭುಮಿ ಅರೆವತ್ತರು ಆ[ನಾ]

ನಾಲ್ಕನೆಯ ಹಲಗೆ ಹಿಂಭಾಗ

೪೨ (೪) ಮಿಕಾ ಭುಮಿ ಮತ್ತರು ೧ ಏವಂ ಗ್ರಾಮಾ ಈಸಾನ್ಯ ಸಿಮಾತು ಕ
೪೩ ಥಂ ಕಂದೆಗಲ್ಲ ಮೆದಕೇರಿಯಾ ಕೋಗಿಲುರ ಏವಂ ತ್ರಿ ಗ್ರಾಮಾ
೪೪ ಸರ್ವ ಸೀಮೆ ಸ್ತ ಸ್ವಯ ಭುಪಾಸರ್‍ರೆ ತಥಾದಕ್ಷಿಣ ಮೆದಕೇ
೪೫ ರಿಸೀಮೆ ಕೋಗಿಲುರ ದ್ವೆ ಸಿಮೆ ಕಗ್ಗಲ್ಲ ಮೊರಡಿ ತಥಾ ದ
೪೬ ಕ್ಷಿಣ ದ್ವೆಸಿಮೆ ಗೊಜ್ಜಿಯಕೋಲ ತಥಾ ದಕ್ಷಿಣ
೪೭ ಮೆದಕೇರಿಯ ಹಿರಿಯ ಬೆಂನುರ ಕೋಗಿಲುರ ಏವಂ
೪೮ ತಿ ಗ್ರಾಮತೇ ಸವಾ ಸಿಮೆ ಗುದೆಗನಹಲ್ಲ ತಥಾ ದಕ್ಷಿ
೪೯ ಣ ಹಿರಿಯ ಬೆಂನುರ ಕೋಗಿಲುರ ದ್ವೆ ಸಿಮೆ ಗುದಿಗನಹಲ್ಲ

ಐದನೆಯ ಹಲಗೆ ಮುಂಭಾಗ

೫೦ ತಥಾ ದಕ್ಷಿಣ ಹಿರಿಬೆಂನುರ ಚಿಕ್ಕಬೆ[ಂ]ನುರ ಕೋಗಿಲುರ
೫೧ ಏವಂ ತ್ರಿಗ್ರಾಮಾತ್ರಿ ಸರ್ವಾ ಸಿಮಾತ ಗದುಗಿನ
೫೨ . ಕ ತಥಾ ದಕ್ಷಿಣ ಚಿಕ್ಕಬೆಂನುರ ಕೋಗಿಲುರ ದ್ವೇ
೫೩ ಸಿಮೆ. . .ಸಾಲುಮಟ್ಟ ತಥಾ ದಕ್ಷಿಣ ದ್ವೇ ಸಿಮ ಸ್ವ
೫೪ . . . ಪಾಸಾಣ ದ್ವಯ ತಥಾ ದಕ್ಷಿಣ ಗ್ರಾಮ
೫೫ ಆಗ್ನೇಯ ಚಿಕ್ಕಬೆಂನುರ ಜಕ್ಕಿಲೆಯ ಕೋಗಿಲುರ
೫೬ ಏವಂ ತ್ರಿ ಗ್ರಾಮಾತಿ ಸರ್ವಸಿಮೆ ಗಂಗೆಯ ಮೊರಡಿ

ಐದನೆಯ ಹಲಗೆ ಹಿಂಭಾಗ

೫೭ (೫) ಸಿಖರ ಮಧ್ಯ ಪಾಸಾಣು ಪುಂಜಿ ತಥಾ ಪಸ್ಚಿಮ ಜ
೫೮ ಕ್ಕಿಲೆಯ ಕೋಗಿಲುರ ದ್ವೆ ಸಿಮೆ ಸೋತ ಪ್ರಾಪ್ಯಥಾ
೫೯ ಪಸ್ಚಿಮ ದ್ವೆ ಸಿಮೆ ಪಾಸಾಣ ಪುಂಜಿತ ದಾ ಪಸ್ಚಿಮ ಜ
೬೦ ಕ್ಕಿಲೆಯ ಬಿಲಿಚೆಯ ಕೋಗಿಲುರ ಏವಂ ತ್ರಿ ಗ್ರಾಮ
೬೧ ತ ಸರ್ವಸಿಮೆ ಮೊರಡಿ ಮಧ್ಯ ಸ್ವಂಯ ಭು ಮೆಟ್ಟರ್ರೆ ತಥಾ
೬೨ ಪಸ್ಚಿಮ ಬಿಲಿಚೆಯ ಕೋಗಿಲುರ ದ್ವೇ ಸಿಮೆ ಆರೋಪಿ
೬೩ ತ ಪಾಸಾಣ ತಥಾ ಪಸ್ಚಿಮ ಗ್ರಾಮಾ ನೈರಿತ್ಯ ಬಿಲಿ
೬೪ ಚೆಯ ನವಿಲೆಯ ಕೋಗಿಲುರ ಏವಂ ತ್ರಿ ಗ್ರಾಮಾತಿ ಸೀಮೆ

ಆರನೆಯ ಹಲಗೆ ಮುಂಭಾಗ

೬೫ (೬) ರ ನೆಲಕುದುರೆಯ ಕೋಗಿಲು[ರ] ಏ . ಸಿಮೆ
೬೬ ಊರಿಯಷಗು ತಥಾ ಉತ್ತರ ದ್ವೆ ಸಿಮೆ ಉರಿ ಯ
೬೭ ವಾಗು ತಥಾ . ತ್ತರ ಗ್ರಾಮಾ ವಾಯವ್ಯೇ ನೆಲ
೬೮ ಕುದುರೆಯ ಕಾಂದಗಲ್ಲ ಕೋಗಿಲುರ
೬೯ . ತಿ ಗ್ರಾಮ ಸಿಮಾ ಮೊರಡಿ ಮಧ್ಯ ಆರಾಪೀತ
೭೦ ಪಾಸಾಣ ತಥಾ ಪುರ್ಬ ಕಂದೆಗಲ್ಲ ಕೋಗಿಲುರ
೭೧ ಚಯಮಬಾಗು ತಥಾ ಪುರ್ಬ ಕಂದೆಗಲ್ಲ ಕೋ[ಗಿ]ಲುರ

ಆರನೆಯ ಹಲಗೆ ಹಿಂಭಾಗ

೭೨ . . . ಮೊರಡಿ ತಥಾ ಛತ್ತರ ನವಿಲೆಯ ಕಾ
೭೩ . . ದ್ವಿ ಸೀಮೆ ಆರೆಪಿತಪಾಸಾಣ
೭೪ . . . . .ಉತ್ತರ ದ್ವೇ ಸಿಮೆ ಗಂಜಣಿವಲ್ಲ ತಥಾ ಉ
೭೫ ತ್ತರ ನವಿಲೆಯ ಕೋಗಿಲುರ ದ್ವೆ ಸಿ
೭೬ ಮೆ ಆಲಗಟ್ಟ ತಥಾ ಉತ್ತರ ನವಿಲೆಯ ನೆಲು
೭೭ ಕುದುರೆಯ ಕೋಗಿಲುರ ಏವಂ ತಿ ಗ್ರಾಮಾತಿ ಸರ್ವಾ
೭೮ ಸಿಮಾತ ಸ್ವೇತಾರೋಪಿತ ಪಾಸಾಣ ತಥಾ ಉತ್ತರ

ಏಳನೆಯ ಹಲಗೆ ಮುಂಭಾಗ

೭೯ (೭)ಸಿಮೆ ದುಗನಕೆರ್‍ರೆಯ ಸರುವಿನಹಲ್ಲ ತಥಾ ಪುರ್ವ್ವ ಸಿಮೆ
೮೦ . ಜ ಕಲ್ಲ ಮೊರಡಿ ತಥಾ ಪುರ್ವ್ವ ಈಸಾನಾ ಸೀಮಾಪ್ತಃ ॥ ಸ್ವದತ್ತ
೮೧ .ಮಹಥೊಕೆಂದುಃ ಖಮಂನ್ಯಸ್ಯ ಪಾಲನಂ ಮ ದಾನಂ ವಾ ಪಾಲನಂ ವಾ
೮೨ . . ಥೆಯೋನಾಂ ॥ ಬಸುರ್ವಾದತ್ತ ರಾಜಭಿಃ ಸಗರಧ್ಬಿಃ
೮೩ ಯಸ್ಯ ಯಸ್ಯ ಯದಾ ಭುಮೀ ತಸ್ಯ ತಸ್ಯ ತದಾ ಫಲಂ ॥
೮೪ ಸ್ವದತ್ತ ಪರದ್ರೂಪಾಹರೇತೆ ವಸುಂದರಾಂ ಸಷ್ಟಿವರುಷ ಸ
೮೫ ಹಸ್ರಾಣಿ ಮಿಷ್ಟಾಯಾ ಜಾತೆ ಕ್ರಿಮಿಃ ॥ ಶ್ರೀಪಾರ
೮೬ ಯ ಗಂಡಭೇರುಂಡ ಮಂ ಗಳ ಮಹಾ ಸ್ರಿ ಸ್ರೀ

[ಈ ಶಾಸನ ಇರುವ ಬಗ್ಗೆ ಮಾಹಿತಿ ನೀಡಿ, ಅದರ ಪಾಠ ಒದಗಿಸಿಕೊಟ್ಟ ಶಿವಮೊಗ್ಗೆಯ ಡಾ॥ ಜಗದೀಶ್ ಅಗಸೀಬಾಗಿಲವಾರ ಅವರಿಗೂ, ಶಾಸನದ ಪಾಠಗಳನ್ನು ಮತ್ತೆ ತಿದ್ದಿ ಪರಿಷ್ಕರಿಸಿಕೊಟ್ಟ ಮೈಸೂರಿನ ಕೇಂದ್ರ ಪ್ರಾಚ್ಯ ಇಲಾಖೆಯ ಡಾ॥ ಟಿ.ಎಸ್. ರವಿಶಂಕರ್ ಮತ್ತು ಚಿತ್ರದುರ್ಗದ ಡಾ॥ ಬಿ. ರಾಜಶೇಖರಪ್ಪನವರಿಗೂ, ಶಾಸನದ ಪರಿಶೀಲನೆಗೆ ಅನುಮತಿಸಿದ ಭೀಮನೆರೆ ಗ್ರಾಮದ ಆಲೂರ ವೆಂಕಪ್ಪ ನವರಿಗೂ,ಇದಕ್ಕೆ ಸಹಕರಿಸಿದ ಶ್ರೀ ಮಲ್ಲಿಕಾರ್ಜುನ ಗೌಡರು ಮತ್ತು ಶ್ರೀ ಜಿ.ಹೆಚ್.ವೆಂಕಟೇಶ ಇವರಿಗೂ ಧನ್ಯವಾದಗಳು.]

ಡಾ. ಕೆ. ವಸಂತಲಕ್ಷ್ಮಿ*

ಸಖರಾಯಪಟ್ಟಣದ ಅಪ್ರಕಟಿತ ನಿಷಧಿ ಶಾಸನ

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಸಖರಾಯಪಟ್ಟಣ ಗ್ರಾಮದಲ್ಲಿನ ಏಳು ಶಾಸನಗಳು ಪ್ರಕಟವಾಗಿವೆ. ಇವುಗಳಲ್ಲಿ ಮೂರು ನಿಷಧಿ ಶಾಸನಗಳಾಗಿವೆ. ಈ ಶಾಸನಗಳನ್ನು ಗಮನಿಸಿದಾಗ ಬಹುಶಃ ೧೪–೧೫ನೇ ಶತಮಾನಗಳಲ್ಲಿ ಈ ಗ್ರಾಮವು ಜೈನಮತದ ಪ್ರಭಾವದ ಫಲವಾಗಿ ಪವಿತ್ರ ಕ್ಷೇತ್ರವಾಗಿದ್ದಂತೆ ತೋರುತ್ತದೆ. ಹೊಯ್ಸಳರ ಅಂತ್ಯಕಾಲದಲ್ಲಿ ಈ ಗ್ರಾಮವು ಪ್ರಮುಖ ಪಟ್ಟಣವಾಗಿದ್ದಿರಬೇಕು. ಇಲ್ಲಿಯ ಶಾಸನವೊಂದು ಈ ನಾಡನ್ನು "ಹೊಯ್ಸಳ ಭೂವಿಭು ಲಕ್ಷ್ಮೀಲಪನವೂ, ಶ್ರೀ ವೀರಬುಕ್ಕರಾಜ ಸಾಮ್ರಾಜ್ಯ ರಮಾರಮಣೀಯ ವಿಲಾಸ ದರ್ಪಣೋಪಮ" ದಂತಿದ್ದ ಎಂದು ಬಣ್ಣಿಸಿದೆ. ಈ ವಿವರಗಳನ್ನು ಗಮನಿಸಿದಾಗ ಆ ಕಾಲದ ಪ್ರಮುಖ ಕೇಂದ್ರಗಳಲ್ಲಿ ಒಂದಾದ ಗ್ರಾಮ ಇದಾಗಿತ್ತೆಂದು ತಿಳಿಯುತ್ತದೆ.

ಸಖರಾಯ ಪಟ್ಟಣದ (ಸಕ್ಕರೆ ಪಟ್ಟಣ) ಮುಖ್ಯರಸ್ತೆಗೆ ಹೊಂದಿಕೊಂಡಿರುವ ಬೀದಿಯಲ್ಲಿನ ಮನೆಯೊಂದರ ಹಿಂಭಾಗದ ಭೂಮಿಯನ್ನು ಅಗೆಯುತ್ತಿದ್ದಾಗ ಅಲ್ಲಿ ದೊರೆತ ಎರಡು ನಿಷಧಿ ಶಾಸನ ಕಲ್ಲುಗಳನ್ನು ಗಮನಿಸಿ ಆ ಮನೆಯ ನಿವಾಸಿ ಪ್ರೊ. ಸೋಮಶೇಖರ್ (ತೀರ್ಥಪಳ್ಳಿ ಕಾಲೇಜು) ಮತ್ತು ಶ್ರೀ ಲಕ್ಷ್ಮೀನಾರಾಯಣ್‌ರವರು ಅವುಗಳನ್ನು ಮನೆಯ ಮುಂದಿನ ಅಂಗಳದಲ್ಲಿ ಸುರಕ್ಷಿತವಾಗಿಟ್ಟಿದ್ದಾರೆ. ಇವುಗಳಲ್ಲಿ ಒಂದು ಎಪಿಗ್ರಾಫಿಯಾ ಕರ್ನಾಟಿಕಾ ಸಂ. ೧೨ರಲ್ಲಿ ಕಡೂರ ೨೧೪ರ ಸಂಖ್ಯೆ ಶಾಸನವಾಗಿ ಪ್ರಕಟವಾಗಿದೆ. ಇದು ಕ್ರಿ.ಶ. ೧೩೬೦ರ ನೂಲವಂದಿ ಸೆಟ್ಟಿಯ ನಿಷಧಿ ಶಾಸನವಾಗಿದೆ. ಆದರೆ ಮತ್ತೊಂದು ಶಾಸನವು ಅಪ್ರಕಟಿತ ಶಾಸನವಾಗಿದ್ದು ಆ ಶಾಸನ ಪಾಠವನ್ನು ಪ್ರಕಟಿಸುವ ಪ್ರಯತ್ನವೇ ಈ ಪ್ರಬಂಧ.

ಈ ಶಾಸನದ ಶಿಲೆಯು ಸುಮಾರು ೪' ಎತ್ತರದ ಶಿಲೆಯಾಗಿದೆ.

ಈ ನಿಷಧಿ ಶಾಸನವು ಐದು ಹಂತಗಳ ಶಿಲ್ಪಪಟ್ಟಿಕೆಯನ್ನು ಹೊಂದಿರುವ ಅಪೂರ್ವವಾದ ನಿಷಧಿ ಶಾಸನವಾಗಿದೆ. ನಿಷಧಿ ಶಾಸನಗಳ ಬಗೆಗೆ ಗಮನಹರಿಸಿದರೆ ಆರಂಭ ಕಾಲದಲ್ಲಿ ಕೇವಲ ಒಂದು ಸಾಲಿನ ಅಥವಾ ೩–೪ ಸಾಲಿನ ನಿಷಧಿ ಪಾಠವನ್ನು ಮಾತ್ರ ಹೊಂದಿರುವ ಸ್ಮಾರಕಗಳು ಕೆಲವೆಡೆ ಪಾದಚಿಹ್ನೆಗಳನ್ನು ಬಿಡಿಸಿರುವ ಸ್ಮಾರಕಗಳು ಸ್ತಂಭವೊಂದನ್ನು ರಚಿಸಿ ಅದರ ಮೇಲೆ ಒಂದು ಸಾಲಿನಲ್ಲಿ ಉಲ್ಲೇಖಿಸಿರುವ ಸ್ಮಾರಕಗಳು ಲಭ್ಯವಿದೆ. ನಂತರದ ಕಾಲದಲ್ಲಿ ನಿಷಧಿ ಸ್ಮಾರಕಗಳು ಶಿಲ್ಪಗಳನ್ನು ಕೆತ್ತಿದ್ದರೂ ಈ ಸ್ಮಾರಕಗಳಲ್ಲಿ ಒಂದು / ಎರಡು ಹಂತಗಳಿದ್ದು ಮೇಲಿನ ಹಂತದಲ್ಲಿ 'ಜಿನಬಿಂಬ'ವನ್ನು, ಕೆಳಗಿನ ಹಂತದಲ್ಲಿ ವ್ರತನಿಷ್ಠನೊಂದಿಗೆ ಯತಿಯು ಗ್ರಂಥ ಪಠಿಸುತ್ತಿರುವಂತೆ ಬಿಡಿಸಿರುತ್ತಾರೆ. ನಿರ್ದಿಷ್ಟ ಭಂಗಿಯಲ್ಲಿ ಕುಳಿತ ವ್ರತಧಾರಿ ಮತ್ತು ಯತಿಯೊಂದಿಗೆ ವ್ಯಾಸಪೀಠವನ್ನು ಕೆತ್ತಿದ್ದು, ಉಳಿದ ಸ್ಥಳದಲ್ಲಿ ನಿಷಧಿ ಶಾಸನದ ಪಾಠವನ್ನು ಕೆತ್ತಿರುತ್ತಾರೆ. ಆದರೆ ಈ ನಿಷಧಿ ಶಾಸನದ ಶಿಲ್ಪವನ್ನು ವೀರಗಲ್ಲಿನ ಶಿಲ್ಪದಂತೆ ಅಲಂಕಾರಿಕವಾಗಿ ನಿರ್ಮಿಸಿರುವುದು ಗಮನಾರ್ಹವಾಗಿದೆ.

ಶಾಸನ ಶಿಲ್ಪವನ್ನು ಐದು ಶಿಲ್ಪಪಟ್ಟಿಕೆಗಳನ್ನಾಗಿ ರೂಪಿಸಿದ್ದು ಆ ಪಟ್ಟಿಕೆಗಳ ನಡುವಣ ಪಟ್ಟಿಯ ಮೇಲೆ ನಿಷಧಿ ಶಾಸನದ ಪಾಠವನ್ನು ಕೆತ್ತಲಾಗಿದೆ. ಶಾಸನ ಪಾಠವು ಒಟ್ಟು ಎಂಟು ಸಾಲುಗಳನ್ನು ಒಳಗೊಂಡಿದ್ದು, ಮೊದಲ ಪಟ್ಟಿಕೆಯ ಮೇಲೆ ಎರಡು ಸಾಲುಗಳಲ್ಲಿ ಜಿನನ ಪ್ರಾರ್ಥನೆ ಇದೆ, ಎರಡನೇ ಮತ್ತು ನಾಲ್ಕನೇ ಪಟ್ಟಿಕೆಗಳ ಮೇಲೆ ೨–೨ ಸಾಲುಗಳ ಶಾಸನಪಾಠವಿದ್ದು, ಮೂರು ಮತ್ತು ಐದನೇ ಪಟ್ಟಿಕೆಯಲ್ಲಿ ಒಂದೊಂದು ಸಾಲಿನ ಶಾಸನದ ಪಾಠವನ್ನು ಕೆತ್ತಿದೆ. ಹೀಗೆ ಒಟ್ಟು ಎಂಟು ಸಾಲುಗಳ ಶಾಸನ ಇದಾಗಿದೆ.

ಎರಡನೇ ಪಟ್ಟಿಕೆಯಲ್ಲಿರುವ ಶಿಲ್ಪಗಳ ಬಳಿ ಅವರ ಹೆಸರುಗಳನ್ನು ಕೆತ್ತಲಾಗಿದೆ. ಶಾಸನ ಫಲಕವು ಪೂರ್ಣವಾಗಿ ಉಳಿದು ಬಂದಿದ್ದು ಬಲಗಡೆ ಕೆಳಭಾಗದಲ್ಲಿ ಸ್ವಲ್ಪ ಒಡೆದಿದೆ. ಆದರೆ ಶಾಸನ ಪಾಠ ಮುಕ್ಕಾಗಿಲ್ಲ ಲಿಪಿಯ ದೃಷ್ಟಿಯಿಂದ ಗಮನಿಸಿದರೆ ಹೆಚ್ಚು ಆಳವಾಗಿ ಕೆತ್ತಿರದ ಕಾರಣ ಅನೇಕ ಅಕ್ಷರಗಳ ಸ್ವರೂಪವು ಸ್ಫುಟವಾಗಿಲ್ಲ. ಕೆಲವೆಡೆ ಗುರುತಿಸುವುದು ಕಷ್ಟವಾಗಿದೆ. ಶಾಸನ ಪಾಠವನ್ನು ಕೆತ್ತಿರುವ ಕಂಡರಣೆಕಾರನು ಹೆಚ್ಚು ನಿಪುಣನಿರದೇ, ಅಕ್ಷರಗಳನ್ನು ಅಂಕುಡೊಂಕಾಗಿ ಕೆತ್ತಿರುವಂತಿದೆ. ಕ್ರಿ.ಶ. ೧೪ನೇ ಶತಮಾನದ ಈ ಶಾಸನ

* # ೧೬೭೬, ೫ 'ಎ' ಅಡ್ಡರಸ್ತೆ, ೧೦ನೇ ಮುಖ್ಯರಸ್ತೆ, ಬನಶಂಕರಿ ೧ನೇ ಹಂತ, ಬೆಂಗಳೂರು.

ಲಿಪಿಯ ಅನೇಕ ಅಕ್ಷರಗಳು ಹೊಸಗನ್ನಡ ಅಕ್ಷರದ ಸ್ವರೂಪದ ಇರುವುದನ್ನು ಕಾಣಬಹುದು. ಶಾಸನ ಪಾಠವನ್ನು ಕೆಳಕಂಡಂತೆ ಓದಬಹುದಾಗಿದೆ.

೧ ಶ್ರೀ ಮತ್ಪರಮ ಗಂಭೀರ ಸ್ಯಾದ್ವಾದಾಮೋಘ ಲಾಂಛನಂ ।

೨ ಜೀಯಾತ್ತ್ರೈಲೋಕ್ಯ ನಾಥಸ್ಯ ಶಾಸನಂ ಜಿನಶಾಸನಂ॥

೩ ಸಕವರ್ಷ ೧೨೮೧ ವಿಕಾರಿ ಸಂವತ್ಸರದ ಫಾಲ್ಗುಣ ಶು (೮ ?)

೪ ಬು । ಶ್ರೀ ಮೂಲ ಸಂಘಾಖ್ಯೆ ಸೇನಭಟ್ಟಾರಕರ (ಗು ?)

೫ ಡುಗಳು ಮಹಾಪ್ರಧಾನಕರ – – ಚ

೬ – ಯೂಥರಪ್ಪ ಬಯಚಯ ದಂಡ ನಾ

೭ ಯಕರಸ ತಂನಂಥಃಪುರ ಸಹಿತ

೮ ಆದಿದೇವರು ನಿಷಧಿಯ ಪ್ರತಿಷ್ಠೆ ಗೆಯ್ದರು ®

ಶಾಸನದ ವಿವರಗಳು ಹೀಗಿವೆ : ಈ ನಿಷಧಿ ಶಾಸನವು ಜಿನಸ್ತುತಿಯೊಂದಿಗೆ ಆರಂಭವಾಗಿದೆ. ಶಕ ೧೨೮೧ರ ವಿಕಾರಿ ಸಂವತ್ಸರದ ಫಾಲ್ಗುಣ (೮?) ಬು ಈ ತೇದಿ ವಿವರವನ್ನು ಗಮನಿಸಿದರೆ ಇದು ಕ್ರಿ.ಶ. ೧೩೫೯ರ (ವಿಕಾರಿ ಸಂವತ್ಸರದ) ಕಾಲದ್ದಾಗಿದ್ದು ಫಾಲ್ಗುಣ ಮಾಸದ ಬುಧವಾರವೂ ಬಹುಳವಾಗಿದ್ದರೆ ಹುಣ್ಣಿಮೆಯಾಗಿದ್ದು, ಫೆಬ್ರವರಿ ೧೩ಕ್ಕೆ ಸರಿಹೊಂದುತ್ತದೆ.

ಶಾಸನವು ಮೂಲಸಂಘದ ಸೇನಭಟಾರಕರ ಶಿಷ್ಯನಾದ ಬಯಚಪ್ಪ ದಂಡನಾಯಕನು, ತನ್ನ ಅಂತಃಪುರದ ಸ್ತ್ರೀಯರೊಂದಿಗೆ 'ನಿಷಧಿ'ಯಾಗಿರುವುದನ್ನು ದಾಖಲಿಸುವುದು ಶಾಸನದ ಉದ್ದೇಶವಾಗಿದೆ. ಆದರೆ ಸಾಮಾನ್ಯವಾಗಿ ಕರ್ನಾಟಕದಲ್ಲಿ ಲಭ್ಯವಿರುವ ನಿಷಧಿ ಶಾಸನಗಳು ವ್ರತನಿಷ್ಠನಾದ ಒಬ್ಬ ಮನುಷ್ಯನು ಮುಡುಪಿದ್ದನ್ನು ತಿಳಿಸುವ ಶಾಸನಗಳಾಗಿವೆ. ಆದರೆ ಈ ನಮ್ಮ ಶಾಸನದಲ್ಲಿ "ಬಯಚಯ ದಂಡನಾಯಕ' ನೊಂದಿಗೆ ಅವನ ಪರಿವಾರದವರೆಲ್ಲರೂ 'ಸಲ್ಲೇಖನ' ಗೊಂಡಿರುವುದು ಅಪೂರ್ವ ಸಾಧನೆಯಾಗಿದೆ. ಇದೊಂದು ಅಪರೂಪದ ನಿಷಧಿ ಶಾಸನವಾಗಿದ್ದು ನಿಷಧಿ ಶಾಸನಗಳ ಅಧ್ಯಯನದಲ್ಲಿ ಗಮನಾರ್ಹ ಸ್ಮಾರಕವಾಗುತ್ತದೆ ಬಯಚಪ್ಪ ದಂಡನಾಯಕನನ್ನು ಶಾಸನವು 'ಅರಸ'ನೆಂದೇ ಕರೆದಿದ್ದು ಅವನ ಅಂತಃಪುರದವರೆಲ್ಲ ಪ್ರಾಣತ್ಯಾಗ ಮಾಡಿದ್ದನು ಶಾಸನ ಶಿಲ್ಪವು ಪ್ರತಿಬಿಂಬಿಸಿದೆ.

ಬಯಚಪ್ಪ ದಂಡನಾಯಕನನ್ನು ಶಾಸನವು ಮೂಲ ಸಂಘದ ಸೇನಭಟಾರಕ ಶಿಷ್ಯನೆಂದು ತಿಳಿಸಿದೆ. ಎರಡನೇ ಪಟ್ಟಿಕೆಯ ಮೇಲ್ಭಾಗದಲ್ಲಿ ಗೂಡಿನಂತೆ ರಚಿಸಿದ್ದು ಅಲ್ಲಿ ಬಯಚಪ್ಪನಾಯಕನು ವ್ರತಧಾರಿಯಾಗಿ, ಅಂಜಲಿಬದ್ಧನಾಗಿ ಕುಳಿತುರುವಂತೆ ಬಿಡಿಸಿದೆ. ಅವನ ಬಳಿಯಲ್ಲಿ ಇನ್ನಿಬ್ಬರೂ ವ್ರತಧಾರಿಗಳನ್ನು ಬಿಡಿಸಿದೆ. ಇವರಲ್ಲಿ ಒಂದು ಶಿಲ್ಪದ ಬಳಿ 'ಕಾವಣ್ಣ' ಎಂದು ಇನ್ನೊಂದರ ಬಳಿ 'ಬುದಾಯಿ' ಬಯಚಪ್ಪನ ಎದುರು ಜಿನಮುನಿಗಳು ಗ್ರಂಥಪಠನ ಮಾಡುತ್ತಿರುವಂತೆ ಬಿಡಿಸಿದ್ದು ಮುನಿಗಳ ಮುಂದೆ ವ್ಯಾಸಪೀಠವನ್ನು ಕೆತ್ತಲಾಗಿದೆ. ಜಿನಮುನಿಯ ಪಕ್ಕದಲ್ಲಿ ಇಬ್ಬರು ಶಿಷ್ಯರು ಕೈಮುಗಿದು ಕುಳಿತು ಕೇಳುತ್ತಿದ್ದಾರೆ. ಈ ಶಿಲ್ಪಗಳ ಬಳಿ ಮಾರಸೇನು ಇಂದ್ರ ದೇವರು ಎಂದು ಅವರ ಹೆಸರುಗಳನ್ನು ಕೆತ್ತಲಾಗಿದೆ. ಆದರೆ ಅವು ಸ್ಪಷ್ಟವಿಲ್ಲ. ಜಿನಮುನಿಯ ಬಳಿ ಮೋನಿ ಭಟಾರಕರು ಎಂದೂ ಮತ್ತೊಬ್ಬ ಶಿಷ್ಯನ ಬಳಿ 'ಆದಿದೇವ' ಎಂಬ ಹೆಸರುಗಳಿವೆ. ಈ ಆದಿದೇವನೇ ಈ ನಿಷಧಿ ಶಾಸನವನ್ನು ಪ್ರತಿಷ್ಠೆ ಮಾಡಿದವನೆಂದು ಶಾಸನ ತಿಳಿಸುತ್ತದೆ.

ಶಾಸನ ಶಿಲ್ಪದ ವಿವರಗಳನ್ನು ಗಮನಿಸಿದರೆ ಈ ನಿಷಧಿ ಶಾಸನದ ಪ್ರಮುಖ ವ್ರತಧಾರಿಯಾದ ಬಯಚಯ್ಯ ದಂಡನಾಯಕನ ಶಿಲ್ಪವನ್ನು ಮತ್ತು ದೀಕ್ಷೆ ನೀಡುತ್ತಿರುವ ಜಿನಮುನಿಯ ಶಿಲ್ಪವನ್ನು ಸ್ವಲ್ಪ ದೊಡ್ಡದಾಗಿ ಬಿಡಿಸಿದೆ. ಸಲ್ಲೇಖನಧಾರಿಯಾದ ಬಯಚಯ್ಯನು ವೀರನಂತೆ ಮುಡಿ ಕಟ್ಟಿದ್ದಾನೆ. ಕಿವಿಯಲ್ಲಿ ಉಂಗುರಗಳಿವೆ. ಕೊರಳಿನಲ್ಲಿ ಮುತ್ತಿನ ಹಾರವಿದೆ. ಭುಜಕೀರ್ತಿ, ಕೈಗಳಲ್ಲಿ ಕಡಗಗಳೂ, ಮೊಣಕಾಲಿನಲ್ಲಿ ದಪ್ಪದಾದ ಗೆಜ್ಜೆ, ಕಾಲಂದಿಗೆ ಹೀಗೆ ಸರ್ವಾಭರಣ ಸಂಪನ್ನನಾಗಿರುವಂತೆ ಬಿಡಿಸಿದೆ. ಕೈಗಳು ಅಂಜಲಿಬದ್ಧವಾಗಿದ್ದು ವ್ರತನಿಷ್ಠನಾಗಿ ಕುಳಿತಿದ್ದಾನೆ. ಬಳಿಯಲ್ಲಿರುವ ಮತ್ತೊಂದು ಪುರುಷಶಿಲ್ಪ ಕಾವಣ್ಣನದು. ಬಹುಶಃ ಇವನು ಅವನ ತಂದೆ ಇರಬೇಕು. ಶಿಲ್ಪದ ಗಾತ್ರ ಚಿಕ್ಕದಾಗಿದ್ದರೂ ಬಯಚಣ್ಣನಂತೆ ವ್ರತಧಾರಿಯಾಗಿ ಕೈಮುಗಿದು ಕುಳಿತಿರುವಂತೆ ಬಿಡಿಸಿವೆ. ಇವನೊಂದಿಗೆ ವ್ರತನಿಷ್ಠಳಾದ ಸ್ತ್ರೀಯೊಬ್ಬಳನ್ನು ಬಿಡಿಸಿದೆ. ಇವಳ ಹೆಸರು ತಿಳಿದಿಲ್ಲ. ಬಹುಶಃ ಈ ಶಿಲ್ಪ ಬಯಚಯ್ಯನ ತಾಯಿಯದಿರಬೇಕು. ಈ ಮೂರು ಜನರಲ್ಲದೇ ಕೆಳಗಿನ ಮೂರು ಪಟ್ಟಿಕೆಗಳಲ್ಲೂ ವ್ರತಧಾರಿಗಳಾದ ಅಂತಃಪುರದ ಸ್ತ್ರೀಯರು ಶಿಲ್ಪಗಳನ್ನು ಕೆತ್ತಲಾಗಿದೆ. ಇವರೆಲ್ಲರೂ ಕೈಮುಗಿದು ಕುಳಿತಿದ್ದಾರೆ. ಇವರ ಕಿವಿಗಳಲ್ಲಿ ಅಗಲವಾದ ಉಂಗುರುಗಳೂ, ಕೈಗಳಲ್ಲಿ ಬಳೆಗಳೂ ಇವೆ. ಮೂರು ಪಟ್ಟಿಕೆಯಲ್ಲಿ ಮಧ್ಯಭಾಗದಲ್ಲಿನ ಸ್ತ್ರೀ ಶಿಲ್ಪವನ್ನು ಸ್ವಲ್ಪ ದೊಡ್ಡದಾಗಿ ಬಿಡಿಸಿದ್ದು ಇವರು ಪ್ರಮುಖರೆಂತೆನಿಸುತ್ತಿದೆ ಮೂರು ನಾಲ್ಕನೇ ಪಟ್ಟಿಕೆಗಳಲಿ ಈ ಮಧ್ಯದ ರಾಶಿ ಶಿಲ್ಪದ ಇಕ್ಕೆಲದಲ್ಲಿ ನಾಲ್ಕು ಜನ ಸ್ತ್ರೀಯರನ್ನು ಬಿಡಿಸಿದೆ. ಐದನೇ ಪಟ್ಟಿಕೆಯಲ್ಲಿ ಮಾತ್ರ ರಾಶಿಯ ಎರಡೂ ಕಡೆ ನಾಲ್ಕು ಜನ



ಸ್ತ್ರೀಯರನ್ನಲ್ಲದೆ ಮತ್ತೊಂದು, ಒಂದು ಚಿಕ್ಕ ಹುಡುಗಿಯ ಶಿಲ್ಪವಿದೆ. ಹೀಗೆ ಒಟ್ಟಿನಲ್ಲಿ ಈ ನಿಷಧಿ ಶಾಸನವು ಮೂವತ್ತೆರಡು ಜನರ ಸಮೂಹ ನಿಷಧಿಯನ್ನು ಉಲ್ಲೇಖಿಸುತ್ತಿರುವ ಅಪರೂಪದ ನಿಷಧಿ ಶಾಸನವಾಗಿದೆ.

ಈ ನಿಷಧಿ ಶಾಸನದ ಪ್ರಮುಖ ವ್ಯಕ್ತಿಯಾದ ಕೇಂದ್ರ ಬಿಂದುವಿನಂತಿರುವ ಬಯಚಪ್ಪ ನಾಯಕನ ವ್ಯಕ್ತಿತ್ವವು ಅಚ್ಚರಿ ಮೂಡಿಸುತ್ತಿದೆ. 'ಹೊಸ ಪಟ್ಟ'ವೆಂದು ಕರೆಯಲಾಗುತ್ತಿದ್ದ ಈ ಗ್ರಾಮದ ಮುಖಂಡ/ಅರಸನಾಗಿದ್ದ ಬಯಚಪ್ಪ ದಂಡನಾಯಕನು 'ಸಲ್ಲೇಖನ' ದೀಕ್ಷೆ ತೆಗೆದುಕೊಳ್ಳಲು ತೀರ್ಮಾನಿಸಿದಾಗ ಅವನೊಂದಿಗೆ ಅವನ ತಾಯಿ ತಂದೆಯರೂ ಮತ್ತು ಅಂತಃಪುರದ ಪರಿವಾರ ಜನರೆಲ್ಲರೂ ಅವನೊಂದಿಗೆ ಸಾವನ್ನು ಎದುರಿಸಲು ಸಿದ್ಧರಾಗಿದ್ದಾರೆ. ಇದು

ಆ ಪರಿವಾರದವರಿಗೆಲ್ಲ ಆ ನಾಯಕನ ಬಗೆಗಿದ್ದ ಆತ್ಮಾದರಗಳನ್ನೂ, ಋಣಿಯತೆಯನ್ನು ಸೂಚಿಸುತ್ತಿದೆ. ಮಹಿಳೆಯರಲ್ಲಿ, ರಾಣಿಯರು, ಪತಿವ್ರತಾನಿಷ್ಠೆಯನ್ನು ತೋರಿದರೆಂದರೂ ಸೇವಕ ವರ್ಗದವರೂ ಪ್ರಾಣತ್ಯಾಗಕ್ಕೆ ಮುಂದಾಗಿರುವುದು ಒಂದು ರೀತಿಯ ಕುತೂಹಲಕ್ಕೆ ಕಾರಣವಾಗುತ್ತಿದೆ. ಆದರೆ ಈ "ಸಾಮೂಹಿಕ ಆತ್ಮಾರ್ಪಣೆ"ಗೆ ಒದಗಿ ಬಂದಿರಬಹುದಾದ ಘೋರವಿಪತ್ತಿನ ಪರಿಚಯ ಇಲ್ಲಿಲ್ಲವಾಗಿದೆ. ಕೇವಲ ಆ ಪರಿವಾರದವರ ಆರ್ದ್ರ ಮನಸ್ಸಿನ ದೃಢ ಸಂಕಲ್ಪವಿಲ್ಲಿ ಬಿಂಬಿಸಿದೆ.

ಇತಿಹಾಸದ ಪುಟಗಳಲ್ಲಿ ಈ ಬಯಚಪ್ಪ ನಾಯಕನ ಪಾತ್ರವನ್ನು ಅರಸಲು ಯತ್ನಿಸಿದಾಗ ಬಯುಚಪ್ಪ ದಂಡನಾಯಕನನ್ನು ಉಲ್ಲೇಖಿಸುವ ಹಂಪೆ ಶಾಸನ (ಸುಮಾರು ೩೫೦) ಮತ್ತು ಕೊಪ್ಪಳ ಜಿಲ್ಲೆಯ ಆನೆಗುಂದಿ ಶಾಸನ (ಗಂಗಾವತಿ ೨೧) ಗಮನ ಸೆಳೆಯುತ್ತದೆ. ಆದರೆ ಇವೆಲ್ಲವೂ ನಮ್ಮ ನಿಷಧಿ ಶಾಸನದ ನಂತರದ ಕಾಲದ ಶಾಸನಗಳಾಗಿದ್ದು ಇವು ಅನುಪಯುಕ್ತವಾದವು. ನಮ್ಮ ಶಾಸನದ ಕಾಲವಾದ ಕ್ರಿ.ಶ. ೧೩೮೯ಕ್ಕೆ ಮೊದಲಿನ ಶಾಸನಗಳಲ್ಲಿ ಇವನ ಉಲ್ಲೇಖವನ್ನು ಹುಡುಕಲು ಯತ್ನಿಸಿದಾಗ ಶ್ರವಣ ಬೆಳಗೊಳದ ಶಾಸನವೊಂದು (ಶ್ರ.ಬೆ. ೩೫೭, ಎ. ಕರ್ನಾ. ಸಂ. ೨) ನೆರವಿಗೆ ಬಂತು. ಈ ಶಾಸನವು ಕ್ರಿ.ಶ. ೧೪೨೨ರ ಕಾಲದ ಶಾಸನವಾಗಿದ್ದು, ಇರುಗಪ್ಪ ದಂಡನಾಯಕನು ಹೊಸದಾಗಿ ಕೊಳವೊಂದನ್ನು ನಿರ್ಮಿಸಿ, ಕೊಳ, ಹೂತೋಟ ಮತ್ತು ಬೆಳಗೊಳ ಗ್ರಾಮವನ್ನು ಗೊಮ್ಮಟ ದೇವರಿಗೆ ದಾನ ನೀಡಿದ್ದನ್ನು ತಿಳಿಸುತ್ತಿದೆ. ಈ ಇರುಗಪ್ಪನ ವಂಶ ಪರಂಪರೆಯನ್ನು ತಿಳಿಸುತ್ತಾ ಶಾಸನವು ಆರಂಭದಲ್ಲೇ "ಬುಕ್ಕರಾಯನ ಮಂತ್ರಿಯಾಗಿದ್ದ ಶ್ರೀ ಬೈಚದಂಡೇಶ್ವರನ ನೀತಿಯನ್ನು ಎಲ್ಲರೂ ಹೊಗಳುತ್ತಿದ್ದರೆಂದಿದೆ".

ವಿಶೇಷವಾಗಿ ಬೈಚಣನನ್ನು ಬಣ್ಣಿಸುತ್ತಾ–"ಇವನು ಮಾಡಿದ ದಾನದ ಬಗೆಗೆ ಹೇಳುತ್ತಿದ್ದರೆ ಕಲ್ಪತರುವು ತನ್ನ ಸ್ಥಾನ ಕಳೆದುಕೊಳ್ಳುವೆನೆಂದು ಅಸೂಯೆಪಡುವಂತಿತ್ತು. ಇವನ ಕೌಶಲ್ಯಗಳ ಮುಂದೆ ಗುರುಗಳ ಮಾತು ಹಿಂಸರಿಯುತ್ತಿತ್ತು. ಇವನಲ್ಲಿದ್ದ ಕ್ಷಮಾಗುಣವನ್ನು ಕಂಡು ಭೂದೇವಿಯು ತನ್ನ ಸ್ಪರ್ಶಭಾವನೆಯನ್ನು ಕಳೆದುಕೊಂಡು ಜಡವಾಗುತ್ತಿದ್ದು ಇಂಥ ಮಹಾಗುಣವುಳ್ಳ ಇವನನ್ನು ಭೂಮಿಯ ಮೇಲಿನ ಯಾವ ಕವಿ ತಾನೇ ಹೊಗಳಲು ಸಾಧ್ಯ ? ಎಂದು ಶಾಸನ ಬಣ್ಣಿಸಿದೆ. [ಸಾಲುಗಳು ೫–೯] ಈ ಬಯಚ ದಂಡಾಧಿಪನ ವಂಶದಲ್ಲಿ ಜನಿಸಿದ ಶಾಸನೋಕ್ತ ಬಯಚನ ಮೊಮ್ಮಗ ಇರುಗಪ್ಪ ದಂಡನಾಯಕನೆಂದು ತಿಳಿಯುತ್ತದೆ. ಈ ನಂತರದ ಶಾಸನಗಳಲ್ಲಿ 'ಕುಲಕ್ರಮಾಗತೋಮಂತ್ರೀ' ಎಂಬ ಉಲ್ಲೇಖವೂ ಇದೆ.

ಹೀಗೆ ನಿಷಧಿ ಬಯಚಯ್ಯ ದಂಡನಾಯಕನು ೧ನೇ ಬುಕ್ಕರಾಯನ ಕಾಲದಲ್ಲಿ (೧೩೫೬–೧೩೭೭) ಮಹಾಪ್ರಧಾನಿಯಾಗಿದ್ದನೆಂದು ತಿಳಿಯುತ್ತದೆ. ಈ ಬಯಚಯ್ಯ ದಂಡನಾಯಕನ ಸಾಧನೆಗಳ ಬಗೆಗೆ ಗಮನಿಸಿದರೆ ಕ್ರಿ.ಶ. ೧೩೩೩ ರಿಂದ ೧೩೪೨ರವರೆಗೆ ತುಳುವರ ಶಾಸನಗಳು ಹೊಯ್ಸಳರ ದೊರೆ ವೀರಬಲ್ಲಾಳದೇವನ (೨ನೇ ಬಲ್ಲಾಳ) ಹೆಸರಿನಿಂದ ಪ್ರಕಟವಾಗಿದ್ದು, ತುಳುನಾಡು ಹೊಯ್ಸಳರ ಆಳ್ವಿಕೆಯ ಭಾಗವಾಗಿದ್ದನ್ನು ಸೂಚಿಸುತ್ತಿವೆ. ಈ ಭಾಗವನ್ನು ಗೆದ್ದಾಗ ಬಲ್ಲಾಳದೇವನು ಅಲ್ಲಿಯ ರಾಜಕುಮಾರಿಯಾದ ಚಿಕ್ಕಯಿತಾಯಿಯನ್ನು ವಿವಾಹವಾಗಿ ಅವಳನ್ನು ಆ ಭಾಗವನ್ನು ಆಡಳಿತ ನಡೆಸಲು ನೇಮಿಸುತ್ತಾನೆ. ಹೀಗೆ ಬಾರಕನ್ಯಾಪುರ (ಬಾರಕೂರು) ರಾಜ್ಯದಲ್ಲಿ ಬಲ್ಲಾಳದೇವನ ಪರವಾಗಿಯೂ, ಬಲ್ಲಾಳದೇವನು ಮಡಿದ ಮೇಲೆ ಸ್ವತಂತ್ರವಾಗಿ ತಾನೇ ರಾಣಿಯಾಗಿ ಆಳ್ವಿಕೆ ನಡೆಸಿರುವುದು ಗಮನಾರ್ಹ ಅಂಶವಾಗಿದೆ. ಹೀಗೆ ಚಿಕ್ಕಾಯಿತಾಯಿ ಸುವ್ಯವಸ್ಥಿತವಾಗಿ ಆಡಳಿತ ನಡೆಸಲು, ಅವಳಿಗೆ ಬಲಗೈ ಬಂಟನಂತೆ ಸಹಕರಿಸಿದವನು ಮಹಾಪ್ರಧಾನನಾಗಿದ್ದ ಈ ಬಯುಚಯ ದಂಡನಾಯಕನಾಗಿದ್ದನು. ಸುಮಾರು ಕ್ರಿ.ಶ. ೧೩೪೫ರಲ್ಲಿ ವಿಜಯನಗರದ ಅರಸರಾದ ೧ನೇ ಹರಿಹರ ಮತ್ತು ೧ನೇ ಬುಕ್ಕರಾಯ ತುಳುನಾಡನ್ನು ವಶಪಡಿಸಿಕೊಂಡಮೇಲೆ ಈ ಪ್ರದೇಶಕ್ಕೆ ಬಾರಕೂರು ಮತ್ತು ಮಂಗಳೂರು ರಾಜ್ಯವೆಂದು ಹೆಸರಿಸಿದರಲ್ಲದೆ ಮಲೆಯನಾಯಕ ಮತ್ತು ಶಂಕರದೇವ ಒಡೆಯರನ್ನು ಮಹಾಪ್ರಧಾನರಾಗಿ ನೇಮಿಸಿದರು. [**ತುಳುನಾಡಿನ ಇತಿಹಾಸ,** ಪುಟ ೭೩, ಕೆ.ವಿ. ರಮೇಶ್) ಬಹುಶಃ ನಂತರದಲ್ಲಿ ಬಯುಚೂರು ದಂಡನಾಯಕ ಸಖರಾಯಪಟ್ಟಣಕ್ಕೆ ಬಂದು ನೆಲೆಸಿದಂತಿದೆ. ರಾಣಿ ಚಿಕ್ಕಾಯಿತಾಯಿಯು ಅಂತ್ಯಕಾಲದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೆಗೆ ಬಂದಳೆಂದು ತಿಳಿಯುತ್ತದೆ. ಕ್ರಿ.ಶ. ೧೩೮೮ರಲ್ಲಿ ರಾಣಿ ಚಿಕ್ಕಾಯಿತಾಯಿ ತೀರಿಕೊಂಡ ಮೇಲೆ ಅವಳ ಸಂಬಂಧಿಯೂ, ಆಪ್ತನೂ ಆಗಿದ್ದ ಬಯಿಚಯನಾಯಕ ಕ್ರಿ.ಶ. ೧೩೮೯ರಲ್ಲಿ ಸಲ್ಲೇಖನ ಧರಿಸಿದನೆಂದು ಮೇಲಿನ ಶಾಸನದಿಂದ ತಿಳಿಯುತ್ತದೆ. ಹೀಗೆ ಹೊಯ್ಸಳರ ಅಂತ್ಯಕಾಲದಲ್ಲಿ ಮಹಾಪ್ರಧಾನಿಯಾಗಿ ಮುಂದೆ ೧ನೇ ಬುಕ್ಕರಾಯನ ಕಾಲದಲ್ಲಿ ಮಂತ್ರಿಯಾಗಿದ್ದ ಬಯಚಯನ ನಿಷಧಿ ಶಾಸನವೂ 'ಅಪರೂಪವಾದ' 'ಸಮೂಹ ನಿಷಧಿ'ಯನ್ನು ಉಲ್ಲೇಖಿಸುವ ಅಪೂರ್ವವಾದ ಶಾಸನಶಿಲ್ಪವುಳ್ಳ ಗಮನಾರ್ಹವಾದ ನಿಷಧಿ ಶಾಸನವಾಗಿದೆ.

ಶಿವಯೋಗಿ ಕಂಬಾಳಮಠ*

ಲಕುಮಾಪುರ ಹಿರೇಮಠದ ಹೊಸ ತಾಮ್ರಶಾಸನ ಮತ್ತು ಅನ್ವಯಿಕ ಸಂಗತಿಗಳು

ಪ್ರಸ್ತುತ ಶಾಸನವು ಕೊಪ್ಪಳ ಜಿಲ್ಲೆಯ ಯಲಬುರ್ಗ ತಾಲ್ಲೂಕಿನ ಲಕಮಾಪುರ ಗ್ರಾಮವಾಸಿಗಳಾಗಿರುವ ವೇ॥ ವೀರಯ್ಯ ರುದ್ರಯ್ಯ ಹಿರೇಮಠ (೯೩ ವರ್ಷ) ಇವರಿಂದ ಪಡೆಯಲಾಯಿತು. ಇವರು ಪ್ರಸ್ತುತ ತಾಮ್ರ ಶಾಸನದಲ್ಲಿ ಬರುವ ವೀರವಾರದ (ಈಗ ವಿರಪುರ) ಹಿರೇಮಠಕ್ಕೆ ಸಂಬಂಧಿಸಿದವರಾಗಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸಿರುವ ಕೊಪ್ಪಳ ಜಿಲ್ಲಾ ಶಾಸನಗಳ ಸಂಪುಟದಲ್ಲಿ ಈ ತಾಮ್ರ ಶಾಸನವು ಪ್ರಕಟವಾಗಿಲ್ಲ. ಕಾಲವನ್ನು ಶಾಲಿವಾಹನ ಶಕ ೧೫೬೦ ವೈ.ಶು.೧೦ ಈ ಮಿತಿಗೆ ಕ್ರಿ.ಶ. ೧೬೩೮ ಏಪ್ರಿಲ್ ೧೦ ನೇ ತಾರೀಖಿಗೆ ಹೊಂದಿಕೊಳ್ಳುವಂತಿದೆ. ಶಾಸನವು ೯ ಅಂಗುಲ ಉದ್ದ, ೭ ಅಂಗುಲ ಅಗಲವಾಗಿದೆ.



ಶಾಸನದ ಪಾಠ

ಚಿಹ್ನೆಗಳು ಚಂದ್ರ ಶಿವಲಿಂಗ ಸೂರ್ಯ

೧ ಶ್ರೀ ಮದ್ಗನಲಿಂಗ ಚಕ್ರವರ್ತಿಗಳಾದ ರಾಜ ಪೂಜಿ

೨ ತರಾದ ರಾಜ ಮಾನ್ಯ ರಾಜೆ ಶ್ರೀ ಬಡಗಲ್ ಶೀಮೆ ಕಾಶಿಕಲ್ಯಾ

೩ ಣ ಗ್ರಾಮಾನುಗ್ರಾಮಗಳಲ್ಲಿ ಮಠಮಾನ್ಯ ಪಡದ ಪಡುಪಿ

೪ ಡಿ ಸೂತ್ರಾನುವರ್ತಿಗಳಾದ (ನ) ವದತ್ತು ವೀರವಾರದ ಹಿರೇಮಠ

೫ ದ । ಪ ॥ ಚನಿವೀರ ಸ್ವಾಮಿಗಳಿಗೆ ಶ್ರೀಮನ್ ಶಾಲಿವಾಹನ ಶಕ

೬ ೧೫೬೦ ॥ ಸಂ ॥ ವೈ ॥ ಶು ॥ ೧೦ ॥ ಶ್ರೀಮನ್ ನೃಪ ಭಾಷಿಗೆ ತಪ್ಪುವ

೭ ರ ಗಂಡ ಮರೆ ಹೊಕ್ಕವರ ಗಂಡ ಪುರಾಂತ್ರ ಗೆಲ್ಲುವ ಅಲ್ಲಾವುದ್ದೀ

೮ ನ್ ಪಾಳೆಗಾ । ನು । ತನ್ನ ರಾಜವಾಡಿ ವೀರಪುರ ಗ್ರಾಮದಲ್ಲಿ ವೂದ

೯ ಪು ॥ ಪ ॥ ಚನಿವೀರಸ್ವಾಮಿಗಳ ಹಿರೇಮಠವೆಂದು ಸ್ತಾಪನ

೧೦ ೧೦೮ ಲಿಂಗಮುದ್ರ ಸ್ತಾಪನೆ ಮಾಡ್ಸಿ ವೂರ ॥ ಉ ॥ ೩೦ ಮಾರು ಭೂಮಿ

೧೧ ಯನ್ನು ಯೀನಾಮು ಹಾಕಿ ಕೊಟ್ಟು ನೆರೆಗಲ್ಲು ಚಂಡೂರು ಬೆಣ್ಣೆಕಲ್ಲು ಯಂಬೊ

೧೨ ಗ್ರಾಮಗಳನ್ನು ಯಿ(ೀ)ನಾಮು ಹಾಕಿ ಕೊಟ್ಟೊ ಯಿ ಗ್ರಾಮಗಳೊಳಗೆ ಬಾಬು

೧೩ ಸಾಬುಗಳಿಗೆ ನೀವೆ ಅಗ್ರಗಣ್ಯರೆಂದು ನಂಮ ವಂಶ ಪಾರಾಂಪರ್ಯ

೧೪ ಚಂದ್ರಾರ್ಕಳಿರುವ ಪರ್ಯಾಂತ್ರ ನೀವೆ ಅನುಭವಿಸಿಕೊಂಡು ಹೋ

೧೫ ಗ ಬೆಕೆಂದು ನಡ್ಸಿಕೊಟ್ಟ ಭೂ ಸ್ವಾಸ್ತಿ ಯಿನಾಮು ದಾನ ಪಟ್ಟ ಸಿಲಾಂ ॥

(ಈ ಶಾಸನವನ್ನು ಓದುವಲ್ಲಿ ಡಾ. ಎಂ.ಜಿ. ನಾಗರಾಜ್ ಅವರ ಸಹಾಯವನ್ನು ಪಡೆದುಕೊಂಡಿದ್ದೇನೆ)

* ೪ನೇ ಮುಖ್ಯರಸ್ತೆ, ೧೦ನೇ ತಿರುವು, ಜೆ.ಸಿ. ಬಡಾವಣೆ, ಹರಿಹರ, ದಾವಣಗೆರೆ ಜಿಲ್ಲೆ.

ಶಾಸನದಲ್ಲಿ ೧೭ನೇ ಶತಮಾನದ ಅಲ್ಲಾವುದ್ದೀನ್ ಪಾಳೇಗಾರನ ಪ್ರಸ್ತಾಪ ಬಂದಿದೆ. ಇದು ಸ್ಪಷ್ಟವಾಗಿ ಕ್ರಿ.ಶ. ೧೨೯೬-೧೩೧೬ರ ಸುಲ್ತಾನನಾದ ಅಲ್ಲಾವುದ್ದೀನ್ ಖಿಲ್ಜಿಗೆ ಸಂಬಂಧಗೊಳ್ಳುವುದಿಲ್ಲ. ಹೀಗಾಗಿ ವಿಜಯನಗರೋತ್ತರ ಕಾಲದಲ್ಲಿ ಆದಿಲ್‌ಶಾಹಿ ನವಾಬರುಗಳ ಕಾಲದಲ್ಲಿ ಈ ಶಾಸನವು ಹುಟ್ಟಿದಂತಿದೆ. ಇದೊಂದು ದಾನಶಾಸನವೂ ಆಗಿದೆ. ಲಿಪಿ ಲಕ್ಷಣಗಳನ್ನು ಗಮನಿಸಿದರೆ ೧೯ನೇ ಶತಮಾನಾಂತ್ಯ ಅಥವಾ ೨೦ ನೇ ಶತಮಾನದ ಪೂರ್ವಾವಧಿಯಲ್ಲಿ ಬರೆಸಿದ ಶಾಸನವಾಗಿ ಕಾಣುತ್ತದೆ. ಈ ಹಿನ್ನೆಲೆಯಲ್ಲಿ ಇದನ್ನು ಕೂಟಶಾಸನವೆಂದು ನಿರ್ಧರಿಸುವ ಬದಲು, ೧೭ನೇ ಶತಮಾನದಲ್ಲಿ ಮುಸ್ಲಿಂ ಆಡಳಿತಗಾರನೊಬ್ಬ ಮಠ ಕಟ್ಟಿಸಿ, ಗ್ರಾಮದಾನ ಮಾಡಿದ್ದ ವಿಷಯವನ್ನು ತಾಮ್ರ ಶಾಸನದಲ್ಲಿ ಪುನರಪಿ ನಕಲು ಮಾಡಿರುವ ಸಾಧ್ಯತೆಯೂ ಇದೆ. ಕಾರಣ ಶಾಸನದಲ್ಲಿ ಉಕ್ತರಾಗಿರುವ ಗುರುಗಳ ವಂಶೀಕರು ಈಗಲೂ ಇದ್ದಾರೆ. ಉಕ್ತ ಗ್ರಾಮಗಳೂ ಇಂದು ಅಸ್ತಿತ್ವದಲ್ಲಿವೆ. ಯಿನಾಮುಗ್ರಾಮಗಳು ಟೆನೆನ್ಸಿಯಲ್ಲಿ ಹೋಗಿವೆ.

ಶಾಸನಾನ್ವಯ ವಿಷಯಗಳು

ಶ್ರೀ ಮದ್ರಂಭಾಪುರಿ ಪೀಠದ ಶಾಖೆಯಲ್ಲಿ ಉಕ್ತವಾದ ವೀರಪುರ ಹಿರೇಮಠದ ಪಡುವಿಡಿ ಸೂತ್ರಾನುವರ್ತಿಗಳಾದ ಪಟ್ಟದ ಚ 'ಲೀ' ವೀರಸ್ವಾಮಿಗಳಿಗೆ ಮುಸ್ಲಿಂ ಪಾಳೇಗಾರನು ವೀರಪುರ ಗ್ರಾಮದಲ್ಲಿ ಹಿರೇಮಠವನ್ನು ಸ್ಥಾಪಿಸಲು ನೆರವಾದ. ಅದಕ್ಕೆ ೧೦೮ ಲಿಂಗಮುದ್ರೆಗಳನ್ನು ಹಾಕಿಸಿದ್ದ, ಯಿನಾಮಾಗಿ ಸ್ವಾಮಿಗಳಿಗೆ ೩೦ ಮಾರು ಭೂಮಿ ಭೂದಾನ ಮಾಡಿ; ನೆರೆಗಲ್ಲು ಚಂಡೂರು, ಬೆಣ್ಣೆಕಲ್ಲು ಗ್ರಾಮಗಳನ್ನು ಕೊಟ್ಟ ವಿಷಯವೂ ಶಾಸನದಲ್ಲಿ ಬಂದಿವೆ. ಇದೊಂದು ವಂಶಪಾರಂಪರ್ಯಕ್ಕೆ ಕೊಟ್ಟ ಕೊಡುಗೆ. ಈ ಗ್ರಾಮಗಳ ವ್ಯವಹಾರಗಳಿಗೆ ಈ ವಂಶಿಕರೇ ಅಗ್ರಗಣ್ಯರೆಂಬ ಅಂಶವನ್ನು ಈ ಶಾಸನದಲ್ಲಿ ಸೂಚಿಸಲಾಗಿದೆ. ಈ ರೀತಿಯ ಶಾಸನೋಕ್ತ ವಿಷಯ ಪಡುವಿಡಿ ಸೂತ್ರ ಶ್ರೀಮದ್ರಂಭಾಪುರಿ ಶಾಖಾ ಮಠಗಳಲ್ಲಿ ಕಾಣಬರುತ್ತವೆ. ಈ ಬಗೆಯ ವಿವಿಧ ಜಂಗಮ ಮನೆತನಗಳಿಗೆ ನೀಡಿದ ದಾನದಲ್ಲಿ ಡಾ|| ಕೆ. ರವೀಂದ್ರನಾಥರೂ **ಇತಿಹಾಸ ದರ್ಶನ**ದಲ್ಲಿ ಪ್ರಕಟಿಸಿರುವ ತಾಮ್ರ ಶಾಸನಗಳಲ್ಲಿಯೂ ಕಂಡು ಬರುತ್ತವೆ.

ಸದ್ಯದ ಶಾಸನದಲ್ಲಿ ಬರುವ 'ಗ್ರಾಮಾನುಗ್ರಾಮಗಳಲ್ಲಿ ಮಠ ಮಾನ್ಯಗಳನ್ನು ಪಡೆದ ಪಡುವಿಡಿ ಸೂತ್ರದ ಸೂತ್ರಾನುವರ್ತಿ' ಎಂಬ ಸಾಲು, ಮೇಲಿನ ಅಂಶಕ್ಕೆ ಪೋಷಕವಾಗುತ್ತವೆ. ಹಾಗಾದರೆ ಈ ಮಠಗಳು ಕೇಂದ್ರ ಪೀಠದ ಯಾವ ಸಂದರ್ಭಗಳಿಗೆ ಸ್ಪಂದಿಸುತ್ತಿದ್ದವು ಎಂಬುದನ್ನು ವಿಚಾರ ಮಾಡಬೇಕು. ಆಧ್ಯಾತ್ಮದ ತವರಾಗಿ, ದೈವೋಪಾಸಕರ ನೆಲೆಯಾಗಿ, ಭಕ್ತರ ಬದುಕಿಗೆ ಗುರುಧರ್ಮದ ಬೆಳಕನ್ನಿತ್ತು ಜೀವನ ವಿಧಾನಕ್ಕೆ ಭೂಮಿಕೆಯಾದ ಪುಣ್ಯಭೂಮಿ ಶ್ರೀ ರಂಭಾಪುರಿ ವೀರಸಿಂಹಾಸನ ಪೀಠವಾಗಿದೆ. ಇದನ್ನು ಬಾಳೆಹಳ್ಳಿ ಸಿಂಹಾಸನವೆಂತಲೂ, ರೇಣುಕ ಪೀಠವೆಂತಲೂ, ಪಡುವಿಡಿ ಸೂತ್ರದ ಮೂಲಕೇಂದ್ರ ವೆಂತಲೂ, ವೀರಗೋತ್ರ ಪೀಠವೆಂತಲೂ ಕರೆಯಲಾಗಿದೆ. ಶ್ರೀಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠ ಬಾಳೆಹೊನ್ನೂರು ಎಂದು ಪ್ರಸ್ತುತದಲ್ಲಿ ಕರೆಯ ಲಾಗುತ್ತಿದೆ. ಈ ಪೀಠಕ್ಕೆ ೧೨.೫೦೦ ಶಾಖಾ ಮಠಗಳಿರುವುದಾಗಿ ಉಲ್ಲೇಖಿಪಿದೆ. ಅವುಗಳಲ್ಲೊಂದಾಗಿರುವುದು ಶಾಸನದಲ್ಲಿ ಬರುವ ವೀರಪುರದ ಹಿರೇಮಠವಾಗಿದೆ.

ರಂಭಾಪುರಿ ಪೀಠದಲ್ಲಿ ಪಾರಾಂಪರಿಕವಾಗಿ ನಡೆದು ಬರುವ ಕ್ಷೇತ್ರನಾಥ ವೀರಭದ್ರಸ್ವಾಮಿಯ ಮಹಾರಥೋತ್ಸವ ಮತ್ತು ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ, ಶರನ್ನವರಾತ್ರಿ ದಸರಾ ದರ್ಬಾರ್ ಹಾಗೂ ಜನಜಾಗೃತಿ ಧರ್ಮ ಸಮ್ಮೇಳನಗಳು, ಶ್ರಾವಣ ಮಾಸದ ಪೂಜಾನುಷ್ಠಾನ ವೇಳೆಯಲ್ಲಿ ಹಾಗೂ ಇತರೆ ಆಗು ಹೋಗುಗಳಲ್ಲಿ ಇಂತಹ ಹಿರೇಮಠಗಳು ಕಷ್ಟಸುಖಗಳಲ್ಲಿ ಪಾಲ್ಗೊಳ್ಳತ್ತಿದ್ದು ಇಂತಹದೊಂದು ಸಂಪ್ರದಾಯ ಇಂದಿಗೂ ನಡೆದು ಬಂದಿದೆ. ಈ ರೀತಿ ಗುರು ಸಾನ್ನಿಧ್ಯಕ್ಕೆ ಶಾಖಾ ಮಠಗಳ ಶ್ರೀಗಳು ಬರುತ್ತಿರುವುದಕ್ಕೆ ಪಾರಂಪರಿಕ ರೂಢಿಯೇ ಕಾರಣವೆನ್ನಬಹುದು. ವಿಶೇಷವೆಂಬಂತೆ ಶರನ್ನವರಾತ್ರಿಯ ದಿನಗಳಲ್ಲಿ ಬರುವುದು ವಾಡಿಕೆ ಇದೆ.

ಶರನ್ನವರಾತ್ರಿಯ ಸಂದರ್ಭದಲ್ಲಿ ರಂಭಾಪುರಿಪೀಠ ದಸರಾ ದರ್ಬಾರ್ ಹಾಗೂ ಜನಜಾಗೃತಿ ಧರ್ಮ ಸಮಾರಂಭ ನಡೆಸುವುದು ಆಶ್ವೀಜ ಶುದ್ಧ ಪ್ರತಿಪದೆಯಿಂದ ವಿಜಯ ದಶಮಿಯವರೆಗೆ. ಈ ಸಮಾರಂಭ ಬಹು ಹಿಂದಿನಿಂದಲೂ ಪೀಠದಲ್ಲಿ (ಬಾಳೆಹೊನ್ನೂರಿನಲ್ಲಿ) ನಡೆಯುತ್ತಿತ್ತು. ಈ ಪೀಠದ ಲಭ್ಯ ದಾಖಲಾತಿಯಲ್ಲಿರುವ ೧೧೮ ನೆಯ ಪೀಠಾಧಿಪತಿಗಳಾದ ಶ್ರೀಶ್ರೀಶ್ರೀ ೧೦೦೮ ಜಗದ್ಗುರು ಅಭಿನವರೇಣುಕ ಶಿವಾನಂದ ಶಿವಾಚಾರ್ಯ ಮಹಾಸ್ವಾಮಿಗಳವರ ಕಾಲದಲ್ಲಿ ಅಂದರೆ ೧೯೨೫ ರಲ್ಲಿ ಪೀಠದಲ್ಲಿ ನಡೆಯುತ್ತಿದ್ದ ಈ ಕಾರ್ಯಕ್ರಮವನ್ನು ಭಕ್ತಾದಿಗಳ ಆಶಯ, ಶಾಖಾಮಠದವರ ಒತ್ತಾಸೆಯಂತೆ ನಾಡಿನ ವಿವಿಧ ಕಡೆಯಲ್ಲಿ ನಡೆಸಲು ಮುಂದಾಯಿತು. ರಂಭಾಪುರಿಪೀಠದ ಈ ದಸರಾ ದರ್ಬಾರ್, ಜನರ ಅಂತರಂಗ ಮತ್ತು ಬಹಿರಂಗಗಳೆರಡನ್ನು ಪವಿತ್ರವಾಗಿಸಿಕೊಂಡು ಬಾಳು ನಡೆಸಲು ಬೆಳಕನ್ನು ನೀಡುತ್ತದೆ. ಇದೊಂದು ಸಾಂಸ್ಕೃತಿಕ ಹಬ್ಬವಾಗಿ, ಸಾಂಸ್ಕೃತಿಕ ಮೌಲ್ಯಗಳನ್ನು ಎತ್ತಿಹಿಡಿಯುವ ಚಲನಶೀಲ ವಿಶ್ವವಿದ್ಯಾಲಯವಾಗಿ ಶ್ರೀ ಸಾಮಾನ್ಯರ ಜೊತೆ ನಡೆಯುತ್ತದೆ. ಇವರಲ್ಲಿ ಪಾಲ್ಗೊಂಡವ

ರನ್ನು ಸಾತ್ವಿಕ ಸುಸಂಸ್ಕೃತರನ್ನಾಗಿ ಪರಿವರ್ತಿಸುವ ಕಾರ್ಯಕ್ರಮ ಇದಾಗಿದೆ. ಈ ದಸರಾ ಮಹೋತ್ಸವದಲ್ಲಿ ಜಾತಿ-ಮತ-ಪಂಥಗಳೆನ್ನದೆ ಸರ್ವ ಜನಾಂಗದವರೂ ಸೇರಿ ಧರ್ಮಕ್ಕೆ, ಮಾನವತೆಗೆ ಅರ್ಥ ಬರುವಂತಹ ರೀತಿಯಲ್ಲಿ ಸಂಯೋಜಿಸುವರು. ಇದರಲ್ಲಿ ಪಾಲ್ಗೊಳ್ಳುವ ಪೀಠದ ಸೂತ್ರಾನುವರ್ತಿಗಳು ಮಹಾಪೀಠದ ಉದ್ಘೋಷಣೆಗಳಾದ “ಮಾನವ ಧರ್ಮಕ್ಕೆ ಜಯವಾಗಲಿ; ಧರ್ಮದಿಂದಲೇ ವಿಶ್ವಕ್ಕೆ ಶಾಂತಿ” ಎಂಬ ಸಂದೇಶಗಳನ್ನು ಅನುಷ್ಠಾನದಲ್ಲಿ ತಂದ ಪರಿಯನ್ನು ಪೀಠಕ್ಕೆ ಅರಿಕೆ ಮಾಡಿಕೊಳ್ಳುವರು, ಜೊತೆಗೆ ನಜರ್ ಸಮರ್ಪಣೆಯಲ್ಲಿ ಪಾಲ್ಗೊಂಡು ಸನ್ನಡತೆಯನ್ನು ಸಮರ್ಪಿಸುವರು.

ದಸರಾ ದರ್ಬಾರ್‌ಗೆ ಆಗಮಿಸುವಾಗ ಜಗದ್ಗುರುಗಳು ರಾಜಗುರುಸಾರ್ವಭೌಮರಾಗಿ, ಹಿಂದೂ-ಮುಸ್ಲಿಂಮರ ಭಾವೈಕ್ಯತೆಯ ಸಂಕೇತವನ್ನು ಎತ್ತಿ ಹಿಡಿಯುವಂತಹ ಪೋಷಾಕು ಧರಿಸಿ ಧರ್ಮದ ದರ್ಬಾರ್ ನಡೆಸುವರು. ಒಬ್ಬ ಉರ್ದು ಭಾಷಿಕ ಭಕ್ತ ಹೇಳುವ ಹಾಗೆ “ದುನಿಯಾಮೇ ಕಿತನಿಹೀ ದರ್ಬಾರ್ ಹೈ ಪರ್ ಜಗದ್ಗುರು ರಂಭಾಪುರೀ ಮಹಾ ಸಂಸ್ಥಾನ್‌ಕಿ ದರ್ಬಾರ್‌ಹೀ ದರ್ಬಾರ್ ತೋ ದೇಖ್‌ನೆ ವಾಲೊಂಕೆ ಆಂಖ ಔರ್ ಜೀ ಚಾಹಿಯೆ. ಯೇಹೋತೋ ಜಿಂದಗಿ ದರ್ಬಾರ್ ಕೀ ದರ್ಬಾರ್ ಹೈ” ಹೀಗೆ ಧರ್ಮದ ಪ್ರಭಾವಕ್ಕೆ, ಒಮ್ಮೆ ಒಳಪಟ್ಟರೆ ಸಾಕು ಅದು ಅವನ ಜೀವನವನ್ನು ಪಾವನಗೊಳಿಸುತ್ತದೆ ಎಂದು ಅಭಿಪ್ರಾಯಿಸುವರು. ಈ ದರ್ಬಾರ್ ಸಂದರ್ಭದಲ್ಲಿ ಪ್ರತಿದಿನದ ಜೀವನ ಮೌಲ್ಯಗಳನ್ನು ಕುರಿತು ವಿವಿಧ ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ ಚಿಂತಕರಿಂದ ಉಪನ್ಯಾಸ. ದರ್ಬಾರ್‌ಗೆ ಆಗಮಿಸಿದ ಶ್ರೀಗಳವರಿಂದ ಧರ್ಮೋಪದೇಶ ಗಳು, ಸಾಹಿತ್ಯ ಸಂಗೀತಗಳ ರಸದೌತಣದ ಜೊತೆಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದು ಸಮಾಜೋತ್ಕರ್ಷತೆಗೆ ಕಾರಣೀಭೂತರಾದ ಕವಿ-ಕಲಾವಿದರಿಗೆ, ಸಮಾಜ ಚಿಂತಕರಿಗೆ, ಸಾಧನಾಶೀಲರಿಗೆ ಬಿರುದು ಸಹಿತ ಪ್ರಶಸ್ತಿ ನೀಡಿ ಗೌರವ ಗುರುರಕ್ಷೆ ನೀಡುವ ಪಾರಂಪರಿಕ ಪರಿಪಾಠವಿದೆ. ಇದು ಆದಿಯಿಂದ ಇರುವದರಿಂದಲೇ ಹಿಂದೆ ರಾಜ-ಮಹಾರಾಜರು, ಪಾಳೆಯಗಾರರು ಪೀಠಕ್ಕೆ, ಪೀಠದ ಶಾಖಾಮಠಗಳಿಗೆ ಗೌರವ ಪೂರ್ವಕ ದತ್ತಿ-ದಾನಗಳನ್ನು ನೀಡಿ ಶಾಸನಗಳನ್ನು ಬರೆಸುತ್ತಿದ್ದರು.

ದರ್ಬಾರ್‌ನ ವೇದಿಕೆಯ ಸಮಾರಂಭದ ಕೊನೆಯಲ್ಲಿ ಅಂದರೆ ಪೀಠಾಧಿಪತಿಗಳ ಧರ್ಮ ಸಂದೇಶಾಮೃತದ ನಂತರದಲ್ಲಿ ನಜರ್ ಸಮರ್ಪಣೆ ಎಂಬ ಆಕರ್ಷಕ ಕಾರ್ಯಕ್ರಮ ವಿಶೇಷವಾಗಿ ನಡೆಯುತ್ತದೆ. ಇದರಲ್ಲಿ ಪೀಠದ ಶಾಖಾಮಠದ ಶ್ರೀಗಳು, ಹಿರೇಮಠದವರು, ಪೀಠದ



ಶ್ರೀ ರಂಭಾಪುರೀ ಜಗದ್ಗುರುಗಳು
ಬಾಳೆಹೊನ್ನೂರು



ಬಂಧೂಕುಧಾರಿಗಳು, ಈಟಿಧಾರಿಗಳು, ಸರ್ಕೀಟ್ ಏಜೆಂಟರು, ದಂಡಧಾರಿಗಳು, ಭರ್ಜಿಧಾರಿಗಳು, ಪೀಠದ ವಾರ್ತಾ ವಿಭಾಗದವರು ಹಾಗೂ ಸಾಹಿತ್ಯ-ಸಂಸ್ಕೃತಿಗಳ ಸಂಗ್ರಹಕಾರರು. ಆಸ್ಥಾನದ ವಿದ್ವಾಂಸರು, ಸಂಘಟಕರು ಸೇರಿದಂತೆ ಸ್ಥಳೀಯ ಜನರಿಂದ ನಜರ್ ಸಮರ್ಪಣೆ ಮಾಡುತ್ತಾರೆ. ಇಂಥ ಪಾರಂಪರಿಕ ಗೌರವ ಭಕ್ತಿ ಸಮರ್ಪಣೆಯು ಗುರುಶಿಷ್ಯರ ಮಧ್ಯೆ ಅವಿನಾಭಾವ ಸಂಬಂಧಗಳು ಉಳಿದು ಬರಲು ಸಹಕಾರಿಯಾಗಿದೆ.



ಗುರು ಪರಂಪರೆಯ ಹಿರೇಮಠಸ್ಥರು ತಾವು ನೆಲೆಸಿರುವ ಗ್ರಾಮದ ಸ್ವಾಸ್ಥ್ಯವನ್ನು ಕಾಯ್ದುಕೊಂಡು ಹೋಗುವವರಾಗಿದ್ದಾರೆ. ಹೀಗಾಗಿ ಇವರು ಸ್ಥಾನಿಕ ಅಧಿಕಾರಿಗಳಾಗಿರುವರು. ಇವರ ಮೇಲೆ ಪ್ರಾಂತೀಯವಾಗಿ ಪಟ್ಟಾಧಿಕಾರಿಗಳು ಇರುತ್ತಾರೆ. ಇವರೆಲ್ಲರಿಗೂ ಕೇಂದ್ರಶಕ್ತಿಯಾಗಿ ಪೀಠಚಾರ್ಯರಿರುವರು. ಈ ಪರಂಪರೆಯನ್ನು ಡಾ॥ ಸ.ಜ. ನಾಗಲೂಟಿ



ಮಠರು ವಿಶ್ಲೇಷಿಸಿರುವಂತೆ "ಹಿರೇಮಠಸ್ಥರು ವೀರಶೈವ ಧರ್ಮ ಸಮಾಜದಲ್ಲಿ ಹುಟ್ಟಿ ಬೆಳೆದವರು. ಸಮಾಜಕ್ಕಾಗಿ ದುಡಿಯುತ್ತ ಸ್ವಾರ್ಥವನ್ನು ಬಹುದೂರ ಇಟ್ಟವರು. ಸೇವೆಯನ್ನು ಅಪ್ಪಿಕೊಂಡವರು ಅವರು. ಇವರ ನಿಸ್ವಾರ್ಥ ಸೇವೆಯನ್ನು ಉಂಡ ಸಮಾಜ ಈ ಹಿರೇಮಠದವರಿಗೆ 'ಸ್ವಾಮಿ' ಪದವಿ ಕೊಟ್ಟಿತು, ಗೌರವಿಸಿತು. ಅವರ ಸೇವೆ ಸಮಾಜಕ್ಕೆ ಅವಶ್ಯವೆಂದು ಮನಗಂಡ ಅವರಿಗೆ ಬೇರೆ ವಸತಿಗಳನ್ನು ಕಟ್ಟಿಸಿ ಅಲ್ಲಿಯೇ ವಾಸಿಸಲು ಹಾಗೂ ಸಮಾಜ ಸೇವೆಯನ್ನು ಮುಂದುವರಿಸಲು ಅನುವು ಮಾಡಿ ಕೊಟ್ಟಿತು. ಅವೇ ಮಠಗಳಾದವು. ಮಠಗಳನ್ನು ಸಮಾಜವೇ ನಿರ್ಮಿಸಿತು. ಮಠಗಳು ಸ್ವಾಮಿಗಳು ಕಟ್ಟಿಕೊಂಡ ಕಟ್ಟಡಗಳಲ್ಲ. ಸ್ವತಃ ಕಟ್ಟಡಗಳನ್ನು ಕಟ್ಟಿಕೊಂಡವರುಗಳಿಗೆ ಮಠಗಳೆನ್ನಲು ಬರುವದಿಲ್ಲ. ಮಠಗಳನ್ನು ಸಮಾಜವೇ ನಿರ್ಮಿಸಬೇಕು. ಮಠಗಳು ಬರೀ ಕಲ್ಲು-ಇಟ್ಟಿಗೆಗಳಿಂದಾದ ಇಮಾರತಿಗಳಲ್ಲ. ಮಠಗಳಿಗೆ ನಿಜವಾಗಿಯೂ ಸಮಾಜ ಬಾಂಧವರ ಭಾವನೆಗಳೇ ಅಲ್ಲಿ ಕಲ್ಲು ಇಟ್ಟಿಗೆಗಳಾಗಿರುತ್ತವೆ. ಈ ಮಠಗಳಲ್ಲಿ ಸ್ವಾಮಿಗಳು ಮಾಡುವ ಸೇವೆ ಮಠಕ್ಕೆ ಮೀಸಲಾಗಲಿಲ್ಲ. ಅವರು ಸಮಾಜ ಮಧ್ಯದಲ್ಲಿ ತಿರುತಿರುಗಿ ಜನರ ಸೇವೆ ಮಾಡತೊಡಗಿದರೆಂದೇ ಇವರಿಗೆ ಇನ್ನೊಂದು ಹೆಸರಿಟ್ಟರು. ಅದೇ ಜಂಗಮರೆಂದು. ಗೌರವಪೂರ್ವಕವಾಗಿ "ಅಯ್ಯ", "ಅಜ್ಜ" ಎಂದು ಸಂಬೋಧಿಸ ತೊಡಗಿದರು. ಈ ಮಠದ ಮಖ್ಯಸ್ಥರ ಕಾರ್ಯ ವೀರಶೈವ ಸಂಸ್ಕೃತಿಯನ್ನು ತಿಳಿಸುವುದಾಗಿತ್ತು. ಇಂಥ ವ್ಯಕ್ತಿ ಸಮಾಜದಲ್ಲಿರಬೇಕು. ಸಮಾಜದದೊಡನಿದ್ದು ಬಾಳಬೇಕು ಎಂಬ ತಿಳುವಳಿಕೆಯಿಂದಲೇ ಪ್ರತಿ ಹಳ್ಳಿಗೆ ಒಂದು ಹಿರೇಮಠ ಸ್ಥಾಪಿಸಿದರು. ಅದಕ್ಕೆ ಓರ್ವನನ್ನು ಪಟ್ಟದಪ್ಪ ಎಂದು ನಿಯಮಿಸಿತು. ಆ ಊರಲ್ಲಿ ಜಂಗಮ ಸಿಗಲಿಲ್ಲವೆಂದರೆ ಸಮೀಪದ ಊರಿನಿಂದ ಜಂಗಮನನ್ನು ಆಮಂತ್ರಿಸಿ ಈ ಮಹತ್ವದ ಸಮಾಜ ಸೇವೆಯನ್ನು ನಿರ್ವಹಿಸಲು ಹೇಳುತ್ತಾರೆ. ಇಂದಿಗೂ ಈ ವ್ಯವಸ್ಥೆ ನಡೆದಿದೆ. ಜಂಗಮ ಗೃಹಸ್ಥನಾಗಿರಬಹುದು ಇಲ್ಲವೆ ಸನ್ಯಾಸಿಯಾಗಿರಬಹುದು. ಒಟ್ಟಿನಲ್ಲಿ ಊರಿಗೊಂದು ಮಠ, ಮಠಕ್ಕೊಬ್ಬ ಸ್ವಾಮಿಬೇಕು ಎನ್ನುವದು ವೀರಶೈವ ಸಮಾಜದ ವ್ಯವಸ್ಥೆಯಾಗಿತ್ತು.

ಈ ಸ್ವಾಮಿಯ ಕಾರ್ಯಗಳೇನು ? ಒಂದು ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಕುಟುಂಬದ ಸುದ್ದಿ ಸ್ವಾಮಿಗೆ ತಲುಪಬೇಕು. ಅಂದರೆ ನಿತ್ಯ ಓರ್ವವ್ಯಕ್ತಿ ಊರಲ್ಲಿಯ ಪ್ರತಿ ವೀರಶೈವರ ಮನೆಗೆ ಹೋಗಿ ಬರಬೇಕು. ಇದಕ್ಕೆಂದು ಇಬ್ಬರು ವ್ಯಕ್ತಿಗಳನ್ನು ನಿಯಮಿಸಿದರು. ಅವರಲ್ಲಿ ಒಬ್ಬ "ಜಂಗಿನ" ಸ್ವಾಮಿ ಅಥವಾ "ಹಿಟ್ಟಿನ ಸ್ವಾಮಿ" ಎಂದರೆ ಒಂದು ತರದ ಗಂಟೆಯನ್ನು (ಜಂಗುವನ್ನು) ಮೊಳಕಾಲಿಗೆ ಕಟ್ಟಿಕೊಂಡು ಇವನು ಊರು ಸುತ್ತುಹಾಕಬೇಕು. ಪ್ರತಿಯೊಂದು ಮನೆಯ ಮುಂದೆ ಹೋದಾಗ ಇವನ ಜೋಳಿಗೆಯಲ್ಲಿ ಮನೆಯವರು ಒಂದು ಮುಷ್ಟಿ ಹಿಟ್ಟು ನೀಡುತ್ತಾರೆ. ಕೆಲವರ ಮನೆಗಳಲ್ಲಿ ನೀಡಲಿಕ್ಕಿಲ್ಲ. ಕಡಿಮೆ ನೀಡಬಹುದು, ಬಂದ ಹಿಟ್ಟನ್ನು

ಅದರೊಡನೆ ಊರ ಸುದ್ದಿಗಳನ್ನು ಹೊತ್ತು ತಂದು ಹಿರಿಯಮಠದ ಸ್ವಾಮಿಗೆ ಒಪ್ಪಿಸಬೇಕು. ಇಲ್ಲಿಗೆ ಜಂಗಿನ ಸ್ವಾಮಿಯ ಕರ್ತವ್ಯ ಮುಗಿಯಿತು. ಬಂದ ಹಿಟ್ಟು ನಿಜವಾಗಿ ಮಠಕ್ಕೆ. ಅಂದರೆ ಸಮಾಜದ ಸೇವೆಗೆ, ಸಮಾಜವೇ ಕೊಟ್ಟ ಕೊಡುಗೆ. ಎರಡನೆಯ ವ್ಯಕ್ತಿ "ಕಜ್ಜಾಯದ ಸ್ವಾಮಿ". ಇವನು ಮಧ್ಯಾಹ್ನದ ಹೊತ್ತಿಗೆ ಊರಲ್ಲಿ ಸುತ್ತಾಡಿ ಕಂತೆಭಿಕ್ಷೆ ಅಂದರೆ ರೊಟ್ಟಿ ಪಲ್ಯೆಗಳನ್ನು ಭಿಕ್ಷೆಬೇಡಿ ಹಿರಿಯ ಮಠಕ್ಕೆ ಸಲ್ಲಿಸಬೇಕು. ಬಂದ ಈ ಪಡಿಪದಾರ್ಥಗಳು ಮಠಕ್ಕೆ ಬಂದ ಅತಿಥಿಗಳಿಗೆ, ಪ್ರವಾಸಿಗಳಿಗೆ, ಪರಿಚಯಸ್ಥರಿಲ್ಲದವರಿಗೆ ಇದು ಪ್ರಸಾದ. ಈ ಪದ್ಧತಿ ಆ ಊರಿನ ಆ ವೀರಶೈವ ಸಮಾಜದ ಮರ್ಯಾದೆ. ಇದನ್ನು ಸರಿಯಾಗಿ ನಡೆಸುವ ಜವಾಬ್ದಾರಿ ಹಿರಿಯಮಠದ ಸ್ವಾಮಿಯದು. ಕಜ್ಜಾಯದ ಸ್ವಾಮಿಯೂ ಊರ ಸುದ್ದಿಗಳನ್ನು ಹಿರಿಯ ಮಠಕ್ಕೆ ತಲುಪಿಸುತ್ತಿದ್ದ. ಹಿರಿಯ ಮಠದ ಸ್ವಾಮಿ ಈ ಸುದ್ದಿಗಳ ಆಧಾರದ ಮೇಲೆ ಆಯಾ ಕುಟುಂಬಗಳಿಗೆ ಹೋಗಿ ಅವರ ತೊಂದರೆಗಳನ್ನು ವಿಚಾರಿಸಿ ಸೂಕ್ತ ವ್ಯವಸ್ಥೆ ಮಾಡಬೇಕು. ಜಂಗಿನ ಸ್ವಾಮಿ, ಕಜ್ಜಾಯದ ಸ್ವಾಮಿ ಆ ನಂತರ ತಮ್ಮ ತಮ್ಮ ಕಾಯಕಕ್ಕೆ ಹೋಗುತ್ತಿದ್ದರು. ಹಿರಿಯ ಮಠದ ಸ್ವಾಮಿಯ ಇನ್ನೊಂದು ಮಹತ್ವದ ಕಾರ್ಯವೆಂದರೆ ಸಮಾಜದ ಮಕ್ಕಳಿಗೆ ಅಕ್ಷರ ಅಭ್ಯಾಸ ಮಾಡಿಸುವುದು. ಸರಕಾರಗಳನ್ನು ವೀರಶೈವರು ಗಣಿಸಲೇ ಇಲ್ಲ. ತಮ್ಮ ಮಕ್ಕಳ ಶಿಕ್ಷಣವನ್ನು ಮಠಗಳಿಗೆ ಹಚ್ಚಿದ್ದರು. ಸಾರ್ವಜನಿಕ ಶಿಕ್ಷಣ ಮಾಡುವುದಕ್ಕಿಂತ ಮೊದಲು ಮಠಗಳೇ ವಿದ್ಯಾಕೇಂದ್ರಗಳಾಗಿದ್ದವು. ದೊಡ್ಡ ದೊಡ್ಡ ಗ್ರಂಥಾಲಯಗಳಾಗಿದ್ದವು. (ಓಲೇಮಠಗಳು). ವಯಸ್ಕರ ಶಿಕ್ಷಣ ಕೇಂದ್ರಗಳಾಗಿದ್ದವು (ಪುರಾಣಿಕಮಠ). ಸಮಾಜ ಬಾಂಧವರನ್ನು ಒಂದೆಡೆ ಕೂಡಿಸಿ ವಿಷಯಗಳನ್ನು ತಿಳಿಸುವ ಮಾಹಿತಿ ಕೇಂದ್ರಗಳಾಗಿದ್ದವು. (ಗಣಾಚಾರಿ ಮಠ). ಇಂಥ ಎಲ್ಲ ಕಾರ್ಯಗಳಿಗೂ ಸಮಾಜ ವ್ಯವಸ್ಥೆ ಮಾಡಿತ್ತು.

ಸಮಾಜದ ವ್ಯಕ್ತಿಗಳಿಗೆ ಏನಾದರು ತೊಂದರೆಯಾಗಿದೆ ಎಂಬ ಸುದ್ದಿ ಹಿರೇಮಠದ ಸ್ವಾಮಿಗಳ ಕಿವಿಗೆ ಬಿದ್ದರೆ ಸಾಕು ಆಗ ಅವರು "ಕಂಬದ ಸ್ವಾಮಿ" ಎಂಬುವವನನ್ನು ಕರೆದು ಸುಳಿವು ಕೊಡುತ್ತಿದ್ದರು. ಆಗ ಕಂಬದ ಸ್ವಾಮಿ ನಸುಕಿನಲ್ಲಿ ಎದ್ದು ಆ ಕುಟುಂಬದ ಮನೆಯ ಮುಂದೆ ನಿಲ್ಲುತ್ತಿದ್ದ. ಮನೆಯ ಬಾಗಿಲು ತೆರೆದೊಡನೆ ಈ ಸ್ವಾಮಿ ಮನೆಯೊಳಗೆ ಪ್ರವೇಶಿಸಿ ಮನೆಯಲ್ಲಿಯ ಒಂದು ಕಂಬ ಅಪ್ಪಿಕೊಂಡು ನಿಲ್ಲುತ್ತಿದ್ದ. ಆಗ ಮನೆಯಲ್ಲಿ ಅಲ್ಲೋಲ ಕಲ್ಲೋಲ. ಮನೆಯವರು ಕೈಮುಗಿದು ಕೇಳಿದರೂ ಹೇಳುವುದಿಲ್ಲ. ಆಗ ಮನೆಯವರು ಓಡುತ್ತ ಹಿರೇಮಠಕ್ಕೆ ಬರಬೇಕು. ಸ್ವಾಮಿಗಳನ್ನು ಆದರದಿಂದ ಕಂಡು ತಮ್ಮ ಮನೆಯವರ ವ್ಯಸನದ ಬಗ್ಗೆ ತಿಳಿಸಬೇಕು. ತಪ್ಪಾಗಿದ್ದರೆ ಎಲ್ಲರೂ ತಮ್ಮ ಕುಟುಂಬದ ವ್ಯಕ್ತಿಯ ತಪ್ಪನ್ನು ಒಪ್ಪಿ ಕ್ಷಮಿಸಲು ಪ್ರಾರ್ಥಿಸಬೇಕು. ಆಗ ಕಂಬದ ಸ್ವಾಮಿಯೊಡನೆ ಹಿರೇಮಠದ ಸ್ವಾಮಿ ಎಲ್ಲರಿಗೂ ತಿಳಿಹೇಳಿ ಕಷ್ಟ ನಿವಾರಿಸುತ್ತಿದ್ದರು.

ಒಂದು ವೇಳೆ ಆ ಮನೆಯವರು ತಪ್ಪು ಒಪ್ಪಿಕೊಳ್ಳದಿದ್ದಲ್ಲಿ ಕಂಬದ ಸ್ವಾಮಿಯ ತಿಳುವಳಿಕೆಗೆ ಬಗ್ಗದ ಸ್ಥಿತಿಯಲ್ಲಿ ಹಿರೇಮಠದ ಸ್ವಾಮಿಯ ಸೂಚನೆಯಂತೆ 'ಜಾಗಟೆಯ' ತಪ್ಪಿತಸ್ಥರ ಮನೆಯ ಮುಂದೆ ಮುಳ್ಳು ಅವುಗಳ ಮೇಲೆ ನಿಂತು ಜಾಗಟೆ ಬಾರಿಸುತ್ತಾ ಧ್ಯಾನಾಸಕ್ತನಾಗುತ್ತಿದ್ದ. ತಪ್ಪು ಬಹಿರಂಗವಾಗುವ ಭೀತಿಗೆ ಆ ಮನೆಯವರು ತಪ್ಪು ಒಪ್ಪಿಕೊಂಡು ಸನ್ನಡತೆಯಿಂದ ನಡೆಯುತ್ತಿದ್ದರು.

ಸಮಾಜ ಹೀಗಾಗಿ ವ್ಯಸನ ಮುಕ್ತವಾಗಿರಲು ಸಾಧ್ಯವಿತ್ತು. ಸಾದಾ ವ್ಯಸನಕ್ಕಿಂತ ಹೆಚ್ಚಿನ ಮೇಲ್ವಿಚಾರಣೆ ನಡೆಸಬೇಕಾಗುತ್ತಿತ್ತು. ಅಂದರೆ ಮದುವೆಯಂತಹ ಪವಿತ್ರ ಕಾರ್ಯ ಮಾಡಬೇಕಾದಲ್ಲಿ ಹಿರೇಮಠದವರೇ ಮುಖ್ಯಸ್ಥರಾಗಿರುತ್ತಿದ್ದರು. ಕನ್ಯಾ ನೋಡುವುದರಿಂದ ಹಿಡಿದು ಮದುವೆಗಳಲ್ಲಿರುವ ಪದ್ಧತಿಗಳೆಲ್ಲವನ್ನು ಸ್ವಾಮಿಯೇ ನಡೆಸಿಕೊಡುತ್ತಾರೆ. ಅರಿಶಿಣ ಹಚ್ಚುವಾಗ, ಕನ್ಯಾದಾನ ಕಾಲದಲ್ಲಿ ಪಂಚಕಲಶಗಳು ಮಹತ್ವವಾಗಿರುತ್ತವೆ. ಒಂದೊಂದು ಕಲಶ ಒಂದೊಂದು ವೀರಶೈವ ಪಂಚಪೀಠವನ್ನು ಪ್ರತಿನಿಧಿಸುತ್ತವೆ. ಜರುಗುತ್ತಿರುವ ವಿವಾಹಕ್ಕೆ ಈ ಪಂಚಪೀಠಗಳು ಸಾಕ್ಷಿ ಆಗಬೇಕು. ವೀರಶೈವರ ಜನಗಣತಿ ಸರಿಯಾಗಿ ಇರಬೇಕೆಂದು ಸಮಾಜ "ಹೇಳವರನ್ನು" ನಿಯಮಿಸಿತ್ತು. 'ಹೇಳವ' ಎಂದರೆ "ಹೇಳುವವ". ಪ್ರತಿ ಮನೆತನದ ಇತಿಹಾಸ ದಾಖಲಾಗಿರುತ್ತಿತ್ತು. ಈ ಸಮಾಜ ಎಷ್ಟು ಆಳವಾಗಿ ಯೋಚಿಸಿತ್ತು ಎಂಬುದು ಆಶ್ಚರ್ಯಕರ.

ಸಮಾಜವು ಸಮಾಧಿ ಕ್ರಿಯೆಗೂ ವ್ಯವಸ್ಥೆ ಮಾಡಿತ್ತು. ಯಾರಾದರೂ ಮರಣ ಹೊಂದಿದ ಸುದ್ದಿ ಮೊದಲು ಹಿರೇಮಠಕ್ಕೆ ತಲುಪಿಸಬೇಕಾಗಿತ್ತು. ಈ ಸುದ್ದಿಯನ್ನು ತಕ್ಷಣ ಅವರು 'ಮಠಪತಿ' ಎಂಬ ಸ್ವಾಮಿಗೆ ತಿಳಿಸುತ್ತಿದ್ದರು. ಅವರು ಊರಲ್ಲಿಯ ಎಲ್ಲರಿಗೂ ತಿಳಿಸುತ್ತಿದ್ದರು. ಬೇರೆ ಊರಿನ ಬೀಗರಿಗೂ, ಪರಿಚಯಸ್ಥರಿಗೂ ಮಠಪತಿ ತಿಳಿಸಬೇಕು. ಮನೆಯವರಿಗೆ ಯಾವ ಚಿಂತೆ ಬೇಕಿಲ್ಲ. ಮಠಪತಿ ಬಂದು ಮೃತ ವ್ಯಕ್ತಿಯ ದೇಹವನ್ನು ನಿರ್ಮಲಗೊಳಿಸಿ, ಬಟ್ಟೆ ತೊಡಿಸಿ, ಸರಿಯಾಗಿ ಕೂಡ್ರಿಸಿ, ಪೂಜೆ ಮಾಡಿಸಬೇಕು. ಸ್ಮಶಾನಕ್ಕೆ ಹೋಗಿ ಅಂತ್ಯ ಸಂಸ್ಕಾರಕ್ಕೆ ಬೇಕಾದ ವ್ಯವಸ್ಥೆ ಮಾಡಿಸುತ್ತಾನೆ. ಮೃತ ಶರೀರ ಶಿವಭೂಮಿಗೆ ಬಂದರೆ ನೇರವಾಗಿ ಅದು ಸ್ಮಶಾನದೊಳಗೆ ಬರುವಂತಿಲ್ಲ. ದಾರಿಯಲ್ಲಿ ನಿಂತು ಸುಡಗಾಡದ ಸ್ವಾಮಿ ತಡೆಯುತ್ತಾನೆ. ಅವನು ಶವವನ್ನು

ಹೊತ್ತು ತಂದವರನ್ನು ಪ್ರಶ್ನಿಸುತ್ತಾನೆ. ಮೃತರ ತಂದೆ, ತಾಯಿ, ಬಂಧುಗಳು ಯಾರು ? ಹುಟ್ಟಿದ ಮೇಲೆ ಏನೆಲ್ಲ ಪುಣ್ಯ ಕಾರ್ಯ ಮಾಡಿದನು ? ಎಂಬುದು ಜನರಿಗೆ ತಿಳಿಯಬೇಕು. ಈ ಜೀವ ಸಮಾಜಕ್ಕೆ ಏನು ಮಾಡಿದೆ ಎಂಬುದನ್ನು ಕೇಳಿ ಒಳಬಿಡುತ್ತಾನೆ. ಇಲ್ಲಿ ಕೇಳಲಾಗುವ ಪ್ರಶ್ನೆಗಳಿಗೆ ಮೃತನಿಗೆ ಕೇಳದಂತಿದ್ದರೂ. ನಿಜವಾಗಿ ಅವು ಸ್ಮಶಾನಕ್ಕೆ ಬಂದ ಎಲ್ಲ ವ್ಯಕ್ತಿಗಳಿಗೆ ಪ್ರಶ್ನೆಗಳಾಗಿರುತ್ತವೆ. ನಾಳೆ ನಾನು ಸತ್ತಾಗ ನನ್ನವರು ಏನು ಉತ್ತರಿಸುವರು ? ಎನಿಸುತ್ತದೆ. ಒಳ್ಳೆಯ ಕಾರ್ಯಗಳನ್ನು ಮಾಡಲು ಈ ಕ್ರಿಯೆ ಪ್ರಚೋದಿಸುತ್ತದೆ. ಸಮಾಜದ ಇಂಥಾ ಸೇವಾ ಕಾರ್ಯಗಳನ್ನು ನಡೆಸುವಲ್ಲಿ ಹಿರಿಯ ಮಠದ ಮುಖ್ಯಸ್ಥರಿಗೆ ಸಹಾಯ ಮಾಡಲು ಓರ್ವರನ್ನು ಮಠದ ಕಾರ್ಯಗಳಿಗೆ ನಿಯಮಿಸಲಾಗುತ್ತದೆ. ಈ ವ್ಯಕ್ತಿಯೇ "ಮಠಪತಿ". ಒಟ್ಟಿನಲ್ಲಿ ವೀರಶೈವ ಸಮಾಜದವರು ಸಮಾಜ ಸೇವೆಗೆಂದು ಒಂದು ಪಡೆಯನ್ನೇ ನಿಯಮಿಸಿದರು. ಇವರೇ ಜಂಗಮರು.

ಮದುವೆಯ ನಂತರ ಸ್ತ್ರೀ ಗರ್ಭಿಣಿಯಾಗುತ್ತಾಳೆ. ಆವಳ ಗರ್ಭದಲ್ಲಿದ್ದ ಮಗು ಹುಟ್ಟಿದ ತಕ್ಷಣ ಅದಕ್ಕೆ ಹಲವಾರು ಸೂತಕಗಳು ಗಂಟು ಬೀಳುತ್ತವೆ. ಇದನ್ನು ತಪ್ಪಿಸಲೆಂದೇ ಗರ್ಭಕ್ಕೆ ಲಿಂಗ ಕಟ್ಟುವ ವಿಧಿಯನ್ನು ವೀರಶೈವದಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಧರ್ಮದಲ್ಲಿ ಸ್ತ್ರೀ-ಪುರುಷರಿಗೆ ಸಮಾಜದಲ್ಲಿ ಸಮಾನ ಹಕ್ಕನ್ನು ನೀಡಲಾಗಿದೆ. ಗರ್ಭಕ್ಕೆ ಆರು ತಿಂಗಳಾದಾಗ ಕುಬುಸದ ಕಾರ್ಯವನ್ನು ಮಾಡಿ ಗರ್ಭದಲ್ಲಿರುವ ಶಿಶುವಿಗೆ ಶಿಕ್ಷಣ ಪ್ರಾರಂಭಿಸುತ್ತಾರೆ. ಇದನ್ನು ಒಂದು ರೀತಿಯಿಂದ LKG-UKG ಅನ್ನದೇ INKG ಅನ್ನಬಹುದು. ಹಳ್ಳಿಯ ಮಟ್ಟದಲ್ಲಿ, ಗ್ರಾಮ ಮಟ್ಟದಲ್ಲಿ ಇಂಥದೆಲ್ಲವನ್ನು ನಮ್ಮ ಸಮಾಜದ ಸಂಘಟಿಸಿದೆ. ಇಂತಹ ವಿಚಾರಗಳಿಗೆಲ್ಲ ಆಗಾಗ ಮೇಲಿನ ಕೇಂದ್ರಗಳಿಗೆ ತಲುಪಬೇಕು. ಹಿರೇಮಠದ ಮೇಲಿನ ಕೇಂದ್ರವನ್ನು "ಪಂಚಗೃಹ ಹಿರೇಮಠ" ಎಂದು ಕರೆದರು. ಚಿಕ್ಕಪುಟ್ಟ ಹಿರೇಮಠಗಳಿಗೆ ಇವರು ಮಾರ್ಗದರ್ಶನ ಮಾಡುತ್ತಿದ್ದರು. ಪಂಚಗೃಹ ಹಿರೇಮಠಗಳು ಎಲ್ಲ ಸುದ್ದಿ ಕಾರ್ಯಗಳನ್ನು ತಮ್ಮ ತಮ್ಮ ಮೇಲಿನ ಆಯಾ ಭಾಗದ ಶಿವಾಚಾರ್ಯರಿಗೆ ಹಾಗೂ ಐದು ಪೀಠಗಳಿಗೆ ಒಪ್ಪಿಸುವ ವ್ಯವಸ್ಥೆಯಿತ್ತು. ಪೀಠಗಳ ಮಾರ್ಗದರ್ಶನ ದೇಶದ ಎಲ್ಲಭಾಗದ ವೀರಶೈವರಿಗೆ ದೊರೆಯಲೆಂದು ಐದು ಪೀಠಗಳನ್ನು ಸ್ಥಾಪಿಸಿದರು. ಕೇದಾರ ಪೀಠದ ಉತ್ತರ ಹಿಂದೂಸ್ಥಾನದವರಿಗೆ, ಕಾಶಿಪೀಠ ಪಶ್ಚಿಮದವರಿಗೆ, ಮಧ್ಯಭಾಗದವರಿಗೆ ಉಜ್ಜಯಿನಿ, ದಕ್ಷಿಣದವರಿಗೆ ರಂಭಾಪುರೀ ಹಾಗೂ ಶ್ರೀಶೈಲಗಳು. ಒಳ್ಳೆಯ ಆಡಳಿತಕ್ಕೆ ಇದೊಂದು ಉತ್ತಮ ಉದಾಹರಣೆ. ಇಂಥ ಮಾದರಿಯ ಸಂಘಟನೆ ಬೇರೆ ಕಡೆ ಇರುವುದು ಸದ್ಯಕ್ಕೆ ತಿಳಿದಿಲ್ಲ. ಹೀಗಾಗಿ ಈ ಪೀಠಗಳನ್ನು ರಾಷ್ಟ್ರೀಯ ಗುರುಪೀಠಗಳೆಂದು ಕರೆದಿದ್ದಾರೆ. ಸಮಾಜದಲ್ಲಿರುವ ವಿವಿಧ ಕಾಯಕದವರು ನಿಶ್ಚಿಂತರಾಗಿ ತಮ್ಮ ಅಭಿವೃದ್ಧಿಯನ್ನು ನೋಡಿಕೊಳ್ಳಲಿ. ಧಾರ್ಮಿಕ ಹಾಗೂ ಸಾಂಸ್ಕೃತಿಕ ಸೇವೆಗಾಗಿ ಸ್ವಯಂ ಸೇವಕರಾದ ಜಂಗಮರ ಪಡೆಯನ್ನು ನಿರ್ಮಿತವಾಗಿ ಸಮಾಜದ್ದು. ಸಮಾಜ ಸೇವೆಗೆಂದೇ ಮೀಸಲಾದರು. ಹೀಗೆ ಹಿರೇಮಠಗಳು ತಮ್ಮ ಪಾಲಿನ ಸೇವೆಗೆಂದು ಭಕ್ತರಿಂದ ಆಯಾ ಭಾಗದ ಆಳರಸರಿಂದ, ಮಾಡಲೀಕರಿಂದ ಸಹಕಾರ ಪಡೆದು ಸಮಾಜವನ್ನು ನಡೆಸುತ್ತಿದ್ದ ಬಗ್ಗೆ ಅನೇಕ ದಾಖಲೆಗಳಿವೆ.

ಕೆಳದಿ ಅರಸರು ಪೀಠಕ್ಕೆ ಬಂದು ದಸರಾ ದರ್ಬಾರಿನಲ್ಲಿ ನಜರ್ ಒಪ್ಪಿಸುತ್ತಿದ್ದರಂತೆ (ಆಧಾರ. ಶ್ರೀ ಪೀಠದ ದಾಖಲೆ) ಹಾಗೆಯೇ ಶ್ರೀ ಪೀಠಕ್ಕೆ ವಿಜಯನಗರ ಉತ್ಸವದ ಶರನ್ನವರಾತ್ರಿ ಹಬ್ಬದ ಒತ್ತಾಸೆಯೂ ಒದಗಿದಂತಿದೆ. ಪೀಠಕ್ಕೆ ೧೩೬೯ ರಲ್ಲಿ ವಿಜಯನಗರದ ಸಂಗಮ ದೊರೆ ಬುಕ್ಕಣ್ಣ ಭೂದಾನ ಕೊಟ್ಟ ವಿಷಯದ ಶಾಸನ, ರಂಭಾಪುರಿಪೀಠದಲ್ಲಿ ಈಗಲೂ ಇದೆ. ಕ್ರಿ.ಶ. ೧೩೬೯ ಬಾಳೆಹಳ್ಳಿ ಶಾಸನಗಳು, ನರಸಿಂಹರಾಜಪುರ ೧೯ ಮತ್ತು ೨೦ ನೇ ಸಂಖ್ಯೆಯ ಶಾಸನಗಳು, (ಎಪಿಗ್ರಾಫಿಯ ಕರ್ನಾಟಕ ಸಂಪುಟ ೧೨ (ಹೊಸತು), ಮೈಸೂರು ವಿಶ್ವವಿದ್ಯಾಲಯ, ೨೦೦೩) ಹೀಗಾಗಿ ರಂಭಾಪುರಿ ಪೀಠದ ಪರಂಪರೆಯ ಶರನ್ನವರಾತ್ರಿ ಉತ್ಸವಕ್ಕೆ ಆಗಿನಿಂದ ಮತ್ತಷ್ಟು ಪ್ರೋತ್ಸಾಹ ದೊರಕಿರಬಹುದು. ಇಂದು ಅದರ ವೈಭವವನ್ನು ಕಣ್ಣಾರೆ ನೋಡಿ ಮನಸಾರೆ ಸವಿಯಬೇಕಿದೆ. ಈಚೆಗೆ ಚಿಕ್ಕಮಂಗಳೂರಿನಲ್ಲಿ ಪ್ರಸ್ತುತ ಜಗದ್ಗುರುಗಳ ೧೮ನೇ ದಸರಾ ನಡೆಯಿತು. ಆಗ ಶಾಖಾ ಮಠಸ್ಥರು ಜಗದ್ಗುರುಗಳ ಉತ್ಸವಕ್ಕೆ ತಮ್ಮ ಗ್ರಾಮಗಳಲ್ಲಿಯ ಶಿಷ್ಯ ವೃಂದವನ್ನು ಕರೆತಂದು ಕ್ಷೇತ್ರನಾಥ ಹಾಗೂ ಗುರುದರ್ಶನಕ್ಕೆ ಅಣಿಗೊಳಿಸುವುದು ಇದಕ್ಕೆ ಮಾದರಿಯಾಗಿದೆ. ಇದರಿಂದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಚೌಕಟ್ಟು ಮತ್ತು ಬಾಂಧವ್ಯ ಬೆಳೆಯಲು ಅವಕಾಶವಾಗುತ್ತ ಬಂದಿದೆ. ಪೀಠವು ಸರ್ವಜನ ಪ್ರಿಯವಾಗಲು ಕಾರಣವಾಗಿದೆ. ಸಾಮಾಜಿಕ, ಶೈಕ್ಷಣಿಕ ಸೇವೆಯಲ್ಲಿ ಅವರನ್ನೆಲ್ಲ ತನ್ನ ಜೊತೆಯಲ್ಲಿ ತೊಡಗಿಸಲು ಕಾರಣವಾಗಿದೆ. ಸದ್ಯದ ಹೊಸ ಶಾಸನ ಹೀಗೆಲ್ಲ ವಿವರಣೆ ನೀಡಲು ಸಹಕಾರಿ ಆದದ್ದು ಗಮನಾರ್ಹ.

ಡಾ. ಡಿ.ಎಂ. ನಾಗರಾಜು*

ಬಾಗಲೂರಿನ ಕಾಲಜ್ಞಾನ ಶಾಸನ

ಬೆಂಗಳೂರು ಜಿಲ್ಲೆಯ ಉತ್ತರ ತಾಲ್ಲೂಕಿನ ಬಾಗಲೂರು ಎಂಬ ಗ್ರಾಮದಲ್ಲಿ ಅಮ್ಮನವರ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡುವ ಸಮಯದಲ್ಲಿ ಕ್ಷೇತ್ರ ಕಾರ್ಯ ಮಾಡುವಾಗ ಸಿಕ್ಕಿದ ಶಾಸನವಿದು. ಇದು ಅಪ್ರಕಟಿತವಾಗಿದ್ದು ೨೦ನೇ ಶತಮಾನದ ಶಾಸನವಾಗಿದೆ. ಶಾಸನವು ೮ ಅಡಿ ಎತ್ತರ ಮತ್ತು ೩ ಅಡಿ ಅಗಲವಿದ್ದು ಒಟ್ಟು ೬೩ ಸಾಲುಗಳಿದ್ದು ಶಾಸನವು ಸರಳವಾದ ಕನ್ನಡ ಭಾಷೆ ಮತ್ತು ನಿರೂಪಣೆಯಿಂದ ಕೂಡಿದೆ.

ಈ ಶಾಸನದಲ್ಲಿ ಪವಿತ್ರವಾದ ಆದಿಲಕ್ಷ್ಮೀದೇವತೆಯನ್ನು ಪ್ರತಿಷ್ಠೆ ಮಾಡಿದ ವಿಷಯ ಹೇಳಲಾಗಿದೆ. ಶಾಸನವು ವಿಸ್ತಾರವಾದ ವಿಷಯಗಳನ್ನು ಒಳಗೊಂಡಿದೆ. ಧಾರ್ಮಿಕ ವಿಶ್ವಾಸದ ಜನರು ಈ ದೇವತೆಯನ್ನು ನಂಬಿದ್ದಾರೆ ಹಾಗೂ ಪೂಜಿಸುತ್ತಾರೆ. ಈ ಶಾಸನ ಮುಖ್ಯವಾಗಿ ಪದೋತ್ಪತ್ತಿ ಭವಿಷ್ಯವನ್ನು ನುಡಿಯುವ ಇತರ ವಿಚಾರಗಳನ್ನು ಹೊಂದಿದೆ. ಪ್ರತಿಯೊಂದು ಹಂತದಲ್ಲಿ ಶಾಪವನ್ನು ತಿಳಿಸುವ ಈ ಶಾಸನ ಏನಾದರೂ ಪ್ರಶ್ನೆಗಳನ್ನು ಕೇಳಿದರೆ ದೇವತೆಯ ಶಕ್ತಿಯು ಮಹಣತ್ವದ್ದು ಎಂದು ತಿಳಿಸುವಂತಿದೆ. ತಪ್ಪು ಮಾಡಿದವರಿಗೆ ಶಿಕ್ಷೆಯನ್ನು ಬಹಿರಂಗವಾಗಿ ಹೊರಕ್ಕೆ ಹಾಕುವ, ತೊಂದರೆಪಡುವ ಮತ್ತು ತಪ್ಪು ಕಾರ್ಯಗಳನ್ನು ಮಾಡುವ ಭವಿಷ್ಯಗಳು ದೇವತೆಯಿಂದಲೇ ಬರುವ ವಿಚಾರಗಳನ್ನು ದೇವತೆಯನ್ನು ಪ್ರಾರ್ಥನೆ ಮಾಡುವ ಸಮಯದಲ್ಲಿ ದೇವತೆಯ ಶಕ್ತಿ, ಭವಿಷ್ಯ ನುಡಿಯುವ ಕಾಲಜ್ಞಾನದಲ್ಲಿ ಗ್ರಹಿಸುವಂತಿದೆ. ಅಂತಾಗಿ, ಎಲ್ಲರ ಒಳ್ಳೆಯದಕ್ಕೋಸ್ಕರ ದೇವತೆಯಲ್ಲಿ ಬರುವ ವಿವರಣೆಗಳನ್ನು ಶಾಸನದ ಪಾಠದಲ್ಲಿ ತಿಳಿಯಬಹುದು. ಈ ಒಂದು ದೇವತೆಯ ಭಕ್ತಿಸ್ಪರ್ಶ ಜ್ಞಾನ, ದೇವತೆಯನ್ನು ಸ್ತುತಿಸುವ ಪ್ರಾರ್ಥಿಸುವ ಶ್ರೇಷ್ಠತೆ ಮತ್ತು ಮಹತ್ವಗಳನ್ನು ತಿಳಿಸುವ ಅಂಶಗಳನ್ನು ಈ ಶಾಸನದಲ್ಲಿ ವಿವರವಾಗಿ ತಿಳಿಸಲಾಗಿದೆ. ಹಾಗೂ ೫೫ ವರ್ಷದ ನರಕಂದನ ಮೇಲೆ ದೇವರು ಬರುವ ವಿಚಾರವನ್ನು ತಿಳಿಸಲಾಗಿದೆ.

ಇದೇ ರೀತಿಯ ನಂಜಮ್ಮ ಎಂಬ ಕನ್ನಿಕೆಯ ಮೇಲೆ ದೇವರು ಬರುವ ಹಾಗೆ ವಿಷಯವನ್ನು ತಿಳಿಸುವ ವಿಷಯ ಹೀಗಿದೆ. ಮೈಸೂರು ಒಡೆಯರ ಮೂರನೇ ಕೃಷ್ಣರಾಜ ಒಡೆಯರ ಕ್ರಿ.ಶ. ೧೮೧೮ರ ಕನ್ನಂಬಾಡಿ ಶಾಸನದಲ್ಲಿ ನಂಜಯ್ಯನೆಂಬಾತನು ನೂತನ ದೇವಾಲಯವನ್ನು ಕಟ್ಟಿಸಿ ಮಹಾಕಾಳಿ, ಮಹಾಲಕ್ಷ್ಮೀ ಮತ್ತು ಸರಸ್ವತಿ ದೇವತೆಗಳನ್ನು ಪ್ರತಿಷ್ಠಾಪಿಸಿದನು. ಈ ಸೀಮೆಯೊಳಗೆ ವಾಂತಿಭ್ರಾಂತಿಯಾಗಿ ಜನರು ಮೃತರಾಗುತ್ತಿದ್ದರು. ಅದನ್ನು ನಿವಾರಿಸಲು ಕೊಲ್ಲಾಪುರದ ಮಹಾಲಕ್ಷ್ಮೀ ಮತ್ತು ಉಜ್ಜಯಿನಿಯ ಮಹಾಕಾಳಿ ದೇವತೆಗಳು ನಂಜಮ್ಮ ಎಂಬ ಕನ್ನಿಕೆಯ ಮೇಲೆ ಆವಿರ್ಭವಿಸಿ ರೋಗ ಪರಿಹಾರವಾಗುವಂತೆ ಮಾಡಿದರಂತೆ. ಆದ ಕಾರಣವೇ ಆ ದೇವತೆಗಳಿಗೆಂದು ಆಲಯವನ್ನು ಕಟ್ಟಿಸಲಾಯಿತು. ಈ ದೇವತೆಗೆ **ಆವೇಶದಮ್ಮ** ಎಂತಲೇ ಹೆಸರಾಗಿತ್ತು.

ಕ್ರಿ.ಶ. ೧೮೩೬ರ ಇದೇ ರಾಜನ ಕಾಲದ ಮೈಸೂರು ಶಾಸನದಲ್ಲಿ "ಶ್ರೀ ವೆಂಕಟೇಶದೇವರು ಪ್ರತ್ಯಕ್ಷರಾದ್ದರಿಂದ ವೇದಶಾಸ್ತ್ರ ಸಂಪನ್ನರಾದ ತಪಸ್ವಿಗಳು ದಿಗ್ಗಾವಿ ಶ್ರೀನಿವಾಸಚಾರರ ಸ್ವಪ್ನದಲ್ಲಿ ಮೂರು ಅಂಗಾರವೆಂದು ಕಂಠೀರಾಯ ಹಣ ಮಂತ್ರಾಕ್ಷತೆ ಕೊಟ್ಟದುಂನು ನಾಕಸಿಂಡಾ ಸರ್ವಜನಗಳು ಕೊಡುತ್ತಾ ಬಂದಲ್ಲೆಂಬುವುಪ್ರದ್ರುಗಳು ಪರಿಹಾರವಾಗಿ ಮನೋಭಿಷ್ಟಗಳು ಆಗುತ್ತೆಂಬುದಾಗಿ ಹೇಳಿ ಶ್ರೀವೈಷ್ಣವರ ಹುಡುಗರ ಹಾಗೆ ದ್ರಿಷ್ಟಿಗೆ ಗೋಚರವಾಗಿ ಸ್ನಾನ ಮಾಡಿ ಬಾಯೆಂದು ಹೇಳಿ ಬೆನ್ನ ಮೇಲ ಹೊಡದ ನಂತರ ವಹಾತ್ಮೋಶ್ರೀಯರ ಸ್ನಾನಕ್ಕೆ ನೀರು ಹಾಕು ಎಂಬುದಾಗಿ ಹೇಳಿ ಸ್ನಾನವಂ ಮಾಡಿದ ಮೇಲೆ ಒಂಭತ್ತು ದಿವಸದವರೆಗೂ ಆಹಾರ ನಿದ್ರಾದಿ ಸ್ಮೃತಿಗಳಿಲ್ಲದೆ ಸಮಸ್ತ ಜನಗಳಿಗೆ ಅಂಗಾರ ತೀರ್ಥ ಕೊಟ್ಟದರಿಂದ ಸರ್ವರಿಗೂ ಮನೋಭಿಷ್ಟಗಳು ಹಾಗೂ ತಾಯಿರುವಲ್ಲಿ ನಾವು ಶ್ರೀ ವೆಂಕಟೇಶ್ವರ ದೇವರ ಪ್ರೇರಣೆಯಿಂದ ದೇವರ ಸೇವೆ ಮಾಡುತ್ತಾ ಇರುವಲ್ಲಿ ಬೆಂಗಳೂರು ಚಕ್ರವರ್ತಿಶಾಮಚಾರರ ಸ್ವಪ್ನವಾಗಿ ತಂದುಕೊಟ್ಟ ಪಂಜಿನ ಶೇವೆಯೆಂನು ವಿಶೇಷ ಮಹಾತ್ಮೆಗಳನ್ನು ನೋಡಿ ನಾಳೆ ದಿವಸ ಅರಮನೆಗೆ ದಯಮಾಡಬೇಕೆಂಬುದಾಗಿ ಹೇಳಿ ಮರುದಿವಸ ಅರಮನೆಗೆ

* ಉಪ ಅಧೀಕ್ಷಕ ಶಾಸನತಜ್ಞರು, ಶಾಸನ ನಿರ್ದೇಶಕರ ಕಛೇರಿ, ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ, ಮೈಸೂರು.

ಕರೆದುಕೊಂಡು ಹೋಗಿ ಕನ್ನಡಿ ತೊಟ್ಟಿಯಲ್ಲಿ ಉತ್ಸವಗಳ ಮಾಡಿಸಿ ಸಂತೋಷಪಟ್ಟಿದ್ದನ್ನು ತಿಳಿಸುತ್ತದೆ. ದೇವರಿಗೆ ಬೆಳ್ಳಿ ಸಿಂಹಾಸನ ನಿಮಗೆ ಪಟ್ಟದ ಕುದುರೆ ಕಾಲಲ್ಲಿಯಿದ್ದ ಬೆಳ್ಳಿ ನಗ್ರ ಕೈಗೆ ಬೆಳ್ಳಿ ಘಂಟೆ ಸಹ ಜರುದು ಕೊಟ್ಟಿಯಿದ್ದ ಸ್ಥಳಕ್ಕೆ ಸಂಸ್ಥಾನದಿಂದಾ ಕಳುಹಿಸಿಕೊಟ್ಟ ನಂತರ ತಿರುಪತಿ ಯಾತ್ರೆ ಹೋಗುವಲ್ಲಿ ಸಿನಪ್ಪನಾಯ್ಕ ಬಾಳಪ್ಪನಾಯ್ಕನ ಮನೆಯಲ್ಲಿ ದಿಗ್ಗಾವಿ ಶ್ರೀನಿವಾಸಚಾರು ಮೂವತ್ತು ವರುಷದ ಮೇಲೆ ಬರುತ್ತೇವೆಂದು ಹೇಳಿಯಿಟ್ಟಿಯಿಂದಂತ್ತ ಶ್ರೀಭುಶ್ರೀನಿವಾಸ ಕೃಷ್ಣದೇವರು ಸಹ ಸ್ವಪ್ನವಾಗಿ ಕೊಟ್ಟಂತಾ ಪ್ರತಿಮೆಗಳು" ತೆಗೆದುಕೊಂಡದ್ದನ್ನು ತಿಳಿಸುತ್ತದೆ.

ಸುಮಾರು ೧೪–೧೭ನೇ ಶತಮಾನದ ಅವಧೂರ ಕಾಲಜ್ಞಾನಕ್ಕೆ ಸೇರಿದ ಬೂಳಿಬಸನ ಕಾಲಜ್ಞಾನ ಕವಿ ಇದ್ದ ಬಗ್ಗೆ ಹಂಪಿ ಶಾಸನ ವಚನಗಳಲ್ಲಿ, ಕೈವಾರ ನಾರಾಯಣ ವಚನ, ಧರೆಗೆ ದೊಡ್ಡವರು ಇತರ ವಚನ ಸಾಹಿತ್ಯದಲ್ಲಿ ಬರುತ್ತದೆ. ಆದರೆ ಶಾಸನದಲ್ಲಿ ಈ ತರಹದ ಕಾಲಜ್ಞಾನ ಶಾಪಗಳ ವಿವರಣೆಗಳನ್ನು ಬಹಳ ಅರ್ಥಪೂರ್ಣವಾಗಿ ವಿಸ್ತಾರವಾಗಿ ಶಾಸನ ಪಾಠವನ್ನು ನೀಡಿರುವುದು ಈ ಬಾಗಲೂರಿನ ಶಾಸನವೆಂದರೆ ತಪ್ಪಾಗಲಾರದು.

ಶಾಸನದ ಪಾಠ

೧ ಶ್ರೀರಸ್ತು ವಿರೋಧಿಕೃತುನಾಮ ಸಂ॥ ಮಾಘ

೨ ಶುದ್ಧ ೧೦ ಸೋಮವಾರ ದಿನ ೧೨ ಘಂಟೆ ರಾತ್ರಿವಳಗೆನ

೩ ರ ಕಂದನ ಸ್ವಪ್ನದೊಳಗೆ ಆದಿಲಕ್ಷ್ಮೀ ಬಂದು ಚನ್ನಾಗಿ

೪ ತಿಳಿಯುವಂತೆ ಹೇಳಿದು ಇಲ್ಲಿಗೆ ೧೨ ವರುಷ ೧೦ ತಿ

೫ ಂಗಳು ೧೦ ದಿನಕ್ಕೆ ಮೂದಲು ಯಿ ಕಲಿಯುಗಕ್ಕೆ ಆದಿ

೬ ಲಕ್ಷ್ಮೀಯಾದ ನಾನು ಬಂದೆನು ನಂತರ ನಾನು ನರಕಂದನ

೭ ಮೇಲೆ ಬಂದು ಹೇಳಿಕೊಟ್ಟು ಬೇಕಾದ ದೃಷ್ಟಾಂತ್ರಗಳು

೮ ಕೊಟ್ಟರು ಕಂದಗಳು ನಂಬಿದಿ ನಿಂದಿಶದರಿಂದ ಅದನ್ನ

೯ ದೇವತಾ ನೋಡಿ ಕಂದನ ಮೇಲೆ ಬಂದು ಹೇಳುವುದು ನಿಂ

೧೦ ತಾ ಹುಳಿಂಯುಱನಾಗಿ ಸ್ವಪ್ನದಲಿ ಬಂದು ಹೇಳಿದೇನೆಂದರೆ

೧೧ ಯಿ ಕಲಿಯುಗದಲಿ ತ್ರಿಮೂರ್ತಿಗಳುರುಟ್ಟಿ ಲೋಕಕೆ ಬಂ

೧೨ ದಿದಾಕೆ ಆದಿಲಕ್ಷ್ಮೀಗೆ ಗುರುವಾದ ಪರಬ್ರಹಂನಾದ ಅಣಯ್ಯ

೧೩ ನಿಗೆ ನಮಸ್ಕಾರ ಮುಂದೆ ಪರಿದಾವಿಸಂ ಚೈತ್ರಶುದ್ಧ ೧ ಲಾಗಾ

೧೪ ಯ್ತು ೫ ವರ್ಷದೊಳಗಾಗಿ ಜಗತ್ತಿಗೆ ಅಧಿಕ ಕಷ್ಟಗಳು ಕೋರುತ್ತೆ

೧೫ ಯಿಗ ೧೩ ವರ್ಷದಿಂದ ಇರುವದಿಂದಕ್ಕಿಂತಲೂ ೧೦ ಭಾಗ ಜಾಸ್ತಿಕ

೧೬ ಷ್ಟುವುಂಟಾಗುತ್ತೆ ಅನೇಕ ದೇವರುಗಳಿಂದ ನರರಿಗೆ ಕೇಡು ತಪ್ಪದು

೧೭ ಲಯವಾಗುತ್ತಾರೆ ಜಗವೆಲ್ಲಾ ಶಿಷ್ಟಘಳಿಗೆ ಕತ್ತಲು ಕವಿಯುತ್ತ

೧೮ ಆಗ ತ್ರಿಮೂರ್ತಿಗಳು ಕಲಿಯುಗದಲಿ ಕಂದಗಳಿಗೆ ಕಷ್ಟಚೊ

೧೯ ಕ ಮಾಡುವುದಕ್ಕೆ ಬರುತ್ತಾರೆ ಇಂಥಾ ವಿಷಯವನು ಯಾ

೨೦ ವಕಂದಗಳು ನೋಡುತ್ತಾರೊ ಯಾರು ನೋಡುವು ದಿಲ್ಲವೊ

೨೧ ತ್ರಿಮೂರ್ತಿಗಳು ನನಿಗೆ ಗುರುವಾದ ಪರಬ್ರಂಹ ಮೂರ್ತಿಯಾ

೨೨ ಜೂನಾಲ್ಕು ಮೂರ್ತಿಗಳು ನಾನು ನರಕಂದನ ಮೇಲೆ ಬಂದು

೨೩ ಹೇಳಿಕೊಂಡು ತಾಯಿಷ್ಟ ಗ್ರಾಮದ ಬಳಿಗೆ ಬಂದು ದೇವಸ್ಥಾನ

೨೪ ದಲ್ಲಿ ಸ್ಥಾಪಿಸಿರುವ ನಿಲುವಿನಲಿ ಶಕ್ತಿ ವಿಳಾಸವನ್ನೆಲ್ಲಾ

೨೫ ಘಳಿಗೆ ನಿಂತು ನೋಡುತ್ತಾರಂತೆ ವಿಳಾಸವನ್ನು ನೋಡಿಯಾ

೨೬ ರು ನಿಂದಿಸುತ್ತಾರೂ ಅವರಿಗೆ ತಿಂಗಳವಳಗಾಗಿ ವುರ

೨೭ ಬಾರುವ ಕಷ್ಟ ಅವರಿಗೆ ಗೊತ್ತಾಗುತ್ತ ಇದೇ ಗ್ರಾಮದಲಿ

೨೮ ೫ ವರ್ಷದ ಕಂದನ ಮೇಲೆ ಬಂದು ಹೇಳಿಕೊಟ್ಟದ್ದಕ್ಕೆ ಕ

೨೯ ಂದಗಳಿಗೆ ದೈಪಾರಿತ್ರವೇನೆಂದರೆ ನಾನು ಯಾವ ಕಂದನ

೩೦ ಮೇಲೆ ಬಂದು ಹೇಳಿದೇನೆಯೋ ಆ ಕಂದನು ಈ ಕಲ್ಲು

೩೧ ಗಡದಲ್ಲಿ ನೋಡುವುದಕ್ಕೆ ನರಕಂದನಾಗೆ ಕಾಣುತ್ತಾನೆ ಮುಂ

೩೨ ದೆ ಆ ಕಂದನು ಯಾವ ತರಹ ಆಗುತ್ತಾನೆಯೋ ಅದನು ಕ
೩೩ ಲಿಯುಗದ ಯಲಾ ಕಂದಗಳು ನಾನು ಹೇಳಿಕೊಟ್ಟು ಇರು
೩೪ ವ ದೃಷ್ಟಾಂತಗಳು ನೀವು ನೋಡಬೇಕು ಆಗ ನೀ
೩೫ ವು ನಾನು ಹೇಳಿಕೊಟ್ಟೆ ವಾತುದುಷ್ಟಾಂತ ನೋಡಿಯಿಂತಾ
೩೬ ದೇವತೆಯನಾವುದು ಗೊತ್ತು ಮಾಡಿಕೊಳ್ಳಬಹುದು
೩೭ ಯೀ ಕಲಿಯುಗದಲ್ಲಿ ಇಂಥ ಆದಿಲಕ್ಷ್ಮೀನರಕಂದನ
೩೮ ಮೇಲೆ ಬಂದು ಹೇಳಿಕೊಟ್ಟದು ಯೆಲ್ಲಾ ಈಗ ನರಕಂದ
೩೯ ನ ಮೇಲೆ ಬಂದು ಹೇಳಿಕೊಡಬೇಕಾದ ಕಾರಣವಿ
೪೦ ರದರಿಂದ ಹೇಳಿಕೊಡಬೇಕಾಯ್ತು ಯೀ ರೀತಿ ನರಕಂ
೪೧ ದನ ಮೇಲೆ ದೇವತೆ ಬಂದು ಹೇಳಿಕೊಟ್ಟದೇ ಆದರೆ ಆ
೪೨ ನರಕಂದನು ಯೀಗ ಪರಬ್ರಂಹನು ಆಗಬೇಕು ಹಾ
೪೩ ಗೆ ಆಗದ ಮೇಲೆ ಆದಿಲಕ್ಷ್ಮೀ ಅಲ್ಲಿ ಬಂದು ತಿಳಿದುಕೊಳ
೪೪ ಬೇಕು ಯಿದು ಕಡೆಯುಗವಾದ ಕಲಿಯುಗವಾದ ಕಂ
೪೫ ದ ನರಕಂದನ ಮೇಲೆ ಬಂದ ಆದಿಲಕ್ಷ್ಮೀ ಹೇಳಿಕೊಟ್ಟಮೇ
೪೬ ಲೆ ಅಂತ ನರಕಂದನನು ಪರಬ್ರಂಹನಾಗಬೇಕು ಯಿಂಥಾ ದೇ
೪೭ ವತೆ ನಿಧಿಗೆ ಬಂದು ಭಕ್ತಿಯಿಂದಾನಿಧಿ ಮೂರುಸುತ ಪ್ರದ
೪೮ ಕ್ಷಣೆ ಮಾಡಿ ಪೂಜೆ ಮಾಡಿಶಿಕೊಂಡು ಬಂದಿತು ನಿಳಿನಿ
೪೯ ರದ ವಂದು ಕಾಸು ಮೊದಲುಗೊಂಡು ಅವರವರ ಶಕ್ತಾ
೫೦ ನುಸಾರ ಮುಡುಪುಕಟ್ಟಿಕೊಂಡರೆ ಮರ್ತಾವ ದೇವತೆ
೫೧ ಗಳ ಕಷ್ಟಕೋರಿದಾಗ್ಯು ಚೊಕ್ಕವಾಗುತ್ತೆ ಕಷ್ಟಗಳು ಪರಿಹ
೫೨ ರವಾದ ಕೊಂಡೆ ಮುಡುಪು ಒಪ್ಪಿಸಿ ನಿಧಿ ಬಳಿ ಅನ್ನಶಾಂ
೫೩ ತಿ ಅವರವರ ಶಕ್ತಾನುಸಾರಮಾಡಬೇಕು ಮಲೆ ಬ
೫೪ ರೆದಿರುವ ವಚನಗಳು ಯಾವತ್ತು ಪರಬ್ರಂಹ್ಮ ಮೂ
೫೫ ರಿಯಾದ ಅಂಣ್ಯೆಯನ ಪಾದದಾಣೆ ಚೊಕಸತ್ಸಾ ॥
೫೬ ದೇವಸ್ತಾನದಲ್ಲಿ ಪೂಜೆ ಆಗುವ ಕಾಲದಲ್ಲಿ ಮಂಗ
೫೭ ಳಾರತಿಗೆ ಹಸಾವಂದು ಮೇಕೆವಂದು ಯಾವಾಗಲ
೫೮ ಯಿರಬೇಕು ಕಪ್ಪಕೊಡದೂ ॥ ॥ ೧ನೇ ನಿಲಿವಿ
೫೯ ನಲ್ಲಿ ೧೬ನೇ ಪಂಕ್ತಿಯಲಿ ಬರಿಯಬೇಕಾದು ಬಿ
೬೦ ಟ್ಟಿ ಹೋದರಿಂದ ಯಿಲಿ ಬರೆದಿರುವುದು ಕಲಿಯು
೬೧ ಗಕ್ಕೆ ಆ ೩೩ ಕರಹಾ ಕಷ್ಟಗಳು ವುಂಟಾಗಿ ನಾಶವಾಗು
೬೨ ತೇ ॥ ಆದಿಲಕ್ಷ್ಮೀ ನೆಲಗೊಂಡಿರುವದರಿಂ
೬೩ ದ ಈ ಸ್ಥಳವು ಪುಣ್ಯಕ್ಷೇತ್ರವು ॥

ಆಧಾರಸೂಚಿ

೧. **ಅನ್ಯುಯಲ್ ರಿಪೋರ್ಟ್ ಆನ್ ಇಂಡಿಯನ್ ಎಪಿಗ್ರಫಿ**, ೨೦೦೯-೧೦.
೨. **ಎಪಿಗ್ರಾಫಿಯಾ ಕರ್ನಾಟಿಕ**, ಸಂಪುಟ ೪ ಮತ್ತು ೫, (ಪರಿಷ್ಕೃತ ಆವೃತ್ತಿ).

ಡಾ. ಎಚ್. ಜಯಮ್ಮ ಕರಿಯಣ್ಣ*

ಕಡೂರು ತಾಲ್ಲೂಕಿನ ಕೆಲವು ವಿಶಿಷ್ಟ ವೀರಗಲ್ಲುಗಳು

ಕಡೂರಿನಿಂದ ಸುಮಾರು ೧೦ ಕಿ.ಮೀ. ದೂರದಲ್ಲಿ ಉತ್ತರಕ್ಕೆ ಕುಪ್ಪಾಳು ಗ್ರಾಮವಿದೆ. ಊರಿನ ಹೆಬ್ಬಾಗಿಲನ್ನು ದಾಟಿ ಮುಂದೆ ಹೋದರೆ ರಸ್ತೆಯ ಬಲಬದಿಯಲ್ಲಿ ಹೊಯ್ಸಳರ ಕಾಲದ ಆಂಜನೇಯ ಸ್ವಾಮಿ ದೇವಾಲಯದ ಆವರಣದ ಪೂರ್ವ ಬಾಗಿಲ ಎದುರಿನಲ್ಲಿ ಪೊದೆ ಹಾಗೂ ಮರಕ್ಕೆ ಒರಗಿಸಿದ್ದ ನಾಲ್ಕು ವೀರಗಲ್ಲುಗಳಿವೆ. ಆ ವೀರಗಲ್ಲಿನ ಬಲ ಬದಿಯಲ್ಲಿ ಮತ್ತೊಂದು ವೀರಗಲ್ಲು ಕೆಳಗೆ ಬಿದ್ದಿತ್ತು. ಪೊದೆಯ ನಡುವೆ ರಾಷ್ಟ್ರಕೂಟರ ಕಾಲದ ತುರುಗೋಳ್ ಕಾಳಗದ ಕಲ್ಲು, ಪಕ್ಕದ ಹೊಲದಲ್ಲಿ ಒಂದು ವಾಮನ ಮುದ್ರೆ ಕಲ್ಲು ಮತ್ತು ಹತ್ತಿರದಲ್ಲಿ ಒಂದು ಯಂತ್ರದ ಕಲ್ಲು ಸಿಕ್ಕಿತು. ಬಸವನ ಬಂಟನೆಂದು ಕರೆಯುವ ಶಿವ ದೇವಾಲಯದಲ್ಲಿ ಮತ್ತೊಂದು ವೀರಗಲ್ಲು ನಿಲ್ಲಿಸಿದೆ.

ಆಂಜನೇಯ ಸ್ವಾಮಿ ದೇವಾಲಯದ ಬಳಿ ಇರುವ ನಾಲ್ಕು ಕಲ್ಲುಗಳಲ್ಲಿ ಬಲಭಾಗದ ಒಂದು ಕಲ್ಲಿನಲ್ಲಿ ಶಾಸನವಿದ್ದು ಲಿಪಿ ಸವೆದು ನಾಶವಾಗಿದೆ. ಮೇಲಿನ ಭಾಗದಲ್ಲಿ ಯತಿ, ಶಿವಲಿಂಗ ಮತ್ತು ನಂದಿ ಮಾತ್ರ ಕಾಣುತ್ತದೆ. ಅದರ ಪಕ್ಕದಲ್ಲಿ ಶಾಸನದ ಕಲ್ಲಿನಂತೆ ಕಾಣುವ ಕಲ್ಲು ಖಾಲಿ ಇದೆ. ಮೂರನೆಯ ವೀರಗಲ್ಲು ಮೂರು ಹಂತದಲ್ಲಿದೆ. ಮೊದಲನೆಯ ಹಂತ ಒಂದು ಮಲಗುವ ಕೊಠಡಿಯಂತೆ ಕಂಡು ಬರುತ್ತದೆ. ಶಿಲ್ಪದ ಬಲಭಾದಲ್ಲಿ ದೀಪದ ಕಂಬವಿದೆ. ನಡುವೆ ಎತ್ತರವಾದ ಮಂಚವಿದೆ. ಮಂಚದ ಮೇಲೆ ದಪ್ಪಗಿರುವ ಹಾಸಿಗೆ ಹಾಸಿದೆ. ಎತ್ತರವಾದ ಮಂಚ ಹತ್ತಲು ಬಳಸುವ ಚಿಕ್ಕದಾದ ಕಾಲು ಮಣೆ ಇದೆ. ಮಣೆಯ ಪಕ್ಕದಲ್ಲಿ ಧೂಪಕುಣಿಕೆ ಇದೆ. ಮಂಚದ ಎಡ ಭಾಗದಲ್ಲಿ ಅಲಂಕಾರಿಕವಾದ ಕುಡಿಯುವ ನೀರಿನ ಗಿಂಡಿ ಇದೆ. ಅದೇ ಭಾಗದ ಮೇಲಿನ ಮೂಲೆಯಲ್ಲಿ ಬಟ್ಟೆ ಹಾಕುವ ನಿಲುವಿದೆ. ಇದಿಷ್ಟು ಆ ಕೊಠಡಿಯಲ್ಲಿರುವ ವಸ್ತುಗಳ ವಿವರಣೆ. ಹಾಸಿಗೆಯ ಮೇಲೆ ಲಲಿತಾಸನದಲ್ಲಿ ದಂಪತಿಗಳು ಕುಳಿತು ಚರ್ಚೆ ಅಥವಾ ಲಘು ಹರಟೆ ಹೊಡೆಯುತ್ತಿರುವಂತೆ ತಿಳಿದುಬರುತ್ತದೆ. ದಂಪತಿಗಳ ಮುಖಭಾವದಿಂದ ಸಂದರ್ಭದ ಅರಿವಾಗಬಹುದಿತ್ತು.ಆದರೆ ಶಿಲ್ಪಗಳ ಮುಖಗಳನ್ನು ವಿರೂಪಗೊಳಿಸಿರುವುದರಿಂದ ಮುಖಭಾವವನ್ನು ಅರ್ಥೈಸಲು ಸಾಧ್ಯವಾಗುತ್ತಿಲ್ಲ.

ಎರಡನೆಯ ಹಂತದಲ್ಲಿ ಮೇಲೆ ಗೋಪುರವಿರುವಂತಹ ಸೊಗಸಾದ ಕಂಬಗಳಿರುವ ಅಲಂಕೃತ ವಿಮಾನದಲ್ಲಿ ಕೈ ಮುಗಿದು ಕುಳಿತಿರುವ ದಂಪತಿಗಳನ್ನು ಸ್ವರ್ಗಕ್ಕೆ ದೇವಲೋಕದ ಅಪ್ಸರೆಯರು ಕೊಂಡೊಯ್ಯುತ್ತಿದ್ದಾರೆ. ಇದರಿಂದ ಕೆಳಹಂತದಲ್ಲಿ ಸೆಜ್ಜೆ ಮನೆಯಲ್ಲಿದ್ದ ದಂಪತಿಗಳು ಸತ್ತಿರುವ ವಿಷಯವನ್ನು ನಿರೂಪಿಸುತ್ತದೆ. ಮೂರನೆಯ ಹಂತದಲ್ಲಿ ಶಿವಲಿಂಗವಿದೆ. ಶಿವಲಿಂಗಕ್ಕೆ ಜಟಾಧಾರಿಯಾದ ಯತಿಯೊಬ್ಬನು ಪೂಜೆ ಮಾಡುತ್ತಿರುವಂತೆ ಕಾಣುತ್ತದೆ, ಶಿವಲಿಂಗದ ಎದುರಿನಲ್ಲಿ ದಂಪತಿಗಳಿಬ್ಬರು ಕೈ ಮುಗಿದು ಕುಳಿತಿದ್ದಾರೆ. ಒಂದು ಕಡೆ ನಂದಿಯನ್ನು, ಮೇಲುಭಾಗದಲ್ಲಿ ಸೂರ್ಯ, ಚಂದ್ರರನ್ನು ಶಿಲ್ಪಿ ಬಿಡಿಸಿ ಸ್ವರ್ಗದ ಕಲ್ಪನೆ ಮೂಡಿಸಿದ್ದಾನೆ. ಸ್ವರ್ಗಕ್ಕೆ ಹೋದ ದಂಪತಿಗಳು ಶಿವನ ಸಾನ್ನಿಧ್ಯವನ್ನು ಸೇರಿರುವಂತೆ ತಿಳಿಯಬಹುದು.

ಮತ್ತೆ ಮೊದಲ ಹಂತದ ವಿವರಣೆಗೆ ಬಂದರೆ, ದಂಪತಿಗಳು ತಮ್ಮ ಸೆಜ್ಜೆ ಮನೆಯಲ್ಲಿ ಕುಳಿತು ಮಾತಾಡುತ್ತಿದ್ದವರು ಹೇಗೆ ಸತ್ತರೆಂದು ತಿಳಿಯುತ್ತಿಲ್ಲ. ಇವರ ಸಾವು ಒಂದು ರೀತಿಯಲ್ಲಿ ನಿಗೂಢವಾಗಿದೆ. ದಿನದ ಒಂದೇ ರಾತ್ರಿಯಲ್ಲಿ ದಂಪತಿಗಳಿಬ್ಬರು ಹೇಗೆ ಸತ್ತರೆಂಬುದಕ್ಕೆ ಶಾಸನದ ಆಧಾರವಿಲ್ಲ. ಆದರೆ ಪಂಪ ಕವಿ ಆದಿಪುರಾಣದಲ್ಲಿ ಬರುವ ಶ್ರೀಮತಿ ಮತ್ತು ವಜ್ರಜಂಘರ ಕಥೆಯನ್ನು ಇಲ್ಲಿ ಆರೋಪಿಸ ಬಹುದಾಗಿದೆ. ಒಂದು ದಿನ ರಾತ್ರಿ ಶ್ರೀಮತಿ ಮತ್ತು ವಜ್ರಜಂಘರು ಶಯ್ಯಾಗೃಹದಲ್ಲಿ ಮಲಗಿರುವಾಗ ಸೆಜ್ಜೆವಳನು ಕೇಶಸಂಸ್ಕಾರಕ್ಕಾಗಿ ಧೂಪದ ಪಾತ್ರೆಯಲ್ಲಿ ಅತಿಯಾಗಿ ಧೂಪ ಹಾಕಿ ಕಿಟಕಿಯ ಬಾಗಿಲುಗಳನ್ನು ತೆರೆಯುವುದನ್ನು ಮರೆತಿದ್ದರಿಂದ ಕೊಠಡಿಯಲ್ಲಿ ಹೊಗೆ ಸುತ್ತಿಕೊಂಡು ಉಸಿರು ಕಟ್ಟಿ ದಂಪತಿಗಳು ಸತ್ತುಹೋದ ರೆಂಬುದನ್ನು ತಿಳಿಸುತ್ತದೆ. ಅದೇ ರೀತಿ ಇವರು ಸಹ ಧೂಪದ ಹೊಗೆಯಿಂದ ಸತ್ತರೆ? ಧೂಪದಾನಿಯ ಹೊರತು ಅಲ್ಲಿ ಮತ್ತಾವ ಅಪಾಯ ಸೂಚಿಸುವ ಸಾಮಗ್ರಿ ಅಥವಾ ವಸ್ತುಗಳಿಲ್ಲ. ವಿಷ ಜಂತುಗಳ ಕಡಿತದಿಂದ ಸತ್ತರೆ? ಅಥವಾ ದಂಪತಿಗಳ ನಡುವೆ ಭಿನ್ನಾಭಿಪ್ರಾಯ ಮೊಳೆತು ಪ್ರಾಣಾರ್ಪಣೆ ಮಾಡಿಕೊಂಡರೆ?

* ಆಶೀರ್ವಾದ, # ೨೯೬೩, ೧೩ನೇ ಮುಖ್ಯ ರಸ್ತೆ, ವಿಜಯನಗರ ೨ನೇ ಹಂತ, ಬೆಂಗಳೂರು.

ಎಂಬ ಹಲವು ಸಂಶಯಗಳಿಗೆ ಎಡೆಮಾಡಿ ಕೊಡುವ ಈ ಶಾಸನ ಶಿಲ್ಪವು ಸಂಶೋಧಕರಿಗೊಂದು ಸವಾಲಾಗಿದೆ. ಈ ವೀರಗಲ್ಲಿನ ಬಗ್ಗೆ ಶಾಸನ ಪಾಠವಿಲ್ಲದ ಕಾರಣ ಇದನ್ನು ವೀರಗಲ್ಲು ಅಥವಾ ಮಹಾಸತಿಕಲ್ಲು ಎಂದು ನಿರೂಪಿಸಲು ಅವಕಾಶವಿಲ್ಲವಾಗಿದೆ. ಹಾಗಾಗಿ ಇದೊಂದು ಅಪರೂಪದ ವಿಶಿಷ್ಟ ಆತ್ಮಾಹುತಿ ಕಲ್ಲೆನ್ನಬಹುದು.

ಇದರ ಪಕ್ಕದಲ್ಲಿ ಮೇಲ್ಭಾಗ ಮುರಿದಿರುವ ಎರಡು ಹಂತದಲ್ಲಿರುವ ಇನ್ನೊಂದು ವೀರಗಲ್ಲನ್ನು ನಿಲ್ಲಿಸಿದೆ. ಈ ವೀರಗಲ್ಲಿನ ಮೊದಲ ಹಂತದಲ್ಲಿ ವೀರನು ಶತ್ರುವಿನ ಮೇಲೆ ಬಾಣ ಪ್ರಯೋಗಿಸಲು ನಿರತನಾಗಿರುವಂತೆ ಬಿಲ್ಲನ್ನು ಎಡಗೈಲಿ ಹಿಡಿದಿದ್ದಾನೆ. ಬಲಗಾಲನ್ನು ಮುಂದಿಟ್ಟು ಎಡಗಾಲನ್ನು ಹಿಂದಿಟ್ಟು ನಿಂತಿದ್ದಾನೆ. ವೀರನ ಹಿಂಭಾಗದಲ್ಲಿರುವ ವ್ಯಕ್ತಿ ವೀರನ ಸಹಾಯಕನೆನ್ನಬಹುದು. ಬಲಭಾಗದಲ್ಲಿ ಸರ್ವಾಲಂಕೃತ ಕುದುರೆಯಮೇಲೆ ಕುಳಿತಿರುವ ಶತ್ರು, ವೀರನ ಮೇಲೆ ಮುನ್ನುಗ್ಗುತ್ತಿರುವಂತೆ ಶಿಲ್ಪಿಯು ಶಿಲ್ಪವನ್ನು ಬಿಡಿಸಿದ್ದಾನೆ. ಅವನು ತನ್ನ ಕೈಲಿರುವ ಆಯುಧದಿಂದ ವೀರನ ಮೇಲೆ ಪ್ರಯೋಗಿಸಲು ನಿರತನಾಗಿರುವಂತೆ ನಿಂತಿದ್ದಾನೆ. ಇದಿಷ್ಟು ಮೊದಲ ಹಂತದಲ್ಲಿ ಕಾಣಬರುವ ಚಿತ್ರಣ. ಎರಡನೆಯ ಹಂತದಲ್ಲಿ ಅಪ್ಸರೆಯರು ಸತ್ತ ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿದ್ದಾರೆ. ಮೂರನೆ ಹಂತ ಹಾಳಾಗಿದೆ. ಇಲ್ಲಿನ ಎಲ್ಲಾ ಶಿಲ್ಪಗಳಲ್ಲಿನ ಮುಖಗಳನ್ನು ಕೆತ್ತಿ ಗುರುತು ಸಿಕ್ಕದ ರೀತಿಯಲ್ಲಿ ವಿರೂಪಗೊಳಿಸಿದ್ದಾರೆ. ಮೇಲಿನ ಎರಡೂ ವೀರಗಲ್ಲುಗಳು ಹೊಯ್ಸಳರ ಕಾಲದ ವೀರಗಲ್ಲುಗಳಾಗಿವೆ.


ಇದೇ ದೇವಾಲಯದ ಆವರಣದಲ್ಲಿ ಸ್ವಲ್ಪ ಮುಂದೆ ಬಲಭಾಗದಲ್ಲಿ ಮತ್ತೊಂದು ವೀರಗಲ್ಲು ಕೆಳಗೆ ಬಿದ್ದಿದೆ. ಇದು ಮೂರು ಹಂತಗಳಲ್ಲಿದೆ. ಕೆಳ ಹಂತದಲ್ಲಿ ವೀರ ಮತ್ತು ಶತ್ರು ಮುಖಾಮುಖಿಯಾಗಿ ಬಿಲ್ಲನ್ನು ಹಿಡಿದು ನಿಂತಿದ್ದಾರೆ. ವೀರನ ಕೈಲಿರುವ ಬಿಲ್ಲು ಅಲಂಕೃತ ಕೆತ್ತನೆಗಳಿಂದ ಕೂಡಿದೆ. ಬಿಲ್ಲಿನ ಮೇಲು ಭಾಗದ ತುದಿಯನ್ನು ಕುಚ್ಚಿನಿಂದ ಸಿಂಗರಿಸಿದೆ. ವೀರ ಬಾಣವನ್ನಲ್ಲದೆ ಕತ್ತಿಯನ್ನೂ ಧರಿಸಿದ್ದಾನೆ. ತಲೆಯಲ್ಲಿ ಪಕ್ಷಿಯ ಗರಿಗಳಿಂದ ಮಾಡಿದ ಅಲಂಕೃತ ಶಿರಸ್ತ್ರಾಣವಿದೆ ? ಕಿವಿಗಳಲ್ಲಿ ಉದ್ದನೆಯ ಕಿವಿಯ ಆಭರಣವಿದೆ. ಕುತ್ತಿಗೆಯಲ್ಲಿ ಕಂಠಾಭರಣದ ಜೊತೆಯಲ್ಲಿ ಮಣಿ ಅಥವಾ ಗುಂಡುಗಳಿಂದಾದ ಎರಡುಸಾಲಿನ ಆಭರಣಗಳಿವೆ. ಕುತ್ತಿಗೆಯನ್ನು ಬಳಸಿ ಭುಜದಿಂದ ಕಿಬ್ಬೊಟ್ಟೆಯವರೆಗೆ ಇಳಿಬಿದ್ದಿರುವ ವೈಜಯಂತಿ ಹಾರವಿದೆ. ಕೈ ತೋಳುಗಳಲ್ಲಿ ಕಡಗ ಮತ್ತು ತೊಳಬಂದಿಯಂತಿರುವ ಒಡವೆಗಳನ್ನು ಮತ್ತು ಕಾಲುಗಳಲ್ಲಿ ಕಾಲು ಕಡಗವನ್ನು, ಸೊಂಟದಲ್ಲಿ ಮಣಿ ಅಥವಾ ಗೆಜ್ಜೆಗಳಿಂದ ಮಾಡಿರುವ ಮೂರುಸಾಲಿನ ಒಡವೆಯನ್ನು ಧರಿಸಿದ್ದಾನೆ. ವೀರನ ಹಿಂಭಾಗದಲ್ಲಿ ಮತ್ತೊಬ್ಬ ವ್ಯಕ್ತಿ ಇದ್ದು ವೀರನಿಗೆ ಸಹಾಯಕನಾಗಿದ್ದಾನೆ. ವೀರನ ಎದುರಿನಲ್ಲಿರುವ ಶತ್ರು ತನ್ನ ಬಲಗೈಯಲ್ಲಿ ಬಾಣ ಹಿಡಿದಿದ್ದಾನೆ, ಎಡಗೈಯಲ್ಲಿ ಗುರಾಣಿ ಸಹಿತ ಬಾಣವನ್ನು ಹಿಡಿದಿದ್ದಾನೆ. ವೀರನಷ್ಟು ಅಧಿಕವಲ್ಲದಿದ್ದರೂ ಅಲ್ಪ ಪ್ರಮಾಣದಲ್ಲಿ ಅಲಂಕೃತನಾಗಿದ್ದಾನೆ. ಈತನಿಗೆ ಗಂಟು ಹಾಕಿದ ಮುಡಿ ಇದೆ. ವೀರ ಮತ್ತು ಶತ್ರುವಿನ ಕಾಲ ಕೆಳಗೆ ಹೆಣಗಳು ಬಿದ್ದಿರುವಂತೆ ಬಿಡಿಸಿದೆ. ಇದು ಯುದ್ಧದ ಭೀಕರತೆಯನ್ನು ತೋರಿಸುತ್ತದೆ. ಬಿಲ್ಲುಗಳ ಮೇಲು ಭಾಗದಲ್ಲಿ ಪ್ರಯೋಗ ಮಾಡಿದ ಬಾಣಗಳನ್ನು ಸಾಂಕೇತಿಕವಾಗಿ ಬಿಡಿಸಿದೆ.

ಎರಡನೆಯ ಹಂತದಲ್ಲಿ ಅಲಂಕೃತ ವಿಮಾನದಲ್ಲಿ ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿದ್ದಾರೆ. ವಿಮಾನದ ಕಂಭಗಳು ತಳಭಾಗದ ಮೂರು ಹಂತದ ಪಟ್ಟಿಕೆಗಳು ವಿವಿಧ ರೀತಿಯ ಕೆತ್ತನೆ ಕೆಲಸಗಳಿಂದ ಕೂಡಿದೆ. ವೀರನು ಭದ್ರಾಸನದಲ್ಲಿ ಕೈ ಮುಗಿದು ಕುಳಿತಿದ್ದಾನೆ. ಅವನಿಗೆ ಕೆಳ ಹಂತದಲ್ಲಿನ ಅಲಂಕರಣಗಳ ಜೊತೆ ಎಡ ಭುಜದ ಮೇಲಿಂದ ಪಾದದವರೆಗೆ ಇಳಿಬಿದ್ದಿರುವ ಅಂಗವಸ್ತ್ರವಿದೆ. ವಿಮಾನವನ್ನು ಕೊಂಡೊಯ್ಯುತ್ತಿರುವ ಅಪ್ಸರೆಯರು ಧರಿಸಿರುವ ಆಭರಣಗಳು ಕೆಳಗಿನ ಹಂತದಲ್ಲಿರುವ ವೀರನು ಧರಿಸಿರುವಂತಹ ಅಲಂಕರಣಗಳ ಪಡಿಯಚ್ಚಾಗಿದೆ. ಅಪ್ಸರೆಯರಿಬ್ಬರೂ ಒಂದು ಕೈಯಲ್ಲಿ ಚಾಮರವನ್ನು ಮತ್ತೊಂದು ಕೈಯಲ್ಲಿ ವಿಮಾನವನ್ನು ಹಿಡಿದಿದ್ದಾರೆ. ಮೂರನೆ ಹಂತದಲ್ಲಿ ಶಿವಲಿಂಗದ ಹತ್ತಿರ ನಿಂತಿರುವ ಯತಿಯನ್ನು, ಕುಳಿತಿರುವ ವೀರನನ್ನು ಗುರುತಿಸಬಹುದಾದರೂ ಶಿಲ್ಪಗಳನ್ನು ಕಲ್ಲಿನಿಂದ ಕೆತ್ತಿ ವಿರೂಪಗೊಳಿಸಿದ್ದಾರೆ. ಈ ಶಿಲ್ಪಗಳಲ್ಲಿನ ಶರೀರದ ರಚನೆ ಉಡಿಗೆ ತೊಡಿಗೆ ಅಲಂಕರಣ ಮತ್ತು ಆಭರಣಗಳ ವಿನ್ಯಾಸದಿಂದ ಈ ವೀರಗಲ್ಲು ಹೊಯ್ಸಳರ ನಂತರದ ಕಾಲದೆಂದು ಹೇಳಬಹುದು.


ಇದೇ ಪ್ರದೇಶದಲ್ಲಿ ಕಂಬದ ಬಸಪ್ಪನೆಂದು ಕರೆಯುವ ಶಿವದೇವಾಲಯದ ಆವರಣದಲ್ಲಿ ಮತ್ತೊಂದು ವೀರಗಲ್ಲನ್ನು ನಿಲ್ಲಿಸಿದೆ. ಆದರೆ ಕಲ್ಲಿನ ತುಂಬ ಗಾರೆ ಅಥವಾ ಸುಣ್ಣದ ದಪ್ಪ ಲೇಪವನ್ನು ಹಚ್ಚಿರುವುದರಿಂದ ಶಿಲ್ಪಗಳ ಆಕೃತಿಗಳನ್ನು ಸ್ಪಷ್ಟವಾಗಿ ಗುರುತಿಸಲಾಗುತ್ತಿಲ್ಲ. ಬಹುಶಃ ಈ ವೀರಗಲ್ಲು ಮೂರು ಹಂತಗಳಲ್ಲಿದ್ದಿರಬಹುದು. ಕೆಳಗಿನ ಯುದ್ಧದ ಹಂತ ಭೂಮಿಯಲ್ಲಿ ಸೇರಿಹೋಗಿದೆ. ಮಧ್ಯದ ಸ್ವರ್ಗಾರೋಹಣ ಹಂತವು ಹಾಳಾಗಿದ್ದರೂ ಅಪ್ಸರೆಯರು ವಿಮಾನದಲ್ಲಿ ವೀರನನ್ನು ಕರೆದೊಯ್ಯುತ್ತಿರುವುದನ್ನು ಗುರುತಿಸಬಹುದು. ಮೇಲಿನ ಸ್ವರ್ಗದ ಹಂತದಲ್ಲಿ ವೀರನು ಲಲಿತಾಸನದಲ್ಲಿ ಕುಳಿತಿದ್ದು ಎಡಗೈಯನ್ನು ಕೆಳಕ್ಕೆ ಚಾಚಿದ್ದಾನೆ. ಅವನ ಇಕ್ಕೆಲಗಳಲ್ಲಿ



ಕುಪ್ಪಾಳು ಗ್ರಾಮದ ವಿಶಿಷ್ಟ ವೀರಗಲ್ಲು



ವೀರಗಲ್ಲು – ಕುಪ್ಪಾಳು



ವೀರಗಲ್ಲು – ಕುಪ್ಪಾಳು



ವೀರಗಲ್ಲು – ಕಬ್ಬಳ್ಳಿ



ವೀರಗಲ್ಲು – ಕಬ್ಬಳ್ಳಿ



ಮಾಸ್ತಿಕಲ್ಲು – ನಂದಿ



ವೀರಗಲ್ಲು – ಕಬ್ಬಳ್ಳಿ



ಗಡಿಕಲ್ಲು – ಕುಪ್ಪಾಳು



ಮಾಸ್ತಿ ಮತ್ತು ವೀರಮಾಸ್ತಿ – ಕೆರೆಸಂತೆ

ಚಾಮರಧಾರಿಯರು ವೀರನಿಗೆ ಚಾಮರ ಸೇವೆ ಮಾಡುತ್ತಿದ್ದಾರೆ. ಈ ವೀರಗಲ್ಲಿನ ಶಾಸನದಲ್ಲಿ ಲಿಪಿಗಳಿರುವಂತೆ ಕಾಣುತ್ತದೆ. ಆದರೆ ಸುಣ್ಣದ ಲೇಪದಿಂದ ಓದಲು ಸಾಧ್ಯವಾಗುತ್ತಿಲ್ಲ. ಸ್ವರ್ಗದ ಹಂತದಲ್ಲಿನ ಶಿಲ್ಪ ಲಕ್ಷಣಗಳಿಂದ ವೀರ ಕುಳಿತಿರುವ ಭಂಗಿಯಿಂದ ಮತ್ತು ವೀರನ ಅಂಗ ಸೌಷ್ಠವದಿಂದ ಇದು ರಾಷ್ಟ್ರಕೂಟರ ಕಾಲಕ್ಕೆ ಸೇರಬಹುದಾದ ಶಿಲ್ಪವಾಗಿದೆ. ಇದಕ್ಕಿಂತಲೂ ಮುಖ್ಯ ವಾದಂತಹ ಸೂಚನೆಯೆಂದರೆ ಈ ವೀರಗಲ್ಲಿನ ಮೇಲ್ಭಾಗದಲ್ಲಿ ನೇಗಿಲನ್ನು ಬಿಡಿಸಿರುವುದು. ಈ ಬಗೆಯ ನೇಗಿಲ ಗುರುತುಳ್ಳ ವೀರಗಲ್ಲು ದಕ್ಷಿಣ ಕರ್ನಾಟಕದಲ್ಲಿ ಸಿಕ್ಕಿರುವುದು ಅಪರೂಪ.

ಇದೇ ಪ್ರದೇಶದಲ್ಲಿ ಒಂದು ಯಂತ್ರದ ಕಲ್ಲು ಸಿಕ್ಕಿದೆ. ಮುಂದೆ ಹೊಲದ ಬದಿಯಲ್ಲಿ ಗಡಿ ಕಲ್ಲನ್ನು ನಿಲ್ಲಿಸಲಾಗಿದೆ. ಶಾಸನವಿರುವ ರಾಷ್ಟ್ರಕೂಟರ ಕಾಲದ ತುರುಗೋಳ್ ಕಲ್ಲು ಇದೆ. ಈ ಊರಿನ ಪ್ರಕಟವಾದ ಶಾಸನಗಳ ಜೊತೆಯಲ್ಲಿ ಸರಿಯಾಗಿ ಹುಡುಕಿದರೆ ಇನ್ನೂ ಕೆಲವಾದರು ಶಾಸನಗಳು ಸಿಕ್ಕಬಹುದು.

ಕಬ್ಬಳ್ಳಿ:– ಕಡೂರು ತಾಲೂಕಿಗೆ ಸೇರಿದ ಕಬ್ಬಳ್ಳಿಯ ಸೋಮನಾಥ ದೇವಾಲಯದ ಆವರಣದ ಬಲಭಾಗದಲ್ಲಿ ಸ್ವಲ್ಪ ಹಿಂದೆ ಒಂದು ಅಡಿ ಎತ್ತರದ, ಎರಡು ಅಡಿ ಅಗಲ ಮೂರು–ನಾಲ್ಕು ಅಡಿ ಉದ್ದ ಇರಬಹುದಾದ ಕಲ್ಲುಕಟ್ಟೆಯ ಮೇಲೆ ಒಂದೆರಡು ಶಾಸನ ಕಲ್ಲು ಮತ್ತೆ ಒಂದೆರಡು ವೀರಗಲ್ಲುಗಳನ್ನು ನಿಲ್ಲಿಸಲಾಗಿದೆ. ಸ್ವಲ್ಪ ಕೆಳಗೆ ಕಟ್ಟೆಗೆ ಒರಗಿಸಿದಂತೆ ಸಪ್ತಮಾತೃಕೆಯರ ಶಿಲ್ಪವನ್ನು ಅವರ ವಾಹನ ಸಹಿತವಾಗಿ ಬಿಡಿಸಲಾಗಿದೆ. ವೀರಗಲ್ಲಿನ ಮುಂಭಾಗದಲ್ಲಿ ಒಂದು ಕುಬ್ಜ ಶಿಲ್ಪವನ್ನು ನಿಲ್ಲಿಸಲಾಗಿದೆ.

ಕೆಳಗೆ ನಿಲ್ಲಿಸಿರುವ ಒಂದನೆಯ ವೀರಗಲ್ಲು ಮೂರು ಹಂತಗಳಲ್ಲಿದೆ. ಕೆಳಗಿನ ಹಂತದಲ್ಲಿ ಮೂವರು ವ್ಯಕ್ತಿಗಳಿದ್ದಾರೆ. ಕಲ್ಲಿನ ಬಲ ಭಾಗದಲ್ಲಿರುವ ವೀರ ಎರಡೂ ಕೈಗಳ ಸಹಾಯ ದಿಂದ ಉದ್ದನೆಯ ಭರ್ಜಿಯನ್ನು ಹಿಡಿದು ಶತ್ರುವಿನ ಹೊಟ್ಟೆಯ ತಳಭಾಗಕ್ಕೆ ಚೂಪಾದ ಭಾಗದಿಂದ ತಿವಿಯು ವಂತೆ ಬಿಡಿಸಲಾಗಿದೆ. ಶತ್ರುವಿನ ಮೇಲೆ ಹೆಚ್ಚಿನ ಬಲ ಪ್ರಯೋಗಿಸಲು ಸಾಧ್ಯವಾಗುವಂತೆ ಎಡಗಾಲನ್ನು ಬಲವಾಗಿ ಮುಂದಿಟ್ಟು ಊರಿ ಬಲಗಾಲನ್ನು ಹಿಂದಿಟ್ಟು ಹಿಮ್ಮಡಿಯನ್ನು ಮೇಲೆತ್ತಿರುವಂತೆ ಕಾಣುತ್ತದೆ. ಭರ್ಜಿ ಹಿಡಿಯಬೇಕಾದ ಎಡಗೈ ತುಂಡಾಗಿದೆ. ನಡುವಿರುವ ಶತ್ರು ಮತ್ತು ಅವನ ಹಿಂದಿರುವ ಸಹಾಯಕ ವ್ಯಕ್ತಿಯು ವೀರನಿಗಿಂತಲೂ ದೃಢವಾಗಿ ದೇಹ ಹೊಂದಿದ್ದು ಬಲಶಾಲಿಯೆಂಬಂತೆ ಕಂಡುಬರುತ್ತದೆ. ಶತ್ರು ಮತ್ತು ಅವನ ಸಹಾಯಕನು ಬಲಗೈಲಿ ಒಂದೇ ರೀತಿಯ ಆಯುಧಗಳನ್ನು ಧರಿಸಿ ಮೇಲೆತ್ತಿದ್ದಾರೆ. ಎಡಗೈಯನ್ನು ನಡುವಿನ ಮೇಲಿರಿಸಿದ್ದಾರೆ. ಈ ಮೂವರೂ ವ್ಯಕ್ತಿಗಳು ಒಂದೇ ರೀತಿಯ ತ್ರಿಕೋಣಾಕೃತಿಯಲ್ಲಿ ಅಲಂಕರಿ ಸಿರುವ ಉಡುಪು ಧರಿಸಿದ್ದಾರೆ. ಅವರ ತಲೆಯಮೇಲೆ ವೃತ್ತಾಕಾರದಲ್ಲಿ ಶಂಕಾಕೃತಿಯ ಆಕಾರದಲ್ಲಿರುವ ಶಿರಸ್ತ್ರಾಣವನ್ನು ಧರಿಸಿದ್ದಾರೆ. ತಳ ಮತ್ತು ನಡುವಿನ ಹಂತದ ಖಾಲಿ ಇರುವ ಪಟ್ಟಿಕೆಯಲ್ಲಿ ಬಿಲ್ಲು ಅದರ ಮೇಲೆ ಬಾಣವನ್ನು ಬಿಡಿಸಲಾಗಿದೆ.

ಎರಡನೆಯ ಹಂತದಲ್ಲಿ ಸಿಂಹ ಕಟಿಯ ಅಪ್ಸರೆಯರು ಒಂದು ಕೈಲಿ ಚಾಮರವನ್ನು ಮತ್ತೊಂದು ಕೈಲಿ ವಿಮಾನ ಮಂಟಪದ ಹಿಡಿಕೆಗಳನ್ನು ಹಿಡಿದಿದ್ದಾರೆ. ವಿಮಾನದಲ್ಲಿ ಪೀಠದ ಮೇಲೆ ಕುಳಿತಿರುವ ವೀರ ಸುಖಾಸನದಲ್ಲಿ ಕೈ ಮುಗಿದು ಕುಳಿತಿದ್ದಾನೆ. ವಿಮಾನದ ಮುಚ್ಚಣಿಗೆಯ ಮೇಲೆ ಛತ್ರಿಯನ್ನು ಬಿಡಿಸಿದೆ. ಮೂರನೆಯ ಹಂತದಲ್ಲಿ ಶಿವಲಿಂಗಕ್ಕೆ ಯತಿ ಪೂಜೆ ಸಲ್ಲಿಸುತ್ತಿದ್ದಾನೆ. ಎದುರಿನಲ್ಲಿ ನಂದಿಯೊಂದು ಹಿಂಗಾಲುಗಳನ್ನು ಮಡಿಚಿ ಮುಂದಕ್ಕೆ ಚಾಚಿರುವಂತೆಯೂ ಮುಂದಿನ ಕಾಲುಗಳಲ್ಲಿ ಒಂದನ್ನು ಹಿಂದಕ್ಕೆ ಮಡಿಚಿರುವಂತೆ ಮತ್ತೊಂದನ್ನು ಸ್ವಲ್ಪ ನೀಳವಾಗಿ ಚಾಚಿ ತಲೆಯನ್ನು ಮೇಲೆತ್ತಿ ಶಿವ ಪೂಜೆಯನ್ನು ನೋಡುತ್ತಿರುವಂತಿದೆ. ಯತಿಯ ಬಲಗಡೆ ಹಿಂಭಾಗದಲ್ಲಿ ಭದ್ರಾಸನದಲ್ಲಿ ಕೈ ಮುಗಿದು ಕುಳಿತ ವೀರನ ಶಿಲ್ಪವಿದೆ. ಮೇಲೆ ಸೂರ್ಯ ಚಂದ್ರನನ್ನು ಬಿಡಿಸಿದೆ. ಈ ವೀರಗಲ್ಲಿನ ಶಿಲ್ಪಗಳ ವ್ಯಕ್ತಿಗಳಲ್ಲಿ ಯತಿಯನ್ನು ಹೊರತು ಪಡಿಸಿದರೆ ಮಿಕ್ಕವರ ತಲೆಯ ಮೇಲೆ ಶಂಕುವಿನಾಕಾರದ ಶಿರಸ್ತ್ರಾಣವಿದೆ ? ಅಪ್ಸರೆಯರ ತಲೆಯ ಮೇಲೆ ಸಹ ಅದೇ ರೀತಿಯ ಕಿರೀಟವಿದೆ.

ಕಟ್ಟೆಯ ಮೇಲಿರುವ ಮತ್ತೊಂದು ವೀರಗಲ್ಲು ಮೂರು ಹಂತಗಳಲ್ಲಿದೆ. ಕೆಳಹಂತದಲ್ಲಿ ಐದು ಜನ ವ್ಯಕ್ತಿಗಳಿದ್ದಾರೆ. ನಡುವೆ ಇರುವ ವೀರ ತನ್ನ ಎಡಗೈಯಲ್ಲಿ ಹಿಡಿದಿರುವ ಬಿಲ್ಲಿನಿಂದ ಬಾಣವನ್ನು ಹೂಡಿ ಶತ್ರುವಿಗೆ ಬಲ ಪ್ರಯೋಗ ಮಾಡು ತ್ತಿರುವಂತಿದೆ. ಅದಕ್ಕೆ ಆತ ನಿಂತಿರುವ ಭಂಗಿ ಸಾಕ್ಷಿಯಾಗಿದೆ. ವೀರನ ಕೈಲಿರುವ ಬಿಲ್ಲು ಅಲಂಕೃತವಾಗಿದೆ. ಸೊಂಟದಲ್ಲಿ ಕಠಾರಿಯನ್ನು ಧರಿಸಿದ್ದಾನೆ. ವೀರನ ಹಿಂದೆ ಒಬ್ಬರ ಹಿಂದೆ ಒಬ್ಬರು ನಿಂತಿರುವ ಅವನ ಸಹಾಯಕರು ಸಹ ಕೈಗಳಲ್ಲಿ ಆಯುಧವನ್ನು ಹಿಡಿದಿದ್ದಾರೆ. ವೀರನು ಕಂಠದಲ್ಲಿ ವಿವಿಧ ರೀತಿಯ ಪದಕದಂತಹ ಆಭರಣಗಳನ್ನು ಧರಿಸಿದ್ದಾನೆ. ಅವನ ತೋಳುಗಳಲ್ಲಿ ತೋಳಬಂದಿ ಮುಂಗೈಗಳಲ್ಲಿ ಕಡಗಗಳಿವೆ. ವೀರ ತನ್ನ ತಲೆಯನ್ನು ಬಲಭಾಗಕ್ಕೆ ಓರೆಯಾಗಿಸಿ ದ್ದಾನೆ. ಗಂಟು ಹಾಕಿರುವ ಮುಡಿ ಇದೆ. ತಲೆಗೆ ಕಿವಿಯನ್ನು ಮುಚ್ಚಿರುವಂತಹ ತಲೆಪಾಗು ಅಥವಾ ಶಿರಸ್ತ್ರಾಣವನ್ನು ಹಾಕಿರುವಂತಿದೆ. ಅವನಂತೆ ಅವನ ಸಹಾಯಕರು ಧರಿಸಿರುವರು. ವೀರನ ಎದುರಿನಲ್ಲಿ ನಿಂತಿರುವ ಶತ್ರು ಮತ್ತು

ಅವನ ಹಿಂದಿರುವ ಅವನ ಸಹಾಯಕ ಬಲಗೈಯನ್ನು ಮೇಲೆತ್ತಿ ದಂಡದಂತೆ ಕಾಣುವ ಆಯುಧವನ್ನು ಹಿಡಿದು ವೀರನ ಮೇಲೆ ಆಕ್ರಮಣ ಮಾಡುವಂತಿದ್ದಾರೆ.

ನಡುವಿನ ಹಂತದಲ್ಲಿ ಅಲಂಕೃತ ಮಂಟಪದಂತಿರುವ ವಿಮಾನದಲ್ಲಿ ವೀರ ಕೈ ಮುಗಿದು ಸುಖಾಸನದಲ್ಲಿ ಕುಳಿತಿದ್ದಾನೆ. ಮಂಟಪದ ನಾಲ್ಕು ಕಂಭಗಳ ಮೇಲೆ ಕಳಶಗಳನ್ನು ಕೂಡಿಸಿದೆ. ವಿಮಾನದ ಮೇಲೆ ಅಲಂಕರಿಸಿದ ಶಿಖರವಿದೆ. ವಿಮಾನವನ್ನು ಕೊಂಡೊಯ್ಯುತ್ತಿರುವ ಕಿರೀಟಧಾರಿಯರಾದ ಅಪ್ಸರೆಯರು ಒಂದು ಕೈಲಿ ಚಾಮರವನ್ನು ಮತ್ತೊಂದು ಕೈಲಿ ವಿಮಾನದ ಹಿಡಿಕೆಯನ್ನಿಡಿದುಕೊಂಡು ಸ್ವರ್ಗಕ್ಕೆ ಕರೆದೊಯ್ಯುತ್ತಿದ್ದಾರೆ. ಇನ್ನು ಮೂರನೆ ಹಂತದಲ್ಲಿ ಎಲ್ಲಾ ವೀರಗಲ್ಲುಗಳಲ್ಲಿರುವಂತೆ ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿರುವ ಯತಿ, ಕುಳಿತಿರುವ ನಂದಿ, ವೀರ ಭಕ್ತಿಯಿಂದ ಕೈಮುಗಿದು ಕುಳಿತಿರುವಂತೆ, ಮೇಲೆ ಸೂರ್ಯ, ಚಂದ್ರರನ್ನು ಬಿಡಿಸಿದೆ.

ಈ ವೀರಗಲ್ಲಿನ ಮುಂದೆ ಕೆಳಭಾಗದಲ್ಲಿ ಪ್ರತ್ಯೇಕವಾದ ಒಂದು ಕುಬ್ಜ ಶಿಲ್ಪವಿದೆ. ಆ ಶಿಲ್ಪದ ತಲೆಗೆ ತಲೆಪಾಗು ಸುತ್ತಿದೆ. ತಲೆಯ ಮೇಲೆ ಬುಟ್ಟಿಯಂತಿರುವ ವಸ್ತುವನ್ನು ಹೊತ್ತು ಅದನ್ನು ಬಲಗೈಯಿಂದ ಹಿಡಿದಿರುವಂತಿದೆ. ಎಡಗೈಲಿ ತೆನೆಯಂತಿರುವ ಫಲವನ್ನು ಹಿಡಿದಿರುವಂತಿದೆ. ಇಲ್ಲಿ ಈ ಶಿಲ್ಪದ ಅಸ್ತಿತ್ವದ ಬಗ್ಗೆ ಹೇಳಲು ಯಾವ ಆಧಾರಗಳು ಕಾಣಬರುವುದಿಲ್ಲ, ಅದರ ಪಕ್ಕದಲ್ಲಿ ಸಪ್ತಮಾತೃಕೆಯರ ಪಟ್ಟಿಕೆ ಇದೆ. ಈ ಪಟ್ಟಿಕೆ ಕೆಳಗೆ ಅವರ ವಾಹನಗಳನ್ನು ಸಹ ಬಿಡಿಸಲಾಗಿದೆ. ಅಲ್ಲದೆ ಇನ್ನು ಹಲವಾರು ತುಂಡಾಗಿರುವ ಶಿಲ್ಪಗಳು ಅಲ್ಲಿ ಬಿದ್ದಿವೆ.

ಕೆರೆಸಂತೆ:– ಲಕ್ಷ್ಮೀದೇವಿ ಗುಡಿಯ ಮುಂಭಾಗದ ಮಂಟಪದ ಕಟ್ಟೆಗೆ ಒರಗಿಸಿ ನಿಲ್ಲಿಸಿರುವ ಮಾಸ್ತಿಕಲ್ಲು ಅದರ ಪಕ್ಕದಲ್ಲಿ ಹಳೆಯದಾದ ಕೀರ್ತಿಮುಖ ಶಿಲೆ ಅದರ ಪಕ್ಕದಲ್ಲಿ ವೀರಮಾಸ್ತಿ ಕಲ್ಲು, ಮಂಟಪದ ಮತ್ತೊಂದು ಬದಿಯಲ್ಲಿ ಮತ್ತೊಂದು ಮಾಸ್ತಿ ಕಲ್ಲಿದೆ. ಒಂದನೆ ಮಾಸ್ತಿ ಕಲ್ಲಿನಲ್ಲಿ ಇಬ್ಬರು ಮಹಿಳೆಯರು ಇದ್ದಾರೆ. ಇಬ್ಬರೂ ಬಲಗೈಯನ್ನು ಮೇಲೆ ಎತ್ತಿದ್ದಾರೆ. ಮೊದಲ ಮಹಿಳೆಯ ಮೇಲೆತ್ತಿರುವ ಕೈ ತುಂಡಾಗಿದೆ. ಎಡಗೈ ಕೆಳಗೆ ಇಳಿಬಿಟ್ಟಿದ್ದಾರೆ. ಕೈನಲ್ಲಿ ಹಿಡಿದಿರುವಂತಿರುವ ದೀಪ ಅಥವಾ ಕಳಶದಂತಿರುವ ವಸ್ತುವಿದೆ. ಅವರ ಉಡಿಗೆ ತೊಡಿಗೆ ಮತ್ತು ಆಭರಣದಿಂದ ಅಲಂಕೃತರಾಗಿದ್ದಾರೆ. ಕೀರ್ತಿಮುಖದ ಪಕ್ಕದಲ್ಲಿರುವ ವೀರಮಾಸ್ತಿಕಲ್ಲಿನಲ್ಲಿ ವೀರ ಬಲಗೈಲಿ ಕತ್ತಿಯನ್ನು ಹಿಡಿದಿದ್ದಾನೆ ಎಡಗೈಲಿ ಗುರಾಣಿಯನ್ನು ಹಿಡಿದಿದ್ದಾನೆ. ವೀರಗಚ್ಚೆ ಹಾಕಿ ಹೋರಾಡುತ್ತಿರುವಂತಿದೆ. ತಲೆಗೆ ಎರಡು ಸುತ್ತಿನ ಅಲಂಕೃತ ರುಮಾಲನ್ನು, ಕತ್ತಿನಲ್ಲಿ, ತೋಳು, ಕೈ, ಕಾಲುಗಳಲ್ಲಿ ಆಭರಣಗಳನ್ನು ಧರಿಸಿದ್ದಾನೆ. ಮಹಿಳೆ ಬಲಗೈ ಮೇಲೆತ್ತಿ ಫಲವನ್ನು ಹಿಡಿದಿರುವಂತೆ ಎಡಗೈಯನ್ನು ಕೆಳಗೆ ಇಳಿಬಿಟ್ಟು ಹಿಡಿಕೆ ಇರುವ ಹೂ ಬುಟ್ಟಿಯನ್ನು ಹಿಡಿದಿರುವಂತೆ ಕಂಡುಬರುತ್ತದೆ. ಅಲಂಕೃತಳಾಗಿದ್ದಾಳೆ. ಮುಡಿಯನ್ನು ಕೇದಿಗೆಯಿಂದ ಅಲಂಕರಿಸಿಕೊಂಡಿರುವಂತಿದೆ. ಅದರ ಪಕ್ಕದ ಮತ್ತೊಂದು ಬದಿಯಲ್ಲಿ ನಿಲ್ಲಿಸಿರುವ ಮಾಸ್ತಿ ಕಲ್ಲು ಇದೇ ರೀತಿಯಲ್ಲಿದೆ.

ನಂದಿ ಹಳ್ಳಿ:– ಕಡೂರು ತಾಲೂಕಿನ ನಂದಿ ಹಳ್ಳಿಯ ಕಸದ ತಿಪ್ಪೆಯಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗ ಹೂತು ಹೋಗಿರುವ ಮೂರು ಮಾಸ್ತಿ ಕಲ್ಲುಗಳಿವೆ. ಒಂದನೆಯ ಕಲ್ಲಿನಲ್ಲಿರುವ ಮಹಿಳೆಯ ಬಲಗೈ ಮೇಲೆತ್ತಿದ್ದು ಎಡಗೈ ಕೆಳಗೆ ಇಳಿಬಿಟ್ಟಿದ್ದಾಳೆ. ಸ್ವಲ್ಪ ದೂರದಲ್ಲಿರುವ ಮಹಿಳೆಯ ಚಿತ್ರಣ ಅಸ್ಪಷ್ಟವಾಗಿರುವುದು. ಅದರ ಪಕ್ಕದಲ್ಲಿರುವ ವೀರ ಮಾಸ್ತಿ ಕಲ್ಲು ನಡುವಿನ ಭಾಗದವರೆಗೆ ತಿಪ್ಪೆಯಲ್ಲಿ ಹೂತುಹೋಗಿದೆ. ವೀರ ಬಿಲ್ಲು ಬಾಣ ಧರಿಸಿದ್ದಾನೆ. ಬೆನ್ನ ಹಿಂದೆ ಬಾಣಗಳನ್ನಿರಿಸುವ ಬತ್ತಳಿಕೆ ಇದೆ. ಅಲಂಕೃತ ಮಹಿಳೆ ಎರಡೂ ಕೈಗಳನ್ನು ಮೇಲೆತ್ತಿರುವಂತಿದೆ.

(ಈ ಲೇಖನಕ್ಕೆ ಮತ್ತು ಚಿತ್ರಗಳನ್ನು ಗುರುತಿಸಲು ನೆರವಾದ ಗುರುಗಳಾದ ಡಾ.ದೇವರಕೊಂಡಾರೆಡ್ಡಿಯವರಿಗೆ ಕೃತಜ್ಞತೆಗಳು ಸಲ್ಲುತ್ತವೆ.)

ವೇಮಗಲ್ ಮೂರ್ತಿ*

ವೇಮಗಲ್ಲಿನ ಸ್ಮಾರಕ ಶಿಲ್ಪಗಳು ಹಾಗೂ ಶಾಸನಗಳು

ವೇಮಗಲ್ ಗ್ರಾಮವು ಕೋಲಾರ ತಾಲ್ಲೂಕಿನ ಹೋಬಳಿ ಕೇಂದ್ರವಾಗಿದ್ದು, ಕೋಲಾರದಿಂದ ಸುಮಾರು ೧೪ ಕಿ.ಮೀ., ನರಸಾಪುರದಿಂದ ೬ ಕಿ.ಮೀ. ದೂರದಲ್ಲಿರುವ ಸ್ಥಳ. ಈ ಗ್ರಾಮದ ಸುತ್ತಮುತ್ತ ಕೈವಾರಬೆಟ್ಟ, ಸೀತಿಬೆಟ್ಟ, ಮೇಡಿಹಾಳ, ಧನಮಟ್ನಹಳ್ಳಿ, ಅಂತರಗಂಗೆ ಹಾಗೂ ಮಲ್ಲೇಶ್ವರ ಬೆಟ್ಟಗಳಿಂದಲೂ, ಹಲವಾರು ಸಣ್ಣ ಮತ್ತು ದೊಡ್ಡ ಕೆರೆಗಳಿಂದ ಸುತ್ತುವರೆಯಲ್ಪಟ್ಟದೆ. ಈ ಗ್ರಾಮದ ಬಳಿಯೇ ಚೆನ್ನಪ್ಪನಹಳ್ಳಿ ತಾಳಿಕೆರೆ ಮತ್ತು ಸೀಕೆರೆ ಎಂಬ ಎರಡು ಕೆರೆಗಳಿಂದಲೂ ಇದರ ಕೆಳಗಿನ ಗದ್ದೆ ಬಯಲಿಂದಲೂ ಪ್ರಕೃತಿ ಸೌಂದರ್ಯ ಹೆಚ್ಚಾಗಿದೆ. ಈ ಪ್ರದೇಶವು ಇತಿಹಾಸ ಪೂರ್ವ ಹಾಗೂ ಇತಿಹಾಸ ಕಾಲ ದಿಂದಲೂ ಪ್ರಸಿದ್ಧಿ ಹೊಂದಿದ್ದು ಕೈವಾರನಾಡಿನ ಭಾಗವಾಗಿತ್ತು. ಇದು ಕುವಳಾಲ ನಾಡಿನ ಉತ್ತರಕ್ಕಿದ್ದ ಸ್ಥಳವಾಗಿತ್ತು.

ಕ್ಷೇತ್ರ ಕಾರ್ಯದಲ್ಲಿ ವೇಮಗಲ್ ಪರಿಸರದಲ್ಲಿ ದೊರತ ಹಲವಾರು ಪ್ರಾಗೈತಿಹಾಸಿಕ ಕುರುಹುಗಳು (ನಿಲುವುಗಲ್ಲು), ವೀರಗಲ್ಲುಗಳು, ವೀರಗಾರರ ಗುಡಿಗಳು, ಹಳೆಯ ಹಾಳು ಬಿದ್ದಿರುವ ದೇವಾಲಯುಗಳು ಹಾಗೂ ಅಪ್ರಕಟಿತ ಶಿಲಾಶಾಸನಗಳು, ಕಟ್ಟಡ ಇದ್ದಿರಬಹುದಾದ ಕುರುಹುಗಳು ಮತ್ತು ಸ್ಮಾರಕ ಶಿಲ್ಪಗಳು ಹಾಗೂ ಕರುವಗಲ್ಲುಗಳು ಗಮನಕ್ಕೆ ಬಂದವು. ಇವುಗಳನ್ನು ಸದ್ಯ ದಾಖಲಿಸಲಾಗಿದೆ.

ಪ್ರಾಗೈತಿಹಾಸಿಕ ಕುರುಹುಗಳು

ಪ್ರಾಗೈತಿಹಾಸಿಕವಾಗಿ ಹೇಳುವುದಾದರೆ ಈ ಊರಿನ ಬಳಿ **'ಅಗಸರ ಕುಂಟೆ'** ಎಂಬ ಒಂದು ಕುಂಟೆ ಇದ್ದು, ಇದು ಸಣ್ಣ ಸಣ್ಣ ಗುಡ್ಡಗಳಿಂದ ಆವೃತವಾಗಿದೆ, ಈ ಕುಂಟೆಯಲ್ಲಿ ಸದಾ ನೀರಿರುತ್ತದೆ. ಈ ಸ್ಥಳದಲ್ಲಿ ಅಲ್ಲಲ್ಲಿ ಕಲ್ಲಾಸರೆಗಳಿವೆ ಹಾಗೂ ಶಿಲಾಗೋರಿಗಳೂ ಇವೆ. ಒಂದು ಶಿಲಾಗೋರಿಯು ದೊಡ್ಡದಾದ ೩ ಗುಂಡುಗಳಿಂದ ಕೂಡಿದ್ದು, ಅದರ ಮೇಲೆ ಒಂದು ಸಮತಟ್ಟಾದ ಚಪ್ಪಡಿಯನ್ನು ಹಾಸಿದ್ದು, ಇದರ ಅಗಲ ಸುಮಾರು ೩.೬ ಅಡಿ, ಎತ್ತರ ೪.೬ ಅಡಿ (ಆದರೆ ಅದು ಇಂದು ಬಿದ್ದು ಹೋಗಿದೆ) ಇರುವಂತೆ ಕಂಡು ಬರುತ್ತದೆ. ಇನ್ನೊಂದು ಶಿಲಾಗೋರಿಯು ಸಹ ೩ ಗುಂಡುಗಳಿಂದ ಕೂಡಿದ್ದು, ಸಮತಟ್ಟಲ್ಲದ ಒಂದು ಉದ್ದನೆಯ ಕಲ್ಲಿನಿಂದ ಈ ಹಿಂದೆ ಮುಚ್ಚಲ್ಪಟ್ಟದ್ದು, ಇಂದು ಅದೂ ಸಹ ಬಿದ್ದು ಹೋಗಿದೆ. ಮತ್ತೊಂದು ಶಿಲಾಗೋರಿ ವೃತ್ತಾಕಾರದ ಗುಂಡುಗಳಿಂದ ಕೂಡಿದೆ. ಈ ಮೇಲಿನ ಸ್ಥಳದ ಪರಿಶೀಲನೆಯಿಂದ, ಈ ಪ್ರದೇಶವು ಬೃಹತ್ ಶಿಲಾಯುಗಕ್ಕೆ ಸೇರಿದೆ ಎಂದು ತಿಳಿಯಬಹುದಾಗಿದೆ. ಹಾಗೆಯೇ ಈ ಕುಂಟೆಯ ಕಟ್ಟೆಯ ಕೆಳಗೆ ಒಂದು ದೊಡ್ಡ ಗುಂಡಿನ ಮೇಲೆ ತಮಿಳಿನ ಶಾಸನ ಇದ್ದು, ಇದು ಪ್ರಕಟಿತಗೊಂಡಿದೆ. (E.C. Vol. 10).

ವೇಮಗಲ್ಲಿಗೆ ಸೇರಿದ **"ಸೀಕೆರೆ"** ಎಂಬ ಸಣ್ಣ ಕೆರೆ ಪ್ರದೇಶದಲ್ಲಿ (ಇತ್ತೀಚೆಗೆ ಈ ಕೆರೆಯನ್ನು ಮುಚ್ಚಲಾಗಿದೆ) ಬೃಹತ್ ಕಲ್ಲುಗಳಿಂದ ಕಟ್ಟಲ್ಪಟ್ಟಿರುವ ಒಂದು ತಳಪಾಯ ಪೂರ್ವ ಪಶ್ಚಿಮ ಸುಮಾರು ೬೦ ಅಡಿಗಿಂತಲೂ ಹೆಚ್ಚಾಗಿದ್ದು, ಉತ್ತರ ದಕ್ಷಿಣ ೧೨೦ ಅಡಿಗಿಂತಲೂ ಹೆಚ್ಚಾಗಿದ್ದು, ಇದರ ಒಂದು ಭಾಗದಲ್ಲಿ ಜಲ್ಲಿಪತ್ರೆಯ ಮರವಿದ್ದು ಇದರ ಬುಡದಲ್ಲಿ ೨ ವೀರಗಲ್ಲುಗಳು ಗುಡಿಗಳ ಸಮೇತ ಇದ್ದ ಕುರುಹುಗಳು ಕಂಡುಬರುತ್ತವೆ. ಆದರೆ ಇಂದು ಗುಡಿಯು ಮುಚ್ಚಲ್ಪಟ್ಟಿದ್ದ ಕಲ್ಲುಗಳು ಬಿದ್ದುಹೋಗಿವೆ. ವೀರಗಲ್ಲುಗಳು ಮಾತ್ರ ಹಾಗೆಯೇ ಇವೆ. ಈ ಪ್ರದೇಶವನ್ನು ಗಮನಿಸಿ ನೋಡಿದರೆ ಹೊರ ನೋಟಕ್ಕೆ ಇದು ಯಾವುದೋ ಕಟ್ಟಡದ ತಳಪಾಯವೆಂದು ಗೋಚರವಾಗುತ್ತದೆ. ಇಲ್ಲೊಂದು ಕೋಟೆ ಅಥವಾ ಪಾಳೆಯಗಾರನ ಮನೆಯ ತಳಪಾಯ ಇದ್ದಿರಬಹುದೆ! ಎನಿಸುತ್ತದೆ. ಪೂರ್ವ ಪಶ್ಚಿಮ ತಳಪಾಯದ ಕಡೆಗೆ ಒಂದು ಕಂದಕ ಇದ್ದು, ಇದರಲ್ಲಿ ಈ ಹಿಂದೆ ಹೇಳಿರುವ ಸೀಕೆರೆಯಿಂದ ಹೆಚ್ಚಿನ ನೀರು ಮೋರಿ ಮುಖಾಂತರ ಈ ಕಂದಕದ ಮುಖೇನ ಹರಿದು ಮುಂದೆ ಪುರಹಳ್ಳಿ ಬಳಿ ಇರುವ ಕೆರೆಗೆ ಸೇರುತ್ತದೆ. ಈ ಪಾಯಕ್ಕೆ ಹೊಂದುಕೊಂಡಿರುವಂತೆ ವೇಮಗಲ್ಲು–ಸೀತಿ ರಸ್ತೆಯಲ್ಲಿ ಒಂದು ಪುಷ್ಕರಣಿ ಸಹ ಈ ಹಿಂದೆ ಇದ್ದಿತು (ಈಗಿಲ್ಲ). ಈ ಎಲ್ಲಾ ಕುರುಹುಗಳಿಂದ ಈ ತಳಪಾಯ ಒಬ್ಬ ಪಾಳೆಯಗಾರನ ನಿವೇಶನ ಅಥವಾ ವೇಮಗಲ್ ಗ್ರಾಮದ ಊರ ಹೊರಗಿನ "ಹೊರ ಕೋಟೆ"

* # ೧೫೬೫, ೧೭ನೆಯ ಮುಖ್ಯರಸ್ತೆ, ೫ನೆಯ ಅಡ್ಡರಸ್ತೆ, ಬನಶಂಕರಿ ೧ನೆಯ ಹಂತ, ೨ನೆಯ ಬ್ಲಾಕ್, ಬೆಂಗಳೂರು.

ಇರಬಹುದು ಎನಿಸುತ್ತದೆ. ಇಲ್ಲಿ ಇರುವ ಒಂದು ಶಿಲ್ಪವನ್ನು ಕೋಟೇರಮ್ಮ ಎಂದು ಊರಿನ ಜನ ಕರೆಯುತ್ತಾರೆ (ಶಿಲ್ಪಕ್ಕೆ ಊರಿನ ಜನ ಹಾಗೂ ಜಮೀನಿನ ಒಡೆಯರು / ಜಮೀನಿನ ಅಕ್ಕ ಪಕ್ಕದವರೂ ಇಂದಿಗೂ ವಿಶೇಷ ದಿನಗಳಲ್ಲಿ ಪೂಜೆ ಮಾಡುತ್ತಾರೆ). ಅಂದರೆ ಕೋಟೆ + ಏರಿ + ಅಮ್ಮ = ಕೋಟೇರಮ್ಮ ಇರಬಹುದೆ ಎನಿಸುತ್ತದೆ. ಈಕೆಯು ಇಲ್ಲಿ ಇದ್ದಿರಬಹುದಾದ ಕೋಟೆಗಾಗಿ ಪ್ರಾಣ ತೆತ್ತಳು ಎಂಬ ನಂಬಿಕೆಯಿದೆ.

ಸ್ಮಾರಕ ಶಿಲ್ಪಗಳು

ಹುಲಿಯನ್ನು ಬೇಟೆಯಾಡುತ್ತಿರುವ ಒಬ್ಬ ವೀರನ ವೀರಗಲ್ಲು : ಅಗಲ ಸುಮಾರು ೪.೬ ಅಡಿ, ಎತ್ತರ ೩.೬ ಅಡಿ, ದಪ್ಪ ೧೦" ಇರುವ ಈ ವೀರಗಲ್ಲಿಗೆ ಒಂದು ಗುಡಿ ಇತ್ತು ಆದರೆ ಈಗಿಲ್ಲ. ಈ ವೀರಗಲ್ಲು ಸರಿ ಸುಮಾರು ವಿಜಯನಗರದ ಕಾಲಕ್ಕೆ ಸಂಬಂಧಿಸಿದ್ದಾಗಿದೆ. ಈ ವೀರಗಲ್ಲಿನ ಎಡಭಾಗದ ಮೇಲುಗಡೆ ಸೂರ್ಯ ಚಂದ್ರರಿದ್ದಾರೆ, ಎಡ ಭಾಗದಲ್ಲಿ ವಿಷ್ಣುವಿನ ಶಿಲ್ಪವನ್ನು ಬಿಡಿಸಿದೆ. ಶಿಲ್ಪದ ಬಲಗಡೆಯ ಮೇಲ್ಭಾಗದ ಮೇಲು ಹಂತದಲ್ಲಿ ಶಿವಲಿಂಗದ ಬಳಿ ವೀರನ ಪತ್ನಿಯನ್ನೂ, ನಂತರ ಕೈಜೋಡಿಸಿ ನಿಂತಿರುವ ವೀರನ ಶಿಲ್ಪವನ್ನು ಬಿಡಿಸಲಾಗಿದೆ, ಹಾಗೂ ಪೀಠದ ಸಮೇತ ಇರುವ ಶಿವಲಿಂಗದ ಶಿಲ್ಪವನ್ನು ಬಿಡಿಸಿದ್ದಾರೆ. ಶಿಲ್ಪದ ಮಧ್ಯಭಾಗದಲ್ಲಿ ವೀರ ಬಲಗೈಯನ್ನು ತನ್ನ ಸೊಂಟದ ಮೇಲಿಟ್ಟು, ಎಡಗೈಯಲ್ಲಿ ಒಂದು ಉದ್ದದ ಭರ್ಜಿಯಿಂದ ತನ್ನ ಮೇಲೆ, ತನ್ನ ಬಲಗಾಲಿನಿಂದ ಎರಗುತ್ತಿರುವ ಹುಲಿಯ ಬಾಯಿಯನ್ನು ತಿವಿಯುತ್ತಿರುವ ಶಿಲ್ಪ ಬಿಡಿಸಲಾಗಿದೆ. ಶಿಲ್ಪಿಯು ಎಲ್ಲಾ ಶಿಲ್ಪಗಳನ್ನು ತುಂಬಾ ಸೊಗಸಾಗಿ ಬಿಡಿಸಿದ್ದಾನೆ. ಈ ಮೇಲಿನ ಶಿಲ್ಪದ ವೀರಗಲ್ಲನ್ನು ಗಮನಿಸಿದರೆ, ವೀರ ತನ್ನ ಹೋರಾಟದ ನಂತರ ಪತ್ನಿ ಸಮೇತ ಶಿವೈಕ್ಯನಾದ ಅಥವಾ ಸ್ವರ್ಗಸ್ಥನಾದ ಎನಿಸುತ್ತದೆ (ಈ ಗುಡಿಯ ಎಡಭಾಗದ ಕಲ್ಲಿನ ತಳಭಾಗದಲ್ಲಿ ತಮಿಳಿನ ಶಾಸನ ಕಂಡು ಬಂದ್ದಿದ್ದು ಇದನ್ನು ನಾನು ಮತ್ತೊಮ್ಮೆ ಕ್ಷೇತ್ರಕಾರ್ಯ ಮಾಡುವಾಗ ಓದಲು ಆಗದಂತೆ ಕಲ್ಲನ್ನು ಮುಚ್ಚಿಹಾಕಲಾಗಿದೆ).

ಊರಬಾಗಿಲ ಸಮೀಪ ಇರುವ ವೀರಗಲ್ಲು : ಈ ವೀರಗಲ್ಲಿಗೆ ಇಂದಿಗೂ ಒಂದು ಗುಡಿ ಇದೆ. ಸುಮಾರು ೩.೬ ಅಡಿ ಎತ್ತರ ಹಾಗೂ ಅಗಲ ೩ ಅಡಿ. ಇಲ್ಲಿ ವೀರನ ಸ್ವರ್ಗಾರೋಹಣವನ್ನು ಆತನ ಸಂಬಂಧಿಕರೋ ಅಥವಾ ಮತ್ಯಾರೋ ಆಚರಿಸುತ್ತಿರುವಂತೆ ಕಂಡು ಬರುತ್ತದೆ. ಒಬ್ಬ ಕಾವಡಿ ಎತ್ತಿಕೊಂಡಿರುವಂತೆ, ಇನ್ನೊಬ್ಬ ಕತ್ತಿ ಗುರಾಣಿ ಹಿಡಿದು ನಿಂತಿರುವಂತೆ, ಮತ್ತೊಬ್ಬ ಕುಣಿಯುತ್ತಿರುವಂತೆ ಕಂಡು ಬರುತ್ತದೆ. ಈ ವೀರಗಲ್ಲು ತುಂಬಾ ಸೊಗಸಾಗಿದೆ.

ಓಕೆರೆ ಕೋಡಿ ಬಳಿ ಇರುವ ವೀರಗಲ್ಲು : ಈ ವೀರಗಲ್ಲಿಗೆ ಹಿಂದೆ ಒಂದು ಗುಡಿ ಇದ್ದಿತ್ತು. ಆದರೆ ಈಗ ತೆಗೆದು ಹಾಕಿದ್ದಾರೆ. ಇಲ್ಲಿನ ವೀರನ ಶಿಲ್ಪ ತುಂಬಾ ಚೆನ್ನಾಗಿದೆ. ವೀರ ಬಲಗೈಯಲ್ಲಿ ಕತ್ತಿ, ಎಡಗೈಯಲ್ಲಿ ಗುರಾಣಿ ಹಿಡಿದಿದ್ದು ತುರುಬು ಕಟ್ಟಿದ್ದಾನೆ, ಬಲಭಾಗದ ಸೊಂಟದಲ್ಲಿ ಚಾಕು ಒಂದನ್ನು ನಡುಕಟ್ಟಿನ ಪಟ್ಟಿಗೆಗೆ ಸಿಕ್ಕಿಸಿದ್ದಾನೆ. ತೊಡೆಗಳ ಮಧ್ಯಭಾಗದವರೆಗೆ ದೋತಿಯನ್ನು ಉಟ್ಟಿದ್ದಾನೆ. ಎರಡೂ ಕಾಲುಗಳಿಗೆ ಕಾಲಂದಿಗೆ ಹಾಕಿದ್ದಾನೆ. ಮೀಸೆಬಿಟ್ಟಿದ್ದು ಕಿವಿಗಳಿಗೆ ಕಿವಿಯ ಆಭರಣ ಧರಿಸಿದ್ದಾನೆ. ಹಾಗೆಯೇ ಎರಡೂ ಕೈಗಳಿಗೆ ತೋಳುಗಳಿಗೆ ಆಭರಣ ತೊಟ್ಟಿದ್ದಾನೆ. ಇಲ್ಲಿನ ಜನ ಇಂದಿಗೂ ಈ ವೀರಗಲ್ಲಿಗೆ ವಿಶೇಷ ದಿನಗಳಲ್ಲಿ ಪೂಜೆ ಮಾಡುತ್ತಾರೆ. ಈ ಮೇಲಿನ ಚಿತ್ರಣದಿಂದ, ವೀರನೊಬ್ಬ ಯುದ್ಧದಲ್ಲಿ ಹೋರಾಡಿ ಸಾವನ್ನಪ್ಪಿದ್ದಾನೆ ಎಂದು ತಿಳಿಯುತ್ತದೆ. ವೀರಗಲ್ಲಿನ ಎತ್ತರ ಸುಮಾರು ೨.೬ ಅಡಿ, ಅಗಲ ೨ ಅಡಿ, ದಪ್ಪ ೦.೫ ಅಡಿ.

ಆಶ್ವಾರೋಹಿ ವೀರನ ವೀರಗಲ್ಲು : ಇದು ಚನ್ನಪ್ಪನಹಳ್ಳಿ ತಾಳೀ ಕೆರೆಯ ಗದ್ದೆಯ ಬಯಲಲ್ಲಿ ಇದೆ. ಈ ಬಯಲನ್ನು (ಪ್ರದೇಶವನ್ನು) ಕತ್ತಿ ಬೀಸಪ್ಪನ (ಬಸಪ್ಪನ) ಬಯಲು ಎಂದು ಕರೆಯುವರೆಂದು ಈ ಜಮೀನಿನ ಒಡೆಯರಿಂದ ತಿಳಿದು ಬರುತ್ತದೆ. ಇದರ ಎತ್ತರ ಸುಮಾರು ೪ ಅಡಿ, ಅಗಲ ೫.೯ ಅಡಿ, ದಪ್ಪ ೦.೬ ಅಡಿ ಇದೆ. ಈ ವೀರಗಲ್ಲಿನಲ್ಲಿ ಕುಸರಿ ಕೆಲಸವನ್ನು ಚೆನ್ನಾಗಿ ಮಾಡಿದೆ. ಓಡುತ್ತಿರುವ ಕುದುರೆ ಮೇಲೆ ವೀರ ಕುಳಿತು, ತನ್ನ ಎಡಗೈಯಿಂದ ಕುದುರೆಯ ಲಗಾಮು ಹಿಡಿದಿದ್ದಾನೆ, ಹಾಗೆಯೇ, ಬಲಗೈಯಲ್ಲಿ ಉದ್ದವಾದ ಭರ್ಜಿ ಹಿಡಿದು ಹೋರಾಟಕ್ಕೆ ಹೊರಟಂತೆ ಚಿತ್ರಿಸಿದ್ದಾನೆ ಶಿಲ್ಪಿ. ವೀರಗಲ್ಲಿನ ಮೇಲ್ಭಾಗದಲ್ಲಿ ತೋರಣ ಕಟ್ಟಿದೆ. ಎಡ, ಬಲ ಭಾಗಗಳಲ್ಲಿ ಗಂಟೆಗಳನ್ನು ನೇತುಹಾಕಿಬಿಟ್ಟಿದ್ದಾನೆ. ಕುದುರೆಯು ಅಲಂಕೃತ ಗೊಂಡಿದೆ. ವೀರನು ಎರಡೂ ಕೈಗಳ ತೋಳುಗಳಿಗೂ, ಮಣಿಕಟ್ಟಿಗೂ ಹಾಗೂ ಕತ್ತಿಗೂ ಆಭರಣಗಳನ್ನು ತೊಟ್ಟಿದ್ದಾನೆ. ವೀರ ಅಪ್ರತಿಮ ವೀರನಂತೆ ಕಾಣಿಸುತ್ತಾನೆ. ಈ ವೀರಗಲ್ಲು ಹೊಯ್ಸಳರ ಕೊನೆಯ ಕಾಲದ್ದು ಇರಬಹುದು ಅನಿಸುತ್ತದೆ.

ವೀರಮಾಸ್ತಿಗಲ್ಲು : ಊರ ಬಾಗಿಲ ಬಳಿ ಇರುವ ಕಲ್ಲಿನಲ್ಲಿ ಈ ಶಿಲ್ಪವನ್ನು ಬಿಡಿಸಲಾಗಿದೆ. ವೀರನು ಹೋರಾಟ ಮಾಡುತ್ತಿರುವಂತೆ ಈ ಶಿಲ್ಪವನ್ನು ಬಿಡಿಸಲಾಗಿದ್ದು ಇದರ ಎತ್ತರ ೨.೬ ಅಡಿ, ಅಗಲ ೩.೬ ಅಡಿ, ಪಕ್ಕದಲ್ಲಿಯೇ ಬಿಲ್ಲು ಪ್ರಯೋಗದಲ್ಲಿರು ವಂತೆಯೂ, ಹೆಣ್ಣು ತನ್ನ ಎಡಗೈಯಲ್ಲಿ ಏನನ್ನೋ ಹಿಡಿದು ಕೊಂಡಿರುವಂತೆ ಶಿಲ್ಪಿಸಲಾಗಿದೆ. ಈ ವೀರಮಾಸ್ತಿಗಲ್ಲು ತುಂಬಾ ಚೆನ್ನಾಗಿದೆ. ಊರಿನ ಹಬ್ಬದ

ದಿನಗಳಲ್ಲಿ ಇಂದಿಗೂ ಈ ವೀರಮಾಸ್ತಿಗಲ್ಲಿಗೆ ಪೂಜೆ ಮಾಡುತ್ತಾರೆ.

ವೀರಗಾರರ ಗುಡಿಗಳು : ವೇಮಗಲ್ಲಿನಲ್ಲಿ ಬೆಳ್ಳೂರು ಬೀರೇಶ್ವರ ಗುಡಿಯೊಂದು ಇದೆ. ಪಕ್ಕದ ಊರಾದ ನರಸಾಪುರ ಬಳಿ ಇರುವ ಬೆಳ್ಳೂರು ಗ್ರಾಮದಿಂದ ಈ ಬೀರೇಶ್ವರ ದೇವರನ್ನು ತಂದು ಇಲ್ಲಿ ಗುಡಿ ಕಟ್ಟಿದ್ದಾರೆ ಎಂದು ಸ್ಥಳೀಕರು ಹೇಳುತ್ತಾರೆ. ಹಿಂದೆ ಈ ದೇವಾಲಯದ ಬಳಿ ಹಲವಾರು ವೀರಗಾರರ ಗುಡಿಗಳು ಇದ್ದವು. ಆದರೆ ಇಂದು ಈ ಗುಡಿಗಳನ್ನು ತೆಗೆದು ಹಾಕಿ, ಇದರಲ್ಲಿದ್ದ ವೀರಗಾರರ ಕಲ್ಲುಗಳನ್ನು ದೇವಾಲಯದ (ನೂತನವಾಗಿ ನಿರ್ಮಿಸಿರುವ) ಆವರಣದ ಸುತ್ತಲೂ ನಿಲ್ಲಿಸಿದ್ದಾರೆ. ಇಲ್ಲಿನ ಕುರುಬ ಜನಾಂಗದವರು ಈ ಬೀರೇಶ್ವರನಿಗೆ ಭಕ್ತರಾಗಿರುತ್ತಾರೆ. ಇಲ್ಲಿ ಕುರುಬ ಜನಾಂಗದವರಿಂದ ಜಾತ್ರೆ ನಡೆಯುತ್ತದೆ. ಇದೇ ರೀತಿಯ ಸುಮಾರು ೭ ಗುಡಿಗಳು ಇದೇ ಗ್ರಾಮದ "ಚೆನ್ನಪ್ಪನ ಹಳ್ಳಿಯ ತಾಳಿ ಕೆರೆ" ಕೋಡಿಯ ಬಳಿಯೂ ಇವೆ. ಈ ಗುಡಿಗಳಲ್ಲೂ ವೀರಗಾರರ ಶಿಲ್ಪಗಳನ್ನು ಬಿಡಿಸಲಾಗಿದೆ. ಇದನ್ನು ಸ್ಥಳೀಯ ಜನರು ಪಾಂಡವರ ಗುಡಿಗಳೆಂದು ಕರೆಯುವ ರೂಢಿಯಲ್ಲಿದೆ. ಇಲ್ಲಿಗೂ ವಿಶೇಷ ದಿನಗಳಲ್ಲಿ ಪೂಜೆ ಮಾಡುತ್ತಾರೆ.

ಭಕ್ತನ ಶಿಲ್ಪ : ಅಗಸರ ಕುಂಟೆಗೆ ಅನಿತ ದೂರದಲ್ಲಿ ಒಂದು ಭಕ್ತನಿರುವ ಪುಟ್ಟದಾದ ಕಂಬವಿದೆ. ಈ ಪರಿಸರವನ್ನು ನೋಡಿದರೆ ಇಲ್ಲೊಂದು ಪುಟ್ಟ ಗುಡಿ, ಅಥವಾ ದೇವಾಲಯ ಇರಬಹುದು ಎಂದು ಅನಿಸುತ್ತದೆ. ತಜ್ಞರ ಅಧ್ಯಯನದಿಂದ ಇದರ ಮೇಲೆ ಬೆಳಕು ಚೆಲ್ಲಬೇಕಾಗಿದೆ. ಇದೇ ರೀತಿ ಮತ್ತೊಂದು ಭಕ್ತನ ಶಿಲ್ಪ ಊರ ಬಾಗಿಲ ಬಳಿ ಇದೆ. ಈ ಶಿಲ್ಪವೂ ಸುಂದರವಾಗಿವೆ.

ಹೆಣ್ಣು ಮಗಳೊಬ್ಬಳ ಸ್ಮಾರಕ ಶಿಲ್ಪ : ಇದು ಸೀಕೆರೆ (ಈಗಿಲ್ಲ) ಅಂಗಳದಲ್ಲಿ ಇರುವ ವೀರಗಲ್ಲಿನ ಪಕ್ಕದಲ್ಲೇ ಇದೆ. ಇಲ್ಲಿನ ಶಿಲ್ಪವು ಚಿಕ್ಕದಾಗಿ ಚೊಕ್ಕದಾಗಿದೆ. ಇದೊಂದು ಹೆಣ್ಣು ಶಿಲ್ಪವಾಗಿದ್ದು, ತನ್ನ ಎಡ ಸೊಂಟದ ಮೇಲೆ ಒಂದು ಪುಟ್ಟ ಮಗವನ್ನು ಎತ್ತಿಕೊಂಡು ಕೈ ಜೋಡಿಸಿ ಕೊಂಡು ನಿಂತಿದ್ದಾಳೆ. ಇಲ್ಲಿನ ಹೆಣ್ಣು ತುರುಬನ್ನು ಕಟ್ಟಿಕೊಂಡು ಕಿವಿಗೆ ಹಾಗೂ ಕತ್ತಿಗೆ ಆಭರಣ ತೊಟ್ಟಿದ್ದಾಳೆ. ಎರಡೂ ಕೈ ತೋಳುಗಳಿಗೆ ಆಭರಣ ಧರಿಸಿದ್ದಾಳೆ, ಸೀರೆಯನ್ನು ಪಾದಗಳವರೆಗೂ ಉಟ್ಟಿದ್ದು ಎರಡೂ ಮೊಣಕಾಲುಗಳಿಗೂ ಆಭರಣ ಧರಿಸಿರುವುದು ಕಾಣುತ್ತದೆ. ಇವೆಲ್ಲವನ್ನೂ ಗಮನಿಸಿದರೆ, ಈ ಶಿಲ್ಪವಿರುವ ಸ್ಥಳದಲ್ಲಿ "ಸೀಕೆರೆ" ಎಂಬ ಕೆರೆ ಇದ್ದು (ಈಗಿಲ್ಲ) ಇದನ್ನು ಕಟ್ಟುವುದಕ್ಕೆ ತನ್ನ ಬಲಿದಾನವನ್ನು ಮಗುವಿನ ಸಮೇತವೇನಾದರೂ ಈ ಹೆಣ್ಣು ಕೊಟ್ಟಿರಬಹುದೇ! ಎಂದು ಊಹಿಸಬಹುದಾಗಿದೆ. ಶಿಲ್ಪದ ಎತ್ತರ ಸುಮಾರು ೩ ಅಡಿ, ಅಗಲ ೧.೯ ಅಡಿ, ದಪ್ಪ ೦.೬ ಅಡಿ.

ಯಂತ್ರದ ಕಲ್ಲು : ವೀರಭದ್ರ ದೇವಾಲಯದ ಎದುರುಗಡೆ ಈ ಯಂತ್ರದ ಕಲ್ಲನ್ನು ನಿಲ್ಲಿಸಿದ್ದಾರೆ. ಈ ಕಲ್ಲಿನ ಎತ್ತರ ಸುಮಾರು ೨.೬ ಅಡಿ, ಅಗಲ ೧.೦ ಅಡಿ, ದಪ್ಪ ೦.೪ ಅಡಿ ಇದೆ. ಈ ಕಲ್ಲಿನಲ್ಲಿ ಒಂದು ಚಿತ್ರವನ್ನು ಬಿಡಿಸಿದ್ದು ಅದು ಯಾವುದು ಎಂದು ಹೇಳುವುದು ಕಷ್ಟವಾಗಿದೆ. ಯಂತ್ರದ ಕಲ್ಲಿನ ಕೆಳಭಾಗದಲ್ಲಿ ಯಂತ್ರ ಒಂದನ್ನು ಬಿಡಿಸಿದ್ದಾರೆ. ಯಾವುದೇ ತರಹದ ಲಿಪಿ ಇಲ್ಲ, ಬೀಜಾಕ್ಷರಗಳು ಇದ್ದಂತೆ ಕಾಣುತ್ತದೆ.


ನಿಲುವುಕಲ್ಲು : ಈ ಹಿಂದೆ ಸಂತೆ ನಡೆಯುತ್ತಿದ್ದ ಊರ ಬಾಗಿಲಿನ ಸ್ವಲ್ಪ ದೂರದಲ್ಲಿ ಈ ಕಲ್ಲನ್ನು ನಿಲ್ಲಿಸಿದ್ದು, ಇದರ ಉದ್ದ ಸುಮಾರು ೫ ಅಡಿ ಇದೆ, ಈ ಕಲ್ಲು ಅನೇಕ ತಲೆಮಾರುಗಳಿಂದ ಹಾಗೆಯೇ ಇದೆಯೆಂದು, ಇದನ್ನು ಕೆಡವುಬಾರದೆಂಬ ನಂಬಿಕೆಯಿಂದ ಹಾಗೆಯೇ ಬಿಟ್ಟಿರುತ್ತಾರೆ ಎಂದು ಸ್ಥಳೀಯರಿಂದ ತಿಳಿದು ಬರುತ್ತದೆ. ಈ ನಡುವೆ ಈ ಭಯ ಇರುವುದರಿಂದಲೇ ಇದರ ಸಮೀಪ ಮನೆ ಕಟ್ಟುವವರು ಇದನ್ನು ಅಂದರೆ "ನಿಲುವುಗಲ್ಲನ್ನು" ಕೆಡವದೆ ನಿಲುವುಗಲ್ಲನ್ನೂ ಸೇರಿಸಿ ಮನೆ ಕಟ್ಟಿದ್ದಾರೆ. ಇದು ಪ್ರಾಗೈತಿಹಾಸಿಕ ಕಾಲಕ್ಕೆ ಸೇರಿರಬಹುದೆಂದು ಅನಿಸುತ್ತದೆ.


ಕರುವಗಲ್ಲು : ಇದು ಹಿಂದೆ ಕೋಟೆ ಇದ್ದ ಸ್ಥಳದಲ್ಲಿದ್ದು, ಸುಮಾರು ೫ ಅಡಿಗಿಂತಲೂ ಎತ್ತರವಿದೆ. ತುಂಬ ಸುಣ್ಣ ಬಳಿದಿರುವ ಕಾರಣ ಈ ಕಲ್ಲಿನ ಮೇಲೆ ಏನಿದೆ ಎಂಬುದು ಅಸ್ಪಷ್ಟ. ಊರಿನ ಜನ ವಿಶೇಷ ದಿನಗಳಲ್ಲಿ ಇಂದಿಗೂ ಪೂಜೆ ಮಾಡುತ್ತಾರೆ.

ರುಂಡವಿಲ್ಲದ ದೇವಶಿಲ್ಪ : ಹುಲಿ ಬೇಟೆಯ ವೀರಗಲ್ಲಿನ ಹತ್ತಿರವೇ ಒಂದು ರುಂಡವಿಲ್ಲದ ಹೆಣ್ಣು ಶಿಲ್ಪವಿದೆ. ಇದನ್ನು ಕರೀ ಕಲ್ಲಿನಿಂದ ಮಾಡಿದೆ. ಇದೊಂದು ದುರ್ಗೆಯ ಶಿಲ್ಪವೆಂದು ತೋರಿ ಬರುತ್ತದೆ. ಇದು ಕ್ರಿ.ಶ. ೧೦ನೆಯ ಶತಮಾನದ್ದೆಂದು ತೋರುತ್ತದೆ.

ದೇವಾಲಯಗಳು : ವೇಮಗಲ್ಲಿನಲ್ಲಿ ಶ್ರೀ ಲಕ್ಷ್ಮೀ ನಾರಾಯಣ, ವೀರಭದ್ರ, ಈಶ್ವರನ ದೇವಾಲಯಗಳಿದ್ದು, ಇದರಲ್ಲಿ ಶ್ರೀ ವೀರಭದ್ರ ದೇವಾಲಯ ವಿಜಯನಗರೋತ್ತರ ಕಾಲಕ್ಕೆ ಸೇರಿದರೆ, ಶ್ರೀ ಲಕ್ಷ್ಮೀನಾರಾಯಣ ಹಾಗೂ ಶ್ರೀ ಈಶ್ವರನ ದೇವಾಲಯಗಳು ೩೦೦ ರಿಂದ ೪೦೦ ವರ್ಷಗಳಷ್ಟು ಹಿಂದಿನದೆಂದು ತಿಳಿದು ಬರುತ್ತದೆ. ಇದೇ ಗ್ರಾಮದಲ್ಲಿ ಮತ್ತೊಂದು ಹಾಳಾದ ದೇಗುಲದ ಪರಿಸರವಿದ್ದು ಇದರ ಬಳಿ ಒಂದು ಧ್ವಜಸ್ತಂಭ ಮತ್ತು ಇದರ ಪಕ್ಕ ಒಂದು ಉದ್ದನೆಯ ಮೊನಚಾಗಿ ಸಣ್ಣಗಿರುವ ಕಲ್ಲನ್ನೂ ನಿಲ್ಲಿಸಿದ್ದು







ಬೀರೇಶ್ವರ ದೇವಾಲಯ – ವೇಮಗಲ್

ಹೊಲವೊಂದರಲ್ಲಿ ವೀರಗಲ್ಲು – ವೇಮಗಲ್







ಊರಬಾಗಿಲ ಮುಂದೆ ವೀರಗಲ್ಲು – ವೇಮಗಲ್

ಹೊಲವೊಂದರಲ್ಲಿ ವೀರಗಲ್ಲು
ವೇಮಗಲ್








ವೀರರ ಗುಡಿಗಳು – ವೇಮಗಲ್

ಕುದುರೆ ಸವಾರನ ಸ್ಮಾರಕ – ವೇಮಗಲ್









ಈ ಕಲ್ಲಿನ ಕೆಳಗಡೆ ನಾಲ್ಕೂ ಬದಿಯಲ್ಲಿ ಪಕ್ಷಿಗಳ ಚಿತ್ರಗಳಿವೆ. ಈ ದೇಗುಲದ ಮುಂದೆ ಹುಟ್ಟು ಬಂಡೆಯ ಮೇಲೆ ಒಂದು ಶಾಸನವೂ ಇದೆ. ಈ ದೇಗುಲವನ್ನು ಸ್ಥಳೀಯರು **"ತಿರುಮಲರಾಯ"** ಎಂದು ಕರೆಯುತ್ತಾರೆ. ಈಗ ಇಲ್ಲಿ ನೂತನ ದೇಗುಲವನ್ನು ಕಟ್ಟಿಸಲು ಪ್ರಯತ್ನಗಳು ನಡೆಯುತ್ತಿವೆ.

ಅಗಸರ ಕುಂಟೆಗೆ ಹತ್ತಿರದಲ್ಲಿ ಒಂದು ಗುಡಿ ಇದ್ದು ಇದರೊಳಗೆ ಮೂರ್ತಿ ಇಲ್ಲ. ಆದರೆ ಈ ಗುಡಿಯ ಮುಂದೆ ಇದ್ದ ಬಸವಣ್ಣನನ್ನು ಗುಡಿಯ ಒಳಗೆ ತಂದು ಇರಿಸಿದ್ದಾರೆ. ಈ ಗುಡಿಯ ಮುಂದೆ ತುಂಬಾ ಚಿಕ್ಕದಾದ ಒಂದು ಪುಷ್ಕರಣಿ ಸಹ ಇದೆ. ಇದೇ ಅಲ್ಲದೆ ವೇಮಗಲ್ ಗ್ರಾಮದಲ್ಲಿ ಸಾಮಾನ್ಯವಾಗಿ ಎಲ್ಲಾ ಕಡೆ ಇರುವಂತೆ ಪುಟ್ಟದಾದ ಗಣೇಶ, ಗ್ರಾಮದೇವತೆ ಗಂಗಮ್ಮ, ಮಾರಮ್ಮ, ಮುತ್ಯಾಲಮ್ಮ, ಮೇಘಮಂಡಲಮ್ಮ, ಕರಗದಮ್ಮನ ಹಾಗೂ ಇತ್ತೀಚೆಗೆ ಕಟ್ಟಿರುವ ಶ್ರೀರಾಮನ ಮತ್ತು ಶ್ರೀ ಗಾಯತ್ರಿ ಗುಡಿಗಳಿವೆ.

ಅಂತೆಯೇ ವೇಮಗಲ್ಲಿನಿಂದ ೧ ಮೈಲಿ ದೂರದಲ್ಲಿ ಪುರಹಳ್ಳಿ ಎಂಬ ಗ್ರಾಮವಿದ್ದು ಇಲ್ಲಿ ಒಂದು ಹಳೇ ಗುಡಿ ಇದೆ. ಇದನ್ನು ಸಪ್ಲಮ್ಮನ ಗುಡಿ ಎನ್ನುತ್ತಾರೆ (ಇಲ್ಲಿ ಮೂಲತಃ ವೈಷ್ಣವಿ ಶಿಲ್ಪವಿದೆ). ಸಪ್ಲಮ್ಮನ ಮೂರ್ತಿ ಚಿಕ್ಕದಾಗಿ ಚೆನ್ನಾಗಿದೆ. ಇಲ್ಲೊಂದು ತಾಟಪರಾಯನ ಗುಡಿಯು ಇದೆ. ಈ ಗುಡಿಗೆ ಸಂಕ್ರಾಂತಿ ಹಬ್ಬದಂದು ಗೋವುಗಳಿಗೆ ಒಳ್ಳೆಯದಾಗಲೆಂದು ಪೂಜೆ ಮಾಡಿಸಿಕೊಂಡು ಹೋಗುತ್ತಾರೆ.

ಅಪ್ರಕಟಿತ ಶಾಸನಗಳು

ಅ) ವೇಮಗಲ್ಲಿನ ಹತ್ತಿರವಿರುವ ಮುರಹಳ್ಳಿ ಎಂಬ ಗ್ರಾಮದಲ್ಲಿ **ರಾಷ್ಟ್ರಕೂಟರ** ದೊರೆ ೩ನೆಯ ಗೋವಿಂದನ ಹೊಸ ಅಪೂರ್ಣ ಶಿಲಾಶಾಸನವೊಂದು ದೊರೆಕಿತು. ಅದು ಸುಮಾರು ೩ ಅಡಿ ಎತ್ತರ, ೧.೬ ಅಡಿ ಅಗಲವಿದೆ. ಇದರಲ್ಲಿ ೯ ಸಾಲುಗಳು ಇದ್ದು ಒಂಬತ್ತನೆಯ ಸಾಲು ಹಾಗೂ ಕೆಲವು ಅಕ್ಷರಗಳು ಮಾತ್ರ ಅಸ್ಪಷ್ಟವಾಗಿವೆ. ಮಿಕ್ಕಂತೆ ಶಾಸನ ಸ್ಪಷ್ಟವಾಗಿದೆ. ಅಕ್ಷರಗಳು ಗುಂಡಾಗಿವೆ.

ಶಾಸನದ ಪಾಠ

೧ ಸ್ವಸ್ತಿ ಪ್ರಭೂತವರ್ಷ
೨ ಶ್ರೀ ಪ್ರಥಿವೀ ವಲ್ಲಭ
೩ ಮಹಾ ರಾಜಾದಿರಾಜ
೪ ಪರಮೇಶ್ವರ ಭಟಾರರ್
೫ ಪ್ರಥಿವೀರಾಜ್ಯಂ ಗೆಯ್ಯೆ
೬ . ಯನಸ ಕ್ರಪ್ರಿಯದೆ
೭ ಸಂದಿಲೆ ಅಯ್ಯಬ್ಬೆಕಬ .
೮ . . ಆ . ಗೊಯಿಂದ ಸೆ(ಮೆ)ಕೆದ
೯ . . . . . (ಅಸ್ಪಷ್ಟ)

ಆ) ಇನ್ನೊಂದು ಅಪ್ರಕಟಿತ ಶಾಸನ ವೇಮಗಲ್ಲಿನಲ್ಲಿ ಈ ಹಿಂದೆ ಇದ್ದ ಕೋಟೆಯ ಬಳಿ ಇದ್ದು ಈಗ ಹೊಸದಾಗಿ ಕಟ್ಟಿರುವ ಕರಗದಮ್ಮನ ದೇವಾಲಯದ ಎದುರುಗಡೆ ಇದೆ. ಇದೊಂದು ಕಲ್ಲು ಚಪ್ಪಡಿಯ ಮೇಲೆ ಬರೆದಿರುವ ಶಾಸನ. ಇದರ ಎತ್ತರ ಸುಮಾರು ೫ ಅಡಿಗಿಂತಲೂ ಹೆಚ್ಚಾಗಿದೆ, ಅಗಲ ೨ ಅಡಿ, ದಪ್ಪ ೦.೬ ಅಡಿ ಇರುವ ಇದು ೧೫೦ ರಿಂದ ೨೦೦ ವರ್ಷಗಳಷ್ಟು ಹಳೆಯದೆಂದು ತಿಳಿದು ಬರುತ್ತದೆ. ಲಿಪಿ ಇತ್ತೀಚಿನದು. ಅಕ್ಷರಗಳು ಅಸ್ಪಷ್ಟವಾಗಿದೆ (ಆಳವಾಗಿ ಅಕ್ಷರಗಳನ್ನು ಕೊರೆದಿಲ್ಲದ ಕಾರಣ) ಮೇಲುಗಡೆ ಸೂರ್ಯನನ್ನು ಕೆತ್ತಿದ್ದಾರೆ. ೯ ರಿಂದ ೧೦ ಸಾಲುಗಳು ಇರುವಂತೆ ಕಾಣುತ್ತದೆ.

ಶಾಸನದ ಪಾಠ

೧ ರಾ ಮ ಯ
೨ ನವರು . . . ವಯಾ ಶಾಖ
೩ . . . . . ಬುದವಾರ
೪ . . ಸಂದ . . . . ಚಂದ
೫ . . . . .
೬ . . . .

(ಉಳಿದ ಸಾಲುಗಳು ಅಸ್ಪಷ್ಟ)

ಈ ಶಾಸನದಲ್ಲಿನ **'ರಾಮಯ್ಯ'** ಎನ್ನುವ ವ್ಯಕ್ತಿ ಊರಿನ ಪ್ರಮುಖನಿದ್ದು ಈತನಿಗೆ ಶಾಸನ ಹಾಕಿಸಿರಬಹುದು ಎಂದು ತಿಳಿಯುತ್ತದೆ. ಅದೂ ಅಲ್ಲದೆ ಈ ಊರಿನಲ್ಲಿ ಹಿಂದೆ ಇದ್ದ ಹಳೇ ಕೋಟೆ ಬಳಿಯೇ ಇರುವುದರಿಂದ ಹೀಗೆಂದು ಊಹಿಸಲು ಸಾಧ್ಯ.

[ನನ್ನ ಈ ಮೇಲಿನ ಕ್ಷೇತ್ರ ಕಾರ್ಯದಲ್ಲಿ ಗುರುಗಳಾದ ಡಾ॥ ಪಿ.ವಿ. ಕೃಷ್ಣಮೂರ್ತಿ, ಡಾ॥ ಗಣೇಶ್ ಹಾಗೂ ಡಾ॥ ಆ.ಲಿ. ನರಸಿಂಹನ್ ರವರ ನೆರವಿಗೆ ನಾನು ಚಿರಋಣಿ. ಎರಡೂ ಅಪ್ರಕಟಿತ ಶಾಸನಗಳನ್ನು ಓದಲು ನೆರವಾದ ಡಾ॥ ಪಿ.ವಿ. ಕೃಷ್ಣಮೂರ್ತಿಯವರಿಗೆ ನಾನು ಆಭಾರಿ. ರಾಷ್ಟ್ರಕೂಟರ ಶಾಸನ ಪತ್ತೆ ಹಚ್ಚಲು ನೆರವಾದ ಮುರಹಳ್ಳಿ ಗ್ರಾಮದ ಪ್ರಮುಖರಾದ ಶ್ರೀ ಶ್ರೀನಿವಾಸಮೂರ್ತಿ, ನಂಜುಂಡಪ್ಪ, ರಾಮಕೃಷ್ಣ, ಶ್ರೀರಾಮ ಹಾಗೂ ಇತರೆ ಗ್ರಾಮದ ಜನರಿಗೂ. ನನ್ನ ಕಛೇರಿಯ ಸಹೋದ್ಯೋಗಿಗಳಾದ ಪಿ.ವಿ. ಕೃಷ್ಣನ್. ಎಚ್. ಮತ್ತು ಬಿ.ಎಸ್. ಅಮರನಾಥರೆಡ್ಡಿ ಅವರಿಗೂ, ವೇಮಗಲ್ಲಿನ ಕ್ಷೇತ್ರಕಾರ್ಯದಲ್ಲಿ ನೆರವಾದ ಶ್ರೀಯುತರಾದ ಮೇಸ್ತ್ರಿ ಪಾಪಣ್ಣ, ಟಿ. ಮುನಿಯಪ್ಪ, ಹಾಗೂ ಈಶ್ವರ್ ಅವರಿಗೂ, ನಮ್ಮ ಅಣ್ಣನವರಾದ ಶ್ರೀ ರಾಜಣ್ಣ ನವರು ಹಾಗೂ ತಮ್ಮ ಶ್ರೀ ನಟರಾಜರವರಿಗೂ, ಎಲ್ಲಾ ಸಂದರ್ಭಗಳಲ್ಲಿಯೂ ಪ್ರೋತ್ಸಾಹಿಸಿ, ಉತ್ತೇಜನ ನೀಡಿದ ನನ್ನ ಪ್ರಿಯ ಮಿತ್ರರಾದ ವೇಮಗಲ್ ಶ್ರೀ ಸೋಮಶೇಖರ್, ಶ್ರೀಯುತರಾದ ಸುಂಕಂ ಗೋವರ್ಧನ ಹಾಗೂ ಬೆಂ.ಪು. ನಿರಂಜನರವರಿಗೂ ನಾನು ಆಭಾರಿಯಾಗಿದ್ದೇನೆ].

ಡಾ. ಕರೆಪ್ಪಗೌಡ ಸಿ. ಪಾಟೀಲ*

ಪಂಚವಟಿಮಳಗಿಯ ವೀರಗಲ್ಲು ಶಾಸನಶಿಲ್ಪ

ಉತ್ತರಕನ್ನಡ ಜಿಲ್ಲೆಯ ಮುಂಡಗೋಡ ತಾಲೂಕಿನಿಂದ ೩೦ ಕಿ.ಮೀ. ದೂರದಲ್ಲಿರುವ ಪಂಚವಟಿಮಳಗಿಯ ಶಿವದೇವಾಲಯದ ಎದುರು ವೀರಗಲ್ಲು ಶಾಸನವಿದೆ. (ಚಿತ್ರ ನೋಡಿ). ಶಿಲ್ಪಫಲಕವು ೬೮ ಸೆಂ.ಮೀ. ಉದ್ದ, ೩೨ ಸೆಂ.ಮೀ. ಅಗಲವಾಗಿದ್ದು, ಒಂದರ ಮೇಲೊಂದರಂತೆ ಮೂರು ಪಟ್ಟಿಕೆಗಳಿವೆ. ಮೊದಲನೆಯ (ಕೆಳಗಿನ) ಪಟ್ಟಿಕೆಯಲ್ಲಿ ವೀರನು ಕೈಯಲ್ಲಿ ಭರ್ಚಿ ಮತ್ತು ಢಾಲು (ಖೇಟಕ) ಹಿಡಿದುಕೊಂಡು ವೈರಿಗಳೊಂದಿಗೆ ಹೋರಾಡುವ ದೃಶ್ಯವಿದೆ. ಎರಡನೆಯ ಪಟ್ಟಿಕೆಯಲ್ಲಿ ಹೋರಾಟದಲ್ಲಿ ಮಡಿದ ವೀರನನ್ನು ಅಪ್ಸರೆಯರು ಕಂಠಾಶ್ಲೇಷ ರೀತಿಯಲ್ಲಿ ದೇವಲೋಕಕ್ಕೆ ಕರೆದೊಯ್ಯುತ್ತಿದ್ದಾರೆ. ಮೂರನೆಯ ಪಟ್ಟಿಕೆಯು ಅರ್ಧ ವೃತ್ತಾಕಾರದಲ್ಲಿದ್ದು, ಮಧ್ಯದಲ್ಲಿ ಶಿವಲಿಂಗ, ಇಕ್ಕೆಲಗಳಲ್ಲಿ ಇಬ್ಬರು ಪುರುಷರು ಕೈಮುಗಿದು ಕುಳಿತಿದ್ದಾರೆ. ಮತ್ತು ಒಬ್ಬ ಯತಿಯು ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿರುವ ಚಿತ್ರವಿದೆ. ಮೇಲ್ಭಾಗದಲ್ಲಿ ಸೂರ್ಯ, ಚಂದ್ರರ ಸಂಕೇತಗಳಿವೆ. ಪ್ರಸ್ತುತ ಶಾಸನವು ಈ ಪಟ್ಟಿಕೆಗಳ ನಡುವಿನ ಅವಕಾಶದಲ್ಲಿ ೫ ಸಾಲುಗಳಲ್ಲಿದೆ. ಶಾಸನದ ಸಾಲುಗಳು ಹೆಚ್ಚು ಕಡಿಮೆ ಸುಸ್ಥಿತಿಯಲ್ಲಿವೆ.

ಶಾಸನವನ್ನು ಕ್ರಿ.ಶ. ೧೨-೧೩ನೆಯ ಶತಮಾನದ ಕನ್ನಡ ಲಿಪಿ ಮತ್ತು ಭಾಷೆಯಲ್ಲಿ ಬರೆದಿದೆ. ತೈಲಹದೇವನು ಕೀರ್ತಿದೇವನ ಮೇಲೆ ದಾಳಿ ಮಾಡಿದಾಗ ಭಚಗೋವೆಯ ಆಲಗಾವುಂಡನ ಮಕ್ಕಳಾದ ಲಕುಮ್ಮಣನು (ಲಕುಮಣ್ಣನು) ಮತ್ತು ಚಟ್ಟಣನು ತುರುಗಳನ್ನು (ಹಸು) ಬಿಡಿಸಿಕೊಳ್ಳಲು ಮತ್ತು ಸ್ತ್ರೀಯರ ಮಾನ ಕಾಪಾಡಲು ಹೋರಾಡುತ್ತ ಸುರಲೋಕ ಪ್ರಾಪ್ತರಾದರು.

ಈ ಶಾಸನದಲ್ಲಿ ತೈಲಹದೇವ ಮತ್ತು ಕೀರ್ತಿದೇವನ ಉಲ್ಲೇಖವಿದ್ದು, ಇವರು ಯಾವ ವಂಶದವರೆಂದು ಸ್ಪಷ್ಟವಿಲ್ಲ. ಮುಂಡಗೋಡ ಪ್ರದೇಶದ ಮೇಲೆ ಕಾದಂಬವಂಶದ ಅರಸರ ಹಿಡಿತವಿತ್ತು. ಈ ಶಾಸನವು ಸುಮಾರು ೧೨-೧೩ನೆಯ ಶತಮಾನದ ಅಕ್ಷರಗಳಲ್ಲಿರುವುದರಿಂದ ಮತ್ತು ಈ ತೈಲಹದೇವ ಮತ್ತು ಕೀರ್ತಿದೇವ ಎಂಬ ಹೆಸರುಗಳು ಹಾನಗಲ್ಲ ಕದಂಬ ಮತ್ತು ಚಂದಾವರ ಕಾದಂಬ ಅರಸರ ವಂಶಾವಳಿಗಳಲ್ಲಿ ಬರುವುದರಿಂದ ಈ ಎರಡು ವಂಶದವರ ನಡುವಣ ಘರ್ಷಣೆಗೆ ಸಂಬಂಧಿಸಿರಬಹುದು.

ಇದೊಂದು ಗೋಗ್ರಹಣ ಮತ್ತು ಪೆಣ್ಬುಯ್ಯಲ್‌ನ ವೀರಗಲ್ಲು ಶಾಸನಶಿಲ್ಪವಾಗಿದ್ದು, ವೀರರ ಜ್ಞಾಪಕಾರ್ಥವಾಗಿ ನಿಲ್ಲಿಸಿದ ವೀರಗಲ್ಲುಗಳ ವಿಧಕ್ಕೆ ಸೇರುತ್ತವೆ. ಶಾಸನದ ಪಾಠ ಈ ಕೆಳಗಿನಂತಿದೆ.[೧]

ಶಾಸನದ ಪಾಠ

ಮೊದಲನೆಯ ಪಟ್ಟಿ

೧ ಭಚಗೋವೆಯ ಆಲಗಾಂಉಣ್ಡನ ಮಗಂದಿರು ಲ

೨ ಕುಮ್ಮಣನು ಚಟ್ಟಣನು ತೈಲಹದೇವನು

೩ ಕೀರ್ತಿದೇವನ ಮೇಲೆ ಎತಿದಾ ಕಾಲ ತು [ಱು]

೪ [ಇ]ರಿವಲ್ಲಿ ಪೆಣ್ಣುಡ ಉಡೆಯ ಉಚುವಲಿ ಇ [ಱಿ]

ಎರಡನೆಯ ಪಟ್ಟಿ

೫ ದು ಸುರಲೋಕ ಪ್ರಸಾರ

(ಕಪ್ಪು ಷಾಯಿಂದ ತೆಗೆದ ಶಾಸನದ ಪಡಿಯಚ್ಚನ್ನು ನಾನು ಓದಲು ಈ ಲೇಖನವನ್ನು ಬರೆಯಲು ಸಹಕರಿಸಿದ ನನ್ನ ವಿದ್ಯಾಗುರುಗಳು ಹಾಗೂ ನನ್ನ ಸಂಶೋಧನ ಮಾರ್ಗದರ್ಶಕರೂ ಆದ ಡಾ. ಶ್ರೀನಿವಾಸ ವ್ಹಿ. ಪಾಡಿಗಾರ, ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ನನ್ನ ಕೃತಜ್ಞತೆಗಳು.)

* ಇತಿಹಾಸ ಉಪನ್ಯಾಸಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಂದಗೋಳ ಜಿಲ್ಲೆ, ಧಾರವಾಡ.

ರಾ. ಶಶಿಧರ್*

ಅಮೃತೂರಿನ ಅಪ್ರಕಟಿತ ತುರುಗೋಳ್ ಶಾಸನ

ಅಮೃತೂರು ಗ್ರಾಮವು ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ, ಅದೇ ಹೆಸರಿನ ಹೋಬಳಿ ಕೇಂದ್ರವಾಗಿದ್ದು, ತಾಲ್ಲೂಕು ಕೇಂದ್ರ ಕುಣಿಗಲ್‌ನಿಂದ ನೈಋತ್ಯಕ್ಕೆ ಸುಮಾರು ೨೨ ಕಿ.ಮೀ. ದೂರದಲ್ಲಿರುವ ಪುರಾತನ ಗ್ರಾಮ. ಶಾಸನೋಕ್ತ ಪ್ರಾಚೀನ ಗ್ರಾಮವಾದ ಅಮೃತೂರಿಗೆ ಶ್ರೀ ವೀರನಾರಸಿಂಹಪುರ ಮತ್ತು ಆತಕೂರು ಎಂಬ ಹೆಸರುಗಳಿದ್ದು ಪುರಾತನ ಅಗ್ರಹಾರಪುರವಾದ ಅಮೃತೂರು ಗ್ರಾಮ ಪರಿಸರದಲ್ಲಿ ಅನೇಕ ದೇವಾಲಯಗಳು, ವೀರಗಲ್ಲುಗಳು, ಮಾಸ್ತಿಗಲ್ಲುಗಳು, ಕೆರೆಗಳು, ನಿವೇಶನಗಳು, ಕೋಟೆಗಳು, ಗಾರೆ ಶಿಲ್ಪ ಹಾಗೂ ದೇವತಾಮೂರ್ತಿ ಶಿಲ್ಪಗಳು, ಅರವಟ್ಟಿಗೆಗಳು, ಬೆಟ್ಟ-ಗುಡ್ಡಗಳು, ಹಳ್ಳ-ಕೊಳ್ಳಗಳಿಂದ ಕಂಡುಬರುತ್ತಿದ್ದು, ಪೌರಾಣಿಕವಾಗಿ, ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ ಅಮೃತೂರು ಗ್ರಾಮವು ವಿಶೇಷತೆ ಹೊಂದಿದೆ.

ಅಮೃತೂರಿನ ಗ್ರಾಮದೇವತೆ ಪಟ್ಟಾಲದಮ್ಮನ ದೇವಾಲಯದ ಬಳಿ ಕ್ಷೇತ್ರಕಾರ್ಯ ಮಾಡುತ್ತಿದ್ದಾಗ ದೇವಾಲಯದ ನೈಋತ್ಯಕ್ಕೆ ಸುಮಾರು ಒಂದು ಕಿ.ಮೀ. ದೂರದಲ್ಲಿ ನಿಶ್ಚಿತ ಸ್ಥಳದಲ್ಲಿ ಬರಹವನ್ನುಳ್ಳ ಒಂದು ಅಪ್ರಕಟಿತ ವೀರಗಲ್ಲು ಶಾಸನವು ಗಮನಕ್ಕೆ ಬಂದಿತು. ಸುಮಾರು ೫ ಅಡಿ ಉದ್ದ ಮತ್ತು ೩.೧೦ ಅಡಿ ಅಗಲವಿದ್ದು, ೭ ಇಂಚು ದಪ್ಪದ ಪೆನಿನ್ಸುಲಾರ್ ನೈಸ್ ಶಿಲೆಯಲ್ಲಿ ಕೆತ್ತಿರುವ 'ಗೋಗ್ರಹಣ'ದ ವೀರಗಲ್ಲು ಶಾಸನವಾಗಿದೆ. ಈ ವೀರಗಲ್ಲು ಕೆರೆ ಕಟ್ಟೆಯ ಬಳಿ (ಶಿಥಿಲವಾಗಿರುವ ಮಾರೀಗುಡಿಯ ಹತ್ತಿರ) ಇದ್ದು ಪೂರ್ವಾಭಿಮುಖವಾಗಿದೆ.



ಈ ವೀರಗಲ್ಲಿನ ಮೊದಲ ಹಂತದ ವಿನ್ಯಾಸದಲ್ಲಿ ವೀರನ ಹೋರಾಟದ ಚಿತ್ರಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದೆ. ವೀರಗಲ್ಲಿನ ಮಧ್ಯಭಾಗದಲ್ಲಿ ಬಹುಪಾಲು ವೀರನ ಶಿಲ್ಪವೇ ಆವರಿಸಿದ್ದು ವೀರನು "ಆಲೀಢಾಸನ" ಭಂಗಿಯಲ್ಲಿ ನಿಂತುಕೊಂಡಿದ್ದು ಎಡಗೈಯಲ್ಲಿ ಬಾಗಿರುವ ಬಿಲ್ಲನ್ನು ಹಿಡಿದುಕೊಂಡಿದ್ದು, ಬಲಗೈಯಲ್ಲಿ ಬಾಣವನ್ನು ಹಿಡಿದಿದ್ದಾನೆ. ವೀರನ ಎದೆಗೆ ವಿವಿಧ ರೀತಿಯ ಮೊನಚಾದ ಐದಾರು ಬಾಣಗಳು ಅತ್ಯಂತ ಆಳವಾಗಿ ನಾಟಿದ್ದು, ಬಾಣಗಳ ಹಿಂಭಾಗದಲ್ಲಿ ಬಾಣಗಳನ್ನು ಹೂಡುವುದಕ್ಕೆ ಅನುಕೂಲವಾಗಿ ಮತ್ತು ಅವುಗಳ ವೇಗ ಹೆಚ್ಚಾಗಲೆಂದು ಬಳಸುವ ಗರಿಗಳು ಇರುವ ಚಿತ್ರ ಗಮನಾರ್ಹವಾಗಿದೆ. ವೀರನ ಎಡಭಾಗದಲ್ಲಿ ಶತ್ರುವು ಬಿಲ್ಲು-ಬಾಣ ಹಿಡಿದು ಆಕ್ರಮಣ ಮಾಡುತ್ತಿರುವ ದೃಶ್ಯವಿದ್ದು, ಶತ್ರುವಿನ ಚಿತ್ರವು ವೀರನ ಚಿತ್ರಿತ ಗಾತ್ರಕ್ಕೆ ಹೋಲಿಸಿದರೆ ಅತೀ ಚಿಕ್ಕದಾಗಿದ್ದು, ಶೇಕಡಾವಾರು ೧೦ ರಿಂದ ೧೫ ರಷ್ಟಿದೆ. ವೀರನ ಎದೆಯು ವಿಶಾಲವಾಗಿದ್ದು ನಗ್ನವಾಗಿದೆ. ವೀರನು ತನ್ನ ಕೂದಲನ್ನು ಕೆದರಿದಂತೆ ಮತ್ತು ಸುಂದರವಾಗಿ ಕಾಣುವಂತೆ ಮುಡಿಯನ್ನು ತಲೆಯ ಮೇಲಿನ 'ಶಿಖಿ'ಯ ಪ್ರದೇಶದ ಎಡಭಾಗದಲ್ಲಿ ಉಂಡೆಯ ರೀತಿ ಬಟ್ಟೆಯಿಂದ ಕಟ್ಟಿಕೊಂಡಿದ್ದು, ವೀರನ ಮುಡಿಯ ಪಕ್ಕದಲ್ಲಿ ತಲೆಗೆ ಕಟ್ಟಿರುವ ಬಟ್ಟೆಯ ಅಂಚುಗಳನ್ನು ಕುಚ್ಚಗಳ ರೀತಿ ಬಿಟ್ಟಿದ್ದಾನೆ. ವೀರನು ಮೊಣಕಾಲಿನಿಂದ ಮೇಲ್ಭಾಗಕ್ಕೆ ಇರುವಂತೆ ವೀರಗಚ್ಚೆಯನ್ನು ಉಟ್ಟಿದ್ದು, ಎಡಗಡೆಗೆ ನೆರಿಗೆಯನ್ನು ಇಳಿಬಿಟ್ಟಂತೆ ಕಂಡುಬರುತ್ತಿದೆ ಅಥವಾ ವೀರಗಚ್ಚೆಯು ಬಿಗಿಯಾಗಿರುವಂತೆ ಒಂದು ಪಟ್ಟಿಯನ್ನು ಹೊಟ್ಟೆಗೆ ಕಟ್ಟಿಕೊಂಡಿರುವಂತೆ

* ಭೂವಿಜ್ಞಾನಿ, ವರಮಹಾಲಕ್ಷ್ಮಿ ನಿಲಯ, # ೬೨೮, ೩ನೇ ಅಡ್ಡರಸ್ತೆ, ೩ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು.

ಕಂಡುಬರುತ್ತಿದ್ದು ಕಟ್ಟಿದ ಬಟ್ಟೆಯು ತುದಿ ಕಾಣುತ್ತಿದೆ. ಜೊತೆಗೆ ನಡುಪಟ್ಟಿಗೆ ಕಿರುಗತ್ತಿ ಅಥವಾ ಚಾಕುವನ್ನು ಕಟ್ಟಿಕೊಂಡಿದ್ದಾನೆ. ವೀರಗಲ್ಲಿನ ಹಿಂಭಾಗದಲ್ಲಿರುವ ಮೂರು ಗೋವುಗಳು (ಒಂದು ಹಸು ಮತ್ತು ಎರಡು ಎಮ್ಮೆ?) ಚಿತ್ರವು ವೀರನ ಬೆನ್ನಿಗೆ ಹಿಮ್ಮುಖವಾಗಿ ಚಿತ್ರಿತವಾಗಿದ್ದು, ಗೋವುಗಳು ಹಿಂದಿರುಗಿ ಹೋಗುತ್ತಿರುವ ಹಾಗೆ ಕೆತ್ತಿರುವುದರಿಂದ ವೀರನು ಗೋವುಗಳನ್ನು ಸಂರಕ್ಷಿಸಿದ್ದಾನೆಂಬುದನ್ನು ಸೂಚಿಸುವಂತಿದೆ. ಅಪರೂಪವೆಂಬಂತೆ ಗೋವುಗಳ ಚಿತ್ರದ ಮೇಲ್ಭಾಗದಲ್ಲಿ ಸಾಮಾನ್ಯವಾಗಿ ರಾಷ್ಟ್ರಕೂಟರ ಶಾಸನಗಳಲ್ಲಿ ಕಂಡುಬರುವಂತಹ ನೇಗಿಲ ಚಿಹ್ನೆ ಸ್ಪಷ್ಟವಾಗಿದೆ.

ವೀರಗಲ್ಲಿನ ಎರಡನೆಯ ಹಂತದ ವಿನ್ಯಾಸದಲ್ಲಿ ಅಪ್ಸರೆಯರು ವೀರನ ಕೈಗಳನ್ನು ಹಿಡಿದು ಹಾರುತ್ತಿರುವ ದೃಶ್ಯ ಕಂಡುಬರುತ್ತಿದ್ದು, ವೀರನ ಇಕ್ಕೆಲಗಳಲ್ಲಿರುವ ಅಪ್ಸರೆಯರಿಬ್ಬರೂ ಚಾಮರಸೇವೆ ಮಾಡುತ್ತಿದ್ದಾರೆ, ಎಡಭಾಗದಲ್ಲಿರುವ ಅಪ್ಸರೆಯು ತನ್ನ ಎಡಭಾಗದಲ್ಲಿ ಮುಡಿಯನ್ನು ಕಟ್ಟಿದ್ದು, ಬಲಭಾಗದ ಅಪ್ಸರೆಯು ತನ್ನ ಬಲಭಾಗದಲ್ಲಿ ಮುಡಿಯನ್ನು ಕಟ್ಟಿದ್ದಾಳೆ.

ವೀರಗಲ್ಲಿನ ಮೂರನೆಯ ಹಂತದ ವಿನ್ಯಾಸದಲ್ಲಿ ವೀರನು ಪದ್ಮಾಸನದಲ್ಲಿ ಪೀಠದ ಮೇಲೆ ಕುಳಿತಿದ್ದು ತನ್ನ ಎರಡು ಕೈಗಳನ್ನು ತನ್ನೆರಡು ತೊಡೆಯ ಮೇಲೆ ಇಟ್ಟಿರುವಂತೆ



ಕಂಡುಬರುತ್ತದೆ. ಎಡಭಾಗದ ಅಪ್ಸರೆಯು ತನ್ನ ಎಡಗೈಯಲ್ಲಿ ಚಾಮರವನ್ನು ಹಿಡಿದಿದ್ದರೆ, ಬಲಭಾಗದ ಅಪ್ಸರೆಯು ತನ್ನ ಬಲಗೈಯಲ್ಲಿ ಚಾಮರ ಹಿಡಿದಿದ್ದಾಳೆ. ಎಡಭಾಗದ ಅಪ್ಸರೆಯು ತನ್ನ ಬಲಗೈಯಲ್ಲಿ ಕನ್ನಡಿಯನ್ನು ಹಿಡಿದಿರಬಹುದೆನ್ನಿಸುತ್ತದೆ. ಬಲಭಾಗದ ಅಪ್ಸರೆಯು ತನ್ನ ಎಡಗೈಯಲ್ಲಿ ಅಮೃತ ಕಲಶ ಅಥವಾ ಪೂರ್ಣಕುಂಭವನ್ನು ಹಿಡಿದಿದ್ದಾಳೆ.

ಎರಡು ಮತ್ತು ಮೂರನೆಯ ಹಂತದ ವಿನ್ಯಾಸಗಳಿರುವ ಶಿಲ್ಪದ ಬಲಭಾಗದ ಖಾಲಿ ಜಾಗದಲ್ಲಿ ೯ ಸಾಲಿನ ಶಾಸನಪಾಠವಿದೆ. ಲಿಪಿಯ ಮತ್ತು ಶಿಲ್ಪದ ಆಧಾರದ ಮೇಲೆ ಈ ವೀರಗಲ್ಲು ಕ್ರಿ.ಶ. ಸುಮಾರು ೯ನೆಯ ಶತಮಾನದ ರಾಷ್ಟ್ರಕೂಟ-ಗಂಗರ ಕಾಲದ್ದಾಗಿದ್ದು ಶಾಸನದಲ್ಲಿ ಶಕವರ್ಷ ೭೮೮ (ಕ್ರಿ.ಶ. ೮೬೬) ಎಂದು ಸ್ಪಷ್ಟವಾಗಿ ಉಲ್ಲೇಖಿಸಿದೆ. ಶಾಸನದ ಪಾಠ ಇಂತಿದೆ.

೧ ಸ್ವಸ್ತಿ ಶ್ರೀ ಪೊಲೆತಾ
೨ ಳ್ವನ ಊರಾ(ರೊ)ಳಿ ಕದಳ್ವವ
೩ ರತಾಗಂ ಗಾಮುಣ್ಡಂ
೪ ರತು ಆತನೂರ ಮೂಡಣ
೫ ಪಟ್ಟಿಯ ಗದೆಯಾ ನ(ಸ)ಮ
೬ ದೋರಗಾಮುಣ್ಡಂ
೭ ತುರುಗೋಳಾಳ್ಕಾದಿ
೮ ಸಖವರ ೭೮೮
೯ ಸತ್ತಂ

ಮೇಲೆ ದುಂಡು ಕಂಸದಲ್ಲಿ ನೀಡಿರುವ ಪಾಠಗಳು ಅದರ ಹಿಂದಿನ ಅಕ್ಷರದ ಬದಲಾಗಿ ಇರಬಹುದಾದ ಅಕ್ಷರವನ್ನು ಸೂಚಿಸುತ್ತದೆ. ಈ ಶಾಸನಪಾಠದ ಸಾರಾಂಶವು ಕೆಳಗಿನಂತಿದೆ.

'ರಾಷ್ಟ್ರಕೂಟರ ಸಾಮಂತರಾದ ಗಂಗರು ಈ ಪ್ರದೇಶವನ್ನು ಆಳುತ್ತಿದ್ದಾಗ ಗಂಗರ ಅಧಿಕಾರಿಯಾಗಿದ್ದ ಪೊಲೆತಾಳ್ವನು ಈ ಪ್ರದೇಶದ ಸ್ಥಳೀಯ ಆಡಳಿತ ಅಧಿಕಾರಿಯಾಗಿದ್ದನು. ಆಗ ನಡೆದ ತುರುಗೋಳ್ ಯುದ್ಧದಲ್ಲಿ ದೊರಗಾಮುಂಡನು ಮರಣ ಹೊಂದುತ್ತಾನೆ. ಈ ಯುದ್ಧ ನಡೆದುದು ಆತನೂರಿನ ಪೂರ್ವ ದಿಕ್ಕಿನ ಗದ್ದೆಯ ಹತ್ತಿರ. ಶಕ ವರ್ಷ ೭೮೮ ರಲ್ಲಿ.'

[ಶಾಸನದ ಕೆಲವು ಭಾಗ ಸ್ಪಷ್ಟವಾಗಿ ಅರ್ಥವಾಗುವುದಿಲ್ಲ. ಆದ ಕಾರಣ ಸಾರಾಂಶವನ್ನು ಪೂರ್ಣವಾಗಿ ಗ್ರಹಿಸಲು ಸಾಧ್ಯವಾಗುವುದಿಲ್ಲ.]

ಈ ಶಾಸನದಲ್ಲಿ ಕಂಡು ಬರುವ ಪೊಲೆತಾಳ್ವನು ಯಾರು ಎಂದು ಗುರುತಿಸಬೇಕಾಗಿದೆ. ಎಚ್.ಎಸ್. ಗೋಪಾಲ

ರಾಯರು ಪ್ರಕಟಿಸಿರುವ ದೊಡ್ಡ ಮಳೂರು ಗ್ರಾಮದ ದುಗ್ಗನ ಕಲ್ನಾಡು ಶಾಸನ ನೆರವಿಗೆ ಬರುತ್ತದೆ. ಅದರ ಪಾಠ ಕೆಳಗಿನಂತಿದೆ.

೧ ಸ್ವಸ್ತಿ ಶಕನೃಪ ಕಾಲಾತೀತ ಸಂವತ್ಸರ ಸ
೨ ತಂಗಳ್ ೮೯೭ ವರ್ಷ ಪ್ರತ್ತಿಸೆ ಪೊಲೆತಾಳ್ವನ ಮ
೩ ನೆ ಮಗ ತಿನಟಿಯರನಳಿಯಂ ದುಗ್ಗಂ ಮಳ್ದೂರೊಳಾ
೪ ರ್ಜ್ಜುನರಾಯನ ಪೊಲೆತಾಳ್ವನ ಕಾಳೆಗದೊಳ್ ಕುದು
೫ ರೆಯ ವಿಳಿದೊರ್ಪ್ಪನೆವಿಜಿದು ಸತ್ತು ಸರ್ಗ್ಗಸ್ಥನಾದಂ
೬ ಆತಙ್ಗೆ ವ್ರಿಜಮಾರನ ಹಳ್ಳಿಯು ಮಣಲ್ಮಡಿಯಿಮ
೭ ಗಿ ಪರ್ನ್ನಿಖಣ್ಡುಗ ಮಣ್ಣಮ ಕಲ್ನಾಡುಗೊಟ್ಟರ್

ಇದನಟಿ

೮ ದೋರ್ ಕವಿಲೆಯುಂ ವಾರಣಾಸಿಯುಮನಟಿದೋರ್

-Kalnadu Inscription of Doddamalur, QJMS. Vol. LXXXII No.3-4, page No.127-130

ಈ ಶಾಸನದ ಪರಿಷ್ಕೃತ ಪಾಠವನ್ನು ಎಂ.ಜಿ. ನಾಗರಾಜ್ ಅವರು ನೀಡಿದ್ದು ಅದು ಈ ರೀತಿಯಾಗಿದೆ.

೧ ಸ್ವಸ್ತಿ ಶಕನೃಪ ಕಾಲಾತೀತ ಸಂವತ್ಸರ ಸ
೨ ತಂಗಳ್ ೭೮೭ ವರ್ಷಪ್ರತ್ತಿಸೆ ಪೊಲ್ಲೆತಾಳ್ವನ ಮ
೩ ನೆ ಮಗ ತಿನಟಿಯರನಳಿಯಂ ದುಗ್ಗಂ ಮಳ್ದೂರೊಳಾ
೪ ರ್ಜ್ಜುನರಾಯನ ಪೊಲ್ಲೆತಾಳ್ವ [ರ] ನ ಕಾಳೆಗದೊಳ್ ಕುದು
೫ ರೆಯ ವಿಟಿದೊರ್ಪ್ಪೆಣ್ಡೆವಿಜಿದು ಸತ್ತು ಸರ್ಗ್ಗಸ್ಥನಾದಂ
೬ ಆತಙ್ಗೆ ವ್ರಜಮಾರನ ಹಳ್ಳಿಯುಂ ಮಣ್ಣಲ್ದೂರಡೆಯಿಮ್ಮಿ
೭ ಗೆ ಪರ್ನ್ನಿಖಣ್ಡುಗ ಮಣ್ಣುವಂ ಕಲ್ನಾಡುಗೊಟ್ಟರ್ ಇದನಟಿ
೮ ದೋರ್ ಕವಿಲೆಯುಂ ವಾರಣಾಸಿಯುಮನಟಿದೋರ್

ಶಾಸನಶಿಲ್ಪಗಳು, ಶ್ರೀ ಗೌರಿ-ಗಂಗಾ ಪ್ರಕಾಶನ, ಬೆಂಗಳೂರು ೧೯೯೦, ಪುಟ. ೩೫-೩೯

ಈ ಶಾಸನದ ಕಾಲವನ್ನು ಎಚ್.ಎಸ್. ಗೋಪಾಲ ರಾಯರು ಶಕವರ್ಷ ೮೯೭ ಎಂದು ಓದಿದ್ದಾರೆ. ಎಂ.ಜಿ. ನಾಗರಾಜ್ ಅವರು ೭೮೭ ಎಂದಿದ್ದಾರೆ. ಇದೊಂದು ಗಮನಾರ್ಹವಾದ ಅಂಶ. ಎಂ.ಜಿ. ನಾಗರಾಜ್ ಅವರ ಈ ಪರಿಷ್ಕರಣಕ್ಕೆ ಅಮೃತೂರಿನ ಶಾಸನದಲ್ಲಿನ ಶಕಕಾಲದ ಉಲ್ಲೇಖವೂ ಸಮರ್ಥನೆಯನ್ನು ನೀಡುತ್ತದೆ. ಈ ಸಂದರ್ಭದಲ್ಲಿ ಬೆಂಗಳೂರು ತಾಲ್ಲೂಕು, ಯಲಹಂಕ ಹೋಬಳಿ, ದಾಸರಹಳ್ಳಿ ಗ್ರಾಮದ ಕೋಟೆ ಹನುಮಂತನ ಹೊಲದಲ್ಲಿ ದೊರೆತಿರುವ ವೀರಗಲ್ಲಿನ ಶಾಸನದ ಪಾಠವನ್ನೂ ಗಮನಿಸಬಹುದು.

೧ ಸ್ವಸ್ತಿ ಶ್ರೀಮತ್ ಶ್ರೀ ಪುರುಷ ಮಹಾರಾಜಂ ಪೃಥುವೀರಾ
೨ ಜ್ಯಂಗೆಯ್ಯೆ ಪೊಲೆತ್ತಾಳ್ವೂರೆನ್ನ ಕರಿಕನಾಡ
೩ ಬಿದಿರ್ಕ್ಕಲ್ಲಾಳ್ದ ಕುಕ್ಕರ ಪಾಟಿಕ್ಕಾಜಿನಾಡಿಯರ್ ತುರಿದು
೪ ಪಡೆಯಳವರಪ್ಪಬಲಮನ್ನ ಎಜಿದು ಬಿಟ್ಟು
೫ ಶ್ರೀ ಅಮ್ಮಿಆಚಾರಿಯರ ಮಗನ್ನಾಗನ್ ಮಡಿದ

ಎಪಿಗ್ರಾಫಿಯಾ ಕರ್ನಾಟಕ, ಸಂಪುಟ ೯, ಬೆಂಗಳೂರು ೩೬

ಈ ಶಾಸನದಲ್ಲಿ ತಲಕಾಡು ಗಂಗರ ಶ್ರೀಪುರುಷನ ಹೆಸರಿರುವುದರಿಂದ ಈ ಶಾಸನದ ಕಾಲವು ಕ್ರಿ.ಶ. ಸುಮಾರು ೭೫೦ ಎಂದು ಬಿ.ಎಲ್. ರೈಸ್ ಅವರು ಹೇಳಿರುವುದು ಸಮಂಜಸವಾಗಿದೆ. ಅಮೃತೂರು ಮತ್ತು ದೊಡ್ಡ ಮಳೂರಿನ ಶಾಸನಗಳ ಕಾಲ ಕ್ರಿ.ಶ. ೮೬೫, ಕ್ರಿ.ಶ. ೮೬೬ ಆಗಿದೆ. ಶ್ರೀಪುರುಷನ ಕಾಲ ಕ್ರಿ.ಶ. ೭೨೬-೭೮೮. ಈ ಮೂರು ಶಾಸನಗಳು ಪೊಲೆತಾಳ್ವನಿಗೆ ಸಂಬಂಧಿಸಿವೆ. ದಾಸರಹಳ್ಳಿ ಶಾಸನವು ಅಮೃತೂರು ಮತ್ತು ದೊಡ್ಡಮಳೂರಿನ ಶಾಸನಗಳ ಕಾಲಕ್ಕಿಂತ ಹಿಂದಿನದು. ಪೊಲೆತಾಳ್ವನು ಶ್ರೀಪುರುಷನ ಕಾಲದಿಂದಲೂ ಅಧಿಕಾರದಲ್ಲಿದ್ದಿರಬೇಕು. ಇಲ್ಲವೇ ಶ್ರೀಪುರುಷನ ಶಾಸನದ ಪೊಲೆತಾಳ್ವನ ಮೊಮ್ಮಗನಾಗಿದ್ದಿರಬೇಕು ಅಮೃತೂರು ಮತ್ತು ದೊಡ್ಡಮಳೂರು ಶಾಸನೋಕ್ತ ಪೊಲೆತಾಳ್ವ ಇದು ಸಂಭಾವ್ಯವಾದ ಊಹೆ (ಇದನ್ನು ಎಂ.ಜಿ. ನಾಗರಾಜ್ ಅವರು ಮೊದಲೇ ಪ್ರತಿಪಾದಿಸಿರುತ್ತಾರೆ.) ಇವೆರಡೂ ಸಾಧ್ಯತೆಗಳ ಜೊತೆಗೆ ದಾಸರಹಳ್ಳಿ ಶಾಸನದ ಪೊಲೆತಾಳ್ವನು ಮಿಕ್ಕೆರಡು ಶಾಸನಗಳ ಪೊಲೆತಾಳ್ವನಿಗಿಂತ ಭಿನ್ನನಾಗಿರಬಹುದು ಎಂಬ ಊಹೆಯನ್ನು ಕೂಡ ಮಾಡಬಹುದು. ಇದರ ಬಗೆಗೆ ಹೆಚ್ಚಿನ ಅಧ್ಯಯನ ಅತ್ಯಗತ್ಯ.

ಅಮೃತೂರಿನಲ್ಲಿ ಇನ್ನೂ ಪೂರ್ಣಪ್ರಮಾಣದ ಸರ್ವೇಕ್ಷಣ ಕಾರ್ಯ ನಡೆದಿಲ್ಲ. ಇದು ತೃಪ್ತಿಕರವಾಗಿ ನಡೆದರೆ ಮೇಲ್ಕಂಡ ತುರುಗೋಳ್ ಶಾಸನವಂತೆ ಇನ್ನೂ ಅನೇಕ ಶಾಸನಗಳು ಸ್ಮಾರಕಗಳು ದೊರಕಬಹುದು. ಆದ ಕಾರಣ ಪರಿವೀಕ್ಷಣೆ ವ್ಯಾಪಕವಾಗಿ ನಡೆಯಬೇಕಿದೆ.

(ನನ್ನೀ ಸಂಶೋಧನ ಕಾರ್ಯಗಳಿಗೆ ಪ್ರೋತ್ಸಾಹ ನೀಡುತ್ತಿರುವ ನನ್ನ ತಂದೆ ತಾಯಿಗಳಿಗೆ, ಕ್ಷೇತ್ರಕಾರ್ಯದಲ್ಲಿ ಶಾಸನದ ಪಡಿಯಚ್ಚು ತೆಗೆದುಕೊಳ್ಳಲು ಸಹಕರಿಸಿ ಶಾಸನವನ್ನು ಓದಿ, ಲೇಖನವನ್ನೂ ಓದಿ, ತಿದ್ದಿದ ಗುರುಗಳಾದ ಡಾ॥ ಪಿ.ವಿ. ಕೃಷ್ಣಮೂರ್ತಿ, ಡಾ॥ ದೇವರಕೊಂಡಾರೆಡ್ಡಿ, ಡಾ॥ ಕೆ.ಆರ್. ಗಣೇಶ, ಡಾ॥ ಹೆಚ್.ಎಸ್. ಗೋಪಾಲರಾವ್, ಡಾ॥ [illegible] ಹಾಗೂ ಎಸ್. ಕಾರ್ತೀಕ್ ಅವರಿಗೆ ಹಾಗೂ ಸ್ನೇಹಿತರಾದ [illegible], ಸುಂಕಂ ಗೋವರ್ಧನ, ವೇಮಗಲ್ ಮೂರ್ತಿ, ಶ್ರೀಮತಿ ನಿರ್ಮಲಾ ಗಣೇಶ್ ಅವರಿಗೆ ಮತ್ತು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಆತಿಥ್ಯ ನೀಡಿ ಸಹಕರಿಸಿದ ಗ್ರಾಮದ ಬಂಧುಗಳಾದ ಶ್ರೀ ಎ.ಎನ್. ಶ್ರೀನಿವಾಸ ಮತ್ತು ಕುಟುಂಬದವರಿಗೂ, ಶ್ರೀ ರಾಮಶಾಸ್ತ್ರಿ, ಬಸವರಾಜು, ಜಗದೀಶ್ ಹಾಗೂ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ವಂದನೆಗಳು.)

ಡಾ. ಹನುಮನಾಯಕ*

ಅರಸೀಕೆರೆ ತಾಲ್ಲೂಕಿನ ಹೊಸ ವೀರಗಲ್ಲುಗಳು

ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನಲ್ಲಿ ಪ್ರಾಗೈತಿಹಾಸಿಕ ಕಾಲದಿಂದ ವಸಾಹತುಶಾಹಿ ಕಾಲದವರೆಗಿನ ಚರಿತ್ರೆಯನ್ನು ಕಟ್ಟುವಲ್ಲಿ ಮತ್ತು ಅರ್ಥೈಸುವಲ್ಲಿ ಚರಿತ್ರೆಯ ವಿದ್ಯಾರ್ಥಿಗಳಿಗೆ ಬೇಕಾಗುವ ಪ್ರಾಥಮಿಕ ಆಕರಗಳು ಹೇರಳವಾಗಿ ಕ್ಷೇತ್ರ ಕಾರ್ಯಗಳಿಂದ ದೊರಕುತ್ತಿವೆ. ಆದರೆ ಈ ಅಂಶಗಳು ಈವರೆಗಿನ ಸಂಶೋಧನೆಗಳಲ್ಲಿ ಬೆಳಕಿಗೆ ಬಂದಿರಲಿಲ್ಲ ಹಾಗೂ ಅವನ್ನು ಬಳಸಿಕೊಂಡಿಲ್ಲ.[೧] ನಮ್ಮ ಕ್ಷೇತ್ರ ಕಾರ್ಯದಲ್ಲಿ ಚರಿತ್ರೆಯ ಪ್ರಮುಖ ಆಕರಗಳಲ್ಲಿ ಒಂದಾದ ವೀರಗಲ್ಲುಗಳು ಹೆಚ್ಚಾಗಿ ಕಂಡುಬಂದಿರುವುದರಿಂದ ಈ ಲೇಖನದಲ್ಲಿ ಕೆಲವನ್ನು ಮಾತ್ರ ಅಂದರೆ ಚಲುವನಹಳ್ಳಿ ಮತ್ತು ವಾಲೇಹಳ್ಳಿಯ ವೀರಗಲ್ಲುಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

ವೀರಗಲ್ಲುಗಳನ್ನು ಅಂದಿನ ಜನತೆ ಅಥವಾ ಸಮಾಜ ನಾಡಿನ ಅಥವಾ ಗ್ರಾಮದ ಸಂರಕ್ಷಣೆಗಾಗಿ ಹೋರಾಡಿ ಮಡಿದವರ ನೆನಪಿನ ಕುರುಹಾಗಿ ನಿಲ್ಲಿಸುತ್ತಿದ್ದರು. ಇವುಗಳ ಅಧ್ಯಯನದಿಂದ ಅಂದಿನ ಜನರ ಆರ್ಥಿಕ ಸ್ಥಿತಿಗತಿಗಳನ್ನು ಹಾಗೂ ಸಾಮಾಜಿಕ-ರಾಜಕೀಯ ಸ್ವರೂಪವನ್ನು ಅರ್ಥೈಸಬಹುದು. ಚಲುವನಹಳ್ಳಿ ಮತ್ತು ವಾಲೇಹಳ್ಳಿಯ ವೀರಗಲ್ಲುಗಳು ಬರವಣಿಗೆರಹಿತ ಶಾಸನಗಳಾಗಿರುವುದರಿಂದ ವೀರನ ಹೆಸರಾಗಲಿ, ಕಾಲವಾಗಲಿ, ಸ್ಥಳವಾಗಲಿ ಅಥವಾ ಯಾರೊಡನೆ ಹೋರಾಡಿದರೆಂಬ ವಿವರಗಳು ಈ ವೀರಗಲ್ಲುಗಳಿಂದ ತಿಳಿದುಬರುವುದಿಲ್ಲ. ಆದ್ದರಿಂದ ನಾವು ಕಲ್ಲಿನಲ್ಲಿರುವ ಶಿಲ್ಪಗಳು ಮತ್ತು ಕಲ್ಲಿನ ಸ್ವರೂಪದ ಮೇಲೆ ಆ ವೀರಗಲ್ಲುಗಳ ಕಾಲವನ್ನು ಹಾಗೂ ಅದರ ಉದ್ದೇಶವನ್ನು ತಿಳಿಯಬಹುದು.

ಮೇಲಿನ ಎರಡು ವೀರಗಲ್ಲುಗಳಲ್ಲಿ ಚಲುವನಹಳ್ಳಿಯ (ಬಾಣಾವರ ಹೋಬಳಿ) ವೀರಗಲ್ಲು ತುಂಬಾ ಪ್ರಾಚೀನವಾದುದಾಗಿ ಕಂಡುಬರುತ್ತದೆ. ಇದು ಊರಿನ ಪೂರ್ವ ಭಾಗದಲ್ಲಿದ್ದು, ಸುಮಾರು ೪.೪ ಅಡಿ ಎತ್ತರ, ೨.೬ ಅಡಿ ಅಗಲ ಮತ್ತು ಅರ್ಧ ಅಡಿ ದಪ್ಪವಿದೆ. ಇದರಲ್ಲಿ ಯಾವುದೇ ಬರವಣಿಗೆಗಳಿಲ್ಲ. ಇದಕ್ಕೆ ಬಳಸಿರುವ ಕಲ್ಲು ಕಪ್ಪು ಗ್ರಾನೈಟ್ ಆಗಿದ್ದು, ಮೂರು ಹಂತಗಳ ಶಿಲ್ಪಗಳನ್ನೊಳಗೊಂಡಿದೆ. ಮೊದಲಿನ ಹಂತವು ಸಂಪೂರ್ಣವಾಗಿ ಮಣ್ಣಿನಲ್ಲಿ ಹೂತು ಹೋಗಿದ್ದರಿಂದ ಅದನ್ನು ಅಗೆಯಬೇಕಾಯಿತು. ಇದರಿಂದಾಗಿ ಮೊದಲನೆ ಹಂತದಲ್ಲಿ ವೀರನು ಬಿಲ್ಲು ಮತ್ತು ಬಾಣಗಳಿಂದ ಕೂಡಿ ತನ್ನ ಶತ್ರುವಿನೊಡನೆ ಹೋರಾಡುತ್ತಿರುವುದು ಹಾಗೂ ಶತ್ರುಗಳ ಸಹ ಅದೇ ರೀತಿಯ ಆಯುಧಗಳನ್ನು ಹಿಡಿದು ಹೋರಾಡುತ್ತಿರುವ ದೃಶ್ಯ ಸೊಗಸಾಗಿರುವುದು ಕಂಡುಬಂದಿದೆ. ಇಲ್ಲಿ ವೀರನ ಶಿಲ್ಪದ ಗಾತ್ರ ಮತ್ತು ಶತ್ರುವಿನ ಶಿಲ್ಪದ ಗಾತ್ರ ಒಂದೇ ಸಮನಾಗಿದೆ. ಆದರೆ ಸಾಮಾನ್ಯವಾಗಿ ಇತರೆ ವೀರಗಲ್ಲುಗಳಲ್ಲಿ ಶತ್ರುವಿನ ಶಿಲ್ಪದ ಗಾತ್ರವನ್ನು ಚಿಕ್ಕದಾಗಿ ಕೆತ್ತಲಾಗಿರುತ್ತದೆ. ಈ ಪಟ್ಟಿಯಲ್ಲಿ ವೀರ ಮತ್ತು ಶತ್ರುವಿನ ನಡುವೆ ಒಂದು ಉಬ್ಬು ಶಿಲ್ಪವಿದ್ದು ಗುರುತಿಸುವುದಕ್ಕೆ ಕಷ್ಟವಾಗಿದೆ. ಇದು ಪ್ರಾಣಿಯ ಶಿಲ್ಪವೋ ಅಥವಾ ಮನುಷ್ಯನ ಶಿಲ್ಪವೋ ಎಂಬುದು ಸ್ಪಷ್ಟವಾಗಿ ಕಂಡುಬರುತ್ತಿರಲಿಲ್ಲ. ಆದರೆ ಕಂಪ್ಯೂಟರ್‌ನಲ್ಲಿ ಇದರ ಫೋಟೋವನ್ನು ಹಾಕಿ ಒಂದು ನಿರ್ದಿಷ್ಟ ದಿಕ್ಕಿನಿಂದ ನೋಡಿದರೆ ಗೋವಿನ ಮುಖ ಹಾಗೂ ಅದರ ಕೋಡುಗಳು ಕಾಣುತ್ತವೆ. ಎರಡನೆ ಹಂತದಲ್ಲಿ ವೀರನನ್ನು ಪುಷ್ಪಕ ವಿಮಾನದಲ್ಲಿ ಅಪ್ಸರೆಯರು ಒಯ್ಯುತ್ತಿರುವುದನ್ನು ಕೆತ್ತಲಾಗಿದೆ. ಹಾಗೂ ಮೂರನೆ ಹಾಗೂ ಕೊನೆಯ ಹಂತದ ಮೇಲ್ಭಾಗದಲ್ಲಿ ಸೂರ್ಯ ಮತ್ತು ಚಂದ್ರರ ಚಿಹ್ನೆಗಳಿದ್ದು, ಅವುಗಳ ಕೆಳಗೆ ಕೆಲವು ಶಿಲ್ಪಗಳಿದ್ದು ಅವುಗಳು ಹೆಚ್ಚು ಶಿಥಿಲಗೊಂಡಿರುವುದರಿಂದ ಅವುಗಳ ನಿಖರ ಸ್ವರೂಪವನ್ನು ತಿಳಿಯುವುದು ದುಸ್ತರ. ಇಲ್ಲಿ ಸಾಮಾನ್ಯವಾಗಿ ವೀರನ ಧರ್ಮದ ಶಿಲ್ಪಗಳನ್ನು ಅಂದರೆ ಶೈವ ಅಥವಾ ವೈಷ್ಣವ ಧರ್ಮದ ಚಿಹ್ನೆಗಳನ್ನು ಕೆತ್ತಲಾಗಿರುತ್ತವೆ. ಇದು ಈ ವೀರಗಲ್ಲಿನ ಪ್ರಮುಖ ಸಮಸ್ಯೆಯಾಗಿದೆ.

ಈ ವೀರಗಲ್ಲಿನಲ್ಲಿ ಯಾವುದೇ ಬರವಣಿಗೆ ಇಲ್ಲದಿದ್ದರೂ ಇದರ ಪಕ್ಕದಲ್ಲಿಯೇ ಇರುವ ಸುಮಾರು ಕ್ರಿ.ಶ. ೯ನೇ ಶತಮಾನದ ಶಾಸನವನ್ನು ೧೯೯೩ರಲ್ಲಿಯೇ ನಾನು ಪತ್ತೆಹಚ್ಚಿ ಶಾಸನದ ಪಾಠವನ್ನು ಪ್ರಕಟಿಸಿದ್ದೆ.[೨] ಆ ಶಾಸನದಲ್ಲಿ ತಲಕಾಡಿನ ಗಂಗರು ಮತ್ತು ನೊಳಂಬರೊಡನೆ ನಡೆದ ಕಾಳಗವು

* ರೀಡರ್, ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳಗಂಗೋತ್ರಿ

ತುರುಗಳನ್ನು ಮತ್ತು ಸ್ತ್ರೀಯರನ್ನು ಒಯ್ಯುವುದಕ್ಕಾಗಿತ್ತು. ಇದನ್ನು ಆ ಶಾಸನದಲ್ಲಿ ಗೋಗ್ರಹಣ ಮತ್ತು ಕೇಶಗ್ರಹಣ ಎಂದು ಉಲ್ಲೇಖಿಸಲಾಗಿದೆ.[೩] ಈ ಶಾಸನ ಕೆತ್ತಿರುವುದು ಗ್ರಾನೈಟ್ ಕಲ್ಲಾಗಿದ್ದುದರಿಂದ ಕಾಳಗದ ದೃಶ್ಯದ ಶಿಲ್ಪಗಳನ್ನು ಕೆತ್ತುವುದಕ್ಕೆ ಸಾಧ್ಯವಾಗಿಲ್ಲ. ಅದಕ್ಕಾಗಿಯೆ ಏನೋ ವೀರಗಲ್ಲನ್ನು ಮಾಡಿಸಿದವರು ಎರಡು ರೀತಿಯ ಕಲ್ಲುಗಳನ್ನು ಬಳಸಿ ಒಂದರಲ್ಲಿ ಅಂದರೆ ಬಿಳಿಯ ಗ್ರಾನೈಟ್ ಕಲ್ಲಿನಲ್ಲಿ ಶಾಸನದ ಪಾಠವನ್ನು ಹಾಗೂ ಕಪ್ಪು ಗ್ರಾನೈಟ್ ಕಲ್ಲಿನಲ್ಲಿ ಕಾಳಗದ ದೃಶ್ಯವನ್ನು ಕೆತ್ತಲಾಗಿದೆ. ಈಗ ಈ ವೀರಗಲ್ಲು ಸಿಕ್ಕಲಾಗಿ ಆಗ ನನಗಿದ್ದ ಸಮಸ್ಯೆಯು ಸಂಪೂರ್ಣವಾಗಿ ನಿವಾರಣೆಯಾದಂತಾಗಿದೆ.

ವಾಲೇಹಳ್ಳಿಯ (ಕಣಕಟ್ಟೆ ಹೋಬಳಿ) ವೀರಗಲ್ಲು ಬಹಳ ಸ್ಪಷ್ಟವಾಗಿ ತುರುಗಾಳಗದಾಗಿದ್ದು ಊರಿನ ವಾಯುವ್ಯ ಭಾಗದಲ್ಲಿರುವ ಬಸವಣ್ಣನ (ಈಶ್ವರ) ಪಾಳು ದೇವಾಲಯದ ಬಲ ಭಾಗದಲ್ಲಿದೆ.[೪] ವೀರಗಲ್ಲಿರುವ ಭೂಮಿಯು ಆ ಗ್ರಾಮದ ಓಬಳ ನಾಯಕನ ಮಗ ಕೆಂಚನಾಯಕನಿಗೆ ಸೇರಿದುದಾಗಿದೆ. ಇದು ಸುಮಾರು ಏಳು ಅಡಿ ಎತ್ತರ, ಎರಡೂವರೆ ಅಡಿ ಅಗಲ ಮತ್ತು ಒಂದು ಅಡಿ ದಪ್ಪವಾಗಿದ್ದು, ನಾಲ್ಕು ಹಂತಗಳಿಂದ ಕೂಡಿದೆ. ಇದಕ್ಕೆ ಬಳಸಿರುವ ಕಲ್ಲು ಬಳಪದ ಕಲ್ಲಾಗಿದ್ದು, ಶಾಸನರಹಿತವಾಗಿದೆ. ಈ ವೀರಗಲ್ಲನ್ನು ಮಾಡಲು ಬಳಪದ ಕಲ್ಲನ್ನು ಬಳಸಿದ್ದರೂ ಹಾಗೂ ಎರಡು ಹಂತಗಳ ಮಧ್ಯೆ ಇರುವ ಪಟ್ಟಿಯಲ್ಲಿ ಸಾಕಷ್ಟು ಸ್ಥಳವಿದ್ದರೂ ಸಹ ತುರುಗಾಳಗದ ವಿವರಗಳನ್ನು ಶಾಸನದ ರೂಪದಲ್ಲಿ ಕಂಡರಿಸಿಲ್ಲ. ಇದಕ್ಕೆ ಕಾರಣ ತಿಳಿಯದು. ಬಹುಶಃ ಇದಕ್ಕೆ ಹೆಚ್ಚಿನ ವೆಚ್ಚ ಬರುವ ಸಾಧ್ಯತೆ ಅಥವಾ ಕಾಳಗದ ವಿವರಗಳನ್ನು ಬರವಣಿಗೆಯ ರೂಪದಲ್ಲಿ ತರುವಲ್ಲಿ ಅಕ್ಷರ ಜ್ಞಾನವಿರುವವರ ಕೊರತೆಯಿರ ಬಹುದು ಅಥವಾ ಕಾಳಗದಲ್ಲಿ ಸತ್ತಂತಹ ವೀರನ ವಿವರಗಳು ಮತ್ತು ಆತನಿಗೆ ನೀಡಿದ ದಾನದ ವಿವರಗಳು ಬೇರೆಯವರಿಗೆ ಗೊತ್ತಾಗಬಾರದೆಂಬುದಾಗಿರಬಹುದು. ಇವುಗಳಲ್ಲಿ ಮೊದಲನೆಯದು ಅಂದರೆ ಆರ್ಥಿಕ ಅಂಶಗಳೇ ಹೆಚ್ಚಾಗಿರುವ ಸಾಧ್ಯತೆಗಳು ಕಂಡುಬರುತ್ತವೆ. ಏಕೆಂದರೆ ಈ ವೀರಗಲ್ಲನ್ನು ಬಹಳ ಕಲಾತ್ಮಕವಾಗಿ ಕೆತ್ತಿದ ಶಿಲ್ಪಿಗೆ ಅಕ್ಷರಗಳನ್ನು ಕೆತ್ತುವುದು ಕಷ್ಟದ ಕೆಲಸವಾಗುತ್ತಿರಲಿಲ್ಲ ಹಾಗೂ ಈ ಗ್ರಾಮದ ಪಕ್ಕದಲ್ಲಿಯೇ ಇರುವ ಹುಣಸೆಘಟ್ಟ (ಬೇಚಿರಾಕ್) ಗ್ರಾಮದ ಹೊಲದಲ್ಲಿ ಸಿಕ್ಕಿರುವ ವೀರಗಲ್ಲು ಈ ವೀರಗಲ್ಲಿನ ಸಮಕಾಲೀನದ್ದಾಗಿದ್ದು ಅದರಲ್ಲಿ ಶಾಸನವಿದೆ.[೫]

ಈ ಮೇಲಿನ ಎರಡು ವೀರಗಲ್ಲುಗಳು ತುರುಗಾಳಗಕ್ಕೆ ಸಂಬಂಧಿಸಿವೆ. ಮೊದಲನೆಯ ತುರುಗಾಳಗ ನಡೆದಿರುವುದು ಕ್ರಿ.ಶ. ೯ನೇ ಶತಮಾನ ಹಾಗೂ ಎರಡನೆಯ ತುರುಗಾಳಗ ನಡೆದಿರುವುದು ಸುಮಾರು ಕ್ರಿ.ಶ. ೧೩ನೆ ಶತಮಾನ. ತುರುಗಾಳಗದಲ್ಲಿ ಎರಡು ವಿಧಗಳಿವೆ. ಅವುಗಳೆಂದರೆ ಮೊದಲನೆಯ ವರ್ಗದ್ದು ವೀರನು ತುರುಗಾಳಗದಲ್ಲಿ ಶತ್ರುಗಳೊಡನೆ ಹೋರಾಡಿ ಗ್ರಾಮದ ಅಥವಾ ಅವನ ತುರುಗಳನ್ನು ಮರುಪಡೆದು ಮಡಿದಿರುವುದು ಹಾಗೂ ಎರಡನೆಯ ವರ್ಗದಲ್ಲಿ ವೀರನು ಶತ್ರುಗಳೊಡನೆ ಹೋರಾಡಿ ತನ್ನ ತುರುಗಳನ್ನು ಮರುಪಡೆಯುವಲ್ಲಿ ವಿಫಲನಾಗಿ ಸತ್ತಿರುವುದು. ಚಲುವನಹಳ್ಳಿಯ ವೀರಗಲ್ಲಿನಲ್ಲಿ ತುರುಗಳನ್ನು ಮರುಪಡೆದಿರುವುದನ್ನು ಬಹಳ ಸೂಕ್ಷ್ಮವಾಗಿ ಶಿಲ್ಪಿಯು ವೀರ ಮತ್ತು ಶತ್ರುವಿನ ನಡುವೆ ದನಗಳು ವೀರನ ಕಡೆ ಮುಖ ಮಾಡಿರುವಂತೆ ಕೆತ್ತಿದ್ದಾನೆ. ಆದರೆ ವಾಲೇಹಳ್ಳಿಯ ವೀರಗಲ್ಲಿನಲ್ಲಿ ದನಗಳು ವೀರನ ಹಿಂಬದಿಯಲ್ಲಿದ್ದು, ಶತ್ರುವಿನ ಕಡೆ ಮುಖ ಮಾಡಿದಂತೆ ಕೆತ್ತಲಾಗಿದೆ. ಅಂದರೆ ವೀರ ತನ್ನ ತುರುಗಳನ್ನು ಮರುಪಡೆಯುವಲ್ಲಿ ವಿಫಲನಾಗಿದ್ದಾನೆ.

ವಾಲೇಹಳ್ಳಿಯ ದಕ್ಷಿಣಕ್ಕೆ ಸುಮಾರು ಒಂದೂವರೆ ಕಿಲೋಮೀಟರ್ ದೂರದಲ್ಲಿರುವ ಬೇಡರಹಳ್ಳಿಯ ಪೂರ್ವಕ್ಕಿರುವ ಬೇಚಿರಾಕ್ ಗ್ರಾಮವಾದ ಹುಣಸೆಘಟ್ಟದಲ್ಲಿ ಒಂದು ವಿಶೇಷವಾದ ತುರುಗಾಳದ ವೀರಗಲ್ಲಿದೆ. ಇದನ್ನು ತೋಟವನ್ನು ಮಾಡುವುದಕ್ಕಾಗಿ ಎತ್ತರವಾದ ಪ್ರದೇಶವನ್ನು ತಗ್ಗು ಮಾಡುವುದಕ್ಕೆ ಅಗೆಯುತ್ತಿದ್ದಾಗ ನಮ್ಮ ಗಮನಕ್ಕೆ ಬಂದಿತ್ತು. ಇದರಲ್ಲಿ ಶಿಲ್ಪಗಳ ಜೊತೆಗೆ ಕ್ರಿ.ಶ. ೧೨೪೦ರ ಶಾಸನವು ೧೧ ಸಾಲುಗಳನ್ನೊಳಗೊಂಡಿದೆ.[೬] ಈ ಶಾಸನದ ಪ್ರಕಾರ ಲಾಕಸಹಳ್ಳಿಯವರು ಕುರುವಂಕದ ತುರುಗಳನ್ನು ಅಪಹರಿಸಿದಾಗ ಅಲ್ಲಿಯ ಗಾವುಂಡರು ಶತ್ರುಗಳನ್ನು ಎದುರಿಸಿ ತುರುಗಳನ್ನು ಮರು ಪಡೆದ ನಂತರ ಕಾಳಗದಲ್ಲಿ ಸತ್ತಿದ್ದಾರೆ. ಈ ದೃಶ್ಯವನ್ನು ಶಿಲ್ಪಿಯು ತುಂಬಾ ಸೊಗಸಾಗಿ ಕೆತ್ತಿದ್ದಾನೆ. ಶಿಲ್ಪಕಲೆಯ ಶೈಲಿಯ ಆಧಾರದಿಂದ ಬೇಡರಹಳ್ಳಿಯ ವೀರಗಲ್ಲು ಮತ್ತು ವಾಲೇಹಳ್ಳಿಯ ವೀರಗಲ್ಲು ಸಮಕಾಲೀನದವುಗಳಾಗಿ ಕಂಡುಬರುತ್ತವೆ.

ಈ ಎರಡೂ ವೀರಗಲ್ಲುಗಳ ಅಧ್ಯಯನ ಹಾಗೂ ಅವುಗಳ ಉಪಸ್ಥಿತಿ ಕೆಲವು ಪ್ರಶ್ನೆಗಳನ್ನು ಎತ್ತಲು ಪುಷ್ಠಿ ನೀಡುತ್ತವೆ. ಅವುಗಳೆಂದರೆ ತುರುಗಾಳಗಗಳು ಏತಕ್ಕಾಗಿ ಈ ಭಾಗದಲ್ಲಿ ನಡೆದಿದ್ದವು ಹಾಗೂ ಅವುಗಳನ್ನು ಯಾರು ಪ್ರೋತ್ಸಾಹಿಸುತ್ತಿದ್ದರು ಎಂಬುದು. ತುರುಗಾಳಗಳ ಇತಿಹಾಸವನ್ನು ವಿದ್ವಾಂಸರು ಮಹಾಭಾರತದ ಕಾಲಕ್ಕೆ ಒಯ್ದಿದ್ದಾರೆ.[೭] ತುರುಗಳು ಅಂದಿನ ಸಮಾಜದ ಆರ್ಥಿಕ ಮತ್ತು ಸಂಪತ್ತಿನ ಪ್ರಮುಖ ಆಧಾರಗಳಾಗಿದ್ದರಿಂದಲೂ ಹಾಗೂ ಅವುಗಳು ಸಾಮಾಜಿಕ ಮತ್ತು ಧಾರ್ಮಿಕ ಸ್ಥಾನವನ್ನು

ಹೊಂದಿದ್ದರಿಂದ ಅವುಗಳನ್ನು ಅಪಹರಿಸುವುದರ ಮೂಲಕ ಬೇರೆಯವರ ಸಂಪತ್ತನ್ನು ತಮ್ಮದಾಗಿಸಿಕೊಳ್ಳುವುದು ಹಾಗೂ ಬೇರೆಯವರ ಸಾಮಾಜಿಕ ಸ್ಥಾನಮಾನಗಳನ್ನು ಹಾಳು ಮಾಡುವುದಾಗಿದ್ದಿರಬಹುದು. ಇಂತಹ ಕಾಳಗಗಳನ್ನು ಸಾಮಾನ್ಯವಾಗಿ ಆಳುವ ವರ್ಗ ಹೆಚ್ಚಾಗಿ ಪ್ರೋತ್ಸಾಹಿಸುತ್ತಿತ್ತು. ಇದಲ್ಲದೇ ತುರುಗಾಳಗಗಳು ಪ್ರಮುಖವಾದ (ದೊಡ್ಡ) ಕಾಳಗಗಳಿಗೆ ಮುನ್ನುಡಿಯಾಗಿರುತ್ತಿದ್ದವು. ಇಂತಹ ಕಾಳಗಗಳಲ್ಲಿ ಹೆಚ್ಚಾಗಿ ಸ್ಥಳೀಯ ಮುಖಂಡರು ಅಥವಾ ವೀರರೇ ಹೆಚ್ಚಾಗಿ ಪಾಲ್ಗೊಳ್ಳುತ್ತಿದ್ದರು.

ಈ ಭಾಗದಲ್ಲಿ ಏಕೆ ಹೆಚ್ಚಾಗಿ ತುರುಗಾಳಗಗಳು ಕಂಡುಬಂದಿವೆಯೆಂದರೆ, ಈ ಭಾಗದಲ್ಲಿ ಯಾವುದೇ ನದಿ ಪಾತ್ರಗಳಿಲ್ಲ. ಹೆಚ್ಚಾಗಿ ಗುಡ್ಡಗಾಡು ಮತ್ತು ಅರೆ ಗುಡ್ಡಗಾಡು ಪ್ರದೇಶವಾದ್ದರಿಂದಲೂ ಮತ್ತು ಮಳೆಯ ಪ್ರಮಾಣ ಹೆಚ್ಚು ಇಲ್ಲದಿರುವುದರಿಂದ ಪಶು ಸಂಗೋಪನೆಯು ಪ್ರಮುಖ ಆರ್ಥಿಕ ಚಟುವಟಿಕೆಯಾಗಿ ಬೆಳೆಯಲಾರಂಭಿಸಿತು. ಕೃಷಿ ಚಟುವಟಿಕೆಗಳು ಕೆರೆ ನೀರಾವರಿಯಿಂದ ಬೆಳವಣಿಗೆ ಹೊಂದಿದ್ದರೂ, ಪಶು ಸಂಗೋಪನೆಯು ತನ್ನ ಪಾತ್ರವನ್ನು ಹೆಚ್ಚಾಗಿ ವಹಿಸಿದ್ದಂತೆ ಕಂಡುಬರುತ್ತದೆ. ಗಂಗರ ಕಾಲದಲ್ಲಿ ಮಾರುಕಟ್ಟೆಯ ಆರ್ಥಿಕ ವ್ಯವಸ್ಥೆ ಅಸ್ತಿತ್ವಕ್ಕೆ ಹೆಚ್ಚು ಬಾರದಿದ್ದರಿಂದ ಪಶು ಸಂಗೋಪನೆ ಮತ್ತು ಕೃಷಿ ಆಧಾರಿತ ಆರ್ಥಿಕ ಚಟುವಟಿಕೆಗಳು ಹೆಚ್ಚಾಗಿ ಬೆಳೆಯಲಾರಂಭಿಸಿದವು. ಆದರೆ ಕ್ರಿ.ಶ. ೧೦ನೇ ಶತಮಾನದಿಂದ ಈಚೆಗೆ ಕೃಷಿ ಆರ್ಥಿಕತೆಯ ಜೊತೆಗೆ ವ್ಯಾಪಾರ ವಹಿವಾಟುಗಳು ಪುನರ್ ಬೆಳವಣಿಗೆಯಾಗುವುದರೊಂದಿಗೆ ಮಾರುಕಟ್ಟೆಯ ಆರ್ಥಿಕ ವ್ಯವಸ್ಥೆಯು ಅಸ್ತಿತ್ವಕ್ಕೆ ಬಂದಿತು.[೭] ಇಂತಹ ವ್ಯವಸ್ಥೆಯು ಮುಂದೆ ವಿಜಯನಗರದ ಕಾಲದವರೆಗೂ ಮುಂದುವರಿಯಿತು. ಪೂರ್ವ ಮಧ್ಯಯುಗೀನ ಮತ್ತು ಮಧ್ಯಯುಗೀನ ಕಾಲದಲ್ಲಿ ಇಂತಹ ಆರ್ಥಿಕ ವ್ಯವಸ್ಥೆಯು ಅಸ್ತಿತ್ವದಲ್ಲಿದ್ದರೂ ತುರುಗಳು ಅಂದಿನ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿರುವುದು ವಾಲೇಹಳ್ಳಿ ಮತ್ತು ಬೇಡರಹಳ್ಳಿಯ ತುರುಗಾಳಗಗಳಿಂದ ಸ್ಪಷ್ಟವಾಗಿ ಕಂಡು ಬರುತ್ತದೆ.

ಈ ತುರುಗಾಳಗಗಳಲ್ಲಿ ಯಾರು ಭಾಗವಹಿಸುತ್ತಿದ್ದರು ಎಂಬ ಪ್ರಶ್ನೆಗೆ ಉತ್ತರಿಸುವುದಾದರೆ ಇಂತಹ ಕಾಳಗಗಳಲ್ಲಿ ಹೆಚ್ಚಾಗಿ ಮತ್ತು ಪ್ರಮುಖವಾಗಿ ಬೇಡ (ನಾಯಕ) ಜನಾಂಗಕ್ಕೆ ಸೇರಿದವರೇ ಭಾಗವಹಿಸಿರುವುದು ಕಂಡುಬರುತ್ತದೆ. ಇದನ್ನು ವೀರಗೀತೆಗಳು ಮತ್ತು ಇತರ ಭಾಗದ ಶಾಸನಗಳು ಪುಷ್ಟೀಕರಿಸುತ್ತವೆ.[೮] ಸ್ಥಳನಾಮಗಳ ಅಧ್ಯಯನ ಮಾಡುವುದಾದರೆ ಗ್ರಾಮದ ಹೆಸರೇ ಹೇಳುವಂತೆ ಬೇಡರಹಳ್ಳಿಯು ಹೆಚ್ಚಾಗಿ ಬೇಡರಿಂದಲೇ ಕೂಡಿದ್ದರಿಂದ ಅಲ್ಲಿ ತುರುಗಾಳಗದ ವೀರಗಲ್ಲಿರುವುದು ಬಹಳ ಔಚಿತ್ಯವಾಗಿದೆ. ಇನ್ನು ಚಲುವನಹಳ್ಳಿ ಮತ್ತು ವಾಲೇಹಳ್ಳಿಯ ಇಂದಿನ ಜನಸಂಖ್ಯೆಯನ್ನು ಪರಿಗಣಿಸಿದರೆ ಬೇಡ (ನಾಯಕ) ಜನಾಂಗಕ್ಕೆ ಸೇರಿದವರೇ ಹೆಚ್ಚಾಗಿ ಕಂಡುಬರುತ್ತಾರೆ. ಇವುಗಳ ಆಧಾರದ ಮೇಲೆ ತುರುಗಾಳಗಗಳಲ್ಲಿ ಹೆಚ್ಚಾಗಿ ಬೇಡ ಜನಾಂಗಕ್ಕೆ ಸೇರಿದವರೇ ಪ್ರಮುಖ ಪಾತ್ರ ವಹಿಸಿದ್ದರೆಂದು ಧೃಡವಾಗಿ ಊಹಿಸಬಹುದು.

ತುರುಗಾಳಗಗಳಲ್ಲಿ ಭಾಗವಹಿಸಿದವರು ಸಾಮಾನ್ಯವಾಗಿ ತುರುಗಳನ್ನು ಮರುಪಡೆದು ಸತ್ತಿರುತ್ತಾರೆ ಅಥವಾ ತುರುಗಳನ್ನು ಮರುಪಡೆಯದೇ ಸಾವನ್ನಪ್ಪಿರುತ್ತಾರೆ. ಅಂತಹವರ ನೆನಪಿನ ಗುರುತಾಗಿ ವೀರನ ಸಂಬಂಧಿಕರು ಅಥವಾ ಆ ಗ್ರಾಮದವರು ಇನ್ನೂ ಕೆಲವು ವೇಳೆ ರಾಜ್ಯದ ಅಧಿಕಾರಿಗಳು ವೀರಗಲ್ಲನ್ನು ನೆಟ್ಟು ಅವನ ಹತ್ತಿರದ ಸಂಬಂಧಿಕರ ಅಂದರೆ ತಂದೆ, ತಾಯಿ, ಹೆಂಡತಿ ಮಕ್ಕಳು ಮತ್ತಿತರ ಜೀವಿತಕ್ಕೆ ಭೂಮಿ, ಹಣ ಮತ್ತಿತರ ವಸ್ತುಗಳನ್ನು ನೀಡಿ ಗೌರವಿಸುತ್ತಿದ್ದರು.[೯] ನಾಡಿನ, ಗ್ರಾಮದ ಅಥವಾ ಸಮಾಜದ ಮಾನವನ್ನು ಕಾಪಾಡುವ ಕಾರ್ಯದಲ್ಲಿ ಅಸುನೀಗಿದವರನ್ನು ಅಂದಿನ ಸಮಾಜ ಸೂಕ್ತ ಸಹಕಾರ ಮತ್ತು ಸವಲತ್ತುಗಳನ್ನು ನೀಡಿ ಗೌರವಿಸಿರುವುದು ಅಂದಿನ ಸಮಾಜದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಇಂದಿನ ಸರಕಾರಗಳು ಇದನ್ನು ಸೂಕ್ತ ಉದಾಹರಣೆಯಾಗಿ ತೆಗೆದುಕೊಂಡು ನಾಡಿಗಾಗಿ ತಮ್ಮ ಪ್ರಾಣವನ್ನೇ ಮುಡಿಪಾಗಿಟ್ಟವರ ಸಂಬಂಧಿಕರಿಗೆ ಸೂಕ್ತ ಗೌರವ ಒದಗಿಸಬೇಕು.

ಆಕರ ಗ್ರಂಥಗಳು

೧. ರಾಬರ್ಟ್ ಬ್ರೂಸ್ ಪೂಟ್ ಮತ್ತು ಕರ್ನಲ್ ಕೂಲಿನ್ ಮೆಕೆಂಜಿಯವರು ೧೯ನೇ ಶತಮಾನದಲ್ಲಿ ಹಾಸನ ಜಿಲ್ಲೆಯ ಅರಸೀಕೆರೆ, ಚನ್ನರಾಯಪಟ್ಟಣ, ಹೊಳೆನರಸೀಪುರ, ಬೇಲೂರು, ಅರಕಲಗೂಡು ತಾಲ್ಲೂಕುಗಳಲ್ಲಿ ಪೂರ್ವೇತಿಹಾಸ ಕಾಲದ ಕೆಲವು ಸ್ಮಾರಕಗಳನ್ನು ಗುರುತಿಸಿ ಬೆಳಕಿಗೆ ತಂದಿದ್ದರೂ ಅವುಗಳನ್ನು ಹೆಚ್ಚಾಗಿ ಅಧ್ಯಯನಕ್ಕೊಳಪಡಿಸಿಲ್ಲ. ಅದರಲ್ಲೂ ಅರಸೀಕೆರೆ ತಾಲ್ಲೂಕಿಗೆ ಸಂಬಂಧಿಸಿದಂತೆ ಹೇಳುವುದಾದರೆ ಅವರ ಕೊಡುಗೆ ಅತ್ಯಲ್ಪ. ಹೆಚ್ಚಿನ ಮಾಹಿತಿಗಾಗಿ ನೋಡಿ ನನ್ನ ಲೇಖನದ ಅಡಿಟಿಪ್ಪಣಿ ಸಂಖ್ಯೆ ೧, 'ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಯ ಕೆಲವು ಹೊಸ ಬೃಹತ್ ಶಿಲಾಯುಗದ ನೆಲೆಗಳು' ಇನ್ ಇತಿಹಾಸ ದರ್ಶನ, ಸಂಪುಟ ೨೨, ಬೆಂಗಳೂರು, ೨೦೦೮, ಪುಟ ೧೧.

೨. ಹನುಮ ನಾಯಕ., 'ಚಲುವನಹಳ್ಳಿಯ ಎರಡು ಅಪ್ರಕಟಿತ ಶಾಸನಗಳು', ಇನ್ **ಇತಿಹಾಸ ದರ್ಶನ**, ಸಂಪುಟ ೮, ಬೆಂಗಳೂರು, ೧೯೯೩, ಪುಟಗಳು ೧೨-೧೪.

೩. ಅದೇ., ಪುಟ ೧೨.

೪. ಈ ವೀರಗಲ್ಲನ್ನು ನಾನು ೧೯೯೪ ರಲ್ಲಿಯೇ ನೋಡಿದ್ದರೂ ಅದನ್ನು ಫೋಟೋ ತೆಗೆದಿರಲಿಲ್ಲ. ಇತ್ತೀಚೆಗೆ ನನ್ನ ಸಂಶೋಧಕ ವಿದ್ಯಾರ್ಥಿ ಮಿತ್ರರಾದ ಶ್ರೀ ಪ್ರವೀಣ್ ಬಿ. ಎಂಬುವರು ಅವರ ಪ್ರಾಜೆಕ್ಟ್ ಪ್ರಯುಕ್ತ ಕ್ಷೇತ್ರಕಾರ್ಯ ಕೈಗೊಂಡಾಗ ಅದರ ಸಂಪೂರ್ಣ ಚಿತ್ರ ಮತ್ತು ಅದರ ಪಕ್ಕದಲ್ಲಿಯೇ ಇರುವ ಹೊಯ್ಸಳರ ಕಾಲದ ಈಶ್ವರ ದೇವಾಲಯದ (ಈಗ ಪಾಳು ಬಿದ್ದಿದೆ) ಫೋಟೋಗಳನ್ನು ತೆಗೆದಿದ್ದಾರೆ. ಅವರಿಗೆ ನನ್ನ ಧನ್ಯವಾದಗಳು.

೫. ಹನುಮ ನಾಯಕ., 'ಅರಸೀಕೆರೆ ತಾಲ್ಲೂಕಿನ ಎರಡು ಅಪ್ರಕಟಿತ ಶಾಸನವುಳ್ಳ ವೀರಗಲ್ಲುಗಳು', ಇನ್ **ಇತಿಹಾಸ ದರ್ಶನ**, ಸಂಪುಟ ೧೦, ಬೆಂಗಳೂರು, ೧೯೯೫, ಪುಟಗಳು ೯೩-೯೬.

೬. ಅದೇ., ಪುಟ ೯೩.

೭. ಡಾ. ಆರ್. ಶೇಷಶಾಸ್ತ್ರಿ., **ಕರ್ನಾಟಕದ ವೀರಗಲ್ಲುಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೨, ಪುಟ ೧೨೯.

೭ಅ. ಹೆಚ್ಚಿನ ಮಾಹಿತಿಗಾಗಿ ನೋಡಿ, ಹನುಮ ನಾಯಕ, **ಆರ್ಟಿಜಾನಲ್ ಅಂಡ್ ಟ್ರೇಡಿಂಗ್ ಆಕ್ಟಿವಿಟೀಸ್ ಇನ್ ಮೆಡಿವಲ್ ಕರ್ನಾಟಕ**, ಅಪ್ರಕಟಿತ ಪಿ.ಹೆಚ್.ಡಿ. ಪ್ರಬಂಧ, ಮಂಗಳೂರು ವಿಶ್ವವಿದ್ಯಾನಿಲಯ, ೨೦೦೦.

೮. ವೀರಗಾಥೆಗಳಿಗೆ ನೋಡಿ ಆರ್. ಶೇಷಶಾಸ್ತ್ರಿ, ಪೂರ್ವೋಕ್ತ, ಪುಟಗಳು ೧೪೪-೪೫, ಮತ್ತು ಕನ್ನಡ ಶಾಸನಗಳು ಬೇಡರು ತುರುಗಾಳಗಗಳಲ್ಲಿ ಹೆಚ್ಚಾಗಿ ಭಾಗವಹಿಸಿದ್ದನ್ನು ತಿಳಿಸುತ್ತವೆ. ಉದಾಹರಣೆಗೆ : ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಕಂಬದಹಳ್ಳಿಯ ಕ್ರಿ.ಶ. ೯೭೭ರ ಶಾಸನವು ಬೇಡರ ಪಡೆಯು ಬಿಂಡಿಗನವಿಲೆಯನ್ನು ದಾಳಿ ಮಾಡಿ ಅಲ್ಲಿಯ ಹೆಂಗಸರನ್ನು ಎತ್ತಿಕೊಂಡು ಹೋಗುವಾಗ ಗವರಸೆಟ್ಟಿಯು ಅವರೊಡನೆ ಹೋರಾಡಿ ಸತ್ತಿದ್ದನ್ನು ತಿಳಿಸುತ್ತದೆ. (ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ ೭, ನಾಗಮಂಗಲ, ೩೪). ಕ್ರಿ.ಶ. ೯೮೫ರ ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನ ನಲ್ಲೂರು ಗ್ರಾಮದ ಶಾಸನವು ಬೇಡರ ಬೀರಮ್ಮನು ತನ್ನ ಕುದುರೆ ಪಡೆಯೊಂದಿಗೆ ನಲ್ಲೂರನ್ನು ದಾಳಿ ಮಾಡಿದಾಗ ಗುಂಡಯ್ಯನು ಸತ್ತಿದ್ದನ್ನು ತಿಳಿಸುತ್ತದೆ. (ಎ.ಕ. ಸಂಪುಟ ೮, ಆಲೂರು ೩೫), ಅದೇ ಜಿಲ್ಲೆಯ ಬೇಲೂರು ತಾಲ್ಲೂಕಿನ ಹೊಯ್ಸಳ ದೊರೆ ಬಿಟ್ಟಿದೇವನ ಕಾಲದ ಕೊನೇರಿಲು ಶಾಸನವು ಅಲ್ಲಿಯ ಮಸಣಗೌಡನ ಅಳಿಯ ಬೇಡಗೌಡನು ತುರುಗಾಳಗದಲ್ಲಿ ಹೋರಾಡಿ ತುರುಗಳನ್ನು ಮರುಪಡೆದು ಸತ್ತಿದ್ದನ್ನು ತಿಳಿಸುತ್ತದೆ. (ಎ.ಕ. ಸಂಪುಟ ೯, ಬೇಲೂರು ೫೫೦), ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಮುದಿಗೆ ಗ್ರಾಮದ ಕ್ರಿ.ಶ. ೧೨೦೯ರ ಶಾಸನವು ಬೇಡರು ಕಲ್ಲಿಕೆರೆಯ ತುರುಗಳನ್ನು ಮತ್ತು ಹೆಂಗಸರನ್ನು ಲೂಟಿ ಮಾಡಿದ್ದನ್ನು ತಿಳಿಸುತ್ತದೆ. (ಎ.ಕ. ಸಂಪುಟ ೧೧, ತರೀಕೆರೆ, ೫೩), ಮತ್ತು ಅದೇ ಜಿಲ್ಲೆ ಮತ್ತು ಅದೇ ತಾಲ್ಲೂಕಿನ ಕ್ರಿ.ಶ. ೧೨೮೭ರ ಅರಿಸಿನಗುಪ್ಪೆ ಶಾಸನವು ಬೇಡರು ಬೊಕಿಯಣ್ಣನ ತುರುಗಳನ್ನು ಒಯ್ಯುವಾಗ ಅವನು ಬೇಡರೊಡನೆ ಹೋರಾಡಿ ಸತ್ತಿದ್ದನ್ನು ತಿಳಿಸುತ್ತದೆ. (ಎ.ಕ. ಸಂ. ೬ (ಹ), ತರೀಕೆರೆ ೮೪).

೯. ಪೂರ್ವ ಮಧ್ಯಯುಗೀನ ಮತ್ತು ಮಧ್ಯಯುಗೀನ ಕಾಲದ ಕನ್ನಡ ಶಾಸನಗಳು ಇಂತಹ ದಾನಗಳನ್ನು ನೆತ್ತರಪಟ್ಟಿ, ವಾಳ್ಗಳ್ಚು, ಅಥವಾ ವಾಳ್ಗಳ್ಚು ರಕ್ತಕೊಡುಗೆ ಎಂದು ಉಲ್ಲೇಖಿಸಿವೆ. ಉದಾಹರಣೆಗಾಗಿ : ಕ್ರಿ.ಶ. ೭ನೇ ಶತಮಾದನ ಕಲ್ಲೂರು (ಕೋಲಾರ ಜಿಲ್ಲೆ) ಶಾಸನವು ಪೃಥು ಎಂಬುವನು ರಕ್ಕಸನೂರು ಗ್ರಾಮವನ್ನು ವಶಪಡಿಸಿಕೊಳ್ಳಲು ಮುತ್ತಿಗೆ ಹಾಕಿ ಸತ್ತಾಗ ಅವನಿಗೆ ಒಂದು ಖಂಡುಗ ಭತ್ತದ ಭೂಮಿಯನ್ನು ನೆತ್ತರಪಡಿಯಾಗಿ ನೀಡಿದ್ದನ್ನು ತಿಳಿಸುತ್ತದೆ. (ಎಂ.ಎ.ಆರ್. ೧೯೧೬-೧೭, ಪುಟ ೩೧) ಅಲ್ಲಿಯ ೮ನೇ ಶತಮಾನದ ಇನ್ನೊಂದು ಶಾಸನವು ಪೆರನ್ ಕೋವರ್ ಎಂಬಾತನು ಮಂದವೂರು ಗ್ರಾಮದಲ್ಲಿ ತುರುಗಾಳದಲ್ಲಿ ಹೋರಾಡಿ ಸತ್ತಾಗ ಅವನಿಗೆ ಹತ್ತು ತೂಬು ಭತ್ತದ ಭೂಮಿಯನ್ನು ನೆತ್ತರಪಡಿಯಾಗಿ ನೀಡಿದ್ದನ್ನು ತಿಳಿಸುತ್ತದೆ. (ಎ.ಕ. ೧೦, ಶ್ರೀನಿವಾಸಪುರ ೨೦), ಕ್ರಿ.ಶ. ೮ನೇ ಶತಮಾನದ ಹಿರೇಗುಂಡಗಲ್ (ತುಮಕೂರು ಜಿಲ್ಲೆ) ಶಾಸನವು ಯುದ್ಧದಲ್ಲಿ ಸತ್ತಂತಹ ಅಣ್ಣೆಗನಿಗೆ ಭತ್ತದ ಭೂಮಿಯನ್ನು ವಾಳ್ಗಳ್ಚಾಗಿ ಕೊಟ್ಟಿದ್ದನ್ನು ತಿಳಿಸುತ್ತದೆ. (ಎಂ.ಎ.ಆರ್. ೧೯೧೦, ಪುಟ ೧೮) ಅದೇ ಕಾಲದ ಕೋಲಾರ ಜಿಲ್ಲೆಯ ಜಿನ್ನಹಳ್ಳಿಯ ಶಾಸನವು ದುಗ್ಗಮಾರನು ಪಾಂಡಪ್ಪನಿಗೆ ಶಾಂತನೂರು ಗ್ರಾಮ, ಒಂದು ತೂಬು ಗದ್ದೆ ಮತ್ತು ಒಂದು ಮನೆ ನಿವೇಶನವನ್ನು ವಾಳ್ಗಳ್ಚಾಗಿ ನೀಡಿದ್ದನ್ನು ತಿಳಿಸುತ್ತದೆ. (ಎ.ಕ. ೧೦, ಮುಳಬಾಗಿಲು, ೨೫೫) ಅದೇ ಜಿಲ್ಲೆಯ ಕ್ರಿ.ಶ. ೯ನೇ ಶತಮಾನದ ಮದಿಗೆರೆ ಶಾಸನವು ಪಲ್ಲವ ಕುಲತಿಲಕನು ಗ್ರಾಮದ ಮುತ್ತಿಗೆಯಲ್ಲಿ ಸತ್ತಾಗ ಅವನಿಗೆ ಜವಯ್ಯ ಮತ್ತು ಅಂದಯ್ಯ ಎಂಬುವರು ಒಂದು ಭತ್ತದ (ಕಳನಿ) ಗದ್ದೆಯನ್ನು ಬಾಳುಗಳ್ಚಾಗಿ ನೀಡಿದ್ದನ್ನು ತಿಳಿಸುತ್ತದೆ. (ಎಂ.ಎ.ಆರ್. ೧೯೨೩-೨೪, ಪು. ೪೭, ಸಂಖ್ಯೆ ೪೬)

ಹಿರೇಮಠ ವೀರಭದ್ರಯ್ಯ ಚನ್ನಬಸಯ್ಯ ಸಿಂಗಟಾಲೂರ*

ರೇನಾಡು ಚೋಳರಾಜರ ಶಾಸನಗಳು

ಚೋಳರಾಜ ವಂಶ ಭಾರತದ ಅತ್ಯಂತ ಪುರಾತನ ರಾಜವಂಶವಾಗಿದೆ. [ಕಾವ್ಯ ಪುರಾಣಗಳ ಆಧಾರದ ಮೇಲೆ ನಂದ, ಮೌರ್ಯರ ಇತಿಹಾಸ ರಚನೆಯಾದಂತೆ, ಈ ರಾಜವಂಶದ ಸಮಗ್ರ ಇತಿಹಾಸ ರಚನೆಯಾಗದಿರುವುದು ಬಹುದೊಡ್ಡ ಕೊರತೆಯಾಗಿದೆ.] ದ್ರವಿಡರಾಜರಾದ ಇವರ ವಂಶ ಪರಂಪರೆ, ಆಡಳಿತಕ್ಕೊಳಪಟ್ಟ ಪ್ರದೇಶ, ರಾಜ್ಯಾಡಳಿತ, ರಾಜಗುರುಗಳು ಮತ್ತು ಇವರ ಧಾರ್ಮಿಕ ವಿಷಯಗಳ ಬಗ್ಗೆ ಬಹಳಷ್ಟು ವಿಷಯಗಳು ತಿಳಿದುಬಂದಿಲ್ಲ. ಪ್ರಸ್ತುತ ಶಾಸನಗಳು ಈ ಪುರಾತನ ರಾಜಮನೆತನದ ಆಡಳಿತ, ಧಾರ್ಮಿಕ ವಿಷಯಗಳ ಬಗ್ಗೆ, ಕೆಲ ಹೊಸ ವಿಚಾರಗಳನ್ನು ನೀಡುತ್ತಿದ್ದು, ಅವು ದಕ್ಷಿಣ ಭಾರತದ ಬಗ್ಗೆ, ಅದರಲ್ಲೂ ಪುರಾತನ ಚೋಳ ರಾಜರ ಬಗ್ಗೆ ಅತ್ಯಂತ ಮಹತ್ವದ ದಾಖಲೆಗಳೇ ಆಗಿರುತ್ತವೆ.

ಈ ರಾಜಮನೆತನದ ಕಾಲಮಾನ– ಕ್ರಿ.ಪೂ. ೫ನೆಯ ಶತಮಾನ ಮತ್ತೆ ಕೆಲ ಇತಿಹಾಸಕಾರರ ಅಭಿಪ್ರಾಯದಂತೆ ಕ್ರಿ.ಶ. ೩ನೆಯ ಶತಮಾನದವರೆಗೂ, ಅಂದರೆ ೮ ಶತಮಾನಗಳ ಕಾಲಮಾನದ ತೂಗುಯ್ಯಾಲೆಗೆ ತಳ್ಳಲ್ಪಟ್ಟಿರುವ ಸಂಗಂ ಸಾಹಿತ್ಯದಲ್ಲಿ ಮತ್ತು ರಾಮಾಯಣ, ಮಹಾಭಾರತಗಳಲ್ಲಿ ಈ ರಾಜರ ಉಲ್ಲೇಖಗಳಿವೆ. ಒಟ್ಟಾರೆ ಚೋಳ ರಾಜಮನೆತನದ ಪೀಳಿಗೆ ಕ್ರಿ.ಶ. ೧೪ನೆಯ ಶತಮಾನದವರೆಗೂ ದೊರೆಯುವುದರಿಂದ ದೀರ್ಘಕಾಲ ರಾಜ್ಯಾಡಳಿತ ನಡೆಸಿದ ಹಿರಿಮೆ ಈ ರಾಜಮನೆತನಕ್ಕೆ ದೊರೆಯುತ್ತದೆ. ಈ ಪುರಾತನ ರಾಜಮನೆತನದ ರಾಜರೇ ರೇನಾಣ್ಡು, ರೇನಾಡು, ರೇನಾಟಿ ಚೋಳರಾಜರು.

ರೇನಾಡು ರಾಜ್ಯದ ವ್ಯಾಪ್ತಿ ಪ್ರದೇಶ : ಪುರಾತನ ಕಾಲದ ಲಭ್ಯ ಮಾಹಿತಿಗಳ ಪ್ರಕಾರ, ಪಾಂಡ್ಯ ರಾಜರ ಆಡಳಿತ ಸತತವಾಗಿ ಕಾವೇರಿ ನದಿಯಾಚೆಗೆ ಸೀಮಿತವಾಗಿರುತ್ತಿದ್ದ ಕಾರಣ, ಕಾವೇರಿ ನದಿ ಈಚೆಯಿಂದ ಹಿಡಿದು [ವಿಂಧ್ಯಾಚಲದ ವರೆಗಿನ] ವಿಶಾಲ ಭೂಪ್ರದೇಶಕ್ಕೆ ಚೋಳರಾಜರೇ ಒಡೆಯರಾಗಿದ್ದರು. ದಕ್ಷಿಣ ಭಾರತದಲ್ಲಿ ಚೋಳ, ಪಾಂಡ್ಯ ರಾಜರು ಸುಪ್ರಸಿದ್ಧ ರಾಜರಾಗಿದ್ದು, ಕಳಭ್ರ, ಪುಳಿಂದ, ಪುಂಡ್ರ, ಶಬರ, ಭೋಜ ರಾಜರ ಉಲ್ಲೇಖಗಳೂ ಇವೆ. ಕಳಭ್ರರು ಪಾಂಡ್ಯರ ಮಧುರೆಯನ್ನು ಗೆದ್ದುಕೊಂಡು ಕೆಲಕಾಲ ಆಳಿದರು. ಇನ್ನುಳಿದ ರಾಜವಂಶಗಳ ರಾಜಕೀಯ, ರಾಜ್ಯವ್ಯಾಪ್ತಿ ವಿಷಯಗಳು ಹೆಚ್ಚಾಗಿ ತಿಳಿದು ಬರುವುದಿಲ್ಲ. ಪ್ರಸ್ತುತ ರೇನಾಡು ನೆಲೆಯುವವರೆಂದು ಹೇಳಿಕೊಳ್ಳುವ ಈ ರಾಜರ ಶಾಸನಗಳು: ತೆಲುಗುನಾಡಿನ ಕಡಪಾ, ಕರ್ನೂಲು, ಅನಂತಪುರ, ನೆಲ್ಲೂರು, ಚಿತ್ತೂರು; ಕರ್ನಾಟಕದ ಕೋಲಾರ, ತುಮಕೂರು, ಚಿತ್ರದುರ್ಗ ಮತ್ತು ಬಳ್ಳಾರಿ ಭಾಗದ ವಿಷಯವಾಗಿ ಪ್ರಸ್ತಾಪಿಸುವುದರಿಂದ ಇವರ ವ್ಯಾಪ್ತಿ ಪೂರ್ವ ಪಶ್ಚಿಮಕ್ಕೆ, ರಾಯಲ್ ಸೀಮೆ, ದಕ್ಷಿಣ ಕೊಸ್ತಾಂದ್ರವನ್ನೊಳಗೊಂಡು, ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳ ಪೂರ್ವ ಭಾಗ, ಉತ್ತರ ದಕ್ಷಿಣಕ್ಕೆ ತಿರುಪತಿಯಿಂದ ತುಂಗಭದ್ರಾ ನದಿಯವರೆಗೆ ವ್ಯಾಪಿಸಿದ್ದುದು ಶಾಸನಗಳ ಮೂಲದಿಂದ ತಿಳಿಯುತ್ತದೆ. ಆದರೆ ಇವರ ಶಾಸನಗಳ ಕಾಲ ಕ್ರಿ.ಶ. ೬ನೆಯ ಶತಮಾನದಿಂದ ಗುರುತಿಸಲ್ಪಡುವುದರಿಂದ ದಕ್ಷಿಣದಲ್ಲಿ ಪಲ್ಲವರ, ಪಶ್ಚಿಮ ಉತ್ತರಕ್ಕೆ ಚೋಳ+ಉಕ್ಕ= ಚೊಳುಕ್ಯ>ಚಳುಕ್ಯರ ರಾಜ್ಯವ್ಯಾಪ್ತಿ ಪ್ರದೇಶದ ಬಗ್ಗೆ ಚಿಂತನೆ ನಡೆಸಬೇಕಾಗುತ್ತದೆ.

ಪೆದ್ದವಡಗೂರು ಶಾಸನವನ್ನು ಗಂಭೀರವಾಗಿ ಪರಿಗಣಿಸಿ ಅಧ್ಯಯನಕ್ಕೊಳಪಡಿಸಿದಾಗ, ಆ ಶಾಸನದಲ್ಲಿಯ ಸತ್ಯಾಶ್ರಯ ಬಿರುದು ಪೊಲ+ಕ+ಎಶನ್=ಪೊಲಕೇಶನ್< ಪುಲಕೇಶನ್ ಅಂದರೆ ಒಂದನೆಯ ಪುಲಕೇಶಿಯು ತನ್ನ ಮೂಲ ಚೋಳವಂಶದ ಪ್ರತಿನಿಧಿಯಾಗಿ ಕುಂತಲನಾಡಿನ ಭಾಗವನ್ನು ಆಳುತ್ತಿದ್ದು, ಸ್ವತಂತ್ರ ರಾಜ್ಯವನ್ನು ಇದೇ ಕಾಲದಲ್ಲಿ ಸ್ಥಾಪಿಸಿದನು. ಈತನು ಪೂರ್ವಕ್ಕೆ ಬಳ್ಳಾರಿಯ ಪಶ್ಚಿಮಭಾಗ, ರಾಯಚೂರ, ತುಂಗಭದ್ರಾ ನದಿಯನ್ನು ಗಡಿಯನ್ನಾಗಿ ಗುರುತಿಸಿದ ನಂತರ ಎರಡನೆಯ ಪುಲಕೇಶಿನ್‌ನು ಗೋದಾವರಿ, ಅಇರಿಅರು= ಕ್ರಿಷ್ಣಾನದಿಯ ವಿಶಾಲ ಪ್ರದೇಶದವರೆಗೂ ದಕ್ಷಿಣ ಕೋಸ್ತಾಂದ್ರ ಹೊರತುಪಡಿಸಿ ವಿಸ್ತರಿಸಿದನು. ಆದರೆ ಪ್ರವರ್ಧಮಾನಕ್ಕೆ ಬರಲು ಪ್ರಯತ್ನಿಸುತ್ತಿದ್ದ ಪಲ್ಲವರ ಗಡಿಭಾಗವನ್ನು ಚಿತ್ತೂರು ಜಿಲ್ಲಾ ಭಾಗಕ್ಕೆ ಗುರುತಿಸಬೇಕಾದುದು ಅನಿವಾರ್ಯವೇ ಆಗುತ್ತದೆ.

* ಪ್ಲಾಟ್ ನಂ. ೭, ಶ್ರೀ ನಿಲಯ, ಅನ್ನಪೂರ್ಣನಗರ, ಸಿಂಗಟಾಲೂರು, ಹೊಸಪೇಟೆ

ಏಕೆಂದರೆ ರೇನಾಡು ಚೋಳರಾಜರ ಯಾವುದೇ ಶಾಸನಗಳು ಅವರನ್ನು ಸ್ವತಂತ್ರ ರಾಜರನ್ನಾಗಿ ಹೇಳಿ ಕೊಂಡಿವೆಯೇ ಹೊರತಾಗಿ, ಚಾಳುಕ್ಯ, ಪಲ್ಲವ ಅಥವಾ ಯಾವುದೇ ರಾಜರಿಗೂ ಸಾಮಂತ, ಮಾಂಡಲಿಕರೆಂದು ಹೇಳಿಕೊಂಡಿಲ್ಲ, ಇದು ಅತ್ಯಂತ ಕಾಳಜಿಯಿಂದ ಗಮನಿಸಬೇಕಾದ ವಿಷಯ. ರೇನಾಡು ರಾಜ್ಯದ ಹೆಸರಿನಲ್ಲಿ ಕಡಿಮೆ ಎಂದರೂ ೩-೪ ಶತಮಾನಗಳ ಕಾಲ ಆಳಿದ ಇವರು, ಒಂದೊಮ್ಮೆ ಚಾಳುಕ್ಯರ ಅಥವಾ ಪಲ್ಲವ ರಾಜರ ಸಾಮಂತ ರಾಜರಾಗಿದ್ದರೆ, ಅವರು ೩-೪ ಶತಮಾನಗಳ ಕಾಲ ಹಾಗೆ ಹೇಳಿಕೊಳ್ಳಲು ಸಾಧ್ಯವೇ ಇರುತ್ತಿರಲಿಲ್ಲ. ಬದಲಾಗಿ ಕಡ್ಡಾಯವಾಗಿ ಮಾಂಡಲೀಕ, ಸಾಮಂತ ರಾಜರೆಂದೇ ಹೇಳಿಕೊಳ್ಳಬೇಕಾಗಿರುತ್ತಿತ್ತು. ಹಾಗೆ ಹೇಳಿಕೊಳ್ಳದಿರುವುದೂ ಅಲ್ಲದೆ ಚಾಳುಕ್ಯ, ಪಲ್ಲವ ರಾಜರ ಶಾಸನಗಳಲ್ಲಿಯೂ ಆ ರೀತಿಯ ಎಲ್ಲೂ ಪ್ರಸ್ತಾಪ ಇಲ್ಲದಿರುವ ಕಾರಣ, ಯಾವ ಆಧಾರಗಳೂ ಇಲ್ಲದೇ ಅವರನ್ನು ಸಾಮಂತ, ಮಾಂಡಲೀಕರೆಂದು ಹೇಳುವುದು ಸೂಕ್ತವಾಗದು.

ಇಮ್ಮಡಿ ಕರಿಕಾಲಚೋಳ ರಾಜನು ಪಲ್ಲವ ಶಿವಸ್ಕಂದವರ್ಮನ ಜೊತೆ ಹೋರಾಡಿ ಸೋಲಿಸಿದುದನ್ನು ಗಮನಿಸಿದರೆ, ಇತಿಹಾಸದ ಈ ಆಧಾರಗಳನ್ನು ಬಿಟ್ಟುಬಿಡುವುದು ಸಾಧುವಲ್ಲ. ಪುರಾತನ ಇತಿಹಾಸವು ಹೊಸಹೊಸ ಆಧಾರಗಳ ಮೂಲದಿಂದ ನಿತ್ಯ ನೂತನವಾಗುತ್ತಲೇ ಇರುತ್ತದೆ. ಇದರಿಂದ ಪಲ್ಲವರಾಜರ ಗಡಿ ಚಿತ್ತೂರ ಭಾಗದ ಆಚೀಚೆ ಸೀಮಿತಗೊಂಡುದನ್ನು ಶಿವಸ್ಕಂದವರ್ಮನ ಸೋಲು ಖಚಿತಪಡಿಸುತ್ತದೆ. ಆನಂತರ ಗಡಿ ವಿಷಯವಾಗಿ ಚೋಳ-ಪಲ್ಲವರಿಗೆ ಯುದ್ಧಗಳಾದ ಬಗ್ಗೆ ಸಾಕ್ಷ್ಯಗಳಿಲ್ಲ. ಹೀಗಾಗಿ ರೇನಾಡು ಚೋಳ ರಾಜರಿಗೆ ದಕ್ಷಿಣಕ್ಕೆ ನೆಲ್ಲೂರ, ಕಡಪಾ ಮತ್ತು ಪಲ್ಲವರಿಗೆ ಉತ್ತರ ಪಶ್ಚಿಮಕ್ಕೆ ಈಗಿನ ಚಿತ್ತೂರು, ಕೋಲಾರ, ತುಮಕೂರು ಜಿಲ್ಲೆಗಳನ್ನೊಳಗೊಂಡ ಗಡಿಯನ್ನೇ ಗುರುತಿಸಬೇಕಾಗುತ್ತದೆ. ಅಥವಾ ಕಾಲಮಾನದ ವಿಷಯವಾಗಿ, ಈ ಶಾಸನಗಳಲ್ಲಿ ಕೆಲವಾದರೂ ಎರಡನೆಯ ಕರಿಕಾಲ ಚೋಳ ಮತ್ತು ಶಿವಸ್ಕಂದವರ್ಮರಿಗಿಂತಲೂ ಪುರಾತನ ಶಾಸನಗಳೆಂದು ಒಪ್ಪಬೇಕಾಗುತ್ತದೆ.

ಶಾಸನಗಳ ಕಾಲಮಾನ – ಈ ರಾಜರ ಕಾಲಮಾನ, ಮತ್ತು ಇವರ ಶಾಸನಗಳ ಕಾಲಮಾನ ಗುರುತಿಸುವಿಕೆಯಲ್ಲಿ ಹಲವಾರು ಗೊಂದಲಗಳು ಎದ್ದು ಕಾಣುತ್ತವೆ. ಅವುಗಳಲ್ಲಿ ಮುಖ್ಯವಾಗಿ,

೧] ಶಾಸನಭಾಷೆ ಅರ್ಥವಾಗುವುದಿಲ್ಲವೆಂದಿದ್ದಾರೆ. ಶಾಸನ ಶೋಧಕರು, ಶಾಸನಗಳ ಅಧ್ಯಯನಕಾರರು ಸ್ಪಷ್ಟವಾಗಿ ಕ್ರಿ.ಶ. ೬, ೭, ೮ನೆಯ ಶತಮಾನ ಕಾಲದ ಶಾಸನಗಳೆಂದು ಹೇಳಿದ್ದಾರೆ. ಅಂತಾಗಿ ಕ್ರಿ.ಶ. ೬-೮ನೆಯ ಶತಮಾನದ ಅವಧಿ ಭಾರತದ ಯಾವುದೇ ಭಾಗದ ಶಾಸನಗಳನ್ನು ಅರ್ಥೈಸಲಾಗದ ಕಾಲಮಾನವಲ್ಲ.

೨] ಶಾಸನ ಶಬ್ದಗಳು ಶಾತವಾಹನ [ಒಂದಕಲ್ಲರು]ರ ಕಾಲದ ಶಬ್ದಸೂಚನೆಗಳನ್ನು ಒಳಗೊಂಡಿವೆ ಯೆನ್ನುತ್ತಾರೆ; ಎಲ್ಲೂ ಈ ಶಾಸನಗಳಿಗೆ ನಾಲ್ಕು ಶತಮಾನಗಳ ಅಂತರದ ಕಾಲಮಾನವನ್ನು [ಕ್ರಿ.ಶ. ಎರಡನೆಯ ಶತಮಾನ- ಕ್ರಿ.ಶ. ಆರನೆಯ ಶತಮಾನ] ಹೇಳುತ್ತಾರೆ. ಇದು ಭಾಷಾ ಬದಲಾವಣಾ ಕ್ರಮಕ್ಕೆ ವಿರೋಧ ವಾಗುತ್ತದೆ.

೩] ಕ್ರಿ.ಶ. ಆರನೆಯ ಶತಮಾನದವರೆಂದು ವಾದಿಸಲು ಮುಖ್ಯ ಕಾರಣವಾಗುವ ವಿಷಯವೆಂದರೆ, ಆ ರಾಜವಂಶದಲ್ಲಿ ೨-೩ ಶತಮಾನಗಳ ಕಾಲಾನಂತರ ಪುಣ್ಯಕುಮಾರ ಚೋಳ ರಾಜನ ಶಾಸನದಲ್ಲಿರುವ ವಂಶವಾಹಿನಿ ಅನುಸರಿಸಿ ಹೇಳಲಾಗಿದೆ; ಒಂದು ರಾಜವಂಶದಲ್ಲಿ ಹಲವಾರು ರಾಜರ ಹೆಸರುಗಳಲ್ಲಿ ಸಾಮ್ಯತೆ ಇರುವುದು ಸಹಜವಾದರೂ, ಬಿರುದು ಬಾವಲಿಗಳಲ್ಲಿ ವ್ಯತ್ಯಾಸವಿರುತ್ತದೆಂಬ ಸೂತ್ರಕ್ಕೆ ಗಮನಹರಿಸಿಲ್ಲ.

ಅಂಕಣ ೧ರಂತೆ-ಶಾಸನಭಾಷೆ ಅರ್ಥವಾಗುವು ದಿಲ್ಲವೆಂದು ....being in archaic Telugu it becomes extremely difficult to make any satisfactory same out of them [inscriptions of Andhra Pradesha, Cuddapah Dt. Part-I, Historical Introduction] ಎಂದು ಹೇಳುವುದು, ಸಹಜವಾಗಿಯೇ ಕ್ರಿ.ಶ. ಆರನೆಯ ಶತಮಾನಕ್ಕಿಂತಲೂ ಹಿಂದಿನ ಕಾಲದ ಶಾಸನಗಳೆಂದು ಗುರುತಿಸಬೇಕಾಗುತ್ತದೆ. ಏಕೆಂದರೆ ಈಗ ನಾವು ಕ್ರಿಪೂ. ಮೂರನೆಯ ಶತಮಾನದ ಅಶೋಕನ ಶಾಸನಗಳಿಂದ ಹಿಡಿದು ದೇಶದ ಎಲ್ಲ ಶಾಸನಗಳನ್ನೂ ಅರ್ಥೈಸಲಾಗಿರುವುದರಿಂದ, ಈ ಶಾಸನಗಳ ಕಾಲವನ್ನು ಅಶೋಕನ ಶಾಸನಗಳಿಗಿಂತಲೂ ಪುರಾತನವಾದವುಗಳೆಂದು ಗುರುತಿಸಲು ಸಾಧ್ಯವೆ ?

ಅಂಕಣ ೨ರಂತೆ-ಶಾಸನ ಶಬ್ದಗಳು ಶಾತವಾಹನರ ಕಾಲದ ಶಬ್ದಸ್ಥಿತಿಯನ್ನು ನೀಡುತ್ತಿವೆ ಎಂದು ಶಾಸನ ಶೋಧಕರು, ಹಿರಿಯ ಇತಿಹಾಸಕಾರರು ....although some Telugu words are noticed in the early inscriptions are even Though of Satavahana period [Inscriptions of Andhra Pradesha, Cuddaph Dt. Part-1, Historical Introduction] ಗುರುತಿಸಿರುವುದರಿಂದ, ಶಾತವಾಹನರ ಕಾಲವನ್ನು ಕ್ರಿ.ಶ. ೨ನೆಯ ಶತಮಾನಕ್ಕೂ, ಈ ರಾಜವಂಶದ



ಪ್ರಾರಂಭ ಕಾಲಮಾನವನ್ನು ಕ್ರಿಶ. ೬ನೆಯ ಶತಮಾನಕ್ಕೂ ಗುರುತಿಸುವುದು. ೪೦೦ ವರ್ಷಗಳ ಅಜಗಜಾಂತರ, ಊಹಾತೀತ ಕಾಲಮಾನದ ವ್ಯತ್ಯಾಸವಾಗುತ್ತದೆ ಅಲ್ಲವೆ ?

ಅಂಕಣ ೩ರಂತೆ– ವಂಶವಾಹಿನಿಯನ್ನು ಹೇಳುವ ಮಾಲೆಪಾಡು, [ಇ.ಪಿ. ಎ.ಇ. ೧೧,ಪಿ.೩೪೪] ದೊಮ್ಮರಿನಂದ್ಯಾಲ [ಎಂ.ಇ. ೨೭,ಪಿಪಿ.೨೬೮ ಎಫ್‌ಎಫ್] ತಾಮ್ರಪಟಗಳು, ರಾಮೇಶ್ವರಮ್, ತಿಪ್ಪಲೂರ, ಮಲಕರು, ವೆಲ್ದುರ್ತಿ [ಇನ್ಸ್ಕ್ರಿಪ್ಷನ್ಸ್ ಆಫ್ ಆಂಧ್ರಾಪ್ರದೇಶ ಕುಡ್ಡಾಪ್ ಡಿಸ್ಟ್ರಿಕ್ಟ್ ಪಾರ್ಟ್–೧, ರಾಮೇಶ್ವರಮ್ ಇ.ನಂ. ೧೪. ತಿಪ್ಪಲೂರ–ಇ.ನಂ. ೧೧. ಕಮಲಕುರು–ಇ.ನಂ. ೬ ವೆಲ್ದುರ್ತಿ–ಇ.ನಂ. ೧೩.] ಶಾಸನಗಳ ಸುಮಾರು ೩೦೦ ವರ್ಷಗಳ ಅಂತರದ ಬೇರೆಬೇರೆ ಕಾಲದ ಸುಮಾರು ಮೂರ್‍ನಾಲ್ಕು ಜನ ಪುಣ್ಯಕುಮಾರಚೋಳರನ್ನು ಗುರುತಿಸಬೇಕಾದ ಸಮಯದಲ್ಲಿ. ಆ ರಾಜರನ್ನೆಲ್ಲ ಒಟ್ಟುಗೂಡಿಸಿ ಒಬ್ಬನೇ ಪುಣ್ಯಕುಮಾರಚೋಳ

ಎಂದು ಹೇಳುವುದರೊಂದಿಗೆ ಶಾಸನಗಳ ವಂಶವಾಹಿನಿ ಸಮಸ್ಯೆ ಪ್ರಾರಂಭವಾಗುತ್ತದೆ. ಮಾಲೆಪಾಡು, ದೊಮ್ಮರಿನಂದ್ಯಾಲ ತಾಮ್ರಪಟಗಳ ಮತ್ತು ರಾಮೇಶ್ವರಮ್ ಶಿಲಾಶಾಸನದ ಪೋರ್ಮುಖರಾಮ, ಮಾರ್ಧನಚಿತ್ತ, ಮದನವಿಲಾಸಾಧ್ಯನೇಕ, ಪ್ರಿಥಿವಿವಲ್ಲಭ ಬಿರುದುಗಳನ್ನು ಹೇಳುವ ಪುಣ್ಯಕುಮಾರಚೋಳ ಒಬ್ಬನೇ ಎಂಬುದು ನಿಸ್ಸಂದೇಹ. ಆದರೆ ಈ ರಾಜನಿಗೂ ಮೊದಲಿನ ತಿಪ್ಪಲೂರ ಶಾಸನದ ಗಣ್ಯಮಾನು(ರು), ಮರುಂತ್ರಪಿದಕು, ಮದಮುದಿತುನ್ರು ಉತ್ತಮೋತ್ತಮ(ರು) ಎಂದು ಬಿರುದುಗಳನ್ನು ಹೇಳುವ ಎರಿಕಲ್ಮುತ್ತು ಪುಣ್ಯಕುಮಾರನಿಗೆ ಬಿರುದು ಪ್ರಶಸ್ತಿಯಲ್ಲಾಗಲಿ, ಲಿಪಿಮಾದರಿಯಲ್ಲಾಗಲಿ, ಶಾಸನಭಾಷೆಯಲ್ಲಾಗಲಿ ಹೊಂದಿಕೆಯಾಗದೇ ಇರುವಾಗ ಅವರಿಬ್ಬರನ್ನೂ ಒಬ್ಬನೇ ಎಂದು ಒಪ್ಪುವುದಕ್ಕೆ ಸಾಧ್ಯವಾಗುವುದಿಲ್ಲ. ಇವರಿಬ್ಬರಲ್ಲಿ ಕನಿಷ್ಠ ೨೦೦ ವರ್ಷಗಳ ಕಾಲಮಾನದ ವ್ಯತ್ಯಾಸವಾಗುತ್ತದೆ. ಈ ಇಬ್ಬರು ಪುಣ್ಯಕುಮಾರ ಚೋಳರಲ್ಲದೇ ಕಮಲಕುರು ಶಾಸನದ ಪುಣ್ಯಕುಮಾ(ರ್ಬಿ) ಮತ್ತು ವೆಲ್ಟುರ್ತಿ ಶಾಸನದ ಅತಿಶಯರಟ್ಟಕುಟ್ಟುನ ಪುಣ್ಯಕುಮಾರಚೋಳ ರಾಜರು ಬೇರೆ ಬೇರೆಯಾಗಿಯೇ ಕಾಣುತ್ತಾರೆ. ಇವರಾರನ್ನೂ ವಂಶವಾಹಿನಿಯಲ್ಲಿ ಹೇಳದಿರುವುದು, ವಂಶವಾಹಿನಿ ಹೇಳುವ ಪುಣ್ಯಕುಮಾರಚೋಳ ಮತ್ತು ತಾಮ್ರಪಟಶಾಸನೋಕ್ತ ಧನಂಜಯವರ್ಮನ್ ಇಬ್ಬರೂ, ತಿಪ್ಪಲೂರ, ಕಮಲಕುರು, ವೆಳ್ಡುರ್ತಿ ಶಾಸನಗಳ ಪುಣ್ಯಕುಮಾರಚೋಳರಾಜರ ನಂತರದವರೆನ್ನುವುದರಲ್ಲಿ ಸ್ಪಷ್ಟ. ಈ ಎಲ್ಲ ಶಾಸನಗಳ ಕಾಲಮಾನದ ಅಂತರ ೩–೪ ಶತಮಾನಗಳೇ ಆಗುತ್ತವೆ. ಶಾಸನಭಾಷೆ, ಲಿಪಿಮಾದರಿ, ಬಿರುದು, ಹೆಸರು ಹೊಂದಾಣಿಕೆ ಇಲ್ಲದಿರುವ ಸ್ಥಿತಿಯಲ್ಲಿಯೂ ಒಬ್ಬನೇ ರಾಜ ಎಂದು ಹೇಳುವುದು, ಆ ಶಾಸನಗಳನ್ನನುಸರಿಸಿ ವಂಶವಾಹಿನಿ ಹೇಳುವುದು ಅಸಂಬದ್ಧವಾಗುತ್ತದೆ.

ವಂಶವಾಹಿನಿ ಸಮಸ್ಯೆಗೆ ಮೂಲ ಕಾರಣವಾಗಿರುವ ಕಲಮಲ್ಲ ಶಾಸನವು, ಎರಿಕಲ್ಲು ಮುತ್ತರಾಜು ಧನಂಜಯರು ಎಂದು ಹೇಳುತ್ತದೆ. ಮಾಲೆಪಾಡು ಮತ್ತು ದೊಮ್ಮರಿನಂದ್ಯಾಲ ತಾಮ್ರಪಟ ಶಾಸನಗಳು ಧನಂಜಯವರ್ಮನ್ ನ್ರಪತಿ ಎಂದು ಹೇಳುತ್ತ, ಗೋತ್ರವನ್ನು ಹೇಳುತ್ತವೆ. ಎರಿಕಲ್ಲುಮುತ್ತರಾಜು ಧನಂಜಯ ಮತ್ತು ಮುಂದಿನ ೧–೨ ಶತಮಾನಗಳ ಶಾಸನಗಳು ಯಾವು ಗೋತ್ರಗಳನ್ನಾಗಲಿ, 'ವರ್ಮ' ನ್ರಪತಿ ಅನ್ನುವ ಸಂಸ್ಕೃತ ಪ್ರಭಾವತಿ ಶಬ್ದಗಳನ್ನಾಗಲಿ ಕಲಮಲ್ಲ ಅಥವಾ ಇನ್ನಾವುದೇ ಶಾಸನಗಳು ಹೇಳಿಕೊಳ್ಳುವುದಿಲ್ಲ. ಇಂಥಹ ಕಾರಣಗಳಿಂದಾಗಿ ....the identification of the persons mentioned in the inscription presents much difficulty. It is not possible to state definitely whether the king erical muthuraju of this record in to be taken above (E.I. Vo. 27) to be identical with Erical muthuraju dhananjaya of inscription ಎಂದು ಗುರುತಿಸಿರುವುದು ಸರಿಯಾಗಿಯೇ ಇದೆ. ಅಲ್ಲದೆ ಶಾಸನಗಳ ಕಾಲಮಾನದ ವ್ಯತ್ಯಾಸ ಗುರುತಿಸಿರುವಂತೆ ಇಲ್ಲಿ ಸುಮಾರು ಮೂರು ಶತಮಾನಗಳ ಅಂತರವನ್ನು ಕಲಮಲ್ಲಶಾಸನದ ಎರಿಕಲ್ಮುತ್ತುರಾಜು ಧನಂಜಯನಿಗೂ ಪುಣ್ಯಕುಮಾರ ಚೋಳರಾಜ ಹೇಳುವ ಧನಂಜಯವರ್ಮನ್‌ನಿಗೂ ಗುರುತಿಸಬಹುದಾಗಿದೆ. ಮೂಲಭೂತವಾಗಿ ಗುರುತಿಸಲ್ಪಡುವ ಕಲಮಲ್ಲ ಶಾಸನದ ಎರಿಕಲ್ಮುತ್ತುರಾಜು ಮತ್ತು ಪುಣ್ಯಕುಮಾರ ಚೋಳ ಹೇಳುವ ಧನಂಜಯವರ್ಮ ಬೇರೆ ಬೇರೆ ಎಂಬುದು ಈ ಕಾರಣಗಳಿಂದ ಸಿದ್ಧವಾಗುತ್ತದೆ.

ಶಾಸನಗಳ ಕಾಲನಿಷ್ಕರ್ಷೆ ಸಾಮಾನ್ಯವಾಗಿ ಆ ಶಾಸನದಲ್ಲಿ ಹೇಳಲಾದ ದಿನಾಂಕಗಳಿಂದ ತೀರ್ಮಾನವಾಗುತ್ತದೆ. ಆ ಕಾಲಮಾನ ಸಂಶಯಾತ್ಮಕವಾದಾಗ ಅಥವಾ ದಿನಾಂಕ ನಮೂದು ಇಲ್ಲದಿರುವಾಗ, ೧] ರಾಜಮನೆತನದ ವಂಶಾನುಕ್ರಣಿಕ ೨] ಶಾಸನ ಭಾಷೆ ೩] ಲಿಪಿ ಮಾದರಿ ೪] ಶಾಸನೋಲ್ಲೇಖಿತ ಇತರೆ ವ್ಯಕ್ತಿ ವಿಷಯಗಳಿಂದ ನಿರ್ಧರಿತವಾಗುತ್ತದೆ. ಈ ರೇನಾಡು ರಾಜರ ಪುರಾತನ ಶಾಸನಗಳಲ್ಲಿ ದಿನಾಂಕ ನಮೂದು ಇಲ್ಲದಿರುವುದು ಕಾಲಮಾನ ಗುರುತಿಸುವಿಕೆಗೆ ಬಹು ದೊಡ್ಡ ಕೊರತೆಯಾಗಿದೆಯಲ್ಲದೇ, ಹಲವಾರು ಗೊಂದಲಗಳಿಗೂ ಕಾರಣವಾಗಿದೆ. ರಾಜವಂಶಾನು ಕ್ರಮಣಿಕೆಯಲ್ಲಿ ಹೇಳಬೇಕೆಂದರೆ ರಾಜವಂಶವು ಶಾಸನೋಲ್ಲೇಖಿತ ರಾಜರ ಹೆಸರುಗಳು ಪ್ರಚಲಿತವಾಗಿ ತಿಳಿದಿರುವ ಚೋಳ ರಾಜವಂಶಕ್ಕೆ ಅಪರಿಚಿತ ಎನ್ನಿಸಿ ಇನ್ನೂ ಹಿಂದಿನ ಕಾಲಕ್ಕೆ ತಳ್ಳುತ್ತವೆ. ಅಲ್ಲದೇ ಬೇರೆ ರಾಜವಂಶಗಳ ಉಲ್ಲೇಖಗಳು ಶಾಸನಗಳಲ್ಲಿ ಬರದಿರುವುದು ಒಂದು ಸಾಕ್ಷ್ಯವಾಗಿ, ಶಾಸನಗಳ ಕಾಲಮಾನ ಹಿಂದಕ್ಕೆ ತಳ್ಳಲ್ಪಡುವ ಸಂದರ್ಭವೂ ಆಗುತ್ತದೆ.

ಶಾಸನ ಅಧ್ಯಯನಕಾರರು ಮೇಲಿನ ಶಾಸನಗಳು ಈಗಿನ ತೆಲುಗುಭಾಷಾ ಪ್ರದೇಶದಲ್ಲಿ ಸಿಕ್ಕ ಕಾರಣ ಅವುಗಳನ್ನು ಕೇವಲ ತೆಲುಗು ಭಾಷೆಗೆ ಮಾತ್ರ ಸೀಮಿತಗೊಳಿಸಿ ಅರ್ಥೈಸಲು ಪ್ರಯತ್ನಿಸಿದ ಕಾರಣ ಅವು ಅರ್ಥವಾಗದೇ, ಅರ್ಥವಾಗದ ಶಾಸನಗಳೆಂದು ಅವನ್ನು ಕರೆದು ಈ ರೀತಿ ಹೇಳಿರುತ್ತಾರೆ: 'the inscription is one of the earlist completely Telagu records so for discovered ; and consequently of great value for the history of telagu language and orthograpy' (E.I. Vol. 27). ಈ ರೀತಿಯ ಹೇಳಿಕೆಗಳು ಶಾಸನಗಳು ಪುರಾತನವಾದವುಗಳೆಂಬುದನ್ನು ಸಾಧಿಸುತ್ತವೆ.

ಭಾರತದಲ್ಲಿ ಬಹುಷಃ ದಿನಾಂಕ ನಮೂದು ಇಲ್ಲದಿರುವ ಶಾಸನಗಳ ಪರಂಪರೆ ಕ್ರಿಪೂ. ಮೂರನೆಯ ಶತಮಾನದ ಅಶೋಕನ ಶಾಸನಗಳಿಂದ ಹಿಡಿದು ಕ್ರಿಶ. ಆರನೆಯ ಶತಮಾನದ ಚೋಳ+ಉಕ್ಯ=ಚೋಳುಕ್ಯ ಮೊದಲನೆಯ ಪುಲಕೇಶಿಯುವರೆಗೂ ಅಂದರೆ; ಅಶೋಕ, ಶಾತವಾಹನ[ಒಂದಕಲ್ಲರು], ಬ್ರಹತ್‌ಪಲಾಯನ, ವಿಷ್ಣುಕುಂಡಿನ, ಶಲಂಕಾಯನ, ಪಾಂಡ್ಯ, ಮೊದಲ ಪಲ್ಲವರಾಜರು, ಮೊದಲ ಕದಂಬರಾಜರು, ಮೊದಲ ಗಂಗರಾಜರು ಈ ಯಾವುದೇ ರಾಜವಂಶದವರ ಶಾಸನಗಳಿಗೂ ಆಳಿಕೆಯ ಸಂಖ್ಯಾ ವರ್ಷ ಹೊರತಾಗಿ ದಿನಾಂಕ ನಮೂದುಗಳಿರುವುದಿಲ್ಲ. ಆದಾಗ್ಯೂ ಬ್ರಾಹ್ಮಿ ಲಿಪಿ ಮಾದರಿಯಲ್ಲಿಯೇ ಅಶೋಕ, ಶಾತವಾಹನರನ್ನು ಕ್ರಿಪೂ.ಕ್ಕೆ ಸೇರಿಸುವುದು ಸರಿಯಾದರೂ, ಲಿಪಿ ಮಾದರಿಯಲ್ಲಿ ಮೊದಲ ರೇನಾಡು ಚೋಳ, ಬ್ರಹತ್ಪಲಾಯನ, ವಿಷ್ಣುಕುಂಡಿನ, ಶಲಂಕಾಯನ, ಹಿರೆಹಡಗಲಿಯ ಪಲ್ಲವ ಶಿವಸ್ಕಂದವರ್ಮನ ಲಿಪಿ ಮಾದರಿ ಒಂದೇ ಇರುವಾಗ್ಯೂ, ಬ್ರಹತ್ ಪಲಾಯನ ರನ್ನು ಕ್ರಿಶ. ಎರಡನೆಯ ಶತಮಾನಕ್ಕೂ, ಶಿವಸ್ಕಂದವರ್ಮನ ಶಾಸನವನ್ನು ಮೂರನೆಯ ಶತಮಾನಕ್ಕೂ, ವಿಷ್ಣುಕುಂಡಿನ, ಶಲಂಕಾಯನ, ಕದಂಬಮಯೂರವರ್ಮನನ್ನು ಮೂರನೆಯ ಶತಮಾನಕ್ಕೂ ಸೇರಿಸಿ, ರೇನಾಡು ಚೋಳರಾಜರ ಶಾಸನಗಳನ್ನು ಅರ್ಥವಾಗದ ಶಾಸನಗಳೆಂದು, ಶಾತವಾಹನ ಕಾಲ ಶಬ್ದ ಹೊಂದಿವೆಯೆಂದು ಹೇಳುತ್ತಲೇ ಕ್ರಿಶ. ಆರನೆಯ ಶತಮಾನಕ್ಕೆ ಸೇರಿಸಿರುವುದು ಸರಿಯೆ ? ಇದು ಕಾಲಮಾನದ ನಿಗದಿ ಎಲ್ಲೋ ತಪ್ಪಿರುವುದನ್ನು ಸೂಚಿಸುತ್ತದೆ. ಜೊತೆಗೆ ಈ ಶಾಸನಗಳಲ್ಲಿರುವ ಏಕಾಕ್ಷರ ಶಬ್ದಗಳು, ಮತ್ತು ಮೂಲದ್ರವಿಡ ಶಬ್ದಗಳು ಅಂಥಹ ವಾದವನ್ನೇ ತಳ್ಳಿ ಹಾಕುವಂತಿವೆ.

ಈ ರೇನಾಂಡು, ರೇನಾಡು, ರೇನಾಟಿ ಚೋಳ ರಾಜರ ಶಾಸನಗಳಲ್ಲಿ, ಇವರ ನಾಡನ್ನು ಹೇಳಿಕೊಳ್ಳುವ ರೇ–ನಾಡು ಎನ್ನುವಲ್ಲಿ, ರೇ ಶಬ್ದವು ಏಕಾಕ್ಷರ ಶಬ್ದವಾಗಿರುತ್ತದೆ. ಈ ರೇ ಒಂದು ಪುರಾತನ ದೇವತೆಯಾಗಿದ್ದು, ಕ್ರಿಪೂ. ೩೫೦೦ ರಲ್ಲಿಯೇ ಭಾರತದಿಂದ ಹಿಡಿದು ಈಜಿಪ್ತವರೆಗೆ ಪೂಜಿತ ವಾಗುತ್ತಿದ್ದ ದೇವತೆಯಾಗಿದೆಯಲ್ಲದೇ, ಈಜಿಪ್ತನ ೧೧೫ ಪುರಾಣ ದೇವತೆಗಳಲ್ಲಿ ಇದೂ ಒಂದು ದೇವತೆಯಾಗಿರುತ್ತದೆ. ಅಲ್ಲದೇ (ಋ)ಗ್ವೇದದ ೧೦ನೆಯ ಮಂಡಲದ ಕ ದೇವತೆಯ ರುಚೆಯಲ್ಲಿಯೂ, ಯಜುರ್ವೇದ ತೈತ್ತಿರಿಯ ಅರಣ್ಯಕದಲ್ಲು ಈ 'ರೇ' ದೇವತೆ ಉಲ್ಲೇಖಗೊಂಡಿರುತ್ತದೆ. ಅದರಂತೆ ಈ ಶಾಸನಗಳಲ್ಲಿ ಉಲ್ಲೇಖವಾಗಿರುವ ಮತ್ತು ಭಾರತದಿಂದ ಈಜಿಪ್ತವರೆಗೂ ಪೂಜಿಸಲ್ಪಡುತ್ತಿದ್ದ ಇನ್ನೊಂದು 'ರಾ' ದೇವತೆಯ ಉಲ್ಲೇಖವು ಶಾಸನಗಳಲ್ಲಿ ಇರುತ್ತದೆ. ಇವಲ್ಲದೆ ಪನಾಶಕೊಂಡ ಶಬ್ದದಲ್ಲಿ, 'ಪ' ಏಕಾಕ್ಷರ ಶಬ್ದವಾಗಿದ್ದು ಪನಾಶಕೊಂಡ=ಪಾಪನಾಶಕೊಂಡ ಎನ್ನುವುದಾಗಿದೆ. ಹೀಗೆ ಏಕಾಕ್ಷರ ಶಬ್ದಗಳ ಪಟ್ಟಿ ಬೆಳೆಯುತ್ತದೆ. ಇದರಿಂದ ಶಾಸನಗಳು ಮೂಲದ್ರಾವಡ ಭಾಷೆಯನ್ನು ಒಳಗೊಂಡಿರು ವುದು ಸ್ಪಷ್ಟವಾಗುತ್ತದೆ ಅಲ್ಲದೆ ಆ ಶಬ್ದಗಳು ಈಗ ಕನ್ನಡ, ತೆಲುಗು, ತಮಿಳು, ಭಾಷೆಗಳಲ್ಲಿ ಹಂಚಿ ಹೋಗಿರುತ್ತವೆ.

ಮೂಲದ್ರಾವಿಡ ಭಾಷಾಶಬ್ದಗಳು : ಎರಿಕಲ್ಲ, ಕಾಜ್ಯ, ಕಾಜು, ಪುಚೆ, ಎಳನ್, ಪೆನ್ಬಾರ್, ಇನ್ಬು, ತೆವುಳ, ಮರುನ್ತ್ರ. ಪಟುಕಾ, ನಗು, ಕಪ್ಪಡ, ಕಣ. ನೆಕ್ಕು, ನತ್ತಿಮಳಿ, ವೆದ್ರಮ್ಮ, ಎವೊಕ್ಕ, ಬುನವ(ನ್ರು), ದಿರ್ರು, ಪಸಿಂದಿ, ನಿವಬು, ಇನ್ದುಲ, ಲಇ–ಚ್ಂಬು, ಮೆಣ್ಣವಡ್ಡವಿ, ಜುದ್ದ, ವ್ರೆಂಗು, ಎಡ್ಲ, ಇವು ಮೂಲದ್ರವಿಡಭಾಷಾ ಶಬ್ದಗಳೆ.

ಕನ್ನಡ ಶಬ್ದಗಳು– ನೀರು, ನೆಲ, ಕಾಲು, ಚಲೊ, ಮಗ, ಉಣೆಲು, ಪುದ, ನಿಲ್ವ, ಅಣತಿ, ಗಳ್ಳವಾರಿ, ಎನ್ಬದಿಯೆ, ಕಾನು, ಕಾಣು ಮುಂತಾದವುಗಳು ಕನ್ನಡದಲ್ಲಿ ಉಳಿದುಬಂದಿರುವ ಶಬ್ದಗಳಾಗಿವೆ.

ತಮಿಳು ಶಬ್ದಗಳು– ಚಂಗ, ಚಂಗಾಲು, ಎಳನ್, ತುಗ ಮುಂತಾದವು ತಮಿಳು ಭಾಷೆಯಲ್ಲಿ ಉಳಿದು ಬಂದಿರುವ ಶಬ್ದಗಳಾಗಿವೆ.

ತೆಲುಗು ಶಬ್ದಗಳು– ಎರಿ, ಪೋತುಲು, ಇಚ್ಚಿನ, ಇಚ್ಚಿರಿ, ಪನ್ನಸ, ದಿನಿಕಿ, ಕೊಡಕು, ಪೊಡಿಯಾರ್, ಚೇಸಿರಿ, ಪನಿ, ಕೊಚ್ಚಿಯ, ಲಾವ್ರಂಬು, ಎಬದಿ, ಮಂಚಿ, ಪೊರ್ರಿಯಾರು, ವೆವುರ, ಕೊಣ್ಣ, ಪಲ್ಕಿನ, ಪಡು. ವಚ್ಚು, ಗಟ್ಟು ಇಂಥಹ ಅನೇಕ ಶಬ್ದಗಳು ತೆಲುಗು ಭಾಷೆಯಲ್ಲಿ ಉಳಿದು ಬಂದಿರುವ ಶಬ್ದಗಳಾಗಿವೆ.

ಈ ಶಬ್ದಗಳಿಂದಾಗಿ ಶಾಸನಗಳು ಮೂಲದ್ರಾವಿಡಭಾಷಾ ಶಾಸನಗಳಾಗಿದ್ದು, ಈ ಕಾರಣದಿಂದ ಅವುಗಳ ಕಾಲಮಾನ ವನ್ನು ಕ್ರಿಶ. ೬ನೆಯ ಶತಮಾನಕ್ಕೆ ಒಯ್ಯುವ ಅವಶ್ಯಕತೆ ಏನು ? ಮತ್ತು ಶಾಸನ ಲಿಪಿ ಶಾತವಾಹನರ ಲಿಪಿ ಮುಂದುವರಿಕೆಯಾಗಿದ್ದು, ಅವು ವಿಷ್ಣುಕುಂಡಿನ, ಶಲಂಕಾಯನ, ಮಯೂರವರ್ಮ, ಮತ್ತು ಹಿರೆಹಡಗಲಿ ಪಲ್ಲವ ಶಿವಸ್ಕಂದವರ್ಮನ ತಾಮ್ರಪಟ ಲಿಪಿಮಾದರಿ ಹೊಂದಿರುವುದರಿಂದ ಶಾಸನಗಳ ಕಾಲಮಾನವನ್ನು ಬ್ರಾಹ್ಮಿಲಿಪಿ ಮಾದರಿಯಲ್ಲಿಯೇ ಕನಿಷ್ಠ ಕ್ರಿಶ. ಮೂರನೆಯ ಶತಮಾನದಿಂದ ಪ್ರಾರಂಭಿಸಬೇಕಾಗುತ್ತದೆ. ಆದರೆ ಏಕಾಕ್ಷರ ಶಬ್ದಗಳು ಮತ್ತು ಮೂಲದ್ರಾವಿಡ ಶಬ್ದಗಳು ಇನ್ನೂ ಪುರಾತನ ಕಾಲಮಾನವನ್ನು ಸೂಚಿಸುವುದರಿಂದ, ಬ್ರಾಹ್ಮಿಲಿಪಿ ಕಾಲಮಾನ

ಲೆಕ್ಕಚಾರ ತಪ್ಪಿಹೋಗಿ, ಅಶೋಕ ಮೂಲದ್ರಾವಿಡ ಲಿಪಿಯಲ್ಲಿ ಶಾಸನಗಳನ್ನು ಹಾಕಿಸಿದ್ದಾನೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಅಶೋಕನ ಕಾಲಕ್ಕಾಗಲೇ ದ್ರಾವಿಡ ಉಪಭಾಷೆಗಳು ಅಸ್ತಿತ್ವದಲ್ಲಿದ್ದು, ತಮ್ಮದೇ ಲಿಪಿ ಕಂಡುಕೊಂಡಿದ್ದವಲ್ಲದೇ, ಆಗಲೇ ವೃತ್ತ ರೂಪಕ್ಕೆ ಪರಿವರ್ತಿತಗೊಳ್ಳುತ್ತಿದ್ದವೆದೆನಿಸುತ್ತದೆ. ಅಶೋಕನು ತನ್ನ ಶಾಸನಗಳು ಯಾವುದೇ ಒಂದು ದ್ರಾವಿಡ ಉಪಭಾಷಾ ಗುಂಪಿನ ಜನಸಾಮಾನ್ಯರಿಗೆ ಸೀಮಿತವಾಗದೇ ದಕ್ಷಿಣ ಭಾರತದ ದ್ರಾವಿಡ ಉಪಭಾಷೆಗಳ ಎಲ್ಲ ಜನಾಂಗಕ್ಕೂ ಓದಲವಕಾಶ ಇರಬೇಕೆಂಬ ಕಾರಣಕ್ಕಾಗಿ, ಹಾಗೂ ಆ ದೂರದೃಷ್ಟಿಯಿಂದಲೇ ; ಇನ್ನೂ ಅಸ್ತಿತ್ವದಲ್ಲಿದ್ದ ಮೂಲದ್ರಾವಿಡ ಲಿಪಿಯಲ್ಲಿಯೇ ಶಾಸನಗಳನ್ನು ಹಾಕಿಸಿದ್ದಾನೆನ್ನಬೇಕು.

ಶಾಸನಭಾಷೆ- ರಾಜಭಾಷೆಗೂ ಜನಸಾಮಾನ್ಯರ ಭಾಷೆಗೂ ಕಾಲಕ್ರಮೇಣದಲ್ಲಿ ಸಂಪರ್ಕವೇರ್ಪಟ್ಟಂತೆ ರಾಜಭಾಷೆ ಜನಸಾಮಾನ್ಯರ ಭಾಷೆಯ ಮೇಲೆ ಪ್ರಭಾವ ಬೀರುವುದು ಸರ್ವೇಸಾಮಾನ್ಯ. ಅದರಲ್ಲೂ ಜನಸಾಮಾನ್ಯ ಭಾಷೆಯ ವಿದ್ವನ್ಮಣಿಗಳು ಸ್ವೀಕರಿಸುವ ಪ್ರಮಾಣದ ಮೇಲೆ ಪ್ರಭಾವಿತವಾಗಿರುತ್ತದೆ. ಸ್ವತಃ ರಾಜನೇ ವ್ಯಾಮೋಹಿಯಾದಾಗ ಅದರ ಪರಿಣಾಮ ಹೇಳಲಸದಳ. ದಕ್ಷಿಣಭಾರತದಲ್ಲಿ ನಡೆದುದು ಅದೆ. ಸ್ವತಃ ದ್ರಾವಿಡರಾಜರೇ ಸಂಸ್ಕೃತಭಾಷೆಯನ್ನು ರತ್ನಗಂಬಳಿ ಹಾಸಿ ಸ್ವಾಗತಿಸಿದರು. ಅಲ್ಲದೆ ಆ ಪರಂಪರೆಯ ಮಹಾಕಾವ್ಯ ಗಳ ಪುರುಷೋತ್ತಮರ ಮೂಲದಲ್ಲಿ ತಮ್ಮ ವಂಶ ಮೂಲವನ್ನು ಕಂಡುಕೊಳ್ಳಲೆಳಸಿದರು. ಅಂತಾಗಿ ಬೆಳೆದಾಗ, ಮೂಲಭಾಷೆಯ ಬಗ್ಗೆ ಅನಾದರ ಬೆಳೆದು ತಾತ್ಸಾರಕ್ಕೊಳಗಾಯಿತು. ರಾಜಮಾನ್ಯತೆಯೇ ಇಲ್ಲದ ಭಾಷೆಯು ವಿದ್ವತ್ ಜನರಿಂದ ಸಹಜವಾಗಿಯೇ ದೂರವಾಗಿ ಮೂಲ ಭಾಷೆ ಕೇವಲ ಜನಸಾಮಾನ್ಯರ ಭಾಷೆಯಾಗಿಯೇ ಉಳಿದು ಬಿಡುತ್ತದೆ. ಇಂಥಹ ಪರಿಸ್ಥಿತಿಯಲ್ಲಿ ರಚನೆಗೊಂಡ ಯಾವುದೇ ವಿಷಯಗಳು ಸಾಮಾನ್ಯನ ಭಾಷೆಯೊಡನೆ ಅಂತರ ಕಳೆದು ಕೊಂಡರೂ, ವಿದ್ವಜ್ಜನರ ದಿನನಿತ್ಯದ ಸಂಪರ್ಕ ದೊಂದಿಗೆ ಜನಸಾಮಾನ್ಯನೂ ಪ್ರಭಾವಕ್ಕೊಳಗಾಗಿ ತನ್ನ ಮೂಲ ಭಾಷೆಯಿಂದ ದೂರ ಸರಿಯುತ್ತ ಸಾಗುತ್ತಾನಾದರೂ ಅದರಿಂದ ಪೂರ್ಣ ದೂರ ಸರಿಯುವುದಿಲ್ಲ. ಏಕೆಂದರೆ ಅದು ಅವನ ಮಾತೃಭಾಷೆ. ಇನ್ನೊಂದು ಭಾಷೆಯ ಪ್ರಭಾವ ವಾದಾಗಲೂ ಪೂರ್ಣವಾಗಿ ಅದನ್ನೇ ಅವಲಂಬಿಸುವುದೂ ಇಲ್ಲ.

ತೋಲ್ಕಾಪ್ಪಿಯಾದ ಭಾಷೆಗೂ ತದನಂತರದ ಸಂಗಂ ಸಾಹಿತ್ಯಕ್ಕೂ ಆ ನಂತರದ ಸಾಹಿತ್ಯಕ್ಕೂ ಸಂಸ್ಕೃತ ಶಬ್ದಗಳೊಡನೆ ಬದಲಾದ ಸಾಹಿತ್ಯವಾಗಿ ಕಂಡರೂ ಅದರಲ್ಲಿ ದ್ರಾವಿಡದ ಕಂಪನ್ನು ಕಾಣಬಹುದೇ ಹೊರತಾಗಿ ಸಂಸ್ಕೃತವನ್ನಲ್ಲ. ಭಾಷೆ ಅನುವಂಶಿಕವಾಗಿ ಜನಸಾಮಾನ್ಯರಲ್ಲಿ ಬೆಳೆದು ಬರುತ್ತದೆಯೇ ಹೊರತಾಗಿ, ವಿದ್ಯಾಕೇಂದ್ರಗಳ ಗುರುಗಳಿಂದ ಕೇವಲ ಶಿಷ್ಟತೆಯನ್ನು ಮಾತ್ರ ಕಲಿಯಬಹುದಾಗಿದೆ. ಪ್ರೊ. ಜವರೇಗೌಡರು ಹೇಳುವಂತೆ....ಭಾಷೆ ಭೌತಿಕ ವಸ್ತುಗಳಂತೆ ಸುಲಭವಾಗಿ ನಾಶವಾಗುವಂಥ ಪದಾರ್ಥವಲ್ಲ.... ಒಂದೊಂದು ಪದವೂ ಯುಗಯುಗಾಂತರದ ಸಂಸ್ಕಾರವನ್ನು ಪಡೆದಿರುವ ಜೀವಾಣು, ಸಾವಿಲ್ಲದ ಕೇಡಿಲ್ಲದ ಜ್ಯೋತಿ, ಇದು ಪ್ರಾಚೀನ ಸಂಸ್ಕೃತಿಯ ಮೇಲೆ ಅಮೂಲ್ಯವಾದ ಬೆಳಕು ಬೀರುವ ಮಹತ್ತರ ಸಾಧನೆಗಳಲ್ಲೊಂದಾಗಿದೆ....[ದ್ರಾವಿಡ ಭಾಷಾ ವಿಜ್ಞಾನ- ಮುನ್ನುಡಿ ಪು. ೯] ಸಂಸ್ಕೃತ ಭಾಷಾ ಪ್ರಭಾವ ದ್ರಾವಿಡ ಉಪಭಾಷೆಗಳ ಮೇಲೆ ಎಷ್ಟೇ ಆಗಿದ್ದರೂ ಮೂಲದ್ರಾವಿಡ ಭಾಷೆಯ ಶಬ್ದಗಳು ಈ ಶಾಸನಗಳಲ್ಲಿ ಎದ್ದು ಕಾಣುತ್ತವೆ. ಆ ಶಬ್ದಗಳ ಅರ್ಥವನ್ನು ಕೇವಲ ತೆಲುಗು ಭಾಷೆಯಲ್ಲಾಗಲಿ, ಅಥವಾ ಇನ್ನಾವುದೆ ಉಪಭಾಷೆಯಲ್ಲಾಗಲಿ ಅರಿಯಲು ಸಾಧ್ಯವಿಲ್ಲ. ಸದ್ಯಕ್ಕೆ ಶಾಸನಾಶಯವನ್ನು ಗುರುತಿಸುವಲ್ಲಿ, ಅತಿ ಮುಖ್ಯಪಾತ್ರ ವಹಿಸುವ ಶಬ್ದಗಳೆಂದರೆ ಮೇಲೆ ಹೇಳಲಾದ ಮೂಲದ್ರಾವಿಡಭಾಷಾ ಶಬ್ದಗಳು. ಅದರಲ್ಲೂ ಎರಿಕಲ್ಲ, ಕಾಲು ಅತಿಮಹತ್ವದ ಶಬ್ದಗಳಾಗಿದ್ದು, ಶಾಸನಾಶಯವೇ ಆ ಶಬ್ದಗಳ ಮೇಲೆ ನಿಂತಿದೆ.

ಎರಿಕಲ್ಲ : ರೇನಾಡು ಚೋಳ ರಾಜರ ಪುರಾತನ ಶಾಸನಗಳು ಬಹುತೇಕ ಎರಿಕಲ್ಲ ಶಬ್ದದಿಂದ ಪ್ರಾರಂಭ ವಾಗುತ್ತವೆ. ಇದು ಪುರಾತನ ದ್ರಾವಿಡರ-ಕಲ್ಲ, ದ್ರಾವಿಡಾರ್ಯರ-ಶಿವಲಿಂಗಕ್ಕೆ ಸಮಾನವಾದ ಶಬ್ದವಾಗಿದೆ. ಎರಿಕಲ್ಲ ಶಬ್ದ ಎರಿ+ಕ+ಅಲ್ಲ ಮೂಲದಲ್ಲಿ ವಿಭಜನೆಯಾಗುವ ಈ ಶಬ್ದ ವಿದ್ವತ್ ಜನರಲ್ಲಿ ಮರೆತು ಹೋಗಿರುವ ಶಬ್ದವೇ ಆಗಿದ್ದರೂ, ಈ ರಾಜ ದೇವತೆ ಜನಸಾಮಾನ್ಯರಲ್ಲಿ ಈ ಕಾಲದಲ್ಲೂ ನಿರಂತರವಾಗಿ ಉಳಿದು ಬೆಳೆದು ಬಂದಿರುವ ಪುರಾತನ ದೇವತೆಯಾಗಿದೆ. ಎರಿಕಲ್ಲ ಇದು ಮಯೂರವರ್ಮನ ಶಾಸನದ 'ನಮಃ ಶಿವಾಯ' ಶಬ್ದಕ್ಕೆ ಸರಿಸಮಾನವಾದುದಾಗಿದ್ದು, ಎರಿಕಲ್ಲ ಮೂಲದ್ರಾವಿಡ ಶಬ್ದವಾಗಿದ್ದು, ನಮಃಶಿವಾಯ ದ್ರಾವಿಡಾರ್ಯ ಶಬ್ದವಾಗಿರುವುದು, ಈ ಶಾಸನಗಳ ಕಾಲಮಾನ ವ್ಯತ್ಯಾಸವನ್ನು ನಿಸ್ಸಂದೇಹವಾಗಿ ಗುರ್ತುಪಡಿಸುತ್ತವೆ.

ಎರಿ+ಕ+ಅಲ್ಲ ಎಂದು ಮೂರು ಶಬ್ದಗಳನ್ನು ಹೊಂದಿರುವ ಈ ಶಬ್ದದಲ್ಲಿ, ಎರ್=ಕೆಂಪಗೆ, ಜ್ಯೋತಿರಾಗ್ನಿ ಸ್ವರೂಪ, ಥಳಥಳನೆ ಹೊಳೆಯುವ, ಕಾಂತಿಯುಕ್ತ, ಸ್ವಯಂಪ್ರಕಾಶಿಸುವ, [ದ್ರಾವಿಡಿಯನ್ ಎಟ್ಮಾಲಜಿಕಲ್ ಡಿಕ್ಷನರಿ, ಸಂಖ್ಯೆ-೬೯೪] ಎಂದು ಶಿವನ ಜ್ಯೋತಿರಾಗ್ನಿ ಸ್ವರೂಪವನ್ನು ವರ್ಣನಾತ್ಮಕ ಸೂಚಕವಾಗಿ ಹೇಳುವ ಶಬ್ದವಾಗಿರುತ್ತದೆ.


ಇದು ಮೂಲದ್ರಾವಿಡ ಶಬ್ದವಾಗಿದ್ದು, ಪ್ರಸ್ತುತ ಶಾಸನಗಳಲ್ಲಿಯೇ ಅದು....ಎರೇಗಿ ಪರ ರೇವಮಿಯಾರಿಕನ್ ಎಂದು ಮಾಲೆಪಾಡು [IOAP, Cuddapa, Part-I, I.N. No. 21] ಶಾಸನದಲ್ಲಿ ಉಕ್ತಗೊಂಡಿರುತ್ತದೆ. .... ಎರಿಪಾರಕ ಎಂದು [SII-606] ಹೇಳುತ್ತದೆ. ಅಲ್ಲದೇ...ಎರ್ (ಯುರ) ಕುಲಗಟ್ಟುಳು....ವೆಲ್ಲುರ್ತಿ IOAP, Cuddapa Dt., Part I, Inb No. 18] ಶಾಸನ ಹೇಳುತ್ತದೆ. ಈ ಅಯ್ಯರ ಕುಲಗಟ್ಟಳು ಎಂದು ಹೇಳುವುದು ಜಾತಿ ಸಂಬಂಧವಿರಬಹುದು. ಈ ಎಲ್ಲ ಶಾಸನಗಳು ದಾನ ಶಾಸನಗಳಾಗಿರುವುದರಿಂದ ಈ ಶಬ್ದ ದೈವಸಂಬಂಧಿತವಾಗಿ ಈ ಶಾಸನಗಳಲ್ಲಿ ಉಕ್ತಗೊಂಡಿರುವುದು ಸಹಜವೇ ಆಗಿರುತ್ತದೆ.

ಇದಕ್ಕೂ ಮಿಗಿಲಾಗಿ ಸಾಹಿತ್ಯಿಕ ಸಾಕ್ಷ್ಯಗಳು ಹಲವಾರು ಇದ್ದು ; ಅವುಗಳಲ್ಲಿ ಅತ್ಯಂತ ಗಮನಾರ್ಹವಾದುದೆಂದರೆ, ಸಂಗಂ ಸಾಹಿತ್ಯದ ಅಹಾನಾನೂರಲ್ಲಿ ಊಕ್ತಗೊಂಡಿರುವ ಎರುಮೈನನ್ನಾಟ್. ಇದನ್ನು ಇತಿಹಾಸಕಾರರು, ಎರ್ಮೈನಾಡು ಎನ್ನುತ್ತಲೇ ಅದನ್ನು ಎಮ್ಮೆನಾಡೆಂದು, ಶ್ರೀ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಅನ್ವಯಿಸಿ ಮಹಿಷಾಸುರನ ನಾಡೆಂದು, ಮೈಸೂರ ಪ್ರದೇಶವೆಂದು ಹೇಳಿಬಿಟ್ಟಿರುವುದು ಅನರ್ಥಾಥವನ್ನು ಮಾಡಿದಂತಾಗಿದೆ. ಎರ್+ಉಮೆ+ನಾಟ್ ಅಂದರೆ ಎರ್=ಶಿವಲಿಂಗ, ಉಮೆ=ಜಗನ್ಮಾತೆ, ನಾಟ್=ನಾಡು ಅಂದರೆ ಶಿವ ಉಮೆಯಯರ ನಾಡು ಎನ್ನುವುದಾಗಿರುತ್ತದೆ. ಉಮೆಯ ಪಕ್ಕದಲ್ಲಿ ಶಿವನಲ್ಲದೆ ಇನ್ನಾರು ಇರಲು ಸಾಧ್ಯ. ಎರುಮೈನನ್ನಾಟ್ ತಮಿಳುನಾಡಿನ ಉತ್ತರಕ್ಕೆ ಇರುವುದನ್ನು, ಮತ್ತು ಅಲ್ಲಿ ಅಇರಿಅರು=ಅಇರಿನದಿಯನ್ನೂ ನಿರ್ದಿಷ್ಟ ಪಡಿಸುವುದರಿಂದ, ಅಯ್ಯಾಹೊಳೆ=ಅಇರಿಅರು ಎಂದು ಕರೆಸಿಕೊಳ್ಳುತ್ತಿರುವ ಕೃಷ್ಣಾನದಿಯೇ ಅಇರಿಅರು ನದಿ ಎನ್ನುವುದು ಸ್ಪಷ್ಟವಿದ್ದು, ತಮಿಳುನಾಡಿನಿಂದ ಉತ್ತರಕ್ಕಿರುವ ಈ ಪ್ರದೇಶವೇ ಎರುಮೈನನ್ನಾಟ್ಟು=ಎರ್ರ+ಉಮೆಯ+ನಾಡು ಎನ್ನುವುದಾಗುತ್ತದೆ.


ಪುರಾತನ ಕಾಲದಲ್ಲಿ ದೇವತೆಗಳ ಹೆಸರಿನಲ್ಲಿ ನಾಡು, ದೇಶಗಳಿದ್ದ ಪರಂಪರೆ ನಮ್ಮ ದೇಶದಲ್ಲಿದೆ. ಕ+ಲಿಂಗ=ಕಲಿಂಗ ರಾಷ್ಟ್ರ, ತ್ರಿಲಿಂಗದೇಶ, ಮುಂತಾದವುಗಳನ್ನು ಉದಾಹರಿಸಬಹುದಾಗಿದೆ. ಅಲ್ಲದೇ ಈ ಭಾಗದ ಜನಸಾಮಾನ್ಯರು ಎರ್ರನನ್ನು, ಎರ್ರಮ್ಮನನ್ನೂ ತಮ್ಮ ಪರಂಪರೆಯಲ್ಲಿ ಅಧಿದೇವತೆಯನ್ನಾಗಿ ಉಳಿಸಿಕೊಂಡು ಬಂದಿದ್ದಾರೆ. ಆ ಕಾರಣದಿಂದಲೇ ಈ ಭಾಗದಲ್ಲಿ ಈ ದೇವತೆಯ ಹೆಸರಿನಲ್ಲಿ ಜನಸಾಮಾನ್ಯರ ನಾಮಗಳು, ಸ್ಥಳನಾಮಗಳು, ಗ್ರಾಮನಾಮಗಳು ಸಾರ್ವತ್ರಿಕವಾಗಿವೆ. ಎರೆಯ್ಯ, ಎರಕಲ್ಲಯ್ಯ, ಎರೆಮ್ಮ, ಎರೆಪ್ಪ, ಎರಕಲ್ಲಪ್ಪ, ಎರಕಲ್ಲಮ್ಮ, ಎನ್ನುವ ಜನಪ್ರಿಯ ನಾಮಗಳು ಸರ್ವ ಸಾಮಾನ್ಯವಾಗಿವೆ. ಶೀರಾ ಇತ್ತೀಚೆಗೆ ಚೆಳಗುರ್ಕಿ ಎರ್ರಿಸ್ವಾಮಿಗಳು ತುಂಬಾ ಪ್ರಸಿದ್ಧರು. ಅಲ್ಲದೆ ಸ್ಥಳನಾಮ, ಗ್ರಾಮ ನಾಮಗಳಾಗಿ, ಬಳ್ಳಾರಿ ಜಿಲ್ಲೆಯ ಅಶೋಕ ಶಿಲಾಶಾಸನದ ಹುಡೆಗೋಳಮ್, ಮತ್ತು ಬೃಹತ್ ಶಿಲಾಯುಗ ಕಾಲದ ತೆಕ್ಕಲಕೋಟೆ, ಸಂಗನಕಲ್ಲು ಸಮೀಪದ ಐತಿಹಾಸಿಕ ನೆಲೆಗಳನ್ನೊಳಗೊಂಡಿರುವ ಎರ್ರಕಲ್ಲ ಗ್ರಾಮ, ಎರಗುಡಿ, [ಬಹಳಷ್ಟು ಗ್ರಾಮಗಳು ಕೂಡ್ಲಗಿ ತಾಲೂಕಿನಲ್ಲಿರುತ್ತವೆ] ಎರ್ರಮ್ಮನಹಳ್ಳಿ, ಎರ್ರಬಳ್ಳಿ, ಎರಂಗಳಿಗಿ, ಹರಪನಹಳ್ಳಿ ತಾಲೂಕಿನ ಎರ್ರಮ್ಮನಗುಡಿ, ಇವಲ್ಲದೇ ಐತಿಹಾಸಿಕ ಸಾಕ್ಷ್ಯಗಳನ್ನೊಳಗೊಂಡಿರುವ ಕಡಪಾ ಜಿಲ್ಲೆಯ ಎರ್ರಗುಡಿ, ಎರ್ರಗುಡಿಪಾಡು, ರಾಯಚೂರ ಜಿಲ್ಲೆಯ ಎರ್ರಗಾರ, ಬೆಳಗಾಮ್ ಜಿಲ್ಲೆಯ ಎರ್ರಗಟ್ಟಿ, ತಮಿಳುನಾಡಿನ ಎರಿಯೋಡು, ಎರಕಾಡ ಹೀಗೆ ಸಾವಿರಾರು ವ್ಯಕ್ತಿನಾಮಗಳು, ಸ್ಥಳನಾಮಗಳು ಸಿಗುತ್ತವೆ. ಇದೊಂದು ಪ್ರತ್ಯೇಕ ಅಧ್ಯಯನ ವಸ್ತುವೇ ಆಗುತ್ತದೆ.

ಎರಿ+ಕ+ಅಲ್ಲ, ಕ=ಲಿಂಗ ಸ್ವರೂಪಶಿವ, ಈ ದೇವತೆ ಇತಿಹಾಸಪೂರ್ವಥಲ್ಲಿ ಭಾರತದಿಂದ ಹಿಡಿದು ಈಜಿಪ್ತವರೆಗೆ ಪೂಜಿತವಾಗುತ್ತಿದ್ದ ದೇವತೆಯಾಗಿದೆ, ಆ ಕಾರಣದಿಂದಲೇ ಕ್ರಿ.ಪೂ. ೧೪೮೦ರಲ್ಲಿ ಈಜಿಪ್ತಿನಲ್ಲಿ ಸ್ಥಾಪಿಸಲ್ಪಟ್ಟ ದೇವತೆಯಾಗಿದ್ದು, ಈಜಿಪ್ತಿನ ಪುರಾತನ ೧೧೫ ದೇವತೆಗಳಲ್ಲಿ ಒಂದು ದೇವತೆಯಾಗಿದೆಯಲ್ಲದೇ, ರ+ಉಕ್+ಕವೇದ=ರು(ಋ)ಗ್ವೇದದ ೧೦ನೆಯ ಮಂಡಲದಲ್ಲಿ ಈ ದೇವತೆಯ ಒಂದು ಸೂಕ್ತವೇ ಇದ್ದು, ಅದರ ಒಂದು ರುಚೆಯಲ್ಲಿ ಪರಬ್ರಹ್ಮ ಸ್ವರೂಪನೆಂದು, ಜಗತ್ ಸೃಷ್ಟಿಕರ್ತ, ಲಯಕರ್ತ, ಪರಿಪಾಲಕನೆಂದು, ಬ್ರಹ್ಮಾಂಡಸ್ವರೂಪನೆಂದು ಸ್ತುತಿಸುತ್ತದೆ. [ರು.ಮಂ. ೧೦, ಕ ಸೂಕ್ತ-೨] ಶ್ರೀ ಶಂಬಾಜೋಷಿಯವರು ಈ ದೇವತೆಯನ್ನು ಮೂಲನಿವಾಸಿಗಳ ದೇವತೆಯೆಂದು ತಮ್ಮ ಒಂದು ಪುಸ್ತಕದಲ್ಲಿ ಸ್ಪಷ್ಟಪಡಿಸಿರುತ್ತಾರೆ. ಈಜಿಪ್ತಿನಲ್ಲಿ ಪ್ರತಿಷ್ಠಾಪಿತ 'ಕ' ದೇವತೆಯನ್ನನುಸರಿಸಿ ಪ್ರಸ್ತುತ ಲೇಖನದಲ್ಲಿ ಲಿಂಗವೆಂದು ಹೇಳಲಾಗಿದೆ. ಎರಿ+ಕ+ಅಲ್ಲ, ಅಲ್ಲ=ಎಲ್ಲಬಲ್ಲವನು, ಒಟ್ಟಾರೆ ಎರಿಕಲ್ಲ ಅರ್ಥ "ಎಲ್ಲಬಲ್ಲಜ್ಯೋತಿರಾತ್ನಿಸ್ವರೂಪಶಿವಲಿಂಗ" ಅನ್ನುವುದಾಗಿದೆ.

ಕಾಲು : ಕಾಲು ಇದು ದ್ರಾವಿಡ ಶಬ್ದ. ಕಾಲು=ಪಾದ ಎನ್ನುವುದಾಗಿರುತ್ತದೆ. ಹಿರಿಯ ಇತಿಹಾಸಕಾರರು ಈ ಶಬ್ದವನ್ನು ಹಾಗೆಯೆ ಗುರುತಿಸಿರುತ್ತಾರೆ. .... ರೇವಣಕಾಲು=ರೇವಣಪಾದಾಃ [E.I. P. 224] ಎಂದು ಗುರುತಿಸಿದ್ದಾರೆ. ಶಾಸನಗಳ ಮೂಲದಲ್ಲಿ ಅದು ಅದೇ ಅರ್ಥವನ್ನು ಹೊಂದಿರುತ್ತದೆ. ಭಾರತ ದೇಶದಲ್ಲಿ ಗುರುಪಾದ, ಶಿವಪಾದ, ಪಿತೃಪಾದ, ಮಾತೃಪಾದ ಅತ್ಯಂತ ಪೂಜನೀಯವಾಗಿರುತ್ತದೆ. ಈ ಶಾಸನಗಳು ದಾನ ಶಾಸನಗಳಾಗಿದ್ದು, ದಾನ



2. Kalamalla



Indukuru

ಸ್ವೀಕರಿಸಿದವರು ಭಾರತದ ಅತ್ಯಂತ ಪುರಾತನ ಜೀವಂತ ಧರ್ಮವೊಂದರ ಸ್ಥಾಪಕರಾಗಿದ್ದು, ದಕ್ಷಿಣ ಭಾರತದ ದ್ರಾವಿಡ ಧಾರ್ಮಿಕ ಇತಿಹಾಸಕ್ಕೆ ಅತ್ಯಮೂಲ್ಯ ದಾಖಲೆಗಳೇ ಆಗಿರುತ್ತವೆ.

ಶಾಸನಗಳು : ೧ ಶಾಸನಸಿಕ್ಕ ಗ್ರಾಮ–ಕಲಮಲ್ಲ, ತಾಲೂಕ–ಕಮಲಾಪುರಮ್, ಜಿಲ್ಲೆ–ಕಡಪಾ, ಆಂಧ್ರಪ್ರದೇಶ, ಚನ್ನಕೇಶವ ದೇವಸ್ಥಾನ ಆವರಣ, ಗುರುತಿಸಿರುವ ಕಾಲಮಾನ–ಕ್ರಿ.ಶ. ೬ನೆಯ ಶತಮಾನ, ಪ್ರಸ್ತುತ ನಿಗದಿತ ಕಾಲಮಾನ–ಕ್ರಿ.ಶ. ೨–೩ನೆಯ ಶತಮಾನ, ಅಥವಾ ಅದಕ್ಕೂ ಹಿಂದಕ್ಕೆ,

೧ ––––

೨ ಕಲ್ಮು[ತು]ರಾ–

೩ ಜು ಧನಂಜ–

೪ ಯು [ರು] ರೇನಾ–

೫ ಣ್ಡು ಎಳನ್

೬ ಚಿ [ರು]ಂಬೂರಿ

೭ ರೇವಣಕಾಲು [ಪಂ]

೮ ಪು ಚೆನೂರುಕಾ[ಜು]

೯ ಅ [ಟ್]ಕಳಾ [ಊ]ರಿ

೧೦ [ಣ್ಡ]ವಾರು [ಊ]ರಿ

೧೧ –––––

೧೨ ––––

೧೩ ––––

೧೪ –––––

೧೫ –––ಪ೩~ಚಮ–

೧೬ ಹಾಪಾತಕಸ—

೧೭ ಕು (ಇನ್ಸ್ಕ್ರಿಪ್ಷನ್ಸ್ ಆಫ್ ಆಂಧ್ರಪ್ರದೇಶ, ಕುಡ್ಡಾಫ್ ಡಿಸ್ಟ್ರಿಕ್ಟ್– ಪಾರ್ಟ್–೧ ಶಾ.ಸಂ. ೨)

ಶಬ್ದಾರ್ಥ– ೧) ಕಲ್ಲ=ಶಿವ, ಶಿವಲಿಂಗ ೨) ಮುತ್ತು–ಆದಿಕಾರಣನು, ಪುರಾತನನು [ಟಿ. ಬುರ್ರೊವ್, ಎಮ್.ಬಿ. ಎಮಿನೆಬ.–ಡಿ.ಇ.ಡಿ. ಸಂಖ್ಯಾ–೪೧೩೩] ೩) ಎಳನ್=ಆಳುವ, ಆಳುತ್ತಿರುವ ೪) ಪಂಪು=ಎಲ್ಲ ಕಾಲದಲ್ಲು [ಟಿ. ಬುರ್ರೊವ್, ಎವ್.ಬಿ.ಎಮಿನೆಬ.–ಡಿ.ಇ.ಡಿ. ಸಂಖ್ಯಾ–೩೨೬೫] ೫) ಕಾಜು=ಗುರು ೬) ಅಳ್<ಅಳ್ಳು<ಅರಳು= ಉದ್ಭವಿಸು ೭) ಕ=ಆತ್ಮಲಿಂಗ ೮) ಇಳಾ=ಭೂಮಿ

INSCRIPTIONS OF ANDHRA PRADESH

Cuddapah District I

1

(No 366 of 1967)

GANGAPERURU

(Siddhavatam Taluk)

On a stone lying in front of a house

In late Brāhmi characters and Prākrit language. It records the installation of the chhāyā-*khambha* by certain Sivadāsa son of [Pari] āchariya of (Bhārā)dasa-gōtra.

TEXT

1. [పరి] ఆచరియ పుతస
2. భారాదసగోతస సివదాస [గాగ--భ]
3. స గామెస గె [- - - స] ఛాయ ఖంభ

1. [Pari] ācharıya putasa
2. Bhārādasa-gōtasa Sivadāsa [Gārga--bha]
3. sa gāmesa ge [- - sa] chhāya khambha

II

KALAMALLA

(Kamalapuram Taluk)

On a broken stone in the Chennakēsava temple

Rēnāti Chōḷa

This broken record is in archaic Telugu of 6th century A.D. It mentions [Bri]kal Muturāja Dhanamjaya who is said to have been ruling Rēnāṇḍu. Certain Chendrukāju on deputation of Revaṇakālu of Chirumbūru is stated to have [made some gift].

CI—3

2 INSCRIPTIONS OF ANDHRA PRADESH : CUDDAPAH DISTRICT—I

TEXT

1. - - - - -	1. . . . . .
2. కల్ము[తు]రా-	2. kal Mu[tu]rā-
3. జు ధనంజ-	3. ju Dhanamja-
4. యు ఱ రేనా-	4. yu ṟa Rēnā-

5. డు ఏళన్	5. ṛḍu Ējan
6. చిఱుంబూరి	6. Chirumbūri
7. రేవణకాలు [పం]	7. Rēvaṇakālu [paṁ]
8. పు చెన్నూరుకా[జు]	8. pu Chennūrukā[ju]
9. అ ళి క ళా ఊరి	9. aḷikaḷā ūri
10. [ణ్డ]వారు ఊరి	10. [ṇḍa]vāru ūri
11. - - - - -	11. - - - - -
12. - - - -	12. - - - -
18. - - - -	13. - - - -
14. - - - - -	14. - - - - -
15. - - - పఞ్చమ-	15. - - - pañchama-
16. హాపాతకస - -	16. hāpātakasa - -
17. కు	17. ku

ಶಾಸನಾರ್ಥ– ಶಿವ ಆದಿಕಾರಣನು ರಾಜು ಧನಂಜಯ [ರು] ರೇನಾಡು ಆಳುತ್ತಿರುವಾಗ ಚಿರುಂಬೂರಿನ ರೇವಣಪಾದಂಗಳನ್ನು [ಎಲ್ಲ ಕಾಲದಲ್ಲು] ಪೂಜಿಸುವಅಞಯ ಗುರು ಶಿವ ಉದ್ಭವಿಸಿದ ಊರಿನವರು ಊರಿ––––ಪಞ~ಚಮಹಾಪಾತಕಸಕು

೩. ಶಾಸನ ಸಿಕ್ಕ ಊರು–ಪೊತ್ತಲದುರ್ತಿ, ತಾಲೂಕ–ಕಮಲಾಪುರಮ್, ಜಿಲ್ಲಾ–ಕಡಪಾ, ಆಂಧ್ರಪ್ರದೇಶ.

ಕಾಲ : ಕ್ರಿ.ಶ. ೭ನೆಯ ಶತಮಾನ.

ಪ್ರಸ್ತುತ ನಿಗದಿಪಡಿಸಿದ ಕಾಲ–೫–೬ನೆಯ ಶತಮಾನ.

೧ ಸ್ವಸ್ತಿ [॥] ಶ್ರಿ ಸೋಳ ಮಹಾರಜುಲ್ಲೋ[ಲ್ಲೆ]ಳನ್ ಇನ್ಪುಟಿಲೋಲಿ

೨ ಅಣಪೋತುಲು ರೇವಣಕಾಲು ಪುದ್ದಣಕಾಲು ಇಚ್ಚಿನಪ–

೩ ನ್ನಸ ಪೆನ್ವಾರ ಇಶ ರೆನಿಕಿನ್[॥*] ತೆನಿ ಟಿ ಚ್ಚಿನ ವಾ ನ್ರು [ಪ]–

೪ [ಞ~ಚ್] ಮಹಾಪಾತಕು ನ್ರ ಕುನ್ [॥*]

೫ ಅಸಿವ್ವೆರುವು ಲಿಖಿತಮ್ [॥*] (ಇನ್ಸ್ಕ್ರಿಪ್ಷನ್ಸ್ ಆಫ್ ಆಂಧ್ರಪ್ರದೇಶ, ಕುಡ್ಡಾಫ್ ಡಿಸ್ಟ್ರಿಕ್ಟ್–ಪಾರ್ಟ್–೧ ಶಾ.ಸಂ. ೪)

ಶಬ್ದಾರ್ಥ– ಇನ್ಪುಳೊಲಿ=ಕೋರಿಕೆಯಂತೆ [ಟಿ. ಬರ್ರೊವ್, ಎಮ್.ಬಿ.ಎಮಿನೆಓ.–ಡಿ.ಇ.ಡಿ. ಸಂಖ್ಯಾ–೩೯೮] ಪೋತುಲು=ಧರ್ಮ ಗುರುಗಳು ಪತಿ<ಪತುಲು<ಪೊತುಲು< ಪಂತುಲು [ಈಗ ತೆಲುಗಿನಲ್ಲಿ ಉಳಿದಿರುವ ಶಬ್ದ ಪಂತುಲು= ಗುರುಗಳು] ಪನ್ನಸ=ಭೂದಾನ ಪೆನ್ವಾರ್=ತೆಗೆದುಕೊಂಡವರು ಇಶರೇನಿಕಿನ್=ಈಶರೇಣುಕರು

ಶಾಸನಾರ್ಥ–ಚೋಳ ಮಹಾರಾಜರು ಆಳುತ್ತಿರುವಾಗ ಅವರ ಕೋರಿಕೆಯಂತೆ ರೇವಣರು ಹೊಸ ದೇಣುಕರು ಕೊಟ್ಟ ಭೂದಾನವನ್ನು ತೆಗೆದುಕೊಳ್ಳುತ್ತಿರುವವರು ಈಶರೇಣುಕರು. ಎಂದು ಶಾಸನ ಅರ್ಥವಿರುತ್ತದೆ.

೩. ಶಾಸನ ಸಿಕ್ಕ ಊರು–ನಲ್ಲಚೆರುವುಪಲ್ಲೆ, ತಾಲೂಕ–ಸಿದ್ಧವಟಮ್, ಜಿಲ್ಲಾ–ನೆಲ್ಲೂರು, ಆಂಧ್ರಾಪ್ರದೇಶ.

ಸ್ಥಳ–ಹಳೆಯ ಶಿವ ದೇವಸ್ಥಾನ, ಕಾಲ–೭ನೆಯ ಶತಮಾನ.

ಪ್ರಸ್ತುತ ನಿಗದಿಪಡಿಸಿದ ಕಾಲ–೫ನೆಯ ಶತಮಾನ.

೧ ನೆಯ ಭಾಗ–	೨ನೆಯ ಭಾಗ–
––––	––––
––––	––––
೧ ––ರಾಜು––	೧ ಕಳುಞ್ಜ
೨ ಣ್ಡು ಎಳ ಈ ನ್ತೆ –	೨ ತೆನಿ ಟಿ ಚ್ಚುವಾ–
೩ ದ್ದಿವಾಡಿ ಎರಿಗ–	೩ ಣ್ಡೆ ವಲ್ಲರಾಚನ್ದ್ರಾ–
೪ ಲ್ಲು ಮುತ್ತುರಾಜು	೪ ದಿಜ್ಜು ಬಾರಣಾ
೫ ಏಳ ಕಜ್ಜಳೂ ನ್ರು ಏ–	೫ ಸಿವೆರಿರ ವಧಿ
೬ ಳ ಚೋಳ ಮಹಾ	೬ ಸಿನವ ನ್ರು ಆಳು [ಬಾ]
೭ ರಾಜುಲ ತೆವುಳ್ ಮ–	೭ ಪಸಿಣ್ಡೆ ಮಿಚಿ
೮ [ಞ~ಚಿ]ಪೊರ್ರಿ	೮ ಕೊಳೊಚ್ಚೆ.
೯ ಯಾರು ಉಣ್ಡೆ–	
೧೦ ಲು ಉಜ್ಜಯಿ–	
೧೧ ನಿ ಇಚ್ಚಿ[ನ*] ಪನ್ನ ವಿ–	
೧೨ [ಸ*] ಗಂಜಿಪಾಱಿ ಮಾ–	
೧೩ [–] ಡಿಯಾರಿಕಿ ತೆನಿ	
೧೪ –ಕಿ—ಗೋ	
೧೫ ಣ್ಡಪು–––– (ಇನ್ಸ್ಕ್ರಿಪ್ಷನ್ಸ್ ಆಫ್ ಆಂಧ್ರಪ್ರದೇಶ, ಕುಡ್ಡಾಫ್ ಡಿಸ್ಟ್ರಿಕ್ಟ್–ಪಾರ್ಟ್–೧ ಶಾ.ಸಂ. ೯)	

ಶಬ್ದಾರ್ಥ– ಈಂತೆದ್ದಿವಾಡಿ=ದೊಡ್ಡವನಾದ, ತೆವುಳ=ಶಾವುಳ, ಶಾವಿನಲ್ಲಿ, ಮಞ~ಚಿ= ಒಳ್ಳೆಯ, ಪೊರ್ರಿ=ರಾಣಿ, ಉಣೆಲು=ಉಣ್ಣಲು, ಇಚ್ಚಿ[ನ]=ಕೊಟ್ಟದ್ದು ಪನ್ನವಿ[ಸ]=ಭೂದಾನವನ್ನು.

ಶಾಸನಾರ್ಥ– ಇಲ್ಲಿ ರೇಣುಕ, ಧೇನುಕ ಮರುಳ ಎಂಬ ಹೆಸರುಗಳು ಐತಿಹಾಸಿಕ ಪುರುಷರು ಎಂಬುದಕ್ಕೆ ಶಾಸನೋಕ್ತ ಸಾಕ್ಷಿಗಳು ಸಿಕ್ಕಂತಾಗಿದೆ ಎಂಬುದನ್ನು ಗಮನಿಸಬೇಕು. ಹೀಗಾಗಿ ಈ ಹೆಸರುಗಳು ಬರುವ ಪರಂಪರೆಯೂ ಐತಿಹಾಸಿಕ ಎಂಬುದನ್ನು ಸಾಕ್ಷೀಕರಿಸುತ್ತವೆ ಎನ್ನಬಹುದು. ಅಂತರಾತ್ಮದಲ್ಲಿ ಪರಮಾತ್ಮ ಪರಿಣಾಮಕಾರವಾಗುವ, ಆತ್ಮ ಪರಮಾತ್ಮ, ಲಿಂಗಾಂಗ ಸಾಮರಸ್ಯವನ್ನೆ ಹೇಳುತ್ತವೆ ಎಂಬುದೂ ಗಮನಾರ್ಹ.

ಡಾ. ಅಪ್ಪಣ್ಣ ಎನ್. ಹಂಜೆ*

ಪಾಶ್ಚಾಪುರದ ಪಾರ್ಶ್ವನಾಥ ಶಿಲ್ಪ ಮತ್ತು ಪಾದಪೀಠ ಶಾಸನ

ಪ್ರಸ್ತಾವನೆ ರಿಕೆ : ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಪಾಶ್ಚಾಪುರ ಗ್ರಾಮವು ಹುಕ್ಕೇರಿಯಿಂದ ಆಗ್ನೇಯಕ್ಕೇ ೧೯ ಕಿ.ಮೀ. ಅತರದಲ್ಲಿದೆ. ಐತಿಹಾಸಿಕವಾಗಿ ಈ ಗ್ರಾಮದ ಪ್ರಾಚೀನತೆಯು ಕ್ರಿ.ಶ. ಸುಮಾರು ೧೨ನೆಯ ಶತಮಾನದಷ್ಟು ಹಿಂದಕ್ಕೋಗುತ್ತದೆ. ಈ ವಿಚಾರ ಸಮಕಾಲೀನ ಸ್ಥಳೀಯ ಪ್ರಾಚ್ಯಾವಶೇಷಗಳಿಂದ ಸ್ಪಷ್ಟವಾಗುತ್ತದೆ. ಕಲ್ಯಾಣದ ಚಾಳುಕ್ಯ ಮನೆತನದ ಚಾಳುಕ್ಯ ಮನೆತನದ ಅಧೀನದಲ್ಲಿ ಕುಹೂಂಡಿ-೩೦೦೦ ಆಡಳಿತ ಪ್ರಾಂತದಲ್ಲಿ ಆಳ್ವಿಕೆ ಕೈಗೊಂಡಿದ್ದ ಸವದತ್ತಿ ರಟ್ಟ ಮನೆತನದ ಕಾಲಾವಧಿಯಲ್ಲಿ ಪಾಶ್ಚಾಪುರ ಗ್ರಾಮದಲ್ಲಿ ಪಾರ್ಶ್ವನಾಥ ತೀರ್ಥಂಕರನ ಜಿನಾಲಯ ನಿರ್ಮಾಣವಾಗಿತ್ತು. ಆ ಜಿನಾಲಯವು ಯಾವುದೋ ಒಂದು ಕಾಲಘಟ್ಟದಲ್ಲಿ ಸಮೂಲನಾಶವಾಗಿದೆ. ಆದರೆ ಆ ಜಿನಾಲಯದ ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿದ್ದ ಪಾರ್ಶ್ವನಾಥ ತೀರ್ಥಂಕರನ ಶಿಲ್ಪವು ಇಂದಿಗೂ ಉಳಿದುಬಂದಿದೆ. ಅದನ್ನು ಈಗ ಹೆಂಚಿನ ಛಾವಣಿಯೊಂದಿಗೆ ಜೀರ್ಣೋದ್ಧಾರ ಗೊಳಿಸಿರುವ ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಲಾಗಿದೆ. ಕ್ರಿ.ಶ. ಸುಮಾರು ೧೨ನೆಯ ಶತಮಾನದ ಈ ಶಿಲ್ಪದ ಪ್ರತಿಮಾ ಲಕ್ಷಣಗಳು, ಇದರ ಪಾದಪೀಠದ ಮೇಲಿರುವ ಅಪ್ರಕಟಿತ ಶಾಸನದ ಪಾಠ, ಸಾರಾಂಶ ಮತ್ತು ಮಹತ್ವವನ್ನು ಚರ್ಚಿಸುವುದು ಈ ಸಂಲೇಖನದ ಆಶಯವಾಗಿದೆ.

ಶಿಲ್ಪದ ಪ್ರತಿಮಾ ಲಕ್ಷಣಗಳು : ಪಾರ್ಶ್ವನಾಥ ತೀರ್ಥಂಕರನ ಶಿಲ್ಪವು ಕಪ್ಪುಮಿಶ್ರಿತ ನೀಲಿಛಾಯೆಯ ಬಳಪದ ಶಿಲೆಯಲ್ಲಿ ಕಂಡರಿಸಲ್ಪಟ್ಟಿದೆ. ೧೧೫ ಸೆಂ.ಮೀ. ಎತ್ತರ ಮತ್ತು ೫೫ ಸೆಂ.ಮೀ. ಅಗಲವಿದೆ. ಕಾಯೋತ್ಸರ್ಗದಲ್ಲಿರುವ ಪಾರ್ಶ್ವನಾಥನ ಹಿಂಬದಿಯಲ್ಲಿ ಬಲಪಾದದಡಿಯಿಂದ ಮುಡಿಯವರೆಗೆ ಅಂಕುಡೊಂಕಾಗಿ ಸುರುಳಿಗೊಂಡಿರುವ ಸರ್ಪವು ಶಿರದ ಮೇಲೆ ತನ್ನ ಏಳು ಹೆಡೆಗಳನ್ನು ಕೊಡೆಯಂತೆ ಬಿಚ್ಚಿಕೊಂಡಿದೆ. ಸರ್ಪದ ಮೇಲೆ ರತ್ನತ್ರಯದ ಪ್ರತೀಕವಾಗಿರುವ ಮುಕ್ಕೊಡೆಯಿದೆ. ಶಿರ ಹಿಂಭಾಗದಲ್ಲಿ ಪ್ರಭಾಮಂಡಲವಿದೆ. ಕಾಲುಗಳ ಬಲಬದಿಯಲ್ಲಿ ಧರಣೇಂದ್ರ ಯಕ್ಷ ಮತ್ತು ಎಡಬದಿಯಲ್ಲಿ ಪದ್ಮಾವತಿ ಯಕ್ಷಿ ಸವ್ಯಲಲಿತಾಸನದಲ್ಲಿ ಆಸೀನರಾಗಿದ್ದಾರೆ. ಚತುರ್ಭುಜರಾಗಿರುವ ಇವರ ಬಲಬದಿಯ ಕೆಳಗಿನ ಕೈ ಅಭಯ ಮುದ್ರೆಯಲ್ಲಿದೆ. ಉಳಿದ ಕೈಗಳಲ್ಲಿ ಕ್ರಮವಾಗಿ ಅಂಕುಶ, ಪಾಶ, ಬೀಜಪೂರಗಳಿವೆ. ಇಬ್ಬರೂ ಕಿರೀಟಮುಕುಟ, ಕರ್ಣಕುಂಡಲ, ಕೇಯೂರ, ಕಂಠಹಾರ, ಮಣಿಸರ, ಮೇಖಲೆ, ತೋಳಬಂದಿ, ಕೈಗಡಗ, ಬೆರಳುಂಗುರ, ಕಟಿವಸ್ತ್ರ, ಕಾಲ್ಗಡಗ ಮೊದಲಾದ ವಸ್ತ್ರಾಭರಣಗಳನ್ನು ಧರಿಸಿದ್ದಾರೆ. ಶಿಲ್ಪದ ಮೇಲರ್ಧದ ಸುತ್ತಲೂ ಬಳ್ಳಿಯಿಂದ ರೂಪಿತವಾಗಿರುವ ಮಕರತೋರಣದ ಪ್ರಭಾವಳಿಯಿದೆ. ತುದಿಯಲ್ಲಿ ಕೀರ್ತಿಮುಖದ ಅಲಂಕಾರವಿದೆ. ಈ ಶಿಲ್ಪವು ಪಾರ್ಶ್ವನಾಥ ತೀರ್ಥಂಕರನು ಕೇವಲಜ್ಞಾನ ಕಲ್ಯಾಣದಲ್ಲಿರುವುದನ್ನು ಪ್ರತಿನಿಧಿಸುತ್ತದೆ. ಪಾರ್ಶ್ವನಾಥ ತೀರ್ಥಂಕರ ಮತ್ತು ಯಕ್ಷ-ಯಕ್ಷಿಯ ಅಂಗೋಪಾಂಗಗಳು ಹಾಗೂ ವಸ್ತ್ರಾಭರಣಗಳು ಸಮಕಾಲೀನ ಶಿಲ್ಪಶಾಸ್ತ್ರಗಳಲ್ಲಿ ನಿರೂಪಿತ ನಿರ್ದೇಶನಗಳಂತೆ ಪ್ರಮಾಣಬದ್ಧವಾಗಿ ಮೂಡಿ ಬಂದಿವೆ.[೧] ಇವುಗಳನ್ನು ನೈಜವಾಗಿ ತೋರಿಸಲು ಅಂದಿನ ಶಿಲ್ಪಿಯ ಪ್ರಯತ್ನ ಯಶಸ್ವಿಯಾಗಿದೆ.



* ಇತಿಹಾಸ ಉಪನ್ಯಾಸಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗದಗ.

ಪಾದಪೀಠ ಶಾಸನದ ಪಾಠ : ಪಾರ್ಶ್ವನಾಥ ತೀರ್ಥಂಕರ ಶಿಲ್ಪದ ಪಾದಪೀಠದ ಮೇಲೆ ನಾಲ್ಕು ಸಾಲುಗಳ ಕನ್ನಡ ಲಿಪಿ ಮತ್ತು ಭಾಷೆಯಲ್ಲಿರುವ ಅಪ್ರಕಟಿತ ಶಾಸನವಿದೆ. ಇದರ ಪಾಠ ಇಂತಿದೆ.

೧ ೞಸ್ವಸ್ತ್ಯತುಳ ಮೂಲಸಂಘೇ ಸುಚಿತ್ರ
೨ ಕೂಟಾನ್ವಯ ಗಣೇ ಸೂರಸ್ಥೇ ಶ್ರೀ
೩ ಪೂಜ್ಯಪಾದ ಮುನಿಪಃ ಶಾಸನ ದ
೪ ವಿಂ ಪ್ರಪೂಜ್ಯಪಾದೋಜಯತೇ ॥ ಶ್ರೀ

ಶಾಸನದ ಸಾರಾಂಶ : ಅತುಲ ಮೂಲಸಂಘದ ಚಿತ್ರಕೂಟಾನ್ವಯದ ಸೂರಸ್ಥಗಣ ಪರಂಪರೆಯ ಶ್ರೀ ಪೂಜ್ಯಪಾದ ಮುನಿಗಳು ಶಾಸನದೇವಿಯನ್ನು (ಯಕ್ಷಿ) ಪೂಜಿಸಿ ವಿಜಯಿಯಾದರು.

ಶಿಲ್ಪ ಮತ್ತು ಪಾದಪೀಠ ಶಾಸನದ ಮಹತ್ವ : ಪ್ರಸ್ತುತ ಪಾರ್ಶ್ವನಾಥ ತೀರ್ಥಂಕರನ ಶಿಲ್ಪ ಮತ್ತು ಪಾದಪೀಠ ಶಾಸನ ಹಲವು ದೃಷ್ಟಿಗಳಿಂದ ಮಹತ್ವದೆನಿಸುತ್ತವೆ. ಪಾಶ್ಚಾಪುರ ಗ್ರಾಮವು ಕ್ರಿ.ಶ. ಸುಮಾರು ೧೨ನೆಯ ಶತಮಾನದಲ್ಲಿ ಪ್ರಮುಖ ಜೈನ ಕೇಂದ್ರವಾಗಿತ್ತು. ಈ ಗ್ರಾಮದಲ್ಲಿ ಪಾರ್ಶ್ವನಾಥ ತೀರ್ಥಕರನ ಜಿನಾಲಯ ನಿರ್ಮಾಣವಾಗಿತ್ತು. ಅದು ಮೂಲಸಂಘದ ಚಿತ್ರಕೂಟಾನ್ವಯದ ಸೂರಸ್ಥಗಣ ಪರಂಪರೆಯ ಮುನಿಗಳ ಪ್ರಭಾವದಲ್ಲಿತ್ತು. ಬೆಳಗಾವಿ ಜಿಲ್ಲೆಯ ಪ್ರದೇಶದಲ್ಲಿ ಪಾರ್ಶ್ವನಾಥನ ಜಿನಾಲಯಗಳ ಸಂಖ್ಯೆ ಅತ್ಯಧಿಕವಾಗಿದೆ. ಇದಕ್ಕೆ ಈ ಪ್ರದೇಶದಲ್ಲಿ ಯಾಪನೀಯ ಸಂಘದ ಪರಂಪರೆಯ ಮುನಿಗಳು ಮತ್ತು ಭಟ್ಟಾರಕರ ಧರ್ಮಪ್ರಸಾರ ಹಾಗೂ ಪ್ರೇರಣೆ ಮುಖ್ಯವೆನಿಸುತ್ತದೆ.[2] ಪ್ರಸ್ತುತ ಶಾಸನೋಕ್ತ ಪೂಜ್ಯಪಾದ ಮುನಿಯು ಶಾಸನದೇವಿಯನ್ನು (ಪ್ರಾಯಶಃ ಪದ್ಮಾವತಿ ಯಕ್ಷಿ) ಪೂಜಿಸಿ ಅವಳಿಂದ ವರವನ್ನು ಪಡೆದು ವಿಜಯಿಯಾದರು. ಆ ಘಟನೆಯನ್ನು ಈ ಪಾರ್ಶ್ವನಾಥ ತೀರ್ಥಂಕರನ ಪಾದಪೀಠದ ಮೇಲೆ ಲಿಪಿಕರಿಸಿರುವಂತೆ ತೋರುತ್ತದೆ. ಬೆಳಗಾವಿ ಜಿಲ್ಲೆಯಲ್ಲಿ ಇದುವರೆಗೆ ಬೆಳಕಿಗೆ ಬಂದಿರುವ ಜೈನ ಶಾಸನಗಳಲ್ಲಿ ಪೂಜ್ಯಪಾದ ಹೆಸರಿನ ಮುನಿಯ ಉಲ್ಲೇಖವಿಲ್ಲ.[3] ಆ ನಿಟ್ಟಿನಲ್ಲಿ ಪ್ರಸ್ತುತ ಪಾದಪೀಠ ಶಾಸನ ಅಪರೂಪದ್ದಾಗಿದೆ.

ಕ್ರಿ.ಶ. ಸುಮಾರು ೫ನೆಯ ಶತಮಾನದಲ್ಲಿದ್ದ ಪೂಜ್ಯಪಾದ (ದೇವನಂದಿ) ಮುನಿಯು ಶಾಸನ ದೇವಿಯರನ್ನು ಪೂಜಿಸಿ ಮತ್ತು ಅವರಿಂದ ಪೂಜಿಸಲ್ಪಟ್ಟು ಪ್ರಸಿದ್ಧನಾಗಿದ್ದನು. ಆತನು ಧರ್ಮ, ಶಾಸ್ತ್ರ, ಸಾಹಿತ್ಯ ಇತ್ಯಾದಿ ಕ್ಷೇತ್ರಗಳಲ್ಲಿ ಅಗಾಧವಾದ ಜ್ಞಾನವನ್ನು ಪಡೆದು ಅನೇಕ ಕೃತಿಗಳನ್ನು ರಚಿಸಿ ಮಹಾಕವಿಯೂ ಆಗಿದ್ದನು. ಆ ಮುನಿಯನ್ನು ತದನಂತರದ ಅನೇಕ ಮುನಿಗಳು ಮತ್ತು ಕವಿಗಳು ತಮ್ಮ ಕೃತಿಗಳಲ್ಲಿ ಸ್ಮರಿಸಿದ್ದಾರೆ.[4] ಅಂತಹ ಕವಿಗಳಲ್ಲಿ ಸವದತ್ತಿ ರಟ್ಟ ಮನೆತನದ ೪ನೆಯ ಕಾರ್ತವೀರ್ಯನ ಆಶ್ರಯದಲ್ಲಿದ್ದ ಪಾರ್ಶ್ವಪಂಡಿತನೂ ಒಬ್ಬನಾಗಿದ್ದಾನೆ. ಗೋಕಾಕ ತಾಲ್ಲೂಕಿನ ಕಲ್ಲೊಳೆಯ ಕ್ರಿ.ಶ. ೧೨೦೪ರ ಜೈನ ಶಾಸನವನ್ನು ಈ ಕವಿಯೇ ರಚಿಸಿದ್ದಾನೆ.[5] ಈತನು ತನ್ನ ಪಾರ್ಶ್ವನಾಥ ಪುರಾಣದ ಪ್ರಾರಂಭದಲ್ಲಿ ಅನೇಕ ಪೂರ್ವಾಚಾರ್ಯರನ್ನು ಸ್ಮರಿಸುತ್ತ ಪೂಜ್ಯಪಾದ ಮುನಿಯನ್ನೂ ಗೌರವಿಸಿದ್ದಾನೆ.[6] ಹೀಗಾಗಿ ಪ್ರಸ್ತುತ ಪಾಶ್ಚಾಪುರದ ಪಾದಪೀಠ ಶಾಸನವನ್ನು ಪಾರ್ಶ್ವಪಂಡಿತ ಕವಿಯೇ ರಚಿಸಿರಬಹುದೇ (?), ಇಲ್ಲವೇ ಈ ಪಾದಪೀಠ ಶಾಸನಕಾರನ ಮೇಲೆ ಪ್ರಾಚೀನ ಪೂಜ್ಯಪಾದ ಮುನಿಯ ವ್ಯಕ್ತಿತ್ವ ಪ್ರಭಾವ ಬೀರಿರಬಹುದೇ (?), ಇಲ್ಲವೇ ಈ ಪಾದಪೀಠ ಶಾಸನೋಕ್ತ ಪೂಜ್ಯಪಾದ ಪ್ರಾಚೀನ ಮುನಿಯ ಸ್ಮರಣೆಯೇ (?) ಮೊದಲಾದ ಸಂಶಯಗಳೂ ಮೂಡುತ್ತವೆ. ಆ ನಿಟ್ಟಿನಲ್ಲಿ ತಲಸ್ಪರ್ಶಿ ಅಧ್ಯಯನದ ಅವಶ್ಯವಿದೆ. ಒಟ್ಟಾರೆ ಪ್ರಸ್ತುತ ಪಾರ್ಶ್ವನಾಥ ತೀರ್ಥಂಕರನ ಶಿಲ್ಪ ಮತ್ತು ಪಾದಪೀಠ ಶಾಸನ ಬೆಳಗಾವಿ ಜಿಲ್ಲೆಯ ಪ್ರದೇಶದ ಜೈನ ವಾಸ್ತುಕಲೆ, ಶಿಲ್ಪಕಲೆ, ಮುನಿ ಪರಂಪರೆಯ ಅಧ್ಯಯನಕ್ಕೆ ಅಪರೂಪದ ಆಕರವಾಗಿದೆ. ಅಲ್ಲದೇ ಈ ಪಾದಪೀಠ ಶಾಸನವು ಈ ಮೇಲಿನ ಸಂಶಯಗಳನ್ನು ಪುಷ್ಟೀಕರಿಸಿದರೆ ಪ್ರಾಚೀನ ಪೂಜ್ಯಪಾದ ಮುನಿಯ ಅಧ್ಯಯನಕ್ಕಿರುವ ಹಲವು ಆಕರಗಳ ಪಟ್ಟಿಗೆ ಇದೊಂದು ಪುಟ್ಟ ಕೊಡುಗೆಯಾಗುತ್ತದೆ.

ಆಧಾರಸೂಚಿ

೧. ಹಂಜೆ ಅಪ್ಪಣ್ಣ ಎಸ್., *ಜೈನ ಶಿಲ್ಪಗಳು : ಹಿನ್ನೆಲೆ ಮತ್ತು ಲಕ್ಷಣಗಳು*. **ರತ್ನಕರಂಡಕ** (ಡಾ. ಎಚ್.ಪಿ. ಪಾರ್ಶ್ವನಾಥ ಅಭಿನಂದನ ಗ್ರಂಥ-೨೦೦೭), ಪು ೩೨೬-೩೪೬.

೨. ಹಂಜೆ ಅಪ್ಪಣ್ಣ ಎಸ್., **ಬೆಳಗಾವಿ ಜಿಲ್ಲೆಯ ಜೈನ ಬಸದಿ ಮತ್ತು ಶಿಲ್ಪಗಳು**, (ಅಚ್ಚಿನಲ್ಲಿದೆ).

೩. ಹಂಪೂರ ಜಿ.ಆರ್., **ಜೈನ ಪರಂಪರೆಗೆ ಬೆಳಗಾವಿ ಪ್ರಾದೇಶಿಕ ಕೊಡುಗೆ** (೨೦೦೩), ಪುಟ ೨೧೫-೨೭೪.

೪. ಹಂಪ ನಾಗರಾಜಯ್ಯ, ಪೂಜ್ಯಪಾದ-ದೇವನಂದಿ, **ಚಂದ್ರಕೊಡೆ** (೧೯೯೭), ಪುಟ ೪೭೫-೪೯೯.

೫. ಹಂಜೆ ಅಪ್ಪಣ್ಣ ಎಸ್., *ಗೋಕಾಕ ತಾಲ್ಲೂಕಿನ ಶಾಸನಗಳು*, **ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ** ಸಂಪುಟ ೮೬, ಸಂ. ೧-೨, (ಜ.ಡಿ. ೨೦೦೮), ಪುಟ ೧೧-೧೭.

೬ ಬಿಜ್ಜಂಗಿ ರಾಜಶೇಖರ ಈ., **ಪಾರ್ಶ್ವನಾಥ ಪುರಾಣ : ಒಂದು ತೌಲನಿಕ ಅಧ್ಯಯನ** (೨೦೦೦), ಪುಟ ೧೩-೨೫.

ಬಿ.ಎಸ್. ರಾಮಭಟ್ಟ*

ಕಲ್ಲೂರುಗುಡ್ಡದ ಶಾಸನ

"ಸ್ವಸ್ತಿ ಧರಿತ್ರಿಗಧಿಪತಿಯಾಗಿ ಧಡಿಗ ಮಾಧವ ರೀರ್ವರುಂ ಕೊಂಕಣ ವಿಷಯ ಸಾಧನಾ ನಿಮಿತ್ತಂ ಬರುತ್ತಂ ಮಂಡಲಿಯಂ ಕಂಡದರ ಪ್ರಭಾವಮೆಂತೆನೆ ; ನುತ ಮಹೇಂದ್ರಪುರಂ ಧರಾತಳದೊಳೆಪ್ಪುತ್ತಿರ್ದ ವಿಖ್ಯಾತಿಯಂ ಕೃತಕಾಲಂಮದನಾಪುರಂ ನೆಗಳಮಿಕ್ಕಾತ್ರೇತೆಯೊಳು ಸಜ್ಜನಸ್ತುತ ಮಂಡಾಲಪುರಂ ತೃತೀಯಪೆಸರಿಂ ದ್ವಾಪರದೊಳು ಸನ್ತತೋನ್ನತಿಯಂ ಮಂಡಲಿಯೆಂಬರಂತು ಕಲಿಕಾಲಂ ಸನ್ತುದಿನ್ತೀಪ್ಮರಂ ;; ಅನ್ತುನಾಲ್ಕುಯುಗಕ್ಕಂ ನಾಲ್ಕು ಪೆಸರಿಂದುಪುವ ಮಂಡಲಿ...."

"ಎಂದಿರುವುದು ಶಿವಮೊಗ್ಗದ ಸರಕಾರಿ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿಟ್ಟಿರುವ ಕಲ್ಲೂರು ಗುಡ್ಡದ ಶಾನದಲ್ಲಿದೆ.[೧] ಕಲ್ಲೂರು ಗುಡ್ಡವಿರುವುದು ಮಂಡಳಿಯಲ್ಲಿ. ಇದು ಶಿವಮೊಗ್ಗದ ನೈಋತ್ಯದಲ್ಲಿರುವ ಬಡಾವಣೆ. ಇದನ್ನು ಈಗ ನ್ಯೂ ಮಂಡಳಿ ಎಂದು ಕರೆಯುತ್ತಿದ್ದಾರೆ.

ಡಾ.. ಸುಂದರ ಅವರು ೧೯೬೭ರಲ್ಲಿ ಶಿವಮೊಗ್ಗ ನಗರದ ದಕ್ಷಿಣಕ್ಕೆ ಸು. ೩ ಕಿ.ಮಿ. ದೂರದ ಗುಡ್ಡೆಮರಡಿ ಎಂಬಲ್ಲಿ ಉತ್ಖನನ ನಡೆಸಿದ್ದಾರೆ. ಈ ಪ್ರದೇಶದಲ್ಲಿ ಶಿಲಾಯುಗದ ಕರಿಕಲ್ಲಿನ ಕೊಡಲಿ, ಮೃತ್‌ಪಾತ್ರೆಯ ಚೂರುಗಳು, ನಿಲಸುಕಲ್ಲುಗಳು, ಇಟ್ಟಿಗೆ ಕಟ್ಟಡಗಳ ಭಗ್ನಾವಶೇಷಗಳು ಮುಂತಾದವನ್ನು ಪತ್ತೆ ಮಾಡಿದ್ದಾರೆ. ಇದೇ ಸ್ಥಳದ ಮಲ್ಲಿಕಾರ್ಜುನ ದೇವಾಲಯವಿರುವ ಗುಡ್ಡದ ನೈರುತ್ಯದ ಬಯಲಿನಲ್ಲಿ ಶ್ರೀಯುತರಿಗೆ ಸು. ೧ ಮೀ. ಅಗಲ ೩೫ ಸೆಂ.ಮೀ. ದಪ್ಪದ ಗ್ರಾನೈಟ್ ಕಲ್ಲು ಹಲಗೆಯ ಕಲ್ಗೋರಿಯು ಸಿಕ್ಕಿದೆ.[೨] ಇದೂ ಸಹ ಇದೇ ಕಾಲಕ್ಕೆ ಸೇರಿದೆ. ಕಲ್ಲೂರುಗುಡ್ಡದ ಹತ್ತಿರ ಪ್ರಾಚೀನ ಕಾಲದ ಇಟ್ಟಿಗೆಗಳು ಕಂಡುಬಂದಿವೆ. ಗುಡ್ಡೆಮರಡಿ, ಕಲ್ಲೂರುಗುಡ್ಡ ಮತ್ತು ಮಂಡಳಿಯು ಸಮಕಾಲೀನ ಶಿಲಾಯುಗದ ನೆಲೆಗಳಾಗಿದ್ದವೆಂದು ತಿಳಿಯುತ್ತದೆ. ಮಂಡಳಿ ಎಂದರೆ ಈ ಪುರಾತನ ಜನ ಸಮುದಾಯದ ಗುಂಪುಗಳು. ಬೇಸಾಯ ಮತ್ತು ಪಶುಪಾಲನೆ ಇವರ ಪ್ರಮುಖ ಉದ್ಯೋಗವಾಯಿತು.

ನವಶಿಲಾಯುಗದ ಜನರು ಶತಮಾನ ಕಾಲಗಳಲ್ಲಿ ಸುಸಂಸ್ಕೃತರಾದರು. ಇದಕ್ಕೆಂದೇ ಮಂಡಳಿಯನ್ನು ಕೃತ, ತ್ರೇತ, ದ್ವಾಪರ ಮತ್ತು ಕಲಿಯುಗದಲ್ಲಿ ಕ್ರಮವಾಗಿ ಮಹೇಂದ್ರಪುರ, ಮದನಾಪುರ, ಮಂಡಲಾಪುರ ಮತ್ತು ಮಂಡಳಿ ಎಂಬ ಹೆಸರಿತ್ತೆಂದು ಇದೇ ಕಲ್ಲೂರುಗುಡ್ಡದ ಕ್ರಿ.ಶ. ೧೧೨೧ರ ಶಾಸನದಲ್ಲಿದೆ.[೩] ಪುರ ಎಂದು ಕರೆಸಿಕೊಳ್ಳಲು ಕನಿಷ್ಠ ಪ್ರಮಾಣದ ನಾಗರಿಕ ಸೌಲಭ್ಯವಿದ್ದಿರಬಹುದು. ಹಾಗೂ ಮಂಡಳಿಯು ಹೇಗೆ ನಗರೀಕರಣಗೊಳ್ಳುತ್ತಿತ್ತು ಎಂಬ ಸಂಕೇತವಿರಬಹುದು. ಆದರೆ ಈ ಹೆಸರುಗಳ ಹಿನ್ನೆಲೆಗೆ ಆಧಾರವೇನು ಎಂಬುದು ತಿಳಿಯುವುದಿಲ್ಲ.

ಶಾಸನದ ಮುಂದಿನ ಭಾಗದಲ್ಲಿ : "ಮಂಡಳಿಯ ಬಹಿರ್ಭಾಗದೊಳು ಸಾಗನ್ಧಮಂಕೂಡಿ ಪಸರಿಸುವ ಸಹಸ್ರ ಪತ್ರವಪ್ಪಲರ್ದ್ದ ತಾವರೆಗಳಿಂ ನಾನಾ ಜಲಚ್ಚರಿಯುಲಿಪದಿಂ ದೊಪ್ಪುವ ಹೆಗ್ಗರೆಯಂ ಕಂಡು . . . ." ಎಂದಿದೆ.

ಮಂಡಳಿಯ ಹೊರಭಾಗದಲ್ಲಿ ವಿಶಾಲವಾದ ಒಂದು ಕೆರೆಯನ್ನು ನೋಡಿದವರು ಕ್ರಿ.ಶ. ೩೫೦ರಲ್ಲಿ ಕುವಲಾಲಪುರ ದಿಂದ ಬಂದ ಗಂಗ ಮನೆತನದ ಅರಸರಾಗಿದ್ದ ದಡಿಗ ಮತ್ತು ಮಾಧವರು; ಇವರೊಂದಿಗೆ ಜೈನಾಚಾರ್ಯರಾದ ಸಿಂಹನಂದಿಯವರೂ ಸಹ ಬಂದಿದ್ದರೆನ್ನಲಾಗಿದೆ. ಇದೊಂದು ವಿಶಾಲವಾದ ಕೆರೆ. ಇದರಲ್ಲಿ ಅರಳಿರುವ ಸಹಸ್ರಾರು ಕಮಲಪುಷ್ಪಗಳು ಅಲ್ಲೆಲ್ಲಾ ಪರಿಮಳವನ್ನು ಪಸರಿಸುತ್ತಿತ್ತು. ಮೀನು ಮುಂತಾದ ಜಲಚರ ಪ್ರಾಣಿಗಳಿಂದ ತುಂಬಿತ್ತು ಎಂದು ಹೇಳಿದೆ. ಇದು ಪ್ರಕೃತಿ ನಿರ್ಮಿತ ಜಲಸ್ಥಾನವಲ್ಲ. ಮಾನವ ನಿರ್ಮಿತವಾದ ಕೆರೆ. ಪ್ರಾಯಶಃ ಇದನ್ನು ಕಟ್ಟಲು ನಿಪುಣ ಶಿಲ್ಪಿಗಳು ಇದ್ದಿರಬಹುದು. ಇದು ಕುಡಿಯುವ ನೀರಿಗೆ ಹಾಗು ಬೇಸಾಯಕ್ಕೂ ಬಳಕೆಯಾಗುತ್ತಿರಬಹುದು.

ಮುಂದುವರೆದ ಶಾಸನದ ಸಾಲುಗಳಲ್ಲಿ : "ಹೆಗ್ಗೆರೆಯಂ ಕಂಡು ಬೀಡಂಬಿಟ್ಟು ತದ್ಗಿರಿಯ ರಮ್ಯಮಂ ಕಂಡು...." ಎಂದು ಉಲ್ಲೇಖಿಸಿದೆ. ದಡಿಗದವರು ಕೆರೆಯ ತಟಾಕದಲ್ಲಿ ಬೀಡುಬಿಟ್ಟರು. ಎದುರಿಗೆ ರಮ್ಯವಾದ ಗಿರಿಯನ್ನು

*(ನಿ) ಉಪನ್ಯಾಸಕ, 'ಪದ್ಮಶ್ರೀ' ೧೪೭-ಇ, ೩ನೇ ಕ್ರಾಸ್, ಗೋಪಾಲಗೌಡ ಬಡಾವಣೆ, ಗೋಪಾಳ, ಶಿವಮೊಗ್ಗ

ನೋಡಿದರು. ಇದೇ ಹಿಂದೆ ಹೇಳಿರುವ ಶಾಸನೋಕ್ತ ಕಲ್ಲೂರುಗುಡ್ಡ. ಆಗ ಈ ಗಿರಿಗೆ ಈ ಹೆಸರು ಇರಲಿಲ್ಲ. ಗುಡ್ಡದ ತಳಭಾಗದಲ್ಲಿ ಪ್ರಾಚೀನ ಮಾನವರ ಕಲ್ಗೋರಿಗಳಿದ್ದಿರಬಹುದು. ಇದರಿಂದ ಗುಡ್ಡಕ್ಕೆ ಈ ಹೆಸರು ಬಂದಿರಬಹುದು. ಆದರೆ ಕಲ್ಗೋರಿಗಳಿದ್ದ ಬಗ್ಗೆ ಉತ್ಖನನ ಈ ಗಿರಿಯ ತಳಭಾಗದಲ್ಲಿ ನಡೆದದ್ದು ತಿಳಿದುಬಂದಿಲ್ಲ.

"ಚೈತ್ಯಾಲಯವಂ ಮಾಡಿ ಎಂದು ಕ್ರಾಣೂರ್ಗಣ ತಿಳಿಕ ಸ್ಸಿರ್ಂಹನಂದಾಚರ್ಯ್ಯಪ್ಪೇಳೆ ಮಹಾಪ್ರಸಾದವೆಂದು ಚೈತ್ಯಾಲವಂ ಮಾಡಿಸಿ..."

ಗುರುಗಳಾಗಿದ್ದ ಸಿಂಹನಂದ್ಯಾಚಾರ್ಯರು ಈ ಗಿರಿಯ ಮೇಲೆ ಒಂದು ಚೈತ್ಯಾಲಯವನ್ನು ಕಟ್ಟಿಸಿ ಎಂದು ಶಿಷ್ಯರಿಗೆ ಹೇಳುತ್ತಾರೆ. ಇದರಿಂದ ಗುರುಶಿಷ್ಯರು ಜೈನಧರ್ಮೀಯರೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಇದರಂತೆ ಬಸದಿಯು ನಿರ್ಮಾಣ ವಾಗುತ್ತದೆ. ಇದನ್ನು ಮರ ಮತ್ತು ಮಣ್ಣಿನಿಂದ ಕಟ್ಟಿಸಿರಬಹುದು. ನಾಲ್ಕನೆಯ ಶತಮಾನದಲ್ಲಿ ಶಿಲೆಯಲ್ಲಿ ಕಟ್ಟಡ ಕಟ್ಟಿಸುವುದು ಆರಂಭವಾಗಿರಲಿಲ್ಲ. ಇದನ್ನು ಕಟ್ಟಲು ಸ್ಥಳೀಯರ ಸಹಾಯ ಪಡೆದಿರಬಹುದು. ಚೈತ್ಯಾಲಯ ಎಂದು ಹೇಳಿರುವುದರಿಂದ ಇದರಲ್ಲಿ ಮೂರ್ತಿ ಪ್ರತಿಷ್ಠೆ ಮಾಡಿಸಿರಬಹುದು. ಇದು ಯಾವ ತೀರ್ಥಂಕರಮೂರ್ತಿ ? ಲೋಹದ ವಿಗ್ರಹವೆ ? ಅಥವಾ ಮರದ್ದಿರಬಹುದೆ ? ಎಂಬ ಸಂದೇಹ ಬರುತ್ತದೆ. ಆದರೆ ಜೈನಧರ್ಮಶಾಸ್ತ್ರದಲ್ಲಿ ಮರದಿಂದ ತೀರ್ಥಂಕರರನ್ನು ಕೆತ್ತನೆ ಮಾಡುವುದನ್ನು ನಿಷೇಧಿಸಿದೆ. ಹಾಗೆ ಲೋಹದ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಲ್ಲಿ ಅದು ಎಲ್ಲಿಂದ ದೊರೆಯಿತು. ತಮ್ಮೊಡನೆ ತಂದಿದ್ದರೆ ? ಇತ್ಯಾದಿ ಪ್ರಶ್ನೆಗಳು ಮೇಲೇಳುತ್ತವೆ.

ಮುಂದಿನ ಸಾಲುಗಳಲ್ಲಿ : "ಕೆಲವಾನುಂ ದಿವಸದಿಂ ಕೋಳಾಲಕ್ಕೆ ಪೋಗಿ ಸುಖದಿಂ ರಾಜ್ಯಂಗೆಯುತ್ತಮಿರೆ" ಗುರುಗಳ ಅಪ್ಪಣೆಯಂತೆ ಚೈತ್ಯಾಲಯ ನಿರ್ಮಾಣ ಮುಗಿಯಿತು. ಮುಂದೆ ಕೆಲವೇ ದಿನಗಳ ನಂತರ ಕೋಲಾರಕ್ಕೆ ಹಿಂತಿರುಗಿದರು.

ದಡಿಗ ಮಾಧವರು ಕ್ರಿ.ಶ. ೩೫೦ರಲ್ಲಿ ಮಂಡಳಿಗೆ ಬಂದದ್ದು "ಕೊಂಕಣ ವಿಶಯ ಸಾಧನಾ ನಿಮಿತ್ತಂ" ಎಂದು ಇದೇ ಶಾಸನದಲ್ಲಿದೆ. ಶಿವಮೊಗ್ಗ ಜಿಲ್ಲೆಯ ಬಹುಪಾಲು ಪ್ರದೇಶವು ಕೊಂಕಣಕ್ಕೆ ಸೇರಿತ್ತು. ಇದನ್ನು ಶಾಸನಗಳಲ್ಲಿ

೧ ಚಾಲುಕ್ಯ ಚಕ್ರೇಶ್ವರ ಜಯಸಿಂಹಂ ಕುಂತಳ ವಿಶಯಕ್ಕ ಧಿಪತಿ[೪]

೨ 'ವಸುದಾಕಾನ್ತೆಯ ಕುನ್ತಳೋಮೆನಿಪ್ಪೀಕುನ್ತಳ ಕ್ಷೋಣಿಯಂ'[೫]

ಎಂದು ಸೊರಬ ಮತ್ತು ಶಿಕಾರಿಪುರದ ಶಾಸನಗಳಲ್ಲಿ ಉಲ್ಲೇಖಿಸಿದೆ. ಇದರಲ್ಲಿ ಹೇಳಿರುವ ವಿಶಯ ಎಂದರೆ ಪ್ರಾಂತ್ಯ ಅಥವಾ ಸೀಮೆಯಾಗಿರಬಹುದು.[೬] ಹಾಗಾದರೆ ಶಾಸನೋಕ್ತ ಕೊಂಕಣವು ಯಾರ ಆಡಳಿತದಲ್ಲಿತ್ತು ಎಂಬುದು ತಿಳಿಯುವುದಿಲ್ಲ. ದಡಿಗಮಾಧವರು ಮಂಡಳಿಗೆ ಬಂದದ್ದು ಕ್ರಿ.ಶ. ೩೫೦ರಲ್ಲಿ ಎಂದು ಶಾಸನದಲ್ಲಿದೆ. ಇದು ಕದಂಬರ ಮಯೂರವರ್ಮನು ರಾಜ್ಯ ಸ್ಥಾಪನೆ ಮಾಡಿದ ಕಾಲ. ಇವರ ಮೂಲಸ್ಥಾನ ಇಂದಿನ ತಾಳಗುಂದ. ಇದೂ ಸಹ ಕೊಂಕಣದ ಒಂದು ಪ್ರದೇಶ.

ಕೊಂಗುಣಿವರ್ಮ ಮಾಧವ (ಕ್ರಿ.ಶ. ೩೫೦–೩೭೦)ನು ಕೋಲಾರದ ಸುತ್ತಮುತ್ತಲಿನಲ್ಲಿ ಆಳುತ್ತಿದ್ದ ಬಾಣರನ್ನು ಸೋಲಿಸಿ ಕೊಂಕಣವನ್ನು ವಶಪಡಿಸಿಕೊಂಡನೆಂದು ಗಾಥಾಸಪ್ತತಿ ಗ್ರಂಥದಲ್ಲಿ ಹೇಳಿದೆ.[೭] ಇದರಂತೆ ಕೋಲಾರದ ಸುತ್ತಮುತ್ತಲಿನ ಪ್ರದೇಶವನ್ನು ಕೊಂಕಣವೆಂದು ಕರೆದಿದೆ. ಅಲ್ಲದೆ ಕದಂಬರ ಮಯೂರವರ್ಮನು ಸಹ ಬಾಣರನ್ನು ಸೋಲಿಸಿದ ಶಾಸನಾಧಾರವಿದೆ. ಆದ ಕಾರಣ ದಡಿಗ ಮಾಧವರು ಹಾಗೂ ಕದಂಬರು ಸಮಕಾಲೀನರೆಂದು ತಿಳಿಯುತ್ತದೆ.

ಮಯೂರವರ್ಮನು ಅಹಿಚ್ಛತ್ರದಿಂದ ಬ್ರಾಹ್ಮಣ ಕುಟುಂಬಗಳನ್ನು ಕರೆಸಿ ತಾಳಗುಂದ, ಕುಪಟೂರು ಮುಂತಾದ ಅಗ್ರಹಾರಗಳಲ್ಲಿ ನೆಲೆಗೊಳಿಸಿದನೆಂದು ತಿಳಿಯುತ್ತದೆ. ಆದರೆ ಮಂಡಳಿಯ ಪ್ರಾಂತ್ಯದಲ್ಲಿ ಇವರನ್ನು ನೆಲೆಗೊಳಿಸಿದ ಬಗ್ಗೆ ತಿಳಿದುಬಂದಿಲ್ಲ.

ಕ್ರಿ.ಶ. ನಾಲ್ಕನೆಯ ಶತಮಾನದಲ್ಲಿ ಸೇಂದ್ರಕರು ಕದಂಬರ ಮಾಂಡಲಿಕರಾಗಿದ್ದರೆಂದು ಡಾ. ಅ. ಸುಂದರರವರು ಉಲ್ಲೇಖಿಸಿದ್ದಾರೆ.[೮] ಇದರಿಂದ ದಡಿಗಮಾಧವರು ಮಂಡಳಿಗೆ ಬಂದಾಗ ಈ ಪ್ರಾಂತ್ಯವು ಸೇಂದ್ರಕರ ವಶದಲ್ಲಿದ್ದ ಸಂಭವವಿದೆ. ಹಾಗಿದ್ದಲ್ಲಿ ಈ ಪ್ರದೇಶವನ್ನು ಸೇಂದ್ರಕರಿಂದ ಇವರು ಹೇಗೆ ವಶಪಡಿಸಿಕೊಂಡರು ? ಯುದ್ಧ ನಡೆದ ಬಗ್ಗೆ ದಾಖಲೆ ಲಭ್ಯವಿಲ್ಲ. ಮುಂದೆ ಮಂಡಳಿ ಆಡಳಿತವು ಕ್ರಿ.ಶ. ೧೦೪೫ ರಿಂದ ಭುಜಬಲಗಂಗ ಪೆರಮ್ಮಾಡಿ (೧೦೪೫–೬೫) ಹಿಂದೆ ಆರಂಭವಾಗಿದೆ ಅಲ್ಲದೆ ಸು. ಏಳು ಶತಮಾನಗಳ ಕಾಲ ಯಾರೂ ಈ ಪ್ರದೇಶವನ್ನು ವಶಪಡಿಸಿಕೊಳ್ಳಲಿಲ್ಲವೆ ? ಅಥವಾ ಕದಂಬರು ಇವರ ವಶದಲ್ಲಿದ್ದ ಮಂಡಳಿಯು ಆಡಳಿತವನ್ನು ಒಪ್ಪಿಕೊಂಡರೆ ? ಹೀಗೆ ಕ್ರಿ.ಶ. ೩೫೦ ರಿಂದ ಮಂಡಳಿಯ ಆಡಳಿತವು ಕ್ರಿ.ಶ. ೧೦೪೫ ರವರೆಗೆ ಅಜ್ಞಾತವಾಗಿಯೇ ಉಳಿದಿದೆ.

ಯಾವುದೇ ಪ್ರದೇಶವನ್ನು ವಶಪಡಿಸಿಕೊಳ್ಳಲು ಸೈನ್ಯವು ಬೇಕೇಬೇಕು. ಇದಕ್ಕೆಂದೇ ಕಲ್ಲೂರು ಗುಡ್ಡದ ಶಾಸನದಲ್ಲಿ

'ಬೀಡಂ ಬಿಟ್ಟು' ಎಂದು ಹೇಳಿದೆ. ಇವರೊಡನೆ ಬಂದಿದ್ದ ಸೈನಿಕರು ತಂಗಿದರು ಎಂಬ ಅರ್ಥದಲ್ಲಿ ಹೇಳಿರಬಹುದು. ಇದನ್ನು ಸಮರ್ಥಿಸುವಂತೆ ಹಂಪನಾರವರು–

'Kongani varman (Madhava I) of Ganga family second distinctive name of Ganga Kings perhaps stayed back at Kuvalalpur. His son and successor Madhavaraman I proceeded further with the family preceptor the adopt simhanandi to Shimoga area to be later called Mandali thousand where he pitched the army camp that augmented the growth of a prominent branch of their family.[9]

ಸೈನ್ಯಸಮೇತರಾಗಿ ಬಂದಿದ್ದರೆಂದು ಹೇಳಿದ್ದಾರೆ. ಕ್ರಿ.ಶ. ೩೫೦ರ ಇವರ ಆಗಮನವನ್ನು ಕ್ರಿ.ಶ. ಹನ್ನೊಂದನೇ ಶತಮಾನದ ಶಾಸನದಲ್ಲಿ ಹೇಳಿದೆ. ಶಾಸನಕಾರರು ಯಾವ ಆಧಾರದಿಂದ ಇದನ್ನು ಉಲ್ಲೇಖಿಸಿದನೆಂದು ತಿಳಿಯುವುದಿಲ್ಲ. ಮಂಡಳಿ ಗಂಗರ ಕಾಲದ ಯಾವ ಶಾಸನದಲ್ಲೂ ಇಲ್ಲಿ ಹರಿಯುತ್ತಿರುವ ತುಂಗಾ ನದಿಯ ಹೆಸರನ್ನು ಹೇಳಿಲ್ಲ ವೆಂಬುದು ಆಶ್ಚರ್ಯಕರವಾಗಿದೆ.

ದಡಿಗಮಾದವರು ದೀರ್ಘಕಾಲ ಮಂಡಳಿಯಲ್ಲಿರಲಿಲ್ಲ. ಕೆಲವೇ ದಿನಗಳು ಮಾತ್ರ ಇದ್ದು ಕುವಲಾಲಪುರಕ್ಕೆ ಹಿಂತಿರುಗಿದರು ಎಂದು ಶಾಸನದಲ್ಲಿ ಹೇಳಿದೆ. ಮಂಡಳಿಯ ಹೊರತಾಗಿ ಬೇರೆ ಯಾವ ಪ್ರದೇಶವನ್ನು ಇವರು ವಶಪಡಿಸಿಕೊಂಡಂತೆ ತಿಳಿಯುವುದಿಲ್ಲ.

ಗಂಗರ ಮೂಲ ಇತಿಹಾಸ : ಮೇಲೆ ಹೇಳಿರುವಂತೆ ಶಿವಮೊಗ್ಗದ ಕಲ್ಲೂರು ಗುಡ್ಡದ ಶಾಸನವಲ್ಲದೆ ಪುರಲೆ, ಮತ್ತು ನಿದಿಗೆಯ ಶಾಸನಗಳಲ್ಲಿಯೂ ಇವರ ಮೂಲವನ್ನು ಬಹುದೀರ್ಘವಾಗಿ ಪ್ರಸ್ತಾಪಿಸಿದೆ. ಶಾಸನಗಳ ಆದಿ ಭಾಗವು ಪೌರಾಣಿಕವಾಗಿದೆ.

ಶಾಸನಗಳಂತೆ ಗಂಗರು ಉತ್ತರ ಭಾರತದ ಅಹಿಚ್ಛತ್ರಪುರದವರು. ಗಂಗವಂಶದ ಪದ್ಮನಾಭನು ಇವರ ದೊರೆ. ಕಾರಣಾಂತರದಿಂದ ಇವನು ರಾಜ್ಯವನ್ನು ತ್ಯಜಿಸಿ ತನ್ನ ಮಕ್ಕಳಾದ ರಾಮ, ಲಕ್ಷ್ಮಣ, ತನ್ನ ತಂಗಿ ಮತ್ತು ಆಪ್ತರಾದ ನಲವತ್ತು ಬ್ರಾಹ್ಮಣ ಕುಟುಂಬದವರೊಂದಿಗೆ ಆಂಧ್ರದ ಗಂಗ ಹೆರೂರಿಗೆ ಆಗಮಿಸಿದರು. ಇವರು ಇಲ್ಲಿಯ ಜೈನ ಆಚಾರ್ಯರಾದ ಸಿಂಹನಂದಾಚಾರ್ಯರ ಶಿಷ್ಯ ರಾಗುತ್ತಾರೆ. ಪ್ರಾಯಶಃ ಇವರೆಲ್ಲರೂ ಜೈನಧರ್ಮಾವಲಂಬಿ ಗಳಾಗಿದ್ದರು. ಆಚಾರ್ಯರು ಇವರಿಗೆ ಧಡಿಗ ಮತ್ತು ಮಾಧವರೆಂದು ಹೆಸರಿಟ್ಟರು.

ಮೊದಲು ನಂದಗಿರಿಯನ್ನು ನಂತರ ಕುವಲಾಲಪುರ (ಕೋಲಾರ)ವನ್ನು ರಾಜಧಾನಿಯನ್ನಾಗಿ ಮಾಡಿ ಇವರಿಗೆ ರಾಜಪದವಿಯನ್ನು ನೀಡಿದ್ದಾರೆ.[೧೦] ಇದನ್ನು ಕುರಿತು

'The lofty Nandagiri being their fortress, Kuvalala their city the blameless Jina their religion.....' ಎಂದು ಹಂಪನಾಗರಾಜಯ್ಯನವರು ಹೇಳಿದ್ದಾರೆ.

ಗಂಗರು ಉತ್ತರ ಭಾರತದವರಲ್ಲ. ದಕ್ಷಿಣಭಾರತದವರು. ಕೋಳಾಲವನ್ನು ರಾಜಧಾನಿಯನ್ನಾಗಿ ಮಾಡಿಕೊಳ್ಳುವ ಮೊದಲು ಇವರು ಕಂಕರ್, ಕಂಗರ್ ಮತ್ತು ಕೊಂಗರಿಕ ಎಂದು ಎಲ್ಲರಿಗೂ ಪರಿಚಯವಾಗಿದ್ದರು. ಇವರು ಕಣ್ವಾಯನ ಗೋತ್ರದ ಗೊಂಗಡಿಕಾರರು. (A Sub division of Vokkaligas) ಇವರು ಕರ್ನಾಟಕದವರು ಎಂದು ಲೆವಿರೈಸ್ ಮತ್ತು ಡಾ. ಎಂ.ವಿ. ಕೃಷ್ಣರಾವ್‌ವರು ಅಧ್ಯಯನ ಮಾಡಿ ಪ್ರಕಟಿಸಿದ್ದಾರೆ.

ಇವರು 'ಗಿರಿರಾಜ' (ಮಲೆವ) ಎಂಬ ಒಳಪಂಗಡ ದವರು. ಆಕಳು, ಕುರಿ ಮತ್ತು ಕುದುರೆಗಳನ್ನು ಸಾಕುತ್ತಿದ್ದರು. ಭತ್ತ, ಗೋಧಿ ಮತ್ತು ದ್ವಿದಳ ಧಾನ್ಯವನ್ನು ಬೆಳೆಸುತ್ತಿದ್ದರು. ಕ್ರಿ.ಶ. ಮೂರನೆಯ ಶತಮಾನದಿಂದ ನಂತರ ಕಾವೇರಿ ನದಿಯ ದಕ್ಷಿಣ, ಪಶ್ಚಿಮ ಮತ್ತು ಮಲೆನಾಡು ಪ್ರದೇಶದಲ್ಲಿ ನೆಲೆಸಿದರು ಎಂದು ಪ. ಷಟ್ಟರ್‌ರವರು ತಮ್ಮ ಸಂಶೋಧನಾ ಕೃತಿಯಲ್ಲಿ ಪ್ರಕಟಿಸಿದ್ದಾರೆ.[೧೧]

ಹಿಂದೆ ಹೇಳಿದಂತೆ ಕ್ರಿ.ಶ. ೩೫೦ ರಿಂದ ಕ್ರಿ.ಶ. ೧೦೪೫ ರಲ್ಲಿ ಆಳುತ್ತಿದ್ದ ಭುಜಬಲಗಂಗ ಪೆರಮ್ಮಾಡಿ ಬರ್ಮದೇವನ ಕಾಲದವರೆಗೆ ಮಂಡಳಿಯ ಸುಮಾರು ಏಳು ಶತಮಾನಗಳ ಇತಿಹಾಸ ಅಜ್ಞಾತವಾಗಿದೆ. ಇವರೆಲ್ಲರೂ ಕುವಲಾಲಪುರದ ಗಂಗ ಮನೆತನದವರು. ಇವರ ಒಂದು ಶಾಖೆ ಇಲ್ಲಿ ಆಡಳಿತ ನಡೆಸಿದೆ.

ಸ್ವತಂತ್ರವಾಗಿ ಆಡಳಿತ ನಡೆಸಿಲ್ಲ. ಇವರು ಕಲ್ಯಾಣಿ ಚಾಲುಕ್ಯ ಹಾಗೂ ಹೊಯ್ಸಳರ ಸಾಮಂತರಾಗಿದ್ದರು. ಆರಂಭದಲ್ಲಿ ಮಂಡಳಿಯು ಇವರ ರಾಜಧಾನಿಯಾಗಿತ್ತೆ ಎಂಬುದಕ್ಕೆ ದಾಖಲೆಗಳಿಲ್ಲ. ನಂತರ ಇವರ ರಾಜಧಾನಿ ಎಡೆಹಳ್ಳಿಯಾಯಿತು. ಮತ್ತೆ ಬೇರೆ ಬೇರೆ ಕಡೆ ಸ್ಥಳಾಂತರ ಗೊಳ್ಳುತ್ತಿತ್ತು.

ಕಲ್ಲೂರು ಗುಡ್ಡದ ಶಾಸನದಲ್ಲಿ ಗಂಗ ಮಂಡಳಿ ಸಾವಿರವನ್ನು ಆಳಿದ ಅರಸರು ಹಾಗೂ ಜಿನಮುನಿಗಳ ವಿವರಗಳಿವೆ. ಈ ಶಾಸನವನ್ನು ಕುರಿತು ವಿವರವಾದ ಸಂಶೋಧನೆಗೆ ಅವಕಾಶವಿದೆ.

ಅನುಬಂಧ-೧

ಕಲ್ಲೂರುಗುಡ್ಡದ ಶಾಸನದಲ್ಲಿ ಕಲಿಯುಗದಲ್ಲೂ ಮಂಡಳಿಯ ಪ್ರಾಚೀನತೆಯನ್ನು ಪ್ರಸ್ತಾಪಿಸಿದೆ. ಇದನ್ನು ಕುರಿತು ಆರ್.ಎಸ್. ಶರ್ಮರವರು

"R.S. Sharma writes of the Kaliyuga which began at the end of the Mauryan and begining of the Gupta period. An inscription of the first half of the fifth century A.D. Pallava ruler simhavarman is described as ever ready to save from the sins of the Kaliyuga. This may suggest that the conception of the Kali age was not very old. The puranic statements that foreign rulers kill Brahmanas and seize the wives and wealth of other is generally applied to this period and as in consonance with the spirit of similar allegations in yuga purana" ಎಂದು ಹೇಳಿದ್ದಾರೆ. ಇದರಂತೆ ಮೌರ್ಯರು ಹಾಗು ಗುಪ್ತರ ಕಾಲವನ್ನು ಸಹ ಕಲಿಯುಗವೆಂದು ಕರೆದಿದೆ. (Saki making History P. 132)

ಅನುಬಂಧ-೨

The spread of Agriculture with the use of iron hoe, pick spade construction of Tanks of irrigating land raised the material standard of society in general and gradually the wealth of the section in particular as seen in the inequalities of the Megalithic burial sites" ಎಂದು ಇತಿಹಾಸಕಾರರಾಗಿದ್ದ ಸಾಕಿಯವರು ಉಲ್ಲೇಖಿಸಿದ್ದಾರೆ. ಇದು ಮಂಡಳಿ ಪ್ರದೇಶದ ಸಮಕಾಲೀನ ಪ್ರಾಚೀನ ಇತಿಹಾಸ ಮತ್ತು ನಡೆದಿರುವ ಉತ್ಖತನವನ್ನು ಸಂಕೇತಿಸುವಂತಿದೆ.

ಅನುಬಂಧ-೩

ಗಂಗಾನದಿ ಕಣಿವೆ ಪ್ರದೇಶದಲ್ಲಿ ಬೇಸಾಯಗಾರರು ಮೊಟ್ಟಮೊದಲು ಕಬ್ಬಿಣದ ನೇಗಿಲನ್ನು ತಯಾರಿಸಿ ಬಳಕೆ ತಂದರು. ಅಶೋಕನ ಕಾಲದವರೆಗೂ ಕರ್ನಾಟಕದಲ್ಲಿ ಕಬ್ಬಿಣದ ನೇಗಿಲಿನ ಬಳಕೆ ತಿಳಿದಿರಲಿಲ್ಲ (Saki Making History P. 98) ಆದರೆ ಮಂಡಳಿಯ ಬೇಸಾಯಗಾರರು ಕಬ್ಬಿಣದ ನೇಗಿಲನ್ನು ಬಳಕೆಗೆ ತಂದ ಬಗ್ಗೆ ದಾಖಲೆ ಲಭ್ಯವಿಲ್ಲ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಎಪಿಗ್ರಾಫಿಯಾ ಕರ್ನಾಟಿಕಾ,** ಶಿವಮೊಗ್ಗ, ೧೪ ಕ್ರಿ.ಶ. ೧೦೧೮ ಮತ್ತು ೧೧೨೧.
೨. ಡಾ. ಅ. ಸುಂದರ., ಶಿವಮೊಗ್ಗದ ಪುರಾತತ್ವ ಸಂಪತ್ತು ಪ್ರಾಚೀನತೆ ಲೇಖನ, **ಶಿಮೊಗೆ,** ಸಂಚಿಕೆ ಪುಟ ೧.
೩. ಅದೇ ಶಾಸನ, ಕ್ರಸಂ. ೧.
೪. ಎ.ಕ. ಸೊರಬ, ೧೬೦ ಉದ್ದರಿ ಕ್ರಿ.ಶ. ?
೫. ಎ.ಕ. ಶಿಕಾರಿಪುರ, ೨೨೫ ಬಂದಳಿಕೆ.
೬ **ಕನ್ನಡ ರತ್ನಕೋಶ,** ಪುಟ ೨೯೨.
೭. **ಪ್ರಾಚೀನ ಕರ್ನಾಟಕ-ಸಾಹಿತ್ಯ ಮತ್ತು ಚಾರಿತ್ರಿಕ ಅಂಶಗಳು,** ಪುಟ ೧೭೬.
೮. ಅದೇ ಕ್ರಸಂ. ೨, ಪುಟ ೧೦.
೯. Hampa Nagarajaiah., *Later Gangas of Mandali thousand.* page 4.
೧೦. ಅದೇ ಕ್ರಸಂ. ೯, ಪುಟ ೨.
೧೧. ಷ. ಷೆಟ್ಟರ್., **ಶಂಗಂ ತಮಿಳಗಂ ಮತ್ತು ಕನ್ನಡ ನಾಡುನುಡಿ,** ಪುಟ ೧೦೯.
೧೨. Saki-making History.

ಡಾ. ಚೆನ್ನಕ್ಕ ಪಾವಟೆ*

ಆಂಧ್ರಪ್ರದೇಶದಲ್ಲಿ ಸದಾಶಿವರಾಯನ ಶಾಸನಗಳು

ವಿಜಯನಗರದ ದೊರೆ ಸದಾಶಿವದೇವರಾಯ ವಿದ್ಯುಕ್ತವಾಗಿ ಪಟ್ಟವೇರಿ ೧೫೪೩ರಿಂದ ಕ್ರಿ.ಶ. ೧೫೭೧ ರವರೆಗೆ ಕೇವಲ ನಾಮಮಾತ್ರ ರಾಜನಾಗಿದ್ದವನು ವಾಸ್ತವವಾಗಿ ಅಧಿಕಾರವೆಲ್ಲ ರಾಮರಾಯನಲ್ಲಿಯೆ ನೆಲೆಸಿತ್ತು. ಕಿರೀಟಧಾರಣ ಸಂದರ್ಭದಲ್ಲಿ ಸದಾಶಿವದೇವರಾಯ ಪ್ರಾಪ್ತವಯಸ್ಕನಾಗದುದರಿಂದ ರಾಮರಾಯನ ರಾಜಪ್ರತಿನಿಧಿಯಾಗಿ ಅನತಿ ಕಾಲದಲ್ಲಿಯೇ ವಿಜಯನಗರ ಸಾಮ್ರಾಜ್ಯದ ಸಾರಸರ್ವಸ್ವವನ್ನು ಅಪಹರಿಸಿದನು. ಸುಮಾರು ೮ ವರ್ಷಗಳ ಕಾಲ ಎಂದರೆ ಕ್ರಿ.ಶ. ೧೫೫೦ ರವರೆಗೆ ಸದಾಶಿವರಾಯನೇ ಶಾಸನ ಸಮ್ಮತ ರಾಜನಾಗಿದ್ದು ರಾಮರಾಯನು ಕೇವಲ ಪ್ರತಿನಿಧಿ ಎನಿಸಿಕೊಂಡಿದ್ದನು. ಇಷ್ಟು ವೇಳೆಗೆ ೨೪ ವಸಂತಗಳ ತರುಣನಾದ ಸದಾಶಿವರಾಯನು ರಾಜ್ಯಭಾರದ ರಸಹಸ್ಯಾಂತರಗಳನ್ನು ಅರಿತುಕೊಂಡುದದರಿಂದ 'ಒತ್ತಾಯದ ಸಾಕ್ಷಿ'ಗೆ ಒಪ್ಪದೇ ಹೋದನು. ಇವನನ್ನು ಹೀಗೆಯೇ ಬಿಟ್ಟರೆ ತನಗೆ ಭವಿಷ್ಯಕ್ಕೆ ಧಕ್ಕೆ ಬರುವದೆಂಬುದನ್ನು ಸಾಕ್ಷಿ ಬಗೆದ ರಾಮರಾಯನು ಅವನನ್ನು ಬಂಧಿಸಿ ಸೆರೆಮನೆಯಲ್ಲಿಟ್ಟಿದ್ದರು. ಸೆರೆಮನೆಯಲ್ಲಿಟ್ಟಿದ್ದ ಸದಾಶಿವರಾಯನನ್ನು ರಾಮರಾಯ ಗೌರವದಿಂದಲೇ ನಡೆಸಿಕೊಂಡಿದ್ದನು. ಸದಾಶಿವದೇವರಾಯನ ಬಂಧನಕ್ಕೆ ಅವನ ಸಹೋದರರಾದ ತಿರುಮಲ ಮತ್ತು ವೆಂಕಟಾದ್ರಿ ಇಬ್ಬರೂ ರಾಮರಾಯನ ಬಗ್ಗೆ ಅಸಂತುಷ್ಟರಾಗಿದ್ದರಂತೆ.

ಆದರೆ ಕರ್ನಾಟಕದಲ್ಲಿ ದೊರಕಲಾರದ ಸದಾಶಿವದೇವರಾಯನ ಕನ್ನಡ ಶಾಸನಗಳು ಆಂಧ್ರಪ್ರದೇಶದಲ್ಲಿ ದೊರೆತಿದೆ. 'ಆಂಧ್ರಪ್ರದೇಶದ ಕನ್ನಡ ಶಾಸನಗಳು' ಎಂಬ ಕೃತಿಯಲ್ಲಿ ಸದಾಶಿವದೇವರಾಯನ ಮೂವತ್ತು ಶಾಸನಗಳು ದೊರಕಿದ್ದು ಅವುಗಳನ್ನು ಬಳಸಿಕೊಂಡು ಒಂದು ಸಪ್ರಬಂಧವನ್ನು ಬರೆದಿದ್ದೇನೆ. ವಿಜಯನಗರದ ದೊರೆ ಸದಾಶಿವರಾಯನ ಆಳ್ವಿಕೆಯಲ್ಲಿ ಕಶಕದಾಟ ದೊರೆಯ ದಳವಾಯಿ ಚೆನ್ನಮನಾಯಕನ ಮಗ ದಳವಾಯಿ ಕೃಷ್ಣನಾಯಕರು ದೊರೆಗೆ ಸ್ಥಿರಪಟ್ಟ, ಸಾಮ್ರಾಜ್ಯ ಪಟ್ಟವಾಗಬೇಕೆಂದು ದೇವತಾಕಾರ್ಯ ಕೈಕೊಂಡ ಸಂದರ್ಭದಲ್ಲಿ ಪೆನುಂಗೊಂಡೆಯ ಯರಮಂಚಿ ಬಾಗಿಲಿನ ಚೆನ್ನಕೇಶವ ದೇವರಿಗೆ ತನ್ನ ನಾಯಕತನದಿಂದ ಪಾಲಿಸುತ್ತಿರುವ ಪೆನುಗೊಂಡ ರಾಜ್ಯದ ಚೆನ್ನಕೇಶವಪುರವೆಂದು ಪ್ರತಿನಾಮವಿರುವ ಚೆನ್ನೂರು ಎಂಬ ಗ್ರಾಮವನ್ನೇ ಸರ್ವಮಾನ್ಯವಾಗಿ ಬಿಟ್ಟುಕೊಟ್ಟಿರುವರು.[೧] ಬಹುಶಃ ರಾಮರಾಯನ ಉಪಟಳ ಅಧಿಕವಾದುದರಿಂದ ವಿಜಯನಗರದ ಪ್ರಜೆಗಳು ಸದಾಶಿವರಾಯನಿಗೆ ಸ್ಥಿರಪಟ್ಟವಾಗಬೇಕೆಂದು ದೇವತಾ ಪ್ರಾರ್ಥನೆ ಮಾಡಿದ್ದಾರೆ.

ಸದಾಶಿವದೇವರಾಯನ ಆಳ್ವಿಕೆಯಲ್ಲಿ ಮನುಬೋಲಿಯ ಮಹಾಮಂಡಳೇಶ್ವರ ತಿರುಮಲದೇವ ಮಹಾಅರಸುಗಳು ಮಾಳಿಗೊಂಡ ಮತ್ತು ಸರುಪಗೊಂಡರಿಗೆ ಕಟ್ಟುಕೊಡುಗೆಯಾಗಿ ದೊಡ್ಡಗಟ್ಟದ ಕೆರೆ ಒಡೆದು ಹಾಳಾಗಿದ್ದಾಗ ಕೆರೆಯನ್ನು ದುರಸ್ತಿ ಮಾಡಿ ದತ್ತಿ ಕೊಟ್ಟಿರುವರು.[೨] ಇಲ್ಲಿಯ ಮೂರು ಶಾಸನಗಳು ನಾಯಿಂದರಿಗೆ ತೆರಿಗೆ ಮಾನ್ಯ ಮಾಡಿಕೊಟ್ಟ ವಿಷಯವನ್ನು ಹೇಳುತ್ತವೆ.[೩] ಪೆನುಗೊಂಡೆಯ ವೀರುಪಣ್ಣನು ದೇವರಾಯಪುರ ಎಂದು ಪ್ರತಿನಾಮವಿರುವ ಸದಾಶಿವಪುರದ ಅರ್ಧಭಾಗವನ್ನು ೧೦೮ ಘಟ್ಟ ವರಹಗಳನ್ನು ಕೊಟ್ಟುಕೊಂಡು ಲೇಪಾಕ್ಷಿಯ ವೀರಭಧ್ರದೇವರಿಗೆ ದತ್ತಿ ಕೊಡುತ್ತಾರೆ. ಇದಕ್ಕಿಂತ ಮುಂಚಿತವಾಗಿಯೇ ಪ್ರೌಢ ಪ್ರತಾಪದೇವರಾಯ ದೇವರಾಯ ಸೋಮರಾಜಿ ಎಂಬುವರಿಗೆ ಈ ಕೊಡುಗೆಯನ್ನು ನೀಡಿರುತ್ತಾರೆ.[೪] ದೊರೆಯ ನಿರೂಪದಿಂದ ಆದವಾನಿ ಸೀಮೆಯ ಕುರುಕುಂದ ಗ್ರಾಮದ ನಾಯಿಂದರಿಗೆ ಸರ್ವಮಾನ್ಯವಾದ ಬಟ್ಟಬಿರಾಡ ಸುಂಕಗಳನ್ನು ಬಿಟ್ಟಿರುವರು. ಈ ಮಾನ್ಯಕ್ಕೆ ಕಂದನ ಪೊಳಲಿನ ತಿಮ್ಮೋಜನ ಮಕ್ಕಳಾದ ಕೊಂಡೋಜ ಮತ್ತು ಭದ್ರೋಜ ಕಾರಣರೆಂದು ಹೇಳಿದೆ.[೫]

ಮಹಾಮಂಡಳೇಶ್ವರ ರಾಮರಾಜವಿಠಲ ಮಹಾಅರಸು ಅವರ ಕಾರ್ಯಕರ್ತನಾದ ವೀರಣ್ಣನಾಯಕನು ಬಾಗಿನಾಯಕನ ಹಳ್ಳಿಯ ಕೆರೆ ಒಡೆದಿದ್ದ ಕಾರಣ ಅದನ್ನು ಕಟ್ಟುವುದಕ್ಕೆ ಐದು ಜನರಿಂದ ಕಟ್ಟುಮಾನ್ಯ ಹೊಲಗದ್ದೆಗಳನ್ನು ಕೊಡಲಾಗಿದೆ.[೬] ದೊರೆಯ ನಿರೂಪದಂತೆ ಮುರಾರಿ ರಾವುತ ಅಯ್ಯನವರ ಕುಮಾರ ತಿಂಮ ಮತ್ತು ಕಂಬದೂರಿನ ಯಲ್ಲಪ್ಪ

* ಪ್ರಾಧ್ಯಾಪಕರು, ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಇವರುಗಳ ಮುಳ್ಳನಹಳ್ಳಿಯ ಬನದ ಚೌಡೇಶ್ವರಿ ದೇವಿಗೆ ಕೊಟ್ಟ ಭೂದಾನವನ್ನು ದಾಖಲಿಸಿದೆ, ಈ ದಾನವನ್ನು ಬಯಪನಾಯಕನ ಮಗ ಕೃಷ್ಣಪ್ಪನಾಯಕ ಅಯ್ಯನವರಿಗೆ ಪುಣ್ಯವಾಗಲಿ ಎಂದು ಭೂದಾನ ನೀಡಿರುವನು.[೭] ಅಪ್ಪಲರಾಜ ಅಯ್ಯನೆಂಬುವನು ಉರ್ವಕೊಂಡ ಸೀಮೆಯ ಗೌಡ ಸೇನಬೋವರಿಗೆ 'ಉರ್ವಕೊಂಡದ ಭಂಗಾರಿ ಗ್ರಾಮ' ಅಗ್ರಹಾರ ದೇವಸ್ಥಾನ ಗ್ರಾಮಗಳಲ್ಲಿರುವ ನಾಯಿಂದರಿಗೆ ತೆರಿಗೆ, ಹೊರಿಗೆ, ಕಾಣಿಕೆ ಕಪ್ಪು, ಬಿಟ್ಟಿ ಬಿರಾಡ ಯಾವದೂ ಇಲ್ಲ ಎಂದು ನಿರೂಪ ಕೊಟ್ಟಿರುವನು[೮] ಪೆನುಗೊಂಡೆಯ ವಿರುಪಣ್ಣನು ದೇವರಾಯಪುರ ಎಂದು ಪ್ರತಿನಾಮವಿರುವ ಸದಾಶಿವಪುರ ಗ್ರಾಮದ ಅರ್ಧಭಾಗವನ್ನು ೧೧೮ ಘಟ್ಟ ವರಹಗಳನ್ನು ಕೊಟ್ಟು ಲೇಪಾಕ್ಷಿಯ ವೀರಭದ್ರದೇವರಿಗೆ ದತ್ತಿ ನೀಡುತ್ತಾರೆ.[೯] ರಾಮರಾಜ ಕೊಂಡಯ್ಯಗಳ ಮಗ ಕೋನೇಟಿ ತಿಮ್ಮರಾಜನು ತನ್ನ ದಳವಾಯಿ ಯಲ್ಲಪ್ಪ ನಾಯಕನಿಗೆ ಕಸಬಾಪುರವನ್ನು ಉಂಬಳಿಯಾಗಿ ಕೊಟ್ಟಿರುವನು. ಕಸಬಾಪುರದ ಪಿಲಿಅಪ್ಪನ ಬೋವನ ಮಕ್ಕಳ ಬಿನ್ನಹದಂತೆ ದಳವಾಯಿ ಎಲ್ಲಪ್ಪ ನಾಯಕನು ತೆರಿಗೆ ಹೊರಿಗೆ ಸಿದ್ಧಾಯ ಬಿಟ್ಟಿ ಬಿರಾಡಗಳನ್ನು ಬಿಡಿಸಿದನೆಂದಿದೆ.[೧೦] ರಾಮರಾಜಯ್ಯನೆಂಬುವನು ತಮ್ಮ ಕ್ಷೌರದ ಕೆಲಸದ ನಾಯಿಂದ ಕೊಂಡಜನಿಗೆ ಹಾಗೂ ತಮ್ಮ ಸೀಮೆಯ ನಾಯಿಂದರಿಗೆ ಸಿದ್ಧಿಯ ಕಟ್ಟಳೆ ಸುಂಕ ಸರ್ವಸಾಮಾನ್ಯವಾಗಿ ಬಿಟ್ಟುಕೊಟ್ಟಿರುವನು.[೧೧]

ಸಿರಿಯಪ ನಾಯಕ ಅಯ್ಯನವರ ಕಾರ್ಯಕರ್ತರಾದ ಗುಂಡಮರಸಯ್ಯನವರು ದೊರೆಯ ದಳವಾಯಿ ಕೃಷ್ಣಪ್ಪನಾಯಕರಿಗೆ ಪುಣ್ಯವಾಗಲೆಂದು ಕೊಟನೂರಿನ ಚೌಡೇಶ್ವರಿ ದೇವಲಯದ ನಾಲ್ಕು ಮಂದಿ ಜೇಡ ಒಕ್ಕಲಿಗರಿಗೆ ಅರಮನೆಗೆ ಕೊಡಬೇಕಾದ ಬಿಟ್ಟಿ ಬಿರಾಡ ಮೊದಲಾದ ಸುಂಕಗಳನ್ನು ಸರ್ವಮಾನ್ಯವಾಗಿ ಬಿಟ್ಟಿರುತ್ತಾರೆ.[೧೨] ಚೌಡೇಶ್ವರಿ ಊಳಿಗರ ಒಕ್ಕಲು ತಿಪಸೆಟ್ಟಿ, ಚಿಕ್ಕಯ್ಯನ ಮಗ ತಿಮ್ಮಯ್ಯನು ಚಿಲೂಮತೂರ ದೇಪಿಸೆಟ್ಟಿಯ ಮಗ ಬಸವಪ್ಪ ಚೆಳಿಬರಲಿ ಕೀರ್ತಿಸೆಟ್ಟಿ ಮುಂತಾದವರ ಹೆಸರುಗಳಿವೆ.[೧೩] ಆನೆಗೊಂದಿಯ ಲಿಂಗಧರನಾದ ಕಾಡವೀರ ಎಂಬುವನು ರಾಮರಾಜಯ್ಯನವರ ನಾಯಕತನಕ್ಕೆ ಸೇರಿದ ಕನಕಗೊಂಡನಹಳ್ಳಿಯ ವೀರೇಶ್ವರ ಸೇವೆಗೆ ಆ ಗ್ರಾಮದಲ್ಲಿ ಲಿಂಗಧಾರಿಗಳು ಕೊಡುವಂತಹ ತೆರಿಗೆಗಳನ್ನು ಕೊಟ್ಟದ್ದನ್ನು ಈ ಶಾಸನ ಸೂಚಿಸಿದೆ.[೧೪] ಮನುಮೋಲಿಯ ಕಟ್ಟು ಕೊಡುಗೆಯಾಗಿ ದೊಡ್ಡಗಟ್ಟದ ಕೆರೆ ಒಡೆದು ಹಾಳಾಗಿದ್ದಾಗ ಕೆರೆಯ ವಡಕಿಯನ್ನು ಕಟ್ಟಿದ್ದಕ್ಕೆ ದತ್ತಿ ಕೊಟ್ಟಿರುತ್ತಾರೆ.[೧೫]

ದೊರೆಯ ಆಳ್ವಿಕೆಯಲ್ಲಿ ಲಿಂಗದ ವೀರಣ್ಣ ಒಡೆಯನ ಶಿಷ್ಯನೊಬ್ಬ ಪ್ರತಾಪ ದೇವರಾಯಪುರ ಎಂದು ಪ್ರತಿನಾಮ ವಿರುವ ಸರ್ವಮಾನ್ಯ ಅಗ್ರಹಾರದ ಸೋಮೇಶ್ವರ ದೇವರ ಕಾರ್ತಿಕಕ್ಕೆ ದೀಪಾರಾಧನೆಗೆ ಹೊನ್ನಿನ ರೊಕ್ಕವನ್ನು ದತ್ತಿಯಾಗಿ ಕೊಟ್ಟಿರುವರು.[೧೬] ದೊರೆಯ ಆಳ್ವಿಕೆಯಲ್ಲಿ ರೊದ್ದನಾಡಿನ ಪೆನುಗೊಂಡ ರಾಜ್ಯದ ಕೋಕಾಪುರ ಸ್ಥಳದ ತಿಮ್ಮ ಸಮುದ್ರ ಎಂದು ಪ್ರತಿನಾಮವಿರುವ ಕಗ್ಗಲ್ಲಿನಲ್ಲಿ ಮಲ್ಲಿಕಾರ್ಜುನದೇವರ ದೀಪಾರಾಧನೆಗೆ ದತ್ತಿ ನೀಡಲಾಗಿದೆ.[೧೭] ಸದಾಶಿವರಾಯನ ಆಳ್ವಿಕೆಯಲ್ಲಿ ಹಸ್ತಿನಾವತಿಯ ಮೂಡಿನಾಡು ರಾಯದುರ್ಗ ದೊಳಗಿನ ಊರುಕೊಂಡ ಸೀಮೆಯ ಲಿಂಗಸಮುದ್ರ ಎಂಬ ಪ್ರತಿನಾಮವಿರುವ ರಾಗನಗಾಳು ಎಂಬ ಅಗ್ರಹಾರದ ಹನುಮಂತದೇವರ ಸೇವೆಗಾಗಿ ಗೋವಿಂದಯ್ಯ, ಕೇಶವಯ್ಯ, ಬಸವಯ್ಯ, ದಕ್ಷಿಣಾಮೂರ್ತಿ, ವಲ್ಲಭಯ್ಯ ಈ ಐದು ಜನ ವಿಪ್ರನೋದಿಗಳಿಗೆ ಪುಣ್ಯವಾಗಲಿ ಎಂದು ಪದ್ಮನಾಭಯ್ಯ ಕೇಶವಯ್ಯ ಮತ್ತು ಮಾಧವಯ್ಯ ಎಂಬ ವಿಪ್ರವಿನೋದಿಗಳ ಧಾರೆಯೆರೆದುಕೊಟ್ಟ ಧರ್ಮಶಾಸನ ಎಂದು ತಿಳಿಸಿದೆ.[೧೮]

ವಿಪ್ರವಿನೋದಿಗಳ ಸ್ಥಾನಮಾನ :

ಇಲ್ಲಿಯ ವಿಪ್ರವಿನೋದಿಗಳ ಹೆಸರು ಕುತೂಹಲ ಕಾರಿಯಾಗಿದೆ. ವಿಪ್ರವಿನೋದಿ ಎಂಬ ವೈಷ್ಣವರ ಪಂಗಡ ದವರ ಬಗ್ಗೆ ಆಂಧ್ರಪ್ರದೇಶದಲ್ಲಿ ಕನ್ನಡ ಮತ್ತು ತೆಲುಗು ಶಾಸನಗಳು ಉತ್ತಮ ಮಾಹಿತಿಯನ್ನು ಒದಗಿಸಿಕೊಡುತ್ತವೆ. ವಿಜಯನಗರ ಸದಾಶಿವದೇವರಾಯನ ಆಳ್ವಿಕೆಯಲ್ಲಿ ಮಾತ್ರ ಬಹುಪಾಲು ಶಾಸನಗಳು ಆಂಜನೇಯ ದೇವಸ್ಥಾನದ ಮುಂದೆ ದೊರೆತಿವೆ. ಈ ಶಾಸನಗಳು ವಿಪ್ರವಿನೋದಿಗಳು ತಮಗೆ ಬರುತ್ತಿದ್ದ 'ತ್ಯಾಗವರ್ತನೆ'ಯನ್ನು ದೇವಾಲಯಗಳಿಗೆ ದತ್ತಿಯಾಗಿ ನೀಡಿದ ವಿಷಯವಿದೆ. ಆದರೆ ಅವರ ಆಚಾರ ವಿಚಾರ ಪದ್ಧತಿಗಳ ಬಗೆಗೆ ಶಾಸನಗಳು ಮೌನವಹಿಸಿವೆ.

ವಿಪ್ರವಿನೋದಿಗಳು ತಮ್ಮನ್ನು ಶುಕ್ಲಯಜುಶ್ಶಾಖೆಯ ಪ್ರಥಮ ಶಾಖೆಯ ಬ್ರಾಹ್ಮಣರೆಂದೇ ಕರೆಯಿಸಿಕೊಂಡಿದ್ದಾರೆ. ಬೇರೆ ಬೇರೆ ಗೋತ್ರದ ಆಪಸ್ತಂಭಸೂತ್ರ, ಕಾತ್ಯಾಯನ ಸೂತ್ರದ ವಿಪ್ರವಿನೋದಳಾಗಿದ್ದು. ದೇವರನ್ನು 'ಚೆನ್ನಕೇಶ್ವರ ಪೆರುಮಾಳ್' ಎಂದು. ಹಬ್ಬಗಳನ್ನು 'ತೆಪ್ಪ ತಿರುನಾಳ್', 'ವೈಶಾಖಿ. ತಿರುನಾಳ್', 'ಪೆರುಮಾಳ್ ದಶಮಿ' ಎಂದು ಕರೆದಿರುವರು. ವಿಪ್ರವಿನೋದಿಗಳದು ತಮಿಳು ಮೂಲವನ್ನು ಸೂಚಿಸುತ್ತದೆ. ಆವರು ತಾವು ವಲಸೆ ಬಂದ ಪ್ರದೇಶದ ಕನ್ನಡ-ತೆಲುಗು ಭಾಷೆಯಲ್ಲಿ ಸಹಜವಾಗಿ ವ್ಯವಹಾರದಲ್ಲಿ ಬಳಸಿ ಅದಕ್ಕೆ ಒಗ್ಗಿಕೊಂಡರೆಂದು ತೋರುತ್ತದೆ.

ವಿಪ್ರವಿನೋದಿಗಳು ಎಂದರೆ ವಿಪ್ರರಿಗೆ ವಿನೋದವನ್ನು ಒದಗಿಸುವವರು ಎಂದೂ, ಯಕ್ಷಿಣಿ, ಜಾದೂ ಮಾಡುವುದರಿಂದ ವಿನೋದವನ್ನುಂಟು ಮಾಡುವ ಬ್ರಾಹ್ಮಣರು ಎಂದೂ ಎರಡು ವ್ಯಾಖ್ಯಾನಗಳಿವೆ. ವೈದಿಕ ವರ್ಗದ ಬ್ರಾಹ್ಮಣರಂತೆ ಕರ್ಮನಿಷ್ಠರಾದರೂ ಅವರಿಂದ ಗೌರವವನ್ನು ಪಡೆಯದೇ ಇದ್ದವರು ವಿಪ್ರವಿನೋದಿಗಳು. ರಾಮಾನುಜಾಚಾರ್ಯರ ಪ್ರಭಾವದಿಂದ ವೈಷ್ಣವರಾದ ಪ್ರಥಮಶಾಖೆಯ ಈ ವರ್ಗಕ್ಕೆ ಈಗ ಬ್ರಾಹ್ಮಣವರ್ಗದಿಂದ ಮಾನ್ಯತೆ ದೊರೆತಂತಿಲ್ಲ. ಪ್ರಥಮ ಶಾಖೆಯವರು ಶೈವರೇ ಆಗಿರಲಿ, ವೈಷ್ಣವರೇ ಆಗಿರಲಿ, ಇವರ ಶಾಖೆಯ ಬ್ರಾಹ್ಮಣರು ಅವರನ್ನು ಕೀಳಾಗಿ ಕಾಣುವದು. ಕರ್ನಾಟಕದಲ್ಲಿ ಬಹುಕಾಲ ಮುಂದುವರೆದಿದೆ.

ಕಡಪ, ಕರ್ನೂಲು ಮತ್ತು ಅನಂತಪುರ ಜಿಲ್ಲೆಗಳಲ್ಲಿ ವಿಪ್ರವಿನೋದಿಗಳಿಗೆ ಸಂಬಂಧಿಸಿದಂತೆ ಒಟ್ಟು ೨೧ ಶಾಸನಗಳಿವೆ. ಅದರಲ್ಲಿ ರಾಗುಲಪಾಡು ಮತ್ತು ಚ್ಯಬಲಗಳಲ್ಲಿರುವದು ಮಾತ್ರ ಕನ್ನಡ ಶಾಸನಗಳು. ಬಹುಶಃ ವಿಪ್ರವಿನೋದಿಗಳೆಂಬ ಹೆಸರೇ ನಮಗರಿಯದು. ವೈಷ್ಣವ ಪಂಥದಲ್ಲಿ ವಿಪ್ರವಿನೋದಿಗಳ ಒಂದು ಪಂಥವಿತ್ತು ಎಂದು ನಂಬುವದಾದರೆ ಅವರ ಪಳಿಯುಳಿಕೆಗಳಾದರೂ ಉಳಿದಿರಬಹುದೆ ?

ಸದಾಶಿವದೇವರಾಯನ ಧಾರ್ಮಿಕ ಪ್ರಕ್ರಿಯೆಗಳು :

ಸದಾಶಿವದೇವರಾಯನ ಆಳ್ವಿಕೆಯಲ್ಲಿ ಆನೆಗೊಂದಿಯ ಕೊಮರವೀರಯ್ಯನ ಮಗ ಕೊಮರವೀರ ಎಂಬುವವನು ವಿರೂಪಾಕ್ಷಪುರದ ದೇವರಿಗೆ ಕಾರ್ತಿಕ ಪೂಜೆ ದೇವತಾ ರಾಧನೆಗೆ ಯಾರೋ ಮಹಂತರಿಗೆ ಭೂಮಿ ದತ್ತಿ ಬಿಟ್ಟಿರುತ್ತಾರೆ.[೧೯] ಡೊಂಬರ ಚೌಡಿನಾಯಕನ ಮಗ ತಿಮ್ಮರಾಜನು ತಿಮ್ಮ ಕುಲಕ್ಕೆ ಹಾಗೂ ರಾಮರಾಜಅಯ್ಯ ಕೊಂಡರಾಜಅಯ್ಯನವರಿಗೆ ಪುಣ್ಯವಾಗಲಿ ಎಂದು ದೇವರ ಸೇವೆಗೆ ದತ್ತಿ ಕೊಟ್ಟಿರುವರು.[೨೦] ಮಹಾಮಂಡಳೇಶ್ವರ ರಾಮರಾಜ ಅಪ್ಪಯ್ಯದೇವಗಳ ಮತ ಕೋನೇಟಿ ದೇವರಾಯ ಮಹಾಅರಸು ರಾಯದುರ್ಗವೇಂಠೇಯಕೆ ಸಲುವ ಉರುವಕೊಂಡ ಸೀಮೆಯ ಅಗ್ರಹಾರಗಳಾದ ಆನಕತಿ, ನಿಂಬೆಗಲ್ಲು, ರಾಯಪನಹಳ್ಳ, ಕಲಿದೇವನ ಹಳ್ಳಿ, ಸಿರಿವರ, ದೇವಿನಾಯಕಹಳ್ಳಿ, ಯದ್ರಗುರಿ ತುಂಬೆಗನೂರು ರಾಗನ ಹಾಳು, ತಾವರೆಕೊಳ, ಚಿಕ್ಕಚೋಪಲ, ತಿಂಮಾಪುರ ಹೀಗೆ-ಹೋತೂರು, ಬೆನಕನಹಳ್ಳಿ, ಅಂಬರಸನಹಳ್ಳಿ, ತಮಳಗಾಳ ಮಹಾಜನರಿಗೆ ತಳವಾರಿಕೆ ಬೇಡಿಕೆ, ರಾಯಸರ ವರ್ತಮೆ ಕರಣಿಕರ ವರ್ತನೆ, ಹರಳಬಿತ್ತಿ ಮೊದಲಾದ ತೆರಿಗೆಗಳಿಂದ ವಿನಾಯತಿ ನೀಡಿರುವರು. ತಂದೆ ಅಪ್ಪಲರಾಜುಅಯ್ಯ ಹಾಗೂ ಅಣ್ಣ ತಿರುಮಲರಾಯನಿಗೆ ಪುಣ್ಯವಾಗಬೇಕೆಂದು ಪಿನಾಕಿನಿ ನದಿತೀರದ ಹೊನ್ನ ಅಹೋಬಲ ನಾರಸಿಂಹನ ಸನ್ನಿಧಿಯಲ್ಲಿ ದತ್ತಿಯನ್ನು ಪೂರಸಲಾಗಿದೆ.[೨೧] ವಿಪ್ರವಿನೋದಿಗಳಿಗೆ ಸಂಬಂಧಿಸಿದಂತೆ ಜ್ಯಬಲ ಗ್ರಾಮದಲ್ಲಿ ಒಂದು ಶಾಸನವಿದೆ. ವಿಪ್ರವಿನೋದಿ ಗೋವಿಂದಯ್ಯ ಕಶ್ಯಪ ಗೋತ್ರದವನು. ವಲ್ಲಭಯ್ಯ ವಸಿಷ್ಠಗೋತ್ರದವನು. ವಿಪ್ರವಿನೋದಿಯ ತಮ್ಮ ಶೀತಾರಯ್ಯ ಮತ್ತು ವಲ್ಲಭಯ್ಯರು ಈ ಮೂವರು ಬರೆದುಕೊಟ್ಟ ಶಾಸನ. ಇಬ್ಬರೂ ಆಪಸ್ತಂಭಸೂತ್ರ ಯಜುರ್ವೇದ ಶಾಖೆಯವರು. ಇವರು ರಾಯದುರ್ಗ ತಾಲೂಕಿನ ಉರವುಕೊಂಡವನ್ನು ಕೃಷ್ಣರಾಯಪುರವೆಂದು ಪ್ರತಿನಾಮ ಇರುವ ಸರ್ವಮಾನ್ಯ ಅಗ್ರಹಾರ ತಾವರೆಕೊಳದ ಚೆನ್ನಕೇಶವ ದೇವರಿಗೆ ವಿಪ್ರವಿನೋದಿಗಳಿಗೆ ಕೊಡುವ 'ತ್ಯಾಗ ವರ್ತನೆಯನ್ನು ದತ್ತಿಯಾಗಿ ಬಿಟ್ಟಿರುವದು.[೨೨]

ಸದಾಶಿವದೇವರಾಯನ ಆಳ್ವಿಕೆಯಲ್ಲಿ ವಿರುಪಣ್ಣನಾಯಕನೆಂಬವ ಕಂಬದೂರಿನ ಮಲ್ಲಿಕಾರ್ಜುನ ದೇವಾಲಯಕ್ಕೆ ತಮ್ಮ ತಂದೆ ತಿಮ್ಮಪ್ಪನಾಯಕನಿಗೆ ಪುಣ್ಯವಾಗಲಿ ಎಂದು ಪಾರುಪತ್ತೆಗಾರರು ಅದುವರೆಗೆ ಮಾನ್ಯಗ್ರಾಸವಾಗಿ ತೆಗೆದುಕೊಳ್ಳುತ್ತಿದ್ದ ೫೦ ವರಹಗಳನ್ನು ಕೊಡುಗೆಯಾಗಿ ಕೊಟ್ಟಿರುವರು.[೨೩] ಪೈಲಬಂಧದ ಶಾಸನವೊಂದು ಮಹಾಮಂಡಳೇಶ್ವರ ರಾಮರಾಜು ತಿರುಮಲಯ್ಯದೇವ ಮಹಾಅರಸುಗಳ ನಿರೂಪದಿಂದ ಮಹಾನಾಯಕಾಚಾರ್ಯ ನಿಡುಗಲ್ಲಿನ ತಿಮ್ಮಣನಾಯಕರು ನಿಡುಗಲ್ಲು ಸೀಮೆಯ ಸೇನಬೋವ ಗವುಡ ಪ್ರಜೆಗಳು ಸೆಟ್ಟಿ ಪಟ್ಟಣಸ್ವಾಮಿಗಳು ಗುತ್ತಿ ತಿರುಮಲಯ್ಯ, ರಾಜಯ್ಯದೇವ ಹಾಗೂ ಕೆಂಚಪನಾಯಕರನ್ನು ಮುಂದಿಟ್ಟುಕೊಂಡು ಪೆಲಬಂಡೆಯ ತಿರುವೇಂಗಳನಾಥದೇವರ ಸೇವೆಗೆ ನಿಡುಗಲ್ಲ ರಾಜ್ಯದ ತುಮಕುಂಟೆಗ್ರಾಮವನ್ನು ದತ್ತಿಯಾಗಿ ನೀಡಿರುವರು.[೨೪] ಮಹಾಮಂಡಳೇಶ್ವರ ರಾಮರಾಜು ಅಯ್ಯಪದೇವ ಮಹಾ ಅರಸರು ಹೊಲದೊಳಗೆ ಪಲಿಗ್ರಾಮವಾಗಿ ಕಟ್ಟಿದ ಆಪಲಪುರದ ಗೌಡ ಸೇನಬೋವರು ಒಕ್ಕಲು ತಿಮ್ಮಜಿಡಿ ಮೊದಲಾದ ಸಮಸ್ತ ಪ್ರಜೆಗಳಿಗೆ ಕೊಟ್ಟ ಸಾಗುವಳಿಯ ಶಾಸನ ದೊರೆಯು ಅಯ್ಯಪದೇವನಿಗೆ ಪೆಲುಪಡಿಗೆ ಗ್ರಾಮವನ್ನು ಅಮರನಾಯಕತನಕ್ಕೆ ಕೊಟ್ಟಿರುತ್ತಾನೆ. ಪಾಳು ಬಿದ್ದಿದ್ದ ಹೊಲವನ್ನು ಸಾಗುವಳಿಗೆ ಗುತ್ತಿಗೆಯ ಮೇಲೆ ಕೊಟ್ಟ ಸರ್ವಮಾನ್ಯವಾಗಿ ಬಿಡಲಾಗಿದೆ.[೨೫]

ಸದಾಶಿವದೇವರಾಯನ ಆಳ್ವಿಕೆಯಲ್ಲಿ ಅಧಿಕಗೊಳಿಸಿದ ಸುಂಕನ್ನು ತಡೆಯಲಾರದೆ ಚ್ಯಬಲಗ್ರಾಮದ ಜನತೆ ಊರನ್ನೇ ಬಿಟ್ಟು ಹೋಗಿದ್ದರು. ಮಹಾಮಂಡಳೇಶ್ವರ ಕೊಂಡೆಯ್ಯದೇವ 'ಮಹಾ ಅರಸನ ಪಾರುಪತ್ಯಗಾರನಾದ ದಳವಾಯಿ ಅಪ್ಪಲನಾಯಕನು ಜನಗಳಿಗೆ ನಂಬುಗೆಯನ್ನು ಕೊಟ್ಟು ಮತ್ತೆ ಜನರು ಹಿಂದಕ್ಕೆ ಬರುವಂತೆ ಮಾಡಿರುವನು. ಈ ಗ್ರಾಮದ ಜನರು ಮೂರು ವರ್ಷಗಳ ಕಾಲ ಅರಮನೆಯ ಸೇನಬೋವ ವರ್ತನೆ, ರಾಯಸರ ವರ್ತನೆ, ಊಳಿಗರ ವರ್ತನೆ, ಕಾಣಿಕೆ ಕಡ್ಡಾಯ ಮುಂಜಿ ಮದುವೆಗಳ ಸುಂಕ ಮೊದಲಾದವುಗಳಿಂದ ವಿನಾಯತಿ ಪಡೆದಿರುವರು. ಹೆನ್ನೆಯ ದೇವರಿಗೆ ಬಿಟ್ಟ ಸೇವೆಯು ದೊರಕಿತು. ಮೂರು ವರ್ಷದ ನಂತರ ಉಳಿದ ಕಡೆ ಇರುವಂತೆಯೆ ತೆರಿಗೆ ಹಾಕಲಾಗುವದು. ಹಾಗೂ ಭತ್ತವಳಿಯ

ರೊಕ್ಕವನ್ನು ಹಸಿಗೆಯ ಮೇಲೆ ತೆಗೆದುಕೊಳ್ಳ ಲಾಗುವದು.[೨೬] ಮಹಾಮಂಡಳೇಶ್ವರ ವೆಂಕಟಾದ್ರಿ ರಾಜಅಯ್ಯಗಳಿಗೆ ಆದವಾನಿ ಸೀಮೆಯ ಅಮರನಾಯಕತನ ದೊರೆತಿತ್ತು. ಆ ಸೀಮೆಯ ಬೂದೂರ ಗ್ರಾಮ ಮಹಾ ಮಂಡಳೇಶ್ವರ ಗೋಬೂರಿ ಅವುಬಳ ರಾಜನಿಗೆ ವುಂಬಳಿ ಯಾಗಿ ಕೊಟ್ಟಿರುವನು. ಈ ಅವುಬಳ ರಾಜಯ್ಯನು ಬೂದೂರಿನ ಅಹೋಬಲ ನಾರಸಿಂಹದೇವರ ಸೇವೆಗೆ ಹೊಲವನ್ನು ದತ್ತಿಯಾಗಿ ನೀಡಿರುವರು.[೨೭]

ಮಹಾಮಂಡಳೇಶ್ವರ ತಿರುಮಲರಾಜದೇವ ಮಹಾ ಅರಸು ಸುರುಳಿವಾಯಿಯ ಕಲ್ಲಿನಾಥ ದೇವರಿಗೆ ಎರಡು ಗ್ರಾಮುಗಳ ಹಣ ಒಂದು ಕಾಸಿನ ಮೂಲ ವೀಸವನ್ನು ಕೊಟ್ಟಿದ್ದಾರೆ.[೨೮] ಪೆನುಗೊಂಡೆಯ [illegible] ದೇವರಾಯ ಪುರ ಎಂದು ಪ್ರತಿನಾಮವಿರುವ ಸದಾಶಿವ ದೇವರಪುರ ಗ್ರಾಮದ ಅರ್ಧಭಾಗವನ್ನು ೧೦೮ ಘಟ್ಟ ವರಹಗಳನ್ನು ಕೊಟ್ಟು ಕೊಂಡು ಲೇಪಾಕ್ಷಿಯ ವೀರಭದ್ರ ಸೇವೆಗೆ ದತ್ತಿಯಾಗಿ ಕೊಡುತ್ತಾರೆ. ಈ ಗ್ರಾಮುವನ್ನು ಹಿಂದೆ ಪ್ರೌಢದೇವರಾಯನು ದೇವರಾಯ ಸೋಮಯಾಜಿ ಎಂಬುವವರಿಗೆ ಕೊಡುಗೆ ನೀಡಿರುತ್ತಾರೆ ಎಂದೂ ದಾಖಲಿಸಿದೆ[೨೯] ವಿಜಯನಗರ ಸದಾಶಿವದೇವರಾಯನ ಆಳ್ವಿಕೆಯಲ್ಲಿ ರೊದ್ದ ನಾಡಿನ ಪೆನುಗೊಂಡೆ ರಾಜ್ಯದ ಕೋಕಾಪುರ ಸ್ಥಳದ ತಿಮ್ಮಸಮುದ್ರ ಎಂಬ ಪ್ರತಿನಾಮವಿರುವ ಕಗ್ಗಲ್ಲಿನಲ್ಲಿ ಮಲ್ಲಿಕಾರ್ಜುನದೇವರಿಗೆ ದತ್ತಿ ನೀಡಿರುವರು.[೩೦] ದೊರೆಯ ಆಳ್ವಿಕೆಯಲ್ಲಿ ಆನೆಗೊಂದಿಯ ಕೊಮರ ವೀರಯ್ಯನ ಮಗ ಕೊಮರವೀರ ಎಂಬುವವರು ವಿರೂಪಾಕ್ಷದೇವಪುರದ ದೇವರಿಗೆ ಕಾರ್ತಿಕ ಪೂಜೆ ದೇವಾರಾಧನೆಗೆ ಯಾರೋ ಮಹಂತನ ಭೂಮಿ ದತ್ತಿ ಬಿಟ್ಟುಕೊಟ್ಟಿದ್ದಾರೆ.[೩೧]

ಈ ಶಾಸನಗಳನ್ನು ಗಮನಿಸಿದಾಗ ಸದಾಶಿವ ದೇವರಾಯ ಸಿದ್ಧಪಟ್ಟಕ್ಕಾಗಿ ಪ್ರಜೆಗಳು ಅನೇಕ ದೇವತಾ ಪೂಜೆಗಳನ್ನು ಮಾಡಿಸಿದಂತೆ ಕಾಣುತ್ತಿದೆ. ರಾಮರಾಯನ ಉಪಟಳದಿಂದ ಬೇಸತ್ತ ಜನತೆ ಅವನಿಂದ ಆದಷ್ಟು ಬೇಗ ಬಿಡುಗಡೆ ಹೊಂದಲೆಂದು ಕೇಳಿಕೊಂಡಿರುವರು. ದೊಡ್ಡಗಟ್ಟದ ಕೆರೆ ಹಾಳಾಗಿದ್ದಾಗ ಕೆರೆಯನ್ನು ದುರಸ್ತಿ ಮಾಡಿಸಿ ಕೊಟ್ಟಿರುವನು. ಸದಾಶಿವದೇವರಾಯನ ಕಾಲದಲ್ಲಿ ಅನೇಕ ದಳವಾಯಿಗಳು, ಕಾರ್ಯದವರು ಅಲ್ಲಿ ಕಾಣಿಸಿಕೊಂಡಿದ್ದಾರೆ. ದೊರೆಯ ದಳವಾಯಿ ಚೆನ್ನಮ್ಮ ನಾಯಕನ ಮಗ ದಳವಾಯಿ ಕೃಷ್ಣಪ್ಪ ನಾಯಕ [illegible] ಮಹಾಮಂಡಳೇಶ್ವರ ರಾಮರಾಜ ಕೋನೇತಿ ತಿಂಮಯದೇವ ಮಹಾಅರಸು, ಸಿರಿಯಪನಾರ್ಯ ಅಯ್ಯನ ಕಾರ್ಯಕರ್ತ ಗುಂಡಮರಸಯ್ಯ. ಆದವಾನಿ ಸೀಮೆಯುನ್ನು ಅಮರ ನಾಯಕತನಕ್ಕೆ ಪಡೆದಿದ್ದ ಮಹಾಮಂಡಳೇಶ್ವರ ಸೋಮವಂಶದ ವೆಂಕಟಾದ್ರಿ ರಾಜಅಂಯ್ಯ ವುಂತಾದವರ ರಾಮರಾಜಯ್ಯನೆಂಬುವನು ತಮ್ಮ ಕೆಲಸದ ಕೌರಿಕ ನಾಯಿಂದ ಕೊಂಡೊಜ ಹಾಗೂ ಸೀಮೆಯ ನಾಯಿಂದರಿಗೆ ಅವರು ಪೂರ್ವದಲ್ಲಿ ಕೊಡುತ್ತಿದ್ದ ಸಿದ್ದಿಯರನ್ನು ಸರ್ವಮಾನ್ಯವಾಗಿ ಬಿಟ್ಟುಕೊಟ್ಟಿರುವರು. ಬಂಗಿನಾಯುಕನ ಹಳ್ಳಿಯು ಕೆರೆ ಒಡೆದದ್ದರಿಂದ ಅದನ್ನು ಕಟ್ಟುವದಕ್ಕೆ ಕಟ್ಟುಗುತ್ತಿಗೆಯಾಗಿ ಹೊಲ ಗದ್ದೆಗಳನ್ನು ಕೊಟ್ಟಿರುವರು. ಚವುಂಡೇಶ್ವರ ದೇವರಿಗೆ ನಾಲ್ಕು ಮಂದಿ ಜೇಡ ಒಕ್ಕಲಿಗರಿಗೆ ಅರಮನೆಗೆ ಕೊಡಬೇಕಾದ ಬಿಟ್ಟಿ ಬಿರಾಡ ಮೊದಲಾದ ಸುಂಕಗಳನ್ನು ಸರ್ವಮಾನ್ಯವಾಗಿ ಬಿಟ್ಟಿರುವರು. ಹೀಗೆ ದೊರೆ ಸದಾಶಿವರಾಯನ ಶಾಸನಗಳು ಸಿಕ್ಕಿವೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಆ.ಪ್ರ.ಶಾ. ಕೊಂಡಾಪುರ (ಕ್ರಿ.ಶ. ೧೫೩೮).
೨. ಆ.ಕ.ಶಾ. ೯೧ ಹಲಕೂರು (ಕ್ರಿ.ಶ. ೧೫೫೧).
೩. ಆ.ಕ.ಶಾ. ೫೫ ಅಮರಾಪುರ (ಕ್ರಿ.ಶ. ೧೫೪೪)
೪. ಆ.ಕ.ಶಾ. ೪೫ ಲೇಪಾಕ್ಷಿ (ಕ್ರಿ.ಶ. ೧೫೪೮)
೫. ಆ.ಕ.ಶಾ. ೩೧೪ ಕುರುಕುಂದಿ (ಕ್ರಿ.ಶ. ೧೫೪೫)
೬ ಆ.ಕ.ಶಾ. ೨೦೪ ಬಾಗಿನಾಯಕನ (ಕ್ರಿ.ಶ. ೧೫೪೬)
೭. ಆ.ಕಾ.ಶಾ. ೧೮೩ ಮಲ್ಲಿಪಲ್ಲ (ಕ್ರಿ.ಶ. ೧೫೪೭)
೮. ಆ.ಕ.ಶಾ. ೧೨೮ ಗಡೇಕಲ್ಲು (ಕ್ರಿ.ಶ. ೧೫೪೭)
೯. ಆ.ಕ.ಶಾ. ೧೧೬ ಕನಕಾಪುರ (ಕ್ರಿ.ಶ. ೧೫೪೭)
೧೦. ಆ.ಕ.ಶಾ. ೨೦೩ ಮುದಡಿ (ಕ್ರಿ.ಶ. ೧೫೪೪)
೧೩. ಆ.ರಾ.ಖಾಸ ೬ ಕೊಟ್ನೂರು (ಕ್ರಿ.ಶ. ೧೫೫೦)
೧೪. ಆ.ಕ.ಶಾ. ೨೧೩ ಕನಗಿನಹಾಳ (ಕ್ರಿ.ಶ. ೧೫೫೦)
೧೫. ಆ.ಕ.ಶಾ. ೯೧ ಹುಲಗೂರು (ಕ್ರಿ.ಶ. ೧೫೫೧)
೧೬. ಆ.ಕ.ಶಾ. ೭೭ ಪಾತಿಸುವರಂ (ಕ್ರಿ.ಶ. ೧೫೫೧)
೧೭. ಆ.ಕ.ಶಾ. ೧ ಕಗ್ಗಲ್ಲು (ಕ್ರಿ.ಶ. ೧೫೫೩)
೧೮. ಆ.ಕ.ಶಾ. ೧೬೨. ರಾಗುಲಪಾಜು (ಕ್ರಿ.ಶ. ೧೫೫೪)
೧೯. ಆ.ಕ.ಶಾ. ೧೮೯ ಗುತ್ರೀತಾ ಆವುಲಪಲ್ಲಿಪುರದಲ್ಲಿ (ಕ್ರಿ.ಶ. ೧೫೫೫)
೨೦. ಆ.ಕ.ಶಾ. ೨೭ ಪುಲಮಿತಿ (ಕ್ರಿ.ಶ. ೧೫೫೫)
೨೧. ಆ.ಕ.ಶಾ. ೧೫೫ ಪನ್ನೆಹೋಬಲಂ (ಕ್ರಿ.ಶ. ೧೫೫೬)
೨೨. ಆ.ಕ.ಶಾ. ೧೪೬ ಚ್ಯಬಲ (ಕ್ರಿ.ಶ. ೧೫೫೬)
೨೩. ಆ.ಕ.ಶಾ. ೧೭೨ ಕಂಬದೂರು (ಕ್ರಿ.ಶ. ೧೫೫೬)
೨೪. ಆ.ಕ.ಶಾ. ೭೮ ಪೈಲಬಂಡೆ (ಕ್ರಿ.ಶ. ೧೫೫೬)
೨೫. ಆ.ಕ.ಶಾ. ೧೬೫ ರಾಗುಲಪಾಡು (ಕ್ರಿ.ಶ. ೧೫೫೮)
೨೬. ಆ.ಕ.ಶಾ. ೧೪೭ ಚ್ಯಬಲ (ಕ್ರಿ.ಶ.–)
೨೭. ಆ.ಕ.ಶಾ. ೩೦೫ ಬೂದೂರು (ಕ್ರಿ.ಶ. ೧೫೬೦)
೨೮. ಆ.ಕ.ಶಾ. ೩೩೩ ಸುಳುವಾಯಿ (ಕ್ರಿ.ಶ. ೧೫೬೧)
೨೯. ಆ.ಕ.ಶಾ. ೪೪ ಲೇಪಾಕ್ಷಿ (ಕ್ರಿ.ಶ. –)
೩೦. ಆ.ಕ.ಶಾ. ೧ ಕಗ್ಗಲ್ಲು (ಕ್ರಿ.ಶ. ೧೫೫೩)
೩೧. ಆ.ಕ.ಶಾ. ೧೮೯ ಗುತ್ತೀತ) ಆವುಲಪಲ್ಲಿ (ಕ್ರಿ.ಶ. ೧೫೫೫)

ಡಾ. ಜಗದೀಶ*

ದೀವರ ಶಾಸನಗಳು

ದೀವರು ಒಂದು ಜನಾಂಗವಾಗಿ ಶಿವಮೊಗ್ಗ ಜಿಲ್ಲೆಯ ಸೊರಬ, ಸಾಗರ, ಹೊಸನಗರ, ತೀರ್ಥಹಳ್ಳಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಸಿರಸಿ ಮತ್ತು ಸಿದ್ಧಾಪುರ ತಾಲ್ಲೂಕುಗಳಲ್ಲಿ ಹರಡಿಕೊಂಡಿದ್ದಾರೆ. ಇತ್ತೀಚೆಗೆ ದೀವರು ಈಡಿಗ ಜನಾಂಗ ಮತ್ತು ಇತರೆ ಜನಾಂಗಗಳೊಂದಿಗೆ ವೈವಾಹಿಕ ಸಂಬಂಧ ಮಾಡಿಕೊಳ್ಳುತ್ತಿರುವವರಾದರೂ ಇವರು ಬೇರೆಯೇ ಆಗಿದ್ದರೆಂಬುದು ಶಾಸನಗಳ ಸಮೀಕ್ಷೆಯಿಂದ ತಿಳಿದು ಬರುತ್ತದೆ. ವೃತ್ತಿ ಆಧಾರಿತವಾಗಿ ಇವರನ್ನು ಹಳೇಪೈಕ, ಹಳೆ ಪಾಯಿಕರೆಂದು ಕರೆಯಲಾಗಿದೆ. ಪಾಯಿ ಮರಾಠಾ ಶಬ್ದವಾದ ಕಾಲು ಎಂಬುದನ್ನು ಸೂಚಿಸುತ್ತದೆ, ಹಳೇಪೈಕದವರು ಸೈನ್ಯದಲ್ಲಿ ಕಾಲ್ದಳವಾಗಿ ಸೇವೆ ಸಲ್ಲಿಸಿದವರಾಗಿರಬೇಕು. ಇವರ ಯುದ್ಧ ಕೌಶಲ್ಯ ಕುರಿತಾಗಿ "ಸಾವಿರ ತಲೆ ಹೋದರೂ ದೀವರ ತಲೆ ಹೋಗದು" ಎಂಬ ಗಾದೆ ಮಾತು ಪ್ರಚಲಿತದಲ್ಲಿದೆ. ಇವರ ಹಬ್ಬಗಳ ಆಚರಣೆಯಲ್ಲಿ ಬಿಲ್ಲ ಹಬ್ಬ ಮುಖ್ಯ, ಅದರಲ್ಲಿ ಆಯುಧಗಳನ್ನು ಪೂಜಿಸುತ್ತಾರೆ. ಡಾ॥ ಶಂ.ಬಾ. ಜೋಶಿ ಹಳೇಪೈಕರು 'ತುರುವ ಕೊಡೊಯ್ಯು ಕಾಯಕದಲ್ಲಿ' ನಿಪುಣರೆಂದು ಮತ್ತು ದಂಡಾಳುಗಳೆಂದು ಹೆಸರಾಗಿದ್ದರೆಂದು ಹೇಳುತ್ತಾರೆ. ಕಂಠೀರವ ನರಸರಾಜ ವಿಜಯದಲ್ಲಿ ಇವರು ಭೂತಳ ನಡುಗಿಸುವವರೆಂದು ಹೇಳಲ್ಪಟ್ಟಿದೆ. ಸುಮಾರು ಹತ್ತು ಶಾಸನಗಳಲ್ಲಿ ದೀವ ಜನಾಂಗದ ಉಲ್ಲೇಖ ಬರುತ್ತದೆ.

ಮುತ್ತಿಗೆ ಗ್ರಾಮದ ಕ್ರಿ.ಶ. ೧೦೭೮ ವೀರಗಲ್ಲೊಂದರಲ್ಲಿ[೧] ತಾಳಗುಂದದಲ್ಲಿನ ಹಸುಗಳನ್ನು ಅಪಹರಿಸುವಾಗ ತಳಾರದಾಸಿ ಹೋರಾಡಿ ಹಸುವನ್ನು ಹಿಂತಿರುಗಿಸುವಾಗ ಮರಣ ಹೊಂದುತ್ತಾನೆ. ಆತನ ಮಗ ಮಸಣಿಗೆ ಒಂದು ಮತ್ತರು ಭೂಮಿ ಮತ್ತು ಮನೆಯೊಂದನ್ನು ಬಿಟ್ಟಾಗ ನಿಲಿಸಿದ ಕಲ್ಲಿನ ಕೊನೆಯ ಸಾಲಿನಲ್ಲಿ ದೀವರ ಗಾಡಯ ನಳಿಯ ದಾಸಯ ಎಂಬ ಉಲ್ಲೇಖವಿದ್ದು ಇದು ಪ್ರಾಯಶಃ ಮಸಣನೊಂದಿಗಿನ ಸಂಬಂಧ ಉಲ್ಲೇಖಿಸುತ್ತದೆ.

ಹಿರೇಜಂಬೂರು ಗ್ರಾಮದಲ್ಲಿರುವ ಎರಡು ವೀರಗಲ್ಲುಗಳು.[೨] ಕ್ರಿ.ಶ. ೧೧೫೯ರಲ್ಲಿ ಬಿಜ್ಜಣದೇವನ ಕಾಲದಲ್ಲಿ ಅಗ್ರಹಾರ ಜಂಬೂರನ್ನು ಕಲ್ಲರಸ ಮುತ್ತಿದಾಗ ದೀವರ ಬಿಟ್ಟೆಯಂ ಹಲವರನ್ನು ಕೊಂದು ಕುದುರೆಯನಿಜಿದು ಸುರಲೋಕ ಪ್ರಾಪ್ತನಾದ ವಿಷಯವಿದೆ. ಕ್ರಿ.ಶ. ೧೧೭೪ರಲ್ಲಿ ಅಗ್ರಹಾರ ಜಂಬೂರ ಮೇಲೆ ಬಿಟ್ಟೆಯೂರ ಮಂಚಗೌಡ ಆಕ್ರಮಣ ಮಾಡಿ ಹಸುಗಳನ್ನು ಅಪಹರಿಸಿ ಹೆಣ್ಣು ಮಕ್ಕಳನ್ನು ಅಪಮಾನಿಸಿದಾಗ ದೀವರ ಬಾಚೆಯ ಹಲವರನ್ನು ಕೊಂದು ಸುರಲೋಕ ಪ್ರಾಪ್ತನಾದ ವಿಷಯವಿದೆ.

ಹೊಸಗುಂದದ ಬೀರರಸ ಕುಪ್ಪಗಡ್ಡೆಯ ಠಾಣೆಯನು ಕ್ರಿ.ಶ. ೧೨೬೮ರಲ್ಲಿ ಪಡೆದುಕೊಳ್ಳಲೆತ್ನಿಸಿದಾಗ, ಬರಿಗೆ ಗ್ರಾಮದ ದೀವರ ಬೀರ ಈ ಯುದ್ಧದಲ್ಲಿ ಹೋರಾಡಿ ಸತ್ತ.[೩] ಸೊರಬ ತಾಲ್ಲೂಕು ತಾಳಗುಪ್ಪೆ ಕ್ರಿ.ಶ. ೧೨೪೩ರ ಶಾಸನವೊಂದು ಸಿಂಹಣನ ಕಾಲದಲ್ಲಿ ಕಲಿಯ ಠಕ್ಕುರನು ತವನಂದಿಯಲ್ಲಿದ್ದ ಅಧಿಕಾರಿ ಉಂಬಳಿಯನ್ನು ನೀಡಲು ನಿರಾಕರಿಸಿದ ಕಾರಣ ತರವೂರು (ತಾಳಗುಪ್ಪ) ಮತ್ತು ಇಡಗೋಲು (ಇಡಗೋಡು) ಠಾಣಾಂತನಿಕ್ಕಿದ ಉಲ್ಲೇಖವಿದೆ.[೪] ಕಲಿದೇವ ಠಕ್ಕುರನು ಕ್ರಿ.ಶ. ೧೩೫೮ರಲ್ಲಿ ಅಕ್ಕಿ ಆಲೂರ ಮೇಲೆ ದಾಳಿ ಮಾಡಿ ಹಸುಗಳನ್ನು ಅಪಹರಿಸುವಾಗ ಪಾಯದಳದ ಸಂಘಟನೆಯೊಳು ಇದ್ದ ದೀವರ ಲೋಕೈಯನಾಯಕನ ಮಗ ಮೃತಪಟ್ಟನು.[೫] ಈ ಶಾಸನದಲ್ಲಿ ಪಾಯದಳ ಎಂಬ ಉಲ್ಲೇಖವು ಗಮನಾರ್ಹವಾಗಿದೆ. ಠಾಣೆಗಳನ್ನು ಮುತ್ತುವ ವಶಪಡಿಸಿಕೊಳ್ಳುವುದು ಮಹತ್ವವಾಗಿತ್ತು. ಠಾಣೆಗಳನ್ನು ವಶಪಡಿಸಿಕೊಂಡರೆ ಸಾಕು ಸರಕು ಸರಂಜಾಮಿನ ಮೇಲೆ ಸುಂಕ ವಸೂಲಿ ಮಾಡುವ ಅಧಿಕಾರ ಲಭಿಸುತ್ತಿತ್ತು. ತನ್ಮೂಲಕ ರಾಜ್ಯ ಮತ್ತು ರಾಜನ ಆದಾಯ ಹೆಚ್ಚುತ್ತಿತ್ತು.

ಮಾಲುವೆಯ ಕ್ರಿ.ಶ. ೧೩೮೩ ಶಾಸನವೊಂದರಲ್ಲಿ ಹಸುಗಳನ್ನು ಅಪಹರಿಸುವಾಗ ಗೌಡನೊಬ್ಬ ಕೂಗಿಕೊಂಡಾಗ ದೀವರ ಬೊಂಮಯನಾಯ್ಕನು ಹೋರಾಡಿ ಮೃತಪಟ್ಟಾಗ ನೆತ್ತರುಗೊಡಿಗೆಯಾಗಿ ಭೂಮಿ ನೀಡಿದ ಉಲ್ಲೇಖವಿದೆ.[೬] ಎಲಗಳಲೆಯ ಕ್ರಿ.ಶ. ೧೫೯೮ರ ಶಾಸನವೊಂದು ಕೆಳದೀ ಮಲ್ಲೇಗೌಡರು ಯಲಗಣನೆಯ ದೀವರು ಬೊಂಮಯ್ಯ ಮಗ ರಾಮಗೆ ನೆತ್ತರುಗೊಡಗೆಯ ಕೊಟ್ಟ ಉಲ್ಲೇಖವಿದೆ.[೭]

* # ೬೬, ಮೊದಲ ಅಡ್ಡ ರಸ್ತೆ, ಹೊಸಮನೆ ಬಡಾವಣೆ, ಶಿವಮೊಗ್ಗ.

ಜಂಬಾಣಿಯ ಕ್ರಿ.ಶ. ೧೬೭೨ ಶಾಸನದಲ್ಲಿ ಜಂಬಾನಿಯ ಹಳೇಪಯಿಕದ ಹೂಜಗೆ ಮೂರು ವರಹ ಉಂಬಳಿ ಬಿಟ್ಟ ಉಲ್ಲೇಖ.[೮]

ಕ್ರಿ.ಶ. ೧೧೩೦ ಮೂಡಿಗೆರೆ ತಾಲ್ಲೂಕು ಹಂತೂರು ಶಾಸನವೊಂದರಲ್ಲಿ ಚೈತ್ಯಾಲಯ ಕಟ್ಟಿಸಲು ಐದು ಹಣವಿನ ಭೂಮಿಯನ್ನು ಗುತ್ತಿಯ ಚೆಣ್ಣನ ದೀವರ ಬಮ್ಮ ಕೊಂಡು ಹೊಯ್ಸಳದೇವರ ಕೈಯಲ್ಲಿ ಕೊಡಿಸಿದ.[೯] ಇವನು ತಮ್ಮ ಗುರುಗಳಾದ ಗಣ್ಡವಿಮುಕ್ತಸಿದ್ಧಾಂತ ದೇವರ ಕಾಲಂಕರ್ಚ್ಚಿ ಧಾರಾಪೂರ್ವಕಂ ಮಾಡಿ ಕೊಟ್ಟ ವಿವರವಿದೆ. ಗುತ್ತಿಯ ಎಂಬ ಉಲ್ಲೇಖವು ಚಂದ್ರಗುತ್ತಿಯನ್ನು ಸೂಚಿಸುತ್ತದೆ. ಏಕೆಂದರೆ ಚಂದ್ರಗುತ್ತಿಯು ಬನವಾಸಿ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡನಂತರ ವಿಜಯನಗರ ಕಾಲದಲ್ಲಿ ಪ್ರಮುಖ ಪಟ್ಟಣವಾಗಿ (ರಾಜಧಾನಿ) ಮುಂದುವರಿಯಿತು. ಇದೇ ಗುತ್ತಿ-೧೮ ಎಂಬ ಪ್ರದೇಶವಾಗಿದೆ. ಪ್ರಾಯಶಃ ಬನವಾಸಿಯ ೧೮ ಕಂಪಣಗಳು ಮುಂದುವರಿದ ಗುತ್ತಿ-೧೮ ಆಗಿರಬೇಕು. ವಿಜಯನಗರ ಅರಸರ ಕಾಲದ ಆರಗ-೧೮ ಮತ್ತು ಗುತ್ತಿ-೧೮ ವಿಭಾಗಗಳು ಮುಂದೆ ಕೆಳದಿ ಅರಸರ ಕಾಲದಲ್ಲಿ ಒಗ್ಗೂಡಿ ಆರಗಗುತ್ತಿ-೩೬ ಎಂದು ಹೆಸರಾಯಿತು.

ಸೊರಬದಲ್ಲಿನ ರಂಗನಾಥ ದೇವಸ್ಥಾನದ ಎದುರಿನ ಗರುಡ ಕಂಭದ ಮೇಲೆ "ತಿಂಮ್ಮಪ್ಪಯ್ಯನ ಉಳಿಗದವ ದಿವರ ರಂಗನಾಯಕನ ಮಗ ಗುಡ್ಡಿಯನು ಮಡಿಸಿದ ಕಂಬ" ಎಂಬ ಶಾಸನವೊಂದಿದೆ. ಇದರ ಕಾಲ ತಿಳಿದುಬರುವುದಿಲ್ಲ.[೧೦]

ಬಹುಪಾಲು ಶಾಸನಗಳು ವೀರಗಲ್ಲುಗಳು ಆಗಿವೆ. ದೀವರು ಒಂದು ಜನಾಂಗವಾಗಿ ಯುದ್ಧಗಳಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದರೆಂದು ನಿಸ್ಸಂಶಯವಾಗಿ ಹೇಳಬಹುದು. ದೀವರು ಮತ್ತು ಕೆಲವು ಶಾಸನಗಳಲ್ಲಿ ಕಂಡುಬರುವ ಬಿಲ್ಲ ಮೂನೂರ್ವ್ವರು ಸಂಘಟನೆಗೂ ಏನಾದರೂ ಸಂಬಂಧ ಇರಬೇಕು. ಹೊಯ್ಸಳರು ಮತ್ತು ಸೇವುಣರು ಮಲೆನಾಡಿನ ಭಾಗವನ್ನು ಹತೋಟಿಗೆ ಪಡೆದುಕೊಳ್ಳಲು ಹವಣಿಸಿದ ಯುದ್ಧಗಳು ತಿಳಿದಿದೆ. ನಂತರದ ಕಾಲದಲ್ಲಿ ತುಂಗಭದ್ರಾ ನದಿಯೇ ಇವರಿಬ್ಬರ ಪ್ರದೇಶಗಳ ಗಡಿಯಾಗಿ ಸಂಧಾನ ಏರ್ಪಡುತ್ತದೆ. ಹೊಯ್ಸಳರಿಗೆ ಬಿಲ್ಲ ಮೂನೂರ್ವ್ವ ಸಂಘಟನೆಯು ಸಹಾಯಕವಾಗಿತ್ತು. ಹೊನ್ನಾಳಿ ತಾಲ್ಲೂಕಿನ ಕುರುವದಗಡ್ಡೆ ಶಾಸನ ಈ ಸಂಘವನ್ನು ಹೊಯ್ಸಳ ಬೀಡಿನ ಪರಮವಿಶ್ವಾಸಿಗಳೆಂದು ಉಲ್ಲೇಖಿಸಿದೆ. ಇವರು ಅರಣ್ಯ ಭಂಡಾರಿಗಳು, ಬಿಲ್ಲು ವಿದ್ಯೆಯಲ್ಲಿ ಪರಿಣತರು ಮತ್ತು ದ್ರೋಣರಿಂದ ವಿದ್ಯೆ ಕಲಿತವರು. ಬಿ.ಆರ್. ಹಿರೇಮಠ ಅವರು ತಮ್ಮ 'ಶಾಸನಗಳಲ್ಲಿ ಕರ್ನಾಟಕದ ವರ್ತಕರು' ಕೃತಿಯಲ್ಲಿ ಆಯುಧಜೀವಿಗಳಾದ ಬಿಲ್ಲ ಮೂನೂರ್ವ್ವರು ಗ್ರಾಮದ ಹತ್ತಿರದ ಅರಣ್ಯದಲ್ಲಿ ವಾಸಿಸುತ್ತಿದ್ದು ವರ್ತಕರು ಕರೆದಾಗ ರಕ್ಷಣೆಯ ನೆರವಿಗೆ ಹೋಗುತ್ತಿದ್ದರು ಮತ್ತು ಯೋಧವೃತ್ತಿಯೊಂದಿಗೆ ಅಡವಿ ಅಥವಾ ತೋಟಗಳಲ್ಲಿ ಬೆಳೆಯುವ ಬಾಡು ಕಾಯಿಗಳನ್ನು ತಂದು ಪೇಟೆಯಲ್ಲಿ ಮಾರುತ್ತಿದ್ದರೆಂದು ಅಭಿಪ್ರಾಯಪಡುತ್ತಾರೆ. ಇವರು ಆದಿ ಬಿಲ್ಲೇಶ್ವರ ದೇವರ ಪಾದ ಪದ್ಮಾರಾಧಕರಾಗಿದ್ದರು. ಆದಿ ಬಿಲ್ಲೇಶ್ವರ ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ಹೊಂಬುಚದಲ್ಲಿನ ಬಿಲ್ಲೇಶ್ವರ ಆಗಿದೆ. ಹೊಂಬುಚವು ಸಾಂತಳಿಗೆ ಸಾವಿರ ಆಡಳಿತ ಪ್ರದೇಶದ ರಾಜಧಾನಿ ಪಟ್ಟಣವಾಗಿತ್ತು. ಬಿಲ್ಲ ಮೂನೂರ್ವ್ವರು ಯುದ್ಧ ನಿಮಿತ್ತ ಅನೇಕ ಪ್ರದೇಶಗಳಲ್ಲಿ ಬೀಡು ಬಿಡಬೇಕಾಯಿತು. ಪ್ರಾಯಶಃ ಬಿಲ್ಲ ಮೂನೂರ್ವ್ವರು ಅವರ ಸಂಘಟನೆ ಇದ್ದೆಡೆ ಬಿಲ್ಲೇಶ್ವರ ದೇವಾಲಯಗಳನ್ನು ನಂತರ ಪ್ರಾರಂಭಿಸಿರಬಹುದು. ಸಾಗರ ತಾಲ್ಲೂಕಿನ ನಾಡಕಲಸಿ, ಹಿರೇಕೆರೂರು ತಾಲ್ಲೂಕಿನ ಅಬ್ಬಲೂರು ಗ್ರಾಮಗಳಲ್ಲಿರುವ ಬಿಲ್ಲೇಶ್ವರ ದೇವಾಲಯಗಳನ್ನು ಈ ನಿಟ್ಟಿನಲ್ಲಿ ಹೆಸರಿಸಬಹುದಾಗಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಎಪಿಗ್ರಾಫಿಯಾ ಕರ್ನಾಟಿಕಾ (ಎ.ಕ.) ೭, ಶಿಕಾರಿಪುರ, ೭೦. (ರೈಸ್ ಆವೃತ್ತಿ).
೨. ಎ.ಕ. ೭, ಶಿಕಾರಿಪುರ, ೭೮. (ಕ್ರಿ.ಶ. ೧೧೫೯). ನಂ. ೭೫ (ಕ್ರಿ.ಶ. ೧೧೭೪). (ರೈಸ್ ಆವೃತ್ತಿ).
೩. ಎ.ಕ. ೮, ಸೊರಬ, ೪೯೨. (ರೈಸ್ ಆವೃತ್ತಿ).
೪. ಎ.ಕ. ೮, ಸೊರಬ, ೨೧೭. (ರೈಸ್ ಆವೃತ್ತಿ).
೫. ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್, ಹಾನಗಲ್ಲು ತಾಲ್ಲೂಕು, ಅಕ್ಕಿ ಆಲೂರ, ನಂ. ೬೧.
೬. ಎ.ಕ. ೮, ಸಾಗರ, ೬. (ರೈಸ್ ಆವೃತ್ತಿ).
೭. ಎ.ಕ. ೮, ಸಾಗರ, ೨೬. (ರೈಸ್ ಆವೃತ್ತಿ).
೮. ಎ.ಕ. ೮, ಸಾಗರ, ೧೭. (ರೈಸ್ ಆವೃತ್ತಿ).
೯. ಎ.ಕ. ೬, ಮೂಡಿಗೆರೆ, ೨. (ರೈಸ್ ಆವೃತ್ತಿ).
೧೦. ಎ.ಕ. ಶಿವಮೊಗ್ಗ ಜಿಲ್ಲೆಯ ಪುರವಣಿ ಸಂಪುಟ, ಸೊರಬ, ನಂ. ೫೭೨.

ಶಿವಪ್ಪ ಎನ್. ನೀರಲಗಿ*

"ಚಿಮ್ಮಲಗಿಯ ವಿಶಿಷ್ಟ ಶಿಲ್ಪಗಳು"

ಚಿಮ್ಮಲಗಿಯ ಪ್ರಾಚೀನತೆ : ಬಿಜಾಪೂರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ಕೃಷ್ಣಾ ತೀರದ ಚಿಮ್ಮಲಗಿಯ ಅತ್ಯಂತ ಪ್ರಾಚೀನ ಐತಿಹಾಸಿಕ ಸ್ಥಳವಾಗಿದ್ದು ಕ್ರಿ.ಶ. ೧೪೦–೫೦ರಲ್ಲಿ ಗ್ರೀಕ ದೇಶದ ಪ್ರವಾಸಿ ಟಾಲ್ಮಿ (Ptolemy) ಎಂಬ ಭೂಗೋಲ ಶಾಸ್ತ್ರಜ್ಞನನು ತನ್ನ "Geographeke Huphegesis" ಎಂಬ ಗ್ರಂಥದಲ್ಲಿ ಕರ್ನಾಟಕದ ಕೆಲವು ಊರುಗಳನ್ನು ಗ್ರೀಕ್ ಭಾಷೆಯಲ್ಲಿ ಹೆಸರಿಸಿದ್ದು, ಅವನು ಕರ್ನಾಟಕವನ್ನು 'ಪೌನ್ನಾಟ್' ಎಂದು ಕರೆದಿದ್ದಾನೆ. ಪುನ್ನಾಟದ ವಜ್ರವೈಡೂರ್ಯಗಳನ್ನು ಅವನು ವರ್ಣಿಸಿದ್ದಾನೆ. ಸಮುದ್ರದಂಡೆಯಲ್ಲಿರುವ "ಮಲಿಪ್ಪಾಲ" ಎಂಬ ಬಂದರನ್ನು ಹೆಸರಿಸಿರುವುದರಿಂದ ಬಹುಶಃ ಅದು ಮಲ್ಪೆಯಾಗಿರಬೇಕು. ಅವನು ಹೇಳುವ ಕರ್ನಾಟಕದ ರಾಜನ ಅರಿಯೇಕೆ ಸಾಡಿನಾನ್ (Ariake Sadinon) ಎಂಬುವುದು. ಆರ್ಯಕ ಶಾತಕರ್ಣಿಯಾಗಿರಬಹುದು. ಸಿರೋ ಪೊಲಿಮಯೋಸ್ (Siro Polemaios) ಎಂದು ಶ್ರೀ ಪುಲಿಮೆಯ್ (ಪುಳುಮಾಯಿ) ಎಂಬ ಶಾತವಾಹನ ರಾಜನನ್ನು (ಕ್ರಿಸ. ಸು. ೧೪೪–೧೫೪) ವರ್ಣಿಸಿದ್ದಾನೆ. ಟಾಲ್ಮಿ ಭೀಮಾನದಿ ಹಾಗೂ ಬನವಾಸಿ ಪ್ರದೇಶಗಳ ನಡುವೆ ಇರುವ ಹತ್ತು ಊರುಗಳನ್ನು ಹೆಸರಿಸಿದ್ದು, "ಸಿಮ್ಮಲಗೆ"ಯನ್ನು "ಸಿರಿಮಂಗಲ"ವೆಂದು ಕರೆದಿದ್ದಾನೆ. ಈ ಚಿಮ್ಮಲಗಿಯಲ್ಲಿ ಒಂದು ಕಾಲಕ್ಕೆ ೧೦೮ ಶಿವರಲಿಂಗಗಳಿದ್ದವೆಂದು ನಮಗೆ ಚರಿತ್ರೆಯಿಂದ ತಿಳಿದು ಬರುತ್ತದೆಯಲ್ಲದೆ ಚನ್ನಿಮರಸನೆಂಬ ಶರಣನು (ಕ್ರಿ.ಶ. ೧೦೪೦) ಈ ಊರಿನಲ್ಲಿಯೇ ನೆಲೆಸಿದ್ದನೆಂದು ತಿಳಿದು ಬರುವುದು. ಆ ಹತ್ತು ಊರುಗಳನ್ನು ಎಂ. ಗೋವಿಂದಪೈಯವರು ಮೊದಲು ಗುರುತಿಸುವ ಪ್ರಯತ್ನವನ್ನು ಮಾಡಿದ್ದಾರೆ. ಪೈಯವರ ಪ್ರಕಾರ ಆ ಊರುಗಳು ಈ ರೀತಿಯಾಗಿವೆ.

೧) Kalligeris - ಬಿಜಾಪೂರ ಜಿಲ್ಲೆಯ ಕಲಿಕೇರಿ ಅಥವಾ ಧಾರವಾಡ ಜಿಲ್ಲೆಯ ಕಲ್ಕೇರಿ

೨) Inde - ಬಿಜಾಪೂರ ಜಿಲ್ಲೆಯ ಇಂಡಿ.

೩) Hippokoura - ಬಿಜಾಪೂರ ಜಿಲ್ಲೆಯ ಬಾಗೇವಾಡಿ ತಾಲ್ಲೂಕಿನ ಹೂವಿನ ಹಿಪ್ಪರಗಿ ಅಥವಾ ಬೆಳಗಾಂ ಜಿಲ್ಲೆಯ ಅಥಣಿ ತಾಲ್ಲೂಕಿನ ಹೂವಿನ ಹಿಪ್ಪರಗಿ.

೪) Petirgala - ಬಾಗಲಕೋಟೆ ಜಿಲ್ಲೆಯ ಪಟ್ಟದಕಲ್ಲು (ಹತ್ತರಕಿಹಾಳ ?)

೫) Modugoulla - ರಾಯಚೂರ ಜಿಲ್ಲೆಯ ಮುದಗಲ್ಲ್.

೬) Souboutton - ಬೆಳಗಾಂ ಜಿಲ್ಲೆಯ ಅಥಣಿ ತಾಲ್ಲೂಕಿನ ಸವಡಿ (ಸೌಂದತ್ತಿ ?)

೭) Tabaso - ಬೆಳಗಾಂ ಜಿಲ್ಲೆಯ ಅಥಣಿ ತಾಲ್ಲೂಕಿನ ತವಸಿ (ಸಂಶಿ ?)

೮) Tiripangalida - ಕೊಲ್ಲಾಪುರದ ಸೀಮಿಗೆ ಒಳಪಟ್ಟ ಗದಾಹಿಂಗಲಜಿ.

೯) Banavase - ಕಾರವಾರ ಜಿಲ್ಲೆಯ ಕದಂಬರ ರಾಜಧಾನಿ ಬನವಾಸಿ.

೧೦) Sirimangala - ಬಿಜಾಪೂರ ಕದಂಬರ ರಾಜಧಾನಿ ಬನವಾಸಿ.

ಚಿಮ್ಮಲಗಿಯ ಚನ್ನಿಮರಸ (ಕ್ರಿ.ಶ. ೧೦೪೦) : ಬಸವಣ್ಣನಿಗಿಂತಲೂ ಹಿರಿಯ ಮತ್ತು ಸಮಕಾಲೀನನಾದ ಚನ್ನಿಮರಸನ ಗುರು ನಿಜಗುಣದೇವನೆಂದು ತಿಳಿದುಬರುತ್ತದೆ. ಚನ್ನಿಮರಸನ ಒಟ್ಟು ೧೬೦ ವಚನಗಳು ಉಪಲಬ್ಧವಿದ್ದು, "ಸಿಮ್ಮಲಗೆಯ ಚನ್ನರಾಮಾ" ನೆಂಬುದು ಇವನ ವಚನಗಳ ಅಂಕಿತವಾಗಿದೆ. ಮೊದಲ ರಾಜನಾಗಿದ್ದು, ವೈರಾಗ್ಯದಿಂದ ಶರಣನಾಗಿ ಪರಿವರ್ತಿತನಾದನೆಂದು ತಿಳಿದುಬರುತ್ತದೆ. ಅವನ ವಚನವೊಂದು ಹೀಗಿದೆ :

ಸಾವು ತಡವಲ್ಲ, ನರಕದೊರವಲ್ಲ
ಕೆಮ್ಮನೆ ಕೆಡಬೇಡ, ವಿಷಯವ ಬಿಡು
ಗುರುಭಕ್ತಿಯ ನಂಬು, ಸುಖಿಯಪ್ಪೆ
ಸಿಮ್ಮಲಗೆಯ ಚನ್ನರಾಮ.

ಈ ಚಿಮ್ಮಲಗಿ ವಚನಕಾರ ಶರಣ ಚನ್ನಮರಸನ ಊರು ಎಂಬುದು ವಿಶೇಷ.

ಸಿಮ್ಮಲಗಿಯ ಚಾಮುಂಡಿ ಶಿಲ್ಪ : ಬಾದಾಮಿ ಚಾಲುಕ್ಯರು, ತಲಕಾಡಿನ ಗಂಗರು ಹಾಗೂ ಮಳಖೇಡದ

* ಉಪ ವಿದ್ಯುತ್ ಪರಿವೀಕ್ಷಕರ ಕಾರ್ಯಾಲಯ, ಬಾಗಲಕೋಟೆ.



ರಾಷ್ಟ್ರಕೂಟರು ಮುಂತಾದ ಕರ್ನಾಟಕದ ಅರಸು ಮನೆತನಗಳು ಸಪ್ತಮಾತೃಕೆಯರು ಹಾಗೂ ನವದುರ್ಗೆಯರ ಆರಾಧಕರಾಗಿದ್ದರು. ದುರ್ಗಾ ಪ್ರತಿಮೆಗಳ ಕೆತ್ತನೆ ದೇವತೆಗಳ ದೇಗುಲಗಳ ನಿರ್ಮಾಣ ಮುಂತಾದ ಧರ್ಮಕಾರ್ಯಗಳನ್ನು ಈ ರಾಜ ಮನೆತನಗಳು ಕರ್ನಾಟಕದಾದ್ಯಂತ ಮಾಡಿವೆ. ಗಂಗದೊರೆ ದುರ್ವಿನೀತನನ್ನು "ಕಾತ್ಯಾಯಿನಿ ಕಮಲೊಧರ" ಭಕ್ತನೆಂದು ಶಾಸನಗಳು ವರ್ಣಿಸಿವೆ. ಅದೇ ರೀತಿಯಾಗಿ ರಾಷ್ಟ್ರಕೂಟ ದೊರೆ ಅಮೋಘವರ್ಷನು ತನ್ನ ರಾಜ್ಯಕ್ಕೆ ಬಂದೊದಗಿದ ಕ್ಷಾಮವನ್ನು ಹೋಗಲಾಡಿಸಲು ಕೊಲ್ಲಾಪ್ರುರದ ಮಹಾಲಕ್ಷ್ಮಿಗೆ ತನ್ನ ಎಡಗೈ ಹೆಬ್ಬೆರಳನ್ನು ಅರ್ಪಿಸುತ್ತಾನೆ.

ಚಾಮುಂಡಿ, ಬ್ರಾಹ್ಮಿ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ ಹಾಗೂ ಇಂದ್ರಾಣಿ ಹೀಗೆ ಸಪ್ತಮಾತೃಕೆಯರಲ್ಲಿ ಈ ಚಿಮ್ಮಲಗಿಯ ಶಿಲ್ಪವು ಚಾಮುಂಡಾ ಶಿಲ್ಪವಾಗಿದ್ದು, ಸ್ಥಳೀಯರು ಈ ಮೂರ್ತಿಯನ್ನು "ಚೌಡಮ್ಮ, ಚೌಡೇಶ್ವರಿ" ಎಂದು ಕರೆಯುತ್ತಾರೆ. ಈ ಶಿಲ್ಪವನ್ನು ಕಪ್ಪು ಗ್ರಾನೈಟ ಶಿಲೆಯಲ್ಲಿ (Deccan Trap) ಕೆತ್ತಲಾಗಿದೆ. ಈ ಶಿಲ್ಪವು ಅಷ್ಟ ಭುಜಧಾರಿಯಾಗಿದ್ದು ಸಹಜ ಆಸನದಲ್ಲಿದೆ. ಚಾಮುಂಡಿಯ ಬಲಗೈಗಳಲ್ಲಿ ಡಮರು, ಚಕ್ರ, ಅಲಗು (ಕಿರುಗತ್ತಿ) ಖಟ್ವಾಂಗಗಳನ್ನು ಹೊಂದಿದ್ದು, ಎಡಗೈಗಳಲ್ಲಿ ಗಂಟೆ, ಪಿಮ್ಮುಖಿಡಾಲು, ರಕ್ತ ಸೋರುತ್ತಿರುವ ರುಂಡ, ಹಾಗೂ ಪಾನಬಟ್ಟಲುಗಳಿವೆ. ಮೂರ್ತಿಯ ಹಿಂದೆ ಎಡಮಗ್ಗಲು ಸುಂದರವಾದ ತ್ರಿಶೂಲವಿದೆ. ದೇವಿಯ ಕಾಲಲ್ಲಿ ಕಾಲ್ಗಡಗ. ಕೊರಳಲ್ಲಿ ಕಂಠಿಹಾರವಿದ್ದು, ಎಲ್ಲ ಕೈಗಳಲ್ಲಿ ಬಳೆಗಳನ್ನು ಧರಿಸಿದ್ದಾರೆ. ಟೊಂಕಕ್ಕೆ ಹೆಡೆತೆಗೆದ ಸುಂದರವಾದ ನಾಗನನ್ನು ಧರಿಸಿದ್ದಾಳೆ. ದೇವಿಯು ಕೊರಳಲ್ಲಿ ರುಂಡಮಾಲೆಯನ್ನು ಧರಿಸಿದ್ದು ಕಿವಿಯಲ್ಲಿ ಸುಂದರವಾದ ಕರ್ಣಕುಂಡಲಗಳಿವೆ. ಪೀಠದಲ್ಲಿ ಅವಳ ವಾಹನವಾದ ಸಿಂಹವಿದ್ದರೆ, ಬಲಭಾಗಕ್ಕೆ ಗೂಬೆ ಇದೆ. ದೇವಿಯ ಅಡಿಯಲ್ಲಿ ಮನುಷ್ಯಾಕಾರದ ಮಹಿಷನ ಮೃತದೇಹವಿದೆ. ಆ ರಾಕ್ಷಸನನ್ನು ಕೊಂದ ಮೇಲೆ ದೇವಿಯು ಪ್ರಶಾಂತ ಚಿತ್ತಳಾಗಿ ಯೋಗನಿದ್ರೆಯಲ್ಲಿರುವಂತೆ ಶಿಲ್ಪಿಯು ಶಿಲ್ಪವನ್ನು ಖಂಡಿರಿಸಿದ್ದಾನೆ. ರಾಕ್ಷಸನ ಜೊತೆಗೆ ಹೋರಾಡಿ ಕೃಶಳಾದ ದೇವಿಯ ಪಕ್ಕೆಲುಬುಗಳು ಸಹ ಕಾಣುವಂತೆ ಶಿಲ್ಪಿಯು ಶಿಲ್ಪವನ್ನು ಕೆತ್ತಿದ್ದು, ಶಿಲ್ಪಿಯು ಜಾಣ್ಮೆಯನ್ನು ತೋರಿಸುತ್ತದೆ. ದೇವಿಯು ತಲೆಗೆ ಸುಂದರವಾದ ಸೊಲಗೆಯಾಕಾರದ ಉದ್ದನೆಯ ಕರಂಡ ಮುಕುಟವನ್ನು ಧರಿಸಿದ್ದು, ಅದಕ್ಕೆ ಮಧ್ಯದಲ್ಲಿ ರತ್ನದ ಹರಳನ್ನು ಕೂಡ್ರಿಸಲಾಗಿದೆ. ಇಲ್ಲಿಯವರೆಗೆ ದಕ್ಷಿಣ ಹಾಗೂ ಉತ್ತರ ಕರ್ನಾಟಕದಲ್ಲಿ ದೊರೆತಿರುವ ಚಾಮುಂಡಿ ಶಿಲ್ಪಗಳಲ್ಲಿಯೇ ಇದೊಂದು ಅಪರೂಪದ ಹಾಗೂ ವಿಶೇಷ ಶಿಲ್ಪವಾಗಿದೆ. ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಚಾಮುಂಡಿಯು ಧರಿಸಿದ ವಿಶಿಷ್ಟ ವಸ್ತ್ರವನ್ನು ಕೂಡಾ ಶಿಲ್ಪಿಯು ಸುಂದರವಾಗಿ ಬಿಡಿಸಿದ್ದಾನೆ. ಚಾಮುಂಡಿಯ ನೀಳವಾದ ಜಡೆಗಳು ಅವಳ ಭುಜದ ಮೇಲೆ ಬಿದ್ದಿವೆ. ಸುಮಾರು ೩ ಅಡಿಯಷ್ಟು ಈ ಮೂರ್ತಿಯು ಎತ್ತರವಾಗಿದೆ. ಚಾಮುಂಡಿ ಮೂರ್ತಿಯ ಮುಂದೆ ಸುಂದರವಾಗಿ ಕೆತ್ತಿದ ಆಮೆಯಾಕಾರದ ಸರ್ಪದಿಂದ ಸುತ್ತಿದ ಕಪ್ಪು ಗ್ರಾನೈಟ್ ಶಿಲೆಯ ಬಲಿಪೀಠವಿದೆ.

ವರಾಹಿ : ಸಪ್ತಮಾತೃಕೆಯರಲ್ಲಿ ಒಬ್ಬಳಾದ ವರಾಹಿಯು ಚತುರ್ಭುಜೆಯಾಗಿದ್ದು, ಬಲಗೈಯಲ್ಲಿ ತ್ರಿಶೂಲ ಹಾಗೂ ಖಟ್ವಾಂಗಗಳಿದ್ದು ಎಡಗೈಯಲ್ಲಿ ಪಾನಬಟ್ಟಲುಗಳಿವೆ. ದೇವಿಯು ಸಿದ್ಧಾಸನದಲ್ಲಿದ್ದು, ಸುಂದರವಾದ ಕರಂಡ ಮುಕುಟವನ್ನು ಧರಿಸಿದ್ದಾಳೆ. ದೇವಿಯು ಆಸನದ ಕೆಳಗೆ ಮಾನವಾಕಾರದ ಮೃತದೇಹವಿದೆ. ದೇವಿಯು ಕೊರಳಲ್ಲಿ ಕಂಠಿಹಾರವಿದ್ದು, ದೇವಿಯ ವಾಹನವಾದ ವರಹವನ್ನು ಸಹ ಶಿಲ್ಪಿಯು ಕೆತ್ತಿದ್ದಾನೆ. ಸಿಂಹ ಕಟಿಯನ್ನು ಹೊಂದಿದ ದೇವಿಯು ಘನಗಾತ್ರದ ಸ್ತನಗಳನ್ನು ಹೊಂದಿದ್ದಾಳೆ. ನೀರಿಗೆಗಳಿಂದದೊಡ ಗೂಡಿದ ಸುಂದರವಾದ ವಸ್ತ್ರ ವಿನ್ಯಾಸವನ್ನು ಸಹ ಶಿಲ್ಪಿಯು ಬಿಡಿಸಿದ್ದಾನೆ. ಚಾಮುಂಡಿಯ ಎದುರಿಗೆ ಸುಂದರವಾದ ಬಲಿಪೀಠವಿದೆ.



ಇಂದ್ರಾಣಿ : ಈ ಇಂದ್ರಾಣಿ ಶಿಲ್ಪವು ಒಂದು ದುಂಡು ಶಿಲ್ಪವಾಗಿದ್ದು, ಚತುರ್ಭುಜೆಯಾಗಿದ್ದಾಳೆ. ಬಲಗೈಯಲ್ಲಿ ಖಟ್ವಾಂಗ ಎಡಗೈಯಲ್ಲಿ ಪಾನಬಟ್ಟಲು ಮತ್ತು ಖಟ್ವಾಂಗ ಗಳಿವೆ. ಮೂರ್ತಿಯು ಎಡಗಾಲನ್ನು ಸ್ವಲ್ಪ ಮಡಚಿ



ಬಲಗಾಲನ್ನು ಸ್ವಲ್ಪ ಎತ್ತಿದಂತಿದ್ದು ಸಹಜಾಸನದಲ್ಲಿದೆ. ತಲೆಗೆ ಸುಂದರವಾದ ಕರಂಡ ಮುಕುಟವನ್ನು ಧರಿಸಿದ್ದು ಕೊರಳಲ್ಲಿ ಕಂಠಿಹಾರ ಹಾಗೂ ರುಂಡಮಾಲೆಯನ್ನು ಧರಿಸಿದ್ದಾಳೆ ದೇವಿಯ ಕಾಲಲ್ಲಿ ಕಾಲ್ಗಂಡಗಗಳಿವೆ. ಸೊಂಟದಲ್ಲಿ ಸುಂದರವಾಗಿ ಕಟಿವಸ್ತ್ರವನ್ನು ಸಹ ಬಿಡಿಸಲಾಗಿದೆ.

ಚಿಮ್ಮಲಗಿಯ ಶಿವರ ಲಿಂಗಗಳು : ಪ್ರಾಚೀನ ಮತ್ತು ಮಧ್ಯಯುಗಿನ ಕರ್ನಾಟಕ ಜನರು ಕೈಗೊಂಡ ಪ್ರತಿಷ್ಠಾಪನಾ ಕಾರ್ಯಗಳಲ್ಲಿ ಶಿವರಲಿಂಗ ಪ್ರತಿಷ್ಠಾಪನ ಕಾರ್ಯವು ಒಂದು. ಈ ಕಾರ್ಯದಲ್ಲಿ ಎಲ್ಲ ವರ್ಗದ ಜನರು ಪಾಲ್ಗೊಂಡಿದ್ದಾರೆ. ಇದಕ್ಕೆ ಕಾರಣ ಲಿಂಗ ಪ್ರತಿಷ್ಠಾಪಿಸಿ. ತಮ್ಮ ಹೆಸರಿಡುವುದರಿಂದ ಅವರೂ ಲಿಂಗವೇ (ಶಿವ) ಆಗುವರೆಂಬ ಆಗಮ ವಾಕ್ಯವೇ ಇದಕ್ಕೆ ಕಾರಣವಾಗಿದೆ. ಚಿಮ್ಮಲಗಿಯಲ್ಲಿ ಒಂದು ಕಾಲಕ್ಕೆ ಒಟ್ಟು ೧೦೮ ಶಿವರ ಲಿಂಗಗಳಿದ್ದವೆಂದು ನಮಗೆ ಚರಿತ್ರೆಯಿಂದ ತಿಳಿದುಬರುತ್ತದೆ. ಆಲಮಟ್ಟಿ ಹಿನ್ನೀರಿನಿಂದ ಮುಳುಗಡೆಯಾದ



ಎಲ್ಲಾ ಶಿವಲಿಂಗಗಳನ್ನು ಹೊಸ ಊರಿಗೆ ಸ್ಥಳಾಂತರಿಸ ಲಾಗಿದೆ. ಕೆಲವು ಲಿಂಗಗಳು ಬ್ರಹ್ಮಸೂತ್ರವನ್ನು ಒಳಗೊಂಡಿದ್ದು ಬಾದಾಮಿ ಚಾಲುಕ್ಯ, ರಾಷ್ಟ್ರಕೂಟರ ಕಾಲಕ್ಕೆ ಸೇರಿದವುಗಳಾಗಿವೆ. ಈ ಶಿವಲಿಂಗಗಳಲ್ಲಿ ಕೆಲವು ಚೌಕಪಾಣಿ ಪೀಠದ ಮೇಲಿದ್ದರೆ, ಮತ್ತೆ ಕೆಲವು ದುಂಡನೆಯ ಪಾಣಿ ಪೀಠದ ಮೇಲಿವೆ.

ನಂದಿಯ ಶಿಲ್ಪ : ಗೆಜ್ಜಿಪಟ್ಟಿಯಿಂದ ಅಲಂಕರಿಸಲ್ಪಟ್ಟು ಸುಂದರವಾದ ಹಿಣಿಯುಳ್ಳ ಹಾಗೂ ಮೂಗಿನ ಹೊರಳೆ ಗಳನ್ನು ಅರಳಿಸಿ ಮೂಸಿಸುವ ನಂದಿಯನ್ನು ನೋಡಿದರೆ, ಶಿಲ್ಪಿಯ ಕೈಚಳಕವನ್ನು ನಾವು ಶಿಲ್ಪದಲ್ಲಿ ಕಾಣಬಹುದಾಗಿದೆ. ಒಟ್ಟು ಎರಡು ಸುಂದರವಾದ ನಂದಿಗಳು ಈ ಊರಿನಲ್ಲಿವೆ.

ವೀರಗಲ್ಲು : ಈ ಊರಿನ ಪಂಚಾಯತಿಯ ಕಾರ್ಯಾಲಯದಲ್ಲಿ ಮೂರು ಹಂತದ ಒಂದು ಸುಂದರವಾದ ವೀರಗಲ್ಲು ಇದೆ. ಮೊದಲನೆ ಹಂತದಲ್ಲಿ ವೀರರು ಕುದುರೆ ಸವಾರರೊಡನೆ ಹೋರಾಡುವ ದೃಶ್ಯವಿದ್ದು, ಎರಡನೇ



ಹಂತದಲ್ಲಿ ವೀರಮರಣವನ್ನಪ್ಪಿದ ವೀರರನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುವ ದೃಶ್ಯವಿದ್ದು, ಮೂರನೇ ಹಂತದಲ್ಲಿ ವೀರರು ಶಿವಲಿಂಗದ ಮುಂದೆ ಪದ್ಮಾಸನದಲ್ಲಿ ಯೋಗಮುದ್ರೆಯಲ್ಲಿ ಕುಳಿತಿದ್ದಾರೆ. ಇದೊಂದು ಅಪರೂಪದ ವೀರಗಲ್ಲಾಗಿದೆ.

ನಾಗರ ಶಿಲ್ಪಗಳು : ಸುಂದರವಾದ ಐದು ಹಾಗು ಏಳು ಹೆಡೆಗಳಿಂದ ಕೂಡಿದ ಸುಮಾರು ಎರಡರಿಂದ ಮೂರು ಅಡಿ ಉದ್ದವಿರುವ ಪ್ರಾಚೀನ ಕಾಲದ ಸುಂದರವಾಗಿ ಕೆತ್ತಿದ ಹಲವಾರು ನಾಗರ ಪ್ರತಿಮೆಗಳು ಈ ಊರಿನಲ್ಲಿವೆ. ಆದುದರಿಂದ ಹಿಂದೆ ಈ ಊರಿನಲ್ಲಿ ನಾಗಾರಾಧನೆ ರೂಢಿಯಲ್ಲಿತ್ತೆಂದು ತಿಳಿದು ಬರುವುದು. ಇವುಗಳಲ್ಲಿ ಯುಗಳ ನಾಗರ ಶಿಲ್ಪಗಳು ಸಹ ಇವೆ.

ಗಣಪತಿ ಶಿಲ್ಪ : ದ್ವಿಭುಜ ಎಡಮುರಿಯಾಗಿದ್ದು ಗಜಮಸ್ತಕನಾಗಿದ್ದಾನೆ. ಬಲಗೈಯಲ್ಲಿ ಅಂಕುಶವಿದೆ. ಎಡಗೈಯಿಂದ ಸೊಂಡಿಲನ್ನು ಸ್ವಲ್ಪ ಎತ್ತಿಹಿಡಿದಂತಿದೆ. ತಲೆಯ ಮೇಲೆ ಸುಂದರವಾದ ಕರಂಡ ಮುಕುಟವನ್ನು ಧರಿಸಿದೆ. ಅಗಲವಾದ ಕಿವಿಗಳಿದ್ದು ಎಡಗಾಲನ್ನು ಮಡಚಿ ಬಲಗಾಲನ್ನು ಸ್ವಲ್ಪ ಎತ್ತಿದಂತಿದ್ದು, ಮೂರ್ತಿಯು ಕುಳಿತ ಭಂಗಿಯಲ್ಲಿದೆ. ಕಾಲಲ್ಲಿ ಕಾಲ್ಗಡಗಳಿವೆ ಈ ಗಣಪತಿಯ ಶಿಲ್ಪವು ಸಪ್ತಮಾತೃಕೆಯರ ಜೊತೆಯಲ್ಲಿಯೇ ಇದ್ದಿರಬಹುದಾದ ಬಿಡಿಶಿಲ್ಪವಾಗಿದೆ. ಶಿಲ್ಪಕಲಾ ಲಕ್ಷಣಗಳಿಂದ ಈ ಮೂರ್ತಿಯನ್ನು ಬಾದಾಮಿ ಚಾಲುಕ್ಯರ ಉತ್ತರಾರ್ಧ ಅಥವಾ ರಾಷ್ಟ್ರಕೂಟರ ಪೂರ್ವಾರ್ಧಕ್ಕೆ ಸೇರಿಸಬಹುದಾಗಿದೆ.

ವಿಷ್ಣು ಶಿಲ್ಪ (?) : ತುಂಬಾ ಹಾಳದ ಸ್ಥಿತಿಯಲ್ಲಿರುವ ಸುಮಾರು ೨ ಅಡಿ ಎತ್ತರವಿರುವ ಈ ಶಿಲ್ಪದ ಶಿರೋಭಾಗ ಒಡೆದುಹೋಗಿದೆ. ಮೂರ್ತಿಯ ಬಲಗಡೆಯಲ್ಲಿ ಚಕ್ರವಿದೆ, ಕೊರಳಲ್ಲಿ ಸುಂದರವಾದ ಹೂಮಾಲೆ ಧರಿಸಿದ್ದು ; ಮೊಳಕಾಲವರೆಗೂ ಇಳಿಬಿದ್ದ ಆ ಮಾಲೆಯನ್ನು ಎರಡೂ ಕೈಗಳಿಂದ ಹಿಡಿದುಕೊಂಡಿದೆ. ಬಲಗೈಯಲ್ಲಿ ಗದೆಯಾಕಾರದ ಶಿಲ್ಪವಿದ್ದು ಹೊಡೆದು ಹೋಗಿದೆ. ಅಜಾನುಭಾವುವಾಗಿ ಮೂರ್ತಿಯನ್ನು ಕೆತ್ತಲಾಗಿದ್ದು, ತುಂಬಾ ಒಡೆದಿರುವುದರಿಂದ ಗುರುತಿಸಲು ಕಷ್ಟವಾಗುತ್ತದೆ. ಭವಿಷ್ಯ ಈ ಮೂರ್ತಿಯು ವಿಷ್ಣು ಅಥವಾ ಕಾರ್ತಿಕೇಯನದಾಗಿರಬಹುದು.

(ಈ ಲೇಖನವನ್ನು ತಯಾರಿಸುವಲ್ಲಿ ಸಹಾಯ ಸಹಕಾರವನ್ನಿತ್ತ ನನ್ನ ಗುರುಗಳಾದ ಡಾ॥ ದೇವರಕೊಂಡಾರೆಡ್ಡಿ ಹಾಗೂ ಡಾ॥ ವಸಂತಲಕ್ಷ್ಮಿ ಬೆಂಗಳೂರು, ಮತ್ತು ಕ್ಷೇತ್ರ ಕಾರ್ಯದಲ್ಲಿ ಸಹಾಯವನಿತ್ತ ಕುಮಾರ ಕಾಶೀನಾಥ ಪೂಜಾರಿ ಹಾಗೂ ಇವರಿಗೆ ಲೇಖಕರ ಕೃತಜ್ಞತೆಗಳು)

ಆಧಾರಸೂಚಿ

೧. **ಮೂರ್ತಿ ಶಿಲ್ಪ ನೆಲೆ ಹಿನ್ನೆಲೆ,** ಡಾ. ಎಸ್.ಕೆ. ರಾಮಚಂದ್ರರಾವ್.
೨. **ಗಂಗರ ಶಿಲ್ಪಕಲೆ,** ಡಾ. ದೇವರಕೊಂಡಾರೆಡ್ಡಿ.
೩. **ಕರ್ನಾಟಕ ಸಂಸ್ಕೃತಿ ಸಮೀಕ್ಷೆ,** ಡಾ. ಹೆಚ್. ತಿಪ್ಪೇರುದ್ರಸ್ವಾಮಿ.

ಡಾ. ಎಸ್.ಕೆ. ಮೇಲಕಾರ*
ಡಾ. ಆರ್.ಎಂ. ಷಡಕ್ಷರಯ್ಯ**

ಹುನಗುಂದದಲ್ಲಿ ಶೋಧಿತ ಜೈನ ವಿಗ್ರಹಗಳು

ಬಾಗಲಕೋಟೆ ಜಿಲ್ಲೆಯಿಂದ ೪೫ ಕಿ. ಮೀ. ದೂರದಲ್ಲಿರುವ ಹುನಗುಂದ ಪಟ್ಟಣ ಶಾಸನಗಳಲ್ಲಿ ಪೊನ್ನಗುಂದ ಎಂದು ಉಲ್ಲೇಖಗೊಂಡಿದ್ದು, ಊರಿನ ಹಿಂಭಾಗದಲ್ಲಿರುವ ಬೆಟ್ಟದಿಂದಾಗಿ ಹೊನ್ನಿನಗುಂದ ಅಥವಾ ಹೊನ್ನಿಗುಂದ ಎಂಬ ಹೆಸರು ಬಂದಿದೆ. ಹುನಗುಂದದಲ್ಲಿರುವ ಬಾವಿಗಳು ಗಂಧಕ ಮಿಶ್ರಿತ ಜಲಜನಕದಿಂದ ತುಂಬಿಹೋಗಿವೆ ಎಂಬ ವೈಜ್ಞಾನಿಕ ಅಭಿಪ್ರಾಯವಿದೆ. ಈ ಊರಿನ ಬೆಟ್ಟದಲ್ಲಿ ಬಂಗಾರದ ಛಾಯೆಗೆ ಹೋಲುವ ಹಳದಿ ಬಣ್ಣದ ಅಭ್ರಕವಿರುವುದರಿಂದ ಹುನಗುಂದವೆಂಬ ಹೆಸರು ರೂಢಿಗೆ ಬಂದಿದೆ ಎಂಬುದು ಸ್ಥಳೀಯ ಜನಾಭಿಪ್ರಾಯವಾಗಿದೆ.

ಈ ಊರಿನ ಕೋಟೆಯೊಳಗೆ ಮೆಗುತಿ ಎಂದು ಕರೆಯಲಾಗುವ ಜೈನ ದೇವಾಲಯದ ಅವಶೇಷಗಳಿದ್ದವೆಂದು ಅಲ್ಲಿಯ ಗಣ್ಯಹಿರಿಯರ ಅಭಿಪ್ರಾಯವಾಗಿದೆ. ಅಲ್ಲದೆ ಬಿಜಾಪುರ ಜಿಲ್ಲೆಯ ಗೆಜೆಟಿಯರ್‌ನಲ್ಲಿಯೂ ಈ ಅಭಿಪ್ರಾಯ ವ್ಯಕ್ತಪಡಿಸಲಾಗಿರುವುದು. ಈ ದೇವಾಲಯದ ಸ್ತಂಭಗಳು ಚೌರಸವಾಗಿದ್ದು, ಬೃಹತ್ ಆಕಾರದಲ್ಲಿದ್ದು, ಅಲಂಕಾರವನ್ನು ಹೊಂದಿದ್ದವೆಂದು ತಿಳಿದುಬಂದಿದೆ. ಅಲ್ಲಿಯ ಮೆಗುತಿ ಗುಡ್ಡದ ಪರಿಸರದಲ್ಲಿ ದಿನಾಂಕ ೭-೧೦-೨೦೧೯ರಂದು ಅಲ್ಲಿಯ ಸ್ಥಳೀಯ ಜನರು ಗುಡ್ಡದ ಪಕ್ಕದಲ್ಲಿ ಮಣ್ಣನ್ನು ಅಗೆಯುವಾಗ ಕೆಲವು "ಜೈನ ವಿಗ್ರಹ"ಗಳು ಪತ್ತೆಯಾದವು. ಇವುಗಳನ್ನು ಅಧ್ಯಯನ ಮಾಡಲು ಮತ್ತು ಸಂರಕ್ಷಿಸಲು ಕೋರಿ ಸರಕಾರಿ ಪ್ರಥಮ ದರ್ಜೆಯ ಉಪನ್ಯಾಸಕರಾದ ಶ್ರೀ ಶಿವಾನಂದ ಕೆ. ಜಮಾದಾರ ಮತ್ತು ವಿದ್ಯಾರ್ಥಿ ಸಂತೋಷ ಇವರು ಹಾಗೂ ಗ್ರಾಮಸ್ಥರು ೮-೧೦-೨೦೧೯ರಂದು ದೂರವಾಣಿ ಮೂಲಕ ವಿನಂತಿಸಿದರು.

ಆ ಹಿನ್ನಲೆಯಲ್ಲಿ ದಿನಾಂಕ ೯-೧೦-೨೦೧೯ರಂದು ಅಲ್ಲಿಗೆ ಹೋಗಿ ಅಧ್ಯಯನ ಮಾಡಲಾಯಿತು. ಹಾಗೂ ವಸ್ತು ಸಂಗ್ರಹಾಲಯಕ್ಕೆ ಸಂಗ್ರಹಿಸಲು ಪ್ರಯತ್ನಿಸಲಾಯಿತು. ಅಲ್ಲಿಯ ತಹಸೀಲ್ದಾರರಾದ ಶ್ರೀಮತಿ ರಾಜಶ್ರೀ ಜೈನಾಪೂರ ಹಾಗೂ ಹುನಗುಂದದ ಅಧ್ಯಾಪಕರು, ವಿದ್ಯಾರ್ಥಿಗಳು ಅಲ್ಲಿಯೇ ಒಂದು ವಸ್ತು ಸಂಗ್ರಹಾಲಯ ಮಾಡುವುದಾಗಿ ತಿಳಿಸಿದರು. ಆ ಕಾರಣ ಅವುಗಳನ್ನು ಅಲ್ಲಿಯ ಪೊಲೀಸ್ ಠಾಣೆಯಲ್ಲಿ ಬಿಟ್ಟುಬರಲಾಯಿತು.

ಹೀಗೆ ಪತ್ತೆಯಾದ ಸ್ಥಳಕ್ಕೆ ಹೋಗಿ ಅಲ್ಲಿಯ ಗುಡ್ಡದ ಪರಿಸರದ ಸುತ್ತಮುತ್ತಲೂ ಅನ್ವೇಷಣೆ ಮಾಡಲಾಗಿ ರಾಮಲಿಂಗೇಶ್ವರ ದೇವಾಲಯ, ಮೆಗುತಿ ದೇವಾಲಯ, ಬಸದಿಯ ಕಂಬಗಳು ಇತ್ಯಾದಿ ಪ್ರಾಚ್ಯಾವಶೇಷಗಳು, ಚಾಲುಕ್ಯರ ಕಾಲದ ದೇವಾಲಯ, ದರ್ಗಾ, ಮಸೀದಿ, ಕೋಟೆ ಮುಂತಾದ ದೇವಾಲಯ, ಶಿಲ್ಪಗಳು ಹಾಗೂ ಪ್ರಾಚೀನ ಜನವಸತಿಯ ಪುರಾವೆಗಳನ್ನು ಪರಿಶೀಲಿಸಲಾಯಿತು. ಇದಲ್ಲದೆ ಸೂಕ್ಷ್ಮ ಶಿಲಾಸಂಸ್ಕೃತಿ ಪುರಾವೆಗಳನ್ನು ಮತ್ತು ಇತಿಹಾಸ ಆರಂಭ ಕಾಲದ ಗಡಿಗೆ, ಮಡಿಕೆ ಚೂರುಗಳು, ಬಾದಾಮಿ ಚಾಲುಕ್ಯರ ಕಾಲದ ದೇವಾಲಯ, ಶಿಲ್ಪ ಪುರಾವೆಗಳನ್ನು ಶೋಧಿಸಲಾಯಿತು.

ಹೀಗೆ ದೊರೆತ ಪ್ರಾಚ್ಯಾವಶೇಷಗಳನ್ನು ಮತ್ತು ಹೊಸದಾಗಿ ಪತ್ತೆಯಾದ ಜೈನ ಶಿಲ್ಪಗಳು ಹಾಗೂ ಅವುಗಳ ಪೀಠದ ಮೇಲಿರುವ ಶಾಸನಗಳನ್ನು ಪ್ರತಿ ಮಾಡಿಕೊಂಡು ಅಧ್ಯಯನಕ್ಕೆ ಒಳಪಡಿಸಲಾಯಿತು.

ಪ್ರಸ್ತುತ ಈ ಪ್ರಬಂಧದಲ್ಲಿ ಹೊಸದಾಗಿ ಬೆಳಕಿಗೆ ಬಂದ ೪ ಜೈನ ವಿಗ್ರಹಗಳನ್ನು ಮತ್ತು ಒಂದು ಜೈನ ಪೀಠವನ್ನು ಇಲ್ಲಿ ಅಧ್ಯಯನಿಸಲಾಗಿರುವುದು.


ಪ್ರಸ್ತುತ ಹುನಗುಂದ ಪಟ್ಟಣದ ದೇವಾಲಯಗಳನ್ನು, ಶಿಲ್ಪಗಳನ್ನು, ಶಾಸನಗಳನ್ನು, ಕೋಟೆ, ಪುಷ್ಕರ್ಣಿಗಳನ್ನು ಮೊದಲು ಡಾ. ಶ್ರೀನಿವಾಸ ಪಾಡಿಗಾರ ಅವರು ಈ ತಾಲೂಕಿನ ಹಳ್ಳಿ - ಹಳ್ಳಿಗಳಲ್ಲಿ ಕ್ಷೇತ್ರಕಾರ್ಯ ಮಾಡಿ ಅಧ್ಯಯನಿಸಿರುವರು. ಡಾ. ಎಸ್. ಶೆಟ್ಟರ್ ಅವರು ಬಾದಾಮಿ ಚಾಲುಕ್ಯರ ಕಾಲದ ರಾಮಲಿಂಗೇಶ್ವರ ದೇವಾಲಯವನ್ನು ಶೋಧಿಸಿರುತ್ತಾರೆ. ಅದೇ ರೀತಿ ಬಿಜಾಪುರ ಜಿಲ್ಲೆಯ ಗ್ಯಾಸೆಟಿಯರ್‌ನಲ್ಲಿ ಉಲ್ಲೇಖ ವಾದ ಜೈನ ಬಸದಿಯ ಕಂಬಗಳು, ದೇವಾಲಯಗಳು, ಶಿಲ್ಪಗಳನ್ನು ಪರಿಶೀಲಿಸ

* ಮ್ಯೂಜಿಯಂ ಕ್ಯುರೇಟರ್, ಕನ್ನಡ ಸಂಶೋಧನ ಸಂಸ್ಥೆ, ಕ.ವಿ.ವಿ., ಧಾರವಾಡ.
** ನಿರ್ದೇಶಕರು, ಕನ್ನಡ ಸಂಶೋಧನ ಸಂಸ್ಥೆ, ಕ.ವಿ.ವಿ., ಧಾರವಾಡ.

ಲಾಯಿತು. ಕ್ರಿ. ಶ. ೧೧ನೇ ಶತಮಾನದ ಮಧ್ಯಭಾಗದ ಜೈನ ಬಸದಿಯೊಂದು ಇಲ್ಲಿ ಇದ್ದ ಬಗ್ಗೆ ತಿಳಿಯಲಾಯಿತು. ಇಲ್ಲಿಯ ಈ ಬಸದಿಗೆ ಕಲ್ಯಾಣ ಚಾಲುಕ್ಯರ ದೊರೆ ಇಮ್ಮಡಿ ಸೋಮೇಶ್ವರನ ಆಳ್ವಿಕೆಯ ಕಾಲದಲ್ಲಿ ಅಂದರೆ ೧೦೭೪ರಲ್ಲಿ ಆ ಭಾಗದ ಅಧಿಕಾರಿಗಳು, ಮಂತ್ರಿಗಳು, ಮಹಾ ಮಂಡಳೇಶ್ವರರು ಮೊದಲಾದ ಅಧಿಕಾರಿಗಳ ಸಮ್ಮುಖದಲ್ಲಿ ಈ ಬಸದಿಗೆ ದತ್ತಿ ನೀಡಿರುವ ವಿಷಯವನ್ನು ತಿಳಿಸುವುದು, ಅದೇ ಪ್ರದೇಶದಲ್ಲಿ ಜೈನ ವಿಗ್ರಹಗಳು ದೊರೆತಿರುವುದು ವಿಶೇಷವಾಗಿದೆ. ಏಕೆಂದರೆ ಈ ಕಾಲಾವಧಿ ಯಲ್ಲಿ ಸೋಮೇಶ್ವರನು ಈ ಸಾಮ್ರಾಜ್ಯದ ರಾಜನಾಗಿ ಉಳಿಯಲು ಅವನ ಸೋದರನಾದ ೬ನೇ ವಿಕ್ರಮಾದಿತ್ಯನ ಜೊತೆಯಲ್ಲಿ ಸಂಘರ್ಷಕ್ಕೆ ಇಳಿದಿದ್ದು ಈ ಕಾಲದ ಕೆಲವು ಶಾಸನಗಳಿಂದ ತಿಳಿಯಲಾಗಿದೆ. ಮುಂದೆ ಕೇವಲ ಎರಡೇ ವರ್ಷಗಳಲ್ಲಿ ಇವನನ್ನು ಸೋಲಿಸಿ ವಿಕ್ರಮಾದಿತ್ಯನು ಚಾಲುಕ್ಯ ಸಾಮ್ರಾಜ್ಯದ ಅರಸನಾದನೆಂದು ವಡಗೇರಿ ಮತ್ತು ಇನ್ನಿತರ ಶಾಸನಗಳಿಂದ ತಿಳಿಯಲಾಗಿದೆ. ಕ್ರಿ. ಶ. ೧೦೭೬–೭೭ರಲ್ಲಿ ವಿಕ್ರಮಾದಿತ್ಯ ಈ ಸಾಮ್ರಾಜ್ಯದ ಸಿಂಹಾಸನವೇರಿ ಪಟ್ಟಾಭಿಷೇಕ ಸಮಾರಂಭವನ್ನು ಮಾಡಿಕೊಂಡನೆಂಬುದನ್ನು ತಿಳಿಯಬಹುದು.

ಈ ಹಿನ್ನೆಲೆಯಲ್ಲಿ ಅವಲೋಕಿಸಿದರೆ ಅವನ ಅಣ್ಣನಾದ ಇಮ್ಮಡಿ ಸೋಮೇಶ್ವರ ತನ್ನ ಸಾಮ್ರಾಜ್ಯ ಉಳಿಸಿಕೊಳ್ಳಲು ಅನೇಕ ಅಧಿಕಾರಿಗಳ ಮತ್ತು ಸಾಮಂತರ ಜೊತೆ ನಿಕಟ ಸಂಪರ್ಕವಿಟ್ಟುಕೊಂಡಿದ್ದನೆಂದು ತಿಳಿಯುತ್ತದೆ

ಪ್ರಸ್ತುತ ಈ ಹುನಗುಂದ ಕೋಟೆಯ ಗುಡ್ಡದ (ಮೇಗಲಪೇಟೆ) ಪರಿಸರದಲ್ಲಿ ದೊರೆತ ೪ ಜೈನ ತೀರ್ಥಂಕರರ ಶಿಲ್ಪಗಳು ಮತ್ತು ಜೈನ ಪೀಠ ಹೊಸದಾಗಿ ಪತ್ತೆಯಾಗಿದ್ದು, ಅದರಲ್ಲಿ ಒಬ್ಬ ತೀರ್ಥಂಕರ ಶಿಲ್ಪ ಬಹು ಸುಂದರ ವಾಗಿದ್ದು, ಅದೇ ರೀತಿ ಪೀಠವು ತುಂಬಾ ಆಕರ್ಷಣೀಯ ವಾಗಿದೆ. ತಲಾ ಒಂದೊಂದು ಶಿಲ್ಪಗಳು ೩ ಅಡಿ ಎತ್ತರ ವಾಗಿದ್ದು, ಸಮಭಂಗಿಯಲ್ಲಿ ನಿಂತ ಒಂದೇ ಮಾದರಿಯ ತೀರ್ಥಂಕರರ ಉಬ್ಬುಶಿಲ್ಪಗಳಾಗಿವೆ. ಅವುಗಳಲ್ಲಿ ಎರಡು ವಿಗ್ರಹಗಳ ಮೇಲೆ ಎರಡು ಸಾಲಿನ ಕನ್ನಡ ಶಾಸನಗಳು ಇವೆ.



ಅದರಲ್ಲಿ "ಯಾಪನೀಯ ಸ್ತಂಭ" ಒಂದು ಗಣ ಮತ್ತು ಶೆಟ್ಟಿಯರ ಉಲ್ಲೇಖ ಮಾಡುತ್ತಿದ್ದನ್ನು ಓದಲಾಗಿರುವುದು. ಶಾಸನದ ಮೇಲೆ ಬಹಳ ಕಪ್ಪು ಬಿದ್ದಿದ್ದು, ಅದರ ಹೆಚ್ಚಿನ ಅಧ್ಯಯನ ಮುಂದುವರೆಸಲಾಗಿರುವುದು.

ಮತ್ತೊಂದು ಶಿಲ್ಪದಲ್ಲಿ ತೀರ್ಥಂಕರನು ಪದ್ಮಾಸನದಲ್ಲಿ ಕುಳಿತಿದ್ದು, ತನ್ನ ಹಸ್ತಗಳನ್ನು ಯೋಗಮುದ್ರೆಯಲ್ಲಿಟ್ಟು ಕೊಂಡಿದ್ದಾನೆ. ಈ ಶಿಲ್ಪಗಳನ್ನು ಡೆಕ್ಕನ್ ಟ್ರ್ಯಾಪ್ ಶಿಲೆಯಿಂದ ನಿರ್ಮಿಸಲಾಗಿದೆ. ಪೀಠವನ್ನು ಸಹ ಡೆಕ್ಕನ್ ಟ್ರ್ಯಾಪಿನ ನೀಲಿ ಶಿಲೆಯಲ್ಲಿ ತಯಾರಿಸಲಾಗಿದೆ.



೧. ಕುಳಿತುಕೊಂಡಿರುವ ತೀರ್ಥಂಕರ ಶಿಲ್ಪ ದುಂಡು ಶಿಲ್ಪವಾಗಿದೆ. ತೀರ್ಥಂಕರನು ಪದ್ಮಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದು, ಕೈಗಳು ಯೋಗಮುದ್ರೆಯಲ್ಲಿವೆ. ದೇಹಾಂಗ ಮತ್ತು ಪೀಠವನ್ನು ಏಕ ಶಿಲೆಯಲ್ಲಿ ಖಂಡರಿಸಲಾಗಿದೆ. ಮುಖದಲ್ಲಿ ಸಾಮ್ಯತೆ ಮತ್ತು ಶಾಂತತೆ ಎದ್ದು ಕಾಣುತ್ತದೆ.

ಇವುಗಳನ್ನು ಅಭಿವ್ಯಕ್ತಗೊಳಿಸಲು ಸುಂದರವಾದ ಕಣ್ಣುಗಳನ್ನು ಅರ್ಧ ತೆರೆದಿರುವಂತೆ ಚಿತ್ರಿಸಲಾಗಿದೆ. ಉದ್ದ, ಚೂಪಾದ ಮೂಗು, ನೀಳವಾದ ಹುಬ್ಬು ಇವುಗಳು ಮುಖದ ಸೌಂದರ್ಯವನ್ನು ಹೆಚ್ಚಿಸಿವೆ. ಇದನ್ನು ಪುಷ್ಠೀಕರಿಸಲು ಏನೋ ತಲೆಯ ಮೇಲಿನ ಕೇಶರಾಶಿಯಲ್ಲಿ ಉಂಗುರು ಕೂದಲುಗಳನ್ನು ರೂಪಿಸಲಾಗಿದೆ. ಈ ಉಂಗುರು ಕೂದಲುಗಳನ್ನು ಹಣೆಯ ಮೇಲಿಂದ ನೆತ್ತಿಯ ಮೇಲಿನವರೆಗೆ ಅನೇಕ ಸಾಲುಗಳಲ್ಲಿ ನಿರೂಪಿಸಲಾಗಿದೆ. ಆದರೆ ಈ ಉಂಗುರು ಕೂದಲುಗಳು ಅಲಂಕರಣವನ್ನು ನೆತ್ತಿಯಿಂದ ಹಿಂದಿನ ಭಾಗದವರೆಗೆ ಚಿತ್ರಿಸಿರುವುದಿಲ್ಲ. ಉದ್ದ ಕಿವಿಗಳ ಮುಂದೆ ಕೆಳಗಡೆ ಇಳಿದ ಕೇಶಗಳಲ್ಲಿ ತಲಾ ಒಂದು ಕಡೆ ಒಂದೊಂದು ಉಂಗುರು ಮಾದರಿಗಳನ್ನು ನಿರೂಪಿಸಿದ್ದನ್ನು ನೋಡಿದರೆ, ಕೂದಲುಗಳನ್ನು ತಿದ್ದಿ, ತೀಡಿ, ಬಾಚಿ, ಎಳೆದು ಕಟ್ಟಿದ್ದನ್ನು ವ್ಯಕ್ತಪಡಿಸುತ್ತದೆ. ಈ ಮುಖ ಭಾಗ ದಷ್ಟಪುಷ್ಟವಾದ ದೇಹಾಂಗವನ್ನು ಅಷ್ಟೊಂದು ಹೇಳಿಕೊಳ್ಳುವಷ್ಟು ನುಣುಪುಗೊಳಿಸಿರುವುದಿಲ್ಲ. ಇನ್ನು ಅಲ್ಲಲ್ಲಿ ಅನೇಕ ಕಚ್ಚುಗಳು ಉಳಿದುಕೊಂಡಿರುವುದನ್ನು ಕಾಣುತ್ತೇವೆ.









ಇದೇ ರೀತಿಯಲ್ಲಿ ಅರ್ಧ ವೃತ್ತಾಕಾರದ ಪೀಠವನ್ನು ಸಹ ನುಣುಪುಗೊಳಿಸಿರುವುದು ಎದ್ದು ಕಾಣುತ್ತದೆ. ಇದರ ಕೇಶಗಳನ್ನು ಎರಡು ಬದಿಗೆ ಭುಜದ ಮೇಲೆ ಬಿದ್ದಿರುವುದನ್ನು ಕಾಣಬಹುದು. ಒಟ್ಟಾರೆ ಈ ಶಿಲ್ಪದ ಕಲಾತ್ಮಕ ಗುಣಲಕ್ಷಣಗಳಿಂದ ಇದರ ಕಾಲಮಾನವನ್ನು ಸು. ಕ್ರಿ. ಶ. ೧೧–೧೨ನೇ ಶತಮಾನದ್ದೆಂದು ತಿಳಿಯಲಾಗಿದೆ.

ಉಬ್ಬು ತೀರ್ಥಂಕರರ ಶಿಲ್ಪಗಳು

ಮೂರು ತೀರ್ಥಂಕರರ ಶಿಲ್ಪಗಳು ಉಬ್ಬು ಶಿಲ್ಪಗಳು ನೋಡಲು ಅಷ್ಟೇನು ಆಕರ್ಷಣೀಯವಾಗಿಲ್ಲದಿದ್ದರೂ, ಉತ್ತಮ ಶಿಲ್ಪಗಳಾಗಿವೆ. ತಲಾ ಒಂದರಲ್ಲಿ ತೀರ್ಥಂಕರನನ್ನು ಸಮಭಂಗದಲ್ಲಿ ಎರಡು ಕೈಗಳನ್ನು ಕೆಳಗಡೆ ಇಳಿಬಿಟ್ಟು ಬತ್ತಲೆಯಲ್ಲಿ ನಿಂತಿರುವುದನ್ನು ಕಾಣುತ್ತೇವೆ.



ತೀರ್ಥಂಕರ ಪೀಠ

ತಲಾ ಒಂದು ತೀರ್ಥಂಕರರಿಗೆ ಒಪ್ಪೊಬ್ಬ ಮೊಟ್ಟೆ ಆಕಾರದ ಪ್ರಭಾವಳಿ ಇದೆ. ಅದರ ಮೇಲೆ ಮುಂಚಾಚಿದ ಛತ್ರಿಗಳಿವೆ. ಒಂದು ಶಿಲ್ಪದಲ್ಲಿ ಮಾತ್ರ ಪ್ರಭಾವಳಿ ಅಂಚಿನಲ್ಲಿ ರೇಖೆ ಇರುವುದಿಲ್ಲ. ಒಟ್ಟಾರೆ ಈ ಶಿಲ್ಪವನ್ನು ಸಂಪೂರ್ಣ ನುಣುಪುಗೊಳಿಸಿದ್ದು ಕಾಣುವುದಿಲ್ಲ. ಆದರೆ ಅದರ ಕಾಲ ಲಕ್ಷಣಗಳು ಮಾತ್ರ ಒಂದೇ ಆಗಿವೆ. ಇದರಿಂದಾಗಿ ಕಾಲಮಾನದಲ್ಲಿ ಪ್ರಭೇದ ಕಂಡುಬರುವುದಿಲ್ಲ. ಅಂದರೆ ಇವು ಸಹ ಕ್ರಿ. ಶ. ೧೧–೧೨ನೇ ಶತಮಾನದ್ದೆಂದು ಹೇಳಬಹುದು.

ಈ ಮೂರ್ತಿಗಳೊಂದಿಗೆ ದೊರೆತ ಒಂದು ಪೀಠ ಬಹು ಸುಂದರವಾದ ನೀಲಿ ಛಾಯೆವುಳ್ಳದ್ದಾಗಿದ್ದು, ಪೀಠದಲ್ಲಿ ಕುಳಿತ ಸಿಂಹಗಳಿವೆ. ಪೀಠದ ಅಂಚಿನ ಬದಿಗಳಲ್ಲಿ ತಲಾ ಒಂದು ಸಿಂಹಗಳನ್ನು ಕಿರುಗೂಡುಗಳಲ್ಲಿ ರಕ್ಷಿಸಲಾಗಿದೆ. ಕೇವಲ ಈ ಸಿಂಹ, ಆನೆ ಚಿತ್ರಗಳಿಂದ ೨೪ ತೀರ್ಥಂಕರರಲ್ಲಿ ಯಾವ ತೀರ್ಥಂಕರನನ್ನು ಈ ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿತ್ತೆಂದು ತಿಳಿದುಬರುವುದಿಲ್ಲ. ಇನ್ನು ಹೆಚ್ಚಿನ

ಉತ್ಖನನ ಮಾಡಿದರೆ ಆ ಮೂರ್ತಿ ಸಿಗಬಹುದಾಗಿದೆ. ಇಲ್ಲಿ ದೊರೆತ ಜೈನ ವಿಗ್ರಹಗಳಲ್ಲಿ ಇದು ಅತ್ಯಂತ ಪ್ರಾಚೀನದ್ದೆಂದು ತಿಳಿಯುತ್ತದೆ. ಅಂದರೆ ೧೧ನೇ ಶತಮಾನದ ಆರಂಭಿಕ ಕ್ರಿ.ಶ. ೧೦ನೇ ಶತಮಾನದ ಅಂತ್ಯದ ಘಟ್ಟವೆಂದು ಹೇಳಬಹುದಾಗಿದೆ.

ಹುನಗುಂದ ಈ ಪ್ರದೇಶದ, ಈ ಕಾಲದ ರಾಜಕೀಯ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರವನ್ನು ಅವಲೋಕನ ಮಾಡಿದಾಗ, ಕಲ್ಯಾಣ ಚಾಲುಕ್ಯರ ವಂಶದ ಕುಡಿಯಾದ ಅಕ್ಕಾದೇವಿಯು ಆಳುತ್ತಿದ್ದು, ಅವಳು ಸಹ ಜೈನ ಧರ್ಮದ ಬೆಳವಣಿಗೆಗೆ ಆಶ್ರಯದಾತಳಾಗಿ ಪ್ರಸಿದ್ಧಿ ಹೊಂದಿದ್ದನ್ನು ಇಲ್ಲಿ ಸ್ಮರಿಸಬಹುದು.

ಅಷ್ಟೇ ಅಲ್ಲ ಈ ತೀರ್ಥಂಕರರ ಶಿಲ್ಪಗಳು ಈ ಬಸದಿಯಲ್ಲಿ ಪ್ರತಿಷ್ಠಾಪಿಸಿದ್ದ ೨೪ ತೀರ್ಥಂಕರರ ಸಮೂಹವಾಗಿದ್ದವೆಂದೂ, ಉಳಿದ ತೀರ್ಥಂಕರರ ವಿಗ್ರಹಗಳು ಈ ಪರಿಸರದಲ್ಲಿ ಹುಡುಕುವುದರ ಅವಶ್ಯಕತೆ ಇದೆ. ೨೪ ತೀರ್ಥಂಕರರನ್ನು ಪ್ರತ್ಯೇಕವಾಗಿ ಬಸದಿಯಲ್ಲಿ ಪ್ರತಿಷ್ಠಾಪಿಸುವ ಪರಂಪರೆ ಈ ಕಾಲದಲ್ಲಿ ನಾಡಿನ ಇತಿಹಾಸದಲ್ಲಿ ಗಮನಿಸಬಹುದು. ಉದಾಹರಣೆಗಾಗಿ ಹಾವೇರಿ ಜಿಲ್ಲೆಯ ಲಕ್ಕುಂಡಿ ಬ್ರಹ್ಮ ಜಿನಾಲಯದ ಬದಿಗೆ ಹಾಗೂ ಲಕ್ಷ್ಮೇಶ್ವರದ ಶಂಕರ ಬಸದಿ ಹಿಂಬದಿಯಲ್ಲಿ ನಿಲ್ಲಿಸಿದ ಪುರಾವೆಗಳಿವೆ. ಈ ಬ್ರಹ್ಮಜಿನಾಲಯವನ್ನು ನಿರ್ಮಿಸಿದವರು ದಾನ ಚಿಂತಾಮಣಿ ಅತ್ತಿಮಬ್ಬೆಯದ್ದಾಗಿದ್ದರೆ, ಸಮಕಾಲೀನವಾಗಿ ಬಹುತೇಕ ಈ ಹುನಗುಂದದಲ್ಲಿ ಅಕ್ಕಾದೇವಿ ನಿರ್ಮಿಸಿರಬಹುದೆಂದು ತಿಳಿಯಲು ಅವಕಾಶವಿದೆ.

ಒಟ್ಟಾರೆ ಈ ಜೈನ ಶಿಲ್ಪಗಳ ಅಧ್ಯಯನದಿಂದ ಸು. ಕ್ರಿ.ಶ. ೧೧-೧೨ನೇ ಶತಮಾನದಲ್ಲಿ ಹುನಗುಂದ ಪ್ರದೇಶದಲ್ಲಿ ಇದೊಂದು ಜೈನ ಕೇಂದ್ರವಾಗಿತ್ತೆಂದು ಕಾಲಾನಂತರದಲ್ಲಿ ಅದರ ಸಾಂಸ್ಕೃತಿಕ ಪರಂಪರೆಗಳ ಬೆಳವಣಿಗೆಯೇ ಕಣ್ಮರೆಯಾಗಿತ್ತೆಂದು ತಿಳಿದುಬರುತ್ತದೆ.

ಹುನಗುಂದ ಪಕ್ಕದ ಗುಡ್ಡದ ಪರಿಸರದಲ್ಲಿ ಪತ್ತೆ ಆದ ಜೈನ ವಿಗ್ರಹಗಳು ದೊರೆತ ನಿವೇಶನದ ಸ್ಥಳವನ್ನು ಪರಿಶೀಲಿಸಲು ಪುರಾತತ್ವ ಶಾಸ್ತ್ರಜ್ಞರು ಉತ್ಖನನ ಮಾಡಿದರೆ ಅಲ್ಲಿ ಇನ್ನು ಅನೇಕ ಹೆಚ್ಚಿನ ಜೈನ ಪುರಾವೆಗಳು ಮತ್ತು ಇತರ ದೇವಾಲಯಗಳ ಪುರಾವೆಗಳು ಬೆಳಕಿಗೆ ಬರುವ ಸಾಧ್ಯತೆಗಳಿವೆ ಎಂದು ಹೇಳಬಹುದು.

ಕೃತಜ್ಞತೆಗಳು ಮತ್ತು ಆಕರ ಗ್ರಂಥಗಳು

ಈ ಸಂದರ್ಭದಲ್ಲಿ ಆ ಸ್ಥಳಕ್ಕೆ ಹೋಗಿ ಅಧ್ಯಯಿನಿಸಲು ಪರವಾನಿಗೆ ನೀಡಿದ ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವರು ಮತ್ತು ನನ್ನ ಜೊತೆಗೆ ಬಂದು ಈ ವಿಗ್ರಹಗಳ ಸಮಗ್ರ ಅಧ್ಯಯನಕ್ಕೆ ಮಾರ್ಗದರ್ಶನ ಮತ್ತು ಸಹಾಯ ಮಾಡಿದ ಸಂಸ್ಥೆಯ ನಿರ್ದೇಶಕರಾದ ಡಾ. ಆರ್.ಎಂ. ಷಡಕ್ಷರಯ್ಯನವರಿಗೂ, ಈ ವಿಗ್ರಹಗಳು ಪತ್ತೆಯಾದ ಸುಳುವು ನೀಡಿದ ಹುನಗುಂದದ ಸರಕಾರಿ ಡಿಗ್ರಿ ಕಾಲೇಜಿನ ಉಪನ್ಯಾಸಕರಾದ ಶಿವಾನಂದ ಜಮಾದಾರ, ಪ್ರೊ. ಬಸವರಾಜ ಮಠ, ಪ್ರೊ. ಪುಲಕೇಶಿ ಸುಣಗಾರ, ವಿದ್ಯಾರ್ಥಿ ಸಂತೋಷ ಹಾಗೂ ಊರಿನ ಗ್ರಾಮಸ್ಥರು, ಸ್ಥಳೀಯ ತಹಶೀಲ್ದಾರರಾದ ರಾಜಶ್ರೀ ಜೈನಾಪೂರ, ಪೊಲೀಸ್ ಇಲಾಖೆಯವರಿಗೂ ಮತ್ತು ಪತ್ರಿಕೆಯಲ್ಲಿ ಪ್ರಕಟಿಸಿ ನಾಡಿನ ಜನತೆಯ ಗಮನ ಸೆಳೆದ ಪತ್ರಿಕಾ ಮಾಧ್ಯಮದವರಿಗೂ ನನ್ನ ಕೃತಜ್ಞತೆಗಳು.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಡಾ. ಆರ್. ಮುನಿಸ್ವಾಮಿ., ಮುಖ್ಯ ಸಂಪಾದಕರು. ೧೯೯೯. ಭಾರತದ **ಗ್ಯಾಝೆಟಿಯರ್**, ವಿಜಾಪುರ ಜಿಲ್ಲೆ, ಕರ್ನಾಟಕ ರಾಜ್ಯ ಸರಕಾರ, ಕಾವೇರಿ ಭವನ, ಬೆಂಗಳೂರು-೯.

೨. ಬಳಿಗಾರ ಶಂಭು : ೧೯೮೬. **ಹುನಗುಂದ ತಾಲೂಕು ದರ್ಶನ**, ಐಬಿಎಚ್ ಪ್ರಕಾಶನ, ಬೆಂಗಳೂರು.

೩. Sundara A. 1990 : *Archaeology in Karnatak*, Directiorate of Arachaeology and Museums, Mysore

೪. Sundara A. 1968 : *Proto-historic sites in Bijapur District*, Journal of Karnatak University, Vol-iv (social Sciences),Dharwad

೫. ಷೇಕ್ ಅಲಿ ಬಿ : ೧೯೯೭ **ಕರ್ನಾಟಕ ಚರಿತ್ರೆ** ಸಂಪುಟ-೧, ಕ.ವಿ.ವಿ. ಹಂಪಿ

೬. ಕಲಬುರ್ಗಿ ಎಂ. ಎಂ. : ೧೯೭೬, **ಬಿಜಾಪುರ ಜಿಲ್ಲಾ ಶಾಸನ ಸೂಚಿ**, ಕ.ವಿ.ವಿ. ಧಾರವಾಡ.

೭. ನಾಯಕ ಹಾ. ಮಾ., ಪ್ರ. ಸ. ೧೯೭೯, **ಕರ್ನಾಟಕ** ವಿಷಯ ವಿಶ್ವಕೋಶ, ಕ.ಅ. ಕೇಂ. ಮೈಸೂರು ವಿ.ವಿ., ಮೈಸೂರು

೮. *South Indian Inscriptions*, Vol.-XI, XV, XVIII, XX.

ಜಿ.ಕೆ. ದೇವರಾಜಸ್ವಾಮಿ*

ಮಂಡಗದ್ದೆಯ ಅಪೂರ್ವ ಹರಿಹರಪಾದ ಶಿಲ್ಪ

ಮಂಡಗದ್ದೆಯು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಲ್ಲಿದೆ. ಶಿವಮೊಗ್ಗ ಮತ್ತು ತೀರ್ಥಹಳ್ಳಿ ಹಾದಿಯ ನಡುವೆ ಕಂಡುಬರುವ ಮಂಡಗದ್ದೆಯು, ಪಕ್ಷಿಧಾಮದಿಂದಲೇ ಪ್ರಖ್ಯಾತಿ ಹೊಂದಿದೆ. ಪ್ರಸ್ತುತ ಹರಿಹರ ಪಾದ ಶಿಲ್ಪವು ಪಕ್ಷಿ ವೀಕ್ಷಣಾ ಜಾಗಕ್ಕೆ ಹೊಂದಿಕೊಂಡಿರುವ ಆಂಜನೇಯ ದೇವಾಲಯಲ್ಲಿದೆ. ಈ ಆಂಜನೇಯ ದೇವಾಲಯದಲ್ಲಿ ಆಂಜನೇಯ ಮೂರ್ತಿಯ ಹಿಂಭಾಗದಲ್ಲಿ ಕಟ್ಟೆಯ ಮೇಲಿರುವುದೇ ಹರಿಹರಪಾದ ಉಬ್ಬುಶಿಲ್ಪವಾಗಿದೆ.

ಹರಿಹರಪಾದ ಶಿಲ್ಪವು ಬಳಪದ ಕಲ್ಲಿನಲ್ಲಿ ಪಾಣಿಪೀಠಾಕಾರದಿಂದ ಕೂಡಿದ್ದು, ಮೂರೂವರೆ (೩'೬") ಅಡಿ ಉದ್ದ ಹಾಗೂ ಎರಡು (೨') ಅಡಿ ಅಗಲವಾಗಿಯೂ ಇದೆ. ಇದರ ಮಧ್ಯದಲ್ಲಿ ಒಂದೂವರೆ (೧'೬") ಅಡಿಯಷ್ಟು ವ್ಯಾಸವಿರುವ ಕಮಲದ ಹೂವಿನ ದಳದ ಆಕೃತಿಯ ವೃತ್ತದಲ್ಲಿ ಉಬ್ಬು ಶಿಲ್ಪದ ಪಾದಗಳು ಕೆತ್ತಲ್ಪಟ್ಟಿವೆ. ಈ ಪಾದದ ಬಲಭಾಗಕ್ಕೆ ತ್ರಿಶೂಲ ಹಾಗೂ ಡಮರುಗ ಮತ್ತು ಎಡಕ್ಕೆ ಚಕ್ರ ಹಾಗೂ ಶಂಖದ ಉಬ್ಬುಶಿಲ್ಪಗಳನ್ನು ಸುಂದರವಾಗಿ ಕೆತ್ತಲಾಗಿದೆ. ಈ ಪೀಠವು ಎಂಟು (೮") ಇಂಚು ದಪ್ಪವುಳ್ಳದಾಗಿದೆ. ಪೀಠದ ಮುಂಭಾಗದಲಿ ಬಲಕ್ಕೆ ಬಸವನ ಉಬ್ಬುಶಿಲ್ಪವೂ (ತ್ರಿಶೂಲ, ಡಮರುಗ ಇರುವ ಕಡೆ), ಎಡಕ್ಕೆ ಗರುಡನ ಉಬ್ಬುಶಿಲ್ಪವೂ (ಚಕ್ರ, ಶಂಖ ಇರುವ ಕಡೆ) ನಾಲ್ಕುವರೆ (೪.೫") ಇಂಚು ಚೌಕದಲ್ಲಿ ಕೆತ್ತಲಾಗಿದೆ. ಮಧ್ಯಭಾಗದಲ್ಲಿ ವಿಶೇಷ ಕೆತ್ತನೆ ಇಲ್ಲವೆನ್ನಬಹುದು.

ಪೂರ್ಣ ಪ್ರಮಾಣದ ಹರಿಹರನ ವಿಗ್ರಹ ಹಾಗೂ ಉಬ್ಬುಶಿಲ್ಪಗಳು ಕರ್ನಾಟಕದಾದ್ಯಂತ ದೊರೆಯುತ್ತದೆ. ಆದರೆ ಪ್ರಸ್ತುತ ಹರಿಹರಪಾದ ಉಬ್ಬುಶಿಲ್ಪದ ಮಧ್ಯಭಾಗದಲ್ಲಿ ಪಾದಗಳನ್ನು ಮಾತ್ರ ಕೆತ್ತಲಾಗಿದೆ. ಅಕ್ಕಪಕ್ಕದಲ್ಲಿ ಹರಿಹರರ ಸೂಚಕವಾಗಿ ಆಯುಧಗಳು ಪೀಠದ ಬಲ ಮತ್ತು ಎಡಭಾಗದಲ್ಲಿದ್ದು, ಶಿಲ್ಪದ ಮುಂಭಾಗದಲ್ಲಿ ಬಸವ ಮತ್ತು ಗರುಡ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ.

ಈ ರೀತಿ ವಿಶಿಷ್ಟವುಳ್ಳ ಶಿಲ್ಪವು ಕರ್ನಾಟಕದ ಬೇರೆಲ್ಲೂ ಕಂಡುಬರುವುದಿಲ್ಲ. ಈ ರೀತಿಯಲ್ಲಿ ಶಿಲ್ಪವನ್ನು ಕೆತ್ತಲು ಕಾರಣಗಳೇನೆಂಬುದು ತಿಳಿದುಬಂದಿಲ್ಲ. ಇದಕ್ಕೆ ಸಮೀಪವಾಗಿರುವ ಒಂದು ಉಬ್ಬುಶಿಲ್ಪವು ಹಂಪಿಯಲ್ಲಿನ ವಿಜಯವಿಠ್ಠಲ ದೇವಾಲಯದ ಹಿಂಭಾಗದಲ್ಲಿರುವ ಹಾಸು ಬಂಡೆಯ ಮೆಲೆ ಕೆತ್ತಿರುವ ಉಬ್ಬುಶಿಲ್ಪವನ್ನು ಹರಿಹರ ಪಾದ ಶಿಲ್ಪ! ಎಂದು ಗುರುತಿಸಲಾಗುತ್ತಿದೆ. ಈ ಉಬ್ಬುಶಿಲ್ಪದಲ್ಲಿ ಎರಡು ಪಾದಗಳಿದ್ದು, ವಿರುದ್ಧ ದಿಕ್ಕಿನಲ್ಲಿ ಕೆತ್ತಲಾಗಿದೆ. ಈ ಎರಡೂ ಪಾದಗಳು ಬಲಹೆಜ್ಜೆಯನ್ನು ಸೂಚಿಸುತ್ತದೆ. ಅದನ್ನು ಸುತ್ತುವರಿದಂತೆ ಹಾವಿನ ಉಬ್ಬುಶಿಲ್ಪವಿದ್ದು, ಇದರ ಹೊರಭಾಗದಲ್ಲಿ ಚೌಕಾಕಾರವಿದ್ದು, ಚೌಕಾಕಾರದ ಆಕಾರದಲ್ಲಿ ಒಳಭಾಗದ ಒಂದು ಕಡೆ ಶಂಖ, ಚಕ್ರವನ್ನೂ ಮತ್ತೊಂದು ಭಾಗದಲ್ಲಿ ತ್ರಿಶೂಲವನ್ನು, ಉಳಿದೆರಡು ಭಾಗದಲ್ಲಿ ಸೂರ್ಯ, ಚಂದ್ರ ಶಿಲ್ಪವನ್ನು ಕೆತ್ತಲಾಗಿದೆ. ಆದರೆ ಇದು ಬಂಡೆ ಮೇಲಿರುವ ಉಬ್ಬುಶಿಲ್ಪವಾಗಿದೆ. ಮಂಡಗದ್ದೆಯ ಹರಿಹರ ಶಿಲ್ಪವನ್ನು ವಿಶೇಷವಾಗಿ ಪಾಣಿಪೀಠಾಕಾರದಲ್ಲಿ ಕೆತ್ತಿರುವುದು ದೊರೆತಿರುವ ಹರಿಹರ ಪಾದಶಿಲ್ಪದಲ್ಲಿಯೇ ವಿಶಿಷ್ಟವಾದದ್ದು.

ತೀರ್ಥಹಳ್ಳಿ ತಾಲ್ಲೂಕಿನ ಹರಿಹರಪುರದಲ್ಲಿ ಹರಿಹರ ದೇವಾಲಯವಿದ್ದು, ಅದರಲ್ಲಿ ಪೂರ್ಣ ಪ್ರಮಾಣದ ಹರಿಹರಮೂರ್ತಿಯ ಶಿಲ್ಪವಿದೆ. ಈ ದೇವಾಲಯದ ಬಗ್ಗೆ ಎಲ್ಲರಿಗೂ ತಿಳಿದಿರುವ ವಿಷಯವೇ ಆಗಿದೆ. ಕಾರಣ ಹರಿಹರ ಪುರದ ಶಾಸನದಲ್ಲಿ ಇಮ್ಮಡಿ ಹರಿಹರನ ಅವಸಾನದ ಕಾಲವನ್ನು (ಕ್ರಿ.ಶ. ೧೪೦೪) ಉಲ್ಲೇಖಿಸಲಾಗಿದೆ.

ಪ್ರಸ್ತುತ ಹರಿಹರ ಪಾದ ಉಬ್ಬುಶಿಲ್ಪದ ಕಾಲವನ್ನು ನಿರ್ಧರಿಸುವಲ್ಲಿ "ಮಂಡಗದ್ದೆ ಕೈಫಿಯತ್ತ"ನ್ನು ಬಿಟ್ಟರೆ, ಶಾಸನಗಳ ಆಧಾರವು ಯಾವುದೂ ಇಲ್ಲ. ಕೈಫಿಯತ್ತಿನಲ್ಲಿ ".... ಆ ಬಳಿಕ ಹರಿಹರರಾಯ ಯಂಬಾತನು ಗಜದೇಶದಿಂದ ಬಂದು ದೊಡ್ಡ ಕ್ಷೇತ್ರದಲ್ಲು ಅಗ್ರಹಾರ ದೇವಾಲಯ ಮಾಡಬೇಕೆಂದು ಯೋಚಿಸಿ ಹುಡುಕಿದಲ್ಲಿ. ತುಂಗಾ ಮಧ್ಯಗಡ್ಡೆಯಲ್ಲಿ ಋಷಿ ಆಶ್ರಮ ಯಿರುವದು ಕಂಡು. "ಯೀ ಸ್ಥಳದಲು ಅಗ್ರಹಾರ ಮಾಡಬೇಕೆಂದು ನದಿ ಉಪದ್ರವ ಆಗದಂತೆ ಕಲ್ಲು ಕಟ್ಲ ಕಟ್ಟಿಸಬೇಕೆಂದು ಪ್ರಯತ್ನ ಮಾಡಿ ಕಟ್ಟಿಸುತ್ತ ಯಿದ್ದಲ್ಲಿ. ಆ ರಾಮ [>ಯ]ಗೆ "ಈ ಸ್ಥಳದಲಿ

*'ತ್ರಯೀ' # ೫೬, ಮೈಸೂರು ಲ್ಯಾಂಪ್ಸ್ ಲೇಔಟ್, ಚನ್ನನಾಯಕನಪಾಳ್ಯ ೨ನೇ ಹಂತ, ನಾಗಸಂದ್ರ ಅಂಚೆ, ಬೆಂಗಳೂರು.

ಆಶ್ರಮಕೆ ಯೋಗ್ಯವೆ ಹೊರತು, ನರಮನುಷ್ಯರಿಗೆ ಯೋಗ್ಯವಲ್ಲಾ. ಕಲಿಯುಗ ಅಂತ್ಯ ಪರಿಯಂತ್ರ ತಾವು ತಪಸ್ಸು ಮಾಡುತ್ತಯಿರುತ್ತೆವೆ. ಯಿಲ್ಲಿ ನೀವು ಯಿ ಯೋಚನೆ ಮಾಡಬ್ಯಾಡಾ. ತೀರದ ದಡದಲ್ಲು. ನಮಗೆ ಸಮೀಪವಾದ ಸ್ಥಳದಲ್ಲು, ಅಗ್ರಹಾರ ದೇವಾಲಯ ಮಾಡು"ಯಂತ ಋಷಿಗಳು ಸ್ವಪ್ನದಲ್ಲು ಅಜ್ಞಾಪಿಸಿದ್ದರಿಂದ ಋಷಿಗಳ ವಾಕ್ಯವನ್ನು ಜ್ಞಾಪ್ತಿಗೆ ತಂದುಕೊಂಡು. ಯಿ ಆಶ್ರಮದಲು ಪಟ್ನವ ಕಟ್ಟಿಸುವದ ಬಿಟ್ಟುಬಂದು, ಯೀ ಆಶ್ರಮಕ್ಕೆ ಸಮೀಪವಾದ ದಕ್ಷಿಣಭಾಗದ ತೀರದಲ್ಲು ಲಿಂಗಾಪುರದ ಗ್ರಾಮದಲು 'ಮಾಂಡವ್ಯ ಅಗ್ರಹಾರ' ಯಂತ ಹೆಸರು ಯಿಟ್ಟು, ಹರಿಹರದೇವರ ದೇವಸ್ಥಾನವ ಕಟ್ಟಿಸಿದ. ಯಿ ಅಗ್ರಹಾರಕ್ಕೆ ದೇವರ ಪೂಜೆ ಬ್ರಾಹ್ಮರಿಗೆ ಸಹಾ ಉತ್ತರವಾಗಬೇಕೆಂದು ಅರಸುಗಳಿಗೆ ವಿಳಂಬಿ ಸಂವತ್ಸರದ ಆಷಾಢ ಶು ೧೫ರಲು ನಿರುಪಾ ಹೇಳಿಕೊಂಡ ಉತ್ತರವ ಬಿಡಿಸಿದ. ....".



ಆಂಜನೇಯನ ಮೂರ್ತಿಯ ಹಿಂಭಾಗದಲ್ಲಿರುವ
ಹರಿಹರ ಪಾದ ಶಿಲ್ಪ (ಮಂಡಗದ್ದೆ)

ಕೈಫಿಯತ್ತಿನಲ್ಲಿ ತಿಳಿಸಿದಂತೆ ಪ್ರಸ್ತುತ ಇಂದಿಗೂ ಅಗ್ರಹಾರವಿದೆ. ಜೊತೆಗೆ ಹರಿಹರ ದೇವಸ್ಥಾನವ ಕಟ್ಟಿಸಿದ ಎಂಬ ಉಲ್ಲೇಖವಿದೆ. ಬಹುಶಃ ಹಿಂದೆ ಹರಿಹರ ದೇವಸ್ಥಾನ ಇದ್ದು, ನಾಶ ಹೊಂದಿರಬೇಕು. ಕಾಲಾಂತರದಲ್ಲಿ ಆಂಜನೇಯನನ್ನು ಪ್ರತಿಷ್ಠಾಪಿಸಿರಬಹುದು ? ಈಗ ಆಂಜನೇಯ ಗುಡಿಯ ಆಂಜನೇಯ ವಿಗ್ರಹದ ಹಿಂಭಾಗದಲ್ಲಿ ಹರಿಹರಪಾದ ಪೀಠವನ್ನು ಇಡಲಾಗಿದೆ. ಕೈಫಿಯತ್‌ನಲ್ಲಿ ತಿಳಿಸಿದ ಕಾಲವನ್ನು 'ಇಂಡಿಯನ್ ಎಫಿಮರೀಸ್'ನಲ್ಲಿ ಗಮನಿಸಿದಾಗ ಇದು ಕ್ರಿ.ಶ. ೧೩೫೮ ಜೂನ್ ೨೧ನೆಯ ಗುರುವಾರಕ್ಕೆ ಸರಿ ಹೊಂದುತ್ತದೆ. ಈ ಸಮಯದಲ್ಲಿ ಒಂದನೆಯ ಹರಿಹರನ ಕಾಲಾವಧಿ ಮುಗಿದು, ಅವನ ತಮ್ಮ ಒಂದನೆಯ ಬುಕ್ಕನ ಆಳ್ವಿಕೆಯ ಕಾಲವಾಗಿರುತ್ತದೆ. ಹರಿಹರರಾಯನ ಕೊನೆಯ ಕಾಲದಲ್ಲಿ ಉಲ್ಲೇಖಿತ ಹರಿಹರಪಾದ ಶಿಲ್ಪ ಹಾಗೂ



ಪೀಠದ ಮೇಲೆ ಹರಿಹರ ಪಾದ ಶಿಲ್ಪ ಹಾಗೂ ಆಯುಧಗಳು

ಹರಿಹರರ ಉಬ್ಬುಶಿಲ್ಪ ಪೀಠದ ಅಳತೆ

	ಉದ್ದ (ಅಡಿ', ಇಂಚು")	ಅಗಲ (ಅಡಿ', ಇಂಚು")
ಪೀಠ	೩' ೬"	೨'
ಪಾದಗಳು	೧೦"	೩"
ತ್ರಿಶೂಲ	೮"	
ಡಮರುಗ	೧೦"	
ಚಕ್ರ	೧'	೩"
ಬಸವ, ಗರುಡ	೪.೫" ಚೌಕದಲ್ಲಿ	
ಪೀಠದ ದಪ್ಪ	೮"	


ಅಗ್ರಹಾರವನ್ನು ನಿರ್ಮಿಸಿರಬಹುದು. ಅಥವಾ ಹರಿಹರ ರಾಯನ ಕಾರ್ಯವನ್ನು ಅನಂತರ ಅವನ ತಮ್ಮ ಒಂದನೆಯ ಬುಕ್ಕ ಕ್ರಿ.ಶ. ೧೩೫೮ ರಲ್ಲಿ ಪೂರ್ಣಗೊಳಿಸಿರಬಹುದೆಂದು ಅಂದಾಜಿಸಲಾಗಿದೆ.

ಈ ಹರಿಹರ ಪಾದ ಉಬ್ಬುಶಿಲ್ಪವು ಕರ್ನಾಟಕದಲ್ಲಿಯೇ ವಿಶಿಷ್ಟವಾಗಿದೆ ಎಂಬುದರಲ್ಲಿ ಸಂಶಯವಿಲ್ಲ ಎನ್ನಬಹುದು.


(ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಎಚ್.ಎನ್. ದೇವೇಂದ್ರ ಹಾಗೂ ಜಿ.ಕೆ. ವಿಶ್ವಾಮಿತ್ರ ಇವರಿಗೆ ಕೃತಜ್ಞತೆಗಳು.)



ಪೀಠದಲ್ಲಿರುವ ತ್ರಿಶೂಲ ಮತ್ತು ಡಮರುಗ



ಹಂಪಿಯಲ್ಲಿ ಹಾಸು ಬಂಡೆಯಲ್ಲಿರುವ ಹರಿಹರಪಾದ ಉಬ್ಬುಶಿಲ್ಪ



ಪೀಠದಲ್ಲಿರುವ ಚಕ್ರ ಮತ್ತು ಶಂಖ

ರಂಗನಾಥ್ ವೈ.*
ಡಾ. ಆರ್.ಎಚ್. ಕುಲಕರ್ಣಿ**

ಮಹಾಕೂಟದ ಮಹಾಕೂಟೇಶ್ವರ ದೇವಾಲಯದ ಅಭಿಮನ್ಯು ವಧಾಶಿಲ್ಪ

ಬಾದಾಮಿ ತಾಲ್ಲೂಕಿನ ಮಹಾಕೂಟ, ಬಾದಾಮಿ ಚಾಲುಕ್ಯರ ಒಂದು ಪ್ರಮುಖ ವಾಸ್ತುಕಲಾ ಹಾಗೂ ಧಾರ್ಮಿಕ ಕೇಂದ್ರವಾಗಿದೆ. ಮಂಗಳೇಶನ ಧರ್ಮವಿಜಯ ಸ್ತಂಭಶಾಸನದ ಪ್ರಕಾರ ಕ್ರಿಶ. ೫೯೬ ರಿಂದಲೇ ಮಹಾಕೂಟೇಶ್ವರನಾಥ ದೇವಾಲಯವು ಇದದ್ದು ತಿಳಿದುಬರುತ್ತದೆ. ಮಹಾಕೂಟೇಶ್ವರ ದೇವಾಲಯದ ನಿರ್ಮಾಣ ಕಾಲದ ಬಗ್ಗೆ ಹಲವಾರು ವಿದ್ವಾಂಸರು ತಮ್ಮದೇ ಆದ ಕಾಲಘಟ್ಟವನ್ನು ನಿಗದಿಪಡಿಸಿದ್ದಾರೆ.

ಮಹಾಕೂಟೇಶ್ವರ ದೇವಾಲಯವು ಹಲವಾರು ವಿಶಿಷ್ಟ ಶಿಲ್ಪಗಳಿಂದ ಕೂಡಿದೆ. ದೇವಸ್ಥಾನದ ಹೊರಗೋಡೆಯ ಮೇಲೆ ಇರುವಂತಹ ಶಿವನ ಹಲವಾರು ನಿರೂಪಣಾ ಶಿಲ್ಪಗಳು ಗಮನ ಸೆಳೆಯುತ್ತವೆ. ಈ ದೇವಾಲಯದ ಅತ್ಯಂತ ಆಕರ್ಷಕ ಶಿಲ್ಪಗಳಿರುವುದು ಅಧಿಷ್ಠಾನದ ಮೇಲಿರುವಂತಹ ಕಥಾನಿರೂಪಣಾ ಪಟ್ಟಿಕೆಯಲ್ಲಿ. ಈ ಕಥಾನಿರೂಪಣಾ ಪಟ್ಟಿಕೆಯಲ್ಲಿ ಶಿವನು ರಾವಣನಿಗೆ ಆತ್ಮಲಿಂಗ ನೀಡುವ ಸನ್ನಿವೇಶ, ರಾವಣನ ಉಗ್ರತಪಸ್ಸು ಹಾಗೂ ರಾವಣನು ಕೈಲಾಸಪರ್ವತವನ್ನು ಎತ್ತುತ್ತಿರುವ ದೃಶ್ಯಗಳು ಒಂದು ಭಾಗದಲ್ಲಿ ಕಂಡುಬಂದರೆ, ಮತ್ತೊಂದು ಭಾಗದಲ್ಲಿ ದೇವಲೋಕದ ಸುರಾಂಗನೆಯರ ದೃಶ್ಯಸನ್ನಿವೇಶಗಳು ಇಲ್ಲಿವೆ. ದೇವ-ದಾನವರ ಯುದ್ಧಸನ್ನಿವೇಶದಲ್ಲಿ ದೇವತೆಗಳು ರಾಕ್ಷಸರೊಂದಿಗೆ ಯುದ್ಧ ಮಾಡುತ್ತಿರುವ ದೃಶ್ಯವನ್ನು ತೋರಿಸಲಾಗಿದೆ. ಇದರ ಮುಂದುವರಿದ ಭಾಗವಾಗಿ ಮಹಾಭಾರತಕ್ಕೆ ಸಂಬಂಧಿಸಿದ ಹಲವು ದೃಶ್ಯನಿರೂಪಣೆಗಳಿವೆ, ಆದರೆ ಈ ದೃಶ್ಯನಿರೂಪಣೆಯನ್ನು ಇದುವರೆವಿಗೂ ವಿವರವಾಗಿ ಗುರುತಿಸಿ ಅಧ್ಯಯನ ಮಾಡುವ ಪ್ರಯತ್ನಗಳು ಅಷ್ಟಾಗಿ ನಡೆದಿಲ್ಲವೆಂದು ಹೇಳಬಹುದು. ಪ್ರಸುತ ಈ ಲೇಖನದಲ್ಲಿ ಅಭಿಮನ್ಯವಿನ ವಧೆಯ ವಿವರವನ್ನು ನೀಡುವ ಒಂದು ಪ್ರಯತ್ನವಾಗಿದೆ.

ಮಹಾಭಾರತದ ದ್ರೋಣಪರ್ವದಲ್ಲಿ ಬರುವಂತಹ ಚಕ್ರವ್ಯೂಹಕಥನ ಹಾಗೂ ಅಭಿಮನ್ಯುವಧೆ ಈ ವಿಷಯಕ್ಕೆ ಸಂಬಂಧಿಸಿದಂತಹ ಒಂದು ಅಪರೂಪದ ದೃಶ್ಯ ನಿರೂಪಣೆಯನ್ನು ಈ ಕಥಾನಕ ಶಿಲ್ಪಗಳ ಪಟ್ಟಿಕೆಯಲ್ಲಿ ಗುರುತಿಸುವ ಪ್ರಯತ್ನ ಮಾಡಿದ್ದೇವೆ. ಈ ಶಿಲ್ಪವು ದೇವಾಲಯದ ಉತ್ತರಗೋಡೆಯ ಕಥಾಪಟ್ಟಿಕೆಯಲ್ಲಿದೆ. ಶಿಲ್ಪದಲ್ಲಿ ನಿರೂಪಿಸಿರುವಂತೆ ಗಜಬಲ, ರಥಬಲದೊಂದಿಗೆ ಯುದ್ಧ ನಡೆಯುತ್ತದೆ. ಯುದ್ಧದ ಮಧ್ಯದಲ್ಲಿ ಸಿಲುಕಿರುವ ಬಾಲಕ ಅಭಿಮನ್ಯು ಯುದ್ಧದ ಕೊನೆಯ ಘಟ್ಟವಾಗಿ ರಥದ ಗಾಲಿಯನ್ನು ಎತ್ತಿಹಿಡಿದು ಯುದ್ಧ ಮಾಡುತ್ತಿದ್ದಾನೆ, ಈ ಸನ್ನಿವೇಶದ ನಿರೂಪಣೆಯಲ್ಲಿ ಧನುರ್ಧಾರಿಗಳಾದ ಕುರುಸೇನೆಯ ದ್ರೋಣ, ಅಶ್ವತ್ಥಾಮ, ಕರ್ಣ, ದುರ್ಯೋಧನ, ದುಶ್ಶಾಸನ, ಮೊದಲಾದವರು ಅಭಿಮನ್ಯುವನ್ನು ಸುತ್ತುವರೆದು, ಬಾಣದ ಮಳೆಗೈಯುತ್ತಿದ್ದಾರೆ. ಇದ್ಯಾವುದಕ್ಕೂ ಜಗ್ಗದ ಅಭಿಮನ್ಯು ರಥದ ಗಾಲಿಯನ್ನೇ ಎತ್ತಿ ವೀರಾವೇಶದಿಂದ ಯುದ್ಧ ಮಾಡುತ್ತಿರುವ ದೃಶ್ಯ ಅತ್ಯಂತ ಹೃದಯಸ್ಪರ್ಶಿಯಾಗಿ ಮೂಡಿಬಂದಿದೆ.




ಕುಮಾರವ್ಯಾಸನ ಕರ್ನಾಟಕ – ಭಾರತ ಕಥಾಮಂಜರಿಯಲ್ಲಿ (ಸಂಪಾದಕರು–ಕುವೆಂಪು ಮತ್ತು ಮಾಸ್ತಿವೆಂಕಟೇಶ್ ಅಯ್ಯಂಗಾರ್ ೧೯೫೮, ೧೯೭೪) ಕೃತಿಯಲ್ಲಿ ಬರುವಂತಹ ದ್ರೋಣಪರ್ವದಲ್ಲಿ ಪದ್ಮವ್ಯೂಹ ರಚನೆ, ವ್ಯೂಹಭೇದಕ್ಕೆ ಅಭಿಮನ್ಯು ಹೊರಟದ್ದು,

** ಇತಿಹಾಸ ಉಪನ್ಯಾಸಕರು, ಸರ್ಕಾರಿ ಪ.ಪೂ. ಕಾಲೇಜು, ಬೆಟ್ಟದಪುರ, ಪಿರಿಯಾಪಟ್ಟಣ ತಾ. ಮೈಸೂರು ಜಿಲ್ಲೆ.
* ಪ್ರಾಂಶುಪಾಲರು, ಚಿತ್ರ ಕಲಾ ಕಾಲೇಜ್, ಬೆಂಗಳೂರು.











ಅಭಿಮನ್ಯು ಪೌರುಷದಿಂದ ಹೋರಾಡುತ್ತಾ ಶತ್ರುಗಳನ್ನು ಕೊಂದು ಅನಂತರದಲ್ಲಿ ತಾನೂ ಮರಣ ಹೊಂದಿರುವುದನ್ನು ಹೃದಯಂಗಮವಾಗಿ ವಿವರಿಸಲ್ಪಟ್ಟಿವೆ. ಈ ಪ್ರಕಾರವಾಗಿ ಅಭಿಮನ್ಯುವಿಗೆ ಸಂಬಂಧಪಟ್ಟ ಯುದ್ಧವಿವರಗಳು ಹಾಗೂ ಅವನ ಮರಣದ ಸನ್ನಿವೇಶಗಳನ್ನು ವಿವರಿಸಲ್ಪಟ್ಟಿದೆ. ಇಂತಹ ಸನ್ನಿವೇಶಗಳು ಶಿಲ್ಪಗಳಲ್ಲಿ ಮೂಡಿಬಂದಿರುವುದು ಒಂದು ವಿಶೇಷತೆಯಾಗಿದೆ. ನಮಗೆ ತಿಳಿದಿರುವಂತೆ ಈ ರೀತಿಯ ಕಥಾನಿರೂಪಣಾ ಶಿಲ್ಪಗಳು ದೊರೆಯುವುದು ಬಹಳ ವಿರಳ ಎಂದು ಹೇಳಬಹುದು. ಬಾದಾಮಿ ಚಾಲುಕ್ಯರ ನಂತರ ದೇವಾಲಯಗಳಲ್ಲಿ ಕೂಡ ಮಹಾಭಾರತದ ಹಲವಾರು ಕಥಾನಿರೂಪಣಾ ಶಿಲ್ಪಗಳಿದ್ದರೂ ಸಹ ಎಲ್ಲಿಯೂ ಕೂಡ ಅಭಿಮನ್ಯುವಿನ ವಧೆಗೆ ಸಂಬಂಧಿಸಿದಂತೆ ಶಿಲ್ಪಗಳು ಕಂಡುಬಂದಿಲ್ಲ. ಈಗಾಗಿ ಕಥಾನಿರೂಪಣಾ ಶಿಲ್ಪಗಳು ಅತ್ಯುತ್ತಮ ಹಾಗೂ ವಿಶಿಷ್ಟವಾದಂತಹ ದೃಶ್ಯ ನಾಟಕಗಳು ಎಂದು ಹೇಳಬಹುದು.

ರಘು ಆರ್.*

ತಾಯಿ – ಮಗುವಿನ ಮೂರ್ತಿಶಿಲ್ಪ

ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲದ ಚಿತ್ರಚಾವಡಿ ಬೀದಿಯಲ್ಲಿರುವ (ಜೈನ) ಬ್ರಾಹ್ಮಣ ವಾರಮ್ಮನ ದೇವಸ್ಥಾನದಲ್ಲಿ ಈ ತಾಯಿ – ಮಗುವಿನ ಹಿತ್ತಾಳೆಯ ಮೂರ್ತಿ ಶಿಲ್ಪವನ್ನು ಸಂಪ್ರದಾಯಬದ್ಧವಾಗಿ ಪೂಜೆಗೊಳ್ಳುತ್ತಾ ಇದೆ.

ಹಿತ್ತಾಳೆ ಮೂರ್ತಿಯ ಅಳತೆ ೬ X ೩ ೧/೨ ಇಂಚು ಎತ್ತರ X ಅಗಲ ಅಳತೆಯಲ್ಲಿದೆ. ಹಿತ್ತಾಳೆಮೂರ್ತಿ ಎರಕದಿಂದ ಮಾಡಿದುದಾಗಿದೆ. ಮೂರ್ತಿಯು ಚಿಕ್ಕದಾಗಿದ್ದರೂ ಶಾಸ್ತ್ರಬದ್ಧ ಪ್ರಮಾಣದಂತೆ ಹಿಂದೂ ಸಂಸ್ಕೃತಿಗೆ ಅನುಗುಣವಾಗಿ ಸುಂದರ ಮೂರ್ತಿ ಸ್ವರೂಪವಾಗಿ ಮೂಡಿಬಂದಿದೆ.

ತಾಯಿಯು ಚತುರ್ಭುಜೆಯಾಗಿ, ವೀರಾಸನದಲ್ಲಿ ಕುಳಿತಿದ್ದಾಳೆ. ಬಲಗಾಲು ಇಳಿಬಿಟ್ಟು ಎಡಗಡೆಯ ತೊಡೆಯ ಮೇಲೆ ಗಂಡುಮಗುವನ್ನು ಕುಳ್ಳಿರಿಸಿಕೊಂಡು ಕಮಲದ ಮೇಲೆ ಕುಳಿತಿದ್ದಾಳೆ. ಹಿಂಬದಿಯ ಬಲಗೈಯಲ್ಲಿ ಕತ್ತಿಯನ್ನು ಎಡಗೈಯಲ್ಲಿ ಗುರಾಣಿಯನ್ನು ಮುಂಭಾಗದ ಬಲಗೈಯಲ್ಲಿ ಹಣ್ಣನ್ನು ಎಡಗೈಯಲ್ಲಿ ಸೌಟು ಹಿಡಿದಿದ್ದಾಳೆ. ಮಾತೆಯು ಕಿವಿಯಲ್ಲಿ ಕರ್ಣಕುಂಡಲ, ಕತ್ತಿನಲ್ಲಿ ಸರವನ್ನು ಶಿರೋಭಾಗದಲ್ಲಿ ಕಿರೀಟವನ್ನು ಧರಿಸಿ ವಸ್ತ್ರಾಲಂಕಾರಯುಕ್ತಳಾಗಿದ್ದಾಳೆ. ಪೀಠದ ಬಲಗಡೆ ಭೈರವರೂಪವಿದೆ; ನಾಯಿಯು ಇದೆ. ಎಡಗಡೆ ೪ ಕೈಗಳುಳ್ಳ ಗಣಪತಿ ಇವೆ. ಮುಂಭಾಗದಲ್ಲಿ ರಜಸ್ಸು, ತಮಸ್ಸು, ಸಾತ್ವಿಕ ಸಂಕೇತದ ೩ ರುಂಡಗಳಿವೆ. ಅಕ್ಕಪಕ್ಕದಲ್ಲಿ ೨ ಟಗರಿನ ರೂಪವಿದೆ. ಹಿಂಭಾಗದ ಪ್ರಭಾವಳಿಯಲ್ಲಿ ೩ ಕಳಸವಿದೆ. ೨ ಕೈಯಿನ ಮಗುವು ತನ್ನ ತಾಯಿಯನ್ನು ನೋಡುತ್ತಿರುವಂತೆ ಮೂರ್ತಿಸ್ವರೂಪ ಮೂಡಿಬಂದಿದೆ. ಈ ಮೂರ್ತಿಯು ಚೋಳರ ಕಾಲದಲ್ಲಿ ತಯಾರಿಸಲ್ಪಟ್ಟಿದೆ ಎಂಬ ಐತಿಹ್ಯವಿದೆ.

ಶ್ವೇತಾಂಬರರು, ದಿಗಂಬರ ಜೈನಮಂದಿರಗಳಲ್ಲಿ ಈ ರೀತಿಯ ತಾಯಿ–ಮಗುವಿನ ಹಿತ್ತಾಳೆಯ ಶಿಲ್ಪ ಮತ್ತು ಕಲ್ಲಿನ ಶಿಲ್ಪ ವಿಗ್ರಹಗಳು ಸಂಪ್ರದಾಯದಂತೆ ಪೂಜೆಗೊಳ್ಳುತ್ತವೆ. ತಾಯಿ–ಮಗುವಿನ ಮೂರ್ತಿಗೆ ಕೂಷ್ಮಾಂಡಿನಿ ಯಕ್ಷಿ (ದೇವಿ) ಎಂದು ದಿಗಂಬರರಲ್ಲಿ ಕರೆಯುತ್ತಾರೆ. ಪುತ್ರಕಾರಿ ಪದ್ಮಾವತಿ ಅಮ್ಮ ಎಂದು ಶ್ವೇತಾಂಬರರಲ್ಲಿ ಕರೆಯುತ್ತಾರೆ. ನೇಮಿನಾಥ ತೀರ್ಥಂಕರರಿಗೆ ಕೂಷ್ಮಾಂಡಿನಿ ಯಕ್ಷಿ, ಸಿದ್ಧಾಯಿಣಿ ಯಕ್ಷಿ, ಇವರು ರಕ್ಷಣಾ ದೇವತೆಗಳಾಗಿದ್ದಾರೆ. ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಕೃಷ್ಣಗಿರಿಯಲ್ಲಿ ಶ್ವೇತಾಂಬರ ಜೈನ ಮಂದಿರ ಸುಂದರವಾಗಿ ಕಟ್ಟಲ್ಪಟ್ಟಿದೆ. ದೇವಾಲಯದ ಹೊರಭಾಗದಲ್ಲಿ ಕಾಲಭೈರವನ ಉಬ್ಬುಚಿತ್ರವು, ರಾಜರಾಜೇಶ್ವರಿ ಪದ್ಮಾವತಿ ಅಮ್ಮ ಮತ್ತು ಜಿನಮೂರ್ತಿಗಳು ನವಗ್ರಹ ದೇವತೆಗಳು ೨೪ ಸ್ತ್ರೀ ದೇವತೆಗಳು, ಮಂದಿರವು ಬಹಳ ಸುಂದರವಾಗಿ ಮೂಡಿಬಂದಿವೆ.

ತಾಯಿ – ಮಗುವಿನ ಹಿತ್ತಾಳೆ ಮೂರ್ತಿಯ ಲಕ್ಷಣಗಳನ್ನು ಗಮನಿಸಿದಾಗ ಜೈನಧರ್ಮದ ಶ್ವೇತಾಂಬರ ಸಂಸ್ಕೃತಿಯಲ್ಲಿಯು ಕಾಲಭೈರವ, ಗಣಪತಿ, ರಾಜರಾಜೇಶ್ವರಿ ಮಾತೆ ಪುತ್ರಕಾರಿ ಪದ್ಮಾವತಿ ಅಮ್ಮ ಮುಂತಾದ ಹಿಂದು ದೇವತೆಗಳಂತೆಯೇ ಮೂರ್ತಿಗಳು, ಚಿತ್ರಗಳು ಕಂಡುಬರುತ್ತವೆ. ತಲಕಾಡಿನ ಗಂಗರ ಪತನಾನಂತರ ವೈದಿಕಧರ್ಮದಲ್ಲಿ ಮತ್ತು ಜೈನಶ್ವೇತಾಂಬರರಲ್ಲಿ ಒಂದೇ ಸಂಸ್ಕೃತಿಯನ್ನು ವಿಭಿನ್ನ ರೀತಿಯಲ್ಲಿ ಆಚರಿಸಿಕೊಂಡು ಬಂದುದು, ಹೊಸದಾಗಿ ಮಂದಿರಗಳು ನಿರ್ಮಿತವಾದುದು ಕಾಣಬರುತ್ತದೆ. ಚೋಳರ ಕಾಲದಲ್ಲಿ ರಾವಳೇಶ್ವರನ ನೆಲೆಯಲ್ಲಿ ಮತ್ತು ಕಾಲಘಟ್ಟದ ಸಂಸ್ಕೃತಿಯಲ್ಲಿ ನಾನಾ ರೀತಿಯ ಮೂರ್ತಿ ಶಿಲ್ಪಗಳು ಕಥಾ ಸಂದರ್ಭದಂತೆ ಮತ್ತು ವರ್ಗಾವಾರು ಜಾತಿ ಕುಲಗಳಲ್ಲಿ, ಬೇರೆ ಬೇರೆ ಪ್ರಾಂತ್ಯಗಳಲ್ಲಿ, ಕಲಾವಿದನ ದೃಷ್ಟಿಕೋನಕ್ಕೆ ಅನುಸಾರವಾಗಿ ಕಲ್ಲಿನ ಮೂರ್ತಿ ಶಿಲ್ಪಗಳು ಕೆತ್ತಲ್ಪಟ್ಟಿವೆ. ಇದಕ್ಕೆ ರಾಜನ ಪ್ರೋತ್ಸಾಹವೇ ಕಾರಣವೆನ್ನಬಹುದು.

ಹಳೆಯ ಮೈಸೂರು ಸಂಸ್ಥಾನದಲ್ಲಿ, ಗ್ರಾಮಗಳಲ್ಲಿ ತಾಯಿ – ಮಗುವಿನ ಶಿಲಗಳು ವಿಶೇಷವಾಗಿ ಕಂಡುಬರುತ್ತದೆ. ವೀರಗಲ್ಲುಗಳು, ಬಿಡಿ ಶಿಲ್ಪಗಳಲ್ಲಿ ಅಲ್ಲಲ್ಲಿ ಉಬ್ಬುಶಿಲ್ಪವಾಗಿ ಕೆತ್ತಲ್ಪಟ್ಟಿರುವುದು ಸತ್ಯಸ್ವರೂಪವಾಗಿದೆ. ಈ ರೀತಿಯ ವೀರಗಲ್ಲುಗಳು ಒಂದು ಕಾಲಘಟ್ಟದಲ್ಲಿ ಮಾತ್ರ ಕಂಡುಬಂದಿದೆ. ಈ ಶಿಲ್ಪಗಳು ಉದಯಿಸಿದ ಸಂದರ್ಭವನ್ನು ಗಮನಿಸಿದಾಗ ಆ ಕಾಲದ ಇತಿಹಾಸವನ್ನು ತಿಳಿಯುವಂತಿದೆ. ಈ ಶಿಲ್ಪಗಳನ್ನು,

* ಚಿತ್ರಕಲಾ ಶಿಕ್ಷಕರು, ಚಿತ್ರ ಚಾವಡಿ ಬೀದಿ, # ೫೨೯, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.



ಚಿತ್ರಚಾವಡಿ ಬೀದಿ ಕೊಳ್ಳೇಗಾಲ
(ಜೈನ) ಬ್ರಾಹ್ಮಣ ಮಾರಮ್ಮ
ದೇವಸ್ಥಾನ



ಕೂಷ್ಮಾಂಡಿನಿ ಯಕ್ಷಿ
ದಿಗಂಬರ ದೇವಸ್ಥಾನ
ಸಂಗಮ ಚಿತ್ರಮಂದಿರದ ಹತ್ತಿರ



ತಾಯಿ–ಮಗು, ರಾಣಿ–ಮಗ
ಸೋಮನಾಥಪುರ
(ಹೊರ ಜಮೀನು)



ತೊಂಡನೂರು ರಾಕಾಸಮ್ಮ
ಮೂಗೂರು ಗ್ರಾಮ



ತಲಕಾಡು ವೈದ್ಯನಾಥೇಶ್ವರ
ದೇವಾಲಯ
ತಾಯಿ – ಮಗು



ಕೊಂಡನೂರು ರಾಕಾಸಮ್ಮ
ಉತ್ಸವಮೂರ್ತಿ
ಟಿ. ನರಸೀಪುರ, ಮೈಸೂರು ಜಿಲ್ಲೆ

ದೃಷ್ಟಿ ಶಾಸನಗಳಂತೆ ಅಧ್ಯಯನ ಮಾಡಿದಾಗ ಚೋಳರ ಕಾಲಘಟ್ಟದ ಸಂಸ್ಕೃತಿಯು ತಿಳಿದುಬರುತ್ತದೆ. ರಾವಳೇಶ್ವರ ಶಿಲ್ಪಗಳ ನೆಲೆಯಲ್ಲಿ ತಾಯಿ–ಮಗುವಿನ ಶಿಲ್ಪಗಳು ಹೇರಳವಾಗಿ ಕಂಡುಬರುತ್ತದೆ. ಗಂಗರನಾಡು, ತಲಕಾಡು, ತೊರೆಯ ನಾಡಿನಲ್ಲಿ ಮೈಸೂರು ಪ್ರಾಂತ್ಯದಲ್ಲಿ ಈ ಸಂಸ್ಕೃತಿಯು ಇನ್ನೂ ಉಳಿದುಕೊಂಡು ಬಂದಿದೆ.

ರಾವಳೇಶ್ವರ ನೆಲೆಯಲ್ಲಿ ಕಂಡುಬರುವ ಮುಡಿ ಕೊಂಡೇಶ್ವರ ಶಿಲ್ಪ, ರಾವಣೇಶ್ವರನ ಶಿಲ್ಪ, ಕಾಳರಾಯ, ಕಾಮರಾಯ, ಮುಂತಾದ ಹೆಸರಿನಲ್ಲಿ ಕರೆಯುತ್ತಾರಾದರೂ ಈ ಶಿಲ್ಪ ರಚನಾ ಕಾಲಕ್ಕೆ ಈ ಮೂರ್ತಿಗಳಿಗೆ ಬೇರೆ ಹೆಸರಿತ್ತು ಎಂಬುದು ಗಮನಾರ್ಹವಾಗಿದೆ. ಈ ಶಿಲ್ಪಗಳ ಸಂಕಲನದಲ್ಲಿ ಆ ಕಾಲದ ಇತಿಹಾಸ ಮತ್ತು ಕಾಲದ ಸಂಸ್ಕೃತಿಯನ್ನು ತಿಳಿಯಬಹುದು. ಶಿಲ್ಪಗಳ ಲಕ್ಷಣಗಳನ್ನು ಗಮನಿಸಿದಾಗ ಗಂಗರ ಮತ್ತು ಚೋಳರ ಕಾಲದಲ್ಲಿ ಈ ಶಿಲ್ಪ ಸಂಸ್ಕೃತಿಯು ಕೆತ್ತಲ್ಪಟ್ಟಿರುವುದು ಸಹಜವಾಗಿ ತಿಳಿದುಬರುತ್ತದೆ.

ಹೊಯ್ಸಳರ ಕಾಲದಲ್ಲಿ ಶಿಲ್ಪಕಲೆಯು, ಕಲಾಶೈಲಿಯು ಮತ್ತು ಪುರಾಣ ಸಂಸ್ಕೃತಿಯು ಅತ್ಯುನ್ನತ ಮಟ್ಟದಲ್ಲಿ ಪ್ರಕಾಶಿಸಲ್ಪಟ್ಟವು. ಆದರೆ ರಾವಳೇಶ್ವರ ಶಿಲ್ಪಶೈಲಿಯು, ಸ್ವರೂಪವುಳ್ಳ ಯಾವ ಶಿಲ್ಪಗಳೂ ಹಳೇಬೀಡು, ಸೋಮನಾಥ ಪುರ, ಬೇಲೂರಿನಲ್ಲಿ ಕಂಡುಬರುವುದಿಲ್ಲ ಮತ್ತು ಯಾವುದೇ ಐತಿಹಾಸಿಕ ಸ್ಥಳಗಳಲ್ಲಿ ಈ ಶಿಲ್ಪಗಳ ಲಕ್ಷಣ ಕಂಡುಬಂದಿಲ್ಲ ದಿರುವುದು ಮತ್ತು ೩೦೦ ವಿವಿಧ ಗ್ರಾಮಗಳಲ್ಲಿ ರಾವಳೇಶ್ವರನ ಶಿಲ್ಪ ಸಂಸ್ಕೃತಿಯು ಬೆಳೆದು ಸುಂದರ ಶೈಲಿಯಲ್ಲಿ ಕೆತ್ತಲ್ಪಟ್ಟವೆ. ಹೀಗಾಗಿ ಈ ರಾವಳೇಶ್ವರ ಶಿಲ್ಪ ಸಂಸ್ಕೃತಿಯು ಕಾಲಘಟ್ಟದ ಸೀಮಿತ ಸಂಸ್ಕೃತಿಯಾಗಿದೆ.

ತಾಯಿ – ಮಗುವಿನ ಶಿಲ್ಪ ಲಕ್ಷಣಗಳು ರಾವಳೇಶ್ವರನ ನೆಲೆಯಾದ ತಲಕಾಡಿನ ವಡಿಯಾಂಡಹಳ್ಳಿ ಗ್ರಾಮ, ವೈದ್ಯನಾಥೇಶ್ವರ ದೇವಾಲಯ ಮತ್ತು ಹಳೆಯ ಬೀದಿಯ ಗಣಪತಿ ದೇವಸ್ಥಾನ ಹಾಗೂ ರಾವಳೇಶ್ವರನ ತಿಟ್ಟು ಎಂಬ ಸ್ಥಳಗಳಲ್ಲಿ ತಾಯಿ ಮಗುವಿನ ವೀರಗಲ್ಲುಗಳು ಮೂರ್ತಿ ಶಿಲ್ಪಗಳು ವಿಗ್ರಹಗಳು ಕಂಡುಬರುತ್ತದೆ.

ತಮಿಳನಾಡಿನ ಮಧುರೈ ಜಿಲ್ಲೆ ಕರುಮಾವುತ್ತೂರಿನ ಗ್ರಾಮದಲ್ಲಿ ಮತ್ತು ತಂಜಾವೂರಿನ ಬೃಹದೇಶ್ವರ ದೇವಾಲಯದ ೩ನೇ ಕೋಟೆಯ ಮುಂಭಾಗದಲ್ಲಿ ಕಥಾಸಂದರ್ಭದ ಉಬ್ಬುಶಿಲ್ಪಗಳಲ್ಲಿ ತಾಯಿ ಮಗುವನ್ನು ಕಂಕುಳಲ್ಲಿ ಇತ್ತುಕೊಂಡಿರುವಂತೆ ಶಿಲ್ಪವನ್ನೇ ಕೆತ್ತಿರುವುದು ಕಂಡುಬರುತ್ತದೆ. ತಾಯಿ ಮಗುವಿನ ಶಿಲ್ಪಕ್ಕೆ ಸಂಪ್ರದಾಯದಂತೆ ಪೂಜಿಸಿಕೊಂಡು ಬರುತ್ತಿದ್ದಾರೆ.

ಕರ್ನಾಟಕದ ಐತಿಹಾಸಿಕ ಸ್ಥಳ ಹಳೇಬೀಡಿನಲ್ಲಿ ಹೊಯ್ಸಳ ಶಿಲ್ಪ ಶೈಲಿಯಲ್ಲಿ ತಾಯಿಮಗುವಿನ ಶಿಲ್ಪ ಬಹಳ ಸುಂದರವಾಗಿ ಮೂಡಿಬಂದಿದೆ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಲ್ಲಿರುವ ಹುಂಬುಜ ಜೈನ ಕ್ಷೇತ್ರದಲ್ಲಿ ಕೂಷ್ಮಾಂಡಿನಿ ಯಕ್ಷಿ (ದೇವಿ)ಯ ಶಿಲ್ಪ ಹಾಗೂ ತಾಯಿ ಮಗುವಿನ ಶಿಲ್ಪಗಳು ಮತ್ತು ಟಿ. ನರಸೀಪುರ ತಾಲ್ಲೂಕು (ಮೈಸೂರು ಜಿಲ್ಲೆ) ಸೋಮನಾಥಪುರದಲ್ಲೂ ಕೂಡ ತಾಯಿ ಮಗುವಿನ ಶಿಲ್ಪ ಸುಂದರವಾಗಿ ಕೆತ್ತಲ್ಪಟ್ಟಿರುವುದು ಹೊರಗಡೆ ಕಂಡುಬರುತ್ತದೆ.

ಗ್ರಾಮಗಳಲ್ಲಿ ತಾಯಿ ಮಗುವಿನ ಶಿಲ್ಪವನ್ನು ಟಿ. ನರಸೀಪುರ ತಾಲ್ಲೂಕು ಮೂಗುರು ಗ್ರಾಮದಲ್ಲಿ ರಾಕಾಸಮ್ಮನೆಂದು ಮತ್ತು ನಂಜನಗೂಡು ತಾಲ್ಲೂಕ ಎಡತಲೆ ಗ್ರಾಮದಲ್ಲಿ ಬಾಣಂತಿ ಮಾರಮ್ಮನೆಂದು ಕೊಳ್ಳೇಗಾಲ ತಾಲ್ಲೂಕು ಮಧುವನಹಳ್ಳಿಯಲ್ಲಿ ಗ್ರಾಮದೇವತೆಯಾಗಿ ಲಿಂಗಾಯಿತ ರಾಕಾಸಮ್ಮನೆಂದು, ದೇವಸ್ಥಾನದಲ್ಲಿ ಪೂಜೆಗೊಳ್ಳುತ್ತಿದೆ. ಬೇರೆ ಬೇರೆ ಗ್ರಾಮಗಳಲ್ಲಿ ಕತ್ತಿರಾಕಾಸಮ್ಮ, ವಳಕಲ್ಲು ರಾಕಾಸಮ್ಮ, ತೊಣ್ಣೂರ ರಾಕಾಸಮ್ಮ, ಎಣ್ಣೆ ರಾಕಾಸಮ್ಮ, ಎಲೆ ರಾಕಾಸಮ್ಮ, ಓಂಟಿ ರಾಕಾಸಮ್ಮ, ಕುಕ್ಕ ರಾಕಾಸಮ್ಮ, ಲಿಂಗವಂತ ರಾಕಾಸಮ್ಮ ಎಂದು ೭ ರಾಕಾಸಮ್ಮನೆಂದು ಕುಲಪದ್ಧತಿಯ ಸಂಪ್ರದಾಯ ವಿದೆ. ಕನಕಪುರ ಗ್ರಾಮದಲ್ಲಿ ಬೇರೆ ಬೇರೆ ಕಥೆಯಿರುವ ರಾಕಾಸಮ್ಮನ ದೇವಸ್ಥಾನವಿದೆ. ಬಾಣಂತಿ ಮಾರಮ್ಮನ ದೇವಾಲಯಗಳು ಕರ್ನಾಟಕ ತಮಿಳುನಾಡಿನಲ್ಲಿ ಕಂಡು ಬರುತ್ತವೆ. ಹೀಗಾಗಿ ಇದರ ಕಾಲಘಟ್ಟವನ್ನು ಊಹಿಸಬಹುದು.

ಕರ್ನಲ್ ಮೆಕೆಂಜಿಯವರು ತೊಣ್ಣೂರ ರಾಕ್ಷಶಿ (ತೊಂಡನೂರ ಸಾಕಸಮ್ಮ) ಎಂಬ ಇತಿಹಾಸವುಳ್ಳ ಕಥೆಯನ್ನು ಸಂಗ್ರಹಿಸಿದ್ದಾರೆ. ಎಂ.ಎಂ. ಕಲಬುರ್ಗಿಯವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಕಥೆ ಕರ್ನಾಟಕದ ಕೈಫಿಯತ್ತಿನಲ್ಲಿದೆ. ಈ ಕಥೆಯನ್ನು ಮೈಸೂರು, ಮಂಡ್ಯ, ಚಾಮರಾಜನಗರ, ಬೆಂಗಳೂರು, ಚಿತ್ರದುರ್ಗ (ಜಿಲ್ಲೆಗಳಲ್ಲಿ) ಪ್ರಾಂತ್ಯಗಳಲ್ಲಿ ತೊಣ್ಣೂರ ರಾಕ್ಷಶಿ ಅಥವಾ ಕರಿಭಂಟನ ಕಾಳಗ ಎಂಬ ಯಕ್ಷಗಾನ ನಾಟಕವನ್ನು ಅಭಿನಯಿಸಿರುವುದು ತಿಳಿದುಬರುತ್ತದೆ.

ಕಥೆಯಲ್ಲಿ ಬರುವ ಮುಖ್ಯಪಾತ್ರ ತೊಣ್ಣೂರ ರಾಕ್ಷಶಿ ಮತ್ತು ಕರಿಭಂಟ ರಾಜನದು, ರಾಕ್ಷಶಿಯು ವೈಯಕ್ತಿಕ ಉದ್ದೇಶದಿಂದ ಕರಿಭಂಟನನ್ನು ಕೊಲ್ಲಲು ಹೋಗುವ ಸಂದರ್ಭದಲ್ಲಿ, ಕತ್ತಿಯನ್ನು ಮಗು ಮಾಡಿಕೊಂಡು ತನ್ನ ಸ್ವರೂಪವನ್ನು ಬಾಣಂತಿಯಾಗಿ ಮಾಡಿಕೊಂಡು ಮಗುವನ್ನು ಕಂಕುಳಲ್ಲಿ ಇಟ್ಟುಕೊಂಡು, ಊರ ಗೌಡ ಯಜಮಾನರಲ್ಲಿ ತನ್ನ ಸುಳ್ಳು ಕಥೆಯನ್ನು ಹೇಳುತ್ತಾಳೆ. ಈತ ನನ್ನ ಪತಿ, ಈತನದೆ ಈ ಮಗು ಈತನು ಬಾಣಂತಿಯಾದ ನನ್ನನ್ನು ಬಿಟ್ಟು ದೇಶ ಸಂಚಾರಕ್ಕೆ ಹೊರಟಿದ್ದಾನೆ. ಆದ್ದರಿಂದ ಮುಂದೆ ನನ್ನ ಗತಿಯೇನು, ನೀವು ನನಗೆ ನ್ಯಾಯ ಮಾಡಿಕೊಡಿ ಎಂದು ಕೋರಿಕೊಳ್ಳುತ್ತಾಳೆ. ಆಗ ಕರಿಭಂಟನು ಇವಳು ರಾಕ್ಷಶಿ, ಮಾಯಾವಿ, ಇವಳ ಮಗಳನ್ನು ನಾನು ಪ್ರೀತಿಸಿದ್ದೇನೆ ಇವಳು ನನ್ನನ್ನು ಕೊಲ್ಲಲು ಬಂದಿರುವಳು. ಆದ್ದರಿಂದ ನನ್ನನ್ನು ಬಿಟ್ಟುಬಿಡಿ, ನಾನು ಬೇರೆ ಎಲ್ಲಿಯಾದರು ಹೋಗಿ ಬದುಕಿಕೊಳ್ಳುತ್ತೇನೆ ಎಂದು ಹೇಳುತ್ತಾನೆ. ಈ ಹೊತ್ತು ಮುಳುಗುವ ಸಮಯದಲ್ಲಿ ನ್ಯಾಯ ಮಾಡಲಾಗುವುದಿಲ್ಲ ನಾಳೆ ಬೆಳಿಗ್ಗೆ ನ್ಯಾಯ ಇಟ್ಟುಕೊಳ್ಳೋಣ ಎಂದು ಗೌಡ ಯಜಮಾನರು ತಿಳಿಸುತ್ತಾರೆ. ಆಗ ಕರಿಭಂಟನು, ಇವಳಿಂದ ನನ್ನ ಪ್ರಾಣ ಹೋಗುತ್ತದೆ ನನ್ನ ಸಾವಿಗೆ ನೀವೇ ಕಾರಣರಾಗುತ್ತೀರಿ ಎಂದು ಹೇಳುತ್ತಾನೆ. ಆಗ ೭ ಜನ ಊರ ಗೌಡಯಜಮಾನರು, ನಾವು ನಮ್ಮ ಪ್ರಾಣ ಕೊಟ್ಟು ನಿನ್ನನ್ನು ರಕ್ಷಿಸುತ್ತೇವೆ ಎಂದು ಹೇಳಿ ಈ ರಾತ್ರಿ ರಾಮಲಿಂಗೇಶ್ವರ ದೇವಸ್ಥಾನದಲ್ಲಿರು ಎಂದು ಕೂಡಿ ಹಾಕುತ್ತಾರೆ. ಮಧ್ಯರಾತ್ರಿ ರಾಕ್ಷಶಿಯು ತನ್ನ ನಿಜಸ್ವರೂಪವನ್ನು ತಾಳಿ ಕರಿಭಂಟನನ್ನು ಕೊಂದು ೭ ಮಾಂಸದ ಗುಡೆಯನ್ನಿಟ್ಟು, ಮಗುವನ್ನು ಕತ್ತಿ ಮಾಡಿಕೊಂಡು ಬೆಳಗಿನ ಜಾವ ಹೊರಟು ಹೋಗುತ್ತಾಳೆ. ಈ ಸಂದರ್ಭದಲ್ಲಿ ಗೌಡರ ಮಗಳು ಮನೆ ಮುಂದೆ ನೀರು ಹಾಕುತ್ತಿರುವಾಗ ರಾಕ್ಷಶಿಯು ಉಗ್ರಸ್ವರೂಪದಲ್ಲಿ ಬರುವುದನ್ನು ನೋಡಿ ಹೆದರುತ್ತಾಳೆ ತನ್ನ ತಂದೆಗೆ ಈ ವಿಷಯವನ್ನು ಹೇಳುತ್ತಾಳೆ ಕಂಕುಳಲ್ಲಿ ನೆನ್ನೆ ಇದ್ದ ಮಗು ಈಗ ಇಲ್ಲ ಬಾಣಂತಿಯಂತೆ ಇದ್ದವಳು ರಾಕ್ಷಶಿಯಾಗಿ ಕಾಣುತ್ತಿದ್ದಾಳೆ ಎಂದು ಸ್ವರೂಪವನ್ನು ತಿಳಿಸುತ್ತಾಳೆ ೭ ಜನ ಗೌಡ ಯಜಮಾನರು ರಾಮಲಿಂಗೇಶ್ವರ ದೇವಸ್ಥಾನಕ್ಕೆ ಬಂದು ನೋಡುತ್ತಾರೆ. ಕರಿಭಂಟನು ಸತ್ತು ಹೋಗಿದ್ದಾನೆ. ಅವನ ದೇಹವು ೭ ಮಾಂಸದ ಗುಡ್ಡೆಯಾಗಿರುವುದನ್ನು ನೋಡಿ ದುಃಖಿತಪ್ತರಾಗುತ್ತಾರೆ. ಕರಿಭಂಟನ ಸಾವಿಗೆ ನಾವೇ ಕಾರಣ ಇದು ನಮ್ಮಿಂದ ಆದ ಅನ್ಯಾಯ ಆದ್ದರಿಂದ ನಾವು ಅವನ ಪ್ರಾಣವನ್ನು ರಕ್ಷಿಸಲು ಆಗಲಿಲ್ಲ. ಆದ್ದರಿಂದ ನಾವು ಜೀವಂತ ಇರಕೂಡದೆಂದು ಜೋಳದ ಕಡ್ಡಿ ಮೆದೆಗೆ ಬೆಂಕಿ ಹಾಕಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಹೀಗೆ ಕಥೆಯು ಅಲ್ಲಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳಿಂದ ಕೂಡಿ ಮುಕ್ತಾಯವಾಗುತ್ತದೆ.

ಈ ಕಥೆಯ ಸಾರಾಂಶವನ್ನು ಗಮನಿಸಿದಾಗ, ರಾಕ್ಷಶಿಯ ಮಗು ಬಾಣಂತಿ ಸ್ವರೂಪ ಸುಳ್ಳು ಎಂದು ಖಚಿತವಾಗಿ ತೀರ್ಮಾನಿಸಬಹುದು. ಸಾಮಾಜಿಕವಾಗಿ ೭ ಜನ ಗೌಡ ಯಜಮಾನರು ಆತ್ಮಹತ್ಯೆ ಮಾಡಿಕೊಳ್ಳುವ ಪ್ರಸಂಗಕ್ಕೀಡಾಲು. ರಾಕ್ಷಶಿ, ಮಗು ಬಾಣಂತಿಯ ಸುಳ್ಳು ಸ್ವರೂಪಗಳೇ

ಕಾರಣವಾಗಿದೆ. ಆದ್ದರಿಂದ ಸುಳ್ಳು ಕಥೆಯ ಆಧಾರದ ಮೇಲೆ ಸಾಕಷ್ಟು ದೇವಸ್ಥಾನಗಳು ಮತ್ತು ರಾಕಾಸಮ್ಮನ ಕುಲ ಪದ್ಧತಿಗಳು ಬೆಳೆದು ಬಂದಿದೆ. ಈ ವಿಷಯ ಕಥಾ ಸಂದರ್ಭ, ಸಾಮಾಜಿಕವಾಗಿ, ಸತ್ಯವಾಗಿ ಬೆಳೆದು ಬಂದಿರುವುದು ಕಣ್ಣಿಗೆ ಕಾಣುತ್ತದೆ. ರಾಮಾಯಣದಲ್ಲಿ ದೇವತೆಗಳ ಮಕ್ಕಳೆ ವರ, ಮಹಾಭಾರತದಲ್ಲಿನ ಮುನೀಶ್ವರ ಮತ್ತು ರಾಜ್ಯದ ವಾರಸುದಾರರ ಹಾಗೂ ತಾಯಿ ಮಗುವಿನ ಪುತ್ರವಾತ್ಸಲ್ಯ ಸಂಬಂಧಕ್ಕೆ ಹಲವಾರು ರೀತಿಯ ಕಥೆಗಳು, ಪುರಾಣಗಳು ಬೆಳೆದು ಬಂದಿರುವುದು ಮತ್ತು ಉಪನಿಷತ್ ಕಥೆಯಲ್ಲಿ ಹಲವು ಕಥೆಗಳು ಬಂದಿರುವುದು ಧಾರ್ಮಿಕವಾಗಿ, ಸಾಮಾಜಿಕವಾಗಿ ಸಮಾಜದಲ್ಲಿ ತಾಯ್ತನಕ್ಕೆ ಮಾನ್ಯತೆ ಪಡೆದು ಕೊಂಡಿದೆ. ಆದರೆ ಈಗಲೂ ಹೆಣ್ಣು ಸೃಷ್ಟಿ ನಿಯಮದಲ್ಲಿ ತಾಯಿತನ ಕಾಪಾಡಿಕೊಳ್ಳಲು ಸರ್ವ ಸ್ವತಂತ್ರಳು, ಅವಳನ್ನು ಪ್ರಶ್ನಿಸುವ ಹಕ್ಕು ಮಾನವನಿಗೆ ಇಲ್ಲವೆಂದು ಉಪನಿಷತ್ತು ಕಥೆಗಳಲ್ಲಿ ತಿಳಿದುಬರುತ್ತದೆ. ಗಂಡನಾದವನು ತನ್ನ ಹೆಂಡತಿಯ ತಾಯಿತನವನ್ನು ಪ್ರಶ್ನಿಸುವ ಹಕ್ಕು ಇದೆ. ಆದರೆ ಹೆಣ್ಣು ತಾಯಿತನವನ್ನು ಉಳಿಸಿಕೊಳ್ಳಲು ಸರ್ವಸ್ವತಂತ್ರಳು ಎಂಬುದು ಸಾಮಾಜಿಕ ಸತ್ಯವಾಗಿದೆ. ಇದು ದೇವರು ಕೊಟ್ಟ ವರವಾಗಿದೆ.

ಹಳೇ ಮೈಸೂರು ಪ್ರಾಂತ್ಯದಲ್ಲಿ ಗಂಗರನಾಡು ಮತ್ತು ಚೋಳರ ನಾಡಿನ ಶಿಲ್ಪಕಲಾ ಸಂಸ್ಕೃತಿಯಲ್ಲಿ ಅಂದರೆ ೧೦೦೪ ರಿಂದ ೧೧೧೬ರವರೆಗೆ ಚೋಳರ ಆಳ್ವಿಕೆಯ ಕಾಲದಲ್ಲಿ ೨೦೦ ತೊರೆಯ ನಾಡಿನಲ್ಲಿ ರಾವಳೇಶ್ವರನ ನೆಲೆಯಲ್ಲಿ ವಿಗ್ರಹಗಳು ಶಿಲ್ಪಗಳು ಕೆತ್ತಲ್ಪಟ್ಟಿದೆ. ತಾಯಿ ಮಗುವಿನ ಶಿಲ್ಪ ವೀರಗಲ್ಲು ಬಿಡಿ ಶಿಲ್ಪಗಳಲ್ಲಿ ರಾವಳೇಶ್ವರನನ್ನು ರಾಜಪ್ರತ್ಯಕ್ಷ ದೇವತಾಶಿಲ್ಪಗಳಲ್ಲಿ ತಾಯಿ ಮಗುವನ್ನು ಕಂಕುಳಲ್ಲಿ ತತ್ತುಕೊಂಡು ಬಲಗೈಯಲ್ಲಿ ಕತ್ತಿ ಹಿಡಿದುಕೊಂಡಂತೆ ಶಿಲ್ಪಗಳು ಕೆತ್ತಿರುವುದು ಕಂಡುಬರುತ್ತದೆ. ತಾಯಿ–ಮಗು ಮತ್ತು ಪತಿ (ಮುಡಿಕೊಂಡೇಶ್ವರ) ರಾವಳೇಶ್ವರ ರಾವಣೇಶ್ವರ, ಕದಗಾರಯ್ಯ, ವೈದ್ಯನಾಥೇಶ್ವರ, ಕಾಳರಾಯ, ಭೂತಕಾಳಯ್ಯ, ಹೊನ್ನಸಪ್ಪೇಶ್ವರ, ಕಾಳಭಂಟರಾಯ, ಬ್ರಹ್ಮೇಶ್ವರ, ಕಾಳಪ್ಪ, ಕ್ಯಾತೆದೇವರು, ಕಾಮರಾಯ ಮಲ್ಲಿಗೆ ಮಾದೇವಮ್ಮ ಹೀಗೆ ಹತ್ತಾರು ಹೆಸರಿನಲ್ಲಿ ಹತ್ತಾರು ಜಾತಿಯವರು ಪೂಜಿಸಿಕೊಂಡು ದೇವಸ್ಥಾನವನ್ನು ಕಟ್ಟಿಕೊಂಡಿದ್ದಾರೆ.

ಈ ಶಿಲ್ಪಗಳಲ್ಲಿ ತಾಯಿ – ಮಗುವಿನ ಚಿತ್ರಣವನ್ನು ಮಾಡಿರುವ ಹಿನ್ನಲೆಯಲ್ಲಿ, ಆ ಕಾಲಘಟ್ಟದ ಸಾಮಾಜಿಕ ಇತಿಹಾಸವನ್ನು ಕಲ್ಲಿನ ಮೂರ್ತಿಗಳನ್ನು ದೃಷ್ಟಿಕ ಶಾಸನವೆಂದು ಪರಿಗಣಿಸಿ ಇತಿಹಾಸವನ್ನು ಬರೆಯಬಹುದು, ತಾಯಿ ತನ್ನ ಗಂಡನ ಕಡೆಯಿಂದ ಬರಬೇಕಾದ ಹಕ್ಕಿಗಾಗಿ ಹೋರಾಟ ಮಾಡಿದ್ದಾಳೆ. ಮಗನ ಹಕ್ಕುಗಳನ್ನು ಪ್ರತಿಪಾದಿಸಿದ್ದಾಳೆ. ತನ್ನ ಪತಿಯ ಉದ್ದೇಶಕ್ಕೆ ಸಹಕಾರ ಕೊಟ್ಟು, ಹಿಂದೂ ಧರ್ಮಕ್ಕೆ ಪುನರುತ್ಥಾನ ಮಾತೆಯಾಗಿ, ತಾಯಿಯಾಗಿ ಸಹಕರಿಸಿದ್ದಾಳೆ ಆದ್ದರಿಂದ ಅವಳು ಚೋಳರ ಕಾಲಘಟ್ಟದಲ್ಲಿ ಈ ಶಿಲ್ಪಕಲೆಯು ಸಮಾಜವು ಮತ್ತು ಕಲೆಗಾರರು ಮತ್ತು ರಾಜನ ಪ್ರೋತ್ಸಾಹಗಳ ಸಹಕಾರದಿಂದ ಈ ತಾಯಿ ಮಗುವಿನ ಕಲ್ಲಿನ ಶಿಲ್ಪಗಳು, ವಿಗ್ರಹಗಳು ಕೆತ್ತಲ್ಪಟ್ಟಿದೆ. ಈ ಶಿಲ್ಪ ಲಕ್ಷಣಗಳನ್ನು ಕ್ರೋಢೀಕರಿಸಿದರೆ ಗತಕಾಲದ ಇತಿಹಾಸದ ಸತ್ಯ ಕಥೆಯುನ್ನು ಬರೆಯಬಹುದು ಎಂದು ಶಿಲ್ಪಗಳು ನಮಗೆ ತಿಳಿಸಿಕೊಡುತ್ತವೆ. ಹೀಗೆ ರಾಕ್ಷಶಿ ಬಾಣಂತಿ – ಮಗು ಈ ಶಿಲ್ಪಗಳಿಗೂ, ತಾಯಿ – ಮಗುವನ್ನು ಎತ್ತುಕೊಂಡಿರುವ ಶಿಲ್ಪಗಳಿಗೂ ಸಮ್ಮಂಧ ವಿಲ್ಲವೆಂದು ಎರಡು ಬೇರೆ ಬೇರೆ ಕಥೆಯಾಗಿರುವುದು ಎಂದು ತಿಳಿದು ಬರುತ್ತದೆ. ಒಟ್ಟಿನಲ್ಲಿ ಮೂರ್ತಿ ಶಿಲ್ಪಗಳ (ವಿಗ್ರಹಗಳು) ಸಂಶೋಧನೆಯಿಂದ ಕಥೆ ಮತ್ತು ಪುರಾಣ ಹೇಳಲು ಇತಿಹಾಸ ಬರೆಯಲು ಸಹಕಾರಿಯಾಗಿದೆ.

ಆಧಾರಸೂಚಿ

೧. **ಕರ್ನಾಟಕದ ಕೈಫಿಯತ್ತುಗಳು :** (ಸಂ). ಎಂ.ಎಂ. ಕಲಬುರ್ಗಿಯವರು. ಸಂಗ್ರಹ : ಕರ್ನಲ್ ಮೆಕೆಂಝಿ. ಸಂಪುಟ ಪ್ರ.ಕ.ವಿ. ಹಂಪಿ ೨೦. ತೊಣ್ಣೂರ ರಾಕ್ಷಶಿ.

೨. ಡಾ. ಎಸ್.ಡಿ. ಶೆಟ್ಟಿ, **ತುಳುನಾಡಿನ ಜೈನಧರ್ಮ,** ಉಡುಪಿ ಗೋವಿಂದಪೈ.

೩. **ಶ್ರೀ ಪಾರ್ಶ್ವ ಪದ್ಮಾವತಿ ಶಕ್ತಿಪೀಠ ತೀರ್ಥಧಾಮ,** ಕೃಷ್ಣಗಿರಿ, ತಮಿಳುನಾಡು.

೪. ತಮಿಳುನಾಡು, ಕರ್ನಾಟಕದ ಮೈಸೂರು ಮೈಸೂರು, ಮಂಡ್ಯ, ಚಾಮರಾಜನಗರ, ಶಿವಮೊಗ್ಗ, ಹಳೇಬೀಡು.

೫. ತಮಿಳುನಾಡು, ತಂಜಾವೂರು, ಮಧುರೆ, ಕರುಮಾವುತ್ತೂರು ಗ್ರಾಮ, ಕೃಷ್ಣಗಿರಿ, ಶಿರುಮುಗೈ, ತಾಳವಾಡಿ ಈ ಊರುಗಳಲ್ಲಿ ಸಂಗ್ರಹಿಸಿದ ಚಿತ್ರಗಳು.

ಪ್ರೊ. ಎಂ.ವಿ. ಕೃಷ್ಣಪ್ಪ*
ಫಾ॥ ಎಂ. ವಿನ್ಸೆಂಟ್**

ಚಾಮುಂಡಿ ಬೆಟ್ಟದ ಅಪರೂಪದ ಸಪ್ತಮಾತೃಕಾ ಶಿಲ್ಪಗಳು

ಪ್ರಾಚೀನ ಕಾಲದಿಂದಲೂ ಮೈಸೂರು ಪ್ರದೇಶ ಕಲಾ ಚಟುವಟಿಕೆಗಳಿಗೆ ಹೆಸರಾಗಿದೆ. ತಲಕಾಡಿನ ಗಂಗರಿಂದ ಹಿಡಿದು ಮೈಸೂರು ವಡೆಯರ ಕಾಲದವರೆಗೆ ನಿರಂತರವಾಗಿ ಧಾರ್ಮಿಕ ಸಂಬಂಧೀ ಕಲಾ ಚಟುವಟಿಕೆಗಳು ನಡೆದುಕೊಂಡು ಬಂದಿವೆ. ಮೈಸೂರಿಗೆ ಪೂರಕವಾದಂತೆ ವಾಸ್ತುಕಲಾ ಚಟುವಟಿಕೆಗಳು ಆ ಕಾಲದಲ್ಲಿಯೇ ಪ್ರಾರಂಭವಾದವು. ಮೈಸೂರಿಗೆ ಕೇಂದ್ರಬಿಂದುವಿನಂತಿರುವ ಚಾಮುಂಡಿಬೆಟ್ಟದಲ್ಲಿ ದೇವಾಲಯಗಳ ನಿರ್ಮಾಣ ಆಯಿತು.

ಚಾಮುಂಡಿಬೆಟ್ಟದ ಮೇಲಿನ ಚಾಮುಂಡೇಶ್ವರಿ ದೇವಾಲಯದ ಹತ್ತಿರ ಇರುವ ಮಹಾಬಲೇಶ್ವರ ದೇವಾಲಯ ಈ ಕ್ಷೇತ್ರದ ಅತ್ಯಂತ ಪ್ರಾಚೀನ ದೇವಾಲಯವಾಗಿದೆ. ಪ್ರಸ್ತುತ ಮಹಾಬಲೇಶ್ವರ ದೇವಾಲಯವು ಬಹುಶಃ ಗಂಗರ ಆಳ್ವಿಕೆಯ ಅಂತ್ಯಭಾಗದಲ್ಲಿ ನಿರ್ಮಾಣವಾಗಿರಬಹುದಾದ ಸಾಧ್ಯತೆ ಇದೆ. ನಿಖರವಾಗಿ ಇದೇ ವರ್ಷದಲ್ಲಿ ನಿರ್ಮಿಸಿದೆ ಎಂದು ಹೇಳಲು ಸಾಕ್ಷಾಧಾರಗಳು ಇಲ್ಲ. ಆದರೆ, ದೇವಾಲಯದ ವಾಸ್ತು ವಿನ್ಯಾಸವನ್ನು – ಕಂಬಗಳ ಹಾಗೂ ಅಲ್ಲಿರುವ ಶಿಲ್ಪಗಳ ದಾಖಲೆಯಿಂದ ಈ ದೇವಾಲಯವು ಸುಮಾರು ಕ್ರಿ.ಶ. ೧೦ನೇ ಅಥವಾ ಕ್ರಿ.ಶ. ೧೧ನೇ ಶತಮಾನಕ್ಕೆ ಸೇರಿರಬಹುದೆಂದು ತಿಳಿಯಬಹುದು.

ಮಹಾಬಲೇಶ್ವರ ದೇವಾಲಯಕ್ಕೆ ಹತ್ತಿರದ ಒಂದು ಶಾಸನ ಹೊಯ್ಸಳ ವಿಷ್ಣುವರ್ಧನನ ಕಾಲಕ್ಕೆ ಸೇರುತ್ತದೆ. ಕ್ರಿ.ಶ. ೧೧೨೮ರಲ್ಲಿ ಇಲ್ಲಿನ ಮರ್ಬ್ಬಳ ತೀರ್ಥಕ್ಕೆ ದಾನ ನೀಡಿದ ದಾಖಲೆಯನ್ನು ಈ ಶಾಸನ ನೀಡುತ್ತದೆ. ಇದಾದ ನಂತರ ನೇರವಾಗಿ ಮಹಾಬಲೇಶ್ವರ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಶಾಸನೋಕ್ತ ದಾಖಲೆಗಳು ದೊರೆಯುವುದು ವಿಜಯನಗರ ಹಾಗೂ ವಡೆಯರ ಕಾಲದಲ್ಲಿ.

ಪ್ರಸ್ತುತ ಚರ್ಚೆಯಲ್ಲಿರುವ ಸಪ್ತಮಾತೃಕಾ ಶಿಲ್ಪಗಳು ಮಹಾಬಲೇಶ್ವರ ದೇವಾಲಯದ ನವರಂಗದಲ್ಲಿವೆ. ಇವುಗಳನ್ನು ಸಾಲಾಗಿ ನವರಂಗದ ಪಶ್ಚಿಮ ಗೋಡೆಯ ಮುಂದೆ ವಿಶೇಷವಾಗಿ ನಿರ್ಮಿಸಿದ ಕಟ್ಟೆಯ ಮೇಲೆ ಇರಿಸಲಾಗಿದೆ. ಈ ಶಿಲ್ಪಗಳ ಜೊತೆಗೆ ನಟರಾಜನ ಶಿಲ್ಪವೂ ಇದೆ. ಇವುಗಳಲ್ಲದೇ, ವೀರಭದ್ರ ಹಾಗೂ ಗಣಪತಿಯ ಶಿಲ್ಪಗಳನ್ನು ಪ್ರತ್ಯೇಕವಾಗಿ ಕೆತ್ತಲಾಗಿದೆ. ಆದರೆ ಇವುಗಳ ಎತ್ತರ, ಶೈಲಿ, ಕೆತ್ತನಾ ವಿಧ ಬಹುತೇಕವಾಗಿ ಒಂದೇ ತೆರನಾಗಿದ್ದು ಪ್ರಾಯಶಃ ಒಬ್ಬನೇ ಶಿಲ್ಪಕಲಾವಿದ ಈ ಶಿಲ್ಪಗಳನ್ನು ಕೆತ್ತಿದಂತೆ ತೋರುತ್ತದೆ.

ಶಿಲ್ಪಗಳ ವಿವರ : ಸಪ್ತಮಾತೃಕಾ ಶಿಲ್ಪಗಳಲ್ಲಿರುವಂತೆ ಸಾಮಾನ್ಯ ಅನುಕ್ರಮಣಿಯಲ್ಲಿಯೇ ಶಿಲ್ಪಗಳನ್ನು ಇಲ್ಲಿ ಪ್ರತಿಷ್ಠಾಪಿಸಲಾಗಿದೆ. ಬ್ರಹ್ಮಾಣಿ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವರಾಹಿ, ಇಂದ್ರಾಣಿ ಹಾಗೂ ಚಾಮುಂಡಾ, ಅಲ್ಲದೇ ಇದೇ ಸಾಲಿನಲ್ಲಿಯೇ ನಟರಾಜನ ಶಿಲ್ಪವೂ ಇದೆ. ಈ ಶಿಲ್ಪಗಳನ್ನು ಪ್ರತ್ಯೇಕವಾಗಿ ಕೆತ್ತಲಾಗಿದೆ ಎಂದು ಮೇಲೆ ಹೇಳಿದಂತೆ, ಪ್ರತಿಯೊಂದು ಶಿಲ್ಪವನ್ನು ಪ್ರತ್ಯೇಕವಾದ ಪೀಠದ ಮೇಲೆ ಆಸನಭಂಗಿಯಲ್ಲಿರುವಂತೆ ಕೆತ್ತಲಾಗಿದೆ. ಪ್ರತಿಯೊಂದು ಮಾತೃಕೆಯರ ವಾಹನಗಳನ್ನು ಪೀಠದ ಮುಂಭಾಗದಲ್ಲಿ ಕೆತ್ತಲಾಗಿದೆ. ಹೀಗಾಗಿ, ಮಾತೃಕೆಯರನ್ನು ಗುರುತಿಸುವುದು ಸುಲಭವಾಗುತ್ತದೆ. ಎಲ್ಲ ಮಾತೃಕೆಯರನ್ನು ಸರಳವಾದ ಹೆಚ್ಚು ಅಲಂಕಾರವಿಲ್ಲದಂತೆ, ಕೆಲವೇ ಆಭರಣಗಳನ್ನು ಧರಿಸಿದಂತೆ ತೋರಿಸಲಾಗಿದೆ. ಚತುರ್ಭುಜರಾದ ಈ ದೇವಿಯರು ತಮ್ಮ ತಮ್ಮ ಆಯುಧಗಳೊಂದಿಗೆ ವಿರಾಜಮಾನರಾಗಿದ್ದಾರೆ. ಎಲ್ಲ ಆಕೃತಿಗಳಲ್ಲಿಯೂ ಬಲಗೈ ಅಭಯಹಸ್ತ–ಎಡಗೈಯಲ್ಲಿ ಪುಷ್ಪದ ಕೆತ್ತನೆ ಇದೆ. ಇದು ಸಾಮಾನ್ಯವಾಗಿ ಒಂದೇ ತೆರನಾದ ರಚನೆ ಆಗಿದೆ.

ಬ್ರಹ್ಮಾಣಿ : ಈ ಶಿಲ್ಪದಲ್ಲಿ ಬ್ರಹ್ಮಾಣಿಯು ಪೀಠದ ಮೇಲೆ ಕುಳಿತಿದ್ದು, ಚತುರ್ಭುಜಗಳನ್ನು ಹೊಂದಿದ್ದಾಳೆ. ಚತುರ್ಮುಖ ಬ್ರಹ್ಮನ ಶಕ್ತಿ ರೂಪವಾದ ಬ್ರಹ್ಮಾಣಿಯು ಇಲ್ಲಿ ಮೂರು ಮುಖಗಳನ್ನು ಮುಂದೆ ಕಾಣುವಂತೆ ಹೊಂದಿದ್ದಾಳೆ. ಈ ಶಿಲ್ಪವು ಉಬ್ಬು ಶಿಲ್ಪವಾಗಿರುವುದರಿಂದ, ಇನ್ನೊಂದು ಮುಖದ ಚಿತ್ರಣ ಸಾಧ್ಯವಿಲ್ಲ. ಕೈಗಳಲ್ಲಿ ಕಮಂಡಲ, ಪುಸ್ತಕ, ಅಭಯಹಸ್ತ ಹಾಗೂ ಪುಷ್ಪಗಳನ್ನು ಹೊಂದಿದ್ದಾಳೆ. ಪೀಠದ ಮೇಲೆ ಹಂಸದ

* ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
** ಸಂಶೋಧನಾ ವಿದ್ಯಾರ್ಥಿ.





















ಕೆತ್ತನೆ ಇದೆ. ದೇವಿಯ ಕಿರೀಟ, ಕಂಠಹಾರ, ತೋಳ್ಬಂಧಗಳು, ಪಟ್ಟಿಕೆಯಂತೆ ಕಾಣುವ ಕುಚಬಂಧವು ದೇವಿಯಲ್ಲಿ ಕಾಣುತ್ತದೆ. ದೇವಿಯ ಶಿರಶ್ಚಕ್ರ ಪ್ರಭಾವಳಿಯನ್ನು ಹೊಂದಿದೆ. ಪ್ರತಿಮಾ ಲಕ್ಷಣಗಳಿಗೆ ಅನುಸಾರವಾಗಿ ದೇವಿಯು ಕಮಂಡಲವನ್ನು ಹಿಡಿದಿದ್ದಾಳೆ.

ಮಹೇಶ್ವರಿ : ಶಿವನ ಶಕ್ತಿಯಾಗಿರುವಂತಹ ಮಹೇಶ್ವರಿಯೂ ಪೀಠದ ಮೇಲೆ ಕುಳಿತಿದ್ದು, ನಂದಿವಾಹನ ವನ್ನು ಹೊಂದಿದ್ದಾಳೆ. ದೇವಿಯ ಹಿಂದಿನ ಕೈಗಳಲ್ಲಿ ಪಾಶ ಹಾಗೂ ಜಿಂಕೆಯನ್ನು ಹಿಡಿದಿದ್ದಾಳೆ. ಮುಂದಿನ ಕೈಗಳು ಅಭಯ ಹಾಗೂ ಪುಷ್ಪವನ್ನು ಹಿಡಿದ ಮುದ್ರೆಯಲ್ಲಿದೆ. ದೇವಿಯ ಕಿರೀಟ ಮಕುಟದಲ್ಲಿ ಶಿವನ ಜಡೆಯಲ್ಲಿರುವಂತಹ ಚಂದ್ರನ ರಚನೆ ಕಂಡುಬರುತ್ತದೆ. ದೇವಿಯ ಅಂಗಸೌಷ್ಠವ, ಆಭರಣ ಹಾಗೂ ಕೆತ್ತನಾರೀತಿಯು ಈ ಹಿಂದಿನ ಶಿಲ್ಪದಂತೆಯೇ ಇದೆ. ಶಿವನ ಆಯುಧ ರೀತಿಯೇ ಇಲ್ಲಿ ಕಂಡುಬರುವುದರಿಂದ ಮಹೇಶ್ವರಿಯು ಹೆಸರಿಗೆ ತಕ್ಕಂತೆಯೇ ಶಿವನ ಶಕ್ತಿಯೇ ಆಗಿದ್ದಾಳೆ.

ಕೌಮಾರಿ : ಕೌಮಾರಿಯು ಸಪ್ತಮಾತೃಕೆಯರಲ್ಲಿ ಅತೀ ಸುಂದರಳೂ ಹಾಗೂ ಯುವಪ್ರಾಯದವಳೆಂದು

ತಿಳಿದುಬರುತ್ತದೆ. ಈ ಶಿಲ್ಪದಲ್ಲಿ ಇವಳೂ ಕೂಡ ಈ ಹಿಂದಿನ ಶಿಲ್ಪದಂತೆಯೇ ಕುಳಿತಿದ್ದಾಳೆ. ಕೌಮಾರಿಯ ವಾಹನವಾದ ನವಿಲನ್ನು ಪೀಠದ ಮೇಲೆ ಬಿಂಬಿಸಲಾಗಿದೆ.

ವೈಷ್ಣವಿ : ವೈಷ್ಣವಿಯ ಶಿಲ್ಪ ಈ ಶಿಲ್ಪ ಸಮೂಹಗಳಲ್ಲಿಯೇ ದೊಡ್ಡದು. ವೈಷ್ಣವಿ ವಿಷ್ಣುವಿನ ಶಕ್ತಿಯಾಗಿರುವುದರಿಂದ ವಿಷ್ಣುವಿನ ಆಯುಧಗಳಾದ ಶಂಖ ಮತ್ತು ಚಕ್ರಗಳನ್ನು ಹಿಡಿದಿದ್ದಾಳೆ ಹಾಗೂ ಮುಂದಿನ ಕೈಗಳು ಅಭಯಹಸ್ತ ಹಾಗೂ ಪುಷ್ಪವನ್ನು ಹೊಂದಿವೆ. ಪೀಠದ ಮುಂಭಾಗದಲ್ಲಿ ಗರುಡನ ಶಿಲ್ಪವು ಕೆತ್ತಲ್ಪಟ್ಟಿದೆ. ಉದ್ದನೆಯ ಕಿರೀಟ, ಮಕರ ಕುಂಡಲಗಳು, ಕಂಠಹಾರ, ತೋಳಿನ ಬಂಧಗಳು, ಪಟ್ಟಿಕೆಯ ರೀತಿಯ ಕುಚಬಂಧಗಳು ದೇವಿಯಲ್ಲಿ ಕಂಡುಬರುತ್ತವೆ.

ವರಾಹಿ : ವರಾಹಿಯು ವಿಷ್ಣುವಿನ ಅವತಾರ. ವರಾಹಿ ದೈವ ಶ್ತಕಿಯ ಅಂಶವಾಗಿದ್ದಾಳೆ. ಪ್ರಾಣಿಯ ಬಲವನ್ನು ಹೊಂದಿರುವ ದೇವಿ ಕೈಯಲ್ಲಿ ಖಡ್ಗ ಹಾಗೂ ಗುರಾಣಿಯನ್ನು ಹಿಡಿದಿದ್ದಾಳೆ. ಪ್ರಾಣಿಯ ಬಲವನ್ನು ಹೊಂದಿರುವ ದೇವಿ ಕೈಯಲ್ಲಿ ಖಡ್ಗ ಹಾಗೂ ಗುರಾಣಿಯನ್ನು ಹಿಡಿದಿದ್ದಾಳೆ. ದೇವಿಯ ಪೀಠದ ಮೇಲೆ ಅವಳ ವಾಹನವಾದ ಸಿಂಹವನ್ನು ಅತ್ಯಂತ ನೈಜವಾಗಿ ಬಿಂಬಿಸಲಾಗಿದೆ.

ಇಂದ್ರಾಣಿ : ಇಂದ್ರಾಣಿ ಇಂದ್ರನ ಶಕ್ತಿಯ ರೂಪ. ಇಂದ್ರನ ಆಯುಧಗಳಾದಂತಹ ಅಂಕುಶ ಹಾಗೂ ವಜ್ರವನ್ನು ದೇವಿಯು ಹಿಡಿದಿದ್ದಾಳೆ. ಇಂದ್ರನ ವಾಹನವಾದ ಐರಾವತ (ಆನೆ) ದೇವಿಯ ವಾಹನವಾಗಿ ಪೀಠದ ಮೇಲೆ ರಚನೆಗೊಂಡಿದೆ.

ಚಾಮುಂಡ : ಸಪ್ತ ಮಾತೃಕೆಯರಲ್ಲಿ ಏಳನೇಯವಳಾದ ಚಾಮುಂಡ ಎಂಬ ರಾಕ್ಷಸನನ್ನು ಸಂಹರಿಸಿದ್ದಕ್ಕೆ ಪ್ರತೀಕವಾಗಿ ದೇವಿಯು ಈ ಹೆಸರನ್ನು ಹೊಂದಿದಳೆಂದು ದೇವಿ ಪುರಾಣ ತಿಳಿಸುತ್ತದೆ. ಚಾಮುಂಡಿಯು ರುಂಡಮಾಲೆ ಧರಿಸಿ ಚತುರ್ಬಾಹು ಹಸ್ತಗಳಾಗಿ ಆಸನದ ಮೇಲೆ ಕುಳಿತಿದ್ದಾಳೆ. ಇವಳು ಖಡ್ಗ ಹಾಗೂ ಗುರಾಣಿಯನ್ನು ಹಿಂದಿನ ಕೈಗಳಲ್ಲಿ ಹೊಂದಿದ್ದಾಳೆ. ಮುಂದಿನ ಕೈಗಳು ಅಭಯ ಹಾಗೂ ಪಾನ ಬಟ್ಟಲನ್ನು ಹಿಡಿದಿವೆ. ದೇವಿಯು ವಿಶಿಷ್ಟವಾದ ಜಟಾಕೇಶ ವಿನ್ಯಾಸವನ್ನು ಹೊಂದಿದ್ದಾಳೆ. ಕೋರೆಹಲ್ಲುಗಳು, ಸರ್ಪ ಕುಚಬಂಧ, ಸರ್ಪಾಭರಣಗಳು ದೇವಿಯನ್ನು ಅಲಂಕರಿಸಿವೆ.

ಸಪ್ತಮಾತೃಕೆಯರ ಜೊತೆಯಲ್ಲಿ ಸಾಮಾನ್ಯವಾಗಿ ನಟರಾಜ ಹಾಗೂ ಗಣೇಶನ ಶಿಲ್ಪಗಳನ್ನು ಬಿಂಬಿಸಲಾಗಿದೆ. ಕೆಲವೊಮ್ಮೆ ವೀಣಾಧಾರಿ ವೀರಭದ್ರ ಮೂರ್ತಿಗಳು ಇರುವಂತಹ ದಾಖಲೆಗಳಿವೆ. ಪ್ರಸ್ತುತ ಇಲ್ಲಿರುವ ನಟರಾಜ ಉಬ್ಬು ಶಿಲ್ಪವಾಗಿದ್ದು ಚತುರ್ಬಾಹುಗಳನ್ನು ಹೊಂದಿದ್ದಾನೆ. ನರ್ತನ ಭಂಗಿಯಲ್ಲಿರುವ ಶಿವನು ಆಕರ್ಷಕವಾದ ಜಟಾ ಮುಕುಟವನ್ನು, ಸರ್ಪಾಭರಣಗಳನ್ನು ಹೊಂದಿದ್ದಾನೆ. ಶಿವನ ಮುಂಬದಿಯಲ್ಲಿ ಆಕರ್ಷಕವಾಗಿ ಶಿವನ ನರ್ತನ ಲಯಕ್ಕೆ ತಕ್ಕಂತೆ ಹರಡುತ್ತಿರುವ ವಸ್ತ್ರಗಳು, ಆಕರ್ಷಕವಾಗಿ ಮಲಗಿರುವ ನಂದಿ ಹಾಗೂ ಶಿವನ ನರ್ತನದ ಜೊತೆಗೆ ನರ್ತಿಸುತ್ತಿರುವ ತ್ರಿಪಾದ ಭೃಂಗಿ ಆಕೃತಿಗಳು ಇಲ್ಲಿ ರಚನೆಯಾಗಿವೆ. ಶಿವನು ಅಪಸ್ಮಾರ ಪುರುಷನ ಮೇಲೆ ನರ್ತಿಸುತ್ತಿದ್ದಾನೆ.

ಈ ಮೇಲಿನ ಶಿಲ್ಪಗಳು ಬಿಡಿ ಬಿಡಿಯಾಗಿ ರಚನೆಯಾಗಿವೆ. ಸಾಮಾನ್ಯವಾಗಿ ಗಂಗ ಮತ್ತು ಚೋಳರ ಕಾಲದಲ್ಲಿನ ಸಪ್ತಮಾತೃಕಾ ಶಿಲ್ಪಗಳು ಪ್ರತ್ಯೇಕವಾಗಿಯೇ ರಚನೆಯಾಗಿರುತ್ತವೆ. ಹಾಗೂ ಶೈಲಿಯಲ್ಲಿ ದಷ್ಟ–ಪುಷ್ಟದಂತಹ ಶರೀರದ ರಚನೆ, ಕುಚಬಂಧಗಳು ಒಂದೇ ತೆರನಾದ ಆಭರಣಗಳು, ಅಲ್ಲದೇ ಒಂದೇ ತೆರನಾದ ಪೀಠ ಹಾಗೂ ಪ್ರಭಾವಳಿ ಹಾಗೂ ಶಿರಶ್ಚಕ್ರಗಳು ಇರುವುದರಿಂದ, ಇವುಗಳನ್ನು ಅಪರೂಪವಾದ ಶಿಲ್ಪಗಳೆಂದು ಹೇಳಬಹುದು. ಅಲ್ಲದೇ ಇವುಗಳು ಪ್ರಾಯಶಃ ಒಬ್ಬನೇ ಶಿಲ್ಪಿಯಿಂದ ರಚನೆಯಾಗಿರುವ ಸಾಧ್ಯತೆಯನ್ನು ಸೂಚಿಸಬಹುದು.

ಮೈಸೂರು ಪ್ರದೇಶದಲ್ಲಿ ಸಪ್ತಮಾತೃಕಾ ದೇವಾಲಯಗಳ ಹಲವಾರು ಉದಾಹರಣೆಗಳು ದೊರೆಯುತ್ತವೆ. ಪ್ರಾಚೀನ ಹಾಗೂ ಮಧ್ಯಕಾಲೀನ ಕಾಲದಲ್ಲಿ ಈ ಶಕ್ತಿ ದೇವತೆಗಳಿಗೆಂದೇ ದೇವಾಲಯಗಳ ನಿರ್ಮಾಣವಾದ ಹಲವಾರು ದಾಖಲೆಗಳಿವೆ. ಈ ಶಿಲ್ಪಗಳು ಮೈಸೂರು ಪ್ರದೇಶದಲ್ಲಿ ವಿಶಿಷ್ಟವಾಗಿವೆ. ಏಕೆಂದರೆ, ಇಂತಹ ಬೇರೆ ಇನ್ನಾವುದೇ ಉದಾಹರಣೆಗಳು ದೊರೆಯುವುದಿಲ್ಲ. ಆದರೆ, ಇವುಗಳ ಕೆತ್ತನಾ ಶೈಲಿಯನ್ನು ತಲಕಾಡಿನ ಮರುಳೇಶ್ವರ ದೇವಾಲಯದಲ್ಲಿರುವ ಕೆಲವು ಶಿಲ್ಪಗಳಿಗೆ ಹೋಲಿಸಬಹದು. ಆ ಶಿಲ್ಪಗಳ ನೈಜತೆ ಇಲ್ಲಿ ಕಂಡು ಬರುವುದಿಲ್ಲ. ಹೀಗಾಗಿ, ಇವುಗಳ ಕೆತ್ತನೆ ಯಾವ ಕಾಲದಲ್ಲಿ ಆಗಿದೆ ಎಂಬುವುದು ಸ್ಪಷ್ಟವಾಗುವುದಿಲ್ಲ. ಆದರೆ ಪ್ರಸ್ತುತ ಸಂದರ್ಭದಲ್ಲಿ ಇವುಗಳ ಶೈಲಿಯನ್ನು ಗಮನಿಸಿ ಪ್ರಾಯಶಃ ೧೧, ೧೨ನೇ ಶತಮಾನದಲ್ಲಿ ಆಗಿರಬಹುದೆಂಬ ಭಾವನೆ ಬಂದರೂ, ವಾಸ್ತವಿಕವಾಗಿ ಈ ಶಿಲ್ಪಗಳು ನಂತರದ ಕಾಲಕ್ಕೆ ಸೇರಿರಬಹುದೆಂದು ಹೇಳಬಹುದಾಗಿದೆ. ಒಟ್ಟಾರೆಯಾಗಿ ವಾಸ್ತವಿಕವಾಗಿ ಚಾಮುಂಡಿ ಬೆಟ್ಟದಲ್ಲಿರುವ ಅಪರೂಪದ ಶಕ್ತಿ ದೇವತಾ ಶಿಲ್ಪಗಳು ಇವುಗಳಾಗಿವೆ.

ಡಾ. ಸಿ.ಯು. ಮಂಜುನಾಥ್*

ಶೂಲ ಬ್ರಹ್ಮಯ್ಯಗಳ ವಿಗ್ರಹ : ನವಶೋಧ

ಬಿಜ್ಜಳನನ್ನು ಕೊಂದ ಜಗದೇವ. ಮೊಲ್ಲೆಬೊಮ್ಮಣ್ಣಗಳು ಓರಂಗಲ್ಲಿನಲ್ಲಿ ವೀರಗುಂಡಬ್ರಹ್ಮರೆಂದು ಶಿವಶರಣರಾಗಿ ಹುಟ್ಟಿದರೆಂದೂ, ಚೋರರಿಬ್ಬರು (ಶಿವ ಸಾರದರೆಂದು ಕತೆ ಹೇಳುತ್ತದೆ) ರಾಜನ ಬೊಕ್ಕಸದಲ್ಲಿ ಕಳ್ಳತನ ಮಾಡಿ ಗುಂಡಬ್ರಹ್ಮರ ರಕ್ಷಣೆಯನ್ನು ಕೋರಿದರಂತೆ. ಆಗ ಅವರು ಕಳ್ಳರ ಪರವಾಗಿ ತಾವೇ ಶೂಲಕ್ಕೆ ಅರ್ಪಿಸಿಕೊಂಡ ಕತೆ ವೀರಶೈವ ಪುರಾಣಗಳಲ್ಲಿ ಬರುತ್ತದೆ. ಅವರ ಶಿಲ್ಪಗಳು ಕರ್ನಾಟಕದ ಕೆಲವು ಸ್ಥಳಗಳಲ್ಲಿ ದೊರೆಯುತ್ತವೆ. ಸಾಮಾನ್ಯವಾಗಿ ಕೈಯಲ್ಲಿ ಇಷ್ಟಲಿಂಗವನ್ನು ಹಿಡಿದ ಗುಂಡಬ್ರಹ್ಮಯ್ಯಗಳು ಶೂಲ ಏರಿದ್ದನ್ನು ಸಾಂಕೇತಿಕವಾಗಿಯೋ ಅಥವಾ ನೇರವಾಗಿಯೋ ಸೂಚಿಸುವ ಇಪ್ಪತ್ತ್ಮೂರು ಶಿಲ್ಪಗಳು ಇದುವರೆಗೂ ವಿದ್ವಾಂಸರಿಂದ ಗುರುತಿಸಲ್ಪಟ್ಟಿವೆ. ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಶೂಲದ ಹಬ್ಬ ಆಚರಣೆಯಲ್ಲಿದೆ. ಕುಮಾರರಾಮನ ಸಾಂಗತ್ಯದಲ್ಲಿ ಶೂಲದ ಹಬ್ಬದ ಪ್ರಸಕ್ತಿ ಬರುತ್ತದೆ. ಸುಮಾರು ಹದಿಮೂರನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ಶಿವಭಕ್ತರ ವಿಷಯ ಆಚರಣೆಯಲ್ಲಿ ಉಳಿದು ಬಂದಿರುವುದು ವಿಶೇಷವಾಗಿದೆ. ಅನೇಕ ಕಾವ್ಯಗಳಲ್ಲಿ ಅವರ ವಿಷಯ ಉಲ್ಲೇಕಗೊಂಡಿದೆ.

ಶಾಸನ ಸಂಶೋಧನೆಯ ಭಾಗವಾಗಿ ಕ್ಷೇತ್ರಕಾರ್ಯ ಕೈಗೊಂಡಿದ್ದಾಗ ನನ್ನ ಗಮನಕ್ಕೆ ಬಂದ ಶೂಲಬ್ರಹ್ಮಯ್ಯಗಳ ಒಂದು ಶಿಲ್ಪದ ವಿಷಯವನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ.



* # ೧೪೪೮, ೭ನೆಯ 'ಸಿ' ಮುಖ್ಯರಸ್ತೆ, ಕಲ್ಯಾಣ ಗೃಹ ನಿರ್ಮಾಣ ಬಡಾವಣೆ, ವಿಜಯನಗರ, ಬೆಂಗಳೂರು.

ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕಿನ ಚಿಕ್ಕಜಾಜೂರಿನಿಂದ ಸುಮಾರು ಮೂರು ಕಿಲೋಮೀಟರ್ ದೂರದಲ್ಲಿರುವ ಚಿಕ್ಕ ಗುಡ್ಡದ ಮೇಲಿರುವ ಕಡೂರಿನ ವೀರಭದ್ರ ದೇವಾಲಯದ ಆವರಣದಲ್ಲಿರುವ ವಿಗ್ರಹವನ್ನು ಮೊದಲ ಬಾರಿಗೆ ಗುರುತಿಸಲಾಗಿದೆ. ವೀರಭದ್ರ ದೇವಾಲಯದ ಗರ್ಭಗುಡಿಯ ಎಡಭಾಗದಲ್ಲಿ ಸ್ವಲ್ಪ ದೂರದಲ್ಲಿ ಚಿಕ್ಕ ಗುಡಿಯಂತಹ ರಚನೆಯಲ್ಲಿ ಎರಡು ನಾಗರಕಲ್ಲುಗಳ ಅನಂತರ ಪ್ರಸ್ತುತ ವಿಗ್ರಹ ಮತ್ತೆ ಪಕ್ಕದಲ್ಲಿ ಒಂದು ನಾಗರಕಲ್ಲು ಪಕ್ಕದಲ್ಲಿ ತುಂಬಾ ಸವೆದು ಹೋಗಿರುವ ಒಂದು ವಿಗ್ರಹವನ್ನು ಸ್ಥಾಪಿಸಲಾಗಿದೆ.

ಶೂಲ ಬ್ರಹ್ಮಯ್ಯಗಳ ವಿಗ್ರಹ ಉಬ್ಬುಗೆತ್ತನೆಯಾಗಿದ್ದು ಅಂಚನ್ನು ಕೆತ್ತಿ ಮಧ್ಯಭಾಗದಲ್ಲಿ ಸಿಂಹಲಲಾಟವನ್ನು ಕೆತ್ತಲಾಗಿದೆ. ಅಂಚಿನ ಒಳಗಿನ ಮೇಲ್ಭಾಗದಲ್ಲಿ ಚಂದ್ರ ಸೂರ್ಯರನ್ನು ಕೆತ್ತಲಾಗಿದೆ. ಮಧ್ಯದಲ್ಲಿ ಎರಡು ಆಕರ್ಷಕ ಶೂಲಗಳನ್ನು ಕೆತ್ತಲಾಗಿದೆ. ಶೂಲಗಳ ಮೇಲ್ಭಾಗ ಅಲಂಕಾರಮಯವಾಗಿ ಒಂದರ ಪಕ್ಕದಲ್ಲಿ ಒಂದು ಇರುವಂತೆ ಕೆತ್ತಲಾಗಿದೆ. ವಿಗ್ರಹದ ಎದುರಾಗಿ ನಿಂತರೆ ಎಡಪಕ್ಕದ ವಿಗ್ರಹದ ಎಡಗೈ ಶೂಲದ ಹತ್ತಿರವಿದ್ದು ಲಿಂಗವನ್ನು ಹಿಡಿದಿದೆ. ಬಲಗೈಯಲ್ಲಿ ಬಾಕುವನ್ನು ಮೇಲೆತ್ತಿ ಹಿಡಿದಂತೆ ಕೆತ್ತಲಾಗಿದೆ. ಬಲಭಾಗದ ವಿಗ್ರಹ ಬಲಗೈ ಶೂಲದ ಕಡೆ ಚಾಚಿದ್ದು ಹಸ್ತದಲ್ಲಿ ಲಿಂಗ ಹಿಡಿದಿದೆ. ಎಡಗೈಯಲ್ಲಿ ಬಾಕುವನ್ನು ಮೇಲೆತ್ತಿ ಹಿಡಿದಂತೆ ಚಿತ್ರಿಸಲಾಗಿದೆ. ಶೂಲದ ಮತ್ತು ಬಾಕುಗಳ ಮೊನಚು ಅರಿವಿಗೆ ಬರುವಂತೆ ಕೆತ್ತಲಾಗಿದೆ. ಎರಡೂ ಶೂಲಗಳನ್ನು ಆಧರಿಸಿದಂತೆ ಒಂದು ಚಿಕ್ಕ ಮಂಟಪದ ಆಕೃತಿ ಇದ್ದು ಪೀಠದಲ್ಲಿ ಲಿಂಗಾಕೃತಿಯನ್ನು ಕೆತ್ತಲಾಗಿದೆ. ಎರಡೂ ಶೂಲಗಳ ಮೇಲ್ಭಾಗದಲ್ಲಿ ಧ್ವಜಾಕಾರದ ಆಕೃತಿ ಯನ್ನು ಕೆತ್ತಲಾಗಿದೆ.

ವಿಗ್ರಹಳೆರಡೂ ಸಮ ಪ್ರಮಾಣದಲ್ಲಿ ಇವೆ. ತೋಳಬಂದಿ, ಕಂಕಣ ಹಾರಗಳನ್ನು ಧರಿಸಿರುವಂತೆ ಕೆತ್ತಲಾಗಿದೆ. ವೀರಗಚ್ಚೆಯನ್ನು ಧರಿಸಿರುವ ವಿಗ್ರಹಗಳು ತೋರಹಾರಗಳನ್ನು ಧರಿಸಿವೆ. ಮಲ್ಲಗಚ್ಚೆಯ ಮಧ್ಯದಲ್ಲಿ ಹೊರಟ ನೆರಿಗೆ ಸೊಂಟದಿಂದ ಮೂರು ಹಂತದಲ್ಲಿ ಪಾದದವರೆಗೂ ಆಕರ್ಷಕವಾಗಿ ಇಳಿಬಿದ್ದಿದೆ. ಆಲೀಢ ಭಂಗಿಯಲ್ಲಿರುವ ವಿಗ್ರಹಗಳ ಕಾಲಿಗೂ ಕಂಕಣ ಧರಿಸಿದ್ದು ಪಾದಗಳೂ ಅಲಂಕೃತಗೊಂಡಿವೆ.

ಶಿಲ್ಪ ಒಟ್ಟು ೩೨ ಅಂಗುಲ ಎತ್ತರವಿದ್ದು ೨೬ ಅಂಗುಲ ಅಗಲವಿದೆ. ವಿಗ್ರಹ ಶಿಲ್ಪಗಳು ೨೦ ಅಂಗುಲ ಎತ್ತರವಾಗಿವೆ. ಎರಡೂ ವಿಗ್ರಹಗಳ ಮಧ್ಯೆ ಶೂಲಗಳಿದ್ದು ವಿಗ್ರಹಗಳು ಅನುರೂಪ ಸಮಪಾರ್ಶ್ವತೆಯಿಂದ ಇರುವಂತೆ ಕೆತ್ತಲಾಗಿದೆ. ಸೊಂಟದಲ್ಲಿ ಎರಡೂ ವಿಗ್ರಹಗಳಿಗೆ ಮಲ್ಲಗಚ್ಚೆ ಕಟ್ಟಲು ಕುಚ್ಚನ್ನು ಆಕರ್ಷಕವಾಗಿ ಕೆತ್ತಲಾಗಿದೆ. ಹೆಗಲಿನಿಂದ ಆವೃತವಾಗಿ ಮಂಡಿಯವರೆಗೂ ಆವೃತವಾಗಿರುವ ವಸ್ತ್ರಪಟ್ಟೆಯನ್ನು ಕೆತ್ತಲಾಗಿದೆ.

ಡಾ. ಬಿ. ರಾಜಶೇಖರಪ್ಪನವರು ಶೂಲ ಬ್ರಹ್ಮಯ್ಯಗಳ ವಿಗ್ರಹಗಳು ಬಹುತೇಕ ವೀರಭದ್ರ ದೇವಾಲಯದ ಆವರಣಗಳಲ್ಲಿ ಕಂಡುಬಂದಿರುವುದನ್ನು ಗುರುತಿಸಿ ಕಾರಣಗಳನ್ನು ಆಲೋಚಿಸಿದ್ದಾರೆ. ಪ್ರಸ್ತುತ ವಿಗ್ರಹವೂ ಕೂಡ ವೀರಭದ್ರ ದೇವಾಲಯದ ಆವರಣದಲ್ಲಿ ಕಂಡುಬಂದಿದೆ. ಈ ಬಗೆಗೆ ಸಮಗ್ರ ಅಧ್ಯಯನದ ಮೂಲಕ ವ್ಯಾಪಕ ಸಂಶೋಧನೆಯನ್ನು ಕೈಗೊಳ್ಳಬಹುದಾಗಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಬಿ.ಎಸ್. ಗದ್ದಿಗೌಡ., 'ಶಾಸನೋಕ್ತ ವೀರಶೈವರು', ವಿಭೂತಿ, ಪುಟ ೨೭೩. (ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿ ಇತರ ಶರಣರೊಂದಿಗೆ ಹೆಸರಿನ ಸಮೇತ)
೨. **ಗುಂಡಬ್ರಹ್ಮಯ್ಯ ಚರಿತೆ**, ವಿ. ಶಿವಾನಂದ (ಸಂ) ಪುಟ ೨೩. (ಗುಂಡೇನಹಳ್ಳಿ ಶಿಲ್ಪ ಮತ್ತು ಚಿತ್ರದುರ್ಗದ ಸಂಪಿಗೆ ಸಿದ್ಧೇಶ್ವರ ದೇವಾಲಯದಲ್ಲಿರುವುವು)
೩. ಎಂ.ಎಂ. ಕಲಬುರ್ಗಿ, **ಶಾಸನ ವ್ಯಾಸಂಗ**, ಸಂ. ೨, ಪುಟ ೧೦೮ (ಹಾವೇರಿಯ ಶಿಲ್ಪ).
೪. ವಿ.ಆರ್. ಹಿರೇಮಠ, 'ನೀತಿಗೆರೆಯಲ್ಲಿ ಗುಂಡಬ್ರಹ್ಮಯ್ಯಗಳ ವಿಗ್ರಹ', ಕರ್ನಾಟಕ ಭಾರತಿ, ೯:೪ ಪುಟ ೧೫೧–೧೫೨ (ಬಳ್ಳಾರಿಯ ಮಲ್ಲಿಕಾರ್ಜುನ ದೇವಸ್ಥಾನದ ಪೌಳಿ ಗೋಡೆಯ ಮೇಲೆ).
೫. ಚನ್ನಕ್ಕ ಎಲಿಗಾರ, 'ವರದ ಮೂಲದ ಗುಂಡಬ್ರಹ್ಮಗಳ ವಿಗ್ರಹ', ವರದಮೂಲ ಸಾಗರ (ತಾ) ಗುಂಡಬ್ರಹ್ಮಯ್ಯ ವಿಗ್ರಹ ಗುರುತಿಸಿದ್ದಾರೆ, ಕ.ಭಾ ೧೧.೧, ಪುಟ ೧೪೭–೧೫೦.
೬. ಬಿ. ರಾಜಶೇಖರಪ್ಪ, 'ಕೆಲವು ಹೊಸ ಶೂಲಬ್ರಹ್ಮ ಶಿಲ್ಪಗಳು', (ಅಸಗೋಡು ಜಗಳೂರು ತಾಲ್ಲೂಕು, ಚಿಕ್ಕಪುರ, ಹಿರೇಗುಂಟನೂರು (ಮೂರು ಚಿತ್ರದುರ್ಗ, ತಾಲ್ಲೂಕು ಹೊಸದುರ್ಗ, ಶ್ರೀರಾಮಪುರ (ಎರಡೂ ಹೊಸದುರ್ಗ ತಾ.) ಮತ್ತು ಬುಕ್ಕಾಂಬುದಿ (ತರೀಕೆರೆ ತಾ) ಬಳಿ ೬ ಶೂಲಬ್ರಹ್ಮ ವಿಗ್ರಹಗಳನ್ನು ಗುರುತಿಸಿದ್ದಾರೆ. ಕರ್ನಾಟಕ ಭಾರತಿ, ೧೪–೧, ಪುಟ ೧೨೯–೧೩೯.
೭. ಡಿ.ವಿ. ಪರಮಶಿವಮೂರ್ತಿ, **ಶಾಸನ ಶಿಲ್ಪ**, ಪುಟ ೨೩೩–೩೪. (ಮೂರು ಶಿಲ್ಪಗಳು).
೮. ಎನ್. ತಿಪ್ಪೇಸ್ವಾಮಿ, 'ಶೂಲಬ್ರಹ್ಮ ಶಿಲ್ಪ ಪತ್ತೆ' ಜೆ. ದುರ್ಗ, ಚಿತ್ರದುರ್ಗ ಜಿಲ್ಲೆ, ವರದಿ : **ಪ್ರಜಾವಾಣಿ**, ೩.೨.೨೦೦೮.

ಡಾ. ಎಂ.ಪಿ. ಮಹದೇವಯ್ಯ*
ಎ. ಶ್ರೀಧರಮೂರ್ತಿ**

ಕರ್ನಾಟಕದಲ್ಲಿ ದಂಪತಿ (ಮಿಥುನ) ಶಿಲ್ಪಗಳ ಬೆಳವಣಿಗೆ

ಕರ್ನಾಟಕದಲ್ಲಿ ಶಿಲ್ಪಕಲೆಯ ಉಗಮ ಮತ್ತು ವಿಕಾಸವನ್ನು ಕುರಿತಂತೆ ಹಲವಾರು ವಿದ್ವಾಂಸರು ಕೆಲಸ ಮಾಡಿದ್ದಾರೆ. ಇಲ್ಲಿನ ಶಿಲ್ಪಕಲೆಯ ವಿಭಿನ್ನ ಆಯಾಮಗಳನ್ನು ಹಾಗೂ ಶೈಲಿಗಳನ್ನು ಕುರಿತಾದಂತೆ ವಿಶ್ಲೇಷಿಸಿದ್ದಾರೆ. ಈ ತರಹದ ಅಧ್ಯಯನಗಳಲ್ಲಿ ಹೆಚ್ಚು ಗಮನ ಸೆಳೆಯದೇ ಇರುವಂತಹ ಶಿಲ್ಪ ಪ್ರಭೇದಗಳ ವಿಷಯವೆಂದರೆ, ಮಿಥುನ ಮತ್ತು ದೇವಾಂಗನಾ ಶಿಲ್ಪಗಳು. ಅಲ್ಲಲ್ಲಿ ಹಲವು ಅಧ್ಯಯನಗಳು ಲೇಖನ ರೂಪದಲ್ಲಿ ಪ್ರಕಟವಾಗಿದ್ದರೂ, ಇವುಗಳ ಉಗಮಮತ್ತು ವಿಕಾಸ ಕುರಿತಂತೆ ಸಂಪೂರ್ಣ ಅಧ್ಯಯನದ ಅವಶ್ಯಕತೆ ಇದೆ[೧].

ಪ್ರಾಚೀನ ಕಾವ್ಯ ಹಾಗೂ ಕೃತಿಗಳಲ್ಲಿ ದಂಪತಿ ಹಾಗೂ ದೇವಾಂಗನಾ ಪರಿಕಲ್ಪನೆ ಅತ್ಯಂತ ವಿಶಿಷ್ಟವಾಗಿ ವರ್ಣಿತವಾಗಿದೆ[೨]. ಈ ಶಿಲ್ಪಗಳ ಉಗಮ ಮತ್ತು ವಿಕಾಸವನ್ನು ಕುರಿತಾದಂತೆ ವಿವರಣಾತ್ಮವಾಗಿ ನೋಡಿದಾಗ ಇವುಗಳ ಉಗಮ ಸಾಕಷ್ಟು ಕುತೂಹಲಕಾರಿಯಾಗಿದೆ. ಸಾಮಾನ್ಯವಾಗಿ ದಂಪತಿ ಪರಿಕಲ್ಪನೆ ಉಗಮವನ್ನು ನೋಡಿದಾಗ ವೈದಿಕ ಸಾಹಿತ್ಯ ಕಾಲಕ್ಕೆ ಹೋದರೂ ದೃಶ್ಯಮಾಧ್ಯಮದಲ್ಲಿ ಇವುಗಳ ಸ್ಪಷ್ಟ ನಿರೂಪಣೆ ಕರ್ನಾಟಕಕ್ಕೆ ಸೀಮಿತವಾದಂತೆ ಅಥವಾ ಭಾರತದ ಒಟ್ಟಾರೆ ಶಿಲ್ಪಕಲೆಗೆ ಪೂರಕವಾದಂತೆ ನೋಡಿದಾಗ, ಮೌರ್ಯರ ಕಾಲಕ್ಕೆ ಈ ಶಿಲ್ಪ ಪ್ರಭೇದಗಳನ್ನು ಗುರುತಿಸಬಹುದು[೩]. ಕರ್ನಾಟಕದಲ್ಲಿ ಮೌರ್ಯರ ಕಾಲದ ಕಲಾ ಚಟುವಟಿಕೆಗಳು ಉತ್ತರ ಭಾರತದಲ್ಲಿನ ಅದೇ ಕಾಲದ ಚಟುವಟಿಕೆಗಳಿಗೆ ಸಮಕಾಲೀನವಾದವುಗಳೆಂದು ವಿದ್ವಾಂಸರು ಈಗಾಗಲೇ ದಾಖಲೆಗಳ ಸಹಿತ ನಿರೂಪಿಸಿದ್ದಾರೆ[೪]. ಹೀಗಾಗಿ ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯ ಸನ್ನತಿ ಕಲಾಚಟುವಟಿಕೆಗಳ ಆರಂಭಿಕ ತಾಣವಾಗಿದೆ. ಅಲ್ಲಿ ಇರುವ ಪ್ರಾಚೀನ ಬೌದ್ಧ ಸ್ತೂಪ ಮತ್ತು ಶಿಲ್ಪಗಳನ್ನು ಒಟ್ಟಾರೆಯಾಗಿ ನೋಡಿದಾಗ ಅಲ್ಲಿ ಮೊದಲ ಬಾರಿ ನಮಗೆ ದೃಶ್ಯ ಮಾಧ್ಯಮದಲ್ಲಿ ಧಾರ್ಮಿಕ ಶಿಲ್ಪಗಳ ಜೊತೆಯಲ್ಲಿ ದಂಪತಿ ಶಿಲ್ಪಗಳು ಕೂಡ ಕಂಡುಬರುತ್ತವೆ. ಬೌದ್ಧ ಧಾರ್ಮಿಕ ಶಿಲ್ಪಗಳಲ್ಲಿ ದಂಪತಿ ಶಿಲ್ಪಗಳ ರಚನೆ ಬುದ್ಧನ ಜಾತಕ ಕತೆಗಳ ದೃಶ್ಯ ನಿರೂಪಣೆಯಲ್ಲಿ ಪ್ರಾಯಶಃ ಆರಂಭಗೊಂಡು ನಂತರ ತಮ್ಮದೇ ಆದಂತಹ ಅಸ್ತಿತ್ವವನ್ನು ಕಂಡುಕೊಂಡವು ಎಂದು ತೋರುತ್ತದೆ. ದಂಪತಿ ನಿರೂಪಣೆ ಮಿಥುನ ಪರಿಕಲ್ಪನೆಗೆ ಪೂರಕವಾಗಿವೆ. ಪ್ರಾಯಶಃ ಮಿಥುನ ಶಿಲ್ಪಗಳ ಉಗಮ ಈ ತರಹದ ಶಿಲ್ಪಗಳಿಂದಲೇ ಆಗಿರುವ ಸಾಧ್ಯತೆ ಇದೆ. ಸನ್ನತಿಯಲ್ಲಿ ದೊರೆತಂತಹ ಹಲವಾರು ದಂಪತಿ ಶಿಲ್ಪಗಳು ಆಲಿಂಗನ ಭಂಗಿಯಲ್ಲಿ ಇರುವುದನ್ನು ಕಾಣಬಹುದು. ಸನ್ನತಿಯಲ್ಲಿ ಇರುವ (ಗುಲಬರ್ಗಾ ಮ್ಯೂಸಿಯಂ) ಹಲವಾರು ದಾನಿಗಳ ಶಿಲ್ಪ ನಿರೂಪಣೆ ದಂಪತಿಗಳದ್ದೆ ಆಗಿವೆ. ಇವುಗಳು ಪ್ರಾಯಶಃ ದಾನ ನೀಡಿದ ಮತ್ತು ಗತಿಸಿದ ದಂಪತಿಗಳ ಸ್ಮರಣೆಗಾಗಿ ರಚನೆಗೊಂಡ ಶಿಲ್ಪಗಳೆಂದು ತೋರುತ್ತವೆ (ಛಾಯ ಪ್ರತಿಮಾ). ಇವುಗಳಿಗೆ ಸಮಾನಾಂತರವಾಗಿ ಮಹಾರಾಷ್ಟ್ರದ ಪಿತಳಖೋರಾ, ಕಾರ್ಲೆ, ನಾಸಿಕ್, ಕನ್ಹೇರಿ ಮೊದಲಾದ ಬೌದ್ಧ ಗುಹಾಲಯಗಳ ಮುಖ್ಯದ್ವಾರಗಳ ಇಕ್ಕೆಲಗಳಲ್ಲಿ ರಚಿಸಿರುವ ದಂಪತಿ ಶಿಲ್ಪಗಳು ಜ್ಞಾಪಕಕ್ಕೆ ಬರುತ್ತವೆ.

ಕೃಷ್ಣಾ ನದಿ ದಂಡೆಯ ಅಮರಾವತಿ ಹಾಗೂ ನಾಗಾರ್ಜುನಕೊಂಡಗಳ ಸ್ತೂಪಗಳ ಅಲಂಕಾರಗಳಲ್ಲಿ ಕಂಡುಬರುವ ಶಿಲ್ಪಗಳಲ್ಲಿಯೂ ಕೂಡ ಬಹುಸಂಖ್ಯೆಯ ದಂಪತಿ ಶಿಲ್ಪಗಳು ಮಿಥುನ ಮಾದರಿಯಲ್ಲಿಯೇ ನಿಂತ ಹಾಗೂ ಕುಳಿತ ಭಂಗಿಯಲ್ಲಿ ಕಂಡುಬರುತ್ತವೆ[೫].

ಪ್ರಾಚೀನ ಕೃತಿಗಳಲ್ಲಿ ಉಲ್ಲೇಖಿಸಿದಂತೆ ಮಿಥುನ. ಗಂಧರ್ವ, ಯಕ್ಷ, ಕಿನ್ನರ, ಅಪ್ಸರ, ದೇವಾಂಗನಾ ಕಿಂಪುರುಷ ಮೊದಲಾದ ಪ್ರಭೇಧಗಳು ದೇವತೆಗಳ ನಂತರದ ಸ್ಥಾನದಲ್ಲಿ ಬರುತ್ತವೆ. ಅಲ್ಲದೇ, ದೇವತೆಗಳು ಹೇಳುವ ಕೆಲಸವನ್ನು ಮಾಡುವ ಪರಿಚಾರಕರಂತೆ, ಸಂಗೀತ ವಿನೋದ ವಾದ್ಯಗಾರರಾಗಿ ಹಾಗೂ ಸೋಮರಸವನ್ನು ಕಾಯುವವರಾಗಿ ಬಿಂಬಿತವಾಗಿದ್ದಾರೆ. ಪ್ರಾಯಶಃ ಬೌದ್ಧ ಹಾಗೂ ಹಿಂದೂ ದೇವಾಲಯುಗಳಲ್ಲಿ ದಂಪತಿ ಶಿಲ್ಪಗಳು ನಿರೂಪಣೆಗೊಂಡಾಗ ಈ ಹಿನ್ನೆಲೆಯಲ್ಲಿಯೇ ರಚನೆ

* ಪ್ರಾಧ್ಯಾಪಕರು, ಇತಿಹಾಸ ಮತ್ತು ಪುರಾತತ್ವ ವಿಭಾಗ, ಮಾನಸ ಗಂಗೋತ್ರಿ, ಮೈಸೂರು.
** ಪ್ರವಾಚಕ, ಗ್ರಾಫಿಕ್ ವಿಭಾಗ, ಚಿತ್ರಕಲಾ ಮಹಾವಿದ್ಯಾಲಯ, ಚಿತ್ರಕಲಾ ಪರಿಷತ್ತು, ಬೆಂಗಳೂರು.



ದಂಪತಿ ಮಿಥುನ ಶಿಲ್ಪಗಳು

ಗೊಂಡಿರುವ ಸಾಧ್ಯತೆ ಇದೆ ಎಂದು ತೋರುತ್ತದೆ. ಸನ್ನತಿಯ ಶಿಲ್ಪಗಳ ಬೆಳವಣಿಗೆಯಲ್ಲಿ ಮಿಥುನ ಶಿಲ್ಪಗಳು ಕಂಡುಬಂದರೂ ಕೂಡ ಅವುಗಳಲ್ಲಿ ಶೃಂಗಾರತ್ವದ ನಿರೂಪಣೆ ಅಷ್ಟಾಗಿ ಕಂಡುಬರುವುದಿಲ್ಲ. ಪ್ರಾಯಶಃ ಇದಕ್ಕೆ ಅಂದಿನ ಸಾಮಾಜಿಕ ಹಾಗೂ ಧಾರ್ಮಿಕ ನಿಬಂಧನೆಗಳು ಕಾರಣವಾಗಿರಬಹುದೆಂದು ತೋರುತ್ತದೆ. ಈ ಬಗ್ಗೆ ಸ್ಪಷ್ಟವಾದ ಚಿತ್ರಣ ಇರುವುದಿಲ್ಲ.

ಸನ್ನತಿಯ ಬೌದ್ಧ ಕಲಾ ಚಟುವಟಿಕೆಗಳ ನಂತರದಲ್ಲಿ ಐತಿಹಾಸಿಕವಾಗಿ ನೋಡುವುದಾದರೆ, ಬನವಾಸಿ ಕದಂಬರ ಕಾಲದ ಶಿಲ್ಪಕಲೆ ಪ್ರಮುಖವಾದರೂ ಈ ಕಾಲದಲಿ ದಂಪತಿ ಶಿಲ್ಪಗಳ ದಾಖಲೆಗಳು ಕಂಡುಬರುವುದಿಲ್ಲ. ಆದರೆ ಬನವಾಸಿ ಹತ್ತಿರದ ಗುಡ್ನಾಪುರದ ರವಿವರ್ಮನ ಸ್ತಂಭ ಶಾಸನದಲ್ಲಿ ಮನ್ಮಥ ಹಾಗೂ ವಸಂತೋತ್ಸವದ ಉಲ್ಲೇಖಗಳಿರುವುದರಿಂದ ಮಿಥುನ ಅಥವಾ ರತಿಮನ್ಮಥರ ಪರಿಕಲ್ಪನೆಗೆ ಪೂರಕವಾಗಿ ಈ ಶಾಸನ ದಾಖಲೆ ಒದಗಿಸುತ್ತದೆ[೬].

ಮಿಥುನ ಅಥವಾ ದಂಪತಿ ಶಿಲ್ಪಗಳ ಬೆಳವಣಿಗೆಯಲ್ಲಿ ಪಕ್ವತೆ ಕಾಣುವುದು ಬಾದಾಮಿ ಚಾಲುಕ್ಯರ ಕಾಲದಲ್ಲಿ. ಬಾದಾಮಿ ಚಾಲುಕ್ಯರ ಕಾಲದ ಗುಹಾಲಯಗಳಲ್ಲಿ ಹಾಗೂ ದೇವಾಲಯಗಳಲ್ಲಿ ಬಹಳ ಪ್ರೌಢವಾದ ಮಿಥುನ ಶಿಲ್ಪಗಳು ಕಂಡುಬರುತ್ತವೆ. ಪೌರಾಣಿಕ ಗ್ರಂಥಗಳ ಬೆಳವಣಿಗೆ, ಸಾಹಿತ್ಯ

ಕೃತಿಗಳ ಪ್ರಭಾವ ಇಲ್ಲಿ ಸಮಾಗಮಗೊಂಡು ದಂಪತಿ ಶಿಲ್ಪಗಳ ಬೆಳವಣಿಗೆಯಲ್ಲಿ ಪರ್ಯಾವಸಾನಗೊಂಡಂತೆ ಕಾಣುತ್ತದೆ. ಬಾದಾಮಿಯ ಮೂರನೇ ಗುಹಾಲಯದ ಮೊಗಸಾಲೆಯ ಕಂಬಗಳ ಬೋಧಿಗೆಯು ಶಿಲ್ಪಗಳು ಬಹುಮುಖ್ಯ ಉದಾಹರಣೆಗಳು. ಇಲ್ಲಿನ ಬಹುತೇಕ ಶಿಲ್ಪಗಳು ಶೃಂಗಾರ ರಸವನ್ನು ಬಿಂಬಿಸುವ ದಂಪತಿ ಅಥವಾ ಮಿಥುನ ಶಿಲ್ಪಗಳೇ ಆಗಿವೆ. ಉದಾಹರಣೆಗೆ, ಮನ್ಮಥ, ರತಿಯರ ಶಿಲ್ಪ ಮಿಥುನ ದಿರಿಸುಗಳಲ್ಲಿ ಇರುವ ಮಿಥುನ ದಂಪತಿಗಳು ಇದ್ದರೆ, ಇಲ್ಲಿನ ಕಲಾವಿದ ಶಿವ-ಪಾರ್ವತಿಯರನ್ನೇ ಅತ್ಯಂತ ವಿಶಿಷ್ಟವಾಗಿ ಹಾಗೂ ಶೃಂಗಾರಯುತವಾಗಿ ಬಿಂಬಿಸಿದ್ದಾನೆ. ಸೋಮರಸ ವನ್ನು ಸೇವಿಸಿರುವ ಪಾರ್ವತಿ ನಿಶೆಯುಳ್ಳವಳಾಗಿ, ಶಿವನ ಭುಜದ ಮೇಲೆ ಕೈಹಾಕಿ ತನ್ನ ದೇಹದ ಭಾರವನ್ನು ಅವನ ಮೇಲೆ ಬಿಟ್ಟಿದ್ದಾಳೆ. ಅವಳನ್ನು ಎತ್ತಿಕೊಂಡು ಹೋಗುವಂತೆ ಈ ನಿರೂಪಣೆ ಇದೆ. ಈ ದೃಶ್ಯಗಳು ಮೈಥುನದಲ್ಲಿ ಮಾದಕ ಪೇಯವೂ ಕೂಡ ಒಂದು ಎಂಬ ಪರಿಕಲ್ಪನೆಯನ್ನು ನೀಡುವಂತೆ ಬಿಂಬಿತವಾಗಿದೆ. ಮೂರನೇ ಗುಹಾಲಯದ ಶಿಲ್ಪಗಳು ಬೋದಿಗೆಗಳನ್ನು ಅಲಂಕರಿಸಿರುವುದು ವಿಶಿಷ್ಟವಾಗಿ ಕಂಡುಬರುತ್ತದೆ. ಇವುಗಳ ಹಿನ್ನೆಲೆಯನ್ನು ಹುಡುಕುತ್ತಾ ಹೊರಟರೆ, ನಾಸಿಕ್, ಸಾಂಚಿ, ಮೊದಲಾದ ಬೌದ್ಧ ನೆಲೆಗಳಲ್ಲಿ ದಂಪತಿ ಶಿಲ್ಪಗಳು ಮಿಥುನ ಶಿಲ್ಪಗಳಾಗಿ ಬೋದಿಗೆಗಳ ಮೆಲೆ ಕಂಡುಬರುತ್ತವೆ. ಪೌರಾಣಿಕ ಹಿನ್ನೆಲೆಯಲ್ಲಿ ನೋಡಿದಾಗ ಮತ್ಸಪುರಾಣ, ಅಗ್ನಿಪುರಾಣ, ವಿಷ್ಣು ಧರ್ಮೋತ್ತರ ಪುರಾಣ ಹಾಗೂ ಕಾಳಿದಾಸನ ಬಹುತೇಕ ಎಲ್ಲಾ ಕೃತಿಗಳ ಹಿನ್ನೆಲೆಗಳಲ್ಲಿ ದಂಪತಿ ಶಿಲ್ಪಗಳೂ ಕಂಬಗಳ ಅಲಂಕರಣದಲ್ಲಿ ರಚನೆ ಯಾಗಿರುವುದು ಕಂಡುಬರುತ್ತದೆ[೭].

ದಂಪತಿ ಶಿಲ್ಪಗಳ ಒಂದು ಸ್ಪಷ್ಟ ಚಿತ್ರಣವನ್ನು, ಐಹೊಳೆಯ ದೇವಾಲಯಗಳ ಉದಾಹರಣೆಯಿಂದ ದೃಢಪಡಿಸಬಹುದು. ದುರ್ಗದ ದೇವಾಲಯ, ಲಾಡಖಾನ ದೇವಾಲಯ, ಹುಚ್ಚಮಲ್ಲಿಗುಡಿ, ಹುಚ್ಚಪ್ಪಯ್ಯಗುಡಿ ಹಾಗೂ ಕುಂತಿಗುಡಿ ದೇವಾಲಯಗಳಲ್ಲಿ ಮುಖ್ಯವಾಗಿ ಮುಖಮಂಟಪಗಳ ಕಂಬಗಳ ಮೇಲೆ ಪ್ರಸ್ತುತ ಶಿಲ್ಪಗಳು ಕಂಡುಬರುತ್ತವೆ. ವಿಶೇಷವಾಗಿ ಅಶ್ವಮುಖಿ ಶಿಲ್ಪಗಳು ನಗ್ನ ಶಿಲ್ಪಗಳಾಗಿ ರಚನೆಗೊಂಡಿವೆ. **ದೇವಾಂಗನ ದೇಸಾಯಿ** ಎಂಬ ವಿದ್ವಾಂಸೆಯ ಪ್ರಕಾರ ಪ್ರಾಚೀನ ನಂಬಿಕೆಗಳಲ್ಲಿ ಋಷಿಗಳನ್ನು, ತಪೋಮುನಿಗಳ ತಪಸ್ಸನ್ನು ಭಂಗಗೊಳಿಸಲು ಬಳಸ ಲಾಗುತ್ತಿತ್ತು. ಅಂತಹ ಸಂದರ್ಭಗಳಲ್ಲಿ ವಿಶೇಷವಾಗಿ ಮೈಥುನದ ಸಂದರ್ಭದಲ್ಲಿ ಮುಖಚರ್ಯೆಯನ್ನು ಬಯಲು ಗೊಳಿಸದೇ ಮುಖವಾಡವನ್ನು ಅಥವಾ ಮುಖಚರ್ಯೆ ಯನ್ನೇ ಬದಲಿಸುತ್ತಿದ್ದಂತಹ ದಾಖಲೆಗಳು ದೊರೆಯುತ್ತವೆ. ಮುಖ್ಯವಾಗಿ ಇಂತಹ ಶಿಲ್ಪಗಳು ಐಹೊಳೆಯಲ್ಲಿಯೇ ಕಂಡುಬರುವುದು ವಿಶಿಷ್ಟವಾಗಿದೆ ಮತ್ತು ಹೆಚ್ಚಿನ ವಿವೇಚನೆಗೆ ಪ್ರೇರಕವಾಗಿವೆ[೮].

ಒಟ್ಟಾರೆಯಾಗಿ ಆರಂಭಕಾಲದಿಂದ ದಂಪತಿ ಶಿಲ್ಪಗಳ ರಚನೆಯನ್ನು ಕುರಿತಂತೆ ನೋಡಿದಾಗ ಇವುಗಳಿಗೆ ಮಿಥುನ ಶಿಲ್ಪಗಳ ಹಿನ್ನೆಲೆ ದೊರೆಯುತ್ತದೆ. ವಿಶೇಷವಾಗಿ ಬಾದಾಮಿ ಚಾಲುಕ್ಯರ ಕಾಲದಲ್ಲಿಯೂ ದೇವ-ದೇವತೆಯರನ್ನು ಕೂಡ ಪತಿ-ಪತ್ನಿಯರಂತೆ ಶೃಂಗಾರಮಯವಾಗಿ ಬಿಂಬಿಸಿ ಮಿಥುನ ಶಿಲ್ಪಗಳಿಗೆ ಪೂರಕವಾದಂತೆ ರಚಿಸಿರುವುದು ಅಂದಿನ ಸಾಮಾಜಿಕ ಹಾಗೂ ಧಾರ್ಮಿಕ ಹಿನ್ನೆಲೆಗೆ ಸೂಕ್ತ ದಾಖಲೆ ಯಾಗುತ್ತದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. i. ಪ್ರಸ್ತುತ ಪ್ರಬಂಧವು ನಮ್ಮ ಸಂಶೋಧನಾ ಅಧ್ಯಯನಕ್ಕೆ ಸಂಬಂಧಿಸಿದ್ದಾಗಿದೆ.
ii. ಭಾರತದ ವಿಸ್ತೀರ್ಣದಲ್ಲಿ ಸಾಕಷ್ಟು ವಿವರಣಾತ್ಮಕವಾಗಿ ಮಿಥುನ, ವಿದ್ಯಾಧರ, ಶೃಂಗಾರ ಶಿಲ್ಪಗಳ ಬಗ್ಗೆ ಪುಸ್ತಕಗಳು ಪ್ರಕಟವಾಗಿವೆ. ವಿವರವಾದ ಪರಾಮರ್ಶನಕ್ಕೆ ನೋಡಿ : ಮಿಥುನಾ : ಪಿ.ಕೆ. ಅಗ್ರವಾಲ (೧೯೮೩) ದೆಹಲಿ.

೨. ಥಾಮಸ್ ಪಿ., 'ಕಾಮಕಲ್ಪ ಅಥವಾ ದಿ ಹಿಂದು ರಿಚುಯ್ ಆಫ್ ಲವ್', ಬಾಂಬೆ (೧೯೫೯).

೩. ಸಹರಂಜನ್ ರೇ, 'ಮೌರ್ಯ ಅಂಡ್ ಸುಂಗಾ ಆರ್ಟ್', ದೆಹಲಿ.

೪. ಕುಲಕರ್ಣಿ. ಆರ್.ಎಚ್., ೨೦೦೯, 'ಪ್ರಿ ಅಂಡ್ ಅರ್ಲಿ ಚಾಲುಕ್ಯಾಸ್ ಸ್ಕಲ್ಪಚರ್ಸ್.

೫. ಬ್ಯಾರೆಟ್ ಡಗ್ಲಾಸ್ ೧೯೫೪, 'ಸ್ಕಲ್ಪಚರ್ಸ್ ಫ್ರಂ ಅಮರಾವತಿ ಇನ್ ದಿ ಬ್ರಿಟಿಶ್ ಮ್ಯೂಸಿಯಂ', ಲಂಡನ್.

೬. ಗೋಪಾಲ್. ಬಿ.ಆರ್., ೧೯೮೫, 'ಕಾರ್ಫಸ್ ಆಫ್ ಕಂದಂಬಾ ಇನ್‌ಸ್ಕ್ರಿಪ್ಷನ್ಸ್, ಶಿರಸಿ.

೭. ಪಿ.ಕೆ. ಅಗ್ರವಾಲ್., ಪೂರ್ವೋಕ್ತ.

೮. ಪಂಚಮುಖಿ. ಆರ್.ಎಸ್., 'ಗಂಧರ್ವಾಸ್ ಅಂಡ್ ಕಿನ್ನರಾಸ್', ಧಾರವಾಡ (೧೯೫೪).

ಡಾ. ಶೀಲಾಕಾಂತ ಪತ್ತಾರ*

ಬನದ ದೇವಿ, ಬನದ ಮಹಾಮಾಯಿ ಮತ್ತು ಬನಶಂಕರಿ

ಬಾದಾಮಿಯ ಶ್ರೀ ಬನಶಂಕರಿ ದೇವಾಲಯವು ಕರ್ನಾಟಕದ ಪ್ರಸಿದ್ಧ ಶಕ್ತಿ ಕ್ಷೇತ್ರಗಳಲ್ಲಿ ಒಂದು. ವಾಸ್ತವದಲ್ಲಿ ಈ ದೇವಾಲಯವು ಚೊಳಚಗುಡ್ಡ ಎಂಬ ಗ್ರಾಮದ ಸೀಮೆಯಲ್ಲಿದೆ. 'ಗ್ರಾಮ ದೇವತಾಭ್ಯೋ ನಮಃ' ಎಂಬ ಮಂತ್ರದೊಂದಿಗೆ ಈಗಲೂ ದೇವಿಗೆ ಪೂಜೆ ಸಲ್ಲುತ್ತದೆ.

ಬನಶಂಕರಿ ದೇವಿಯ ಪ್ರಧಾನ ಅರ್ಚಕರಾಗಿದ್ದ ದಿ. ಮಲ್ಹಾರ ಭಟ್ಟರು ತಮ್ಮ ಪುಸ್ತಿಕೆಯಲ್ಲಿ ದೇವಿಯ ಪೀಠದ ಮೇಲೆ ಬಾದಾಮಿ ಚಲುಕ್ಯರ ಶಾಸನವಿದೆ ಎಂದು ಹೇಳಿರುವರು. ಆದರೆ ಅದರ ವಿವರಗಳನ್ನು ನೀಡಿಲ್ಲ. ತ್ರಿಕಾಲ ಪೂಜೆ ಸಲ್ಲುವ ಈ ವಿಗ್ರಹದ ಕೆಳಗಿರುವ ಶಾಸನದ ಪ್ರತಿಯನ್ನು ಒಬ್ಬ ಅರ್ಚಕರೇ ತೆಗೆದುಕೊಳ್ಳಬೇಕಾಗುತ್ತದೆ. ವಿಗ್ರಹವನ್ನು ದೂರದಿಂದಲೇ ವೀಕ್ಷಿಸಿದ ಡಾ. ಶ್ರೀನಿವಾಸ ಪಾಡಿಗಾರ ಅವರು ಅದು ದೇವನಾಗರಿ ಲಿಪಿಯಲ್ಲಿರುವುದನ್ನು ಗುರುತಿಸಿದ್ದಾರೆ. ಬನಶಂಕರಿ ಕ್ಷೇತ್ರದಲ್ಲಿ ಇದುವರೆಗೆ ಗುರುತಿಸಲಾದ ಯಾವ ಶಾಸನದಲ್ಲಿಯೂ 'ಬನಶಂಕರಿ' ಎಂಬ ಪದವಿಲ್ಲ. ಇದು ಗಮನಾರ್ಹ ಸಂಗತಿ.

ಸುಮಾರು ೧೧ನೆಯ ಶತಮಾನದ ಎರಡು ಶಾಸನಗಳಲ್ಲಿ[೧] ಈ ದೇವಿಯನ್ನು 'ಬನದೇವಿ'ಯೆಂದೂ, ೧೬ನೆಯ ಶತಮಾನದ ಎರಡು ಶಾಸನಗಳಲ್ಲಿ[೨] 'ಬನದ ಮಹಾಮಾಯಿ' ಎಂದೂ ಕರೆಯಲಾಗಿದೆ.

ಮೈಸೂರು ದೊರೆಗಳಾಗಿದ್ದ ಶ್ರೀ ಜಯಚಾಮ ರಾಜೇಂದ್ರ ಒಡೆಯರು (೧೨-೯-೧೯೫೧ರಂದು) ಬನಶಂಕರಿ ಕ್ಷೇತ್ರಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ ದೇವಸ್ಥಾನ ಪೂಜಾರ ಸಂಘವು ಅರ್ಪಿಸಿದ ಬಿನ್ನವತ್ತಳೆಯಲ್ಲಿ "ಚಾಲುಕ್ಯ ಪುಲಿಕೇಶಿ ಮೊದಲಾದ ನರೇಂದ್ರರ ಕುಲದೈವವಾದ ಶ್ರೀ ಬನಶಂಕರಿ" ಎಂದು ಬರೆಯಲಾಗಿದೆ. ಹೀಗೆ ದೇವಸ್ಥಾನದ ಸಮಿತಿಯಿಂದ ಪ್ರಕಟವಾದ ಗ್ರಂಥ ಹಾಗೂ ಪ್ರಕಟನಾ ಪತ್ರ ಹಾಗೂ ಭಕ್ತಿಗೀತೆಗಳ ಸಾಹಿತ್ಯವು ಅಭಿಮಾನದಿಂದ ಕೂಡಿದ್ದಾಗಿದೆ. ವಾಸ್ತವವಾಗಿ ಬನಶಂಕರಿ ದೇವಸ್ಥಾನವು ಬಾದಾಮಿ ಚಾಲುಕ್ಯರ ಕಾಲದ್ದಲ್ಲ.

ಈಗ ಪೂಜೆಗೊಳ್ಳುತ್ತಿರುವ ಬನಶಂಕರಿ ದೇವಾಲಯದ ಉತ್ತರ ಬದಿಯಲ್ಲಿ, ಪ್ರಾಕಾರದ ಹೊರಗೆ, ಭಾಗಶಃ ನೆಲದಲ್ಲಿ ಕುಸಿದ ಹಾಳು ದೇಗುಲವಿದೆ. ಸದ್ಯ ಗರ್ಭಗೃಹದಲ್ಲಿ ಯಾವ ವಿಗ್ರಹವೂ ಇಲ್ಲ. ಆದರೆ ಇದೇ ಮೂಲ ಬನಶಂಕರಿ ಗುಡಿ ಎಂಬುದು ಜನಪದರ ನಂಬಿಕೆ. ಈ ಮಂದಿರದ ಶಿಖರ ವಿನ್ಯಾಸ, ಕಂಬ ವಿನ್ಯಾಸ ಹಾಗೂ ಗೋಡೆಗಳ ವಾಸ್ತು ಲಕ್ಷಣಗಳನ್ನು ಆಧರಿಸಿ ಇದು ರಾಷ್ಟ್ರಕೂಟ ಕಾಲದ ದೇವಾಲಯವೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಸುಮಾರು ಮೂರು ದಶಕಗಳ ಹಿಂದೆ ಈ ಗುಡಿಯ ಹೊರಭಾಗದಲ್ಲಿ ದೇವಿಯ ಶಿಲ್ಪವೊಂದಿತ್ತು. ಪ್ರಾಯಶಃ ಅದು ಹಿಂದೊಮ್ಮೆ ಗರ್ಭಗೃಹದಲ್ಲಿ ಪೂಜಿತವಾದ ಶಿಲ್ಪವಾಗಿರಬಹುದು. ಅದನ್ನು ಪರಿಶೀಲಿಸಿದ ಡಾ. ಅ. ಸುಂದರ ಅವರು ಅದು ರಾಷ್ಟ್ರಕೂಟರ ಕಾಲದ ವಿಗ್ರಹವೆಂದು ಗುರುತಿಸಿದ್ದರು. ಈಗ ಆ ಶಿಲ್ಪವೂ ಲಭ್ಯವಿಲ್ಲ. ಸುಮಾರು ೨'- ೨.೫" ಎತ್ತರದ ಮೂರ್ತಿ ಅದಾಗಿತ್ತು.

ಬನಶಂಕರಿ ಕ್ಷೇತ್ರದಲ್ಲಿ ದೊರೆತ ಶಿಲಾಶಾಸನಗಳಲ್ಲಿ ಅತೀ ಪ್ರಾಚೀನವಾದುದೆಂದರೆ ಅಲ್ಲಿಯ ಕೇದಾರೇಶ್ವರ ದೇಗುಲದ ಒಳಗೋಡೆಯ ಅರ್ಧಕಂಬದ ಮೇಲಿರುವ ಶಾಸನ. ಇದರ ಕಾಲ ಕ್ರಿ.ಶ. ೧೦೧೯. ಇದರಲ್ಲಿ ಕಲ್ಯಾಣ ಚಾಲುಕ್ಯರ ಸಾಮಂತನೂ, ರಾಷ್ಟ್ರಕೂಟ ಕುಲತಿಲಕನೂ ಎನಿಸಿದ ಭೀಮದೇವರ ಸೇವಕ ಸೇನಬೋವ, ನಾಗವರ್ಮಯ್ಯನ ಉಲ್ಲೇಖವಿದೆ. ಜೊತೆಗೆ ಮಾತಿಳ ಚಾವೋಜ, ಎಡೆವ ಗೇತೋಜ, ಅಯ್ಯಾವೊಳೆ ಗೇತೋಜ ಮತ್ತು ಬನದ ದೇವಿಯ ದಾಸಿ ದುವ್ವೋಜ ಎಂಬ ನಾಲ್ವರು ಓಜರ ಪ್ರಸ್ತಾಪವಿದೆ. ಇದರಲ್ಲಿ ದುವ್ವೋಜನನ್ನು "ಬನದ ದೇವಿಯ ದಾಸಿ" ಎಂದು ಕರೆಯಲಾಗಿದೆ. ಇದರಿಂದ ದುವ್ವೋಜನು ದೇವಿಯ ಅರ್ಚಕನೆಂದು ತೋರುತ್ತದೆ. ಸಾಮಾನ್ಯವಾಗಿ ಗ್ರಾಮ ದೇವತೆಯ ಪೂಜಾರಿಗಳು ಓಜರೇ ಇರುವದು ಈಗಲೂ ವಾಡಿಕೆ ಮತ್ತು ಸಂಪ್ರದಾಯ. ಓಜರು ಎಂದರೆ ಶಿಲ್ಪಿ ಬ್ರಾಹ್ಮಣರು ಅಥವಾ ವಿಶ್ವಕರ್ಮರು. ಕಾಳಿ ಇವರ ಕುಲದೇವಿ

* 'ಈಶ್ವರ ಶಿಲ್ಪ', ವಿದ್ಯಾನಗರ, ಬಾದಾಮಿ, ಬಾಗಲಕೋಟೆ ಜಿಲ್ಲೆ.

ಶಿರಸಂಗಿ ಕಾಳಿಕಾದೇವಿ, ಶಿರಸಿ ಮಾರಿಕಾಂಬಾ ದೇವಿಯ ಅರ್ಚಕರು ವಿಶ್ವಕರ್ಮರು ಎಂಬುದನ್ನಿಲ್ಲಿ ನೆನೆಯಬಹುದು.

ವಿಜಯನಗರ ಅರಸು ಅಚ್ಯುತರಾಯನು ರಾಜ್ಯಭಾರ ಮಾಡುತ್ತಿದ್ದಾಗ ಮಹಾರಾಜಕ (ದಾಳಿ) ದಿಂದ[೩] ಹಾಳಾಗಿದ್ದ ಬನದ ಮಹಾಮಾಯಿ ದೇವಾಲಯವು ಜೀರ್ಣೋದ್ಧಾರಗೊಂಡ ಸಂಗತಿ ೧೫೩೨ರ ಶಾಸನದಲ್ಲಿ ದಾಖಲಾಗಿದೆ.[೪] ಪ್ರಾಕಾರದ ಹೊರಗಿರುವ ಪ್ರಾಚೀನ ದೇಗುಲವೇ ಹೀಗೆ ಜೀರ್ಣೋದ್ಧಾರಗೊಂಡ ಗುಡಿ. ಈಗಲೂ ಅದರ ಶಿಖರ ಭಾಗಗಳಲ್ಲಿ ಗಾರೆಯಿಂದ ದುರಸ್ತಿ ಮಾಡಿರುವುದನ್ನು ಕಾಣಬಹುದು. ಅದಾಗಿ ಈ ಪ್ರಾಚೀನ ಮಂದಿರವೇ ಶಾಸನದಲ್ಲಿ ಹೇಳಲಾದ ಬನದ ಮಹಾಮಾಯಿ ದೇವಾಲಯ. ಆದ್ದರಿಂದ "ಇದೇ ಮೊದಲ ಬನಶಂಕರಿ ಗುಡಿ" ಎನ್ನುವ ಜನಪದರ ಮಾತು ಸತ್ಯವಾದುದು.

ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯು ಬನಶಂಕರಿ ದೇವಸ್ಥಾನದ ಹರಿದ್ರಾ ತೀರ್ಥ ಎಂಬ ವಿಶಾಲ ಪುಷ್ಕರಿಣಿಯನ್ನು ಸ್ವಚ್ಛಗೊಳಿಸುವಾಗ ಸುಮಾರು ೪' ಎತ್ತರ, ೩' ಅಗಲ ಹಾಗೂ ೧.೫' ದಪ್ಪ ಇರುವ ಉಸುಕು ಕಲ್ಲಿನಲ್ಲಿ ಕಂಡರಿಸಲಾದ ದೇವಿ ವಿಗ್ರಹವೊಂದು ದೊರೆಯಿತು. ಲಕ್ಷಣಗಳನ್ನಾಧರಿಸಿ, ಇದು ವಿಜಯನಗರ ಕಾಲದ ಮೂರ್ತಿಯೆಂದು ಡಾ. ಶ್ರೀನಿವಾಸ ಪಾಡಿಗಾರ ಅವರು ಗುರುತಿಸಿದ್ದಾರೆ. ಇದೀಗ ಬಾದಾಮಿಯ ಪುರಾತತ್ವ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿತವಾಗಿದೆ.

ಈ ದೇವಿಯ ಮೂರ್ತಿಯ ಎರಡು ಕೈಗಳು, ಸ್ತನಗಳು, ಒಡೆದು ಹೋಗಿವೆ. ಈಗ ಪೂಜೆಗೊಳ್ಳುತ್ತಿರುವ ಬನಶಂಕರಿ ದೇವಿಯಂತೆ, ಈ ದೇವಿಯು ಕೂಡ ಬಲಗೈಗಳಲ್ಲಿ ತ್ರಿಶೂಲ, ಗಂಟೆ, ಖಡ್ಗಗಳನ್ನು ಮತ್ತು ಎಡಗೈಗಳಲ್ಲಿ ಡಮರು, ಗುರಾಣಿ, ರುಂಡಗಳನ್ನು ಹಿಡಿದಿರುವಂತೆ ಶಿಲ್ಪಿತಳಾಗಿದ್ದಾಳೆ. ಈ ಶಿಲ್ಪಗಳ ಪ್ರತಿಮಾ ಲಕ್ಷಣಗಳ ಸಾಮ್ಯವನ್ನು ಲಕ್ಷ್ಯಿಸಿದಾಗ ಇವೆರಡೂ ಒಂದೇ ದೇವಿಯ ಶಿಲ್ಪಗಳೆಂಬುದು ಸ್ಪಷ್ಟವಾಗುತ್ತದೆ. ಪುಷ್ಕರಿಣಿಯಲ್ಲಿ ದೊರೆತ, ಮುಕ್ಕಾದ ಈ ದೇವಿಯ ಶಿಲ್ಪವು ಮೂಲ ಬನಶಂಕರಿ ದೇವಸ್ಥಾನದಲ್ಲಿಯದು ಎಂದು ಹೇಳಬಹುದು. ಅಲ್ಲಿ ಪ್ರತಿಷ್ಠಾಪನಗೊಂಡ ಎರಡನೆಯ ಮೂರ್ತಿ ಇದು.

ಮಹಾರಾಜಿಕ (ಮುತ್ತಿಗೆ)ದಿಂದ ದೇವಾಲಯವು ಖಿಲವಾಯಿತೆಂದು ಅಚ್ಯುತರಾಯನ ಶಾಸನದಿಂದ ಸ್ಪಷ್ಟವಾಗುತ್ತದೆ. ಆದರೆ ಶಿಲ್ಪವು ಭಿನ್ನವಾದ ಬಗ್ಗೆ ನಿಶ್ಚಿತವಾಗಿ ತಿಳಿದು ಬರುವುದಿಲ್ಲ. ಆದಾಗ್ಯೂ ಆ ಬಗ್ಗೆ ಸುಳುಹು ಇದೆ. ಶಾಸನದ ಪಠ್ಯದ ಸಾಲೊಂದು ತ್ರುಟಿತವಾಗಿದ್ದು '....ಪ್ರತಿಷ್ಠೆ ಮಾಡ ಹೇಳಿ' ಎಂದಿರುವುದರಿಂದ ತ್ರುಟಿತಗೊಂಡ ಭಾಗದಲ್ಲಿ ಶಿಲ್ಪದ ಪ್ರಸ್ತಾಪವೇ ಇರಬೇಕು. ದೇವಾಲಯವನ್ನೇ ಹಾಳು ಮಾಡಿದ ಧರ್ಮಾಂಧರು ಮೂಲವಿಗ್ರಹವನ್ನು ಹಾಳು ಮಾಡದೇ ಇರಲು ಹೇಗೆ ಸಾಧ್ಯ ?

ಸುಮಾರು ೧೯೭೫ರ ವೇಳೆಗೆ ಡಾ. ಅ. ಸುಂದರ ಅವರು ಇಲ್ಲಿಯ ಹಾಳು ದೇಗುಲದ ಪಕ್ಕದಲ್ಲಿ ಹೊರಗೆ ಇಡಲಾಗಿದ್ದ ಸುಮಾರು ಎರಡು – ಮೂರು ಅಡಿ ಎತ್ತರದ ಭಗ್ನವಾಗಿರುವ ದೇವಿ ಶಿಲ್ಪವನ್ನು ರಾಷ್ಟ್ರಕೂಟರ ಕಾಲದ್ದೆಂದು ಗುರುತಿಸಿದ್ದರು. ಅದೇ ಮೊದಲ ಮೂಲವಿಗ್ರಹವಾಗಿರಬೇಕು. ಅದು ವಿರೂಪವಾದ ಕಾರಣ ಬೇರೊಂದು ದೇವಿ ವಿಗ್ರಹವನ್ನು ಪ್ರತಿಷ್ಠಾಪಿಸಿರುವುದು ಸಹಜವಾದುದೇ.

ಸುಮಾರು ೧೧ನೆಯ ಶತಮಾನದ ಎರಡು ಶಾಸನಗಳಲ್ಲಿ ಈ ದೇವಿಯನ್ನು "ಬನದ ದೇವಿ" ಎಂದೂ, ೧೬ನೆಯ ಶತಮಾನದ ಎರಡು ಶಾಸನಗಳಲ್ಲಿ "ಬನದ ಮಹಾಮಾಯಿ" ಎಂದೂ ಕರೆಯಲಾಗಿದೆ. ಅಂದರೆ ಗುಡಿಯನ್ನು ಜೀರ್ಣೋದ್ಧಾರ ಮಾಡುವ ಸಂದರ್ಭದಲ್ಲಿ ಮೊದಲಿನ ಮೂರ್ತಿಗಿಂತ ದೊಡ್ಡದಾಗಿರುವ ವಿಗ್ರಹವನ್ನು ಕಂಡರಿಸಿ ಅವಳನ್ನು 'ಬನದ ಮಹಾಮಾಯಿ' ಎಂದು ಕರೆದಿರುವುದು ಸಹಜವೆನಿಸುತ್ತದೆ.

ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿತವಾಗುತ್ತಿರುವ ದೇವಿಶಿಲ್ಪವು ಇಲ್ಲಿ ಪ್ರತಿಷ್ಠಾಪಿತವಾದ ಎರಡನೆಯ ಶಿಲ್ಪವೆಂಬುದು ಅರ್ಥವಾಗುತ್ತದೆ. ಆನಂತರ ಈ ಶಿಲ್ಪವೂ ಕೂಡ ಇನ್ನೊಂದು ಆಕ್ರಮಣಕ್ಕೆ ತುತ್ತಾಗಿ ವಿರೂಪಗೊಂಡು, ಪೂಜೆಗೆ ಅನರ್ಹವಾದ ಕಾರಣ ಎದುರಿನ ಪುಷ್ಕರಿಣಿಯಲ್ಲಿ ವಿಸರ್ಜಿತಗೊಂಡಿರಬೇಕು. ಪುರಾಣದ ಕತೆಗಳಲ್ಲಿ ಇದು ಸೂಚಿತವಾಗಿರುವುದನ್ನು ಕಾಣುತ್ತೇವೆ. ಕಥೆಯಲ್ಲಿ ಹೇಳಲಾದಂತೆ ನೂರು ವರ್ಷಗಳ ಕಾಲ ಬರಗಾಲವಿದ್ದ ಸಂಗತಿಯು ಹಲವಾರು ವರ್ಷಗಳವರೆಗೆ ಈ ಮಂದಿರದಲ್ಲಿ ಯಾವುದೇ ಪೂಜಾವಿಧಿಗಳು ಜರುಗಲಿಲ್ಲವೆಂಬುದನ್ನು ಸೂಚಿಸುತ್ತದೆ.

ಕ್ಯಾಂಪಬೆಲ್ ಅವರ ಗ್ಯಾಸೆಟಿಯರ್‌ದಲ್ಲಿ ಹೀಗೆ ಹೇಳಲಾಗಿದೆ : According to legend, it is said that no rains fell for hundred years. The Sages prayed to the Goddess who, pleased with their devotion, took the form of Shakambari and took up her abode in the pond.[೫]

ಇನ್ನೊಂದು ಕತೆಯ ಮೇರೆಗೆ ಒಮ್ಮೆ ದೇವಿಗೆ ನೀಡಿದ ಫಲ ಕಾಣಿಕೆಯನ್ನು ಮಗುವೊಂದು ತಿಂದುಬಿಟ್ಟಿತಂತೆ. ಸಿಟ್ಟಿಗೆದ್ದ ವನದೇವಿಯು ಆ ಮಗುವನ್ನೇ ನುಂಗತೊಡಗಿದಳು. ಆದರೆ ಮಗುವಿನ ಕಾಲಲ್ಲಿಯ ಕಾಲ್ಗಡಗಗಳು ಆಕೆಯ ಬಾಯಿಯ ಹೊರಗೆ ಉಳಿದವು. ಭಕ್ತರೆಲ್ಲರೂ ಅನನ್ಯವಾಗಿ ದೇವಿಯಲ್ಲಿ

ಪ್ರಾರ್ಥಿಸಲು ಆಕೆಯು ಮಗುವನ್ನು ಸಜೀವವಾಗಿ ಹಿಂತಿರುಗಿಸಿ ತನ್ನನ್ನು ಆ ಪುಷ್ಕರಣಿಯಲ್ಲಿ ನೆಲೆಗೊಳಿಸ ಬೇಕೆಂದು ಆದೇಶಿಸಿದಳು. ಈ ಎರಡೂ ಕತೆಗಳು, ದೇವಿಯ ಶಿಲ್ಪವನ್ನು ಮಂದಿರದ ಪುಷ್ಕರಣಿಯಲ್ಲಿ ವಿಸರ್ಜಿಸಿರುವುದನ್ನು ಸ್ಪಷ್ಟವಾಗಿ ನಿರ್ದೇಶಿಸುತ್ತದೆ.

ಈ ಪುಷ್ಕರಿಣಿಯನ್ನು ಸುಮಾರು ೧೬೮೦ ರ ವೇಳೆಗೆ ಶಂಕರಶೇಠ (ಶೆಟ್ಟಿ) ಮತ್ತು ಚಂದ್ರಶೇಠ(ಶೆಟ್ಟಿ) ಎಂಬ ಇಬ್ಬರು ಜೈನರು ಕಟ್ಟಿಸಿದರೆಂದು ಜೇಮ್ಸ ಕ್ಯಾಂಪ್‌ಬೆಲ್‌ರ ಗ್ಯಾಸೆಟಿಯರ್ ತಿಳಿಸುತ್ತದೆ. (ಪು. ೬೭೯). ಅಂದರೆ ಈ ಅವಧಿಯ (ಕ್ರಿ.ಶ. ೧೬೮೦) ನಂತರ ದೇವಿ ಶಿಲ್ಪವು ಭಗ್ನಗೊಂಡಿರಬೇಕು. ಇದು ವಿಜಯನಗರೋತ್ತರ ಕಾಲ. ಅಥವಾ ಮರಾಠಾ ಹಾಗೂ ಆದಿಲಶಾಹಿ ರಾಜರ ಕಾದಾಟದ ಅವಧಿ. ದೇವಾಲಯವು ಗ್ರಾಮದಿಂದ ಬಲುದೂರದಲ್ಲಿದ್ದು, ವನದ ಮಧ್ಯೆ ಏಕಾಕಿಯಾಗಿದ್ದ ಕಾರಣ ಅದು ಹಲವು ಬಾರಿ ದಾಳಿಗೆ ಒಳಗಾಗಿದೆ. ಗಡಿ ಭಾಗದಲ್ಲಿದ್ದ ಈ ಭೂ ಪ್ರದೇಶವು ಆಗಾಗ್ಗೆ ಅನಿರೀಕ್ಷಿತ ದಾಳಿಗಳಿಗೆ ತುತ್ತಾಗುತ್ತಿತ್ತು. ಈ ಕಾರಣಕ್ಕಾಗಿಯೇ ವಿಜಯನಗರದ ಅರಸ ಹರಿಹರನು ಕ್ರಿ.ಶ. ೧೩೫೯ರ ವೇಳೆಗೆ ಬಾದಾಮಿಯಲ್ಲಿ ಕೋಟೆಯೊಂದನ್ನು ಕಟ್ಟಿಸಿದ್ದನು.

ಅಂದಿನ ಅಭದ್ರ ಸಾಮಾಜಿಕ ಜೀವನದ ಚಿತ್ರಣ ನೀಡುವ ಹಾಡುಗಳು ಇನ್ನೂ ಜನರ ಬಾಯಿಯಲ್ಲಿವೆ. ಇಂದಿನ ಗ್ರಾಮೀಣ ಮಹಿಳೆಯರು ಅಳುತ್ತಿರುವ ಮಕ್ಕಳನ್ನು ಸುಮ್ಮನಾಗಿರಿಸಲು "ಆನಿ ಬಂತಾನಿ" ಎಂದು ಹೆದರಿಕೆ ಹಾಕುವುದುಂಟು. ವಿಜಾಪೂರದ ಈ ಆನೆ ಮುಸಲ್ಮಾನರ ದಾಳಿಯ ಪ್ರತೀಕವೆಂಬುದು ಜಾನಪದ ವಿದ್ವಾಂಸರ ವಿಶ್ಲೇಷಣೆ.[೬]

ಹೀಗೆ ಇನ್ನೊಂದು ದಾಳಿಗೆ ತುತ್ತಾಗಿ ಎರಡನೆಯ ದೇವಿಯ ಶಿಲ್ಪವೂ ಒಡೆದು ಹೋದ ಕಾರಣ ಬೇರೊಂದು ಹೊಸ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡುವ ಅನಿವಾರ್ಯತೆ ಉಂಟಾಗಿರಬೇಕು. ಹೀಗೆ ಮೂರನೆಯ ಬಾರಿ ಪ್ರತಿಷ್ಠಾಪಿತಗೊಂಡ ದೇವಿಯನ್ನು "ಬನಶಂಕರಿ" ಎಂಬ ಹೊಸ ಅಭಿಧಾನದಿಂದ ಕರೆದಿರುವುದು ಸ್ಥಳ ಪುರಾಣದಿಂದ ತಿಳಿದು ಬರುತ್ತದೆ.

ಶ್ರೀಶೇಷ ದೀಕ್ಷಿತ ಹಿಂಡಸಗೇರಿ ಅವರಿಂದ ರಚಿತವಾದ ಶ್ರೀ ಬನಶಂಕರಿ (ಶಾಕಂಭರೀ) ಮಹಾತ್ಮ್ಯಂ ಎಂಬ ಸಂಸ್ಕೃತ ಸ್ಥಳಪುರಾಣದಲ್ಲಿ ೪ನೇ ಅಧ್ಯಾಯದ ಕೊನೆಯ ಮೂರು ಶ್ಲೋಕಗಳ ಭಾವಾರ್ಥ ಹೀಗಿದೆ.

"ಹರಿದ್ರಾತೀರ್ಥದ ಪಶ್ಚಿಮ ದಿಕ್ಕಿನಲ್ಲಿ ಹಾಗೂ ತೈಲ ತೀರ್ಥದ ದಕ್ಷಿಣ ದಿಕ್ಕಿನಲ್ಲಿ ದೇವೇಂದ್ರನ ಆಣತಿಯಂತೆ ಮನೋಹರವಾದ ಮಂದಿರವನ್ನು ಕಟ್ಟಿ ಅಲ್ಲಿ ಸುಮುಹೂರ್ತ



ಮೂಲ ಬನಶಂಕರಿ ದೇವಸ್ಥಾನ



ಬನದ ಮಹಾಮಾಯಿ



ನಿತ್ಯ ಪೂಜೆಗೊಳ್ಳುತ್ತಿರುವ ಶ್ರೀ ಬನಶಂಕರಿ ದೇವಿ

ದಲ್ಲಿ ಹಾಗೂ ಸ್ಥಿರ ಲಗ್ನದಲ್ಲಿ ಸಿಂಹಾರೂಢಳಾದ ದೇವಿಯನ್ನು "ಶಾಕಂಬರೀ" ಎಂಬ ಹೆಸರಿನಿಂದ ಸ್ಥಾಪಿಸಿ ಸಂತೋಷದಿಂದ ಯುಕ್ತರಾಗಿ. ವೈದಿಕ ಮಂತ್ರಗಳಿಂದಲೂ. ತಾಂತ್ರಿಕ ಮಂತ್ರ ಗಳಿಂದಲೂ ಪೂಜಿಸಿ ದೇವತೆಗಳೆಲ್ಲರೂ ಕೃತಾರ್ಥರಾದರು. ಹೀಗೆ "ಬನಶಂಕರಿ" ಎಂಬ ಹೊಸ ಹೆಸರು ಪ್ರಾಪ್ತವಾಯಿತು."

ಜೇಮ್ಸ ಕ್ಯಾಂಪಬೆಲ್ ಅವರ ಗ್ಯಾಸೆಟಿಯರ್‌ದಲ್ಲಿ ಹೀಗೆ ಹೇಳಲಾಗಿದೆ. "About 1750 one Parashuram Naik Anagale of Satara came to pay his devotions to the Goddess and finding her temple ruinous, built a new temple at the request of the Gooddess in which he placed her image, repaired the lake and built the great door of the temple enclosure."

ಆದ್ದರಿಂದ ಈಗಿರುವ ಕಪ್ಪುಕಲ್ಲಿನ ಬನಶಂಕರಿ ದೇವಾಲಯವನ್ನು ಕ್ರಿ.ಶ. ೧೭೫೦ರ ಸುಮಾರಿಗೆ ಸಾತಾರೆಯ ಪರಶುರಾಮ ನಾಯಕ ಅನಗಳಲೆ ಎಂಬಾತನು ಕಟ್ಟಿಸಿದ ನೆಂಬುದು ತಿಳಿದುಬರುತ್ತದೆ.[೭] ಇಲ್ಲಿಯ ವಿಗ್ರಹವನ್ನು ಮರಾಠಾ ಸಿಂಧೇ ಮನೆತನದವರು ಸುಮಾರು ೧೭ ನೆಯ ಶತಮಾನದಲ್ಲಿ ಪ್ರತಿಷ್ಠಾಪಿಸಿದರೆಂದು ಪೀಠದಲ್ಲಿಯ ಶಾಸನವೂ ತಿಳಿಸುತ್ತದೆ – ಎಂದು ಆನಂತರದ ಗ್ಯಾಸೆಟಿಯರ್ ದಾಖಲಿಸುತ್ತದೆ.[೮] ಡಾ. ಶ್ರೀನಿವಾಸ ಪಾಡಿಗಾರರು ದೂರದಿಂದ ವೀಕ್ಷಿಸಿದ ಶಾಸನವು ಇದೇ ಆಗಿರಬಹುದು. ಇದರ ಪರಿಶೀಲನೆ ಆಗುವ ಅಗತ್ಯವಿದೆ.

ಅಚ್ಯುತರಾಯನ ಕಾಲದಲ್ಲಿ ದೇವಾಲಯದ ಜೀರ್ಣೋದ್ಧಾರವಾಗಿ ಭವ್ಯವಾದ ಉಸುಕು ಕಲ್ಲಿನ ವಿಗ್ರಹವು ಪ್ರತಿಷ್ಠಾಪಿತವಾದರೆ, ಮರಾಠಾ ಅವಧಿಯಲ್ಲಿ ನೂತನ ದೇವಾಲಯವು ನಿರ್ಮಿತವಾಗಿ ಅದರಲ್ಲಿ ಕಪ್ಪುಶಿಲೆಯ ಶಾಂತ ಮುಖಭಾವದ ಬನಶಂಕರಿ ಶಿಲ್ಪವು ಪ್ರತಿಷ್ಠಾಪಿತವಾಯಿ ತೆಂಬುದು ಈ ಚರ್ಚೆಯಿಂದ ಸ್ಪಷ್ಟವಾಗುತ್ತದೆ. ಶಿಲ್ಪದ ಪ್ರತಿಮಾ ಲಕ್ಷಣಗಳು ಮತ್ತು ದೇವಾಲಯದ ವಾಸ್ತು ಲಕ್ಷಣಗಳು ಕೂಡ ಮರಾಠಾ ಶೈಲಿಯವಾಗಿರುವುದು ಕೂಡ ಇದನ್ನು ಸಮರ್ಥಿಸುತ್ತದೆ.

ಬನಶಂಕರಿ ದೇವಾಲಯದ ಇಂದಿನ ಅರ್ಚಕರು ಕಣ್ವ ಬ್ರಾಹ್ಮಣರು. ಶ್ರೀವತ್ಸ ಗೋತ್ರದವರು. ಇವರದು ಕಾತ್ಯಾಯನ ಸೂತ್ರ. ಶುಕ್ಲ ಯಜುರ್ವೇದ ಶಾಖೆ. ಮನೆತನದ ಹೆಸರು ಪೂಜಾರ ಎಂದಿದೆ. ಇವರ ಕುಲದೇವರು ಮೈಲಾರಲಿಂಗ, ಬನಶಂಕರಿಯಲ್ಲ.

೬ ಏಪ್ರಿಲ್ ೧೮೬೦ ರಂದು ಮಾಮಲೇದಾರರಿಂದ ರುಜುವಾದ ಅರ್ಚಕರ ವಂಶಾವಳಿಯಲ್ಲಿ ಪೂಜಾರ ಮನೆತನದ ಮೂಲ ಪುರುಷರ ಹೆಸರು ಚೌಡಂಭಟ್ಟ ಎಂದಿದೆ. ಈ ವಂಶಾವಳಿಯನ್ನು ಬರೆದಾಗ ನೀಲಕಂಠಭಟ್ಟರಿಗೆ ೪೪ ವರ್ಷ ವಯಸ್ಸು.

ಇವರ ತಂದೆ ಶ್ಯಾಮಭಟ್ಟರು ಮತ್ತು ಈ ಶ್ಯಾಮಭಟ್ಟರ ಮುತ್ತಾತರು ಶಂಕರಭಟ್ಟರು. ಪ್ರಾಯಶಃ ಇವರೇ ಅರ್ಚಕರಾಗಿ ಮೊದಲು ನಿಯುಕ್ತರಾದವರು. ೧೮೬೦ ರಿಂದ ೪-೫ ತಲೆಮಾರು ಹಿಂದಕ್ಕೆ ಹೋದರೆ ಬಹುಶಃ ಕ್ರಿ.ಶ. ೧೭೫೦ರ ಸುಮಾರಿಗೆ ಹೊಸದಾಗಿ ನಿರ್ಮಾಣವಾದ ಬನಶಂಕರಿ ದೇವಿ ವಿಗ್ರಹದ ಅರ್ಚನೆ ಪ್ರಾರಂಭವಾದಂತೆ ತೋರುತ್ತದೆ. ಅಂದರೆ ನೂತನ ದೇವಾಲಯದ ನಿರ್ಮಾಣ ಕಾಲದಿಂದ ಇಂದಿನ ಅರ್ಚಕರ ಮನೆತನವೇ ಪೂಜಾ ಕೈಂಕರ್ಯವನ್ನು ವಹಿಸಿಕೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ.

ಒಟ್ಟಿನಲ್ಲಿ ಕಲ್ಯಾಣ ಚಾಲುಕ್ಯರ ಅವಧಿಯಲ್ಲಿ ವಿಶ್ವಬ್ರಾಹ್ಮಣ (೬೨)ರಿಂದ ಪೂಜಿತಳಾದ ಬನದ ದೇವಿಯು ವಿಜಯನಗರ ಅರಸರ ಕಾಲದಲ್ಲಿ ಬನದ ಮಹಾಮಾಯಿಯಾಗಿ, ನಂತರ ಮರಾಠರ ಆಳ್ವಿಕೆಯಲ್ಲಿ ಶಿಷ್ಟೀಕರಣಗೊಂಡು ಬನಶಂಕರಿ ಯೆಂಬ ಹೊಸ ಅಭಿಧಾನದೊಂದಿಗೆ ನೂತನವಾಗಿ ನಿರ್ಮಿತವಾದ ದೇವಾಲಯದಲ್ಲಿ ಕಪ್ಪು ಶಿಲಾ ಪ್ರತಿಮೆಯಾಗಿ ನೆಲೆಗೊಂಡು ಕಣ್ವ ಬ್ರಾಹ್ಮಣರಿಂದ ಪೂಜೆ ಸ್ವೀಕರಿಸ ತೊಡಗಿದಳೆಂದು ತೀರ್ಮಾನಿಸಬಹುದು.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. B.K. No. 140 of 1928-29; (1019 AD) ಮತ್ತು S.I.I. XI (1), 60, (1024 AD).

೨. **ಜಯಕರ್ನಾಟಕ,** ೧-೩, (1532 AD) ಮತ್ತು I.A.X, 66, (1544 AD).

೩. ಡಾ. ದೇವರಕೊಂಡಾರೆಡ್ಡಿಯವರು 'ಮಹಾರಾಜಕರಿಂದ' ಎಂದು ಓದಿ, 'ಮುಸಲ್ಮಾನರಿಂದ' ಎಂದು ಅರ್ಥೈಸಿದ್ದಾರೆ. I.A.V. 19-8 ರಲ್ಲಿ 'ಮಹಾರಾಜಿಕದಿಂದ' ಎಂದಿದೆ. ರಾಜಿಕ ಎಂದರೆ ಆಕ್ರಮಣ ಎಂದರ್ಥ.

೪. **ಜಯಕರ್ನಾಟಕ,** ೧-೩.

೫. **Bijapur Gazetteer,** Editor : James Campbell, Vol. XXIII, 1884 (Reprint 2001), P. 679.

೬. **ಕನ್ನಡ ಜನಪದ ಗೀತಗಳು,** (ಸಂ) ಡಾ. ಜಿ.ಎಸ್. ಗದ್ದಗಿಮಠ, ಕ.ವಿ.ವಿ. ಧಾರವಾಡ, ದ್ವಿತೀಯ ಮುದ್ರಣ, ೧೯೭೯, ಪುಟ ೪೯-೫೦.

೭. ವಸಂತ ಗೋಪಾಲ ಜೋಷಿ ಅವರ **"ಶಾಕಂಭರಿ ಮಹಾತ್ಮೆ"** ಎಂಬ ಮರಾಠಿ ಕೃತಿಯಲ್ಲಿ ಈ ಹೆಸರು ಪರಶುರಾಮ ನಾರಾಯಣ ಅನಗಳ ಎಂದಿದೆ. ಇದೇ ಸರಿಯಾದ ಹೆಸರೆಂದು ತೋರುತ್ತದೆ.

೮. **ವಿಜಾಪೂರ ಜಿಲ್ಲೆ,** (ಸಂ.) ಡಾ. ಆರ್. ಮುನಿಸ್ವಾಮಿ, ಕರ್ನಾಟಕ ರಾಜ್ಯ ಗ್ಯಾಸೆಟಿಯರ್ (೧೯೯೯), ಪುಟ ೧೧೦೪.

ಡಾ. ಆರ್.ಎಚ್. ಕುಲಕರ್ಣಿ*

ತ್ರಿಪುರಾಂತಕ ಶಿವ : ಕೆಲವು ವೈವಿಧ್ಯಮಯ ದೃಶ್ಯ ನಿರೂಪಣೆ

ತ್ರಿಪುರಾತಂಕ, ತ್ರಿಪುರಾರಿ, ತ್ರಿಪುರಾಸುರ, ಸಂಹಾರಮೂರ್ತಿ, ತ್ರಿಪುರಸಂಹಾರ, ತ್ರಿಪುರ ವಿಜಯ, ತ್ರಿಪುರ ಸುಂದರ, ಪುರಾರಿ ಹೀಗೆ ಹಲವಾರು ಹೆಸರುಗಳಿಂದ ಕರೆಯಲಾಗುವ ಶಿವನ ಈ ರೂಪ ಅವನ ಹಲವು ಉಗ್ರ ಹಾಗೂ ಲೀಲೆಗಳಲ್ಲಿ ಒಂದಾಗಿವೆ. ತ್ರಿಪುರ ಸಂಹಾರದ ದೃಶ್ಯ ನಿರೂಪಣೆಗಳು ಭಾರತೀಯ ಶಿಲ್ಪ ಹಾಗೂ ಚಿತ್ರಕಲೆಗೆ ಪೂರಕವಾದಂತೆ ಕ್ರಿ.ಶ. ಆರು ಮತ್ತು ಏಳನೇ ಶತಮಾನಗಳಲ್ಲಿ ಜನಪ್ರಿಯವಾಯಿತು. ಕರ್ನಾಟಕದ ಮಟ್ಟಿಗೆ ಬಾದಾಮಿ ಚಾಲುಕ್ಯರ ಕಾಲದಿಂದಲೇ ತ್ರಿಪುರವಿಜಯ ಶಿಲ್ಪಗಳು ಕಂಡುಬರುತ್ತವೆ. ವಿಶೇಷವೆಂದರೆ ಕರ್ನಾಟಕ ಒಂದರಲ್ಲಿಯೇ, ತ್ರಿಪುರಸಂಹಾರದ ದೃಶ್ಯ ನಿರೂಣೆಯಲ್ಲಿ ಕಾಲಘಟ್ಟಗಳಿಗೆ ಅನುಗುಣವಾಗಿ ವೈವಿಧ್ಯತೆ ಕಂಡುಬರುತ್ತದೆ. ಅಂತಹ ಹಲವು ನಿರೂಪಣೆಗಳನ್ನು ಶಿಲ್ಪ ಮತ್ತು ಚಿತ್ರಕಲೆಯಲ್ಲಿ ಗುರುತಿಸುವುದೇ ಈ ಪ್ರಬಂಧದ ಆಶಯವಾಗಿದೆ.

ತ್ರಿಪುರಸಂಹಾರದ ಶಿವ ಉಗ್ರರೂಪಿ, ಪ್ರಾಚೀನ ಶಿಲ್ಪ ಶಾಸ್ತ್ರಕೃತಿಗಳ ಪ್ರಕಾರ ಅವನಿಗೆ ೨,೪,೮ ಅಥವಾ ೧೦ ಕೈಗಳು ಇರಬಹುದಾಗಿವೆ. ತ್ರಿಪುರಾಂತಕ ಶಿವನು ಯಾವಾಗಲೂ ಎಡಗೈಯಲ್ಲಿ ಬಿಲ್ಲು ಹಾಗೂ ಬಲಗೈಯಲ್ಲಿ ಬಾಣವನ್ನು ಹಿಡಿದಿರಬೇಕು, ಅಲ್ಲದೇ ಯಾವಾಗಲೂ ಉಮೆಯ ಜೊತೆಯಲ್ಲಿ ಇರಬೇಕು ಹಾಗೂ ರಥಾರೂಢಿಯಾಗಿರಬೇಕು. ಈ ವರ್ಣನೆಯ ಪ್ರಕಾರ ಶಿವನು, ಯುದ್ಧೋತ್ಸಾಹದಲ್ಲಿ ಇದ್ದು ತ್ರಿಪುರಾಸುರರನ್ನು ಸಂಹಾರ ಮಾಡುವತ್ತ ಸನ್ನದ್ಧನಾಗಿರುವಂತೆ ಬಿಂಬಿಸಲಾಗುತ್ತದೆ. ಇದು ಸಾಮಾನ್ಯವಾಗಿ ಬಹುತೇಕ ಶಿಲ್ಪಗಳಲ್ಲಿ ಕಂಡುಬರುವಂತಹ ದೃಶ್ಯ ನಿರೂಪಣೆಯಾಗಿದೆ.

ತ್ರಿಪುರಾಂತಕ ಶಿವನ ಪರಿಕಲ್ಪನೆ ವೇದಗಳಲ್ಲಿಯೇ ಉಲ್ಲೇಖಗೊಳ್ಳುತ್ತವೆ. ತ್ರಿಪುರಾಂತಕ ಶಿವನ ಕುರಿತಾದಂತೆ ಕಥೆ ಹುಟ್ಟಿಕೊಳ್ಳುವುದು 'ಉಪಾಸದ್' ಎಂಬ ವೈದಿಕ ಯಜ್ಞದ ಆಚರಣೆಯಿಂದ. ಈ ಕುರಿತಂತೆ ಖ್ಯಾತ ಇತಿಹಾಸ ತಜ್ಞೆ ಸ್ಟೆಲ್ಲಾ ಕ್ರಾಮ್ರಿಶ್ಚರು ತಮ್ಮ ಮ್ಯಾನಿಫೆಸ್ಟೇಶನ್ಸ್ ಆಫ್ ಶಿವ ಎಂಬ ಕೃತಿಯಲ್ಲಿ ಚರ್ಚಿಸಿದ್ದಾರೆ[೧]. ನಂತರದಲ್ಲೂ ಶಿವನ ಈ ಪರಿಕಲ್ಪನೆಯು ಪುರಾಣಗಳಲ್ಲಿ ಹಾಗೂ ಶಿವನ ಲೀಲೆಗಳಲ್ಲಿ ಕಥನರೂಪವಾಗಿ ಬೆಳವಣಿಗೆ ಹೊಂದಿತು. ವಿಶೇಷವಾಗಿ ಶಿವನು ಮೂರು ನಗರಗಳನ್ನು ಅಥವಾ ಆ ನಗರಗಳಲ್ಲಿ ವಾಸಿಸುವ ರಾಕ್ಷಸರನ್ನು ಸಂಹರಿಸಿಕೊಂಡು ಕಥನವೇ ತ್ರಿಪುರಾಂತಕ ಶಿವನ ನಿರೂಪಣೆಗೆ ಮೂಲ ಆಕಾರವಾಗಿದೆ. ಲಿಂಗಪುರಾಣದ ಪ್ರಕಾರ[೨], ಮೂರು ನಗರಗಳ ಅಸುರರು ಶಿವನ ಅನನ್ಯ ಭಕ್ತರಾಗಿದ್ದರು. ಅಲ್ಲದೇ ಬಹಳ ಗರ್ವಿಷ್ಟರೂ ಹಾಗೂ ಜನಮಾನಸಕ್ಕೆ ಕಂಟಕಪ್ರಾಯರಾಗಿಯೂ ಆಗಿದ್ದರು. ಇವರನ್ನು ಸದೆಬಡಿಯಲು ದೇವತೆಗಳಿಗೆ ಸಾಧ್ಯವಾಗದೇ ಇದ್ದಾಗ ಶಿವನನ್ನು ಈ ಕುರಿತು ಬೇಡಿಕೊಂಡರು. ಶಿವನು ಅವರಿಗೆ ತನ್ನದೇ ರೂಪವಾದ ಪಶುಪತಿಯನ್ನು ಪೂಜಿಸಲು ಹೇಳಿದ. ಅದರಂತೆ ಪಾಶುಪತತ್ವವನ್ನು ದೇವತೆಗಳು ಅನುಸರಿಸಲು ಸಿದ್ಧರಾದಾಗ ಶಿವನು ಅಸುರರನ್ನು ಸದೆಬಡಿಯಲು ಸಿದ್ಧನಾಗುತ್ತಾನೆ. ದೇವತೆಗಳು ಪಶುಪತಿ ಶಿವನನ್ನು ಲಿಂಗ ರೂಪದಲ್ಲಿ ಪೂಜಿಸುವುದರ ಮುಲಕ ಪಾಶುಪತ ವ್ರತವನ್ನು ಆಚರಿಸುತ್ತಾರೆ[೩]. ಇದೇ ಸಂದರ್ಭದಲ್ಲಿ ದೇವತೆಗಳು ಪುನಃ ಪುನಃ ಪ್ರಾರ್ಥಿಸಲಾಗಿ ಶಿವನಿಗೆ ಈ ಯುದ್ಧಕ್ಕೆ ಅನುಕೂಲವಾಗಲು ವಿಶ್ವಕರ್ಮನು ರಥವನ್ನು ಹಾಗೂ ಆಯುಧಗಳನ್ನು ತಯಾರಿಸುತ್ತಾನೆ, ಬ್ರಹ್ಮನೇ ಸಾರಥಿಯಾಗುತ್ತಾನೆ. ಸೂರ್ಯ-ಚಂದ್ರರೇ ರಥದ ಗಾಲಿಗಳಾಗುತ್ತಾರೆ, ಜೊತೆಯಲ್ಲಿ ಉಮಾ ಹಾಗೂ ಗಣಸಮೂಹ ಶಿವನೊಂದಿಗೆ ಇರುತ್ತದೆ. ಶಿವನ ಈ ಯಶೋಗಾಥೆಯಲ್ಲಿ ಮೂರೂ ನಗರಗಳ ರಾಕ್ಷಸರು ಸುಟ್ಟು ಭಸ್ಮವಾಗುತ್ತಾರೆ. ಇದಿಷ್ಟು ತ್ರಿಪುರಾಂತಕ ವಿಜಯದ ಕುರುಹಾಗಿ ಇರುವಂತಹ ಕಥಾ ನಿರೂಪಣೆ. ವಾಸ್ತವಿಕವಾಗಿ ಇಲ್ಲಿ ಪಾಶುಪತ ಶೈವ ಆಚರಣೆಯ ಕಲ್ಪನೆಯೂ ಕೂಡ ಹುಟ್ಟಿಕೊಳ್ಳುತ್ತದೆ. ಬ್ರಹ್ಮ, ವಿಷ್ಣು ದೇವತೆಗಳು ಮೊದಲಾಗಿ ಎಲ್ಲರೂ ಲಿಂಗರೂಪಿ ಪಶುಪತಿ ರುದ್ರ ಶಿವನನ್ನು ಪೂಜಿಸುತ್ತಾರೆ, ಹಾಗೆಂದು ಲಿಂಗಪುರಾಣವು ಸ್ಪಷ್ಟವಾಗಿ ಉಲ್ಲೇಖ ನೀಡುತ್ತದೆ.

ಈ ಮೇಲಿನ ಹಿನ್ನೆಲೆಯಲ್ಲಿ ತ್ರಿಪುರ ಸಂಹಾರದ ದೃಶ್ಯ ನಿರೂಪಣೆಗಳನ್ನು ನೋಡಿದಾಗ ಕಾಲದಿಂದ ಕಾಲಕ್ಕೆ ದೃಶ್ಯ

* ಪ್ರಾಂಶುಪಾಲರು, ಚಿತ್ರಕಲಾ ಮಹಾವಿದ್ಯಾಲಯ, ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪ ರಸ್ತೆ, ಬೆಂಗಳೂರು.

ನಿರೂಪಣಾ ತಂತ್ರಗಾರಿಕೆ ವೈವಿಧ್ಯಮಯವಾಗಿ ಬೆಳವಣಿಗೆ ಹೊಂದಿರುವುದು ಗೋಚರಿಸುತ್ತದೆ. ಆರಂಭದಲ್ಲಿ ಹೇಳಿದಂಥ ಕರ್ನಾಟಕದ ಮಟ್ಟಿಗೆ, ಬಾದಾಮಿ ಚಾಲುಕ್ಯರ ಕಾಲದ ಪಟ್ಟದಕಲ್ಲಿನಲ್ಲಿ ದೊರೆತ ಕ್ರಿ.ಶ. ೭–ಲನೇ ಶತಮಾನಕ್ಕೆ ಸೇರಿದ ಶಿಲ್ಪವೇ ಮೊದಲನೆಯದು. ಇದರಲ್ಲಿ ಶಿವನು ರಥಾರೂಢಿಯಾಗಿದ್ದು, ಎಂಟು ಕೈಗಳನ್ನು ಹೊಂದಿದ್ದಾನೆ. ಇಲ್ಲಿ ಬ್ರಹ್ಮನೇ ಸಾರಥಿಯಾಗಿದ್ದು, ಪಾರ್ವತಿಯು ರಥದಲ್ಲಿರುವ ದೃಶ್ಯ ನಿರೂಪಣೆ ಇದೆ. ತನ್ನ ಸಹಜಕೈಗಳಿಂದ ಬಿಲ್ಲು ಬಾಣವನ್ನು ಹಿಡಿದು, ಹೆದೆ ಏರಿಸಿದ್ದಾನೆ. ಇನ್ನುಳಿದ ಕೈಗಳಲಿ ಖಡ್ಗ, ಗುರಾಣಿ, ವಜ್ರ ಹಾಗೂ ಸರ್ಪವನ್ನು ಹಿಡಿದಿದ್ದಾನೆ. ಶಿಲ್ಪದ ಎಡ ಮೇಲ್ಭಾಗದಲ್ಲಿ ಮೂರು ನಗರಗಳನ್ನು ಸಾಂಕೇತಿಕವಾಗಿ ಬಿಂಬಿಸುವ ಕಿರಿದಾದ ವಾಸ್ತುಕೃತಿ ಇದೆ. ಇಲ್ಲಿ ಅಸುರರನ್ನು ಸಾಂಕೇತಿಕವಾಗಿ ನಗರಗಳ ರೂಪದಲ್ಲಿ ಬಿಂಬಿಸಲಾಗಿದೆ. ಶಿವನ ಒಟ್ಟಾರೆ ಭಾವಭಂಗಿಯನ್ನು ಗಮನಿಸಿದಾಗ ಅವನ ದೈಹಿಕ ಚಲನೆ ಹಾಗೂ ಯುದ್ಧೋತ್ಸಾಹದ ಅನುಭವ ದೃಶ್ಯ ನಿರೂಪಣೆಯಲ್ಲಿ ಗೋಚರಿಸುತ್ತದೆ. ಇಲ್ಲಿ ರಥದ ಗಾಲಿಗಳು ಸಾಮಾನ್ಯ ಗಾಲಿಗಳಾಗಿಯೇ ನಿರೂಪಣೆಗೊಂಡಿದೆಯಾದರೂ ಕುದುರೆಗಳನ್ನು ಬಿಂಬಿಸಿರುವ ರೀತಿ, ರಥವು ಮುನ್ನುಗ್ಗುತ್ತಿರುವಂತೆ ಗೋಚರವಾಗುತ್ತದೆ.

ತ್ರಿಪುರಾರಿಯ ಈ ರೂಪವೇ ನಂತರದ ರಾಷ್ಟ್ರಕೂಟರ ಕಾಲದಲ್ಲಿಯೂ ಮುಂದುವರೆದುಕೊಂಡು ಬಂದಿತು. ಎಲ್ಲೋರದ ಕೈಲಾಸನಾಥ ದೇವಾಲಯದ ಹೊರಭಿತ್ತಿಯಲ್ಲಿ ಬಹು ಮನೋಜ್ಞವಾಗಿ ತ್ರಿಪುರಸಂಹಾರಿಯ ದೃಶ್ಯ ನಿರೂಪಣೆ ಇದೆ. ಸಾಕಷ್ಟು ನೈಜವಾಗಿ ರಚನೆಗೊಂಡಿರುವ ಈ ಶಿಲ್ಪದಲ್ಲಿ ಪಟ್ಟದಕಲ್ಲಿನ ಶಿಲ್ಪದಂತೆಯೇ ಶಿವನು ರಥಾರೂಢನಾಗಿ ತ್ರಿಪುರಾಸುರನನ್ನು ಸಂಹರಿಸುತ್ತಿರುವ ದೃಶ್ಯ ರಚನೆಗೊಂಡಿದೆ. ಇಲ್ಲಿಯೂ ಕೂಡ ತ್ರಿಪುರಾಸುರನನ್ನು ಸಾಂಕೇತಿಕವಾಗಿ ನಗರದ ರೂಪದಲ್ಲಿ ಬಿಂಬಿಸಲಾಗಿದೆ. ಈ ಶಿಲ್ಪನಿರೂಪಣೆ ಸಾಕಷ್ಟು ಸ್ಥಳಾವಕಾಶವಿದ್ದುದರಿಂದ ಹೆಚ್ಚು ಗಮನಾರ್ಹವಾಗಿ ಕೆತ್ತನೆಯಾಗಿರುವುದು ಕಂಡುಬರುತ್ತದೆ. ಶಿವನ ದೈಹಿಕ ಕೆತ್ತನೆ, ರಥದ ನಿರೂಪಣೆ ಹಾಗೂ ಶಿಲ್ಪದ ಹಿನ್ನೆಲೆಯಲ್ಲಿ ಆಗಸದ ನಿರೂಪಣೆ ಇವೆಲ್ಲವೂ ಸಾಕಷ್ಟು ನೈಜವಾಗಿ ಮೂಡಿಬಂದಿವೆ.

ಕಲ್ಯಾಣ ಚಾಲುಕ್ಯರ ಕಾಲಘಟ್ಟದ ದಾಖಲೆಗಳನ್ನು ಗಮನಿಸಿದಾಗ ತ್ರಿಪುರಾಂತಕನ ಉಲ್ಲೇಖ ಹಲವಾರು ಶಾಸನಗಳಲ್ಲಿ ಕಂಡುಬರುತ್ತವೆ. ವಿಶೇಷವೆಂದರೆ, ಆ ಕಾಲದ ಕಾಳಮುಖ ಶೈವ ಸಿದ್ಧಾಂತದ ಪ್ರಮುಖ ಕೇಂದ್ರವಾಗಿದ್ದ ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆಯಲ್ಲಿ ತ್ರಿಪುರಾಂತಕೇಶ್ವರ ದೇವಾಲಯ ಇರುವುದನ್ನು ಇಲ್ಲಿ ಸ್ಮರಿಸಬಹುದು. ಈ ಕಾಲಘಟ್ಟಕ್ಕೆ ಸಂಬಂಧಿಸಿದಂತಹ ತ್ರಿಪುರಾಂತಕ ಶಿವನ ದೃಶ್ಯ ನಿರೂಪಣೆ ಇದ್ದಿರಬಹುದಾದರೂ, ನಮ್ಮ ಗಮನಕ್ಕೆ ಬಂದಿರುವುದಿಲ್ಲ.

ಆದರೆ ತ್ರಿಪುರವಿಜಯದ ದೃಶ್ಯ ರೂಪದ ನಿರೂಪಣೆ ಹೊಯ್ಸಳ ಶಿಲ್ಪಕಲೆಯಲ್ಲಿ ವೈವಿಧ್ಯಮಯವಾಗಿ ರಚನೆಗೊಂಡಿವೆ. ತ್ರಿಪುರಾಸುರರನ್ನು ವೃತ್ತಾಕಾರದ ನಗರದ ನಿರೂಪಣೆಯಲ್ಲಿ ರಚಿಸಲು ಆರಂಭಿಸಿದ್ದು ಹೊಯ್ಸಳರ ಕಾಲದಲ್ಲಿ ಎಂದು ಹೇಳಬಹುದು. ಇದುವರೆವಿಗೂ ಕೇವಲ ತ್ರಿಪುರಾಂತಕ ಒಬ್ಬನನ್ನೆ ಶಿಲ್ಪದಲ್ಲಿ ನೋಡಿದ್ದೇವೆ. ಆದರೆ ಹೊಯ್ಸಳ ಶಿಲ್ಪಿಗಳು ತ್ರಿಪುರಾಂತಕ ಕಥೆಯ ನಿರೂಪಣೆಯನ್ನು ವಿಸ್ತಾರವಾಗಿ ಕಥಾನಿರೂಪಣಾ ಶಿಲ್ಪದಲ್ಲಿ ಸೆರೆಹಿಡಿದಿದ್ದಾರೆ. ಹೊಯ್ಸಳ ದೇವಾಲಯಗಳ ಭಿತ್ತಿ ಹಾಗೂ ಕಥಾನಿರೂಪಣಾ ಪಟ್ಟಿಕೆಗಳಲ್ಲಿ ಅವು ಬಿಂಬಿತವಾಗಿವೆ. ಬಸರಾಳಿನ ಮಲ್ಲಿಕಾರ್ಜುನ ದೇವಾಲಯದ ಭಿತ್ತಿಯಲ್ಲಿನ ನಿರೂಪಣೆಯಲ್ಲಿ ಈ ಹಿಂದೆ ಇದ್ದಂತಹ ತಾಂತ್ರಿಕತೆಯನ್ನೇ ಇಲ್ಲಿ ಕಲಾವಿದ ಮಡಿಸಿಕೊಂಡಿದ್ದಾನೆ. ಲಂಬವಾದ ಪಟ್ಟಿಕೆಯಲ್ಲಿ ಶಿವನು – ಮೇಲ್ಭಾಗದಲ್ಲಿರುವ ತ್ರಿಪುರಾಸುರರನ್ನು ತನ್ನ ಬಿಲ್ಲು–ಬಾಣದಿಂದ ಸಂಹರಿಸುತ್ತಿರುವ ದೃಶ್ಯ ಕಂಡು ಬರುತ್ತದೆ ಈ ಶಿಲ್ಪವು ಅರ್ಜುನನ ಮತ್ಸ್ಯಯಂತ್ರದ ಭೇದನದ ದೃಶ್ಯವನ್ನು ನೆನಪಿಗೆ ತರುತ್ತದೆ.

ಕಥಾ ನಿರೂಪಣಾ ಪಟ್ಟಿಕೆಗಳಲ್ಲಿ ಮಾತ್ರ ಸ್ವಲ್ಪ ವಿವರವಾದ ರಚನೆಗಳಿವೆ. ಅಲ್ಲದೆ ಈ ಹಿಂದಿನ ನಿರೂಪಣೆಗಳಿಗಿಂತ ವೈವಿಧ್ಯಮಯವಾಗಿದೆ. ತ್ರಿಪುರಾಸುರರನ್ನು ನಗರದ ವಾಸ್ತುರೂಪದಲ್ಲಿ ಬಿಂಬಿಸುತ್ತಿದ್ದ ದೃಶ್ಯ ಈ ಮೊದಲೇ ನೋಡಿದ್ದೇವೆ. ಆದರೆ ಜಾವಗಲ್ಲಿನ ಲಕ್ಷ್ಮೀನರಸಿಂಹ ದೇವಾಲಯದಲ್ಲಿ 'ವೃತ್ತವಾಗಿ' ಪರಿವರ್ತನೆ ಹೊಂದಿರುವುದನ್ನು ನೋಡಬಹುದು. ಮೂರು ವೃತ್ತಗಳನ್ನು ತ್ರಿಕೋನಾಕೃತಿಯಲ್ಲಿ ಅಥವಾ ಸಾಲಾಗಿ ರಚಿಸಲಾಗಿರುತ್ತದೆ; ಇವುಗಳ ಒಂದು ಪಾರ್ಶ್ವದಲ್ಲಿ ಯುದ್ಧದಲ್ಲಿ ತೊಡಗಿರುವ ಶಿವನ ರಥಾರೂಢ ಶಿಲ್ಪವಿರುತ್ತದೆ. ವಿಶೇಷವೆಂದರೆ, ಈ ನಿರೂಪಣೆಯಲ್ಲಿ ಮೂರು ನಗರಗಳಲ್ಲಿ ರಾಕ್ಷಸರೂಪಿ ಆಕೃತಿಗಳನ್ನು ತೋರಿಸಲಾಗಿರುತ್ತದೆ. ಜಾವಗಲ್ಲಿನ ಈ ಕಥಾನಿರೂಪಣೆಯಲ್ಲಿ ಶಿವನು ರಥದಲ್ಲಿ ನಿಂತುಕೊಂಡು ನಗರಗಳತ್ತ ಬಾಣ ಪ್ರಯೋಗವನ್ನು ಮಾಡುತ್ತಿರುವಂಥೆ ಬಿಂಬಿಸಲಾಗಿದೆ. ಈ ಕಥನಕ್ಕೆ ಪೂರಕವಾಗಿ, ಮಹಾಭಾರತದ ಕರ್ಣಪರ್ವದಲ್ಲಿ ಅತ್ಯಂತ ವಿವರವಾಗಿ ತ್ರಿಪುರಾಸಂಹಾರದ ಕಥೆಯನ್ನು ವಿವೇಚಿಸಲಾಗಿದೆ". ತಾರಕಾಸುರನ ಮೂವರು ಮಕ್ಕಳಾದ ವಿದ್ಯುನ್ಮಾಲಿ, ತಾರಕಾಕ್ಷ ಹಾಗೂ ಕಮಲಾಕ್ಷರಿಗೆ ಬ್ರಹ್ಮನ ವರವಿದ್ದು ಚಿನ್ನ, ಬೆಳ್ಳಿ ಹಾಗೂ ಕಬ್ಬಿಣದಿಂದ ಕೋಟೆಗಳನ್ನು



ತ್ರಿಪುರಾಂತಕ ಶಿವ ದೃಶ್ಯಗಳು































ನಿರ್ಮಿಸಿಕೊಂಡು, ಕೋಟೆಗಳ ಸಮೇತವಾಗಿ ಎಲ್ಲೆಂದರಲ್ಲಿ ಅವರು ಸಂಚರಿಸಬಹುದಾಗಿತ್ತು. ಮೂವರೂ ಸಹೋದರರು ಒಂದೆಡೆ ಸೇರುವುದು ಒಂದು ಸಾವಿರ ವರ್ಷಕ್ಕೆ ಮಾತ್ರ ಹಾಗೂ ಒಂದೇ ಬಾಣದಿಂದ ಮೂವರನ್ನು ಹಣೆಯ ಮಧ್ಯಕ್ಕೆ ಗುರಿಯಿಟ್ಟು ಹೊಡೆದಾಗ ಮಾತ್ರ ಕೊಲ್ಲಬಹುದಾಗಿತ್ತು. ಇಂತಹ ವರವನ್ನು ಪಡೆದ ಅಸುರರು ಎಲ್ಲರಿಗೂ ಕಂಟಕ ಪ್ರಾಯರಾಗಿದ್ದರು; ಆರಂಭದಲ್ಲಿ ನಿರೂಪಿಸಿದಂತೆ ಬ್ರಹ್ಮ, ವಿಷ್ಣು, ಸೋಮ, ಅಗ್ನಿ ಮೊದಲಾದ ದೇವತೆಗಳು ತಮ್ಮ ಶಕ್ತಿಯನ್ನು ಧಾರೆ ಎರೆದು ತ್ರಿಪುರಾಸುರರನ್ನು ಕೊಲ್ಲಲು ಶಿವನಿಗೆ ಸಹಾಯ ಮಾಡಿದರು. ಇದೇ ರೀತಿಯ ಕಥಾನಿರೂಪಣೆಗೆ 'ಅಂಶುಭೇದಾಗಮ', 'ಉತ್ತರಕಾಮಿಕಾಗಮ' ಹಾಗೂ ಹಲವಾರು ಪುರಾಣಗಳಲ್ಲಿ ವಿವರಣೆ ದೊರೆಯುತ್ತದೆ[೫].

ಹೊಸಹೊಳಲುವಿನ ಲಕ್ಷ್ಮೀನಾರಾಯಣ ದೇವಾಲಯದ ಕಥಾನಿರೂಪಣಾ ಪಟ್ಟಿಕೆಯಲ್ಲಿ ತ್ರಿಪುರ ಸಂಹಾರದ ಕಥೆಯು ಸಾಕಷ್ಟು ವಿವರಣಾತ್ಮಕವಾಗಿ ಮೂಡಿಬಂದಿದೆ. ಜಾವಗಲ್ಲು ದೇವಾಲಯದಲ್ಲಿನ ತ್ರಿಪುರಸಂಹಾರದ ನಿರೂಪಣೆಯಂತೆಯೇ ಇಲ್ಲಿಯೂ ಕೂಡ ತ್ರಿಪುರಾಸುರರನ್ನು ವೃತ್ತಾಕಾರದ ಕೋಟೆಯ ರೀತಿಯಲ್ಲಿ ತೋರಿಸಲಾಗಿದೆ. ಮಹಾಭಾರತದಲ್ಲಿನ ಕರ್ಣಪರ್ವದಲ್ಲಿ ನಿರೂಪಿತವಾಗಿರುವ ತ್ರಿಪುರ ದಹನದ ಕಥೆಯಂತೆ, ಮೂವರು ರಾಕ್ಷಸ ಸಹೋದರರನ್ನು ಮಾನುಷ ರೂಪದಲ್ಲಿ ಒಂದೇ ಕಡೆ ನಿಂತಿರುವಂತೆ ಹಾಗೂ ಶಿವನು ರಥಾರೂಢಿಯಾಗಿ ತನ್ನ ಧನಸ್ಸು ಹಾಗೂ ಪಾಶುಪತದಿಂದ ಅವರನ್ನು ಸಂಹರಿಸು ತ್ತಿರುವಂತೆ ತೋರಿಸಲಾಗಿದೆ. ಹೊಯ್ಸಳ ಕಲಾವಿದರು ಸಾಕಷ್ಟು ಕ್ರಿಯಾತ್ಮಕವಾಗಿದ್ದು, ಕಥಾನಿರೂಪಣೆಯನ್ನು ದೃಶ್ಯ ನಿರೂಪಣೆಯಲ್ಲಿ ಅಳವಡಿಸಿದಾಗ ಸಾಕಷ್ಟು ಸ್ವಜವಾಗಿ ಹಾಗೂ ಕಥೆಗೆ ಹತ್ತಿರವಾಗಿ ರಚಿಸುತ್ತಿದ್ದರು; ಅದಕ್ಕೆ ಪ್ರಸ್ತುತ ಶಿಲ್ಪವು ಉತ್ತಮ ಉದಾಹರಣೆಯಾಗಿದೆ.

ಹೊಯ್ಸಳೋತ್ತರ ಕಾಲದಲ್ಲಿ ತ್ರಿಪುರ ಸಂಹಾರದ ಪ್ರಮುಖ ರಚನೆಗಳು ಭಿತ್ತಿ ಚಿತ್ರದ ರೂಪದಲ್ಲಿ ಕಂಡುಬರುತ್ತವೆ. ಹಂಪಿಯ ವಿರೂಪಾಕ್ಷ ದೇವಾಲಯದ ಮಹಾರಂಗ ಮಂಟಪದ ಒಳಭಿತ್ತಿಯ ಚಿತ್ರಗಳಲ್ಲಿ ತ್ರಿಪುರ ವಿಜಯದ ನಿರೂಪಣೆಯೂ ಒಂದು, ವಿಶೇಷವೆಂದರೆ ಇದೇ ಭಿತ್ತಿಯಲ್ಲಿ ಕಾಮದಹನ ಮೂರ್ತಿಯೂ ಇದೆ. ಹಂಪಿಯ ತ್ರಿಪುರಾಂತಕ ಶಿವನ ದೃಶ್ಯ ನಿರೂಪಣೆ ಹಲವಾರು ಕಾರಣಗಳಿಂದ ಅತ್ಯಂತ ಪ್ರಮುಖವಾಗುತ್ತದೆ. ಮೊದಲನೆಯದಾಗಿ ಭಿತ್ತಿಚಿತ್ರ ಪರಂಪರೆಯ ಪುನರುಜ್ಜೀವನ ಘಟ್ಟದಲ್ಲಿ ಈ ಚಿತ್ರಗಳು ರಚನೆಯಾಗಿವೆ. ಅಲ್ಲದೆ, ವಿಜಯನಗರದ ದೊರೆ ಕೃಷ್ಣದೇವರಾಯನ ಕಾಲದಲ್ಲಿಯೇ ಈ ಚಿತ್ರಗಳು ರಚನೆ ಯಾಗಿರುವುದನ್ನು ತ್ರಿಪುರಾಂತಕ ಚಿತ್ರದ ಉದಾಹರಣೆಯಿಂದ ಸಾಬೀತು ಪಡಿಸಬಹುದು.

ಹಂಪಿಯ ಚಿತ್ರದಲ್ಲಿ ತ್ರಿಪುರಾಂತಕ ಚಿತ್ರದ ನಿರೂಪಣೆ ಗದುಗಿನ ಕುಮಾರವ್ಯಾಸನ 'ಕರ್ನಾಟಕ ಭಾರತ ಕಥಾ ಮಂಜರಿ' ಯ ಕರ್ಣ ಪರ್ವದಲ್ಲಿನ ಆರು ಮತ್ತು ಏಳನೇ ಅಧ್ಯಾಯದಲ್ಲಿ ವರ್ಣನೆಯಾಗಿರುವ ವಿವರಣೆಗೆ ಅತ್ಯಂತ ಸಾಮ್ಯತೆಯನ್ನು ಹೊಂದಿದೆ. ಶಿವನ ರಥ, ರಥದ ಗಾಲಿಗಳು, ರಥದ ಹಗ್ಗ, ಶಿವನ ಬಿಲ್ಲು-ಬಾಣ, ಸಾರಥಿ ಹಾಗೂ ಶಿವನ ದೇಹದ ವರ್ಣನೆ ಅಲ್ಲದೇ ತ್ರಿಪುರಾಸುರರು ಇರುವ ನಗರಗಳು ಒಂದೆಡೆ ಸೇರುತ್ತಿರುವ ದೃಶ್ಯ ಈ ಎಲ್ಲಾ ಸಾಹಿತ್ಯಕ ದಾಖಲೆಗಳನ್ನು ಹಂಪಿ ತ್ರಿಪುರಾಂತಕ ಭಿತ್ತಿಯ ಚಿತ್ರಕಲಾವಿದ ದೃಶ್ಯ ರೂಪದಲ್ಲಿ ಯಥಾವತ್ತಾಗಿ ಹಾಗೂ ಮನೋಜ್ಞವಾಗಿ ನಿರೂಪಿಸಿದ್ದಾನೆ. ಈ ಚಿತ್ರದಲ್ಲಿ ಆದಿಶೇಷನೇ ರಥದ ಹಗ್ಗ ಮತ್ತು ರಥ, ಸೂರ್ಯ-ಚಂದ್ರರೇ ರಥದ ಗಾಲಿಗಳು, ಬ್ರಹ್ಮನೇ ರಥದ ಸಾರಥಿ, ಸರ್ಪವೇ ಬಿಲ್ಲು, ಅಗ್ನಿ, ವಿಷ್ಣು, ಯಮರೇ (ಸೋಮ) ಬಾಣವಾಗಿ ಮಾನುಷರೂಪದಲ್ಲಿ ರಚನೆ ಗೊಂಡಿದ್ದಾರೆ. ಕುಮಾರವ್ಯಾಸನ ಕೃತಿಯಲ್ಲಿ ಉಲ್ಲೇಖಿಸಿದಂತೆ ರೌದ್ರರೂಪವನ್ನು ತಾಳಿದ ಪಶುಪತಿ ಭಸ್ಮದುಂಡೆಯನ್ನು ಮೈಗೆಲ್ಲ ಸವರಿಕೊಂಡು, ಶ್ವೇತ ವರ್ಣನಾಗಿ ಗಜ-ಚರ್ಮಾಂಬರಧಾರಿಯಾಗಿ, ನಾಗಾಲಂಕಾರಗಳನ್ನು ಹೊಂದಿದವನಾಗಿ, ಬಿಂಬಿತವಾಗಿದ್ದಾನೆ. ಈ ಚಿತ್ರದಲ್ಲಿಯೂ ಕೂಡ ಎಲ್ಲ ಸೂಕ್ಷ್ಮ ಅಂಶಗಳು ಚಾಚೂತಪ್ಪದೇ ನಿರೂಪಣೆಗೊಂಡಿರುವುದು ಆಶ್ಚರ್ಯ ಮೂಡಿಸುತ್ತದೆ.

ಕುಮಾರವ್ಯಾಸನು ವಿಜಯನಗರಕ್ಕೆ ತನ್ನ 'ಭಾರತ' ಕೃತಿಯನ್ನು ತೆಗೆದುಕೊಂಡು ಬಂದು ವ್ಯಾಸತೀರ್ಥರಿಗೆ ತೋರಿಸಿದ ಎಂಬ ಪ್ರತೀತಿ ಇದೆ. ಒಂದು ವೇಳೆ ಕುಮಾರವ್ಯಾಸ ಹಂಪೆಗೆ ಬಂದಿದ್ದೇ ಆಗಿದ್ದಲ್ಲಿ, ಅವನ ಕೃತಿಯ ತ್ರಿಪುರಾಂತಕ ಶಿವನ ನಿರೂಪಣೆಯ ಯಥಾವತ್ತಾದ ದೃಶ್ಯ ನಿರೂಪಣೆ ಇಲ್ಲಿ ಮೂಡಿಬಂದಿದೆ ಎಂದು ಹೇಳಬಹುದು. ಕುಮಾರವ್ಯಾಸನ ಕಾಲಘಟ್ಟ ಹಾಗೂ ಪ್ರಸ್ತುತ ಚಿತ್ರದ ದೃಶ್ಯ ವಿವರಣೆ ಅದೇ ಕಾಲಘಟ್ಟಕ್ಕೆ ಸೇರುತ್ತಿರುವುದರಿಂದ, ವಿರೂಪಾಕ್ಷ ದೇವಾಲಯದ ಭಿತ್ತಿ ಪತ್ರಗಳ ರಚನಾ ಕಾಲವನ್ನು ನಿಸ್ಸಂದೇಹವಾಗಿ ೧೬ನೇ ಶತಮಾನದ ಆರಂಭದ ಕಾಲಘಟ್ಟಕ್ಕೆ ಸೇರಿಸಬಹುದಾಗಿದೆ. ಈ ಹಿಂದೆಯೂ ಇದೇ ಅಭಿಪ್ರಾಯ ವನ್ನು ಪ್ರಸ್ತುತ ಲೇಖಕ ಯತಿಗಳ ಮೆರವಣಿಗೆ ಚಿತ್ರದ ಆಧಾರದಿಂದ ನಿರೂಪಿಸಿದ್ದನ್ನು ಇಲ್ಲಿ ಸ್ಮರಿಸಬಹುದು[೬].

ಸರಿಸುಮಾರು ಇದೇ ಕಾಲಘಟ್ಟಕ್ಕೆ ಅಥವಾ ಸ್ವಲ್ಪ ನಂತರದ ಕಾಲಘಟ್ಟಕ್ಕೆ ಸೇರಿಸಬಹುದಾದ ಶೃಂಗೇರಿಯ

ವಿದ್ಯಾಶಂಕರ ದೇವಾಲಯದ ಹೊರಭಿತ್ತಿಯಲ್ಲಿ ತ್ರಿಪುರಾಂತಕ ಶಿವನ ರಚನೆಯಿದೆ. ಇಲ್ಲಿ ಶಿವನನ್ನು ಚತುರ್ಬಾಹು ಹಸ್ತನಾಗಿ ರಥದಲ್ಲಿ ನಿಂತಿರುವಂತೆ ವಾಸ್ತುರೂಪದಲ್ಲಿ ಬಿಂಬಿಸಿರುವ ತ್ರಿಪುರಾಸುರರನ್ನು ತನ್ನ ಬಾಣದಿಂದ ಸದೆಬಡಿಯುತ್ತಿರುವಂತೆ ತೋರಿಸಲಾಗಿದೆ. ಸಾಹಿತ್ಯದಲ್ಲಿ ಉಲ್ಲೇಖಿಸಿರುವಂತೆ ಬ್ರಹ್ಮನೇ ರಥದ ಸಾರಥಿಯಾಗಿದ್ದು ರಥದ ಹಿಂಬದಿಯಲ್ಲಿ ಉಮೆ ಜೊತೆಯಲ್ಲಿ ಇದ್ದಾಳೆ. ಮೇಲೆ ಚರ್ಚಿಸಲಾದ ಭಿತ್ತಿ ಚಿತ್ರದಂತೆಯೇ ಇಲ್ಲಿಯೂ ಕೂಡ ಶಿವನ ಬಾಣವು ವಿಷ್ಣು ಹಾಗೂ ಯಮರ ಆಕೃತಿಗಳಿಂದ ಕೂಡಿದೆ. ವಿಶೇಷವೆಂದರೆ ಯಮನ ಆಕೃತಿಯನ್ನು ಮಾತ್ರ ಕಾಯೋತ್ಸರ್ಗದ ತೀರ್ಥಂಕರನಂತೆ ಬಿಂಬಿಸಲಾಗಿದೆ. ಈ ಉದಾಹರಣೆ ಕೂಡ ಸಾಕಷ್ಟು ಪ್ರೌಢವಾಗಿಯೂ ಹಾಗೂ ಸಾಹಿತ್ಯಕ ಕೃತಿಗಳ ನಿರೂಪಣೆಗೆ ತೀರ ಹತ್ತಿರವಾಗಿಯೂ ರಚನೆಯಾಗಿದೆ.

ತ್ರಿಪುರಾಂತಕ ಶಿವನ ದೃಶ್ಯ ನಿರೂಪಣೆ ಕರ್ನಾಟಕದ ಕಲಾವಿದರಿಗೆ ಚಿತ್ರರಚನೆಯಲ್ಲಿ ಸಾಕಷ್ಟು ಪ್ರಿಯವಾದ ವಿಷಯವಾಗಿದ್ದಂತೆ ತೋರುತ್ತದೆ. ಸುಮಾರು ೧೮೬೦-೭೦ರ ಕಾಲಘಟ್ಟದಲ್ಲಿ ನಿರ್ಮಾಣವಾದ ಧಾರವಾಡದ ಹತ್ತಿರದ ಅಮ್ಮಿನಭಾವಿಯ ಶಾಂತೇಶ್ವರ ಮಠದಲ್ಲಿನ ಸಜ್ಜಾದ ಮೇಲಿನ ಫಲಕದ ಚಿತ್ರಗಳು ಗಮನ ಸೆಳೆಯುತ್ತವೆ. ಇವುಗಳಲ್ಲಿ ತ್ರಿಪುರಾಂತಕ ಶಿವನ ಸುಂದರ ನಿರೂಪಣೆ ಕಂಡುಬರುತ್ತದೆ. ಸುಮಾರು ಎರಡುವರೆ ಅಡಿ ಉದ್ದ ಹಾಗೂ ಏಳು ಅಂಗುಲ ಅಗಲವಿರುವ ಪಟ್ಟಿಕೆಯಲ್ಲಿ ಈ ಚಿತ್ರದ ರಚನೆಯಾಗಿದೆ. ತ್ರಿಪುರಾಸುರರನ್ನು ವೃತ್ತಮಾದರಿಯಲ್ಲಿಯೇ ಒಬ್ಬರ ಮೇಲೊಬ್ಬರು ಇರುವಂತೆ ಸಾಲಾಗಿ ಬಿಂಬಿಸಲಾಗಿದೆ. ಇವುಗಳಲ್ಲಿ ರಾಕ್ಷಸರ ಆಕೃತಿಗಳು ಸ್ಪಷ್ಟವಾಗಿ ಕಂಡುಬರುತ್ತವೆ ಮತ್ತು ಇವುಗಳಿಗೆ ಎದುರಾಗಿ ಸರ್ಪ, ರಥಾರೂಢನಾದ ಶಿವ ಬಿಲ್ಲಿಗೆ ಎದೆಯೇರಿಸಿ ತ್ರಿಪುರಾಸುರರ ಕಡೆಗೆ ಬಾಣ ಬಿಡುತ್ತಿರುವಂತೆ ರಚನೆಯಾಗಿದೆ. ಈ ರಥದ ಸಾರಥಿ ಬ್ರಹ್ಮ ಹಾಗೂ ಉಮೆಯ ಚಿತ್ರಣವೂ ಕೂಡ ಇಲ್ಲಿ ಕಂಡುಬರುತ್ತವೆ. ಹಂಪೆಯ ತ್ರಿಪುರಾಂತಕ ಚಿತ್ರದಲ್ಲಿರುವಂತೆಯೇ ಇಲ್ಲಿಯೂ ಕೂಡ ಸೂರ್ಯ-ಚಂದ್ರರೇ ರಥದ ಗಾಲಿಗಳು, ಒಟ್ಟಾರೆಯಾಗಿ ಉದ್ದನೆಯ ಪಟ್ಟಿಕೆಯಲ್ಲಿ ಈ ನಿರೂಪಣೆ ಬಹಳ ಸೊಗಸಾಗಿ ಮೂಡಿಬಂದಿದೆ[೮].

ಮೈಸೂರು ಭಾಗದ ಸಾಂಪ್ರದಾಯಿಕ ಮೈಸೂರು ಶೈಲಿಯ ಚಿತ್ರಗಳಲ್ಲಿ ಕೂಡ ತ್ರಿಪುರಾಂತಕ ಶಿವನ ದೃಶ್ಯ ನಿರೂಪಣೆಗಳು, ಜನಪ್ರಿಯವಾಗಿದ್ದಂತೆ ತೋರುತ್ತವೆ. ಸುತ್ತೂರಿನ 'ಶಿವರಾತ್ರೀಶ್ವರ' ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಲಾಗಿರುವ ಸಾಂಪ್ರದಾಯಿಕ ಚಿತ್ರವೊಂದು ಶಿವನ ವಿಭಿನ್ನ ಲೀಲೆಗಳನ್ನು ಬಿಂಬಿಸುತ್ತದೆ. ಅದರಲ್ಲಿ ತ್ರಿಪುರ ಸಂಹಾರ ಮೂರ್ತಿಯ ಲೀಲೆಯೂ ಕೂಡ ಒಂದು. ಚಿತ್ರದಲ್ಲಿ ಶಿವನು ರಥದ ಮೇಲೆಯೇ ನಿಂತಿದ್ದಾನೆ, ಸೂರ್ಯ-ಚಂದ್ರರೇ ರಥದ ಗಾಲಿಗಳಾಗಿದ್ದಾರೆ, ಬ್ರಹ್ಮನೇ ಸಾರಥಿ ಹಾಗೂ ವೃತ್ತಾಕಾರದ ಕೋಟೆಗಳಲ್ಲಿ ಮೂವರು ಅಸುರರು ರಚನೆಗೊಂಡಿದ್ದಾರೆ. ಈ ಕೋಟೆಗಳ ಸುತ್ತಲೂ ಜ್ವಾಲೆಗಳನ್ನೂ ಸಾಂಕೇತಿಕವಾಗಿ ತೋರಿಸಲಾಗಿದೆ. ಪ್ರಸ್ತುತ ಚಿತ್ರದ ವಿಶೇಷವೆಂದರೆ ಮೈಸೂರು ಸಾಂಪ್ರದಾಯಿಕ ಉಬ್ಬು ಚಿತ್ರಣ (ಜಸ್ಸೋ) ಅಲಂಕಾರಿಕ ಭಾಗದಲ್ಲಿ ಕಂಡುಬರುತ್ತವೆ. ಮಾಧ್ಯಮ ಯಾವುದೇ ಇರಲಿ, ಕಥೆಯನ್ನು ಆ ಮಾಧ್ಯಮದ ಶೈಲಿಗೆ ಹೊಂದಿಕೊಂಡಂತೆ ರಚನೆ ಮಾಡುವಂತಹ ಕಲಾವಿದನ ಜಾಣ್ಮೆ ಮೆಚ್ಚಲೇ ಬೇಕಾದಂತದ್ದು. ಒಟ್ಟಾರೆಯಾಗಿ ತ್ರಿಪುರಾಂತಕ ನಿರೂಪಣೆ, ದೃಶ್ಯ ನಿರೂಪಣೆಯಲ್ಲಿ ಅತ್ಯಂತ ಸೊಗಸಾಗಿ ಮೂಡಿ ಬಂದಿರುವುದನ್ನು ಮೇಲಿರುವ ಉದಾಹರಣೆಗಳಿಂದ ರುಜುವಾತುಪಡಿಸಬಹುದು.

ಆಧಾರಸೂಚಿ

೧. ಸ್ಟೆಲ್ಲಕಾಮ್ರಿಶ್., ಮ್ಯಾನಿಫೆಸ್ಟೇಷನ್ ಆಫ್ ಶಿವ, (೧೯೮೧).
೨. ಟಿ.ಏ. ಗೋಪಿನಾಥರಾವ್, 'ಎಲಿಮೆಂಟ್ ಆಫ್ ಹಿಂದು ಐಕನೋಗ್ರಫಿ' (೧೯೧೧).
೩. ಆರ್. ನಾಗಸ್ವಾಮಿ : **ತ್ರಿಪುರಾಂತಕ, ವೀಣಾಧರ ದಕ್ಷಿಣಮೂರ್ತಿ ಅಥವಾ ಕಿರಾತಮೂರ್ತಿ.**
೪. **ಮಹಾಭಾರತ.**
೫. ಗೋಪಿನಾಥರಾವ್, ಪೂರ್ವೋಕ್ತ.
೬ ಎಸ್. ಗುಂಡಪ್ಪ., ೧೯೮೦, **'ಕರ್ನಾಟಕ ಭಾರತ-ಕಥಾಮಂಜರಿ'.**
೭. ಕುಲಕರ್ಣಿ. ಆರ್.ಎಚ್., ೨೦೦೦, 'ಹಂಪಿ ವಿರೂಪಾಕ್ಷ ದೇವಾಲಯದ ಮಹಾರಂಗ ಮಂಟಪದ ಭಿತ್ತಿಚಿತ್ರ ವಿದ್ಯಾರಣ್ಯರದೇ ? ವ್ಯಾಸರಾಯರದೇ?' **ಇತಿಹಾಸ ದರ್ಶನ.**
೮. ಕುಲಕರ್ಣಿ. ಆರ್.ಎಚ್., ೨೦೦೫, 'ಅಮ್ಮಿನಭಾವಿ ಶಾಂತೇಶ್ವರ ಮಠದ ಭಿತ್ತಿ ಚಿತ್ರಗಳು'. **ಧಾರವಾಡ ಜಿಲ್ಲೆ ಇತಿಹಾಸ ಮತ್ತು ಪುರಾತತ್ವ ಅಧ್ಯಯನ,** ಪ್ರಾಚ್ಯವಸ್ತು ಇಲಾಖೆ, ಮೈಸೂರು.

ಲೋಕೇಶ್ ಸಿ.ಇ.*

ಹೊಯ್ಸಳರಲ್ಲಿಯ ಕಥಾನಿರೂಪಣಾ ಶಿಲ್ಪಗಳು : ಪ್ರಹ್ಲಾದ ಚರಿತೆ ಶಿಲ್ಪಗಳು

ಹೊಯ್ಸಳ ದೇವಾಲಯಗಳು ವಿಶಿಷ್ಟ ನಿರ್ಮಾಣ ಶೈಲಿಯಿಂದ ಸೂಕ್ಷ್ಮ ಕೆತ್ತನೆಗಳಿಂದ ಹಾಗೂ ಆಕರ್ಷಕ ಶಿಲ್ಪಕಲೆಯಿಂದಾಗಿ ವಿಶ್ವವ್ಯಾಪಿಯಾಗಿ ಪ್ರಸಿದ್ಧಿಯಾಗಿವೆ. ಸಾಮಾನ್ಯವಾಗಿ ಹೊಯ್ಸಳ ದೇವಾಲಯಗಳು ಅಲಂಕಾರಿಕವು, ಹಾಗೂ ಕೆಲವು ಯಾವುದೇ ಶಿಲ್ಪಗಳನ್ನೂ ಹೊಂದದೆ, ಅಲಂಕಾರರಹಿತವಾದವುಗಳೂ ಇವೆ.


ಹೊಯ್ಸಳ ಶಿಲ್ಪಕಲೆಯಲ್ಲಿ ಗಮನ ಸೆಳೆಯುವಂತವು ಗಳೆಂದರೆ ದೇವಾಲಯಗಳ ಭಿತ್ತಿಗಳಲ್ಲಿರುವ ಸುಂದರ ವಿಗ್ರಹಗಳ ಕೆತ್ತನೆಗಳು; ಇವುಗಳಲ್ಲಿ ವಿಷ್ಣು, ಶಿವ, ದೇವಿ ಮತ್ತು ಪರಿವಾರ ದೇವತೆಗಳ ಶಿಲ್ಪಗಳು ವಿಭಿನ್ನ ವಿನ್ಯಾಸಗಳಲ್ಲಿ, ಅವತಾರಗಳಲ್ಲಿ ಕಂಡುಬರುತ್ತವೆ. ಶಿಲ್ಪಗಳು ದೇವಾಲಯದ ಹೊರ ಭಿತ್ತಿಯನ್ನು ಅತ್ಯಂತ ಸುಂದರವಾಗಿ ಕಾಣುವಂತೆ ಮಾಡುವಲ್ಲಿ ಯಶಸ್ವಿಯಾಗಿವೆ. ಆದರೆ ಈ ಶಿಲ್ಪಗಳು ಕೇವಲ ಒಂದು ನಿರ್ದಿಷ್ಟ ದೇವತೆಯನ್ನು ಮಾತ್ರ ಬಿಂಬಿಸು ವಂತಹುಗಳು. ಇವುಗಳ ಹಿನ್ನೆಲೆಗೆ ಪೂರಕವಾದಂತಹ ಕಥಾನಕ ವಿಷಯ ನಿರೂಪಣೆಗಳ ಬಗೆಗೆ ನೋಡುಗರ ಗಮನ ಅಷ್ಟಾಗಿ ಹೋಗುವುದಿಲ್ಲ ಉದಾ : ನರಸಿಂಹ ಅವತಾರದ ವಿಷ್ಣು ಹಿರಣ್ಯಕಶ್ಯಪನನ್ನು ಕೊಲ್ಲುವ ಉಗ್ರನರಸಿಂಹವತಾರದ ನೆಲೆ ಹಿನ್ನೆಲೆ ಹಾಗೂ ಕಥಾನಕವನ್ನು ವಿವೇಚಿಸಿದಾಗ ಕಥೆಯ ಸಂಪೂರ್ಣತೆ ವಿಭಿನ್ನ ಘಟನಾವಳಿಗಳ ದಾಖಲೆಯಿಂದ ಅರ್ಥವಾಗುತ್ತಾ ಹೋಗುತ್ತದೆ. ಸಾಮಾನ್ಯವಾಗಿ ಹೊಯ್ಸಳ ದೇವಾಲಯಗಳ ಅಧಿಷ್ಠಾನದಿಂದ ಹಿಡಿದು ಶಿಖರದವರೆಗೂ ಕುಸುರಿ ಕೂಡಿದ ಕೆತ್ತನೆ ಹೊಂದಿರುವುದನ್ನು ಗಮನಿಸುತ್ತಾ ಭವ್ಯ ಭಿತ್ತಿಶಿಲ್ಪಗಳ ಸುಂದರ ಮದನಿಕೆಯರತ್ತ ನೋಡುಗನ ಗಮನ ಕೇಂದ್ರೀಕೃತವಾಗಿ ಬಿಡುತ್ತದೆ. ಆದರೆ ಈ ದೇವಾಲಯಗಳಲ್ಲಿ ಇರುವ ಕಥಾನಿರೂಪಣಾ ಶಿಲ್ಪಗಳು ಅಷ್ಟಾಗಿ ಗಮನ ಸೆಳೆಯುವುದಿಲ್ಲ. ಇದಕ್ಕೆ ಮುಖ್ಯ ಕಾರಣ ಅವುಗಳು ದೇವಾಲಯದ ಅಧಿಷ್ಠಾನಗಳ ಅಲಂಕಾರಿಕ ಪಟ್ಟಿಕೆಗಳಲ್ಲಿ ಒಂದು ಪಟ್ಟಿಯಲ್ಲಿ ರಚನೆ ಗೊಂಡಿರುವುದರಿಂದ ಇವುಗಳನ್ನು ಕೂಡ ಅಲಂಕಾರಿಕ ಪಟ್ಟಿಗಳೊಂದಿಗೆ ಗಮನಿಸಿ ಬಿಡುವುದರಿಂದ ಈ ಕಥಾನಕ ಶಿಲ್ಪಗಳು ಅಷ್ಟಾಗಿ ನೋಡುಗರನ್ನು ಆಕರ್ಷಿಸುವುದಿಲ್ಲ. ಹೀಗಾಗಿ ಇವುಗಳ ಅಧ್ಯಯನ ಅಷ್ಟಾಗಿ, ಸಮರ್ಪಕವಾಗಿ ಆಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಹೊಯ್ಸಳ ಕಥಾನಕ ಶಿಲ್ಪಗಳಲ್ಲಿ ಪ್ರಮುಖವಾಗಿ ಕಂಡುಬರುವ ವಿಷಯ ನಿರೂಪಣೆಗಳೆಂದರೆ, ದೇವದಾನವರ ಯುದ್ಧ, ಸಮುದ್ರಮಥನ, ರಾಮಾಯಣ, ಭಾಗವತ, ಮಹಾಭಾರತ, ಕಿರುತಾರ್ಜುನೀಯ, ಶಿವನಿಗೆ ಸಂಬಂಧಿಸಿದ ಘಟನಾವಳಿಗಳು ಹಾಗೂ ಪ್ರಹ್ಲಾದಚರಿತ, ಪಂಚತಂತ್ರದ ಕಥೆಗಳೇ ಆಗಿವೆ. ಈ ಎಲ್ಲಾ ಶಿಲ್ಪಗಳು ಬಹುತೇಕವಾಗಿ ಹೊಯ್ಸಳರ ಕಾಲದ ಎಲ್ಲಾ ಅಲಂಕಾರಿಕ ದೇವಾಲಯಗಳ ಅಧಿಷ್ಠಾನ ಪಟ್ಟಿಕೆಗಳಲ್ಲಿ ಕಂಡುಬರುತ್ತವೆ.


ಹೊಂಯ್ಸಳರ ಅಂದಿನ ರಾಜ್ಯದುದ್ದಗಲಕ್ಕೂ ದೇವಾಲಯಗಳನ್ನು ನಿರ್ಮಾಣ ಮಾಡಿದ್ದಾರೆ. ಹೀಗಾಗಿ ಆಯಾ ಸ್ಥಳೀಯ ಕಲಾತ್ಮಕ ಪ್ರಭಾವವನ್ನು ಕೂಡ ಶಿಲ್ಪಕಲೆಯಲ್ಲಿ ಗುರುತಿಸಬಹುದಾಗಿದೆ. ಮುಖ್ಯವಾಗಿ ಬೇಲೂರು, ಹಳೇಬೀಡು, ಅರಸೀಕೆರೆ, ಕೊರವಂಗಲ, ಅಮೃತಾಪುರ, ನುಗ್ಗೀಹಳ್ಳಿ, ಹೊಸ್ಹಾವರ, ಹುಲ್ಲೇಕೆರೆ, ಹಾರ್ನಹಳ್ಳಿ, ಜಾವಗಲ್ಲು, ಹೊಸಹೊಳಲು, ಬಸರಾಳು ಹಾಗೂ ಸೋಮನಾಥಪುರ ಗಳಲ್ಲಿ ಇರುವ ಹೊಯ್ಸಳ ದೇವಲಯಗಳಲ್ಲಿ ಕಾಥನಕ ಶಿಲ್ಪಗಳು ನಿರೂಪಣೆಗೊಂಡಿವೆ.


ಪ್ರಹ್ಲಾದ ಚರಿತ ವಿಷಯವನ್ನೆ ಗಮನವಿಟ್ಟು ನೋಡಿದಾಗ ಈ ಕಥಾ ನಿರೂಪಣೆ ಹೊಯ್ಸಳ ಕಥಾನಕ ಶಿಲ್ಪಗಳಲ್ಲಿ ಒಂದು ಅತ್ಯಂತ ಕಿರುಭಾಗವಾಗಿ ರಚನೆಗೊಂಡಿದೆ. ಪ್ರಹ್ಲಾದ ಚರಿತೆಗೆ ಪೂರಕವಾದಂತಹ ಆತನ ತಂದೆ ಹಿರಣ್ಯಕಶ್ಯಪು ಹಾಗೂ ಆತನ ನಡುವೆ ನಡೆಯುವ ಘಟನಾವಳಿಗಳೇ ರಚನೆಗೊಂಡಿವೆ. ಈ ಶಿಲ್ಪಗಳಲ್ಲಿ ಪ್ರಧಾನವಾಗಿ ಪ್ರಹ್ಲಾದನ ವಿಷ್ಣುಭಕ್ತಿ ಮತ್ತು ಆತನಿಗೆ ಹಿರಣ್ಯಕಶ್ಯಪುವಿನ ಆಜ್ಞೆಯ ಮೇರೆಗೆ ನೀಡುವಂತಹ ಹಲವಾರು ಶಿಕ್ಷೆಗಳು ಹಾಗೂ ಕೊನೆಯದಾಗಿ ನರಸಿಂಹ ಹಿರಣ್ಯಕಶ್ಯಪರ ಕಾದಾಟ ಹಾಗೂ ಹಿರಣ್ಯಕಶ್ಯಪು ವನ್ನು ತೊಡೆಯ ಮೇಲೆ ಮಲಗಿಸಿಕೊಂಡು ಹೊಟ್ಟೆಯನ್ನು ಬಗೆಯುತ್ತಿರುವ ಶಿಲ್ಪರೂಪಗಳಲ್ಲಿ ಕಾಣಬಹುದಾಗಿದೆ.

* ಅಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು.



























ಪ್ರಸ್ತಾವ ಚರಿತ ಶಿಲ್ಪಗಳು ಪ್ರಮುಖವಾಗಿ ಬೇಲೂರಿನ ದೇವಾಲಯ, ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯ, ಕೊರವಂಗಲದ ಬುಚ್ಚೇಶ್ವರ ದೇವಾಲಯ, ಹಳೇಬೀಡಿನ ಕೇದಾರೇಶ್ವರ, ಜಾವಗಲ್ಲಿನ ಲಕ್ಷ್ಮೀನಾರಾಯಣ, ನುಗ್ಗೇಹಳ್ಳಿಯ ನರಸಿಂಹ (ಕೇಶವ) ಹೊಸಹೊಳಲಿನ ಲಕ್ಷ್ಮೀನಾರಾಯಣ, ಬಸರಾಳಿನ ಮಲ್ಲಿಕಾರ್ಜುನ ದೇವಾಲಯ ಹಾಗೂ

















ಸೋಮನಾಥಪುರದ ಕೇಶವ ದೇವಾಲಯಗಳಲ್ಲಿ ಪ್ರಹ್ಲಾದ ಚರಿತೆಯ ದೃಶ್ಯ ನಿರೂಪಣೆಗಳು ಕಂಡುಬರುತ್ತವೆ.

ಪೌರಾಣಿಕವಾಗಿ ನೋಡುವುದಾದರೆ ದಶಾವತಾರದ ಒಂದು ಅವತಾರವಾದ ನರಸಿಂಹನ ಪರಿಕಲ್ಪನೆ ಹಾಗೂ ಉಲ್ಲೇಖ ಮೊದಲು ಸಿಗುವುದು ಹರಿವಂಶ ಕೃತಿಯಲ್ಲಿ, ವಿಷ್ಣುಪುರಾಣ ಭಾಗವತ ಪುರಾಣಗಳಲ್ಲಿಯೂ ಕೂಡ ಬಾಲ ಪ್ರಹ್ಲಾದನ ಭಕ್ತಿ ಹಾಗೂ ಉಗ್ರನರಸಿಂಹನ ಅವತಾರ ಅಲ್ಲದೆ ಹಿರಣ್ಯಕಶ್ಯಪುವಿನ ವಧೆಯವರೆಗಿನ ಘಟನಾವಳಿಗಳು ಉಲ್ಲೇಖಗೊಂಡಿವೆ. ಇವುಗಳಲ್ಲದೆ ನರಸಿಂಹಪುರಾಣ ಹಾಗೂ ಸ್ವತಃ ಪ್ರಹ್ಲಾದ ರಚಿಸಿದಂತಹ ನರಸಿಂಹ ಸ್ತೋತ್ರಗಳಲ್ಲಿ ನರಸಿಂಹನ ವರ್ಣನೆ ಬರುತ್ತದೆ.

ಉಗ್ರನರಸಿಂಹನ ಶಿಲ್ಪಗಳು ಕರ್ನಾಟಕದ ಮಟ್ಟಿಗೆ ನೋಡಿದಾಗ ಬಾದಾಮಿ ಚಾಲುಕ್ಯರ ಕಾಲದಿಂದಲೇ ರಚನೆಯಾಗಿರುವುದು ಕಂಡುಬರುತ್ತದೆ. ಬಾದಾಮಿ ಐಹೊಳೆ, ಪಟ್ಟದ ಕಲ್ಲು, ಮಹಾಕೂಟಗಳಲ್ಲಿ ಉಗ್ರನರಸಿಂಹನ ಶಿಲ್ಪಗಳು ಕಂಡುಬರುತ್ತವೆ. ಆದರೆ ಇಲ್ಲಿ ಎಲ್ಲಿಯೂ ಕೂಡ ಪ್ರಹ್ಲಾದ ಚರಿತೆಯ ಕಥಾ ನಿರೂಪಣೆಗಳು ಕಂಡುಬರುವುದಿಲ್ಲ.

ಸಾಮಾನ್ಯವಾಗಿ ಹೊಯ್ಸಳ ದೇವಾಲಯಗಳಲ್ಲಿ ಕಂಡುಬರುವ ಪ್ರಹ್ಲಾದ ಚರಿತೆಯಲ್ಲಿ ಸುಮಾರು ೭ ಮತ್ತು ೮ ಆಯ್ದ ಘಟನಾವಳಿಗಳು ಮಾತ್ರ ರಚನೆಗೊಂಡಿವೆ. ಬೇಲೂರಿನ ಚೆನ್ನಕೇಶವ ದೇವಾಲಯದ ದಕ್ಷಿಣ ದ್ವಾರದ ಎಡಪಾರ್ಶ್ವದ ಜಾಲಂದರದಲ್ಲಿ ಪ್ರಹ್ಲಾದ ಚರಿತದ ದೃಶ್ಯಗಳು ಕಂಡುಬರುತ್ತವೆ. ಆದರೆ ಹಳೇಬೀಡಿನಲ್ಲಿ ಮಾತ್ರ ಅದಿಷ್ಠಾನದಲ್ಲಿಯೇ ರಚನೆಗೊಂಡಿರುವ ಪ್ರಹ್ಲಾದ ಚರಿತೆಯಲ್ಲಿ

ಅ) ಹಿರಣ್ಯಕಶ್ಯಪು ತನ್ನ ಯೋಧರಿಗೆ ಪ್ರಹ್ಲಾದನನ್ನು ಕೊಲ್ಲಲು ಆದೇಶಿಸುವುದು ಮತ್ತು ಅದರಂತೆ ಯೋಧರು ಅವನನ್ನು ಕೊಲ್ಲಲು ಪ್ರಯತ್ನಿಸುತ್ತಿರುವದು.

ಆ) ವಿಷಪೂರಿತ ಕಾಳಿಂಗ ಸರ್ಪಗಳ ಮಧ್ಯೆ ಹಾಕುವುದು, ಅಲ್ಲಿಂದ ಯಾವುದೇ ತೊಂದರೆಯಿಲ್ಲದೆ ಪಾರಾಗುವುದು.

ಇ) ಆನೆಗಳಿಂದ ತುಳಿಸಿ ಕೊಲ್ಲಲು ಪ್ರಯತ್ನಿಸುತ್ತಿರುವುದು.

ಈ) ಮೇಲಿನ ಯಾವುದಕ್ಕೂ ಸಾಯದೇ ಇರುವ ಈತನನ್ನು ಯಾವುದಾದರು ತಮಗೆ ತಿಳಿದಿರುವ ದಾರಿಯಿಂದ ಪ್ರಹ್ಲಾದನನ್ನು ಕೊಲ್ಲುವಂತೆ ಪೂಜಾರಿಗಳಿಗೆ ತಿಳಿಸುವುದು ಈ ಪೂಜಾರಿಗಳು ಯಜ್ಞಕುಂಡದಿಂಧ ರಾಕ್ಷಸಿ ಅವತಾರದ 'ಕೃತ್ಯೆ' ಎಂಬುವವಳನ್ನು ಸೃಷ್ಟಿಸಿ ಅವಳು ತನ್ನ ಬಾಯಿಯಿಂದ ವಿಷಪೂರಿತ ಜ್ವಾಲೆಗಳಿಂದ ಪ್ರಹ್ಲಾದನನ್ನು ಕೊಲ್ಲಲು ಪ್ರಯತ್ನಿಸುವುದು ಅದು ಸಾಧ್ಯವಾಗದೆ ಪೂಜಾರಿಗಳ ಮೇಲೆ ತಿರುಗಿ ಬಿದ್ದು ಅವರನ್ನೆ ಕೊಲ್ಲಲು ಪ್ರಾರಂಭಿಸಿದ ದೃಶ್ಯ.

ಊ. ಯಾವುದಕ್ಕೂ ಸಾಯದ ಪ್ರಹ್ಲಾದನ ಅಚಲ ಭಕ್ತಿಯನ್ನು ಪರೀಕ್ಷಿಸುತ್ತ ಕಂಬದಲ್ಲಿಡಗಿರುವ ನರಸಿಂಹ ರೂಪಿ ವಿಷ್ಣುವನ್ನು ತನ್ನೊಂದಿಗೆ ಯುದ್ಧ ಮಾಡುವಂತೆ ಆಹ್ವಾನಿಸುವುದು ಮುಖ್ಯವಾಗಿದೆ.

ನಂತರದಲ್ಲಿ ನಡೆಯುವ ಯುದ್ಧದಲ್ಲಿ ಹಿರಣ್ಯಕಶ್ಯಪು ಸೋತು ಅವನನ್ನು ನರಸಿಂಹ ತೊಡೆಯ ಮೇಲೆ ಮಲಗಿಸಿಕೊಂಡು ಹೊಟ್ಟೆಯಲ್ಲಿ ಬಗೆಯುತ್ತಿರುವ ದೃಶ್ಯದೊಂದಿಗೆ ಪ್ರಹ್ಲಾದ ಚರಿತದ ಪ್ರಮುಖ ಘಟನಾವಳಿಗಳು ಸಂಪೂರ್ಣವಾಗುತ್ತವೆ.

ಪ್ರಸ್ತುತ ಕಥಾನಿರೂಪಣೆ ಭಾಗವತ ಪುರಾಣದಲ್ಲಿ ಬರುವ ಕಥಾವಿವರಣೆಗೆ ಹೆಚ್ಚು ನಿಕಟವಾಗಿರುವುದನ್ನು ಗಮನಿಸಬಹುದು.

ಪ್ರಹ್ಲಾದ ಚರಿತವು ಉಳಿದೆಲ್ಲ ದೇವಾಲಯಗಳಲ್ಲಿ ಇದೇ ರೀತಿ ಅಧಿಷ್ಠಾನ ಪಟ್ಟಿಕೆಗಳಲ್ಲಿ ರಚನೆಗೊಂಡಿದ್ದರೂ ಕೊರವಂಗಲದ ಬುಜ್ಜೇಶ್ವರ ದೇವಾಲಯದಲ್ಲಿ ಮಾತ್ರ ಭಿತ್ತಿ ಶಿಲ್ಪಗಳ ಜೊತೆಜೊತೆಯಲ್ಲಿ ಭಿತ್ತಿ ಶಿಲ್ಪಗಳಂತೆಯೇ ರಚನೆಗೊಂಡಿವೆ. ಇಲ್ಲಿ ಅತ್ಯಂತ ಸಾಂಕೇತಿಕವಾಗಿ ರಚನೆಗೊಂಡಿರುವ ಈ ಶಿಲ್ಪಗಳು ಲಂಬವಾಗಿ ಗೋಡೆಯ ವಿನ್ಯಾಸಕ್ಕೆ ಪೂರಕವಾಗಿ ಕೆತ್ತನೆಗೊಂಡಿರುವದು ವಿಶಿಷ್ಟವಾಗಿದೆ. ಇಲ್ಲಿ ಮುಖ್ಯವಾಗಿ ಹಿರಣ್ಯಕಶ್ಯಪು ಪ್ರಹ್ಲಾದ, ಅಗ್ನಿಜ್ವಾಲೆಯಲ್ಲಿ ಪ್ರಹ್ಲಾದ, ವಿಷಪೂರಿತ ಹಾವುಗಳನ್ನು ಬಿಟ್ಟು ಕೊಲ್ಲುತ್ತಿರುವುದು, ಆನೆಗಳನ್ನು ಬಿಟ್ಟು ತುಳಿಸುತ್ತಿರುವ ಕಾಲ್ತುಳಿತ, ವಿಷ ಪ್ರಾಶನದಲ್ಲಿ ಪ್ರಹ್ಲಾದ, ಕೊನೆಯದಾಗಿ ಪ್ರಹ್ಲಾದ ಕೋರಿಕೆ ಮೇರೆಗೆ ಪ್ರತ್ಯಕ್ಷನಾಗುತ್ತಿರುವ ನರಸಿಂಹ ಹಾಗೂ ಕಂಬವನ್ನು ಹೊಡೆಯಲು ಹವಣಿಸುತ್ತಿರುವ ಹಿರಣ್ಯಕಶ್ಯಪು ಹಾಗೂ ಹಿರಣ್ಯಕಶ್ಯಪುವಿನ ಕೊನೆ ಘಟ್ಟ, ಹೀಗೆ ಎಲ್ಲಾ ವಿಷಯಗಳು ಅತ್ಯಂತ ವಿಭಿನ್ನವಾಗಿ ನಿರೂಪಣೆಗೊಂಡಿವೆ. ಇವೇ ದೃಶ್ಯಾವತರಣಿಕೆಗಳು ಕೇದಾರೇಶ್ವರ ದೇವಾಲಯದಲ್ಲಿ (ಹಳೇಬೀಡು) ಅತ್ಯಂತ ಸೊಗಸಾಗಿ ರಚನೆಗೊಂಡಿವೆ. ಈ ಹಾಳೆಗಳನ್ನು ನೋಡಿದಾಗ ಆ ಕಾಲದ ಕಲಾತ್ಮಕತೆ ಮತ್ತು ವಿಷಯ ನಿರೂಪಣೆ ಸಮಾನಂತರವಾಗಿ ಇನ್ನುಳಿದ ದೇವಾಲಯಗಳಲ್ಲಿಯೂ ಕೂಡ ಕಂಡುಬರುತ್ತದೆ. ಒಟ್ಟಾರೆ ನೋಡಿದಾಗ ಪ್ರಹ್ಲಾದ ಚರಿತೆ ವಿಷಯಗಳಲ್ಲಿ ಬಹು ಸೊಗಸಾಗಿ ಮೂಡಿಬಂದಿರುವುದರಲ್ಲಿ ಸಂಶಯ ಇಲ್ಲ. ಇವುಗಳ ಕುರಿತು ಸಮಗ್ರ ಅಧ್ಯಯನ ಮತ್ತು ಅವಶ್ಯಕತೆ ಇದೆ.

ಮಂಜುಳಾ ತಿ. ಯಲಿಗಾರ**

ಎಸ್.ಬಿ. ಹಿರೇಮಠ**

ಮುರಗೋಡದ ಪ್ರಾಚ್ಯಾವಶೇಷಗಳು

ಪ್ರಾಸ್ತಾವಿಕೆ :

ಮುರಗೋಡವು ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಒಂದು ಪ್ರಮುಖ ಗ್ರಾಮ. ಐತಿಹಾಸಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಹೊಂದಿರುವ ಇದು ಬನವಾಸಿ ಕದಂಬರ ರಾಜಧಾನಿಯಾಗಿತ್ತೆಂದು ಹೇಳಲಾಗುತ್ತದೆ. ಪ್ರಸ್ತುತ ಗ್ರಾಮನಾಮವನ್ನು ಗಮನಿಸಿದರೆ ಇದು ತನ್ನ ಹೆಸರನ್ನು ನಿಸರ್ಗವಾಚಿಯಾಗಿ ಪಡೆದುಕೊಂಡಿರುವುದು ಸ್ಪಷ್ಟ.

ಮೂರು+ಕೋಡ್ (ಪರ್ವತ) > ಮೂರ್ಕೋಡ್ > ಮೂಗೋರ್ಡ್ > ಮುರಗೋಡ ಎಂದು ಮೂರು ಪರ್ವತಗಳನ್ನು ಹೊಂದಿರುವ ಸ್ಥಳದಲ್ಲಿ ನೆಲೆಗೊಂಡ ಗ್ರಾಮ ಎನ್ನುವ ಅರ್ಥದಲ್ಲಿ ಮುರಗೋಡ್ ಎಂದು ಈ ಗ್ರಾಮಕ್ಕೆ ಹೆಸರಾಗಿದೆ. ಹಾಗೆಯೇ ಈ ಕದಂಬರ ಶಾಸನಗಳಲ್ಲಿ ಬರುವ ತ್ರಿಪರ್ವತ ಅಥವಾ ತ್ರಿಶೃಂಗಪುರ ಮುರಗೋಡದ ಸಂಸ್ಕೃತ ರೂಪವಾಗಿದೆ. ಹೀಗೆ ಇತಿಹಾಸಪೂರ್ವ ಕಾಲದಿಂದಲೂ ಜನವಸತಿಯನ್ನು ಹೊಂದಿ ಇತಿಹಾಸ ಕಾಲದಲ್ಲಿ ಮಹತ್ವದ ನಗರವಾಗಿ ಮೆರೆದು ಇಂದಿಗೂ ತನ್ನ ಪೂರ್ವ ಪ್ರಸಿದ್ಧಿಯನ್ನು ಮುಂದುವರಿಸಿಕೊಂಡು ಹೋಗುತ್ತಿರುವ ಮುರಗೋಡ ಗ್ರಾಮದಲ್ಲಿ ಲಭ್ಯವಿರುವ ಪ್ರಾಚ್ಯಾವಶೇಷಗಳನ್ನು ಸಮೀಕ್ಷಿಸುವುದು ಈ ಲೇಖನದ ಉದ್ದೇಶವಾಗಿದೆ.

ಇಲ್ಲಿನ ಪ್ರಾಚ್ಯಾವಶೇಷಗಳನ್ನು ಅಭ್ಯಾಸದ ಅನುಕೂಲಕ್ಕಾಗಿ ಈ ಕೆಳಗಿನಂತೆ ವಿಂಗಡಿಸಿಕೊಳ್ಳಲಾಗಿದೆ.

೧) ಶಾಸನಗಳು.

೨) ದೇವಾಲಯಗಳು.

೩) ಧಾರ್ಮಿಕ ಕೇಂದ್ರಗಳು ಮತ್ತು ಮಠಗಳು.

೪) ಕೆರೆ – ಕಟ್ಟೆ – ಬಾವಿಗಳು.

೫) ಪೌರಾಣಿಕ ಐತಿಹಾಸಿಕ ಕುರುಹುಗಳು.

೬) ಶಿಲ್ಪಗಳು.

I. ಶಾಸನಗಳು

ಬಾದಾಮಿ ಚಾಲುಕ್ಯರು, ಕಲ್ಯಾಣಿ ಚಾಲುಕ್ಯರು, ಕದಂಬರು, ಬೈಸರು, ರಟ್ಟರು, ಯಾದವರು, ಬಹುಮನಿ ಸುಲ್ತಾನರು, ಬಿಜಾಪುರದ ಆದಿಲ್ ಶಾಹಿಗಳು, ವಿಜಯನಗರ ಅರಸರು, ಮರಾಠರ ಆಡಳಿತವನ್ನು ಕಂಡ ಈ ಗ್ರಾಮದಲ್ಲಿ ಒಟ್ಟು ೪ ಶಾಸನಗಳಿವೆ.

ಪೂರ್ವದಲ್ಲಿ ಚಾಲುಕ್ಯರು ಇಲ್ಲಿ ಆಳಿದ್ದರೆಂಬುದಕ್ಕೆ ಸಾಕ್ಷಿಯಾಗಿ ಶಕ ೯೭೪ರ ಮೊದಲನೇ ಸೋಮೇಶ್ವರ ಶಾಸನ ಮತ್ತು ೬ನೇ ವಿಕ್ರಮಾದಿತ್ಯನ ಮತ್ತು ತ್ರೈಲೋಕ್ಯಮಲ್ಲನ ಶಾಸನಗಳಿವೆ. ಇಲ್ಲಿ ಈ ಕಾಲದ ದೇಗುಲಗಳು, ಕಟ್ಟಡಗಳು ಮತ್ತು ಶಿಲ್ಪಗಳು ಇಲ್ಲಿನ ಮಹತ್ವಪೂರ್ಣವಾದ ಇತಿಹಾಸವನ್ನು ಸಾರುತ್ತವೆ.

೧೪೭೩ರ ಶಾಸನ ವಿಜಯನಗರ ಅರಸರ ಆಡಳಿತದಡಿಯಲ್ಲಿ ಈ ಪ್ರದೇಶ ಇದ್ದುದ್ದನ್ನು ತಿಳಿಸುತ್ತದೆ.

ಜಂಬುಲಿಂಗ ದೇವಸ್ಥಾನದ ಪಕ್ಕದಲ್ಲಿ ಒಂದು ತ್ರುಟಿತ ಶಾಸನವಿದೆ. ಅದು ಶೈವ ಪಂಥಕ್ಕೆ ಸಂಬಂಧಿಸಿದ ವೀರಗಲ್ಲು. ಇದು ೩ ಪಟ್ಟಿಕೆಗಳನ್ನು ಒಳಗೊಂಡಿದೆ. ಮೊದಲನೇ ಪಟ್ಟಿಕೆಯಲ್ಲಿ ಲಿಂಗವಿದೆ. ಲಿಂಗದ ಕೆಳಗೆ ೩ ಸಾಲಿನ ಶಾಸನವಿದೆ. ಆದರೆ ಆ ಅಕ್ಷರಗಳು ಸಂಪೂರ್ಣ ನಶಿಸಿ ಹೋಗಿವೆ. ೨ನೇ ಪಟ್ಟಿಕೆಯಲ್ಲಿ ಮಧ್ಯದಲ್ಲಿ ಇಬ್ಬರು ವೀರರೂ ಇದ್ದಾರೆ. ಅವರನ್ನು ಸ್ತ್ರೀಯರು ಸ್ವರ್ಗಕ್ಕೆ ಕೊಂಡೊಯ್ಯುವ ರೀತಿಯಲ್ಲಿ ಈ ಚಿತ್ರವಿದೆ.

ಮಾರುತಿ ದೇವಸ್ಥಾನದ ಒಂದು ಅಪ್ರಕಟಿತ ಶಾಸನ : ಅದು ಅತಿ ಚಿಕ್ಕ ಶಾಸನ; ತ್ರುಟಿತವಾಗಿದೆ. ಮಾರುತಿ ಶಿಲ್ಪದ ಪಕ್ಕದಲ್ಲಿ ಒಂದು ನಾಗರ ಶಿಲ್ಪವಿದೆ. ಆ ಶಿಲ್ಪದ ಬಲಭಾಗದಲ್ಲಿ ಈ ೫ ಸಾಲಿನ ಶಾಸನವಿದೆ, ಕನ್ನಡ ಭಾಷೆಯಲ್ಲಿದೆ.

ಸಾರಾಂಶ : ಶ್ರೀ ಮಾರುತಿ ದೇವರ ಮಾನ್ಯ ಮಿತಿ ಶ್ರಾವಣ ಶುದ್ಧ ಜಿನಂ ಧನನಾಮ ಸಂವತ್ಸರ (ಸಾಯಿಸಂ) ೧೮೧೪ ಎಂದಿದೆ.

* ಸಂಶೋಧನಾ ವಿದ್ಯಾರ್ಥಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

** ಅಧ್ಯಾಪಕರು, ಕನ್ನಡ ಸಂಶೋಧನಾ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

II. ಮುರಗೋಡದ ಪ್ರಮುಖ ದೇವಾಲಯಗಳು

೧) ಮಲ್ಲಿಕಾರ್ಜುನ ದೇವಾಲಯ.

೨) ಸೂರ್ಯನಾರಾಯಣ ದೇವಾಲಯ.

೩) ಮಾರುತಿ ದೇವಾಲಯ.

೪) ಮುಡಿ ಮಲ್ಲಿಕಾರ್ಜುನ ದೇವಾಲಯ.

೫) ಬೋರಮ್ಮ ಶ್ರೇಣಿ ದೇವಾಲಯ.

೬) ಗಣಪತಿ ಶ್ರೇಣಿ ದೇವಾಲಯ.

೭) ಪಾರ್ವತಿ ಮಹೇಶ್ವರ ದೇವಾಲಯ.

ಈ ಮೇಲಿನ ದೇವಾಲಯಗಳಲ್ಲಿ ಪ್ರಾಚೀನ ದೇವಾಲಯಗಳು ಈ ಕೆಳಗಿನಂತಿವೆ.

ಮಲ್ಲಿಕಾರ್ಜುನ ದೇವಾಲಯ : ಈ ದೇವಾಲಯವು ನಂತರದ ಚಾಲುಕ್ಯರ ಶೈಲಿಯಲ್ಲಿದ್ದು ದ್ವಿಕೂಟಾಚಲ ಮಾದರಿಯಲ್ಲಿದೆ. ಇದು ೨ ಗರ್ಭಗೃಹಗಳನ್ನು ಹೊಂದಿ ಅವುಗಳಿಗೆ ಎದುರಾಗಿ ಅಂತರಾಳ, ನವರಂಗ ಮತ್ತು ೨ ಅರ್ಧ ಮಂಟಪಗಳನ್ನು ಹೊಂದಿದೆ. ಮುಂಭಾಗದಲ್ಲಿ ನಂದಿ ಶಿಲ್ಪವಿದೆ. ನವರಂಗದ ಛಾವಣಿಯ ಭುವನೇಶ್ವರಿ ಶಿಲ್ಪದಿಂದ ಅಲಂಕೃತವಾಗಿದೆ. ಉತ್ತರಾಭಿಮುಖ ವಾಗಿರುವ ಗರ್ಭಗೃಹದ ಮೇಲೆ ಕದಂಬ ನಾಗರ ಶಿಖರ ವನ್ನು ಹೊಂದಿದೆ. ಇದರ ಛಾವಣಿಯು ಇಳಿಜಾರಾಗಿದೆ. ಈ ದೇವಾಲಯವು ಉತ್ತಾರಾಭಿಮುಖ ವಾಗಿ ನಿಂತಿದೆ. ದೇವಾಲಯದ ಅಧಿಷ್ಠಾನವು ಜಗತಿ, ಪದ್ಮ, ಗ್ರೀವ, ತ್ರಿಪದಿ, ಕಾಮುದಿ ಕಂಠ ಮತ್ತು ವೇದಿಕೆಗಳನ್ನು ಒಳಗೊಂಡಿದೆ.

ನಾರಾಯಣ ದೇವಾಲಯ : ಈ ದೇವಾಲಯುವು ಮಲ್ಲಿಕಾರ್ಜುನ ದೇವಾಲಯುದ ಎದುರಿಗಿದ್ದು ದಕ್ಷಿಣಾಭಿಮುಖವಾಗಿದೆ. ದೇವಾಲಯದ ಅಧಿಷ್ಠಾನ ಸಾಧಾರಣವಾಗಿದ್ದು ಗರ್ಭಗೃಹ ಮುಂಚಾಚು, ತೆರೆದ ಮಂಟಪ ಹಾಗೂ ಮೇಲೆ ೫ ಚಿಕ್ಕದಾದ ಕದಂಬ ನಾಗರ ಶಿಖರವನ್ನು ಹೊಂದಿದೆ. ಗರ್ಭಗೃಹದ ಮೇಲೆ ದೊಡ್ಡದಾದ ಕದಂಬನಾಗರ ಶಿಖರವಿದೆ. ಒಟ್ಟು ೬ ಶಿಖರಗಳಿವೆ. ಈ ತೆರೆದ ಮಂಟಪವು ನಂತರದ ಜೋಡಣೆಯಾಗಿದೆ. ಈ ದೇವಾಲಯವು ಚಾಲುಕ್ಯರ ನಂತರದ ಶೈಲಿಯಲ್ಲಿದೆ.

ಪಾರ್ವತಿ ಪರಮೇಶ್ವರ ದೇವಾಲಯ : ಈ ದೇವಾಲಯವು ಸಂಪೂರ್ಣವಾಗಿ ನವೀಕರಣಗೊಂಡಿದೆ. ಪೂರ್ವಭಿಮುಖ ವಾಗಿ ಮಲ್ಲಿಕಾರ್ಜುನ ದೇವಾಲಯದ ಆವರಣದಲ್ಲಿದೆ. ಇದು ಗರ್ಭಗೃಹ, ಮುಖಮಂಟಪವನ್ನು ಹೊಂದಿದೆ. ಈ ದೇವಾಲಯದ ಒಳಗೆ ಚಿಕ್ಕದಾದ ಗರ್ಭಗೃಹವಿದ್ದು ಗರ್ಭಗೃಹದಲ್ಲಿ ಪಾರ್ವತಿ ಪರಮೇಶ್ವರ ವಿಗ್ರಹವಿದೆ. ಇದು ಬಹಳ ಸುಂದರವಾಗಿದ್ದು ಅಲಂಕಾರದಿಂದ ಕೂಡಿದ್ದಾರೆ.

ಗಣಪತಿ ಶ್ರೇಣಿ ದೇವಾಲಯ : ಇದು ಮಲ್ಲಿಕಾರ್ಜುನ ದೇವಾಲಯದ ಆವರಣದಲ್ಲಿದ್ದು ದಕ್ಷಿಣಾಭಿಮುಖವಾಗಿದೆ. ಇಲ್ಲಿ ಮುಖಮಂಟಪ, ಗರ್ಭಗೃಹ, ಅಧಿಷ್ಠಾನ, ಗಣಪತಿ ಶಿಲ್ಪ, ಕಪ್ಪು ಶಿಲೆಯಿಂದ ಕೂಡಿದ್ದಾಗಿದೆ.

III. ಮುರಗೋಡ ಗ್ರಾಮದ ಧಾರ್ಮಿಕ ಮಠಗಳು

ಈ ಗ್ರಾಮದಲ್ಲಿ ಪ್ರಮುಖವಾಗಿ ೨ ಮಠಗಳು ಕಂಡುಬರುತ್ತವೆ.

ಶ್ರೀ ಶಿವ ಚಿದಂಬರೇಶ್ವರ ಮೂಲಪೀಠ ಮೂಲ ಮಹಾಕ್ಷೇತ್ರ ಸಂಸ್ಥಾನ ಕೆಂಗೇರಿ ಮಠ : ಸುಮಾರು ೨೫೦ ವರ್ಷಗಳ ಇತಿಹಾಸವನ್ನು ಹೊದಿರುವ ಈ ಕ್ಷೇತ್ರವು ಪವಿತ್ರವಾಗಿದೆ. ಲೀಲಾ ಮಹಿಮರು, ಪವಾಡ ಪುರುಷರಾದ ಧಾರ್ಮಿಕ ಪರಂಪರೆಗೆ ಹೆಸರಾದ ಶ್ರೀ ಶಿವ ಚಿದಂಬರ ಮಹಾಸ್ವಾಮಿಗಳ ಜನ್ಮಸ್ಥಳವಾದ ಮುರಗೋಡದ ಅಮರ ಕಲ್ಯಾಣ ಪುಣ್ಯಭೂಮಿ ಶ್ರೀ ಕ್ಷೇತ್ರ ಕೆಂಗೇರಿ. ೧೭೫೮ರಲ್ಲಿ ಜನಿಸಿ ೧೮೧೫ರ ವರೆಗೆ ಬ್ರಹ್ಮಚಾರಿಗಳಾಗಿ ಬಾಳಿ ಈ ನಾಡನ್ನು ಪ್ರಣೀತಗೊಳಿಸಿದ ಶ್ರೀ ಚಿದಂಬರೇಶ್ವರರು ಇಲ್ಲಿ ನೆಲಸಿ ಹೋಗಿದ್ದಾರೆ. ಪ್ರತಿ ವರ್ಷವು ಮಹಾರಥೋತ್ಸವವು ಜರುಗುತ್ತದೆ. ಈ ಕ್ಷೇತ್ರದ ೭ ನೆಯ ಪೀಠಾಧಿಕಾರಿಗಳಾಗಿ ಪರಮಪೂಜ್ಯ ಶ್ರೀ ಶಂಕರ ದೀಕ್ಷಿತ ಮಹಾಸ್ವಾಮಿಗಳು ಈ ಕ್ಷೇತ್ರದ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸಿದ್ದಾರೆ. ಈ ಮಠದಲ್ಲಿ ಚಿದಂಬರೇಶ್ವರ ಮೂರ್ತಿ, ಶಿಲ್ಪ, ಲಿಂಗ, ಶಿವಪಂಚಾಯತ, ಯಜ್ಞಕುಂಡ, ವೈದಿಕ ಧ್ವಜರೋಹಣ ಕಟ್ಟೆ, ರಾಮಮಂದಿರ, ದತ್ತಾತ್ರೇಯ, ಪಾದುಕೆಗಳು, ತಂಬೂರಿ, ಛತ್ರಛಾಮರಗಳು, ಬೆಳ್ಳಿಕ್ಕ ಪಲ್ಲಕ್ಕಿಗಳು ಇವೆ.

ದುರದುಂಡೀಶ್ವರ ಮಠ : ಉತ್ತರ ಕರ್ನಾಟಕದ ಪ್ರಸಿದ್ಧ ಮಠಗಳಲ್ಲೊಂದಾದ ಅರಭಾವಿಯ ಶ್ರೀ ದುರದುಂಡೀಶ್ವರ ಮಠವು ಒಂದು. ಈ ಮಠದ ಪೀಠಾಧಿಪತಿಗಳಾದ ಲಿಂಗೈಕ್ಯ ಶ್ರೀ ನಿರಂಜನ ಪ್ರಣವ ಸ್ವರೂಪಿ ಶ್ರೀ ಮಹಾಂತ ಶಿವಯೋಗಿ ಗಳು. ೧೯೨೭ರಲ್ಲಿ ಮುರಗೋಡ ಗ್ರಾಮಕ್ಕೆ ದಯಮಾಡಿಸಿ ೧೯೬೯ರ ಶತಮಾನೋತ್ಸವ ಆಚರಿಸಿಕೊಂಡು ಈ ನಾಡಿನ ಜನರನ್ನು ಪುನೀತರನ್ನಾಗಿ ಮಾಡಿಹೋದ ಏಕಮೇವ ಶಿವಯೋಗಿಗಳು. ಇವರ ಪೀಠಕ್ಕೆ ಬಂದ ಶ್ರೀ ಮ.ಮ.ನಿ.ಸ್ವ. ನೀಲಕಂಠ ಮಹಾಸ್ವಾಮಿಗಳು ಶ್ರೀಮಠದ ಏಳ್ಗೆಗಾಗಿ ಹಗಲಿರುಳು ಶ್ರಮಿಸುತ್ತಾ ಬಂದಿದ್ದಾರೆ. ಶ್ರೀ ಮಠವು ಸಂಸ್ಕೃತ ಪಾಠಶಾಲೆ ೧೯೫೮–೫೯ರಲ್ಲಿ ಹೈಸ್ಕೂಲು, ೧೯೫೯ರಲ್ಲಿ





ಮುರಗೋಡದ ವೀರಗಲ್ಲು (ಶಾಸನ ಅಪ್ರಕಟಿತ)



ಮಲ್ಲಿಕಾರ್ಜುನ ದೇವಾಲಯ



ಪಾಂಡವರು ಒಂದು ದಿನ ವಾಸವಿದ್ದ ಸ್ಥಳ



ವಾಡೆಯಲ್ಲಿನ ದೇವಾಲಯ



ವಿಜ್ಞಾನಕ್ಕೆ ಸವಾಲಾಗಿರುವ ಅಗಸಕಟ್ಟೆ



ಪಾಂಡವರ ರಥದ ಹಾದಿ



ಮುರಮಂಡೀಶ್ವರ ಮಠ



ಚಿದಂಬರೇಶ್ವರ ಶಿವಪಂಚಾಯತ



ಮಲ್ಲಿಕಾರ್ಜುನ ದೇವಾಲಯದ ನಂದಿ ಶಿಲ್ಪ



ಮಾರುತಿ ಶಿಲ್ಪ



ಕೂಗುವ ಬಸವನ ಶಿಲ್ಪ



ವಾಡೆಯ ಮಹಾದ್ವಾರದ ಬದಿಯ ಕೋಟೆ



ವಾಡೆ ಒಳಗೆ ಹೋಗುವ ಹಳೇ ಮಹಾದ್ವಾರ

ಪದವಿ ಪೂರ್ವ ಕಾಲೇಜನ್ನು, ೧೯೮೦-೮೧ರಲ್ಲಿ ಸುಮಾರು ೧೫೦೦ ರಿಂದ ೨೦೦೦ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದೆ. ಇಲ್ಲಿಯೇ ಶಿಕ್ಷಣ ಪಡೆದು ೨೦ ಜನ ಮಠಾಧೀಶರು ೮೦ ರಿಂದ ೮೫ ಜನ ಅರ್ಚಕರಾಗಿ ಹೋದ ಖ್ಯಾತಿಯಿದೆ.

ಓ) ಸಿದ್ದನಗವಿ : ನಿಸರ್ಗದತ್ತ ಪುರಾತನವಾದ ಈ ಗವಿಯು ಮುರಗೋಡದಿಂದ ೧ ಕಿ.ಮೀ. ದೂರದಲ್ಲಿದ್ದು ವಿಸ್ತಾರವಾದ ಬೆಟ್ಟಗುಡ್ಡಗಳಿಂದ ಆವೃತ್ತವಾಗಿದೆ. ಇಲ್ಲಿ ಕಳೆದ ೩೦೦ ಮತ್ತು ೪೦೦ ವರ್ಷಗಳಾಚೆ ಸಿದ್ದಪ್ಪ ಎಂಬ ಋಷಿಮುನಿಯು ವಾಸಿಸಿ ಈ ಗವಿಯಲ್ಲಿಯೇ ಜೀವತ್ಯಾಗ ಮಾಡಿದರೆಂದು ಹೇಳಲಾಗುತ್ತದೆ. ಮರಳುಗಲ್ಲಿನ ಬಂಡೆಕಲ್ಲುಗಳಿಂದ ಈ ಗವಿಯು ನಿರ್ಮಾಣಗೊಂಡಿದ್ದು ಈ ಗವಿಯನ್ನು ಪ್ರವೇಶಿಸುವ ಕಾಲಕ್ಕೆ ರಂಗಮಂದಿರದ ಚಿತ್ರ ಕಣ್ಣಿಗೆ ಗೋಚರವಾಗುತ್ತದೆ. ಭೂಗರ್ಭ ಶಾಸ್ತ್ರಜ್ಞರಿಗೆ ಅಧ್ಯಯನ ಮಾಡಲು ಈ ಗವಿಯು ಸಹಕಾರಿಯೂ ಆಗಿದೆ. ಅಲ್ಲದೇ ಗರಗದ ಮಡಿವಾಳೇಶ್ವರರು, ನವಲಗುಂದದ ನಾಗಲಿಂಗ ಸ್ವಾಮಿಗಳು, ತ್ರಿಭುವನ ಭಂಗಿ ಮುನಿಗಳು ಇಲ್ಲಿ ವಸತಿಮಾಡಿ ಹೋಗಿದ್ದರೆಂದು ಹೇಳಲಾಗುತ್ತದೆ. ಇಲ್ಲಿ ೫ ಹೆಡೆನಾಗರ ಶಿಲ್ಪ, ಸಿದ್ದೇಶನ ಗದ್ದುಗೆ ತ್ರುಟಿತ ಲಿಂಗವೂ ಇದೆ.

IV. ಪೌರಾಣಿಕ ಐತಿಹಾಸಿಕ ಕುರುಹುಗಳು

ಎ) ಪಾಂಡವರ ಫಡಿ : ಹೆಗ್ಗೇರಿ ಕೆರೆಯ ಮೇಲ್ಭಾಗ ಸಮತಟ್ಟಾದ ಬೆಟ್ಟದ ಮೇಲೆ ಪಾಂಡವರು ಹಾದು ಹೋದ ಕುರುಹು ಎಂದು ಹೇಳುವುದು ಜನವಾಡಿಕೆಯಲ್ಲಿದೆ. ಇಲ್ಲಿ ಭೀಮನ ಹೆಜ್ಜೆಯ ಗುರುತು, ರಥದ ಗಲಿಯು ಹಾದಿ ಹೋದ ದಾರಿ, ಆನೆ ಬಂಡೆ, ಕುದುರೆಯ ಹೆಜ್ಜೆಯ ಗುರುತು ಎಂದು ತೋರಿಸುವುದು, ಹಾಗೇ ಮುಂದೆ ಸ್ವಲ್ಪ ದೂರದಲ್ಲಿ ಪಾಂಡವರು ಒಂದು ದಿನ ವಾಸ ಮಾಡಿ ಹೋದ ಪ್ರತೀತಿ ಕೂಡಾ ಇದೆ.

ಬಿ) ಉಳವೆ ಬಾಗಿಲು : ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಶರಣರು ಹೋರಾಟದ ಪ್ರತೀಕವಾಗಿ ಉಳವೆಯ ಹೆಬ್ಬಾಗಿಲೊಂದು ಊರ ಪೂರ್ವಕ್ಕೆ ಈಗಲೂ ಇಟ್ಟಿಗೆಯಿಂದ ತನ್ನ ಮೊದಲಿನ ಅಸ್ತಿತ್ವವನ್ನು ಕಾಯ್ದುಕೊಂಡಿದೆ. ಜನರ ಮಾತಿನಲ್ಲಿ 'ಉಳವೆ ಕಡೆ ಬಾಗಿಲು' ಎಂದಾಗಿದೆ. ಚೆನ್ನಬಸವಣ್ಣನನ್ನು ಇಲ್ಲಿಯೇ ಕದಂಬ ಸೈನಿಕರು ಬಂದು ಅವನನ್ನು ಭೇಟಿಯಾದರಂತೆ ಎಂದು ಪ್ರತೀತಿ ಕೂಡಾ ಇದೆ.

ಡಿ) ಕೂಗುಮಾರಿ ಬಸವಣ್ಣನ ಶಿಲ್ಪ : ಉಳವೆ ಬಾಗಿಲು. ಬಲಗಡೆ ಭಾಗದಲ್ಲಿ ಕೂಗುಮಾರಿ ತಂದೆಯ ಚಿಕ್ಕ ಗುಡಿ ಇದೆ. ಈ ಗುಡಿಯಲ್ಲಿ ಲಿಂಗ, ನಂದಿಯ ಶಿಲ್ಪವಿದೆ. ಕಳಚೂರಿ ಸೈನಿಕರು ಬಂದಿದ್ದನ್ನು ಕಂಡು ಶರಣರನ್ನು ಕೂಗಿ ಎಚ್ಚರಿಸಿ

ದನೆಂದು, ಕೂಗೂಮಾರಿ ತಂದೆಯನ್ನು ಸೈನಿಕರು ಕಿವಿಯಲ್ಲಿ ಹಾರೆಯಿಂದ ಹೊಡೆದುಕೊಂಡು ಇದೇ ಸ್ಥಳದಲ್ಲಿ ಎಸೆದಿದ್ದರೆಂದು ಪ್ರತೀತಿ ಇದೆ. ಆ ಜ್ಞಾಪಕಾರ್ಥವಾಗಿ ಇಲ್ಲಿಯೇ ನಂದಿಯ ಶಿಲಾಮೂರ್ತಿಯ ಎಡದ ಕಿವಿಯಲ್ಲಿ ತೂತು ಕೊರೆಯಲಾಗಿದೆ.

ಇ) ಅಗಸಕಟ್ಟೆ : ವಿಚಿತ್ರ ಆದರೂ ಸತ್ಯ ಎಂಬಂತೆ ಇಲ್ಲಿಯೇ ಶ್ರೀ ದುರದುಂಡೀಶ್ವರ ಮಠದ ಸಮೀಪ ಅಗಸನ ಕಟ್ಟೆಯು ಗುಡಿಯ ಮೇಲೆ ಸ್ಥಾಪಿತಗೊಂಡು ಗುಡಿಯ ರಕ್ಷಣೆಯನ್ನು ಮಾಡುವ ತರದ ಆಲದ ಮರವೊಂದು ಗುಡಿಯ ಸುತ್ತಲೂ ಬೀಳಲುಗಳನ್ನು ಬಿಟ್ಟು ಜನರನ್ನು ಆಕರ್ಷಿಸುತ್ತದೆ.

V. ಕೆರೆ–ಕಟ್ಟೆ–ಬಾವಿಗಳು

ಎ) ಕೆಂಗೇರಿಯ ಕೆಂಪು ಕೆರೆ : ಶ್ರೀ ಶಿವ ಚಿದಂಬರೇಶ್ವರ ದೇವಸ್ಥಾನದ ಹಿಂಭಾಗದಲ್ಲಿ ಕೆಂಗೇರಿ ಎಂದು ಕರೆಯಲ್ಪಡುವ ದೊಡ್ಡದಾದ ಕೆರೆ ಇದೆ. ೧೨ನೇ ಶತಮಾನದ ಶಿವಶರಣರ ಕಾಲಕ್ಕೆ ಸಂಬಂಧಿಸಿದಂತೆ ಶರಣರನ್ನು ಬೆನ್ನಟ್ಟಿ ಬರುತ್ತಿದ್ದ ಕಳಚೂರಿ ಸೈನಿಕರನ್ನು ಕದಂಬ ಮೈಲಳದೇವಿಯ ಸೈನಿಕರು ಎದುರಿಸಿದಳು. ಈ ೨ ಗುಂಪುಗಳ ಸೈನಿಕರಲ್ಲಿ ಕಾದಾಟ ನಡೆದು ಸೈನಿಕರ ರಕ್ತದ ಕೋಡಿಯೇ ಹರಿಯಿತು. ರಕ್ತವೆಲ್ಲ ಕೆರೆಯಾಗಿ ಕೆಂಪು + ಕೆರೆ ಆಯಿತೆಂದು ಸ್ಥಳೀಯರ ಹೇಳಿಕೆ. ಆದರೆ ಅಲ್ಲಿಯ ಮಣ್ಣು ಕೂಡಾ ಕೆಂಪು ವರ್ಣವನ್ನೇ ಹೊಂದಿದೆ.

ಬಿ) ಹೆಗ್ಗೇರಿ ಕೆರೆ : ಈ ಗ್ರಾಮಕ್ಕೆ ವಿಸ್ತಾರವಾದ ಭೂಮಿಯ ಆವರಿಸಿರುವ ಹೆಗ್ಗೇರಿ ಕೆರೆಯು ಬ್ರಿಟಿಷರ ಕಾಲಕ್ಕೆ ಬ್ರಿಡ್ಜನ್ನು ನಿರ್ಮಾಣ ಮಾಡಲಾಗಿದೆ. ಈ ಕೆರೆಯು ಒಡೆದರೆ ಈ ಗ್ರಾಮವೇ ಮುಳುಗಡೆ ಆಗುವ ಸಾಧ್ಯತೆ ಇದೆ ಎಂದು ತಿಳಿದುಬರುತ್ತದೆ.

ಸಿ) ಬಾವಿಗಳು : ಈ ಗ್ರಾಮದಲ್ಲಿ ೧. ನಾಗರಬಾವಿ, ೨. ಬಾಳವ್ವನ ಬಾವಿ, ೩. ಜಂಬವ್ವನ ಬಾವಿ ಎಂಬ ೩ ಪ್ರಾಚೀನ ಬಾವಿಗಳಿವೆ. ಇವುಗಳಲ್ಲಿ ನಾಗರಬಾವಿ ಸುಸ್ಥಿತಿಯಲ್ಲಿದೆ. ಉಳಿದೆರಡು ಬಾವಿಗಳು ಹಾಳಾಗಿವೆ. ಸುಮಾರು ವರ್ಷಗಳ ಹಿಂದೆ ನಾಗವ್ವ, ಬಾಳವ್ವ, ಜಂಬವ್ವ ಎಂಬ ೩ ಜನ ಸಹೋದರಿಯರಿದ್ದರು. ಅವರು ವೇಶ್ಯಾವಾಟಿಕೆಯ ವೃತ್ತಿಯಿಂದ ತುಂಬಾ ಹಣ, ಆಸ್ತಿಯನ್ನು ಸಂಪಾದಿಸಿದ್ದರು. ಈ ಕಾರಣಕ್ಕಾಗಿ ಒಬ್ಬ ಮಗುವನ್ನು ದತ್ತಕ ತೆಗೆದುಕೊಂಡರೆ ಆ ಮಗು ಮಾತ್ರ ನಮಗೆ ಅವ್ವ ಅನ್ನುತ್ತದೆ. ಆದರೆ ನಾವು ಎಲ್ಲರಿಂದ ಅವ್ವ ಎನಿಸಿಕೊಳ್ಳಬೇಕೆಂಬ ಉದ್ದೇಶದಿಂದ ಸಾರ್ವಜನಿಕವಾಗಿ ತಮ್ಮ ಹೆಸರಿನಲ್ಲಿ ೩ ಬಾವಿಗಳನ್ನು ನಿರ್ಮಿಸಿದರೆಂದು ಐತಿಹ್ಯ ಇದೆ.

ಕದಂಬರ ಕಾಲಕ್ಕೆ ಸಂಬಂಧಿಸಿದಂತೆ ಶಿವದೇವಾಲಯ, ತೀರ್ಥಂಕರ ಶಿಲ್ಪ ಕರಿಕಲ್ಲಿನ ರುಂಡವಿಲ್ಲದ ವಿಗ್ರಹ ಶಿಥಿಲವಾದ ತ್ರಿಪೀಠ ಶಿವಲಿಂಗವೂ ಕೂಡಾ ಇದೆ.

VI. ಶಿಲ್ಪಗಳು : ಈ ಗ್ರಾಮದಲ್ಲಿ ನಂದಿಯ ಶಿಲ್ಪ, ಕೂಗು ಬಸವಣ್ಣ ಶಿಲ್ಪ, ನಾಗರಶಿಲ್ಪ, ಕಲ್ಲು ಶಿಲೆಯ ಗಣಪತಿ ಶಿಲ್ಪ, ಚಿದಂಬರೇಶ್ವರ ಪಾದುಕೆಗಳು, ಮೂರ್ತಿಶಿಲ್ಪ, ಶಿವಪಂಚಾಯತ, ಲಿಂಗಗಳು, ಹಲವಾರು ಶಿಲ್ಪಗಳು ಕಂಡು ಬರುತ್ತವೆ.

ಸಮಾರೋಪ : ಈ ಮುರಗೋಡ ಗ್ರಾಮವು ಆಧುನಿಕತೆಯ ಮಹತ್ವವನ್ನು ಕೂಡಾ ಪಡೆದುಕೊಂಡಿದೆ. ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ, ಕಲೆ ಮತ್ತು ವಾಸ್ತುಶಿಲ್ಪಗಳ ಇತಿಹಾಸವನ್ನು ಒಳಗೊಂಡ ಮುರಗೋಡವು ಜಾನಪದ ರತ್ನ ಬಾಳಪ್ಪ ಹುಕ್ಕೇರಿ, ನಾಟ್ಯ ಕಲಾವಿದೆ ರೇಣುಕಮ್ಮ ಮುರಗೋಡ ಪ್ರಸಿದ್ಧ ಕಲಾವಿದರು, ಎಂ.ಎಂ. ಭಟ್ಟ ಮೂರ್ತಿಕಾರ, ಎಂ.ಎಂ. ಕಮ್ಮಾರ ಶಿಲ್ಪಿಕಾರ, ಅಲ್ಲಮ್ಮಪ್ರಭು ಬಡಿಗೇರ, ಪುಸ್ತಕ ಪ್ರೇಮಿ ಮಹಾರುದ್ರಪ್ಪ ದಾಡಿಗುಂಡಿ, ಅಲ್ಲದೇ ಸ್ವಾತಂತ್ರ್ಯ ಹೋರಾಟಗಾರರಿಗೆ ಜನ್ಮ ನೀಡಿದ ಈ ಗ್ರಾಮವು ತನ್ನದೇ ಆದ ಐತಿಹಾಸಿಕತೆಯನ್ನು ಸಾರಿ ಹೇಳುತ್ತಿದೆ.

ಅಲ್ಲದೆ ಹಸಿರುಗಾಜಿನ ಬಳೆ, ಹಳದಿ ಮಣ್ಣಿನ ಒಲೆ ತಯಾರಿಕೆ, ಕುಂಬಾರಿಕೆ, ಕರೆ ಹಂಚುಗಳು, ಗೃಹಪಯೋಗಿ ಗಡಿಗೆ, ಮಡಿಕೆ, ಹೂವಿನ ಕುಂಡೆ, ಹೂಜಿ, ಪ್ಲಾಸ್ಟಿಕ್, ಹೂವಿನ ತಯಾರಿಸುವಲ್ಲಿ ಪ್ರಮುಖ ಕೀರ್ತಿಗೆ ಹೆಸರಾಗಿದೆ. ಅಲ್ಲದೇ ಪ್ರಾಚೀನ ಕಾಲದಿಂದಲೂ ಈ ಗ್ರಾಮವು ತನ್ನದೇ ಆದ ಐತಿಹಾಸಿಕತೆಯನ್ನು ಹೊಂದಿ ಇಂದಿಗೂ ಅನೇಕ ಕುರುಹುಗಳನ್ನು ಉಳಿಸಿಕೊಂಡು ಬಂದಿದೆ.

ಆಧಾರಸೂಚಿ

೧ **ಕರ್ನಾಟಕ ರಾಜ್ಯ ಗೆಜೆಟಿಯರ್ಸ್** – Vo. III.

೨ **ಬೆಳಗಾಂ ಜಿಲ್ಲೆಯ ಗೆಜೆಟಿಯರ್.**

೩ ಡಾ. ಸಂಗಮೇಶ ಸವದತ್ತಿ ಮಠ, **ಮುರಗೋಡ ಶರಣ ಕ್ಷೇತ್ರ.**

೪ 'ತ್ರಿಶೃಂಗಪುರ ಕದಂಬರ ರಾಜಧಾನಿ ಮುರಗೋಡ', ಡಾ. ನಾಗಭೂಷಣರವರ ಲೇಖನ.

೫ ಸ್ಥಳೀಯರ ಹೇಳಿಕೆ ಮತ್ತು ಕಾರ್ಯಕ್ಷೇತ್ರ.

೬ ಕೆಂಗೇರಿ ಮಠ ಮತ್ತು ದುರದುಂಡೀಶ್ವರ ಮಠದ ಪುಸ್ತಕಗಳು.

೭ ಎಂ.ಸಿ. ದಾಡಿಗುಂಡಿಯವರು ಸಂಗ್ರಹಿಸಿದ ಹಲವಾರು ಪುಸ್ತಕಗಳು.

ಕುಂ.ಬಾ. ಸದಾಶಿವಪ್ಪ*

ಹರಪನಹಳ್ಳಿ ತಾಲ್ಲೂಕು ಅರಸಿಕೆರೆ ಗ್ರಾಮದ ಪ್ರಾಚೀನ ಪರಿಸರ ಶೋಧ

ಅರಸಿಕೆರೆ ಹೆಸರುಳ್ಳ ಗ್ರಾಮಗಳು ಎರಡು ಎಂಬುದು ನನ್ನ ತಿಳುವಳಿಕೆ. ಹಾಸನ ಜಿಲ್ಲೆಯಲ್ಲಿ ಒಂದು, ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನಲ್ಲಿ ಒಂದು. ಸದ್ಯದ ಶೋಧ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಅರಸಿಕೆರೆ ಪ್ರಾಚೀನ ಪರಿಸರ ಕುರಿತಾದದ್ದು. ಈ ಗ್ರಾಮ ಹರಪನಹಳ್ಳಿ ಪಟ್ಟಣದಿಂದ ದಕ್ಷಿಣ ದಿಕ್ಕಿಗೆ ಸುಮಾರು ೧೫ ಕಿ.ಮೀ. ಅಂತರದಲ್ಲಿದೆ.

ಗುಡ್ಡದ ಪರಿಸರ–೧

ಗ್ರಾಮದ ಪಶ್ಚಿಮ ದಿಕ್ಕಿಗೆ ಸುಮಾರು ಒಂದು ಕಿ.ಮೀ. ಅಂತರದಲ್ಲಿ ಒಂದು ಗುಡ್ಡದ ಸಾಲು ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಹಬ್ಬಿದೆ. ಅದರ ದಕ್ಷಿಣದ ಕೊನೆಯಲ್ಲಿ ಒಂದು ಕೋಟೆಯ ಗೋಡೆ, ಹೂಡೇವು, ಹೊಂಡ, ಗುಹೆ ಒಂದು ಶಾಸನ ಕಾಣುತ್ತದೆ. ಗುಡ್ಡದ ಕೆಳಭಾಗದ ಅರ್ಧದಲ್ಲಿ ನರಸಿಂಹ ದೇವರು, ಅಲ್ಲಿ ಒಂದು ಇತ್ತೀಚಿನ ಶಾಸನ ದೊರಕಿದೆ. ಅದಕ್ಕೆ ಸ್ವಲ್ಪ ಕೆಳಗೆ ಬೈರಸಿದ್ದನೆಂಬುವ ದೇವರಿದೆ. ಅದು ಉದ್ದಕ್ಕಿರುವ ಒಂದು ಈಶ್ವರಲಿಂಗ. ಈ ಕೋಟೆಯನ್ನು ಯಾರು ಆಳಿದರು? ಎಂಬುದಕ್ಕೆ ಪುರಾವೆಗಳಿಲ್ಲ. ಈ ಗುಡ್ಡದ ಪೂರ್ಣ ಕೆಳಗೆ ಮೊದಲಿಗೆ ಒಂದು ಗ್ರಾಮವಿದ್ದಿತು. ಇದು ಕಾಲಕ್ರಮದಲ್ಲಿ ಈಗಿನ ಸ್ಥಳಕ್ಕೆ ಸ್ಥಳಾಂತರಗೊಂಡಿದೆ. ಈ ಮಾತನ್ನು ಗ್ರಾಮದ ಹಿರಿಯರು ಒಪ್ಪುವರು. ಮೊದಲಿನ ಈ ಗ್ರಾಮದ ಹೆಸರು ತಿಮಲಾಪುರವೆಂದು ಇರಬೇಕು. ಈಗಲೂ, ಊರವರು ಗುಡ್ಡದ ಕಡೆಯ ಗ್ರಾಮದ ಭಾಗಕ್ಕೆ ತಿಮಲಾಪುರವೆಂದು ಕರೆಯುವರು.

ಗ್ರಾಮದ ಪರಿಸರ–೨

ಈ ಗ್ರಾಮದಲ್ಲಿ ಒಂದು ಕೋಟೆಯಿದ್ದು ಅದು ಹಾಳಾಗಿದೆ. ಅದರ ಗೋಡೆ ಹೂಡೇವು ಗುರುತುಗಳು ಇರುತ್ತವೆ. ಈ ಕೋಟೆಯಲ್ಲಿ ಒಂದು ಕಲ್ಲೇಶ್ವರ, ಮತ್ತೊಂದು ಹರಿಹರೇಶ್ವರ ಗುಡಿಗಳು. ಕಲ್ಲೇಶ್ವರ ಸಂಪೂರ್ಣ ಹಾಳಾಗಿ ಅದರ ಗುರುತುಗಳು ಕಾಣುತ್ತವೆ. ಹರಿಹರೇಶ್ವರ ದೇವಾಲಯ ಚೆನ್ನಾಗಿದೆ. ಅದು ಮೂರ್ತಿಯು ಆಕಾರದಲ್ಲಿದೆ. ಮುಖಮಂಟಪ, ಹರಿಹರ ಮತ್ತು ಬಾಗಳಿಗಳ ಕಂಬಗಳನ್ನು ಹೋಲುವುದು. ಇದರ ಒಂದು ಭಾಗದಲ್ಲಿ ಕೋಲಶಾಂತರ ಮಠವು, ಅದರ ಮುಂದೆ ಒಂದು ಬಯಲು ಸ್ಥಳವಿದೆ. ಅದರಲ್ಲಿ ಒಂದು ಚಿಕ್ಕ ಗುಡಿಯಿದೆ. ಸುತ್ತ ಕಲ್ಲುಅರೆಗಳನ್ನು ನಿಲ್ಲಿಸಿರುವರು. ಈ ಬಯಲಿನ ಕಾಲುಭಾಗವು ಗೌಡರು, ಮುಕ್ಕಾಲು ಭಾಗವು ಬ್ರಾಹ್ಮಣ ಶ್ಯಾನುಭೋಗರ ವಶದಲ್ಲಿದೆ. ಅದರಲ್ಲಿರುವ ಒಂದು ಚಿಕ್ಕಗುಡಿಯಲ್ಲಿ ಮಂಗಮ್ಮ ದೇವತೆಯಿದೆ ಎಂದು ಹೇಳುವರು.

ಇದಕ್ಕೆ ಗ್ರಾಮದ ಎಲ್ಲಾ ಜನರು 'ಅರಮನೆ ಬಯಲು' ಎಂದು ಕರೆಯುವರು. ಇದರ ಪಕ್ಕದಲ್ಲಿ **ಕೋಲಶಾಂತರ ಮಠವಿದೆ.**

ಕೆರೆಯ ಪರಿಸರ–೩

ಹೊಸಕೋಟೆ ಎಂಬುವ ಹಳ್ಳಿ ಮತ್ತು ಈಗಿನ ಅರಸೀಕೆರೆ ಗ್ರಾಮದ ಮಧ್ಯಪೂರ್ವ ಮತ್ತು ಪಶ್ಚಿಮ ದಿಕ್ಕಿಗೆ ಚಾಚಿಕೊಂಡಿರುವ ಸ್ಥಳವೇ ಕೆರೆಯು. ಇದಕ್ಕೆ ಪೂರ್ವದಲ್ಲಿ ಒಂದು, ಪಶ್ಚಿಮದಲ್ಲಿ ಒಂದು ಹೀಗೆ ಎರಡು ಕೋಡಿಗಳಿರುತ್ತವೆ. ಕೆರೆಯ ಪೂರ್ವದ ಏರಿಯಾ ಮೇಲೆ ಒಂದು ಚಿಕ್ಕ ಕೋಟೆ ಸ್ಥಾಪಿತವಾಗಿದೆ. ಪಶ್ಚಿಮದ ಕಡೆಗೆ ಒಂದು ಚಿಕ್ಕ ಕೆರೆಯು ಕಂಡುಬರುವುದು. ಅದರ ಪಕ್ಕದಲ್ಲಿ ಕೋಲಶಾಂತರ ಮತ್ತೊಂದು ಮಠವು ಸ್ಥಾಪಿಸಿದೆ. ದೊಡ್ಡ ಕೆರೆಯ ಅಳತೆಯು ಕೆಳಗಿನಂತೆ ಇರುವುದು.

೧ ಜಲ ವಿಸ್ತೀರ್ಣ – ೧೦೫ ಹೆಕ್ಟೇರ್.

೨ ಅಚ್ಚುಕಟ್ಟು – ೧೨೨.೨೫ ಹೆಕ್ಟೇರ್.

೩ ಸರ್ವೆ ನಂಬರ್ – ೨ ಇರುತ್ತವೆ.

೪ ನೀರು ಉಣಿಸುವ ವಿಸ್ತೀರ್ಣ – ೪೦೦ ಹೆಕ್ಟೇರ್.

೫ ಗೋಡೆ (ಒಡ್ಡು) ಎತ್ತರ – ೨೫ ಅಡಿ.

೬ ಕೋಡಿ ಎತ್ತರ – ೧೨ ಅಡಿ.

೭ ಕಟ್ಟಿದ್ದ ಕಾಲ – ೧೦೧೮–೧೦೩೬ ವಿರಬೇಕು.

ಸೂಚನೆ : ೧ ಹೆಕ್ಟೇರು = ೨.೫೦ ಎಕರೆ.

*ಗೋಸಾಯಿಗುಡ್ಡ, ಹಂಪಿ, ಹರಿಹರ ಮಾರ್ಗ, ಹರಪನಹಳ್ಳಿ, ದಾವಣಗೆರೆ ಜಿಲ್ಲೆ.

ಗುಡಿ ಮತ್ತು ಗುಡಿಯ ಹಳ್ಳಿಯ ಪರಿಸರ-೪

ದೊಡ್ಡ ಕೆರೆಯ ಏರಿಯನ್ನು ಹತ್ತುವಾಗ ಎಡಭಾಗದ ಏರಿಯ ಕೆಳಗೆ ಒಂದು ಈಶ್ವರ ಮತ್ತು ನಂದಿ ವಿಗ್ರಹಗಳ ದೇವಾಲಯವಿದೆ. ಅದಕ್ಕೆ ಮುಂದೆ ಹರಪನಹಳ್ಳಿ ಪಾಳೆಯಗಾರನ ಮಗನ ಒಂದು ಸಮಾಧಿ ಇದೆ.

ಅವುಗಳನ್ನು ದಾಟಿ ಮುಂದೆ ಹೋದರೆ, ಒಂದು ಚಿಕ್ಕ ಕೋಟೆಯಿದೆ. ಅದರಲ್ಲಿ ಪೂರ್ವಕ್ಕೆ ಮುಖ ಮಾಡಿದ ಈಶ್ವರ ದೇವಾಲಯವಿದೆ. ಮುಖ್ಯ ದೇವಾಲಯದ ಗರ್ಭಗೃಹದ ಬಾಗಿಲ ಮೇಲೆ ಎರಡು ಆನೆಗಳ ಮಧ್ಯ ಲಕ್ಷ್ಮೀಯ ಉಬ್ಬುಚಿತ್ರವಿದ್ದು, ಎಲ್ಲಾ ಕಡೆಯಂತೆ ಚಾಲುಕ್ಯ ಮತ್ತು ಹೊಯ್ಸಳ ಶೈಲಿಯಲ್ಲಿರುತ್ತದೆ. ಕಂಬ ಮತ್ತು ಹೊರ ಆವರಣ ಆತು ಕುಳಿತುಕೊಳ್ಳುವಂತೆ ಕಲ್ಲುಅರೆಗಳನ್ನು ಹೊಂದಿಸಿದೆ. ಈ ದೇವಾಲಯದ ಹೊರಗೆ ನಂದಿ ವಿಗ್ರಹವು ಸುಮಾರು ಐದು ಅಡಿ ಎತ್ತರವಿದ್ದು, ಮುಖವನ್ನು ಬಲಕ್ಕೆ ತಿರುವಿದೆ. ಅದರ ಹಿಂದೆ ಒಂದು ಈಶ್ವರ ಮತ್ತು ನಂದಿ ವಿಗ್ರಹವಿರುವ, ದೇವಾಲಯವಿದೆ. ಅದಕ್ಕೆ ಸ್ವಲ್ಪ ಸಮೀಪ ಬಯಲಿನಲ್ಲಿ ನಾಲ್ಕು ಶಾಸನಗಳು. ಅವುಗಳ ಪಕ್ಕದಲ್ಲಿ ಒಂದು ಉದ್ದ ಈಶ್ವರ ಲಿಂಗ ಮತ್ತು ಸಪ್ತಮಾತೃಕೆಗಳ ಕಲ್ಲು ಸಿಗುತ್ತದೆ. ಮುಖ್ಯ ದೇವಾಲಯದ ಮುಂದೆ ಮಂಟಪದ ಕಲ್ಲುಗಳು ನಿಂತಿವೆ. ಮುಖ್ಯ ದೇವಾಲಯದ ಎಡಕ್ಕೆ ಒಂದರ ಮುಂದೆ ಮತ್ತೊಂದು ಈಶ್ವರ ದೇವಾಲಯಗಳು. ಹೀಗೆ ಎರಡು ಈಶ್ವರ ದೇವಾಲಯಗಳು ಮುಖ್ಯ ದೇವಾಲಯದ ಬಲಭಾಗಕ್ಕೆ ಕೆರೆಯ ಕಡೆಗೆ ಪ್ರತ್ಯೇಕವಾಗಿ ಶಾರದೆಯ ದೇವಾಲಯವಿದೆ. ಒಡ್ಡು ಕುಸಿದು ಹಳ್ಳವಾಗಿದ್ದ ಸಂದರ್ಭದಲ್ಲಿ ತಳ ಸೇರಿದ್ದ ಮೂರ್ತಿಯನ್ನು ಮೇಲಕ್ಕೆ ಎತ್ತಿ ಕ್ರಿ.ಶ. ೧೯೭೫ರಲ್ಲಿ ಪುನಃ ಇದನ್ನು ಸ್ಥಾಪಿಸಲಾಗಿದೆ. ಇದನ್ನು ಗುಡಿಹಳ್ಳಿ ರೇವಣಸಿದ್ದಪ್ಪ ಎಂಬುವರು ಹೇಳುವರು. ಮುಖ್ಯ ದೇವರ ಎದುರು ಒಂದು ಸ್ತ್ರೀ ಮೂರ್ತಿ ಕಾಣುವುದು. ಮುಖಮಂಟಪದ ಒಂದು ಕಂಬದ ಎರಡು ಭಾಗಗಳಲ್ಲಿ ಒಂದು ಶಾಸನವಿರುವುದು. ಕೆರೆಯ ಕೆಳಗೆ ಹೊಲದಲ್ಲಿ ಒಂದು ಶಾಸನ; ಒಟ್ಟಿಗೆ ಅರಸಿಕೆರೆಯಲ್ಲಿ ಎಂಟು ಶಾಸನಗಳಿರುತ್ತವೆ. ಅವುಗಳ ವಿವರ ಪ್ರತ್ಯೇಕ ಕೊಟ್ಟಿದೆ. ಕೋಟೆಯ ಆವರಣದಲ್ಲಿ ಒಂದು ಕುಟುಂಬಕ್ಕೆ ದೇವರ ಪೂಜೆಗೆಂದು ನೇಮಕ ಮಾಡಿ, ಅದರ ಖರ್ಚಿಗಾಗಿ ಕಡಕೋಳ ಗ್ರಾಮದ ಆದಾಯವನ್ನು ಬಿಟ್ಟಿದ್ದು ಶಾಸನ ತಿಳಿಸುವುದು. ನಿತ್ಯ ಪೂಜೆ ಮಾಡುವ ಈ ಕುಟುಂಬ ಸುಮಾರು ಮುನ್ನೂರು ವರ್ಷಗಳ ಬಳಿಕ ಈ ಸ್ಥಳದಿಂದ ಪೂರ್ವದ ಕೆರೆಕೋಡಿಯ ಪಕ್ಕ ಅರ್ಧ ಕಿ.ಮೀ. ಅಂತರದಲ್ಲಿ ಸ್ಥಾಪನೆಯಾಗಿದೆ. ಪೂಜೆಗಾಗಿ ನೇಮಿಸಿದ ಕುಟುಂಬದಲ್ಲಿ ಇಬ್ಬರು ಸ್ತ್ರೀಯರು **ಗಂಗವ್ವ ಮತ್ತು ಸಕ್ರವ್ವ** ಎಂಬುವರಿಂದ ಇವರ ವಂಶ ಅಭಿವೃದ್ಧಿಗೊಂಡು ಗಂಗವ್ವರ ವಂಶಕ್ಕೆ ೫೦ ಮನೆಗಳು ಸಕ್ರವ್ವರ ವಂಶಕ್ಕೆ ೩೦ ಮನೆಗಳು ಕಂಡುಬಂದವು. ಗಂಗವ್ವಳ ವಂಶದವರಿಗೆ ಮೊದಲು **ಗಾಂಗಾಳೇರು** ಸಕ್ರವ್ವಳ ವಂಶಕ್ಕೆ **ಸಕ್ರವಾಳೇರು** ಎಂದು ಕರೆಯುತ್ತಿದ್ದು, ಗಂಗವ್ವಾರು, ಸಕ್ರವ್ವಾರು ಎಂದು ಕರೆಯುವರು. ಈ ೮೦ ಮನೆಗಳಲ್ಲದೆ ಇತರರ ೬೦ ಮನೆಗಳಿಂದ ಒಟ್ಟಿಗೆ ೧೪೦ ಮನೆಗಳ ಗ್ರಾಮಕ್ಕೆ 'ಗುಡಿಹಳ್ಳಿ' ಎಂದು ಕರೆಯುವರು. ಈಗ ಸ್ವಲ್ಪ ಅಂತರದಲ್ಲಿ ಕಾಣುವ ಒಡ್ಡರಹಟ್ಟಿ ಇದೆ. ಅದು ನೂರು ಮನೆಗಳಿಂದ ಕೂಡಿದೆ. ಅದನ್ನು ಸೇರಿಸಿ ಗುಡಿಹಳ್ಳಿ ಗ್ರಾಮವೆಂದು ಕರೆಯುವರು. ಈ ದೇವರ ಪೂಜೆಯನ್ನು ಒಂದೊಂದು ವರ್ಷ ಒಂದೊಂದು ಮನೆಯವರು ಪೂಜಿಸುವರು. ವರ್ಷದಲ್ಲಿ ಬರುವ ಹಬ್ಬ-ಹುಣ್ಣಿಮೆಗಳಲ್ಲಿ ಉಂಟಾಗುವ ಖರ್ಚಿಗೆ, ಊರವರು ವಂತಿಗೆ ಕೂಡಿಸಿಕೊಳ್ಳುವರು. ಈಗ ಕೆರೆಗುಡಿ ಹಳ್ಳಿಯ ಮಧ್ಯಭಾಗದಲ್ಲಿ ಒಂದು ಬಸವೇಶ್ವರ ಗುಡಿಯನ್ನು ನಿರ್ಮಿಸಿಕೊಂಡಿರುವರು. ಈ ಗ್ರಾಮದಲ್ಲಿ ಪ್ರತಿ ಮನೆಯಲ್ಲಿ ಗಂಡು ಹೆಣ್ಣು ಬಸವ್ವ-ಬಸಪ್ಪ ಎಂಬುವ ಹೆಸರಿನವರು ಸಿಗುವರು.

ಕೆರೆಯಿಂದ ಈ ಗ್ರಾಮಕ್ಕೆ ಅರಸಿಕೆರೆ ಎಂಬುವ ಹೆಸರು ಉಂಟಾಗಿದೆ. ಅರಸಿಯಾರು ? ಯಾವ ಅರಸನ ಹೆಂಡತಿ? ಈ ನೊಳಂಬೇಶ್ವರ ದೇವಾಲಯದ ನಿರ್ಮಾಣ ಯಾರು ಮಾಡಿದರು ? ಕಾಲ ಯಾವುದು ? ಎಂಬುದಕ್ಕೆ ಉತ್ತರವನ್ನು ಪಡೆಯಬೇಕಾದರೆ ನೊಳಂಬ ಪಲ್ಲವರ ಸಂಕ್ಷಿಪ್ತ ಇತಿಹಾಸವನ್ನು ತಿಳಿಯಬೇಕಾಗುವುದು.

ನೊಳಂಬ ಪಲ್ಲವರ ಇತಿಹಾಸ

ಪ್ರಾಚೀನ ಕಾಲದಲ್ಲಿ ಬಾದಾಮಿ ಚಾಲುಕ್ಯರಿಗೂ, ಕಂಚಿಯ ಪಲ್ಲವರಿಗೂ, ಸತತ ಕದನಗಳು ನಡೆಯುತ್ತಿದ್ದವು. ಆಗ ಸೋಲು-ಗೆಲುವುಗಳು ರಾಜ್ಯದ ಗಡಿಗಳಲ್ಲಿ ಹೆಚ್ಚು ಕಡಿಮೆಯಾಗುತ್ತಿದ್ದುವು. ಇದರ ಸದುಪಯೋಗಪಡಿಸಿಕೊಂಡು, ಪಲ್ಲವರ ಕೆಲ ಸೇನಾಧಿಕಾರಿಗಳು ಕರ್ನಾಟಕ ಪ್ರದೇಶಕ್ಕೆ ನುಗ್ಗಿ ಚಾಲುಕ್ಯರ ರಾಜ್ಯದ ಗಡಿಗಳಲ್ಲಿ ಒಂದು ಚಿಕ್ಕ ರಾಜ್ಯವನ್ನು ಸ್ಥಾಪಿಸಿದರು. ಅದೇ ನೊಳಂಬಳಿಗೆ-೧೦೦೦ವೆಂದು ಕರೆಯಲ್ಪಟ್ಟಿತು. ನೊಳಂಬಳಿಗೆ ಚಿತ್ರದುರ್ಗ ಜಿಲ್ಲೆ ಮತ್ತು ಅದರ ಆಸುಪಾಸು ಪ್ರದೇಶವಾಗಿದ್ದಿತು. ಕಾಲ ಕಳೆದಂತೆ ೯-೧೦ನೇ ಶತಮಾನಗಳ ಹೊತ್ತಿಗೆ ವರ್ಧಿಸಿ ನೊಳಂಬ ವಾಡಿ-೩೨೦೦೦ ಕ್ಕೆ ವಿಸ್ತರಿಸಿದ್ದಿತು. ಇದು ಈಗಿನ ಕೋಲಾರ, ತುಮಕೂರು, ಚಿತ್ರದುರ್ಗ, ಬೆಂಗಳೂರು, ಬಳ್ಳಾರಿ ಮತ್ತು ಆಗ್ನೇಯ ದಿಕ್ಕಿನ ತಮಿಳುನಾಡಿನ ಧರ್ಮಪುರಿ. ನೈರುತ್ಯದಲ್ಲಿ ಮಂಡ್ಯ ಜಿಲ್ಲೆಯ ತಾಯ ಊರಿನವರೆಗೂ ವಿಸ್ತರಿಸಿದ್ದಿತು.



ನಂದಿ – ಕೆರೆಗುಡಿ

ಇವರ ವಂಶವೃಕ್ಷ ಅನಂತಪುರ ಜಿಲ್ಲೆಯ ಮಡಕಸಿರಾ ತಾಲೂಕಿನ ಹೆಂಜೇರು-ಹೇಮಾವತಿಯ ಸಿದ್ಧೇಶ್ವರ ಕಂಬದಲ್ಲಿದೆ. ಆದರೆ ಇವರಿಗೆ ಮಹಾರಾಜರಾಗಿ ಚಕ್ರವರ್ತಿಗಳಾಗುವ ಸಾಧ್ಯತೆಗಳು ಕಡಿಮೆಯಾದುವು. ಕಾಲ ಕಳೆದಂತೆ ಗಂಗರ ಕೈಕೆಳಗೆ ತಮ್ಮ ಆಡಳಿತ ಆರಂಭಿಸಿ, ರಾಷ್ಟ್ರಕೂಟರ ಚಾಲುಕ್ಯರ ವಂಶಗಳೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸಿ, ಬಹುಕಾಲ ಕರ್ನಾಟಕ ರಾಜ್ಯವನ್ನಾಳಿದರು.

ಆಡಳಿತ : ನೊಳಂಬ ಪಲ್ಲವರ ರಾಜ್ಯದಲ್ಲಿ ಅರಸನನ್ನು ಬಿಟ್ಟರೆ ಎರಡನೆಯ ಸ್ಥಾನವು ರಾಣಿಯರದು. ಅರಸ ಮೃತನಾದರೆ ಮಗ ದೊಡ್ಡನಾಗುವವರೆಗೂ ರಾಣಿಯರೇ ರಾಜ್ಯಭಾರ ಮಾಡುತ್ತಿದ್ದರು. ಪರಮೇಶ್ವರ ಪಲ್ಲವಾದಿ ರಾಜನ ಮಡದಿ ಮದಕರಿ ಕಲ್ಲು ಆಳಿದಳು. ಒಂದನೇ ಮಹೇಂದ್ರನಿಗೆ ನಾಲ್ಕು ಜನ ರಾಣಿಯರು ೧) ಬಿಜ್ಜಮಹಾದೇವಿ, ೨) ಪರಮಮಹಾದೇವಿ, ೩) ಅಕ್ಕಬ್ಬೆ, ೪) ದೊಂಬಾಬ್ಬೆ. ಇವರು ಅರಸನ ಪರವಾಗಿ ಬೇರೆ ಬೇರೆ ಪ್ರಾಂತಗಳನ್ನು ಆಳುತ್ತಿದ್ದರು. ಉದಾ : ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಗೆ



ನೊಳಂಬೇಶ್ವರ – ಕೆರೆಗುಡಿ

ಪೂರ್ವ, ಸುಮಾರು ೧೫ ಕಿ.ಮೀ. ದೂರದಲ್ಲಿಯ ಚಿಕ್ಕಮಧುರೆ ಶಾಸನದ ಪ್ರಕಾರ ಚಾರು ಪೊನ್ನೇರ ರಾಷ್ಟ್ರಕೂಟರ ಪ್ರಭೂತ ವರ್ಷ (೩ನೆಯ ಗೋವಿಂದ) ನ ಮಾಂಡಳಿಕನಾಗಿ ನೊಳಂಬಳಿಗೆ-೧೦೦೦, ನಿರ್ಗುಂದ-೩೦೦, ಇರಿಲ್ವಾಡಿ-೩೦೦, ಗಂಗವೂರು-೩೦ ಮತ್ತು ನೆಲ್ಲಗುಡಿ-೧೨ ನಾಡುಗಳನ್ನು ಆಳುತ್ತಿದ್ದನು. ಅವನ ಅರಸಿ ಗವಣಗಬ್ಬೆ ಮದಕರಿ ಕಲ್ಲನ್ನು ಆಳುತ್ತಿದ್ದಳು ಎಂದು ತಿಳಿಸಿದೆ. ಅವನ ಕಾಲ– ಕ್ರಿ.ಶ. ಸು. ೮೦೦-೮೩೦ ಎಂದೂ, ತಮಿಳುನಾಡಿನ ಶಾಸನ ಪ್ರಕಾರ ಇವನ ಕಾಲ ಕ್ರಿ.ಶ. ೮೦೦-೮೬೦ ಎಂದು ತಿಳಿಸಿದೆ.

ನೀರಾವರಿಗೆ ಆದ್ಯತೆ : ಪ್ರಾಣಿ ಪಕ್ಷಿಗಳು ಹಾಗೂ ಜನರು ಕುಡಿಯುವುದಕ್ಕೆ ಮತ್ತು ರೈತರ ಬೆಳೆಗಳಿಗೆ ನೀರನ್ನು ಒದಗಿಸುವ ಉದ್ದೇಶದಿಂದ ಅರಸರು-ಅರಸಿಯರು ಬಾವಿ ಕೆರೆಗಳನ್ನು ನಿರ್ಮಿಸುತ್ತಿದ್ದರು. ಚಿಕ್ಕ ಅರಸರು ಸಮಾಜದ ಶ್ರೀಮಂತರು ಕೆರೆಗಳನ್ನು ನಿರ್ಮಿಸಿದರೆ, ದುರಸ್ತಿ ಕಾರ್ಯ ಕೈಗೊಂಡರೆ ಅಂಥವರನ್ನು ವಿಶೇಷ ಸಂದರ್ಭಗಳಲ್ಲಿ ಈ ಅರಸರು ಗೌರವಿಸುತ್ತಿದ್ದರು.



ಗುಡಿಯ ಹತ್ತಿರದ ಕೋಟೆಯ ಹೂಡೇವು

ದೇವಾಲಯಗಳ ರಚನೆ : ಪಲ್ಲವರಂತೆ ನೊಳಂಬರು ದೇವಾಲಯಗಳನ್ನು ನಿರ್ಮಿಸುತ್ತಿದ್ದರು. ಅವರು ತಮ್ಮನ್ನು ಈಶ್ವರ ವಂಶದವರೆಂದು ಹೇಳಿಕೊಂಡಿರುವರು. ಅದರಂತೆ ಈಶ್ವರ ಲಿಂಗ ಅದರ ಮುಂದೆ ನಂದಿಯನ್ನು ಸ್ಥಾಪಿಸುತ್ತಿದ್ದರು.

ಪಂಚಗಣಾಧೀಶ್ವರರೆಂದು ಕರೆಯಲ್ಪಡುವ ಐದು ಜನ ಸಾಧುಗಳು, ಪ್ರಾಚೀನ ಬಳ್ಳಾರಿ ಜಿಲ್ಲೆಯ ಪಶ್ಚಿಮ ತಾಲೂಕುಗಳಲ್ಲಿ ಪ್ರಸಿದ್ಧರು. ಅವರಲ್ಲಿ ಓರ್ವ **ಕೋಲಶಾಂತರು**. ಅವರು ಅರಸಿಕೆರೆಗೆ ಆಗಮಿಸಿ, ಅನೇಕ ಜನ ಜೈನರನ್ನು ಲಿಂಗ ಧರ್ಮಕ್ಕೆ ಮತಾಂತರಗೊಳಿಸಿದರು. ಇವರ ಎರಡು ಮಠಗಳಲ್ಲಿ ಒಂದು ಊರೊಳಗೆ ; ಮತ್ತೊಂದು ಚಿಕ್ಕ ಕೆರೆಯ ಪಕ್ಕದಲ್ಲಿದೆ. ಉಚ್ಚಂಗಿದುರ್ಗದ ಗಂಟೆ ಶಾಸನದ ಪ್ರಕಾರ ಕೋಲಶಾಂತರ ಕಾಲ ಕ್ರಿ.ಶ. ೨೪-೧೦-೧೬೫೩ ಇರಬೇಕು. ಈ ಮಠಕ್ಕೆ ೨೮ ಎಕರೆ ಜಮೀನು ಇದ್ದು, ಈ ಮಠ ಹದಿನೆಂಟು ಜನ ಸ್ವಾಮಿಗಳನ್ನು ಕಂಡಿದೆ. ಈಗಿನವರು ಕೋಲಶಾಂತ ಲಿಂಗದೇಶಿ ಕೇಂದ್ರ ಸ್ವಾಮಿಗಳು, ೫-೧೧-೧೯೮೪ರಲ್ಲಿ ದೀಕ್ಷೆಗೊಂಡರು. ಮಠದ ಅಭಿವೃದ್ಧಿಗೂ ಕಾರಣರಾಗಿರುವರು.

ಈ ಗ್ರಾಮ ಪ್ರಾಚೀನ ಕಾಲದಲ್ಲಿ ೮೬ ಗ್ರಾಮಗಳಿಗೆ ಮುಖ್ಯ ಪಟ್ಟಣವಾಗಿದೆ. ಈಗಲೂ ೮೬ ಹಳ್ಳಿಗಳಿಗೆ ಜೋಕುಮಾರ ಹೋಗುವುದು.

ಚಾಲುಕ್ಯರು, ನೊಳಂಬ ಪಲ್ಲವರು, ಹೊಯ್ಸಳರು, ವಿಜಯನಗರದವರು, ಹರಪನಹಳ್ಳಿ ಪಾಳೆಯಗಾರರು ಈ ಪ್ರದೇಶವನ್ನು ಆಳಿದರು. ಅರಸಿಕೆರೆಯ ಬ್ರಾಹ್ಮಣ ಹಂಪರಸಪ್ಪ ಹರಪನಹಳ್ಳಿ ಪಾಳೆಯಗಾರರಿಗೆ ದಿವಾನನಾಗಿದ್ದನು. ಕೆರೆಯ ಒಡ್ಡು ಮತ್ತು ತೂಬುಗಳು ಎರಡು ಬಾರಿ ಜೀರ್ಣೋದ್ಧಾರ ಗೊಂಡಿವೆ. ಆಗ ಮೇಲಿನ ಶಿಲ್ಪ ಶಾಸನಗಳು ತಳಸೇರಿವೆ ಎಂದು ಹೇಳುವ ಊರವರ ಹೇಳಿಕೆಯೇ ಸರಿ ಕಾಣುತ್ತದೆ. (ನೆರವು : ಕೆ.ಬಿ. ಷಣ್ಮುಖಪ್ಪ ಅರಸಿಕೆರೆ, ಹರಪನಹಳ್ಳಿ ತಾಲ್ಲೂಕು, ಎಸ್. ಪರಶಿವಮೂರ್ತಿ ಅರಸಿಕೆರೆ ತಾಲ್ಲೂಕು.)

ವಿಮರ್ಶೆ : ಅರಸಿಕೆರೆಗೆ ದಕ್ಷಿಣ ದಿಕ್ಕಿನಲ್ಲಿ ಸುಮಾರು ೧೫ ಕಿ.ಮೀ. ಅಂತರದಲ್ಲಿ 'ಅಣಿಜಿ' ಎಂಬುವ ಹೆಸರಿನ ಗ್ರಾಮ ದೊರಕುವುದು. ಅಲ್ಲಿರುವ ಒಂದು ಶಾಸನದಲ್ಲಿ ನಣಕ್ಕಸ ಪಲ್ಲವನಿಗೂ ಕೃಷ್ಣವರ್ಮನಿಗೂ ಯುದ್ಧ ನಡೆದದ್ದು ತಿಳಿಸುವುದು. ಈ ಕೃಷ್ಣವರ್ಮನು ಕದಂಬ ವಂಶದವನು. ಇವನು ಉಚ್ಚಂಗಿದುರ್ಗದ ಕೋಟೆಯಿಂದ ಆಳ್ವಿಕೆ ನಡೆಸಿದನು. ನಣಕ್ಕಸ ಪಲ್ಲವನ ವಿಚಾರ ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟದಲ್ಲಿದೆ. ನರ್ಸಾಪುರ ಗುಡ್ಡದಲ್ಲಿರುವ ಬೈರಸಿದ್ಧ ದೇವರು ನೊಳಂಬ ಪಲ್ಲವರ ಆರಾಧ್ಯ ದೇವರು. ಕೆರೆಯ ಏರಿಯ ಮೇಲಿನ ನೊಳಂಬೇಶ್ವರ ದೇವರು ನೊಳಂಬ ಪಲ್ಲವರಿಗೆ ಸೇರಿದ್ದು, ಶಾಸನಗಳಲ್ಲಿ ನೊಳಂಬನರಸಿಕೆರೆ ಎಂಬುವ ಉಲ್ಲೇಖವಿದೆ. ಹರಪನಹಳ್ಳಿ ತಾಲ್ಲೂಕಿನಲ್ಲಿ ಮತ್ತು ಅರಸಿಕೆರೆಯ ಸುತ್ತುಮುತ್ತ ದೊರಕುವ ೨೧ ಶಾಸನಗಳು ಹಾಗೂ ಈ ಎಲ್ಲಾ ಆಧಾರಗಳನ್ನು ಪರಿಶೀಲಿಸಿದರೆ, ನೊಳಂಬ ಪಲ್ಲವ ಅರಸರು ಅರಸಿಕೆರೆ ಭಾಗದಲ್ಲಿ ರಾಜ್ಯಭಾರ ಮಾಡಿದ್ದು ಕಂಡುಬರುತ್ತಿದೆ. ಬಾಗಳಿಯ ಕ್ರಿ.ಶ. ೧೨೧೨ರ ಶಾಸನದಲ್ಲಿ ಅರಸಿಯ ಬೀಡಿನ ಸೋಮಯಾಜ್ಯ ಹಿರಿಯಣ್ಣ ಎಂದಿದೆ. ಅರಸಿಕೆರೆಯ ೧೦೬೫ರ ಒಂದು ಶಾಸನದಲ್ಲಿ ಅರಸಿಕೆರೆ ಗ್ರಾಮದ ಪ್ರಸ್ತಾಪವಿರುವುದರಿಂದ ಈ ಶಾಸನದ ಕಾಲಕ್ಕೂ ಪೂರ್ವದಲ್ಲಿ ಈ ಗ್ರಾಮ ಸ್ಥಾಪಿಸಿರುವುದು ಖಚಿತವಾಗುವುದು. ದೇವರ ಪೂಜೆಗೆ ಮಹಿಳೆಯರನ್ನು ನೇಮಿಸಿದ್ದು, ಅರಸಿಕೆರೆಯ ನೊಳಂಬೇಶ್ವರ ಗುಡಿಯ ಕ್ರಿ.ಶ. ೭-೮-೧೮೨೭ರ ಶಾಸನದ ಪ್ರಕಾರ ಈ ಕೆರೆಯ ತೂಬು ಮುರಿದಿದ್ದು ಅದನ್ನು ಕಿತ್ತು ಜೀರ್ಣೋದ್ಧಾರ ಮಾಡಿದ ವಿಚಾರವಿದೆ. ಅರಸಿಕೆರೆಯ ದಕ್ಷಿಣ ದಿಕ್ಕಿನಲ್ಲಿ ಸುಮಾರು ೭-೮ ಕಿ.ಮೀ. ಅಂತರದಲ್ಲಿ ಪುನಾಬಗಟ್ಟೆ ಎಂಬ ಹೆಸರಿನ ಗ್ರಾಮ ದೊರಕುತ್ತದೆ. ಈ ಗ್ರಾಮದಲ್ಲಿರುವ ಕಲ್ಲೇಶ್ವರ ಗುಡಿಯ ಬಳಿ ನೆಟ್ಟಿರುವ ಕ್ರಿ.ಶ. ೨೪-೧೨-೧೦೫೨ರ ಶಾಸನದಲ್ಲಿ ಚಾಲುಕ್ಯ ರಾಜ ತ್ರೈಲೋಕ್ಯಮಲ್ಲ ದೇವನ (ಒಂದನೆಯ ಸೋಮೇಶ್ವರ), ಸಾಮಂತ ತ್ರೈಲೋಕ್ಯಮಲ್ಲ ಇರಿವ ನೊಳಂಬ ಪಲ್ಲವ ಪೆರ್ಮಾನಡಿ ನಾರಸಿಂಗ ದೇವನ ಆಳ್ವಿಕೆಯಲ್ಲಿ, ನಾರಸಿಂಗ ದೇವನರಾಣಿಯಾದ ನೊಳಂಬ ಮಹಾದೇವಿಯು ಹೊಸಗೆರೆಯ ಮಹಾದೇವರ ಪೂಜೆಗಾಗಿ ಭೂದಾನ ಮಾಡಿದ ಉಲ್ಲೇಖವಿದೆ.

ಇರಿವ ನೊಳಂಬ-೧ ಘಟೆಯಂಕಾರನು ಕೇವಲ ಚಾಲುಕ್ಯರ ಮಾಂಡಳಿಕನಷ್ಟೇ ಅಲ್ಲದೆ, ಅವರ ಬಂಧುವೂ ಆಗಿದ್ದನು. ಆಲೂರು ಶಾಸನದಿಂದ ಇವನು ಚಾಲುಕ್ಯರ ವಂಶದ ಎರಡನೆಯ ತೈಲಪನ ಮೊಮ್ಮಗಳು, ಹಾಗೂ ೫ನೆಯ ವಿಕ್ರಮಾದಿತ್ಯನ ಕಿರಿಯ ಸೋದರಿಯು ಆಗಿದ್ದ ಮಹಾದೇವಿಯನ್ನು ಮದುವೆಯಾಗಿದ್ದನು ಎಂದಿದೆ. ಇವರ ಮಗನೇ ಜಗದೇಕ ಮಲ್ಲ ನೊಳಂಬ ಪಲ್ಲವ ಪೆರ್ಮಾನಡಿ ಉದಯಾದಿತ್ಯ ದೇವನು. ಇವನು ಕ್ರಿ.ಶ. ೧೦೨೪ ರಿಂದ ೧೦೩೬ ರ ವರೆಗೂ ತಂದೆಯ ಜೊತೆಯಲ್ಲಿ ನೊಳಂಬ ವಾಡಿಯ ಕೆಲ ಪ್ರದೇಶಗಳನ್ನು ಬಳ್ಳಾರಿ ಜಿಲ್ಲೆಯ ಕಂಪಿಲಿಯಿಂದ ಆಳಿದನು. ಚಾಲುಕ್ಯ ಜಗದೇಕ ಮಲ್ಲದೇವ (ಜಯಸಿಂಹ-೨) ನು ಇರಿವ ನೊಳಂಬ-೧ ಘಟೆಯಂಕಾರನ ಮಗಳಾದ ರೇವಲದೇವಿಯನ್ನು ಮದುವೆಯಾಗಿದ್ದನು.

ಇದೂ ಅಲ್ಲದೆ, ಇರಿವ ನೊಳಂಬ-೧ ಘಟೆಯಂಕಾರ ಕ್ರಿ.ಶ. ೧೦೧೦-೨೪, ಜಗದೇಕಮಲ್ಲ ನೊಳಂಬ ಪಲ್ಲವ

ಪೆರ್ಮಾನಡಿ ಉದಯಾದಿತ್ಯ ದೇವ ಕ್ರಿ.ಶ. ೧೦೨೪–೧೦೩೬ರ ವರೆಗೂ, ಜಗದೇಕಮಲ್ಲ ಇರ್ಮಡಿ ನೊಳಂಬ ಪಲ್ಲವ ಪೆರ್ಮಾನಡಿ ಕ್ರಿ.ಶ. ೧೦೩೭–೪೪ರವರೆಗೂ, ತ್ರೈಲೋಕ್ಯಮಲ್ಲ ನನ್ನಿ ನೊಳಂಬ ಪಲ್ಲವ ಪೆರ್ಮಾನಡಿ– ಕ್ರಿ.ಶ. ೧೦೪೪–೫೪ರವರೆಗೂ ಇವರು ಮತ್ತು ಇವರ ಮುಖ್ಯಮಂತ್ರಿ ಬ್ರಹ್ಮಾದಿರಾಜ ಕ್ರಿ.ಶ. ೧೦೫೪ ವರೆಗೂ ಆಳಿದರು. ಇವರ ಶಾಸನಗಳೇ ಹೆಚ್ಚಾಗಿ ಈ ಭಾಗದಲ್ಲಿ ಕಂಡುಬರುತ್ತವೆ.

ಮೇಲಿನ ಕಾರಣಗಳಿಂದ ಕೆರೆ, ಗ್ರಾಮ ಮತ್ತು ನೊಳಂಬೇಶ್ವರ ದೇವಾಲಯಗಳ ರೂವಾರಿ ಮಹಾದೇವಿಯೇ ಇರಬೇಕು. ಕ್ರಿ.ಶ. ೧೦೩೬ರ ಒಳಗೇ ಇವುಗಳ ಸ್ಥಾಪನೆ ಯಾಗಿರುವ ಸಾಧ್ಯತೆಗಳು ಹೆಚ್ಚು.

ಅನುಬಂಧ

ಅರಸಿಕೆರೆ ಹೆಸರಿರುವ ಗ್ರಾಮ ಮತ್ತು ಶಾಸನಗಳು

೧ ಕೂಡ್ಲಿಗಿ ತಾಲ್ಲೂಕು ರಾಜಭಾವನಹಳ್ಳಿಯ ಆಂಜನೇಯ ಸ್ವಾಮಿ ದೇವಾಲಯದ ಬಳಿ ನಿಲ್ಲಿಸಿರುವ ಶಾಸನ ಕ್ರಿ.ಶ. ೨೯–೧೦–೧೪೧೯ರ ಶಾಸನದಲ್ಲಿ "ನೊಣಬನರಸಿಯ ಕೆರೆಯನ್ನು ಲಖಪನ ಮಗ ಹರಿಯಣನು ಹರಿಯ ಸಮುದ್ರ ದಾನ ನೀಡಿದನು" ಎಂದಿದೆ.

೨ ಹಡಗಲಿ ತಾಲ್ಲೂಕು ಹಿರೇಕುರುವತ್ತಿಯ ಮಲ್ಲಿಕಾರ್ಜುನ ದೇವರ ದಕ್ಷಿಣ ಬಾಗಿಲಿನ ಎಡಕ್ಕಿರುವ ಗೋಡೆಯ ಕ್ರಿ.ಶ. ೧–೬–೧೧೯೭ರ ಶಾಸನ (ಹೊಯ್ಸಳ ವೀರಬಲ್ಲಾಳನ ಕಾಲ) "ಅರಸಿಂಯ ಕೆ ಯ ಮಹದೇವದಣ್ಣಾಯಕರುಂ" ಎಂದಿದೆ.

೩ ಹರಪನಹಳ್ಳಿ ತಾಲ್ಲೂಕು ಬಾಗಳಿಯ ಕಲ್ಲೇಶ್ವರ ಗುಡಿಯ ಕ್ರಿ.ಶ. ೧೨೧೨ರ ಶಾಸನದಲ್ಲಿ "ಅರಸಿಯ ಬೀಡಿನ ಸೋಮಯಾಜ್ಯ ಹಿರಿಯಣ್ಣ" ಎಂದಿದೆ.

೪ ಬಾಗಳಿಯ ಕಲ್ಲೇಶ್ವರ ದೇವರ ಆವರಣದಲ್ಲಿರುವ ಕ್ರಿ.ಶ. ೨೬–೧೨–೧೦೭೯ರ ಶಾಸನದಲ್ಲಿ (ಪಾಂಡ್ಯ ದೇವನ ಆಳ್ವಿಕೆಯಲ್ಲಿ) "ಅರಸಿಕೆಯ ಕಲಿಯಮಗೌಡನ ಮಗಳೂ ಪಿರಿಯ ಪೆರ್ಗಡೆಯ ಹೆಂಡತಿಯೂ ಆದ ಬಾಳಲ ದೇವಿಯು ಬಾಗಳಿ ಕಲಿದೇವರ ಪೂಜೆಗೆ ಭೂದಾನ ನೀಡಿದಳು ಪಿರಿಯ ಪೆರ್ಗಡೆ ೧೩ ಗದ್ಯಾಣವನ್ನು ಬಿಡುವನು" ಎಂದಿದೆ.

೫ ಕೆರೆಯಗುಡಿ ಕಂಬದ ಶಾಸನ : ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಕ್ರಿ.ಶ. ೧೫೨೭ರಲ್ಲಿ "ನೊಣಂಬನರಸಿ ಕೆ ಯನ್ನು" ಕೆರೆಯ ತೂಬು ಜೀರ್ಣೋದ್ಧಾರ ಮಾಡಿಸಿದೆ ಎಂದಿದೆ.

೬ ಕಂಬದ ಇನ್ನೊಂದು ಬದಿಯಲ್ಲಿ ಅದೇ ಕಾಲದಲ್ಲಿ ಇದ್ದಾಗ ಅರಸಿಕೆ ಯ ಪುರದ ತುಂಬು ಮುರಿದು.

೭ ಅದೇ ದೇವಾಲಯದ ಸಭಾಂಗಣದಲ್ಲಿರಿಸಿದ ಶಾಸನ ಕ್ರಿ.ಶ. ೩೦–೧೨–೧೧೪೨ ಮುತ್ತಗೆ–೩೦ರ ಸಮೀಪದ ಗ್ರಾಮವಾದ ಅರಸಿಕೆ ಯ ನೊಳಂಬೇಶ್ವರ ದೇವರ ಪೂಜಾರ್ಥವಾಗಿ ವಡ್ಡರಾವುಳ ಸುಂಕ ಬಿಡುವರಂ (ಚಾಲುಕ್ಯ ತ್ರಿಭುವನ ಮಲ್ಲನ ಆಳ್ವಿಕೆ ಅನಂತಪಾಳಯ್ಯ ಸಾಮಂತನ ಕಾಲ).

೮ ಅದೇ ಗ್ರಾಮದ ನೊಳಂಬೇಶ್ವರ ದೇವಾಲಯದಲ್ಲಿ ನಿಲ್ಲಿಸಿದ ಶಾಸನ ೭–೧೨–೧೦೬೫ರ ಚಾಲುಕ್ಯ ತ್ರೈಲೋಕಮಲ್ಲನು ಆಳುತ್ತಿದ್ದಾಗ, ವಿಷ್ಣುವರ್ಧನ ಮಹಾರಾಜ ಆಳುವಾಗ ಅವನ ಸಾಮಂತ ಬಿಜ್ಜಲ ದೇವನು ದಿಗ್ವಿಜಯಾರ್ಥವಾಗಿ ಅರಸಿಕೆರೆಯ ಬೀಡಿನಲ್ಲಿದ್ದಾಗ, ಕಡಕೊಳ ಗ್ರಾಮವನ್ನು ನೊಳಂಬೇಶ್ವರ ದೇವರಿಗೆ ದಾನ ಮಾಡಿದ.

೯ ಶಾಸನವು ಅರಸೀಕೆರೆ ಕೆರೆಕಟ್ಟೆಯ ಹೊಲದಲ್ಲಿದೆ. ಕಾಲ ಕ್ರಿ.ಶ. ೧೬–೧೧–೧೬೬೧ ಹರವನಹಳ್ಳಿ ಪಾಳೆಯಗಾರ ಬಾಗಳಿ ಬಸವಪನಾಯಕ ಭೂದಾನ ಮಾಡಿದ. ಅದರಲ್ಲಿ "ಅರಸಿಕೆರೆ ಮುರಿಗೆ ಸಾಂತ ರಾವುತನ" ಎಂದಿದೆ.

ಅರಸೀಕೆರೆಯಲ್ಲಿಯ ಶಾಸನಗಳು

ಈ ಶಾಸನದ ಮೇಲೆ ಗೋವಳರು

೧ ಕಲ್ಲುಗಳಿಂದ ಜಜ್ಜಿ ಗೆರೆ ಎಳೆದಿರುವುದು ಅಕ್ಷರಗಳು ಸ್ಪಷ್ಟವಾಗಿ ಕಾಣುವುದಿಲ್ಲ. 'ಸತ್ಯಾಶ್ರ .... ಶ್ರೀ ಪೃಥ್ವಿವ ....' ಮಾತ್ರ ಕಾಣುತ್ತವೆ. ಇವುಗಳನ್ನು ನೋಡಿದರೆ ಬಾದಾಮಿ ಚಾಲುಕ್ಯರ ಇಮ್ಮಡಿ ಪುಲಿಕೇಶಿಯ ಶಾಸನವಿರಬಹುದು ಎಂದೆನಿಸುತ್ತದೆ.

೨ ಬೆಟ್ಟದ ಮಧ್ಯಭಾಗದ ದೇವಾಲಯದ ಬಳಿ ಒಂದು ಶಾಸನವಿದೆ. ಕ್ರಿ.ಶ. ೨೪–೪–೧೫೧೦ ಕ್ಕೆ ಸೇರಿದೆ. ದೇವರಸ ಮತ್ತು ಗಂಗೆಯ ಮಗ ಗಿರಿದೇವನು ಯೋಗನರಸಿಂಹ ದೇವಾಲಯದ ಶಿಖರವನ್ನು ಕಟ್ಟಿಸಿದ್ದು ಉಲ್ಲೇಖಿಸುವುದು.

೩ ಕೆರೆಗುಡಿಯ ನೊಳಂಬೇಶ್ವರ ದೇವಾಲಯದ ಮುಂದಿನ ಮಂಟಪದ ಕಂಬದ ಕ್ರಿ.ಶ. ೭–೮–೧೫೨೭ರ ಶಾಸನ ಕೃಷ್ಣ ದೇವರಾಯ ವಿಜಯನಗರ ದಿಂದ ರಾಜ್ಯಭಾರ ಮಾಡುತ್ತಿದ್ದಾಗ ಚಿಂನ ಭಂಡಾರದ ತಿಂಮರಸನ ಮಗ ರಾಯಸದ ನಾರಾಯಣಪ್ಪ ಕೊಟ್ಟೂರು ಸೀಮೆಯ ಪಾರುಪತ್ಯೆ ಮಾಡುವಾಗ ಅವನ ನಿರೂಪದಂತೆ ರಂಗದಾಸನ ಮಗ ತಿಂರಸನು ಅರಸಿಕೆರೆ ಅಧಿಕಾರ ಮಾಡುತ್ತಿದ್ದಾಗ ತೂಬು ಮುರಿದಿದ್ದು ಅದನ್ನು ಕಿತ್ತು ಜೀರ್ಣೋದ್ಧಾರ ಮಾಡಿಸಿದ.

೪ ಅದೇ ಸಭಾಂಗಣದಲ್ಲಿಯ ಇನ್ನೊಂದು ಕ್ರಿ.ಶ. ೩೦–೧೨–೧೧೧೨ರ ಚಾಲುಕ್ಯ ತ್ರಿಭುವನಮಲ್ಲ ಆಳ್ವಿಕೆಯಲ್ಲಿ ಅವನ ಸಾಮಂತ ಅನಂತ ಪಾಳಯ್ಯನ ಪಾಲಮರನು

ಸುಂಕಾಧಿಕಾರಿ ಆಗಿದ್ದಾಗ, ಅವನ ಆಜ್ಞೆಯಂತೆ ಚಾವುಮಡಮಯ್ಯ ನಾಯಕನು ಮುತ್ತಗೆ-೩೦ರ ಸಮೀಪದ ಅರಸಿಕೆರೆಯ ನೊಳಂಬೇಶ್ವರ ಪೂಜಕ್ಕಾಗಿ ತೋಟದ ಅಡಿಕೆ ದಾನವಿತ್ತನು.

೫ ಅದೇ ಸಭಾಂಗಣದಲ್ಲಿಯ ಮತ್ತೊಂದು ಕ್ರಿ.ಶ. ೨೫-೧೨-೧೧೧೧ರ ಶಾಸನದಲ್ಲಿ ತ್ರಿಭುವನಮಲ್ಲ ಪಾಂಡ್ಯ ದೇವನ ಸಾಮಂತ ಕಾಮರಸ ಮತ್ತು ಚಟ್ಟಜ್ಜಿಯ ಮಗ ಸಿಂಗರಸನು ನೊಳಂಬೇಶ್ವರ ಪೂಜಾಮುನಿಗಳ ಭೋಜನ, ವಿದ್ಯಾದಾನಕ್ಕೆ ತೋಟಗದ್ದೆಯನ್ನು ದಾನ ನೀಡಿದನು.

೬ ಅರಸಿಕೆರೆಯ ಈಶ್ವರ ದೇವಾಲಯದಲ್ಲಿ ನಿಲ್ಲಿಸಿರುವ ಕ್ರಿ.ಶ. ೭-೧೨-೧೦೬೫ರ ಸಾಮಂತ ಬಿಜ್ಜಲ ದೇವನು ಅರಸಿಕೆರೆಯ ಬೀಡಿನಲ್ಲಿದ್ದಾಗ ಅರಸನ ಅನುಮತಿ ಪಡೆದು ಕಡಕೋಳ ಗ್ರಾಮವನ್ನು ನೊಳಂಬೇಶ್ವರ ದೇವರಿಗೆ ದಾನ ನೀಡುವನು.

೭ ಹರಪನಹಳ್ಳಿ ಪಾಳೆಯಗಾರ ಬಾಗಳಿ ಬಸಪ್ಪ ನಾಯಕನಿಗೆ ಸೇರಿದ್ದ ಕ್ರಿ.ಶ. ೧೬-೧೧-೧೬೬೧ರ ರಾಮದೇವರ ಕುಮಾರ ಬಾಗಳಿ ಬಸವಪ್ಪ ನಾಯಕ ಅಯ್ಯನವರು ಅರಸಿಕೆರೆಯ ಮುರಿಗೆ ಸಾವಂತ ರಾವುತನ ಮಗ ಗಿರಿಮಲ್ಲಣ್ಣ ಮಗ ಬಸವಯನಿಗೆ ರಾವುತ ವೃತ್ತಿಗಾಗಿ ಭೂದಾನ ನೀಡಿದ.

೮ ೩೦-೧೨-೧೧೪೨ರ ಚಾಲುಕ್ಯ ತ್ರಿಭುವನ ಮಲ್ಲನ ಆಳ್ವಿಕೆಯಲ್ಲಿ ಅವನ ಮಹಾ ಸಾಂತ ಅನಂತ ಪಾಳ್ಯಯ್ಯ ಅವನ ಅಳಿಯ ಪಾಲಿಮರಸ ಸುಂಕದ ಅಧಿಕಾರಿ ಆಗಿದ್ದಾಗ ಅವನ ಆಜ್ಞೆಯಂತೆ ಚಾವುಂಡಯ್ಯ ನಾಯಕನು ಮುತ್ತಗೆ-೩೦ರ ಅರಸಿಕೆರೆಯ ನೊಲಂಬೇಶ್ವರ ದೇವರ ಸುಂಕವನ್ನು ಬಿಡುವರು.

ನೊಳಂಬ ಪಲ್ಲವರ ವೀರಗಲ್ಲು ಮತ್ತು ಶಾಸನಗಳು ಹರಪನಹಳ್ಳಿ ತಾಲ್ಲೂಕಿನಲ್ಲಿ

೧ *ಕಂಚಿಕೇರಿ ಶಾಸನದಲ್ಲಿ ಮಂದಲ ಮಠದ ಶಾಸನ :* ನೊಳಂಬರಾಜ ಜಗದೇಕ ಮಲ್ಲ ನೊಳಂಬ ಪಲ್ಲವ ಪೆರ್ಮಾನಡಿ ದೇವ ಕಾಲ ೨೩-೪-೧೦೩೯.

೨ *ಸತ್ತೂರು ಕಲ್ಲೇಶ್ವರ ಬಳಿ ಶಾಸನ :* ಚಾಲುಕ್ಯ ರಾಜ ತ್ರೈಲೋಕಮಲ್ಲದೇವ ಸೋಮೇಶ್ವರನ ಆಳ್ವಿಕೆ ಜಗದೇಕಮಲ್ಲ ನನ್ನಿ ನೊಳಂಬ ಪಲ್ಲವ ಪೆರ್ಮಾಡಿ ದೇವನು - ಕಾಲ ಕ್ರಿ.ಶ. ೨೪-೧೨-೧೦೪೪.

೩ *ಹಿರೇಮ್ಯಾಗಳಗೇರಿ ಕೆರೆಕಟ್ಟೆ ಮೇಲೆ ಇರುವ ಶಾಸನ :* ಚಾಲುಕ್ಯ ಜಗದೇಕ ಮಲ್ಲ ಮಲ್ಲದೇವ (ಜಯಸಿಂಹ-೨) - ೧೦೨೧-೨೨.

೪ *ಮತ್ತೊಂದು ಶಾಸನ :* ಜಗದೇಕಮಲ್ಲ ನೊಳಂಬಪಲ್ಲವನ ಕಾಲ - ಕ್ರಿ.ಶ. ೧೦೩೪.

೫ *ಅಲ್ಲೇ ಇರುವ ಇನ್ನೊಂದು ಶಾಸನ :* ಜಗದೇಕಮಲ್ಲ ನೊಳಂಬ ಬ್ರಹ್ಮಾಧಿರಾಜ - ಕಾಲ ಕ್ರಿ.ಶ. ೨೬-೬-೧೦೫೪.

೬ *ತೆಲಿಗಿ ಹರಿಹರೇಶ್ವರ ಸ್ವಾಮಿ ದೇವಾಲಯದ ಬಳಿ ನಿಂತ ಶಾಸನ :* ಚಾಳುಕ್ಯ ದೊರೆ ಜಯಸಿಂಹ ದೇವ ಮಹಾ ಮಂಡಳೇಶ್ವರ ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾಡಿ ದೇವನ ಕಾಲ-ಕ್ರಿ.ಶ. ೨೪-೧೨-೧೦೩೦.

೭ *ಚಿರಸ್ತಹಳ್ಳಿ ಶಂಕರಲಿಂಗ ಸ್ವಾಮಿ ದೇವಾಲಯದ ಬಳಿ ಶಾಸನ :* ಚಾಲುಕ್ಯ ರಾಜ ತ್ರೈಲೋಕ್ಯಮಲ್ಲ ದೇವನ ಕಾಲದಲ್ಲಿ ಅವನ ಸಾಮಂತ ಪಲ್ಲವ ನರಸಿಂಘ ದೇವನು ಕ್ರಿ.ಶ. ೧೧-೧-೧೦೫೦.

೮ *ಅದೇ ಸ್ಥಳದ ವೀರಗಲ್ಲು ಶಾಸನ :* ರಾಷ್ಟ್ರಕೂಟ ಗೋವಿಂದ-೪೧-ಅಯ್ಯಪಯ್ಯ, ಕ್ರಿ.ಶ. ೯೩೧-೩೨.

೯ *ಬಾಗಳಿಯ ಕಲ್ಲೇಶ್ವರ ದೇವಾಲಯದ ಆವರಣದಲ್ಲಿ ಶಾಸನ :* ಚಾಲುಕ್ಯ ದೊರೆ ಜಗದೇಕಮಲ್ಲ ಜಯಸಿಂಘ ದೇವನ ಆಳ್ವಿಕೆ ಅವನ ಸಾಮಂತ ಜಗದೇಕ ಮಲ್ಲ ನೊಳಂಬ ಉದಯಾದಿತ್ಯ - ಕ್ರಿ.ಶ. ೧೦೧೮.

೧೦ *ಬಾಗಳಿ ಕಲ್ಲೇಶ್ವರ ದೇವಾಲಯದ ಆವರಣದಲ್ಲಿ ಶಾಸನ:* ಚಾಲುಕ್ಯ ತ್ರಿಭುವನಮಲ್ಲನ ಕಾಲ ಮಹಾ ಮಂಡಳೇಶ್ವರ ಕಾಂಚಿಪುರವರಾಧೀಶ್ವರಂ-ಕ್ರಿ.ಶ. ೧೨-೮-೧೦೭೯.

೧೧ *ಕಲ್ಲೇಶ್ವರ ದೇವಾಲಯದ ನೈರುತ್ಯಕ್ಕೆ ಇರಿಸಿದ ಶಾಸನ:* ಚಾಲುಕ್ಯ ಭುವನೈಕ್ಯಮಲ್ಲನ ಆಳ್ವಿಕೆ ಮಾಂಡಲಿಕ ತ್ರೈಲೋಕ್ಯಮಲ್ಲ ನೊಳಂಬ ಪಲ್ಲವ ಪೆರ್ಮಾಡಿ ಜಯಸಿಂಗದೇವನು - ಕ್ರಿ.ಶ. ೯-೫-೧೦೬೮.

೧೨ *ಬಾಗಳಿ ಕಲ್ಲೇಶ್ವರ ನರಸಿಂಹಸ್ವಾಮಿ ಗುಡಿ ಮುಂದಿನ ಶಾಸನ :* ಚಾಲುಕ್ಯ ಜಗದೇಕಮಲ್ಲ ಜಯಸಿಂಹನ ಕಾಲದಲ್ಲಿ ಅವನ ಸಾಮಂತ ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾನಡಿ ಉದಯಾದಿತ್ಯ ದೇವನು - ಕ್ರಿ.ಶ. ೨೩-೧೨-೧೦೧೮.

೧೩ *ನಂದಿಬೇವೂರು ಆಂಜನೇಯ ದೇವಾಲಯದ ಬಳಿ ನೆಟ್ಟ ಶಾಸನ :* ಚಾಲುಕ್ಯ ತ್ರೈಲೋಕ್ಯ ಮಲ್ಲನ ಆಳ್ವಿಕೆಯಲ್ಲಿ ಅವನ ಮಾಂಡಳಿಕ ತ್ರೈಲೋಕ್ಯಮಲ್ಲ ನೊಳಂಬಪಲ್ಲವ ಪೆರ್ಮಾಡಿದೇವನು ಆಳುವಾಗ - ಕ್ರಿ.ಶ. ೨೪-೧೨-೧೦೫೪.

೧೪ ಕಡಬಗೆರೆ ಪಶ್ಚಿಮಕ್ಕೆ ಹೊಲದಲ್ಲಿ ನಿಲ್ಲಿಸಿದ ವೀರಗಲ್ಲು ಶಾಸನ : ನೊಳಂಬ ಅಯ್ಯಪದೇವನ ಮಗ ಅಣ್ಣಿಗ ಪಡುಗಲ್ಲು ಮುತ್ತಿದನು – ಕ್ರಿ.ಶ. ೯–೯–೯೩೩.

೧೫ ತಲವಾಗಲು ಬಾಗ್ಯೇಶ್ವರ ದೇವಾಲಯದ ಬಳಿ ನಿಲ್ಲಿಸಿದ ಶಾಸನ : ಚಾಲುಕ್ಯ ಜಗದೇಕಮಲ್ಲ ಆಳ್ವಿಕೆಯಲ್ಲಿ ಸಾಮಂತ ಜಗದೇಕಮಲ್ಲ ಉದಯಾದಿತ್ಯ ದೇವನು. ಕ್ರಿ.ಶ. ೩–೧೨–೧೦೩೪.

೧೬ ಪುನಬಗಟ್ಟಿ ಈಶ್ವರ ದೇವಾಲಯದ ಬಳಿ ಶಾಸನ : ಮಹಾದೇವಿ ನೊಳಂಬ ಪಲ್ಲವ ಪೆರ್ಮಾನಡಿ ನರಸಿಂಗ ದೇವನ ರಾಣಿ – ಕ್ರಿ.ಶ. ೧೦೫೨.

೧೭ ಉಚ್ಚಂಗಿದುರ್ಗದ ಹೊಲವೊಂದರ ಶಾಸನ : ನೊಳಂಬ ರಾಜನಾದ ನೊಳಂಬ ಪಲ್ಲವ ಪೆರ್ಮಾನಡಿ ದೇವನು – ಕ್ರಿ.ಶ. ೧೦೭–೭–೧೦೭೦.

೧೮ ಚಿರಸ್ತಹಳ್ಳಿ ವೀರಗಲ್ಲು : ರಾಷ್ಟ್ರಕೂಟ ದೊರೆ ಗೋವಿಂದನ (ಗೋವಿಂದ–೪) ಆಳ್ವಿಕೆಯಲ್ಲಿ ಕೋಗಳಿ ಆಳುತ್ತಿದ್ದ ಅಯ್ಯಪಯ್ಯ ಸತ್ತವನ ಕುಟುಂಬಕ್ಕೆ ಗದ್ದೆ–ಹೊಲ ನೀಡಿದನು– ಕಾಲ ಕ್ರಿ.ಶ. ೯೩೧–೩೨.

೧೯ ಅದೇ ಸ್ಥಳದಲ್ಲಿ : ಇಮ್ಮಡಿ ನೊಳಂಬ ಕೋಗಳಿ ಕದಂಬಳಿಗೆ ಆಳುವಾಗ ಪ್ರತಿಮೆಗಳನ್ನು ಮಾಡಿಸಿದ ಕಾಲ – ಸ್ವಭಾನು ಸಂವತ್ಸರ.

೨೦ ಬಾಗಳಿಯ ಕಲ್ಲೇಶ್ವರ ದೇವಾಲಯದ ಪಶ್ಚಿಮದ ಶಾಸನ: –ರಾಷ್ಟ್ರಕೂಟರ ದೊರೆ ಖೊಟ್ಟಿಗನ ಆಳ್ವಿಕೆಯಲ್ಲಿ ಅವನ ಸಾಮಂತ ಗಂಗಪೆರ್ಮಾನಡಿ ಮಾಡಿದ ದಾನ ಕಾಲ – ಕ್ರಿ.ಶ. ೯೭೨ರಲ್ಲಿ.

೨೧ ಬಾಗಳಿ ಗ್ರಾಮದ ಕಲ್ಲೇಶ್ವರ ದೇವಾಲಯದ ಗರ್ಭ ದೇವಾಲಯದ ಗರ್ಭಗೃಹದ ಮೇಲೆ ನೈರುತ್ಯ ದಿಕ್ಕಿನ ಕಪೋತದಲ್ಲಿ : ಜಗದೇಕಮಲ್ಲ ನೊಳಂಬಾಚಾರಿ – ಕಾಲವಿಲ್ಲ.

ಆಧಾರಸೂಚಿ

೧. B.R. Gopal., *History of the pallavas of Kannchi.*, Madras.
೨. Dr. M.S. Krishnana Murthy., *The Nolambas.*,
೩. Desai Dinakar., *The Maha Mandaleswaras under the Chalukyas of Kalyani.* Bombay.
೪. C.R. Srinivasan., *The Nolambas and the Tamil country.*
೫. *South Indian Inscription*-Vol. IX.
೬ Dr. Z.K. Ansari., *Some Feudatory families of Medieval Karnataka-A study.*
೭. ಗಂಗಪ್ಪ., **ನೊಳಂಬರ ಆರ್ವಾಚೀನ ಇತಿಹಾಸ.**
೮. ನೊಳಂಬ ವಂಶವೃಕ್ಷ., ಕಂಬದ ಶಾಸನ ಹೇಮಾವತಿ.
೯. ನೊಳಂಬರ ವಂಶಾವಳಿ ಶಾಸನ., ಮೋರಿಗೇರಿ ಹಗರಿಬೊಮ್ಮನಹಳ್ಳಿ ತಾಲ್ಲೂಕು.
೧೦. ಎಂ.ಎಸ್. ರಾಮಲಿಂಗಪ್ಪ., **ನೊಳಂಬರ ಲಾಂಛನ.**
೧೧. ಶಂ.ಬಾ. ಜೋಷಿ., **ಹಾಲುಮತ ದರ್ಶನ.**
೧೨. **ನೊಳಂಬ ಇತಿಹಾಸ ದರ್ಶನ.,** ನೊಳಂಬ ವೀರಶೈವ ಸಂಘ.
೧೩. **ಕರ್ನಾಟಕ ಪರಂಪರೆ ಸಂಪುಟ–೧,** ಕನ್ನಡ ಸಂಸ್ಕೃತಿ ಇಲಾಖೆ.
೧೪. **ಎಪಿಗ್ರಾಫಿಯಾ ಕರ್ನಾಟಿಕ,** ಸಂಪುಟ IX, X, XI, XII.
೧೫. ಡಾ. ಹೆಚ್. ತಿಪ್ಪೇರುದ್ರಸ್ವಾಮಿ., **ಕರ್ನಾಟಕ ಸಂಸ್ಕೃತಿ ಸಮೀಕ್ಷೆ.**
೧೬. **ಇಮ್ಮಡಿ ಚಿಕ್ಕ ಭೂಪಾಲ ಸಾಂಗತ್ಯ,** ರಾಯರಾಯ ಕೈಪಿಡಿ ಮತ್ತು ಶಾಸನಗಳು.

ಎಂ.ಎನ್. ಪ್ರಭಾಕರ್*

ಆಗಮಗಳು ಮತ್ತು ದೇವಾಲಯಗಳ ಪ್ರಾಚೀನತೆ

ವಿದಿಶಾ ನಗರದಲ್ಲಿ ವಾಸುದೇವನ ಆಲಯಕ್ಕೆ ಸಂಬಂಧಿಸಿದ ಹೆಲಿಯೋಡೋರಸ್ ಸ್ಥಾಪಿಸಿದ ಶಾಸನಸ್ಥ ಗರುಡಗಂಬದ ಉಲ್ಲೇಖ ದೇವಾಲಯದ ಅಸ್ತಿತ್ವವನ್ನು ಗುರುತಿಸುವ ಒಂದು ಮೈಲಿಗಲ್ಲು. ಇದರ ಕಾಲ ಕ್ರಿ.ಪೂ. ಎರಡನೆ ಶತಮಾನ.[೧] ಇದರೊಂದಿಗೆ ರಾಜಾಸ್ಥಾನದ ಕೌಸುಂಬಿಯಲ್ಲಿ ಪಾರಾಶರಿಪುತ್ರ ಗಜಾಯನನು ವಾಸುದೇವ ಸಂಕರ್ಷಣರಿಗಾಗಿ ನಿರ್ಮಿಸಿದ ಪೂಜಾ ಶಿಲಾ ಪ್ರಕಾರ ನಾರಾಯಣ ವಾಟಿಕಾದ ಉಲ್ಲೇಖವನ್ನೂ ಗಮನಿಸಬೇಕು.[೨] ಇದರ ಕಾಲ ಕ್ರಿ.ಶ. ಒಂದನೇ ಶತಮಾನ. ಇವೆರಡೂ ಶಾಸನೋಲ್ಲೇಖಗಳಾದ್ದರಿಂದ ಇವುಗಳ ಕಾಲದ ಬಗ್ಗೆ ಖಚಿತತೆ ಇದೆ. ಇವುಗಳ ರಚನೆ ಕೈಗೊಂಡವರು ಪರಮಭಾಗವತರು.

ಕ್ರಿ.ಪೂ. ಎರಡನೆ ಶತಮಾನದ ಕಾಲಕ್ಕೆ ವೃಷ್ಣೀ ವಂಶದ ವಾಸುದೇವ ಕೃಷ್ಣ ದೈವತ್ವಕ್ಕೆ ಏರಿ, ದೇವಾಲಯಗಳಲ್ಲಿ ಪ್ರತಿಷ್ಠಾಪಿಸಲ್ಪಟ್ಟ ದೇವತೆಯಾಗಿದ್ದು ಭಾಗವತ ಸಂಪ್ರದಾಯದಲ್ಲಿ ಮೂರ್ತಿಪೂಜೆ ವ್ಯಾಪಕವಾಗಿ ಅಂಗೀಕರಿಸಲ್ಪಟ್ಟಿತ್ತು. ವಾಸುದೇವ ಕೃಷ್ಣನನ್ನು ಪರಿಚಯಿಸಿದ ಮಹಾಭಾರತದ ಕಾಲ ದ್ವಾಪರಯುಗ. ವಿದ್ವಾಂಸರು ಮಹಾಭಾರತದ ಕಾಲವನ್ನು (ಕ್ರಿ.ಪೂ. ३೦೦೦ ದಿಂದ ೧೫೦೦ ರವರೆಗೆ ಗುರುತಿಸುತ್ತಾರೆ. ಮಹಾಭಾರತದ ಯುದ್ಧ ನಡೆದದ್ದು ದ್ವಾಪರಯುಗದ ಅಂತ್ಯದಲ್ಲಿ. ಮಹಾಭಾರತದ ಕಾಲ ಹಾಗೂ ಮಹಾಭಾರತ ಕಾವ್ಯರಚನೆಯ ಕಾಲ ಇವೆರೆಡರ ನಡುವೆ ಹಲವು ಶತಮಾನಗಳ ಅಂತರವಿದೆ. ಆದರೆ ಪ್ರಸ್ತುತ ಅಧ್ಯಯನಕ್ಕೆ ಲಭ್ಯವಿರುವ ಕಾವ್ಯವು ಕ್ರಿ.ಪೂ. ಐದನೆಯ ಶತಮಾನದಿಂದ ಕ್ರಿ.ಶ. ಎರಡನೆ ಶತಮಾನದವರೆಗೆ ಮಾಹಿತಿಯನ್ನು ಒಳಗೊಂಡಿದೆ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಮಹಾಭಾರತದಲ್ಲಿ ಪಾಶುಪತರ, ವೈಖಾನಸರ ಹಾಗೂ ಪಾಂಚರಾತ್ರಿಗಳ ಉಲ್ಲೇಖಗಳಿವೆ. ಮೋಕ್ಷಧರ್ಮ ಪರ್ವದಲ್ಲಿ ವೈಖಾನಸರನ್ನು ಒಂದು ಸಮೂಹವಾಗಿ ಗುರುತಿಸಿರುವುದನ್ನು ಈ ಕೆಳಕಂಡ ಶ್ಲೋಕದಲ್ಲಿ ಕಾಣಬಹುದು.

ಋಷಿಣಾಂ ಉಗ್ರ ತಪಸಾಂ ಧರ್ಮ ನೈಪುಣ್ಯ ದರ್ಶಿನಾಃ
ಅನ್ಯೇಚ ಅಪರಿಮೇಯಾಶ್ಚ ಬ್ರಾಹ್ಮಣಾ ವನಮಾಶ್ರಿತಾಃ
ವೈಖಾನಸೋ ವಾಲಖಿಲ್ಯಾಃ ಸೈಕತಾಶ್ಚ ತಥಾ ಪರೇ[೩]

ಆಗಮಗಳ ವರ್ಗೀಕರಣದಲ್ಲಿ, ವೈಷ್ಣವಾಗಮವು ವೈಖಾನಸ ಮತ್ತು ಪಾಂಚರಾತ್ರ ಎಂದು ಎರಡು ಮುಖ್ಯ ಪ್ರಭೇದಗಳನ್ನೊಳಗೊಂಡಿದೆ. ಇವುಗಳಲ್ಲಿ ವೈಖಾನಸವು ಅತಿ ಪ್ರಾಚೀನವೆಂದು ಪರಿಗಣಿಸಲಾಗಿದೆ. ಇದರ ಪ್ರಾಚೀನತೆಯ ಬಗ್ಗೆ ಮತ್ತಷ್ಟು ಚರ್ಚೆಗೆ ಅವಕಾಶವಿದೆ. ಆಗಮಗಳ ವರ್ಗೀಕರಣ, ತದನಂತರ ಕಾಲದಲ್ಲಿ ರೂಪಿತವಾದದ್ದು ಎಂದು ತಿಳಿಯಬಹುದು. 'ಆಗಮ' ಎಂಬ ಪದವೂ 'ಆಗಮ ನಿಗಮ'ಗಳ ವರ್ಗೀಕರಣ ಸಂದರ್ಭದಲ್ಲಿ ಖಚಿತತೆಯನ್ನು ಪಡೆದುಕೊಂಡಿದೆ. 'ಆಗಮ' ಪದ ಬಳಕೆಗೆ ಮುಂಚೆ ಈ ಜ್ಞಾನದ ಶಾಖೆಗೆ ತಂತ್ರವೆನ್ನುವ ಪದ ಹೆಚ್ಚು ರೂಢಿಯಲ್ಲಿತ್ತು. ವೇದ, ಉಪನಿಷತ್ತು ಮತ್ತು ಬ್ರಾಹ್ಮಣಗಳ ಸಾಹಿತ್ಯವನ್ನು ನಿಗಮದಡಿಯಲ್ಲಿ ಸೂಚಿಸಿದ್ದು ಇದಕ್ಕೆ ಹೊರತಾದ ಹಾಗೂ ತದನಂತರ ಬಂದ ಸಾಹಿತ್ಯವನ್ನು ಆಗಮವೆನ್ನಲಾಗಿದೆ. 'ಆಗಮ' ಪದವು ಮಾಂಡೂಕ್ಯ ಕಾರಿಕೆಯಲ್ಲಿ ಬಳಕೆಗೊಂಡಿದ್ದರೂ ಚರ್ಚಿತವಾದ ವಸ್ತು ಬೇರೆಯದು. 'ಆಗಮ' ಪದ ವಿವರಣೆ ಇಂತಿದೆ.

ಆಗತಂ ಶಿವವಕ್ತ್ರೇಭ್ಯೋ ಗತಂಚೈವ ಗಿರಿಜಾನನೇ
ಮತಂ ಚ ವಾಸು ದೇವಸ್ಯ ತಸ್ಮಾತ್ ಆಗಮ ಮುಚ್ಯತೇ[೪]

ಈ ಶ್ಲೋಕವು ಅಲ್ಪ ಸ್ವಲ್ಪ ವ್ಯತ್ಯಾಸದೊಡನೆ ಹಲವೆಡೆ ಪ್ರಸ್ತಾಪಗೊಂಡಿದೆ. ಈ ಸಾಲುಗಳು ವಸ್ತುನಿಷ್ಠ ವಿವರಣೆಯನ್ನು ಒಳಗೊಂಡಿಲ್ಲವೆಂಬುದನ್ನು ಗಮನಿಸಬಹುದು. ಇದು ಶಿವಪರವಾದ ಹೇಳಿಕೆಯಾಗಿದೆ. ಆದರೆ ವಾಸುದೇವ ಕೃಷ್ಣನನ್ನು ತನ್ನ ತೆಕ್ಕೆಯಲ್ಲಿ ತೆಗೆದುಕೊಂಡಿದೆ. ಶೈವಾಗಮಗಳಲ್ಲಿ ವೈಷ್ಣವ ದೇವತೆಗಳನ್ನು ಉಪೇಕ್ಷಿಸಿಲ್ಲ ಎಂದು ಗಮನಿಸಬಹುದು. ಬಹುಶಃ ಶೈವಾಗಮಗಳು ಆರಂಭವಾದಾಗ ಆಗಮವೆಂಬ ಪದ ಬೆಳಕಿಗೆ ಬಂದಿದ್ದು, ಶೈವಾಗಮ, ವೈಷ್ಣವಾಗಮ, ಶಾಕ್ತಾಗಮಗಳ ವರ್ಗೀಕರಣಕ್ಕೆ ಚಾಲನೆ ದೊರೆಯಿತು. ಈ ಶ್ಲೋಕದ ಮೂಲಕ ಶೈವಾಗಮಗಳ ಮನೋಧರ್ಮವೂ

* ಪದ್ಮಪ್ರಭಾ, # ೪೨, ೧೭ನೇ ಬ್ಲಾಕ್, ಶ್ರೀರಾಂಪುರ ೨ನೇ ಹಂತ, ಮೈಸೂರು - ೫೭೦ ೦೨೩.

ಪ್ರಕಟಗೊಂಡಿತು ಎನ್ನಬಹುದು. ಮಹಾಭಾರತದ ಕಾಲಕ್ಕೆ ಅಥವಾ ಕಾವ್ಯ ರಚನೆಯ ಕಾಲಕ್ಕೆ ವೈಖಾನಸರು ಗುಂಪುಗಳಲ್ಲಿ ಅರಣ್ಯಗಳಲ್ಲಿ ಜೀವಿಸಿದ್ದರೆಂದು ದೃಢಪಟ್ಟಿದೆ. ಮನುಸ್ಮೃತಿಯ ಬೋಧಾಯನ ಭಾಷ್ಯದಲ್ಲಿ ವೈಖಾನಸರನ್ನು ಹೆಸರಿಸಲಾಗಿದ್ದು "ವೈಖಾನಸೋ ವಾನಪ್ರಸ್ಥ ಏವ" ಎಂಬ ಉಲ್ಲೇಖವಿದೆ. ವೈದಿಕ ಧರ್ಮವನ್ನು ಆಚರಿಸುತ್ತಿದ್ದವರಲ್ಲಿ ಕೆಲವು ದ್ವಿಜರು, ಗೃಹಸ್ಥಾಶ್ರಮದ ನಂತರ ವಾನಪ್ರಸ್ಥದ ಸಲುವಾಗಿ ಅರಣ್ಯಗಳನ್ನು ಆಶ್ರಯಿಸುತ್ತಿದ್ದರು. ಈ ರೀತಿ ಜೀವಿಸುತ್ತಿದ್ದವರಲ್ಲಿ ವೈಖಾನಸರೂ ಒಂದು ಗುಂಪು. ಇವರೊಂದಿಗೆ ವಾಲಖಿಲ್ಯರು, ಸೈಕತರೂ ಇತರ ಗುಂಪುಗಳು. ಈ ಗುಂಪುಗಳು ಅಥವಾ ಪಂಗಡಗಳ ಬಗ್ಗೆ ಹೆಚ್ಚು ತಿಳಿದಿಲ್ಲ. ಯಜ್ಞ ಯಾಗಾದಿಗಳನ್ನು ಆಚರಿಸುತ್ತಿದ್ದ ವೈಖಾನಸರು, ಅದರೊಂದಿಗೆ ಯಜ್ಞ ಯಾಗಾದಿಗಳಿಗೆ ಪರ್ಯಾಯವಾಗಿ ಧ್ಯಾನ, ಜಪತಪಾದಿಗಳನ್ನು ಕೈಗೊಂಡರು. ಇದು ಮಾನಸಪೂಜೆ ಎನ್ನಿಸಿತು.

ವೈಖಾನಸ ಪದದ ಉತ್ಪತ್ತಿಯನ್ನು ಗಮನಿಸಬೇಕು.

> "ಮನಸಃ ಖನನಾತ್ ವಿಖನಾ ಇತಿ ಪ್ರೋಕ್ತೊ ತಪಸ್ಯಸುತಃ
> ವೈಖಾನಸಃ"

ಮಾನಸ ಪೂಜೆಯನ್ನು ಆರಂಭಿಸಿದ ಈ ಪಂಗಡದವರನ್ನು ವೈಖಾನಸರೆಂದು ಗುರುತಿಸಿರಲು ಸಾಧ್ಯವಿದೆ. ಮನಸ್ಸಿನ ಖನನವೆಂದಲ್ಲಿ ಮನದೊಳಗಿನ ಚಿಂತನೆ, ಶೋಧಗಳನ್ನು ಕುರಿತದ್ದು. ಇದು ಧ್ಯಾನವೇ. ಇದೇ ಮಾನಸಪೂಜೆ. ಈ ಹಾದಿ ಅಷ್ಟೇನೂ ಸುಲಭವಲ್ಲ. "ಧ್ಯಾನಂ ನಿರ್ವಿಷಯ ಮನಃ"–ಇದು ಸಾಮಾನ್ಯನಿಗೆ ಸಾಧ್ಯವಲ್ಲ. ಧ್ಯಾನಕ್ಕೆ ಅವಲಂಬನೆಯು ಬೇಕು. ವಿಷ್ಣು ಸಂಹಿತೆಯ ಈ ಕೆಳಗಿನ ಶ್ಲೋಕಗಳು ಧ್ಯಾನದ ಅವಲಂಬನೆಗೆ ಪ್ರತಿಮಾರೂಪವನ್ನು ಕೊಡುತ್ತವೆ.

> ನಿರಾಕಾರೇ ತು ಯಾ ಭಕ್ತ್ಯಾ ಪೂಜೇಷ್ಟಾ ಧ್ಯಾನಮೇವ ವಾ ॥
> ರಮಣೀಯಮಿವಾಭಾತಿ ತದನರ್ಥಸ್ಯ ಕಾರಣಂ
> ಸ್ಥೂಲಭಾವ ಪ್ರಸಂಗಾನಿ ಜನ್ಮನಾಸ್ಯ ಇಂದ್ರಿಯಾಣಿ ಹಿ ॥
> ನಚರೂಪಂ ವಿನಾ ದೇವೋ ಧ್ಯಾತುಂ ಕೇನಾಪಿ ಶಕ್ಯತೇ
> ತಸ್ಮಾತ್ ವಿದ್ವಾನ್ ಉಪಾಸೀತ ಬುದ್ಧ್ಯಾ ಸಾಕಾರಮೇವ ತಂ[೫]

ಯಜ್ಞ ಯಾಗಾದಿಗಳೊಂದಿಗೆ ವೈಖಾನಸರು ಮಾನಸ ಪೂಜೆಯನ್ನು ಅಳವಡಿಸಿಕೊಂಡರು. ಮಾನಸಪೂಜೆಯಲ್ಲಿ ಅವಲಂಬನೆಗಾಗಿ ಪ್ರತಿಮಾರೂಪವನ್ನು ಅವಲಂಬಿಸಿದರು. ವೈಖಾನಸರು ಮೂರು ರೀತಿಯ ಪೂಜೆಗಳನ್ನು ಅಂಗೀಕರಿಸಿರುವುದನ್ನು ವೈಖಾನಸ ಗ್ರಂಥಗಳು ಗುರುತಿಸಿವೆ.

> ಉಪಾಯಸ್ತ್ರಿ ವಿಧಃ ಪ್ರೋಕ್ತೋ ಪೂಜಾಯಾ ಶೃಣುತದ್ವಿಜಃ।
> ಮಾನಸೀ ಹೋಮಪೂಜಾ ಚ ಬೇರ ಪೂಜೇತಿ ಸಾತ್ರಿಧಾ॥[೬]

ವಿಷ್ಣುಸಂಹಿತೆ ವೈಖಾನಸರ ಸ್ಪಷ್ಟ ಚಿತ್ರಣವನ್ನು ಶ್ಲೋಕವೊಂದರಲ್ಲಿ ನೀಡಿದೆ.

> ಸ್ಥಂಡಿಲಾಜಿನ ಶಾಯೀ ಚ ಧ್ಯಾಯನ್ ವೈಖಾನಸಃ ಸದಾ।
> ವನ್ಯವೃತ್ತಿ ತ್ರಿಸಂಧ್ಯಾರ್ಚೀ ಜಪಹೋಮ ಪರಾಯಣಃ ॥[೭]

ವನಗಳಲ್ಲಿ ವಾಸಿಸುತ್ತಾ ಕೃಷ್ಣಾಜಿನದ ಮೇಲೆ ಮಲಗುತ್ತಿದ್ದ ವೈಖಾನಸರು ತ್ರಿಸಂಧ್ಯಾರ್ಚನೆ, ಜಪ, ಹೋಮಾದಿಗಳಲ್ಲಿ ನಿರತರಾಗಿರುತ್ತಿದ್ದರು.

ವಿಷ್ಣುಧರ್ಮೋತ್ತರ ಪುರಾಣವು ಅರಣ್ಯಗಳಲ್ಲಿ ಪ್ರತಿಷ್ಠಾಪಿಸಲ್ಪಟ್ಟ ದೇವತಾಮೂರ್ತಿಗಳನ್ನು ಪ್ರಸ್ತಾಪಿಸಿದೆ. ಈ ಶ್ಲೋಕಗಳನ್ನು ಕೆಳಗೆ ಗಮನಿಸಬಹುದು.

> ಪ್ರತ್ಯಕ್ಷೇಣಾಪಿದೃಶ್ಯಂತೇ ತ್ರೇತಾದ್ವಾಪರಯೋರ್ಜನಾಃ
> ದೇವಾನಾಂ ಪ್ರತಿಮಾಃ ಕೃತ್ವಾ ಪೂಜಯನ್ತಿಯಥಾ ವಿಧಿ॥
> ಗೃಹೇ ಪ್ರತಿಷ್ಠಾ ತತ್ರಾಪಿ ತ್ರೇತಾಯಾಂ ತು ಪ್ರವರ್ತಿತಾಃ
> ದ್ವಾಪರೇ ಚಾಪಿ ಅರಣ್ಯೇಷು ಋಷಿಭಿಃ ತತಃ ಕೃತಾ ॥[೮]

ತ್ರೇತಾ ಮತ್ತು ದ್ವಾಪರ ಯುಗಗಳಲ್ಲಿ ದೇವತೆಗಳ ಪ್ರತ್ಯಕ್ಷ ದರ್ಶನಕ್ಕೆ ಅವಕಾಶವಿತ್ತು. ದೇವ ಪ್ರತಿಮೆಗಳಿಗೂ ಪೂಜೆ ಸಲ್ಲುತ್ತಿತ್ತು. ತ್ರೇತಾಯುಗದಲ್ಲಿ ಮನೆಗಳಲ್ಲಿ ದೇವತೆಗಳ ವಿಗ್ರಹಗಳನ್ನು ಪ್ರತಿಷ್ಠಾಪಿಸಿ ಪೂಜೆಗೈಯುತ್ತಿದ್ದರು. ದ್ವಾಪರ ಯುಗದಲ್ಲಿ ಅರಣ್ಯಗಳಲ್ಲಿ ಋಷಿಗಳಿಂದ ಪ್ರತಿಷ್ಠಾಪನೆಗೊಂಡು ಪೂಜಾದಿ ಕೈಂಕರ್ಯಗಳು ಆರಂಭವಾದವು. ಇದನ್ನು ದೇವತಾಯತನ ವಿಧಾನವಡಿಯಲ್ಲಿ ಗುರುತಿಸಲಾಗಿದೆ. ಅರಣ್ಯಗಳಲ್ಲಿ ಪ್ರತಿಷ್ಠೆ ಎಂದಲ್ಲಿ ಆ ವಿಗ್ರಹಗಳಿಗೆ ಆಶ್ರಯ ಬೇಕಷ್ಟೆ. ಈ ಆಶ್ರಯದ ತಾಣಗಳೇ ದೇವಾಲಯಗಳು. ಆದರೆ ಅಂದಿನ ದೇವಾಲಯದ ಸ್ವರೂಪ ವ್ಯಕ್ತವಾಗದು.

ಮಹಾಭಾರತದ ಆದಿಪರ್ವವನ್ನು ಗಮನಿಸಿ; ದುಶ್ಯಂತ ಬೇಟೆಗೆ ಹೊರಟವನು ಒಂಟಿಯಾಗಿ ಕಣ್ವರ ಆಶ್ರಮದೆಡೆಗೆ ಸಾಗುತ್ತಾನೆ. ಆಗ ಹಾದಿಯಲ್ಲಿ ಅರಣ್ಯದಲ್ಲಿ ದ್ವಿಜರಿಂದ ಪೂಜಿಸಲ್ಪಡುತ್ತಿದ್ದ ದೇವಾಲಯಗಳನ್ನು ಕಾಣುತ್ತಾನೆ.

> ದೇವತಾಯತವಾನಾಂ ಚ ಪ್ರೇಕ್ಷ್ಯ ಪೂಜಾಂ ಕೃತಾಂ ದ್ವಿಜೈಃ
> ಬ್ರಹ್ಮಲೋಕಸ್ಥಮಾತ್ಮಾನಂ ನಮೇನೇ ಸನೃಪ ಸತ್ತಮಃ ॥[೯]

ಕಲಿಯುಗದಲ್ಲಿ ನದೀ ತೀರಗಳಲ್ಲಿ, ವನಗಳಲ್ಲಿ, ಉಪವನಗಳಲ್ಲಿ, ಸರೋವರಗಳಲ್ಲಿ, ಬೆಟ್ಟದ ಶಿಖರಗಳಲ್ಲಿ, ತಪ್ಪಲಿನಲ್ಲಿ, ರಮ್ಯವಾದ ಪ್ರದೇಶಗಳಲ್ಲಿ, ಗುಹೆಗಳಲ್ಲಿ ಪ್ರತಿಷ್ಠಾಪನಾದಿ ಕಾರ್ಯಗಳನ್ನು ಕೈಗೊಳ್ಳಬಹುದಾಗಿತ್ತು. ಇದನ್ನು ವಿಷ್ಣುಧರ್ಮೋತ್ತರ ಪುರಾಣವು "ಪ್ರತಿಷ್ಠಾತು ಕಾಲೇಯುಗೇ" ಎಂದು ಗುರುತಿಸಿದೆ. ವೈಖಾನಸರು ಹೋಮ, ಧ್ಯಾನ,

ಬೇರೆ ಪೂಜೆಗಳಲ್ಲಿ ವೈದಿಕ ಮೂಲದ ಆಚರಣೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದರು. ವೈದಿಕ ಮಂತ್ರಗಳನ್ನೇ ಬಳಸಿದರು. ವೈಖಾನಸರ ಆಸ್ತಿತ್ವ ಪ್ರಾಚೀನವೆನಿಸದರೂ ಲಭ್ಯವಿರುವ ವೈಖಾನಸ ಗ್ರಂಥಗಳು ಅಷ್ಟು ಪ್ರಾಚೀನವಲ್ಲ. ಆದರೂ ಕೆಲವು ವೈಶಿಷ್ಟ್ಯಗಳನ್ನು ಗಮನಿಸಬಹುದು.

ವೈಖಾನಸರ ಗ್ರಂಥಗಳಲ್ಲಿ ಜ್ಞಾನ, ಯೋಗ, ಕ್ರಿಯಾ, ಚರ್ಯಾಪಾದಗಳಲ್ಲಿ ಜ್ಞಾನಪಾದವು ತಾತ್ತ್ವಿಕ ಭಾಗವೆನಿಸಿದ್ದು, ವೈದಿಕ ಮಹರ್ಷಿಗಳನ್ನೇ ಅನುಸರಿಸಿದ್ದರಿಂದ ಪ್ರತ್ಯೇಕ ಪ್ರತಿಪಾದನೆಗೆ ಮಹತ್ವ ನೀಡಲಿಲ್ಲ. ಯೋಗಪಾದದಲ್ಲಿ ಇನ್ನಿತರ ಆಗಮ ಗ್ರಂಥಗಳು ಹೆಚ್ಚಾಗಿ ಅಷ್ಟಾಂಗಯೋಗವನ್ನು ಅನುಸರಿಸಿವೆ. ವೈಖಾನಸರ ಕ್ರಿಯಾಧಿಕಾರ ಗ್ರಂಥವು ಪ್ರಾಣಾಯಾಮದೊಂದಿಗೆ ಮಾನಸಪೂಜೆಯನ್ನೂ ಪ್ರಸ್ತಾಪಿಸಿದೆ. ವೈಖಾನಸ ವಿಧಿಗಳು ಸರಳ ಹಾಗೂ ನೇರವಾದದ್ದು. ಮಹಾಭಾರತದಲ್ಲಿ ಧ್ಯಾನ, ಯೋಗಗಳ ಪ್ರಸ್ತಾಪವಿದ್ದು, ಪತಂಜಲಿಯ ಅಷ್ಟಾಂಗಯೋಗಕ್ಕಿಂತ ಪ್ರಾಚೀನವಾದದ್ದು.

ಖಿಲಾಧಿಕಾರ ಗ್ರಂಥದಲ್ಲಿ ಬೇರ ಪೂಜೆಯು ಕೆಳಕಂಡಂತಿದೆ.

> **ಕೃತ್ವಾಂಯುತ್ ಪ್ರತಿಮಾಂ ವಿಷ್ಣೋಃ ಯಥಾ ಲಕ್ಷಣಮಾದರಾತ್**
> **ಸಂಸ್ಥಾಪ್ಯತಾಂ ತುವಿಧಿನಾ ದೇವಾಗಾರೇ ಅಥವೇಶ್ಮನಿ**
> **ನಿತ್ಯಮಾರಾಧನಂ ಭಕ್ತ್ಯಾ ಸಾ ಪೂಜಾ ಬೇರ ಪೂಜನಂ**[೧೦]

ವೈಖಾನಸರು ವಿಷ್ಣುವನ್ನು ಪರಮ ದೈವವೆಂದು ಸ್ವೀಕರಿಸಿದ್ದಾರೆ.

"ವಿಷ್ಣಾತೇರ್ವಿಶತೇ ವಿಷ್ಣುಃ"–ಎಲ್ಲೆಡೆಯಲ್ಲಿಯೂ ವ್ಯಾಪಿಸಿರುವವನು ವಿಷ್ಣು. ವೈಖಾನಸರಿಗೆ ವಿಷ್ಣುವನ್ನು ಬಿಟ್ಟರೆ ಅನ್ಯ ದೇವರಿಲ್ಲ. ವಿಷ್ಣುವೇ ಪರಮಪದ. ವೈದಿಕ ಪರಂಪರೆಯ ಪ್ರಭಾವ ಸ್ಪಷ್ಟವಾಗಿ ಅವರ ಮೇಲೆ ಆಗಿಬಂದಿದೆ. ಆದ್ದರಿಂದ ಬೇರೆ ಪೂಜೆಯಲ್ಲಿಯೂ ವಿಷ್ಣು ಆರಾಧ್ಯ ದೈವನೆನಿಸಿದ. ಇಂದಿಗೂ ಈ ಪರಂಪರೆ ಮುಂದುವರೆದಿದೆ ಎಂದು ಗಮನಿಸಬಹುದು.

ಮಹಾಭಾರತದ ಮೋಕ್ಷಧರ್ಮ ಪರ್ವದಲ್ಲಿ ಪಾಂಚರಾತ್ರ ಹಾಗೂ ಪಾಶುಪತದ ಉಲ್ಲೇಖವಿದೆ. ಇವುಗಳೂ ವೈಖಾನಸದಂತೆ ವೈಷ್ಣವ ಮತ್ತು ಶೈವ ಸಂಪ್ರದಾಯಗಳು. ವೈಖಾನಸರಂತೆ ಇವುಗಳಿಗೆ ತಮ್ಮದೇ ಆದ ವ್ಯವಸ್ಥೆ ಇದ್ದು ನಂತರ ಶಾಸ್ತ್ರ ಸಂದೋಹಗಳನ್ನು ಕಟ್ಟಿಕೊಂಡು ಬೆಳೆದವು. ಇವುಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಆಗಮಗಳೂ ಬೆಳೆದವು.

"ವಾಸುದೇವ ಅರ್ಜುನಾಭ್ಯಂ ವುನ್" ಸೂತ್ರವನ್ನು ಆಧರಿಸಿ ಪಾಂಚರಾತ್ರ ಸಂಪ್ರದಾಯವು ಕ್ರಿ.ಪೂ. ನಾಲ್ಕನೇ ಶತಮಾನಕ್ಕಿಂತ ಪೂರ್ವದ್ದೆಂದು ವಿದ್ವಾಂಸರು ಅಭಿಪ್ರಾಯ ಮಂಡಿಸುತ್ತಾರೆ.

ಪಾಂಚರಾತ್ರ ಪದದ ವ್ಯುತ್ಪತ್ತಿಯೇ ಅಸ್ಪಷ್ಟ ವಾಸುದೇವ ಕೃಷ್ಣನನ್ನು ದೈವತ್ವಕ್ಕೇರಿಸಿ ಆರಾಧ್ಯ ದೇವತೆಯನ್ನಾಗಿ ಸ್ವೀಕರಿಸಿದ್ದನ್ನು ಶಾಸನಗಳ ಮೂಲಕ ಮೊದಲಿಗೆ ಗುರುತಿಸಲಾಗಿದೆ. ಮಧುರೆಯ ಸಮೀಪದ ಒಂದನೆ ಶತಮಾನದ ಮೋರ್ ಶಾಸನವು ವೃಷ್ಣೀ ಸಂತತಿಯ ಐದು ಮಂದಿ ವೀರರಾದ ಸಂಕರ್ಷಣ–ವಾಸುದೇವ–ಪ್ರದ್ಯುಮ್ನ–ಅನಿರುದ್ಧ–ಸಾಂಬಕರನ್ನು ಗುರುತಿಸಿದೆ. ಷಡ್ಗುಣಗಳನ್ನು ಆಧರಿಸಿ ವಿಭಾವಾತಾರಗಳನ್ನು, ಚತುರ್ವಿಂಶತಿ ಮೂರ್ತಿಗಳನ್ನೂ ಬೆಳಕಿಗೆ ತಂದಿದ್ದು ಆಗಮಗಳಲ್ಲಿರುವ ಮುಂದಿನ ನಡಿಗೆ ಎನಿಸಿದೆ. ಆದರೆ ಮಹಾಭಾರತದಲ್ಲಿ ಪ್ರಸ್ತಾಪಗೊಂಡ ಪಾಂಚರಾತ್ರಿಗಳ ವಿವರಗಳು ಅಸ್ಪಷ್ಟ. ಒಟ್ಟಾರೆ ಪಾಂಚರಾತ್ರವನ್ನು ಮೂರು ಹಂತಗಳಲ್ಲಿ ಕಾಣಬಹುದು.

ಮಹಾಭಾರತದಲ್ಲಿ ಉಲ್ಲೇಖಗೊಂಡದ್ದು ಮೊದಲ ಹಂತ, ಇದು ಅಸ್ಪಷ್ಟ. ವಾಸುದೇವ ಕೃಷ್ಣನೊಂದಿಗೆ ಬೆಳೆದ ವ್ಯೂಹಾವತಾರ ಚತುರ್ವಿಂಶತಿ ಮೂರ್ತಿಗಳು ಮಧ್ಯದ ಹಂತ. ರಾಮಾನುಜರ ಪ್ರಪತ್ತಿಯೊಡನೆ ಪ್ರಚಾರಗೊಂಡು ಪ್ರಚಲಿತದಲ್ಲಿರುವ ನಡೆ ಅಥವಾ ಸಂಪ್ರದಾಯ ಮೂರನೇ ಹಂತ.

ಮಹಾಭಾರತದಲ್ಲಿ ಉಲ್ಲೇಖಗೊಂಡ ಪಾಶುಪತರ ಬಗ್ಗೆಯೂ ಅಧ್ಯಯನ ನಡೆಯಬೇಕಾಗಿದೆ. ಹರಪ್ಪಾ ಮಹೆಂಜೋದಾರೋ ಉತ್ಖನನಗಳಲ್ಲಿ ದೊರೆತ ಪಶುಪತಿ ಎನ್ನಲಾದ ಮುದ್ರೆಯೊಂದಿಗೆ ಶೈವ ಸಂಪ್ರದಾಯವನ್ನು ಗುರುತಿಸಲು ವಿದ್ವಾಂಸರು ಪ್ರಯತ್ನಿಸಿದ್ದಾರೆ. ಆದರೆ ಮುದ್ರೆಯಲ್ಲಿರುವ ಲಿಪಿಯೇ ಕಗ್ಗಂಟು. ಕ್ರಿಪೂ. ಎರಡನೆ ಶತಮಾನಕ್ಕೆ ಸೇರಿದ ಗುಡಿಮಲ್ಲಂನಲ್ಲಿರುವ ಲಿಂಗ ಅದರಲ್ಲಿರುವ ಪ್ರಾತಿನಿಧಿಕ ಸ್ವರೂಪ ಒಂದು ದಿಕ್ಸೂಚಿ.

ಲಿಂಗವು ಹಲವು ದೇವತೆಗಳ ಪ್ರತೀಕವಾಗಿ ಹಲವು ಶತಮಾನಗಳವರೆಗೆ ಮುಂದುವರೆದದ್ದನ್ನು ಕಾಣಬಹುದು. ವೈಖಾನಸರಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಿ, ಮುಂದುಗಡೆ ವಿಷ್ಣುವನ್ನಿಟ್ಟು ಪೂಜಿಸುವುದುಂಟು. ಇದಕ್ಕೆ ವಿಷ್ಣೇಶ್ವರ ಲಿಂಗವೆಂದು ಹೆಸರು. ಇಲ್ಲಿ ಲಿಂಗ ಕೇವಲ ಪ್ರತೀಕವಷ್ಟೇ ಹೌದು. ಕರ್ನಾಟಕದ ತ್ರೈಪುರುಷರ ದೇವಾಲಯಗಳಲ್ಲಿ ಬ್ರಹ್ಮ–ವಿಷ್ಣು–ಮಹೇಶ್ವರರ ಹೆಸರಿನಲ್ಲಿ ಮೂರು ಲಿಂಗಗಳು ಪೂಜಿಸಲ್ಪಡುತ್ತವೆ. ಶೈವಾಗಮಗಳೊಂದಿಗೆ ಲಿಂಗವು ಶಿವಸ್ವರೂಪವನ್ನು ಪಡೆಯಿತೇ ? ಚರ್ಚೆಗೆ ಅರ್ಹವಾದ ವಿಷಯ. ಶೈವ ಸಂಪ್ರದಾಯವನ್ನು ವಿದ್ವಾಂಸರು ಮೂರು

ಹಂತಗಳಲ್ಲಿ ಗುರುತಿಸುತ್ತಾರೆ. ತಮಿಳುನಾಡಿನ ನಾಯನಾರರ ಭಕ್ತಿ ಪರಂಪರೆ ಮೊದಲನೆಯದು. ಕಾಶ್ಮೀರದಿಂದ ದಕ್ಷಿಣಕ್ಕೆ ವಲಸೆ ಬಂದು ಆಗಮಗಳನ್ನು ರಚಿಸಿಕೊಂಡವರು ಎರಡನೆಯವರು. ಮೂರನೆಯ ಸಂಪ್ರದಾಯ ಲಾಕುಲೀಶ–ಪಾಶುಪತ–ಕಾಳಾಮುಖ ಸಂಪ್ರದಾಯ. ಕರ್ನಾಟಕದಲ್ಲಿ ಹೆಚ್ಚಾಗಿ ಕಂಡದ್ದು ಮೂರನೆಯ ಸಂಪ್ರದಾಯ. ಬಾದಾಮಿ ಚಾಲುಕ್ಯರ ಕಾಲದಲ್ಲಿ ಲಾಕುಲೀಶರ ದೇವಾಲಯಗಳೂ ಮೂರ್ತಿಗಳೂ ದೊರೆತಿವೆ. ತದನಂತರ ಕಾಲದಲ್ಲಿ ಪಾಶುಪತರೂ ಕಾಳಾಮುಖರೂ ಜೀವನದಲ್ಲಿ ನೈಷ್ಠಿಕತೆಯನ್ನು ಬೋಧಿಸಿದ್ದಾರೆ.

ಇವರ ಕಾಲದಲ್ಲಿ ದೇವಾಲಯಗಳು ರಚನೆಗೊಂಡರೂ, ದೇವಾಲಯ ಮತ್ತು ಮಠಗಳಲ್ಲಿ ಸ್ಥಾನಪತಿಗಳಾಗಿ ಆಡಳಿತ ನಿರ್ವಹಿಸಿ ವಿದ್ಯಾಭ್ಯಾಸ ಹಾಗೂ ಸಾಮಾಜಿಕ ಉನ್ನತಿಗಾಗಿ ಶ್ರಮಿಸಿದರು. ಯೋಗ ಧ್ಯಾನಾದಿಗಳಿಗೆ ಮೌನಾನುಷ್ಠಾನ ಜಪಗಳೆಡೆಗೆ ಹೆಚ್ಚು ಒಲವು ತೋರಿದ್ದರೆಂದೂ ಗಮನಿಸಬಹುದು. ಜಪದಲ್ಲಿ ಸಗರ್ಭಜಪ, ಅಗರ್ಭಜಪ ಎಂದು ಎರಡು ಪ್ರಭೇದಗಳಿವೆ.

ಸಗರ್ಭವು ಪ್ರಾಣಾಯಾಮವನ್ನೊಳಗೊಂಡಿದೆ. ಅಗರ್ಭವು ಪ್ರಾಣಾಯಾಮದಿಂದ ಹೊರತಾದದ್ದು. ಪಾಶುಪತರಲ್ಲಿ ಶ್ರೌತಿ, ಅಶ್ರೌತಿ ಎಂದು ಎರಡು ವಾಹಿನಿಗಳಿವೆ. ಇವುಗಳೊಂದಿಗೆ ಜನಸಾಮಾನ್ಯರನ್ನೂ ತಲುಪಲು ಸಾಧ್ಯ ಎಂದು ಗಮನಿಸಬಹುದು. ಕರ್ನಾಟಕದಲ್ಲಿ ರಚನೆಗೊಂಡ ಆಗಮಾದಿ ಗ್ರಂಥಗಳು ಈವರೆವಿಗೆ ಅಲಭ್ಯ. ಬಹುಶಃ ವಾತುಲಶುದ್ಧಾಗಮವೊಂದು ಈ ನೆಲದಲ್ಲಿ ಅರಳಿರಬಹುದು. ಈ ದಿಸೆಯಲ್ಲಿ ವ್ಯಾಪಕವಾದ ಅಧ್ಯಯನ ನಡೆಯಬೇಕು.

ಮಹಾಭಾರತ ಮತ್ತು ವಿಷ್ಣು ಧರ್ಮೋತ್ತರ ಪುರಾಣಗಳನ್ನಾಧರಿಸಿ ದೇವಾಲಯಗಳನ್ನು ಆರಂಭಿಸಿದವರಲ್ಲಿ ವೈಖಾನಸರು ಮೊದಲಿಗರು ಎಂದು ಗುರುತಿಸಲು ಸಾಧ್ಯವಾಗಿದೆ. ಶೈವಾಗಮಗಳೊಂದಿಗೆ ವರ್ಗೀಕರಣ ಸಾಧ್ಯವಾಗಿದ್ದು ಶೈವಾಗಮಗಳಲ್ಲಿ ಶಿವ ವಿಷ್ಣುವಿನ ಭೇದ ಎಣಿಸದಿರುವುದನ್ನು ಕಾಣಬಹುದು. ಕಾಳಾಮುಖ ಪಾಶುಪತರ ಕಾಲದಲ್ಲಿ ಕರ್ನಾಟಕದಲ್ಲಿ ಯೋಗ, ಜಪತಪಾದಿಗಳಿಗೆ ಹೆಚ್ಚು ಒತ್ತು ನೀಡಿದ್ದು, ಈ ಬಗ್ಗೆ ಹೆಚ್ಚಿನ ಅಧ್ಯಯನಕ್ಕೆ ಅವಕಾಶವನ್ನು ಕಲ್ಪಿಸಿದೆ.

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. ಡಿ.ಸಿ. ಸರ್ಕಾರ್., ಸೆಲೆಕ್ಟ್ ಇನ್‌ಸ್ಕ್ರಿಪ್ಷನ್ಸ್, ಕಲ್ಕತ್ತಾ, ೧೯೭೫, ಪುಟ ೯೦–೯೧.

೨. ಅದೇ., ಪುಟ ೯೧–೯೨.

೩. **ಶ್ರೀ ಮನ್ಮಹಾಭಾರತ,** ಭಾರತ ದರ್ಶನ ಮುದ್ರಣಾಲಯ, ಬೆಂಗಳೂರು, ಸಂ. ೨೪, ಪುಟ ೨೨೨೬ ಮೋಕ್ಷಧರ್ಮ ಪರ್ವ, ೨೪೪ನೆ ಅಧ್ಯಾಯ, ಶ್ಲೋಕ. ೧೯–೨೦.

೪. ಆಸೂರಿ ಶ್ರೀನಿವಾಸಯ್ಯಂಗಾರ್ಯ ಮತ್ತು ತಿರುಪತಿ ಶ್ರೀನಿವಾಸಯ್ಯಂಗಾರ್ : **ಆಗಮಪ್ರಕಾಶ ಶೈವಾಗಮ,** ಬೆಂಗಳೂರು, ೧೯೭೫, ಪುಟ ೨.

೫. ಎಂ.ಎಂ. ಗಣಪತಿಶಾಸ್ತ್ರಿ (ಸಂ), **ವಿಷ್ಣು ಸಂಹಿತಾ.,** ನಾಗ್ ಪಬ್ಲಿಷರ್ಸ್, ಡೆಲ್ಲಿ ೧೯೯೧, ಪುಟ ೨೩೬, ಪಟಲ–೨೯, ಶ್ಲೋಕ ೪೩–೪೫.

೬. **ವೈಖಾನಸ ಆಗಮಕೋಶ,** ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ, ತಿರುಪತಿ, ೧೯೯೧, ಭಾಗ–೧, ಪುಟ ೪. (ಜಿಲಾಧಿಕಾರ ೧.೧೪.೬)

೭. **ವಿಷ್ಣು ಸಂಹಿತೆ,** ಪುಟ ೨೩೯, ಪಟಲ ೨೯, ಶ್ಲೋಕ ೮೬.

೮. **ವಿಷ್ಣು ಧರ್ಮೋತ್ತರ ಪುರಾಣ,** ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ, ಮೈಸೂರು, ಪುಟ ೫೪೦–೫೪೧, ತೃತೀಯಖಂಡ, ಅಧ್ಯಾಯ ೯೩, ಶ್ಲೋಕ ೨–೩.

೯. ಲಕ್ಷ್ಮಣ ಬಾಬಣೆ ಪೈ (ಸಂ.) **ಶ್ರೀ ಮಹಾಭಾರತ ಸಂಹಿತೆ,** ೧೯೬೧, ಭಾಗ ೪, ಪುಟ ೬೫೮, ಆದಿಪರ್ವ, ಅಧ್ಯಾಯ ೭೦, ಶ್ಲೋಕ ೪೯.

೧೦. **ವೈಖಾನಸ ಆಗಮಕೋಶ,** ಪುಟ ೭, (ಜಿಲಾಧಿಕಾರ ೧.೨೫.೬).

ಡಾ. ಹೆಚ್. ಚಂದ್ರಶೇಖರ*


ಜಾತವೇದ ಮುನಿಗದ್ದುಗೆ : ಇದೊಂದು ಈಶ್ವರ ದೇವಾಲಯ

ಪ್ರಸ್ತಾವಿಕೆ : ಕೂಡಲಸಂಗಮ ಕ್ಷೇತ್ರ ಜಗಜ್ಯೋತಿ ಬಸವಣ್ಣನವರನ್ನು ರೂಪಿಸಿದ ಕ್ಷೇತ್ರ, ಅವರ ಕೊನೆಯ ದಿನಗಳಲ್ಲಿಯೂ ಇದು ಅವರಿಗೆ ಸಾಂತ್ವನ ನೀಡಿದ ಕ್ಷೇತ್ರ, ಈ ಕಾರಣಕ್ಕಾಗಿ ಕೂಡಲಸಂಗಮ ಕ್ಷೇತ್ರವು ಕರ್ನಾಟಕದ ಇತಿಹಾಸದಲ್ಲಿ ಅತ್ಯಂತ ಪ್ರಮುಖ ಕ್ಷೇತ್ರ.

ಮಲಪ್ರಭಾ ನದಿಯು ಕೃಷ್ಣಾ ನದಿಯನ್ನು ಸೇರುವ ತ್ರಿಕೋಣಾಕೃತಿಯ ಈ ಕ್ಷೇತ್ರ ಬಸವಣ್ಣನವರ ಕಾಲದಲ್ಲಿ ಸುಪ್ರಸಿದ್ಧ ವಿದ್ಯಾಕೇಂದ್ರವಾಗಿತ್ತು. ಹಾಗೆಯೇ ಒಂದು ಧಾರ್ಮಿಕ ಕ್ಷೇತ್ರವಾಗಿತ್ತು.

ಈ ಕ್ಷೇತ್ರವು ಬಾಗಲ್ಕೋಟೆಯಿಂದ ಸುಮಾರು ೩೦ ಕಿ.ಮೀ. ದೂರದಲ್ಲಿದೆ. ಹಾಗೆಯೇ ಬಿಜಾಪುರದಿಂದ ಸುಮಾರು ೭೦ ಕಿ.ಮೀ. ದೂರದಲ್ಲಿದೆ. ಪ್ರಸ್ತುತ ಈ ಕ್ಷೇತ್ರವು ಕರ್ನಾಟಕ ಸರ್ಕಾರವು ಸ್ಥಾಪಿಸಿರುವ ಕೂಡಲಸಂಗಮ ಅಭಿವೃದ್ಧಿ ಮಂಡಳಿಯು ಕೈಗೊಂಡ ಹಲವಾರು ಕಟ್ಟಡಗಳ ನಿರ್ಮಾಣ ಮತ್ತು ಸಂಗಮೇಶ್ವರ ಗುಡಿಯ ಪುನರುತ್ಥಾನದ ಕಾರಣಗಳಿಂದಾಗಿ ತುಂಬಾ ಜನಪ್ರಿಯ ಯಾತ್ರಾಸ್ಥಳವಾಗಿದೆ.[೧]

ಈ ಕ್ಷೇತ್ರದಲ್ಲಿ ಸಂಗಮೇಶ್ವರ ದೇವಾಲಯ ಮತ್ತು ಅದರ ಹತ್ತಿರದಲ್ಲಿರುವ ಸಿದ್ಧೇಶ್ವರ ದೇವಾಲಯ ಮತ್ತು ಜಾತವೇದ ಮುನಿಗಳ ಗದ್ದುಗೆ ಎಂದು ತಪ್ಪಾಗಿ ಕರೆಯಲ್ಪಡುತ್ತಿರುವ ಆಚೇಶ್ವರ ಗುಡಿಗಳಿವೆ. ಇವು ಮೂರು ಕಟ್ಟಡಗಳು ಮೂಲತಃ ಕಲ್ಯಾಣ ಚಾಳುಕ್ಯ ಶೈಲಿಯಲ್ಲಿ ರಚಿತವಾದ ಕಟ್ಟಡಗಳು.



ಪ್ರಸ್ತುತ ಸಂಪ್ರಬಂಧವು ಜಾತವೇದ ಮುನಿಗಳ ಗದ್ದುಗೆಯ ನಿಜಸ್ವರೂಪವನ್ನು ಪುರಾತತ್ವ ಹಿನ್ನೆಲೆಯಲ್ಲಿ ಚರ್ಚಿಸುತ್ತದೆ. ಇದರ ಉಪ ಫಲಶೃತಿ ಎಂಬಂತೆ (Byproduct) ಬಸವಣ್ಣನವರಿಗೆ ದೀಕ್ಷಾ ಗುರುಗಳೆಂಬುವವರು ಇದ್ದರೆ ? ಎಂಬುದನ್ನು ಸಂಕ್ಷಿಪ್ತದಲ್ಲಿ ಚರ್ಚಿಸುತ್ತದೆ.

ಶಾಸನಗಳು : ಕೂಡಲಸಂಗಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಟ್ಟು

* 'ಸಂಗಮ' ಎಮ್.ಐ.ಜಿ.-೭೭, ೬ನೇ ಕ್ರಾಸ್, ಕೆ.ಹೆಚ್.ಬಿ. ಕಾಲೋನಿ, ಬಸವೇಶ್ವರನಗರ, ಬೆಂಗಳೂರು.



ಪುನರುತ್ಥಾನಗೊಂಡ ಕೂಡಲಸಂಗಮ ದೇವಾಲಯ

ಆರು ಶಾಸನಗಳು ದೊರಕಿವೆ. ಅವುಗಳಲ್ಲಿ ನಾಲ್ಕು ಶಾಸನಗಳು ಪ್ರಕಟವಾಗಿವೆ[೨]. ಇವುಗಳಲ್ಲಿ ನಮ್ಮ ಪ್ರಸ್ತುತ ಅಧ್ಯಯನಕ್ಕೆ ಕ್ರಿ.ಶ. ೧೧೬೦ ಕ್ರಿ.ಶ. ೧೨೧೩ ಮತ್ತು ೧೧೪೫ರ ಶಾಸನಗಳು ಪ್ರಸ್ತುತವಾಗುತ್ತವೆ (ಅನುಬಂಧ ೧.೨.೩ ನೋಡಿ). ಈ ಶಾಸನಗಳ ಪ್ರಕಾರ, ಸಂಗಮೇಶ್ವರ ದೇವಾಲಯದ ಆವರಣದಲ್ಲಿ ಕಾಳೇಶ್ವರ ಮತ್ತು ಆಚೇಶ್ವರ ದೇವಾಲಯಗಳಿರುವುದು ತಿಳಿದುಬರುತ್ತಿದ್ದು, ಈ ಶಾಸನಗಳ ಪ್ರಕಾರ ಮಲಪ್ರಭಾ (ಮಲಹಾರಿ) ನದಿ ತೀರದಲ್ಲಿ ಆಚೇಶ್ವರ (ಆಚೇಶ್ವರ) ದೇವಾಲಯವಿತ್ತೆಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಈ ಪ್ರಕಟಿತ ನಾಲ್ಕು ಶಾಸನಗಳಲ್ಲಿ ಎಲ್ಲಿಯೂ ಜಾತವೇದ ಮುನಿಗದ್ದುಗೆ ಅಥವಾ ಜಾತವೇದ ಮುನಿಯ ಗುಡಿ ಎಂಬ ಹೆಸರೇ ಇಲ್ಲ ಎಂಬುದು ಗಮನಿಸಬೇಕಾದ ಪ್ರಮುಖ ಅಂಶ.


ಸಿದ್ಧೇಶ್ವರ ಮತ್ತು ಆಚೇಶ್ವರ ದೇವಾಲಯಗಳು : ಆಗಲೇ ಹೇಳಲಾದಂತೆ ಸಂಗಮೇಶ್ವರ ದೇವಾಲಯದ ಆವರಣದಲ್ಲಿರುವ ಈ ಎರಡು ದೇವಾಲಯಗಳನ್ನು ಕುರಿತು ಪುರಾತತ್ವದ (Archaeology) ಹಿನ್ನೆಲೆಯಲ್ಲಿ ಮುಂದೆ ಚರ್ಚಿಸುತ್ತೇನೆ.

ಸಿದ್ಧೇಶ್ವರ ದೇವಾಲಯ : ಸಂಗಮೇಶ್ವರ ದೇವಾಲಯದ ಬಲ ಕೊನೆಯಲ್ಲಿ ಕೆಲವೇ ಅಡಿಗಳ ಅಂತರದಲ್ಲಿ ಇರುವ ಚೌಕಾಕಾರದ ಕಟ್ಟಡವೇ ಸಿದ್ಧೇಶ್ವರ ದೇವಾಲಯ. ಶಾಸನದಲ್ಲಿ ಉಲ್ಲೇಖಿಸಲ್ಪಟ್ಟ ಕಾಳೇಶ್ವರ ದೇವಾಲಯವೇ ಇದು. ಈ ಹೆಸರಿನ ಬದಲಾವಣೆ ಯಾವಾಗ ಆಯಿತು, ಯಾರು ಮಾಡಿದರು ಎಂಬ ಬಗ್ಗೆ ಸದ್ಯಕ್ಕೆ ಮಾಹಿತಿ ಇಲ್ಲ. ಆದರೆ ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟ ಕಾಳೇಶ್ವರ ದೇವಾಲಯದ ಲಕ್ಷಣಗಳನ್ನು ಈ ಪ್ರಸ್ತುತ ಕಟ್ಟಡದಲ್ಲಿ ಕಾಣಬಹುದು. ಉತ್ತರಾಭಿಮುಖವಾಗಿರುವ ಈ ಗುಡಿಯು ಗರ್ಭಗುಡಿ ಸುಕನಾಸಿ ಮತ್ತು ಮುಖ ಮಂಟಪಗಳನ್ನು ಒಳಗೊಂಡಿದೆ. ಇದೊಂದು ನಿರಂಧಾರ ದೇವಾಲಯ. ಗರ್ಭಗುಡಿ ಮತ್ತು ಸುಕನಾಸಿಗಳೆರಡೂ ಸೇರಿ ಸುಮಾರು ೨೦ ಅಡಿ ಉದ್ದ ಮತ್ತು ೩೦ ಅಡಿಗಳಷ್ಟು ಅಗಲವಾಗಿವೆ. ಇವುಗಳ ಗೋಡೆಗಳನ್ನು ಕಂದು ಬಣ್ಣದ ಕಣಶಿಲೆ (Gray Granite) ಮತ್ತು ಕೆಂಪು ಬಣ್ಣದ ಮರಳುಗಲ್ಲುಗಳ (Red Sand Stone) ಸೈಜು ಕಲ್ಲುಗಳಿಂದ ಕಟ್ಟಲಾಗಿದೆ. ಮುಖಮಂಟಪದ ಕಂಬಗಳನ್ನು ಕಂದು ಬಣ್ಣದ ಶಿಲೆಗಳಿಂದ ಕಟೆಯಲಾಗಿದೆ. ಈ ಒಟ್ಟು ಕಟ್ಟಡವನ್ನು ಇತ್ತೀಚೆಗೆ ಸುಚಿಗೊಳಿಸಲಾಗಿದೆ (Renovated) ಮುಖ ಮಂಟಪದ ಛತ್ತಿನಲ್ಲಿ ಕಂದುಶಿಲೆಯಲ್ಲಿ ಕಡೆಯಲಾದ ಸುಂದರ ಕಮಲದ ಕಲಾಕೃತಿ ಇದೆ. ಈ ಕಟ್ಟಡದ ಒಟ್ಟು ಎತ್ತರ ಸುಮಾರು ೧೫ ಅಡಿಗಳು. ಗರ್ಭಗುಡಿಯಲ್ಲಿ ಶಿವಲಿಂಗ ಇದೆ. ಆಗಾಗ ಭಕ್ತರಿಂದ ಪೂಜೆ ನಡೆಯುತ್ತದೆ. ನಿರಂತರ ಪೂಜೆ ಇಲ್ಲ.

ಆಚೇಶ್ವರ ಗುಡಿ : ಸಿದ್ಧೇಶ್ವರ ಗುಡಿಯ ಬಲ ಪಕ್ಕದಲ್ಲಿ ಸುಮಾರು ೨೦-೩೦ ಅಡಿಗಳ ಅಂತರದಲ್ಲಿರುವುದೇ ಶಾಸನೋಕ್ತ ಆಚೇಶ್ವರ (ಆಚೇಸ್ವರ) ಗುಡಿ. ಈಗ ನಮಗೆ ನೋಡಲು ಸಿಗುವದು ಕೇಂದ್ರ ಪುರಾತತ್ವ ಇಲಾಖೆಯಿಂದ (A.S.I.) ಪುನರುತ್ಥಾನಗೊಂಡ ಹಾಗೂ ಮೂಲದಲ್ಲಿ (ಅಂದರೆ ಕ್ರಿ.ಶ. ಹನ್ನೆರಡು ಮತ್ತು ಹದಿಮೂರನೆಯ ಶತಮಾನದಲ್ಲಿ ಇದ್ದಂಥ ಕಟ್ಟಡ) ಇದ್ದಂತಹ ಗುಡಿ. ಇದೊಂದು ಚೌಕಾಕಾರದ ರಚನೆ. ಇದು ಸಾಂಧಾರ ಗುಡಿ. ಗರ್ಭಗುಡಿಯ ಸುತ್ತಲೂ ಪ್ರದಕ್ಷಿಣಾ ಪಥ ಇದೆ. ಇದು ಒಟ್ಟು ೨೦ ಕಂಬಗಳುಳ್ಳ ರಚನೆ. ಗರ್ಭಗುಡಿಯ ಬಾಗಿಲ ಚೌಕಟ್ಟು ಕಲ್ಯಾಣ ಚಾಳುಕ್ಯ ಶೈಲಿಯಲ್ಲಿರುವುದನ್ನು ಸ್ಪಷ್ಟವಾಗಿ ಗುರ್ತಿಸಬಹುದು. ಗರ್ಭಗುಡಿಯ ಹಣೆಪಟ್ಟಿಯ ಮೇಲೆ "ಶಾಖಾಮಠ ಶ್ರೀ ಜಾತವೇದ ಮುನಿಗಳ ಗದ್ದುಗೆ" ಎಂದು ಖಡುವಿನಿಂದ ಯಾರೋ ಬರೆದಿರುವುದನ್ನು ನಾನು ೪-೮-೨೦೦೩ರಲ್ಲಿ ಗುರ್ತಿಸಿದ್ದೇನೆ. ಸಧ್ಯಕ್ಕೆ ಗರ್ಭಗುಡಿಯಲ್ಲಿ ಯಾವ ಮೂರ್ತಿಯೂ ಇಲ್ಲ. ಆದ್ದರಿಂದ ಪೂಜೆ ಪುನಸ್ಕಾರಗಳ ಪ್ರಶ್ನೆ ಉದ್ಭವಿಸುವುದಿಲ್ಲ.


ಕೇಂದ್ರ ಪುರಾತತ್ವ ಇಲಾಖೆಯ ಪುನರುತ್ಥಾನದ ಕೆಲಸ: ಈ ಕಟ್ಟಡದ ಬಗ್ಗೆ ಹಾಗೂ ಕೂಡಲಸಂಗಮ ಕ್ಷೇತ್ರದ ಬಗ್ಗೆ ಸುಮಾರು ೧೯೭೮ ರಿಂದ ಕ್ರಿ.ಸ. ೨೦೦೩ರವರೆಗೆ ಅಧ್ಯಯನ ನಡೆಸಿರುವ ನಾನು ಕೊಂಚ ಹಿನ್ನೆಲೆಯನ್ನು ಹೇಳುವುದು ಅವಶ್ಯಕ.

೧೯೭೮ರ ಸುಮಾರಿನಲ್ಲಿ ಮೊದಲ ಬಾರಿಗೆ ಈ ಕ್ಷೇತ್ರವನ್ನು ಸಂದರ್ಶಿಸಿದಾಗ ಸಂಗಮೇಶ್ವರ ದೇವಾಲಯ ಮತ್ತು ಸಿದ್ಧೇಶ್ವರ ದೇವಾಲಯಗಳು ಹೆಚ್ಚು ಕಮ್ಮಿ ಈಗಿರುವ ಸ್ಥಿತಿಯಲ್ಲಿಯೇ ಇದ್ದವು. ಈಗ ಇಡೀ ಮೂರು



ಸೂಚಿ:
೧. ಕಾಳೇಶ್ವರ (ಸಿದ್ದೇಶ್ವರ ಗುಡಿ)
೨. ಆಚೇಶ್ವರ (ಜಾತವೇದಮುನಿ ಗದ್ದುಗೆ ?)

ಕೂಡಲ ಸಂಗಮೇಶ್ವರ ಸಂಕೀರ್ಣದ ಸ್ಥೂಲ ನಕಾಶೆ




ಸೂಚಿ:

ಜಲಧಾರೆ

ಕಟ್ಟೆ

ಆಚೇಶ್ವರ ಗುಡಿಯ ಸ್ಥೂಲ ತಲವಿನ್ಯಾಸ
(ಜಾತವೇದ ಮುನಿಯ ಗದ್ದುಗೆ?)



ಕಾಳೇಶ್ವರ ಗುಡಿಯ (ಸಿದ್ಧೇಶ್ವರ ಗುಡಿ) ಸ್ಥೂಲ ತಳವಿನ್ಯಾಸ

ಗುಡಿಗಳನ್ನು ಪುನರುತ್ಥಾನಗೊಳಿಸಲಾಗಿದೆ. ನಾನು ಕೂಡಲಸಂಗಮ ಅಭಿವೃದ್ಧಿಯ ಮಂಡಲಿಯ ಸದಸ್ಯನಾಗಿದ್ದಾಗ ಈ ದೇವಾಲಯಗಳ ಪುನರುತ್ಥಾನದ ಕೆಲಸವನ್ನು (conservation) ಕೇಂದ್ರ ಪುರಾತತ್ವ ಇಲಾಖೆಗೆ (A.S.I.) ಒಪ್ಪಿಸಬೇಕೆಂದು ಒತ್ತಾಯಿಸಿದೆ. ಅದರ ಪರಿಣಾಮವೇ ಇಂದು ನಾವು ನೋಡುವ ಈ ಮೂರು ಗುಡಿಗಳ ಸುಂದರ ಸ್ವಚ್ಛ ನೋಟ.

ಆಚೇಶ್ವರ ಗುಡಿಯ ಹೆಸರಿನ ಬದಲಾವಣೆ ಮತ್ತು ನಿಜಸ್ವರೂಪ : ಈ ಮೂರು ಗುಡಿಗಳಲ್ಲಿ ಆಚೇಶ್ವರ ಗುಡಿಯನ್ನು ಸುಮಾರು ೫೦-೬೦ ವರ್ಷಗಳ ಹಿಂದೆ ಯಾರೋ ಆಕ್ರಮಿಸಿಕೊಂಡು ಸುತ್ತಲೂ ಕಲ್ಲು ಮತ್ತು ಮಣ್ಣಿನಿಂದ ಕಟ್ಟಿದ

ಗೋಡೆಗಳನ್ನು ನಿರ್ಮಿಸಿ ಇದಕ್ಕೆ ಜಾತವೇದ ಮುನಿಗಳ ಗದ್ದುಗೆ ಎಂದು ಹೆಸರಿಟ್ಟರು. ೧೯೭೮ರಲ್ಲಿ ಮೊದಲ ಬಾರಿಗೆ ನೋಡಿದಾಗ 'ಜಗಜ್ಯೋತಿ ಬಸವೇಶ್ವರರ ಗುರು ಜಾತವೇದ ಮುನಿಗಳ ಗದ್ದುಗೆ' ಎಂಬ ಬೋರ್ಡನ್ನು ನೋಡಿದ್ದೆ ಹಾಗೂ ಅದರಂತೆ ನಂಬಿದ್ದೆ ಕೂಡ. ಈ ಬೋರ್ಡನ್ನು ನಾನು ೧೫-೬-೨೦೦೧ರಂದು ಕೂಡ ಗಮನಿಸಿದ್ದೆ.

ಆದರೆ, ಕೇಂದ್ರ ಪುರಾತತ್ವ ಇಲಾಖೆಯು ಪುನರುತ್ಥಾನದ ಕಾರ್ಯ ಕೈಗೊಂಡಾಗ ಜಾತವೇದ ಮುನಿಗಳ ಗದ್ದುಗೆಯ ನಿಜಸ್ವರೂಪ ಬಯಲಾಗಿ ಅದೊಂದು ಈಶ್ವರ ದೇವಾಲಯವೆಂಬುದು ಬೆಳಕಿಗೆ ಬಂತು. ನಾನು ೨-೮-೨೦೦೩ರಂದು ಈ ಕ್ಷೇತ್ರದ ಅಧ್ಯಯನಕ್ಕಾಗಿ ಹೋದಾಗ ಶ್ರೀ ಅಂದಾನಯ್ಯ ಮುಷ್ಟಿಗೇರಿ ಮಠರು ಸಿಕ್ಕಿದ್ದರು. ಅವರು ಈ ಕ್ಷೇತ್ರದ ಪರಿಸರಕ್ಕೆ ಸೇರಿದವರು. ಅವರ ಹೇಳಿಕೆಯ ಪ್ರಕಾರ ಸುಮಾರು ೩೫-೪೦ ವರ್ಷಗಳಿಂದ ಈಚೆಗೆ ಈ ಗುಡಿಗೆ ಜಾತವೇದ ಮುನಿಗಳ ಗದ್ದುಗೆ ಎಂಬ ಹೆಸರು ಬಂತು. ಅಂದರೆ ಸುಮಾರು ೧೯೬೦-೭೦ರ ದಶಕದಲ್ಲಿ ಈ ಕಟ್ಟಡಕ್ಕೆ ಈ ಹೆಸರು ಬಂತು. ಅದಕ್ಕೂ ಪೂರ್ವದಲ್ಲಿ ಇದನ್ನು ಈಶ್ವರ ಗುಡಿ ಎಂದು ಕರೆಯುತ್ತಿದ್ದರು ಮತ್ತು ಇಂದಿನ ಕಟ್ಟಡದ ಒಳಗೆ ಬಲಬದಿಯ ಕಟ್ಟೆಯ ಮೇಲೆ ಒಂದು ಈಶ್ವರ ಲಿಂಗವಿತ್ತು. ಅದನ್ನು ಜನರು ಪೂಜಿಸುತ್ತಿದ್ದರು ಎಂದು ಹೇಳಿದರು.

ಕೇಂದ್ರ ಪುರಾತತ್ವ ಇಲಾಖೆಯು ತುಂಬಾ ಎಚ್ಚರಿಕೆಯಿಂದ ಈ ಕಟ್ಟಡದ ಹೊರಗೋಡೆಗಳನ್ನು ಬಿಡಿಸಿದಾಗ ಒಳಗೆ ಇರುವ ಗುಡಿಯು ಬೆಳಕಿಗೆ ಬಂತು. ಇದೇ ಆಚೇಶ್ವರ ಇನ್ನು ಇಲ್ಲಿರುವ ಈಶ್ವರಲಿಂಗ ಎಲ್ಲಿ ಹೋಯಿತು ಎಂದು ವಿಚಾರಿಸಿದಾಗ ಶ್ರೀ ಮುಷ್ಟಿಗೇರಿ ಮಠ ಮತ್ತು ಸಂಗಮೇಶ್ವರ ದೇವಾಲಯದ ಅರ್ಚಕರು ಒಟ್ಟಾಗಿ ಈ ಲಿಂಗವನ್ನು ಸದ್ಯ ಐಕ್ಯಮಂಟಪದ ಮೇಲೆ ಸ್ಥಾಪಿಸಲಾಗಿದೆ ಎಂದು ಹೇಳಿದರು. ಈ ಆಚೇಶ್ವರ ಗುಡಿಯ ಪುನರುತ್ಥಾನದ ಕೆಲಸ ನಡೆದಾಗ ೨೦೦೧ರಲ್ಲಿ ನಾನು ಈ ಗುಡಿಯ ಕಂಬಗಳ ಮತ್ತು ಕಲ್ಲುಗಳ ಮಧ್ಯೆ ಒಂದು ಈಶ್ವರಲಿಂಗವನ್ನು ನೋಡಿದ್ದೆ. ಅದೇ ಲಿಂಗವೇ ಇಂದು ಸ್ಥಳಾಂತರಗೊಂಡು ಐಕ್ಯ ಮಂಟಪದ ಛತ್ರಿಯ ಕೆಳಗೆ ಸ್ಥಾಪಿಸಲ್ಪಟ್ಟಿದ್ದೆ.

ಕಟ್ಟುಕತೆ : ಈ ಎಲ್ಲಾ ಸ್ಥಿತ್ಯಂತರಗಳನ್ನು ಅಭ್ಯಾಸ ಮಾಡಿ ಮತ್ತು ಚಿತ್ರೀಕರಿಸಿರುವ ನನಗೆ ಜಾತವೇದ ಮುನಿಗಳ ಗದ್ದುಗೆ ಎಂಬುದು ಕಟ್ಟುಕತೆ. ಅದು ಮೂಲತಃ ಹನ್ನೆರಡನೆಯ ಶತಮಾನದ ಆಚೇಶ್ವರ ದೇವಾಲಯ ಎಂಬುದರಲ್ಲಿ ಅನುಮಾನವಿಲ್ಲ. ಈ ಕಟ್ಟುಕತೆಯ ಹಿಂದೆ ಲಿಂಗಾಯತರಲ್ಲಿರುವ ವಿದ್ವತ್ ಪುರೋಹಿತಶಾಹಿ ಮನಸ್ಸುಗಳು ಕೆಲಸ ಮಾಡಿವೆ. ಈ ಪುರೋಹಿತಶಾಹಿಗಳಲ್ಲಿ ಕೆಲವರಿಗೆ ಬಸವಣ್ಣನವರು ತಮ್ಮ ಶಾಖಾಮಠದ ಶಿಷ್ಯ ಎಂದು ಹೇಳಿಕೊಳ್ಳುವುದನ್ನು ಕೇಳಿದ್ದೇನೆ, ಹಾಗೂ ಅಂದೇ ಪ್ರತಿಭಟಿಸಿದ್ದೇನೆ.

ಅಣ್ಣನವರಿಗೆ ದೀಕ್ಷಾ ಗುರುವಿಲ್ಲ : ಲಿಂಗಾಯತ ಧರ್ಮದ ಸ್ಥಾಪಕರಾದ ಬಸವಣ್ಣನವರಿಗೆ ಯಾವ ದೀಕ್ಷಾಗುರುವು ಇರಲಿಲ್ಲ. ಇದಕ್ಕೆ ಅವರ ವಚನಗಳಲ್ಲಿಯೇ ಆಧಾರಗಳಿವೆ. ಈ ಬಗ್ಗೆ ಡಾ. ಎಂ.ಎಂ. ಕಲಬುರ್ಗಿ[೩] ಮತ್ತು ಡಾ. ಆರ್.ಸಿ. ಹಿರೇಮಠರ[೪] ಲೇಖನಗಳನ್ನು ಓದಬಹುದು. ಈ ಕುರಿತು ಇನ್ನೊಂದು ಲೇಖನಕ್ಕೆ ಸಾಕಾಗುವಷ್ಟು ವಚನ ಮತ್ತು ಕಾವ್ಯಾಧಾರಗಳಿವೆ. ಇಷ್ಟಲಿಂಗದ ಪರಿಕಲ್ಪನೆಯನ್ನು ನೀಡಿದವರೇ ಬಸವಣ್ಣನವರು ಎಂಬುದಕ್ಕೆ ಅವರ ಒಂದು ವಚನವನ್ನು ಉದ್ಧರಿಸಿ ಈ ಸಂಪ್ರಬಂಧವನ್ನು ಮುಗಿಸುತ್ತೇನೆ:

> **ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ,**
> **ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ,**
> **ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮಕುಟ,**
> **ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ**
> **ಕೂಡಲಸಂಗಮದೇವಯ್ಯಾ,**
> **ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ**
> **(ವ.ಸಂ. ೭೪೪)**

ಅನುಬಂಧ ೧
ಕ್ರಿ.ಶ. ೧೧೬೦

ಸಂಗಮೇಶ್ವರ ದೇವಾಲಯದ ಆವರಣದೊಳಗಿರುವ ಈ ಶಾಸನದ ಕಾಲ ಚಾಲುಕ್ಯ ವಿಕ್ರಮ ೮೪ನೆಯ ಪ್ರಮಾದಿ ಸಂವತ್ಸರದ ಕಾರ್ತಿಕ ಶುದ್ಧ ೫ ಭಾನುವಾರ ಇಂಗ್ಲೀಷ್ ತೇದಿಯ ಪ್ರಕಾರ ೧೮ ಅಕ್ಟೋಬರ್ ೧೧೬೦. ತಮಿಳುನಾಡಿನ ಹನ್ನೊಂದನೆಯ ಶತಮಾನದ ಕರೂರ್ ಶಾಸನವನ್ನು ಬಿಟ್ಟರೆ ಕನ್ನಡದ ಶಾಸನಗಳಲ್ಲಿ ಮೊಟ್ಟ ಮೊದಲಿಗೆ ಕೂಡಲ ಸಂಗಮದ ಉಲ್ಲೇಖ ದೊರೆಯುವುದು ಈ ಶಾಸನದಲ್ಲಿ ಮಾತ್ರ. ಕೂಡಲ ಸಂಗಮವು ಒಂದು ಅಗ್ರಹಾರವಾಗಿದ್ದು ಇಲ್ಲಿಯ ಮಹಾಜನರು ಸಂಗಮೇಶ್ವರ ಪರಮಭಕ್ತರಾಗಿದ್ದರೆಂದು ಇದರಿಂದ ತಿಳಿದುಬರುತ್ತದೆ. ಯಮನಿಯಮಾದಿ ಯೋಗ ಸಾಧನ, ಅನುಷ್ಠಾನ ಜಪತಪಾದಿಗಳಲ್ಲಿ ನಿರತರಾದ ಸಾಧು ಸತ್ಪುರುಷರ ವರ್ಣನೆಯು ಇದರಲ್ಲಿ ಬರುತ್ತದೆ. ಶ್ರೀ ಸಂಗಮೇಶ್ವರನ ದೇವಾಲಯದಂತೆಯೇ ಪ್ರಸಿದ್ಧವಾದ ಶ್ರೀ ಕಾಳೇಶ್ವರ ಮತ್ತು ಶ್ರೀ ಆಚೇಶ್ವರ ಎಂಬ ಇನ್ನೂ ಎರಡು ದೇವಾಲಯಗಳು ಇಲ್ಲಿ ಇದ್ದಂತೆ ತೋರುತ್ತವೆ. ಆಚೇಶ್ವರ ದೇವಾಲಯವು ಮಲಪ್ರಭಾ ನದಿಯ ತೀರದಲ್ಲಿತ್ತೆಂದು ತೋರುತ್ತದೆ. ಈ



ಕೂಡಲ ಸಂಗಮೇಶ್ವರ ದೇವಾಲಯ, ಸಿದ್ಧೇಶ್ವರ ಮತ್ತು
ಆಚೇಶ್ವರ ದೇವಾಲಯ (ಜಾತವೇದಮುನಿ ಗದ್ದುಗೆ?)



ಕಾಳೇಶ್ವರ ಗುಡಿ (ಸಿದ್ಧೇಶ್ವರ ಗುಡಿ)



ಪುನರುತ್ಥಾನಗೊಂಡಿರುವ ಆಚೇಶ್ವರಗುಡಿ ಜಾತವೇದಮುನಿ
ಗದ್ದುಗೆ ಎಂದು ತಪ್ಪಾಗಿ ಕರೆಯಲಾಗುತ್ತಿದೆ



ಒಂದು ಕಟ್ಟೆ – ಇದನ್ನೇ ಜಾತವೇದಮುನಿ ಗದ್ದುಗೆ ಕರೆಯಲಾಗುತ್ತಿತ್ತು
ಆಚೇಶ್ವರ ದೇವಾಲಯದ ಪ್ರದಕ್ಷಿಣಾ ಪಥದಲ್ಲಿದೆ



ಆಚೇಶ್ವರ ಗುಡಿಯ ಜೀರ್ಣೋದ್ಧಾರ ಕ್ರಿಯೆ ಮುಂಭಾಗದ ನೋಟ



ಆಚೇಶ್ವರ ಗುಡಿಯ ಕಲ್ಯಾಣ ಚಾಲುಕ್ಯ ಶೈಲಿಯ ದ್ವಾರಬಂಧ



ಐಕ್ಯಮಂಟಪದ ಛತ್ರಿಯ ಕೆಳಗೆ
(ಸ್ಥಳಾಂತರಗೊಂಡು ಸ್ಥಾಪಿಸಲ್ಪಟ್ಟ ಆಚೇಶ್ವರ ಲಿಂಗ)

ಕಾಳೇಶ್ವರ ಮತ್ತು ಆಚೇಶ್ವರ ದೇವರಿಗೆ ಚುಂಚಿನ ಆದಿಶೆಟ್ಟಿ ಮತ್ತಿತರ ವರ್ತಕರು ಹೂವಿನತೋಟ, ಅಂಗಡಿ ಮತ್ತು ಎಣ್ಣೆ ತೆಗೆಯುವ ಗಾಣವನ್ನು ದಾನವಾಗಿ ನೀಡಿದ ಉಲ್ಲೇಖವು ಈ ಶಾಸನದಲ್ಲಿ ಬರುತ್ತದೆ :

೧ ಸ್ವಸ್ತಿ ಶ್ರೀಮಚ್ಚಾಳುಕ್ಯವಿಕ್ರಮವರಿಷದ ೮೪ನೆಯ [ಪ್ರ]......
೨ ರದ ಕಾರ್ತಿಕ ಶುದ್ಧ ೫ ಆದಿತ್ಯವಾರದಂದು ಸ್ವಸ್ತಿ ಯಮ......
೩ ಯಧ್ಯಾನಧಾರಣ ಮೌನಾನುಷ್ಠಾನ ಜಪಸ[ಮಾಧಿ]......
೪ ಸಂಪನ್ನರುಂ ಶ್ರೀಸಂಗಮೇಶ್ವರದೇವಲಬ್ಧವರಪ್ರ.......
೫ ಮಚ್ಚಕ್ರವರ್ತಿಗಳಾದಿಬ್ರಹ್ಮಪುರಿಯಪ್ಪ ಸರ್ವ್ವನವಂ......
೬ ಗ್ರಹಾರಂ ಕೂಡಲ ಕಪ್ಪಡಿಸಂಗಮದ ಶ್ರೀಮನ್ಮೂ......
೭ ಹಾಜನಂಗಳ ಪರಮ ಕಾರುಣ್ಯ ಪ್ರಸಾದದಿಂದಂ ಸಮಸ್ತಗುಣ......
೮ ಚುಂಚಿನಾದಿಸೆಟ್ಟಿ ಶ್ರೀಕಾಳೇಶ್ವರ ದೇವರಿಗರುವಣಕ್ಕೆ.......
೯ ಕೆಯಿ ಲೊಕ್ಕಿಗೇಟಿಯಿಂ ಬಡಗಣ ಮತ್ತರು ಹನ್ನೆ........
೧೦ ಶ್ರೀಮದಾಚೇಶ್ವರದೇವರಿಗೆ ಹೂವಿನೂರ ದಾರಿಯ......
೧೧ ನೆಸಿಯ ಬಟ್ಟೆಯಿಂ ಬಡಗಣ ಗದ್ದೆಗಯ್ಯ ಸ್ಥಳ........
೧೨ ಯರುವಣಕ್ಕೆ ಬರಸಿ ಬಿಟ್ಟ ಮತ್ತರು ಹ........
೧೩ ಡು ೧೨ ಅ[ಇವ]ತ್ತೊಕ್ಕಲು ಮುಕ್ಯವಾಗಿ ಸಮಸ್ತತೆ [ಲ್ಲ]........
೧೪ ......ರದು ಆಚೇಸ್ವರಗೆ ಗಾಣದಲು......
೧೫ ಮತ್ತ ವಿಬ್ಬರು ದೇವರಿಗಂ ಸಮುದಿತವಾಗಿ ಮಾಡಿಸಿಕೊಟ್ಟು ಬಿಟ್ಟಮ[ತ್ತ]....
೧೬ ಹೂವಿನ ತೋಟ೧ ಅಂಗಡಿ ೧ ಗಾಣ ೧ ಯಿಂತಿನಿತುಂ ಶ್ರೀಮನ್ಮಾ[ಜ] –
೧೭ ನಂಗಳ ಧರ್ಮ್ಮಂ ಚಂದ್ರಾರ್ಕ್ಕತಾರಂಬರಂ ಪ್ರತಿಪಾಳಿಸುವರು ಅನುಪಮ –
೧೮ ವಿದ್ವಜ್ಜನವಿನುತರ್ಸ್ಸ[ಕ]ಲಶಾಸ್ತ್ರವಿದರೆನಿಪ ಮಹಾ ಜನಮುಂ ಕಾಳೇಸ್ವರ ನೀವನುದಿನ –
೧೯ ರಕ್ಷಿಸುವ ಪೆರ್ಮ್ಮೆ ತಾಂ ಜಗವಿದಿತ ಧರೆಯೊಳ್ ಪೂಜ್ಯರೆನಿಪ್ಪ ಸಂಗ –
೨೦ ಮದ ಭೂದೇವಾಗ್ರಗಣ್ಯರ್ಗ್ಗೆ ವಿಸ್ತರದಿಂ ಭಾಸುರ ಸಾಂದ್ರಚಂದ್ರರುಚಿ–
೨೧ ಯಂ ತಾಳ್ದೆಟ್ಟಿ ಸತ್ಕೀರ್ತ್ತಿಯಿಂ.......ದೆಯ್ಯಂ ಶಿವಶಂಭು ರುದ್ರನೆನಿಸಿರ್ದ್ದಾಚೇಸ್ವರಂ ಕೂರ್ತು
೨೨ ತಾಂ ಪರಮೋತ್ಸಾಹದಿನೀಗೆ ಮಂಗಳಮಹಾಶ್ರೀಯಂ ಜಯಶ್ರೀಯು–
೨೩ ಮ ಮಲಹಾರೀತೀರ್ತ್ಥದೊಳ್ ತಾ ನೆಲಸಿರ್ದ್ದಾ ಚ್ಚೇಸ್ವರಂ ಮಹೋತ್ಸವದಿಂದೆಂ [॥*]
೨೪ ಸೊಲಗೆಣ್ಣೆಯ ಬಿಟ್ಟರು ಚಂದ್ರಾದಿತ್ಯ
೨೫ ....ರುಳ ನಡಸುವವರು [॥*]

ಅನುಬಂಧ ೨

ಕ್ರಿ.ಶ. ೧೨೧೩

ಈ ಶಾಸನವು ಸಂಗಮೇಶ್ವರ ದೇವಾಲಯದ ಒಳಗೆ ಒಂದು ಕಂಬದ ಮೇಲಿದೆ. ಇದು ದೇವಗಿರಿಯ ಸೇವುಣ ರಾಜನಾದ ಸಿಂಹಣ ದೇವನ ಆಳ್ವಿಕೆಯ ಕಾಲದ್ದು. ಶ್ರೀಮುಖ ಸಂವತ್ಸರದ ಶ್ರಾವಣ ಬಹುಳ ೨ ಭಾನುವಾರ. ಇಂಗ್ಲೀಷ್ ತೇದಿಯ ಪ್ರಕಾರ ೨ ಆಗಸ್ಟ ೧೨೧೩. ಇದರ ಹಿಂದಿನ ಶಾಸನದಲ್ಲಿ (ಕ್ರಿ.ಶ. ೧೧೬೦) ಉಲ್ಲೇಖಿತವಾಗಿರುವ ಆಚೇಶ್ವರ ದೇವರ ಗುಡಿಯು ಮಲಪ್ರಭಾ ನದಿಯ ತೀರದಲ್ಲಿತ್ತೆಂದು ಇದರಿಂದ ತಿಳಿದುಬರುತ್ತದೆ. ಚುಂಚಿನ ಆದಿಶೆಟ್ಟಿಯ ವಂಶಸ್ಥರು ಸಂಗಮೇಶ್ವರ ದೇವರಿಗೆ ನೀಡಿದ ದತ್ತಿಯ ಉಲ್ಲೇಖವು ಇದರಲ್ಲಿದೆ.

೧ ....ಯಾ–
೨ ದವ ನಾರಾಯಣ
೩ ಭುಜಬಳಚಕ್ರವರ್ತಿ ಸಿಂಹ –
೪ ಣದೇವವರ್ಷದ ೧೪ನೆಯ ಶ್ರೀಮು –
೫ ಖ ಸಂವತ್ಸರದ ಶ್ರಾವಣ ಬ ೨ ಆದಿವಾ –
೬ [ರದನ್ದು] ಶ್ರೀಮದಾಚೇಸ್ವರದೇವರ ಹೂ –
೭ ದೋಟಕ್ಕೆ [ಧೂ]ಪಕಂ ದೇವರಾಸಿ ಜೀ –
೮ ......ಮಲಹಾರಿ ತೀರದೊಳ್ ತಾ ನೆಲಸಿದ್ದಾ –
೯ ಚೇಶ್ವರಂ ಮಹೋತ್ಸವದಿಂದಂ ತೊಲ –
೧೦ ಗದೆ ಭಕ್ತರ್ಗ್ಗೆಲ್ಲಂ ಸಲೆ ಕುಡು[ತೆ]
೧೧ ಸೆದಿರ್ಕ್ಕೆ ದೀರ್ಘಮಾಯುಂ ಶ್ರೀ –
೧೨ [ಯಮಂ] ಪರಮಗುರುವೆನಿಪ
೧೩ ......ಪುತ್ರಂ [ಚುಂಚಿ] ನಾದಿಸೆಟ್ಟಿ
೧೪ ......[ದ]ಯೆಯಿಂ ಪರಮೈಶ [ರ್ಯ] –
೧೫ ಮನಿತು (೦) ಪರಿರಕ್ಷಿಸುತಿರ್ಪ್ಪನಕ್ಕೆ
೧೬ ಸಂಗಮಹೇಶಂ
೧೭ ದೇವರಿಗೆ ಸಾಸಿರ್ಬ್ಬರು ಬಿಟ್ಟೆಲೆಯಾ –
೧೮ ಯಂ ಹೇಜೆಂಗೆ ೫೦ ಪೊಜೆಗೆ ೨[೫]

೧೯ ದೇವರಿಗಟುವತ್ತೊಕ್ಕಲಾರಂಭದೊ –
೨೦ ಕ್ಕಲಲು ವರಿಷಂಪ್ರತಿ ಪಾಗದ
೨೧ ಲೆಕ್ಕದಿಂ ಕೊಟ್ಟು ಬಿಟ್ಟರು ಶ್ಲೋಕ
೨೨ ಸ್ವ[ದ*]ತ್ತಂ ಪರದತ್ತಂ ವಾ ಯೋ ಹರೇ –
೨೩ ತಿ ವಸುಂಧರಾ[ಮ್] ಷಷ್ಟಿರ್ವ್ವರುಷ –
೨೪ ಸಹಸ್ರಾಣಿ ವಿಷ್ಟಾಯಾಂ ಜಾ –
೨೫ ಯತೇ ಕ್ರಿಮಿಃ
೨೬ ಶ್ರೀ ಚ[೦]ದ್ರಾರ್ಕ್ಕತಾರಂ –
೨೭ ಬರಂ ಆರಯ್ದು
೨೮ ಬೆಸಕೆಯ್ದು ನ –
೨೯ ಡಸುವರು

ಕ್ರಿ.ಶ. ೧೪೪೫

ಈ ಶಾಸನವು ಬಿಜಾಪುರ ಜಿಲ್ಲೆ ಮುದ್ದೇಬಿಹಾಳ್ ತಾಲ್ಲೂಕ್ ತಂಗಡಗಿಯಲ್ಲಿರುವ ಹನುಮಂತ ದೇವರ ಗುಡಿಯ ಆವರಣದಲ್ಲಿದೆ. ಇದರ ಕಾಲ ಕ್ರೋಧನ ಸಂವತ್ಸರದ ಶ್ರಾವಣ ಬಹುಳ ಅಮಾವಾಸ್ಯೆ ಸೋಮವಾರ. ಇಂಗ್ಲೀಷ್ ತೇದಿಯ ಪ್ರಕಾರ ೨ ಅಗಸ್ಟ್ ೧೪೪೫.

ಬರಿಗೆಯ ಮಲ್ಲಿನಾಯಕನು ದೇವಿನಾಯಕರ ಮಠದ ಕಪಿಲಸಿದ್ಧ ದೇವರಿಗೆ ಜಂಗಮರ ದಾಸೋಹಕ್ಕೆಂದು ಭೂದಾನ ಮಾಡಿದ ಉಲ್ಲೇಖ ಇದರಲ್ಲಿದೆ. ಕೂಡಲ ಸಂಗಮದ ಮತ್ತೊಂದು ಹೆಸರಾದ ಕಪ್ಪಡಿ ಸಂಗಮದ ಉಲ್ಲೇಖವು ಶಾಸನದ ಆರಂಭದಲ್ಲಿಯೇ ಬರುತ್ತದೆ. ಶಿವಶರಣರ ವಚನ ಸಾಹಿತ್ಯದಲ್ಲಿ ಬರುವ ಜಂಗಮ ಮತ್ತು ದಾಸೋಹ ಪದಗಳನ್ನು ಈ ಶಾಸನದಲ್ಲಿ ಬಳಸಿರುವುದು ಗಮನಾರ್ಹ :

೧ ಶ್ರೀಮತು ಕಪ –
೨ ಡಿಯ ಸಂಗಮ –
೩ ಗೆ ಜಂಗಮದೇವರ
೪ ದಾಸೋಹ ಕಾರ –
೫ ಣವಾಗಿ ದೇವಿನಾ –
೬ ಯಕರ ಮಟದ ಕಪಿ –
೭ ಲಸಿದ್ಧ ದೇವರಿಗೆ ಬ –
೮ ರಿಗೆಯ ಮಲ್ಲಿನಾಯ –
೯ ಕರು ನೇಮಿದ್ದ ಭೂ –
೧೦ ಮಿ ೧೩೦ [ಅದ]ಕ್ಕೆ
೧೧ ....
೧೨ ಕ್ರೋಧ –
೧೩ ನ ಸಂವತ್ಸ –
೧೪ ರ ಸ್ರಾವ –
೧೫ ಣ ಬ –
೧೬ ವು ಳ
೧೭ ......ಅ –
೧೮ ಮ ವಾ –
೧೯ ಸೆ ಸೋಮ –
೨೦ ವಾರದ –
೨೧ ಲ್ಲಿ ಸ್ಥಾ
೨೨ ಪ ವಾ –
೨೩ ....
೨೪ ಲಿಂಗ –
೨೫ ಮು –
೨೬ ದ್ರೆ ಕಲ್ಲು

[ವಿ.ಸೂ. : ಈ ಲೇಖನವನ್ನು ಕರ್ನಾಟಕ ಇತಿಹಾಸ ಅಕಾಡೆಮಿಯ ಒಪ್ಪಿಗೆಯ ಮೇರೆ ಬೆಂಗಳೂರಿನ ಆಕಾಶವಾಣಿ ಕೇಂದ್ರದಿಂದ ೧೮–೩–೧೧ರಂದು ಬಿತ್ತರಿಸಲಾಯಿತು.]

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಹೆಚ್. ಚಂದ್ರಶೇಖರ (೨೦೦೩), 'ಕೂಡಲ ಸಂಗಮ ದೇವಾಲಯ ನಡೆದು ಬಂದ ದಾರಿ', **ಸಂಕ್ರಮಣ**, ಸಂ. ೩೪೯, ಮೇ–ಜೂನ್ ೨೦೦೩, ಪುಟ ೬೫–೭೦, ಸಂಕ್ರಮಣ ಪ್ರಕಾಶನ, ಬೆಂಗಳೂರು.

೨. ಶಿವಮೂರ್ತಿ ಶಿವಾಚಾರ್ಯರು (೧೯೮೮), **ಕೂಡಲಸಂಗಮದ ಅಳಿವು–ಉಳಿವು**, ಪುಟ l x VI - l xx iii, ತರಳಬಾಳು ಪ್ರಕಾಶನ ಸಿರಿಗೆರೆ. (೨೦೦೩).

೩. ಕಲಬುರ್ಗಿ. ಎಂ.ಎಂ., (೨೦೦೫), **ಮಾರ್ಗ**, ಪುಟ ೧೪೯–೧೫೧, ಸ್ವಪ್ನ ಬುಕ್ ಹೌಸ್, ಬೆಂಗಳೂರು.

೪. ಹಿರೇಮಠ. ಆರ್.ಸಿ., (೧೯೬೭), Sri Basaveshwara, A Biography in *Sri Basaveshvara Commemoration volume* pp. 13-17, Government of Mysore, Bangalore.

ಬಿ. ಅರುಣಕುಮಾರಿ*

ನಿಜಗಲ್ಲು ಮತ್ತು ನಿಜಗಲ್ಲು ದುರ್ಗದ ದೇವಾಲಯಗಳು

ದೇವಾಲಯಗಳು ಸಮಾಜದಲ್ಲಿ ವಹಿಸುವ ಪಾತ್ರ ಮಹತ್ವಪೂರ್ಣವಾದುದು. ಪ್ರಾಚೀನ ಮತ್ತು ಮಧ್ಯಕಾಲದಲ್ಲಿ ಇವು ಕೇವಲ ಧಾರ್ಮಿಕ ಕೇಂದ್ರಗಳಾಗಿರದೇ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕೇಂದ್ರಗಳೂ ಆಗಿದ್ದವು. ಇಂತಹ ದೇವಾಲಯಗಳು ಜನರು ಹೆಚ್ಚು ಸಂಪರ್ಕದಲ್ಲಿರಬಹುದಾದ ಸಾರ್ವಜನಿಕ ಸ್ಥಳಗಳಲ್ಲಿ ಇರುತ್ತಿದ್ದುದ್ದರಿಂದ ಜನರು ಹೆಚ್ಚು ದೇವಾಲಯ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಇವುಗಳು ರಾಜರು, ಅಧಿಕಾರಿಗಳು ಮತ್ತು ಸಾರ್ವಜನಿಕರು ಕೊಡುವ ದಾನ ದತ್ತಿಗಳಿಂದ ಪೋಷಣೆಗೊಳ್ಳುತ್ತಿದ್ದವು. ಇಂತಹ ದೇವಾಲಯಗಳು ಎಲ್ಲಾ ಕಡೆಯಲ್ಲಿಯೂ ಇವೆ. ಅಂತಹ ದೇವಾಲಯಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ನಿಜಗಲ್ಲಿನಲ್ಲಿರುವ ದೇವಾಲಯಗಳೂ ಸಹ ಪ್ರಾದೇಶಿಕವಾಗಿ ಪ್ರಮುಖ ಸ್ಥಾನ ಪಡೆದಿದ್ದವೆ.



ಹೊಸ ನಿಜಗಲ್‌ನ ಪರಮೇಶ್ವರ ದೇವಾಲಯದಲ್ಲಿರುವ ಬಾಣಲಿಂಗ

ನಿಜಗಲ್ಲು, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿದ್ದು ನೆಲಮಂಗಲದಿಂದ ೨೫ ಕಿ.ಮೀ. ದೂರದಲ್ಲಿದೆ. ಇದನ್ನು ಶೂರಗಿರಿ[೧], ರಸಸಿದ್ಧರ ಬೆಟ್ಟ, ಉದ್ದಂಡಯ್ಯನ ಬೆಟ್ಟವೆಂತಲೂ ಕರೆಯುತ್ತಾರೆ. ಸ್ಥಳನಾಮದ ದೃಷ್ಟಿಯಿಂದ ಇದನ್ನು ಒಂದು ಪ್ರಾಗೈತಿಹಾಸಿಕ ನೆಲೆ ಎಂದು ಹೇಳಬಹುದಾದರೂ ಇದರ ಉಲ್ಲೇಖವಿರುವ ಹಳೆಯ ದಾಖಲೆಯೆಂದರೆ ಕ್ರಿ.ಶ. ೧೨೮೮ರ ಹೊಯ್ಸಳರ ಕಾಲದ ಶಾಸನ[೨], ಇದರಲ್ಲಿ



ಹೊಸ ನಿಜಗಲ್‌ನ ಕೋಟೆ


'ನಿಜಗಲಿಪುರ' ಎಂಬ ಉಲ್ಲೇಖವಿದೆ. ಇದೊಂದು ಧಾರ್ಮಿಕ, ರಾಜಕೀಯ ಮತ್ತು ಸೈನಿಕ ನೆಲೆಯಾಗಿತ್ತು. ಇಲ್ಲಿ ಹೊಯ್ಸಳರು ವಿಜಯನಗರದ ಅರಸರು, ಮೈಸೂರು ಒಡೆಯರು ಸಂಪರ್ಕ ಹೊಂದಿದ್ದರೆಂದು ಅಲ್ಲಿನ ಶಾಸನಗಳಿಂದ ತಿಳಿಯುತ್ತದೆ. ಇಲ್ಲಿ ಲಕ್ಷ್ಮೀನರಸಿಂಹ, ವೀರಭದ್ರ, ಮಲ್ಲಿಕಾರ್ಜುನ ಹಾಗೂ ಗಣಪತಿ ದೇವಾಲಯಗಳಿವೆ. ಮೊದಲಿನಿಂದಲೂ ಧಾರ್ಮಿಕ ಪ್ರಾಮುಖ್ಯ ಪಡೆದಿದ್ದ ನಿಜಗಲ್ಲು ಮೈಸೂರು ಒಡೆಯರ್‌ರ ಕಾಲದಲ್ಲಿ ರಾಜಕೀಯ ಪ್ರಾಮುಖ್ಯ ಪಡೆಯಿತು.

ನಿಜಗಲ್ಲಿನ ದೇವಾಲಯಗಳ ಬಗ್ಗೆ ಇದುವರೆಗೂ ಮೈಸೂರು ಗ್ಯಾಜೆಟಿಯರ್, ಕನ್ನಡ ವಿಷಯ ವಿಶ್ವಕೋಶ, ದಕ್ಷಿಣ ಕರ್ನಾಟಕದ ಅರಸು ಮನೆತನಗಳು ಮತ್ತು ಸಾಂಸ್ಕೃತಿಕ ಶ್ರೀ ವೀರಭದ್ರಸ್ವಾಮಿ ಗ್ರಂಥಗಳಲ್ಲಿ ಹಾಗೂ ಎ.ಕ.ಸಂ. IX ಹಾಗೂ ಸಂ. XII ರಲ್ಲಿ ಪ್ರಕಟಿಸವಾಗಿರುವ ಶಾಸನಗಳನ್ನು ಹೊರತು ಪಡಿಸಿದರೆ ಇದರ ಬಗ್ಗೆ ಹೆಚ್ಚಿನ ಮಾಹಿತಿ ದೊರೆಯುವುದಿಲ್ಲ. ಈ ಪ್ರಬಂಧದಲ್ಲಿ ನಿಜಗಲ್ಲು ಗ್ರಾಮ, ಬೆಟ್ಟ ಮತ್ತು ಅಲ್ಲಿನ ದೇವಾಲಯಗಳಿಗೆ ಸೀಮಿತಗೊಳಿಸಿಕೊಂಡಿರುತ್ತೇನೆ.

'ನಿಜಗಲ್ಲು' ಪ್ರಾಚೀನ ಕಾಲದಿಂದಲೂ ಒಂದು ಪ್ರಮುಖ ಧಾರ್ಮಿಕ ಕೇಂದ್ರವಾಗಿ ಪ್ರಾಮುಖ್ಯತೆ ಪಡೆದಿತ್ತು. ಆದರೆ ಇದು ಗಡಿಠಾಣೆಯಾಗಿ ರಾಜಕೀಯವಾಗಿ ಮಹತ್ವ ಪಡೆದದ್ದು ಚಿಕ್ಕದೇವರಾಜ ಒಡೆಯರ್‌ರವರ ಕಾಲದಲ್ಲಿ.

*

ಇವರ ಕಾಲದಲ್ಲಿ ಇದೊಂದು ತಾಲ್ಲೂಕು ಮತ್ತು ಗಡಿಠಾಣೆಯಾಗಿದ್ದು ರಾಜಕೀಯವಾಗಿ ಪ್ರಾಮುಖ್ಯತೆ ಪಡೆದಿತ್ತು. ಇದು ಐತಿಹಾಸಿಕವಾಗಿ ಬಹಳ ಪ್ರಮುಖವಾಗಿ ದಾಖಲಾಗುವುದು ಕ್ರಿ.ಶ. ೧೭೭೦ರ ಸುಮಾರಿನ ಮೈಸೂರು–ಮರಾಠ ಯುದ್ಧಗಳ ಸಂದರ್ಭದಲ್ಲಿ. ಆಗ ನಿಜಗಲ್ಲು ಮರಾಠರ ವಶವಾಯಿತು. ಇಂತಹ ಸಮಯದಲ್ಲಿ ಚಿಕ್ಕದೇವರಾಜ ಒಡೆಯರ ಸೇವಕನಿಂದ ಬಿಳುಗಿಲೆ ದಾಸರಾಜಯ್ಯ ನಿಜಗಲ್ಲಿನಲ್ಲಿ ರಕ್ಷಣೆಗಾಗಿ ಕ್ರಿ.ಶ. ೧೬೯೮ರಲ್ಲಿ ಕಲ್ಲುಕೋಟೆ ಕಟ್ಟಿಸುವುದಕ್ಕೆ ಪ್ರಾರಂಭ ಮಾಡಿದ ಉಲ್ಲೇಖ ಶಾಸನದಲ್ಲಿದೆ.[೩] ಈ ಶಾಸನದಲ್ಲಿರುವಂತೆ ಬಹುಧಾನ್ಯ, ಪ್ರಮಾಥಿ, ವಿಕ್ರಮ ಈ ೩ ಸಂವತ್ಸರಗಳಲ್ಲಿ ಕ್ರಮವಾಗಿ ಕೋಟೆಯ ಪೂರ್ವ ದಿಕ್ಕಿನ ಬಾಗಿಲು, ದಕ್ಷಿಣ ದಿಕ್ಕಿನ ಬಾಗಿಲು



ಹೊಸ ನಿಜಗಲ್‌ನ ಹಳೆ ಲಕ್ಷ್ಮೀ ನರಸಿಂಹ ದೇವಾಲಯ (ಬೆಟ್ಟದ ಮೇಲೆ)



ಹೊಸ ನಿಜಗಲ್‌ನ ವೀರಭದ್ರ ದೇವಾಲಯ ಕಂಬದಲ್ಲಿನ ವೀರಭದ್ರ ಶಿಲ್ಪ

ಹಾಗೂ ದಕ್ಷಿಣ ಬಾಗಿಲ ಬಳಿಯ ವಿಘ್ನೇಶ್ವರನ ಗುಡಿಗಳ ನಿರ್ಮಾಣವಾಯಿತೆಂದು ತಿಳಿಯುತ್ತದೆ. ಕೋಟೆಗೆ ಪೂರ್ವ ಮತ್ತು ದಕ್ಷಿಣ ಭಾಗಗಳಲ್ಲಿ ಮಾತ್ರ ಬಾಗಿಲುಗಳನ್ನು ಇಡಲಾಗಿದೆ. ಇಲ್ಲಿ ರಾಜವಂಶದವರ ನೇರ ಆಳ್ವಿಕೆ ಇಲ್ಲದಿದ್ದರೂ ಅವರ (ರಾಜರ) ಸಾಮಂತ ಅಧಿಕಾರಿಗಳು, ಸ್ಥಳೀಯ ರಾಜಕೀಯ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದರು. ತಂಬಯ್ಯ ದಣ್ಣಾಯಕ, ಸದಾಶಿವರಾಯ, ದಳವಾಯಿಗಳಾದ ಕೆಂಪರಾಜಯ್ಯ ಹಾಗೂ ದಾಸ ರಾಜಯ್ಯರು ಇಲ್ಲಿನ ಆಡಳಿತ ನಡೆಸಿ ದೇವಾಲಯಗಳಿಗೆ ದಾನ ನೀಡಿರುವುದನ್ನು ಶಾಸನಗಳು ತಿಳಿಸುತ್ತವೆ.

ಇಲ್ಲಿರುವ ದೇವಾಲಯಗಳಲ್ಲಿ ಪ್ರಾಚೀನವೆನ್ನಬಹುದಾದುದೆ, ಪರಮೇಶ್ವರ ಅಥವಾ ಮಲ್ಲಿಕಾರ್ಜುನ ದೇವಾಲಯ. ಇದು ನೈಸರ್ಗಿಕ ಗುಹಾಂತರ ದೇವಾಲಯ ವಾಗಿದ್ದು ಪೂರ್ವಾಭಿಮುಖವಾಗಿದೆ. ಗರ್ಭಗೃಹದಲ್ಲಿ ಬಾಣಲಿಂಗವಿದೆ. ಇದರ ಆರಾಧನೆ ೧೦ನೇ ಶತಮಾನಕ್ಕಿಂತ ಹಿಂದಿನಿಂದಲೂ ಇರಬಹುದು. ಈ ದೇವಾಲಯಕ್ಕೆ ಕ್ರಿ.ಶ. ೧೨೮೮ರಲ್ಲಿ ಹೊಯ್ಸಳ ಮಂತ್ರಿ ರಾಜ ನಿಚಯನ ಆದೇಶದಂತೆ ಮಹಾಪ್ರಧಾನಿ ಕಂಬಯ್ಯ ದಣ್ಣಾಯಕನು ದಾನ ನೀಡಿದ್ದಕ್ಕೆ ಶಾಸನದ ಉಲ್ಲೇಖವಿದೆ.[೪] ಇದರಂತೆ ನಿಜಗಲಿಯ ಪುರವು (ಈಗಿನ ಹಳೆ ನಿಜಗಲ್ಲು) ನರಸೆಯಪುರಕ್ಕೆ ಸಲ್ಲುವ ಊರಾಗಿದ್ದು ಕ್ರಿ.ಶ. ೧೨೮೮ರ ವೇಳೆಗೆ ಅಲ್ಲೊಂದು ಶಿವಾಲಯವಿತ್ತು. ಆದರೆ ಅದು ನರಸೆಯಪುರಕ್ಕೆ ಸಲ್ಲುತ್ತಿತ್ತು ಎಂದು ತಿಳಿಯಬಹುದು. ಆ ನರಸೆಯಪುರವು ನಿಜಗಲ್ಲಿಗೆ ಸಮೀಪದ ಡಾಬಸ್‌ಪೇಟೆ–ಊರ್ಡಿಗೆರೆ ರಸ್ತೆಯಲ್ಲಿರುವ ನರಸೀಪುರ.

ಪರಮೇಶ್ವರ ದೇವಾಲಯದ ಪಕ್ಕದಲ್ಲಿರುವ ಉದ್ಭಾನ ವೀರಭದ್ರ ಇನ್ನೊಂದು ಇಲ್ಲಿನ ಪ್ರಮುಖ ದೇವಾಲಯ. ವಾಸ್ತುಶಿಲ್ಪ ಮತ್ತು ಶೈಲಿಯ ದೃಷ್ಟಿಯಿಂದ ಇದು ೧೩ನೇ ಶತಮಾನಕ್ಕೆ ಸೇರಿದ್ದೆಂದು ಹೇಳಬಹುದು. ಇದು ನೈಸರ್ಗಿಕ ಶಿಲಾನೆಲೆ. ಈ ವೀರಭದ್ರ ಶಿಲ್ಪ ೧೨ ಅಡಿ (೩ ಮೀಟರ್) ಎತ್ತರ ಇದೆ. ಬಲಕ್ಕೆ ಭದ್ರಕಾಳಿ ಮತ್ತು ಎಡಕ್ಕೆ ದಕ್ಷನ ಶಿಲ್ಪಗಳಿವೆ. ಇದರಲ್ಲಿ ಹಾವುಗಳು ವಿಶಿಷ್ಟವಾಗಿ ಎದ್ದು ಕಾಣುವುದರಿಂದ ಹಾವುಗೆ ವೀರಭದ್ರನೆಂದೂ ಕರೆಯುವುದುಂಟು.[೫] ಈ ದೇವಾಲಯವನ್ನು ಕ್ರಿ.ಶ. ೧೫೭೨ರಲ್ಲಿ ನವೀಕರಿಸಲಾಗಿದೆ.

ಕೋಟೆಯ ಒಳಗಿರುವ ಆಂಜನೇಯ ಮತ್ತು ದಕ್ಷಿಣ ದಿಕ್ಕಿನ ಬಾಗಿಲ ಬಳಿ ಇರುವ ಗಣೇಶನ ಗುಡಿಗಳು ಕೋಟೆಯ ರಕ್ಷಣಾತ್ಮಕ ಗುಡಿಗಳಾಗಿವೆ. ಗಣೇಶನ ಗುಡಿ ಪೂರ್ಣ ಬಿದ್ದುಹೋಗಿದ್ದು ಗಣೇಶನ ವಿಗ್ರಹ ಮಾತ್ರ ಬಯಲಲ್ಲಿದೆ.

ಇಲ್ಲಿನ ಮತ್ತೊಂದು ಪ್ರಮುಖ ದೇವಾಲಯವೆಂದರೆ ಲಕ್ಷ್ಮೀನರಸಿಂಹ ದೇವಾಲಯ. ಇದನ್ನು ಅದರ ಶೈಲಿಯ ದೃಷ್ಟಿಯಿಂದ ಮೈಸೂರು ಒಡೆಯರ ಕಾಲದ್ದೆಂದು ಹೇಳಬಹುದು. ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಇದೊಂದು ಪ್ರಮುಖ ಗಡಿಠಾಣೆಯಾಗಿ ಪ್ರಾಮುಖ್ಯತೆ ಪಡೆದಿತ್ತು. ಆದ್ದರಿಂದ ರಕ್ಷಣೆಗಾಗಿ ಕ್ರಿ.ಶ. ೧೬೯೮ರಲ್ಲಿ ಇಲ್ಲಿ ಕಲ್ಲುಕೋಟೆ ಕಟ್ಟುವುದಕ್ಕೆ ಪ್ರಾರಂಭಿಸಿದ್ದನ್ನು ಶಾಸನವೊಂದು ತಿಳಿಸುತ್ತದೆ.[೬] ಈ ದೇವಾಲಯಕ್ಕೆ ದೇವರಾಯನದುರ್ಗದ ಎರಡು ತಾಮ್ರಶಾಸನಗಳು ದಾನ ನೀಡಿರುವುದನ್ನು ತಿಳಿಸುತ್ತವೆ. ಅದರಂತೆ ಒಂದು ತಾಮ್ರಶಾಸನದಲ್ಲಿ ಕ್ರಿ.ಶ. ೧೭೮೯ರಲ್ಲಿ ಶೂರಗಿರಿ ದುರ್ಗದಲ್ಲಿ ತಿಂಮರಾಜ ವಡೆಯರ ಪುತ್ರರಾದ ಕೆಂಪರಾಜ ಒಡೆಯರ ಪುತ್ರರಾದ ದಾಸರಾಜೈಯನವರು ಕರ್ಪಣಾದಿ ಪ್ರತಿಷ್ಠೆಯನ್ನು ಮಾಡಿಸಿ ಲಕ್ಷ್ಮಿನರಸಿಂಹ ಸ್ವಾಮಿಯವರ ಸಕಲ ಸೇವೆ ನಿಮಿತ್ತ ಶ್ರೀ ಭಂಡಾರಕ್ಕೆ ಪ್ರುದಿವಟ್ಟಾಗಿ ಸಮರ್ಪಣೆ ಮಾಡಿದ ದ್ರವ್ಯದಲ್ಲಿ ದೇವಸ್ಥಾನಕ್ಕೆ ಕ್ರಯಬದ್ಧವಾಗಿ ಸಂಪಾದಿಸಿದ ವೃತ್ತಿಗಳ ವಿವರಣೆ ನೀಡಿದೆ. ಮತ್ತೊಂದು ತಾಮ್ರಶಾಸನವು (ಕ್ರಿ.ಶ. ೧೭೨೦ರ) ಅದೇ

ಶೂರಗಿರಿ ದುರ್ಗದ ಲಕ್ಷ್ಮೀನರಸಿಂಹ ಸ್ವಾಮಿಯ ದೀಪರಾಧನೆ ಮುಂತಾದ ಸೇವೆಗೆ ಬಿಳುಗಿಲೆ ದಾಸರಾಜಯ್ಯನ ವಿಜ್ಞಾಪನೆಯಂತೆ ಕೃಷ್ಣರಾಜ ಒಡೆಯರು ಶೂರಗಿರಿ ಸೀಮೆಗೆ ಸೇರಿದ ಸೋಮಸಾಗರದ ಅಗ್ರಹಾರದಲ್ಲಿ ಸಂಪಾದಿಸಿದ ವೃತ್ತಿಗಳು ಹಾಗೂ ಭೂಮಿಯ ಹುಟ್ಟುವಳಿಯಲ್ಲಿ ದೇವರಿಗೆ ಮಾಡಬೇಕಾದ ವಿವಿಧ ಬಗೆಯ ಪೂಜೆ, ಸೇವೆಯನ್ನು ನೆರವೇರಿಸಬೇಕೆಂಬುದನ್ನು ಉಲ್ಲೇಖಿಸಿದೆ. ನಿಜಗಲ್ಲು ಹೋಬಳಿ ನರಸಿಂಹಪುರದ ಶಿಲಾಶಾಸನವು[೫] ಲಕ್ಷ್ಮೀನರಸಿಂಹ ದೇವಾಲಯಕ್ಕೆ ಬಿಳಿಗಿಲೆ ದಾಸರಾಜೈಯನ ವಿಜ್ಞಾಪನೆಯಂತೆ ಕೃಷ್ಣರಾಜ ಒಡೆಯರು ಶೂರಗಿರಿ ಸ್ಥಳದ ಹೆಗ್ಗುಂದ ಹೋಬಳಿಗೆ ಸೇರಿದ ಗೊರಟಗೆರೆಗೆ ಪ್ರತಿನಾಮಾಂಕಿತ ಹೊಂದಿರುವ ನರಸಿಂಹಪುರ ಹಾಗೂ ಅದರ ಉಪಗ್ರಾಮವನ್ನು ಸಹ ಸಕಲ ವಿದ್ವಾಂಸರು ಹಾಗೂ ಸಾಮಾಜಿಕರ ಮುಂದೆ ಸಹಿರಣ್ಯೋದಕ ಧಾರಾಪೂರ್ವಕವಾಗಿ ದಾನ ನೀಡಿರುವುದನ್ನು ತಿಳಿಸುತ್ತದೆ.

ಈ ಲಕ್ಷ್ಮೀನರಸಿಂಹ ದೇವಾಲಯ ಒಡೆಯರ ಕಾಲದಲ್ಲಿ ಬೆಟ್ಟದ ಮೇಲೆ ಇದ್ದದ್ದು ಈಗ ಹಾಳಾಗಿದೆ. ಆದರೆ ಮೂಲ ದೇವರನ್ನು ಊರಿನ ಹತ್ತಿರ ಬೇರೆ ದೇವಾಲಯವನ್ನು ನಿರ್ಮಿಸಿ ಅಲ್ಲಿ ಪ್ರತಿಷ್ಠಾಪಿಸಲಾಗಿದೆ. ಹೀಗೆ ಸ್ಥಳಾಂತರಗೊಂಡಿರುವ ದೇವಾಲಯ, ಶೈಲಿಯಲ್ಲಿ ಬೆಟ್ಟದ ಮೇಲಿನ ದೇವಾಲಯವನ್ನು ಹೋಲುತ್ತದೆ. ಹೀಗೆ ಸ್ಥಳಾಂತರವಾಗುವುದಕ್ಕೆ ಅಥವಾ ಬೆಟ್ಟದ ಮೇಲಿನ ದೇವಾಲಯ ಹಾಳಾಗಲು ಕೆಲವು ಕಾರಣಗಳನ್ನು ಊಹಿಸಬಹುದು.

೧. ಕ್ರಿ.ಶ. ೧೭೭೦ರ ಸುಮಾರಿನಲ್ಲಿ ಮೈಸೂರು ಮರಾಠ ಯುದ್ಧಗಳ ಸಂದರ್ಭದಲ್ಲಿ ನಿಜಗಲ್ಲು ರಾಜಕೀಯ ಪ್ರಾಮುಖ್ಯತೆ ಪಡೆಯಿತು. ಆ ಸಮಯದಲ್ಲಿ ಮರಾಠರು ಮತ್ತು ಹೈದರ್ ನಡುವೆ ಆದ ಹೋರಾಟದಿಂದಾಗಿ ಕೋಟೆಯೊಳಗಿನ ದೇವಾಲಯ ಹಾಳಾಗಿರಬಹುದು.

೨. ಮೈಸೂರು ಮರಾಠ ಯುದ್ಧಗಳ ಸಂದರ್ಭದಲ್ಲಿ ವೀರಭದ್ರ ಮತ್ತು ಪರಮೇಶ್ವರ ದೇವಾಲಯಗಳು ಬೆಟ್ಟದಲ್ಲೇ ಇದ್ದರೂ ಅವುಗಳು ಹಾಳಾಗದಿರಲು ಕಾರಣ ಅವುಗಳು ಕೋಟೆಯಿಂದ ಹೊರಗಿದ್ದುವೆಂದು ಹೇಳಬಹುದು.

೩. ಲಕ್ಷ್ಮೀನರಸಿಂಹ ದೇವಾಲಯ ಬೆಟ್ಟದ ಮೇಲ್ಭಾಗ ದಲ್ಲಿತ್ತು. ಆದ್ದರಿಂದ ಅಲ್ಲಿ ಜನಸಂಪರ್ಕ ಕಡಿಮೆಯಾಗಿ ದೇವಾಲಯಕ್ಕೆ ರಕ್ಷಣೆ ಸಿಗದೆ ನಂತರದ ದಿನಗಳಲ್ಲಿ ಜನಸಂಪರ್ಕಕ್ಕೆ ಅನುಕೂಲವಾಗುವಂತೆ ಊರಿಗೆ ಸ್ಥಳಾಂತರಗೊಂಡಿತೆಂದು ಹೇಳಬಹುದು. ಆದರೆ ವೀರಭದ್ರ ಮತ್ತು ಪರಮೇಶ್ವರ ದೇವಾಲಯಗಳು ಸ್ಥಳಾಂತರವಾಗದೆ ಅಲ್ಲಿಯೇ ಉಳಿದಿರುವುದಕ್ಕೆ ಕಾರಣ ಅವುಗಳು ಊರಿಗೆ ಸಮೀಪದಲ್ಲಿವೆ ಮತ್ತು ಜನರ ಅಥವಾ ಭಕ್ತಾದಿಗಳ ನಿರಂತರ ಸಂಪರ್ಕ ಹೊಂದಿವೆ.

೪. ನಿಧಿಯ ಆಸೆಯಿಂದ ಕೆಲವು ಜನರು ಬೆಟ್ಟದ ಮೇಲಿನ ಲಕ್ಷ್ಮೀನರಸಿಂಹ ದೇವಾಲಯವನ್ನು ಹಾಳು ಮಾಡಿರ ಬಹುದೆಂದು ಊಹಿಸಬಹುದು.

ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಸುಮಾರು ೧೭–೧೮ನೇ ಶತಮಾನದಲ್ಲಿ ನಿಜಗಲ್ಲಿನಲ್ಲಿದ್ದ ಧಾರ್ಮಿಕ ಪರಿಸ್ಥಿತಿ ಮತ್ತು ದೇವಾಲಯಗಳ ಮೇಲೆ ಜನರು ಮತ್ತು ಆಡಳಿತಗಾರರ ಪ್ರಭಾವ ಯಾವ ರೀತಿ ಬದಲಾವಣೆಗೆ ಒಳಗಾಗುತ್ತ ದೆಂಬುದನ್ನು ತಿಳಿಯಬಹುದು. ಒಡೆಯರ ಕಾಲದಲ್ಲಿ ನಿಜಗಲ್ಲು ಮತ್ತು ದೇವರಾಯನದುರ್ಗಗಳ ಆಸುಪಾಸಿನಲ್ಲಿ ಶ್ರೀ ವೈಷ್ಣವ ಧರ್ಮಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿದ್ದರಿಂದ ಈ ಸ್ಥಳಗಳಲ್ಲಿ ಲಕ್ಷ್ಮೀನರಸಿಂಹನ ಆರಾಧನೆ ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯಿತೆಂಬುದನ್ನು ಅವರ ಶಾಸನಗಳು ತಿಳಿಸುತ್ತವೆ. ಅವರ ನಂತರದ ದಿನಗಳಲ್ಲಿ ನಿಜಗಲ್ಲಿನಲ್ಲಿ ಲಕ್ಷ್ಮೀನರಸಿಂಹ ದೇವಾಲಯದ ಪ್ರಾಮುಖ್ಯತೆ ಕಡಿಮೆಯಾಗಿ ಕ್ರಿ.ಶ. ೧೯೦೦ರ ನಂತರ ಊರಿನ ಹತ್ತಿರ ದೇವಾಲಯವನ್ನು ನಿರ್ಮಿಸಿಕೊಂಡಿರಬೇಕು. ದುರ್ಗದಲ್ಲಿದ್ದ ವಿಗ್ರಹವನ್ನೇ ತಂದು ಇಲ್ಲಿ ಪ್ರತಿಷ್ಠಾಪಿಸಿದ್ದಾರೆ. ದೇವಾಲಯದ ಶೈಲಿ ಕೂಡ ಹಳೆಯ ದೇವಾಲಯದ ಮಾದರಿಯಲ್ಲಿಯೇ ಇದೆ.

ನಿಜಗಲ್ಲು ಬೆಟ್ಟದ ಮೇಲೆ ಇಂದಿಗೂ ಉಳಿದುಕೊಂಡು ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಕೊಂಡಿರುವ ಸಿದ್ಧೇಶ್ವರ ದೇವಾಲಯ ಮತ್ತು ಮುಸಲ್ಮಾನರ ದರ್ಗಾ ಕೂಡ ಅಸ್ತಿತ್ವದಲ್ಲಿರಲು ಕಾರಣ ಅಲ್ಲಿ ಬಲಿಪೂಜೆಯಾಗುತ್ತದೆ. ಹಾಗೂ ಭಕ್ತರು ನಿರಂತರ ಸಂಪರ್ಕ ಹೊಂದಿರುವುದೆಂದು ಹೇಳಬಹುದು.

ಯಾವುದೇ ಘಟನೆಗಳು ನಡೆಯಲು ಒಂದು ಪ್ರಮುಖ ಕಾರಣವಿರುತ್ತದೆ. ಹಾಗೆ ಇಲ್ಲಿ ದೇವಾಲಯ ಸ್ಥಳಾಂತರ ಗೊಳ್ಳಲು ಅಲ್ಲಿನ ಧಾರ್ಮಿಕ ಪರಿಸ್ಥಿತಿ ಮತ್ತು ಸ್ಥಳಾಂತರದ ಅಗತ್ಯತೆ ಯಾವ ಮಟ್ಟದಲ್ಲಿತ್ತೆಂದು ತಿಳಿಯುತ್ತದೆ.

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. ಎ.ಕ.ಸಂ. IX ನೆಲ ೬೫.
೨. ಎ.ಕ.ಸಂ. IX ನೆಲ ೬೩.
೩. ಎ.ಕ.ಸಂ. IX ನೆಲ ೬೫.
೪. ಎ.ಕ.ಸಂ. IX ನೆಲ ೬೩.
೫. ಎಂ.ಜಿ. ನಾಗರಾಜ್., **ಸಾಂಸ್ಕೃತಿಕ ಶ್ರೀ ವೀರಭದ್ರಸ್ವಾಮಿ.** ಪು. ೧೦೪–೧೦೫.
೬ ಎ.ಕ.ಸಂ. IX ನೆಲ ೬೫.
೭. ಎ.ಕ.ಸಂ. XII ನೆಲ ೪೬.
೮. ಎ.ಕ.ಸಂ. XII ನೆಲ ೪೮.
೯. ಎ.ಕ.ಸಂ. IX ನೆಲ ೭೦.

ಡಾ. ಎಸ್. ಹನುಮಂತ ಜೋಯಿಸ್*

ಲೋಕದೊಳಲುವಿನ 'ಪ್ರಾಚೀನ ಶಿಡಿಲೇಶ್ವರ ದೇವಾಲಯ'

ಪ್ರಸ್ತಾವಿಕೆ : ಇತಿಹಾಸ ಸಂಗ್ರಹಣೆಯ ಆದ್ಯ ಪ್ರವರ್ತಕರಾದ ಬ್ರಿಟೀಷ್ ಅಧಿಕಾರಿ ಕರ್ನಲ್ ಮೆಕೆಂಜಿ, ಬಿ. ಲೂಇಸ್ ರೈಸ್, ಜೇಮ್ಸ್ ಫರ್ಗುಸನ್, ಜಾನ್ ಫೇತ್‌ತಫಲ್ ಫ್ಲೀಟ್, ಕರ್ನಾಟಕದ ಆರ್. ನರಸಿಂಹಾಚಾರ್ ಮುಂತಾದವರು ನಮ್ಮ ಕರ್ನಾಟಕದ ವಿವಿಧ ಭಾಗಗಳಿಗೆ ಖುದ್ದಾಗಿ ಭೇಟಿ ಕೊಟ್ಟಿದ್ದರು. ಇವರು ಸಂಪಾದಿಸಿದ ಅಗಣಿತ ಸ್ಥಳಗಳ ಇತಿಹಾಸಗಳ ವಿಚಾರಗಳು ದಾಖಲಾಗಿರುತ್ತವೆ. ಅವರೆಲ್ಲರ ಗಮನಕ್ಕೆ ಬಾರದೇ ಇರುವ ಅಗಣಿತ ಇತಿಹಾಸ ಪ್ರಸಿದ್ಧವಾದ ಪ್ರದೇಶಗಳು ಇನ್ನೂ ಉಳಿದುಕೊಂಡಿವೆ.

ಅಂಥವುಗಳಲ್ಲಿ ಸದ್ಯ ವರ್ಣಿತವಾಗಿರುವ ಅಜ್ಞಾತ ಲೋಕದೊಳಲುವಿನ 'ಶಿಡಿಲೇಶ್ವರ ದೇವಾಲಯವು ಗಣನೀಯ ಇತಿಹಾಸವನ್ನು ಹೊಂದಿದೆ.

ಕ್ರಿ.ಶ. ೧೦ನೆಯ ಶತಮಾನದಲ್ಲಿ ಈ ಪ್ರಾಂತ್ಯವನ್ನು ರಾಷ್ಟ್ರಕೂಟರು ಆಳುತ್ತಿದ್ದರು. ಅವರ ಆಳ್ವಿಕೆಯಲ್ಲಿ ಶಿಡಲಂಕರಾಯ (ಶಿಡಿಲಯ್ಯ)ನೆಂಬಾತನು ಲೋಕದೊಳಲುವಿನಲ್ಲಿ ಆ ಗ್ರಾಮದ ಪೂರ್ವದಿಕ್ಕಿನಲ್ಲಿ ಮಣ್ಣಿನದಿಣ್ಣೆಯೊಂದರ ಮೇಲೆ ಕದಂಬ ನಾಗರ ಶಿಖರದ ದೇಗುಲವನ್ನು ನಿರ್ಮಾಣ ಮಾಡಿಸಿದನು. ಅದರಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿದನು. ಆ ಶಿವಲಿಂಗವನ್ನು ಗ್ರಾಮಸ್ಥರು ಆತನ ಹೆಸರಿನಿಂದಲೇ 'ಶಿಲೇಶ್ವರ'ನೆಂದು ಕರೆಯಲಾರಂಭಿಸಿದರು. ಆ ದೇವರ ಪೂಜೆಗಾಗಿ 'ದಿವ್ಯಲಂಗಿ' ಎಂಬ ವೀರಶೈವ ಧರ್ಮದವನನ್ನು ನೇಮಕ ಮಾಡಿದನಂತೆ. ಆತನ ಜೀವನ ನಿರ್ವಹಣೆಗಾಗಿ ಸಾಗುವಳಿ ಮಾಡದ ಭೂಮಿಯನ್ನು ಮತ್ತು ಫಲಭರಿತವಾದ ತೋಟವನ್ನು ದಾನವಾಗಿ ಕೊಟ್ಟನಂತೆ (ಈಗ ಆ ತೋಟವಿದೆ). ಅಲ್ಲಿ ಆತನಿಗೆ ದಾನವಾಗಿ ಕೊಟ್ಟ ಭೂಮಿಯು ಕಲ್ಲು ಮುಳ್ಳುಗಳಿಂದ ತುಂಬಿದ್ದು, ಅದನ್ನು ಈಗ ಆ ಗ್ರಾಮದವರು 'ಶಿಡಲೆಹೊಲ'ವೆಂದು ತೋರಿಸುತ್ತಾರೆ.

ಕ್ರಿ.ಶ. ೧೦೫೧ರಲ್ಲಿ ಈ ಪ್ರಾಂತ್ಯವು ಕಲ್ಯಾಣ ಚಾಲುಕ್ಯರ ಆಳ್ವಿಕೆಗೆ ಸೇರಿದ್ದು, ಅವರಲ್ಲಿ ಚಾಲುಕ್ಯರ ತ್ರೈಲೋಕಮಲ್ಲನು ರಾಜ್ಯವನ್ನು ಆಳುತ್ತಿದ್ದನು. ಆಗ ನಾರಸಿಂಗದೇವನೆಂಬುವವನು, ಈ ಕದಂಬ ರಾಜ್ಯವನ್ನು ಆಳುತ್ತಿದ್ದನು. ಈತನು ಕಲ್ಯಾಣ ಚಾಲುಕ್ಯರ ಸಾಮಂತ ರಾಜನಾಗಿದ್ದನು. ಚಾಲುಕ್ಯರು ವೈಷ್ಣವ ಸಂಪ್ರದಾಯದವರಾಗಿದ್ದರೂ ಶೈವ ಸಂಪ್ರದಾಯದವರನ್ನು ಗೌರವಿಸುತ್ತಿದ್ದರು. ಶೈವ ಸಂಪ್ರದಾಯಸ್ಥನಾದ ನಾರಸಿಂಗ ದೇವನು ಶಿಡಲೇಶ್ವರನ ಪ್ರತಿನಿತ್ಯದ ಅಭಿಷೇಕಕ್ಕಾಗಿ ಒಂದು ವಿಶಾಲವಾದ ಕೆರೆಯನ್ನು ದೇವಾಲಯದ ಸಮೀಪದಲ್ಲಿ ನಿರ್ಮಾಣ ಮಾಡಿಸಿದನು. ಅದನ್ನು 'ಶಿಡಲಕೆರೆ' ಎಂದು ಹೆಸರಿಸಿದನು. ಈಗಲೂ ಆ ಕೆರೆಯು ಸರ್ವಋತುವಿನಲ್ಲಿಯೂ ನೀರಿನಿಂದ ತುಂಬಿರುತ್ತದೆ.

ದೇವಾಲಯದ ವಿಚಾರ

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ಈ 'ಲೋಕದೊಳಲು' ಗ್ರಾಮವು ಹೊಳಲ್ಕೆರೆಯಿಂದ ಹೊಸದುರ್ಗಕ್ಕೆ ಹೋಗುವ ಮಾರ್ಗದಲ್ಲಿದೆ. ಹೊಳಲ್ಕೆರೆಯಿಂದ ೧೦ ಕಿ.ಮೀ.



ಶಿಡಿಲೇಶ್ವರ ದೇವಾಲಯದ ಪಾರ್ಶ್ವನೋಟ

ಹೊಸದುರ್ಗ ಮಾರ್ಗದಲ್ಲಿ ವಾಹನದಲ್ಲಿ ಪ್ರಯಾಣಿಸಿದರೆ ಈ ಗ್ರಾಮವನ್ನು ತಲುಪುತ್ತೇವೆ. ಈ ದೇವಾಲಯವು ಈ ಗ್ರಾಮದಿಂದ ಪೂರ್ವಕ್ಕೆ ಒಂದು ಕಿ.ಮೀ. ಬಂಡಿದಾರಿಯಲ್ಲಿ ನಡೆದರೆ, ಅಲ್ಲಿ ಸ್ವಲ್ಪ ಎತ್ತರವಾದ ಮಣ್ಣಿನ ದಿಬ್ಬದ ಮೇಲೆ ದೂರದಿಂದಲೇ ಕಂಡುಬರುವ ಎರಡು ಅಂಕಣದ ದಕ್ಷಿಣಾಭಿಮುಖ ಪ್ರವೇಶದ್ವಾರ ಹಾಗೂ ಕದಂಬ ನಗರ ಗೋಪುರವುಳ್ಳ ಶಿಲೆಯಿಂದ ನಿರ್ಮಾಣ ಮಾಡಿದ ಶಿವಾಲಯವು ಸಿಗುತ್ತದೆ. ಒಮ್ಮೆ ಒಬ್ಬರು ಮಾತ್ರ ಪ್ರವೇಶ ಮಾಡುವಷ್ಟು ದೊಡ್ಡದಾದ ಪ್ರವೇಶ ದ್ವಾರದ ಮೂಲಕ


* ೬೭, 'ಬಿ' ಬ್ಲಾಕ್, ಗೋಣಿ ಬಸಪ್ಪ ಬಿಲ್ಡಿಂಗ್ಸ್, ಗೋಪಾಲಗೌಡ ಬಡಾವಣೆ, ಶಿವಮೊಗ್ಗ.

ಗುಡಿಯನ್ನು ಪ್ರವೇಶ ಮಾಡಿದರೆ, ಆರು ಅಡಿ ಚದುರದ ಎಂಟು ಅಡಿ ಎತ್ತರದ ನವರಂಗವೂ ಅದರ ಸುತ್ತಲೂ ಇರುವ ಸಭಾಮಂಟಪವನ್ನು ನೋಡ ಬಹುದು. ನವರಂಗವು ಆಯತಾಕಾರದವಾಗಿದ್ದು, ಎಂಟು ಅಡಿ ಎತ್ತರದ ನಾಲ್ಕು



ವಿಸ್ತಾರವಾದ ಶಿಡಲ ಕೆರೆ

ಕಲ್ಲಿನ ಕಂಬಗಳಿಂದ ಕೂಡಿದ್ದು ಅವುಗಳ ನಡುವೆ ಮೇಲ್ಛಾವಣಿಯಲ್ಲಿರುವ ಭುವನೇಶ್ವರಿಯು ಆಗಿನವರ ಕಲಾ ಸೌಂದರ್ಯವನ್ನು ಎತ್ತಿ ತೋರಿಸುತ್ತಿದೆ. ಸುಕನಾಸಿಯ ಪ್ರವೇಶದ್ವಾರದ ಎರಡು ಬದಿಗಳಲ್ಲಿ ಕೆಲವು ಪುರಾತನ ವಿಗ್ರಹಗಳನ್ನು ಜೋಡಿಸಿಟ್ಟಿರುತ್ತಾರೆ. ಸುಕನಾಸಿಯಲ್ಲಿ ಸಾಲಂಕೃತ ನಂದಿಯ ವಿಗ್ರಹವು ಗರ್ಭಗುಡಿಯಲ್ಲಿರುವ ಲಿಂಗಕ್ಕೆ ಎದುರಾಗಿದೆ. ಗರ್ಭಗುಡಿಯು ಚಿಕ್ಕದಾಗಿದ್ದು ಏಕಮುಖ ದ್ವಾರವನ್ನು ಹೊಂದಿದೆ. ಅದರಲ್ಲಿ ಮೂರು



ಶಿಡಿಲೇಶ್ವರ ದೇವಾಲಯದ ಪ್ರಾಚೀನ ಗೋಪುರ



ವೀರಗಲ್ಲುಗಳು

ಅಡಿ ಉದ್ದದ ಪಾಣೀಪೀಠದ ಮೇಲೆ ಪೂಜನೀಯ ಶ್ರೀ ಶಿಡಿಲೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಿದ್ದಾರೆ. ಪ್ರತಿದಿನವೂ ಪೂಜೆಯ ವ್ಯವಸ್ಥೆಯು ಇರುತ್ತದೆ. ಈ ಪ್ರಾಂತ್ಯದಲ್ಲಿ ವೈಷ್ಣವ ಸಂಪ್ರದಾಯದ ಭಕ್ತರು ಅಗಣಿತ ಸಂಖ್ಯೆಯಲ್ಲಿದ್ದರೂ, ಹರಿಭಕ್ತಾಗ್ರೇಸರನಾದ ಪರಶಿವನನ್ನು ಹಬ್ಬ ಹರಿದಿನಗಳಲ್ಲಿ, ಸರ್ವಧರ್ಮದವರೂ ಸೇರಿ ಸಾಮೂಹಿಕ ಭಜನೆಯನ್ನು ಮಾಡುತ್ತಾ ಪೂಜಿಸುತ್ತಾರೆ. ಗರ್ಭಗುಡಿಯಲ್ಲಿ ಕತ್ತಲಾಗದಂತೆ ಪ್ರತಿದಿನ ಉದಯ ಸೂರ್ಯನ ಹೊಂಗಿರಣವು ಗರ್ಭಗುಡಿಯಲ್ಲಿರುವ ಶಿವಲಿಂಗದ ಮೇಲೆ ಬೀಳುವಂತೆ ಗರ್ಭಗುಡಿಗೆ ಎದುರಾಗಿರುವ ಸಭಾಮಂಡಪದ ಗೋಡೆಯಲ್ಲಿ ಒಂದು ಚದರಡಿಯ ಬೆಳಕಿನ ಕಿಂಡಿಯನ್ನು ನಿರ್ಮಾಣ ಮಾಡಿರುತ್ತಾರೆ. ಪ್ರತಿವರ್ಷ ಮಹಾಶಿವರಾತ್ರಿಯ ಜಾಗರಣೆಯನ್ನು ಈ ದೇವಾಲಯದಲ್ಲಿ ಗ್ರಾಮದಲ್ಲಿರುವ ಸರ್ವಧರ್ಮದವರೂ ಸೇರಿ ಬಹು ವಿಜೃಂಭಣೆಯಿಂದ ಆಚರಿಸುತ್ತಾರೆ. ಅಭಿಷೇಕ ಪ್ರಿಯನಾದ ಪರಶಿವನ ಅಭಿಷೇಕ ಮಾಡಿದ ಕೊಡಗಟ್ಟಲೆಯ ನೀರು ವ್ಯರ್ಥವಾಗದೆ, ಗರ್ಭಗುಡಿಯಿಂದ ದೇವಾಲಯದ ಹೊರಗಡೆ ನೀರು ಹರಿದುಹೋಗದ ವ್ಯವಸ್ಥೆಯು ಇರದೇ, ಅದೆಲ್ಲ ನೀರು ಹರಿದು ಗರ್ಭಗುಡಿಯ ತಳಭಾಗದಿಂದ ಮಧ್ಯದ ನವರಂಗದಲ್ಲಿ ನೆಲದ ಕೆಳಭಾಗದಲ್ಲಿಯೇ ಶೇಖರಣೆಯಾಗಿ ಭೂಮಿಯಲ್ಲಿ ಇಂಗಿ ಹೋಗುವ ವ್ಯವಸ್ಥೆಯನ್ನು ಈ ದೇಗುಲವನ್ನು ನಿರ್ಮಾಣ ಮಾಡಿದವರು ಮಾಡಿರುತ್ತಾರೆ.

ಇತರೆ ವಿಚಾರ

ಈ ದೇಗುಲದ ಹೊರಗಡೆ ದಕ್ಷಿಣ ದಿಕ್ಕಿನಲ್ಲಿ ಸುಮಾರು ನಾಲ್ಕು ಅಡಿ ಎತ್ತರದ, ಎರಡು ಅಡಿ ಅಗಲದ ವೀರಗಲ್ಲುಗಳಿವೆ. ಅವುಗಳ ಮೇಲೆ ಯುದ್ಧದ ಉಬ್ಬುಚಿತ್ರಗಳನ್ನು ಕೆತ್ತಲಾಗಿದೆ. ಅವುಗಳ ಕೆಳಗೆ ಪ್ರಾಚ್ಯ ಭಾಷೆಯಲ್ಲಿ ಬರೆದಿರುತ್ತಾರೆ (ಆದರೆ ಇವು ಓದಲು ಬರುವುದಿಲ್ಲ). ಪ್ರಕೃತಿಯ ವಿಕೋಪದಿಂದ ಮಸುಕಾಗಿವೆ. ಈ ವೀರಗಲ್ಲುಗಳು ಈ ದೇವಾಲಯಕ್ಕೆ ಸಂಬಂಧಪಟ್ಟವುಗಳಲ್ಲ. ಈ ಲೋಕದೊಳಲುವಿನ ಪೂರ್ವದಲ್ಲಿ ಅನೇಕ ಪಾಳೆಯಗಾರರು ಇದ್ದುದ್ದಾಗಿಯೂ, ಆಗ ಅನೇಕ ಯುದ್ಧಗಳು ನಡೆದಿದ್ದ ವಿಚಾರವು ಈ ವೀರಗಲ್ಲುಗಳಿಂದ ತಿಳಿದುಬರುತ್ತದೆ. ಈ ಗ್ರಾಮದ ಸಮೀಪದಲ್ಲಿ ಅನಾಥವಾಗಿ ಬಿದ್ದಿದ್ದ ಈ ವೀರಗಲ್ಲುಗಳನ್ನು ಗ್ರಾಮದವರು ಈ ದೇವಾಲಯ ಮುಂದೆ ತಂದಿಟ್ಟಿರುವಂತೆ ತೋರುತ್ತದೆ.

ಉಪಸಂಹಾರ

ಈ ದೇಗುಲವು ಅಷ್ಟು ಕಲಾತ್ಮಕವಲ್ಲದಿದ್ದರೂ ಭವ್ಯವಾದ ಇತಿಹಾಸವನ್ನು ಹೊಂದಿರುತ್ತದೆ. ಇವುಗಳ ರಕ್ಷಣೆಯು ನಮ್ಮ ಕರ್ತವ್ಯವಲ್ಲವೆ.

(ಈ ಲೇಖನವನ್ನು ಸಿದ್ಧಪಡಿಸಲು ಐತಿಹಾಸಿಕ ದಾಖಲೆಗಳನ್ನು ಹೇಳಿದ ಲೋಕದೊಳಲು ಗ್ರಾಮದ ಹಿರಿಯ ಗ್ರಾಮಸ್ಥರು ಹಾಗೂ ಈ ಗ್ರಾಮದ ಸಂಶೋಧಕ ಶ್ರೀಯುತ ಎಲ್.ಆರ್. ವೀರಭದ್ರಪ್ಪನವರಿಗೂ ಧನ್ಯವಾದಗಳು.)

ಆದಪ್ಪ ಪಾಸೋಡಿ*

ವಾಗಟದ ವರದರಾಜಸ್ವಾಮಿ ದೇವಸ್ಥಾನದ ವಾಸ್ತುಶಿಲ್ಪ ಮತ್ತು ಶಾಸನಗಳು

ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕಿನಲ್ಲಿ ವಾಗಟ ಗ್ರಾಮವಿದೆ. ಹೊಸಕೋಟೆಯಿಂದ ಆಗ್ನೇಯ ದಿಕ್ಕಿಗೆ ೧೦ ಕಿ.ಮೀ. ದೂರದಲ್ಲಿರುವ ವಾಗಟಕ್ಕೆ ಬೆಂಗಳೂರಿನಿಂದ ವೈಟ್‌ಫಿಲ್ಡ್–ಮಾಕನಹಳ್ಳಿ ಮಾರ್ಗವಾಗಿ ಅಥವಾ ಹೊಸಕೋಟೆಯಿಂದಲೂ ಹೋಗಬಹುದಾಗಿದೆ.

ವಾಗಟ ಗ್ರಾಮವು 'ಇವಟ್ಟಂ' 'ಬ್ರಹ್ಮದೇಯ ಇವಟ್ಟಂ' 'ಬ್ರಹ್ಮದೇಯ ವೋವಟ್ಟಂ' 'ವರದರಾಜ ಚತುರ್ವೇದಿ ಮಂಗಲ' ಎಂದು ತಮಿಳು ಶಾಸನಗಳಲ್ಲಿ, 'ಉಗಟ್ಟ', 'ವಾಗಟದ ಭಗೀರಥಪುರ' 'ವೊಗಟ್ಟ' ಎಂತಲೂ ಕನ್ನಡ ಶಾಸನಗಳಲ್ಲಿ ಉಲ್ಲೇಖವಾಗಿದೆ. ನಂತರದ ಅವಧಿಯ ಸಾಹಿತ್ಯದ ಕೃತಿಗಳಲ್ಲಿ 'ಯೋಗವತಪುರಿ' ಅಥವಾ 'ಯೋಗಪುರಿ' ಎಂದು ಕರೆಯಲ್ಪಟ್ಟಿದೆ.[೧] ವರದರಾಜಸ್ವಾಮಿ ದೇವಸ್ಥಾನಕ್ಕೆ ಹೊಂದಿಕೊಂಡಂತೆ ಅಗ್ರಹಾರವಿದ್ದು, ಅಲ್ಲಿ ಋಕ್ಕು, ಯಜುಸ್ಸು, ಸಾಮ ಮತ್ತು ಅಥರ್ವಣ ಎಂಬ ನಾಲ್ಕು ವೇದಗಳಲ್ಲಿ ಪರಿಣತಿ ಪಡೆದ ಮಹಾಜನರು ಇದ್ದಿರುವುದರಿಂದ 'ವರದರಾಜ ಚತುರ್ವೇದಿ ಮಂಗಲಂ' ಎನಿಸಿದೆ. ವಾಸ್ತುಶಾಸ್ತ್ರದಲ್ಲಿ 'ಮಂಗಲ' ಎಂದರೆ ಕೋಟೆ ಎಂಬರ್ಥ ಬರುತ್ತದೆ. ಕೆಲವು ಊರುಗಳ ಹೆಸರಿನ ಕೊನೆಯಲ್ಲಿ ಸೇರುವ ಪದವೂ ಆಗಿದೆ.[೨] ಉದಾ: ನೆಲಮಂಗಲ, ಭಿನ್ನಮಂಗಲ, ಕನ್ನಮಂಗಲ, ಸಾದರಮಂಗಲ ಇತ್ಯಾದಿ. ವಾಗಟದ ಶ್ರೀ ವರದರಾಜಸ್ವಾಮಿ ದೇವಾಲಯವು ಪ್ರಸಿದ್ಧವಾಗಿದ್ದು ದ್ವಾಪರ ಯುಗದ ಶ್ರೀ ಜನಮೇಜಯ ರಾಯನಿಂದ ಆರಂಭಿಸಿದ ನಂತರ ಶ್ರೀ ಕುಲಶೇಖರಾಳ್ವಾರ್ ರವರಿಂದ ಶಾಸ್ತ್ರೋಕ್ತವಾಗಿ ಪುನಃ ಪ್ರತಿಷ್ಠಾಪಿಸಲ್ಪಟ್ಟು ಮಧ್ಯೆ ನಾಸ್ತಿಕ ಆಘಾತಕ್ಕೆ ಸಿಲುಕಿ, ಆಗಲೂ ಮೂಲಬಿಂಬಕ್ಕೆ ಆಘಾತವಿಲ್ಲದೆ ರಕ್ಷಿಸಲ್ಪಟ್ಟಿದೆ ಎಂಬುದು ಇಲ್ಲಿಯ ಸ್ಥಳಪುರಾಣದ ಐತಿಹ್ಯವಾಗಿದೆ.

ವಾಸ್ತುಶಿಲ್ಪ : ವಾಗಟದ ವರದರಾಜಸ್ವಾಮಿ ದೇವಸ್ಥಾನವು ವಾಸ್ತುಶಿಲ್ಪದ ದೃಷ್ಟಿಯಿಂದ 'ಹೊಯ್ಸಳ ದ್ರಾವಿಡ ಶೈಲಿ'ಯನ್ನು ಅನುಸರಿಸಿದೆ. ಸಾಮಾನ್ಯವಾಗಿ ಹೊಯ್ಸಳ ದೇವಾಲಯ ವೆಂದಾಗ ನಮ್ಮ ದೃಷ್ಟಿಯಲ್ಲಿರುವುದು ಬಳಪದ ಕಲ್ಲಿನ ಮಾಧ್ಯಮ, ನಕ್ಷತ್ರಾಕಾರದ ತಲವಿನ್ಯಾಸ, ಶಿಲಾಬಾಲಿಕೆಯರು, ಅತ್ಯಂತ ಸೂಕ್ಷ್ಮ ಕೆತ್ತನೆ ಮತ್ತು ಅಲಂಕೃತ ಹೊರಭಿತ್ತಿಗಳು[೩]. ಇದಕ್ಕೆ ಹೊರತಾದ ಹೊಯ್ಸಳ ದೇವಾಲಯಗಳು ಇರುತ್ತವೆ ಎಂಬುದಕ್ಕೆ ವಾಗಟದ ವರದರಾಜಸ್ವಾಮಿ ದೇವಸ್ಥಾನವು ಉದಾಹರಣೆಯಾಗುತ್ತದೆ. ಈ ಭಾಗದಲ್ಲಿ ಬಳಪದ ಕಲ್ಲು ಸಿಗುವುದಿಲ್ಲವಾದ್ದರಿಂದ ಕಗ್ಗಲ್ಲನ್ನೇ ಬಳಸಲಾಗಿದೆ. ಈ ಕಗ್ಗಲ್ಲು ಮಾಧ್ಯಮದಲ್ಲಿ ಸೂಕ್ಷ್ಮ ಕೆತ್ತನೆ, ಹೊರಭಿತ್ತಿಯ ಅಧಿಕ ಅಲಂಕರಣ, ಮದನಿಕೆಯರ ಶಿಲ್ಪಗಳು, ನಕ್ಷತ್ರಾಕಾರದ ವಿನ್ಯಾಸ – ಇದೆಲ್ಲವೂ ಕಷ್ಟದ ಕೆಲಸವಾಗುತ್ತದೆ. ಆದ್ದರಿಂದ ಅಲಂಕರಣದ ಕೊರತೆ ಮತ್ತು ಸರಳತೆ ಈ ದೇವಾಲಯದ ವೈಶಿಷ್ಟ್ಯ. ಚೋಳರಂತೆ ಸರಳ ವಾಸ್ತುಪ್ರಕಾರಗಳನ್ನು ಬಳಸಿದ್ದು ಭಿತ್ತಿಗಳಲ್ಲಿ ಕಂಬ ಮಾದರಿ ಮತ್ತು ದೇವಕೋಷ್ಠಗಳನ್ನು ಮಾತ್ರ ತೋರಿಸಲಾಗಿದೆ.

ವರದರಾಜಸ್ವಾಮಿ ದೇವಸ್ಥಾನವು ಗರ್ಭಗೃಹ, ಅಂತರಾಳ, ಸಭಾಮಂಟಪಗಳನ್ನು ಒಳಗೊಂಡಿದೆ. ಪಶ್ಚಿಮದ ಮುಖ್ಯ ಪ್ರವೇಶ ದ್ವಾರಕ್ಕೆ ಹೊಂದಿಕೊಂಡಿರುವ ೧೬ ಕಲ್ಲು ಕಂಬಗಳ ವಿಶಾಲ ಮಂಟಪವು ನಂತರದ ಸೇರ್ಪಡೆ ಯಾಗಿರುತ್ತದೆ. ಪಶ್ಚಿಮಾಭಿಮುಖವಾಗಿರುವ ದೇವಸ್ಥಾನದ ಸಭಾಮಂಟಪಕ್ಕೆ ಕ್ರಮವಾಗಿ ಪಶ್ಚಿಮ, ದಕ್ಷಿಣ ದಿಕ್ಕುಗಳಿಂದ ಪ್ರವೇಶ ದ್ವಾರಗಳಿವೆ. ನೆಲಮಟ್ಟದಿಂದ ಎತ್ತರದ ಕಟ್ಟೆ ಮೇಲೆ ಮೂರು ಮೆಟ್ಟಿಲುಗಳನ್ನೇರಿ ಸಭಾ ಮಂಟಪವನ್ನು ಪ್ರವೇಶಿಸ ಬೇಕಾಗುತ್ತದೆ. ಮೆಟ್ಟಿಲುಗಳ ಇಕ್ಕೆಲಗಳಲ್ಲಿ ಯಾಳಿ ಶಿಲ್ಪಗಳಿರುತ್ತವೆ. **೨೩ ಗುಣಕ ೨೩ ಅಡಿ** ಅಳತೆಯ ಸಭಾಮಂಟಪದ ಮಧ್ಯ ಭಾಗದಲ್ಲಿ ೬ ಅಡಿ ಎತ್ತರದ ನಾಲ್ಕು ಕಂಬಗಳಿರುತ್ತವೆ. ಈ ಕಂಬಗಳ ಮೇಲೆ ೧' ೩" ಎತ್ತರದ ಸರಳ ಬೋದಿಗೆ – ತೊಲೆ – ಅದರ ಮೇಲೆ ಕಲ್ಲು ಚಪ್ಪಡಿಗಳನ್ನು ಹೊದಿಸಲಾಗಿದೆ.

ಗರ್ಭಗೃಹದಿಂದ ಎಡಭಾಗದ ಒಂದನೇ ಕಂಬದ ಅಡಿಭಾಗದಲ್ಲಿ ಸಿಂಹಶಿಲ್ಪಗಳಿದ್ದು ಅವು ಹಿಂಗಾಲುಗಳ ಮೇಲೆ ಕುಳಿತು ಮುಂದಿನ ಕಾಲುಗಳನ್ನು ಜೋಡಿಸಿಟ್ಟುಕೊಂಡಿರುತ್ತವೆ. ಮುಂದುವರೆದ ಫಲಕಗಳಲ್ಲಿ ಮೊಸಳೆ ಆನೆಕಾಲು ಹಿಡಿದಿರುವ (ಗಜೇಂದ್ರ ಮೋಕ್ಷ) ಶಿಲ್ಪವಿದೆ. ಕಂಬದ ಶಿಲ್ಪದಲ್ಲಿ

* ಸರ್ಕಾರಿ ಕಾಲೇಜಿನ ಹಿಂಭಾಗ, ವರ್ತೂರು, ಬೆಂಗಳೂರು.



ವಾಗಟದ ವರದರಾಜಸ್ವಾಮಿ ದೇವಾಲಯದ ಪಾರ್ಶ್ವನೋಟ

ಕಂಡರಿಸಿರುವ ಈ ಗಜೇಂದ್ರ ಮೋಕ್ಷ ಕೈಂಕರ್ಯವನ್ನು ಇಂದಿಗೂ ಬ್ರಹ್ಮ ರಥೋತ್ಸವ ಸಂದರ್ಭದಲ್ಲಿ ಪಾಲಿಸಿಕೊಂಡು ಬರಲಾಗಿದೆ. ದಿನಾಂಕ: ೩೦.೦೩.೨೦೦೯ರಂದು ಈ ಸೇವೆಯನ್ನು ವಾಗಟದ ತಿಮ್ಮಪ್ಪ ಮತ್ತು ಮಕ್ಕಳು, ಮುನಿಶಾಮಪ್ಪ ಮತ್ತು ಸಹೋದರರು ನಡೆಸಿಕೊಟ್ಟಿದ್ದಾರೆ. ಪಾಂಡುರಂಗ ವಿಠ್ಠಲ, ಕೃಷ್ಣ ರಾಧೆ, ಗರುಡನ ಮೇಲೆ ಕುಳಿತಿರುವ ನಾರಾಯಣ, ಕೌಶಿಕ ಮಹರ್ಷಿಯಿಂದ ಪಾನೀಯ ಸೇವನೆ, ಲಕ್ಷ್ಮಿ ವರಾಹ, ಭೂವರಾಹ ಶಿಲ್ಪಗಳನ್ನು ಕಂಡರಿಸಲಾಗಿದೆ. ಗರ್ಭಗೃಹದಿಂದ ಎರಡನೇ ಕಂಬದ ಪಿಂಡಿ ಭಾಗದಲ್ಲಿ ಸಿಂಹಗಳ ಬದಲಿಗೆ ನಾಲ್ಕು ದಳಗಳ ಚಕ್ರ, ಹಿರಣ್ಯಕಶಪು ಸಂಹಾರ, ಡೋಲು ಬಾರಿಸುವ ನೃತ್ಯಗಾರ್ತಿ, ಕಂಬದ ನರಸಿಂಹ ಹಾಗೂ ನರಸಿಂಹಸ್ವಾಮಿ ಹಿರಣ್ಯಕಶಪು ನನ್ನು ಬೆನ್ನಟ್ಟಿರುವ ದೃಶ್ಯಗಳಿವೆ. ಗರ್ಭಗೃಹದಿಂದ ಬಲಭಾಗದ ಒಂದನೇ ಕಂಬದ ಮೇಲೆ ಶ್ರೀರಾಮನ ಪಾದಸ್ಪರ್ಶ ಮಾಡಿದ ಆಂಜನೇಯ, ವಿನೀತ ಭಾವದಲ್ಲಿ ಕೈ ಮುಗಿದು ನಿಂತಿರುವ ಲಕ್ಷ್ಮಣ, ಲಕ್ಷ್ಮಣನ ಬೆನ್ನ ಮೇಲೆ ಬತ್ತಳಿಕೆ-ಬಿಲ್ಲು ಇರುತ್ತವೆ. ಶ್ರೀರಾಮನ ಕೈಯಲ್ಲಿ ಬಿಲ್ಲು-ಬಾಣ, ಮುಗಿದ ಕೈಯಲ್ಲಿರುವ ಆಂಜನೇಯ, ವೀರಾಂಜನೇಯ ಹಾಗೂ ಉಗ್ರನರಸಿಂಹ ರಿದ್ದಾರೆ. ಉಗ್ರನರಸಿಂಹನ ತೊಡೆಗೆ ಪಟ್ಟಿ ಕಟ್ಟಿಕೊಂಡಿರುವು ದನ್ನು (ಹಂಪಿಯಲ್ಲಿದ್ದಂತೆ) ತೋರಿಸಲಾಗಿದೆ. ಉಗ್ರ ನರಸಿಂಹನ ಮುಂದಿನ ಎಡ ಮತ್ತು ಬಲಗೈಗಳು ಯೋಗಸ್ಥಿತಿ ಯಲ್ಲಿದ್ದರೆ, ಹಿಂದಿನ ಬಲಗೈಯಲ್ಲಿ ಚಕ್ರ, ಎಡಗೈಯಲ್ಲಿ ಶಂಖ ತೋರಿಸಲಾಗಿದೆ. ಬಾಲಕೃಷ್ಣ ಹಾಗೂ ಕೊಳಲ ನೂದುವ ಕೃಷ್ಣನ ಶಿಲ್ಪಗಳು ಸುಂದರವಾಗಿ ಮೂಡಿ ಬಂದಿವೆ. ಗರ್ಭಗೃಹದಿಂದ ಬಲಕ್ಕೆ ಇರುವ ಎರಡನೇ ಕಂಬದ ಪಿಂಡಿ ಭಾಗದಲ್ಲಿ ಅಷ್ಟದಳ ಚಕ್ರ, ವಾಲಿ ಸುಗ್ರೀವರು, ನಾಲ್ಕು ದಳಗಳ ಚಕ್ರ, ದೊರೆಯೊಬ್ಬ ಪತ್ನಿ ಸಮೇತ ಕೈಮುಗಿದು ನಿಂತಿರುವ ಶಿಲ್ಪಗಳಿರುತ್ತವೆ. ಆಮೆ, ನಾಲ್ಕು ದಳಗಳ ಚಕ್ರ ಹಾಗೂ ಬಲಗೈಯಲ್ಲಿ ದಂಡ, ಎಡಗೈಯಲ್ಲಿ ಕಮಂಡಲ ಹಿಡಿದಿರುವ ಮಹರ್ಷಿ, ಕೈಮುಗಿದ ಸ್ಥಿತಿಯಲ್ಲಿರುವ ಗರುಡ ಶಿಲ್ಪಗಳು ಮೂಡಿಬಂದಿವೆ.

ಸಭಾಂಗಣದ ನಾಲ್ಕು ಕಂಬಗಳ ಮೇಲಿರುವ ತೊಲೆಗಳ ಉತ್ತರಾರ್ಧ ಭಾಗಗಳು ಸಭಾಂಗಣದ ದೊಡ್ಡ ದೊಡ್ಡ ಕಲ್ಲುಗಳಿಂದ ಕಟ್ಟಿದ ಗೋಡೆಯ ಮೇಲೆ ಇಡಲ್ಪಟ್ಟಿವೆ. ಮೇಲ್ಛಾವಣಿಯ ಮಧ್ಯಭಾಗದ ಛತ್ತಿನಲ್ಲಿ ನಾಲ್ಕು ಗೆರೆಗಳ ಚೌಕಾಕಾರದ ಮನೆ ಬಿಡಿಸಿ ಎರಡು ವೃತ್ತಗಳನ್ನು ಎಳೆದು, ಅದರೊಳಗೆ ಅಷ್ಟದಳದ ತಾವರೆ, ಮತ್ತೆರೆಡು ವೃತ್ತಗಳು ಅಷ್ಟದಳದ ತಾವರೆ ಹೂವಿನ ಪುನರಾವರ್ತನೆಯಾಗಿರುತ್ತದೆ. ಗರ್ಭಗೃಹದ ಬಾಗಿಲಿನ ನೇರದಲ್ಲಿರುವ ಸಭಾಮಂಟಪದ ಛತ್ತು ಸಮತಟ್ಟಾಗಿದ್ದು, ಎಡಬಲ ಪಾರ್ಶ್ವಗಳಲ್ಲಿ ಇಳಿಜಾರು ಛಾವಣಿಯಾಗಿರುತ್ತದೆ. ಸಭಾಮಂಟಪದ ಗೋಡೆಗಳು ೩ ಅಡಿ ಅಗಲವಾಗಿದ್ದು ದೊಡ್ಡ ದೊಡ್ಡ ಚೌಕಾಕಾರದ ಕಗ್ಗಲ್ಲುಗಳನ್ನು ಇದರಲ್ಲಿ ಬಳಸಲಾಗಿದೆ.

ಸಭಾಮಂಟಪದಿಂದ ಅಂತರಾಳ ಪ್ರವೇಶಕ್ಕೆ ೨' ೨" ಅಗಲ ಹಾಗೂ ೫ ಅಡಿ ಎತ್ತರದ ದ್ವಾರವಿರುತ್ತದೆ.



ವಾಗಟದ ವರದರಾಜಸ್ವಾಮಿ ದೇವಾಲಯದ ಅಧಿಷ್ಠಾನ ಭಿತ್ತಿ ಕಂಬ ಮತ್ತು ಭಿತ್ತಿ



ವಾಗಟದ ವರದರಾಜಸ್ವಾಮಿ ದೇವಸ್ಥಾನ – ಕಂಬ ಮಾದರಿ

ಅಂತರಾಳವು ೫' ೧೦" x ೬' ೭" ವಿಸ್ತೀರ್ಣ ಹೊಂದಿದೆ. ಅಂತರಾಳದ ಛತ್ತಿಗೆ ೩ ಕಲ್ಲು ಚಪ್ಪಡಿ ಹೊದಿಸಿದ್ದು, ಮಧ್ಯದಲ್ಲಿ ದುಂಡಾದ ಪದ್ಮ ಶಿಲ್ಪವಿರುತ್ತದೆ. ಅಂತರಾಳದಿಂದ ಗರ್ಭಗೃಹವನ್ನು ಬೇರ್ಪಡಿಸುವ ೩ ಅಡಿ ಅಂತರದ ಪ್ರವೇಶ ಅವಕಾಶವಿದೆ. ೭' ೧" x ೬' ೧೧" ವಿಸ್ತೀರ್ಣವುಳ್ಳ ಗರ್ಭಗೃಹ ದಲ್ಲಿ ಒಂದು ಮೀಟರ್ ಎತ್ತರದ ಸಮಭಂಗಿಯಲ್ಲಿ ನಿಂತಿರುವ ಭೂನೀಳಾ ಸಮೇತ ವರದರಾಜಸ್ವಾಮಿಯ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಸ್ವಾಮಿಯ ಬಲಗೈ ಅಭಯ ಮುದ್ರೆಯಲ್ಲಿದ್ದು, ಲೋಹದ ಕರಂಡಕ, ಕಂಠಹಾರ ಹಾಗೂ ವಸ್ತ್ರಾಭರಣಗಳಿರುತ್ತವೆ.

ಸಭಾಮಂಟಪದ ಪ್ರವೇಶದ್ವಾರದ ಬಲಭಾಗದ ಭಿತ್ತಿಯ ಮೇಲೆ ಸ್ತ್ರೀಯೊಬ್ಬಳು ದ್ವಿಭಂಗಿಯಲ್ಲಿ ತನ್ನೆರಡೂ ಕೈಮುಗಿದು ನಿಂತಿದ್ದು, ಅವಳ ಬಲಗೈ ಬಗಲಲ್ಲಿ ಮೀನು ಇದೆ. ಕಿವಿಗಳನ್ನು ಸಹಜಕ್ಕಿಂತ ದೊಡ್ಡದಾಗಿ ತೋರಿಸಲಾಗಿದೆ. ಅವಳ ತಲೆಯ ಮೇಲೆ ಟೊಪ್ಪಿಗೆ ಇದೆ. ಎಡಭಿತ್ತಿಯ ಮೇಲೆ ಮರ, ಅದಕ್ಕೆ ಎರಡು ಟೊಂಗೆಗಳು. ಒಂದು ಟೊಂಗೆಯ ಕೆಳಗೆ ತನ್ನೆರಡೂ ಕೈಗಳ ಹಸ್ತಗಳನ್ನು ಮತ್ತು ಮೊಣಕಾಲುಗಳನ್ನು ನೆಲಕ್ಕೆ ಸ್ಪರ್ಶಿಸಿ ಅಂಬೆಗಾಲಲ್ಲಿ ಸಾಗುತ್ತಿರುವ ಸ್ತ್ರೀ ತನ್ನ ಎಡಪಕ್ಕಕ್ಕೆ ತಿರುಗಿ ನೋಡುತ್ತಿದ್ದಾಳೆ. ಅವಳ ಭುಜ ಮತ್ತು ಬೆನ್ನಿನ ಮೇಲೆ ಕೇಶರಾಶಿ ಹರಡಿದ್ದು, ಸೊಂಟಕ್ಕೆ ಡಾಬು, ಕೊರಳಲ್ಲಿ ಕಂಠಹಾರ ಧರಿಸಿದ್ದಾಳೆ. ಬಲಭಾಗದ ಹೊರಭಿತ್ತಿಯ ಮೇಲೆ ದಿಗಂಬರ ಪುರುಷನೊಬ್ಬ ದ್ವಿಭಂಗಿಯಲ್ಲಿ ನಿಂತಿದ್ದು, ಬಲಗೈಯಲ್ಲಿ ಛತ್ರಿಯಾಕಾರದ ಪುಟ್ಟ ವಸ್ತುವೊಂದನ್ನು ಹಿಡಿದಿದ್ದಾನೆ. ಎಡಗೈಯಲ್ಲಿ ಬಾಣವನ್ನು ಮೇಲ್ಮುಖವಾಗಿ ಹಿಡಿದಿರುವುದರ ಸಾಂಕೇತಿಕ ಅಭಿವ್ಯಕ್ತಿ ವಿಮರ್ಶಾರ್ಹವಾಗಿದೆ. ಭಿತ್ತಿಯಲ್ಲಿರುವ ಕಂಬ ಮಾದರಿಗಳಲ್ಲಿ ಕಾಂಡ ಎಡಕಟ್ಟು, ಕುಂಭ, ಕಂಠ, ಮುಚ್ಚಳ, ಕಂಠ ಮತ್ತು ಬೋದಿಗೆಗಳನ್ನು ಕಂಡರಿಸಲಾಗಿದೆ.

ಈ ದೇವಾಲಯವು ೩' ೯" ಎತ್ತರದ ಪಾದಬಂಧ ಅಧಿಷ್ಠಾನ ಹೊಂದಿದ್ದು, ಇದರಲ್ಲಿ ಉಪಾನ, ಜಗತಿ, ತ್ರಿಪಟ್ಟ ಕುಮುದ, ಕಂಪ, ಗಳ, ಕಂಪ ಭಾಗಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಅದರ ಮೇಲೆ ೧೦ ಕಂಬ ಮಾದರಿಗಳು ಮೂಡಿ ಬಂದಿರುತ್ತವೆ. ಇಡೀ ದೇವಾಲಯಕ್ಕೆ ಒಂದು ಮಾತ್ರ ನಕ್ಷತ್ರಾಕಾರದ ಜಾಲಂಧ್ರ ಉತ್ತರ ದಿಕ್ಕಿನಲ್ಲಿದ್ದು ಅದನ್ನು ಚೌಕಟ್ಟಿನಲ್ಲಿಟ್ಟು ದೇವಕೋಷ್ಠದಲ್ಲಿ ಕಾಣುವಂತೆ ಮಾಡಿರುತ್ತಾರೆ. ಗರ್ಭಗೃಹ ಹಾಗೂ ಅಂತರಾಳದ ಹೊರಭಿತ್ತಿ ಭಾಗಗಳು ದುರಸ್ತಿ ಹೊಂದಿ ನವೀಕರಣಗೊಂಡಿರುತ್ತವೆ. ಆದಾಗ್ಯೂ ಅಧಿಷ್ಠಾನದಲ್ಲಿ ಕಂಡು ಬರುವ ಕಂಬ ಮಾದರಿಗಳ ಗುರುತುಗಳನ್ನು ಆಧರಿಸಿ ಹೇಳುವುದಾದಲ್ಲಿ ಗರ್ಭಗೃಹದ ಭಿತ್ತಿಯಲ್ಲಿ ೧೨ ಕಂಬ ಮಾದರಿಗಳು ಇದ್ದವು. ಇವುಗಳಲ್ಲಿ ೨ ಮೂಲೆಗಂಬ ಮಾದರಿಗಳು ೪ ಕಂಬಮಾದರಿಗಳಂತೆ ಕೆಲಸ ಮಾಡಿವೆ. ೩ ದೇವಕೋಷ್ಠಗಳಿದ್ದಿರಬಹುದಾದ ಸಾಧ್ಯತೆಯಿದೆ. ಅದರಂತೆ ಅಂತರಾಳದ ಭಿತ್ತಿಯಲ್ಲಿದ್ದಿರ ಬಹುದಾದ ಕಂಬ ಮಾದರಿಗಳು ೪. ಸಭಾಮಂಟಪದ ದಕ್ಷಿಣ ದಿಕ್ಕಿನಲ್ಲಿರುವ ಪ್ರವೇಶದ್ವಾರವು ೨' ೮" ಅಗಲ ೫' ೦"ಅಡಿ ಎತ್ತರವಾಗಿದ್ದು, ನಿರಾಲಂಕಾರ ದ್ವಾರಶಾಖೆಗಳನ್ನು ಹೊಂದಿದೆ. ಈ ದ್ವಾರದ ಬಲ ಭಿತ್ತಿಯ ಮೇಲೆ ತಾಳ ಹಾಕುತ್ತಿರುವ ಸ್ತ್ರೀ ಶಿಲ್ಪ, ಎಡಭಿತ್ತಿಯಲ್ಲಿ ನೃತ್ಯಪಟುವಿನ ಚಿಕಣಿ ಶಿಲ್ಪವಿದೆ. ಅವನು ತನ್ನ ಬಲಗಾಲನ್ನು ನೆಲಕ್ಕೆ ಸ್ಪರ್ಶಿಸಿ ಎಡಗಾಲು ಮೇಲೆ ಎತ್ತಿದ್ದಾನೆ. ಬಲಗೈಯಿಂದ ಡೋಲು ಬಾರಿಸುತ್ತ, ಎಡಗೈ ಮೇಲೆ ಎತ್ತಿದ್ದಾನೆ.

ರಥೋತ್ಸವದ ಕಾಷ್ಠ ಶಿಲ್ಪಗಳು : ಪ್ರತಿ ಸಂವತ್ಸರ ಚಾಂದ್ರಮಾನ ಯುಗಾದಿಯಿಂದ ಪ್ರಾರಂಭವಾಗಿ ಸಪ್ತದಿನ ಸಂಕಲ್ಪದಲ್ಲಿ ವರದರಾಜಸ್ವಾಮಿಯವರ ಬ್ರಹ್ಮರಥೋತ್ಸವವನ್ನು ಶ್ರೀ ಪಾಂಚರಾತ್ರ ಆಗಮ ರೀತಿಯಲ್ಲಿ ನೆರವೇರಿಸಲಾಗುವುದು.

ಈ ಸಂದರ್ಭದಲ್ಲಿ ರಥದ ಭಾಗಗಳಾಗಿ ಬಳಸಲಾಗುವ ಸುಂದರವಾದ ಕಾಷ್ಠ ಶಿಲ್ಪಗಳನ್ನು ದೇವಸ್ಥಾನದಲ್ಲಿ ಸಂರಕ್ಷಿಸಿಡಲಾಗಿದೆ. ಇವುಗಳಲ್ಲಿ ಪ್ರಮುಖವಾದವುಗಳೆಂದರೆ ಮೂರೂವರೆ ಅಡಿ ಎತ್ತರದ ಚತುರ್ಮುಖ ಬ್ರಹ್ಮ. ಅವನು ತನ್ನ ಎಡಗೈಯಲ್ಲಿ ಅಶ್ವಗಳೆರಡರ ಹಗ್ಗ ಹಿಡಿದು, ಬಲಗೈಯಿಂದ ಚಾಟಿ ಮೇಲೆತ್ತಿರುವುದು; ರೆಕ್ಕೆ ಸಹಿತ ಎರಡು ಅಶ್ವಗಳು ಮುಂಗಾಲುಗಳನ್ನು ಮೇಲೆತ್ತಿ ಹಾರುತ್ತಿರುವಂತೆ ಕಾಣುತ್ತವೆ. ಬ್ರಹ್ಮನ ಎಡಬಲಕ್ಕೆ ನಿಲುವಂಗಿ, ರುಮಾಲು(ಪೋಷಾಕು) ಧರಿಸಿ ಸನ್ನದ್ಧರಾಗಿ ನಿಂತಿರುವ ಸೇವಕರು; ಅವರು ತಮ್ಮ ಒಂದು ಕೈಯನ್ನು ಸೊಂಟದ ಮೇಲೆ ಇಟ್ಟುಕೊಂಡಿದ್ದಾರೆ. ರಥದ ಮುಂದೆ ಎಡ-ಬಲಕ್ಕೆ ನಿಲ್ಲಿಸಲು ಆರು ಅಡಿ ಎತ್ತರದ ಕಾಷ್ಠ ಸಿಂಹಗಳಿವೆ. ಅವು ಮನುಷ್ಯನ ತಲೆಯ ಮೇಲೆ ತಮ್ಮ ಹಿಂಗಾಲುಗಳನ್ನಿಟ್ಟು ಮುಂದಿನ ಕಾಲುಗಳನ್ನು ಎತ್ತಿ ಹಿಡಿದಿರುತ್ತವೆ. ಬ್ರಹ್ಮ, ಕುದುರೆಗಳು, ಮತ್ತು ಸಿಂಹಗಳ ಕಾಲಡಿಯಲ್ಲಿರುವ ಮನುಷ್ಯ ಶಿರಗಳಿಗೆ ಬಿಳಿ ಬಣ್ಣ, ಸೇವಕರ ಅಂಗಿಗಳಿಗೆ ನೀಲಿ ಹಾಗೂ ಸಿಂಹಗಳಿಗೆ ಬಂಗಾರ ವರ್ಣಗಳನ್ನು ಲೇಪಿಸಿರುವುದು ಅತ್ಯಾಕರ್ಷಣೀಯವಾಗಿದೆ. ರಥೋತ್ಸವ ಸಂದರ್ಭದಲ್ಲಿ ರಥದೊಳಗೆ ಇಟ್ಟು ಮೆರವಣಿಗೆ ಮಾಡುವ ವರದರಾಜಸ್ವಾಮಿಯ ಮೂರ್ತಿಯು ಪಂಚಲೋಹದ್ದೆಂದು ಸ್ಥಳೀಯರು ಹೇಳುತ್ತಾರೆ. ದೇವಾಲಯದ ಆವರಣದ ಬಲಭಾಗದಲ್ಲಿ ದಿನಾಂಕ ೧೮.೦೫.೧೯೬೯ರಂದು ಪ್ರತಿಷ್ಠಾಪಿಸಲಾದ ಪೂರ್ವಾಚಾರ್ಯರಾದ ಶ್ರೀ ನಮ್ಮಾಳ್ವಾರ್, ಶ್ರೀ ರಾಮಾನುಜಾಚಾರ್ಯ, ಶ್ರೀ ಮಣವಾಳ ಮಾಮುನಿಯರ ವಿಗ್ರಹಗಳಿರುತ್ತವೆ.[೪]

ವಾಗಟದ ಮಹಾಜನರು:

'ಜಾತಿಯೊಳೆಲ್ಲಮುತ್ತಮ ಜಾತಿಯು ವಿಪ್ರಕುಲ' ದ (ಪಂಪಭಾರತ ೧೪-೪೬) ಮಹಾಜನರು ಅಂದಿನ ಸಮಾಜದಲ್ಲಿ ಅಗ್ರಸ್ಥಾನದಲ್ಲಿದ್ದರು. ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹಣ - ಇವು ಅವರ ಮುಖ್ಯ ಕರ್ತವ್ಯಗಳಾಗಿದ್ದವು. ಈ ಕರ್ತವ್ಯಗಳನ್ನು ಷಟ್ಕರ್ಮಗಳೆಂದು ಕರೆಯುತ್ತಾರೆ. ಮಹಾಜನರಲ್ಲಿ ಬುದ್ಧಿಮತ್ತೆ, ಶಾಸ್ತ್ರ, ಜ್ಞಾನಗಳು, ಶಿಕ್ಷಣ ಕ್ಷೇತ್ರದಲ್ಲಿ ಅವರಿಗೆ ಗೌರವ ತಂದುಕೊಟ್ಟವು. ಜೊತೆಗೆ ರಾಜರು, ಅಧಿಕಾರಿಗಳು, ಸಾಮಾನ್ಯ ಜನರೂ ಅವರಿಗೆ ದಾನ ದತ್ತಿಗಳನ್ನು ನೀಡಿದರು. ಅಗ್ರಹಾರಗಳಂತೂ ಅವರಿಗಾಗಿಯೇ ಸ್ಥಾಪಿತವಾದವು. ಮಹಾಜನರು ಅಗ್ರಹಾರಗಳನ್ನು ಉಪಭೋಗಿಸುತ್ತಿದ್ದಂತೆಯೇ ವಿವಿಧ ದೇವಸ್ಥಾನಗಳಿಗೆ ದತ್ತಿ ನೀಡಿದ್ದಾರೆ. ಬೇರೆಯವರು ಬಿಟ್ಟ ದತ್ತಿಗಳನ್ನು ಸಮರ್ಪಕವಾಗಿ ನಿರ್ವಹಿಸಿಕೊಂಡು ಬಂದಿದ್ದಾರೆ. ವಾಗಟ (ವರದರಾಜ ಚತುರ್ವೇದಿ ಮಂಗಲಂ) ದ ಮಹಾಜನರೂ ಶಾಸನಗಳಲ್ಲಿ ಉಲ್ಲೇಖಗೊಂಡಿದ್ದಾರೆ.

ಕ್ರಿ.ಶ. ೧೨೯೭ರ ಶಾಸನವು ಹೊಯ್ಸಳ ವೀರ ವಿಶ್ವನಾಥ ದೇವರ ೪ನೇ ವರ್ಷದಲ್ಲಿ ಬರೆಸಲಾಗಿದ್ದು, ಅದು ವಾಗಟ ಹೋಬಳಿಯ ಪರಮನಹಳ್ಳಿ ಕೆರೆ ಏರಿಯ ಉತ್ತರ ದಿಕ್ಕಿನಲ್ಲಿದೆ. ಈ ಶಾಸನ ಕಲ್ಲಿನ ಪ್ರಮಾಣ ೭' ೩" x ೪'೩" ಆಗಿರುತ್ತದೆ. ಇದರಲ್ಲಿ ಚೋಳಮಂಡಲಂ ವ್ಯಾಪ್ತಿಗೊಳಪಡುವ ಪುಲಿಯೂರು (ಕುರುವಂಜಿ) ನಾಡಿನ ಇವಟ್ಟಂನಲ್ಲಿರುವ ವರದರಾಜ ಚತುರ್ವೇದಿ ಮಂಗಲಂ ಮಹಾಜನರಿಗೆ ೪ ಕುಲಿ ಭೂಮಿ ದಾನ ಬಿಟ್ಟ ಬಗ್ಗೆ ಹೇಳಲಾಗಿದೆ[೫]. ಸೇವಿಡೈ ನಾರಾಯಣ ಚತುರ್ವೇದಿ ಮಂಗಲಂನ ತ್ರಿಭುವನ ಚೌಳೀಶ್ವರಂ ಉದಯಾರ್ ದೇವರನ್ನೂ ಇಲ್ಲಿ ಸ್ತುತಿಸಲಾಗಿದೆ.

ವಾಗಟ ಗ್ರಾಮದ ಆಂಜನೇಯ ದೇವಾಲಯಕ್ಕೆ ಪೂರ್ವ ಹಳ್ಳದಲ್ಲಿ ನೆಟ್ಟ ಕ್ರಿ.ಶ. ೧೩೩೬ ರ ಶಾಸನವು ೪'x೪' ಪ್ರಮಾಣದಲ್ಲಿದೆ. ಇದರಲ್ಲಿ ಶ್ರೀ ಹೊಯ್ಸಳ ವೀರಬಲ್ಲಾಳನನ್ನು ಶನಿವಾರಸಿದ್ಧಿ, ಗಿರಿದುರ್ಗಮಲ್ಲ, ವೈರಿಗಳಿಗೆ ಸಿಂಹಸ್ವಪ್ನನಾಗಿದ್ದವನು ಎಂದು ಸ್ತುತಿಸಲಾಗಿದೆ. ದಾಟಿ ಸಿಂಗೆ ದಣ್ಣಾಯಕನ ಕಿರಿಯ ಸಹೋದರ ವಲ್ಲಪ್ಪ ದಣ್ಣಾಯಕನು ಪುಲಿಯೂರ ನಾಡಿನ 'ಬ್ರಹ್ಮದೇಯ ಇವಟ್ಟನ್' ಅಥವಾ 'ವರದರಾಜ ಚತುರ್ವೇದಿ ಮಂಗಲಂ' ನ ಎಲ್ಲ ಅಶೇಷ ಮಹಾಜನರಿಗೆ ಉದಕಪೂರ್ವ ಪ್ರಮಾಣ ಮಾಡಿ ಕಲ್ಕಿರೈ ಹತ್ತಿರದ ನರಸಿಂಹ ಜಮೀನಿನಲ್ಲಿ ಚತುಸ್ಸೀಮೆಗಳನ್ನು ನಿಗದಿಪಡಿಸಿ ತೆರಿಗೆರಹಿತ ಭೂಮಿಯನ್ನು ದಾನ ಬಿಟ್ಟನೆಂದು ಹೇಳುತ್ತದೆ[೬]. ಶಾಸನದ ಕೊನೆಯ ಭಾಗದಲ್ಲಿ ಶಾಪಾಶಯ ಮತ್ತು ವಲ್ಲಪ್ಪ ದಣ್ಣಾಯಕರ ಸಹಿ ಇದ್ದು ಈ ದಾನ ಶಾಸನವು ಶಿಲೆ ಮತ್ತು ತಾಮ್ರಪಟಗಳಲ್ಲಿ ಏಕಕಾಲದಲ್ಲಿ ಬರೆಸಲ್ಪಟ್ಟಿರುವುದನ್ನು ಹೇಳಲಾಗಿದೆ. ಈ ಶಾಸನದ ಸಾರಾಂಶವನ್ನೇ ಹೊಂದಿರುವ ೪೦ ಸಾಲುಗಳ ತಮಿಳು ಶಾಸನವು ವಾಗಟ ಹೋಬಳಿ ಪರಮನಹಳ್ಳಿಗೆ ಕೆರೆ ಏರಿಯ ಉತ್ತರಕ್ಕೆ ಬಿದ್ದಿರುತ್ತದೆ. ದಾನ ಬಿಟ್ಟ ಭೂಮಿಯ ಗಡಿಗಳನ್ನು ಹೇಳುವಾಗ ತಿರ್ಪಿಡೈಯಾಟ್ಟಂ, ಮರುದೇರಿಕ್ಕ, ಅಚ್ಚುಕಟ್ಟುಕ್ಕು ಪದಗಳನ್ನು ಬಳಸಲಾಗಿದೆ.[೭] ಪುಲಿಯೂರು ನಾಡಿನ 'ಕಲ್ಕಿರೈ' ಕೆರೆ ಹಾಳಾಗಿರುವುದನ್ನು, ಅದನ್ನು ದುರಸ್ತಿಪಡಿಸಲಿಕ್ಕೆ ಮಹಾಮಂತ್ರಿ ತಮ್ಮ ಸಿಂಗಯ ದಣ್ಣಾಯಕರು ಮತ್ತು ಪುಲಿಯೂರು ನಾಡಜನರು ದಾಮೋದರ ಸೋಮಿಯಾರ್‌ರಿಗೆ 'ಕುಡಂಗೈ' ಎಂಬ ಭೂದಾನ ಬಿಟ್ಟಿದ್ದನ್ನು ಕ್ರಿ.ಶ.೧೩೧೪ರ ಶಾಸನವು ಸ್ಪಷ್ಟಪಡಿಸುತ್ತದೆ.[೮] ಪುಲಿಯೂರ ನಾಡಜನರು ಕೆರೆಯೊಂದರ ಜೀರ್ಣೋದ್ಧಾರಕ್ಕಾಗಿ ದಂಡನಾಯಕರೊಂದಿಗೆ ಕೈಗೂಡಿಸಿದ್ದು ಮಹತ್ವದ ಸಮಾಜಮುಖಿ ಕೆಲಸವಾಗಿದೆ.

ವಾಗಟ ಹೋಬಳಿ ಕರಿಬೀರನ ಹೊಸಹಳ್ಳಿಯ ಊರಬಾಗಿಲಿನ ದಕ್ಷಿಣಕ್ಕೆ ೧೮ ಸಾಲುಗಳ ಗ್ರಂಥ ಮತ್ತು ಅರವಕ್ಷರಗಳಲ್ಲಿರುವ ಶಾಸನವನ್ನು ಕ್ರಿ.ಶ. ೧೩೪೨ ರಲ್ಲಿ ಹೊಯ್ಸಳ ದೊರೆ ಶ್ರೀ ವೀರಬಲ್ಲಾಳ ದೇವನ ಆಳ್ವಿಕೆಯ ಸಂದರ್ಭದಲ್ಲಿ ಹಾಕಿಸಲಾಗಿದೆ. ನಾಡವಾಸಿಗಳಾದ ತುರವರ ನಾಡಶೆಟ್ಟಿಯ ಮಗ ಮಾರಿಶೆಟ್ಟಿ, ಇವಮಿಶೆಟ್ಟಿ ಮತ್ತು ಶಿಮಾಂಡಶೆಟ್ಟಿಯರು ಪುಲಿಯೂರಿನ ಪೆರಿಯ ನಾಡು ಇವಟ್ಟಂ ಅಲಿಯಾಸ್ ವರದರಾಜ ಚತುರ್ವೇದಿ ಮಂಗಲಂನ ಅಶೇಷ ಮಹಾಜನರಿಗೆ ದಾನ ಬಿಟ್ಟಿರುವುದನ್ನು ಹೇಳುತ್ತದೆ.[೯] ಆದರೆ ದಾನದ ವಸ್ತು ಮತ್ತು ಪ್ರಮಾಣಗಳ ಉಲ್ಲೇಖವಾಗಿರುವುದಿಲ್ಲ.

ವರದರಾಜಸ್ವಾಮಿ ದೇವಸ್ಥಾನದ ಉತ್ತರ ತಳಪಾದಿ ಕಲ್ಲಿನ ಮೇಲಿನ ಕ್ರಿ.ಶ. ೧೪೯೧ರ ಶಾಸನವು ಶ್ರೀಮತು ಶ್ರೀಮನ್ಮಹಾಪ್ರಧಾನ ಗಲುರೆಯ ದಣ್ಣಾಯಕನು ವಾಗಟದ ಭಗೀರಥಪುರದ ಮಹಾಜನರಿಗೆ ಉಪೊಡವಂಟು ಕಾರ್ಯಕ್ಕಾಗಿ ವಾಗಟದ ಗೌಡಶೆಟ್ಟಿ ಪಟ್ಟಣಸ್ವಾಮಿಯವರ ಸಮ್ಮುಖದಲ್ಲಿ ಭೂದಾನ ಮಾಡಿದ ಅಂಶಗಳನ್ನು ವಿವರಿಸುತ್ತದೆ.[೧೦] ಈ ಎಲ್ಲ ಶಾಸನಗಳಲ್ಲಿ ಮಹಾಜನರ ಹೆಸರುಗಳನ್ನು ಪ್ರಸ್ತಾಪಿಸಿರುವುದಿಲ್ಲ.

ದೇವರ ಅಂಕುರಾರ್ಪಣೆ ಮತ್ತು ನೈವೇದ್ಯ

ದೇವಾಲಯದ ಪಶ್ಚಿಮ ತಳಪಾದಿ ಕಲ್ಲಿನ ಮೇಲೆ ಕ್ರಿ.ಶ. ೧೩೪೦ರ ೩ ಸಾಲುಗಳ ಶಾಸನವಿದೆ. ಇದರಲ್ಲಿ ವಟ್ಟಂನ ವರದರಾಜನ್ ದೇವರ ತಿರುವುಲ್ಳೈ (ಅಂಕುರಾರ್ಪಣ) ಉತ್ಸವದ ಖರ್ಚುವೆಚ್ಚಗಳಿಗಾಗಿ ಶ್ರೀವತ್ಸ ಗೋತ್ರದ ವ್ಯಕ್ತಿಯೊಬ್ಬರಿಗೆ ಮತ್ತು ಬೋಧಸೂತ್ರನಿಗೆ ದಾನಬಿಟ್ಟ ಅಂಶ ನಮೂದಾಗಿದೆ.[೧೧] ಈ ಶಾಸನದಲ್ಲಿ ಕೆಲವು ಶಬ್ದಗಳು ಸವಕಳಿಯಾಗಿವೆ. ಪ್ರತಿವರ್ಷದ ೭ ದಿನಗಳ ಬ್ರಹ್ಮರಥೋತ್ಸವದಲ್ಲಿ ಮೊದಲ ದಿನ ರಾತ್ರಿ ಶಾಸನೋಕ್ತ ಅಂಕುರಾರ್ಪಣ ಕೈಂಕರ್ಯವನ್ನು ಗ್ರಾಮದ ಸೇವಾಕರ್ತರು ನಡೆಸಿಕೊಂಡು ಬಂದಿದ್ದಾರೆ. ದಿನಾಂಕ: ೨೭.೦೩.೨೦೦೯ ರ ಈ ಸೇವೆಯನ್ನು ವಾಗಟದ ಅಪ್ಪಯ್ಯನವರ ನಾರಾಯಣಪ್ಪ ನಡೆಸಿಕೊಟ್ಟಿದ್ದಾರೆ.[೧೨] ಉತ್ತರ ತಳಪಾದಿ ಕಲ್ಲಿನ ಮೇಲಿನ ಕ್ರಿ.ಶ.೧೪೯೧ ರ ಶಾಸನವು ಊರ ವರದರಾಜ ದೇವರ ನೈವೇದ್ಯಕ್ಕಾಗಿ ಬನಹಳ್ಳಿ ದಕ್ಷಿಣದ ನಾಲ್ಕು ಸೀಮೆಗಳನ್ನು ದಾನ ಬಿಟ್ಟ ಬಗ್ಗೆ ತಿಳಿಸುತ್ತದೆ. ಈ ಶಿಲಾಸ್ಥಾಪನವನ್ನು ಅಪ್ಪಜಿದೇವ ಹಾಗೂ ವುಗಟ್ಟದ ಅಧಿಕಾರಿ ತಿಪ್ಪಯರ ಸಮ್ಮುಖದಲ್ಲಿ ಹೊಯಿಸಿಕೊಡಲಾಗಿದೆ. ನೈವೇದ್ಯ ಕಾರ್ಯ ಅಚಂದ್ರಾರ್ಕಸ್ಥಾಯಿಯಾಗಿ ನಡೆಸಬೇಕೆಂಬ ಆಶಯ ಇದರಲ್ಲಿದೆ. ಯಾರಾದರೂ ಶಾಸನವನ್ನು ಅಳುಹಿದರೆ ಸಾವಿರ ಹಸುಗಳನ್ನು ಕಡಸಿದ ಪಾಪದಲ್ಲಿ ಹೋಗುವರೆಂದು ಈ ಧರ್ಮ ಶಾಸನ ಎಚ್ಚರಿಸುತ್ತದೆ.[೧೩]

ದೀಪಕಂಬ : ದೇವಸ್ಥಾನದ ಮುಂದೆ ಇರುವ ಧ್ವಜಸ್ತಂಭದ ಜಗುಲಿ ಕಲ್ಲಿನ ಮೇಲೆ ಇರುವ ಕ್ರಿ.ಶ. ೧೫೦೨ರ ಶಾಸನವು ೭ ಸಾಲುಗಳಲ್ಲಿದೆ. ದುಂದುಭಿ ಸಂವತ್ಸರದ ಮಾರ್ಗಶಿರ ಶುದ್ಧ ೧ ರಂದು ಮುಳುಬಾಗಿಲಿನ ಶ್ರೀಮತ್ ಮಲಹರಿ ದೇವರಾವುತ್ತರ ಮಕ್ಕಳಾದ ಮಾಯದೇವ ರಾಜೆಯರು, ಚಂದಳ ದೇವರಾವುತ್ತರು ವೊಗಟ್ಟದ ವರದರಾಜದೇವರಿಗೆ ದೀಪಮಾಲೆ ಕಂಬವನ್ನು ಧರ್ಮವಾಗಿ ಮಾಡಿಸಿದರೆಂದು ಸ್ಪಷ್ಟವಾಗುತ್ತದೆ.[೧೪]

ದೇವಾಲಯದ ಗೋಡೆ ಮೇಲಿನ ಇತರ ಶಾಸನಗಳು:

ಉತ್ತರ ತಳಪಾದಿ ಕಲ್ಲಿನ ಮೇಲಿನ ಕ್ರಿ.ಶ. ೧೩೩೪ ರ ಶಾಸನವು, ಭಾವವರ್ಷ ಚೈತ್ರ ಮಾಸದ ಆರಂಭದಲ್ಲಿ ಸೆಂಗಲುನಿರುಪಿಳ್ಳೈ ಆಚಾರಿಗೆ ಮರುದೇರಿ (ಮದ್ದೇರಿ)ಯಲ್ಲಿ ಕಾಣಿಕೆಯಾಗಿ ಗದ್ದೆ ಕಂಡಗ ೪, ದೊಡ್ಡಕೆರೆ ಏರಿಯಲ್ಲಿ ೪೪ ಕೊಲ್ಗೆ ೫೫ ದಾನ ಬಿಟ್ಟಿರುವುದನ್ನು ತಿಳಿಸುತ್ತದೆ.[೧೫] ದಕ್ಷಿಣ ಭಾಗದ ತಳಪಾದಿ ಕಲ್ಲಿನ ಮೇಲಿರುವ ಕ್ರಿ.ಶ.೧೩೩೫ ರ ೭ ಸಾಲುಗಳ ಶಾಸನದಲ್ಲಿ ಉಕ್ತವಾಗಿರುವಂತೆ ಯುವಸಂವತ್ಸರ ಆದಿಮಾಸದಲ್ಲಿ ಚಿಕ್ಕ ದಣ್ಣಾಯಕರು ಕ್ಷೇತ್ರಪಾಲ ದೇವರ ಯಜ್ಞ ಮಾಡಿಸುವುದಕ್ಕಾಗಿ ಭೂದಾನ ಬಿಟ್ಟಿರುತ್ತಾರೆ.[೧೬] ದೇವಾಲಯದ ಹೊರಗೋಡೆಯ ತುತ್ತತುದಿಯಲ್ಲಿ ಬರೆಸಲಾದ ಕ್ರಿ.ಶ.೧೪೪೦ ರ ಶಾಸನವು ಭಾಷೆಗೆ ತಪ್ಪುವ ರಾಯರ ಗಂಡ ಶ್ರೀ ವೀರಪ್ರತಾಪ ದೇವರಾಯ ಮಹಾರಾಯನು (ವಿಜಯನಗರದ ಅರಸು ದೇವರಾಯ II) ರತ್ನಸಿಂಹಾಸನದಲ್ಲಿರುವುದನ್ನೂ ಹಾಗೂ ಮುಳುಬಾಗಿಲಿನ ಕನ್ನ ಒಡೆಯರ ನಿರೂಪ ಇದಾಗಿದೆ ಎಂದೂ ತಿಳಿಸುತ್ತದೆ.[೧೭]

ಅದೇ ದೇವಾಲಯದ ಹೊರಭಿತ್ತಿಯಲ್ಲಿರುವ ಕ್ರಿ.ಶ. ೧೩೭೮ ರ ೨ ಸಾಲುಗಳ ಶಾಸನದಲ್ಲಿ ಬಳಕೆಯಾದ 'ಸಮಸ್ತವಂದಿಜನ', 'ಕಾಶ್ಯಪ ಗೋತ್ರ'[೧೮] ಎಂಬ ಪದಗಳಿಂದ ವಾಗಟದ ಮಹಾಜನರೂ ಕೂಡ ವಿಶಿಷ್ಟವಾದ ಕುಲಗೋತ್ರಗಳ ಕಟ್ಟುಪಾಡಿಗೆ ಒಳಪಟ್ಟಿದ್ದರೆಂದು ತಿಳಿದು ಬರುತ್ತದೆ. ಯಾಗಗಳಲ್ಲಿ ದೇವತೆಗಳ ಆಹ್ವಾನಕ್ಕೆ ಅವು ಉಪಯುಕ್ತವೆಂದು ತಿಳಿಯಲಾಗಿತ್ತು.

ಲೋಹದ ಅಡ್ಡಣಿಗೆಗಳು

೧೨, ೧೩ನೇ ಶತಮಾನಕ್ಕೆ ಸೀಮಿತವಾಗಿದ್ದ ವಾಗಟ ಮತ್ತು ವರದರಾಜ ಸ್ವಾಮಿಯ ಇತಿಹಾಸವು, ವಾಗಟ

ಗ್ರಾಮವ್ಯಾಪ್ತಿಗೆ ಒಳಪಡುವ ಪ್ರದೇಶವಾದ 'ಬೂದಿಹಳ್ಳ' (Ash Mound) ದ ಭೌಗೋಳಿಕ ಲಕ್ಷಣಗಳಿಂದಾಗಿ ೮, ೯ ನೇ ಶತಮಾನಗಳಷ್ಟು ಹಿಂದಕ್ಕೆ ಹೋಗುತ್ತದೆ. ಬೂದಿಹಳ್ಳದಲ್ಲಿ ಮಣ್ಣು ತೋಡುತ್ತಿದ್ದಾಗ ಸಿಕ್ಕಿರುವ ಎರಡು ಲೋಹದ ಅಡ್ಡಣಿಗೆಗಳು ಅಪರೂಪದ ಐತಿಹಾಸಿಕ ಆಧಾರಗಳಾಗಿವೆ.[೧೯] ಒಂದು ಅಡ್ಡಣಿಗೆಯ ವೃತ್ತಾಕಾರದ ಲೋಹದ ಪಟ್ಟಿಯ ಮೇಲೆ 'ಶ್ರೀ ನಾಗಮಾರ' ಎಂಬ ಶಾಸನವಿದ್ದು ಗಂಗರ ಕಾಲದ ಲಿಪಿಯ ಗುಣಲಕ್ಷಣಗಳನ್ನು ಹೊಂದಿದೆ. 'ರ' ಅಕ್ಷರವನ್ನು ಉದ್ದುದ್ದಾಗಿ, 'ಗ' ಅಕ್ಷರದ ಎಡಬಾಲವು ಒಳಗಡೆ ಸುರುಳಿ ಸುತ್ತಿಕೊಂಡಿದೆ. ಶಾಸನದಲ್ಲಿ ಉಕ್ತನಾಗಿರುವ 'ಶ್ರೀನಾಗಮಾರ' ಯಾರು? ಅವನೊಬ್ಬ ರಾಜನೇ? ಅಥವಾ ಸರಳ ಜೀವನ ನಡೆಸಿ ಉನ್ನತ ಮೌಲ್ಯಗಳನ್ನು ಮೆರೆದ ಒಬ್ಬ ಜನಸಾಮಾನ್ಯನೇ? ಎಂಬುದನ್ನು ನಿರ್ಣಯಿಸ ಲಾಗದಿದ್ದರೂ, 'ಶ್ರೀ' ಎಂಬ ಅಕ್ಷರದಿಂದ ಅವನೊಬ್ಬ ಮಹತ್ವದ ವ್ಯಕ್ತಿ ಎಂಬುದನ್ನು ಊಹಿಸಬೇಕಾಗುತ್ತದೆ. ಇನ್ನು ಈ ಬಗೆಯ ಲೋಹದ ಅಡ್ಡಣಿಗೆಗಳನ್ನು ದೇವರ ಪೂಜಾ ಕೈಂಕರ್ಯದ ಸಮಯದಲ್ಲಿ ತಟ್ಟೆಗಳನ್ನಿಡಲು ಬಳಸುತ್ತಿದ್ದಿರ ಬಹುದು. ಬಹುಶಃ ನಾಗಮಾರನೆಂಬ ಪ್ರತಿಷ್ಠಿತ ವ್ಯಕ್ತಿ ಬೂದಿಹಳ್ಳದ ಸಮೀಪವಿರುವ ವಾಗಟದ ವರದರಾಜಸ್ವಾಮಿಗೆ ಕಾಣಿಕೆಯಾಗಿ ಸಮರ್ಪಿಸಿದ ಅಡ್ಡಣಿಗೆಗಳೇ? ಅಥವಾ ನಾಗಮಾರನೆಂಬ ಭಕ್ತ (ಅರ್ಚಕ?) ನಿಗೆ ವರದರಾಜ ಸ್ವಾಮಿಯ ಪೂಜೆ ಮಾಡುವುದಕ್ಕಾಗಿ ಬೇರೆ ಯಾರಿಂದ ಲಾದರೂ ಈ ಅಡ್ಡಣಿಗೆಗಳು ಕಾಣಿಕೆಯಾಗಿ ಕೊಡಲ್ಪಟ್ಟ ವೆಯೇ? ಈ ನಿಟ್ಟಿನಲ್ಲಿ ಬೂದಿಹಳ್ಳದ ಹೆಚ್ಚಿನ ಕ್ಷೇತ್ರಕಾರ್ಯ ಮತ್ತು ಉತ್ಖನನ ನಡೆಯಬೇಕಾಗಿದೆ. ಪ್ರಸಕ್ತ ಈ ಅಡ್ಡಣಿಗೆಗಳನ್ನು ಮೈಸೂರಿನ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಿಸಿ ಡಲಾಗಿದೆ.

ಹೊಯ್ಸಳ ದೊರೆ ಎರಡನೇ ಬಲ್ಲಾಳನ ದಂಡನಾಯಕ ನಾದ ಕುಮಾರ ಲಕ್ಷ್ಮೀಧರನು ಇದೇ ತರಹದ ಲೋಹದ ಅಡ್ಡಣಿಗೆಗಳನ್ನು ಬೇಲೂರಿನ ಚನ್ನಕೇಶವ ದೇವರಿಗೆ ಸಮರ್ಪಿಸಿರುವುದನ್ನು ಗಮನಿಸಿದಾಗ, ದೇವಸ್ಥಾನಗಳಿಗೆ ಈ ಬಗೆಯ ಅಡ್ಡಣಿಗೆಯ ಕಾಣಿಕೆ ಅರ್ಪಿಸುವ ಪದ್ಧತಿ ಹೊಯ್ಸಳ ದೊರೆಗಳ ಕಾಲದಲ್ಲಿ ರೂಢಿಯಲ್ಲಿತ್ತು ಎಂದು ತಿಳಿದುಬರುತ್ತದೆ.

ವಾಗಟದ ಇತರ ಪ್ರಾಚೀನ ಸ್ಮಾರಕಗಳು

ಪಶ್ಚಿಮಾಭಿಮುಖವಾಗಿರುವ ಶ್ರೀ ಆಂಜನೇಯ ಸ್ವಾಮಿ ಗುಡಿಯಲ್ಲಿ ೭ ಅಡಿ ಎತ್ತರದ ಆಂಜನೇಯನ ಮೂರ್ತಿ ಶಿಲ್ಪವಿದೆ. ಕೊರಳಲ್ಲಿ ಕಂಠ ಹಾರಗಳನ್ನು ಹಾಕಲಾಗಿದೆ. ತನ್ನ ಬಲಗೈಯನ್ನು ಮೇಲಕ್ಕೆತ್ತಿ ಎಡಗೈಯನ್ನು ಸೊಂಟದ ಮೇಲಿಟ್ಟಿದ್ದಾನೆ. ಎಡಗಾಲು ಮುಂದೆ, ಬಲಗಾಲು ಹಿಂದೆ ಇರುತ್ತದೆ. **ಕೆರೆಯ ಪೂರ್ವದ ದಂಡೆಯ** ಮೇಲೆ ಅಡವಿಯಲ್ಲಿ ೧೧' ೮" X ೨೧' ೪" ವಿಸ್ತೀರ್ಣದ ಚೌಡೇಶ್ವರಿ (ಸಪ್ತಮಾತೃಕೆಯರು) ದೇವಸ್ಥಾನವಿದೆ. ಈ ದೇವಾಲಯದ ಬಾಗಿಲು ಪೂರ್ವಕ್ಕೆ ಇದ್ದು, ಎರಡು ಕಲ್ಲುಕಂಬಗಳ ಮೇಲೆ ೩ ಅಂಕಣಗಳ ಛತ್ತು ಹೊದಿಸಲಾಗಿದೆ. ಸಪ್ತಮಾತೃಕೆಯರು ಇಲ್ಲಿ ಸ್ವತಂತ್ರವಾಗಿ ಪೂಜೆಗೊಳ್ಳುತ್ತಿದ್ದಾರೆ. ಅಮ್ಮನವರೆಂದು ಕರೆಯುವುದು ಸ್ಥಳೀಯ ವಾಡಿಕೆ. ಸಾಮಾನ್ಯವಾಗಿ ಎಲ್ಲೆಡೆಗೂ ಚಾಮುಂಡಿಯನ್ನುಳಿದು ಇತರ ವಿಗ್ರಹಗಳು ೧ ಅಥವಾ ೧½ ಅಡಿ ಎತ್ತರದ ವಿಗ್ರಹಗಳಾಗಿರುತ್ತವೆ. ಆದರೆ ಇಲ್ಲಿ ೩½ ಯಿಂದ ೪ ಅಡಿ ಎತ್ತರ ಹೊಂದಿರುವ ಸಪ್ತಮಾತೃಕೆಯರ ಪ್ರತ್ಯೇಕ ಶಿಲ್ಪಗಳನ್ನು ಗೋಡೆಗೆ ಆನಿಸಲಾಗಿದೆ. ಬ್ರಾಹ್ಮೀ, ಮಾಹೇಶ್ವರಿ, ವಾರಾಹಿ, ವೈಷ್ಣವಿ, ಚೈವ, ಚೈಂದ್ರ, ಚಾಮುಂಡೇಶ್ವರಿ ಶಿಲ್ಪಗಳು ಪೂರ್ವಕ್ಕೆ ಹಾಗೂ ಗಜಾನನ, ಭೈರವ, ಕಾಲಭೈರವರು ದಕ್ಷಿಣಕ್ಕೆ; ಇಂದ್ರಾಣಿ ಪಶ್ಚಿಮಕ್ಕೆ ಮುಖ ಮಾಡಿದ್ದಾರೆ. ಅಸ್ಥಿಪಂಜರದಲ್ಲಿ ಕಾಣಿಸಿಕೊಳ್ಳುವ ಬೇತಾಳ, ಪುರುಷನೊಬ್ಬ ತನ್ನ ಬಲಗೈಯಲ್ಲಿ ಕಮಲ ಹಿಡಿದಿದ್ದು ಎಡಗೈಯನ್ನು ತೊಡೆಯ ಮೇಲೆ ಇಟ್ಟಿದ್ದಾನೆ. ಮತ್ತೊಂದು ಶಿಲ್ಪದಲ್ಲಿ ಪುರುಷನಿಗೆ ೪ ಕೈಗಳಿದ್ದು ಮೇಲಿನ ಎರಡು ಕೈಗಳಲ್ಲಿ ಚಿಕ್ಕ ಅಸ್ಪಷ್ಟ ವಸ್ತುಗಳನ್ನು ಹಿಡಿದಿರುತ್ತಾನೆ. ಕೆಳಗಿನ ಬಲಗೈ ಚಿನ್ಮುದ್ರೆಯಲ್ಲಿ, ಕೆಳಗಿನ ಎಡಗೈ ತೊಡೆಯ ಮೇಲೆ ಇಟ್ಟುಕೊಂಡಿರುತ್ತಾನೆ. ಕಂಬದ ಮೇಲಿನ ಫಲಕಗಳಲ್ಲಿ ಕುಬ್ಜರು ಪ್ರಯಾಸಪಟ್ಟು, ತೊಲೆಗಳನ್ನು ಕೈಯಲ್ಲಿ ಹಿಡಿದಿರುವಂತೆ ತೋರಿಸಲಾಗಿದೆ. ಚೌಡೇಶ್ವರಿ ಗುಡಿಯ ಮುಂದೆ ಅರ್ಧ ವೃತ್ತಾಕಾರದ ತೋರಣಗಂಬವಿದ್ದು ಅದರ ಮೇಲೆ ಗಜಲಕ್ಷ್ಮಿಯ ಶಿಲಾಫಲಕವಿದೆ. ಫಲಕದ ಹಿಂದೆ ಕ್ರಿ.ಶ. ೧೦೨೮ರ ರಾಜೇಂದ್ರ ಚೋಳನ ಶಾಸನವಿದೆ.[೨೦] ಗಜಲಕ್ಷ್ಮಿ ಶಿಲಾಫಲಕದಲ್ಲಿ ಬಲಕ್ಕೆ ಹಸು, ಸಿಂಹ; ಎಡಕ್ಕೆ ಒಂದೇ ಶರೀರದಲ್ಲಿ ಆನೆಯ ಸೊಂಡಿಲು ಮತ್ತು ಸಿಂಹದ ಮುಖ ಗಳನ್ನು ವೈಶಿಷ್ಟ್ಯಪೂರ್ಣವಾಗಿ ತೋರಿಸಲಾಗಿದೆ. ಈ ಸಪ್ತಮಾತೃಕೆಯರ ದೇವಸ್ಥಾನಕ್ಕೆ ೨೮ ಎಕರೆ ಭೂಮಿ ಇತ್ತೆಂದು ಸದ್ಯ ಅದು 'ಸಾಗುವಳಿದಾರನೇ ಭೂಮಾಲೀಕ' ಕಾನೂನಿನಡಿ ಬೇರೆಯವರ ಸ್ವಾಧೀನದಲ್ಲಿದೆಯೆಂದು ಸ್ಥಳೀಯ ಅರ್ಚಕರೊಬ್ಬರ ಅಭಿಪ್ರಾಯ. **ಕೆರೆಯ ಪಶ್ಚಿಮದ ದಂಡೆಯ** ಮೇಲೆ ಇರುವ ಚಂದ್ರಮೌಳೀಶ್ವರ ದೇವಸ್ಥಾನವು ತನ್ನೆಲ್ಲ ಹಳೆಯ ವಾಸ್ತು ಲಕ್ಷಣಗಳನ್ನು ಕಳೆದುಕೊಂಡು ನವೀಕರಣ ಗೊಂಡಿದೆ. **ಗ್ರಾಮದಿಂದ ವಾಯವ್ಯ ದಿಕ್ಕಿಗೆ** ಸುಮಾರು ೨ ಕಿಲೋಮೀಟರ್ ದೂರದಲ್ಲಿ ರಾಮದೇವರ ಗುಡಿ ಇದೆ.

ಅದರ ಮುಂಭಾಗದಲ್ಲಿ ೭ ಬೀರರ ಗುಡಿಗಳಿರುತ್ತವೆ. ಸುತ್ತಲಿನ ಗ್ರಾಮಗಳಿಂದ ಹಾಲುಮತ ಜನರು ರಾಮದೇವರ ದರ್ಶನಕ್ಕೆ ಬರುತ್ತಾರೆ. ಅದರಂತೆ **ಕ್ರಿ.ಶ. ೧೯೪೯-೫೦ನೇ ವರ್ಷ**ದಲ್ಲಿ ಆರಂಭಗೊಂಡ ಮಾರುತಿ ವ್ಯಾಯಾಮ ಶಾಲೆಯ ಕಟ್ಟಡ ಶಿಥಿಲವಾಗಿದೆ. ಆದರೆ ಪೈಲ್ವಾನರು ರೂಢಿಸಿಕೊಳ್ಳುವ ದೈಹಿಕ ಚಟುವಟಿಕೆಗಳಿಗೆ ಪೂರಕವಾದ ಕತ್ತಿ, ಗದೆ ಮತ್ತು ಗುಂಡು ಗಳನ್ನು ಈ ವ್ಯಾಯಾಮ ಶಾಲೆಯಲ್ಲಿ ಅಚ್ಚುಕಟ್ಟಾಗಿ ಜೋಡಿಸಿಡ ಲಾಗಿದೆ.

(ಪ್ರಬಂಧದ ವಿಷಯ ಆಯ್ಕೆ, ಮಂಡನೆಗೆ ಮಾರ್ಗದರ್ಶನ ಮಾಡಿದ ಪೂಜ್ಯ ಗುರುಗಳಾದ ಡಾ। ಪಿ.ವಿ.ಕೃಷ್ಣಮೂರ್ತಿ, ಡಾ। ಎಂ.ಜಿ.ಎನ್.ರವರಿಗೆ, ಕ್ಷೇತ್ರಕಾರ್ಯದಲ್ಲಿ ನೆರವಾದ ಹೆಚ್.ಎ.ಎಲ್.ನ ಮೋಹನ್ ಹಾಗೂ ವಾಗಟದ ಪ್ರಶಾಂತ್‌ರವರಿಗೆ ಧನ್ಯವಾದಗಳು.)

ಆಧಾರಸೂಚಿ ಮತ್ತು ಅಡಿಟಿಪ್ಪಣಿಗಳು

೧. ಗ್ಯಾಜೆಟಿಯರ್ ಆಫ್ ಇಂಡಿಯಾ., ಬೆಂಗಳೂರು ಗ್ರಾಮಾಂತರ ಜಿಲ್ಲೆ, ಪುಟ ೮೬೪-೮೬೫.

೨. **ಕನ್ನಡ ನಿಘಂಟು.**, ಕನ್ನಡ ಸಾಹಿತ್ಯ ಪರಿಷತ್ತು, ಸಂಪುಟ ೦೭, ೧೯೯೩, ಪುಟ ೬೮೦೭.

೩. **ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ.**, ಸಂಪುಟ ೮೭, ೨೦೦೯, ಪುಟ ೫೨.

೪. **ಶ್ರೀ ನಿತ್ಯಸ್ತೋತ್ರ ರತ್ನಮಾಲ**, ಶ್ರೀ ಭಾಷ್ಯಕಾರ ಸಭಾ(ರಿ) ವಾಗಟ, ೨೦೦೯, ಪುಟ ೫.

೫. **ಎಪಿಗ್ರಾಫಿಯಾ ಕರ್ನಾಟಕ** ೯, ರೈಸ್ ಬಿ.ಎಲ್. ಶಾಸನ ಸಂಖ್ಯೆ ೧೩೬.

೬ -ಪೂರ್ವೋಕ್ತ- ಶಾಸನ ಸಂಖ್ಯೆ ೧೩೪.

೭. -ಪೂರ್ವೋಕ್ತ- ಶಾಸನ ಸಂಖ್ಯೆ ೧೩೭.

೮. -ಪೂರ್ವೋಕ್ತ- ಶಾಸನ ಸಂಖ್ಯೆ ೧೩೯.

೯. -ಪೂರ್ವೋಕ್ತ- ಶಾಸನ ಸಂಖ್ಯೆ ೧೩೫.

೧೦. -ಪೂರ್ವೋಕ್ತ- ಶಾಸನ ಸಂಖ್ಯೆ ೧೨೮.

೧೧. -ಪೂರ್ವೋಕ್ತ- ಶಾಸನ ಸಂಖ್ಯೆ ೧೩೨ಬಿ.

೧೨. ಶ್ರೀ ಯೋಗಪುರಿ ವರದರಾಜಸ್ವಾಮಿ ಬ್ರಹ್ಮರಥೋತ್ಸವದ ಆಹ್ವಾನ ಪತ್ರಿಕೆ - ಮಾರ್ಚ್ ೨೦೦೯.

೧೩. **ಎಪಿಗ್ರಾಫಿಯಾ ಕರ್ನಾಟಕ.**, ೯, ರೈಸ್ ಬಿ.ಎಲ್. ಶಾಸನ ಸಂಖ್ಯೆ ೧೨೮.

೧೪. -ಪೂರ್ವೋಕ್ತ- ಶಾಸನ ಸಂಖ್ಯೆ ೧೩೧.

೧೫. -ಪೂರ್ವೋಕ್ತ- ಶಾಸನ ಸಂಖ್ಯೆ ೧೨೭.

೧೬. -ಪೂರ್ವೋಕ್ತ- ಶಾಸನ ಸಂಖ್ಯೆ ೧೩೨.

೧೭. -ಪೂರ್ವೋಕ್ತ- ಶಾಸನ ಸಂಖ್ಯೆ ೧೩೦.

೧೮. -ಪೂರ್ವೋಕ್ತ- ಶಾಸನ ಸಂಖ್ಯೆ ೧೨೯.

೧೯. ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್ಸ್, ೧೯೪೨, ಪುಟ ೧೩೧.

೨೦. -ಪೂರ್ವೋಕ್ತ- ೧೯೧೯, ಪುಟ ೯.

ಡಾ. ರಾಕೇಶ್. ಬಿ.ಸಿ.*

ಕೊಕ್ಕನೂರಿನ ಈಶ್ವರ ದೇವಾಲಯ

ಕೊಕ್ಕನೂರು ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನಲ್ಲಿ ಕಂಡುಬರುತ್ತದೆ. ಹರಿಹರ ಹೊನ್ನಾಳಿ ಮಾರ್ಗ ಮಧ್ಯದ ಮಲೆಬೆನ್ನೂರಿನಿಂದ ನಂದಿಗುಡಿ ಮಾರ್ಗದಲ್ಲಿ ೭ ಕಿ.ಮೀ. ದೂರದಲ್ಲಿದೆ. ಈ ಊರಿಗೆ ದಾವಣಗೆರೆಯಿಂದ ನೇರ ಬಸ್ಸಿನ ಸೌಲಭ್ಯವಿದೆ. ಮತ್ತು ಹೊನ್ನಾಳಿ ತಾಲ್ಲೂಕಿನಿಂದ, ಹಾವೇರಿ ಜಿಲ್ಲೆಯಿಂದ ತುಮಿನಟ್ಟಿ ಮಾರ್ಗವಾಗಿ ಕೊಕ್ಕನೂರಿಗೆ ಬಸ್ಸಿನ ಜೊತೆಗೆ ಇತ್ತೀಚೆಗೆ ಆಟೋಗಳ ಸೌಕರ್ಯ ಕೂಡ ಹೆಚ್ಚಾಗಿದೆ.

ಕೊಕ್ಕನೂರಿನ ಶ್ರೀ ಆಂಜನೇಯ ದೇವಾಲಯ ಜಿಲ್ಲೆಯಲ್ಲಿ ಪ್ರಖ್ಯಾತವಾಗಿದೆ. ಈ ದೇವಾಲಯಕ್ಕೆ ದೂರದ ಊರುಗಳಿಂದ ಬಂದ ಭಕ್ತಾದಿಗಳಿಗೆ ಉಳಿಯಲು ವ್ಯವಸ್ಥೆ ಮಾಡಲಾಗಿದೆ. ಈ ದೇವಾಲಯಕ್ಕೆ ಶನಿವಾರ ಮತ್ತು ಅಮಾವಾಸ್ಯೆಯಂದು ವಿಶೇಷ ಪೂಜೆಯ ಜೊತೆಗೆ ಅಪಾರ ಜನಸ್ತೋಮ ಸೇರುತ್ತದೆ. ದಸರೆಯ ಸಮಯದಲ್ಲಿ ೧೫ ದಿನಗಳವರೆಗೆ ಶ್ರೀ ಆಂಜನೇಯನಿಗೆ ವಿಶೇಷ ಪೂಜೆಯನ್ನು ಸಲ್ಲಿಸುತ್ತಾರೆ. ಉತ್ಸವಮೂರ್ತಿಯನ್ನು ಸುಮಾರು ೨ ಲಕ್ಷ ಬೆಲೆ ಬಾಳುವ ಸಾಗುವನೆ ಮರದ ಮಂಟಪದಲ್ಲಿ ಪ್ರತಿಷ್ಠಾಪಿಸಿ ವಿಶೇಷ ಸಂದರ್ಭದಲ್ಲಿ ಪೂಜೆಯನ್ನು ಸಲ್ಲಿಸುತ್ತಾರೆ. ಆಯುಧಪೂಜೆ ಎಲ್ಲಾ ವಾಹನಗಳನ್ನು ಪೂಜೆ ಮಾಡಿಸುತ್ತಾರೆ. ಇತ್ತೀಚೆಗೆ ದುರ್ಗಾದೇವಿ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡುತ್ತಿದ್ದಾರೆ.

ಈ ದೇವಾಲಯವನ್ನು ಸಂಪೂರ್ಣ ಕಲ್ಲಿನಿಂದ ಕಟ್ಟುತ್ತಿದ್ದಾರೆ. ಸುಮಾರು ೩೦ ಲಕ್ಷ ರೂ.ಗಳನ್ನು ವಿನಿಯೋಗಿಸಿ ಈ ದೇವಾಲಯವನ್ನು ನಿರ್ಮಿಸುತ್ತಿದ್ದಾರೆ. ಅದೇ ರೀತಿ ಈ ಊರಿನಲ್ಲಿ ಅತ್ಯಂತ ಪ್ರಾಚೀನವಾದ ದೇವಾಲಯ ಈಶ್ವರ ದೇವಾಲಯವು ಕೂಡ ಹೆಚ್ಚು ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಈ ದೇವಾಲಯವು ಐತಿಹಾಸಿಕ ಮಹತ್ವವುಳ್ಳ ದೇವಾಲಯವಾಗಿದೆ.

ಈ ರೀತಿಯಾಗಿ ಕೊಕ್ಕನೂರು ಐತಿಹಾಸಿಕ ಮಹತ್ವ ಪಡೆದ ಸಿಹಿ ನೀರಿನ ಪುಷ್ಕರಣಿಯನ್ನು (ದೊಡ್ಡ ಬಾವಿ) ಯನ್ನು ಹೊಂದಿದೆ. ಈ ಪುಷ್ಕರಣಿ ಮೆಟ್ಟಿಲುಗಳಿಂದ ಕೂಡಿದ್ದು, ಸುಮಾರು ೧೩೦ ರಿಂದ ೧೫೦ ಅಡಿ ಆಳವಾಗಿದೆ. ಈ ಪುಷ್ಕರಣಿಯನ್ನು ೫ ವರ್ಷಗಳ ಹಿಂದೆ ಸ್ವಚ್ಛಗೊಳಿಸಿ ದುರಸ್ತಿ ಮಾಡಲಾಗಿದೆ. ಈ ಪುಷ್ಕರಣಿಯಿಂದ ನೀರನ್ನು ದೇವರ ಅಭಿಷೇಕಕ್ಕೆ ಬಳಸುತ್ತಾರೆ. ಈ ಪುಷ್ಕರಿಣಿಗೆ ದಸರಾ ಸಮಯದಲ್ಲಿ ದಾಸರ ಅಥವಾ ನಾಯಕ ಸಮುದಾಯದವರು ವಿಶೇಷ ಪೂಜೆಯನ್ನು ಸಲ್ಲಿಸುತ್ತಾರೆ. ಈ ಪುಷ್ಕರಿಣಿ ಬರಗಾಲದ ಸಮಯದಲ್ಲಿ ಅತ್ಯಂತ ಉಪಯುಕ್ತವಾದ ಪುಷ್ಕರಣಿಯಾಗಿದೆ ಈ ದೇವಾಲಯದ ಆಸ್ತಿಯು ಕೊಮ್ಮಾರನಹಳ್ಳಿ (ಹೆಳವನ ಕಟ್ಟೆ) ಯಲ್ಲಿ ಕೂಡ ಇದೆ. ಈ ಎಲ್ಲ ದೇವಾಲಯಗಳ ಉಸ್ತುವಾರಿಯನ್ನು ದೇವಾಲಯದ ಆಡಳಿತ ಮಂಡಳಿ ನೋಡಿಕೊಂಡು ಹೋಗುತ್ತದೆ. ಎಲ್ಲ ದೇವಾಲಯಗಳನ್ನು ಸಮಾನದೃಷ್ಟಿಯಿಂದ ಕಾಣಲಾಗುತ್ತದೆ.

ಕೊಕ್ಕನೂರಿನ ಪ್ರಾಚೀನತೆ

೧೨ನೇ ಶತಮಾನದ ಒಂದು ಶಾಸನದಲ್ಲಿ ಪ್ರಕಟಿಸಿದಂತೆ 'ಕೊಕ್ಕಲೂರು' ಎಂಬ ರೂಪದಲ್ಲಿ ದೊರೆಯುತ್ತದೆ. ಆದ್ದರಿಂದ ಈ ಊರು ೧೨ನೇ ಶತಮಾನಕ್ಕೂ ಮುಂಚೆಯೆ ಅಸ್ತಿತ್ವದಲ್ಲಿ ಇದ್ದಿರಬೇಕು. ಸುಪ್ರಸಿದ್ಧ ಭಕ್ತೆ ಹೆಳವನಕಟ್ಟೆ ಗಿರಿಯಮ್ಮ ಶ್ರೀ ಆಂಜನೇಯನ ಭಕ್ತಳಾಗಿದ್ದಳು. ಈ ದಾಖಲೆಗಳನ್ನು ಬಿಟ್ಟರೆ ಕೊಕ್ಕನೂರಿನ ಪ್ರಾಚೀನ ಚಾರಿತ್ರಿಕ ದಾಖಲೆಗಳು ಶಿಲಾಶಾಸನಗಳು ಇಲ್ಲ. ಆದರೆ ಮೊದಲನೆಯ ಉಲ್ಲೇಖ ಪ್ರಾಚೀನ ಕಾಲದಲ್ಲಿ ಕೊಕ್ಕಲೂರು ಎಂಬುದು ಕೊಕ್ಕನೂರು ಎಂಬ ಹೆಸರಿಗೆ ಪರಿವರ್ತನೆಯಾಗಿದೆ. ಇದಕ್ಕೆ ಪೂರಕವಾಗಿ ಈಶ್ವರ ದೇವಾಲಯ ಮತ್ತು ಕೋಣನ ತಲೆಯ ಕಾಲಕ್ರಮಣಿಕೆಯನ್ನು ನಾವು ನೋಡುವುದಾದರೆ ಕೊಕ್ಕನೂರಿನ ಇತಿಹಾಸ ೬ ಮತ್ತು ೭ನೇ ಶತಮಾನಕ್ಕೆ ಹಿಂದೆ ಸರಿಯುತ್ತದೆ. ಒಟ್ಟಾರೆಯಾಗಿ ಇದು ಐತಿಹಾಸಿಕ ಮಹತ್ವವುಳ್ಳ ಗ್ರಾಮವಾಗಿದೆ.

ಈಶ್ವರ ದೇವಾಲಯ

ಈ ದೇವಾಲಯವು ಕೊಕ್ಕನೂರಿನ ಉತ್ತರಕ್ಕೆ ಕಂಡು ಬರುತ್ತದೆ. ಈ ದೇವಾಲಯವು ಕೊಕ್ಕನೂರಿನಿಂದ ಕಡರನಾಯಕನಹಳ್ಳಿಯ ದಾರಿಯಲ್ಲಿ ಎಡಕ್ಕೆ ೨೦೦ ಕಿ.ಮೀ.

* ಇತಿಹಾಸ ಉಪನ್ಯಾಸಕರು, ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜು, ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.

ಅಂತರದಲ್ಲಿ ಇರುವುದು ಕಂಡುಬರುತ್ತದೆ. ಅಲ್ಲದೆ ಶ್ರೀ ಆಂಜನೇಯ ದೇವಾಲಯದ ಒಳಗಡೆಯಿಂದ ಕೂಡ ಈ ದೇವಾಲಯಕ್ಕೆ ಹೋಗಬಹುದು. ಈಶ್ವರ ದೇವಾಲಯದ ಮುಂದಿನ ದಾರಿಯು ಕೊಕ್ಕನೂರಿನ ಜಮೀನುಗಳಿಗೆ ಮತ್ತು ಮುಂದೆ ಸಾಗಿದರೆ ನಂದಿಗುಡಿಗೆ ಹೋಗುತ್ತದೆ. ಈ ದೇವಾಲಯವು ರಸ್ತೆಯ ಬಲಬದಿಗೆ ಕಂಡುಬರುತ್ತದೆ. ಈ ದೇವಾಲಯದ ಜಾಗ ರಸ್ತೆಗೆ ಹೊಂದಿಕೊಂಡಂತೆ ಸಂರಕ್ಷಣ ಗೋಡೆಯನ್ನು ಹಾಕಲಾಗಿದೆ. ಈ ಸಂರಕ್ಷಣ ಗೋಡೆಯ ಹಿಂದಿನ ಭಾಗದಲ್ಲಿ ಈ ದೇವಾಲಯ ಕಂಡುಬರುತ್ತದೆ. ಈ ದೇವಾಲಯದ ಜಾಗವು ೧ ಎಕರೆ ಇರಬಹುದು. ಈ ಜಾಗದ ಕೊನೆಯ ಸ್ವಲ್ಪ ಮುಂದೆ ಈ ದೇವಾಲಯವನ್ನು ನಿರ್ಮಾಣ ಮಾಡಲಾಗಿದೆ.

ಗರ್ಭಗುಡಿ : ಗರ್ಭಗುಡಿಯು ಪೂರ್ವಕ್ಕೆ ಮುಖ ಮಾಡಿದ್ದು ೭X೭ ಅಡಿ ವಿಸ್ತೀರ್ಣವನ್ನು ಹೊಂದಿದೆ. ತೊಲೆಯ ಭಾಗವು ೬.೬ ಅಡಿ ವಿಸ್ತೀರ್ಣವನ್ನು ಹೊಂದಿದೆ. ಭುವನೇಶ್ವರಿಯಲ್ಲಿ ಅರಳಿದ ಕಮಲವನ್ನು ನಾವು ನೋಡಬಹುದು, ಈ ಕಮಲವು ನೆಲದಿಂದ ೭.೯ ಅಡಿ ಎತ್ತರವಿದೆ. ಈ ಕಮಲದ ಹೂವಿನ ಮೊದಲ ಕೋನ ೬.೫X೬.೫ ಉದ್ದ ಮತ್ತು ಅಗಲವನ್ನು ಹೊಂದಿದೆ. ಎರಡನೆಯ ಕೋನ ೩.೩X೩.೩ ಉದ್ದ ಮತ್ತು ಅಗಲ ಹೊಂದಿದೆ. ಇದು ೨.೬ ಅಡಿ ಸುತ್ತಳತೆಯನ್ನು ಹೊಂದಿದೆ. ಈ ಕಮಲದ ಹೂ ಗೋಡೆಯಿಂದ ೨ ಅಡಿ ಸುತ್ತಳತೆಯನ್ನು ಹೊಂದಿದೆ. ಈ ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಈ ಲಿಂಗವು ೨.೫X೨.೫ ಅಗಲ ಮತ್ತು ಉದ್ದದ ಪೀಠದ ಮೇಲೆ ಇದೆ. ಪೀಠ ಮತ್ತು ಲಿಂಗದ ಮಧ್ಯ ೨ ಅಡಿ ವೃತ್ತಾಕಾರದ ಭಾಗವನ್ನು ನೋಡಬಹುದು. ಲಿಂಗದ ಎತ್ತರ ೧.೫ ಅಡಿ ಎತ್ತರವಿದೆ. ಲಿಂಗವು ಉಳಿದಂತೆ ಒಂದು ಅಡಿ ವಿನ್ಯಾಸವನ್ನು ಹೊಂದಿದೆ. ಉಳಿದಂತೆ ಪಾಣಿಪೀಠ ೨*೩ ಅಗಲ ಮತ್ತು ಉದ್ದವನ್ನು ಹೊಂದಿದೆ. ಈ ಲಿಂಗವು ಆರಂಭದ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿದ್ದು, ಅದು ಆ ಕಾಲದ ಲಕ್ಷಣಗಳನ್ನು ಹೋಲುತ್ತದೆ. ಲಿಂಗದ ಮೇಲೆ ಬ್ರಹ್ಮಸೂತ್ರದ ಗೆರೆಗಳನ್ನು ನಾವು ಗಮನಿಸಬಹುದು. ಲಿಂಗಕ್ಕೆ ಲೋಹದ ಶಿರಸ್ತ್ರಾಣವನ್ನು ನಾಗರಹೆಡೆಯೊಂದಿಗೆ ನಿರ್ಮಿಸಲಾಗಿದೆ. ನೋಡಲು ಸುಂದರವಾಗಿದೆ. ನೆಲವನ್ನು ಇತ್ತೀಚೆಗೆ ಸಿಮೆಂಟಿನಿಂದ ಮಾಡಲಾಗಿದೆ. ಲಿಂಗವನ್ನು ತೊಳೆದ ನೀರು ನಾಳದಿಂದ ಸಾಗಿ ಹೊರ ಹೋಗುವಂತೆ ವ್ಯವಸ್ಥೆ ಮಾಡಿದ್ದಾರೆ. ಒಟ್ಟಾರೆ ಗರ್ಭಗುಡಿಯು ನೋಡಲು ಸುಂದರವಾಗಿದ್ದು, ಬಲಿಷ್ಠವಾದ ಗೋಡೆಗಳನ್ನು ಹೊಂದಿದೆ. ಗರ್ಭಗುಡಿಯ ಬಾಗಿಲ ೨.೫ ಅಡಿ ಅಗಲ, ೫ ಅಡಿ ಎತ್ತರವಾಗಿದೆ. ಬಾಗಿಲು ಸರಳವಾದ ಅಲಂಕಾರದಿಂದ ಕೂಡಿದೆ. ಗರ್ಭಗುಡಿಯ ಎದುರಿಗೆ ಮತ್ತೊಂದು ಗರ್ಭಗುಡಿಯನ್ನು ನೋಡಬಹುದು. ಈ ಗರ್ಭಗುಡಿ ೫.೪X೭.೩ ಅಗಲ ಮತ್ತು ಉದ್ದವನ್ನು ನಾವು ಗಮನಿಸಬಹುದು. ಇದರ ಎತ್ತರ ೭.೭ ಅಡಿ ಇದೆ. ಈ ಗರ್ಭಗುಡಿಯಲ್ಲಿ ಸೂರ್ಯನ ವಿಗ್ರಹವಿದೆ. ಈ ವಿಗ್ರಹವು ನೋಡಲು ತುಂಬ ಸುಂದರವಾಗಿದೆ. ಈ ವಿಗ್ರಹವು ೨.೧೦ ಅಡಿ ಎತ್ತರವಾಗಿದೆ. ಇದರ ಅಗಲ ಸುಮಾರು ೨ ಅಡಿ ವಿಸ್ತೀರ್ಣವನ್ನು ಹೊಂದಿದೆ. ಈ ವಿಗ್ರಹದಲ್ಲಿ ೨ ಕೈಗಳಲ್ಲಿ ಕಮಲದ ಹೂವುಗಳನ್ನು ನಾವು ನೋಡಬಹುದು. ಸರಳ ಅಭರಣಗಳಿಂದ ಸೂರ್ಯನ ವಿಗ್ರಹ ಅಲಂಕೃತವಾಗಿದೆ. ಪಕ್ಕದಲ್ಲಿ ಸಣ್ಣ ಸ್ತ್ರೀ ವಿಗ್ರಹ ಸೂರ್ಯನ ಮೂರ್ತಿಗೆ ಹೊಂದಿಕೊಂಡಂತೆ ಕಂಡುಬರುತ್ತದೆ. ಇದು ಬಲಪಕ್ಕದಲ್ಲಿ ಕಂಡುಬರುತ್ತದೆ. ಎಡಪಕ್ಕದಲ್ಲಿ ಕಾರ್ತಿಕೇಯನು ನವಿಲಿನ ಮೇಲೆ ಕುಳಿತಂತೆ ಸುಂದರವಾಗಿ ಕೆತ್ತಲಾಗಿದೆ. ಇದು ಕೂಡ ಸೂರ್ಯನ ಪಕ್ಕದಲ್ಲಿ ಹೊಂದಿಕೊಂಡಂತೆ ಕೆತ್ತಲಾಗಿದೆ. ಸೂರ್ಯನ ಬಲಪಕ್ಕದಲ್ಲಿರುವ ಸ್ತ್ರೀಶಿಲ್ಪ ದುರ್ಗೆಯ ಶಿಲ್ಪವಿರಬೇಕು. ಈ ಎಲ್ಲಾ ಶಿಲ್ಪಗಳನ್ನು ನಾವು ಗಮನಿಸಿದರೆ ಇದು ತ್ರೈಪುರುಷ ದೇವಾಲಯವಿರಬಹುದೆಂದು ನಮಗೆ ತಿಳಿದುಬರುತ್ತದೆ. ಸೂರ್ಯನ ಪೀಠದ ಕೆಳಗಡೆ ಗಜಲಕ್ಷ್ಮಿಯ ಶಿಲ್ಪವನ್ನು ನಾವು ಕಾಣಬಹುದು. ಇದು ೨ ಆನೆಗಳನ್ನು ಹೊಂದಿಕೊಂಡಂತೆ ಮಧ್ಯದಲ್ಲಿ ಗಜಲಕ್ಷ್ಮಿಯನ್ನು ಕಾಣಬಹುದು. ಈ ವಿಗ್ರಹವನ್ನು ಪೀಠಕ್ಕೆ ಹೊಂದಿಕೊಂಡಂತೆ ನಿಲ್ಲಿಸಲಾಗಿದೆ. ಈ ಶಿಲ್ಪವು ಸುಸ್ಥಿತಿಯಲ್ಲಿ ಕಂಡುಬರುತ್ತದೆ. ಈ ಗರ್ಭಗುಡಿಯ ಬಾಗಿಲು ೨.೨ ಅಗಲ ೪.೧೦ ಅಡಿ ಎತ್ತರವಾಗಿದೆ ಬಾಗಿಲಿನ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ವಿಗ್ರಹವನ್ನು ನಾವು ನೋಡಬಹುದು. ಈ ಲಲಾಟಬಿಂಬದಲ್ಲಿ ಕಂಡುಬರುವ ನಾಲ್ಕು ಆನೆಗಳ ಚಿತ್ರದ ಲಕ್ಷಣಗಳು ಪ್ರಾಚೀನ ಕಾಲಕ್ಕೂ ಹಿಂದೆ ಸರಿಯುತ್ತವೆ. ಕಲ್ಯಾಣಿ ಚಾಲುಕ್ಯರ ಪ್ರಾರಂಭದ ದೇವಾಲಯಗಳಲ್ಲಿ ಈ ಲಕ್ಷಣಗಳನ್ನು ನಾವು ನೋಡಬಹುದು. ಈ ಗರ್ಭಗುಡಿಯ ಸಭಾಮಂಟಪಕ್ಕೆ ಹೊಂದಿಕೊಂಡಂತೆ ಕಂಡುಬರುತ್ತದೆ. ಶಿವಲಿಂಗಕ್ಕೆ ವಿರುದ್ಧ ದಿಕ್ಕಿನಲ್ಲಿ ಈ ಸೂರ್ಯನ ಗರ್ಭಗುಡಿ ಕಂಡುಬರುತ್ತದೆ. ಭುವನೇಶ್ವರಿ ಸರಳವಾಗಿದೆ.

ಅಂತರಾಳ : ಮೂಲ ಗರ್ಭಗುಡಿಯ ಮುಂದೆ ನಾವು ಅಂತರಾಳ ವನ್ನು ನೋಡಬಹುದು, ಅಂತರಾಳದ ಎತ್ತರ ೭.೬ ಅಡಿ, ಅಗಲ ೭.೧ ಅಡಿ, ಮತ್ತು ಉದ್ದ ೭.೪ ಅಡಿ ಇದೆ. ಇಲ್ಲಿ ಭುವನೇಶ್ವರಿಯು ಸರಳವಾದ ಅಲಂಕಾರಗಳನ್ನು ಒಳಗೊಂಡಿದೆ. ೪ ಅಡಿ ಉದ್ದ ೩ ಅಡಿ ಅಗಲದ ಪೀಠದ

ಮೇಲೆ ಎರಡು ಜೋಡಿ ನಂದಿಗಳನ್ನು ಇರಿಸಲಾಗಿದೆ. ಈ ನಂದಿಗಳು ಸರಳಹಾರಗಳಿಂದ ಅಲಂಕೃತಗೊಂಡಿವೆ. ಶಿವಲಿಂಗಕ್ಕೆ ನೇರವಾದ ನಂದಿಯು ಮೂಲನಂದಿ ಇರಬೇಕು. ಬಲಪಕ್ಕದಲ್ಲಿರುವ ಇನ್ನೊಂದು ನಂದಿಯನ್ನು ಬೇರೆ ಕಡೆಯಿಂದ ತಂದು ಇಟ್ಟಿರಬೇಕು ಎಂದು ತಿಳಿದುಬರುತ್ತದೆ. ಅಂತರಾಳದ ಬಾಗಿಲುಗಳನ್ನು ಸರಳವಾಗಿ ಕೆತ್ತಲಾಗಿದೆ. ಲಲಾಟದಲ್ಲಿ ಎರಡು ಆನೆಗಳನ್ನು ಹೊಂದಿಕೊಂಡಂತೆ ಸುಂದರವಾದ ಗಜಲಕ್ಷ್ಮಿಯನ್ನು ನಾವು ಕಾಣಬಹುದು. ಈ ಬಾಗಿಲನ್ನು ಪ್ರವೇಶಿಸಿದರೆ ಸಭಾಮಂಟಪಕ್ಕೆ ಬರಬಹುದು.

ಸಭಾಮಂಟಪ : ಈ ಸಭಾಮಂಟಪದ ವಿಸ್ತೀರ್ಣ ೨೦.೮X೨೦.೮ ಅಡಿ ಉದ್ದ ಮತ್ತು ಅಗಲವನ್ನು ಹೊಂದಿದೆ. ಸಭಾಮಂಟಪದ ಮಧ್ಯದಲ್ಲಿ ನಾಲ್ಕು ಕಂಬಗಳು ಅರ್ಧ ಅಡಿ ಕಟ್ಟೆಯ ಮೇಲೆ ನಿರ್ಮಿತವಾಗಿವೆ. ಈ ಮಂಟಪದಲ್ಲಿ ೧೨ ಅರ್ಧ ಕಂಬಗಳು ಇವೆ. ಭುವನೇಶ್ವರಿಯು ಅರಳಿದ ಕಮಲವನ್ನು ಹೊಂದಿದ ಚಿತ್ರವನ್ನು ನಾವು ಕಾಣಬಹುದು. ಈ ಕಮಲವು ೨ ಅಡಿ ,ಸುತ್ತಳತೆಯನ್ನು ಹೊಂದಿದೆ. ಮಧ್ಯದಲ್ಲಿರುವ ಕಂಬಗಳು ೧೧.೩X೧೧.೩ ವಿಸ್ತೀರ್ಣದ ಕಟ್ಟೆಯ ಮೇಲೆ ನಿರ್ಮಿಸ ಲಾಗಿದೆ. ಇದರ ಪಕ್ಕದಲ್ಲಿ ಕಂಬದಿಂದ ಗೋಡೆಯವರೆಗೆ ತಗ್ಗಾದ ಪ್ರದೇಶವಿದೆ. ೪ ಕಂಬಗಳು ೬.೮ ಅಡಿ ಎತ್ತರವನ್ನು ಹೊಂದಿದೆ. ಕೆಳಭಾಗ ದಪ್ಪವಾದ ಚೌಕ ಭಾಗವನ್ನು ಹೊಂದಿವೆ. ಅದರ ಮೇಲೆ ಸಿಲಿಂಡರಿನ ಭಾಗ ೪.೫ ಅಡಿ ವಿಸ್ತೀರ್ಣವನ್ನು, ಕುತ್ತಿಗೆ ಭಾಗ ೨.೯ ಅಡಿ ಅಗಲವನ್ನು ಹೊಂದಿದೆ. ನಾಲ್ಕು ಕಂಬಗಳಿಂದ ಗೋಡೆಗೆ ೫.೬ ಅಡಿ ಅಂತರವಿದೆ. ಈ ಭಾಗದಲ್ಲಿ ಭುವನೇಶ್ವರಿಯ ಎತ್ತರ ೭.೮ ಅಡಿ ಇದ್ದು ನಾಲ್ಕು ಕಂಬಗಳ ಮಧ್ಯದಲ್ಲಿ ಭುವನೇಶ್ವರಿಯ ಎತ್ತರ ೭.೨ ಇದೆ. ಕಮಲದ ಹೂವಿನ ಭಾಗದ ಎತ್ತರ ೭.೮ ಅಡಿ ಇದೆ. ನಾಲ್ಕು ಕಂಬಗಳ ಮಧ್ಯದ ಭಾಗ ೭.೭*೭.೭ ಅಡಿ ಎತ್ತರವನ್ನು ನಾವು ನೋಡಬಹುದು, ಮೂರು ಚೌಕದ ಮಧ್ಯದಲ್ಲಿ ಈ ಕಮಲದ ಹೂವನ್ನು ನಾವು ನೋಡಬಹುದು. ಮೊದಲ ಚೌಕ ಭಾಗ ೫.೭*೫.೭ ಅಡಿ ವಿಸ್ತೀರ್ಣವನ್ನು, ಎರಡನೇ ಚೌಕ ಭಾಗ ೩.೧೦*೩.೧೦ ಅಡಿ ವಿಸ್ತೀರ್ಣವನ್ನು (ಉದ್ದ ಮತ್ತು ಅಗಲ) ಮೂರನೇ ಚೌಕ ಭಾಗ ೨.೯*೨.೯ ಅಡಿ ಅಂತರದಲ್ಲಿ ನಾವು ನೋಡಬಹುದು. ಅಂತರಾಳದ ಬಾಗಿಲಿನಿಂದ ಸೂರ್ಯದೇವರ ಗರ್ಭಗುಡಿ ೨೧.೬ ಅಡಿ ದೂರದಲ್ಲಿ ಇದೆ. ನಾಲ್ಕು ಕಂಬಗಳು ಮತ್ತು ಗೋಡೆಯ ಮಧ್ಯೆ ೫.೬ ಅಡಿ ಅಗಲವಾದ ಜಾಗವನ್ನು ಬಿಡಲಾಗಿದೆ. ಈ ಸಭಾಮಂಟಪಕ್ಕೆ ದಕ್ಷಿಣಾಭಿಮುಖವಾಗಿ ದ್ವಾರ ಮಾಡಲಾಗಿದೆ.

ದೇಗುಲದ ಶಿಲ್ಪಗಳು

ಗಣೇಶನ ಶಿಲ್ಪ : ಇದು ಸಭಾಮಂಪದ ಒಳಗಡೆ ಕಂಡುಬರುತ್ತದೆ. ಈ ಶಿಲ್ಪವು ಅಂತರಾಳದ ಎಡಪಕ್ಕದಲ್ಲಿ ಕಂಡುಬರುತ್ತದೆ. ಈ ಲಕ್ಷಣಗಳು ಕೂಡ ತುಂಬ ಪ್ರಾಚೀನ ಕಾಲಕ್ಕೆ ಹೊಂದಿಕೆ ಯಾಗುತ್ತವೆ. ಈ ಶಿಲ್ಪವು ನೋಡಲು ತುಂಬ ಸುಂದರವಾಗಿದೆ. ಇದರ ಎತ್ತರ ೩.೫ ಇದ್ದು ೨ ಅಡಿ ವಿಸ್ತೀರ್ಣವನ್ನು ಹೊಂದಿದೆ. ಈ ಗಣೇಶ ವಿಗ್ರಹವು ಸುಸ್ಥಿತಿಯಲ್ಲಿದೆ.

ನಾಗರ ಶಿಲ್ಪಗಳು : ಒಂದು ಸುಂದರ ಜೋಡಿನಾಗರ ಶಿಲ್ಪವನ್ನು ತಳಕು ಹಾಕಿಕೊಂಡಂತೆ ಕೆತ್ತಲಾಗಿದೆ. ಈ ಶಿಲ್ಪವು ೨X೧ ಅಡಿ ಎತ್ತರವಾಗಿದ್ದುದು ಕಂಡುಬರುತ್ತದೆ. ಇನ್ನೊಂದು ಒಂದೇ ನಾಗರಶಿಲ್ಪವನ್ನು ಕೆತ್ತಲಾಗಿದೆ. ಇದರ ಹೆಡೆ ವಿಶಾಲವಾಗಿದೆ. ಇದು ಕೂಡ ೨*೧ ಎತ್ತರ ಮತ್ತು ಅಗಲವನ್ನು ಹೊಂದಿದೆ.

ಹೊರಗಡೆ ಇರುವ ಶಿಲ್ಪಗಳು

ಸಭಾಮಂಟಪದ ದಕ್ಷಿಣಾಭಿಮುಖದ್ವಾರದ ಎರಡು ಪಕ್ಕದಲ್ಲಿ ಎರಡು ಶಿಲ್ಪಗಳನ್ನು ನಾವು ಕಾಣಬಹುದು. ಎರಡು ಪಕ್ಕದಲ್ಲಿರುವ ಶಿಲ್ಪವು ಸ್ವಲ್ಪ ಹಾಳಾಗಿದೆ. ಇದರ ಕೆಲವು ಲಕ್ಷಣಗಳನ್ನು ನಾವು ಗಮನಿಸಿದರೆ ಇದು ಮಹಾಕಾಳಿಯ ಶಿಲ್ಪವಿರಬೇಕೆಂದು ಅನುಮಾನ ಬರುತ್ತದೆ. ದೇವಿಯ ಕೆಳಭಾಗದ ಎರಡು ಕಡೆ ಸಣ್ಣ ಶಿಲ್ಪಗಳು ಕಂಡುಬರುತ್ತವೆ. ಇವುಗಳು ಕೂಡ ಅಸ್ಪಷ್ಟವಾಗಿರುವ ಕಾರಣ ಇದು ಹಾಳಾಗಿದ್ದರಿಂದ ಇದು ಪೂಜೆಗೆ ಯೋಗ್ಯವಲ್ಲ ಎಂದು ಹೊರಗಡೆ ತಂದಿಟ್ಟಿರಬಹುದು. ಇದಕ್ಕೆ ಎಣ್ಣೆಯನ್ನು ಹಾಕಿರುವುದರಿಂದ ಇದನ್ನು ಗುರುತಿಸುವುದು ಕಷ್ಟ ಮತ್ತು ಜೀರ್ಣೋದ್ಧಾರ ಮಾಡುವ ಕಾಲಕ್ಕೆ ತಂದು ಇಟ್ಟಿರುವ ಸಾಧ್ಯತೆ ಇದೆ. ಇದರ ಎತ್ತರ ೩.೬ ಅಡಿ ಇವೆ. ಸುಮಾರು ೧.೬ ಅಡಿ ಅಗಲವಾಗಿದೆ.

ಬಲಪಕ್ಕದಲ್ಲಿರುವ ಶಿಲ್ಪವು ತುಂಬ ಇತ್ತೀಚಿನದು ಸುಮಾರು ೧೬ ಮತ್ತು ೧೭ನೇ ಶತಮಾನದ ಲಕ್ಷಣಗಳನ್ನು ಹೊಂದಿದೆ. ಇದು ೨.೬ ಅಡಿ ಎತ್ತರವಾಗಿದೆ. ಸ್ವಲ್ಪ ಭಾಗ ಪೀಠದಲ್ಲಿ ಹೋಗಿರುವ ಸಾಧ್ಯತೆ ಇದೆ. ಈ ಶಿಲ್ಪವು ಮುಖದ ಮೇಲೆ ಮೀಸೆಯನ್ನು ಹೊಂದಿದೆ. ಬಲಗೈಯಲ್ಲಿ ಕತ್ತಿಯನ್ನು ಹಿಡಿದಂತೆ ಇದ್ದು ಇದು ಹಾಳಾಗಿದೆ. ಎಡಗೈಯಲ್ಲಿ ಕಮಲ ಅಥವಾ ಬಿಲ್ಲನ್ನು ಹಿಡಿದಿರುವಂತೆ ಕೆತ್ತಲಾಗಿದೆ. ಮತ್ತು ದೇಹದ ಲಕ್ಷಣಗಳು ಮತ್ತು ಬಟ್ಟೆಯ ಲಕ್ಷಣಗಳನ್ನು ತುಂಬ ಸೊಗಸಾಗಿ ಕೆತ್ತಲಾಗಿದೆ.

ಕೋಣನ ತಲೆ

ಈ ಶಿಲ್ಪವು ಪ್ರಕಾರಗೋಡೆಯ ಬಲಪಕ್ಕದ ಹೊರಗಡೆ ಕಂಡುಬರುತ್ತದೆ. ಇದು ಕಲ್ಲುಹಾಸಿಗೆ ಮೇಲೆ ೨ ಅಡಿ ವಿಸ್ತೀರ್ಣವನ್ನು ಹೊಂದಿದೆ. ಇದು ಸುಮಾರು ೬ ಮತ್ತು ೭ನೇ ಶತಮಾನಕ್ಕೆ ಸೇರಿದ ಶಿಲ್ಪವೆನ್ನಬಹುದಾಗಿದೆ. ಇದರ ಮುಖ್ಯ ಉದ್ದೇಶ ದೇವಿ ಆರಾಧನೆ. ಇದನ್ನು ಮಹಾಕಾಳಿಯ ಸಂಕೇತವಾಗಿ ಬಳಸುತ್ತಾರೆ. ಈ ದೇವಿಯ ಆರಾಧಕರು ಮಹಾಶಾಕ್ತರು ಎಂಬುದು ತಿಳಿದುಬರುತ್ತದೆ. ಇದನ್ನು ನಿತ್ಯ ಪೂಜೆ ಮಾಡುತ್ತಾ ಬಂದಿದ್ದಾರೆ.

ಈ ದೇವಾಲಯದ ಪ್ರಕಾರ ಗೋಡೆಯ ಆವರಣಗಳಲ್ಲಿ ಬಹಳ ಪ್ರಾಚೀನವಾದ ಅರಳಿಮರವನ್ನು ನಾವು ಕಾಣಬಹುದು.

ಜೀರ್ಣೋದ್ಧಾರ

ಈ ದೇವಾಲಯುವನ್ನು ೧೯೮೧ರಲ್ಲಿ ಮತ್ತು ೨೦೦೬ರಲ್ಲಿ ಜೀರ್ಣೋದ್ಧಾರ ಮಾಡಲಾಗಿದೆ. ಈ ದೇವಾಲಯದ ಸೌಂದರ್ಯಕ್ಕೆ ಧಕ್ಕೆ ಬಾರದ ಹಾಗೆ ಜೀರ್ಣೋದ್ಧಾರ ಮಾಡಿ, ಈ ದೇವಾಲಯದ ಸುತ್ತಲು ಗೋಡೆಯನ್ನು ಕಟ್ಟಿ, ದೇವಾಲಯದ ಬಾಗಿಲುಗಳಿಗೆ ಬೀಗ ಹಾಕುವ ವ್ಯವಸ್ಥೆಯನ್ನು ಮಾಡುವುದರ ಮೂಲಕ ಈ ದೇವಾಲಯವನ್ನು ರಕ್ಷಿಸಲಾಗಿದೆ.

ಪೂಜಾರಿಗಳು

ಈ ದೇವಾಲಯುದ ಪೂಜಾಕಾರ್ಯಗಳನ್ನು ಕೋಟೆಮಲ್ಲೂರಿನ ಭದ್ರಪ್ಪನವರು ಮಾಡುತ್ತಾ ಬಂದಿದ್ದಾರೆ. ಇವರ ವಂಶಸ್ಥರೇ ದೇವಾಲಯದ ಪೂಜಾಕಾರ್ಯಗಳನ್ನು ನೆರವೇರಿಸುತ್ತಾ ಬಂದಿದ್ದಾರೆ. ಈಗ ಭಧ್ರಪ್ಪನವರ ಅಳಿಯ ಸ್ವಾಮಿತಿ ಬಸವರಾಜಪ್ಪನವರು ಪೂಜಾಕಾರ್ಯವನ್ನು ಮತ್ತು ದೇವಾಲಯದ ಮೇಲ್ವಿಚಾರಣೆಯನ್ನು ನೋಡಿಕೊಂಡು ಹೋಗುತ್ತಿದ್ದಾರೆ. ಈ ದೇವಾಲಯಕ್ಕೆ ಯಾವುದೇ ರೀತಿಯ ಆದಾಯವಿರುವುದಿಲ್ಲ. ಬಂದದ್ದರಲ್ಲೇ ಪೂಜಾಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಶಿವರಾತ್ರಿಯ ಸಮಯದಲ್ಲಿ ಜಾಗರಣೆಯ ವಿಧಿ ವಿಧಾನಗಳನ್ನು ಮತ್ತು ಶ್ರಾವಣ ಮಾಸದಲ್ಲಿ ವಿಶೇಷ ಪೂಜೆಯನ್ನು ನೆರವೇರಿಸುತ್ತ ಬಂದಿದ್ದಾರೆ. ಅದೇ ರೀತಿ ಪ್ರತಿ ಸೋಮವಾರದಂದು ಅಭಿಷೇಕವನ್ನು ಮಾಡುತ್ತಾ ಬಂದಿದ್ದಾರೆ.

ಈ ದೇವಾಲಯವು ಆರಂಭದ ಕಲ್ಯಾಣಿ ಚಾಲುಕ್ಯರ ಕಾಲದ ಲಕ್ಷಣಗಳನ್ನು ಹೊಂದಿದೆ. ಈ ದೇವಾಲಯುವನ್ನು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಿಸಿರಬೇಕು. ನಮಗೆ ಶಾಸನಗಳ ಆಧಾರ ಸಿಗುವುದಿಲ್ಲ. ಈ ಲಕ್ಷಣಗಳನ್ನು ಗಮನದಲ್ಲಿ ಇರಿಸಿಕೊಂಡು ಈ ದೇವಾಲಯ ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದ್ದು ಎಂಬುದಾಗಿ ಹೇಳಬಹುದು. ಈ ದೇವಾಲಯದ ಪಕ್ಕದಲ್ಲಿರುವ ಕೋಣನ ತಲೆ ೬ ಮತ್ತು ೭ನೇ ಶತಮಾನಕ್ಕೆ ಸಂಬಂಧಿಸಿದ್ದರೆ, ದೇವಾಲಯದಲ್ಲಿರುವ ಶಿವಲಿಂಗ, ಗಣೇಶ, ನಂದಿ, ಸೂರ್ಯನ ವಿಗ್ರಹಗಳು ಆರಂಭದ ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದವುಗಳಾಗಿವೆ. ನಂತರದಲ್ಲಿ ಇನ್ನೊಂದು ನಂದಿ, ನಾಗರಶಿಲ್ಪಗಳು ೧೦ ಮತ್ತು ೧೧ನೇ ಶತಮಾನಕ್ಕೆ ಸಂಬಂಧಿಸಿದವುಗಳಾಗಿವೆ. ಬಾಗಿಲ ಪಕ್ಕದಲ್ಲಿರುವ ಶಿಲ್ಪವು ೧೬ ಮತ್ತು ೧೭ನೇ ಶತಮಾನಕ್ಕೆ ಸಂಬಂಧಿಸಿದ್ದಾಗಿವೆ. ಅದನ್ನು ಹೊರತುಪಡಿಸಿ ಉಳಿದಂತೆ ಎಲ್ಲಾ ಶಿಲ್ಪಗಳು ಮತ್ತು ದೇವಾಲಯದ ಲಕ್ಷಣಗಳನ್ನು ನಾವು ಗಮನಿಸಿದರೆ ೭ನೇ ಶತಮಾನದಿಂದ ೧೪ನೇ ಶತಮಾನದವರೆಗೆ ಅಭಿವೃದ್ಧಿಯನ್ನು ಅಥವಾ ಜೀರ್ಣೋದ್ಧಾರವನ್ನು ಕಂಡಿರಬಹುದೆಂದು ಹೇಳಬಹುದು. ಈ ದೇವಾಲಯವನ್ನು ನಾವು ಅವಲೋಕಿಸಿದಾಗ ಈ ದೇವಾಲಯವು ಐತಿಹಾಸಿಕ ಮಹತ್ವವುಳ್ಳ ದೇವಾಲಯವಾಗಿದೆ.

(ಈ ಪ್ರಬಂಧವನ್ನು ರಚನೆ ಮಾಡುವಲ್ಲಿ ಸಹಕರಿಸಿದ ಡಾ. ಬಿ. ರಾಜಶೇಖರಪ್ಪ, ಡಾ. ಜಗದೀಶ, ಡಾ. ಲಕ್ಷ್ಮಣ ತೆಲಗಾವಿ ಅವರಿಗೂ ಕ್ಷೇತ್ರಕಾರ್ಯ ಮಾಡುವಾಗ ಸಹಕರಿಸಿದ ರಾಜು ಹೆಚ್.ಪಿ. ಈಶ್ವರ ದೇವಾಲಯದ ಪೂಜಾರಿಗಳಿಗೂ ಮತ್ತು ಕೊಕ್ಕನೂರಿನ ಗ್ರಾಮಸ್ಥರಿಗೂ ನಾನು ಆಭಾರಿಯಾಗಿರುತ್ತೇನೆ.)

ಆಧಾರಸೂಚಿ

೧. ಶ್ರೀಕಾಂತ ಶಾಂಚಿ. ಶ್ರೀಕೊಕ್ಕನೂರು ಶ್ರೀಆಂಜನೇಯ ಸ್ವಾಮಿಯ ಮಹಾತ್ಮೆ, ಲಲಿತಾಂಬ ಪ್ರಕಾಶನ. ಹರಿಹರ. ೨೦೦೧.
೨. ಕ್ಷೇತ್ರ ಕಾರ್ಯ ವರದಿ.

ಡಾ. ಕೆ.ಎನ್. ಮೋಹನ್*

ಅರಸೀಕೆರೆಯ ಈಶ್ವರ ದೇವಾಲಯ

'ಅರಸೀಕೆರೆ' ಒಂದು ಇತಿಹಾಸ ಪ್ರಸಿದ್ಧ ಸ್ಥಳವಾಗಿದ್ದು ಸುಮಾರು ೧೦-೧೧ನೆಯ ಶತಮಾನದಿಂದಲೂ ಆಳರಸರ ನೆಲೆವೀಡಾಗಿದ್ದು, ಹಲವು ವಿದ್ಯಾಮಾನಗಳಿಗೆ ಹೆಸರುವಾಸಿಯಾಗಿದ್ದು ಶಾಸನದಿಂದ ತಿಳಿಯುತ್ತದೆ. ಅರಸೀಕೆರೆ ಶಾಸನದಲ್ಲಿ ತಿಳಿಸಿರುವಂತೆ ಚಾಲುಕ್ಯ ಅರಸಿಯೊಬ್ಬಳು ಕೆರೆಯನ್ನು ಕಟ್ಟಿಸಲಾಗಿ ಈ ನಗರಕ್ಕೆ ಅರಸೀಯಕೆರೆ ಎಂಬ ಹೆಸರು ಬಂದಿರುವಂತೆ ತೋರುತ್ತದೆ. ೧೧ನೆಯ ಶತಮಾನದಲ್ಲಿ ಹೊಯ್ಸಳ ವಿನಯಾದಿತ್ಯನಿಗೆ ಈ ಪ್ರದೇಶ ಸೇರಿದ್ದು, ಹುಲಿಯನ್ನು ಕೊಲ್ಲುತ್ತಿರುವ ಲಾಂಛನವನ್ನು ಹೊಂದಿದ್ದರಿಂದ 'ಪುಲ್ಲರಸಿಕೆರೆ' ಎಂದೂ 'ನವದ್ವಾರತಿ' ಎಂದೂ ಇದನ್ನು ಕರೆಯಲಾಗಿದೆ. ಹೊಯ್ಸಳರ ಕಾಲದಲ್ಲಿ ಈ ಪಟ್ಟಣವನ್ನು 'ಬಲ್ಲಾಳಪುರ' ಎಂದು ಕರೆಯಲಾಗುತ್ತಿತ್ತು. ಎರಡನೇ ಬಲ್ಲಾಳನ ಅಂತ್ಯ ಕಾಲದಲ್ಲಿ ಇತರ ಹೊಯ್ಸಳ ನಗರಗಳಂತೆ ಅರಸೀಕೆರೆ ಕೂಡ ವಾಣಿಜ್ಯ ಕೇಂದ್ರವಾಗಿತ್ತು.

ಈ ದೇವಾಲಯವು ನಗರದಿಂದ ಪೂರ್ವಕ್ಕೆ ಸುಮಾರು ಒಂದೂವರೆ ಕಿ.ಮೀ. ದೂರದಲ್ಲಿದೆ. ಕ್ರಿ.ಶ. ೧೨೨೦ ರಲ್ಲಿ ಎರಡನೇ ಬಲ್ಲಾಳನ ಆಳ್ವಿಕೆಯ ಕೊನೆಯ ಭಾಗದಲ್ಲಿ ಈ ದೇವಾಲಯದ ನಿರ್ಮಾಣವಾಗಿದೆ. ಇದೊಂದು ಏಕಕೂಟ ದೇವಾಲಯವಾಗಿದೆ. ಇದು ಪೂರ್ವಾಭಿಮುಖವಾಗಿದ್ದು ನಕ್ಷತ್ರಾಕಾರದ ತಳವಿನ್ಯಾಸವನ್ನು ಹೊಂದಿದೆ. ದೇವಾಲಯವು



ದೇವಾಲಯದ ಹೊರನೋಟ

* ಇತಿಹಾಸ ಉಪನ್ಯಾಸಕರು, ಸ.ಪ್ರದ. ಕಾಲೇಜು, ಹುಲ್ಲಹಳ್ಳಿ, ನಂಜನಗೂಡು ತಾಲ್ಲೂಕು.



ದೇವಾಲಯದ ಪಾರ್ಶ್ವನೋಟ

ಗರ್ಭಗುಡಿ, ಸುಖನಾಸಿ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಹೊರಭಾಗದಲ್ಲಿ ಹೊಯ್ಸಳರ ಕಾಲದ ಅಧಿಷ್ಠಾನದ ಮೇಲೆ ಅಲಂಕಾರಿಕ ಭಿತ್ತಿ ಇದೆ. ಈ ಭಿತ್ತಿಯಲ್ಲಿ ಶಿವನ ಲೀಲೆಯ ನಿರೂಪಣಾ ಶಿಲ್ಪಗಳನ್ನು ಕೆತ್ತಲಾಗಿದೆ. ಭಿತ್ತಿಯ ಮೇಲ್ಭಾಗದಲ್ಲಿ ಸುತ್ತಲೂ ಕಪೋತವಿದೆ. ದೇವಾಲಯದ ಮೇಲ್ಭಾಗದಲ್ಲಿ ದಕ್ಷಿಣ ಶೈಲಿಯ ಶಿಖರವಿದೆ. ದೇವಾಲಯದ ಉತ್ತರಕ್ಕೆ ಕತ್ತಮೇಶ್ವರ ಮತ್ತು ಭಲ್ಲೇಶ್ವರ ಎಂಬ ಹೊಯ್ಸಳೇತರ ದೇವಾಲಯವಿದೆ.

ಅಧಿಷ್ಠಾನ : ಈ ದೇವಾಲಯವು ಜಗತಿ ಇರದ ದೇವಾಲಯವಾಗಿದ್ದು ಅಲ್ಲಲ್ಲಿ ಯಕ್ಷ; ಯಕ್ಷಿಯರ ಉಬ್ಬು ಶಿಲ್ಪಗಳಿವೆ. ಹೊಯ್ಸಳ ಶೈಲಿಯ ಸಾಮಾನ್ಯ ಗುಣವಾದ ಅಲಂಕೃತ ಪಟ್ಟಿಕೆಗಳು ಸಹ ಇಲ್ಲಿ ಕಂಡುಬರುವುದಿಲ್ಲ.

ಭಿತ್ತಿ ಮತ್ತು ಭಿತ್ತಿ ಶಿಲ್ಪಗಳು : ಹೊರಭಿತ್ತಿಯು ಸಾಲಂಕೃತವಾಗಿದ್ದು ಅಧಿಷ್ಠಾನದಿಂದ ಕಪೋತದವರೆಗೆ ನಕ್ಷತ್ರಾಕಾರದ ಇಲ್ಲವೇ ಚೌಕಾಕಾರದ ಕಂಬಗಳಿದ್ದು ಅವು ಪಾದದಿಂದ ಶಿರದವರೆಗೂ ಅಲಂಕೃತವಾಗಿದ್ದು, ತಳಭಾಗದಲ್ಲಿ ಯಕ್ಷನ ಉಬ್ಬು ಶಿಲ್ಪಗಳಿದ್ದರೆ ಅಧಿಷ್ಠಾನದ ಮೇಲೆ ದೇವಬಿಂಬಗಳನ್ನು



ಭಿತ್ತಿ ರಕ್ಷಣೆಗೆ ನಕ್ಷತ್ರಾಕಾರದ ಕಪೋತ

ಶಿಲ್ಪಿಸಲಾಗಿದೆ. ದೇವತಾಶಿಲ್ಪಗಳ ಎಡ ಮತ್ತು ಬಲಭಾಗಗಳಲ್ಲಿ ಚಿಕ್ಕ ಚಿಕ್ಕ ಶಿಖರಗಳಿವೆ. ಭಿತ್ತಿಯಲ್ಲಿ ನೂರಕ್ಕೂ ಅಧಿಕ ದೇವತಾಮೂರ್ತಿಗಳಿದ್ದು ಮೂಲತಃ ಶೈವ ದೇವಾಲಯವಾದರೂ ಭಿತ್ತಿಯಲ್ಲಿ ಕೆಲವೇ ಕೆಲವು ಶೈವಮೂರ್ತಿ ಹೊರತುಪಡಿಸಿದರೆ ಉಳಿದೆಲ್ಲವು ವೈಷ್ಣವಮೂರ್ತಿಗಳಿರುವುದು ದೇವಾಲಯದ ವಿಶೇಷವಾಗಿದೆ. ಎಲ್ಲಾ ಶಿಲ್ಪಗಳು ಭಗ್ನವಾಗಿರುವುದು ಇನ್ನು ವಿಶೇಷವಾಗಿದೆ. ಮುಖ್ಯವಾಗಿ ಲಕ್ಷ್ಮಿ ವಿಷ್ಣುವಿನ ಶಿಲ್ಪ, ಸಪ್ತ ಮಾತೃಕೆಯರ ಶಿಲ್ಪ, ಪಾರ್ವತಿ ಮತ್ತು ಶಿವನ ಮೂರ್ತಿಗಳು. ಭಿತ್ತಿಯಲ್ಲಿನ ಎಲ್ಲ ಮೂರ್ತಿಗಳ



ನಿರಾಡಂಬರ ಅಧಿಷ್ಠಾನ ಮತ್ತು ಕಕ್ಷಾಸನದ ಹೊರಚಾಚು

ಪೀಠದಲ್ಲಿ ಶಿಲ್ಪಿಗಳ ಹೆಸರು ಹಾಗೂ ಶಿಲ್ಪಗಳ ಹೆಸರುಗಳನ್ನು ಕೆತ್ತಲಾಗಿದೆ. ಪ್ರತಿಯೊಂದು ಶಿಲ್ಪದ ಎಡಬದಿಯಲ್ಲಿ ಪರಿಚಾರಕರು ಸಾಮಾನ್ಯವಾಗಿ ಕಂಡುಬರುತ್ತಾರೆ. ಲಕ್ಷ್ಮೀನಾರಾಯಣರು ಗರುಡ ವಾಹನದೊಂದಿಗೆ ಮಾಧವ, ಗೋವಿಂದ, ವಿಷ್ಣು, ಮಧುಸೂದನ, ತ್ರಿವಿಕ್ರಮ, ವಾಮನ, ಲಕ್ಷ್ಮಿಯೊಡನೆ ಋಷಿಕೇಶ, ಚಾಮರಧಾರಿಣಿಯೊಂದಿಗೆ



ನವರಂಗದಲ್ಲಿನ ಕಕ್ಷಾಸನದಲ್ಲಿ ಆನೆ ಸಾಲು

ಪ್ರದ್ಯುಮ್ನ ಮತ್ತು ಅನಿರುದ್ಧ, ನರಸಿಂಹ, ಜನಾರ್ದನ, ಉಪೇಂದ್ರ, ಪರಿಚಾರಕೆಯೊಂದಿಗೆ ಹರಿ, ಗರುಡನೊಂದಿಗೆ ನಿಂತಿರುವ ಕೃಷ್ಣ, ಚತುರ್ಭುಜನಾದ ಶಿವನು ಎರಡು ಕೈಗಳಲ್ಲಿ ಹಾವು ಮತ್ತು ತ್ರಿಶೂಲವನ್ನು ಹೊಂದಿದ್ದು, ಮತ್ತೆರಡು ಕೈಗಳು ಮುರಿದಿವೆ. ಅಂತಿಮವಾಗಿ ಕೇಶವ ಮತ್ತು ಲಕ್ಷ್ಮಿಯ ಶಿಲ್ಪಗಳು ಪರಿಚಾರಕರೊಂದಿಗೆ ಇವೆ. ಇದು ಶೈವದೇವಾಲಯ ವಾಗಿದ್ದರೂ ಹೊರಭಿತ್ತಿಯಲ್ಲಿ ಹೆಚ್ಚಾಗಿ ವಿಷ್ಣು ಮತ್ತು ಲಕ್ಷ್ಮೀಯರ ಮೂರ್ತಿಗಳಿವೆ. ಕಾರಣ ಹೊಯ್ಸಳರು ವೈಷ್ಣವ ಧರ್ಮೀಯರಾಗಿದ್ದು, ಕಾಲಾಂತರದಲ್ಲಿ ಈ ದೇವಾಲಯವು ಶೈವರ ಪ್ರಾಬಲ್ಯ ಭಾಗದಲ್ಲಿರುವುದರಿಂದ ಹೆಚ್ಚಿನ ಶಿಲ್ಪಗಳು ಭಿನ್ನಗೊಂಡಿವೆ (ವಿಜಯನಗರದಂತೆ ಇಲ್ಲಿಯೂ ಸಹ ಅದಕ್ಕೂ ಮೊದಲೇ ಧರ್ಮ ಸಂಘರ್ಷವಾಗಿರಬಹುದು) ಎನ್ನಬಹುದು.

ವಿಮಾನ / ಶಿಖರ : ದಕ್ಷಿಣ ಶೈಲಿಯಲ್ಲಿ ಇರುವ ದೇವಾಲಯವು ಉಪಾನದಿಂದ ಶಿಖರದವರೆಗಿನ ವಿಮಾನದಿಂದ ಕೂಡಿ ದೇವಾಲಯದ ಸೌಂದರ್ಯವನ್ನು ವೃದ್ಧಿಸಿದೆ. ಶಿಖರವು ಗರ್ಭಗುಡಿಯ ಮೇಲಿದ್ದು ನಕ್ಷತ್ರಾಕಾರದ ತಳವಿನ್ಯಾಸವನ್ನು ಅವಲಂಬಿಸಿ ಕಪೋತದ ಮೇಲೆ ಚಿಕ್ಕ ಚಿಕ್ಕ ಗೋಪುರ ಪೇರಿಸಿದಂತೆ ಕಾಣುತ್ತದೆ. ಮೇಲೆ ಹೋದಂತೆ ಚಿಕ್ಕದಾಗಿದ್ದು ಇವರ ಮೇಲೆ ಸ್ತೂಪಿ ಇದ್ದು ನಂತರ ಕಳಸವಿದೆ. ಪೂರ್ವಕ್ಕೆ ಸಳನ ಶಿಲ್ಪದ ಜಾಗದಲ್ಲಿ ಗಾರೆಯಿಂದ ನಂತರದ ಕಾಲದಲ್ಲಿ ನಿರ್ಮಿತವಾದ ನಂದಿಯ ವಿಗ್ರಹವು ಶುಕನಾಸ ದಲ್ಲಿದೆ.

ಮುಖಮಂಟಪ : ಈ ದೇವಾಲಯ ತೆರೆದ ಮಂಟಪ ವನ್ನು ಹೊಂದಿದ್ದು ದೇವರ ರಂಗಭೋಗಕ್ಕಾಗಿ ನಿರ್ಮಿತ ವಾದಂತೆ ಕಾಣುತ್ತದೆ. ನವರಂಗದ ಅಧಿಷ್ಠಾನ ೧೬ ಕೋನಗಳ ನಕ್ಷತ್ರಕಾರ ಹೊಂದಿದೆ. ಅಧಿಷ್ಠಾನದ ಮೇಲೆ ಕಟಾಂಜನವಿದ್ದು ಹೊರಚಾಚಿದೆ. ಮಂಟಪದಲ್ಲಿನ ನೀರು ಜಾಳುವ ಸೂರು ಸಹ ೧೬ ಮೂಲೆಗಳನ್ನು ಒಳಗೊಂಡಿದೆ. ಮಂಟಪದ ಛಾವಣಿಯು ಮಳೆ, ಬಿಸಿಲಿಗೆ ಬಾಗಿ ಜೋರಲಾದ ಪರಿಗೋಲಿನಂತೆ ಗೋಚರಿಸುತ್ತದೆ. ಪೂರ್ವಾಭಿಮುಖಿ ವಾಗಿರುವ ಮುಖಮಂಟಪವು ಮುಕ್ತ ನವರಂಗವಾಗಿರುವುದ ರಿಂದ ಉತ್ತರ ಮತ್ತು ದಕ್ಷಿಣದಿಂದಲೂ ಪ್ರವೇಶಿಸಬಹುದು. ಇದು ಕೇವಲ ಎಂಟು ಅಡಿಗಳಾಗಿದ್ದು, ನಾಲ್ಕು ಕಂಬಗಳನ್ನು ಒಳಗೊಂಡಿದೆ. ಒಂದು ಕಂಬವನ್ನು ಸುಂದರವಾಗಿ ಕೆತ್ತಿದ್ದು ಹುಲಿಯನ್ನು ಆನೆ ಮೆಟ್ಟಿನಿಂತಿರುವಂತೆ ಶಿಲ್ಪಿಸಲಾಗಿದೆ. ಕಂಬಗಳು ಗಂಟೆಯಾಕಾರದಲ್ಲಿ ಇದ್ದು ಮುಖಮಂಟಪದ ಮೇಲ್ಛಾವಣಿಯು ಚೌಕಾಕಾರದಲ್ಲಿದ್ದು ಎರಡು ಭಾಗಗಳನ್ನು ಒಳಗೊಂಡಿದೆ. ಮೊದಲ ಭಾಗದಲ್ಲಿ ಅಷ್ಟದಿಕ್ಪಾಲಕರ ಚಿತ್ರಗಳಿದ್ದರೆ (ಇಂದ್ರ, ಅಗ್ನಿ, ಯಮ, ನಿರುತ್ತಿ, ವರುಣ, ವಾಯು, ಕುಬೇರ, ಈಶ) ಇವರ ನಡುವೆ ಕುಳಿತ ಭಂಗಿಯ ಲಕ್ಷ್ಮೀನಾರಾಯಣರ ಶಿಲ್ಪಗಳು ಕಂಡುಬರುತ್ತವೆ. ಜೊತೆಗೆ ಪರಿಚಾರಕರು ಕಾಣಬರುತ್ತಾರೆ. ಎರಡನೆಯ ಪಟ್ಟಿಕೆಯಲ್ಲಿ ನರ್ತಕ, ನರ್ತಕಿಯರು, ವಾದ್ಯಗಾರರು, ಸಂಗೀತಗಾರರಿಂದ ಕೂಡಿದೆ. ಮೇಲ್ಛಾವಣಿಯ ಭುವನೇಶ್ವರಿಯಲ್ಲಿ ತಾಂಡವ ಮೂರ್ತಿ ಶಿಲ್ಪವಿದ್ದು, ಉಳಿದ ಎಂಟು ಭುವನೇಶ್ವರಿಗಳಲ್ಲಿ ಜಾಮಿತಿ ಆಕಾರದ ಚೌಕುಗಳನ್ನು ರಚಿಸಲಾಗಿದೆ.

ಮುಕ್ತ ನವರಂಗ : ಈ ದೇವಾಲಯದ ನವರಂಗವು ಹೊಯ್ಸಳ ದೇವಾಲಯಗಳಲ್ಲಿ ವಿಶೇಷವಾಗಿದೆ. ಒಳಾಂಗಣ ಸುಮಾರು ಇಪ್ಪತ್ತೈದು ಅಡಿಗಳಷ್ಟಿದ್ದು, ಬೇಲೂರಿನ ದೇವಾಲಯದಂತೆ ಇಲ್ಲಿಯು ಸಹ ನೃತ್ಯಕ್ಕೆ ಮೂರು ಇಂಚು ಎತ್ತರದ ಹನ್ನೆರಡು ಅಡಿ ವಿಸ್ತೀರ್ಣದ ವೃತ್ತವನ್ನು ನಿರ್ಮಾಣ ಮಾಡಲಾಗಿದೆ. ಇಲ್ಲಿ ಹದಿಮೂರು ಕಂಬಗಳಿದ್ದು, ಇವುಗಳನ್ನು ಚರಕಯಂತ್ರದಿಂದ ದುಂಡಗೆ ಮಾಡಿದ್ದು, ಅರೆಗಂಬಗಳು ಕಕ್ಷಾಸನದ ಮೇಲೆ ಛಾವಣಿಗೆ ಹೊಂದಿಕೊಂಡಂತಿವೆ.

ಕಕ್ಷಾಸನ / ಕಲ್ಬೆಂಚು : ನೃತ್ಯ ನೋಡುಗರಿಗೆಂದು ನಿರ್ಮಾಣ ಮಾಡಿರುವ ಕಕ್ಷಾಸನವು ಎರಡು ಅಡಿ ಎತ್ತರವಿದೆ. ಒರಗಿ ಕೂರಲು ಅವಕಾಶವಿದ್ದು ಮಧ್ಯದಲ್ಲಿ ಕಂಬಗಳಿರುವುದರಿಂದ ಇವು ಪ್ರೇಕ್ಷಕನಿಗೆ ಏಕಾಂತವನ್ನು ಒದಗಿಸುವಂತಿವೆ. ಕಕ್ಷಾಸನವು ಆನೆಗಳ ಮೇಲೆ ನಿರ್ಮಿತವಾಗಿರುವಂತೆ ಶೃಂಗರಿಸಲಾಗಿದೆ. ಈ ರೀತಿಯ ಕಕ್ಷಾಸನ ಬೆಳವಾಡಿಯ ದೇವಾಲಯದಲ್ಲಿ ಕಾಣಬರುತ್ತವೆ.

ನವರಂಗದ ಕಂಬಗಳು ಮತ್ತು ಭುವನೇಶ್ವರಿ : ತಿರುಗುಣಿ ಯಂತ್ರದಿಂದ ಕಂಬಗಳನ್ನು ನಿರ್ಮಿಸಿದ್ದು ತಳಭಾಗದಲ್ಲಿ ಚೌಕಾಕಾರವಾಗಿದ್ದು ಮೇಲೆ ಹೋದಂತೆ ಕೆತ್ತನೆಗೆ ಒಳಗಾಗಿವೆ. ಕೆಲವು ಹದಿನಾರು ಮೂಲೆಯ ಕಂಬಗಳಿವೆ, ದೇವಾಲಯ ಚಿಕ್ಕದಾಗಿದ್ದರೂ ಭುವನೇಶ್ವರಿಯು ಇದರ ಆಕರ್ಷಣೆಯನ್ನು ಹೆಚ್ಚಿಸಿದೆ. ಭುವನೇಶ್ವರಿಯಲ್ಲಿ ವಿಷ್ಣುವಿನ ಇಪ್ಪತ್ನಾಲ್ಕು ಅವತಾರ, ಹನ್ನೊಂದು ರುದ್ರಚಿತ್ರಗಳು, ಮೊಗಸಾಲೆಯಲ್ಲಿ ಎಂಟು ಗೂಡುಗಳಿದ್ದು ಅವುಗಳಲ್ಲಿ ಯಕ್ಷ ಮತ್ತು ಯಕ್ಷಿಣಿಯರ ಕುಳಿತ ಶಿಲ್ಪಗಳಿವೆ.

ಸುಖನಾಸಿ : ಗರ್ಭಗೃಹ ಮತ್ತು ನವರಂಗದ ಮಧ್ಯೆ ಸಳನ ಶಿಲ್ಪಕ್ಕೆ ಬದಲಾಗಿ ನಂದಿ ವಿಗ್ರಹವಿದೆ. ಸುಖನಾಸಿಯಲ್ಲಿನ ಭುವನೇಶ್ವರಿಯಲ್ಲಿ ಎರಡು ಪಟ್ಟಿಕೆಗಳ ಅಲಂಕೃತ ಕೆತ್ತನೆಯು ಇಲ್ಲಿನ ವಿಶೇಷವಾಗಿದ್ದು ಮೊದಲನೇ ಪಟ್ಟಿಕೆಯಲ್ಲಿ ಮಹಾಭಾರತಕ್ಕೆ ಸಂಬಂಧಿಸಿದ ಕಥನ ಶಿಲ್ಪಗಳಿದ್ದರೆ ಎರಡನೆ ಪಟ್ಟಿಕೆಯಲ್ಲಿ ಸಮುದ್ರ ಮಂಥನ, ತಾಂಡವ ನೃತ್ಯದ ಕೆತ್ತನೆಗಳಿದ್ದು, ತಾಂಡವಮೂರ್ತಿಯ ಸುತ್ತಲೂ ಅಷ್ಟ ದಿಕ್ಪಾಲಕರನ್ನು ಶಿಲ್ಪಿಸಿರುವುದು ಈ ದೇವಾಲಯದ ವಿಶೇಷ.

ಗರ್ಭಗುಡಿ : ಒಳಗೋಡೆಗಳು ಶೃಂಗರಿಸಿಲ್ಲ. ಮೇಲ್ಛಾವಣಿಯು ಚಿತ್ರಪಟ್ಟಿಕೆಗಳನ್ನು (ಅಷ್ಟದಿಕ್ಪಾಲಕ) ಒಳಗೊಂಡಿದೆ. ಗರ್ಭಗುಡಿಯ ಬಾಗಿಲವಾಡವನ್ನು ಸವುರಾಗಿ ಹೂಬಳ್ಳಿಗಳಿಂದ ಅಲಂಕರಿಸಲಾಗಿದ್ದು ಚೌಕಾಕಾರದ ಕಲ್ಲಿನ ಮುಂಚಾಚುವಿನಲ್ಲಿ ಗಜಲಕ್ಷ್ಮಿ ಅದರ ಮೇಲೆ ಶಿವ, ಗಣೇಶ, ಬ್ರಹ್ಮ, ವಿಷ್ಣುವಿನ ಕಿರುವಿಗ್ರಹಗಳಿವೆ.

ಅವಳಿಗುಡಿಗಳು : ಈಶ್ವರ ದೇವಾಲಯದ ಉತ್ತರಕ್ಕೆ ಶಿಖರವಿಲ್ಲದ ಸಾಮಾನ್ಯ ದೇವಾಲಯಗಳಂತಹ ಕತ್ತಮೇಶ್ವರ ಮತ್ತು ಭಲ್ಲೇಶ್ವರ ಗುಡಿಗಳು ನಿರ್ಮಾಣಗೊಂಡಿದ್ದು, ಇವುಗಳ ನರ್ಮಾಣಕ್ಕೆ ಸ್ಥಳೀಯರು ಹಣ ಸಂಗ್ರಹಿಸಿದ ವಿವರಗಳ ಶಾಸನವೊಂದು ಈಶ್ವರ ದೇವಾಲಯದಲ್ಲಿದೆ. ಈ ಎರಡು ಗುಡಿಗಳು ಸಾಧಾರಣ ಗರ್ಭಗುಡಿಗಳನ್ನು ಹೊಂದಿದ್ದು, ಸುಖನಾಸಿಯನ್ನು ಹೊಂದಿವೆ. ಗರ್ಭಗುಡಿಯ ದ್ವಾರದಲ್ಲಿ ರತಿ ಮನ್ಮಥರ ಶಿಲ್ಪಗಳಿವೆ.

ಅರಸೀಕೆರೆಯ ಈಶ್ವರ ದೇವಾಲಯವು ನರ್ತನಕ್ಕಾಗಿ ಮುಕ್ತ ನವರಂಗವನ್ನು ನಿರ್ಮಿಸಿರುವುದು ವಿಶೇಷವಾಗಿದ್ದರೆ, ಧಾರ್ಮಿಕವಾಗಿ ಶೈವ ದೇವಾಲಯದಲ್ಲಿ ವೈಷ್ಣವ ಮೂರ್ತಿಗಳೇ ಅಧಿಕವಾಗಿರುವುದರ ಜೊತೆಗೆ ಅವುಗಳೆಲ್ಲವೂ ಭಿನ್ನವಾಗಿರುವುದು ಕುತೂಹಲ ಮೂಡಿಸುತ್ತದೆ. ಎಲ್ಲಕ್ಕೂ ಮಿಗಿಲಾಗಿ ವಿಶೇಷ ಎಂದರೆ ಸುಖನಾಸಿಯ ಭುವನೇಶ್ವರಿಯಲ್ಲಿ ಮತ್ತು ಗರ್ಭಗುಡಿಯ ಮೇಲ್ಛಾವಣಿಯಲ್ಲಿ ಕಥಾನಕ ಶಿಲ್ಪಗಳ ಕೆತ್ತನೆ, ಈ ದೇವಾಲಯದ ವಿಶೇಷವಾಗಿದೆ.

ಆಧಾರಸೂಚಿ

೧. **ಎಪಿಗ್ರಾಫಿಯ ಕರ್ನಾಟಕ.**, ಸಂಪುಟ – ೫, ಹಾಸನ ಜಿಲ್ಲೆ.
೨. ಗೆರಾರ್ಡ್ ಫೋಕೇಮ., **ಹೊಯ್ಸಳ ಆರ್ಕಿಟೆಕ್ಚರ್**, ಸಂಪುಟ–೨.
೩. ಎಸ್. ಶೆಟ್ಟರ್., **ದಿ ಹೊಯ್ಸಳ ಟೆಂಪಲ್ಸ್.**
೪. [illegible]., ದಿ ಸ್ಕಲ್ಪಚರ್ಸ್ ಅಂಡ್ ಆರ್ಕಿಟೆಕ್ಚ್ ಆಫ್ ಏನ್ಷಿಯಂಟ್ ಅಂಡ್ ಮಿಡಿವಲ್ ಕರ್ನಾಟಕ, ಮೈಸೂರು [illegible]
೫. **ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್ಸ್.**, ೧೯೩೧, ೧೯೪೬, ೧೯೩೯, ೧೯೨೧ .
೬ ಎಸ್.ಕೆ. ಮೈಟಿ., **ಮಾಸ್ಟರ್ ಪೀಸಸ್ ಆಫ್ ಹೊಯ್ಸಳ ಆರ್ಟ್ಸ್.**
೭. ದಯಾನಂದ ಪಟೇಲ್., **ಕೇಶವ ಟೆಂಪಲ್ ಆಫ್ ಸೋಮನಾಥಪುರ.**
೮. ಶ್ರೀಕಂಠಶಾಸ್ತ್ರಿ ಎಸ್., **ಹೊಯ್ಸಳ ವಾಸ್ತುಶಿಲ್ಪ**, ೧೯೮೨.
೯. ರಘುನಾಥ ಭಟ್., **ಹೊಯ್ಸಳ ವಾಸ್ತುಶಿಲ್ಪ ಪರಿಚಯ.**, ೧೯೭೯.
೧೦. **ಕರ್ನಾಟಕ ರಾಜ್ಯ ಗೆಜೆಟಿಯರ್.**, ಸಂಪುಟಗಳು ೧–೧೯೮೪, ೨–೧೯೮೫, ೩–೧೯೯೬. (ಪ್ರ. ಸಂ) ಸೂರ್ಯನಾಥ ಕಾಮತ್.
೧೧. **ಇತಿಹಾಸ ದರ್ಶನ ಸಂಪುಟಗಳು.**, ಇತಿಹಾಸ ಅಕಾದೆಮಿ, ಬೆಂಗಳೂರು.
೧೨. ಎಂ. ಚಿದಾನಂದಮೂರ್ತಿ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.**
೧೩. ಎ. ಎಂ. ಅಣ್ಣಿಗೇರಿ, ಆರ್. ಶೇಷಾಶಾಸ್ತ್ರಿ., **ಕನ್ನಡ ಶಾಸನ ಸಂಗ್ರಹ** – ೧೯೭೫.
೧೪. ಕರ್ನಾಟಕ ಇತಿಹಾಸ ಕಾಂಗ್ರೆಸ್ ಸಂಪುಟಗಳು.
೧೫. ಡಾ. ಕೆ.ಎನ್. ಮೋಹನ್., **ಸಗ್ಗೀಹಳ್ಳಿ ಮತ್ತು ಹೊಸ ಹೊಳಲು ಹೊಯ್ಸಳ ದೇವಾಲಯಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನ** (ಅಪ್ರಕಟಿತ).

ಡಾ. ಬಿ.ಸಿ. ಸುರೇಶ*

ಮುದಿಗೆರೆಯ ದೇವಾಲಯಗಳು

ಮುದಿಗೆರೆಯು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನಲ್ಲಿರುವ ಒಂದು ಗ್ರಾಮ, ಇದು ತರೀಕೆರೆಯಿಂದ ಪೂರ್ವಕ್ಕೆ ಸು. ೩೦ ಕಿ.ಮೀ. ದೂರದಲ್ಲಿದೆ. ಅಜ್ಜಂಪುರದಿಂದ ಆಗ್ನೇಯಕ್ಕೆ ಸು. ೧೭ ಕಿ.ಮೀ. ದೂರದಲ್ಲಿದೆ. ಕ್ರಿ.ಶ. ೧೨೩೦ರಲ್ಲಿ ಹೊಯ್ಸಳ ದೊರೆ ನರಸಿಂಗದೇವನ ಆಳ್ವಿಕೆಯ ಕಾಲದಲ್ಲಿ ಆಸಂದಿನಾಡಿನ ಮುದಿಗೆರೆಯ ಬೇಳಗಾವುಂಡ, ಚೀಳಗಾವುಂಡ, ರಾಮಗಾವುಂಡರ ಮಕ್ಕಳಾದ ರಾಮಗಾವುಂಡ, ಸೋಮಗಾವುಂಡ, ಬೈಚಗಾವುಂಡ ಎಂಬುವವರು ಕ್ರಿ.ಶ.೧೨೩೦ರಲ್ಲಿ ನಾರಸಿಂಗೇಶ್ವರ ದೇವಾಲಯವನ್ನು ಕಟ್ಟಿಸಿದರು. ಹಾಗೂ ದೇವರ ಕಾರ್ಯಕ್ಕೆ ಎರೆಯ ಮಣ್ಣಿನ ಗದ್ದೆ, ಅಡಕೆ ಮರ, ತೆಂಗಿನ ಮರ ಮುಂತಾದ ಸುಮಾರು ೮೦೦ ಮರಗಳಿರುವ ತೋಟವನ್ನು ದಾನ ನೀಡಿದ್ದಾರೆ. ಪ್ರಸ್ತುತ ಈ ಗ್ರಾಮದಲ್ಲಿ ಶಿವ ದೇವಾಲಯವಿದ್ದು ಇದನ್ನು ಸಿಂಗೇಶ್ವರ ಮತ್ತು ರಾಮೇಶ್ವರ ದೇವಾಲಯ ಎಂದು ಕರೆಯುತ್ತಾರೆ. ಐತಿಹಾಸಿಕವಾಗಿ ಈ ಗ್ರಾಮವನ್ನು ಆಸಂದಿನಾಡಿನ ಮುದುಗೆರೆ ಎಂದೂ ಕರೆಯುತ್ತಿದ್ದರು. ಕ್ರಿ.ಶ. ೧೧೭೫ರ ಚಾಲುಕ್ಯ ವಿಕ್ರಮಾದಿತ್ಯನ ಕಾಲದಲ್ಲಿ ಮುದಿಗೆರೆಯ ಮಹಾಪ್ರಭುವಾದ ಆದಿಗಾವುಂಡನ ಮಕ್ಕಳಾದ ಬೆಳ್ಳಗಾವುಂಡ, ಚೀಲಗಾವುಂಡ ಮತ್ತು ರಾಮಗಾವುಂಡರು ಸೇರಿ ರಾಮೇಶ್ವರ ದೇವಾಲಯವನ್ನು ಕಟ್ಟಿಸಿ ದೇವರ ಪೂಜಾಕಾರ್ಯಕ್ಕೆ ಭೂಮಿಯನ್ನು ದಾನ ನೀಡಿದ್ದಾರೆ. ಪ್ರಸ್ತುತ ಈ ಗ್ರಾಮದಲ್ಲಿ ದ್ವಿಕೂಟಾಚಲದ ಒಂದು ಈಶ್ವರ ದೇವಾಲಯ ಮತ್ತು ಶಿಥಿಲವಾಗಿರುವ ರಾಮೇಶ್ವರ ಮತ್ತು ಲಕ್ಷ್ಮೀನಾರಾಯಣ ದೇವಾಲಯಗಳಿವೆ.

ಈಶ್ವರ (ಸಿಂಗೇಶ್ವರ) ದೇವಾಲಯ : ಊರಿನ ಉತ್ತರ ಭಾಗದಲ್ಲಿರುವ ಈಶ್ವರ ದೇವಾಲಯ ಪೂರ್ವಾಭಿಮುಖವಾಗಿದ್ದು ಸೋಪುಗಲ್ಲಿನಿಂದ ನಿರ್ಮಿಸಲಾಗಿರುವ ದ್ವಿಕೂಟಾಚಲ ದೇವಾಲಯ. ದೇವಾಲಯದ ಹೊರಭಾಗದ ಕೆಲವು ಕಡೆ ಶಿಥಿಲವಾಗಿದೆ. ಇದು ಗರ್ಭಗೃಹ, ಸುಕನಾಸಿ, ನವರಂಗಗಳನ್ನು ಹೊಂದಿದೆ. ನವರಂಗದ ಉತ್ತರ ಭಾಗದಲ್ಲಿ ಮತ್ತೊಂದು ಕೋಣೆಯನ್ನು ಸೇರ್ಪಡೆಗೊಳಿಸಲಾಗಿದೆ. ಮೂಲ ಗರ್ಭಗೃಹದಲ್ಲಿ ೨.೫ ಅಡಿ ಎತ್ತರದ ಪಾಣಿಪೀಠದ ಮೇಲೆ ಸುಮಾರು ಅರ್ಧ ಅಡಿ ಎತ್ತರದ ಲಿಂಗವಿದೆ, ಗರ್ಭಗೃಹದಲ್ಲಿ ಯಾವುದೇ ಅಲಂಕರಣವಿಲ್ಲ. ದ್ವಾರದ ಎರಡೂ ಬದಿಯಲ್ಲೂ ಶಿಲ್ಪಗಳನ್ನು ಕೆತ್ತಲು ಸ್ಥಳಾವಕಾಶವನ್ನು ಕಲ್ಪಿಸಿದ್ದರೂ ಅಲ್ಲಿ ಯಾವುದೇ ಶಿಲ್ಪಗಳಿಲ್ಲ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಈ ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಷ್ಟೇ ಅಳತೆಯ ಸುಕನಾಸಿಯಿದ್ದು ಇದರ ಮಧ್ಯ ಭಾಗದಲ್ಲಿ ನಂದಿ ಶಿಲ್ಪವಿದೆ. ಇದರ ದ್ವಾರಬಂಧವು ಗರ್ಭಗೃಹದ ದ್ವಾರಬಂಧದ ಲಕ್ಷಣಗಳನ್ನು ಹೊಂದಿದೆ. ನವರಂಗದ ಉತ್ತರಕ್ಕೆ ಮತ್ತೊಂದು ಗರ್ಭಗೃಹವಿದೆ, ಇಲ್ಲಿ ನಂದಿ ಮತ್ತು ಗರುಡ ಪೀಠದ ಮೇಲೆ ೫ ಅಡಿ ಎತ್ತರದ ಶಂಕರನಾರಾಯಣನ ಶಿಲ್ಪವಿದೆ. ಕೈಯಲ್ಲಿ ತ್ರಿಶೂಲ ಮತ್ತು ಶಂಖವನ್ನು ಹಿಡಿದಿದ್ದು ಮತ್ತೆರಡು ಕೈಗಳು ಭಗ್ನಗೊಂಡಿವೆ. ಇದಕ್ಕೆ ಸುಂದರವಾದ ಪ್ರಭಾವಳಿಯಿದ್ದು ಅರ್ಧಭಾಗದಲ್ಲಿ ದಶಾವತಾರವನ್ನೂ, ಇನ್ನುಳಿದ ಅರ್ಧ ಭಾಗದಲ್ಲಿ ಏಕದಶ ರುದ್ರರನ್ನು ಶಿಲ್ಪಿಸಿದೆ. ಬಲಭಾಗದಲ್ಲಿ ಪಾರ್ವತಿ, ಎಡಭಾಗದಲ್ಲಿ ಲಕ್ಷ್ಮಿಯ ಶಿಲ್ಪವಿದೆ.

ನವರಂಗವು ಒಂಭತ್ತು ಅಂಕಣದಿಂದ ಕೂಡಿದ್ದು ಇಲ್ಲಿ ಹೊಯ್ಸಳರ ಕಾಲದ ದುಂಡನೆಯ ನಾಲ್ಕು ಕಂಬಗಳಿವೆ. ಮಧ್ಯದ ಅಂಕಣದಲ್ಲಿ ಭುವನೇಶ್ವರಿಯಿದ್ದು ಇದನ್ನು ಮೂಲೆಕಲ್ಲಿನಿಂದ ಅಲಂಕರಿಸಿ ಪದ್ಮ ಹಾಗೂ ಶ್ರೀಚಕ್ರಗಳನ್ನು ಕೆತ್ತಲಾಗಿದೆ. ಇನ್ನುಳಿದ ಅಂಕಣಗಳಲ್ಲಿ ಭುವನೇಶ್ವರಿಗಳ ಅಲಂಕರಣವಿಲ್ಲ. ನವರಂಗದ ಈಶಾನ್ಯ ಭಾಗದಲ್ಲಿ ವೃಶ್ಚಿಕವಿರುವ ಪೀಠದಲ್ಲಿ ಸುಮಾರು ಐದು ಅಡಿ ಎತ್ತರದ ಭೈರವ ಶಿಲ್ಪವಿದೆ. ತ್ರಿಭಂಗಿಯಲ್ಲಿರುವ ವಿಗ್ರಹಕ್ಕೆ ಪ್ರಭಾವಳಿ ಇದೆ. ಕೈಗಳಲ್ಲಿ ತ್ರಿಶೂಲ, ಢಮರು ಹಾಗೂ ರುಂಡವಿದೆ. ಇನ್ನೊಂದು ಕೈಯಲ್ಲಿರುವ ಆಯುಧ ಮುರಿದಿದ್ದು ಬಹುಶಃ ಅದು ಖಡ್ಗವಿರಬಹುದು. ಮನುಷ್ಯನ ರುಂಡದಿಂದ ಸೋರುತ್ತಿರುವ ರಕ್ತವನ್ನು ನಾಯಿಯು ನೆಕ್ಕುತ್ತಿರುವುದನ್ನು ಕಂಡರಿಸಲಾಗಿದೆ. ಭೈರವನ ಎರಡೂ ಬದಿಯಲ್ಲೂ ನರ್ತಿಸುತ್ತಿರುವ ಬೇತಾಳಗಳನ್ನು ಶಿಲ್ಪಿಸಲಾಗಿದೆ. ಈ ರೀತಿಯ

* ಇತಿಹಾಸ ಉಪನ್ಯಾಸಕರು, ಶ್ರೀ ಮದ್ದಾನೇಶ್ವರ ಸ.ಪ್ರ.ದ. ಕಾಲೇಜು, ಕಬ್ಬಹಳ್ಳಿ, ಗುಂಡ್ಲುಪೇಟೆ, ಚಾಮರಾಜನಗರ

ಶಿಲ್ಪವನ್ನು ಅಯ್ಯನಕೆರೆಯ ಬಲ್ಲಾಳೇಶ್ವರ ದೇವಾಲಯದ ಆವರಣದಲ್ಲಿ ಕಾಣಬಹುದು. ಈ ಎರಡೂ ಶಿಲ್ಪಗಳು ಶಿಲ್ಪ ಲಕ್ಷಣಗಳಲ್ಲಿ ಹಾಗೂ ಅಳತೆಯಲ್ಲಿ ಸಾಮ್ಯತೆಯನ್ನು ಹೊಂದಿವೆ. ನವರಂಗದ ಆಗ್ನೇಯ ದಿಕ್ಕಿನಲ್ಲಿ ಕ್ರಿ.ಶ. ೧೨೩೦ರ ಶಾಸನವಿದ್ದು ಇದರಲ್ಲಿ ಈ ದೇವಾಲಯವನ್ನು ಕಟ್ಟಿದ ಉಲ್ಲೇಖವಿದೆ. ನವರಂಗದ ಮಧ್ಯಭಾಗದಲ್ಲಿ ಬಹುಶಃ ನಿಧಿಕಳ್ಳರು ಗುಂಡಿಯನ್ನು ತೋಡಿದ್ದಾರೆ. ಇದನ್ನು ಆ ಗ್ರಾಮದ ಜನರು ದೇವರ ನೈವೇದ್ಯಕ್ಕೆ ನೀರನ್ನು ಬಳಸಲು ಕಟ್ಟಿರುವ ಬಾವಿ ಎಂದು ಹೇಳುತ್ತಾರೆ. ದ್ವಾರದಲ್ಲಿ ಶೈವ ದ್ವಾರಪಾಲಕರನ್ನು ಕೆತ್ತಿದ್ದು, ದ್ವಾರಪಟ್ಟಿಕೆಯಲ್ಲಿ ಲತಾಸುರುಳಿಯನ್ನೂ, ಇನ್ನಿತರ ಕೆತ್ತನೆಗಳನ್ನೂ ಕಾಣಬಹುದು. ಮಕರ ತೋರಣದಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಕಂಡರಿಸಿದ್ದು, ಮುಂಭಾಗದಲ್ಲಿ ಎರಡು ಕಂಬಗಳುಳ್ಳ ಅರ್ಧಮಂಟಪವಿದೆ.

ದೇವಾಲಯವು ಸುಮಾರು ಐದು ಅಡಿ ಎತ್ತರದ ಅಧಿಷ್ಠಾನವನ್ನು ಹೊಂದಿದ್ದು ತ್ರಿಪಟ್ಟ ಕುಮುದ, ಉಪಾನ, ಪಟ್ಟಿಕಾ, ಊರ್ಧ್ವಕಂಪವನ್ನು ಹೊಂದಿದೆ. ಹೊರಭಿತ್ತಿಯು ಯಾವುದೇ ಲಕ್ಷಣಗಳನ್ನು ಹೊಂದಿಲ್ಲ. ಮೂಲ ಗರ್ಭಗೃಹದ ಮೇಲೆ ಕ್ರಿ.ಶ.೧೭ನೆಯ ಶತಮಾನದಲ್ಲಿ ಇಟ್ಟಿಗೆ ಮತ್ತು ಸುಣ್ಣಕಲ್ಲು ಗಾರೆಯನ್ನು ಉಪಯೋಗಿಸಿ ಶಿಖರವನ್ನು ಕಟ್ಟಲಾಗಿದೆ. ಆದರೆ ಇಂದು ಅದೂ ಸಹ ಶಿಥಿಲವಾಗಿದೆ. ನವರಂಗದ ಆಗ್ನೇಯ ದಿಕ್ಕಿನ ಹೊರ ಭಿತ್ತಿಯ ಸ್ವಲ್ಪಭಾಗ ಭಗ್ನವಾಗಿದೆ.

ರಾಮೇಶ್ವರ (ಈಶ್ವರ) ದೇವಾಲಯ : ಈ ದೇವಾಲಯ ಮುದಿಗೆರೆಯ ನಾರಸಿಂಗೇಶ್ವರ ದೇವಾಲಯದ ವಾಯುವ್ಯ ದಿಕ್ಕಿಗೆ ಊರಿನ ಕೆರೆಯ ಪಕ್ಕದ ಜಮೀನಿನಲ್ಲಿದೆ. ಇದನ್ನು ಸ್ಥಳೀಯರು ಈಶ್ವರ ದೇವಾಲಯ ಎಂದು ಕರೆಯುವರು. ಇದನ್ನು ಕ್ರಿ.ಶ.೧೧೭೨ರಲ್ಲಿ ಮುದಿಗೆರೆಯ ಮಹಾಪ್ರಭುವಾದ ಆದಿಗಾವುಂಡನ ಮಕ್ಕಳಾದ ಬೆಳ್ಳಗಾವುಂಡ, ಚೀಲಗಾವುಂಡ ಮತ್ತು ರಾಮಗಾವುಂಡರು ಸೇರಿ ರಾಮೇಶ್ವರ ದೇವಾಲಯವನ್ನು ಕಟ್ಟಿಸಿದರು. ಇಲ್ಲಿ ಚಾಳುಕ್ಯ ತ್ರೈಲೋಕ್ಯಮಲ್ಲ ವಿಕ್ರಮಾದಿತ್ಯದೇವನ ಕಾಲದಲ್ಲಿ ಹೊಯ್ಸಳ ರಾಜ ಕೊಂಗುಣಿವರ್ಮ ನರಸಿಂಹನು ಆಡಳಿತ ನಡೆಸುತ್ತಿದ್ದ. ಮೂಲ ದೇವಾಲಯ ಸಂಪೂರ್ಣವಾಗಿ ಭಗ್ನವಾಗಿದೆ. ಇಲ್ಲಿ ಸುಮಾರು ೨೦ ಅಡಿ ಉದ್ದ, ೨೦ ಅಡಿ ಅಗಲದ ಒಂದು ಗುಡಿಯನ್ನು ಕಟ್ಟಲಾಗಿದೆ. ಮೇಲ್ಛಾವಣಿಗೆ ಚಪ್ಪಡಿಕಲ್ಲನ್ನು ಬಳಸಿರುವುದನ್ನು ಬಿಟ್ಟರೆ ಎಲ್ಲವೂ ಹೊಸರಚನೆ. ಈ ಸಣ್ಣಗುಡಿಯಲ್ಲಿ ಸುಮಾರು ಎರಡು ಅಡಿ ಎತ್ತರದ ರಾಮೇಶ್ವರ ಲಿಂಗವಿದ್ದು ಇದರ ಎದುರು ಭಾಗದಲ್ಲಿ ನಂದಿ ಶಿಲ್ಪವಿದೆ.

ಗುಡಿಯ ಎಡಭಾಗದ ಬಯಲಿನಲ್ಲಿ ಗರುಡಪೀಠದ ಮೇಲೆ ಸುಮಾರು ಐದು ಅಡಿ ಎತ್ತರದ ಮಹಾವಿಷ್ಣುವಿನ ಶಿಲ್ಪವಿದೆ. ಕೈಗಳಲ್ಲಿ ಗದೆ, ಶಂಖ, ಪ್ರಯೋಗಚಕ್ರ ಹಾಗೂ ಮತ್ತೊಂದು ಕೈಯನ್ನು ಸೊಂಟದ ಮೇಲೆ ಇರಿಸಿದ್ದಾನೆ. ಇದು ಸಮಭಂಗಿಯಲ್ಲಿದ್ದು ಕೀರ್ತಿಮುಕುಟ, ಮಕರ ಕುಂಡಲ ಹಾಗೂ ಯಜ್ಞೋಪವೀತವನ್ನು ಧರಿಸಿದೆ. ಗ್ರಾನೈಟ್ ಶಿಲೆಯಲ್ಲಿ ಕೆತ್ತಿರುವ ಈ ಶಿಲ್ಪ ಕ್ರಿ.ಶ. ೧೧ನೆಯ ಶತಮಾನದ ರಚನೆ. ಇದರ ಶಿಲ್ಪ ಲಕ್ಷಣಗಳನ್ನು ಗಮನಿಸಿದರೆ ಕಲ್ಯಾಣ ಚಾಳುಕ್ಯರ ಕಾಲದ್ದೆನಿಸುತ್ತದೆ. ಹೊಯ್ಸಳ ಹಾಗೂ ವಿಜಯನಗರದ ಕಾಲದ ರಚನೆಯಾದಲ್ಲಿ ವಿಷ್ಣು ಶಿಲ್ಪಗಳಲ್ಲಿ ಪ್ರಯೋಗಚಕ್ರ ಮುಂಭಾಗಕ್ಕೆ ಇರುತ್ತದೆ. ಆದರೆ ಇಲ್ಲಿ ಬಲಭುಜದ ಮೇಲಿರುವಂತೆ ಬಲಕಿವಿಯ ಪಕ್ಕಕ್ಕೆ ಎದುರಾಗಿ ಇದೆ. ಸಾಮಾನ್ಯವಾಗಿ ಈ ರೀತಿಯ ಶಿಲ್ಪಗಳನ್ನು ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಕೆತ್ತಲಾಗುತ್ತಿತ್ತು. ಎಂ.ಎ.ಆರ್. ವರದಿಯಲ್ಲಿ ಇದನ್ನು ವೆಂಕಟೇಶ ಎಂದು ಉಲ್ಲೇಖಿಸಿದೆ. ಆದರೆ ಇದು ಮಹಾವಿಷ್ಣು ಶಿಲ್ಪ. ಇದರ ಪಕ್ಕದಲ್ಲಿ ಒಂದು ಗಣಪತಿಯ ಶಿಲ್ಪವಿದ್ದು, ಇದೂ ಸಹ ಆ ಕಾಲಕ್ಕೆ ಸೇರಿದುದಾಗಿದೆ. ಇದರ ಪಕ್ಕದಲ್ಲಿ ಸುಂದರವಾದ ಶಾಸನೋಕ್ತ ಪ್ರಕಟಿತ ಎರಡು ವೀರಗಲ್ಲುಗಳಿವೆ.

ಲಕ್ಷ್ಮೀನಾರಾಯಣ ದೇವಾಲಯ : ಈ ದೇವಾಲಯ ನಾರಸಿಂಗೇಶ್ವರ ದೇವಾಲಯದ ನೈರುತ್ಯ ದಿಕ್ಕಿಗಿದ್ದು ಪೂರ್ವಾಭಿಮುಖವಾಗಿದೆ. ಇದನ್ನು ಗ್ರಾನೈಟ್ ಶಿಲೆಯಿಂದ ಕ್ರಿ.ಶ.೧೪–೧೫ನೆಯ ಶತವಾನದಲ್ಲಿ ಕಟ್ಟಲಾಗಿದೆ. ದೇವಾಲಯವು ಎತ್ತರವಾದ ಅಧಿಷ್ಠಾನದ ಮೇಲೆ ಕಟ್ಟಿದ್ದು ಗರ್ಭಗೃಹ, ಸುಕನಾಸಿ ಮತ್ತು ನವರಂಗಗಳನ್ನು ಹೊಂದಿದೆ. ಮುಖಮಂಟಪ ಸಂಪೂರ್ಣವಾಗಿ ಭಗ್ನವಾಗಿದೆ. ಗರ್ಭಗೃಹದಲ್ಲಿ ಗರುಡಪೀಠದ ಮೇಲೆ ಸುಮಾರು ಐದು ಅಡಿ ಎತ್ತರದ ಲಕ್ಷ್ಮಿನಾರಾಯಣನ ಶಿಲ್ಪವಿದೆ. ಇದಕ್ಕೆ ಸುಂದರವಾದ ಪ್ರಭಾವಳಿಯಿದೆ. ಸುಖಾಸನದಲ್ಲಿ ಕುಳಿತಿರುವ ನಾರಾಯಣನ ತೊಡೆಯ ಮೇಲೆ ಲಕ್ಷ್ಮಿಯಿದ್ದಾಳೆ. ಗರ್ಭಗೃಹದ ದ್ವಾರಬಂಧದ ಎರಡುಬದಿಯಲ್ಲೂ ಪೂರ್ಣಕುಂಭದ ಕೆತ್ತನೆಯನ್ನು ಮಾಡಿದ್ದು ಅನಂತರದಲ್ಲಿ ಲತಾಸುರುಳಿ, ಪಂಚಾ ಶಾಖಾಲಂಕೃತ ಪಟ್ಟಿಕೆ ಇದೆ. ಲಲಾಟಬಿಂಬದಲ್ಲಿ ಕಾಳಿಂಗಮರ್ದನ ಕೃಷ್ಣನ ಶಿಲ್ಪವಿದೆ. ಇಲ್ಲಿ ಗರ್ಭಗೃಹದಷ್ಟೇ ಅಳತೆಯಿರುವ ಸುಕನಾಸಿಯಿದ್ದು ಇಲ್ಲಿ ಯಾವುದೇ ಅಲಂಕರಣವಿಲ್ಲ. ದ್ವಾರಬಂಧದ ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರ ಶಿಲ್ಪವಿದೆ. ಅನಂತರದಲ್ಲಿ ಲತಾಬಳ್ಳಿಗಳ ಅಲಂಕರಣಯುಕ್ತ ಐದು ಪಟ್ಟಿಕೆಗಳಿವೆ ಲಲಾಟಬಿಂಬದಲ್ಲಿ ಬೆಣ್ಣೆ ಕೃಷ್ಣನ ಶಿಲ್ಪವಿದೆ.

ಒಂಬತ್ತು ಅಂಕಣದ ನವರಂಗಕ್ಕೆ ನಾಲ್ಕು ಕಂಬಗಳಿವೆ. ಇವು ಚೌಕಾಕಾರದ ಎರಡು ಹಂತದ ಪಟ್ಟಿಕೆಗಳನ್ನು ಹೊಂದಿವೆ. ಮೊದಲ ಎರಡು ಕಂಬಗಳಲ್ಲಿ ಉಬ್ಬು ಶಿಲ್ಪಗಳಿವೆ. ಇಲ್ಲಿ ಕೇಶವ, ಆಂಜನೇಯ, ಬಾಲಕೃಷ್ಣ, ವಿಷ್ಣು, ಉಗ್ರನರಸಿಂಹ,



ಈಶ್ವರ ದೇವಾಲಯದ ಪಾರ್ಶ್ವನೋಟ – ಮುದಿಗೆರೆ



ಈಶ್ವರ ದೇವಾಲಯದ ನವರಂಗ ಮತ್ತು ಕಂಬಗಳು – ಮುದಿಗೆರೆ





ಶಂಕರ ನಾರಾಯಣ ಶಿಲ್ಪ–ಈಶ್ವರ ದೇವಾಲಯ



ಭೈರವ ಶಿಲ್ಪ–ಈಶ್ವರ ದೇವಾಲಯ







ಲಕ್ಷ್ಮೀನಾರಾಯಣ ದೇವಾಲಯದ ಮುಂಭಾಗ – ಮುದಿಗೆರೆ



ಲಕ್ಷ್ಮೀನಾರಾಯಣ ದೇವಾಲಯದ
ಗರ್ಭಗೃಹದಲ್ಲಿರುವ ಲಕ್ಷ್ಮೀನಾರಾಯಣ ಶಿಲ್ಪ

ಸುಭಾಷಿಣಿ, ಭಕ್ತರು, ಪದ್ಮ, ವೆಂಕಟೇಶ ಮುಂತಾದ ಶಿಲ್ಪಗಳನ್ನು ಕೆತ್ತಲಾಗಿದೆ. ದೇವಾಲಯವು ಸುಮಾರು ಏಳು ಅಡಿ ಎತ್ತರದ ಅಧಿಷ್ಠಾನದ ಮೇಲೆ ಕಟ್ಟಲಾಗಿದ್ದು ನವರಂಗದ ಮಧ್ಯಭಾಗದಲ್ಲಿ ದೊಡ್ಡ ಬೇವಿನ ಮರವೊಂದಿದ್ದು ಇದರಿಂದಾಗಿ ದೇವಾಲಯದ ಬಹಳ ಭಾಗ ಭಗ್ನವಾಗಿದೆ. ಈ ಬೇವಿನ ಮರವನ್ನು ತೆಗೆಯದಿದ್ದರೆ ಕೆಲವೇ ದಿನಗಳಲ್ಲಿ ಇದು ಸಂಪೂರ್ಣವಾಗಿ ಭಗ್ನವಾಗುವ ಸಂಭವವಿದೆ. ಈಗಾಗಲೇ ಮುಖಮಂಟಪವು ಸಂಪೂರ್ಣವಾಗಿ ಭಗ್ನವಾಗಿದೆ. ದೇವಾಲಯದಲ್ಲಿ ಯಾವುದೇ ರೀತಿಯ ಶಿಖರವಿರುವುದಿಲ್ಲ ಈ ದೇವಾಲಯದ ವಾಸ್ತುಶೈಲಿಯನ್ನು ಗಮನಿಸಿದರೆ ಇದು ವಿಜಯನಗರ ಕಾಲದಲ್ಲಿ ಕಟ್ಟಿರಬಹುದೆಂದೆನಿಸುತ್ತದೆ.



ಮಹಾವಿಷ್ಣುವಿನ ಶಿಲ್ಪ
– ಮುದಿಗೆರೆ

ಆಧಾರಸೂಚಿ

೧. **ಎಪಿಗ್ರಾಫಿಯ ಕರ್ನಾಟಿಕಾ**, ಸಂ. ೧೨, ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ೭೮.

೨. ಅದೇ ೮೦.

೩. ಕೃಷ್ಣತಂತ್ರಿ, ಆರ್. – **ತರೀಕೆರೆ ತಾಲ್ಲೂಕು ದರ್ಶನ.**

೪. ಎಂ.ಎ.ಆರ್. – ೧೯೪೨.

೫. **ಭೈರವ ಬಾಗಿನ..**, ಜಯಪ್ಪಗೌಡ (ಸಂ.)

೬. **ಚಿಕ್ಕಮಗಳೂರು ಜಿಲ್ಲಾ ಗೆಜೆಟಿಯರ್.**

ಪ್ರೊ. ಕೆ.ಸಿ. ಮಲ್ಲಿಗವಾಡ*

ಹಸರಂಬಿಯ ಕಾನನದ ಸೋಮೇಶ್ವರ ದೇವಾಲಯ

ಸಹ್ಯಾದ್ರಿ ಬೆಟ್ಟಗಳಿಂದ ಕೂಡಿದ ಮಲೆನಾಡಿನ ಸೆರಗಿನಲ್ಲಿ ದಟ್ಟವಾದ ಕಾಡಿನ ಮಧ್ಯದಲ್ಲಿ ಸುತ್ತಲೂ ಕವಳ ಬೆಳೆಯುವ ನೆಲದಲ್ಲಿ ಹಲವಾರು ಅದ್ಭುತಗಳನ್ನು ತನ್ನ ಅಂತರಾಳದಲ್ಲಿ ಹುದುಗಿಸಿಕೊಂಡು ಬಣ್ಣದ ತೊಟ್ಟಿಲಿಗೆ ಹೆಸರಾದ ಹಾಗೂ ಮಲೆನಾಡಿನ ಭತ್ತದ ಕಣಜವೆಂದೇ ಖ್ಯಾತಿಯನ್ನು ಪಡೆದ ಧಾರವಾಡ ಜಿಲ್ಲೆ ಕಲಘಟಗಿ ತಾಲ್ಲೂಕಿನ ಕೊನೆಯಹಳ್ಳಿ ಹಸರಂಬಿ. ಇದು ಕಾರವಾರ ಜಿಲ್ಲೆಯ ಗಡಿ ಭಾಗಕ್ಕೆ ಹೊಂದಿಕೊಂಡಿದ್ದು ಹಳಿಯಾಳ ತಾಲ್ಲೂಕಿಗೆ ನಿಕಟ ಸಂಬಂಧವನ್ನು ಹೊಂದಿ ದಿನೇ ದಿನೇ ಹಳಿಯಾಳಕ್ಕೆ ಹೋಗಿ ಬರುವ ಸಂಪ್ರದಾಯ ಬತ್ತದ ಗಳಗಿ ಎಂದೇ ಪ್ರಸಿದ್ಧವಾದ ಗಳಗಿ ಹುಲಿಕೊಪ್ಪದ ಸಮೀಪವಿರುವ ಊರೇ ಹಸರಂಬಿ.

ಹೆಸರೇ ಸೂಚಿಸುವಂತೆ ಸದಾ ಹಚ್ಚಹಸುರಿನ ಭಯಾನಕ ಘೋರಾರಣ್ಯದಲ್ಲಿ ಹುಲಿ, ಕರಡಿ, ಮಿಕ, ತೋಳ. ಚಿರತೆ ವಾಸಿಸುವ ತಾಣದಲ್ಲಿ ಹೆಮ್ಮರಗಳ ಮಧ್ಯದಲ್ಲಿ ಸುತ್ತಲೂ ಅರಣ್ಯದಿಂದಾವೃತವಾದ ಸ್ಥಳವೇ ಹಸರಂಬಿ ಹಸಿರೇ ಉಸಿರು ಎನ್ನುವ ವಾಣಿಯಂತೆ ಹಸಿರಿನಿಂದ ತುಂಬಿದ ಊರಿಗೆ ಹಸರಂಬಿ ಎಂದು ಕರೆಯಲಾಗಿದೆ. ಹಸರಾಣಿ (ಕಾಳುಜವಿ) ಹಸರು ಕಡಲೆ, ಅಗಸಿ ಮೊದಲಾದವುಗಳನ್ನು ಎರಡನೇ ಬೆಳೆಯಾಗಿ ಬೆಳೆಯುವ ಸ್ಥಳಕ್ಕೆ ಹಸರಂಬಿ ಎಂದು ಕರೆಯುತ್ತಾರೆ.

ಐತಿಹಾಸಿಕವಾಗಿ ಇದೊಂದು ಪ್ರಸಿದ್ಧ ಗ್ರಾಮ ಇಲ್ಲಿ ವಿವಿಧ ಆಳರಸರ ಕಾಲದ ಸ್ಮಾರಕಗಳು ಕಂಡುಬರುತ್ತಿವೆ. ಸುಮಾರು ೩೦೦೦ ಜನಸಂಖ್ಯೆಯನ್ನು ಹೊಂದಿದೆ.

ಧಾರವಾಡದಿಂದ ಪಶ್ಚಿಮಕ್ಕೆ ೩೨ ಕಿ.ಮೀ. ಕಲಘಟಗಿಯಿಂದ ಉತ್ತರಕ್ಕೆ ೧೦ ಕಿ.ಮೀ. ಹಳಿಯಾಳದಿಂದ ೫೫ ಕಿ.ಮೀ. ಅಂತರದಲ್ಲಿ ಯಾವುದೇ ಮಾರ್ಗ ಹಿಡಿದು ಹಸರಂಬಿ ಮುಟ್ಟಬೇಕಾದರೂ ದಟ್ಟಾರಣ್ಯದಲ್ಲಿಯೇ ಸಾಗಬೇಕು. ಇಂತಹ ದುರ್ಗಮ ಮಾರ್ಗದಲ್ಲಿ ಸಾಗಿದರೆ ನಮಗೆ ಸಿಗುವ ಊರೇ ಹಸರಂಬಿ.

ಹಸರಂಬಿಯಿಂದ ಉತ್ತರಕ್ಕೆ ೨ ಕಿ.ಮೀ. ಅಂತರದಲ್ಲಿ ನೆಲೆಗೊಂಡ ಶ್ರೀ ಸೋಮೇಶ್ವರ ದೇವಾಲಯ ದೂರದಿಂದ ನೋಡಿದರೆ ಗುಡ್ಡ ಮರಡಿಯಾಕಾರದಂತೆ ಕಂಡರೂ ಸುಂದರವಾಗಿ ಅಲಂಕೃತಗೊಂಡು, ಪ್ರೇಕ್ಷಕರನ್ನು ಕೈ ಮಾಡಿ ಕರೆಯುವಂತಿದೆ. ಶ್ರೀ ಸೋಮೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದೆ. ಇದರ ನಿರ್ಮಾಣ ಕಾರ್ಯ ಅಪೂರ್ಣವಾಗಿದ್ದು ಹೆಚ್ಚಿನ ಭಾಗವು ಕ್ಷೀಣಾವಸ್ಥೆಯಲ್ಲಿದೆ. ದೇಗುಲ ಪೂರ್ವ ಪಶ್ಚಿಮ ೬೦ ಅಡಿ ದಕ್ಷಿಣ ಉತ್ತರವಾಗಿ ೪೫ ಅಡಿ ಅಳತೆಯಲ್ಲಿದೆ. ದೇವಾಲಯಕ್ಕೆ ಯಾವುದೇ ರಕ್ಷಣಾ (ಕಾಂಪೌಂಡ್) ಗೋಡೆ ನಿರ್ದಿಷ್ಟ ಪ್ರಮಾಣದ ಸುತ್ತಲಿನ ಜಾಗ ಇರುವುದಿಲ್ಲ ರೈತಾಪಿ ಜನರು ಅತಿಕ್ರಮಿಸಿ ಸಾಗುವಳಿ ಮಾಡಿದ್ದಾರೆ.



ದೇವಾಲಯವು ಪೂರ್ವ ಹಾಗೂ ಉತ್ತರ ದಿಕ್ಕಿನಲ್ಲಿ ಎರಡು ಪ್ರತ್ಯೇಕ ಪ್ರವೇಶದ್ವಾರಗಳನ್ನು ಹೊಂದಿದೆ. ಈಗ ಪೂರ್ವದಿಕ್ಕಿನ ದ್ವಾರವು ಮಾತ್ರ ಚಾಲ್ತಿಯಲ್ಲಿದ್ದು ಉತ್ತರ ದಿಕ್ಕಿನದು ನಾಮರಸ್ತಾಗಿ ಬಂದ್ ಆಗಿರುತ್ತದೆ. ದೇಗುಲದ ಸುತ್ತಲೂ ಅತಿಕ್ರಮಣ ಮಾಡಿದ ರೈತರು ಮಣ್ಣು ಕಲ್ಲು ತಂದು ಹರಡಿರುವುದರಿಂದ ಅರ್ಧಭಾಗ ಮುಚ್ಚಿದೆ. ತಳಪಾಯವೆಲ್ಲ ಸಂಪೂರ್ಣ ಭೂಮಿಯಲ್ಲಿ ಹುಗಿದು ಗೋಡೆಯ ಮೇಲೆ ೩-೪ ಅಡಿವರೆಗೆ ಆವೃತಗೊಂಡಿದೆ. ಇದರಿಂದ ದೇಗುಲ ಕುಸಿದಿರುವಂತೆ ತೋರುತ್ತಿದೆ.

ಯಾರು ಕಂಡು ಕೇಳರಿಯದ ಈ ದೇಗುಲ ಈಗ ಬೆಳಕು ಕಾಣಬೇಕಾಗಿದೆ. ಇದು ಕಲ್ಯಾಣದ ಚಾಲುಕ್ಯರ

* ಜೆ.ಇ.ಸಿ.ಜೆ.ಕೆ. ಹಿರೇಗೌಡರ, ಸಂ.ಪ.ಪೂ. ಕಾಲೇಜು, ರೊಟ್ಟಿಗವಾಡ, ಕುಂದಗೋಳ ತಾ. ಧಾರವಾಡ ಜಿಲ್ಲೆ.

ಕಲಾಶೈಲಿಯಲ್ಲಿದ್ದು ಕ್ರಿ.ಶ. ೧೧ನೇ ಶತಮಾನದ ಆದಿಭಾಗದಲ್ಲಿ ನಿರ್ಮಾಣವಾಗಿದೆ. ಆದರೆ ಇದು ಸಂಪೂರ್ಣ ದುರ್ಬಲವಾಗಿದ್ದು ಯಾವ ಕ್ಷಣದಲ್ಲಿ ನೆಲಸಮಗೊಳ್ಳುವುದೋ ತಿಳಿಯದು. ಅಂತರಾಳದಲ್ಲಿ ಕೌತುಕಮಯವಾದ ಕಲಾಸ್ಮಾರಕಗಳನ್ನು ತುಂಬಿಕೊಂಡು ಇತಿಹಾಸ ಹಾಗೂ ಕಲಾರಾಧಕರಿಗೆ ಕೈಗನ್ನಡಿಯಾಗಿ ನಿಂತ ದೇಗುಲವು ಪ್ರವೇಶದ್ವಾರ, ಪ್ರಾಂಗಣ ಪ್ರದಕ್ಷಿಣಾ ಪಥ ಸಭಾಮಂಟಪ, ನವರಂಗ, ಗರ್ಭಗೃಹಗಳನ್ನು ಹೊತ್ತು ನಿಂತಿದೆ.

ದೇಗುಲವು ಒಟ್ಟು ೨೨ ಕಂಬಗಳ ಶಿಲಾಮಂಟಪವಾಗಿದ್ದು ಸುತ್ತಲೂ ಕಲ್ಲು, ಗಚ್ಚುಗಾರೆ ಬಳಸಿ ಗೋಡೆ ನಿರ್ಮಿಸಲಾಗಿದೆ. ಪ್ರವೇಶದ್ವಾರವು ಪೂರ್ವದಲ್ಲಿ ಸುಗಮವಾಗಿ ದೇಗುಲ ಪ್ರವೇಶಿಸಲು ಉತ್ತಮವಾಗಿದೆ.

ಪ್ರವೇಶದ್ವಾರದ ಮುಂಭಾಗ ಸಂಪೂರ್ಣ ಜಖಂಗೊಂಡಿದ್ದು ಅಲ್ಲಿ ಯಾವುದೇ ಇಮಾರತಿಗಳಲ್ಲದಿದ್ದರೂ ಕೆಳಗಡೆ ತಳಪಾಯ ಹಾಗೂ ನಾಲ್ಕು ಅಡಿ ಎತ್ತರವಾದ ಜಗಲಿ ಇದ್ದು ಕಂಬಸಾಲು ಗೋಡೆವಗೈರೆ ಇರುವುದಿಲ್ಲ ಪ್ರವೇಶದ್ವಾರದ ಮಧ್ಯದಲ್ಲಿ ಬೃಹದಾಕಾರದ ನಂದಿ ವಿಗ್ರಹವಿದ್ದು ಇದು ತೃಟಿತಗೊಂಡಿದೆ. ಮೂಲ ಪ್ರವೇಶದ್ವಾರದ ಬಾಗಿಲು ಚೌಕಟ್ಟುಗಳು ತ್ರುಟಿತಗೊಂಡಿದ್ದು ಹೊಸ್ತಿಲು ಬೃಹದಾಕಾರವಾಗಿದ್ದು ಎಡ ಬಲದ ತೋಳುಗಳು ಅಲಂಕಾರಗೊಂಡಿವೆ. ಹಣೆಪಟ್ಟಿಯ ಸುರುಳಿ ಕೆತ್ತನೆಯನ್ನು ಹೊಂದಿದೆ. ಇದನ್ನು ದಾಟಿ ಮುಂದೆ ಸಾಗಿದರೆ ನಯನ ಮನೋಹರವಾದ ಬೃಹದಾಕಾರದ ೧೫ ಅಡಿ ಅಗಲಳತೆಯ ಸಭಾಮಂಟಪವಿದ್ದು ಮಜಭೂತಾದ ನಾಲ್ಕು ಕಂಬಗಳ ಶಿಲಾಮಂಟಪದಲ್ಲಿ ನೆಲೆಗೊಂಡಿದೆ. ಕೆಳಭಾಗದ ತಳಹಾಸಿಗೆಯಲ್ಲಿ ಒಂದೇ ಕಲ್ಲು ಇದ್ದು, ಶಿಲ್ಪವನ್ನು ವೃತ್ತಾಕಾರವಾಗಿ ಕಟೆದಿದ್ದು ಅದರ ಮೇಲೆ ನಾಲ್ಕು ಕಂಬಗಳನ್ನು ಜೋಡಿಸಿದ್ದಾರೆ. ಕಂಬಗಳು ೨ ಅಡಿ ಅಗಲ ಹಾಗೂ ೮ ಅಡಿ ಎತ್ತರವಾಗಿವೆ. ಎಲ್ಲಾ ಕಂಬಗಳು ಚೌಕಾಕಾರವಾಗಿ ಅಷ್ಟಕೋನಾಕಾರವಾಗಿದ್ದು ಮೇಲ್ಭಾಗದಲ್ಲಿಯ ಬೋದಿಗೆಗಳು ದುಂಡಾಗಿದ್ದು ಎಷ್ಟು ಭಾರವಿದ್ದರೂ ದೈತ್ಯರಂತೆ ಹೊತ್ತು ನಿಲ್ಲುವ ಶಕ್ತಿ ಪಡೆದಿವೆ. ಇವು ಗಗ್ಗರಿಯಾಕಾರದಲ್ಲಿದ್ದು ಕೆಳಗೆ ಚೌಕಾಕಾರವಾಗಿದ್ದು, ಮೇಲೆ ಅಷ್ಟ ಕೋನಾಕೃತಿಯಲ್ಲಿವೆ. ಕಂಬದ ಮೇಲೆ ಗಡಗಿ, ಕಡಗ ಅದರ ಮೇಲೆ ಬೆದುಗೆಗಳನ್ನು ಹೊಂದಿದ ತೊಲೆಗಳು ಅಂದಿನ ಮೂಲ ಕಲಾವೈಭವವನ್ನು ಹೊರಸೂಸುವಂತಿವೆ. ಇದರ ಮೇಲ್ಛೆತ್ತಿನಲ್ಲಿ ಯಾವುದೇ ಕೆತ್ತನೆಗಳಿರುವುದಿಲ್ಲ. ಸಭಾಮಂಟಪದ ಸುತ್ತಲೂ ೫ ಅಡಿ ಅಗಲದ ಪ್ರದಕ್ಷಿಣಾ ಪಥವಿದೆ. ಗೋಡೆಯ ಎಡಬಲಗಳಲ್ಲಿ ನಾಲ್ಕು ಬೃಹದಾಕಾರದ ಗೂಡುಗಳಿವೆ. ಇಲ್ಲಿ ಸೂರ್ಯ, ಗಣಪತಿ, ಭೈರವ ಮೊದಲಾದ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ್ದಾರೆ. ಇದರ ಹಿಂದೆಯೇ ಸುಮಾರು ೧೪ ಅಡಿ ಉದ್ದದ ೪ ಅಡಿ ಎತ್ತರವಾದ ಕಲ್ಲಿನಲ್ಲಿ ಸುಂದರವಾದ ಸಪ್ತಮಾತೃಕೆಯರ ವಿಗ್ರಹಗಳನ್ನು ಉಬ್ಬು ಚಿತ್ರಣದಲ್ಲಿ ಬಿಡಿಸಲಾಗಿದೆ. ಇವರ ಎದುರಿಗಿನ ಗೋಡೆ ಗೂಡಿನಲ್ಲಿ ಮಹಿಷಾಸುರ ಮರ್ದಿನಿ ವಿಗ್ರಹ ಹಾಗೂ ಗಜಾನನ ತ್ರುಟಿತ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ.

ನವರಂಗದಲ್ಲಿ ಯಾವುದೇ ಅಲಂಕಾರಗಳಿರವುದಿಲ್ಲ. ಇದು ೧೮ ಅಡಿ ಉದ್ದ ೧೨ ಅಡಿ ಅಗಲವಿದೆ. ಇದನ್ನು ದಾಟಿ ಮುಂದೆ ಹೋದರೆ ಎದುರಾಗುವ ಗರ್ಭಗೃಹದ ಬಾಗಿಲುವಾಡವು ಸುಂದರವಾಗಿದ್ದು ಎಡಬಲದ ಪಟ್ಟಿಗಳಲ್ಲಿ ಮಕರ ತೋರಣ ಹಾಗೂ ಸುರುಳಿ ಗೆತ್ತನೆಯನ್ನು ಬಿಡಿಸಲಾಗಿದೆ. ಸಪಾಟಾದ ಕಲ್ಲಿನಲ್ಲಿ ಡಪ್ಪೆಗಳನ್ನು ಜೋಡಿಸಿ ಅಲಂಕರಿಸಲಾಗಿದೆ.

ಎಲ್ಲೆಂದರಲ್ಲಿ ಗುಂಡುಸಾಲೆಗಳನ್ನು ಬಿಡಿಸಲಾಗಿದ್ದು ಮೇಲಿನ ಹಣೆಪಟ್ಟಿಯು ಸಪಾಟಾಗಿದ್ದು ಚೌಕಾಕಾರದ ಪಟ್ಟಿಕೆಗಳನ್ನು ಬಿಡಿಸಲಾಗಿದೆ. ಹಣೆಪಟ್ಟಿಯ ಮಧ್ಯಭಾಗದಲ್ಲಿ ಒಂದು ಅಡಿ ಚೌಕಾಕಾರದ ಕಲ್ಲನ್ನು ನಿರ್ಮಿಸಿ ಅದರಲ್ಲಿ ಯಾವುದೇ ಕೆತ್ತನೆಯನ್ನು ಮಾಡದೇ ಸಪಾಟಾಗಿ ಹಾಗೆ ಬಿಟ್ಟಿದ್ದಾರೆ. ಇದರಲ್ಲಿ ಗಜಲಕ್ಷ್ಮಿ ಅಥವಾ ಗಣೇಶ ವಿಗ್ರಹಗಳಿಲ್ಲ. ಗರ್ಭಗೃಹದ ಎಡಬಲದ ಗೋಡೆಗಳಲ್ಲಿ ಯಾವುದೇ ಗೂಡು ಅಥವಾ ವಿಗ್ರಹಗಳು ಕಂಡುಬರುವುದಿಲ್ಲ. ದೇವಾಲಯದ ಮೇಲ್ಛೆತ್ತು ಮಣ್ಣಿನಿಂದಾವೃತಗೊಂಡಿದೆ. ಇದು ವೈರಿಯ ಕಾಟಕ್ಕೆ ಅಥವಾ ಮಳೆಯ ಹೊಡೆತಕ್ಕೆ ತಡೆಯಲಾರದೆ ಮುಚ್ಚಿರಬಹುದಾದ ಸಾಧ್ಯತೆಗಳಿವೆ. ಗರ್ಭಗೃಹದ ಒಳಭಾಗದಲ್ಲಿ ಯಾವುದೇ ವಿಶೇಷ ಅಲಂಕಾರಗಳಿರುವುದಿಲ್ಲ. ಮಧ್ಯಭಾಗದಲ್ಲಿ ಶ್ರೀ ಸೋಮೇಶ್ವರ ದೇವರ ಲಿಂಗವು ಪ್ರತಿಷ್ಠಾಪನೆಗೊಂಡಿದೆ. ಇದರ ಸೌಂದರ್ಯ ವಿಶೇಷವಾಗಿದೆ. ಅಷ್ಟಕೋನಾಕೃತಿಯಲ್ಲಿದ್ದ ಪೀಠವು ಚಿಕ್ಕದಾದ ಜಲಹರಿಯನ್ನು ಹೊಂದಿದೆ. ಲಿಂಗವು ೫ ಅಡಿ ಚೌಕಾಕಾರದ ಕಲ್ಲಿನಲ್ಲಿ ನಿರ್ಮಾಣಗೊಂಡಿದೆ. ಇದರ ಎಡಭಾಗದಲ್ಲಿರುವ ಜಲಹರಿಯು ೫ ಅಡಿ ಉದ್ದವಿದೆ. ಸೋಮೇಶ್ವರ ದೇವರ ಅಭಿಷೇಕದ ನೀರು ಹೊರ ಹೋಗಲು ಜಲಹರಿ ಇದ್ದು ಇದರ ನಂತರ ಗೋಡೆ ಗೂಡಿನಲ್ಲಿ ಹೊಸ ಜಲಹರಿಗೆ ಕಿಂಡಿಯನ್ನು ಬಿಡಲಾಗಿದೆ ಯಾದರೂ ಅದು ಮಣ್ಣಿನಲ್ಲಿ ಹೂತುಹೋಗಿದೆ. ಲಿಂಗದ ಮೇಲ್ಭಾಗದ ಬಾಣವು ಮಾತ್ರ ತ್ರುಟಿತಗೊಂಡಿದ್ದು ಯಾರದೋ ದಾಳಿಗೆ ತುತ್ತಾದಂತೆ ಕಂಡರೂ ಭಕ್ತಾದಿಗಳು ನೂತನ ಬಾಣವನ್ನು ಇತ್ತೀಚಿನ ದಿನಗಳಲ್ಲಿ ರೇಖಿಸಿರುವುದು ವಿಶೇಷವಾಗಿದೆ. ದೇಗುಲಕ್ಕೆ ಗೋಪುರ ಶಿಖರಗಳಿರದೆ, ಗರ್ಭಗೃಹದ ಕೆಳಗಿನ ಗೋಡೆ

ಯಲ್ಲಿ ಯಾವುದೇ ಗೂಡುಗಳಾಗಿರಲಿ ಮಾಡುಗಳಾಗಲಿ ಇರುವುದಿಲ್ಲ. ಮೇಲ್ಛೆತ್ತಿನಲ್ಲಿ ಯಾವುದೇ ಕೆತ್ತನೆಗಳಿರದಿದ್ದರೂ ಅಷ್ಟಕೋನಾಕೃತಿಯಲ್ಲಿ ಕಲ್ಲುಗಳನ್ನು ಹೊಂದಿಸಿದ್ದಾರೆ.

ಸೋಮೇಶ್ವರ ದೇವಾಲಯದ ಸುತ್ತಲೂ ಮಜಭೂತಾದ ಗೋಡೆಗಳಿದ್ದು ಸುಮಾರು ನಾಲ್ಕು ಅಡಿ ಅಗಲವಾಗಿದೆ. ಸುಮಾರು ೯-೧೦ ಅಡಿಗಳಷ್ಟು ಎತ್ತರವಾಗಿದೆ. ತಳಪಾಯದ ಗೋಡೆಯು ಮಜಭೂತಾಗಿದ್ದು, ಗೋಡೆಯ ಮೇಲ್ಛೆತ್ತಿನ ಭಾರ ಹೊರಲಾರದೆ ಕೆಳಗೆ ಕುಸಿದು ಹೋಗಿದೆ. ಕೆಲವೆಡೆಗಳಲ್ಲಿ ಗೋಡೆ ವಾಲಿದ್ದು ಇನ್ನೂ ಕೆಲವೆಡೆಗಳಲ್ಲಿ ಗೋಡೆ ಬಿದ್ದು ಹೋಗಿದೆ. ಗೋಡೆಯನ್ನು ಕರಿಯ ಕಲ್ಲುಗಳನ್ನು ಮಧ್ಯದಲ್ಲಿ ಗಚ್ಚು ಗಾರೆಯನ್ನು ಬಳಸಿ ನಿರ್ಮಿಸಲಾಗಿದೆ. ಗರ್ಭಗೃಹದ ಕೋಣೆಯು ಕವಲು ೩೦ ಅಡಿ ಅಗಲವಾಗಿದೆ. ದೇಗುಲದ ಹೊರಗೋಡೆಗಳಲ್ಲಿ ಯಾವುದೇ ಕೆತ್ತನೆಗಳಾಗಲಿ, ವಿಗ್ರಹಗಳಾಗಲಿ ಕಂಡು ಬರುವುದಿಲ್ಲ. ಮಣ್ಣಿನಿಂದ ಅರ್ಧ ಗೋಡೆಗಳು ಹುಗಿದು ಹೋಗಿರುವುದರಿಂದ ದೇವಾಲಯದ ಅಂದವೇ ಕಳೆಗುಂದಿವೆ. ಮೇಲ್ಛೆತ್ತು ಕುಸಿದು ಕಲ್ಲುಗಳು ಮುರಿದು ಭಯಾನಕವಾಗಿ ಒಳಹೋಗಲು ಹೆದರಿಕೆ ಬರುವಂತಿದೆ. ಕೆಳಗೆ ನಿಂತು ನೋಡಿದರೆ ಮೈಮೇಲೆ ಬೀಳುವುದೇನೋ ಎಂಬ ಭಾವನೆ ಬರುವುದು ಸಹಜವಾಗಿದೆ.

ದೇವಾಲಯದ ಎಡಭಾಗದ ಗೋಡೆಗೆ ಆತುಕೊಂಡು ನಿಂತಿರುವ ಶಿಲಾಶಾಸನವು ಇದರ ಐತಿಹ್ಯವನ್ನು ಸಾರಲು ಸಜ್ಜಾಗಿದೆ. ಇದು ಕ್ರಿ.ಶ. ೧೧೭೦-೭೧ರಲ್ಲಿ ಗೋವಾ ಕದಂಬರ ಅರಸ ಪೆರ್ಮಾಡಿದೇವನ ಕಾಲದಲ್ಲಿ ಸೋವಗಾವುಂಡನು ಸೋಮೇಶ್ವರ ದೇವಾಲಯಕ್ಕೆ ಭೂದಾನ ಮಾಡಿದ ವಿವರವನ್ನು ಹೇಳುತ್ತಿದೆ. ಅಂದರೆ ಇದಕ್ಕೂ ಮೊದಲು ದೇಗುಲ ನಿರ್ಮಿಸಿರುವುದು ಸುಸ್ಪಷ್ಟವಾಗಿದೆ. ಕ್ರಿ.ಶ. ೧೧ನೇ ಶತಮಾನದ ಆದಿ ಮಧ್ಯಕಾಲದಲ್ಲಿಯೇ ಇದರ ನಿರ್ಮಾಣ ಕಾರ್ಯವಾಗಿರುವ ಸಾಧ್ಯತೆಗಳು ಮೇಲ್ನೋಟಕ್ಕೆ ಸಾಬೀತಾಗುತ್ತದೆ.

ದೇವಾಲಯದ ಬಲಭಾಗದಲ್ಲಿ ಬೃಹದಾಕಾರದ ಹೊಂಡವಿದ್ದು ಹಿಂದೆ ಇದರ ನೀರನ್ನು ಪೂಜೆಗೆ ಬಳಸುತ್ತಿದ್ದರೆಂದು ತಿಳಿದುಬರುತ್ತದೆ. ಆದರೆ ಇಂದು ಗ್ರಾಮದ ಭಕ್ತ ಜನರು ದೇವಾಲಯದ ಜೀರ್ಣೋದ್ಧಾರಕ್ಕಾಗಿ ಹೊಂಡವನ್ನು ಸುಮಾರು ೩೦-೩೫ ಅಡಿ ಆಳದವರೆಗೆ ಅಗೆದು ಆಳವಾದ ತಗ್ಗು ನಿರ್ಮಿಸಿದ್ದರಿಂದ ದೇವಾಲಯ ಅದರಡಿಯಲ್ಲಿ ಕುಸಿದು ಕುಳಿತಂತೆ ಕಂಡುಬರುತ್ತದೆ. ಕೆರೆಯಲ್ಲಿಯ ಹೂಳು ಮಣ್ಣನ್ನು ತೆಗೆದು ಅದರ ದಂಡೆ ಮೇಲೆ ಹಾಕಿದ್ದರಿಂದ ದಂಡೆ ಬಹಳಷ್ಟು ಎತ್ತರವಾಗಿ ಕಾಣುತ್ತದೆ.

ದೇವಾಲಯದ ಸುತ್ತಲೂ ಕಂಬ ತೋಲೆಬೋದುಗೆ ಚೌಕಟ್ಟು ಹಣೆಪಟ್ಟಿ ಹೊಸ್ತಿಲು ಜಾಲಾಂದರ ಮುಂತಾದವು ತ್ರುಟಿತಗೊಂಡು ಅಲ್ಲಲ್ಲಿ ಚದುರಿದಂತೆ ಕಂಡುಬರುತ್ತಿರುವುದು. ಇದು ದೇಗುಲದ ವೈಶಾಲ್ಯತೆಗೆ ಪುಷ್ಟಿ ನೀಡುವಂತಿದೆ.

ದೇವಾಲಯದ ಪ್ರವೇಶದ್ವಾರದ ಮುಂಭಾಗದಲ್ಲಿ ಪಶ್ಚಿಮಕ್ಕೆ ಮುಖ ಮಾಡಿ ಇದನ್ನು ಪ್ರತಿಷ್ಠಾಪಿಸಲಾಗಿದೆ. ಇದು ಸುಮಾರು ೬ ಅಡಿ ಉದ್ದ, ೪ ಅಡಿ ಎತ್ತರ, ೫ ಅಡಿ ಅಗಲವಾಗಿದೆ. ಇದರ ವೈಶಿಷ್ಟ್ಯವೆಂದರೆ ನಂದಿ ವಿಗ್ರಹದ ಜಲಹರಿ ಮಧ್ಯಭಾಗದಲ್ಲಿದ್ದು ಅದನ್ನು ಎಡಗಡೆ ತಿರುವಿ ಕೆತ್ತಲಾಗಿದೆ. ನಂದಿ ಅಭಿಷೇಕದ ನೀರು ಹೋಗಲು ಈ ರೀತಿ ವ್ಯವಸ್ಥೆಗೊಳಿಸಲಾಗಿದೆ. ನಂದಿ ವಿಗ್ರಹವು ತ್ರುಟಿತ ಗೊಂಡಿದ್ದು ನಿಧಿಶೋಧಕರು ಈ ಕೃತ್ಯ ಎಸಗಿರಬಹುದು. ಎಡಗಾಲನ್ನು ಮುಂದಿಟ್ಟುಕೊಂಡು ಮಲಗಿದ ಭಂಗಿಯಲ್ಲಿದೆ. ಕಾಲಲ್ಲಿ ಸರಪಳಿ, ಕಡಗ, ಕೊರಳಲ್ಲಿ ಗೆಜ್ಜೆ ಸರ, ಗುಮುರಿ, ಗಂಟೆ, ಬೆನ್ನ ಮೇಲೆ ಜೂಲ, ಮುಖಕ್ಕೆ ಮುಖವಾಡ ಹಣೆಪಟ್ಟಿ ಕೊಡಣಸು, ಕೊರಳಲ್ಲಿ ಕಟ್ಟಿದ ಗೆಜ್ಜೆ ಸರದ ಹಗ್ಗದ ಗಂಚು, ಇಣಿ ಶಿರದ ಬೆನ್ನಿನ ಮೇಲೆ ಸುಂದರವಾಗಿ ಬಿಡಿಸಲ್ಪಟ್ಟಿದೆ. ಬಾಲದ ಕೆಳಗೆ ಜೂಲು ಕಟ್ಟಿ ಬಿಗಿಗೊಳಿಸಿದ ಕುರುಹುಗಳಿವೆ. ಇದು ಕಲಘಟಗಿ ತಾಲ್ಲೂಕಿನಲ್ಲಿ ಅತಿ ಎತ್ತರವಾದ ಎರಡನೇ ನಂದಿ, ಇದಾಗಿದ್ದು ಇನ್ನೊಂದು ತಂಬೂರಿನ ಬಸವಣ್ಣನ ದಾಗಿದೆ. ತಂಬೂರಿನ ಬಸವಣ್ಣ ದೇವಸ್ಥಾನದ ಮಾದರಿ ಯಲ್ಲಿಯೇ ಈ ದೇವಾಲಯದ ಕುರುಹುಗಳು ಕಂಡು ಬರುತ್ತಿರುವುದರಿಂದ ಇವೆರಡು ದೇಗುಲಗಳು ಸಮಕಾಲೀನ ವಾದವುಗಳೆಂದು ನಂಬಲಾಗಿದೆ.

ಮಹಿಷಾಸುರ ಮರ್ದಿನಿ (ದುರ್ಗಾದೇವಿ) : ದೇವಾಲಯದಲ್ಲಿಯೇ ಇದು ಅತ್ಯಾಕರ್ಷಕವಾಗಿ ಕಂಗೊಳಿಸು ತ್ತಿದೆ. ಇದು ಅಲ್ಲಲ್ಲಿ ತ್ರುಟಿತಗೊಂಡಿದೆ. ದುರ್ಗಾಮಾತೆ ಮಹಿಷಾಸುರನನ್ನು ಯುದ್ಧದಲ್ಲಿ ವೀರಾವೇಶದಿಂದ ಕೊಲ್ಲುವ ದೃಶ್ಯ ಭಕ್ತರನ್ನು ಬೆರಗುಗೊಳಿಸುವಂತಿದೆ. ಶ್ರೀ ಮಾತೆ ಅಷ್ಟ ಭುಜಗಳನ್ನು ಹೊಂದಿದ್ದಾಳೆ. ಬಲಹಸ್ತದಲ್ಲಿ ತ್ರಿಶೂಲ, ಕಠಾರಿ, ಖಡ್ಗ, ಎಡಹಸ್ತದಲ್ಲಿ ಬಿಲ್ಲು, ಡೌಲು, ಪಾಶಗಳನ್ನು ಧರಿಸಿ ಇನ್ನೊಂದು ಹಸ್ತದಿಂದ ಮಹಿಷನ ವಾಹನ ಕೋಣನ ರುಂಡವನ್ನು ಮೇಲೆತ್ತಿ ಹಿಡಿದಿರುವ ಸನ್ನಿವೇಶ ಹಾಗೂ ಬಲಗೈಯಿಂದ ತ್ರಿಶೂಲವನ್ನು ಮಹಿಷನ ಹೊಟ್ಟೆಗೆ ಚುಚ್ಚಿದ ಭಯಾನಕ ದೃಶ್ಯ ಚಿತ್ತಾಕರ್ಷಣೀಯವಾಗಿದೆ. ವಿಗ್ರಹದ ಕೆಳಭಾಗದಲ್ಲಿ ಎಡಕ್ಕೆ ಸಿಂಹ ಮತ್ತು ವೀರಯೋಧರು ವೀರಾವೇಶದಲ್ಲಿ ನಿಂತಿರುವಂತೆ ಕಂಡುಬರುತ್ತಿದೆ. ದೇವಿಯ ಮುಖವು ನೇರವಾಗಿದ್ದು ಉಬ್ಬುಶಿಲ್ಪದಲ್ಲಿ ಕೆತ್ತಲಾಗಿದೆ. ವಿಗ್ರಹದ ಸುತ್ತಲೂ ಅಲಂಕೃತಗೊಂಡ ಪ್ರಭಾವಳಿ ಇದ್ದು ಇದರಲ್ಲಿ



ಮಕರ ತೋರಣದ ಚಿತ್ರ ಬಿಡಿಸಲಾಗಿದೆ. ವಿಗ್ರಹವು ಸುಮಾರು ೫ ಅಡಿ ಎತ್ತರವಾಗಿದ್ದು ೩ ಅಡಿ ಅಗಲವಾಗಿದೆ. ಇದಕ್ಕೆ ಪ್ರತ್ಯೇಕವಾದ ಗೂಡನ್ನು ನಿರ್ಮಿಸಿ ದಕ್ಷಿಣದ ಗೋಡೆಯಲ್ಲಿ ಎತ್ತರಕ್ಕೆ ಮುಖ ಮಾಡಿ ನಿಲ್ಲಿಸಲಾಗಿದೆ.

ಗಣೇಶ : ಇಲ್ಲಿ ಗಣೇಶನ ಎರಡು ಸುಂದರ ವಿಗ್ರಹಗಳು ಕಂಡುಬರುತ್ತಿವೆ. ಒಂದನೆಯದು ಬಹಳಷ್ಟು ನಯನಾಜೂಕಿನಿಂದ ೪ ಅಡಿ ಎತ್ತರವಾಗಿ ನಿರ್ಮಿಸಿದ್ದರೂ ವೈರಿಗಳ ಹೊಡೆತಕ್ಕೆ ಹೊಟ್ಟೆಭಾಗ ಶಿರ, ಮುಖ, ಕಾಲುಗಳು ಬೇರೆ ಬೇರೆಯಾಗಿ ತ್ರುಟಿತಗೊಂಡಿದೆ. ಸೊಂಡಿಲು ಎಡಕ್ಕೆ ತಿರುವಿದ್ದು ಉಬ್ಬು ಚಿತ್ರಣವಾಗಿದೆ.

ಮತ್ತೊಂದು ಗಣೇಶನ ವಿಗ್ರಹವು ನೋಡಲು ಸುಂದರವಾಗಿದೆ. ಇದನ್ನು ಕಪ್ಪು ಮಿಶ್ರಿತ ಒರಟು ಕಲ್ಲಿನಲ್ಲಿ ನಿರ್ಮಿಸಿದ್ದಾರೆ. ಇಲ್ಲಿಯ ವಿಗ್ರಹ ೪ ಅಡಿ ಎತ್ತರವಾಗಿದ್ದರೂ ಸಹ ವಿಶೇಷವಾದ ಕೆತ್ತನೆಗಳು ಶಿಲ್ಪಿಯ ಕೈಯಲ್ಲಿ ಸುಂದರವಾಗಿ ಅರಳಿ ನಿಂತಿವೆ. ಯಾವುದೇ ಭಾಗ ತ್ರುಟಿತಗೊಂಡಿಲ್ಲ. ದೇವಾಲಯಕ್ಕೆ ಮೆರಗು ತರುವಂತಾಗಿದೆ.

ಸಪ್ತಮಾತೃಕೆಯರ ವಿಗ್ರಹ : ಬೃಹದಾಕಾರದ ೧೪ ಅಡಿ ಉದ್ದ, ೪ ಅಡಿ ಅಗಲವಾದ ಕಲ್ಲಿನಲ್ಲಿ ಧಾರ್ಮಿಕ ವಿಷಯಕ್ಕೆ ತಕ್ಕಂತೆ ೭ ವಿಗ್ರಹಗಳಿವೆ. ಇದರಲ್ಲಿ ೨ ವಿಗ್ರಹಗಳನ್ನು ೨ ಸಾರಿ ಕೆತ್ತಿದ್ದರಿಂದ ೯ ಆಗಿವೆ. ಸ್ಪಷ್ಟವಾಗಿ ಕೇವಲ ೭ ಮಾತೃಕೆಯರ ವಿಗ್ರಹಗಳಿರುವುದು ಸುಸ್ಪಷ್ಟವಾಗಿದೆ. ಮುಖ್ಯವಾಗಿ ಗಿರಿಜೆ, ಸರಸ್ವತಿ, ಲಕ್ಷ್ಮಿ, ಉಮಾಮಹೇಶ್ವರಿ, ಪಾರ್ವತಿ, ದಾಕ್ಷಾಯಿಣಿ, ಗಜಲಕ್ಷ್ಮಿ, ಗಜಗೌರಿ, ಗಣೇಶ ಮೊದಲಾದ ವಿಗ್ರಹಗಳನ್ನು ಉಬ್ಬು ಚಿತ್ರದಲ್ಲಿ ಒಂದೇ ಕಲ್ಲಿನಲ್ಲಿ ಬಿಡಿಸಲಾಗಿದೆ. ಇಲ್ಲಿ ಗಮನಾರ್ಹವಾದ ವಿಷಯವೆಂದರೆ ಆಯಾ ಮಹಾ ಮಾತೃಕೆ ಮಾತೆಯರ ಕೆಳಭಾಗದಲ್ಲಿ ಅವರ ವಾಹನಗಳಿದ್ದು ಅವರೆಲ್ಲರೂ ತಮ್ಮನ್ನು ತಾವು ಪರಿಚಯಿಸಿಕೊಂಡಿದ್ದಾರೆ.

ಹಿಂದೂ ಧರ್ಮದಲ್ಲಿ ದೇವಾನುದೇವತೆಯರ ದರ್ಶನ ಹಾಗೂ ಪೂಜೆಯನ್ನು ಒಂದೇ ಸ್ಥಳದಲ್ಲಿ ನೇರವೇರಿಸುವ ಸದುದ್ದೇಶದಿಂದ ದೇವಾಲಯಗಳಲ್ಲಿ ಸಪ್ತಮಾತೃಕೆಯರ ವಿಗ್ರಹಗಳನ್ನು ಪ್ರತಿಷ್ಠಾಪಿಸುತ್ತಿದ್ದುದನ್ನು ಸೂಚಿಸುವಂತಿದೆ. ಅದರಂತೆ ಹಸರಂಬಿಯ ಸೋಮೇಶ್ವರ ದೇವಸ್ಥಾನದಲ್ಲಿ ಸಪ್ತಮಾತೃಕೆಯರ ವಿಗ್ರಹ ಪ್ರತಿಷ್ಠಾಪಿಸಿರುವುದು ಸ್ತುತ್ಯಾರ್ಹ.

ಇದರಲ್ಲಿ ಮುಖ್ಯವಾಗಿ ಸರಸ್ವತಿ, ಕೆಳಗಡೆ ಹಂಸ, ಪಾರ್ವತಿ, ಕೆಳಗೆ ನಂದಿ, ಗಿರಿಜೆ, ವೃಷಭ (ಬ್ರಹ್ಮ), ಸರನಾತಿ, ನವಿಲು, ಗಜ, ಲಕ್ಷ್ಮಿ, ದಾಕ್ಷಾಯಣಿ, ಎತ್ತು, ಗಜಗೌರಿ, ಆನೆ ಹಾಗೂ ಗಣಪತಿ, ಉಮಾಮಹೇಶ್ವರಿ ಮೊದಲಾದ ದೇವಾನುದೇವತೆಗಳನ್ನು ಒಂದೇ ಕಲ್ಲಿನಲ್ಲಿ ಕೆತ್ತಿರುವುದು ಕಂಡುಬರುತ್ತದೆ.

ಸೂರ್ಯವಿಗ್ರಹ

ಇದು ನಿಂತ ಭಂಗಿಯಲ್ಲಿದೆ. ನಾಲ್ಕು ಭುಜಗಳನ್ನು ಹೊಂದಿದ್ದು ತನ್ನ ಕೈಗಳಲ್ಲಿ ಗದೆ, ಶಂಖ, ಚಕ್ರ ಬಲಗೈ ಹಸ್ತ, ಅಭಯಹಸ್ತವಿರುತ್ತದೆ. ವಿಗ್ರಹ ಬಹು ಸುಂದರವಾಗಿದ್ದು ಯಾವುದೇ ಧಕ್ಕೆಗೊಳಗಾಗಿಲ್ಲ. ಸುತ್ತಲೂ ಪ್ರಭಾವಳಿ ಇದೆ. ಅದರಲ್ಲಿ ಸುಂದರ ಕಲಾಕೃತಿಗಳನ್ನು ಬಿಡಿಸಲಾಗಿದೆ. ಕೆಳಭಾಗದಲ್ಲಿ ಯಕ್ಷ ಯಕ್ಷಿಣಿಯರ ವಿಗ್ರಹಗಳಿವೆ. ದೇವಾಲಯದ ಪ್ರವೇಶದ್ವಾರದ ಮುಂದಿನ ಗೋಡೆಯ ಗೂಡಿನಲ್ಲಿ ಇದನ್ನು ಪ್ರತಿಷ್ಠಾಪಿಸಲಾಗಿದೆ. ವಿಗ್ರಹ ನೋಡಲು ನಯನಮನೋಹರವಾಗಿದೆ.

ರುಂಡಮಾಲೆ ಧರಿಸಿದ ಭೈರವ ವಿಗ್ರಹ

ಶೈವ ದೇವಾಲಯಗಳಲ್ಲಿ ಅದರಲ್ಲೂ ವಿಶೇಷವಾಗಿ ಕಲ್ಯಾಣದ ಚಾಲುಕ್ಯರ ಕಾಲದ ಶೈಲಿಯ ದೇಗುಲಗಳಲ್ಲಿ ಶ್ರೀ ಭೈರವ ವಿಗ್ರಹ ಪ್ರತಿಷ್ಠಾಪಿಸಿರುವುದು ಸರ್ವೇಸಾಮಾನ್ಯ. ಅದರಂತೆ ಇಲ್ಲಿಯೂ ಸಹ ದೇವರ ವಿಗ್ರಹವು ಸುಂದರವಾಗಿ ಕಂಗೊಳಿಸುತ್ತದೆ. ವಿಗ್ರಹ ನಿಂತ ಭಂಗಿಯಲ್ಲಿದ್ದು ಎಡಭಾಗದ ಕೈಕಾಲುಗಳು, ಪಾದ, ಪೀಠ, ಪ್ರಭಾವಳಿಗಳೆಲ್ಲವೂ ತ್ರುಟಿತಗೊಂಡಿವೆ. ಭೈರವ ದೇವರು ನಯನ ಮನೋಹರವಾಗಿ

ಕಾಣುತ್ತಿದ್ದಾನೆ. ಉಗ್ರರೂಪದ ಭಂಗಿಯಲ್ಲಿದ್ದು ಮುಖ, ಮೀಸೆ, ಕಣ್ಣು, ಹುಬ್ಬುಗಳು, ಹರವಾದ ಹಣೆ, ಗದ್ದ ಇವೆಲ್ಲವೂ ವೀರಾವೇಶದ ಶೈಲಿಯಲ್ಲಿ ನಿರ್ಮಾಣಗೊಂಡಿವೆ. ಕೈ ಕಾಲು ಭುಜಗಳಲ್ಲಿ ನಾಗಾಭರಣ ಧರಿಸಿದ್ದು, ಕಾಲಿನಲ್ಲಿ ಜಂಗು, ಕಡಗ, ಪಾದುಕೆ, ಕೊರಳಲ್ಲಿ ಲಿಂಗಧಾರಣವಿದ್ದು, ಕೈಯಲ್ಲಿ ತ್ರಿಶೂಲ, ಹಣೆಯಲ್ಲಿ ಮೂರನೇ ಕಣ್ಣು, ಡಮರುಗ ಕಂಠಹಾರ ಜಡೆ ಧರಿಸಿದ್ದಾನಲ್ಲದೇ ಜಟಾಧಾರಿಯಾಗಿದ್ದಾನೆ. ಬಲಗೈಯಲ್ಲಿ ಖಡ್ಗ ಹಿಡಿದಿದ್ದಾನೆ. ಇಷ್ಟಲ್ಲದೆ, ಕೊರಳಲ್ಲಿ ರುಂಡಮಾಲೆ ಧರಿಸಿದ್ದು ಮೊಳಕಾಲಿನವರೆಗೂ ಅದು ಇಳಿಬಿದ್ದಿದ್ದು ನೋಡುಗರಿಗೆ ಭಯಾನಕವೆನಿಸುತ್ತದೆ. ಆದರೆ ವಿಗ್ರಹ ಕೇವಲ ೩ ಅಡಿ ಮಾತ್ರ ಎತ್ತರವಿದ್ದು ಕಾರಣ ಉಗ್ರತೆಗೆ ಸ್ವಲ್ಪ ಕಡಿವಾಣ ಬಿಡಿಸಲಾಗಿದೆ. ಭೈರವನನ್ನು ದೇಗುಲದ ಬಲಭಾಗದಲ್ಲಿ ಪ್ರತಿಷ್ಠಾಪಿಸಿರಬಹುದು. ಆದರೆ ಅದು ವೈರಿಗಳ ಹೊಡೆತದಿಂದ ಸಂಪೂರ್ಣ ತ್ರುಟಿತಗೊಂಡಿದೆ. ಅರ್ಧ, ಮಧ್ಯಭಾಗ ಮಾತ್ರ ಉಳಿದಿರುವುದು. ಪ್ರವೇಶದ್ವಾರದ ನಂದಿ ವಿಗ್ರಹದ ಎದುರಿಗೆ ಕಂಡುಬರುತ್ತಿದೆ. ಆದರೂ ಬಹು ಆಕರ್ಷಣೀಯ ವಿಗ್ರಹವಾಗಿದೆ.

ಬೃಹತ್ ನಾಗದೇವತೆಯ ವಿಗ್ರಹಗಳು : ನೆಟ್ಟಗೆ ನಿಲ್ಲಿಸಿದ ಎರಡು ನಾಗರೇಖಾ ಶಿಲಾ ವಿಗ್ರಹಗಳು ಉಗ್ರರೂಪ ದಲ್ಲಿರುವಂತೆ ಭಾಸವಾಗುತ್ತದೆ. ಇದರಲ್ಲಿ ಒಂದು ವಿಗ್ರಹ ೬ ಅಡಿ ಎತ್ತರವಾಗಿದ್ದು, ಪಂಚ ಹೆಡೆಗಳನ್ನು ಹೊಂದಿದೆ. ಅಂಕುಡೊಂಕಾಗಿ ಹೆಡೆ ಮೇಲೆತ್ತಿ ನಿಂತ ಭಂಗಿಯಲ್ಲಿರುವುದು ಕಂಡುಬರುತ್ತದೆ. ಇದನ್ನು ಕಪ್ಪುಮಿಶ್ರಿತ ಬಳಪದ ಕಲ್ಲಿನಲ್ಲಿ ತಯಾರಿಸಿ ದೇಗುಲದ ಸಭಾಮಂಟಪದ ಪಕ್ಕದ ಗೋಡೆಯಲ್ಲಿ ಉತ್ತರ ದಿಕ್ಕಿನ ಪ್ರವೇಶದ್ವಾರದ ಬಳಿ ನಿಲ್ಲಿಸಲಾಗಿದೆ. ಅದರಂತೆ ಇನ್ನೊಂದು ನಾಗದೇವರ ವಿಗ್ರಹವು ಸುಮಾರು ೫ ಅಡಿ ಎತ್ತರವಾಗಿದ್ದು ಸಪ್ತ ಹೆಡೆಗಳನ್ನು ಹೊಂದಿದೆ. ಪ್ರತಿಯೊಂದು ಹೆಡೆಯ ಮುಖವೂ ಸ್ಪಷ್ಟವಾಗಿ ಕಂಡುಬರುತ್ತವೆ. ಹೆಡೆಯ ಮೇಲ್ಭಾಗದಲ್ಲಿ ನೆರಳು ಮಾಡಲು ಚಿಕ್ಕ ಗೋಪುರ ನಿರ್ಮಿಸಲಾಗಿದೆ. ನೋಡಲು ಭಯಾನಕವಾಗಿದ್ದರೂ ಚಿತ್ತಾಕರ್ಷಕವಾಗಿದೆ.

ಜೋಡಿ ನಾಗರ ವಿಗ್ರಹ : ಎರಡು ಹಾವುಗಳು ಪರಸ್ಪರ ಸ್ನೇಹ ಸ್ಪಂದನದಲ್ಲಿ ತೊಡಗಿರುವುದು ಸುಸ್ಪಷ್ಟ. ವಿಶಾಲವಾದ ಹೆಡೆ. ಐದು ಹೆಡೆಗಳನ್ನು ಬಿಚ್ಚಿ ಒಂದನ್ನೊಂದು ಹೆಣೆದುಕೊಂಡಿವೆ. ಇದೊಂದು ಮನಾಕರ್ಷಕ ಚಿತ್ರವಾಗಿದೆ.

ಗಜಲಕ್ಷ್ಮಿ ವಿಗ್ರಹ

ಎಂಟು ಅಡಿ ಉದ್ದದ ನಾಲ್ಕು ಅಡಿ ಅಗಲವಾದ ಕಲ್ಲಿನಲ್ಲಿ ನಯನಮನೋಹರವಾಗಿ ಗಜಲಕ್ಷ್ಮಿ ವಿಗ್ರಹವನ್ನು ಬಿಳುಪು ಮಿಶ್ರಿತ ಕರಿಯ ಶಿಲೆಯಲ್ಲಿ ತಯಾರಿಸಲಾಗಿದೆ. ಲಕ್ಷ್ಮೀದೇವಿಯು ಕುಳಿತ ಭಂಗಿಯಲ್ಲಿದ್ದು ಧ್ಯಾನಾಸಕ್ತಳಾಗಿದ್ದಾಳೆ. ಎಡ ಬಲಗಳಲ್ಲಿ ಎರಡು ಆನೆಗಳು ತಮ್ಮ ಮುಂಗಾಲುಗಳನ್ನು ಮೇಲೆತ್ತಿ ಸೊಂಡಿಲನ್ನು ಮೇಲ್ಮುಖ ಮಾಡಿ ಅದರಲ್ಲಿ ಕುಂಭಗಳನ್ನೂ ಹಿಡಿದು ಗಜಲಕ್ಷ್ಮಿಗೆ ಅಭಿಷೇಕ ಮಾಡುತ್ತಿವೆ. ಮೇಲ್ಭಾಗದಲ್ಲಿ ಸ್ವರ್ಗಲೋಕದಲ್ಲಿ ಅಪ್ಸರೆಯರು ಪುಷ್ಪಧಾರೆ ಮಾಡುತ್ತಿದ್ದಾರೆ. ಸ್ವರ್ಗಲೋಕದ ದೃಶ್ಯವನ್ನು ಮನಮುಟ್ಟುವಂತೆ ಕೆತ್ತಲಾಗಿದೆ. ಎಡಬಲಗಳಲ್ಲಿ ಸೇವಕಿಯರು ಕೈಯಲ್ಲಿ ಚಾಮರ ಹಿಡಿದು ಗಾಳಿ ಬೀಸುತ್ತಿದ್ದಾರೆ. ಮೇಲಿನ ಪಟ್ಟಿಕೆಯಲ್ಲಿ ಸ್ವರ್ಗಲೋಕದ ದೇವಕನ್ನಿಕೆಯರು ಲಕ್ಷ್ಮಿದೇವಿಗೆ ಹೂಮಾಲೆ ಹಾಕಲು ಸಜ್ಜಾಗಿ ನಿಂತಿದ್ದಾರೆ. ಲಕ್ಷ್ಮಿ ವಿಗ್ರಹದ ಕೆಳಭಾಗದ ಪಾದದಲ್ಲಿ ದೇವತೆಗಳು ಸೇವೆಗೈಯ್ಯಲು ಹೊರಟಂತಿವೆ. ಆನೆಗಳು ತ್ರುಟಿತಗೊಂಡಿದ್ದು ವಿಗ್ರಹದ ಸುತ್ತಲೂ ಮಕರ ತೋರಣದ ಸುರುಳಿಗೆತ್ತನೆ ಹಾಗೂ ನೃತ್ಯಭಂಗಿಯಲ್ಲಿರುವ ಕನ್ನಿಕೆಯರಿಂದೊಡಗೂಡಿ ಗಜಲಕ್ಷ್ಮಿ ವಿಗ್ರಹದ ಅತ್ಯಾಕರ್ಷಕ ವಾಗಿದೆ.

ಇಷ್ಟೆಲ್ಲ ಅದ್ಭುತಗಳನ್ನು ತನ್ನ ಅಂತರಾಳದಲ್ಲಿ ಹುದುಗಿಸಿ ಕೊಂಡಿರುವ ಹಸರಂಬದ ಸೋಮೇಶ್ವರ ದೇವಾಲಯದ ಸಂಪತ್ತಿಗಾಗಿ ನಿಧಿ ಶೋಧಕರು ದೇಗುಲದಲ್ಲಿ ಗರ್ಭಗೃಹ, ಸಭಾಮಂಟಪ ಅಗೆದು ಬಗೆದು ನಿಧಿಶೋಧನೆ ನಡೆಸಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಈ ದೇಗುಲ ಜೀರ್ಣೋದ್ಧಾರ ಕ್ಕಾಗಿ ಕಾದು ಕುಳಿತಿದೆ.

ಜೀರ್ಣೋದ್ಧಾರ ಕಾರ್ಯ ಕೈಗೊಳ್ಳಲು ಧರ್ಮಸ್ಥಳದ ಧರ್ಮೋತ್ಥಾನ ಟ್ರಸ್ಟ್ ಕಮಿಟಿಯವರು ಮುಂದೆ ಬಂದರೆ ಗ್ರಾಮಸ್ಥರು ಕೃತಾರ್ಥರಾಗುವುದರಲ್ಲಿ ಸಂದೇಹವಿಲ್ಲ.

(ಈ ಪ್ರಬಂಧ ಮಂಡನೆ ಕಾರ್ಯದಲ್ಲಿ ಸಹಾಯ ಸಹಕಾರ ನೀಡಿದ ಮಾಜಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷ ಶ್ರೀ ಯಲ್ಲಪ್ಪ ದಾಸನಕೊಪ್ಪ ಹಸರಂಬಿ ಗ್ರಾಮದ ಶ್ರೀ ಶಿವಲಿಂಗಯ್ಯ ಹಿರೇಮಠ ಹಾಗು ಡಾ. ಅ. ಸುಂದರ, ಜಿ.ಇ.ಎಸ್.ಜಿ.ಕೆ. ಒಡೇಗೌಡರ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಶ್ರೀ ಎ.ಎಲ್. ಪೋಲಿಸ್ ಪಾಟೀಲ, ಚೇರ್‌ಮನ್ ಜಿ.ಎಸ್. ಪಾಟೀಲ. ಶ್ರೀಮತಿ ಹನುಮಾಕ್ಷಿಗೋಗಿ, ಶ್ರೀ ಹನುಮಂತ ಮಲ್ಲಿಗವಾಡ. ಶ್ರೀ ಫಕ್ಕೀರಪ್ಪ ಬೇವಿನಮರದ. ದಾವಲಸಾಬ ಮುಲ್ಲಾ. ಶ್ರೀಮತಿ ಲಾಲವ್ವ ಲಮಾಣಿ, ಸಾ॥ ಶಿಗಿಗಟ್ಟಿ, ಎ.ಎನ್.ಎಸ್. ಬ್ಯಾಂಕ್ ಮ್ಯಾನೇಜರ್ ಚಂದ್ರು ಕಬನೂರ. ದೇವಿಕೊಪ್ಪ ಗ್ರಾಮದ ಕಂಟ್ರಾಕ್ಟರ್. ಬಿ. ವಲ್. ಶ್ರೀ ಬಸವರಾಜ ಮಾಗಳ ತಾವರಗೇರಿಯ ಶ್ರೀ ಬಸವಣ್ಣೆಪ್ಪ ಮಲ್ಲಿಗವಾಡ. ಶ್ರೀ ಚನ್ನವೀರಪ್ಪ ಮಲ್ಲಿಗವಾಡ (ದೊಡ್ಡವಾಡ) ಶ್ರೀ ಸುನಂದಯ್ಯ ಬಿ. ಹಿರೇಮಠ ಧರ್ಮಸ್ಥಳ ಧರ್ಮೋತ್ಥಾನ ಟ್ರಸ್ಟ್ ಕಮಿಟಿಯ ನಿರ್ದೇಶಕ ಶ್ರೀ ಶಶಿಧರಶೆಟ್ಟಿ ಇವರಿಗೆಲ್ಲ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.)

ಡಾ. ಬಿ. ಸುರೇಶ*

ಚಿತ್ರದುರ್ಗ ಜಿಲ್ಲೆಯ ಶಾಸನೋಕ್ತ ದೇವಾಲಯಗಳು

ಪ್ರಸ್ತುತ ಚಿತ್ರದುರ್ಗ ಜಿಲ್ಲೆಯಲ್ಲಿ ಐದುನೂರಕ್ಕೂ ಹೆಚ್ಚು ದೇವಾಲಯಗಳು ಕಂಡುಬರುತ್ತವೆ. ಅವುಗಳಲ್ಲಿ ಶಾಸನೋಕ್ತವಾಗಿರುವ ದೇವಾಲಯಗಳ ಸಂಖ್ಯೆ ಸರಿ ಸುಮಾರು ನೂರು ಎಂದು ಹೇಳಬಹುದು. ಪ್ರಸ್ತುತ ಲೇಖನದಲ್ಲಿ ಶಾಸನೋಕ್ತ ದೇವಾಲಯಗಳ ಬಗ್ಗೆ ಚರ್ಚಿಸಿರುವುದರಿಂದ ನೂರಕ್ಕೂ ಅಧಿಕವಿರುವ ಈ ರೀತಿಯ ಶಾಸನೋಕ್ತ ದೇವಾಲಯಗಳಲ್ಲಿ ಕೆಲವು ಸಂಪೂರ್ಣವಾಗಿ ನಾಶವಾಗಿದ್ದರೆ, ಬಹುತೇಕವು ಶಿಥಿಲಾವಸ್ಥೆಯಲ್ಲಿಯೂ, ಕೆಲವೇ ಕೆಲವು ಸುಸ್ಥಿತಿಯಲ್ಲಿಯೂ ಇರುವುದು ಕಂಡುಬರುತ್ತವೆ. ಇಲ್ಲಿಯ ಕೆಲವು ದೇವಾಲಯಗಳು ಮೂಲ ರಾಜಮನೆತನದವರಿಂದ ನಿರ್ಮಾಣಗೊಂಡು ನಂತರ ಇಲ್ಲಿ ಆಳ್ವಿಕೆ ನಡೆಸಿದ ಅರಸು ಮನೆತನದವರಿಂದ ಜೀರ್ಣೋದ್ಧಾರಗೊಂಡಿವೆ. ಉದಾಹರಣೆಗೆ ಚಾಲುಕ್ಯ ಕಾಲದ ದೇವಾಲಯಗಳು ಹೊಯ್ಸಳರ ಕಾಲದಲ್ಲಿಯೂ, ಹೊಯ್ಸಳರ ಕಾಲದ ದೇವಾಲಯಗಳು ವಿಜಯನಗರ ಅರಸರ ಕಾಲದಲ್ಲಿಯೂ ಹೀಗೆ ಇಲ್ಲಿಯ ಬಹುತೇಕ ದೇವಾಲಯಗಳು ವಿಜಯನಗರ ಅರಸರ ಕಾಲದಲ್ಲಿ ಜೀರ್ಣೋದ್ಧಾರವಾಗಿರುವುದನ್ನು ಕಾಣಬಹುದು.

ಪ್ರಸ್ತುತ ಶಾಸನೋಕ್ತ ದೇವಾಲಯಗಳಲ್ಲಿ ಹೆಚ್ಚಿನ ಸಂಖ್ಯೆಯವು ಶೈವಧರ್ಮಕ್ಕೆ ಸಂಬಂಧಿಸಿದ್ದರೆ ನಂತರದ ಸ್ಥಾನದಲ್ಲಿ ವೈಷ್ಣವ ದೇವಾಲಯಗಳಿವೆ. ಅದರಂತೆ ಜೈನ, ಶಾಕ್ತ ಹಾಗೂ ವಿಶೇಷವಾಗಿ ಹನುಮಂತನಿಗಾಗಿ ನಿರ್ಮಾಣಗೊಂಡ ದೇವಾಲಯಗಳೂ ಸಹ ಅಸ್ತಿತ್ವದಲ್ಲಿದ್ದ ಬಗ್ಗೆ ಇಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ.

ಜಿಲ್ಲೆಯ ಇತಿಹಾಸವನ್ನು ಅವಲೋಕಿಸಿದರೆ ಇಲ್ಲಿನ ವಾಸ್ತುಕಲಾ ಚಟುವಟಿಕೆಗಳು ಪ್ರಾಗ್‌ಚಾರಿತ್ರಿಕ ಕಾಲದಲ್ಲೇ ಆರಂಭಗೊಂಡಿರುವುದನ್ನು ಕಾಣುತ್ತೇವೆ. ನಿರ್ದಿಷ್ಟವಾಗಿ ದೇವಾಲಯಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ಬ್ರಹ್ಮಗಿರಿ ಪರಿಸರದಲ್ಲಿ ನಡೆದಿರುವ ಉತ್ಖನನದಲ್ಲಿ ಗುಪ್ತಪೂರ್ವಕಾಲದ ಇಟ್ಟಿಗೆಯ ಕಟ್ಟಡಗಳು ದೊರೆತಿದ್ದು ಬಹುಶಃ ಅವುಗಳೇ ಇಲ್ಲಿನ ಪ್ರಾಚೀನತಮ ದೇವಾಲಯಗಳ ದೇಶಿಸುತ್ತದೆ. ಆದರೆ ಶಾಸನೋಕ್ತ ದೇವಾಲಯಗಳನ್ನು ಕುರಿತು ಹೇಳುವುದಾದರೆ ನೊಳಂಬ, ರಾಷ್ಟ್ರಕೂಟ, ಪಲ್ಲವ ಕಾಲದಲ್ಲಿ ರಚನೆಗೊಂಡಿರುವ ದೇವಾಲಯಗಳನ್ನು ಉದಾಹರಿಸಬಹುದು.

ಕ್ರಿ.ಶ. ೮೫೧ರ ಮಧುರೆಯ ಶೈವ ದೇವಾಲಯ, ಕ್ರಿ.ಶ. ೯೬೧ರ ಜಟಂಗ ಬೆಟ್ಟದ ಮೇಲಿನ ರಾಮೇಶ್ವರ ದೇವಾಲಯ, ಕ್ರಿ.ಶ. ೯೬೪ರ ಚಿಕ್ಕಂದವಾಡಿಯ ಮಹೇಶ್ವರ ದೇವಾಲಯ, ಕ್ರಿ.ಶ. ೯೬೮ರ ಕ್ಯಾಸಾಪುರದ ಕಲ್ಲೇಶ್ವರ ದೇವಾಲಯ ಮತ್ತು ಕ್ರಿ.ಶ. ೯೯೯ರ ಗುಂಡೇರಿ ಚನ್ನಕೇಶವ ದೇವಾಲಯಗಳು ಇಲ್ಲಿನ ಶಾಸನೋಲ್ಲೇಖಿತ ಆರಂಭ ಕಾಲದ ದೇವಾಲಯಗಳು, ಇವುಗಳಲ್ಲಿ ಜಟಂಗರಾಮೇಶ್ವರ ದೇವಾಲಯದ ನಿರ್ಮಾಣ ಅಥವಾ ಅಸ್ತಿತ್ವದ ಬಗ್ಗೆ ಇಲ್ಲಿನ ಶಾಸನಗಳಲ್ಲಿ ಅನೇಕ ಮಹತ್ವದ ಸಂಗತಿಗಳು ತಿಳಿದಬರುತ್ತವೆ. ಕ್ರಿ.ಶ. ೯೬೧ರ ಶಾಸನವು, ರಾವಣನು ಸೀತೆಯನ್ನು ಹೊತ್ತೊಯ್ಯುವಾಗ ಜಟಾಯು ಅಡ್ಡಿಪಡಿಸಲು ರಾವಣನು ಜಟಾಯುವನ್ನು ಕೊಂದು ಮುಂದೆ ನಡೆದನು. ಹಾಗಾಗಿ ಇದರ ಜ್ಞಾಪಕಾರ್ಥವಾಗಿ ಮೊದಲೇ ಅಸ್ತಿತ್ವದಲ್ಲಿದ್ದ ಇಟ್ಟಿಗೆಯ ದೇವಾಲಯವನ್ನು ಸಂಪೂರ್ಣವಾಗಿ ಶಿಥಿಲಗೊಳಿಸಿ ಕಲ್ಲಿನ ದೇವಾಲಯವನ್ನು ನಿರ್ಮಾಣ ಮಾಡಿದ ವಿವರ ನೀಡುತ್ತದೆ. ಕ್ರಿ.ಶ. ೧೦೬೧ರ ಮತ್ತೊಂದು ಶಾಸನವು ನೊಳಂಬ ಪಲ್ಲವ ಪೆರ್ಮಾಡಿ ಜಯಸಿಂಗ ದೇವನು ತನ್ನ ಆಡಳಿತಾವಧಿಯಲ್ಲಿ ರಾಮೇಶ್ವರ ದೇವಾಲಯಕ್ಕೆ ದಾನ ನೀಡಿದ ವಿವರ ನೀಡುತ್ತದೆ. ಮತ್ತೊಂದು ಶಾಸನವು ಹೊಯ್ಸಳ ಅರಸ ವಿಜಯಾದಿತ್ಯನು ನೊಳಂಬವಾಡಿ ೩೨೦೦೦ ವನ್ನು ಆಳುತ್ತಿರುವಾಗ ಕ್ರಿ.ಶ. ೧೦೬೪ರಲ್ಲಿ ದಾನ ನೀಡಿದ ವಿವರ ನೀಡುತ್ತದೆ. ಹೀಗೆ ಈ ದೇವಾಲಯಕ್ಕೆ ಸಂಬಂಧಿಸಿದ ಶಾಸನಗಳನ್ನು ಹಾಗೂ ಶೈಲಿಯನ್ನ ಗಮನಿಸಿದರೆ, ಅದು ಚಾಲುಕ್ಯ ಕಾಲದಲ್ಲಿ ನಿರ್ಮಾಣಗೊಂಡಿದೆ ಎಂದು ಹೇಳಬಹುದು. ಆದರೆ ಮೊದಲೇಯಿದ್ದ ಇಟ್ಟಿಗೆಯ ದೇವಾಲಯದ ವಿವರಗಳನ್ನು ಗಮನಿಸಿದರೆ ಬಹುಶಃ ಚಾಲುಕ್ಯ ಪೂರ್ವ ಕಾಲದಲ್ಲೇ ಈ ದೇವಾಲಯ ಅಸ್ತಿತ್ವದಲ್ಲಿತ್ತೆಂದು ಹೇಳಬಹುದು. ಭಾರತೀಯ

* ಹಿರಿಯ ಶ್ರೇಣಿ ಉಪನ್ಯಾಸಕರು, ಸ್ನಾತಕೋತ್ತರ ಇತಿಹಾಸ ವಿಭಾಗ, ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ.

ದೇವಾಲಯದ ಉಗಮ ಮತ್ತು ಬೆಳವಣಿಗೆಯನ್ನು ಗಮನಿಸಿದರೆ ಆರಂಭ ಕಾಲದ ದೇವಾಲಯಗಳು ಇಟ್ಟಿಗೆಯಿಂದಲೇ ನಿರ್ಮಾಣ ಗೊಳ್ಳುತ್ತಿದ್ದವೆಂದು ತಿಳಿದು ಬರುತ್ತದೆ. ಈ ದೇವಾಲಯದ ಅನತಿ ದೂರದಲ್ಲೇ ಇಟ್ಟಿಗೆಯ ಚೈತ್ಯಾಕಾರದ ಕಟ್ಟಡವು ದೊರೆತಿದ್ದು ಅದರ ಕಾಲವನ್ನು ಶಾತವಾಹನ ಅಥವಾ ಕ್ರಿ.ಶ. ಆರಂಭ ಕಾಲದ್ದೆಂದು ಹಲವಾರು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಜಟಂಗ ರಾಮೇಶ್ವರದ ಬೆಟ್ಟದ ತಪ್ಪಲಿನಲ್ಲಿ ಇಟ್ಟಿಗೆಯಿಂದ ನಿರ್ಮಾಣಗೊಂಡು ಶಿಥಿಲಾವಸ್ಥೆ ಯಲ್ಲಿರುವ ಇನ್ನು ಕೆಲವು ಚಿಕ್ಕ ಚಿಕ್ಕ ಗುಡಿಗಳನ್ನು ಗಮನಿಸಿದರೆ ಈ ದೇವಾಲಯವು ಚಾಲುಕ್ಯ ಪೂರ್ವ ಕಾಲದಲ್ಲೇ ಅಂದರೆ ಕದಂಬ – ರಾಷ್ಟ್ರಕೂಟ ಕಾಲಕ್ಕಾಗಲೇ ನಿರ್ಮಾಣಗೊಂಡಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ.

ಚಿತ್ರದುರ್ಗ ಜಿಲ್ಲೆಯ ಚಾಲುಕ್ಯರ ಕಾಲದ ಶಾಸನೋಕ್ತ ದೇವಾಲಯಗಳೆಂದರೆ ಹಿರೇಜನ್ನೂರಿನ ರಾಮೇಶ್ವರ ದೇವಾಲಯ, ಬಾಗೇನಹಾಳಿನ ಬ್ರಹ್ಮೇಶ್ವರ ದೇವಾಲಯ, ಪರಶುರಾಂಪುರದ ಜನ್ನಕೇಶವ ದೇವಾಲಯ, ಸಿದ್ದಯ್ಯನ ಕೋಟೆಯ ಬ್ರಹ್ಮೇಶ್ವರ ದೇವಾಲಯ, ಗುಂಗನೂರಿನ ಕುಂಭೇಶ್ವರ ದೇವಾಲಯ, ಓಬಳಾಪುರದ ರಾಮೇಶ್ವರ ದೇವಾಲಯ, ಚಿತ್ರದುರ್ಗ ಕೋಟೆಯೊಳಗಿನ ಹಿಡಂಬೇಶ್ವರ, ಸಂಪಿಗೆ ಸಿದ್ದೇಶ್ವರ ಇತ್ಯಾದಿಗಳು ಪ್ರಮುಖವು. ಈ ದೇವಾಲಯಗಳು ಸರಳವಾಗಿ ರಚನೆಗೊಂಡಿದ್ದು ಚಾಲುಕ್ಯ ಶೈಲಿಯಲ್ಲಿ ರಚನೆಗೊಂಡಿವೆ.

ಕೆಲವು ದೇವಾಲಯಗಳು ಬಾಹ್ಯ ಲಕ್ಷಣಗಳಿಂದ ಹೊಯ್ಸಳ – ವಿಜಯನಗರ ಕಾಲದ ದೇವಾಲಯಗಳೆಂದು ಕಂಡುಬರುತ್ತವೆ. ಆದರೆ ಅವುಗಳ ಗರ್ಭಗೃಹ, ಅಂತರಾಳ, ನವರಂಗದ ಕಂಬಗಳು ಹಾಗೂ ಇನ್ನಿತರ ಶಿಲ್ಪಗಳ ಸಹಾಯ ದಿಂದ ಅವುಗಳು ಚಾಲುಕ್ಯರ ಕಾಲದಲ್ಲೇ ನಿರ್ಮಾಣ ಗೊಂಡಿರಬಹುದೆಂದು ಹೇಳಬಹುದು. ಉದಾಹರಣೆಗೆ ಬ್ರಹ್ಮಗಿರಿಯ ತ್ರಿಶಂಕೇಶ್ವರ ದೇವಾಲಯ, ಹೆಗ್ಗೆರೆಯ ಕಲ್ಲೇಶ್ವರ ದೇವಾಲಯ, ಚಿತ್ರದುರ್ಗ ಕೋಟೆಯೊಳಗಿನ ಗೋಪಾಲಕೃಷ್ಣ ದೇವಾಲಯ, ಫಲ್ಗುಣೇಶ್ವರ, ಹೊಳಲ್ಕೆರೆಯ ಶಿವಾಲಯ, ಕೋಗುಂಡೆಯ ಬಾಚೇಶ್ವರ, ನೀರ್ಗುಂದದ ಕಲ್ಲೇಶ್ವರ, ಮಲ್ಲೇಶ್ವರ ಹಾಗೂ ಸಿದ್ದೇಶ್ವರ ದೇವಾಲಯಗಳು.

ನೀರ್ಗುಂದದ ಸಿದ್ದೇಶ್ವರ ದೇವಾಲಯುವನ್ನು ಹೊರಗಿನಿಂದ ಗಮನಿಸಿದರೆ ಇದೊಂದು ಹೊಯ್ಸಳರ ಕಾಲದ ವಾಸ್ತುಕೃತಿ ಎನಿಸುತ್ತದೆ. ಆದರೆ ಇಲ್ಲಿರುವ ಶಾಸನವು ಕ್ರಿ.ಶ. ೧೦೬೫ ರಲ್ಲಿ ರಚನೆಗೊಂಡಿದ್ದು ದೇವಾಲಯಕ್ಕೆ ದಾನ ನೀಡಿದ ವಿವರಗಳನ್ನ ನೀಡುತ್ತದೆ.

ಚಿತ್ರದುರ್ಗದ ಕೋಟೆಯೊಳಗಿನ ಗೋಪಾಲಕೃಷ್ಣ ದೇವಾಲಯುವನ್ನು ಹೊರಗಿನಿಂದ ಗಮನಿಸಿದರೆ ವಿಜಯನಗರ ಕಾಲದ್ದೆನಿಸುತ್ತದೆ. ಆದರೆ ಕ್ರಿ.ಶ. ೧೩೩೮ರ ಶಾಸನವೊಂದು ಹೊಯ್ಸಳ ವೀರಬಲ್ಲಾಳ ದೇವನ ಮಹಾಪ್ರಧಾನ ರಾಮೇಯದಂಣ್ಣಾಯಕರ ಮಗ ಹಿರಿಯ ಬಲ್ಲಪ್ಪ ದಂಣ್ಣಾಯಕರು ಶ್ರೀ ಗೋಪಾಲಕೃಷ್ಣ ದೇವರಿಗೆ ಗೋಪಾಲಪುರ ಗ್ರಾಮವನ್ನೆ ದತ್ತಿ ನೀಡಿದ ವಿವರ ನೀಡುತ್ತದೆ. ಅಂದರೆ ಈ ದೇವಾಲಯವು ಹೊಯ್ಸಳ ಅಥವಾ ಹೊಯ್ಸಳ ಪೂರ್ವದ್ದಿರಬೇಕೆನಿಸುತ್ತದೆ. ಹೀಗೆ ಚಾಲುಕ್ಯರ ಕಾಲದ ಅನೇಕ ದೇವಾಲಯಗಳು ಹೊಯ್ಸಳ ಅಥವಾ ಹೊಯ್ಸಳ ಪೂರ್ವದ್ದಿರಬೇಕೆನಿಸುತ್ತದೆ. ಹೀಗೆ ಚಾಲುಕ್ಯ ಕಾಲದ ಅನೇಕ ದೇವಾಲಯಗಳು ಹೊಯ್ಸಳ ಹಾಗೂ ವಿಜಯನಗರ ಅರಸರ ಕಾಲಾವಧಿಯಲ್ಲಿ ಜೀರ್ಣೋದ್ಧಾರಗೊಂಡಿರುವುದಕ್ಕೆ ಶಾಸನೋಕ್ತ ಮಾಹಿತಿ ದೊರೆಯುತ್ತದೆ.

ಆರಂಭದಲ್ಲಿ ಚಾಲುಕ್ಯರ ಸಾಮಂತರಾಗಿ ನಂತರ ಸ್ವತಂತ್ರ ಅರಸರಾಗಿ ಆಳ್ವಿಕೆ ನಡೆಸಿದ ಹೊಯ್ಸಳ ಅರಸರು ಕಲೆ ಮತ್ತು ವಾಸ್ತುಶಿಲ್ಪಕ್ಕೆ ಅತ್ಯಂತ ಹೆಚ್ಚಿನ ಪ್ರೋತ್ಸಾಹ ನೀಡಿದ್ದರು. ಹಾಗಾಗಿ ಇವರ ಕಾಲಾವಧಿಯಲ್ಲಿ ಅತ್ಯಂತ ವಿಶಿಷ್ಟ ಶೈಲಿಯ ಆಕರ್ಷಣೀಯ ದೇವಾಲಯಗಳು ನಿರ್ಮಾಣಗೊಳ್ಳಲು ಸಾಧ್ಯವಾಯಿತು. ಆದರೆ ಚಿತ್ರದುರ್ಗ ಜಿಲ್ಲೆಯಲ್ಲಿ ಇವರ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯಗಳ ಸಂಖ್ಯೆ ಕಡಿಮೆ ಎಂದೇ ಹೇಳಬೇಕಾಗುತ್ತದೆ. ಬಹುಶಃ ತಮ್ಮ ಆಳ್ವಿಕೆಯ ಉತ್ತರದ ಗಡಿ ಪ್ರದೇಶ ಇದಾಗಿದ್ದರಿಂದ ದೇವಾಲಯ ನಿರ್ಮಾಣಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟಿಲ್ಲದಿರಬಹುದು. ಅಥವಾ ಅವರು ತಮ್ಮ ದೇವಾಲಯಗಳ ನಿರ್ಮಾಣಕ್ಕೆ ಬಳಸುತ್ತಿದ್ದ ಕಲ್ಲಿನ ಅಭಾವ ಇಲ್ಲಿದ್ದುದರಿಂದ ಹಿಂದಿನ ಕಾಲದ ಹಲವಾರು ದೇವಾಲಯಗಳ ಜೀರ್ಣೋದ್ಧಾರ ಮಾಡುವುದರ ಜೊತೆಗೆ ಕೆಲವು ದೇವಾಲಯಗಳನ್ನು ನಿರ್ಮಿಸಿರುವುದು ಇಲ್ಲಿನ ಶಾಸನಗಳಿಂದ ತಿಳಿದು ಬರುತ್ತದೆ. ಅವುಗಳಲ್ಲಿ ಪ್ರಮುಖ ವೆಂದರೆ, ೧ನೇ ನರಸಿಂಹನ ಕಾಲದ ಕ್ರಿ.ಶ. ೧೧೬೧ರಲ್ಲಿ ನಿರ್ಮಾಣಗೊಂಡ ಹೆಗ್ಗೆರೆಯ ಶಾಂತಿನಾಥೇಶ್ವರ, ಬೇವಿನಹಳ್ಳಿಯ ಬಸದಿ, ನೀರ್ಗುಂದದ ಸಿದ್ಧೇಶ್ವರ, ಚಿತ್ರದುರ್ಗದ ಫಲ್ಗುಣೇಶ್ವರ ದಾವಾಲಯದ ಮುಂದಿನ ಮಂಟಪ, ೨ನೇ ವೀರ ನರಸಿಂಹನ ಕಾಲದ ಹಿಡಂಬೇಶ್ವರ ದೇವಾಲಯ, ಬೇಬಲನಾಥ ದೇವಾಲಯ, ಹೆಗ್ಗೆರೆಯ ಕಲ್ಲೇಶ್ವರ ದೇವಾಲಯಗಳು ಪ್ರಮುಖವು. ಹೊಯ್ಸಳರು ದೇವಾಲಯ ಗಳನ್ನು ನಿರ್ಮಾಣ ಮಾಡುವಲ್ಲಿ ಚಾಲುಕ್ಯ ಶೈಲಿಯನ್ನೆ ಮುಂದುವರೆಸಿದ್ದಾರೆ. ಆದರೆ ಕೆಲವು ಅಂಶಗಳಲ್ಲಿ ಎತ್ತರವಾದ

ಅಧಿಷ್ಠಾನ, ನಕ್ಷತ್ರಾಕಾರದ ತಳವಿನ್ಯಾಸ, ದೇವಾಲಯ ನಿರ್ಮಾಣಕ್ಕೆ ಮೃದುಶಿಲೆ (ಬಳಪದ ಕಲ್ಲು) ಇತ್ಯಾದಿ ಅಂಶಗಳನ್ನು ಅಳವಡಿಸಿಕೊಳ್ಳುವುದರ ಮೂಲಕ "ಹೊಯ್ಸಳರ ಶೈಲಿ" ಎಂದೇ ಕರೆಯಿಸಿಕೊಳ್ಳುವಷ್ಟರ ಮಟ್ಟಿಗೆ ಚಾಲುಕ್ಯ ಶೈಲಿಯಿಂದ ಭಿನ್ನತೆಯನ್ನು ಬಳಸಿಕೊಂಡಿದ್ದಾರೆ.

ಹೆಗ್ಗೆರೆಯ ಜೈನ ಬಸದಿ ಇವರ ಶೈಲಿಗೆ ಉತ್ತಮ ಉದಾಹರಣೆಯಾಗಿದೆ. ಗ್ರಾಮದ ಮಧ್ಯಭಾಗದಲ್ಲಿರುವ ಸುಪಾರ್ಶ್ವನಾಥ ಬಸದಿಯು ಪೂರ್ವಾಭಿಮುಖವಾಗಿದೆ. ಎತ್ತರವಾದ ಅಧಿಷ್ಠಾನದಲ್ಲಿರುವ ಈ ಬಸದಿಯು ನಕ್ಷತ್ರಾಕಾರದ ತಳವಿನ್ಯಾಸವನ್ನು ಹೊಂದಿದೆ. ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಭಾಗಗಳನ್ನು ಒಳಗೊಂಡಿದೆ. ಗರ್ಭಗೃಹದ ಮಧ್ಯದಲ್ಲಿ ಸಿಂಹಪೀಠದ ಮೇಲೆ ಬ್ರಹ್ಮದೇವರನ್ನು ಪ್ರತಿಷ್ಠಾಪಿಸಲಗಿದೆ. ಅದರ ಹಿಂಭಾಗ ಕಿರು ಜಗತಿಯನ್ನು ನಿರ್ಮಿಸಿ ಅದರ ಮೇಲೆ ಸುಪಾರ್ಶ್ವನಾಥನನ್ನು ಪ್ರತಿಷ್ಠಾಪಿಸಲಾಗಿದೆ. ವಿತಾನದಲ್ಲಿ ಅರಳಿದ ಪದ್ಮದ ಅಲಂಕರಣವಿದೆ. ಪ್ರವೇಶದ್ವಾರ ಪಂಚಶಾಖೆಗಳಿಂದ ಕೂಡಿದ್ದು ಸರಳವಾಗಿದೆ. ಅಂತರಾಳದ ಪ್ರವೇಶದ್ವಾರದಲ್ಲಿ ಜಾಲಂಧ್ರಗಳ ಅಳವಡಿಕೆಯಿದೆ. ನವರಂಗದ ಮಧ್ಯದಲ್ಲಿ ಹೊಯ್ಸಳ ಶೈಲಿಯ ಅಂದರೆ ತಿರುಗುಣಿ ಯಂತ್ರದ ಸಹಾಯದಿಂದ ನಿರ್ಮಿಸಿದ ನಾಲ್ಕು ಕಂಬಗಳಿವೆ. ಒಂಭತ್ತು ಅಂಕಣಗಳಲ್ಲಿ ಒಂದೊಂದು ಅರಳಿದ ಪದ್ಮದ ಅಲಂಕರಣೆಯಿದೆ.

ಅಧಿಷ್ಠಾನದಲ್ಲಿ ಉಪಾನ, ಜಗತಿ, ತ್ರಿಪಟ್ಟ ಕುಮುದ, ಕಂಠ, ದಂತ ಪಂಕ್ತಿ ಮತ್ತು ಕಪೋತಭಾಗಗಳಿವೆ. ಗರ್ಭಗೃಹದ ಭಿತ್ತಿ ತ್ರಿರಥ, ನವರಂಗದ ಭಿತ್ತಿ ಪಂಚರಥಗಳಿಂದ ಕೂಡಿದೆ. ಭಿತ್ತಿಯ ಮೇಲೆ ಕಪೋತ-ಹಾರ ಭಾಗಗಳಿವೆ. ನಂತರದ ಭಾಗ ಜೀರ್ಣೋದ್ಧಾರಗೊಂಡಿದೆ. ಭಿತ್ತಿಯು ಭದ್ರ ಮತ್ತು ಸಲಿಲಾಂತರಗಳನ್ನು ಹೊಂದಿದ್ದು, ಮಧ್ಯದಲ್ಲಿ ಅರಳಿದ ಪದ್ಮಗಳ ಕೆತ್ತನೆಯಿದೆ. ಹೀಗೆ ಈ ಬಸದಿಯು ಶುದ್ಧ ಹೊಯ್ಸಳ ಶೈಲಿಯಲ್ಲಿ ನಿರ್ಮಾಣಗೊಂಡಿದೆ.

ಚಿತ್ರದುರ್ಗ ಕೋಟೆಯಲ್ಲಿರುವ ಹಿಡಂಬೇಶ್ವರ ದೇವಾಲಯದಲ್ಲಿರುವ ಶಾಸನವು ಕ್ರಿ.ಶ. ೧೨೮೬ರಲ್ಲಿ ರಚನೆಗೊಂಡಿದ್ದು ಹೊಯ್ಸಳ ಅರಸ ೩ನೇ ನರಸಿಂಹನ ಕಾಲದ್ದಾಗಿದೆ. ಈತನ ಮಹಾಪ್ರಧಾನ ಅಧಿಕಾರಿಯಾದ ಪೆರುಮಾಳ ದಂಡ್ನಾಯಕನು ಹಿಡಂಬೇಶ್ವರ, ಚೋಳೇಶ್ವರ ದೇವರ ಅಮೃತಪಡಿಗೆ ದತ್ತಿ ನೀಡಿದ ವಿವರಗಳನ್ನು ನೀಡುತ್ತದೆ. ಹಾಗೆಯೇ ಕ್ರಿ.ಶ. ೧೩೧೩ರ ಮತ್ತೊಂದು ಶಾಸನವು ವೀರಬಲ್ಲಾಳನ ಪ್ರಧಾನ ಅಧಿಕಾರಿ ಅಲ್ಲಪ್ಪ ದಂಡ್ನಾಯಕನು ಹುಳಿಯೂರು ನಾಡೊಳಗಿನ ಚಳ್ಳಕೆರೆಯನ್ನು ಕಲ್ಲಗೌಡನಿಗೆ ಕೊಡುಗೆಯಾಗಿ ಕೊಟ್ಟ ಕಲ್ಲಿನಾಥನಿಗೆ ಸಮರ್ಪಿಸಿದ ವಿವರ ನೀಡುತ್ತದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬರುವ ಶಾಸನೋಕ್ತ ದೇವಾಲಯಗಳಲ್ಲಿ ಹೆಚ್ಚಿನವು ವಿಜಯನಗರ ಹಾಗೂ ಚಿತ್ರದುರ್ಗ ಪಾಳೆಯಗಾರರ ಕಾಲದವು. ವಿಜಯನಗರ ಅರಸರ ಕಾಲದ ದೇವಾಲಯಗಳಿಗೂ ಚಿತ್ರದುರ್ಗದ ಪಾಳೆಯಗಾರರ ಕಾಲದ ದೇವಾಲಯಗಳಿಗೂ ಹೆಚ್ಚಿನ ವ್ಯತ್ಯಾಸಗಳೇನೂ ಕಂಡು ಬರದೆ ಒಂದೇ ಶೈಲಿಯಲ್ಲಿ ನಿರ್ಮಾಣಗೊಂಡಿರುವುದನ್ನು ಕಾಣುತ್ತೇವೆ. ಕ್ರಿ.ಶ. ೧೪ನೇ ಶತಮಾನದ ಮಧ್ಯಭಾಗದಿಂದ ಕ್ರಿ.ಶ. ೧೬ನೇ ಶತಮಾನದ ಉತ್ತರಾರ್ಧದವರೆಗೂ ಆಳ್ವಿಕೆ ನಡಿಸಿದ ವಿಜಯನಗರ ಅರಸರು ತಮ್ಮ ಆಳ್ವಿಕೆಯ ಅವಧಿಯಲ್ಲಿ ಈ ಭಾಗದಲ್ಲಿ ಅನೇಕ ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿರುವುದು ಶಾಸನಗಳಿಂದ ತಿಳಿದು ಬರುತ್ತದೆ. ಅವುಗಳಲ್ಲಿ ಪ್ರಮುಖವೆಂದರೆ ಚಿಕ್ಕಪುರದ ಸಿದ್ದನಾಥ ದೇವಾಲಯ, ಪರಶುರಾಂಪುರದ ಗರುಡ ಮತ್ತು ಹನುಮಂತ ದೇವಾಲಯ, ರಾಮಗಿರಿಯ ರಾಮೇಶ್ವರ ಮತ್ತು ವೀರಭದ್ರೇಶ್ವರ ದೇವಾಲಯ. ಸೋಮೇರಹಳ್ಳಿಯ ಸೋಮೇಶ್ವರ ದೇವಾಲಯ, ಗೊಡಬನಾಳಿನ ಕಲ್ಲಿನಾಥ ದೇವಾಲಯ, ಮಾಳೇನಹಳ್ಳಿಯ ರಂಗನಾಥ ದೇವಾಲಯ, ಹಿರೇಗುಂಟನೂರಿನ ವಿನಾಯಕ ದೇವಾಲಯ, ಕಾಮಸಮುದ್ರದ ವೀರಭದ್ರ ದೇವಾಲಯ, ದೇವಸಮುದ್ರದ ವಿಠಲ ದೇವರ ದೇವಾಲಯ, ಹಿರಿಯೂರಿನ ತೇರುಮಲ್ಲೇಶ್ವರ, ಹೊಳಲ್ಕೆರೆಯ ಗೋಪಾಲಕೃಷ್ಣ ದೇವಾಲಯ, ಕಲ್ಕೆರೆಯ ಚೌಡೇಶ್ವರಿ ದೇವಾಲಯ ಇತ್ಯಾದಿಗಳು ಪ್ರಮುಖವಾಗಿವೆ.

ಚಿತ್ರದುರ್ಗದ ಸಂಪಿಗೆ ಸಿದ್ದೇಶ್ವರ ದೇವಾಲಯದ ಬಳಿಯಿರುವ ಶಾಸನವು ಕ್ರಿ.ಶ. ೧೩೫೫ ರಲ್ಲಿ ರಚನೆಗೊಂಡಿದ್ದು ಮಲ್ಲಿನಾಥವೊಡೆಯನು ಸಿದ್ದನಾಥ ದೇವರಿಗೆ ಕಲ್ಲುವುಪ್ಪರಿಗೆಯನು ಎತ್ತಿಸಿ ಆ ದೇವರ ಸಿಖರ ಪ್ರತಿಷ್ಠಾಪನೆ ಮಾಡಿ ದತ್ತಿ ನೀಡಿದ ವಿವರ ನೀಡುತ್ತದೆ. ಸಂಪಿಗೆ ಸಿದ್ದೇಶ್ವರ ದೇವಾಲಯವು ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡಿದ್ದು, ಕಪೋತದ ಮೇಲ್ಭಾಗದ ಅಂಗಗಳು ವಿಜಯನಗರದ ಕಾಲದಲ್ಲಿ ನಿರ್ಮಾಣಗೊಂಡಂತೆ ಕಾಣುತ್ತದೆ. ಹಾಗೆಯೇ ಸಿದ್ದೇಶ್ವರನನ್ನು ಶಾಸನದಲ್ಲಿ ಸಿದ್ದನಾಥ ಎಂದು ಉಲ್ಲೇಖಿಸಿದ್ದು, ಇದರ ಮುಂದಿನ ಗಾಳಿಮಂಟಪಗಳನ್ನು ಮಲ್ಲಿನಾಥವೊಡೆಯನು ನಿರ್ಮಿಸಿದ್ದಾನೆನ್ನುವುದು ಹಲವು ವಿದ್ವಾಂಸರ ಅಭಿಮತ. ಹಿಡಂಬೇಶ್ವರ ದೇವಾಲಯದಲ್ಲಿರುವ ಕ್ರಿ.ಶ. ೧೪೧೨ರ ಶಾಸನವು ದೇವರಾಯನ ಮಹಾಮಂಡಳೇಶ್ವರನಾದ

ವೀರಮಲ್ಲಂಣ್ಣೊಡೆಯರು ಹಿಡಂಬೇಶ್ವರ ದೇವಾಲಯಕ್ಕೆ ಕುಂಚಿಗನ ಹಳ್ಳಿಯನ್ನು ದತ್ತಿ ನೀಡಿದ ವಿವರ ಉಲ್ಲೇಖಿಸುತ್ತದೆ. ಕ್ರಿ.ಶ. ೧೪೩೦ರ ದೇವರಾಯನ ಕಾಲದ ಮತ್ತೊಂದು ಶಾಸನವು ಕಲ್ಲಿನಾಥ ದೇವರಿಗೆ ದತ್ತಿ ನೀಡಿದ ವಿವರ ನೀಡುತ್ತದೆ.

ಕ್ರಿ.ಶ. ೧೫೩೭ರ ಅಚ್ಚುತರಾಯುನ ಕಾಲದ ಹಿರೇಗುಂಟನೂರಿನ ಶಾಸನವು ವಿನಾಯಕ ದೇವರಿಗೆ ಗುಡಿಯನ್ನು ಕಟ್ಟಿಸಿ ಗುಂಟನೂರು ಸೀಮೆಯೊಳಗಿನ ಮಲ್ಲಾಪುರ ಅಥವಾ ಬೆನಾಕಾಪುರವನ್ನು ದತ್ತಿ ಬಿಟ್ಟ ವಿವರ ನೀಡುತ್ತದೆ. ಕ್ರಿ.ಶ. ೧೫೩೫ರ ಅಚ್ಚುತರಾಯನ ಕಾಲದ ಮತ್ತೊಂದು ಶಾಸನವು ದುಂಮಿಯ ವೀರಭದ್ರ ದೇವರಿಗೆ ತನ್ನ ದಂಡನಾಯಕನಾದ ಕೃಷ್ಣಪ್ಪನಾಯಕನು ದತ್ತಿ ನೀಡಿದ ವಿವರವನ್ನು ನೀಡುತ್ತದೆ. ಇದೇ ಕಾಲದ ಮತ್ತೊಂದು ಶಾಸನವು ಚೌಡಪ್ಪನಾಯಕನು ಗುಂಡೇರಿಯ ವೀರಭದ್ರ ದೇವರಿಗೆ ದತ್ತಿ ನೀಡಿದ ವಿವರ ನೀಡುತ್ತದೆ.

ಕ್ರಿ.ಶ. ೧೫೬೦ – ೬೨ ರ ಶಾಸನಗಳು ಸದಾಶಿವ ರಾಯನು ದೇವಸಮುದ್ರದ ವಿಠಲದೇವರ ಗುಡಿಗೆ ದತ್ತಿ ನೀಡಿದ ವಿವರವನ್ನು ಉಲ್ಲೇಖಿಸುತ್ತವೆ. ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದ ಗರ್ಭಗೃಹ, ಅಂತರಾಳ ಹಾಗೂ ನವರಂಗ ಭಾಗಗಳನ್ನು ಗಮನಿಸಿದರೆ ಚಾಲುಕ್ಯ – ಗಂಗರ ಕಾಲದಲ್ಲಿ ನಿರ್ಮಾಣಗೊಂಡಿದೆ ಎಂದು ಹೇಳಬಹುದು. ಆದರೆ ದೇವಾಲಯದ ಮುಖಮಂಟಪ, ದೀಪಸ್ತಂಭ ಹಾಗೂ ರಾಯಗೋಪುರಗಳು ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡಂತೆ ಕಾಣುತ್ತವೆ. ಇಲ್ಲಿನ ಕ್ರಿ.ಶ. ೧೫೬೭ರ ಸದಾಶಿವ ರಾಯನ ಕಾಲದ ಶಾಸನವು ಹರತಿಯ ಕೆಂಚಪ್ಪ ನಾಯಕನು ದತ್ತಿ ನೀಡಿದ ವಿವರ ನೀಡುತ್ತದೆ.

ಹೀಗೆ ವಿಜಯನಗರದ ಅರಸರುಗಳಾದ ಬುಕ್ಕರಾಯ, ದೇವರಾಯ, ಕೃಷ್ಣರಾಯ, ಅಚ್ಚುತರಾಯ ಹಾಗೂ ಸದಾಶಿವರಾಯರು, ಸ್ಥಳೀಯ ದಂಡನಾಯಕರುಗಳ ಸಹಾಯದಿಂದ ಕೆಲವು ದೇವಾಲಯಗಳನ್ನು ನಿರ್ಮಿಸಿದ್ದಾರೆ. ಹಾಗೆಯೇ ಹಲವಾರು ದೇವಾಲಯಗಳನ್ನು ಜೀರ್ಣೋದ್ಧಾರ ಗೊಳಿಸಿರುವುದರ ಜೊತೆಗೆ ದತ್ತಿ ನೀಡಿರುವ ವಿವರಗಳು ಶಾಸನಗಳಿಂದ ತಿಳಿದುಬರುತ್ತದೆ. ಕ್ರಿ.ಶ. ೧೫೬೫ರಲ್ಲಿ ನಡೆದ ರಕ್ಕಸ – ತಂಗಡಿ ಯುದ್ಧ ನಂತರ ವಿಜಯನಗರ ಸಾಮ್ರಾಜ್ಯ ತನ್ನ ವೈಭವವನ್ನು ಕಳೆದುಕೊಂಡು ಪೆನುಗೊಂಡಿಗೆ ವರ್ಗಾಯಿಸಲ್ಪಟ್ಟಿತು. ಈ ಸನ್ನಿವೇಶದಲ್ಲಿ ಹಲವಾರು ಪಾಳೆಯಗಾರರು ಸ್ವತಂತ್ರವಾಗಿ ಆಳ್ವಿಕೆ ನಡೆಸಲು ಪ್ರಾರಂಭಿಸಿದರು. ಅವರಲ್ಲಿ ಚಿತ್ರದುರ್ಗದ ಆಳ್ವಿಕೆ ನಡೆಸಿದ "ಚಿತ್ರದುರ್ಗದ ಪಾಳೆಯಗಾರರು" ಪ್ರಮುಖರು.

ಚಿತ್ರದುರ್ಗದ ಪಾಳೆಯಗಾರರ ದೇವಾಲಯಗಳ ನಿರ್ಮಾಣ ಕಾರ್ಯದಲ್ಲಿ ವಿಜಯನಗರ ಅರಸರ ಶೈಲಿಯನ್ನೇ ಮುಂದುವರೆಸಿದ್ದಾರೆ. ಸಾಮಾನ್ಯವಾಗಿ ಇವರ ದೇವಾಲಯ ಗಳು ಒರಟಾದ ಮರಳು ಮಿಶ್ರಿತ ಕೆಂಪುಕಲ್ಲುಗಳಿಂದ ನಿರ್ಮಾಣಗೊಂಡಿವೆ. ಹಾಗೆಯೇ ವಿಶಾಲವಾಗಿಯೂ, ಬೃಹದಾಕಾರವಾಗಿಯೂ ಕಂಡುಬರುತ್ತವೆ. ಇವರ ಕಾಲದ ಪ್ರಮುಖ ದೇವಾಲಯಗಳೆಂದರೆ, ಬಾಗೂರಿನ ಚನ್ನಕೇಶವ, ಲಕ್ಷ್ಮೀ ದೇವಾಲಯ, ಹೊಸದುರ್ಗದ ವೀರಭದ್ರ, ಹಿರಿಯೂರಿನ ವೀರಭದ್ರ, ಹರತಿಯ ಮಲ್ಲಿಕಾರ್ಜುನ, ಚಿತ್ರದುರ್ಗದ ಚನ್ನಕೇಶವ, ವೆಂಕಟರಮಣ, ಉಚ್ಚಂಗಿ ಎಲ್ಲಮ್ಮ (ಉತ್ಸವಾಂಬ) ಹೊರಕೆರೆ ದೇವಪುರದ ಶ್ರೀರಂಗನಾಥ ದೇವಾಲಯ ಇತ್ಯಾದಿಗಳು ಪ್ರಮುಖವು.

ಬಾಗೂರಿನ ಶ್ರೀ ಚನ್ನಕೇಶವ ದೇವಾಲಯವು ಸದಾಶಿವರಾಯನ ಕಾಲಕ್ಕಾಗಲೇ ನಿರ್ಮಾಣಗೊಂಡಿದ್ದರ ಬಗ್ಗೆ ಕ್ರಿ.ಶ. ೧೫೫೬ರ ಶಾಸನವು ಮಾಹಿತಿಯನ್ನು ನೀಡುತ್ತದೆ. ಆದರೆ ಇಲ್ಲಿನ ಕ್ರಿ.ಶ. ೧೫೭೧ ಮತ್ತೊಂದು ಶಾಸನವು. ಸಂತೆಬೆನ್ನೂರು ಹನುಮಪ್ಪನಾಯಕನ ಮಗ ರಾಜಪ್ಪ ನಾಯಕನು ತಮ್ಮ ತಂದೆ – ತಾಯಿಯರಿಗೆ ಪುಣ್ಯವಾಗಲೆಂದು ಕೇಶವ ದೇವಾಲಯದ ಆವರಣದಲ್ಲಿರುವ ಲಕ್ಷ್ಮೀ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿದ ದತ್ತಿ ನೀಡಿದ ವಿವರವಿದೆ. ಬಹುಶಃ ಈ ದೇವಾಲಯವು ವಿಜಯನಗರ ಅರಸರ ಕಾಲದಲ್ಲಿ ಪ್ರಾರಂಭಗೊಂಡು ಪಾಳೆಯಗಾರರ ಕಾಲಕ್ಕೆ ಸಂಪೂರ್ಣಗೊಂಡಿಬಹುದೆಂದು ಹೇಳಬಹುದು. ಕ್ರಿ.ಶ. ೧೫೭೦ರ ಶಾಸನವು ಕಂಚಿಪುರದ ಅಲ್ಲಿನಾಥ ದೇವರಿಗೆ ಹರತಿಯ ಕೆಂಚಪ್ಪನಾಯಕನು ಚಿಕ್ಕ ಕಪೂರ್ರದ ಕಟ್ಟೆಯನ್ನು ದತ್ತಿ ನೀಡಿದ ಉಲ್ಲೇಖವಿದೆ. ಹುಲ್ಲೂರಿನ ಶ್ರೀ ವೀರಭದ್ರ ದೇವಾಲಯಕ್ಕೆ ೨ ನೇ ಮದಕರಿ ನಾಯಕನು ದತ್ತಿ ನೀಡಿದ ವಿವರವನ್ನು ಕ್ರಿ.ಶ. ೧೬೮೯ರ ಶಾಸನವೊಂದು ಮಾಹಿತಿ ನೀಡುತ್ತದೆ.

ಚಿತ್ರದುರ್ಗ ನಗರಕ್ಕೆ ಹೊಂದಿಕೊಂಡಂತೆ ತುರುವ ನೂರು ರಸ್ತೆಯಲ್ಲಿರುವ ಶ್ರೀ ವೆಂಕಟರಮಣ ದೇವಾಲಯವು ಕ್ರಿ.ಶ. ೧೬–೧೭ನೇ ಶತಮಾನದಲ್ಲಿ ನಿರ್ಮಾಣ ಹೊಂದಿದೆ ಎಂದು ಅದರ ಲಕ್ಷಣಗಳ ಆಧಾರದ ಮೇಲೆ ಹೇಳಬಹುದು. ಕ್ರಿ.ಶ. ೧೭೧೫ರ ಶಾಸನವು ಬಿಚ್ಚುಗತ್ತಿ ಭರಮಣ್ಣ ನಾಯಕನು ದೇವಾಲಯದ ಅಮೃತಪಡಿ, ನಂದಾದೀಪ, ಪುಷ್ಪಾರ್ಚನೆ ಇನ್ನಿತರ ಕಾರ್ಯಗಳಿಗೆ ಪಿಳ್ಳೇಕೆರನ ಹಳ್ಳಿಯನ್ನು ದತ್ತಿ ನೀಡಿದ ಬಗ್ಗೆ ತಿಳಿಸುತ್ತದೆ. ದೇವಾಲಯವು ವಿಶಾಲವಾದ ಪ್ರಾಕಾರದಲ್ಲಿದ್ದು ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಹಾಗೂ ರಂಗಮಂಟಪಗಳನ್ನು ಹೊಂದಿದೆ.

ಗರ್ಭಗೃಹದ, ವಿಷ್ಣುವಿನ ಸ್ಥಾನಕ ಶಿಲ್ಪ, ನವರಂಗದ ಕಂಬಗಳು, ಕಂಬಗಳಲ್ಲಿರುವ ಉಬ್ಬುಶಿಲ್ಪಗಳು, ವಿಜಯನಗರ – ಪಾಳೆಯ ಗಾರರ ಶೈಲಿಗೆ ಉತ್ತಮ ಉದಾಹರಣೆಗಳು, ನಗರದಲ್ಲಿರುವ ಚನ್ನಕೇಶವ ದೇವಾಲಯವೂ ಸಹ ಇದೇ ಶೈಲಿಯಲ್ಲಿದ್ದು ಇದೇ ಕಾಲದಲ್ಲಿ ರಚನೆಗೊಂಡಿರಬಹುದು. ಕ್ರಿ.ಶ. ೧೫೭೬ರ ಶಾಸನವು ಕಸ್ತೂರಿ ರಂಗಪ್ಪನಾಯಕನು ಹೊರಕೆರೆ ದೇವಪುರದ ರಂಗನಾಥ ದೇವಾಲಯಕ್ಕೆ ದತ್ತಿ ನೀಡಿದ ವಿವರವನ್ನು ನೀಡುತ್ತದೆ. ಈ ದೇವಾಲಯವೂ ಸಹ ವಿಶಾಲವಾದ ಪರಕಾರದಲ್ಲಿದ್ದು ವಿಷ್ಣುವಿನ ದಶಾವತಾರ ಶಿಲ್ಪಗಳನ್ನು ಹೊಂದಿದೆ. ಇಲ್ಲಿರುವ ಶಿಲ್ಪಗಳೂ ಸಹ ವಿಜಯನಗರ ಪಾಳೆಯಗಾರರ ಕಾಲದ ರಚನೆಗಳೇ ಆಗಿವೆ.

ಇಂದು ಚಿತ್ರದುರ್ಗ ಜಿಲ್ಲೆಯಾದ್ಯಂತ ಇರುವ ಪ್ರತಿಯೊಂದು ಹಳ್ಳಿ – ಹಟ್ಟಿ – ನಗರಗಳಲ್ಲಿ ಸಾಮಾನ್ಯವಾಗಿ ದೇವಾಲಯಗಳು ಕಂಡುಬರುತ್ತವೆ. ಇವುಗಳಲ್ಲಿ ಕೆಲವೇ ಕೆಲವು ದೇವಾಲಯುಗಳಿಗೆ ಮಾತ್ರ ಶಾಸನೋಕ್ತ ದಾಖಲೆಗಳಿದ್ದರೆ, ಬಹುತೇಕ ದೇವಾಲಯಗಳಿಗೆ ಶಾಸನೋಕ್ತ ದಾಖಲೆಗಳು ಸಿಗುವುದಿಲ್ಲ. ಕೆಲವು ಶಾಸನಗಳಲ್ಲಿ ದೇವಾಲಯ ನಿರ್ಮಾಣ ಕುರಿತು ಮಾಹಿತಿ ದೊರೆತರೂ ಆ ಸ್ಥಾನದಲ್ಲಿ ಇಂದು ದೇವಾಲಯವಿಲ್ಲದೆ ಸಂಪೂರ್ಣವಾಗಿ ನಾಶವಾಗಿರುವ ಉದಾಹರಣೆಗಳೂ ಇವೆ. ಹಾಗೆಯೇ ಕೆಲವು ದೇವಾಲಯ ಗಳಿಗೆ ಯಾವುದೇ ಶಾಸನೋಕ್ತ ದಾಖಲೆ ಇಲ್ಲದೇ ಹೋದರೂ ಅತ್ಯಂತ ಉತ್ತಮವಾದ, ಸುಸ್ಥಿತಿಯಲ್ಲಿರುವ ಕಲಾತ್ಮಕ ದೇವಾಲಯಗಳನ್ನು ನೋಡುತ್ತೇವೆ. ಹೀಗೆ ಚಿತ್ರದುರ್ಗ ಜಿಲ್ಲೆಯ ದೇವಾಲಯಗಳಿಗೆ ಸಂಬಂಧಿಸಿದಂತೆ ಶಾಸನಾಧಾರಗಳನ್ನು ಹುಡುಕುತ್ತಾ ಹೋದರೆ ಕ್ರಿ.ಶ. ೮೫೧ರಲ್ಲಿ ಅಥವಾ ಅದಕ್ಕೂ ಪೂರ್ವದಲ್ಲಿ ನಿರ್ಮಾಣಗೊಂಡಿರುವ ಚಳ್ಳಕೆರೆ ತಾಲ್ಲೂಕಿನ ಶ್ರೀ ಮಲ್ಲೇಶ್ವರ ದೇವಾಲಯವೇ ಇಲ್ಲಿನ ಪ್ರಾಚೀನ ದೇವಾಲಯ. ಆದರೆ ಇಂದು ಸಂಪೂರ್ಣವಾಗಿ ನಾಶವಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆತಿರುವ ಶಾಸನೋಕ್ತ ದೇವಾಲಯಗಳು ಹಾಗು ವಿವರಣ ಪಟ್ಟಿಯನ್ನು ನೀಡಲಾಗಿದೆ.

೧. ಕ್ರಿ.ಶ. ೮೫೧ : ಮಧುರೆಯ ಶಿವಾಲಯ (ಮಲ್ಲೇಶ್ವರ) ದೇವಾಲಯ. (CLK 34)
೨. ಕ್ರಿ.ಶ. ೯೪೯ : ಇಸಾಮುದ್ರದ ಭೋಗೇಶ್ವರ ದೇವಾಲಯ (CTA 77)
೩. ಕ್ರಿ.ಶ. ೯೬೧ : ಜಟಿಂಗರಾಮೇಶ್ವರ ದೇವಾಲಯ (MLK 27)
೪. ಕ್ರಿ.ಶ. ೯೬೪ : ಚಿಕ್ಕಂದವಾಡಿ ಮಹೇಶ್ವರ ದೇವಾಲಯ (HLK 29)
೫. ಕ್ರಿ.ಶ. ೯೬೮ : ಕಾಕಂಬಾವಿಯಲ್ಲಿ ಜಕ್ಕಿಸುಂದರಿಯು ನಿರ್ಮಿಸಿದ ಜೈನಬಸದಿ (CTA 74)
೬. ಕ್ರಿ.ಶ. ೯೬೮ : ಕ್ಯಾಸಾಪುರದ ಕಲ್ಲೇಶ್ವರ ದೇವಾಲಯ (CTA 50)
೭ ಕ್ರಿ.ಶ. ೯೭೯ : ಗುಂಡೇರಿ ಚನ್ನಕೇಶವ ದೇವಾಲಯ (HLK 21)
೮. ಕ್ರಿ.ಶ. ೧೦೪೧ : ಮಲ್ಲರದ ರಾಮೇಶ್ವರ ದೇವಾಲಯ (MLK 33)
೯. ಕ್ರಿ.ಶ. ೧೦೬೦ : ಓರೇಬೆನ್ನೂರಿನ ರಾಮೇಶ್ವರ ದೇವಾಲಯ (CTA 65)
೧೦. ಕ್ರಿ.ಶ. ೧೦೬೪ : ಜಟಿಂಗ ರಾಮೇಶ್ವರ ದೇವಾಲಯ (MLK 29)
೧೧. ಕ್ರಿ.ಶ. ೧೧೦೦ : ಬಾಗೇನಾಳ್ ಬ್ರಹ್ಮೇಶ್ವರ ದೇವಾಲಯ ಪ್ರತಿಷ್ಠಾಪನೆ ಹಾಗೂ ಸೋಮೇಶ್ವರ ದೇವಾಲಯಕ್ಕೆ ದಾನ. (CTA 59)
೧೨. ಕ್ರಿ.ಶ. ೧೦೭೧ : ಜಟಿಂಗ ರಾಮೇಶ್ವರ ದೇವರಿಗೆ ದಾನ (MLK 28)
೧೩. ಕ್ರಿ.ಶ. ೧೧೨೪ : ಪರಶುರಾಂಪುರದ ಚನ್ನಕೇಶವ ದೇವಾಲಯ (CLK 35)
೧೪. ಕ್ರಿ.ಶ. ೧೧೨೪ : ಚಿತ್ರದುರ್ಗದ ಹಿಡಂಬೇಶ್ವರ ದೇವಾಲಯ (CTA 13)
೧೫. ಕ್ರಿ.ಶ. ೧೧೨೬ : ಗುಂಜಗನೂರಿನ ಕುಂಭೇಶ್ವರ ದೇವಾಲಯ (HLK 68)
೧೬. ಕ್ರಿ.ಶ. ೧೧೩೬ : ಸಿದ್ಧಯ್ಯನ ಕೋಟೆ ಬ್ರಹ್ಮ ದೇವಾಲಯ (HIR 23)
೧೭. ಕ್ರಿ.ಶ. ೧೧೪೮ : ಓಬಳಾಪುರದ ರಾಮೇಶ್ವರ ದೇವಾಲಯ (CLK 21)
೧೮. ಕ್ರಿ.ಶ. ೧೧೨೪ : ಕೋಗುಂಡೆ ಬಾಚೇಶ್ವರ ದೇವಾಲಯ ಪ್ರತಿಷ್ಠಾಪನೆ. ಹೊಯ್ಸಳ (೧ನೇ ವೀರಬಲ್ಲಾಳ) (CTA 79)
೧೯. ಕ್ರಿ.ಶ. ೧೧೫೪ : ಹೊಳಲ್ಕೆರೆಯ ಶಾಂತಿನಾಥ ದೇವರ ಜೀರ್ಣೋದ್ಧಾರ (HLK 1 & 2)
೨೦. ಕ್ರಿ.ಶ. ೧೧೬೧ : ಹೆಗ್ಗೆರೆಯ ಜೈನ ಬಸದಿ, (೧ನೇ ನರಸಿಂಹ)

೨೧. ಕ್ರಿ.ಶ. ೧೨೩೨ : ಹೆಗ್ಗೆರೆ ಗಳಗೇಶ್ವರ ದೇವಾಲಯ (೨ನೇ ನರಸಿಂಹ)

೨೨. ಕ್ರಿ.ಶ. ೧೧೩೨ : ಹೆಗ್ಗೆರೆ ಕಲ್ಲೇಶ್ವರ ದೇವಾಲಯ

೨೩. ಕ್ರಿ.ಶ. ೧೨೨೦ : ಹಿರೇ ಎಮ್ಮಿಗನೂರಿನ ಕಲ್ಲೇಶ್ವರ ದೇವಾಲಯ (HLK 56)

೨೪. ಕ್ರಿ.ಶ. ೧೨೪೦ : ನೀರ್ಗುಂದದ ಸಿದ್ಧೇಶ್ವರ ದೇವಾಲಯ (HLK 121)

೨೫. ಕ್ರಿ.ಶ. ೧೨೬೮ : ನೀರ್ಗುಂದದ ಸಿದ್ಧೇಶ್ವರ ದೇವಾಲಯ (HLK 122)

೨೬. ಕ್ರಿ.ಶ. ೧೨೫೯ : ಪಲ್ಲುಗ್ಗಣೇಶ್ವರ ದೇವಾಲಯ ಮುಂದಣ ಮಂಟಪ ನಿರ್ಮಾಣ (ಸಂಧಿವಿಗ್ರಹಿ ಸೋಮಣ್ಣನಿಂದ) (CTA 11)

೨೭. ಕ್ರಿ.ಶ. ೧೨೬೦ : ಬ್ರಹ್ಮಗಿರಿಯ ತ್ರಿಶಂಕೇಶ್ವರ ದೇವಾಲಯ

೨೮. ಕ್ರಿ.ಶ. ೧೨೮೬ : ಚಿತ್ರದುರ್ಗದ ಹಿಡಂಬೇಶ್ವರ ದೇವಾಲಯ (೨ನೇ ವೀರನರಸಿಂಹ) (CTA 12)

೨೯. ಕ್ರಿ.ಶ. ೧೩೧೩ : ಚಳ್ಳಕೆರೆಯ ಕಲ್ಲಿನಾಥ ದೇವಾಲಯ (ವೀರಬಲ್ಲಾಳ) (HIR 87)

೩೦. ಕ್ರಿ.ಶ. ೧೩೨೮ : ಚಿತ್ರದುರ್ಗದ ಬೇಬಲನಾಥ ದೇವಾಲಯ (CTA 04)

೩೧. ಕ್ರಿ.ಶ. ೧೩೩೮ : ಚಿತ್ರದುರ್ಗ ಶ್ರೀ ರಾಮಕೃಷ್ಣ ಗೋಪಾಲ ದೇವರಿಗೆ ವೀರಬಲ್ಲಾಳ ದಾನ ನೀಡಿದ ವಿವರ (CTA 06)

೩೨. ಕ್ರಿ.ಶ. ೧೩೫೫ : ಚಿತ್ರದುರ್ಗದ ಸಂಪಿಗೆ ಸಿದ್ದೇಶ್ವರ ದೇವಾಲಯ (CTA 2 & 3)

೩೩. ಕ್ರಿ.ಶ. ೧೩೫೫ : ಚಿಕ್ಕಪುರದ ಸಿದ್ದನಾಥ ದೇವರ ದೇವಾಲಯದ ಜೀರ್ಣೋದ್ಧಾರ (ಸೋಮೇಯ ನಾಯಕನಿಂದ) (CTA 55)

೩೪. ಕ್ರಿ.ಶ. ೧೩೯೧ : ಪರಶುರಾಂಪುರದಲ್ಲಿ ಗರುಡ ಮತ್ತು ಹನುಮಂತ ದೇವರ ದೇವಾಲಯ ಪ್ರತಿಷ್ಠಾಪನೆ (CLK 37)

೩೫. ಕ್ರಿ.ಶ. ೧೪೧೦ : ರಾಮಗಿರಿಯ ರಾಮೇಶ್ವರ ಮತ್ತು ವೀರಭದ್ರದೇವಾಲಯಗಳಿಗೆ ದಾನ ನೀಡಿದ ವಿವರ (HLK 75)

೩೬. ಕ್ರಿ.ಶ. ೧೪೧೧ : ನಾಯಗೊಂಡನಹಳ್ಳಿಯ ರಾಮನಾಥ ದೇವರಿಗೆ ದೃವನಾಯ್ಕ ಮತ್ತು ಹದವನಾಯ್ಕರು ದಾನ ನೀಡಿದ ವಿವರ (HLK 89)

೩೭. ಕ್ರಿ.ಶ. ೧೪೧೨ : ಚಿತ್ರದುರ್ಗ ಹಿಡಂಬೇಶ್ವರ ದೇವಾಲಯಕ್ಕೆ ದೇವರಾಯನು ಕುಂಚಿಗನ ಹಳ್ಳಿಯನ್ನು ದಾನ ನೀಡಿದ ವಿವರ (CTA 14)

೩೮. ಕ್ರಿ.ಶ. ೧೪೧೭ : ಸೋಮೇರಹಳ್ಳಿಯ ಸೋಮೇಶ್ವರ ದೇವಾಲಯ (HIR 52)

೩೯. ಕ್ರಿ.ಶ. ೧೪೩೦ : ಗೋಡಬನಾಳಿನ ಕಲ್ಲಿನಾಥ ದೇವಾಲಯ (CTA 29)

೪೦. ಕ್ರಿ.ಶ. ೧೪೫೪ : ಜಟಂಗ ರಾಮೇಶ್ವರ ದೇವರಿಗೆ ದೇವರಾಯನು ದಾನ ನೀಡಿದ ವಿವರ (MLK 32)

೪೧. ಕ್ರಿ.ಶ. ೧೪೮೩ : ಮಾಳೇನಹಳ್ಳಿಯ ತಿರುಮಲ (ರಂಗನಾಥ) ದೇವಾಲಯ (HLK 24)

೪೨. ಕ್ರಿ.ಶ. ೧೫೧೬ : ಆಲದಹಳ್ಳಿ – ಮಲ್ಲಿಕಾರ್ಜುನ ದೇವಾಲಯ (HLK 128)

೪೩. ಕ್ರಿ.ಶ. ೧೫೧೬ : ಆಲದಹಳ್ಳಿ – ಮಲ್ಲಿಕಾರ್ಜುನ ದೇವಾಲಯ (HLK 129)

೪೪. ಕ್ರಿ.ಶ. ೧೫೩೭ : ಹಿರೇಗುಂಟನೂರಿನ ವಿನಾಯಕ ದೇವರಿಗೆ ಅಚ್ಚುತರಾಯನು ಮಲ್ಲಾಪುರವನ್ನು ದಾನ ನೀಡಿದ ವಿವರ (CTA 45)

೪೫. ಕ್ರಿ.ಶ. ೧೫೩೫ : ಕಲ್ಕೆರೆಯ ಚೌಡೇಶ್ವರಿ ದೇವಾಲಯ (HLK 125)

೪೬. ಕ್ರಿ.ಶ. ೧೫೩೫ : ದುಮ್ಮಿಯ ವೀರಭದ್ರ ದೇವಾಲಯಕ್ಕೆ ಅಚ್ಚುತರಾಯನ ದಂಡನಾಯಕನಾದ ಕೃಷ್ಣನಾಯಕನು ದಾನ ನೀಡಿದ ವಿವರ (HLK 15)

೪೭. ಕ್ರಿ.ಶ. ೧೫೩೯ : ಗುಂಡೇರಿಯ ವೀರಭದ್ರ ದೇವರಿಗೆ ಅಚ್ಚುತರಾಯನ ಕಾರ್ಯಕರ್ತನಾದ ಚೌಡಪ್ಪನಾಯಕನು ದಾನ ನೀಡಿದ ವಿವರ (HLK 20)

೪೮. ಕ್ರಿ.ಶ. ೧೫೪೦ : ಕಡೂರು ವೀರಭದ್ರ ದೇವರಿಗೆ ದಾನ (HLK 71)

೪೯. ಕ್ರಿ.ಶ. ೧೫೪೬ : ಕಾಮಸಮುದ್ರದ ವೀರಭದ್ರ ದೇವಾಲಯ (CLK 46)

೫೦. ಕ್ರಿ.ಶ. ೧೫೫೩ : ಕಾಮಸಮುದ್ರದ ವೀರಭದ್ರ ದೇವಾಲಯ (CLK 45)
೫೧. ಕ್ರಿ.ಶ. ೧೫೫೪ : ಅಂಬಲಗೆರೆ ರಂಗನಾಥ ದೇವಾಲಯ, ಸದಾಶಿವರಾಯನು ತಿರುವೆಂಗಳನಾಥನಿಗೆ ಗೋಣಿಕೆರೆ ನಾಡೊಳಗಿರುವ ಉಪರಿಕರಪಳ್ಳಿ / ವೆಂಗಳಾಪುರವನ್ನು ದತ್ತಿ ನೀಡಿದ ವಿವರವಿದೆ. (HIR 22)
೫೨. ಕ್ರಿ.ಶ. ೧೫೫೮ : ಕಾಮಸಮುದ್ರದ ವೀರಭದ್ರ ದೇವಾಲಯ (CLK 47)
೫೩. ಕ್ರಿ.ಶ. ೧೫೬೦ : ದೇವಸಮುದ್ರದ ವಿಠಲ ದೇವರಗುಡಿ (MLK 1)
೫೪. ಕ್ರಿ.ಶ. ೧೫೬೨ : ದೇವಸಮುದ್ರದ ವಿಠಲ ದೇವರಗುಡಿ (MLK 2)
೫೫. ಕ್ರಿ.ಶ. ೧೫೬೭ : ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯ (HIR 47)
೫೬. ಕ್ರಿ.ಶ. ೧೫೬೮ : ಹೊಳಲ್ಕೆರೆ ಗೋಪಾಲಕೃಷ್ಣ ದೇವಾಲಯ (HLK 6)
೫೭. ಕ್ರಿ.ಶ. ೧೫೭೦ : ಕಂಚೀಪುರದ ಅಲ್ಲಿನಾಥ ದೇವರಿಗೆ ಪರತಿಯ ಕೆಂಚಪ್ಪ ನಾಯಕನು ಚಿಕ್ಕ ಕರ್ಪೂರದ ಕಟ್ಟೆಯನ್ನು ದಾನ ನೀಡಿದ ವಿವರ (HIR 85)
೫೮. ಕ್ರಿ.ಶ. ೧೫೭೧ : ಬಾಗೂರಿನ ಲಕ್ಷ್ಮಿ / ಕೇಶವ ದೇವಾಲಯ (HLK 115)
೫೯. ಕ್ರಿ.ಶ. ೧೫೭೩ : ಹೆಮ್ಮಿಗನೂರಿನ ಕಲ್ಲೇಶ್ವರ ದೇವಾಲಯ (HLK 43)
೬೦. ಕ್ರಿ.ಶ. ೧೫೭೮ : ಹೊರಕೆರೆ ದೇವಪುರದ ರಂಗನಾಥ ದೇವಾಲಯ (HLK 53)
೬೧. ಕ್ರಿ.ಶ. ೧೫೮೮ : ಬಿದರಕೆರೆ ಹನುಮಂತ ದೇವಾಲಯ (HIR 26)
೬೨. ಕ್ರಿ.ಶ. ೧೬೦೦ : ಗಂಗ ಸಮುದ್ರದ ರಾಮನಾಥ / ರಾಮೇಶ್ವ ದೇವಾಲಯ (HLK 83)
೬೩. ಕ್ರಿ.ಶ. ೧೬೦೫ : ಕೆಲ್ಲೋಡಿನ ಹನುಮಂತ ದೇವಾಲಯ (HLK 92)
೬೪. ಕ್ರಿ.ಶ. ೧೬೦೯ : ಹುಲ್ಲೂರಿನ ವೀರಭದ್ರ ದೇವಾಲಯಕ್ಕೆ ೨ನೇ ಮದಕರಿನಾಯಕನು ದಾನ ನೀಡಿದ ವಿವರ (CTA 22)
೬೫. ಕ್ರಿ.ಶ. ೧೬೩೯ : ಬಿದರಕೆರೆ ಹನುಮಂತ ದೇವಾಲಯ (HIR 27)
೬೬. ಕ್ರಿ.ಶ. ೧೬೬೮ : ಕಸ್ತೂರಿ ರಂಗಪ್ಪ ನಾಯಕರ ಕುಮಾರ ಮದಕರಿ ನಾಯಕರು ನಂದನ ಹೊಸೂರಲಿ ಹನುಮಂತ ದೇವರ ಕಟ್ಟಿಸಿದ ವಿವರ (HLK 55)
೬೭. ಕ್ರಿ.ಶ. ೧೬೮೯ : ಹೊಸದುರ್ಗದ ವೀರಭದ್ರ ದೇವಾಲಯ (HLK 90)
೬೮. ಕ್ರಿ.ಶ. ೧೬೮೯ : ಹಿರಿಯೂರ ವೀರಭದ್ರ ದೇವಾಲಯ (HIR 40)
೬೯. ಕ್ರಿ.ಶ. ೧೭೦೦ : ಹರತಿ ಮಲ್ಲಿಕಾರ್ಜುನ ದೇವಾಲಯ (HIR 17)
೭೦. ಕ್ರಿ.ಶ. ೧೭೧೫ : ಚಿತ್ರದುರ್ಗ ವೆಂಕಟರಮಣ ದೇವಾಲಯಕ್ಕೆ ಕಾಮಗೇರಿ ಕಸ್ತೂರಿ ಮದಕರಿ ನಾಯಕರು ಪಿಳ್ಳೇಕೆರೆನಹಳ್ಳಿ ದಾನ (CTA 31)
೭೧. ಕ್ರಿ.ಶ. ೧೭೫೬ : ಹೊರಕೆರೆ ರಂಗನಾಥ ದೇವಾಲಯಕ್ಕೆ ಕಸ್ತೂರಿ ರಂಗಪ್ಪ ನಾಯಕ

ಆಧಾರಸೂಚಿ

೧. **ಎಪಿಗ್ರಾಫಿಯ ಕರ್ನಾಟಿಕ,** ಸಂ. ೧೧. (ರೈಸ್ ಆವೃತ್ತಿ).
೨. **ಚಿತ್ರದುರ್ಗ ಜಿಲ್ಲಾ ಗ್ಯಾಸೆಟಿಯರ್,** (ಸಂ.) ಸತ್ಯನ್ ಬಿ.ಎನ್., ಬೆಂಗಳೂರು, ೧೯೬೭.
೩. ಕ್ಷೇತ್ರ ಕಾರ್ಯವರದಿ.
೪. ಎಂ.ಎ.ಆರ್. ವರದಿಗಳು (೧೯೩೯–೪೦).

ಕೆ. ನಾರಾಯಣ ನಾಯಕ್*


ಬೊಮ್ಮರಬೆಟ್ಟು ಪರಿಸರದ ಸಾಮಾಜಿಕ ಐತಿಹಾಸಿಕ ನೆಲೆಗಳು

ಉಡುಪಿ -ಕಾರಕಳ ಹೆದ್ದಾರಿಯು, ೧೪ ಕಿ.ಮೀ. ದೂರದ ಬೊಮ್ಮರಬೆಟ್ಟು ಗ್ರಾಮದ ಕೇಂದ್ರವಾಗಿರುವ ಹಿರಿಯಡಕ ಮೂಲಕ ಹಾಗು ಹೋಗುತ್ತದೆ. ಅಲ್ಲಿಂದ ಇದೇ ಗ್ರಾಮದ ಕೋಟಣಕಟ್ಟೆ-ಕೊಂಡಾಡಿಯಾಗಿ ಸುಮಾರು ೨ ಕಿ.ಮೀ. ದೂರದಲ್ಲಿನ ಗುಡ್ಡೆಯಂಗಡಿಯ ನಂತರ ಕಾರ್ಕಳದೆಡೆಗೆ ಕ್ರಮಿಸುವುದು. ಬೊಮ್ಮರಬೆಟ್ಟು ಉಡುಪಿ ತಾಲ್ಲೂಕಿನ ದೊಡ್ಡ ಗ್ರಾಮವಾಗಿದೆ.[೧]

ಸುವರ್ಣ ನದಿಯು ಗ್ರಾಮದ ಪೂರ್ವೋತ್ತರ ಮೇರೆಯಾಗಿ ಮಾಣೈ, ಪುತ್ತಿಗೆ, ಅನಂತರ ಬಜ್ಪೆಯಾಗಿದೆ. ಪಶ್ಚಿಮ ದಿಸೆಗೆ ಹರಿದು ಪಶ್ಚಿಮ ಸಮುದ್ರದಲ್ಲಿ ಸಂಗಮಿಸುವುದು. ಶೀರೂರು, ಬೆಳ್ಳರಪಾಡಿ, ಪರಡೂರು, ಕುಕ್ಕೆಹಳ್ಳಿ, ಅಂಜಾರು ಹಾಗೂ ೮೨ ಕುದಿ-ಇವು ಬೊಮ್ಮರಬೆಟ್ಟಿನ ಸೀಮೆಗೆ ನಿಕಟವಾಗಿರುವ ಗ್ರಾಮಗಳು. ಆಗ್ನೇಯ ದಿಕ್ಕಿಗೆ ಇರುವ ಕಣಂಜಾರು ಮತ್ತು ನೀರೆ ಗ್ರಾಮಗಳು ಕಾರಕಳ ತಾಲ್ಲೂಕಿನಲ್ಲಿವೆ. ಹಚ್ಚಹಸಿರಿನ ಪರಿಸರ ಸಿರಿ ಹೊಂದಿರುವ ಬೊಮ್ಮರಬೆಟ್ಟು ಪ್ರಕೃತಿ ಸೌಂದರ್ಯದೊಂದಿಗೆ ಚಾರಿತ್ರಿಕ ನೆಲೆವೀಡೂ ಆಗಿರುತ್ತದೆ.

ಅಲೂಪರ ಆಳ್ವಿಕೆಯ ಕಾಲದಿಂದ ಹೊಯ್ಸಳ, ವಿಜಯನಗರ ಹಾಗೂ ಕೆಳದಿ ಕಾಲದವರೆಗಿನ ಐತಿಹಾಸಿಕ ನೆಲೆಗಳನ್ನು ಈ ಗ್ರಾಮದಲ್ಲಿ ಗುರುತಿಸಬಹುದಾಗಿದೆ. ಸ್ವಾತಂತ್ರ್ಯ ಹೋರಾಟದಲ್ಲೂ ಇಲ್ಲಿನ ಹಿರಿಯರು ಭಾಗವಹಿಸಿರುವುದೂ ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. "ಬಸ್ತಿ"ಯ ಪಾಳುಬಿದ್ದಿರುವ ಬಸದಿ, ಪುತ್ತಿಗೆ ಮತ್ತು ಹಿರಿಯಡಕದ ದೇವಾಲಯಗಳು, ಮಠಗಳು, "ಸಿರಿಜಾತ್ರೆ" - ಇವೆಲ್ಲಾ

ಬೊಮ್ಮರಬೆಟ್ಟು ಗ್ರಾಮದ ನಕ್ಷೆ.



೧. ಹಿರಿಯಡಕ ಶ್ರೀ ವೀರಭದ್ರ ಸ್ವಾಮಿ ದೇವಸ್ಥಾನ
೨. ಸುವರ್ಣಾ ನದಿ
೩. ಬಜೆ
೪. ಶ್ರೀ ಬಬ್ಬುಸ್ವಾಮಿ ದೇವಸ್ಥಾನ
೫. ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪುತ್ತಿಗೆ
೬. ಪುತ್ತಿಗೆ ಮಠ
೭. ಪಾಪುಜೆ ಮಠ
೮. ಮಾಣ್ಯಾ ಸೇತುವೆ
೯. ಮಾಣ್ಯಾ ಮಠ
೧೦. ಕೋಲ್ಯಾರು ಮಠ
೧೧. ಜಂಗಮ ಮಠ
೧೨. ಬೊಮ್ಮಾರಬೆಟ್ಟು ಗದಡಿ
೧೩. ಗಂಪ ದೇವಸ್ಥಾನ
೧೪. ಪಡ್ದಂ ಬೀಡು
೧೫. ಪಡ್ದಂ ಗರಡಿ
೧೬. ಬಸ್ತಿ ದೇವಸ್ಥಾನ (ವರ್ತೆ - ಕಲ್ಕುಡ)
೧೭. ಬಸದಿ
೧೮. ಪಡ್ದಂ ಶ್ರೀ ದುರ್ಗಾದೇವಿ ಗುಡಿ
೧೯. ಮೂಡು ಮಠ
೨೦. ಕೋಟ್ನಕಟ್ಟೆ

* 'ನಿಸರ್ಗ', ಜಯದುರ್ಗಾನಗರ, ಕನ್ನರಪಾಡಿ, ಉಡುಪಿ.

ಗತಕಾಲದ ಸಮಾಜ ಸಂಸ್ಕೃತಿಯ ವೈವಿಧ್ಯಮಯ ಅರಿವಿಗೆ ಬೆಳಕು ಚೆಲ್ಲುವ ನೆಲೆಗಳು. ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಅಧ್ಯಯನ ಸಂಶೋಧನೆ ಅವಶ್ಯವಿದೆ.

'ಬೊಮ್ಮರ ಬೆಟ್ಟು' ಸ್ಥಳೀಯ ತುಳುಭಾಷೆಯಲ್ಲಿ "ಬೊಮ್ಮೆರಬೆಟ್ಟು' ಎಂದಾಗುತ್ತದೆ. ಎಂದರೆ, 'ಬ್ರಹ್ಮರ' + ಬೆಟ್ಟು ಎಂದರ್ಥ. ತೌಳವ ಸಂಸ್ಕೃತಿಯಲ್ಲಿರುವ ಆಲಡೆಯ ಪ್ರಧಾನ ದೈವ 'ಬ್ರಹ್ಮ'ನಿಂದಾಗಿ ಗ್ರಾಮಕ್ಕೆ ಹೆಸರು ಬಂತು ಎಂದು ಕೆಲವರು ಊಹಿಸುತ್ತಾರೆ.ಆಲಡೆಗಿಂತಲೂ ಪ್ರಾಚೀನವಾಗಿರುವ ಇಲ್ಲಿನ ಬಸದಿಯ ಜೈನ ಯಕ್ಷಬ್ರಹ್ಮನಿಂದಾಗಿ ಗ್ರಾಮದ ಹೆಸರು ಬೊಮ್ಮರಬೆಟ್ಟು ಎಂದಾಗಿದೆ ಎಂದು ತೀರ್ಮಾನಿಸುವುದೇ ಹೆಚ್ಚು ಸೂಕ್ತವೆನಿಸುವುದು.[೨] ಆ ಹಿನ್ನೆಲೆಯಲ್ಲಿ ಇಲ್ಲಿ ಹೆಚ್ಚು ಬ್ರಾಹ್ಮಣರು ಇದ್ದರು; ಹಾಗಾಗಿ "ಬ್ರಾಹ್ಮಣರ ಬೆಟ್ಟು – ಬೊಮ್ಮರಬೆಟ್ಟು ಎಂದಾಯಿತು ಎಂಬ ಹೇಳಿಕೆಯು ಸರಿಯೆನಿಸುವುದಿಲ್ಲ.

ಬೊಮ್ಮರಬೆಟ್ಟು ಬಸದಿ : ಹಿರಿಯಡಕ – ಕೋಟಣಕಟ್ಟೆ ಮಾರ್ಗವಾಗಿ ಸುಮಾರು ೨ ಕಿ.ಮೀ. ಪೂರ್ವದಿಕ್ಕಿನಲ್ಲಿ ಈಗ 'ಬಸ್ತಿ' ಎಂದು ಕರೆಯಲಾಗುವ ಊರಿನಲ್ಲಿಯೇ ಪಾಳು ಬಿದ್ದಿರುವ ಪುರಾತನ ಬಸದಿಯ ಅವಶೇಷಗಳು ಇವೆ. ರಸ್ತೆಯ ಪಕ್ಕದಲ್ಲಿಯೇ ಇರುವ ಬಸದಿಯು ಪರಿಸರದ ಗಿಡಮರ ಬಳ್ಳಿಗಳಿಂದ ಮರೆಯಾಗಿದೆ. ಒಂದು ಕಾಲದಲ್ಲಿ ಜೈನರ ಪವಿತ್ರ ಆರಾಧನಾ ಸ್ಥಳವಾಗಿದ್ದ ಅತ್ಯಂತ ಭವ್ಯವಾದ ಬಸದಿಯು ಪೂರ್ಣ ನಿರ್ಲಕ್ಷ್ಯಕ್ಕೊಳಗಾಗಿ ಪಾಳು ಬಿದ್ದಿರುವುದನ್ನು ಗಮನಿಸುವಾಗ ಪ್ರಾಚೀನ ಸ್ಮಾರಕಗಳ ಕುರಿತಾದ ದಿವ್ಯ ನಿರ್ಲಕ್ಷ್ಯದ ಪರಮಾವಧಿ ಇದು–ಎಂದೇ ಹೇಳಬೇಕಾಗುತ್ತದೆ!

ಬಸದಿಯು ಮೂರು ಮಾಳಿಗೆಗಳನ್ನು ಹೊಂದಿತ್ತು. ಕೆಳಗಿನ ಅಂತಸ್ತು ಶಿಲಾಮಯ, ಎರಡನೆ ಮತ್ತು ಮೂರನೆಯ ಮಾಳಿಗೆಗಳು ಕ್ರಮವಾಗಿ ಮುರಕಲ್ಲು ಮತ್ತು ಇಟ್ಟಿಗೆ ಉಪಯೋಗಿಸಿದಂತೆ ಕಂಡುಬರುತ್ತದೆ. ಈ ಮೇಲಿನ ಅಂತಸ್ತು ರಚನೆ ಆನಂತರದ ನಿರ್ಮಾಣ ಕಾರ್ಯವಾಗಿರಬೇಕು. ಕಟ್ಟಡದ ಕಲ್ಲುಗಳು ಅಸ್ತವ್ಯಸ್ತವಾಗಿ ನೆಲಕ್ಕೆ ಬಿದ್ದಿರುವುದು ಗೋಚರ ವಾಗುತ್ತದೆ. ಬಸದಿಯೊಳಗೆ ಹುತ್ತ ಬೆಳೆದಿದ್ದು ಒಳಗಡೆ ಕಾಲಿಡುವಂತಿಲ್ಲ. ಒಂದು ಕಾಲದಲ್ಲಿ ಅತೀ ಸುಂದರವಾಗಿದ್ದಿರ ಬಹುದಾದ ಈ ಪವಿತ್ರ ಆರಾಧನಾ ಮಂದಿರವು ಇನ್ನು ಮುಂದಕ್ಕೆಯಾದರೂ ಗತವೈಭವವನ್ನು ಗಳಿಸಬಹುದೆ?

ಆಯತಾಕಾರದ ಸಾಂಪ್ರದಾಯಿಕ ಶೈಲಿಯ ಬಸದಿ ಇದಾಗಿದ್ದು ಪೂರ್ವಾಭಿಮುಖವಾಗಿದೆ. ಎದುರಿಗೆ ಹಸ್ತಿ ಸೋಪಾನಗಳು ಇವೆ. ಮುಖಮಂಪಟದ ಸ್ತಂಭಗಳ ಕೆತ್ತನೆ ಕಲಾತ್ಮಕವಾಗಿದೆ. ಪ್ರಾರ್ಥನಾಲಯ (ಗಂಧಕುಟಿ), ಸುಖನಾಸಿ ಮತ್ತು ಗರ್ಭಗೃಹಗಳನ್ನು ಬಸದಿಯು ಹೊಂದಿದೆ. ರಂಗಮಂಟಪದ ನಾಲ್ಕು ಶಿಲಾಸ್ತಂಭಗಳಲ್ಲೂ ನರಸಿಂಹ, ಹನುಮಂತ, ಆನೆ ಇತ್ಯಾದಿ ಕೆತ್ತನೆ ಸೊಗಸಾಗಿದೆ. ನಪಿರಾದ ಶಿಲ್ಪಕಲಾ ಸೌಂದರ್ಯ ಕಂಡುಬರುತ್ತದೆ. ಪಾಳುಬಿದ್ದಿರುವ ಸ್ಥಿತಿಯಲ್ಲಿ ಒಳಗಡೆಯ ವಾಸ್ತು ವೈಶಿಷ್ಟ್ಯವನ್ನು ಗಮನಿಸಲು ಸಾಧ್ಯವಾಗಿದೆ.

ಬಸದಿಯ ವಾಯುವ್ಯ ಮೂಲೆಯಲ್ಲಿ ಸುಮಾರು ೮ ಅಡಿ ಎತ್ತರದ ಜೈನಜಟ್ಟಿಗ (ಜಟ್ಟಂಗರಾಯ) ಬಸದಿಯ ಕ್ಷೇತ್ರಪಾಲ – ಇನ್ನೂ ಸುಸ್ಥಿತಿಯಲ್ಲಿದೆ. ಈಗಲೂ ಇದು ಪೂಜೆಗೊಳ್ಳುತ್ತಿದೆ. ಬಸದಿಯ ನಿರ್ಮಾಣ ಕಾಲ ಸುಮಾರು ೧೪–೧೫ನೆಯ ಶತಮಾನವಾಗಿರಬಹುದೆಂದು ಇತಿಹಾಸ ತಜ್ಞ ಡಾ. ಪಿ.ಎನ್. ನರಸಿಂಹಮೂರ್ತಿಯವರು ಅಭಿಪ್ರಾಯ ಪಟ್ಟಿರುತ್ತಾರೆ.

ಬಸದಿಯಲ್ಲಿ ಪೂಜೆಗೊಳ್ಳುತ್ತಿದ್ದ ಮುಖ್ಯ ಆರಾಧನಾ ಮೂರ್ತಿಯ ಬಗ್ಗೆ ಎಲ್ಲಿಯೂ ಯಾವುದೇ ಉಲ್ಲೇಖ ದೊರಕಿದಂತೆ ಕಾಣುವುದಿಲ್ಲ. ಪಾಣಿಪೀಠದ ಬದಿಯಲ್ಲಿ ಕಂಡುಬಂದಿರುವ ಸಿಂಹದ ಚಿಹ್ನೆಯಿಂದಾಗಿ ಇದು ಮಹಾವೀರ ತೀರ್ಥಂಕರರ ಬಸದಿ ಎಂದು ತಿಳಿಯುವಂತಿದೆ.[೩] ಬೊಮ್ಮರಬೆಟ್ಟಿನ ಈ ಪರಿಸರದಲ್ಲಿ ಇಷ್ಟೊಂದು ಸುಂದರವಾದ ಬಸದಿಯ ನಿರ್ಮಾಣವಾಗಬೇಕಾಗಿದ್ದರೆ ಇಲ್ಲಿ ಜೈನರ ವಸತಿ ಇದ್ದಿರಲೇಬೇಕು. ಈಗ ಇಲ್ಲಿ ಈ ಗ್ರಾಮದಲ್ಲಿ ಜೈನರು ಕಂಡುಬರುವುದಿಲ್ಲ. ಬಸದಿಯ ಸುತ್ತುಮುತ್ತುಲಿನ ಪ್ರದೇಶದಲ್ಲಿ ಮನೆ–ಕಟ್ಟಡಗಳ ಅವಶೇಷಗಳು ಗೋಚರಿಸಿವೆ.

ಇಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಆಸುಪಾಸಿನ ಜನರ ಗಮನ ಸೆಳೆದಾಗ ಪ್ರತಿಯೊಬ್ಬರೂ ಇಂತಹ ಒಂದು ಆರಾಧನಾ ಮಂದಿರದ ಪುನನಿರ್ಮಾಣ, ಜೀರ್ಣೋದ್ಧಾರ ವಾಗಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಸ್ವಸ್ತಿ ಶ್ರೀ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮೀಜಿ, ಶ್ರೀ ಜೈನಮಠ ಮೂಡಬಿದಿರೆ ಇವರನ್ನು ಸಂದರ್ಶಿಸಿದಾಗ ಪೂಜ್ಯರು "ಈ ಬಸದಿಯ ವಿಷಯ ನಮಗೆ ತಿಳಿದಿದೆ" ಎಂದೂ, ಜೀರ್ಣೋದ್ಧಾರದ ಆಶಯದಲ್ಲಿ ವ್ಯಕ್ತಪಡಿಸಿದರು.[೪] ಯಾವುದೇ ಆರಾಧನಾ ಸ್ಥಳವು ಜೀರ್ಣೋದ್ಧಾರಗೊಂಡು ಪೂಜಾದಿ ವಿಧಿಗಳು ನಡೆದಲ್ಲಿ ಆ ಗ್ರಾಮ ಹಾಗೂ ಪರಿಸರಕ್ಕೆ ಒಳ್ಳೆಯದು".[೫] ಎಂದವರುಂಟು.

ಈ ಬಸದಿಯ ಸನಿಹದಲ್ಲಿಯೇ ವರ್ತೆ ಕಲ್ಕುಡ ತಾಣವೊಂದಿದೆ. ಬಸದಿಯ ರಕ್ಷಣೆಗಾಗಿ ಮೂಡುಮಠದಿಂದ ಈ ದೈವವು 'ಬಸ್ತಿ'ಗೆ ಬಂತು ಎನ್ನುತ್ತಾನೆ. "ಬೊಮ್ಮರಾಜ

ಕಲ್ಕುಡ" ಎಂಬ ಹೆಸರಿನ ಈ ದೈವದ ಬಗ್ಗೆ ಪಾಡ್ದನಗಳಲ್ಲಿ ಸವಿವರವಾದ ವರ್ಣನೆಯಿದೆ.[೬] ಇದೇ ಪರಿಸರದಲ್ಲಿ ಬೊಬ್ಬರ್ಯ ದೈವವೂ ಇದೆ.

ಪ್ರಾಚೀನ ದೇವಾಲಯ ಪುತ್ತಿಗೆಯ ಶ್ರೀ ವಿಷ್ಣುಮೂರ್ತಿ: ಹಿರಿಯಡಕ ಪೇಟೆಯಿಂದ ಪೆರಡೂರು ಕಡೆಗೆ ಹೋಗುವ ಮಾರ್ಗದಲ್ಲಿ ಸ್ವಲ್ಪ ಮುಂದುವರಿದರೆ ಸುವರ್ಣ ನದಿಯ ಸೇತುವೆ ಸಿಗುತ್ತದೆ. ಇದರ ಎಡಬದಿಯಲ್ಲಿ ಸುಂದರವಾಗಿರುವ ಪುತ್ತಿಗೆ ಊರಿದೆ. ಸುವರ್ಣೆಯ ತಟದಲ್ಲಿ ಹೊಲ, ಗದ್ದೆ, ತೋಟ, ಮನೆಗಳಿಂದ ಮನೋಲ್ಲಾಸ ನೀಡುವ ಈ ಊರಿನ ಪಶ್ಚಿಮ ಬದಿಯಲ್ಲಿರುವುದೇ ಬೊಮ್ಮರಬೆಟ್ಟಿನ ಪ್ರಾಚೀನ ಶ್ರೀ ವಿಷ್ಣುಮೂರ್ತಿ ದೇವಾಲಯ. ಇದು ಅಲೂಪರ ಕಾಲದ್ದು ಎಂದು ಡಾ॥ ಪಿ.ಎನ್. ನರಸಿಂಹಮೂರ್ತಿಯವರು ಹೇಳುತ್ತಾರೆ.[೭] ಒಂದು ಕಾಲದಲ್ಲಿ ಇದು ಗ್ರಾಮ ದೇವಸ್ಥಾನ ವಾಗಿರಬಹುದು. ಎತ್ತರವಾದ ಸ್ಥಳದಲ್ಲಿರುವ ದೇವಸ್ಥಾನವು ಪ್ರಶಾಂತವಾದ ಪರಿಸರದಲ್ಲಿದೆ.

"ಎದುರಿಗೆ ಧ್ವಜಸ್ತಂಭ, ಪ್ರಧಾನ ಬಲಿಪೀಠ, ಪ್ರವೇಶದ್ವಾರ, ಮಹಾದ್ವಾರ ಸುತ್ತ ಪ್ರಾಕಾರ ಮಂಟಪ, ಶಿಲಾಮಯ ದೇವಾಲಯದ ಮಾಡಿಗೆ ಹಂಚಿನ ಹೊದಿಕೆಯಿದೆ. ತೆರೆದ ಪ್ರದಕ್ಷಿಣಾಪಥ, ತೀರ್ಥಮಂಟಪ ಮತ್ತು ಗರ್ಭಗುಡಿಗಳು ಪ್ರಾಕಾರದ ಕೇಂದ್ರಭಾಗದಲ್ಲಿದೆ. ತೀರ್ಥಮಂಟಪವು ಶಿಲಾಮಯ ರಚನೆಯಾಗಿದ್ದು, ನಾಲ್ಕು ಸ್ತಂಭಗಳು, ಅವುಗಳ ಬೋದಿಗೆ ಮತ್ತು ಇವನ್ನು ಆಧರಿಸಿರುವ ಮುಚ್ಚಿಗೆ ಎಲ್ಲವೂ ಕಗ್ಗಲ್ಲಿನದು. ಮುಚ್ಚಿಗೆಯ ಕೇಂದ್ರ ಭಾಗದಲ್ಲಿ ಗರುಡನ ವಿಗ್ರಹವಿರುವ ಶಿಲಾಫಲಕವಿದೆ. ಇದರ ಮೇಲಿನ ಮಾಡು ಮಾತ್ರ ಹಂಚಿನ ಹೊದಿಕೆಯನ್ನು ಹೊಂದಿದೆ."[೮]

ತಜ್ಞರಾದ ಡಾ॥ ಪಿ.ಎನ್. ನರಸಿಂಹಮೂರ್ತಿಯವರು ದೇವಾಲಯ ಹಾಗೂ ಇಲ್ಲಿನ ಆರಾಧ್ಯಮೂರ್ತಿಯ ಕುರಿತಾಗಿ ಅಧ್ಯಯನ ನಡೆಸಿ, ವಿವರವನ್ನು ನೀಡಿರುತ್ತಾರೆ. "ಗರ್ಭಗುಡಿಯ ರಚನೆ ಸಾಮಾನ್ಯ ಮಟ್ಟದ್ದು ಚತುರಸ್ರ ಆಕಾರದಲ್ಲಿರುವ ಇದರ ಅಧಿಷ್ಠಾನ ಶಿಲಾಮಯ...."

"ಗರ್ಭಗೃಹದ ಸಾಧಾರಣ ಎತ್ತರದ ಪಾಣಿಪೀಠದ ಮೇಲೆ ಸುಮಾರು ಒಂದು ಮೀಟರ್ ಎತ್ತರದ ಕೃಷ್ಣಶಿಲಾ ವಿಗ್ರಹ ಇದೆ" ಈ ವಿಗ್ರಹವು ಕ್ರಿ.ಶ. ೧೦ನೆಯ ಶತಮಾನ ಕಾಲದ್ದು ಎಂದು ಇತಿಹಾಸ ತಜ್ಞ ಡಾ॥ ಪಿ.ಎನ್. ನರಸಿಂಹಮೂರ್ತಿಯವರ ಅಭಿಪ್ರಾಯವಿಲ್ಲದೆ "ಚತುರ್ಬಾಹು, ಹಿತಮಿತ ಆಭರಣ, ವಸ್ತ್ರಾಲಂಕಾರ, ದೀರ್ಘ ಕಿರೀಟ, ಮಂಡಲಾಕಾರದ ವಿನೂತನ ಪ್ರಭಾವಳಿ, ಕಲಾತ್ಮಕವಾಗಿ ಪಾದದವರೆಗೂ ಇಳಿಬಿಟ್ಟ ಉತ್ತರೀಯ" – ಇವು ಈ ಸುಂದರ ವಿಗ್ರಹದ ವೈಶಿಷ್ಟ್ಯಗಳು. "ನಾಲ್ಕು ಕೈಗಳಲ್ಲಿ ದಂಟು ಸಹಿತ ಕಮಲಪುಷ್ಪಗಳಿರುವ ಈ ಪ್ರತಿಮೆ ಸೂರ್ಯ ಎಂದು ಅವರು ಹೇಳಿದ್ದಾರೆ. ನಿತ್ಯಪೂಜೆ, ಉತ್ಸವಗಳು ಇಲ್ಲಿ ಜರಗುತ್ತವೆ. ಇಲ್ಲಿರುವ ಕ್ರಿ.ಶ. ೧೨೬೭ರ ಆಲೂಪರಾಜ ವೀರಪಾಂಡ್ಯ ದೇವನ (ಕ್ರಿ.ಶ. ೧೨೫೪-೧೨೭೪) ಶಾಸನವು ಈ ದೇವಾಲಯವು ಒಂದು ಪ್ರಮುಖ ಧಾರ್ಮಿಕ ಕೇಂದ್ರವಾಗಿತ್ತು ಎಂಬುವುದಕ್ಕೆ ಸಾಕ್ಷಿಯಾಗಿದೆ.

ಪುತ್ತಿಗೆ ಮಠ : ಉಡುಪಿಯ 'ಅಷ್ಟಮಠ' ಗಳಲ್ಲೊಂದಾಗಿರುವ ಪುತ್ತಿಗೆ ಮಠದ ಮೂಲಮಠವು ಪುತ್ತಿಗೆಯಲ್ಲಿ ಸುವರ್ಣಾ ನದಿಯ ದಕ್ಷಿಣ ತಟದಲ್ಲಿದೆ. ಸಂಪೂರ್ಣ ಕಾಷ್ಠ ನಿರ್ಮಿತವಾದ ಈ ಮಠವು ದಾರುಶಿಲ್ಪದ ಕಲಾವೈಭವಕ್ಕೆ ಸಾಕ್ಷಿಯಾಗಿದೆ. ೧೬-೧೭ನೆಯ ಶತಮಾನದಲ್ಲಿ ಇದು ಜೀರ್ಣೋದ್ಧಾರವಾಗಿರಬಹುದು. ವಿಜಯನಗರ ಚಕ್ರವರ್ತಿ ಕೃಷ್ಣದೇವರಾಯನ ಕಾಲದಲ್ಲಿ ಈ ಮಠಕ್ಕೆ ಭೂದಾನ ಲಭಿಸಿದ ಬಗ್ಗೆ ಇರುವ ಶಿಲಾಶಾಸನ ಫಲಕವು ಮಠದ ಆವರಣದೊಳಗಿದೆ.[೯]

ಶ್ರೀ ಮಧ್ವಾಚಾರ್ಯರ ಎಂಟು ಮಂದಿ ಶಿಷ್ಯರಲ್ಲಿ ಒಬ್ಬರಾದ ಶ್ರೀ ಉಪೇಂದ್ರತೀರ್ಥರು ಮಠದ ಪ್ರಥಮ ಯತಿವರ್ಯರು ಇದೀಗ ಪರ್ಯಾಯ ಮುಗಿಸಿರುವ ಶ್ರೀ ಸುಗುಣೇಂದ್ರ ತೀರ್ಥರು ಈ ಮಠದ ಯತಿವರ್ಯ ರಾಗಿರುತ್ತಾರೆ. ಮಠದಲ್ಲಿ (ತುಳುಲಿಪಿಯ) ಅಮೂಲ್ಯವಾದ ಹಳೆಯ ಹಸ್ತಪ್ರತಿಗಳು ಇವೆ.

ಚತುರಸ್ರ ಬೃಹತ್ ಮಠದ ಮಧ್ಯೆ ಭವ್ಯವಾದ ಗರ್ಭಗುಡಿಯಲ್ಲಿ ಉಪಾಸ್ಯ ದೇವರು ಶ್ರೀ ವಿಠಲ – ವಿರಾಜಮಾನ ಸುಂದರ ಮೂರ್ತಿ. ಶ್ರೀ ಕಾಳಿಂಗಮರ್ದನ. ಶ್ರೀ ಕೃಷ್ಣ ವಿಗ್ರಹವೂ ಇಲ್ಲಿ ಶೋಭಾಯಮಾನವಾಗಿದೆ. ಶ್ರೀ ಮುಖ್ಯಪ್ರಾಣ ದೇವರಿಗೆ ಪ್ರತ್ಯೇಕ ಗುಡಿಯಿದೆ. ಗರ್ಭಗುಡಿಯ ಮುಂದಿನ ಬೃಹತ್ ಸ್ತಂಭಗಳಲ್ಲಿ ಸೊಗಸಾದ ಕೆತ್ತನೆ ವರ್ಣನಾತೀತವಾಗಿದ್ದು ಅತ್ಯಂತ ಪ್ರೇಕ್ಷಣೀಯವಾಗಿದೆ. ಸೀತಾ, ಲಕ್ಷ್ಮಣ ಸಹಿತ ಶ್ರೀರಾಮ, ಶ್ರೀ ಲಕ್ಷ್ಮೀನರಸಿಂಹ ಇಲ್ಲಿ ರಜತಪೀಠದಲ್ಲಿ ಪೂಜೆಗೊಳ್ಳುತ್ತಾರೆ.

ಶ್ರೀ ಮಠವು ಧರ್ಮ, ಶಿಕ್ಷಣ ಮತ್ತು ಸಂಸ್ಕೃತಿಯ ಕೇಂದ್ರವಾಗಿದ್ದು ಅನ್ನದಾನಕ್ಕೂ ಹೆಸರಾಗಿದೆ. ಇಲ್ಲಿನ ವೇದಪಾಠ ಶಾಲೆಯಲ್ಲಿ ಸಂಸ್ಕೃತ, ಋಗ್ವೇದ, ಜ್ಯೋತಿಷ್ಯ ಮತ್ತು ತಂತ್ರಾಗಮಗಳ ಅಧ್ಯಯನ ನಡೆಯುತ್ತದೆ. ಮಠದಲ್ಲಿರುವ ಕಂಬದ ಗಣಪತಿ ಭಕ್ತರ ಅಭೀಷ್ಟಗಳನ್ನು ನೆರವೇರಿಸುವ ದೇವರೆಂಬ ಖ್ಯಾತಿಯಿದೆ.

ಬೊಮ್ಮರಬೆಟ್ಟಿನ ಮಠಗಳು : ಪುತ್ತಿಗೆ ಮಠವಲ್ಲದೆ ಇತರ ಎಂಟು ಮಠಗಳು ಈ ಗ್ರಾಮದಲ್ಲಿ ಇದ್ದುವು

ಎಂಬುದಾಗಿ ತಿಳಿದುಬರುತ್ತದೆ. ಮೂಡುಮಠವನ್ನು ಕೇಂದ್ರವಾಗಿಟ್ಟು, ಮುಂಡುಜೆ, ಕೋಲ್ಯಾರು ಮತ್ತು ಪಾಪುಜೆ ಮಠಗಳಿವೆ. ಈಗ ನಾಮಾವಶೇಷವಾಗಿರುವ ಗುಳಿಬೆಟ್ಟು, ಅಂಗಡಿಬೆಟ್ಟು, ಹೊಸ ಒಕ್ಕಲು ಮತ್ತು ಕುಯಿಲಾಡಿ ಮಠಗಳು ಒಂದು ಕಾಲದಲ್ಲಿ ಅಸ್ತಿತ್ವದಲ್ಲಿದ್ದುವು ಎಂಬುದಕ್ಕೆ ಆಯಾ ಸ್ಥಳಗಳಲ್ಲಿರುವ ಕೆರೆ, ನಾಗಬನ ಹಾಗೂ ಇತರ ಅವಶೇಷಗಳನ್ನು ಕಾಣಬಹುದಾಗಿದೆ. ಈ ಮಠಗಳ ದೇವರ ವಿಗ್ರಹಗಳನ್ನು ಈಗಲೂ ಮೂಡುಮಠ ಮತ್ತು ಕೋಲ್ಯಾರು ಮಠಗಳಲ್ಲಿ ಕಾಣಬಹುದು.

ಪ್ರಾಚೀನ ಮಠ – ಮೂಡು ಮಠ : ಉಡುಪಿಯಲ್ಲಿ ಶ್ರೀ ಕೃಷ್ಣ ಸ್ಥಾಪನೆಗಿಂತಲೂ ಪೂರ್ವ ಕಾಲದಲ್ಲಿ ಮೂಡುಮಠವು ಇತ್ತೆಂದು ತಿಳಿಯಲ್ಪಟ್ಟಿದೆ. ಬಸ್ತಿಯ ಬಸದಿಯಿಂದ ಪೂರ್ವಕ್ಕೆ ಸುಮಾರು ಒಂದು ಕಿ.ಮೀ. ದೂರದಲ್ಲಿ ಮೂಡುಮಠ ಇದೆ. ಸುತ್ತಲೂ ಬನಸಿರಿಯ ಹಚ್ಚಹಸಿರಿನ ಸೊಬಗಿನ ನೆಲೆಯೆನಿಸಿರುವ ಮೂಡುಮಠ ಒಂದು ಪ್ರೇಕ್ಷಣೀಯ ತಾಣವಾಗಿದೆ. ಮಠದ ಆವರಣದಲ್ಲಿರುವ ಸುಮಾರು ೧೪–೧೫ನೆಯ ಶತಮಾನದ ಶಿಲಾಶಾಸನವು ವಿಜಯನಗರ ಕಾಲದ್ದಾಗಿದೆ. ಮಠದ ಮಹತ್ತರದ ಪಾತ್ರವನ್ನು ಶಾಸನವು ತಿಳಿಯಪಡಿಸಿದೆ.[೧೦] "ಶ್ರೀಮತು ಕೆಲ ಹೆಗಡೆಯರಾದ ಮಂಜುಸೆಟ್ಟಿಯರು ಬಂಮರು ಬೆಟ್ಟಿನಲ್ಲಿ"......ಜನಾರ್ಧನ ಮೂರ್ತಿಗೆ ತಂನಮೂಲ, ಸರ್ವಸ್ವದಿಂದ ಮಾಡಿದ ಧರ್ಮ"ದ ವಿವರ ಶಾಸನದಲ್ಲಿ ಇದೆ. ಸೋಣೆ ತಿಂಗಳು ಮಹಾಚಉತ್ರ್ತಿ (ಚೌತಿ) ಶಷ್ಠಿಗೆ ಅಮವಾಸೆ ದ್ವಾದಶಿ ಧರ್ಮ ಹೋಮಗಳಿಗೆ 'ನಯಿವೇದ್ಯ' ಹಾಗೂ 'ನಿತ್ಯಚತ್ರ'ದ ಊಟಕ್ಕೆ ದಾನ ನೀಡಲಾದ ಅಕ್ಕಿಮುಡೆಗಳ ವಿವರ ಶಾಸನದಲ್ಲಿ ಉಲ್ಲೇಖಿತವಾಗಿದೆ. 'ಪಾಂಡಿ ಸಾವಂತರು ಕಟ್ಟಿಸಿದಂಥಾ ಮಠದಲ್ಲಿ' ಎಂದು ತಿಳಿಸುವ ಶಾಸನವು ಬಹು ಮುಖ್ಯವಾದುದು. ಹೆಚ್ಚಿನ ಸಂಶೋಧನೆ ಈ ಬಗ್ಗೆ ಇನ್ನೂ ಮಹತ್ವದ ಮಾಹಿತಿ ಪಡೆಯಲು ನೆರವಾಗಬಲ್ಲುದು. ಶಾಸನವು ಶಾಪವಾಕ್ಯವನ್ನು ಪ್ರಕಟಿಸಿ, "ಅಯಿದು ಬೆಟ್ಟಿನ ದೇಸಿಗಳು" ಹಾಗೂ "ಅಯಿನೂರಾಳು"ಗಳಿಗೆ ದಾನ ಧರ್ಮಾದಿಗಳು ಸರಿಯಾಗಿ ನಡೆಯುವಂತೆ ಹೊಣೆಗಾರಿಕೆಯನ್ನೂ ಹೊರಿಸಿದೆ. ಇದೇ ಮಠಕ್ಕೆ ನೀಡಿದ ಇನ್ನೊಂದು ದಾನ ಶಾಸನವು ಸನಿಹದ ಗುಳಿಬೆಟ್ಟು ಎಂಬಲ್ಲಿ ಪತ್ತೆಯಾಗಿದೆ. ವಿಜಯನಗರ ಚಕ್ರವರ್ತಿ ವಿರೂಪಾಕ್ಷರಾಯನ ಕಾಲದ (ಕ್ರಿ.ಶ. ೧೪೭೨) ಈ ಶಿಲಾಶಾಸನ[೧೦] ಮೂಡಮಠದ ಚಾರಿತ್ರಿಕ ಹಿರಿಮೆಗೆ ಸಾಕ್ಷಿಯೆನ್ನಬಹುದು. 'ಸುಬ್ರಹ್ಮಣ್ಯ ಮೇಲಾಂಟನ ಮಗ ಜಲದ್ಮ ಮೇಲಾಂಟನು' ತನ್ನ ಮೂಲದ ಬ್ರಹ್ಮದಾಯದ ಹೊಸ ಆಳಿಕೆ ಎಂಬ ಜಮೀನನ್ನು ದಾನ ಮಾಡಿದ ಉಲ್ಲೇಖ ಶಾಸನದಲ್ಲಿದೆ.[೧೧]

ಮಠದ ಗರ್ಭಗುಡಿಯು ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದೆ. ಗರ್ಭಗುಡಿಯ ವೇದಿಕೆಯಲ್ಲಿ ಪ್ರಧಾನ ಆರಾಧ್ಯಮೂರ್ತಿ ಶ್ರೀದೇವಿ ಭೂದೇವಿ ಸಹಿತ ಶ್ರೀ ಲಕ್ಷ್ಮೀ ಜನಾರ್ಧನ ದೇವರು ಪೂಜೆಗೊಳ್ಳುತ್ತಿದ್ದಾರೆ. ಬೇರೆ ಮಠಗಳಿಂದ ಬಂದಿರುವ ಪಂಚಲೋಹದ ಮೂರ್ತಿಗಳು ವೇದಿಕೆಯಲ್ಲಿವೆ. ಅವು ಯಾವುವು ಎಂದರೆ – ಶ್ರೀ ಕೇಶವ, ಶ್ರೀ ಲಕ್ಷ್ಮೀ ನರಸಿಂಹ, ಸೂರ್ಯನಾರಾಯಣ ಕಾಳಿಂಗಮರ್ದನ ಶ್ರೀ ಕೃಷ್ಣ, ವೇದವ್ಯಾಸ, ರುಕ್ಮಿಣೀ ಸತ್ಯಭಾಮಾ ಸಹಿತ ಶ್ರೀ ಗೋಪಾಲಕೃಷ್ಣ, ಗಣಪತಿ, ದುರ್ಗಾದೇವಿ ಇವು ಯಾವ ಯಾವ ಮಠಗಳಿಂದ ಬಂದಿವೆ ಎಂಬ ಉಲ್ಲೇಖ ಇರುವುದಿಲ್ಲ. ಮೂಡುಮಠವು ಒಂದು ಪ್ರಾಚೀನ ಆಲಡೆಯೂ ಆಗಿರುತ್ತದೆ. ಬ್ರಹ್ಮಲಿಂಗೇಶ್ವರ ಸಹಿತ ಪಂಚ ದೈವಗಳ ನೆಲೆ ಇಲ್ಲಿದೆ. ಜೊಟ್ಟುರ್ಯದೈವವು ಸ್ಥಳದ ರಕ್ಷಕದೈವ ಎನಿಸಿದೆ. ಧೂಮಾವತಿ ವಾರಾಹಿ, ವರ್ತೆ ಕಲ್ಕುಡ ದೈವಗಳ ಸನ್ನಿಧಾನವೂ ಈ ಮಠದ ಪರಿಸರದಲ್ಲಿರುತ್ತದೆ. ಸ್ಥಳೀಯ ಹಾಗೂ ಕೊಪ್ಪ, ಶಿವಮೊಗ್ಗ ಮೊದಲಾದ ನೆರೆ ಜಿಲ್ಲೆಯ ಪ್ರದೇಶದಿಂದಲೂ ಜನರು ಈ ಆಲಡೆಗೆ ಬಂದು ಸೇವಾದಿಗಳನ್ನು ಒಪ್ಪಿಸುತ್ತಾರೆ.[೧೨]

ಮಠದ ಮುಂದಿನ ದೇವರ ಕೆರೆ (ಪುಷ್ಕರಿಣಿ) ನಿರ್ಮಲ ಹಾಗೂ ಶುಭ್ರ ಜಲಭರಿತ ತೀರ್ಥದ ಕೆರೆಯೆನಿಸಿದೆ. ಕರ್ನಾಟಕದಲ್ಲಿ ಜೈನರೂ, ವೀರಶೈವರೂ ಪ್ರಬಲರಾಗಿದ್ದ ಕಾಲದಿಂದಲೂ ಈ ಮಠವು ಅಸ್ತಿತ್ವದಲ್ಲಿದ್ದು, ಆಗಮೋಕ್ತ ಪೂಜೆಯು ನಡೆಯುತ್ತಿರುವ ಈ ಕ್ಷೇತ್ರವು ಗತವೈಭವ ಮರುಕಳಿಸಿ ಪುನಃ ಬೆಳಗುವಂತೆ ನೂತನ ಕಟ್ಟಡ ನಿರ್ಮಾಣ ಯೋಜನೆಯಿದೆ.[೧೩]

ಕೋಲ್ಯಾರು ಮಠ : ಹಿರಿಯಡಕದಿಂದ ಗಂಪದ ನಂತರ ಮುಂದೆ ಕೋಲ್ಯಾರು ಬಯಲು ಭೂಮಿಯ ಬಳಿ ಹರಿಯುವ ಕಿರುತೊರೆಯ ಮೇಲೆ ಕೊಂಡಾಡಿ ಜಂಗಮ ಮಠದ ಉತ್ತರಕ್ಕೆ ಇದೆ. ಶ್ರೀ ಹನುಮಂತ ದೇವರ ಗುಡಿಯು ಇಲ್ಲಿದೆ. ಸುಮಾರು ೧½ ಎತ್ತರದ ಪೀಠದ ಮೇಲಿರುವ ವಿಗ್ರಹವು ಬಹಳ ಸುಂದರವಾಗಿದೆ. ಹೊಸತಾಗಿ ನಿರ್ಮಿಸಲಾಗಿರುವ ಮಂಟಪ ಗರ್ಭಗುಡಿಯ ವೇದಿಕೆಯಲ್ಲಿ ಬೇರೆ ಮಠಗಳಿಂದ ಬಂದಿರುವ ಗೋಪಾಲಕೃಷ್ಣ ಗಣಪತಿ, ಅನಂತಪದ್ಮನಾಭ, ಲಕ್ಷ್ಮೀ ನರಸಿಂಹ ಹಾಗೂ ಸಾಲಿಗ್ರಾಮ ಇವೆ. ಸನಿಹದಲ್ಲಿ ನಾಗನಕಟ್ಟೆಯಿದೆ. ಈ ಮಠವು 'ವ್ಯಾಸರಾಯರ ಕಾಲದ್ದು' ಎನ್ನುತ್ತಾರೆ. ಟಿಪ್ಪು ಕಾಲದಲ್ಲಿ ಈ ಕಡೆ ದೇವಾಲಯಗಳ ಮೇಲೆ ಹಣ ಐಶ್ವರ್ಯಕ್ಕಾಗಿ ಧಾಳಿ ನಡೆದಿತ್ತು ಎಂಬ ಮಾತು ಕೇಳಬರುತ್ತಿದೆ. ನೈಮಿತ್ತಿಕ ಪೂಜೆ, ಉತ್ಸವಗಳು ಇಲ್ಲಿ ನಡೆಯುವುದಾದರೂ, ಆರ್ಥಿಕ ಸಂಪನ್ಮೂಲದ ಅವಶ್ಯಕತೆಯಿದೆ.[೧೪]



ಶ್ರೀ ಬ್ರಹ್ಮಲಿಂಗೇಶ್ವರ
ಹಿರಿಯಡಕ



ಆದಿ ಬ್ರಹ್ಮಲಿಂಗೇಶ್ವರ ಗುಡಿ – ಹಿರಿಯಡಕ



ಸುವರ್ಣಾ ನದಿ ತಟದಲ್ಲಿರುವ
ಪುತ್ತಿಗೆ ಮಠದ ಗುರುಕುಲ



ಶ್ರೀ ಬ್ರಹ್ಮಲಿಂಗೇಶ್ವರ
ಹಿರಿಯಡಕ



ಪುತ್ತಿಗೆ ಮಠದ ಒಳಗಡೆ ಕಾಷ್ಠಸ್ತಂಭಗಳು



ಲಕ್ಷ್ಮೀ ಜನಾರ್ದನ ದೇವಾಲಯ – ಬೊಮ್ಮರಬೆಟ್ಟು ಮೂಡು ಮಠ



ಭೂತದೈವಗಳ ಪಾಪೆಗಳು
ಹಿರಿಯಡಕ ವೀರಭದ್ರ ದೇಗುಲ



ವಿಶಿಷ್ಟ ಶೈಲಿಯ
ಶ್ರೀ ಅಡಕತ್ತಾಯ ಗುಡಿ –
ಹಿರಿಯಡಕ



ಶ್ರೀ ವಿಷ್ಣು ದೇವರು
ಪುತ್ತಿಗೆ ದೇವಸ್ಥಾನ



ಶ್ರೀ ಸಿದ್ಧಲಿಂಗ ದೇವರು – ಕೊಂಡಾಡಿ ಮಠ



ಶ್ರೀದೇವಿ, ಭೂದೇವಿ ಸಹಿತ ಶ್ರೀ ಲಕ್ಷ್ಮೀ ಜನಾರ್ದನ ದೇವರು ಹಾಗೂ ವೇದಿಕೆಯಲ್ಲಿ ಇತರ ಮಠಗಳಿಂದ ಬಂದಿರುವ ದೇವರುಗಳು – ಮೂಡುಮಠ



ಶ್ರೀ ವೀರಭದ್ರ ದೇವರು – ಹಿರಿಯಡಕ

ಪಾಪುಜೆ ಮಠ : ಹಿರಿಯಡಕದ ಉತ್ತರದ ಬಜೆಗೆ ಹೋಗುವಾಗ ಸ್ವಲ್ಪ ದೂರದಲ್ಲಿ ಪಾಪುಜೆ ಮಠ ಹೊಲಗದ್ದೆಗಳ ನಡುವೆ ಕಂಡುಬರುತ್ತದೆ. ಉಡುಪಿಯ ಅಷ್ಟ ಮಠಗಳಲ್ಲೊಂದಾಗಿರುವ ಶಿರೂರು ಮಠದ ಅಧೀನವಿರುವ ಈ ಮಠ ಈಗ ಮುಚ್ಚಲಾಗಿದೆ.

ಮಾಣಾಯಿ ಮಠ : ಬಸ್ತಿಯಿಂದ ಸುಮಾರು ೨ ಕಿ.ಮೀ. ದೂರದಲ್ಲಿ ಉತ್ತರ ದಿಕ್ಕಿನಲ್ಲಿ ಸುವರ್ಣಾ ನದಿಯ ತಟದಲ್ಲಿರುವ ಮಾಣಾಯಿ ಮಠ ಇತ್ತೀಚೆಗೆ ನಿರ್ಮಾಣವಾದುದು. ಇಲ್ಲಿರುವ ಶ್ರೀ ಆಂಜನೇಯ ಸ್ವಾಮಿಯ ಮೂರ್ತಿಯು ಅತ್ಯಾಕರ್ಷಕವಾಗಿದೆ. ಪ್ರಕೃತಿಯ ಬಹು ರಮ್ಯವಾದ, ಕಣ್ಮನ ಸೆಳೆಯುವ ಪ್ರಶಾಂತ ನೆಲೆಯಲ್ಲಿ ಈ ಮಠ ಇದೆ.

ಕೊಂಡಾಡಿಯ ಜಂಗಮ ಮಠ[೧೫]

ಬೊಮ್ಮರ ಬೆಟ್ಟು ಗ್ರಾಮದ ಕೊಂಡಾಡಿ ಎಂಬಲ್ಲಿರುವ ಜಂಗಮ ಮಠವು ವಿಜಯನಗರ ಕಾಲದ್ದಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದುವು ಎನ್ನಲಾದ ೬ಳ ಜಂಗಮ ಮಠಗಳಲ್ಲಿ ಈ ಮಠದ ಉಲ್ಲೇಖವಿದೆ. ಹಿರಿಯಡಕ ವೀರಭದ್ರನ ಜಾತ್ರೆಗೆ ಬರುವ ವೀರಶೈವರು ಈ ಜಂಗಮ ಮಠವನ್ನು ಸಂದರ್ಶಿಸುತ್ತಾರೆ. ಗುರುಪುರ ಮಠದಷ್ಟೆ ಪ್ರಾಚೀನ ಎಂದು ಹೇಳಲಾಗುವ ಕೊಂಡಾಡಿ ಮಠದಲ್ಲಿ ಶ್ರೀ ಸಿದ್ಧೇಶ್ವರ ಗುಡಿಯಿದೆ. ಕಾಷ್ಟಕಲೆಯ ಬಾಗಿಲಿನ ಕೆತ್ತನೆ ಕೆಲಸ ಅಪೂರ್ವವಾಗಿದೆ. ಸುಮಾರು ೧೧/೨ ಚಚ್ಚೌಕ ಶಿಲಾಪೀಠದ ಮೇಲೆ ನೆಲಸಿರುವ ಸಿದ್ಧೇಶ್ವರ ಲಿಂಗವು ಪಂಚಲೋಹದ ಶಿವನ ಮುಖಾಕೃತಿಯ ಹೊದಿಕೆಯುಳ್ಳದ್ದಾಗಿದೆ. ಶ್ರಾವಣ ಸೋಮವಾರ, ಶಿವರಾತ್ರಿ ಇತ್ಯಾದಿ ಪರ್ವದಿನಗಳಲ್ಲಿ ವಿಶೇಷ ಪೂಜೆ ಆಚರಣೆಗಳು ನಡೆಯುತ್ತವೆ. ಗುಡಿಯ ಬಳಿಯಲ್ಲೇ ಇರುವ ವಾಸಸ್ಥಾನದ ಸಾಂಪ್ರದಾಯಿಕ ಶೈಲಿಯ ಮನೆಯ ಮುಖ್ಯದ್ವಾರವು ಹಳೆಯ ಮರದ್ದಾಗಿದ್ದು ಕಲಾತ್ಮಕ ದಾರು ಶಿಲ್ಪ ವೈಖರಿಗೆ ಉತ್ತಮ ಉದಾಹರಣೆಯಾಗಿದೆ. ಮಠದಲ್ಲಿ ಅಪೂರ್ವವಾದ ಹಳೆಯ ತಾಳೆಗರಿ ಗ್ರಂಥಗಳಿವೆ. ಕೆಳದಿಯ ಆಳರಸರ ಕಾಲದಲ್ಲಿ ಕೊಂಡಾಡಿಯ ಜಂಗಮಮಠ ಹಾಗೂ ಶ್ರೀ ವೀರಭದ್ರ ದೇವಸ್ಥಾನ ಹೆಚ್ಚಿನ ಆರ್ಥಿಕ ನೆರವು ಪ್ರೋತ್ಸಾಹವನ್ನು ಪಡೆದಿರಬೇಕು.

ಹಿರಿಯ ಆಲಡೆ – ಹಿರಿಯಡಕ : ಬೊಮ್ಮರಬೆಟ್ಟು ಗ್ರಾಮದ ಕೇಂದ್ರಸ್ಥಾನವಾಗಿರುವ ಹಿರಿಯಡಕ ಸಣ್ಣ ಪೇಟೆಯಾಗಿದೆ. ಇದು ಮುಖ್ಯ ಆಲಡೆಯೆನಿಸಿದೆ. ಆಲಡೆ ಎಂದರೆ ಹಾಲು ಎರೆವ ಎಡೆ –> ಹಾಲೆಡೆ –> ಆಲಡೆ ಎಂದಾಗಿದೆ. ಮಾತೃಪ್ರಧಾನ ತುಳುವ ಕುಟುಂಬಗಳಿಗೆ ಆದಿಮೂಲ



ಜಟ್ಟಿಗ (ಜಟ್ಟಿಂಗರಾಯ ದೈವ) ಕ್ಷೇತ್ರಪಾಲ – ಬೊಮ್ಮರಬೆಟ್ಟು ಬಸದಿ

ವೆನಿಸಿರುವ ಆಲಡೆಯಲ್ಲಿ ಪಂಚದೈವಗಳಿವೆ. ಬ್ರಹ್ಮ ('ಬೆರ್ಮೆರ್') ರಕ್ತೇಶ್ವರಿ (ಲೆಕ್ಕೆಸಿರಿ) ಕ್ಷೇತ್ರಪಾಲ, ನಂದಿಗೋಣ (ನಂದಿ) ಮತ್ತು ನಾಗ ಇರುವ ನೆಲೆಯೇ ಬ್ರಹ್ಮಸ್ಥಾನವೆಂದು ನಂಬಿಕೊಂಡು ಬರುವ ಆಲಡೆಯೆನಿಸಿದೆ. ಇಲ್ಲಿ ಬ್ರಹ್ಮ ಅಥವಾ ತುಳು ಭಾಷೆಯಲ್ಲಿ 'ಬೆರ್ಮೆರ್' ಎನ್ನುವ ದೈವ ಪ್ರಧಾನವಾಗಿರುವುದರಿಂದ ಬ್ರಹ್ಮಸ್ಥಾನ ಎಂದು ಕರೆಯಲ್ಪಡುತ್ತದೆ. ಶಿವನು ಭೂತಗಳ ಒಡೆಯನಾಗಿರುವ ಕಾರಣದಿಂದ ಭೂತ, ಬ್ರಹ್ಮಶಿವನನ್ನು ಪ್ರತಿನಿಧಿಸುತ್ತದೆ.

ಆಲಡೆಯಲ್ಲಿ ಸಿರಿ ಆರಾಧನೆಯೂ ಇದೆ. ಸಿರಿ ಮತ್ತು ಸಿರಿ ಬಳಗದ ದೈವಗಳು ಬ್ರಹ್ಮಸ್ಥಾನದಲ್ಲಿ ನೆಲೆಸಿದಾಗ ಅವು ಸಿರಿ ಆಲಡೆ ಎನಿಸಿದುವು. ಇಲ್ಲಿ ವಾರ್ಷಿಕ ಸಿರಿ ಜಾತ್ರೆ ನಡೆಯುವ ರೂಢಿ ಮೊದಲಾಯಿತು. ಒರಿಯಡಕ ಸಿರಿ ಆಲಡೆಗಳಲ್ಲಿ ಹೆಚ್ಚು ಪ್ರಧಾನವಾದುದು.

ಒರಿಯಡಕದ ಒರಿಮೆಯ ದೇವಸ್ಥಾನ : ಒರಿಯ ಆಲಡೆಯೆನಿಸಿರುವ ಒರಿಯಡಕವು ಶ್ರೀ ಬ್ರಹ್ಮಲಿಂಗೇಶ್ವರ ಮತ್ತು ಮಹತೋಭಾರ ಶ್ರೀ ವೀರಭದ್ರಸ್ವಾಮಿ ದೇವಸ್ಥಾನಗಳು ಅಭೂತಪೂರ್ವ ದೇವ, ದೈವ ಮತ್ತು ಭೂತಗಳ ಸಂಗಮದಂತಿರುವ ಆಲಡೆ ಸ್ಥಾನವಾಗಿದೆ. ದೈವ, ಭೂತಸ್ಥಾನದ ಆಲಡೆಯಲ್ಲಿ ಕ್ರಮೇಣ ದೇವಸ್ಥಾನವೂ ನಿರ್ಮಾಣವಾಯಿತೆಂದೂ ಆಗಮೋಕ್ತ ಪೂಜಾ ವಿಧಾನವು ಬೆಳೆದು ಬಂತೆಂದೂ ತಿಳಿಯಬಹುದಾಗಿದೆ. ಒರಿಯಡಕವು ಸಿರಿ ಆಲಡೆಯೂ ಆಗಿದ್ದು, ವೀರಭದ್ರಸ್ವಾಮಿ ದೇವಸ್ಥಾನವಿರುವ ಆಲಡೆಯು ಒರಿಯಡಕ ಮಾತ್ರ ಎಂಬುವುದು ಒಂದು ವೈಶಿಷ್ಟ್ಯವಾಗಿದೆ. ನಂದಳಿಕೆ, ನಿಡ್ಗಲ್ಲು, ಕವತ್ತಾರು, ಪಾಂಗಾಳ, ದರೆಗುಡ್ಡೆ, ಬರ್ಮೆಟ್ಟು, ಬಂಗರೊಟ್ಟು, ಬೋಲ್ಕೊಟ್ಟು ಈ ಸಿರಿ ಆಲಡೆಗಳಲ್ಲಿ ಬ್ರಹ್ಮಲಿಂಗೇಶ್ವರ, ಮಹಾಲಿಂಗೇಶ್ವರ, ಲೋಕೇಶ್ವರ ಮೊದಲಾದ ಈಶ್ವರ ಪ್ರಧಾನ ಗುಡಿಗಳಿವೆ.

ವಿಶಾಲವಾದ ಪ್ರಾಂಗಣದಲ್ಲಿ ಶ್ರೀ ವೀರಭದ್ರ ಹಾಗೂ ವಾಯುವ್ಯ ಭಾಗದಲ್ಲಿ ಶ್ರೀ ಬ್ರಹ್ಮಲಿಂಗೇಶ್ವರ ಗುಡಿಗಳಿವೆ. ದೇಗುಲವು ವಿಜಯನಗರ ಕಾಲದ್ದು. ಪ್ರವೇಶ ದ್ವಾರದಲ್ಲಿನ ಬೃಹತ್ ಧ್ವಜಸ್ತಂಭ ಅತ್ಯಂತ ಆಕರ್ಷಕವಾದುದು. ಬಳಿಯಲ್ಲೇ ಇರುವ ದೀಪಸ್ತಂಭ ಹಾಗೂ ಭೂತರಾಜ ಸ್ತಂಭ ಗಮನ ಸೆಳೆಯುವಂತಹವುಗಳಾಗಿವೆ. ಪ್ರವೇಶದ್ವಾರದ ನಂತರ ಒಳಗಡೆ ಇರುವುದೇ ವಿಶಾಲವಾದ "ಪ್ರಮಾಣದ ಚಾವಡಿ".

ಪ್ರಧಾನ ಆಲಯದಲ್ಲಿ ಮುಖಮಂಟಪ, ಸುಖನಾಸಿ ಸಹಿತ ಗರ್ಭಗುಡಿಯಿದೆ. ಗದ್ದಿಗೆ ರೀತಿಯ ಎರಡು ಹಂತದ ಶಿಲಾಪೀಠದಲ್ಲಿ ದೈವ, ದೇವರ ಸಮೂಹವೇ ಇದೆ. ಪ್ರಧಾನ ದೇವರು ಶ್ರೀ ವೀರಭದ್ರಸ್ವಾಮಿ–ಚತುರ್ಭುಜ ವಿಗ್ರಹದ ಎಡಬಲದಲ್ಲಿ ಅಬ್ಬಗ ದಾರಗ ಸಿರಿದೈವಗಳು ಇವೆ.

ಮೇಲ್ಭಾಗದಲ್ಲಿ ಖಡ್ಗೇಶ್ವರ ಹಾಗೂ ಶ್ರೀಚಕ್ರದ ಜೊತೆಗೆ ನರಸಿಂಹ, ಸಾಲಿಗ್ರಾಮ ಸಂಪುಟವಿದೆ. ಇಲ್ಲಿನ ೧೯ ಸಂಖ್ಯೆಯ ದೈವಗಳಲ್ಲಿ "ವಾಂಛಿತಾರ್ಥ" ಎಂಬ ದೈವವೂ ಇದೆ.

ವೀರಭದ್ರ ಪರಮೇಶ್ವರನಿಗೆ ಸಮನಾದ ಗುಣವುಳ್ಳ ಗಣಪುರುಷ ಎಂಬ ಉಲ್ಲೇಖ ಕಾರಣಾಗಮದಲ್ಲಿದೆ. ಕೆಳದಿ ಅರಸರ ಕಾಲದಲ್ಲಿ ಕರಾವಳಿ ಕರ್ನಾಟಕದ ವಿವಿಧೆಡೆಗಳಲ್ಲಿ ವೀರಭದ್ರ ದೇವಸ್ಥಾನಗಳು ನಿರ್ಮಾಣವಾಗಿವೆ. ವೀರಭದ್ರ ಕೆಳದಿ ಅರಸರ ಕುಲದೇವರು.[೧೭]

ದೇವಸ್ಥಾನದ ಒಳಪ್ರಾಂಗಣದಲ್ಲಿ ವಾಯುವ್ಯ ಭಾಗದಲ್ಲಿ ಶ್ರೀ ಬ್ರಹ್ಮಲಿಂಗೇಶ್ವರ ಗುಡಿ ಹಾಗೂ ಅದರ ದಕ್ಷಿಣ ಬದಿಯಲ್ಲಿ ನಾಗನಕಟ್ಟೆಯೂ ಇದೆ. ದೇವಸ್ಥಾನದ ಅಧಿದೈವವು ಬ್ರಹ್ಮ-ಬ್ರಹ್ಮಲಿಂಗೇಶ್ವರ. ಬ್ರಹ್ಮನ ಕೈಯಲ್ಲಿ ಖಡ್ಗ, ಶಂಖ, ಪಾನಪಾತ್ರೆ, ಢಮರು, ಪೀಠದಲ್ಲಿ ಹಂಸ ಮತ್ತು ಕುಕ್ಕುಟಲಾಂಛನ ಕಾಲಿನ ಕೆಳಗಡೆ ಇದೆ. ನಿತ್ಯ ನೈವೇದ್ಯ ಸಮರ್ಪಣೆ ಸಹಿತ ಪೂಜೆ ಬ್ರಹ್ಮಲಿಂಗೇಶ್ವರನಿಗೆ ಸಲ್ಲುವುದು. ರಥೋತ್ಸವವು ಬ್ರಹ್ಮನಿಗೆ ಸಲ್ಲುವುದು. ಈ ದೇಗುಲದಲ್ಲಿ "ಉತ್ಸವ ನಿನಗಿರಲಿ; ಕಾಣಿಕೆ, ಸೇವೆ ನನಗಿರಲಿ" ಎಂದನಂತೆ ವೀರಭದ್ರ.[೧೮]

ಹೊರ ಪ್ರಾಕಾರದಲ್ಲಿ ಪಿಲಿಚಾಮುಂಡಿ ಮತ್ತು ಕ್ಷೇತ್ರಪಾಲ, ಕ್ಷೇತ್ರಕ್ಕೆ ಕಾರಣೀಭೂತನಾದ ಅಡಕತ್ತಾಯ ಗುಡಿಗಳಿವೆ. ಅನೇಕ ದೈವ ಭೂತಗಳ ವರ್ಣರಂಜಿತ ಪಾಪೆಗಳು ಇಲ್ಲಿನ ಕೊಠಡಿಯಲ್ಲಿ ಶೋಭಾಯಮಾನವಾಗಿವೆ. ಕಲ್ಕುಡ, ಬೊಬ್ಬರ್ಯ, ನೀಚದೈವಗಳೂ ಸೇರಿದಂಥೆ ಅನೇಕ ದೈವಗಳು ಇಲ್ಲಿ ನೆಲೆಯಾಗಿವೆ. ಹೊರಪ್ರಾಂಗಣದ ಈಶಾನ್ಯ ದಿಕ್ಕಿನಲ್ಲಿರುವ ದೇವಸ್ಥಾನದ ಕೆರೆ ಅತ್ಯಾಕರ್ಷಕವಾಗಿದ್ದು ಇದರಲ್ಲಿ ಜಲಸ್ತಂಭನಗೈದ ನಾಗಪ್ರತಿಮೆಗಳಿವೆ.

ವರ್ಷದಲ್ಲಿ ನಾಲ್ಕು ಬಾರಿ ರಥೋತ್ಸವ, ವೃಶ್ಚಿಕ ಸಂಕ್ರಮಣ, ಶಿವರಾತ್ರಿ, ಸೌರಯುಗಾದಿ ಹಾಗೂ ಮೇಷ ಸಂಕ್ರಮಣಗಳಲ್ಲಿ ನಡೆಯುವ ಉತ್ಸವಾದಿಗಳು ವಿಶೇಷ ರೂಢಿಯದಾಗಿವೆ. ದೇವಳದ ಮುಂದಿನ ವಿಶಾಲವಾದ ಬಾಕಿಮಾರು ಗದ್ದೆಯಲ್ಲಿ ರಥೋತ್ಸವ, ಉತ್ಸವಗಳು ನಡೆಯುತ್ತವೆ. ವಿಜಯದಶಮಿ ಕಾಲದಲ್ಲಿ 'ದೇವರ ಫೌಜು' ಎಂಬ ಮೆರವಣಿಗೆ, ಚಂಡಿಕಾಹೋಮ ಹಾಗೂ ಸಾರ್ವಜನಿಕ ಅನ್ನಸಂತರ್ಪಣೆ ನಡೆಯುತ್ತದೆ. ಸೋಮವಾರ ದಿನ ಶ್ರೀ ವೀರಭದ್ರ ದರ್ಶನ ವಿಶೇಷಯೆನಿಸಿದೆ. ಇಲ್ಲಿ ಕಾರ್ತೀಕ ಶುದ್ಧ ದ್ವಾದಶಿಯಂದು ನಡೆಯುವ ತುಳಸೀ ಪೂಜೆ ಹಾಗೂ ಒಂಭತ್ತು ದಿನಗಳ ದೀಪೋತ್ಸವದ ವೈಭವ ಸುಪ್ರಸಿದ್ಧ. ಕರಾವಳಿ ಮಾತ್ರವಲ್ಲದೆ, ಘಟ್ಟದ ಮೇಲಿನ ಜನರೂ ಹರಕೆ ಹೊತ್ತು ಇಲ್ಲಿಗೆ ಬರುತ್ತಾರೆ. ಪ್ರೇತೋಚ್ಚಾಟನೆ, ಸಂತಾನಪ್ರಾಪ್ತಿ, ವಿವಾಹಯೋಗ, ಆರೋಗ್ಯ ಸಮಸ್ಯೆ ಇಂತಹ ಹತ್ತು ಹಲವು ಸಮಸ್ಯೆಗಳಿಗೆ ಹಿರಿಯಡಕ ದೇವರಿಗೆ ಹರಕೆ ಹೊರುತ್ತಾರೆ. ಇಲ್ಲಿ ಮೊದಲು ಆದಿಬ್ರಹ್ಮ ಸ್ಥಾನವಿತ್ತು. ಇಂದಿಗೂ ದೇವಾಲಯದ ಹಿಂಬದಿಯಲ್ಲಿ ಆದಿಬ್ರಹ್ಮಲಿಂಗೇಶ್ವರ ಗುಡಿಯಿರುತ್ತದೆ.

ಅಡಕತ್ತಾಯ : ಹಿರಿಯಡಕ ಆಲಡೆಯ ಬ್ರಹ್ಮಸ್ಥಾನದ ಆದಿಬ್ರಹ್ಮಲಿಂಗೇಶ್ವರನ ಪೂಜಾ ಕಾರ್ಯವನ್ನು ಅಡಕತ್ತಾಯ ಎಂಬ ಮಹಾಶಿವಭಕ್ತನು ಕೈಗೊಳ್ಳುತ್ತಿದ್ದನು. ಇಲ್ಲಿನ ಐತಿಹ್ಯದಂತೆ ಶ್ರೀಶೈಲಕ್ಕೆ ಹೋಗಿ ತನ್ನ ತಪಸ್ಸಿನ ಶಕ್ತಿಯಿಂದ ಈಶ್ವರನನ್ನು ಒಲಿಸಿದಾಗ ಗಣನಾಯಕನಾದ ವೀರಭದ್ರನನ್ನು ಕಳಿಸಿಕೊಡುತ್ತಾನೆ. ಅಡಕತ್ತಾಯನೇ ವೀರಭದ್ರಸ್ವಾಮಿಯನ್ನು ಹಿರಿಯಡಕದಲ್ಲಿ ಪ್ರತಿಷ್ಠಾಪಿಸಿದನು.[೧೯] ಅಂತೆಯೇ ಶಿವನು ತನ್ನ ಅಸಂಖ್ಯಾತ ಗಣಗಳೊಂದಿಗೆ ಇಲ್ಲಿ ನೆಲೆಸಿದನು. ೬ಳ ಸ್ಥಾನಗಳಲ್ಲಿ ಹಿರಿಯಡಕವು ಹಿರಿದಾದುದು. ಅಡಕತ್ತಾಯನಿಗೆ ಹೊರಾಂಗಣದಲ್ಲಿ ಪ್ರತ್ಯೇಕ ಗುಡಿಯಿದೆ. ಚತುರಸ್ರ ಆಕಾರದ ಕೇರಳಿಯ ವಾಸ್ತುರಚನೆ ಬಿಂಬಿಸುವ, ಮಧ್ಯದಲ್ಲಿರುವ ಮರದ ಸ್ತಂಭ ಮಾಡಿಗೆ ಆಧಾರವಿದ್ದು ತಾಮ್ರದ ಹೊದಿಕೆ ಮತ್ತು ಮುರಕಲ್ಲಿನ ಗಾರೆ ನಿರ್ಮಿತ ಸುಂದರವಾದ ಛಾವಣಿ ಆರಾಧ್ಯ ತಾಣವಾಗಿದೆ. ಪ್ರಧಾನಗುಡಿಯುಲ್ಲೂ ವೀರಭದ್ರ ದೇವರೊಂದಿಗೆ ಅಡಕತ್ತಾಯನಿಗೂ ಪೂಜೆ ಸಲ್ಲುವುದು.

ಹಿರಿಯಡಕದ ಸಿರಿಜಾತ್ರೆ : ಹಿರಿಯಡಕದ ಸಿರಿಜಾತ್ರೆಯು ಹೆಸರುವಾಸಿಯಾಗಿದೆ. ನಂದಳಿಕೆ ಕವತ್ತಾರು, ಪಾಂಗಾಳ ಮೊದಲಾದೆಡೆಗಳಲ್ಲಿ ಸಿರಿಜಾತ್ರೆ ನಡೆಯುವುದಾದರೂ ಹಿರಿಯಡಕದ ಸಿರಿಜಾತ್ರೆಯ ಅಬ್ಬರ ಬೇರೆಲ್ಲೂ ಇಲ್ಲ! ಸಿರಿಗಳಿಗೆ ನಂದಳಿಕೆಯಲ್ಲಿ ಹುಟ್ಟು; ಹಿರಿಯಡಕದಲ್ಲಿ ಬೆಳವಣಿಗೆ ಹಾಗೂ ಕವತ್ತಾರಿನಲ್ಲಿ ಅವತಾರ ಎನ್ನುವರು.

ಸಿರಿ ಮತ್ತು ಅವಳ ಬಳಗದಲ್ಲಿ ಅವಳ ಮಗ ಕುಮಾರ, ಸಿರಿಗೆ ಎರಡನೆಯ ಪತಿ ಕೊಡ್ಸರಾಳ್ವನಲ್ಲಿ ಹುಟ್ಟಿದ ಹೆಣ್ಣು ಮಗು 'ಸೊನ್ನೆ' ನಾಗಬೆರ್ಮೆರ್ ಹರಕೆಯಿಂದ ಸೊನ್ನೆಗೆ ಜನಿಸಿದ 'ಅಬ್ಬಗ' ಮತ್ತು 'ದಾರಗ' ಮತ್ತು ಅವರ ಸೇವಕಿ 'ಗಿಂಡೆ' ಹಾಗೂ ಸಿರಿಯ ಮಗ 'ಕುಮಾರ' ಸೇರಿರುತ್ತಾರೆ. ಅಂದಿನ ಸಾಮಾಜಿಕ ಕಟ್ಟುಪಾಡುಗಳು, ನಿಷ್ಠುರ ನಡವಳಿಕೆಗಳು, ಅಸಮಾನತೆ ಪುರುಷರಿಂದ ನಡೆದ ಶೋಷಣೆ- ಇವುಗಳ ವಿರುದ್ಧ ಸಿರಿ ಮತ್ತು ಅವಳ ಬಳಗದವರು ಸಿಡಿದೆದ್ದು, ಮರಣ ನಂತರ ದೈವಶಕ್ತಿಗಳಾಗಿ ಆಲಡೆಗಳಲ್ಲಿ ಆರಾಧನೆಗೊಳ್ಳುತ್ತಿದ್ದಾರೆ.[೨೦]

ಮೇಷ ತಿಂಗಳು (ತುಳು 'ಪಗ್ಗು' ತಿಂಗಳು) ಹುಣ್ಣಿಮೆಯಂದು ಸಿರಿಜಾತ್ರೆ ನಡೆಯುತ್ತದೆ. ದೇವಾಲಯದ ಒಳಾಂಗಣದಲ್ಲಿ ಹಾಗೂ ಸುತ್ತಮುತ್ತಲಲ್ಲಿ ಸ್ನಾನದ ನಂತರ ಮಡಿಯುಟ್ಟು ಜಾತಿಯ ಸ್ಥಾನಮಾನಕ್ಕನುಸಾರವಾಗಿ ಸಿರಿ

ಭಕ್ತರ ಬಳಗ ನೆರೆದಿರುತ್ತದೆ. ಸಿರಿದೇವತೆಗೆ ಪ್ರಾರ್ಥನೆ ಸಲ್ಲಿಸಿದ ನಂತರ ಮಹಿಳೆಯರು ಸಿರಿಪಾಡ್ದನ ಹಾಡುವರು. ಹಿರಿಯ ಅನುಭವಿ ಸಿರಿಭಕ್ತೆಯರು ಹಾಡತೊಡಗುವರು. ಹೊಸತಾಗಿ ಸಿರಿ ಸಮುದಾಯಕ್ಕೆ ಸೇರಿದವರು. ಎಲ್ಲರೂ ದೈವಾವೇಶಕ್ಕೊಳಪಡುತ್ತಾರೆ. "ದೈವಾವೇಶವು ಶಾಂತವಾಗಿ ನಿಯಂತ್ರಿತವಾಗಿರುತ್ತದೆ.[೨೦] ಕುಟುಂಬದ ಹಾಗೂ ವೈಯಕ್ತಿಕ ಸಮಸ್ಯೆಗಳಿಗೆ ಸಿರಿ ಐತಿಹ್ಯ ಸಂಬಂಧಿತ ಆಚರಣೆಗಳು ಒಂದು ರೀತಿಯ ಸಮಾಧಾನವಾವನ್ನು[೨೧] ಒದಗಿಸುತ್ತವೆ. ಸಿರಿ ಆರಾಧನೆಯಲ್ಲಿ ಅಲೌಕಿಕ ಶಕ್ತಿಗಳು ವ್ಯಕ್ತವಾಗುವುದರೊಂದಿಗೆ ಆಚರಣೆ ಸಂಪನ್ನವಾಗುವುದು.[೨೨]

ಮಾತೃಪ್ರಧಾನ ಕಟುಂಬಗಳು ಸಿರಿ ಆರಾಧನೆಯಲ್ಲಿ ಭಾಗವಹಿಸುವುದು ಕಂಡುಬರುತ್ತದೆ. ಸಿರಿ ಆರಾಧನೆಯಲ್ಲಿ ಅವರ ಕಟುಂಬದವರಿಗೂ ನೀತಿ ಸಂಹಿತೆ ಬೋಧಿಸಲಾಗುತ್ತದೆ.

ಬೊಮ್ಮರಬೆಟ್ಟಿನ ದೇವಿಗದ್ದಿಗೆ ಪೀಠಗಳು : ಸುಮಾರು ೧೮ನೆಯ ಶತಮಾನದಲ್ಲಿ ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯಿಂದ ಬಂದಿರಬಹುದಾದ ಮರಾಠಿ ಭಾಷಿತ ಜನಸಮುದಾಯವು ಉಡುಪಿ ಜಿಲ್ಲೆಯ ಕೆಲವೆಡೆಗಳಲ್ಲಿ ಅದರಲ್ಲೂ ಬೊಮ್ಮರಬೆಟ್ಟು ಗ್ರಾಮದಲ್ಲಿ ನೆಲೆಸಿರುತ್ತಾರೆ. ತುಳಜಾಪುರದ ದೇವಿಯನ್ನು ವಿಶಿಷ್ಟ ಭಕ್ತಿಯಿಂದ ಆರಾಧಿಸುವ ಇವರ ಪೂಜಾ ವಿಧಾನವು ತುಳು ನಾಡಿನಲ್ಲೂ ಜನಪ್ರಿಯತೆ ಮೆರೆದಿದೆ.

ದುರ್ಗಾದೇವಿಯನ್ನು ಚೌಂಡಿಕೆ, ದೀವಟಿಗೆ, ಶಂಖ, ಜಾಗಟೆ ಮತ್ತು ಕವಡಿಕೆ ಮಾಲೆಗಳಿಂದ ಆರಾಧಿಸುವರು. ಧೂಪ, ದೀಪ, ನೈವೇದ್ಯ, ಪಿಸಿಯೋ ಇವು ಪೂಜಾ ವೈಶಿಷ್ಟ್ಯಗಳಾಗಿವೆ. ಹಿರಿಯಡಕದ ಬಳಿ ಗಂಪದಲ್ಲಿ ಶ್ರೀ ಸಿಂಹವಾಹಿನಿ ದುರ್ಗಾಂಬಾ ಭವಾನಿ ಕ್ಷೇತ್ರವಿದೆ. ಹಿರಿಯಡಕದ ಪಡುಭಾಗದಲ್ಲಿ (ಪಡ್ದಮ) ಶ್ರೀ ದುರ್ಗಾ ಪರಮೇಶ್ವರಿ ಗದ್ದುಗೆಯಿದೆ. ನವರಾತ್ರಿ ಪೂಜೆ ಘಟ ಸ್ಥಾಪನೆ ನಂತರ ವಿಶೇಷ ಪೂಜೆ ನಡೆಯುತ್ತದೆ. ಜುಲೈ ತಿಂಗಳಲ್ಲಿ ಭೈರವ ಪೂಜೆ ಜರಗುತ್ತದೆ.

'ಗೋಂದಳ' ಪೂಜೆ ಇನ್ನೊಂದು ವಿಶಿಷ್ಟ ಮಹಾರಾಷ್ಟ್ರೀಯ ಪೂಜೆ. ದೇವಿಯ ಮಹಿಮಾತಿಶಯವನ್ನು, ಹಾಡು, ನರ್ತನಸೇವೆ, ದೀವಟಿಗೆ ಸೇವೆ ಮೂಲಕ ಭಕ್ತರ ಹರಕೆ ಸಲ್ಲಿಸುವ ಆರಾಧನಾ ಕ್ರಮ ಭಕ್ತ್ಯಾವೇಶ ಪ್ರಧಾನವಾದುದು.

ಗರಡಿಗಳು : ಗರಡಿ ತುಳು ಭಾಷೆಯಲ್ಲಿ 'ಗರೋಡಿ' ಎಂದು ಕರೆಯಲಾಗುವ ಆರಾಧನಾ ಕೇಂದ್ರವಾಗಿದೆ. ಗರಡಿಗಳು ಯೋಧರ ತರಬೇತಿ ಕೇಂದ್ರಗಳಾಗಿದ್ದುವು. ಕೋಟಿ ಚೆನ್ನಯರು ಗರಡಿಯಲ್ಲಿ ಜಟ್ಟಿಕಾಳಗ ಇತ್ಯಾದಿ ಸಮರ ಕಲೆಗಳನ್ನು ಕರಗತ ಮಾಡಿದ್ದರು. ಅವರ ಬಲಿದಾನದ ನಂತರ ವೀರಪುರುಷರಾದ ಕೋಟಿಚೆನ್ನಯರ ಆರಾಧನೆಯು ಗರಡಿಯಲ್ಲಿ ಮೊದಲಾಯಿತು. ಗರಡಿಯಲ್ಲಿ 'ಬೆರ್ಮೆರ್' (ಬ್ರಹ್ಮ) ಆರಾಧ್ಯ ದೇವತೆಯಾಗಿ ಮೊದಲಿನಿಂದಲೂ ನೆಲಸಿದ್ದು ಬ್ರಹ್ಮಬೈದರ್ಕಳ ಗರಡಿ ಎಂಬುದಾಗಿ ಈಗ ಈ ತುಳುನಾಡಿನ ಆರಾಧನಾ ಕೇಂದ್ರಗಳು ಪ್ರಖ್ಯಾತವಾಗಿವೆ.

ಬೊಮ್ಮರಬೆಟ್ಟು ಮೂಡುಮಠದ ಬಳಿಯಲ್ಲಿಯೇ ಒಂದು ಗರಡಿ ಇದ್ದು, ಇನ್ನೊಂದು ಗರಡಿಯು ಪಡ್ದಮ ಬೀಡಿನ ಪೂರ್ವ ದಿಕ್ಕಿನಲ್ಲಿ ಇದ್ದು ಒಟ್ಟು ಒಂದೇ ಗ್ರಾಮದಲ್ಲಿ ಎರಡು ಗರಡಿಗಳಿರುವುದು ಒಂದು ವೈಶಿಷ್ಟ್ಯ ಎನ್ನಬಹುದು.

ಎರ್ಡಿನಾಡು ಬಲ್ಲಾಳರು : ಶ್ರೀ ಗಣಪತಿರಾವ್ ಐಗಳ್ ರವರು ತಮ್ಮ "ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ" ಎಂಬ ಗ್ರಂಥದಲ್ಲಿ (೧೯೨೩) ಬೊಮ್ಮರಬೆಟ್ಟು ಗ್ರಾಮದ ಬೀಡುಗಳ ಬಗ್ಗೆಯೂ ಉಲ್ಲೇಖಿಸಿರುತ್ತಾರೆ. ಈ ಗ್ರಾಮದಲ್ಲಿ ಬೊಮ್ಮರಬೆಟ್ಟು ಬೀಡು ಮತ್ತು ಪಡುಭಾಗ ಬೀಡು ಎಂದು ಎರಡು ಬೀಡುಗಳಿದ್ದು ಎರಡು ಬಲ್ಲಾಳರು ಇರುತ್ತಾರೆಂದು ತಿಳಿಸಿರುತ್ತಾರೆ. 'ಎರ್ಡು ನಾಡಿನ ಬಲ್ಲಾಳರು' ಎಂದು ಇವರನ್ನು ಕರೆದಿರುತ್ತಾರೆ. ಈ 'ಎರ್ಡುನಾಡು' ಎಂಬ ಹೆಸರು ಏಕೆ ಬಂತು ಎನ್ನುವುದು ತಿಳಿಯದು. "ಈ ಮನೆತನಗಳೆಲ್ಲವೂ ಜೈನರ ಕೈಯಿಂದ ತಪ್ಪಿವೆ". ಎಂದು ಉಲ್ಲೇಖಿಸಿರುತ್ತಾರೆ.[೨೩]

ಈ ಎರಡೂ ಬೀಡುಗಳು ತುಂಬಾ ಹಳೆಯದಾಗಿದ್ದು ಪಾಳುಬೀಳುವ ಹಂತದಲ್ಲಿವೆ. ಮೂಡುಮಠದ ಹತ್ತಿರ ಬೊಮ್ಮರಬೆಟ್ಟು ಬೀಡು ಇದ್ದು, ಕೊಡಮಣಿತ್ತಾಯ ದೈವ ಮತ್ತು ಪಟ್ಟದ ಮಂಚ ಇಲ್ಲಿ ಇವೆ. ಪಡ್ದಮ ಯಾ ಪಡುಭಾಗದ ಬೀಡು ಗರಡಿಯ ಪಶ್ಚಿಮದಲ್ಲಿದೆ. ಈ ಬೀಡಿನಲ್ಲಿ ಕೊಡಮಣಿತ್ತಾಯ ದೈವ, ಜುಮಾದಿದೈವ, ಹಾಗೂ ಪಂಜುರ್ಲಿ ದೈವವಿದೆ.

ಬೃಹತ್ ಶಿಲಾಯುಗದ ಸಮಾಧಿಗಳು : ಪ್ರಾಗೈತಿಹಾಸಿಕ ಸ್ಮಾರಕಗಳು ವಡ್ಡರ್ಸೆ, ಮೂಡನಿಡಂಬೂರು ಹಾಗೂ ಬೊಮ್ಮರಬೆಟ್ಟುಗಳಲ್ಲಿ ಸಿಕ್ಕಿವೆ.[೨೪] ಇಲ್ಲಿನ ಕೊಂಡಾಡಿ ಜಂಗಮ ಮಠದ ಪರಿಸರ ಹಾಗೂ ಕೊಂಡಾಡಿ ಗುತ್ತಿನ ಆಸುಪಾಸುಗಳಲ್ಲಿ ಬೃಹತ್ ಶಿಲಾಯುಗದ ಚಿತಾಭಸ್ಮ ಸಮಾಧಿಗಳು ಬೆಳಕಿಗೆ ಬಂದಿವೆ. ಇನ್ನೂ ಹೆಚ್ಚಿನ ಸ್ಮಾರಕಗಳು ಇಲ್ಲಿ ದೊರೆಯಬಹುದಾಗಿದೆ.

ಬೊಮ್ಮರಬೆಟ್ಟಿನ ಸ್ವಾತಂತ್ರ್ಯ ಹೋರಾಟಗಾರರು : ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಗಣನೀಯ ಸೇವೆ ಸಲ್ಲಿಸಿದ

ಹಿರಿಯರನ್ನು ಸ್ಮರಿಸುವುದು ಅವಶ್ಯವೇ ಆಗಿದೆ. ಹಿರಿಯಡಕದ ರಾಮರಾಯ ಮಲ್ಯರು ಉಪ್ಪಿನ ಸತ್ಯಾಗ್ರಹದಲ್ಲಿ ಕಾರಾಗೃಹ ಶಿಕ್ಷೆಗೆ ಒಳಗಾದ ಮಹನೀಯರು 'ಸ್ವತಂತ್ರ ಭಾರತ', 'ಸ್ವದೇಶಾಭಿಮಾನಿ' ಪತ್ರಿಕೆಗಳ ಸಂಪಾದಕರಾಗಿಯೂ ಕಾರ್ಯನಿರ್ವಹಿಸಿದ್ದರು. ಹಿರಿಯಡಕ ರಾಮರಾಯರೊಡನೆ ಹಿರಿಯಡಕ ನಾರಾಯಣರಾವ್ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ನಾರಾಯಣರಾಯರು ಸತ್ಯಾಗ್ರಹಿ ಪತ್ರಿಕೆಗೆ ಲೇಖನ ಬರೆಯುತ್ತಿದ್ದರು. ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯವರು ಕಾರ್ನಾಡು ಸದಾಶಿವರಾವ್ ಹಾಗೂ ಎನ್.ಎಸ್. ಕಿಲ್ಲೆಯವರ ನಿಕಟವರ್ತಿಗಳಾಗಿ ಸತ್ಯಾಗ್ರಹದಲ್ಲಿ ಭಾಗವಹಿಸಿ ಜೈಲು ಸೇರಿದ್ದರು.

ಸೀತಾನದಿ ಗಣಪಯ್ಯ ಶೆಟ್ಟಿಯವರು ಅನೇಕ ಯಕ್ಷಗಾನ ಪ್ರಸಂಗಗಳ ಕವಿಯಾಗಿದ್ದ ಜನಪ್ರಿಯ ಶಿಕ್ಷಕರು.[೨೫]

ಡಾ॥ ಚಂದಯ್ಯ ಹೆಗ್ಡೆಯವರು ಹಿರಿಯಡಕದ ಜನಪ್ರಿಯ ವೈದ್ಯರಾಗಿ, ಗ್ರಾಮ ಪರಿಸರದ ಶೈಕ್ಷಣಿಕ ಹಾಗೂ ಸಮಾಜೋದ್ಧಾರಕ್ಕಾಗಿ ಶ್ರಮಿಸಿದ ಮಹನೀಯರು.[೨೬] ಇಂದಿಗೂ ಅವರ ಹೆಸರು ಜನಮನದಲ್ಲಿ ಅಚ್ಚಳಿಯದೆ ಉಳಿದಿರುವುದು ಅವರ ಸಾಧನೆಗೆ ಪ್ರತೀಕವೆನಿಸಿದೆ. ಆರ್ಯ ಸಮಾಜದ ಶಾಖೆಯನ್ನು ತೆರೆದು ದೇವದಾಸಿ ಪದ್ಧತಿ ನಿವಾರಣೆಗೆ ದುಡಿದಿರುವ ಹಿರಿಯಡಕ ಅನಂತಯ್ಯನವರು ಇನ್ನೊಬ್ಬ ಸಾಧಕರು.[೨೭] ಬಸ್ತಿ ಸರ್ವೋತ್ತಮ ಪೈಯವರು ಸಮಾಜ ಸುಧಾರಣೆಗೆ ಶ್ರಮಿಸಿದ ಮಹನೀಯರು. ಇನ್ನೂ ಅನೇಕ ಹಿರಿಯ ವ್ಯಕ್ತಿಗಳಿರುವುದಾದರೂ ಉಲ್ಲೇಖಿಸಲು ಅಶಕ್ಯವಾಗಿದೆ.

ಬೊಮ್ಮರಬೆಟ್ಟು ಗ್ರಾಮದ ಐತಿಹಾಸಿಕ ನೆಲೆಗಳು – ಪುನರಾವಲೋಕನ : ಇಲ್ಲಿನ ಗ್ರಾಮ ಪರಿಸರದ ಐತಿಹಾಸಿಕ ನೆಲೆಗಳನ್ನು ಗಮನಿಸಿದಾಗ ಉಡುಪಿ ಹಾಗೂ ಕಾರ್ಕಳಗಳ ನಡುವೆ ಇದೊಂದು ಪ್ರಮುಖ ವ್ಯಾಪಾರ ವಾಣಿಜ್ಯ ಹಾಗೂ ಧಾರ್ಮಿಕ ಕ್ಷೇತ್ರವಾಗಿಯೂ ಮೆರೆದಿತ್ತೆಂದು ಪರಿಗಣಿಸ ಬಹುದಾಗಿದೆ. ಇಲ್ಲಿನ ಹಿರಿಯರು ಹೇಳುವಂತೆ ಹಿರಿಯಡಕ ಒಂದು ವಾಣಿಜ್ಯ ಕೇಂದ್ರ ಹಾಗೂ ಪ್ರಮುಖ ಬಂದರಾಗಿತ್ತು. ಸುವರ್ಣಾ ನದಿಯ ತಟದಲ್ಲಿರುವ ಬಜೆಯು ಹಿರಿಯಡಕದ ಬಂದರಾಗಿತ್ತು. ಹಡಗುಕಟ್ಟೆ ಹಾಗೂ ಬಂಡಸಾಲೆಗಳು ಇಲ್ಲಿದ್ದುವು. ಹಿರಿಯಡಕ ಮೇಳದ ಪ್ರಥಮ ಬಯಲಾಟ 'ದೇವರ ಆಟ' ಎರಡನೆಯ ಆಟ 'ಹಿರಿಯಡಕ ಬಂದರಿನವರ ಆಟ ಎನ್ನುವ ಮಾತು ಈಗಲೂ ರೂಢಿಯಿದೆ.

ಹಿರಿಯಡಕದಲ್ಲೂ ಅನೇಕ ಬಂಡಸಾಲೆಗಳಿದ್ದುವು. ಜೈನ ವೀರಶೈವ ವಣಿಜರು ವ್ಯಾಪಾರ ವಾಣಿಜ್ಯದಲ್ಲಿ ತೊಡಗಿದ್ದರು. ಶೀಗೆಕಾಯಿ, ಕಾಸರಕಾಯಿ, ರಾಮಪತ್ರೆ, ಅಂಟುವಾಳಕಾಯಿ ಮೊದಲಾದ ಕಾಡುತ್ಪತ್ತಿ ವಸ್ತುಗಳು, ಬೆಲ್ಲ, ಅಕ್ಕಿ, ಅಡಕೆ, ತೆಂಗಿನಕಾಯಿ ಮೊದಲಾದುವನ್ನು ಸುವರ್ಣಾ ನದಿಯ ತಟದ ಬಜೆಯಿಂದ ಹಂಗಾರಕಟ್ಟೆ ಮಾರ್ಗವಾಗಿ ವಿವಿಧೆಡೆಗೆ ರವಾನಿಸಲಾಗಿತ್ತು.

ಹಿರಿಯಡಕದಲ್ಲಿ 'ಪಟ್ಟಣಸೆಟ್ಟಿ'ಯ ಮನೆಯಿತ್ತು.[೨೮] ಎಂದು ಅನೇಕ ಹಿರಿಯರು ಹೇಳುತ್ತಿದ್ದರು. ಗಣಪತಿರಾವ್ ಐಗಳ್‌ರವರು ಬೆಟ್ಟುಪಾಡಿ, ಕಟ್ಟುಪಾಡಿ, ಕಾಪು- ಇವು ಪೇಟೆ ಕೇರಿಗಳಾಗಿದ್ದುವು ಎಂದು ಉಲ್ಲೇಖಿಸಿದ್ದಾರೆ. ಹಿರಿಯಡಕವೂ ವ್ಯಾಪಾರ ಕೇಂದ್ರ, ಬಂದರು ಆಗಿದ್ದು ಒಂದು ಪ್ರಮುಖ ವ್ಯಾಪಾರ ಕೇಂದ್ರವೆನಿಸಿತ್ತು. ಹಾಗೂ ಪಟ್ಟಣಸೆಟ್ಟಿ ಎಂಬ ಅಧಿಕಾರಿ ಇರುವ ಒಂದು ಪ್ರಮುಖ ಪಟ್ಟಣಕೇರಿಯಾಗಿತ್ತು ಎಂಬುವುದು ಸುಸ್ಪಷ್ಟ. ಮೂಡುಮಠವು ಪ್ರಮುಖ ಧಾರ್ಮಿಕ ಕೇಂದ್ರವಾಗಿತ್ತು. ಶಾಸನಗಳಲ್ಲಿ ಮೂಡುಮಠಕ್ಕೆ ನೀಡಿರುವ ಭೂದಾನವನ್ನು ಗಮನಿಸಿದಾಗ ಮೂಡುಮಠ–ಬಸ್ತಿ–ಹಿರಿಯಡಕ ಮುಖ್ಯ ವ್ಯಾಪಾರ ಮಾರ್ಗವಾಗಿತ್ತು ಎಂದು ಊಹಿಸಬಹುದಾಗಿದೆ. ಅನ್ನಛತ್ರ, ದಾನ ಧರ್ಮಕ್ಕೆ ಹೆಸರಾಗಿದ್ದ ಮೂಡುಮಠಕ್ಕೆ ಊರ ಪ್ರಮುಖರು ಭೂದಾನ ನೀಡಿರಬಹು ದಾಗಿದೆ ಜೈನ ವ್ಯಾಪಾರಿಗಳು ನೆಲಸಿದ್ದರಿಂದಲೇ ಬಸ್ತಿಯ ಬಸದಿ ನಿರ್ಮಾಣವಾಗಿರಬೇಕು. ಅಲ್ಲದೆ ಇಲ್ಲಿ ಆಳುತ್ತಿದ್ದ ಜೈನ ಬಲ್ಲಾಳರು ಬಸದಿ ಸ್ಥಾಪನೆಗೆ ನೆರವಾಗಿರಬೇಕು. ಪುತ್ತಿಗೆ ಶ್ರೀ ವಿಷ್ಣುಮೂರ್ತಿ ದೇವಸ್ಥಾನವು ಇಲ್ಲಿನ ಸಾಮಾಜಿಕ–ಧಾರ್ಮಿಕ ಉತ್ಸವಕ್ಕೆ ಪ್ರೇರಕವಾಗಿತ್ತು ಎಂದು ತಿಳಿಯಬಹುದು. ಇಲ್ಲಿನ ವಿವಿಧ ಮಠಗಳು, ಹಿರಿಯಡಕದ ದೇವಸ್ಥಾನ, ವೈಶಿಷ್ಟ್ಯಪೂರ್ಣ ಪಾತ್ರವಹಿಸಿವೆ.

ಸುವರ್ಣಾನದಿ ಹರಿಯುವ ಬೊಮ್ಮರಬೆಟ್ಟು ಗ್ರಾಮ ಪರಿಸರ ಶಿಕ್ಷಣ ಹಾಗೂ ಇತರ ಕ್ಷೇತ್ರದಲ್ಲಿ ಪ್ರಗತಿ ಸಾಧಿಸುತ್ತಿದೆ. ನೂರು ವರ್ಷದ ಸಾಧನೆ ಮಾಡಿದ ಇಲ್ಲಿಯ ಹಿರಿಯ ಪ್ರಾಥಮಿಕ ಶಾಲೆ ಚಿನ್ನದ ಹಬ್ಬ ಆಚರಿಸಿದ ಪದವಿ ಪೂರ್ವ ಕಾಲೇಜು ಹಾಗೂ ಇದೀಗ ಪ್ರಗತಿ ಪಡೆಯುತ್ತಿರುವ ಪದವಿ ಕಾಲೇಜು ಈ ಗ್ರಾಮ ಪರಿಸರದ ಶೈಕ್ಷಣಿಕ ಸಾಧನೆ ಸಾಮಾಜಿಕ ಪ್ರಗತಿಗೆ ನಾಂದಿ ಹಾಡಿವೆ. ಇಲ್ಲಿನ ವೈಶಿಷ್ಟ್ಯಪೂರ್ಣ ಐತಿಹಾಸಿಕ ನೆಲೆಗಳ ಬಗ್ಗೆ ಹೆಚ್ಚಿನ ಸಂಶೋಧನೆ ಹಾಗೂ ಅಧ್ಯಯನ ಹೆಚ್ಚು ಉಪಯುಕ್ತವಾಗಬಲ್ಲದು.

(ಈ ಸಂಪ್ರಬಂಧ ರಚನೆಗೆ ಆಧಾರ, ನೆರವು ಹಾಗೂ ಮಾಹಿತಿ ನೀಡಿದ ಎಲ್ಲಾ ಮಹನೀಯರಿಗೂ ಕೃತಜ್ಞನಾಗಿದ್ದೇನೆ.)

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. **ಬೊಮ್ಮರಬೆಟ್ಟು ಗ್ರಾಮದ ವಿಸ್ತೀರ್ಣ–೬,೩೫೦.೯೧ ಎಕ್ರೆ.**
೨. **ಡಾ॥ ಸೂರ್ಯನಾಥ ಕಾಮತ್‌ರವರ ಅಭಿಪ್ರಾಯ.**
೩. ಡಾ॥ ಎ.ಎನ್. ನರಸಿಂಹಮೂರ್ತಿಯವರು ಪಾಣಿಪೀಠದಲ್ಲಿರುವ 'ಸಿಂಹಮುಖ' ದ ಚಿಹ್ನೆಯಿಂದ ಬಸದಿಯ ತೀರ್ಥಂಕರರು 'ಮಹಾವೀರ' ಎಂದು ಸ್ಪಷ್ಟಪಡಿಸಿದರು. ಶ್ರೀ ಟಿ. ಮುರಿಗೇಶಿಯವರೂ ಇದೇ ಅಭಿಪ್ರಾಯ ನೀಡಿದರು.
೪. ಪೂಜ್ಯ ಸ್ವಾಮೀಜಿಯವರನ್ನು ದಿನಾಂಕ : ೧೦–೧–೨೦೧೦ರಂದು ನಲ್ಲೂರು ಅತಿಶಯ ಕ್ಷೇತ್ರದಲ್ಲಿ ಭೇಟಿ ಮಾಡಿದಾಗ ಅವರು ನೀಡಿದ ಆಶಯ.
೫. ಶ್ರೀ ಪ್ರಸನ್ನ ಇಂದ್ರರು, ಅಜೆಕಾರು ಅವರ ಅಭಿಪ್ರಾಯ.
೬. ಶ್ರೀ ಪ್ರಸನ್ನ ಇಂದ್ರರ ಮಾಹಿತಿ.
೭. ಡಾ॥ ಪಿ.ಎನ್. ನರಸಿಂಹಮೂರ್ತಿ, **ದಕ್ಷಿಣ ಕನ್ನಡದ ದೇವಾಲಯಗಳು.**
೮. ಅದೇ.,
೯. ಅದೇ.,
೧೦. ಎ.ಆರ್.ಎಸ್.ಇ.ಇ. ೧೯೨೮–೫. ಶಾಸನ ಸಂಖ್ಯೆ ೫೦೧.
೧೧. ಡಾ॥ ಪಿ.ಎನ್. ನರಸಿಂಹಮೂರ್ತಿಯವರು ಶೋಧಿಸಿದ ಶಾಸನ (**ಉದಯವಾಣಿ,** ದಿನಾಂಕ : ೦೩–೦೬–೨೦೦೪)
೧೨. ಮೂಡುಮಠದ ಅರ್ಚಕ ಶ್ರೀ ಲಕ್ಷ್ಮೀ ಜನಾರ್ಧನ ಭಟ್ ಅವರು ನೀಡಿದ ಮಾಹಿತಿ.
೧೩. ಅದೇ.,
೧೪. ಕೋಲ್ಯಾರು ಮಠದ ಮುಖ್ಯಸ್ಥರು, ಶ್ರೀ ವಾಸುದೇವಭಟ್‌ರವರ ಮಾಹಿತಿ.
೧೫. ಕೆ. ನಾರಾಯಣ ನಾಯಕ್, '**ಕೊಂಡಾಡಿ ಜಂಗಮಮಠ**', **ಇತಿಹಾಸ ದರ್ಶನ,** ೨೦೦೫.
೧೬. ಡಾ॥ ಪಿ.ಎನ್. ನರಸಿಂಹಮೂರ್ತಿ, **ದಕ್ಷಿಣ ಕನ್ನಡದ ದೇವಾಲಯಗಳು,** ಅದೇ.
೧೭. ಡಾ॥ ಚಂದ್ರಶೇಖರ ಸ್ವಾಮಿಗಳು, 'ವೀರಶೈವರ ಗೋತ್ರ ಪುರುಷರಲ್ಲಿ ವೀರಭದ್ರ', '**ವೀರಶೈವ ಪಂಚಪೀಠ ಪರಂಪರೆ**' (ಪುಟ ೨೮).
೧೮. ಶ್ರೀ ಎಂ.ಜಿ. ನಾಗರಾಜ್, 'ತುಳುನಾಡಿನಲ್ಲಿ ವೀರಶೈವ', **ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ** (ಪುಟ ೧೫೯).
೧೯. ಡಾ॥ ಪಿ.ಎನ್. ನರಸಿಂಹಮೂರ್ತಿ, **ದಕ್ಷಿಣ ಕನ್ನಡದ ದೇವಾಲಯಗಳು,** ಅದೇ.
೨೦. ಎಸ್. ನಿತ್ಯಾನಂದ ಪಡ್ರೆ, ರಂಗನಾಥಭಟ್, **ಉದಯವಾಣಿ** ಪುರವಣಿ ಸಹಸ್ರ ಕಲಶ, ದಿನಾಂಕ : ೨೯–೦೪–೨೦೦೧.
೨೧. ಶ್ರೀ ಎಲ್. ಕುಂಡತ್ತಾಯ ನಂಬಿಕೆ ನಡವಳಿಕೆಯೇ ಪ್ರಧಾನವಾದ 'ಸಿರಿಜಾತ್ರೆ', **ಉದಯವಾಣಿ,** ದಿನಾಂಕ : ೧೫–೪–೨೦೦೩.
೨೨. ಎ.ವಿ. ನಾವಡ ಮತ್ತು ಸುಭಾಶ್ಚಂದ್ರ 'ತುಳುವ ದರ್ಶನ' ಡಾ. ಪೀಟರ್ ಜೆ. ಕ್ಲಾಸ್ ಕೃತಿಯಿಂದ.
೨೩. ಗಣಪತಿರಾವ್ ಐಗಳ್, **ಪ್ರಾಚೀನ ದಕ್ಷಿಣ ಕನ್ನಡದ ಇತಿಹಾಸ.**
೨೪. ಡಾ॥ ವಸಂತ ಮಾಧವ., **ಕರಾವಳಿ ಕರ್ನಾಟಕದ ರಾಜಕೀಯ ಇತಿಹಾಸ ಅಧ್ಯಯನ,** ಪುಟ–೧೩. (೧೯೯೮).
೨೫. ಡಾ॥ ಪಾದೆಕಲ್ಲು ವಿಷ್ಣುಭಟ್‌ರವರ ಅವರು ನೀಡಿದ ಮಾಹಿತಿ.
೨೬. ಮುರಳೀಧರ ಉಪಾಧ್ಯ, ಹಿರಿಯಡಕ ಹಿರಿಯೂರು (ಶ್ರೀ ಚಂದಯ್ಯ ಹೆಗ್ಡೆಯವರ ಬಗ್ಗೆ ಬರೆದ ಪುಸ್ತಕ).
೨೭. ಶ್ರೀ ಜಯವಂತರಾವ್ ಹಿರಿಯಡಕ ಅವರು ನೀಡಿದ ಮಾಹಿತಿ.

ಆಧಾರಸೂಚಿ

೧. ಅಮೃತ ಸೋಮೇಶ್ವರ, **ತುಳುನಾಡಿನ ಪಾಡ್ದನ,** ಸಂಪುಟ (ಪ್ರಸಾರಾಂಗ ಕನ್ನಡ ವಿ.ವಿ.).
೨. ಗುರುರಾಜಭಟ್ ಪಿ., **ತುಳುನಾಡು,** (೧೯೬೩).
೩. Gururaj Bhatt. P., *Studies in Tuluva History and Culture*, (1975).
೪. ಚಿನ್ನಪ್ಪಗೌಡ ಕೆ., **ಭೂತಾರಾಧನೆ,** ಜಾನಪದೀಯ ಅಧ್ಯಯನ, (೧೯೯೦).
೫. **ಸಿರಿ ಕಾವ್ಯಾವಲೋಕನ,** (ಸಂ.) ಡಾ॥ ಅಶೋಕ ಆಳ್ವ, (ಶ್ರೀಮತಿ ಕರ್ಗಿ ಶೆಡ್ತಿ, ಪಾಡ್ದನಗಾರ್ತಿ ಹಾಡಿದವರು).
೬. ಡಾ॥ ಬಿ. ವಸಂತಶೆಟ್ಟಿ., **ಉಡುಪಿ ತಾಲ್ಲೂಕಿನ ಶಾಸನಗಳು,** (೧೯೫೫).
೭. ಡಾ॥ ವಾಮನ ನಂದಾವರ., **ಕೋಟಿ ಚೆನ್ನಯ,** (೨೦೦೧).

ಡಾ. ಬಿ. ರಾಜಶೇಖರಪ್ಪ *

ಚಿತ್ರದುರ್ಗದ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠಕ್ಕೆ ಉಪ್ಪಾರ ಜನಾಂಗದವರ ಕಾಣಿಕೆ

ಚಿತ್ರದುರ್ಗದ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ದಕ್ಷಿಣ ಭಾರತದ ಪ್ರಮುಖ ಧಾರ್ಮಿಕ ಸಂಸ್ಥೆಗಳಲ್ಲಿ ಒಂದು ಎಂಬುದು ಈಗಾಗಲೇ ಸುವಿದಿತವಾದ ಸಂಗತಿ. ಈ ಪೀಠದ ಗುರುಗಳು ವೀರಶೈವ ಧರ್ಮದವರಿಗಷ್ಟೆ ಅಲ್ಲ, ಸಮಾಜದ ಎಲ್ಲ ಜಾತಿಗಳವರಿಗೂ ಗೌರವನೀಯರಾಗಿದ್ದರು. ಅದಕ್ಕೆ ಮುಖ್ಯ ಕಾರಣ ಅವರು ವೀರಶೈವರದಷ್ಟೇ ಅಲ್ಲದೆ, ಎಲ್ಲರ ಹಿತವನ್ನೂ ಬಯಸುತ್ತ ಅದಕ್ಕಾಗಿ ಸ್ಪಂದಿಸುತ್ತ ಇದ್ದುದೇ. ಹೀಗಾಗಿ ವೀರಶೈವರಷ್ಟೇ ಅಲ್ಲದೆ ಇತರ ಜನಾಂಗಗಳವರೂ ಸಹ ಶ್ರೀಮಠದ ಸೇವಾಕಾರ್ಯಗಳಿಗೆಂದು ತಮ್ಮ ಶಕ್ತ್ಯನುಸಾರವಾಗಿ ಕಾಣಿಕೆಯನ್ನು ನೀಡುತ್ತಿದ್ದರು. ಶ್ರೀಮಠಕ್ಕೆ ಹೀಗೆ ಕಾಣಿಕೆ ನೀಡಿದ ಇತರ ಜನಾಂಗದವರಲ್ಲಿ ಉಪ್ಪಾರ ಜನಾಂಗದವರೂ ಸೇರಿದ್ದಾರೆ ಎನ್ನುವುದು ಇಲ್ಲಿ ವಿಶೇಷ ಸಂಗತಿ. ಈ ಜನಾಂಗದ ಭಕ್ತರು ಶ್ರೀಮಠಕ್ಕೆ ಕಾಣಿಕೆ ನೀಡಿದ್ದನ್ನು ಶ್ರೀಮಠದಲ್ಲಿರುವ ಎರಡು ಸುದೀರ್ಘ ಶಾಸನಗಳು ಸಾರುತ್ತವೆ. ಅವನ್ನು ಬೆಳಕಿಗಿಡುವುದು ಈ ಸಂಪ್ರಬಂಧದ ಉದ್ದೇಶ.

ಬಹುಪೂರ್ವದಿಂದ ಉಪ್ಪನ್ನು ತಯಾರಿಸುತ್ತ ಬಂದವರೇ ಉಪ್ಪಾರರು. ಉಪ್ಪಿನ ತಯಾರಿಕೆ ಹಿಂದಿನ ಕಾಲದಲ್ಲಿ ಒಂದು ಪ್ರಮುಖ ವಾಣಿಜ್ಯೋದ್ಯಮವಾಗಿತ್ತು. ಹಿಂದಿನ ಕಾಲದ ದೊರೆಗಳು ಆಡಳಿತ ಉಪ್ಪಿನ ಉದ್ಯಮಕ್ಕೆ ಸಂಬಂಧಿಸಿದಂತೆ ವಿವಿಧ ತೆರಿಗೆಗಳನ್ನು ವಿಧಿಸುತ್ತಿದ್ದುದೇ ಅದಕ್ಕೆ ಸಾಕ್ಷಿ. ಉಪ್ಪಾರರು ಉಪ್ಪನ್ನು ತಯಾರಿಸಿ, ಅದನ್ನು ಚೀಲಗಳಲ್ಲಿ ತುಂಬಿ, ಕೋಣಗಳ ಮೇಲೆ ಹೇರಿಕೊಂಡು, ಬೇರೆ ಬೇರೆ ಊರುಗಳಿಗೆ ಹೋಗಿ ಅಲ್ಲಿಯ ವರ್ತಕರಿಗೆ ವಿತರಿಸುತ್ತಿದ್ದರಲ್ಲದೆ, ಸಂತೆಗೂ ತೆಗೆದುಕೊಂಡು ಹೋಗಿ ಮಾರುತ್ತಿದ್ದರು. ಉಪ್ಪಿನ ವಾಣಿಜ್ಯೋದ್ಯಮವು ತಯಾರಕರಿಗೆ ವರ್ತಕರಿಗೆ ಹೇಗೋ ಹಾಗೆಯೇ ಸರ್ಕಾರಕ್ಕೂ ಒಂದು ಆದಾಯದ ಮೂಲವಾಗಿತ್ತು.

ಬೇರೆ ಬೇರೆ ಕಡೆಯಿಂದ ಚಿತ್ರದುರ್ಗಕ್ಕೆ ಉಪ್ಪನ್ನು ಮಾರಲು ಮತ್ತು ವಿತರಿಸಲು ಬರುತ್ತಿದ್ದ ಉಪ್ಪಾರ ಜನಾಂಗದವರು ಆಗಾಗ ಶ್ರೀಮಠದಲ್ಲಿ ತಂಗಿ, ಅಲ್ಲಿಯ ದಾಸೋಹದ ಪ್ರಯೋಜನವನ್ನು ಪಡೆಯುತ್ತಿದ್ದರು. ಆ ಕೃತಜ್ಞತೆಯ ದ್ಯೋತಕವಾಗಿ ಹಿಂದಿನ ಚಿತ್ರದುರ್ಗ ಜಿಲ್ಲೆಯ ತಳಕು ತಾಲ್ಲೂಕಿನ (ತಳಕು ಈಗ ಹೋಬಳಿ ಕೇಂದ್ರವಾಗಿ ಚಳ್ಳಕೆರೆ ತಾಲ್ಲೂಕಿನಲ್ಲಿದೆ) ಮತ್ತು ಕಣಕುಪ್ಪೆ ತಾಲ್ಲೂಕಿನ (ಕಣಕುಪ್ಪೆ ಈಗ ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನಲ್ಲಿದೆ) ಉಪ್ಪಾರರು ಶ್ರೀಮಠಕ್ಕೆ ಏನಾದರೂ ಕಾಣಿಕೆ ನೀಡಲೇಬೇಕೆಂದು ತಮ್ಮ ತಮ್ಮಲ್ಲೇ ಆಲೋಚಿಸಿ, ತಮ್ಮ ತಮ್ಮ ಉಪ್ಪಿನ ಮೋಳೆಗಳ (ಉಪ್ಪು ತಯಾರಿಸಲು ಬಳಸುತ್ತಿದ್ದ ಪಾತಿಗಳ) ನಿರ್ವಹಣೆ ಮಾಡುತ್ತಿದ್ದ ಮತ್ತು ನೀಡುತ್ತಿದ್ದ ರೈತ ವರ್ಗದವರು, ಉಪ್ಪಿನ (ಸಗಟು) ಖರೀದಿದಾರರು, ಗ್ರಾಮುಗಳ ಗೌಡರು (ಪಟೇಲರು), ನಾಡಿಗರು (ಶಾನುಭೋಗರು) ತಮ್ಮ ಕುಲದ ಮತ್ತು ಇತರ ಪ್ರಮುಖರೊಂದಿಗೆ ಶ್ರೀಮಠಕ್ಕೆ ಬಂದು, "ನಾವು ವರ್ಷಂಪ್ರತಿ ತಪ್ಪದೆ ಇಂತಿಷ್ಟು ಉಪ್ಪನ್ನು ಕಾಣಿಕೆಯಾಗಿ ಕೊಡುತ್ತೇವೆ. ಇದು ನಾವಿರುವವರೆಗೆ ಅಷ್ಟೇ ಅಲ್ಲ, ಮುಂದೆ ನಮ್ಮ ಸಂತತಿಯವರೂ ತಪ್ಪದೆ ಪಾಲಿಸಿಕೊಂಡು ಬರುವ ಧರ್ಮ" ಎಂದು ಕ್ರಿ.ಶ. ೧೮೩೮ರಲ್ಲಿ ಎರಡು ಬೇರೆ ಬೇರೆಯ ದಿನಾಂಕಗಳಲ್ಲಿ ಶ್ರೀಮಠಕ್ಕೆ ಕಾಣಿಕೆ ನೀಡಿದ್ದನ್ನು ಎರಡು ಸುದೀರ್ಘ ಶಾಸನಗಳು ಸಾರುತ್ತವೆ. ಈ ಶಾಸನಗಳು ದೊಡ್ಡ ಗಾತ್ರದ ಕಾಗದಗಳ ಮೇಲೆ ಬರೆಯಲ್ಪಟ್ಟಿವೆ. ತಾಮ್ರದ ತಗಡಿನ ಮೇಲೆ ಕೊರೆಯಿಸಲು ಸಿದ್ಧಮಾಡಿಟ್ಟುಕೊಂಡ ಕಾಗದದ ಪ್ರತಿಗಳು ಇವಾಗಿರಬೇಕು ಎಂದು ಕಾಣುತ್ತದೆ. ಇವುಗಳ ತಾಮ್ರಪಟಗಳೇನಾದರೂ ಶ್ರೀಮಠದ ದಾಖಲೆಗಳ ಸಂಗ್ರಹದಲ್ಲಿವೆಯೋ ಹೇಗೋ ಇನ್ನೂ ಸ್ಪಷ್ಟವಾಗಿ ತಿಳಿದುಬಂದಿರುವುದಿಲ್ಲ.

ಇವುಗಳಲ್ಲಿ ಮೊದಲನೆಯದರ ಪ್ರಕಾರ, ಸುಮಾರು ೬೦ಕ್ಕೂ ಮೇಲ್ಪಟ್ಟ ಸಂಖ್ಯೆಯ ಗ್ರಾಮಗಳ ಉಪ್ಪಾರರು ಹಾಗೂ ಇತರರು ಈ ಕಾಣಿಕೆ ಒಪ್ಪಿಸುವ ಸಂದರ್ಭದಲ್ಲಿ ಸೇರಿದ್ದರೆಂಬುದು ಗಮನಿಸಬೇಕಾದ ಸಂಗತಿ. ಉಪ್ಪಾರ ಭಕ್ತರು ಶ್ರೀಮಠದ ಸ್ವಾಮಿಗಳವರಲ್ಲಿ ಹೀಗೆ ನೀವೇದನೆ ಮಾಡಿಕೊಳ್ಳುತ್ತಾರೆ : "ಮಹಾಸನ್ನಿಧಿಯ ದಾಸೋಹ

* ಕನ್ನಡ ಪ್ರಾಧ್ಯಾಪಕರು, ಪ್ರಾಂಶುಪಾಲರು (ನಿ), ೨ನೇ ಕ್ರಾಸ್ (ಪಶ್ಚಿಮ), ಜೆಸಿಆರ್ ಬಡಾವಣೆ, ಚಿತ್ರದುರ್ಗ.

ಸೇವೆಯನ್ನು ಪಡೆದ ನಮ್ಮ ಹಿರಿಯರಿಗೂ ನಮಗೂ (ಇಹದಲ್ಲಿ) ಪುಣ್ಯ, ಶ್ರೇಯಸ್ಸು, (ಪರರಲ್ಲಿ ಸದ್ಗತಿ ಗಳಿಸಿಕೊಳ್ಳಲಿಕ್ಕೂ, ನಮ್ಮ ವಂಶ ಅಭಿವೃದ್ಧಿ ಹೊಂದಲಿಕ್ಕೂ ಮಹಾಸನ್ನಿಧಿಯ ದಾಸೋಹ ಸೇವೆಗೆ ನಮ್ಮ ಶಕ್ತ್ಯನುಸಾರ, ನಮ್ಮ ಅಳಿಲುಭಕ್ತಿ ಸಮರ್ಪಿಸಬೇಕೆಂದು ನಮ್ಮ ಮನಸ್ಸಲ್ಲಿ ನಾವು ಆಲೋಚನೆ ಮಾಡಿಕೊಂಡ ಪ್ರಕಾರಕ್ಕೆ ಮಹಾಸನ್ನಿಧಿಯ ದರ್ಶನ ಪಡೆದ ಅನಂತರದಲ್ಲಿ, ನಮ್ಮ ತಾಲ್ಲೂಕಿನ ಗ್ರಾಮಾನು ಗ್ರಾಮಗಳಲ್ಲಿರುವ ಉಪ್ಪಿನ ಮೋಳೆಯುಳ್ಳವರ ಕೋಣಗಳ ಕಾಲುನಡೆ ೧ಕ್ಕೆ ೨॥ ಗಿ (ಎರಡೂವರೆ ಗಿದ್ದನ) ಉಪ್ಪು, ಈ ಪ್ರಕಾರ ಎಷ್ಟು ನಡೆಗಳಿವೆಯೋ ಅಷ್ಟಕ್ಕೂ ಈ ಮೊತ್ತದ ಉಪ್ಪನ್ನು ಭಕ್ತಿಪೂರ್ವಕವಾಗಿ ಸಲ್ಲಿಸುತ್ತಿದ್ದೇವೆ. (ಚಿತ್ರದುರ್ಗ-ದಾವಣಗೆರೆ ಪ್ರದೇಶದಲ್ಲಿ ೪ ಸೇರುಗಳ ಮೊತ್ತ ೧ ಗಿದ್ದನ ಎರಡೂ ೨ ಸೇರಿಗೆ ೧ ಪಡಿ ಎಂದೂ ಕರೆಯುತ್ತಿದ್ದರು. ಹೀಗಾಗಿ ೨॥ ಗಿ ಎಂದರೆ ೧೦ ಸೇರು ಮೊತ್ತ. ೧ ಕೋಣ (ಕಾಲುನರೆ) ಇಟ್ಟುಕೊಂಡಿದ್ದರೆ ೧ ವರ್ಷಕ್ಕೆ ೧ ಸೇರು, ಹಾಗೇ ಈ ಕಾಣಿಕೆ ಮೊತ್ತ ಅವರು ಇಟ್ಟುಕೊಂಡಿರುತ್ತಿದ್ದ ಕೋಣಗಳ ಸಂಖ್ಯೆಗನುಗುಣವಾಗಿ ಹೆಚ್ಚಾಗುತ್ತ ಹೋಗುತ್ತದೆ). ಈ ಪ್ರಕಾರ ಮುಂದೆ ನಮ್ಮ ಪುತ್ರಪೌತ್ರ ಪರಂಪರೆಯವರು ಸಹ ತಮಗೆ ಭಕ್ತಿಸೇವೆ ಸಲ್ಲಿಸುತ್ತಾರೆ" ಎಂದು ಅತ್ಯಂತ ಭಕ್ತಿಯಿಂದ ಬಿನ್ನವಿಸಿಕೊಂಡದ್ದನ್ನು ಶಾಸನಗಳಲ್ಲಿ ನಿರೂಪಿಸಲಾಗಿದೆ.

ಉಪ್ಪಾರ ಭಕ್ತರ ಭಕ್ತಿ-ಕಾಣಿಕೆಯನ್ನು ಪ್ರೀತಿಯಿಂದ ಒಪ್ಪಿಸಿಕೊಂಡ ಸ್ವಾಮಿಗಳವರು "ಆಯಿತು. ಈ ನಿಮ್ಮ ಸೇವೆ ನಿರಂತರವಾಗಿ ನಿಮ್ಮ ವಂಶೋದ್ಭವರಿಂದಲೂ ನಡೆಯುತ್ತ ಬರಲಿ" ಎಂದು ಹರಸಿದರು. ಅದಕ್ಕೆ ಉಪ್ಪಾರ ಭಕ್ತರು "ಗುರುಪುತ್ರರಾದ ನಮ್ಮಲ್ಲಿ ಒಬ್ಬರೂ ಎಷ್ಟು ಮಾತ್ರಕ್ಕೂ ಕಿಂಚಿತ್ತಾದರೂ ಈ ಕಾಣಿಕೆ ನೀಡುವಲ್ಲಿ ಹರಕತ್ತು (ಅಡ್ಡಿ) ಮಾಡುವುದಿಲ್ಲ. ಹಾಗೆ ಮಾಡಿ ದೋಷಕ್ಕೆ ಗುರಿಯಾಗಿರುವವರೂ ಅಲ್ಲ. ಆದ್ದರಿಂದ ಸರ್ವರೂ ಧನ್ಯರಾಗಲು ತಮ್ಮ ಆಶೀರ್ವಾದ ಸದಾ ಇರಬೇಕು ಎಂದು ಎಲ್ಲರೂ ತ್ರಿಕರಣ ಶುದ್ಧವಾಗಿ ಈ ಕಾಣಿಕೆ ಒಪ್ಪಿಸಿ ಧನ್ಯರಾಗುತ್ತಿದ್ದೇವೆ" ಎಂದು ಬರೆಸಿ ಒಪ್ಪಿಸಿದ ದಾನ ಶಾಸನ ಎಂದು ಈ ಶಾಸನಗಳು ಮುಕ್ತಾಯವಾಗುತ್ತವೆ. ಅಂತ್ಯದಲ್ಲಿ ಶಾಪಾಶಯ ಹೇಳುವ ಸಂಸ್ಕೃತ ಶ್ಲೋಕಗಳೂ ಕನ್ನಡ ಗದ್ಯವೂ ಇವೆ. ಇವುಗಳಲ್ಲಿ ಮೊದಲನೆಯದರ ಅಂತ್ಯದಲ್ಲಿ ನೂರಾರು ಜನರ ಒಪ್ಪಿತಗಳಿದ್ದು, ಎರಡನೆಯದರ ಅಂತ್ಯದಲ್ಲಿ ಉಪ್ಪಿನಕಟ್ಟೆ ಅಥವಾ ಪಾತಿಗಳನ್ನು ಸಂಕೇತಿಸುವ ಮನೆಮನೆಗಳಿರುವ ಚೌಕಗಳ ರೇಖಾಚಿತ್ರಗಳನ್ನು ಬರೆದು ಕೆಲವರು ಒಪ್ಪಿತ ಹಾಕಿದ್ದಾರೆ; ಇದು ಇಲ್ಲಿಯ ಒಂದು ವಿಶೇಷ ಅಂಶ.

ಈ ದಾನ ನೀಡಿಕೆಯ ಕಾಲಕ್ಕೆ ಶ್ರೀಮಠದ ಪೀಠಾಧೀಶರಾಗಿದ್ದವರ ಹೆಸರನ್ನು ಶಾಸನಗಳಲ್ಲಿ ಉಲ್ಲೇಖಿಸಿಲ್ಲವಾದರೂ, ಅನ್ಯತ್ರ ಈಗಾಗಲೇ ತಿಳಿದುಬಂದಿರುವಂತೆ ಆ ಕಾಲಕ್ಕೆ ಇದ್ದ ಪೀಠಾಧೀಶರು ಸಾವಳಿಗೆ ಗುರುಶಾಂತ ಸ್ವಾಮಿಗಳೆಂಬವರು.

ಈ ಶಾಸನಗಳಲ್ಲಿ ಬರುವ ಅನೇಕ ವ್ಯಕ್ತಿನಾಮಗಳು ಹಾಗೇ ಸ್ಥಳನಾಮಗಳು ಈಗಲೂ ಬಳಕೆಯಲ್ಲಿದ್ದು ಅಭ್ಯಾಸ ಯೋಗ್ಯವಾಗಿವೆ. ಈ ವ್ಯಕ್ತಿಗಳಲ್ಲಿ ಉಪ್ಪಾರರ ಜೊತೆಗೆ ಬ್ರಾಹ್ಮಣ, ಲಿಂಗಾಯತ, ವೈಶ್ಯ, ಕುರುಬ, ಕುಂಚಟಿಗ, ಗೊಲ್ಲ, ಬೇಡ, ಬೆಸ್ತ, ಈಡಿಗ ಹೀಗೆ ವಿವಿಧ ಜನಾಂಗಗಳವರೂ ಸಹ ಸಾಕ್ಷಿಗಳಾಗಿ ಉಪಸ್ಥಿತರಿದ್ದರೆನ್ನುವುದು ಅಂದಿನ ಸಾಮರಸ್ಯದ ಸಾಮಾಜಿಕ ಪರಿಸರಕ್ಕೆ, ಮತ್ತು ಮುರಿಗೆಸ್ವಾಮಿಗಳಿಗೆ ಕಾಣಿಕೆ ಅರ್ಪಣೆ ಮಾಡುವ ಸಂದರ್ಭದಲ್ಲಿ ಅವರೆಲ್ಲ ಹೇಗೆ ಜಾತ್ಯತೀತವಾಗಿ ಪಾಲ್ಗೊಂಡಿದ್ದರೆನ್ನುವುದಕ್ಕೆ ಒಂದು ನಿದರ್ಶನವಾಗಿದೆ. ಜೊತೆಗೆ ಶ್ರೀಮಠ ವೀರಶೈವದ್ದಾದರೂ ತನ್ನ ಸೇವಾ ಭಾವನೆಯಿಂದ ಇತರ ಜನಾಂಗಗಳವರಲ್ಲಿ ಎಂತಹ ಗೌರವ ಪ್ರಭಾವಗಳನ್ನು ಹೊಂದಿದ್ದರೆನ್ನುವುದೂ ವ್ಯಕ್ತವಾಗುತ್ತದೆ.

ಒಂದನೆಯ ಶಾಸನ

೧ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರ್‍ರು ಮರ್‍ರಿಗಾ ರಾಜೇಂದ್ರಸ್ವಾಮಿನಾಂ ಶ್ರೀ ಚರಣಾರವಿ[೦*]ದಗಳಿಗೆ ॥=॥ =

೨ ನಮಸ್ತುಂಗ ಶಿರಶ್ಚುಂಬಿ । ಚಂದ್ರಚಾಮರ ಚಾರುವೆ ॥ ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಾಂಭವೆ॥ ಸ್ವಸ್ತಿಶ್ರೀ ವಿಜೆಯಾ

೩ ಭ್ಯುದಯ ಶಾಲಿವಾಹನ ಶಖವರುಷಂಗಳು ೧೭೬೦ನೆ ವಿಳಂಬಿ ನಾಮ ಸಂವತ್ಸರದ ಆಷಡ ಶು ೧೩ ನಿರುದ್ಧದಲ್ಲು ಚಿತ್ರದು

೪ ರ್ಗದ ಶಿಮೆ ಕಣುಕುಪ್ಪಾ ತಾಲ್ಲೂ ಪೈಯಿಕಿ ಕಸಬಾ ನಾಡಿಗ ಮಾವಿನಳ್ಳಪ್ಪ । ಮಾಚಿಕೆರ್‍ರೆ । ಗ । ಗುರುಶಿದ್ದಪ್ಪ। ಶಿವಲಿಂಗಪ್ಪ । ಮು

೫ ಷ್ಟಿ ಗರಹಳಿ । ಗ । ನಾರಪ್ಪ ಚಂನಪ್ಪ । ಕೆಚ್ಚೆನಹಳ್ಳಿ । ಗ । ವುಜ್ಜಪ್ಪ ಮರ್‍ರಿಶಿದ್ಧಪ್ಪ । ಬೈರನಾಯ್ಕನಹಳ್ಳಿ । ಗ। ಶಿದ್ಧಲಿಂಗಪ್ಪ । ಹಳು

೬ ವದಂಡಿ ಸಂಮತ್ತು । ಕಸಬಾ । ಗ । ಹನುಮಪ್ಪ । ದೆವಿಕೆರೆ । ಗ । ಶಿದ್ಧರಾಮಪ್ಪ । ಹಿರೆಅರಕೆರೆ । ಗ । ಗುರುಪಾದಪ್ಪ । ಚಿಕ್ಕಅರ

೭ ಕೆರೆ । ಗ। ಬಸವಪ್ಪ । ಗುತ್ತಿದುರ್ಗದ । ಗ । ಮರುಳಪ್ಪ।

ಮ್ಯೆದಗಿನ ಕೆರ್‍ರೆ । ಗ। ಚಂನಪ್ಪ । ಬಸವಪ್ಪ । ಕೊರಟಿಕೆರ್‍ರೆ । ಗ । ಹನು [ಮ*]ಪ್ಪ

೮ ಕಲ್ಲಪ್ಪ । ಸೊಮೆನಹಳ್ಳಿ । ಗ । ಸಮೆರಾಯರ ತಾತ್ಯೆಯ್ಯ । ಸಾಗಲಗಟ್ಟಿ । ಗ । ಕೊಡಲಿ ಬರಮಪ್ಪ । ನಿಬಗೂರು ಸಂಮತ್ತು ॥ ಕಸಬ

೯ । ಗ । ಬ್ಯೆರಪ್ಪ । ಪಾವಾಡಪ್ಪ । ಬಿದರುಕೆರ್‍ರೆ । ಗ । ಕಲ್ಲಪ್ಪ । ಹನು[ಮ*]ಪ್ಪ ಬಸ್ತುವಳ್ಳಿ । ಗ । ದಾನಪ್ಪ । ಕಲ್ಲಪ್ಪ । ಮಾಕುಂಟಿ । ಗ । ಕಲ್ಲಪ್ಪ ।

೧೦ ಜಂಮಾಪುರದ । ಗ । ಮುರ್‍ರಿಗಪ್ಪ । ಬಡಪ್ಪ । ಅಜ್ಜಪ್ಪ। ಸಂಣಲಿಂಗಪ್ಪ । ಅರ್‍ರಿಶಿನಗುಂಡಿ । ಗ । ಬಸವಪ್ಪ । ನೆಲ್ಲಿಕಟಿ ಬಸವಪ್ಪ ॥

೧೧ ಹನುಮಪ್ಪ । ಕಟಿಗೆಹಳ್ಳಿ । ಗ । ಹನುಮಪ್ಪ । ಬರಮಸಮುದ್ರದ ಸಂಮತ್ತು । ಕಸಬಾ । ನಾಡಿಗ । ಗುರ್‍ರುಶಿದ್ಧಪ್ಪ । ಕರೆಬರಮಪ್ಪ । ಕಾ

೧೨ ಮಗೆತನಹಳ್ಳಿ । ಗ। ಕಾಡಪ್ಪ । ಡೊಂಣೆಹಳ್ಳಿ । ಗ । ಗಾದ್ರಿಪಾಲನಾಯ್ಕ । ಮೂಡಲಮಾಚಿಕೆರ್‍ರೆ । ಗ । ಐಯಪ್ಪ । ಶಿದ್ಧವ್ವನಳ್ಳಿ ।

೧೩ । ಗ । ಐಯಪ್ಪ । ಮುಷ್ಟೂರ್‍ರು । ಗ । ಡೊಂಣೆ ಭಿಮಪ್ಪ । ಕಲ್ಲೆದೇವರಪುರದ । ಗ । ದೊಡಲಿಂಗಪ್ಪ । ಕಲ್ಲಪ್ಪ । ಜಗಲೂರು ಸಂಮತ್ತು ॥

೧೪ ಕಸಬಾ । ಗ । ಕಲ್ಲಪ್ಪ । ಮಾಚಿಕೆರೆ । ಬಸಪ್ಪ । ಗವುಡನಕಟ್ಟೆ ಲಿಂಗಪ್ಪ । ಬಂದಜ್ಜಿ ಬಸವಲಿಂಗಪ್ಪ । ವುದ್ದುಗಟ್ಟೆ ವುಪ್ಪಿನ ಮೊಳೆ ಯಿಜಾರ

೧೫ ದಾರ ಕರ್‍ರೆ ಬರಮಪ್ಪ । ಸುಳೊಬನಹಳ್ಳಿ । ಗ । ನಂಜಪ್ಪ । ಗೊಸುದ್ದಿನ । ಗ । ದ್ಯಾಮಂಣ । ಕಸುವನಹಳ್ಳಿ । ಗ । ಕೆಂಚಪ್ಪ । ಜೋಗಿಹಳ್ಳಿ । ಗ । ಮುರ್‍ರಿ

೧೬ ಗಪ್ಪ॥ ಕಾಸಾದ ಮಹಾ ॥॥ ಸಂನಿಧಿಗೆ ನೆಡಿಯುತಿದಂಥ ರಡ್ಡಿಹಳ್ಳಿ । ಗ । ನಂಜಪ್ಪ । ಮಲ್ಲಾನಹೊಳೆ ಸಂಮತ್ತು ಕಸಬಾ । ಗ ।

೧೭ ಶಾಮಲ ಭಿಮಪ್ಪ । ಚಿಕ್ಕಮಲ್ಲನಹೊಳೆ । ಗ । ರಾಯರ ತಿಪ್ಪಪ್ಪ । ಯಿ ರಂಗಪ್ಪ । ಸಾಲಹಳ್ಳಿ । ಗ । ಅಪ್ಯೆಯ್ಯ । ಟಾಯಟೋಣೆ । ಗ । ನಾಗಪ್ಪ ।

೧೮ ಹುಚ್ಚವನಳ್ಳಿ ।ಗ । ಚಂನಪ್ಪ । ಹಾಲಹಳ್ಳಿ । ಗ । ವೊಬಳ್ಯೆಯ । ಅಣುಬೂರ್‍ರು । ಗ । ವಿರಪ್ಪ । ಮಾಲ್ಲಾಪುರದ । ಗ । ತಿಪ್ಪಪ್ಪ ಸದರ್‍ರಿ ತಾಲೊಕ್ಕು

೧೯ ಪ್ಯೆಕಿ ವುಪ್ಪಿನ ಮಾಳೆ ಯಿಜಾರೆದಾರ್‍ರು । ಸದರಿ ಗ್ರಾಮಗಳಲ್ಲಿರುವುಪಾರು । ಚಿಕ್ಕ ಅರೆಕೆರ್‍ರೆ ಶಿದ್ಧಪ್ಪ । ಮುದಿಯಪ್ಪ । ಹಳು[ವ*]ದಂಡಿ ಕ

೨೦ ರ್‍ರಿಯಪ್ಪ । ಗಂಗೆ ಮಗ ತಿಂಮ್ಮಪ್ಪ । ಕೊರಟಕೆರ್‍ರೆ ತಿಂಮ್ಮಪ್ಪ । ಮಾಕುಂಟಿ ಸಂಡ್ಲಪ್ಪ । ಸೊಮಪ್ಪ ಬುಡಪ್ಪ। ಜಯಾಪುರದ ಭೀಮಪ್ಪ । ಗೊಂ

೨೧ ದ್ಯಪ್ಪ । ಅಜಪ್ಪ । ದಾಸರ ತಿಂಮ್ಮಪ್ಪ । ಕಬಿಗೆರ್‍ರೆ ಶಿದ್ಧಪ್ಪ॥ ಕೊಕ್ಕಿನ ತಿಂಮ್ಮಪ್ಪ । ಕಾಮಗೆತನಳ್ಳಿ ಕುರ್‍ಷಪ್ಪ । ಕರಿಯಪ್ಪ। ನಾಗಪ್ಪ । ನಲ್ಲಪ್ಪ

೨೨ ಮಲ್ಲಾಪುರದ ತಿಗಳಪ್ಪ । ತಿಂಮಪ್ಪ ವುದ್ದುಗಟಿ ಅಜ್ಯೆಯ್ಯ ತಿಂಮ್ಮಪ್ಪ । ಮುಂತ್ತಾರ ವುಪ್ಪಿನ ಮಾಳಿಗಳ ಮಾಡುವಂಥ ಸಮಸ್ತ ರ್‍ಯೆತರ್‍ರು

೨೩ ಸಹ । ಬರಶಿ ವಪ್ಪಿಶಿದ ದಾನಶಾಸನದ ಕ್ರಮವೆನಂದರು ಅದಾಗಿ । ಪ್ರಾಕು ಮಹಾ ॥ ॥ ಸಂನಿಧಿ ದಾಸೊಹದ ಸೆವಿಗೆ ಹಾಜರಾಗಿ । ಯಿ

೨೪ ದಂತ್ತ ನಂಮ ಹಿರೆರ ಪಾಲಿಗು । ನಂಮ್ಮ ಪಾಲಿಗೆ ಸಹ ಪುಂಣ್ಯ ಶ್ರಯಸ್ಸು ಗಳಿಶಿಕೊಳತಕ್ಕ ಬಗ್ಯ ನಂಮ್ಮ ವಂಶ ಅಭಿವೃದ್ಧಿಯಾಗತಕ್ಕ ಬಗ್ಯೆ ಸಹ

೨೫ ಯಿಾಗ ಮಹ ॥ ॥ ಸಂನಿಧಿ ದಾಸೊಹದ ಸೆವಿಗೆ ಶಕ್ತಾನುಸಾರ ನಂಮ್ಮ ಅಳುಲು ಭಕ್ತಿ ಸಮರ್ಪ್ಪಿಸಬೆಕೆಂಬ ಅಲೊಚನೆ ಮನದಲ್ಲಿ ಗ್ರ

೨೬ ಹಿಸಿಕೊಂಡ ಪ್ರಕಾರಕ್ಕೆ ಮಹ ॥ ॥ ಸಂನಿಧಿ ದರುಶನಾ ನಂತ್ತರಾದಲ್ಲಿ ಸದರ್‍ರಿ ತಾಲೊಕು ಪ್ಯೆಕಿ ಗ್ರಾಮಾನು ಗ್ರಾಮಗಳಲ್ಲಿರುವ ವುಪಿನ ಮೊ

೨೭ ಳಸ್ತರ ಪ್ಯೆಕಿ ಕೊಣಗಳ ಕಾಲುನಡೆ ೧ ವಂದಕ್ಕೆ ಗಿ ೨॥ ಯರಡುವರ್‍ರೆ ಗಿದ್ನದ ಪ್ರಕಾರಕ್ಕೆ ಸಮಸ್ತ ಮಾಳೆಗಳಲ್ಲಿ । ಯೆಷ್ಟು ನೆಡಗಳಿದಾಗು ಸದ್ರಿ ನಡೆ ೧

೨೮ ರ ವಿವರದಂತ್ತೆ ಯೆಷ್ಟು ವುಪು ಆದಾಗು ಆದೊಷ್ಟು ವುಪ್ಪು ಭಕ್ತಿಪೂರಕವಾಗಿ । ವಂಚನೆಯಿಲ್ಲದೆ । ಮಹ ॥ ॥ ಸಂನಿಧಿಗೆ ಸರ್ವಸ್ತರಿಂದ

೨೯ ಸಲ್ಲುವಂತ್ತೆ ಮಾಡುತ್ತಿದ್ದೆವೆ ಯಿಾದೆ ಪ್ರಕಾರ ನಂಮ ಪೌವುತ್ರ ಪಾರಂಪರ ಆಚಂದ್ರರ್ಕ ವರ್‍ರಿಗು ಸರಾಗದಿಂದ ಶೆವೆ ವಪ್ಪಿಶುತ್ತಿದೆವೆಂಬದಾ

೩೦ ಗಿ ಬಹುತರ ದ್ಯೆಂನ್ಯೊಕ್ತಿಯಿಂದ ಅರಿಕೆ ಮಾಡಿ ಕೊಂಡಲ್ಲಿ ನಿಂಮ ನಿಂಮ ಮನೊಸಂತೊಷದಿಂದ ಅರಿಕೆ ಮಾಡಿಕೊಂಡ ಶೆವೆ ಪ್ರಕಾರ ನಿಂಮ್ಮ ನಿಂಮ್ಮ ವೊ

೩೧ ವುಷೊದ್ಭವರ್‍ರು ಶಿರಸಾವ್ಯೆಹಿಸಿ ಶೆವೆ ನಡಸುಬೆಕೆಂದು ಪೂರ್ಣದಯವಿಟ್ಟು ಅಪ್ಪಣೆ ಆದಂತ್ತಾದಕ್ಕೆ ಯಿಂತ್ತಪ್ಪ ಸದರ್ಮ ವಿಷಯವಾಗಿ ।

೩೨ ಬರಶಿ ವಪಿಶಿವ ದಾನಶಾಸನಕ್ಕೆ ಗುರುಪುತ್ರರಾದಂತ್ತವರ್ರು
ಮುಂದೆ ವಬರಾದರು ಯೆಷ್ಟು ಮಾತ್ರಕ್ಕು ಕಿಂಚಿತ
ಹರುಕತ್ತು ಮಾಡಿ ದೊಷಕ್ಕೆ ಗುರ್ರಿಯಾಗಲರ್ರಿ
೩೩ ಯರು ಅದು ಕಾರಣ ಸರ್ವರು ಧಂನ್ಯರಾಗತಕ್ಕ
ಬಗ್ಯೆ ಅಪ್ಪಣೆ ಕೊಡಬೆಕೆಂದು ಅರ್ರಿಕೆ ಮಾಡಿಕೊಂಡದ
ರ್ರಿಂದ ನಿಮ್ಮ ವಿಸ್ವಾಸ ಯಿದ ಪ್ರಕಾರ ಆಗ
೩೪ ತಕ್ಕದು ಯೆಂಬು ಹಾಗೆ ಚಿತ್ತದಲು ಸಂತೋಷ ಬಟ್ಟು
ಅಪ್ಪಣೆ ಕೊಟ ತರುವಾಯ ಯಿಹದಲ್ಲಿ ಪುಣ್ಯ ಕಿರ್ತಿ
ಶ್ರಯಸ್ಸು ಪರದಲ್ಲಿ ಸದ್ಗತ್ತಿ ಮುಂತ್ತಾದ
೩೫ ಗಳಿಶಿಕೊಂಬುವಲ್ಲಿ ಯಿಚ್ಚೆಯಿಟ್ಟು ಸರ್ವಸ್ತರು ತ್ರಿಕರಣ
ಶಿದ್ಧವಾಗಿ । ಅರ್ರಿಕೆ ಮಾಡಿಕೊಂಡ ಮೆರ್ರಿಗೆ ವಿಶ್ವಸವಿಟ್ಟು
ಸಲಿಶಿ ಧಂನ್ಯಾರಾಗುತ್ತಿದ್ದೆ
೩೬ ವೆಂಬದಾಗಿ ನಂಮ್ಮನಂಮ್ಮ ರಾಜೆಯಿಂದ ಬರಶಿ ವಪ್ಪಿ
ಶಿದ ದಾನಶಾಸನಾ ॥ ಗ್ರಂಥ ॥ ಪದತ್ತ ದ್ವಿಗಣಂ
ಪುಂಣ್ಯ । ಪರದತ್ತಾನು ಪಾಲನಂ । ಪರರತ್ತಾ

೩೭ ಪಹರೇಣಾಂ । ಸ್ವದತ್ತ ನಿಃಪಲಂ ಭವೆತ್ ॥ ೧ ॥
ಸ್ವದತ್ತಾ ಪುತ್ರಿಕಾ ಧಾತ್ರಿ । ಪಿತ್ರುದತ್ತಾ ಸಹೊಧರ್ರಿ ।
ಅಂನ್ಯದತ್ತಾ ಚ ಮಾತಾ ಚಾ । ವಿಪ್ರದತ್ತಾ ವಸು
೩೮ ಂಧರ ॥ ೨ ॥ ವಾಚೊದತ್ತ ಮನೊದತ್ತ । ದಾರಾದತ್ತ
ನಧೀಯತ್ತ ಸಾಟಿವರ್ರುಷಾಣಿ । ಶೂಕರಂ ಜಾಯತ್ತೆ
ನರಃ । ॥ ೩ ॥ ಯಿಂತ್ತೆಂದು ದಂ
೩೯ ರ್ಮ ಶಾಸ್ತ್ರ ವುಂಟಾಗಿ ಯಿರಲಾಗಿ । ದಾನಕ್ಕೆ ಹರಕತ್ತು
ಮಾಡಿದ ಪುರುಷನು । ಅರವತ್ತು ಸಹಸ್ರ ವರುಷ
ಅಘೋರ ನರಕದಲ್ಲಿ ಬಿದ್ದು
೪೦ ಶೂಕರ ಜಲ್ಮದಲ್ಲಿ ಹುಟ್ಟಿ ಕ್ರಿಮಿಯಾಗಿ ಪ್ರವರ್ತಿಸುವನು
ಯೆಂಬುವದು ಶಿದ್ಧಾಂತ್ತ ತಿಳಿದು ಯಾರ್ರು
ಮಾಡಿಕೊಟ್ಟು ಯಿದಾಗ್ಯು
೪೧ ಅನುಕೂಲಶಿ ವರ್ಧನ ಮಾಡಿ । ನೆಡಿಶಿದಂತ್ತ ಪುರುಷು
ಧಂನ್ಯನು ॥

೧ ಕಣುಕುಪಾ ನಾಡಿಗ ಮಾವಿನಳೆಪ ನ ವಪ್ಪಿ
೧ ಬರಮ ಸಮುದ್ರದ । ಗ । ಕರ್ರೆ ಬರಮಪನ ವಪ್ಪಿ
೧ ವುದ್ದ । ಗ । ಭರಮಪ್ಪನ ವಪ್ಪಿ
೧ ಮುದಕ । ನಾ । ಗುರ್ರುಶಿದಪನ ವಪಿ
೧ ದೆವಿಕೆರ್ರೆ । ಗ । ಶಿದ್ಧರಾ । ನ ವಪ್ಪಿ
೧ ಹರ್ರಿಕೆರ್ರೆ । ಗ। ಗುರುಪಾದಪವಪ್ಪಿ
೧ ಉದ್ದಗಟಿನ ವುಪಾರ ಲಚ್ಮಂಣನ ವಪ್ಪಿ
೧ ಉದಗಟಿನ ವುಪಾರ ತಿಂಮ್ಮಂಣನ ವಪ್ಪಿ
೧ ಮಾಕುಂಟಿ ಬುಡಪ್ಪನ ವಪ್ಪಿ
೧ ಮಾಕುಂಟಿ ಸೊಮಪ್ಪನ ವಪ್ಪಿ
೧ ಕಾಮಗೆತನಹಳ್ಳಿ ನಾಗಪ್ಪನ ವಪ್ಪಿ
೧ ಕಾಮಗೆಡನಹಳಿ ಕರಿಯಪನ ವಪ್ತ
೧ ಕಾಮಗೆತಹಳಿ ನಲ್ಲೂಪನ ವಪ್ಪಿ
೧ ನಾದುಲುಗ ಟಿ । ಗ । ಕೊಡ್ಲ । ಬರಮಪ್ಪ ನ ವಪಿಕ್ಕೆ
ದೆವಿಕೆರ್ರೆ ವಳಗೆ ಯಿರ್ರುವ ಯಿರ್ರೈನ ಬರಹ
೧ ಸೊಮೆ । ಗ । ಸಮೆಗಾಯರ ತಾತಪನ ವಪ್ಪಿ
೧ ಅಳುವುದಂಡೆ । ಗ । ಹನುಮಪ್ಪನ ವಪ್ಪಿ ಕ್ಕೆ ದೆವಿಕೆರ್ರೆ
। ಗ । ಶಿದರಾಮ್ಮೈಯ್ನ ಬರಹ
೧ ಕೊರಟಿ । ಗ । ಕರ್ರೆ ಹನುಪ್ಪ ಕಲ್ಲಪನ ವಪ್ಪಿಕ್ಕೆಶಾ ।
ಮೆಲುಗಿರ್ರಿಯಪ್ಪನ ಬರಹ
೧ ಹಿರೆಹರ್ರಿಕೆರ್ರೆ ನಾಲ್ಕು ಭಿಮನ ವಪ್ಪಿ
೧ ಭಂಜಗೆರ್ರೆ ವುಪಾರ ಗದಿಗೆ ತಿಂಮಂಣನವಪ್ಪಿ
೧ ಭಂಜ । ವುಪಾರ ಕರ್ರಿಯಂಣ ವಪ್ಪಿ
೧ ಬಂಜ । ಲಿಂಗಂಣ ವಪ್ಪಿ
೧ ಕಾಮಚಂದರ ತಿಂಮ್ಮಪ್ಪನ ವಪ್ಪಿ
೧ ಅಜನಹಳ್ಳಿ ಬೂತಂಣ ವಪ್ಪಿ

೧ ಮಂಗವನ ತಿಂಮ್ಮಂಣ ವಪ್ಪಿ
೧ ಯಿಾರ ತಿಂಮ್ಮಂಣ ವಪ್ಪಿ
೧ ಕೊಡಿಹಳಿ ತಿಂಮ್ಮಂಣ ವಪ್ಪಿ
೧ ಕನಕೂರು ಗಡ್ಯೆಯ್ನ ವಪ್ಪಿ
೧ ಮಾಳಜ್ಜೆ ಮಲ್ಲೈಯ ವಪ್ಪಿ
ಯಿಾಜನ ವಪ್ತಕ್ಕೆ ನಾಡಿಗ ಗುರ್ರುಶಿದ್ಧಪನ ಬರಹ
೧ ಮುದುಕದಳ
೧ ಬಿಸುವಳ್ಳಿ । ಗ । ದಾನಪ್ಪ । ಕಲಿ ನಿಂಗ ಪ್ಪ । ನ
ವಪ್ಪಿಕ್ಕೆ । ಶಾ । ಮೆಲುಗಿರ್ರಿಯವಪನ ಬರಹ
೧ ಮೆದಗನ ಕೆರ್ರೆ । ಗ । ಚಂನಪ್ಪ ಬ್ಸಪನ ವಪ್ಪಿ
೧ ಚಿಕ್ಕಹರ್ರಿಕೆರ್ರೆ । ಗ । ಬ್ಸಪನ ವಪ್ಪಿ ಕ್ಕೆ [ಶಾ]
ಮೆಲುಗಿರ್ರಿಯಪನ ಬರಹ
೧ ಕಣುಕಪೆ । ವುಪಾರ । ಗ । ಜರ್ರಿಮಲೆ ತಾಲ್ಲುಕಿನ
ಲೊಕಿಕೆರೆ ಗಿರೆ ತಿಂಮ್ಮಪ್ಪ ವಪ್ಪಿ
೧ ಮುಷ್ಟಿಗರಳಿ । ಗ । ನಾರಪ್ಪ ಚಂನಪ ವ ಪ್ಪಿ
೧ ನಿಬಗೂರ್ರು । ಗ । ಭೈರಪ್ಪ ಪವಾಡಪನ ವ ಪ್ಪಿ
೧ ಅರ್ರಿಶಿನ ಗುಂಡಿ । ಗ । ಬ್ಸಪ್ಪ । ನೆಲ್ಲಿಕಟಿಬ್ಸವನ ವತ್ರಿ
೧ ಜಂಮಾಪುರದ । ಗ । ಮುರ್ರಿಗಪ್ಪ ಬಡಪ್ಪ ಸಂಣ
ಲಿಂಗಪ ಅಜಪ್ಪ ಸಹ ವಪ್ಪಿ
೧ ಜಗಲೂರ್ರು । ಗ । ಕಲ್ಲಪನ ವಪ್ಪಿ
೧ ಮಾಚಿಕೆ । ಬ್ಸಂಣನ ವಪ್ಪಿ
೧ ಕಡವನಕಟಿ ಲಿಂಗಂಣ ವಪ್ಪಿ
೧ ಬಂದಜೆ ಬಸವಲಿಂಗಂಣನ ವಪ್ಪಿ
೧ ಮಾಕುಂಟಿ । ಗ । ಕಲ್ಲಪ ವಪ್ಪಿ
೧ ಕಲಿದೆವರಪುರದ । ಗ । ದೊಡ ಲಿಂಗಪ್ಪ ಕಲ್ಲಪನ
ವಪ್ಪಿ

೧ ಶಿದ್ವನಳಿ ಐಯಪ್ಪನ ವಪ್ಪಿ
೧ ಮೂಡಲು ಮಾಚಿಕೆರ್ರೆ । ಗ । ಐಯಪನ ವಪ್ಪಿ
೧ ಮುಷೂರ್ರು । ಗ । ದೊಂಣೆಭಿಮಪ್ಪ ವ ಪ್ಪಿ
ಸದರ್ರಿ ಯಿಾಂತಿಪ್ಪುರ್ರು ಲೆಖನೆ ಮು ಟಿದ ವಪ್ಪಿಕ್ಕೆ
ಜಯಾಪುರದ । ಗ । ಕಲ್ಲಪ್ಪನ ಬರಹ
೧ ಹಾಲದಳಿ । ಗ । ವೊಬಸನ ವಪ್ಪಿಕ್ಕೆಜಂತ್ತಿಕಲ್ಲು
ಗುರುಪಾದಪ ಬರಹ
೧ ಹಿರ್ರೆಯಲ್ಲನ । ಹೊಳೆ । ಗ । ಶಾಮಲ ಭಿಮ್ಮೈಯನ
ವಪ್ಪಿಕ್ಕೆ ಗುರ್ರುಪಾದಪ್ಪನ ಬರಹ
೧ ಕೊರಟ ಕೆರ್ರೆ ವುಪಾರ ತಿಂಮ್ಮಪನ ವಪ್ಪಿಕ್ಕೆ ದೆವಿಕೆರ್ರೆ
। ಗ । ಶಿದ್ಧರಾಮಪನ ಬರಹ
೧ ಅಳುದಂಡೆ ವುಪಾರ ಕರ್ರಿಯಪನ ವಪ್ಪಿ
೧ ಗಂಗ್ವನ ಮಗ ತ್ತಿಂಮಂಣನ ವಪ್ಪಿಶಾಂತ್ತಪನ ಬರಹ
೧ ಚಿಕ್ಕಹರ್ರಿಕೆರ್ರೆ ವುಪಾರ ಶಿದ್ಯೆಯ ನ ವತ್ತಿ
೧ ಚಿಕ್ಕು ಹರ್ರಿ ಕೆರ್ರೆ ವುಪಾರ ಮುಪಯಪನ ವಪ್ಪಿ
೧ ಜಂಮಾಪುರದ ಭಿಮಪ್ಪನ ವಪ್ಪಿ
೧ ಜಂಮಾಪುರದ ದಾಸರವೆಪನ ವಪ್ಪಿ
೧ ಜಯಾಪುರದ ಕಬಿಗೆರ್ರೆ ಶಿದ್ಧಪ ನ ವಪ್ಪಿ
೧ ಜಯಾಪುರದ ದೆವರಮನಿ ತಿಂಮ್ಮಪ್ಪನ ವಪ್ಪಿ
೧ ಡೊಣೆಹಳಿ । ಗ । ಗಾದ್ರಿಪಾಲೈಯನ ವಪ್ಪಿಕ್ಕೆ ಬಸವನ
ಬರಹ
೧ ಕಾಮಗೆತನಹಳ್ಳಿ । ಗ । ಕಾಡಪ್ಪನ ವಪ್ಪಿ
೧ ಸುಳೊಬನಳಿ । ಗ । ನಂಜಪ್ಪ ವಪ್ಪಿ
೧ ಕಾಸಾದ ರಡಿಹಳಿ । ಗ । ನಂಜಪ್ಪ ವಪ್ಪಿ
೧ ಗೊಗುತ್ತಿನ । ಗ । ದ್ಯೆಮಪನ ವಪ್ಪಿ
೧ ಕಾಮನಳಿ । ಗ । ಕೆಂಚಪ್ಪನ ವಪ್ಪಿ

ಎರಡನೆಯ ಶಾಸನ

೧ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಮುಗಾ ರಾಜೇಂದ್ರ ಸ್ವಾಮಿನಾಂ ಶ್ರೀ ಚರಣಾರವಿಂದಗಳಿಗೆ

೨ ನಮಸ್ತುಂಗ ಶಿರಶ್ಚುಂಬಿ ಚೆಂದ್ರ ಚಾಮರ ಚಾರುವೆ ತ್ರೈಲೊಕ್ಯ ನಗರಾರಂಭ ಮೂಲಸ್ತಂಭಾಯ ಶಾಂಭವೇ ॥ ೧ ॥ ಸ್ವಸ್ತಿಶ್ರೀ ವಿ

೩ ಜಯಾಭ್ಯುದಯ ಶಾಲಿವಾಹನ ಶಖ ವರುಷಂಗಳು ೧೭೬೦ನೆ ವಿಳಂಬಿ ನಾಮ ಸಂ ॥ ರದ ಭಾದ್ರಪದ ಶು ೧೨ ನಿರುದ್ದಲ್ಲು

೪ ಚಿತ್ರದುರ್ಗದ ಸಿಮೆ ತಳುಕು ತಾಲೊಕು ಪೈಕಿ ನಾಯ್ಕನಹಟ್ಟಿ ಮುಂತಾದ ಪ್ಯಾಟಿ ಮನೆ ಗ್ರಾಮಾನು ಗ್ರಾಮಂಗಳಲ್ಲಿರುವ ಉ

೫ ಪ್ಪಿನ ಮಾಳೆ ಯಿಜಾರದಾರ್ರು ಗೊಲ್ಲರಹಳ್ಳಿ ಹನುಮಪ್ಪ– ಬೂಸೆದೇವರ ಹಟ್ಟಿ ಭಂಗಾರಪ್ಪ – ಉಪಿನಮೊಳೆಗಳ ಮಾಡತಕ್ಕ

೬ ಗೊಲ್ಲರಹಳ್ಳಿ ಗೊವಿಂದಪ್ಪ – ದೊಡ್ಡಶಿದಪ್ಪ – ಹಂಪೈಯ್ಯ – ದುಗ್ಗವಾರದ ಮಾಳಪ್ಪ – ಪುಜಾರಿ ಲಿಂಗಪ್ಪ – ಭಂಗಿ ತಿಪ್ಪೈಯ್ಯ

೭ ಗಲುಡಗೆರೆ ಉಪ್ಪಾರ ಗಲುಡ ತಿಂಮಪ್ಪ – ಹಟ್ಟಿಶಿಧಪ್ಪ – ಬೂಸೆದೇವರಹಟ್ಟಿ ಚೊಗಪ್ಪ – ಜಡೆಕತ್ಯಪ್ಪ – ಹೆಗ್ಗಂಣ – ವರ

೮ ವಿನ ಗ್ರಾಮದ ಸಂಣಶಿದ್ದೈಯ್ಯ – ಗಉರಿಪುರದ ತಿಂಮೈಯ್ಯ – ಮುಂತಾದ ಉಪ್ಪಿನ ಮೊಳೆಗಳ ಮಾಡತಕ್ಕ ಸಮಸ್ತು ರೈ

೯ ತರು ಸಹ ಬರಶಿ ವಪ್ಪಿಸಿದ ದಾನ ಶಾಸನದ ಕ್ರಮವೆನೆಂದರೆ ಅದಾಗಿ ಪ್ರಾಕು ಮಹಾ ॥ ॥ ಸಂನಿಧಿ ದಾಸೊಹದ ಶೆ

೧೦ ವಿಗೆ ಹಾಜರಾಗಿ ಯಿದಂತ ನಂಮ ಹಿರೆರ ಪಾಲಿಗು ನಂಮ ಪಾಲಿಗೆ ಸಹ ಪುಂಣ್ಯ ಶ್ರಯಸ್ಸು ಗಳಿಸಿಕೊಳ್ಳತಕ್ಕ ಬಗ್ಯು – ನಂ

೧೧ ಮ ನಂಮ ವಂಶ ಅಭಿಹ್ರುದ್ಧಿಯಾಗತಕ್ಕ ಬಗ್ಯೆ ಸಹ ಯಾಗ ಮಹಾ ॥ ॥ ಸಂನಿಧಿ ದರ್ಶನಾನಂತರದಲ್ಲಿ ಸದರಿ ತಾ

೧೨ ಲೊಕು ಪೈಕಿ ಗ್ರಾಮಾನುಗ್ರಾಮಂಗಳಲ್ಲಿರುವ ಉಪ್ಪಿನ ಮಾಳಸ್ತರ ಪೈಕಿ ನಾಲುಗಳು ಮಹಾ ॥ ॥ ಸಂನಿಧಿ ದಾಸೊಹದ ಶೆವೆಗೆ

೧೩ ಶಕ್ತಾನುಸಾರ ನಂಮ ಅಳುಲು ಭಕ್ತಿ ಸಮರ್ಪಿಸಬೆಕೆಂಬ ಆಲೊಚನೆ ಮನದಲ್ಲಿ ಗ್ರಹಿಸಿಕೊಂ ಪ್ರಕಾರಕ್ಕೆ ಕೊಣಗಳ ಕಾ

೧೪ ಲು ನಡೆ ೧ಕ್ಕೆ ದರ ಗಿ ೨ ॥ ಯರಡುವರೆ ಗಿದ್ನದ ಮೇರಿಗೆ ಸಮಸ್ತು ಮೊಳೆಗಳಲ್ಲಿ ಯೆಷ್ಟು ನಡೆಗಳು ಯಿದ್ದಾಗ್ಯು ಸದರಿ ನಡೆ ವಂ

೧೫ ದರ ವಿವರದಂತೆ ಯೆಷ್ಟು ಉಪ್ಪು ಆದಾಗ್ಯೂ ಆದಷ್ಟು ಉಪ್ಪು ಭಕ್ತಿಪೂರ್ವಕವಾಗಿ ವಂಚನೆಯಿಲ್ಲದೆ ಮಹಾ ॥ ॥ ಸಂ

೧೬ ನಿಧಿಗೆ ಸರ್ವಸ್ತರಿಂದ ಸಲ್ಲುವಂತೆ ಮಾಡುತಿಧೆವೆ – ಯಿದೆ ಪ್ರಕಾರ ನಂಮ ಪುತ್ರ ಪಉತ್ರ ಪಾರಂಪರ ಅಚೆಂದ್ರಾರ್ಕವರಿಗು

೧೭ ಸರಾಗದಿಂದ ಶೇವಿ ವಪ್ಪಿಸುತಿದ್ದೆವೆಂಬದಾಗಿ ಬಹುತರ ದೈನ್ಯೊಕ್ತಿಯಿಂದ ಅರಿಕೆ ಮಾಡಿಕೊಂಡಲ್ಲಿ ನಿಂಮ ನಿಂಮ ಮನೊ

೧೮ ಸಂತೊಷದಿಂದ ಅರಿಕೆ ಮಾಡಿಕೊಂಡ ಶೇವಿ ಪ್ರಕಾರ ನಿಂಮ ನಿಂಮ ವಂಶೊಧ್ಭವರು ಸಿರಸಾ ವೈಶಿ ಶೆವೆ ನಡೆಸಬೇಕೆಂದು

೧೯ ಪೂರ್ಣ ದಯವಿಟ್ಟು ಅಪ್ಪಣೆ ಆದಂತಾದ್ದಕ್ಕೆ ಯಿಂತಪ್ಪ ಸಧರ್ಮ ವಿಷಯವಾಗಿ ಬರಶಿ ವಪ್ಪಿಸಿದ ದಾನಶಾ[ಸ*] ನಕ್ಕೆ ಕುಲ

೨೦ ಪುತ್ರರಾದಂತವರು ಮುಂದೆ ವಬ್ಬರಾದರು ಯೆಷ್ಟು ಮಾತ್ರಕ್ಕು ಕಿಂಚಿತ ಹರುಕತ್ತು ಮಾಡಿ ದೊಷಕ್ಕೆ ಗುರಿಯಾಗಲರಿಯ

೨೧ ರು ಆದ ಕಾರಣ ಸರ್ವಸ್ತರು ಧನ್ಯರಾಗತ್ಕ ಬಗ್ಯೆ ಅಪ್ಪಣೆ ಕೊಡೆಬೇಕೆಂದು ಅರಿಕೆ ಮಾಡಿಕೊಂಡಧರಿಂ ನಿಂಮ ವಿಶ್ವಾಸ

೨೨ ಯಿಧ ಪ್ರಕಾರ ಆಗತಕ್ಕದು ಯಂಬ ಹಾಗೆ ಚಿತ್ತದಲ್ಲು ಸಂತೊಷಬಟ್ಟು ಅಪ್ಪಣೆ ಕೊಟ್ಟ ತರುವಾಯ ಯಿಹದಲ್ಲಿ

೨೩ ಪುಂಣ್ಯ ಕೀರ್ತಿ ಶ್ರಯಸ್ಸು ಪರದಲ್ಲಿ ಸದ್ಗತಿ ಮುಂತಾದ್ದ ಗಳಿಸಿಕೊಂಬುವಲ್ಲಿ ಯಿಚ್ಛೆ ಯಿಟ್ಟು ಸರ್ವಸ್ತರು ತ್ರಿಕರಣ ಶು

೨೪ ದ್ದವಾಗಿ ಸದರಿ ಅರಿಕೆ ಮಾಡಿಕೊಂಡ ಮೆರಿಗೆ ವಿಶ್ವಾಸವಿಟ್ಟು ಸಲ್ಲಿಸಿ ಧಂನ್ಯರಾಗುತ್ತಿಧೆದೆಂಬದಾಗಿ ನಂಮ ನಂಮ ರಾಜಿ

೨೫ ಯಿಂದ ಬರಶಿ ವಪ್ಪಿಸಿದ ದಾನ ಶಾಸನಾ ॥ ಗ್ರಂಥ ॥ ಸ್ವದತ್ತ ದ್ವಿಗುಣಂ ಪುಣ್ಯಂ – ಪರದತ್ತಾ ನುಪಾಲನಂ = ಪರದತ್ತಾ

೨೬ ಪಹಾರೇಣ – ಸ್ವದತಂ ನಿಷ್ಪಲಂ ಭವೇತು ॥ ೧ ॥ ಸ್ವದತ್ತ ಪುತ್ರಿಕಾ ದಾತ್ರಿ – ಪಿತ್ತುದತ್ತ ಸಹೋರಿ – ಅಂನ್ಯದತ್ತಾ ಚ ಮಾತಾ

೨೭ ಚ – ವಿಪ್ರದತ್ತ ವಸುಂಧರಾ ॥ ೨ ॥ ವಾಚಾದತ್ತ ಮನೊದತ್ತ । ದಾರಾದತ್ತ ನ ದಿಯತೆ ಸಾಲು ಸಹಸ್ರ ವರುಷಾಣಿ ಶೂಕ

೨೮ ರಂ ಜಾಯತೆ ನರಃ ॥ ೩ ॥ ಯಿಂತೆಂದು ಧರ್ಮಶಾಸ್ತ್ರ ಉಂಟಾಗಿರಲಾಗಿ ದಾನಕ್ಕೆ ಹರುಕತ್ತು ಮಾಡಿದ ಪುರುಷನು

೨೯ ಅರುವತ್ತು ಸಹಸ್ರ ವರುಷ ಅಘೋರ ನರಕದಲ್ಲಿ ಬಿದ್ದು ಶೂಕರ ಜಲ್ಮದಲ್ಲಿ ಹುಟ್ಟಿ ಕ್ರಿಮಿಗಿ ಪ್ರವರ್ತಿಸುವನು.


೩೦ ಯುಂಬುವದು ಸಿಧಾಂತ ತಿಳಿದು ಯರಾರು ಮಾಡಿಕೊಟ್ಟು ಯಿಧಾಗ್ಯು ಅನುಕೂಲಿಸಿ ವರ್ದನ ಮಾಡಿ ನಡಸಿದಂತ ಪು[ರು*]

೩೧ ಷ ಧಂನ್ಯನೂ ॥




೩೨ ಯಿಾ ವುಪಿನ ಕಟಿಗಳು ಸದರ್‍ರಿ ಗೊಲ್ಲರಹಳಿಯಲು ಯಿಾರುವ ವುಪಾರ ಹನುಮಪ್ಪ ಶಿದ್ದಪ್ಪ । ಗೋವಿಂದಪ್ಪ ಹಂಪ್ಪೆಯ । ತಿಂಮಪ್ಪ । ಬೂಸೆದೇವರ ಹ

೩೩ ಟ್ಟಿ ಭಂಗಾರಪ್ಪ । ದುರ್ಗದ ತಿಂಮಪ್ಪ । ಸಹ । ಹಸ್ತಮು ಹಾಕಿದ ವಪ್ಪಿತ್ಕೆ ಚಂನಗಿರ್‍ರಿ ತಾಲೊಕು ಪೈಕಿ ನಲ್ಲೂರ್‍ರು ಶೆಟ್ರು ರೇವಪ್ಪನ ಬರಹಾ

೩೪  ಯಿಾ ಉಭಯ ಉಪ್ಪಿನಕಟ್ಟಿಗಳು ತಂಮ ಸಂನ್ಮತದಿಂದ ಬರಸಿದವರು ಉಳ್ಳರ್ತಿ ತಂಮಂಣ ವಿರಂಣ

೩೫ ನ ಲೆಕಣಿ ಮುಟ್ಟಿದ ರುಜುವಿಗೆ ಮುನಿಷಿಗಳ ಬರಹಾ


(ಕೃತಜ್ಞತೆ : ಈ ಶಾಸನಗಳನ್ನು ಅಧ್ಯಯನ ಮಾಡಲು ಅವಕಾಶ ನೀಡಿದ ಚಿತ್ರದುರ್ಗದ ಶ್ರೀ ಮುರುಘರಾಜೇಂದ್ರ ಮಠದ ಡಾ. ಶಿವಮೂರ್ತಿ ಮುರುಘಾ ಶರಣರಲ್ಲಿ ನನ್ನ ಭಕ್ತಿಪ್ರಣಾಮಗಳು.)






೨ನೆಯ ಶಾಸನ (ಇದೊಂದೇ ಪುಟ)

[illegible]



[illegible]



[illegible]

ಡಾ. ಆರ್. ರಂಗಸ್ವಾಮಿ*

ಕೃಷ್ಣರಾಜಪೇಟೆ ತಾಲ್ಲೂಕಿನ ಶಾಸನೋಕ್ತ ಗಾವುಂಡರ ಚಟುವಟಿಕೆಗಳು

ಪೀಠಿಕೆ : ಮಂಡ್ಯ ಜಿಲ್ಲಾ ಪ್ರದೇಶವು ಕನ್ನಡ ನಾಡಿನಲ್ಲಿ ಆಳಿದ ವಿವಿಧ ಅರಸು ಮನೆತನಗಳ ಆಳ್ವಿಕೆಗೆ ಒಳಪಡುತ್ತಾ ಬಂದಿರುವುದು ಸಮಕಾಲೀನ ಶಾಸನಾದಿ ಪುರಾತತ್ವ ಮತ್ತು ಸಾಹಿತ್ಯಕ ಕುರುಹುಗಳಿಂದ ಮನದಟ್ಟಾಗುತ್ತದೆ. ಪ್ರಸ್ತುತ ಲೇಖನದಲ್ಲಿ ಕೃಷ್ಣರಾಜಪೇಟೆ ತಾಲ್ಲೂಕಿನ ಶಾಸನಗಳನ್ನು ಕೇಂದ್ರವಾಗಿಟ್ಟುಕೊಂಡು, ಈ ತಾಲ್ಲೂಕಿನಲ್ಲಿ ಆಳಿದ ಗಾವುಂಡರ ಚಟುವಟಿಕೆಗಳನ್ನು ಪರಿಶೀಲಿಸಲಾಗಿದೆ.

ಗಾವುಂಡರು ಪ್ರಭುಗಾವುಂಡರ ಅಧೀನದಲ್ಲಿ ಗ್ರಾಮಗಳ ಸ್ಥಳೀಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ಒಂದು ಗ್ರಾಮದಲ್ಲಿ ಒಬ್ಬ ಗಾವುಂಡ ಇರುತ್ತಿದ್ದನು. ಕೆಲವು ಗ್ರಾಮಗಳಲ್ಲಿ ಹಲವಾರು ಗಾವುಂಡರಿದ್ದು, ಅವರೆಲ್ಲರ ಮೇಲೆ ಒಬ್ಬ ಪ್ರಧಾನ ಗಾವುಂಡ ಇರುತ್ತಿದ್ದನು.[೧] ಗಾವುಂಡತನ ವಂಶಪಾರಂಪರ್ಯವಾಗಿ ಮುಂದುವರೆಯು ತ್ತಿತ್ತು. ಅವರು ಗ್ರಾಮದ ಆಡಳಿತ, ರಕ್ಷಣೆ, ಸುಂಕ ಸಂಗ್ರಹಣೆ ಮೊದಲಾದ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಅದರೊಂದಿಗೆ ಗ್ರಾಮಕ್ಕೆ ಕೊಳ್ಳೆಯ ಬಾಧೆ ಮೊದಲಾದ ಸಂದರ್ಭಗಳಲ್ಲಿ ಜೀವದ ಹಂಗು ತೊರೆದು ಹೋರಾಡು ತ್ತಿದ್ದರು.[೨] ಕೆಲವು ಗಾವುಂಡರು **ಏಕಭೋಗದಿಂದ**[೩] ಮತ್ತೆ ಕೆಲವರು ತ್ರಿಭೋಗದಿಂದ[೪] ಆಳುತ್ತಿದ್ದರು. ಕೃಷ್ಣರಾಜಪೇಟೆ ತಾಲ್ಲೂಕಿನ ಶಾಸನಗಳಲ್ಲಿ ಕಾಣುವ ಗಾವುಂಡರು ಮತ್ತು ಅವರ ಚಟುವಟಿಕೆಗಳು ಈ ಕೆಳಗಿನಂತಿವೆ :

೧. **ಏಚಗಾವುಣ್ಡ :** ಕ್ರಿ.ಶ. ೧೧೧೩ರಲ್ಲಿ ಈತನು ಹಿರೀಕಳಲೆ ಗ್ರಮದಲ್ಲಿ ಗಾವುಂಡುಗೈಯುತ್ತಿದ್ದನು. ಈತನು ಸ್ಥಳೀಯ ಅಂಕಕಾರ ದೇವಾಲಯಕ್ಕೆ ಭೂದಾನ ಮಾಡಿದ್ದಾರೆ.[೫]

೨. **ಗಾವುಂಡರು :** ಇವರು (ಹೆಸರುಗಳ ಉಲೇಖ ವಿಲ್ಲ) ಮಾಳಗೂರಿನಲ್ಲಿ ಗಾವುಂಡುಗೈಯುತ್ತಿದ್ದರು ಇವರು ಮಹಾ ಸಾಮಂತ ಬಲ್ಲೆಯನಾಯಕ ಮತ್ತು ಐವತ್ತೊಕ್ಕಲವ ರೊಂದಿಗೆ ಜೊತೆಗೂಡಿ ಸ್ಥಳೀಯ ಕರ್ಮ್ಮಟೇಶ್ವರ ದೇವಾಲಯಕ್ಕೆ ಭೂದಾನ ನೀಡಿದ್ದಾರೆ.[೬]

೩. **ಗೋಳಗವುಡ :** ಕ್ರಿ.ಶ. ಸುಮಾರು ೧೦-೧೧ನೆಯ ಶತಮಾನದಲ್ಲಿ ಈತನು ತೊಣಚಿ ಗ್ರಾಮದಲ್ಲಿ ಗಾವುಂಡುಗೈಯುತ್ತಿದ್ದನು. ಸ್ಥಳೀಯ ಅಂಕಕಾರ ದೇವಾಲಯಕ್ಕೆ ಭೂದಾನ ಮಾಡಿದ್ದಾನೆ.[೭]

೪. **ಗಾವುಂಡರು :** ಇವರ (ಹೆಸರುಗಳು ಉಲ್ಲೇಖವಿಲ್ಲ) ತೊಣಚಿ ಗ್ರಾಮದಲ್ಲಿ ಗಾವುಂಡಗೈಯುತ್ತಿದ್ದರು. ಇವರು ಹೊಯ್ಸಳ ವೀರಬಲ್ಲಾಳದೇವನ ಜೊತೆಗೂಡಿ ಸ್ಥಳೀಯ ಸಿದ್ಧನಾಥ ದೇವಾಲಯಕ್ಕೆ ಭೂದಾನ ಮಾಡಿದ್ದಾರೆ.[೮]

೫. **ಮಾರಗೌಡ :** ಇವನು ಸಂಕಿಯ ಕುಲದವನು. ಕೈಗೋನಹಳ್ಳಿಯಲ್ಲಿ ಗಾವುಂಡುಗೈಯುತ್ತಿದ್ದನು.[೯] ಈತನ ಮಕ್ಕಳಾದ ಕಪಿಗೊಂಡ, ಕರಕಗೌಡ, ಭುವಗೌಡ್ಡ, ಗೌಡಗೊಡ್ಡ ಮತ್ತು ರಾಯಗೌಡ ಇವರುಗಳು ಇದೇ ಗ್ರಾಮದಲ್ಲಿ ಗಾವುಂಡರಾಗಿ ಕಾರ್ಯ ನಿರ್ವಹಿಸಿದ್ದಾರೆ.[೧೦]

೬. **ಚಿಕ್ಕಗವುಣ್ಡ :** ಇವನು ಕಡಂಬಿಗೆಂಯು ಗಾವುಂಡನಾಗಿದ್ದನು. ಸ್ಥಳೀಯ ಅಂಕಕಾರ ದೇವಾಲಯಕ್ಕೆ ಭೂದಾನ ಮಾಡಿದ್ದಾನೆ.[೧೧]

೭. **ಬಿಟ್ಟಿಗಾವುಡ :** ಮಡುವಿನಕೋಡಿಯ ಕ್ರಿ.ಶ. ೧೨೦೦ರ ಶಾಸನೋಕ್ತ ಈತನು ತನ್ನ ಧರ್ಮಪತ್ನಿ ದುಬಿ ಗಾವುಂಡಿಂಯೊಂದಿಗೆ ಪ್ರಸ್ತುತ ಗ್ರಾಮದಲ್ಲಿ ಗಾವುಂಡುಗೈಯುತ್ತಿದ್ದನು.[೧೨] ಬಿಟ್ಟಿಗಾವುಂಡನ ಮಕ್ಕಳಾದ ಮಲ್ಲಿಯಣ್ಣ ಗಾವುಂಡ ಮತ್ತು ಮಾರಗೌಡ ಇದೇ ಗ್ರಾಮದಲ್ಲಿ ಗಾವುಂಡರಾಗಿದ್ದರು.[೧೩]

೮. **ಬಲ್ಲಗಾವುಂಡ :** ಅಗ್ರಹಾರ ಬಾಚಹಳ್ಳಿಯಲ್ಲಿ ಕ್ರಿ.ಶ. ೧೨೨೪ರಲ್ಲಿ ಈತನು ಗಾವುಂಡಗೈಯುತ್ತಿದ್ದನು.[೧೪]

೯. **ದಮ್ಮಗವುಂಡ :** ಜಾಗನಕೆರೆಯ ಕ್ರಿ.ಶ. ೧೨೪೨ರ ಶಾಸನ ಪ್ರಕಾರ ಇವನು ಬೆಳ್ಳಿಯ ಕುಲದವನು. ಇವನು ತನ್ನ ಧರ್ಮಪತ್ನಿ ಬೊಮ್ಮಗಾವುಂಡಿಯೊಂದಿಗೆ ಪ್ರಸ್ತುತ ಗ್ರಾಮದಲ್ಲಿ ಗಾವುಂಡಗೈಯುತ್ತಿದ್ದನು.[೧೫]

೧೦. **ಬಿಟ್ಟಿಗವುಂಡ :** ಅದೇ ಶಾಸನದಿಂದ ತಿಳಿಯುವಂತೆ ಈ ಮೇಲಿನ ದಮ್ಮಗಾವುಂಡ ಮತ್ತು ಬೊಮ್ಮಗಾವುಂಡಿ ದಂಪತಿಗಳ ಮಗ. ಈತನು ತನ್ನ ಧರ್ಮಪತ್ನಿ ಬೀಚಗಾವುಂಡಿ ಯೊಂದಿಗೆ ಜಾಗನಕೆರೆಯಲ್ಲಿ ಗಾವುಂಡಗುಗೈಯುತ್ತಿದ್ದನು.[೧೬]

೧೧. **ಹರಿಯಗವುಂಡ :** ಈತನು ಈ ಮೇಲಿನ ಬಿಟ್ಟಿಗಾವುಂಡ ಮತ್ತು ಬೀಚಗಾವುಂಡಿ ದಂಪತಿಗಳ ಮಗ. ಈತನು ತನ್ನ ಪತ್ನಿ ಹರಿಯುಗಾವುಂಡಿಯೊಂದಿಗೆ ಜಾಗನಕೆರೆಯ ಗ್ರಾಮದಲ್ಲಿ ಗಾವುಂಡುಗೈಯುತ್ತಿದ್ದನು.[೧೭]

* ಇತಿಹಾಸ ವಿಭಾಗ, ಮಹಾರಾಣಿ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜು, ಮೈಸೂರು.

೧೨. **ಮಾರದೇವಗಾವುಂಡ :** ಈತನು ಜಾಗನಕೆರೆಯ ಕ್ರಿ.ಶ. ೧೨೪೨ರ ಶಾಸನೋಕ್ತ ಗಾವುಂಡ. ಈ ಮೇಲಿನ ಹರಿಯಗಾವುಂಡ ಮತ್ತು ಹರಿಯಗಾವುಂಡಿ ದಂಪತಿಗಳ ಪುತ್ರ, ಇವನು ತನ್ನ ಧರ್ಮಪತ್ನಿ ಮಾಚಿಗಾವುಂಡಿಯೊಂದಿಗೆ ಪ್ರಸ್ತುತ ಗ್ರಾಮದಲ್ಲಿ ಗಾವುಂಡಗೈಯುತ್ತಿದ್ದನು.[೧೮]

೧೩. **ಕಲ್ಲಗವುಂಡ :** ಜಾಗನಕೆರೆಯ ಕ್ರಿ.ಶ. ೧೨೪೨ರ ಶಾಸನದಲ್ಲಿ ಇವನು ಉಲ್ಲೇಖಿತನಾಗಿದ್ದಾನೆ. ಇವನು ಮಾರದೇವಗಾವುಂಡ ಮತ್ತು ಮಾಚಿಗಾವುಂಡಿ ದಂಪತಿಗಳ ಪುತ್ರ, ಈತನು ಜಾಗನಕೆರೆಯ ಗ್ರಾಮದಲ್ಲಿ ಗಾವುಂಡನಾಗಿದ್ದನು. ಆಗ ಈ ಗ್ರಾಮದಲ್ಲಿ ತನ್ನ ಮುತ್ತಜ್ಜ ದಮ್ಮಗಾವುಂಡನ ಪರೋಕ್ಷ ವಿನಯಾರ್ಥವಾಗಿ ಆತನ ಹೆಸರಿನಲ್ಲಿ ದಮ್ಮೇಶ್ವರ ದೇವಾಲಯವನ್ನು ನಿರ್ಮಿಸಿ ಅದರ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ದಾನ ಮಾಡಿದ್ದಾನೆ.[೧೯]

೧೪. **ರಾಮಗವುಡ :** ಚಿಟ್ಟನಹಳ್ಳಿಯ ಕ್ರಿ.ಶ. ೧೩೦೩ರ ಶಾಸನೋಕ್ತ ಈತನು ಪ್ರಸ್ತುತ ಗ್ರಾಮದಲ್ಲಿ ಗಾವುಂಡುಗೈಯುತ್ತಿದ್ದನು.[೨೦]

೧೫. **ಕಾಮಗವುಡ :** ಈತನು ಅದೇ ಗ್ರಾಮದಲ್ಲಿ ಗಾವುಂಡುಗೈಯುತ್ತಿದ್ದ ವಿಚಾರವಿದೆ.[೨೧]

೧೬. **ಮಾಚಿಗವುಡ :** ಮಡುವಿನಕೋಡಿಯ ಕ್ರಿ.ಶ. ೧೩೪೬ರಲ್ಲಿ ಈತನು ತನ್ನ ಧರ್ಮಪತ್ನಿ ಮಾದಗೌಡಿಯೊಂದಿಗೆ ಪ್ರಸ್ತುತ ಗ್ರಾಮದಲ್ಲಿ ಗಾವುಂಡು ಗೈಯುತ್ತಿದ್ದ ವಿಚಾರ ತಿಳಿದು ಬರುತ್ತದೆ.[೨೨]

೧೭. **ಸಳಿಗವುಡ :** ಮಾದಗಾವುಂಡ ಮತ್ತು ಮಾದಗಾವುಂಡಿ ದಂಪತಿಗಳ ಮಗನಾದ ಈತನು ಮಡುವಿನಕೋಡಿಯ ಗ್ರಾಮದಲ್ಲಿ ಗಾವುಂಡನಾಗಿದ್ದನು.[೨೩]

೧೮. **ಮಲ್ಲಿಗೌಡ :** ಇವನು ಮಂಚಿಬೀಡಿನಲ್ಲಿ ಗಾವುಂಡನಾಗಿದ್ದನು.[೨೪]

೧೯. **ಬಸವೇಗೌಡ :** ಕ್ರಿ.ಶ. ಸುಮಾರು ೧೫–೧೬ನೆಯ ಶತಮಾನದಲ್ಲಿ ವಸಂತಪುರದ ಗ್ರಾಮದಲ್ಲಿ ಗಾವುಂಡನಾಗಿದ್ದನು.[೨೫]

೨೦. **ಕೆಂಪೇಗೌಡ :** ಅದೇ ಶಾಸನದಲ್ಲಿ ಉಲ್ಲೇಖಿತ ಈತನು ಈ ಮೇಲಿನ ಬಸವೇಗೌಡನ ಪುತ್ರ, ಈತನು ವಸಂತಪುರದಲ್ಲಿ ಗಾವುಂಡುಗೈಯುತ್ತಿದ್ದನು.[೨೬]

೨೧. **ಮಾಯಿಗೌಂಡ :** ಸಾಸಲಿನ ಕ್ರಿ.ಶ. ೧೭೫೩ರ ಶಾಸನೋಕ್ತವಾಗಿರುವ ಇವನು ಪ್ರಸ್ತುತ ಗ್ರಾಮದಲ್ಲಿ ಗಾವುಂಡಗೈಯುತ್ತಿದ್ದನು. ಈತನು ಸ್ಥಳೀಯ ಧಾರ್ಮಿಕ ಚಟುವಟಿಕೆಗಳಿಗೆ ದಾನ ಮಾಡಿದ್ದಾನೆ.[೨೭]

ಉಪಸಂಹಾರ : ಈ ತಾಲ್ಲೂಕಿನಲ್ಲಿ ಹೊಯ್ಸಳ ವಿಜಯನಗರ ಮನೆತನಗಳ ಅಧೀನದಲ್ಲಿ ಗಾವುಂಡರು ಆಳ್ವಿಕೆ ನಡೆಸಿದ್ದಾರೆ. ಒಟ್ಟಾರೆ ಈ ತಾಲ್ಲೂಕಿನ ಶಾಸನಗಳು ಸ್ಥಳೀಯ ಪ್ರಾಚೀನ ರಾಜಕೀಯ, ಆಡಳಿತದ ಹಿನ್ನೆಲೆಯನ್ನು ಹಾಗೂ ಇಲ್ಲಿ ಆಡಳಿತ ನಡೆಸಿದ ಗಾವುಂಡರ ವಂಶಾವಳಿ, ಆಳ್ವಿಕೆ ಮತ್ತು ಅವರು ಕೈಗೊಂಡ ಸಾಮಾಜಿಕ, ಧಾರ್ಮಿಕ ಮುಂತಾದ ಚಟುವಟಿಕೆಗಳನ್ನು ಪುನರ್‌ರಚಿಸಲು ಮಹತ್ವಪೂರ್ಣ ದಾಖಲೆಗಳಾಗಿವೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** (೧೯೭೭) ಪುಟ ೩೫೬–೩೫೭.
೨. ನಾಗಯ್ಯ ಜಿ.ಎಂ., **ಆರನೆಯ ವಿಕ್ರಮಾದಿತ್ಯನ ಶಾಸನಗಳು–ಒಂದು ಅಧ್ಯಯನ,** (೧೯೯೨), ಪುಟ ೨೫೩.
೩. ವ್ಯಕ್ತಿಯು ತಾನು ಜೀವಂತವಾಗಿರುವವರೆಗೆ ಮಾತ್ರ ಆಡಳಿತ ಕೈಗೊಳ್ಳುವುದು ಏಕಭೋಗವಾಗಿದೆ. ಈ ಅಧಿಕಾರ ಆತನ ವಂಶಸ್ಥರಿಗೆ ಮುಂದುವರೆಯುವುದಿಲ್ಲ.
೪. ಮೂರು ತಲೆಮಾರುಗಳವರೆಗೆ ಒಂದೇ ವಂಶಸ್ಥರು ಆಡಳಿತವನ್ನು ನಡೆಸುವುದು ತ್ರಿಭೋಗವಾಗಿದೆ.
೫. **ಎಪಿಗ್ರಾಫಿಯಾ ಕರ್ನಾಟಿಕ.,** ಸಂ. ೬, ಕೃಷ್ಣರಾಜಪೇಟೆ ೭೪, (ಮೈ.ವಿ.ವಿ. ಆವೃತ್ತಿ), ಪುಟ ೬೦.
೬ ಅದೇ., ೬೬, ಪುಟ ೪೮–೪೯.
೭. ಅದೇ., ೫೧, ಪುಟ ೩೮.
೮. ಅದೇ., ೪೮, ಪುಟ ೩೫–೩೬.
೯. ಅದೇ., ೭೦, ಪುಟ ೫೧–೫೨.
೧೦. ಅದೇ., ೭೦, ಪುಟ ೫೧–೫೨.
೧೧. ಅದೇ., ೪೭, ಪುಟ ೩೫.
೧೨. ಅದೇ., ೧೧೧, ಪುಟ ೯೮–೯೯.
೧೩. ಅದೇ., ೧೧೧, ಪುಟ ೯೮–೯೯.
೧೪. ಅದೇ., ೭೮, ಪುಟ ೬೩–೬೪.
೧೫. ಅದೇ., ೬೯, ಪುಟ ೫೦–೫೧.
೧೬. ಅದೇ., ೬೯, ಪುಟ ೫೦–೫೧.
೧೭. ಅದೇ., ೬೯, ಪುಟ ೫೦–೫೧.
೧೮. ಅದೇ., ೬೯, ಪುಟ ೫೦–೫೧.
೧೯. ಅದೇ., ೬೯, ಪುಟ ೫೦–೫೧.
೨೦. ಅದೇ., ೧೦೦, ಪುಟ ೯೧.
೨೧. ಅದೇ., ೧೦೦, ಪುಟ ೯೧.
೨೨. ಅದೇ., ೧೧೦, ಪುಟ ೯೮.
೨೩. ಅದೇ., ೧೧೦, ಪುಟ ೯೮.
೨೪. ಅದೇ., ೧೮, ಪುಟ ೧೩–೧೪.
೨೫. ಅದೇ., ೯೪, ಪುಟ ೭೭.
೨೬. ಅದೇ., ೯೪, ಪುಟ ೭೭.
೨೭. ಅದೇ., ೫೮, ಪುಟ ೪೧.

ಡಾ. ಧನವಂತ ಹಾಜವಗೋಳ*

ನಾಗದೇವ : ಶಾಸನ ಚಂಪುಕವಿ

ಶಾಸನ ಕವಿಗಳ ಪಾಂಡಿತ್ಯ ಗೊತ್ತಾಗುವುದು ಬರಿ ಗದ್ಯ ಬರವಣಿಗೆಯಿಂದಲ್ಲ ; ಆ ಶಾಸನಗಳಲ್ಲಿ ಕವಿಯು ಸೃಷ್ಟಿಸಿದ ಕಂದ-ವೃತ್ತಗಳ ರಚನೆಯಿಂದ ಎಂದು ಹೇಳಬಹುದು. ಅವರ ಪದ್ಯರಚನಾ ಸೃಷ್ಟಿ ಶಾಸನಕವಿಯ ವಿದ್ವತ್ತಿಗೆ ಸಾಕ್ಷಿ ಎನ್ನಬಹುದು. ಶಾಸನ ಕವಿಗಳ ಇಂಥ ಪಾಂಡಿತ್ಯವನ್ನು ಗುರುತಿಸುವ ಪ್ರಯತ್ನಗಳು ಅಷ್ಟಾಗಿ ನಡೆದಿಲ್ಲ. ಅಂಥ ವಿದ್ವತ್ತನ್ನು ಹೊಂದಿದ್ದ ನಾಗದೇವನೆಂಬ ಶಾಸನ ಚಂಪುಕವಿಯನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಕಲ್ಯಾಣ ಚಾಲುಕ್ಯ ದೊರೆ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ನಾಗದೇವ ಎಂಬುವನು ಕುರ್ತಕೋಟಿಯ ಮೂರು ಶಾಸನಗಳನ್ನು ರಚಿಸಿರುವುದಾಗಿ ತಿಳಿದು ಬರುತ್ತದೆ. ಮೊದಲನೆಯದು ಕ್ರಿ.ಶ. ೧೦೮೨ರ ಕಾಲದ ಶಾಸನದಲ್ಲಿ ಕಲ್ಯಾಣ ಚಾಲುಕ್ಯ ದೊರೆ ಆರನೆಯ ವಿಕ್ರಮಾದಿತ್ಯನ ಯುವರಾಜ ಜಯಸಿಂಗನ ದಂಡನಾಯಕ ವಾಮದೇವಯ್ಯನ ಪರಾಕ್ರಮಗಳನ್ನು, ಕಡಲಕೆರೆಯನ್ನು ಕಾವ್ಯಮಯವಾಗಿ ವರ್ಣಿಸಿರುವುದು. ಎರಡನೆಯದಾಗಿ ಕ್ರಿ.ಶ. ೧೦೮೭ರ ಕಾಲದ ಶಾಸನದಲ್ಲಿ ಬೆಳ್ಕೆರೆಯ ಎರೆಗನ ವ್ಯಕ್ತಿತ್ವವನ್ನು ಹದಿನೇಳು ಕಂದ ವೃತ್ತಗಳಲ್ಲಿ ಕಟ್ಟಿಕೊಟ್ಟಿರುವುದು. ಮೂರನೆಯದಾಗಿ ಕುರ್ತಕೋಟಿಯ ವಿರೂಪಾಕ್ಷ ದೇವಾಲಯದ ಗೋಡೆಯಲ್ಲಿರುವ ಮತ್ತೊಂದು ಶಾಸನದಲ್ಲಿ ನಾವಿದದಾಸನು ಕುರ್ತಕೋಟಿಯಲ್ಲಿ ಕಟ್ಟಿಸಿದ ದಾಸೇಶ್ವರದೇವಾಲಯಕ್ಕೆ ಮೋರಿಯ ವಂಶಜರು ದಾನ ಕೊಟ್ಟ ವಿಷಯವನ್ನು ಮೂವತ್ನಾಲ್ಕು ಕಂದ ವೃತ್ತಗಳಲ್ಲಿ ರಚಿಸಿದ ನಾಗದೇವ ತಾನು ಒಬ್ಬ ಶಾಸನ ಚಂಪುಕವಿ ಎಂಬುದನ್ನು ಸಾಬೀತು ಪಡಿಸಿದ್ದಾನೆ. ಈ ಶಾಸನ ಒಂದು ಪುಟ್ಟ ಚಂಪುಕಾವ್ಯದಂತಿದೆ. ಇಲ್ಲಿ ನಾಗದೇವನು ರಚಿಸಿದ ಶಾಸನ ಪದ್ಯಗಳ ಆಧಾರದಿಂದ ಅವನೊಬ್ಬ ಚಂಪುಕವಿ ಎಂಬುದನ್ನು ಎತ್ತಿ ತೋರಿಸುವ ಪ್ರಯತ್ನ ಮಾಡಲಾಗಿದೆ.

ನಾಗದೇವ ಒಬ್ಬ ಪ್ರಸಿದ್ಧ 'ಶಾಸನಕವಿ'. ಕ್ರಿ.ಶ. ೧೦೮೨ರ ಶಾಸನದಲ್ಲಿ "ಪೊಂಬಳಲನಾಗದೇವಬುಧಂಬುಧ-ತತಿಮೆಚ್ಚೆ ಕಾವ್ಯವಂ ಪಿರಚಿಸಿದ"[೧] ಎಂದು ಹೇಳಲಾಗಿದೆ. ಕ್ರಿ.ಶ. ೧೦೮೭ರ ಕಾಲದ ಶಾಸನದಲ್ಲಿ-

> "ಇಂತೀ ಶಾಸನಗಬ್ಬಮ
> ನೆಂತು ವಿಚಾರಿಪೊಡೆವುಚಿತವೆಂಬಂತಿರೆ
> ಕ್ರಾಂತಧನಂ ಜಯಲಕ್ಷ್ಮೀ
> ಕಾಂತಂ ಪೊಂಬಳಲ ನಾಗದೇವಂ ಪೇಳ್ದಂ"[೨] (ಸಾಲು ೪೮-೪೯)

ಎಂದು ಹೇಳಿಕೊಂಡಿದ್ದಾನೆ. ಇಲ್ಲಿ ಇವನು ತನ್ನನ್ನು 'ಜಯಲಕ್ಷ್ಮೀಕಾಂತ' ಎಂದು ಬಣ್ಣಿಸಿಕೊಂಡಿದ್ದಾನೆ. ಇವನಿಗೆ 'ಪ್ರಸನ್ನಕವಿ' ಎಂಬ ಬಿರುದು ಇದ್ದಿತು. ನಾಗದೇವನ ಈ ಎರಡೂ ಶಾಸನಗಳನ್ನು ಕಲ್ಲಿನ ಮೇಲೆ ಕೆತ್ತಿದ ಲಿಪಿಕಾರ ಕುಳಕರಣಿ ಮಾಬಳಾರ್ಯ.

ಕಲ್ಯಾಣ ಚಾಲುಕ್ಯದೊರೆ ಆರನೆಯ ವಿಕ್ರಮಾದಿತ್ಯನ ಯುವರಾಜ ಜಯಸಿಂಗ ದೇವನ ದಂಡನಾಯಕನಾಗಿದ್ದ ವಾಮದೇವಯ್ಯನು ಅಲ್ಲಿಯ ಮಹಾಜನಗಳಿಗೆ ಕಡಲಕೆರೆಯ ಪ್ರಯೋಜನಾರ್ಥ ಸುಂಕಾದಾಯ ಬಿಟ್ಟ ವಿಷಯವೂ ಈ ಶಾಸನದಲ್ಲಿದೆ.[೩] ಇದರಲ್ಲಿ ಒಟ್ಟು ಐವತ್ತಾರು ದೀರ್ಘ ಸಾಲುಗಳಿವೆ; ವೈವಿಧ್ಯಮಯವಾದ ಹದಿನಾರು ಕನ್ನಡ ಪದ್ಯಗಳಿವೆ. ಶಾಸನದ ಮಧ್ಯಭಾಗದಲ್ಲಿ ಅಲ್ಲಲ್ಲಿ ಕೆಲವು ಅಕ್ಷರಗಳು ಒಡೆದು ನಾಶವಾಗಿವೆ. ಹೀಗಾಗಿ ಈ ಭಾಗದ ಕೆಲವು ಪದ್ಯಗಳ ಛಂದಸ್ಸನ್ನು ಗುರುತಿಸುವುದು ಸಾಧ್ಯವಾಗಿಲ್ಲ. ಅಗ್ರಹಾರ ಕುರ್ತಕೋಟಿಯ ಕಡಲಕೆರೆ ಹಾಗೂ ವಾಮದೇವ ಯ್ಯನ ಪರಾಕ್ರಮ ಇವೇ ಮೊದಲಾದ ವಿಷಯಗಳನ್ನು ನಾಗದೇವ ತನ್ನ ಪ್ರತಿಭೆಯಿಂದ ಸುಂದರ ಕಾವ್ಯವನ್ನಾಗಿ ಮಾಡಿದ್ದಾನೆ. ಮಾದರಿಗಾಗಿ ಕೆಲವು ಪದ್ಯಗಳನ್ನು ನೋಡಬಹುದು.

> "ಮನಸಿಜನಿಕ್ಷುಚಾಪಮೆನಿಸಿರ್ಪತಿಮುಗ್ಧವಿದಗ್ಧಕಾಮಿನೀ
> ಜನಕೆ ಮನೋಜರಾಜನಿಭವನೆಂಬುದು ವಂದಿಜನಕ್ಕೆ
> ಸೂರ್ಯ್ಯನಂ
> ದನನಿನನೂನದಾನಯುತನೆಂಬುದುರ್ದ್ದರವೀರವೈರಿಗಿಂ
> ದ್ರನಸುತನಿಂದ ಮತ್ತಧಿಕನೆಂಬುಧಾರಿಣಿ ವಾಮದೇವನ"[೪]
> (ಚಂಪಕಮಾಲೆ : ಸಾಲು ೧೦-೧೧)

* ಪ್ರಾಧ್ಯಾಪಕರು, ಕನ್ನಡ ವಿಭಾಗ, ಕರ್ನಾಟಕ ಕಲಾ ಕಾಲೇಜು, ಧಾರವಾಡ-೧

ಇಲ್ಲಿ ವಾಮದೇವನನ್ನು ಮನಸಿಜನ ಇಕ್ಷುಚಾಪವೆನಿಸಿದ, ಅತಿಮುಗ್ಧಪಂಡಿತ, ಶ್ರೀಜನಕ್ಕೆ ಕಾಮನಾಸೆಯುಂತಿರುವ, ಸ್ತುತಿಸುವವರಿಗೆ ಕರ್ಣನಂತೆ, ಭಯಂಕರವಾದ ವೀರವೈರಿಗಳಿಗೆ ಅರ್ಜುನನಂತೆ ಅಧಿಕನೆಂದು ಭೂಲೋಕದ ಜನ ಹೊಗಳುತ್ತಿತ್ತು ಎಂದು ಹೇಳಲಾಗಿದೆ. ಇಲ್ಲಿ ಮಹಾಭಾರತದ ಮಹಾವ್ಯಕ್ತಿಗಳ ಉಪಮೆಗಳೊಂದಿಗೆ ವಾಮದೇವನ ವ್ಯಕ್ತಿತ್ವವನ್ನು ಪರಿಚಯಿಸಿದ್ದಾನೆ. ನಾಗದೇವನ ಚಂಪೂಶೈಲಿಗೆ ಇದು ಉತ್ತಮ ನಿದರ್ಶನವೆನ್ನಬಹುದು. ಈ ಪದ್ಯದ ನಂತರದಲ್ಲಿ ವಾಮದೇವನನ್ನು ಕುರಿತ ಎರಡು ವೃತ್ತಗಳಿದ್ದು ಅವುಗಳ ಅಕ್ಷರಗಳು ತ್ರುಟಿತವಾಗಿರುವುದರಿಂದ ಅವುಗಳನ್ನು ಪೂರ್ಣ ರೂಪದಲ್ಲಿ ಕಟ್ಟಿಕೊಡುವುದು ಸಾಧ್ಯವಾಗಿಲ್ಲ.

ಕುರ್ತಕೋಟಿಯ ಮಹಾಜನಗಳ ಜೀವನಾಡಿಯಾಗಿದ್ದ ಕಡಲಕೆರೆಯೆನ್ನು ಹೀಗೆ ಬಣ್ಣಿಸಿದ್ದಾನೆ.

"ಅತಿಮಧುರಂ ಪ್ರಸನ್ನಕವಿ ನಿರ್ಮ್ಮಿಸಿದುನ್ನತ ಕಾವ್ಯದನ್ತೆ ನಿ
ರ್ವೃತಿಯುತಮೆಯ್ದೆ ಮೋಕ್ಷದವೊಲ್ಚಿತ್ತಜನಪ್ಪನಚಿತ್ತದನ್ತೆಂ
ಸನ
ತತಿಮತಿನಿರ್ಮ್ಮಳಂಪೆಱನೆಂದುಮಪೇಕ್ಷಿಸುತಿರ್ಪ್ಪನನ್ತೆತಾ
ನತಿಲಘುವೆನ್ನದೀ ಚಣಕುದುದ್ಗತಟಾಕಮನಾರೋ
ಬಣ್ಣಿಸರ್"[೫] (ಸಾಲು ೩೮-೩೯)

ಈ ಕಡಲಕೆರೆ ಅತ್ಯಂತ ಮಧುರವಾದುದು, ಪ್ರಸನ್ನಕವಿ ನಿರ್ಮಿಸಿದ ಉನ್ನತಕಾವ್ಯದಂತೆ ತೃಪ್ತಿಕರವಾದುದು, ಮೋಕ್ಷ ಹೊಂದಿದ ವಿಷ್ಣುವಿನ ಮನಸ್ಸಿನಂತೆ ನಿರ್ಮಲವಾದುದು, ಅನ್ಯವನ್ನು ಅವಲಂಬಿಸದೆ ಅತೀ ವಿಸ್ತಾರವಾದುದು. ಈ ಇಳಿಜಾರಾದ ಕೆರೆಯನ್ನು ಯಾರು ಬಣ್ಣಿಸುವರು ? ಎಂದು ಪ್ರಶ್ನಿಸುತ್ತ ನಾಗದೇವ ಅದನ್ನು ಸಹಜವಾಗಿ ಬಣ್ಣಿಸಿದ್ದಾನೆ. ಕೆರೆಯ ನೀರಿನ ಸಿಹಿಯು ತನ್ನ ಕಾವ್ಯದಂತೆ ಅತಿಮಧುರ ವಾದುದು ಎಂದು ಹೇಳಿರುವುದು ನಾಗದೇವನ ಕಲ್ಪನಾವಿಲಾಸಕ್ಕೆ ಸಾಕ್ಷಿಯಾಗಿದೆ. ಕಾವೇರಿಯ ನೀರಿನೊಂದಿಗೆ ಈ ಕಡಲಕೆರೆಯ ಅಮೃತಜಲವನ್ನು ತೂಗಿನೋಡಬಹು ದೆಂದು ಬಣ್ಣಿಸಿರುವುದನ್ನು ಇನ್ನೊಂದು ಪದ್ಯದಲ್ಲಿ ಕಾಣಬಹುದು.[೬]

ನಾಗದೇವನು ಬರೆದ ಇನ್ನೊಂದು ಶಾಸನ[೭] ದಲ್ಲಿ ಒಟ್ಟು ಐವತ್ತೊಂದು ಸಾಲುಗಳಿವೆ. ಕುರ್ತಕೋಟಿಯ ಮಹಾಜನಗಳಲ್ಲಿ ಒಬ್ಬನಾದ ಬೇಳ್ಕೆಯರೆರೆಗನನ್ನು ವರ್ಣಿಸಿರುವ ಈ ಶಾಸನದ ಬಹುಭಾಗ ಪದ್ಯಮಯವಾಗಿದೆ. ಇದರಲ್ಲಿ ಒಟ್ಟು ಹದಿನೇಳು ಕಂದ, ವೃತ್ತಗಳಿವೆ. ಉದಾಹರಣೆಗೆ ಕೆಲವು ಪದ್ಯಗಳನ್ನು ನೋಡಬಹುದು.

"ವಾರಧಿವೇಷ್ಟಿತಾವನಿಲತಾಂಗಿಗೆ ಕುಂತಳದೇಶಮಾಸ್ಯಮಂ
ತಾರಮಣೀಯಪ್ಪಮುಖಪಂಕರುಹಕ್ಕೆಲಲಾಟದಂತೆ ವಿ
ಸ್ತಾರದಿನೊಪ್ಪಿ ತೋರುವುದು ಬೆಳ್ವೊಲಮಲ್ಲಿಲಲಾಮ
ದೊನ್ದಳಂ
ಕಾರಸಮಸ್ತಿತಂಕುರಿತಕೂಂಟಿವಿರಾಜಿಪುದೀಧರಿತ್ರಿಯೊಳ್"[೮]
(ಸಾಲು ೫-೭)

ಹೀಗೆ ಈ ನಾಡಿನ ಸೊಬಗನ್ನು ಒಟ್ಟಿಗೆ ಬಣ್ಣಿಸಿರುವನು. ಸಮುದ್ರ ಸುತ್ತುವರೆಯಲ್ಪಟ್ಟ ಭೂಲತಾಂಗಿಯ ಮುಖದಂತೆ ಕುಂತಳದೇಶ ತಾರಾಮಣಿಯಿಂದ ಅಲಂಕರಿಸಲ್ಪಟ್ಟ ಆ ಮುಖಕಮಲದಲ್ಲಿಯ ಹಣೆಯಂತೆ ವಿಸ್ತಾರದಿಂದ ಒಪ್ಪಿ ತೋರುವುದು ಬೆಳ್ವೊಲ. ಆ ಹಣೆಯ ತಿಲಕದಂತೆ ಅಲಂಕಾರಪ್ರಾಯವಾಗಿ ವಿರಾಜಿಸುವುದು ಕುರ್ತಕೋಟಿ. ಇಲ್ಲಿ ದೇಶ, ಪ್ರಾಂತ, ಗ್ರಾಮವೊಂದನ್ನು ಸ್ತ್ರೀಯ ಸೌಂದರ್ಯ ಪ್ರಜ್ಞೆಯ ಹಿನ್ನೆಲೆಯಲ್ಲಿ ಬಣ್ಣಿಸಿರುವುದು ಗಮನಾರ್ಹವಾಗಿದೆ.

ಕುರ್ತಕೋಟಿಯ ಮಹಾಜನಗಳಲ್ಲಿ ಒಬ್ಬನಾದ ಬೆಳ್ಕೆಯರ ಎರೆಗನನ್ನು ಹಲವು ಕಂದಪದ್ಯಗಳಲ್ಲಿ ಸೆರೆಹಿಡಿದ ನಾಗದೇವನ 'ಕಲಾಪರಿಣತಿ'ಯನ್ನು ಇಲ್ಲಿ ಕಾಣಬಹುದು. ಒಂದು ಕಂದಪದ್ಯದಲ್ಲಿ-

"ಎಱಗಂಭಯಲೋಭದ್ವಯಂ
ಕೆಱಗಂದುಶ್ಶೀಳೆದುಷ್ಟದುರ್ಜನದೆ
ತ್ತೆಱಗಂ ಸಚ್ಚರಿತೇತ
ಗ್ಗಱಿಕೆವಂ ಚಾರಿತ್ರಜಳಧಿಬೆಳ್ಕೆಯೆರೆಱಿಗ"[೯]
(ಸಾಲು ೧೯-೨೦)

ಹೀಗೆ ಎರೆಗನನ್ನು ಪರಿಚಯಿಸಿದ್ದಾನೆ. ಭಯಲೋಭ ದ್ವಯಗಳಿಗೆ, ದುಷ್ಟ ದುಶ್ಶೀಲ ಜನರಿಗೆ, ಸಚ್ಚರಿತ್ರ್ಯದಿಂದ ದೂರಾದವರಿಗೆ 'ಚಾರಿತ್ರ್ಯಸಮುದ್ರ' ದಂತಿರುವ ಎರಗನ ಉದಾತ್ತ ವ್ಯಕ್ತಿತ್ವವನ್ನು ಕಟ್ಟಿಕೊಟ್ಟಿದ್ದಾನೆ. ಈ ಪದ್ಯದಲ್ಲಿ ಪ್ರಯೋಗವಾದ 'ಬೆಳ್ಕೆಯರ' ಎಂಬ ಪದ್ಯಕ್ಕೆ ಹೋಮ ಮಾಡುವವರು ಎಂದರ್ಥವಿದೆ. "ಅಗ್ನಿಹೋತ್ರಿಗಳನ್ನು ಆಗ ಈ ಕನ್ನಡ ಹೆಸರಿನಿಂದ ಜನರು ಕರೆಯುತ್ತಿದ್ದರೆಂಬಂತೆ ತೋರುತ್ತದೆ ; ಅಥವಾ ಕವಿಯೇ ಕನ್ನಡದ ಮೇಲಣ ಅಕ್ಕರೆಯಿಂದ ಕರೆದಿದ್ದಾನೋ ಏನೋ. ಏನಿದ್ದರೂ ಇದೊಂದು ಸೊಗಸಾದ ಪದಪ್ರಯೋಗವಾಗಿದೆ."[೧೦] ಇದು ನಾಗದೇವನ ಭಾಷಾಭಿಮಾನವನ್ನು ತೋರುತ್ತದೆ.

ಕುರ್ತಕೋಟಿ[೧೧]ಯ ವಿರೂಪಾಕ್ಷದೇವಾಲಯದ ಗೋಡೆಯಲ್ಲಿರುವ ಶಾಸನವನ್ನು ನಾಗದೇವನು ರಚಿಸಿರಬೇಕು. ಮೊದಲಿನ ಎರಡು ಶಾಸನಗಳಲ್ಲಿ ತನ್ನ ಹೆಸರನ್ನು ಸ್ಪಷ್ಟವಾಗಿ ಹೇಳಿಕೊಂಡ ನಾಗದೇವ ಈ ಶಾಸನದಲ್ಲಿ ಏಕೆ ತನ್ನ ಹೆಸರನ್ನು ಹೇಳಿಕೊಂಡಿಲ್ಲ. ಅದು ಲಿಪಿಕಾರನ ಅಚಾತುರ್ಯದಿಂದ

ಕೈಬಿಟ್ಟು ಹೋಗಿರಬೇಕು. ಅದೇನೇ ಇದ್ದರೂ ಈ ಶಾಸನವನ್ನು ನಾಗದೇವ ರಚಿಸಿದ್ದಾನೆಂದು ಹೇಳಲು ಕೆಲವು ಆಂತರಿಕ ಆಧಾರಗಳು ಸಹಾಯಕವಾಗುತ್ತವೆ.

ನಾಗದೇವನು ಬರೆದ ಕುರ್ತಕೋಟಿಯ ಕೆರೆಯ ಏರಿಯ ಮೇಲಿರುವ ಶಾಸನದ[೧೨] ಕಾಲ ಮತ್ತು ಪ್ರಸ್ತುತ ಶಾಸನದ ಕಾಲ ಕ್ರಿ.ಶ. ೧೦೮೭. ಈ ಶಾಸನಗಳ ರಚನಾಸ್ಥಳ ಒಂದೇ ಆಗಿದೆ. ಇವುಗಳನ್ನು ಕೆತ್ತಿದ ಲಿಪಿಕಾರನೂ ಒಬ್ಬನೇ ಆಗಿದ್ದಾನೆ. ನಾಗದೇವನು ಬರೆದ ಮೊದಲಿನ ಎರಡು ಶಾಸನಗಳಲ್ಲಿ ಬಂದಿರುವ ಮಹಾಜನ ಇನ್ನೋರ್ವರ ವರ್ಣನೆ, ಕಂದ, ವೃತ್ತಗಳ ಪದಬಂಧಗಳು, ಬಳಸಿದ ಭಾಷಾಶೈಲಿ – ಮೊದಲಾದ ಅಂಶಗಳಲ್ಲಿ ಪ್ರಸ್ತುತ ಶಾಸನ ಹೆಚ್ಚು ಸಾಮ್ಯತೆಯನ್ನು ಹೊಂದಿದೆ. ಇವೆಲ್ಲವುಗಳಿಂದ ನಾಗದೇವನೇ ಈ ಶಾಸನ ರಚಿಸಿರಬೇಕು.[೧೩]

ಕುರ್ತಕೋಟಿಯಲ್ಲಿ ನಾವಿದದಾಸನು ಕಟ್ಟಿಸಿದ ದಾಸೇಶ್ವರ ದೇವಾಲಯಕ್ಕೆ ಮೋರಿವಂಶದವರು ದಾನ ಕೊಟ್ಟ ವಿಷಯ ಈ ಶಾಸನದಲ್ಲಿದೆ. ಒಟ್ಟು ಅರವತ್ತೈದು ಸಾಲುಗಳಲ್ಲಿರುವ ಈ ಶಾಸನ ಮೂವತ್ನಾಲ್ಕು ಕಂದ–ವೃತ್ತಗಳನ್ನೊಳಗೊಂಡಿದ್ದು, ಒಂದು 'ಪುಟ್ಟ ಚಂಪೂಕಾವ್ಯ' ದಂತಿದೆ. ಧಾರ್ಮಿಕ ಪ್ರವೃತ್ತಿಯ ಮೋರಿವಂಶಜರನ್ನು, ಉದಾರ ಮನೋಭಾವ ನಾವಿದದಾಸ ಮೊದಲಾದವರನ್ನು ಹಲವು ಪದ್ಯಗಳಲ್ಲಿ ಬಣ್ಣಿಸಿದ್ದಾನೆ. ಉದಾಹರಣೆಗೆ ಒಂದೆರಡು ಪದ್ಯಗಳನ್ನು ನೋಡಬಹುದು.

"ಆದಿಬ್ರಹ್ಮಸಮಾನದ
ವೇದವಿದರ್ಸ್ಸಪ್ತಸೋಮಸಂಸ್ತಾವಬೃಥಾ
ಹ್ಲಾದನಕೃತರಮಳಯಶ
ರ್ಮ್ಮೇದಿನಿಯೊಳ್ಕುರ್‍ತರೊಂಟೆಯದ್ವಿಜನಿಚಯ"[೧೪]

(ಸಾಲು – ೧೦)

ಕುರ್ತಕೋಟಿ ಬ್ರಾಹ್ಮಣ ಸಮುದಾಯವು ಆದಿಬ್ರಹ್ಮನ ಸಮಾನ, ವೇದವಿದರು, ಸಪ್ತಸೋಮಸಂಸ್ಥಾವಭೃತ ಆಹ್ಲಾದನಕೃತರು ಹಾಗೂ ಅಮಳಯಶಸ್ಸನ್ನು ಪಡೆದವರೆಂದು ಪರೋಕ್ಷವಾಗಿ ಮೋರಿಯ ವಂಶವನ್ನು ಪ್ರಶಂಸಿಸಿದ್ದಾನೆ.

ಅಂತಾಯಿನ್ನೂರ್ವ್ವರ್ಗ್ಗಂ
ಸಂತತಮತಿಭಕ್ತಿಯಿಂದೆ ನಾವಿದಧೋರಂ
ಮಾಂತನದಾಗರಮೆನಿಪದ
ಗುಂತಿಗೆನೆಲೆಯಾದನನ್ತುಪಿರಿಯರುಮೊಳರೆ[೧೫]

(ಸಾಲು ೧೨–೧೩)

ಇಲ್ಲಿ ಕುರ್ತಕೋಟಿಯ ಇನ್ನೂರ್ವರು ಮಹಾಜನಗಳನ್ನು ಅತಿಭಕ್ತಿಯಿಂದ ನೋಡುವ, ಮಾಂತನದಾಗರವೆನಿಸುವ ಗುಂತಿಗೆ (?) ನೆಲೆಯಾದ ನಾವಿದಧೋರನ ವ್ಯಕ್ತಿತ್ವವನ್ನು ಪರಿಚಯಿಸಿದ್ದಾನೆ. ಇಲ್ಲಿಯ ಇನ್ನೂ ಅನೇಕ ಕಂದಪದ್ಯಗಳನ್ನು ನೋಡಿದಾಗ, ನಾಗದೇವ ವ್ಯಕ್ತಿಪರಿಚಯಕ್ಕಾಗಿ ಕಂದಪದ್ಯಗಳನ್ನು ರಚಿಸುವುದರಲ್ಲಿ 'ಸಿದ್ಧಹಸ್ತ' ನಾಗಿದ್ದನೆಂದು ಸ್ಪಷ್ಟವಾಗುತ್ತದೆ.

ಮೋರಿಯ ವಂಶದ ಗುಜ್ಜಗೇತನನ್ನು ವರ್ಣಿಸುವ ವೃತ್ತಪದ್ಯವೊಂದು ಹೀಗಿದೆ :

"ಧರ್ಮದದಾನದಾರ್ಪಿನ ತವರ್ಮ್ಮನೆಸರ್ವಜನೋಪ
ಕಾರಿತ
ಕ್ಕೂರ್ಮೆಯ ಜನ್ಮಭೂಮಿಸುಭಟಾಗ್ರಣಿಮೋರಿಯ
ವಂಶಮಣ್ಡನಂ
ನಿರ್ಮಳಮೊಪ್ಪುತಿರ್ಪ್ಪತಿಳಕಂ ಸಲೆಭಾವಿಸೆಗುಜ್ಜಗೇತನಿಂ
ಧಾರ್ಮಿಕರಾರುಮತ್ತುಳಿದರೆಂಬುದುವಾರ್ಧಿಪರೀತಭೂತಳಂ"[೧೬]

(೨೪–೨೬)

ಧರ್ಮದಿಂದ ದಾನ ಮಾಡುವ ತವರುಮನೆ ; ಸರ್ವಜನೋಪಕಾರಕ್ಕೆ ಜನ್ಮಭೂಮಿ, ಸುಭಟಾಗ್ರಣಿ, ಮೋರಿಯ ವಂಶಮಂಡನನೂ, ನಿರ್ಮಳನೂ ಆಗಿ ಶೋಭಿಸುವ ತಿಳಕಪ್ರಾಯವಾಗಿರುವ ಗುಜ್ಜಗೇತನ ಧರ್ಮಕಾರ್ಯಗಳಿಗೆ ಈ ಭೂಮಿಯ ಮೇಲೆ ಯಾರು ಸರಿಯೆಂಬರು ? ಎಂದು ಕೇಳುವ ನಾಗದೇವ ಗುಜ್ಜಗೇತನನ ಇಡೀ ವ್ಯಕ್ತಿತ್ವವನ್ನು ಸಮಗ್ರವಾಗಿ ನಿರೂಪಿಸಿದ್ದಾನೆ. ಈ ಪದ್ಯದ ಪದಬಂಧ, ಪ್ರೌಢಭಾಷಾ ಬಳಕೆಯ ಮೂಲಕ ತಾನೊಬ್ಬ ಸಮರ್ಥ 'ಶಾಸನಕವಿ'ಯೆಂಬುದನ್ನು ತೋರಿಸಿದ್ದಾನೆ.

ಒಟ್ಟಿನಲ್ಲಿ ನಾಗದೇವ ಈ ನಾಡಿನ ಮೂರು ಬಹುದೊಡ್ಡ ಶಾಸನಗಳನ್ನು ರಚಿಸಿದ ಕೀರ್ತಿಗೆ ಪಾತ್ರನಾಗಿದ್ದಾನೆ. ಕಂದಪದ್ಯಗಳನ್ನು, ಅಕ್ಷರವೃತ್ತಗಳನ್ನು ಸಲೀಸಾಗಿ ಪ್ರಯೋಗಿಸಿರುವುದು. ಅವನಿಗೆ 'ಕಾವ್ಯಕಲೆ' ಕರಗತವಾಗಿರುವುದನ್ನು ತೋರುತ್ತದೆ. ಕನ್ನಡ ಭಾಷಾಭಿಮಾನಿಯಾದ ನಾಗದೇವ ಗದ್ಯ – ಪದ್ಯಗಳ ಸಮ್ಮಿಶ್ರಣಶೈಲಿಯ ಬಳಕೆಯಿಂದ 'ಶಾಸನಚಂಪುಕವಿ' ಎಂಬ ಮನ್ನಣೆಗೆ ಪಾತ್ರನಾಗಿದ್ದಾನೆ. ಅವನ ಒಟ್ಟು ಪದ್ಯಗಳನ್ನು ಸಂಗ್ರಹಿಸಿ ಕೊಡಲಾಗಿದೆ.

ಅನುಬಂಧ

ನಾಗದೇವ ವಿರಚಿತ ಕೆಲವು ಶಾಸನೋಕ್ತ ಪದ್ಯಗಳು

ಇಱಿದಡೆ ಪನ್ನೆರಡು ಪಣಂ
ಕಱ್ದುಬನ್ದು ಪೊಯ್ದಡಾರು ಪಣಮು ದಂಡಂ
ನೆಱೆ ಬಯ್ದಡೆ ಮೂರುಪಣಂ
ಕಱೆದನ್ದುಂ ದಣ್ಡಮಾಗಿನಡೆವುದುನಿಯತ (೩೨–೩೩)

ಭಾವಿಸೆ ಮೂರ್ತಿ ಸೋಮಕಳೆಯಂದದೆ ಶೋಭಿಸುತಿರ್ಪ್ಪುದೀಜಗ
ತ್ಪಾವನಮೆಂಬುಜೋದರ ನಿವಾಸಪಯೋಧಿಯಂತೆ ತೀವಿ ಸೇ
ವ್ಯಾವ ಹಮಾಗಿ ರಂಜಿಪುದು ಜೀವನದಿಂ ನರಜೀವರಾಶಿಗಳ್
ಜೀವಿಪುವೆಂದಡುನ್ನತಿಯನಾರ್ ಪೊಗಳರ್ ಧರಣೀತಳಾಗ್ರದೊಳ್ (೩೯–೪೧ ಉತ್ಪಲಮಾಲೆ)

ಪೊಡವೀಪತಿ ಕಾವೇರಿಯ
ತಡಿಯೊಳ್ ಬಿಟ್ಟಿರ್ದ ತನ್ನಧೀ ಜಲಮುಮನೀ ।
ಕಡಲೆಗೆಱೆಯುಮೃತ ಚಳಮುಮ
ನೊಡನೊಯ್ಕನೆ ತೂಗಿನೊರ್ಪನಭಿವರ್ಣಿಸಿದಂ ॥ (೪೧–೪೧)

ರಂಗತ್ತರಂಗ ಮಾಳಾ
ಭಂಗುರದಿಂದೆಸೆವ ಕಡಲೆಗೆಱೆ ನೋರ್ಪಜನ
ಕಿಂಗಡಲಂ ದಿಕ್ಕರಿಪುದ
ದಂಗಡ ಪೊಗಳಲ್ಕೆ ಕಮಳಭವನುಂನೆಱೆಯಂ ॥ (೪೩–೪೪)

ಅಂಬುಧಿಪರಿವೇಷ್ಟಿತವಸು
ಧಾಂಬಿಕೆಗೆ ಲಲಾಮವೆನಿಪ ವಿಪ್ರಗ್ರಾಮಂ
ಪೊಂಬೊಳಲ ನಾಗದೇವ ಬು
ಧಂ ಬುಧತತಿ ಮೆಚ್ಚೆ ಕಾವ್ಯಮಂ ವಿರಚಿಸಿದಂ ॥ (೪೮–೪೯)

ಪರಹಿತರಿನ್ಪೂರ್ವರ ಪದ
ಸರಸಿರುಹಾಮೋದಮಧುಕರಂ ಶಿವಭಕ್ತಂ
ಕರವತಿಶಯವಾಗಿರೆ ವಿ
ಸ್ತರದಿಂ ಕುಳಕರಣೆ ಮಾಬಳಾರ್ಯಂ ಬರೆದಂ ॥ (೫೩–೫೪)

ಪುರಿಕರಪಟ್ಟಣೋದ್ಭವನ ಕಂಟದ ಬಮ್ಮನ ಪುತ್ರನಯ್ಯಣಂ
ಮರವೆಸದೊಪ್ಪುವಿಟ್ಟಿಗೆಯ ದಂತದ ಚಿತ್ರದ ಶಾಸ್ತ್ರಯುಕ್ತ ಮಾ
ಗಿರೆ ಬೆಸಗೆಯ್ತಕ [ಲ್ಪರೆವ] ಕಮ್ಮರವಿನ್ನಣದೋಜೆಗೆಲ್ಲಿಯಂ
ಪರಕಿಸೆ ವಿಶ್ವಕರ್ಮನಿನವಂ ಮಿಗಿಲೆಂಬುದ ಶೇಷಭೂತಳಂ ॥

ಮಕರಕರ ವಿಹತಭೀಕರ
ಮಕರಾಶರವಳಯೆ ವಳಯಿ ತೋರ್ವ್ವೀ ತಳಮಂ
ಸಕಳರಿಪುನೃಪ ಭಯಂಕರ
ನಕಳಂಕಂ ವಿಕ್ರಮಾಂಕನಾಳುತ್ತಮಿರಲ್ ॥* (೪–೫)

ಗ್ರಾಮದ ಪೂರ್ವ ದಕ್ಷಿಣದಿಶಾ ಪ್ರವಿಭಾಗದ ಯಾಗಮಣ್ಡಪ
ಸ್ತೋಮದ ಹೋಮಧೂಮದ ಕವಿಲ್ಪೊಗೆ ಪೆರ್ಚಿದಿಗನ್ತರಾಳದಿಂ
ವ್ಯೋಮಮನೆಯ್ದೆ ನೀಳ್ದೆ ಸೆವಿದಬ್ದಿನಿನಾದಮೆ ವೇದಗೋಷಮೆಂ
ದೀ ಮಹಿ ಬಣ್ಣಿಕುಂ ಕುಱುತಕೊಂಟೆಯ ವಿಪ್ರಜನಾಗ್ರಗಣ್ಯರ್ (೭–೯ ಉತ್ಪಲಮಾಲೆ)

---

* ಎಸ್.ಐಯ್. ಸಂ. XI ಭಾಗ–೧, ಶಾಸನ ಸಂಖ್ಯೆ–೧೨೭, ಪುಟ ೧೪೬–೧೪೯, ಕ್ರಿ.ಶ. ೧೦೭೨.

ಅವರೊಳಗೆ ವಿಪ್ರವಂಶಾ
ರ್ಣ್ಣಾವ ಹಿಮಕರನೆನಿಸಿ ಸಂದ ಪೆಂಪಂ ತಳೆದಂ
ಭುವ[ನ] ಸ್ತುತ್ಯಂ ವಿದ್ವಂ
ನಿವಹೋತ್ತಮ ವತ್ಸುದಾರಿ ಪಿಟ್ಟೆಯ ಭಟ್ಟ (೧೦-೧೧)
ಸಂಗತನೀತಿಶಾಸ್ತ್ರವಿದಿತಂಗೆ ಧರಾಮರಪೂಜ್ಯ ವೇದ ವೇ
ದಾಂಗ ವಿಶಾರದಂಗೆ ನಿಜಗೋತ್ರನಭೋಮಣಿಸನ್ನಿಬಂಗ ಸೋ
ತ್ತುಂಗ ಗುಣಾನ್ವಿತಂಗೆ ಹರಭಕ್ತಿಯೊಳುನ್ನತನಪ್ಪ ಪಿಟ್ಟಮ
ಯ್ಯಂಗೆಣೆ ಸತ್ಯವಾಕ್ಯರುದಿತೋದಿತರಾರೂಮಹೀತಳಾಗ್ರದೊಳ್ (೧೧-೧೩)
ಆತನ ಸಮಸ್ತ ಭುವನ
ಖ್ಯಾತನ ಸುತನಖಿಳಶಾಸ್ತ್ರ ಪರಿಣತೆಯೆಡೆಯೊಳ್
ನೂತನ ಕಮಳಜನೆನಿಸಿದ
ನೀತಿವಿದಂ ನಾಗವರ್ಮ್ಮನನುಪಮಧರ್ಮ್ಮ ॥ (೧೩-೧೪)
ಇಂತೀ ಶಾಸನಗಬ್ಬಮ
ನೆಂತು ವಿಚಾರಿಪೊಡೆವುಚಿತಮೆಂಬಂತಿರೆವಿ
ಕ್ರಾಂತಧನಂ ಜಯಲಕ್ಷ್ಮೀ
ಕಾಂತಂ ಪೊಂಬೊಳಲ ನಾಗದೇವಂ ಪೇಳ್ದಂ ॥ (೪೮-೪೯)
ನಿರ್ಮ್ಮಳ ಗುಣನಿಧಿಜಸದೆತ
ವರ್ಮ್ಮನೆಯನೆ ಪೆಂಪುವೆತ್ತಬರ್ಮಂ
ನಿರ್ಮ್ಮಿಸುವಲ್ಲಿಗೆ ಕರ್ತೃಸು
ಧರ್ಮ್ಮಾನ್ವಿತನೆನಿಸಿ ನೆಗರ್ದನೀವಸುಮತಿಯೊಳ್ (೧೯-೨೦)
ಶಿವಭಕ್ತಸ್ತ್ರೀಜನಕ್ಕಂಗಜನಸತಿವಧೋತ್ಯಜ್ಯನಂಹೋವಿದೂರಂ
ಭುವನಕ್ಕಾರಾಧ್ಯ ವಿಪ್ರೋತ್ತಮಕುಳತಿಳಕ ಸತ್ಯವಾರಾಶಿಯತ್ಯು
ಗ್ರವಿರೋದಿಬ್ರಾತ ಸಂಹಾರಕ ಸುಭಟ ಶಿಖಾರತ್ನಮಾಗಿಳ್ದನೆನ್ದಿಂ
ತವನೀ ಚಕ್ರಂ ಕರಂ ಕೀರ್ತಿಸುತಿರೆ ನೆಗರ್ದ್ದಂದೇವನಾರಾವದೇವ (೨೨-೨೩)
ನಿಜಬಂಧು ಬೃಜಕಾಮಧೇನು ವಿನಯಾಂಭೋರಾಶಿಶೌರ್ಯ್ಯೋರ್ಜ್ಜಿತಂ
ಸುಜನಂ ಸತ್ಯದೊಳಂಬುಜ ಪ್ರಿಯತನೊಜಂದೇವತಾಭಕ್ತಿಯೊಳ್
ತ್ರಿಜಗದ್ವೈನ್ದ್ಯನವಿನ್ದ್ಯ ಬಾಣನಮದೆನ್ತಾಂದೇಸಿಗರ್ಗ್ಗೆಯ್ದಿತಾ
ಯಜಿತಂ ತಂಬುಲಿಗಗಾಗ್ರಗಣ್ಯನಧಿಕನ್ನಾಗಂಮಹೀಭಾಗದೊಳ್ (೨೬-೨೮)
ಶಿವಭಕ್ತ ವೀರಾಗ್ರಣಿ
ಗವಱಿಗಳಾಭರಣಮಖಿಳದೇಸಿಗರ್ಗ್ಗೆಲ್ಲಂ
ಭುವನದೊಳೆಂದುಂ ತಾಯಿಭೂ
ಭುವನೋತ್ತಮನೆನಿಸಿ ಗವಱಿಮುದ್ದಂ ನೆಗಳ್ದಿ (೨೮-೨೯)
ಮನಸಿಜನೆನಿಸುವ ಸುಬಗದು
ತನಗೆ ನಿಜಂ ವಿಕ್ರಮೈಕ್ರಮೋನ್ನತಿಯೊಳೆಮರ್ಜ್ಜ
ನನ ಸಮನೆಡವಬಸವನಿ
ನನುರಾಗದೆ ಸಕಳಧಾತ್ರಿ ಬಣ್ಣಿಸುತಿರ್ಕು (೩೦-೩೧)
ಜರಗ್ ವಜ್ರಪಂಜರ ಮರಾತಿಭಯಂಕರನೇಕವಾಕ್ಯನೀ
ಧರೆಯೋಳಗಣ್ಯಪುಣ್ಯನಿಧಿದೇಸಿಗರಾಶ್ರಯನುನ್ನತಾನ್ವಯಂ

* ಎಸ್.ಆಯ್. ಸಂ. XI ಭಾಗ-೧, ಶಾಸನ ಸಂಖ್ಯೆ-೧೩೪, ಪುಟ ೧೫೭-೧೬೦, ಕ್ರಿ.ಶ. ೧೦೮೭.
* ಎಸ್.ಆಯ್. ಸಂ. XI, ಶಾಸನ ಸಂಖ್ಯೆ-೧೩೩, ಪುಟ ೧೫೪-೧೫೭, ಕ್ರಿ.ಶ. ೧೦೮೭.

ಸ್ಮರನಿಭ ಸುಂದರಾಂಗ ನಕಳಂಕಚರಿತ್ರನ ಪಾರಪೌರುಷಂ
ಕರಂದರ ಬಾಚಗಂ ಕುಜಿತಕೊಂಟೆಯವಿಪ್ರರಗಸ್ಥವಾರಣ (೩೧–೩೩)

ಗಂಗರಸನ ಬೀರನುವು
ತ್ತುಂಗಯಶೋಭಾಗಿಯೆಡವ ಬಸವಯ್ಯನುಮಾ
ಗಂಗರ ಚಾವುಂಡನುಮಂ
ಗಂಗಾಧರಭಕ್ತನೆನಿಪ ಮಾಲರ ಕಲ್ಲಂ (೩೭)

ಕೊಡಗರ ಕೇತಂ ಪಡವಳ
ರೆರೆಯಮ್ಮಂ ಮಿಕ್ಕ ದಾನಿಗಡಿಯರಸಿಂಗಂ
ತೊಡರ್ದ್ದರಗಾಳಂ ಕೆಂಚಂ
ಪೊಡವಿಯೊಳುತ್ಕೃಷ್ಟ ಬಮ್ಮಿಕಬ್ಬೆಯರಾವ (೩೮)

ನಾಡಂಕರಾಬಿಬಾವಂ
ರೂಢಿಯ ಕೊನ್ತದ ಚವುಣ್ಡನನುಪಮವಿಭವಂ
ನೋಡಾಕಜ್ಜವಸತ್ತಿಗ
ನೋಡದೆ ಸಂಗರದೊಳಿಜಿವ ತಂಬುಲಿಗೆಬಿಕ (೩೮–೩೯)

ಪರಮಪರೋಪಕಾರದ ತವರ್ಮನೆಮೋರಿವಂಶಜರ್ಗ್ಗೆತಾ (೦)
ಪರಮಪದಾಬ್ಜಭ್ರಿಂಗ ಸುರದೇನು ಸಮಸ್ತಸುಹ್ರಿಜ್ಜನಕ್ಕೆ ತಾಂ
ದುರಿತವಿದೂರೆ ದೇಸಿಗರದಾಯಿ ಪಿರಿದುಂಗುಣದಾಗರಂಗಳಂ
ದಿರದಭಿವರ್ಣಿಕುಂ ಜನಚಯಂ ಸಲೆ ಪೋರಿಯ ಜಕ್ಕಿಕಬ್ಬೆಯಂ [೪೯–೫ ಚಂಪಕಮಾಲೆ]

ಪರಿಹಿತರಿನ್ನೂರ್ವರ ಪದ
ಸರಸಿರುಹಾಮೋದ ಮಧುಕರಂ ಶಿವಭಕ್ತಂ
ಕರವತಿಶಯವಾಗಿರೆ ವಿ
ಸ್ತರದಿಂ ಕುಲಕರಣಿ ಮಾಬಳಾರ್ಯ ಬರೆದಂ (೬೪–೬೫)

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಎಸ್.ಆಯ್.ಆಯ್. ಸಂ. ೧೧–೧, ಶಾಸನ ನಂ. ೧೨೭, (ಕುರ್ತಕೋಟಿ) ಪುಟ ೧೪೬, ಕ್ರಿ.ಶ. ೧೦೮೨.
೨. ಅದೇ., ಶಾಸನ ನಂ. ೧೩೪, ಪುಟ ೧೬೦, ಕ್ರಿ.ಶ. ೧೦೮೭.
೩. ಅದೇ., ಶಾಸನ ನಂ. ೧೨೭, ಪುಟ ೧೪೭, ಕ್ರಿ.ಶ. ೧೦೮೨.
೪. ಅದೇ., ಪುಟ ೧೪೭.
೫. ಅದೇ., ಶಾಸನ ನಂ. ೧೨೭, ಪುಟ ೧೪೮, ಕ್ರಿ.ಶ. ೧೦೮೨.
೬ ಅದೇ., ಶಾಸನ ನಂ. ೧೨೭, ಕಂದಪದ್ಯ ಸಾಲು ೪೧–೪೩, ಪುಟ ೧೪೮, ಕ್ರಿ.ಶ. ೧೦೮೭.
೭. ಅದೇ., ಶಾಸನ ನಂ. ೧೩೪, ಪುಟ ೧೫೭–೧೬೦, ಕ್ರಿ.ಶ. ೧೦೮೭.
೮. ಅದೇ., ಶಾಸನ ನಂ. ೧೩೪, ಪುಟ ೧೫೮, ಕ್ರಿ.ಶ. ೧೦೮೭.
೯. ಅದೇ., ಶಾಸನ ನಂ. ೧೩೪, ಪುಟ ೧೫೮, ಕ್ರಿ.ಶ. ೧೦೮೭.
೧೦. ಮೇವುಂಡಿಮಲ್ಲಾರಿ, **ಕನ್ನಡ ನಾಡಿನ ಶಾಸನ ಕವಿಗಳು**, ಪುಟ ೭೩.
೧೧. ಎಸ್.ಆಯ್.ಆಯ್. ಸಂ. ೧೧–೧, ಶಾಸನ ನಂ. ೧೩೩, (ಕುರ್ತಕೋಟಿ) ಪುಟ ೧೫೪, ಕ್ರಿ.ಶ. ೧೦೮೭.
೧೨. ಅದೇ., ಶಾಸನ ನಂ. ೧೩೪, ಪುಟ ೧೫೮, ಕ್ರಿ.ಶ. ೧೦೮೭.
೧೩. ನೋಡಿ, **ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ**, ಸಂ. ೩೬, ಸಂ. ೧–೨, ಪುಟ ೭೦ ಮತ್ತು ಮೇವುಂಡಿಮಲ್ಲಾರಿ, **ಕನ್ನಡ ನಾಡಿನ ಶಾಸನ ಕವಿಗಳು**, ಪುಟ ೭೧.
೧೪. ಎಸ್.ಆಯ್.ಆಯ್. ಸಂ. ೧೧–೧, ಶಾಸನ ನಂ. ೧೩೩, (ಕುರ್ತಕೋಟಿ) ಪುಟ ೧೫೪, ಕ್ರಿ.ಶ. ೧೦೮೭.
೧೫. ಅದೇ., ಶಾಸನ ನಂ. ೧೩೩, ಪುಟ ೧೫೫, ಕ್ರಿ.ಶ. ೧೦೮೨.
೧೬. ಅದೇ., ಶಾಸನ ನಂ. ೧೩೩, ಪುಟ ೧೫೫, ಕ್ರಿ.ಶ. ೧೦೮೭.

ಪ್ರವೀಣ್ ಬಿ.*

ಅರಸೀಕೆರೆ ತಾಲ್ಲೂಕು ಶಾಸನಗಳಲ್ಲಿ ಕಂದಾಯದ ಉಗಮ ಮತ್ತು ಬೆಳವಣಿಗೆ

ಅರ್ಥವ್ಯವಸ್ಥೆಯು ತನ್ನ ವಿಶಾಲ ವ್ಯಾಪ್ತಿ ಮತ್ತು ವೈವಿಧ್ಯತೆಗಳಿಂದಾಗಿ ಸಮಾಜದಲ್ಲಿ ಮಹತ್ವದ ಸ್ಥಾನವನ್ನು ಪಡೆಯುತ್ತದೆ. ಒಂದು ನಾಡಿನ ಅಭಿವೃದ್ಧಿ ಮತ್ತು ಸುಭದ್ರತೆಗಳು ಅದರ ಹಣಕಾಸಿನ ವ್ಯವಸ್ಥೆಯನ್ನವಲಂಬಿಸಿರುತ್ತದೆ. ಕೋಶವೆಂಬುದು ರಾಜ್ಯದ ಸಪ್ತಾಂಗಗಳಲ್ಲಿ ಒಂದಾಗಿರುವುದರಿಂದ ಇದರ ತುಂಬುವಿಕೆಯ ಹಾದಿಯಾಗಿ ತೆರಿಗೆ ಮತ್ತು ಇತರ ರಾಜ್ಯಾದಾಯಗಳು ಮೂಲಕಾರಣವೆಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕಿನ ಶಾಸನಗಳನ್ನು ಆಧರಿಸಿ ಭೂಕಂದಾಯದ ಉಗಮ ಮತ್ತು ಬೆಳವಣಿಗೆಯನ್ನು ಗುರುತಿಸಲು ಪ್ರಯತ್ನಿಸಲಾಗಿದೆ.

ನಾಡಿನ ಸುಭದ್ರ ಅರ್ಥವ್ಯವಸ್ಥೆಗೆ ಭೂಮಿಯೇ ಮೂಲವಾದುದರಿಂದ ರಾಜ್ಯದ ಆದಾಯದಲ್ಲಿ ಭೂಕಂದಾಯದ ಪಾತ್ರ ಮಹತ್ತರವಾದುದು. ಕೃಷಿ ಪ್ರಧಾನವಾದ ಪ್ರದೇಶಗಳಿಗೆಲ್ಲ ಇದು ಅನಿವಾರ್ಯವೂ ಹೌದು. ಸಾಮಾನ್ಯವಾಗಿ ಹೇಳುವುದಾದರೆ, ಭೂಮಿಯಿಂದ ಬರುವ ಬಾಡಿಗೆಯ ಮೊತ್ತವನ್ನು ಗುರುತಿಸುವುದೇ ಭೂಕಂದಾಯವೆನ್ನಬಹುದು. ಮಹಾಭಾರತದ ಅನುಶಾಸನ ಪರ್ವದ ಒಂದು ಅಧ್ಯಾಯ ಭೂದಾನ ಪ್ರಶಂಸೆಗೆ ಮೀಸಲಾಗಿದೆ. ಮೌರ್ಯರಿಗಿಂತ ಪೂರ್ವದ ಪಾಲಿ ಗ್ರಂಥಗಳು ಕೋಸಲ ಮತ್ತು ಮಗಧ ರಾಜ್ಯಗಳ ಅರಸರಿಂದ ಬ್ರಾಹ್ಮಣರಿಗೆ ದಾನವಾಗಿ ನೀಡಲ್ಪಟ್ಟ ಗ್ರಾಮಗಳನ್ನು ಕುರಿತು ಹೇಳುತ್ತವೆ. ಕ್ರಿ.ಶ. ೫ನೇ ಶತಮಾನದ ಬಳಿಕ ಭೂದತ್ತಿ ಕೊಡುವುದು ಹೆಚ್ಚಾಗಿ ಜಾರಿಯಲ್ಲಿ ಬಂದಿತು.[೧] ಸಾಹಿತ್ಯ ಕೃತಿಗಳಲ್ಲಿ ಮತ್ತು ಶಿಲಾಶಾಸನಗಳಲ್ಲಿ ತಿಳಿಸಿರುವ ರಾಜ್ಯಾಧಿಕಾರದ ಏಳು ಅಂಶಗಳಲ್ಲಿ ತೆರಿಗೆಯ ಪದ್ಧತಿ ಮತ್ತು ಸೈನ್ಯದ ತಳಹದಿಯ ಮೇಲಿನ ನಿರ್ಬಂಧಕ ಅಧಿಕಾರಗಳು ಮುಖ್ಯವಾದ ಎರಡು ಅಂಶಗಳೆಂದು ಹೇಳಲ್ಪಟ್ಟಿವೆ.[೨] ಆರಂಭದ ಕಾಲದಲ್ಲಿ ಆದಾಯದ ಪ್ರಮುಖ ಭಾಗವಾದ ಭೂಕಂದಾಯವನ್ನು ಗ್ರಾಮಯೋಜಕರು ಅಥವಾ ಗೋಪುರ ಮೂಲಕವಾಗಲೀ, ರಾಜ್ಯದ ಕಾರುಭಾರಿಗಳ ಮೂಲಕವಾಗಲಿ ನೇರವಾಗಿ ವಸೂಲು ಮಾಡಲಾಗುತ್ತಿತ್ತು. ಗುಪ್ತರ ಕಾಲದಿಂದ ರಾಜ್ಯವು ತೆರಿಗೆಗಳನ್ನು ವಸೂಲು ಮಾಡುವ ಹೊಣೆಯ ಅಂಶವನ್ನು ಸಾಮಂತರಿಗೆ ವರ್ಗಾಯಿಸಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.[೩]

ಒಂದು ನಾಡಿನ ಸಮಸ್ತ ಜನತೆ ತಮ್ಮ ಜೀವನ ನಿರ್ವಹಣೆ ಮತ್ತು ಆರ್ಥಿಕ ಭದ್ರತೆಗೆ ಅಲ್ಲಿನ ನಿಸರ್ಗ ಸಂಪತ್ತಾದ ಭೂಮಿಯನ್ನು ಆಶ್ರಯಿಸುವುದು ಸ್ವಾಭಾವಿಕವಾದುದು. ಹೀಗಾಗಿಯೇ ದಾನದ ವಸ್ತುಗಳಲ್ಲಿಯೂ ಕೂಡ ವ್ಯವಸಾಯ ಯೋಗ್ಯಭೂಮಿಗೆ ಪ್ರಥಮ ಪ್ರಾಶಸ್ತ್ಯ ಸಂದಿದ್ದು, ಕರ್ನಾಟಕದ ಮುಕ್ಕಾಲು ಪಾಲು ಶಾಸನಗಳು ಭೂದಾನಕ್ಕೆ ಸಂಬಂಧಿಸಿವೆ ಎನ್ನಬಹುದು.[೪] ಭೂಮಿಯು ಸಂಪತ್ತಿನ ಮೂಲವಾದುದರಿಂದ ಮಾನವನ ಬಹುಪಾಲು ಆರ್ಥಿಕ ಜೀವನ ಅದನ್ನು ಅವಲಂಬಿಸಿದೆ. ಹೀಗಾಗಿ ಮಾನವನ ಸಮಸ್ತ ದುಡಿಮೆ, ಉತ್ಪಾದನೆ, ಅಭಿವೃದ್ಧಿಗಳು ಆತ ಸ್ವತಂತ್ರವಾಗಿ ಹೊಂದಿರುವ ಭೂಸ್ವಾಮ್ಯ ಮಾಲೀಕತ್ವವನ್ನು ಅವಲಂಬಿಸಿದೆ. ಮಧ್ಯಕಾಲೀನ ಕುಟುಂಬಗಳ ಎಲ್ಲಾ ಬೇಡಿಕೆಗಳು ಪ್ರತ್ಯಕ್ಷವಾಗಿ ಮಾಲೀಕತ್ವವನ್ನು ಅವಲಂಬಿಸಿವೆ. ಮಧ್ಯಕಾಲೀನ ಕುಟುಂಬಗಳ ಎಲ್ಲಾ ಬೇಡಿಕೆಗಳನ್ನು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪೂರೈಸುತ್ತಿದ್ದ ಭೂಮಿಯು ತನ್ನ ಸ್ಥಾನವನ್ನು ಭದ್ರಪಡಿಸುವುದರಿಂದ ಅದರ ಒಡೆತನದ ಅಂಶವು ಬಹಳಷ್ಟು ಗೌರವದ ಮಾತಾಗಿತ್ತೆಂಬುದನ್ನು ಅಲ್ಲಗಳೆಯುವಂತಿಲ್ಲ.

ರಾಜ್ಯಾದಾಯವನ್ನು ಸ್ಥೂಲವಾಗಿ ಎರಡು ಭಾಗಗಳನ್ನಾಗಿ ವಿಂಗಡಿಸಬಹುದು. ಅವುಗಳೆಂದರೆ ತೆರಿಗೆಗಳು ಮತ್ತು ಇತರ ಆಕರಗಳು. ಇವುಗಳಲ್ಲಿ ತೆರಿಗೆಗಳಿಂದ ಬರುವ ಆದಾಯವೇ ಅಧಿಕವೆನ್ನಬಹುದು. ರಾಜನ ಆದಾಯದ ಬಹುಭಾಗವು ಈ ತೆರಿಗೆಗಳಿಂದ ಬರುತ್ತಿದ್ದವು. ಇಲ್ಲಿ ಗೌತಮ ಸಂಹಿತೆ, ನಾರದ ಸಂಹಿತೆಗಳು ರಾಜನು ದೇಶವನ್ನು ರಕ್ಷಿಸುವುದಕ್ಕೆ ಪ್ರಜೆಗಳು ಹಿಂದಿರುಗಿ ಕೊಡುವ ಪ್ರತಿಫಲ ರೂಪವೇ ತೆರಿಗೆಗಳೆಂಬುದಾಗಿ ಭಾವಿಸುತ್ತವೆ. ಈ ದಿಶೆಯಲ್ಲಿ ವಶಿಷ್ಠನು ಹೇಳಿರುವಂತೆ, ಧರ್ಮದಿಂದ ರಾಜ್ಯವನ್ನಾಳುವ ರಾಜನಿಗೆ ದೇಶದಲ್ಲಿ ಬೆಳೆಯುವ ಬೆಳೆಯ ಆರನೆಯ ಒಂದು

* ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ

ಭಾಗ ಸಲ್ಲಬೇಕು ಎಂದಿರುವಾಗ ಇದು ರಾಜ ಮತ್ತು ಪ್ರಜೆಗಳ ಮಧ್ಯೆ ಒಂದು ರೀತಿಯ ಒಪ್ಪಂದವೆಂಬುದನ್ನು ನಾವು ತಿಳಿಯಬಹುದು.[೫] ಕರ್ನಾಟಕದಲ್ಲಿರುವ ಶಾಸನಗಳನ್ನು ಗಮನಿಸಿದಾಗ ದಾನ ದತ್ತಿ ನೀಡಿರುವ ಅಂಶಗಳೇ ಹೆಚ್ಚಾಗಿ ನಮಗೆ ಕಾಣಬರುತ್ತವೆ. ದಾನವಾಗಿ ಕೊಡುವ ವಸ್ತುಗಳಲ್ಲಿ ಭೂಮಿಯು ಬಹು ಶ್ರೇಷ್ಠವಾದ ವಸ್ತುವೆಂದು ಜನತೆಯು ಭಾವಿಸಿದ್ದಿರಬೇಕು. ದತ್ತಿಗಳನ್ನು ಹೇಳುವ ದಾನ ಶಾಸನಗಳಲ್ಲಿ ಭೂದಾನವನ್ನು ಹೇಳುವ ಶಾಸನಗಳೇ ಅಧಿಕವಾಗಿವೆ. ಹೀಗಾಗಿ ಪ್ರಾಚೀನ ಕರ್ನಾಟಕದ ಆರ್ಥಿಕ ವ್ಯವಸ್ಥೆಯನ್ನರಿಯಲು ಶಾಸನಗಳು ವಿಪುಲವಾದ ಸಾಮಗ್ರಿಯನ್ನೊದಗಿಸುತ್ತವೆ.[೬] ದಾನದ ವಿಷಯವು ವ್ಯಾಪಾರದ ವಸ್ತುಗಳಿಗೆ ಸಂಬಂಧಿಸಿದ್ದರೆ ಆ ಕಾಲದ ಜನರ ಆರ್ಥಿಕ ಪರಿಸ್ಥಿತಿ, ವ್ಯಾಪಾರ, ವ್ಯಾಪಾರಿಗಳು, ಸುಂಕಗಳು, ಸುಂಕದ ಅಧಿಕಾರಿಗಳು ಮುಂತಾದ ವಿವರಗಳು ಕಾಣಬರುತ್ತವೆ.

ಅರಸೀಕೆರೆ ತಾಲ್ಲೂಕು ಮೂಲತಃ ೫ ಹೋಬಳಿಗಳನ್ನು ಹೊಂದಿದೆ. ಅವುಗಳೆಂದರೆ, ಬಾಣಾವರ, ಕಣಕಟ್ಟೆ, ಜಾವಗಲ್, ಕಸಬಾ, ಮತ್ತು ಗಂಡಸಿ. ಈ ಪ್ರದೇಶದಲ್ಲಿ ಈಗಾಗಲೇ ದೊರೆತಿರುವ ೩೭೮ ಶಾಸನಗಳಲ್ಲಿ ನಮಗೆ ೩೦ ಶಾಸನಗಳು ಹೊಯ್ಸಳ ಮತ್ತು ವಿಜಯನಗರದ ಅರಸರ ಆಳ್ವಿಕೆಯ ಅವಧಿಯಲ್ಲಿ ಜಾರಿಯಲ್ಲಿದ್ದ ಕಂದಾಯದ ಪದಗಳನ್ನು ಉಲ್ಲೇಖಿಸುತ್ತವೆ. ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿರುವ ಗಂಗರ ಕಾಲಾವಧಿಗೆ ಸೇರಿರುವ ಕೆಲವು ಶಾಸನಗಳು ದೊರೆತಿದ್ದಾಗ್ಯೂ, ಅವುಗಳಲ್ಲಿ ಕಂದಾಯದ ವಿಚಾರಕ್ಕೆ ಸಂಬಂಧಿಸಿರುವ ಅಂಶಗಳು ಕಾಣಬರುವುದಿಲ್ಲ. ಆದರೆ ಹೊಯ್ಸಳರ ಕಾಲಾವಧಿಗೆ ಸೇರಿರುವ ಬಹುತೇಕ ಶಾಸನಗಳಲ್ಲಿ ಕಂದಾಯದ ವಿಚಾರವಾಗಿ ಮಾಹಿತಿ ನೀಡುತ್ತವೆ ಎನ್ನಬಹುದು.

ರಾಜ್ಯಾದಾಯದಲ್ಲಿ ಭೂಕಂದಾಯದ ಮೊತ್ತ ಅಧಿಕವಾಗಿರುವುದರಿಂದ ಶಾಸನಗಳು ಕರಭೂಮಿಗಾಗಿ ವಿಶೇಷ ಭೂಮಾಪನವನ್ನು ಹೇಳಿವೆ. **ಮಾಪನ ಮಾಡಿದ ನಂತರ ತೆರಿಗೆಯನ್ನು ನಿಗದಿ ಮಾಡುತ್ತಿದ್ದು,** ಅಂತಹ ತೆರಿಗೆಯನ್ನು ಸೂಕ್ತಿಸುಧಾರ್ಣವ ಸಿದ್ಧಾಯವೆಂಬುದಾಗಿ ಬಿಂಬಿಸಲಾಗಿದೆ. ಹಾಗಾಗಿ **ಸಿದ್ಧಾಯ**ವೆಂಬುದು ಶಾಶ್ವತ ಭೂಕಂದಾಯ ಪದ್ಧತಿಗೆ ಒಳಗಾದ ತೆರಿಗೆಯೆನ್ನಬಹುದು. ಇದನ್ನು ಇನ್ನೊಂದು ರೀತಿಯಲ್ಲಿ ಕೇವಲ ಭೂಕಂದಾಯ ಮಾತ್ರವೆನ್ನದೇ, ವಾರ್ಷಿಕವಾಗಿ ಸಂಗ್ರಹಿಸುವ ಆಯವೆಂಬುದಾಗಿಯೂ ಕರೆಯಬಹುದು. ಹೀಗಾಗಿ ಶಾಸನಗಳಲ್ಲಿ ಕಂಡುಬರುವ ಕರಭೂಮಿ, ಹೊಲದೆರೆ, ಅರುವಣಭೂಮಿ, ದಶವಂದ, ಮುಂತಾದವುಗಳು ಭೂಕಂದಾಯವನ್ನು ಸೂಚಿಸುತ್ತವೆ. ಅರಸೀಕೆರೆ ತಾಲೂಕಿನ ಕೆಲವು ಶಾಸನಗಳಲ್ಲಿ ನಾವು ಭೂಕಂದಾಯಕ್ಕೆ ಸಂಬಂಧಿಸಿದಂತೆ ಮಾಹಿತಿ ಪಡೆಯಬಹುದು. ಕ್ರಿ.ಶ. ೧೧೭೩ನೇ ಅರಸೀಕೆರೆಯ ಶಾಸನವೊಂದರಲ್ಲಿ ಸ್ಥಳೀಯ ಪ್ರಜೆಗಾವುಂಡರು, ನಕರ ಮತ್ತು ನಾನಾದೇಶಿಯರು ಪ್ರತೀ ವರ್ಷ ವಿವಿಧ ರೂಪಗಳಲ್ಲಿ ನೀಡುತ್ತಿದ್ದ ಗದ್ಯಾಣ, ಎತ್ತುಗಾಣ, ಕೈಗಾಣ, ಅಡಕೆಹೇರು, ಎಣ್ಣೆಯಕೊಡ, ಸೊಂಟಿಗೆ, ಮಾತ್ರವಲ್ಲದೇ, ಯಾದವರ ದೊರೆ ಬ್ರಾಹ್ಮಣರಿಗೆ ಅರಸೀಕೆರೆಯಲ್ಲಿ ೧೫ ಪೊನ್ನಿನಷ್ಟು ಬೆಳೆಬಾಳುವ ಭೂಮಿಯನ್ನು ಪಡಿ ಅಥವಾ ಸಂಬಳ ರೂಪದಲ್ಲಿ ನೀಡಿರುವುದನ್ನು ಉಲ್ಲೇಖಿಸುತ್ತದೆ.[೭] ಕ್ರಿ.ಶ. ೧೨–೧೩ನೇ ಶತಮಾನಕ್ಕೆ ಸೇರಿರುವ ನೇರ್ಲಿಗೆಯ ಶಾಸನದಲ್ಲಿ ಊರಿನ ಜನತೆಯು ಸಿದ್ಧಾಯದ ಸೇಸೆಯಲ್ಲಿ ಕೆಲವು ಭಾಗವನ್ನು ನೀಡಿರುವ ಅಂಶ ಕಾಣಬರುತ್ತದೆ.[೮]

ಕ್ರಿ.ಶ. ೧೨೧೯ರ ಅರಸೀಕೆರೆಯ ಶಾಸನವು, ದೊರೆ ಬಲ್ಲಾಳನು ೧೦ ನಿಷ್ಕಗಳಿಗೆ ಭೂಮಿಯನ್ನು ಮಾರಾಟ ಮಾಡಿರುವುದು ಹಾಗೂ ಸಾವಿರ ಒಕ್ಕಲಿಂದ ಪಡೆದ ಭೂಮಿಯ ಮೇಲಿದ್ದ ೧೦ ಹೊನ್ನು ತೆರಿಗೆಯನ್ನು ಇಳಿಸಿರುವ ಅಂಶವನ್ನು ತಿಳಿಸುತ್ತದೆ.[೯] ಹೀಗಾಗಿ ಆ ಸಮಯದಲ್ಲಿ ನಿಷ್ಕ ಮತ್ತು ಹೊನ್ನು ಎಂಬ ಹಣದ ಚಲಾವಣೆಯನ್ನು ನಾವಿಲ್ಲಿ ಗುರುತಿಸಬಹುದಾಗಿದೆ. ಇದೇ ಶಾಸನದಲ್ಲಿ ಅರಸೀಕೆರೆಯ ಜೈನ ಸಮುದಾಯದವರು ಏಳ್ಕೋಟಿ ಜಿನಾಲಯದ ನಿರ್ಮಾಣಕ್ಕಾಗಿ ೧ ಕೋಟಿ ಹಣವನ್ನು ನೀಡಿರುವುದಾಗಿ ಉಲ್ಲೇಖಿಸಲ್ಪಟ್ಟಿರುವುದು ಮೇಲ್ನೋಟಕ್ಕೆ ಉತ್ಪ್ರೇಕ್ಷೆಯಂತೆ ಕಾಣಬರುತ್ತದೆ. ಕ್ರಿ.ಶ. ೧೩೦೭ರ ಹೊನ್ನಶೆಟ್ಟಿಹಳ್ಳಿಯ ಶಾಸನವೊಂದರಲ್ಲಿರುವ ಮಾಹಿತಿಯು ವಿಭಿನ್ನವಾಗಿದೆ. ಆದರಲ್ಲಿ ತಿಳಿಸಿರುವಂತೆ ಊರಿನ ಮಹಾಜನತೆಯು ನೀಡುವ ಸಿದ್ಧಾಯವನ್ನು ದೇವಪ್ಪ ಮತ್ತು ಸಂಕಣ್ಣನವರು ಖರೀದಿ ಮಾಡಿರುವುದು ಹಾಗೂ ಆ ಹಳ್ಳಿಗೆ ಪುಷ್ಯಮಾಸದಲ್ಲಿ ಸಿದ್ಧಾಯದ ಗದ್ಯಾಣವನ್ನು ದಾನವಾಗಿ ನೀಡುತ್ತಾಬರುವುದನ್ನು ಉಲ್ಲೇಖಿಸಲಾಗಿದೆ. ಇಲ್ಲಿ ಖಾಣ (ಮೇವು), ಪೂರ್ವಾಯ, ಹೊಸತಾಗಿ ನೀಡುವ ಅಪೂರ್ವಾಯ, ದೇವದಾನದ ಭೂಮಿ ಮತ್ತು ಸಿದ್ಧಾಯವು ದೇವಪ್ಪ ಮತ್ತು ಸಂಕಣ್ಣರಿಗೆ ಸಲ್ಲುವುದೆಂಬ ಅಂಶ ಕಾಣಬರುತ್ತದೆ. ಇಲ್ಲಿ ಖಾಣ(ಮೇವು), ಪೂರ್ವಾಯ, ಅಪೂರ್ವಾಯಗಳೆಂಬ ತೆರಿಗೆಗಳು ಹಾಗೂ ಅದನ್ನು ನೀಡುತ್ತಿದ್ದ ಅವಧಿಯನ್ನು ಉಲ್ಲೇಖಿಸಿರುವುದು ಪ್ರಮುಖವಾದುದಾಗಿದೆ.[೧೦]

ಒಂದು ಹೊಲವನ್ನು ಉತ್ತು ಬೆಳೆಯನ್ನು ತೆಗೆಯುವ ರೈತನು ಆ ಹೊಲದ ಯಜಮಾನನಿಗೆ ಕೊಡಬೇಕಾದ ನಿರ್ದಿಷ್ಟ ಧಾನ್ಯದ ಮೊತ್ತ ಅಥವಾ ಹಣವೇ ಕಟ್ಟುಗುತ್ತಿಗೆ ಎನ್ನಬಹುದು.

ಬೆಳೆಯಾಗಲಿ, ಅಥವಾ ಆಗದಿರಲಿ, ಆದರೆ ಅಷ್ಟು ಧಾನ್ಯವನ್ನು ಕೊಡಲೇಬೇಕು.[೧೧] ಈ ಬಗೆಯ ವಿವರಗಳು ಅರಸೀಕೆರೆ ತಾಲೂಕಿನ ಸೂಳೆಕೆರೆ, ಬೆಂಡೆಕೆರೆ, ನೇರ್ಲಿಗೆ ಮತ್ತು ಅರಕೆರೆಯ ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ಇವುಗಳಲ್ಲಿ ಸಾಮಾನ್ಯವಾಗಿ ಗ್ರಾಮದ ಮುಖ್ಯಸ್ಥನಿಗೆ ನೀಡುವ ಗೌಡಸೇಸೆ ಮತ್ತು ಶಾಶ್ವತ ತೆರಿಗೆಯಾದ ಸಿದ್ಧಾಯ ಕಟ್ಟುಗುತ್ತಿಗೆ ಎಂಬೆರಡು ತೆರಿಗೆಗಳು ಕಾಣಬರುತ್ತವೆ.[೧೨] ಕ್ರಿ.ಶ. ೧೩೧೮ರ ಕೆಲ್ಲಂಗೆರೆಯ ಶಾಸನವೊಂದರಲ್ಲಿ ಕಟ್ಟುಗೆ ಕಾಣಿಕೆ ಎಂಬ ತೆರಿಗೆಯೊಂದರ ಉಲ್ಲೇಖವಿದೆ. ಶಾಸನದಲ್ಲಿ ತಿಳಿಸಿರುವಂತೆ ಮಹಾಪಸಾಯಿತರಾದ ಭಂಡಾರಿ ಕಾವಣ್ಣವರ ಮಗನಾದ ಕಾಮಣ್ಣನವರಿಗೆ ನೀಡಿರುವ ಶಿಲಾಶಾಸನದ ಪ್ರಕಾರವಾಗಿ, ಆ ಊರಿನ ಹರಿಯಣ್ಣ ಮತ್ತಿತರರು ತಮಗೆ ನೀಡಿರುವ ಭೂಮಿಯಲ್ಲಿ ವ್ಯವಸಾಯ ಮಾಡಲಾಗದೇ, ಆ ಕ್ಷೇತ್ರದ ಮೊದಲ ಸಿದ್ಧಾಯ, ಅಪೂರ್ವಾಯಗಳೆಂಬ ತೆರಿಗೆಗಳನ್ನು ತೆರಲಾರದೇ ತಾವಾಗಿಯೇ ಧಾರೆಯೆರೆದು ಕೊಟ್ಟಿದ್ದಾರೆ. ಹಾಗಾಗಿ ಆ ಊರಿನ ರಾಮಣ್ಣನೆಂಬಾತ ಕಾವಣ್ಣನಿಂದ ಗದ್ಯಾಣ ೮ನ್ನು ಕಟ್ಟುಗೆ ಕಾಣಿಕೆಯಾಗಿ ನೀಡಿ, ಆ ಕ್ಷೇತ್ರಕ್ಕೆ ಪ್ರತಿ ವರ್ಷ ಗದ್ಯಾಣ ೧ನ್ನು ಮಹಾಜನಗಳಿಗೆ ಪುಷ್ಯಮಾಸದಲ್ಲಿ ನೀಡುತ್ತಾ ಬರುವರು ಎನ್ನುವುದರ ಉಲ್ಲೇಖವಿದೆ.[೧೩] ಇಲ್ಲಿ ಶಾಶ್ವತ ಕಂದಾಯವಾಗುವ ಸಿದ್ದಾಯ ಮತ್ತು ಹೊಸದಾಗಿ ನೀಡುವ ಅಪೂರ್ವಾಯ ಹಾಗೂ ಮುಂಗಡವಾಗಿ ನೀಡಿರುವ ಕಟ್ಟುಗೆ ಕಾಣಿಕೆಗಳೆಂಬ ತೆರಿಗೆಗಳ ಉಲ್ಲೇಖವಿರುವುದನ್ನು ಗಮನಿಸಬಹುದು.

ಭೂಮಿಯ ಹಾಗೆಯೇ ನಿವೇಶನ ಮತ್ತು ಪಶು ಪ್ರಾಣಿಗಳ ಮೇಲೆ ತೆರಿಗೆಯನ್ನು ವಿಧಿಸುತ್ತಿದ್ದ ಅಂಶ ಶಾಸನ ಗಳಿಂದ ತಿಳಿದುಬರುತ್ತದೆ. ನಿವೇಶನಗಳಿಗೆ ಸಂಬಂಧಿಸಿದಂತೆ ಮನೆದೆರೆ, ತಿಪ್ಪೆಸುಂಕಗಳು ಕಾಣಬಂದರೆ, ಕುದುರೆಸುಂಕ, ಕುರಿದೆರೆಗಳು ಪ್ರಾಣಿ ತೆರಿಗೆಗಳಾಗಿವೆ. ಮನೆತೆರಿಗೆಗೆ ಸಂಬಂಧಿಸಿದಂತೆ ಕ್ರಿ.ಶ. ೧೧೮೯ರ ಕಣಕಟ್ಟೆಯ ಶಾಸನ ವೊಂದರಲ್ಲಿ ಮಾಹಿತಿಯಿದೆ. ಇಲ್ಲಿ ಪ್ರಸ್ತಾಪಿಸಿರುವಂತೆ ಅಲ್ಲಿನ ಸಮಸ್ತ ಜಗತಿಯ ಕೊತ್ತಾಳಿಗಳೆಂಬ ಸಮುದಾಯ ಮನೆದೆರೆ, ಮಗ್ಗದೆರೆ, ಕಟ್ಟತೆರಿಗೆಯನ್ನು ಮಾಚೇಯನೆಂಬಾತನಿಗೆ ನೀಡಿರುವ ಮಾಹಿತಿಯಿದೆ. ಇಲ್ಲಿ ಮನೆತೆರಿಗೆ, ನೇಯ್ಗೆಯ ಮಗ್ಗದ ಮೇಲಿನ ತೆರಿಗೆ, ಕೆರೆಕಟ್ಟೆಯ ಮೇಲಿನ ತೆರಿಗೆಯ ಉಲ್ಲೇಖವಿರುವುದನ್ನು ಗಮನಿಸಬಹುದು.[೧೪] ಕ್ರಿ.ಶ. ೧೧೮೪ರ ಅರಸೀಕೆರೆಯ ಮತ್ತೊಂದು ಶಾಸನದಲ್ಲಿ ಕೇತಮಲ್ಲನ ಮನೆತೆರಿಗೆಯನ್ನು ಮಾನ್ಯ ಮಾಡಲಾಗಿದೆ ಎನ್ನುವ ಮಾಹಿತಿಯಿರುವುದನ್ನು ಗಮನಿಸಬಹುದು.[೧೫]

ಪ್ರಾಚೀನ ಕಾಲದಿಂದಲೂ ಬೆಳೆದುಬಂದ ಪ್ರಮುಖ ಕೈಗಾರಿಕೆಯೆಂದರೆ ನೇಕಾರಿಕೆ. ಶಾಸನಗಳು ಬಟ್ಟೆ ನೇಯುವ ಕಾಯಕದವರನ್ನು ಜೇಡ, ಸಾಲಿಗ ಎಂಬುದಾಗಿ ಕರೆದಿವೆ. ನೇಯ್ಗೆಯ ಮಗ್ಗದ ಮೇಲೆ ತೆರಿಗೆಯನ್ನು ವಿಧಿಸಲಾಗುತ್ತಿತ್ತು.[೧೬] ಮಗ್ಗದ ಮೇಲಿನ ತೆರಿಗೆಗೆ ಸಂಬಂಧಿಸಿದಂತೆ ಕ್ರಿ.ಶ. ೧೩-೧೬ನೇ ಕಾಲದ ಚಿಕ್ಕಗಂಡಸಿಯ ಶಾಸನವೊಂದರಲ್ಲಿ ಉಲ್ಲೇಖಿಸಿರುವಂತೆ, ಸುಂಕದ ಪುಟರಸರು ಮತ್ತು ಚಿಕ್ಕಗಂಡಸಿಯ ಮಹಾಜನಗಳು ಸಂದರಾಮಠದ ಗೋಪಿಚಂದನಕ್ಕೆ ಈ ಊರಿನ ಮಗ್ಗದೊಳಗೆ ಮೂರುವೀಸದ ಒಂದು ಮಗ್ಗದೆರೆಯನ್ನು ನಡೆಸಿಬರುವರು ಎಂಬುದಾಗಿದೆ.[೧೭] ಮಗ್ಗದೆರೆಯ ಬಗೆಗೆ ಕ್ರಿ.ಶ. ೧೧೮೯ರ ಕಣಕಟ್ಟೆಯ ಶಾಸನವೊಂದರಲ್ಲಿಯೂ ಕೂಡ ಉಲ್ಲೇಖವಿರುವುದನ್ನು ಕಾಣಬಹುದು.[೧೮] ಕೆಲ್ಲಂಗೆರೆಯ ಕ್ರಿ.ಶ. ೧೧೬೧ರ ಶಾಸನವೊಂದರಲ್ಲಿ ಹೇಳಿರುವಂತೆ, ಸುಂಕದ ಹೆಗ್ಗಡೆಗಳು ದೇವರ ನಂದಾದೀವಿಗೆಗೆ ತಮ್ಮ ಆಗಾಂತುಕದ ಸುಂಕದೆರೆಯ ಬಿಟ್ಟಗಾಣವೊಂದು, ಧರ್ಮೇಶ್ವರ ದೇವರ ಪಾದಾರಾಧಕರಾದ ಮಾಚಯನಿಗೆ ಮಗ್ಗದ ಸುಂಕವೂ, ಜೇಡದೆರೆಯನ್ನು ನೀಡಿದರು ಎನ್ನುವ ಉಲ್ಲೇಖವಿದೆ.[೧೯] ಈ ಶಾಸನದಲ್ಲಿ ಆಗಾಂತುಕ, ಸುಂಕದೆರೆ, ಮಗ್ಗದೆರೆ ಮತ್ತು ಜೇಡದೆರೆಗಳೆಂಬ ತೆರಿಗೆಗಳ ಪ್ರಸ್ತಾಪವಿರುವುದನ್ನು ಗಮನಿಸಬಹುದು.

ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದಲ್ಲಿ ಸಾರ್ವಜನಿಕರಿಗೆ ಅಗತ್ಯವಾದ ಎಣ್ಣೆ ಉತ್ಪಾದನೆಯ ಮೇಲೆಯೂ ತೆರಿಗೆ ವಿಧಿಸಲಾಗುತ್ತಿತ್ತು ಎಂಬಂಶ ಶಾಸನ ಗಳಿಂದ ತಿಳಿದು ಬರುತ್ತದೆ. ಶಾಸನಗಳು ಇದನ್ನು ಗಾಣದೆರೆ, ಗಾಣದತೆರೆ ಎಂಬುದಾಗಿ ಕರೆದಿವೆ. ಕ್ರಿ.ಶ. ೧೨ನೇ ಶತಮಾನದ ಕೆಲ್ಲಂಗೆರೆಯ ಶಾಸನವೊಂದರಲ್ಲಿ ಹೇಳಿರುವಂತೆ, ಸುಂಕದ ಹೆಗ್ಗಡೆಗಳು ತಮ್ಮ ಆಗಾಂತುಕದ ಗಾಣದೆರೆಯೊಳಗೆ ಕೇಶವದೇವರ ನಂದಾದೀವಿಗೆಗೆ ಗಾಣವೊಂದನ್ನು ನೀಡಿರುವುದರ ಉಲ್ಲೇಖವಿದೆ.[೨೦] ಇದಲ್ಲದೇ ನಾಡಿನ ಬಹು ದೊಡ್ಡ ಆದಾಯಗಳಲ್ಲಿ ಒಂದಾದ ವ್ಯಾಪಾರ ತೆರಿಗೆ ಶಾಸನ ಗಳಲ್ಲಿ ಸುಂಕವೆಂದೇ ಪ್ರಸಿದ್ಧಿ ಪಡೆದಿದೆ. ಸುಂಕಾದಾಯಕ್ಕಾಗಿ ಪಟ್ಟಣ ಮತ್ತು ಸಂತೆಯ ಊರುಗಳಲ್ಲಿ ಸುಂಕದ ಕಟ್ಟೆಗಳನ್ನು ನಿರ್ಮಿಸಿ ಸುಂಕದ ಅಧಿಕಾರಿಯ ನೇಮಕವಾಗುತ್ತಿದ್ದುದನ್ನು ನಾವಿಲ್ಲಿ ಗಮನಿಸಬಹುದು.[೨೧] ಈ ಬಗೆಯ ತೆರಿಗೆಗಳಲ್ಲಿ ಕಿರಿದೆರೆ, ಹೆಜ್ಜುಂಕ, ಪನ್ನಾಯ ಮುಖ್ಯವಾದವುಗಳು. ಅರಸೀಕೆರೆ ತಾಲೂಕಿನ ಶಾಸನಗಳಲ್ಲಿ ಮೊದಲೆರಡು ತೆರಿಗೆಗಳ ಪ್ರಸ್ತಾಪ ಕಾಣದಿದ್ದಾಗ್ಯೂ, ಪನ್ನಾಯದ ಉಲ್ಲೇಖವಿರುವುದನ್ನು ಕಾಣಬಹುದು. ಕ್ರಿ.ಶ. ೧೧೬೨ರ ಹುಲ್ಲೇಕೆರೆಯ ಶಾಸನವೊಂದರಲ್ಲಿ ತಿಳಿಸಿರುವಂತೆ ಶ್ರೀ ಚೆನ್ನಕೇಶವದೇವರ

ನಂದಾದೀವಿಗೆಗೆ ಸುಂಕದ ಮಂಚೆಯ ಹೆಗ್ಗಡೆ ಬಿಟ್ಟು ಗಾಣವೊಂದು, ದೇವರತೋಟ ಪನ್ನಾಯವನ್ನು ಶ್ರೀಕರಣ ಹೆಗ್ಗಡೆ ಸೋವಯ್ಯನು ಸೂರ್ಯಗ್ರಹಣದಂದು ಧಾರೆಯೆರೆದನು ಎಂಬುದಾಗಿ ಉಲ್ಲೇಖವಿದೆ.[೨೨] ಇಲ್ಲಿ ಪನ್ನಾಯವೆಂಬುದು ಎಲೆ, ಅಡಿಕೆಗಳ ಮೇಲೆ ಆಕರಿಸುವ ಸುಂಕವೆನ್ನಬಹುದು. ಎಲೆ ಕೆಡುವ ವಸ್ತುವಾದುದರಿಂದ ಪನ್ನಾಯವನ್ನು ವಸ್ತುರೂಪದಲ್ಲಿ ಸ್ವೀಕರಿಸದೇ ಹಣದ ರೂಪದಲ್ಲಿಯೇ ಸ್ವೀಕರಿಸಲಾಗುತ್ತಿದ್ದುದು ಗಮನಾರ್ಹ ವಾದುದು.

ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಜನತೆ ಸಾಮಾಜಿಕ – ಧಾರ್ಮಿಕ ಸಂಸ್ಕಾರಗಳಿಂದ ಉಪನಯನ, ಮದುವೆ, ಮೊದಲಾದ ಸಂದರ್ಭಗಳಲ್ಲಿ ತೆರಿಗೆಗಳನ್ನು ನೀಡಬೇಕಿದ್ದಿತು. ಈ ವಿಧವಾದ ತೆರಿಗೆಗಳನ್ನು ಆಯಾಸ್ಥಳದ ಪ್ರಮುಖರೇ ನಿರ್ಧರಿಸುತ್ತಿದ್ದು, ಅದು ರಾಜ್ಯಾದಾಯಕ್ಕೆ ಸೇರುವುದಕ್ಕಿಂತ ಸಾಮಾಜಿಕ–ಧಾರ್ಮಿಕ ಕಾರ್ಯಗಳಿಗೆ ವಿನಿಯೋಗವಾಗುತ್ತಿದ್ದಂತೆ ತೋರುತ್ತದೆ.[೨೩] ಈ ಬಗೆಯ ಶಾಸನಕ್ಕೆ ಸಂಬಂಧಿಸಿದಂತೆ ಅರಸೀಕೆರೆ ತಾಲೂಕಿನ ಕ್ರಿ.ಶ. ೧೫೮೬ರ ಚಿಕ್ಕಗಂಡಸಿಯ ಕೇಶವದೇವರು, ಗೋಪಿನಾಥ ದೇವರಿಗೆ ವಸ್ತ್ರಕ್ಕಾಗಿ ಈ ಊರ ಮದುವೆದೆರೆಯೊಳಗೆ ಒಂದು ಮದುವೆದೆರೆಯನ್ನು ನಡೆಸಿಬರುವರು ಎಂಬುದಾಗಿ ಉಲ್ಲೇಖವಿದೆ.[೨೪] ಕ್ರಿ.ಶ. ೧೧೭೭ರ ಯಡವನಹಳ್ಳಿಯ ಶಾಸನವೊಂದರಲ್ಲಿ ಹೇಳಿರುವಂತೆ, ಯಡವನಹಳ್ಳಿಯ ಕೇತಗೌಡ ನಿರ್ಮಿಸಿ, ಲಿಂಗಪ್ರತಿಷ್ಠೆ ಮಾಡಿಸಿ, ಸಮಸ್ತ ಜನಕಾಶ್ರಯವಾಗಿ ಕಟ್ಟಿಸಿದ ಕೆರೆಧರ್ಮಕ್ಕೆ ಮದುವೆಯ ಹಂದರ ಹಣವನ್ನು ಕೆರೆಗೆ ನೀಡಿದರು ಎಂಬ ಉಲ್ಲೇಖವಿದೆ. ಇಲ್ಲಿ ಹಂದರಹಣವೆಂಬುದು ಮದುವೆಯ ಚಪ್ಪರದ ಮೇಲಿನ ತೆರಿಗೆಯೆನ್ನಬಹುದು.[೨೫] ಅಡಿಕೆಯ ಸುಂಕಕ್ಕೆ ಸಂಬಂಧಿಸಿದಂತೆ ಕ್ರಿ.ಶ. ೧೨೪೮ರ ನೇರ್ಲಿಗೆಯ ಶಾಸನವೊಂದರಲ್ಲಿ ಪ್ರಸ್ತಾಪವಿದೆ. ಇಲ್ಲಿನ ಮಹಾಜನತೆಯು ದೊರೆ ವೀರಬಲ್ಲಾಳನಿಗೆ ನೇರ್ಲಿಗೆಯ ಸಿದ್ಧಾಯ ಮೊದಲ ಗದ್ಯಾಣವನ್ನು ೪೦೦ ಅಡಿಕೆಯ ಸುಂಕ ಸರ್ವಾಯ ಶುದ್ಧಿಪಿಂಡದಾನ, ಕಟ್ಟುಗುತ್ತಿಗೆಯಾಗಿ, ಸುವರ್ಣಾಯ ಗದ್ಯಾಣ ಸಾವಿರವನ್ನು ನೀಡುವರು ಹಾಗೂ ಆ ೪೦೦ರ ಮೊದಲಿಗೆ ಖಾಣನೆಲ್ಲು, ಎಳ್ಳುಜೋಳವನ್ನ ಬೇರೆಯಾಗಿ ತೆರುವರು ಎಂಬುದನ್ನು ಉಲ್ಲೇಖಿಸಲಾಗಿದೆ.[೨೬]

ಕ್ರಿ.ಶ. ೧೩೩೫ರ ಮಾಡಾಳುವಿನ ಶಾಸನವೊಂದರಲ್ಲಿ ಉಲ್ಲೇಖಿಸಿರುವಂತೆ, ಅಲ್ಲಿಯ ಮಹಾಜನಗಳು ಗೂಳಿಯ ಕಲಗೌಡನಿಗೆ ಕೊಟ್ಟ ಶಿಲಾಶಾಸನ ಪ್ರಕಾರ, ಆ ಮಹಾಜನರಿಗೆ ಕಲಗೌಡನು ಕೊಡಗಿದೆರೆಯಾಗಿ ನೀಡಿ, ಅಳಿವು, ಅನ್ಯಾಯ, ಕಟ್ಟುಗೂಳು, ಕಟ್ಟಳಿಸೇನೆ, ಅಪೂರ್ಬಾಯ, ಸಪೂರ್ಬಾಯ, ವುತ್ಸಾಹ, ಮುಂತಾದವನ್ನು ಸರ್ವಬಾಧಾ ಪರಿಹಾರವಾಗಿ ವರ್ಷವೊಂದಕ್ಕೆ ೯ನ್ನು ಮುಕ್ಕಂದಾಯವಾಗಿ ನೀಡುತ್ತಾ ಬರುವುದು ಎಂಬ ಮಾಹಿತಿಯಿದೆ.[೨೭] ಈ ಶಾಸನದಲ್ಲಿರುವ ತೆರಿಗೆಯ ವೈವಿಧ್ಯತೆಯನ್ನು ಹೊನ್ನಶೆಟ್ಟಿಹಳ್ಳಿ ಮತ್ತು ಕೆಲ್ಲಂಗೆರೆಯ ಶಾಸನಗಳಲ್ಲಿಯೂ ಕೂಡ ನಾವು ಗುರುತಿಸಬಹುದು.[೨೮] ಕ್ರಿ.ಶ. ೧೨೯೭ರ ಸೂಳೆಕೆರೆಯ ಶಾಸನವು ವಿಭಿನ್ನ ರೀತಿಯ ತೆರಿಗೆಗಳನ್ನು ಪ್ರಸ್ತಾಪಿಸುತ್ತದೆ. ಕೆಲ್ಲಂಗೆರೆಯ ಮಹಾಪಸಾಯಿತ ರಾದ ಹೆಗ್ಗಡೆ ಜಯಿತಣ್ಣನವರ ಮಗನಾದ ಅಯ್ಯಣ್ಣನವರಿಗೆ ಕೆಲ್ಲಂಗೆರೆಯನ್ನು ಮಾರಾಟ ಮಾಡಿದ್ದು, ಅದಕ್ಕೆ ಪ್ರತಿಯಾಗಿ ಜಯಿತಣ್ಣನವರು ಅಭ್ಯಾಗತೆ, ಧವಳಾರದಭಂಡಿ, ಕಳುಕು, ತುಪ್ಪ, ದಳಮಿರೆ, ಕೂಳು, ನೂಲು, ಮುಂತಾದವಲ್ಲದೇ, ಹೊದ್ದಕೆ, ಕಾಣಿಕೆ, ಉಗ್ರಣ, ಪೂರ್ವಾಯ, ಅಪೂರ್ವಾಯ, ಹದಿಕೆ, ಉಭಯ ಕಾರಣವಿಲ್ಲದೆ ಸರ್ವಬಾಧೆ ಪರಿಹಾರವಾಗಿ ಕಟ್ಟುಗುತ್ತಿಗೆ ಪಿಂಡಾದಾನ ವರ್ಷಂಪ್ರತಿ ಆ ಹಳ್ಳಿಗೆ ಸಿದ್ಧಾಯ ಗದ್ಯಾಣ ೪೦ನ್ನು ಪುಷ್ಯಮಾಸದಲ್ಲಿ ನೀಡುತ್ತಾ ಬರುವರು ಎಂಬುದಾಗಿ ಹೇಳಲಾಗಿದೆ.[೨೯] ಕ್ರಿ.ಶ. ೧೨೫೪ರ ಹಿರಿಯೂರಿನ ಶಾಸನವೊಂದರಲ್ಲಿ ತಿಳಿಸಿರುವಂತೆ ಮಹಾ ವಡ್ಡವ್ಯವಹಾರಿ ಹಿರಿಯ ಭಂಡಿನಂಬಿಸೆಟ್ಟಿಯವರ ಅಳಿಯ ಕಂಡನಂಬಿಸೆಟ್ಟಿಗೆ ಗುಬ್ಬಿಯ ಕಲ್ಲಯ್ಯನ ಮಗ ಪೋತಗೌಡ, ಕಲ್ಲಯ್ಯನ ಮಗ ಸಿಂಗಯ್ಯ ಚವುಂಡಾದೇವಿಯರ ಮಗ ಬಲ್ಲಯ್ಯನು ಮಾನೆಣ್ಣೆ, ತಿಪ್ಪೆಸುಂಕ, ಹಡಿಯದೆರೆ, ಮೂಲೆವೆತ್ತ, ಹಂದರಹಣವನ್ನು ನೀಡಿರುವುದನ್ನು ಶಾಸನ ಉಲ್ಲೇಖಿಸುತ್ತದೆ. ಇದರಲ್ಲಿ ಮತದೆರೆ ನೀಡಿರುವುದನ್ನು ಕೂಡ ಗಮನಿಸ ಬಹುದು.[೩೦] ತಿಪ್ಪೆಸುಂಕದ ಬಗೆಗೆ ಅರಸೀಕೆರೆ ಮತ್ತು ಕರಗುಂದದ ಶಾಸನಗಳಲ್ಲಿಯೂ ಕೂಡ ಉಲ್ಲೇಖಗಳಿವೆ.[೩೧] ಕ್ರಿ.ಶ. ೧೨೭೪ರ ಕಣಕಟ್ಟೆಯ ಶಾಸನವೊಂದರಲ್ಲಿ ತಿಳಿಸಿರುವಂತೆ ಕಾವಣಕರವೆಂಬ ತೋಟಿನ ಮೇಲಿನ ತೆರಿಗೆಯ ಉಲ್ಲೇಖವಿದೆ. ಅದರಲಿ ತಿಳಿಸಿರುವಂತೆ, ತಮಗೂ ಮಹಾ ಜನಗಳಿಗೂ ಭೂಮಿ ವಿಷಯವಾಗಿ ಹಳ್ಳಿ ಹಿರಿಯೂರಿನಲ್ಲಿ ಕಾವಣಕರವಿಲ್ಲವೆಂದು ಆ ಮಹಾಜನಗಳಿಗೆ ಸ್ಥಾನಿಕರು ಕೊಟ್ಟ ಓಲೆ ಇದಾಗಿದೆ ಎಂಬುದನ್ನು ತಿಳಿಯಪಡಿಸುತ್ತದೆ.[೩೨]

ಒಟ್ಟಾರೆಯಾಗಿ ಹೇಳಬೇಕಾದರೆ ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದಲ್ಲಿದ್ದ ಭೂಕಂದಾಯ ಮತ್ತು ಇತರ ಆಕರಗಳು ವೈವಿಧ್ಯತೆ ಹೊಂದಿರುವುದನ್ನು ಗಮನಿಸಬಹುದು. ಈ ಹಾದಿಯಲ್ಲಿ ಅರಸೀಕೆರೆಯೂ ಕೂಡ ತನ್ನದೇ ಆದ ವಿಶೇಷತೆಯನ್ನು ಹೊಂದಿದೆ. ಹೊಯ್ಸಳರು, ವಿಜಯನಗರ ಅರಸರ ಕಾಲಾವಧಿಗಳಲ್ಲಿ ಈ ಪ್ರದೇಶದಲ್ಲಿದ್ದ

ತೆರಿಗೆ ಪದ್ಧತಿಗಳನ್ನು ಗಮನಿಸಿದಾಗ ಕಾಣಬರುವ ಬಹುಸಂಖ್ಯಾತ ತೆರಿಗೆ ಪದ್ಧತಿ ಪ್ರಮುಖವಾದುದು. ರಾಜ್ಯದ ಬೊಕ್ಕಸಕ್ಕೆ ಕಂದಾಯವು ತಲುಪುತ್ತಿದ್ದ ಮೂಲ ಮತ್ತು ಮಧ್ಯವರ್ತಿತನವನ್ನು ಈ ಭಾಗದ ಶಾಸನಗಳಿಂದ ತಿಳಿಯಬಹುದಾಗಿದೆ. ಈ ಪ್ರದೇಶದ ಕೆಲವು ಶಾಸನಗಳು ಭೂಕಂದಾಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ನೀಡದಿದ್ದಾಗ್ಯೂ ಇತರ ಬಗೆಯ ತೆರಿಗೆಗಳನ್ನು ಕುರಿತು ಉಲ್ಲೇಖಿಸುತ್ತವೆ. ಈ ಬಗೆಯ ತೆರಿಗೆಗಳಲ್ಲಿ ಮುಖ್ಯವಾಗಿ ಅನ್ಯಾಯ, ಅಪೂರ್ವಾಯ, ಅಭ್ಯಾಗತೆ, ಅಳಿವು, ಆಗಾಂತುಕ, ಆಲವೆತ್ತ, ಉಗ್ರಣ, ಕಟ್ಟುಗುತ್ತಗೆ, ಕಳುಕು, ಕಾಣಿಕೆ, ಕಾರಕ, ಕುಳ, ಕೂಳು, ಕೊಡಗಿದೆರೆ, ಖಾಣ, ಗೌಡಸೇಸೆ, ಗಾಣದೆರೆ, ಜೇಡದೆರೆ, ಮಗ್ಗದೆರೆ, ತಿಪ್ಪೆಸುಂಕ, ದಳಮಿರೆ, ಧವಳಾರದಭಂಡಿ, ನೂಲು, ಪನ್ನಾಯ, ಮತದೆರೆ, ಮದುವೆದೆರೆ, ಮನೆದೆರೆ, ಮುಕ್ಕಂದಾಯ ಮೂಲೆವೆತ್ತ, ವುತ್ಸಹಾ, ಕಾವಣಕರ, ಸಪೂರ್ಬಾಯ, ಸಿದ್ಧಾಯ, ಸುಂಕ, ಸೇಸೆ, ಹಡಿಯದೆರೆ, ಹಂದರಹಣ, ಹೊಂಗುತ್ತಗೆ, ಹೊದ್ದಕೆ, ಹೊಂಬಳು, ಕಟ್ಟುಗೆ ಕಾಣಿಕೆ, ಮುಂತಾದ ಬಹುಸಂಖ್ಯಾತ ತೆರಿಗೆ ವ್ಯವಸ್ಥೆ ಜಾರಿಯಲ್ಲಿದ್ದುದನ್ನು ಶಾಸನಗಳು ಉಲ್ಲೇಖಿಸುತ್ತವೆ. ಇವೆಲ್ಲವನ್ನೂ ಗಮನಿಸಿದಾಗ ತೆರಿಗೆ ಪದ್ಧತಿಯು ವಿಭಾಗೀಯತೆ ಹೊಂದಿರುವುದನ್ನು ನಾವಿಲ್ಲಿ ಗಮನಿಸ ಬಹುದು. ಪ್ರತ್ಯಕ್ಷ ಮತ್ತು ಪರೋಕ್ಷ, ಅರೆಕಾಲಿಕ ಮತ್ತು ಶಾಶ್ವತ, ವರಮಾನ ಮತ್ತು ಬಂಡವಾಳ, ಆಸ್ತಿ ಮತ್ತು ಸರಕುಗಳು, ವ್ಯಕ್ತಿ ಮತ್ತು ವಸ್ತು ಎನ್ನುವ ವಿಭಾಗೀಯತೆಯನ್ನು ನಾವಿಲ್ಲಿ ಗುರುತಿಸಬಹುದು.

ಅರಸೀಕೆರೆ ತಾಲೂಕಿನಲ್ಲಿ ಯಾವುದೇ ನದಿ ಪಾತ್ರವಿಲ್ಲದಿರುವುದರಿಂದ ಇಲ್ಲಿನ ಜನತೆ ವ್ಯವಸಾಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಕೆರೆ ಹಾಗೂ ಮಳೆ ನೀರನ್ನು ಅವಲಂಬಿ ಸಿರುವುದು ಶಾಸನಗಳಿಂದ ಸ್ಪಷ್ಟವಾಗುತ್ತದೆ. ಆದಾಗ್ಯೂ ರಾಜ್ಯದ ಖಜಾನೆಗೆ ಅವರು ಸಲ್ಲಿಸುತ್ತಿದ್ದ ಕಂದಾಯದ ವಿವಿಧ ಬಗೆಗಳನ್ನು ಗಮನಿಸಿದಾಗ ಆ ಕಾಲದ ಅರ್ಥವ್ಯವಸ್ಥೆಯು ಉತ್ತಮವಾಗಿತ್ತು ಎನ್ನಬಹುದು. ಮುಖ್ಯವಾಗಿ ಈ ಒಂದು ಪ್ರದೇಶದಲ್ಲಿ ಆಳ್ವಿಕೆ ನಡೆಸಿರುವ ಗಂಗರ ಕಾಲಕ್ಕೆ ಸೇರಿರುವ ಕೆಲವು ಶಾಸನಗಳು ದೊರೆತ್ತಿದ್ದಾಗ್ಯೂ, ಅವುಗಳಲ್ಲಿ ಕಂದಾಯದ ಬಗೆಗಿನ ಮಾಹಿತಿಯು ನಮಗೆ ಕಾಣಬರುವುದಿಲ್ಲ. ಹೊಯ್ಸಳರ ಕಾಲಕ್ಕೆ ಸೇರಿರುವ ಸಾಕಷ್ಟು ಶಾಸನಗಳಲ್ಲಿ ಭೂಕಂದಾಯ ಮತ್ತು ಇತರ ತೆರಿಗೆಗಳ ಬಗೆಗೆ ಉಲ್ಲೇಖ ಗಳಿರುವುದನ್ನು ನಾವಿಲ್ಲಿ ಗಮನಿಸಬಹುದು.

ಈ ರೀತಿಯ ಬಹುಸಂಖ್ಯಾತ ತೆರಿಗೆ ಪದ್ಧತಿಯಿರುವುದರಿಂದ ಯಾವುದೇ ವರ್ಗವೊಂದರ ಮೇಲೆ ಅಧಿಕ ತೆರಿಗೆಯು ಹೊರೆ ಬೀಳಲಾರದು ಎನ್ನುವ ಅಭಿಪ್ರಾಯವನ್ನು ನಾವಿಲ್ಲಿ ವ್ಯಕ್ತಪಡಿಸಬಹುದು. ಸಾಮಾನ್ಯ ಜನತೆಯ ರಾಜ್ಯಕ್ಕೆ ನಿಗದಿತ ಅವಧಿಯಲ್ಲಿ ಕಂದಾಯ ಸಲ್ಲಿಸುತ್ತಿದ್ದುದರಿಂದ ಅವರಿಗೆ ತೆರಿಗೆಗಳು ಹೊರೆಯಾಗಿ ಕಂಡುಬಂದಿಲ್ಲವೆನ್ನಬಹುದು. ತೆರಿಗೆಯು ಹಲವು ವರ್ಗ, ವೃತ್ತಿಗಳ ಮೇಲೆ ವಿಧಿಸಲಾಗುತ್ತಿದ್ದುದು, ಸೂಕ್ತ ಸಮಯದಲ್ಲಿ ಅದರ ಸಂಗ್ರಹ ರಾಜ್ಯದ ಬೊಕ್ಕಸಕ್ಕೆ ಸಂದಾಯ ವಾಗುತ್ತಿದ್ದುದರಿಂದ, ರಾಜ್ಯದ ವ್ಯವಸ್ಥೆ ಸುಗಮ ವಾಗಿರಬಹುದು. ಇದಲ್ಲದೇ ವ್ಯವಸಾಯ, ಕೈಗಾರಿಕೆಗಳು, ಹಾಗೂ ಇತರ ಆರ್ಥಿಕ ಚಟುವಟಿಕೆಗಳು ಪ್ರಗತಿದಾಯಕ ವಾಗಿರುವ ಕಾರಣದಿಂದಲೋ ಜನತೆಗೆ ತೆರಿಗೆಯು ಹೊರೆಯಾಗಿರಲಾರದು ಎನ್ನಬಹುದು. ಇದಲ್ಲದೇ ಶಾಸನಗಳಲ್ಲಿ ಅರಸೀಕೆರೆಯನ್ನು ಪ್ರಮುಖ ವ್ಯಾಪಾರ ಕೇಂದ್ರವೆಂಬುದಾಗಿ ಬಿಂಬಿಸಿರುವುದರಿಂದ ಈ ಭಾಗದ ಆರ್ಥಿಕ ಪರಿಸ್ಥಿತಿ ಉತ್ತಮವಾಗಿತ್ತು ಎಂಬುದನ್ನು ನಾವು ತಿಳಿಯಬಹುದು. ತೆರಿಗೆ ಪದ್ಧತಿಯೆಂಬುದು ಬಹು ಉತ್ಪಾದಕತ್ವವೂ, ಹಾಗೂ ಸಮರ್ಥನೀಯವಾದುದರಿಂದ ಈ ಭಾಗದ ಜನತೆಗೆ ಅವುಗಳು ಹೊರೆಯಾಗಿರಲಾರವು. ಶಾಸನಗಳಲ್ಲಿ ಈ ಬಗೆಯ ತೆರಿಗೆಗಳನ್ನು ಜನತೆ ನೀಡಿದ್ದಾಗ್ಯೂ, ವಾಸ್ತವದಲ್ಲಿ ಅವುಗಳು ಕಷ್ಟಸಾಧ್ಯ ಎನ್ನಬಹುದು. ತೆರಿಗೆಯೆಂಬುದು ಅದು ಕಡಿಮೆಯಿರಲಿ ಅಥವಾ ಅಧಿಕವಾಗಿರಲಿ, ರಾಜ್ಯವೊಂದರ ಶಾಶ್ವತ ಸಂಪನ್ಮೂಲಗಳಾಗಿ ಇರುತ್ತಿತ್ತು ಎನ್ನಬಹುದು. ರಾಜ್ಯದ ಆರ್ಥಿಕತೆಯ ಮೂಲಾಧಾರಗಳಾಗಿ ಭೂಕಂದಾಯ ಮತ್ತು ಇತರ ಆಕರಗಳು ಕಾರ್ಯನಿರ್ವಹಿಸುತ್ತಿದ್ದುದು ನಮಗೆ ಶಾಸನ ಗಳಿಂದ ಸ್ಪಷ್ಟವಾಗುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ, ಕಾಲದಿಂದ ಕಾಲಕ್ಕೆ, ತೆರಿಗೆಯು ಈ ಪ್ರದೇಶದಲ್ಲಿ ಅಧಿಕಗೊಂಡಿರುವುದು ಸ್ಪಷ್ಟವಾಗುತ್ತದೆ. ಗಂಗರ ಕಾಲದ ಆಳ್ವಿಕೆಯಾವಧಿಯಲ್ಲಿದ್ದ ತೆರಿಗೆಯು ಹೊಯ್ಸಳರ ಕಾಲಕ್ಕೆ ಬಂದಾಗ ಹೆಚ್ಚಾಗುವುದನ್ನು ನಾವು ಗಮನಿಸಬಹುದು. ಮುಂದೆ ಇದು ವಿಜಯನಗರದ ಅರಸರ ಆಳ್ವಿಕೆ ಯವಧಿಯಲ್ಲಿಯೂ ಕೂಡ ಮುಂದುವರಿಯುವುದನ್ನು ಶಾಸನಗಳಿಂದ ತಿಳಿದುಕೊಳ್ಳಬಹುದು. ವಿವಿಧ ಬಗೆಯ ತೆರಿಗೆಗಳ ಮೂಲಕ ರಾಜ್ಯದ ಕಂದಾಯದ ಹೆಚ್ಚಳ ವಾಗಿರುವುದನ್ನು ನಾವಿಲ್ಲಿ ಸ್ಪಷ್ಟವಾಗಿ ಗಮನಿಸಬಹುದು.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಆರ್.ಎಸ್. ಶರ್ಮಾ., ಇಂಡಿಯನ್ ಫ್ಯೂಡಲಿಸಂ, ಅನು : ಜಿ.ಎಂ. ಜಯವೀರನಾಥ, **ಭಾರತೀಯ ಊಳಿಗಮಾನ್ಯ (ಸರಂಜಾಮೀ) ಪದ್ಧತಿ**, ಐಸಿಎಚ್‌ಆರ್ ಮತ್ತು ಸಿವಿಜಿ (ಬೆಂಗಳೂರು–೨೦೦೭). ಪುಟ ೨.

೨. ಅದೇ., ಪುಟ ೪.

೩. ಅದೇ., ಪುಟ ೮–೯.

೪. ಡಾ. ಎಸ್.ಕೆ. ಕೊಪ್ಪ, '**ತರ್ದವಾಡಿ ನಾಡು ಒಂದು ಅಧ್ಯಯನ**, ಶಾಸನಗಳನ್ನಾಧರಿಸಿ' (ಕ್ರಿ.ಶ. ೮೫೦–೧೩೦೦), ಪ್ರತಿಭಾ ಪ್ರಕಾಶನ, ೧೯೯೦, ಪುಟ ೨೦೩.

೫. ಡಾ. ಎಂ. ಚಿದಾನಂದಮೂರ್ತಿ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ** (ಕ್ರಿ.ಶ. ೪೫೦–೧೧೫೦), ಪ್ರತಿಭಾ ಇಂಡಿ, ಪುಟ ೪೪೦.

೬. ಅದೇ., ಪುಟ ೪೮೯.

೭. **ಎಪಿಗ್ರಾಫಿಯ ಕರ್ನಾಟಿಕ**, ಸಂ. ೧೦, ಅರಸೀಕೆರೆ ೨೩, (ಇನ್ನು ಮುಂದೆ ಎ.ಕ. ಓದುವುದು).

೮. ಅದೇ., ೨೮೩.

೯. ಅದೇ., ೩೧.

೧೦. ಅದೇ., ೧೪೭.

೧೧. ಡಾ. ಎಂ. ಚಿದಾನಂದಮೂರ್ತಿ., ಪೂರ್ವೋಕ್ತ., ಪು. ೪೧೨.

೧೨. ಎ.ಕ. ಸಂ. ೧೦, ಅರಸೀಕೆರೆ ೫೨, ೨೮೬, ೩೧೫.

೧೩. ಅದೇ., ೧೫೪.

೧೪. ಅದೇ., ೮೮.

೧೫. ಅದೇ., ೩೯.

೧೬. ಎಸ್.ಕೆ. ಕೊಪ್ಪಾ., ಪೂರ್ವೋಕ್ತ., ಪುಟ ೨೧೧.

೧೭. ಎ.ಕ. ಸಂ. ೧೦, ಅರಸೀಕೆರೆ ೨೦೮.

೧೮. ಅದೇ., ೮೮.

೧೯. ಅದೇ., ೧೬೦.

೨೦. ಅದೇ., ೧೫೦.

೨೧. ಎಸ್.ಕೆ. ಕೊಪ್ಪಾ., ಪೂರ್ವೋಕ್ತ, ಪುಟ ೨೨೯–೨೩೦.

೨೨. ಎ.ಕ. ಸಂ. ೧೦, ಅರಸೀಕೆರೆ ೧೮೪.

೨೩. ಎಸ್.ಕೆ. ಕೊಪ್ಪಾ., ಪೂರ್ವೋಕ್ತ, ಪುಟ ೨೩೨.

೨೪. ಎ.ಕ. ಸಂ. ೧೦, ಅರಸೀಕೆರೆ ೨೧೦.

೨೫. ಅದೇ., ೧೮೨.

೨೬. ಅದೇ., ೨೮೬.

೨೭. ಅದೇ., ೧೧೫.

೨೮. ಅದೇ., ೧೪೭, ೧೫೪.

೨೯. ಅದೇ., ೧೪೧.

೩೦. ಅದೇ., ೩೧೭.

೩೧. ಅದೇ., ೩೬, ೨೪೧.

೩೨. ಅದೇ., ೮೯.

ಮಹೇಂದ್ರಕುಮಾರ ಕೆ.ಸಿ. *

ಹೊಳೆನರಸೀಪುರ ತಾಲ್ಲೂಕಿನ ಶಾಸನೋಕ್ತ ಭೂಮಾಲೀಕರ ಉಗಮ ಮತ್ತು ಬೆಳವಣಿಗೆ

ಇಡೀ ಭಾರತದಲ್ಲಿ ಅರ್ಚಕರಿಗೆ, ದೇವಾಲಯಗಳಿಗೆ, ಸಾಮಂತರಿಗೆ, ಅಧಿಕಾರಿಗಳಿಗೆ, ಸೈನಿಕರಿಗೆ, ಭೂಮಿ ಗ್ರಾಮಗಳನ್ನು ದತ್ತಿ ಕೊಡುತ್ತಿದ್ದುದು ಸಾಮಾನ್ಯವಾಗಿದ್ದಿತು. ಇದರಿಂದ ಕರ್ನಾಟಕ ಹೊರತಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಈ ಲೇಖನದಲ್ಲಿ ಕರ್ನಾಟಕದ ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ (ಕ್ರಿ.ಶ. ೮-೯ನೇ ಶತಮಾನದಿಂದ ಕ್ರಿ.ಶ. ೧೮ನೇ ಶತಮಾನದವರೆಗಿನ) ಶಾಸನಗಳನ್ನು ಆಧರಿಸಿ ಹೊಸ ಭೂಮಾಲೀಕತ್ವದ ಉಗಮ ಮತ್ತು ಬೆಳವಣಿಗೆಯನ್ನು ಗುರುತಿಸಲು ಪ್ರಯತ್ನಿಸಲಾಗಿದೆ.

ಹೊಳೆನರಸೀಪುರ ತಾಲ್ಲೂಕು ಹಾಸನ ಜಿಲ್ಲೆಯ ದಕ್ಷಿಣ ಭಾಗಕ್ಕಿದ್ದು ೧೨.೭೮೩ ಉತ್ತರ ಅಕ್ಷಾಂಶ ಮತ್ತು ೭೬.೨೪೩' ಪೂರ್ವ ರೇಖಾಂಶಗಳ ನಡುವೆ ಇದೆ. ಇದು ಅರೆಮಲೆನಾಡು ಪ್ರದೇಶವಾಗಿದ್ದು ಹೇಮಾವತಿ ನದಿ ಈ ತಾಲ್ಲೂಕಿನ ಉದ್ದಕ್ಕೂ ಹರಿಯುತ್ತಿದೆ. ಈ ನದಿಗೆ ಸಣ್ಣ ಸಣ್ಣ ಅಣೆಕಟ್ಟುಗಳನ್ನು ಕಟ್ಟಿ ಸ್ವಲ್ಪ ಪ್ರಮಾಣದ ನೀರನ್ನು ಒದಗಿಸುವ ಕಾರ್ಯ ಪ್ರಾಚೀನ ಮತ್ತು ಮಧ್ಯಕಾಲದಲ್ಲೂ ನಡೆದಿದೆ.

ಹೊಳೆನರಸೀಪುರ ತಾಲ್ಲೂಕಿನಲ್ಲಿ ಒಟ್ಟು ೧೪೫ ಶಾಸನಗಳಿದ್ದು, ಇವುಗಳಲ್ಲಿ ೧೮ ಶಾಸನಗಳು ಭೂದತ್ತಿ ನೀಡಿದುದಕ್ಕೆ ಸಂಬಂಧಿಸಿದವುಗಳಾಗಿವೆ. ಇವುಗಳಲ್ಲಿ ದೇವಾಲಯಗಳಿಗೆ, ಯುದ್ಧದಲ್ಲಿ ಮಡಿದ ವೀರರುಗಳಿಗೆ ಸಂಬಂಧಿಸಿದಂತೆ ಖಾಸಗಿ ವ್ಯಕ್ತಿಗಳಿಗೆ ಭೂದತ್ತಿ ನೀಡಿದ ವಿವರಗಳನ್ನು ಗುರುತಿಸಬಹುದು.

ಭಾರತದಲ್ಲಿ ಭೂದತ್ತಿಯ ವಿವರ ನೀಡುವ ಶಾಸನವನ್ನು ಕ್ರಿ.ಪೂ. ೧ನೆಯ ಶತಮಾನದಲ್ಲಿ ಅಶ್ವಮೇಧಯಾಗದ ಸಂದರ್ಭದಲ್ಲಿ ದತ್ತಿ ನೀಡಿದುದ್ದರಿಂದ ಗುರುತಿಸಬಹುದು.[೧] ಆದರೆ ಕ್ರಿ.ಶ. ೫ನೇ ಶತಮಾನದ ನಂತರ ಭೂದತ್ತಿ ಕೊಡುವುದು ಹೆಚ್ಚಾಗಿ ಜಾರಿಯಲ್ಲಿ ಬಂದಿತು.[೨] ಮೂಲತಃ ವೈಶ್ಯರಾಗಿದ್ದ ಗುಪ್ತ ಅರಸರನ್ನು ಕ್ಷತ್ರಿಯರೆಂದು ಪರಿಗಣಿಸಿದ ಕಾರಣ ಅವರಿಗೆ ದೈವಗುಣಗಳನ್ನು ಹೊರಿಸಲಾಯಿತು. ಇದರಿಂದಾಗಿ ಗುಪ್ತ ಅರಸರ ಸ್ಥಾನಮಾನಗಳು ಉನ್ನತವಾದವು ಮತ್ತು ಸಾಮಾಜಿಕ ಮಾನ್ಯತೆ ಪಡೆದವು. ಇದರಿಂದಾಗಿ ಗುಪ್ತ ಅರಸರು ಜಾತಿ ಮೇಲ್ವರ್ಗೀಯ ವ್ಯವಸ್ಥೆಯ ಕಟ್ಟಾ ಬೆಂಬಲಿಗರಾದರು. ಪರಿಣಾಮವಾಗಿ ಬ್ರಾಹ್ಮಣರಿಗೆ ದೊಡ್ಡ ಪ್ರಮಾಣದಲ್ಲಿ ಭೂದತ್ತಿಗಳನ್ನು ನೀಡುತ್ತ ಬರಲಾಯಿತು.[೩] ಜೊತೆಗೆ ಕೆಲವು ಉನ್ನತಾಧಿಕಾರಿಗಳಿಗೆ ಸಂಬಳ ಕೊಡುವ ಬದಲಾಗಿ ಭೂಮಿಯನ್ನು ನೀಡುತ್ತಿದ್ದರು.[೪] ಇದರಿಂದಾಗಿಯೂ ಈ ಕಾಲದಲ್ಲಿ ಭೂದತ್ತಿ ಶಾಸನಗಳ ಸಂಖ್ಯೆ ಹೆಚ್ಚಾಗುತ್ತ ಹೋಯಿತು. ಕರ್ನಾಟಕದಲ್ಲಿ ದೇವಾಲಯಗಳಿಗೆ ದತ್ತಿಕೊಟ್ಟ ವಿವರ ಕ್ರಿ.ಶ. ೧೫೦[೫]ರಲ್ಲಿ ಕಂಡುಬರುತ್ತದೆ. ಇದರಲ್ಲಿ ಶಾತವಾಹನ ರಾಜನೊಬ್ಬನು **'ಮಟ್ಟಪಟ್ಟಿ ದೇವರಿಗೆ'** ದತ್ತಿಕೊಟ್ಟ ವಿಷಯವಿದೆ. ಕ್ರಿ.ಶ. ೫ನೇ ಶತಮಾನದ ಶಾಸನದಲ್ಲಿ ವಾಕಾಟಕ ಅರಸನಾಗಿದ್ದ ಇಮ್ಮಡಿ ಪ್ರವರಸೇನನು ಹುಲ್ಲುಗಾವಲುಗಳ ಮೇಲೆ ಹಾಗೂ ಚರ್ಮ, ಇದ್ದಿಲು, ಉಪ್ಪಿನ ಉತ್ಪಾದನೆಗಳು ಭೂಗರ್ಭ ಸಂಪತ್ತು ಮತ್ತು ನಿಧಿಗಳ ಮೇಲಿನ ಕಂದಾಯ ಮೂಲಗಳನ್ನೊಳಗೊಂಡ ದತ್ತಿಯನ್ನು ದತ್ತಿ ಪಡೆದವರಿಗೆ ಬಿಟ್ಟುಕೊಟ್ಟನು. ಈ ರೀತಿಯ ದಾನವನ್ನೆ (ಅಡವಿನ ಮಣ್ಣು) ಕ್ರಿ.ಶ. ೧೧-೧೨ನೇ ಶತಮಾನದಲ್ಲಿ ಗುಬ್ಬಿಯ ಸಾವನ್ತ ಬೂವೆಯ ನಾಯಕನು ಪದ್ಮಣ ದೇವರಿಗೆ ದಾನ ಕೊಟ್ಟನು.[೬]

ಹೊಳೆನರಸೀಪುರ ತಾಲ್ಲೂಕಿನಲ್ಲಿ ಕ್ರಿ.ಶ. ೮-೯ನೇ ಶತಮಾನದಲ್ಲಿ ಗಂಗರ ರಾಚಮಲ್ಲನ ಹೆಂಡತಿ ನೀಡಿದ ದತ್ತಿಯಿಂದ ದೇವಾಲಯಗಳಿಗೆ ದತ್ತಿ ನೀಡುವ ಕಾರ್ಯ ಪ್ರಾರಂಭವಾದುದನ್ನು ಗುರುತಿಸಬಹುದು.[೭] ಇದು ಹೊಳೆನರಸೀಪುರ ತಾಲ್ಲೂಕಿನಲ್ಲಿ ರಾಣಿ(ಸ್ತ್ರೀ)ಯೊಬ್ಬಳು ಮಾಡಿದ ಮೊದಲ ಮತ್ತು ಕೊನೆಯ ಭೂದಾನವಾಗಿದೆ. ಇದರಲ್ಲಿ ರಾಣಿಯು ನಂದಗಿರಿ ದೇವರಿಗೆ ದೇವಾಲಯವನ್ನು ನಿರ್ಮಿಸಿ ಎರಡು ಖಂಡುಗ ಭೂಮಿಯನ್ನು ದತ್ತಿ ನೀಡಿದಳು. ಇದಾದ ನಂತರ ಹೊಯ್ಸಳರ ಕಾಲದಲ್ಲಿ ಹೆಚ್ಚಿನದಾಗಿ ದತ್ತಿ ನೀಡಿರುವುದು ಶಾಸನಗಳಿಂದ ಕಂಡುಬರುತ್ತದೆ. ಇವರ ಕಾಲದಲ್ಲಿ ರಾಜನಲ್ಲದೇ ಮಹಾಸಾಮಂತರು, ಸಾಮಂತರು, ಗಾವುಂಡ ಪ್ರಜೆಗಳು, ನಾಯಕರುಗಳ ಜೊತೆಗೆ ಆ ಸೀಮೆಯ ಅರಸರುಗಳು ಸೇರಿ ಭೂದತ್ತಿಯನ್ನು ದೇವಾಲಯಗಳಿಗೆ ನೀಡಿರುವುದನ್ನು ಕಾಣಬಹುದು.

* ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳಗಂಗೋತ್ರಿ

ಹೊಯ್ಸಳರ ಕಾಲದಲ್ಲಿ ಬಾಗಿವಾಳುವಿನ ಮಾಣಿಕಶೆಟ್ಟಿ ಮತ್ತು ಶಾಸ್ತ್ರಿಯಪ್ಪಯ್ಯರ ಮಗ ರಾಮೇಶ್ವರ ದೇವರಿಗೆ ೧೦೪೯ರಲ್ಲಿ ಒಂದು ಸಲಗೆ ಗದ್ದೆ ಮತ್ತು ಒಂದು ಸಲಗೆ ಹೂದೋಟವನ್ನು ದಾನ ಮಾಡಿದನು.[೮] ಹಾಗೆಯೇ ಜಕ್ಕಗಾವುಂಡ, ಕುಳಗಾವುಂಡ, ಮಸಣಿಗಾವುಂಡ ಮುಂತಾದವರು ನೀರಹಳ್ಳಿಯಲ್ಲಿ ಲಿಂಗವನ್ನು ನಿರ್ಮಿಸಿ ಇದರ ನೈವೇದ್ಯಕ್ಕೆ ನಾಲ್ಕು ಸಲಗೆ ಗದ್ದೆ ಮತ್ತು ಹತ್ತು ಕೊಳಗ ಹೊಲವನ್ನು ಕ್ರಿ.ಶ. ೧೧೩೮ರಲ್ಲಿ ದಾನ ನೀಡಿದರು.[೯] ಹೀಗೆ ದೇವಸ್ಥಾನಗಳನ್ನು ಕಟ್ಟಿಸುವುದು. ಅವುಗಳ ವ್ಯವಸ್ಥೆಗಾಗಿ, ಅನ್ನಸಂತರ್ಪಣೆ ಧರ್ಮಕಾರ್ಯಗಳಿಗಾಗಿ ದತ್ತಿ ಕೊಡುವುದು ಲೌಕಿಕ ಸಂಪತ್ತಿನಗಳಿಕೆಯ ಸಾರ್ಥಕತೆ ಎಂದು ಜನ ಭಾವಿಸಿದ್ದರು. ರಾಜಾಧಿರಾಜರಿಂದ ಪ್ರಾರಂಭವಾಗಿ ಜನಸಾಮಾನ್ಯರಿಗೂ ಈ ಧರ್ಮ-ಸಾಂಸ್ಕೃತಿಕ ಭಾವನೆ ಜೀವನದ ಸಹಜಗುಣವಾಗಿ ಪರಿಣಾಮಿಸಿದುದರ ಫಲವಾಗಿ ದೇವಸ್ಥಾನಗಳು ತಲೆ ಎತ್ತಿದವು ಮತ್ತು ದಾನಧರ್ಮಗಳು ಜೀವನದ ಸಾರ್ಥಕತೆಯ ಅಂಶಗಳಾದವು.[೧೦] ಈ ರೀತಿ ಕಾಲಕಾಲಕ್ಕೆ ದೇವಾಲಯಗಳ ನಿರ್ಮಾಣವಾದಂತಹದ್ದು ಸರಿಯಷ್ಟೆ. ಆದರೆ ಅದು ವ್ಯವಸ್ಥಿತವಾಗಿ ನಡೆಯುತ್ತಾ ಸಾಗಬೇಕಾದರೆ ಭಕ್ತಜನರಿಂದ ಆಗಾಗ್ಗೆ ಬರಬಹುದಾದ ಕಾಣಿಕೆಗಳನ್ನೇ ಅವಲಂಬಿಸಿ ಕುಳಿತುಕೊಳ್ಳಲಾರದು.; ಆದ ಕಾರಣ ದೇವಸ್ಥಾನವನ್ನು ಕಟ್ಟಿಸಿದ ವ್ಯಕ್ತಿಗಳೇ ಅದಕ್ಕೆ ಸಮೃದ್ಧವಾಗಿ ದತ್ತಿಗಳನ್ನು ಬಿಡುತ್ತಿದ್ದರು. ಅಷ್ಟೇ ಅಲ್ಲದೆ ಒಬ್ಬ ವ್ಯಕ್ತಿಯಿಂದ ದೇವಸ್ಥಾನವು ನಿರ್ಮಾಣವಾಯಿತೆಂದರೆ ಹತ್ತಾರು ಜನರು, ಹತ್ತಾರು ಶ್ರೇಣಿಗಳು ಒಮ್ಮೊಮ್ಮೆ ಹತ್ತಾರು ಗ್ರಾಮಗಳು ಸೇರಿ ಅದಕ್ಕೆ ದತ್ತಿಯನ್ನು ಬಿಟ್ಟುಕೊಡುತ್ತಿದ್ದರು. ಇದಕ್ಕೆ ಸಾಕ್ಷಿ ಎಂಬಂತೆ ಮೂಡಲಹಿಪ್ಪೆವು, ಈಶ್ವರ ದೇವರಿಗೆ ಮತ್ತು ಎಳ್ಳೇಶ್ವರ ದೇವರಿಗೆ[೧೧] ಕೊಟ್ಟ ಭೂದತ್ತಿಗಳು. ಈ ದತ್ತಿಗಳನ್ನು ನೀಡಿದವರು ಊರಿನ ಪ್ರಮುಖರು. ಬಹುಶಃ ಇವರು ಆ ಊರಿನ ಜಮಿನ್ದಾರರಾಗಿದ್ದು ಅವರ ಸ್ವಂತ ಭೂಮಿಯನ್ನು ದೇವಾಲಯಗಳಿಗೆ ದಾನ ನೀಡಿರುವುದನ್ನು ಕಾಣಬಹುದು.

೩ನೇ ವೀರನರಸಿಂಹನ ಮಹಪ್ರಧಾನ ಪೆರುಮಾಳ ದಣ್ಣನಾಯಕರು ಬಾರಿನ ಕೆರೆಯ ಮತ್ತು ಆಲಕೆರೆಯ ಕೆಳಗೆ ಎರಡು ಸಲಗೆ ಹಳ್ಳ ಗದ್ದೆಯನ್ನು ಉದ್ದೂರು ಮಹಾಜನಗಳಿಂದ ಎಲ್ಲರೂ ಒಪ್ಪುವಂತೆ ಕ್ರಯ ಲಕ್ಷಣ ಲಕ್ಷಿತವಾಗಿ ಕೊಂಡು ಪಂಚಿಕೇಶ್ವರ ದೇವರ ಆರಣಪೂಜೆಯ ಧರ್ಮಕ್ಕೆ ಕೊಟ್ಟು ಇದಕ್ಕೆ ಯಾರೂ ಚ್ಯುತಿಪಡಿಸದಂತೆ ಆ ಗ್ರಾಮದ ಮಹಾಜನಗಳು ಕಾಯಬೇಕೆಂದು ಅಪ್ಪಣೆ ಹೊರಡಿಸಿದನು.[೧೨] ೧೨-೧೩ನೇ ಶತಮಾನಗಳಲ್ಲಿ ಭೂಮಿಯ ಮಾರಾಟದ ಬಗೆಗಿನ ನಿಯಮಗಳ ಬೆಳವಣಿಗೆಯನ್ನು ಮತ್ತು ಭೂಮಿಯ ಮೇಲೆ ವ್ಯಕ್ತಿಗಳಿಗಿದ್ದ ಒಡೆತನವನ್ನು ಇದು ಸೂಚಿಸುತ್ತದೆ.

ಹೊಳೆನರಸೀಪುರ ತಾಲ್ಲೂಕಿನ ಮತ್ತೊಂದು ಶಾಸನದಲ್ಲಿ[೧೩] ಉದ್ದೂರು ಕೇಶವದೇವರ ಪ್ರತಿಷ್ಠಾ ಕಾಲದಲ್ಲಿ ಆ ಉದ್ದೂರಿನ ಮಹಾಜನಗಳು, ಆ ಕಾಲದ ಅರಸು ಚೆಂಜಿಭುಳಿನಾಯಕರು ಸುಂಕದ ಬೊಪ್ಪಣ್ಣನ ಮಗ ಕಾವಣ್ಣ, ಹಳ್ಳಿಯ ಹಿರಿಯರು, ಸಮಸ್ತ ಗಾವುಂಡ ಪ್ರಜೆಗಳು ದೇವರ ಅಮೃತಪಡಿಗೆ ದೇವಗೆರೆಯ ಕೆಳಗೆ ಅಡಿಕೆಮರ, ಎರಡು ಖಂಡುಗ ಗದ್ದೆ, ಅಂಕನಹಳ್ಳಿಯ ಚುತಸ್ಸೀಮೆಗೆ ಒಳಗಾದ ಗದ್ದೆ ಬೆದ್ದಲು, ತೋಟ ತುಡಿಕೆಗಳನ್ನು ಧಾರಾಪೂರ್ವಕವಾಗಿ ಕೊಟ್ಟರು. ಇದು ಭೂಮಿಯ ಮೇಲಿನ ಅರಸ ಮತ್ತು ಪ್ರಜೆಗಳ ಸಂಯುಕ್ತ ಹಕ್ಕುಗಳಿಗೆ ಎಡೆಮಾಡಿಕೊಟ್ಟಿರುವುದನ್ನು ಕಾಣಬಹುದು ಮತ್ತು ಮೀಮಾಂಸಾ ಸೂತ್ರಕ್ಕೆ ವ್ಯಾಖ್ಯೆಯನ್ನು ನೀಡಿದ 'ಶಬರಸ್ವಾಮೀನ್‌ನು' "ಭೂಮಿಯ ಮೇಲೆ ಅರಸನಿಗೆ ಇದ್ದಷ್ಟೆ ಹಕ್ಕು ಇತರರಿಗೂ ಇದೆ ಎಂದು ಮಾಡಿರುವ ವಾದಕ್ಕೆ"[೧೪] ಇದು ನಿದರ್ಶನವಾಗಿದೆ.

ದೇವಾಲಯಗಳಿಗೆ ಭೂದಾನ ಕೊಟ್ಟಂತೆ ಯುದ್ಧದಲ್ಲಿ ಮಡಿದ ವೀರರಿಗೂ ಭೂದಾನ ನೀಡಿರುವುದನ್ನು ಗುರುತಿಸಬಹುದು. ಹನುಮನ ಹಳ್ಳಿಯಲ್ಲಿ ದೊರೆತಿರುವ ಎರಡು (೭೬.೭೮), ವೀರಗಲ್ಲುಗಳಲ್ಲಿ ಭೂದತ್ತಿ ನೀಡಿರುವುದನ್ನು ಕಾಣಬಹುದು. ತೆರಣ್ಯದ ಮೈದವೆ ಹೆಗ್ಗಡೆ ಎಂಬ ವೀರನು ಆಕಸ್ಮಿಕವಾಗಿ ನಡೆದ ಯುದ್ಧದಲ್ಲಿ ಮರಣ ಹೊಂದಿದನು. ಅದರ ನೆನಪಿಗಾಗಿ ಬಬ್ಬೆಯನಾಯಕನು ಕಲ್ಲು ನಿಲ್ಲಿಸಿ ದೇವಾಲಯವನ್ನು ನಿರ್ಮಿಸಿ ಅದಕ್ಕೆ ಎರಡು ಸಲಗೆ ಗದ್ದೆ ಮತ್ತು ಹತ್ತು ಕೊಳಗದ ಬೆದ್ದಲೆಯನ್ನು ದಾನ ನೀಡಿದನು[೧೫]. ಆದರೆ ಇದೇ ಹನುಮನಹಳ್ಳಿಯಲ್ಲಿ ದೊರೆತಿರುವ ಮತ್ತೊಂದು ವೀರಗಲ್ಲಿನಲ್ಲಿ[೧೬] ತುರುಗಳನ್ನು ಬಿಡಿಸುವ ಕಾಳಗದಲ್ಲಿ ಬೊಮ್ಮಯ್ಯ ಎಂಬುವವನು ಮರಣ ಹೊಂದಿದನು. ಆ ಬಗ್ಗೆ ಕಲ್ಲು ಕೆತ್ತಿದ ಕೇತುಗನಿಗೆ ಆ ಊರಿನ ಮಹಾಜನಗಳು, ಹಿರಿಯಣ್ಣ, ಸೂರಯ್ಯ ಮೊದಲಾದವರು ಕಪ್ಪು ಮಣ್ಣಿನ ಭೂಮಿಯನ್ನು ದಾನವಾಗಿ ಕೊಟ್ಟರು. ಈ ಎರಡು ವೀರಗಲ್ಲುಗಳಲ್ಲಿ ವೀರಗಲ್ಲಿನ ಸಂಖ್ಯೆ ೭೮ರಲ್ಲಿ ತಿಳಿಸಿರುವಂತೆ ಮರಣ ಹೊಂದಿದ ವೀರನ ಹೆಸರಿನಲ್ಲಿ ದೇವಾಲಯವನ್ನು ನಿರ್ಮಿಸಿ ಅದಕ್ಕೆ ಭೂದತ್ತಿಯನ್ನು ನೀಡಿದರು. ಇದರಿಂದ ವೀರನಿಗಾಗಲಿ, ಆತನ ಕುಟುಂಬದವರಿಗಾಗಲಿ ಉಪಯೋಗವೇನಾಯಿತೆಂದು ತಿಳಿಸಿಲ್ಲ. ಇದು ರಾಯನ ಮಗ ಬಬ್ಬೆಯನಾಯಕ ಮಾಡಿದ ಕಾರ್ಯವಾಗಿತ್ತು ಈ ನಾಯಕನು ಆ ಸ್ಥಳದ ಅರಸನಿದ್ದು ಸೈನಿಕರನ್ನು ದೈವಿಕರಿಸಿ ಅವರನ್ನು ಹುರಿದುಂಬಿಸುವ ಕಾರ್ಯವನ್ನು ಈ ಮುಖಾಂತರ ಮಾಡಿರುವುದು

ತಿಳಿದುಬರುತ್ತದೆ. ಆದರೆ ವೀರಗಲ್ಲು ಸಂಖ್ಯೆ ೭೬ರಲ್ಲಿ ಕಾಳಗದಲ್ಲಿ ಮಡಿದ ವೀರನಿಗೆ ಯಾವುದೇ ಪರಿಹಾರವಿಲ್ಲ ಅದಕ್ಕೆ ಬದಲಾಗಿ ಅದನ್ನು ತಿಳಿಸಿದ (ಕಲ್ಲನ್ನು ಕೆತ್ತಿದ) ವ್ಯಕ್ತಿಗೆ ಕಪ್ಪುಮಣ್ಣಿನ ಭೂಮಿಯ ದಾನ ನೀಡಲಾಗಿದೆ.

ಚೋಳ ಕೊಂಗಾಳ್ವ ದೇವರ ಸಾವಂತ ಪ್ರಿತುರಾವಿ ಸೆಟ್ಟಿಯ ಮೊಮ್ಮಗ ಸಾವಂತ ಬೂವೆಯ ನಾಯಕನು ಪದ್ಮಣ್ಣ ದೇವನಿಗೆ ಗುಬ್ಬಿಯ ಕೆರೆಯ ಕೆಳಗೆ ಅರ್ಧ ಖಂಡುಗ ಭೂಮಿಯನ್ನು ಎರಡು ಖಂಡುಗ ಹುಲ್ಲುಗಾವಲನ್ನು ದಾನ ನೀಡಿದನು.[೧೮] ಹಾಗೆಯೇ ಪಾಂಡ್ಯಗಾಂವುಡನು ತನ್ನ ಕೆರೆಯ ಕೆಳಗೂ ಎರಡು ಖಂಡುಗ ಭೂಮಿಯನ್ನು ಮಾದಯ್ಯನಿಗೆ ದಾನ ಕೊಟ್ಟನು.[೧೯] ಇಲ್ಲಿ ಪದ್ಮಣ ದೇವ ಮತ್ತು ಮಾದವಯ್ಯರವರು ಆ ಊರುಗಳ ಅಧಿಕಾರಿಗಳಾಗಿದ್ದಿರ ಬಹುದು ಅಥವಾ ದೇವಾಲಯಗಳ ನಿರ್ವಾಹಕರಾಗಿದ್ದಿರಲು ಬಹುದು.

ಇಲ್ಲಿ ಮಹಾಸಾಮಂತರು, ಸಾಮಂತರು ಊರಿನ ಪ್ರಮುಖರುಗಳ ಜೊತೆಗೆ ಅರಸರು ಸೇರಿ ದಾನ ಮಾಡಿರುವುದನ್ನು ನೋಡಿದರೆ ಇವರೆಲ್ಲರು ತಮ್ಮ ಭೂಮಿಗಳನ್ನೇ ದಾನ ಮಾಡಿದ್ದಾರೆ. ಇವರು 'ಬೃಹಸ್ಪತಿ ಮತ್ತು ವ್ಯಾಸರು' ಹೇಳಿರುವಂತೆ "ಭೂಮಿಯು ಮೂರು ತಲೆಮಾರುಗಳವರೆಗೆ ಉಪಯೋಗಿಸಲ್ಪಟ್ಟಿದ್ದಾದರೆ ಅದರ ಮೇಲೆ ಶಾಸನ ಸಮ್ಮತವಾದ ಹಕ್ಕನ್ನು ಹೊಂದಲು ಅನುಮತಿ ಇದೆ"[೨೦] ಎಂಬ ನಿಯಮಗಳಿಗೆ ಒಳಪಟ್ಟು ದಾನ ನೀಡಿರಬಹುದು.

ವಿಜಯನಗರ ಅರಸರ ಕಾಲದಲ್ಲಿಯೂ ಸಹ ದಾನದತ್ತಿಗಳನ್ನು ಸಾಮಂತರುಗಳು ನೀಡಿರುವುದನ್ನು ನೋಡಬಹುದು. ನರಸಿಂಹರಾಯರ ಆಳ್ವಿಕೆಯ ಕಾಲದಲ್ಲಿ ಚಿಗಳ್ಳಿಯ ಗಾವುಂಡ ಪ್ರಜೆಗಳು ಮಲ್ಲಿಕಾರ್ಜುನ ದೇವರಿಗೆ ದಾನ ಕೊಟ್ಟರು[೨೧]. ಕೃಷ್ಣದೇವರಾಯನ ಮಂತ್ರಿ ಬಾಗೂರು ಮಲ್ಲರಸನ ಕಾರಬಾರಿ ವೀರಪ್ಪರಸರು ಮಲ್ಲರಸರಿಗೆ ಧರ್ಮವಾಗಬೇಕೆಂದು ನಿಡುವಣಿಕೆರೆಗೆ ಏರಿಯನ್ನು ಕಟ್ಟಿಸಿ ಅದರ ನಿರ್ವಹಣೆಗೆ ಗದ್ದೆ, ೫ ಗುಳ ಹೊಲ, ೨೦ ಹಣವನ್ನು ದಾನ ಕೊಟ್ಟರು[೨೨]. ಹೀಗೆ ಪ್ರಜಾಕಾರ್ಯ ಮಾಡುವುದರಿಂದ ತನ್ನ ಒಡೆಯನಿಗೆ ಒಳ್ಳೆಯದಾಗುವುದೆಂಬ ನಂಬಿಕೆಯಿಂದಲೂ ಮತ್ತು ಇತರರ ಭೂಮಿಗೆ ನೀರನ್ನು ಒದಗಿಸುವ ಕಾರ್ಯವನ್ನು ಮಾಡಲಾಗಿದೆ.

ನಂತರ ಕಾಲದಲ್ಲಿ ಹೊಳೇನರಸೀಪುರ ತಾಲ್ಲೂಕಿನಲ್ಲಿ ಪಾಳೆಯಗಾರರ ಆಳ್ವಿಕೆ ಪ್ರಾರಂಭವಾದ ನಂತರ ಇದುವರೆಗೆ ನೋಡಿದ ಸಾಮಂತರು, ಊರಿನ ಪ್ರಮುಖರು ನೀಡಿರುವಂತಹ ದಾನಗಳಿಗೆ ಬದಲಾಗಿ ಈ ನಾಯಕರೇ ಸ್ವತಹ ತಾವೇ ಸಂಪೂರ್ಣವಾಗಿ ದಾನ ನೀಡುವ ಕಾರ್ಯ ಕೈಗೊಂಡರು. ಕಾರಣ ಈ ಹೊತ್ತಿಗೆ ಸರ್ಕಾರ ಹೆಚ್ಚು ಪರಿಣಾಮಕಾರಿಯಾಗಿಯೂ ಮತ್ತು ಬಲಯುತವಾಗಿಯೂ ಈ ಪ್ರದೇಶದಲ್ಲಿ ರೂಪುಗೊಂಡಿದ್ದನ್ನು ಕಾಣಬಹುದು. ಹಾಗಾಗಿ ಇವರು ದೇವಾಲಯಗಳಿಗೆ ಮತ್ತು ಬ್ರಾಹ್ಮಣರಿಗೆ ತಾವೇ ಭೂಮಿಯನ್ನು ದಾನ ನೀಡುತ್ತಾ ಬಂದರು.

ವೆಂಕಟಪತಿರಾಯರ ಕರಣಿಕ ತಿಪ್ಪರಸಯ್ಯನ ಮೊಮ್ಮಗ ಲಕ್ಷ್ಮರಸನು ನರಸಿಂಹದೇವರ ತೆಪ್ಪದಂದು ದೇವರನ್ನು ಇಡಲು ಮಂಟಪವನ್ನು ಕಟ್ಟಿಸಿದರು. ಇದಕ್ಕೆ ನರಸಿಂಹನಾಯಕರು ಎರಡು ಖಂಡುಗ ಫಲವತ್ತಾದ ಭೂಮಿಯನ್ನು ಕೆರೆಯ ಹತ್ತಿರದಲ್ಲಿ ದಾನ ನೀಡಿದರು[೨೩]. ಹಾಗೆಯೇ ಇದೇ ನರಸಿಂಹನಾಯಕರು ನರಸಿಂಹಸ್ವಾಮಿ ದೇವಸ್ಥಾನದ ಆವರಣದೊಳಗೆ ದೇವಸ್ಥಾನಗಳನ್ನು ಕಟ್ಟಿಸಿ ಆ ದೇವಸ್ಥಾನ ಗಳಲ್ಲಿ ಚಕ್ರಾಳ್ವರನ್ನು, ಕೊರತ್ತಾಳ್ವರು, ವೇದಾಂತಾಚಾರ್ಯರು ಮುಂತಾದವರನ್ನು ಪ್ರತಿಷ್ಠೆ ಮಾಡಿಸಿ ಅವರ ಅಮೃತಪಡಿಗೆ ನೈವೇದ್ಯಕ್ಕೆ ಮುಂತಾದ ಸಕಲ ಸೇವೆಗಳಿಗೆ ಚಾಕನಹಳ್ಳಿಯಲ್ಲಿ ತೋಟ ಮತ್ತು ಎರಡು ಖಂಡುಗ ಭೂಮಿಯನ್ನು ದಾನ ಮಾಡಿದರು[೨೪]. ಅದೇ ರೀತಿ ನರಸಿಂಹಸ್ವಾಮಿ ಉತ್ಸವಕ್ಕೆ ಲಕ್ಷ್ಮಿ ವಿಳಾಸ ಮಂಟಪ ಕಟ್ಟಿಸಿ ಅದರ ಚರಪಿಗೆ (ದೇವತಾ ನೈವೇದ್ಯ) ಸಣಕಲ ಹೊಸೂರಿನಲ್ಲಿ ಭೂಮಿಯನ್ನು ದಾನ ಕೊಟ್ಟರು. ಹಾಗೆ ಅರಸರು ಭೂಮಿಯನ್ನು ದಾನ ನೀಡಬೇಕಾದರೆ ಅವರು ಪ್ರತ್ಯೇಕ ಅರಸರ ಭೂಮಿಯ ಬಗ್ಗೆ ಯಾವ ಆಧಾರಗಳನ್ನು ನೀಡುವುದಿಲ್ಲ. ಆದ್ದರಿಂದ ಅರಸನು ತಮ್ಮ ಸೀಮೆಯ ಎಲ್ಲಾ ಭಾಗಗಳಲ್ಲಿ ದಾನ ನೀಡಲು ಸ್ವತಂತ್ರರಿದ್ದರೆಂದು ತೋರುತ್ತದೆ. ರಾಜಸ್ವಾಮ್ಯ ಸಿದ್ಧಾಂತ ದಂತೆ[೨೫] ಅರಸನು ಅತಿಕಿರಿಯ ಭೂಸ್ವಾಮಿ ಎಂದು ಪ್ರತಿಪಾದಿಸಲ್ಪಟ್ಟರೆ ಉಳಿದವರೆಲ್ಲರು ಆತನ ನಂತರದ ಕಿರಿಯ ಭೂಸ್ವಾಮಿ ಎಂದು ತಿಳಿಸುತ್ತದೆ. ಆದ್ದರಿಂದ ರಾಜ ತನ್ನ ಪ್ರದೇಶದ ಭೂಮಿಯ ಮೇಲೆ ಸಂಪೂರ್ಣ ಒಡೆತನವನ್ನು ಹೊಂದಿದ್ದನು. ನರಸಿಂಹ ಪುರಾಣದ ವ್ಯಾಖ್ಯಾನಕಾರನೂ ಸಹ ಭೂಮಿಯು ಅರಸನಿಗೆ ಸೇರಿದ್ದೆಂದು, ಅದು ಬೇಸಾಯಗಾರನಿಗೆ ಸೇರಿದ್ದಲ್ಲವೆಂದು[೨೬] ಪ್ರತಿಪಾದಿಸಿರುವುದಕ್ಕೆ ಈ ಅರಸರು ಮನ್ನಣೆ ನೀಡಿದಂತಿದೆ. ಇದರಿಂದಾಗಿ ಈ ನಾಯಕರು ಸಮಾಜದ ಪ್ರತಿನಿಧಿಯಾಗಿ ಭೂಮಿಯ ಮೇಲೆ ಹಕ್ಕು ಪಡೆದಿದ್ದು ತಮ್ಮ ರಾಜ್ಯ (ಸೀಮೆಯ)ದ ಎಲ್ಲಾ ಭಾಗಗಳಲ್ಲಿ ತಮಗೂ[೨೭]. ತಮ್ಮ ತಂದೆತಾಯಿಗಳಿಗೂ, ಮತ್ತು ಒಡೆಯರಿಗೆ[೨೮] ಧಾರ್ಮಿಕ ಶ್ರೇಷ್ಠತೆಯ ಪುಣ್ಯವನ್ನು ಪಡೆಯುವ ಉದ್ದೇಶದಿಂದ ದತ್ತಿಗಳನ್ನು ನೀಡಿದರು. ಅವರು ಎಂದೂ ದಾನ ನೀಡಿದ ಭೂಮಿ ಒಳಪಡುವ ಗ್ರಾಮದ ಮುಖ್ಯಸ್ಥನಿಗೆ, ಪ್ರಮುಖ ನಿವಾಸಗಳಿಗೆ ಮತ್ತು ಬೇಸಾಯಗಾರರಿಗೆ ತಾವು ನೀಡುವ ದತ್ತಿಯ ಬಗ್ಗೆ ಶಾಸನಗಳ ಮುಖಾಂತರ ತಿಳಿಸಿದರೇ ಹೊರತು, ಅವರ ಸಮ್ಮತಿಯನ್ನು ಕೇಳುತ್ತಿರಲಿಲ್ಲ. ಇದು ಗ್ರಾಮಸ್ಥರ ಹಕ್ಕುಗಳು ದುರ್ಬಲವಾಗಿದ್ದುದನ್ನು ಸೂಚಿಸುತ್ತದೆ.

ಈ ಪಾಳೆಯಗಾರರು ತಮ್ಮ ದಾನಗುಣದಿಂದ 'ದೈವಬ್ರಾಹ್ಮಣ ಪ್ರತಿಪಾಲಕ'[೩೦] ಎಂಬ ಬಿರುದನ್ನು ಹೊಂದಿದ್ದು ಭೂಮಿಯನ್ನು ದೇವಾಲಯಗಳಿಗೆ ದಾನ ನೀಡಿದ್ದಾರೆ. ಹೀಗೆ ಕೊಟ್ಟ ದಾನವನ್ನು ಬೇರೆಯವರು ಆಕ್ರಮಿಸಬಾರದೆಂದು ಸಾಮಾನ್ಯವಾಗಿ ಎಲ್ಲಾ ಶಾಸನಗಳ ಕೊನೆಯಲ್ಲಿ ಶಾಪಾಶಯಗಳನ್ನು ಕೆತ್ತಿಸಿದ್ದಾರೆ. ಆದ್ದರಿಂದ ಈ ದಾನದ ಭೂಮಿ ಸಂಪೂರ್ಣವಾಗಿ ದಾನ ಪಡೆದವರ (ದೇವಸ್ಥಾನಗಳ) ಏಕಸ್ವಾಮ್ಯಕ್ಕೆ ಒಳಪಟ್ಟು ಬೇರೆಯವರ ಅತಿಕ್ರಮಣದಿಂದ ದೂರ ಉಳಿಯಿತು. ಆದರೆ ಈ ಶಾಸನಗಳಲ್ಲಿ ದಾನ ನೀಡಲ್ಪಟ್ಟ ಭೂಮಿಯಲ್ಲಿ ಈ ಹಿಂದೆ ಇದ್ದ ಬೇಸಾಯಗಾರರ ಬಗ್ಗೆ ಏನನ್ನೂ ಹೇಳಿಲ್ಲದಿರುವುದು ಕಂಡುಬರುತ್ತದೆ. ಆದರೂ ೧೨ನೇ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದ ಭಟ್ಟಸ್ವಾಮಿನ್‌ನು ಕೌಟಿಲ್ಯನ ಅರ್ಥಶಾಸ್ತ್ರದ ಮೇಲಿನ ತನ್ನ ವ್ಯಾಖ್ಯಾನದಲ್ಲಿ ಮಹತ್ವದ ವ್ಯಾಖ್ಯಾನವನ್ನು ಉಲ್ಲೇಖಿಸುತ್ತಾರೆ. ಅದರ ಪ್ರಕಾರ "ಶಾಸ್ತ್ರಗಳಲ್ಲಿ ಪಾಂಡಿತ್ಯವನ್ನು ಹೊಂದಿದವರು, ಅರಸರು ಭೂಮಿಯ ಮತ್ತು ನೀರಿನ ಒಡೆಯನೆಂದು ಒಪ್ಪಿಕೊಳ್ಳುತ್ತಾರೆ. ಇವೆರಡರ ಹೊರತಾಗಿ ಉಳಿದೆಲ್ಲವುಗಳ ಮೇಲೆ ಜನರು ಒಡೆತನವನ್ನು ಹೊಂದಿರಬಹುದು"[೩೧] ಎಂದು ಹೇಳಿದ್ದಾರೆ. ಇದಕ್ಕೆ ಸಾಕ್ಷಿ ಎಂಬಂತೆಯೇ ಅರಸರು ನೀರಾವರಿ ಭೂಮಿಗಳನ್ನು ಸಾಮಾನ್ಯವಾಗಿ ದೇವಾಲಯಗಳಿಗೆ ದಾನ ನೀಡಿರುವುದನ್ನು ನೋಡಬಹುದು. ಇಂತಹ ಭೂಭಾಗಗಳು ದೇವಾಲಯದ ಸೇವಕರಿಗೆ ವೇತನಕ್ಕಾಗಿ ನೀಡಲ್ಪಟ್ಟ ಬಾಡಿಗೆ ಸ್ಥಳಗಳಾಗಿದ್ದವು. ಇಲ್ಲಿ ದೇವಾಲಯಗಳಿಗೆ ವೇತನವನ್ನು ನೀಡಲು ಈ ಪದ್ಧತಿಯನ್ನು ಅನುಸರಿಸಲ್ಪಟ್ಟಿದ್ದಾರೆ. ಇಂತಹ ಕಾರಣದಿಂದ ಉಂಟಾದ ಉಪಸಾಮಂತೀಕರಣದ ಪ್ರಮಾಣದ ಬಗ್ಗೆ ನಮಗೆ ಕಲ್ಪನೆ ಇರದಿದ್ದರೂ, ಅವು ಭೂಮಿಯನ್ನು ಕಳೆದುಕೊಂಡ ಬೇಸಾಯಗಾರರನ್ನು ಕೆಳಮಟ್ಟಕ್ಕೆ ತಂದಿರ ಬಹುದು. ಒಂದು ವೇಳೆ ಭೂಮಿಯನ್ನು ಬಿಟ್ಟುಕೊಡದಿದ್ದರೂ ಆ ಬೇಸಾಯಗಾರರು ದತ್ತಿಯನ್ನು ಪಡೆದವರಿಗೆ ನಿಷ್ಠರಾಗಿ ದ್ದರು.

ಈ ಪ್ರಕ್ರಿಯೆಯಿಂದ ಪ್ರಾರಂಭದಲ್ಲಿ ಪುರೋಹಿತ ವರ್ಗ ಮತ್ತು ದೇವಾಲಯಗಳು ಭೂಮಿಯ ಮೇಲೆ ಹಿಡಿತವನ್ನು ಹೊಂದಿ ನಂತರದ ಕಾಲದಲ್ಲಿ ರಾಜ್ಯದ ಸೇವೆಯಲ್ಲಿ ದೇವರಿಗೆ ಈ ರೀತಿಯ ಸವಲತ್ತು ದೊರಕುವಂತಾಯಿತು. ದಾನಧರ್ಮಗಳಿಂದ ಬಂದಂತಹ ಭೂಮಿಯನ್ನು ಪುರೋಹಿತ ವರ್ಗವಾಗಲಿ ಅಥವಾ ದೇವಾಲಯಗಳಾಗಲಿ ನೇರವಾಗಿ ಕೃಷಿ ಮಾಡದೆ ಅವುಗಳನ್ನು ಮತ್ತೊಬ್ಬರ (ಕೃಷಿಕರು) ಮುಖಾಂತರ ವ್ಯವಸಾಯ ಮಾಡಿಸುತ್ತಿದ್ದರಿಂದ ಈ ಕಾಲದಲ್ಲಿ Absentee Landlordism (ಅನುಪಸ್ಥಿತ ಭೂಮಾಲಿಕತ್ವ)ವು ಅಸ್ತಿತ್ವಕ್ಕೆ ಬಂದಿತು. ಇದು ಕಾಲಕ್ರಮೇಣ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ತನ್ನ ಪ್ರಭಾವವನ್ನು ಬೀರಲಾರಂಭಿಸಿತು.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಆರ್.ಎಸ್. ಶರ್ಮ., **ಇಂಡಿಯನ್ ಫ್ಯೂಡಲಿಸಂ,** ಅನುವಾದ : ಜಿ.ಎಂ. ಜಯವೀರನಾಥ., **ಭಾರತೀಯ ಊಳಿಗಮಾನ್ಯ** (ಸರಂಜಾಮಿ ಪದ್ಧತಿ) ಐಸಿಹೆಚ್‌ಆರ್ ಮತ್ತು ಸಿವಿಜಿ (ಬೆಂಗಳೂರು ೨೦೦೭), ಪುಟ ೨.

೨. ಅದೇ., ಪುಟ ೨.

೩. ಆರ್.ಎಸ್. ಶರ್ಮ., **ಏನ್ಷಿಯಂಟ್ ಇಂಡಿಯಾ,** ಅನುವಾದ : ಎನ್.ಪಿ. ಶಂಕರನಾರಾಯಣರಾವ್, **ಪ್ರಾಚೀನ ಭಾರತ,** ನವಕರ್ನಾಟಕ ಪ್ರಕಾಶನ (ಬೆಂಗಳೂರು ೧೯೯೭) ಪುಟಗಳು ೨೧೦–೨೧೧.

೪. ಅದೇ., ಪುಟ ೨೧೯.

೫. **ಎಪಿಗ್ರಾಫಿಯ ಕರ್ನಾಟಕ,** ಸಂ. ೭, ಸ.ಕ. ೨೬೩, ಇನ್ ಡಾ॥ ಎಂ. ಚಿದಾನಂದಮೂರ್ತಿ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** (ಕ್ರಿ.ಶ. ೪೫೦–೧೧೫೦) ಸ್ವಪ್ನ ಬುಕ್ ಹೌಸ್, (ಬೆಂಗಳೂರು ೨೦೦೨), ಪುಟ ೧೯೩.

೬ **ಎಪಿಗ್ರಾಫಿಯ ಕರ್ನಾಟಕ,** ಸಂ. ೮, ಹೊನ. ೧೩೫, ಕ್ರಿ.ಶ. ೧೧–೧೨ನೇ ಶತಮಾನ) (ಇನ್ನು ಮುಂದೆ ಎ.ಕ. ಓದುವುದು)

೭. ಅದೇ., ಸಂ. ೮, ಹೊನ ೧೩೩.

೮. ಅದೇ., ಸಂ. ೮, ಹೊನ ೧೦೫.

೯. ಅದೇ., ಸಂ. ೮, ಹೊನ ೯೮.

೧೦. ಡಾ. ಎಚ್. ತಿಪ್ಪೇರುದ್ರಸ್ವಾಮಿ., **ಕರ್ನಾಟಕ ಸಾಂಸ್ಕೃತಿಕ ಸಮೀಕ್ಷೆ,** ಡಿ.ವಿ.ಕೆ. ಮೂರ್ತಿ, ಪ್ರಕಾಶನರು (ಮೈಸೂರು ೨೦೦೭) ಪು.೨೯೯.

೧೧. ಎ.ಕ. ಸಂ. ೮, ಹೊನ ೧೦೬.

೧೨. ಅದೇ., ಸಂ. ೮, ಹೊನ ೭೧–೭೨.

೧೩. ಅದೇ., ಸಂ. ೮, ಹೊನ ೧.

೧೪. ಅದೇ., ಸಂ. ೮. ಹೊನ ೪.

೧೫. ಆರ್.ಎಸ್. ಶರ್ಮ., ಪೂರ್ವೋಕ್ತ, ಪುಟ ೧೩೦.

೧೬. ಎ.ಕ. ಸಂ. ೮, ಹೊನ ೭೮.

೧೭. ಅದೇ., ಸಂ. ೮, ಹೊನ ೭೬

೧೮. ಅದೇ., ಸಂ. ೮, ಹೊನ ೧೩೫.

೧೯. ಅದೇ., ಸಂ. ೮, ಹೊನ ೫೦.

೨೦. ಆರ್.ಎಸ್. ಶರ್ಮ., ಪೂರ್ವೋಕ್ತ ಪುಟ ೧೩೪.

೨೧. ಎ.ಕ. ಸಂ. ೮. ಹೊನ ೧೪೪.

೨೨. ಅದೇ., ಸಂ. ೮, ಹೊನ ೧೨೮.

೨೩. ಅದೇ., ಸಂ. ೮. ಹೊನ ೪೩.

೨೪. ಅದೇ., ಸಂ. ೮. ಹೊನ ೧೧.

೨೫. ಅದೇ., ಸಂ. ೮, ಹೊನ ೧೫.

೨೬ ಆರ್.ಎಸ್. ಶರ್ಮ., ಪೂರ್ವೋಕ್ತ, ಪುಟ ೧೪೨.

೨೭ ಆರ್.ಎಸ್. ಶರ್ಮ., ಪೂರ್ವೋಕ್ತ ಪುಟ ೧೩೩.

೨೮. ಎ.ಕ. ಸಂ. ೮, ಹೊನ ೧೫.

೨೯. ಅದೇ., ಸಂ. ೮, ಹೊನ ೧೨೪.

೩೦. ಅದೇ., ಸಂ. ೮, ಹೊನ ೧೧.

೩೧. ಆರ್.ಎಸ್. ಶರ್ಮ., ಪೂರ್ವೋಕ್ತ, ಪುಟ ೧೫೩.

ಡಾ. ಶೋಭಾ ಮಹೇಶ್*

ಕುಣಿಗಲ್ ತಾಲ್ಲೂಕಿನ ಹಾಲಗೆರೆಯ ಶಾಸನೋಕ್ತ ಸ್ಥಳಗಳು

ಕಳೆದ ಶತಮಾನದ ಅಂತ್ಯಭಾಗದಲ್ಲಿ ವ್ಯವಸ್ಥಿತವಾಗಿ ಶಾಸನಗಳ ಸಂಗ್ರಹ ಕಾರ್ಯ ಮತ್ತು ಪ್ರಕಟಣೆಗಳು ಪ್ರಾರಂಭವಾದಾಗ ಇತಿಹಾಸವನ್ನು ಹೆಚ್ಚು ನಿಖರವಾಗಿ ಬರೆಯಬಹುದೆಂಬ ಆಶಯವಿದ್ದಿತು. ಆದರೆ ಅಲ್ಲಿಯೂ ಗೊಂದಲಗಳು ಕಂಡುಬಂದು ಸಂಶೋಧನೆಗೆ ಹೆಚ್ಚು ಅವಕಾಶವಾಗುವಂತಾಯಿತು. ಬಹುತೇಕ ಶಾಸನಗಳನ್ನು ಸಾಹಿತ್ಯದ ಮಾದರಿಯಲ್ಲಿ ಪ್ರಾಯೋಗಿಕ ವಿಮರ್ಶೆಗೆ ಒಳಪಡಿಸಿದಾಗ ಅವುಗಳಲ್ಲಿ ಕಂಡುಬರುವ ವಿಸ್ಮೃತಿ ಆಶ್ಚರ್ಯಕರವಾದುದು. ಶಾಸನ ಶಾಸ್ತ್ರ ಕುರಿತ ಇಂತಹ ತಳಮಟ್ಟದ ಅಧ್ಯಯನಗಳು ಈಗ ಹೆಚ್ಚು ಪ್ರಚಾರದಲ್ಲಿವೆ. ಅಂತಹ ಒಂದು ಪ್ರಯತ್ನ ಇಲ್ಲಿ ಮಾಡಲಾಗಿದೆ.

ಈ ಸಂದರ್ಭಕ್ಕಾಗಿ ತುಮಕೂರು ಜಿಲ್ಲೆ, ಕುಣಿಗಲ್ ತಾಲೂಕಿನ ಹಾಲಗೆರೆಯ ಶಾಸನವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇದು ಬಿ.ಎಲ್. ರೈಸ್ ಅವರು ಸಂಪಾದಿಸಿದ ಶಾಸನ ಸಂಪುಟ ೧೨ರಲ್ಲಿ ಕುಣಿಗಲ್ ೩೭ನೇ ಸಂಖ್ಯೆಯ ಶಾಸನವಾಗಿ ಪ್ರಕಟವಾಗಿದೆ. ಈ ಶಾಸನ ಇಡೀ ತುಮಕೂರು ಜಿಲ್ಲೆಯಲ್ಲಿ ಮೈಸೂರು ಅರಸರಿಗೆ ಸಂಬಂಧಿಸಿದ ಪ್ರಥಮ ಶಾಸನವಾಗಿದ್ದು ೧೬೭೨-೭೩ ರಲ್ಲಿ ರಚಿತವಾಗಿದೆ. ಶಾಸನ ಹಲವು ಭಾಗಗಳದಲ್ಲಿದ್ದು ಮೊದಲ ಭಾಗದಲ್ಲಿ ಯದು ಮಹಾರಾಜರಿಂದ ಹಿಡಿದು ಕೆಂಪದೇವರಾಜನವರೆಗೂ ಸಂಕ್ಷಿಪ್ತವಾಗಿ ವಂಶಾವಳಿಯನ್ನು ಹೇಳಲಾಗಿದೆ. ಆತನ ಹಿರಿಮೆ, ಗೆದ್ದ ಪ್ರದೇಶಗಳು, ದಾನ ನೀಡಿದ ಹಾಗೂ ಕಟ್ಟಿಸಿದ ದೇವಾಲಯಗಳು, ನಿರ್ಮಿಸಿದ ಕೆರೆ, ಬಾವಿ, ರಸ್ತೆ ಇತ್ಯಾದಿ ವಿವರಗಳಿವೆ. ಎರಡನೆಯ ಭಾಗದಲ್ಲಿ ಹಾಲಗೆರೆಗೆ ದೇವರಾಯಪುರ ಎಂದು ಹೆಸರಿಸಿ, ಅಗ್ರಹಾರವನ್ನಾಗಿ ಮಾಡಿ ತಲಾ ೫೦ x ೧೦೦ ಅಡಿಗಳ ೫೦ ಮನೆಗಳನ್ನು ಪ್ರತಿಯೊಂದರಲ್ಲೂ ಹಿತ್ತಲಲ್ಲಿ ಭಾವಿ ಇರುವಂತೆ ನಿರ್ಮಿಸಿ, ೨೦ ಮಂದಿ ತ್ರಿಮತಸ್ಥರ (ಸ್ಮಾರ್ತ, ಶ್ರೀವೈಷ್ಣವ ಮತ್ತು ತತ್ವವಾದಿ-ವೈಷ್ಣವ-) ಕವಿಗಳು, ಗುರುಗಳು, ಕಲಾವಿದರು ಹಾಗೂ ವಿದ್ವಾಂಸರುಗಳಿಗೆ, ವಾರ್ಷಿಕ ೫೦೦ ದಿನಾರುಗಳ ಉತ್ಪತ್ತಿ ಬರುವಂತೆ, ೪೯ ೧/೨ ಭಾಗಮಾಡಿ ದೇವರಾಜನು ದಾನವಾಗಿ ನೀಡಿದನು. ಆ ನಂತರ ೧೬೭೩ರ ತೂಬಿನಕೆರೆ ಶಾಸನದಲ್ಲಿ ಇದೇ ದೇವರಾಜನು ಹಾಲಗೆರೆಯ ಉಪಗ್ರಾಮವಾದ (ಸಲುವ) ತೂಬಿನಕೆರೆ ಗ್ರಾಮವನ್ನು ಮೈಸೂರು ಅರಮನೆಯಲ್ಲಿ ಪುರೋಹಿತರಾಗಿದ್ದ ಇಮ್ಮಡಿ ತಿರುಮಲೆ ತಾತಾಚಾರ್ಯರ ಮೊಮ್ಮಗ ವೆಂಕಟವರದಾಚಾರ್ಯರಿಗೆ ನೀಡಿದನು, (ಶಾಸನ ಸಂಖ್ಯೆ-ಕುಣಿಗಲ್ ೩೩) ಒಟ್ಟಾರೆಯಾಗಿ ಇಂದಿನ ಕುಣಿಗಲ್ ತಾಲೂಕಿನ ಹತ್ತು ಗ್ರಾಮ ಸಮುಚ್ಚಯಗಳು ಮತ್ತು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಒಂದು ಗ್ರಾಮ ಸಮುಚ್ಚಯ, ಒಂದು ಗ್ರಾಮ ಹಾಗೂ ಒಂದು ಕೆರೆಯನ್ನು, ಮತ್ತು ತೂಬಿನಕೆರೆಗಳನ್ನು ಈ ಪ್ರಬಂಧದಲ್ಲಿ ವಿವರಣಾತ್ಮಕ ಅಧ್ಯಯನವನ್ನು ಮಾಡಲಾಗಿದೆ. ಮತ್ತು ನಕ್ಷೆಯನ್ನು ನೀಡಲಾಗಿದೆ. ಪ್ರತಿಯೊಂದು ಗ್ರಾಮ ಸಮುಚ್ಚಯವನ್ನು ನಕ್ಷೆಯೊಂದಿಗೆ ಹೋಲಿಸಿ ವ್ಯಾಖ್ಯಾನಿಸಲಾಗಿದೆ. ಇಂದಿಗೆ ಕುಣಿಗಲ್ ಮತ್ತು ನಾಗಮಂಗಲ ತಾಲೂಕುಗಳು ಬೇರೆಬೇರೆಯದೇ ಜಿಲ್ಲೆಯದಾದರೂ ಹಾಲಗೆರೆಯ ಶಾಸನದಲ್ಲಿ ಅಮೃತೂರು ಸ್ಥಳ, ನಾಗಮಂಗಲ ಸೀಮೆ, ಹೊಯ್ಸಳ ನಾಡಿನಲ್ಲಿರುವ ಗ್ರಾಮಗಳೆಂದು ಕರೆದಿದೆ.

ಕುಣಿಗಲ್‌ನ ಗ್ರಾಮಗಳು


೧. ಜಿನ್ನಾಗರದಿಂದ ಮೂಡಲು (ಪೂರ್ವ) - ಶಟ್ಟಿಪುರದಿಂದ ಆಗ್ನೇಯ - ಕೊರಟಿ ಗ್ರಾಮದಿಂದ ತೆಂಕಲು (ದಕ್ಷಿಣ)- ಹೊನ್ನ ಮಾಚನಹಳ್ಳಿಯಿಂದ ನೈರುತ್ಯ - ದೊಡ್ಡಗುಣಿಯಿಂದ ಪಡುವಲು (ಪಶ್ಚಿಮ) - ಸಣಬಗಟ್ಟೆಯಿಂದ ವಾಯುವ್ಯ - ಕುಪೆಗ್ರಾಮದಿಂದ ಬಡಗಲು (ಉತ್ತರ) - ಸಣಬ ಗ್ರಾಮದಿಂದ ಈಶಾನ್ಯ - ಇಂತೀ ಸೀಮೆಯೊಳಗಾದ - **ಹಾಲಗೆರೆ ಗ್ರಾಮ.**

(ಶಾಸನದಲ್ಲಿ ಉಕ್ತವಾಗಿರುವಂತೆಯೇ ಆಯಾ ದಿಕ್ಕುಗಳಲ್ಲಿಯೇ ಸದರಿ ಗ್ರಾಮಗಳಿವೆ. ಆದರೆ ದೊಡ್ಡಗುಣಿ ಎಂಬ ಗ್ರಾಮ ಇಂದು ಇಲ್ಲ. ಇದು ಹೊನ್ನಮಾಚನ ಹಳ್ಳಿಯಿಂದ ನೈರುತ್ಯಕ್ಕೆ ಇರಬೇಕಿತ್ತು. ಹೊನ್ನಮಾಚನ ಹಳ್ಳಿಯಿಂದ ನೈರುತ್ಯಕ್ಕೆ ಕುಪೆ ಗ್ರಾಮದಿಂದ ಮೇಲ್ಭಾಗಕ್ಕೆ ಇಂದು ವೊಡ್ಡರಹಳ್ಳಿಯಿದೆ. ಆದರೆ ಶಾಸನದಲ್ಲಿ ಹೇಳಿರುವಂತೆ ಸಣಬಗಟ್ಟ

* ಉಪನ್ಯಾಕರು, ಇತಿಹಾಸ ವಿಭಾಗ, ಸ.ಪ.ಪೂ.ಕಾ., ಅಮೃತೂರು, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ.

ಕುಣಿಗಲ್ ತಾಲ್ಲೂಕಿನ ಹಾಲಗೆರೆಯ ಶಾಸನೋಕ್ತ ಸ್ಥಳಗಳು

ಅಮೃತೂರು ಸ್ಥಳ



ವೊಡ್ಡರಹಳ್ಳಿಯಿಂದ ಪಶ್ಚಿಮಕ್ಕಿರದೆ ಪೂರ್ವಕ್ಕಿದೆ. ಅಂತೆಯೇ ಕುಪೆ ಗ್ರಾಮದಿಂದ ಸಣಬ ಉತ್ತರದಲ್ಲಿ ಇಲ್ಲದೆ ಪಶ್ಚಿಮದಲ್ಲಿದೆ. ಹೊನ್ನಮಾಚನ ಹಳ್ಳಿಯಿಂದ ಆಗ್ನೇಯಕ್ಕೆ ಸಣಬಗಟ್ಟೆಯಿಂದ ಈಶಾನ್ಯಕ್ಕೆ ಲಕ್ಷ್ಮೀಪುರ ಎಂಬ ಗ್ರಾಮವಿದೆ. ಇದು ದೊಡ್ಡಗುಣಿ ಆಗಿರಬಹುದಾದ ಸಾಧ್ಯತೆ ಕಡಿಮೆ. ೧೯೦೮ರಲ್ಲಿಯೇ ಲಕ್ಷ್ಮೀಪುರದ ಉಲ್ಲೇಖವಿದೆ. ಇದೀಗ ಕುಣಿಗಲ್ ತಾಲೂಕಿನಲ್ಲಿ ದೊಡ್ಡಗುಣಿ ಎಂಬ ಗ್ರಾಮ ಇಲ್ಲ. ತುಮಕೂರು ಕಸಬ ತಾಲೂಕಿನಲ್ಲಿ ದೊಡ್ಡಗುಣಿ ಎಂಬ ಗ್ರಾಮವಿದ್ದು ಶಾಸನೋಕ್ತ ಹಾಲಗೆರೆಯಿಂದ ಸಾಕಷ್ಟು ದೂರದಲ್ಲಿದೆ.)

ರಾಮದೇವರಪುರ ಗ್ರಾಮ

(ಇಂದಿನ ಕುಣಿಗಲ್ ತಾಲ್ಲೂಕು ನಕ್ಷೆಯಲ್ಲಿ ರಾಮದೇವರಪುರ ಗ್ರಾಮ ಇಲ್ಲ. ಸ್ಥಳೀಯರ ಹೇಳಿಕೆಯಂತೆ ರಾಮದೇವರಪುರವು ಇಂದಿನ ಹೊನ್ನಮಾಚನ ಹಳ್ಳಿಯ ಬಳಿ ಇರುವ ರಾಮದೇವರಪಾಳ್ಯ ಎಂಬುದಾಗಿ ತಿಳಿದು ಬರುತ್ತದೆ.

ಬಾಳೇಕಟ್ಟೆ ಗ್ರಾಮ

ಇದೂ ಸಹ ಇಂದಿನ ಕುಣಿಗಲ್ ತಾಲೂಕಿನಲ್ಲಿ ಇಲ್ಲ. ಸ್ಥಳೀಯರ ಹೇಳಿಕೆಯಂತೆ ಅಮೃತೂರಿನ ಪಕ್ಕದಲ್ಲಿರುವ ಹಂದಲಗೆರೆಯಿಂದ ಎರಡು ಕಿಲೋಮೀಟರ್ ದೂರದಲ್ಲಿ ಇರುವುದಾಗಿ ತಿಳಿದುಬರುತ್ತದೆ.

ಕೀಲಾರದಿಂದ ಮೂಡಲು – ಸಣಬಗಟ್ಟೆಯಿಂದ ತೆಂಕಲು – ಉಳಲೇಬೆಟ್ಟ ಹುಲಿಯೂರುದುರ್ಗದ ಎಲ್ಲೆಯಿಂದ ಪಡುವಲು – ಕಗ್ಗಲ ಹಳ್ಳಿಯಿಂದ ಬಡಗಲು – ಇಂತೀ ಚತುಸ್ಸೀಮೆಯೊಳಗಾದ – **ಬೇಡಗೆರೆ ಗ್ರಾಮ.**

ಶಾಸನೋಕ್ತವಾದಂತೆ ಕೀಲಾರ, ಸಣಬಗಟ್ಟೆ, ಕಗ್ಗಲಹಳ್ಳಿಗಳ ಮಧ್ಯೆ ಬೇಡಗೆರೆ ಗ್ರಾಮವಿದೆ. ಉಳಲೇಬೆಟ್ಟ ಇಂದಿನ ನಕ್ಷೆಯಲ್ಲಿ ಇಲ್ಲ. ಪ್ರಾಯಶ ಬೇಡಗೆರೆಯಿಂದ ಪೂರ್ವಕ್ಕೆ ಇರುವ ಬೆಟ್ಟದ ಸಾಲು ಇರಬಹುದು. ಅಲ್ಲದೆ ಈ ಗ್ರಾಮ ಸಮುಚ್ಚಯಗಳಿಗೆ ಹುಲಿಯೂರುದುರ್ಗದ ಎಲ್ಲೆ ಸಾಕಷ್ಟು ದೂರದಲ್ಲಿದೆ. ಈ ಗಡಿಗೂ ಬೇಡಗೆರೆ ಸರಹದ್ದಿಗೂ ಮಧ್ಯೆ ಪುರ, ಸುಗ್ಗನಹಳ್ಳಿ, ಕೆಂಕೆರೆ, ಸಣ್ಣನಾಯಕನ ಹಳ್ಳಿ ಹಾಗೂ ಶೃಂಗಾರ ಸಾಗರ ಗ್ರಾಮಗಳಿವೆ. ಶಾಸನದ ಕಾಲಕ್ಕೆ ಸಾಗರ ಗ್ರಾಮದ ವಿನಾ ಉಳಿದವು ಅಸ್ತಿತ್ವದಲ್ಲಿ ಇದ್ದಿರಲಾರದು ಅಥವ ಗೌಣವಾಗಿದ್ದಿರಬಹುದು.

ಯಡವಂಣೇ ಗ್ರಾಮದಿಂದ ಮೂಡಲು – ಎಲ್ಲೇಆಲದಿಂದ ತೆಂಕಲು – ಮಾವಿನಕಟ್ಟೆಯಿಂದ ಪಡುವಲು – ಸಾಗರದಿಂದ ಬಡಗಲು – ಇಂತೀ ಚತುಸ್ಸೀಮೆಯೊಳಗಾದ – **ವುಂಗುರ ಗ್ರಾಮ.**

ಈ ವುಂಗುರ ಗ್ರಾಮದ ಸರಹದ್ದು ಗೊಂದಲದಿಂದ ಕೂಡಿದೆ. ಇಂದಿನ ಯಡವಾಣೀ ಗ್ರಾಮಕ್ಕೆ ಹೊಂದಿಕೊಂಡಂತೆಯೇ ವುಂಗುರ ಗ್ರಾಮವಿದೆ. ಈ ಗ್ರಾಮ ಸಮುಚ್ಚಯಗಳ ದಕ್ಷಿಣ ಭಾಗಕ್ಕೆ ಹತ್ತಿದಂತೆಯೇ ಶಿಂಷಾ ನದಿಯಿದೆ. ಶಾಸನೋಕ್ತ ಎಲ್ಲೆಆಲ ಮತ್ತು ಮಾವಿನಕಟ್ಟೆಗಳು ನಕ್ಷೆಯಲ್ಲಿ ಇಲ್ಲ. ಇವು ಗ್ರಾಮಗಳಾಗಿರದೆ ಒಂದು ನಿಶ್ಚಿತ ಸಾಂಕೇತಿಕ ಸ್ಥಳದಂತೆ (ಆಲದಮರದ ಮತ್ತು ಮಾವಿನಮರದ ಗುಂಪು) ಇದ್ದಿರಬಹುದು. ಸಾಗರ ತೀರಾ ದೂರದಲ್ಲಿದೆ. ವುಂಗುರ ಗ್ರಾಮ ಸಾಗರದಿಂದ ಉತ್ತರಕ್ಕೆ ಇಲ್ಲ ಬದಲಿಗೆ ಪಶ್ಚಿಮಕ್ಕೆ ಇದೆ. ವುಂಗುರದಿಂದ ಪೂರ್ವಕ್ಕೆ (ಶೃಂಗಾರ) ಸಾಗರದಿಂದ ಪಶ್ಚಿಮಕ್ಕೆ ಮಧ್ಯದಲ್ಲಿ ಕೆಂಕೆರೆ, ಬೊಮ್ಮನ ಹಳ್ಳಿ, ಕೊಡವತ್ತಿ, ಭೈರನಾಯಕನ ಹಳ್ಳಿಗಳಿದ್ದು ಇವು (ಶೃಂಗಾರ) ಸಾಗರದ ಭಾಗವಾಗಿದ್ದಿರಬಹುದು. ಹಾಲಗೆರೆಯ ಶಾಸನದಲ್ಲಿ 'ಸಾಗರ' ಗ್ರಾಮದ ಉಲ್ಲೇಖ ಹಲವು ಬಾರಿ ಬರುತ್ತದೆ. ಕುಣಿಗಲ್ ತಾಲೂಕಿನ ಶಾಸನ ಸಂಖ್ಯೆ ೩೦ ಹಾಗೂ ೩೧ರಲ್ಲಿಯಂತೆ ಇಮ್ಮಡಿ ಕೆಂಪೇಗೌಡನ ಪಟ್ಟದ ನಾಟಕಶಾಲೆಯ ಶೃಂಗಾರಮ್ಮ ಎಂಬಾಕೆ ಹುಲಿಯೂರು ದುರ್ಗ ಹೋಬಳಿಯಲ್ಲಿ ೨೯-೫-೧೬೫೯ರಲ್ಲಿ ಶೃಂಗಾರ ಸಾಗರ ಎಂಬ ಅಗ್ರಹಾರವನ್ನು ಮತ್ತು ಕೆರೆಯೊಂದನ್ನು ನಿರ್ಮಿಸುತ್ತಾಳೆ. ಇಂದಿನ ಗ್ರಾಮ ಪಟ್ಟಿ ಹಾಗೂ ಭೂಮಾಪನ ಇಲಾಖೆಯವರ ನಕ್ಷೆಗಳಲ್ಲಿ 'ಶೃಂಗಾರಸಾಗರ' ಎಂದೇ ಇದೆ. ಆದರೆ ಹಾಲಗೆರೆಯ ೧೬೬೩ರ ಶಾಸನದಲ್ಲಿ 'ಸಾಗರ' ಎಂದಷ್ಟೇ ಕರೆದಿದೆ. ಶೃಂಗಾರ ಸಾಗರವಾಗಿ ೬೪ ವರ್ಷಗಳ ನಂತರವೂ ಅಂದಿನ ಸರ್ಕಾರಿ ಕಡತಗಳಲ್ಲಿ 'ಸಾಗರ' ಎಂದೇ ಇದ್ದಿರಬಹುದು. ಹುಲಿಯೂರು ದುರ್ಗ ಗಡಿಗೆ ಹೊಂದಿಕೊಂಡಂತೆಯೇ ಇರುವುದರಿಂದ 'ಶೃಂಗಾರ ಸಾಗರ' ಮತ್ತು 'ಸಾಗರ'ಗಳು ಅಭಿನ್ನವೆಂದು ತಿಳಿಯಲಾಗಿದೆ.

ಸಾಗರದಿಂದ ಮೂಡಲು – ಚಿಕ್ಕ ಅಜ್ಜನ ಹಳ್ಳಿಯಿಂದ ತೆಂಕಲು – ವೊಳಗೆರೆ ಗ್ರಾಮದಿಂದ ಪಡುವಲು – ಚಿಕ್ಕಕಲ್ಲ ಹಳ್ಳಿ ಗ್ರಾಮದಿಂದ ಬಡಗಲು – ಇಂತೀ ಚತುಸ್ಸೀಮೆಯೊಳಗಾದ – **ದೊಡ್ಡಕಲ್ಲ ಹಳ್ಳಿ ಗ್ರಾಮ**

ಇಂದಿನ ನಕ್ಷೆಯಲ್ಲಿಯೂ ದೊಡ್ಡಕಲ್ಲ ಹಳ್ಳಿಯ ಸರಹದ್ದು ಶಾಸನೋಕ್ತವಾದಂತೆಯೇ ಇವೆ. ವೊಳಗೆರೆಗ್ರಾಮ ಇಂದು ವೊಳಗೆರೆ ಪುರ ಎಂದಾಗಿದೆ. ಆದರೆ ಚಿಕ್ಕಕಲ್ಲ ಹಳ್ಳಿ ಗ್ರಾಮ ನಕ್ಷೆಯಲ್ಲಿ ಇಲ್ಲ. ಸ್ಥಳೀಯರ ಅಭಿಮತ ದಂತೆ ಚಿಕ್ಕ ಅಜ್ಜನ ಹಳ್ಳಿ ಬಳಿಯ ಬೆಟ್ಟಗೆರೆ-ಪಡುವಗೆರೆ ಹಾದಿಯಲ್ಲಿ ಚಿಕ್ಕಕಲ್ಲ ಹಳ್ಳಿ ಇದೆ. ಈ ಎಲ್ಲ ಗ್ರಾಮಗಳು ಸಾಗರದಿಂದ ಪೂರ್ವಕ್ಕಿರದೆ ಪಶ್ಚಿಮಕ್ಕಿದೆ. ಅಲ್ಲದೆ ಈ ಗ್ರಾಮಗಳ ಪಶ್ಚಿಮದ ಗಡಿರೇಖೆಯಾಗಿ ಶಿಂಷಾನದಿ ಇದೆ.

ಸಾಗರದಿಂದ ಮೂಡಲು – ಕೆಂಪನಾಯ್ಕನ ಹಟ್ಟಿಯಿಂದ ತೆಂಕಲು – ಪಡುಬಗೆರೆ ಗ್ರಾಮದಿಂದ ಪಡುವಲು – ದೊಡ್ಡಕಲ್ಲ ಹಳ್ಳಿಯಿಂದ ಬಡಗಲು – ಇಂತೀ ಚತುಸ್ಸೀಮೆಯೊಳಗಾದ – **ಚಿಕ್ಕ ಅಜ್ಜನ ಹಳ್ಳಿ ಗ್ರಾಮ**

ಶೃಂಗಾರ ಸಾಗರಕ್ಕೂ ಈ ಗ್ರಾಮಗಳಿಗೂ ಸಂಬಂಧವೇ ಇಲ್ಲ ಹಾಗೂ ಮೂಡಲು (ಪೂರ್ವ) ಗಿರದೆ ಪಶ್ಚಿಮಕ್ಕಿವೆ. ಶಾಸನೋಕ್ತ ಕೆಂಪನಾಯ್ಕನ ಹಟ್ಟಿ ಇಂದಿನ ನಕ್ಷೆಯಲ್ಲಿ ಇಲ್ಲ. ಆದರೆ ಇದು ಜೆನ್ನಾಗರದಿಂದ ಮೂರು ಕಿಲೋಮೀಟರ್ ದೂರದಲ್ಲಿ ಇರುವುದಾಗಿ ಸ್ಥಳೀಯರ ಹೇಳಿಕೆ. ಅದು ಇಂದಿನ ಕಾಂತನ ಹಳ್ಳಿ ಆಗಿರಬಹುದಾದ ಸಾಧ್ಯತೆಯೂ ಇದೆ.

ಚನ್ನೇರಾಯನ ಪುರ ಗ್ರಾಮ

ಯಡವಾಣಿಯಿಂದ ಪಶ್ಚಿಮಕ್ಕೆ, ಶಿಂಷಾ ನದಿಯಿಂದ ಪೂರ್ವಕ್ಕೆ ಇರುವ ಚಂದನ ಹಳ್ಳಿಯನ್ನೇ ಚಂನೇರಾಯಪುರ ಎಂದು ಗುರುತಿಸಲಾಗಿದೆ.

ಸಾಗರದಿಂದ ಮೂಡಲು – ಬಿಳಿಕಲ್ಲಿಂದ ತೆಂಕಲು – ಶಾನುಭಾಗನ ಹಳ್ಳಿಯಿಂದ ಪಡುವಲು – ತೊರೆಹಳ್ಳಿ ಯಿಂದ ಬಡಗಲು – ಇಂತೀ ಚತುಸ್ಸೀಮೆಯೊಳಗಾದ – **ಹನುಮಾಪುರ ಗ್ರಾಮ**

ಈ ವರೆಗಿನ ಗ್ರಾಮ ಸಮುಚ್ಛಯದಿಂದ ಹೊರಗೆ, ಅಮೃತೂರಿನ ಮೇಲುಭಾಗದಲ್ಲಿ ಹನುಮಾಪುರ ಸರಹದ್ದಿದೆ. ಶಾಸನೋಕ್ತದಂತೆಯೇ ಗ್ರಾಮಗಳಿದ್ದರೂ ಬಿಳಿಕಲ್ಲು ಇಂದಿನ ನಕ್ಷೆಯಲ್ಲಿ ಇಲ್ಲ. ಶಾಸನದಂತೆ ಬಿಳಿಕಲ್ಲಿನಿಂದ ತೆಂಕಲು (ದಕ್ಷಿಣ) ಎಂದರೆ ಶಾನುಭೋಗನ ಹಳ್ಳಿಯಿಂದ ಬಡಗಲು (ಉತ್ತರ) ದಿಕ್ಕಿನಲ್ಲಿ ಬಿಳಿಕಲ್ಲು ಇರಬೇಕಿತ್ತು. ಬದಲಿಗೆ ಇಲ್ಲಿ ಯಾಚನ ಹಳ್ಳಿ ಇದ್ದು ಇದೇ ಬಿಳಿಕಲ್ಲು ಆಗಿದ್ದಿರಬಹುದು. ಶೃಂಗಾರ ಸಾಗರದಿಂದ ಹನುಮಾಪುರ ಸರಹದ್ದು ಸಾಕಷ್ಟು ದೂರದಲ್ಲಿ ವಾಯುವ್ಯದ ಕಡೆಗಿದೆ.

ಕೊಡಹಳ್ಳಿಯಿಂದ ಮೂಡಲು – ಹೊಸಪುರ ಗ್ರಾಮದಿಂದ ತೆಂಕಲು – ಹೊಂಬೆಟ್ಟದಿಂದ ಪಡುವಲು – ಸೊಂಡೇಕೊಪ್ಪದಿಂದ ಬಡಗಲು – ಇಂತೀ ಚತುಸ್ಸೀಮೆ ಯೊಳಗಾದ – **ಮಲ್ಲಾಪುರ ಗ್ರಾಮ**

ಈ ಗ್ರಾಮಗಳೂ ಅಮೃತೂರಿನಿಂದ ಮೇಲ್ಭಾಗದಲ್ಲಿದ್ದು ಶಾಸನೋಕ್ತವಾದಂತೆಯೇ ಇವೆ. ಇಂದಿಗೆ ಹೊಂಬೆಟ್ಟ ಗುರುತಿಸಲು ಸಾಧ್ಯವಿಲ್ಲವಾದರೂ ಶಾಸನದಂತೆ ಹೊಸಪುರ ಹಾಗೂ ಸೊಂಡೇಕೊಪ್ಪದಿಂದ ಪೂರ್ವಕ್ಕೆ ಇರುವ ಬೆಟ್ಟಗಳ ಸಾಲು ಹೊಂಬೆಟ್ಟವಾಗಿರುವ ಸಾಧ್ಯತೆಯಿದೆ. ಇದನ್ನು ಇಂದು ಸ್ಥಳೀಯರು ಹೆಬ್ಬೆಟ್ಟ, ದೊಡ್ಡಬೆಟ್ಟ ಎಂದು ಗುರುತಿಸುತ್ತಾರಲ್ಲದೆ ಅಮೃತೂರಿನಿಂದ ಮೂರು ಕಿಲೋಮೀಟರ್ ದೂರದಲ್ಲಿದೆ. ಕೊಡಹಳ್ಳಿಯನ್ನು ಇಂದಿನ ಕೊಡಿಗೆಹಳ್ಳಿ ಎಂದು ಗುರುತಿಸಲಾಗಿದೆ.

ಅಂತೂ ಅಮೃತೂರು ಸ್ಥಳದ ಗ್ರಾಮಗಳು ಹತ್ತು.

ನಾಗಮಂಗಲದ ಗ್ರಾಮಗಳು

೧೧ ಮಂಚೇನ ಹಳ್ಳಿ ಕೆರೆಯಿಂದ ಪಡುವಲು – ಕಡುಗನ ಹಳ್ಳಿಯಿಂದ ವಾಯುವ್ಯ – ಬೋನಗೆರೆಯಿಂದ ಬಡಗಲು – ಪಟ್ಟದಮ್ಮನಗುಡಿಯಿಂದ ಈಶಾನ್ಯ – ಕೆಂಚೇನ ಹಳ್ಳಿಯಿಂದ ಮೂಡಲು – ಕೆಂಚನ ಹಳ್ಳಿಯಿಂದ ಆಗ್ನೇಯ – ಬೀಚನ ಹಳ್ಳಿಯಿಂದ ತೆಂಕಲು – ದೊಡ್ಡಾಬಲ ಗ್ರಾಮದಿಂದ ನೈರುತ್ಯ – ಇಂತೀ ಚತುಸ್ಸೀಮೆ ಯೊಳಗಾದ – **ಚಿಟ್ಟನ ಹಳ್ಳಿ ಗ್ರಾಮ**

ಮೇಲಿನ ಸ್ಥಳಗಳು ಶಾಸನೋಕ್ತದಂತೆಯೇ ಇವೆ. ಆದರೆ ದಿಕ್ಕುಗಳಲ್ಲಿ ವ್ಯತ್ಯಾಸವಿದೆ. ಕಡುಗನ ಹಳ್ಳಿ ಇಂದಿನ ನಕ್ಷೆಯಲ್ಲಿ ಇಲ್ಲ. ಮಂಚೇನ ಹಳ್ಳಿಯಿಂದ ಪಡುವಲಿಗೆ (ಪಶ್ಚಿಮಕ್ಕೆ) ನಕ್ಷೆಯಲ್ಲಿ ಅಡಹಳ್ಳಿಯಿದ್ದು ಇದೇ ಕಡುಗನ ಹಳ್ಳಿ ಆಗಿರಬಹುದು. ಗ್ರಾಮಗಳ ಪಟ್ಟಿಯಲ್ಲಿ ಅಡಹಳ್ಳಿ ಇಲ್ಲ. ಪಟ್ಟದಮ್ಮನಗುಡಿ ಗ್ರಾಮವಾಗಿರದೆ ಗಡಿರೇಖೆಯಾಗಿದೆ. ಪಟ್ಟದೆಲ್ಲಮ್ಮನಗುಡಿ ಇಂದಿನ ಅಮೃತೂರಿನ ಬಳಿ ಇದೆ ಯಾದರೂ ಈ ಗ್ರಾಮ ಸಮುಚ್ಛಯ ದಿಂದ ಸಾಕಷ್ಟು ದೂರದಲ್ಲಿದೆ. ಚಿಟ್ಟನ ಹಳ್ಳಿಗೆ ನಕ್ಷೆಯಲ್ಲಿ ಮೋಕ್ಷಿಚಿಟ್ಟನ ಹಳ್ಳಿ ಎಂದು ಕರೆದಿದ್ದು ಗ್ರಾಮ ಸೂಚಿಯಲ್ಲಿ ಇದು ನಮೂದಾಗಿಲ್ಲ. ಮೇಲಿನ ಎಲ್ಲಾ ಗ್ರಾಮಗಳು ಇಂದಿನ ನಾಗಮಂಗಲ ಕೇಂದ್ರ ಸ್ಥಾನದಿಂದ ತೀರಾ ದಕ್ಷಿಣದಲ್ಲಿದೆ.

೧೨ ಹೊನ್ನೇನ ಹಳ್ಳಿ ಗ್ರಾಮ

ಹೊನ್ನೇನ ಹಳ್ಳಿ ಗ್ರಾಮ ಚಿಟ್ಟನ ಹಳ್ಳಿ ಗ್ರಾಮ ಸಮುಚ್ಛಯಕ್ಕೆ ಹೊಂದಿಕೊಂಡಂತೆಯೇ ಇದೆ.

ಕೆಂಚನಹಳ್ಳಿ ಕೆರೆ

ಉಭಯ ಗ್ರಾಮಗಳು ೧೨, ಕರೆ ೧

ಎಂದರೆ ಅಮೃತೂರು ಸ್ಥಳದ ಹತ್ತು ಗ್ರಾಮಗಳು ಮತ್ತು ನಾಗಮಂಗಲದ ಎರಡು ಗ್ರಾಮಗಳು ಸೇರಿ ಒಟ್ಟು ಹನ್ನೆರಡು ಗ್ರಾಮಗಳು ಹಾಗೂ ಕೆರೆ ಒಂದು.

ಕೆಂಚನಹಳ್ಳಿಗ್ರಾಮದ ಗಡಿಯೊಳಗೆ ಕೆರೆ ಇಲ್ಲ. ಅಲ್ಲಿಂದ ದಕ್ಷಿಣಕ್ಕೆ ಕೆರೆಯೊಂದಿದ್ದು ಅದು ಇಂದಿನ ರಾಮಚಂದ್ರ ಅಗ್ರಹಾರದ ಗಡಿಯೊಳಗೆ ಇದೆ.

ತೂಬಿನಕೆರೆ ಗ್ರಾಮ

ತೂಬಿನಕೆರೆ ಗ್ರಾಮ ೧೬೬೩ರಲ್ಲಿ ವೆಂಕಟವರದಾ ಚಾರ್ಯರಿಗೆ ಪ್ರತ್ಯೇಕವಾಗಿ ನೀಡಿದ ದಾನ. ಶಾಸನದಲ್ಲಿ ಇದು ಹಾಲಗೆರೆಯ ಉಪಗ್ರಾಮ (ಸಲುವ) ಎಂದಿದ್ದರೂ ಹಾಲಗೆರೆಯಿಂದ ಪ್ರತ್ಯೇಕವಾಗಿ ಸಾಕಷ್ಟು ದೂರದಲ್ಲಿದೆ.


ಒಳನೋಟ

೧. ಒಟ್ಟು ಗ್ರಾಮಗಳು ಇಂದಿನ ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕಿನ ಅಮೃತೂರು ಹೋಬಳಿಯ ಆಸು ಪಾಸಿನಲ್ಲಿಯೂ, ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕು ಕಸಬ ಹೋಬಳಿಯ ಪಶ್ಚಿಮಭಾಗದಲ್ಲಿಯೂ ಹಂಚಿ ಹೋಗಿದೆ.

೨. ಶಾಸನೋಕ್ತ ೧೨ + ೧ ಗ್ರಾಮ ಸಮುಚ್ಛಯಗಳ ಎಲ್ಲೆ ಕಟ್ಟನ್ನು ಎಂಟು ಇಲ್ಲವೆ ನಾಲ್ಕು ದಿಕ್ಕುಗಳ ಗಡಿ ಗ್ರಾಮಗಳಿಂದ ಗುರುತಿಸುವಾಗ ಕೆಲವು ಘಟಕಗಳ ಗ್ರಾಮಗಳು ಪರಸ್ಪರ ಹತ್ತಿರದಲ್ಲಿದ್ದರೆ, ಕೆಲವುಬಾರಿ ಸಾಕಷ್ಟು ದೂರದಲ್ಲಿವೆ. ಹೀಗೆ ದೂರದಲ್ಲಿರುವ ಗ್ರಾಮಗಳ ಗಡಿರೇಖೆಯನ್ನು ಹೊಂದಿಸಿ ಒಂದು ಘಟಕವಾಗಿಸಿದರೆ ಅದರ ಮಧ್ಯದಲ್ಲಿ

ಹಾಲಗೆರೆ ಶಾಸನದಲ್ಲಿ ಉಲ್ಲೇಖಿಸದೇ ಇರುವ ಹಲವಾರು ಗ್ರಾಮಗಳು ಅಂತರ್ಗತವಾಗಿರುತ್ತವೆ.

೩. ಲೇಖನದ ಆರಂಭದಲ್ಲಿ ಹೇಳಿದಂತೆ ಹಾಲಗೆರೆ ಶಾಸನದ ಮೊದಲ ಭಾಗದಲ್ಲಿ ಮೈಸೂರು ಅರಸರ ವಂಶಾವಳಿ



ಯನ್ನು ಸಂಸ್ಕೃತದಲ್ಲಿ ವಿವರವಾಗಿ ಹೇಳಿದೆ. ಬಿ.ಎಲ್. ರೈಸ್ ಅವರು ಶಾಸನದ ಸಾರಾಂಶವನ್ನು ಬರೆಯುವಾಗ ಚಾಮರಾಜ ಒಡೆಯರ ನಾಲ್ಕು ಮಕ್ಕಳಿಗೂ ದೇವರಾಜ ಎಂದೇ ಹೆಸರಿದ್ದು ಅವರಲ್ಲಿ ಮೂರನೆಯವನನ್ನು ಸಾಮಾನ್ಯವಾಗಿ ದೊಡ್ಡದೇವರಾಜ ಎಂದು ಕರೆಯುತ್ತಿದ್ದ ಆತನೇ ಹಾಲಗೆರೆಯ ಶಾಸನದಲ್ಲಿ ಉಕ್ತನಾದ ದೇವರಾಜ ಎಂದು ಹೇಳುತ್ತಾರೆ. ರೈಸ್ ಅವರೇ ಮೈಸೂರಿನ ಇತಿಹಾಸ ಬರೆಯುವಾಗಲೂ ಇದೇ ರೀತಿ ಹೇಳುತ್ತಾರೆ. ಇಂದಿನ ಸರಿಪಡಿಸಿದ ಇತಿಹಾಸದಂತೆ ದೊಡ್ಡದೇವರಾಜ ರಾಜ್ಯಾಡಳಿತ ಮಾಡಲಿಲ್ಲ. ಆತನ ಎರಡನೆಯ ಸಹೋದರ ಕೆಂಪದೇವರಾಜ ೧೬೫೯ರಿಂದ ೧೬೭೩ರ ವರೆಗೆ ಆಳ್ವಿಕೆ ನಡೆಸಿದ್ದು ಹಾಲಗೆರೆಯಲ್ಲಿ ಉಕ್ತನಾದವನು ಈತನೇ ಆಗಿದ್ದಾನೆ. ಈ ಘಟನೆಗೆ ಮುವತ್ತು ವರ್ಷಗಳಿಗೂ ಮೊದಲೇ ೨ನೇ ಕೆಂಪೇಗೌಡನು ಮಾಗಡಿಯಲ್ಲಿ ನೆಲೆಸಿದ್ದನಾದರೂ ಕುಣಿಗಲ್,

ಹುಲಿಯೂರುದುರ್ಗ ಇತ್ಯಾದಿ ಪ್ರದೇಶಗಳು ಮೈಸೂರು ಅರಸರ ಕೈಯಲ್ಲಿ ಇತ್ತು ಎಂದು ರೈಸ್ ಅವರು ಹೇಳುತ್ತಾರೆ.

೪. ಒಟ್ಟು ೧೨ + ೧ ಗ್ರಾಮ ಸಮುಚ್ಚಯಗಳಲ್ಲಿ ೩೯ ಗ್ರಾಮಗಳು, ಎರಡು ಸಾಂಕೇತಿಕ ಗುರುತುಗಳು, ಮೂರು ಬೆಟ್ಟಗಳು, ಒಂದು ಕರೆ ಹಾಗು ಒಂದು ದೇವಾಲಯ ಉಲ್ಲೇಖಿತವಾಗಿವೆ. (ಸಾಗರ ನಾಲ್ಕು ಬಾರಿ, ಚಿಕ್ಕ ಅಜ್ಜನ ಹಳ್ಳಿ, ದೊಡ್ಡಕಲ್ಲ ಹಳ್ಳಿ, ಸಣಬಗಟ್ಟೆಗಳು ತಲಾ ಎರಡು ಬಾರಿ ಬಂದಿವೆ.) ಗ್ರಾಮ ಸಮುಚ್ಚಯಗಳಿಗೆ ಮೇಲೆ ನೀಡಿರುವ ಟಿಪ್ಪಣಿಗಳಲ್ಲಿ ಗುರುತಿಸಲು ಸಾಧ್ಯವಿಲ್ಲದ ಮತ್ತು ಊಹಿಸಲಾದ ಗ್ರಾಮಗಳ ವಿವರ ನೀಡಿದೆ.

೫. ಹಾಲಗೆರೆ ಶಾಸನದಲ್ಲಿರುವ ನ್ಯೂನತೆಗಳನ್ನು ಗಮನಿಸಿದಲ್ಲಿ ಈ ತಾಮ್ರಶಾಸನ ಕೂಟಶಾಸನವಿರಬಹುದು ಎಂಬ ಅನುಮಾನ ಬರುತ್ತದೆಯಾದರೂ ಸಾಕಷ್ಟು ವಿವರಗಳು ನಿಖರವಾಗಿರುವುದು ಗಮನಾರ್ಹ. ಹಾಲಗೆರೆಯದು ತಾಮ್ರ ಶಾಸನವಾಗಿದ್ದು ಸಂಸ್ಕೃತ ಭೂಯಿಷ್ಠವಾಗಿದ್ದರೆ ತೂಬಿನಕೆರೆಯದು ಶಿಲಾಶಾಸನವಾಗಿದ್ದು ಕನ್ನಡದಲ್ಲಿದೆ.

೬ ಹಾಲಗೆರೆ ಶಾಸನದ ಮೊದಲ ಭಾಗದ ಮೈಸೂರು ಅರಸರ ಹಾಗೂ ಎರಡನೆಯ ಭಾಗದ ದಾನ ಸ್ವೀಕರಿಸಿದ ವಿದ್ವಾಂಸರ ಮತ್ತು ವೆಂಕಟವರದಾಚಾರ್ಯರ ವಂಶಾವಳಿಗಳನ್ನು ರೂಪಿಸಿ ಅಧ್ಯಯನ ಮಾಡಬಹುದಾದರೂ ಪ್ರಸ್ತುತ ಲೇಖನಕ್ಕೆ ಹೊರತಾದುದು.

೭. ಶಾಸನೋಕ್ತ ಭೂಪ್ರದೇಶ ಇಂದಿನ ಎರಡು ತಾಲೂಕುಗಳ ವಿವಿಧ ಜಾಗಗಳಲ್ಲಿ ಹಂಚಿ ಹೋಗಿರುವುದು ಕುತೂಹಲಕಾರಿ. ಮಧ್ಯದ ಪ್ರದೇಶಗಳು ಶಾಸನದ ಕಾಲಕ್ಕಾಗಲೇ ಬೇರೆಯವರಿಗೆ ಅಥವ ದೇವಾಲಯಗಳಿಗೆ ನೀಡಿದ್ದಿರಬಹುದು. ಶಾಸನದಲ್ಲಿ ದೇವರಾಜ ತನ್ನ ವಶದಲ್ಲಿದ್ದ ಜಾಗವನ್ನು ನೀಡಿದ್ದೇನೆ ಎಂದು ಹೇಳುತ್ತಾನೆ. ಹಾಗೂ ತಾನೇ ಖುದ್ದಾಗಿ ಕೆಲವು ಆಚರಣೆಗಳನ್ನು ಮಾಡಿ ದಾನ ಶಾಸನ ನೀಡಿದ್ದಾನೆ. ದಾನ ನೀಡಿದ ಕಾರಣ ಸ್ಪಷ್ಟವಾಗಿಲ್ಲ. ವಿದ್ವಾಂಸರ ಅಧ್ಯಯನ, ಅಧ್ಯಾಪನಗಳಿಗಾಗಿ ನೀಡಿರಬಹುದು.

೮. ಹಾಲಗೆರೆಯ ಶಾಸನದಲ್ಲಿ ಅರಸರ ವಂಶಾವಳಿಯ ನಂತರ ೧೨ ಗ್ರಾಮಗಳ ಹೆಸರು ಬರುತ್ತದೆ. ಮುಂದೆ ಈ ಗ್ರಾಮಗಳ ಅಚ್ಚುಕಟ್ಟುಗಳ ವಿವರ ಬರುತ್ತದೆ. ಹಾಗಾಗಿ ಒಟ್ಟು ೪೧ ಗ್ರಾಮಗಳ ಉಲ್ಲೇಖವಿದ್ದರೂ ದಾನ ನೀಡಿರುವುದು ೧೨ ಗ್ರಾಮಗಳು ಮಾತ್ರ. ಆದರೆ ಈ ಲೇಖನದೊಂದಿಗೆ ಇರುವ ನಕ್ಷೆಯಲ್ಲಿ ಹೆಚ್ಚು ನಿಖರವಾಗಿ ಹೇಳಲು ಎಲ್ಲ ಗ್ರಾಮಗಳನ್ನು ಗುರುತಿಸಿದೆ.

೯. **ದಾನ ಪಡೆದವರುಗಳು :** ಮಹದೇವ ಸೋಮಯಾಜಿ, ಕಸ್ತೂರಿ ರಂಗಾವಧಾನಿ, ಗೌತಮವಲ್ಲಭ ಶಾಸ್ತ್ರಿ, ಲಿಂಗಾಭಟ್ಟ, ಮಲ್ಲುಭಟ್ಟ, ಕದರೀಪತಿಭಟ್ಟ, ತಿರುಮಲ ಭಟ್ಟ, ಮಹದೇವಭಟ್ಟ, ನಾರಸಿಂಹಭಟ್ಟ, (ಇಲ್ಲಿ ಜಗನ್ನಾಥ (ಭಟ್ಟ)ನ ಮಗನ ಹೆಸರಿದ್ದು ಅಸ್ಪಷ್ಟವಾಗಿದೆ) ವೆಂಕಟಾವಧಾನಿ, ಶ್ರೀನಿವಾಸಾರ್ಯ, ಶಿಂಗ್ರಯ್ಯಂಗಾರ್ಯ, ತಿರುಮಲಾರ್ಯ (ಚಿಂತಾಮಣ್ಯಾರ್ಯನ ಮಗ), ಶೇಷಾದ್ರಿಶರ್ಮ, ತಿರುಮಲಾರ್ಯ (ನರಸಿಂಹಾರ್ಯನ ಮಗ), ವೇಂಗಳಲಾರ್ಯ, ವರದಾರ್ಯ, ರಂಗರಾಜ ಭಾಗವತ, ವೆಂಕಟ ಭಾಗವತ ಅವರುಗಳು. ಇವರುಗಳ ವಂಶಾವಳಿಯೂ ಇವೆ. ಉಳಿದವರಿಗೆ ಸಾಮಾನ್ಯವಾಗಿ ಮೂರು ತಲೆಮಾರು ಹೇಳಿದ್ದು ಕಸ್ತೂರಿ ರಂಗಾವಧಾನಿಗೆ ಆರು ತಲೆಮಾರುಗಳನ್ನು ಹೇಳಿದೆ.

೧೦. ಈ ಶಾಸನಗಳೂ ಸೇರಿದಂತೆ ಸಾಧ್ಯತೆ ಇರುವ ಎಲ್ಲ ಶಾಸನಗಳನ್ನೂ ವಿವರವಾಗಿ ಅಧ್ಯಯನ ಮಾಡಿದಲ್ಲಿ ಶಾಸನಗಳಲ್ಲಿರುವ ಕುಂದುಕೊರತೆಗಳು, ಆರ್ಥಿಕ, ಸಾಮಾಜಿಕ ಇತ್ಯಾದಿ ಹಲವಾರು ಶಿಸ್ತುಗಳಿಂದ ನೋಡಬಹು ದಾದ ಸಾಧ್ಯತೆಯಿದೆ.

(ಪ್ರಬಂಧವನ್ನು ಸಿದ್ಧಪಡಿಸುವ ವೇಳೆಯಲ್ಲಿ ಕೆಲವು ಗ್ರಾಮಗಳನ್ನು ಗುರುತಿಸಲು ನೆರವಾದ ಶ್ರೀಯುತರಾದ ಟಿ. ವಿ. ರಾಜು ಮತ್ತು ಸುಂಕಂ ಗೋವರ್ಧನ್ ಹಾಗೂ ಡಾ ॥ ಅ. ಲ. ನರಸಿಂಹನ್ ಅವರುಗಳಿಗೆ ವಂದನೆಗಳು)

ಆಧಾರಸೂಚಿ

೧. ಕನ್ನಡ ವಿಷಯ ವಿಶ್ವಕೋಶ., **ಕರ್ನಾಟಕ**, ಮೈಸೂರು ವಿ.ವಿ., ಮೈಸೂರು, ೧೯೭೯.
೨. ರೈಸ್ ಬಿ. ಎಲ್., **ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಶಾಸನಗಳು**, ಸಂಪುಟ ೧೨, ಬೆಂಗಳೂರು, ೧೯೦೪.
೩. ಶೋಭ ಮಹೇಶ್, 'ಶಾಸನಗಳಲ್ಲಿ ರಾಜವಂಶದ ಬಿರುದುಗಳಲ್ಲಿ ವಿಸ್ಮೃತಿ'. **ಇತಿಹಾಸ ದರ್ಶನ**, (ಸಂ) ಎಂ.ಜಿ. ನಾಗರಾಜ್ ಮತ್ತು ಪಿ.ವಿ. ಕೃಷ್ಣಮೂರ್ತಿ, ಸಂಪುಟ ೨೨, ಬೆಂಗಳೂರು, ೨೦೦೭.
೪. ಶ್ರೀನಿವಾಸ ರಿತ್ತಿ, **ಕರ್ನಾಟಕ ಗ್ರಾಮಗಳ ಸೂಚಿ**, ಬೆಂಗಳೂರು, ೧೯೮೫.
೫. ಕುಣಿಗಲ್ ಮತ್ತು ನಾಗಮಂಗಲ ಗ್ರಾಮಗಳ ನಕ್ಷೆಗಳು, ಪರ್ಯಾವರ್ತಕರು, ನಕಾಶೆ ದಾಖಲೆ ವಿಭಾಗ, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು, ೧೯೮೪.

ಡಾ. ಕೂ.ಸ. ಅಪರ್ಣ*

ದೇವಾಲಯದ ಹೊರ ಆವರಣದ ರಚನೆಗಳು

ದೇವಾಲಯಗಳನ್ನು ಊರ್ಧ್ವಮುಖ ಕ್ರಮದಲ್ಲಿ ಗಮನಿಸಿದಲ್ಲಿ, ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ, ಶಿಖರ, ಸ್ತೂಪಿ ಈ ಅಂಗಗಳಿರುತ್ತವೆ. ಅದೇ, ತಿರ್ಯಙ್ಮುಖ ಕ್ರಮದಲ್ಲಿ ಗಮನಿಸಿದಲ್ಲಿ ಗರ್ಭಗೃಹ ಆದಿಯಾಗಿ ಅಂತರಾಳ, ನವರಂಗ, ಮುಖಮಂಟಪ ಈ ಮಂಟಪಗಳು ಕ್ರಮವಾಗಿ ಇರುತ್ತವೆ. ಈ ಮಂಟಪಗಳನ್ನು ದಾಟಿ ಮುಂದೆ ಬಂದಲ್ಲಿ ಬಲಿಪೀಠ, ಧ್ವಜಸ್ತಂಭ, ಸೋಪಾನ, ವೃಷಭ – ಈ ಅಂಗಗಳಿರುತ್ತವೆ. ಇವೆಲ್ಲವೂ ದೇವಾಲಯದ ಹೊರ ಆವರಣದಲ್ಲಿರುವ ವಾಸ್ತು ಅಂಗಗಳು. ಇವುಗಳ ಬಗ್ಗೆ ಈ ಲೇಖನದಲ್ಲಿ ಅಧ್ಯಯನ ಮಾಡಲಾಗಿದೆ. ಕೆಲವು ಗ್ರಂಥಗಳಲ್ಲಿ ಈ ಒಂದೊಂದಕ್ಕೂ ಪ್ರತ್ಯೇಕ ಅಧ್ಯಾಯಗಳಿದ್ದರೆ, ಕೆಲವೆಡೆ ಪರಿವಾರಾಲಯ ಮುಂತಾದ ಅಧ್ಯಾಯಗಳ ಮಧ್ಯೆ ವಿವರಣೆಗಳಿವೆ.

ಬಲಿಪೀಠ : ಮೂಲ ದೇವರಿಗೆ ನೈವೇದ್ಯವಾದ ಪದಾರ್ಥ (ಬಲಿಹರಣ) ಗಳನ್ನು ಅಷ್ಟದಿಕ್ಪಾಲಕರಿಗೆ / ಪರಿವಾರ ದೇವತೆಗಳಿಗೆ ಇಡಲೆಂದು ಬಳಸುವ ಪೀಠಕ್ಕೆ 'ಬಲಿಪೀಠ' ಅಥವಾ 'ಬಲಿವಿಷ್ಟರ' ಎಂದು ಹೆಸರು. ಈ ಉದ್ದೇಶಕ್ಕಾಗಿ ಪರಿವಾರ ಗುಡಿಗಳ ಮುಂದೆ ಮಂಟಪವಿರಬೇಕೆಂಬ ಸೂಚನೆಯನ್ನು ಮಯಮತವು ನೀಡಿದೆ (೨೩.೭೨ಬಿ).

ಕ್ಷುದ್ರದೇವತೆಗಳಿಗೆ ನೈವೇದ್ಯಕ್ಕೆಂದು ಮಾಡಿದ ಪೀಠಕ್ಕೆ **'ಕ್ಷುದ್ರಪೀಠ'** (ಮಾನ ೩೨.೫೮–೫೯), ಚಿಕ್ಕ ಬಲಿಪೀಠಕ್ಕೆ **'ಬಲಿಪೀಠಕ'** (ಮಾನ ೩೨.೫೦) ಎಂದೂ ಹೆಸರು. ಇದು ದೇವಾಲಯದಲ್ಲಿ ಗರ್ಭಗೃಹ, ವಿಮಾನದಷ್ಟೇ ಮುಖ್ಯವಾದ ಭಾಗ. ದೇವಾಲಯದ ನಾಲ್ಕು ಮುಖ್ಯ ಅಂಗಗಳಲ್ಲಿ ಗರ್ಭಗೃಹ, ಗರ್ಭಗೃಹದ ದೇವತೆ, ಗರ್ಭಗೃಹದ ಮೇಲಿನ ವಿಮಾನ ಮತ್ತು ಬಲಿಪೀಠ – ಬಲಿಪೀಠವೂ ಸೇರಿರುವುದು, ಆಲಯವನ್ನು ಬಲಿಪೀಠದವರೆಗೆ ಎಂದು ಗುರುತಿಸಿರುವುದು (It.P.92) ಗಮನಾರ್ಹವಾದುದು. ಇದೂ ದೇವರುಗಳು ಸೇರುವ ಸ್ಥಳವಾದ್ದರಿಂದ, ಬಲಿಪೀಠವನ್ನು ಗರ್ಭಗೃಹದ ಮೇಲಿರುವ ವಿಮಾನದ ಸಂಕೇತ ಎಂದೂ ಗುರುತಿಸಲಾಗಿದೆ (Vastu - P. 141). ಬಲಿಪೀಠವು ಪ್ರಧಾನ ದೇವಾಲಯದಿಂದ ಮುಂದೆ ಇರಬೇಕು (ಮಯ ೨೩.೧೦೩). ಬಲಿಯನ್ನು ಬ್ರಹ್ಮ, ಇತರ ದೇವತೆಗಳು ಮತ್ತು ರಾಕ್ಷಸರಿಗೆ ನೀಡಬೇಕು ಎಂದು ಮಾನಸಾರವು ಹೇಳಿದೆ (೮.೩). 'ವೃಷಭ–ಸ್ಯೋಪರಿ ಭಾಗೇತು ಕಲ್ಪಯೇದ್ ಬಲಿಪೀಠಕಂ'–ಇದರಂತೆ, ವೃಷಭದಿಂದ ಮುಂದೆ ಬಲಿಪೀಠವು ಇರಬೇಕು. ಅದು ಪ್ರಸಾದ ಮತ್ತು ಗೋಪುರದ ಮಧ್ಯೆ ಇರಬೇಕು. (ಅದೇ ೩೨.೫೦–೫೧). ರಾಕ್ಷಸರಿಗೆಂದಿರುವ ಪೈಶಾಚಪೀಠವು ಪ್ರಾಕಾರದಿಂದ ಹೊರಗೆ ದೇವಾಲಯದ ಎದುರಿಗೆ ಇರುತ್ತದೆ. ಪ್ರಾಕಾರದ ಹೊರಗಿನ ಬಲಿಪೀಠವನ್ನು 'ಪೈಶಾಚ ಪೀಠ' ಎಂದೂ, ಒಳಗಿನ ಬಲಿಪೀಠವನ್ನು 'ಬಲಿವಿಷ್ಟರ' ಎಂದೂ ಮಯಮತವು ಹೇಳಿದೆ (೨೩.೭೪). ಪೈಶಾಚ ಪೀಠವು ದೇವಾಲಯದ ಮುಂದೆ ೫ ಪ್ರಾಕಾರದಿಂದ ಹೊರಗಿದ್ದರೆ, ಬಲಿವಿಷ್ಟರವು ದೇವಾಲಯ ಮತ್ತು ಪೈಶಾಚಪೀಠದ ಮಧ್ಯೆ ಇರುತ್ತದೆ (ಅದೇ ೨೩.೭೬).

ದೇವಾಲಯದ ಗೋಪುರದ/ಪ್ರಾಕಾರದ ಹಿಂದೆ ಮತ್ತು ಮುಂದೆ ಹೀಗೆ ಎರಡು ಬಲಿಪೀಠಗಳಿದ್ದಾಗ, ಕೆಲವೆಡೆ ಅವುಗಳನ್ನು ಪೀಠ ಮತ್ತು ಮಹಾಪೀಠ ಎಂದೂ (ಅಜಿತಾ–೩೯.೪೨–೪೩) ಬಲಿಪೀಠ ಮತ್ತು 'ಮಹಾಪೀಠ' (ಪಾದ್ಮ ೩೦.೧೨೮.೧೭೩) ಎಂದೂ ಕ್ರಮವಾಗಿ ಹೇಳಲಾಗಿದೆ. ಅಜಿತಾಗಮವೇ ಇನ್ನೊಂದೆಡೆ ಈ ಎರಡನ್ನೂ 'ಮಹಾಪೀಠ' ಎಂದೇ ಹೇಳಿದೆ. (ಅಜಿತಾ ೩೯.೪೧–೪೨) ರೌರವಾಗಮದಲ್ಲಿ ಒಂದೇ ಪೀಠ ಹೇಳಿದ್ದು ಮಹಾಪೀಠ ಎಂದಿದೆ (೩೩.೧೧), ಪರಿವಾರ ದೇವತೆಗಳಿಗೆಂದು ದೇವಾಲಯದಲ್ಲಿ ಹೆಚ್ಚಿನ ಬಲಿಪೀಠಗಳಿದ್ದಾಗ, ಪ್ರಧಾನ ದೇವಾಲಯದ ಮುಂದಿರುವುದನ್ನು 'ಪ್ರಧಾನ ಬಲಿಪೀಠ' ಎನಿಸಿಕೊಳ್ಳುತ್ತದೆ. ಇದು ಹೆಚ್ಚು ಅಲಂಕೃತಗೊಂಡಿರುತ್ತದೆ.

ಬಲಿಪೀಠದ ಮೊದಲ ಭಾಗವು ಅಧಿಷ್ಠಾನದಂತಿದ್ದು, ಇದು ಪ್ರಧಾನ ದೇವಾಲಯದ ಅಧಿಷ್ಠಾನದಂತೆಯೇ ಇರಬೇಕೆಂಬ ನಿಯಮವಿದೆ. (ಮಾನ–೩೨.೫೮) 'ನಾನಾಧಿಷ್ಠಾನಾಮ ಕೃತಯೋ' ಎಂದು ಮಯಮತದಲ್ಲಿದೆ. (೨೩.೮೦ಜ–೮೧) ಈ ಅಧಿಷ್ಠಾನದ ಅಂಗಗಳ ಬಗ್ಗೆಯೂ

* # ೧೬೭೬, ೫ನೇ 'ಎ' ಅಡ್ಡರಸ್ತೆ, ೧೦ನೇ ಮುಖ್ಯರಸ್ತೆ, ಬನಶಂಕರಿ ಮೊದಲನೇ ಹಂತ, ಬೆಂಗಳೂರು.

ಗ್ರಂಥಗಳು ಹೇಳಿದ್ದು, ರೌರವಾಗಮವು 'ಕುಂಭ'ವನ್ನು ಹೇಳಿದ್ದರೆ (೩೩.೧೭–೨೧), ಮಯಮತವು ಕುಮುದವನ್ನು (೨೩–೭೭.೮)ಹೇಳಿದೆ. ಪೀಠಕ್ಕೆ 'ಮಧ್ಯ ಭದ್ರ' ವಿರಚಿಸಬಹುದೆಂದು ಗ್ರಂಥಗಳಲ್ಲಿದೆ (ಮಯ–೨೩.೮೦; ಮಾನ–೩೨.೫೭; ಕಾಮಿಕಾ–೭೧.೧೨೦; ಕೌರವ–೩೩.೧೭–೨೧). ಇದಕ್ಕೆ ಉಪಪೀಠವಿರಬಹುದು ಅಥವಾ ಇಲ್ಲದಿರಬಹುದು. ಉಪಪೀಠವಿದ್ದಲ್ಲಿ ಸೋಪಾನ ವಿರಬೇಕು (ಅಜಿತಾ–೩೯.೫೨). ಉಪಪೀಠದ ಮೇಲೆ ಉಪಪೀಠಮಾಡಿ ಅದರ ಮೇಲೆ 'ಮಹಾಪೀಠ'ವನ್ನು ರಚಿಸುವಂತೆ ಅಂಶುಮತ್ ಕಾಶ್ಯಪದಲ್ಲಿ ಹೇಳಿರುವುದು ಅಸ್ಪಷ್ಟವಾಗಿದೆ (೫೦–೧೭೦.೭೧). ಬಲಿಪೀಠದ ಮೇಲ್ಭಾಗದಲ್ಲಿ 'ಪದ್ಮ'ವೂ ಇದ್ದು, ಪದ್ಮದ ಮಧ್ಯೆ ಕರ್ಣಿಕಾ/ಕರಿಕರ್ಣಿಕಾ/ಇರಬೇಕೆಂದು ಎಲ್ಲಾ ಗ್ರಂಥಗಳಲ್ಲಿ ಹೇಳಿವೆ. (ಕಾಮಿಕಾ–೭೧.೧೦೩–೧೧೬; ಮಾನ ೫೪–೫೬; ಮಯ ೨೩.೭೯.೮೦; ಕೌರವ–೩೩.೧೭–೨೧) ಕರ್ಣಿಕಾದಲ್ಲಿ 'ಭೂತೇಶ್ವರ' ಇರಬೇಕೆಂದು ರೌರವಾಗಮದಲ್ಲಿದ್ದರೆ, (೩೩.೧೭–೨೧), ಕರ್ಣಿಕಾದಲ್ಲಿ 'ಭೂತೇಶ್ವರ' ಇರಬೇಕೆಂದು ರೌರವಾಗಮದಲ್ಲಿದ್ದರೆ (೩೩.೧೭–೨೧), ನಂದಿಯ ಶಿಲ್ಪವೂ ಪೀಠದ ಮೂಲೆಗಳಲ್ಲಿ ಮತ್ತು ಉಪಪೀಠದಲ್ಲಿ 'ಮಹಾಭೂತ' ಬಿಂಬದ ಬಳಿ ಇರಬೇಕೆಂದು ಅಜಿತಾಗಮದಲ್ಲಿದೆ. (೩೯.೪೩–೫೨). ಇದು ನಾನಾ ಭೂತಗಳಿಂದ ಅಲಂಕರಿಸಲ್ಪಟ್ಟಿರಬೇಕು. (ಕಾಮಿಕಾ–೭೧–೧೨೦).

ಭೂತ, ಮಕರ, ವ್ಯಾಳ, ವೃಷಭದಿಂದ ಇದನ್ನು ಅಲಂಕರಿಸಬೇಕೆಂದು ಅಂಶುಮತ್ ಕಾಶ್ಯಪದಲ್ಲಿದೆ (ಪೂರ್ವೋಕ್ತ). ಬಲಿಪೀಠವನ್ನು ಇಟ್ಟಿಗೆ ಗಾರೆ, ಲೋಹ, ಶಿಲೆ, ಮರದಿಂದಲೂ ಮಾಡಬಹುದು (ಅಂಶು–೧೬೭–೧೬೯) ಮರದಿಂದ ಮಾಡಿದಾಗ ಅದನ್ನು ಲೋಹದಿಂದ ಮುಚ್ಚಬೇಕೆಂದು ಕಾರಣಾಗಮವು ಹೇಳಿದೆ (IT-P.92) ಮಣ್ಣಿನ ಬಲಿಪೀಠಗಳೂ ಇದ್ದ ಸೂಚನೆಯು ಶಿಲ್ಪರತ್ನದಲ್ಲಿದೆ (Ibid). ಇದು ವೃತ್ತಾಕಾರ ಅಥವಾ ಚತುರಶ್ರಾಕಾರದಲ್ಲಿರಬಹುದು (ಕಾರಣಾ–I 60.28); ಚೌಕ ಅಥವಾ ಅಷ್ಟಮುಖವಾಗಿರಬಹುದು (ಕೌರವ–೧೧.೯); ಚೌಕ, ವೃತ್ತ, (ಕಲಾಶ್ರ?) ಅಥವಾ ಅಷ್ಟಮುಖವಾಗಿರಬಹುದು (ಅಂಶು–೫೦.೧೬೬–೧೬೭). ಇದರೊಂದಿಗೆ ಕಾಮಿಕಾಗಮವು ತ್ರಯಶ್ರಾಕಾರವನ್ನೂ ಹೇಳಿದೆ (೭೧.೧೨೧–೨೨). ಈ ಪೀಠದ ಅಳತೆ ಮತ್ತು ಆಕಾರದ ಆಧಾರದ ಮೇಲೆ ಅದನ್ನು ಶ್ರೀಬಂಧ, ಪದ್ಮಬಂಧ ಇತ್ಯಾದಿ ಬೇರೆ ಬೇರೆ ಹೆಸರಿನಿಂದ ಗುರುತಿಸುವುದುಂಟು (IT P.92). ಹಲಸೂರಿನ ಸೋಮೇಶ್ವರ, ಹಂಪೆಯ ಬಾಲಕೃಷ್ಣ ದೇವಾಲಯಗಳಲ್ಲಿ ಸುಂದರ ಬಲಿಪೀಠವನ್ನು ಕಾಣಬಹುದು.

ಧ್ವಜಸ್ತಂಭ : ಧ್ವಜವನ್ನು ಕಟ್ಟಲು ಬಳಸುವ ಸ್ತಂಭವೇ 'ಧ್ವಜಸ್ತಂಭ'/ಧ್ವಜದಂಡ. ಮೂಲತಃ ದೇವಾಲಯದ ಇರುವಿಕೆಯನ್ನೂ, ಅದು ಪೂಜಾಸ್ಥಳವೆಂಬುದನ್ನು ತೋರಿಸುವುದು ಇದರ ಉದ್ದೇಶ. ಹಯಶೀರ್ಷ ಸಂಹಿತೆಯು ಧ್ವಜಸ್ತಂಭ ಇರಬೇಕೆಂದು ಹೇಳಿ ವಿವರ ನೀಡಿರುವುದಾಗಿ ತಿಳಿದುಬರುತ್ತದೆ (IT P.95). ಬಲಿಪೀಠದಿಂದ ಮುಂದೆ ಅಥವಾ ಗರ್ಭಗೃಹ ಮತ್ತು ಬಲಿಪೀಠದ ನಡುವೆ ಗರ್ಭಗೃಹಕ್ಕೆ ಅಭಿಮುಖವಾಗಿ ಧ್ವಜಸ್ತಂಭವು ಇರುವುದು. ಅಜಿತಾಗಮದಂತೆ, ಧ್ವಜದಂಡವು ದೇವಾಲಯದ ಮುಂದೆ ಪ್ರಾಕಾರಗಳ ಒಳಗೆ, ಪ್ರಧಾನ ಪೀಠದ ಮುಂದೆ, ಗೋಪುರದ ಮುಂದೆ, ಗೋಪುರ ಮತ್ತು ಪ್ರಧಾನ ಪೀಠದ ಮಧ್ಯೆ ೪ ಅಥವಾ ೫ನೇ ಪ್ರಾಕಾರದಲ್ಲಿ ಇರಬಹುದು (ಅಜಿತಾ. ೨೭–೯೧–೯೨); ವೃಷಭದಿಂದ ಮುಂದೆ ಅಥವಾ ಹಿಂದೆ ಅಥವಾ ಬಲಿಪೀಠ ಮತ್ತು ಗೋಪುರದ ಮಧ್ಯೆ ಅಥವಾ ಎರಡನೇ ಪ್ರಾಕಾರದ ಮುಂದೆ ಅಥವಾ ಮಧ್ಯೆ ಅಥವಾ ಮೂರನೇ ಪ್ರಾಕಾರದಲ್ಲಿ ಇರಬಹುದೆಂದು ರೌರವಾಗಮವು ಹೇಳಿದೆ (೧೮.೨೨–೨೩). ಅದೇ, ದೀಪ್ತಾಗಮವು, ಪೀಠ ಮತ್ತು ಗೋಪುರದ ಮಧ್ಯೆ ಅಥವಾ ಪೀಠ ಅಥವಾ ವೃಷದ ಮುಂದೆ ಅಥವಾ ಮರ್ಯಾದಿ ಅಥವಾ ಮಹಾಮರ್ಯಾದಿಯ/(೪/೫ನೇ ಪ್ರಾಕಾರ) ಮಧ್ಯದಲ್ಲಿ ಧ್ವಜಸ್ಥಾನವಿರುವದು (೮೫–೬–೭) ಎಂದು ಹೇಳಿದೆ. ಮಯಮತದ ಪ್ರಕಾರ, ವೃಷಭದ ಮುಂದೆ, ದೇವಾಲಯದಿಂದ ಅರ್ಧ ದೂರದಲ್ಲಿ ಧ್ವಜಸ್ತಂಭವಿದ್ದು ಅದರ ಮುಂದೆ ತ್ರಿಶೂಲ ಇರಬೇಕು ಹಾಗೂ ಇವು ಮಹಾದ್ವಾರದಿಂದ ಒಳಗೆ ಬರುವಲ್ಲಿ ಎಡಕ್ಕಿರಬೇಕು (೨೩.೮೨–೮೩). ವಿಶೇಷ ಉತ್ಸವಗಳ ಸಂದರ್ಭಗಳಲ್ಲಿ ಈ ಧ್ವಜಸ್ತಂಭಕ್ಕೆ ಧ್ವಜವನ್ನು ಕಟ್ಟಲಾಗುತ್ತದೆ (ಪಾದ್ಮ–೪.೨೧). ಧ್ವಜಸ್ತಂಭವು ಶಾಶ್ವತವಾಗಿ ಸ್ಥಾಪನೆಯಾಗಿದ್ದಲ್ಲಿ ಹೀಗೆ ಸಾಂದರ್ಭಿಕವಾಗಿ ಧ್ವಜವನ್ನು ಕಟ್ಟುವುದುಂಟು. ಅದೇ, ಉತ್ಸವಗಳ ಸಂದರ್ಭದಲ್ಲಿ ಮಾತ್ರ ಧ್ವಜಸ್ತಂಭ ನಿಲ್ಲಿಸಿ ನಂತರ ತೆಗೆಯುವುದನ್ನು 'ಜಯಂತ' ಎಂದು ಕರೆಯಲಾಗಿದೆ (Vastu-P. 141). ಧ್ವಜವಿರುವ ಸ್ತಂಭವನ್ನು 'ಸಪತಾಕ' ಎಂದೂ, ಧ್ವಜವಲ್ಲದ್ದಕ್ಕೆ 'ನಿಷ್ಪತಾಕ' ಎಂದೂ ಹೆಸರು.

ಧ್ವಜಸ್ತಂಭವನ್ನು ಕಲ್ಲು ಅಥವಾ ಮರದಿಂದ ಮಾಡಬಹುದು. ಮರದಿಂದ ಮಾಡಿದ್ದಾಗಿದ್ದಲ್ಲಿ ಅದನ್ನು ಲೋಹದಿಂದ ಮುಚ್ಚುವುದುಂಟು. ಇದಕ್ಕಾಗಿ ಯಾವ ಮರವನ್ನು ಬಳಸಬೇಕೆಂಬ ಸೂಚನೆಯು ರೌರವಾಗಮದಲ್ಲಿದೆ (೧೮.೨೯–೩೦). ಈ ಸ್ತಂಭವು ದೇವಾಲಯದ ಅಳತೆಯುಲ್ಲಿರಬೇಕು (ಮಯ–೨೩.೮೮ಬಿ–೯೧); ದೇವಾಲಯದ ಮೂರರಷ್ಟಿರಬೇಕು (ರೌರವ–೧೮.೩೦;

ಸುಪ್ರ–I. 14-19) ಎಂದು ಕೆಲವೆಡೆ ಇದ್ದರೆ, ಇನ್ನೊಂದೆಡೆ, ಶಿಖರ, ಗೋಪುರಕ್ಕಿಂತ ಎತ್ತರದಲ್ಲಿರಬಹುದು; ಪ್ರಸ್ತರ ಅಥವಾ ಗಲದವರೆಗೂ ಇರಬಹುದು ಎಂದಿದೆ. (ಅಜಿತಾ ೨೭.೭೬; ಸುಪ್ರ–I. 14, 199-28). ಈ ಅಳತೆಯ ಆಧಾರದ ಮೇಲೆ ಧ್ವಜಸ್ತಂಭವನ್ನು ಉತ್ತಮ, ಮಧ್ಯಮ ಇತ್ಯಾದಿಯಾಗಿ ವಿಂಗಡಿಸಲಾಗಿದೆ (ಈಶಾನ. III, P. 459; ದೀಪ್ತಾಗಮ–೮೫.೧೦–೧೭). ಧ್ವಜಸ್ತಂಭದ ಆಕಾರವು ವೃತ್ತ, ೮ ಮುಖ ಅಥವಾ ೧೬ ಮುಖ ಇರಬಹುದೆಂದು ಗ್ರಂಥಗಳು ಹೇಳಿವೆ (ಮಯ–೨೩.೮೮–೯೧; ಅಜಿತಾ–೨೭.೭೪; ರೌರವ–೧೮.೨೯–೩೦). ಸ್ತಂಭದ ಎಲ್ಲ ಅಂಗಗಳೂ ಇದರಲ್ಲಿದ್ದು, ಇದು ಒಂದು ಎತ್ತರದ ವೇದಿಕೆಯ ಮೇಲಿರುತ್ತದೆ. (ಸ್ತಂಭದಲ್ಲಿ ತ್ರಿಮೂರ್ತಿಗಳಿರುವ ಸೂಚನೆಯೂ ಇದೆ). ಇದಕ್ಕೆ ಉಪಪೀಠ /ವೇದಿಕಾ ಇರಬಹುದು–ಎಂದು ಗ್ರಂಥಗಳಲ್ಲಿದೆ. ಇದರಲ್ಲಿ ದಂಡ ಮತ್ತು ಉಪದಂಡ ಎಂದು ಎರಡು ಮುಖ್ಯ ಭಾಗಗಳಿರುತ್ತವೆ. ದಂಡವು ಮೂಲ ಕಂಬದ ಭಾಗವಾಗಿದ್ದರೆ, ಉಪದಂಡವು ಅದರ ಮೇಲಿನ ಭಾಗಕ್ಕೆ ಅನ್ವಯಿಸುತ್ತದೆ. ಮೇಲ್ಭಾಗದಲ್ಲಿನ ೩ ಅಡ್ಡಪಟ್ಟಿಗಳಿಗೆ 'ಯುಷ್ಟಿ ಎಂದು ತ್ರಯ', 'ಘಟಿಕಾತ್ರಯ' ಹೆಸರು. ಈ ಉಪದಂಡದಲ್ಲಿ 'ವಲಯ'ವಿದ್ದು, ಧ್ವಜದ ಹಗ್ಗವು (ರಜ್ಜು) 'ವಲಯ'ದ ಮೂಲಕ ಸಾಗಿಬರುವುದು. ದಂಡದಲ್ಲಿ 'ಸುಶಿರ' ಎಂಬ ಸಣ್ಣ ಗುಮ್ಮಟದಂತಹ ಭಾಗವಿದ್ದು, ದಂಡದ ತುದಿಯಲ್ಲಿ ವೇಣುವಿನಂತಹ (–ವೈಣವ) ಅಂಗವಿರುವುದು (ಅಜಿತಾ–೧೮.೩೮–೩೯ ಮತ್ತು ೨೭–೭೮, ೯೪–೯೭; ರೌರವ–೧೮.೩೨–೩೩; ಸುಪ್ರ–I. 14.19-24). ಸ್ತಂಭದ ಅಂತ್ಯದಲ್ಲಿ 'ಫಲಕ'ವಿದ್ದು ಅದರ ಮೇಲೆ 'ಭೂತಮುಕ್ತಾ' ಇರಬೇಕೆಂದು ಮಯಮತದಲ್ಲಿದೆ (೨೩.೮೮ಬಿ–೯೧). ಸ್ತಂಭದಲ್ಲಿರುವ ಕಟ್ಟುಗಳ (ಪರ್ವ) ಸಂಖ್ಯೆಯ ಆಧಾರದ ಮೇಲೆ ಸ್ತಂಭವನ್ನು ಬೇರೆ ಬೇರೆ ಹೆಸರಿನಿಂದ ಗುರುತಿಸಲಾಗುತ್ತದೆ (Vastu-P. 133). ಸ್ತಂಭದ 'ಪಾದ'ದಲ್ಲಿ ಸಾಮಾನ್ಯವಾಗಿ ನಂದಿ, ಲಿಂಗ, ಗರುಡ, ಶಂಖ, ಚಕ್ರ ಇತ್ಯಾದಿಗಳನ್ನು ಬಿಡಿಸಲಾಗಿರುತ್ತದೆ. (ಈ ಸ್ತಂಭಗಳ ಪ್ರಾಚೀನತೆಯ ಬಗ್ಗೆ ನೋಡಿ : ವಾಸ್ತು–೧೦೯) ಈ ಸ್ತಂಭಗಳು ನಂತರ ಕಾಲದ ಸೇರ್ಪಡೆ ಯಾದ್ದರಿಂದ ಧ್ವಜಸ್ತಂಭದ ಸಾಂಕೇತಿಕತೆಯ ಬಗ್ಗೆ ಗ್ರಂಥಗಳಲ್ಲಿ ಸ್ಪಷ್ಟವಾಗಿಲ್ಲವೆಂದೂ, ಇದು ರಾಜಸಂಬಂಧಿ ಎಂದೂ ಒಂದೆಡೆ ಹೇಳಲಾಗಿದೆಯಲ್ಲದೆ, ಈ ಕಾರಣವಾಗಿ ಅದು ವಿಜಯ ಮತ್ತು ಅಭಿವೃದ್ಧಿಯನ್ನು ಸಂಕೇತಿಸುತ್ತದೆ ಎಂದೂ ಗುರುತಿಸಲಾಗಿದೆ (IT-P.92). 'ಶಿವಸರ್ವಸ್ವ'ದ ಪ್ರಕಾರ, ಇದು ದೈವದ ಸ್ವರೂಪ ; ದೇವರ ವಾಹನ. ಜೊತೆಗೆ ಧ್ವಜವು ಭಕ್ತನನ್ನು ಮೇಲಕ್ಕೆತ್ತುವ ಸಾಧನ ; ಧ್ವಜಸ್ತಂಭವು ಬಯಸಿದ್ದನ್ನೆಲ್ಲಾ ನೀಡುತ್ತದೆ (IT. P.95). (ದೀಪಸ್ತಂಭದ ಬಗ್ಗೆ ವಿವರಗಳು ಗ್ರಂಥಗಳಲ್ಲಿದ್ದಂತೆ ತೋರುವುದಿಲ್ಲ) ಮಾನಸಾರದಲ್ಲಿ ಮನೆಯ ಮುಂದಿನ ದೀ

ವೃಷ ಮತ್ತು ಗರುಡ : ದೇವಾಲಯಗಳಲ್ಲಿರುವ ಗರುಡ ಮತ್ತು ನಂದಿ ಬಿಂಬದ ಬಗ್ಗೆಯೂ ಗ್ರಂಥಗಳಲ್ಲಿ ವಿವರಗಳಿವೆ. ಮಾನಸಾರದಲ್ಲಿ ಈ ಬಗ್ಗೆ ಪ್ರತ್ಯೇಕ ಅಧ್ಯಾಯಗಳಿದ್ದು (೬೧ ಮತ್ತು ೬೨), ಗರುಡ ಮತ್ತು ನಂದಿ ಶಿಲ್ಪವನ್ನು ಕೆತ್ತುವುದರ ಬಗ್ಗೆ ವಿವರಗಳಿವೆ. ಗರುಡ ಶಿಲ್ಪವು ಚರ, ಸ್ಥಿತ, ಚರ ಅಥವಾ ಆಸೀನ ಭಂಗಿಯಲ್ಲಿರಬಹುದು ಮತ್ತು ಇದನ್ನು ಶಿಲೆ, ಮಣ್ಣು ಮತ್ತು ಮರದಿಂದ ಮಾಡಬಹುದೆಂಬ ಸೂಚನೆ ಅದರಲ್ಲಿದೆ (ಮಾನ. ೬೧,೧೦,೧೨, ೬೬–೬೭). ನಂದಿಯು ದೇವರಿಗೆ ಅಭಿಮುಖವಾಗಿರಬೇಕು (ಕಾರಣಾ - II 87, 39); ಇದು ಪ್ರಧಾನ ದೇವಾಲಯದ ಮುಂದೆ ಇರಬೇಕು (ಮಯ–೨೩.೧೦೩); ಪೀಠ, ದಂಡವನ್ನು ಬಿಟ್ಟು ಅದರಿಂದ ಮುಂದೆ ವೃಷ ಇರಬೇಕು ಅಥವಾ ಬೇರೆ ರೀತಿಯಲ್ಲೂ ಮಾಡಬಹುದು (ಕಾರಣಾ–I-60,50). ''ಚಲಂ ಸ್ಥಾಪಯೇದಗ್ರೇ ದಿವ್ಯಲಿಂಗಂ ದೇಶಿಕಃ ೧ ಅಚಲೇ ಸ್ಥಾಪಿತಸ್ಯೈವ ಮಂತ್ರನ್ಯಾಸಂ ಸಮಾಚರೇತ್ ॥ ವೃಷಸ್ತಿಷ್ಠತಿ ವಾ ಯತ್ರ ದೇವೇನ ಸಹ ವಿಷ್ಟರೇ ।" ಎಂದು ಅಜಿತಾಗಮವು ಹೇಳಿದೆ (೪೬.೪೬–೪೭). ಪ್ರಾಕಾರದ ಎಲ್ಲಾ ದ್ವಾರದಲ್ಲೂ ನಂದಿ ಇರಬೇಕು (ಮಾನ–೩೨.೯೮). ನಂದಿಯನ್ನು ಆಕಾಶವನ್ನು ನೋಡುತ್ತಿರುವಂತೆ ಪೀಠದ ಮೇಲೆ, ದೇವಾಲಯದೊಳಗೆ ಶಿವಬಿಂಬದ ಪೀಠದ ಮೇಲೆ ಅಥವಾ ಮಂಟಪದಲ್ಲಿ 'ಚಾರ' ಭಂಗಿಯಲ್ಲಿ ನಿರ್ಮಿಸಿಡಬಹುದು (ಮಾನ–೬೨.೨). ಅಂತರ್ದ್ವಾರದ ಹಿಂದೆ ಮಂಟಪದ ಮುಂದೆ, ಪೀಠದ ಹಿಂದೆ ವೃಷಭಸ್ಥಾನ (ಕಾಮಿಕಾ I. 74, 1ಬಿ ಮತ್ತು ೭೨ ೧–೨). ಎರಡನೇ ಪ್ರಾಕಾರದಲ್ಲಿ ಅಲ್ಪೋಕ್ಷ, ಬೇರೆ ಸ್ಥಾನದಲ್ಲಿ ಮಹೋಕ್ಷ, ಪೂಜಾಸ್ಥಾನದಲ್ಲಿ ಅಲ್ಪೋಕ್ಷ ಇರಬೇಕು (ಕಾರಣಾ I.60,71 ಬಿ–೮೩). ವೃಷಭದ ಎತ್ತರವನ್ನು ಮೂಲ ಬಿಂಬಕ್ಕೆ ಸಂಬಂಧಿಸಿದಂತೆ, ಗರ್ಭಗೃಹ ದ್ವಾರಕ್ಕೆ ಸಂಬಂಧಿಸಿದಂತೆ ಮಾನಸಾರದಲ್ಲಿ ಹೇಳಲಾಗಿದೆ (ಅ. ೬೨). ವೃಷಭ ಬಿಂಬವು ನಿಂತಿರುವಂತೆ, ಕುಳಿತಿರುವಂತೆ ಅಥವಾ ಮಲಗಿರುವಂತೆ ಮಾಡಬಹುದೆಂಬ ಸೂಚನೆಯು ಗ್ರಂಥಗಳಲ್ಲಿದ್ದು, ಅದಕ್ಕೆ ಸಂಬಂಧಿಸಿದಂತೆ ನಿರ್ಮಾಣ ಸಾಮಗ್ರಿಯನ್ನೂ ಹೇಳಲಾಗಿದೆ (ಮಯ–೨೩.೧೨೮–೨೯). ಶಯಿತ ಭಂಗಿಯಲ್ಲಿರುವ ನಂದಿಯನ್ನು ಶಿಲೆಯಿಂದಲೂ (ಸುಪ್ರ–I. 40, 3-5; ಕಾರಣಾ-I.60.7-83; ಅಜಿತಾ–೩೬.೩೭೪ಎ). ಲೋಹದಿಂದಲೂ (ಅಜಿತಾ–೩೬.೩೭೩; ಕಾಮಿಕಾ–೭೨.೮; ಕಾರಣಾ–ಪೂರ್ವೋಕ್ತ), ಸುಣ್ಣದಿಂದಲೂ

(ಸುಪ್ರ, ಪೂರ್ವೋಕ್ತ) ಮಣ್ಣಿನಿಂದಲೂ (ಕಾರಣಾ-ಪೂರ್ವೋಕ್ತ) ಮಾಡಬೇಕು. ನಿಂತಿರುವ ಬಿಂಬವನ್ನು ಲೋಹದಿಂದಲೂ (ಸುಪ್ರ, ಪೂರ್ವೋಕ್ತ), ಕುಳಿತಿರುವ ಬಿಂಬವನ್ನು ಲೋಹದಿಂದಲೂ (ಅಜಿತಾ, ಕಾಮಿಕಾ, ಕಾರಣಾ-ಪೂರ್ವೋಕ್ತ) ಮಾಡಬೇಕು. ಲೋಹದಿಂದ ಮಾಡಿದ ಬಿಂಬವು ಉತ್ತಮವೆಂದೂ, ಶಿಲೆಯಿಂದ ನಿರ್ಮಿಸಿದ್ದು ಮಧ್ಯಮ ಹಾಗೂ ಸುಣ್ಣದಿಂದ ಮಾಡಿದ್ದು ಅಧಮವೆಂದೂ ಸುಪ್ರಭೇದಾಗಮವು ಹೇಳಿದೆ (ಪೂರ್ವೋಕ್ತ). ಶಿಲೆಯಿಂದ ನಿರ್ಮಿತವಾದ ಮೈಸೂರಿನ ನಂದಿ, ಹಳೇಬೀಡಿನ ನಂದಿ ಮಂಟಪಗಳು ಪ್ರಸಿದ್ಧವಾಗಿವೆ.

ಸೋಪಾನ : ದೇವಾಲಯದ ಹೊರ ಆವರಣವೆಂದಾಗ ಅದರಲ್ಲಿ ಸೋಪಾನ (ಮೆಟ್ಟಿಲು) ಕೂಡಾ ಸೇರುತ್ತದೆ. ಇದರ ವಿಷಯವೂ ಕೂಡಾ ವಾಸ್ತುಗ್ರಂಥಗಳಲ್ಲಿ ಸಂದರ್ಭಾನುಸಾರವಾಗಿ ಬೇರೆ ಬೇರೆ ಅಧ್ಯಾಯಗಳಲ್ಲಿದೆ. 'ಸೋಪಾನಂ-ಉಪಾನಂ ಉಪರಿಗಮನಂ ತೇನ ಸಹ ವಿದ್ಯಮಾನಂ' ಎಂಬ ವಿವರಣೆಯು 'ಶಬ್ದಕಲ್ಪದ್ರುಮ'ದಲ್ಲಿರುವುದಾಗಿ ತಿಳಿದುಬರುತ್ತದೆ (Archi-P. 41). ಅಧಿಷ್ಠಾನ, ಉಪಪೀಠ, ನೆಲಹಂತದ ಮುಖ್ಯಭಾಗ, ಪ್ರಸ್ತರವನ್ನು ಹತ್ತಲು ಮುಂದೆ ಅಥವಾ ಪಕ್ಕಗಳಲ್ಲಿ ಮೆಟ್ಟಿಲಿರಬೇಕು (ಮಯ-೨೧.೯೬-೯೭, ೩೦.೧೦೨). ಸೋಪಾನವು ದೇವಾಲಯದ ಮುಂದೆ/ಮಂಟಪದ ಮುಂದೆ ಅಥವಾ ಪಾರ್ಶ್ವಗಳಲ್ಲಿ ಇರಬೇಕು (ಮಾನ-೩೪.೮೬); 'ಪ್ರಪಾ'ದ ಮುಂದೆ/ಪಕ್ಕಗಳಲ್ಲಿ ಕೆಲವೊಮ್ಮೆ ಇರುತ್ತವೆ (ಅದೇ-೧೧೩-೧೪). ಮಂಟಪದ ಮುಂದೆ 'ಭದ್ರ' ಮತ್ತು ಸೋಪಾನ ಇದ್ದು, ಮೂಲೆಗಳಲ್ಲಿ 'ಲಾಂಗುಲ ಭಿತ್ತಿ' ಇರಬೇಕು. 'ಭದ್ರ'ದ ಮುಂದೆ ಮತ್ತು 'ಮುಖಭದ್ರ'ದ ಮುಂದೆ ಎರಡು ಪಾರ್ಶ್ವಗಳಲ್ಲಿ ಸೋಪಾನವಿರಬೇಕು (ಮಾನ-೩೪.೧೧೩-೧೪ ಮತ್ತು ೩೦.೪೭; ಮಯ-೨೫.೧೫೨ಬಿ). ದೇವಾಲಯದ ಮೇಲಿನ ನೆಲೆಗಳನ್ನು ಹತ್ತಲು ಮೂಲೆಗಳಲ್ಲಿ ಸೋಪಾನವಿರಬೇಕು ಹಾಗೂ ಇದು ಪ್ರತಿ ನೆಲೆಗಳಲ್ಲೂ ಇರಬೇಕು (ಮಾನ. ೩೫. ೧೪೬,೧೯೬). ಸೋಪಾನವು 'ಕೂಟ'ದವರೆಗೂ ಇರಬಹುದೆಂಬ ಸೂಚನೆಯು ಮಯಮತದಲ್ಲಿದೆ (೩೦.೧೦೩); ಶಿಖರದ 'ಹಾರ'ದ ತುದಿಯವರೆಗೂ ಸೋಪಾನ ನಿರ್ಮಿಸುವಾಗ, ಅಧಿಷ್ಠಾನದ ಮಧ್ಯದಿಂದ ಆರಂಭಿಸಿ ಸುಂದರವಾಗಿ ಮಾಡಬೇಕೆಂದು ಮಾನಸಾರವು ಹೇಳಿದೆ (೨೦.೫೭). ಭವನಗಳಲ್ಲಿ ಎರಡು ತಲಗಳ ಮಧ್ಯೆ ಸೋಪಾನವಿರುವುದೆಂದು ಮಯಮತವು ಹೇಳಿದ್ದು (೨೧.೮೬-೮೭), ಇದು 'ಅನರ್ಪಿತ ಹಾರ'ದ ದೇವಾಲಯಕ್ಕೆ ಅನ್ವಯಿಸುತ್ತದೆ. (ಶ್ರವಣಬೆಳಗೊಳದ ಚಾವುಂಡರಾಯ ಬಸದಿಯನ್ನಿಲ್ಲಿ ನೆನೆಯಬಹುದು.

'ಅಂತಃಸೋಪಾನ ಸಂಯುಕ್ತಂ ದ್ವಾರಗೋಪುರಂ ತ್ರಿಧಾ' ಇದರಂತೆ, ದ್ವಾರಗೋಪುರದಲ್ಲೂ ಒಳಗೆ ಸೋಪಾನವಿರಬೇಕು (ಮಯ-೨೪.೧೩೪). ಮೂರು ಪ್ರಾಸಾದಗಳಿದ್ದಾಗ, ಅವುಗಳ ನಡುವೆ (Corridor) ಅಂತರಾಲವನ್ನು ಮಾಡಿ, ಸುತ್ತಲೂ ಪಕ್ಕಗಳಲ್ಲಿ ಸೋಪಾನವನ್ನು ನಿರ್ಮಿಸಬೇಕು (ಮಾನ-೨೩.೧೦-೨೪). ಇವೆಲ್ಲವೂ ಸ್ಥಾನಗಳನ್ನು ನಿರ್ದೇಶಿಸುವುದರೊಂದಿಗೆ, ಅವು ಯಾವ ಮುಖದಲ್ಲಿರಬೇಕೆಂಬುದನ್ನೂ ಅಲ್ಲಲ್ಲಿ ಹೇಳಿವೆ.

(ಮಂಟಪವು) 'ಚತುರ್ದ್ವಾರ ಸಮನ್ವಿತಂ । ಸೋಪಾನಂ ಪ್ರಮುಖೇತಸ್ಯ' ಮತ್ತು ಸೋಪಾನಂಸ್ಯಾಚ್ಚತುರ್ದಿಕ್ಷು' (ಮಯ. ೨೫.೬೩ಬಿ, ೮೧ಎ)-ಎಂಬ ಉಕ್ತಿಗಳು, ಸೋಪಾನಗಳು ಮಂಟಪದ ಮುಂದೆ ನಾಲ್ಕು ಕಡೆಗಳಲ್ಲೂ ಇರಬಹುದೆಂದು ಸೂಚಿಸಿವೆ ; ಹಿಂದೆಯೇ ಹೇಳಿದಂತೆ ಇದು ಪಕ್ಕಗಳಲ್ಲೂ ಇರಬಹುದು. ಗುಹ್ಯದ್ವಾರದ ಸೋಪಾನವು ಎಡಕ್ಕಿರಬೇಕು. ಗರ್ಭಗೃಹದ ದೇವತೆಯು ಅದರ ಮುಂದಿರುವ ದ್ವಾರಕ್ಕೆ ಕಾಣುವಂತಿರಬಾರದು. ಆದ್ದರಿಂದ ಸೋಪಾನಗಳು 'ಮುಖಭದ್ರ'ದ ಪಾರ್ಶ್ವಗಳಲ್ಲಿರಬೇಕು ಅಥವಾ ದೇವಾಲಯದ ಹಿಂಭಾಗ ಅಥವಾ ಪಾರ್ಶ್ವಗಳಲ್ಲಿರಬೇಕು (ಮಾನ-೩೦.೪೯-೫೧). ದ್ವಾರಕ್ಕೆ ೩ 'ಮುಖಭದ್ರ'ಗಳಿಲ್ಲದಿದ್ದಲ್ಲಿ ಅದರ ಮುಂದೆ ಎರಡು ಪಾರ್ಶ್ವಗಳಲ್ಲಿ ಸೋಪಾನಗಳಿರುವುದು ಶ್ರೇಷ್ಠ (ಅದೇ. ೫೨). ಪಾರ್ಶ್ವದ್ವಾರಗಳಿದ್ದಾಗ, ಅಲ್ಲಿ ಮುಂಭಾಗದಲ್ಲಿ ಸೋಪಾನ ಮಾಡಬಹುದು (-ಮುಖಸೋಪಾನ) (ಅದೇ. ೪೭). ಆರೋಹಣಾರ್ಥವಾಗಿ ಈ ಸೋಪಾನಗಳನ್ನು ದಕ್ಷಿಣದ್ವಾರದ 'ಭದ್ರಕ'ದಲ್ಲಿ ಮಾಡಬೇಕು ಅಥವಾ ಅದರ ಪಕ್ಕಗಳಲ್ಲಿ ಪೂರ್ವ ದಿಕ್ಕಿನಲ್ಲಿ ಮಾಡಬೇಕು (ಅದೇ. ೪೮). 'ಪ್ರಾದಕ್ಷಿಣ್ಯೇನ ಸೋಪಾನಂ ಮಹಾವಾರಾಧಿರೋಹಣಂ ಉಪರ್ಯುಪರಿ ಯೋಜಯೇತ್' (ಮಯ. ೭೨ಎ, ೯೨ ಎ) ಎಂದಿದ್ದು, ಮೆಟ್ಟಿಲುಗಳ ತಿರುವು ಪ್ರದಕ್ಷಿಣೆಯ ರೀತಿಯಲ್ಲಿ ಬಲಕ್ಕಿರಬೇಕು (ಅದೇ. ೯೫) ಎಂದು ತಿಳಿದುಬರುತ್ತದೆ. ಮೆಟ್ಟಿಲುಗಳು ಬೆಸಸಂಖ್ಯೆಯಿಂದ ಕೂಡಿರಬೇಕು (ಅದೇ. ೯೪). 'ತಲ'ಗಳ ಬಳಿ ಸೋಪಾನ ನಿರ್ಮಿಸುವಾಗ, ಅದು ಮೂಲದಿಂದ ಚೌಕ, ಆಯತ ಮತ್ತು ವೃತ್ತಾಕಾರವಾಗಿರಬಹುದೆಂಬ ಸೂಚನೆಯು ಮಯಮತದಲ್ಲಿದೆ (೨೧.೮೬-೮೭).

ಸೋಪಾನಗಳಲ್ಲಿ ಚಾರ ಮತ್ತು ಸ್ಥಿರ ಸೋಪಾನಗಳೆಂದು ಎರಡು ವಿಧಗಳಿದು, ಅವುಗಳನ್ನು ಕಲ್ಲು, ಇಟ್ಟಿಗೆ, ಮರದಿಂದ ಮಾಡಬಹುದು (ಮಾನ-೩೦.೪೫-೪೬). ಉಪಪೀಠವನ್ನು ಹತ್ತಲೆಂದು ಮಾಡುವ ಸೋಪಾನಕ್ಕೆ 'ಚಾರ' ಸೋಪಾನ ನಿರ್ಮಿಸಿ ಎನ್ನಲಾಗಿದೆ (ಮಯ-೩೦.೧೦೨-

೩) ಪ್ರತೀ ಮೆಟ್ಟಿಲಿನ ಭಾಗಕ್ಕೆ 'ಪಟ್ಟಿಣ' ಎಂದೂ ಹೆಸರು (ಮಾನ-೩೦.೭೪) ಅಶ್ವಪಾದೋಪರಿಸ್ಥಿತ್ಯಾ ರೋಹಣಂ ದಕ್ಷಿಣಾಂಘ್ರಿಣಾ' ಎಂದಿದ್ದು, (ಮಯ-೨೧.೮೯ಬಿ) ಆರೋಹಣದಲ್ಲಿ ಕೆಳಗಿರುವ, ಅಂದರೆ, ಮೊದಲನೆಯ ಮೆಟ್ಟಿಲಿಗೆ 'ಅಶ್ವಪಾದ' ಎಂದು ಹೆಸರು. [ಒಂದರ ಮೇಲೊಂದರಂತೆ ಸಾಲಾಗಿರುವ ಮೆಟ್ಟಿಲಿಗೆ ಸೋಪಾನ ಮಾಲಾ, 'ಸೋಪಾನಮಾರ್ಗ' ಎಂದು ಹೆಸರು). ಅಶ್ವಪಾದವನ್ನು ಅರ್ಧಚಂದ್ರಾಕಾರದಲ್ಲಿ ಮಾಡಬೇಕು (ಈಶಾನ ೩೨.೮೨-೮೩). ಇದರ ಕೊನೆಯ ಮೆಟ್ಟಿಲಿಗೆ 'ಫಲಕ' ಎಂದು ಹೆಸರು (ಮಯ-೨೧.೯೬-೯೭). ಅಂದರೆ, ಮೆಟ್ಟಿಲುಗಳ ಅಕ್ಕಪಕ್ಕ ಇರುವ ಆಧಾರಕ್ಕೆ 'ಹಸ್ತಿಹಸ್ತ' ಎಂದು ಹೆಸರು (ಮಯ-ಪೂರ್ವೋಕ್ತ). ಇದನ್ನು ಆನೆಯ ಸೊಂಡಿಲಿನಂತೆ ಅಲಂಕರಿಸಬೇಕೆಂದೂ ಹೇಲಾಗಿದ್ದು, ಈ ಕಾರಣವಾಗಿಯೇ ಅದಕ್ಕೆ 'ಹಸ್ತಿಹಸ್ತ' ಎಂಬ ಹೆಸರು ಇದೆ (ಮಯ-೧೯.೭); ಇದನ್ನು ಸಿಂಹ, ವ್ಯಾಳಗಳಿಂದಲೂ ಅಲಂಕರಿಸುವುದುಂಟು. ಮಯಮತವು ೪ ಪ್ರಕಾರದ ಸೋಪಾನಗಳನ್ನು ಹೇಳಿದೆ. ಅವುಗಳೆಂದರೆ, ಶಂಖಮಂಡಲ, ವಲ್ಲೀಮಂಡಲ, ತ್ರಿಖಂಡಾಕಾರ ಮತ್ತು ಅರ್ಧಗೋಮೂತ್ರ (೨೫.೮೭-೮೮). ಕೆಳಗಿನಿಂದ ಮೇಲಕ್ಕೆ ಹೋಗುತ್ತಾ ಮೆಟ್ಟಿಲುಗಳ ಅಗಲವು ಕಿರಿದಾಗುತ್ತಾ (winding) ಸುರುಳಿಸುರುಳಿಯಾಗಿ ಹೋಗುವಂತಿದ್ದರೆ, (ಮಧ್ಯೆ ನಡುಗಂಬ(newel)ವಿಲ್ಲದೆ) ಅದು 'ಶಂಖಮಂಡಲ ಸೋಪಾನ' ಮೆಟ್ಟಿಲುಗಳು ಬಳ್ಳಿಯಂತೆ (Spiral) ಸುತ್ತುವರಿದಿದ್ದು (ಮಧ್ಯೆ ನಡುಗಂಬವಿಲ್ಲದ್ದು) ಅದನ್ನು 'ವಲ್ಲೀಮಂಡಲ ಸೋಪಾನ ಎನ್ನಲಾಗಿದೆ. (ಮಯ ೨೧.೮೮-೯೦) ತ್ರಿಖಂಡ ಮತ್ತು 'ಅರ್ಧಗೋಮೂತ್ರ'ದ ಬಗ್ಗೆ ವಿವರವಿಲ್ಲ. ಈ ಬಗ್ಗೆ ಸಂಪಾದಕರು (ಪುಟ ೩೫೯) ಮೂರು ಹಂತಗಳಲ್ಲಿ ಮೇಲೇರುವ ಅಥವಾ ಎರಡು ಹಂತಗಳಿದ್ದು ಮಧ್ಯೆ ಫಲಕ (Landing) ಇರುವ ಸೋಪಾನವು 'ತ್ರಿಖಂಡಾಕಾರ ಸೋಪಾನ' ವಿರಬಹುದೆಂದೂ, ನಾಯಿಯ ಕಾಲಿನಂತೆ (dog-leg) ರುವ ಸೋಪಾನವು 'ಅರ್ಧ ಗೋಮೂತ್ರ (half-a-zigzag) ರೀತಿಯದೆಂದೂ ವಿವರಿಸಿದ್ದಾರೆ. ಹೀಗೆ, ಸಣ್ಣದಾದ, ಅಮುಖ್ಯ ಅಂಗಗಳೆಂದು ಪರಿಗಣಿಸಲ್ಪಟ್ಟ ಅಂಗಗಳ ಬಗ್ಗೆಯೂ ಗ್ರಂಥಗಳು ಸಾಕಷ್ಟು ವಿವರಣೆ ನೀಡಿರುವುದು ಇಲ್ಲಿ ಸ್ಪಷ್ಟವಾಗುತ್ತದೆ.

ಆಧಾರಸೂಚಿ (ಸಂಕ್ಷೇಪಗಳ ವಿವರಗಳೊಂದಿಗೆ)

೧. **ಮಾನಸಾರ ಸೀರೀಸ್**, ಸಂಪುಟ ೩, ಆಚಾರ್ಯ, ಪಿ.ಕೆ., (ಸಂ). ನವದೆಹಲಿ, '೧೯೭೯', (ಮಾನ).

೨. **ಮಯಮತ** (ಮಯ), *ಬ್ರೂನೋ ಡಗೆನ್ಸ್ (ಸಂ).* ಪಾಂಡಿಚೇರಿ, ೧೯೭೦.

೩. **ಅಜಿತಾಗಮ** (ಅಜಿತಾ) ಸಂಪುಟ ೧, ಭಟ್. ಎನ್.ಆರ್., (ಸಂ). ಪಾಂಡಚೇರಿ, ೧೯೬೪.

೪. **ರೌರವಾಗಮ** (ರೌರವ), ಭಟ್. ಎನ್.ಆರ್. (ಸಂ), ಪಾಂಡಿಚೇರಿ, ೧೯೭೨.

೫. **ಕಾಮಿಕಾಗಮ** (ಕಾಮಿಕಾ) ಪೂರ್ವಭಾಗ, ಸ್ವಾಮಿನಾಥ ಶಿವಾಚಾರ್ಯ. ಜೆ. (ಸಂ), ಮದ್ರಾಸ್, ೧೯೭೬.

೬. **ಪಾದ್ಮಸಂಹಿತೆ** (ಪಾದ್ಮ), ಜೋಸ್ಯರ್. ಜಿ.ಆರ್., (ಸಂ), ಮೈಸೂರು, ೧೯೬೯.

೭. **ಅಂಶುಮತ್ ಕಾಶ್ಯಪ್** (ಅಂಶು), **ಕಾರಣಾಗಮ** (ಕಾರಣಾ), **ಸುಪ್ರಭೇದಾಗಮ** (ಸೂಪ್ರ) **ದೀಪ್ತಾಗಮ** (ದೀಪ್ತಾ), ಮತ್ತು **ಈಶಾನ ಶಿವಗುರುದೇವ ಪದ್ಧತಿ,** (ಈಶಾನ) ಇವುಗಳ ವಿವರಗಳನ್ನು ಬೇರೆ ಗ್ರಂಥಗಳಿಂದ ಸಂಗ್ರಹಿಸಲಾಗಿದೆ.

೮. *Indian Temple Art & Architeclure*, Vol.I (II), S.K.R.

೯. Bruno Dagens., *Architecture in the Ajithagama & Rauravagama*, 1984.

೧೦. *Vastusilpakosha.*, pt 1. (Vastu), SKR.

೧೧. ಕೂ.ಸ. ಅಪರ್ಣ, **ದೇವಾಲಯ ವಾಸ್ತುಶಿಲ್ಪ ಪರಿಚಯ,** ೧೯೯೯.

ಡಾ. ವಿ. ಅನುರಾಧ*

ಕರ್ನಾಟಕದ ದೇವಾಲಯಗಳ ಸ್ತಂಭಗಳು

ಕರ್ನಾಟಕದ ದೇವಾಲಯಗಳು ಸಾಮಾನ್ಯವಾಗಿ ನಾಲ್ಕು ಅಥವಾ ಹೆಚ್ಚು ಸ್ತಂಬಗಳ ಆಧಾರದಿಂದ ನಿರ್ಮಿಸಲ್ಪಟ್ಟಿರುತ್ತವೆ. ಈ ಸ್ತಂಬಗಳು ಅಲಂಕೃತವಾದ ದಿಂಡುಗಳನ್ನು ಹೊಂದಿರುತ್ತವೆ. ಈ ಅಲಂಕರಣಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತವೆ. ಒಂದು ರಾಜವಂಶದಿಂದ ಮತ್ತೊಂದು ರಾಜವಂಶಕ್ಕೆ ಮಾರ್ಪಾಡಾಗುತ್ತವೆ. ಒಂದು ವಾಸ್ತುಶೈಲಿಯಿಂದ ಮತ್ತೊಂದು ವಾಸ್ತುಶೈಲಿಗೆ ಭಿನ್ನವಾಗುತ್ತಾ, ದೇವಾಲಯ ವಾಸ್ತುಶಿಲ್ಪದ ಕಾಲಸೂಚಿಗಳಾಗಿ ಸ್ತಂಬಗಳು ನಿಲ್ಲುತ್ತವೆ. ಹೀಗಾಗಿ ಸ್ತಂಭದ ದಂಡಿನ ಭಾಗದ ಆಕಾರ ಮತ್ತು ಅದರ ಅಲಂಕರಣಗಳು ದೇವಾಲಯದ ವಾಸ್ತುಶೈಲಿಯನ್ನು ನಿರ್ಧರಿಸುವ ಪ್ರಮುಖ ಅಂಗಗಳಾಗಿವೆ.

ವಾಸ್ತುಗ್ರಂಥಗಳಲ್ಲಿ **'ರುಚಕ ಸ್ತಂಭ'** ಎಂಬ ಸ್ತಂಭದ ನಿರೂಪಣೆ ಇದೆ. ಇದು ಕೇವಲ ಆಧಾರಕ್ಕಾಗಿ ರಚಿಸಲ್ಪಟ್ಟಿರುವ ಸ್ತಂಭವಾಗಿದೆ. ಸಂಸ್ಕೃತದ **'ರುಚಕ'** ಎಂಬ ಪದದ ಅರ್ಥ "ಅಂಗೀಕರಿಸಬಹುದಾದ" ಅಥವಾ "ಸ್ವೀಕರಿಸಬಹುದಾದ" ಎಂದು ಅರ್ಥ; ಎಂದರೆ ಈ ರೀತಿಯ ಕಂಬವು ಕೇವಲ ಆಚರಣಾತ್ಮಕ ಕಂಬವಾಗಿರುತ್ತದೆ. ಇದು ಸ್ವರೂಪ ಅಥವಾ ರಚನಾವಿನ್ಯಾಸಕ್ಕೆ ಯಾವುದೇ ಮಹತ್ವ ನೀಡದೆ, ಕೇವಲ ಕಾರ್ಯಚರಣೆಗೆ ಮಾತ್ರ ಸಂಬಂಧಪಟ್ಟ ಕಂಬವಾಗಿರುತ್ತದೆ. ಈ ಕಂಬವು ಕಾರ್ಯನಿರ್ವಹಕ ಭಾಗಗಳಾದ ಪೀಠ, ದಿಂಡು ಮತ್ತು ಚಾಚುಭಾಗವನ್ನು ಮಾತ್ರ ಹೊಂದಿರುತ್ತದೆ. ಬೇರೆಲ್ಲಾ ಅವಯುವಗಳು ಎಂದರೆ ಬೋಧಿಗೆ, ಫಲಕ ಮತ್ತು (Cushion) ಇವೆಲ್ಲ ಐಚ್ಛಿಕ ಭಾಗಗಳಾಗಿವೆ. ಕಂಬದ ದಿಂಡಿನ ಮೇಲಿನ ಅಲಂಕರಣಗಳು ಹಾಗೂ ಇತರ ಅವಯುವಗಳು ಎಂದರೆ ಬೋಧಿಗೆ, ಫಲಕ ಮತ್ತು Cushion ಬೇರೆ ಬೇರೆ ರೀತಿಯ ಕಂಬಗಳ ಸೃಷ್ಟಿ ಮತ್ತು ಬೆಳವಣಿಗೆಗೆ ಕಾರಣವಾಗಿವೆ.

ವಾಸ್ತುಗ್ರಂಥಗಳು ಕಂಬಗಳ ವಿವರಣಾತ್ಮಕ ನಿರೂಪಣೆಯನ್ನು ನೀಡುತ್ತಾ ವೈವಿಧ್ಯತೆ, ರಚನೆಯ ವಿಧಾನ ಮತ್ತು ಅಳತೆಗಳನ್ನು ಸೂಚಿಸುತ್ತದೆ.[1] ಸ್ಥಾಣು, ಸ್ಥೂಣಮ್, ಪಾದಮ್, ಜಂಘಾ, ಚರಣಮ್, ಅಂಘ್ರಿಕಾ, ತಲಿಪ, ಸ್ಥಂಬ, ಕಂಪ, ಅರಣಿ, ಭಾರಕಮ್, ಧಾರಣಂ, ಕುಂಭ ಮತ್ತು ಶಾಲಿ ಎಂಬ ಪದಗಳು ಸ್ತಂಬದ ಪರ್ಯಾಯ ಪದಗಳಾಗಿ ವಾಸ್ತು ಶಾಸ್ತ್ರ ಗ್ರಂಥಗಳು ಹೆಸರಿಸಿವೆ.[2] ಶಾಸ್ತ್ರಗ್ರಂಥಗಳು ವಿವಿಧ ರೀತಿಯ ಸ್ತಂಭಗಳ ವರ್ಣನೆಯನ್ನು ನೀಡುತ್ತವೆ. ಕೆಳಗಿನ ಪಟ್ಟಿಯಲ್ಲಿ ಶಾಸ್ತ್ರಗಳು ವರ್ಣಿಸಿರುವ, ಅದನ್ನು ಅನ್ವಯಿಸಿ ರಚನೆ ಮಾಡಿರುವ ಸ್ತಂಭಗಳ ವಿವರಣೆ ಇದೆ.

ಸಂಖ್ಯೆ – ಕಂಬದ ಹೆಸರು ಗ್ರಂಥ/ಪಟಲ/ಸ್ತೋತ್ರ ವಿವರಣೆ

ಕ್ರಮ ಸಂಖ್ಯೆ	ಸ್ತಂಭದ ಹೆಸರು	ಗ್ರಂಥ/ಅಧ್ಯಾಯ/ಶ್ಲೋಕ	ವಿವರಣೆ
೧	ಬ್ರಹ್ಮಕಾಂತ	ಮಯಮತ ೧೫-೧೩ ಮಾನಸರ ೧೫-೧೦ ಕಾಶ್ಯಪಶಿಲ್ಪ ೮-೧೦ ಶಿಲ್ಪರತ್ನ ೨೧-೫೮ ಈಶಾನಶಿವಗುರುದೇವ ಪದ್ಧತಿ ೩೧-೧೦೬-೧೧೨ ಕಾಮಿಕಾಗಾಮ ೫೩-೧೬	ನಾಲ್ಕು ಮಗ್ಗಲನ್ನು ಹೊಂದಿರುವ ದಿಂಡು
೨	ವಿಷ್ಣುಕಾಂತ	ಮಯಮತ ೧೫-೧೩ ಮಾನಸರ ೧೫-೧೦ ಕಾಶ್ಯಪಶಿಲ್ಪ ೮-೧೦ ಶಿಲ್ಪರತ್ನ ೨೧-೫೮	ಎಂಟು ಮಗ್ಗಲನ್ನು ಹೊಂದಿರುವ ದಿಂಡು

* ಅಯ್ಕೆ ಶ್ರೇಣಿ ಉಪನ್ಯಾಸಕಿ, ಮಹಾರಾಣಿ ಮಹಿಳಾ ಕಾಲೇಜು, ಬೆಂಗಳೂರು.

ಕ್ರಮ ಸಂಖ್ಯೆ	ಸ್ತಂಭದ ಹೆಸರು	ಗ್ರಂಥ/ಅಧ್ಯಾಯ/ಶ್ಲೋಕ	ವಿವರಣೆ
		ಈಶಾನಶಿವಗುರುದೇವ ಪದ್ಧತಿ ೩೧-೧೦ಬಿ ಕಾಮಿಕಾಗಮ ೫೩-೧೭ಎ	
೩	ರುದ್ರಕಾಂತ	ಮಯಮತ ೧೫-೧೫ ಮಾನಸರ ೧೫-೧೦ ಕಾಶ್ಯಪಶಿಲ್ಪ ೮-೧೫ ಶಿಲ್ಪರತ್ನ ೨೧-೬೦ಬಿ-೬೧ಎ ಈಶಾನಶಿವಗುರುದೇವ ಪದ್ಧತಿ ೩೧-೨೩ ಕಾಮಿಕಾಗಮ ೫೩-೨೦ಬಿ-೨೧ಎ	ಕೊಳವೆಯಾಕಾರ
೪	ಈಶಕಾಂತ	ಶಿಲ್ಪರತ್ನ ೨೧-೬೦ಎ ಈಶಾನಶಿವಗುರುದೇವ ಪದ್ಧತಿ ೩೧-೧೦ಬಿ-೧೧೩ ಕಾಮಿಕಾಗಮ ೫೩-೨೦ಎ	ಕೊಳವೆಯಾಕಾರ
೫	ಸೂರ್ಯಕಾಂತ/ ಭಾನುಕಾಂತ	ಕಾಶ್ಯಪಶಿಲ್ಪ ೮-೧೧ಬಿ ಶಿಲ್ಪರತ್ನ ೨೧-೫೯ಬಿ ಈಶಾನ ಶಿವಗುರುದೇವ ಪದ್ಧತಿ ೩೧-೨೨ ಕಾಮಿಕಾಗಮ ೫೩-೨೦ಬಿ-೧೮ಬಿ	ಹನ್ನೆರಡು ಮಗ್ಗಲನ್ನು ಹೊಂದಿರುವ ದಿಂಡು
೬	ಚಂದ್ರಕಾಂತ	ಕಾಶ್ಯಪಶಿಲ್ಪ ೮-೧೧ಬಿ ಶಿಲ್ಪರತ್ನ ೨೧-೫೯ಬಿ ಈಶಾನಶಿವಗುರುದೇವ ಪದ್ಧತಿ ೩೧-೨೨ ಕಾಮಿಕಾಗಮ ೫೩-೨೦ಬಿ-೧೮ಬಿ	ಹದಿನಾರು ಮಗ್ಗಲನ್ನು ಹೊಂದಿರುವ ದಿಂಡು
೭	ಸಿಂಹಕಾಂತ	ಶಿಲ್ಪರತ್ನ ೨೧-೬೨ಎ-೬೩ಬಿ	(ದಿಂಡಿನ ಭಾಗದಲ್ಲಿ ಸಿಂಹವಿದೆ)
೮	ಸಿಂಹಪಾದ	ಈಶಾನಶಿವಗುರುದೇವ ಪದ್ಧತಿ ೩೧-೨೫ ಕಾಮಿಕಾಗಮ ೫೩-೪೦	ಪಾದ ಭಾಗದಲ್ಲಿ ಸಿಂಹವಿದೆ
೯	ವ್ಯಾಳಪಾದ	ಕಾಶ್ಯಪಶಿಲ್ಪ ೮-೧೯ ಈಶಾನಶಿವಗುರುದೇವ ಪದ್ಧತಿ ೩೧-೨೫ ಕಾಮಿಕಾಗಮ ೫೩-೪೪	ಪಾದದಲ್ಲಿ ವ್ಯಾಳವಿದೆ
೧೦	ವ್ಯಾಳಕಾಂತ	ಶಿಲ್ಪರತ್ನ ೨೧-೬೨-೬೩	ದಿಂಡಿನ ಭಾಗದಲ್ಲಿ ವ್ಯಾಳವಿದೆ
೧೧	ಗಜಪಾದ/ಇಭಪಾದ	ಕಾಶ್ಯಪಶಿಲ್ಪ ೮-೧೯ ಶಿಲ್ಪರತ್ನ ೨೧-೬೨-೬೩ ಈಶಾನಶಿವಗುರುದೇವ ಪದ್ಧತಿ ೩೧-೨೫ ಕಾಮಿಕಾಗಮ ೫೩-೪೪	ಪಾದದಲ್ಲಿ ಆನೆಯಿದೆ
೧೨	ಭೂತಕಾಂತ / ಭೂತಪಾದ	ಶಿಲ್ಪರತ್ನ ೨೧-೬೨-೬೩ ಈಶಾನಶಿವಗುರುದೇವ ಪದ್ಧತಿ ೩೧-೨೫ ಕಾಮಿಕಾಗಮ ೫೩-೪೪	ಪಾದದಲ್ಲಿ ಭೂತಾಕಾರವಿದೆ

ಕ್ರಮ ಸಂಖ್ಯೆ	ಸ್ತಂಭದ ಹೆಸರು	ಗ್ರಂಥ/ಅಧ್ಯಾಯ/ಶ್ಲೋಕ	ವಿವರಣೆ
೧೩	ಶಿವಚ್ಛಂದ	ಕಾಶ್ಯಪಶಿಲ್ಪ ೮-೧೫-೧೬	ನಾಲ್ಕು ಎಂಟು ಮತ್ತು ಕೊಳವೆಯಾಕಾರದ ದಿಂಡು
೧೪	ರುದ್ರಭಂದ	ಮಯಮತ ೧೫-೧೭ಎ	ಮೇಲೆ ಹೇಳಿದ ರೀತಿಯದ್ದು
೧೫	ಸೌಮ್ಯಕಾಂತ	ಮಯಮತ ೧೫-೧೩-೧೬	ಹದಿನಾರು ಮುಖವುಳ್ಳದ್ದು
೧೬	ಸ್ಕಂದಕಾಂತ ಇಂದ್ರಕಾಂತ ಕೌಮಾರಮ್	ಮಾನಸರ ೧೫-೧೧ಬಿ ಕಾಶ್ಯಪಶಿಲ್ಪ ೮-೧೦ಬಿ ಶಿಲ್ಪರತ್ನ ೨೧-೫೯ಎ ಈಶಾನಶಿವಗುರುದೇವ ಪದ್ಧತಿ ೩೧-೨೧ ಕಾಮಿಕಾಗಮ ೫೩-೧೮ಎ	ಹದಿನಾರು ಮುಖವುಳ್ಳದ್ದು
೧೭	ಪೂರ್ವಾಶ್ರ	ಮಯಮತ ೧೫-೧೩-೧೬	
೧೮	ಶ್ರೀಖಂಡ	ಈಶಾನಶಿವಗುರುದೇವ ಪದ್ಧತಿ ೩೧-೩೦ಬಿ-೩೧ಎ	
೧೯	ಶ್ರೀಕಾಂತ	ಕಾಮಿಕಾಗಮ ೫೩-೨೭-೨೯ಎ	
೨೦	ಶ್ರೀಬಂಧ	ಶಿಲ್ಪರತ್ನ ೨೧-೬೮	
೨೧	ಪದ್ಮಪಾದುಕ	ಕಾಶ್ಯಪಶಿಲ್ಪ ೮-೧೭-೧೯ಎ	
೨೨	ಶಿವಕಾಂತ	ಮಾನಸಾರ ೧೫-೧೧ಬಿ	
೨೩	ಚಿತ್ರಖಂಡ	ಮಯಮತ ೧೫-೨೨ಬಿ-೨೬ಎ ಕಾಶ್ಯಪಶಿಲ್ಪ ೮-೨೩-೨೫ ಶಿಲ್ಪರತ್ನ ೨೧-೬೭	
೨೪	ಚಿತ್ರಕಾಂತ	ಮಾನಸಾರ ೧೫-೧೩-೧೫	
೨೫	ಕೋಷ್ಠಸ್ತಂಭ	ಮಾನಸಾರ ೧೫-೪೨-೪೯	
೨೬	ಕುಂಭಸ್ತಂಭ	ಮಾನಸಾರ ೧೫-೩೭-೪೨	
೨೭	ಶ್ರೀವಜ್ರ	ಮಯಮತ ೧೫-೨೬ಎ	
೨೮	ಪದ್ಮಕಾಂತ	ಮಾನಸರ ೧೫ ಕಾಶ್ಯಪಶಿಲ್ಪ ೮	
೨೯	ಶಂಡು ಪಾದ	ಮಯಮತ ೧೫-೨೦-೨೨ ಕಾಶ್ಯಪಶಿಲ್ಪ ೮-೨೦-೨೨ ಶಿಲ್ಪರತ್ನ ೨೧-೬೩-೬೪ಎ ಈಶಾನಶಿವಗುರುದೇವ ಪದ್ಧತಿ ೩೧-೧೬	
೩೦	ಬಂಡಿ ಪಾದ	ಮಯಮತ ೧೫-೨೦-೨೨ ಕಾಶ್ಯಪಶಿಲ್ಪ ೮-೨೦-೨೨ ಶಿಲ್ಪರತ್ನ ೨೧-೬೩-೬೪ಎ ಈಶಾನಶಿವಗುರುದೇವ ಪದ್ಧತಿ ೩೧-೧೬	

ಮೇಲಿನ ಪಟ್ಟಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಶಾಸ್ತ್ರಗ್ರಂಥಗಳು ಒಂದೇ ಹೆಸರನ್ನು ಬೇರೆ ಬೇರೆ ಕಂಬಗಳಿಗೆ ನೀಡಿರುವುದು ಮತ್ತು ಒಂದೇ ಶೈಲಿಯ ಕಂಬಗಳು ಬೇರೆ ಹೆಸರಿನಿಂದ ಕರೆಯಲ್ಪಟ್ಟಿರುವುದು ಅರಿವಾಗುತ್ತದೆ. ಇದು ಕಂಬಗಳನ್ನು ಸರಿಯಾಗಿ ಗುರುತಿಸಲು ಅಡ್ಡಿಯನ್ನುಂಟು ಮಾಡುತ್ತದೆ. ಈ ದಿಸೆಯಲ್ಲಿ ಶಾಸ್ತ್ರಗ್ರಂಥಗಳನ್ನು ಅನ್ವಯಿಸಿ ಕಂಬಗಳ ಅಧ್ಯಯನ ಮಾಡಲು ಕಿರುಪ್ರಯತ್ನವನ್ನು ನಡೆಸಲಾಗಿದೆ.

ಸಾಮಾನ್ಯವಾಗಿ ಎಲ್ಲಾ ವಾಸ್ತು ಗ್ರಂಥಗಳಲ್ಲೂ ಬ್ರಹ್ಮಕಾಂತ[೩], ವಿಷ್ಣುಕಾಂತ[೪], ರುದ್ರಕಾಂತ[೫] ಮತ್ತು ಚಿತ್ರಖಂಡ[೬] ಕಂಬಗಳ ವಿವರಣೆ ಇದೆ. ಚಿತ್ರಖಂಡ ಸ್ತಂಭ[೭]ವನ್ನು ಹೊರತುಪಡಿಸಿ ಬೇರೆಲ್ಲಾ ಕಂಬಗಳೂ ಮಗ್ಗಲು ಅಥವಾ ಪಾರ್ಶ್ವಗಳನ್ನು ಆಧರಿಸಿ ರಚಿಸಲ್ಪಟ್ಟಿವೆ. ಕಂಬಗಳ ರಚನೆಯಲ್ಲಿ ಪೀಠ, ದಿಂಡು, ಬೋದಿಗೆ, ಫಲಕ ಮತ್ತು ಚಾಚು ಭಾಗಗಳು ಇರುತ್ತವೆ. ಈ ಎಲ್ಲಾ ಭಾಗಗಳನ್ನು ಹೊಂದಿರುವ ಕಂಬಗಳು ಸಾವಯವ ಕಂಬಗಳೆಂದೂ, ಈ ಭಾಗಗಳು ಇಲ್ಲದ ಕಂಬಗಳು ನಿರವಯವ ಕಂಬಗಳೆಂದು ಪರಿಗಣಿಸಲ್ಪಡುತ್ತವೆ. ಮಯಮತವು ಪೂರ್ವಾಶ್ರ ಸ್ತಂಭ[೮] ಎಂಬ ಒಂದು ವಿಧದ ಕಂಬವನ್ನು ಹೆಸರಿಸಿ, ಈ ಕಂಬವು ಘನಾಕಾರದ ಕೆಳಭಾಗ/ಆಧಾರಭಾಗವನ್ನು ಹೊಂದಿದ್ದು, ಇದರ ದಿಂಡಿನ ಭಾಗವು ಎಂಟು ಪಾರ್ಶ್ವಗಳುಳ್ಳದ್ದು ಅಥವಾ ಹದಿನಾರು ಪಾರ್ಶ್ವಗಳುಳ್ಳದ್ದು ಅಥವಾ ವೃತ್ತಾಕಾರವಾಗಿ ರಚಿಸತಕ್ಕದ್ದು ಎಂದು ಹೇಳುತ್ತದೆ. ಮಯಮತವು ಸೌಮ್ಯಕಾಂತ[೯] ಸ್ತಂಭವು ಹದಿನಾರು ಮಗ್ಗಲುಗಳನ್ನು ಹೊಂದಿರಬೇಕೆಂದು ಹೇಳುತ್ತದೆ. ಬೇರೆಲ್ಲಾ ಗ್ರಂಥಗಳು ಇದೇ ಸ್ತಂಭವನ್ನು ಚಂದ್ರಕಾಂತ[೧೦] ಸ್ತಂಭವೆಂದು ಹೆಸರಿಸುತ್ತವೆ.

ವೃತ್ತಾಕಾರದ ದಿಂಡಿನ ಭಾಗವಿರುವ ಸ್ತಂಭವನ್ನು ಶಿಲ್ಪರತ್ನ[೧೧], ಈಶಾನಶಿಗುರುದೇವ ಪದ್ಧತಿ[೧೨] ಮತ್ತು ಕಾಮಿಕಾಗಮ[೧೩] ಈಶಕಾಂತವೆಂದು ಕರೆಯುತ್ತವೆ. ಮಯಮತವು ಇದನ್ನು ರುದ್ರಕಾಂತವೆಂದು ಹೆಸರಿಸಿದೆ.

ಹನ್ನೆರಡು ಮುಖಗಳುಳ್ಳ ಸ್ತಂಭವನ್ನು ಭಾನುಕಾಂತ ಎಂದು ಶಿಲ್ಪರತ್ನ[೧೪], ಈಶಾನಶಿವಗುರುದೇವ ಪದ್ಧತಿ[೧೫] ಹಾಗೂ ಕಾಮಿಕಾಗಮಗಳು[೧೬] ಹೆಸರಿಸಿವೆ. ಇದನ್ನು ಕಾಶ್ಯಪಶಿಲ್ಪವು[೧೭] ಸೂರ್ಯಕಾಂತ ಎಂದು ಹೆಸರಿಸಿದೆ. ಸ್ಕಂದ ಕಾಂತ ಸ್ತಂಭವು ಆರು ಮುಖಗಳನ್ನು ಹೊಂದಿರುತ್ತದೆ. ಎಲ್ಲಾ ಪ್ರಮುಖ ವಾಸ್ತುಗ್ರಂಥಗಳಲ್ಲೂ ಇದರ ಉಲ್ಲೇಖವಿದೆ. ಇದೇ ಕಂಬವನ್ನು ಕಾಮಿಕಾಗಮ[೧೮]ವು ಕುಮಾರಕಾಂತ ಎಂದು ಕರೆದಿದೆ. ಮಯಮತವು[೧೯] ಆರು ಮುಖಗಳುಳ್ಳ ಕಂಬವನ್ನು ಇಂದ್ರಕಾಂತವೆಂದೂ, ಕಾಶ್ಯಪಶಿಲ್ಪ[೨೦]ವು ಸ್ಕಂದಕಾಂತವೆಂದೂ ಹೆಸರಿಸಿದೆ.

ಮಾನಸಾರವು ಒಂದು ವಿಶೇಷವಾದ ಕಂಬದ ವರ್ಣನೆಯನ್ನು ನೀಡುತ್ತಾ, ಐದು ಮುಖಗಳುಳ್ಳ ಕಂಬವು ಶಿವಕಾಂತ[೨೧] ಕಂಬವೆಂದು ಹೆಸರಿಸುತ್ತದೆ.

ಬ್ರಹ್ಮಕಾಂತ ಕಂಬದ ಮಧ್ಯಭಾಗವು ಭದ್ರವನ್ನು ಹೊಂದಿದ್ದರೆ, ಅಥವಾ ಮಧ್ಯಭಾಗವು ಮುಂಚಾಚಿಕೊಂಡಿದ್ದರೆ, ಈ ರೀತಿಯ ಮುಂಚಾಚುವಿಕೆ, ಒಂದೇ ಸಮನೆ ಕುಂಭ ಮತ್ತು ಮಂಡಿಯವರೆಗೆ ಇದ್ದಲ್ಲಿ, ಈ ರೀತಿಯ ಕಂಬವನ್ನು ಭದ್ರಕಾಂತ ಕಂಬವೆಂದು ಶಿಲ್ಪರತ್ನ[೨೨], ಈಶಾನ ಶಿವಗುರುದೇವ ಪದ್ಧತಿ[೨೩] ಮತ್ತು ಮಯಮತ[೨೪]ಗಳು ವರ್ಣಿಸಿವೆ.

ಕೆಲವು ಕಂಬಗಳನ್ನು, ಶಾಸ್ತ್ರಗಂಥಗಳು ಅವುಗಳ ಮೂಲ/ಬುಡ ಅಥವಾ ಪಾದಭಾಗವನ್ನು ಗಮನಿಸಿ[೨೫] ಸಿಂಹಪಾದ, ವ್ಯಾಳಪಾದ, ಗಜಪಾದ ಮತ್ತು ಭೂತಪಾದ ಎಂದು ಹೆಸರಿಸಿವೆ.

೧ ಸಿಂಹಪಾದವು ಕುಳಿತಿರುವ ಸಿಂಹವನ್ನು ಕಂಬದ ಬುಡದಲ್ಲಿ ಹೊಂದಿದೆ.

೨ ವ್ಯಾಳಪಾದವು ವ್ಯಾಳವನ್ನು ಕಂಬದ ಮೂಲಭಾಗದಲ್ಲಿ ಹೊಂದಿದೆ.

೩ ಗಜಪಾದ ಅಥವಾ ಇಭಪಾದವು ಕಂಬದ ಮೂಲಭಾಗದಲ್ಲಿ ಗಜವನ್ನು ಹೊಂದಿದೆ.

೪ ಭೂತಪಾದವು ಕಂಬದ ಬುಡದಲ್ಲಿ ಬಾರವಾಹಕನಂತಿರುವ ಭೂತವನ್ನು ಹೊಂದಿದೆ.

ಹೆಚ್ಚಿನ ವಾಸ್ತುಗ್ರಂಥಗಳು ಎರಡು ವಿಶಿಷ್ಟ ರೀತಿಯ ಕಂಬಗಳು ವರ್ಣನೆಯನ್ನು ಅವುಗಳ ಅಲಂಕರಣಗಳನ್ನು ಆಧರಿಸಿ ನೀಡಿವೆ. ಅವು ಶುಂಡುಪಾದ ಮತ್ತು ಪಿಂಡಿಪಾದ ಸ್ತಂಭಗಳು. ಕೊಳವೆ ಆಕಾರದ ದಿಂಡಿನ ಭಾಗವನ್ನು ಹೊಂದಿದ್ದು, ಬೋದಿಗೆ ಮತ್ತು ಫಲಕಗಳನ್ನು ಹೊಂದಿ, ಆನೆಯ ಸೊಂಡಿಲನ್ನು ಹೋಲುವಂತೆ ಕಾಣುವ ಈ ಸ್ತಂಬವನ್ನು ಶುಂಡುಪಾದ[೨೬]ವೆಂದೂ, ಅದೇ ಕಂಬವು ಮುಕ್ತಾಗ್ರಾಸಗಳನ್ನು ಹೊಂದಿ ಅಲಂಕೃತವಾಗಿದ್ದರೆ ಪಿಂಡಿಪಾದ[೨೭]ವೆಂದೂ ಕರೆಯಲ್ಪಟ್ಟಿದೆ.

ಹೆಚ್ಚಿನ ಶಾಸ್ತ್ರಗ್ರಂಥಗಳು ಚಿತ್ರಖಂಡ ಸ್ತಂಭದ ವರ್ಣನೆಯನ್ನು ನೀಡುತ್ತವೆ. ಹೆಸರೇ ಹೇಳುವಂತೆ, ಚಿತ್ರಖಂಡ ಕಂಬವು ಬೇರೆ, ಬೇರೆ ಬಗೆಯಲ್ಲಿ ಕಂಡರಿಸಲ್ಪಡುವ ಕಂಬವಾಗಿದೆ. ಮಾನಸಾರವು ಚಿತ್ರಖಂಡ ಸ್ತಂಭದ ವರ್ಣನೆಯನ್ನು[೨೮] ನೀಡುತ್ತಾ, ಈ ಸ್ತಂಭವು ಮೂರು ಘನಾಕೃತಿಗಳನ್ನು ಹೊಂದಿದ್ದು, ಮಧ್ಯಾಂತರವು ಎಂಟು ಮುಖದ ದಿಂಡುಗಳಿಂದ ರಚನೆಯಾಗಿರಬೇಕು ಎನ್ನುತ್ತದೆ. ಮಯಮತವು ಚಿತ್ರಖಂಡವು ಮೂರು ಘನಾಕೃತಿಗಳನ್ನು

ಹೊಂದಿದ್ದು, ಮೇಲಿನ ಮತ್ತು ಮಧ್ಯದ ಆಕೃತಿಯ ನಡುವೆ ಎಂಟು ವರ್ಷಗಳ ದಿಂಡಿನ ಭಾಗ, ಮಧ್ಯದ ಹಾಗೂ ಕೆಳಗಿನ ಘನಾಕೃತಿಯ ನಡುವೆ ಹದಿನಾರು ಮುಖಗಳ ದಿಂಡಿನ ಭಾಗವನ್ನು ಹೊಂದಿದ್ದು, ಈ ಭಾಗಗಳು ದಳಪದ್ಮಗಳಿಂದ ಅಲಂಕೃತವಾಗಿರಬೇಕೆಂದು ಸೂಚಿಸುತ್ತದೆ. ಶಿಲ್ಪರತ್ನವು ಚಿತ್ರಖಂಡ ಸ್ತಂಭವು ಮೂಲಭಾಗದಲ್ಲಿ ದಳಪದ್ಮಗಳಿಂದ ಅಲಂಕೃತವಾಗಿರಬೇಕೆಂದು ವರ್ಣಿಸುತ್ತವೆ.

ಮಯಮತವು ಚಿತ್ರಖಂಡದ ಮಧ್ಯಭಾಗವಾದ ಪಟ್ಟಬಂಧವು ಎಂಟು ಮುಖಗಳನ್ನು ಹೊಂದಿದ್ದಲ್ಲಿ ಅದನ್ನು ಶ್ರೀಖಂಡ ಸ್ತಂಬ[೩೦]ವೆಂದೂ ಪಟ್ಟಬಂಧವು ಹದಿನಾರು ಮುಖಗಳನ್ನು ಹೊಂದಿದ್ದಲ್ಲಿ ಅದನ್ನು ಶ್ರೀವಜ್ರವೆಂದೂ[೩೧] ಹೆಸರಿಸುತ್ತದೆ. ಬೆಂಗಳೂರು ಮತ್ತು ಕೋಲಾರ ಜಿಲ್ಲೆಯ, ಚೋಳ ಮತ್ತು ವಿಜಯನಗರ ಕಾಲದ ದೇವಾಲಯಗಳಲ್ಲಿ ಈ ರೀತಿಯ ಕಂಬಗಳನ್ನು ಕಾಣಬಹುದು.[೩೨]

ಮಾನಸಾರವು ಐದು ವಿಶೇಷ ರೀತಿಯ ಸ್ತಂಭಗಳನ್ನು ವರ್ಣಿಸುತ್ತದೆ. ಅವು ಕುಂಭಸ್ತಂಭ,[೩೩] ಕೋಷ್ಠಸ್ತಂಭ[೩೪], ಪದ್ಮಕಾಂತ[೩೫], ಚಿತ್ರಸ್ತಂಬ[೩೬] ಮತ್ತು ಪಾಲಿಕಾಸ್ತಂಬ[೩೭] ಕುಂಭ ಸ್ತಂಭವು ಕಂಬದ ಮೂಲಭಾಗ ಮತ್ತು ದಿಂಡಿನಭಾಗದ ನಡುವೆ ಕುಂಭವನ್ನು ಹೊಂದಿರಬೇಕು. ಕೋಷ್ಠ ಸ್ತಂಭ[೩೪]ವು ಕಂಬದ ಮೂಲಭಾಗದಿಂದ ಬೋದಿಗೆಯವರೆಗೆ **'ಕೋಷ್ಠಕ'** ಗಳನ್ನು ಹೊಂದಿರಬೇಕು. ಈ ರೀತಿ ಕೋಷ್ಠಕಗಳನ್ನು ಹೊಂದಿರುವ ಸ್ತಂಭಗಳು ಚೋಳ ಮತ್ತು ವಿಜಯನಗರ ಕಾಲದ ದೇವಾಲಯಗಳಲ್ಲಿ ಕಾಣಬಹುದು[೩೮] ಸಂಸ್ಕೃತದಲ್ಲಿ 'ಪಾಲಿ'[೩೯] ಎಂದರೆ 'ಕತ್ತಿಯ ಅಲಗು' ಎಂದರ್ಥ. ಈ ರೀತಿಯ ಸ್ತಂಭಗಳು ಕತ್ತಿಯ ಅಲಗನ್ನು ಹೋಲುವಂತಹ ಚೂಪಾದ ಭಾಗಗಳನ್ನು ಸುತ್ತಲೂ ಹೊಂದಿರುವುದರಿಂದ ಇದನ್ನು ಪಾಲಿಕಾಸ್ತಂಭ ಎಂದು ಕರೆದಿವೆ. ಕಲ್ಯಾಣಿ ಚಾಲುಕ್ಯರ ಮತ್ತು ಹೊಯ್ಸಳರ ಕಾಲದ ದೇವಾಲಯಗಳಲ್ಲಿ ಈ ರೀತಿಯ ಸ್ತಂಭಗಳು ದೊರೆತಿವೆ.

ಶಿಲ್ಪರತ್ನವು ಪದ್ಮಾಸನ[೪೦], 'ವಜ್ರಕಾಂತ[೪೧], ರತ್ನಸ್ತಂಭ[೪೨], ಶ್ರೀಬಂಧ, ಶ್ರೀವತ್ಸ, ಶ್ರೀಕರ, ಪ್ರಿಯದರ್ಶನ ಮತ್ತು ಸೌಮುಖ್ಯ ಎಂಬ ಕಂಬಗಳನ್ನು ವರ್ಣಿಸುತ್ತವೆ. ಕೌಶ್ಯಪಶಿಲ್ಪವು 'ಶುಭಂಕರಿ' ಎಂಬ ಹೆಸರಿನ ಸ್ತಂಭವನ್ನು ವರ್ಣಿಸುತ್ತದೆ. ಈ ರೀತಿಯ ಸ್ತಂಭವು ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡಿರುವ ಕೆಲವು ದೇವಾಲಯಗಳಲ್ಲಿ ಕಾಣಬಹುದು.

ಬೆಂಗಳೂರು ಮತ್ತು ಕೋಲಾರ ಜಿಲ್ಲೆಯ ದೇವಾಲಯಗಳಲ್ಲಿ ಲಭ್ಯವಿರುವ ಕಂಬಗಳನ್ನು ಅಧ್ಯಯನ ಮಾಡುವಾಗ, ಅವುಗಳ ಬೇರೆ, ಬೇರೆ ಭಾಗಗಳು "ಬುಡದಿಂದ ಮೇಲ್ಭಾಗದವರೆಗೂ" ಈ ರೀತಿಯಾಗಿ ಯೋಜಿಸಲಾಗಿವೆ.

೧. ಅಧಿಷ್ಠಾನ/ಪೀಠ, ೨. ದಂಡ, ೩. ಕುಂಭ

೪. ಮಂಡಿ, ೫. ಫಲಕ, ೬. ಪೋತಿಕ

ಪೀಠ : ಕಂಬದ ತಳಭಾಗವನ್ನು ಪೀಠಭಾಗ ಎಂದು ಕರೆಯಲಾಗಿದೆ. ಇದಕ್ಕೆ ಮೂರು ಪ್ರಮುಖ ಕಾರಣಗಳಿವೆ.

೧. ಪೀಠ ಭಾಗವು ಕಂಬಕ್ಕೆ ಭದ್ರವಾದ ಬುನಾದಿಯನ್ನು ನೀಡುತ್ತದೆ.

೨. ಇದು ಕಂಬಕ್ಕೆ ಅಗತ್ಯವಾದ ಎತ್ತರವನ್ನು ನೀಡುತ್ತದೆ.

೩. ಇದು ಕಂಬದ ಸೌಂದರ್ಯವನ್ನು ಹೆಚ್ಚಿಸುತ್ತದೆ.

ಸಾಮಾನ್ಯವಾಗಿ ಕಂಬಗಳ ಮೂಲ ಭಾಗವು ಚೌಕವಾಗಿರುತ್ತದೆ. ಗಂಗ ಮತ್ತು ನೊಳಂಬರ ಕಾಲದ ಕಂಬಗಳ ಪೀಠ ಭಾಗವು ಮಡಿಕೆಗಳಿಂದ[೪೩] (Foldings) ಅಲಂಕೃತವಾಗಿರುತ್ತವೆ. ಹಲವು ಬಾರಿ ಪೀಠಭಾಗವು ಕಪೋತಬಂಧ ಅಧಿಷ್ಠಾನದಂತೆಯೂ ರಚನೆಯಾಗಿರುತ್ತದೆ. ಕಪೋತ ಭಾಗವು ನಾಸಿಗಳಿಂದ, ಪದ್ಮ[೪೪] ದಳಗಳಿಂದ ಅಲಂಕೃತವಾಗಿರುತ್ತದೆ. ಹೊಯ್ಸಳರ ಕಾಲದಲ್ಲಿ ಪೀಠ ಭಾಗದಲ್ಲಿ ಒಂದು ಕೋಷ್ಠದ ರಚನೆಯೂ ಪ್ರಾರಂಭವಾಗುತ್ತದೆ. ಈ ಕೋಷ್ಠ ಕೆಲವೊಮ್ಮೆ ದೇವತಾಮೂರ್ತಿಗಳ ಆಕೃತಿಗಳನ್ನೂ ಹೊಂದಿರುತ್ತವೆ. ಪೀಠ ಭಾಗವು, ಕಾಲಾನಂತರದಲ್ಲಿ ಹೆಚ್ಚು ಅಲಂಕರಣಗಳನ್ನು ಹೊಂದಿ ಬದಲಾಗವುದು ಕಂಡುಬರುತ್ತದೆ. ಹದಿಮೂರನೇ ಶತಮಾನದ ನಂತರ ಪೀಠಭಾಗವು ವಿವಿಧ ರೀತಿಯ ಅಧಿಷ್ಠಾನ ಮಾದರಿಗಳನ್ನು ಹೋಲುವಂತೆ ರಚಿಸಲ್ಪಟ್ಟಿವೆ. ಸಾಮಾನ್ಯವಾಗಿ ಕಪೋತಬಂಧ ಅಧಿಷ್ಠಾನ,[೪೫] ಮಂಚಬಂಧ ಅಧಿಷ್ಠಾನ,[೪೬] ವೇದಿಭದ್ರ ಅಧಿಷ್ಠಾನ ರೀತಿಯು ಅಲಂಕರಣಗಳು ಕಂಡುಬರುತ್ತವೆ. ಈ ಪೀಠ ಭಾಗಗಳಲ್ಲಿ ಕಪೋತವಿದ್ದಲ್ಲಿ,[೪೮] ಸಿಂಹಗಳು ಇರುವುದಿಲ್ಲ ಬದಲಾಗಿ ಪಟ್ಟಿಕೆಯಲ್ಲಿ ಸಿಂಹಗಳು ಕಂಡುಬರುತ್ತವೆ. ಕಪೋತ ಮತ್ತು ನಾಸಿಗಳೂ ಕರ್ನಾಟಕದ ವಾಸ್ತುಶೈಲಿಯಲ್ಲೂ, ಪಟ್ಟಿಕಾ ಮತ್ತು ಸಿಂಹಗಳು ತಮಿಳು ವಾಸ್ತುಶೈಲಿಯಲ್ಲೂ ಕಂಡುಬರುತ್ತವೆ. ವಿಜಯನಗರದ ಕಾಲದ ದೇವಾಲಯದ ಸ್ತಂಭಗಳಲ್ಲಿ ಪೀಠಭಾಗವು ಪಟ್ಟಿಕಾ ಮತ್ತು ಕಪೋತಗಳನ್ನು ಹೊಂದಿರುತ್ತವೆ[೫೦]. ವಿಜಯನಗರ ಕಾಲದಲ್ಲಿ ಎತ್ತರವಾದ ಸ್ತಂಭಗಳು ನಿರ್ಮಾಣವಾದ್ದರಿಂದ, ಅದಕ್ಕೆ ಬೇರೆ ಪೀಠಭಾಗವನ್ನು ರಚಿಸುವ ಅಗತ್ಯವಿರಲಿಲ್ಲ[೫೧]. ಬದಲಾಗಿ ಪೀಠದ ಅಲಂಕರಣವನ್ನು ಸ್ತಂಭದ ತಳಭಾಗದಲ್ಲೇ ರಚಿಸಲಾಗುತ್ತಿತ್ತು. ಕಲ್ಯಾಣಮಂಟಪದಲ್ಲಿರುವ ಸ್ತಂಭದ ಪೀಠಗಳು ಶ್ರೀಬಂಧ ಅಧಿಷ್ಠಾನ[೫೨] ರೀತಿಯಲ್ಲಿ ರಚನೆಯಾಗಿವೆ. ಈ ರೀತಿಯ ಕಂಬಗಳು ಕಲ್ಯಾಣ ಮಂಟಪದ ಸೊಗಸನ್ನು ಹೆಚ್ಚಿಸಲಿಕ್ಕಾಗಿ ರಚನೆಯಾಗಿವೆ. ಹೀಗಾಗಿ ವಾಸ್ತು ರಚನೆಗಳು[೫೩] ಭಾರವಾಹಕರು,[೫೪] ದೇವತಾಮೂರ್ತಿಗಳು,[೫೫] ಹಲವು ಭಂಗಿಗಳಲ್ಲಿರುವ ಸ್ತ್ರೀಯರ[೫೬] ಹಾವ-ಭಾವಗಳು,

ಸಸ್ಯರಾಶಿ[೫೭], ಪ್ರಾಣಿಪಕ್ಷಿಗಳ[೫೮] ಸಮೂಹ ಹತ್ತು ಹಲವು ರೀತಿಯ ಅಲಂಕರಣಗಳು ಕಂಬಗಳಲ್ಲಿ ವ್ಯಕ್ತವಾಗುತ್ತವೆ.

ದಿಂಡಿನ ಭಾಗ : ಕಂಬದ ದಿಂಡಿನ ಭಾಗವು ಯಾವಾಗಲೂ ಏಕಶಿಲೆಯಿಂದ ರಚಿಸಲ್ಪಟ್ಟಿರುತ್ತದೆ. ಎರಡು ಅಥವಾ ಮೂರು ಶಿಲೆಗಳಿಂದ ಅಥವಾ ಬೇರೆ, ಬೇರೆ ಶಿಲೆಗಳ ಜೋಡಣೆಯಿಂದ ನಿರ್ಮಿತವಾಗಿರುವ ಕಂಬಗಳು ಕಂಡುಬಂದಿಲ್ಲ. ದಿಂಡಿನ ಭಾಗವು ಕಂಬದ ಪೀಠದಿಂದ, ಬೋದಿಗೆಯವರೆಗೂ ಇರುತ್ತದೆ. 'ಕೆಲವೊಮ್ಮೆ ಅಪರೂಪವಾಗಿ ಸ್ತಂಭದ ಪೀಠಭಾಗದ ಮೇಲೆ ಕುಳಿತಿರುವ ಸಿಂಹಗಳನ್ನು ರಚಿಸಲಾಗಿದೆ. ಈ ರೀತಿಯ ಸ್ತಂಭಗಳು ದೇವನಹಳ್ಳಿಯ ಗಂಗಾವರ[೫೯]ದಲ್ಲಿ ಮತ್ತು ಚೆನ್ನಪಟ್ಟಣದ ಕೂಡ್ಲೂರಿ[೬೦]ನಲ್ಲಿ ಲಭ್ಯವಿದೆ. ಇವು ಪಲ್ಲವರ ಕಾಲದ ಸಿಂಹಕಾಂತ ಕಂಬಗಳನ್ನು ನೆನಪಿಸುತ್ತವೆ.

ಸ್ತಂಭಗಳ ದಿಂಡಿನ ಭಾಗವು ದೇವಾಲಯದ ಕಾಲ, ಶೈಲಿ ಮತ್ತು ರಾಜವಂಶಗಳನ್ನು ಪರಿಚಯಿಸುತ್ತದೆ. ಕಂಬದ ಈ ಭಾಗವು ಅತ್ಯಾಕರ್ಷಕವಾಗಿದ್ದು ವರ್ಧಕಿಯ ಪರಿಣಿತಿ ಮತ್ತು ಅಭಿವ್ಯಕ್ತಿಯನ್ನು ತೋರಿಸುತ್ತದೆ. ಸಾಮಾನ್ಯವಾಗಿ ದಿಂಡಿನ ಭಾಗದ ಅಲಂಕರಣಗಳನ್ನು ಗಮನಿಸಿ ಕಂಬಗಳನ್ನು ನೊಳಂಬ ಶೈಲಿ, ಪಲ್ಲವ ಶೈಲಿ, ಚೋಳ ಶೈಲಿ, ಹೊಯ್ಸಳ ಶೈಲಿ, ವಿಜಯನಗರದ ಶೈಲಿ ಎಂದು ಗುರುತಿಸಲಾಗುವುದು. ಕೆಲವೊಮ್ಮೆ ಅಪರೂಪವಾಗಿ ಮಿಶ್ರ ಶೈಲಿಗಳೂ ಲಭ್ಯವಾಗುತ್ತವೆ. ಸ್ತಂಭದ ಗಾತ್ರ ಮತ್ತು ಎತ್ತರವು ದೇವಾಲಯದ ಗಾತ್ರ ಮತ್ತು ಎತ್ತರಕ್ಕೆ ಅನುಗುಣವಾಗಿರುತ್ತದೆ. ಬೆಂಗಳೂರು ಮತ್ತು ಕೋಲಾರದಲ್ಲಿ ಗಂಗ, ನೊಳಂಬರ ಕಾಲದ ಸ್ತಂಭಗಳು ಮೊದಲಿಗೆ ದೊರಕುತ್ತವೆ. ಗಂಗರ ಕಾಲದ ಸ್ತಂಭಗಳು ಬೇಗೂರು, ಮಣ್ಣೆಯಲ್ಲೂ, ನೊಳಂಬರ ಕಾಲದ ಸ್ತಂಭಗಳು ನಂದಿ ಮತ್ತು ಆವನಿಯಲ್ಲೂ ಲಭ್ಯವಾಗಿವೆ. ಇಲ್ಲಿನ ಸ್ತಂಭಗಳು ಹೇಮಾವತಿಯ ಸ್ತಂಭಗಳಿಗಿಂತ ಸ್ವಲ್ಪ ಭಿನ್ನವಾಗಿವೆ. ಆವನಿಯ ದೇವಾಲಯ ಸಂಕೀರ್ಣದಲ್ಲಿನ ನೊಳಂಬ ದೇವಾಲಯಗಳು ಹತ್ತನೆಯ ಶತಮಾನದ್ದಾಗಿದ್ದು ಅಲ್ಲಿನ ಸ್ತಂಭಗಳ ದಿಂಡಿನ ಭಾಗವು ಅಲಂಕರಣಗಳನ್ನು ಹೊಂದಿವೆ.

ಹೊಯ್ಸಳರ ಕಾಲದ ಸ್ತಂಭಗಳು ಲೇತ್‌ನಿಂದ/ಯಂತ್ರಗಳಿಂದ ತಯಾರಿಸಲ್ಪಟ್ಟ ಸ್ತಂಭಗಳು ಎಂಬುದಾಗಿ ಹೇಳಲಾಗಿದೆ[೬೦]. ಇದು ಯಾವ ರೀತಿಯದ್ದು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಆ ಕಂಬಗಳ ಮೇಲಿನ ಚೂಪಾದ ಮತ್ತು ಸ್ಪಷ್ಟವಾದ ಅಲಂಕರಣಗಳನ್ನು ಗಮನಿಸಿ ಕೆಲವು ವಿದ್ವಾಂಸರು ಈ ರೀತಿಯ ಅಭಿಪ್ರಾಯವನ್ನು ಮಂಡಿಸಿದ್ದಾರೆ. ಈ ಹೊಯ್ಸಳ ಶೈಲಿಯ ಸ್ತಂಭಗಳು ಮತ್ತು ಆ ರೀತಿಯ ನಯವಾದ ಕೆತ್ತನೆಯನ್ನು ಉಳ್ಳ ಸ್ತಂಭಗಳು ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲೂ ಲಭ್ಯವಿದೆ.

ಹದಿಮೂರನೇ ಶತಮಾನದ ಸ್ತಂಭಗಳು ಹೆಚ್ಚು ಎತ್ತರವೂ, ಗಾತ್ರವುಳ್ಳ ಸ್ತಂಭಗಳಾಗಿದ್ದು, ಇವು ಸುಂದರ ಶಿಲ್ಪಗಳನ್ನು ಹೊಂದಿದ್ದು, ನಿರ್ದಿಷ್ಟ ರಾಜವಂಶವನ್ನು ಮತ್ತು ಶೈಲಿಯನ್ನು ನಿರೂಪಿಸುತ್ತವೆ. ಸಾಮಾನ್ಯವಾಗಿ ವಿಜಯನಗರದ ಸ್ತಂಬಗಳು ಯಾಳಿಗಳನ್ನು ಹೊಂದಿದ್ದು ಸಿಂಹಗಳು, ಹುಲಿಗಳು, ಕುದುರೆಗಳು ಮತ್ತು ವ್ಯಾಳಗಳು ದಿಂಡಿನ ಭಾಗವನ್ನು ಅಲಂಕರಿಸಿರುತ್ತವೆ. ಕೆಲವೊಮ್ಮೆ ಈ ಯಾಳಿಯ ಅಲಂಕರಣಗಳು ಎರಡು ಹಂತಗಳಲ್ಲೂ[೬೧] ಇರುತ್ತವೆ. ಇನ್ನು ಕೆಲವೊಮ್ಮೆ ಎರಡು ಭಾಗಗಳಲ್ಲಿ[೬೨], ಎರಡು ಮಗ್ಗುಲುಗಳಲ್ಲಿ, ಅಥವಾ ನಾಲ್ಕು[೬೩] ಮಗ್ಗಲುಗಳಲ್ಲಿ ಇರುತ್ತವೆ. ಈ ಸ್ತಂಬಗಳ ಮೇಲಿನ ಅಲಂಕರಣದ ಕೆತ್ತನೆಗಳೂ ಕೂಡ ಧಾರ್ಮಿಕ, ಸಸ್ಯರಾಶಿಯನ್ನು, ಪ್ರಾಣಿವರ್ಗವನ್ನು ಅಥವಾ ಸಾಮಾನ್ಯ ವಿಷಯಗಳನ್ನು ಉಳ್ಳದ್ದಾಗಿರುತ್ತವೆ.

ಉಪಸ್ತಂಬಗಳನ್ನು ಹೊಂದಿರುವ ಸ್ತಂಬಗಳು : ಸಾಮಾನ್ಯವಾಗಿ ವಿಜಯನಗರದ ಮತ್ತು ನಂತರದ ಕಾಲದ ದೇವಾಲಯಗಳಲ್ಲಿ ಉಪಸ್ತಂಭಗಳನ್ನು ಹೊಂದಿರುವ ಸ್ತಂಬಗಳು ಲಭ್ಯವಾಗಿವೆ. ವಿಶ್ವಕರ್ಮ ವಾಸ್ತುಶಾಸ್ತ್ರವು ಈ ರೀತಿಯ ಸ್ತಂಬಗಳ ವಿವರಣೆ ನೀಡುತ್ತದೆ. ಮೂಲಸ್ತಂಬದ ಪ್ರತಿರೂಪದಂತಿರುವ ಮತ್ತು ಎಲ್ಲಾ ಅವಯವಗಳನ್ನೂ ಹೊಂದಿರುವ ಉಪಸ್ತಂಭಗಳು ಕಂಡುಬರುತ್ತವೆ. ಈ ಉಪಸ್ತಂಬಗಳ ಸಂಖ್ಯೆಗೆ ಅನುಗುಣವಾಗಿ ಅವುಗಳನ್ನು ವಿವಿಧ ರೀತಿಯ ಸ್ತಂಭಗಳೆಂದು ಹೆಸರಿಸಲಾಗಿದೆ.

ಸಂಖ್ಯೆ	ಉಪಸ್ತಂಭದ ಸಂಖ್ಯೆ	ಸ್ತಂಭದ ಹೆಸರು
೧.	ಒಂದು ಉಪಸ್ತಂಭವನ್ನು ಹೊಂದಿರುವ ಸ್ತಂಭ	ಸುಪ್ರತೀಕಾಂತ
೨.	ಎರಡು ಉಪಸ್ತಂಭವನ್ನು ಹೊಂದಿರುವ ಸ್ತಂಭ	ಸೂರ್ಯಕಾಂತ
೩.	ನಾಲ್ಕು ಉಪಸ್ತಂಭವನ್ನು ನಾಲ್ಕು ಮಗ್ಗಲುಗಳಲ್ಲಿ ಹೊಂದಿರುವ ಸ್ತಂಭ	ಬ್ರಾಹ್ಮಣಕಾಂತ
೪.	ಎರಡು ಉಪಸ್ತಂಭಗಳನ್ನು ಮೂಲ ಸ್ತಂಬದ ಇಬ್ಬದಿಗಳಲ್ಲಿ ಹೊಂದಿರುವ ಸ್ತಂಭ	ಕೈಲಾಸಕಾಂತ
೫.	ಎರಡು ಉಪಸ್ತಂಭಗಳನ್ನು ನಾಲ್ಕು ಬದಿಗಳಲ್ಲಿ ಹೊಂದಿರುವ ಸ್ತಂಭ	ಮೇರುಕಾಂತ
೬.	ಎರಡು, ಅಥವಾ ನಾಲ್ಕು ಸ್ತಂಭಗಳದ್ದು ಮೂಲ ಸ್ತಂಭ ಇಲ್ಲದಿದ್ದಲ್ಲಿ.	ನಂದೀಶಕಾಂತ

ಮಾನಸಾರವು ನಾಲ್ಕು ಬಗೆಯ ಉಪಸ್ತಂಭಗಳುಳ್ಳ ವಿವರಣೆ ನೀಡುತ್ತದೆ. ಅವು

ಸಂಖ್ಯೆ	ಉಪಸ್ತಂಭದ ಸಂಖ್ಯೆ	ಸ್ತಂಭದ ಹೆಸರು
೧.	ನಾಲ್ಕು ಉಪಸ್ತಂಭಗಳಿದಲ್ಲಿ	ಬ್ರಹ್ಮಕಾಂತ
೨.	ಐದು ಉಪಸ್ತಂಭಗಳಿದ್ದಲ್ಲಿ	ಶಿವಕಾಂತ
೩.	ಆರು ಉಪಸ್ತಂಭಗಳಿದ್ದಲ್ಲಿ	ಸ್ಕಂದಕಾಂತ
೪.	ಎಂಟು ಉಪಸ್ತಂಭಗಳಿದ್ದಲ್ಲಿ	ವಿಷ್ಣುಕಾಂತ

ಬೋದಿಗೆ : ದಿಂಡಿನ ಮೇಲ್ಭಾಗವು ಬೋದಿಗೆ ಎಂದು ಕರೆಯಲ್ಪಡುತ್ತದೆ. ಬೋದಿಗೆಗಳಲ್ಲಿ ಹಲವು ವಿಧಗಳಿವೆ. ಬೋದಿಗೆಯೂ ಮೂರು ಮುಖ್ಯ ಭಾಗಗಳನ್ನು ಹೊಂದಿರುತ್ತದೆ. ಮೊದಲ ಭಾಗವು ಕುಂಭಭಾಗ, ಇದು ಚಕ್ರಾಕಾರವಾಗಿದ್ದು, ನಯವಾಗಿ ರಚಿಸಲ್ಪಟ್ಟಿರುತ್ತದೆ. ಕೆಲವೊಮ್ಮೆ ಹೂವು-ಬಳ್ಳಿಗಳ ಅಲಂಕರಣವನ್ನೂ ಹೊಂದಿರುತ್ತದೆ[೬೩]. ಇದನ್ನು ಕುಷನ್ ಕ್ಯಾಪಿಟಲ್ ಎಂದು ಇಂಗ್ಲಿಷಿನಲ್ಲಿ ಕರೆಯುತ್ತಾರೆ. ದಿಂಡಿನ ಭಾಗದ ಅಲಂಕರಣಕ್ಕೆ ಅನುಗುಣವಾಗಿ ಕಂಭಭಾಗವನ್ನು ರಚಿಸಲಾಗುವುದು. ದಿಂಡಿನ ಭಾಗವು ನಾಲ್ಕು ಮಗ್ಗಲುಗಳನ್ನು ಹೊಂದಿದ್ದಲ್ಲಿ ಕುಂಭವೂ ನಾಲ್ಕು ಮಗ್ಗಲುಗಳು ಉಳ್ಳಂತೆ ರಚನೆಯಾಗಿರುತ್ತದೆ[೬೪]. ದಿಂಡಿನ ಭಾಗವು ಎಂಟು ಮಗ್ಗಲುಗಳನ್ನು ಹೊಂದಿದ್ದರೆ ಕುಂಭವೂ ಅದೇ ರೀತಿ ರಚಿಸಲ್ಪಟ್ಟಿರುತ್ತದೆ[೬೫]. ಕುಂಭದ ಮೇಲಿನ ಭಾಗವೇ ಫಲಕ, ಈ ವಾಸ್ತುರಚನೆಯ ತಮಿಳುನಾಡಿನ ಸ್ತಂಬಗಳಲ್ಲಿ ಹೆಚ್ಚಾಗಿ ಬಳಕೆಯಲ್ಲಿದ್ದು ನಂತರ ಹಂತ ಹಂತವಾಗಿ ದಕ್ಷಿಣ ಕರ್ನಾಟಕವನ್ನೂ ಪ್ರವೇಶಿಸಿತು. ಬಾದಾಮಿ ಚಾಲುಕ್ಯರ ಸ್ತಂಬಗಳಲ್ಲಿ ಫಲಕವು ಇರುವುದಿಲ್ಲ. ಆದರೆ ಒಂಭತ್ತನೆಯ ಶತಮಾನದ ನಂತರ ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳರು ತಮ್ಮ ಕಂಬಗಳಲ್ಲಿ ಫಲಕಗಳನ್ನು ಹೊಂದಿದ್ದಾರೆ. ನೊಳಂಬರ ಕಾಲದ ಕಂಬಗಳು ಈ ರೀತಿಯ ಫಲಕಗಳನ್ನು ಪಡೆದಿವೆ.

ಫಲಕವು ಚೌಕಟ್ಟಾದ, ಮಣೆಯನ್ನು ಹೋಲುವಂತೆ ರಚಿಸಲ್ಪಟ್ಟಿರುತ್ತದೆ. ಇದರ ಅಗಲವು ಕೆಲವೊಮ್ಮೆ ೪ ಅಡಿಗಳಷ್ಟು ಇರುತ್ತದೆ. ಚೋಳರ ಕಾಲದ ದೇವಾಲಯಗಳಲ್ಲಿ ಈ ರೀತಿಯ ಅಗಲವಾದ ಫಲಕಗಳನ್ನು ಕಾಣಬಹುದು. ಫಲಕದ ಕೆಳಭಾಗವು ಅರಳಿದ ತಾವರೆಯ ಹೂವಿನಂತೆ ರಚಿತವಾಗಿರುತ್ತದೆ. ಇದನ್ನು ತಮಿಳಿನಲ್ಲಿ ಫಲಗೈ (ಫಲಕ) ಮತ್ತು ಇದಳ್ (ತಾವರೆಯು ಹೂವು) ಎಂದು ಹೆಸರಿಸಲಾಗಿದೆ.

ಇದರ ಮೇಲ್ಭಾಗವೇ ಪೋತಿಕಾ ಎಂದರೆ ಬೋದಿಗೆ, ಪೋತಿಕೆಯ ಅಲಂಕರಣವನ್ನು ಆಧರಿಸಿ ಐದು ವಿಧಗಳಾಗಿ ವಿಭಜಿಸಲಾಗಿದೆ. ಅವು

೧) ವೃತ್ತ ಪೋತಿಕ, ೨) ತರಂಗ ಪೋತಿಕ, ೩. ಆಧಾರ ಪೋತಿಕ, ೪) ಮುಷ್ಟಿಬಂಧ ಪೋತಿಕ, ೫) ಪುಷ್ಪ ಪೋತಿಕ

ಬೆಂಗಳೂರು ಮತ್ತು ಕೋಲಾರ ಜಿಲ್ಲೆಯ ದೇವಾಲಯಗಳಲ್ಲಿ ಗಂಗರ ಕಾಲದ ಸ್ತಂಭಗಳು ವೃತ್ತ ಪೋತಿಕೆಯನ್ನು, ಗಂಗ ನೊಳಂಬರ ಕಂಬಗಳು ತರಂಗಪೋತಿಕೆಯನ್ನು ಚೋಳರ ಕಾಲದ ಕಂಬಗಳು ಆಧಾರ ಪೋತಿಕೆಯನ್ನೂ, ಹೊಯ್ಸಳರ ಕಂಬಗಳು ಮುಷ್ಟಿಬಂಧ ಪೋತಿಕೆಯನ್ನು ವಿಜಯನಗರದ ಕಂಬಗಳಲ್ಲಿ ಪುಷ್ಪ ಪೋತಿಕೆಯನ್ನು ಮತ್ತು ಚಿತ್ರಪೋತಿಕೆಗಳನ್ನು ಗಮನಿಸಬಹುದು. ಸಾಮಾನ್ಯವಾಗಿ ಕಂಬದ ಇಬ್ಬದಿಯಲ್ಲೂ ಆಧಾರದಂತೆ ಪೋತಿಕೆಗಳು ರಚನೆಯಾಗಿರುತ್ತವೆ. ಅಪರೂಪವಾಗಿ ನಾಲ್ಕು ಮಗ್ಗಲುಗಳಲ್ಲೂ ರಚನೆಯಾಗಿರುವ ಉದಾಹರಣೆಗಳೂ ದೊರತಿವೆ.

ಸ್ತಂಬಗಳ ಪೂರ್ಣ ಚಿತ್ರಣ, ಅವುಗಳ ಶಾಸ್ತ್ರೀಯ ಅನ್ವಯತೆ, ಸ್ಥಳೀಯ ವಿಭಿನ್ನತೆಗಳು, ವಾಸ್ತು ವಿಭಿನ್ನತೆಗಳೂ ಹೀಗೆ ಹಲವು ವಿಷಯಗಳನ್ನು ಚರ್ಚಿಸುವ ಕಿರು ಪ್ರಯತ್ನವೇ ಈ ಲೇಖನ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಮಯಮತ**, ಅಧ್ಯಾಯ – ೧೫, **ಮಾನಸಾರ** ಅಧ್ಯಾಯ – ೧೫, **ಈಶಾನಶಿವಗುರುದೇವ** ಪದ್ಧತಿ – ಕ್ರಿಯಾ – ೩೧–೧೯–೭೪, **ಕಾಶ್ಯಪಶಿಲ್ಪ** ಪಡಲ ೮ ಸ್ತಂಭಗಳನ್ನು ಕುರಿತು ವಿವರಿಸುತ್ತವೆ.

೨. ಮಯಮತ ಅಧ್ಯಾಯ – ೧೫, ಶ್ಲೋಕ–೨, ಮಾನಸಾರ ಅಧ್ಯಾಯ–೧೫, ಶ್ಲೋಕ–೨ಬಿ–೩, ಕ್ಯಾಶಪಶಿಲ್ಪಶಾಸ್ತ್ರ ಪತಲ ೮, ಶ್ಲೋಕ–೨. ಈ ಶಾನ ಶಿವಗುರು ದೇವಪದ್ಧತಿ–ಕ್ರಿಯಾ–೩೧–ಶ್ಲೋಕ, ೧೯ಬಿ ಮತ್ತು ೨೦ಎ.

೩. ಮಯಮತ ಅಧ್ಯಾಯ–೧೫, ಶ್ಲೋಕ ೧೩, ಮಾನಸಾರ ಅಧ್ಯಾಯ–೧೫, ಶ್ಲೋಕ ೧೦, ಕಾಶ್ಯಪ ಶಿಲ್ಪ ಶಾಸ್ತ್ರ ಪತಲ–೮, ಶ್ಲೋಕ–೧೦, ಶಿಲ್ಪರತ್ನ ಅಧ್ಯಾಯ–೨೧, ಶ್ಲೋಕ–೫೮, ಈಶಾನಶಿವಗುರುದೇವ ಪದ್ಧತಿ ಕ್ರಿಯಾ–೩೧–ಶ್ಲೋಕ ೧೦ಬಿ–೧೧ಎ, ಕಾಮಿಕಾಗಮ ಪತಲ ೫೩–ಶ್ಲೋಕ–೧೬.

೪. ಮಯಮತ–ಅಧ್ಯಾಯ–೧೫, ಶ್ಲೋಕ ೧೫, ಮಾನಸಾರ ಅಧ್ಯಾಯ–೧೫, ಕಾಶ್ಯಪಶಿಲ್ಪ ಪತಲ–೮–ಶ್ಲೋಕ–೧೦, ಶಿಲ್ಪರತ್ನ ಅಧ್ಯಾಯ–೨೧, ಶ್ಲೋಕ–೫೮. ಈಶಾನಶಿವಗುರುದೇವ ಪದ್ಧತಿ, ಪತಲ ೩೧, ಶ್ಲೋಕ ೧೧ಬಿ, ಕಾಮಿಕಾಗಮ ಪತಲ ೫೩, ಶ್ಲೋಕ ೧೭ಎ.


೫. ಮಯಮತ–ಅಧ್ಯಾಯ–೧೫, ಶ್ಲೋಕ ೧೫, ಮಾನಸಾರ ಅಧ್ಯಾಯ–೧೫, ಶ್ಲೋಕ ೧೧ಎ, ಕಾಶ್ಯಪಶಿಲ್ಪ ಪತಲ–೭, ಶ್ಲೋಕ–೧೩–೧೪, ಶಿಲ್ಪರತ್ನ ಅಧ್ಯಾಯ–೨೧, ಶ್ಲೋಕ–೬೦ಬಿ–೬೧ಎ, ಈಶಾನಶಿವಗುರುದೇವ ಪದ್ಧತಿ, ಕ್ರಿಯಾಕಾಗಮ ಪತಲ ೫೩, ಶ್ಲೋಕ ೨೦ಎ, ೨೧ಬಿ.

೬. ಮಯಮತ ಅಧ್ಯಾಯ–೧೫, ಶ್ಲೋಕ ೨೨ಬಿ–೨೬ಎ.

೭. ಕಾಶ್ಯಪಶಿಲ್ಪ–ಪತಲ ೮, ಶ್ಲೋಕ ೨೩–೨೫.

೮. ಮಯಮತ ಅಧ್ಯಾಯ–೧೫, ಶ್ಲೋಕ ೧೩–೧೬.
೯. ಮಯಮತ ಅಧ್ಯಾಯ–೧೫, ಶ್ಲೋಕ ೧೩ಬಿ–೧೬.
೧೦. ಕಾಶ್ಯಪಶಿಲ್ಪ ಪಟಲ ೮, ಶ್ಲೋಕ ೧೧ಬಿ, ಶಿಲ್ಪರತ್ನ ಅಧ್ಯಾಯ–೨೧. ಶ್ಲೋಕ–೫೯. ಈಶಾನಶಿವಗುರುದೇವ ಪದ್ಧತಿ, ಕ್ರಿಯಾಪದ, ಪಟಲ ೩೧, ಶ್ಲೋಕ ೨೨ಬಿ–, ಕಾಮಕಾಗಮ ಪಟಲ ೫೩, ಶ್ಲೋಕ ೧೮ಬಿ.
೧೧. ಶಿಲ್ಪರತ್ನ ಅಧ್ಯಾಯ–೨೧, ಶ್ಲೋಕ–೬೦ಎ.
೧೨. ಈಶಾನಶಿವಗುರುದೇವ ಪದ್ಧತಿ ಕ್ರಿಯಾಪದ ಪಠಲ ೩೧, ಶ್ಲೋಕ ೨೨ಬಿ.
೧೩. **ಕಾಮಿಕಾಗಮ ಪಠಲ** ೫೩, ಶ್ಲೋಕ ೨೦ಎ.
೧೪. **ಶಿಲ್ಪರತ್ನ,** ಅಧ್ಯಾಯ–೨೧, ಶ್ಲೋಕ – ೫೯ಬಿ.
೧೫. ಈಶಾನಶಿವಗುರುದೇವ ಪದ್ಧತಿ, ಕ್ರಿಯಾಪದ, ಪಟಲ ೩೧, ಶ್ಲೋಕ ೨೪ಬಿ.
೧೬. **ಕಾಮಿಕಾಗಾಮ ಪಠಲ** ೫೩, ಶ್ಲೋಕ–೧೮ಬಿ.
೧೭. ಕಾಶ್ಯಪಶಿಲ್ಪ ಪಟಲ ೮, ಶ್ಲೋಕ ೧೧.
೧೮. ಮಾನಸಾರ ಅಧ್ಯಾಯ–೧೫, ಶ್ಲೋಕ ೧೧ಬಿ, ಕಾಶ್ಯಪಶಿಲ್ಪ ಪಟಲ–೮, ಶ್ಲೋಕ ೧೦ಬಿ, ಶಿಲ್ಪರತ್ನ ಅಧ್ಯಾಯ–೨೧, ಶ್ಲೋಕ ೫೯ಎ, ಈಶಾನಶಿವಗುರುದೇವ ಪದ್ಧತಿ, ಕ್ರಿಯಾಪದ ಪಟಲ ೩೧, ಶ್ಲೋಕ–೨೧, ಕಾಮಿಕಾಗಮ ಪಠಲ ೫೩, ಶ್ಲೋಕ–೧೮ಎ.
೧೯. ಕಾಮಿಕಾಗಮ ಪಠಲ ೫೩, ಶ್ಲೋಕ–೧೮ಎ.
೨೦. ಮಯಮತ ಅಧ್ಯಾಯ ೧೫, ಶ್ಲೋಕ–೧೪ಎ.
೨೧. ಕಾಶ್ಯಪಶಿಲ್ಪ ಪಟಲ ೮, ಶ್ಲೋಕ–೧೦ಬಿ.
೨೨. ಮಾನಸಾರ ಅಧ್ಯಾಯ–೧೫, ಶ್ಲೋಕ–೧೧ಬಿ.
೨೩. ಶಿಲ್ಪರತ್ನ ಅಧ್ಯಾಯನ–೨೧, ಶ್ಲೋಕ–೬೨ಎ.
೨೪. ಈಶಾನಶಿವಗುರುದೇವ ಪದ್ಧತಿ, ಕ್ರಿಯಾಪದ ಪಟಲ ೩೧, ಶ್ಲೋಕ–೨೪.
೨೫. ಮಯಮತ ಅಧ್ಯಾಯ–೧೫, ಶ್ಲೋಕ–೧೭–೧೯.
೨೬. ಶಿಲ್ಪರತ್ನ ಅಧ್ಯಾಯ ೨೧, ಶ್ಲೋಕ–೬೨ಬಿ–೬೩ಎ.
೨೭. ಕಾಶ್ಯಪಶಿಲ್ಪ ಪಟಲ ೮, ಶ್ಲೋಕ–೨೧.
೨೮. ಕಾಶ್ಯಪಶಿಲ್ಪ ಪಟಲ ೮, ಶ್ಲೋಕ–೨೨ಎ.
೨೯. ಮಯಮತ ಅಧ್ಯಾಯ–೧೫, ಶ್ಲೋಕ ೨೨ಬಿ–೨೬ಎ–, ಮಾನಸಾರ ಅಧ್ಯಾಯ ೧೫, ಶ್ಲೋಕ ೧೩–೧೫, ಕಾಶ್ಯಪಶಿಲ್ಪ ಪಠಲ ೮, ಶ್ಲೋಕ ೨೩–೨೫, ಶಿಲ್ಪರತ್ನ ಅಧ್ಯಾಯ ೨೧, ಶ್ಲೋಕ–೬೭.
೩೦. ಮಯಮತ ಅಧ್ಯಾಯ–೧೫, ಶ್ಲೋಕ–೨೫ಬಿ.
೩೧. ಮಯಮತ ಅಧ್ಯಾಯ–೧೫, ಶ್ಲೋಕ–೨೬ಎ.
೩೨. ಸೋಮೇಶ್ವರ ದೇವಸ್ಥಾನ, ಬಿದರಹಳ್ಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಜಿಲ್ಲೆ ಮತ್ತು ಪ್ರಸನ್ನ ವಿರೂಪಾಕ್ಷ ದೇವಸ್ಥಾನ, ವಿರೂಪಾಕ್ಷಿ, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ.
೩೩. ಮಾನಸಾರ ಅಧ್ಯಾಯ–೧೫, ಶ್ಲೋಕ ೩೭–೪೨.
೩೪. ಮಾನಸಾರ ಅಧ್ಯಾಯ–೧೫, ಶ್ಲೋಕ ೪೨–೪೯.
೩೫. ಮಾನಸಾರ ಅಧ್ಯಾಯ–೧೫, ಶ್ಲೋಕ ೧೬–೧೯.
೩೬. ಮಾನಸಾರ ಅಧ್ಯಾಯ–೧೫, ಶ್ಲೋಕ ೨೯.
೩೭. ಮಾನಸಾರ ಅಧ್ಯಾಯ–೧೫, ಶ್ಲೋಕ ೨೨–೩೬.
೩೮. ಅಮರನಾರಾಯಣ ಸ್ವಾಮಿ ದೇವಸ್ಥಾನ, ಕೈವಾರ, ಚಿಂತಾಮಣಿ ತಾಲ್ಲೂಕು, ಕೋಲಾರ ಜಿಲ್ಲೆ.
೩೯. ಸಂಸ್ಕೃತ ಇಂಗ್ಲಿಷ್ ನಿಘಂಟು–ಮೋನೀರ್ ವಿಲಿಯ್ಸಂ, ಪುಟ–೬೨೩.
೪೦. ಶಿಲ್ಪರತ್ನ ಅಧ್ಯಾಯ–೨೧, ಶ್ಲೋಕ–೬೫ಎ.
೪೧. ಶಿಲ್ಪರತ್ನ ಅಧ್ಯಾಯ–೨೧, ಶ್ಲೋಕ ೬೫ಬಿ–೬೬.
೪೨. ಶಿಲ್ಪರತ್ನ ಅಧ್ಯಾಯ–೨೧, ಶ್ಲೋಕ–೬೬.
೪೩. ಕಪಿಲೇಶ್ವರ ದೇವಸ್ಥಾನ–ಮಣ್ಣೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಜಿಲ್ಲೆ, ನಗರೇಶ್ವರ ದೇವಸ್ಥಾನ–ಬೆಂಗಳೂರು, ಬೆಂಗಳೂರು ಜಿಲ್ಲೆ, ಭರತೇಶ್ವರ ದೇವಸ್ಥಾನ–ಅವನಿ, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ.
೪೪. ನಗರೇಶ್ವರ ದೇವಸ್ಥಾನ–ಬೇಗೂರು, ಬೆಂಗಳೂರು ಜಿಲ್ಲೆ, ತಾವರೆದಳಗಳನ್ನು ಬಿಡಿಸಲಾಗಿದೆ. ಭೋಗನಂದೀಶ್ವರ ದೇವಸ್ಥಾನ–ನಂದಿ, ಚಿಕ್ಕಬಳ್ಳಾಪುರ ತಾಲ್ಲೂಕು, ಕೋಲಾರ ಜಿಲ್ಲೆ ಕಂಬಗಳಲ್ಲಿ ಕಪೋತವನ್ನು ರಚಿಸಲಾಗಿದೆ.
೪೫. ಗಂಗಾಧರೇಶ್ವರ ದೇವಸ್ಥಾನದ ಸ್ತಂಭಗಳು–ಶಿವಗಂಗೆ, ಬೆಂಗಳೂರು ಜಿಲ್ಲೆ.....
೪೬ ಕಪೋತಬಂಧ ಅಧಿಷ್ಠಾನವನ್ನು ರಚಿಸಲಾಗಿದೆ. ಮಾರ್ಕಂಡೇಶ್ವರ ದೇವಸ್ಥಾನ–ವೊಕ್ಕಲೇರಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ.
೪೭. ಮಂಚಬಂಧ ಅಧಿಷ್ಠಾನವು–ಸೋಮೇಶ್ವರ ದೇವಸ್ಥಾನ ಕಂಬಗಳಲ್ಲಿ–ಕುರುಡುಮಲೆ, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆಯಲ್ಲಿ ಕಂಡುಬರುತ್ತದೆ.

೪೮. ಸೋಮೇಶ್ವರ ದೇವಸ್ಥಾನದ ಕಲ್ಯಾಣ ಮಂಟಪದ ಕಂಬಗಳು, ಕೋಲಾರ ಜಿಲ್ಲೆ.
೪೯. ಸೋಮೇಶ್ವರ ದೇವಸ್ಥಾನ, ಕುರುಡುಮಲೆಯಲ್ಲಿ, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ.
೫೦. ಸೋಮೇಶ್ವರ ದೇವಸ್ಥಾನದ, ಕಲ್ಯಾಣ ಮಂಟಪದಲ್ಲಿ, ಕೋಲಾರ ಜಿಲ್ಲೆಯ ಸ್ತಂಭಗಳು, ಮತ್ತು ನಂದಿಯ ಕಲ್ಯಾಣ ಮಂಟಪದ ಯೋಗನಂದೀಶ್ವರ ದೇವಸ್ಥಾನದ ಕಂಬಗಳು ಹಾಗೂ ಕೋಲಾರ ಜಿಲ್ಲೆಯ, ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ.
೫೧. ಕೋಲಾರ ಜಿಲ್ಲೆಯ, ಚಿಂತಾಮಣಿ ತಾಲ್ಲೂಕು, ಅಲಂಬಗಿರಿ ವೆಂಕಟರಮಣ ಸ್ವಾಮಿ ದೇವಸ್ಥಾನವು ಕಲ್ಯಾಣಮಂಟಪದಲ್ಲಿಯ ಸ್ತಂಬಗಳು.
೫೨. ಯೋಗನಂದೀಶ್ವರ ದೇವಸ್ಥಾನದ ಕಲ್ಯಾಣಮಂಟಪದ ಕಂಬಗಳು, ಚಿಕ್ಕಬಳ್ಳಾಪುರ ತಾಲ್ಲೂಕು, ಕೋಲಾರ ಜಿಲ್ಲೆ.
೫೩. ಸೋಮೇಶ್ವರ ದೇವಸ್ಥಾನದ ಕಲ್ಯಾಣಮಂಟಪದ ಕಂಬಗಳು. ಕೋಲಾರ ಜಿಲ್ಲೆಯ, ಕೋಲಾರದಲ್ಲಿ.
೫೪. ರಂಗನಾಥ ದೇವಸ್ಥಾನದ ಕಂಬದ ಪಟಲಿಕ ಯೋದಿಗೆನಹಳ್ಳಿ, ಚಿಕ್ಕಬಳ್ಳಾಪುರ ತಾಲ್ಲೂಕು, ಕೋಲಾರ ಜಿಲ್ಲೆ ಹಾಗೂ ಕೋಲಾರ ಜಿಲ್ಲೆ ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿಯಲ್ಲಿ ಯೋಗನಂದೀಶ್ವರ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಸುಮಾರು ೬೦ ಪಾದಕೀಲದ ಕಂಬಗಳು.
೫೫. ಸೋಮೇಶ್ವರ ದೇವಸ್ಥಾನದ ಕಲ್ಯಾಣ ಮಂಟಪ, ಕೋಲಾರ ಜಿಲ್ಲೆ.
೫೬. ಅದೇ.,
೫೭. ಅದೇ.,
೫೮. ಅದೇ.,
೫೯. ಸೋಮೇಶ್ವರ ದೇವಸ್ಥಾನದ ಕಂಬಗಳ ಹೊರಾಗಣದ ಪ್ರಕಾರ. ಗಂಗಾವರ, ದೇವನಹಳ್ಳಿ.
೬೦. ಶ್ರೀರಾಮದೇವಸ್ಥಾನ, ಕೂಡ್ಲೂರು.
೬೧. ಕೋಲಾರ ಜಿಲ್ಲೆಯ ಸೋಮೇಶ್ವರ ದೇವಸ್ಥಾನ.
೬೨. ಕೋಲಾರ ಜಿಲ್ಲೆಯ ಸೋಮೇಶ್ವರ ದೇವಸ್ಥಾನದ ಪಾತಾಳ ಅಂಕಣಗಳು.
೬೩. ಕೋಟೆ ವೆಂಕಟರಮಣಸ್ವಾಮಿ ದೇವಸ್ಥಾನ, ಬೆಂಗಳೂರು.
೬೪. ಕೋಲಾರ ಜಿಲ್ಲೆಯ, ಕೋಲಾರ ತಾಲ್ಲೂಕಿನ, ಸಿತಿಪಟ್ಟದ ಭೈರವ ದೇವಸ್ಥಾನದಲ್ಲಿ ಅಂಕಣದಲ್ಲಿ ಕಂಬಗಳು.
೬೫. ಕೋಲಾರ ಜಿಲ್ಲೆಯ, ಕೋಲಾರ ತಾಲ್ಲೂಕಿನ, ಸಿತಿಪಟ್ಟದ ಭೈರವ ದೇವಸ್ಥಾನದಲ್ಲಿ ಅಂಕಣದಲ್ಲಿ ಕಂಬಗಳು.









ಪೂರ್ವಾಶ್ರ ಸ್ಥಂಬಗಳು









20. ಕಪೋತಬಂಧ ಅಧಿಷ್ಠಾನದ ಕಂಬ ಭೋಗನಂದೀಶ್ವರ ದೇವಾಲಯ, ನಂದಿ

21. [illegible]

24. ಗೂಢ ರತ್ನಪಟ್ಟಿಯುಳ್ಳ ಅಧಿಷ್ಠಾನ ಗಂಗಾಧರೇಶ್ವರ ದೇವಸ್ಥಾನ, ಶಿವಗಂಗೆ

25. [illegible]





29. ಕ್ರೇಬಂಧ ಅಧಿಷ್ಠಾನದ ಕಂಬ, ಭೋಗನಂದೀಶ್ವರ ದೇವಸ್ಥಾನ, ನಂದಿ

30. ಕ್ರೇಬಂಧ ಅಧಿಷ್ಠಾನದ ಕಂಬ, ಸೋಮೇಶ್ವರ ದೇವಸ್ಥಾನ, ಕೋಲಾರ





39. ಹೊಯ್ಸಳ ಸ್ತಂಭ- ಶಿವಗಂಗೆ

40. ಹೊಯ್ಸಳ ಸ್ತಂಭ- [illegible]







45. ವಿಜಯನಗರ ಕಾಲದ ಕಂಬಗಳು
ಕೋಲಾರ



46. ವಿಜಯನಗರ ಕಾಲದ ಕಂಬಗಳು



47 ವಿಜಯನಗರ ಕಾಲದ ಕಂಬಗಳು,
ಸೋಮೇಶ್ವರ ದೇವಾಲಯ, ಕೋಲಾರ






49 ವಿಜಯನಗರ ಕಾಲದ ಕಂಬಗಳು



50 ವಿಜಯನಗರ ಕಾಲದ ಕಂಬಗಳು





ಡಾ. ಬೆಂ.ಶಾ. ಶ್ಯಾಮಲಾ ರತ್ನಕುಮಾರಿ*

ಹೊಳಲಿಯ ಐತಿಹಾಸಿಕ ಪ್ರಾಮುಖ್ಯತೆ

'ಹೊಳಲಿ' ಕೋಲಾರ ಜಿಲ್ಲೆಯ ಹುತ್ತೂರು ತಾಲ್ಲೂಕಿನ ಒಂದು ಗ್ರಾಮ. ಕೋಲಾರದಿಂದ ಬಸ್ಸಿನಲ್ಲಿ ಶಾಪುರ ಅಥವಾ ತಂಬಳ್ಳಿ (ತಂಬಿಹಳ್ಳಿ) ಮಾರ್ಗವಾಗಿ ಮುಕ್ಕಾಲು ಘಂಟೆ ಪಯಣಿಸಿ ಹೊಳಲಿಯನ್ನು ತಲುಪಬಹುದು. ಪಾಲಾರ್ ನದಿಯ ದಂಡೆಯ ಮೇಲಿರುವ ಹೊಳಲಿ ಗ್ರಾಮದ ಈಶಾನ್ಯ ಭಾಗವು ಜಲದ ಆಕರದಿಂದ ತಗ್ಗಾಗಿದ್ದು ನೈರುತ್ಯ ಭಾಗವು ಎತ್ತರವಾಗಿದ್ದು ಪ್ರಶಸ್ತ ವಾಸ್ತುಲಕ್ಷಣಗಳಿಂದ ಕೂಡಿರುವುದು ಈ ಗ್ರಾಮದ ಏಳಿಗೆಯ ದ್ಯೋತಕವಾಗಿದೆ.

ಹೊಳಲಿಯು ಐತಿಹಾಸಿಕವಾಗಿ ಮಹತ್ವದ ಗ್ರಾಮವಾಗಿದ್ದಿತೆಂಬುದು ಇಲ್ಲಿನ ಐತಿಹಾಸಿಕ ಅವಶೇಷಗಳಿಂದ, ಶಾಸನಗಳಿಂದ ತಿಳಿದುಬರುತ್ತದೆ. ಹತ್ತನೇ ಮತ್ತು ಹನ್ನೊಂದನೇ ಶತಮಾನಗಳಲ್ಲಿ ಈ ಪ್ರದೇಶವು ನೊಳಂಬ ರಾಜಮನೆತನದ ಆಳ್ವಿಕೆಗೊಳಪಟ್ಟಿದ್ದು ಆವನಿ ನಾಡಿನ ಭಾಗವಾಗಿದ್ದಿತು. ಆವನಿಯ ರಾಮೇಶ್ವರ ದೇವಾಲಯದ ದಕ್ಷಿಣ ದ್ವಾರದ ಬಳಿಯಲ್ಲಿ ಬಿದ್ದಿರುವ ಕಲ್ಲು ಕಂಭದ ಮೇಲಿರುವ ಶಾಸನವು ಹೊಳಲಿಯ ಐತಿಹಾಸಿಕ ಮಹತ್ವದ ಬಗ್ಗೆ ಬೆಳಕು ಚೆಲ್ಲುತ್ತದೆ. ಆ ಪ್ರಕಾರ ನೊಳಂಬರಾಜನಾದ ಪೊಳಲ್ಚೋರನ ಅಗ್ರಮಹಿಷಿಯಾಗಿದ್ದ ಕದಂಬ ರಾಜಕುಮಾರಿ ದೀವಾಂಬಿಕೆ ಅಥವಾ ದೀವಬ್ಬರಸಿಯು ತನ್ನ ಮಗ ಮಹೇಂದ್ರನು ರಾಜ್ಯಭಾರ ನಡೆಸುತ್ತಿದ್ದಾಗ ತನ್ನ ಪತಿಯ ಯಶೋರ್ಜಿತಕ್ಕಾಗಿ ಅವನ ಹೆಸರಿನಲ್ಲಿ 'ಪೊಳಲಿ ಮಂಗಲ' ಎಂಬ ಅಗ್ರಹಾರವನ್ನು ನಿರ್ಮಿಸಿ ಚತುರ್ವೇದಿ ಬ್ರಾಹ್ಮಣೋತ್ತಮರಿಗೆ ದಾನಗೈದಳು ಹಾಗೂ ಆ ಅಗ್ರಹಾರದಲ್ಲಿಯೇ 'ದೀವಳಬ್ಬಾ ಸಮುದ್ರ' ಎಂಬ ಕೆರೆಯನ್ನೂ ತನ್ನ ಹೆಸರಿನಲ್ಲಿ ನಿರ್ಮಿಸಿದಳು. ಆ ಕೆರೆಯೇ ಇಂದು ಹೊಳಲಿಕೆರೆ ಎಂಬ ಹೆಸರಿನಿಂದ ಕರೆಯಲ್ಪಡುತ್ತಿದೆ. ಶಾಸನೋಕ್ತ ಪೊಳಲಿಮಂಗಲ ಅಗ್ರಹಾರವೇ ಇಂದಿನ ಹೊಳಲಿ ಗ್ರಾಮವಾಗಿದೆ. ಹೀಗಾಗಿ ಹೊಳಲಿ ಗ್ರಾಮದ ಪ್ರಾಚೀನತೆ ಕ್ರಿ.ಶ. ೧೦ನೇ ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆ.

ಹೊಳಲಿಯಲ್ಲಿ ಭೀಮೇಶ್ವರ, ಸೋಮೇಶ್ವರ, ಚೌಡೇಶ್ವರಿ ಮತ್ತು ಚನ್ನಕೇಶವ ದೇವಾಲಯಗಳಿವೆ. ಭೀಮೇಶ್ವರ ದೇವಾಲಯದಲ್ಲಿ ಬೃಹದ್ಗಾತ್ರದ ಭವ್ಯಲಿಂಗ ಮತ್ತು ಎರಡೂವರೆ ಅಡಿ ಎತ್ತರದ ಪಾರ್ವತಿಯ ಶಿಲ್ಪಗಳಿವೆ. ದೇವಾಲಯವು ಇತ್ತೀಚೆಗೆ ಕಲ್ಲು ಸೀಮೆಂಟುಗಳಿಂದ ಜೀರ್ಣೋದ್ಧಾರಗೊಂಡಿದ್ದು ದೇವಾಲಯದ ಹೊರ ಆವರಣ ಮತ್ತು ಕಲ್ಯಾಣಿಯ ನಿರ್ಮಾಣಕಾರ್ಯ ನಡೆದಿದೆ. ಈ ಪ್ರದೇಶದಲ್ಲಿ ನಿಂತು ಕಣ್ಣುಹಾಯಿಸಿದರೆ ಹೊಳಲಿಕೆರೆ (ದೀವಳಬ್ಬಾ ಸಮುದ್ರ) ಮತ್ತು ಹೊಳಲಿ ಬೆಟ್ಟ ಮತ್ತು ಬೆಟ್ಟದ ಬುಡದಲ್ಲಿರುವ ಕಿರುಹೊಳಲಿ ಗ್ರಾಮದ ಮನೆಗಳು ಕಂಡುಬರುತ್ತದೆ.

ದೇವಾಲಯದ ಮುಂದೆ ನಂದಿಮಂಟಪವಿದೆ. ಭೀಮೇಶ್ವರ ಲಿಂಗ, ದ್ವಾರಪಾಲಕ ಶಿಲ್ಪ, ನಂದಿ, ನಂದಿ ಮಂಟಪದ ಸ್ತಂಭಗಳು, ದೇವಾಲಯದ ಪ್ರಾಚೀನತೆಯನ್ನು ಸಾರುತ್ತವೆ. ದೇವಾಲಯದ ಆವರಣದ ಅರಳಿಕಟ್ಟೆಯ ಮೇಲೆ ನಾಗಶಿಲ್ಪ ಹಾಗೂ ಕೈಮುಗಿದು ನಿಂತಿರುವ ಭಕ್ತನ ಶಿಲ್ಪ ಕಂಡುಬರುತ್ತವೆ. ಆವರಣದ ಹೊರಗೆ ಈಶಾನ್ಯ ಭಾಗದಲ್ಲಿ ಶಿಲಾಮಂಟಪವಿದ್ದು ಅದರಲ್ಲಿ ಸ್ಥಾನಕ ವೀರಾಂಜನೇಯ ಶಿಲ್ಪವಿದೆ. ಭೀಮೇಶ್ವರ ಪೂಜಾರ್ಚನೆಗಳನ್ನು ಸ್ಥಳೀಯ ಮುಲಕನಾಡು ಸ್ಮಾರ್ತ ಭಾರದ್ವಾಜ ಗೋತ್ರದ ಶ್ರೀ ಸತ್ಯನಾರಾಯಣಶಾಸ್ತ್ರಿಗಳು ನಡೆಸಿಕೊಂಡು ಬರುತ್ತಿದ್ದಾರೆ.

ಸೋಮೇಶ್ವರ ದೇವಾಲಯವು ಹೊಳಲಿಯಲ್ಲಿನ ಅತ್ಯಂತ ಪ್ರಾಚೀನ ದೇವಾಲಯವಾಗಿದ್ದು ಈಗ ಪೂರ್ಣ ಶಿಥಿಲಾವಸ್ಥೆಯಲ್ಲಿದೆ. ದೇವಾಲಯದ ಕಂಬಗಳೂ ಸೋಮೇಶ್ವರ ಬಾಣಲಿಂಗವೂ, ಪಾಣಿವಟ್ಟವೂ, ದೇವಪಾದ ಶಿಲೆಗಳೂ ಬಿಡಿ ಬಿಡಿಯಾಗಿ ಬಿದ್ದಿವೆ. ದೇವಾಲಯದ ಗರ್ಭಗುಡಿಯಿದ್ದ ಸ್ಥಳದಲ್ಲಿ ಇಟ್ಟಿಗೆ ಮತ್ತು ಚೂರು ಕಲ್ಲುಗಳಿಂದ ವೇದಿಕೆಯನ್ನು ಕಟ್ಟಿ ಅಲ್ಲಿ ಶಿವಲಿಂಗವೊಂದನ್ನು ಇಟ್ಟು ಪೂಜಿಸಲಾಗುತ್ತಿದೆ. ಅದಕ್ಕೆ ಗೋಡೆಯಾಗಲೀ ಬಾಗಿಲಾಗಲೀ ಕಂಡುಬರುವುದಿಲ್ಲ. ಮುಂದಿನ ಅಂಗಳದೊಳಗೆ ಮುರಿದ ನಂದಿ ಶಿಲ್ಪವೂ ಕಂಡುಬರುತ್ತದೆ. ದೇವಾಲಯದ ಆವರಣದ

---

* ಎ.ಕ. X, ಮುಳಬಾಗಿಲು, ಶಾಸನ ಸಂಖ್ಯೆ ೩೮.

* ನಿವೃತ್ತ ಇತಿಹಾಸ ಪ್ರವಾಚಕರು, ಬೆಂಗಳೂರು.



ಹೊಳಲಿ ಬೆಟ್ಟದ ಬುಡದಲ್ಲಿರುವ ಕಿರು ಹೊಳಲಿ ಗ್ರಾಮ
ಬೆಟ್ಟದ ಪಕ್ಕದಂಚಿನಲ್ಲಿರುವ ದೇವಳಬ್ಬ ಸಮುದ್ರ



ಹೊಳಲಿ ಗ್ರಾಮದಲ್ಲಿರುವ ಚಿಕ್ಕ ಕೆರೆ (ವೆಂಕಟಮ್ಮನ ಕೆರೆ) ಒಡ್ಡಿನೊಂದಿಗೆ



ಭೀಮೇಶ್ವರ ಲಿಂಗ



ಭೀಮೇಶ್ವರ ದೇವಾಲಯದ
ಮುಂದಿನ ನಂದಿ ಮಂಟಪ



ಭೀಮೇಶ್ವರ ದೇವಾಲಯದ
ಮುಂದಿನ ಮಂಟಪದಲ್ಲಿರುವ
ಆಂಜನೇಯ ಸ್ಥಾನಿಕ ಶಿಲ್ಪ



ಭೀಮೇಶ್ವರ ದೇವಾಲಯದ
ಆವರಣದಲ್ಲಿರುವ ಭಕ್ತನ ಶಿಲ್ಪ



ಭೀಮೇಶ್ವರ ದೇವಾಲಯದ ಮುಂದಿರುವ ಶಿಲಾ ಮಂಟಪ



ಸೋಮೇಶ್ವರ ದೇವಾಲಯ ಮುಂದೆ
ಬಿದ್ದಿರುವ ದೇವಪಾದ ಶಿಲೆ



ಚೌಡೇಶ್ವರಿ
ದೇವಾಲಯ
ದಲ್ಲಿರುವ ದೇವಿ
ಶಿಲ್ಪಗಳು



ಚೌಡೇಶ್ವರಿ
ದೇವಾಲಯದ
ಮಂದಿರುವ ಸಮಾಧಿ -
ಶಿಲಾ ಪೂಜಾ
ಗೂಡುಗಳು

ಮುಂಭಾಗದಲ್ಲಿ ಹೊಂಡವೂ ಅದಕ್ಕೆ ಸೇರಿದಂತೆ ಚಿಕ್ಕ ಕೆರೆಯೂ ಮರವೆಯ ಭಾಗವೂ ಕಂಡುಬರುತ್ತದೆ. ಈ ಹೊಂಡದಿಂದಾಚೆಗೆ ಸ್ವಲ್ಪ ದೂರದಲ್ಲಿಯೇ ಪಾಲಾರ್ ನದಿಗೆ ಕಟ್ಟಿದ ಒಡ್ಡಿನ ಭಾಗವೂ ಕಾಣಸಿಗುತ್ತದೆ. ಚಿಕ್ಕ ಕೆರೆಯನ್ನು ಸ್ಥಳೀಯರು ವೆಂಕಟಮ್ಮನ ಕೆರೆ ಎಂದು ಕರೆಯುವರು. ವೆಂಕಟಮ್ಮನ ಕೆರೆಗೆ ನೀರು ಹೊಳಲಿಯ ಕೆರೆ ಅಥವಾ ದೀವಳಬ್ಬಾ ಸಮುದ್ರದಿಂದ ಹರಿದು ಬರುವುದು. ಚಿಕ್ಕಕೆರೆಯಿಂದ ಕೆಳಗಿನ ಹೊಂಡಕ್ಕೆ ತೂಬಿನ ಮೂಲಕ ನೀರು ಹರಿಯುವುದು. ಬೇತಮಂಗಲದ ಕೆರೆಗೂ ದೀವಳಬ್ಬಾ ಸಮುದ್ರದಿಂದ ನೀರು ಹರಿಯುವುದು. ಕೆರೆಯ ಪಶ್ಚಿಮದ ರಸ್ತೆ ಬದಿಯ ಬಂಡೆಯ ಮೇಲೆ 'ಭಾಗವತ ಕೃಷ್ಣದೇವನಿಗೆ ಮಾನ್ಯ ಹತ್ತು ಕೊಳಗದ ಹೊಲನು' ಎಂಬ ಬರೆಹವಿರುವ ಶಾಸನವಿದೆ.

ಹೊಳಲಿ ಗ್ರಾಮದ ಎಗುವ ಬೀದಿ ಅಥವಾ ಮೇಲಿನ ಬೀದಿಯಲ್ಲಿರುವುದೇ ಚೆನ್ನಕೇಶವ ದೇವಾಲಯ. ಈ ದೇವಾಲಯವೂ ಕೆಲವು ವರ್ಷಗಳ ಹಿಂದೆ ಪುನರ್ನಿರ್ಮಿತವಾಗಿದೆ. ಗರ್ಭಗುಡಿಯಲ್ಲಿ ಮೂರಡಿ ಎತ್ತರದ ಕರಿಶಿಲೆಯ ಶ್ರೀದೇವಿ ಮತ್ತು ಭೂದೇವಿಯರೊಡನಿರುವ ಚೆನ್ನಕೇಶವ ಶಿಲ್ಪ ಇದೆ. ಈ ದೇವಾಲಯದಲ್ಲಿರುವ ಶಾಸನ ಗ್ರಂಥ ಅಕ್ಷರಗಳಲ್ಲಿ 'ತಿರುನಿಲ್ಯೆ ಪಾಲ್ಪ....ಸ್ವ ಶ್ರೀ ವೈಷ್ಣವದಾಸ ನಿಲ್....ಎಂಬ ಬರೆಹವನ್ನು ಹೊಂದಿದೆ. ಪ್ರಾಯಶಃ ಶ್ರೀ ವೈಷ್ಣದಾಸನೇ ಚನ್ನಕೇಶವ ದೇವಾಲಯದ ನಿರ್ಮಾತೃ ಇರಬಹುದು. ಚೆನ್ನಕೇಶವ ದೇಗುಲದ ಪೂಜೆಯನ್ನು ಇತ್ತೀಚಿನವರೆಗೂ ಭೀಮೇಶ್ವರ ದೇವಾಲಯದ ಅರ್ಚಕರೇ ಮಾಡುತ್ತಿದ್ದರಂತೆ ಈಗೆರಡು ವರ್ಷಗಳಿಂದ ದೇವಾಲಯದ ಪಕ್ಕದಲ್ಲೇ ವಾಸಿಸುತ್ತಿರುವ ತಿರುಪತಿಯ ಮನೆಯವರೆಂದು ಕರೆಯಲ್ಪಡುವ ಕೌಂಡಿಲ್ಯ ಗೋತ್ರದ ಮುಲಕನಾಡು ಸ್ಮಾರ್ತ ಬ್ರಾಹ್ಮಣರಿಂದ ಪೂಜೆ ನಡೆಯುತ್ತಿದೆ.

ಹೊಳಲಿ ಗ್ರಾಮದ ಶಕ್ತಿದೇವತೆ ಚೌಡೇಶ್ವರಿ. ಚೌಡೇಶ್ವರಿ ದೇವಾಲಯವು ಗ್ರಾಮದ ವಾಯುವ್ಯಕ್ಕೆ ಹುಣಸೇತೋಪು ಮತ್ತು ರಾಗಿಯ ಹೊಲಗಳ ಮಧ್ಯದಲ್ಲಿದೆ. ಚೌಡೇಶ್ವರಿ ದೇವಾಲಯದಲ್ಲಿ ಸಾಲಾಗಿ ಎಡದಿಂದ ಬಲಕ್ಕೆ ಎರಡು ಅಡಿ ಎತ್ತರದ ಗಣೇಶ ಮತ್ತು ದೇವಿಯರ ಮೂರು ಸುಂದರ ಶಿಲ್ಪಗಳಿವೆ. ಅದರಲ್ಲಿ ಬಲಗಡೆಗಿರುವ ಚೌಡೇಶ್ವರಿ ಶಿಲ್ಪವು ದೊಡ್ಡಗಾತ್ರದಿದ್ದು ಭವ್ಯವಾಗಿದೆ. ಆ ಶಿಲ್ಪಗಳ ಮುಂದೆ ಮೂರು ಚಿಕ್ಕಕಲ್ಲುಗಳನ್ನು ಇಟ್ಟು ಪೂಜಿಸಲಾಗುತ್ತದೆ. ಚೌಡೇಶ್ವರಿಯನ್ನು ಗ್ರಾಮದ ಎಲ್ಲ ಕೋಮಿನ ಅಂದರೆ ಬ್ರಾಹ್ಮಣರು, ಒಕ್ಕಲಿಗರು, ಹೊಲೆಯರು ಮತ್ತು ಬೋವಿಗಳೂ ಪೂಜಿಸುತ್ತಾರೆ. ಚೌಡೇಶ್ವರಿ ದೇವಿಯ ಪೂಜೆಯನ್ನೂ ಸತ್ಯನಾರಾಯಣ ಶಾಸ್ತ್ರಿಗಳೇ ನಡೆಸುತ್ತಿದ್ದಾರೆ.

ಹೀಗೆ ಹೊಳಲಿ ಗ್ರಾಮವು ಐತಿಹಾಸಿಕ ಅಗ್ರಹಾರ ವಾಗಿದ್ದು ಶೈವ, ವೈಷ್ಣವ ಮತ್ತು ಶಾಕ್ತಪಂಥಗಳ ಧಾರ್ಮಿಕ ಕೇಂದ್ರವಾಗಿ ನಡೆದುಬಂದಿದೆ. ಈಗಲೂ ಬ್ರಾಹ್ಮಣರ ಐದಾರು ಮನೆಗಳಿದ್ದು ಸುತ್ತಮುತ್ತಲ ಗ್ರಾಮದ ಪೌರೋಹಿತ್ಯವನ್ನೂ ನಿರ್ವಹಿಸಿಕೊಂಡು ಬರುತ್ತಿದ್ದಾರೆ. ವೇದಶಾಸ್ತ್ರ, ಸಾಹಿತ್ಯ, ನಾಟಕ, ಸಂಗೀತ, ಕಲೆ ಮುಂತಾದವುಗಳಲ್ಲಿ ಪರಿಣತಿ ಸಾಧಿಸಿದ ಅನೇಕ ಗಣ್ಯರನ್ನು ನೀಡಿದೆ ಹೊಳಲಿ ಗ್ರಾಮ. ಇವರಲ್ಲಿ ಉಲ್ಲೇಖಾರ್ಹರೆಂದರೆ ಅಯ್ಯವಾರು ವೆಂಕಟಸುಬ್ಬಾಭಟ್ಟರು, ಲಿಂಗಂಭಟ್ಟರು ಸೀತಾರಾಮಶಾಸ್ತ್ರಿಗಳು, ರಾಘವಶಾಸ್ತ್ರಿಗಳು, ಸಾಹುಕಾರ ಸುಬ್ರಮಣ್ಯಶಾಸ್ತ್ರಿಗಳು, ನಾಟಕಂ ಸುಬ್ರಮಣ್ಯಶಾಸ್ತ್ರಿಗಳು, ಗೋಪಾಲಯ್ಯ, ಯೋಗಪ್ಪನವರು ಹಾಗೂ 'ಅಷ್ಟಾದಶಪುರಾಣ ರತ್ನಾಕರ', ದತ್ತಪ್ರಬೋಧ ರತ್ನಾಕರ ಮುಂತಾದ ಗ್ರಂಥಗಳ ಕರ್ತೃ ಮತ್ತು ಅಗಸ್ತ್ಯಾ ನಾಡಿ ಜ್ಯೋತಿಷಿಗಳಾದ ಡಾ. ನಾಗರಾಜಶಾಸ್ತ್ರಿಗಳು. ತಂದೆಯವರನ್ನು ಬಾಲ್ಯದಲ್ಲಿ ಬೆಳೆಸಿದ ನನ್ನ ದೊಡ್ಡಜ್ಜಿ ಮತ್ತು ದೊಡ್ಡಜ್ಜ ರಾಮಣ್ಣನವರು ಹೊಳಲಿಯವರು ಎಂಬುದು ಹೆಮ್ಮೆಯ ಸಂಗತಿ.

ಆದರೆ ಹೊಳಲಿ ಗ್ರಾಮದಲ್ಲಿ ಹೈಸ್ಕೂಲ್ ಮಾತ್ರ ಇದ್ದು, ಕಾಲೇಜು ಶಿಕ್ಷಣಕ್ಕೆ ಕೋಲಾರಕ್ಕೆ ಹೋಗಬೇಕಾಗಿದೆ. ಬಸ್ಸಿನ ಸೌಕರ್ಯವೂ ಸಾಕಷ್ಟಿಲ್ಲ ಹಾಗೂ ಸ್ಥಳೀಯರಲ್ಲಿ ನೈರ್ಮಲ್ಯ, ಆರೋಗ್ಯಪ್ರಜ್ಞೆ ತೀರ ಕಡಿಮೆ ಇದೆ. ದೇವಾಲಯ, ಕೆರೆ ಅಂಗಳ ಮುಂತಾದವುಗಳ ರಕ್ಷಣೆಯ ಬಗ್ಗೆಯೂ ಹೆಚ್ಚಿನ ಅರಿವು ಮೂಡಿಸುವುದು ಅವಶ್ಯಕವಾಗಿದೆ. ನನ್ನ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಅವುಗಳ ಬಗ್ಗೆ ಜನರ ಗಮನವನ್ನು ಸೆಳೆಯಲು ಪ್ರಯತ್ನಿಸಿದೆ. ಆದರೂ ಇನ್ನೂ ಹೆಚ್ಚಿನ ಪ್ರಯತ್ನದ ಅಗತ್ಯವಿದೆ.

(ಲೇಖನ ಬರೆಯಲು, ಕ್ಷೇತ್ರ ಕಾರ್ಯದಲ್ಲಿ ಸಹಕರಿಸಿದ ಡಾ. ನಾಗರಾಜಶಾಸ್ತ್ರಿಗಳಿಗೂ, ಶ್ರೀ ಸತ್ಯನಾರಾಯಣ ಶಾಸ್ತ್ರಿಗಳಿಗೂ ಅವರ ಪತ್ನಿ ಇಂದಿರಮ್ಮ ಹಾಗೂ ಸುಬ್ರಮಣ್ಯ ಶಾಸ್ತ್ರಿಗಳ ಮನೆಯ ಸದಸ್ಯರಿಗೂ ತಿರುಮಲೆಯ ಮನೆತನದವರಿಗೂ, ಇತರ ಸ್ಥಳೀಯರಿಗೂ ನನ್ನ ಕೃತಜ್ಞತೆಗಳು.)

* 'ಚಿನ್ನ ಹೊಳಲಿ' ಡಾ. ನಾಗರಾಜಶಾಸ್ತ್ರಿಗಳ ೨೦ ವರ್ಷಗಳ ನೆನಪಿಗಾಗಿ ಸಲ್ಲಿಸಿದ ಅಭಿನಂದನಾ ಸಂಚಿಕೆ.

ವೇದಾವತಿ ಎಸ್. ಬಾಲು*

ಶಿವಗಂಗೆಯ ತೀರ್ಥೋದ್ಭವ - ಒಂದು ವೈಜ್ಞಾನಿಕ ವಿಶ್ಲೇಷಣೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಪ್ರಸಿದ್ಧ ತೀರ್ಥಕ್ಷೇತ್ರ ಶಿವಗಂಗೆ. ಪ್ರತಿ ವರ್ಷ ಮಕರ ಸಂಕ್ರಾಂತಿಯಂದು ಶಿವಗಂಗೆಯ ಬೆಟ್ಟದ ಶಿಖರದಲ್ಲಿ ತೀರ್ಥೋದ್ಭವವಾಗುವುದು ವಿಶೇಷ. ಆ ಪವಿತ್ರ ತೀರ್ಥವನ್ನು ಅಂದು ನಡೆಯುವ ಗಿರಿಜಾ ಕಲ್ಯಾಣ ಮಹೋತ್ಸವಕ್ಕೆ ಬಳಸುತ್ತಾರೆ. ಈ ತೀರ್ಥೋದ್ಭವ ಹಾಗೂ ಗಿರಿಜಾ ಕಲ್ಯಾಣದ ಪ್ರಸ್ತಾಪವು ಕ್ರಿ.ಶ. ೧೨೩೪ರ ತುಮಕೂರು ಜಿಲ್ಲೆಯ ಹೊನ್ನುಡಿಕೆ ಹೋಬಳಿಯ ಮುಳುಕುಂಟೆ ಅಗ್ರಹಾರದಲ್ಲಿ ದೊರೆತ ತಾಮ್ರಶಾಸನ[೧]ದ ನಕಲಿನಲ್ಲಿದೆ. ಶಾಸನದಲ್ಲಿ ತೀರ್ಥೋದ್ಭವ ಹಾಗೂ ಗಿರಿಜಾ ಕಲ್ಯಾಣದ ಕುರಿತು ಹೀಗೆ ಹೇಳಲಾಗಿದೆ :



> ಸಏಕದಾತೀರ್ಥಯಾತ್ರಾಮಟನ್ ಕ್ಷೇತ್ರಂ ಕಕುದ್ಗಿರಿಂ
> ಅಗತ್ಯಸಬಲಃ ಶ್ರೀಮಾನ್ ಸಾಮಾತ್ಯಃ ಸಪುರೋಹಿತಃ
> ತದ್ಗಿರೇರ್ಮೂರ್ಧ್ನಿ ಸಂಭೂತಾಂ ಗಂಗಾಂಮಕರಗೇರವೌ
> ದೃಷ್ಟ್ವಾಗಂಗಾಧರೇಶಾಯ ವಿಭುರ್ವಿಪ್ರೈರ್ವಿಧಾನತಃ
> ಕಾರಯಾಮಾಸ ಗಿರಿಜಾಕಲ್ಯಾಣಂ ಸುಮಹೋತ್ಸವಂ

ಕಾಕತೀಯ ಪ್ರತಾಪರುದ್ರನು ತೀರ್ಥಯಾತ್ರೆ ಮಾಡುತ್ತಾ ಶಿವಗಂಗೆಗೆ ಬಂದಿದ್ದು, ಆ ದಿನ ಸೂರ್ಯನು ಮಕರ ರಾಶಿಗೆ ಚಲಿಸಿದ ವಿಚಾರವನ್ನು ಹಾಗೂ ಬೆಟ್ಟದ ಮೇಲೆ ಗಂಗೋತ್ಪತ್ತಿ ಆದದ್ದನ್ನು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಪ್ರತಾಪರುದ್ರನು ಗಿರಿಜಾಕಲ್ಯಾಣದ ಸುಮಹೋತ್ಸವದಲ್ಲಿ ಪಾಲ್ಗೊಂಡಿದ್ದಾಗಿ ಶಾಸನವು ತಿಳಿಸುತ್ತದೆ.


ಈ ಶಾಸನ ಮಾತ್ರವಲ್ಲದೆ 'ಶಿವಗಂಗಾ ಮಠದ ಐತಿಹಾಸಿಕ ದಾಖಲೆಗಳು' ಎಂಬ ಕೃತಿಯಲ್ಲಿ ನಮೂದಾಗಿರುವ ಹಲವು ಪತ್ರಗಳಲ್ಲಿ ಶಿವಗಂಗೆಯ ತೀರ್ಥಪ್ರಸಾದವು ಮೈಸೂರು ಮಹಾರಾಜರಿಗೆ ತಲುಪಿದ ಬಗ್ಗೆ ವಿವರಗಳಿವೆ. ಆಗಿನ ಮೈಸೂರು ದೊರೆಗಳಾಗಿದ್ದ ಕೃಷ್ಣರಾಜ ಒಡೆಯರ್ ಅವರಿಗೆ ಅಭಿನವ ಸಚ್ಚಿದಾನಂದ ಭಾರತಿಯವರು ಆಗಿನ ಕಾಲಕ್ಕೆ ಸಾವಿರ ರೂಪಾಯಿ ಬೆಲೆ ಬಾಳುವ ಶಾಲು ಜೋಡಿಯ ಜೊತೆಗೆ ಸ್ವಾಮಿಗಳ ಶ್ರೀಮುಖ, ಗಂಗಾತೀರ್ಥ, ಪ್ರಸಾದ ವಿಭೂತಿ, ಫಲ ಮಂತ್ರಾಕ್ಷತೆಗಳನ್ನು ಶ್ರೀಮಠದಿಂದ ಅರ್ಚಕ ಹೊನ್ನಿಭಟ್ಟ, ಮಠದ ಗೋಪಾಲಶಾಸ್ತ್ರಿ ಎಂಬಿಬ್ಬರು ಬ್ರಾಹ್ಮಣರು ಮೈಸೂರು ಅರಮನೆಗೆ ಕೊಂಡೊಯ್ದಿದ್ದಾಗಿ ೨೧-೩-೧೮೧೬ರ ಪತ್ರವೊಂದರ ಟಿಪ್ಪಣಿ[೨]ಯಿಂದ ತಿಳಿಯುತ್ತದೆ. ಶ್ರೀಮಠದಲ್ಲಿ ಅಭಿನವ ಸಚ್ಚಿದಾನಂದ ಭಾರತಿ ಸ್ವಾಮಿಗಳು ಸನ್ಯಾಸಪೀಠ ವಹಿಸಿದ್ದ ಕಾಲದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಶ್ರೀಮಠಕ್ಕೆ ಭೇಟಿ ನೀಡಿ ಶ್ರೀ ಕ್ಷೇತ್ರದ ದೇವಾನುದೇವತೆಗಳ ದರ್ಶನ ಭಾಗ್ಯ ಪಡೆದಿದ್ದರೆಂಬ ವಿಚಾರವನ್ನು ೯-೩-೧೮೩೨ರ ಪತ್ರದ ಟಿಪ್ಪಣಿ[೩]ಯು ತಿಳಿಸುತ್ತದೆ.

ಗುಬ್ಬಿ ಮಲ್ಲಣಾರ್ಯ ವಿರಚಿತ ವೀರಶೈವಾಮೃತ ಪುರಾಣ ಕೃತಿಯಲ್ಲಿ ಶಿವಗಂಗೆಯ ತೀರ್ಥೋದ್ಭವದ ಉಲ್ಲೇಖವಿದೆ ಎಂಬುದನ್ನು ಡಾ॥ ಬಿ. ನಂಜುಂಡಸ್ವಾಮಿಯವರು ತಿಳಿಸಿದ್ದಾರೆ.

ನೂರಾರು ವರ್ಷಗಳಿಂದ ಆಗುತ್ತಿರುವ ತೀರ್ಥೋದ್ಭವವನ್ನು ಜನರು ಪವಾಡವೆಂದು ನಂಬಿದ್ದಾರೆ. ಆದರೆ ವೈಜ್ಞಾನಿಕವಾಗಿ ತೀರ್ಥೋದ್ಭವಕ್ಕೆ ಹಲವು ಕಾರಣಗಳಿವೆ. ಅವುಗಳು ಹೀಗಿವೆ :

* ೧೪೪, 'ಸ್ವಸ್ತಿಶ್ರೀ ಸ್ಕಂದ', ಅರಸಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

೧) **ಜಿಲ್ಲೆಯ ಎತ್ತರದ ಬೆಟ್ಟ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರಮುಖ ಬೆಟ್ಟಗಳೆಂದರೆ : ಶಿವಗಂಗೆ (೧೩೮೯ ಮೀ), ಸಾವನದುರ್ಗ (೧೨೦೭ ಮೀ), ನಿಜಗಲ್ಲು (೧೦೭೦ ಮೀ), ರಾಮಗಿರಿ (೯೮೯ ಮೀ), ಕಬ್ಬಾಳದುರ್ಗ (೧೦೫೦ ಮೀ), ಹಾಗೂ ಬಾಣಂತಿಮಾರಿ ಬೆಟ್ಟ (೧೦೪೩ ಮೀ)[೪]. ಶಿವಗಂಗೆಯು ೧೩°೧೦" ರಿಂದ ೧೩°೧೫" ಉತ್ತರ ಅಕ್ಷಾಂಶ ಹಾಗೂ ೭೭°೧೦" ರಿಂದ ೭೭°೧೫" ಪೂರ್ವ ರೇಖಾಂಶದಲ್ಲಿದೆ. ಬೆಟ್ಟದ ತುತ್ತತುದಿಯವರೆಗೆ ಇದರ ಎತ್ತರ ಸಮುದ್ರಮಟ್ಟದಿಂದ ೪೫೫೯ ಅಡಿಗಳು (೧೩೮೯ ಮೀಟರ್). ಈ ಮಾಹಿತಿಯಿಂದ ಗಮನಿಸಬೇಕಾದ ಮುಖ್ಯ ಸಂಗತಿಯೆಂದರೆ ಶಿವಗಂಗೆಯು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎತ್ತರದ ಬೆಟ್ಟವಾಗಿದೆ. ಭೌಗೋಳಿಕವಾಗಿ ನೀರು ಉತ್ಪತ್ತಿಯಾಗಲು ಅವಶ್ಯಕವಿರುವ ವಾತಾವರಣವನ್ನು ಹೊಂದಿದೆ ಎನ್ನಬಹುದು.




೨) **ಬೆಟ್ಟದ ಶಿಲೆಯ ಸ್ವರೂಪ :** ಶಿವಗಂಗೆಯ ಬೆಟ್ಟವು ಕಣಶಿಲೆಗಳಿಂದ ರೂಪು ಗೊಂಡಿದ್ದು ನೀರನ್ನು ನೈಸರ್ಗಿಕವಾಗಿಯೇ ಬಂಡೆಗಳ ಸಂದುಗಳಲ್ಲಿ ಸಂಗ್ರಹಿಸಿಕೊಂಡಿರುತ್ತದೆ. ಅಲ್ಲದೆ ಬೆಟ್ಟವು ಲೋಹದ ಅಂಶಗಳನ್ನು ಒಳಗೊಂಡಿರುವುದರಿಂದ ಸಂದುಗಳಲ್ಲಿ ಶೇಖರಗೊಂಡಿರುವ ನೀರು ಉಷ್ಣತೆ ಹೆಚ್ಚಿದಂತೆ ಜಿನುಗುತ್ತದೆ ಹಾಗೂ ಕೆಲವೊಮ್ಮೆ ಚಿಲುಮೆಯಂತೆಯೂ ಹೊರಬರುತ್ತದೆ[೫]. ಇಂತಹ ಬೆಟ್ಟಗಳಲ್ಲಿನ ಒರತೆಗಳು ಬಹುದೊಡ್ಡ ಮರುಭೂಮಿಗಳಲ್ಲೂ ಕಾಣಸಿಗುತ್ತವೆ. ಸಹಾರಾದ ಹೃದಯ ಭಾಗದಲ್ಲಿರುವ 'ಟಿಸ್ಸಿಲಿ' ಬೆಟ್ಟಗಳು ನೀರನ್ನು ಹೆಚ್ಚಿನ ಪ್ರಮಾಣದಲ್ಲಿ ಹಿಡಿದಿಟ್ಟುಕೊಂಡಿರುವುದರಿಂದ ಸೈಪ್ರಸ್ ಮರಗಳು ಹಾಗೂ ಮೀನಿರುವ ಸರೋವರಗಳನ್ನು ಬಹಳ ಹಿಂದಿನಿಂದಲೂ ಕಾಣಬಹುದು[೬].


ಕ್ಯಾಲಿಫೋರ್ನಿಯಾದ ಆಗ್ನೇಯ ದಿಕ್ಕಿನಲ್ಲಿರುವ ಬೆಟ್ಟಗಳಲ್ಲಿಯೂ ಸಹ ನೀರು ಸಂಗ್ರಹಗೊಂಡಿರುತ್ತದೆ. ಆಸ್ಟ್ರೇಲಿಯಾದ ಮರುಭೂಮಿಯಲ್ಲಿರುವ ಏಕಶಿಲೆ 'ಉಲೂರು'ನಿಂದಲೂ ಕೂಡ ನೀರು ಜಿನುಗುತ್ತದೆ.

೩) **ಸೂರ್ಯನ ಪಥ ಹಾಗೂ ಹವಾಮಾನದಲ್ಲಿನ ಬದಲಾವಣೆ :** ಕ್ರಿ.ಪೂ. ೩೫೦ರಲ್ಲಿದ್ದ ಬಹುಮುಖ ಪ್ರತಿಭೆಯ ಅರಿಸ್ಟಾಟಲ್ ಭೂಗೋಳಶಾಸ್ತ್ರಕ್ಕೆ ಸಂಬಂಧಿಸಿದಂತೆ "ಮಿಟಿಯರಾಲಜಿ" (Meteorology) ಎಂಬ ಕೃತಿಯನ್ನು ರಚಿಸಿದ್ದಾರೆ. ಈ ಕೃತಿಯಲ್ಲಿ "ಬಹುತೇಕ ನೀರಿನ ಚಿಲುಮೆಗಳು ಬೆಟ್ಟ ಹಾಗೂ ಬೆಟ್ಟಗಳ ಆಸುಪಾಸಿನಲ್ಲಿರುತ್ತವೆ. ಇವು ಶುಭ್ರ ಹಾಗೂ ಆರ್ದ್ರತೆಯ ಸ್ಪಂಜಿನಂತೆ ಕಾರ್ಯ ನಿರ್ವಹಿಸಿ ಸಂಕ್ರಮಣದ ಸಂದರ್ಭಗಳಲ್ಲಿ ಇಲ್ಲಿ ನೀರು ಜಿನುಗುತ್ತದೆ ಹಾಗೂ ಸ್ವಲ್ಪ ಪ್ರಮಾಣದಲ್ಲಿ ಶೇಖರವಾಗುತ್ತದೆ"[೭] ಎಂಬ ಉಲ್ಲೇಖವಿದೆ. ಭೂಮಿಯನ್ನು ಆವರಿಸಿರುವ ಮೊದಲ ಪದರವು ನೀರು ಹಾಗೂ ಗಾಳಿಗಳಿಗೆ ಸಂಬಂಧಿಸಿದ ಪ್ರದೇಶ ವಾಗಿದ್ದು, ನೀರಿನ ಉತ್ಪತ್ತಿಯು ಇದೇ ಪ್ರದೇಶದಲ್ಲಾಗುತ್ತದೆ. ನೀರಿನ ಉತ್ಪತ್ತಿಗೆ ಮೂಲ ಹಾಗೂ ಮುಖ್ಯ ಕಾರಣವೆಂದರೆ ಸೂರ್ಯನ ಪಥ. ಇದನ್ನೇ ಅರಿಸ್ಟಾಟಲ್ ಹೀಗೆ ಬರೆದಿದ್ದಾರೆ:

The efficient and chief and first cause is the circle in which the sun moves. For the sun as it approaches or recedes, obviously causes dissipation and condensation and so gives rise to generation and destruction. Now the earth remains but the moisture surrounding it is made to evaporate by the sun's rays and the other heat from above, and rises. But when the heat which was raising it leaves it, in part dispersing to the higher region, in part quenched through rising so far into the upper air, then the vapour cools because its heat is gone and because the place is cold, and condenses again and turns from air into water. And after the water has formed it falls down again to the earth.

The exhalation of water is vapour: air condensing into water is cloud. Mist is what is left over when a cloud condenses into water, and is therefore rather a sign of fine weather than of rain; for mist





might be called a barren cloud. So we get a circular process that follows the course of the sun. For according as the sun moves to this side or that, the moisture in this process rises or falls. We must think of it as a river flowing up and down in a circle and made up partly of air, partly of water. When the sun is near, the stream of vapour flows upwards; when it recedes, the stream of water flows down: and the order of sequence, at all events, in this process always remains the same.

ಏಷ್ಯಾದ ಘರ್ನಾಸಸ್, ಬ್ಯಾಕ್ಟ್ರಸ್, ಅರಾಕ್ಸಸ್ ಮೊದಲಾದ ಬೆಟ್ಟಗಳಲ್ಲಿ ಇಂತಹ ಪ್ರಕ್ರಿಯೆ ನಡೆಯುತ್ತದೆ ಎಂದು ಅರಿಸ್ಟಾಟಲ್ ತಿಳಿಸುತ್ತಾರೆ. ಪ್ರಪಂಚದ ಹಲವು ಭಾಗಗಳಲ್ಲಿ ನಡೆಯುವಂತಹ ಪ್ರಕ್ರಿಯೆಗಳಿಂದಾಗಿಯೇ ಬಹು ದೊಡ್ಡ ನದಿಗಳು ಎತ್ತರದ ಬೆಟ್ಟಗಳಲ್ಲಿ ಉಗಮವಾಗುತ್ತವೆ. ಇದಕ್ಕೆ ಶಿವಗಂಗೆಯೂ ಹೊರತಾಗಿಲ್ಲ.

ಭೂಗರ್ಭಶಾಸ್ತ್ರ ಹಾಗೂ ಹವಾಮಾನಶಾಸ್ತ್ರಗಳ ಪ್ರಕಾರ ಬೆಟ್ಟಗಳು ನೀರಿನ ಪ್ರಮುಖ ಸಂಪನ್ಮೂಲಗಳು. ಎತ್ತರದ ಪ್ರದೇಶಗಳಿಂದ ಸುತ್ತಮುತ್ತಲ ಕೆಳ ಪ್ರದೇಶಗಳಿಗೆ ನಿಯಮಿತ ವಾಗಿ ಮತ್ತು ನಿರ್ಧಾರಿತ ಸ್ವರೂಪದಲ್ಲಿ ನೀರು ಹರಿಯಲು ಸಾಧ್ಯವಾಗುತ್ತದೆ[೮].

ಬೆಟ್ಟಗಳಲ್ಲಿ ಸಂಗ್ರಹಗೊಂಡಿರುವ ನೀರು ನಿರ್ಧಾರಿತ ಪ್ರಮಾಣದಲ್ಲಿದ್ದರೂ ಹವಾಮಾನದ ಬದಲಾವಣೆಗೆ ಒಡ್ಡಿಕೊಳ್ಳುವ ಸಾಮರ್ಥ್ಯವಿರುವುದರಿಂದ ಮಳೆ ಹಾಗೂ ಹಿಮದ ರೂಪದಲ್ಲಿ ಆಕರ್ಷಿಸಿಕೊಂಡಿರುವ ನೀರನ್ನು ಚಳಿಗಾಲದಲ್ಲಿ ಘನರೂಪದಲ್ಲಿ ಹಿಡಿದಿಟ್ಟುಕೊಳ್ಳುತ್ತದೆ[೯].

ಒಟ್ಟಿನಲ್ಲಿ, ಮಕರ ಸಂಕ್ರಮಣದ ದಿನದಂದು ಸೂರ್ಯನು ಭೂಮಿಗೆ ಅತೀ ಸಮೀಪದಲ್ಲಿರುತ್ತಾನೆ. ಭೂಮಿಯ ಉತ್ತರ ಧ್ರುವವು ಸೂರ್ಯನಿಂದ ಅತೀ ದೂರದಲ್ಲಿರುತ್ತದೆ. ಈ ಸಮಯದಲ್ಲಿ ಸೂರ್ಯ ಮಕರ ಸಂಕ್ರಾಂತಿ ವೃತ್ತದಲ್ಲಿ ಭೂಮಿಯ ಸಮಭಾಜಕ ವೃತ್ತದಿಂದ ಸುಮಾರು ೨೩೪° ಅಂತರದಲ್ಲಿರುತ್ತಾನೆ. ಭೂಮಿಯ ಸಮಭಾಜಕ ವೃತ್ತದ ಆಸುಪಾಸಿನ ಪ್ರದೇಶಗಳನ್ನು 'ಉಷ್ಣವಲಯ' ಎಂದು ಗುರುತಿಸಲಾಗುತ್ತದೆ. ಹೀಗೆ ಸಮೀಪದಿಂದ ಹಾಯುವ ಸೂರ್ಯನ ಉಷ್ಣಾಂಶದ ಪರಿಣಾಮದಿಂದ ಉಷ್ಣವಲಯದಲ್ಲಿನ ಎತ್ತರದ ಬೆಟ್ಟಗಳಲ್ಲಿನ ಘನೀಕೃತ ನೀರು ಕರಗುತ್ತದೆ ಹಾಗೂ ನೀರಿನ ಪ್ರಮಾಣ ಹೆಚ್ಚುತ್ತದೆ. ಜೊತೆಗೆ ಬೆಟ್ಟದ ಸುತ್ತಮುತ್ತಲಿನ ಗಾಳಿಯ ಮೇಲ್ಮುಖ ಹಾಗೂ ಕೆಳಮುಖ ಚಲನೆಯಿಂದಾಗಿಯೂ ಉಷ್ಣತೆ ಹೆಚ್ಚಾಗುತ್ತದೆ. ಈ ಕಾರಣದಿಂದಾಗಿಯೇ ಶಿವಗಂಗೆಯಲ್ಲಿ ಸಂಕ್ರಮಣದಂದು ನೀರು ಉಕ್ಕುತ್ತದೆ ಎಂದು ನಿರ್ಧರಿಸಬಹುದು.

ಈ ಪ್ರಕ್ರಿಯೆಯು ಸಂಕ್ರಮಣದ ಹಿಂದಿನ ದಿನವೇ ಆರಂಭವಾಗಿ ಕೆಲವು ದಿನಗಳವರೆಗೆ ಮುಂದುವರೆಯುವ ಸಾಧ್ಯತೆಗಳೂ ಇವೆ. ಆದ್ದರಿಂದ ಪ್ರತಿವರ್ಷ ಮಕರ ಸಂಕ್ರಮಣ ದಂದು ಶಿವಗಂಗೆಯಲ್ಲಿ ಉಂಟಾಗುವ ಗಂಗೋತ್ಪತ್ತಿಗೆ ವೈಜ್ಞಾನಿಕ ಹಿನ್ನೆಲೆಯಿದೆಯೇ ಹೊರತು ಯಾವುದೇ ಪವಾಡ ವಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಎಪಿಗ್ರಾಫಿಯಾ ಕರ್ನಾಟಿಕಾ**, ಸಂ. ೧೨, ತುಮಕೂರು ಜಿಲ್ಲೆಯ ಶಾಸನಗಳು (ಹಳೆಯದು), ೧೯೦೪, ಸಂ. ಬಿ. ಲೂಯಿಸ್ ರೈಸ್.

೨. **ಶ್ರೀ ಶಿವಗಂಗಾ ಕ್ಷೇತ್ರದ ಐತಿಹಾಸಿಕ ದಾಖಲೆಗಳು**, ಪುಟ ೪, ಸಂ. ಶ್ರೀ ಸಿದ್ಧಗಂಗಯ್ಯ ಕಂಬಾಳು, ಪ್ರಕಟಣೆ : ಕರ್ನಾಟಕ ಸರ್ಕಾರ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಧಾನಸೌಧ, ಬೆಂಗಳೂರು.

೩. ಅದೇ., ಪುಟ ೭.

೪. **ಕರ್ನಾಟಕ ರಾಜ್ಯ ಗ್ಯಾಸೆಟಿಯರ್**, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಆಂಗ್ಲ ಸಂಪುಟ), ಸಂ. ಸೂರ್ಯನಾಥ ಕಾಮತ್, ಪ್ರಕಟಣೆ : ಕರ್ನಾಟಕ ಸರ್ಕಾರ, ಬೆಂಗಳೂರು.

೫. ಅದೇ.

೬ ಅದೇ.

೭. ಅರಿಸ್ಟಾಟಲ್‌ನ ಮಿಟಿಯರಾಲಜಿ, ಕ್ರಿ.ಪೂ. ೩೫೦, ಜಾಲತಾಣ :http://classics.mit.edu/Aristotle

೮. http://www.britannica.com/blogs/2008/02/mountains-snow-and-wter-the-cycle-of-life/, Written by : Gregory McNamee, February 26th, 2008.

೯. ಅರಿಸ್ಟಾಟಲ್‌ನ ಮಿಟಿಯರಾಲಜಿ, ಕ್ರಿ.ಪೂ. ೩೫೦, ಜಾಲತಾಣ : http://classics.mit.edu/Aristotle.

ಶಾಶ್ವತಸ್ವಾಮಿ ಮುಕ್ಕುಂದಿಮಠ *

ಪ್ರಾಚೀನ ಐತಿಹಾಸಿಕ ನಗರಿ ಸಾಲಗುಂದೆ

ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನ ಕೇಂದ್ರ ಸ್ಥಳದಿಂದ ಆಗ್ನೇಯ ದಿಕ್ಕಿಗೆ ೨೪ ಕಿ.ಮೀ. ದೂರದಲ್ಲಿ ತುಂಗಭದ್ರಾ ನದಿಯ ಎಡದಂಡೆಯ ಮೇಲೆ ಸಾಲಾಗಿ ಹಬ್ಬಿದ ಬೆಟ್ಟದ ನಡುವೆ ಸಾಲಗುಂದೆ ಊರು ಪವಡಿಸಿದೆ. ನಿತ್ಯ ಹರಿಯುತ್ತಿರುವ ತುಂಗಭದ್ರಾ ತೀರ, ದಕ್ಷಿಣಾಭಿಮುಖವಾಗಿ ಸಿದ್ಧಪರ್ವತವೆಂದು ಪುರಾಣ ಪ್ರಸಿದ್ಧವಾದ ಬಗಳಾಮುಖಿ (ಅಂಬಾದೇವಿ) ಕ್ಷೇತ್ರದವರೆಗೆ ಸಾಲುಸಾಲಾಗಿ ಹಬ್ಬಿದ ಪರ್ವತಶ್ರೇಣಿ ಸಾಲಗುಂದೆಯನ್ನು ಭೌಗೋಳಿಕವಾಗಿ ನಿಸರ್ಗಸಹಜ ಕೋಟೆಯಂತೆ ಸುರಕ್ಷಿತ ಸ್ಥಳವಾಗಿದೆ. ಸಾಮ್ರಾಜ್ಯವನ್ನು ಕಟ್ಟಲು ಆಯಕಟ್ಟಿನ ಅಭೇದ್ಯ ಐತಿಹಾಸಿಕ ಸ್ಥಳದಂತಿದೆ. ಇಲ್ಲಿ ಕಲ್ಯಾಣದ ಚಾಳುಕ್ಯರ ಸಾಮಂತ ಅರಸರಾದ ಸಿಂಧವಂಶದರಸರು ಸುಮಾರು ಎರಡುನೂರು ವರ್ಷಗಳ ಕಾಲ ರಾಜ್ಯಭಾರ ಮಾಡಿದರು. ಸಾಲಗುಂದೆ ಸಿಂಧವಂಶದ ಒಂದು ಶಾಖೆಯ ಉಪರಾಜಧಾನಿಯಾಗಿತ್ತು. ಕ್ರಿ.ಶ. ೧೦೫೩ರ ಚಾಳುಕ್ಯ ತ್ರಿಭುವನ ವಿಕ್ರಮಾದಿತ್ಯನಿಂದ ಕಲ್ಯಾಣದ ಕಳಚೂರಿ ವಂಶದ ಅಂತ್ಯದ ಕಾಲದವರೆಗೂ ಸಾಲಗುಂದೆಯಲ್ಲಿ ಸಿಂಧರು ರಾಜ್ಯಭಾರ ಮಾಡಿ, ಕರ್ನಾಟಕ ಸಂಸ್ಕೃತಿ ಸಾಹಿತ್ಯ ಕಲೆಗೆ ಅಪಾರ ಕೊಡುಗೆಯನ್ನು ನೀಡಿದರು. ಆ ವಂಶದ ಕೆಲವು ರಾಜರು ದೇವಾಲಯ, ಕೆರೆ, ಬಾವಿ, ಪುಷ್ಕರಣಿಗಳನ್ನು ನಿರ್ಮಿಸಿ, ಜನೋಪಯೋಗಿ ಕಾರ್ಯಗೈದರು. ರವಡಕಂದೆ, ಮುಕುಂದಿಯವರೆಗೆ ಹಬ್ಬಿದ ಏಳು ಬೆಟ್ಟಗಳಿಂದ ಆವೃತವಾಗಿರುವುದಕ್ಕೆ ಇದಕ್ಕೆ ಸಾಲಗುಂದೆ ಎಂಬ ಹೆಸರಾಯಿತು. 'ಕುಂದೆ' ಎಂದರೆ ಬೆಟ್ಟವೆಂದು ಅರ್ಥ. ಅಂತೆಯೆ ಸಾಲಗುಂದೆಗೆ ಈ ಹೆಸರು ಅನ್ವರ್ಥಕವಾಯಿತು. ಇಲ್ಲಿಯ ಶಾಸನಗಳು ಈ ಊರನ್ನು 'ಸಾಲಿಗುಂದ ೭೦' ಎಂದು ಉಲ್ಲೇಖಿಸುತ್ತವೆ.

ಪ್ರಾಚೀನ ಐತಿಹಾಸಿಕ ನಗರ : ಸಾಲಗುಂದೆ ಕರ್ನಾಟಕದ ಪ್ರಾಚೀನ ಐತಿಹಾಸಿಕ ನಗರಗಳಲ್ಲಿ ಅತ್ಯಂತ ಪ್ರಸಿದ್ಧ. ಇದು ಐತಿಹಾಸಿಕವಾಗಿ ಹತ್ತು ಹಲವು ಅಂಶಗಳಿಂದ ಮಹತ್ವ ಪಡೆದು ಶ್ರೇಷ್ಠವಾಗಿದೆ. ಹನ್ನೊಂದನೆಯ ಶತಮಾನದ ಪ್ರಾಚೀನತೆ ಮತ್ತು ಭವ್ಯಪರಂಪರೆಯನ್ನು ಹೊಂದಿದೆ. ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಸಾಲಗುಂದೆ ಹೆಚ್ಚಿನ ಪ್ರಾಶಸ್ತ್ಯ ಪಡೆದುಕೊಂಡಿತು. ಇದು ಅಗ್ರಹಾರ, ಉಪರಾಜಧಾನಿಯ ಸ್ಥಾನಮಾನ ಗಳಿಸಿತ್ತು. ಬಲ್ಲಕುಂದೆಯ ರಾಜಧಾನಿಯಾಗಿ ಆಳುತ್ತಿದ್ದ ಕುರುಗೋಡ ಸಿಂದರ ಒಂದು ಶಾಖೆಗೆ ಇದು ಉಪರಾಜಧಾನಿಯಾಗಿತ್ತು. ಮಹಾಜನರಿಂದ ಅಗ್ರಹಾರವಾಗಿದ್ದ ಸಾಲಗುಂದೆ ಒಂದು ಶಿಕ್ಷಣ ಕೇಂದ್ರವಾಗಿತ್ತು. ಸದಾ ಯಜನ-ಯಾಜನಗಳು ಸಾಂಗವಾಗಿ ನಡೆದು ಕರ್ನಾಟಕದ ಇತಿಹಾಸದಲ್ಲಿ ಕುಂದದ ಕೀರ್ತಿಗೆ ಭಾಜನವಾಗಿತ್ತು.

ಉಪರಾಜಧಾನಿ ಸಾಲುಗುಂದೆ : ಸಾಲಗುಂದೆ ೭೦ ಎಂದು ಪ್ರಸಿದ್ಧವಾಗಿರುವ ಈ ಸ್ಥಳ ಎಡೆದೊರೆ ಇರ್ಚ್ಛಾಸಿರ (ಇರ್ದೊರೆ ೨೦೦೦)ದ ಭೌಗೋಳಿಕ ವ್ಯಾಪ್ತಿಯಲ್ಲಿ 'ಸಿಟ್ಟಾರವೆ ೭೦' ಬಲ್ಲಕುಂದೆ ನಾಡಿಗೆ ಸಂಬಂಧಿಸಿತ್ತು. ಸಿಟ್ಟಾರವೆ ಮತ್ತು ಬಲ್ಲಕುಂದೆಯನ್ನು ನೆಲವೀಡನ್ನಾಗಿ ಮಾಡಿಕೊಂಡು ಆಳುತ್ತಿದ್ದ ಸಿಂದವಶಂದ ಒಂದು ಶಾಖೆ ಸಾಲಗುಂದೆಯನ್ನು ಉಪರಾಜಧಾನಿಯಾಗಿ ಮಾಡಿಕೊಂಡು ಆಳುತ್ತಿತ್ತು. ಈ ಸಿಂದ ಅರಸರು ರವುಡಕುಂದೆ, ಮುಕ್ಕುಂದೆ, ಸಿಂಧನೂರು, ದೇವರಗುಡಿ, ನರೇಗಲ್ಲು ಪ್ರದೇಶದಲ್ಲಿ ರಾಜ್ಯಭಾರ ಮಾಡಿದರು. ಅವರು ಬರೆಯಿಸಿದ ಶಾಸನಗಳು ಈ ಪ್ರದೇಶದಲ್ಲಿ ಹೇರಳವಾಗಿ ಸಿಕ್ಕುತ್ತವೆ. ದೇವರಗುಡಿ, ಪಗಡದಿನ್ನಿ, ಮುಕ್ಕುಂದೆ, ರವುಡಕುಂದೆ, ಭೇರಿಗೆ ವೊದಲಾದ ಶಾಸನಗಳು ಐತಿಹಾಸಿಕವಾಗಿ ಬಹು ಮುಖ್ಯವಾಗಿವೆ. 'ಉಳಿಯುಮೇಶ್ವರ' ಅಂಕಿತದಿಂದ ವಚನಗಳನ್ನು ರಚಿಸಿದ ವಚನಕಾರ ಚಿಕ್ಕಯ್ಯ ಪಂಡಿತನ ಚರಿತ್ರೆ ದೇವರಗುಡಿಯ ಎರಡು ಶಾಸನಗಳಲ್ಲಿ ಉಲ್ಲೇಖವಾಗಿದೆ.

ಕಲ್ಯಾಣದ ಚಾಳುಕ್ಯ ರಾಜ ತ್ರೈಲೋಕ್ಯಮಲ್ಲ (ಕ್ರಿ.ಶ. ೧೦೫೩) ಚಾಳುಕ್ಯ ತ್ರಿಭುವನಮಲ್ಲ ವಿಕ್ರಮಾದಿತ್ಯ (ಕ್ರಿ.ಶ. ೧೦೭೬), ಚಾಳುಕ್ಯ ಭೂಲೋಕಮಲ್ಲ ಮಲ್ಲಿಕಾರ್ಜುನ (ಕ್ರಿ.ಶ. ೧೧೫೩) ರಾಜ್ಯಭಾರ ಮಾಡುತ್ತಿದ್ದಾಗ ಅವರ ಸಾಮಂತ ಅರಸರಾದ ಸಿಂದರ ಸಾಲಗುಂದೆಯಲ್ಲಿ ರಾಜ್ಯವಾಳುತ್ತಿದ್ದು ಸುಮಾರು ಎರಡುನೂರು ವರ್ಷ ಬಹು ವೈಭವದಿಂದ ಆಳಿದರು. ನಾಚಿಮಯ್ಯ ಮಗ ಚಾಟಿಗಭೂಪ ಇವರು ಪ್ರಸಿದ್ಧ ಆಡಳಿತಗಾರರು. ಇವರ ಕೈಕೆಳಗಿನ ಕೆಲವು ಅಧಿಕಾರಿಗಳು ಜನಕಲ್ಯಾಣ ಕಾರ್ಯಗೈದು ಕೀರ್ತಿ

* ವಿಶ್ರಾಂತ ಪ್ರಾಂಶುಪಾಲರು, ಪಟೇಲ್‌ನಾಡಿ, ಸಿಂಧನೂರು.

ತಂದಿದ್ದಾರೆ. ಅವರಲ್ಲಿ ನಾಕಿಮಯ್ಯನ ಮಗ ಕಾಳಿದಾಸ ಚಮೂಪ ಆತನ ಹೆಂಡತಿ ಕರ್ಣಾಂಬೆ. ಇವರ ಮಗ ಬಾಚಿಗಭೂಪ ಈತನು ಕಾಳೇಶ್ವರ ದೇವಸ್ಥನವನ್ನು ನಿರ್ಮಿಸಿ ಅದಕ್ಕೆ ಎರಡು ಮತ್ತರು ಭೂಮಿಯನ್ನು ದಾನ ಮಾಡುತ್ತಾನೆ. ಅರ್ಧ ಮತ್ತರು ನೆಲವನ್ನು ಹೂದೋಟಕ್ಕಾಗಿ ನೀಡುತ್ತಾನೆ.

ನಾಗದೇವನ ಕಲ್ಯಾಣ ಕೆಲಸಗಳು : ಬಾಚಿಗಭೂಪನ ಕೈಕೆಳಗಿನ ಅಧಿಕಾರಿ ಕನ್ನಡ ಶಿಖಾಮಣಿ ಬಿರುದಿನ ಸೋಮದೇವ ಮತ್ತು ಆತನ ಪತ್ನಿ ಜಕ್ಕಣಾಂಬೆಯರ ಮಗ ನಾಗದೇವ ಸಾಲಗುಂದೆಯಲ್ಲಿ ಬಾವಿ, ಕೆರೆ, ಹೊಕ್ಕರಾನಿ (ಪುಷ್ಕರಣಿ) ದೇವಾಲಯಗಳನ್ನು ನಿರ್ಮಿಸುತ್ತಾನೆ. ಇವುಗಳ ನಿರ್ವಹಣೆಗಾಗಿ ಆತನು ತುಂಗಭದ್ರಾ ನದಿ ತೀರದಲ್ಲಿ ೧೨ ಮತ್ತರು ಭೂಮಿ ಮತ್ತು ಗಾಣವನ್ನು ನೀಡಿದ್ದಾನೆ. ಆತನು ಕಟ್ಟಿಸಿದ 'ಜಕ್ಕಂಬಾವಿ' ಅತ್ಯಂತ ಪ್ರಸಿದ್ಧ. ನಾಗದೇವನನ್ನು ಕುರಿತು ಕ್ರಿ.ಶ. ೧೦೬೫ರಲ್ಲಿ ಬರೆಯಿಸಿದ ಶಾಸನ ಬಹಳವಾಗಿ ಹೊಗಳಿದೆ. ಅದರಂತೆ ಸಾಲಗುಂದೆ ನಗರದ ವರ್ಣನೆ ಬಹು ಮನೋಜ್ಞವಾಗಿದೆ. ನಾಗದೇವನ ತಂದೆ ಸೋಮದೇವನನ್ನು 'ಕನ್ನಡ ಶಿಖಾಮಣಿ' ಎಂಬ ಬಿರುದಿನಿಂದ ವರ್ಣಿಸಿದೆ. ಇನ್ನು ಆತನ ಪತ್ನಿ ಜಕ್ಕಣಾಂಬೆಯ ರೂಪ–ಗುಣಗಳ ವರ್ಣನೆ ಅದ್ಭುತ ಹಾಗೂ ಅದ್ವಿತೀಯ.

ಜಕ್ಕಂಬಾವಿ : ಸಾಲಗುಂದೆಯ ಹೃದಯ ಭಾಗದಲ್ಲಿರುವ ಜಕ್ಕಂಬಾವಿ ವಿಶಾಲವಾದ ಹೊಕ್ಕರಾಣಿ. ಸುಮಾರು ೧೨೦ ಅಡಿ ಉದ್ದ ಹಾಗೂ ಅಗಲ ಚಚ್ಚೌಕಾಕಾರದಲ್ಲಿದ್ದು ನಾಲ್ಕೂ ದಿಕ್ಕಿಗೂ ಶಿಲೆಯ ಮೆಟ್ಟಿಲುಗಳಿವೆ. ಆಳವಾದ ಈ ಬಾವಿ ಸದಾ ನೀರಿನಿಂದ ತುಂಬಿದೆ. ಬಾವಿಯ ಪಶ್ಚಿಮ ದಿಕ್ಕಿನ ದಂಡೆಯ ಮೇಲೆ ಸಾಲು ಶಿಲಾಮಂಟಪಗಳಿವೆ. ಈ ಬಾವಿಯನ್ನು ಜನ ಜಕ್ಕಂಬಾವಿ ಎಂದು ಕರೆಯುತ್ತಾರೆ. ಕ್ರಿ.ಶ. ೧೦೬೫ರಲ್ಲಿ ನಾಗದೇವ ತನ್ನ ತಾಯಿ ಜಕ್ಕಣಾಂಬೆಯ ಹೆಸರಿನಲ್ಲಿ ಈ ಪುಷ್ಕರಣಿಯನ್ನು ಕಟ್ಟಿಸಿದನು. ಜಕ್ಕಣಾಂಬೆಯ ಹೆಸರು ಇಂದಿಗೂ ಜನಮಾನಸದಲ್ಲಿ ಜಕ್ಕಂಬಾವಿ ಎಂದು ಉಳಿದುಕೊಂಡು ಬಂದಿರುವುದು ಐತಿಹಾಸಿಕ.

ಕನ್ನಡ ಶಿಖಾಮಣಿ : ನಾಗದೇವನ ತಂದೆಯನ್ನು ಶಾಸನ 'ಕನ್ನಡಶಿಖಾಮಣಿ' ಬಿರುದಿನಿಂದ ಬಣ್ಣಿಸಿರುವುದು ಉಲ್ಲೇಖನೀಯ. ಹನ್ನೆರಡನೆಯ ಶತಮಾನದಲ್ಲಿ 'ಕನ್ನಡ ಶಿಖಾಮಣಿ' ಬಿರುದಿನ ಪ್ರಶಸ್ತಿಯೊಂದು ಇತ್ತು ಎಂಬ ವಿಚಾರ ವಿಸ್ಮಯಗೊಳಿಸುತ್ತದೆ. ಇದೊಂದು ಅಪರೂಪದ ಬಿರುದುಳ್ಳ ಪ್ರಶಸ್ತಿ. ಬಹುಶಃ ಕನ್ನಡ ಭಾಷೆಗೆ ಗೌರವ ತರುವ ಇಂತಹ ಬಿರುದಿನ ಸಾಲಗುಂದೆಯ ಈ ಶಾಸನ ಕನ್ನಡ ಶಾಸನ ಸಂಪತ್ತಿನಲ್ಲಿ ಮತ್ತೆಲ್ಲಿಯೂ ದೊರೆಯದ ಅಪರೂಪದ ಶಾಸನ.

ಇದೇ ಶಾಸನವು ಕನ್ನಡ ಶಿಖಾಮಣಿ ಬಿರುದಿನ ಸೋಮದೇವನ ಪತ್ನಿ ಜಕ್ಕಣಾಂಬೆಯ ರೂಪ, ಗುಣ, ಗಾಂಭೀರ್ಯ, ಔದಾರ್ಯಗಳನ್ನು ವರ್ಣಿಸುವ ಭಾಗ ರಸಮಯ ಕಾವ್ಯದಂತಿದೆ. "ಕಮಳಾಸನೆಗಂ ರತಿಗಮದ್ರಿರಾಜಾತ್ಮಗಂ ವಾಸವ ಸತಿಗಂ ಮಿಗಿಲೆನಿಪ ಸತಿ ಪತಿಭಕ್ತಿ ಜಕ್ಕಣಾಂಬಿಕೆಯೆಂಬಳ್" ಸುಂದರ ವರ್ಣನೆ. ಇನ್ನು ಸಾಲಗುಂದೆಯ ವರ್ಣನೆ ಚೇತೋಹಾರಿ. "ಅಗಣಿತಮೆನಲೊಪ್ಪುವ ದೇವಗೇಹಾ ಶತ್ರ ಪ್ರಪಾವನೋಧ್ಧವ ತಟಾಕಾದಿಗಳಿಂದಮರಾವತಿಗಂ ಮಿಗಿಲೆನಿಪ್ಪುದು ಸಾಲಿಗುಂದೆ ಕುಂದದ ಚೆಲ್ವಿಂ" ಎಂಬುದು ಸಾಲಗುಂದೆಯ ಅದ್ವಿತೀಯ ಸೌಂದರ್ಯ.

ಸಾಲಗುಂದೆಯಲ್ಲಿ ನೋಡಬೇಕಾದ ಐತಿಹಾಸಿಕ ಸ್ಥಳಗಳು: ಸಾಲಗುಂದೆಯಲ್ಲಿ ಪ್ರಾಚೀನ ಹಲವಾರು ಸ್ಥಳಗಳು ನೋಡಲು ದೊರೆಯುತ್ತವೆ. ಉತ್ತರಬೆಟ್ಟದ ಮೇಲಿನ ಅನೀಶ್ವರನ ಈಶ್ವರದೇವಾಲಯ, ನೀಲಕಂಠೇಶ್ವರ ದೇವಸ್ಥಾನ ಸುಂದರ ಶಿಲ್ಪಕಲೆಯ ಕಾಲಕಲೇಶ್ವರ ದೇವಸ್ಥಾನ, ಜಕ್ಕಂಬಾವಿ ಮತ್ತು ಸಾಲುಮಂಟಪ, 'ಪಠಾಣಬಾವಿ' ಎಂದು ರೂಢಿಯಲ್ಲಿರುವ ಪ್ರಾಚೀನ ಪುಷ್ಕರಣೆಗಳು ಪ್ರಮುಖ.

ಗಂಡುಗಲಿ ಕುಮಾರರಾಮನ ಉಬ್ಬು ಶಿಲ್ಪ : ಊರಿನ ಪೂರ್ವದಿಕ್ಕಿನಲ್ಲಿ ಒಂದು ಜಗಲಿಯ ಮೇಲೆ ಕಪ್ಪು ಶಿಲೆಯ ಒಂದು ಶಿಲ್ಪ ಎಲ್ಲರನ್ನು ಆಕರ್ಷಿಸುತ್ತದೆ. ಕುದುರೆಯ ಮೇಲೆ ಆರೂಢನಾದ ಯೋಧನೊಬ್ಬ ರಾಜಪೋಷಾಕದಿಂದ ಮನಸೆಳೆಯುತ್ತಾನೆ. ಆ ಯೋಧನ ಹಿಂದೆ ಸೈನಿಕರು ಹೊರಟಿದ್ದಾರೆ. ಕೆಲವರು ಛತ್ರಗಳನ್ನು ಹಿಡಿದು, ಚಾಮರಗಳಿಂದ ಬೀಸುತ್ತ ನಡೆದಿದ್ದಾರೆ. ಈ ಪರಿ ಗೌರವಿಸಿಕೊಳ್ಳುವ ಗಂಡುಗಲಿ ಕುಮಾರರಾಮನಿರಬೇಕು. ಜನರು ಈ ಮೂರ್ತಿಯನ್ನು 'ರಾಮದೇವನೆಂದು' ಕರೆಯುತ್ತಿರುವುದು ಈ ಮಾತಿಗೆ ಪುಷ್ಟಿ ದೊರೆಯುತ್ತದೆ. 'ಪರದಾರ ಸೋದರ' ಕುಮಾರ ರಾಮನ ಕಥೆ ಈ ಭಾಗದ ಜನರ ಮನೆಮಾತಾಗಿದೆ. ಗೌರವಾಭಿಮಾನಗಳು ಅವರಲ್ಲಿ ತುಂಬಿರುವುದೇ ಕುಮಾರರಾಮ ಇನ್ನೂ ಜೀವಂತವಾಗಿರಲು ಕಾರಣ.

ಜೀರ್ಣೋದ್ಧಾರ ಕಾರ್ಯ : ಪ್ರಾಚೀನ ನಗರಿ ಸಾಲಗುಂದೆ ಇಂದು ತನ್ನ ಎಲ್ಲ ವೈಭವವನ್ನು ಕಳೆದು ಕೊಂಡಿದೆ. ಇಲ್ಲಿಯ ದೇವಸ್ಥಾನ, ಬಾವಿ, ಪುಷ್ಕರಣೆಗಳು ಶಿಥಿಲಾವಸ್ಥೆಯಲ್ಲಿವೆ. ಅವುಗಳ ಜೀರ್ಣೋದ್ಧಾರದ ಕಾರ್ಯ ನಡೆಯಬೇಕಾಗಿದೆ. ವಿಶೇಷವಾಗಿ 'ಜಕ್ಕಂಬಾವಿ' ಹೆಸರಿನ ಜಕ್ಕಣಾಂಬೆ ಪುಷ್ಕರಣಿ. ಕರ್ನಾಟಕದಲ್ಲಿನ ಪ್ರಾಚೀನ ಪುಷ್ಕರಣಿಗಳಲ್ಲಿ ಇದೂ ಒಂದು. ಬೃಹದಾಕಾರದ ಪುಷ್ಕರಣಿಯ ನಾಲ್ಕೂ ದಿಕ್ಕಿನಲ್ಲಿ ಶಿಥಿಲವಾಗಿರುವ ಮೆಟ್ಟಿಲುಗಳನ್ನು ಹಾಗೂ ಅದರ ಮೇಲಿನ ಸಾಲುಶಿಲಾಮಂಟಪಗಳನ್ನು ಆದ್ಯತೆಯ ಮೇರೆಗೆ ಜೀರ್ಣೋದ್ಧಾರ ಮಾಡುವುದು ಅವಶ್ಯವಿದೆ. ಕೇಂದ್ರ ಪುರಾತತ್ವ ಇಲಾಖೆ ಇತ್ತ ಕಡೆ ಗಮನ ಹರಿಸಿ ಈ ಕೆಲಸವನ್ನು ಕಾರ್ಯಗತಗೊಳಿಸುವ ಮೂಲಕ ಪ್ರಾಚೀನ ಇತಿಹಾಸ ಸಂಪತ್ತನ್ನು ಸಂರಕ್ಷಿಸಲಿ.

ಡಾ. ಎಸ್.ಜಿ. ಚಲವಾದಿ*
ಶಕುಂತಲಾ ಹ. ಭಜಂತ್ರಿ**

ಪ್ರಾಚೀನ ಅಗ್ರಹಾರ ಹಾವೇರಿ

ಪ್ರಾಚೀನ ಕಾಲದ ವಿದ್ಯಾಕೇಂದ್ರಗಳಲ್ಲೊಂದಾದ ಅಗ್ರಹಾರವು ಸಾಮಾನ್ಯವಾಗಿ ಪಟ್ಟಣದಲ್ಲಿಯ ಬ್ರಾಹ್ಮಣರ ವಸತಿ ಅಥವಾ ಸಾಲುಮನೆಗಳು. ಅಲ್ಲದೆ ಅಗ್ರಹಾರವೆಂದರೆ ವಿದ್ಯಾಕೇಂದ್ರವಿರುವ ಹಳ್ಳಿಯಾಗಿತ್ತು. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ಅಗ್ರಹಾರವೆಂದರೆ ಶ್ರೇಷ್ಠರಿಗೆ ಕೊಟ್ಟಿರುವ ಸ್ಥಳ ಅಥವಾ ಊರು ಎಂದರ್ಥ. ಅಗ್ರ ಎಂದರೆ ಶ್ರೇಷ್ಠ ಆಹಾರ ಎಂದರೆ ದೇಶ ಅಥವಾ ಸ್ಥಳ. ಅಗ್ರಹಾರವೆನ್ನುವುದು ಬ್ರಾಹ್ಮಣರಿಗೆ ಧಾರ್ಮಿಕವಾಗಿ ದಾನ ಕೊಡಲಾದ ದತ್ತಿ. ಅದರ ಸರ್ವಾಧಿಕಾರ ಅವರಿಗೆ ಸೇರಿದ್ದೆಂದು ಕೆ.ಎಂ. ಗುಪ್ತಾರವರು ಅಭಿಪ್ರಾಯಪಟ್ಟಿದ್ದಾರೆ. ಅಗ್ರಹಾರಗಳು ಹೆಚ್ಚಾಗಿ ದೊಡ್ಡ ಗ್ರಾಮಗಳಲ್ಲಿ ಕಂಡುಬರುತ್ತದೆ. ಅಲ್ಲಿ ಬ್ರಾಹ್ಮಣ ವಿದ್ವಾಂಸರು ವೇದಾಧ್ಯಯನದಲ್ಲಿ ನಿರತರಾಗಿರುವುದಲ್ಲದೆ ಷಟ್‌ಕರ್ಮಗಳಲ್ಲಿ ತೊಡಗುತ್ತಿದ್ದರು. ಪಾಠ ಹೇಳಿಕೊಡುವುದು ಈ ಷಟ್‌ಕರ್ಮಗಳಲ್ಲಿ ಒಂದಾಗಿತ್ತು. ಈ ಅಗ್ರಹಾರಗಳನ್ನು ಮಹಾಜನರು ನೋಡಿಕೊಳ್ಳುತ್ತಿದ್ದರು. ಅಗ್ರಹಾರಗಳಲ್ಲಿ ವಿದ್ಯಾರ್ಥಿಗಳಿಗೆ ಅನೇಕ ವಿಷಯಗಳನ್ನು ಕಲಿಸಲಾಗುತ್ತಿತ್ತು. ಈ ಅಗ್ರಹಾರಗಳು ಹೇಗೆ ಸ್ಥಾಪನೆಯಾಗುತ್ತಿದ್ದವು ಎಂಬುದನ್ನು ತಿಳಿಯುವುದಕ್ಕೆ ಬೆಳಗಾವಿ ಜಿಲ್ಲೆಯಲ್ಲಿರುವ ದೇಗಾಂವಿಯ ಅಗ್ರಹಾರ ಸ್ಥಾಪನೆಯಾದ ಬಗೆಯನ್ನು ವಿವರಿಸುವ ಶಾಸನವು ಇದೆ.

ಅಗ್ರಹಾರದಲ್ಲಿ ಕಲಿಸುವ ವಿಷಯಗಳೆಂದರೆ ಗಣಿತ, ಜ್ಯೋತಿಷ್ಯ, ಛಂದಸ್ಸು, ಅಲಂಕಾರಶಾಸ್ತ್ರ ಮತ್ತು ವ್ಯಾಕರಣಶಾಸ್ತ್ರ ಈ ಅಗ್ರಹಾರಗಳಿಗೆ ಮಹಾಜನರಿಂದ ಭೂದಾನ, ದ್ರವ್ಯದಾನಗಳನ್ನು ನೀಡಲಾಗುತಿತ್ತೆಂದು ಶಾಸನಗಳು ತಿಳಿಸುತ್ತವೆ. ಮಹಾಸಾಮಂತರು ಹಾಗೂ ಶ್ರೀಮಂತರು ಸಹ ಅಗ್ರಹಾರಗಳನ್ನು ಸ್ಥಾಪಿಸುತ್ತಿದ್ದರು. ಇದಕ್ಕೂ ಪೂರ್ವವಾದ ಮಾಹಿತಿಗಳು ಶಾಸನಗಳಲ್ಲಿ ಲಭ್ಯವಾಗಿವೆ. ಅಗ್ರಹಾರಗಳ ಸ್ಥಾಪನೆಯ ಪರಂಪರೆಯು ಪ್ರಾಚೀನ ಕಾಲದಿಂದಲೂ ಇತ್ತು. ಕಲ್ಹಣನು ತನ್ನ ರಾಜತರಂಗಿಣಿಯಲ್ಲಿ ಕಾಶ್ಮೀರದ ಅರಸರಾದ ಕುಶ, ಜನಕ, ಚಿನಾಕ ಅವರು ಅಗ್ರಹಾರಗಳನ್ನು ಸ್ಥಾಪಿಸಿದ್ದರೆಂದು ತಿಳಿದುಬರುತ್ತದೆ. ಇದರಿಂದ ಬ್ರಾಹ್ಮಣರಿಗೆ ದಾನವನ್ನು ಕೊಡುವುದಕ್ಕಾಗಿ ಅಗ್ರಹಾರವನ್ನು ನಿರ್ಮಿಸುತ್ತಿದ್ದರು. ಈ ಅಗ್ರಹಾರಗಳು ಮುಂದೆ ಶಿಕ್ಷಣ ಕೇಂದ್ರಗಳಾಗಿ ಮಾರ್ಪಾಡನ್ನು ಹೊಂದುತ್ತಿದ್ದವು. ದಾನವನ್ನು ನೀಡುವುದರಿಂದ ತನಗೂ ತನ್ನ ಬಂಧುಗಳಿಗೂ ಪುಣ್ಯ ಲಭಿಸುತ್ತದೆ ಎಂಬ ಕಾರಣಕ್ಕಾಗಿ ಹಳ್ಳಿಗಳನ್ನು ಅಗ್ರಹಾರವಾಗಿ ಪರಿವರ್ತಿಸಿ ಬ್ರಾಹ್ಮಣರಿಗೆ ದಾನವನ್ನು ನೀಡುತ್ತಿದ್ದರು. ಆ ಮೂಲಕ ಅಗ್ರಹಾರಗಳು ಶಿಕ್ಷಣವನ್ನು ಪ್ರಸಾರಗೊಳಿಸಿ ಜ್ಞಾನವನ್ನು ನೀಡುವ ವಿದ್ಯಾಕೇಂದ್ರಗಳಾದವು. ಇನ್ನೂ ಕೆಲವು ಸಂದರ್ಭಗಳಲ್ಲಿ ರಾಜರು ತಾವು ಯುದ್ಧದಲ್ಲಿ ಜಯವನ್ನು ಸಂಪಾದಿಸಿದಾಗ ಅದರ ಸ್ಮರಣೆಗಾಗಿ ಅಗ್ರಹಾರಗಳನ್ನು ಸ್ಥಾಪಿಸುತ್ತಿದ್ದರು.

ಹಾವೇರಿ ಪ್ರದೇಶವು ಪ್ರಾಚೀನ ಕಾಲದಿಂದಲೂ ಒಂದು ವಿಶಿಷ್ಟವಾದ ಚರಿತ್ರೆಯನ್ನು ಹೊಂದಿದೆ. ಈ ಪ್ರದೇಶ ಕುಂತಳ ದೇಶದ ಬೃಹತ್ ಪ್ರಾಂತ್ಯವಾದ ಬನವಾಸಿ-೧೨೦೦೦, ಬಾಸವೂರ-೧೪೦ರ ಭಾಗವಾಗಿದೆ. ಈ ಪ್ರದೇಶವು ಬನವಾಸಿ ಕದಂಬರಿಂದ ಹಿಡಿದು ಕಲ್ಯಾಣದ ಚಾಲುಕ್ಯರ ಕಾಲದವರೆಗೆ ಅನೇಕ ಅರಸರ ಆಳ್ವಿಕೆಗೆ ಒಳಪಟ್ಟಿತ್ತೆಂದು ತಿಳಿಯಲಾಗಿದೆ. ಈ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ಅನೇಕ ದೊರೆಗಳ ಶಿಲಾಶಾಸನಗಳು ಹಾವೇರಿಯ ಚರಿತ್ರೆ ಮತ್ತು ಅಗ್ರಹಾರದ ಬಗ್ಗೆ ಮಾಹಿತಿ ಒದಗಿಸುತ್ತವೆ. ಅವುಗಳ ಜೊತೆಗೆ ಪ್ರಚಲಿತವಿರುವ ದಂತಕಥೆಯ ಪ್ರಕಾರ ಈ ಪ್ರದೇಶವನ್ನು ನಳಚಕ್ರವರ್ತಿ ಎಂಬ ಅರಸನು ಆಳುತ್ತಿದ್ದಾಗ ಅಲ್ಲಿ ಬೃಹತ್ ಕೆರೆಯನ್ನು ಕಟ್ಟಿಸಿದ. ತದನಂತರ ಒಂದು ವರ್ಷ ಅತಿಯಾದ ಮಾನಸೂನ ಮಳೆಯಿಂದ ಕೆರೆ ತುಂಬಿ ಪ್ರವಾಹ ಹರಿಯಿತು. ಆಗ ಆ ಪ್ರವಾಹದ ಜೊತೆಗೆ ಒಂದು ಸರ್ಪ ತೇಲಿಹೋಗುತ್ತಿತ್ತು. ಅದನ್ನು ಕಂಡ ನಳಚಕ್ರವರ್ತಿ ಆ ಹಾವನ್ನು ಕೆರೆಯ ಏರಿಯ ಮೇಲೆ ಎತ್ತಿ ಹಾಕಿದ ಪ್ರಯುಕ್ತ ಆ ಪ್ರದೇಶಕ್ಕೆ ಹಾವೇರಿ ಎಂಬ ಹೆಸರು ಬಂದಿತ್ತೆಂದು ಹೇಳಬಹುದು.

ಹಾವೇರಿಯಲ್ಲಿ ದೊರೆತ ಕಲ್ಯಾಣದ ಚಾಲುಕ್ಯ ದೊರೆ ಒಂದನೇ ಸೋಮೇಶ್ವರನ ಕ್ರಿ.ಶ. ೧೦೬೭ರ ಶಾಸನವು

*
**

ಸೇರಿದಂತೆ ಅನೇಕ ಶಾಸನಗಳು ಹಾವೇರಿಯನ್ನು ಪಾವರಿ, ಪಾವುರಿ, ನಳಪುರಿ ಇತ್ಯಾದಿ ಹೆಸರುಗಳಿಂದ ಕರೆಯಲ್ಪಡುತ್ತಿದ್ದು, ಅಂಶವನ್ನು ತಿಳಿಸುತ್ತಿದ್ದು, ಹಾವೇರಿಯು ಬೃಹತ್ ಅಗ್ರಹಾರವಾಗಿ ಬೆಳೆದ ಅಂಶವನ್ನು ದಾಖಲಿಸಿವೆ.

ಹಾವೇರಿ ಪ್ರದೇಶದ ಅಗ್ರಹಾರಗಳ ಬಗ್ಗೆ ಕದಂಬರ ಕಾಲದ ಶಾಸನಗಳು ಖಚಿತ ಮಾಹಿತಿ ಕೊಡುವುದಿಲ್ಲ ಹಾಗೆಯೇ ಬಾದಾಮಿ ಚಾಲುಕ್ಯ ಮತ್ತು ರಾಷ್ಟ್ರಕೂಟರ ಕಾಲದ ಶಾಸನಗಳಲ್ಲಿಯೂ ಸಹ ಹಾವೇರಿ ಅಗ್ರಹಾರದ ಕುರಿತು ಶಾಸನಗಳು ಉಲ್ಲೇಖಿಸಿಲ್ಲ. ಆದರೆ ಹತ್ತನೆ ಶತಮಾನದ ನಂತರ ಕಲ್ಯಾಣಿ ಚಾಲುಕ್ಯರು, ಕಲಚೂರಿಗಳು ಮತ್ತು ಸೇವುಣರ ಶಾಸನಗಳು ಹಾವೇರಿ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಅಗ್ರಹಾರಗಳ ಬಗ್ಗೆ ದಾನದತ್ತಿಗಳನ್ನು ಬಿಟ್ಟಿರುವ ವಿಷಯಗಳನ್ನು ತಿಳಿಸುತ್ತವೆ. ಹಾವೇರಿಯಲ್ಲಿ ದೊರೆತ ಕಲ್ಯಾಣಿ ಚಾಲುಕ್ಯ ಅರಸ ಮೂರನೇ ತೈಲಪನ ಕ್ರಿಸ. ೧೧೫೨ರ ಶಾಸನದಲ್ಲಿ ಮಾದೇವರಸ ತನ್ನ ಒಡೆಯನ ಕಾಶ್ಮೀರ ಮುಖಮುಂಡ ಬಿರುದುಳ್ಳವನು, ಇವನು ೫೦೦ ಬಣಜಿಗರೊಡನೆ ಇಂದಿನ ಹಾವೇರಿಗೆ ಬಂದು ಅಲ್ಲಿ ೪೦೦ ಮಹಾಜನರ ಪಾದಪೂಜೆ ಮಾಡಿಸಿದನೆಂದು ಈ ಶಾಸನ ಉಲ್ಲೇಖಿಸಿದೆ. ವೇದಾಧ್ಯಯನ ಮಾಡುವುದು ಮತ್ತು ಶಿಕ್ಷಣವನ್ನು ಕಲಿಸುವುದು ಇವರ ಕರ್ತವ್ಯವಾಗಿತ್ತು. ಹಾವೇರಿಯಲ್ಲಿ ದೊರೆತ ಕಲಚೂರಿ ಸೋಮೇಶ್ವರನ ಶಾಸನದಲ್ಲಿ ಹಾವೇರಿಯ ೪೦೦ ಮಹಾಜನರಿಂದ ಸಿದ್ಧೇಶ್ವರ ದೇವಾಲಯಕ್ಕೆ ದಾನ ಮಾಡಿದ ಉಲ್ಲೇಖ ಕಂಡುಬರುತ್ತದೆ.

ಯಾದವ ಮೂರನೇ ಸಿಂಘಣನ ಹಾವೇರಿಯ ಕ್ರಿಶ. ೧೨೨೮ರ ಶಾಸನದಲ್ಲಿ ಶ್ರೀಮದನಾದಿಯಗ್ರಹಾರಂ ಹವರಿ ಎಂಬ ವಿಷಯ ವಿಷದೀಕರಿಸಲಾಗಿದೆ. ಅಲ್ಲದೆ ಈ ದೊರೆಯ ಇನ್ನೊಂದು ಶಾಸನದಲ್ಲಿ ಅಂದರೆ ಕ್ರಿ.ಶ. ೧೨೩೦ರ ಶಾಸನದಲ್ಲಿ ಅಗ್ರಹಾರ ಹಾವೇರಿ ಎಂದು ಹೇಳಲಾಗಿದೆ. ಸೇವುಣ ಅರಸ ಕನ್ನರನ ಒಂದು ಶಾಸನದಲ್ಲಿ ಹಾವೇರಿಯ ಮಹಾಅಗ್ರಹಾರ ಪುನರ್‌ದತ್ತಿಯ ಉಲ್ಲೇಖವಿದೆ. ಇದೇ ರಾಜಮನೆತನದ ಮಹಾದೇವನ ಕ್ರಿ.ಶ. ೧೨೬೫ರ ಒಂದು ಶಾಸನದಲ್ಲಿ ಹಿರಿಯ ಅಗ್ರಹಾರ ಹಾವೇರಿ ಎಂದು ಉಲ್ಲೇಖಿತವಾಗಿದೆ. ಈತನದೇ ಆದ ಕ್ರಿ.ಶ. ೧೨೬೯ರ ಶಾಸನದಲ್ಲಿ ಕೂಡಾ ಮೇಲಿನಂತೆ ತಿಳಿದುಬರುತ್ತದೆ. ಇದೇ ನಗರದಲ್ಲಿ ದೊರೆತ ರಾಮಚಂದ್ರನ ಕ್ರಿಶ. ೧೨೬೯ರ ಒಂದು ಶಾಸನದಲ್ಲಿ ಸುಂಕಾಧಿಕಾರಿ ಮಾದಯ್ಯನಿಂದ ಅಗ್ರಹಾರ ಹಾವೇರಿಯ ಸಿದ್ಧನಾಥ ದೇವರಿಗೆ ಸುಂಕಗಳ ದಾನದ ಉಲ್ಲೇಖವಿದೆ. ಹಾವೇರಿಯಲ್ಲಿ ದೊರೆತ ಕ್ರಿ.ಶ. ೧೭೮೫ರ ಒಂದು ಶಾಸನದಲ್ಲಿ ಶ್ರೀನಿವಾಸ ದೇವರ ಅಗ್ರಹಾರದಲ್ಲಿಯ ಬ್ರಾಹ್ಮಣರ ವೃತ್ತಿಗಳ ಬಗ್ಗೆ ಉಲ್ಲೇಖಿಸಲಾಗಿದೆ.

ಈ ಮೇಲಿನ ಎಲ್ಲ ಅಂಶಗಳನ್ನು ಅವಲೋಕಿಸಿದಾಗ ಹಾವೇರಿಯು ಪ್ರಾಚೀನ ಕಾಲದಲ್ಲಿ ಪ್ರಮುಖ ಅಗ್ರಹಾರವಾಗಿ ವಿದ್ಯಾಕೇಂದ್ರವಾಗಿ ಮೆರೆದಿತ್ತು ಎಂದು ಹೇಳಬಹುದು. ಅಲ್ಲದೆ ಮಹಾಜನರು ಎಂದು ಉಲ್ಲೇಖಿತಗೊಂಡಿರುವುದರಿಂದ ವಿದ್ಯಾರ್ಜನೆಗೆ ಬಹಳ ಮಹತ್ವವಾದ ಸ್ಥಾನವನ್ನು ಕೊಟ್ಟಿದ್ದರೆಂದು ಹೇಳಬಹುದು. ಒಟ್ಟಿನಲ್ಲಿ ಇದೊಂದು ವಿದ್ಯಾಕೇಂದ್ರವಾಗಿತ್ತು. ಈ ಪ್ರಾಂತದಲ್ಲಿ ವಿದ್ಯಾಭ್ಯಾಸಕ್ಕಾಗಿ ಅನೇಕ ಅಗ್ರಹಾರಗಳಿದ್ದವು ಎಂದೂ ಇತರೇ ಶಾಸನಗಳಿಂದ ತಿಳಿಯುತ್ತದೆ.

ಇದು ವಿದ್ಯಾಕೇಂದ್ರವಾಗಿದ್ದು ಮಹಾಜನರು ಈ ಪ್ರದೇಶದಲ್ಲಿ ಶಾಸ್ತ್ರಾಧ್ಯಯನದ ವಿವಿಧ ಶಾಖೆಗಳಲ್ಲಿ ಅಧ್ಯಯನ ನಿರತರಾಗಿದ್ದರು. ಇಲ್ಲಿ ೪೦೦ ಮಹಾಜನರಿದ್ದು ವೇದ, ತರ್ಕ, ವ್ಯಾಕರಣ, ಪುರಾಣ, ಕಾವ್ಯ, ನಾಟಕ ಇತ್ಯಾದಿ ವಿಷಯಗಳು ಇಲ್ಲಿ ಅಧ್ಯಯನ ಮಾಡುತ್ತಿದ್ದರು. ಈ ಪ್ರದೇಶದಲ್ಲಿ ದೊರೆತ ಶಾಸನಗಳಲ್ಲಿ ಹೆಚ್ಚು ಹಳಗನ್ನಡ ಭಾಷೆಯಲ್ಲಿವೆ. ಮುಂದೆ ಅದರ ಮಹತ್ವವನ್ನು ತಿಳಿದುಕೊಳ್ಳಬಹುದು. ಹಾವೇರಿ ಅಗ್ರಹಾರದ ಪ್ರಾಮುಖ್ಯತೆಯನ್ನು ಈ ಕೆಳಗೆ ತಿಳಿಸಲಾಗಿದೆ.

ಮಹಾಜನರು : ಅಗ್ರಹಾರದ ಅಧಿಕಾರಿಗಳಿಗೆ ಮಹಾಜನರೆಂದು ಹೆಸರು. ಆದರೆ ಮಹಾಜನರೆಂದರೆ ಸಾಹಿತ್ಯಿಕವಾಗಿ ಗೌರವಾನ್ವಿತ ವ್ಯಕ್ತಿಗಳು. ಇವರು ಅಧ್ಯಯನ ಮಾಡುವ ಪಂಡಿತರಿಗೆ ಗ್ರಾಮಗಳನ್ನು ಕಾಣಿಕೆಯಾಗಿ ನೀಡುತ್ತಿದ್ದರು. ಸಾಮಾನ್ಯವಾಗಿ ಬ್ರಾಹ್ಮಣರಿಗೆ ಮಹಾಜನರೆಂಬ ಉಲ್ಲೇಖವಿದೆ. ಅದಕ್ಕಾಗಿ ಅನೇಕ ವಿಭಾಗಗಳಲ್ಲಿ ಅಧ್ಯಯನ ನಡೆಯುತ್ತಿತ್ತು. ಕ್ರಿ.ಶ. ೯೨೯ರ ರಾಷ್ಟ್ರಕೂಟ ಅರಸನಾದ ನಾಲ್ಕನೆಯ ಗೋವಿಂದ ಇವರನ್ನು ಸಾಮಾಜಿಕ ಕಳಸವೆಂದು ಕರೆದಿದ್ದಾನೆ.

ಪ್ರತಿಯೊಂದು ಅಗ್ರಹಾರದಲ್ಲೂ ಮಹಾಜನರ ಸ್ಥಳೀಯ ಮಂಡಳಿ ಇರುತ್ತದೆ. ಇವರು ಗ್ರಾಮಾಡಳಿತದ ಜೊತೆಗೆ ನ್ಯಾಯವನ್ನು ಬಗೆಹರಿಸುತ್ತಿದ್ದರು. ಮತ್ತು ದಾನವನ್ನು ಸಹ ತೆಗೆದುಕೊಳ್ಳುತ್ತಿದ್ದರು. ಪರಿಪೂರ್ಣ ಅಗ್ರಹಾರದ ಮಂಡಳಿಯ ಕಾರ್ಯವೈಖರಿಯನ್ನು ಕಾಣಬಹುದು. ಉದಾಹರಣೆಗೆ, ಪಲ್ಲವರ ಮತ್ತು ಚೋಳರ ಕಾಲದಲ್ಲಿ ಅಗ್ರಹಾರಕ್ಕೆ ಸ್ಥಳೀಯ ಚುನಾವಣೆಯ ಮೂಲಕ ಇಲ್ಲವೆ, ಅರ್ಹತೆಯ ಆಧಾರದ ಮೇಲೆ ಕೆರೆ ಸಮಿತಿ, ಉದ್ಯಾನವನ ಸಮಿತಿ, ಚಿನ್ನದ ಸಮಿತಿ ಮುಂತಾದ ಸಮಿತಿಗಳನ್ನು ಮಾಡಿ ಸಾರ್ವಜನಿಕ ಕಲ್ಯಾಣಕಾರ್ಯವನ್ನು ನೋಡಿಕೊಳ್ಳುತ್ತಿದ್ದರು. ಅಗ್ರಹಾರದಲ್ಲಿ ಬೇರೆ ಬೇರೆ ವಿಭಾಗಗಳಿದ್ದು ಅವುಗಳನ್ನು ಮಹಾಜನರ ಸಮಿತಿಯು ನೋಡಿಕೊಳ್ಳುತ್ತಿತ್ತು. ಅವುಗಳಲ್ಲಿ ಹಿರಿಯ ಮತ್ತು ಅನಾದಿ ಅಗ್ರಹಾರಗಳು ಪ್ರಮುಖವಾದವು.

ಮಹಾಜನರು ಕೆಲವು ಅರ್ಹತೆಯನ್ನು ಪಡೆದುಕೊಳ್ಳ ಬೇಕಾಗುತ್ತಿತ್ತು. ಅವರು ಸ್ಥಳೀಕರಾಗಿದ್ದು ಸ್ವತಃ ಭೂಮಿಯುಳ್ಳವ ರಾಗಿದ್ದು, ವೇದಗಳ ಜ್ಞಾನ ಪಡೆದುಕೊಂಡು ಉತ್ತಮ ನಡವಳಿಕೆಯನ್ನು ಹೊಂದಿದವರು ಮಾತ್ರ ಮಹಾಜನರೆಂದು ಆಯ್ಕೆಯಾಗುತ್ತಿದ್ದರು. ಅಲ್ಲದೆ ಅಗ್ರಹಾರದಲ್ಲಿ ವೇದ, ವೇದಾಂಗ, ಪುರಾಣ, ನ್ಯಾಯ, ಮೀಮಾಂಸೆ, ಆಗಮ, ವ್ಯಾಕರಣ, ತಾರ್ಕಿಕ ಶಾಸ್ತ್ರಗಳು ಅಧ್ಯಯನದ ವಿಷಯ ಗಳಾಗಿದ್ದವು. ಸಾಹಿತ್ಯದೊಂದಿಗೆ ಕಲಾತ್ಮಕ ವಿಷಯವು ಇರುತ್ತಿತ್ತು. ಅದಕ್ಕಾಗಿ ಅನೇಕ ದತ್ತಿ, ದಾನ ನೀಡುತ್ತಿದ್ದರು.

ಮಹಾಜನರ ಕಾರ್ಯವೆಂದರೆ, ದತ್ತಿ ಸಮಿತಿಯ ಪ್ರತಿಷ್ಠಾಪನೆ ಇದರ ಮೂಲಕವಾಗಿ ಜನಗಳಿಂದ ಭೂಮಿ ಮತ್ತು ಹಣವನ್ನು ಸ್ವೀಕರಿಸಿ ಸಾರ್ವಜನಿಕರ ಕಲ್ಯಾಣಕ್ಕಾಗಿ ಉಪಯೋಗಿಸುವುದು ಮತ್ತು ದೇವಾಲಯ, ಮಠಗಳು, ಇವುಗಳನ್ನು ನಿಯಂತ್ರಿಸುವುದು ಇವರ ಕಾರ್ಯವಾಗಿತ್ತು. ಈ ಪ್ರದೇಶದಿಂದ ಬಂದ ಎಲ್ಲ ಆದಾಯವನ್ನು ಮಹಾಜನರು ನಿಯಂತ್ರಿಸುತ್ತಿದ್ದರು. ಉದಾಹರಣೆಗೆ ಕೇಶಿರಾಜನ ವಿವರದಂತೆ ಸಂಧಿವಿಗ್ರಹಿ ಮತ್ತು ದಂಡನಾಯಕರು ಸರ್ವಾಧಿಕಾರಿಯಾಗಿ ಕರ ವಸೂಲಿ ಮಾಡಿ, ಬಂದ ಆದಾಯವು ಅವರ ನಿಯಂತ್ರಣದಲ್ಲಿತ್ತು ಎಂದಿದ್ದಾನೆ.

ಮಹಾಜನರು, ಅಗ್ರಹಾರಕ್ಕೆ ನೀಡಿದ ಕಾಣಿಕೆಯ ಹಣ ಮತ್ತು ಭೂಮಿಯನ್ನು ವಿವಿಧ ಉದ್ದೇಶಗಳಿಗಾಗಿ ಬಳಸಿಕೊಳ್ಳುತ್ತಿದ್ದರು. ಸದಾ ವೇಳೆಯಲ್ಲಿ ತಮ್ಮ ಗಡಿಪ್ರದೇಶದಲ್ಲಿ ತೊಂದರೆಯಾಗದಂತೆ ನೋಡಿಕೊಳ್ಳುತ್ತಿದ್ದರು. ವೈರಿಗಳು ತಮ್ಮ ಗೋವುಗಳನ್ನು ಅಪಹರಿಸಿದಾಗ ಊರಿನ ತುರಣ ಯುವಕರು ರಕ್ಷಿಸುತ್ತಿದ್ದರು. ಮಹಾಜನರು ಆ ಪ್ರದೇಶದಲ್ಲಿ ಸಂಪೂರ್ಣ ಜವಾಬ್ದಾರಿ ಕಾರ್ಯನಿರ್ವಹಿಸುತ್ತಿದ್ದರು. ಮಹಾಜನರು ದತ್ತಿಯಿಂದ ಬಂದ ಭೂಮಿಯನ್ನು ಮಾರುವ ಅಧಿಕಾರ ಪಡೆದುಕೊಂಡಿದ್ದರು. ಕೆಲವು ಸಮಯದಲ್ಲಿ ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದರು. ಅಲ್ಲದೆ ಸಾರ್ವಜನಿಕ ಕಲ್ಯಾಣಕ್ಕಾಗಿ ಅನೇಕ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರು. ಇವರ ಸಾಮಾಜಿಕ ಕೆಲಸವೆಂದರೆ ಸಾರ್ವಜನಿಕರಿಗಾಗಿ ಬಾವಿ ಮತ್ತು ಕೆರೆ ಕಟ್ಟಿಸುವುದು. ಹೀಗೆ ಕಟ್ಟಿಸಿದ ಕೆರೆ ಮತ್ತು ಬಾವಿಯಿಂದ ನೀರಾವರಿ ಸೌಲಭ್ಯವನ್ನು ಒದಗಿಸುತ್ತಿದ್ದರು. ಉದಾಹರಣೆಗೆ ಹಾವೇರಿಯ ಹೆಗ್ಗೇರೆ. (ಬೃಹತ್ ಕೆರೆ).

ಮಹಾಜನರು ಶಿಕ್ಷಣ ಸಂಘ ಸಂಸ್ಥೆಗಳನ್ನು ನೋಡಿಕೊಳ್ಳುತ್ತಿದ್ದರು. ಸ್ಥಳೀಯ ಜನರ ದತ್ತಿಯಿಂದಲೇ ಶಾಲಾ ಕಟ್ಟಡಗಳು ನಿರ್ಮಾಣವಾಗುತ್ತಿದ್ದವೆಂದು ಚಾಲುಕ್ಯರ ಆರನೆಯ ವಿಕ್ರಮಾದಿತ್ಯನ ಶಾಸನದಿಂದ ತಿಳಿದು ಬಂದಿದೆ. ಅಗ್ರಹಾರಕ್ಕೆ ಬೇರೆ ಬೇರೆ ಉದ್ದೇಶಕ್ಕಾಗಿ ಅಧಿಕಾರಿಗಳ ನೇಮಕವಾಗುತ್ತಿತ್ತು. ಹಲವರನ್ನು ಅಗ್ರಹಾರದ ದಾಖಲೆಗಳನ್ನು ನೋಡಿಕೊಳ್ಳಲು ನಿಯಮಿಸುತ್ತಿದ್ದರು. ಉದಾಹರಣೆಗೆ ಹಾವೇರಿಯ ಮಹಾಜನರು ಶಾನಭೋಗನಾದ ಲೆಕ್ಕಿಶೆಟ್ಟಿಯನ್ನು ನಿಯಮಿಸಿದ್ದು ಕಂಡುಬಂದಿದೆ. ಮಹಾಜನರು ದೇವಾಲಯಕ್ಕೆ ಪರಸ್ಪರ ಸಂಬಂಧವನ್ನು ಇಟ್ಟುಕೊಂಡಿದ್ದರು. ಎಲ್ಲ ಸಾಮಾಜಿಕ, ಧಾರ್ಮಿಕ ಚಟುವಟಿಕೆಗಳು ದೇವಾಲಯ ದಲ್ಲಿಯೇ ನಡೆಯುತ್ತಿದ್ದವು. ಪೂಜೆ-ಪುನಸ್ಕಾರಗಳಿಗೆ ಸ್ಥಳೀಯ ಜನರು ಬರುತ್ತಿದ್ದರು. ಇದರಿಂದ ವಿದ್ಯಾರ್ಥಿಗಳ ಅಧ್ಯಯನಕ್ಕೆ ತೊಂದರೆಯಾಗುತ್ತಿತ್ತು. ಇದರಿಂದ ಮಹಾಜನರು ಅಗ್ರಹಾರಗಳನ್ನು ಧಾನ್ಯ ಸಂಗ್ರಹಣದ ಮನೆ ಮತ್ತು ಮಠಗಳಲ್ಲಿ ಪ್ರಾರಂಭಿಸಿ ಶಿಕ್ಷಣದ ಅಭಿವೃದ್ಧಿಯನ್ನು ಕೈಗೊಂಡಿದ್ದರು.

ಮಹಾಜನರು ನ್ಯಾಯ ನಿರ್ಣಾಯಕರಾಗಿದ್ದು, ಸ್ಥಳೀಯ ಸಾರ್ವಜನಿಕರ ಜೀವನದಲ್ಲಿ ಸುಖ-ಶಾಂತಿ ನೆಲೆಸುವಂತೆ ಮಾಡಿದರು. ಅಗ್ರಹಾರದ ನಿಯಮಗಳಿಗೆ ವಿರುದ್ಧವಾಗಿ ನಡೆದವರಿಗೆ ಕಠಿಣ ಶಿಕ್ಷೆ ವಿಧಿಸುತ್ತಿದ್ದರಲ್ಲದೇ ದಂಡ ವಸೂಲಿಯನ್ನು ಸಹ ಮಾಡುತ್ತಿದ್ದರು. ಉದಾಹರಣೆಗೆ ಕೆಟ್ಟ ಮಾತನಾಡಿದವರಿಗೆ ಮೂರು ಗದ್ಯಾಣಗಳನ್ನು ಕೊಡಬೇಕಾಗುತ್ತಿತ್ತು. ಹೀಗೆ ಸಾರ್ವಜನಿಕ ಹಿತಾಸಕ್ತಿಗಾಗಿ ಅಗ್ರಹಾರ ಈ ಕಾರ್ಯವನ್ನು ಹಮ್ಮಿಕೊಂಡಿತ್ತು. ಹಾವೇರಿಯು ಬನವಾಸಿ-೧೨೦೦೦ದ ಬಾಸವೂರ-೧೪೦ರ ಒಂದು ಭಾಗವಾಗಿದ್ದು ೪೦೦ ಮಹಾಜನರನ್ನು ಹೊಂದಿದ ಒಂದು ಅಗ್ರಹಾರವಾಗಿತ್ತೆಂದು ಶಾಸನ ಉಲ್ಲೇಖಿಸುತ್ತದೆ. ಇಲ್ಲಿ ವೇದ, ತಾರ್ಕಿಕ ವ್ಯಾಕರಣ, ಪುರಾಣ, ಕಾವ್ಯ, ನಾಟಕ ಮುಂತಾದ ವಿಭಾಗಗಳನ್ನು ಹೊಂದಿತ್ತು. ಇಲ್ಲಿಯ ಮಹಾಜನರು ರಾಜಮನೆತನದವರಂತೆ ಇಲ್ಲವೇ ಅಧಿಕಾರಿಗಳಂತೆ ಕೆಲವು ಸಮಯದಲ್ಲಿ ವರ್ತಿಸುತ್ತಿದ್ದರು. ಕಲ್ಯಾಣಿ ಚಾಲುಕ್ಯ ದೊರೆ ಮೂರನೆಯ ಸೋಮೇಶ್ವರನು ಇಲ್ಲಿಯ ಮಹಾಜನರಿಂದ ಆಶೀರ್ವಾದ ಪಡೆದು ಅಗ್ರಹಾರಕ್ಕೆ ದತ್ತಿಯನ್ನು ಕೊಟ್ಟ ಉಲ್ಲೇಖ ಕಂಡುಬರುತ್ತದೆ.

ಉದಾಹರಣೆಗೆ ಕಲ್ಯಾಣಿ ಚಾಲುಕ್ಯರ ದೊರೆ ಎರಡನೆಯ ತೈಲಪ ಹಾವೇರಿಯ ೪೦೦ ಮಹಾಜನರಿಗೆ ನಗದು ದಾನ ನೀಡಿ ಸಿದ್ಧೇಶ್ವರ ದೇವಾಲಯಕ್ಕೆ ಆದಾಯ ಕಲ್ಪಿಸಿಕೊಟ್ಟನು. ಅದೇ ರೀತಿ ಹೊಯ್ಸಳ ವೀರಬಲ್ಲಾಳನು ಹಣವನ್ನು ದಾನಮಾಡಿ ಮಾಳಿಶೆಟ್ಟಿ ಎಂಬುವನು ಸಿದ್ಧೇಶ್ವರ ದೇವರ ದೀಪಕ್ಕೆ ಎಣ್ಣೆ ದಾನ ಮಾಡಿದನು.

ಮೂರನೆಯ ಕೃಷ್ಣನ ಸಾಮಂತನಾದ ಗರವೀಂದ್ರನು ಬನವಾಸಿ ನಾಡನ್ನು ಆಳುತ್ತಿದ್ದಾಗ ಹೊಸವೂರು ಮಹಾಜನರಿಂದ ೫೫ ಗದ್ಯಾಣಗಳನ್ನು ಪಡೆಯಲಾಗಿತ್ತು. ಈ ಗದ್ಯಾಣಗಳನ್ನು ಸಂಸ್ಕೃತ ಅಧ್ಯಯನಕ್ಕೆ ಬ್ರಾಹ್ಮಣರಿಗೆ

ಕೊಡಲಾಗಿತ್ತೆಂದು ಉಲ್ಲೇಖವಿದೆ. ಈ ಸಂಸ್ಕೃತ ಅಧ್ಯಯನವು ಮೌಲಿಕನ ಮಗನಾದ ಬನಗನ ಮನೆಯಲ್ಲಿ ನಡೆಯುತ್ತಿತ್ತು. ಒಂದನೆಯ ಸೋಮೇಶ್ವರ ಮತ್ತು ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಸಮಯದಲ್ಲಿ ೩೦೦ ಗದ್ಯಾಣಗಳನ್ನು ದೇವಾಲಯಕ್ಕೆ ಕೊಟ್ಟರು. ಈ ೩೦೦ ಗದ್ಯಾಣಗಳನ್ನು ಕ್ರಮವಾಗಿ ವಿಭಾಗಿಸಿ ನಂದಾದೀವಿಗೆಗೆ ೧೦೦ ಗದ್ಯಾಣ, ಪುರಾಣ ವೃತ್ತಿಗೆ ೧೦೦ ಗದ್ಯಾಣ ಹಾಗೂ ವಿಷಯದ ಖಂಡಕ್ಕೆ ೧೦೦ ಗದ್ಯಾಣ ಕೊಟ್ಟರೆಂದು ಶಾಸನದಲ್ಲಿ ಉಲ್ಲೇಖ ಕಂಡುಬಂದಿದೆ. ಹಾವೇರಿ ಅಗ್ರಹಾರದ ಮಹಾಜನರು ಸಮಾಜದಲ್ಲಿ ಉನ್ನತಸ್ಥಾನ ಪಡೆದು ಶಿಕ್ಷಣದಲ್ಲಿ ಗುಣಮಟ್ಟ ಅಭಿವೃದ್ಧಿಪಡಿಸಿ ಸಂಸ್ಕೃತ ಮತ್ತು ಜೈನ ಸಾಹಿತ್ಯದ ಪ್ರಗತಿಗೆ ಕಾರಣರಾದರು. ಭೂಮಿ ಮತ್ತು ಹಣ ದಾನ ಪಡೆದು ಹಾವೇರಿ ಪ್ರದೇಶವು ಕುಂತಳ ನಾಡಿನಲ್ಲಿ ಪ್ರಸಿದ್ಧ ಅಗ್ರಹಾರವಾಗಿತ್ತೆಂದು ಶಾಸನದಿಂದ ತಿಳಿದು ಬರುತ್ತದೆ.

ಪ್ರಾಚೀನ ಕಾಲದಲ್ಲಿ ಶಿಕ್ಷಣ ಪ್ರಗತಿಗೊಂಡಿದ್ದು ಶಾಸನದಲ್ಲಿ ಕಂಡುಬಂದಿದೆ. ದೇವಾಲಯ, ಮಠ ಮತ್ತು ಛತ್ರಗಳಲ್ಲಿ ಅಂದಿನ ವಿದ್ಯಾಭ್ಯಾಸ ನಡೆಯುತ್ತಿತ್ತು. ಬನವಾಸಿ-೧೨೦೦೦ ಬೃಹತ್ ಪ್ರಾಂತ್ಯದ ಬಾಸವೂರ-೧೪೦ರಲ್ಲಿ ಹಾವೇರಿ ಒಂದು ಪ್ರಮುಖ ಅಗ್ರಹಾರವಾಗಿ ಶೈಕ್ಷಣಿಕ ಕ್ಷೇತ್ರದಲ್ಲಿ ಹೆಸರು ಪಡೆದಿತ್ತು. ಇದರಿಂದ ಈ ಪ್ರದೇಶ ತನ್ನದೇ ಆದ ಇತಿಹಾಸ, ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿಕೊಂಡು ಬಂದಿದೆ. ಇಲ್ಲಿ ಆಳ್ವಿಕೆ ನಡೆಸಿದ ಬಾದಾಮಿ ಚಾಲುಕ್ಯರು ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಲಚೂರ್ಯರು ಹಾಗೂ ದೇವಗಿರಿಯ ಯಾದವರ ಕಾಲದಲ್ಲಿ ಈ ಅಗ್ರಹಾರ ಉನ್ನತ ಸ್ಥಾನ ಪಡೆದುಕೊಂಡಿತು. ಮೂರನೆಯ ಕೃಷ್ಣನ ಸಾಮಂತನಾದ ಗರವಿಂಡನು ಬನವಾಸಿ ನಾಡನ್ನು ಆಳುತ್ತಿದ್ದಾಗ ಹೊಸವೂರು ಮಹಾಜನರಿಂದ ೫೫ ಗದ್ಯಾಣಗಳನ್ನು ಪಡೆಯಲಾಗಿತ್ತು. ಈ ಪ್ರದೇಶಕ್ಕೆ ಅನೇಕ ರಾಜಮಹಾರಾಜರು ಭೂಮಿ ಮತ್ತು ಹಣದಾನ ಮಾಡಿ ಅಗ್ರಹಾರದ ಬೆಳವಣಿಗೆಗೆ ಕಾರಣರಾಗಿದ್ದರು.

ಅನೇಕ ಮಾಂಡಲೀಕ ಮಹಾಜನರಿಂದ ಶೋಭಿಸುತ್ತಿದ್ದ ಈ ಅಗ್ರಹಾರ ಮಲ್ಲಿಕಾರ್ಜುನ ಪಂಡಿತ ಮತ್ತು ಗಾವುಂಡ ಪಂಡಿತರೆಂಬ ವಿದ್ವಾಂಸರನ್ನು ಹೊಂದಿದ್ದು ಇಲ್ಲಿ ವೇದ, ತರ್ಕ, ವ್ಯಾಕರಣ, ಕಾವ್ಯ ನಾಟಕಗಳೆಂಬ ವಿವಿಧ ವಿಷಯಗಳನ್ನು ಅಧ್ಯಯನ ಮಾಡಲ್ಪಡುತ್ತಿದ್ದವು. ಇಲ್ಲಿ ಅನೇಕ ಜೈನ ಪಂಡಿತರು ವಾಸವಾಗಿದ್ದು ಜೈನ ಸಾಹಿತ್ಯದ ಬೆಳವಣಿಗೆಗೆ ಕಾರಣರಾದರು.

ರಾಷ್ಟ್ರಕೂಟರ ಕಾಲದಲ್ಲಿ ಅನೇಕ ದೇವಾಲಯಗಳು ನಿರ್ಮಾಣವಾಗಿ ಒಂದನೆಯ ಕೃಷ್ಣ, ನಾಲ್ಕನೆಯ ಇಂದ್ರ, ಇತ್ಯಾದಿ ಅರಸರು ಅಗ್ರಹಾರಕ್ಕೆ ದತ್ತಿ ನೀಡಿ ಪಂಡಿತರಿಗೆ ಆಶ್ರಯ ನೀಡಿದರು.

ಹಾವೇರಿ ಪ್ರದೇಶದ ಕಲೆ ಸಾಹಿತ್ಯ, ವಾಸ್ತುಶಿಲ್ಪ ಕಲೆಗೆ ಕಲ್ಯಾಣಿ ಚಾಲುಕ್ಯರ ಕೊಡುಗೆ ಅಪಾರವಾಗಿದೆ. ಏಕೆಂದರೆ ಎರಡನೆಯ ತೈಲಪ ಮತ್ತು ಆರನೆಯ ವಿಕ್ರಮಾದಿತ್ಯ ಈ ಅಗ್ರಹಾರಕ್ಕೆ ಪ್ರಾಮುಖ್ಯತೆ ನೀಡಿ ಅಲ್ಲಿ ೧೦೦೦ ಜೈನ ಮತ್ತು ೫೦೦ ಹಿಂದೂ ವಿದ್ವಾಂಸರನ್ನೊಳಗೊಂಡ ಅಗ್ರಹಾರವಾಗಿತ್ತೆಂದು ಶಾಸನ ಉಲ್ಲೇಖಿಸುತ್ತದೆ. ಕಲ್ಯಾಣಿ ಕಲಚೂರಿ ಮತ್ತು ದೇವಗಿರಿಯ ಸೇವುಣರ ಕಾಲದಲ್ಲಿ ಅನೇಕ ಪಂಡಿತರಿಗೆ ಹಾಗೂ ಸಾಹಿತಿಗಳಿಗೆ ಆಶ್ರಯ ನೀಡಿ ಸಾಹಿತ್ಯದ ಅಭಿವೃದ್ಧಿಗೆ ಕಾರಣರಾಗಿ ಪ್ರಾಚೀನ ಜೈನ ಸಂಸ್ಕೃತಿ ಮತ್ತು ಹಳಗನ್ನಡ ಭಾಷೆಯ ಪ್ರಗತಿಗೆ ಕಾರಣವಾಗಿದ್ದರಿಂದ ಇಂದಿನ ಹಾವೇರಿ ಪ್ರಾಚೀನ ವಿದ್ಯಾಕೇಂದ್ರ ಹಾಗೂ ಬೃಹತ್ ಅಗ್ರಹಾರವಾಗಿತ್ತೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಆಧಾರಸೂಚಿ

೧. ಪಿ.ಬಿ. ದೇಸಾಯಿ, ೧೯೭೧, ಕನ್ನಡ ನಾಡಿನ ಶಾಸನಗಳು.
೨. ಪಾಟೀಲ ಭೋಜರಾಜ, ೧೯೯೫, ನಾಗರಖಂಡ, ೭೦.
೩. ಲಕ್ಷ್ಮೀನಾರಾಯಣರಾವ್, ೧೯೪೬, ಕರ್ನಾಟಕದ ಅರಸು ಮನೆತನಗಳು ಮತ್ತು ಪಂಚಮುಖಿ ಆರ್.ಎಸ್.
೪. ಮುಗುಳಿ ಆರ್.ಎಸ್., ೧೯೭೧, ಕನ್ನಡ ಸಾಹಿತ್ಯ ಚರಿತ್ರೆ.
೫. ಚಿದಾನಂದಮೂರ್ತಿ ಎಂ., ೧೯೬೬, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.
೬. ಅಣ್ಣಿಗೇರಿ ಎ.ಎಂ. ಮತ್ತು ಮೆವುಂಡಿ ಮಲ್ಲಾರಿ, ೧೯೬೧, ಶಾಸನ ಸಾಹಿತ್ಯ ಸಂಚಯ.
೭. ಜೆ.ಎಂ. ನಾಗಯ್ಯ, ೧೯೯೨, ಆರನೆಯ ವಿಕ್ರಮಾದಿತ್ಯನ ಶಾಸನಗಳು, (ಒಂದು ಅಧ್ಯಯನ).
೮. ಎಸ್.ಎಲ್. ಶಾಂತಕುಮಾರಿ, ಕರ್ನಾಟಕದ ಅಗ್ರಹಾರಗಳು.
೯. ಡಾ. ಜಿ.ಎಸ್. ದೀಕ್ಷಿತ್, ೧೯೭೦, ಪ್ರಾಚೀನ ಕರ್ನಾಟಕದ ಶಿಕ್ಷಣ ಕ್ರಮ.
೧೦. ಕಲ್ಯಾಣಿ ಚಾಲುಕ್ಯರ ಕಾಲದ ಶಿಕ್ಷಣ ವ್ಯವಸ್ಥೆ, ಪಿ.ಎಚ್‌ಡಿ. ಮಹಾಪ್ರಬಂಧ ಹಾಗೂ ಎಂ.ಫಿಲ್ ಪ್ರಬಂಧಗಳು.
೧೧. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್, ಸಂಪುಟ ೧೮, ಶಾಸನ ಸಂಖ್ಯೆ ೨೦೯, ೨೪೨, ೨೪೯, ೨೫೩, ೧೫೭, ೧೯೨, ೪೫೬, ೨೭೦

ಬಿ.ಆರ್. ರಾಠೋಡ*
ಡಾ. ಎಸ್.ಕೆ. ಮೇಲಕಾರ**

ಕಣಂಬಡೆ ನಾಡಿನ ಅಗ್ರಹಾರಗಳು

ಮಧ್ಯಕಾಲೀನ ಕರ್ನಾಟಕ ಇತಿಹಾಸದಲ್ಲಿ ಅಗ್ರಹಾರಗಳು ಬಹು ವಿಶಿಷ್ಟವಾದ ಸ್ಥಾನವನ್ನಲಂಕರಿಸಿವೆ. ಅಗ್ರಹಾರ – ಅಗ್ರ [ಶ್ರೇಷ್ಠ] + ಆಹಾರ [ಸ್ಥಳ] ಎಂಬೆರಡು ಪದಗಳ ಕೂಡು ಪದವಾಗಿದ್ದು, ಅದರರ್ಥ ಶ್ರೇಷ್ಠರಿಗೆ ಕೊಟ್ಟಿರುವ ಸ್ಥಳ ಎಂದಾಗುತ್ತದೆ. ಇಲ್ಲಿನ ಶ್ರೇಷ್ಠರೆಂದರೆ ಚಾತುರ್ವರ್ಣದಲ್ಲಿ ಅಗ್ರರಾದ ಬ್ರಾಹ್ಮಣರು. ಅವರಿಗೆ ದತ್ತಿಯಾಗಿ ಬಿಟ್ಟುಕೊಟ್ಟ ಊರುಗಳೇ ಅಗ್ರಹಾರಗಳು.[೧] ಕಣಂಬಡೆ ನಾಡಿನ ಶಾಸನಗಳಲ್ಲಿ ಉಲ್ಲೇಖಗೊಂಡ ಅಗ್ರಹಾರಗಳಲ್ಲಿ ಪ್ರಮುಖವಾದವುಗಳನ್ನು ಮಾತ್ರ ಈ ಕೆಳಗಿನಂತೆ ವಿವರಿಸಲಾಗಿದೆ.

ಕಣಂಬಡೆಯ ಕರಹಾಡ ನಾಲ್ಸಾಸಿರದ ಕಂಪಣವಾಗಿತ್ತೆಂದು ಅನೇಕ ಶಾಸನಗಳು ಸ್ಪಷ್ಟಪಡಿಸಿವೆ. ಸಾಂಪ್ರದಾಯಿಕವಾಗಿ ಈ ನಾಡಿನಲ್ಲಿ ಮುನ್ನೂರು ಹಳ್ಳಿಗಳು ಸಮಾವೇಶಗೊಂಡಿದ್ದವು. ಕಣಂಬಡೆ ಈ ನಾಡಿನ ಕೇಂದ್ರ ಸ್ಥಳವಾಗಿತ್ತು. ಈಗಿನ ವಿಜಾಪುರ ತಾಲೂಕಿನ ಚಿಕ್ಕಗ್ರಾಮವಾದ 'ಕನಮಡಿಯೆ' ಅಂದಿನ ಕಣಂಬಡೆ. ಮುನ್ನೂರು ಹಳ್ಳಿಗಳ ಆಡಳಿತ ವಿಭಾಗವಾಗಿ ರಚನೆಗೊಂಡ ಈ ನಾಡು ಶಾಸನಗಳಲ್ಲಿ ಕಳಂಬಡೆನಾಡು[೨] ಕಳಂಬಡೆ ಮೂನೂರು[೩] ಕಣಂಬಡೆ ತ್ರಿಶತ[೪], ಕಂಪಣ ಕಣಂಬಡೆ ಮೂನೂರು[೫] ಕಣಂಬಡೆ ನಾಡು, ಎಂಬ ರೂಪಗಳಲ್ಲಿ ಕಾಣಿಸಿಕೊಂಡಿದೆ. ಪ್ರಸ್ತುತ ಪ್ರಬಂಧದಲ್ಲಿ ಈ ನಾಡಿನ ನಾಲ್ಕು ಅಗ್ರಹಾರಗಳನ್ನು ಕುರಿತು ವಿಚಾರ ಮಾಡಲಾಗಿದೆ.

೧) ಕೊಕಟನೂರ ಅಗ್ರಹಾರ : ಕ್ರಿ.ಶ. ೧೧೨೬ರ ಕೊಕಟನೂರ ಶಾಸನವು ಕಲಚುರಿವಂಶದ ಮಹಾಮಂಡಳೇಶ್ವರ ವೀರ ಪೆರ್ಮಾಡಿದೇವನ ಪಾದಪದ್ಮೋಪಜೀವಿಯಾದ ಮಹಾಪ್ರಧಾನ ದಂಡನಾಯಕ **ವಿಟ್ಟಪ್ಪಯ್ಯನು** ಕಣಂಬಡೆ ಮೂನೂರು ನಾಡನ್ನು ಆಳುತ್ತಿದ್ದಾಗ ಕೊಕಟನೂರು ಅಗ್ರಹಾರದ ವಿಟ್ಟಮರಸ ಪ್ರಮುಖ ಮಹಾಜನಂಗಳು ಮತ್ತು ಸಮಸ್ತ ಪ್ರಜೆಗಳು ಕೂಡಿ ಅಲ್ಲಿಯ ದೇವಾಲಯಕ್ಕೆ ಕೆಲವು ಭೂಮಿ, ತೋಟ ಹಾಗೂ ಮನೆಯ ನಿವೇಶನಗಳನ್ನು[೬] ದಾನ ಮಾಡಿದರೆಂದು ತಿಳಿಸುತ್ತದೆ. ಚಾಳುಕ್ಯ ಚಕ್ರವರ್ತಿ ತ್ರೈಲೋಕ್ಯಮಲ್ಲದೇವನ ಪಾದಪದ್ಮೋಪಜೀವಿಯಾದ ಮಹಾಮಂಡಲೇಶ್ವರ ಜೋಗಪಯ್ಯರಸನು ಕರಹಾಡನಾಲ್ಸಾಸಿರ ಮತ್ತು ಮಿರಂಜೆ ಮೂರು ಸಾವಿರ ಆಳುತ್ತಿದ್ದಾಗ **"ಅಗ್ರಹಾರ ಕೊಕಟನೂರ"** ಗ್ರಾಮದಲ್ಲಿ ವೈಶಾಗ್ರಣಿ ಕೂಚಶೆಟ್ಟಿಯು ತ್ರೈಪುರುಷದೇವರ ದೇವಾಲಯವನ್ನು ಮಾಡಿಸಿದನೆಂದು, ಆ ದೇವಾಲಯಕ್ಕೆ ಮಹಾಮಂಡಳೇಶ್ವರ ಜೋಗಪಯ್ಯ ಮತ್ತು ಆತನ ಅರಸಿ ಪೊಲ್ಲಿಕಬ್ಬೆಯು ಜನ್ನವಾಡ ಗ್ರಾಮವನ್ನು ದತ್ತಿಯಾಗಿ ಕೊಟ್ಟಿದ್ದನ್ನು ತಿಳಿಸುತ್ತದೆ. ಅಲ್ಲದೆ ಅಗ್ರಹಾರದ ಕೂಚಿಶೆಟ್ಟಿ ತ್ರೈಪುರುಷದೇವರ ಅಂಗಭೋಗಕ್ಕೆ ಧೂಪ, ದೀಪ, ನೈವೇದ್ಯಕ್ಕೆ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಹಾಗೂ ಅಲ್ಲಿ ಓದುವ ವಿದ್ಯಾರ್ಥಿಗಳಿಗೆ, ತಪೋಧನರಿಗೆ ದಾನ[೭] ನೀಡಿದ ವಿಷಯ ಉಲ್ಲೇಖಿಸುತ್ತದೆ. ಕ್ರಿ.ಶ. ೧೧೮೯ರ **ಕೊಕಟನೂರಿನ** ಶಾಸನವು ಕಳಚೂರಿ ಅರಸ ರಾಯಮುರಾರಿ ಸೋವಿದೇವನ ಆಳ್ವಿಕೆಯ ಸಂದರ್ಭದಲ್ಲಿ ಶ್ರೀ ಮದಗ್ರಹಾರ ಕೊಗ್ಗೂರ್ಟನೂರ ಶ್ರೀ ಸ್ವಯಂಭೂ ವಿಶ್ವೇಶ್ವರ ದೇವರ ಸ್ಥಾನಾಚಾರ್ಯ ವಿದ್ಯಾರಾಶಿ ಪಂಡಿತದೇವರಿಗೆ, ಮತ್ತು ಅಲ್ಲಿಯ ಅಂಗಭೋಗ, ರಂಗಭೋಗ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ, ಮಠದ ತಪೋಧನರಿಗೆ ವಿದ್ಯಾರ್ಥಿಗಳಿಗೆ ಮತ್ತು ಧರ್ಮಕಾರ್ಯಕ್ಕೆ ಕರಹಾಡ–ನಾಲ್ಸಾಸಿರದ ಕಣಂಬಡೆ ಮೂನೂರನೊಳಗಣ ಕೊಕ್ಕಟಗ್ರಹಾರದಲ್ಲಿ ಚಂಡಿನಾಥನ ಭಕ್ತನಾಗಿದ್ದ, ಈತನು ಪ್ರಸಿದ್ಧ ಶೈವ ಬ್ರಾಹ್ಮಣನೆಂದು ಹೇಳುವುದರೊಂದಿಗೆ ಆತನ ಶಿಷ್ಯ ಮಲ್ಲರಸಯ್ಯನು ಪ್ರಸಿದ್ಧ ಬ್ರಾಹ್ಮಣನಾಗಿದ್ದು, ಕೊಕಟನೂರಿನ ಭಾವಶುದ್ಧದೇವರ ಅಂಗಭೋಗ, ರಂಗಭೋಗ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ತೋಟ ಮತ್ತು ನಿವೇಶನವನ್ನು ದತ್ತಿ[೧೦] ಬಿಟ್ಟ ಬಗ್ಗೆ ಉಲ್ಲೇಖಿಸುತ್ತದೆ.

೨) ತೆಲಸಂಗ ಅಗ್ರಹಾರ : ಕಣಂಬಡೆನಾಡಿನಲ್ಲಿ ತೆಲಸಂಗವು ಅಗ್ರಹಾರವಾಗಿರುವುದನ್ನು ಎರಡು ಶಾಸನಗಳು ಉಲ್ಲೇಖಿಸುತ್ತದೆ. ಕ್ರಿ.ಶ. ೧೧೪೭ರ ಶಾಸನವು ಶ್ರೀ ಚಾಳುಕ್ಯ ಚಕ್ರವರ್ತಿ ಜಗದೇಕಮಲ್ಲದೇವನ ಹತ್ತನೇ ವರ್ಷದ

* ಸಂಶೋಧನ ವಿದ್ಯಾರ್ಥಿ, ಡಾ|| ಆರ್.ಸಿ. ಹಿರೇಮಠ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
** ಮ್ಯೂಜಿಯಂ ಮೇಲ್ವಿಚಾರಕರು, ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಆಡಳಿತಾವಧಿಯಲ್ಲಿ ಶ್ರೀಮನ್‌ಮಹಾಗ್ರಹಾರ ತೆಲಸಂಗದಲ್ಲಿ ಸಾವಿರ ಸ್ವಾಮಿಗಳು, ಮೂವತ್ತಾರು ಬೀಡಿನ ಸೆಟ್ಟಿಯರು, ಬಣಂಜಿಗಸೆಟ್ಟಿಯರು ಮತ್ತು ಸಮಗ್ರ ಜನಗಳು ಕೂಡಿ ಸತ್ರಕ್ಕೆ ವಿವಿಧ ಮೂಲಗಳಿಂದ ಬರುವ ಆದಾಯವನ್ನು[೧೧] ದಾನಬಿಟ್ಟ ವಿಷಯ ತಿಳಿಸುತ್ತದೆ. ತೆಲಸಂಗದ ಮತ್ತೊಂದು ಶಾಸನ ಕುಂತಳನಾಡಿನಲ್ಲಿ ಶೋಭಿಸುವ ಕರಹಾಡನಾಲ್ಸಾಸಿರ ಎಂಬ ಪ್ರಾಂತದಲ್ಲಿ ವಿರಾಜಮಾನವಾಗಿ ಶೋಭಿಸುವ ಕಣಂಬಡೆ ಮೂನೂರನೆಂಬ ಕಂಪಣ, ಈ ಕಂಪಣದಲ್ಲಿ ತೆಲಸಂಗ ಎಂಬ ಪ್ರಸಿದ್ಧ ಅಗ್ರಹಾರ, ಈ ಅಗ್ರಹಾರದಲ್ಲಿ ಐದನೂರು ಜನ ವಿದ್ಯಾಧರ ಪಂಡಿತ ಬ್ರಾಹ್ಮಣರಿದ್ದರೆಂದು ಹಾಗೂ ವೈಶ್ಯಕುಲದ ಪ್ರಸಿದ್ಧ ಸರ್ವಗುಣ ಸಂಪನ್ನ ಶೆಟ್ಟಿಬೊಮ್ಮನಿದ್ದು ಈತನಿಗೆ ಸದ್ಗುಣೆಯಾದ, ಗುಣಶೀಲೆಯಾದ ಸತಿ ಅಕ್ಕಣಬ್ಬೆ, ಈ ದಂಪತಿಗಳಿಗೆ ನಾಚಿ ಮತ್ತು ಕೇಶವ ಇಬ್ಬರು ಮಕ್ಕಳು[೧೨] ಎಲ್ಲ ಕಲೆಗಳಲ್ಲಿ ಪರಿಣಿತರಿದ್ದರೆಂದು ತಿಳಿಸುತ್ತದೆ.

೩) ಕೊಟ್ಟಲಗಿ ಅಗ್ರಹಾರ : ಕ್ರಿ.ಶ. ೧೧೬೭ರ ರಾಮತೀರ್ಥ ಶಾಸನವು ಭುಜಬಲ ಚಕ್ರವರ್ತಿ ಬಿಜ್ಜಳನ ಕಾಲದಲ್ಲಿ ಅಗ್ರಹಾರ ಕೊಟ್ಟಲಿಗೆಯ ಮಹಾಜನಗಳು ಬಿಜ್ಜಳನ ಹೇಳಿಕೆಯಂತೆ ತೀರ್ಥದ ಶ್ರೀಸ್ವಯಂಭು ರಾಮೇಶ್ವರದೇವರ ಹಾಲುಮಂಡಿಗೆಗೆಂದು ಹಿರಿಯಕೊಲ ಎಂಟು ಮತ್ತರು ಭೂಮಿ ಮತ್ತು ಅಂಗಡಿಮನೆಯನ್ನೂ ಸರ್ವಭಾದಾ ಪರಿಹಾರವಾಗಿ ದತ್ತಿ[೧೩] ಬಿಟ್ಟಿದ್ದನ್ನು ಉಲ್ಲೇಖಿಸುತ್ತದೆ.

೪) ತುಂಗಳ ಅಗ್ರಹಾರ : ತುಂಗಳ ಶಾಸನದಲ್ಲಿ ಕಣಂಬಡೆ ಅಧಿಕಾರಿ ಚೆದ್ದರಸ ದಂಡನಾಯಕ ಮತ್ತು ಪ್ರಮುಖಿ ಶ್ರೀಕರಣಂಗಳು ಅಗ್ರಹಾರ ತುಂಗಳದ ಚೌಡಪ್ಪ ಭಟ್ಟೋಪಾಧ್ಯಾಯರಿಗೆ ದತ್ತಿ[೧೪] ಬಿಟ್ಟ ವಿಷಯ ಉಲ್ಲೇಖಿಸುತ್ತದೆ. ತುಂಗಳದ ಮತ್ತೊಂದು ಶಾಸನ ತುಂಗಳ ಅಗ್ರಹಾರದ ದೇವರ ಖಂಡಸ್ಫುಟಿತಜೀರ್ಣೋದ್ಧಾರಕ್ಕೆ ದತ್ತಿ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಈ ರೀತಿಯಾಗಿ ಕಣಂಬಡೆ ನಾಡಿನಲ್ಲಿ ಸದ್ಯ ಲಭ್ಯವಾಗಿರುವ ಶಾಸನಗಳನ್ನು ಉಲ್ಲೇಖಿಸಿ ಅಗ್ರಹಾರಗಳ ಕುರಿತು ವಿವರಿಸಲಾಗಿದೆ.

(ಈ ಪ್ರಬಂಧ ಸಿದ್ಧಪಡಿಸುವಲ್ಲಿ ಮಾರ್ಗದರ್ಶನ ನೀಡಿದ ಮಾರ್ಗದರ್ಶಕರಾದ ಡಾ॥ ಎಸ್.ಕೆ. ಕೊಪ್ಪಾರವರಿಗೆ ಕೃತಜ್ಞತೆಗಳು.)

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಡಾ. ಎಸ್.ಕೆ. ಕೊಪ್ಪ., **ತರ್ದವಾಡಿ ನಾಡು – ಒಂದು ಅಧ್ಯಯನ,** ಪುಟ ೧೧೩.

೨. **ಕರ್ನಾಟಕ ಭಾರತಿ,** ಸಂಪುಟ–೪, ೧೯೭೧, ಪು.ಸಾ. ೩೮.

೩. *Karnataka Inscriptions,* Vol. II, No. 18, PP. 74.

೪. *Muragundi Plates of Somashekara,* IX, R.N. Gurava.
The Journal of the Karnataka University Soeiaty Sciences, Vol. 1, 1965-37.

೫. Collected works of R.G. Bhandarakar, Vol. III, P. 346, Badachi Copper plates.

೬ *South Indian Inscription,* XV, P. 172, Katageri Inscriptions Tq: Badami.

೭. **ಕನ್ನಡ ಸಾಹಿತ್ಯ ಪತ್ರಿಕೆ,** ೧೯೮೦, ಡಾ. ಆರ್.ಎನ್. ಗುರುವ ಅವರು ಸಂಪಾದಿಸಿದ ಕಲಚುರಿ ಪೆರ್ಮಾಡಿ ದೇವನ ಕೊಕಟನೂರು ಶಾಸನ.

೮. **ಕರ್ನಾಟಕ ಭಾರತಿ,** ಸಂ. ೬, ೧೯೭೦, ಆರ್.ಎನ್. ಗುರುವ ಅವರು ಸಂಪಾದಿಸಿದ ಚಾಳುಕ್ಯ ಚಕ್ರವರ್ತಿ ತ್ರೈಳೋಕ್ಯ ಮಲ್ಲದೇವ ಕೊಕಟನೂರ ಶಾಸನ.

೯. *Karnataka Inscriptions,* Vol. II No. 25, PP. 93 to 95.

೧೦. Ibid., No. 38, PP. 131 to 132.

೧೧. Ibid., No. 21, PP. 82.

೧೨. Ibid., No. 18, PP. 72 to 74.

೧೩. Ibid., No. 24, PP. 91.

೧೪. South Indian Inscriptions, Vol. XX, PP. 204.

೧೫. Ibid., PP. 368.

ಡಾ. ಬಿ.ವಿ. ಸುಧಾಮಣಿ*

ಸುಬ್ಬರಾಯದಾಸರು ಮತ್ತು ಸುಬ್ರಹ್ಮಣ್ಯ ಅಗ್ರಹಾರ

ಅಗ್ರಹಾರಗಳ ನಿರ್ಮಾಣ ಹಾಗೂ ಅದನ್ನು ವಿದ್ವಾಂಸರೂ, ಧರ್ಮಿಷ್ಠರೂ ಆದ ಬ್ರಾಹ್ಮಣರಿಗೆ ದಾನ ನೀಡುವುದು ನಮ್ಮ ದೇಶದ ಹಾಗೂ ಕನ್ನಡ ನಾಡಿನ ಸಂಸ್ಕೃತಿಯಲ್ಲಿ ಅನೂಚಾನವಾಗಿ ನಡೆದುಕೊಂಡು ಬಂದಿದೆ. ಪ್ರಥಮ ಕನ್ನಡಿಗ ರಾಜಮನೆತನವಾದ ಕದಂಬರ ಕಾಲದಲ್ಲೂ ಅಗ್ರಹಾರಗಳನ್ನು ನಿರ್ಮಿಸಲಾಯಿತು. ಮಯೂರಶರ್ಮ ಸ್ವತಃ ಸ್ಥಾನಕುಂದೂರು (ತಾಳಗುಂದ) ಅಗ್ರಹಾರದ ವಿದ್ಯಾರ್ಥಿಯಾಗಿದ್ದ. ಕನ್ನಡ ನಾಡಿನಲ್ಲಾಳಿದ ಎಲ್ಲ ರಾಜಮನೆತನಗಳ ಆಳ್ವಿಕೆಯ ಸಂದರ್ಭದಲ್ಲೂ ಅಗ್ರಹಾರಗಳ ನಿರ್ಮಾಣವಾಗಿರುವುದು ಸಮಕಾಲೀನ ಶಾಸನಗಳಿಂದ ಸ್ಪಷ್ಟವಾಗುತ್ತದೆ.

ಮೈಸೂರಿನ ಒಡೆಯರ ಮನೆತನಗಳಲ್ಲಿ ಅಗ್ರಹಾರಗಳ ನಿರ್ಮಾಣಕಾರ್ಯ ಚಾಮರಾಜ ಒಡೆಯರ ಕಾಲದಿಂದ ಆರಂಭವಾಗಿರುವುದು ದಾಖಲೆಗಳಲ್ಲಿ ಲಭ್ಯವಿದೆ. ಈ ಪರಂಪರೆ ಮುಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಅವಧಿಯವರೆವಿಗೂ ಮುಂದುವರಿಯಿತು. ಆರಂಭದಲ್ಲಿ ಅಗ್ರಹಾರಗಳ ನಿರ್ಮಾಣಕಾರ್ಯ ಕೆರೆ-ಕಟ್ಟೆ ಹಾಗೂ ದೇವಾಲಯಗಳ ನಿರ್ಮಾಣದಷ್ಟೇ ಪುಣ್ಯದ ಕೆಲಸವೆಂದು ಭಾವಿಸಲಾಗಿತ್ತು. ಕ್ರಮೇಣ ಇದು ರಾಜ್ಯದ ಒಂದು ನೀತಿಯಾಗಿಯೇ ಪರಿಣಮಿಸಿತು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಬ್ರಿಟಿಷರ ಪರೋಕ್ಷ ಆಳ್ವಿಕೆ ಮೈಸೂರು ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದುದರ ಹಿನ್ನೆಲೆಯಲ್ಲಿ ಆಡಳಿತದ ಅಥವಾ ರಾಜ್ಯದ ನೀತಿಯಾಗಿ ಅಗ್ರಹಾರಗಳನ್ನು ನಿರ್ಮಿಸುವ ಅಗತ್ಯ ಇರಲಿಲ್ಲ. ಬದಲಿಗೆ ಒಡೆಯರು ಹಿಂದಿನ ಪರಂಪರೆಯನ್ನು ಮುಂದುವರಿಸಿದರೆನ್ನಬಹುದು.

ಪ್ರಸ್ತುತ ಲೇಖನದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಅವರ ಆಸ್ಥಾನದಲ್ಲಿ ಪಂಡಿತರೂ, ಅರಮನೆಯ ಅಧಿಕಾರಿಯೂ ಆಗಿದ್ದ ಸುಬ್ಬರಾಯದಾಸರ ಜೀವನ, ಧಾರ್ಮಿಕ ವ್ಯಕ್ತಿತ್ವ ಹಾಗೂ ಅವರೇ ನಿರ್ಮಿಸಿದ ಸುಬ್ರಹ್ಮಣ್ಯ ಅಗ್ರಹಾರದ ಬಗೆಗೆ ಪ್ರಸ್ತಾಪಿಸಲಾಗುವುದು.

ತುಮಕೂರು ಜಿಲ್ಲೆಯ ಪಾವಗಡದವರಾದ ಸುಬ್ಬರಾಯದಾಸರು ಬಡತನದ ಕುಟುಂಬದಲ್ಲಿ ಜನಿಸಿದರು. ಇವರ ತಂದೆ ಸೀತಾರಾಮಯ್ಯ ಮರಣವನ್ನಪ್ಪಿದುದರಿಂದ ದಾಸರ ತಾಯಿ ಬಡತನದಿಂದ ನೊಂದು ದಿಕ್ಕು ಕಾಣದೆ ಮಕ್ಕಳಾದ ಶೀನಪ್ಪದಾಸ ಮತ್ತು ಸುಬ್ಬರಾಯದಾಸರೊಂದಿಗೆ ಮೈಸೂರಿಗೆ ಬಂದರು. ಪೂರ್ಣಯ್ಯನ ಛತ್ರದಲ್ಲಿ ಒಂದು ಸಣ್ಣ ಕೆಲಸ ಬಾಲಕ ಸುಬ್ಬರಾಯದಾಸನಿಗೆ ದೊರಕಿತು. ಇದರಿಂದ ಕುಟುಂಬದ ನಿರ್ವಹಣೆಯೂ ಆಗುತ್ತಿತ್ತು. ಈತನ ನಿಷ್ಠೆ ಧಾರ್ಮಿಕ ಪ್ರವೃತ್ತಿ, ಕೆಲಸದಲ್ಲಿದ್ದ ಆಸಕ್ತಿ ಮುಮ್ಮಡಿಯವರ ಗಮನಕ್ಕೂ ಬಂದಿತು. ಸುಬ್ಬರಾಯದಾಸರನ್ನು ಅರಮನೆಗೆ ಕರೆಸಿಕೊಂಡ ಒಡೆಯರು ಅವರನ್ನು ಅರಮನೆಯ ಒಳಬಾಗಿಲ ಅಧಿಕಾರಿಯಾಗಿ ನೇಮಿಸಿ ಮಾಸಿಕ ಹತ್ತು ವರಹಗಳ ವೇತನವನ್ನು ನಿಗಧಿಪಡಿಸಿದರು. ಪಂಡಿತರೂ ಆಗಿದ್ದ ಇವರಿಗೆ ಶನಿವಾರದ ಪೂರೈಕೆಗಾಗಿ ಕೆಲ ಪದಾರ್ಥಗಳನ್ನೂ ನೀಡಲಾಗುತ್ತಿತ್ತು. ಕ್ರಮೇಣ ಸುಬ್ಬರಾಯದಾಸರ ವ್ಯಕ್ತಿತ್ವವನ್ನು ಹತ್ತಿರದಿಂದ ಗಮನಿಸತೊಡಗಿದ ಒಡೆಯರು ಅವರೊಂದಿಗೆ ಅನೇಕ ವಿಷಯಗಳನ್ನು ಕುರಿತು ಚರ್ಚಿಸುತ್ತಿದ್ದರಲ್ಲದೆ ಪಗಡೆ ಚದುರಂಗದಾಟಗಳನ್ನೂ ಆಡತೊಡಗಿದರು. ಒಡೆಯರ ಆತ್ಮೀಯ ಮಿತ್ರರೆನಿಸಿದರು.

ಸುಬ್ಬರಾಯದಾಸರನ್ನು ಕಂಡರೆ ಮಹಾಮಾತೃಶ್ರೀ ಮಹಾರಾಣಿ ಲಕ್ಷ್ಮಮ್ಮಣ್ಣಿಯವರಿಗೂ ಹಾಗೂ ಒಡೆಯರ ರಾಣಿ ಕೃಷ್ಣವಿಲಾಸ ಸನ್ನಿಧಾನದ ಲಿಂಗಾಜಮ್ಮಣ್ಣಿಯವರಿಗೂ ತುಂಬು ವಿಶ್ವಾಸ ಮತ್ತು ಗೌರವ ಇತ್ತು. ಮಹಾಮಾತೃಶ್ರೀಯವರು ದಾಸರಿಗೆ ೧೮೨೧ರಲ್ಲಿ ಆನಂದೂರು ಸ್ಥಳದಲ್ಲಿ ಒಂದು ಭಟ್ಟಮಾನ್ಯ ವೃತ್ತಿಯನ್ನು ನೀಡಿದರು. ಅದೇ ವರ್ಷ ಕೃಷ್ಣವಿಲಾಸ ಸನ್ನಿಧಾನದವರು ನಿರ್ಮಿಸಿದ 'ಕೃಷ್ಣವಿಲಾಸ ಅಗ್ರಹಾರ'ದಲ್ಲಿ ಒಂದು ಮನೆ ಹಾಗೂ ವೃತ್ತಿಯೊಂದನ್ನು ದಾಸರಿಗೆ ನೀಡಿದರು.

ಸುಬ್ಬರಾಯದಾಸರು ವೆಂಕಟರಮಣನ ಆರಾಧಕರೂ, ಪರಮ ಭಕ್ತರೂ ಆಗಿದ್ದರು. ಆ ದೇವರ ಅನುಗ್ರಹದಿಂದ ಅನೇಕ ಪವಾಡಗಳನ್ನು ಮಾಡಿ ಜನರ ಸಂಕಷ್ಟಗಳನ್ನು ಪರಿಹರಿಸಿದುದಾಗಿ ಶಾಸನಗಳಲ್ಲಿ ವಿವರಿಸಲಾಗಿದೆ.

* # ೨೯, ೧೨ನೇ ಅಡ್ಡರಸ್ತೆ, ವಿಜಯನಗರ ರೈಲ್ವೆ ಕಾಲೋನಿ, ಮೈಸೂರು.

೧೮೨೭ರಲ್ಲಿ ಮೈಸೂರು ನಗರದಲ್ಲಿ ಸಾಂಕ್ರಾಮಿಕ ರೋಗ (ಕಾಲರಾ) ಹರಡಿ ಜನ ಕಂಗಾಲಾದರು. ಒಡೆಯರಿಗೂ ಸಹ ಜನರ ಕಷ್ಟಗಳು ನೋವುಂಟುಮಾಡಿತು. ಸಾವಿನ ಸಂಖ್ಯೆ ನಗರದಲ್ಲಿ ದಿನೇ ದಿನೇ ಹೆಚ್ಚತೊಡಗಿತು. ಆ ಸಂದರ್ಭದಲ್ಲಿ ಸುಬ್ಬರಾಯದಾಸರು ನಿದ್ರಾಹಾರಗಳನ್ನು ತೊರೆದು ವೆಂಕಟರಮಣನ ಧ್ಯಾನದಲ್ಲಿ ನಿರತರಾದರು. ಇವರ ಕನಸಿನಲ್ಲಿ ಯತಿ ದಿಗ್ಗಾಮಿ ಶ್ರೀನಿವಾಸಾಚಾರ್ಯರು ಬಂದು ಮೂರು ಚೂರು ಇದ್ದಿಲು, ಒಂದು ಕಂಠೀರಾಯಿ ಹಣ ಹಾಗೂ ಮಂತ್ರಾಕ್ಷತೆಗಳನ್ನು ನೀಡಿ ಅವುಗಳ ಮೂಲಕ ರೋಗ ನಿವಾರಿಸಿ ಜನರ ಸಂಕಷ್ಟಗಳನ್ನು ದೂರ ಮಾಡಬಹುದೆಂದು ಹೇಳಿದರು. ದಾಸರು ಮರುದಿನದಿಂದಲೇ ಅಂಗಾರ ತೀರ್ಥ ಹಾಗೂ ಮಂತ್ರಾಕ್ಷತೆಗಳನ್ನು ಜನರಿಗೆ ನೀಡಲು ಆರಂಭಿಸಿದರು. ಕೆಲವೇ ದಿನಗಳಲ್ಲಿ ನಗರ ಸಹಜ ಸ್ಥಿತಿಗೆ ಬಂದಿತು. ಈ ವಿಷಯದ ಬಗ್ಗೆ ಕೆಲವರು ವ್ಯಕ್ತಪಡಿಸಿದ ಅನುಮಾನವನ್ನು ಪರಿಹರಿಸುವ ಸಲುವಾಗಿ ಒಡೆಯರು ಖುದ್ದಾಗಿ ಸುಬ್ಬರಾಯದಾಸರ ಅಗ್ರಹಾರದ ಮನೆಗೆ ತೆರಳಿದರು. ದಾಸರು ವೆಂಕಟರಮಣನಿಗೆ ಪೂಜಿಸುತ್ತಿದ್ದ ರೀತಿ ಕಂಡು ಸಂತುಷ್ಟರಾಗಿ ಮರುದಿನ ಅರಮನೆಗೆ ಕರೆಸಿಕೊಂಡರು. ಗಾಜಿನ ತೊಟ್ಟಿಯಲ್ಲಿ ಅವರಿಗೆ ತಮ್ಮ ಪಟ್ಟದ ಕುದುರೆಯ ಗಗ್ಗರ (anklet) ಹಾಗೂ ಒಂದು ಬೆಳ್ಳಿಯ ಗಂಟೆಯನ್ನು ನೀಡಿ ಗೌರವಿಸಿದರು.

ಸುಬ್ಬರಾಯದಾಸರು ಕೈಗೊಂಡ ಯಾತ್ರೆಗಳು, ಆ ಸಂದರ್ಭದಲ್ಲಿ ಅವರಿಗೆ ದೊರೆತ ಬಿರುದುಗಳು, ದಾನಗಳು ಮತ್ತು ದಾಸರು ಅಲ್ಲೆಲ್ಲಾ ಕೈಗೊಂಡ ಧಾರ್ಮಿಕ ಚಟುವಟಿಕೆಗಳ ಬಗೆಗೆ ಶಾಸನದಲ್ಲಿ ದೀರ್ಘವಾದ ವಿವರಣೆ ಇದೆ. ಈ ಯಾತ್ರೆಗೆ ಮುಮ್ಮಡಿಯವರು ನೀಡಿದ ಸಹಕಾರವೂ ಪ್ರಶಂಸಾರ್ಹ. ಯಾತ್ರೆ ಹೊರಟ ದಾಸರಿಗೆ ಒಡೆಯರು ಮುತ್ತು ರತ್ನಗಳನ್ನು ಬೆರೆಸಿದ ಮೂರು ಬೊಗಸೆ ಅಕ್ಕಿ, ಚಿನ್ನದ ಗಂಟೆಯ ಸರ, ಹಾಗೂ ಬೆಳ್ಳಿ ಕಾಲಂದುಗೆಯನ್ನು ನೀಡಿದರು. ಅವರ ದೇವರಾದ ವೆಂಕಟರಮಣನಿಗೆ ಒಂದು ಪಲ್ಲಕ್ಕಿ, ಆನೆ, ಒಂದು ಜೊತೆ ಬೆಳ್ಳಿ ದಂಡ, ಚೌರಿ, ಚಾಮರ, ಶ್ವೇತಛತ್ರಿ, ಒಂದು ಕುದುರೆ ಹಾಗೂ ಒಂಟೆಯೊಂದನ್ನು ನೀಡಿದರು. ಸುಬ್ಬರಾಯದಾಸರೊಂದಿಗೆ ಪ್ರಯಾಣದಲ್ಲಿ ಅರವತ್ತು ಬ್ರಾಹ್ಮಣರು, ಮೂವತ್ತು ಮಂದಿ ಶೂದ್ರರು, ಇಪ್ಪತ್ತು ಪದಾತಿದಳ, ಎರಡು ಆನೆ, ಹದಿನಾರು ಕುದುರೆ, ಒಂದು ಪಲ್ಲಕ್ಕಿ, ಮೂರು ಒಂಟೆ ಹಾಗೂ ಇಪ್ಪತ್ತು ಎತ್ತಿನ ಗಾಡಿಗಳಲ್ಲಿ ಸಾಮಾನು ಸರಂಜಾಮುಗಳಿದ್ದವು. ಇದೆಲ್ಲವನ್ನು ಮುಮ್ಮಡಿಯವರೇ ನೀಡಿದ್ದರು. ಅಲ್ಲದೆ ಇವರು ಪ್ರಯಾಣ ಮಾಡುವ ಸಂದರ್ಭದಲ್ಲಿ ಹಾದುಹೋಗುವ ಜಿಲ್ಲೆಗಳಲ್ಲಿ ದಾಸರಿಗೆ ಎಲ್ಲಾ ರೀತಿಯ ಅನುಕೂಲ ಮಾಡಿಕೊಡುವಂತೆ ಆದೇಶಿಸಿ (ಜಿಲ್ಲೆಗಳ ಅಧಿಕಾರಿಗಳಿಗೆ) ಒಂದು ರಹದಾರಿ ಪತ್ರವನ್ನು ನೀಡಿದ್ದರು. ಅದೇ ರೀತಿ ಕಂಪೆನಿಗೆ ಸೇರಿದ್ದ ಪ್ರಾಂತ್ಯಗಳಲ್ಲಿ ಪ್ರಯಾಣ ಮಾಡುವಾಗ ದಾಸರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ತಿಳಿಸಿ ಮೈಸೂರು ರಾಜ್ಯದ ಬ್ರಿಟಿಷ್ ರೆಸಿಡೆಂಟ್ ಖಾಸಾ ಮೇಜರ್ ಸಾಹೇಬ್ ರಹದಾರಿ ಪತ್ರ ಒಂದನ್ನು ನೀಡಿದ್ದರು. ಒಡೆಯರ ಕಾಳಜಿಯಿಂದ ಸುಬ್ಬರಾಯದಾಸರ ತೀರ್ಥಯಾತ್ರೆಗಳು ಸುಗಮವಾಗಿ ನಡೆದವು. ದಾಸರ ಧಾರ್ಮಿಕ ವ್ಯಕ್ತಿತ್ವ ಮತ್ತು ಪಾಂಡಿತ್ಯದಿಂದಾಗಿ ಹೋದಲ್ಲೆಲ್ಲಾ ಅವರಿಗೆ ಗೌರವಾದರಗಳು ದೊರೆತವು.

ಸುಬ್ಬರಾಯದಾಸರು ತೀರ್ಥಯಾತ್ರೆ ಮುಗಿಸಿ ಮೈಸೂರಿಗೆ ಹಿಂತಿರುಗಿದ ನಂತರ ಅವರಿಗೆ ತಮ್ಮ ಆರಾಧ್ಯದೈವ ವೆಂಕಟರಮಣನಿಗೂ, ಪ್ರಾಣದೇವರಾದ ಆಂಜನೇಯನಿಗೂ ದೇವಾಲಯ ನಿರ್ಮಿಸಬೇಕೆಂಬ ಇಚ್ಛೆಯಾಯಿತು. ತಮ್ಮ ಇಚ್ಛೆಯನ್ನು ಒಡೆಯರಿಗೆ ತಿಳಿಸುತ್ತಾ ತಾವಿರುವ ಕೃಷ್ಣವಿಲಾಸ ಅಗ್ರಹಾರದ ೨೦ನೇ ನಿವೇಶನದಲ್ಲಿ ದೇವಾಲಯ ನಿರ್ಮಿಸಿಕೊಡಬೇಕಾಗಿ ಕೋರಿದರು. ಇವರ ಕೋರಿಕೆಯನ್ನು ಒಡೆಯರು ಎಂದಿಗೂ ನಿರ್ಲಕ್ಷಿಸಿದವರಲ್ಲ. ಹಾಗಾಗಿ ೧೮೩೬ರ ವೇಳೆಗೆ ಅವರ ಮನೆಯ ಸ್ವಲ್ಪ ಭಾಗ ದೇವಾಲಯವಾಗಿ ಪರಿವರ್ತನೆಗೊಂಡಿತು. ಅದೇ ವರ್ಷ ಪ್ರಸನ್ನ ವೆಂಕಟರಮಣ ಹಾಗೂ ಪ್ರಾಣದೇವರಾದ ಆಂಜನೇಯ ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡಲಾಯಿತು. ಈ ಎರಡೂ ವಿಗ್ರಹಗಳು ಇಂದಿಗೂ ಆ ದೇವಾಲಯದಲ್ಲಿವೆ. ಈ ವಿಗ್ರಹಗಳನ್ನು ಒಡೆಯರಾಗಲೀ, ಸುಬ್ಬರಾಯ ದಾಸರಾಗಲೀ ಕೆತ್ತಿಸಿದ್ದಲ್ಲವೆಂದೂ ಅವುಗಳು ದಾಸರಿಗೆ ಚಾಮುಂಡಿ ಬೆಟ್ಟದ ದೊಡ್ಡ ಕೆರೆಯಲ್ಲಿ ದೊರಕಿದವುಗಳೆಂದೂ ಹೇಳಲಾಗಿದೆ. ಈ ದೇವಾಲಯಕ್ಕೆ ಶ್ರೀನಿವಾಸ ಪುಷ್ಕರಣಿ ಎಂಬ ಕೊಳ, ಒಂದು ರಥ, ಪೂಜಾ ಪಾತ್ರೆಗಳು, ಉತ್ಸವಾದಿಗಳಿಗಾಗಿ ವಾಹನಗಳು, ಹಬ್ಬಹರಿದಿನಗಳಲ್ಲಿನ ವಿಶೇಷ ಪೂಜೆಗಳಿಗಾಗಿ ಹಾಗೂ ಬ್ರಾಹ್ಮಣರ ಅನ್ನಸಂತರ್ಪಣೆಗಾಗಿ ಮಾಸಿಕ ೧೦೦ ವರಹಗಳು ಇತ್ಯಾದಿ ಅನೇಕ ರೀತಿ ಕೊಡುಗೆಗಳು ಒಡೆಯರಿಂದ ಲಭಿಸಿದವು.

ಈ ದೇವಾಲಯದಲ್ಲಿ ಚಿತ್ರಪಟ್ಟಿಕೆಗಳಿರುವುದು ಗಮನಾರ್ಹ. ಪ್ರಾಣದೇವರ ಗುಡಿಯ ಎರಡು ಬಾಗಿಲುಗಳ ಮೇಲೆ ಚಿತ್ರಪಟಗಳಿವೆ. ಅದರಲ್ಲಿ ಐದು ಹೆಡೆಯ ಸರ್ಪ, ಸರ್ಪದ ಸುರುಳಿಗಳ ನಡುವೆ ಕುಳಿತಿರುವ ವ್ಯಾಸ, ಬಲಭಾಗದಲ್ಲಿ ಮಧ್ವಾಚಾರ್ಯ ಮತ್ತು ಗರುಡ. ಎಡಭಾಗದಲ್ಲಿ ಭೀಮ ಹಾಗೂ ಹನುಮಂತನನ್ನು ಚಿತ್ರಿಸಲಾಗಿದೆ. ಕೆಳಭಾಗದಲ್ಲಿ

ಮುಮ್ಮಡಿ ಕೃಷ್ಣರಾಜ ಒಡೆಯರು, ಸುಬ್ಬರಾಯದಾಸ, ಶೀನಪ್ಪದಾಸ ಹಾಗೂ ದಿವಾನ್ ಪೂರ್ಣಯ್ಯನವರ ಚಿತ್ರಗಳಿವೆ. ಈ ದೇವಾಲಯದ ಮೊದಲ ಮಹಡಿಯಲ್ಲೂ ವರ್ಣಚಿತ್ರಪಟಗಳಿದ್ದು, ರಾಜಒಡೆಯರಿಂದ ಖಾಸಾ ಚಾಮರಾಜ ಒಡೆಯರವರೆಗಿನ ಆಡಳಿತದ ಕಾಲವನ್ನೂ, ಹೆಸರುಗಳನ್ನೂ ನೀಡಲಾಗಿದೆ. ಇದೇ ಸುಬ್ಬರಾಯದಾಸರು ಬಿಳಿಕೆರೆಯಲ್ಲಿ ಜಯವೆಂಕಟೇಶ್ವರ ದೇವಾಲಯ ಹಾಗೂ ಅನ್ನಸತ್ರ ಒಂದನ್ನು ಕಟ್ಟಿಸಿದರು. ಈ ಅನ್ನಸತ್ರಕ್ಕೂ ಒಡೆಯರು, ಅವರ ಪುತ್ರ ಹಾಗೂ ಅಳಿಯ ಲಿಂಗರಾಜಯ್ಯ ಅರಸು ದಾನ ನೀಡಿರುವುದು ದಾಖಲೆಗಳಿಂದ ತಿಳಿದುಬಂದಿದೆ. ಸುಬ್ಬರಾಯರ ಮೇಲೆ ಒಡೆಯರಿಗಿದ್ದ ಅಪಾರ ಪ್ರೀತಿ–ಗೌರವಗಳಿಂದಾಗಿ ಇವೆಲ್ಲ ಸಾಧ್ಯವಾಯಿತು.

ಮುಮ್ಮಡಿಯವರಿಗೆ ಸುಬ್ಬರಾಯದಾಸರ ಮೇಲಿದ್ದ ಗೌರವ–ಪ್ರೀತಿಗಳಿಗೆ ಎಣೆ ಇರಲಿಲ್ಲ. ಕೆಲವು ಉದಾಹರಣೆಗಳೊಂದಿಗೆ ಮೇಲಿನ ಹೇಳಿಕೆಯನ್ನು ಸ್ಪಷ್ಟಪಡಿಸಬಹುದು. ದಾಸರು ಯಾತ್ರೆಗೆ ತೆರಳಿದ್ದ ಸಂದರ್ಭದಲ್ಲಿ ಅವರಿಗೆ ನೀಡುತ್ತಿದ್ದ ಹತ್ತು ವರಹಗಳ ವೇತನವನ್ನೂ, ಶನಿವಾರದ ಪೂರೈಕೆಗಾಗಿ ನೀಡುತ್ತಿದ್ದ ಪದಾರ್ಥಗಳನ್ನೂ ಅವರ ಅಣ್ಣ ಶೀನಪ್ಪದಾಸರಿಗೆ ಕಳುಹಿಸಲಾಗುತ್ತಿತ್ತು. ದಾಸರು ಇಚ್ಛಿಸಿದಂತೆ ಅವರ ಮನೆಯನ್ನೇ ಶಿಲ್ಪಿ ಚೂಡಾಚಾರಿಯಿಂದ ದೇವಾಲಯವಾಗಿ ಪರಿವರ್ತಿಸಿ ಅದರ ಪೂಜಾಕೈಂಕರ್ಯಗಳಿಗೆ ಅನುಕೂಲವಾಗುವಂತೆ ಉದಾರವಾಗಿ ದಾನ ನೀಡಲಾಯಿತು. ಇವಲ್ಲದೆ ದಾಸರು ಮತ್ತೊಮ್ಮೆ ತಿರುಪತಿ ಯಾತ್ರೆಗೆ ತೆರಳಿದ್ದಾಗ ಒಡೆಯರು ಅವರಿಗೆ ಎರಡು ಪತ್ರಗಳನ್ನೂ ಸಹ ಬರೆದಿದ್ದರು. ಮೊದಲನೇ ಪತ್ರ ದೇವಾಲಯದ ನಿರ್ಮಾಣ ಕಾರ್ಯ ಆರಂಭವಾಗಿದ್ದ ಸಂದರ್ಭದ್ದು. "ತಿರುಪತಿಗೆಂದು ನೀವು ಮೈಸೂರಿನಿಂದ ಹೋಗಿ ಬಹಳ ದಿನಗಳಾದವು. ನಿಮ್ಮ ಕೋರಿಕೆಯಂತೆ ಶಿಲ್ಪಿ ಚೂಡಾಚಾರಿಯಿಂದ ದೇವಾಲಯದ ಕೆಲಸ ಶೀಘ್ರವಾಗಿ ಮುಗಿಸುವಂತೆ ಆಜ್ಞಾಪಿಸಿದ್ದೇವೆ...." ಎಂಬುದಾಗಿದೆ. ಮತ್ತೊಂದು ಪತ್ರವು ಸುಬ್ಬರಾಯದಾಸರಿಗೆ ಸಾಂತ್ವನ ಹೇಳಿ ಬರೆದುದಾಗಿದೆ. ದಾಸರು ಯಾತ್ರೆಯಲ್ಲಿದ್ದಾಗ ಅವರ ಹತ್ತಿರದ ಸಂಬಂಧಿಗಳು (ಮಗ ಎನ್ನಲಾಗಿದೆ) ಮರಣವಪ್ಪಿದ್ದರು. ಆಗ ಬರೆದ ಪತ್ರ ಹೀಗಿದೆ. "ನಿಮ್ಮ ನೋವನ್ನು ನಾನು ಅರಿಯಬಲ್ಲೆ. ದಯವಿಟ್ಟು ನಿಮ್ಮ ಕುಟುಂಬಕ್ಕಾಗಿ, ನನಗಾಗಿ ನಿಮ್ಮ ದುಃಖವನ್ನು ಕಡಿಮೆ ಮಾಡಿಕೊಳ್ಳಿ. ನಿಮ್ಮ ದುಃಖ ನಮ್ಮ ದುಃಖ ಎಂದು ನಾವು ಭಾವಿಸುತ್ತೀವಿ. ನಿಮ್ಮ ಧರ್ಮಪತ್ನಿಯವರು ಅಪಾರ ಸಂಕಟಪಡುತ್ತಿರಬೇಕು. ದಯವಿಟ್ಟು ಅವರಿಗೆ ನಮ್ಮ ಸಂತಾಪ ಮತ್ತು ಸಹಾನುಭೂತಿ ತಿಳಿಸಿ."

ಧಾರ್ಮಿಕ ಮನೋಭಾವದ ಸುಬ್ಬರಾಯದಾಸರು ಬಹುಶಃ ಮಗನನ್ನು ಕಳೆದುಕೊಂಡು ಮತ್ತೆ ವಿರಕ್ತರಾದಂತೆ ತೋರುತ್ತದೆ. ತಮ್ಮ ದೇವಾಲಯದ ಪೂಜಾಕೈಂಕರ್ಯಗಳು ಸರಿಯಾಗಿ ನಡೆಯಲೆಂಬ ಉದ್ದೇಶದಿಂದ ಹಾಗೂ ಬ್ರಾಹ್ಮಣರಿಗೆ ದಾನ ನೀಡುವ ಆಕಾಂಕ್ಷೆಯಿಂದ ೧೮೩೭ರಲ್ಲಿ ಅಗ್ರಹಾರ ಒಂದನ್ನು ನಿರ್ಮಿಸಿದರು. ಬಹುಶಃ ಮುಮ್ಮಡಿಯವರ ಕಾಲದಲ್ಲಿ ಖಾಸಗಿ ವ್ಯಕ್ತಿಗಳು ನಿರ್ಮಿಸಿದ ಕೊನೆಯ ಅಗ್ರಹಾರ ಇದೆ ಎಂದು ತೋರುತ್ತದೆ. ಸುಬ್ಬರಾಯದಾಸರು ಹಾಗೂ ಅವರ ಅಣ್ಣ ಶೀನಪ್ಪದಾಸರು ಕೂಡಿ ತಮ್ಮ ಮಾತಾಪಿತೃಗಳ ಆಧ್ಯಾತ್ಮಿಕ ಕಲ್ಯಾಣಕ್ಕಾಗಿ, ರಾಜನ ಅಭಿವೃದ್ಧಿಗಾಗಿ, ಭಗವಂತ ವೆಂಕಟೇಶನ ಸಂತೋಷಕ್ಕಾಗಿ ಅಗ್ರಹಾರ ನಿರ್ಮಿಸಿದರು. ಪ್ರಸನ್ನ ವೆಂಕಟರಮಣ ದೇವಾಲಯದ ಎದುರಿಗೆ ಒಂಬತ್ತು ಮನೆಗಳ ಅಗ್ರಹಾರವನ್ನು ನಿರ್ಮಿಸಿದರು. ಶಾಸನದಲ್ಲಿ ಮೌದ್ಗಲ್ಯಗೋತ್ರ, ಆಶ್ವಲಾಯನಸೂತ್ರ, ಋಕ್‌ಶಾಖಾಧ್ಯಾಯಿ ಸೀತಾರಾಮಯ್ಯನ ಮಕ್ಕಳೂ, ಸುಬ್ಬಯ್ಯನ ಮೊಮ್ಮಕ್ಕಳೂ ಆದ ಶೀನಪ್ಪದಾಸ ಮತ್ತು ಸುಬ್ಬರಾಯದಾಸ ಅಲಿಯಾಸ್ ಗೋಪಾಲದಾಸ ಅಗ್ರಹಾರ ನಿರ್ಮಿಸಿ ದಾನನೀಡುತ್ತಿರುವ ವಿಷಯ ಇದೆ. ಆ ೯ ಮನೆಗಳನ್ನು ದಾನ ನೀಡಿದ ವಿವರ ಇಂತಿದೆ.

ಅ) ಮೇಲು ಭಾಗದಲ್ಲಿ ಅನ್ನಛತ್ರಕ್ಕಾಗಿ ಒಂದು ಮನೆ.

ಆ) ಪೂರ್ವಭಾಗದಲ್ಲಿ ಯಜಮಾನ ವೃತ್ತಿ ಒಂದು, ಮನೆ ಒಂದು. ಯಜಮಾನ ವೃತ್ತಿಗೆ ಮಹಾಮಾತೃಶ್ರೀ ಲಕ್ಷಮ್ಮಣ್ಣಿಯವರು ಕೊಟ್ಟ ಆನಂದೂರು ಭಟಮಾನ್ಯ ಒಂದು.

ಇ) ಪ್ರಾಣದೇವರ ಪೂಜೆ ಮಾಡುವ ಸುಬ್ಬಣ್ಣಾಚಾರ್ಯರಿಗೆ ಮನೆ ಒಂದು.

ಈ) ಒಂಬತ್ತು ಮನೆ ಅಗ್ರಹಾರಕ್ಕೆ ಸೇರಿದ ಪ್ರಾಣದೇವರ ಪೂಜೆ ವೆಂಕಪ್ಪಾಚಾರ್‌ರಿಗೆ ಮನೆ ಒಂದು.

ಉ) ಪ್ರಸನ್ನ ವಿಶ್ವೇಶ್ವರ ಪೂಜೆ ಮಾಡುವ ವೆಂಕಟರಾಮಾಶಾಸ್ತ್ರಿಗಳಿಗೆ ಮನೆ ಒಂದು.

ಊ) ಭಾಗವತ ಸೇವೆ ಮಾಡುವ ಕೃಷ್ಣದಾಸರು–ಮನೆ ಒಂದು.

ಋ) ಮಂತ್ರಪುಷ್ಪದ ಅವಲಕ್ಕಿ ರಾಮಾಚಾರು–ಮನೆ ಒಂದು.

ಎ) ಸಹಸ್ರನಾಮದ ವೆಂಕಟಕೃಷ್ಣಾಚಾರ್ಯರು–ಮನೆ ಒಂದು. ಇವು ಎಂಟು ಮನೆಗಳನ್ನು ೧೮೩೭ ಅಕ್ಟೋಬರ್ ೧೫ರಂದು ದಾನ ಮಾಡಿದ್ದರೆ, ಒಂಬತ್ತನೇ ಮನೆಯನ್ನು

ಏ) ೧೯೩೮ರ ನವರಾತ್ರಿ ಸಂದರ್ಭದಲ್ಲಿ ನೀಡಲಾಗಿದೆ. ಆಪಸ್ತಂಭ ಸೂತ್ರ, ಹರಿದಾಸ ಗೋತ್ರದ ಸುಬ್ರಹ್ಮಣ್ಯಾಚಾರ್ಯನ ಮೊಮ್ಮಗ, ಶ್ರೀನಿವಾಸಾಚಾರನ ಮಗ ಬಾಬಾ

ಸ್ವಾಮಿ ಆಚಾರನಿಗೆ ಅಗತ್ಯವಸ್ತುಗಳ ಸಹಿತ ಒಂದು ಮನೆ ಹಾಗೂ ಒಂದು ವೃತ್ತಿಯನ್ನು ನೀಡಲಾಯಿತು. ಈತ ಪ್ರಸನ್ನ ವೆಂಕಟೇಶ್ವರ ದೇವಾಲಯದಲ್ಲಿ ಪೌರೋಹಿತ್ಯವನ್ನೂ ಹಾಗೂ ಸಾಮವೇದ ಪಠಣವನ್ನೂ ಮಾಡಬೇಕಾಗಿ ಶಾಸನದಲ್ಲೇ ತಿಳಿಸಲಾಗಿದೆ.

ಮೊದಲೆರಡು ಹಾಗೂ ಕೊನೆಯ ಪ್ರತಿಗ್ರಹಿಗಳನ್ನು ಬಿಟ್ಟು ಉಳಿದ ಪ್ರತಿಗ್ರಹಿಗಳಿಗೆ ತಾವು ಆನಂದೂರಿನಲ್ಲಿ ಪಡೆದಿದ್ದ ಭಟಮಾನ್ಯದಲ್ಲಿ ವಾರ್ಷಿಕ ಆರು ವರಹಗಳ ಉತ್ಪತ್ತಿಯನ್ನು ವೃತ್ತಿಯಾಗಿ ಪಡೆಯುವಂತೆಯೂ ತಿಳಿಸಿ ಶಾಸನ ಬರೆಸಲಾಗಿದೆ. ಈ ಅಗ್ರಹಾರ ಶಾಸನದಲ್ಲಿ ಪ್ರತಿಗ್ರಹಿಗಳ ಕರ್ತವ್ಯದ ಬಗೆಗೂ ವಿವರಣೆ ಇದೆ. ಪ್ರಾಣದೇವರ ಪೂಜೆ ಮಾಡುವ ಸುಬ್ಬಣ್ಣಚಾರರು ಸ್ಥಳದಲ್ಲಿಲ್ಲದಿದ್ದ ಪಕ್ಷದಲ್ಲಿ ವೆಂಕಪ್ಪಾಚ್ಯಾರ್, ವೆಂಕಟರಾಮಾಶಾಸ್ತ್ರಿ ಹಾಗೂ ಕೃಷ್ಣದಾಸ ಇವರುಗಳು ಕ್ರಮವಾಗಿ ಒಂದೊಂದು ದಿನ ಒಬ್ಬೊಬ್ಬರಂತೆ ದೇವರಿಗೆ ನೈವೇದ್ಯವನ್ನು ಮನೆಯಲ್ಲಿ ಮಾಡಿಸಿಕೊಂಡು ಬಂದು ದೇವಾಲಯದಲ್ಲಿ ಪೂಜೆ ನೆರವೇರಿಸಬೇಕು. ಯಾವುದೇ ಕಾರಣಕ್ಕೂ ದೇವಾಲಯದಲ್ಲಿ ಪೂಜೆ ನಿಲ್ಲಬಾರದೆಂಬ ಉದ್ದೇಶ ಇದ್ದುದು ಮೇಲಿನ ವ್ಯವಸ್ಥೆಯಿಂದ ತಿಳಿದುಬರುತ್ತದೆ. ಇದರ ಜೊತೆಗೆ ದೇವರ ಪೂಜೆ ಮಾಡುವ ಸಂದರ್ಭದಲ್ಲಿ ಭಕ್ತರಿಂದ ಬರುವ ಹಣ ಒಂದು ರೂಪಾಯಿಗಿಂತ ಕಡಿಮೆ ಇದ್ದಲ್ಲಿ ಪೂಜಾರಿಯೇ ಅದನ್ನು ಇಟ್ಟುಕೊಳ್ಳಬೇಕೆಂದೂ ಅದಕ್ಕಿಂತ ಹೆಚ್ಚಾಗಿದ್ದಲ್ಲಿ ಅದನ್ನು ಯಜಮಾನನಿಗೆ ನೀಡಬೇಕೆಂದೂ, ಆ ಹಣವನ್ನು ದೇವಾಲಯದ ನಿರ್ವಹಣೆಗೆ ಉಪಯೋಗಿಸಬೇಕೆಂದೂ ತಿಳಿಸಲಾಗಿದೆ. ಒಟ್ಟಿನಲ್ಲಿ ಸುಬ್ಬರಾಯದಾಸರು ಸುಬ್ರಹ್ಮಣ್ಯ ಅಗ್ರಹಾರ (ಸುಬ್ಬರಾಯದಾಸ ಅಗ್ರಹಾರವೆಂದೂ ಹೇಳಲಾಗುತ್ತಿತ್ತು) ನಿರ್ಮಿಸಿ ದೇವಾಲಯದ ಪೂಜಾ ಕಾರ್ಯಗಳು ಸುಗಮವಾಗಿ ನಡೆಯುವಂತೆ ನೋಡಿಕೊಂಡರು. ಬಹುಶಃ ಅವರಲ್ಲಿದ್ದ ಸಂಪತ್ತನ್ನೆಲ್ಲಾ ಧಾರ್ಮಿಕ ಕಾರ್ಯಗಳಿಗಾಗಿಯೇ ವಿನಿಯೋಗಿಸಿದ್ದಂತೆ ತೋರುತ್ತದೆ.

೧೮೬೪ರಲ್ಲಿ ಸುಬ್ಬರಾಯದಾಸರು ಮರಣವಪ್ಪಿದರು. ಇವರ ಪ್ರತಿಮೆಯೊಂದನ್ನು ಪ್ರಸನ್ನ ವೆಂಕಟೇಶ್ವರ ದೇವಾಲಯದ ಉತ್ತರ ದ್ವಾರದ ಒಳಗೆ ಗರ್ಭಗುಡಿಯ ಎದುರಾಗಿ ಕೆತ್ತಲಾಗಿದೆ. ಪ್ರತಿಮೆಯ ಇಕ್ಕಡಗಳಲ್ಲೂ, ಮೇಲೂ ಶಾಸನ ಬರೆಸಲಾಗಿದೆ. ಸುಮಾರು ೨೧/೨ ಎತ್ತರವಿರುವ ಈ ವಿಗ್ರಹದ ಎಡತೋಳಿನಲ್ಲಿ ತಂಬೂರವಿದೆ, ಎಡಕೈಯ್ಯಲ್ಲಿ ಕಮಂಡಲ(ಪಂಚಪಾತ್ರೆ)ದಂತಹ ಪಾತ್ರೆ ಹಾಗೂ ಬಲಗೈಲಿ ತುಳಸೀದಳ ಹಿಡಿದು ಎಲ್ಲವನ್ನೂ ವೆಂಕಟರಮಣನಿಗೇ ಸಮರ್ಪಿಸುತ್ತಿರುವ ಭಂಗಿ ಕೆತ್ತಲಾಗಿದೆ.

ಅವರ ಮನೆ ಹಾಗೂ ದೇವಾಲಯ, ಬಿಳಿಕೆರೆಯ ಜಯವೆಂಕಟೇಶ್ವರ ದೇಗುಲ ಇಂದಿಗೂ ಸುಬ್ಬರಾಯದಾಸರ ವಂಶದವರ ಸುಪರ್ದಿನಲ್ಲೇ ಇದೆ. ವೆಂಕಟೇಶದಾಸ, (ಐದನೇ ತಲೆಮಾರಿನ) ಈ ದೇವಾಲಯಗಳ ಮೇಲ್ವಿಚಾರಕರಾಗಿಯೂ, ಅರ್ಚಕರಾಗಿಯೂ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇಲ್ಲಿಯ ವರ್ಣಚಿತ್ರಗಳು ಸುಂದರವಾಗಿದ್ದು ನೋಡಲರ್ಹವಾಗಿವೆ.

ಆಧಾರಸೂಚಿ

೧. EC. Vol. V, (NS), Mysore 4-8.

೨. M.A.R. 1919, PP. 48-52.

೩. ನಂಜರಾಜ ಅರಸ್ ಪಿ.ವಿ., ಮೈಸೂರು ನೂರಿನ್ನೂರು ವರ್ಷಗಳ ಹಿಂದೆ, ಮೈಸೂರು, ೨೦೦೭, ಪುಟ–೧೯೭–೧೯೯.

೪. ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಮೈಸೂರು ಜಿಲ್ಲೆ, ಸೂರ್ಯನಾಥ ಕಾಮತ್ (ಪ್ರ.ಸಂ.), ಬೆಂಗಳೂರು, ೧೯೮೮, P. 894.

ಸುಂಕಂ ಗೋವರ್ಧನ*

ವಿಜಯನಗರ ಆಡಳಿತ ಕಾಲದಲ್ಲಿ ಮಧುವಂಕ ನಾಡು

ವಿಜಯನಗರದ ಅರಸರು ಸಾಮ್ರಾಟರಾಗಿ ಆಡಳಿತವನ್ನು ಆರಂಭಿಸಿದ ನಂತರ ತಮ್ಮ ಒಟ್ಟೂ ಸಾಮ್ರಾಜ್ಯವನ್ನು ಹಲವಾರು ರಾಜ್ಯಗಳಾಗಿ ವಿಂಗಡಿಸಿ ಅಧಿಕಾರದ ವಿಕೇಂದ್ರೀಕರಣವನ್ನು ಮಾಡಿದರು. ಸಂಗಮರೇ ಈ ರೀತಿಯ ರಾಜ್ಯಗಳನ್ನು ರೂಢಿಸಿದರು. ಇದರಿಂದ ಐದೂ ಜನ ಸಂಗಮ ಸೋದರರು ಬೇರೆ ಬೇರೆ ಪ್ರಾಂತ್ಯಗಳ ಅಧಿಕಾರದಲ್ಲಿದ್ದು ಸಾಮ್ರಾಜ್ಯದ ಬಲವು ನೂರ್ಮ್ಮಡಿಗೊಳ್ಳಲು ಸಹಕಾರಿಯಾಯಿತು.

ಹೀಗೆ ರೂಪುಗೊಂಡ ರಾಜ್ಯಗಳಲ್ಲಿ ಮಲೆನಾಡಿನ ಸಂಪೂರ್ಣ ಭಾಗವನ್ನು ಆರಗ ರಾಜ್ಯವೆಂದು ಕರೆದು ತೀರ್ಥಹಳ್ಳಿಯ ಬಳಿ ಇರುವ ಆರಗವನ್ನು ಕೇಂದ್ರವನ್ನಾಗಿ ಮಾಡಿಕೊಂಡು ಸಂಗಮರ ಪಂಚ ಸಹೋದರರಲ್ಲಿ ಒಬ್ಬನಾದ ಮಾರಪ್ಪನು ಆಡಳಿತ ನಡೆಸಿದನು. ಆರಗದ ೧೮ ಕಂಪಣಗಳು ಹಾಗೂ ಗುತ್ತಿಯ (ಚಂದ್ರಗುತ್ತಿ) ೧೮ ಕಂಪಣಗಳನ್ನು ಒಳಗೊಂಡ ಅರಗ–ಗುತ್ತೀ ರಾಜ್ಯವು ಈತನ ಆಡಳಿತಕ್ಕೆ ಒಳಪಟ್ಟಿತ್ತು. ಅರಗ ಹಾಗೂ ಚಂದ್ರಗುತ್ತಿಗಳು ಇವುಗಳ ರಾಜಧಾನಿಯಾಗಿದ್ದವು.

ಆರಗ ರಾಜ್ಯದಲ್ಲಿ ಇಂದಿನ ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಭಾಗಗಳು ಅಂತರ್ಗತವಾಗಿದ್ದರೆ ಗುತ್ತೀ ರಾಜ್ಯದಲ್ಲಿ ಇಂದಿನ ಉತ್ತರ ಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಯ ಮೇಲಿನ ಭಾಗಗಳು ಅಂತರ್ಗತವಾಗಿದ್ದವು.

ಆರಗವು ಭೌಗೋಳಿಕವಾಗಿ ತುಂಗಾ ನದಿಗೆ ಸನಿಹ ದಲ್ಲಿಯೇ ಇದ್ದು ಸಣ್ಣ ತೊರೆಗಳಾದ ಕುಶಾವತಿ ಮತ್ತು ಗೋಪಿನಾಥವು ಆರಗದ ಬಳಿಯೇ ಹರಿಯುತ್ತದೆ. ಶ್ರೀಮಂತ ಜಲಸಂಪತ್ತಿನ ಜೊತೆಗೇ ಇರುವ ಅಪಾರ ವೃಕ್ಷಸಂಪತ್ತು, ಸುತ್ತಲೂ ಹರಡಿಕೊಂಡಿರುವ ದಟ್ಟವಾದ ಪರ್ವತ ಶ್ರೇಣಿ ಯಿಂದ ಲಭ್ಯವಾಗಿದೆ. ಆದುದರಿಂದಲೇ ವ್ಯಾಪಾರಕ್ಕೆ ಪೂರಕ ವಾದ ವಾತಾವರಣ ಆರಗದಲ್ಲಿ ಸಿದ್ಧಿಸಿದೆ.

ಮೂಲತಃ ಈ ಪ್ರದೇಶವು ಸಾಂತಳಿಗೆ ೧೦೦೦ ಪ್ರಾಂತ್ಯದ ಸಾಂತರರ ಆಡಳಿತ ಪ್ರದೇಶ. ಆದರೆ ಈ ಕಾಲದಲ್ಲಿ ಆರಗಕ್ಕೆ ಅಂತಹ ಪ್ರಾಮುಖ್ಯತೆಯಿರಲಿಲ್ಲ. ಶಾಂತರರ ನಂತರ ಆಡಳಿತ ನಡೆಸಿದ ಹೊಯ್ಸಳರ ಅವಧಿಯಲ್ಲಿಯೂ ಆರಗಕ್ಕೆ ವಿಶೇಷ ಪ್ರಾಶಸ್ತ್ಯವಿರಲಿಲ್ಲ. ಆದರೆ ಸಂಗಮದೊರೆ ಮಾರಪ್ಪನಿಂದ ಅರಗವು ಆರಗ ರಾಜ್ಯವಾಗಿ ಪರಿವರ್ತಿತ ವಾಯಿತು.

ಈ ಆರಗ ರಾಜ್ಯದಲ್ಲಿ ಸರಿಸುಮಾರು ೫೦ ನಾಡುಗಳೂ ಹಾಗೂ ೬೦ ಪ್ರಮುಖ ಅಗ್ರಹಾರಗಳು ಅಸ್ತಿತ್ವದಲ್ಲಿದ್ದವು. ಈ ನಾಡುಗಳಲ್ಲಿ ಅತ್ಯಂತ ಪ್ರಮುಖವಾದ ನಾಡಾಗಿ ರಾಜಧಾನಿಯ ಸಮೀಪದಲ್ಲಿಯೇ ಇದ್ದ ನಾಡೆಂದರೆ ಮಧುವಂಕ ನಾಡು. ಈ ನಾಡಿನ ಇತಿಹಾಸವು ಆರಗ ರಾಜ್ಯದ ಪ್ರಮುಖ ಘಟನಾವಳಿಗಳನ್ನು ಹೊಂದಿದೆ.

ಅರಗ ರಾಜ್ಯವನ್ನು ಕ್ರಿ.ಶ. ೧೩೬೨ ರಿಂದ ಆರಂಭವಾಗಿ ವಿಜಯನಗರದ ಅರಸರು ಇವರ ನಂತರದ ಕೆಳದಿಯ ಅರಸರು ಕ್ರಿ.ಶ. ೧೬೯೫ರವರೆಗೆ ಆಳಿರುವುದಕ್ಕೆ ಶಾಸನಾಧಾರ ಗಳಿವೆ. ಹಾಗೂ ಮಧುವಂಕ ನಾಡಿನ ಉಲ್ಲೇಖವೂ ಸಹ ಇದೇ ಕಾಲಾವಧಿಯಲ್ಲಿಯೇ ಇರುತ್ತದೆ.

ಮಧುವಂಕ ನಾಡಿನ ಕೇಂದ್ರಭಾಗ ಯಾವುದು ಎಂಬ ಪ್ರಶ್ನೆಗೆ ಸುಲಭವಾಗಿ ಉತ್ತರ ದೊರಕುವುದಿಲ್ಲ. ಬೇರೆ ನಾಡುಗಳಂತೆ ಆ ನಾಡಿನ ಹೆಸರಿನಲ್ಲಿಯೇ ಒಂದು ಪ್ರತ್ಯೇಕ ಗ್ರಾಮವಿದ್ದು ಅದು ಕೇಂದ್ರವಾಗಿರುವಂತೆ ಮಧುವಂಕ ನಾಡಿನ ವಿಷಯದಲ್ಲಿ ಹೇಳಲು ಬರುವುದಿಲ್ಲ. ಶಾಸನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಮಧುವಂಕನಾಡಿನ ಕೇಂದ್ರ ಭಾಗವು ಆರಗ ಹಾಗೂ ತೀರ್ಥಹಳ್ಳಿಗಳೇ ಆಗಿರಬೇಕೆಂದು ತೋರುತ್ತದೆ. ಈ ಎರಡೂ ಸ್ಥಳಗಳಲ್ಲಿ ಆರಗವನ್ನೇ ಮಧುವಂಕ ನಾಡಿನ ಕೇಂದ್ರಭಾಗವೆಂದು ಸ್ಥಳಗಳಲ್ಲಿ ಆರಗವನ್ನೇ ಮಧುವಂಕ ನಾಡಿನ ಕೇಂದ್ರ ಭಾಗವೆಂದು ಗುರುತಿಸುವುದಕ್ಕೆ ಹೆಚ್ಚಿನ ಆಧಾರಗಳು ಸಿಗುತ್ತದೆ.

ಆದರೆ ಮಧುವಂಕ ನಾಡಿನ ಭೌಗೋಳಿಕ ವಿಸ್ತಾರದ ಬಗ್ಗೆ ಯಾವುದೇ ಅನುಮಾನಗಳಿಲ್ಲ. ಮಧುವಂಕ ನಾಡಿನಲ್ಲಿ ಅಂತರ್ಗತವಾಗಿದ್ದವು ಎಂದು ಸ್ಪಷ್ಟವಾಗಿ ಹೇಳಲಾಗುವ ೪೮ಕ್ಕೂ ಹೆಚ್ಚು ಗ್ರಾಮಗಳು ಶಾಸನೋಕ್ತವಾಗಿದೆ. ಇವುಗಳಲ್ಲಿ ಹಲವಾರು ಗ್ರಾಮಗಳು ತನ್ನ ಹೆಸರನ್ನು ಅಲ್ಪ ಸ್ವಲ್ಪ

*೬೭, ಮೊದಲನೇ ಮಹಡಿ, ಕೋದಂಡರಾಮಪುರ, ೫ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.



ಇದು ಶಿವಮೊಗ್ಗ ಜಿಲ್ಲೆಯ ಆಡಳಿತ ವಿಭಾಗಗಳಲ್ಲಿ ಬರುವ ವಿಶೇಷತೆ. ಈ 'ಬಾಗೆ' ಎಂಬುದಕ್ಕೆ ಕೇವಲ ಭಾಗಗಳೆಂದೇ ಅರ್ಥ. ಅಂತಹ ಕೆಲವು ಬಾಗೆಗಳು ಮಧುವಂಕ ನಾಡಿನಲ್ಲಿ ಅಂತರ್ಗತವಾಗಿತ್ತು.

ಮೇಲು ಬಾಗೆಯಲ್ಲಿದ್ದ ಗ್ರಾಮಗಳೆಂದರೆ ಬೊಂದಿ, ಕಲ್ಲಿನಾಥಪುರ, ತೊರಗಲೆ.

ಸಾಲೂರು ಬಾಗೆಯಲ್ಲಿದ್ದ ಗ್ರಾಮಗಳೆಂದರೆ = ಸಿಂಗಪೊಟ್ಟಣ ಹಾಗೂ ಕೋಳೂರು ಗ್ರಾಮಗಳು.

ಬಳ್ಳೂರು ಬಾಗೆಯಲ್ಲಿ ಭಾರತೀಪುರ ಹಾಗೂ ಭಾವರಸನ ಕೊಪ್ಪ ಗ್ರಾಮಗಳಿದ್ದವು.

ರೂಪಾಂತರದೊಂದಿಗೆ ಇಂದಿಗೂ ಉಳಿಸಿಕೊಂಡು ಬಂದಿದೆ. (ಈ ಎಲ್ಲಾ ಗ್ರಾಮಗಳನ್ನು ನಕ್ಷೆಯಲ್ಲಿ ತೋರಿಸಲಾಗಿದೆ.)

ಈ ಮಧುವಂಕ ನಾಡಿನಲ್ಲಿ ಪ್ರಧಾನವಾಗಿ ತುಂಗಾನದಿಯು ಹರಿಯುತ್ತದೆ. ಈ ತುಂಗಾನದಿಯ ಎರಡೂ ಕಡೆಗಳಲ್ಲಿ ಮಧುವಂಕ ನಾಡು ಹರಡಿದ್ದು ಈ ನಾಡಿನ ಇನ್ನಿತರ ಪ್ರಮುಖ ತೊರೆಗಳೆಂದರೆ ಮಾಲತಿಹೊಳೆ, ಮೀನಹೊಳೆ, ಬ್ಲಾರೆ ಹೊಳೆ, ಕುಶಾವತಿ ಹೊಳೆ ಹಾಗೂ ಗೋಪಿನಾಥ ಹೊಳೆಗಳು. ಇವು ಮಧುವಂಕ ನಾಡನ್ನು ಶ್ರೀಮಂತಗೊಳಿಸುವುದರಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿದೆ.

ಮಧುವಂಕ ನಾಡಿನಲ್ಲಿ ಭೌಗೋಳಿಕ ವ್ಯಾಪ್ತಿಯ ತೀರ್ಥಹಳ್ಳಿಯ ಸುತ್ತಮುತ್ತಲ ಗ್ರಾಮಗಳೇ ಆಗಿದ್ದು ಇವೆಲ್ಲವೂ ಇಂದಿನ ತೀರ್ಥಹಳ್ಳಿ ತಾಲ್ಲೂಕಿನಲ್ಲಿಯೇ ಅಂತರ್ಗತವಾಗಿದೆ. ಈ ನಾಡಿನ ಪ್ರಮುಖ ಗ್ರಾಮಗಳಾಗಿ ಅತ್ತಿಗಾರು, ಅಲುಗವಳ್ಳಿ, ಬಾಳಗೋಡು, ಮಳಲಿ, ಬಸವನಕಲ್ಲು, ಜಂಬೆ, ನೆರಟೂರು, ಹೊರಣಿ, ಶಿವರಾಜಪುರ, ಯಡೆಹಳ್ಳಿ, ಸಾಲೂರು, ಕೊಡಸಗೋಳಿ, ಬಳ್ಳೂರು, ಸೂರಳಿ, ಮರಗಳಲೆ, ಜೆಗಟಿಗಾರೆ, ಮಹಿಷಿ, ಕೋಳೂರು, ಜಿಕ್ಕಸೂರು, ಬಸವಾನಿ, ಮತ್ತೂರು ಮುಂತಾದ ಗ್ರಾಮಗಳು ಅಸ್ತಿತ್ವದಲ್ಲಿದ್ದವು.

ಈ ನಾಡಿನ ವಿಶೇಷವೆಂದರೆ ಈ ನಾಡಿನಲ್ಲಿಯೇ ಕೆಲವು ಗ್ರಾಮಗಳ ಸಮುಚ್ಚಯವನ್ನು 'ಬಾಗೆ'ಗಳಲ್ಲಿ ಸೇರಿಸುವುದು.

ಇದಲ್ಲದೆ ಮಧುವಂಕ ನಾಡಿನಲ್ಲಿ ಪಟ್ಟಡಿಗಳ ಅಧಿಕಾರ ವ್ಯಾಪ್ತಿಯಲ್ಲಿ ಕೆಲವು ಗ್ರಾಮಗಳಿದ್ದವು. ಇವುಗಳಲ್ಲಿ ಮುಂದಿನ ಕೆಲವನ್ನು ಉದಾಹರಣೆಯಾಗಿ ಗಮನಿಸಬಹುದು. ಬಹುಶಃ ಈ ಗ್ರಾಮಗಳ ಕಂದಾಯ ವ್ಯವಸ್ಥೆಯ ಕೇಂದ್ರಭಾಗ ಈ ಪಟ್ಟಡಿಗಳಾಗಿರಬಹುದು.

ಕೊಡಸಗೋಳಿ ಪಟ್ಟಡಿಯಲ್ಲಿ ಬೊಬ್ಬಳ್ಳಿ, ವಡದಕೆರೆ ಗ್ರಾಮ, ಹಿಂಡಚನಳ್ಳಿ, ಕುಕ್ಕರಿ ಗ್ರಾಮ, ಮಾವಕೋಡು ಗ್ರಾಮ ಹಾಗೂ ಕೇದಗೆ ಬಯಲು ಗ್ರಾಮಗಳಿದ್ದವು.

ಜಂಬೆ ಪಟ್ಟಡಿಯಲ್ಲಿ ಮರಗಳಲೆ, ನಿರಜವಳ್ಳಿ ಹಾಗೂ ಬಸವನ ಕಲ್ಲು ಗ್ರಾಮಗಳಿದ್ದವು.

ವಂಬೀ ಪಟ್ಟಡಿಯಲ್ಲಿ ಬಸವನಕಲ್ಲು ಗ್ರಾಮವಿತ್ತು.

ನೆರಟೂರು ಪಟ್ಟಡಿಯಲ್ಲಿ ಸೂರಳಿ ಗ್ರಾಮವಿತ್ತು.

ಮಧುವಂಕ ನಾಡಿನ ಇತಿಹಾಸ

ಆರಗ ರಾಜ್ಯದ ಅಧೀನದಲ್ಲಿದ್ದ ಮಧುವಂಕನಾಡನ್ನು ಆರಗದ ಅರಸರೇ ಆಳಿರುತ್ತಾರೆ. ೧೩೬೨ ರಿಂದ ೧೩೮೧ ರವರೆಗಿನ ಶಾಸನಗಳಲ್ಲಿ ವಿರುಪಣ್ಣ ಒಡೆಯ ಉತ್ತಮವಾಗಿರುವ ಮಧುವಂಕ ನಾಡನ್ನು ಆಳಿದವರಲ್ಲಿ ಮೊದಲಿಗನು. ಈತ ವಿರೂಪಾಕ್ಷರಾಯನೆಂದು ಕೂಡ ಹೆಸರುವಾಸಿಯಾಗಿದ್ದ. ಈತನು ವಿಜಯನಗರದ ಅರಸ ವೀರಬುಕ್ಕಣ್ಣ ಒಡೆಯನ ಮಗ. ಈತನ ಹೆಸರಿನಲ್ಲಿ ಮಧುವಂಕ ನಾಡಿನ ವ್ಯಾಪ್ತಿ

ಯಲ್ಲಿಯೇ ಬರುವ 'ವಿರೂಪಾಕ್ಷಪುರ'ವೆಂಬ ಗ್ರಾಮವೊಂದಿದೆ. ಈ ವಿರೂಪಣ್ಣ ಒಡೆಯನ ಅಧೀನನಾಗಿ ಕ್ರಿ.ಶ. ೧೩೬೯ ರಿಂದ ೧೩೮೭ರ ವರೆಗೆ ಸೋರಣ್ಣ ಒಡೆಯನು ಮಧುವಂಕ ನಾಡನ್ನು ಆಳುವುದರಲ್ಲಿ ಸಹಕಾರಿಯಾಗಿದ್ದನು. ಕ್ರಿ.ಶ. ೧೩೮೭ರ ಶಾಸನವೊಂದು (ತೀ. ೧೨೦) ಸೋರಣ್ಣ ಒಡೆಯನು ಹರಿಹರ ಮಹಾರಾಯನ ಅಧೀನವಾಗಿ ಆರಗವನ್ನು ಆಳುತ್ತಿದ್ದುದನ್ನು ದಾಖಲಿಸಿದೆ. ೧೪೦೧ರ ಬಿಕ್ಕಹಳ್ಳಿಯ ಶಾಸನವು (ತೀ. ೧೮೩) ಜನ್ನರಸನು ಆರಗ ರಾಜ್ಯವನ್ನು ಆಳುತ್ತಿದ್ದುದನ್ನು ತಿಳಿಸುತ್ತದೆ. ಕ್ರಿ.ಶ. ೧೪೦೪-೧೪೦೫ರ ಅವಧಿಯಲ್ಲಿ ಆರಗ ರಾಜ್ಯವನ್ನು ಬೊಮ್ಮಣ್ಣ ಒಡೆಯನ ಮಗನಾದ ವಿಠ್ಠಣ್ಣ ಒಡೆಯನು ಆಳುತ್ತಿದ್ದನು. ವಿಠ್ಠಣ್ಣ ಒಡೆಯ ಹಾಗೂ ವೀರಪ್ಪ ಒಡೆಯರು ಒಬ್ಬರೇ ಆಗಿದ್ದಾರೆ. ಇವನ ಅಧೀನನಾಗಿ ಸಿಂಗಣ್ಣ ಅಥವಾ ಸಿಂಗರಸ ಹಾಗೂ ಹರಿಯಪ್ಪ ಎನ್ನುವವರು ಸೇನಬೋವರಾಗಿ ಈ ನಾಡಿನಲ್ಲಿ ಆಳುತ್ತಿದ್ದರು. ಈ ಇಬ್ಬರೂ ಮಧುವಂಕನಾಡಿನ ಸೇನಬೋವರು. ಇವರ ಆಜ್ಞೆಯಂತೆಯೇ ಇಲ್ಲಿನ ಶಾಸನಗಳು ಬರೆದಿರುವುದು. ಕ್ರಿ.ಶ. ೧೪೧೩ರಲ್ಲಿ ಲಿಂಗಣ್ಣ ಒಡೆಯನು ಆರಗದ ರಾಜ್ಯವನ್ನು ಆಳುತ್ತಿರುವ ವಿಷಯ ಕರಡಿಕೋಡಿನ ಶಾಸನವೊಂದು (ತೀ. ೩೪) ತಿಳಿಸುತ್ತದೆ. ಕ್ರಿ.ಶ. ೧೪೨೪ ರಿಂದ ೧೪೩೭ ರ ವರೆಗಿನ ಶಾಸನಗಳು ಸಿರಿಗಿರಿನಾಥ ಒಡೆಯನು ಆರಗ ರಾಜ್ಯವನ್ನು ಆಳುತ್ತಿದ್ದುದನ್ನು ತಿಳಿಸುತ್ತದೆ. ಕ್ರಿ.ಶ. ೧೪೬೮ರ ಶಾಸನವೊಂದು (ತೀ. ೧೭೭) ದೇವಪ್ಪ ದಣ್ಣಾಯಕನು ಆರಗ ರಾಜ್ಯವನ್ನು ಆಳುತ್ತಿದ್ದುದನ್ನು ತಿಳಿಸುತ್ತದೆ.

ಈ ನಾಡಿನ ಹಲವಾರು ಶಾಸನಗಳನ್ನು ನಾಡಿನ ಸೇನಬೋವರು ರಚಿಸಿರುತ್ತಾರೆ. ಇವರು ಕಾವ್ಯಶಕ್ತಿಯನ್ನು ಪಡೆದಿದ್ದವರು. ಇವರಲ್ಲಿ ಬಹಳ ಮುಖ್ಯನಾದವನು. ಮಧುವಂಕ ನಾಡಿನ ಹಲವಾರು ಶಾಸನಗಳನ್ನು ಬರೆದ ಸೇನಬೋವ ಸಿಂಗರಸ ಅಥವಾ ಸಿಂಗಣ್ಣ.

ಈ ಲೇಖನದುದ್ದಕ್ಕೂ ಕಂಸದಲ್ಲಿ ಕೊಟ್ಟಿರುವ ಸಂಖ್ಯೆಗಳನ್ನು ಎಪಿಗ್ರಾಫಿಯಾ ಕರ್ನಾಟಕದ ಸಂ. ೧೩ (ಪರಿಷ್ಕೃತ ಆವೃತ್ತಿ) ರಲ್ಲಿರುವ ತೀರ್ಥಹಳ್ಳಿಯ ಶಾಸನಗಳೆಂದು ಓದಿಕೊಳ್ಳುವುದು.

ವಿಜಯನಗರದ ಅರಸರ ನಂತರ ಕೆಳದಿ ಅರಸರು ಪ್ರವರ್ಧಮಾನರಾಗಿ ಕೆಳದಿಯಿಂದ ಕೆಳದಿ ರಾಜ್ಯವನ್ನು ಆಳುವಾಗ ಸಹ ಆರಗಕ್ಕೆ ಈ ಹಿಂದಿನಂತೆಯೇ ಪ್ರಾಮುಖ್ಯತೆಯನ್ನು ನೀಡಿ ಆರಗ ರಾಜ್ಯವೆಂದೇ ವ್ಯವಹರಿಸಿದ್ದಾರೆ. ಸರಿಸುಮಾರು ಪ್ರತಿಯೊಬ್ಬ ಕೆಳದಿಯ ಅರಸರೂ ಆರಗ ರಾಜ್ಯದ ವ್ಯವಹಾರದಲ್ಲಿ ಒಂದಿಲ್ಲ ಒಂದು ರೀತಿಯಲ್ಲಿ ಭಾಗಿಗಳಾಗಿದ್ದಾರೆ.

ಮಧುವಂಕ ನಾಡಿನ ಪ್ರಮುಖ ರಾಜಕೀಯ ಸಂಗತಿಗಳು

ಆರಗದ ಶಾಸನವೊಂದು (ತೀ. ೨೩) ಶ್ರೀ ವೀರ ಹರಿಹರರಾಯರ ರಾಜ್ಯಾಭ್ಯುದಯದಲ್ಲಿ ವಾಸುಕಾರ ರಾಮದೇವನ ಮಗಳಾದ ಪದುಮಲಾದೇವಿ ಹಾಗೂ ವೀರ ಬುಕ್ಕರಾಯನಿಗೆ ಹುಟ್ಟಿದ ಮಗನಾದ ವೇದಗಿರಿ ವಿರೂಪರಾಯನು ಮಂಜಾದೇವಿಯನ್ನು ಮದುವೆಯಾದ ದಿನವನ್ನು ದಾಖಲಿಸುತ್ತದೆ. ಆ ದಿನ ೧೮-೫-೧೩೭೭. ಈ ಶಾಸನದಲ್ಲಿ ವಿರುಪಣ್ಣ ಒಡೆಯರನ್ನು ಕೂಡಿ ಮಂಜಾದೇವಿಯು ಸ್ವರ್ಗವನ್ನು ಸೂರೆಗೊಂಡಳು ಎಂದಿದೆ.

ವೀರಬುಕ್ಕಣ್ಣ ಒಡೆಯರ ಕುಮಾರನಾದ ವಿರುಪಣ್ಣ ಒಡೆಯರು ಆರಗ ರಾಜ್ಯವನ್ನು ಆಳುತ್ತಿದ್ದಾಗ ವಿರುಪಣ್ಣ ಒಡೆಯರ ಮನೆಯ ಪ್ರಧಾನ ರಾಮರಸರಿಗೆ ಆರಗದ ಗೌಡಪ್ರಜೆಗಳು ಸೇರಿ ಹುತ್ತದ ಹಳ್ಳಿಯನ್ನು ದಾನ ನೀಡಿದರು. ಈ ಹುತ್ತದ ಹಳ್ಳಿಗೆ ಹರಿಹರಪುರವೆಂದು ಪುನರ್ನಾಮಕರಣ ಮಾಡಿ ಅಗ್ರಹಾರವನ್ನಾಗಿ ಮಾಡಿದರು. (ತೀ. ೨೩೩).

ಇನ್ನೊಂದು ಪ್ರಮುಖ ಸಂಗತಿಯೆಂದರೆ ಆರಗದ ವೇಂಠೆಯ ಮಧುವಂಕ ನಾಡೊಳಗಣ ಬಳ್ಳೂರು ಬಾಗೆಗೆ ಸೇರಿದ ಭಾರತೀಪುರವನ್ನು ಇಮ್ಮಡಿ ಹರಿಹರರಾಯರ ನೆನಪಿನಲ್ಲಿ ಮುಕ್ತ ಹರಿಹರಪುರವನ್ನಾಗಿ ನಾಮಕರಣ ಮಾಡಿದರು. ಈ ಶಾಸನದ (ತೀ. ೨೦೫) ಪ್ರಮುಖ ಸಂಗತಿಯೆಂದರೆ ಇದು ೧೫-೯-೧೪೦೪ರಂದು ಎರಡನೇ ಹರಿಹರನು ಮಡಿದುದನ್ನು ದಾಖಲಿಸುತ್ತದೆ.

ಅಗ್ರಹಾರಗಳು

ಇಡೀ ಆರಗ ರಾಜ್ಯದಲ್ಲಿ ವಿಜಯನಗರದ ಆಡಳಿತಾವಧಿಯಲ್ಲಿ ರೂಪಗೊಂಡ ಅಗ್ರಹಾರಗಳು ಆ ಕಾಲದ ಧಾರ್ಮಿಕ ಪ್ರಾಮುಖ್ಯತೆಯನ್ನು ತಿಳಿಸುವಂತಿದೆ. ಇವುಗಳಲ್ಲಿ ಮಧುವಂಕನಾಡಿನ ಕೆಲವು ಅಗ್ರಹಾರಗಳನ್ನು ಪರಿಚಯ ಮಾಡಿಕೊಳ್ಳಬಹುದಾಗಿದೆ.

ಬೊಯಾಪುರ ಅಗ್ರಹಾರ

೨೮-೭-೧೪೦೭ರ ಅಲಗವಳ್ಳಿಯ ಶಾಸನವು (ತೀ. ೧೦) ವಿಠ್ಠಣ್ಣ ಒಡೆಯನು ಆರಗ ರಾಜ್ಯವನ್ನು ಆಳುತ್ತಿದ್ದಾಗ ಮಧುವಂಕ ನಾಡಿನ ಅಲುಗವಳ್ಳಿ ಗ್ರಾಮವನ್ನು (ಇದು ಕಉರಿಯ ಭಾಗೆಯಲ್ಲಿತ್ತು). ಹರವರಿಯ ಬಾಗೆಯ ಸಮಸ್ತ ಗೌಡವನ್ನು, ಕಉರ್ಯ್ಗ ಬಾಗೆಯ ತೈಲಪ್ಪಹೆಗ್ಗಡೆಯ ಪಾಲಿನ ಭೂಮಿ ಸಹಿತವಾಗಿ ಬೊಯಾಪುರವೆಂದು ಅಗ್ರಹಾರವನ್ನು ಮಾಡಿ ೧೮ ವೃತ್ತಿಗಳಾಗಿ ವಿಂಗಡಿಸಿ ದಾನ ನೀಡಿರುವುದನ್ನು ಉಲ್ಲೇಖಿಸುತ್ತದೆ.

ಚೌಡೇಶ್ವರಿಪುರ

೮-೭-೧೪೦೫ರ ಶಾಸನವೊಂದು (ತೀ. ೧೫) ಅರಗಪಟ್ಟಣದ ಹಿರಿಯಂಗಡಿಯ ಬನದ ದೇವಿಯರಿಗೆ ಮಧುವಂಕನಾಡಿನ ಸಂಕುಹಳ್ಳಿಯನ್ನು ದಾನ ನೀಡಲಾಗಿದೆ. ನಿತ್ಯವೂ ದೇವಿಗೆ ಶ್ರೀಸೂಕ್ತ ಅಭಿವ್ಯಕ್ತಿಯನ್ನು ಮಾಡಬೇಕು ಎಂದು ಈ ಶಾಸನ ತಿಳಿಸುತ್ತದೆ. ಈ ಹಿಂದೆ ೨೭-೧೦-೧೪೦೪ ರಂದೇ ಮಧುವಂಕ ನಾಡೊಳಗಣ .ಂಮರಿಯ ಗ್ರಾಮವನ್ನು ವಿಠ್ಠಣ್ಣ ಒಡೆಯನು ಚೌಡೇಶ್ವರಿ ಪುರವಾಗಿ ಮಾಡಿ ಅಗ್ರಹಾರವನ್ನಾಗಿಸಿದ್ದನು. (ತೀ. ೨೦).

ಅಭಿನವ ಗೋಪೀನಾಥಪುರ

೧೬-೨-೧೫೩೮ರ ಆಲಗೇರಿ ಶಾಸನವು (ತೀ. ೨೫) ಆಲಗೇರಿ ಗ್ರಾಮವನ್ನು ಸರ್ವಜ್ಞಪುರಿ ಶ್ರೀಪಾದಂಗಳಿಗಾಗಿ ಆರಗದ ಹದಿನೆಂಟು ಕಂಪಣದ ನಾಡವರೂ ಮೂರು ಪಟ್ಟಣದ ಹಲರೂ ಸೇರಿ ಅಭಿನವ ಗೋಪೀನಾಥಪುರವನ್ನಾಗಿ ಮಾಡಿದರು.

ತೀರ್ಥರಾಜಪುರ

ಮಧುವಂಕನಾಡಿನ ಪ್ರಮುಖ ಸ್ಥಳವಾದ ತೀರ್ಥಹಳ್ಳಿಯ ತೀರ್ಥರಾಜಪುರವೆಂಬ ಅಗ್ರಹಾರವಾಗಿತ್ತು. ಈ ಸ್ಥಳದಲ್ಲಿ ಅನೇಕ ಬ್ರಾಹ್ಮಣರು ಅನೇಕ ಯಾಗ-ಯಜ್ಞಗಳನ್ನು ಮಾಡಿದ ಉದಾಹರಣೆಗಳು ಶಾಸನದಲ್ಲಿ ದೊರೆಯುತ್ತದೆ.

ಮುಕ್ತ ಹರಿಹರಪುರ

೮-೨-೧೩೭೭ರ ಹುತ್ತವಳ್ಳಿ ಶಾಸನವು (ತೀ. ೨೩೩) ಬುಕ್ಕರಾಯನ ಕುಮಾರ ಉದಯಗಿರಿಯ ವಿರುಪಣ್ಣ ಒಡೆಯರು ಆರಗ ರಾಜ್ಯವನ್ನು ಆಳುತ್ತಿದ್ದಾಗ ಅವರ ಮನೆಯ ಪ್ರಧಾನ ರಾಮರಸನಿಗೆ ಆರಗದ ಗೌಡಪ್ರಜೆಗಳು ಗೌರಿ ಹುತ್ತದಹಳ್ಳಿ ಗ್ರಾಮವನ್ನು ಹರಿಹರಪುರವೆಂದು ನಾಮಕರಣ ಮಾಡಿ ದಾನ ನೀಡಿದರು.

ಆರಗದ ವೇಂಠೆಯ ಮಧುವಂಕ ನಾಡೊಳಗಿದ್ದ ಬಳ್ಳೂರು ಬಾಗೆಯ ಭಾರತೀಪುರವನ್ನು ಇಮ್ಮಡಿ ಹರಿಹರರಾಯರು ಇಹಲೋಕವನ್ನು ತ್ಯಜಿಸಿದ ಸಂದರ್ಭದಲ್ಲಿ ಮುಕ್ತ ಹರಿಹರಪುರ ಎಂದು ನಾಮಕರಣ ಮಾಡಿ ಅಗ್ರಹಾರವನ್ನಾಗಿ ಮಾಡಿದ್ದನ್ನು ೧೫-೯-೧೪೦೪ರ ಶಾಸನ (ತೀ. ೨೦೫) ತಿಳಿಸುತ್ತದೆ.

ಲಕ್ಷ್ಮೀ ಗೋವಿಂದಪುರ

ತೀರ್ಥಹಳ್ಳಿಯ ತಾಮ್ರಶಾಸನವೊಂದು (ತೀ. ೧೫೯) ತೀರ್ಥರಾಜಪುರದಿಂದ ಶಿವರಾಜಪುರದ ಅಗ್ರಹಾರಕ್ಕೆ ಹೋಗುವ ಮಾರ್ಗದಲ್ಲಿರುವ ಮಧುವೆಂಕನಾಡ ಸೀಮೆಯ ಬಾಳೇಬಯಲು ಗ್ರಾಮದಲ್ಲಿ ತುಂಗಭದ್ರಾ ನದೀ ತೀರದಲ್ಲಿ ಲಕ್ಷ್ಮೀ ಗೋವಿಂದಪುರವೆಂಬ ಅಗ್ರಹಾರವನ್ನು ಮಾಡಿದ ಶಾಸನ ವಿವರವಿದೆ.

ಕಲ್ಲಿನಾಥಪುರ

೧೪-೧೦-೧೪೦೪ರ ಶಾಸನವು (ತೀ. ೧೮) ಆರಗದಲ್ಲಿದ್ದು, ಅದು ಆರಗದ ವೇಂಠೆಯಲ್ಲಿರುವ ಮಧುವೆಂಕ ನಾಡಿನಲ್ಲಿರುವ ಬೊಂದಿಯರ ಗ್ರಾಮವನ್ನು ಆರಗದ ಮೂಲಸ್ಥಾನ ಶ್ರೀ ಕಲ್ಲಿನಾಥದೇವರ ಅಮೃತಪಡಿಗೆಂದು ಕಲ್ಲಿನಾಥಪುರವೆಂಬ ಅಗ್ರಹಾರವನ್ನಾಗಿ ಮಾಡಿ ದಾನ ನೀಡಲಾಗಿದೆ. ದಾನ ನೀಡಿದವನು ವಿಠ್ಠಣ್ಣ ಒಡೆಯ. ಈ ಕಲ್ಲಿನಾಥ ದೇವರು ಆರಗದ ಪ್ರಮುಖ ದೇವತೆ.

ಆಧಾರಸೂಚಿ

೧. **ಎಪಿಗ್ರಾಫಿಯಾ ಕರ್ನಾಟಿಕಾ** (ಪರಿಷ್ಕೃತ), ಸಂ. ೧೩, ಮೈಸೂರು, ೨೦೦೬.

೨. **ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು**, (ಸಂ.) ಎಂ.ಎಂ. ಕಲಬುರ್ಗಿ, ೧೯೯೯, ಹಂಪಿ.

೩. **ಶಿವಮೊಗ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, (ಸಂ.) ಆರ್. ಗೋಪಾಲ್, ೨೦೦೮, ಮೈಸೂರು.

೪. **ಮಲೆ ಕರ್ನಾಟಕದ ಅರಸು ಮನೆತನಗಳು**, (ಸಂ.) ರಾಜಾರಾಮ ಹೆಗಡೆ, ಅಶೋಕ ಶೆಟ್ಟರ, ೨೦೦೧, ಹಂಪಿ.

೫. ಪಿ.ಬಿ. ದೇಸಾಯಿ, **ವಿಜಯನಗರ ಸಾಮ್ರಾಜ್ಯ**, ೨೦೦೭, ಧಾರವಾಡ.

ಡಾ. ಎನ್.ಆರ್. ಲಲಿತಾಂಬ*

ಎಕ್ಕಟಿಗ ವೀರಪಡೆ

ಕರ್ನಾಟಕದ ಉದ್ದಗಲಕ್ಕೂ ಹರಡಿರುವ ಸಾವಿರಾರು ವೀರಗಲ್ಲುಗಳು ರಾಜರ ನೆಚ್ಚಿನ ಬಂಟರಾಗಿ, ಪ್ರಾಮಾಣಿಕ ಹೋರಾಟಗಾರರಾಗಿದ್ದ ವಿಶಿಷ್ಟವಾದ 'ವೀರಪಡೆ'ಗಳು ವೀರ ಕುಟುಂಬಗಳು ಇದ್ದು ವೀರ ಪರಂಪರೆಯೊಂದು ಅಸ್ತಿತ್ವದಲ್ಲಿದ್ದುದು ತಿಳಿದ ವಿಚಾರವೇ. ಹೊಯ್ಸಳರ ಕಾಲದಲ್ಲಿ ಅಸ್ತಿತ್ವದಲ್ಲಿದ್ದ 'ಭೇರುಂಡದ ಮೊತ್ತದ ಕೂಸರೆಂಬ ವಿಭಿನ್ನವಾದ ವೀರಪಡೆಯೊಂದನ್ನು ತಮಗೆ ಈ ಹಿಂದೆ ಪರಿಚಯಿಸಿದ್ದೇನೆ. ಈಗ ಮತ್ತೊಂದು ವಿಶಿಷ್ಟ ವೀರಪಡೆಯೊಂದನ್ನು ಪರಿಚಯಿಸಲು ಸಂತೋಷಿಸುತ್ತೇನೆ.

ಎಕ್ಕಟಿಗರು, ಎಕ್ಕೋಟಿಗಳು ಬೇರೆಬೇರೆ. ಎಕ್ಕಟಿಗರ ಉಲ್ಲೇಖಗಳಿರುವ ಶಾಸನಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅವರ ಕಾರ್ಯವೈಖರಿ, ಬಿರುದುಗಳು, ರಾಜರೊಂದಿಗಿನ ಅವರ ಸಂಬಂಧ, ಅವರ ತ್ಯಾಗ, ಪರಾಕ್ರಮ, ಮರಣಗಳು ಕನ್ನಡನಾಡಿನ ಇತರ ಪತಿಭಕ್ತ ವೇಳೆವಾಳಿ, ಜೋಳವಾಳಿ, ಭೇರುಂಡದ ಮೊತ್ತದ ಕೂಸರು, ಲೆಂಕರು, ಪ್ರಿಯಪುತ್ರ ಗರುಡ ಮುಂತಾದ ವೃತ್ತಿವೀರರಿಗಿಂತ ಕಡಿಮೆಯಲ್ಲ ಎಂಬುದು ಸ್ಪಷ್ಟವಾಗುತ್ತದೆ. ಹಾಗಾಗಿ ಎಕ್ಕಟಿಗರು ಕರ್ನಾಟಕದ ವೀರ ಪರಂಪರೆಗೆ ಮತ್ತೊಂದು ಹೆಮ್ಮೆಯ ಗರಿ.

ಕ್ರಿ.ಶ. ೧೧೯೫ ರ ಮಹಾಮಂಡಳೇಶ್ವರ ತ್ರಿಪುರಾಧೀಶ್ವರ ಬಲೀಂದ್ರ ಕುಲ ಕಮಲನೆನಿಸಿದ್ದ ದುದ್ದರಸನ ಶಾಸನದಲ್ಲಿರುವ ಎಕ್ಕಟಿಗರ ಉಲ್ಲೇಖವೇ ಸದ್ಯಕ್ಕೆ ನಮಗೆ ತಿಳಿದುಬಂದಿರುವ ಪ್ರಾಚೀನ ಉಲ್ಲೇಖವಾಗಿದೆ.[೧] ನಂತರ ಹೊಯ್ಸಳ ವಿಷ್ಣುವರ್ಧನ, ಒಂದನೇ ನರಸಿಂಹ, ಇಮ್ಮಡಿ ವೀರಬಲ್ಲಾಳ, ಇಮ್ಮಡಿ ವೀರನರಸಿಂಹರ ಶಾಸನಗಳಲ್ಲಿ ಕಾಣಿಸಿಕೊಂಡಿದೆ. ೧೩ನೆಯ ಶತಮಾನದ ನಂಜನಗೂಡು ತಾಲ್ಲೂಕಿನ ಸುತ್ತೂರಿನ ಶಾಸನ ಉಲ್ಲೇಖವೇ ಅರ್ವಾಚೀನ ಉಲ್ಲೇಖವಾಗಿದೆ.

ಎಕ್ಕಟಿಗ

ಎಕ್ಕೆ, ಎಕ್ಕು, ಎಕ್ಕಲ, ಎಕ್ಕುವ, ಎಗ್ಗಲ, ಎಗ್ಗುಡು, ಎಕ್ಕಟಿಗ ಇತ್ಯಾದಿ ಪದಗಳು ದ್ರಾವಿಡ ಭಾಷೆಯಲ್ಲಿವೆ. ಇವುಗಳಿಗೆ ಹೆಚ್ಚು, ಹೆಚ್ಚಾದ, ಪಖ್ಯಾತ, ಪತಿಷ್ಠೆ, ಉನ್ನತ, ಶ್ರೇಷ್ಠ ಎಂಬ ಅರ್ಥವಿದೆ. ಎಕ್ಕಟಿಗ ಎಂಬುದು ಶ್ರೇಷ್ಠ ವ್ಯಕ್ತಿ, ಪ್ರತಿಷ್ಠಿತ ವ್ಯಕ್ತಿ ಎಂಬ ಅರ್ಥವನ್ನು ಹೊಂದಿದೆ.[೨]

ಹಾಸನಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ನೇರ್ಲಿಗೆಯ ವೀರಗಲ್ಲೊಂದರಲ್ಲಿ ವಿಷ್ಣುವರ್ಧನನ (ಕ್ರಿ.ಶ. ೧೧೧೦–೧೧೪೨) ಎಕ್ಕಟಿಗ ಮಸಣಯ್ಯನ ಉಲ್ಲೇಖವಿದೆ.[೩] ಶಾಸನ ಹಾಳಾಗಿದ್ದು ಯಾವ ವಿವರಗಳೂ ಸ್ಪಷ್ಟವಾಗದಿದ್ದರೂ ಮಸಣಯ್ಯನು ವಿಷ್ಣುವರ್ಧನನಿಗೆ ಎಕ್ಕಟಿಗನಾಗಿದ್ದನೆಂಬುದೂ, ಆತ ಯಾವುದೋ ಯುದ್ಧದಲ್ಲಿ ಮಡಿದಿದ್ದಾನೆಂಬುದು ಸ್ಪಷ್ಟವಾಗುತ್ತದೆ. ವಿಷ್ಣುವರ್ಧನನ ಮಗ ನರಸಿಂಹನ ಯೆಕ್ಕಟಿಗ ಮುದ್ದೆಯ್ಯನಾಯಕ ಎಂಬುವವನನ್ನು ಕ್ರಿ.ಶ. ೧೧೬೦ರ ಬೂಚೇನಹಳ್ಳಿಯ ಒಂದು ಶಾಸನ ಉಲ್ಲೇಖಿಸುತ್ತದೆ.[೪]

ಈ ಎರಡು ಶಾಸನಗಳಲ್ಲಿ, 'ವಿಷ್ಣುವರ್ಧನನ ಎಕ್ಕಟಿಗ' 'ನರಸಿಂಹನ ಎಕ್ಕಟಿಗ' ಎಂಬ ಉಲ್ಲೇಖಗಳು ವಿಶೇಷವಾಗಿ ಕಾಣುತ್ತಿದು, ಅವು ಖಾಸಾ ಎಕ್ಕಟಿಗರನ್ನು ಸೂಚಿಸುತ್ತಿರುವಂತಿದೆ. ಎಕ್ಕಟಿ ಎಂಬುದಕ್ಕೆ ಏಕಾಂತ ಎಂಬ ಅರ್ಥವಿದೆ. ದೊರೆಗಳೊಂದಿಗೆ ಆ ವ್ಯಕ್ತಿಗಳಿಗಿದ್ದ ಏಕಾಂತ, ಆಪ್ತತೆಗಳಿಂದಾಗಿ ಅವರಿಗೆ ಎಕ್ಕಟಿಗರೆಂದು ಕರೆಯಲಾಗುತಿತ್ತೆಂದು ಹೇಳಬಹುದು.

ಎಕ್ಕಟಿಗ ಎಂಬುದಕ್ಕೆ ಒಂಟಿಗ, ಸಿಟ್ಟಿನವನು ಎಂಬ ಅರ್ಥವೂ ಇದೆ.[೫] ಬಹುಶಃ ಎಕ್ಕಟಿಗರು ನಿರ್ವಹಿಸುತ್ತಿದ್ದ ಅತ್ಯಂತ ಗುರುತರವಾದ ಹೊಣೆಗಾರಿಕೆಯಿಂದಾಗಿ ಅವರು ಬಹಳ ಗಂಭೀರ ಪ್ರವೃತ್ತಿಯವರೂ, ಶಿಸ್ತಿನ ಮನುಷ್ಯರೂ ಆಗಿರುತ್ತಿದ್ದು ಜನಸಾಮಾನ್ಯರೊಂದಿಗೆ ಹೆಚ್ಚು ಬೆರೆಯುತ್ತಿರಲಿಲ್ಲವೆನಿಸುತ್ತದೆ. ಹಾಗಾಗಿ ಸಾಮಾನ್ಯರಿಗೆ ಅವರು ಸಿಟ್ಟಿನವರಂತೆ ತೋರುತ್ತಿದ್ದರೆನ್ನಬಹುದು. ಹಾಗಾದರೆ ಈ ಎಕ್ಕಟಿಗರು ನಿರ್ವಹಿಸುತ್ತಿದ್ದ ಗುರುತರವಾದ, ದೊರೆಗೆ ಆಪ್ತವಾದ ಆ ರಾಜಕಾರ್ಯ ಯಾವುದು, ಅವರ ಕಾರ್ಯ ವೈಖರಿ ಏನು ಎಂಬ ಪ್ರಶ್ನೆ ಏಳುತ್ತದೆ. ಇದಕ್ಕೆ ಎಕ್ಕಟಿಗರ ಇತರ ಶಾಸನಗಳು ಉತ್ತರಿಸುತ್ತವೆ.

* ಆಯ್ಕೆ ಶ್ರೇಣಿ ಅಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು.

ಯೆಕ್ಕಟಿಗರಂಗರಕ್ಕರ್

ಕೇವಲ ಎಕ್ಕಟಿಗನೆಂಬ ಉಲ್ಲೇಖವಲ್ಲದೆ 'ಯೆಕ್ಕಟಿಗರಂಗರಕ್ಕರ್' ಎಂಬ ಉಲ್ಲೇಖವೂ ಕಂಡುಬರುತ್ತದೆ. 'ಅಂಗರಕ್ಕರ್' ಎಂಬುದು ಅಂಗರಕ್ಷಕ ದಳವನ್ನು ಸೂಚಿಸುತ್ತದೆ. ಅಂದರೆ ಎಕ್ಕಟಿಗರು ನಿರ್ವಹಿಸುತ್ತಿದ್ದ ಕಾರ್ಯ ಒಡೆಯರ ಅಂಗರಕ್ಷೆ ಎಂಬುದು ಸ್ಪಷ್ಟವಾಗುತ್ತದೆ. 'ಯುದ್ಧದಲ್ಲಿ ಶತ್ರುಗಳನ್ನು ಉರವಣಿಸಿ ಗೆಲ್ಲುವ ಠಕ್ಕು ತಿಳಿದಿರಬೇಕು ಮತ್ತು ವೈರಿ ಸಮೂಹದ ಕುಟಿಲ ವ್ಯೂಹವನ್ನು ಭೇದಿಸಿ ತನ್ನ ಪತಿಯ ಅಂಗರಕ್ಷೆಯನ್ನು ಮಾಡುವುದು ಅಂಗರಕ್ಷಕನ ನಿಜಕಾರ್ಯವೇ ಹೊರತು ಬೇರೆ ಅಲ್ಲ' ಎಂದು ಈ ಅಂಗರಕ್ಷಕರ ಅರ್ಹತೆ, ವಿಶೇಷತೆಗಳೇನು ಎಂಬುದನ್ನು ಕ್ರಿ.ಶ.೧೧೮೬ರ ಕುರುವಂಕದ ಶಾಸನವು[೬] ಸ್ಪಷ್ಟವಾಗಿ ಹೇಳಿದೆ. ಅಲ್ಲದೆ 'ಯೆಕ್ಕಟಿಗಂಗರಕ್ಷಕರ್ನಾಲ್ವದಿಂಬರ'ನ್ನು ಅಂಗರಕ್ಕಪಡೆ ಎಂದು ಕರೆದು ಅದರ ಅಧಿಪತಿ ಕಳುವ ಮಲ್ಲೆಯನೆಂದು ಹೇಳಿದೆ. ಅಂದರೆ ಈ ಎಕ್ಕಟಿಗರಂಗರಕ್ಕರ್ ಪ್ರತಿಷ್ಠಿತವಾದ ವಿಶಿಷ್ಟ ವೀರ ಅಂಗರಕ್ಷಕಪಡೆ ಎಂದು ಸ್ಪಷ್ಟವಾಗಿ ಅರ್ಥೈಸಬಹುದು.

ಸಂಹಥನಾಡು ಮತ್ತು ಪಾಕುಂವಾಡಿಯುನ್ನು ಆಳ್ವಿಕೆಮಾಡುತ್ತಿದ್ದ ಹಾನುಗಲು ಕದಂಬ ವಂಶಿಕ ಶಾಖೆಯ ದುದ್ದರಸನ ಪರೋಕ್ಷಯವಿನಯದ ಕ್ರಿ.ಶ. ೧೦೯೫ರ ಶಾಸನವು[೭] ಅವನ ಆಳ್ವಿಕೆಯ ಹಿರಿಮೆಯನ್ನು ಅವನ ಬಿರುದು, ಪರಾಕ್ರಮ-ಕೀರ್ತಿ, ಅವನ ಪ್ರಜೆ ಪರಿವಾರ, ಬಂಧುವರ್ಗ, ತಳವರ್ಗ ಕುಲಸ್ತ್ರೀಯನ್ನು, ದಾನಕಾರ್ಯಗಳನ್ನು ಹೇಳುವುದರೊಂದಿಗೆ ಆತನ ವಿಶೇಷ ಸೈನ್ಯ ಪಡೆಯ ಉಲ್ಲೇಖವನ್ನೂ ಮಾಡಿದೆ. ೧೫ ಕುದುರೆಗಳು, ೫೦ ಲೆಂಕರು, ೪೫ ಕುಳಪುಟ್ಟಿಗೆ ಆಯದಾಳುಗಳು(?) ಹಾಗೂ ೨೫೦ ಎಕ್ಕಟಿಗರು ಅವನ ಸೈನ್ಯದ ವಿಶೇಷ ಶಕ್ತಿಯಾಗಿದ್ದುದರಿಂದ ಶಾಸನ ಅದನ್ನು ಹೆಮ್ಮೆಯಿಂದ ದಾಖಲಿಸಿದೆ. ಎಕ್ಕಟಿಗರ ಸಂಖ್ಯೆಯ ಹೊರತು ಬೇರೆ ಯಾವ ವಿವರಗಳನ್ನು ಶಾಸನದಲ್ಲಿ ಹೇಳಿಲ್ಲವಾದರೂ ಎಕ್ಕಟಿಗರನ್ನು ಸ್ಪಷ್ಟವಾಗಿ ಲೆಂಕರಿಂದ ಪ್ರತ್ಯೇಕಿಸಿರುವುದನ್ನು ಗಮನಿಸಬೇಕು, ಇದುವರೆಗೆ ದೊರೆಕಿರುವ ಎಕ್ಕಟಿಗಪಡೆಗಳಲ್ಲಿ ಮಹಾಮಂಡಳೇಶ್ವರ ದುದ್ದರಸನ ಪಡೆ ೨೫೦ ಎಕ್ಕಟಿಗರನ್ನು ಹೊಂದಿದ್ದ ಅತಿದೊಡ್ಡ ಎಕ್ಕಟಿಗಪಡೆಯಾಗಿದೆ. ಹೊಯ್ಸಳರು ಪ್ರವರ್ಧಮಾನಕ್ಕೆ ಬರುವ ಮೊದಲಿನಿಂದಲೂ ಈ ಎಕ್ಕಟಿಗರ ಪಡೆ ಅಸ್ತಿತ್ವದಲ್ಲಿತ್ತೆಂಬುದು ಗಮನಿಸಬೇಕಾದ ಅಂಶ.

ಹೊಯ್ಸಳರಲ್ಲಿ. ಎಕ್ಕಟಿಗನ ಉಲ್ಲೇಖ ವಿಷ್ಣುವರ್ಧನನ ಶಾಸನವೊಂದರಲ್ಲಿ ಕಾಣಿಸಿಕೊಂಡಿದೆಯಾದರೂ ಒಂದನೇ ನರಸಿಂಹ, ವೀರಬಲ್ಲಾಳ ಹಾಗು ವೀರನರಸಿಂಹರ ಕಾಲದಲ್ಲಿ ಎಕ್ಕಟಿಗರ ಪಡೆ ಹೆಚ್ಚು ಪ್ರಾಮುಖ್ಯತೆ ಪಡೆದಂತೆ ತೋರುತ್ತದೆ. ಈ ಸಮೂಹದಲ್ಲಿ ಮುಖ್ಯ ನಾಯಕನಿದ್ದು ಅವನ ಮಾರ್ಗದರ್ಶನದಲ್ಲಿ ಇವು ಕಾರ್ಯ ನಿರ್ವಹಿಸುತ್ತಿದ್ದವು. ಈ ನಾಯಕರು ಅರಸನ ಪಾದಪದ್ಮೋಪಜೀವಿಗಳಾಗಿದ್ದು, ನಂಬಿಗಸ್ತ ವೀರರಾಗಿರುತ್ತಿದ್ದರು. ಪತಿಯೂ ಧರೆಯೂ ಅವರ ಗುಣಗಳನ್ನು ವರ್ಣಿಸುವಂತೆ ನಡೆದುಕೊಳ್ಳುವ ಪ್ರಾಗಲ್ಭ್ಯತೆಯನ್ನು ಹೊಂದಿದವರಾಗಿರುತ್ತಿದ್ದರು.

ಕಣಕಟ್ಟೆಯ ಶಾಸನದಲ್ಲಿ[೮] ಹೇಳಿರುವ ಅರವತ್ತು ಮಾನಸ ಎಕ್ಕಟಿಗರ ಪಡೆ ಸಾಮಂತ ಸೋಮೆಯನಾಯಕನ ಕೈಕೆಳಗೆ, ದುಗ್ಗಬ್ಬೆಯ ಕೇತಣ್ಣ ಹಾಗೂ ಕಲ್ಲೆಯರ ನಾಯಕತ್ವವನ್ನು ಪಡೆದಿತ್ತು.

ಕುರುವಂಕದ ಶಾಸನವು[೯] ಹೊಯ್ಸಳ ಧರಣೀಶರು ಮೆಚ್ಚುವಂತೆ ಹಗೆಗಳನ್ನು ಗೆಲ್ಲುವ ಅದಟು ಈ ಧರೆಯಲ್ಲಿ ಕುರುವಂಕದ ಉನ್ನತ ಕಳುವ ಮಲ್ಲೆಯನ ನಾಯಕತ್ವದ ಯೆಕ್ಕಟಿಗ 'ಅಂಗರಕ್ಷಕರ್ ನಾಲ್ವಂದಿಂಬರ್'ಗಲ್ಲದೆ ಬೇರೆಯವರಿಗೆ ಶೋಭಿಸುವುದಿಲ್ಲವೆಂದು ಹೊಗಳಿದೆ. ಈ 'ನಾಲ್ವಂದಿಂಬರ್' ಎಂಬುದು ಈ ಅಂಗರಕ್ಷಕರ ಸಂಖ್ಯೆಯನ್ನು ಹೇಳುತ್ತಿದ್ದು, ಇವರ ಪಡೆಯು ಹೊಯ್ಸಳ ವೀರಬಲ್ಲಾಳನ ನೆಚ್ಚಿನ ಪಾದಪದ್ಮೋಪಜೀವಿ, 'ಎಸುವರಾದಿತ್ಯನೆಂದೂ ಕಂಣಂಬಿನಾಥನೆಂದೂ ಪ್ರಸಿದ್ಧನಾದ ಮಹಾದೇವರಸನ ಕೈಕೆಳಗಿತ್ತು.[೧೦] ಹಳೇಬೀಡಿನ ಕ್ರಿ.ಶ.೧೨೨೦ರ ಶಾಸನವು ಉಲ್ಲೇಖಿಸುವ ಎಕ್ಕಟಿಗರ ಪಡೆಯು ಕಳುವ ಮಾಚೆಯ್ಯನೆಂಬುವವನ ನಾಯಕತ್ವದಲ್ಲಿತ್ತು. ಈ ಎಕ್ಕಟಿಗರ ಪಡೆಯ ನಾಯಕರ ಹೆಸರಿನೊಂದಿಗೆ 'ಕಳುವ' ಎಂಬ ಉಪನಾಮ ಅಥವಾ ವಿಶೇಷಣ ಕಂಡುಬರುತ್ತದೆ.[೧೧] ಈ 'ಕಳುವ' ಪದದ ಅರ್ಥ ಸ್ಪಷ್ಟವಾಗುವುದಿಲ್ಲ.

ಸಿಡಿಲ ಬಳಗ, ಚಲಕ್ಕೆ ಬಲುದಲೆಗಳು

ಕಣಕಟ್ಟೆಯ ಶಾಸನ[೧೨] ಅಱುವತ್ತು ಮಾನಸ ಎಕ್ಕಟಿಗರು ವೀರಬಲ್ಲಾಳದೇವನ ಪಾದಾರಾಧಕರಾಗಿದ್ದು, ಬರಸಿಡಿಲಿನಂತವರೆಂದೂ ಕರ್ಣನಂತೆ ದಾನಿಗಳೆಂದೂ, ನುಡಿದಂತೆ ಗಂಡರೆಂದೂ ಸಿಡಿಲ ಬಳಗವೆಂದೂ ಚಲಕ್ಕೆ ಬಲುದಲೆಗಳು ಶಿವಪೂಜಾ ಧುರಂಧರರೆಂದೂ ಪ್ರಸಿದ್ಧರಾಗಿದ್ದರೆಂದು ಹೊಗಳಿದೆ. ಇಲ್ಲಿ 'ಸಿಡಿಲಬಳಗ' ಹಾಗೂ 'ಚಲಕ್ಕೆಬಲುದಲೆಗಳು' ಎಂಬ ವಿಶೇಷಣ ಗಮನಾರ್ಹವಾಗಿದೆ. ಸಿಡಿಲು ಎಂಬುದು ಪ್ರತಿಯೊಬ್ಬ ಎಕ್ಕಟಿಗನ ಶೌರ್ಯವನ್ನು ಸೂಚಿಸುತ್ತಿದ್ದರೆ, ಬಳಗ ಎಂಬುದು ಅವರ ಒಗ್ಗಟ್ಟನ್ನು ಸೂಚಿಸುತ್ತಿದೆ. ಅವರಿಗಿರುತ್ತಿದ್ದುದು ವೈರಿಸಂಹಾರದ ಚಲವೊಂದೆಯಾದರೂ ಅದನ್ನು ಸಾಕಾರಗೊಳಿಸುವಲ್ಲಿ

ಬಲಿದಾನಕ್ಕೆ ಹಲವು ತಲೆಗಳು ಸಿದ್ಧವಾಗಿರುತ್ತಿದ್ದವೆಂಬುದನ್ನು ಈ ರೂಪಕಗಳು ಧ್ವನಿಸುತ್ತವೆ. ಏಕಚಿತ್ತತೆಯ, ಏಕೋದ್ದೇಶದ, ಏಕಕಾರ್ಯೋನ್ಮುಖತೆಯ ಈ ವೀರಪಡೆಗಳ ಶಿಸ್ತು-ಸಾಹಸ ತ್ಯಾಗ ಬಲಿದಾನಗಳು ಆನಂತರದ ಮಧ್ಯಕಾಲೀನ ಕರ್ನಾಟಕದ ಸೈನ್ಯಗಳಲ್ಲಿ ಕಾಣುವುದಿಲ್ಲ, ವಿದ್ರೋಹ, ಪಿತೂರಿಗಳ ಬೀಡಾಗಿ ನಿಷ್ಠಾವಂತ ವೀರ ಪರಂಪರೆಯೊಂದು ವಿಘಟಿತಗೊಂಡ ತೆನಿಸುತ್ತದೆ.

ಅಜಿಕೆಯ ಬೋವರು

ಪಸ್ತುತ ಎಡೂರು, ಕುರುವಂಕ ಹಾಗೂ ಕಣಕಟ್ಟೆಯ ಶಾಸನಗಳ ಉಲ್ಲೇಖಗಳನ್ನು ಗಮನಿಸಿದಾಗ ಮಂಡಳೇಶ್ವರರು, ಅರಸರ ಪಾದಪದ್ಮೋಪಜೀವಿಗಳಾಗಿ ಸ್ಥಳೀಯ ಪದೇಶ ಗಳನ್ನು ಆಳ್ವಿಕೆ ಮಾಡುತ್ತಿದ್ದ ಸಾಮಂತ ಅರಸರು ತಮ್ಮದೇ ಆದ ವಿಶಿಷ್ಟವಾದ ವೀರರ ಕಾಯ್ದಿಟ್ಟ ಅಂಗರಕ್ಷಕ ಪಡೆಯೊಂದನ್ನು ಹೊಂದಿರುತ್ತಿದ್ದರು ಮತ್ತು ಈ ಪಡೆಯವರು ಸ್ವಾಮಿಕಾರ್ಯ ದುರಂಧರರಾಗಿದ್ದು, ವಿಶೇಷ ನಿಷ್ಠೆ, ಪರಾಕಮಗಳಿಂದ ಕಾಳಗದಲ್ಲಿ ಅವರನ್ನು ರಕ್ಷಿಸುವ ಹಾಗೂ ಶತುವ್ಯೂಹವನ್ನು ಭೇದಿಸುವ ವಿಶಿಷ್ಟ ತರಬೇತಿ ಪಡೆದವ ರಾಗಿರುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಇವರನ್ನು ಕಣಕಟ್ಟೆ ಶಾಸನ 'ಅರಿಕೆಯ ಬೋವರೆಂದು' ಕರೆದಿರುವುದುರು ವಿಶೇಷವಾಗಿದೆ. ಅರಿಕೆ ಎಂದರೆ ವಿಜ್ಞಾಪನೆ, ಬೇಡಿಕೆ ಎಂದೂ ಬೋವ ಎಂದರೆ ಸಾರಥಿ ಎಂದೂ ಅರ್ಥವಿದೆ. ಹಳೇಬೀಡಿನ ವೀರಗಲ್ಲುಶಾಸನವೊಂದರಲ್ಲಿ[೧೩] ನರಸಿಂಹದೇವ ಹಾಗೂ ಬಿಜ್ಜಳರ ನಡುವಿನ ಬವರದಲ್ಲಿ ಕಳುವ ಮಾಚಯ್ಯನ ಸಂಗಡದ ಎಕ್ಕಟಿಗರನ್ನು ಕರೆದು 'ಆನೆಯ ಕಾಲ್ಗಾಪಿಂಗೆ' ನಿಯೋಜಿಸಲಾಗಿದ್ದುದನ್ನು ಹೇಳಿದೆ. ಅಂದರೆ ಇವರು ಕರೆಯಮೇರೆಗೆ (on request) ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದ ವಿಶೇಷ ವೀರಪಡೆ ಎಂದು ಅರ್ಥೈಸಬಹುದು. ಇದೇ ಶಾಸನದಲ್ಲಿ ನರಸಿಂಹ ದೇವನೆಕ್ಕಟಿಗರ ಉಲ್ಲೇಖವೂ ಇದೆ. ಯುದ್ಧಕ್ಕೆ ಸಿದ್ಧವಾದ ಸೈನ್ಯದಲ್ಲಿ ಅರಸನ ಸಂರಕ್ಷಣೆ ಎಲ್ಲಕ್ಕಿಂತ ಮುಖ್ಯವಾದುದು, ಹಾಗಾಗಿ ಅರಸನಿರುತ್ತಿದ್ದ ಆನೆಯ ಸುತ್ತ ರಕ್ಷಕ ಕೋಟೆಯಂತೆ ವೀರರನ್ನು ನಿಯೋಜಿಸಲಾಗುತ್ತಿತ್ತು. ಹಾಗೆ ನಿಲ್ಲುತ್ತಿದ್ದುದೇ 'ಆನೆಯ ಕಾಲ್ಗಾಪಿನ ರಕ್ಷಕದಳ'. ಇದು. ಅತ್ಯಂತ ನಿಷ್ಠೆಯನ್ನೂ ಪರಾಕ್ರಮವನ್ನೂ ಯುದ್ಧ ಕೌಶಲ್ಯವನ್ನು ಬಯಸುವಂತಹ ಜವಾಬ್ದಾರಿ ಯುತವಾದ ಕಾರ್ಯ. ಬಿಜ್ಜಳ ನರಸಿಂಹರ ನಡುವಿನ ಮಹತ್ವದ ಯುದ್ಧದಲ್ಲಿ ಕಳುವ ಮಾಚಯ್ಯನ ನಾಯಕತ್ವದ ಎಕ್ಕಟಿಗ ವೀರರ ಪಡೆಗೆ ಇಂತಹ ಮಹತ್ವದ ಅವಕಾಶ ಒದಗಿತ್ತೆಂಬುದು ಈ ಶಾಸನದಿಂದ ತಿಳಿದುಬರುತ್ತದೆ.

ಈ ಎಕ್ಕಟಿಗರು ವಂಶಪಾರಂಪರ್ಯವಾಗಿ ಆ ವೃತ್ತಿಯನ್ನು ಹಿಡಿಯುತ್ತಿದುದು ಹಳೇಬೀಡಿನ ಈ ವೀರಗಲ್ಲು ಶಾಸನದಿಂದ ಸಾಜೀತಾಗುತ್ತದೆ. ವಂಶ ಪಾರಂಪರ್ಯವಾಗಿ ಎಕ್ಕಟಿಗರಾಗಿದ್ದ ಮನೆತನದ ವೀರ ಜಸಪಾಳದೇವ (ದಸದೇವ)ನು ಕಾಳಗದಲ್ಲಿ ತೋರಿದ್ದ ಅದ್ಭುತ ಸಾಹಸವನ್ನು ವಿರೋಚಿತವಾಗಿ ಶಾಸನ ವರ್ಣಿಸಿದೆ. ಜಸನಾಯಕನ ಮೊಮ್ಮಗನೂ ಎಕ್ಕಟಿಗ ಕೇತಮಲ್ಲನ ಮಗನೂ ಆದ ಜಸಪಾಳದೇವನು ಕಳುವ ಮಾಚಯನ ಎಕ್ಕಟಿಗರಸಂಗಡ ಹೊಯ್ಸಳ ನರಸಿಂಹ ದೇವನ ಆನೆಯ ಕಾಲ್ಗಾಪಿನ ಎಕ್ಕಟಿಗರಲ್ಲಿ ಒಬ್ಬನಾಗಿದ್ದು, "ಬವರವು ಅನೋಜೆಯಾಗೆ ಆನೆಯಂ ಪಿಂತಿಕ್ಕಿ" ತನ್ನ ಕುದುರೆಯನ್ನು ಅರಿಸಿರದ ತೆರಗದ ಮೇಲೆ ನುಗ್ಗಿಸಿ ಅಟ್ಟ ಮೇಲಾಳುಗಳನ್ನು ಇರಿದು, ಒಡ್ಡವನ್ನು ಮುರಿದು, ಬಿಜ್ಜಳನ ದಳವನ್ನು ಕೆಡಿಸಿ ಕುದುರೆಯನ್ನೂ ಪಾಳ್ದಲೆಯನ್ನೂ ತಂದೊಪ್ಪಿಸಿ ಎಕ್ಕಟಿಗರು ಮೆಚ್ಚುತ್ತಿರಲು ಮತ್ತೆ ಹೋರಾಟಕ್ಕೆ ನುಗ್ಗಿದಾಗ ಸುರಲೋಕ ಪಾಪ್ತನಾಗಿದ್ದಾನೆ. ಕುದುರೆಯ ಮೇಲೆ ಕುಳಿತು ಅರಸನ ಆನೆಯ ಕಾಲ್ಗಾಪಿನವರಾಗಿ, ಅರಸನಿಗೆ ರಕ್ಷಣೆ ಒದಗಿಸುತ್ತಿದ್ದ ಈ ಎಕ್ಕಟಿಗರು ಕೇವಲ ರಕ್ಷಣಾತ್ಮಕ ಹೋರಾಟದಲ್ಲಿ ನಿಪುಣರಷ್ಟೇ ಅಲ್ಲ ಅವಶ್ಯಕತೆ ಒದಗಿದರೆ ಆಕ್ರಮಣಕಾರಿಗಳಾಗಿ ಮುನ್ನುಗ್ಗಿ ವೈರಿ ಸೇನೆಯ ಒಡ್ಡನ್ನು (ವ್ಯೂಹ) ಭೇಧಿಸುವುದರಲ್ಲೂ ನಿಪುಣರಾಗಿದ್ದರೆಂಬುದು ವ್ಯಕ್ತವಾಗುತ್ತದೆ. ಇದನ್ನೇ ಕುರುವಂಕದ ಶಾಸನ ಎಕ್ಕಟಿಗನ ಲಕ್ಷಣವೆಂದು ಹೇಳಿರುವುದು. ಎಕ್ಕಟಿಗ ಪಡೆಗೂ ತನ್ನ ವಂಶಕ್ಕೂ ಹೆಮ್ಮೆಯನ್ನು ತರಬಲ್ಲ ಜಸಪಾಳದೇವನಂತಹ ವೀರನೊಬ್ಬನ ಹೋರಾಟದ ವೈಖರಿ, ತುರ್ತುಸಮಯಕ್ಕೆ ಒದಗುವ ತೀಕ್ಷ್ಣತೆ, ತ್ಯಾಗ ಪರಾಕ್ರಮಗಳನ್ನು ಕಂಡಾಗ ಎಕ್ಕಟಿಗರಿಗೆ ನೀಡಲಾಗುತ್ತಿದ್ದ ತರಬೇತಿಯ ತೀವ್ರತೆ, ವೈಶಿಷ್ಟ್ಯತೆ ಅರಿವಾಗುತ್ತದೆ.


ನಂಜನಗೂಡು ತಾಲ್ಲೂಕಿನ ಸುತ್ತೂರಿನ ಒಂದು ಶಾಸನದಲ್ಲಿ ಸೆಟ್ಟಿಯೊಬ್ಬನ ಅಂಗರಕ್ಷಕನನ್ನು ಎಕ್ಕಟಿಗನೆಂದು ಕರೆದಿದೆ.[೧೪] ಮಹಾಪಧಾನ ಹಿರಿಯ ನಾಯಕ ಮಂಚ್ಚಯ್ಯಗಳ ಜೆಸದಿಂ ಮಲ್ಲಿಸೆಟ್ಟಿಯ ಮಗನೆಕ್ಕಟಿಗ ಚಿಕ್ಕಣ ಬವರದಲ್ಲಿ ಹೋರಾಡಿ ಮಡಿದುದನ್ನು ಶಾಸನ ದಾಖಲಿಸಿದೆ. ಇಲ್ಲಿ ಎಕ್ಕಟಿಗ ಚಿಕ್ಕಣ್ಣನನ್ನು ಮಲ್ಲಿಸೆಟ್ಟಿಯ ಮಗ ಎಂದಿರುವುದು, ಮನೆಮಗ ಅಥವಾ ಬಂಟನೆಂಬ ಅರ್ಥದಲ್ಲಿ. ಇವನು ಸೆಟ್ಟಿಯ ಅಂಗರಕ್ಷಕನೆಂಬುದು ಸ್ಪಷ್ಟವಾಗುತ್ತದೆ. ಕೇವಲ ಅರಸರು, ಸಾಮಂತಾಧಿಕಾರಿಗಳಷ್ಟೇ ಅಲ್ಲದೆ ಶ್ರೇಷ್ಠ ವ್ಯಾಪಾರಿಗಳೂ ತಮ್ಮ ಸಂಪತ್ತನ್ನು ಕಾಪಾಡಿಕೊಳ್ಳಲು ಅಂಗರಕ್ಷಕರನ್ನು ನೇಮಿಸಿಕೊಳ್ಳುತ್ತಿದ್ದುದು ಅನೇಕ ಶಾಸನಗಳಲ್ಲಿ ಕಂಡುಬಂದಿದೆ. ಇಲ್ಲಿ ಅಂಗರಕ್ಷಕನನ್ನು ಎಕ್ಕಟಿಗ ಎಂದಿರುವುದೂ, ಸೆಟ್ಟಿಯ

ಮಗ ಎಂದಿರುವುದೂ ವಿಶೇಷ. ಈ ಎಕ್ಕಟಿಗನ ಶೌರ್ಯ ವಿಶೇಷತೆಗಳನ್ನು ಗಮನಿಸಿ ಮಹಾಪ್ರಧಾನ ಹಿರಿಯ ನಾಯಕ ಮಂಚಯ್ಯನು ಅವನನ್ನು ಯುದ್ಧ ಸಂದರ್ಭದಲ್ಲಿ ಹೋರಾಡಲು ಕರೆಕೊಟ್ಟಿದ್ದಾನೆ. ಆ ಪ್ರಕಾರ ಆತ ಯುದ್ಧದಲ್ಲಿ ಪಾಲ್ಗೊಂಡು ಹೋರಾಡಿದ್ದಾನೆ ಹಾಗೂ ಮಡಿದಿದ್ದಾನೆ. ಸೆಟ್ಟಿಯ ಎಕ್ಕಟಿಗ ಚಿಕ್ಕಣ್ಣನನ್ನು ಮಗನೆಂದು ಕರೆದಿರುವುದನ್ನು ಗಮನಿಸಿದಾಗ ಎಕ್ಕಟಿಗರನ್ನು ಪಿಂಚುಪುತ್ರರು ಎನ್ನಬಹುದೆನಿಸುತ್ತದೆ.

ಎರಡು ಶತಮಾನಗಳ ಕಾಲ ಕರ್ನಾಟಕದ ಅರಸರ ಸೇವೆಯಲ್ಲಿ, ಒಡೆಯರ ಸೇವೆಯಲ್ಲಿ ನಿಷ್ಠೆಯಿಂದ ನಿರತರಾದ ಎಕ್ಕಟಿಗರನ್ನು ಇದುವರೆಗೂ ನಾವು ಗುರುತಿಸಿರಲಿಲ್ಲ. ಆಶ್ಚರ್ಯವೆಂದರೆ ಗರುಡರನ್ನು ಉಲ್ಲೇಖಿಸುವ ಶಾಸನಗಳಿಗಿಂತ ಹೆಚ್ಚಾಗಿ ಹೊಯ್ಸಳರ ಸೀಮೆಯ ಶಾಸನದಲ್ಲಿ ಭೇರುಂಡದ ಮೊತ್ತದ ಕೂಸರ ಹಾಗೂ ಕೂಸರ ಪಡೆಗಳ ಉಲ್ಲೇಖ, ಎಕ್ಕಟಿಗ ಹಾಗೂ ಎಕ್ಕಟಿಗ ಅಂಗರಕ್ಷಕ ಪಡೆಯ ಉಲ್ಲೇಖ ಸ್ಪಷ್ಟವಾಗಿ, ವಿಶೇಷವಾಗಿ ಬಂದಿದೆ. ಇವರು ಗರುಡರಿಗಿಂತ ಯಾವ ರೀತಿಯಲ್ಲೂ ಕಮ್ಮಿಯಿಲ್ಲ.

ಇನ್ನು ಮುಂದೆ ಕರ್ನಾಟಕದ ವೀರ ಪರಂಪರೆಯಲ್ಲಿ ಪ್ರಿಯಪುತ್ರರು ಪ್ರೇಮಾಲಯಸುತರು ಮನೆಮಕ್ಕಳೆಂದು ಕರೆಸಿಕೊಂಡ ವೇಳೆವಾಳಿಗಳು, ಲೆಂಕರು ಸ್ವಾಮಿನಿಷ್ಠ ಗರುಡರು ಮುಂತಾದವರಿಗೆ ದೊರೆತ ಗೌರವ-ಸ್ಥಾನಮಾನ ಪ್ರಾಮುಖ್ಯತೆ ಎಕ್ಕಟಿಗರಿಗೂ ದೊರೆಯಬೇಕಾಗಿದೆ. ಈ ವೀರರು ಗರುಡನನಪ್ಪಿ ಪ್ರಾಣ ತ್ಯಾಗಮಾಡಿರುವ ವಿವರಗಳಿಲ್ಲ. ಬದಲಿಗೆ ರಣರಂಗದಲ್ಲಿ ಹೋರಾಡಿ ಮಡಿದಿರುವ ಉಲ್ಲೇಖಗಳಿವೆ. ಹಾಗಾಗಿ ಈ ಎಕ್ಕಟಿಗರು ಜೋಳವಾಳಿಗಳೆನ್ನಬಹುದು.

ಹಲಕೂರಿನ ಅಪ್ರಕಟಿತ ವೀರಗಲ್ಲು ಶಾಸನವೊಂದು ವಿಶಿಷ್ಟವಾದ ಶಿಲ್ಪವನ್ನು ಒಳಗೊಂಡಿರುವ ನಲವತ್ತು ವೀರರ ಮರಣವನ್ನು ದಾಖಲಿಸಿರುವ ವೀರ ಗಲ್ಲಾಗಿದೆ. ಬರಹ ಹಾಳಾಗಿದ್ದರೂ ಲಿಪಿಯ ಹಾಗೂ ಶಿಲ್ಪದ ಆಧಾರ ದಿಂದ ಅದು ಹೊಯ್ಸಳರ ಕಾಲದ್ದೆಂದು ಹೇಳಬಹು ದಾಗಿದೆ. ಸಾಮಾನ್ಯವಾಗಿ ವೀರರ ಸ್ಮಾರಕವನ್ನು ಸ್ವಂತಕುಟುಂಬದವರು, ಅಧಿಕಾರಿಗಳು ನಿಲ್ಲಿಸುವುದರಿಂದ ಒಂದೇ ಯುದ್ಧದಲ್ಲಿ ಮಡಿದಿದ್ದರೂ ಬೇರೆ ಬೇರೆ ವ್ಯಕ್ತಿಗಳ ಕುಟುಂಬಗಳ ಸ್ಮಾರಕ ಪ್ರತ್ಯೇಕವಾಗಿರುತ್ತವೆ. ಇಲ್ಲಿನ ನಲವತ್ತು ವೀರರು ಒಂದೇ ಕುಟುಂಬದವರಾಗಿರಲು ಸಾಧ್ಯವಿಲ್ಲ ಬಹುಶಃ ಇದು ಎಕ್ಕಟಿಗರಂತಹ ವೀರಪಡೆಯ ಮರಣದ ಸಾಮೂಹಿಕ ಸ್ಮಾರಕವಾಗಿರಬಹುದೇ? ಈ ಶಾಸನಶಿಲ್ಪವು ಅತ್ಯಂತ ಆಕರ್ಷಕವೂ ವಿಶಿಷ್ಟವೂ ಆಗಿದೆ.



ಈ ಎಕ್ಕಟಿಗರು ಉತ್ತಮ ಸ್ಥಾನಮಾನ ಗೌರವಗಳನ್ನು ಪಡೆದು ಕೆಲವರು ಆರ್ಥಿಕವಾಗಿಯೂ ರಾಜಕೀಯವಾಗಿಯೂ ಪ್ರಭಾವಶಾಲಿಗಳಾಗಿದ್ದರೆಂದು ಕೆಲವು ಶಾಸನಗಳಿಂದ ತಿಳಿದುಬರುತ್ತದೆ. ಒಂದನೇ ನರಸಿಂಹನ ಯೆಕ್ಕಟಿಗ ಮುದೆಯನಾಯಕ ತನ್ನ ಹೆಸರಿನಲ್ಲಿ ಮುದ್ದೇಶ್ವರ ದೇವಾಲಯವನ್ನು ನಿರ್ಮಿಸಿ ದಾನ ಬಿಟ್ಟಿದ್ದಾನೆ. ಬಿಟ್ಟಿಬೋವನೆಂಬ ಎಕ್ಕಟಿಗ ನಾಯಕ ನಿಲೇಶ್ವರ ದೇವಾಲಯವನ್ನು ಕೆರೆಯನ್ನು ಕಟ್ಟಿಸಿದ್ದಾನೆ. ಬೆಳ್ಳಪ್ಪನೆಂಬ ಅಂಗರಕ್ಷಕನು ತೋರಿದ ಸದ್ಭಕ್ತಿಗೆ ಪರಾಕ್ರಮಕ್ಕೆ ಮೆಚ್ಚಿದ ನರಸಿಂಘದೇವನು ಅವನ ಶೌರ್ಯದ ಉದ್ದಾಮತೆಗೆ ಅಕ್ಕರೆಯಿಂದ ಅಂಗರಕ್ಷೆ, ಬಂಡಾರದರಕ್ಷೆ, ಸಜ್ಜೆರಕ್ಷೆ ಎಲ್ಲವನ್ನು ಅವನಿಗೆ ವಹಿಸಿಕೊಟ್ಟು ಪಸಾಯಿತನನ್ನಾಗಿ ಮಾಡಿದ್ದಾನೆ. ಅಂತಃಪಸಾಯ್ತ ಸ್ಥಾನಪಡೆದ ಈ ಬೆಳ್ಳಪ್ಪನ ಮಗಳು ಗೌರಲದೇವಿಯನ್ನು ಅರಸ ವಿವಾಹವಾಗಿದ್ದಾನೆ. ಅವಳ ಮಗ ಕುಮಾರ ಎರೆಯಂಗದೇವನು ಕೆಂಬಾಳನ್ನು ಆಳುತ್ತಿದ್ದುದನ್ನು ಶಾಸನವೊಂದು ದಾಖಲಿಸಿದೆ. ಎಕ್ಕಟಿಗರು ಅಂಗರಕ್ಷಕರೆಂಬುದನ್ನು ಶಾಸನಾಧಾರದಿಂದ ಹೇಳಬಹುದಾದರೂ ಅಂಗರಕ್ಷಕರೆಲ್ಲರನ್ನೂ ಎಕ್ಕಟಿಗರೆನ್ನಬಹುದೇ ಎಂಬ ಪ್ರಶ್ನೆ ಏಳುತ್ತದೆ. ವೈವಿಧ್ಯಮಯವಾದ ಅಂಗರಕ್ಷಕಪಡೆಗಳಲ್ಲಿ ಇವರು ಒಬ್ಬರೆಂದು ಹೇಳಬಹುದು. ಈ ಎಕ್ಕಟಿಗರ ವಿಚಾರ ಬೇರೆ ಕಾಲದಲ್ಲಿ, ಬೇರೆ ಪ್ರದೇಶದ ಶಾಸನಗಳಲ್ಲಿ ನನ್ನ ಗಮನಕ್ಕೆ ಬಂದಿಲ್ಲ. ಕಾವ್ಯಗಳಲ್ಲಿನ ಉಲ್ಲೇಖಗಳನ್ನು ಸದ್ಯಕ್ಕೆ ಗಮನಿಸಲು ಸಾಧ್ಯವಾಗಿಲ್ಲ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಎ.ಕ.೧ (ಪರಿ) ಕೊಡಗು ಸೋಮವಾರಪೇಟೆ ಶಾ.ಸಂ. ೬೨. ಎಡೂರು ಕ್ರಿ.ಶ. ೧೧೯೫. (ಈ ಶಾಸನದತ್ತ ನನ್ನ ಗಮನ ಸೆಳೆದ ಶ್ರೀಯುತ ಡಾ. ಎಂ.ಜಿ. ನಾಗರಾಜ್‌ರವರಿಗೆ ಋಣಿಯಾಗಿದ್ದೇನೆ).

೨. ದ್ರವಿಡಿಯನ್ ಎಟಿಮಾಲಜಿಕಲ್ ಡಿಕ್ಷನರಿ ೬೫೫, ಪು. ೫೯.

೩. ಎ.ಕ. ೧೦ (ಪರಿ) ಅ.ಕೆ.ಶಾ.ಸಂ. ೨೮೨, ನೇರ್ಲಿಗೆ, ಕ್ರಿ.ಶ. ಸು. ೧೧೧೦-೧೧೪೨.

೪. ಅದೇ, ಶಾ.ಸಂ. ೨೭೯, ಬೂಚೇನಹಳ್ಳಿ, ಕ್ರಿ.ಶ. ೧೧೬೦.

೫. ಗಂಗಾಧರ ಮಡಿವಾಳೇಶ್ವರ, ತುರಮುರಿ ಸಟೀಕಿನ **ಶಬ್ದಮಂಜರಿ ಕೋಶ**.

೬ ಎ.ಕ. ೧ (ಪರಿ) ಕೊಡಗು ಸೋಮವಾರಪೇಟೆ ಶಾ.ಸಂ. ೬೨. ಅದೇ.,

೭. ಎ.ಕ. (ಪರಿ). ೧೦ ಅ.ಕೆ.ಶಾ. ಸಂ. ೮೮ ಕಣಕಟ್ಟೆ ಕ್ರಿ.ಶ. ೧೧೮೯.

೮. ಎ.ಕ. ೧೦ (ಪರಿ) ಅ.ಕೆ.ಶಾ. ಸಂ. ೫೯, ಕುರುವಂಕ, ಕ್ರಿ.ಶ. ೧೧೮೬.

೯. ಎ.ಕ. ೧೨ (ಪರಿ), ಕಡೂರು, ಶಾ.ಸಂ. ೧೬, ೧೭, ಆಸಂದಿ..(ಇವನು, ಆರನೇ ವಿಕ್ರಮಾದಿತ್ಯನಿಂದ ಕಣ್ಣಂಜಿನಾಥ ನೆಂಬ ಬಿರುದು ಪಡೆದ ಆಸಂದಿಗಂಗರಸ ವೈಜರಸನ ಸಂತತಿಯವನಿರಬೇಕು.)

೧೦. ಎ.ಕ. ೧೦ (ಪರಿ) ಅ.ಕೆ ಶಾ.ಸಂ. ೫೯; ಎ.ಕ. ೯ (ಪರಿ), ಬೇಲೂರು, ಶಾ.ಸಂ. ೩೩೨. ಕ್ರಿ.ಶ. ೧೨೨೦.

೧೧. ಅದೇ, ಶಾ.ಸಂ. ೮೮, ಕಣಕಟ್ಟೆ, ಕ್ರಿ.ಶ. ೧೧೮೯ ೮೬- ಕಣಕಟ್ಟೆ, ಕ್ರಿ.ಶ. ೧೧೫೩-೫೪.

೧೨. ಈ ವೀರಗಲ್ಲು ಶಾಸನ ಈಗ ಹಳೇಬೀಡಿನ ಮ್ಯೂಸಿಯಂ ಅಂಗಳದಲ್ಲಿದೆ.

೧೩. ಎ.ಕ. ೩ (ಪರಿ), ನಂಜನಗೂಡು, ಶಾ.ಸಂ. ೨೨೧, ೧೩ನೇ ಶತಮಾನ.

೧೪. ಡಾ. ಎನ್.ಆರ್. ಲಲಿತಾಂಬ. 'ಭೇರುಂಡದ ಮೊತ್ತದ ಕೂಸರು – ಒಂದು ಪರಿಚಯ'. **ಇತಿಹಾಸ ದರ್ಶನ**, ಸಂ. ೨೨. ೨೦೦೭.

೧೫. ಎ.ಕ. ೧೦ (ಪರಿ), ಅ.ಕೆ.ಶಾ. ಸಂ. ೨೭೯, ಬೂಚೇನಹಳ್ಳಿ, ಕ್ರಿ.ಶ. ೧೧೬೦.

೧೬. ಅದೇ, ಶಾ.ಸಂ. ೮೬, ಕಣಕಟ್ಟೆ, ಕ್ರಿ.ಶ. ೧೧೫೩, ೫೪.

೧೭. ಅದೇ, ಚನ್ನರಾಯಪಟ್ಟಣ, ಶಾ.ಸಂ. ೭೬, ಬಿದರೆ ಕ್ರಿ.ಶ. ೧೧೬೫.

ಡಾ. ಇಂದಿರಾ ಹೆಗ್ಗಡೆ*

ತುಳುನಾಡಿನ ಗರಡಿ ವಿದ್ಯೆ

ಕರ್ನಾಟಕದ ಕರಾವಳಿ ಭಾಗವಾಗಿರುವ ತುಳುನಾಡು ಐತಿಹಾಸಿಕ ಪರಂಪರೆಯ ಹಲವು ವೈಶಿಷ್ಟ್ಯಗಳನ್ನು ಇನ್ನೂ ಉಳಿಸಿಕೊಂಡು ಬಂದಿದೆ. ಅಂತಹ ವೈಶಿಷ್ಟ್ಯವೊಂದರ ಪರಿಚಯ ನೀಡುವುದು ಈ ಲೇಖನದ ಉದ್ದೇಶ. ಐತಿಹಾಸಿಕವಾಗಿ ತುಳುನಾಡಿನ ಅರಸರು ಘಟ್ಟದ ಮೇಲಿನ ಅರಸ ಸಾಮಂತರಾಜರಾಗಿ ಇರುವುದನ್ನು ನಾವು ಕಾಣುತ್ತೇವೆ. ಕ್ರಿ.ಶ. ೪೩೦ರ ಹಲ್ಮಿಡಿಯ ಆಳಪಗಣ ಪಶುಪತಿಯ ಕಾಲದಿಂದಲೂ ಅವರು ಒಂದಲ್ಲ ಒಂದು ರಾಜಮನೆತನದ ಸಾಮಂತರಾಜರಾಗಿ ಇದ್ದವರು. ಈ ಹಿನ್ನೆಲೆಯು ತುಳುನಾಡನ್ನು ಅನೇಕ ಸಣ್ಣ ಸಣ್ಣ ಸ್ವತಂತ್ರ ಪಾಳೆಯಗಾರ ಅರಸರು ಆಳುತ್ತಿದ್ದರು. ಇವರಿಗೆ ಗುತ್ತುಗಳು ಸೈನಿಕರನ್ನು ಪೂರೈಸುತ್ತಿದ್ದುವು.

ತುಳುನಾಡಿನಲ್ಲಿ ಗುತ್ತುಗಳನ್ನು ಆಳುಗಳ ಮೂಲಕ ಅಂದರೆ ಸೈನಿಕರ ಸಂಖ್ಯೆ ಮೂಲಕ ಗುರುತಿಸುತ್ತಿದ್ದರು. ಮೂರು ಸಾವಿರಾಳಗುತ್ತು ಐದುಸಾವಿರಾಳಗುತ್ತ ಐನ್ನೂರಾಳ ಗುತ್ತು, ಮುನ್ನೂರಾಳಗುತ್ತು....ಹೀಗೆ. ಆಳುಗಳನ್ನು ಯುದ್ಧ ತರಬೇತಿ ಕೊಟ್ಟು ಯುದ್ಧಕ್ಕೆ ಸಿದ್ಧಗೊಳಿಸುತ್ತಿದ್ದರು. 'ಜಮೀನು ಹೊಂದಿದವರೇ ಸೈನಿಕರಾದರೇ ಅಥವಾ ಸೈನಿಕರಾದವರು ಜಮೀನು ಹೊಂದಿದರೇ ಎಂಬುದು ಬೀಜವೃಕ್ಷ ನ್ಯಾಯದಂತೆ ನಿರ್ಣಯಿಸಲು ಕಷ್ಟವಾದ ಸಂಗತಿ. ತಮ್ಮ ಜಮೀನಿನಲ್ಲಿ ಒಂದೋ ಎರಡೋ ಬೆಳೆ ಬೆಳೆಯುತ್ತಿದ್ದ ರೈತನಿಗೆ ಬಿಡುವಿನ ವೇಳೆ ಇತ್ತು. ಗ್ರಾಮ ರಕ್ಷಣೆಗಾಗಿ ಅವರು ಶಸ್ತ್ರ ಸನ್ನದ್ಧರಾಗಿರಬೇಕಿತ್ತು. ಪಾಳಯಗಾರರಿಂದ ಇಲ್ಲವೇ ರಾಜರಿಂದ ಯುದ್ಧದ ಕಾಲದಲ್ಲಿ ಕರೆ ಬಂದಾಗ ಅಥವಾ ಅವಕಾಶಗಳು ದೊರೆತಾಗ ಅವರು ಯುದ್ಧದಲ್ಲಿ ಸಹಜವಾಗಿಯೇ ಪಾಲುಗೊಳ್ಳುತ್ತಿದ್ದರು.[೧] ಆಳುಪರ ಕಾಲದಲ್ಲಿ ಗ್ರಾಮ ಮತ್ತು ಊರುಗಳ ಅಧಿಕಾರವು ಪ್ರಾಮುಖ್ಯತೆಯನ್ನು ಪಡೆದಿತ್ತು ಎನ್ನುತ್ತಾರೆ ಗುರುರಾಜಭಟ್ಟರು.[೨] ಪ್ರತಿ ಸೀಮೆ ಅಥವಾ ನಾಡು ಆಳುಗಳ/ಯೋಧರ ಸಂಖ್ಯೆ ಮೂಲಕ ಗುರುತಿಸಲ್ಪಡುತ್ತಿತ್ತು ಎನ್ನುತ್ತಾರೆ. ಮಾತ್ರವಲ್ಲ ಸೀಮೆಗೆ ಆಪತ್ತು ಬಂದಾಗ ಸೀಮೆಯ ರಕ್ಷಣೆಯ ಜೊತೆ ಯುದ್ಧಾಳುಗಳನ್ನು ಒದಗಿಸುವ, ಆರ್ಥಿಕ ಸಂಪನ್ಮೂಲ ಕ್ರೋಢೀಕರಿಸುವ ನೇರ ಹೊಣೆಗಾರಿಕೆ ಗುತ್ತುಗಳಲ್ಲಿ ಇರುತ್ತದೆ ಎನ್ನುತ್ತಾರೆ.[೩] ಪಾಡ್ದನಗಳಲ್ಲಿ ಯುದ್ಧಕ್ಕೆ ಓಲೆ ಬಂದಾಗ "ಉಟ್ಟ ಬಟ್ಟೆಯಲ್ಲಿ ಇಟ್ಟ ತಟ್ಟೆಯಲ್ಲಿ ಎದ್ದೋಡಿ" ಬಂದರು-ಎನ್ನುವ ನಿರೂಪಣೆಯನ್ನು ಕಾಣುತ್ತೇವೆ. ಇಂತಹ ಸೈನಿಕ ಆಳುಗಳು ಗರಡಿಗಳಲ್ಲಿ ಯುದ್ಧಕೌಶಲ ತರಬೇತಿ ಪಡೆಯುತ್ತಿದ್ದರು.

ಗರಡಿಯನ್ನು ತುಳು ಭಾಷೆಯಲ್ಲಿ ಗರೋಡಿ ಎನ್ನುತ್ತಾರೆ. ಗರೊಡಿ ಮನೆಗಳು ಅಂದಿನ ರಾಜಕೀಯ ಚಟುವಟಿಕೆಗಳಲ್ಲಿ ಗಮನಾರ್ಹ ಪಾತ್ರವಹಿಸಿವೆ. "ತುಳುನಾಡಿನ ಪಾಳೆಯಗಾರರ ಯುದ್ಧಾಳುಗಳನ್ನು ತರಬೇತುಗೊಳಿಸುವ ಕೆಲಸ ಗರೋಡಿಗಳಲ್ಲಿ ನಡೆಯುತ್ತಿತ್ತು. ಪಾಂಗಾಳ ನಾಯಕರ ಗರೋಡಿಯ ಬಗ್ಗೆ ಕೋರ್ಟ್ ದಾಖಲೆ ಹೀಗೆ ಹೇಳುತ್ತದೆ :

"The institution is a Garadi i.e., it is originaly a military gymnasium. I gather that before the British occupation, Hindu Chieftain used to recruit their armies from such gymnesia and it is no doubt true for the upkeep of these gymnesia assignment of land revenue were made by the Hindu rulers" (court of district judge of South Canara 10th march 1930)[4]

ಪುತ್ತೂರು ಕಡೆ ಗರಡಿಯನ್ನು ಕಲೆರಿ ಚಾವಡಿ ಎಂದು ಗರಡಿ ಕೇಂದ್ರಕ್ಕೆ ಹೇಳುತ್ತಾರೆ. 'ಕಲೆರಿ ಚಾವಡಿ' ಗರೋಡಿ ಮನೆಯಂತೆ ಶಸ್ತ್ರಾಭ್ಯಾಸ ಕಲಿಸುವ ಚಾವಡಿ ಆಗಿತ್ತು. ಮಲಯಾಲ ಭಾಷೆಯಲ್ಲಿ ಗರಡಿಗೆ ಕಲರಿ ಎಂದು ಈಗಲೂ ಕರೆಯುತ್ತಾರೆ. ಪುತ್ತೂರು ತಾಲೂಕಿನ ಸವಣೂರು ಗುತ್ತಿನ ಚಾವಡಿಯನ್ನು 'ಕಲೆರಿ ಚಾವಡಿ' ಎಂದು ಕರೆಯುತ್ತಿದ್ದರು. ಈಗ ಚಾವಡಿ ಬಿದ್ದುಹೋಗಿದೆ.

ಡಾ. ವಾಮನ ನಂದಾವರ ಅವರು ಹೀಗೆ ಬರೆಯುತ್ತಾರೆ: ತುಳುನಾಡಿನಲ್ಲಿ ಗರಡಿಗಳ ಸ್ಥಾಪನೆ ಹೆಚ್ಚು ಕಡಿಮೆ ೧೧ನೆಯ ಶತಮಾನದಲ್ಲಿ ಆಗಿರಬೇಕು. ಆಳುಪರ ಅವನತಿಯ ಕಾಲದಲ್ಲಿ ರಾಜಾಡಳಿತ ವಿಕೇಂದ್ರೀಕರಣಗೊಂಡು ಒಳ ಜಗಳಗಳು ಹುಟ್ಟಿಕೊಂಡದ್ದರಲ್ಲಿ ಆಶ್ಚರ್ಯವಿಲ್ಲ. ಆ

* ೬, ಕೃಷ್ಣಾ ರೆಸಿಡೆನ್ಸಿ, ೪ನೆಯ ತಿರುವು, ಅಮರಜ್ಯೋತಿ ನಗರ, ವಿಜಯನಗರ, ಬೆಂಗಳೂರು.

ಕಾಲದಲ್ಲಿ ಅಂಗಸಾಧನೆಯ, ಯುದ್ಧಕಲೆಯ ಶಿಕ್ಷಣದ ಅಗತ್ಯವೂ ಇತ್ತು. ಗರಡಿಗಳು ಇಂತಹ ಶಿಕ್ಷಣ ಕೇಂದ್ರಗಳಾಗಿದ್ದು ಅಲ್ಲೆಲ್ಲ ಯುದ್ಧವೀರರನ್ನು ಸಿದ್ಧಗೊಳಿಸಲಾಗುತ್ತಿತ್ತು. ಮುಂದೆ ವಿಜಯನಗರ ಕಾಲದಲ್ಲಿ ಗ್ರಾಮೀಣ ಸ್ಥಾನ ದೊರೆಯುವುದರೊಂದಿಗೆ ಒಂದು ವ್ಯವಸ್ಥೆಯೂ ನೆಲೆಗೊಂಡಿತು. ಗ್ರಾಮೀಣ ಸ್ಥಾನದ ಜತೆಗೆ ಈ ವ್ಯವಸ್ಥೆಯಲ್ಲಿ ಏಕಸೂತ್ರ ಪದ್ಧತಿಯೂ ರೂಢಿಯಾಯಿತು. ಹೀಗಾಗಿ ಗರಡಿಗಳ ಕಾರ್ಯ ಚಟುವಟಿಕೆಗಳು ತುಸು ದುರ್ಬಲಗೊಂಡವೆನ್ನಬಹುದು. ವಿಜಯನಗರದ ಅವನತಿಯ (ಕ್ರಿ.ಶ. ೧೫೬೫) ಬಳಿಕ ಈ ಗರಡಿಗಳಿಗೆ ಮತ್ತೆ ಮಹತ್ವ ಬಂತು.[೫]

ಕೆ.ವಿ. ರಮೇಶರು ಆಳುಪರ ಬಗ್ಗೆ ಬರೆಯುತ್ತಾ 'ವ್ಯೂಹ ರಚನೆ, ಸೈನ್ಯ ಸಂಚಲನೆ ಮುಂತಾದ ಯುದ್ಧೋಪಾಯಗಳಲ್ಲಿ ಆಳುಪರು ನಿರತರಾಗಿದ್ದರು. ಸಾಮಾನ್ಯ ಸೈನಿಕರನ್ನು ಭಟ ಅಥವಾ ಆಳು ಎಂದು ಕರೆಯುತ್ತಿದ್ದರು' ಎನ್ನುತ್ತಾರೆ.[೬] ತುಳುನಾಡಿನಲ್ಲಿ ಪ್ರತಿ ಸೀಮೆಗೊಂದರಂತೆ ಇರುವ ಗರಡಿಗಳಲ್ಲಿ ಅಂಗಸಾಧನೆಯ ಜೊತೆಯಲ್ಲಿ ಯುದ್ಧ ಕೌಶಲಗಳನ್ನು ಹೇಳಿಕೊಡಲಾಗುತ್ತಿತ್ತು. ಆಳುಪರ ಶಾಸನಗಳಲ್ಲಿ ಅಂಬು, ವಾಳ್ ಮತ್ತು ಪಲಗೆಯ ಪ್ರಸ್ತಾಪ ಇದೆ.[೭] ಇಂದಿಗೂ ಬೀಡುಗಳ ಆರಾಧನೆಯ ಅಂಗವಾಗಿ ಆಚರಣೆಯಲ್ಲಿ 'ಅಂಕ' ಮತ್ತು 'ಅಂಬೊಡಿ' ಯುದ್ಧದ ಅಣಕು ಪ್ರದರ್ಶನ ಈಗಲೂ ಅಲ್ಲಡೆ ಶಕ್ತಿ ಸ್ಥಳಗಳ ವಾರ್ಷಿಕ ಉತ್ಸವದಂದು ನಡೆಯುತ್ತದೆ. ವಾಳ್/ಬಾಳ್ ಹರಿತವಾದ ಸಣ್ಣ ಆಯುಧ. ಕೋಳಿ ಅಂಕಣದಲ್ಲಿ ಇದನ್ನು ಕೋಳಿಯ ಕಾಲಿಗೆ ಕಟ್ಟಿ ಹೋರಾಟಕ್ಕೆ ಬಿಡುತ್ತಾರೆ. ಕ್ರಿ.ಶ. ೧೪೯೦ರ ಶಾಸನದಲ್ಲಿ 'ಅಳು ಅಂಬು ಅರಿ ಕೊಪ್ಪರಿಗೆಯ' ಪ್ರಸ್ತಾಪ ಬರುತ್ತದೆ.[೮] ಪಲಗೆ ಎಂದರೆ ಅಡ್ಡಣೆ (ಗುರಾಣಿ) ಆಗಿರಬೇಕು. ಬಿಲ್ಲು-ಬಾಣ, ಖಡ್ಗ, ಕತ್ತಿ, ಸುರಿಯ, ಈಟಿ, ಭರ್ಚಿ, ಎರಡು ಅಲಗಿನ ಕತ್ತಿ, ಕಠಾರಿ, ಚಾಕು, ತ್ರಿಶೂಲ-ಮುಂತಾದ ಅತ್ಯಂತ ಪುರಾತನ ಯುದ್ಧಾಸ್ತ್ರಗಳು ತುಳುನಾಡಿನ ದೈವಾಲಯಗಳಲ್ಲಿ ಇವೆ. ಈ ಅರಸರು ಸೈನಿಕ ತರಬೇತಿ ಕೇಂದ್ರವನ್ನು ನಡೆಸುತ್ತಿದ್ದರು. ಕೆಲವು ಕಡೆ ಅರಮನೆ ಅಥವಾ ಬೀಡುಗಳಲ್ಲಿ ತರಬೇತಿ ನಡೆಯುತ್ತಿತ್ತು.

ಪ್ರತಿ ಸೀಮೆಗೂ ಅರಸರಿಗೆ ಯುದ್ಧಾಳುಗಳನ್ನು ತರಪೇತುಗೊಳಿಸಲು ಒಂದೊಂದು ಗರಡಿ ಮನೆಗಳು ಇದ್ದುವು. ಮುಲ್ಕಿಯ ಅರಸರ ಗರಡಿ ಮನೆ ಅರಮನೆಯ ಸಮೀಪ ಚಿತ್ರಾಪು ಎಂಬಲ್ಲಿದೆ. ಇದನ್ನು 'ಚಿತ್ರಾಪು ಗರಡಿ ಮನೆ' ಎಂದು ಕರೆಯುತ್ತಾರೆ. ಮುಲ್ಕಿಯ ಅರಸರು ೩೦೦೦ ಆಳುಗಳನ್ನು ಹೊಂದಿದ್ದರು. ವಾರಂಬಳ್ಳಿಯ ಪಡುಮೂಡು ಗರಡಿಗಳು, ಪಾಂಗಾಳದ ನಾನಯರ ಗರಡಿ, ಮೂಲ್ಕಿಯ ಚಿತ್ರಾಪು ಗರಡಿ, ಕಾಸರಗೋಡಿನ ಕೋಡಿ ಬೈಲು ಗರಡಿಗಳು ನಾಲ್ಕು ವರ್ಣದವರಿಗೆ ಇದ್ದ ಗರಡಿಗಳು ಎಂದು ವಾಮನ ನಂದಾವರ ಬರೆಯುತ್ತಾರೆ.[೧೦] ವಿಜಯನಗರ ಅವನತಿಯ ಕಾಲದಲ್ಲಿ ಮೂಡಬಿದಿರೆಯ ಚೌಟರ ಜೊತೆ ಗುರುತಿಸಿಕೊಂಡ ನಂದಳಿಕೆ ಚಾವಡಿಯ ಅರಸು ಮನೆಯಲ್ಲಿ ಗರಡಿ ಸಾಧನೆ ಮಾಡುವ ಮುರ್ತದ ಕಂಬ ಮತ್ತು ಗುರುಕಂಬ ಇದೆ. ವಂಡಾರು ಬೀಡಿನ ಒಳ ಸಂಕೀರ್ಣದಲ್ಲಿ ಅಂಗ ಸಾಧನೆಯ ಗರಡಿ ಇದೆ. ಈ ಗರಡಿಯಲ್ಲಿ ಪಟ್ಟದ ಅರಸರ ಕಂಚಿನ ಮೂರ್ತಿ ಇಟ್ಟಿದ್ದಾರೆ.

ಗರೋಡಿ ಮನೆಗಳು

ಗರಡಿಗಳಲ್ಲಿ ಗರಡಿ ಗುರುಗಳು ತಮ್ಮ ಮಾತೃವಂಶೀಯ ಕುಟುಂಬದೊಂದಿಗೆ ವಾಸಿಸುತ್ತಿದ್ದರು. ಹೀಗಾಗಿ ಗರೊಡಿ ಕೇಂದ್ರಗಳನ್ನು ಗರೋಡಿಮನೆಗಳು ಎಂದು ಕರೆಯುವ ರೂಢಿ ಬೆಳೆದಿದೆ. ಎಲ್ಲಾ ಗರೋಡಿಗಳಲ್ಲೂ ಪಟ್ಟಾಭಿಷೇಕದ ವಿಧಿವತ್ತಾಗಿ ಗುರುಗಳ ಆಯ್ಕೆ ನಡೆಯುತ್ತಿತ್ತು. ಇದು ವಂಶಪಾರಂಪರ್ಯ ಅಧಿಕಾರ ಆದರೂ ಆಯ್ಕೆಯ ಪದ್ಧತಿ ಇದೆ. ಆಯ್ದ ವ್ಯಕ್ತಿಗೆ ಪಟ್ಟಾಭಿಷೇಕದ ವಿಧಿ ವಿಧಾನಗಳು ನಡೆಯುತ್ತಿದ್ದವು. ಗುರು ಆಗಿ ಆಯ್ಕೆಯಾಗುವವರು ತಲೆಗೆ ಮುಂಡಾಸು, ಕತ್ತಿಗೆ ಶಾಲು, ಸೊಂಟಕ್ಕೆ ಕಚ್ಚೆ ಹಾಕುತ್ತಿದ್ದರು. ಕೈಯಲ್ಲಿ ದಂಡ ಕೋಲು ಇರುತ್ತಿತ್ತು. ಕೆಲವು ಗರಡಿಗಳಲ್ಲಿ ಯುದ್ಧ ತರಬೇತಿಯ ಕುರುಹುಗಳು ನಾಶವಾಗಿದ್ದರೂ ಗರಡಿ/ಕಳರಿ ದೇವತೆ ಹಾಗೂ ಚಂಡಿಕೆಯ ಆರಾಧನೆಯಂತಹ ಆಚರಣೆಗಳು ಈಗಲೂ ಇವೆ. ಈಗಲೂ ಈ ಮನೆಗಳಲ್ಲಿ ಗುರುವಿನ ಮಾತೃವಂಶೀಯ ಕುಟುಂಬ ಸದಸ್ಯರು ವಾಸವಿದ್ದಾರೆ.

"ಕೇರಳದ ಕಳರಿ ಮತ್ತು ತುಳುನಾಡಿನ ಗರಡಿ ಮೂಲತಃ ಒಂದೇ ಆಗಿರಬೇಕು. ಇಲ್ಲಿ ಗರಡಿ ವಿದ್ಯೆ ತನ್ನ ಅಸ್ತಿತ್ವವನ್ನು ಕಳೆದುಕೊಂಡಿದ್ದರೆ ಅಲ್ಲಿ ಕಳರಿ ಇಂದೂ ಜನಪ್ರಿಯವಾಗಿದೆ."[೧೧] ೧೯ನೆಯ ಶತಮಾನದಲ್ಲಿ ಕೇರಳದ ಶಾಲೆಗಳಲ್ಲಿ ಯೋಧಕಲೆಯನ್ನು ಕಡ್ಡಾಯವಾಗಿ ಕಲಿಸಲಾಗುತ್ತಿತ್ತು. ೧೫೧೪ರಲ್ಲಿ ಪೋರ್ಚುಗೀಸ ಕ್ಯಾಪ್ಟನ್ ಬರ್ಬರಾ ದಾಖಲಿಸಿರುವಂತೆ "ಪ್ರತಿನಾಯರ್ ಹುಡುಗನೂ ತನ್ನ ಏಳನೆಯ ವರ್ಷದಲ್ಲಿ ಶಸ್ತ್ರಗಳನ್ನು ಪ್ರಯೋಗಿಸಲು ಉಪಯೋಗವಾಗುವ ಚಮತ್ಕಾರ ವಿದ್ಯೆಯ ಹಾಗೂ ಅಂಗ ಸಾಧನೆಯ ಸರ್ವವಿಧದ ಕೈ ಚಳಕ ಸಾಮರ್ಥ್ಯವನ್ನು ಅಭ್ಯಾಸ ನಡೆಸುವುದಕ್ಕಾಗಿ ಶಾಲೆಗೆ ಹೋಗಬೇಕಾಗಿತ್ತು. ಕೇರಳದ ಒಂದು ಹಳೆದ ಗಾದೆ ಹೀಗಿದೆ. : ಇಲ್ಲಿ ಖಡ್ಗಗಳಿಗೆ ಒರೆಯಿರುವುದಿಲ್ಲ ಮತ್ತು ಹೆಣ್ಣುಗಳು ತಮ್ಮ ಮೊಲೆಗಳನ್ನು ಮುಚ್ಚಿಕೊಳ್ಳುವುದಿಲ್ಲ.[೧೨] ತುಳುನಾಡಿನ ಬಂಟರೂ ಹಿಂದೆ

ಬಂಟಕತ್ತಿಯೊಂದಿಗೆ ನಡೆದಾಡುತ್ತಿದ್ದರು ಎಂದು ಶೀನಪ್ಪ ಹೆಗ್ಗಡೆಯವರು ಬರೆಯುತ್ತಾರೆ.

ಪಾಂಗಾಳ ನಾನಯರ ಗರಡಿ : ಲಭ್ಯ ಇರುವ ಮಾಹಿತಿಯಂತೆ "ಪಾಂಗಾಳ ನಾನಯರ ಗರೊಡಿಯವರು ಕಟಪಾಡಿ ಬಲ್ಲಾರ ಯುದ್ಧಾಳುಗಳನ್ನು ತರಬೇತಿಗೊಳಿಸುತ್ತಿದ್ದರು. ಈ ಗರಡಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಟಪಾಡಿ ಬಳಿ ಇದೆ. ಹೈದರಾಲಿ ಮತ್ತು ಟಿಪ್ಪುಸುಲ್ತಾನನ ಕಾಲದಲ್ಲಿ ಪಾಂಗಾಳ ನಾನಯರ ಗರಡಿಗೆ ಇನಾಮು ದೊರಕುತ್ತಿತ್ತು. ಬ್ರಿಟಿಷರ ಕಾಲದಲ್ಲಿ ಈ ಸಹಾಯಧನ ತಸ್ತೀಕು ಎಂಬ ಹೆಸರು ಪಡೆಯಿತು. ಮುಂದೆ ಈ ಯುದ್ಧ ತರಬೇತಿ ಕೇಂದ್ರವಾಗಿದ್ದ ಗರಡಿಯನ್ನು ಬ್ರಿಟಿಷರು ತುಫಾಕಿ ಸಿಡಿಸಿ ಧ್ವಂಸ ಮಾಡಿದರು ಎನ್ನುತ್ತಾರೆ ಈ ಗರಡಿಯವರು.

ಇಲ್ಲಿ ಸೊಗಸಾದ, ವಿಶಾಲವಾದ ಒಂದು ಕೆರೆ ಇದೆ. ಇದನ್ನು ಮುರಕಲ್ಲಿನಿಂದ ರಚಿಸಲಾಗಿದೆ. ಇದು ಗರಡಿ ಸಾಧಕರ ಈಜುಕೊಳವಾಗಿತ್ತು ಇಂತಹುದೇ ಈಜುಕೊಳ ಕಾಪು ಪೂವಣಿ ಗುತ್ತಿನಲ್ಲಿದೆ. ಇದೂ ಕಾಪುಸೀಮೆಯ ಗರಡಿ ಸಾಧಕರ ಈಜುಕೊಳವಾಗಿತ್ತು ಎಂದು ಪೂವಣಿ ಗುತ್ತಿನವರು ಹೇಳುತ್ತಾರೆ. ದಾಮೋದರ ಕಲ್ಮಾಡಿ ಸಂಪಾದಿಸಿದ **ಕೋಟಿ ಚೆನ್ನಯರ ಪಾಡ್ದನ**ದಲ್ಲಿ ಮೂಡುದಿಕ್ಕಿನ ಪೇರ್ಮುಂಡು ಗರಡಿಗಿಂತ ಪಡುದಿಕ್ಕಿನ ನಾನಯರ ಗರಡಿ ಉತ್ತಮ ಗರಡಿ ಎನ್ನುತ್ತಾ ಕೋಟಿಚೆನ್ನಯರ ಸೋದರ ಮಾವನು ಅವರನ್ನು ಕಟಪಾಡಿ ನಾನಯರ ಗರಡಿಗೆ ವಿದ್ಯೆ ಕಲಿಯಲು ಗುರುವಂದನೆಗೆ ಗುರುಕಾಣಿಕೆಯೊಂದಿಗೆ ಕಳುಹಿಸುವ ವರ್ಣನೆ ಇದೆ. "ಗರಗಡಿಯ ಬಾಗಿಲಲ್ಲಿ ನಿಲ್ಲುತ್ತಾರೆ. ಗರಡಿಯ ಗುರುವನ್ನು ಕರೆಸುತ್ತಾರೆ. ಗರಡಿ ಬಾಗಿಲು ತೆರೆಸುತ್ತಾರೆ. ಗರಡಿ ಶುದ್ಧ ಮಾಡಿಸಿ ಗುಂಡದಲ್ಲಿ ದೀಪ ಹೊತ್ತಿಸಿ ಗುರು ಚೆನ್ನಿಂಗ ದೇವರಿಗೆ ಪೂಜೆ ಮಾಡಿಸಿ ಬೆರ್ಮರಿಗೆ ತಂಬಿಲ ಕಟ್ಟಿಸುತ್ತಾರೆ." ಅಲ್ಲಿ ಅವರು ಕಲಿತ ವಿದ್ಯೆಯನ್ನು ಪಾಡ್ದನ ಈ ರೀತಿ ವಿವರಿಸುತ್ತದೆ : 'ಕೋಟಿ ಚೆನ್ನಯರು ಮೊದಲು ಹತ್ತು ಹದಿನಾರು ಕೈ ಖಡ್ಗದಲ್ಲಿ ಸಾಧನೆ ಮಾಡಿದರು. ಮುಂದೆ ಅದನ್ನು ಮೀರುವ ಕತ್ತಿ ಮತ್ತು ಬಿಲ್ಲು ಬಾಣಗಳ ಸಮರಭ್ಯಾಸ ನಡೆಸಿದರು. ಹಂದಿಯಂತೆ ಮುನ್ನುಗ್ಗಿದರು. ಪಟ್ಟೆ ಹುಲಿಯಂತೆ ಅಬ್ಬರಿಸಿದರು. ಜಿಂಕೆಯಂತೆ ನೆಗೆದು, ನವಿಲಿನಂತೆ ಕುಣಿದು ಗರಡಿ ವಿದ್ಯೆ ಕಲಿತರು.[೧೩] ಆದರೆ ಈ ಗರಡಿಯಲ್ಲಿ ಕೋಟಿಚೆನ್ನಯರ ಆರಾಧನೆ ಇಲ್ಲ. ಶಸ್ತ್ರಾಭ್ಯಾಸ ತರಬೇತಿ ಕೇಂದ್ರ ಮಾತ್ರವಾಗಿ ಇದೆ.

ನಾನಯರ ಗರಡಿ ಮನೆಯ ಕೇರಳದ ಶಾಖೆ : "ಪಾಂಗಾಳ ಗರಡಿಯಲ್ಲಿ ಕೆಲವು ದಾಖಲೆಗಳಿವೆ. ಇವು ಕೇರಳದ ತಿರುವಾಂಕೂರಿನ ಉಚ್ಚನ್ಯಾಯಾಲಯದ ದಾಖಲೆ. ಇದರ ಪ್ರಕಾರ ನಾನಯರ ಗರಡಿಯ ಕೇರಳದ ಶಾಖೆಯ ಭೂಮಿ ಅಡಮಾನ ಆಗಿ ಹೋಗಿತ್ತು. ಗರಡಿ ಮನೆಯವರ ಪ್ರಕಾರ ಕೇರಳದ ಭೂಮಿ ತಿರುವಾಂಕೂರು ಅರಸ ಕೊಟ್ಟ ಭೂಮಿ. ಅಂದಿನ ಕಾಲದಲ್ಲಿ ಅಲ್ಲಿ ಕಳರಿ ಚಾವಡಿ ನಿರ್ಮಿಸಿ ಯುದ್ಧ ತರಬೇತಿ ನೀಡಲು ಪಾಂಗಾಳ ನಾನಯರ ಗರಡಿಯ ನಾನಯರನ್ನು ತಿರುವಾಂಕೂರಿನ ಅರಸನು ಕೇಳಿಕೊಳ್ಳುತ್ತಾನೆ. ನಾನಯರು ಕೇರಳದ ತಿರುವಾಂಕೂರಿನ ಅಲೆಪ್ಪಿಗೆ ಹೋಗಿ ಅಲ್ಲಿ ಕಲೆರಿ ಕಟ್ಟುತ್ತಾರೆ. ಕಲೆರಿ ಚಾವಡಿಯ ನಿರ್ವಹಣೆಗೆ ಕೇರಳದಲ್ಲಿಯೇ ಭೂಮಿಯನ್ನು ಅರಸನು ಕೊಡುತ್ತಾನೆ. ಪಾಂಗಾಳದಲ್ಲಿರುವಂತೆ ನಿತ್ಯಪೂಜೆಯ ವ್ಯವಸ್ಥೆಯನ್ನು ಅಲ್ಲಿಯೂ ಮಾಡಲಾಗಿತ್ತು. ಪಾಂಗಾಳ ಗರಡಿಯ ಪಟ್ಟ ಆದ ನಾನಯರು ಆರು ತಿಂಗಳು ಪಾಂಗಾಳದಲ್ಲಿ ಆರು ತಿಂಗಳು ಕೇರಳದ ವೆಲ್ಲೂರು ಕಳರಿ ಕಳದಲ್ಲೂ ಇರುತ್ತಿದ್ದು ಎರಡೂ ಕಡೆಯಲ್ಲಿ ಗುರುಗಳಾಗಿ 'ನಾನಯ' ಆಗಿದ್ದರು. ಅಂದಿನ ಎಲ್ಲಾ ನಾನಯರು ಎರಡು ಸಂಸಾರ ಹೊಂದಿದ್ದರು. ಉಡುಪಿಯಲ್ಲಿ ೬ ತಿಂಗಳು, ಕೇರಳದಲ್ಲಿ ೬ ತಿಂಗಳು ಇವರು ಇರುತ್ತಿದ್ದರು. ಉಡುಪಿಯಲ್ಲಿ ಸ್ವಜಾತಿ ಹೆಣ್ಣನ್ನು ಸ್ವಜಾತಿ ಕ್ರಮದಲ್ಲಿ ಮದುವೆಯಾಗುತ್ತಿದ್ದರು. ಕೇರಳದಲ್ಲಿ ನಾಯರ್ ಹೆಣ್ಣಿನ ಜತೆ ಬಾಳುವೆ ಮಾಡುತ್ತಿದ್ದರು. ಆಕೆಯಲ್ಲಿ ಮಕ್ಕಳಾದರೆ ಮಾತೃವಂಶೀಯತೆಯ ಪ್ರಕಾರ ಕೇರಳದ ನಾಯರ್ ಜಾತಿಯನೇ ಸೇರುತ್ತಿದ್ದರು. ಈ ಮಕ್ಕಳಿಗೆ ಪಾಂಗಾಳ ನಾನಯರ ಗರಡಿಯ ಸಂಪರ್ಕ ಇರಲಿಲ್ಲ. ನಾನಯರ ಮನೆಯವರು ಕೇರಳದ ಸಂಸಾರಕ್ಕೆ ಮಾನ್ಯತೆ ಕೊಟ್ಟಿಲ್ಲ. ನಾನಯರ ಗರೊಡಿಯಲ್ಲಿ ಚಂಡಿಕೆ, ರಕ್ತೇಶ್ವರಿ, "ಇಸರ ಕುಮಾರ" ಇದ್ದಾನೆ. ಪಟ್ಟದ ಚಾವಡಿಯಲ್ಲಿ ಸಿರಿಗಿಂಡೆಯಲ್ಲಿ ಇಸರ ಕುಮಾರನಿಗೆ ನೀರು ಇಡಬೇಕು."[೧೪]

ವ್ಯಾಜ್ಯದ ಮೂಲಕ ಕೇರಳದ ಭೂಮಿಯನ್ನು ಬಹಳಷ್ಟು ಇವರು ಕಳಕೊಂಡಿದ್ದಾರೆ. ನಾನಯರ ಗರಡಿಯ, ಕೇರಳದ ಆಸ್ತಿಯಲ್ಲಿ ಮಾಡಿದ ಸಾಲದ ಪ್ರಯುಕ್ತ ವ್ಯಾಜ ಆಗಿ ಆಸ್ತಿ ಕೈತಪ್ಪಿ ಹೋಯಿತು. ಕೈಬಿಟ್ಟು ಹೋದ ಆಸ್ತಿಯಲ್ಲಿ ಒಂದು ಕಲರಿ (ಕದನ ಶಾಲೆ) ಮತ್ತೊಂದು ದೇವರ ಗುಡಿ ಇತ್ತು. ಆದರೂ ಇವರಿಗೆ ಈಗಲೂ ಅಲ್ಲಿ ಆಸ್ತಿ ಇದೆ. ಸುಮಾರು ೪೫ ವರುಷದ ಸಚ್ಚಿದಾನಂದ ನಾನಯರು ಕೇರಳದಲ್ಲಿ ನೆಲಸಿ ಆಸ್ತಿ ನೋಡುತ್ತಿದ್ದಾರೆ. ಅವರ ತಾಯಿ ಹಾಗೂ ಸೋದರ ಉಡುಪಿಯ ಗರಡಿಯಲ್ಲಿದ್ದಾರೆ. ಇವರ ಕೇರಳದ ಮನೆಯ ಹೆಸರು "Pallam Pillavi Matam". ಉಡುಪಿಯ The Court of District Munsiff of Udipi, Original Suit No. 358 of 1892 ಈ ದಾಖಲೆಯಲ್ಲಿ ಕೇರಳದ ಇವರ ಆಸ್ತಿಯನ್ನು ಪ್ರಸ್ತಾಪಿಸಲಾಗಿದೆ. ....The immovable properties mentioned herebelow and situated

within the jurisdiction of this Court, the Pooja of the Gardi Chandika Parameswari Amman (Goddess) the right of obtaining the Tasdik of rupees 26-6-5 due therefor, and also the properties situated in the villages of Jambakola and Meddakola attached to the territory fo Travancore, and yielding a net income of rupees 500 a year excluding thirva (or assessment) these belong to the family of the plaintiff and the defendent."

ವಾರಂಬಳ್ಳಿ ಗರೊಡಿ : "ಕ್ರಿ.ಶ. ೧೩೪೫ರ ವೀರಕುಲ ಶೇಖರನ ಶಾಸನವು ಪರಂಪಳ್ಳಿ ನಾಯಕರಿಗೆ ಬರೆದು ಕೊಟ್ಟ ಶಿಲಾಶಾಸನವಾಗಿದ್ದು 'ಅಂಣ ವೊರಂಬಳ್ಳಿ, ನಾರಣ ವೊರಂಬಳ್ಳಿಯ 'ಬಿರವು' ಎಂದಿದೆ. ಬಿರಾವು ಎಂದರೆ ಬರಾವು/ ಬರಹ. ಈ ಶಾಸನವನ್ನು ಬರೆದಾತ 'ಕುಜಣ' ಎಂದಿದೆ. ಕ್ರಿ.ಶ. ೧೪೪೭ರ ಶಾಸನದಲ್ಲಿ 'ವಿಷ್ಣು ವೋರಂಬಳ್ಳಿಯ ಮಗ ನಾರಣ ವೊರಂಬಳ್ಳಿಯ ಹಾಗೂ ಇನ್ನೂ ಕೆಲವು ಹೆಸರುಗಳು ಇವೆ.

ಪರಂಪಳ್ಳಿ ನಾಯಕರು ತೋಡಿರುವ ೪ ಅಡಿ ವ್ಯಾಸದ ಬಾವಿಯೊಂದು ಗರೋಡಿ ಮನೆಯ ಮುಂದಿನ ತೋಟದಲ್ಲಿ ಇದೆ. ಮುರಕಲ್ಲಿನಿಂದ ಕಟ್ಟಿರುವ ಈ ಬಾವಿ ಈಗಲೂ ಸಿಹಿ ನೀರಿನಿಂದ ತುಂಬಿದೆ. ಕವಿಯಾಳುಪೇಂದ್ರನ ಉಪ್ಪೂರಿನ ಕ್ರಿ.ಶ. ೧೧೩೭ರ ಶಾಸನದಲ್ಲಿ ಪರಂಪಳ್ಳಿ ನಾಯಕನು ಉಪ್ಪೂರಿನ ವಿನಾಯಕದೇವರಿಗೆ ಗದ್ಯಾಣವನ್ನು ದಾನ ಮಾಡಿದ ಬಗ್ಗೆ ಸಾಲೆತ್ತೂರ್ ಅವರು ಬರೆಯುತ್ತಾರೆ. ಜೊತೆಗೆ ಆತನ ಬಗ್ಗೆ ಇದ್ದ ಪರಂಪರಾಗತ ಕಥೆಯನ್ನೂ ನೀಡುತ್ತಾರೆ. ೧೩ನೆಯ ಶತಮಾನದ ಶಾಸನದಲ್ಲಿ 'ಪಾಂಡ್ಯದೇವ ರಾಜ್ಯಂಗೈಯ್ಯುತ್ತಿರಲು ಪರಪಳ್ಳಿ ನಾಯಕ ಮುಂತಾದವರು' ಎಂದು ಹೇಳಿದೆ. ಹೀಗಾಗಿ ಪರಂಪಳ್ಳಿ ನಾಯಕ ಸಾಮಾನ್ಯ ವ್ಯಕ್ತಿಯಾಗಿರಲಾರ. ಹಿಂದೆ ಈ ಗರೋಡಿ ನಾಯಕರು 'ಪರಂಪಳ್ಳಿ'ಯವರಾಗಿದ್ದಿರಬಹುದು. ನಾಯಕ ಎನ್ನುವುದು ಸೇನಾ ಮೂಲದ ಹೆಸರು. ಹೀಗಾಗಿ ಪರಂಪಳ್ಳಿ ನಾಯಕರಿಂಥ ವೋರಂಬಳ್ಳಿಯ ಬ್ರಾಹ್ಮಣರಿಗೆ ಆಳುಪರಸರ ಕಾಲದಲ್ಲಿ ಅಥವಾ ಮುಂದೆ ಬ್ರಹ್ಮಾವರದ ಈ ಗರೋಡಿ ಹಸ್ತಾಂತರ ಆಗಿರುವ ಸಾಧ್ಯತೆ ಇದೆ."[೧೫] ಈ ಶಾಸನಗಳಲ್ಲಿ ವಾರಂಬಳ್ಳಿ ಯವರು ಗರೋಡಿವಿದ್ಯೆ ಕಲಿಸುವ ಗುರುಗಳು ಎಂದು ಹೇಳಿಲ್ಲ. ಆದರೆ ಆ ಕಾಲಕ್ಕೆ ಅಕ್ಷರಜ್ಞಾನವುಳ್ಳವರಾಗಿದ್ದು ಶಾಸನ ಬರಹವನ್ನು ಬರೆದು ಶಿಲ್ಪಿಗಳಿಗೆ ಶಾಸನ ಕೊರೆಯಲು ನೀಡುತ್ತಿದ್ದರು ಎಂದು ತಿಳಿಯಬಹುದು. ವಾರಂಬಳ್ಳಿ ಮನೆತನ ಗರಡಿ ವಿದ್ಯೆ ಕಲಿಸುತ್ತಿದ್ದ ಗುರುಗಳ ಮನೆತನ. ಕ್ರಿ.ಶ. ೧೩೪೫ರಿಂದಲೂ – ಆಳುಪರಸರ ಕಾಲದಿಂದಲೂ ಈ ಗರೊಡಯಲ್ಲಿ ಬ್ರಾಹ್ಮಣರೇ ಇದ್ದಾರೆ. ವಾರಂಬಳ್ಳಿ ಎನ್ನುವುದು ಆ ಊರಿನ ಹೆಸರೂ ಅಲ್ಲ. ಅದು ಆ ಬ್ರಾಹ್ಮಣ ಮನೆತನದ ಹೆಸರು.

"ಕೆ.ಜಿ. ವಸಂತ ಮಾಧವ (೧೯೯೦) ಅವರ ಪ್ರಕಾರ ತುಳುನಾಡಿನ ಪಾಳೆಯಗಾರ ಅರಸರು ಗೋಕರ್ಣದಿಂದ ತ್ರಿಕರಪುರದವರೆಗಿನ ೭೪ ಗರಡಿಗಳನ್ನು ನೋಡಿಕೊಳ್ಳುವ ವ್ಯವಸ್ಥೆಗಾಗಿ ಕೇರಳದ ಬಳ್ಳಿ ಬ್ರಾಹ್ಮಣರನ್ನು ಕರೆಸಿಕೊಂಡರು. ಈ ಬ್ರಾಹ್ಮಣರಿಗೆ ಸೂತಕ ಇತ್ಯಾದಿ ಇರಲಿಲ್ಲ. ಹಾಗಾಗಿ ಇಲ್ಲಿನ ವ್ಯವಸ್ಥೆಗಾಗಿ, ಕೇರಳದ ಬಳ್ಳಿ ಬ್ರಾಹ್ಮಣರನ್ನು ಕರೆಸಿಕೊಂಡರು."[೧೬] ಓನ್ನೆಲೆಯಿಂದ ಬ್ರಾಹ್ಮಣರು ಆಮೇಲೆ ಬಂದವರು ಎಂದು ಹೇಳಿದರೂ ವಾರಂಬಳ್ಳಿ ಮನೆತನ ಬಿಟ್ಟರೆ ಇತರೆ ಯಾವುದೇ ಸಾಧನೆಯ ಗರಡಿಯಲ್ಲಿ ಬ್ರಾಹ್ಮಣ ಕುಟುಂಬ ವಾಸವಿಲ್ಲ. ಬಂಟರು ಅಥವಾ ಜೈನರು ನಮಗೆ ಸಿಗುತ್ತಾರೆ. ಕೋಟಿ ಚೆನ್ನಯರ ಉಯ್ಯಾಲೆಯೂ ಬಂಟರ ಅಥವಾ ಜೈನರ ಗುತ್ತು ಬೀಡುಗಳಲ್ಲಿ ಇವೆ.

'ವಾರಂಬಳ್ಳಿಯಲ್ಲಿ ಅಣ್ಣ–ತಮ್ಮ ಭಾಗ ಪಡೆದು ಮೂಡು ಗರೋಡಿ ಪಡು ಗರೋಡಿ ಎಂದು ಎರಡಾಗಿದೆ. ಪಡು ಗರೋಡಿ ಹೊಸದು. ಪುರಾತನ ಗರೋಡಿ ಮೂಡು ಗರೊಡಿ. ಹಳೆಯ ಮುಳಿ ಹುಲ್ಲಿನ ಗರೋಡಿಯನ್ನು ನವೀಕರಿಸಿ ಹೆಂಚು ಹೊಸೆದಿದ್ದು ೧೯೭೨ರಲ್ಲಿ ಗರೋಡಿಯನ್ನು ಕೆಡವಿ ಕಟ್ಟಿದ ಹೊಸ ಗರೋಡಿ ಇದು. ಮರು ನಿರ್ಮಾಣದಲ್ಲಿ ಬದಲಾವಣೆ ಮಾಡಲಾಗಿದೆ ಎನ್ನುತ್ತಾರೆ ವಾರಂಬಳ್ಳಿ ರಾಮದಾಸರು, ಆಯಕ್ಕೆ ಧಕ್ಕೆ ತಂದಿಲ್ಲ. ಗರೋಡಿಯ ಚಾವಡಿ ಪಾಂಗಾಳ ನಾನಯರ ಗರೋಡಿ ಯಂತೆ ಇದೆ. ಯಜ್ಞಕುಂಡ ಗುರುಕಂಬ ಹಾಗೂ ವೀರಭದ್ರ ಮತ್ತು ಬಿರ್ಮೆರ ಗುಂಡ ಇಲ್ಲಿ ಇಲ್ಲ. ಅಷ್ಟಕೋನಾಕೃತಿಯ ಚಂಡಿಕೆಯ ಮಂಟಪ ಇದೆ. ಗರೋಡಿ ಕೆಡವಿದಾಗ ಹಳೆಯ ಅಷ್ಟಕೋನಾಕೃತಿಯ ಚಂಡಿಕೆಯ ಪಾಣಿಪೀಠ ಗೋಚರ ವಾಗಿತ್ತು. ಸುಮಾರು ಏಳು ಅಡಿ ಐದು ಅಡಿ ಅಗಲ ಇತ್ತು. ಮೂಲ ಪಾಣಿಪೀಠವನ್ನು ಕೆಡವದೆ ಅದರ ಮೇಲೆ ಚಂಡಿಕೆಯ ಈಗಿನ 'ಸ್ತಂಭ ಲಿಂಗ'ವನ್ನು ಪ್ರತಿಷ್ಠಾಪಿಸಿದ್ದಾರೆ. ಪಾಣಿಪೀಠವೇ ಸಾಕಷ್ಟು ಎತ್ತರದಲ್ಲಿದೆ. ಅದರ ಮೇಲೆ ಸುಮಾರು ಒಂದು ಅಡಿ ಅಗಲದ ಮೂರು ಅಡಿ ಎತ್ತರದ ಉರುಟಾದ ಲಿಂಗ ಇದೆ. ಗರೋಡಿ ಮೂಡು ಮುಖವಾಗಿದೆ. ಗರೋಡಿಯ ಒಳಗಿನ ದೈವಸ್ಥಾನಗಳು ಉತ್ತರಾಭಿಮುಖವಾಗಿದೆ. ಗರೋಡಿಯ ಜಾಗದಲ್ಲಿ ಹಿಂದೆ ಇದ್ದ ಎತ್ತರದ ಜಿಡ್ಡೆಯಲ್ಲಿ ಮಲ್ಲಯುದ್ಧದ ತರಬೇತಿ ನಡೆಯುತ್ತಿತ್ತು. ಈಗಿನ ಭೋಜನಶಾಲೆಯ ಭಾಗ ಶಸ್ತ್ರಾಗಾರ ಆಗಿತ್ತು. ಗರೋಡಿಯ ಹೊರಗೆ ಪಂಚದೈವಗಳಿವೆ. ಕ್ಷೇತ್ರಪಾಲ ರಕ್ತೇಶ್ವರಿ ಇದೆ.

ಎಡಕ್ಕೆ ನಾಗಯಕ್ಷಿಣಿ, ಬಲಮೂಲೆಯಲ್ಲಿ ಉದ್ಭವ ಶಿಲೆಯ ರೆಕ್ಕೆಸಿರಿ ಇದೆ.

ಕೇರಳದಲ್ಲಿ ವಾರಂಬಳ್ಳಿಯ ಶಾಖೆ : ಇಲ್ಲಿಯ ಗುರುಗಳು ಕೇರಳಕ್ಕೆ ಕಲರಿ ವಿದ್ಯೆ ಕಲಿಸಲು ಹೋಗುತ್ತಿದ್ದರು. ಕೇರಳದ ಅಲೆಪ್ಪಿಯಿಂದ ೪೦ ಕಿಲೋಮೀಟರ್ ದೂರದಲ್ಲಿ 'ನಡುಮುಡಿ' ಎಂಬ ಜಾಗ ಇದೆ. ಇದು ಕರ್ನಾಟಕದ ವಾರಂಬಳ್ಳಿ ಮನೆಗೆ ಸೇರಿದೆ. ಅಲ್ಲಿಯ ಸಾಮಂತ ರಾಜನಿಗೆ ಮಾಥೂರ್ ನಾಯರ್ ಎಂಬವರು ಮಂತ್ರಿ. ವಾರಂಬಳ್ಳಿಯಲ್ಲಿ ಕಲರಿ ವಿದ್ಯೆ ಕಲಿತು ಹೋದ ಮಂತ್ರಿ ರಾಜನು ಯುದ್ಧಲ್ಲಿ ಸೋತು ಹೋಗುವ ಸಂದರ್ಭ ಬರಬಹುದು ಎಂದು ಭಾವಿಸಿ ಗುರುಗಳನ್ನು ಕೇರಳಕ್ಕೆ ಕರೆಸಲು ರಾಜನಿಗೆ ಸೂಚಿಸಿದ. ಸಾಮಂತ ರಾಜನ ಆಹ್ವಾನದ ಮೇರೆಗೆ ಕೇರಳಕ್ಕೆ ಹೋಗುತ್ತಾರೆ. ಯುದ್ಧ ತಂತ್ರ ಹಾಗೂ ಮಂತ್ರ ತಂತ್ರಗಳ ಮೂಲಕ ರಾಜನ ಎದುರಾಳಿಯನ್ನು ಸೋಲಿಸುತ್ತಾರೆ. ಈ ಗೆಲುವಿನ ಗುರುಕಾಣಿಕೆಯಾಗಿ ಆ ಸಾಮಂತ 'ನಡುಮುಡಿ' ಯನ್ನು ವಾರಂಬಳ್ಳಿ ಗುರುಗಳಿಗೆ ನೀಡುತ್ತಾರೆ. ಈಗಲೂ ಅಲ್ಲಿ ಪೊನ್ನೊಟ್ಟು ಮಠ ಇದೆ. ವಾರಂಬಳ್ಳಿ ಕುಟುಂಬದ ಸುಬ್ರಾಯ ವಾರಂಬಳ್ಳಿ ಅಲ್ಲಿ ವಾಸವಾಗಿದ್ದಾರೆ. ಇವರನ್ನು ಮನೆಯಲ್ಲಿ ಬಾಬಯ್ಯ ಎಂದು ಕರೆಯುತ್ತಾರೆ. ಇವರ ಪ್ರಾಯ ೬೪ ವರುಷ. ಮದುವೆಯಾಗಿಲ್ಲ. 'ವೈಕಂ'ನ ದೊಡ್ಡ ದೇವಸ್ಥಾನದಲ್ಲಿ ರಾಜರ ಕಾಲದಲ್ಲಿ ಒಂದನೆಯ ಪೂಜೆ ಮಹಾರಾಜರದ್ದು ಎರಡನೆಯ ಪೂಜೆಯ ಅಧಿಕಾರ ವಾರಂಬಳ್ಳಿಯವರದ್ದು.

ಕೇರಳದಿಂದ ಕಲರಿ ವಿದ್ಯೆ ಕಲಿಯಲು ಉಡುಪಿಗೆ ಬಂದ ನಾಯರುಗಳೇ ಇಲ್ಲಿ ನೆಲಸಿ ನಾಯರಿ ಆದರೂ ಎನ್ನುವುದು ವಾರಂಬಳ್ಳಿಯವರ ಹೇಳಿಕೆ. ಆದರೆ ನಾಯಿರಿಗಳ ಪ್ರಕಾರ ಇವರು ತುಳುನಾಡಿನ ನೆಲದ ಮಕ್ಕಳು. ಈ ನಾಯಿರಿ ಎನ್ನುವ ಸಮುದಾಯದವರು ಬ್ರಹ್ಮಾವರ ಸುತ್ತುಮುತ್ತ ಮಾತ್ರ ಇದ್ದಾರೆ. ನವರಾತ್ರಿಯಲ್ಲಿ ನಾಯರಿಗಳಲ್ಲಿ ಶಿಷ್ಯ ಮರ್ಯಾದೆ ಈಗಲೂ ಇದೆ. ನಾಯರಿಗಳಿಗೆ ಈಗಲೂ ನವರಾತ್ರಿಯ ದಿನಗಳಲ್ಲಿ ಕತ್ತಿ ಕಟ್ಟಿ ಮಂತ್ರೋಪದೇಶ ಮಾಡುತ್ತಾರೆ. ಈ ಮಾಹಿತಿ ನೀಡಿದವರು ಮೂಡು ಗರೊಡಿಯ ರಾಮದಾಸ ವಾರಂಬಳ್ಳಿಯವರು. ನಾಯಿರಿಗಳ ಮದುವೆಯಲ್ಲಿ ವರನಿಗೆ ಯೋಧ ದೀಕ್ಷೆ ನೀಡಿ ಆತನ ಕೈಗೆ ಖಡ್ಗ ಕೊಡುವ ಪದ್ಧತಿ ಇದೆ. ಈ ಖಡ್ಗ ಯುದ್ಧದಲ್ಲಿ ಬಳಸಬಹುದಾದ ಕತ್ತಿ.

ಚಿತ್ರಾಪು ಗರಡಿ ಮನೆ : ಮುಲ್ಕಿ ಸೀಮೆಯ ಚಿತ್ರಾಪಿನಲ್ಲಿ ಮಾರ್ತವಂಶೀಯ ಕುಟುಂಬ ವಾಸ ಇರುವ ಗರಡಿ ಮನೆ ಇದೆ. ಇವರು ಮುಲ್ಕಿಯ ಸೈನಿಕರಿಗೆ ತರಬೇತಿ ನೀಡುತ್ತಿದ್ದವರು. ಚಿತ್ರಾಪು ಗರಡಿ ಗುರುಗಳ ಪಟ್ಟದ ನಾಮ 'ತುರಕ ನಾಯ್ಗರ್' ಸೇನಾಪತಿಗಳಾಗಿ ಬಂಟರು ಅಂದಿನ ಕಾಲದಲ್ಲಿ ಯುದ್ಧದಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಅಳುಪರ ಕಾಲದಲ್ಲಿ ಕೂಡ 'ನಾಯ್ಗ' ಎಂಬುದು ಪಟ್ಟದ ನಾಮವಾಗಿತ್ತು. ಕುಂದಾಪುರದಿಂದ ಕಾಸರಗೋಡಿನವರೆಗೆ ಹಲವು ನಾಯ್ಗರ ಮನೆಗಳಿವೆ. ಸೇನಾಪತಿಗಳೂ ಯುದ್ಧ ತರಬೇತಿ ಕೊಡುತ್ತಿದ್ದುದರಿಂದ ಗರಡಿ ಮನೆಯು 'ನಾಯ್ಗರು' ಎಂಬ ವೃತ್ತಿನಾಮ ಪಡೆದಿದೆ. ಮುಲ್ಕಿ ಸೀಮೆಯಲ್ಲಿ ಸೇನಾಪತಿ ಮನೆ ಬೇರೆಯೇ ಇವೆ.

ಚಿತ್ರಾಪು ಗರಡಿ ಮನೆ ಕೇರಳದ ಶಾಖೆ : ಚಿತ್ರಾಪು ಕರಡಿ ಮನೆಯ ಕೇರಳದ ಶಾಖೆಯು ಅಳುವಾಯಿಯಲ್ಲಿ ಇದೆ. ಕೇರಳಕ್ಕೆ ಇವರು ಇಲ್ಲಿಂದ ಹೇಗೆ ಹೋದರು ಎಂಬ ಬಗ್ಗೆ ದಂತ ಕಥೆ ಹೀಗಿದೆ : ಚಿತ್ರಾಪುವಿನಲ್ಲಿ ಸಮೀಪ 'ಆನೆ ಪಡ್ಪು' ಇದೆ. ಆನೆ ಪಡ್ಪು ಎಂದರೆ ಆನೆ ಬಯಲು. 'ಕೇರಳದ ಅರಸರಿಗೆ ಸಂತಾನ ಇಲ್ಲವಾದಾಗ ಆನೆಯೊಂದು ಸಮುದ್ರದ ಮೂಲಕ ಆನೆ ಪಡ್ಪುಗೆ ಬಂದು ಗರಡಿ ಮನೆಯ ಅಳಿಯನಿಗೆ ಹೂಮಾಲೆ ಹಾಕಿ ಕೇರಳದ ಅರಸನಿಗೆ ಉತ್ತರಾಧಿಕಾರಿಯನ್ನು ಆರಿಸಿತು.' ಎಂದು ಈ ಕತೆಯನ್ನು ಚಿತ್ರಾಪಿನವರು ಹೇಳುತ್ತಾರೆ. ಆದರೆ ಈ ಕತೆಯನ್ನು ದಂತಕತೆ ಎಂದು ತಳ್ಳಿಹಾಕುವಂತಿಲ್ಲ. ಈಗಲೂ ಮುಲ್ಕಿಯ ಗರಡಿಯ ಅಳಿಯ ಸಂತಾನ ಕ್ರಮದಂತೆ ಅಳುವಾಯಿ 'ಕಳರಿಯ' ಪಟ್ಟವೇರುತ್ತಾರೆ. ಪಟ್ಟ ಆದ ಮೇಲೆ ಆತ ಅಲ್ಲಿಯ ಪಟ್ಟದ ಪೂರ್ವಪರಂಪರೆಯ ಹೆಸರು ಪಡೆದು 'ಕುಲೆಸಿ ನಾಯ್ಗ' ಆಗುತ್ತಾನೆ. ಕೇರಳದಲ್ಲಿಯ ಈ ಮನೆಯನ್ನು ಮಠ ಎಂದು ಕರೆಯುತ್ತಾರೆ.

ಭೂ ಮಸೂದೆ ಜಾರಿಗೆ ಬಂದು ಕೇರಳದಲ್ಲಿಯ ಇವರ ಆಸ್ತಿ, ಭಾಗ ಆಗುವವರೆಗೂ ಇಲ್ಲಿಂದ ಒಂದು ತಲೆಮಾರಿನ ಎಳೆಯ ಬಾಲಕನನ್ನು ಕೇರಳಕ್ಕೆ ಕಳುಹಿಸಿ ಕೊಡುತ್ತಿದ್ದರು. ಹಾಗೆ ಕಳುಹಿಸಿಕೊಡುವಾಗ ಗರಡಿಯ ಪಟ್ಟದ ದೈವ ಜುಮಾದಿಯ ದರ್ಶನ ಇರುತ್ತಿತ್ತು. ಕೇರಳದ ಅಳುವಾಯಿಯಲ್ಲಿ ನೆಲೆಸಿರುವ ಮೊದಲ ತಲೆಮಾರಿನ ಸೋದರ ಮಾವ ಕುಲೆಸಿ ನಾಯ್ಗರು ಮುಗುವನ್ನು ಪಡೆಯುತ್ತಾರೆ. ಆತ ಮುಲ್ಕಿ ಗರಡಿಗೆ ಬಂದು ತನ್ನ ಸೋದರಿಯ ಮಗನನ್ನು ಮುಂದಿನ ಉತ್ತರಾಧಿಕಾರಿಯನ್ನಾಗಿ ಕೇರಳಕ್ಕೆ ಕರೆದೊಯ್ದು ಅಲ್ಲಿಯ ಉತ್ತರಾಧಿಕಾರಿಯನ್ನಾಗಿ ಮಾಡುವುದು ಮುಲ್ಕಿಯ ಗರಡಿ ಮನೆಯ ವೈಶಿಷ್ಟ್ಯ. ಹಿರಿ ಮಗಳ ಹಿರಿ ಮಗನನ್ನು ಕೇರಳಕ್ಕೆ ನೀಡುತ್ತಾರೆ. ಚಾವಡಿಯ ಪಟ್ಟದ ದೈವ, ಮಾಧ್ಯಮನ ಮೂಲಕ ಈ ವಿಧಿ ವಿಧಾನಗಳನ್ನು ವಿಧಿವತ್ತಾಗಿ ನೆರವೇರಿಸುತ್ತದೆ. ದೈವವು ಬಾಲಕನ ತಲೆಯ ಮೇಲೆ ಖಡ್ಗದ ತುದಿಯನ್ನು ಇಟ್ಟು ರಕ್ಷಣೆಯ ಅಭಯ ನೀಡುತ್ತದೆ. ಆ ಮೂಲಕ ಸೋದರ ಮಾವನಿಗೆ ಕೇರಳದ

ಕಳರಿ (ಗರಡಿ) ಮನೆಯ ಉತ್ತರಾಧಿಕಾರಿಯನ್ನು ಒಪ್ಪಿಸಿಕೊಡುತ್ತದೆ. ಈ ಕ್ರಮವನ್ನು 'ಬೂಳ್ಯ ನೀಡುವುದು' ಎನ್ನುತ್ತಾರೆ. ಗರಡಿ ಮನೆಯಲ್ಲಿ ನಡೆದಿರುವ ಮೇಲಿನ ಸಂಪ್ರದಾಯಗಳನ್ನು ನೋಡಿರುವ ಕೆಲವು ಹಿರಿಯರು ಇಂದಿಗೂ ಬದುಕಿ ಇದ್ದಾರೆ. ನನಗೆ ವಿವರ ಒದಗಿಸಿ ಕೊಟ್ಟಿದ್ದವರು ತಾವೇ ಕಣ್ಣಲ್ಲಿ ನೋಡಿದ್ದುದಾಗಿ ಹೇಳಿದ್ದರು. ಎಲ್ಲಾ ವರ್ಗದ ಬಂಧುಗಳೂ ವಿವರ ನೀಡಬಲ್ಲವರಾಗಿದ್ದಾರೆ. ಇಲ್ಲಿಂದ ಕೇರಳಕ್ಕೆ ಹೋದ ಕೊನೆಯ 'ಕುಲೆಸಿನಾಯ್ಗ' ಅಶೋಕ್‌ಕುಮಾರ್ ಎಂಬುವರು. ಇವರು ಈಗಲೂ ಕೇರಳದಲ್ಲಿ ನೆಲೆಸಿದ್ದಾರೆ. ಮುಲ್ಕಿಯ ಗರಡಿಯ ಕುಟುಂಬದ ಹಿರಿಯ ಪುರುಷನು ಇಲ್ಲಿ ಪಟ್ಟ ಆಗಿ 'ತುಕ್ರ ನಾಯ್ಗ'ರಾಗುತ್ತಾರೆ. ಕೇರಳಕ್ಕೆ ಹೋಗಿ ಕೇರಳದ ಮಠದ ಅಧಿಕಾರ ವಹಿಸಿಕೊಂಡ 'ಕುಲೆಸಿ ನಾಯ್ಗ'ರವರು ಕೇರಳದ ಸಂಪ್ರದಾಯದಂತೆ ಸ್ಥಳೀಯ ನಾಯರ್ ಹೆಣ್ಣಿನೊಂದಿಗೆ ಇರುತ್ತಿದ್ದರು. ಅವರಿಗೆ ಹುಟ್ಟಿದ ಮಕ್ಕಳು ಮಾತೃವಂಶೀಯತೆಯಂತೆ ತಾಯಿಗೆ ಸೇರುತ್ತಿದ್ದರು. ಆದರೂ ಅವರ ಮಕ್ಕಳ ಹಾಗೂ ಗರಡಿ ಮನೆಯ ಅಳಿಯ ಅಥವಾ ಸೊಸೆಯರಿಗೂ ಮಧ್ಯೆ ವಿವಾಹ ನಡೆಯುವ ಕ್ರಮ ಇದೆ.

ಕೇರಳದಲ್ಲಿ ಮನೆಯ ಆರಾಧನಾ ಸ್ಥಳವನ್ನು ಮಠವೆಂದು ಕರೆಯುತ್ತಾರೆ. ಈಗ ಕೇರಳದ ಆಸ್ತಿಯಲ್ಲಿ ಮುಲ್ಕಿ ಗರಡಿ ಮನೆಯ ಎಲ್ಲ ಹೆಣ್ಣು ಸಂತತಿಯವರು ಪಾಲು (ಸುಮಾರು ೬) ಮಾಡಿಕೊಂಡಿದ್ದಾರೆ. ತಲಾ ಸುಮಾರು ೬೦ ಎಕ್ರೆ ಭೂಮಿ ದೊರೆತಿದೆ.[೧೭] ಮೇಲೆ ತಿಳಿಸಿದಂತೆ ತುಳುನಾಡಿನ ಮೂರು ಗರಡಿಗಳಿಂದ ಗರಡಿ ಗುರುಗಳು ಗರಡಿ ತರಬೇತಿ ನೀಡಲು ಕೇರಳಕ್ಕೆ ಹೋಗಿದ್ದರು ಎಂಬುದಕ್ಕೆ ಇಲ್ಲಿಯ ಕುಟುಂಬಗಳು ಅಲ್ಲಿಯ ಗರಡಿ (ಮಠ)ದಲ್ಲಿ ಈಗಲೂ ವಾಸವಿರುವುದು ಜೀವಂತ ಉದಾಹರಣೆ. ಇಲ್ಲಿಯ ಗುರುಗಳನ್ನು ಕೇರಳಕ್ಕೆ ಕರೆಸಿಕೊಂಡವರು ತಿರುವಾಂಕೂರು ಅರಸರು ಎಂದು ಈ ಮೂರು ಮನೆಯವರು ಹೇಳುತ್ತಾರೆ. "ಪಾಂಗಾಳ ಗರಡಿಯ ಗುಣಾಕರ ನಾನಯರ್ (೧೯೯೦) ಹೇಳುವಂತೆ.... ವಿಜಯನಗರ ಕಾಲದಲ್ಲಿ ತಿರುವಾಂಕೂರಿನ ಮಹಾರಾಜ ಸೋತಾಗ ತುಳುನಾಡಿನ ಈ ನಾಲ್ಕು ಗರಡಿಗಳಿಂದಲೂ (ನಾಲ್ಕನೆಯ ಕೋಡಿ ಬೈಲು ಗರಡಿ ಈ ಲೇಖಕಿ ನೋಡಿಲ್ಲ) ಗುರುಗಳನ್ನು ಕರೆಸಿ ತನ್ನ ಪ್ರಜೆಗಳಿಗೆ ಯುದ್ಧ ವಿದ್ಯೆ ತರಬೇತಿ ಕೊಡಿಸಿದ"[೧೮]

ಪೆಜಮಾಡಿ ಗರೊಡಿ : ಇದು ಮಾತೃವಂಶೀಯ ಕುಟುಂಬ ವಾಸವಿರುವ ಗರೊಡಿ ಮನೆ. ಯುದ್ಧಾಳುಗಳ ತರಬೇತಿ ಕೇಂದ್ರ. ಇಲ್ಲಿಯೂ ವಾರಂಬಳ್ಳಿಯವರಲ್ಲಿ ಇರುವಂತಹ ಚಂಡಿಕೆಯ ಲಿಂಗ ಇದೆ. ದೊಡ್ಡ ತ್ರಿಶೂಲವನ್ನು ಕಟ್ಟೆಯ ಮೇಲೆ ನೆಡಲಾಗಿದೆ. ಚಾವಡಿಯ ಅಂಗಳದ ಗುಡಿಗಳಲ್ಲಿ ಇತರೆ ಕೆಲವು ದೈವಗಳೂ ಇವೆ. ಇವಲ್ಲದೆ ಇನ್ನೂ ಅನೇಕ ಯುದ್ಧ ತರಬೇತಿ ನೀಡುತ್ತಿದ್ದ ಸಾಧಕದ ಗರಡಿಗಳು ಇವೆ.

ಪಾಡ್ದನಗಳಲ್ಲಿ ಗರೊಡಿ : ಕೋಟಿಚೆನ್ನಯರ ಪಾಡ್ದನದಲ್ಲಿ ಅವರ ಸೋದರ ಮಾವ ಅಳಿಯಂದಿರಾದ ಕೋಟಿಚೆನ್ನಯರಿಗೆ ಗರಡಿಸಾಧನೆ ಮಾಡುವಾಗ ತೊಡಬೇಕಾದ ಉಡುಗೆ, ಹೊಂದಬೇಕಾದ ಆಯುಧಗಳ ವಿವರ ನೀಡುತ್ತಾನೆ. "ಕೈಯ ಕೋಲಿಗೆ ಬೆಳ್ಳಿಯ ಹಿಡಿ ಹಾಗೂ ಗೆಜ್ಜೆಯನ್ನು ಜೋಡಿಸಿದರು. ಜಟ್ಟಿಗಳ ಅಂಗಿ ಹಾಗೂ ನಾನವರ ಹಚ್ಚಡವನ್ನು ಮಾಡಿಸಿದರು. ಯಾವ ಗರಡಿಯಲ್ಲಿ ಅಂಗಸಾಧನೆ ಮಾಡುತ್ತಾರೆ ಎಂದು ವಿಚಾರಿಸುವರು. ಕೋಟಿ ಚೆನ್ನಯ ರೊಂದಿಗೆ ಮಕ್ಕಳೇ ಮೂಡಣ ಪೇರ ಪೆರ್ಮುಂಡೆ ಗರಡಿಯ ಅಂಗಸಾಧನೆಗಿಂತಲೂ ಪಡುವಣ ಕಟಪಾಡಿ ನಾನಯರ ಗರಡಿ ಅಂಗ ಸಾಧನೆ ಕಲಿಸುವಿಕೆ ಬಹಳ ಉತ್ತಮವಾಗಿದೆ ಎಂದು ಸಾಯನ ಬೈದ್ಯರು ಹೇಳುವರು"[೧೯] "ಕೋಟಿಚೆನ್ನಯರ ಪ್ರಾರಂಭದಲ್ಲಿ ಪರ್ಮಲೆ ಮಠದಲ್ಲಿ ಕಲಿತಿದ್ದು ಪರಿಪೂರ್ಣತೆ ಹಾಗೂ ಸಾಧನೆಯ ವಿದ್ಯೆಗಾಗಿ ನಾನಯರ ಗರಡಿಗೆ ಬಂದಿದ್ದರೆನ್ನಲಾಗಿದೆ.[೨೦] "ಕೇರಳದ ಮಲಯಾಳ ಪಾಟುಗಳಲ್ಲಿ ತುಳುನಾಡಿನ ಗರಡಿ ವಿದ್ಯೆಯ ಅನೇಕ ವಿವರ ಬರುತ್ತದೆ. ಮಲಯಾಳ ದೇಶದಿಂದ ಕೆಲಸ ಹುಡುಕಿಕೊಂಡು ಬಂದ ಚಾತು ಚಂದು ಸಹೋದರರಿಬ್ಬರಲ್ಲಿ ಚಂದುವನ್ನು ಸುಳ್ಯದ ಪನ್ನೆಬೀಡಿನ ಬಲ್ಲಾಳ, ಕೆಲಸಕ್ಕೆ ಇರಿಸಿಕೊಂಡಿದ್ದಾಗ ಆತ ಬಲ್ಲಾಳನ ಗರಡಿಯಲ್ಲಿ ಚೆನ್ನಾಗಿ ತರಬೇತಿ ಹೊಂದಿ ಮುಂದೆ ಅಪ್ರತಿಮ ವೀರನಾಗಿ ಮೆರೆದು ಮತ್ತೆ ದೈವವಾಗಿ ಮಾಯಗೊಂಡು ಇಂದು ನಾಯರ ಭೂತವಾಗಿರುವ ವಿವರವನ್ನು ತುದಿಯಡ್ಕ ವಿಷ್ಣಯ್ಯ (೧೯೮೪) ಒಂದೆಡೆ ಚರ್ಚಿಸಿದ್ದಾರೆ."[೨೧]

ತುಳುನಾಡಿನ ತುಳು ವಿದ್ಯೆ – ಗರಡಿ ವಿದ್ಯೆ

ಮಲಯಾಳಿ ಪಾಟ್ಟುಗಳು ಗರಡಿ ಸಾಧನೆಯನ್ನು "ತುಳುನಾಡಿನ ತುಳು ವಿದ್ಯೆ' ಎಂದು ಹೇಳುತ್ತದೆ. "ತೆನ್ನಾಯಿ ಮಲಯಾಲ ಸೀಮೆಡ್ದ್‌ಬರು ಸಾವಿರ ಆಲ್ ಸಾವಿರ ದೊನ್ನೆ...." (ತೆಂಕಣ ಮಲಯಾಲ ಸೀಮೆಯಿಂದ ಬರಬಹುದು ಸಾವಿರ ಆಳು ಸಾವಿರ ದೊಣ್ಣೆ.......) ತುಳು ದೈವಕಥನದಲ್ಲಿ ಈ ಮಾತು ಬರುತ್ತದೆ. ತೆಂಕು ಮಲಯಾಲ. ಹೀಗಾಗಿ ತುಳುನಾಡಿಗೆ ಮಲಯಾಳಿಗಳು ತೆಂಕಣ ದೇಶದಿಂದ ಸಾವಿರಾರು ಆಳುಗಳು ದೊಣ್ಣೆಯೊಂದಿಗೆ ಕಾದಾಟಕ್ಕೆ ಬರುತ್ತಿದ್ದರು ಎಂದು ನಾವು ಭಾವಿಸಬಹುದು. ಆದರೂ

ಗೆಲುವು ತುಳುನಾಡಿಗರದ್ದೇ ಆಗಿರಬಹುದೆಂದು ತೋರುತ್ತದೆ. ಯಾಕೆಂದರೆ ಇಲ್ಲಿಗೆ ಮಲಯಾಳಿಗಳು ತುಳು ವಿದ್ಯೆ ಕಲಿಯಲು ಬರುತ್ತಿದ್ದರು ಎಂಬುದು ಗಮನಿಸಬೇಕಾದ ಅಂಶ ಇದೆ.

"ವೆಂಕಟರಾಜ ಪುಣಿಚಿಂತಾಯ ಅವರು ತುಳು ನಡೆ ನುಡಿ ಕೃತಿಯಲ್ಲಿ ತುಳುನಾಡಿನ ಬಗ್ಗೆ, ತುಳು ಗರಡಿಗಳ ಬಗ್ಗೆ ಮಲಯಾಳ ಪಾಟುಗಳಲ್ಲಿ ಇರುವ ಮಾಹಿತಿಗಳನ್ನು ನೀಡಿದ್ದಾರೆ. ಅವರ ಪ್ರಕಾರ ಮಲ್ಲ ವಿದ್ಯೆಗೆ ತುಳುನಾಡನ್ ವಿದ್ಯೆಯೆಂದೇ ಹೆಸರಿಸುತ್ತಿದ್ದರು. ಅದನ್ನು ಅಭ್ಯಾಸ ಮಾಡಲು ಮೂರು ವರ್ಷಗಳ ಕಾಲಾವಕಾಶ ಬೇಕಾಗಿತ್ತು.

'ಉತ್ತರ ಮಲಬಾರಿನಲ್ಲಿ 'ವಡಕ್ಕನ್ ಪಾಟ್ಟುಗಳ್' ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಹೆಚ್ಚಿನ ಜನಪದ ಗೀತೆಗಳಲ್ಲಿ ತುಳುನಾಡಿನ ಗರಡಿಗಳ ಪ್ರಸ್ತಾಪ ಬರುತ್ತದೆ. ಯುದ್ಧಾಸಕ್ತರಾದ ಕೇರಳದ ತರುಣರೆಲ್ಲ ಗರಡಿ ವಿದ್ಯೆಯ ತರಬೇತಿಗಾಗಿ ತುಳುನಾಡಿಗೆ ಬರುತ್ತಿದ್ದರು. ಗರಡಿ ವಿದ್ಯೆಗೆ ಕೇರಳದಲ್ಲಿ ತುಳು ವಿದ್ಯೆಯೆಂದೇ ಹೆಸರು. ಉದಾ : ಕಪ್ಪುಳ್ಳಿ ಪಾಲಾಟ್ಟು ಕೋಮನೆಂಬ ತರುಣನ ವಿದ್ಯಾಭ್ಯಾಸ ವರ್ಣನೆಯಲ್ಲಿ 'ತುಳುನಾಟ್ಟಿಲ್ ನಲ್ಲ ತುಳುಕ್ಕುರಿಕ್ಕಳ್' (ತುಳುನಾಡಿನಲ್ಲಿ ಶ್ರೇಷ್ಠರಾದ ತುಳು ಗುರುಗಳು ಇದ್ದಾರೆ) ಎಂಬ ವಿವರ ಇದೆ. 'ತುಳುನಾಡನ್ ವಿದ್ಯೆ ಗ್ರಹಿಚ್ಚು ಕೋಮನ್' (ತುಳುನಾಡಿನ ವಿದ್ಯೆ ಕಲಿತ ಕೋಮನ್) ಇತ್ಯಾದಿ 'ಪುಳ್ಳಿ ಕುರತ್ತಿಯ ತೊಟ್ಟಂ ಪಾಟ್ಟು' ವಿನಲ್ಲಿ ಕುರುತ್ತಿ ದೈವ ತುಳುನಾಡಿನ ಪ್ರಯಾಣದ ಅನುಭವವನ್ನು ವಿವರಿಸುತ್ತದೆ. ಆ ಹಾಡು ಹೀಗಿದೆ :

.........ವಡಕ್ಕೊರು ರಾಜ್ಯ ಕಂಡ ಕುರತ್ತಿ
ತುಳುವರ ಕಳರಿ ಕಂಡ ಕುರತ್ತಿ
ತುಳುನಾಟ್ಟಂಬಲಂ ಕಂ ಕುರತ್ತಿ (ತುಳುನಾಡ ದೇವಾಲಯ ಕಂಡ ಕುರತ್ತಿ)
ಮಲನಾಡು ರಾಜ್ಯ ಕಂಡ ಕುರತ್ತಿ
ಮಂಗಲಪುರಂ ಕಂಡ ಕುರತ್ತಿ
ಮಂಜುಚ್ಚಿರ ಪಾಲಂ ಕಂಡ ಕುರತ್ತಿ
ಬೇಕ್ಕಲಂ ಕೋಟ್ಟ ಕಂಡ ಕುರತ್ತಿ
ಕಮ್ಮಣ್ಣಾರ್ ಕಳರಿ ಕಂಡ ಕುರತ್ತಿ'......'ಕಮ್ಮಣ್ಣಾರ್ ಕಳರಿ'

ಎಲ್ಲಿ ಎಂದು ಇದುವರೆಗೆ ತಿಳಿಯಲಾಗಲಿಲ್ಲ. ಡಾ॥ ವಿವೇಕ್ ರೈ ಅವರ ಪ್ರಕಾರ ತುಳುವಿನ ಗರೊಡಿ ಮಲಯಾಳದಲ್ಲಿ 'ಕಳರಿ'ಯಾಯಿತು. "ಮಲಯಾಳ ಭಾಷೆಯಲ್ಲಿ ಶಿಷ್ಟ ಜಾನಪದ ಸಾಹಿತ್ಯವು ಬೆಳೆದು ಬಂದಿದ್ದು, ಕೇರಳದ ನಾಡೋಡಿ ಪಾಟ್ಟು ಜಾನಪದ ಗೀತೆಗಳಲ್ಲಿ ಉತ್ತರ ಮಲಬಾರಿನ "ವಡಕ್ಕನ್ ಪಾಟ್ಟು" ಪ್ರಾಮುಖ್ಯವಾದುದು. ಈ ವಡಕ್ಕನ ಪಾಟ್ಟುವಿನಲ್ಲಿ ತುಳುನಾಡಿನ ಗರೊಡಿಗಳ ಬಗ್ಗೆ ಬಹಳ ಉಲ್ಲೇಖವಿದೆ. ಇದನ್ನು ದುಡಿ ಬಾರಿಸಿ ಹಾಡುವ ಪಾಣನ್ ಎಂಬ ಕಥಾ ಪ್ರಸಂಗದ ಅಭಿಪ್ರಾಯವೇನೆಂದರೆ ತುಳುನಾಡಿನ ಗರೊಡಿಗಳಲ್ಲಿ ಕಲಿತ ವಿದ್ಯಾಭ್ಯಾಸಿ ಒಳ್ಳೆಯ 'ಚೇಗವ'ನಾಗುತ್ತಾನೆ. ಚೇಗವ ಅಂದರೆ ತುಳುನಾಡಿನ ಗರೊಡಿ ವಿದ್ಯೆಯನ್ನು ಕಲಿತು ಬಂದ ಪರಿಣತರೆಂಬ ವರ್ಣನೆ ಕೇರಳದ 'ವಲಿಯ ಅರೋಮಲ್ ಚೇಗವರ್' ಎಂಬ ಇನ್ನೊಂದು ಜಾನಪದ ಗೀತೆಯಲ್ಲೂ ಉಲ್ಲೇಖಿಸಲಾಗಿದೆ. ಅತ್ಯಂತ ಪ್ರಸಿದ್ಧವಾದ ಕೇರಳದ 'ತಚ್ಚೊಳ್ಳಿ ಚಂದು' ಎಂಬ ಜಾನಪದ ಗೀತೆಯಲ್ಲಿ ತುಳುನಾಡಿನ ಗರೊಡಿಗಳ ಹಿರಿಮೆಯನ್ನು ಹಾಡುತ್ತಾರೆ. ಕೇರಳದ ಇನ್ನೊಂದು ಜಾನಪದ ಗೀತೆ 'ಚೆರಿಯ ಅರೋಮಣ್ಣು' ಎಂಬ ಹಾಡಿನಲ್ಲಿ ಉಣ್ಣಿಯಾರ್ಚೆ ಎಂಬ ಮಹಿಳೆ ಒಂದೆಡೆ ತನ್ನ ಮಗುವಿಗೆ ಹೀಗೆ ಹೇಳುತ್ತಾಳೆ: 'ಮಗನೇ ನಾನು ನಿನಗೆ ಯುದ್ಧ ವಿದ್ಯೆ ಕಲಿಸಿದೆ. ಆದರೆ ಅದು ಪರಿಪೂರ್ಣವಲ್ಲ. ಅದು ನಿನಗೆ ಸಾಲದೆಂದು ಹೇಳುತ್ತಾಳೆ.'

"ತುಳು ನಾಟ್ಟಿಲ್ ನಲ್ಲ ತುಳುಕ್ಕುರುಕ್ಕಳ್
ಕುರುಕ್ಕಳೇತ್ತನ್ನೆ ವರತ್ತಿಞಾನುಂ
ಮುವ್ವಾಂಡಿರುತ್ತೀ ಞಾನಭ್ಯಸಿಚ್ಚುಂ
ತುಳುನಾಡಿನ ವಿದ್ಯೆ ಗ್ರಹಿಸಿಚ್ಚುತಾನುಂ'

ಅಂದರೆ 'ತುಳುನಾಡಿಲ್ಲಿ ಒಳ್ಳೆಯ ಗುರುಗಳಿದ್ದಾರೆ, ತುಳು ಗುರುಗಳ ತರಿಸಿದೆ ನಾನು, ಮೂರು ವರ್ಷ ನಾನು ಅಭ್ಯಾಸ ಮಾಡಿ, ತುಳು ವಿದ್ಯೆ ಕಲಿತೆ ನಾನು.'

ಈ ಪದ್ಯಗಳ ಸಾಲುಗಳಲ್ಲಿ ತುಳುನಾಡಿನ ಗುರುಗಳ ಹಿರಿಮೆಯನ್ನು ಹೇಳಲಾಗಿದ್ದು ಪೂರ್ವ ಕಾಲದಲ್ಲಿ ಕೇರಳೀಯರು ತುಳುನಾಡಿನ ಶ್ರೇಷ್ಠ ಗುರುಗಳನ್ನು ಆಮಂತ್ರಿಸಿ ತಮ್ಮ ಮಕ್ಕಳಿಗೆ ಮಲ್ಲ ವಿದ್ಯೆ ಕಲಿಸುತ್ತಿದ್ದರೆಂದೂ ಅದನ್ನು ಅಭ್ಯಾಸ ಮಾಡಲು ಮೂರು ವರ್ಷಗಳ ಕಾಲಾವಧಿ ಬೇಕಾಗುತ್ತಿತ್ತೆಂದೂ ತಿಳಿದು ಬರುತ್ತದೆ. ಕೇರಳದ 'ಕಪ್ಪುಳ್ಳಿ ಪಾಲಾಟ್ಟು ಕೋಮ' ಎಂಬವನ 'ತೋತ್ವಂ' ಸಾಹಿತ್ಯದಲ್ಲೂ ತುಳುನಾಡಿನ ಪ್ರಸ್ತಾಪ ಬರುತ್ತದೆ. ಹಿಂದೆ ವೀರ ಯೋಧರು ತಮ್ಮ ಬಾಲ್ಯ ಕಾಲದ ಅಕ್ಷರಾಭ್ಯಾಸ ಮುಗಿದ ಅನಂತರ ಗರಡಿಗೆ ಸಂಬಂಧಿಸಿದ (ಯುದ್ಧ ವಿದ್ಯೆ) ಶಿಕ್ಷಣಕ್ಕಾಗಿ ತುಳುನಾಡಿಗೆ ಬರುತ್ತಿದ್ದರು ಅಥವಾ ತುಳುನಾಡಿನಿಂದ ಗರಡಿಯ ಆಚಾರ್ಯರನ್ನು ತರಿಸಿ ಶಿಕ್ಷಣ ಕೊಡಿಸುತ್ತಿದ್ದರು ಎಂದೂ ಈ ಹಾಡುಗಳಲ್ಲಿ ವರ್ಣಿಸಲಾಗಿದೆ. ಕೇರಳದ 'ಮತ್ತೂರು ಕಣ್ಣಪ್ಪನ ಚೇಗವರ್' ಎಂಬ ಇನ್ನೊಂದು ಜಾನಪದ ಕವನದಲ್ಲಿ ಚೇಗವರ ಮಗನು ತುಳುವ ಗರಡಿಗೆ ಬಂದು ಗರಡಿಯ ಆಚಾರ್ಯರಿಂದ ಇಪ್ಪತ್ತೆರಡು ಅಡವು

(ಯುದ್ಧ ವಿಧಾನ ಅಥವಾ ಪಟ್ಟು)ಗಳನ್ನು ಅಭ್ಯಾಸ ಮಾಡಿದನು. ಹದಿನೇಳನೆಯ ಶತಮಾನದ ಕೇರಳದ ಜಾನಪದ ವರಕವಿ ತುಂಜನ್ ನಂಬ್ಯಾರರು ತುಳುನಾಡಿನ ದ್ರೋಣಂ ಪಳ್ಳಿ ಆಚಾರ್ಯರ ಮೂಲಕ ಗರಡಿ ವಿದ್ಯೆಯನ್ನು ಅಭ್ಯಾಸ ಮಾಡಿದರೆಂದು ಕವಿ ಚರಿತ್ರೆಗಳಿಂದ ತಿಳಿದುಬರುತ್ತದೆ. ತುಳುನಾಡಿನಿಂದ ಕೇರಳಕ್ಕೆ ಹೋದ ಅಡವುಗಳಲ್ಲಿ ಕೇವಲ ಹದಿನೆಂಟು ಅಡವುಗಳು ಮಾತ್ರ ಈಗ ಅರ್ಥಕೋಶಗಳಲ್ಲಿ ನಮಗೆ ಕಾಣಸಿಗುತ್ತವೆ. ಅಡವುಗಳೆಂದರೆ ಶತ್ರುಗಳನ್ನು ವಂಚಿಸುವ ಯುಕ್ತಿ (Strateg) ಯೆಂದು ನಿಘಂಟುಗಳಲ್ಲಿ ಉಲ್ಲೇಖವಿದೆ. ಈ ತುಳುವ (Strateg) ಕದನ ಕಲೆಗೆ ಸಂಬಂಧಿಸಿದಂತೆ ಕೇರಳದ ಕಳರಿ ಪಟ್ಟುವಿನಲ್ಲಿ ಬರುವ ಹಿಡಿತದ ಹೆಸರು ಹೀಗಿವೆ :

'ಓದಿರಂ, ಕಟಕಂ ಚಟುಲಂ, ಮಂಡಲಂ, ವೃತ್ತಚರಕಂ, ಸುಕಂಗಾಳಂ, ವಿಜಯಂ, ವಿಶ್ವಮೋಹನಂ, ತಿರ್ಯಕ್ ಮಂಡಲಂ, ಗದಯಾಖೇಟಗಹ್ವರಂ, ಶತ್ರುಂಜಯಂ, ಸೌಭದ್ರಂ, ಪಟಲಂ, ಪರಾಜಯಂ, ಕಾಯವುದ್ದಿಂ, ಶಾಲಾಖಂಡಂ, ಗದಾಶಾಸ್ತ್ರಂ, ಅನುತ್ತಮಂ.' ಈ ರೀತಿಯ ಹದಿನೆಂಟು ಅಡವುಗಳಲ್ಲದೆ 'ಪೊಯಿಕಟಕಂ' ಎನ್ನುವ ತುಂಬಾ ಕಷ್ಟಕರವಾದ ಇನ್ನೊಂದು ಅಡವು ಕಲಿಯಲು ಕೇರಳದ ವೀರರು ತುಳುನಾಡಿನ ಗರಡಿಗಳಿಗೆ ಬರುತ್ತಿದ್ದರು ಎಂದು ಕೇರಳದ ಪಾಟ್ಟುವಿನಲ್ಲಿ ಉಲ್ಲೇಖಿಸಲ್ಪಟ್ಟಿದೆ. ಇಂತಹ ಅಡವುಗಳನ್ನು ನೆನಪಿಗೆ ತುರವಂತಹ ಆರಾಧನೆಯ 'ಸಾಧಗೊ' ಎಂಬ ಕುಣಿತವನ್ನು ಇವತ್ತಿಗೂ ಪುತ್ತೂರು ತಾಲ್ಲೂಕಿನ ಮುಡಾಯೂರು ಅರಿಗೊ ಗರಡಿಯ ನೇಮೋತ್ಸವದಂದು ಪರವರು ತಮ್ಮ ನೃತ್ಯದಲ್ಲಿ ಅಳವಡಿಸುತ್ತಾರೆ. ಕಳರಿಪಟ್ಟುವಿನಲ್ಲಿ ಬಳಸುವ 'ಚೆರುವಡಿ' ಹೊಡೆತವನ್ನು ಬಹಳಷ್ಟು ಹೋಲುವ ಭಂಗಿ ಈ ಸಾಧಗೊ ಕುಣಿತದಲ್ಲಿ ಇದೆ ಎಂದು ಕೇರಳದ ಕಳರಿ ವಿದ್ವಾಂಸ, ನಾಟಕಕಾರ, ತ್ರಿಕರಿಪುರ ಪದ್ಮನಾಭನ್ ಹೇಳಿದರು. ಅರಿಗೊ ಗರಡಿಯಲ್ಲಿ ಪರವರು ವಿಶೇಷವಾಗಿ ಪ್ರದರ್ಶಿಸಿದ ಈ 'ಸಾಧಗೊ' ತುಳುನಾಡಿನಲ್ಲಿ ಹಿಂದೊಮ್ಮೆ ಪ್ರಚಲಿತವಿದ್ದ ಯುದ್ಧವಿದ್ಯೆಯ ನೆನಪಿನ ಸಂಕೇತ'

'ಚೇಗವರ ಹಾಡಿನಲ್ಲಿ ಕೂಡಾ ಬರುವ ತುಳುನಾಡಿನ ಪ್ರಸ್ತಾಪದಲ್ಲಿ ಗರಡಿಯ ವಿವರ ಬರುತ್ತದೆ. 'ಹಿಂದೆ ವೀರ ಯೋಧರು ತಮ್ಮ ಬಾಲ್ಯದಲ್ಲಿ ಅಕ್ಷರ ವಿದ್ಯಾಭ್ಯಾಸ ಮುಗಿದ ಅನಂತರ ಗರಡಿಗೆ ಸಂಬಂಧಿಸಿದ ಹೆಚ್ಚಿನ (ಹಾಯರ್ ಎಜ್ಯುಕೇಷನ್) ವಿದ್ಯಾಭ್ಯಾಸಕ್ಕಾಗಿ ತುಳುನಾಡಿಗೆ ಬರುತ್ತಿದ್ದರು. ಅಥವಾ ತುಳುನಾಡಿನ ಗರಡಿಯ ಆಚಾರ್ಯರನ್ನು ಕರೆಸಿ ಕೊಳ್ಳುತ್ತಿದ್ದರು ಎಂದೂ ಈ ಹಾಡುಗಳಲ್ಲಿ ಪ್ರಸ್ತಾಪಿಸಲಾಗಿದೆ.

ವಲಿಯ ಚೇಗವರ್ ಹಾಡಿನಲ್ಲಿಯೂ ತುಳುನಾಡಿನಲ್ಲಿ ವಿದ್ಯೆ ಕಲಿತು ಬರುವ ಪ್ರಸ್ತಾಪ ಬರುತ್ತದೆ. 'ಮಗನೇ ಚೇಗವರ್ ನಿಮುಗೆ ಸಿಕ್ಕಿದರೆ ನಿಸ್ಸಂದೇಹವಾಗಿಯೂ ಜಯಿಸಿ ಬರಬಹುದು. ಇಪ್ಪತ್ತೆರಡು ವರ್ಷ ಪ್ರಾಯ ಅವರಿಗೆ. ತುಳುನಾಡಿಗೆ ಹೋಗಿ ಕಲಿತು ಬಂದವರು. ತುಳು ಋಣುವನ್ನು ತೀರಿಸಿ ಕತ್ತಿ ಪಡೆದು ಸಂಪೂರ್ಣ ವಿದ್ಯೆಯನ್ನು ಗಳಿಸಿದವರು.' ಪುತ್ತೂರಲ್ಲಿ ಮೂವರು ಚೇಗವರು ಇದ್ದಾರೆ. ತಂದೆ ಮಗ ಅಳಿಯ ಎಂದು. ಅವರಲ್ಲಿ ಮಗ ಅತ್ಯಂತ ಪರಾಕ್ರಮಶಾಲಿ. ಆತ ತುಳುನಾಡಿಗೆ ಹೋಗಿ ಉಚ್ಚ ಶಿಕ್ಷಣ ಪಡೆದು ಬಂದವ ಎಂಬ ಕಾರಣಕ್ಕಾಗಿ ಆತನಿಗೆ ಇಲ್ಲಿ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ.

'ಪುತ್ತೂರು ಕಣ್ಣಪ್ಪನ್ ಚೇಗವರ್' ಎಂಬ ಜಾನಪದ ಕಥನ ಕವನದಲ್ಲಿ ಚೇಗವರು ತನ್ನ ಮಗನಿಗೆ ವಿದ್ಯೆ ಕಲಿಸಲು.

'ತುಳು ನಾಟ್ಟಲ್ ಞಾನಂಬಪೋಯಿ ವರಟ್ಟೇ'
ಮೂತ್ತ ಕುರುಕ್ಕಳೆ ವರುತ್ತ ವೇಣಂ

(ತುಳುನಾಡಿಗೆ ನಾನೊಮ್ಮೆ ಹೋಗಿ ಬರುತ್ತೇನೆ, ದೊಡ್ಡ ಗುರುಗಳನು ಕಂಡು ಬರಬೇಕು.) ಎನ್ನುತ್ತಾರೆ. ಅವರು ತಾಳಿಮರ ತೋಟಗಳ ದಾರಿಯಾಗಿ ಕುಮರಾರು, ಏರಿಯ ಕುನ್ನು ಮಲೆ ದಾಟಿ, ತುಳುನಾಡನ್ನು ಸೇರುತ್ತಾರೆ. ಅಲ್ಲಿ ಉತ್ತಮ ಗುರುಗಳನ್ನು ಕಂಡು ಹುಡುಕಿ, ಪುತ್ತೂರಿಗೆ ಆಮಂತ್ರಿಸುತ್ತಾನೆ. ಚೇಗವರ ಆಹ್ವಾನದಂತೆ ತುಳುನಾಡಿನ ಗರಡಿಯಾಚಾರ್ಯರು ಪುತ್ತೂರಿಗೆ ಬರುತ್ತಾರೆ. ಅಲ್ಲಿ 'ತೋಡುವರ್' ಗರಡಿಯಲ್ಲಿ ಶಿಕ್ಷಣ ಪ್ರಾರಂಭವಾಗುತ್ತದೆ. ಚೇಗವರ ಮಗನು ಆಚಾರ್ಯರಿಂದ ಇಪ್ಪತ್ತೆರಡು 'ಅಡವು' (ಯುದ್ಧವಿಧಾನ) ಅದಕ್ಕೆ ಸಂಬಂಧಿಸಿದ ತಯಾರಿಗಳನ್ನೂ ಅಭ್ಯಾಸ ಮಾಡಿದನು–ಎಂಬುದಾಗಿ ಒಂದು ಹೊಸ ವಿಚಾರವು ಈ ಗೀತೆಯಲ್ಲಿ ನಮಗೆ ಉಪಲಬ್ಧವಾಗುತ್ತದೆ.

ತುಳುನಾಡಿನ ಗರಡಿಯಾಚಾರ್ಯರಿಗೆ ಮಾತ್ರ ಈ ಇಪ್ಪತ್ತೆರಡು 'ಅಡವುಗಳು' ಯಾವುವು ? ೧೭ನೆಯ ಶತಮಾನದ ಜಾನಪದ ವರಕವಿ ಕುಂಜನ್ ನಂಬ್ಯಾರರು ತುಳುನಾಡಿನ ದ್ರೋಣಂಪಳ್ಳಿ ಆಚಾರ್ಯರ ಮೂಲಕ ಗರಡಿ ವಿದ್ಯೆಯನ್ನು ಅಭ್ಯಾಸ ಮಾಡಿದರೆಂದು ಕವಿ ಚರಿತ್ರೆಗಳಿಂದ ತಿಳಿದುಬರುತ್ತದೆ. ಅಂತೂ ಈ ಅಡವುಗಳು ತುಳುನಾಡಿನ ವಿಶಿಷ್ಟ ಕದನ ವಿಧಾನಗಳು ಎಂಬುದರಲ್ಲಿ ಸಂದೇಹವಿಲ್ಲ. ತುಳುನಾಡಿನಿಂದ ಕೇರಳಕ್ಕೆ ವಲಸೆಹೋದ ಈ ಇಪ್ಪತ್ತೆರಡು ಅಡವುಗಳಲ್ಲಿ ಮೇಲಿನ ಕೇವಲ ಹದಿನೆಂಟು ಅಡವುಗಳ ಹೆಸರು ಮಾತ್ರ ಈಗ ಕೋಶಗಳಲ್ಲಿ ನಮಗೆ ಕಾಣಸಿಗುತ್ತವೆ. ಅಡವು ಎಂದರೆ ಸ್ಟ್ರಾಟಜಮ್' (ಶತ್ರುಗಳನ್ನು ವಂಚಿಸುವ

ಯುಕ್ತಿ) ಎಂಬ ಅರ್ಥವನ್ನು ನಿಂಘಟುಗಳಲ್ಲಿ ಕೊಡಲಾಗಿದೆ.[೨೨]

ಇಂಟರ್‌ನೆಟ್‌ನಲ್ಲಿ ಕೇರಳದ ಗರಡಿಯ ಬಗ್ಗೆ ದೊರೆತ ಮಾಹಿತಿಯಂತೆ ವಿದೇಶಿ ಬರಹಗಾರರು ಕೇರಳದ ನಾಯರುಗಳು ಮಾತ್ರ ಅರಸರ ಸೈನಿಕರಾಗಿ ಇದ್ದವರು ಎಂದು ಬರೆದರೂ ಕೇರಳದಲ್ಲಿ ನಾಯರ್ ಮಾತ್ರವಲ್ಲದೆ ಇಳ, ಪುಲಯ, ಪರಯ ಹಾಗೂ ಮಲಬಾರಿನ ಕ್ರೈಸ್ತರು ಮತ್ತು ಮುಸ್ಲಿಮರೂ ಕಲರಿ ವಿದ್ಯೆ ಕಲಿಯುತ್ತಿದ್ದರು. ಚೆಂಗನ್ನೂರು ಅಲಿ ಕಲರಿ ವಿದ್ಯೆಯ ತಂತ್ರದಲ್ಲಿ ನಿಪುಣನಾಗಿದ್ದನು. ತುಳು ವಿದ್ಯೆಯ ತಂತ್ರವನ್ನು (ಕಳರಿ ವಿದ್ಯೆ) ಕಲಿಸಿಕೊಡುತ್ತಿದ್ದ ಮುಸ್ಲಿಮ ಗುರುಕುಲವೂ ಕೇರಳದಲ್ಲಿ ಇದ್ದುವು. ಕ್ರೈಸ್ತ ಸಮುದಾಯದಲ್ಲೂ ಅವರದೇ ಸೈನಿಕದಳ ಇತ್ತು. ಇವರು ಯುದ್ಧದಲ್ಲಿ ಪರಿಣಿತರಾಗಿದ್ದರು. ಪೋರ್ಚುಗೀಸರನ್ನು ಸೋಲಿಸಿದ ರಾಣಿ ಅಬ್ಬಕ್ಕಳ ಸೈನ್ಯದಲ್ಲಿ ಮುಸ್ಲಿಂ ಮತ್ತು ಮೊಗವೀರರೂ ಇದ್ದರು.

ಆಧುನಿಕ ಕಾಲದಲ್ಲಿ ಗರೋಡಿ ಮನೆಗಳು ಬರೇ ವಾಸದ ಮನೆಗಳಾಗಿ ಇವೆ. ಎಲ್ಲಾ ಮನೆಗಳಲ್ಲಿ ಶಸ್ತ್ರಾಭ್ಯಾಸ ನಡೆಸಿದ ಕುರುಹು ಇಲ್ಲವಾದರೂ ಇಂತಹ ಗರೊಡಿಗಳ ಪ್ರಧಾನ ದೈವ ಚಂಡಿಕೆಯ ಆರಾಧನೆ ಇಂದಿಗೂ ನಡೆಯುತ್ತದೆ. ಸಾಮಾನ್ಯವಾಗಿ ಎಲ್ಲಾ ಗರೊಡಿಗಳಲ್ಲಿ ಪಂಚ ದೈವಗಳಾದ, ಬಿರ್ಮೆರ್, ನಾಗ, ಕ್ಷೇತ್ರಪಾಲ, ನಂದಿಗೋನ ಮತ್ತು ರೆಕ್ಕೆಸಿರಿ ದೈವಶಕ್ತಿಗಳಿವೆ. ಚಂಡಿಕೆ ಮುಖ್ಯ ದೈವ. ಚಂಡಿಕೆಗೆ ರಕ್ತ ಬಲಿ ನೀಡುವ ಪದ್ಧತಿ ಇತ್ತು. ಜೈನ ಮತೀಯರಾದರೂ [illegible] ತಿನ್ನಲು ನಿಷೇಧ ಇದ್ದರೂ ಕಲರಿ ಚಾವಡಿಯ ಚಂಡಿಕೆಗೆ ಕೋಳಿ ಬಲಿ ನೀಡಬೇಕಿತ್ತು.

ಸ್ವತಂತ್ರ ಭಾರತದ ಗರಡಿ ಮನೆಗಳಲ್ಲಿ ಶಸ್ತ್ರಾಭ್ಯಾಸ ಇಲ್ಲವಾಗಿ ಗರಡಿಗಳ ಉದ್ದೇಶ ಹಾಗೂ ಅಂದಿನ [illegible] ಆಯಾ ಮನೆಗಳ ದಂತಕಥೆಯಾಗಿ ಆಯಾ ವಂಶದವರಲ್ಲಿ ಮುಂದವರಿಯುತ್ತಿದೆ. ಹೀಗಾಗಿ ಗರೊಡಿ ಎಂದರೆ ಸಾಮಾನ್ಯ ಜನರು ಸಾಂಸ್ಕೃತಿಕ ವೀರರಾದ ಕೋಟಿಚೆನ್ನಯರ ಗರೊಡಿ ಎಂದು ಭಾವಿಸುತ್ತಾರೆ. ಆದರೆ ಕೋಟಿಚೆನ್ನಯರು ಜನಿಸುವ ಮೊದಲೇ ಗರೊಡಿಗಳು ಜನರನ್ನು ಯುದ್ಧಕ್ಕೆ ತರಬೇತುಗೊಳಿಸುತ್ತಿದ್ದವು ಎಂಬ ವಿವರ ಕೋಟಿಚೆನ್ನಯರ ಕಥೆಯಲ್ಲಿಯೇ ಇರುವ ಮಾಹಿತಿಯನ್ನು ಮೇಲೆ ನೀಡಲಾಗಿದೆ. ಕೋಟಿಚೆನ್ನಯರು ಗರಡಿಯಲ್ಲೂ ಸಾಧನಾ ಗರಡಿಯಲ್ಲಿ ಇರುವ ದೈವಗಳು ಇವೆ. ಆದರೆ ಇದು ಬರೇ ಆರಾಧನಾ ಸ್ಥಳ. ಈಗಲೂ ಕೋಟಿಚೆನ್ನಯ ಹಾಗೂ ಬಿರ್ಮೆರ್ ಮತ್ತು ಪರಿವಾರ ದೈವಗಳ ಆರಾಧನೆಗೆ ಹೊಸ ಗರಡಿಗಳನ್ನು ಅಪರೂಪಕ್ಕೆ ಆದರೂ ನಿರ್ಮಿಸುತ್ತಿದ್ದಾರೆ.

ಆಧಾರಸೂಚಿ

೧. **ಸೂರ್ಯನಾಥ ಕಾಮತ್., ಒಕ್ಕಲುತನ ಮತ್ತು ಒಕ್ಕಲಿಗರು : ಇತಿಹಾಸ ಅನ್ವೇಷಣೆ,** ಪುಟ ೧೪೧.

೨. P. Gururaja Bhatt., *Studies in Tuluva History and Culture* 42-144, 1975.

೩. ಇಂದಿರಾ ಹೆಗ್ಗಡೆ., **ಬಂಟರು ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ,** ಪುಟ ೩೧೬, ೨೦೦೯.

೪. ಇಂದಿರಾ ಹೆಗ್ಗಡೆ., ಅದೇ., ಪುಟ ೩೩೪.

೫. ಡಾ. ವಾಮನ ನಂದಾವರ., **ಕೋಟಿ ಚೆನ್ನಯ,** ಪುಟ ೧೪೮.

೬. ರಮೇಶ ಕೆ.ವಿ., **ತುಳುನಾಡಿನ ಇತಿಹಾಸ,** ಪುಟ ೪೪.

೭. ರಮೇಶ ಕೆ.ವಿ., ಮತ್ತು ಎಂ.ಜೆ. ಶರ್ಮ, **ತುಳುನಾಡಿನ ಶಾಸನಗಳು,** ಸಂ. ೧೦.

೮. SII, Vol. VII, No. 273.

೯. ರಮೇಶ ಕೆ.ವಿ., ಮತ್ತು ಎಂ.ಜೆ. ಶರ್ಮ, ಅದೇ., ಸಂ. ೮೫.

೧೦. ಡಾ. ವಾಮನ ನಂದಾವರ, ಅದೇ., ಪುಟ ೧೫೫.

೧೧. ಡಾ. ವಾಮನ ನಂದಾವರ, ಅದೇ., ಪುಟ ೧೪೮.

೧೨. ಡಾ. ವಾಮನ ನಂದಾವರ, ಅದೇ., ಪುಟ ೧೪೯.

೧೩. **ಕೋಟಿ ಚೆನ್ನಯ ಪಾರ್ದನ** ಸಂಪುಟ, ದಾಮೋದರ ಕಲ್ಮಾಡಿ (ಸಂಪಾದಕ), ಪುಟ ೧೭೯/೮೦, ೨೦೦೨.

೧೪. ಇಂದಿರಾ ಹೆಗ್ಗಡೆ, ಅದೇ., ಪುಟ ೩೩೭.

೧೫. ಇಂದಿರಾ ಹೆಗ್ಗಡೆ, ಅದೇ., ಪುಟ ೩೩೪.

೧೬. ಡಾ. ವಾಮನ ನಂದಾವರ, ಅದೇ., ಪುಟ ೧೪೮, ೨೦೦೧.

೧೭. ಇಂದಿರಾ ಹೆಗ್ಗಡೆ, ಅದೇ., ಪುಟ ೩೩೪.

೧೮. ಡಾ. ವಾಮನ ನಂದಾವರ, ಅದೇ., ಪುಟ ೧೫೫.

೧೯. ದಾಮೋದರ ಕಲ್ಮಾಡಿ (ಸಂಪಾದಕ), **ಕೋಟಿ ಚೆನ್ನಯ ಪಾರ್ದನ** ಸಂಪುಟ, ಪುಟ ೧೭೭/೮, ೨೦೦೨.

೨೦. ಡಾ. ವಾಮನ ನಂದಾವರ, ಅದೇ., ಪುಟ ೧೫೫.

೨೧. ಡಾ. ವಾಮನ ನಂದಾವರ, ಅದೇ., ಪುಟ ೧೪೮.

೨೨. ಇಂದಿರಾ ಹೆಗ್ಗಡೆ, ಅದೇ., ಪುಟ ೩೪೨, ೨೦೦೯.

ಕನ್ಯಾಕುಮಾರ್ ಪಿ.*

ಯಲಹಂಕ ನಾಡಪ್ರಭುಗಳ ರಾಣಿಯರು

ಸ್ತ್ರೀ ಮತ್ತು ಪುರುಷ ಸಮಾಜದ ತೀರಾ ಅವಶ್ಯಕ ಮತ್ತು ಅನಿವಾರ್ಯ ಘಟಕಗಳು. ಈ ಇಬ್ಬರೂ ಒಂದೇ ನಾಣ್ಯದ ಎರಡು ಮುಖಗಳು. ಸ್ತ್ರೀ ಪುರುಷನಿಗೆ ಮಗಳಾಗಿ, ಮಡದಿಯಾಗಿ, ಮಾತೆಯಾಗಿ, ಕೌಟುಂಬಿಕ ಮತ್ತು ಸಾಮಾಜಿಕ ರಂಗಗಳಲ್ಲಿ ನಡೆದು ಬಂದ ವಿಷಯ ಮನುಕುಲದ ಚರಿತ್ರೆಯಲ್ಲಿ ವ್ಯಾಪಕವಾಗಿ ವರ್ಣಿತವಾಗಿದೆ. ಕರ್ನಾಟಕದ ಸಾಂಸ್ಕೃತಿಕ ಪರಂಪರೆಯನ್ನು ಶ್ರೀಮಂತಗೊಳಿಸಿದ ರಾಜವಂಶಗಳ ರಾಜರುಗಳು ಅನೇಕರು ದೊರೆಯುತ್ತಾರೆ. ಅಂತೆಯೇ ಆಯಾ ರಾಜವಂಶಗಳ ರಾಣಿಯರು ಮತ್ತು ಸಾಮಂತರಾಜರ ರಾಣಿಯರು ದೊರೆಯುತ್ತಾರೆ. ಸಾಮಾನ್ಯವಾಗಿ ಶಾಸನಗಳ ಕಾಲದಿಂದ ವಿಜಯನಗರದ ಕಾಲದವರೆವಿಗೂ ಶಾಸನಗಳ ಒಡಲಲ್ಲಿ ಮೂಡಿ ನಿಂತವರು ಪ್ರಭುವರ್ಗದ ಮತ್ತು ಉನ್ನತ ಮಹಿಳೆಯರು. ವಿಜಯನಗರ ಸಾಮ್ರಾಜ್ಯದ ಅವನತಿಯ ನಂತರ ಅವರ ಪರಂಪರೆಯನ್ನು ಚಿಕ್ಕ ಮನೆತನಗಳು (ಪಾಳೆಯಗಾರರು) ಮುಂದುವರಿಸಿಕೊಂಡು ಬಂದವು. ಅವುಗಳಲ್ಲಿ ಯಲಹಂಕ ನಾಡಪ್ರಭುಗಳು ಪ್ರಮುಖರಾಗಿದ್ದಾರೆ.

ಯಲಹಂಕ ನಾಡಪ್ರಭುಗಳ ಚರಿತ್ರೆಯ ಬಗ್ಗೆ ಇತ್ತೀಚಿನ ದಿನಗಳಲ್ಲಿ ಹೆಚ್ಚು ಅಧ್ಯಯನಗಳು ನಡೆಯುತ್ತಲಿವೆ. ಇದುವರೆವಿಗೂ ಪ್ರಕಟವಾಗಿರುವ ಎಲ್ಲಾ ಕೃತಿಗಳು ಯಲಹಂಕ ನಾಡಪ್ರಭುಗಳ ರಾಜ್ಯ, ಯುದ್ಧ, ರಾಜ್ಯ ವಿಸ್ತಾರ, ಆರ್ಥಿಕ ವ್ಯವಸ್ಥೆಯ ಕಲೆ ಮತ್ತು ವಾಸ್ತುಶಿಲ್ಪಗಳ ಬಗೆಗೆ ಹೆಚ್ಚು ಅಧ್ಯಯನಗಳಾಗಿಯೇ ಹೊರತು, ರಾಣಿಯರ (ಮಹಿಳೆಯರ) ಬಗೆಗೆ ಅಲ್ಲಲ್ಲಿ ಪ್ರಾಸಂಗಿಕವಾದ ವಿವರಗಳು ಮಾತ್ರ ಲಭ್ಯವಿದೆ. ಇದಕ್ಕೆ ಅಪವಾದವೆಂಬಂತೆ 'ಯಲಹಂಕ ನಾಡಪ್ರಭುಗಳ ಸ್ತ್ರೀ ಸಮಾಜ',[೧] ಎಂಬ ಡಾ. ಜಯಮ್ಮ ಕರಿಯಣ್ಣ ಅವರ ಲೇಖನ ಪ್ರಕಟಗೊಂಡಿದ್ದರೂ ಅದು ಪರಿಪೂರ್ಣವಾಗಿ 'ಯಲಹಂಕ ಪ್ರಭುಗಳ ಕುಟುಂಬದ ಮಹಿಳೆಯರ ಮೇಲೆ ಬೆಳಕು ಚೆಲ್ಲುವುದಿಲ್ಲ. ಒಬ್ಬ ಪುರುಷನ ಸಫಲತೆಯ ಹಿಂದೆ ಒಬ್ಬ ಹೆಣ್ಣು ಇದ್ದೇ ಇರುತ್ತಾಳೆ ಎಂಬುದಕ್ಕೆ ಇತಿಹಾಸದ ಪುಟಗಳಲ್ಲಿ ಸಾಕಷ್ಟು ಉದಾಹರಣೆಗಳಿವೆ. ಅಂತೆಯೇ ಒಬ್ಬ ರಾಜ, ನಾಡಪ್ರಭು ತಮ್ಮ ಆಡಳಿತದಲ್ಲಿ ಯಶಸ್ಸು ಕಾಣಬೇಕಾದರೆ, ಆ ಕುಟುಂಬದ ಮಹಿಳೆಯರ ಪಾತ್ರ ಮುಖ್ಯ ಎಂಬುದನ್ನು ನಾವು ಅರಿತಿದ್ದೇವೆ. ಈ ಹಿನ್ನೆಲೆಯಲ್ಲಿ ಯಲಹಂಕ ನಾಡಪ್ರಭುಗಳ ಕುಟುಂಬದ ರಾಣಿಯರು' ಕುರಿತು ಗಮನಿಸಲಾಗಿದೆ. ಯಲಹಂಕ ನಾಡಪ್ರಭುಗಳ ಇತಿಹಾಸದ ಬಗೆಗೆ ಬೆಳಕು ಚೆಲ್ಲುವ ಪ್ರಾಥಮಿಕ ಆಕರವಾದ, ಎಫಿಗ್ರಫಿಯಾ ಕರ್ನಾಟಿಕಾ ಸಂಪುಟಗಳು,[೨] ಯಲಹಂಕ ಪ್ರಭುಗಳು ಒಂದು ಅಧ್ಯಯನ[೩] ಬೆಂಗಳೂರು ಕೆಂಪೇಗೌಡ[೪] ಬೆಂಗಳೂರಿನ ಇತಿಹಾಸ[೫] ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ[೬] ಯಲಹಂಕ ನಾಡಪ್ರಭುಗಳ ಜಾನಪದ ಸಾಹಿತ್ಯ ಸಂಪುಟ[೭] ಬೆಂಗಳೂರು ಕೆಂಪೇಗೌಡ ವಂಶಸ್ಥರು[೮] ಸುಗುಟೂರು ಪಾಳೆಯಗಾರರು[೯] ವೀರಭದ್ರ ವಿಜಯ ಯಲಹಂಕ ನಾಡಪ್ರಭುಗಳ ವಾಸ್ತುಶಿಲ್ಪ- ಶಿಲ್ಪಕಲೆ[೧೦] ಬೆಂಗಳೂರಿನ ಬಖೈರುಗಳು[೧೧] ಮತ್ತು ಬಿಡಿ-ಬಿಡಿ ಲೇಖನಗಳನ್ನು ಸಂಗ್ರಹಿಸಿ ಅದನ್ನು ವಿಶ್ಲೇಷಿಸುವ ಮೂಲಕ ಯಲಹಂಕ ನಾಡಪ್ರಭುಗಳ ಕುಟುಂಬದ ಮಹಿಳೆಯರ ನಿಖರವಾದ ಚಿತ್ರಣವನ್ನು ನೀಡಲು ಪ್ರಯತ್ನಿಸಲಾಗಿದೆ. ಈ ಆಕರಗಳ ಜೊತೆಗೆ ನಮಗೆ 'ಜಾನಪದ ಸಾಹಿತ್ಯ ಹೆಚ್ಚು ಬೆಳಕನ್ನು ಚೆಲ್ಲುತ್ತದೆ. ಈ ಜಾನಪದ ಸಾಹಿತ್ಯ ಅಂದಿನ ಬದುಕಿನ ಪ್ರತಿಬಿಂಬ. ಅಲ್ಲಿ ಬರುವ ಘಟನೆಗಳು ವೈಭವೀಕರಣದಿಂದ ಕೂಡಿದ್ದರೂ, ಅವು ಸುಳ್ಳನ್ನು ಹೇಳುವುದಿಲ್ಲ. ಆದ್ದರಿಂದ ಜಾನಪದ ಆಕರವನ್ನೂ ಕೂಡ ಈ ಲೇಖನದಲ್ಲಿ ಬಳಸಿಕೊಳ್ಳಲಾಗಿದೆ.

ಏಕಾಮ್ರದೀಕ್ಷಿತನ ವೀರಭದ್ರವಿಜಯ[೧೨] ಕಾವ್ಯವು ಯಲಹಂಕ ನಾಡಪ್ರಭುಗಳ ವಂಶಾವಳಿಯನ್ನು ನೀಡಿದೆ. ಆ ವಂಶಾವಳಿಯಲ್ಲಿ ಅನೇಕ ರಾಣಿಯರ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ಅವರುಗಳೆಂದರೆ ಇಮ್ಮಡಿ ಕೆಂಪೇಗೌಡನ ರಾಣಿಯರಾದ ಕೆಂಪಮ್ಮ ಮತ್ತು ಲಿಂಗಮ್ಮಾಂಬೆ, ದೊಡ್ಡ ವೀರ ಭೂಪಾಲನ ರಾಣಿಯರಾದ ಮುದ್ದು ವೀರಮಾಂಬೆ, ಈ ಕೃತಿ ಕೇವಲ ರಾಣಿಯರ ಹೆಸರುಗಳನ್ನು ಉಲ್ಲೇಖಿಸಿದೆಯೇ ಹೊರತು ಅವರ ಕಾರ್ಯಗಳನ್ನು ವಿವರಿಸಿಲ್ಲ.

* ಸಂಶೋಧನ ವಿದ್ಯಾರ್ಥಿ, ಇತಿಹಾಸ ವಿಭಾಗ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ.

ಪುರುಷ ಪ್ರಧಾನ ಸಮಾಜದಲ್ಲಿ ಇದು ಸಹಜವಾದದ್ದೇ ಆಗಿದೆ. ಆದರೂ ಈ ರಾಣಿಯರು ಅರಮನೆಯಲ್ಲಿದ್ದುಕೊಂಡೇ ತಮ್ಮ ರಾಜರಿಗೆ ಕೌಟುಂಬಿಕ ವಿಚಾರದಲ್ಲೇ ಆಗಲಿ ಸಲಹೆಗಳನ್ನು ನೀಡಿರಬಹುದು. ಜಾನಪದ ಸಾಹಿತ್ಯವೂ ಈ ಕೃತಿಗಿಂತ ಭಿನ್ನವಾಗಿ ರಾಣಿಯರ ಕಾರ್ಯಗಳನ್ನು ಬಿಂಬಿಸಿದೆ. ಅದನ್ನು ಈ ಕೆಳಕಂಡಂತೆ ಸಂಗ್ರಹಿಸಲಾಗಿದೆ.

ಬೆಂಗಳೂರು ಕೆಂಪೇಗೌಡ (ಇಮ್ಮಡಿ ಕೆಂಪೇಗೌಡ)ನ ತಾಯಿ ಮತ್ತು ಪತ್ನಿ ಇಬ್ಬರ ಊರು ಬೆಂಗಳೂರು ಆದ್ದರಿಂದ ಕೆಂಪೇಗೌಡ ತನ್ನ ರಾಜಧಾನಿಯನ್ನು ಯಲಹಂಕದಿಂದ ಬೆಂಗಳೂರಿಗೆ ಬದಲಾಯಿಸಿದ. ಇದರಿಂದ ರಾಜಕುಟುಂಬದ ಮಹಿಳೆಯುರು ಪ್ರಾಚೀನ ಕಾಲದ ರಾಣಿಯರಂತೆ ಪ್ರಭುವರ್ಗದವರ ಮೇಲೆ ಪ್ರಭಾವ ಬೀರುತ್ತಿದ್ದರೆಂದು ಅರಿಯಬಹುದಾಗಿದೆ. ನಂತರ ಕೆಂಪೇಗೌಡ ಬೆಂಗಳೂರಿನ ದಕ್ಷಿಣ ಭಾಗದ ಕೋಟೆಯ ಬಾಗಿಲನ್ನು ನಿರ್ಮಿಸುವ ಕಾರ್ಯದಲ್ಲಿದ್ದಾಗದ ಹೆಬ್ಬಾಗಿಲಿನ ಕಾರ್ಯ ಎಷ್ಟೇ ಭದ್ರವಾಗಿರುತ್ತಿದ್ದರೂ ಅದು ಬೆಳಗಾಗುವ ಹೊತ್ತಿಗೆ ಉರುಳಿ ಹೋಗುತ್ತಿದ್ದು ಇದನ್ನು ಅಪಶಕುನದ ಸೂಚನೆಯೆಂದು ತಿಳಿದ ಕೆಂಪೇಗೌಡ ಜ್ಯೋತಿಷ್ಯವನ್ನು ಕೇಳಿದಾಗ "ಗರ್ಭಿಣಿ ಯೋರ್ವಳ ರಕ್ತ ತರ್ಪಣದಿಂದ ಮಾತ್ರ ಶಾಶ್ವತ ಕೋಟೆ ಬಾಗಿಲು ಸಾಧ್ಯವೆಂದು ಅರಿತ ಕೆಂಪೇಗೌಡ ಚಿಂತಾಕ್ರಾಂತ ನಾದನು. ಸೊಸೆ ಲಕ್ಷ್ಮೀದೇವಿ ಸಮಸ್ತ ವಿಷಯವನ್ನು ಅರಿತಿದ್ದು ತುಂಬುಗರ್ಭಿಣಿಯಾಗಿದ್ದರೂ ಸಹ ಕೋಟೆಯ ಹೆಬ್ಬಾಗಿಲಿಗೆ ಬಲಿ ಹೋದಳು. ತರುವಾಯ ಕೋಟೆಯ ಹೆಬ್ಬಾಗಿಲು ಭದ್ರವಾಗಿ ನಿಂತಿತು. ನಂತರ ವಿಷಯವನ್ನು ಅರಿತ ಕೆಂಪೇಗೌಡ ಆಕೆಯ ದೇಹವನ್ನು ತವರೂರಾಗಿದ್ದ ಕೋರಮಂಗಲಕ್ಕೆ ತಂದು ಸಕಲ ಪೂಜಾವಿಧಿಗಳಿಂದ ಆಕೆಯ ದೇಹವನ್ನು ಸಮಾಧಿಗೊಳಿಸಿದನು.[೧೩] ಈ ಮೌಖಿಕ ಆಕರವನ್ನು ದಾಖಲಿಸಿದ ಶಾಸನಗಳಿಂದ ಪ್ರತ್ಯೇಕವಾಗಿ ಗಮನಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಕೋರಮಂಗಲದಲ್ಲಿರುವ ಸಮಾಧಿಯ ಬಳಿ ಇರುವ ಸ್ಮಾರಕವನ್ನು ಹಂದಿಯ ಬೇಟೆಯ ಕಲ್ಲೆಂದು ವಿದ್ವಾಂಸರು ಭಾವಿಸಿ ಈ ಘಟನೆಯನ್ನೇ ತಳ್ಳಿಹಾಕಿದ್ದಾರೆ.

ಈ ಲಕ್ಷ್ಮೀದೇವಿಯು ಕೋರಮಂಗಲದ ನಂಜೇಗೌಡನ ಹಿರಿಯ ಮಗಳು. ಅವಳನ್ನು ಕೆಂಪೇಗೌಡ ತನ್ನ ಹಿರಿಯ ಮಗ ದೊಡ್ಡ ವೀರಪ್ಪಗೌಡನಿಗೆ ಮದುವೆ ಮಾಡಿಸಿದ್ದನು. ಈ ವಿಷಯವನ್ನು 'ಕೆಂಪೇಗೌಡನ ಜಯ ಪ್ರಶಸ್ತಿ'[೧೪] ಕೃತಿಯು ವಿವರಿಸುತ್ತದೆ. ತ್ಯಾಗ ಬಲಿದಾನಕ್ಕೆ ಸಂಬಂಧಿಸಿದ ಘಟನೆಗಳು ಕರ್ನಾಟಕದಾದ್ಯಂತ ಕಂಡುಬರುತ್ತದೆ. ಇವುಗಳಲ್ಲಿ ಕೆರೆಗೆ ಬಲಿಯಾದವರ ಕತೆಗಳು ಸಾಕಷ್ಟಿವೆ. ಆದರೆ ಕೋಟೆಗೆ ಬಲಿಯಾದವರ ಕಥೆಗಳು ಬಹಳಷ್ಟು ಕಡಿಮೆ. ಆದ್ದರಿಂದ ಈ ನಾಡ ಪ್ರಭುಗಳ ಮನೆತನದಲ್ಲಿ ಇದು ವಿಶೇಷವಾದ ಘಟನೆಯಾಗಿದ್ದು ಈ ರೀತಿ ತನ್ನ ಜೀವನವನ್ನು ರಾಜ್ಯದ ರಕ್ಷಣೆಗಾಗಿ ಅರ್ಪಿಸಿದ ಲಕ್ಷ್ಮೀದೇವಿ ದೈವತ್ವ ಪಟ್ಟವನ್ನು ಪಡೆದಳು ಎಂದು ಹೇಳಬಹುದು. ಇದಕ್ಕೆ ಅಂದಿನ ಸಮಾಜವೂ ಪರೋಕ್ಷವಾಗಿ ಬೆಂಬಲ ನೀಡಿರಲೂಬಹುದು. ಇಂದಿಗೂ ಕೂಡ ಕೋರಮಂಗಲದಲ್ಲಿ ಲಕ್ಷ್ಮಮ್ಮನ ದೇವಸ್ಥಾನದಲ್ಲಿ ಪೂಜೆ ಉತ್ಸವಗಳು ನಡೆಯುತ್ತಲಿವೆ.

ಕೆಂಪೇಗೌಡ ನೀರಿನ ವ್ಯವಸ್ಥೆಗಾಗಿ ಕೆರೆ-ಕಾಲುವೆಗಳನ್ನು ನಿರ್ಮಿಸಿದ್ದನು. ಆದರೆ ಅವುಗಳು ಹೆಚ್ಚಾಗಿ ಅವರ ಮಹಿಳೆಯರ ಹೆಸರುಗಳಲ್ಲೇ ಇರುವುದನ್ನು ಗಮನಿಸಿದರೆ ಅದು ಮಹಿಳೆಯರ ಪ್ರಾಮುಖ್ಯತೆಯನ್ನು ನೆನಪಿಸುತ್ತದೆ. ಕೆಂಪೇಗೌಡನ ಸೋದರ ಮಾವನ ಮಗಳಾದ ಚೆನ್ನಮ್ಮ ಕೆಂಪೇಗೌಡರ ಪಟ್ಟದರಸಿಯಾಗಿದ್ದಳು. ಪಟ್ಟದರಸಿ ಚೆನ್ನಮ್ಮಳ ಹೆಸರಿನಲ್ಲಿ ಕೆಂಪೇಗೌಡ 'ಚೆನ್ನಮ್ಮನಕೆರೆ'ಯನ್ನು, ತನ್ನ ಅರಮನೆಯ ಕುಟುಂಬದ ರಾಣಿಯರಲ್ಲೇ ಒಬ್ಬರಾದ ಸಿದ್ದಮ್ಮನ ಹೆಸರಿನಲ್ಲಿ ಈಗಿನ ಸಿಟಿ ಮಾರ್ಕೆಟ್‌ನ 'ಸಿದ್ದಿಕಟ್ಟೆ' ಯನ್ನು ತನ್ನ ಕುಲದೇವತೆ ಕೆಂಪಮ್ಮಳ ಹೆಸರಿನಲ್ಲಿ ನೆನಪಿನಾರ್ಥ ಈಗಿನ ರೈಲ್ವೆ ನಿಲ್ದಾಣದ ಮುಂದಿನ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ 'ಧರ್ಮಾಂಬುದಿ ಕೆರೆಯನ್ನು' ಮತ್ತು ಅಲಸೂರಿನ ಬಳಿ ಕೆಂಪಾಂಬುದಿ ಕೆರೆಯನ್ನು ನಿರ್ಮಿಸಿದನು. ಇನ್ನು ಕೆಂಪೇಗೌಡ ತನ್ನ ತಂಗಿ-ಹೊಂಬಾಳಮ್ಮನ ಹೆಸರಿನಲ್ಲಿ ಕುಡಿಯುವ ನೀರಿನ ಸೌಕರ್ಯಕ್ಕಾಗಿ, 'ಹೊಂಬಾಳಮ್ಮನ ಕೆರೆ' ಎಂದು ಒಂದು ಕೆರೆಯನ್ನು ನಿರ್ಮಿಸಿದನು. ಇದು ಇಂದು ಮಾಗಡಿ ಪ್ರದೇಶಕ್ಕೆ ಸೇರಿದೆ. ಇಂದಿಗೂ ಇದರ ಪಕ್ಕದಲ್ಲಿ ಆಕೆ ನೆಲೆಸಿದ್ದಂತಹ ಪ್ರದೇಶವನ್ನು 'ಹೊಂಬಾಳಮ್ಮನ ಪೇಟೆ'' ಎಂತಲೇ ಕರೆಯಲಾಗುತ್ತಿದೆ. ಇದಕ್ಕೆ "ಗಟ್ಟಿಯಾದ ಆಕರ' ಜಾನಪದ ಸಾಹಿತ್ಯ.

ಡಾ. ಎಂ.ವಿ. ಕೃಷ್ಣರಾವ್‌ರವರು ತಮ್ಮ ಪುಸ್ತಕ ಬೆಂಗಳೂರು ಕೆಂಪೇಗೌಡದಲ್ಲಿ ಮುಮ್ಮಡಿ ಕೆಂಪೇಗೌಡನಿಗೆ ಬಸಮ್ಮ, ತೋಟದಮ್ಮ, ಬೈಯಮ್ಮ ಎಂಬ ಮೂವರು ಪತ್ನಿಯರು ಇದ್ದರೆಂದಿದ್ದಾರೆ. ಇದನ್ನು ಗಮನಿಸಿದರೆ ಅಂದು ರಾಜಕುಟುಂಬದಲ್ಲಿ ಬಹುಪತ್ನಿತ್ವ ರೂಢಿಯಲ್ಲಿದ್ದು ಮಹಿಳೆಯುರು ಪ್ರಧಾನ ಭಾಗವಾಗಿದ್ದರೆಂಬುದನ್ನು ಗುರುತಿಸಬಹುದಾಗಿದೆ. ಜೊತೆಗೆ ಮಾಗಡಿ ದಕ್ಷಿಣ ದಿಕ್ಕಿನಲ್ಲಿ ಇರುವ ಭಾರ್ಗವತಿ ಮತ್ತು ಜಾಪಮುದ್ರಿ ಎಂಬ ಹೆಸರಿನಲ್ಲಿರುವ ಕೆರೆಗಳು ಮುಮ್ಮಡಿ ಕೆಂಪೇಗೌಡನಿಗೆ ಇವರು ಮೆಚ್ಚಿನ ರಾಣಿಯರೆಂದು ತಿಳಿಸುವಂತಿದೆ.[೧೫]

ಮೇಲು ಜಗಳಕನುವಾದ ಪಟುಭಟರು ವೂಳಿಗದವರು ಮಿಗೆ, ವೀರ ವಿಕ್ರಮಾರ್ಕರು ರಾಯರಾಹುತರು । ಸುಗಣ ಮಂತ್ರಿ

ಪ್ರಧಾನರು ರಾಣಿವಾಸ, ದಂಡಿಗೆಯ ಪಲ್ಲಕ್ಕಿ ಸಾಲುಗಳಾ ಯಿನ್ನುಪೊಗಳಲರಿ ದೈಯ್ಯಾ........[೧೬]

ಎಂಬ ಬಣ್ಣನೆಯನ್ನು ಗಮನಿಸಿದಾಗ ಯುದ್ಧ ರಣರಂಗಕ್ಕೆ ಕೇವಲ, ವೀರಾಧಿವೀರರು ಮಾತ್ರ ಹೋಗುತ್ತಿರಲಿಲ್ಲ. ಬದಲಾಗಿ ಸೇವಕರು, ಅಡಿಗೆಯವರು, ಹಾಸ್ಯಗಾರರು, ನರ್ತಕಿಯರು, ಮಂತ್ರಿ, ರಾಜಕುಟುಂಬದ ರಾಣಿವಾಸದವರೂ ಹೋಗುತ್ತಿದ್ದರೆಂದು ನಾವು ಅರಿಯಬಹುದು.

ಯಲಹಂಕ ನಾಡಪ್ರಭುಗಳ ಕುಟುಂಬದ ಮಹಿಳೆಯರು ಹಲವಾರು ಧಾರ್ಮಿಕ ದಾನದತ್ತಿಗಳನ್ನು ಲೋಕೋಪಯೋಗಿ ಕಾರ್ಯಗಳನ್ನು ಮಾಡಿರುವ ಬಗೆಗೆ ಶಾಸನಗಳು ಬೆಳಕು ಚೆಲ್ಲಿವೆ. ಅವುಗಳೆಂದರೆ

ಇಮ್ಮಡಿ ಕೆಂಪೇಗೌಡನ ಹಿರಿಯ ಸೊಸೆ ಅಂದರೆ ೧ನೇ ಮಗನಾದ ಇಮ್ಮಡಿ ಹಿರಿಯ ಕೆಂಪೇಗೌಡನ ರಾಣಿ ವೆಂಕಟಕೃಷ್ಣಾಜಮ್ಮ ವಾಸ್ತವವಾಗಿ ಯಲಹಂಕ ವಂಶದ ರಾಣಿಯರಲ್ಲಿ ಹೆಚ್ಚು ಧಾರ್ಮಿಕ ಆಸಕ್ತಿವುಳ್ಳವಳಾಗಿ ಕಾಣುತ್ತಾಳೆ. "ನಂಮಾನ ಯಿಂಮಡಿ ಕೆಂಪೇಗೌಡರೈಯವರಿಗು ನಂಮ ಅತ್ತೆ ಲಿಂಗಾಜಮ್ಮನವರಿಗೂ ಪುಣ್ಯವಾಗಲಿ" ಎಂದು ಕುಣಿಗಲಿಗೆ ಪಶ್ಚಿಮ ದ್ವಾರದಲ್ಲಿ ವೆಂಕಟಸಾಗರ ಎಂಬ ಅಗ್ರಹಾರವನ್ನು ಮತ್ತು ಕೆರೆಯನ್ನು ಸ್ಥಾಪಿಸಿ ದಾನ ನೀಡಿರುವುದು ತನ್ನ ಅತ್ತೆ-ಮಾವರ ಸ್ಮರಣೆಗೋಸ್ಕರವೇ ಇದು ೧೬೫೯ರ ಕುಣಿಗಲ್ ದಾನ ಶಾಸನದಲ್ಲಿ ಉಕ್ತವಾಗಿದೆ.[೧೭]

ಕ್ರಿ.ಶ. ೧೫೫೯ರ ಕೃಷ್ಣಸಾಗರ ಶಾಸನದಲ್ಲಿ ಇಮ್ಮಡಿ ಕೆಂಪೆಯ್ಯನವರ ಪುಣ್ಯಸ್ತ್ರೀಗಳಾದ ವೆಂಕಟಕೃಷ್ಣಾಜಮ್ಮನ ಉಲ್ಲೇಖವಿದೆ.[೧೮]

ಕ್ರಿ.ಶ. ೧೫೫೯ರ ಶೃಂಗಾರ ಸಾಗರದ ೨ ಶಿಲಾಶಾಸನಗಳಲ್ಲಿ[೧೯] ಇಮ್ಮಡಿ ಕೆಂಪೇಗೌಡನ ಉಪಪತ್ನಿಯಾಗಿದ್ದಂತಹ ಪಟ್ಟದ ನಾಟಕ ಶಾಲೆಯ ಶೃಂಗಾರಮ್ಮನ ಉಲ್ಲೇಖ ದೊರೆತಿದ್ದು ಆಕೆ ಒಂದು ಕೆರೆಯನ್ನು ಕಟ್ಟಿಸಿರುವ ಉಲ್ಲೇಖ ದೊರೆಯುತ್ತದೆ. ಅಂತೆಯೇ ಕ್ರಿ.ಶ. ೧೫೫೯ರ ಶೃಂಗಾರ ಸಾಗರದ ೧ನೇ ಶಿಲಾಶಾಸನವು[೨೦] ಈಕೆಯೇ 'ಶೃಂಗಾರ ಸಾಗರ' ಎಂಬ ಅಗ್ರಹಾರವನ್ನು ನಿರ್ಮಿಸಿದ ಬಗ್ಗೆ ವಿವರಗಳಿವೆ.

ಕ್ರಿ.ಶ. ೧೫೫೭ರ ಒಂದು ಶಾಸನದಿಂದ[೨೧] ಯಲಹಂಕ ನಾಡಪ್ರಭು ಜುಟ್ಟನಹಳ್ಳಿಯ ಗಿರಿಯಪ್ಪಗೌಡರ ಮಗ ಚಿಕ್ಕ ಹೊನ್ನೇಗೌಡನ ಪತ್ನಿ ಅಗಜಮ್ಮ ಶಿವಗಂಗೆಯ ಗಂಗಾಧರೇಶ್ವರನಿಗೆ ಒಂದು ಘಂಟೆಯನ್ನು ಮಾಡಿಸಿಕೊಟ್ಟ ವಿವರಣೆಗಳು ಮತ್ತು ಘಂಟೆಯನ್ನು ಎರಕ ಹೊಯ್ದವನ ಹೆಸರು ಗಂಗಯ್ಯ ಎಂಬ ವಿವರಗಳು ಲಭಿಸಿದೆ. ಇದು ನಾಡಪ್ರಭುಗಳ ಮಹಿಳೆಯರ – ಧಾರ್ಮಿಕ ರಂಗದಲ್ಲಿ ಹೊಂದಿರುತ್ತಿದ್ದ ಸ್ವಾತಂತ್ರ್ಯವನ್ನು ಆಸಕ್ತಿಯನ್ನು ತಮ್ಮ ಪ್ರಾಮುಖ್ಯತೆಯನ್ನು ತಿಳಿಯಪಡಿಸುತ್ತದೆ. ಈ ಶಾಸನ ಅಗಜಮ್ಮಳನ್ನು 'ಪುಂಣ್ಯಸ್ತ್ರೀಯು[೨೨] ಎಂಬ ಉಲ್ಲೇಖಿಸಿದೆ.

ಸುಮಾರು ಕ್ರಿ.ಶ. ೧೬೦೦ರ ಶಾಸನವೊಂದರಲ್ಲಿ ಯಲಹಂಕ ನಾಡಪ್ರಭುಗಳ ಕಾಲದ ಅರಸಿಯೊಬ್ಬಳಾದ ನಾಗಮ್ಮ ಎಂಬುವಳ ಉಲ್ಲೇಖ ಶಿವಗಂಗೆ ಬೆಟ್ಟದ ಮೇಲಿನ ನಂದಿಮಂಟಪದ ಪಕ್ಕದಲ್ಲಿರುವ ಭಕ್ತವಿಗ್ರಹದ ಪಕ್ಕ ದೊರೆತಿದೆ ಆದರೆ ಶಾಸನದ ಅಕ್ಷರಗಳು ತ್ರುಟಿತವಾಗಿದ್ದು:

'....................ನ ಅರಸಿ ನಾಗಮ್ಮ' ಎಂದು ಮಾತ್ರ ತೋರಿದೆ. ಆಕೆ ಯಾರ ರಾಣಿಯೆಂಬುದು ತಿಳಿಯದೇ ಹೋದರೂ ಮತ್ತು ಆಕೆ ಮಾಡಿದ ದಾನ ಯಾವುದೆಂದು ತಿಳಿಯದೇ ಹೋದರೂ ಯಲಹಂಕನಾಡ ಪ್ರಭುಗಳ ರಾಣಿಯರ ಸಾಲಿಗೆ ಮತ್ತೊಂದು ಹೆಸರು ಸೇರ್ಪಡೆಯಾಗಿದೆ.

ಸುಗಟೂರು ಪಾಳೆಯಗಾರಲ್ಲೊಬ್ಬನಾಗಿದ್ದ ಮುಮ್ಮಡಿ ತಮ್ಮೇಗೌಡನು ಕ್ರಿ.ಶ. ೧೬೪೦-೪೨ರ ಸುಮಾರಿನಲ್ಲಿ ಗತಿಸಿಹೋದನೆಂದು, ಆತನ ಹೆಂಡತಿ ಹಲಸಮ್ಮನೆಂದು, ಈಕೆ ಬಹುಮಟ್ಟಿಗೆ ಯಲಹಂಕನಾಡಪ್ರಭುಗಳ ಇಮ್ಮಡಿ ಕೆಂಪೇಗೌಡನ ಮಗಳಾಗಿರಬೇಕು.[೨೩] ಚಿಕ್ಕರಾಜ ಚಿಕ್ಕತಮ್ಮೇಂದ್ರನ ಮರಣದ ತರುವಾಯ ಅವನ ಮಗ ಚಿಕ್ಕರಾಯ ಬಸವನ ಗೌಡ ಇನ್ನೂ ೬ ವರ್ಷದ ಅಪ್ರಾಪ್ತ ಬಾಲಕ ನಾಗಿದ್ದರಿಂದ ಹಲಸಮ್ಮ ಈತನ ಸೋದರತ್ತೆಯಾಗಿದ್ದರಿಂದ ಆತನ ಪೋಷಕಳಾಗಿ ಕೆಲಸ ನಿರ್ವಹಿಸುತ್ತಾಳೆ.[೨೪] ಆಕೆಯ ಆಡಳಿತ ಕಾಲದಲ್ಲಿ ಬಿಜಾಪುರದ ಪರವಾಗಿ ಆಕ್ರಮಣ ನಡೆಸಿದ ರಣದುಲ್ಲಾಖಾನ್ ಮತ್ತು ಮರಾಠರು ಸರದಾರ ಷಹಜಿ ಬೆಂಗಳೂರು ಮತ್ತು ಹೊಸಕೋಟೆಗಳನ್ನು ವಶಪಡಿಸಿಕೊಂಡು ಕೋಲಾರವನ್ನಾಕ್ರಮಿಸಿದರು. ಆ ಸಂದಿಗ್ಧ ಸಂದರ್ಭದಲ್ಲಿ ಹಲಸಮ್ಮ ಕೋಲಾರವನ್ನು ಬಿಟ್ಟು ಆವಪಲ್ಲಿಗೆ ಬಂದು ನೆಲಸಿದಳು.[೨೫]

ಇದು ಯಲಹಂಕ ನಾಡಪ್ರಭುಗಳು ಮತ್ತು ಸುಗಟೂರು ಪಾಳೆಯಗಾರರ ನಡುವೆ ವೈವಾಹಿಕ ಸಂಬಂಧಗಳು ಬೆಳೆದಿದ್ದವು ಮತ್ತು ನಾಡಪ್ರಭುಗಳು ಕುಟುಂಬದ ಮಹಿಳೆಯರೂ ರಾಜಕೀಯ ಆಡಳಿತದಲ್ಲಿ ಪಾಲ್ಗೊಳ್ಳುತ್ತಿದ್ದರೆಂದು ಗುರುತಿಸಬಹುದಾಗಿದೆ.

ರಾಣಿಯರ ಶಿಲ್ಪಗಳು

ಯಲಹಂಕ ನಾಡಪ್ರಭುಗಳ ದೇವಾಲಯ, ವಾಸ್ತುಶಿಲ್ಪ ಕಲೆಯು ಅನೇಕ ವೈಶಿಷ್ಟ್ಯಗಳಿಂದ ಕೂಡಿವೆ. ದೇವಾಲಯಗಳ

ಮಂಟಪಗಳಲ್ಲಿ, ಹಜಾರಗಳಲ್ಲಿ ಉಪಲಬ್ದವಿರುವ ಶಿಲ್ಪಗಳನ್ನು ಆಳವಾಗಿ ಅಧ್ಯಯನ ಮಾಡಿದರೆ ಯಲಹಂಕ ನಾಡಪ್ರಭುಗಳ – ಶಿಲ್ಪಗಳ ಜೊತೆಗೆ ರಾಣಿಯರ ಶಿಲ್ಪಗಳನ್ನು ಕೂಡ ಕಾಣಬಹುದು.

ಸಾಮಾನ್ಯವಾಗಿ ದಕ್ಷಿಣ ಭಾರತದ ದೇವಾಲಯಗಳಲ್ಲಿ 'ನಮಸ್ಕಾರ ಮುದ್ರೆಯಲ್ಲಿರುವ ಅರಸನ ಹಾಗೂ ಆತನ ರಾಣಿಯರ ಶಿಲ್ಪಗಳು' – ಕಂಬಗಳ ಮೇಲೆ ಅಥವಾ ಗೋಡೆಗಳ ಮೇಲೆ ಕಾಣಬಹುದು. ಅದರಂತೆ ಯಲಹಂಕ ನಾಡಪ್ರಭುಗಳ ಕಾಲದಲ್ಲಿ ಈ ಸಂಪ್ರದಾಯ ಮುಂದುವರೆದು ಅರಸ ಮತ್ತು ರಾಣಿ ಶಿಲ್ಪಗಳ ರಚನೆಯಲ್ಲಿ ಕಾಣಬಹುದು. ಈ ಶಿಲ್ಪಗಳು ರಾಜ–ಲಕ್ಷಣಗಳಿಂದ ಕೂಡಿದ್ದು ಅತ್ಯಂತ ಸುಂದರ ಶಿಲ್ಪಗಳಾಗಿವೆ. ರಾಜನ ಬಲಭಾಗದ ರಾಣಿಯ ಶಿಲ್ಪದಲ್ಲಿ ವಿವಿಧ ಆಭರಣಗಳಾದ ಕಿವಿಯೋಲೆ, ತೋಳಬಂಧ, ಕಾಲ್ಗಡಗ, ಸರಮಾಲೆ, ಬೈತಲೆಸರ ಹಾಗೂ ವಿಶಿಷ್ಟ ಕೇಶಲಂಕಾರ ಇತ್ಯಾದಿಗಳಿಂದ ರಚಿಸಲಾಗಿದೆ. ನಿರಿಗೆ ಸೀರೆ ಧರಿಸಿ ನಯವಾಗಿ ದೇವರಿಗೆ ನಮಸ್ಕರಿಸುತ್ತಾ ನಿಂತಿರುವಂತೆ ಶಿಲ್ಪವನ್ನು ಕಂಡರಿಸಲಾಗಿದೆ.[೨೬]

ಆವತಿಯ ಪ್ರದೇಶದಲ್ಲಿರುವ ತಿಮ್ಮರಾಯ ದೇವಸ್ಥಾನ, ಒಂದು ವೈಷ್ಣವ ದೇವಾಲಯವಾಗಿದ್ದು ಸುಂದರ ಕೆತ್ತನೆಗಳಿಗೆ ಒಳಗಾಗಿದೆ. ಇಲ್ಲಿ ಭಕ್ತನ ರೂಪದಲ್ಲಿ ಅರಸನ ಒಂದು ಉಬ್ಬುಶಿಲ್ಪವಿದೆ. ನವರಂಗದ ಬಲಭಾಗದ ಕಂಬದಲ್ಲಿ ಅನೇಕ ಆಭರಣಗಳನ್ನು ಧರಿಸಿರುವ ರಾಣಿಯನ್ನು ಹೋಲುವ ಶಿಲ್ಪವಾಗಿದ್ದು ದೇವಾಲಯ ನಿರ್ಮಿಸಿದ ಅರಸನ ರಾಣಿಯ ಶಿಲ್ಪವೆಂದು ಅದರ ಲಕ್ಷಣಗಳನ್ನು ನೋಡಿ ಗುರುತಿಸಬಹುದಾಗಿದೆ.[೨೭]

ಕೆಂಪೇಗೌಡ ಹಜಾರದ ಮುಖಮಂಟಪ ಕಂಬಗಳ ಮೇಲಿನ ಶಿಲ್ಪಗಳು ಅರಸ ಕೆಂಪೇಗೌಡ ಮತ್ತು ಅವರ ಅರಸಿಯದು ಎಂದು ಅಭಿಪ್ರಾಯಪಡಲಾಗಿದೆ.[೨೮]

ಗಂಗಾಧರೇಶ್ವರ ಗರ್ಭಗುಡಿಯ ಎಡಗಡೆ ಆಳವಾಗಿ ಕೊರೆದ ಇನ್ನೊಂದು ಗರ್ಭಗುಡಿ ಇದೆ. ಇದನ್ನು ಹೊನ್ನಾದೇವಿ ಗುಡಿ ಎಂದು ಕರೆಯಲಾಗಿದ್ದು ಈ ಗರ್ಭಗುಡಿ ಪೂರ್ವಾಭಿಮುಖವಾಗಿದೆ. ಆದರೆ ಅದು ಆಳವಾಗಿದ್ದು ಒಳಗಡೆ ರಾಜನ ಶಿಲ್ಪದ ಪಕ್ಕದಲ್ಲಿ ರಾಣಿಯ ಶಿಲ್ಪವಿದೆ.[೨೯] ಇಲ್ಲಿ ರಾಣಿ ವಿವಿಧ ಆಭರಣಗಳು, ನಿರಿಗೆಯ ಸೀರೆ ಮತ್ತು ಕುಪ್ಪಸ ಧರಿಸಿ ನಮಸ್ಕಾರ ಮುದ್ರೆಯಲ್ಲಿ ನಿಂತಿದ್ದಾಳೆ. ರಾಣಿಯ ಕೇಶಾಲಂಕಾರವಂತೂ ಗಮನ ಸೆಳೆಯುತ್ತದೆ.

ಯಲಹಂಕ ನಾಡಪ್ರಭುಗಳ ನಾಡಿನ ಮತ್ತೊಂದು ಪ್ರಮುಖ ಪ್ರದೇಶ ಹಲಸೂರು; ಇಲ್ಲಿ ಯಲಹಂಕ ನಾಡಪ್ರಭುಗಳು ಸುಪ್ರಸಿದ್ಧ ಸೋಮೇಶ್ವರ ದೇವಾಲಯವನ್ನು ನಿರ್ಮಿಸಿದ್ದಾರೆ. ಇದರ ನಿರ್ಮಾಣದ ವ್ಯಕ್ತಿಗಳ ಬಗ್ಗೆ ಏನೇ ಭಿನ್ನಾಭಿಪ್ರಾಯಗಳಿದ್ದರೂ ಕೆಂಪೇಗೌಡ ಸೋಮೇಶ್ವರನ ಭಕ್ತನಾಗಿದ್ದು ಅಲಸೂರಿನಲ್ಲಿ ಸೋಮೇಶ್ವರನ ದೇವಾಲಯವನ್ನು ನಿರ್ಮಿಸಿದವನೆಂದು ಅಭಿಪ್ರಾಯಪಟ್ಟಿದ್ದಾರೆ.[೩೦]

ದೇವಾಲಯವನ್ನು ಜೀರ್ಣೋದ್ಧಾರ ಮಾಡಿದ ರಾಜನ ಮತ್ತು ರಾಣಿಯ ಶಿಲ್ಪಗಳನ್ನು ನವರಂಗದ ಸಾಲಿನ ಎಡಗಡೆಯ ಕಂಬದಲ್ಲಿ ರಚಿಸಲಾಗಿದೆ. ಶಿವಗಂಗೆಯಲ್ಲಿ ರಾಣಿಯ ಶಿಲ್ಪದ ಪಕ್ಕದಲ್ಲಿ ಪುತ್ರನನ್ನು ಕೂಡ ತೋರಿಸಲಾಗಿದೆ. ಇಲ್ಲಿ ರಾಣಿಯನ್ನು ಏಕಾಂಗಿಯಾಗಿ ತೋರಿಸಲಾಗಿದೆ. ಅರಸನ ಶಿಲ್ಪಕಂಬದ ಪಶ್ಚಿಮದಿಕ್ಕಿನಲ್ಲಿ ನಮಸ್ಕರಿಸುತ್ತ ನಿಂತಿರುವ ರಾಣಿಯ ಶಿಲ್ಪವಿದೆ.[೩೧] ಈ ಶಿಲ್ಪವು ಗರ್ಭಗುಡಿಗೆ ಮುಖಮಾಡಿದೆ. ಇಲ್ಲಿ ರಾಣಿಯ ಶಿಲ್ಪವು ವಿಶೇಷ ಆಭರಣಗಳಿಂದ ಕೂಡಿದೆ. ನಮಸ್ಕಾರದ ಮುದ್ರೆಯ ಭಂಗಿಯಲ್ಲಿ ನಿಂತಿರುವ ರಾಣಿಯ ಶಿಲ್ಪ ನೀಳದೇಹ, ಉದ್ದನೆಯ ಕೇಶ, ದುಂಡನೆಯ ಮುಖಲಕ್ಷಣಗಳಿಂದ ಕೂಡಿದೆ. ನಿರಿಗೆ ಸೀರೆಯನ್ನು ಧರಿಸಿದ್ದು ವಿವಿಧ ಆಭರಣಗಳನ್ನು ಧರಿಸಿ ವಂದಿಸುತ್ತಾ ನಿಂತಿರುವ ರಾಣಿಯ ಶಿಲ್ಪವಂತೂ ಆಕರ್ಷಣೀಯವಾಗಿದೆ. ಇದು ರಾಣಿ ಹಲಸಮ್ಮನ ಶಿಲ್ಪವೆಂದು ತಿಳಿಯಬಹುದು.* ಸ್ವಲ್ಪ ಹೆಚ್ಚು ಕಡಿಮೆ ಶಿವಗಂಗೆಯ ದ್ವಾರದ ಮೇಲಿನ ರಾಣಿಯ ಶಿಲ್ಪವನ್ನು ಹೋಲುತ್ತದೆ. ಶಿಲ್ಪಗಳನ್ನು ವೀಕ್ಷಿಸಿದಾಗ ಅವುಗಳು ರಾಣಿಯರ ಚಿತ್ರವೆಂದು ಗುರುತಿಸಬಹುದಾಗಿದೆ.

ಒಟ್ಟಾರೆ ಯಲಹಂಕ ನಾಡ ಪ್ರಭುಗಳ ಕುಟುಂಬದ ಮಹಿಳೆಯರ ಬಗ್ಗೆ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟು ಕೊಂಡು ನಾವು ಈ ಕೆಳಗಿನ ತೀರ್ಮಾನಗಳಿಗೆ ಬರಬಹುದು.

* ಯಲಹಂಕ ನಾಡಪ್ರಭುಗಳ ರಾಣಿಯರು ಪ್ರಾಚೀನ ಕಾಲದ ರಾಣಿಯರಂತೆ ತಮ್ಮ ಪ್ರಭುವರ್ಗದ ಮೇಲೆ ಪ್ರಭಾವ ಬೀರುತ್ತಿದ್ದರು.
* ಯಲಹಂಕ ನಾಡಪ್ರಭುಗಳಲ್ಲಿ ಬಹುಪತ್ನಿತ್ವ ರೂಢಿಯಲ್ಲಿತ್ತು.
* ಯಲಹಂಕ ನಾಡಪ್ರಭುಗಳ ಕಾಲದಲ್ಲಿ ಮಹಿಳೆಯರು ರಾಣಿಯರು ಸಮಾಜದಲ್ಲಿ ಗೌರವಯುತ ಸ್ಥಾನಮಾನಗಳನ್ನು ಹೊಂದಿದ್ದರು.
* ರಾಜಮನೆತನದ ರಾಣಿಯರು ಬಹುಶಃ ಯುದ್ಧ, ಶಸ್ತ್ರಾಭ್ಯಾಸದಲ್ಲಿ ಪರಿಣಿತಿ ಹೊಂದಿರುತ್ತಿದ್ದರು.
* ಯಲಹಂಕ ನಾಡಪ್ರಭುಗಳ ಅರಮನೆಯಲ್ಲಿ ರಾಣಿಯರು ಲೋಕಕಲ್ಯಾಣಕಾರಕ ಕಾರ್ಯಗಳಲ್ಲಿ ಆಸಕ್ತಿ ಹೊಂದಿದ್ದರು ಮತ್ತು ಹಲವಾರು ದಾನ, ದತ್ತಿ,

ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು.

* ರಾಣಿಯರು ನಾಡಪ್ರಭುಗಳಂತೆ ರಾಜ್ಯಭಾರ ಮಾಡಿರಬಹುದು ಎಂದು ಹಲಸಮ್ಮನ ವಿವರದಿಂದ ಗುರುತಿಸಬಹುದು.
* ರಾಣಿಯರು ಧಾರ್ಮಿಕ ರಂಗದಲ್ಲಿ ಉನ್ನತ ಸ್ಥಾನಮಾನ ಹೊಂದಿದ್ದರು.
* ದೇವಾಲಯಗಳನ್ನು ನಿರ್ಮಿಸಲು ಮತ್ತು ಜೀರ್ಣೋದ್ಧಾರಗೊಳಿಸುವಲ್ಲಿ ರಾಣಿಯರ ಪಾಲು ಇತ್ತು ಎಂಬುದನ್ನು ದೇವಾಲಯಗಳಲ್ಲಿ ಭಕ್ತರಂತೆ ವಂದಿಸುತ್ತಿರುವ ತಮ್ಮ ಶಿಲ್ಪಗಳನ್ನು ಹಾಕಿಸುವ ಸಂಪ್ರದಾಯದಲ್ಲಿ ಗುರುತಿಸಬಹುದು.
* ಯಲಹಂಕ ನಾಡಪ್ರಭುಗಳಿಗೂ ಸುಗುಟೂರು ಪಾಳೆಯಗಾರರಿಗೂ ವೈವಾಹಿಕ ಸಂಬಂಧ ಇತ್ತು ಎಂಬುದಕ್ಕೆ ಹಲಸಮ್ಮನ ನಿದರ್ಶನ ಕೊಡಬಹುದಾಗಿದೆ.

ಹೀಗೆ ಯಲಹಂಕ ನಾಡಪ್ರಭುಗಳ ಕುಟುಂಬದ ರಾಣಿಯರು ಮತ್ತು ರಾಣಿ ವರ್ಗದವರು. ತಮ್ಮನ್ನು ಸಾಮಾಜಿಕ ರಂಗಗಳಲ್ಲಿ ಧಾರ್ಮಿಕ ರಂಗಗಳಲ್ಲಿ ಸಾಂಸ್ಕೃತಿಕ ವಲಯಗಳಲ್ಲಿ ಪ್ರಭುಗಳ ಆಳ್ವಿಕೆಯ ಅವಧಿಯಲ್ಲಿ ತಮ್ಮ ವೈಭವದಿಂದ ಮಾತ್ರ ಪ್ರಸಿದ್ಧಿಯಾಗಿರದೆ ತಮ್ಮ ವಿಶಿಷ್ಟ ಸೇವೆಗಳಿಂದಲೂ ಮೆರೆದಿರುವುದನ್ನು ಇದುವರೆವಿಗೂ ದೊರೆತ ಮಾಹಿತಿಗಳಿಂದ ನಾವು ಅರಿಯಬಹುದಾಗಿದೆ. ಇದರಿಂದ ನಮಗೆ ಇತಿಹಾಸವೆಂದರೆ ಕೇವಲ ಪುರುಷರ ಇತಿಹಾಸ ಮಾತ್ರವಲ್ಲ ಮಹಿಳೆಯರ ಇತಿಹಾಸವನ್ನು ಒಳಗೊಂಡಿರುತ್ತದೆ. ಮತ್ತು ರಾಜರ ಯಶಸ್ಸಿನ ಹಿಂದೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕುಟುಂಬ ವರ್ಗದ ಮಹಿಳೆಯರು ಇದ್ದೇ ಇರುತ್ತಾರೆ ಎಂದು ಅರಿಯಬಹುದು.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಬೆಂಗಳೂರು ಕೆಂಪೇಗೌಡ ವಂಶಸ್ಥರು.**, ಪ್ರೊ. ಎಂ.ಎಚ್. ಕೃಷ್ಣಯ್ಯ, ಡಾ. ದೇವರಕೊಂಡಾರೆಡ್ಡಿ, ಪುಟ ೧೨೩, ಜನತಾ ಶಿಕ್ಷಣ ಸಂಸ್ಥೆ, ಬೆಂಗಳೂರು, ೧೯೯೬.

೨. ಎ.ಕ., IX, XII.

೩. ದಯಾನಂದ ಪಟೇಲ್ ಮತ್ತು ಜೆ.ಟಿ. ವೀರಪ್ಪ, **ಮಂಡ್ಯ ಜಿಲ್ಲೆ** ಕನ್ನಡ ಸಾಹಿತ್ಯ ಪರಿಷತ್, ಮಂಡ್ಯ, ೧೯೯೪.

೪. ಪ್ರೊ. ಎಂ.ವಿ. ಕೃಷ್ಣರಾವ್, **ಬೆಂಗಳೂರು ಕೆಂಪೇಗೌಡ**, ಬೆಂಗಳೂರು, ೧೯೬೪.

೫. ಬಿ.ಎನ್. ಸುಂದರರಾವ್, **ಬೆಂಗಳೂರು ಇತಿಹಾಸ**, ಬೆಂಗಳೂರು, ೧೯೮೫.

೬ ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ, ಡಾ. ಎಂ. ಜಮುನ, ಬೆಂಗಳೂರು ವಿಶ್ವವಿದ್ಯಾಲಯ, ೨೦೦೬.

೭. ಯಲಹಂಕ ನಾಡಪ್ರಭುಗಳ ಜಾನಪದ ಸಾಹಿತ್ಯ, ಡಾ. ಎಂ. ಜಮುನ, ಬೆಂಗಳೂರು ವಿಶ್ವವಿದ್ಯಾಲಯ, ೨೦೦೬.

೮. ಪ್ರೊ. ಎಂ.ಎಚ್. ಕೃಷ್ಣಯ್ಯ ಮತ್ತು ಡಾ. ದೇವರಕೊಂಡಾರೆಡ್ಡಿ, ಅದೇ.

೯. ಡಾ. ಪಿ.ವಿ. ಕೃಷ್ಣಮೂರ್ತಿ, **ಸುಗುಟೂರು ಪಾಳೆಯಗಾರರು**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೪.

೧೦. ಯಲಹಂಕ ನಾಡ ಪ್ರಭುಗಳ ವಾಸ್ತುಶಿಲ್ಪ, ಶಿಲ್ಪಕಲೆ, ಡಾ. ಎಂ. ಜಮುನ, ಪ್ರಸಾರಾಂಗ, ಬೆಂಗಳೂರು ವಿ.ವಿ. ೨೦೦೭.

೧೧. ಡಾ. ಎಂ. ಜಮುನ, **ಬೆಂಗಳೂರಿನ ಬಖೈರುಗಳು**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ೨೦೦೬.

೧೨. **ಏಕಾಮ್ರ ದೀಕ್ಷಿತರ ವೀರಭದ್ರವಿಜಯ.**

೧೩. ಡಾ. ಎಂ. ಜಮುನ, ಯಲಹಂಕ ನಾಡಪ್ರಭುಗಳ ಜಾನಪದ ಸಾಹಿತ್ಯ, ಪುಟ ೪೧೧–೪೧೨.

೧೪. ಕರ್ಲಮಂಗಲಂ ಶ್ರೀಕಂಠಯ **ಕೆಂಪೇಗೌಡ ಜಯಪ್ರಶಸ್ತಿ**, ಪುಟ ಬೆಂಗಳೂರು.

೧೫. ಎಂ.ವಿ. ಕೃಷ್ಣರಾವ್, ಅದೇ., ಪುಟ ೧೫೯.

೧೬. ಪ್ರೊ. ಎಂ.ಎಚ್. ಕೃಷ್ಣಯ್ಯ ಮತ್ತು ಡಾ. ದೇವರಕೊಂಡಾರೆಡ್ಡಿ, ಪುಟ ೧೨೮, ಅದೇ.

೧೭. ಎ.ಕ. IX, ಕುಣಿಗಲ್, ಶಾಸನಸಂಖ್ಯೆ ೧೨.

೧೮. ಅದೇ.

೧೯. ಎ.ಕ. ಸಂಪುಟ, IX, ಕುಣಿಗಲ್ ತಾಲ್ಲೂಕು, ಶೃಂಗಾರಸಾಗರ, ಶಾಸನ ಸಂಖ್ಯೆ ೩೦, ೧೫೯೯.

೨೦. ಎ.ಕ. ಸಂಪುಟ, IX, ಕುಣಿಗಲ್ ತಾಲ್ಲೂಕು, ಶೃಂಗಾರಸಾಗರ, ಶಾಸನ ಸಂಖ್ಯೆ ೨೯, ೧೫೯೯.

೨೧. ಎ.ಕ. ಸಂಪುಟ IX, ನೆಲಮಂಗಲ ತಾಲ್ಲೂಕು, ಶಾಸನಸಂಖ್ಯೆ – III, ಕಾಲ ?

೨೨. ಅದೇ.

೨೩. ಡಾ. ಪಿ.ವಿ. ಕೃಷ್ಣಮೂರ್ತಿ., ಅದೇ., ಪುಟ ೨೨.

೨೪. ಅದೇ.

೨೫. ಅದೇ ಪುಟ ೨೬, ೨೮.

೨೬. ಡಾ. ಎಂ. ಜಮುನ, ಯಲಹಂಕ ನಾಡಪ್ರಭುಗಳ ವಾಸ್ತು ಶಿಲ್ಪ – ಶಿಲ್ಪಕಲೆ, ಪುಟ ೨೬೭, ಅದೇ.

೨೭. ಡಾ. ಎಚ್.ಎಸ್. ಗೋಪಾಲರಾವ್ ಮತ್ತು ಡಾ. ಡಿ.ಎನ್. ಯೋಗೀಶ್ವರಪ್ಪರವರು, ಡಾ. ಪಿ.ವಿ. ಕೃಷ್ಣಮೂರ್ತಿರವರು ಮಾಹಿತಿಯನ್ನು ಮೌಖಿಕವಾಗಿ ವಿವರಿಸಿದರು.

೨೮. ಡಾ. ಎಂ. ಜಮುನ, ಯಲಹಂಕ ನಾಡಪ್ರಭುಗಳ ವಾಸ್ತುಶಿಲ್ಪ–ಶಿಲ್ಪಕಲೆ, ಪುಟ ೨೭೦, ಅದೇ.

೨೯. ಅದೇ., ಪುಟ ೨೬೦.

೩೦. ಅದೇ., ಪುಟ ೧೬೮.

೩೧. ಅದೇ., ಪುಟ ೧೭೬.

೩೨. ಕ್ಷೇತ್ರಕಾರ್ಯ.

ಡಾ. ಮಲ್ಲಿಕಾರ್ಜುನ ಕಂಬಾರ*

ರನ್ನನ 'ಗದಾಯುದ್ಧ' ತಿದ್ದಿದ "ಕೇಶಿ" ಯಾರು ?

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ೧೧ನೆಯ ಶತಮಾನವನ್ನು "ಸುವರ್ಣ ಯುಗ"ವೆಂದು ಕರೆಯಲಾಗುತ್ತದೆ. ಅದಕ್ಕೆ ಕಾರಣರಾದವರು ರತ್ನತ್ರಯರೆಂದು ಖ್ಯಾತರಾದ ಪಂಪ. ಪೊನ್ನ ಮತ್ತು ರನ್ನರು. ಈ ಮೂವರು ಹೆಚ್ಚು ಕಡಿಮೆ ಸಮಕಾಲೀನ ಕವಿಗಳಾಗಿದ್ದಾರೆ. ರನ್ನನು ತನ್ನ ಸತ್ವಯುತ ಓಜಸ್ವಿಯಾದ ಬರವಣಿಗೆಯಿಂದ ಅನ್ಯರಿಂದ ಭಿನ್ನವೆನಿಸಿ ನಮ್ಮನ್ನು ಆಕರ್ಷಿಸುತ್ತಾನೆ. ಅಂತೆಯೆ ರಾಷ್ಟ್ರಕವಿ ಕುವೆಂಪುರವರು "ರನ್ನನಿರುವ ಕನ್ನಡಕ್ಕೂ ಅನ್ಯರಿಂದ ಬಹುದೇ ಧಕ್ಕೆ ? ಬರಿಯ ಕವಿಯೆ ಸಿಡಿಲ ಚಕ್ಕೆ"[1] ಎಂದು ಈ ಶಕ್ತಿ ಕವಿಯನ್ನು ಹೊಗಳಿದ್ದಾರೆ.

ಸಾವಿರ ವರ್ಷಗಳಿಂದಲೂ ರನ್ನನು ತನ್ನ ಕಾವ್ಯವನ್ನು ಓದುಗರಿಂದ ಇಂದಿಗೂ ಬಲು ಉತ್ಸಾಹದಿಂದ ಓದಿಸಿಕೊಳ್ಳುತ್ತಿದ್ದಾನೆ. ಅದೇ ಅವನ ಜನಪ್ರಿಯತೆ ! ಇದರಿಂದ ಕನ್ನಡ ಕವಿಗಳಲ್ಲಿ ಈತನು ಮಹತ್ವದ ಕವಿ ಎಂಬುವದು ನಿರ್ವಿವಾದ, ಈತನು ಬರೆದ ಅಜಿತಪುರಾಣ ಪುರಾಣತಿಲಕವೆನ್ನಿಸಿದರೆ, ಆಶ್ರಿತ ಅರಸನನ್ನು ಭೀಮನಿಗೆ ಹೋಲಿಸಿ ಬರೆದ ಗದಾಯುದ್ಧ ಕೃತಿಯಿಂದ ''ಕವಿ ಚಕ್ರವರ್ತಿ'' ಎಂಬ ಬಿರುದಿಗೆ ಪಾತ್ರನಾಗುತ್ತಾನೆ. ಈ ಕೃತಿಯಲ್ಲಿ ಇರಿವಬೆಡಂಗ ಸತ್ಯಾಶ್ರಯನೆ ಭೂರಮಣನೆಂದು, ಅವನನ್ನು ಅನಿಲಜ (ಭೀಮ)ನಿಗೆ ಹೋಲಿಸಿ ಈ ಕಾವ್ಯವನ್ನು ಬರೆದುದಾಗಿ ಹೇಳಿ, ಈ ಕೃತಿಯಿಂದ ವಾಗ್ದೇವಿಯ ಭಂಡಾರವನ್ನು ಸೂರೆ ಮಾಡಿದ್ದಾಗಿ ಪ್ರಶಂಸೆ ಮಾಡಿಕೊಳ್ಳುತ್ತಾನೆ. ಈ ಕೃತಿಯನ್ನು "ದಂಡನಾಯಕಂ ಕೇಶಿ ತಿರ್ದೆ......" (೧-೫೧)[2] ಎಂದು ಹೇಳುವದರಿಂದ, ರನ್ನನು ಬರೆದ ಗದಾಯುದ್ಧದಲ್ಲಿನ ಲೋಪ ದೋಷಗಳನ್ನು ದಂಡನಾಯಕನಾದ ಕೇಶಿ ಎಂಬವನು ತಿದ್ದಿದನು ಎಂದು ತಿಳಿದು ಬರುತ್ತದೆ ಹಾಗಾದರೆ ದಂಡನಾಯಕ ಕೇಶಿ ಯಾರು? ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

ಕೇಶಿಮಯ್ಯ ಎಂಬ ದಂಡನಾಯಕನು ಗದಗ ಜಿಲ್ಲೆಯ ಕೊಟುಮಚಗಿ ಎಂಬ ಗ್ರಾಮದ ೨ ಶಾಸನಗಳಲ್ಲಿ ಉಲ್ಲೇಖಗೊಂಡಿದ್ದಾನೆ. ಇದರಲ್ಲಿನ ಒಂದು ಶಾಸನವು ಕ್ರಿ.ಶ. ೧೧೪೨ಕ್ಕೆ ಸೇರಿರುವುದರಿಂದ ಅದು ಇಲ್ಲಿ ಹೊಂದಿಕೆಯಾಗುವುದಿಲ್ಲ. ಅದೇ ಊರಿನ ಇನ್ನೊಂದು ಶಾಸನವು ಕಲ್ಮೇಶ್ವರ ದೇವಾಲಯದಲ್ಲಿದ್ದು ಅದು ಕಲ್ಯಾಣ ಚಾಲುಕ್ಯ ಚಕ್ರವರ್ತಿ ತ್ರಿಭುವನಮಲ್ಲ ೫ನೆಯ ವಿಕ್ರಮಾದಿತ್ಯನ ಕಾಲ (ಕ್ರಿ.ಶ. ೧೦೦೮-೧೫)ಕ್ಕೆ ಸಂಬಂಧಿಸಿದೆ ಅವನು ದಂಡನಾಯಕನಾದ ಕೇಶಿಮಯ್ಯ ಎಂಬವನು ಬೆಳ್ವಲ-೩೦೦, ಪುಲಿಗೆರೆ-೩೦೦ನ್ನು ಆಳುತ್ತಿರುವಾಗ ಉಮಚಗಿಯ ಮೌನರಸ ಎಂಬವನು ಶ್ರೀಧರಭಟ್ಟ ಎಂಬವನಿಗೆ, ಅದೇ ಊರಿನ ೧೦೪ ಮಹಾಜನರಿದ್ದ ಅಗ್ರಹಾರಕ್ಕೆ ದಾನವನ್ನು ನೀಡಿದ್ದನ್ನು ಉಲ್ಲೇಖಿಸುತ್ತದೆ.[3] ಇಲ್ಲಿರುವ ಶಾಸನೋಕ್ತ ಕೇಶಿಮಯ್ಯನೇ ರನ್ನನ ಗದಾಯುದ್ಧವನ್ನು ತಿದ್ದಿದ ಕೇಶಿಯಾಗಿರಬೇಕು.

ಲಕ್ಕುಂಡಿಯಲ್ಲಿನ ಅತ್ತಿಮಬ್ಬೆಯ ಗಂಡ ನಾಗಿದೇವನು ನೂರ್ಮಡಿ ತೈಲನೆಂಬ ಬಿರುದಿನ ೨ನೆಯ ತೈಲ (ಕ್ರಿ.ಶ. ೯೭೩-೯೭)ನಲ್ಲಿ ಅತ್ತಿಮಬ್ಬೆಯ ಗಂಡ ನಾಗಿದೇವನು ನೂರ್ಮಡಿ ತೈಲನೆಂಬ ಬಿರುದಿನ ೨ನೆಯ ತೈಲ (ಕ್ರಿ.ಶ. ೯೭೩-೦೭)ನಲ್ಲಿ ಸೇನಾನಿಯಾಗಿದ್ದು, ಆತನ ವೈರಿಯಾದ ಪಾಂಚಾಲದೇವನನ್ನು ಕೊಲ್ಲುತ್ತಾನೆ. ನಾಗಿದೇವನ ಮರಣದ ನಂತರ ಆತನ ಮಗ ಅಣ್ಣಿಗನು ಲಕ್ಕುಂಡಿ, ಮಾಸವಾಡಿಯ ಮೂಲಕ ರಾಜ್ಯಭಾರವನ್ನು ಮಾಡುತ್ತಾನೆ, ಕವಿ ರನ್ನನು ಚಾವುಂಡರಾಯನ ಆಶ್ರಯದಲ್ಲಿ ಶ್ರವಣಬೆಳಗೊಳದಲ್ಲಿರುವಾಗ ದಾನಚಿಂತಾಮಣಿ ಅತ್ತಿಮಬ್ಬೆಯು ಅಲ್ಲಿದ್ದ ರನ್ನನನ್ನು ಲಕ್ಕುಂಡಿಗೆ ಕರೆತಂದು ಆಶ್ರಯ ನೀಡುತ್ತಾನೆ. ಅಲ್ಲಿನ ಬ್ರಹ್ಮಜಿನಾಲಯದಲ್ಲಿ ಈತನಿಂದ ಅಜಿತನಾಥ ಪುರಾಣವನ್ನು ಬರೆಯಿಸುತ್ತಾಳೆ. ಆಗ ಈ ರನ್ನನನ್ನು ತನ್ನ ಗಂಡನ ಆಶ್ರಯದಾತ ಅರಸ ಕ.ಚಾ. ಅರಸ ೨ನೆಯ ತೈಲನಿಗೆ ಪರಿಚಯಿಸಿರಬೇಕು. ಹೀಗಾಗಿ ಈತ ಆಗಾಗ ೨ನೆಯ ತೈಲನ ರಾಜಧಾನಿಯಾಗಿರಬಹುದಾದ ಮಳಖೇಡಕ್ಕೆ ಹೋಗಿ ಬರುತ್ತಿರಬೇಕು. ಆಗಲೇ ಆತನ ಆಸ್ಥಾನದ ಕವಿಯಾಗಿರಬಹುದು. ೨ನೆಯ ತೈಲನ ಮಗನಾದ ಇರಿವಬೆಡಂಗ ಬಿರುದಿನ ಸತ್ಯಾಶ್ರಯ (ಕ್ರಿ.ಶ. ೯೯೭-೧೦೦೮)ನಲ್ಲಿ ಮುಂದುವರಿದು ಅವನನ್ನು ಭೀಮನಿಗೆ ಹೋಲಿಸಿ ಗದಾಯುದ್ಧವನ್ನು ಬರೆದನು. ಈ ಕೃತಿರಚನೆಯ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ.

*ವಚನ, ರಾಜೂರ, ರೋಣ ತಾಲ್ಲೂಕು, ಗದಗ ಜಿಲ್ಲೆ.

ಗೋವಿಂದ ಪೈಗಳು "ಗದಾಯುದ್ಧವು ಕ್ರಿ.ಶ. ೯೮೨ರಲ್ಲಿ ೨ನೆಯ ತೈಲನ ಆಳ್ವಿಕೆಯಲ್ಲಿ ಮುಗಿಯಲಿಲ್ಲ. ಅದು ಅವನ ಮಗನಾದ ಸತ್ಯಾಶ್ರಯನ ಆಳ್ವಿಕೆಯ ಕೊನೆಯಲ್ಲಿ (ಕ್ರಿ.ಶ. ೧೦೦೭-೦೮) ಬರೆದು ಮುಗಿಸಿರಬೇಕೆಂದು" ಅಭಿಪ್ರಾಯಪಡುತ್ತಾರೆ. ಆದರೆ ಕರ್ನಾಟಕ ಕವಿಚರಿತೆಕಾರರು ಗದಾಯುದ್ಧದ ರಚನೆಯು ಕ್ರಿ.ಶ. ೯೮೨ರಲ್ಲಿ ಆಯಿತೆಂದು ಹೇಳುತ್ತಾರೆ[೪]. ಬಹುಶಃ ಇದು ಆಗ ರಚನೆಗೆ ಆರಂಭವಾಗಿ, ಗೋವಿಂದಪೈಗಳು ಹೇಳುವಂತೆ ಕ್ರಿ.ಶ. ೧೦೦೭-೦೮ರಲ್ಲಿ ಮುಗಿದಿರಬೇಕು.[೫] ಇದನ್ನು ಒಪ್ಪುವದಾದರೆ ಈ ಕೃತಿಯನ್ನು ತಿದ್ದಿದ ಕೇಶಿಯೆ ಕೊಟುಮಚಗಿಯ ದಂಡನಾಯಕ ಕೇಶಿಮಯ್ಯನಾಗುತ್ತಾನೆ. ರನ್ನನು ಲಕ್ಕುಂಡಿಯಲ್ಲಿದ್ದಾಗ, ಲಕ್ಕುಂಡಿಗೆ ಸಮೀಪದ ಅಂದಿನ ಜೈನಸ್ಥಳವಾದ ಕೊಟುಮಚಗಿಯೊಂದಿಗೆ ಅವಿನಾಭಾವ ಸಂಪರ್ಕ ಹೊಂದಿರಬಹುದು. ಆಗ ಅಲ್ಲಿದ್ದ ದಂಡನಾಯಕ ಕೇಶಿಮಯ್ಯನು ರನ್ನನಿಗೆ ಪರಿಚಯವಾಗಿ ಅದು ಗಾಢ ಸ್ನೇಹಕ್ಕೆ ತಿರುಗಿರಬೇಕು. ಇದರಿಂದ ಆತ್ಮೀಯನಾದ ಆತನನ್ನು ಕವಿ ತನ್ನ ಕಾವ್ಯದಲ್ಲಿ "ದಂಡನಾಯಕ ಕೇಶಿ" ಎಂದು ಕರೆಯುತ್ತಾನೆ. ಈ ದಂಡನಾಯಕ ಕೇಶಿಮಯ್ಯನು ಸತ್ಯಾಶ್ರಯನ ನಂತರದ ೫ನೆ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿದ್ದವನು. ಇಲ್ಲಿನ ಶಾಸನದ ಕಾಲ ಕ್ರಿ.ಶ. ೧೦೧೨. ಇದಕ್ಕೆ ಸ್ವಲ್ಪ ಹಿಂದೆ ಅಂದರೆ ಕ್ರಿ.ಶ. ೧೦೦೭ರಲ್ಲಿ ರನ್ನನು-ಕೇಶಿಮಯ್ಯನ ಸಂಪರ್ಕ ಹೊಂದಿ ತನ್ನ ಕಾವ್ಯವನ್ನು ಲಕ್ಕುಂಡಿ ಪಕ್ಕದಲ್ಲಿದ್ದ ಕೊಟುಮಚಗಿಯ ಕೇಶಿಮಯ್ಯನಿಂದ ತಿದ್ದಿಸಿಕೊಂಡಿರಬೇಕು. ಹೀಗಾಗಿ ರನ್ನ ನೆನೆದ ಕೇಶಿಮಯ್ಯನು, ಕೊಟುಮಚಗಿ ಶಾಸನದಲ್ಲಿ ಉಲ್ಲೇಖಗೊಂಡ ಕೇಶಿಮಯ್ಯನೇ ಆಗಿರಬೇಕು.

ಆಧಾರಸೂಚಿ

೧. **ವಿಭೂತಿ ಪೂಜೆ, ಕುವೆಂಪು** (ಪುಟ ೧೪).
೨. **ಗದಾಯುದ್ಧಂ,** (ಸಂ.) ಬಿ.ಎಸ್. ಸಣ್ಣಯ್ಯ, ರಾಮೇಗೌಡ (ಮೈ.ವಿ.ವಿ) (೧-೫೧).
೩. SII-XI-i-56 (ಕೊಟುಮಚಗಿ-ಶಾಸನ).
೪. **ಕರ್ನಾಟಕ ಕವಿಚರಿತೆ,** ೧, (ಪುಟ ೬೫).
೫. ಗೋವಿಂದಪೈ, **ಮೂರು ಉಪನ್ಯಾಸಗಳು,** ಕೆ.ಆರ್.ಐ., ಧಾರವಾಡ, ೧೯೬೦ (ಪು. ೪೧, ೫೨).

ಕೆಳದಿ ಗುಂಡಾಜೋಯಿಸ್*

ಅಲಹಾಬಾದಿನಲ್ಲಿರುವ ಕೆಳದಿ ತಿರುಮಲಭಟ್ಟನ ಗೀತಗೌರೀವರ ಹಸ್ತಪ್ರತಿ

ಭಾರತದಲ್ಲಿ ಜಯದೇವ ಕವಿಯ ಗೀತಗೋವಿಂದ ಕೃತಿಯು ದೇಶ ವಿದೇಶಗಳಲ್ಲಿ ಖ್ಯಾತಿ ಗಳಿಸಿದಂತೆ ದಕ್ಷಿಣ ಭಾರತದ ಕೆಳದಿ ಆಸ್ಥಾನದಿಂದ ತಿರುಮಲಭಟ್ಟನಿಂದ ರಚಿತವಾದ **ಗೀತಗೌರೀವರ** "ಅಜ್ಞಾತ ಕೃತಿಯ ಹಸ್ತಪ್ರತಿ ಯೊಂದನ್ನು ಅಂತರರಾಷ್ಟ್ರೀಯ ಖ್ಯಾತ ವಿದ್ವಾಂಸ ಡಾ. ಗಯಾಚರಣ ತ್ರಿಪಾಠಿರವರು ಅಲಹಾಬಾದಿನಲ್ಲಿ ಪರಿಶೋಧಿಸಿ ಗಂಗಾನಾಥ ಝೂ ಕೇಂದ್ರೀಯ ಸಂಸ್ಕೃತ ವಿದ್ಯಾಪೀಠ ಪ್ರಯಾಗದಿಂದ ಪ್ರಕಟಿಸಿ ವಿನೂತನ ಬೆಳಕು ಚೆಲ್ಲುತ್ತಾ ಕೆಳದಿ ಇತಿಹಾಸಕ್ಕೆ ಉನ್ನತ ಸ್ಥಾನವನ್ನು ದೊರಕಿಸಿಕೊಟ್ಟಿದ್ದಾರೆ. ಈ ಕೃತಿಯಮಹತ್ವವನ್ನು–

I am happy to present before the lovers of sanskrit poetry the present lyrical work of the poet Tirumala Bhatta which has been composed on the theme of the love union of siva and parvati, The elernal divine couple and the primordial parents of the universe (of 'Jagatah pitaran' of Raghuvamsa I.I.) What the poet describes and highlights here howeve, is not the amorous dalliance of the couple, but the painful seperation of parvati from her lord and her eraing for union with her beloved husband who is busy with gods and sages etc., bestowing favours upon them or solving their problems, thus looking after the welfare of the world.

गीतगोविन्द की एक अनुपम अनुकृति
गीतगौरीवरम्

ಎಂದು ವರ್ಣಿಸಿದ್ದಾರೆ.

ಕೆಳದಿ ಆಸ್ಥಾನ ಪರಂಪರೆ

ಕವಿ ತಿರುಮಲಭಟ್ಟನೇ 'ಗೀತ ಗೌರೀವರ' ಕೃತಿಯಲ್ಲಿ ನಿರೂಪಿಸಿದಂತೆ–

> **ಸತ್ಯಂ ಸಾಹಿತ್ಯಮುದ್ಧರ್ತುಂ ಭೋಜೇ ವೇಂಕಟ ರಾಜತಾಮ್ ।**
> **ಪ್ರಾಪ್ತೇತು ಕಾಲಿದಾಸೋಽಯಂ ಕವಿಸ್ತಿರುಮಲಾಭಿಧಃ ॥**

ಭೋಜ, ಕೃಷ್ಣದೇವರಾಯ (ವಿಜಯನಗರ), ಅಕ್ಬರ ಮುಂತಾದ ಅಗ್ರಮಾನ್ಯ ಸಂಸ್ಥಾನಾಧೀಶರ ಆಸ್ಥಾನದಂತೆ ಕೆಳದಿ ಆಸ್ಥಾನದಿಂದ ಭಟ್ಟೋಜೀದೀಕ್ಷಿತ, ಅಶ್ವಪಂಡಿತ, ರಾಮಾನುಜಶೃಂಗಿ, ನಿರ್ವಾಣಯ್ಯ ರಂಗನಾಥ ದೀಕ್ಷಿತ, ಲಿಂಗಣ್ಣ ಕವಿ ಮುಂತಾದ ಖ್ಯಾತ ವಿದ್ವಾಂಸರು ಕೃತಿ ರಚನೆ ಮಾಡಿ ಆಸ್ಥಾನವನ್ನು ಉನ್ನತ ಮಟ್ಟಕ್ಕೇರಿಸಿದ್ದಾರೆ. ಡಾ. ತ್ರಿಪಾಠಿರವರೇ–

ಪ್ರತೀಯತೇ ಯದಯಂ ಕೆಳದೀಪುರಾಧೀಶೋ ವೇಂಕಟಾದ್ರಿಃ ಸ್ವಯಮಪಿ ವಿದ್ಯಾವ್ಯಸನೀ ಗುಣಗ್ರಾಹೀ ಸುಕವಿವಿದ್ವಜ್ಜನಶರಣ್ಯಶ್ಚಾಸೀತ್ ಯತಃ ತಿರುಮಲಸ್ತಂ "ಅಭಿನವ ಭೋಜ" ಇತಿ ಬಿರುದೇನ" ಸುಕವಿಜನಸುರಭುಜ" ವಿಶೇಷಣೇನ ಚ ಪ್ರತಿಸರ್ಗಂ ಪುಷ್ಪಿಕಾಯಾಂ ವಿಭೂಷಯಾತಿ– ಈ ರೀತಿ ಅಭಿಪ್ರಾಯಪಟ್ಟಿದ್ದಾರೆ.

ಇದೇ ಮಾಲೆಯಲ್ಲಿ ಕೆಳದೀ ಬಸವರಾಜನೂ ಖ್ಯಾತ ವಿದ್ವಾಂಸನಾಗಿದ್ದು ಶಿವತತ್ವರತ್ನಾಕರ ಕೃತಿಕಾರನಾಗಿ ಭೋಜ ಕಾಳಿದಾಸರಂತೆ ಶೋಭಿಸಿ ಕವಿ ತಿರುಮಲಭಟ್ಟನೂ ಆಸ್ಥಾನದ ಕೀರ್ತಿಯನ್ನು ಬೆಳಗಿಸಿದ್ದಾನೆ. ಕೆಳದಿ ಆಸ್ಥಾನದ ಕೃತಿಗಳು ದೇಶ ವಿದೇಶಗಳಲ್ಲಿ ವಿವಿಧ ಭಾಷೆಗಳಲ್ಲಿ ಈಗಲೂ ಪ್ರಕಟವಾಗುತ್ತಲೇ ಇರುವುದನ್ನು ಕಾಣಬಹುದು. ಮೇರು ಕೃತಿಗಳಾದ ಶಿವತತ್ವರತ್ನಾಕರ, ಕೆಳದೀ ನೃಪವಿಜಯವನ್ನು ಉದಹರಿಸಬಹುದು. ಅಜ್ಞಾತವಾಗಿ ಡಾ. ತ್ರಿಪಾಠಿರವರಿಂದ ಬೆಳಕು ಕಂಡ ತಿರುಮಲಭಟ್ಟನ ಗೀತಗೌರವ ಕೃತಿಯು ಈ ಸಾಲಿನಲ್ಲಿ ಸೇರಲು ಅರ್ಹವಾಗಿದೆ.

ಗೀತಗೌರೀವರ ಹಸ್ತಪ್ರತಿ

I New catalogues Catalogorum (AARS & AWA ; Vol. VI, University of Madras, 1971. Gita Gowrivara Kavya in 13, Sargas by Tiurmala Bhatta, Jodhpur 204 ; Rice 270; Sringeri 177 (an) page 37.

II Gita Gowrivara of Tirumala Bhatta Malnad Research Academy ; Shimoga G.V. Kallapura ; X The world Sanskrit Confernce ; Jan 3-9, 1997 ;

*ಕೆಳದಿ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

Taralabalu Kendra, Bangalore - 560 037. Page 180. ಡಾ. ಜಿ.ಸಿ. ತ್ರಿಪಾಠಿರವರು ನನಗೆ Ref No. 0-18/A 98 544 D 5-1-1998. (Regd Post) ಮೇರೆಗೆ ಶ್ರೀ ಕಲ್ಲಾಪುರ್‌ರವರಲ್ಲಿ ಪ್ರಸ್ತಾಪಿಸಿದಾಗ ದಿನಾಂಕ : ೬-೧-೧೯೯೮ರಂದು ಬರೆದದ್ದು ಹಸ್ತಪ್ರತಿ ವಿವರ : ತಾಳೆಯೋಲೆ; ಭಾಷೆ : ಸಂಸ್ಕೃತ ; ೪೫ ಗರಿಗಳಿವೆ ; ೧೩ ಸರ್ಗಗಳಿವೆ ; ಇಷ್ಟನ್ನು ವಿವಿಧ ಷರತ್ತುಗಳೊಂದಿಗೆ ನಮೂದಿಸಿದ್ದಾರೆ ; ಈವರೆಗೂ ಹಸ್ತಪ್ರತಿ ಅವಲೋಕನೆಗೆ ನೀಡಿರುವುದಿಲ್ಲ. ಇದನ್ನೇ ಡಾ. ತ್ರಿಪಾಠಿರವರು ಸಂಸ್ಕೃತ ಭಾಷೆಯ ಭೂಮಿಕಾದಲ್ಲಿ–

ಶಿಮೊಗಾಜನಪದಸ್ಥ ಜಯನಗರ ವಾಸಿನಃ ಜಿ.ವಿ. ಕಲ್ಲಾಪುರ ಮಹಾಭಾಗಾಃ ಏಕಸ್ಯ ಗ್ರಂಥಸ್ಯ ಕೆಳದೀ ಸಂಗ್ರಹಾಲಯೇ ಸುರಕ್ಷಿತಾಂ ಪಾಂಡುಲಿಪಿಮಲೋಚ್ಯ ಬೆಂಗಲೂರ ನಗರೇ ೧೯೭೭ ತಮೇವರ್ಷೇ ಸಂಜಾತೇ ವಿಶ್ವಸಂಸ್ಕೃತ ಸಮ್ಮೇಲನೇ ಶೋಧಪತ್ರಮೇಕಂ ಪ್ರಸ್ತುತವಂತಃ ಇತ್ಯಸ್ಮಾಕಂ ಶೃತಿಗೋಚರತಾಂ ಗತವಮ್ (ತೇಷಾಂ ವರ್ತಮಾನಃ ಪತ್ರಸಂಕೇತಃ 'ಶ್ರೀರಾಘವೇಂದ್ರ ಮಠಮ್' ಸಾಗರ ೫೭೭೪೦೧. ಮುಂದುವರಿದು–

The text of this edition is based more or less exclusively on that manuscripts. One preservation our vidya pitha and the other in the Pustaka Prakash (Maharaja Mansingh Pustakalaya Jodhpur for the procurement of a copy of which I am indebted my friend Dr. Gaiuidram charora of that city. I am aware of the existance of one or two more MSS of the work But They renamed unaccessible to me. It is thus not a critical edition in the strict sense of the term, but at least a new work is thus being brought to light in a more or less readalble form. I do not think that new manuscripts would alter much of the readings accepted by me. ಕೆಳದಿ ಸಂಗ್ರಹಾಲಯದ ಉಲ್ಲೇಖದೊಂದಿಗೆ (ಪು. ೨) ಹಿಂದೀ ವಿದ್ವತ್ ಸಭೆಯಲ್ಲಿ ಮಂಡಿಸಿದ ಪ್ರಬಂಧದಲ್ಲಿ–

ಇಸ್ ರಾಗಕಾವ್ಯ ಮೇ ತೇರಹ ಸರ್ಗ ಹೈಂ, ಜಯದೇವ ಕೃತ ಗೀತಗೋವಿಂದ ಸೇಃ ಏಕ ಸರ್ಗ ಅಧಿಕ। ಗೀತಗೋವಿಂದ ಮೇ ಪ್ರತ್ಯೇಕ ಸರ್ಗಮೇ ದೋ ಅಷ್ಟಪದಿಯೋಂಕೇ ಅನುಸಾರ ಕುಲ ೨೪ ಅಷ್ಟಪದಿಯಾಂ ಹೈಂ ತೋ ಗೀತಗೌರವರಂ ಮೇ ೨೬೧ ಬತ್ತೀಸ ಅಕ್ಷರೋಂ ಕೇ ಏಕಕ ಕೋ ಪಾಂಡುಲಿಪಿ ಲೇಖಕ 'ಗ್ರಂಥ' ಸಂಜ್ಞಾದೇತೇ ಹೈಂ । ಪ್ರಾಚೀನ ಸಮಯ ಮೇ ಪಾಂಡುಲಿಪಿ ಲೇಖಕೋಂ ಕೋ ಪಾರಕ್ರಮಿಕ ಕಾಭುಗತಾನ ಗ್ರಂಥ ಸಂಖ್ಯಾ ಕೇ ಅನುಸಾರ ಕಿಯಾ ಜಾತಾ ಥಾ । ಗೀತಗೌರೀವರಮ್ ಕಾವ್ಯಕಾ ಪರಿಮಾಣ ಪೂರೇ ೭೦೦ ಗ್ರಂಥೋ (ಅರ್ಥಾತ್ ೭೦೦ X ೩೨ = ೨೨೪೦೦ ಅಕ್ಷರ) ಕಾ ಹೈ । ಭಗವದ್ಗೀತಾ ಆದಿ ಆರ್ಷಗ್ರಂಥೋಂ ಕಾ ಪರಿಮಾಣ ಇತನಾ ಹೋನೇ ಕೇ ಕಾರಣ ಸಂಭವತಃ ಕವಿ ಕೋ ಯಹ ಸಂಖ್ಯಾ ಮಾಂಗಲಿಕ ಪ್ರತೀತ ಹುಯಿ । (ಪುಟ ೩).

–ಎಂದು ಉಲ್ಲೇಖಿಸಿದ್ದಾರೆ. ಶ್ರೀ ಶೃಂಗೇರಿ ಮಠದ ಹಸ್ತಪ್ರತಿ ಕ್ಯಾಟಲಾಗನ್ನು ಶ್ರೀ ಜಗದ್ಗುರುಗಳ ಪ್ರೋತ್ಸಾಹದ ಮೇರೆಗೆ ಕೆಳದಿ ಸಂಶೋಧನಾಲಯ ನಿರ್ವಹಿಸಿಕೊಟ್ಟಿದೆ.

ಕೆಳದಿ ಆಸ್ಥಾನಕವಿ ತಿರುಮಲಭಟ್ಟ

ಗೀತಗೌರೀವರ ೧೩ನೇ ಸರ್ಗದ ೫ನೇ ಶ್ಲೋಕದಲ್ಲಿ–

ವೇಂಕಟ ನೃಪಪತಿ ಸುಮತಿ ಕಲಿತ ರಚನಮ್ ।
ಜಯತಿ ನರಸಾಂಬಿಕಾ ತನಯ ವಚನಮ್ ॥

ಅತ್ರಿಗೋತ್ರಸುಧಾಬ್ಧಿ ಕೌಸ್ತುಭ ವಿಷ್ಣು ಸೂರಿಸುತೇನ ।
ಗೀತಮೇತದಕಾರಿ ವೇಂಕಟರಾಜ ಭೋಜಮತೇನ ॥

ಆತ್ಮಾನಂ ಉಭಯ ಕವಿಕುಲತಿಲಕಮಿತಿ ಪ್ರಥಯತಾ ಸಕದಾಚಿದ್ ಧ್ವನಯತಿ ಯತ್ ತಸ್ಯ ಮಾತೃಕುಲೇ ಪಿತೃಕುಲೇಚೋಭಯತ್ರ ಪ್ರಥಿತಯಶಸಃ ಕವಯೋ ಆಜಾಯಂತ । ಅತ್ರಿಗೋತ್ರೇ ಲಬ್ಧಜನೇರಸ್ಮಾಕಂ ಕವೇರ್ಮಾತ್ರ್ನಾಮ ನರಸಾಂಬಿಕಾ ಪಿತೃಶ್ಚನಾಮಧೇಯಂ ವಿಷ್ಣುಭಟ್ಟ ಇತ್ಯಾಸೀತ್

ಇದೇ ಪ್ರಥಮ ಸರ್ಗ ೧೧ನೇ ಶ್ಲೋಕದಲ್ಲಿ–

ಕೀರ್ತಿವರ್ಣೇನ ಏಷ ಕುಪ್ಯತಿ ಶಶೀಬುದ್ಧೇರ್ಗುರು ಸ್ತೇಜಸಸ್
ತೀಕ್ಷ್ಣಾಂಶುಃ ಪೃಥುಸಂಪದೋನಮುಚಭಿದ್ ರೂಪಸ್ಯ ಪುಷ್ಪಾಯುಧಃ ।
ಗಂಧರ್ವಾಃ ಕೆಳದೀಶ ವೆಂಕಟವಿಭೋರ್ಗಾಯಂತಿ ವಿಶ್ರಾಣನಮ್ ॥
ಇದಮಸ್ಮಜ್ಜನಕೇನ ಶ್ರೀ ವಿಷ್ಣುಭಟ್ಟೇನ ಕೃತಂ ಪದ್ಯಂ

ಇದರಿಂದ ಕವಿ ತಿರುಮಲಭಟ್ಟನ ಪಿತಾಮಹ ವಿಷ್ಣುಭಟ್ಟನೂ ಕೆಳದಿ ಆಸ್ಥಾನದಲ್ಲಿದ್ದುದು ಕಂಡುಬರುತ್ತದೆ. ಪ್ರಥಮ ಹಾಗೂ ಅಂತ್ಯಸರ್ಗದ ಕೊನೆಯಲ್ಲಿ–

ಇತಿ ಶ್ರೀಮನ್ಮಮಹಾವರಾಹ ದೇಹಸಂಭೂತ ತುಂಗಭದ್ರಾಂಗ
ನೋಪಕಂಠ ಮಂಗಲಸೂತ್ರಾಯಮಾಣ ಶೃಂಗಪುರೀಮಠಾ
ಧೀಶ ನಾರಸಿಂಹಭಾರತೀ ಯತೀಂದ್ರ ಚಾರುಚರಣಾರವಿಂದ

ಚಂಚರೀಕಾಯಮಾಣ ಸಕಲ ಪಂಡಿತ ಮಂಡಲೀ ಮಂಡನೀ
ಭೂತಸಾಹಿತ್ಯ ಶಿಕ್ಷಾಚಾರ್ಯ ಶ್ರೀವಿಷ್ಣುಭಟ್ಟನಂದನೇನ
ಕೃತಕಸ್ತೂರಿಕಾಮಂಜರೀ ಪ್ರಮುಖಾನೇಕ ನಿಬಂಧನೇನ
ಉಭಯಕವಿಕುಲ ತಿಲಕೇನ ತಿರುಮಲಭಟ್ಟೇನ
ವಿರಚಿತೇ ಕೇಲರಿ (ಕೆಳದಿ) ಪುರಾಧಿನಾಯಕ ಸದಾ
ಶಿವರಾಯನಾಯಕ ಕುಮಾರ ಜಗದೇಕವೀರ
ಶಂಕರಭೂಪಾಲತನುಜಸ್ಯ ರಾಮರಾಜ ತಿಲಕಾನುಜಸ್ಯ
ಸುಕವಿ ಜನಸುರಭುಜಸ್ಯಾಭಿನವಭೋಜಸ್ಯ
ಶ್ರೀವೆಂಕಟಾದ್ರಿನಾಯಕ ಮಹಾರಾಜಸ್ಯ ಮನೋ
ವಿನೋದನಕರೇ ಶ್ರೀ ಗೀತಗೌರೀವರೇ ಕಾವ್ಯಮುಖೇ
ನಿಜೇಷ್ಟದೇವತಾಮೂರ್ತಿವರ್ಣನಂ ನಾಮ ಪ್ರಥಮಃ ಸರ್ಗಃ ॥

(ಭೂಮಿಕಾಃ ಪುಟ ೫ ; ೧೩ನೇ ಸರ್ಗ ಪುಟ ೭೫)

ಇಸ ಪುಷ್ಪಿಕಾ ಕೇ ಅಂತಿಮ ಪದೋಂ ಮೇಂ ಕವಿ ನೇ ಧ್ವನಿತ ಕಿಯಾ ಹೈ ಕಿ ಶಿವ ಉನಕೇ ಇಷ್ಟದೇವತಾ ಥೇ ಜಿನಕೀ (ಅಷ್ಟ) ಮೂರ್ತಿಯೋಂ ಕಾ ಉನ್ಹೋನೇ ಉಲ್ಲೇಖ ಇಸ್ ಪ್ರಥಮ ಸರ್ಗಮೇ ಕಿಯಾ ಹೈ । ವಸ್ತುತಃ ಕವಿ ಹೀ ನಹೀಂ, ಉಸಕೇ ಆಶ್ರಯದಾತಾ ನಾಯಕವಂಶೀ ಸಮಸ್ತ ರಾಜಾ ಭೀ ಶೈವಸಂಪ್ರದಾಯಾಂತರ್ಗತ 'ವೀರಶೈವ' ಮತ ಕೇ ಅನುಯಾಯೀ ಥೇ, ಸ್ಪಷ್ಟ ಹೈ ಇಸೇಲಿಯೇ ಉನ್ಹೋನೇ ಕವಿ ಕೋ ಪಾರ್ವತೀ ಏವಂ ಶಿವ ಕೀ ಪ್ರಣಯಕೇಲಿ ಕೋ ಆಧಾರ ಬನಾಕರ್ ಐಸೇ ಕಾವ್ಯ ಕೀ ರಚನಾ ಕರನೇ ಕೀ ಪ್ರೇರಣಾ ದೀ ।

೧೧ನೇ ಸರ್ಗ ೧೦ (೮) ಶ್ಲೋಕದಲ್ಲಿ–

ಕೋಟೆ ಕೋಲಾಹಲ ಬಿರುದಾಭೃತ್ ವೇಂಕಟನೃಪ ಕವಿ ತಿರುಮಲಗೀತಮ್ ।
ಜಯತಿ ಜಗತಿ (ಧೃತ ಭವ ಭಾವಂ) ದಯಿತಾಧರಮಧು ಸಹಜಾತಮ್ ॥ ೯ ॥ ॥ ೧೦ ॥

ಕೆಳದಿ ದೊರೆಗೆ ಕೋಟೆ ಕೋಲಾಹಲ ಬಿರುದಿದ್ದುದೂ ಸೇರಿದಂತೆ ಡಾ. ತ್ರಿಪಾಠಿರವರು–

....he makes a mention of his another work "kasturikamaraj' Perhaps a Natika, but I must admit that I have not seen it in print or in manuscript form.

ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ. ಶಾ.ಶ. ೧೫೧೧ (ಕ್ರಿ.ಶ. ೧೫೮೯) ರಲ್ಲಿ ರಚನೆಯಾದ "ಗೀತಗೌರೀವರ" ಕೃತಿಯಲ್ಲಿ ತಿರುಮಲಭಟ್ಟನು ತನ್ನ ಇಷ್ಟದೇವತೆ ಕೊಲ್ಲೂರು ಮೂಕಾಂಬಿಕೆಯನ್ನು ಭಕ್ತಿಯಿಂದ ಸ್ಮರಿಸಿದ್ದಾನೆ. ಅಭಿನವ ಭೋಜ–ಕಾಳಿದಾಸರಂತೆ–

ಸತ್ಯಂ ಸಾಹಿತ್ಯಮುದ್ಧರ್ತುಂ
ಭೋಜೇ ವೇಂಕಟರಾಜತಾಮ್ ।
ಪ್ರಾಪ್ತೇತು ಕಾಳಿದಾಸೋಽಯಂ
ಕವಿಸ್ತಿರುಮಲಾಭಿಧಃ ॥

ಎಂದಿರುವುದು ಉತ್ಪ್ರೇಕ್ಷೆಯಾಗಲಾರದು. ತಮ್ಮ ನಿರರ್ಗಳವಾದ ಸಂಸ್ಕೃತ ಭಾಷೆಯಲ್ಲಿಯೇ– ಕೆಳದೀ ಪುರಾಧೀಶಾ ನಾಯಕ ವಂಶೀಯಾ ಸರ್ವೇಽಪಿ ರಾಜಾನೋ ಶೈವ ಸಂಪ್ರದಾಯಾಂತರ್ಗತಸ್ಯ 'ವೀರಶೈವ" ಇತ್ಯಾಖ್ಯಸ್ಯ ಮತಸ್ಯಾವಲಂಬಿನ ಆಸನ್ನತಃ ಕೆಳದೀ ಪುರಾಧಿಪತಿನಾ ವೇಂಕಟಾದ್ರಿಣಾ ಪಾರ್ವತೀ ಶಂಕರಯೋ ಪ್ರಣಯ ಕೇಲಿಮಧಿಕೃತ್ಯ ಕಾವ್ಯರಚನಾಂ ಕರ್ತುಂ ಕವಿಸ್ತಿರುಮಲಃ ಪ್ರಾರ್ಥಿತಃ ಪ್ರೇರಿತಶ್ಚೇತಿ ಸತ್ಯಂ ಸ್ವಾಭಾವಿಕಂ ಚ ಪ್ರತಿಭಾತಿ– ಎಂಬುದಾಗಿ ನಿರೂಪಿಸಿದ್ದಾರೆ. ಹಿಂದೀ ಭಾಷೆಯಲ್ಲಿನ ಅವರ ಪ್ರಬಂಧಗಳ ಅವತರಣಿಕೆಯನ್ನೂ ಅವಲೋಕಿಸಬಹುದಾಗಿದೆ. ಕೃತಿಯಲ್ಲಿ ಉಲ್ಲೇಖಿಸಿದಂತೆ ಶೃಂಗೇರಿ Vನೇ ನರಸಿಂಹ ಭಾರತಿಗಳ ಕಾಲ ೧೫೭೬–೧೯೯೯ಕ್ಕೆ ಸರಿಹೊಂದುತ್ತದೆ.

ಗೀತಗೌರೀವರ ಕೃತಿ

ಜಯದೇವ ಕವಿಯ ಗೀತಗೋವಿಂದದಲ್ಲಿ ೧೨ ಸರ್ಗವಿದ್ದರೆ ತಿರುಮಲಭಟ್ಟ ಗೀತಗೌರೀವರ ೧೩ ಸ್ವರ್ಗವನ್ನು ಹೊಂದಿದ್ದು ಈ ರೀತಿ ಇದೆ.

ಸರ್ಗ	ಗೀತಗೌರೀವರ	ಗೀತಗೋವಿಂದ
೧	ನಿಜೇಷ್ಟ ದೇವತಾಮೂರ್ತಿ ವರ್ಣನಂ	ಸಾಮೋದದಾಮೋದರೋ ನಾಮ
೨	ಸಂಕೀರ್ಣ ಶಂಕರವರ್ಣನಂ	ಅಕ್ಲೇಶ ಕೇಶವೋನಾಮ
೩	ಪಾರ್ವತೀವಿರಹ ಶೈತ್ಯೋಪಚಾರ ವರ್ಣನಂ	ಮುಗ್ಧ ಮಧುಸೂದನೋನಾಮ
೪	ಶಿಶಿರೋಪಚಾರ ವೈಫಲ್ಯ ನಿವಾರಕನಾಯಿಕಾ ವಚೋವರ್ಣನಂ	ಸ್ನಿಗ್ಧ ಮಧುಸೂದನೋ ನಾಮ
೫	ವಿರಹೋತ್ಕಂಠಿತನಾಯಿಕಾ ಕಥಿತ ಪ್ರಿಯಸ್ಮರಣ ಸ್ಮರಣತದನಾಗಮ ಕಾರಣ ವಿಚಾರ ವರ್ಣನಂ	ಅಭಿಸಾರಿಕಾ ವರ್ಣನೋಸಾಕಾಂಕ್ಷ ಪುಂಡರೀಕಾಕ್ಷೋ ನಾಮ

೬ ಸದಾಶಿವ ಸಭಾಗೌರೀಪ್ರಮದ ವರ್ಣನಂ	೬ ವಾಸಕ ಸಜ್ಜಾವರ್ಣನೇಧೃಷ್ಟ ವೈಕುಂಠೋ ನಾಮ
೭ ದೇವೀ ಸಖೀಕೃತ ಪುಷ್ಪಾವಚ ಯನಸ್ವತಾಪ ವರ್ಣನಂ	೭ ವಿಪ್ರಲಬ್ಧಾವರ್ಣನೇ ನಾಗರ ನಾರಾಯಣೋ ನಾಮ
೮ ಚಂದ್ರೋದಯ ತದನಂತರ ನಾಯಿ ಕಾ ಪ್ರಲಾಪ ವರ್ಣನಂ	೮ ಖಂಡಿತಾ ವರ್ಣನೇ ವಿಲಕ್ಷ್ಯ ಲಕ್ಷ್ಮೀಪತಿರ್ನಾಮ
೯ ಸಖೀಮುಖೇನ ನಾಯಕಾಗ್ರೇ ದೇವೀ ವಿರಹಾವಸ್ಥಾ ಕಥನಸ್ಯನಾಯಿಕಾಗ್ರೇ ಪ್ರಿಯಾಗಮನಾಶಂ ಸನಸ್ಯ ವರ್ಣನಂ	೯ ಕಲಹಾಂತರಿಕಾ ವರ್ಣನೇ ಮುಗ್ಧ ಮುಕುಂದೋ ನಾಮ
೧೦ ವಾಸಕ ಸಜ್ಜಿಕಾವದಲಂಕರಣಸ್ಯ ಆಗಚ್ಛತೋ ನಾಯಕಸ್ಯನಾಯಿಕಾ ಕೋಪಪ್ರಸಾದ ಚಿಂತಾ ವಿತರ್ಕಸ್ಯವ ವರ್ಣನಂ	೧೦ ಮಾನಿನೀ ವರ್ಣನೇ ಚತುರ ಚತುರ್ಭುಜೋನಾಮ
೧೧ ವರಯಾತ್ರೀಕೃತನಾಯಕೋಪಾಲಂಭ ತದ್ವಿರಹ ವರ್ಣನಂ	೧೧ ರಾಧಿಕಾಮಿಲನೇ ಸಾನಂದ ದಾಮೋದರೋ ನಾಮ
೧೨ ನಾಯಕೋದ್ಯಾನ ಪ್ರಲಾಪ-ನಾಯಿಕಾ ಸಂದರ್ಶನ ವರ್ಣನಂ	೧೨ ಸುಪ್ರೀತ ಪೀತಾಂಬರೋನಾಮ
೧೩ ನಾಯಿಕಾ ವಿಶ್ರಂಭಣ ಸಂಭೋಗ ವರ್ಣನಂ	

ಗೀತ ಗೌರೀವರ ಕೃತಿರಚನಾ ಕಾಲ

ಕವಿ ತಿರುಮಲಭಟ್ಟನ ಗೀತಗೌರೀವರ ಕೃತಿಯ ಕಾಲವನ್ನು ೧೩ನೇ ಸರ್ಗದ ೧೫ನೆಯ ಶ್ಲೋಕದಲ್ಲಿ-

ಅಬ್ದೇ ಭಾಸ್ವತಿ ಶಾಲಿವಾಹನ ಶಕೇ ಭೂಮಿಂದು ಬಾಣಕ್ಷಮಾ
ಸಂಖ್ಯಾಶಾಲಿನಿ ಸರ್ವಧಾರಿಣಿ ಜಗದ್ವಾಂಛಾಪ್ರದಾನೋತ್ಸು ಕಾಮ್ ।
ಕಾಶೀವಲ್ಲಭ ವಿಶ್ವನಾಥ ಮಹಿಷೀಮುದ್ದಿಶ್ಯ ಮೂಕಾಂಬಿಕಾಂ
ಶ್ರೀಮದ್ವೇಂಕಟ ಭೂಮಿಪಾಲ ವಚನಾ ಸೋಽಯಂ ಪ್ರಬಂಧೋಜ್ಜನಿ ॥

ಅಂಕಾನಾಂ ವಾಮತೋಗತಿರಿತಿ ನ್ಯಾಯೇನ ಕೃತಾಯಾಂ ಗಣನಾಯಾಂ ಭೂಮಿಃ । ಇಂದುಃ । ಬಾಣಾಃ ೫ ಕ್ಷಮಾ । ಏವಂ ॥ ೫ ॥ ಶಕ ಸಂವತ್ಸರೋ ಯದಿವಾ ೧೫೮೯ ಇಸವೀಯವತ್ಸರೋಽಸ್ಯ ಗ್ರಂಥಸ್ಯ ರಚನಾವರ್ಷ ಮಿತಿ ನಿಶ್ಚಿಯತೇ । ಉಭಾವಪಿ ಕವಿಸ್ತಸ್ಯಾಶ್ರಯದಾತಾಚ ವಿಶ್ವನಾಥಸ್ಯ ಮೂಕಾಂಭಿಕಾಖ್ಯಾಯಾಃ ದೇವ್ಯಾಶ್ಚ ಭಕ್ತಾವಸ್ತಾಮಿತ್ಯನೇನ ಸ್ಪಷ್ಟಮ್ । ಮೂಕಾಂಬಿಕಾಖ್ಯದೇವ್ಯಾಃ ದಕ್ಷಿಣಾವರ್ತೇಽತೀವ ಭಕ್ತ್ಯುದ್ರೇಕೇನ ಸಮರ್ಚಿತಾಯಾಃ ಮಂದಿರಂ ಕರ್ನಾಟಕ ಪ್ರದೇಶಸ್ಯ ಕೊಲ್ಲೂರ ಇತಿ ನಾಮ್ನೇ ಸ್ಥಾನೇ ವರ್ತತೇ । ಅಸ್ಯಾಃ ಸಮರ್ಚನೇನ ಮೂಕೋಪಿ ಕವಿರ್ಭವತೀತಿ ಪ್ರಸಿದ್ಧಃ । ವಿಶ್ವನಾಥ ಶಬ್ದಸ್ಯೋಲ್ಲೇಖಃ ಕಾಶೀಗತಂ ಏತದಾಖ್ಯಂ ಜ್ಯೋತಿರ್ಲಿಂಗ ಪ್ರತ್ಯಪಿ ಕವೇಃ ಶ್ರದ್ಧಾಂ ಭಕ್ತಿಂ ಚ ಪ್ರಮಾಣಯತಿ ।

ಈ ರೀತಿ ಗ್ರಂಥದಲ್ಲಿಯೇ ಕಾಲವಮಾನದ ಉಲ್ಲೇಖನವೂ ಗಮನಾರ್ಹವಾಗಿದೆ.

ರಾಗ ಕಾವ್ಯ ತಾಲ ವಿವರಣೆ

ಸಾಮವೇದ ವಿದ್ವಾಂಸರಾದ ಡಾ. ತ್ರಿಪಾಠಿರವರು ಗೀತಗೌರೀವರ ಗ್ರಂಥದಲ್ಲಿ ಉಲ್ಲೇಖನಗೊಂಡಿರುವ ಸಂಗೀತ ರಸ ಮಾಧುರ್ಯದ ರಾಗ ಕಾವ್ಯ ತಾಲ ಪ್ರಸ್ತಾರ ಪರಿಚಯವನ್ನು-

ಅಸ್ಮಿನ್ ರಾಗಕಾವ್ಯೇ ಯೇಷು ವಿಭಿನ್ನೇಷು ರಾಗೇಷು ಗ್ರಂಥಸ್ಯಾಷ್ಟಪದ್ಯೋ ನಿಬದ್ಧಾಸ್ತೇಷಾಂ ಸಂಜ್ಞಾಪೃಥಮ್- ರಾಮಕರೀ ಮಾಲವಗೌಡಃ ಗುರ್ಜರೀ ಕರ್ಣಾಟಃ ವಸಂತಃ ವರಾಟೀ ದೇಶೀವರಾಟೀ ದೇಶಾವರಃ ಕೇದಾರಃ ಭೈರವಃ ಧನಾಶ್ರೀಃ ವಿಭಾಸಶ್ಚ-

ಪ್ರಾಯಃ ಸ್ಯೈವಾಷ್ಟಪದೀ ವೈಕಲ್ಪಿಕರೂಪೇಣಾಪರೇಣಾಪಿ ಕೇನಾಚಿದ್ ರಾಗೇಣ ಗಾತುಂ ಶಕ್ಯತೇ । ಕವಿರಪಿ ಕಾಸಾಂಚಿದಷ್ಟ ಪದೀನಾಂ ಕೃತೇ 'ವಾ' ಇತಿ ಶಬ್ದೇನ ರಾಗದ್ವಯಸ್ಯಾಪ್ಯುಲ್ಲೇಖಂ ಕರೋತಿ (ಯಥಾ ಗುರ್ಜರೀರಾಗೇ ಧನಾಶ್ರೀರಾಗೇ ವಾ ಮಾಲವ ಗೌಡರಾಗೇ ಕರ್ಣಾಟೇ ವಾ ಇತ್ಯಾದಿ) ಏತದ್ರಾಗ ಸಂಗತಾನಾಂ ತಾಲಾನಾಮಪಿ ಸಂಖ್ಯಾ ಭೂಯಸೀ । ಯತಿ

ನಿಸ್ಸಾರ ತಾಲ ಏಕತಾಲ ಪ್ರತಿಮಂದ್ರ ದ್ರುತಾಖ್ಯ ತಾಲಾನಾಂ ತೇನೋಲ್ಲೇಖಃ ಕೃತಃ । ಅತ್ರಾಪಿ ಕುತ್ರಚಿದ್ ವೈಕಲ್ಪಕತ್ವಂ ಕಲ್ಪಿತಂ ತೇನ (ಯಥಾ ನಿಸ್ಸಾರತಾಲೇ ರೂಪಕೇ ವಾ ಏಕತಾಲೀ ತಾಲೇ ರೂಪ ಕೇವಾ ಇತ್ಯಾದಿ) ಹೀಗೆ ವರ್ಣಿಸಿದ್ದಾರೆ.

ಸರ್ಗ	ರಾಗ ಕಾವ್ಯ ತಾಲಗಳು	ವಿಶೇಷ
೧	ರಾಮಕರಿರಾಗೇ ಯತಿತಾಲೇ	ಪಲ್ಲವ ಉಲ್ಲೇಖ
೨	ಗೌಡಾ ಮಾಲವರಾಗೇ ಯತಿತಾಲೇ ಗುರ್ಜರೀರಾಗೇ ನಿಸ್ಸಾರತಾಲೇ	
೩	ರಾಮಕರಿರಾಗೇ ಯತಿತಾಲೇ	ಪಲ್ಲವ – " –
	ಕರ್ಣಾಟರಾಗೇ ಏಕತಾಲೀ ತಾಲೇ	ಧ್ರುವಪದಂ – " –
೪	ರಾಮಕರೀರಾಗೆ ವಿಭಾಸೇ ವಾ ಏಕತಾಲೀ ತಾಲೇ	ಅದೇ
	ಮಾಲವಗೌಡರಾಗೇಣ ಕರ್ಣಾಟೇ ವಾ ಪ್ರತಿಮಂದ್ರತಾಲೇ	ಅದೇ
೫	ಗುರ್ಜರೀರಾಗೇ ಧನಾಶ್ರೀರಾಗೇವಾ ರೂಪಕತಾಲೇ	ಅದೇ
	ಮಾಲವಗೌಡರಾಗೇ ಪ್ರತಿಮಂದ್ರತಾಲೇ	ಅದೇ
೬	ವಸಂತರಾಗೇ ರೂಪಕತಾಲೇ	ಅದೇ
	ವಸಂತರಾಗೇ ಏಕತಾಲೀತಾಲೇ	ಪಲ್ಲವ ಉಲ್ಲೇಖ
೭	ಗೌಡಮಾಲವ ದೇಶೀವರಾಟೀರಾಗೇ ನಿಸ್ಸಾರಕತಾಲೇ ರೂಪಕೇವಾ	ಧ್ರುವಪದಂ ಉ
	ಭೈರವರಾಗೇ ರೂಪಕತಾಲೇ	ಅದೇ
೮	ಗುರ್ಜರೀರಾಗೇ ಕೇದಾರೇ ವಾ ಏಕತಾಲೀ ತಾಲೇ	ಅದೇ
	ಗುರ್ಜರೀರಾಗೇ ಪ್ರತಿಮಂದ್ರ ತಾಲೇ	ಅದೇ
೯	ದೇಶೀವರಾಟೀರಾಗೇ ದೃತ ತಾಲೇ	ಧ್ರುವಪದಂ ಉ
	ಗುರ್ಜರಿರಾಗೇ ಪ್ರತಿಮಂದ್ರ ತಾಲೇ	ಅದೇ
೧೦	ಮಾಲವಗೌಡರಾಗೇ ನಿಸ್ಸಾರಕ ತಾಲೇ	ಅದೇ
	ವಸಂತರಾಗೇ ಗುರ್ಜರೀರಾಗೇ ಏಕತಾಲೀತಾಲೇ	ಅದೇ
೧೧	ದೇಶಾವರರಾಗೇ ಏಕತಾಲೀ ತಾಲೇ ರೂಪಕೇವಾ	ಅದೇ
	ಮಾಲವರಾಗೇ ಏಕತಾಲೀತಾಲೇ	ಅದೇ
೧೨	ಗುರ್ಜರೀರಾಗೇ ಏಕತಾಲೀತಾಲೇ ರೂಪಕತಾಲೇ ವಾ	ಪಲ್ಲವ ಉ
	ರಾಮಕರೀರಾಗೇ ಯತಿತಾಲೇ	ಧ್ರುವಪದಂ ಉ
೧೩	ವಿರಾಟೀರಾಗೇ ಪ್ರತಿಮಂದ್ರ ತಾಲೇ	ಅದೇ
	ವಿರಾಟೀರಾಗೇ ರೂಪಕತಾಲೇ	ಅದೇ

ಗೀತಗೌರೀವರ ಕೃತಿ ವರ್ಣನೆ

ವೆಂಕಟನೃಪವರಕಾರಿತಂ ರಸಪೂರಿತಂ
ಶೃಣು ಕವಿ ತಿರುಮಲ ಗೀತಮ್
ಜಯ ಜಗದೇಕಪತೇ ॥ ೮ ॥ ೫ ॥ ಪು ೨೧ (ಸರ್ಗ ೨)
ತಿರುಮಲ ಸುಕವಿ ಗೀತಮ್ ಕಲಿತಮತಿರಸೇನ ।
ಕೆಳದಿ ನೃಪತಿವಿನುತಂ ಜಯತಿ ಜಗತಿ ಸುಕೃತೇನ ॥
ಸರ್ಗ ೭ ॥ ೮ ॥ ೨ ॥ ಪು. ೪೧
ಅತ್ರಿಗೋತ್ರಸುಧಾಬ್ಧಿ ಕೌಸ್ತುಭವಿಷ್ಣುಸೂರಿಸುತೇನ ।
ಗೀತಮೇತದಕಾರಿ ವೆಂಕಟರಾಜ ಭೋಜಮತೇನ ॥
ಸರ್ಗ ೮ ॥ ೮ ॥ ೧೬ ॥ ಪುಟ ೪೯

ಸಂಗೀತ ಚೂಡಾಮಣಿ ಓಲೆಗರಿ ಹಸ್ತಪ್ರತಿಯೊಂದೂ ಕೆಳದಿ ಸಂಶೋಧನಾಲಯದಲ್ಲಿದೆ.

ವೆಂಕಟನೃಪನ್ನುತ ತಿರುಮಲಗೀತಮ್ ।
ಶಂಕರಲಲನಾಲಂಕೃತಪೂತಮ್ ॥
ಸರ್ಗ ೧೦ ॥ ೮ ॥ ೪ ॥ ಪುಟ ೫೭

ವೇಂಕಟನೃಪಪತಿ ಸುಮತಿ ಕಲಿತರಚನಮ್ ।
ಜಯತಿ ನರಸಾಂಬಿಕಾತನಯ ವಚನಮ್ ॥
ಸರ್ಗ ೧೩ ॥ ೮ ॥ ೫ ॥ ಪುಟ ೭೨

ಕಲಿಯುಗ ಕರ್ಣ ವೆಂಕಟನೃಪಲಾಲಿತ
ತಿರುಮಲ ಕವಿವರಗೀತಮ್ ।
ದಿಶತು ಶಿವಾನವ ಸಂಗಮಮುದಿತ
ಶಿವಃ ಶಿವಂ ಮತಿಜಾತಮ್ ॥
ಸರ್ಗ ೧೩ ॥ ೮ ॥ ೮ ॥ ಪುಟ ೭೪

ಕವಿ ಪ್ರಾರ್ಥನೆ (ಕೃತಿಯಲ್ಲಿ ಕಂಡಂತೆ)

ಕೆಳದಿ ವೆಂಕಟನೃಪತೇರ್ಮನಸಃ ಕೃತತೋಷಂ
ಶೃಣು ತಿರುಮಲ ಕವಿ ಗೀತಮದೋಷಮ್
ಶಂಕರಂ ಧೃತ ವಸುಮಿತಮೂರ್ತೇ
ಪಾಹಿ ಕೃಪಾ ಜಲಧೇ॥ ಸರ್ಗ ೨ ॥ ೮ ॥ ೨ ಪುಟ ೨೦

ವೆಂಕಟನೃಪವರ ಕಾಂತಮೇತಮ್ ।
ನೃತ್ಯತು ಭುವಿ ಕವಿ ತಿರುಮಲಗೀತಮ್ ॥
ಸರ್ಗ ೩ ॥ ೮ ॥ ೫ ಪುಟ ೨೫

ವೆಂಕಟನೃಪನುತ ತಿರುಮಲ ಕವಿ
ಕೃತಗೀತಂ ಮುದಯತಿ ಬುಧಾನಾಮ್ ।
ಜೀವನಮಚಲಸುತಾವನವರ್ಣನ
ಪಾವನಮತಿ ರಸಿಕಾನಾಮ್ ॥
ಸರ್ಗ ೬ ॥ ೧೧ ಪುಟ ೩೯

ವೆಂಕಟನೃಪನುತ ತಿರುಮಲಕೃತಿನಾ ।
ಗೀತಮಕಾರಕುಕವಿಗಿರಿಪವಿನಾ ॥
ಸರ್ಗ ॥ ೮ ॥ ೧೬ ಪುಟ ೫೫

ವೆಂಕಟನೃಪನಯನೇಂಗಿತಜಾತಮ್
ಶೃಣುತ ಬುಧಾಸ್ತಿರುಮಲಕವಿ ಗೀತಮ್ ॥
ಸರ್ಗ ೧೦ ॥ ೮ ॥ ೧೬ ಪುಟ ೬೦

ವೆಂಕಟನೃಪವರಕವಿರಚಿತಾನಿ ।
ಶೃಣು ಹರನಿಂದಾಸ್ತುತಿಭಣಿತಾನಿ ॥
ಸರ್ಗ ೧೧ ॥ ೮ ॥ ೪ ಪುಟ ೬೩

ವಿನಯ ವಿಶಂಕಟ ವೇಂಕಟಭುವನ
ವರಕವಿ ತಿರುಮಲ ನಿರ್ಮಿತಮ್ ।
ಲಲಿತಪದಂ ವಿಪದಂ ಹರತಾಂ ಸ್ಮರತಾಂ
ವಚನಂ ಬುಧ ಸಮ್ಮಿತಾಮ್ ॥
ಸರ್ಗ ೧೨ ॥ ೧೨ ಪುಟ ೭೦

ಕರ್ಣಶ್ರಾವ್ಯ ವಿಚಿತ್ರ ವೃತ್ತಕಲಿತಃ
ಶ್ಲಾಘ್ಯಾಖಿಲಾಲಂಕೃತಿ
ನಿತ್ಯಂ ಸ್ವಾರ್ಥನಿತಾಂತ ತೋಷಿತ ಬುಧಃ ಪ್ರದ್ವೇ
ಷಿನಾಮೂರ್ತಿಕೃತ್ ।
ಲೋಕಾನಂದಕರಃ ಪ್ರಸಾರಿತಯಶಾಃ
ಸೋಯಂ ಪ್ರಬಂಧಶ್ಚಿರಂ
ಶ್ರೀಮದ್ವೇಂಕಟರಾಜವದ್ವಿಜಯತಾಂ
ಶಂಭೋಃ ಪ್ರಸಾದಾದ್‌ಭುವಿ ॥
ಸರ್ಗ ೧೩ ॥ ೧೪ ಪುಟ ೭೫

ಉಪಸಂಹಾರ

ಗೀತಗೋವಿಂದ ಕಾವ್ಯವನ್ನು ಕುರಿತು ಜಯದೇವ ಕವಿಯು–

ಮೃದುಲಪದ ಸರಣಿ ಲಲಿತಂ
ರುಚಿರಾರ್ಥ ಸಂಹತಿ ಬಹುಲಂ
ಸರಸರಾಗನಿಬದ್ಧಸುಪ್ರಬಂಧ ಪ್ರಧಾನಂ
ಶೃಂಗಾರ ರಸ ಭಾಂಡಾರ ಸದೃಶಮಿದಂ
ಗೀತಗೋವಿಂದ ಕಾವ್ಯಂ

ಜಗನ್ನಾಥಪುರೀ ಪ್ರಾಂತೇ ದೇಶೀ
ಚೈವೋತ್ಕಲಾಭಿಧೇ ।
ಬಿಂದುಬಿಲ್ವಇತಿ ಖ್ಯಾತೋ ಗ್ರಾಮೋ
ಬ್ರಾಹ್ಮಣ ಸಂಕುಲಃ
ತತ್ರೋತ್ಕಲೇ ದ್ವಿಜೋ ಜಾತೋ
ಜಯದೇವ ಇತಿ ಶೃತಃ

ಕೃತಿಯಲ್ಲಿ ಕಾವ್ಯ ಹಾಗೂ ತನ್ನ ಪೂರ್ವೋತ್ತರವನ್ನು ಉಲ್ಲೇಖಿಸಿದಂತೆ ಕೆಳದಿ ಆಸ್ಥಾನ ಕವಿ ತಿರುಮಲಭಟ್ಟನೂ ವಿರಾಟೀರಾಗೇ ರೂಪಕ ತಾಳದ 'ರಾಗ ಕಾವ್ಯದಲ್ಲಿ–

ಅಬ್ದೇ ಭಾಸ್ವತಿ ಶಾಲಿವಾಹನ ಶಕೇ ಭೂಮಿಾಂದು
ಬಾಣಕ್ಷಮಾ
ಸಂಖ್ಯಾಶಾಲಿನಿ ಸರ್ವಧಾರಿಣಿ ಜಗದ್ವಾಂಭಾಪ್ರದಾ
ನೋತ್ಸುಕಾಮ್ ।
ಕಾಶೀವಲ್ಲಭ ವಿಶ್ವನಾಥ ಮಹಿಷೀಮುದ್ದಿಶ್ಯ
ಮೂಕಾಂಬಿಕಾಂ
ಶ್ರೀಮದ್ವೇಂಕಟಭೂಮಿಪಾಲವಚಸಾ ಸೋಽಯಂ
ಪ್ರಬಂಧೋಽಜನಿ ॥

ಸತ್ಯಂ ಸಾಹಿತ್ಯಮುದ್ಧರ್ತುಂ ಭೋಜೇ
ವೇಂಕಟರಾಜತಾಮ್ ।
ಪ್ರಾಪ್ತೇತು ಕಾಲಿದಾಸೋಽಯಂ ಕವಿಸ್ತಿರುಮಲಾಮಿಧಃ ॥
ವೇಂಕಟನೃಪಪತಿ ಸುಮತಿ ಕಲಿತ ರಚನಮ್ ।
ಜಯತಿ ನರಸಾಂಬಿಕಾ ತನಯ ವಚನಮ್ ॥
ಅತ್ರಿಗೋತ್ರ ಸುಧಾಬ್ಧಿ ಕೌಸ್ತುಭ ವಿಷ್ಣುಸೂರಿ ಸುತೇನ ।
ಗೀತಮೇತದಕಾರಿ ವೇಂಕಟರಾಜ ಭೋಜಮತೇನ ॥

ಕೃತಿಯ ಉದ್ದೇಶ ಹಾಗೂ ಕುಲಗೋತ್ರಗಳನ್ನು ಉಲ್ಲೇಖಿಸಿ ಪರಿಚಯ ಮಾಡಿಕೊಟ್ಟಿದ್ದಾನೆ.

ಇಂತಹ ಮಹೋನ್ನತ ಗೀತಗೌರೀವರ ಕೃತಿಯ ಹಸ್ತಪ್ರತಿಯನ್ನು ಸಮರ್ಥ ವಿದ್ವಾಂಸರಾದ ಡಾ. ಗಯಾಚರಣ ತ್ರಿಪಾಠಿರವರು ಪರಿಶೋಧಿಸಿ ಬೆಳಕಿಗೆ ತಂದಿರುವುದು ಕೆಳದಿ ಇತಿಹಾಸಕ್ಕೆ ಹಿರಿಮೆಯಾಗಿದೆ. ಬಾರ್ಬರಾ ಸ್ಟೋಲರ್ ಮಿಲ್ಲರ್‌ರವರು ಜಯದೇವ ಕವಿಯ ಗೀತಗೋವಿಂದ ಕೃತಿಯನ್ನು Love Song of the Dark Lord ಎಂಬ ಶೀರ್ಷಿಕೆಯಲ್ಲಿ ಭಾಷಾಂತರಿಸಿದ್ದಾರೆ. ಯುನೆಸ್ಕೋದ ಭಾಷಾಂತರ ಯೋಜನೆಯಡಿಯಲ್ಲಿ ೧೯೭೭ರಲ್ಲಿ ಕೊಲಂಬಿಯಾ ವಿಶ್ವವಿದ್ಯಾಲಯ ಮುದ್ರಣಾಲಯ ಇದನ್ನು ಪ್ರಕಟಿಸಿದೆ. ಹಂಗೇರಿಯನ್ ಭಾಷಾಶಾಸ್ತ್ರಜ್ಞ ರಾಬರ್ಟ್ ಹೆಟ್ಸಾರಾವ್‌ರವರು ಹಂಗೇರಿಯನ್ ಭಾಷೆಯಲ್ಲಿ 'ಗೀತ ಗೋವಿಂದ' ಗ್ರಂಥವನ್ನು ಭಾಷಾಂತರಿಸಿ ಪ್ರಕಟಿಸಿದ್ದಾರೆ. ಕೆಳದಿ ಸಂಶೋಧನಾಲಯದಲ್ಲಿ ಗೀತಗೋವಿಂದದ ನಾಗರೀ ಮತ್ತು ತಿಗಳಾರಿ ಹಸ್ತಪ್ರತಿಯೊಂದೂ ಇದೆ. ಇಂತಹ ಹಿನ್ನೆಲೆಯಲ್ಲಿ ಕೆಳದಿ ಆಸ್ಥಾನದ "ಗೀತಗೌರೀವರ" ಮೇರು ಕೃತಿಯೂ ವಿಶ್ವವ್ಯಾಪ್ತಿಯನ್ನು ಹೊಂದಲು ಅರ್ಹವಾಗಿದೆ ಡಾ. ತ್ರಿಪಾಠಿರವರು ಗೀತಗೌರೀವರದ ಮಹತ್ವವನ್ನು ಕುರಿತು– ವಿದ್ವತ್ ಸಮ್ಮೇಳನದಲ್ಲಿ (ಹಿಂದೀ ಭಾಗ)

ಐಸೀ ಹೀ ರಸಪೇಶಲ್ ಅಷ್ಟಪದಿಯಾಂ ಕಾವ್ಯಮೇ ಸರ್ವತ್ರ ಅನುಸ್ಯೂತ ಹೈಂ। ತಿರುಮಲ ಭಟ್ಟಕೇ ಆಶ್ರಯದಾತಾ ನೃಪತಿ ವೇಂಕಟನಾಯಕ ಸಂಗೀತ ಕೇ ಭೀ ಅದ್ವಿತಿಯ ಮರ್ಮಜ್ಞಥೇ ಅತಃ ಸೋಚಾ ಜಾ ಸಕತಾ ಹೈ ಕಿ ಯೇ ಅಷ್ಟಪದಿಯಾಂ ಉನಕೇ ಸಭಾ ಮೇ ಸಂಗೀತಕಾರೋ ಕೇದ್ವಾರಾ ಅನೇಕಶಃ ಸವಾದ್ಯ ಪ್ರಸ್ತುತ ಕೀ ಗಯೀ ಹೋಂಗೀ।

ಗೀತಗೋವಿಂದಕಾರ ಕೃಷ್ಣಕೋ ಏಕ ಅವತಾರ ನಹೀಂ ಅಪಿ ತು ಅವತಾರೀ ಮಾನತೇ ಹೈಂ ಜಿನ್‌ಹೋನೇ ಜಗದ್ರಕ್ಷಾರ್ಥ ವಿಭಿನ್ನ ಅವತಾರ ಗ್ರಹಣ ಕಿಯೇ । ಉನಕಾ ಕೃಷ್ಣ ಕೇ ದಶಾವತಾರಕಾ ವರ್ಣನ ಕರನೇವಾಲಾ "ವೇದಾನುದ್ಧರತೇ ಜಗಂತಿ ವಹತೇ...." ಶ್ಲೋಕ ಬಹುತ ಪ್ರಸಿದ್ಧ ಹೈ । ತಿರುಮಲಭಟ್ಟ ಭೀ ಐಸೇ ಹೀ ಶಿವ ಕೀ ಅಷ್ಟಮೂರ್ತಿಯೋಂ ಸಹಿತ ಉನಕೇ ಏಕಾದಶ ರೂಪೋಂ ಕಾ ವರ್ಣನ ನಿಮ್ನ ಪದ್ಯ ಮೇಂ ಕರತೇ ಹೈಂ ಜೋ ಅಭಿಜ್ಞಾನ ಶಾಕುಂತಲ ಕೇ ಅಷ್ಟಮೂರ್ತಿ ಪರಕ ಪ್ರಥಮ ಶ್ಲೋಕ ಸೇ ವಸ್ತುತಃ ಉತ್ಕೃಷ್ಟತರ ಪ್ರತೀತ ಹೋತಾ ಹೈ–

ವಾರ್ಧಿಂ ವರ್ಧಯತೇ ತಮಃ ಶಮಯತೇ
ಜ್ಯೋತಿರ್ಗಣಂ ಬಿಭ್ರತೇ
ಭೂತಾಲಿಂ ದಧತೇಽಂತರಂ ಪ್ರದದತೇ ತುಷ್ಟಾನ್
ಸುರಾನ್ ತನ್ವತೇ ।
ತಾಪಾಟೋಪಹೃತೇ ಹುತಂ ಪ್ರವಹತೇ ಮೂರ್ತ್ಯಷ್ಟಕಂ
ಕುರ್ವತೇ
ಬ್ರಹ್ಮಾಡಂ ಸೃಜತೇಽವತೇ ಚ ಹರತೇ ಶಂಭೋ
ಪ್ರಣಾಮೋಽಸ್ತುತೇ ॥

ಇಸ ಪದ್ಯಮೇ ಖಡೇ ಚಾತುರ್ಯ ಎವಂ ಕೌಶಲಕೇ ಸಾಥ್ ಆಕಾಶದಿ ಪಂಚತತ್ವ, ಸೂರ್ಯಚಂದ್ರ ತಥಾ ಯಜಮಾನ (ಆತ್ಮಾ) ರೂಪೀ ಶಿವಕೀ ಅಷ್ಟಮೂರ್ತಿಯೋಂ ಕೇ ಅತಿರಿಕ್ತ ಉನಕೋ ವಿಶ್ವಕಾ ಸರ್ಜಕ, ಪಾಲಕ ತಥಾ ಸಂಹಾರಕ ಬತಾತೇ ಹುಯೇ ವಸ್ತುತಃ ಉನಕೇ ಏಕಾದಶ ರೂಪ ಬತಾಯೇ ಹೈ ಜೋ ಶಿವ ಕೇ ಪ್ರಸಂಗ ಮೇ ಬಹುತ ಪ್ರಾಸಂಗಿಕ ಹೈಂ, ಕ್ಯೋಂ ಕಿ ರುದ್ರೋಂ ಕಿ ಸಂಖ್ಯ ಹಮಾರೇ ದೇವಶಾಸ್ತ್ರ ಮೇ ಏಕಾದಶ ಹೀ ಮಾನೀ ಗಯೀ ಹೈ । ಯಥಾ 'ವಾರ್ಧಿಂ ವರ್ಧಯತೇ' (ಸಮುದ್ರ ಮೇ ಜ್ವಾರ ಲಾನೇವಾಲೇ) ಸೇ ಚಂದ್ರಮಾ ಕಾ, 'ತಮಃ ಶಮಯತೇ' (ಅಂಧಕಾರ ಕಾ ವಿನಾಶ ಕರನೇ ವಾಲೇ), ಸೇ ಸೂರ್ಯಕಾ, 'ಜ್ಯೋತಿರ್ಗಣಂ ಬಿಭ್ರತೇ' (ಜ್ಯೋತಿಷ್ಪಿಂಡೋಂ ಕೋ ಗತಿಶೀಲ ಕರನೇವಾಲೇ ಸೇವಾಯು ಕಾ, 'ಭೂತಾಲಿಂ ದಧತೇ' (ಪ್ರಾಣಿ ಯೋಂ ಕೋ ಧಾರಣ ಕರನೇವಾಲಾ ರೂಪ) ಸೇ ಧರಿತ್ರೀ ಕಾ, 'ಅಂತರಂ ಪ್ರದದತೇ' (ಸಾಂಸಾರಿಕ ಪದಾರ್ಥೊಲಿ ಕೀ ಉತ್ಪತ್ತಿ ಏವಂ ಅಸ್ತಿತ್ವ ಕೇ ಲಿಯೇ ಸ್ಥಾನ ಪ್ರದಾನ ಕರನೇವಾಲೇ) ಸೇ ಆಕಾಶ ಕಾ, 'ತುಷ್ಟಾನ್ ಸುರಾನ್' ಕುರ್ವತೇ (ದೇವೊಲೀಂಕೋ ಸಂತೃಪ್ತಕರನೇ ವಾಲೇ) ಸೇ ಯಜಮಾನ ಕಾ, 'ತಾಪಾಟೋಪಹೃತೇ' (ಉದ್ದಾಮ ತಾಪಕಾ ಶಮನ ಕರನೇ ವಾಲೇ') ಸೇ ಜಲಕಾ, 'ಹುತಂ ಪ್ರವಹತೇ' (ಹವಿಕಾ ವಹನ್ ಕರನೇವಾಲೇ) ಸೇ ಅಗ್ನಿಕಾ ; ಇಸ ಪ್ರಕಾರ ಅಷ್ಟಮೂರ್ತಿಯೋಂ ಕಾ, ತಥಾ ಬ್ರಹ್ಮಾಂಡ ಕೇ ಸರ್ಜಕ, ಪಾಲಕ ತಥಾ ಸಂಹಾರಕಕೇ ರೂಪಮೇ ತೀನ್ ಅತಿರಿಕ್ತ ಮೂರ್ತಿಯೋಂ ಕಾ ಸಂಕೇತ ಇಸ ಪದ್ಯ ಮೇ ಹೈ ಜಿಸಕೇ ಅಂತಿಮ ಶಬ್ದೋಂ ಮೇಂ ಕವಿ ಅಪನೇ ಇಷ್ಟದೇವಕೋ ಪ್ರಣಾಮ ಕರತಾ ಹೈ ।

ಇಸೀ ಮಂಗಲಾತ್ಮಕ ಉದ್ಧರಣ ಕೇ ಸಾಥ ಹಮ್ ಗೀತಗೌರೀ ವರಮ್ ಕಾ ಯಹ ಸಂಕ್ಷಿಪ್ತ ಪರಿಚಯ ಸಮಾಪ್ತ ಕರತೇ ಹೈಂ ।

ತಮ್ಮ ಪ್ರಬಂಧದಲ್ಲಿಯೇ ಸಂಕ್ಷಿಪ್ತವಾಗಿಯೇ ಅಭಿಪ್ರಾಯಪಟ್ಟಿದ್ದಾರೆ.

ಕೇವಲ ಅಲಹಾಬಾದ್‌ನಲ್ಲಿರುವ 'ಗೀತಗೌರೀವರ' ಹಸ್ತಪ್ರತಿಯನ್ನು ಆಧರಿಸಿ ವಿದ್ವತ್‌ಪೂರ್ಣವಾಗಿ ತುಲನೆ ಮಾಡಿದ ಡಾ. ತ್ರಿಪಾಠಿರವರಿಗೆ ಉಳಿದ ಎಲ್ಲಾ ಹಸ್ತಪ್ರತಿಯಂತೆ ಶೃಂಗೇರಿ ಮಠದ ಹಸ್ತಪ್ರತಿ ಉಪಲಬ್ಧವಾಗಿದ್ದಲ್ಲಿ ಇನ್ನಷ್ಟು ಶೋಭೆಯುಂಟಾಗುತ್ತಿತ್ತು. ಕೆಳದಿಯಲ್ಲಿ ತಿರುಮಲ ದೇವಸ್ಥಾನ ಸಂಕೀರ್ಣವೊಂದಿದೆ.

ಮಠದ ಹಸ್ತಪ್ರತಿಯನ್ನು ಹೊರತು ಇಂತಹ ಮಹತ್ವಪೂರ್ಣ ಕೃತಿಯನ್ನು ಶೀಘ್ರವೇ ಬೆಳಕಿಗೆ ತರಲು

Telegram : VIDYAPEETHAM

Phones : 53484 (Off.)
52229 (Res.)

GANGANATHA JHA KENDRIYA SANSKRIT VIDYAPEETHA

Chandrashekher Azad Park, Allahabad-211002, INDIA

ef.No:0-18/A/98-544

Dr. G. C. TRIPATHI
Ph.D., Dr. Phil., D. Litt.
Principal

REGISTERED

Date 5.1.1998

Dear Shri Jois,

It was very nice to receive your letter of 24th December today. I am grateful for the information given by you about your Museum, its publication and its activities. Of special interest to me was the photocopy of a cutting from the Times of India dated 14.11.1997 giving details of your endeavours to establish [illegible]- Singlehandedly such a great Museum of high historical value at Keladi. I congratulate you of executing such a monumental work which will keep your fame for a long time to come.

As for your query for any palm-leaf catalogue published by us, I may inform you that although we have over 45,000 manuscripts in our Library, yet they are almost exclusively on paper. They are usually in three scripts: Devanagari, Maithili and Bengali. We have only a very few palm leaf manuscripts procured from Orissa. We are in process of publishing a Descriptive Catalogue of our collection and have published till now three Volumes which contain altogether a description of some 13,000 manuscripts.

I shall ask my Librarian to procure your catalogue and also the cultural study of Śivatattvaratnākara.

I shall be obliged if you kindly to request Dr. G.V. Kallapur to send me a photocopy of his paper on Gītagaurīvaram. I assure you to acknowledge the debt of paper in my work where-above I make use of it. I am also writing to Dr. Kallapur in this regard.

Thanking you very much and awaiting your reply regarding the manuscripts of the above mentioned text.

With regards,

Yours sincerely,

(G.C. TRIPATHI)
PRINCIPAL

Dr. Keladi Gunda Jois
Ex-Directer
C/O Keladi Museum & H.R.B.
K E L A D I
Sagar Tq.
Distt. SHIMOGA-577401
(Karnataka)

राष्ट्रिय-संस्कृत-संस्थानम्
(केन्द्रीय-शिक्षामन्त्रालयस्याङ्गभूतम्)
देहली

गङ्गानाथझा-केन्द्रीय-संस्कृत-विद्यापीठ-ग्रन्थमाला
प्रधानसम्पादकः
डॉ० गयाचरण त्रिपाठी

द्विपञ्चाशत्तमं प्रसूनम्


केळदि
श्रीतिरुमलभट्टविरचितम्

।। गीतगौरीवरम् ।।

(रागकाव्यम्)

सम्पादकः
डॉ० गयाचरण त्रिपाठी

गङ्गानाथझा-केन्द्रीय-संस्कृत-विद्यापीठम्
प्रयागः





ಕೆಳದಿಯಲ್ಲಿರುವ ತಿರುಮಲ ದೇವಸ್ಥಾನ

ಮಾಡಿದ ಪ್ರಯತ್ನ ಸಫಲವಾಗದೇ ಶೃಂಗೇರಿ ಉಪಲಬ್ಧ ಅಲಹಾಬಾದ್ ಹಸ್ತಪ್ರತಿಯನ್ನೇ ಆಧರಿಸಿರುವುದನ್ನು ಡಾ. ತ್ರಿಪಾಠಿರವರು ತಿಳಿಸಿದ್ದಾರೆ.

ಗೀತ ಗೌರೀವರ ಮಾದರಿ ಶ್ಲೋಕಗಳು

ಇಂದುಂ ನಿಂದತಿ ಚಂದನಂ ನ ಮನುತೇ ಮಂದಾನಿಲಂ ನೇಕ್ಷತೇ
ಕುಂದಂ ನಾದ್ರಿಯತೇ ಮರಂದಕಲಿತೇ ಧತ್ತೇರವಿಂದೇ ರತಿಮ್ ।
ನೈವಾನಂದತಿ ಕಂದಲಂ ನ ರಮತೇ ಮಾಕಂದವೃಂದೇ ಮನಃ
ಸಂಧತ್ತೇ ನಚ ನಂದನೇ ನಗಸುತಾ ಕಂದರ್ಪಬಂದೀಕೃತಾ॥

೯ನೇ ಸರ್ಗ – ॥ ೪ ॥ ಶ್ಲೋಕ

"ರಾಮಕರಿರಾಗೇ ಯತಿತಾಲೇ ॥
ಶೈಲಜಾ ವಿರಹೇ ಸಖಿ ಸೀದತಿ ।
ಶೈಲಜಾ ವೀರಹೇ .... ।

(ಪಲ್ಲವ)

ವಹತಿ ತನೂಮತಿಪಾಂಡಿಮಸಂಗಾಮ್
ಜೇತುಮಿವೇಶಶಿರೋಧೃತಗಂಗಾಮ್

ಶೈಲಜಾ .... ।

ಅತಿತನುಮಾತನುತೇ ತನುಮಿಾಶಾ ।
ಮಾತುಮಿವ ಪ್ರಿಯಮನಸಿ ಕೃತಾಶ ॥

ಶೈಲಜಾ .... ।

ಜಪತಿ ಶಿವೇತಿ ಮುಹಃ ಪ್ರಹರಂತಮ್ ।
ತರ್ಜಿತುಮಿವ ಮದನಂ ಪ್ರಸಭಂ ತಮ್ ॥

ಶೈಲಜಾ .... ॥

ದ್ವೇಷಿ ಸಖೀಜನಮಪಿ ಬತ ನಿತ್ಯಮ್ ।
ಕೃತಶಿಖಿಶುಕಪಿಕ ಪೋಷಣಕೃತ್ಯಮ್ ॥

ಶೈಲಜಾ .... ।

ನವದತಿ ನಹಸತಿ ನ ಇಛತಿ ಗೇಯಮ್ ।
ನಾತ್ತಿನ ದೀವ್ಯತಿ ನ ಸ್ವಪಿತೀಯಮ್ ॥

ಶೈಲಜಾ .... ॥

ನವದತಿ ನಹಸತಿ ನ ಇಚ್ಛತಿ ಗೇಯಮ್ ।
ನಾತ್ತಿನ ದೀವ್ಯತಿ ನ ಸ್ವಪಿತೀಯಮ್ ॥

ಶೈಲಜಾ ..... ।

ಖಿದ್ಯತಿ ಶುಷ್ಯತಿ ಶೋಚತಿ ಗೂಢಮ್ ।
ವಿಲಪತಿ ವಿಲುಠತಿ ಮುಹ್ಯತಿ ಗಾಢಮ್ ॥
ಶೈಲಜಾ ವಿರಹೇ ಎರಹೇ ಸಖಿ ಸೀದತಿ ॥

ಭೂಮಿಕಾ : ಪುಟ ೧೧, (ಗೀತಗೌರೀವರ)

ಏಷಾ ಸರಸಾ ರಚನಾ ಸಾಹಿತ್ಯ ಸೌಂದರ್ಯದೃಶಾऽತೀವ ರಮ್ಯಾ। ಆಶಾಸೇ ಯದೇಷಾ ಕಸ್ಯಚಿದ್ ವಿದುಷೋ ಹೃದಯಮಾವರ್ಜ್ಯ ತಂ ಸ್ವಕೀಯಮಖಿಲಂ ಕಾವ್ಯಸೌಂದರ್ಯಂ ವಿವರೀತುಂ ಪ್ರೇರಯಿಷ್ಯತೀತಿ ಶಿಮೊಗಾಜನಪದಸ್ಥ ಜಯನಗರ ವಾಸಿನಃ ಜಿ.ವಿ. ಕಲ್ಲಾಪುರ ಮಹಾಭಾಗಾಃ ಏತಸ್ಯ ಗ್ರಂಥಸ್ಯ

ಕೆಲಡೀ (ಕೆಳದೀ) ಸಂಗ್ರಹಾಲಯೇ ಸುರಕ್ಷಿತಾಂ ಪಾಂಡುಲಿಪಿಮಲೋಚ್ಯ ಬೆಂಗಲೂರ ನಗರೇ ೧೯೯೭ ತಮೇ ವರ್ಷೇ ಸಂಜಾತೇ ವಿಶ್ವ ಸಂಸ್ಕೃತ ಸಮ್ಮೇಲನೇ ಶೋಧಪತ್ರಮೇಕಂ ಪ್ರಸ್ತುತವಂತಃ ಇತ್ಯಸ್ಮಾಕಂ ಶೃತಿಗೋಚರತಾಂ ತಗಮ್ ತೇಷಾಂ ವರ್ತಮಾನಃ ಪತ್ರ ಸಂಕೇತಃ 'ಶ್ರೀ ರಾಘವೇಂದ್ರ ಮಠಮ್', ಸಾಗರಾ ೫೭೭೪೦೧ ಕರ್ನಾಟಕಾಃ । ಆಶಾಸೇ ಯದಸ್ಯ ಗ್ರಂಥಸ್ಯೇದಾನೀ ಪ್ರಕಾಶನೇನ ಅನ್ಯೇಪಿ ಏನಂ ಪ್ರತ್ಯಾಕೃಷ್ಟಾ ಭವಿಷ್ಯಂತೀತಿ ಶಮ್।

ಪ್ರಬಂಧ ಮಂಡನೆ (ಹಿಂದೀಯಲ್ಲಿ)

ರಚನಾ ಕೀ ತೀನ್ ಹೀ ಪಾಂಡುಲಿಪಿಯಾಂ ಅಭೀ ತಕ ಪರಿಜ್ಞಾತ ಹೈಂ । ಜೋ ಕ್ರಮಶಃ ಕೆಲಡೀ (ಕೆಳದೀ) ಸಂಗ್ರಹಾಲಯ, ಶಿಮೊಗಾ (ಕರ್ನಾಟಕ) ಗಂಗಾನಾಥ ಝಾ ಶೋಧ ಸಂಸ್ಥಾನ ಪ್ರಯಾಗ ತಥಾ ಜೋಧಪುರ ಕೇ ರಾಜಸಂಗ್ರಹಾಲಯ (ಮಾನಮಹಲ್) ಮೇ ಸುರಕ್ಷಿತ ಹೈಂ ಪ್ರಥಮ ಪಾಂಡುಲಿಪಿ ಪಾಠ ಕೀ ದೃಷ್ಟಿ ಸೇ ಅಪೂರ್ಣ ಹೈ ಕ್ಯೋಂ ಕಿ ಇಸಮೇ ಕೇವಲ ಕಥಾತ್ಮಕ ಕಾವ್ಯ ಭಾಗ ಹೀ ಸನ್ನಿವಿಷ್ಟ ಹೈ ಔರ್ ಸಂಗೀತ ಕೀ ದೃಷ್ಟಿ ಸೇ ಮಹತ್ವಪೂರ್ಣ ಸಭೀ ೨೬ ಅಷ್ಟಪದಿಯಾಂ ಛೋಡ್ ದೀ ಗಯಾ ಹೈಂ । ಗಂಗಾನಾಥ ಝಾ ಕೀ ಪಾಂಡುಲಿಪಿ ಪ್ರಾಯಃ ಶುದ್ಧ ಏವಂ ಪೂರ್ಣ ಹೈ । ಪ್ರಯಾಸ ಕರನೇ ಪರ್ ಭೀ ಕೆಲಡಿ (ಕೆಳದಿ) ಕೀ ಪಾಂಡುಲಿಪಿ ದೇಖನೆ ಕಾ ಅವಸರ ಇನ್ ಪಂಕ್ತಿಯೋಂಕೇ ಲೇಖಕ ಕೋ ನಹೀ ಮಿಲಾ ಕಿಂತು ಇಸ್ ಪಾಂಡುಲಿಪಿಕೋ ಆಧಾರ ಬನಾಕರ ಶ್ರೀ ಜಿ.ವಿ. ಕಲ್ಲಾಪುರ ನೇ ಸನ್ ೧೯೯೬ ಮೇಂ ಬೆಂಗಲೂರ ಮೇಂ ಆಯೋಜಿತ ವಿಶ್ವಸಂಸ್ಕೃತ ಸಮ್ಮೇಲನ ಮೇಂ ಏಕ ಶೋಧಪತ್ರಕಾ ವಾಚನ ಕಿಯಾ ಥಾ।

ಗೀತಗೌರೀವರ – Foreword

.... still it is a wonderful literary composition surely worth bringing to light and therey to the notice of the scholars.

The text of this edition is based more or less exclusvely on two NSS, one preserved in our vidyapitha and the other in the pustaka Prakash (Maharaja Mansingh Pustakalaya). Jodhpur for the procurement of a copy of which I am indebted to my friend Dr. gorindram charora of that city. I am aware of the existance of one or two more Mss of the work, but they remained unaccessilble to me. It is thus not a critical edition' in the strict sense of the term, but at least a new work is thus being brought to light in a more or less readable form. I do not think that new Mss would atter much of the readings accepted by me.

ಕೆಳದಿ ವಸ್ತುಸಂಗ್ರಹಾಲಯದಿಂದ ಶ್ರೀ ಜಗದ್ಗುರುಗಳ ಪ್ರೋತ್ಸಾಹದ ಮೇರೆಗೆ ಮಠದ ಹಸ್ತಪ್ರತಿ ಕ್ಯಾಟಲಾಗ್ ಸಿದ್ಧಪಡಿಸಿದ್ದು ಈ ಹಿಂದೆಯೇ ತಿಳಿಸಿದಂತೆ ಗೀತಗೌರೀವರದ ಹಸ್ತಪ್ರತಿ ಸಂಖ್ಯೆ ೧೭೭. ಇದು New Catalogues catalogorum - Vol VI ಪುಟ ೩೭ರಲ್ಲಿ ದಾಖಲಾಗಿದ್ದು, ಈ ಹಸ್ತಪ್ರತಿ ಅವಲೋಕನೆ ಕುರಿತೇ ಡಾ. ತ್ರಿಪಾಠಿರವರು ಹಾಗೂ ನಾನು ಸೇರಿ ನಡೆಸಿದ ಪ್ರಯತ್ನಗಳು ಸಫಲವಾಗಲಿಲ್ಲ. ಆದರೆ ಪ್ರಬಂಧಕಾರರೊಬ್ಬರು ಈ ದಿಸೆಯಲ್ಲಿ ಕೆಳದಿ ಸಂಶೋಧನಾಲಯಕ್ಕೆ ಮಾಹಿತಿ ವಂಚಿಸಿ ಪ್ರಬಂಧ ಮಂಡಿಸಿದು ವಿಷಾದನೀಯ. ಅಲಹಾಬಾದ್ ಗಂಗಾನಾಥ್ ಝಾ ಮತ್ತು ಕೆಳದಿ ಸಂಶೋಧನಾಲಯದ ಮುಖಾಂತರ ಪ್ರಕಟಿಸಲು ಡಾ. ತ್ರಿಪಾಠಿರವರ ಉದ್ದೇಶವೂ ಭಗ್ನವಾಯಿತು.

(ಈ ಪ್ರಬಂಧವನ್ನು ಸಾದರಪಡಿಸಲು ಡಾ. ಜಿ.ಸಿ. ತ್ರಿಪಾಠಿರವರು ನನಗೆ ಅವಕಾಶ ಕಲ್ಪಿಸಿಕೊಟ್ಟುದಕ್ಕೆ ಕೃತಜ್ಞತೆಗಳು.)

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಶೃಂಗೇರಿ ಮಠದ ಹಸ್ತಪ್ರತಿ ಭಂಡಾರದಲ್ಲಿರುವ "ಗೀತ ಗೌರೀವರ" ಹಸ್ತಪ್ರತಿ ಕುರಿತು ನಡೆಸಿದ ಪ್ರಯತ್ನಗಳು. ಕೆಳದಿ ಸಂಶೋಧನಾಲಯದಿಂದ ಪೂಜ್ಯ ಶ್ರೀಗಳ ಪ್ರೋತ್ಸಾಹದ ಮೇರೆಗೆ ಕ್ಯಾಟಲಾಗ್ ನಿರ್ವಹಿಸಿಕೊಟ್ಟಿದ್ದು ಮಠದಲ್ಲಿದೆ.

ಡಾ. ಜ್ಯೋತ್ಸ್ನಾ ಕಾಮತ್*

'ಗುರು ಚರಿತ್ರೆ'ಯಲ್ಲಿ ಚಾರಿತ್ರಿಕ ಅಂಶಗಳು

'ಗುರು ಚರಿತ್ರೆ'ಯು ನರಸಿಂಹ ಸರಸ್ವತಿ, ಎಂಬ ಮಧ್ಯಕಾಲೀನ (ಕ್ರಿ.ಶ. ಸುಮಾರು ೧೩೭೮–೧೪೫೮) ಸಂತಶ್ರೇಷ್ಠರ ಜೀವನ–ಸಾಧನೆಗಳ ಕುರಿತ ಗ್ರಂಥವಾಗಿದೆ. ಪಾರಾಯಣ ಗ್ರಂಥವಾಗಿ ಅದು ಮಹಾರಾಷ್ಟ್ರ–ಕರ್ನಾಟಕಗಳಲ್ಲಿ ಅತ್ಯಂತ ಜನಪ್ರಿಯವಾಗಿದೆ. ಸಾರ್ವಜನಿಕರ ಹಿತಕ್ಕಾಗಿ ಇದನ್ನು ಬರೆದೆನೆಂದು ಹೇಳಿಕೊಳ್ಳುವ ಗ್ರಂಥಕರ್ತೃವಾದ ಸರಸ್ವತಿ ಗಂಗಾಧರ ಸಾಖರೆ, ಕನ್ನಡಿಗ ೧೭ನೇ ಶತಮಾನದವನು. ಗುಲ್ಬರ್ಗಾ ಜಿಲ್ಲೆಯಲ್ಲಿ ದತ್ತ ಸಂಪ್ರದಾಯದ ಪೀಠವೆಂದು ಪ್ರಸಿದ್ಧವಾದ ಗಾಣಗಾಪುರದಲ್ಲಿ ನರಸಿಂಹ ಸರಸ್ವತಿಗಳು ಬಹುಕಾಲ ಜೀವಿಸಿದ್ದರು. ಅವರ ನಿಕಟ ಶಿಷ್ಯನಾಗಿದ್ದ ಸಾಯಂದೇವ ಸಾಖರೆ, ಬೀದರ್ ರಾಜನ ಕಾಲದಲ್ಲಿ ಗ್ರಾಮಾಧಿಕಾರಿಯಾಗಿದ್ದ. ಅವನ ವಂಶಜನಾದ ಗಂಗಾಧರನು, ಗುರುಚರಿತ್ರೆಯ ಪ್ರಾರಂಭದಲ್ಲಿ ಮತ್ತು ಕೊನೆಯಲ್ಲಿ ತಾನು ಸಾಯಂದೇವನ ೫ನೇ ತಲೆಮಾರಿನವನೆಂದು ಹೇಳಿಕೊಂಡಿದ್ದಾನೆ. ವಂಶಸ್ಥರು ಸಂಗ್ರಹಿಸಿಟ್ಟ ಮಾಹಿತಿಯ ಮೇಲೆ ಈ ಗ್ರಂಥ ಬರೆದಿರಬಹುದು.

ಸರಳ ಸುಲಭ ಪಠನಕ್ಕೆ ಯೋಗ್ಯವಾದ ಪದ್ಯರೂಪದಲ್ಲಿ ರಚಿಸಲ್ಪಟ್ಟ ಶ್ರೀ ಗುರುಚರಿತ್ರೆ ಮರಾಠಿಯಲ್ಲಿದೆ. ಇದರ ಕನ್ನಡ ಗದ್ಯರೂಪಾಂತರವು ಅನೇಕರಿಂದ ಪ್ರಕಟಿತವಾಗಿದೆ. ಪವಾಡಗಳ ವರ್ಣನೆಯೇ ಮುಖ್ಯವಾದರೂ, ಅಲ್ಲಲ್ಲಿ ಬರುವ ಕಥಾನಕಗಳಿಂದ, ಘಟನಾವಳಿಗಳಿಂದ ಕ್ರಿ.ಶ. ೧೫ನೇ ಶತಮಾನದ ಸಾಮಾಜಿಕ ಜೀವನವನ್ನು ಕೆಲಮಟ್ಟಿಗೆ ಅರಿಯಬಹುದಾಗಿದೆ. ಇಲ್ಲಿ ಅಂದಿನ ಧರ್ಮಸಮನ್ವಯ, ಸಮಾಜ ಜೀವನ, ಶಿಕ್ಷಣದ ನೋಟ, ಸ್ತ್ರೀಯರ ಸ್ಥಾನಮಾನಗಳು, ಸಮಕಾಲೀನ ಸಂಗೀತಾದಿ ಮರಾಠಿ ಆಕರಗಳನ್ನೂ, 'ಶ್ರೀ ಗುರು ಚರಿತ್ರೆ' ಎಂಬ ಕೃಷ್ಣಾಜಿ, ಶ್ರೀಪಾದರಾವ ಕುಲಕರ್ಣಿ ಎನ್ನುವವರ ಕನ್ನಡ ಗದ್ಯಾನುವಾದವನ್ನೂ ಈ ಪ್ರಬಂಧಕ್ಕೆ ಬಳಸಲಾಗಿದೆ.

ಮಹಾರಾಷ್ಟ್ರದ ಅಕೋಲಾ ಜಿಲ್ಲೆಯ ಮಾತಾಪುರ ಅಥವಾ ಮಾಹುರ ಎಂಬಲ್ಲಿ ಕ್ರಿ.ಶ. ಸುಮಾರು ೧೩೭೮ರಲ್ಲಿ ಮಾಧವ ಮತ್ತು ಅಂಬಾಬಾಯಿ ದಂಪತಿಗಳ ಮಗನಾಗಿ ನರಸಿಂಹ ಸರಸ್ವತಿಗಳು ಜನ್ಮವೆತ್ತಿದರು. ಚಿಕ್ಕಂದಿನಲ್ಲಿಯೇ ವೈರಾಗ್ಯದ ಲಕ್ಷಣಗಳು ಗೋಚರಿಸಿದ ಬಾಲಕನಿಗೆ ತುಂಬ ತಡವಾಗಿ ಮಾತು ಬಂದಿತಂತೆ. ವಾರಣಾಸಿಗೆ ಸಂಸ್ಕೃತದ ಹೆಚ್ಚಿನ ಅಭ್ಯಾಸಕ್ಕಾಗಿ ಹೋದ ಈ ಕಿಶೋರ ಮುಂದೆ ಹಿಮಾಲಯಕ್ಕೆ ಹೋಗುತ್ತಾರೆ. ಅಲ್ಲಿ ಸಾಧನಾರತರಾಗಿ, ಜೊತೆಗೆ ಆಯುರ್ವೇದವನ್ನೂ ಅಭ್ಯಸಿಸಿ ಹತ್ತು ವರ್ಷಗಳ ಬಳಿಕ ಈಗಿನ ವಿದರ್ಭದ ತನ್ನ ಹುಟ್ಟೂರಿಗೆ ಮರಳುತ್ತಾರೆ. ಮುಂದೆ ಪರಳೀ ವೈಜನಾಥ ಎಂಬ ಕ್ಷೇತ್ರದ ಬಳಿಯ ದೇವತೆ, 'ಆರೋಗ್ಯ–ಭವಾನಿ'ಯ ಉಪಾಸನೆ ಕೈಕೊಳ್ಳುತ್ತಾರೆ. ಇದರಿಂದಾಗಿ ಅಪಸ್ಮಾರ, ಬಂಜೆತನ, ಬುದ್ಧಿಭ್ರಮಣೆ ಹಾಗೂ ಚರ್ಮರೋಗಗಳನ್ನು ಗುಣಪಡಿಸುವ ವಿಶೇಷ ಶ್ರಮ ಅವರದಾಗುತ್ತದೆ.

ಗುರು ಚರಿತ್ರೆಯಲ್ಲಿ ಈ ಎಲ್ಲ ರೋಗಗಳಿಂದ ವಾಸಿ ಮಾಡಿದ ಉಲ್ಲೇಖಗಳ ಜೊತೆಯಲ್ಲಿ ಗಾಣಗಾಪುರ ಒಂದೇ ಅಲ್ಲದೇ ಕೊಲ್ಲಾಪುರದ ನರಸೋಬಾವಾಡಿ, ಸಾಂಗಲಿಯ ಔದುಂಬರ ಹಾಗೂ ಕರ್ನಾಟಕ–ಮರಾಠವಾಡಾ (ಮಹಾರಾಷ್ಟ್ರ)ಗಳ ಇತರ ಚಿಕ್ಕ ದೊಡ್ಡ ಊರುಗಳಲ್ಲಿ ಗುರು ನರಸಿಂಹ ಸರಸ್ವತಿಗಳು ಸಂಚಾರ ಮಾಡಿದ ತಾತ್ಕಾಲಿಕ ವಸತಿ ಮಾಡಿದ ತಾಣಗಳಲ್ಲಿ ಪಾದುಕೆಗಳಿದ್ದು ಅವೆಲ್ಲ ದತ್ತಾತ್ರೇಯ ಸಂಪ್ರದಾಯದ ಕುರುಹು ಹೊಂದಿವೆ. ಈ ಸಂಪ್ರದಾಯವನ್ನು ಪುನಶ್ಚೇತನಗೊಳಿಸಿದ್ದರಿಂದ ನರಸಿಂಹ ಸರಸ್ವತಿಗಳನ್ನು ತ್ರಿಮೂರ್ತಿಯ ಸಂಪನ್ನರೂಪವಾದ ದತ್ತಾತ್ರೇಯನ ಅವತಾರವೆಂದೇ ತುಂಬ ಜನ ಗುರುತಿಸುತ್ತಾರೆ.

ಈ ದತ್ತಾತ್ರೇಯ, ದತ್ತಗುರು ಅಥವಾ ಗುರುದತ್ತನ ಉಪಾಸನೆ ತುಂಬ ಪ್ರಾಚೀನವಾದದ್ದು ದತ್ತಾತ್ರೇಯ ಉಪನಿಷತ್ತೂ ಒಂದು ಇದೆ. ಆದಿಶಂಕರಾಚಾರ್ಯರಿಂದ ಹಿಂದು ಧರ್ಮದ ಪುನರುತ್ಥಾನವಾದ ಬಳಿಕ, ನಾನಾ ಮತ–ಪಂಥಗಳೊಂದಿಗೆ ಅನೇಕಾನೇಕ ದೇವ–ದೇವತೆಗಳೂ ಅವುಗಳಿಗೆ ಹೊಂದಿಕೊಂಡು ಪುರಾಣ–ಪುಣ್ಯಕಥೆಗಳು ಹುಟ್ಟಿಕೊಂಡದ್ದೂ ಪರಿಚಿತ ವಿಚಾರ ! ಈ ಕಾಲದಲ್ಲೂ ಏಕದೇವೋಪಾಸನೆಯ ಮಹತ್ವವನ್ನು ಕಂಡುಕೊಂಡವರು

* # ೧೧೦, ಶಶಿಕಿರಣ್, ೧೮ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು.

ಬ್ರಹ್ಮ (ವೇದಾಂತ ಅಥವಾ ಅದ್ವೈತ) ವಿಷ್ಣು, ಶಿವರನ್ನು ತ್ರಿಮೂರ್ತಿಯನ್ನಾಗಿಸಿದರು. ಮಹಾನುಭಾವಪಂಥದ ಸ್ಥಾಪಕನೆಂದು ಹೇಳಲಾಗುವ ಚಕ್ರಧರನು (ಕ್ರಿ.ಶ. ಸುಮಾರು ೧೨೬೩) ಈ ತ್ರಿಮೂರ್ತಿಯ ಕಲ್ಪನೆಯನ್ನು ದತ್ತಾತ್ರೇಯನ ರೂಪದಲ್ಲಿ ಪ್ರಚಾರ ಮಾಡಿದ. ಅತ್ರಿಮುನಿ ಮತ್ತು ಸತಿ ಅನಸೂಯೆಯ ಮಗನಾಗಿ ದತ್ತನು (ದತ್ತ + ಆತ್ರೇಯ = ಅತ್ರಿಯ ಮಗ) ದತ್ತಾತ್ರೇಯನಾಗಿ, ದತ್ತಗುರು ಅಥವಾ ಗುರುದತ್ತನ ರೂಪದಲ್ಲಿ ವಂದಿತನಾದ. ಈ ದತ್ತನ ಪೂಜೆಗೆ ವ್ಯಾವಹಾರಿಕ ರೂಪಕೊಟ್ಟ ಶ್ರೇಯಸ್ಸು ನರಸಿಂಹ ಸರಸ್ವತಿಗಳಿಗೆ ಸಲ್ಲುತ್ತದೆ.

ಬಾಹ್ಮನಿ ರಾಜ್ಯ (ಕ್ರಿ.ಶ. ೧೩೪೭-೧೫೨೭) ವಿಂಧ್ಯದ ದಕ್ಷಿಣಕ್ಕೆ ನೆಲೆಗೊಂಡು ಇಸ್ಲಾಂ ಧರ್ಮ ಹರಡಲಾರಂಭಿಸಿತ್ತು. ಮೂರ್ತಿ ಭಂಜಕ ಗುಂಪುಗಳು ಬಲವಾಗಲಾರಂಭಿಸಿದ್ದವು. ಮಠ ದೇವಾಲಯಗಳಿಗೆ ಸುರಕ್ಷಿತತೆ ಇರಲಿಲ್ಲ. ಹೀಗಾಗಿ ಸಂಚಾರಿ ಗುರುವಾದ ದತ್ತಾತ್ರೇಯನ ಪೂಜೆಗೆ ಪ್ರಾಧಾನ್ಯ ಬಂದಿತು. ಊರ ಹೊರಗಿನ ಬಯಲಲ್ಲಿ ಅಶ್ವತ್ಥ ಮರದಡಿಯೇ ಗುರುವಿನ ಪೂಜಾ ಸ್ಥಾನವಾಯಿತು. ಎರಡು ಶಿಲೆಯ ಪಾದ ಅಥವಾ ಪಾದುಕೆಗಳೇ ಗುರವಿನ ಪ್ರತಿಮೆ (ಪ್ರತೀಕವಾದವು) ನಿರ್ದಿಷ್ಟ ದಿನಗಳಂದು ಜನರು ಸೇರಿ ಈ ಪಾದಗಳನ್ನು ಪೂಜಿಸಿ, ಭಜನೆ ಮಾಡಿ, ಚದರಿ ಹೋಗುವುದು ರೂಢಿಯಾಯಿತು. ನಾಲ್ಕು ವೇದಗಳನ್ನು ನಾಲ್ಕು ನಾಯಿಗಳ ರೂಪದಲ್ಲಿ ಹೊಂದಿ, ಆರು ಕೈ, ಮೂರು ಮುಖಗಳ ಗುರುದತ್ತನು ಕಾಯಂ ಸಂಚಾರಿಯ ರೂಪದಲ್ಲಿ ಗುರುತಿಸಲ್ಪಟ್ಟ. ಸೂಫಿ ಸಂತರನ್ನೂ ಈ ದತ್ತನ ಸಂಪ್ರದಾಯ ಆಕರ್ಷಿಸಿತು. ಫಕೀರ ಶ್ರೇಷ್ಠನಾದ ದತ್ತನು 'ಶಾಹ ದತ್ತಾ ಆಲಂ ಪ್ರಭು' (ಜಗದ್ಗುರು ದತ್ತ)ನೆಂದು ಮುಸ್ಲಿಂ ಸೂಫಿಗಳು ಗೌರವಿಸುತ್ತಾರೆ. ಗಾಣಗಾಪುರದಲ್ಲಿದ್ದರೂ ಆಗಾಗ ಸಂಚಾರ ಕೈಕೊಳ್ಳುತ್ತಿದ್ದ ಊರುಗಳಲ್ಲಿ ಪಾದುಕೆಗಳ ಪೂಜೆ ಪ್ರಚಾರ ಗೊಂಡಿತು. ಕಾಲಾಂತರದಲ್ಲಿ ಅಲ್ಲಿ ದತ್ತಮಂದಿರಗಳು ಕಾಣಿಸಿಕೊಂಡವು.

ಹರಿಹರರ ಸಮನ್ವಯ ಸಾಧಿಸಲು ಪೂಜೆ, ಭಸ್ಮಧಾರಣೆಯಲ್ಲೂ ವಿಶೇಷ ಸೂಚನೆಯನ್ನು ನರಸಿಂಹ ಸರಸ್ವತಿಗಳು ಅಳವಡಿಸಿದಂತೆ ಇದೆ. ಶುದ್ಧ ಸ್ನಾನದ ನಂತರ ಭಸ್ಮಧಾರಣೆ ಮಾಡಬೇಕು. ಶುದ್ಧಭಸ್ಮ ದೊರೆಯದಿದ್ದರೆ ಗೋಪಿಚಂದನ ಧರಿಸಬೇಕು. ಅದಕ್ಕೆ ದ್ವಾರಕೆಯ ಮಣ್ಣು ಬೇಕು. ಗೋಪಿಚಂದನದ ಊರ್ಧ್ವ ಪುಂಡ್ರದ ಮೇಲೆ ಭಸ್ಮ ಹಚ್ಚಿಕೊಂಡರೆ ಹರಿಹರರು ಸಂತುಷ್ಟರಾಗುತ್ತಾರೆ ಎಂದು ಗುರುಚರಿತ್ರೆ ಹೇಳುತ್ತದೆ.

ಗುರು ಚರಿತ್ರೆಯಲ್ಲಿ ಭಾವುಕಭಕ್ತರಿಗೆ ದೊರೆಯುವ ಸಾತ್ವಿಕ ಸಮಾಧಾನವೆಂದರೆ ಎಲ್ಲ ನದಿಗಳೂ ಗಂಗೆ-ಯಮುನೆಯರಂತೆ ಪುಣ್ಯಪ್ರದಾಯಿನಿಗಳೆಂದು ಸ್ಪಷ್ಟವಾದ ಗುರುವಾಣಿ. ಕಳ್ಳರು, ಡಕಾಯಿತರಿಂದಾಗಿ ಅಂದಿನ ಯುಗಗಳಲ್ಲಿ ಜನ ಸಾಮಾನ್ಯರಿಗೆ ತೀರ್ಥಯಾತ್ರೆಯಾಗಲಿ ದೂರದ ಗಂಗಾ ಯಮುನಾ ಪುಣ್ಯಸ್ನಾನವಾಗಲಿ ಸಾಧ್ಯವಿರಲಿಲ್ಲ.

ಆಯಾ ಪ್ರದೇಶದಲ್ಲಿ ಹರಿಯುವ ನದಿಗಳೇ ಪವಿತ್ರ ತೀರ್ಥಸ್ಥಾನಗಳೆಂದು ನರಸಿಂಹ ಸರಸ್ವತಿಗಳು ಸಾರಿದರು. ಬಾಹ್ಮನಿ (ಆದಿಲಶಾಹಿ) ನಾಡಿನ, ಕನ್ನಡಿಗರಿಗೆ ಸುಪರಿಚಿತವಾದ ಕೃಷ್ಣಾ, ಗೋದಾವರಿ, ತುಂಗಭದ್ರಾ, ಭೀಮಾ ಅಮರಜಾ, ಚಂದ್ರಭಾಗಾ ನದಿಗಳೆಲ್ಲ ಪುಣ್ಯನದಿಗಳೆಂದು ಪರಿಗಣಿತವಾದವು. ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆಯ ಶರಾವತಿಯೂ ಈ ಯಾದಿಯಲ್ಲಿದೆ. ಶ್ರೀಶೈಲ, ದಕ್ಷಿಣದ ಕಾಶಿಯೆಂದು ಘೋಷಿಸಲ್ಪಟ್ಟಿತು.

ಸಮಾಜ ಜೀವನ : ಮುಸ್ಲಿಂ ಆಳರಸರ ಕಾಲದಲ್ಲಿ ಉಚ್ಚ ಆಡಳಿತಗಾರರೆಲ್ಲ ಆ ಸಮುದಾಯದವರೇ ಆಗಿರುತ್ತಿದ್ದರು. ಸ್ಥಳೀಯ ಆಡಳಿತವು ಇತರ ಮತಸ್ಥರ ಕೈಯಲ್ಲಿತ್ತು. ಬ್ರಾಹ್ಮಣರು ಅರ್ಚಕ ವೃತ್ತಿಯಲ್ಲಿ ಅಷ್ಟೇ ಅಲ್ಲದೇ ಶಿಕ್ಷಕರು, ಸ್ಮೃತಿ ಮಾನ್ಯ ವಸ್ತುಗಳ ವ್ಯಾಪಾರಿಗಳಾಗಿ, ಗ್ರಾಮಲೆಕ್ಕಿಗರಾಗಿ, ಅಲ್ಲದೇ ಚಿಕ್ಕಪುಟ್ಟ ರಾಜಸೇವೆಯಲ್ಲಿ ಇರುತ್ತಿದ್ದರು. ಬಾಹ್ಮನಿ ಅರಸರ ಕಾಲಕ್ಕೆ ಬ್ರಾಹ್ಮಣರನ್ನು ಸರಕಾರಿ ಸೇವೆಯಲ್ಲಿ ನೇಮಿಸುವ ಪರಿಪಾಠ ಮುಂದಿನ ಶತಮಾನಗಳಲ್ಲೂ ಕಾಣಬಹುದು. ಬ್ರಾಹ್ಮಣವರ್ಗದ ಕಂದಾಚಾರ, ರೂಢಿ, ಸಂಪ್ರದಾಯಗಳೇ ಗುರುಚರಿತ್ರೆಯಲ್ಲಿ ಮುಖ್ಯತಃ ಬಿಂಬಿತವಾಗಿದೆ. ಧರ್ಮಾಭರಗಳ ಕೈಪಿಡಿಯಾಗಿ ಮಹಾರಾಷ್ಟ್ರದಲ್ಲಿ ಇದರಂತಹ ಗ್ರಂಥ ಇನ್ನೊಂದಿಲ್ಲವೆಂದು ಹೇಳಲಾಗುತ್ತಿದೆ. ತುಂಬಾ ಬಡಬ್ರಾಹ್ಮಣರ ಉಲ್ಲೇಖ ಮೇಲಿಂದ ಮೇಲೆ ಬರುತ್ತಿದ್ದು, ದಾನವಾಗಿ ಪಡೆದ ದನ-ಕರುಗಳ ಸಂತಾನವಾಗಿ ಸಾಕಿದ ಎತ್ತುಗಳನ್ನು, ಕೃಷಿಕರಿಗೆ ಬಾಡಿಗೆಗೆ ಕೊಟ್ಟು ಜೀವಿಸುವವರು ಇದ್ದಂತೆ, ಕೃಷಿ ಮಾಡುವ ಬ್ರಾಹ್ಮಣರಿದ್ದರು.

ನರಸಿಂಹ ಸರಸ್ವತಿಗಳ ಶಿಷ್ಯರಲ್ಲಿ **ಅಂಬಿಗ, ನೇಕಾರ, ಕೃಷಿಕ, ಅಸ್ಪೃಶ್ಯ** ವರ್ಗದವರೆಲ್ಲ ಇದ್ದರು. ಅವರಿಗೆಲ್ಲ ಪೂಜೆಯ, ಪ್ರಾರ್ಥನೆಯ ಅನುಕೂಲಗಳನ್ನು ಗುರುಗಳು ಒದಗಿಸಿದ್ದು ವಿಶೇಷ! ಪರಮನಿಷ್ಠ ನೇಕಾರನೊಬ್ಬನ ಕುಟುಂಬದವರೆಲ್ಲ ಶ್ರೀಶೈಲಯಾತ್ರೆಗೆ ಹೊರಟಾಗ, ಆತನು ಗುರುಗಳ ಮಠದ ಶುಚಿತ್ವದ ಸೇವೆ ಬಿಟ್ಟುಕೊಡಲು ಒಪ್ಪದೇ, 'ಪಾಷಾಣ

ಮೂರ್ತಿಯ ದರ್ಶನಕ್ಕೆ ವೃಥಾ ಹೋಗುತ್ತಿದ್ದಾರೆ. ನನ್ನ ತೀರ್ಥಯಾತ್ರೆ ಗುರುಚರಣಗಳಲ್ಲಿದೆ ! ಎಂದು ಉದ್ಗರಿಸುತ್ತಾನೆ. ನೇಕಾರನಿಗೆ ಶ್ರೀಶೈಲದ ಶಂಕರ ದರ್ಶನ ಯಥಾವತ್ ಆದದ್ದು. ಆತನ ಬಾಯಿಂದಲೇ ಆ ವರ್ಣನೆ ಕೇಳಿದ ಕುಟುಂಬದವರು ದಿಙ್ಮೂಢರಾಗುತ್ತಾರೆ.

ಓರ್ವ ಶೂದ್ರ ಕೃಷಿಕನ ಕಥಾನಕದಲ್ಲಿ ಕೃಷಿಕನ ಪ್ರಾಮಾಣಿಕತೆ, ಗುರುಭಕ್ತಿ, ಗ್ರಾಮಾಡಳಿತದ ನಿದರ್ಶನ, ಜ್ಯೋತಿಶ್ಶಾಸ್ತ್ರದ ಆಧಾರದ ಐತಿಹಾಸಿಕ ಘಟನೆ, ಎಲ್ಲವೂ ಒಟ್ಟಿಗೇ ಬಿಂಬಿತವಾಗಿವೆ. ಪರ್ವತೇಶ್ವರನೆಂಬ ಕೃಷಿಕನೊಬ್ಬ ಗುರುಗಳ ನಿಷ್ಠಾವಂತ ಭಕ್ತನಾಗಿದ್ದ. ಪ್ರತಿದಿನ ಗುರುಗಳು ಸ್ನಾನಕ್ಕೆ ನದಿಗೆ ಹೋಗುವಾಗ, ಸಾಷ್ಟಾಂಗ ನಮಸ್ಕಾರ ಹಾಕುತ್ತಿದ್ದ. ಪ್ರಾರ್ಥನೆ–ಪೂಜೆಗಳನ್ನು ನಿಷ್ಠೆಯಿಂದ ಕೈಕೊಳ್ಳುತ್ತಿದ್ದ. ದೀರ್ಘಕಾಲದ ಆತನ ದಿನಚರಿ ನೋಡಿ, ಕಾರಣವನ್ನು ಗುರುಗಳು ವಿಚಾರಿಸುತ್ತಾರೆ. ತನ್ನನ್ನು, ತನ್ನ ಹೊಲಗಳನ್ನು ಹರಸುವಂತೆ ಕೃಷಿಕನು ಕೇಳಿಕೊಳ್ಳುತ್ತಾನೆ. ಗುರುಗಳು ಹೊಲದತ್ತ ದೃಷ್ಟಿ ಬೀರುತ್ತಾರೆ. ಬಳಿಕ ಬೆಳೆದು ನಿಂತಿದ್ದ ಪೈರಿನ ಕೊಯ್ಲನ್ನು ಆ ಕೂಡಲೇ ಮಾಡುವಂತೆ ಸಲಹೆ ಇತ್ತು ಮುಂದುವರಿಯುತ್ತಾರೆ. ಪರ್ವತೇಶ್ವರನು ಕೂಡಲೇ ಗ್ರಾಮಾಧಿಕಾರಿಗಳ ಬಳಿ ಹೋಗಿ ತನ್ನೊಬ್ಬನ ಹೊಲದ ಕಟಾವು ಮಾಡಲು ಅನುಮತಿ ಕೇಳುತ್ತಾನೆ. ಅವರು ಒಪ್ಪದಿದ್ದಾಗ ಕೃಷಿಕನು ಪಟ್ಟು ಬಿಡದೇ, ಅನುಮತಿ ಕೊಟ್ಟರೆ ತಾನು ಮುನ್ನಾ ವರ್ಷ ಸರಕಾರಕ್ಕೆ ನೀಡಿದ ಫಸಲಿನ ಎರಡರಷ್ಟು (ದಂಡದ ರೂಪದಲ್ಲಿ) ಕೊಡುವುದಾಗಿ ಹೇಳುತ್ತಾನೆ. ಅಧಿಕಾರಿಗಳು, ಲಿಖಿತ ಅರ್ಜಿ ಕೊಟ್ಟರೆ, ಪರವಾನಗಿ ಕೊಡುವುದಾಗಿ ಹೇಳುತ್ತಾರೆ. ಕೃಷಿಕನು ಹಾಗೇ ಮಾಡಿ, ಕುಟುಂಬದವರ ಇತರರ ವಿರೋಧ ಲೆಕ್ಕಿಸದೇ ಕೊಯ್ಲುಮಾಡಿ ಮುಗಿಸುತ್ತಾನೆ. ಎಂಟೇ ದಿನಗಳಲ್ಲಿ ಭಯಂಕರ ತಂಗಾಳಿ ಬೀಸಿ ಅಕಾಲ ವರ್ಷಧಾರೆ, ಆಲಿಕಲ್ಲಿನ ಮಳೆಯಾಗುತ್ತದೆ. ಮಾಗಿನಿಂತ ಇತರ ಎಲ್ಲರ ಪೈರು ನಾಶವಾಗಿ ಹೋಗುತ್ತದೆ. ಆಶ್ಚರ್ಯದ ಮಾತೆಂದರೆ ಪರ್ವತೇಶ್ವರನ ಹೊಲದಲ್ಲಿ ಕಡಿದು ನಿಂತ ಮೋಟು ದಂಟುಗಳೆಲ್ಲ ಪುನಃ ಚಿಗಿತು, ಮೊದಲಿಗಿಂತ ಹತ್ತು ಪಟ್ಟು ಪೈರು ಅವನದಾಗುತ್ತದೆ. ಬರಗಾಲದ ಪರಿಸ್ಥಿತಿ ನೋಡಿ ಆ ಕೃಷಿಕನು ತನಗೆ ಲಭಿಸಿದ ಧಾನ್ಯರಾಶಿಯ ಅರ್ಧದಷ್ಟು ರಾಜರ ಬೊಕ್ಕಸಕ್ಕೆ ಕೊಡಲು ಮುಂದಾದರೂ, ಅಧಿಕಾರಿಗಳು ಲಿಖಿತ ಒಪ್ಪಂದವನ್ನು ಮುರಿಯಲು ಒಪ್ಪುವುದಿಲ್ಲ. ತಾವು ಹಾಗೆ ಮಾಡಿದರೆ ಧರ್ಮದಿಂದ ನಡೆದಂತೆ ಆಗುವುದಿಲ್ಲವೆಂದು ನಿಗದಿತ ಪ್ರಮಾಣವನ್ನಷ್ಟೆ ಪಡೆಯುತ್ತಾರೆ. ಕೃಷಿಕನು ಹೆಚ್ಚಿನ ಬೆಳೆಯನ್ನೆಲ್ಲ ದಾನಧರ್ಮದಲ್ಲಿ ತೊಡಗಿಸುತ್ತಾನೆ.

ಈ ಘಟನೆಯಿಂದ ಅಂದಿನ ಕೃಷಿಕರು ಲಿಖಿತ ರೂಪದಲ್ಲಿ ಅರ್ಜಿ ಬರೆಯುವಷ್ಟು ಓದು ಬರಹ ಬಲ್ಲವರಿದ್ದರು. ದಾನ ಧರ್ಮದಲ್ಲಿ ಮುಂದಿದ್ದರು, ಪ್ರಾಮಾಣಿಕ ಅಧಿಕಾರಿಗಳು, ರಾಯ ಬೊಕ್ಕಸಕ್ಕೂ, ಕೃಷಿಕರಿಗೂ ಅನ್ಯಾಯವಾಗದಂತೆ ನೋಡಿಕೊಳ್ಳುತ್ತಿದ್ದರು ಎಂದು ಊಹಿಸಬಹುದು. ಆದರೆ ಎದ್ದು ಕಾಣುವ ಅಂಶವೆಂದರೆ, ಅಕಾಲ ವರ್ಷಾಧಾರೆಯಿಂದ ಬರಗಾಲ ಬಂದ ಸಮಯ, ಬಾಹ್ಮನಿ ಅರಸು ಇಮ್ಮಡಿ ಅಲ್ಲಾವುದ್ದೀನನ (ಕ್ರಿ.ಶ. ೧೪೩೬–೧೪೫೮) ಆಡಳಿತದ ಕೊನೆಯ ವರ್ಷದಲ್ಲಿ, ಎಂದು ಪ್ರಸಿದ್ಧ ಜ್ಯೋತಿಶ್ಶಾಸ್ತ್ರಜ್ಞರಾಗಿದ್ದ ದಿ. ತಾತ್ಯಾಸಾಹೇಬ ಕರಂದಿಕರ ಅವರು ಸಿದ್ಧ ಮಾಡಿದ್ದಾರೆ. ನರಸಿಂಹ ಸರಸ್ವತಿಗಳ ಕಾಲನಿರ್ಣಯಕ್ಕೂ ಇದು ಸಹಾಯವಾಗಿದೆ.

ಸ್ತ್ರೀಯರ ಸ್ಥಾನಮಾನಗಳು : ಮುಸ್ಲಿಂ ಆಡಳಿತ ಮುಂದುವರಿದರೂ, ಹಿಂದು ಸಮಾಜದಲ್ಲಿ, ಉತ್ತರ ಭಾರತದಂತೆ ಪರ್ದಾ ಪದ್ಧತಿ ಜಾರಿಗೆ ಬರಲಿಲ್ಲವೆಂಬುದು ಮಹತ್ವದ ಅಂಶ. ಇದನ್ನೊಂದನ್ನು ಬಿಟ್ಟರೆ, ಇತರೇ ವಿಷಯಗಳಲ್ಲಿ ಸ್ತ್ರೀಯರಿಗೆ ಬಹಳಷ್ಟು ಕಟ್ಟುಪಾಡುಗಳು ಇದ್ದವು. ವಿಧವೆಯರ ಸ್ಥಿತಿ ಅತಿ ಶೋಚನೀಯವಾಗಿತ್ತು. ಮುಂಡನ, ಕೆಂಪು ಸೀರೆಯ ಧಾರಣೆ ಕಡ್ಡಾಯವಾಗಿದ್ದವು. ಸತಿಪದ್ಧತಿಯನ್ನು ಶ್ಲಾಘಿಸಿದೆಯಾದರೂ ಮಿತಾಕ್ಷರಾ (೧೧ನೇ ಶತಮಾನ)ದಂತೆ ಅದರ ವೈಭವೀಕರಣ ಮತ್ತು ಸತಿ ಹೋಗುವಂತೆ ಸ್ತ್ರೀಯರನ್ನು ಪ್ರೋತ್ಸಾಹಿಸಿದ್ದು ಬಲವಾಗಿಲ್ಲ. 'ಧೈರ್ಯವಿದ್ದರೆ ಪತಿಯೊಡನೆ ಸಹಗಮನ ಮಾಡು. ಆದರೆ ವಿಧವಾ ಧರ್ಮವನ್ನು ಅಕ್ಷರಶಃ ಪಾಲಿಸಿದರೆ ಅಷ್ಟೇ ಪುಣ್ಯವುಂಟು ಎಂಬ ವಿಚಾರ ಗುರುಚರಿತ್ರೆಯಲ್ಲಿ ಬರುತ್ತದೆ. ಈ ವಿಧವಾ ಧರ್ಮಪಾಲನೆ ಅತ್ಯಂತ ಕಠೋರವಾಗಿತ್ತು ಎಂದು ಬೇರೆ ಹೇಳಬೇಕಿಲ್ಲ.

ಬಾಲ್ಯ ವಿವಾಹಗಳು ಹೆಚ್ಚೆಚ್ಚು ಪ್ರಚಲಿತವಿದ್ದವು. ಬನಶಂಕರಿಯ ಪೂಜೆ, ಅನಂತಚತುರ್ದಶಿ ವ್ರತಗಳು, ಮುತ್ತೈದೆಯರಿಗೆ ನದಿ ದಂಡೆಯ ಮೇಲೆ ಸಾಮೂಹಿಕವಾಗಿ ಪೂಜಿಸಲು, ಆ ನೆವದಿಂದ ನಲಿಯಲು ಅವಕಾಶ ಕಲ್ಪಿಸುತ್ತಿದ್ದವು.

ಹೆಂಗಳೆಯರ ನಿಂದಾಸ್ತುತಿ ಇದ್ದರೂ, ಗೌರವದ ಸ್ಥಾನ ಕಲ್ಪಿಸಲಾಗಿದೆ. ಪುರುಷನಿಗೆ ಚತುರ್ವಿಧ ಪುರುಷಾರ್ಥಗಳು ಸ್ತ್ರೀಯರಿಂದಲೇ ಲಭ್ಯ ! ಎಂದು ಹೇಳಲಾಗಿದೆ. ಹೆಂಡತಿಯಿಲ್ಲದವನು ಯಜ್ಞಾದಿ ಕರ್ಮಗಳಿಗೆ ಯೋಗ್ಯನಲ್ಲ. ಮನೆಯಲ್ಲಿ ಹೆಂಡತಿ ಇಲ್ಲದವನಿಗೆ ಅರಣ್ಯವು ದೂರವಿಲ್ಲ ! ಅವನು ಕರ್ಮಬಾಹಿರನು ಎನ್ನಲಾಗಿದೆ.

ಶಿಕ್ಷಣ ಪದ್ಧತಿಯ ಕೆಲ ನೋಟಗಳು : "ಹೊಟ್ಟೆಪಾಡಿಗೆ ಶಿಕ್ಷಣ, ನೌಕರಿಗಾಗಿ ಸರ್ಟಿಫಿಕೇಟ್" ಅವಶ್ಯವಿಲ್ಲದ ದಿನಗಳಲ್ಲಿ ಅಕ್ಷರಾಭ್ಯಾಸವೇ ವಿದ್ಯೆ ! ಎಂಬ ಟೊಳ್ಳು ಕಲ್ಪನೆ ಬೆಳೆದಿರಲಿಲ್ಲ. ವಿದ್ಯೆಯೆಂದರೆ ಅಧ್ಯಾತ್ಮಿಕ ವಿದ್ಯೆ ! ಎಂಬ ಕಲ್ಪನೆ ರೂಢವಾಗಿತ್ತು. ಗುರುಕುಲ ಪದ್ಧತಿ ಜಾರಿಯಲ್ಲಿತ್ತು. ನಿಜವಾದ ಬೋಧಕರು ಕಡಿಮೆ ಸಂಖ್ಯೆಯಲ್ಲಿ ಇದ್ದರು. ಢೋಂಗಿ (ಸೋಗಿನ) ಪಂಡಿತರೂ ಇದ್ದರು. ಸುಳ್ಳು ಪ್ರಚಾರದಿಂದ ರಾಜರ ಕೃಪೆ ಗಳಿಸಿ ಧನ ಮತ್ತು ಪ್ರಶಸ್ತಿ ಗಳಿಸುವವರು ಇದ್ದರು. ಇಂಥ ಇಬ್ಬರು ಬ್ರಾಹ್ಮಣರ ಡಾಂಭಿಕತೆಯನ್ನು ಬಯಲಿಗೆಳೆದ ಘಟನೆ ಗುರುಚರಿತ್ರೆಯಲ್ಲಿ ಬರುತ್ತದೆ. ತಾವು ಘನಪಂಡಿತರೆಂದು ಅರಸನನ್ನು ನಂಬಿಸಿ, ಆನೆ ಮತ್ತು ಜಯಪತ್ರಗಳನ್ನು ಪಡೆದು, ಈ ಈರ್ವರು ಹೋದಲ್ಲೆಲ್ಲ ಅವನ್ನು ಪ್ರದರ್ಶಿಸುವರು. ಶಾಸ್ತ್ರಾರ್ಥಕ್ಕೆ ಪಂಡಿತರನ್ನು ಆಹ್ವಾನಿಸುವರು.

ಅವರ ಪ್ರಚಾರಕ್ಕೆ ಹೆದರಿ ಯಾರೂ ಮುಂದರಿಯದಿದ್ದಾಗ ಆ ಊರಿನಲ್ಲಿ ಸಾರ್ವಜನಿಕವಾಗಿ ಜಯಪತ್ರ ಪಡೆದು ಮುಂದಿನ ಊರಿಗೆ ತೆರಳುವರು. ಈ ವಿಚಾರ ನರಸಿಂಹ ಸರಸ್ವತಿಗಳ ಗಮನಕ್ಕೆ ಬಂದು ತಮ್ಮ ಅತಿ ಅಜ್ಞಾನಿ, ದರಿದ್ರ ಶಿಷ್ಯನೊಬ್ಬನನ್ನು ತಮ್ಮ ಯೋಗಬಲದಿಂದ ಜಾಗೃತಗೊಳಿಸಿ ಆ ಇಬ್ಬರು ಬ್ರಾಹ್ಮಣರೊಂದಿಗೆ ವಾದಕ್ಕೆ ಕಳಿಸುತ್ತಾರೆ. ಸೋತ ಬ್ರಾಹ್ಮಣರು ಸದ್ದಿಲ್ಲದೇ ಅಡಗುತ್ತಾರೆ. ಈ ಅಧ್ಯಾಯದಲ್ಲಿ ಕ್ರಮಬದ್ಧವಾದ ವೇದ ಮತ್ತು ಶಾಸ್ತ್ರಾಧ್ಯಯನಗಳ ವಿವರಗಳು ಬಂದು, ಮಧ್ಯಯುಗದಲ್ಲಿ ಅವುಗಳ ಕಲಿಕೆಯ ಪದ್ಧತಿಯ ಪರಿಚಯವಾಗುತ್ತದೆ.

ವಿದ್ಯೆಯ ಮಹತ್ವದ ಕುರಿತು ಚಿರಪರಿಚಿತ ವಿಚಾರಗಳೇ ಇದ್ದರೂ ವ್ಯಕ್ತಿಗಳನ್ನು ಪರದೇಶಗಳಲ್ಲಿ ಕಾಯುವದು ವಿದ್ಯಾಬಲವೊಂದೇ ! ಎಂಬ ಬ್ರಾಹ್ಮಣ ಬೋಧೆ ಎದ್ದುಕಾಣುತ್ತದೆ. ಮುಖ್ಯ ಆದಾಯವಿಲ್ಲದ ಜನಾಂಗದವರು ವಿದ್ಯೆ ಪಡೆದರೂ, (ವಿದ್ಯೆ ಉಚಿತವಾಗಿದ್ದ ದಿನಗಳಲ್ಲಿ) ಸ್ವದೇಶದಲ್ಲಿ ಮನ್ನಣೆ ದೊರೆಯದಾಗ ನೆರೆನಾಡುಗಳಿಗೆ ವಲಸೆ ಹೋಗುವದು ಸಾಮಾನ್ಯವಾಗಿತ್ತು. ಎಂಥ ಪ್ರತಿಕೂಲ ಪರಿಸ್ಥಿತಿಯಲ್ಲೂ ಧೃತಿಗೆಡದೆ ಬಾಳು ನಡೆಸುವ ಜೀವನ ಶಿಕ್ಷಣವನ್ನು ಅಂದಿನವರು ಪಡೆಯುತ್ತಿದ್ದರು. ಕೃಷಿಜೀವನ ನಡೆಸಿಯೂ ಬಡವರು ದಾನ-ಧರ್ಮದಲ್ಲಿ ಮುಂದಾದುದನ್ನು ಗುರುಚರಿತ್ರೆಯಲ್ಲಿ ಕಾಣುತ್ತೇವೆಯೇ ಹೊರತು ಆತ್ಮಹತ್ಯೆಯ ಪ್ರಸಂಗಗಳನ್ನಲ್ಲ !

ಸಂಗೀತಕ್ಕೆ ದೊರೆತ ಪ್ರಾಧಾನ್ಯ : ಹರಿದಾಸರಿಂದಾಗಿ ಭಕ್ತಿಪಂಥದಲ್ಲಿ ಸಂಗೀತಕ್ಕೆ ಪ್ರಾಧಾನ್ಯ ಬಂದದ್ದು ಪರಿಚಿತ ವಿಚಾರ. ಆದರೆ ಅದಕ್ಕೂ ಒಂದುವರೆ ಶತಮಾನದ ಮೊದಲು ಭಜನೆಗೆ (ಸಾಮೂಹಿಕ ಹಾಡುಗಾರಿಕೆಗೆ) ನರಸಿಂಹ ಸರಸ್ವತಿಗಳು ಮಹತ್ವ ಕೊಟ್ಟಿದ್ದರು. ಗಾಯನೆ ಪ್ರೀತಿ ಬಹುಮುಖ ! (ನನಗೆ ಗಾಯನದಲ್ಲಿ ತುಂಬ ಪ್ರೀತಿ !) ಮತ್ತು "ನಿತ್ಯ ಜೇ ಜನ ಗಾಯನ ಕರಿತಿ, ತ್ಯಾವರ ಮಾಝಿ ಅತಿ ಪ್ರೀತಿ !" ದಿನವೂ ಹಾಡುವವರು ನನ್ನ ಅತಿ ಮೆಚ್ಚಿಗೆಗೆ ಪಾತ್ರರು !" ಎಂಬ ಗುರುವಾಣಿ ಪುಸ್ತಕದಲ್ಲಿದೆ. ಗುರುಚರಿತ್ರೆಯ ಆರನೆಯ ಅಧ್ಯಾಯವು ಅಂದು ಪ್ರಚಲಿತವಿದ್ದ ೩೬ ರಾಗಗಳನ್ನೆಲ್ಲ ಹೆಸರಿಸುತ್ತದೆ. ಹಿಂದುಸ್ತಾನಿ, ಕರ್ನಾಟಕಗಳೆಂಬ ಭೇದ ಸ್ಫುಟವಾಗಿರದ ದಿನಗಳಲ್ಲಿ ಎರಡೂ ಶೈಲಿಗಳಲ್ಲಿ ಹಾಡುವದು ಸಾಮಾನ್ಯವಾಗಿತ್ತು. ಶ್ರೀ, ವಸಂತ, ಆಹಿರಿ, ಭೈರವ, ಭೂಪಾಲಿ, ಮೇಘ, ಧನಾಶ್ರಿ, ಲಲಿತ, ಕೌಶಿ, ರಾಮಕಲಿ ಎಂದು ಇವತ್ತಿಗೆ ಹಿಂದಸ್ತಾನಿ ರಾಗಗಳೆಂದು ಗುರುತಿಸಲ್ಪಡುವವುಗಳೊಂದಿಗೆ ದೇಶಾಕ್ಷಿ, ಕುರಂಜಿ, ಕಲ್ಯಾಣಿ, ತೋಡಿ, ಮಾಳವ, ಗೌಳ, ದೇವಕ್ರಿ, ಹಂಸ(ಧ್ವನಿ), ಕಾಂಬೋಧಿ, ರಾಮಕ್ರಿಯಾ ಮುಂತಾದ ಇಂದಿನ ಕರ್ನಾಟಕ ಗುಂಪಿನ ರಾಗಗಳ ಹೆಸರುಗಳನ್ನು ಕಾಣುತ್ತೇವೆ. ಕೆಲ ರಾಗಗಳು (ತ್ರಾಟಿಕೆ, ವಲ್ಲಭಾ, ಚೌಡಿ, ಪಟಮಂಜರಿ, ಮಾಧುರಿ ಮುಂಮಾಯವಾದಂತಿದೆ !) ಸಂಗೀತಾಸಕ್ತ ಸಂಶೋಧಕರಿಗೆ ಗುರುಚರಿತ್ರೆಯ ಆರನೆಯ ಅಧ್ಯಾಯವು ಬಾಹ್ಮನಿಗಳ ಕೊನೆಯ ಮತ್ತು ಆದಿಲಶಾಹಿಗಳ ಮೊದಲ ವರ್ಷಗಳಲ್ಲಿಯ ದಖ್ಖನ ಪ್ರಾಂತದಲ್ಲಿ ಪ್ರಚಲಿತವಿದ್ದ ಸಂಗೀತ ಪದ್ಧತಿಯ ಒಳ್ಳೆಯ ಪರಿಚಯ ಕೊಡುತ್ತದೆ. ಮಾನಸೋಲ್ಲಾಸವು ೧೨ನೇ ಶತಮಾನದ ಸಂಗೀತ ಪದ್ಧತಿಯನ್ನು ವಿವರಿಸಿದರೆ ಗುರುಚರಿತ್ರೆಯು ೧೫-೧೬ನೇ ಶತಮಾನದ ಪ್ರಚಲಿತ ಪದ್ಧತಿಯ ಮೇಲೆ ಬೆಳಕು ಚಲ್ಲುತ್ತದೆ.

ಕೊನೆಯದಾಗಿ, ನರಸಿಂಹ ಸರಸ್ವತಿಗಳು ಸಮಾಧಿಸ್ಥರಾಗುವ ಮುನ್ನ ಕೈಕೊಂಡ ಲೋಕಕಲ್ಯಾಣದ ಪ್ರಯತ್ನದ ಮಾದರಿಯನ್ನು ಉದಹರಿಸಬಹುದು. ಬಾಹ್ಮನಿ ಅರಸು ಇಮ್ಮಡಿ ಅಲ್ಲಾವುದ್ದೀನನಿಗೆ (೧೪೩೬-೧೪೫೮) ತೊಡೆಯಲ್ಲಿ ಕುರುವೆದ್ದು ವಿಪರೀತ ಬಾಧೆ ಕೊಡುತ್ತಿತ್ತು ('ರಾಜಸ್ಫೋಟಕ'ವೆಂದು ಅದನ್ನು ಕರೆಯಲಾಗಿದೆ). ಯಾವ ಚಿಕಿತ್ಸೆಯಿಂದಲೂ ಗುಣ ಕಾಣದಾಗ, ಆಯುರ್ವೇದಸಿದ್ಧಿಯ ನರಸಿಂಹ ಸರಸ್ವತಿಗಳ ಹೆಸರನ್ನು ಸೂಚಿಸಲಾಗುತ್ತದೆ. ತಾನು ಹೇಳಿಕಳಿಸಿದರೆ ಗುರುಗಳು ಬರುವವರಲ್ಲವೆಂದು ಮನಗಂಡ ಬಾದಶಹನು ಮೇಣೆಯಲ್ಲಿ ಅವರು ತಂಗಿರುವ ಸ್ಥಳಕ್ಕೆ ಹೋಗಿ ಶರಣಾಗುತ್ತಾನೆ. ಗುರುಗಳು ಅವನ ಸ್ಫೋಟಕ ಯಾತನೆಯನ್ನು ವಾಸಿಮಾಡುತ್ತಾರೆ. ಕೃತಜ್ಞನಾದ ಬಾದಶಾಹನು ತನ್ನ ವಿದುರನಗರಿ (ಬೀದರ)ಗೆ ಆಮಂತ್ರಿಸುತ್ತಾನೆ. ರಾಜಗುರುಗಳ ಮನ್ನಣೆ ಸೂಚಿಸುತ್ತಾನೆ. ಗುರುಗಳು ಎರಡಕ್ಕೂ ಒಪ್ಪದಿದ್ದಾಗ, ಅವರ ಯಾವುದೇ ಸಲಹೆಯನ್ನು ಪೂರ್ಣತಃ

ಒಪ್ಪಿಕೊಳ್ಳುವದಾಗಿ ನಿರುಪಾಯನಾದ ಅರಸನು ಹೇಳಿದಾಗ, "ಈ ರಾಜ್ಯದಲ್ಲಿ ಗೋವಧೆಯನ್ನು ನಿಲ್ಲಿಸು ! ಎಂದು ಗುರುಗಳು ಹೇಳುತ್ತಾರೆ. ಕೂಡಲೇ ಅರಸನು ಒಪ್ಪಿಕೊಳ್ಳುತ್ತಾನೆ. ಮದ್ಯಪಾನವನ್ನು ತ್ಯಜಿಸುವಂತೆ ಅವನಿಗೆ ಉಪದೇಶಿಸುತ್ತಾರೆ. ಅದಕ್ಕೂ ಸಮ್ಮತಿಯನ್ನು ಸೂಚಿಸಿದ ರಾಜನು ತನ್ನ ಜೀವಾವಧಿಯ ತನಕ ಅದನ್ನು ಪಾಲಿಸಿದನಂತೆ! ಆತ ಬದುಕಿದ್ದು ಆ ಬಳಿಕ ಒಂದು ವರ್ಷ ಮಾತ್ರ.

ಬಾದಶಹನನ್ನು ಗುಣಪಡಿಸಿದ ವಾರ್ತೆ ನಾಲ್ಕೂ ದಿಕ್ಕುಗಳಲ್ಲಿ ಪಸರಿಸುತ್ತಿದ್ದಂತೆ, ತಂಡೋಪತಂಡವಾಗಿ ಜನರು ಗಾಣಗಾಪುರಕ್ಕೆ ಬರಲಾರಂಭಿಸಿ ಗುರುದರ್ಶನಕ್ಕಾಗಿ ಹಾತೊರೆಯಲಾರಂಭಿಸುತ್ತಾರೆ. ಸಂಸಾರದಿಂದ ವಿಮುಖರಾದ ಗುರುಗಳಿಗೆ ಇದು ರುಚಿಸದೇ ಶ್ರೀಶೈಲಕ್ಕೆ ಹೊರಟು ನಿಲ್ಲುತ್ತಾರೆ. ಶಿಷ್ಯಗಣಕ್ಕೆ ಕೊಡಬೇಕಾದ ನಿರ್ದೇಶನಗಳನ್ನು ಕೊಟ್ಟು ಶ್ರೀಶೈಲಕ್ಕೆ ಕೆಲವೇ ಶಿಷ್ಯರೊಂದಿಗೆ ಗುಪ್ತವಾಗಿ ಹೊರಟು ಹೋಗುತ್ತಾರೆ. ಕದಳಿವನದಲ್ಲಿ ಶಂಕರನ ದಿವ್ಯಸ್ಥಾನದಲ್ಲಿ ಲೀನವಾಗುತ್ತಾರೆ.

ಶರಣಯುಗದಿಂದ ಹರಿದಾಸರ ಕಾಲವಾನ ಪ್ರಾರಂಭವಾಗುವ ಮಧ್ಯಂತರದಲ್ಲಿ ಬದುಕಿದ ನರಸಿಂಹ ಸರಸ್ವತಿಗಳು ಆಧ್ಯಾತ್ಮಿಕ ಮಾರ್ಗ ದರ್ಶನವಿಲ್ಲದೇ ಕಂಗೆಟ್ಟ ಜನಸಮುದಾಯಕ್ಕೆ ಧೈರ್ಯ ನೀಡಿ, ಅವರು ಬಾಳುತ್ತಿದ್ದ ಸಂಕಷ್ಟಗಳ ನಡುವೆ, ಪರಿಮಿತಿಗಳ ಮಧ್ಯೆ ಬಾಳನ್ನು ಹಸನಾಗಿಸಲು ಯತ್ನಿಸಿದ್ದಾರೆ. ಯಾವ ದೊಡ್ಡ ಮಠ ನಿರ್ಮಿಸದಿದ್ದರೂ, ಜಂಗಮವಾಗಿದ್ದ ದತ್ತ ಸಂಪ್ರದಾಯವನ್ನು ಪುನಶ್ಚೇತನಗೊಳಿಸಿದ್ದಾರೆ. ವ್ಯಾವಹಾರಿಕವಾಗಿ ತಮ್ಮ ಪೂಜೆ ಪುನಸ್ಕಾರಗಳನ್ನು ನಡೆಸಿಕೊಂಡು ಹೋಗುವಂತೆ ಜನಸಾಮಾನ್ಯರಿಗೆ ಮಾರ್ಗದರ್ಶನ ನೀಡಿದ್ದಾರೆ.

'ಗುರು ಚರಿತ್ರೆ'ಯ ಆಳ ಅಧ್ಯಯನ, ಮಧ್ಯಯುಗದ ಜನಜೀವನದ ಬಗ್ಗೆ ಸಾಕಷ್ಟು ಬೆಳಕು ಚಲ್ಲುತ್ತದೆ.

ಆಧಾರಸೂಚಿ

೧. **ಶ್ರೀ ಗುರು ಚರಿತ್ರಾಂತಿಲ್ ಐತಿಹಾಸಿಕ ಮಾಹಿತಿ,** ಲೇಖನ : ಜೆ.ಎಸ್. ಕರಂದಿಕರ.
ಭಾರತೀಯ ಇತಿಹಾಸ ಸಂಶೋಧಕ ಮಂಡಲ, ತ್ರೈಮಾಸಿಕ ಸಂಚಿ ೨, ಸಂಪುಟ ೨, ಪುಣೆ, ೧೯೨೯.

೨. **ಮಹಾರಾಷ್ಟ್ರ ಮಹೋದಯಾಚಾ ಪೂರ್ವರಂಗ,** ನಾರಾಯಣ ಕೃಷ್ಣ ಗದ್ರೆ., ಮುಂಬೈ, ೧೯೦೫.

೩. **ನರಸಿಂಹ ಸರಸ್ವತಿ ಯಾಂಚಾ ಕಾಲ ಆನಿ ಕಾರ್ಯ,** ಲೇಖನ : ಪಿ.ಎಚ್. ಖಾಡಿಲ್ಕರ್.
ಪ್ರೊ. ಡಿ.ವಿ. ಪೊದ್ದಾರ್., felicitation volume, Pune, ೧೯೫೦.

೪. ಗೋಪಾಲ್ ನೀಲಕಂಠ ದಾಂಡೇಕರ್, **ಶ್ರೀ ಗುರುಚರಿತ್ರೆ,** ಮುಂಬೈ, ೧೯೭೫.

೫. *History of Medieval Deccan*, Vol. I & II, prof. H.K. Sherwani & Dr. P.M. Joshi, Hyderabad 1975.

೬ **ದಾಸಸಾಹಿತ್ಯ ದರ್ಶನ,** (ಸಂ. ಎಚ್ಚೆಸ್ಕೆ) ಮೈಸೂರು, ೧೯೮೩.

೭. ಕೃಷ್ಣಾಜಿ ಶ್ರೀ ಪಾದರಾವ್ ಕುಲಕರ್ಣಿ, **ಶ್ರೀ ಗುರು ಚರಿತ್ರೆ,** (ಗದ್ಯಾನುವಾದ) ೮ನೇ ಮುದ್ರಣ, ಹುಬ್ಬಳ್ಳಿ, ೧೯೮೨.

ಡಾ. ಕೆಳದಿ ವೆಂಕಟೇಶ್ ಜೋಯಿಸ್*

ಚಿಕ್ಕಮಗಳೂರು ಜಿಲ್ಲೆಯ ಕೆಳದಿ ಅವಶೇಷಗಳು ಮತ್ತು ಕೆಳದಿ ಭದ್ರಪ್ಪನಾಯಕನ ಕಾಲದ ನಿರೂಪ

ಕೆಳದಿ ಅರಸರ ಶಾಸನಗಳು ಚಿಕ್ಕಮಗಳೂರು ಜಿಲ್ಲೆಯಲ್ಲಿಯೂ (ಹಿಂದಿನ ಕಡೂರು ಜಿಲ್ಲೆ) ದೊರೆತಿವೆ. ಕ್ರಿ.ಶ. ೧೬೩೧ರಿಂದ ೧೭೯೯ ರವರೆಗಿನ, ಇದುವರೆಗೆ ದೊರೆತಿರುವ ಸುಮಾರು ೧೫ ಶಾಸನಗಳಲ್ಲಿ ಹೆಚ್ಚಿನವು ದಾನಶಾಸನವಾಗಿವೆ. ಇವುಗಳಲ್ಲಿ ವೆಂಕಟಪ್ಪನಾಯಕನ ಕಾಲದ ಶೃಂಗೇರಿ - ೫ ಮತ್ತು ಕೊಪ್ಪ ೬೧ನೆಯ (೧೬೨೧) ಶಾಸನಗಳಲ್ಲಿ ಈತನು ಶೃಂಗೇರಿಯನ್ನು ಪುನರ್ ಪ್ರತಿಷ್ಠಾಪನೆ ಮಾಡಿದ ಉಲ್ಲೇಖ ದೊರೆಯುತ್ತದೆ. ಶಿವಪ್ಪನಾಯಕನ ಕಾಲದ ಶೃಂಗೇರಿ ೧೧ ಮತ್ತು ೧೩ (೧೬೫೨) ಶಾಸನಗಳು ಈ ಕುರಿತಂತೆಯೇ ಇದ್ದು ಪ್ರಮುಖವಾಗಿವೆ. ಇದು ಶಿವಪ್ಪನಾಯಕನು ಆರಗ, ಗುತ್ತಿ ಬಾರಕೂರು, ಮಂಗಳೂರು ಮೊದಲಾದ ಪ್ರದೇಶಗಳನ್ನು ಒಳಗೊಂಡಂತೆ ತನ್ನ ರಾಜ್ಯವನ್ನು ಸಮುದ್ರದವರೆಗೆ ವಿಸ್ತರಿಸಿದ್ದುದನ್ನು ಉಲ್ಲೇಖಿಸುತ್ತದೆ. ಚಿಕ್ಕಮಗಳೂರು ಜಿಲ್ಲೆಯ ನಿರ್ವಾಣಸ್ವಾಮಿ ಮಠ, ಕಲ್ಲಮರಡಿ ಮಠ, ರಂಭಾಪುರಿ ಮಠ, ಹುಲಿಗೆರೆ ಮಠ ಮೊದಲಾದವು ಇವನ ಕಾಲದಲ್ಲಿ ಪ್ರೋತ್ಸಾಹ ಪಡೆದವು. ಕೊನೆಯ ರಾಣಿ ವೀರಮ್ಮಾಜಿಯು ಶೃಂಗೇರಿ ಮಠಕ್ಕೆ ವಿಶೇಷ ಸಹಾಯ ಮಾಡಿದಳು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೆಳದಿ ಕಾಲದ ಅವಶೇಷಗಳು ಸಾಕಷ್ಟು ಇವೆ. ಅವುಗಳಲ್ಲಿ ಪ್ರಮುಖವಾಗಿ ಶೃಂಗೇರಿ, ಕಿಗ್ಗ ಮೊದಲಾದ ಕಡೆಗಳಲ್ಲಿ ಲಭ್ಯವಿರುವ ಅವಶೇಷಗಳು, ದಾಖಲೆಗಳು ಈಗಾಗಲೇ ಪ್ರಕಟವಾಗಿವೆ. ಕೆಲವನ್ನು ಈಗಾಗಲೇ ವಿದ್ವಾಂಸರು ಗುರುತಿಸಿದ್ದಾರೆ. ಆದರೂ ಇನ್ನೂ ಸಾಕಷ್ಟು ಅವಶೇಷಗಳನ್ನು ಗುರುತಿಸಲು ಅವಕಾಶವಿದ್ದು ಅದರಲ್ಲಿ ಮುಖ್ಯವಾಗಿ ಕೆಳದಿ ಅರಸರ ಕಾಲದಲ್ಲಿ ನಿರ್ಮಿತವಾದ ಕೆರೆ, ಬೊಕ್ಕಸದ ಸಿದ್ಧಬಸವಯ್ಯನು ಕಳಸದಲ್ಲಿ ನಿರ್ಮಿಸಿದ ಮಠ, ಕಳಸದಲ್ಲಿ ಮೊದಲನೇ ಬಸಪ್ಪನಾಯಕನ ಕಾಲದಲ್ಲಿ ಕುರುವದ ಮರಿಯಪ್ಪ ಹಾಲದೇವರು ನಿರ್ಮಿಸಿದ ವಿರಕ್ತ ಮಠ ಮೊದಲಾದವನ್ನು ಇದುವರೆಗೆ ಗುರುತಿಸಿಲ್ಲ. ಇಂದೂ ಸಹ ಈ ಮಠಗಳ ಅವಶೇಷಗಳು ಅಲ್ಲಿ ನಮಗೆ ನೋಡಲು ಸಿಗುತ್ತದೆ. ಇದರ ಜೊತೆಗೆ ಎಪಿಗ್ರಾಫಿಯ ಕರ್ನಾಟಕ ಸಂಪುಟ ೧೨ರಲ್ಲಿ ಇರುವ ಶಾಸನ ಸಂಖ್ಯೆ ೪೩ ಮತ್ತು ೪೪ರಲ್ಲಿ ಬಾಳೆಹೊನ್ನೂರು ಉಲ್ಲೇಖ ಕಂಡುಬರುತ್ತದೆ. ಅಂತೆಯೇ ಪುಟ ೪೬೨ರಲ್ಲಿ ಬಾಳೆಹಳ್ಳಿ ತಾಮ್ರ ಶಾಸನದ ಉಲ್ಲೇಖವಿದ್ದು ಇದರಲ್ಲಿ ಬೊಕ್ಕಸದ ಸಿದ್ಧಬಸವಯ್ಯನ ಉಲ್ಲೇಖ ಕಂಡುಬರುತ್ತದೆ. ಈ ಬೊಕ್ಕಸದ ಸಿದ್ಧ ಬಸವಯ್ಯನೇ ಕೆಳದಿಯಲ್ಲಿ ರಾಣಿ ಚೆನ್ನಮ್ಮಾಜಿ ಕಾಲದಲ್ಲಿ ಶಾ.ಶ. ೧೬೦೩ ಅಂದರೆ ಕ್ರಿ.ಶ. ೧೬೭೮ರಲ್ಲಿ ಧ್ವಜಸ್ತಂಭವನ್ನು ಹಾಕಿಸಿದುದನ್ನು ಕೆಳದಿ ಧ್ವಜಸ್ತಂಭದಲ್ಲಿರುವ ಶಾಸನ ಉಲ್ಲೇಖಿಸುತ್ತದೆ.

ಇಲ್ಲಿ ಬೊಕ್ಕಸದ ಸಿದ್ಧಬಸವಯ್ಯನ ಕುರಿತು ಇನ್ನೊಂದು ವಿಷಯ ಗಮನ ಸೆಳೆಯುತ್ತದೆ. ಇತ್ತೀಚೆಗೆ ಸಾಗರ ತಾಲ್ಲೂಕಿನ ಆವಿನಹಳ್ಳಿಯವರೊಬ್ಬರು ಬಂದು ತಮ್ಮಲ್ಲಿ ಸಿದ್ಧಪ್ಪನ ಗುಡಿ ಎಂದೊಂದಿದ್ದು ಅದರ ಬಗ್ಗೆ ಹೆಚ್ಚಿನ ಸಂಶೋಧನೆ ಆಗಬೇಕೆಂದು ತಿಳಿಸಿದರು. ಅವರೇ ಹೇಳುವಂತೆ ಅದು ಒಂದು ಸಮಾಧಿಯಾಗಿದ್ದು ಅಲ್ಲಿ ಲಿಂಗವನ್ನು ಸ್ಥಾಪಿಸಿದ್ದಾರೆಂದೂ ಆ ದೇವಾಲಯದ (ಸಮಾಧಿ)ಯ ಮೇಲ್ಭಾಗದಲ್ಲಿ ಒಂದು ಕೋಣೆ ಈ ಹಿಂದೆ ಇತ್ತೆಂದೂ ಆ ಕೋಣೆಯಲ್ಲಿ ಸಾಕಷ್ಟು ಕಡತ, ದಾಖಲೆಗಳು ಇದ್ದವೆಂದೂ ತಿಳಿಸಿರುತ್ತಾರೆ. ಆದರೆ ನಾನಲ್ಲಿಗೆ ಹೋದಾಗ ಅಲ್ಲಿ ಈ ರೀತಿಯಲ್ಲಿ ಕಡತ ಅಥವಾ ದಾಖಲೆಗಳು ಯಾವುದೂ ಸಿಕ್ಕಿರುವುದಿಲ್ಲ. ಈ ದೇವಾಲಯವನ್ನು ಕೆಲವರು ಸಿದ್ದೇಶ್ವರ ದೇವಾಲಯ ಎಂದು ಕರೆಯುತ್ತಾರೆ. ಕೆಲಸರು ಸಿದ್ಧಪ್ಪನ ಗದ್ದುಗೆ ಎಂದೂ ಕರೆಯುವುದು ಕಂಡುಬಂದಿದೆ. ಈ ದೇವಾಲಯವು ಗರ್ಭಗೃಹ ಮತ್ತು ಹೊರ ಪ್ರಾಕಾರ ಹೊಂದಿದೆ. ಹೊರ ಪ್ರಾಕಾರದಲ್ಲಿ ಸುತ್ತಲೂ ಮಿನಾರ್‌ಗಳ ಮಾದರಿಯಲ್ಲಿ ರಚನೆ ಮಾಡಲಾಗಿದ್ದು ಲಿಂಗವನ್ನು ಪಾಣಿಪೀಠದ ಕೆಳಭಾಗದಲ್ಲಿ ಅಷ್ಟ ಕೋನಾಕೃತಿಯ ಕಲ್ಲಿನ ಮೇಲೆ ಇಡಲಾಗಿದೆ. ಈ ಸಿದ್ಧಪ್ಪನ ಗುಡಿಯ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆ ನಡೆಯುತ್ತಿದೆ.

* ಕೆಳದಿ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ನರಸಿಂಹರಾಜಪುರದ ವೀರಮ್ಮಾಜಿ ಕೆರೆ

ಇದರ ಜೊತೆಗೆ ಚಿಕ್ಕಮಗಳೂರಿನ ನರಸಿಂಹರಾಜ ಪುರದಲ್ಲಿರುವ ಕೆರೆಯೂ ಈ ನಿಟ್ಟಿನಲ್ಲಿ ಗಮನಿಸುವಂತಹುದು. ಕೆಳದಿ ಅರಸರ ಕಾಲದಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಪ್ರಮುಖ ಸ್ಥಾನ ದೊರೆತಿರುವುದು ಇತಿಹಾಸ ಅಧ್ಯಯನದಿಂದ ತಿಳಿಯಬಹುದಾಗಿದೆ. ಇದೇ ಜಿಲ್ಲೆಯ ನರಸಿಂಹರಾಜಪುರ ಪಟ್ಟಣದಲ್ಲಿ ಅಗ್ರಹಾರವೊಂದಿದ್ದು ಅದಕ್ಕೆ ಅಂಟಿಕೊಂಡಂತೆ ಕೆರೆಯೊಂದಿದೆ. ಈ ಕೆರೆಯನ್ನು ಸ್ಥಳೀಯರು ವೀರಮ್ಮಾಜಿ ಕೆರೆ ಅಥವಾ ಇರಮ್ಮಾಜಿ ಕೆರೆ ಎಂದು ಕರೆಯುತ್ತಾರೆ. ಇದು ಕೆಳದಿ ಅರಸರಲ್ಲಿ ಪ್ರಮುಖರಾದ ರಾಣಿ ಚೆನ್ನಮ್ಮಾಜಿ ಮತ್ತು ಕೊನೆಯಲ್ಲಿ ಆಡಳಿತ ನಡೆಸಿದ ವೀರಮ್ಮಾಜಿಯು ಈ ಕೆರೆಯನ್ನು ನಿರ್ಮಿಸಿದರೆಂದು ಇತಿಹಾಸ ಹೇಳುತ್ತದೆ. ಈ ಕೆರೆ ಸುಮಾರು ೧೩ ಎಕರೆ ೩೦ ಗುಂಟೆ ವಿಸ್ತೀರ್ಣ ಹೊಂದಿದೆ. ಇದಕ್ಕೆ ತಾಲ್ಲೂಕಿನಲ್ಲಿಯೇ ಎಂದೂ ಬತ್ತದ ಕೆರೆ ಎಂದು ಹೇಳಲಾಗುತ್ತದೆ. ಈ ಊರಿನಲ್ಲಿ ಪುರಾತನ ಏಳು ಬಾವಿಗಳು ಇವೆ. ಇದನ್ನು ಅಂದಿನ ಆಡಳಿತ ಅಧಿಕಾರಿ ಸಂಗಪ್ಪ ಎಂಬುವವನು ನಿರ್ಮಿಸಿದ್ದಾನೆಂದು ಹೇಳಲಾಗುತ್ತದೆ. ಈ ಬಾವಿಗಳು ಇಂದು ಶಿಥಿಲಗೊಂಡಿದೆ. ಕೆರೆ ಒತ್ತುವರಿಗೆ ಒಳಗಾಗುತ್ತಿದೆ. ಇದರ ಜೊತೆಗೆ ಸುಗಪ್ಪ ಮಠ ಎಂಬ ಮಠವಿದ್ದು ಇದನ್ನು ಗುರುಶಾಂತಪ್ಪ ಎಂಬುವವರು ಸ್ಥಾಪಿಸಿರುವುದಾಗಿ ತಿಳಿದುಬರುತ್ತದೆ. ಈ ಮಠವು ಬೆಂಗಳೂರಿನ ಲಾಲ್‌ಬಾಗ್ ಹತ್ತಿರವಿರುವ ಕಡಳೆ ಮಠಕ್ಕೆ ಸಂಯೋಜನೆಗೊಂಡಿದ್ದುದು ಕಂಡುಬರುತ್ತದೆ. ('ನಿಷ್ಕಳಂಕಿಣಿ ಕೆಳದಿ ರಾಣಿ ವೀರಮ್ಮಾಜಿ ಸತ್ಯ ಶೋಧನೆ', ಕೆಳದಿ ಗುಂಡಾಜೋಯಿಸ್ ೨೦೦೭ ಪುಟ ೩೫-೩೭) ಕೆರೆಯ ಪೂರ್ವ ಭಾಗದಲ್ಲಿ ಇಂದು ಹಳೆ ಪೇಟೆ ಎಂದು ಕರೆಯಲ್ಪಡುವ ಊರು ಅಂದು ವೀರಮ್ಮಾಜಿ ಪೇಟೆ ಎಂದು ಕರೆಯ ಲಾಗುತ್ತಿತ್ತು.

ಈಗ ದೊರೆತಿರುವ ನಿರೂಪ

ಚಿಕ್ಕಮಗಳೂರು ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀ ಕೆ.ಬಿ.ಎಂ. ಪಾಟೀಲ್‌ರವರು ನಮ್ಮ ಊರಿನ ಹತ್ತಿರದವರಾಗಿದ್ದು ಅವರು ಒಮ್ಮೆ ತಮ್ಮ ನ್ಯಾಯಾಲಯಕ್ಕೆ ಬಂದಿದ್ದ ಈ ದಾಖಲೆಯನ್ನು ಓದಿಸುವ ಸಲುವಾಗಿ ನಮ್ಮಲ್ಲಿಗೆ ತಂದಿದ್ದರು. ಇದನ್ನು ಚಿಕ್ಕಮಗಳೂರು ಜಿಲ್ಲೆಯಲ್ಲಿ ನಡೆಯುತ್ತಿರುವ ಇತಿಹಾಸ ಸಮ್ಮೇಳನದ ಈ ಸಂದರ್ಭದಲ್ಲಿ ಬಳಸಿಕೊಳ್ಳಲು ನನಗೆ ಸಂತೋಷವೆನಿಸುತ್ತದೆ.*

ಈ ನಿರೂಪವು ಕೆಳದಿ ಭದ್ರಪ್ಪನಾಯಕನು ಬೈಗೂರು ನಿರ್ವಾಣಯ್ಯನವರಿಗೆ ಬರೆದು ಕಳುಹಿಸಿದ್ದುದಾಗಿದೆ. ಈತನು ಕೆಳದಿ ಇತಿಹಾಸದಲ್ಲಿ ಪ್ರಮುಖ ಪಾತ್ರ ವಹಿಸಿರುವುದು ಕಂಡುಬರುತ್ತದೆ. ಈ ನಿರೂಪವು ಹಳೆಯ ಕಾಗದದಲ್ಲಿ ಬರೆಯಲ್ಪಟ್ಟಿದ್ದು ಹನ್ನೆರಡು ಸಾಲುಗಳನ್ನು ಒಳಗೊಂಡಿದೆ. ನಿರೂಪದಲ್ಲಿ ಕೊನೆಯಲ್ಲಿ ಮುದ್ರೆ ಇದೆ.

ನಿರೂಪದ ಪಾಠ

ಯಿಶ್ವರ ಸಂವತ್ಸರದ ಕಾರ್ತಿಕ ಶು ೫ಲ್ಲೂ ಶ್ರೀಮತ್ಕೆಳದಿ ಭದ್ರಪ್ಪನಾಯ್ಕರು ಬೈಗೂರ ನಿರ್ವಾಣಯ್ಯನವರಿಗೆ ಬರಸಿ ಕಳುಹಿಸಿದ ಶಿಖಾ ನಿರೂಪ ಕಾರ್ಯ. ಆದಾಗಿ ಜಾವಣಿಗೆ ಶಿಮೆ ವಳಿತವಾದ ಹಿರೆಕೊಳವೆ ಮಲೆ ಗಲುಡನು ಮೊದಲಾರಭ್ಯ ಅರಮನೆ ಕಾರ್ಯವೆ ಪ್ರಧಾನವಾಗಿ ಯಿದ್ದವನಷ್ಟೆ. ಯಿಾಗ ಯಿವನು ಹಜೂರ್‍ರು ಬಂದು ದಂಡಿಗೆ ಕಾಣಿಕೆ ಮುಂತ್ತಾಗಿ ಮಾಡಿ ಕೊಡಿಶಿ ನಿವು ಸಿಸ್ತು ಪಾಲಿಸಬೇಕು ಯೆಂಬದಾಗಿ ವಿಸ್ತರಿಶಿದರ್‍ರಿಂದ ಯಿವನಿಗೆ ದಂಡಿಗೆ ಕೊಡೆ ದಿವಟಿಗೆ ಕೊಡಿಶಿ ಯಿದಕ್ಕ ಉಂಬಳಿ ಗ ೮ ॥೧ ದ ಭೂಮಿಯನ್ನು ಪಾಲಿಸಿ ಯಿರುವದರ್‍ರಿಂದ ಯಿಾ ಮೆರ್‍ರೆ ಆ ಹಿರೆಕೊಳವೆ ಗ್ರಾಮದಲ್ಲಿಯೂ ಮಲೆ ಗಲುಡಗೆ ಬಿಡಿಶಿ ಕೊಟ್ಟು ಸರಾಗದಿಂದ ನಡಶಿಕೊಂಡು ಬರುವಂತೆ ಅಪ್ಪಣೆ ಕೊಡಿಶಿ ಯಿರುವ ಸಂಬಂಧ ಯಿಾ ಪ್ರಕಾರ ನಡಸಿಕೊಟ್ಟು ಯಿಾ ನಿರ್‍ರುಪದ ನಕುಲಂನ್ನು ಚಾವಡಿ ಲೆಖ್ಖಕ್ಕೆ ಬರಶಿಕೊಂಡು ತ್ತಿರ್‍ರುಗಾ ನಿರ್‍ರುಪವಂನ್ನು ಯಿಾ ಮಲ್ಲೆಗಲುಡನ ವಶಕ್ಕೆ ಕೊಡಿಸುವದು.

ನಿರೂಪದ ಸಾರಾಂಶ

ಕೆಳದಿ ಭದ್ರಪ್ಪನಾಯಕನು ಈಶ್ವರ ಸಂವತ್ಸರದ ಕಾರ್ತಿಕ ಶುದ್ಧ ೫ರಲ್ಲಿ ಬೈಗೂರ ನಿರ್ವಾಣಯ್ಯರಿಗೆ ಬರೆದು ಕಳಿಸಿದ ಕಾರ್ಯ ಇದಾಗಿದೆ. ಹಿರೇಕೊಳವೆಯ ಮಲೆಗೌಡನು ಅರಮನೆ ಕೆಲಸ ಮಾಡುತ್ತಿದ್ದವನಾಗಿದ್ದನು. ಇವನು ದಂಡಿಗೆ, ಕೊಡೆ, ದೀವಟಿಗೆ ಮಾಡಿಸಿಕೊಡುವಂತೆ ಕೇಳಿಕೊಂಡದ್ದರಿಂದ ಅವುಗಳನ್ನು ಕೊಡಿಸುವುದರ ಜೊತೆಗೆ ಅವನಿಗೆ ಗ ೮॥೧ ಭೂಮಿಯನ್ನು ಉಂಬಳಿಯಾಗಿ ಕೊಟ್ಟಿರುವ ವಿವರವನ್ನು ಈ ನಿರೂಪ ತಿಳಿಸುತ್ತದೆ.

ನಿರೂಪದ ಪ್ರಾಮುಖ್ಯತೆ

ಇದು ಯಾವ ಮಠಕ್ಕೆ ಕೊಟ್ಟಿರುವುದೆಂದು ಸ್ಪಷ್ಟವಾಗುವುದಿಲ್ಲ. ಆದರೆ ಈ ಮಠದಲ್ಲಿಯೂ ದಂಡಿಗೆ, ದೀವಟಿಗೆ ಕೊಡೆ ಇತ್ತೆಂದರೆ ಈ ಮಠವೂ ಪ್ರಮುಖ ಮಠಗಳಲ್ಲಿ ಒಂದಾಗಿತ್ತೆಂದು ಹೇಳಬೇಕಾಗುತ್ತದೆ. ಬೈಗೂರು, ಜಾವಣಿಗೆ

---

* ಇದನ್ನು ಬಳಸಿಕೊಳ್ಳಲು ಅವಕಾಶವಿತ್ತ ಮಾನ್ಯ ಪಾಟೀಲ್ ಅವರಿಗೆ ನಾನು ಅಭಾರಿಯಾಗಿದ್ದೇನೆ.

ಸೀವೆ ಮತ್ತು ಹಿರೆಕೊಳಲೆ ಗ್ರಾಮಗಳು ಚಿಕ್ಕಮಗಳೂರು ಜಿಲ್ಲೆಯ ಕೇಂದ್ರ ಸ್ಥಳ ಚಿಕ್ಕಮಗಳೂರಿನಿಂದ ಸುಮಾರು ಹತ್ತು ಕಿ.ಮಿ. ಆಸುಪಾಸಿನಲ್ಲಿ ಇರುವುದಾಗಿ ಬಾಳೆಹೊನ್ನೂರು ಶ್ರೀ ಮಠದ ಪೂಜ್ಯರು ತಿಳಿಸಿರುತ್ತಾರೆ.

ನಿರೂಪದಲ್ಲಿ ಉಕ್ತವಾಗಿರುವ ನಿರ್ವಣಯ್ಯ ಅಥವಾ ನಿರ್ವಾಣಾರ್ಯನ ಕುರಿತು : (ಕ್ರಿ.ಶ. ೧೭೨೫)

ವೀರಶೈವ ಸುಧಾನಿಧಿ ಎಂಬ ಕೃತಿಯಲ್ಲಿ ಶ್ರೀ ಗುರುಬಸವದೇಶಿಕೇಂದ್ರರು ಕೆಳದಿಯ ಮಹಾಮಂತ್ರಿಯಾಗಿದ್ದ ನಿರ್ವಾಣಯ್ಯ ಅಥವಾ ನಿರ್ವಾಣಾರ್ಯನ ಕುರಿತು ತಮಗೆ ಈ ಕೃತಿಯನ್ನು ಬರೆಯುವಂತೆ ಹೇಳಿರುವುದಾಗಿ ತಿಳಿಸುತ್ತಾನೆ. ಈ ಗ್ರಂಥದ ಉಪೋದ್ಘಾತದಲ್ಲಿ ಮಾನಪ್ಪ ಅಥವಾ ಮೌನಪ್ಪ ಮಂತ್ರಿಯ ವಂಶವೃಕ್ಷ ಬಂದಿದೆ.[೧]

ಮೌನಪ್ಪ ಮಂತ್ರಿ ಮತ್ತು ಶಿವಾಂಬರ ಇವರಿಗಿದ್ದ ನಾಲ್ವರು ಮಕ್ಕಳಲ್ಲಿ ಎರಡನೆಯವನು ನಿರ್ವಾಣಾರ್ಯ. ಈತನು ಹಿರಿಯ ಬಸವಪ್ಪನಿಗೆ ಆಡಳಿತದಲ್ಲಿ ಸಹಾಯಕನಾಗಿದ್ದುಕೊಂಡು ಅರಸು ಮನೆತನದಲ್ಲಿ ಬಾಂಧವ್ಯ ಬೆಳಸಿಕೊಂಡಿದ್ದನು. ಚೆನ್ನಮ್ಮಾಜಿಯು ಹಿರಿಯ ಬಸವಪ್ಪ ನಾಯಕನಂತೆಯೇ ತನ್ನ ತಂಗಿ ಮರಿಯಮ್ಮಾಜಿಯನ್ನು ದತ್ತು ತೆಗೆದುಕೊಂಡು ಸಾಕಿದ್ದಲ್ಲದೆ ಅವಳನ್ನು ನಿರ್ವಾಣಯ್ಯನಿಗೆ ಕೊಟ್ಟು ಮದುವೆ ಮಾಡಿದ್ದಳು. ಈತನು ತನ್ನ ಮಗಳು ನೀಲಮ್ಮಾಜಿಯನ್ನು ಹಿರಿಯ ಬಸವಪ್ಪನ ಅನಂತರ ಪಟ್ಟಕ್ಕೆ ಬಂದಂತಹ ಕಿರಿಯ ಸೊಮಶೇಖರ ನಾಯಕನಿಗೆ ಕೊಟ್ಟು ಮದುವೆ ಮಾಡಿದ್ದನು. ಅರಸನ ಮಾವನಾಗಿದ್ದರಿಂದ ನಿರ್ವಾಣಯ್ಯನಿಗೆ ರಾಜ್ಯದಲ್ಲಿ ವಿಶೇಷ ಗೌರವವಿತ್ತು. ಈತನು ಅಳಿಯ ಸೋಮಶೇಖರನ ನಂತರ ಕಿರಿಯ ಬಸವಪ್ಪನಾಯಕನ ಕಾಲದಲ್ಲಿಯೂ ಬದುಕಿದ್ದನೆಂದು ತಿಳಿದು ಬರುತ್ತದೆ. ಮುಂದೆ ಕಿರಿಯ ಬಸವಪನಾಯಕನಿಗೆ ಮಕ್ಕಳಿಲ್ಲವಾದಾಗ ನಿರ್ವಾಣಯ್ಯನ ಮೊಮ್ಮಗ ಗುರುವಪ್ಪನ ಮಗ ಚೆನ್ನಪ್ಪನನ್ನು ಚೆನ್ನಬಸವನಾಯಕ ಎಂದು ನಾಮಕರಣ ಮಾಡಿ ಶಕವರ್ಷ ೧೬೭೭ ಕ್ರಿ.ಶ. ೧೭೧೫ರಲ್ಲಿ ಪಟ್ಟಕ್ಕೆ ತಂದನು.

ನಿರ್ವಾಣಯ್ಯನು ಮೇಧಾವಿಯಲ್ಲದೆ ಮಂತ್ರಿಯೂ ಆಗಿದ್ದನು. ಕವಿಯೂ ಆಗಿದ್ದನು. ಶಿವಪೂಜಾವಿಧಿ ಗ್ರಂಥಕರ್ತ ಇವನಾಗಿದ್ದು ಈ ಹಸ್ತಪ್ರತಿಯ ಎರಡು ಕಟ್ಟುಗಳು ಹುಬ್ಬಳ್ಳಿಯ ಮೂರು ಸಾವಿರ ಮಠದಲ್ಲಿ ಇರುವುದು ಕಂಡುಬರುತ್ತದೆ.[೨] ಈತನು ಸ್ವತಃ ಧಾರ್ಮಿಕ ತತ್ವಜ್ಞಾನಿಯಾಗಿದ್ದನು. ಈ ನಿರ್ವಾಣಾರ್ಯ ಅಥವಾ ನಿರ್ವಾಣ ಶೆಟ್ಟಿ ಅಥವಾ ನಿರ್ವಾಣ ಮಂತ್ರಿಯು ಮಂಗಳೂರು ಬಾರಕೂರು, ತೋನ್ಸೆ, ಕಟೀಲು, ಗುರುಪುರ, ಉಡುಪಿ ಮೊದಲಾದ ಕಡೆಗಳಲ್ಲಿ ಸುಮಾರು ೬೪ ಮಠಗಳ ನಿರ್ಮಾಣಕ್ಕೆ ಕಾರಣನಾಗಿದ್ದು ಈತನ ವಂಶೀಕರು ಇಂದಿಗೂ ಮಂಗಳೂರು ಸಮೀಪ ಕಾಡು ಮಠ ಎಂಬಲ್ಲಿ ಇದ್ದಾರೆಂದು ತಿಳಿದುಬರುತ್ತದೆ. ಇವನ ಕಾಲ ಸುಮಾರು ಕ್ರಿ.ಶ. ೧೭೨೫ ಎಂದು ಹೇಳಲಡ್ಡಿಯಿಲ್ಲ.[೩]

ಲಿಂಗಣ್ಣ ಕವಿಯ ಕೆಳದಿ ನೃಪ ವಿಜಯದಲ್ಲಿ ನಿರ್ವಾಣ ಮಂತ್ರಿಯು ಕುರಿತು ಹಲವು ಕಡೆ ಉಲ್ಲೇಖಗಳು ಕಂಡುಬರುತ್ತದೆ.

೧. ....ಅದೆಂತೆಂದೊಡಾ ಬಸವಪ್ಪನಾಯಕಂ ತಮ್ಮ ತಂದೆ ಮರಿಯಪ್ಪ ಸೆಟ್ಟರ್, ಮೋನಪ್ಪ ಸೆಟ್ಟರ್ ಪುತ್ರ ನಿರ್ವಾಣಯ್ಯನವರ್ ತದನುಜ ಗುರುವಪ್ಪನವರ್[೪]

೨. .... ಮುಂದೆ ಈ ಸೋಮಶೇಖರನಾಯಕರ್ ತಾವು ಸ್ವಾತಂತ್ರ್ಯದಲ್ಲಿ ರಾಜ್ಯವಾಳುತ್ತಿರ್ದ ಪ್ಲವ ಸಂವತ್ಸರದ ಹಾಲ್ಗುಣ ಶುದ್ಧ ೨ ಯಲಿ ಮೋನಪ್ಪ ಸೆಟ್ಟರ ಮಗ ನಿರ್ವಾಣಯ್ಯನವಾ ಪತ್ನಿ ಭದ್ರಮ್ಮನವರ ಕುಮಾರಿ ನೀಲಮ್ಮಾಜಿಯವರಂ ವಿವಾಹಮಾದರ್[೫]

೩. .... ಚೆನ್ನಮ್ಮಾಜಿಯವರ್ ಪುತ್ರಿಯ ಭಾವದಿಂದ ಸಾಕಿದ ಆ ಚೆನ್ನಮ್ಮಾಜಿಯವ್ರ ತಂಗಿ ಮರಿಯಮ್ಮಾಜಿಯೆಂಬ ಕುಮಾರಿಯಂ ಮೋನಪ್ಪ ಸೆಟ್ಟರ ಮಗ ನಿರ್ವಾಣಯ್ಯಂಗಿತ್ತತ್ಯಂತ ಸಂಭ್ರಮದಿಂ ವಿವಾಹಮಂ ರಚಿಸಿ ಸುಖಮಿರುತ್ತಮಿರ್ದು[೬]

೪. .... ಅದೆಂತೆಂದೊಡೆ ಮೋನಪ್ಪಸ್ಸೆಟ್ಟರ ಮಗ ನಿರ್ವಾಣಯ್ಯನವರ, ಗುವಪ್ಪ....[೭]

೫. .... ಮಾವ ನಿರ್ವಾಣಯ್ಯನವರ್ಗೆ ಸರ್ವಾಧಿಕಾರವನಿತ್ತು ಸದ್ಧರ್ಮದಿಂ ರಾಜ್ಯ ಪ್ರತಿಪಾಲನಂಗಯ್ಯುತ್ತುಮಿರಲಾ ಕಾಲದೊಳಿತ್ತಂ ....

೬ .... ಮತ್ತಮಾ ಸಂವತ್ಸರದ ಫಾಲ್ಗುಣ ಬಹುಳ ತದಿಗೆಯೊಳ್ ನಿರ್ವಾಣಯ್ಯನವರ ಕುವಾರಿ ನೀಲಮ್ಮಾಜಿಯವರನತ್ಯಂತೋತ್ಸವದಿಂ ವಿವಾಹಮಾಗಿ ಸುಖಮಿರುತಿರ್ದು[೮]


ಹೀಗೆ ನಿರ್ವಾಣಯ್ಯನವರ ಉಲ್ಲೇಖ ಕಂಡುಬರುತ್ತದೆ.

ಕೆಳದಿ ಶಾಸನಗಳಲ್ಲಿಯೂ ಸಹ ಹಲವು ಶಾಸನಗಳಲ್ಲಿ ನಿರ್ವಾಣಯ್ಯನವರ ಉಲ್ಲೇಖ ಕಂಡುಬರುತ್ತದೆ.

೧. ೧೬೫ ಖಗ್ಗುಂಜೆ, ಕೊಪ್ಪಾ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

೨. ೧೬೭ ಕೌಲೇದುರ್ಗ, ತೀರ್ಥಹಳ್ಳಿ ತಾಲ್ಲೂಕು.

೩. ೨೪೫, ೨೪೬, ೨೪೮, ಕೌಲೇದುರ್ಗ, ತೀರ್ಥಹಳ್ಳಿ



ತಾಲ್ಲೂಕು. ಇದರಲ್ಲಿ ಸೋಮಶೇಖರನ ಮಾವ ನಿರ್ವಾಣಯ್ಯ ಎಂದಿದೆ.

೪. ೧೬೮ ಕುಂಶಿ, ಶಿವಮೊಗ್ಗ ತಾಲ್ಲೂಕು.

೫. ೨೪೨ ಹಿರೇಬಿಳಗುಂಜಿ (ಶಿವಮೊಗ್ಗ ಜಿಲ್ಲೆ) ಇದರಲ್ಲಿ ಹೊಂನಪ್ಪ ಸೆಟ್ಟಿಯ ಮಗ ನಿರ್ವಾಣಯ್ಯ ಎಂಬ ಉಲ್ಲೇಖ ಕಂಡುಬರುತ್ತದೆ.

೬. ೨೪೯ ಶೃಂಗೇರಿ, ಚಿಕ್ಕಮಗಳೂರು ಜಿಲ್ಲೆ.

೭. ೨೫೩ ಹರಕೆರೆ, ಶಿವಮೊಗ್ಗ ಜಿಲ್ಲೆ.

೮. ೨೫೯ ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ.

೯. ೧೬೭ ಕೌಲೇದುರ್ಗ, ತೀರ್ಥಹಳ್ಳಿ ತಾಲ್ಲೂಕು ಇದರಲ್ಲಿ ಅಳವಿಂಡಿ ಕೆಂಚ ಸಿದ್ದೇದೇವರ ಶಿಷ್ಯರು ನಿರ್ವಾಣ ದೇವರು ಎಂದಿದೆ.[9]

ಶಿವತತ್ವರತ್ನಾಕರದಲ್ಲಿಯೂ ನಿರ್ವಾಣಯ್ಯನ ವಿಚಾರವಾಗಿ ಹಲವು ಕಡೆ ಪ್ರಸ್ತಾಪ ಆಗಿರುವುದು ಕಂಡುಬರುತ್ತದೆ.

ಈ ಮೇಲಿನ ಆಧಾರಗಳ ಮೇರೆಗೆ ನಿರ್ವಾಣಯ್ಯನು ಮೌನಪ್ಪ ಸೆಟ್ಟಿಯ ಮಗ ಎನ್ನಬಹುದಾದರೂ ಶಾಸನ ಸಂಖ್ಯೆ ೨೪೨ರಲ್ಲಿ ಹೊನ್ನಪ್ಪ ಸೆಟ್ಟಿ ಎಂದಿರುವುದೂ ಗಮನಿಸ ಬೇಕಾಗುತ್ತದೆ. ಹೊಂನಪ್ಪ>ಮೋನಪ್ಪ ಎಂಬುದಾಗಿಯೂ ಕೇಶಿರಾಜನ ಶಬ್ದಮಣಿ ದರ್ಪಣದಲ್ಲಿ ಕಂಡುಬಂದಂತೆ ಭಾಷಾ ಶಾಸ್ತ್ರದೃಷ್ಟಿಯಿಂದಲೂ ಇದು ಗಮನ ಸೆಳೆಯುತ್ತದೆ. ಇವರ ತಮ್ಮ ಗುರುವಪ್ಪ, ನಿರ್ವಾಣಯ್ಯನವರ ಮಗಳು ನೀಲಮ್ಮಾಜಿಯನ್ನು ಇಮ್ಮಡಿ ಸೋಮಶೇಖರನಾಯಕನಿಗೆ ಕೊಟ್ಟು ವಿವಾಹ ಮಾಡಲಾಯಿತು ನಿರ್ವಾಣಯ್ಯನ ವಂಶಾವಳಿ ಈ ರೀತಿ ಕಂಡುಬರುತ್ತದೆ.

ಮೋನಪ್ಪ ಶೆಟ್ಟಿ
ಅಥವಾ
ಹೊಂನಪ್ಪ ಶೆಟ್ಟಿ

ನಿರ್ವಾಣಯ್ಯ — ಗುರುವಪ್ಪ

ಪತ್ನಿ ಭದ್ರಮ್ಮ — ಪತ್ನಿ ಮರಿಯಮ್ಮಾಜಿ

ಮಗಳು ಕುಮಾರಿ ನೀಲಮ್ಮಾಜಿ

ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರಿನ ಸಮೀಪ ನಿರ್ವಾಣಯ್ಯ ಮಠ ಎಂದೊಂದಿದ್ದು ಅದು ಈ ನಿರ್ವಾಣಯ್ಯ ನಿಗಿಂತಲೂ ಹಿಂದಿನದೆಂದು ಹೇಳುವವರಿದ್ದಾರೆ. ಈಗ ದೊರೆತಿರುವ ನಿರೂಪದಿಂದ ಕೆಳದಿ ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸಿದ್ದ ನಿರ್ವಾಣಯ್ಯನು ಇದೇ ಜಿಲ್ಲೆಯವನಿರ ಬಹುದೆಂದು ಊಹಿಸಲು ಸಾಕಷ್ಟು ಅವಕಾಶವಿದೆ. ಈತನು ಬಾಳೆಹೊನ್ನೂರು ಮಠಕ್ಕೆ ನಡೆದುಕೊಂಡಿರಲೂಬಹುದಾಗಿದೆ. ಅಲ್ಲದೆ ಈತ ಕೇಳಿರುವ ದಂಡಿಗೆ, ಕೊಡೆ, ದೀವಟಿಗೆ ಮೊದಲಾದವನ್ನು ಯಾವ ಮಠಕ್ಕೆ ಕೊಡಿಸಿದ್ದಾನೆಂಬುದು ಸ್ಪಷ್ಟವಾಗುವುದಿಲ್ಲ.

(ಈ ಲೇಖನ ಸಿದ್ಧಪಡಿಸಲು ನನಗೆ ನಿರೂಪವನ್ನು ಒದಗಿಸಿದ ಹಿಂದೆ ಚಿಕ್ಕಮಗಳೂರು ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಶ್ರೀ ಕೆ.ಬಿ.ಎಂ. ಪಾಟೀಲ್‌ರವರಿಗೆ ಮತ್ತು ನನ್ನ ತಂದೆ ಕೆಳದಿ ಗುಂಡಾಜೋಯಿಸ್‌ರವರಿಗೆ ನಾನು ಅಭಾರಿಯಾಗಿದ್ದೇನೆ.)

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ವೀರಶೈವ ಸುಧಾನಿಧಿ,** ಉಪೋದ್ಘಾತ ಪ್ರಕರಣ ಶ್ಲೋಕ, ೨೦.

೨. **ಶ್ರೀ ಜಗದ್ಗುರು ಮೂರು ಸಾವಿರ ಮಠದ ವರ್ಣನಾತ್ಮಕ ಹಸ್ತಪ್ರತಿ ಸೂಚಿ,** ಕೆಳದಿ ಗುಂಡಾಜೋಯಿಸ್. ೧೯೮೯, ಪುಟ ೩೧೮–೩೧೯. ಇದರಲ್ಲಿ ಶಿವಪೂಜೆಗೆ ಯೋಗ್ಯವಾದ ಮಂತ್ರ ಸ್ತೋತ್ರಗಳು ೫೦ನೇ ಓಲೆಯವರೆಗೆ ವೀರಶೈವ ಶಾಸ್ತ್ರದ ಪ್ರಕಾರ ಕ್ರಮದ ಪೂಜಾ ವಿಧಾನಗಳ ಮಂತ್ರಗಳಿವೆ. ಈ ಕೃತಿಯ ಓಲೆ ಪ್ರತಿಯೊಂದು ನಂ. ೧೭೫೦ ಮೇರೆಗೆ ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವುದು ಕಂಡುಬರುತ್ತದೆ.

೩. ಡಾ. ಕೆ.ಎನ್. ಚಿಟ್ನಿಸ್, **ಕೆಳದಿ ಪಾಲಿಟಿ,** ಪುಟ ೬೯ ಮತ್ತು ಕೆ.ನೃ.ವಿ. ಪುಟ ೧೭೬. ಎಂ.ಎ.ಆರ್. ೧೯೧೬. ಪುಟ ೬೮. ಅದೇ ೧೯೩೩. ಪುಟ ೧೪೪ ಅಲ್ಲದೆ ಇ.ಕ. ೮. ತೀರ್ಥಹಳ್ಳಿ ನಂ. ೬. ೮೭. ೧೮೩. ೧೮೪. ಎಂ.ಎ.ಆರ್. ೧೯೩೩. ಪುಟ ೧೯೯.

೪. ಕೆ.ನೃ.ವಿ. ಆಶ್ವಾಸ ಹತ್ತು

೫. ಅದೇ.,

೬. ಅದೇ.,

೭. ಅದೇ.,

೮. ಅದೇ.,

೯. ಡಾ. ಕೆಳದಿ ವೆಂಕಟೇಶ್ ಜೋಯಿಸ್, **ಕೆಳದಿ ಅರಸರ ಶಾಸನ ಸಂಪುಟ,** ಗದಗ ತೋಂಟದಾರ್ಯ ಮಠ, ಗದಗ.

ಅನ್ನಪೂರ್ಣ ಗೋಸ್ಬಾಳ*

ತಗರ ಪವಾಡ ಮತ್ತು ಸಿದ್ಧಮಂಕ ಚರಿತೆ

ಸಂಸ್ಕೃತಿ, ಸಮಾಜ, ಸಂಸ್ಕಾರ, ಸಂಪ್ರದಾಯಗಳು ಏಕವ್ಯಕ್ತಿ ನಿರ್ಮಿತವಲ್ಲದೆ ಸಮಷ್ಠಿ ನೆಲೆಯಲ್ಲಿ ನಿರ್ಮಾಣಗೊಂಡು ಸಾಮಾಜಿಕ ಹಿತ ಕಾಯ್ದುಕೊಂಡಿರುತ್ತವೆ. ಸ್ವಾತಂತ್ರ್ಯವು ಮನುಷ್ಯನ ಮೂಲಪ್ರವೃತ್ತಿಯಾದರೂ ಸ್ವೇಚ್ಛಾಚಾರದತ್ತ ಸಾಗದಂತೆ ಧರ್ಮದ ಚೌಕಟ್ಟಿನಲ್ಲಿ ಕೆಲವು ಆಚಾರ, ನಿಯಮ, ನಡಾವಳಿಗಳಿಂದ ಬಂಧಿಸಲು ಮಾಡಿಕೊಂಡಿರುವ ಸಮಾಜ ಹಿತ ಕ್ರಮಗಳಿಗೆ ಸಾಂಸ್ಕೃತಿಕ ಕಾರ್ಯಕ್ರಮಮವೆನ್ನಬಹುದು. ಕೆಲವು ವೈಜ್ಞಾನಿಕ ನೆಲೆಯಲ್ಲಿ ನಿರ್ಮಿತವಾದರೆ, ಕೆಲವು ಮಾನಸಿಕ ನೆಲೆಯಲ್ಲಿ ನಿರ್ಮಾಣಗೊಂಡಿರುತ್ತವೆ. ಅಲಕ್ಷ್ಯಕ್ಕೆ ಒಳಗಾಗಿದ್ದ ಸಾಂಸ್ಕೃತಿಕ ಅಧ್ಯಯನವು ಪ್ರಸ್ತುತ ದಿನಗಳಲ್ಲಿ ಪ್ರಾಮುಖ್ಯತೆ ಪಡೆದಿದೆ. ಹಾಲುಮತ ಅಧ್ಯಯನಕ್ಕೆ ಅತೀ ಮಹತ್ವದ ದೇಸೀ ಆಕರಗಳಲ್ಲಿ 'ತಗರ ಪವಾಡ' ಮತ್ತು 'ಸಿದ್ಧಮಂಕ ಚರಿತೆ' ಮುಖ್ಯವಾಗಿವೆ. ಈ ಎರಡೂ ಕೃತಿಗಳನ್ನು ತೌಲನಿಕವಾಗಿ ವಿವೇಚಿಸುವುದು ಈ ಸಂಪ್ರಬಂಧದ ಉದ್ದೇಶವಾಗಿದೆ.

ತಗರ ಪವಾಡ

ತಗರ ಪವಾಡವನ್ನು ಡಾ. ಎಂ.ಎಂ. ಕಲಬುರ್ಗಿ, ಸಿ.ಕೆ. ಪರಶುರಾಮಯ್ಯ, ಡಾ. ಎಫ್.ಟಿ. ಹಳ್ಳಿಕೇರಿ ಅವರು ೨೦೦೪ರಲ್ಲಿ ಪರಿಷ್ಕರಿಸಿದ್ದಾರೆ. ಸುಮಾರು ಹದಿನೇಳನೆಯ ಶತಮಾನದಲ್ಲಿ ಈ ಕೃತಿ ರಚನೆಯಾಗಿರಬಹುದು. ಸಾಂಗತ್ಯ ಕೃತಿಯಾದ ಈ ಕಾವ್ಯ ಎಂಟು ಸಂಧಿಗಳನ್ನು ಹೊಂದಿದೆ. ತಗರ ಪವಾಡದ ನಾಯಕ ಶಾಂತಮುತ್ತಯ್ಯ, ಶಿವನು **ರೇವಣಸಿದ್ಧ** ಎಂಬ ಹೆಸರಿನಿಂದ ಭೂಲೋಕದ ಕೊಲ್ಲಾಪುರದ ಮಾಯೆಯಲ್ಲಿಗೆ ಬಂದು ಅವಳು ಕೊಡುವ ವಿಷವನ್ನು ಕುಡಿಯುತ್ತಾನೆ. ಅವನ ಸಾಮಾನ್ಯ ಶಕ್ತಿಗೆ ಬೆರಗಾದ ಮಾಯೆಯ ಮೂಗುಕೊಯ್ದು ಓಡಿಸುತ್ತಾನೆ. ಅವಳಲ್ಲಿ ಸೆರೆಯಾದ ನವಕೋಟಿ ಸಿದ್ಧರನ್ನು ಕುರಿಗಳಾಗುವಂತೆ ಶಪಿಸುತ್ತಾನೆ. ಕುರಿಗಳು ಅವನನ್ನು ಸುತ್ತುವರಿಯಲು ಕಾಯ್ದು ಸಾಕಾಗಿ, ತೊಗರಿಸಿಯ ಆದಿಗೊಂಡನ ಕೊಡಗಿ ಎಂಬ ಹೆಸರಿನ ಹೊಲದ ಹುತ್ತದಲ್ಲಿ ಕುರಿಗಳನ್ನು ಹೊಗಿಸಿ ಮೇಲೆ ಮುತ್ತುಗದ ಮರವನ್ನು ನೆಟ್ಟು ಪದ್ಮಣ್ಣನ ಹೊರತಾಗಿ ಯಾರನ್ನೂ ಒಳಗೆ ಬಿಡದಂತೆ ವೀರೇಶನನ್ನು ಕಾವಲಿಟ್ಟು ಕೈಲಾಸಕ್ಕೆ ಹೋಗುತ್ತಾನೆ. ತಾಯಿ ಮಲ್ಲಮ್ಮನ ಹಿತನುಡಿಯಿಂದ ಪ್ರಭಾವಿತನಾಗಿ ಪದ್ಮನು ಹೊಲ ಹಸನು ಮಾಡುವಾಗ ತಂದೆ ಮಾತನ್ನು ಪರೀಕ್ಷಿಸಲು ಹುತ್ತವನ್ನು ಒಡೆಯುತ್ತಾನೆ. ಹುತ್ತದಿಂದ ಹೊರ ಬಂದ ಕುರಿಗಳು ಹಿಂಬಾಲಿಸಲು ಆತಂಕಗೊಳ್ಳುತ್ತಾನೆ. ಶಿವನು ಪ್ರತ್ಯಕ್ಷನಾಗಿ ಪದ್ಮಣ್ಣನ ಸಹಾಯಕ್ಕೆ ವೀರಬೀರಯ್ಯನನ್ನು ಸೃಷ್ಟಿಸುತ್ತಾನೆ. ಪದ್ಮಣ್ಣ ಮತ್ತು ಬೀರಯ್ಯ ಕಾಡುಮೇಡು ಅಲೆಯುವಾಗ ಬಕನೆಂಬ ರಾಕ್ಷಸನನ್ನು ಬೀರಯ್ಯ ಸಂಹರಿಸುತ್ತಾನೆ. ಅನಾಥಳಾದ ಮಗಳು ಸಿರಿವಂತೆಯೊಂದಿಗೆ ಪದ್ಮಣ್ಣನ ಮದುವೆಯನ್ನು ಮಾಡುತ್ತಾನೆ. ಶಿವ ಪ್ರತ್ಯಕ್ಷನಾಗಿ ಹಿರಿಯ ಹೆಂಡತಿ ಲಿಂಗಮ್ಮಗೆ ಹದಿಮೂರು ಮಂದಿ ಮಕ್ಕಳು 'ಹತ್ತಿಕಂಕಣ ಕುರುಬರು', ಕಿರಿಯ ಹೆಂಡತಿ ಸಿರಿವಂತೆಗೆ ಹದಿಮೂರು ಮಂದಿ ಮಕ್ಕಳು 'ಉಣ್ಣೆ ಕಂಕಣದ ಕುರುಬರು' ಎಂದು ಹೇಳಿ ಕುರಿಯ ಜವಾಬ್ದಾರಿಯನ್ನು ಹೊತ್ತ ನೀನು 'ಕುರುಬಗೌಡ'ನಾಗು ನಿನ್ನ ಕುಲಗುರು ಶಾಂತಮುತ್ತಯ್ಯ ಎಂದು ಆಶೀರ್ವದಿಸಿ ಮಾಯವಾಗುತ್ತಾನೆ.

ತೊಗರಿಸಿಯಲ್ಲಿಯ ಪದ್ಮಣ್ಣನ ಮೊದಲ ಹೆಂಡತಿ ಮಗ ಶಾಂತಯ್ಯನಿಗೆ ಪರವಿಗೊಂಡನ ಮೊಮ್ಮಗಳು ದೇವಮ್ಮನೊಂದಿಗೆ ಅಜ್ಜಿ ಮಲ್ಲಮ್ಮ ಮದುವೆಯನ್ನು ಸಂಭ್ರದಿಂದ ಮಾಡುತ್ತಾಳೆ. ಕುರಿಕಾಯುತ್ತಾ ತೊಗರಸಿಗೆ ಬಂದ ಪದ್ಮಣ್ಣನನ್ನು ಆದಿಗೊಂಡ ಮಲ್ಲಮ್ಮ ಗುರುತಿಸಿ ಮನೆಗೆ ಕರೆದುಕೊಂಡು ಹೋಗುತ್ತಾರೆ. ತಂದೆ, ತಾಯಿ, ಪತ್ನಿ ಲಿಂಗಮ್ಮ ಪದ್ಮಣ್ಣನನ್ನು ಸತ್ಕರಿಸುತ್ತಾರೆ. ಮರುದಿನ ಆಸ್ತಿಯನ್ನು ಅಣ್ಣಂದಿರಿಗೆ ಬಿಟ್ಟು ಹೆಂಡತಿ ಮಕ್ಕಳೊಂದಿಗೆ ಹೊರಡುತ್ತಾನೆ. ಪದ್ಮಣ್ಣ ರಾಕ್ಷಸಿ ಹೆಂಡತಿ ಸಿರಿವಂತೆಯೊಂದಿಗೆ ಸಹಭೋಜನ ಮಾಡುವುದನ್ನು ಕಂಡು ಶಾಂತಯ್ಯ ಹೆಂಡತಿ ದೇವಮ್ಮನೊಂದಿಗೆ ಬೇರೆಯಾಗಿ ಜೀವಿಸತೊಡಗುತ್ತಾನೆ. ಇಲ್ಲಿಗೆ ಪದ್ಮಣ್ಣನ ಕತೆ ಮುಗಿದು ಶಾಂತಯ್ಯನೇ ಕೇಂದ್ರ ವ್ಯಕ್ತಿಯಾಗುತ್ತಾನೆ. ನವಕೋಟಿ ಜಂಗಮರಿಗೆ ಉಣಬಡಿಸಿ,

* ಸಂಶೋಧಕರು, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ತನ್ನ ತೋಟದಿಂದ ಬಂಡಿಗಳನ್ನು ತುಂಡು ತುಂಡು ಮಾಡಿ ಶಿವ ಪ್ರೀತಿಗೆ ಪಾತ್ರನಾಗುತ್ತಾನೆ. ಲಿಂಗದೀಕ್ಷೆಯ ಸಂದರ್ಭದಲ್ಲಿ ಕರಿಮಲ್ಲಿಗೆಯ ಪುಷ್ಪವನ್ನು ಸುರಿಸುತ್ತಾನೆ. "ಇಂದಿನಿಂದ ನೀನು ನಿಜವಾದ ಶರಣನಾದೆ ಮುಂದೆ ನಿನ್ನ ತಂದೆಗೆ ರಾಕ್ಷಸಿಯಿಂದ ಹುಟ್ಟಿದ ಮಕ್ಕಳು ನಿನ್ನಲ್ಲಿಗೆ ಬರುವರು. ಆಗ ಅವರಿಗೆ ಕುಲವಿತ್ತು ಗುರುವಾಗು ಅವರು ಉಣ್ಣೆಕಂಕಣದವರಾಗುವರು. ನಿನ್ನ ಸಂತತಿ ಹತ್ತಿಕಂಕಣದವರಾಗುವದು' ಎಂದು ಆಶೀರ್ವದಿಸಿ ಶಿವನು ಮಾಯವಾಗುವನು.

ಕಲ್ಯಾಣದಲ್ಲಿ ಬೊಪ್ಪಯ್ಯನೆಂಬ ವಿಷಯಾಸಕ್ತನು ತನ್ನ ವೇಶ್ಯೆ ಚೆನ್ನಿಗಾಗಿ ತಗರನ್ನು ತರುವ ಸಮಯದಲ್ಲಿ ಆಯಾಸ, ಪರಿಹರಿಸಿಕೊಳ್ಳುತ್ತಿರುವಾಗ, ದಾರಿಯಲ್ಲಿ ತಗರು ತ್ರಿಪುರಾಂತಕ ದೇವಾಲಯ ಪ್ರವೇಶಿಸಿ ಗರ್ಭಗುಡಿಯ ಲಿಂಗವನ್ನು ಅಪ್ಪಿಕೊಳ್ಳುತ್ತದೆ. ಮೊರೆಹೊಕ್ಕವರನ್ನು ಕಾಯುವ ಧರ್ಮದಿಂದ ಬ್ರಹ್ಮಯ್ಯ ಎರಡರಷ್ಟು ಬೆಲೆ ಕೊಟ್ಟು ಕೊಂಡು ಸಾಕ್ಷಿಗಾಗಿ ಲಿಂಗಮುದ್ರೆ ಒತ್ತುತ್ತಾನೆ. ವಿಷಯ ತಿಳಿದ ಚೆನ್ನಿ ಹಣ ಮುಟ್ಟದೆ ತನಗೆ ಅದೇ ತಗರು ಬೇಕೆಂದು ಹಿಂದಕ್ಕೆ ಕಳುಹಿಸುತ್ತಾಳೆ. ಬ್ರಹ್ಮಯ್ಯ ತಗರು ಕೊಡಲು ನಿರಾಕರಿಸಿದಾಗ ಬೊಪ್ಪಯ್ಯ ನೊಂದಿಗೆ ತನ್ನ ಸಹೋದರರನ್ನು ಕಳುಹಿಸುತ್ತಾಳೆ. ಕಿನ್ನರಿ ಬ್ರಹ್ಮಯ್ಯ ಅವರೆಲ್ಲರನ್ನು ಕೊಂದು ಹಾಕಲು, ಚೆನ್ನಿ ಬಿಜ್ಜಳನಿಗೆ ದೂರು ಕೊಡುತ್ತಾಳೆ. ಸಹಾಯಕ್ಕಾಗಿ ಬಿಜ್ಜಳ ದೂತರನ್ನು ಕಳುಹಿಸಿದರೆ ಅವರೂ ಸಹ ಸೋಲುತ್ತಾರೆ. ಈ ವಿಷಯ ಬಸವಣ್ಣನಿಗೆ ತಲುಪುತ್ತದೆ. ಬಿಜ್ಜಳ ಮತ್ತು ಬಸವಣ್ಣನ ಎದುರಿನಲ್ಲಿ ಶಿವಲಿಂಗ ಪ್ರತ್ಯಕ್ಷವಾಗಿ ಮೋಕ್ಷವನ್ನು ಕೊಂಡುದಕ್ಕೆ ಸಾಕ್ಷಿ ಹೇಳುತ್ತದೆ. ಕಿನ್ನರಯ್ಯ ತಗರಿಗೆ ಚಿನ್ನದ ಮುಖವಾಡ ಮತ್ತು ಮಾಣಿಕ್ಯದಿಂದ ಅಲಂಕರಿಸಿ 'ಶಂಬು' ಎಂದು ಹೆಸರಿಸಿ ಸಾಕತೊಡಗುತ್ತಾನೆ. ಕೊಬ್ಬಿದ ತಗರು ಉಪಟಳ ಕೊಡಲು ಪ್ರಾರಂಭಿಸುತ್ತದೆ. ಅದನ್ನು ಶಾಂತಮುತ್ತಯ್ಯನ ಕುರಿಯ ಹಿಂಡಿನಲ್ಲಿ ಬಿಟ್ಟು ಬರುತ್ತಾನೆ.

ಸತ್ತ ಕುರಿಯನ್ನು ಹಾಲಕಂಬಿಯ ಮೇಲೆ ಇಟ್ಟು ಮಾರಿದ ಪ್ರಮಾದದಿಂದ ಕುರುಬರು ಊರಿನಿಂದ ಹೊರಹಾಕಲ್ಪಟ್ಟು ಅಸ್ಪೃಶ್ಯರಂತೆ ಬಾಳುತ್ತಿರುತ್ತಾರೆ. ಅದೇ ವೇಳೆಗೆ ಶಾಂತಮುತ್ತಯ್ಯ ನಲ್ಲಿಯ ಕಿನ್ನರಿ ಬ್ರಹ್ಮಯ್ಯನ ತಗರು ಸಾಯುತ್ತದೆ. ಸತ್ತ ಕುರಿಗೆ ಅಲಂಕರಿಸಿ ಮೆರವಣಿಗೆಯೊಂದಿಗೆ ಶಾಂತಮುತ್ತಯ್ಯ ಕಲ್ಯಾಣ ಪ್ರವೇಶಿಸುತ್ತಾನೆ. ಕಲ್ಯಾಣದ ಶರಣರು ಮತ್ತು ಮಲ್ಲಿಶೆಟ್ಟಿ (ಶಿವ) ಪ್ರತಿರೋಧಿಸಲು ಬಸವಣ್ಣ ಬಿಜ್ಜಳ, ಸಿದ್ಧರಾಮ ಕಲಕೇತ ಬ್ರಹ್ಮಯ್ಯ, ಚೆನ್ನಯ್ಯ ಒಕ್ಕಲಿಗ ಮುದ್ದಯ್ಯರ ಸಮ್ಮುಖದಲ್ಲಿ ಭಸಿತವಿಟ್ಟು, ಮೈದಡವಿ, ತೀರ್ಥ ಪ್ರಸಾದ ಸಿಂಪಡಿಸಲು ಮಲಗಿದ್ದ ತಗರು ಎದ್ದು ನಿಲ್ಲುತ್ತದೆ.

ಸೇರಿದ ಭಕ್ತರೆಲ್ಲ ಶಾಂತಯ್ಯನ ಭಕ್ತಿ, ವಿಶ್ವಾಸ, ದೃಢತೆಗೆ ಬೆರಗಾಗುತ್ತಾರೆ. ಬಸವಣ್ಣ ಶಾಂತಯ್ಯನಿಗೆ 'ಬೇಕಾದ ವರವನ್ನು ಬೇಡು' ಎಂದಾಗ 'ಊರಿನಿಂದ ಹೊರಹಾಕಲ್ಪಟ್ಟ ಕುರುಬರನ್ನು ಮತ್ತು ಕುರುಬ ಕುಲವನ್ನು ಉದ್ಧರಿಸು' ಎಂದು ಬೇಡಿಕೊಳ್ಳುತ್ತಾನೆ. 'ಮೂರೇಣಿನ ಕಂಥೇಯಾಗಿತ್ತು' 'ಕುರುಬ ಕುಲಕ್ಕೆ ಒಡೆಯನಾಗು' ಎಂದು ಬಸವಣ್ಣ ಹರಸುತ್ತಾನೆ. ಇದು ತಗರ ಪವಾಡದ ಸಂಕ್ಷಿಪ್ತ ಕಥಾಸಾರವಾಗಿದೆ.

ಸಿದ್ಧಮಂಕ ಚರಿತೆ

'ಸಿದ್ಧಮಂಕ ಚರಿತೆ'ಗೆ ೪೦ ವರ್ಷಗಳ ಹಿಂದೆ ವಿದ್ವಾಂಸ ಡಿ.ಎಲ್. ನರಸಿಂಹಾಚಾರ್ 'ಮಂಕಯ್ಯ ಚರಿತ್ರೆ' ಮತ್ತು 'ಸಿದ್ಧರಾಮನ ಸಾಂಗತ್ಯ' ಎಂಬ ಹೆಸರುಗಳನ್ನು ಸೂಚಿಸಿದ್ದರು. ದೀರ್ಘಕಾಲಾವಧಿ ತರುವಾಯ ಎಂ.ಎಂ. ಕಲಬುರ್ಗಿ ಮತ್ತು ವೈ.ಸಿ. ಭಾನುಮತಿ ಅವರು ೨೦೦೪ರಲ್ಲಿ ಈ ಕೃತಿಯನ್ನು ಪರಿಷ್ಕರಿಸಿದ್ದಾರೆ. ಹಾಲುಮತದ ಶಿಷ್ಟಸಾಹಿತ್ಯದ ಮೊದಲ ಪುರಾಣ 'ಸಿದ್ಧಮಂಕ ಚರಿತೆ' ಎಂಬ ಅಭಿಪ್ರಾಯ ಎಂ.ಎಂ. ಕಲಬುರ್ಗಿ ಅವರದು. ೧೭ನೆಯ ಶತಮಾನದ ಸಾಂಗತ್ಯ ಕೃತಿಯು ನಾಲ್ಕು ಸಂಧಿಗಳನ್ನು ಹೊಂದಿದೆ.

ಪವಾಡ ರೀತಿಯಲ್ಲಿ ಸಿದ್ಧರಾಮನ ಜನನವಾಗುತ್ತದೆ. ಧೂಳಿಮಾಕಾಳ ಎಂಬ ಹೆಸರಿನಿಂದ ಕರೆಯಲ್ಪಡುವ ಸಿದ್ಧರಾಮ ಬಾಲ್ಯದಲ್ಲೇ ಶಿವಭಕ್ತನಾಗಿ ಲಿಂಗ ಪೂಜಿಸುವ, ಹೂಪತ್ರೆ ಏರಿಸುವ ಕಾಯಕದಲ್ಲಿ ಮಗ್ನನಾಗಿರುತ್ತಿದ್ದನು. ಸಿದ್ಧರಾಮ ಕರು ಕಾಯುವ ಸಮಯದಲ್ಲಿ ಸರ್ವಾಲಂಕಾರ ಭೂಷಿತನಾಗಿ ಶಿವನು ಕಾಣಿಸಿಕೊಂಡು, ತನಗೆ ಹಸಿವೆ ಆಗಿರುವುದಾಗಿಯೂ ತನಗೆ ಆಹಾರ ಬೇಕೆನ್ನಲು ಮನೆಗೆ ಓಡಿಹೋಗಿ ತರುವಷ್ಟರಲ್ಲಿ ಮಾಯವಾಗಿದ್ದನು. ಶಿವನ ಹುಡುಕಾಟದಲ್ಲಿ ಬಳಲಿದಾಗ ಜಂಗಮ ವೇಷದ ಶಿವ ಶ್ರೀಶೈಲದತ್ತ ಹೋದುದಾಗಿ ತಿಳಿಸಿದನು. ಶ್ರೀಶೈಲದಲ್ಲಿ ಹುಡುಕಲಾಗಿ ತಾನು ಕಂಡ ಶಿವ ಸಿಗದಿದ್ದಾಗ ಪ್ರಾಣತ್ಯಾಗ ಮಾಡಲು ಕಮರಿಯಲ್ಲಿ ಹಾರಿದ. ಶಿವ ಪ್ರತ್ಯಕ್ಷನಾಗಿ ರಕ್ಷಿಸುವನು. ಬರಡು ಕಪಿಲೆಯಿಂದ ಕರುಹುಟ್ಟಿದ ದಿನ ಬರುವುದಾಗಿ ಶಿವನಿಂದ ಆಶ್ವಾಸನೆ ದೊರೆತ ತರುವಾಯ ಸೊಲ್ಲಾಪುರಕ್ಕೆ ಬಂದು ಅಲ್ಲಿ ಶಿವಾಲಯ ನಿರ್ಮಿಸಿದನು.

ರೋಮಕೋಟಿ ಋಷಿಯ ಶಾಪಕ್ಕೆ ಗುರಿಯಾಗಿ ಮಂಕು ಮರಳು ಎಂಬ ಹೆಸರಿನಿಂದ ಹುಟ್ಟಿ ಸಿದ್ಧರಾಮನ ದರ್ಶನಕ್ಕಾಗಿ ಮತ್ತು ಅವನ ಶಿಷ್ಯನಾಗಲು ಸರೂರು ಗ್ರಾಮದ ಕೋಡುಗಲ್ಲಿನ ಮೇಲೆ ಸೂಜಿಯೂರಿ ತಲೆಕೆಳಗಾಗಿ ಉಗ್ರ ತಪಸ್ಸಿಗೆ ತೊಡಗುವನು. ತಪಸ್ಸನ್ನು ನೋಡಲು ಶಿವನು ಸ್ವತಃ ತಾನೇ ನಂದಿಯನ್ನು ಏರಿ ಬರುವನು.

ಶಿವಭಕ್ತ ಹೆಗ್ಗಗೌಡ ತನ್ನ ಹೊಲದಲ್ಲಿಯೇ ಮುತ್ತುಗದ ಗಿಡವನ್ನು ನೆಲಸಮ ಮಾಡಿದಾಗ ಗವಿಯ ಬಾಯಿಯಿಂದ ಬಂದ ಕುರಿಗಳನ್ನು ರಕ್ಷಿಸಲು ಶಿವನು ಆದೇಶಿಸಿ ರಕ್ಷಣೆಗಾಗಿ ತಳವಾರ ಮತ್ತು ಊಳಿಗದವಳಾಗಿ ರಾಕ್ಷಸಿಯನ್ನು ಕಳುಹಿಸುವನು. ಹೆಗ್ಗಗೌಡ ರಾಕ್ಷಸಿಯನ್ನು ಮೋಹಿಸಿ ಮದುವೆ ಮಾಡಿಕೊಂಡನು. ಈ ಮೊದಲೇ ಸ್ವಕುಲದ ಸಿದ್ಧಮ್ಮಳನ್ನು ಮದುವೆಯಾಗಿದ್ದನು. ಅವಳ ನೆನಪಾಗಿ ಕುರಿಬೆಟ್ಟದೂರಿಗೆ ಬರುವನು. ಅಲ್ಲಿ ತಂದೆ ಚಂದಗೊಂಡನು ಪ್ರತಿರೋಧಿಸಲು ಬಳಗದ ಜನವೆಲ್ಲ ಬೆಂಬಲಿಸಿದನು. ತಂದೆಯಿಂದ ಆಸ್ತಿಯನ್ನು ಕುಲವಧುವನ್ನು ಪಡೆದು ಸೊಲ್ಲಾಪುರಕ್ಕೆ ಬಂದು ನೆಲಸಿದನು. ಬಿಜ್ಜಳನು ಹಾಲಕಂಬಿಯ ಮೇಲೆ ಸತ್ತ ಕುರಿ ಮಾರಿದ್ದಕ್ಕಾಗಿ ಕುರುಬರನ್ನು ಪಟ್ಟಣದಿಂದ ಹೊರಹಾಕಿ, ಏಳುಗೆರೆ ದಾಟಬಾರದೆಂದು ಆಜ್ಞೆಯಿತ್ತನು. ಹೆಗ್ಗಗೌಡನು "ಕುಲದಲ್ಲಿ ಕಿರಿಯರಾದರೂ ನಮ್ಮ ನಡತೆ ಕಿರಿದಲ್ಲವೆಂದೂ" ಕುಲದಲ್ಲಿ ಭಕ್ತ ಕುಲ ಭವಿಕುಲ ಎಂದು ಎರಡು ಕುಲ ಮಾತ್ರ ಇರುವುದಾಗಿ ಬಿನ್ನವಿಸಿಕೊಂಡನು.

ಸಿದ್ಧರಾಮನು ಪ್ರಸಿದ್ಧಿಗಾಗಿ ಕೆರೆ ದೇವಾಲಯ ನಿರ್ಮಾಣವನ್ನು ಅಲ್ಲಮ ಖಂಡಿಸಲು, ಅಲ್ಲಮನ್ನು ಸಿದ್ಧರಾಮ ಗುಡ್ಡರು ಸಿಟ್ಟಿಗೆದ್ದು ಹಿಡಿಯಲು ಹೋದರೆ ಸಿಗುವುದಿಲ್ಲ. ಕಲ್ಲಿನಿಂದ ಹೊಡೆದರೆ ಮಾಯವಾಗುವನು. ಸಿದ್ಧರಾಮ ಸಿಟ್ಟಿನಿಂದ ಹಣೆಗಣ್ಣು ತೆಗೆದಾಗ ಅಲ್ಲಮನನ್ನು ಬಿಟ್ಟು ಉಳಿದ ಎಲ್ಲ ಪ್ರದೇಶವು ಸುಟ್ಟು ಬೂದಿಯಾಗುವುದು. ಹೀಗೆ ಅಲ್ಲಮನ ದೈವಿಕ ಶಕ್ತಿಯಿಂದ ಸಿದ್ಧರಾಮನಿಗೆ ತನ್ನ ತಪ್ಪಿನ ಅರಿವಾಗು ವುದು. ರೇವಣ್ಣಸಿದ್ದರ ಸ್ಪರ್ಶದಿಂದ ಎಚ್ಚೆತ್ತ ಮಂಕಯ್ಯನು ರಾಜಧಾನಿಯ ಹೊರಗೆ ಏಳು ಬೇಲಿಯ ಒಳಗೆ ಕುರುಬಗೌಡ ಬದುಕುತ್ತಿದ್ದು, ಅವರು ಗ್ರಾಮದೊಳಗೆ ಸೇರುವಂತೆ ಮಾಡು ಎಂದು ಬಿನ್ನವಿಸಿದನು. ಮಂಗಳವಾಡದ ಬಿಜ್ಜಳ ಕುರುಬರನ್ನು ಹೊರಹಾಕಿದ ತನ್ನ ತಪ್ಪನ್ನು ಒಪ್ಪಿಕೊಂಡನು. ಮಂಕಯ್ಯ ತನ್ನನ್ನು ದಂಡಿಸಿ ಅನ್ಯರ ಹಿತ ಬಯಸುವ ತ್ಯಾಗವನ್ನು ಮೆಚ್ಚಿಕೊಂಡನು. "ಶಿಷ್ಯ ಮಾಡಿದ ಶಾಪ ಗುರುವಿಗೆ ತಗಲುವಂತೆ" ತಮ್ಮ ತಪ್ಪಿನಿಂದ ಮಂಕನ ಮನಸ್ಸು ನೋಯಿಸಿತು ಎಂದು ಗುರು ಮಂಕತಂದೆಗೆ ಶರಣು ಎಂದು ಹೆಗ್ಗಗೌಡನ ಮಕ್ಕಳು ಖಡ್ಗದಿಂದ ತಮ್ಮ ತಲೆ ಕತ್ತರಿಸಿಕೊಂಡಂತೆ ಪುನಃ ಬಿಗಿಯುತ್ತಿದ್ದವು. ಸಿದ್ಧರಾಮ ಮಂಕತಂದೆಯ ಆದೇಶದಂತೆ ನಡೆದು ಕೊಳ್ಳಲು ತಿಳಿಸಿ ಶರಣರ ಮುಂದೆ ಕುರುಬರ ಹಣೆಗೆ ವಿಭೂತಿಯನ್ನಿತ್ತು ಹರಸಿದನು. ಇದು ಸಿದ್ಧರಾಮ ಚರಿತೆಯ ಸಂಕ್ಷಿಪ್ತ ಕಥಾಸಾರ.

ತೌಲನಿಕ ವಿವೇಚನೆ

ಎರಡೂ ಕೃತಿಗಳು ಬಹಳಷ್ಟು ವಿಷಯಗಳಲ್ಲಿ ಸಾಮ್ಯತೆ ಪಡೆದಿವೆ. ಹಾಲಕಂಬಿಯ ಮೇಲೆ ಸತ್ತ ಕುರಿಯ ಮಾಂಸವನ್ನು ಮಾರಿದ ತಪ್ಪಿನಿಂದಾಗಿ 'ರಟ್ಟಮತ'ದವರೆಂದು ಕಲ್ಯಾಣದಿಂದ ಏಳುಗೆರೆಯ ಆಚೆ ಅತಂತ್ರರಾಗಿ ಅಸ್ಪೃಶ್ಯರಂತೆ ಕನಿಷ್ಠರಾಗಿ ಹನ್ನೆರಡು ವರ್ಷ ಬದುಕು ನಡೆಸಬೇಕಾಯಿತು. ತಮ್ಮ ಪ್ರಮಾದದಿಂದ ಜಾಗೃತವಾದ ಹಾಲುಮತದವರ ಪರವಾಗಿ ಶಾಂತಮುತ್ತಯ್ಯ ಮತ್ತು ಮಂಕಸಿದ್ಧ ಹೋರಾಟ ನಡೆಸಿ ಜಯಶೀಲರಾಗುತ್ತಾರೆ. ಶಾಂತಮುತ್ತಯ್ಯ 'ತಗರ ಪವಾಡ'ದಲ್ಲಿ ಪ್ರಾಮುಖ್ಯತೆ ಪಡೆದರೆ ಸಿದ್ಧರಾಮ 'ಸಿದ್ಧಮಂಕ ಚರಿತೆ'ಯಲ್ಲಿ ಪ್ರಮುಖ. ನಂತರದ ದಿನಗಳಲ್ಲಿ ಶಾಂತಮುತ್ತಯ್ಯನ ಸಂಪ್ರದಾಯದ ಶಾಂತೊಡೆಯರಿಗೂ ಸಿದ್ಧಮಂಕ ಸಂಪ್ರದಾಯದ ಮಂಕೊಡೆಯರಿಗೂ ಘರ್ಷಣೆ ಏರ್ಪಟ್ಟಿರಬಹುದು. ಇದಕ್ಕೆ ಪೂರಕವಾಗಿ ತುರುವೆಕೆರೆ ತಾಮ್ರಶಾಸನ ಮಹತ್ವದ ಮಾಹಿತಿ ಒದಗಿಸುತ್ತದೆ. ವಿಷಯಕ್ಕೆ ಸಾಕ್ಷ್ಯಾಧಾರವಾಗಿ ಚಿಕ್ಕನಾಯಕನಹಳ್ಳಿಯಲ್ಲಿ ಕುರುಬರ ಮೂರು ಮಠಗಳಿವೆ. ಎರಡು ಮಠಗಳು ಶಾಂತೊಡೆಯರಿಗೆ ಸೇರಿದ್ದರೆ ಇನ್ನೊಂದು ಮಂಕೊಡೆಯರ ಅಧೀನದಲ್ಲಿದೆ. ಅಲ್ಲದೆ ಸರೂರಿನ ರೇವಣಸಿದ್ಧ ಹೆಸರಿನ ಮಠವು ಮೂಲತಃ ಸಿದ್ಧರಾಮ ನಿರ್ಮಿತ ಮಲ್ಲಿಕಾರ್ಜುನ ದೇವಾಲಯ ಎಂದು ಪಂಡಿತರು ಊಹಿಸಿದ್ದಾರೆ. ಸರೂರಿನ ಸುಮಾರು ಐವತ್ತು ಮನೆಗಳಲ್ಲಿ ನಲವತ್ತು ಒಡೆಯರ ಮನೆಗಳಾದರೆ ಉಳಿದವು ಜಂಗಮ ಮನೆಗಳಾಗಿವೆ. ಮಂಕೊಡೆಯರು ಲಿಂಗಾಯಿತ ಜಂಗಮರಾಗಿರಬಹುದೆ ? ಎರಡೂ ಕೃತಿಗಳಿಗೆ ನಿರ್ಣಾಯಕ ನಾಗಿ ಕಲ್ಯಾಣ ಪ್ರವೇಶ ನೀಡಿದ ಬಸವಣ್ಣ ಶೂದ್ರಕುಲವೆಂದು ಕಡೆಗಣಿಸಲ್ಪಟ್ಟ ಕುರುಬ ಕುಲಕ್ಕೆ ನ್ಯಾಯ ನೀಡಿ, ಸಮಾನತೆ ತತ್ವದೊಂದಿಗೆ ಅಂತಃಕರಣ ಮೆರೆದನು. ಅನ್ಯಾಯಕ್ಕೆ, ದೌರ್ಜನ್ಯಕ್ಕೆ ಒಳಗಾದವರಿಗೆ ಕಲ್ಯಾಣ ಪ್ರವೇಶಿಸಿ ಸಾಮಾಜಿಕ ಘನತೆ ಮರ್ಯಾದೆಯನ್ನು ದೊರಕಿಸಿ ತನ್ನ ಸ್ಥಾನಮಾನಗಳನ್ನು ಬಸವಣ್ಣ ಹೆಚ್ಚಿಸಿಕೊಂಡರೆ ಪ್ರತಿನಾಯಕನಾಗಿ ಬಿಜ್ಜಳ ಕಾಣಿಸಿಕೊಳ್ಳುತ್ತಾನೆ.

ತಗರ ಪವಾಡದಲ್ಲಿ ರೇವಣಸಿದ್ದರ ಪ್ರಸ್ತಾಪ ಮೇಲಿಂದ ಮೇಲೆ ಬರುತ್ತದೆ. ಶಿವನನ್ನೇ ರೇವಣಸಿದ್ದನೆಂದು ಕರೆದಿರ ಬಹುದೇ ? ಎಂಬ ಸಂದೇಹ ಉಳಿಯುತ್ತದೆ. ಸತ್ತ ಕರುವನ್ನು ಮಂಟೇಸ್ವಾಮಿ ಹೊತ್ತೊಯ್ದರೆ, ಸತ್ತ ಕುರಿಯನ್ನು ಶಾಂತಮುತ್ತಯ್ಯ ಒಯ್ಯುತ್ತಾನೆ. ಎರಡೂ ಘಟನೆಗಳಲ್ಲಿ ಹೋಲಿಕೆಯಿದೆ. ವ್ಯಷ್ಟಿ ಕಲ್ಯಾಣವನ್ನು ಶಾಂತಮುತ್ತಯ್ಯನ ಲಿಂಗದೀಕ್ಷೆ ಸೂಚಿಸಿದರೆ ಸಮಷ್ಟಿ ಕಲ್ಯಾಣವನ್ನು ತಗರ ಪವಾಡ ಸೂಚಿಸುತ್ತದೆ. ಒಬ್ಬ ಸಮರ್ಥ ನಾಯಕನ

ಮುಖಾಂತರ ಜನಸಾಮಾನ್ಯರ ಕಲ್ಯಾಣ ಅಭಿವೃದ್ಧಿ ಆಗುತ್ತದೆ. ಒಟ್ಟಿನಲ್ಲಿ ಸ್ವಾರ್ಥ ಜೀವನದಿಂದ ಮುಕ್ತ ವಾತಾವರಣ ನಿರ್ಮಾಣವಾಗುತ್ತದೆ. ಕಾಡುವಾಸಿಗಳಾದವರನ್ನು ನಾಡ ಪ್ರಜೆಗಳನ್ನಾಗಿ ಮಾಡುವಲ್ಲಿ ಶರಣ ಸಮುದಾಯದ ಬೆಂಬಲ ಪ್ರೀತಿ, ವಿಶ್ವಾಸಗಳು ಮುಖ್ಯ ಪಾತ್ರ ವಹಿಸಿವೆ.

ಶಾಂತಮುತ್ತಯ್ಯನ ಕಾರ್ಯಕ್ಷೇತ್ರ ಮುದ್ದೇಬಿಹಾಳ ತಾಲ್ಲೂಕಿನ ಸರೂರು ಗ್ರಾಮ. ಈ ಗ್ರಾಮದ ಮಲ್ಲಿಕಾರ್ಜುನ (ರೇವಣಸಿದ್ಧ) ದೇವಾಲಯದ ಆವರಣದಲ್ಲಿರುವ ಕ್ರಿ.ಶ. ೧೨೦೮ ಮತ್ತು ೧೨೧೦ರ ಕಾಲದ ಶಾಸನಗಳಲ್ಲಿ ಮಂಕಯ್ಯನ ಪ್ರಸ್ತಾಪವಿದೆ. ಹಾಗೆಯೇ ಶಾಂತಮುತ್ತಯ್ಯನ ಗದ್ದುಗೆ ಮತ್ತು ಗುಡಿಗಳು ಇವೆ. ತಗರ ಪವಾಡ ಮೆರೆದ ಶಾಂತಮುತ್ತಯ್ಯನು ಕುರುಬರು ಕುಲಗುರುವಾಗಿ ಪೂಜಿಸಲ್ಪಡುತ್ತಾನೆ. **'ಸರೂರು ಸಂಪ್ರದಾಯ'** ಎಂಬ ಗೋತ್ರವು ಕುರುಬರಲ್ಲಿದೆ. ಈ ವಿಷಯದನ್ವಯ ಸರೂರು ಕ್ಷೇತ್ರವು ಹಾಲುಮತದ ಸಾಂಸ್ಕೃತಿಕ ನೆಲೆಯಲ್ಲಿ ಮಹತ್ವವುಳ್ಳದ್ದಾಗಿದೆ. ಮದುವೆ ಕಾರ್ಯಗಳಲ್ಲಿ 'ಕಲಿಕಲಿಯಾಗಿ ಕರ್ಯಜ್ಜನಾಗಿ, ಭಿಲ್ಲರಾಜ್ಯವನಾಳಿ ಗುರು ರೇವಣಸಿದ್ಧ ಕಟ್ಟಿದ ಸೇಸೆ ಸ್ಥಿರವಾಗಲಿ ಸರೂರು ಶಾಂತಮುತ್ತಯ್ಯ ಕಟ್ಟಿಸಿದ ಕಲ್ಯಾಣ ಸ್ಥಿರವಾಗಲಿ ಸೋಬತಿ ಸೋಬಾನ' ಎಂಬ ವ್ಹಿ.ಆರ್. ಹನುಮಂತಯ್ಯನವರ 'ಕುರುಬರ ಚರಿತ್ರೆ'ಯಲ್ಲಿ ಉಕ್ತಗೊಂಡ ಪದ್ಯವನ್ನು ಒಡೆಯರು ವಧುವರರಿಗೆ ಹೇಳಿ ಆಶೀರ್ವದಿಸುತ್ತಾರೆ. ಇಲ್ಲಿ ಉಲ್ಲೇಖಿತರಾದ ಶಾಂತಮುತ್ತಯ್ಯ ಮತ್ತು ರೇವಣಸಿದ್ಧರ ಪ್ರಸ್ತಾಪವು ಅವರ ಪ್ರಾಚೀನತೆಯನ್ನು ತಿಳಿಸುತ್ತದೆ. ಆದರೆ ಇಂದು ಹಾಲುಮತ ಸಮಾಜ ಕನಕದಾಸರ ಹೆಸರಿನಲ್ಲಿ ಪೀಠ ಸ್ಥಾಪಿಸಿ ಪುರಾತನ ಮೂಲ ಕುರುಹನ್ನೂ ಕೈ ಬಿಟ್ಟು ತನಗೆ ತಾನೇ ಅನ್ಯಾಯ ಮಾಡಿಕೊಂಡು ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಿಲ್ಲ ಎನ್ನುವ ಸ್ಥಿತಿಯಲ್ಲಿದೆ. ಪೂರಕವಾಗಿ ತುರುವೇಕೆರೆ ಶಾಸನವು ವಿಜಯನಗರ ರಾಜರ, ಹಿರಿಯರ, ಸ್ವಾಮಿಗಳ ಸಮ್ಮುಖದಲ್ಲಿ ಕುರುಬರಿಗೆ ಗುರುಗಳಾರು ಎಂಬ ವಾದದಲ್ಲಿ ಶಾಂತಮುತ್ತಯ್ಯ ಗೆದ್ದು ಮಂಕನನ್ನು ಸೋಲಿಸಿ ಕೊನೆಗೆ ಹಾಲುಮತಕ್ಕೆ ಶಾಂತಮುತ್ತಯ್ಯನೇ ಗುರು ಎಂದು ಸಭೆ ನಿರ್ಣಯಿಸುತ್ತದೆ ಎಂಬ ವಿಷಯವನ್ನು ತಿಳಿಸುತ್ತದೆ. 'ತಗರ ಪವಾಡ'ದಲ್ಲಿ ಬಸವಣ್ಣ 'ಹಾಲುಮತದ ಕುಲದವರಿಗೆಲ್ಲ ಶಾಂತಯ್ಯ ನೀನೇ ಗುರುವಾಗು' ಎಂದು 'ಮೂರೇಣಿನ ಕಂಥೇ' ಕೊಡುತ್ತಾರೆ. ಶಾಂತಮುತ್ತಯ್ಯನನ್ನು ಕುರಿತಾಗಿ ಸಿರಿವಾಳ (೧೧೭೦), ಕೆಲ್ಲೂರು (೧೧೭೫), ಹೋತಗಲ್ಲ (೧೧೭೫), ಸಿರಿವಾಳ (೧೧೭೮), ಹಿರೇಬೇವಿನೂರು (೧೧೯೦), ತುರುವೇಕೆರೆ (೧೪೮೦), ಆರು ಶಾಸನಗಳು ಲಭಿಸಿದೆ.

ತಗರ ಪವಾಡದಲ್ಲಿ ಉಣ್ಣೆಕಂಕಣ ಮತ್ತು ಹತ್ತಿಕಂಕಣದ ಉಗಮವನ್ನು ಗುರುತಿಸಬಹುದು. ಪದ್ಮಗೊಂಡನ ಕಾಡುವಾಸಿ ರಾಕ್ಷಸಿ ಹೆಂಡತಿಯ ಮಕ್ಕಳನ್ನು ಉಣ್ಣೆಕಂಕಣದವರೆಂದೂ, ನಾಡವಾಸಿ ಲಿಂಗಮ್ಮನ ಮಕ್ಕಳಿಗೆ ಹತ್ತಿಕಂಕಣದವರೆಂದೂ ಕರೆದು ಆ ಸಂಪ್ರದಾಯವನ್ನು ಕುರುಬರು ಇಂದಿನವರೆಗೂ ಪಾಲಿಸುತ್ತಾ ಬಂದಿರುವುದು ವಿಶೇಷವಾಗಿದೆ.

'ಸಿದ್ಧಮಂಕ ಚರಿತೆ'ಯಲ್ಲಿ ಹೆಗ್ಗಗೌಡ 'ತಗರ ಪವಾಡ'ದ ಪದ್ಮಗೊಂಡವನಾಗಿರುವನು. ಪದ್ಮಗೊಂಡ ಮತ್ತು ಹೆಗ್ಗಗೌಡನಿಗೆ ಇಬ್ಬರು ಹೆಂಡಂದಿರು. ಒಬ್ಬಳು ರಾಕ್ಷಸಿಯಾದರೆ ಮತ್ತೊಬ್ಬಳು ಕುಲವಧು. ಕಥಾನಾಯಕ ಶಾಂತಮುತ್ತಯ್ಯ ತಗರ ಪವಾಡದಲ್ಲಿ ಪದ್ಮಗೊಂಡನ ಮಗ. ಉಪಕಥಾನಾಯಕ ಹೆಗ್ಗಗೌಡ 'ಸಿದ್ಧಮಂಕ ಚರಿತೆ'ಯಲ್ಲಿ ಮಂಕಯ್ಯನ ರಕ್ಷಕ. ಮಂಗಳವೇಡ ಮತ್ತು ಕಲ್ಯಾಣ ಏಕಸ್ಥಳವೆಂಬಂತೆ 'ಸಿದ್ಧಮಂಕ ಚರಿತೆ'ಯಲ್ಲಿ ಚಿತ್ರಿಸಲಾಗಿದೆ.

'ಸಿದ್ಧಮಂಕ ಚರಿತೆ'ಯ ತೂಗುಡ್ಡವು ಮುದ್ದೇಬಿಹಾಳ ತಾಲ್ಲೂಕಿನ ಸರೂರಿನಿಂದ ಸುಮಾರು ಎರಡು ಕಿಲೋ ಮೀಟರ್ ಅಂತರದಲ್ಲಿದೆ. ಇದೊಂದು ಪ್ರಸಿದ್ಧ ಐತಿಹಾಸಿಕ ಸ್ಥಳವಾಗಿದೆ. ಇಲ್ಲಿ ಸಿದ್ಧಮಂಕ ಸೂಜಿಗೆ ತಲೆಯೂರಿ ಕಾಲುಮೇಲೆ ಮಾಡಿ ಉಗ್ರ ತಪಸ್ಸು ಕೈಗೊಂಡ ವಿಷಯ ತಿಳಿಯುತ್ತದೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ತೂಗುಡ್ಡದಲ್ಲಿ ಬಸವಣ್ಣನ ಕದನದಿಂದಾಗಿ ಇಂದಿಗೂ ರಕ್ತ ಹರಿಯುತ್ತದೆಂದು ಗ್ರಾಮವಾಸಿ ಕುಮಾರಿ ಸುಜಾತಳ ಹೇಳಿಕೆಯಾದರೆ ಲೇಖಕ ಶಿವಪ್ಪ ನೀರಲಗಿಯವರು.

ಕುಂಟೋಜಿ ಬಸವಣ್ಣ ಬಾಗೋಡಿ ಬಸವಣ್ಣ
ಕಾದಬಿದ್ದಾಗ ಯರಿಯಾಗ । ಕಾದಬಿದ್ದಾಗ ಯರಿಯಾಗ
ಯರನಾಳ ದ್ಯಾಮವ್ವ ಬಿಡಿಸ್ಯಾಳ

ಭಿನ್ನ ಅಭಿಪ್ರಾಯದ ಮೌಖಿಕ ತ್ರಿಪದಿಯನ್ನು ಹೇಳುತ್ತಾರೆ. ಅವರ ಪ್ರಕಾರ ಶರಣ ಬಸವಣ್ಣ ಮತ್ತು ಮೇಲಿನ ತ್ರಿಪದಿ ಬಸವಣ್ಣ ಬೇರೆ ಬೇರೆ ಆಗಿದ್ದಾರೆ. ಆದರೆ ತೂಗುಡ್ಡದಲ್ಲಿ ಬಸವಣ್ಣನ ಹೆಸರಂತೂ ಜನಪದರಲ್ಲಿ ಉಳಿದುಕೊಂಡು ಅಧ್ಯಯನಕ್ಕೆ ಪೂರಕಮಾಹಿತಿ ಒದಗಿಸಿಕೊಡುತ್ತದೆ. ಮಂಕಸಿದ್ಧನ ತಪೋಭೂಮಿಯಾದ ತೂಗುಡ್ಡವು ಹಾಲುಮತ ಸಂಸ್ಕೃತಿ ಅಧ್ಯಯನದ ಮಹತ್ವದ ಕ್ಷೇತ್ರವಾಗಿದೆ. ಏಕವ್ಯಕ್ತಿಯಾಗಿ ಮರುಳುಮಂಕ, ಮಂಕತಂದೆ, ಮಂಕಸಿದ್ಧಯ್ಯ, ಮಂಕಯ್ಯ ಎಂಬ ನಾಮ ಭಿನ್ನತೆ ಹೊಂದಿರುವನು. ಮರುಳುಮಂಕನ ಉಲ್ಲೇಖವನ್ನು ತಗರ ಪವಾಡದಲ್ಲಿ ಕಾಣುವುದಿಲ್ಲ. ಶಾಂತಮುತ್ತಯ್ಯನ ಉಲ್ಲೇಖವನ್ನು ಸಿದ್ಧಮಂಕ ಚರಿತೆಯಲ್ಲಿ ಕಾಣುವುದಿಲ್ಲ. ಆದರೂ ಎರಡೂ ಕೃತಿಗಳು ಒಂದೇ ವಿಷಯವನ್ನು ಅನಾವರಣಗೊಳಿಸುತ್ತವೆ. ಒಂದೇ ದಾರಿಯ



ಶಾಂತಮುತ್ತಯ್ಯನ ಗದ್ದುಗೆ, ಸರೂರ

ಎರಡು ಕವಲುಗಳಾಗಿವೆ. ಈ ಕೃತಿಗಳು ಚರಿತ್ರೆ ಮತ್ತು ಪುರಾಣಗಳ ಅಂಶಗಳನ್ನೊಳಗೊಂಡಿವೆ.

ಸಿದ್ಧಮಂಕ ಚರಿತೆಯಲ್ಲಿ 'ಕಾದೋಡಿ ಒಡೆಯ ಸಿದ್ಧ ಬರೆದರ್ಥವ ಗಾಡದಿ ಬರೆದಡಗಿಸಿದ' ಎಂಬಲ್ಲಿ ಒಡೆಯ ಸಿದ್ಧನೆಂಬುವನು ಕಾದೋಡಿ ಗ್ರಾಮದವನಾಗಿ ಕೃತಿ ರಚಿಸಿರಬಹುದು. 'ಒಡೆಯ' ಎಂಬ ಪದವು ಕುರುಬರ ಗುರುಗಳನ್ನು ಸೂಚಿಸವದಾಗಿದೆ. ಸಿದ್ಧಮಂಕ ಚರಿತೆಯಲ್ಲಿ 'ಏಳು ಗೆರೆಯ ಬೇಲಿ ಹೊರಗೆ' ಎಂಬುದು ಏಳುಕೋಟಿ, ಏಳುಕೊಳ್ಳ, ಏಳುಗುಡ್ಡ, ಏಳು ಕಳಸ, ಏಳುತಾಯಿ, ಏಳು ಹೆಡೆ, ಏಳೂರು ದೇವರ ಕಾಳಗ ಮೊದಲಾದ ಪದಗಳಲ್ಲಿಯ 'ಏಳು' ಎಂಬ ಸಂಖ್ಯೆಯೊಂದಿಗೆ ಸಾಮ್ಯತೆ ಪಡೆದಿದೆ.

ಒಡೆಯರ ಒಡೇರಮ್ಮನಿಗೆ ಭಾರತದ ದೇಶದ ಯಾವ ಧರ್ಮವೂ ನೀಡದ ಮಾನ್ಯತೆಯನ್ನು ಗೌರವವನ್ನು ಹಾಲುಮತ ದೊರಕಿಸಿಕೊಟ್ಟಿದೆ. ಅವರು ಒಡೆಯರಷ್ಟೇ ಸಮಾನರಾಗಿ ಅವರ ಅನುಪಸ್ಥಿತಿಯಲ್ಲಿ ಕರುಬರ ನಾಮಕರಣ, ಮದುವೆ, ಮರಣದಂತಹ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ನೆರವೇರಿಸಿಕೊಡುವರು. ಅವರು ವಿಧವೆಯರಾದರೂ ಸೌಭಾಗ್ಯದ ಸಂಕೇತಗಳಾದ ಕುಂಕುಮ, ಬಳೆ, ಮಾಂಗಲ್ಯ ಮೊದಲಾದವನ್ನು ತೆಗೆಯದೇ ಸುಮಂಗಲಿಯರಾಗಿ ಮಾನಸಿಕ ಭದ್ರತೆಯೊಂದಿಗೆ ಗೌರವಯುತವಾಗಿ ಬಾಳುತ್ತಾರೆ.

ಲಿಂಗದೀಕ್ಷೆಯನ್ನು ಒಪ್ಪಿಕೊಂಡ ಶಾಂತಮುತ್ತಯ್ಯನ ಶಾಂತ ಸಂಪ್ರದಾಯ ಷಟ್‌ಸ್ಥಲವನ್ನು ಒಪ್ಪಿಕೊಂಡಿದ್ದರೂ ಶರಣಧರ್ಮದಲ್ಲಿ ಸೇರಿ ಸ್ವಲ್ಪ ಪ್ರಮಾಣವ ನಾಥಶೈವೀಯ ಅಂಶ ಉಳಿಸಿಕೊಂಡಿರಬಹುದು. ಹಂಪಿ ಪರಿಸರದ ನೂರೊಂದು ವಿರಕ್ತರನ್ನು ಈ ಗುಂಪಿಗೆ ಸೇರಿಸಬಹುದಾಗಿದೆ. ಶಾಂತ ಪರಿಭಾಷೆಯ ಮದ್ದಳೆ ಶಾಂತ, ಮಿಡಿಬಿಲ್ಲಶಾಂತ, ವಚನ ಮತ್ತು ಸ್ವರವಚನಕಾರರು ನೂರೊಂದು ವಿರಕ್ತರ ಶಾಂತಪರಂಪರೆಯ ಲಿಂಗಾಯಿತರು, ಹದಿನಾರನೆಯ ಶತಮಾನದ ಶಾಂತಪರಂಪರೆಯ ಶಾಂತಲಿಂಗಸ್ವಾಮಿ ನಿಜಗುಣರ ವಿವೇಕ ಚಿಂತಾಮಣಿಯನ್ನು ಮರಾಠಿಗೆ ಅನುವಾದಿಸಿದರು. ಇದು ಅವರಿಬ್ಬರ ಶಾಂತ ಸಂಪ್ರದಾಯದ ಸಂಬಂಧ ಸೂಚಕವಾಗಿದೆ. ಹದಿನೈದು ಹದಿನಾರನೇ ಶತಮಾನದಲ್ಲಿ ಲಿಂಗಾಯತತನವನ್ನೂ ಒಪ್ಪಿಕೊಂಡ ಶಾಂತ ಸಂಪ್ರದಾಯ ವೀರಶೈವವಾಯಿತು. ಮಹಾರಾಷ್ಟ್ರದಲ್ಲಿ ಶಾಂತ ಸಂಪ್ರದಾಯವು ಈ ದಿಸೆಗೇ ತಿರುಗಿತು. ಇದಕ್ಕೆ ಪುಷ್ಠಿ ಕೊಡುವಂತೆ ಚೆನ್ನಬಸವಣ್ಣನ ಕರಣ ಹಸಿಗೆಯನ್ನು ನಿಜಗುಣರ ವಿವೇಕ ಚಿಂತಾಮಣಿಯನ್ನು ಕರುಣಹಂಸ ಎಂಬ ಹೆಸರಿನಲ್ಲಿ ಸಿಂಗಣಾಪುರದ ಶಾಂತಲಿಂಗಸ್ವಾಮಿಗಳು ಅನುವಾದಿಸಿದ್ದಾರೆ. ಅಲ್ಪ ಪ್ರಮಾಣದಲ್ಲಿ ಶರಣ ಧರ್ಮದತ್ತ



ಸರೂರಿನ ಸಿದ್ಧಮಂಕನಿಗೆ ಸಂಬಂಧಿಸಿದ ಶಾಸನದಲ್ಲಿ ಲಿಂಗಶಿಲ್ಪ

ವಾಲಿದ ನಾಥಶೈವೀ ಪಂಥವನ್ನು ಪೂರ್ಣವಾಗಿ ತನ್ನತ್ತ ಸೆಳೆಯಲು ನಡೆಸಿದ ಪ್ರಯತ್ನವಾಗಿರಬಹುದು. ಎರಡೂ ಕಾವ್ಯಗಳಲ್ಲಿ 'ವಿಭೂತಿ', ಶರಣ, ಲಿಂಗದೀಕ್ಷೆ ಎಂಬ ಪದಗಳು ಕಾಣಿಸಿಕೊಳ್ಳುತ್ತವೆ. ಸಹಜವಾಗಿ ಕನಿಷ್ಠತೆಯಿಂದ ಶ್ರೇಷ್ಠತೆಯತ್ತ ಸಾಗುವ ವಿಕಸನ ಕ್ರಿಯೆಯಲ್ಲಿ ಜನಸಾಮಾನ್ಯರನ್ನು ಮಾನಸಿಕವಾಗಿ ಸಿದ್ಧಪಡಿಸಿರುವ ಸಾಧ್ಯತೆಗಳಿರಬಹುದು. ಹನ್ನೆರಡನೆಯ ಶತಮಾನದಲ್ಲಿ ಸಾಮರಸ್ಯ ಜೀವನ ನಡೆಸಿದ ಕುರುಬರು ಮತ್ತು ಲಿಂಗಾಯಿತರು ನಂತರದ ದಿನಗಳಲ್ಲಿ ಪ್ರತ್ಯೇಕಗೊಂಡಿರುವುದು ಕಂಡುಬರುತ್ತದೆ.

ನಾರದನು ವಿಭೂತಿಯನ್ನಿಟ್ಟು ಹೆಗ್ಗಗೌಡನಿಗೆ ಹರಸುವದು, ಬಿಜ್ಜಳನಿಂದ ಕಲ್ಯಾಣ ಪ್ರವೇಶದ ಅನುಮತಿ ಪಡೆದ ಜನರಿಗೆ ವಿಭೂತಿ ವಿಳ್ಯ ಹಂಚುವ ಪ್ರಸಂಗ, ಹೀಗೆ 'ಭಂಡಾರ ಸಂಸ್ಕೃತಿ'ಯು ವಿಭೂತಿ ಸಂಸ್ಕೃತಿಯತ್ತ ಹೊರಳುವ ವಿಕಸನಶೀಲ ಧ್ವನಿ ಇಲ್ಲಿದೆ. ಕುಲಬೇಧ ನಿರಾಕರಣೆ ಕೇಂದ್ರ ಪ್ರಜ್ಞೆಯಾಗಿದೆ. ಲಿಂಗಾಯತ ಜಂಗಮರಂತೆ ಬದುಕುವ ಮರುಳುಮಂಕ ಸಂಪ್ರದಾಯದ ಮಂಕೊಡೆಯರು ಹೆಚ್ಚಾಗಿ ಸರೂರು ಮತ್ತು ತುಮಕೂರು ಜಿಲ್ಲೆಯ ಚಿಕ್ಕನಾಯಕನ ಹಳ್ಳಿಯಲ್ಲಿ ವಾಸವಾಗಿದ್ದಾರೆ. ಇದಕ್ಕೆ ಪೂರಕವಾಗಿ ತಗರ ಪವಾಡದಲ್ಲಿ ಕುರುಬರ ಮತ್ತು ಲಿಂಗಾಯತರ ಏಕೀಕರಣವನ್ನು ಗುರುತಿಸಬಹುದು.

ರೇವಣಸಿದ್ಧರ ಶಿಷ್ಯ ಶಾಂತಮುತ್ತಯ್ಯನಿಂದಾಗಿ 'ಶಾಂತ ಸಂಪ್ರದಾಯ', ಸಿದ್ಧರಾಮನ ಶಿಷ್ಯ ಸಿದ್ಧಮಂಕನಿಂದಾಗಿ 'ಮಂಕ ಸಂಪ್ರದಾಯ' ಕುರುಬರಲ್ಲಿ ಕವಲೊಡೆದಿದೆ. ಸಿದ್ಧಮಂಕ ಸಂಪ್ರದಾಯದ ಸಾದಗುರುಬರು ಲಿಂಗಾಯತರಾಗುತ್ತ ಬಂದ ಕಾರಣ, ಕುರುಬರಲ್ಲಿ ಮಂಕಸಂಪ್ರದಾಯವರ ಸಂಖ್ಯೆ ತೀರ ಕಡಿಮೆ. ಶಾಂತ ಸಂಪ್ರದಾಯದವರ ಸಂಖ್ಯೆ ಹೆಚ್ಚು. ಅಮೋಘಸಿದ್ಧ ಸಂಪ್ರದಾಯವರು ವಿಭೂತಿ ಹಚ್ಚಿಕೊಳ್ಳುವದು, ಹಂಡೆ ಕುರುಬರು ಲಿಂಗ ಧರಿಸುವದು ಇವೆಲ್ಲ ಶಾಂತ ಸಂಪ್ರದಾಯದ ಲಿಂಗಾಯತತನವನ್ನು ಸೂಚಿಸುತ್ತದೆ. ಪೂರಕವಾಗಿ ದೊಡ್ಡಬಳ್ಳಾಪುರದ 'ಕುರುಬರ ಹಳ್ಳಿ' ಗ್ರಾಮದಲ್ಲಿ ಲಿಂಗಾಯಿತರು ವಾಸವಾಗಿರುವರು.

ಶರಣ ಚಳುಗಳಿಗಳಲ್ಲಿ ವೀರಶೈವದತ್ತ ವಾಲಿದ ಅಮೋಘಸಿದ್ಧ, ಗೊಲ್ಲಾಳ ಮತ್ತು ರುದ್ರಮುನಿಯರಂತೆ, ಜನಸಾಮಾನ್ಯರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಲಿಂಗಾಯತರಾಗಿರುವ ಸಾಧ್ಯತೆ ಇದೆ.

ವಿಜಯನಗರದ ಸ್ಥಾಪಕರು ಹಕ್ಕಬುಕ್ಕರು ಮೈಸೂರಿನ ಒಡೆಯರು ಮೂಲತಃ ಕುರುಬರು. ಬಳ್ಳಾರಿ ಹಂಡೇ ಅರಸರು ಸಿದ್ಧರಾಮನ ಭಕ್ತರು. ಹೀಗೆ ಧಾರ್ಮಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಪೌರಾಣಿಕವಾಗಿ ಕುರುಬ ಮತ್ತು ಲಿಂಗಾಯಿತ ಸಮಾಜಗಳಲ್ಲಿ ಹೋಲಿಕೆಯಿದ್ದು ಕುರುಬರ ಪರಿಷ್ಕೃತರೂಪ ವೀರಶೈವವೆಂದು ಎಂ.ಎಂ. ಕಲಬುರ್ಗಿಯವರು ಅಭಿಪ್ರಾಯಪಟ್ಟಿದ್ದಾರೆ.

ಹೀಗೆ 'ತಗರ ಪವಾಡ' ಮತ್ತು 'ಸಿದ್ಧಮಂಕ ಚರಿತೆ' ಈ ಎರಡೂ ಕೃತಿಗಳು ಕುರುಬರ ಗುರುಪರಂಪರೆಯನ್ನು ಹೇಳುವಲ್ಲಿ ಯಶಸ್ವಿಯಾಗಿವೆ. ಜೊತೆಗೆ ಕುಲಕಸುಬುಗಳಾದ ಕಂಬಳಿ ತಯಾರಿಕೆ, ಕಂಬಳಿ ನೇಯ್ಗೆ, ಕಂಬಳಿ ಕಂಥೆ ಮೊದಲಾದ ಹಾಲುಮತದ ಪ್ರಾಚೀನ ಪರಂಪರೆ, ಸಂಸ್ಕೃತಿಯನ್ನು ತಿಳಿಸುವ ಪ್ರಮುಖ ಆಕರಗಳಾಗಿವೆ.

ಆಧಾರಸೂಚಿ

೧. **ತಗರ ಪವಾಡ,** (ಸಂ) ಎಂ.ಎಂ. ಕಲಬುರ್ಗಿ, ಸಿ.ಕೆ. ಪರಶುರಾಮಯ್ಯ, ಎಫ್.ಟಿ. ಹಳ್ಳಿಕೇರಿ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೪.

೨. **ಸಿದ್ಧಮಂಕ ಚರಿತೆ,** (ಸಂ) ಎಂ.ಎಂ. ಕಲಬುರ್ಗಿ, ಡಾ. ವೈ.ಸಿ. ಭಾನುಮತಿ, ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯ ಮಠ, ಗದಗ, ೨೦೦೪.

೩. ವಿ.ಆರ್. ಹನುಮಂತಯ್ಯ., **ಕುರುಬರ ಚರಿತ್ರೆ,** ೧೯೨೬.

೪. ಶ್ರೀ ಮಲ್ಲಿಕಾರ್ಜುನ., **ವೀರಶೈವ ಪಂಚಾಚಾರ್ಯ ಚರಿತ್ರೆ**

೫. ಡಾ. ಎಂ.ಎಂ. ಕಲಬುರ್ಗಿ, ಪುಟ ೩೭೩., **ಕುರುಬ ಸಮಾಜ ಮತ್ತು ಲಿಂಗಾಯತ ಸಮಾಜ, ಮಾರ್ಗ ೪.**

೬. ಡಾ. ಎಂ.ಎಂ. ಕಲಬುರ್ಗಿ, ಪುಟ ೩೭೧. **ಕುರುಬರ ಗುರು ಶಾಂತಮುತ್ತಯ್ಯ, ಮಾರ್ಗ ೪.**

೭. ಡಾ. ಎಫ್.ಟಿ. ಹಳ್ಳಿಕೇರಿ., 'ಹಾಲುಮತ ಸಂಸ್ಕೃತಿಯ ವಿಶಿಷ್ಟ ಕೃತಿ ಸಿದ್ಧಮಂಕ ಚರಿತೆ', **ಗುರುವಂದನ,** ಪುಟ ೧೭೨.

೮. ಎಫ್.ಟಿ. ಹಳ್ಳಿಕೇರಿ, ಕುರುಬ ಲಿಂಗಾಯಿತ, **ಕಂಠಪತ್ರ ೨,** ೨೦೦೪.

೯. ಡಾ. ಎಂ.ಎಂ. ಕಲಬುರ್ಗಿ, 'ಶಾಂತ ಲಿಂಗಾಯತ-ಶರಣ ಲಿಂಗಾಯತ-ವೀರಶೈವ', **ಲಿಂಗಾಯತ** ೩-೯, ಡಿಸೆಂಬರ್ ೨೦೦೮, ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ.

೧೦. ಸಿ.ಕೆ. ಪರಶುರಾಮಯ್ಯ, **ಹಾಲತೊರೆ : ತಗರ ಪವಾಡ ಮತ್ತು ಗುರುಪರಂಪರೆ,** ನಗರ ಕುರುಬರ ಸಂಘ ದಾವಣಗೆರೆ, ೨೦೦೦, ಪುಟ ೩೯.

ಮಮತಾ ರಾಣಿ*

ರಾಘವಾಂಕನ ವೀರೇಶ ಚರಿತ್ರೆಯಲ್ಲಿ ಸಾಂಸ್ಕೃತಿಕ ಸಂಘರ್ಷ

ಪೆರರೊಡವೆಯಂ ಕೊಂಡು ಕೃತಿಯ ಪೇಳದ ಭಾಷೆಯನ್ನು ತೊಟ್ಟು, ಪೊಸ ಕಾವ್ಯಕನ್ನಿಕೆಯನ್ನು ಪಂಪಾಂಬಿಕೆಯರಸಗಿತ್ತು ಕೃತಕೃತ್ಯನಾದ ಸ್ವತಂತ್ರ ಯುಗದ ಪ್ರಯೋಗಶೀಲ ವೀರಶೈವ ಕವಿ ರಾಘವಾಂಕ. ಷಟ್ಪದಿ ರೂಪವನ್ನು ತನ್ನ ಕಾವ್ಯಕ್ಕೆ ವಾಹಕವಾಗಿ ಸ್ವೀಕರಿಸಿ, ಕನ್ನಡ ಸಾಹಿತ್ಯದಲ್ಲಿ ಅಮರನಾಗಿದ್ದಾನೆ. ರಾಘವಾಂಕನು ತನ್ನ ಕಾವ್ಯದ ವಸ್ತು ಪಾತ್ರಗಳನ್ನು ಪುರಾಣದಿಂದ ಇತಿಹಾಸಕ್ಕೆ ಇಳಿಸಿದನು. ಸಮಾಜದ ಸ್ಥಿತ್ಯಂತರಗಳನ್ನು ಕಾವ್ಯದ ಮೂಲಕ ವಿರೋಧಿಸಿದನು. ಅಂದಿನ ಸಾಮಾಜಿಕ, ಧಾರ್ಮಿಕ ಪರಂಪರೆಯನ್ನು ಕಾಲಘಟ್ಟದಲ್ಲಿ ಉಳಿಸಿಕೊಡಬಲ್ಲವನಾಗಿದ್ದಾನೆ.

ರಾಘವಾಂಕನ ಕಾಲದ ಬಗ್ಗೆ ಹಲವು ಅಭಿಪ್ರಾಯಗಳಿದ್ದರೂ, ರಾಘವಾಂಕನ ಕಾಲ ಕ್ರಿ.ಶ. ೧೨೩೦ ಎಂಬುದು ಇತ್ತೀಚಿನ ಅಭಿಪ್ರಾಯವಾಗಿದೆ. (ಮೈ.ವಿ.ವಿ.ಸಾ.ಚ. ಸಂ. ೪) ರಾಘವಾಂಕನು ಹರಿಹರ ಮತ್ತು ಕೆರೆಯ ಪದ್ಮರಸರ ಕಿರಿಯ ಸಮಕಾಲೀನ ಎನ್ನಬಹದು. ಅಲ್ಲದೆ ಹರಿಹರನು ಸೋದರ ಮಾವನೂ, ವಂಶ ಗುರುವೂ ಆಗಿದ್ದರಿಂದ ಅವನಿಂದ ದೀಕ್ಷೆ ಪಡೆದು, ವಿದ್ಯೆ ಕಲಿತು ಕರಕಮಲ ಸಂಜಾತನಾಗಿ ತನ್ನನ್ನು ''ಹರೀಶ್ವರನ ವರಸುತ''ನೆಂದಿದ್ದಾನೆ. ರಾಘವಾಂಕನಿಗೆ ಹರಿಹರ ದೀಕ್ಷಾ ಗುರುವಾದರೆ, ಕೆರೆಯ ಪದ್ಮರಸ ಮೋಕ್ಷ ಗುರುವಾಗಿದ್ದನು. ಇವನ ಕಾಲದ ಬಗ್ಗೆ ಹರೀಶ್ವರನು ಬರೆದಿರುವ "ಏಕಾಂತರಾಮಿ ರಗಳೆ" ಹೆಚ್ಚು ಸಹಾಯಕ ವಾಗಿದೆ. ಏಕಾಂತ ರಾಮಯ್ಯನು ಐತಿಹಾಸಿಕ ವ್ಯಕ್ತಿ, ಅಬ್ಬಲೂರು ಶಾಸನದಲ್ಲಿ ಈತನ ವಿಷಯ ಬಂದಿದೆ. ಇವನ ವಚನದಲ್ಲಿಯೂ ಹರಿಹರನೂ ಅವನ ಸಮಕಾಲೀನ ಎಂಬುದು ಸೂಚಿತವಾಗಿದೆ (ಕ್ರಿ.ಶ. ೧೧೯೦ರವರಿಗೂ ಜೀವಿಸಿರಬಹುದಾದ ಏಕಾಂತರಾಮಯ್ಯನ ರಗಳೆಯನ್ನು ಹರಿಹರ ನಂತರ ಬರೆದಿರಬಹುದು)

೧. ರಾಘವಾಂಕನು ಪಂಪಾಪುರದ ದೇವರಾಜನ ಸಭೆಯಲ್ಲಿ ಹರಿಶ್ಚಂದ್ರ ಕಾವ್ಯವನ್ನು ಓದಿದನು.

೨. ಪ್ರಮುಖ ವಿಚಾರ : ಓರಂಗಲ್ಲಿಗೆ ಹೋಗಿ ಮೀಸಲುಗವಿತೆಯನ್ನೊರೆದು ಏಕ, ದ್ವಿ, ತ್ರಿದಂಡಿಗಳನ್ನು ಸೋಲಿಸಿ ದೊರೆ ರುದ್ರಪ್ರತಾಪನಿಂದ ಪೂಜೆ ಪಡೆದನು. (೧೨೯೨-೧೩೩೪) ಆಂಧ್ರ ಪ್ರದೇಶದ ಇತಿಹಾಸದಲ್ಲಿ ಇವನ ಕಾಲ (ಕ್ರಿ.ಶ. ೧೨೯೮-೧೩೨೩)

೩. ಕೆರೆಯ ಪದ್ಮರಸನು ನರಸಿಂಹ ಬಲ್ಲಾಳನ ಮಂತ್ರಿಯಾಗಿದ್ದನು. ಹರಿಹರನು ನರಸಿಂಹ ಬಲ್ಲಾಳರಾಯನ ಕರಣಿಕನಾಗಿದ್ದನು. (ಜನ್ನ)

ರಾಘವಾಂಕನ ಕಾಲದ ಬಗ್ಗೆ ವಿವಿಧ ವಿದ್ವಾಂಸರ ತೀರ್ಮಾನಗಳು ಹೀಗಿವೆ :

ಕಿಟ್ಟೆಲ್	ಕ್ರಿ.ಶ. ೧೨೯೦-೧೩೦೦
ಆರ್. ನರಸಿಂಹಚಾರ್ಯ	ಕ್ರಿ.ಶ. ೧೧೬೫
ಎ. ವೆಂಕಟಸುಬ್ಬಯ್ಯ	ಕ್ರಿ.ಶ. ೧೨೮೦-೧೨೯೦ ಕಿ. ವಾದಕ್ಕೆ ಸಮರ್ಥನೆ
ಗೋವಿಂದ ಪೈ	ಕ್ರಿ.ಶ. ೧೧೬೦-೧೧೯೦
ಎ.ಆರ್. ಕೃಷ್ಣಶಾಸ್ತ್ರಿ	ಕ್ರಿ.ಶ. ೧೨೮೦
ಡಿ.ಎಲ್.ಎನ್.	ಕ್ರಿ.ಶ. ೧೨೪೦
ಬಿ. ಶಿವಮೂರ್ತಿಶಾಸ್ತ್ರಿ	ಕ್ರಿ.ಶ. ೧೨೦೦, ಇನ್ನೊಂದು ಕಡೆ ೧೧೫೬-೧೨೨೦
ಆರ್.ಸಿ. ಹಿರೇಮಠ್	ಕ್ರಿ.ಶ. ೧೩ನೇ ಶತಮಾನದ ಮೊದಲ ೨೫ ವರ್ಷ ೧೨೭೫
ರಂ.ಶ್ರೀ. ಮುಗಳಿ	ಕ್ರಿ.ಶ. ೨ನೇ ಶತಮಾನದ ಮಧ್ಯದಿಂದ ೧೩ನೇ ಶತಮಾನದ ನಡುವಿನ ಕಾಲ

ರಾಘವಾಂಕ ಮತ್ತು ಜನ್ನರು ಸಮಕಾಲೀನರೆಂದು ತಿಳಿಯಲಾಗಿದೆ ಎಂಬುದು ಹೆಚ್. ದೇವೀರಪ್ಪ ಅವರ ಅಭಿಪ್ರಾಯ.

ಹರಿಹರ ಕರಣಿಕನಾಗಿದ್ದ ನರಸಿಂಹ ಬಲ್ಲಾಳನ ಸಭೆಯಲ್ಲಿ ಕೆರೆಯ ಪದ್ಮರಸನಿಗೂ ತ್ರಿಭುವನತಾತನಿಗೂ ವಾದ ನಡೆದಾಗ ರಾಘವಾಂಕನು ಉಪಸ್ಥಿತನಿದ್ದನೆಂದು ಪದ್ಮರಸನ ಪುರಾಣದ ಹೇಳಿಕೆ.

*

ಒಟ್ಟಿನಲ್ಲಿ ಹರಿಹರ, ರಾಘವಾಂಕ, ಕೆರೆಯ ಪದ್ಮರಸರ ಜೀವಿತದ ಪರಮಾವಧಿಯ ಕಾಲ ಕ್ರಿ.ಶ. ೧೨೬೫ ಎನ್ನಬಹುದು.

ರಾಘವಾಂಕನು ಹರಿಶ್ಚಂದ್ರ ಕಾವ್ಯದಿಂದ ಪ್ರಸಿದ್ಧಿ ಪಡೆದು, ಸಿದ್ಧರಾಮ ಚರಿತ್ರೆಯಿಂದ ಎಲ್ಲರ ಗಮನ ಸೆಳೆದವ ನಾಗಿದ್ದರೂ, ಅವನ ಸೋಮನಾಥ ಚರಿತೆ ಮತ್ತು ವೀರೇಶ ಚರಿತ್ರೆಗಳು ಇನ್ನೂ ಹೆಚ್ಚು ಚರ್ಚಿತವಾಗದ ಕೃತಿಗಳಾಗಿ ಉಳಿದಿವೆ.

ಕ್ರಿ.ಶ. ೧೨ನೇ ಶತಮಾನದಲ್ಲಿ ನಡೆದ ಸಾಮಾಜೋ – ಧಾರ್ಮಿಕ ಚಳವಳಿ ಒಂದು ಸಂಕ್ರಮಣ ಘಟ್ಟವಾಗಿತ್ತು. ರಾಘವಾಂಕನು ವೀರಶೈವನಾಗಿದ್ದು, ತನ್ನ ಕಾಲಘಟ್ಟದಲ್ಲಿ ಶೈವಧರ್ಮವನ್ನು ಎತ್ತಿ ಹಿಡಿಯಲು ವೀರಭದ್ರನನ್ನು ಪುರಾಣದಿಂದ ಕಾವ್ಯಕ್ಕೆ ಇಳಿಸಿದನ್ನೆನ್ನಬಹುದು. ಅಂದಿನ ಕ್ರಾಂತಿಯ ಪೂರ್ಣ ಚಿತ್ರಣ ರಾಘವಾಂಕನಿಗೆ ತಿಳಿದಿತ್ತೆನ್ನ ಬಹುದು. ವೀರಬಲ್ಲಾಳನ ಕಾಲದಲ್ಲಿದ್ದ ಶ್ರೀ ವೈಷ್ಣವ ಪ್ರಭಾವವನ್ನು ಕಡಿಮೆ ಮಾಡಲು, ಅವನು ವೀರೇಶ ಚರಿತೆಯನ್ನು ಬರೆದಿದ್ದಾನೆ ಎನ್ನಬಹುದು. ಆ ಮೂಲಕ ತನ್ನ ಧರ್ಮದ ನೆಲೆಗಟ್ಟನ್ನು ಭದ್ರಪಡಿಸಲು ಯತ್ನಿಸಿದ್ದಾನೆ ಎಂದರೆ ತಪ್ಪಾಗಲಾರದು.

ಬಸವ ಪೂರ್ವದ ವೀರಶೈವ ಧರ್ಮವು ವೈದಿಕ ಧರ್ಮದ ಪ್ರಭಾವಕ್ಕೆ ಒಳಗಾಗಿದ್ದರೂ, ಯಜ್ಞಯಾಗಾದಿಗಳ, ಕರ್ಮಕಾಂಡವನ್ನು, ವರ್ಣಾಶ್ರಮ ಪದ್ಧತಿಯನ್ನು ವಿರೋಧಿಸಿದ್ದರ ಫಲವೇ "ವೀರೇಶ ಚರಿತ್ರೆ".

ಪರಂಪರೆಯ ಘರ್ಷಣೆಯನ್ನು ರಾಘವಾಂಕನು ತನ್ನ ಕೃತಿಗಳಲ್ಲಿ ಹೇಗೆ ಸಾಧಿಸಿದ್ದಾನೆಂಬುದನ್ನು ತಿಳಿಯೋಣ.

ರಾಘವಾಂಕನ ಪ್ರಸಿದ್ಧ ಕಾವ್ಯವೆಂದರೆ ಹರಿಶ್ಚಂದ್ರ ಕಾವ್ಯ, ಶುದ್ಧ ಶೈವವಾಗಿದ್ದು, ದರ್ಶನಾಂಶದಿಂದ ಕೂಡಿದ್ದೂ, ಶಿವಪಾರಮ್ಯ, ಸತ್ವ ಪಾರಮ್ಯ, "ಹರನೇ ಸತ್ಯ, ಸತ್ಯವೇ ಹರ" ಎಂಬ ನಿಟ್ಟಿನಲ್ಲಿ ವೈದಿಕ ಧರ್ಮವನ್ನು ಅಲ್ಲಗಳೆಯುವ ಸಾಹಸಕ್ಕೆ ರಾಘವಾಂಕನು ಕೈ ಹಾಕಿದ್ದಾನೆ.

ಸೋಮನಾಥ ಚಾರಿತ್ರ್ಯದಲ್ಲಿ ಮತೀಯಾಂಶ ಮತ್ತು ತಾಮಸಾಂಶವನ್ನು ಅಧ್ಯಯನದ ಮೂಲಕ ಆಗ ಪ್ರಚಲಿತದಲ್ಲಿದ್ದ ಜೈನ ಧರ್ಮ ವಿರೋಧಿ ತತ್ವಗಳನ್ನು ಸಾರಿದ್ದಾನೆ.

ಬಸವ ಪಂಥದ ಸಿದ್ಧರಾಮ ಚರಿತೆಯಲ್ಲಿ ಶೈವಧರ್ಮದ ಚಾರಿತ್ರಿಕಾಂಶವನ್ನು, ಸಾತ್ವಿಕಾಂಶವನ್ನು, ಅಲ್ಲದೆ ಕರ್ಮಯೋಗಕ್ಕೆ ಪ್ರಾಶಸ್ತ್ಯ ಕೊಟ್ಟು, "ಕಾಯಕ"ದ ಮಹತ್ವದಿಂದ ವೀರಶೈವ ಧರ್ಮವನ್ನು ಪ್ರತಿಪಾದಿಸಿದ್ದಾನೆ.

(ಕಾಯಕ ತತ್ವ) ಜನಪರವಾದುದು ಇದಕ್ಕೆ ಸಿದ್ಧರಾಮ ಉದಾಹರಣೆ.

ವೀರೇಶ ಚರಿತ್ರೆಯಲ್ಲಿ ಪೌರಾಣಿಕಾಂಶವನ್ನು, ಯಜ್ಞ ವಿರೋಧಿ, ಶೈವ ಸಿದ್ಧಾಂತವನ್ನು ಮಂಡಿಸಿದ್ದಾನೆ. ವೈಷ್ಣವ ವಿರೋಧಿ ಪ್ರತಿಭಟನೆಯನ್ನು ಶರಭ ಚರಿತ್ರೆಯಲ್ಲಿ ಮುಂದುವರೆಸಿದಂತೆ ಕಾಣುತ್ತದೆ. (ಶರಭ ಚರಿತ್ರೆ ದೊರೆತಿಲ್ಲದ ಕಾರಣ ಅದರ ಬಗ್ಗೆ ಹೆಚ್ಚು ಚರ್ಚೆಗೆ ಅವಕಾಶವಿಲ್ಲ) ವೀರಭದ್ರ ಚರಿತ್ರೆಯ ಪ್ರಕಾರ ವೀರಭದ್ರ ನರಸಿಂಹನನ್ನು ಸಂಹರಿಸು ತ್ತಾನೆ.)

ಹೀಗೆ ರಾಘವಾಂಕನು ಅಂದಿನ ಸಮಾಜದಲ್ಲಿ ಏನೇನು ಪ್ರತಿಭಟನೆ ಇತ್ತೋ ಅದೆಲ್ಲವನ್ನೂ ತನ್ನ ಪ್ರತಿಭೆಯ ಮೂಲಕ ಜನಮಾನಸದಲ್ಲಿದುದ್ದನ್ನು ಕವಿಯಾಗಿ ಕಾವ್ಯದಲ್ಲಿ ಪಡಿಮೂಡಿಸಿದ್ದಾನೆ. ಅಂದಿನ ಜನ ಏನನ್ನು ಅಪೇಕ್ಷಿಸು ತ್ತಿದ್ದರೋ ಅದನ್ನು ಕಾಲಘಟ್ಟದ ಸ್ಥಿತ್ಯಂತರಗಳನ್ನು ವಿರೋಧಿಸಿ ಕಾವ್ಯದ ಮೂಲಕ (ಶಿವ ಪ್ರಾಬಲ್ಯ, ಕಾಯಕ, ಯಾಗಯಜ್ಞ ವಿರೋಧ ಜೈನ ಪ್ರಾಬಲ್ಯ ಕಡಿಮೆ ಮಾಡಲು ವೀರಭದ್ರನಿಗೆ ಪ್ರಾಶಸ್ತ್ಯ) ಸಮಕಾಲೀನ ಐತಿಹಾಸಿಕ ಪ್ರಜ್ಞೆಯನ್ನು ಒಳಗು ಮಾಡಿಕೊಂಡು, ತಾನು ಎದುರಿಸಬೇಕಾಗಿ ಬಂದ ಪರಂಪರೆ ಯೊಂದಿಗೆ ಹೋರಾಡಿದ ಸಂಗತಿ ಅಷ್ಟೇ ಅಲ್ಲದೆ ತನ್ನ ಮತ ಧರ್ಮದಲ್ಲಿ ನಡೆದ ಘರ್ಷಣೆ ಮತ್ತು ಅದರ ಪರಿಣಾಮದ ಧಾರ್ಮಿಕ ಶ್ರದ್ಧೆಯೇ ಕಾವ್ಯಶ್ರದ್ಧೆಯಾಗಿದೆ. ತನ್ನ ಕಾವ್ಯ ಕೇವಲ ಋಷಿಗಷ್ಟೇ ಅಲ್ಲ, ಇವು ಸಾಮಾಜಿಕ ದಾಖಲೆಗಳಾಗಬೇಕೆಂದು ರಾಘವಾಂಕನು ಬಯಸಿದಂತೆ ತೋರುತ್ತದೆ.

ವಚನಕಾರರ ಕ್ರಾಂತಿಯ ಫಲಗಳಲ್ಲಿ ರಾಘವಾಂಕನೂ ಒಬ್ಬ. ಆ ಕಾಲದ ವಿಚಾರ ಮಂಥನದ ಸಾರ ಹಾಗೂ ನೂತನ ಅಭಿವ್ಯಕ್ತಿ ವಿಧಾನ ರಾಘವಾಂಕನ ಕಾವ್ಯದಲ್ಲಿದ್ದವು. ಈ ಕ್ರಾಂತಿಯು ಮುಖ್ಯವಾಗಿ ಕಲ್ಯಾಣದ ಚಾಲುಕ್ಯರನ್ನು ಹತ್ತಿಕ್ಕುವ ನಿಟ್ಟಿನಲ್ಲಿದ್ದುದುದರಿಂದ ವೀರೇಶ ಚರಿತ್ರೆಯ ಛಂದಸ್ಸಿನಲ್ಲಾಗಲೀ, ವಸ್ತುವಿನ ಆಯ್ಕೆಯಲ್ಲಾಗಲೀ ಮುಖ್ಯ ಎಂಬುದನ್ನು ಸೂಚಿಸುತ್ತದೆ. ಸಾಮಾಜಿಕ ಪ್ರಜ್ಞೆಯಿಂದ ಭೂಮಿಯಲ್ಲಿ ಯಾಗನಾಶ ಶೈವ ಪರಂಪರೆಯ ವಿರೋಧವಾಗಿತ್ತು.

(ದಕ್ಷಯಾಗ ನಡೆದದ್ದು ಕಾಶಿಯ ಪಶ್ಚಿಮ ಭಾಗದ ಕನಖಳ ಪ್ರದೇಶವಾದ ಮರ್ತ್ಯಲೋಕದಲ್ಲಿ).

ವೀರಭದ್ರ : ಇವನು ಕೈಲಾಸದ ಗಣ ದೇವತೆಗಳಲ್ಲಿ ಬಹಳ ಮುಖ್ಯನಾದವನು. ಶಿವನ ಮೂರು ಮಂದಿ ಪುತ್ರರಲ್ಲಿ (ಗಣಪತಿ, ಕುಮಾರಸ್ವಾಮಿ, ವೀರಭದ್ರ) ಇವನೂ ಒಬ್ಬನಾಗಿದ್ದಾನೆ. ಇವನು ಮೊದಲು ವೀಣಾಧರ ಶಿವನಾಗಿದ್ದು, ನಂತರ ರಕ್ಷಕ ದೇವತೆಯಾಗಿದ್ದಾನೆ. ದಕ್ಷಯಾಗದ ನಾಶ ಮತ್ತು ಶಿವ ಪಾರಮ್ಯತೆಯನ್ನು ಎತ್ತಿ ಹಿಡಿಯಲು

ಶಿವಾಗಮಗಳಲ್ಲಿ ಶಿವಪುರಾಣಗಳಲ್ಲಿ ಮೂಡಿದ್ದಾನೆ. ವೇದ ಪೂರ್ವ ಶೈವ ಧರ್ಮದಲ್ಲಿ ವೀರಭದ್ರನು ಪ್ರಮುಖ ವ್ಯಕ್ತಿಯಾಗಿದ್ದಾನೆ. ವೀರಶೈವ ಧರ್ಮದಲ್ಲಿ ವೀರಭದ್ರನಿಗೆ ಅಗ್ರಸ್ಥಾನವಿದೆ. ವೀರಶೈವ ಪಂಚಗೋತ್ರಗಳಲ್ಲಿ ಒಂದಾದ ವೀರಗೋತ್ರಕ್ಕೆ ವೀರಭದ್ರನು ಅಧಿಪತಿ. ವೀರಶೈವ ಸಮಾಜದ ಗುರುಗಳಾದ ಶ್ರೀ ಭಗವತ್ಪಾದ ರೇಣುಕಾಚಾರ್ಯರ ಪರಂಪರಾಗತವಾದ ಮಠಗಳಲ್ಲಿ ವೀರಭದ್ರನೇ ಆರಾಧ್ಯ ದೇವತೆ. ಇದರಿಂದ ವೀರಶೈವ ಧರ್ಮಕ್ಕೂ ವೀರಭದ್ರ ದೇವರಿಗೂ ನಿಕಟ ಸಂಬಂಧವಿದೆಯೆಂದು ವಿಧಿತವಾಗುತ್ತದೆ. ಬಾಳೆಹೊನ್ನೂರಿನಲ್ಲಿಯೂ ಸಹ ವೀರಭದ್ರನೇ ಕ್ಷೇತ್ರನಾಥ. ಇದು ಮೊದಲ ಪಂಚಾಚಾರ್ಯ ಪೀಠವಾಗಿದೆ.

ಚರಿತ್ರೆ : ರಾಘವಾಂಕನು ತನ್ನ ಕಾವ್ಯಗಳಿಗೆ ಚರಿತ್ರೆ ಎಂದಿರುವುದಕ್ಕೆ ಅವನಲ್ಲಿದ್ದ ಕವಿ ಭಾವವೇ ಆಗಿದೆ. ಚಾರಿತ್ರ್ಯ ಎಂದರೆ ಒಳ್ಳೆಯ ನಡತೆ ಎಂದೇ ಅರ್ಥ. ಇದರಿಂದ ಕವಿಯು ಒಳ್ಳೆಯ ನಡತೆಗೆ ಪ್ರಾಶಸ್ತ್ಯವಿತ್ತವನೆಂದೂ. ಧರ್ಮದ ಲಕ್ಷಣದಲ್ಲಿ ನಡತೆಯೇ ಭಕ್ತಿಯ ಲಕ್ಷಣವೂ ಆಗಿದೆ. "ಕವಿ ಭಾವಕೃತ, ಕವೇಃ ಕರ್ಮ ಕಾವ್ಯಂ" ಕವಿ ಭಾವವೇ ಕಾವ್ಯಕ್ಕೆ ಪ್ರೇರಕ ಶಕ್ತಿ, ಜೀವನದಲ್ಲಿನ ಒಳ್ಳೆಯ ನಡತೆಯನ್ನು ಚಿತ್ರಿಸುವುದೇ ಕವಿಯ ಗುರಿಯೆಂಬುದು ವಿದಿತವಾಗುತ್ತದೆ. ಯಾವುದನ್ನು ಸಮಾಜ ಜೀವನ ಮೌಲ್ಯವೆಂದು ನಂಬಿದನೋ, ಅದನ್ನು ಚಾಚೂತಪ್ಪದೆ "ಜೀವನಕ್ಕಾಗಿ ಕಾವ್ಯ" ಎಂಬ ಸೈದ್ಧಾಂತಿಕ ಮನೋಧರ್ಮದಿಂದ ರಾಘವಾಂಕ ಬರೆದಿದ್ದಾನೆ.

ವೀರೇಶ ಚರಿತ್ರೆಯಲ್ಲಿ ಶಿವದ್ವೇಷಿ, ಗರ್ವಿಯಾದ ದಕ್ಷನಿಗೆ ಏನಾಯಿತೆಂಬ ನೀತಿಯಿದೆ. ಸಚ್ಚಾರಿತ್ರೆಯ ವಿರುದ್ಧ, ಅಧರ್ಮ ದ್ವೇಷದ ಮೂಲಕ, ಉದಾತ್ತ ಸಮಾಜೋಪಯೋಗಿ ತತ್ವ ಪ್ರತಿಪಾದನೆಯಾಗಿದೆ. ಇದರಿಂದ ಕವಿ ಪಶುತ್ವದಿಂದ ಮಾನವೀಯತೆಗೆ, ಮಾನವೀಯತೆಯಿಂದ ದೇವತ್ವಕ್ಕೂ ಏರುವ ಸೋಪಾನಗಳು ಎಂಬ ಭಾವದಿಂದ ಇವನ್ನೆಲ್ಲ ಕವಿ. ಜನ ಬದುಕಬೇಕೆಂದು ಬರೆದುದಾಗಿದೆ.

ಪ್ರಾಚೀನ ಶೈವ ಧರ್ಮೀಯರಾದ ಕಾಳಾಮುಖ, ಲಾಕುಳದಲ್ಲಿನ ಶೈವ ಪಾರಮ್ಯದಲ್ಲಿ ಸ್ಥಿರಲಿಂಗ ಪೂಜೆ, ಶರಣ ಪಾರಮ್ಯದಲ್ಲಿ ಇಷ್ಟ ಲಿಂಗ ಪೂಜೆಯ ಮಧ್ಯದಲ್ಲಿ ವೀರಭದ್ರ ಏಕೆ ಪ್ರಸಿದ್ಧನಾದನೆಂದರೆ ಕಾಲಘಟ್ಟದ ಪ್ರಭಾವವೇ ಈ ಕೆಲಸ ಮಾಡಿಸಿರಬೇಕು. ಇದರಿಂದ ತಿಳಿಯುವುದೆಂದರೆ ಸಾಮಾಜಿಕ ರಕ್ಷೆಗಾಗಿಯೇ, ವೀರಭದ್ರನನ್ನು ಪುರಾಣದಿಂದ ಕಾವ್ಯಕ್ಕೆ ತಂದಿರಬೇಕೆಂದು ತಿಳಿಯುತ್ತದೆ. ವೀರಶೈವ ಪುಣ್ಯ ಸ್ಥಳಗಳಾದ ಕಾಶಿಯಲ್ಲಿ ವಿಶ್ವೇಶ್ವರ, ಹಂಪೆಯಲ್ಲಿ ವಿರೂಪಾಕ್ಷ, ಇವರ ಮಧ್ಯದಲ್ಲಿ (ಓರಂಗಲು) ವೀರಭದ್ರ ಹೆಚ್ಚು ಆರಾಧನೆಗೊಂಡಿದ್ದಾನೆ.

ಉದ್ದಂಡ ಷಟ್ಪದಿ : ವೀರೇಶ ಚರಿತ್ರೆಯಲ್ಲಿ ವೀರರಸ ಪ್ರಧಾನ. ಅದರ ಛಂದಸ್ಸು ವಿಶಿಷ್ಟವಾದ ಉದ್ದಂಡ ಷಟ್ಪದಿ. ಇದನ್ನು ರಾಘವಾಂಕನು ಬೇರೆ ಕೃತಿಗಳಲ್ಲಿ ಪ್ರಯೋಗಿಸಿಲ್ಲವಾದ್ದರಿಂದ ಈ ಕಾವ್ಯಕ್ಕೆ ಈ ಷಟ್ಪದಿ ಹೇಗೆ ಪ್ರಸ್ತುತ ಎಂಬುದನ್ನು ವಿವೇಚಿಸೋಣ. ಇಲ್ಲಿನ ೪ ಮಾತ್ರೆಯ ಗಣಗಳು ಏಕ ತಾಳದ ಗತಿಗೆ ಒಡಂಬಡುವುದಾಗಿ ವೀರರಸ ಪ್ರಚೋದಕಗಳಾಗಿವೆ. ಈ ಗಣಗಳು ಸೈನಿಕ ಪಥ ಸಂಚಲನಕ್ಕೆ ಅನುಗುಣವಾದುದು. ಈ ದೃಷ್ಟಿಯಿಂದ ಉದ್ದಂಡ ಷಟ್ಪದಿ ಸಂಚಲನ ಗೀತೆ. ಉದ್ದಂಡ (ಉತ್+ದಂಡ) ಎತ್ತಿದ ದಂಡ ಎಂಬ ಅರ್ಥ. ಪಥ ಸಂಚಲನಕ್ಕೆ ಅನುಗುಣವಾಗಿದೆ. ರಣ ವಾದ್ಯಗಳಿಂದ ಯುದ್ಧಕ್ಕೆ ಕ್ರಮಬದ್ಧವಾಗಿ ಹೆಜ್ಜೆಯಿಡುವ ಕ್ರಿಯೆ. ಸೈನ್ಯವೂ ದಂಡೆತ್ತುವ ಕಾರ್ಯವೇ "ಉದ್ದಂಡ". ಅಲ್ಲದೆ ವೀರಭದ್ರನನ್ನು ಉದ್ದಂಡ ಎಂಬ ಹೆಸರಿನಿಂದ ಕರೆಯುವ ರೂಢಿ ವೀರಶೈವ ಸಮಾಜದಲ್ಲಿದೆ. ಈ ಕಾವ್ಯವು ವೀರಭದ್ರನನ್ನು ಕುರಿತು ಹಾಡಿದುದರಿಂದ ಈ ಗ್ರಂಥದ ಪದ್ಯಗಳಿಗೆ ಉದ್ದಂಡ ಷಟ್ಪದಿ ಎಂದಿದ್ದಾರೆ. ಇದರಿಂದ ತಿಳಿಯುವ ವಿಷಯವೆಂದರೆ ಈ ಕಾವ್ಯವು ದಕ್ಷ ಯಾಗದ ಕಡೆಗೆ ವೀರಭದ್ರನ ಗಣಕುಲದೊಡನೆ ದಂಡೆತ್ತಿ ಹೋದ ಕಥನದಿಂದ ಕೂಡಿದೆ. ತಾಳಗತಿಗೆ ಅನುಗುಣವಾಗಿ ಹೇಳಿದಾಗ ಇದು ಪಥ ಸಂಚಲನೆಗೆ ಸರಿ ಹೊಂದುವುದು. (ದಕ್ಷನ ಮೇಲೆ ವೀರೇಶನು ಎತ್ತಿದ ದಂಡದಿಂದ ಇದು ಉದ್ದಂಡವಾಗಿದೆ)

ಮೀಸಲುಗವಿತೆ : (ಹರಕೆ ಕಟ್ಟುವುದು)

ಮೀಸು ಎಂಬುದಕ್ಕೆ ಈಜಾಡು ಎಂಬಾರ್ಥ, ಜಯಶಾಲಿಯಾಗು ಎಂಬ ಲಕ್ಷ್ಯಾರ್ಥದಲ್ಲಿ ಈ ಶಬ್ಧವನ್ನು ಬಳಸುತ್ತಾರೆ. ಅಲು ಸೇರಿದಾಗ ಅದು ಭಾವನಾಮಯ. ಆಗ ಮೀಸಲುಗವಿತೆ ಎಂಬುದಕ್ಕೆ ವಿಜಯ ಗೀತೆ ಎಂದರ್ಥ. ಈ ಕಾವ್ಯದ ವಸ್ತು ದಕ್ಷಾಧ್ವರ ಧ್ವಂಸಿಯಾದ ವೀರೇಶನ ವಿಜಯದ ಜೊತೆಗೆ ರಾಘವಾಂಕನ ವಿಜಯವೂ ಕೂಡ. ವೀರಭದ್ರನ ವೀರಾವೇಶಕ್ಕೆ ತಕ್ಕಂತೆ ವೀರೇಶ ಚರಿತ್ರೆಗೆ ಮಾತ್ರ ಮೀಸಲಾಗಿದೆ. ವೀರೇಶನು ಅಧರ್ಮದ ವಿರುದ್ಧ ಹೋರಾಡುವ ವೀರರಿಗೆಲ್ಲಾ ಒಡೆಯನಾಗಿದ್ದಾನೆ.

ಓರಂಗಲ್ಲಿನ ಪ್ರತಾಪ ಅಥವಾ ಕಾಕತೀಯ ರುದ್ರನ ಆಸ್ಥಾನದಲ್ಲಿಯೇ ರಚಿಸಿ ಓದಿ ಕುಕವಿಗಳನ್ನು ರಾಘವಾಂಕನು ಸೋಲಿಸಲು ಮಾಡಿಕೊಂಡ ಹರಕೆ ಸಲ್ಲಿಕೆಯೇ ಉದ್ದಂಡ ಷಟ್ಪದಿಯ ವೀರೇಶ ಚರಿತ್ರೆ, ಈ ಕೃತಿಯನ್ನು ರಾಘವಾಂಕನು ಓರಂಗಲ್ಲಿನ ವೀರಭದ್ರನಿಗೆ ಸಮರ್ಪಿಸಿದ್ದಾನೆ. ದಕ್ಷ ಯಜ್ಞ ಕಥೆಯ ಮೂಲಕ ಶಿವಲೀಲೆಗಳಲ್ಲಿ ಒಂದಾದ ವೀರಭದ್ರನ ಲೀಲೆಯನ್ನು ಕೊಂಡಾಡಿ ಧರ್ಮ ರಕ್ಷಣೆಗೆ ಮುನ್ನುಡಿ ಬರೆದಿದ್ದಾನೆ.

ಡಾ. ಎಸ್.ಎಂ. ನಾಗಭೂಷಣ*

ರಾಯಚೂರು ಜಿಲ್ಲೆಯ ಶಾಸನಕವಿಗಳು ಹಾಗು ರೂವಾರಿಗಳು

ಕನ್ನಡ ಭಾಷೆ ಹಾಗು ಲಿಪಿಯ ಸಹಸ್ರಾರು ಶಾಸನಗಳ ಸಮಗ್ರ ಅಧ್ಯಯನ ಕುರಿತಂತೆ ಅನೇಕ ಶಾಸನತಜ್ಞರು ಯೋಜಿಸುತ್ತಿರುವ ಸಂದರ್ಭದಲ್ಲಿ ಅದರ ಒಂದು ಭಾಗವಾಗಿ "ಶಾಸನ ಕವಿಗಳು ಹಾಗು ರೂವಾರಿಗಳು" ವಿಷಯದಲ್ಲಿ ಸಮಗ್ರ ಕರ್ನಾಟಕದ ಶಾಸನಗಳನ್ನು ಹಂತ ಹಂತವಾಗಿ ಜಿಲ್ಲಾವಾರು ಶೋಧನಾ ಕಾರ್ಯವನ್ನು ಕೈಗೊಂಡು, ಈಗಾಗಲೇ ಬೆಳಗಾವಿ, ಬಳ್ಳಾರಿ, ಚಿಕ್ಕಮಗಳೂರು ಜಿಲ್ಲೆಗಳಿಗೆ ಸಂಬಂಧಿಸಿದ ಲೇಖನಗಳನ್ನು ಇತಿಹಾಸ ದರ್ಶನ ಸಂ. ೧೭, ೧೮, ೨೦ರಲ್ಲಿ ಪ್ರಕಟಿಸಲಾಗಿದೆ. ಇದೀಗ 'ರಾಯಚೂರು ಜಿಲ್ಲೆಗೆ ಸಂಬಂಧಿಸಿದ ಶಾಸನಗಳಲ್ಲಿ' ಶಾಸನ ಕವಿಗಳು ಹಾಗು ರೂವಾರಿಗಳ ಕುರಿತು ಇಲ್ಲಿ ಪ್ರಸ್ತುತ ಪಡಿಸಲಾಗಿದೆ

ಒಂದು ಶಿಲಾಶಾಸನ ಅಥವಾ ತಾಮ್ರಶಾಸನ ನಿರ್ಮಾಣಗೊಳ್ಳಲು ಸರ್ವೇಸಾಮಾನ್ಯವಾಗಿ ಶಾಸನ ಕವಿ, ಬರಹಗಾರ, ಹಾಗು ರೂವಾರಿಗಳು ಶ್ರಮಿಸಬೇಕಾಗುತ್ತದೆ. ಪಾಠವನ್ನು ಕವಿ ಅಥವಾ ಪಂಡಿತನು ರಚಿಸಿ, ಹೇಳಿದರೆ, ಮುದ್ದಾದ ಲಿಪಿಯಲ್ಲಿ ಬರೆದವ ಬರಹಗಾರನಾಗುತ್ತಾನೆ. ಶಿಲೆಯ ಮೇಲೆ ಕೆತ್ತುವವ ಶಿಲ್ಪಿ, ರೂವಾರಿ ಅಥವಾ ಸೂತ್ರಧಾರನಾಗುತ್ತಾನೆ. ಆದರೆ ಎಲ್ಲಾ ಶಾಸನಗಳಲ್ಲಿ ಈ ಉಲ್ಲೇಖಗಳು ಇರಲು ಸಾಧ್ಯವಿಲ್ಲ. ಎಲ್ಲೋ ಕೆಲವು ಶಾಸನಗಳಲ್ಲಿ ಕವಿ ಅಥವಾ ಬರಹಗಾರ ಅಥವಾ ರೂವಾರಿಯ ಹೆಸರುಗಳು ಅಪರೂಪವಾಗಿ ಹೆಸರಿಸಿರುತ್ತಾರೆ. ರಾಯಚೂರು ಜಿಲ್ಲೆಯ ಸುಮಾರು ಶಾಸನಗಳಲ್ಲಿ ರೂವಾರಿಗಳ ಹೆಸರುಗಳು ಸಿಗುತ್ತವೆ. ಅಪರೂಪವಾಗಿ ಶಾಸನಕವಿಗಳ ಉಲ್ಲೇಖಗಳು ಲಭ್ಯವಾಗುತ್ತವೆ.

ಕರ್ನಾಟಕದಲ್ಲಿ ರಾಯಚೂರು ಜಿಲ್ಲೆಯ ಶಾಸನಗಳ ಶೋಧಕಾರ್ಯವಾಗಿಲ್ಲದ ಕಾರಣ ಅವುಗಳ ಸಂಖ್ಯೆ ಸ್ವಲ್ಪ ಕಡಿಮೆ ಎಂದೇ ಹೇಳಬಹುದು. ಡಾ. ಚನ್ನಬಸಯ್ಯ ಹಿರೇಮಠ ಇತ್ತೀಚೆಗೆ ಕೆಲವು ಶಾಸನಗಳನ್ನು ಪ್ರಕಟಿಸಿದ್ದಾರೆ. ಅಲ್ಲದೆ ಡಿ.ಜೆ. ಬೀಮ್ಸೆನ್ ರಾವ್, ಪ್ರೊ. ಜಿ.ವಿ. ವೀರಭದ್ರಪ್ಪ, ಡಾ. ಮಂದಾಕಿನಿಬಾಯಿ, ಸಿದ್ದಲಿಂಗಪ್ಪ ಕೊಟ್ನೆಕಲ್ ಮುಂತಾದವರು ಇದುವರೆಗೆ ಶಾಸನ ಸಾಹಿತ್ಯದಲ್ಲಿ ಕೆಲಸ ಮಾಡಿದ್ದಾರೆ. ಕೆಲವರು ಶಾಸನಗಳನ್ನು ಶೋಧಿಸಿ, ಪ್ರಕಟಿಸಿದ್ದಾರೆ. ಆ ಎಲ್ಲಾ ಶಾಸನಗಳನ್ನು ಸೇರಿಸಿ ಹಂಪಿ ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭ ರಲ್ಲಿ ಪ್ರಕಟಿಸಿದ್ದಾರೆ. ಆದರೂ ಶಾಸನಗಳ ಸಂಖ್ಯೆ ಕಡಿಮೆ ಎಂದೇ ಹೇಳಬಹುದು. ಇಲ್ಲಿ ರಾಯಚೂರು ಜಿಲ್ಲೆಯ ಶಾಸನಗಳ ಕಾಲಮಾನವನ್ನು ಅನುಸರಿಸಿ ಕಾಲಾನುಕ್ರಮವಾಗಿ ಲಭ್ಯವಿರುವ ಉಲ್ಲೇಖಗಳನ್ನು ಗುರುತಿಸಲಾಗಿದೆ.

ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಬಲ್ಲಟಗಿ ಸುಮಾರು ೧೦ನೇ ಶತಮಾನದ ತ್ರುಟಿತ ಶಿಲಾಶಾಸನವಿದೆ. ಈ ಶಾಸನದ ಕೊನೆ ಸಾಲಿನಲ್ಲಿ "ಸಪ್ಪಣೋಜಪ ಬರಹ"[೧] ಎಂಬ ಉಲ್ಲೇಖದೊಂದಿಗೆ ರೂವಾರಿಯ ಹೆಸರನ್ನು ಉಲ್ಲೇಖಿಸುವ ಜಿಲ್ಲೆಯ ಪ್ರಪ್ರಥಮ ಶಾಸನವಾಗಿದೆ. ಮಸ್ಕಿ ಶಾಸನ ಕ್ರಿ.ಶ. ೧೦೧೦ರ ಶಾಸನ ಜಿಲ್ಲೆಯ ಎರಡನೇ ಉಲ್ಲೇಖವಾಗಿ ಇದರ ೨೫ನೇ ಸಾಲಿನಲ್ಲಿ "ಬರೆವಂ ಕಟ್ಟಜಂ"[೨] ಎಂದು ಶಾಸನವನ್ನು ಕೆತ್ತಿದ ಶಿಲ್ಪಿಯನ್ನು ಹೆಸರಿಸಲಾಗಿದೆ. ಮಾಡಶಿರವಾರ. ಕ್ರಿ.ಶ. ೧೦೩೩ರ ಕೊನೆಯ ೧೪ ಮತ್ತು ೧೫ನೇ ಸಾಲುಗಳಲ್ಲಿ "ರಾಮಚಂ... ಬರೆದಂ..."[೩] ಎಂದು ಉಲ್ಲೇಖಿಸಿದೆ. ಕಿಲ್ಲಾರಟ್ಟಿಯ ಕ್ರಿ.ಶ. ೧೦೪೬ರ ಕೊನೆಯ ಸಾಲಿನಲ್ಲಿ "ಬರೆದಂ ಸೇನಬೋವ ಬಮ್ಮಣ್ಣಯ್ಯ".[೪] ಕಕ್ಕರಗೂಳದ ಕ್ರಿ.ಶ. ೧೦೭೧ರ ಶಾಸನದ ಅಂತ್ಯದಲ್ಲಿ "ತಳವಾರ ಬಳಿಯ ಬೋವ ಕಾಟೇಬೋವ"[೫] ಎಂದು ಸೂತ್ರಧಾರನನ್ನು ಉಲ್ಲೇಖಿಸಿದೆ. ಗಬ್ಬೂರು ಕ್ರಿ.ಶ. ೧೦೮೪ರ ಶಾಸನದ ೩೫ನೇ ಸಾಲಿನಲ್ಲಿ "ವೋಜನ ಲಿಖಿತಂ ಮಂಗಳ...ಮಹಾ...."[೬] ಎಂದು ಶಾಸನ ಲಿಪಿಕಾರನನ್ನು ಉಲ್ಲೇಖಿಸಿದೆ. ಒಳಬಳ್ಳಾರಿಯ ಕ್ರಿ.ಶ. ೧೯೫ರ ಸಂಸ್ಕೃತ ಶಾಸನದಲ್ಲಿ ೨೭-೨೮ನೇ ಸಾಲುಗಳಲ್ಲಿ "ಮಹಾ ಶ್ರೀ...ಶ್ರೀ...ಶ್ರೀ...ಬರೆದಂ ದೇವೋಜಂ ಬೋಜಣಾರ್ಯ"[೭] ಎಂದು ಶಾಸನ ಶಿಲ್ಪಿಯನ್ನು ಕಾಣಬಹುದು. ಬಲ್ಲಟಗಿಯ ಮೂರು ಶಾಸನಗಳು ಲಿಪಿಯಾಧಾರವಾಗಿ ೧೧ನೇ ಶತಮಾನಕ್ಕೆ ಸೇರುವ ಶಾಸನಗಳು. ಎರಡು ಶಾಸನಗಳಲ್ಲಿ ರೂವಾರಿ.

* ಎಸ್.ಜೆ.ಎಂ.ವಿ. ಮಹಂತ ಮಹಾವಿದ್ಯಾಲಯ, ಧಾರವಾಡ.

ಸೂತ್ರಧಾರಿಗಳಿಗೆ ಭೂಮಿಯನ್ನು ಕೊಟ್ಟ ಅಪರೂಪದ ವಿಷಯುವಿದೆ. "ಸೂತ್ರದಾರಿ ಕಾಸಿಗ ವೋಜಂಗೆ ಧಾರಪೂರ್ವಕದಿಂದ ಬಿಟ್ಟ ಮತ್ತರಯ್ದು ದೇವರಿಗೆ ಗದ್ದೆ...[೮] ಅಲ್ಲಿನ ಮತ್ತೊಂದು ಶಾಸನದಲ್ಲಿ "ಶ್ರೀ...ಮನ್ಮಹಾಸಾಮನ್ತಂ ಲೋಕರಸ ಸೂತ್ರದಾರಿ ನೇವೋಜಂಗೆ ಮೊರಟದ ಮುಲದ ಬಿಟ್ಟ ಕರಿ ನೆಲ ಮತ್ತರು...."[೧೦] ಇಲ್ಲಿ ರೂವಾರಿಯಾದ ನೇವೋಜನಿಗೆ ಕರಿನೆಲ ಎಂದರೆ ಫಲವತ್ತಾದ ಎರೆ ಭೂಮಿಯನ್ನು ನೀಡಿ ಗೌರವಿಸಿದ ವಿಶೇಷ ಉಲ್ಲೇಖವಿದೆ. ದೇವರಗುಡಿಯ ಕ್ರಿ.ಶ. ೧೧೦೧ರ ಶಾಸನ ಬಹುದೊಡ್ಡ ಶಾಸನ. ಅಲ್ಲಿನ ಪ್ರಾಚೀನ ಮಲ್ಲಿಕಾರ್ಜುನ ದೇವಾಲಯವಿದೆ; ಅದರ ಪ್ರಾಚೀನ ಹೆಸರು ಹುಳಿಮೇಶ್ವರ.[೧೧] ದೇವಾಲಯದಲ್ಲಿನ ಶಾಸನ ಕ್ರಿ.ಶ. ೧೧೦೧ ಹುಳಿಮೇಶ್ವರನೆಂಬವ ಈ ದೇವಾಲಯುದ ಲಿಂಗವನ್ನು ಸ್ಥಾಪಿಸಿದ್ದರಿಂದ ಈ ದೇವಾಲಯಕ್ಕೆ ಉಳಿಯುಮೇಶ್ವರ ದೇವಾಲಯವೆಂದು ಕರೆಯಲಾಗಿದೆ. ವಚನಕಾರ ಚಿಕ್ಕಯ್ಯನಿಗೆ "ಉಳಿಯುಮೇಶ್ವರ" ಎಂಬ ವಿಶೇಷಣವಿದ್ದು. ಶಾಸನೋಕ್ತ ಚಿಕ್ಕಯ್ಯನಿಗೆ ಹುಲಿಮೇಶ್ವರ ಎಂದು ಬಳಕೆಯಾಗಿದೆ. ಈ ವಚನಕಾರ ಹುಲಿಮೇಶ್ವರ ದೇವರಗುಡಿ ಗ್ರಾಮದ ಹುಲಿಮೇಶ್ವರ ದೇವಾಲಯದ ಆಚಾರ್ಯನಾಗಿದ್ದು ಭೂದಾನ ದತ್ತಿ ಸ್ವೀಕರಿಸಿದ ಉಲ್ಲೇಖವಿದೆ ಮತ್ತು ಅವನ ವಚನವನ್ನು ಶಾಸನದಲ್ಲಿ ಕಂಡರಿಸಲಾಗಿದೆ. ಆದ್ದರಿಂದ ಉಳಿಮೇಶ್ವರನನ್ನು ಶಾಸನ ಕವಿ ಎಂದು ಸ್ವೀಕರಿಸಬಹುದೇ? ಈ ಶಾಸನದ ಕೊನೆಯಲ್ಲಿ "ಶಂಭುವಣ್ಣಂಗಳು ಬರೆದ ಶಾಸನ".[೧೨] ಎಂದರೆ ಶೆಂಭವಣ್ಣ ಎಂಬುವನು ದೇವರಗುಡಿ ಕ್ರಿ.ಶ. ೧೧೦೧ರ ಶಾಸನವನ್ನು ಬರೆದವನು. ನಿಲವಂಜಿ ಕ್ರಿ.ಶ. ೧೧೭೭ರ ಶಾಸನದ ಹಿಂಬದಿಗೆ ಕೊನೆಯ ಸಾಲಿನಲ್ಲಿ "ಇ ಶಾಸನವಂ ಹಾಚಿದೇವರಸರ ಬೆಸದಂ ಶ್ರೀ ಕರಣ ವೇರ್ಗ್ಗಡೆಯರಸಂ ಬರೆದ"[೧೩]. ಇಲ್ಲಿ ಶಾಸನ ಕವಿ ಹಾಚಿದೇವರಸ. ಶ್ರೀ ಕರಣ ವೆರ್ಗ್ಗಡೆ ಬರಹಗಾರ. ಗಬ್ಬೂರು– ಕ್ರಿ.ಶ. ೧೨೧೩ ನಾಗರಲಿಪಿಯ ಸಂಸ್ಕೃತ ಭಾಷೆಯ ಯಾದವರ ಕಾಲದ ಶಾಸನ. ಈ ಶಾಸನದ ೧೨೧ನೇ ಸಾಲುಗಳಲ್ಲಿ "ಶ್ರೀ ನಿತ್ಯಾವರದ ದಾಸೇಶ್ವರಾರ್ಯ್ಯೇನ ರಚಿತೆಯಂ ಶಾಸನ ಪದ್ಧತಿ"[೧೪]. ಇಲ್ಲಿ ಶಾಸನಕವಿಯನ್ನು ಉಲ್ಲೇಖಿಸಲಾಗಿದೆ. ಮುದಗಲ್ಲುಕೋಟೆ– ಕ್ರಿ.ಶ. ೧೪೩೬. ಶಾಸನದ ೨೬–೩೨ ಸಾಲುಗಳಲ್ಲಿ" ಮಂಗಳ...ಮಹಾ ಶ್ರೀ...ಶ್ರೀ...ಶ್ರೀ...ಶ್ರೀ.. ಕಲ್ಲುಕುಟಿಗ ತಿಪೋಜಗೆ ಹಿರಿಯ ಎರದ (ಹ) ಳಿಯಲು (ಕೊ)ಟ್ಟ ಮೇಟಿಗೋಳಗ"[೧೫]. ಇಲ್ಲಿ ಶಾಸನ ಶಿಲ್ಪಿಯಾದ ಕಲ್ಲುಕುಟಿಗ ತಪ್ಪೋಜನಿಗೆ ಭೂದಾನದ ಉಲ್ಲೇಖವಿದೆ. ಬೇವಿನಹಳ್ಳಿ– ಕ್ರಿ.ಶ. ೧೫೫೧ರ ತಾಮ್ರ ಶಾಸನದ ೩೧೧–೩೧೨ನೇ ಸಾಲುಗಳಲ್ಲಿ "ಸಂಸತರೇಣ ಸಭಾಪತಿಃ" ಹಾಗು ತ್ವಷ್ಟಾ ಶ್ರೀ ವೀರಣಾಚಾರ್ಯ್ಯೇವ್ಯ. ಲಿಖಿತಾಮ್ರ ಶಾಸನಂ"[೧೬]. ಎಂದು ಶಾಸನಕವಿ ಹಾಗು ರೂವಾರಿಯ ಹೆಸರನ್ನು ತಿಳಿಸಲಾಗಿದೆ. ಮುಕ್ಕುಂದಿ– ಕ್ರಿ.ಶ. ೧೬೪೬ರ ಕನ್ನಡ ಶಾಸನದ ಕೊನೆಯಲ್ಲಿ "ವೀರೋಜನ ಮಗ ಭೈರೋಜ ಕೆತ್ತಿದ"[೧೭]. ಮಟಮಾರಿ– ೧೭ನೇ ಶತಮಾನದ ಶಾಸನದ ಕೊನೆಯಲ್ಲಿ "ಇ ಶಾಸನದ ಬರೆದಾತ ಕುಮಾರ ಭೋ(ಮ್ಮೊ)ಜ"[೧೮], ರೂವಾರಿಯನ್ನು ಉಲ್ಲೇಖಿಸಿದೆ. ಈಗೆ ರಾಚೂರು ಜಿಲ್ಲೆಯ ಕೆಲವು ಶಾಸನಗಳು ಶಾಸನಕವಿ, ಬರಹಗಾರ, ರೂವಾರಿಗಳನ್ನು ಹೆಸರಿಸಬಹು ದಾಗಿದೆ. ಮುಂದಿನ ಪಟ್ಟಿಯಲ್ಲಿ ಶಾಸನ ಸಮೇತ ಪೂರ್ಣಮಾಹಿತಿ ಕೊಡಲಾಗಿದೆ.

ರಾಯಚೂರು ಜಿಲ್ಲೆಯ ಶಾಸನ ಕವಿಗಳು – ರೂವಾರಿಗಳು

ಅ. ಸಂ.	ಶಾಸನಗಳು, ತಾಮ್ರ ಶಾಸನ ಗ್ರಾಮ ಸ್ಥಳ	ತಾಲೂಕ	ಕಾಲ ಕ್ರಿಶ.	ಶಾಸನ ಕವಿ	ಬರಹಗಾರ	ರೂವಾರಿಗಳು, ಶಿಲ್ಪಿ	ಪ್ರಕಟಣೆ
೧.	ಬಲ್ಲಟಗಿ	ಮಾನ್ವಿ	೧೦	--	--	ಸೆಪ್ಪಣ್ಣೋಜಪ ಬರಹ	ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ ೭, ಸಂ. ೮೪, ಪು. ೩೦೨
೨.	ಮಸ್ಕಿ	ಲಿಂಗಸೂರು	೧೦೧೦	--	--	ಕಟ್ಟೋಜ	ಕ.ವಿ.ಶಾ.ಸಂ. ೨. ನಂ. ೩೨, ಪು.೧೬೬
೩.	ಮಾಡಶಿರವಾರ	ಮಾನ್ವಿ	೧೦೩೩	--	ರಾಮಚಾರಿ ಬರದಂ	--	ಕ.ವಿ.ಶಾ.ಸಂ. ೨. ನಂ. ೪೬, ಪು.೪೧೮
೪.	ಕಿಲ್ಲಾರಟ್ಟಿ	ಲಿಂಗಸೂರು	೧೦೪೬	--	ಸೇನಭೋವ ಬೊಮ್ಮಣ್ಣಯ್ಯ	--	ಕ.ವಿ.ಶಾ.ಸಂ. ೨, ನಂ. ೧೨೬, ಪು. ೨೨೬

೫.	ಕಕ್ಕರಗೋಳ		೧೦೭೧	--	--	ಬಳಿಯಭೋವ ಕಾಟಿ ಭೋವ	ಕ.ಪಿ.ಶಾ.ಸಂ. ೨, ನಂ. ೪೪, ಪು.೧೭೫
೬.	ಗಬ್ಬೂರು	ದೇವದುರ್ಗ	೧೦೮೪	--	--	ಶ್ರೀ ಸರಸ್ವತಿ ದರ್ಪ್ಪಣ ವೋಜನ ಲಿಖಿತಂ	ಕ.ಪಿ.ಶಾ.ಸಂ. ೨, ನಂ. ೨೬, ಪು. ೯೦
೭.	ಒಳಬಳ್ಳಾರಿ	ಸಿಂಧನೂರು	೧೯೫	--	--	ಬರೆದಂ ದೇವೋಜಂ ಭೋಜಣಾರ್ಮ	ಕ.ಪಿ.ಶಾ.ಸಂ. ೨, ನಂ. ೫೩, ಪು.೪೨೪
೮.	ಬಲ್ಲಟಗಿ	ಮಾನ್ವಿ	೧೧	--	--	ಸೂತ್ರಧಾರಿ ಕಸಿವೋಜಂ	ಕ.ಪಿ.ಶಾ.ಸಂ. ೨, ನಂ. ೮೮, ಪು.೩೦೬
೯.	ಬಲ್ಲಟಗಿ	ಮಾನ್ವಿ	೧೧	--	--	ಬೀಚರಸನ ಮಗ ದಸದ ಮೊಜ	ಕ.ಪಿ.ಶಾ.ಸಂ. ೨, ನಂ. ೮೯, ಪು.೩೦೬
೧೦.	ಬಲ್ಲಟಗಿ	ಮಾನ್ವಿ	೧೧	--	--	ಸೂತ್ರಧಾರಿನೇವೋಜಂಗೆ	ಕ.ವಿ.ಶಾ.ಸಂ. ೨, ನಂ.೯೩, ಪು.೩೧೧
೧೧.	ದೇವರಗುಡಿ	ಸಿಂಧನೂರು	೧೧೦೧	--	ಶಂಭು ಮಣ್ಣಂಗಳು ಬರೆದ ಶಾಸನ	--	ಕ.ವಿ.ಶಾ.ಸಂ. ೨, ನಂ. ೨೮, ಪು.೩೯೨
೧೨.	ನಿಲವಂಜಿ	ದೇವದುರ್ಗ	೧೧೭೭	ಹಾಚಿದೇವರಸ ಬೆಸೆದಂ	ಶ್ರೀಕರಣ ವೆರ್ಗ್ಗಡೆ ಬರೆದಂ	--	ಚೆನ್ನಬಸವಯ್ಯ ಹಿರೇಮಠ 'ಸತ್ಯದ ಹಾದಿ', ಮಸ್ಕಿ, ಪು.೭ ಕ.ವಿ.ಶಾ.ಸಂ. ೭, ನಂ. ೨೯, ಪು. ೯೬
೧೩.	ಗಬ್ಬೂರು	ದೇವದುರ್ಗ	೧೨೧೩	ಶ್ರೀ ನಿತ್ಯಾವರದ ದೇಸೇಶ್ವರಾರ್ಯೋನ ರಚಿತಯಂ ಶಾಸನ ಪದ್ದತಿಃ	--	--	ಕ.ವಿ.ಶಾ.ಸಂ. ೭, ನಂ. ೯, ಪು. ೬೬
೧೪.	ಮುದಗಲ್ಲು ಕೋಟೆ	ಲಿಂಗಸೂರು	೧೪೩೬	--	--	ಕಲ್ಲುಕುಟಿಗ ತಿಪೋಜನ	ಕ.ವಿ.ಶಾ.ಸಂ. ೭, ನಂ. ೫೦, ಪು.೧೮೭
೧೫.	ಬೇವಿನಹಳ್ಳಿ (ತಾಮ್ರಶಾಸನ)	ಸಿಂಧನೂರು	೧೫೫೧	ಸಂಸತೆರೇಣ ಸಭಾಪತಿಃ ಸ್ವಯಂಭೂ	--	ವೀರಣನ ಮಗ ವೀರಾಣಾರ್ಯ ಲಿಖಿತಾಂಮ್ರ ಶಾಸನಂ	ಕ.ವಿ.ಶಾ.ಸಂ. ೭, ನಂ. ೫೪, ಪು.೪೩೬
೧೬.	ಮುಕ್ಕುಂದಿ	ಸಿಂಧನೂರು	೧೬೪೬	--	--	ವೀರೋಜನ ಮಗ ಬೈರೋಜ ಕೆತ್ತಿದ	ಕ.ವಿ.ಶಾ.ಸಂ. ೭, ನಂ. ೧೯, ಪು.೩೭೬
೧೭.	ಮಟಮಾರಿ	ರಾಯಚೂರು	೧೭೦೦	--	--	ಕುಮಾರ ಬೊಮ್ಮೋಜ	ಚೆನ್ನಬಸವಯ್ಯ ಹಿರೇಮಠ 'ಸತ್ಯದ ಹಾದಿ', ಮಸ್ಕಿ, ಪು. ೭, ಹಾಗೂ ಕ.ವಿ.ಶಾ.ಸಂ. ೭ ನಂ. ೨೯, ಪು. ೭

ಆಧಾರಸೂಚಿ

೧. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ – ೭, ಬಲ್ಲಟಗಿ – ನಂ. ೧೦, ೮೪, ಪುಟ ೩೦೨.
೨. ಕ.ವಿ.ಶಾ.ಸಂ. ೭, ಮಸ್ಕಿ, ಕ್ರಿ.ಶ. ೧೦೧೦, ನಂ. ೩೨, ಪುಟ ೧೬೬.
೩. ಕ.ವಿ.ಶಾ.ಸಂ. ೭, ಮಾಡಶಿರವಾರ, ಕ್ರಿ.ಶ. ೧೦೩೩, ನಂ. ೪೬, ಪುಟ ೪೧೮.
೪. ಕ.ವಿ.ಶಾ.ಸಂ. ೭, ಕಿಲ್ಲಾರಟ್ಟಿ, ಕ್ರಿ.ಶ. ೧೦೪೬, ನಂ. ೧೨೬, ಪುಟ ೨೨೬.
೫. ಕ.ವಿ.ಶಾ.ಸಂ. ೭, ಕ್ಕರಗೋಳ, ಕ್ರಿ.ಶ. ೧೦೭೧, ನಂ. ೪೪, ಪುಟ ೧೭೮.
೬ ಕ.ವಿ.ಶಾ.ಸಂ. ೭, ಗಬ್ಬೂರು, ಕ್ರಿ.ಶ. ೧೦೮೪, ನಂ. ೨೬, ಪುಟ ೯೦.
೭. ಕ.ವಿ.ಶಾ.ಸಂ. ೭, ಒಳಬಳ್ಳಾರಿ, ಕ್ರಿ.ಶ. ೧೧೯೫, ನಂ. ೫೩, ಪುಟ ೪೨೪.
೮. ಕ.ವಿ.ಶಾ.ಸಂ. ೭, ಬಲ್ಲಟಗಿ, ಕ್ರಿ.ಶ. ೧೧ನೇ ಶತಮಾನ, ನಂ. ೮೮, ಪುಟ ೩೦೬.
೯. ಕ.ವಿ.ಶಾ.ಸಂ. ೭, ಬಲ್ಲಟಗಿ, ಕ್ರಿ.ಶ. ೧೧ನೇ ಶತಮಾನ, ನಂ. ೮೯, ಪುಟ ೩೦೬.
೧೦. ಕ.ವಿ.ಶಾ.ಸಂ. ೭, ಬಲ್ಲಟಗಿ, ಕ್ರಿ.ಶ. ೧೧ನೇ ಶತಮಾನ, ನಂ. ೯೩, ಪುಟ ೩೧೧.
೧೧. ಚೆನ್ನಬಸಯ್ಯ ಹಿರೇಮಠ, "ಕುರುಗೋಡುಸಿಂದರು", ಪುಟ ೩೦೬.
೧೨. ಕ.ವಿ.ಶಾ.ಸಂ. ೭, ದೇವರಗುಡಿ, ಕ್ರಿ.ಶ. ೧೧೦೧, ನಂ. ೨೮, ಪುಟ ೩೯೨.
೧೩. ಚೆನ್ನಬಸಯ್ಯ ಹಿರೇಮಠ, 'ಸತ್ಯದ ಹಾದಿ', ಪುಟ ೭.
೧೪. ಕ.ವಿ.ಶಾ.ಸಂ. ೭, ಗಬ್ಬೂರು, ಕ್ರಿ.ಶ. ೧೨೧೩, ನಂ. ೯, ಪುಟ ೬೬.
೧೫. ಕ.ವಿ.ಶಾ.ಸಂ. ೭, ಮುದಗಲ್ಲು ಕೋಟೆ, ಕ್ರಿ.ಶ. ೧೪೩೬, ನಂ. ೫೦, ಪುಟ ೧೮೭.
೧೬. ಕ.ವಿ.ಶಾ.ಸಂ. ೭, ಬೇವಿನಹಳ್ಳಿ ತಾಮ್ರಶಾಸನ, ಕ್ರಿ.ಶ. ೧೫೮೧, ನಂ. ೫೪, ಪುಟ ೪೩೬.
೧೭. ಕ.ವಿ.ಶಾ.ಸಂ. ೭, ಮುಕ್ಕುಂದಿ, ಕ್ರಿ.ಶ. ೧೬೪೬, ನಂ. ೧೯, ಪುಟ ೩೭೬.
೧೮. ಕ.ವಿ.ಶಾ.ಸಂ. ೭, ಮಟಮಾರಿ, ಕ್ರಿ.ಶ. ೧೭ನೇ ಶತಮಾನ, ನಂ. ೭, ಪುಟ ೭ ಮತ್ತು ಚೆನ್ನಬಸಯ್ಯ ಹಿರೇಮಠ, "ಸತ್ಯದ ಹಾದಿ", ಮಸ್ಕಿ, ೨೦೦೮, ಪುಟ ೭.

ಡಾ. ಎಸ್.ಕೆ. ಜೋಶಿ*

ಕರ್ನಾಟಕ ರಾಜವಂಶಗಳ ಶಿರೋನಾಮಗಳ ವ್ಯುತ್ಪತ್ತಿ

ಕರ್ನಾಟಕವು ೨೦೦೦ ವರುಷಗಳಿಗಿಂತ ಹೆಚ್ಚು ಆಳವಾದ ಇತಿಹಾಸ ಹೊಂದಿದೆ. ಈ ನೆಲದಲ್ಲಿ ಪ್ರಮತ್ತ ರಾಜಮನೆತನಗಳು ಆಳಿವೆ. ಪ್ರಭೃತಿಗಳಾದ ರಾಜರುಗಳು ಪ್ರತಿಷ್ಠಿತ ರಾಜ್ಯಗಳನ್ನು ಸ್ಥಾಪಿಸಿ, ಅವುಗಳಿಗೆ ರಾಜಮನೆತನದ ನಾಮಕರಣಗಳನ್ನೂ ನೀಡಿದ್ದಾರೆ, ಅಥವಾ ಅವು ತಾವೇ ಹೊಂದಿವೆ. ಆ ರಾಜಮನೆತನಗಳ **ಹೆಸರುಗಳ 'ವ್ಯುತ್ಪತ್ತಿ'** ಯನ್ನು ಅಭ್ಯಾಸ ಮಾಡುವುದು ಅವಶ್ಯವಾಗಿದೆ. ಈವರೆಗೆ ಇತಿಹಾಸಕಾರರು ಆಯಾ ರಾಜಮನೆತನಗಳ ಆಗುಹೋಗುಗಳ ಇತಿಹಾಸ ಬರೆದಿದ್ದಾರೆ, ಸಂಶೋಧಿಸಿದ್ದಾರೆ. ಆದರೆ ಆಯಾ ಮನೆತನಗಳ ಹೆಸರುಗಳ ಹುಟ್ಟಿನ ಬಗ್ಗೆ ಬಹಳಷ್ಟು ಮೌನ ತಾಳಿದ್ದಾರೆ. ಕನ್ನಡ ನಾಡಿನಲ್ಲಿ ಆಳಿದ ರಾಜಮನೆತನಗಳಾದರೋ : ಮೌರ್ಯರು, ಶಾತವಾಹನರು, ಚುಟುಗಳು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಚೋಳರು, ಗಂಗರು, ಹೊಯ್ಸಳರು, ಕಲ್ಯಾಣ ಚಾಲುಕ್ಯರು, ಯಾದವರು (ಸೇವುಣರು), ವಿಜಯನಗರ ಅರಸರು– ಸಂಗಮ, ಸಾಳ್ವ, ತುಳುವ ಹಾಗೂ ಅರವೀಡು.

ಈ ಎಲ್ಲ ರಾಜಮನೆತನಗಳ ನಾಮಗಳ ಶಬ್ದೋತ್ಪತ್ತಿ, ವ್ಯಾಕರಣ, ಅರ್ಥ, ಪರಿಸರ ಪ್ರಭಾವ, ನಾಮಕರಣಕ್ಕೆ ಐತಿಹಾಸಿಕ ಕಾರಣ, ಇತ್ಯಾದಿಗಳ ಬಗ್ಗೆ ಈ ಪ್ರಬಂಧದಲ್ಲಿ ಅವಲೋಕನ ಮಾಡಲಾಗಿದೆ.

ಮೌರ್ಯರು : ಮೌರ್ಯ ಸಾಮ್ರಾಜ್ಯದ ಸಂಸ್ಥಾಪಕ ಚಂದ್ರಗುಪ್ತ. ಚಂದ್ರಗುಪ್ತನ ಹಾಗೂ ತದನಂತರದ ಮೌರ್ಯ ಅರಸರುಗಳ ರಾಜ್ಯಾರೋಹಣ ಇಂತಿವೆ : ಚಂದ್ರಗುಪ್ತ ಮೌರ್ಯ ಕ್ರಿ.ಪೂ. ೩೨೨ ಅವನ ಮಗ ಬಿಂದುಸಾರ ಕ್ರಿ.ಪೂ. ೨೯೮ ಹಾಗೂ ಅಶೋಕ ಮೌರ್ಯ ೨೭೦–೨೩೯. (ಡಾ॥ ನೀಲಕಂಠಶಾಸ್ತ್ರಿ *Adv. Hist of India,* P. 95).

ಚಾಣಕ್ಯನು – ಚಂದ್ರಗುಪ್ತ ಮೌರ್ಯನ ಗುರು ಹಾಗೂ 'ಅರ್ಥಶಾಸ್ತ್ರ' ಕೃತಿಕಾರ ಪಾಟಲೀಪುತ್ರ ಅಂದರೆ 'ಪಾಟನಾ'ದಲ್ಲಿ ಮಗಧ ಸಾಮ್ರಾಜ್ಯದ ಸಾಮ್ರಾಟನನ್ನಾಗಿ ಚಂದ್ರಗುಪ್ತನಿಗೆ ರಾಜ್ಯಾಭಿಷೇಕ ಮಾಡಿ, 'ಮೌರ್ಯ' ಸಾಮ್ರಾಜ್ಯವೆಂದು ನಾಮಕರಣ ಮಾಡಿದನು. ಅದು ಮುಂದೆ ಅಶೋಕ ಮೌರ್ಯನ ಕಾಲದಲ್ಲಿ ಕಾಬೂಲಿನಿಂದ ಸಿಲೋನ್‌ವರೆಗೆ. ಅತ್ಯಂತ ವಿಸ್ತಾರ ಹೊಂದಿತು. ಹಾಗಾದರೆ. ಈ 'ಮೌರ್ಯ' ಹೆಸರು ಹೇಗೆ ಬಂತು ?

ರಾಷ್ಟ್ರವ್ಯಾಪೀ 'ಮಯೂರ ಪಕ್ಷಿ' ಈ ದೇಶದ ರಾಷ್ಟ್ರೀಯ ಪಕ್ಷಿ, ಇದನ್ನು ಮೌರ್ಯ ಸಾಮ್ರಾಜ್ಯದ ಲಾಂಛನವನ್ನಾಗಿ ಮಾಡಿದ ಆಗಿನ ರಾಜನೀತಿಜ್ಞ ಚಾಣಕ್ಯ. ಮಯೂರ ನಮ್ಮ ಹಾಗೂ ನಿಮ್ಮೆಲ್ಲರ ದೃಷ್ಟಿಯಂತೆ ಬಲು ಸುಂದರ ಪಕ್ಷಿ, ಅದರ ನಡಿಗೆ ಡೌಲು, ನಿಲುವು ಡೌಲು, ಕುಣಿತ ಡೌಲು, ನಿಸ್ಸೀಮ ಜಾಣತನದ್ದು. ಅದು ಭಾರತೀಯ ದೇವತೆಯಾದ ಸರಸ್ವತಿಯ ವಾಹನ. ಹಾಗಾಗಿ, ಚಂದ್ರಗುಪ್ತ ಹಾಗೂ ಕೌಟಿಲ್ಯರು ಈ ಪಕ್ಷಿಯ ಹೆಸರನ್ನೇ ಆರಿಸಿ 'ಮಯೂರ ಸಾಮ್ರಾಜ್ಯ' 'ಮೌರ್ಯ ಸಾಮ್ರಾಜ್ಯ' ಎಂದು ನಾಮಕರಣ ಮಾಡಿರಲು ಸಾಕು. ಅವರ ಮಯೂರ ಸಿಂಹಾಸನ ಕೂಡ ರಾಜ್ಯದ ಘನತೆಯ ರಾಜ್ಯಪೀಠ, ಅರಸರು ಕುಳಿತುಕೊಳ್ಳುವ ಆಸನ, ಹೀಗೆ ಕೆಲ ಇತಿಹಾಸಕಾರರ ಚಿಂತನೆ. *(Smith V.a. Early Hist. of India,* Oxford, 1924. ಡಾ. ಆರ್. ಎಸ್. ಪಂಚಮುಖಿ, **ಕರ್ನಾಟಕದ ಇತಿಹಾಸ,** ೧೯೬೭).

ಅಶೋಕನ 'ಪ್ರಸ್ತರ ಲೇಖ', 'ಸ್ತಂಭಲೇಖ', 'ಬ್ರಹದ್ ಪ್ರಸ್ತರ ಲೇಖ', 'ಲಘು ಪ್ರಸ್ತರಲೇಖ', ಹಾಗೂ ಗುಹಾಲೇಖನಗಳು; ರೂಪನಾಥ, ಗುಜರ್ರಾ (ಮ. ಪ್ರದೇಶ), ಸಾಸಾರಾಮ (ಬೀಹಾರ), ಬೈರಾಟ (ರಾಜಸ್ಥಾನ), ಮಸ್ಕಿ, ಗವೀಮಠ ಪಾಲ್ಕಿಗುಂಡು, ಬ್ರಹ್ಮಗಿರಿ, ಸಿದ್ದಾಪೂರ, ಜಟಿಂಗರಾಮೇಶ್ವರ, ನಿಟ್ಟೂರು, ಉದೇಗೊಳಂ (ಎಲ್ಲವೂ ಕರ್ನಾಟಕ), ಎರ್ರಗುಡಿ, ರಾಜಮಂಡಲಗಿರಿ (ಆಂಧ್ರ)ಗಳಲ್ಲಿ ಹರಡಿಕೊಂಡಿದ್ದರೂ ತನ್ನ ಹೆಸರನ್ನು ಅಶೋಕ ಮೌರ್ಯ ಎಂದು ಎಲ್ಲಿಯೂ ಬರೆಸಿಲ್ಲ. 'ದೇವಾನಂ ಪಿಯಸ/ಅಸೋಕಸ', 'ದೇವಾಣಂ ಪಿಯ ಆಹ...' ಎಂತಾಗಿ ಅಶೋಕ ಮೌರ್ಯನ ಹೆಸರು ಕೆತ್ತಲಾಗಿದೆ.

ಸಾತವಾಹನರು (ಕ್ರಿಪೂ. ೧–೩ನೇ ಶತಕ) : ಆಂಧ್ರ ಪದವು ದೇಶವಾಚಕವಲ್ಲ, ವಂಶವಾಚಕ, ಕುಲವಾಚಕ, ಪಂಗಡವಾಚಕ, ಆಂಧ್ರ ಸಾತವಾಹನರ ಮೂಲ ಪುರುಷ ಸಿಮುಕ, ಸಾತವಾಹನನೆಂದು ನಾನಾಘಾಟ್ ಗುಹಾಲಿಪಿ

* ಪುರಾತತ್ವವಿದ, ಸಿಲ್ವರ್ ಆರ್ಚರ್ಡ್, ಧಾರವಾಡ.

ಯಲ್ಲಿದೆ. ಆಂಧ್ರರು ಜಾತೀಯರೆಂದು ಗಣಿಸಿದ್ದಾದರೆ, ಸಾತವಾಹನ ಪದವಾದರೂ ಜಾತಿವಾಚಕವೆ. ನಾಸಿಕದ ಒಂದು ಶಾಸನದಲ್ಲಿ 'ಸಾದವಾಹನ ಕುಲೇ ಕನ್ನೇ ರಾಜನಿ...' ಸಾತವಾಹನ ಕುಲದಲ್ಲಿ ಕೃಷ್ಣನು ರಾಜನಾಗಿದ್ದಾಗ...' ಎಂದು ಸ್ಪಷ್ಟವಾಗಿ ಸಾತವಾಹನವು ಕುಲದ ಹೆಸರೆಂದು ತಿಳಿದು ಬಂದಿದೆ. (ಆರ್.ಎಸ್. ಪಂಚಮುಖಿ, **ಕರ್ನಾಟಕದ ಇತಿಹಾಸ,** P-98-99).

ಸಾತವಾಹನರು ಸತಕರ್ಣಿಗಳು (ಡಾ॥ ಆರ್.ಎಸ್. ಪಂಚಮುಖಿ, **ಕರ್ನಾಟಕ ಇತಿಹಾಸ,** P. 90-91), ಪ್ರತಿಷ್ಠಾನ, ಗೋವರ್ಧನ, ನಾಸಿಕ, ವೈಜಯಂತೀ ನಗರಗಳನ್ನು (ಬನವಾಸಿ) ರಾಜಧಾನಿಗಳನ್ನಾಗಿ ಮಾಡಿಕೊಂಡು ಬಹು ವಿಸ್ತಾರವಾದ ಪ್ರದೇಶವನ್ನು ಆಳುತ್ತಿದ್ದರು. ಗೋದಾವರಿಯಿಂದ ಕೃಷ್ಣೆಯ ದಕ್ಷಿಣ ಪ್ರದೇಶವೆಲ್ಲ ಅವರ ರಾಜ್ಯವಿಸ್ತಾರ. ಸಾತವಾಹನರ ಮೂಲಪುರುಷನು ಸಿಮುಕ ಸಾತವಾಹನ ರಾಜನೆಂದು ಕೊಂಡಾಪೂರ ಹಾಗೂ ವರಂಗಲ್ ಉತ್ಖನನದಲ್ಲಿ ದೊರೆತ ನಾಣ್ಯಗಳು ಸಾರುತ್ತವೆ. ಕೃಷ್ಣಾ, ಗುಂಟೂರು, ಜಿಲ್ಲೆಗಳೂ ಧಾನ್ಯಕಟಕ ಅಮರಾವತಿ, ಪೂರ್ವ ಕರಾವಳಿ, ಅವರ ಆಡಳಿತ ಭಾಗಗಳಾಗಿದ್ದವು. ಈ ವಿಸ್ತಾರವಾದ ಪ್ರದೇಶದ ಅವರ ಹರವನ್ನು ನೋಡಿದರೆ ಅವರು ದಕ್ಷಿಣಾಪಥದ ಅಧಿಪತಿಗಳೆಂದು ಗೊತ್ತಾಗುತ್ತವೆ. ಏಕಮೇವ ರಾಜ್ಯ ಆಳಿದರೆಂದು ತಿಳಿದುಬರುತ್ತದೆ. ಹಾಗಾಗಿ ಮೂಲಪುರುಷ ಸಾತವಾಹನ ರಾಜನ ಹೆಸರಿನಿಂದ 'ಸಾತವಾಹನ' ಎಂಬ ಹೆಸರು ಬಂದಿದೆ ಎಂದು ಕೆಲ ವಿದ್ವಾಂಸರ ಹೇಳಿಕೆ. 'ಶಹಮೃಗ' (ಒಂದು ದೊಡ್ಡ ಪಕ್ಷಿ) ಯನ್ನು ತಮ್ಮ ವಾಹನವನ್ನಾಗಿ ಉಪಯೋಗಿಸುತ್ತಿದ್ದರೆಂದು, ಅದು ಅವರ ವಾಹನವಾಗಿದ್ದರಿಂದ 'ಶಹವಾಹನ' 'ಸಾತವಾಹನ' ಆಗಿರಲು ಸಾಕು.


ಅಥವಾ ಸಾತವಾಹನ ಶಬ್ದದ, ಇಲ್ಲವೆ ಶಾತವಾಹನ ಶಬ್ದದ ಇನ್ನು 'ಸಾಲಿವಾಹನ' ಶಬ್ದದ/ವಿವಿಧಾರ್ಥಗಳನ್ನು 'ಶಬ್ದಮಣಿ ದರ್ಪಣ'ದ ಮೂಲಕ ನೋಡಿದಾಗ್ಗೆ, ಕನ್ನಡ ರತ್ನಕೋಶದ ಮೂಲಕ ಅರಸಿದಾಗ, ಈ ಅರ್ಥಗಳು ಹೊರಡುವವು.

ಶಾಲ = ಕೋಟೆಯ ಗೋಡೆ, ಒಂದು ಜಾತಿಯ ಮರ ; ಶಾಲಿ = ಭತ್ತ, ಭತ್ತದ ಹೊಲ, ಪಾಯಸ (ಅಕ್ಕಿ + ಹಾಲು) ; ಶಾಲಿಹೋತ್ರ = ಕುದುರೆ, ಸಾಮಜ = ಆನೆ) ; ಸಲೆ = ಕ್ಷೇತ್ರ ವಿಸ್ತಾರ, ಪ್ರಾದೇಶಿಕ ವ್ಯಾಪ್ತಿ ; ಸಾತ = ಬೆಳ್ಗೊಡೆ = ಬಿಳಿಕೊಡೆ, ರಾಜರು ಉಪಯೋಗಿಸವದು ; ಸಿತ = ಬಿಳಿಯಕೊಡೆ, ಸ್ವೇತಭತ್ರ, ಕೇವಲ ರಾಜರಿಗೆ ಮಾತ್ರ ಈ ಎಲ್ಲ ಶಬ್ದಗಳನ್ನು ಸಂಮೀಕ್ಷಿಸಿ ದಾಗ, ಸಾಲಿವಾಹನರು ಸಾತವಾಹನರು ಸಾಮ್ರಾಜ್ಯ ಕಟ್ಟುವ ಮಹತ್ವಾಕಾಂಕ್ಷೆಯಲ್ಲಿ ಕುದುರೆ – ಆನೆಗಳನ್ನು ವಾಹನಗಳನ್ನಾಗಿ ಬಳಸಿದರೆಂದೂ, ಕ್ಷೇತ್ರ ವಿಸ್ತಾರದಲ್ಲಿ ರಕ್ಷಣೆಗಾಗಿ ಕೋಟೆಗಳನ್ನು ಕಟ್ಟಿಸಿದರೆಂದೂ, ರಾಜನಿಗೇ ಮಾತ್ರ ವೈಭವವನ್ನು ನೀಡುವ ಸ್ವೇತಛತ್ರ – ಬೆಳ್ಗೊಡೆಯನ್ನು ಉಪಯೋಗಿಸುತ್ತಿದ್ದರೆಂದೂ, ಇವರಾಳಿದ ಪ್ರಾದೇಶಿಕ ವ್ಯಾಪ್ತಿಯಲ್ಲಿ ಭತ್ತದ ಹೊಲಗಳಿದ್ದವೆಂದೂ, ಖಾದ್ಯದಲ್ಲಿ ಪಾಯಸ ಪ್ರಿಯರೆಂದೂ, ಅರ್ಥೈಸುತ್ತವೆ.

ಚುಟುಕುಲಾನಂದರು : ಸಾತವಾಹನ (ಆಂಧ್ರ)ರ ಮಾಂಡಲಿಕರಾಗಿ, ಚುಟುಕುಲದ ಸಾತಕರ್ಣಿಗಳು ದಕ್ಷಿಣದಲ್ಲಿ ಆಳುತ್ತಿದ್ದರು. ಈ ಮನೆತನದ ನಾಣ್ಯಗಳೂ, ಶಾಸನಗಳೂ ಕಾನ್ಹೇರಿ (ಕಾಣ್ಹೇರಿ = ಕೃಷ್ಣಗಿರಿ, ಠಾಣಾ ಜಿಲ್ಲೆ), ಮಳವಳ್ಳಿ (ಶಿವಮೊಗ್ಗ ಜಿಲ್ಲೆ), ಬನವಾಸಿ (ಕಾರವಾರ ಜಿಲ್ಲೆ)ಗಳಲ್ಲಿ ದೊರೆತಿವೆ. ಇವುಗಳಲ್ಲದೆ ಸಾವಿರಾರು ಚುಟುಕುಲದ ಅರಸರ ನಾಣ್ಯಗಳಿಂದ, ಈ ಕೆಳಗಿನ ರಾಜವಂಶಾವಳಿ ಸಿದ್ಧವಾಗುತ್ತದೆ (ಡಾ॥ ಆರ್.ಎಸ್. ಪಂಚಮುಖಿ, **ಕರ್ನಾಟಕ ಇತಿಹಾಸ,** PP. 98-99).

ವೈಜಯಂತಿ ಪತಿರಾಜಾ ಮಾನವ್ಯಸಗೋತ್ರ ಹಾರಿತೀಪುತ್ರ ಚುಟುಕುಲಾನನ್ದ ಸಾತಕರ್ಣಿ :

ಮಾನವ್ಯಸಗೋತ್ರ ಹಾರಿತೀ ಪುತ್ರ ಚುಟುಕುಲಾನನ್ದ ಸಾತಕರ್ಣಿಗಳು ಬನವಾಸಿ. ಮಳವಳ್ಳಿ, ಕಾಣ್ಹೇರಿಗಳಲ್ಲಿ (ಠಾಣಾ



ಜಿಲ್ಲೆ), ವೈಜಯಂತೀ (ಬನವಾಸಿ) ರಾಜಧಾನಿಯಿಂದ ಆಳುತ್ತಿದ್ದರು. ಇವರಿಗೂ ಮೂಲ ಮನೆತನದ ಸಾತಕರ್ಣಿಗಳಿಗೂ ಯಾವ ಸಂಬಂಧವಿತ್ತೆಂಬುದು ಗೊತ್ತಾಗುವುದಿಲ್ಲ. ಇಬ್ಬರೂ ಸಾತಕರ್ಣಿಗಳೆಂದು ಹೆಸರಾಗಿದ್ದಾರೆ. (ಶತ + ಕರ್ಣಿಕರು) ನೂರು ಕರ್ಣಿಕರ ಶ್ರೇಷ್ಠ ಸ್ಥಾನ ಇಲ್ಲಿ ಚುಟು– ಚಿಕ್ಕ ಎಂಬ ಅರ್ಥದಲ್ಲಿ (ಪ್ರಯೋಗವಿದೆ ಎಂಬ ಅಂಶವನ್ನು ಗಣಿಸಿ. ಕೆಲವು ವಿದ್ವಾಂಸರು ಪ್ರತಿಷ್ಠಾನದ (ಪ್ರತಿಷ್ಠಾನಪುರ ಪೈಠಣ ಗೋದಾವರಿ ದಂಡೆ) ಆಂಧ್ರ ಸಾತಕರ್ಣಿಗಳು ಹಿರಿಯ ಮನೆತನದವರು ; ಬನವಾಸಿ ಸಾತಕರ್ಣಿಗಳು ಚಿಕ್ಕ ಮನೆತನದವರು ಎಂದು ಭಾವಿಸಿದ್ದಾರೆ (ಡಿ.ಸಿ. ಸರ್ಕಾರ:

Successors of the Satavahanas and ಬಿ.ವ್ಹಿ. ಕೃಷ್ಣರಾಯರು : *Early Dynasties of Andhra Desa)*. ಆಂಧ್ರ ಭೃತ್ಯ (ಭೃತ್ಯ = ಸೇವಕ) ಪದವು ಚುಟುಕುಲರಿಗೆ ಅನ್ವಯಿಸುತ್ತದೆ. ಆಂಧ್ರ ಸಾತವಾಹನರ ಕೆಳಗಿನ, ಸೇವಭಾವದ, ನಮ್ರರಾದ ಅರಸರು ಚುಟುಗಳಾಗಿದ್ದರೆಂದು ಸೂಚಿಸುತ್ತದೆ. (ಬಿ.ವ್ಹಿ.ಕೃ.).

ಕದಂಬರು : ತಾಳಗುಂದ ಶಾಸನ (೬ನೆಯ ಶತಮಾನ) ಹೇಳುವಂತೆ ಮಯೂರಶರ್ಮ ಕದಂಬ ಸಾಮ್ರಾಜ್ಯ ಸ್ಥಾಪಿಸಿದನು. 'ಮಾನವ್ಯಗೋತ್ರಣಾಂ' ಹಾರೀತೀ ಪುತ್ರಾಣಂ... ಸದ್ಧರ್ಮಸದಂಬಾನಾಂ ಕದಂಬಾನಾಂ' ಎಂದು ಕದಂಬರ ವರ್ಣನೆ ಇದೆ. 'ಕದಂಬ' ಬ್ರಾಹ್ಮಣರನ್ನು ಉತ್ತರ ಹಿಂದಿಸ್ಥಾನದ ಅಹಿಚ್ಛತ್ರದಿಂದ ಕರ್ನಾಟಕಕ್ಕೆ ಅಲೋಚನ ಕದಂಬನೆಂಬ ಮೂಲ ಪುರುಷನು ಕರೆತಂದನೆಂದು ೧೧–೧೨ ಶತಮಾನಗಳ ಲಿಪಿಗಳಲ್ಲಿ ಹೇಳಿದೆ.

ಕದಂಬರು ಮೂಲದಿಂದ ಕರ್ನಾಟಕದ ಮೂಲ ನಿವಾಸಿಗಳೆಂದು ತಿಳಿಸಿದೆ ; ಕ್ರಿ.ಶ. ೫ ನೇ ಶತಮಾನದ ತಾಳಗುಂದ ಶಾಸನದಲ್ಲಿ ಇವರ ಮನೆಯ ಸಮೀಪ 'ಕದಂಬ ವೃಕ್ಷ'ವನ್ನು ಬೆಳೆಸಿದ್ದರಿಂದ ಇವರಿಗೆ 'ಕದಂಬ'ರೆಂದು ಹೆಸರು ಬಂದಿತು. ತಮಿಳರ ಶಾಸನ ಸಾಹಿತ್ಯದಲ್ಲಿ ಕದಂಬರ ಉಲ್ಲೇಖವಿದೆ.

'ಪುರನಾನೂರು' ಎಂಬ ತಮಿಳಗ್ರಂಥ ಕದಂಬರ ಉಲ್ಲೇಖ ಮಾಡುತ್ತ, 'ಕದಂಬರು ಹಡಗು ಪಡೆ'ಯಲ್ಲಿ ಬಲಿಷ್ಠರೆಂದೂ, 'ಕಡಲ್ ಕಡಂಬರು' – ಸಮುದ್ರದ ಕದಂಬರು– ಸೆಂಗುಟ್ಟುವನ್ ಚೇರನ್‌ನನ್ನೂ ಅವರ ಪೂರ್ವಜರನ್ನೂ ಸಮುದ್ರ ಯುದ್ಧದಲ್ಲಿ ಕಾಡಿಸಿದರೆಂದು ತಮಿಳು 'ಸಂಗಂ'ದ 'ಶಿಲಪ್ಪದಿಗಾರಂ' ಹಾಗೂ 'ಪದಿಟ್ರುಪತ್ತು' ಗ್ರಂಥಗಳಲ್ಲಿ ಉಲ್ಲೇಖಗೊಳ್ಳಲಾಗಿದೆ. (ಡಾ॥ ಆರ್.ಎಸ್. ಪಂಚಮುಖಿ, **ಕರ್ನಾಟಕ ಇತಿಹಾಸ,** P. 109).

ಕದಂಬರು ರಾಜಕೀಯ ಕ್ಷೇತ್ರಕ್ಕೆ ಬರುವ ಪೂರ್ವದಲ್ಲಿ ವೇದಾಧ್ಯಯದ ತಪಸ್ವಿ, ಬ್ರಾಹ್ಮಣರಾಗಿದ್ದರೆಂದೂ ತಮ್ಮ ಹೆಸರಿನ ಮುಂದೆ 'ಶರ್ಮ' ಎಂಬ ಬ್ರಾಹ್ಮಣ್ಯ ಸೂಚಕ ಪದವನ್ನು ಉಪಯೋಗಿಸುತ್ತಿದ್ದರು. ಕದಂಬ ಮನೆತನದ ಉತ್ಪತ್ತಿ ಮತ್ತು ವಿಸ್ತಾರಗಳನ್ನು ಕುರಿತು ನಮಗೆ ಶಾಸನಗಳಲ್ಲದೆ ಬೇರೆ ಪ್ರಮಾಣಗಳಿಲ್ಲ. *(Prof. G.S. Mories, Kadamba Kula)*.

"ಮೂಲತಃ ಬ್ರಾಹ್ಮಣನಾದ ಮಯೂರಶರ್ಮನು, ತಾಳಗುಂದ ಅಗ್ರಹಾರದ ಯುವಬ್ರಾಹ್ಮಣ ಕ್ಷಾತ್ರವೃತ್ತಿಯನ್ನು ಅವಲಂಬಿಸಿ ರಾಜ್ಯ ಸ್ಥಾಪಕನಾದ ಮೇಲೆ, ಅವನ ವಂಶಜರೆಲ್ಲ ರಾಜ ಪರಂಪರೆಯಲ್ಲಿಯೇ ಬೆಳೆದು, ಬ್ರಾಹ್ಮಣ ವೃತ್ತಿಯನ್ನು ಬಿಟ್ಟುಬಿಟ್ಟರು. ಏಳು ತಲೆಮಾರುಗಳವರೆಗೆ ಸತತವಾಗಿ ನಡೆದು ಬಂದ ವೃತ್ತಿಯೇ ಸಾಮಾಜಿಕವಾಗುವುದೆಂದು ಧರ್ಮಶಾಸ್ತ್ರಗಳು ಹೇಳುತ್ತವೆ. ಆದ್ದರಿಂದ ಮುಂದೆ ಬಂದ ೧೧–೧೨ನೇ ಶತಕದ ಕದಂಬರು ಕೇವಲ ಕ್ಷತ್ರಿಯರಾಗಿದ್ದು ಮನೆತನದ ಮೂಲವನ್ನು 'ಬ್ರಾಹ್ಮಣ–ಕ್ಷತ್ರಿಯ' ಉಭಯ ಸಂಪ್ರದಾಯ ಸೇರಿಸಿ, ಹೆಸರಿನ ಮುಂದೆ. 'ವರ್ಮ' ಕ್ಷಾತ್ರ ಸೂಚಕ ಪದವನ್ನು ಇಟ್ಟುಕೊಂಡು ತಮ್ಮ ಮನೆತನದ ಗೌರವವನ್ನು ಹೆಚ್ಚಿಸಿದರು. (ಡಾ॥ ಆರ್.ಎಸ್. ಪಂಚಮುಖಿ, ಪುಟ ೧೨೮).

ಚಾಲುಕ್ಯರು (ಕ್ರಿ.ಶ. ೪೫೦–೭೩೫) : ಕರ್ನಾಟಕದ ಇತಿಹಾಸದಲ್ಲಿ ಬಾದಾಮಿ 'ಚಾಲುಕ್ಯ'ರ (ಚಲುಕ್ಯ) ಕಾಲವು 'ಸುವರ್ಣಯುಗ' ಎಂದು ಗುರುತಿಸಲಾಗಿದೆ. ಕ್ರಿ.ಶ. ೪೫೦– ೬೫೦ರ ಕಾಲಘಟ್ಟದಲ್ಲಿ ಸಂಸ್ಕೃತಿಯ ಹೆಮ್ಮರವಾಗಿ ಅವರು ಬೆಳೆದಿದ್ದಾರೆ. ಇಲ್ಲಿ ಆ ಸಾಮ್ರಾಟರ ಮನೆತನದ ಹೆಸರು 'ಚಾಲುಕ್ಯ' 'ಚಲುಕ್ಯ' ಇತ್ಯಾದಿಗಳು ಸಂಶೋಧನೆಯಲ್ಲಿ ಅನಾವರಣಗೊಂಡುದು ಹೇಗೆ ಎಂಬುದನ್ನು ನೋಡಲಾಗಿದೆ.

ಚಾಲುಕ್ಯ ಶಬ್ದದ ನಿರ್ವಚನ ಹಾಗೂ ಪುನರ್ವ್ಯಾಖ್ಯೆಗೆ ಅವಕಾಶವಿದೆ (ಡಾ. ಹಂಪ. ನಾಗರಾಜಯ್ಯ) ಚಾಲುಕ್ಯ ಎಂಬ ಶಬ್ದರೂಪಕ್ಕೆ ಕೆಲವು ಪ್ರಾಚೀನ ಶಾಸನ ಪ್ರಯೋಗಗಳಿವೆ.

೧. ಚಲ್ಕ್ಯ : ಬಾದಾಮಿ ಶಾಸನ ಕ್ರಿ.ಶ. ೫೭೮,
೨. ಚಳಿಕ್ಯ : ಮಹಾಕೂಟ ಸ್ತಂಭ ಶಾಸನ, ಕ್ರಿ.ಶ. ೬೦೨,
೩. ಚಲಿಕ್ಯ : ಮಂಗಳೇಶನ ಶಾಸನ ಕ್ರಿ.ಶ. ೬ನೆಯ ಶತಮಾನ,
೪. ಚಲುಕ್ಯ : ಪುಲಿಕೇಶ II, ಐಹೊಳೆ ಶಾಸನ ಕ್ರಿ.ಶ. ೬೩೪,
೫. ಚಳುಕಿ : SILXVII 37 ಅತೇದಿ, ಸಳುಕಿ : SII XI 14 ಕ್ರಿ.ಶ. ೮೭೨. (ಬಾದಾಮಿ ಚಾಲುಕ್ಯ ಸಂಪದ, P. 34, ೩೫ ಸಂ. (ಡಾ. ಶಿಲಾಕಾಂತ ಪತ್ತಾರ)

ಸಲಿಕೆ (ತ್ಭ) ಸಲಾಕೆ, ಶಲಾಕೆ (ಸಂಸ್ಕೃತ) ಕಬ್ಬಿಣದ ಸರಳು, ಕೃಷಿ ಉಪಕರಣ. 'ಚಳುಕ್ಯ' 'ಸಳುಕಿ' ಎಂಬ ಮೂಲ ಶಬ್ದಕ್ಕೆ ಜ್ಞಾತಿ ಶಬ್ದಗಳೆಂದು ಹೆಸರು (Cognate Words). ಇದರಿಂದ ಪ್ರತೀತವಾಗುವುದೇನೆಂದರೆ ಚಾಳುಕ್ಯ ವಂಶದ ಮೂಲ ಪುರುಷರು ಒಕ್ಕಲು ಮಕ್ಕಳಾಗಿದ್ದರು, ಕೃಷಿಕ ಕುಟುಂಬದವರು. (ಪ್ರೊ. ಎಸ್.ಎಸ್. ಬಸವನಾಳ).

ಪೊಲಕೇಶಿನ್ (ಲಕ್ಷ್ಮೇಶ್ವರ ಶಾಸನ) (ಆಲೂರ ಶಾಸನ), ಪೊಲ + ಕೇಶಿನ್ (ಹೊಲ + ಮಾಡುವವನು), ಮೂಲ ದ್ರಾವಿಡಕ್ಕೂ ಹಾಗೂ ಹಳೆಗನ್ನಡಕ್ಕೂ ಸೇರಿದ ಶಬ್ದಗಳು. ಪೊಲ+ಚೇಸಿನ್ (ತೆಲುಗು) ಹೊಲ+ಮಾಡಿದವ ಎಂದೂ

ಅರ್ಥ. ಹೀಗಾಗಿ, 'ಪೊಲಕೇಶಿನ್'ವು ಒಕ್ಕಲುತನಕ್ಕೆ ಸೇರಿದ್ದು, 'ನೆಲದೊಡೆಯ' ನೆಲದ ಕೆಲಸ ಮಾಡುವವ ಎಂಬ ಅರ್ಥವನ್ನು ಕೊಡುತ್ತದೆ. ಅದಾಗಿ 'ಚಾಳುಕ್ಯ'ರದು ಕೃಷಿಕ ಕುಟುಂಬ. ಮಹತ್ವಾಕಾಂಕ್ಷೆಯ ಅವರು ಸಾಮ್ರಾಜ್ಯ ಕಟ್ಟುವಷ್ಟು ಬಲಿಷ್ಠರಾದರು (ಡಾ. ಎಚ್.ಎಸ್. ಗೋಪಾಲರಾವ್).

ಬಿಲ್ಹಣನು (೧೧ನೇ ಶತಮಾನದ ಉತ್ತರಾರ್ಧ) ಕಲ್ಯಾಣ ಚಾಲುಕ್ಯ ದೊರೆ ೬ನೆಯ ವಿಕ್ರಮಾದಿತ್ಯನ ಕಾಲದಲ್ಲಿ, ವಿಕ್ರಮಾಂಕದೇವಚರಿತದಲ್ಲಿ (ಸರ್ಗ ಪದ್ಯಗಳು ೩೦–೬೭) ಹೀಗೆ ಹೇಳುತ್ತಾನೆ. 'ಬ್ರಹ್ಮನು ಸಂಧ್ಯಾವಂದನೆ ಸಮಯದಲ್ಲಿ ಬೊಗಸೆಯಲ್ಲಿಂದ ಚಾಲುಕ್ಯನೆಂಬ ಮೂಲ ಪುರುಷನು ಹುಟ್ಟಿದನು. ಆತನ ಮನೆತನವೇ 'ಚಾಲುಕ್ಯ' ಮನೆತನ'.

ಚುಳಕ=ಬೊಗಸೆ, ಬೊಗಸೆಯಲ್ಲಿ ಅಗಸ್ತ್ಯ ಋಷಿಯು ಅರ್ಘ್ಯ ಕೊಡುವಾಗ ಹುಟ್ಟಿದವರು, ಎಂದೂ ಅರ್ಥೈಸಲಾಗಿದೆ. ಹೀಗೆ 'ಚಾಲುಕ್ಯ' 'ಚಲುಕ್ಯ' 'ಚಾಳುಕ್ಯ' ಶಬ್ದವ್ಯಾಖ್ಯೆಗಳು ಹಲವಾರು ಇವೆ. (ವಿಕ್ರಮಾಂಕದೇವಚರಿತ, ಸರ್ಗ ೧, ಪದ್ಯ ೩೦–೬೭).

ರಣರಾಗನ ಮಗನಾದ ಪುಲಕೇಶಿವಲ್ಲಭನು ಅಶ್ವಮೇಧಯಾಗವನ್ನು ಮಾಡಿ, ವಾತಾಪಿಯಲ್ಲಿ ಕ್ರಿ.ಶ. ೫೪೩ರಲ್ಲಿ, ಅಭೇದ್ಯವಾದ ಕೋಟೆ ಕಟ್ಟಿ ರಾಜ್ಯ ಭದ್ರಪಡಿಸಿದನು. ಶ್ರೀ ಆರ್.ಎಸ್. ಪಂಚಮುಖಿ ಅವರು ೧೯೪೫ರಲ್ಲಿ ಆ ಬಂಡೆಗಲ್ಲು ಶಾಸನವನ್ನು ಹುಡುಕಿದುದು, ಅವರಿಗೆ ಕೀರ್ತಿ ತಂದಿದೆ.

ಆ ಶಾಸನದಲ್ಲಿ 'ವಾತಾಪಿ', 'ಚಲಿಕ್ಯ' ಹಾಗೂ ಕಾಲಮಾನ 'ಚತುಶ್ಶತೇಷು ಪಂಚಷಷ್ಟಿಯುತೇಷು,' ಶಬ್ದಗಳು ಬಹಳೇ ಮಹತ್ವದ ಅಂಶಗಳಾಗಿವೆ clif Inscription A.D. 543 : 465 + 78.

"ಸ್ವಸ್ತಿ ಶಕವರ್ಷೇಷು ಚತುಶ್ಶತೇಷು
ಪಂಚಷಷ್ಟಿಯುತೇಷು

ಅಶ್ವಮೇಧಾದಿಯಜ್ಞಾನಾಂ ಯಜ್ವಾ ಶ್ರೌತವಿಧಾನತಃ
ಹಿರಣ್ಯಗರ್ಭಸಂಭೂತಶ್ಚಲಿಕ್ಯೋ ವಲ್ಲಭೇಶ್ವರಃ
ಧರಾಧರೇನ್ದ್ರ ವಾತಾಪಿಮಜೇಯಂ ಭೂತಯೇಭುವಃ
ಅಧಸ್ತಾದು ಪರಿರಿಷ್ಟಾಚ್ಚ ದುರ್ಗಮೇತದ ಚೀಕರತ್"

ಬಾದಾಮಿಯು ಕ್ರಿ.ಶ. ೧ ರಿಂದ ೫ ಶತಕದವರೆಗೆ ಬಾದಾಮಿ ಎಂದೇ ಕರೆಯಲ್ಪಟ್ಟಿದೆ. ೧ನೇ ಶತಮಾನದಲ್ಲಿ ಭೇಟಿಕೊಟ್ಟ ಭೌಗೋಲಿಕಜ್ಞ **ಟೋಲಮಿ**ಯು ಬಾದಾಮಿಯನ್ನು 'ಬದಮಾಯಿ' 'Badamoi' ಎಂದೇ ಕರೆದಿದ್ದಾನೆ. ನಂತರ ೫ನೇ ಶತಕದಲ್ಲಿ ಅದು ಸಂಸ್ಕೃತ ಜನ್ಯ 'ವಾತಾಪಿ' ಆಗಿ, ಶಾಸನೋಕ್ತವಾಯಿತು. ಆ ಮೇಲೆ ಮತ್ತೆ ಮಧ್ಯಯುಗದಿಂದ, ೧೫ ಶತಕದಿಂದ ೨೦ ಶತಕಗಳಲ್ಲಿಯೂ ಮತ್ತೆ 'ಬಾದಾಮಿ' ಎಂದೇ ಕರೆಯಲ್ಪಡುತ್ತಿದೆ. (ಡಾ. ಶಿಲಾಕಾಂತ ಪತ್ತಾರ, **ಸಂಶೋಧನಾ ಗ್ರಂಥ**).

ಕಲಚೂರಿ ರಾಜ ಯುವರಾಜ–IIನ, ತಾಮ್ರಲೇಖವೊಂದು ಚಾಲುಕ್ಯರು ಮಧ್ಯಪ್ರದೇಶದ ಜಬಲ್‌ಪೂರದಿಂದ ಬಂದರೆಂದು ಹೇಳುತ್ತದೆ. ಶಿವಮೊಗ್ಗ ಜಿಲ್ಲೆಯ ಕೋಗಿಲೂರು ಶಿಲಾಶಾಸನವು 'ಚಲುಕಿ' ಎಂದು ಕರೆದಿದೆ. ಗಂಗೆಯಿಂದ ಬಂದ ಇವರು ಪವಿತ್ರರಾದರೆಂದು ಹೇಳುತ್ತದೆ. ಕ್ರಿ.ಶ. ೧೦೨೫–೨೬ರಲ್ಲಿಯ ಜಯಸಿಂಹ IIನ ಶಿಲಾಶಾಸನ ಆಕರಿಸಿ ಚಾಲುಕ್ಯವಂಶವನ್ನು ಬ್ರಹ್ಮ–ಸ್ವಯಂಭೂಮನು–>ಮಾನವ್ಯ –>ಹಾರಿತಿ–>ಚಾಲುಕ್ಯ– ಹೀಗೆ ಫ್ಲೀಟರು ಜೋಡಿಸುತ್ತಾರೆ. ಗುಲಬರ್ಗಾ ಜಿಲ್ಲೆಯ ಹಂದರಕಿ ಗ್ರಾಮದ ಶಿಲಾಶಾಸನವು (1110 A.D.) ವಿಷ್ಣು–>ಹಿರಣ್ಯಗರ್ಭ–>ಬ್ರಹ್ಮ–>ಮನು–> ಮಾಂಡವ್ಯ–>ಹಾರಿತ–>ಈತನ ಅರ್ಘ್ಯದ ಬೊಗಸೆಯಿಂದ 'ಚಾಲುಕ್ಯ' ಜನಿಸಿದನೆಂದು ಹೇಳುತ್ತದೆ (Dr. B.R. Gopal : *The Chalukyas of Kalyana and the Kalachuris)*. ಈ ರೀತಿಯ ಬೇರೆ ಬೇರೆ ಆಕರಗಳು 'ಚಾಲುಕ್ಯ' ಶಬ್ದಕ್ಕೆ ಇವೆ.

ರಾಷ್ಟ್ರಕೂಟರು (ಕ್ರಿ.ಶ. ೭೩೫–೯೭೩) : 'ರಾಷ್ಟ್ರಕೂಟ' ವೆಂಬ ಹೆಸರಿದ್ದ ರಾಜಮನೆತನಗಳು ಉತ್ತರ ಹಿಂದುಸ್ತಾನ ಹಾಗೂ ಮಧ್ಯ ಹಿಂದುಸ್ತಾನದಲ್ಲಿ ೭ನೆಯ ಶತಮಾನದಲ್ಲಿಯೇ ನೆಲೆಗೊಂಡಿದ್ದವು.

ಸಾತಾರಾ ಜಿಲ್ಲೆಯ ವಾಳ್ವಾ ತಾಲೂಕಿನ 'ದೇವುಲ ವಾಡ'ವು ಕೊಪ್ಪರ–೫೦೦ ಪ್ರಾಂತ್ಯದಲ್ಲಿದ್ದು, ದಂತಿದುರ್ಗ (ಮೂಲ ಪುರುಷ ರಾಷ್ಟ್ರಕೂಟರ)ನ ಊರು. ಎಂದೂ ಉತ್ತರದ ಮಹೀ, ಮಹಾನದಿ ಹಾಗೂ ನರ್ಮದೆಗಳವರೆಗೆ ಆತನು ಗೆದ್ದ ರಾಷ್ಟ್ರಕೂಟರ ನಾಡಾಗಿತ್ತೆಂದು ಸಾಮನಗಡದ ತಾಮ್ರಶಾಸನ (ಕ್ರಿ.ಶ. ೬೫೫)ವು ತಿಳಿಸುತ್ತದೆ. (Dr. R.S. Panchmukhi).

ಗುಜರಾತದಲ್ಲಿ ರಾಷ್ಟ್ರಕೂಟರ ಪಠಾರಿ ರಾಜ ಜೆಜ್ಜ, ಆತನ ಅಣ್ಣ, **ಲಾಟಮಂಡಳದ** ಕಕ್ಕರಾಜ ಇವರುಗಳ ಹೆಸರು ಕೇಳಿಬರುತ್ತದೆ. ೧ನೆಯ ಕೃಷ್ಣ ಹಾಗೂ ೨ನೆಯ ಕೃಷ್ಣರು ಗುಜರಾತದಲ್ಲಿ ರಾಷ್ಟ್ರಕೂಟ (ಸೊಲಾಂಕಿ–ಚಾಲುಕ್ಯರಿಂದ ಆ ಪ್ರದೇಶವನ್ನು ಗೆದ್ದು) ಮನೆತನವೊಂದನ್ನು ಅಲ್ಲಿ ಸ್ಥಾಪಿಸಿದರು. ಈಗ ಕರೆಯಲ್ಪಡುವ 'ಖೈರಾ' ಆಗಿನ ರಾಷ್ಟ್ರಕೂಟರ 'ಖೇಟ ಮಂಡಳ'ವಾಗಿತ್ತು. ಸುರತದಲ್ಲಿ (ಸೂರತ ಪ್ರಾಂತವೆಂದು ಆಗ ಕರೆಯಲ್ಪಡುತ್ತಿತ್ತು). ಕ್ರಿ.ಶ. ೭೫೭, ಕರ್ಕ, ನಂತರ ನಾಶಿಕ, ತದನಂತರ ಮೋರಖಿಂಡ

(ಮಯೂರಖಿಂಡ)ಗಳಲ್ಲಿ ರಾಷ್ಟ್ರಕೂಟರ ಆಡಳಿತವು ಧ್ರುವ ಹಾಗೂ ಗೋವಿಂದ III ರಿಂದ ಮತ್ತಿಷ್ಟು ಬಲಗೊಂಡಿತು.

ಉತ್ತರ ಹಿಂದುಸ್ತಾನದಲ್ಲಿ ರೇವಾಸಂಸ್ಥಾನದ 'ಮಾನಪುರ'ದಲ್ಲಿ 'ಅಭಿಮನ್ಯ' ರಾಜನು ರಾಷ್ಟ್ರಕೂಟನಾಗಿದ್ದು, ಮಾನಪುರದಿಂದ ರಾಜ್ಯವಾಳುತ್ತಿದ್ದನು. ಇದನ್ನು 'ಉಂಟ' ಶಾಸನವು (ತಾಮ್ರಪಟ) ಹೇಳುತ್ತದೆ. ಈ ತಾಮ್ರಶಾಸನದಲ್ಲಿ ಸಿಂಹಲಾಂಛನವಿದೆ. ಮಾನ್ಯಖೇಟದ ರಾಷ್ಟ್ರಕೂಟರ ಲಾಂಛನವು ಗರುಡವಾಗಿದೆ. ಲಾಂಛನಗಳು ಬೇರೆ ಬೇರೆಯಾಗಿವೆ. ಮಾನಪುರ ಪ್ರದೇಶದ ರಾಜನಾದ 'ಅಭಿಮಾನ್ಯ' ರಾಷ್ಟ್ರಕೂಟ ಅರಸನೆಂದು ಆ ತಾಮ್ರಶಾಸನದಲ್ಲಿ ಹೇಳಿದ್ದಾನೆ.

ಮಧ್ಯಪ್ರಾಂತ್ಯದ ಅಮರಾವತೀ ಜಿಲ್ಲೆಯ 'ಚಾಂದೂರ' ತಾಲೂಕಿಗೆ ಸೇರಿದ 'ತಿವಾರ್ಖೇಡ' ಮತ್ತು 'ಮುಲ್ತಾಯಿ' (ಶಕೆ. ೫೩೩ ಮತ್ತು ಶಕೆ. ೬೩೧) ಶಾಸನಗಳಲ್ಲಿ (ಕ್ರಿ.ಶ. ೬೧೩ ಹಾಗೂ ಕ್ರಿ.ಶ. ೭೦೯) ರಾಷ್ಟ್ರಕೂಟ ನಂದರಾಜನು ಕೆಲ ಬ್ರಾಹ್ಮಣ ಪಂಡಿತರಿಗೆ ಗ್ರಾಮಗಳ ದಾನ ಮಾಡಿದ್ದಾನೆ. ಮುಲ್ತಾಯಿ ಶಾಸನದಲ್ಲಿ ಗರುಡ ಮುದ್ರೆ ಇದೆ. ಹೀಗಾಗಿ ಮಳಖೇಡ ರಾಷ್ಟ್ರಕೂಟರು ಹಾಗೂ ಇವರು ಒಂದೇ ಮನೆತನದವರಾಗಿರಲು ಸಾಕು.

ಭೋಪಾಲ ಸಂಸ್ಥಾನದ ಪಠಾರಿ ಎಂಬಲ್ಲಿ 'ಪರಬಲ ರಾಜ' ನೆಂಬ ರಾಷ್ಟ್ರಕೂಟ ಅರಸನ ಶಿಲಾಶಾಸನವು (ವಿಕ್ರಮ ಸಂವತ್ ೯೧೭ ಚೈತ್ರ ಶುದ್ಧ ೬, ಶುಕ್ರವಾರ ಕ್ರಿ.ಶ. ೮೬೧ ಮಾರ್ಚ್ ೨೧). ಈ ರಾಷ್ಟ್ರಕೂಟರು ನಂದರಾಜನ ಮನೆತನಕ್ಕೆ ಸೇರಿದವರು. (ಆರ್.ಎಸ್. ಪಂಚಮುಖಿ **ಕರ್ನಾಟಕ ಇತಿಹಾಸ,** P. 271), ವಂಶ ವೃಕ್ಷ ಕೊಟ್ಟಿದ್ದಾರೆ.

ರಾಜಸ್ಥಾನದಲ್ಲಿ 'ರೌಷ್ಟ್ರಾಡ' (ರಾಷ್ಟ್ರಕೂಟ) ವಂಶದ ಎರಡು ಮನೆತನಗಳಿದ್ದವು. ಶಾಹುಪುರದ ಸಮೀಪದಲ್ಲಿರುವ ಧನೋಪದಲ್ಲಿ ದೊರೆತ ಎರಡು ಶಿಲಾಶಾಸನಗಳು ಈ ಎರಡೂ ವಂಶಗಳ ಸ್ತಂಭವನ್ನು ವಿವರಿಸುತ್ತವೆ.

ಮಗಧ ದೇಶದಲ್ಲಿ ೧೧ನೇ ಶತಮಾನದ ರಾಷ್ಟ್ರಕೂಟರ ಇನ್ನೊಂದು ಮನೆತನವಿತ್ತೆಂದು ಶಾಸನಗಳಿಂದ ಗೊತ್ತಾಗುತ್ತದೆ. ಮಹಣದೇವ ಆತನ ಮಗ ಕಾಣ್ಬರದೇವ, ಸುವರ್ಗಿ ಆತನ ಮಗ ಶಿವರಾಜ, ಮಹೀಪಾಲ ವಿಗ್ರಹಪಾಲರ ಹೆಸರುಗಳೂ ಇವೆ.

ಪಾಂಚಾಲ ದೇಶದ 'ವೋದಾಮಯೂತಾ' ಪಟ್ಟಣದಲ್ಲಿ 'ಲಖನಪಾಲ' ನೆಂಬ ರಾಷ್ಟ್ರಕೂಟ ಅರಸನು ಆಳುತ್ತಿದ್ದ ನೆಂಬುದನ್ನು ಬದಾವುನ್ ಜಿಲ್ಲೆ (ಉ.ಪ್ರ) ಶಿಲಾಶಾಸನದಿಂದ ಗೊತ್ತಾಗುತ್ತದೆ.

ಹೀಗೆ ಉತ್ತರ ಹಿಂದುಸ್ತಾನದಲ್ಲೂ, ಮಧ್ಯ ಹಿಂದುಸ್ತಾನದಲ್ಲೂ ಮಳಖೇಡದ ರಾಷ್ಟ್ರಕೂಟರ ಪೂರ್ವದಲ್ಲಿ ೭ನೆಯ ಶತಮಾನದ ಪ್ರಾರಂಭದಲ್ಲಿಯೇ ರಾಷ್ಟ್ರಕೂಟ ಹೆಸರಿನ ರಾಜಮನೆತನಗಳು ಇದ್ದವೆಂದು ಸ್ಪಷ್ಟವಾಗುತ್ತದೆ. ಇವರಿಗೂ ಮಾನ್ಯಖೇತದ ದಂತಿದುರ್ಗನ ರಾಷ್ಟ್ರಕೂಟ ಮನೆತನಕ್ಕೂ ಯಾವ ಸಂಬಂಧವಿತ್ತೆಂಬುದು ಹೇಳಲಿಕ್ಕಾಗದು. ಇದರೆ 'ರಾಷ್ಟ್ರಕೂಟ' ಎಂಬ ಹೆಸರು ಮಾತ್ರ ಬಹಳಷ್ಟು ಪ್ರಚಾರದಲ್ಲಿತ್ತು ಎಂದು ಹೇಳಬೇಕಾಗುತ್ತದೆ. ಲಟ್ಟಲೂರಿನ ರಟ್ಟರು (ಲಾತೂರ ಮಹಾರಾಷ್ಟ್ರ) ಸವದತ್ತಿಯ ರಟ್ಟರು (ರಾಷ್ಟ್ರಕೂಟರು) ಒಂದೇ ಆಗಿದ್ದರೆಂದು ಪಂಡಿತರ ನಿಷ್ಕರ್ಷೆ.

ರಾಷ್ಟ್ರ+ಕೂಟ=ರಾಷ್ಟ್ರಕೂಟ, 'ರಾಷ್ಟ್ರ' ಪ್ರದೇಶವಾಚಕ ವಾದರೆ, ಇದು ಸಂಸ್ಕೃತ ಶಬ್ದ. ಕೂಟ=ಸಂಘ, ಸಂಕುಲ, ಸಮೂಹ ಎಂಬ ಸಂಯೋಜನವಾಚಕವಾಗಿ ಇದು ಅಚ್ಚಕನ್ನಡ ಶಬ್ದ. ವ್ಯಾಕರಣದಲ್ಲಿ ಒಂದು ಸಂಸ್ಕೃತ ಶಬ್ದ, ಇನ್ನೊಂದು ಕನ್ನಡ ಶಬ್ದ. ಇಂಥ ಈ ಸಂಯುಕ್ತಾಕ್ಷರ ಶಬ್ದವು ಉತ್ತರ ಭಾರತದಲ್ಲಿ ಪ್ರಚಲಿತವಾಗಿರುವುದು ಆಶ್ಚರ್ಯದ ಸಂಗತಿ.

ಎಲಿಚಪುರ (ಈಗಿನ ಉಲ್ಲೇರಾ) ವನ್ನು 'ದಂತಿಗ'ನು (ರಾಷ್ಟ್ರಕೂಟ ದಂತಿದುರ್ಗನು) ಕ್ರಿ.ಶ. ೭೩೫ರಲ್ಲಿ ಬಾದಾಮಿ ಚಾಲುಕ್ಯ ಅರಸ ಇಮ್ಮಡಿ ಕೀರ್ತಿವರ್ಮನನ್ನು ಸೋಲಿಸಿ, ಪ್ರಥಮ ರಾಜಧಾನಿಯನ್ನಾಗಿ ಮಾಡಿದನು. ಕ್ರಿ.ಶ. ೮೧೪ರಲ್ಲಿ ರಾಷ್ಟ್ರಕೂಟ ಅರಸ ಮುಮ್ಮಡಿ ಗೋವಿಂದ ಮಳಖೇಡವನ್ನು ರಾಜಧಾನಿಯನ್ನಾಗಿ ಆಯ್ದುಕೊಂಡನು. ಆತನ ಉತ್ತರಾಧಿಕಾರಿ ಅಮೋಘವರ್ಷನು ಕ್ರಿ.ಶ. ೮೧೪ರಿಂದಲೇ ಇಲ್ಲಿಂದ ರಾಷ್ಟ್ರಕೂಟರ ಆಳ್ವಿಕೆ ಪ್ರಾರಂಭಿಸಿದನು. (ಕ್ರಿ.ಶ. ೮೧೪ ರಿಂದ ೮೭೮ ರವರೆಗೆ ಆಳಿದನು) (ಡಾ॥ ಆರ್.ಎಂ. ಷಡಕ್ಷರಯ್ಯ).

ಸುಗಂಧವರ್ತಿಯು (ಸವದತ್ತಿಯು) ರಟ್ಟರು ರಾಷ್ಟ್ರಕೂಟರ ಮೂಲರು, ಮೊದಲಿಗರು. 'ರಟ್ಟ' ಎಂಬ ಶಬ್ದವು ಹಳೆಗನ್ನಡವಾಗಿದ್ದು, ರಥಿಕರು, 'ರಠರು' 'ರಥರು' ಎಂದರೆ 'ಗಟ್ಟಿಗರು' 'ಹಟವಾದಿಗಳು' 'ಶ್ರೇಷ್ಠರು' ಎಂದೂ ಅರ್ಥಗಳನ್ನು ಕೊಡುತ್ತದೆ. (ಕನ್ನಡ ರತ್ನಕೋಶ). ರಾಷ್ಟ್ರಕೂಟ ಎಂಬ ಶಬ್ದ ಬಳಕೆಯಲ್ಲಿ ಬರುವದಕ್ಕಿಂತ ಮೊದಲೇ 'ರಟ್ಟ' ಎಂಬ ಶಬ್ದ ಬಳಕೆಯಲ್ಲಿ ಇತ್ತು. ಹೀಗಾಗಿ ಸುಗಂಧವರ್ತಿಯ ರಟ್ಟರು ಮಾನ್ಯಖೇಡದ ರಾಷ್ಟ್ರಕೂಟರಿಗಿಂತ ಮೊದಲೇ ೭ನೆಯ ಶತಮಾನದಲ್ಲಿ ನೆಲೆಗೊಂಡಿದ್ದರೆಂದು ಡಾ. ಆರ್.ಎಸ್. ಪಂಚಮುಖಿ ಹೇಳುತ್ತಾರೆ. ಮಾನ್ಯಖೇಟರ ರಾಷ್ಟ್ರಕೂಟರಿಗಿಂತ ರಟ್ಟರು ಮೊದಲಿಗರು ಹೀಗಾಗಿ 'ರಾಷ್ಟ್ರಕೂಟರ' ಮೂಲ ಹೆಸರು 'ರಟ್ಟ'ರೆಂದು ಹೇಳಬಹುದು, ಸಾಧಿಸಲೂಬಹುದು.

ರಾಷ್ಟ್ರಕೂಟರು ಗರುಡ ಲಾಂಛನದವರು. ಈ ಚಿಹ್ನೆಯು ಅವರ ತಾಮ್ರಶಾಸನಗಳ ಮುದ್ರೆಗಳ ಮೇಲೆ ಕಂಡುಬರುತ್ತದೆ.

ಪೂನಾ ತಾಮ್ರಶಾಸನ, ತಳೆಗಾಂವ ತಾಮ್ರಶಾಸನ, ಧುಲಿಯಾ ತಾಮ್ರಶಾಸನ, ಪಿಂಪರಿ ತಾಮ್ರ ಶಾಸನ, ಪೈಠಣ ತಾಮ್ರ ಶಾಸನ, ಅಂಜನಾವತಿ ತಾಮ್ರ ಶಾಸನ (ಮಯೂರಖಿಂಡ), ರಾಮೇಶ್ವರ ತೀರ್ಥ ತಾಮ್ರ ಶಾಸನ, ನೇಸರಿ ತಾಮ್ರಶಾಸನ ಮುಂತಾದವು, ಗರುಡ ಲಾಂಛನ ಹೊಂದಿವೆ. ರಾಷ್ಟ್ರಕೂಟರ ಧ್ವಜವು ಪಾಲಿಧ್ವಜವು, ಅಂದರೆ ಹತ್ತು ತೆರೆದ ಪತಾಕೆಗಳಿಂದ ಕೂಡಿದ ವಿಶಿಷ್ಟ ಆಕಾರವುಳ್ಳ ಧ್ವಜವು. ಮಾಲೆ, ವಸ್ತ್ರ ನವಿಲು, ಕಮಲ, ಹಂಸ, ಗರುಡ, ಸಿಂಹ, ವೃಷಭ, ಆನೆ, ಚಕ್ರಗಳ ಚಿತ್ರಗಳು ಆ ಪತಾಕೆಯ ಮೇಲೆ ಇರುತ್ತವೆ. (ಪ್ರೊ. ಪಾಠಕ, **ಕರ್ನಾಟಕ ಇತಿಹಾಸ,** P. 828).

ಅರಬ್ಬೀ ದೇಶದ ಕೆಲ ಪ್ರವಾಸಿಗರು ೯-೧೦ ಶತಮಾನಗಳಲ್ಲಿ ಹಿಂದೂಸ್ತಾನಕ್ಕೆ ಬಂದಿದ್ದರು. ಅವರಲ್ಲಿ ಇಬನ್ ಹಾಕಲ್ ಹಾಗೂ ಅಲ್‌ಇಸ್ತರೀ ಎಂಬವರು ರಾಷ್ಟ್ರಕೂಟ ರಾಜ್ಯಕ್ಕೆ 'ಕಂಕರ' ಎಂಬ ಹೆಸರನ್ನು ಕೊಟ್ಟಿದ್ದಾರೆ. ಆ ರಾಜ್ಯದ ಭಾಷೆ 'ಕೀರಿಯ' ಎಂದು ಹೇಳಿದ್ದಾರೆ. (**ಕರ್ನಾಟಕ ಇತಿಹಾಸ P. 283**) ಇವುಗಳ ಅರ್ಥವೇನು ? ಶೋಧಿಸ ಬೇಕಾಗಿದೆ.

ಗಂಗರು (ಕ್ರಿ.ಶ. ೩೫೦-೧೦೦೪) : ಕ್ರಿ.ಶ. ೩೫೦ರ ಸುಮಾರಿಗೆ ಕೋಲಾರದಿಂದ ಆಳಲಾರಂಭಿಸಿದ ಗಂಗರು ಮುಂದೆ ರಾಜಧಾನಿಯನ್ನು ಕಾವೇರಿ ತೀರದ ತಲಕಾಡಿಗೆ ವರ್ಗಾಯಿಸಿದರು. ಆರಂಭದಲ್ಲಿ ಸ್ವತಂತ್ರರಾಗಿದ್ದ ಇವರು ನಂತರ ಬಾದಾಮಿ ಚಾಲುಕ್ಯರ ಮಾಂಡಲೀಕರಾದರು. ಅನೇಕ ಗಂಗರಾಜರು ಶೂರರಷ್ಟೇ ಅಲ್ಲ ಕವಿಗಳೂ ವಿದ್ವಾಂಸರೂ ಆಗಿದ್ದರು. ಗಂಗವಾಡಿಯು ಚೋಳರ ವಶವಾಗದಂತೆ, ಚಾಲುಕ್ಯರ ಹಾಗೂ ರಾಷ್ಟ್ರಕೂಟರ ನೆರವಿನಿಂದ ಇವರು ಹೋರಾಡಿದರು. ನಂತರ ಕಲ್ಯಾಣ ಚಾಲುಕ್ಯರ ಜೊತೆಗೆ ಸಹಕರಿಸದೆ, ಚೋಳರ ಎದುರು ಸೋತು, ಕ್ರಿ.ಶ. ೧೦೦೬ ಹೊತ್ತಿಗೆ ರಾಜ್ಯ ಕಳೆದುಕೊಂಡರು (ಡಾ॥ ಸೂರ್ಯನಾಥ ಕಾಮತ್, **ಕರ್ನಾಟಕ ಕೈಪಿಡಿ,** P. 8 and 9) ದುರ್ವಿನೀತಗಂಗ ಪ್ರಸಿದ್ಧ ಅರಸ. ಸಂಸ್ಕೃತ ಭಾರವಿಕವಿ ಆತನ ಆ ಸ್ಥಾನದಲ್ಲಿದ್ದನು. ತಲಕಾಡಿನ ಪಾತಾಳೇಶ್ವರ ಗುಡಿ ಮತ್ತು ಗಂಗ ಮುರುಳೇಶ್ವರ ಹಾಗೂ ಶ್ರವಣಬೆಳಗುಳದ ಗೊಮ್ಮಟ ಇವರ ರಚನೆ.

'ಗಂಗ', 'ಗಂಗೆ', 'ಗಂಗಾ' ಇವು ಶಬ್ದಗಳೆಲ್ಲ ಜಲಕ್ಕೆ ಸಂಬಂಧ ; ಗಂಗಾ ನದಿಗೆ, ಅಥವಾ ಯಾವುದೇ ನದಿಗೆ ಗಂಗಾಜಲವೆಂದು ಕರೆಯುವ ರೂಢಿ. ಅದರಿಂದಾಗಿ ಇವರು ಗಂಗೆ ಪುತ್ರರೆಂದೂ ಕರೆಯಿಸಿಕೊಂಡಿರಲು ಸಾಕು. ಗಂಗರು ನದಿ ತಟದಲ್ಲಿದ್ದು, ನಾವಿಕರಾಗಿರಲು ಸಾಕು. ಈಗಲೂ ಆ ಭಾಗದ ಅಂದರೆ ಗಂಗವಾಡಿ ನಾಡಿನ ಕೆಲ ಮೂಲರು ತಾವು ಗಂಗಿ/ಗಂಗೆ ಪುತ್ರರೆಂದು ಹೇಳಿಕೊಳ್ಳುತ್ತಾರೆ. ಮಹತ್ವಾಕಾಂಕ್ಷಿಯವರಾದ ಅವರು ರಾಜ್ಯ ಕಟ್ಟುವಷ್ಟು ಬಲಿಷ್ಠರಾದರು. ಕೋಲಾರ ಪ್ರದೇಶದಿಂದ ನೀರಿನ ನೆಲೆಯಾದ ಕಾವೇರಿಯ ತಟದ ತಲಕಾಡಿಗೆ ಬಂದು ಇಲ್ಲಿ ಬಲಿಷ್ಠರಾದರೆಂದು ಒಂದು ಜನಪದ ಪರಂಪರೆಯು ಹೇಳುತ್ತವೆ.

ಗಂಗ ದುರ್ವಿನೀತ : ಕ್ರಿ.ಶ. ೫೫೫-೬೦೫ ; ಗಂಗ ಭೂವಿಕ್ರಮ : ಕ್ರಿ.ಶ. ೬೪೯-೭೯ ; ಗಂಗ ಶ್ರೀ ಪುರುಷ (ಪೆರ್ಮನಡಿ) ಕ್ರಿ.ಶ. ೭೩೧ ; ಗಂಗ ಇಮ್ಮಡಿ ಶಿವಕುಮಾರ ಕ್ರಿ.ಶ. ೭೮೮-೮೧೬ ; ಗಂಗ ರಾಚಮಲ್ಲ ಕ್ರಿ.ಶ. ೮೧೬-೮೪೩ ;

* ೩ನೆಯ ರಾಷ್ಟ್ರಕೂಟ ಕೃಷ್ಣನಿಗೆ ಚೋಳರನ್ನು ಗೆಲ್ಲಲ್ಲು ಗಂಗರು ನೆರವಾದರು.

* ೧೦೦೪ರಲ್ಲಿ ಚೋಳರು ಗಂಗರ ಮೇಲೆ ಸೇಡು ತೀರಿಸಿಕೊಳ್ಳಲು ಯುದ್ಧ ಸಾರಿ ಗಂಗವಾಡಿಯನ್ನು ಗೆದ್ದುಕೊಂಡರು. ಆಗ ಗಂಗ ರಾಜ್ಯ ಅಸ್ತಂಗತವಾಯಿತು.

ಹೊಯ್ಸಳರು (A.D. 1000-1348) : ಹೊಯ್ಸಳರು ಚಂದ್ರವಂಶದವರೆಂದು ಕರೆದುಕೊಳ್ಳುತ್ತಾ, ಯಾದವ ಕುಲದವರೆಂದು ಹೇಳಿಕೊಳ್ಳುತ್ತಾರೆ. ಚಾಲುಕ್ಯರ ಸಾಮಂತ'ರೆಂದೂ, ಗಂಗವಾಡಿಯಿಂದ ಮೈಸೂರ ಪ್ರದೇಶದವರೆಗೆ ಹಬ್ಬಿದ ನಾಡಿನಲ್ಲಿ ರಾಜ್ಯವಾಳಿದರು.

'ಹೊಯ್ಸಳ' ಎಂಬುದು ಪ್ರಾಮುಖ್ಯವಾಗಿ ಕನ್ನಡ ನಾಡಿನ ರಾಜಮನೆತನಗಳ ಹೆಸರುಗಳಲ್ಲೇ ಅಚ್ಚಕನ್ನಡ ಶಬ್ದಪ್ರಯೋಗ ಇದು. ಮೂಲ ಪುರುಷ ಸಳ, ಅರಣ್ಯದಲ್ಲಿ ಗುರುವಿನ ಆಜ್ಞೆಯ ಮೇರೆಗೆ ಮೇಲೇರಿ ಬಂದ ಹುಲಿಯನ್ನು 'ಹೊಯ್ಯಲು', 'ಸಳನೇ ಹೊಡಿ' ಎಂದು ಆಜ್ಞೆ ಮಾಡಿದಾಗ, ಸಳನು ಆ ಹುಲಿಯನ್ನು ತನ್ನ ಕಠಾರಿಯಿಂದ ಸೆಣಸಾಡಿ, ಅದರ ಬಾಯಿಯಲ್ಲಿ ಚುಚ್ಚಿ ಕೊಂದ, ಈ ಚಿತ್ರಣವು ಹೊಯ್ಸಳರ ಶಿಲ್ಪಕಲೆಯಲ್ಲಿ ಕೊರೆಯಲ್ಪಟ್ಟು, ಅದು ಹೊಯ್ಸಳರ ರಾಜ್ಯಲಾಂಛನವಾಗಿದೆ. ಹಾಗಾಗಿ 'ಹೊಯ್ಸಳ' ಎಂಬ ಶಬ್ದ ಬಂದಿದೆ.

'ಸಳನೇ ಪೊಯ್' ಐತಿಹಾಸಿಕ ಘಟನೆ ನಡೆದುದು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಈಗ ಕರೆಯಲ್ಪಡುವ 'ಅಂಗಡಿ' ಎಂಬ ಊರಿನ ಅರಣ್ಯದಲ್ಲಿದ್ದ ವಾಸಂತಿಕಾ ದೇವಸ್ಥಾನದಲ್ಲಿ. ಆಗ್ಗೆ ಅಂಗಡಿಗೆ 'ಸೊಸೆಯೂರು' ಅಥವಾ 'ಸಸಕಾಪುರ' ಎಂದು ಶಾಸನೋಕ್ತವಾಗಿ ಕರೆಯುತ್ತಿದ್ದರು. (**Hoysala Heritage** pub : Archaelogical Survey of India, Bangalore Circle).

ಹೊಯ್ಸಳ ರಾಜರುಗಳಲ್ಲಿ ನೃಪಕಾಮ (A.D. 1000-1047 A.D.) ಬಿಟ್ಟಿದೇವ (A.D. 1108-1152), ನಂತರ ಈತನ

ಹೆಸರೇ ವಿಷ್ಣುವರ್ಧನನೆಂದು ಪ್ರಸಿದ್ಧಿ ಪಡೆಯಿತು. ಈತನ ಕಾಲದಲ್ಲಿ ಹೊಯ್ಸಳ ಶಿಲ್ಪಕಲೆ, ನೃತ್ಯ, ಸಂಗೀತಗಳು, ಉನ್ನತ ಸೌಂದರ್ಯ ಪಡೆದು, ಶಿಲ್ಪಕಲೆಯು 'ಹೊಯ್ಸಳ ಆರ್ಕಿಟೆಕ್ಚರ್' ಎಂಬ ವಿಶೇಷ ಸಾಂಸ್ಥಿಕ ಮುದ್ರೆಯನ್ನೇ ಧರಿಸಿತು, (Hoysala Architecture). ಹಳೆಬೀಡು (ದ್ವಾರಸಮುದ್ರ) ವೇಲಾಪುರಿ (ಬೇಲೂರು) ಸೋಮನಾಥಪುರ, ಮುಂತಾದವುಗಳು ಕಲೆಯ ಬಲೆಯಾಗಿ, ಈ ದೇಶದ ಶಿಲ್ಪಸಾಮ್ರಾಜ್ಯದಲ್ಲಿ ಉನ್ನತ ಕೀರ್ತಿ ಪಡೆದಿವೆ. ಕ್ರಿ.ಶ. ೧೩೧೦ರಲ್ಲಿ ಮಲಿಕ್ ಕಾಫುರನ ದಾಳಿಯ ನಂತರದ ಈ ರಾಜ್ಯ ನೆನಪಿನಿಂದ ಅಡಗಿ ಹೋಯಿತು, ಈ ರಾಜವಂಶ ಅಸ್ತವಾಯಿತು.

ಯಾದವರು (ಸೇವುಣರು) (ಕ್ರಿ.ಶ. ೧೧೭೩-೧೩೧೦): ಕಲ್ಯಾಣ ಚಾಲುಕ್ಯರ ಸಾಮ್ರಾಜ್ಯವು ಅವರ ಸಾಮಂತರಾಗಿದ್ದ ಮೂವರಲ್ಲಿ ಅಂದರೆ ದೇವಗಿರಿ ಯಾದವರು (ಸೇವುಣರು), ದ್ವಾರಸಮುದ್ರ ಹೊಯ್ಸಳರು, ಮತ್ತು ಓರಂಗಲ್ಲಿನ ಕಾಕತೀಯರಲ್ಲಿ ಹಂಚಿಹೋಯಿತು, (ಡಾ॥ ಸೂರ್ಯನಾಥ ಕಾಮತ್), ದೇವಗಿರಿಯಲ್ಲಿ ದೀರ್ಘಕಾಲದಿಂದ ರಾಷ್ಟ್ರಕೂಟ ಹಾಗೂ ಕಲ್ಯಾಣ ಚಾಲುಕ್ಯರ ಮಾಂಡಲೀಕರಾಗಿದ್ದ ಸೇವುಣರ ವಂಶದ ಐದನೆಯ ಬಿಲ್ಲಮ (೧೧೭೩-೯೨)ನು ದೇವಗಿರಿಯನ್ನು ರಾಜಧಾನಿಯಾಗಿ ಮಾಡಿ ಕಲ್ಯಾಣವನ್ನು ಗೆದ್ದ (೧೧೮೬). ಈತನ ಸಾಮ್ರಾಜ್ಯವು ನರ್ಮದೆಯಿಂದ ಕೃಷ್ಣೆಯವರೆಗೆ ಹಬ್ಬಿತ್ತು. ಜೈತುಗಿ (೧೧೯೨-೯೯), ಎರಡನೆಯ ಸಿಂಘಣ (೧೧೨೨-೪೭) ಇಲ್ಲಿ ಆಳಿದರು. ಭಾಸ್ಕರಾಚಾರ್ಯ (ಗಣಿತಜ್ಞ), ಶಾರ್ಙ್ಗದೇವ (ಸಂಗೀತ ರತ್ನಾಕರ). ಸಂತ ಜ್ಞಾನೇಶ್ವರ (ಜ್ಞಾನೇಶ್ವರಿ-ಮರಾಠಿ), ಇವರೆಲ್ಲ ಇವರ ಕಾಲದಲ್ಲಿದ್ದರು. ಮಲಿಕ್ ಕಾಫುರನ ದಾಳಿಯಿಂದ ಸೇವುಣ ರಾಜ್ಯವು (೧೩೧೮) ಶಿಥಿಲವಾಗಿ ಅಸ್ತಂಗತವಾಯಿತು (ಡಾ॥ ಬಿ.ಆರ್. ಗೋಪಾಲ).

ಇಲ್ಲಿ 'ಯಾದವರು' ಎಂಬ ಶಬ್ದ ಪ್ರಯೋಗ ಪ್ರಾಯಶಃ ಶ್ರೀ ಕೃಷ್ಣನ ವಂಶಜರು ಇವರಾಗಿರಲು ಸಾಕು. ಸೇವುಣರು ಎಂಬ ಪದದ ವಿಶೇಷಣೆಯನ್ನು 'ಸಾಹಸಗರು' ಎಂದು ಡಾ॥ ಶ್ರೀನಿವಾಸ ರಿತ್ತಿ ಅವರು ತಮ್ಮ ರಿಸರ್ಚ್ ಪ್ರಬಂಧದಲ್ಲಿ ವರ್ಣಿಸಿದ್ದಾರೆ. ಇದಲ್ಲದೆ ಕಲ್ಯಾಣ ಚಾಲುಕ್ಯರ ಸಾಮಂತ ರಾಗಿದ್ದು ಇವರು ಸೇವಾಭಾವದವರಾಗಿದ್ದರಿಂದ, ಸೇವೆಯ ಸೇವುಣರು ಎಂದೂ ಅರ್ಥ ನೀಡುತ್ತದೆ.'

ವಿಜಯನಗರ (ಕ್ರಿ.ಶ. ೧೩೩೬-೧೫೬೫) : ವಿಜಯನಗರ ಸಾಮ್ರಾಜ್ಯ ಮಧ್ಯಯುಗೀನ ಏಶಿಯಾದ ಸಾಮ್ರಾಜ್ಯಗಳಲ್ಲಿಯೇ ಬಹು ವಿಸ್ತೃತ ಹಾಗೂ ಬಹುಶ್ರುತ, ದಕ್ಷಿಣ ಭಾರತದ ಸಾಮ್ರಾಜ್ಯ ವಿಜಯ+ನಗರ=ವಿಜಯೋತ್ಸವ ನಗರ, ವಿಜಯ ಪಡೆದ ನಗರ, ವಿಜಯದ ಸಂಕೇತ ಎಂಬ ಅರ್ಥಗಳು.

ವಿದ್ಯಾರಣ್ಯರು ಗಿರಿಗಳಿಂದ ಕೂಡಿದ ಈ ಪ್ರದೇಶದಲ್ಲಿ ಸಂಚರಿಸುವಾಗ್ಗೆ, ಪ್ರಾಣಿಗಳ ವೈರುಧ್ಧಗುಣ ಕಂಡ ಆಶ್ಚರ್ಯ. ಮೊಲವೇ ನಾಯಿಯ ಬೆನ್ನಟ್ಟಿ ಕಾಡಿಸುತ್ತಿರುವ ದೃಶ್ಯ. ಈ ನೆಲದಲ್ಲಿ ಶೌರ್ಯದ ಸಾತತ್ಯವಿದೆ. ಇಲ್ಲಿ ಸಾಮ್ರಾಜ್ಯ ಸ್ಥಾಪನೆಯಾದರೆ, ನಾಡ ಉತ್ಕರ್ಷೆಯಾದೀತು, ಹಿಂದುತ್ವದ ಘನತೆ ಬೆಳೆದೀತು ಎಂದು ತಿಳಿದು, ಹುಕ್ಕ ಬುಕ್ಕರ ಮುಂದಾಳತ್ವದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಇಲ್ಲಿ ಸ್ಥಾಪಿಸಲು ನೆರವಾದರು.

'ಹಂಪಿ' ಎಂಬ ಶಬ್ದಾರ್ಥ ; 'ಹಂಪ' ಅಂದರೆ ಏರಿ, ಎತ್ತರ, ಇಣಿ (ಹೋರಿಯ ಬೆನ್ನ ಮೇಲಿನ ಎತ್ತರದ ಭಾಗ) ಇತ್ಯಾದಿಗಳು ಅರ್ಥಗಳಿವೆ. ಈ ಪ್ರದೇಶದಲ್ಲಿ 'ಹಂಪ'ದಂತೆ ಕಾಣುವ ಗುಡ್ಡಗಳು ಹರಡಿರುವದರಿಂದ 'ಹಂಪಿ' ಎಂಬ ಪ್ರಾದೇಶಿಕ ನಾಮ ಹೊಂದಿತು. (Rugged hills and dales).

ಈ ಸಾಮ್ರಾಜ್ಯವನ್ನು ೧) ಸಂಗಮ, ೨) ಸಾಳ್ವ, ೩) ತುಳುವ, ೪) ಅರವೀಡು ಹೀಗೆ ನಾಲ್ಕು ಹೆಸರುಳ್ಳ ರಾಜವಂಶಗಳು ಆಳಿದವು.

ಸಂಗಮ : ಈ ಅರಸರಿಗೆ ಸಂಬಂಧಿಸಿದಂತೆ, ಕ್ರಿ.ಶ. ೧೩೩೬-೧೩೬೮ರ ವರೆಗೆ ೧೨೨ ಶಾಸನಗಳು ದೊರೆತಿವೆ (ಡಾ॥ ಕು.ಸ. ಅಪರ್ಣ), ಶಿವಮೊಗ್ಗ (ಕುಗ್ವೆ) ಜಿಲ್ಲೆಯವರು ವಿಜಯನಗರದತ್ತ ಪಯಣ, ಇವರು ವಿಜಯನಗರದತ್ತ ಬರುವುದೂ ಅಲ್ಲಿ ರಾಜ್ಯಸ್ಥಾಪನೆ ಯಾದುದೂ ಮೇಳವಿಸಿತು (ಕ್ರಿ.ಶ. ೧೩೩೬) ; ಸಂಗಮ ಎಂದರೆ ನದಿಗಳ ಕೂಟ. ಶಿವಮೊಗ್ಗ ಬಹು ಚಿಕ್ಕ ಪುಟ್ಟ ನದಿಗಳ ಕೂಟಗಳ ನಾಡು. ಆ ಕೂಟಗಳ ಪ್ರಕ್ರಿಯೆಯನ್ನು ಈ ಸಾಮ್ರಾಜ್ಯ ಸ್ಥಾಪನೆಯಲ್ಲಿ 'ಸಂಗಮ' ಎಂದು ನಾಮಕರಣ ಮಾಡಿರಬಹುದೇ ? ಅಥವಾ 'ಸಂಗಮ' ವ್ಯಕ್ತಿಗತವೂ ಆಗಿರಲು ಸಾಕು.

ಸಾಳ್ವ : 'ಸಾಳ್ವ' ಎಂದರೆ ಬೇಟೆಗಾಗಿ ಉಪಯೋಗಿಸುವ ಒಂದು ತರಹದ ಭದ್ರ ಹಕ್ಕಿ. ಈ ಗಟ್ಟಿತನವನ್ನು ಗ್ರಹಿಸಿ ಗುಣಗ್ರಾಹಿಗಳಾದ ರಾಜರು ಈ ಹೆಸರನ್ನು ಇಟ್ಟಿರಲು ಸಾಕು. ಸಾಳ್ವ ರಾಜಮನೆತನವು ಈ ಹೆಸರಿಗಾಗಿ ಉತ್ಸಕರಾಗಿ, ತಮ್ಮ ಕಾರ್ಯವೈಖರಿ ಹಾಗೂ ಪಕ್ಷಿಯ ವೇಗಗಳ ಹೊಂದಾಣಿಕೆ ಮಾಡಿ, 'ಸಾಳ್ವ' ರೆಂದು ನಾಮಕರಣ ಮಾಡಿರಲು ಸಾಕು. ಸಮರ್ಥ ರಾಜ್ಯದ ಸೇನಾನಿ ಸಮರ್ಥನಾದ ಸಾಳ್ವ ನರಸಿಂಹನು

ಪಟ್ಟಾಧಿಕಾರ ಗ್ರಹಣ ಮಾಡಿದನು (೧೪೮೫).

ತುಳುವ : ತುಳುವ ನಾಡಿಗೆ ಸಂಬಂಧಿಸಿದ ನರಸಿಂಹ ಸೇನಾನಿ ಈ ತುಳುವ ಹೆಸರಿಗೆ ಕಾರಣಿಭೂತ. ಈತನ ಮಗ ಶ್ರೀಕೃಷ್ಣದೇವರಾಯ (೧೫೦೯–೧೫೨೯) ಕೃಷ್ಣದೇವರಾಯನ ತಾಯಿ ತುಳು ನಾಡಿನವಳು (ಬಂಟ). ಈ ಕಾಲಘಟ್ಟದಲ್ಲಿ (೧೫೦೯–೨೯)ವರೆಗೆ, ವಿಜಯನಗರ ಸಾಮ್ರಾಜ್ಯ ಅತ್ಯಂತ ಘನತೆಯನ್ನು ಹೊಂದಿತ್ತು.

ಅರವೀಡು : 'ಅರವೀಡು' ಅಥವಾ ಆರವೀಡು (ಆರ + ವೀಡು) ಎಂದು ಶಬ್ದ ಸಂಧಿ ಬಿಡಿಸಬಹುದು. ಅರಿವಿನ + ಬೀಡು = ತಿಳಿವಳಿಕೆಯ ಸ್ಥಳ. ಅರವೀಡು ರಾಮರಾಯ (೧೫೪೨–೬೫) ಕೃಷ್ಣದೇವರಾಯನ ಅಳಿಯ. ದಕ್ಷಿಣ ಶಾಹಿಗಳೊಡನೆ ತಾಳಿಕೋಟೆ ಯುದ್ಧದಲ್ಲಿ ಹತನಾದ. ಈ ಮನೆತನವೇ ಮುಂದೆ ಮೈಸೂರಿಗೆ ಹೋಗಿ ಬಾಳಿತು.

ಉಪಸಂಹಾರ : ಸಮೀಕ್ಷೆಯಲ್ಲಿ ನಿಷ್ಕರ್ಷಣೆಗೆ ಬರುವುದೇನೆಂದರೆ ಈ ಮೇಲಿನ ರಾಜವಂಶಗಳು, ಹೆಸರುಗಳ ವ್ಯುತ್ಪತ್ತಿಯ ದೃಷ್ಟಿಯಲ್ಲಿ ವೈಯಾಕರಣ ಪಾರ್ಶ್ವದಲ್ಲಿ ನೋಡಿದಂತೆ ಅವುಗಳು ಆಯಾ ವಂಶಜರು, ಅವರು ಮಾಡುತ್ತಿದ್ದ ಕಸಬು ವ್ಯಾಪಾರೋದ್ಯೋಗ, ಸುತ್ತಲಿನ ಪಕ್ಷಿಸಂಕುಲದ ಪ್ರಭಾವ, ವನಸ್ಪತ್ಯ ಸಂಪದ, ಐತಿಹಾಸಿಕ ಅವಿಸ್ಮರಣೀಯ ಘಟನೆ, ಜನಿಸಿದ ಗೋತ್ರಗಳು, ಇತ್ಯಾದಿಗಳ ಮೇಲೆ ಉದ್ಭೂತವಾಗಿದೆ ಎಂದು ನಿಶ್ಚಿತವಾಗಿ ಹೇಳಬಹುದು.

ಆಧಾರಸೂಚಿ

೧. Prof. K.A. Nilakanta,Sastri and Professor G. Srinivasachari, *Advanced History of Of India*, New Delhi, 1982.

೨. Prof. Jawaharlal Nehru, *Discovery of India*, London, 1957.

೩. Sri. K.M. Munshi, *Indian Heritage*, Bombay, 1956.

೪. Vidyaratna Sri. R.S. Panchamukhi, **ಕರ್ನಾಟಕದ ಇತಿಹಾಸ,** ಧಾರವಾಡ, ೧೯೬೭.

೫. ಬಾದಾಮಿ ಚಾಲುಕ್ಯ ಸಂಪದ, ಡಾ॥ ಶೀಲಾಕಾಂತ ಪತ್ತಾರ (ಸಂ), ಬಾಗಲಕೋಟೆ, ೨೦೦೯.

೬ Dr. D.C. Sarkar, Successor of Satavahanas.

೭. Prof. B.V. Krishna Rao, *Early Dynasties (Dynasties) of Andhra Desa.*

೮. Prof. G.M. Moreis, *Kadamba Kula,* Bangalore.

೯. Robert Sewel, *Forgotten Empire,* Dr. A.V. Narashimha Murti, Hemakuta.

೧೦. Dr. K.M. Suresh., Dr. K.P. Poonacha., Dr. K.P. Basavaraj., Recent Researches in Archaeology, Museology (Sri. CTM Kotraiah) Felicitation volume), New Delhi - 2001.

೧೧. ಡಾ॥ ಆರ್. ಗೋಪಾಲ, ಚಾಲುಕ್ಯ ಆಫ್ ಕಲ್ಯಾಣ ಅಂಡ್ ಕಲಚೂರೀಸ್, ಕ.ವಿ.ವಿ., ಧಾರವಾಡ.

೧೨. ಡಾ॥ ಸೂರ್ಯನಾಥ ಕಾಮತ್., **ಕರ್ನಾಟಕ ಕೈಪಿಡಿ,** ಕರ್ನಾಟಕ ಇತಿಹಾಸ, ಅಕಾಡೆಮಿ (Pub) ಬೆಂಗಳೂರು, ೨೦೦೭.

೧೩. ಡಾ॥ ಎಸ್.ಕೆ. ಜೋಶಿ, **ಕಲ್ಲು ಕುಸುರಿತು,** ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೨೦೦೬.

ಮಂದರ್ಕೆ ನಿತ್ಯಾನಂದ ಪೈ*

ನೊಳಂಬಾಧಿರಾಜ ಒಂದನೇ ಮಹೇಂದ್ರನ ನಂದಿಗದ್ಯಾಣ

ದ್ವಿ ಮುದ್ರಾ ವಿಧಾನದ ಈ ನಂದಿ ಗದ್ಯಾಣವು ಇದುವರೆಗೆ ಲಭಿಸಿದ ನೊಳಂಬರ ನಾಣ್ಯಗಳಲ್ಲೇ ಬಹಳ ವಿಶೇಷವಾಗಿದೆ. ನೊಳಂಬರ ಇದುವರೆಗೆ ಲಭ್ಯ ನಾಣ್ಯಗಳಲ್ಲಿ ಕೇವಲ ಅವರ ಬಿರುದುಗಳು ಮಾತ್ರ ಇರುತ್ತಿದ್ದವು. ಉದಾ: 'ಶ್ರೀನೊಳಂಬ ನಾರಾಯಣ' (ಒಂದನೇ ಮಹೇಂದ್ರ; ಕ್ರಿ.ಶ. ೮೭೫–೮೯೭), 'ಶ್ರೀ ಇಮ್ಮಡಿ ನೊಳಂಬ ನಾರಾಯಣ', 'ವೀರನೊಳಂಬ' (ಎರಡನೆಯ ಮಹೇಂದ್ರ; ಕ್ರಿ.ಶ. ೯೭೫–೯೮೧), 'ನನ್ನಿ ನೊಳಂಬ' (ತ್ರೈಲೋಕ್ಯಮಲ್ಲ ಇಮ್ಮಡಿ ನೊಳಂಬ ಪಲ್ಲವ ಪೆರ್ಮನಡಿ; ಕ್ರಿ.ಶ. ೧೦೪೪–೫೪). ಇದರಲ್ಲಿ ಕೆಲವು ಬಿರುದುಗಳನ್ನು ಒಂದಕ್ಕಿಂತ ಹೆಚ್ಚಿನ ನೊಳಂಬರಸರು ಹೊಂದಿದ್ದರಿಂದ ಈ ನಾಣ್ಯಗಳು ಯಾರದ್ದೆಂದು ಖಚಿತವಾಗಿ ಹೇಳಲು ಕಷ್ಟಸಾಧ್ಯವಾಗಿತ್ತು. ಆದರೆ ಪ್ರಸ್ತುತ ಈ ಚಿನ್ನದ ಗದ್ಯಾಣದಲ್ಲಿ ಬಿರುದಿನೊಂದಿಗೆ ರಾಜನ ಹೆಸರು ಸಹಾ ಇರುವುದರಿಂದ ಈ ನಾಣ್ಯವು ಯಾವ ಅರಸನಿಗೆ ಸೇರಿದ್ದೆಂದು ಖಚಿತವಾಗಿ ಹೇಳಬಹುದು.

ಲೋಹ : ಚಿನ್ನ, ಆಕಾರ : ವೃತ್ತಾಕಾರ, ತೂಕ : ೩.೭೦೦ ಗ್ರಾಂ, ವ್ಯಾಸ : ೧೫ ಮಿ.ಮಿ.

ಮುಂಬದಿ : ಚುಕ್ಕೆಗಳಿಂದ ಆವೃತವಾದ ಗೆರೆಯ ವರ್ತುಲದಲ್ಲಿ ಬಲಬದಿಗೆ ಮುಖ ಮಾಡಿ ಬಾಲ ಎತ್ತಿ ಕುಳಿತಿರುವ ನೊಳಂಬರ ರಾಜ ಚಿಹ್ನೆಯಾದ 'ನಂದಿ' (ಬಸವ)ಯ ಚಿತ್ರವಿದ್ದು, ಅದರ ಎರಡೂ ಬದಿಗಳಲ್ಲಿ ದೀಪದ ಕಂಬಗಳಿವೆ. ಮೇಲ್ಗಡೆ ಸೂರ್ಯ ಚಂದ್ರ, ಚೌರಿಯಿದ್ದು ನಂದಿಯ ಕೆಳಗಡೆ ೯ನೇ ಶತಮಾನದ ಕನ್ನಡ ಲಿಪಿಯಲ್ಲಿ 'ಮಹೇಂದ್ರ' ([illegible]) ಎಂಬ ಹೆಸರಿದೆ. ನಂದಿ ಮತ್ತು ಲಿಪಿಗಳ ನಡುವೆ ಉದ್ದವಾದ ರೇಖೆಯಿದೆ.

ಹಿಂಬದಿ : ಚುಕ್ಕೆ ಮತ್ತು ಗೆರೆಗಳಿಂದಾದ ಎರಡು ವೃತ್ತಗಳ ಒಳಗೆ 'ಶ್ರೀ ತ್ರಿಭುವನ ಧೀರ' ([illegible]) ಎಂಬ ೯ನೇ ಶತಮಾನದ ಕನ್ನಡ ಲಿಪಿಯಿದ್ದು ಕೆಳಗಡೆ ಖಡ್ಗಾಕಾರದ ಒಂದು ಆಯುಧವಿದೆ.

ಒಂದನೇ ಪೊಳಲ್ಚೋರನ ಮಗನಾದ ಒಂದನೇ ಮಹೇಂದ್ರನು (ಕ್ರಿ.ಶ. ೮೭೫–೮೯೭) ನೊಳಂಬ ವಂಶದಲ್ಲೇ ಸಮರ್ಥ ಮತ್ತು ಮಹತ್ವಾಕಾಂಕ್ಷಿ ದೊರೆ. ಇವನ ತಾಯಿ ಗಂಗ ದೊರೆ ಒಂದನೇ ರಾಚಮಲ್ಲನ ಮಗಳು ಮತ್ತು ಒಂದನೇ ನೀತಿಮಾರ್ಗ ಎರೆಯಂಗನ ತಂಗಿಯಾದ 'ಜಯಬ್ಬೆ'. ಒಂದನೇ ಮಹೇಂದ್ರನು ಕ್ರಿ.ಶ. ೮೭೫ರಲ್ಲಿ ಸಿಂಹಾಸನವನ್ನೇರಿದ.



ಬಹಳ ಸಮರ್ಥ ದೊರೆಯಾದ ಈತನ ನೊಳಂಬವಾಡಿ ೩೨,೦೦೦ದ ಗಡಿ–ದಕ್ಷಿಣದಲ್ಲಿ ಧರ್ಮಪುರಿ, ನೈಋತ್ಯದಲ್ಲಿ ಮಂಡ್ಯ ಜಿಲ್ಲೆಯ ತಾಯಲೂರು, ಪೂರ್ವದಲ್ಲಿ ಚಿತ್ತೂರು, ಉತ್ತರದಲ್ಲಿ ಬಳ್ಳಾರಿ ಜಿಲ್ಲೆ, ಪಶ್ಚಿಮದಲ್ಲಿ ತುಮಕೂರು ಜಿಲ್ಲೆಗಳನ್ನು ಒಳಗೊಂಡಿತ್ತು.

ಒಂದನೇ ಮಹೇಂದ್ರನಿಗೆ ಗಂಗ ರಾಜಕುಮಾರಿ 'ಗಾಮಬ್ಬೆ'ಯೊಂದಿಗೆ ವಿವಾಹವಾಗಿತ್ತು. ಹೇಮಾವತಿಯ ಒಂದು ಶಾಸನದಲ್ಲಿ 'ಬಿಜ್ಜಮಹಾದೇವಿ', 'ಪರಮಮಹಾದೇವಿ', 'ಅಕ್ಕಬ್ಬೆ' ಮತ್ತು 'ದೊಂಬಬ್ಬೆ' ಎಂಬ ನಾಲ್ಕು ಮಹಿಳೆಯರು ಇವನ ಕೈ ಕೆಳಗೆ ಆಡಳಿತ ಮಾಡುತ್ತಿದ್ದುದು ವಿಶೇಷವಾಗಿತ್ತು. ಆದರೆ ಇವರು ಒಂದನೇ ಮಹೇಂದ್ರನ ಪತ್ನಿಯರೇ ಎಂದು ಸ್ಪಷ್ಟವಾಗಿಲ್ಲ.

ಬಾಣ, ವೈದುಂಬರನ್ನು ಸೋಲಿಸಿದ ನಂತರ ಒಂದನೇ ಮಹೇಂದ್ರನು ಗಂಗ ದೊರೆ ಸಂಬಂಧಿ ಎರಡನೇ ರಾಚಮಲ್ಲನನ್ನು ಎದುರಿಸಿದ. ಒಂದನೇ ಮಹೇಂದ್ರನ ಮಹತ್ವಾಕಾಂಕ್ಷೆಗೆ ವೈವಾಹಿಕ ಸಂಬಂಧಗಳು ಅಡ್ಡ ಬರಲಿಲ್ಲ. ತೆಲುಗು ಚೋಡರು, ಬಾಣರು, ವೈದುಂಬರರು ಮತ್ತು

* ಗಣೇಶ್ ಎಂಟರ್‌ಪ್ರೈಸಸ್, ಹಳೇ ಬಸ್‌ಸ್ಟ್ಯಾಂಡ್, ಮೂಡಬಿದಿರೆ.

ತಲಕಾಡಿನ ಗಂಗರೊಂದಿಗೆ ಮಾಡಿದ ಯುದ್ಧದ ನಂತರ ಇವನು ತನ್ನ ಸಾಮ್ರಾಜ್ಯದ ಗಡಿಗಳನ್ನು ನಾಲ್ಕು ದಿಕ್ಕುಗಳಲ್ಲೂ ವಿಸ್ತರಿಸಿದ. ಗಂಗ ನೊಳಂಬರ ಪರಸ್ಪರ ಕಾದಾಟ ಮುಂದುವರಿದು ಮಂಡ್ಯ ಜಿಲ್ಲೆಯ ತಾಯಲೂರಿನ ಶಾಸನವೊಂದು ಇವನ ತಲಕಾಡಿನ ದಂಡಯಾತ್ರೆಯನ್ನು ದಾಖಲಿಸಿದೆ. ಧರ್ಮಪುರಿಯ ಶಾಸನವು ಈತನನ್ನು ಗಂಗಮಂಡಲ ೯೬,೦೦೦ದ ಏಕೈಕ ಅಧಿಪತಿಯೆಂದು ಸಾರಿದೆ. ಆದರೆ ಗಂಗಮಂಡಲದ ಮೇಲಿನ ಈತನ ಹಿಡಿತ ಕೆಲಕಾಲ ಮಾತ್ರವಿತ್ತು. ಎರಡನೆಯ ರಾಚಮಲ್ಲನು ಸಹೋದರ ಒಂದನೇ ಬೂತುಗ ಮತ್ತು ಅವನ ಮಗನಾದ ನೀತಿಮಾರ್ಗ ಎರೆಯಪ್ಪನ ಸಹಾಯದಿಂದ ಗಂಗವಾಡಿಯನ್ನು ಒಂದನೇ ಮಹೇಂದ್ರನಿಂದ ಮರುವಶ ಮಾಡಿಕೊಂಡ. ಹುಂಚದ ಶಾಸನವೊಂದು ಎರೆಯಪ್ಪನು ಒಂದನೇ ಮಹೇಂದ್ರನನ್ನು ಸಂಹರಿಸಿ 'ಮಹೇಂದ್ರಾಂತಕ' ಎಂಬ ಬಿರುದು ಪಡೆದ ವಿಷಯವನ್ನು ತಿಳಿಸುತ್ತದೆ.

ಹೇಮಾವತಿ ಶಾಸನವು ಒಂದನೇ ಮಹೇಂದ್ರನನ್ನು 'ಸೂರ್ಯನಂತೆ ತೇಜಸ್ವಿ, ಭೂಲೋಕದ ಇಂದ್ರನೆಂದು, ಇವನ ಕಾಲುಗಳು ವೈರಿ ರಾಜರುಗಳ ಕಿರೀಟಗಳಿಂದ ಸುತ್ತಲ್ಪಟ್ಟಿವೆ ಯೆಂದು, ಕಾಮಧೇನು'ವೆಂದು ವರ್ಣಿಸಿವೆ. ಧರ್ಮಪುರಿಯ ಒಂದು ಶಾಸನವು ಒಂದನೇ ಮಹೇಂದ್ರನನ್ನು ಹೊಗಳುತ್ತಾ ಮಹಾಬಲಿ ಕುಲವಿಧ್ವಂಸಕನೆಂದು ವರ್ಣಿಸುತ್ತದೆ. ಇವನು ಮಹಾಶಿವಭಕ್ತ. ತನ್ನ ಅರಮನೆಯನ್ನೇ ಶಿವನಿಗೆ ಅರ್ಪಿಸಿ ಅಲ್ಲಿ ಮಹೇಂದ್ರೇಶ್ವರನನ್ನು ಸ್ಥಾಪಿಸಿದನೆಂದು ಬರಗೂರಿನ ಶಾಸನ ತಿಳಿಸುತ್ತದೆ. ಶೈವನಾದರೂ ಪರಮತ ಸಹಿಷ್ಣುವಾಗಿದ್ದ ಈತ ಬಸದಿಗೆ ದಾನ ಕೊಟ್ಟ ವಿವರ ಧರ್ಮಪುರಿ ಶಾಸನ ಹೇಳುತ್ತದೆ. 'ಸೋರೆಮಡಿ'ಯುದ್ಧದ ನಂತರ ಅನಂತಪುರ ಜಿಲ್ಲೆಯ ಕಲ್ಯಾಣದುರ್ಗದ ಕಂಬದೂರಿನ ಸಕ ೮೦೫, ಸೋಬನ ಸಂವತ್ಸರ ಅಂದರೆ ಕ್ರಿ.ಶ. ೮೮೩–೮೮೪ರ ಶಿಲಾಶಾಸನವೊಂದು ಸೂರ್ಯ ದೇವಸ್ಥಾನ (ಆದಿತ್ಯಗೃಹ)ಕ್ಕೆ ದತ್ತಿ ಕೊಟ್ಟ ವಿವರಗಳನ್ನು ಹೇಳುತ್ತದೆ. ಇದೇ ಶಾಸನವು ಇವನನ್ನು 'ತ್ರಿಭುವನಧೀರ' ಅರ್ಥಾತ್ ಮೂರು ಲೋಕದ ಒಡೆಯನೆಂದು ವರ್ಣಿಸಿದೆ. ಇದು ಇವನು ಬಾಣ, ವೈದುಂಬರರನ್ನು ಸೋರೆಮಡಿ ಯುದ್ಧದಲ್ಲಿ ಸೋಲಿಸಿದ್ದನ್ನು ಸೂಚಿಸುತ್ತದೆ.

ಒಂದನೇ ಮಹೇಂದ್ರನ ಮೊಮ್ಮಗನಾದ ಇರಿವ ನೊಳಂಬ ದಿಲೀಪ (ಕ್ರಿ.ಶ. ೯೪೧–೯೬೮) ಕೂಡ 'ತ್ರಿಭುವನ ಧೀರ' ಎಂಬ ಬಿರುದನ್ನು ಹೊಂದಿದ್ದ ವಿಷಯವನ್ನು ಮೇಲ್ಪತಿ ಶಾಸನವು ತಿಳಿಸುತ್ತದೆಯಾದರೂ ಈ ನಾಣ್ಯದ ಮುಂಭಾಗದಲ್ಲಿ ನಂದಿಯ ಕೆಳಗೆ ಮಹೇಂದ್ರ ಎಂಬ ಲಿಪಿಯು ಇರುವುದರಿಂದ ಈ ಚಿನ್ನದ ನಾಣ್ಯವನ್ನು ಒಂದನೇ ಮಹೇಂದ್ರನೇ ಟಂಕಿಸಿದನೆಂದು ಖಚಿತವಾಗಿಯು ಹೇಳಬಹುದು. ಇದರಿಂದ ನೊಳಂಬರ ನಾಣ್ಯಪರಂಪರೆಗೆ 'ಅಪರೂಪ'ದ ಈ ನಾಣ್ಯವು ಸೇರ್ಪಡೆಯಾದಂತಾಯಿತು.

ಆಧಾರಸೂಚಿ

೧. M.S. Krishnamurthy., The Nolambas-A political and cultural study. prasaranga University of Mysore-1980.

೨. ರಾಜಪ್ಪದಳವಾಯಿ–'ನೊಳಂಬ ಅರಸರು' ದಕ್ಷಿಣ ಕರ್ನಾಟಕದ ಅರಸುಮನೆತನಗಳು–ಇದರಲ್ಲಿನ ಒಂದು ಪ್ರಬಂಧ, (ಸಂ), ಡಾ. ವಸು ಎಂ.ವಿ., ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೧.

ಡಾ. ಅಣ್ಣಯ್ಯ ತೈಲೂರು*

ಹೊಯ್ಸಳ ವೀರ ಸೋಮೇಶ್ವರನ ಕಾಲದ ಧಾರ್ಮಿಕ ಪಂಥಗಳು

ಕ್ರಿ.ಶ. ೧೩ನೇ ಶತಮಾನದಲ್ಲಿ ಆಡಳಿತ ನಡೆಸಿದ ದಕ್ಷಿಣ ಭಾರತದ ಪ್ರಮುಖ ರಾಜ ಮನೆತನವೆಂದರೆ ದ್ವಾರ ಸಮುದ್ರದ ಹೊಯ್ಸಳರು ಈ ಮನೆತನದಲ್ಲಿ ಕ್ರಿ.ಶ. ೧೨೩೫ – ೧೨೫೫ರವರೆಗೆ ಆಡಳಿತ ನಡೆಸದ ವೀರ ಸೋಮೇಶ್ವರನು ಧರ್ಮಾಭಿಮಾನಿಯಾಗಿದ್ದು ವಿವಿಧ ಧರ್ಮಗಳಿಗೆ ಉತ್ತೇಜನ ನೀಡಿ ಧಾರ್ಮಿಕ ಸಹಿಷ್ಣುತಾ ಮನೋಭಾವವನ್ನು ಪ್ರದರ್ಶಿಸಿದನು. ಜೈನಧರ್ಮ ಹೊಯ್ಸಳರ ಕಾಲದಲ್ಲಿ ಉತ್ತುಂಗಕ್ಕೇರಿದರೂ ಕೂಡ ಇತರ ಧರ್ಮಗಳಾದ ಶೈವ, ವೀರಶೈವ, ವೈಷ್ಣವ ಧರ್ಮಗಳು ಕೂಡ ಬೆಳವಣಿಗೆ ಹೊಂದಿರುವುದು ಗಮನಾರ್ಹವಾಗಿದೆ. ಹಾಗೆಯೇ ಸೋಮೇಶ್ವರ ಶಿಕ್ಷಣ ಪ್ರೇಮಿಯೂ ಆಗಿದ್ದು ಅಗ್ರಹಾರಗಳಿಗೆ ದಾನದತ್ತಿಗಳನ್ನು ನೀಡಿದ್ದಾನೆ.

ಈತನ ಕಾಲದ ಪ್ರಮುಖ ಧಾರ್ಮಿಕ ಪಂಥಗಳ ವಿವರಣೆ ಈ ಕೆಳಕಂಡಂತಿದೆ.

ಜೈನ ಧರ್ಮ

ಹೊಯ್ಸಳರ ಉಗಮ ಜೈನಮುನಿ ಸುದಾತ್ತಾಚಾರ್ಯನಿಂದ ಆರಂಭಗೊಂಡಿದ್ದರಿಂದ ಇವರ ಕಾಲದಲ್ಲಿ ಜೈನ ಧರ್ಮಕ್ಕೆ ವಿಶಿಷ್ಟ ಸ್ಥಾನವನ್ನು ನೀಡಲಾಗಿದೆ.

ವೀರಸೋಮೇಶ್ವರ ಜೈನರ ಬಗ್ಗೆ ಸಹಿಷ್ಣುತೆಯುಳ್ಳವನಾಗಿದ್ದು ಈತ ತನ್ನ ಆಡಳಿತಾವಧಿಯಲ್ಲಿ ಜೈನಧರ್ಮವನ್ನು ಪ್ರೋತ್ಸಾಹಿಸಿದನು. ಜೈನ ಗುರುವಾದ ಮೂಲ ಸಂಘದೇಸಿಂಗದ ಸಕಲ ಚಂದ್ರಮುನಿಯು ತೀರಿಕೊಂಡಾಗ ಹಳೇಬೀಡಿನ ನಾಗರೀಕರು ಸೋಮೇಶ್ವರ ಕಾಲದಲ್ಲಿ ಅವರ ಸ್ಮರಣಾರ್ಥ ಬೀಳಚದಲ್ಲಿ ಒಂದು ಬಸದಿಯನ್ನು ನಿರ್ಮಿಸಿದರು ಎಂದು ಹೇಳಲಾಗಿದೆ.[೧]

ಶೈವಧರ್ಮ

ಭಾರತದ ಅತ್ಯಂತ ಪುರಾತನ ಧರ್ಮಗಳಲ್ಲಿ ಶೈವ ಧರ್ಮವೂ ಒಂದಾಗಿದೆ. ರುದ್ರನ ಆರಾಧನೆಯು ವೇದದ ಮೂಲವಾಗಿದೆ. ಶೈವಧರ್ಮವು ಶೈವ ಆಗಮಗಳ ಮೇಲೆ ಆಧಾರಿತವಾಗಿತ್ತು.

ಸೋಮೇಶ್ವರನ ಕಾಲದಲ್ಲಿ ಶೈವಧರ್ಮವು ಜನರ ಜೀವನದ ಮೇಲೆ ಅಗಾಧವಾದ ಪ್ರಭಾವವನ್ನು ಬೀರಿತ್ತು ಮತ್ತು ಎಲ್ಲಾ ವರ್ಗದ ಜನಗಳನ್ನು ಧಾರ್ಮಿಕವಾಗಿ, ಸಾಮಾಜಿಕವಾಗಿ ನೈತಿಕವಾಗಿ ಸಂಘಟಿತ ಚಟುವಟಿಕೆಗಳ ಮೂಲಕ ಪ್ರಚೋದಿಸಿತ್ತು. ಸೋಮೇಶ್ವರ ಶೈವ ಮತಕ್ಕೆ ಉತ್ತೇಜನ ನೀಡಿದ್ದಲ್ಲದೇ ಈತನು ಒಬ್ಬ ಶೈವನಾಗಿದ್ದನು.

ಶೈವಧರ್ಮವು ಜನರ ಜೀವನದ ಮೇಲೆ ಅಗಾಧವಾದ ಪ್ರಭಾವವನ್ನು ಬೀರಿತ್ತು ಮತ್ತು ಎಲ್ಲಾ ವರ್ಗದ ಜನಗಳನ್ನು ಧಾರ್ಮಿಕವಾಗಿ, ಸಾಮಾಜಿಕವಾಗಿ ನೈತಿಕವಾಗಿ ಮತ್ತು ಸಂಘಟಿತ ಚಟುವಟಿಕೆಗಳ ಮೂಲಕ ಪ್ರಚೋದಿಸಿತ್ತು.

ವೀರಸೋಮೇಶ್ವರನು ಶೈವ ಮತಕ್ಕೆ ಪ್ರೋತ್ಸಾಹ ನೀಡಿದ್ದಲ್ಲದೇ ಈತನು ಒಬ್ಬ ಶೈವನಾಗಿದ್ದನು. ಸೋಮೇಶ್ವರನು ಶೈವಮತದ ಪಕ್ಷಪಾತವನ್ನು ಹೊಂದಿದ್ದ ಎಂಬುದಕ್ಕೆ ಒಂದು ರಸಾವತ್ತಾದ ಕಥೆಯಿದೆ. ಕುಷ್ಠರೋಗದಿಂದ ಬಳಲುತ್ತಿದ್ದ ಸೋಮೇಶ್ವರನು ದೋರಸಮುದ್ರದ ಬಳಿಯ ಪುಷ್ಪಗಿರಿ ಬೆಟ್ಟದಲ್ಲಿ ವಿಶ್ರಾಂತಿ ತೆಗೆದುಕೊಳ್ಳಲು ಹೋದನು. ಅಲ್ಲಿ ದೇವವಾಣಿಯೊಂದು ಈತನಿಗೆ ಒಂದು ಶಿವದೇವಾಲಯ ನಿರ್ಮಾಣ ಮಾಡಿ ಪೂಜೆ ಮಾಡಿದರೆ ಖಾಯಿಲೆ ಗುಣವಾಗುತ್ತೆಂದು ನುಡಿಯಿತು.[೨] ಈತನು ಖಾಯಿಲೆಯಿಂದ ನರಳುತ್ತಿದ್ದ ಎಂಬುದಕ್ಕೆ ಸೋಮೇಶ್ವರನ ಆಳ್ವಿಕೆಯ ಹದಿನೈದು ಹಾಗೂ ಹದಿನೇಳನೇ ವರ್ಷಗಳಲ್ಲಿ ಸೇಲಂ ಜಿಲ್ಲೆಯಲ್ಲಿ ದೊರೆತ ಎರಡು ಶಾಸನಗಳಿಂದ ಮಾಹಿತಿಯನ್ನು ಊಹಿಸಬಹುದಾಗಿದೆ. ಇವುಗಳಿಂದ ರಾಜನ ಯೋಗಕ್ಷೇಮದ ದೃಷ್ಟಿಯಿಂದ ಸೋಮೆಯ ದಂಡನಾಯಕ ಹಾಗೂ ಎಪ್ಪತ್ತೊಂಬತ್ತು ಜಿಲ್ಲೆಗಳ ನಾಗರೀಕರು ದೇವಸ್ಥಾನಕ್ಕೆ ಭೂದಾನ ಮಾಡಿದುದರ ಬಗ್ಗೆ ಬರೆಯುತ್ತವೆ.[೩] ಕೆಲವು ಶಾಸನಗಳ ಸಾಕ್ಷಿಯಿಂದ ಸೋಮೇಶ್ವರನು ಶೈವ ಮತವನ್ನು ಅವಲಂಬಿಸಿದ್ದ ಎಂಬುದು ರುಜುವಾತಾಗುತ್ತದೆ. ಉದಾಹರಣೆಗೆ ಕಿ.ಶ. ೧೨೫೩ ರಲ್ಲಿ ಈತನು ಕಣ್ಣಾನೂರಿನ ಜಂಬುಕೇಶ್ವರ ದೇವಾಲಯದಲ್ಲಿ ಅತನ ಅಜ್ಜ, ಅಜ್ಜಿ, ತಂದೆ

* ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಪಟ್ಟಣ.

ಮತ್ತು ತಾಯಿಯ ಸ್ಮರಣಾರ್ಥ ವಲ್ಲಾಲೀಶ್ವರ, ಪದುಮಾಲೀಶ್ವರ, ವೀರ ನರಸಿಂಗೀಶ್ವರ ಮತ್ತು ಸೋಮಲೀಶ್ವರ ಎಂಬ ಮೂರ್ತಿಗಳನ್ನು ಪ್ರತಿಷ್ಠಾಪಿಸಿನೆಂದು ತಿಳಿದುಬರುತ್ತದೆ.[೪]

ವೀರಶೈವಧರ್ಮ

ಹೊಯ್ಸಳರ ಯುಗವು ಸ್ಫೂರ್ತಿಯುತ ಬಸವೇಶ್ವರರ ನಾಯಕತ್ವದಡಿಯಲ್ಲಿ ವೀರಶೈವ ಧರ್ಮವು ಪ್ರತಿಷ್ಠೆಯ ಉತ್ತುಂಗಕ್ಕೆ ಏರಿತು. ಪ್ರೊ. ಮುಗಳಿಯವರು ಹೇಳುವಂತೆ ಅದೊಂದು ಸರಿಸಾಟಿಯಿಲ್ಲದ ಆಧ್ಯಾತ್ಮಿಕ ಉತ್ಸಾಹವನ್ನು ಹೊಂದಿದ್ದ ಯುಗವಾಗಿತ್ತು. ಈ ಕಾಲದಲ್ಲಿ ಕರ್ನಾಟಕ ಎಲ್ಲಾ ಭಾಗಗಳಲ್ಲಿ ವೀರಶೈವ ಧರ್ಮವು ಪ್ರಚಾರ ಹೊಂದಿತ್ತು.

ವೀರಸೋಮೇಶ್ವರ ಕಾಲದಲ್ಲಿ ಕುಂದನಂಬಿಯು ಕಣ್ಣಾನೂರಿನ ಕುಂಜನ ಹೆಸರಿನಲ್ಲಿ ಶಿವಲಿಂಗವೊಂದನ್ನು ಪ್ರತಿಷ್ಠಾಪಿಸಿ ಪೂಜೆ ಪುನಸ್ಕಾರಕ್ಕಾಗಿ ಭೂದಾನವನ್ನು ಮಾಡಿದನು. ಆಲೂರಿನ ಎಲ್ಲಾ ಬ್ರಾಹ್ಮಣರು ದಾನವನ್ನು ನೀಡಿರುವುದು ತಿಳಿದುಬರುತ್ತದೆ.[೫] ಕ್ರಿ.ಶ. ೧೨೩೫ರಲ್ಲಿ ವೀರಸೋಮೇಶ್ವರ ಕಂದಾಯದ ಅಧಿಕಾರಿಯಾದ ಅಡ್ಡಾಯದ ಹರಿಹರ ದಂಡನಾಯಕ ಮತ್ತು ಅವನ ಸಹೋದರರು ಅವರ ತಾಯಿಯ ಹೆಸರಿನಲ್ಲಿ ಮಂಡ್ಯ ಜಿಲ್ಲೆಯ ಬಸರಾಳುವಿನ ಬಳಿ ಮಲ್ಲಿಕಾರ್ಜುನ ದೇವಾಲಯ ವನ್ನು ಕಟ್ಟಿಸಿದರು ಮತ್ತು ದೇವರ ಸೇವೆಗಾಗಿ ಸಹಾಯ ಧನವನ್ನು ಪಡೆದಿದ್ದುದ್ದು ತಿಳಿದುಬರುತ್ತದೆ.[೬] ಸೋಮೇಶ್ವರನ ಅಧಿಕಾರಿ, ಮಂತ್ರಿ ಹಾಗೂ ದಂಡನಾಯಕನಾಗಿದ್ದು ಬೊಮ್ಮಣ್ಣನು ರಾಜನಿಂದ ತುಮಕೂರು ಜಿಲ್ಲೆಯ ಕೊಂಡಜ್ಜಿ, ಹಳ್ಳಿ ಹಿರಿಯೂರು ಗ್ರಾಮಗಳನ್ನು ಪಡೆದು ಅವುಗಳನ್ನು ಶಿವಪರವಾಗಿ ಮಾಡಿ ನಂತರ ಅವುಗಳನ್ನು ಶಿವಯೋಗಿ ಚಿಕ್ಕ ಅಘಮ್ಮ ದೇವನಿಗೆ ಕೊಡುಗೆಯಾಗಿ ನೀಡಿದನು. ಆ ಊರ ದೇವರ ಪೂಜೆಗೆಂದು ಎರಡು ಭಾಗಗಳನ್ನು ನೀಡಲಾಯಿತು. ಎಲ್ಲಾ ದಾನಿಗಳು ಲಿಂಗಾಯಿತರಾಗಿದ್ದು ಅವರಲ್ಲಿ ಕೆಲವರು ಮಹಿಳೆಯಾಗಿದ್ದರು.[೭] ಸೋಮೇಶ್ವರನು ತನ್ನ ತಾಯಿಯ ಒಳಿತಿಗಾಗಿ ಹಾಗೂ ತಿರುಚಿ ಜಿಲ್ಲೆಯ ಜಂಬುಕೇಶ್ವರಂನ ಪೂಸಳೇಶ್ವರಂ ಉಡಿಯೂರ್ ದೇವಸ್ಥಾನ ದಲ್ಲಿನ ಪೂಜೆಗಾಗಿ ನಾಲ್ಕು ಹಳ್ಳಿಗಳ ತೆರಿಗೆಯನ್ನು ದಾನ ಮಾಡಿದನು.[೮] ಸೋಮೇಶ್ವರನ ಆಳ್ವಿಕೆಯಲ್ಲಿ ನಲ್ಲಶೆಟ್ಟಿ ಯೆಂಬುವನು ಶಿವದೇವಸ್ಥಾನವನ್ನು ಕಟ್ಟಿಸಿ, ಪುನರ್‌ಸ್ಥಾಪಿಸಿ ಕಲ್ಯಾಣಜಿಯನ ಪಾದಗಳನ್ನು ತೊಳೆದು ದೇವರಿಗಾಗಿ ಭೂ ದಾನವನ್ನು ಮಾಡಿದನು.[೯] ಕ್ರಿ.ಶ. ೧೨೪೩ರಲ್ಲಿ ಕಣ್ಣಾನೂರಿನ ಕೆಲವು ಮಹಾಜನರು ಸ್ವಲ್ಪ ಭೂಮಿಯನ್ನು ಖರೀದಿಸಿ ಹೋಮ ಮಾಡುವ ಸಲುವಾಗಿ ಅಗ್ನಿಷ್ಠಿಗೆಗೆ ಒಂದು ಗರ್ಭಗುಡಿಯನ್ನು ಕಟ್ಟಲು ಅದನ್ನು ದಾನ ಮಾಡಿದರು.[೧೦]

ವೈಷ್ಣವ ಧರ್ಮ

ಶಿವನ ಆರಾಧನೆಯಂತೆ ವಿಷ್ಣುವಿನ ಆರಾಧನೆಯೂ ವೇದಗಳಷ್ಟು ಪುರಾತನವಾದುದು. ವೇದಗಳ ಕಾಲದಿಂದಲೇ ಭಾಗವತ ಪಂಥವು ಭಕ್ತಿಯ ಸಿದ್ಧಾಂತವನ್ನು ಅಭಿವೃದ್ಧಿಪಡಿಸಿತು. ದಕ್ಷಿಣ ಭಾರತದಲ್ಲಿ ಹಾಗೂ ತಮಿಳುನಾಡಿನಲ್ಲಿ ಈ ಧರ್ಮ ಉತ್ತುಂಗಕ್ಕೇರಿತು. ವೀರಸೋಮೇಶ್ವರನು ಶೈವ ಮತಕ್ಕೆ ಹೆಚ್ಚು ಪ್ರಾಧಾನ್ಯತೆಯನ್ನು ನೀಡಿದ್ದುದ್ದರಿಂದ ವೈಷ್ಣವ ಮತವನ್ನು ನಿರ್ಲಕ್ಷಿಸಿದುದು ತಿಳಿದುಬರುತ್ತದೆ. ಕಣ್ಣಾನೂರಿನ ಜಂಬುಕೇಶ್ವರ ದೇವಾಲಯದಲ್ಲಿ ಆತನ ಅಜ್ಜ, ಅಜ್ಜಿ, ತಂದೆ ಮತ್ತು ತಾಯಿಯ ಸ್ಮರಣಾರ್ಥ ಮೂರ್ತಿಗಳನ್ನು ಪ್ರತಿಷ್ಠಾಪಿಸಿದಾಗ ಆ ದ್ವೀಪದಲ್ಲಿ ದೇವಾಲಯಗಳನ್ನು ನಿರ್ಲಕ್ಷಿಸಲಾಯಿತು.[೧೧] ಜಾತವರ್ಮನ್ ಸುಂದರ ಪಾಂಡ್ಯನೊಬ್ಬ ಮಾತ್ರ ವೈಷ್ಣವ ದೇವಾಲಯಗಳನ್ನು ದುರಸ್ತಿಗೊಳಿಸಿರುವುದು ಕಂಡು ಬರುತ್ತದೆ. ಈತನ ಒಂದು ಶಾಸನವು ಸೋಮೇಶ್ವರನನ್ನು ಕುರಿತು ಈ ರೀತಿಯಾಗಿ ವರ್ಣಿಸುತ್ತದೆ. ಸೋಮೇಶ್ವರನು "ಕನ್ನಡದ ಚಂದಿರ ಈ ಶ್ರೀರಂಗಂನ ತಾವರೆ ಕೊಳವನ್ನು ಅಸಹ್ಯ ಸ್ಥಿತಿಗೆ ತಂದಿದ್ದನು"[೧೨] ಈ ಅಂಶವು ಅವನು ವೈಷ್ಣವ ಧರ್ಮದ ಬಗ್ಗೆ ಹೊಂದಿದ್ದ ಉದಾಸೀನತೆಯನ್ನು ಸ್ಪಷ್ಟಪಡಿಸುತ್ತದೆ. ಸೋಮೇಶ್ವರನು ತನ್ನ ಸಾವಿಗೆ ಸ್ವಲ್ಪ ಮುನ್ನ ಮೂರು ಛತ್ರಿಯನ್ನು ವಿಜಯ ತೀರ್ಥಂಕರ ಬಸದಿಯಲ್ಲಿ ಸ್ಥಾಪಿಸಿದ್ದರಿಂದ ಅದಕ್ಕೆ ಗೌರವವನ್ನು ಅರ್ಪಿಸಲು ತನ್ನ ಪ್ರಜೆಗಳನ್ನು ಕರೆಸಿ ಅನಂತರ ಜೈನ ದೇವರುಗಳಿಗೆ ನಮನವನ್ನು ಸಲ್ಲಿಸುದುದಾಗಿ ಹೇಳಲಾಗಿದೆ.[೧೩] ಆದರೂ ವೀರ ಸೋಮೇಶ್ವರನು ಶ್ರೀರಂಗಂ ದೇವಾಲಯಕ್ಕೆ ಅಕ್ಕಿಯ ಕಾಣಿಕೆಯನ್ನು ನೀಡಿರುವುದು ಕಾಣಸಿಗುತ್ತದೆ.[೧೪]

ಅಗ್ರಹಾರಗಳು

ವಿದ್ಯಾವಂತ ಬ್ರಾಹ್ಮಣರು ತಮ್ಮ ವಸಾಹತುಗಳನ್ನು ನಾಡಿನುದ್ದಕ್ಕೂ ಹರಡುವುದರೊಂದಿಗೆ (ಸ್ಥಾಪಿಸುವುದ ರೊಂದಿಗೆ) ಶಿಕ್ಷಣಕ್ಕೆ ವ್ಯವಸ್ಥಿತ ಉತ್ತೇಜನವು ದೊರೆಯಿತು. ನಾಡಿನ ಪ್ರತಿ ಮೂಲೆಮೂಲೆಯಲ್ಲೂ ಹೆಚ್ಚು ಸಂಖ್ಯೆಯ ಅಗ್ರಹಾರಗಳು ತಲೆ ಎತ್ತಿದವು. ರಾಜ್ಯದ ಹಾಗೂ ಜನರ ಔದಾರ್ಯದ ದಿಸೆಯಿಂದಾಗಿ ಇವುಗಳು ಅಸ್ತಿತ್ವಕ್ಕೆ ಬಂದವು. ಅಗ್ರಹಾರವು ಬ್ರಾಹ್ಮಣರ ವಸತಿಯಾಗಿತ್ತು. ಎಲ್ಲ ವರ್ಗದ ದಾನಿಗಳು ನೀಡುತ್ತಿದ್ದ ದಾನದಿಂದ ಇದನ್ನು ನಡೆಸಲಾಗುತ್ತಿತ್ತು. ಇದು ಸಾಮಾನ್ಯವಾಗಿ ಒಂದು ಹಳ್ಳಿಯಾಗಿರುತ್ತಿದ್ದು ನಗರಗಳಿಂದ ಹೊರಭಾಗದಲ್ಲಿರುತ್ತಿತ್ತು. ಸುಂದರ ನಿಸರ್ಗದ ವಾತಾವರಣದ ಮಧ್ಯೆ ಪ್ರತ್ಯೇಕ ಕೇಂದ್ರವಾಗಿರುತ್ತಿತ್ತು. ಇದೊಂದು ವಸತಿ ವಿಶ್ವವಿದ್ಯಾಲಯ ಕೇಂದ್ರವಾಗಿದ್ದು ಅಲ್ಲಿನ

ವಿದ್ಯಾರ್ಥಿಗಳಿಗೆ ಉಚಿತ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಹಲವಾರು ಸಂದರ್ಭಗಳಲ್ಲಿ ಒದಗಿಸಲಾಗುತ್ತಿತ್ತು.[೧೫]

ಈ ಕಾಲದ ಹಲವಾರು ಶಾಸನಗಳು ವಿಧವಿಧವಾದ ಅಗ್ರಹಾರಗಳು ಸ್ಥಾಪನೆಯ ಬಗ್ಗೆ ಮಾಹಿತಿಯನ್ನು ನೀಡುತ್ತವೆ. ಮೂರು ಶತಮಾನಗಳ ಕಾಲ ವಿದ್ಯಾಭ್ಯಾಸದ ಪ್ರತಿನಿಧಿಯಾಗಿದ್ದ ಹಾಗೂ ಈ ಪ್ರದೇಶದಲ್ಲಿ ಹುಲುಸಾಗಿ ಬೆಳೆದ ಸುಪ್ರಸಿದ್ಧ ಅಗ್ರಹಾರಗಳು ಇಣುಕು ನೋಟವನ್ನು ಈ ಶಾಸನಗಳು ನಮಗೆ ನೀಡುತ್ತವೆ. ಬಹುಶಃ ಶ್ರೋತ್ರಿಯ ಗ್ರಾಮವು ಅಗ್ರಹಾರದ ಇನ್ನೊಂದು ಹೆಸರಾಗಿತ್ತೆಂದು ಕಾಣಿಸುತ್ತದೆ.[೧೬]

ಈ ಅಗ್ರಹಾರಗಳಲ್ಲಿ ಇತರೆ ಧರ್ಮಗಳ ಗುಂಪಿನ ಜನರೂ ಇದ್ದರು. ಆದರೆ ದಾನ ದತ್ತಿಗಳು ಬ್ರಾಹ್ಮಣರ ಮೇಲ್ವಿಚಾರಣೆಯಲ್ಲಿದ್ದವು. ಇವರದು ಒಂದು ಸಭೆಯಿತ್ತು. ಈ ಸಭೆಯು ಅಗ್ರಹಾರದ ಚಟುವಟಿಕೆಗಳನ್ನು ನೋಡಿ ಕೊಂಡು ನಿಯಂತ್ರಿಸುತ್ತಿತ್ತು.ಈ ಸಭೆಯ ಸದಸ್ಯರನ್ನು ಮಹಾಜನರು ಎಂದು ಕರೆಯಲಾಗುತ್ತಿತ್ತು. ಈ ಸಭೆಯು ನಾಗರೀಕ ಮತ್ತು ಸೇನೆಯ ಕರ್ತವ್ಯಗಳನ್ನು ನಿರ್ವಹಿಸುತ್ತಿತ್ತು.[೧೭] ಈ ಅಗ್ರಹಾರಗಳನ್ನು ಅರಸರು ಹಾಗೂ ಅವರ ಸಾಮಂತರು ಈ ಕಾಲದುದ್ದಕ್ಕೂ ಉಂಬಳಿಯನ್ನು ಕೊಡುವುದರೊಂದಿಗೆ ಸ್ಥಾಪಿಸುತ್ತಾ ಹೋದರು.[೧೮]

ಕ್ರಿ.ಶ. ೧೨೫೨ ರಲ್ಲಿ ಹೊಯ್ಸಳರ ರಾಜ ಸೋಮೇಶ್ವರನ ಮಂತ್ರಿ ಹಾಗೂ ದಂಡನಾಯಕನಾದ ಬೊಮ್ಮಣ್ಣನು ರಾಜನಿಂದ ಕೊಂಡಜ್ಜಿ ಮತ್ತು ಹಳ್ಳಿ ಹಿರಿಯೂರು ಗ್ರಾಮಗಳನ್ನು ಸ್ವೀಕರಿಸಿ ಅವುಗಳನ್ನು ಶಿವಪುರ ಅಗ್ರಹಾರವನ್ನಾಗಿ ಮಾಡಿದನು.[೧೯]

ಅಗ್ರಹಾರದ ಬ್ರಾಹ್ಮಣರು ಸಾಮಾನ್ಯವಾಗಿ ವಿದ್ಯಾವಂತ ಪುರುಷರಾಗಿರುತ್ತಿದ್ದರು. ಇವರಲ್ಲಿ ಕೆಲವರ ಸ್ಪಷ್ಟ ಚಿತ್ರಣವನ್ನು ಶಾಸನಗಳು ನಮಗೆ ನೀಡುತ್ತವೆ. ಹಾಗು ಬ್ರಾಹ್ಮಣರನ್ನು ಹೊಗಳಿವೆ. ಸುಪ್ರಸಿದ್ಧ ಮತ್ತು ಹುಲುಸಾಗಿ ಬೆಳೆದಿದ್ದ ಅಗ್ರಹಾರಗಳಲ್ಲಿ ಕುಕ್ಕನೂರು ಅಗ್ರಹಾರ ಅಥವಾ ಇತ್ತೀಚಿನ ಕುಕ್ನೂರುವು ಒಂದಾಗಿತ್ತು. ಕುಕ್ಕನೂರು ೩೦೦ರ ಮುಖ್ಯ ಕಛೇರಿಯಾಗಿತ್ತು. ಇದೊಂದು ಪ್ರಸಿದ್ದ ಅಗ್ರಹಾರವಾಗಿದ್ದು ಇಲ್ಲಿ ೧೦೦೦ ಮಹಾಜನರು ಅದರ ಪ್ರತಿನಿಧಿಗಳಾಗಿದ್ದರು. ಇವರು ವೇದ ಮತ್ತು ಜ್ಞಾನದ ಇತರ ಕ್ಷೇತ್ರಗಳಲ್ಲಿ ಉನ್ನತ ಪಾಂಡಿತ್ಯವನ್ನು ಹೊಂದಿದ್ದರು. ಇವರು ಪವಿತ್ರ ಜ್ಞಾನ, ಸದ್ಗುಣ, ವಿದ್ವತ್ತು, ವಿನಯ ಮತ್ತು ಒಳ್ಳೆಯ ಕಾರ್ಯಗಳಿಂದ ಪುಣ್ಯವನ್ನು ಹೊಂದಿದ್ದ ಶ್ರೇಷ್ಠ ಬ್ರಾಹ್ಮಣರು ಎಂದು ಹೇಳಲಾಗುತ್ತದೆ.

ಅರಸೀಕೆರೆ ತಾಲ್ಲೋಕು ಜಯಗೊಂಡಪುರ ಎಂದು ಕರೆಯಲ್ಪಡುವ ಬೆಂಡಕೆರೆಯು ಹಲವಾರು ಆಳವಾದ ಅಧ್ಯಯನ ಮಾಡಿದ ಪಂಡಿತರನ್ನು ಹೊಂದಿದ್ದ ಶ್ರೇಷ್ಠ ಅಗ್ರಹಾರವೆಂದು ವಿವರಿಸಲಾಗಿದೆ. ಈ ಊರಿನ ಬ್ರಾಹ್ಮಣರು ವೇದ, ಶಾಸ್ತ್ರ, ಪುರಾಣ, ಸ್ಮೃತಿ, ನಾಟಕ ಮತ್ತು ಕಾವ್ಯಗಳಲ್ಲಿ ಪಾರಂಗತರಾಗಿದ್ದರು.[೨೦]

ಆಧಾರಸೂಚಿ

೧. B.L. Rice Mysore Vol.1, (London 1897) P.462
೨. MAR 1929-P.75
೩. Madras Inscriptions. II P. 1210
೪. E.I.III.p.8
೫. E.C 5, AK 108-1255
೬ EC.3-Mandya 121-1235
೭. MAR 1907-P.4-1252
೮. S.I.E. 1937-No.122-1258
೯. EC11-HL 121-1240
೧೦. MAR 1930-P.227-No.69-1243
೧೧. E.I.,III.P.8
೧೨. Ibid., P.14
೧೩. F.C., V,B1,125
೧೪. S.I.E. 1936-No.69-1232
೧೫. The Kadamba Kula P.287
೧೬. E.C.3-NJ-164-1092
೧೭. E.C.9-127-132
೧೮. MAR-1337-Kn 17
೧೯. MAR-1907-P.4
೨೦. J.B.B.R.A.S. 15-P.42-1253 A.D.

ಡಾ. ಎಸ್. ಮಾಲತಿ*

ಹೊಯ್ಸಳ ಸಮಾಜದಲ್ಲಿ ಮಾತೆಯರ ಸ್ಥಾನ

ಪ್ರಾಚೀನ ಭಾರತದಲ್ಲಿ ಸ್ತ್ರೀಯರಿಗೆ ಕುಟುಂಬದಲ್ಲಿ ಹಾಗೂ ಸಮಾಜದಲ್ಲಿ ಮನ್ನಣೆಯಿತ್ತು. ಅದರಲ್ಲೂ ಮಾತೆಯರಿಗೆ ಅತಿಯಾದ ಮನ್ನಣೆಯಿತ್ತು. ತಾಯಂದಿರ ಪದವಿ ತಂದೆಯರ ಸ್ಥಾನಕ್ಕಿಂತ ಶ್ರೇಷ್ಠವಾಗಿತ್ತು. ಆದರೆ ದಿನ ಕಳೆದಂತೆ ಸ್ತ್ರೀಯರ ಸ್ಥಿತಿ ಕ್ರಮೇಣವಾಗಿ ಇಳಿಮುಖವಾಗ ತೊಡಗಿತು. ಮಧ್ಯಯುಗ ತಲುಪುವ ವೇಳೆಗೆ ಸ್ತ್ರೀಯರ ನೆಲೆ ಅಧೋಗತಿಯನ್ನು ತಲುಪಿತ್ತು. ಅವಳ ನ್ಯಾಯಬದ್ಧ ಹಕ್ಕು, ರಾಜಕೀಯ ಹಕ್ಕು ಹಾಗೂ ವಿದ್ಯಾಭ್ಯಾಸದ ಹಕ್ಕುಗಳು ಕಣ್ಮರೆಯಾದವು. ಅವಳು ಗಂಡಸರ ಎಲ್ಲಾ ಅವಶ್ಯಕತೆಗಳನ್ನು ತೃಪ್ತಿಪಡಿಸುವ ವಸ್ತುವಾಗಿದ್ದಳು.

ಹೆಮ್ಮೆಪಡುವ ವಿಷಯವೇನೆಂದರೆ ಹೊಯ್ಸಳ ಸಾಮ್ರಾಜ್ಯ ಮಧ್ಯಯುಗವಾದರೂ ಸ್ತ್ರೀಯರನ್ನು ಗೌರವಿಸುತ್ತಿತ್ತು. ಅದರಲ್ಲೂ ಮಾತೆಯರನ್ನು ಪ್ರೀತಿ, ಭಕ್ತಿ ಮತ್ತು ಗೌರವದಿಂದ ಕಾಣುತ್ತಿತ್ತು. ಇದು ಹೊಯ್ಸಳರ ಅನೇಕ ಶಾಸನಗಳಿಂದ ಕಂಡುಬರುತ್ತದೆ. ಹಲವಾರು ಶಾಸನಗಳು ಅಂದಿನ ಜನರ ಚಟುವಟಿಕೆ, ಅವರ ನಿಷ್ಠೆ, ಅವರ ನಂಬಿಕೆಗಳನ್ನು ತಿಳಿಸುವುವು.

ತಮ್ಮ ತಾಯಂದಿರ ಸ್ಮರಣೆಗೆ ಅಥವಾ ತಾಯಂದಿರಿಗೆ ಪುಣ್ಯಗಳಿಸಲು ಕೆರೆಗಳನ್ನು, ದೇವಸ್ಥಾನಗಳನ್ನು, ದೇವರ ಮೂರ್ತಿಗಳನ್ನು ಸ್ಥಾಪಿಸುತ್ತಿದ್ದರೆಂದು ಅನೇಕ ಶಾಸನಗಳು ತಿಳಿಸುತ್ತವೆ. ಉದಾಹರಣೆಗೆ ಕ್ರಿ.ಶ. ೧೧೮೮ರ ನರಸಿಂಹ ಹೊಯ್ಸಳರ ಕಾಲದಲ್ಲಿ ಬೆಟ್ಟಗೌಡನ ಮಗನಾದ ಪಾಂಡುವಗೌಂಡ ಒಂದು ಕೆರೆಯನ್ನು ಮತ್ತು ಒಂದು ದೇವಸ್ಥಾನವನ್ನು ಕಟ್ಟಿಸಿ ಅವನ ತಾಯಿಯ ಹೆಸರಿನಲ್ಲಿ ಚೋಳೇಶ್ವರ ದೇವರ ಲಿಂಗವನ್ನು ಸ್ಥಾಪಿಸಿದನು.[೧] ಹಾಗೆಯೆ ಹೊಯ್ಸಳ ವಿಷ್ಣುವರ್ಧನರ ಕಾಲದಲ್ಲಿ ಉಂಡಿಗೆಯಪಲು ಮತ್ತು ಬಲವರಿವನ ಹಳ್ಳಿಗಳ ರಾಜ್ಯಪಾಲಕನಾದ ಮುನಿಜೆಟ್ಟಿ ಕೃಷ್ಣದೇವರಿಗೆ ದೇವಸ್ಥಾನವನ್ನು ಕಟ್ಟಿಸಿ ದೇವಸ್ಥಾನದ ನಿರ್ವಹಣೆಗೆ ದಾನವನ್ನು ಕೊಟ್ಟು ಅದರ ಪುಣ್ಯವು ತನ್ನ ತಾಯಿಗೋಸ್ಕರ ಎಂದು ಶಾಸನದಲ್ಲಿ ಬರೆಸಿರುವನು.[೨]

ವಲ್ಲದಹಳ್ಳಿ ಎಂಬ ಗ್ರಾಮದಲ್ಲಿ ಆಗ್ನೇಯ ಭಾಗದಲ್ಲಿ ಒಂದು ಪಾಳುಬಿದ್ದ ಬಸದಿ ಇದೆ. ಅದರ ಹತ್ತಿರ ಕ್ರಿ.ಶ. ೧೧೪೫ರ ಒಂದು ಕಲ್ಲಿನ ಶಾಸನವಿದೆ. ಆ ಶಾಸನವು ಜಿನಬಸದಿಯನ್ನು ದೇವರಾಯನೆಂಬ ಒಬ್ಬ ಸದ್ಗುಣ ಪುಣ್ಯಾತ್ಮ ಕಟ್ಟಿಸಿದ ವಿಷಯವನ್ನು ಪ್ರಸ್ತಾಪಿಸಿದೆ. ಅದರಲ್ಲಿ ಪ್ರಶಂಸೆಗೆ ಅರ್ಹವಾದ ದೇವರಾಯನ ಜ್ಞಾನವನ್ನು ಮೆಚ್ಚಿ ಹೊಯ್ಸಳ ವಿಷ್ಣುವರ್ಧನರು ತನ್ನ ಮಂತ್ರಿಯಾದ ದೇವರಾಯನಿಗೆ ಸೂರನಹಳ್ಳಿಯನ್ನು ಬಳುವಳಿಯಾಗಿ ಕೊಟ್ಟಿದ್ದನೆಂದು ತಿಳಿಸುತ್ತದೆ. ಅಲ್ಲಿ ದೇವರಾಯನು ಜೈನ ಬಸದಿಯನ್ನು ಕಟ್ಟಿಸಿ ಅದರ ಪುಣ್ಯ ಅವನ ತಾಯಿ ತಂದೆಯರಿಗೆ ತಲುಪಬೇಕೆಂದು ಪ್ರಾರ್ಥನೆಯನ್ನು ಮಾಡಿರುವನು.[೩]

ಹಾಗೆಯೇ ವಿಷ್ಣುವರ್ಧನರ ಕಾಲದ ಸಾಮಂತ ಹೊಯ್ಸಳ ಗೌಂಡನು ಒಂದು ಬಸದಿಯನ್ನು ತನ್ನ ತಾಯಿ ಚಟ್ಟವೆಗೌಂಡಿಯ ಸಾವಿನ ನೆನಪಿಗೆ ಕಟ್ಟಿಸಿ ಅದಕ್ಕೆ ಹೊಯ್ಸಳ ನರಸಿಂಹದೇವರಿಂದ ಪಡೆದ ಭೂಮಿಯನ್ನು, ದೇವಸ್ಥಾನಕ್ಕೂ ಮತ್ತು ಬಸದಿಗೂ ಸಮನಾಗಿ ನಿವಾಸಿಗಳು ಮತ್ತು ಪಟ್ಟಣದ ರೈತರ ಮುಂದೆ ಕ್ರಿ.ಶ. ೧೧೬೦ರಂದು ದಾನ ಮಾಡಿದನೆಂದು ಶಾಸನವು ತಿಳಿಸುತ್ತದೆ.[೪]

ಹಾಗೆಯೇ ನೆಲಮಂಗಲದಲ್ಲಿ ಇರುವ ಇನ್ನೊಂದು ಶಾಸನವು ರಾಜ್ಯಪಾಲಕನಾದ ಛಿನ್ನಂದಿಯ ಅವನ ತಾತ, ಅಜ್ಜಿ ಮತ್ತು ತಾಯಿ ಚನ್ನವ್ವೆ ಸಾವನ್ನಪ್ಪಿದಾಗ ಕೆರೆಯ ಮೇಲೆ ಲಿಂಗವನ್ನು ಸ್ಥಾಪಿಸಿ ಅದನ್ನು ಗರಂಜೇಶ್ವರನೆಂದು ಕರೆದು ಖಚಿತವಾದ ಭೂಮಿಯನ್ನು ಅದಕ್ಕೆ ದಾನ ಮಾಡಿದನೆಂದು ತಿಳಿಸುತ್ತದೆ.[೫]

ಭುಜಬಲ ವೀರರಾಮನಾಥ ದೇವರಸನ ಮಂತ್ರಿ ಕಂಭಯ್ಯ ದಂಡನಾಯಕ ಕ್ರಿ.ಶ. ೧೨೮೭ರಲ್ಲಿ ಕಾಚಿ ಸಮುದ್ರದ ಕೆರೆಯ ಕೆಳಗೆ ಸ್ವಲ್ಪ ಭೂಮಿಯನ್ನು ಹೊನ್ನಸಿಗೆರೆಯ ಹೊನ್ನಮಾರಗೌಡನಿಗೆ ದಾನ ಕೊಟ್ಟನು. ಆ ಕೆರೆಯನ್ನು ಕಂಭದಂಡನಾಯಕನು ತನ್ನ ತಾಯಿಯ ಹೆಸರಿನಲ್ಲಿ ಕಟ್ಟಿಸಿದನು.[೬]

* ಆಯ್ಕೆ ಶ್ರೇಣಿ ಉಪನ್ಯಾಸಕರು, ಇತಿಹಾಸ ವಿಭಾಗ, ಆರ್.ಬಿ.ಎನ್.ಎಂ.ಎಸ್. ಪ್ರ. ದ. ಕಾಲೇಜು, ಬೆಂಗಳೂರು.

ಹೊಯ್ಸಳ ಬಲ್ಲಾಳ ದೇವರಸರ ಮಂತ್ರಿ ಅಂಕೆಯ ದಂಡನಾಯಕನ ಅಳಿಯ ಮಾಚಯ್ಯ ದಂಣಾಯಕನು ಕ್ರಿಶ. ೧೩೧೪ರಲ್ಲಿ ಮೂರು ಸಾವಿರದಿಂದ ನಾಲ್ಕು ಸಾವಿರ ಹೊನ್ನನ್ನು ಖರ್ಚು ಮಾಡಿ ಒಂದು ಕೆರೆಯನ್ನು ತನ್ನ ತಾಯಿ ಮಾಯಕ್ಕನ ಹೆಸರಿನಲ್ಲಿ ಕಟ್ಟಿಸಿದನು ಎಂದು ಅವರೆಹಳ್ಳಿಯ ತಮ್ಮಡಿ ನಂಜಯ್ಯನವರ ಬಯಲಿನ ಕೆರೆಯ ಅಡಿಯಲ್ಲಿರುವ ಕಲ್ಲಿನ ಶಾಸನ ತಿಳಿಸುತ್ತದೆ.[೭]

ಮೇಲೆ ತಿಳಿಸಿರುವ ಶಾಸನಗಳಿಂದ ತಿಳಿದು ಬರುವ ಸಂಗತಿ ಏನೆಂದರೆ ಹೊಯ್ಸಳ ಕಾಲದ ಜನರಿಗೆ ತಾಯಿಯಲ್ಲಿ ಪ್ರೀತಿ, ಭಕ್ತಿ ಮತ್ತು ಗೌರವ ಇತ್ತೆಂದು ತಿಳಿದುಬರುತ್ತದೆ.

ಇನ್ನೊಂದು ಆಸಕ್ತಿ ತರುವ ವಿಷಯವೇನೆಂದರೆ ಅದೇ ರೀತಿಯಲ್ಲಿ ಮಾತೆಯರು ಸಹ ತಮ್ಮ ಬಂಧು ಬಳಗದವರ ನೆನಪಿಗಾಗಿ ದೇವಸ್ಥಾನವನ್ನು, ಕೆರೆಯನ್ನು ಕಟ್ಟುವುದಕ್ಕೂ ಹಾಗೂ ವೀರಗಲ್ಲನ್ನು ನೆಡುವುದಕ್ಕೂ ಭೂಮಿಯನ್ನು ದಾನ ಕೊಡುವುದಕ್ಕೂ ಸ್ವಾತಂತ್ರ್ಯ ಮತ್ತು ಆರ್ಥಿಕಬಲವೂ ಇತ್ತೆಂದು ಅನೇಕ ಶಾಸನಗಳು ತಿಳಿಸುತ್ತವೆ. ವಿನಿಯಾದಿತ್ಯನ ಕಾಲದಲ್ಲಿ ಕೇತಲಬ್ಬೆ ಎಂಬ ಮಾತೆಯ ವೀರಪುತ್ರನು ಗ್ರಾಮದ ಹಸುಗಳನ್ನು ಕಾಪಾಡುವ ಸಲುವಾಗಿ ಪ್ರಾಣವನ್ನು ಕೊಟ್ಟಿದ್ದನು. ಅದನ್ನು ಸ್ಮರಿಸಲು ಮಾತೆಯು ಒಂದು ವೀರಗಲ್ಲನ್ನು ನೆಟ್ಟದ್ದನ್ನು ಈ ಶಾಸನ ವರ್ಣಿಸುತ್ತದೆ.[೮]

ದೊಡ್ಡ ಹೋಬಳಿಯ ದೊಡ್ಡದಕಾಲೇಶ್ವರ ದೇವಸ್ಥಾನದ ದ್ವಾರದ ಬಳಿ ಇರುವ ವೀರಗಲ್ಲು ಶಾಸನ ವಿವರಿಸುವುದೇನೆಂದರೆ ಕ್ರಿಶ. ೧೨೯೩ರಲ್ಲಿ ದೊಡ್ಡದ ಚಟ್ಟವ್ವೆ ನಾಯಕನ ಮೊಮ್ಮಗ ಕೂಸಕಾಳಿ ತನ್ನ ಶಿರವನ್ನು ಸೇವೆಯಲ್ಲಿ ತ್ಯಜಿಸಿದನು. ಅವನ ತಾಯಿ ಚಟ್ಟವ್ವೆ ವೀರಗಲ್ಲನ್ನು ನೆಡಿಸಿ ಈ ಪ್ರಸಂಗವನ್ನು ಬರೆಸಿರುವಳು.[೯]

ಮತ್ತೊಂದು ಶಾಸನವು ತಿಳಿಸುವುದೇನೆಂದರೆ ಒಬ್ಬ ಮಗನು ತಾಯಿಗೋಸ್ಕರ ಒಂದು ಕೆರೆಯನ್ನು ಕಟ್ಟಿಸಿದಾಗ ಆ ತಾಯಿಯು ತನ್ನ ಮಗನ ಹೆಸರಿನಲ್ಲಿ ಮೂರು ಸಾವಿರದ ಐನೂರು ಗದ್ಯಾಣದಲ್ಲಿ ಮಾಚಸಮುದ್ರ ಕೆರೆಯನ್ನು ಕಟ್ಟಿಸಿದಳು.[೧೦] ಇದು ಮಗನ ಮೇಲಿರುವ ಮಮತೆ, ವಾತ್ಸಲ್ಯವನ್ನು ತೋರಿಸುವುದಲ್ಲದೆ ಅವಳ ಸ್ವಾತಂತ್ರ್ಯ ಹಾಗೂ ಆರ್ಥಿಕ ಬಲವನ್ನು ತಿಳಿಸುತ್ತದೆ.

ಎಲೆಗುಂಡದ ಶಾಂತಲೇಶ್ವರ ದೇವಸ್ಥಾನದ ಸಮೀಪದಲ್ಲಿರುವ ಕಲ್ಲಿನ ಶಾಸನವು ಗಮನಿಸಬೇಕಾದ ಸಂಗತಿಯನ್ನು ತಿಳಿಸುತ್ತದೆ. ಅದೇನೆಂದರೆ ಒಬ್ಬ ಮಾತೆಯು ಮಗಳ ಮತ್ತು ಮೊಮ್ಮಗಳ ಮೇಲೆ ಇರುವ ಮಮತೆ ವಾತ್ಸಲ್ಯವನ್ನು ಹೀಗೆ ಪ್ರದರ್ಶಿಸಿದ್ದಾಳೆ. ಆ ತಾಯಿ ಹೊಯ್ಸಳ ವಿಷ್ಣುವರ್ಧನನ ಅತ್ತೆ ಜಕ್ಕಬ್ಬೆ ತನ್ನ ಮಗಳು (ಕಿರಿಯ) ಶಾಂತಲೆ ಮತ್ತು ಮೊಮ್ಮಗಳು ಚಿಕ್ಕ ಶಾಂತಲೆಯರು ಅಕಾಲದಲ್ಲಿ ನಿಧನರಾದಾಗ ಅವರ ಸ್ಮರಣೆಗೆ ಶಾಂತಲೇಶ್ವರ ಮತ್ತು ಬೊಪ್ಪೇಶ್ವರ ಎಂಬ ಎರಡು ಈಶ್ವರನ ದೇವಸ್ಥಾನಗಳನ್ನು ನಿರಗುಂಡಾದದ ಎಲೆಗುಂಡದಲ್ಲಿ ಅಳಿಯ ಕೊಟ್ಟಿದ್ದ ಮೂರು ಪಾಲಿನ ಹಣದಲ್ಲಿ ಕಟ್ಟಿಸಿದಳು ಎಂದು ತಿಳಿಸುತ್ತದೆ.[೧೧]

ಹೊಯ್ಸಳ ವಿಷ್ಣುವರ್ಧನರ ಪಟ್ಟದ ಅರಸಿ ಶಾಂತಲಾದೇವಿ ನಿಧನಳಾದಾಗ ಶಾಂತಲೆಯ ತಾಯಿ ಮಾಚಿಕಬ್ಬೆ ಸಲ್ಲೇಖನವ್ರತವನ್ನು ಪಾಲಿಸಿ ಅನ್ನ ನೀರನ್ನು ತೊರೆದು ನಿರ್ವಾಣ ಹೊಂದಿದಳು ಎಂದು ಶಾಸನವು ತಿಳಿಸುತ್ತದೆ.[೧೨] ಇದು ತಾಯಿಗೆ ಮಗಳ ಮೇಲೆ ಇದ್ದ ಪ್ರೀತಿ, ವಾತ್ಸಲ್ಯ ಹಾಗೂ ಕಷ್ಟವನ್ನು ಎದುರಿಸುವ ಧೈರ್ಯ. ಇಚ್ಛಾಶಕ್ತಿ, ಮನಸ್ಥೈರ್ಯವನ್ನು ಬಿಂಬಿಸುತ್ತದೆ.

ಈ ರೀತಿಯಾಗಿ ಶಾಸನಗಳು ಹೊಯ್ಸಳ ಸಮಾಜದಲ್ಲಿ ಉನ್ನತ ವರ್ಗದ ಮಾತೆಯರಿಗೆ ಗೌರವ, ಮನ್ನಣೆ ಪ್ರೀತಿ, ಅಭಿಮಾನ, ಆರ್ಥಿಕಬಲ ಇತ್ತೆಂದು ತಿಳಿಸುತ್ತದೆ.

ಆಧಾರಸೂಚಿ

೧. ಎಪಿಗ್ರಾಫಿಯ ಕರ್ನಾಟಕ, ಸಂಪುಟ V, ಚನ್ನರಾಯಪಟ್ಟಣ, ೧೮೯.
೨. ಎ.ಕ. V, ಅರಸೀಕೆರೆ, ೧೮.
೩. ಎ.ಕ. IV, ನಾಗಮಂಗಲ, ೭೬.
೪. ಎ.ಕ. VI, ಕಡೂರು, ೬೯.
೫. ಎ.ಕ. IV, ನಾಗಮಂಗಲ, ೬೫.
೬ ಎ.ಕ. XII, ತುಮಕೂರು, ೨೮.
೭. ಎ.ಕ. XII ಹಾಸನ, ೧೮೨.
೮. ಮೈಸೂರು ಆರ್ಕಲಾಜಿಕಲ್ ರಿಪೋರ್ಟ್ ನಂ. ೯೦, ಪುಟಗಳು ೨೬ ಮತ್ತು ೨೬೭.
೯. ಎ.ಕ. V, ಹಾಸನ, ೫೦.
೧೦. ಎ.ಕ. V, ಹಾಸನ, ೧೬೪.
೧೧. ಎ.ಕ. V, ಹಾಸನ, ೮೯.
೧೨. ಎ.ಕ. II, ಶ್ರವಣಬೆಳಗೊಳ, ೧೪೩.

ಎಸ್. ಪರಶಿವಮೂರ್ತಿ*

ಹೊಯ್ಸಳ, ಪಾಂಡ್ಯ, ಚೋಳರ ವೈವಾಹಿಕ ಸಂಬಂಧ

ಕರ್ನಾಟಕವನ್ನು ಆಳಿದ ಚಕ್ರವರ್ತಿಗಳಲ್ಲಿ ಕಲ್ಯಾಣಿ ಚಾಳುಕ್ಯರಿಗೆ ವಿಶಿಷ್ಟ ಸ್ಥಾನವಿದೆ. ಇವರ ಅಧೀನ ರಾಜರಲ್ಲಿ ಕೆಲವರು ಅವರಿಗೆ ನಿಷ್ಠಾವಂತರಾಗಿದ್ದು, ಚಾಳುಕ್ಯ ವಂಶದ ಕೊನೆಯ ಅರಸರು ಬಲಹೀನರಾದಾಗ ಅಧೀನ ರಾಜರುಗಳು ತಮ್ಮ ಬಲವನ್ನು ವೃದ್ಧಿಸಿಕೊಂಡು ಚಕ್ರವರ್ತಿಗಳ ಮಟ್ಟಕ್ಕೇರಿದರು. ಅವರಲ್ಲಿ ದೋರಸಮುದ್ರದ ಹೊಯ್ಸಳರು ಮತ್ತು ದೇವಗಿರಿ ಯಾದವರು ಪ್ರಮುಖರು.

ದೋರಸಮುದ್ರದ ಹೊಯ್ಸಳರು ಮೂರು ಶತಮಾನಗಳ ಕಾಲ ಪ್ರಸಿದ್ಧರಾಗಿ ರಾಜ್ಯಭಾರ ಮಾಡಿ ಕನ್ನಡನಾಡನ್ನಲ್ಲದೆ ಅಕ್ಕಪಕ್ಕದ ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳ ಭಾಗಗಳಲ್ಲಿ ಯಶಸ್ವೀ ರಾಜಕೀಯ ಚಟುವಟಿಕೆಗಳನ್ನು ನಡೆಸಿ ಆ ಪ್ರದೇಶಗಳಲ್ಲಿ ತಮ್ಮ ಅಧಿಕಾರದ ಛಾಪುವನ್ನು ಮೂಡಿಸಿದರು. ಇವರು ಕನ್ನಡ ನಾಡಿನ ಸ್ಥಳೀಯ ರಾಜಮನೆತನದವರಾಗಿದ್ದು ಪ್ರಮುಖ ಪ್ರದೇಶಗಳನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡರು. ಪ್ರಾರಂಭದಲ್ಲಿ ಇವರ ವಂಶದ ಮೂಲ ಚೂಲಗಳ ಸ್ಪಷ್ಟಚಿತ್ರ ದೊರೆಯದಿದ್ದರೂ ತಲಕಾಡು ಗಂಗರಿಗೂ ಇವರಿಗೂ ಏನೋ ಸಂಬಂಧ ಇದ್ದ ಬಗ್ಗೆ ಅಸ್ಪಷ್ಟ ಮಾಹಿತಿಗಳಿವೆ.[೧] ಈ ವಂಶದ "ಸಳ"ನೆಂಬುವನ ಬಗ್ಗೆ ಶಾಸನಗಳಲ್ಲಿ ಕಥೆಗಳು ಇವೆಯೇ ಹೊರತು ಅವನ ಆಳ್ವಿಕೆಗೆ ಸಂಬಂಧಪಟ್ಟ ದಾಖಲೆಗಳು ಇಲ್ಲ. ಇವನ ಅನಂತರದವನೆಂದು ತಿಳಿದಿರುವ ನೃಪಕಾಮನ ಬಗ್ಗೆ ದಾಖಲೆಗಳು ದೊರೆಯುತ್ತವೆ. ಇವನು ಪಶ್ಚಿಮಘಟ್ಟಗಳ ಮಲಪರೆಂಬ ಅರಸರನ್ನು ಗೆದ್ದು "ಮಲಪರೊಳ್‌ಗಂಡ" ಎಂಬ ಬಿರುದನ್ನು ಹೊಂದಿದ್ದನು.

೧೦ನೇ ಶತಮಾನದ ಉತ್ತರಾರ್ಧ ಮತ್ತು ೧೧ನೇ ಶತಮಾನದ ಮೊದಲ ದಶಕಗಳಲ್ಲಿ ತಲಕಾಡು ಗಂಗರು ಚೋಳ ರಾಜನಾದ ರಾಜೇಂದ್ರನ ಧಾಳಿಯನ್ನು ಎದುರಿಸಬೇಕಾಯಿತು. ಈ ಸಮಯದಲ್ಲಿ ಪ್ರಾಬಲ್ಯಕ್ಕೆ ಬರುತ್ತಿದ್ದ ಹೊಯ್ಸಳರು ಗಂಗರ ನೆರವಿಗೆ ಬಂದರು ಮತ್ತು ಚೋಳರನ್ನು ಗಂಗರಾಜ್ಯದಿಂದ ಕ್ರಿ.ಶ. ೧೧೧೬ರ ವೇಳೆಗೆ ಹೊರದಬ್ಬಲು ಯಶಸ್ವೀ ಹೋರಾಟ ಮಾಡಿದರು. ತಲಕಾಡ ಗಂಗರಿಗೆ ಯಾವುದೊ ರೀತಿಯ ಸಂಬಂಧ ಹೊಂದಿದ್ದ ಹೊಯ್ಸಳರು ಗಂಗ ರಾಜ್ಯದ ಉತ್ತರಾಧಿಕಾರಿಗಳಾದರು.[೨]

ದೋರಸಮುದ್ರದ ಹೊಯ್ಸಳರು ಪ್ರಾರಂಭದಲ್ಲಿ ತಲಕಾಡು ಗಂಗರಿಗೆ, ಅನಂತರ ಕಲ್ಯಾಣಿ ಚಾಳುಕ್ಯರಿಗೆ ಸಾಮಂತರಾಗಿ ಕರ್ನಾಟಕದ ದಕ್ಷಿಣ ಮತ್ತು ಮಧ್ಯಭಾಗಗಳನ್ನು ಆಳಲು ಪ್ರಾರಂಭಿಸಿದರು. ನೃಪಕಾಮ ಹೊಯ್ಸಳನ ಅನಂತರ ಅವನ ಮಗ ತ್ರಿಭುವನ ಹೊಯ್ಸಳ ಅಥವಾ ವಿನಯಾದಿತ್ಯನು ಆಳಿದನು. ಇವನ ಕಾಲದಿಂದ ಹೊಯ್ಸಳರು ಪ್ರಬಲರಾಗುತ್ತಾ ಬಂದರು. ಇವನ ಕಾಲದಲ್ಲಿ ಚಕ್ರವರ್ತಿಗಳಾಗಿದ್ದ ಕಲ್ಯಾಣಿ ಚಾಳುಕ್ಯರೊಂದಿಗೆ ವೈವಾಹಿಕ ಸಂಬಂಧವನ್ನೂ ಬೆಳಸಿದ್ದನೆಂಬುದಕ್ಕೆ ಶಾಸನಗಳಲ್ಲಿ ಸೂಚನೆಗಳು ಸಿಕ್ಕುತ್ತವೆ. ಇವನು ಚಾಳುಕ್ಯ ೧ನೇ ಸೋಮೇಶ್ವರ, ೨ನೇ ಸೋಮೇಶ್ವರ ಮತ್ತು ಅವನ ತಮ್ಮ ೬ನೇ ವಿಕ್ರಮಾದಿತ್ಯನ ಕಾಲದಲ್ಲಿ ಚಾಳುಕ್ಯರ ಸಾಮಂತನಾಗಿ ಆಳಿದ ಬಗ್ಗೆ ಶಾಸನಗಳು ದೊರೆಯುತ್ತವೆ. ವಿನಯಾದಿತ್ಯನು ದೀರ್ಘಕಾಲ ಅಂದರೆ ಸುಮಾರು ೫೦ ವರ್ಷಗಳು ಆಡಳಿತ ನಡೆಸಿದ್ದರಿಂದ ಅವನ ಮಗ ಯೆರೆಯಂಗನು ತನ್ನ ಇಳಿವಯಸ್ಸಿನಲ್ಲಿ ರಾಜ್ಯಭಾರವನ್ನು ವಹಿಸಿಕೊಂಡನು. ಹೊಯ್ಸಳರ ಕೀರ್ತಿಯನ್ನು ಎತ್ತಿ ಹಿಡಿದವನೇ ಯರೆಯಂಗ. ಇವನು ಯುದ್ಧ ನಿಪುಣನಾಗಿದ್ದು ಪ್ರಾರಂಭದಲ್ಲಿ ೨ನೇ ಸೋಮೇಶ್ವರನಿಗೆ, ಅನಂತರ ೬ನೇ ವಿಕ್ರಮಾದಿತ್ಯನಿಗೆ ಬಲುಭುಜದಂತಿದ್ದನೆಂದು ಶಾಸನಗಳು ತಿಳಿಸುತ್ತವೆ. ಯರೆಯಂಗನು ೬ನೇ ವಿಕ್ರಮಾದಿತ್ಯನ ಪ್ರಮುಖ ದಂಡನಾಯಕನಾಗಿದ್ದು, ಉತ್ತರ ಭಾರತದ ರಾಜ್ಯಗಳ ಮೇಲೆ ದಾಳಿ ಮಾಡಿ ಅವುಗಳನ್ನು ಚಾಳುಕ್ಯ ಚಕ್ರವರ್ತಿಗಳ ಅಧೀನಕ್ಕೆ ತಂದನು. ಇದರಿಂದ ಚಾಳುಕ್ಯ ಚಕ್ರವರ್ತಿಗಳ ಆಳ್ವಿಕೆಯಲ್ಲಿ ಹೊಯ್ಸಳರಿಗೆ ಪ್ರಮುಖ ಮಹಾಮಂಡಲೇಶ್ವರರ ಸ್ಥಾನ ಲಭಿಸಿತು.

ಹೊಯ್ಸಳ ಯರೆಯಂಗನ ಪಟ್ಟದರಸಿ ಏಚಲದೇವಿ. ಈಕೆಯ ಬಗ್ಗೆ ಅರಸೀಕೆರೆ ತಾಲ್ಲೂಕಿನ ಕಾಟೀಕೆರೆ ಗ್ರಾಮದ ಒಂದು ಶಾಸನ ವಿವರ ಮಾಹಿತಿ ನೀಡುತ್ತದೆ.[೩] ಈಕೆಯನ್ನು ಶಾಸನ ಮಹಾದೇವಿಯೆಂದೇ ಪರಿಚಯಿಸುತ್ತದೆ. ಈಕೆ

*ಮೇಲಿನ ಮಠ, ಶಾನುಭೋಗರ ಬೀದಿ, ಅರಸೀಕೆರೆ, ಹಾಸನ ಜಿಲ್ಲೆ.

ಉಚ್ಚಂಗಿ ಪಾಂಡ್ಯ ಮನೆತನಕ್ಕೆ ಸೇರಿದ್ದು ಅವಳ ಅಜ್ಜ, ದೊಡ್ಡಪ್ಪ ಮತ್ತು ತಂದೆಯ ಬಗ್ಗೆ, ಅವರ ಶೌರ್ಯದ ಬಗ್ಗೆ ತಿಳಿಸುತ್ತದೆ. ಅಷ್ಟೇ ಅಲ್ಲದೆ ಆಕೆಯ "**ಮಾತಾಮಹ**" ಎಂದರೆ ತಾಯಿಯ ತಂದೆಯ ಬಗ್ಗೆಯೂ ಮಾಹಿತಿ ನೀಡಿ ಪಾಂಡ್ಯ ಮತ್ತು ಚೋಳರ ಸಂಬಂಧ ಹೊಯ್ಸಳರಿಗೆ ಹೇಗೆ ಆಯಿತು ಎಂಬ ವಿವರಗಳನ್ನು ನೀಡುತ್ತದೆ.

ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಕಾಟೀಕೆರೆ ಗ್ರಾಮ ಅರಸೀಕೆರೆ ನಗರಕ್ಕೆ ಕೇವಲ ೧.೫ ಕಿ.ಮೀ. ದೂರದಲ್ಲಿದೆ. ಇಲ್ಲಿಯ ಶಾಸನ ಒಂದು ಈ ಊರನ್ನು "**ಕಾಡುವೆಟ್ಟಿಯಕೆರೆ**" ಎಂದು ಹೆಸರಿಸುತ್ತದೆ.

ಈ ಊರಿನ ದಾರಿ ಪಕ್ಕದಲ್ಲೇ ಇರುವ ಶಾಸನ ಹೊಯ್ಸಳರ ಆಳ್ವಿಕೆಯ ಮಾಹಿತಿಯನ್ನಲ್ಲದೆ ಉಚ್ಚಂಗಿ ಪಾಂಡ್ಯರು ಮತ್ತು ನೊಳಂಬವಾಡಿ ಪರಿಸರದಲ್ಲಿ ಆಳಿದ ಚೋಳ ಮನೆತನ ಒಂದರ ಬಗ್ಗೆ ಮಾಹಿತಿ ನೀಡುತ್ತದೆ.

ಉಚ್ಚಂಗಿ ಪಾಂಡ್ಯರ ಮೂಲದ ಬಗ್ಗೆ ಮಾಹಿತಿಗಳು ಸ್ಪಷ್ಟವಿಲ್ಲದಿದ್ದರೂ ಇವರು ಪ್ರಾರಂಭದಲ್ಲಿ ಸಪ್ತ ಕೊಂಕಣ ಪ್ರದೇಶವನ್ನು ಆಳುತ್ತಿದ್ದರೆಂದು ತಿಳಿದುಬರುತ್ತದೆ.[೫]

ಚಾಲುಕ್ಯ ೧ನೇ ಜಯಸಿಂಹನು ಸಪ್ತ ಕೊಂಕಣವನ್ನು ಗೆದ್ದ ಮೇಲೆ ಚಾಲುಕ್ಯ ರಾಜ್ಯದ ಭಾಗವಾದ ಉಚ್ಚಂಗಿ ದುರ್ಗ ಮತ್ತು ನೊಳಂಬವಾಡಿ ಪ್ರಾಂತ್ಯಗಳನ್ನು ಚಾಲುಕ್ಯರ ಅಧೀನದಲ್ಲಿ ಆಳಲು ಈ ಪಾಂಡ್ಯರು ಪ್ರಾರಂಭಿಸಿದರು. ಕೆಲವು ಚರಿತ್ರಕಾರರು ಇವರ ಮೂಲ ಪುರುಷ "ಮಂಗಯ್ಯ" ಎಂಬುವವನು ಎಂದು ಹೇಳಿದರೂ ಅವನ ಬಗ್ಗೆ ಶಾಸನಗಳಲ್ಲಿ ಮಾಹಿತಿ ಇಲ್ಲ.[೬] ಈ ವಂಶದ ಶಾಸನೋಕ್ತ ಮೊದಲನೆಯ ಹೆಸರು "**ತೇಜರಾಯ**" ನದು. ಇವನು ಸೂರ್ಯವಂಶದ ಇಕ್ವಾಕು ಚಕ್ರವರ್ತಿಗಳಿಂದ ಅವಿಚ್ಛಿನ್ನವಾಗಿ ಬಂದ ವಂಶದಲ್ಲಿ ಹುಟ್ಟಿದ ಚೋಳ ಚಕ್ರವರ್ತಿಗಳ "ವಜ್ರಕೋಟೆ" ಎನ್ನಿಸಿಕೊಂಡಿದ್ದು ಏಳು ಸಿಂಹಾಸನಗಳನ್ನು (ಸಪ್ತಕೊಂಕಣ) ತನ್ನ ಬಾಹುಬಲದಿಂದ ಆಳಿದನೆಂದು ಶಾಸನ ತಿಳಿಸುತ್ತದೆ. ಇವನ ಮಗ "**ಪ್ರಚಂಡ ಪಾಂಡ್ಯ**" ಇವನೂ ತಂದೆಯಂತೆ ಶೂರನಾಗಿದ್ದು ಚಾಳುಕ್ಯ ಚಕ್ರವರ್ತಿಗಳ ಬಲಭುಜನೆನಿಸಿಕೊಂಡಿದ್ದನು. ಇವನು "ಭುವನೈಕಮಲ್ಲನ ಭೂ ಭವನದ ಸುಂಗೊಳೆ ಮರಳ್ದೆ ರಾಜ್ಯಮನಧಿಕೋತ್ಸವದಿಂ ತ್ರಿಭುವನಮಲ್ಲಂಗ ವಯವದಿಂಕೊಂಡು ಕೊಟ್ಟ ಗಂಡ ಪಾಂಡ್ಯ" ಇವನಿಗ "ಏಕಾಂಗವೀರ" ಮತ್ತು "ಪರಿಚ್ಛೇದಿಗಂಡ" ಎಂಬ ಬಿರುದುಗಳಿದ್ದುವೆಂದು ತಿಳಿದುಬರುತ್ತದೆ. ಇವನು ಚೇದಿ ಅರಸರನ್ನು ಜಯಿಸಿದ್ದರಿಂದ "**ಚೇದಿರಾಜ**" ಎಂಬ ಮತ್ತೊಂದು ಹೆಸರು ಪಡೆದಿದ್ದನು.[೭] ಕೆಲವು ವಿದ್ವಾಂಸರು "**ಚೇದಿರಾಜ**" ಎಂಬುದನ್ನು ತೇಜರಾಜ ಎಂಬುದಕ್ಕೆ ಸಮೀಕರಿಸುತ್ತಾರೆ. ಆದರೆ ತೇಜರಾಯ ಪ್ರಚಂಡ ಪಾಂಡ್ಯನ ತಂದೆ ಎಂಬುದನ್ನು ಪ್ರಸ್ತುತ ಶಾಸನ ಸ್ಪಷ್ಟಪಡಿಸುತ್ತದೆ.

ಈ ಪ್ರಚಂಡ ಪಾಂಡ್ಯ ಭೂ ಬುಜನ ಅನುಜ "**ಇರಕ್ಕುವೇಳ**" ಎಂದು ಇದೇ ಶಾಸನ ತಿಳಿಸುತ್ತದೆ. ಇವನು ಚಾಳುಕ್ಯ ಚಕ್ರವರ್ತಿ ೬ನೇ ವಿಕ್ರಮಾದಿತ್ಯನ ತಮ್ಮನಾದ ಜಯಸಿಂಹನ ಅನಂತರ ನೊಳಂಬವಾಡಿ ೩೨೦೦೦ ಪ್ರದೇಶವನ್ನು ಆಳುತ್ತಿದ್ದನೆಂದು ತಿಳಿದುಬರುತ್ತದೆ. ಇವನ ಮಗಳೇ ಮಹಾದೇವಿ. ಹೊಯ್ಸಳ ಯರೇಯಂಗನ ಪಟ್ಟದರಸಿ. "**ಇರುಕ್ಕವೇಳ**"ನ ಕಾಲಕ್ಕಾಗಲೇ ಚಾಳುಕ್ಯ ಚಕ್ರವರ್ತಿಗಳೊಂದಿಗೆ ಪಾಂಡ್ಯರ ಸಂಬಂಧ ಮೊದಲಿನಷ್ಟು ಮಧುರವಾಗಿರಲಿಲ್ಲವೆಂದು ತಿಳಿದುಬರುತ್ತದೆ. ಇವನು ತನ್ನ ಹಲವು ಶಾಸನಗಳಲ್ಲಿ ತಾನು ಚಾಳುಕ್ಯರ ಸಾಮಂತನೆಂದು ಹೇಳಿಕೊಂಡಿಲ್ಲ. ಅಷ್ಟೇ ಅಲ್ಲದೆ ಇವನು ಚೋಳರಾಜಕುಮಾರಿಯೊಬ್ಬಳನ್ನು ವಿವಾಹವಾಗಿದ್ದನು. ಮತ್ತು ಚೋಳರೊಂದಿಗೆ ರಾಜಕೀಯ ಸಂಬಂಧ ಇಟ್ಟುಕೊಂಡಿದ್ದನು. ಕಲ್ಯಾಣ ಚಾಳುಕ್ಯರ ಸಾಮಂತನಾಗಿದ್ದರೂ ಅವರ ವೈರಿಗಳಾಗಿದ್ದ ಚೋಳರೊಂದಿಗೆ ವೈವಾಹಿಕ ಸಂಬಂಧಕ್ಕೆ ಚಕ್ರವರ್ತಿಗಳ ಒಪ್ಪಿಗೆ ಪಡೆದಿದ್ದನೋ ಇಲ್ಲವೋ ತಿಳಿಯದು.[೮] ಅವನು ವಿವಾಹವಾಗಿದ್ದ ಚೋಳರಾಜಕುಮಾರಿ ಮೂಲ ಚೋಳ ವಂಶದವಳಲ್ಲದೆ ಚೋಳರ ಯಾವುದೋ ಶಾಖೆಗೆ ಸೇರಿದವಳಾಗಿರುವ ಸಾಧ್ಯತೆ ಇದೆ ಅಥವಾ ಚೋಳರ ಸಾಮಂತನೊಬ್ಬನ ಮಗಳಾಗಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಈಕೆಯ ತಂದೆಯನ್ನು "**ಕರ್ಕಡ ಮಹಾರಾಯ**" ನೆಂದು ಪ್ರಸ್ತುತ ಶಾಸನ ಪರಿಚಯಿಸುತ್ತದೆ. ಇವನು ನೊಳಂಬವಾಡಿ ಪ್ರದೇಶದಲ್ಲಿರುವ ತೆರೆಯೂರನ್ನು ಕೇಂದ್ರವಾಗಿಟ್ಟುಕೊಂಡು ಆಳುತ್ತಿದ್ದನೆಂದು ತಿಳಿದುಬರುತ್ತದೆ.

ತೆರೆಯೂರು ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಒಂದು ಗ್ರಾಮವಾಗಿದೆ. ಈ ಗ್ರಾಮದಲ್ಲಿ ಚೋಳರ ಅನೇಕ ಶಾಸನಗಳು ದೊರೆಯುತ್ತವೆ.[೯] ಕಾಟೀಕೆರೆ ಶಾಸನವು ಯರೆಯಂಗನ ಪಟ್ಟಮಹಿಷಿ ಮಹಾದೇವಿಯ "**ಮಾತಾಮಹ**"ನಾದ (ತಾಯಿಯ ತಂದೆ) ಕರ್ಕಡ ಮಹಾರಾಯನ ಶೌರ್ಯವನ್ನು ವರ್ಣಿಸಲು ರಾಮಾಯಣ ಕಥೆಯ ರಾವಣನ ಶೌರ್ಯಕ್ಕೆ ಹೋಲಿಸಿ ರಾವಣನಂತೆ ಇವನೂ ಶತ್ರುರಾಜರನ್ನು ಸದೆಬಡಿದು ಹಿಡಿದುತಂದು ಸೆರೆಯಲ್ಲಿಟ್ಟಿದ್ದನೆಂದು ಹೇಳುತ್ತದೆ.

ಇದೇ ಶಾಸನ ಮುಂದುವರಿದು ಯರೆಯಂಗನ ಪಟ್ಟದರಸಿ ಮಹಾದೇವಿ ತನ್ನ ಪಾದಪದ್ಮೋಪಜೀವಿ "**ಕಾಡುವೆಟ್ಟಿ**" ಮತ್ತು ಆತನ ಪತ್ನಿ "**ಸೋರದೆಯಬ್ಬೆ**" ಇವರಿಂದ



ಕಾಟೀಕೆರೆ ಶಾಸನದ ಮುಂಭಾಗ

ಕಾಟೀಕೆರೆಗೆ ಸಮೀಪದಲ್ಲಿರುವ ಹಿರಿಯಮುತ್ತನ ಹೊಸ ಊರಿನಲ್ಲಿ ದೊಡ್ಡಕೆರೆಯನ್ನು ಕಟ್ಟಿಸಿದಳು. ಇದೇ ಊರಿನ ಮತ್ತೊಂದು ಶಾಸನ "ಕಾಡುವೆಟ್ಟಿ"ಯೂ ದೇವರಿಗೆ ಭೂದಾನ ನೀಡಿದ ಬಗ್ಗೆ ತಿಳಿಸುತ್ತದೆ. ಅದರಲ್ಲಿ ದೇವರ ಹೆಸರು ಮತ್ತು ದಾನ ಪಡೆದವರ ಹೆಸರು ಹಾಳಾಗಿದೆ.[೧೦]

ಈ ಶಾಸನದಲ್ಲಿ ಉಲ್ಲೇಖವಾಗಿರುವ ಕಾಡುವೆಟ್ಟಿ ಮಹಾದೇವಿಯ ಸಾಮಂತನೆಂದು ತಿಳಿದುಬರುತ್ತದೆ. ಇವನ ಹೆಸರಿನಿಂದಲೇ ಆ ಊರಿಗೆ **"ಕಾಡುವೆಟ್ಟಿಯಕೆರೆ"** ಎಂಬ ಹೆಸರು ಅಂದು, ಇಂದು ಕಾಟೀಕೆರೆ ಎಂದಾಗಿದೆ. ಇವನು ಆಳುತ್ತಿದ್ದ ಕಾಟೀಕೆರೆ ಮತ್ತು ಹತ್ತಿರದಲ್ಲೇ ಇರುವ ಮತ್ತೊಂದು ಗ್ರಾಮ ಕೊಳಗುಂದಗಳ ಮಧ್ಯೆ "ಕಾಡುವೆಟ್ಟಿಯ ಬಯಲು" ಎಂಬ ಪ್ರದೇಶದ ಉಲ್ಲೇಖ ಶಾಸನ ಒಂದರಲ್ಲಿ ಬಂದಿದೆ.[೧೧]

ಕಾಡುವೆಟ್ಟಿಗಳು ಪ್ರಾರಂಭದಲ್ಲಿ ಪಲ್ಲವರ ಸಾಮಂತರಾಗಿ **"ತೊಂಡೈಮಂಡಳ"** ಪ್ರದೇಶದಲ್ಲಿ ಕಾಣಬರುತ್ತಾರೆ. ತಲಕಾಡ



ಕಾಟೀಕೆರೆ ಶಾಸನದ ಹಿಂಭಾಗ

ಗಂಗರೊಂದಿಗೆ ಅನೇಕ ಬಾರಿ ಸೆಣಸಿದ್ದಾರೆ. ಈ ವಂಶದವರು ಆಂಧ್ರ ಮತ್ತು ಕರ್ನಾಟಕದಲ್ಲೂ ಆಳಿದ ದಾಖಲೆಗಳಿವೆ. ಇದೇ ವಂಶಕ್ಕೆ ಸೇರಿದ **"ಅತ್ಯಮನಾಯಕ"** ನೆಂಬುವವನು ತಲಕಾಡನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ದಾಖಲೆಯನ್ನು ಶಾಸನ ತಜ್ಞರಾದ ಶ್ರೀಯುತ ಸೀತಾರಾಮ ಜಾಗೀದಾರ್‌ರವರು ನೀಡಿದ್ದಾರೆ. ಕಾಡುವೆಟ್ಟಿಗಳು ಪಲ್ಲವನೊಳಂಬ ವಂಶದ ಮೂಲಪುರುಷನೆಂದು ತಿಳಿದಿರುವ **"ತ್ರಿಣಯನ ಪಲ್ಲವ"** ಅಥವಾ **"ತ್ರಿಲೋಜನ ಪಲ್ಲವ"** (ಮುಕ್ಕಂಟಿ ಪಲ್ಲವ)ನ ವಂಶಜರೆಂದು ಅಭಿಪ್ರಾಯಪಡುತ್ತಾರೆ. ಈ ಕಾಡುವೆಟ್ಟಿಗಳು ಮತ್ತು ಕಾಡವರಾಯ ಕುಲದವರೂ ಒಂದೇ ವಂಶಸ್ಥರು. ತಲಕಾಡು ಇವರಿಗೆ ಕರ್ನಾಟಕದಲ್ಲಿ

ರಾಜಧಾನಿಯಾಗಿತ್ತು ಎಂದು ಅಭಿಪ್ರಾಯಪಡುತ್ತಾರೆ. "ತಲಕಾಡು" ಎಂಬ ಹೆಸರೂ ಕಾಡವರಾಯ ಮತ್ತು ಕಾಡುವೆಟ್ಟಿಗರಿಂದ ಬಂದಿರಬಹುದೆಂಬ ಅಭಿಪ್ರಾಯವೂ ಇದೆ. ಈ ಬಗ್ಗೆ ಸಂಶೋಧನೆ ನಡೆಸಿದರೆ ಇನ್ನೂ ಹೆಚ್ಚಿನ ವಿವರಗಳು ದೊರಕುವ ಸಾಧ್ಯತೆಗಳಿವೆ.

ಕಾಟೀಕೆರೆಯ ಪ್ರಸ್ತುತ ಶಾಸನ ಹೊಯ್ಸಳ, ಪಾಂಡ್ಯ ಮತ್ತು ಚೋಳ ವಂಶಗಳ ವೈವಾಹಿಕ ಸಂಬಂಧದ ಸ್ಪಷ್ಟ ಚಿತ್ರಣ ನೀಡುತ್ತದೆ.

ಆಧಾರಸೂಚಿ

೧. **ಕರ್ನಾಟಕ ಪರಂಪರೆ,** (ಸಂ) ಸಿಂ.ಆರ್.ಆರ್. ದಿವಾಕರ್‌ರವರು ಪುಟ-೪೬೭,
ಕರ್ನಾಟಕ ಸರ್ಕಾರದ "ಕನ್ನಡ ಮತ್ತು ಸಂಸ್ಕೃತಿ" ಇಲಾಖೆ ಪ್ರಕಟಣೆ.

೨. – " – ಅದೇ – " –

೩. ಇ.ಸಿ. ೧೦ ಆಕೆ ಶಾಸನ ಸಂಖ್ಯೆ-೩೨೧, ಕಾಟೀಕೆರೆ, ಅರಸಿಕೆರೆ ತಾಲ್ಲೂಕು.

೪. – " – ಅದೇ – ಶಾಸನ ಸಂಖ್ಯೆ ೩೨೩ – " –

೫. **ಕರ್ನಾಟಕ ಪರಂಪರೆ** ಅದೇ., ಪುಟ-೪೮೭.

೬ – " – ಅದೇ – " –

೭. ಇ.ಸಿ. ೧೦ ಆಕೆ, ಶಾಸನ ಸಂಖ್ಯೆ-೩೨೧, ಕಾಟೀಕೆರೆ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ.

೮. "ದಿ ಚಾಳುಕ್ಯಾಸ್ ಆಫ್ ಕಲ್ಯಾಣ" ಸೆಮಿನಾರ್ ಪೇಪರ್ಸ್, ಬೆಂಗಳೂರು ಮಿಥಿಕ್ ಸೊಸೈಟಿಯಿಂದ ೧೯೮೩ರಲ್ಲಿ ಪ್ರಕಟಣೆ ಸಂ. ಎಂ.ಎಸ್. ನಾಗರಾಜರಾವ್, "ದಿ ಚಾಳುಕ್ಯ ಅಂಡ್ ಪಾಂಡ್ಯ ರಿಲೇಷನ್ಸ್, ಲೇಖಕ ಡಾ॥ ಎಂ.ಪಿ. ಶ್ರೀನಿವಾಸ್, ಪುಟ-೪೩.

೯. ಇ.ಸಿ. XII, ಮಧುಗಿರಿ ೭೬, ತೆರೆಯೂರು, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ ಮತ್ತು ತುಮಕೂರು ಜಿಲ್ಲೆಯ ತಮಿಳು ಶಾಸನಗಳು, ಲೇಖನ ಡಾ॥ ಪಿ.ವಿ. ಕೃಷ್ಣಮೂರ್ತಿ, 'ಕಲ್ಪಸಿರಿ' ಅಖಿಲ ಭಾರತ ೭೧ನೇ ಕನ್ನಡ ಸಾಹಿತ್ಯ ಸಮ್ಮೇಳನ, ೨೦೦೨ ಸ್ಮರಣ ಸಂಚಿಕೆ.

೧೦. ಇ.ಸಿ. ೧೦, ಆಕೆ, ಶಾಸನ, ಸಂಖ್ಯೆ-೩೨೧, ಕಾಟೀಕೆರೆ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ.

೧೧. ಇ.ಸಿ. ೧೦, ಶಾಸನ ಸಂಖ್ಯೆ ೩೦೭, ಕು.ಕ.ಅ. ಸಂಖ್ಯೆ, ಮೈಸೂರು ವಿಶ್ವವಿದ್ಯಾನಿಲಯ.

೧೨. **"ಪಲ್ಲವ ನೊಳಂಬ" ಶಾಸನ ಸಂಪುಟ (ಒಂದು ಅಧ್ಯಯನ)** (ಸಂ.) ಸೀತಾರಾಮ್ ಜಾಗೀರ್‌ದಾರ್ ಮತ್ತು ವಿದ್ವಾನ್ ಟಿ. ಮರಿಬಸವಾರಾಧ್ಯ, ಪ್ರಕಾಶಕರು, "ನೊಳಂಬ ವೀರಶೈವ ಸಂಘ (ರಿ.), ಬೆಂಗಳೂರು, ಪುಟ-೯-೧೦.

ಡಾ. ಟಿ.ವಿ. ನಾಗರಾಜ್ *

ಕದಂಬರ ನೀರಾವರಿ ಚೌಕಟ್ಟು

ಪ್ರಾಗೈತಿಹಾಸಿಕ ಮಾನವ ತನ್ನ ವಾಸಕ್ಕಾಗಿ ಗುರುತಿಸಿಕೊಂಡ ನೆಲೆಗಳು ಸಾಮಾನ್ಯವಾಗಿ ನೀರು ಸಿಗುವಂತಹ ನೈಸರ್ಗಿಕ ತಾಣಗಳೇ ಆಗಿದ್ದವು. ಕೃಷಿಯನ್ನು ತನ್ನ ಮುಖ್ಯ ಜೀವನಾಧಾರವಾಗಿ ರೂಢಿಸಿಕೊಂಡ ದಿನದಿಂದಲೇ ಮಳೆಯ ಮತ್ತು ಹೊಳೆಯ ನೀರನ್ನು ಸಾಕಷ್ಟು ಕಾಲಹಿಡಿದಿಟ್ಟುಕೊಳ್ಳುವ ಅವಶ್ಯಕತೆ ಕಂಡು ಬಂದಿತು. ಈ ನಿಟ್ಟಿನಲ್ಲಿ ಮುಂದುವರಿದು ಕೃತಕವಾಗಿ ನೀರನ್ನು ಸಂಗ್ರಹಿಸಿಟ್ಟುಕೊಳ್ಳುವ ತನ್ನ ಅಗತ್ಯಕ್ಕೆ ತಕ್ಕ ಹಾಗೆ ಬಳಸಿಕೊಳ್ಳಲು ನಡೆಸಿದ ಪ್ರಯತ್ನಗಳ ಫಲವೆ ಕೆರೆ, ಕುಂಟೆ, ಕಟ್ಟೆಗಳಾಗಿ ರೂಪ ಪಡೆದವು. ಪ್ರಾಚೀನ ಕಾಲಘಟ್ಟದಲ್ಲೇ ನೀರಾವರಿ ಕಾಮಗಾರಿಗಳ ನಿರ್ಮಾಣದಲ್ಲಿ ಅವುಗಳು ಕೃಷಿ ಆರ್ಥಿಕಾಭಿವೃದ್ಧಿಗೆ ಪೂರಕವಾಗಿದ್ದರೂ ಧಾರ್ಮಿಕ ಮಹೋನ್ನತಿಯ ಉದ್ದೇಶಗಳು ಪ್ರಧಾನವಾಗಿದ್ದವು. ಕೆರೆ ಕಾಲುವೆಗಳನ್ನು ನಿರ್ಮಿಸುವುದು, ಒಡ್ಡುಗಳನ್ನು ಹಾಕುವುದು, ಬಾವಿಗಳನ್ನು ತೋಡುವುದು ಒಂದು ಧಾರ್ಮಿಕ ಕಾರ್ಯ. ಇಂತಹ ಕಾರ್ಯಗಳನ್ನು ಕೈಗೊಂಡ ವ್ಯಕ್ತಿ ಕುಟುಂಬ ಹಾಗು ಮುಖ್ಯಸ್ಥರು ಪುಣ್ಯಕ್ಕೆ ಅರ್ಹರಾಗುತ್ತಾರೆ ಎಂಬ ಗಾಢವಾದ ನಂಬಿಕೆ ಇದ್ದಿತು. ಕೌಟಿಲ್ಯನ ಅರ್ಥಶಾಸ್ತ್ರವೂ ಸಹ "ರಾಜನು ಜನಪದಗಳಲ್ಲಿ ಅಣೆಕಟ್ಟುಗಳನ್ನು ಕೆರೆಗಳನ್ನು ಕಟ್ಟಿಸಬೇಕೆಂದು ಕಟ್ಟಿಸುವವರಿಗೆ ಹಣ ಉಪಕರಣಗಳನ್ನು ನೀಡಿ ಸಹಕರಿಸಬೇಕು" ಎಂದು ಉಲ್ಲೇಖಿಸುತ್ತದೆ.[೧] ಅದಕ್ಕಾಗಿ ತಟಾಕಗಳನ್ನು ನಿರ್ಮಿಸಿ ನದೀ ಮಾತೃಕೆಯನ್ನಾಗಿ ಮಾಡಬೇಕು ಎಂಬ ನಿದರ್ಶನಗಳೂ ಇವೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಕಾಲಘಟ್ಟದಲ್ಲಿ ಉಗಮಗೊಂಡ ನೀರಾವರಿ ಚೌಕಟ್ಟನ್ನು ಸಮಕಾಲೀನ ಶಾಸನಗಳ ನೆಲೆಯಲ್ಲಿ ಪರಿಶೀಲಿಸೋಣ.

ಕರ್ನಾಟಕದ ಮೊದಲ ರಾಜಮನೆತನವಾದ ಬನವಾಸಿಯ ಕದಂಬರು ಕ್ರಿ.ಶ. ನಾಲ್ಕನೆ ಶತಮಾನದ ಪ್ರಥಮಾರ್ಧದಿಂದ ಕ್ರಿ.ಶ. ಏಳನೇ ಶತಮಾನದ ಉತ್ತರಾರ್ಧದವರೆಗೆ ಆಳ್ವಿಕೆ ನಡೆಸಿದರು. ರಾಜ್ಯದ ವಾಯುವ್ಯ ಪ್ರದೇಶದಲ್ಲಿ ಸ್ಥಾಪನೆಗೊಂಡ ಕದಂಬರಾಜ್ಯ ಶಿವಮೊಗ್ಗ, ಉತ್ತರ ಕನ್ನಡ, ಧಾರವಾಡ ಮತ್ತು ಬೆಳಗಾಂ ಜಿಲ್ಲೆಗಳನ್ನು ಅಲ್ಲದೆ, ಚಿತ್ರದುರ್ಗ ಜಿಲ್ಲೆಯ ಹಲವು ಭಾಗಗಳನ್ನು ಒಳಗೊಂಡಿತ್ತು. ಕದಂಬರ ಸಾಮ್ರಾಜ್ಯದ ಒಂದು ಭಾಗ ಮೊದಲಿಗೆ ಶಾತವಾಹನರ ಹಾಗು ಚುಟುಗಳ ನಂತರ ಪಲ್ಲವರ ಅಧೀನಕ್ಕೆ ಒಳಪಟ್ಟಿತ್ತು. ಮಯೂರಶರ್ಮ ಪಲ್ಲವರನ್ನು ಸೋಲಿಸಿ, ಕರ್ನಾಟಕದ ಪ್ರಥಮ ರಾಜಮನೆತನವೊಂದರ ಸಾಮ್ರಾಜ್ಯವನ್ನು ಸ್ಥಾಪಿಸಿದೆ. ಹೀಗೆ ಸ್ಥಾಪನೆಗೊಂಡ ಬನವಾಸಿಯ ಕದಂಬರು ಕರ್ನಾಟಕದ ಇತಿಹಾಸ, ಸಂಸ್ಕೃತಿ ಮತ್ತು ಪರಂಪರೆಗಳಿಗೆ ತನ್ನದೇ ಆದ ವಿಶಿಷ್ಟ ಕೊಡುಗೆಗಳನ್ನು ನೀಡಿರುವುದು ಗಮನಾರ್ಹ.

ಕದಂಬರ ಆಳ್ವಿಕೆಯಲ್ಲಿ ಕೆರೆ ನೀರಾವರಿ ಚೌಕಟ್ಟಿನ ಬೆಳವಣಿಗೆಯಲ್ಲಿ ನಿರ್ಮಾಣಗೊಂಡ ಹಲವು ಕೆರೆಗಳನ್ನು ಉಲ್ಲೇಖಿಸುವ ಶಾಸನಗಳು ಪ್ರಮುಖವಾಗಿವೆ. ಅವುಗಳೆಂದರೆ ಚಿತ್ರದುರ್ಗದ ಬಳಿ ಚಂದ್ರವಳ್ಳಿಯಲ್ಲಿ ಮೊದಲನೇ ಕದಂಬರಾಜ್ಯದ ಮಯೂರಶರ್ಮ ಕೆರೆಯನ್ನು ಕಟ್ಟಿಸಿದುದಾಗಿ ದಾಖಲಿಸಿದೆ. ಇದೇ ಶಾಸನದ ಮರು ಪರಿಶೀಲನೆಯನ್ನು ಮಯೂರಶರ್ಮ ಆ ಕೆರೆಯನ್ನು ದುರಸ್ತಿಪಡಿಸಿದ ಎಂದು ಪ್ರತಿಪಾದಿಸಿರುವ ಹಿನ್ನೆಲೆಯಲ್ಲಿ ಕೆರೆ ನಿರ್ಮಾಣ ಚೌಕಟ್ಟು ಕದಂಬರ ಕಾಲಘಟ್ಟಕ್ಕೂ ಹಿಂದಿನದಾಗಿತ್ತೆಂದು ಅಭಿಪ್ರಾಯಕ್ಕೆ ಬರಲು ಸಹಾಯಕವಾಗಿದೆ. ಕದಂಬರ ಎರಡನೆ ದಾಖಲೆಯುತ ಕೆರೆ ಕಾಕುತ್ಸವರ್ಮನ ತಾಳಗುಂದ ಶಾಸನದಲ್ಲಿ ತಾಳಗುಂದ ಶಾಸನದಲ್ಲಿ ತಾಳಗುಂದದ ಪ್ರಣವೇಶ್ವರ ದೇವಾಲಯದ ಎದುರಿಗೆ ಕೆರೆ ನಿರ್ಮಿಸಿದ್ದ ಬಗ್ಗೆ ಶಾಸನ ಉಲ್ಲೇಖಿಸುತ್ತದೆ. ಅದೇ ಶಾಸನದಲ್ಲಿ ಶಾತವಾಹನರು ಪ್ರಣವೇಶ್ವರನನ್ನು ಪೂಜಿಸುತ್ತಿದ್ದರು ಎಂದು ಪ್ರಸ್ತಾಪಗೊಂಡಿರುವ ಹಿನ್ನೆಲೆಯಲ್ಲಿ ಶಾತವಾಹನ ಕಾಲಘಟ್ಟದ ವೇಳೆಗೆ ಇಲ್ಲಿ ಕೆರೆ ಇದ್ದುದು ಸ್ಪಷ್ಟ. ಈ ಮೇಲಿನ ಎರಡೂ ಶಾಸನಗಳು ಕದಂಬರ ಆರಂಭಿಕ ಶಾಸನೋಕ್ತ ಕೆರೆಗಳಾಗಿದ್ದು, ಕರ್ನಾಟಕದಲ್ಲಿ ಕದಂಬ ಪೂರ್ವದಲ್ಲೇ ಕೆರೆಗಳು 'ಜಲಸಂಗ್ರಹ' ಸ್ವರೂಪದ ಕಾರ್ಯವಿಧಾನಗಳಲ್ಲಿ ಒಂದಾಗಿದ್ದವು.

ರವಿವರ್ಮನ ಗುಡ್ನಾಪುರ ಶಾಸನದಲ್ಲಿ ಜಿನಾಲಯದ ಪೂಜಾ ಕೈಂಕರ್ಯಗಳು ಹಾಗು ಅಲಂಕಾರ ಸೀಮೆಗಳಿಗಾಗಿ

* ಇತಿಹಾಸ ಪ್ರಾಧ್ಯಾಪಕರು, ಸರ್ಕಾರಿ ಕಲಾ ಕಾಲೇಜು, ಬೆಂಗಳೂರು.

ದಾನ ನೀಡಿದ ಸಂದರ್ಭದಲ್ಲಿ, ಗಡಿಯ ದಕ್ಷಿಣಕ್ಕೆ ನಿರ್ಮಿಸಿದ 'ತಟಾಕ'ದಿಂದ ಹರಿಸಿದ ನೀರಿನಿಂದ ಸಾಗುವಳಿಯಾಗುವ 'ಕನ್ಯೆ' ಭೂಮಿ ನೀಡಿದ್ದನ್ನು ದಾಖಲಿಸಿದೆ. ಮೃಗೇಶನ ಕ್ರಿ.ಶ. ೪೬೨ರ ತಾಮ್ರಪಟಗಳಲ್ಲಿ ಅರಸ ವಿಜಯ ವೈಜಯಂತಿ ಯಲ್ಲಿದ್ದಾಗ ಪಲಾಶಿಕಾ (ಈಗಿನ ಹಲಸಿ)ದಲ್ಲಿ ಜಿನಾಲಯವನ್ನು ತನ್ನ ತಂದೆಯ ಪುಣ್ಯಾರ್ಥವಾಗಿ ನಿರ್ಮಿಸಿ, ೩೩ ನಿವರ್ತನ ಭೂಮಿಯನ್ನು ದಾನವಾಗಿ ನೀಡಿದ್ದನ್ನು ಉಲ್ಲೇಖಿಸುವಲ್ಲಿ "ಮಾತೃಸರಿತಾರಭ್ಯ ಇಜ್ಜಣ ಸಂಗಮದವರೆಗೆ ಹಬ್ಬಿತೆಂದು ಹೇಳಿದೆ. ಹೀಗಾಗಿ ಉಲ್ಲೇಖಿತ ನದಿಯಿಂದ ನದಿ ಸಂಗಮದವರೆಗೆ ಭೂಮಿ ನೀರಾವರಿ ಸೌಲಭ್ಯದಿಂದ ಕೂಡಿದ್ದು ಆ ಕಾಲಘಟ್ಟದಲ್ಲಿ ನದಿ ನೀರನ್ನು ಕೃಷಿ ಚಟುವಟಿಕೆಗೆ ವಿಸ್ತರಿಸಿಕೊಳ್ಳುವ ಕಾರ್ಯವಿಧಾನ ಕಂಡುಬರುತ್ತದೆ. ರವಿವರ್ಮನ ಕುಂಟಗೇಣಿಯ ಕ್ರಿ.ಶ. ೪೯೦ರ ತಾಮ್ರಪಟಗಳಲ್ಲಿ ರವಿವರ್ಮನು ವರಿಯಾಕಾ ಗ್ರಾಮದಲ್ಲಿ ಕೆರೆಯೊಂದನ್ನು ತೋಡಿಸಿ ಅದರ ಎರಡೂ ಬದಿಗಳಲ್ಲಿ ೨೪ ನಿವರ್ತನ ಭೂಮಿಯನ್ನು ಭಾವಸ್ವಾಮಿ ಎಂಬ ವೇದಪಾರಂಗತನಿಗೆ ದಾನವಾಗಿ ನೀಡಿದ್ದನ್ನು ದಾಖಲಿಸಿದೆ. ರವಿವರ್ಮನ ಮತ್ತೊಂದು ತಾಮ್ರಶಾಸನದಲ್ಲಿ ದಾವಣಗೆರೆ ಬಳಿ....ಕಟ್ಟೆಯ ನಿರ್ಮಾಣದ ಸಮಯದಲ್ಲಿ ಒಂದು ನಿವರ್ತನ ಭೂಮಿಯನ್ನು ದಾನವಾಗಿ ನೀಡಿರುವುದು ದಾಖಲಾಗಿದೆ. ಹೀಗಾಗಿ ಕೆರೆ ನಿರ್ಮಾಣ ಚಟುವಟಿಕೆ ಭೂದಾನಗಳು ಪ್ರೋತ್ಸಾಹದಾಯಕ ಕ್ರಮಗಳಾಗಿ ಕಂಡುಬರುತ್ತವೆ. ಶಾಂತಿವರ್ಮನ ಬೇಡಿಹಾಳ್ ತಾಮ್ರಪಟಗಳಲ್ಲಿ ತನ್ನ ರಾಣಿ ಮಹಾದೇವಿಯು ಕೋರಿಕೆಯಂತೆ ದುಗ್ಗಮದ ಚತುರ್ವೇದಿಭಟ್ಟ ಮತ್ತು ಶ್ರೀಧರ ಚತುರ್ವೇದಿಭಟ್ಟರಿಗೆ ಕೊಂಡನಾದಿ ವಿಷ್ಯದ ಗ್ರಾಮಗಳನ್ನು ದಾನವಾಗಿ ನೀಡುವಾಗ, ಆ ದಾನಗಳ ಗಡಿಗಳನ್ನು ಗುರುತಿಸಿ "ಮೂರು ಕೆರೆಗಳು" ಎಂದು ಪ್ರಸ್ತಾಪಗೊಳ್ಳುವುದರಿಂದಗಿ ಹಾಗು "ಎರಡೂ ಹಳ್ಳಗಳು ಕೂಡುವ ಸ್ಥಳ"ಗಳಿಂದಾಗಿ ಹಲವಾರು ಕೆರೆಗಳು ಭೌತಿಕವಾಗಿ ಅಸ್ತಿತ್ವದಲ್ಲಿದ್ದು, ನೀರಾವರಿ ಸೌಕರ್ಯಗಳನ್ನು ಒದಗಿಸುತ್ತಿದುದು ಕಂಡುಬರುತ್ತದೆ. ಅಲ್ಲದೆ ಅವುಗಳ ಸಾಂದ್ರತೆಯು ಪ್ರಮಾಣವೂ ಗಮನಾರ್ಹವಾಗಿದ್ದುದು ವೇದ್ಯವಾಗುತ್ತದೆ. ಯೋಗಿವರ್ಮನ ತಗರೆ ತಾಮ್ರಪಟಗಳಲ್ಲಿ ೩೨ ವಿವಿಧ ಬಗೆಯ ತೆರಗಿಗೆಳಿಂದ ಮುಕ್ತವಾಗಿದ್ದು, ತಗರೆಯ 'ದೊಡ್ಡಕೆರೆ' ಉಲ್ಲೇಖಿತಗೊಂಡಿರುವುದು. ಕೆರೆ ನೀರಾವರಿ ಚೌಕಟ್ಟಿನ ಲಕ್ಷಣಗಳಲ್ಲಿ ಒಂದಾದ ಸಣ್ಣ ಕೆರೆ ದೊಡ್ಡ ಕೆರೆ ಗಾತ್ರಾಧಾರಿತ ಪ್ರಮಾಣವೂ ಶಾಸನಗಳಲ್ಲಿ ದಾಖಲಾಗಿರುವುದು ಗಮನಾರ್ಹ.

ಕರ್ನಾಟಕದ ಇತಿಹಾಸದಲ್ಲಿ ಭೂದಾನಗಳು ಅತ್ಯಂತ ಗಣನೀಯ ಪ್ರಮಾಣದಲ್ಲಿ ಕಂಡುಬರಲಾರಂಭಿಸಿದ್ದು ಕದಂಬರ ರಾಜ್ಯಾಡಳಿತದಲ್ಲಿ ಬಸದಿ, ದೇವಾಲಯ ನಿರ್ಮಾಣಗಳಿಗಷ್ಟೆ ಅಲ್ಲದೆ ಧಾರ್ಮಿಕ ಕಾರ್ಯಗಳಿಗೂ ಹಾಗು ವೇದಾಧ್ಯಯನ ಚಟುವಟಿಕೆಗಳಿಗೆ ಪೂರಕವಾಗಿ ದೊಡ್ಡ ಪ್ರಮಾಣದ ಭೂದಾನಗಳು ದಾಖಲಾಗಿವೆ. ಅಂತಹವುಗಳಲ್ಲಿ ಪ್ರಧಾನವಾದ ಸಿಂಗವರ್ಮನ ಮೂಡಿಗೆರೆ ತಾಮ್ರಪಟಗಳಲ್ಲಿ ಸೇಂದ್ರಕ ವಿಷ್ಯದ ಅಸಂಡಿಕೆರೆಯ ದಕ್ಷಿಣಕ್ಕೆ ೫ ನಿವರ್ತನ ಭೂಮಿಯನ್ನು ಬಸದಿಯಲ್ಲಿ ಆರಾಧನೆಗಾಗಿ ನೀಡಿರುವುದು ಕಂಡುಬಂದಿದೆ. ಹೊನ್ನಾವರದ ಚಿತ್ರಸೇನ ಕೈಕೇಯನ ತಾಮ್ರಪಟಗಳಲ್ಲಿ ಭೂಮಿ ಮತ್ತು ತೋಟವನ್ನು ಆರ್ಯಸಂಘಕ್ಕೆ ದಾನವಾಗಿ ನೀಡಿರುವುದು ಕೃಷಿ ಮತ್ತು ನೀರಾವರಿ ಚೌಕಟ್ಟನ್ನು ಅರ್ಥೈಸುವಲ್ಲಿ ಸಹಾಯಕವಾಗಿದೆ. ನೀರಾವರಿ ಚೌಕಟ್ಟು ಹೆಚ್ಚು ವಿಸ್ತೃತವಾಗಿದುಕ್ಕೆ ಮೃಗೇಶವರ್ಮನ ವಿಜಯಶಿವ ತಾಮ್ರ ಪಟಗಳಲ್ಲಿ ದಾನ ನೀಡಿದ ಭೂಮಿಯ ಗಾಡಿಗಳನ್ನು ಹೇಳಲಾಗಿ "ನೀರಿನ ಹರಿವು ಇರುವವರೆಗೆ" ಎಂದು ಪ್ರಸ್ತಾಪಿಸಿದೆ. ಹೀಗಾಗಿ ನೀರಾವರಿ ಚೌಕಟ್ಟಿನ ವಿಸ್ತರಣೆ ಹಾಗು ಬೆಳವಣಿಗೆಯಲ್ಲಿ ಭೂದಾನಗಳು ಹೆಚ್ಚು ಪ್ರಮುಖ ಪಾತ್ರವಹಿಸಿರುವುದು ಕಂಡುಬರುತ್ತಿದೆ.

ಕದಂಬರ ರಾಜ್ಯಾಡಳಿತ ಅವಧಿಯಲ್ಲಿ ಕೃಷಿ ವಿಸ್ತರಣೆ ಗೊಂಡಿದ್ದಲ್ಲದೆ ಅರ್ಥ ವ್ಯವಸ್ಥೆಯ ಅಭಿವೃದ್ಧಿಗೆ ಪೂರಕವಾಗಿ ನೀರವರಿ ಚಟುವಟಿಕೆಗಳು ಸಹ ಅನುಷ್ಠಾನಗೊಂಡಿರುವುದು ಕಂಡುಬರುತ್ತದೆ. ಧಾರ್ಮಿಕ ಆಶಯಗಳೇ ಪ್ರದಾನವಾಗಿದ್ದರೂ ಕೃಷಿ, ಆರ್ಥಿಕಾಭಿವೃದ್ಧಿ ರಾಜ್ಯಾದಾಯಕ್ಕೆ ಪ್ರಮುಖವಾದ ಕೊಡುಗೆಯಾಗಿರುವ ಹಿನ್ನೆಲೆಯಲ್ಲಿ ಪ್ರಾಯೋಜಕತ್ವ ವ್ಯಾಪಕತೆ ಪಡೆದುಕೊಂಡಿದೆ. ಕೆರೆಗಳನ್ನು ಮತ್ತು ದೇವಾಲಯಗಳನ್ನು ದಾತರು ಒಂರು ರೀತಿಯ ಧರ್ಮಕಾರ್ಯ ಎಂದು ಭಾವಿಸಿದ್ದರು. ಇಂತಹ ಕಾರ್ಯಗಳಲ್ಲಿ ತೊಡಗಿಸಿಕೊಂಡವರು ಸಾಮಾಜಿಕ ಹಾಗು ರಾಜಕೀಯ ಪ್ರತಿಷ್ಠೆಗೆ ಅರ್ಹರಾದರು. ಕದಂಬರ ಕಾಲದ ನೀರಾವರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನೇರವಾಗಿ ಹಲವು ರಾಜರುಗಳು ಸಕ್ರಿಯವಾಗಿ ತೊಡಗಿಸಿಕೊಂಡಿರುವುದು ಕಂಡುಬರುತ್ತದೆ. ಹೀಗಾಗಿ ರಾಜ ಪ್ರಾಯೋಜಿತ ಕಾಮಗಾರಿಗಳು ಗಣನೀಯ ವಾಗಿ ಕಂಡುಬರುತ್ತವೆ. ಅಂದಮಾತ್ರಕ್ಕೆ ಎಲ್ಲ ನೀರಾವರಿ ಕಾಮಗಾರಿಗಳನ್ನು ರಾಜರೇ ಕಟ್ಟಿಸಿದರೆಂದಾಗಲಿ, ಪ್ರಭುತ್ವಗಳೇ ಕಾರಣವೆಂದಾಗಲಿ ಭಾವಿಸಬೇಕಾಗಿಲ್ಲ. ಸ್ಥಳೀಯ ಜನ ಸಮುದಾಯಗಳು ತಮ್ಮ ಅಗತ್ಯಗಳಿಗೆ ತಕ್ಕಹಾಗೆ ಸಾಮೂಹಿಕವಾಗಿ ನೀರಾವರಿ ಚೌಕಟ್ಟನ್ನು ಬೆಳೆಸುತ್ತಾ ಬಂದಿರುವುದು ಸರ್ವವಿದಿತ.

ಕದಂಬರ ಹಲವು ದಾನ ಶಾಸನಗಳಲ್ಲಿ ನದಿ, ಹಳ್ಳ ಹಾಗು ಸಂಗಮ ಸ್ಥಳಗಳು ಉಲ್ಲೇಖಿತಗೊಂಡಿವೆ.

ರವಿವರ್ಮನ ಗುಡ್ನಾಪುರದ ಶಾಸನದಲ್ಲಿ "ಕೆರೆಯ ಕೆಳಗಿನ ೪ ನಿವರ್ತನ ಗೃಹ ನಿವೇಶನ ಮತ್ತು ನದಿ ಈಸಾಳ ಹರಿವಿನಲ್ಲಿ ಅಭಿವೃದ್ಧಿಪಡಿಸಿದ ಭೂಮಿ" ಎಂದು ಪ್ರಸ್ತಾಪ ಇರುವ ಹಿನ್ನಲೆಯಲ್ಲಿ ನದಿ ಅಥವಾ ಹಳ್ಳದ ನೀರನ್ನು ಕೃತಕ ಕಟ್ಟೆಗಳನ್ನು ನಿರ್ಮಾಣ, ಕೃಷಿ ಭೂಮಿಗೆ ನೀರನ್ನು ಒದಗಿಸಿ ಕೊಳ್ಳುವ ಪ್ರಕ್ರಿಯೆ ನಿರಂತರವಾಗಿ ಬೆಳೆದುಬಂದಿದೆ. ವಿಷ್ಣುವರ್ಮನ ಬೀರೂರು ತಾಮ್ರಪಟಗಳಲ್ಲಿ ಕಟಟ್ಟಿಕ ಎಂಬ ಗ್ರಾಮ ಅಲ್ಲಿದೆ. ೧೦೦ ನಿವರ್ತನ ಭೂಮಿಯನ್ನು **"ಕರ್ಣೆಸಕ"** ನದಿಗೆ ಕಟ್ಟಿರುವ ಸೇತುವೆಯ ಬಳಿ ೮೫ ಜನ ಬ್ರಾಹ್ಮಣರಿಗೆ ದಾನ ನೀಡಿದ್ದನ್ನು ಪ್ರಸ್ತಾಪಿಸಿವೆ. ಹೀಗಾಗಿ ಅಂದಿನ ಕೃಷಿ ನೀರಾವರಿ ಚೌಕಟ್ಟಿನಲ್ಲಿ ನದಿ ಮೂಲದ ನೀರಾವರಿ ಚಟುವಟಿಕೆಗಳು ಮುಖ್ಯಪಾತ್ರ ವಹಿಸಿರುವುದು ಕಂಡು ಬರುತ್ತದೆ. ಹಾಗೆಯೇ ಎರಡನೇ ಕೃಷ್ಣವರ್ಮನ ಶಿವಳ್ಳಿ ತಾಮ್ರಪಟಗಳಲ್ಲಿ ವಂದಣಿಕೆ ಗ್ರಾಮದ ಮುಖ್ಯ ದ್ವಾರದ ದಕ್ಷಿಣಕ್ಕೆ ಇರುವ ನಾಯಾರು ದಂಡೆಯ ಭೂಮಿಯ ಷಟ್ ಭಾಗ (೧/೬ ಭಾಗ) ದಾನ ನೀಡಿದ್ದನ್ನು ದಾಖಲಿಸಿವೆ.

ಕರ್ನಾಟಕದ ನೀರಾವರಿ ಚೌಕಟ್ಟಿನಲ್ಲಿ ಇತಿಹಾಸ ಕಾಲದಿಂದಲೂ ರಾಜರು, ರಾಣಿಯರು, ಸಾಮಂತರು, ಮಂತ್ರಿಗಳು, ಅಧಿಕಾರಿಗಳು, ಶ್ರೀಮಂತರು, ವ್ಯಕ್ತಿಗಳು ಹಾಗು ಕುಟುಂಬಗಳು ನೀರಾವರಿ ಕಾಮಗಾರಿಗಳನ್ನು ಪ್ರಾಯೋಜಿಸಿರುವದು ಸರ್ವವಿದಿತ. ಇಂತಹ ಪ್ರಾಯೋಜಕತ್ವದ ಒಂದು ದೊಡ್ಡ ಪರಂಪರೆ ನಮ್ಮ ರಾಜ್ಯದಲ್ಲಿದೆ. ಅದರ ಉಗಮ ಮತ್ತು ವಿಕಸನದ ಪ್ರಕ್ರಿಯೆ ಶಾಸನೋಕ್ತ ರೂಪದಲ್ಲಿ ಬಿಂಬಿತವಾಗುವುದೇ ಕದಂಬರ ಕಾಲದಲ್ಲಿ ಕೇವಲ ನಿರ್ಮಾಣ ಮಾತ್ರವಲ್ಲದೆ, ಅವುಗಳಲ್ಲಿ ದುರಸ್ತಿ ಹಾಗು ನಿರ್ವಹಣಾ ಕೌಶಲ್ಯಗಳೂ ಸಹ ಅಭಿವೃದ್ಧಿ ಹೊಂದುತ್ತಾ ಬಂದಿರುವುದು ಗಮನಾರ್ಹ. ಸಾಮ್ರಾಜ್ಯದಾದ್ಯಂತ ಅಸ್ತಿತ್ವದಲ್ಲಿದ್ದ ನೀರಾವರಿ ಚೌಕಟ್ಟಿನ ನಿರ್ಮಾಣ, ದುರಸ್ತಿ ಹಾಗು ನಿರ್ವಹಣೆಯಲ್ಲಿ ಸ್ಥಳೀಯ ಜನ ಸಮುದಾಯಗಳು ಸಕ್ರಿಯವಾಗಿ ಪಾಲ್ಗೊಂಡಿದ್ದವು. ಬಹುತೇಕ ನೀರಾವರಿ ಕಾಮಗಾರಿಗಳಿಗೆ ಶಾಸನೋಕ್ತ ಆಧಾರಗಳು ಇಲ್ಲವಾದರೂ, ಅವುಗಳ ಭೌತಿಕ ಅಸ್ತಿತ್ವ ಹಾಗು ಬಳಕೆ ನಿರಾಕರಿಸುವಂತಿರಲಿಲ್ಲ. ಕದಂಬರ ಕಾಲಘಟ್ಟದ ನೀರಾವರಿ ಚೌಕಟ್ಟು, ರಾಜ್ಯದ ನೀರಾವರಿ ಚೌಕಟ್ಟಿನ ಆರಂಭಿಕ ಹಂತದ ಬೆಳವಣಿಗೆಯ ಪರ್ವಕಾಲ. ಆ ಚೌಕಟ್ಟು ಕಾಲಕಾಲಕ್ಕೆ ವಿಸ್ತೃತಗೊಂಡಿದ್ದಲ್ಲದೆ, ವ್ಯವಸ್ಥಿತವಾಗಿ ಬೆಳೆದು ಒಂದು "ಪಾರಂಪರಿಕ ಕೌಶಲ್ಯ"ವಾಗಿ ಇಂದಿಗೂ ಪ್ರಸ್ತುತವೆನಿಸಿದೆ.

(ವಿಶೇಷ ಸೂಚನೆ : ಈ ಲೇಖನ ಸಿದ್ಧಪಡಿಸುವಲ್ಲಿ ಮಾಹಿತಿ ನೀಡಿ ಸೂಕ್ತ ಸಲಹೆ ಮತ್ತು ಚರ್ಚೆ ನಡೆಸಿ ಸಹಕರಿಸಿದ ಡಾ. ಪಿ.ವಿ. ಕೃಷ್ಣಮೂರ್ತಿಯವರಿಗೆ ಕೃತಜ್ಞತೆಗಳು).

ಗ್ರಂಥಋಣ

೧. *Corps of Kadamba Inscription*, Vol (1). -B.R. Gopal.

೨. ಬಾ.ರಾ. ಗೋಪಾಲ್., **ಬನವಾಸಿ ಕದಂಬರು.**

೩. **ಕರ್ನಾಟಕ ಪರಂಪರೆ,** ಭಾಗ (೧). (ಸಂ.) ಆರ್.ಆರ್. ದಿವಾಕರ್.

೪. ಕೃಷ್ಣಯ್ಯ ಮತ್ತು ಕೇಶವಭಟ್ಟ, **ಕರ್ನಾಟಕ ಇತಿಹಾಸ ದರ್ಶನ.**

೫. *Minor Dynsties of South India*, Karnataka -B.R. Gopal.

೬ P.B. Desai, S.H. Ritti, B.R. Gopal., *A History of Karnataka.*

೭. ಎಪಿಗ್ರಾಫಿಕಾ ಕರ್ನಾಟಿಕ, ಸಂಪುಟ VII.

೮. ಎಪಿಗ್ರಾಫಿಕಾ ಕರ್ನಾಟಿಕ, ಸಂಪುಟ VIII.

ಶ್ರೀಧರ*

ತುಮಕೂರು ಪರಿಸರದ ಐತಿಹಾಸಿಕ ಕೆರೆಗಳು

ಚಾರಿತ್ರಿಕ ಹಿನ್ನೆಲೆ : ತುಮಕೂರು ಕರ್ನಾಟಕದ ಬಯಲುಸೀಮೆ ಯಲ್ಲಿರುವ ಒಂದು ಪ್ರಮುಖ ಜಿಲ್ಲೆ. ಮಂಡ್ಯ, ಚಿತ್ರದುರ್ಗ, ಹಾಸನ, ಚಿಕ್ಕಮಗಳೂರು, ಬೆಂಗಳೂರು, ಕೋಲಾರ ಮತ್ತು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಗಳಿಂದ ಸುತ್ತುವರಿದಿದೆ.

ತುಮಕೂರು ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ ೧೦,೫೯೮ ಚ.ಕಿ.ಮೀ. ಗಳು, ಜಿಲ್ಲೆಯಲ್ಲಿನ ಸರಾಸರಿ ಮಳೆ ಪ್ರಮಾಣ ಸುಮಾರು ೫೨೯.೯ ಮಿ.ಮೀ.ಗಳು, ಇಲ್ಲಿನ ವಾಯುಗುಣವು ಉಷ್ಣವಲಯದ ಮಾನ್‌ಸೂನ್ ಮಾದರಿಯದಾಗಿದೆ. ಜಿಲ್ಲೆಯಲ್ಲಿ ಸುಮಾರು ೨೦೧೦ ಕೆರೆಗಳಿದ್ದು, ಯಾವುದೇ ಪ್ರಮುಖವಾದ ನದೀ ಮೂಲಗಳಲ್ಲಿ ಕೆರೆಯ ನೀರಿನಿಂದ ಸುಮಾರು ೩೦೧೧೨ ಹೆಕ್ಟೇರ್‌ನಷ್ಟು ಭೂಪ್ರದೇಶ ನೀರಾವರಿಯಾಗುತ್ತಿದೆ. ಜಿಲ್ಲೆಯ ದಕ್ಷಿಣ ಭಾಗದ ತುರುವೇಕೆರ, ಗುಬ್ಬಿ, ತುಮಕೂರು ಮತ್ತು ಕುಣಿಗಲ್ ತಾಲ್ಲೂಕಗಳ ಕೆಲವು ಭಾಗಗಳಿಗೆ ಹೇಮಾವತಿ ನಾಲಾ ನೀರಾವರಿ ಸೌಲಭ್ಯವಿದ್ದು ಉತ್ತರ ಭಾಗದ ಶಿರಾ, ಪಾವಗಡ, ಕೊರಟಗೆರೆ ಮತ್ತು ಮಧುಗಿರಿ ತಾಲ್ಲೂಕುಗಳಲ್ಲಿ ಭೂಭಾಗದ ನೀರಾವರಿಯು ಕೆರೆ ಮತ್ತು ಕೊಳವೆ ಬಾವಿಗಳನ್ನು ಅವಲಂಬಿಸಿದೆ. ಜಿಲ್ಲೆಯು ಕೆರೆ ನೀರಾವರಿಗೆ ಹೆಸರಾಗಿದ್ದು, ಇಲ್ಲಿನ ಸ್ಥಳೀಯ ಆಡಳಿತಗಾರರು ಅನೇಕ ಕೆರೆಗಳನ್ನು ನಿರ್ಮಾಣ ಮಾಡಿ ಇಲ್ಲಿನ ಜನರ ಕೃಷಿಗೆ ಅನುಕೂಲ ಮಾಡಿದ್ದಾರೆ.

ಪ್ರಾಚೀನ ಸಾಹಿತ್ಯಾಧಾರಗಳಲ್ಲಿ ಜಲಸಂಗ್ರಹ ವಿಧಾನಗಳ ಮಹತ್ವವನ್ನು ಕುರಿತು ಹೇಳಲಾಗಿದ್ದು, ಅವುಗಳಲ್ಲಿ ಕೆಲವುಗಳನ್ನು ಇಲ್ಲಿ ಹೆಸರಿಸಲಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರವು (ಕ್ರಿ.ಪೂ. ೩೦೦) ನಿರಂತರವಾದ ಅಥವಾ ಇತರ ಯಾವುದಾದರೂ ಮೂಲಗಳಿಂದ ನೀರು ತುಂಬುವಂತಹ ಅಣೆಕಟ್ಟು ಅಥವಾ ಕೆರೆಗಳನ್ನು ಕಟ್ಟಲು ಯಾರು ಮುಂದೆ ಬರುತ್ತಾರೋ ಅವರಿಗೆ ಬೇಕಾದ ಮರಮುಟ್ಟು, ಸ್ಥಳ, ರಸ್ತೆ ಇತ್ಯಾದಿ ಅಗತ್ಯಗಳನ್ನು ಒದಗಿಸಬೇಕೆಂದಿದೆ. ಇಡೀ ಸಮಾಜದ ಅಭ್ಯುದಯಕ್ಕೆ ಮೂಲಭೂತ ಅಗತ್ಯವುಳ್ಳದ್ದು ಈ ಕೆರೆ ನಿರ್ಮಾಣವೆಂಬುದು ವಿಜ್ಞಾನೇಶ್ವರನ ಮಿತಾಕ್ಷರದಿಂದ ತಿಳಿದುಬರುತ್ತದೆ. ಕಲ್ಹಣನ ರಾಜತರಂಗಿಣಿಯಲ್ಲಿ ತಿಳಿಸಿರುವಂತೆ ಹರಿಯುವ ನೀರಿಗೆ ಕಲ್ಲುಗುಂಡುಗಳಿಂದ ಅಡ್ಡಲಾಗಿ ನಿರ್ಮಿಸುತ್ತಿದ್ದ ಸುಯ್ಯಗಳು ಆರ್ಥಿಕ ಕ್ರಾಂತಿಯನ್ನೇ ಉಂಟು ಮಾಡಿದವು. ಕೆರೆ, ಕಟ್ಟೆಗಳು ಕೇವಲ ಕಲ್ಲು ಮಣ್ಣಿನ ರಚನೆಗಳಲ್ಲ, ಅವು ನಾಡಿನ ಜೀವನಾಧಾರಗಳೆನ್ನಬಹುದು.

ತುಮಕೂರು ಜಿಲ್ಲೆಯಾದ್ಯಂತ ಲಭ್ಯವಿರುವ ಅನೇಕ ಶಾಸನಗಳಲ್ಲಿ ವಿವಿಧ ರಾಜಮನೆತನದ ಅರಸರು ಪ್ರಭಾವಿ ಪುರುಷರು, ಮಹಿಳೆಯರು, ದಂಡನಾಯಕರು, ನಾಡಗೌಡರು, ಜನಸಾಮಾನ್ಯರು ಕಟ್ಟಿಸಿದ ಕೆರೆಗಳ ಮತ್ತು ನೀಡಿರುವ ಭೂದಾನಗಳ ವಿವರಗಳು ಲಭ್ಯವಿದೆ. ಜಿಲ್ಲೆಯಲ್ಲಿ ಕೆರೆ ಕಟ್ಟೆಗಳ ನಿರ್ಮಾಣವು ಏಳನೇ ಶತಮಾನದಿಂದಲೂ ನಿರಂತರವಾಗಿ ಸಾಗಿಬಂದಿದೆ. ಯಾವುದೇ ಪ್ರಮುಖ ನದೀ ಮೂಲಗಳಿಲ್ಲದ, ಈ ಪ್ರದೇಶದಲ್ಲಿ ಜನಸಾಮಾನ್ಯರ ನಾಡಿಮಿಡಿತವನ್ನು ಅರಿತಿದ್ದ ಆಡಳಿತ ವರ್ಗವು ಅನೇಕ ಕೆರೆ ಕಟ್ಟೆಗಳನ್ನು ಕಟ್ಟಿಸಿ ವ್ಯವಸಾಯಕ್ಕೆ ಅನುಕೂಲ ಮಾಡಿಕೊಟ್ಟಿತ್ತು.

ಕ್ರಿ.ಶ. ೫ನೇ ಶತಮಾನದ ಆರಂಭದಿಂದ ೧೦ನೇ ಶತಮಾನದವರೆಗೆ ಆಳಿರುವ ಗಂಗರ ಕಾಲದ ಶಾಸನಗಳಲ್ಲಿ ನೀರಾವರಿಗೆ ಸಂಬಂಧಿಸಿದ ಕೆರೆ, ದೊಣೆ, ಗುಂಡು ಜಲಾಶಯ, ಕೊಳ ಮುಂತಾದ ಪದಗಳು ಕಂಡುಬರುತ್ತವೆ. ತಡಂಗಾಲ ಮಾಧವವರ್ಮನ ಮೇಳೆಕೋಟೆ ಶಾಸನದಲ್ಲಿ 'ರಕ್ತ ತಟಾಕ' ಎಂಬ ಕೆರೆಯ ಉಲ್ಲೇಖ ಹಾಗೂ ಅವನು ನೀಡಿರುವ ಭೂದಾನ ವಿವರಗಳು ಇವೆ. ಆದರೆ ಈ ಕೆರೆಯು ತುಮಕೂರು ವ್ಯಾಪ್ತಿಗೆ ಬರುವುದಿಲ್ಲ. ಆದರೂ, ಕೆರೆ ಕುರಿತು ಹೇಳಲಾಗಿರುವ ತುಮಕೂರಿನ ಶಾಸನಗಳಲ್ಲಿ ಇದೇ ಪ್ರಥಮ.

ಇತಿಹಾಸ ಪ್ರಸಿದ್ಧವಾದ ಕುಣಿಗಲ್ ಕೆರೆಯನ್ನು ಗಂಗ ಶ್ರೀಪುರುಷ ನಿರ್ಮಿಸಿದನೆಂದು ಹೇಳಲಾಗಿದೆ. ರಾಷ್ಟ್ರಕೂಟರ ಅಕಾಲವರ್ಷ ಕನ್ನರದೇವನು ಆಳುತ್ತಿದ್ದ ಸಂದರ್ಭದಲ್ಲಿ ಅವನ ಮಹಾಸಾಮಂತ ಚಾಲುಕ್ಯ ಮಂದಾತನೆಂಬುವನು ೮೦೦ ನಾಡು(ಗ್ರಾಮ)ಗಳನ್ನು ಆಳುತ್ತಿದ್ದನು. ಶ್ರೀಪುರುಷ ಕಟ್ಟಿಸಿದ್ದ ಕುಣಿಗಲ್ ಕೆರೆಯು ಶಿಥಿಲಗೊಂಡಿದ್ದು ಅದನ್ನು ಇವನು

* ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಜೀರ್ಣೋದ್ಧಾರಗೊಳಿಸಿದ ಎಂದು ಶಾಸನ ತಿಳಿಸುತ್ತದೆ. ಇದೇ ಕೆರೆಗೆ ರಾಷ್ಟ್ರಕೂಟರ ದಂಡನಾಯಕ ಇರುಗುಪ್ಪ ನೆಂಬುವನು ತೂಬು ನಿರ್ಮಿಸಿದ ಎಂದು ಮತ್ತೊಂದು ಶಾಸನ ತಿಳಿಸುತ್ತದೆ. ಸಮುದ್ರದಂತೆ ಭಾಸವಾಗುವ ಈ ಕೆರೆಯ ನೋಟ ಮನೋಹರ, ರುದ್ರರಮಣೀಯ, ಇದೊಂದು ಅಸಾಧಾರಣವಾದ ರಚನೆ. ಇದರ ವೈಭವವು ಪಿ. ಕಾಳಿಂಗರಾಯರು ಹಾಡಿರುವ ಜಾನಪದ ಧಾಟಿಯ ಮೂಡಲ್ ಕುಣಿಗಲ್ ಕೆರೆ ನೋಡೋರ್‌ಗೆ ಒಂದ್ ಐಭೋಗ ಮೂಡಿ ಬರುತ್ತಾನೆ ಚಂದಿರಾಮ ಎಂಬ ಹಾಡಿನ ಮೂಲಕ ಜನಜನಿತವಾಗಿದೆ. ಈ ಕೆರೆ ಜಿಲ್ಲೆಯ ಸೌಭಾಗ್ಯ ಎಂದರೆ ಅತಿಶಯೋಕ್ತಿ ಆಗಲಾರದು.

ತುಮಕೂರಿನ ಸೋಮೇಶ್ವರ ದೇವಸ್ಥಾನದಲ್ಲಿರುವ ಶಾಸನವೊಂದು ತುಮಕೂರಿನ ಕೆರೆ ನಿರ್ಮಾಣ ಕುರಿತು ಬೆಳಕು ಚೆಲ್ಲುತ್ತದೆ. ಈ ಶಾಸನದ ವಿವರದಂತೆ ಶಕವರ್ಷ ೮೭೭ ಅಂದರೆ ಕ್ರಿ.ಶ. ೯೫೫ರಲ್ಲಿ ತಿಯಣ್ಣ ಎಂಬುವವನು ತುಮಕೂರು ಕೆರೆ ಕಟ್ಟಿಸಲಾಗಿ ಇವನಿಗೆ ಕಂದಮಯ್ಯನ ಮಗ ಅಜ್ಜಮಯ್ಯ ಎಂಬುವನು ೧೨ ಖಂಡುಗ ಮಣ್ಣು ಮತ್ತು ಬಿತ್ತುವಟ್ಟವನ್ನು ಕೊಟ್ಟು ಅವನಿಗೆ ಬ್ರಹ್ಮೋತ್ತರ ಎಂದು ಬಿರುದನ್ನು ಕೊಟ್ಟು ಪಟ್ಟ ಕಟ್ಟಿದನೆಂದು ಶಾಸನ ತಿಳಿಸುತ್ತದೆ. ಈ ಬೃಹತ್ ಕೆರೆ ಇಂದಿಗೂ ವ್ಯವಸ್ಥಿತವಾಗಿದ್ದು ಉಪಯೋಗದಲ್ಲಿದೆ. ಆದರೆ ಕೆರೆಯ ನೀರು ನೀರಾವರಿಗೆ ಅಲಭ್ಯವಾಗಿದೆ. ಕಾರಣ ಕೆರೆ ಅಚ್ಚುಕಟ್ಟು ಜಮೀನುಗಳು ಇಂದು ನಿವೇಶನಗಳಾಗಿ ಅಲ್ಲಿ ಮನೆ ಮತ್ತು ಕಾರ್ಖಾನೆಗಳು ತಲೆಯೆತ್ತಿವೆ. ಇದು ನಗರೀಕರಣದ ಪ್ರಭಾವ ಎನ್ನಬಹುದು. ಜಲಾನಯನ ಪ್ರದೇಶದ ಕೆಲವು ಹೊಲಗದ್ದೆಗಳಿಗೆ ಮಾತ್ರ ನೀರನ್ನು ಬಳಸಲಾಗುತ್ತದೆ. ತುಮಕೂರಿನ ಆಸುಪಾಸಿನಲ್ಲಿದ್ದ ಎಷ್ಟೋ ಕೆರೆಗಳು ಇಂದು ಕಣ್ಮರೆಯಾಗಿವೆ. ನಗರೀಕರಣದ ಪೆಡಂಭೂತ ಅವುಗಳನ್ನು ನುಂಗಿಹಾಕಿದೆ.

ಹೊಯ್ಸಳರ ದಂಡನಾಯಕ ಗೂಳಿಬಾಚಿದೇವನು ಸರ್ವಧರ್ಮ ಸಮಾನತೆಗೆ ಹೆಸರಾದ ಸೇನಾನಿ. ಶಾಸನಗಳಲ್ಲಿ ಇವನನ್ನು ಚತುಸಮುದ್ಧರಣ ಎಂದು ಹೊಗಳಲಾಗಿದೆ. ಇವನ ಮಹಾನ್ ಕಾರ್ಯಗಳಲ್ಲಿ ಕೆರೆಗಳ ನಿರ್ಮಾಣವೂ ಒಂದು. ಇವನು ತನ್ನ ತಂದೆಯ ನೆನಪಿಗಾಗಿ ಪರೋಕ್ಷ ವಿನಯವಾಗಿ ಗಂಗೇಶ್ವರ ಎಂಬ ದೇವಾಲಯ ಕಟ್ಟಿಸಿ, ದೇವರ ಅಂಗರಂಗ ಭೋಗಕ್ಕೆ ಕೈದಾಳ ಗ್ರಾಮದ ಕೆರೆಯ ಕೆಳಗೆ ಭೂದಾನ ಮಾಡುತ್ತಾನೆ.

ಬಾಚಿದೇವನು ತನ್ನ ರಾಣಿ ಭೂಮಲೆ ನಾಯಕಿತಿಗೆ ಅವಳ ಹೆಸರಿನಲ್ಲಿ ಭೀಮಜಿನಾಲಯ ಎಂಬ ಬಸದಿ ಕಟ್ಟಿಸಿ, ಭೀಮಸಮುದ್ರ ಎಂಬ ಬೃಹತ್ ಕೆರೆ ಕಟ್ಟಿಸಿದನು. ಈ ಕೆರೆಯು ಗೂಳೂರಿನ ಪಶ್ಚಿಮಕ್ಕೆ ಇದ್ದು ವಿಶಾಲವಾಗಿದೆ. ಇದರ ನಿರ್ಮಾಣವು ಇತರೆ ಕೆರೆಗಳಂತೆ ಇರದೆ ಬಹಳ ಸೊಗಸಾದ ರಚನೆಯಾಗಿದೆ. ಕಾರಣ ಇದರ ಏರಿಯು ಕೋಟೆಯಂತೆ ಸುತ್ತುವರಿದಿದ್ದು ಹೆಚ್ಚು ನೀರು ಹಿಡಿದಿಡುವ ಸಾಮರ್ಥ್ಯ ಹೊಂದಿದೆ. ಹಾಗೆಯೇ ಇದರ ಕೋಡಿ ವಿಶೇಷವಾಗಿದ್ದು ಈ ಪರಿಸರದಲ್ಲಿ ಇದು ಅಪರೂಪ ಎನ್ನಬಹುದು. ಕೋಡಿ ನೀರು ಹರಿಯುವ ಜಾಗದಲ್ಲಿ ಕೆಲವು ಪ್ರಾಚೀನ ದೇವತಾ ಮೂರ್ತಿಗಳಿದ್ದು ಅಲಂಕೃತವಾಗಿವೆ. ಕೆರೆಯ ಬಳಿ ಕೈಮುಗಿದು ನಿಂತ ಭಂಗಿಯಲ್ಲಿರುವ ಒಂದು ಪ್ರತಿಮೆಯಿದ್ದು ಇದ ಗೂಳಿಬಾಚಿದೇವನದೇ ಇರಬಹುದೆಂದು ಊಹಿಸಲಾಗಿದೆ. ಕೆರೆಯ ಹಿಂದೆ ಸುಮಾರು ೪೦೦ ಎಕರೆ ಕೃಷಿ ಜಮೀನು ನೀರಾವರಿಗೆ ಒಳಪಡುತ್ತದೆ. ಸಂಯುಕ್ತ ಚೂಡಾಮಣಿ ಎನಿಸಿದ ಸೇನಬೋವ ಮಾರಯ್ಯನೆಂಬುವನು ಈ ಗೂಳಿಬಾಚಿ ದೇವನಿಂದ ಭೂಮಿಯನ್ನು ದಾನ ಪಡೆದು ಮುದುಗೆರೆ ಎಂಬಲ್ಲಿ ಮಾರಸಮುದ್ರ ಎಂಬ ಹೊಸ ಕೆರೆ ನಿರ್ಮಾಣ ಮಾಡಿದನು. ಬಹುದೀರ್ಘವಾದ ಕೈದಾಳದ ಈ ಶಾಸನದಲ್ಲಿ ಹಲವು ಗ್ರಾಮಗಳ ಕೆರೆಗಳ ಉಲ್ಲೇಖವಿದ್ದು ಭೂದಾನ ಕುರಿತು ಮಾಹಿತಿ ಇದೆ.

ಈ ಪರಿಸರದ ಮತ್ತೊಂದು ಐತಿಹಾಸಿಕ ಕೆರೆಯೆಂದರೆ ಹುಳುಮನ ಕುಪ್ಪೆ, ಹೊಯ್ಸಳ ಶ್ರೀವೀರರಾಮನಾಥ ದೇವರಸನ ಆಳ್ವಿಕೆಯಲ್ಲಿ ಅವನ ಪ್ರಧಾನ ಮಾಂಡಳೀಕ ಕೆಂಚಯ್ಯ ದಂಡನಾಯಕರು ಬಸೀಗೌಡರ ಹೊನ್ನಗೌಡನಿಗೆ ಉಡುಗೊರೆ ಯಾಗಿ ಮರುಗಲುನಾಡಿನ ಹುಳುಮನ ಕುಪ್ಪೆಯನ್ನು ಕೊಟ್ಟನು. ಅಲ್ಲಿ ಹೊನ್ನಗೌಡನು ತನ್ನ ತಂದೆ ಬಸೀಗೌಡನ ಹೆಸರಿನಲ್ಲಿ ಅವನಿಗೆ ಪುಣ್ಯವಾಗಲೆಂದು ಧರ್ಮಾರ್ಥವಾಗಿ ಬಾಸಿಸಮುದ್ರ ಎಂಬ ಕೆರೆಯನ್ನು ಕಟ್ಟಿಸಿದನು. ಅದೇ ಕೆರೆಯ ಕೆಳಗೆ ಐವತ್ತು ಖಂಡುಗ ಸಾಗುವಳಿಯ ಗದ್ದೆ, ಬೆದ್ದಲು ಜಮೀನನ್ನು ಕೊಡುಗೆಯಾಗಿ ಬಿಟ್ಟನು. ಇಷ್ಟಲ್ಲದೆ ಕೆರೆಯ ಬಳಿ ಬಾಸೀಶ್ವರ ಎಂಬ ದೇವಾಲಯ ಕಟ್ಟಿಸುತ್ತಾನೆ. ಈ ದೇವರ ಅಮೃತಪಡಿಗೆಗೆ ಹುಳುವನ ಕುಪ್ಪೆ ಊರಿನ ಮುಂದಿರುವ ಜಮೀನು ದತ್ತಿ ಬಿಡುತ್ತಾನೆ. ಈ ಕೆರೆಯು ಇಂದು ಒತ್ತುವರಿಯಾಗುತ್ತಿದೆ. ಇದರಲ್ಲಿ ಸಾಕಷ್ಟು ಹೂಳು ತುಂಬಿರುವುದರಿಂದ ಇತ್ತೀಚಿನ ವರ್ಷಗಳಲ್ಲಿ ಕೆರೆ ತುಂಬಿರುವ ಉದಾಹರಣೆಗಳು ಕಡಿಮೆ.

ತುಮಕೂರು ಪರಿಸರದ ಹೆಸರಿಸಬೇಕಾದ ಮತ್ತೊಂದು ಮಹತ್ವದ ಕೆರೆಯೆಂದರೆ ತುಮಕೂರಿಗೆ ಸಮೀಪವಿರುವ ಇತಿಹಾಸ ಪ್ರಸಿದ್ಧವಾದ ಮೈದಾಳ ಕೆರೆ. ಪಂಡಿತರ ಹಳ್ಳಿಯ ಬಸದಿಯ ಶಾಸನದ ವಿವರದಂತೆ, ಹೊಯ್ಸಳರ ಅಧಿಕಾರಿ ಈಶ್ವರನು ಮಂದರಗಿರಿಯಲ್ಲಿದ್ದ ಶಿಥಿಲವಾದ ಜಿನಾಲಯ ವನ್ನು ಜಗತ್ತೇ ಹೊಗಳುವ ಹಾಗೆ ಪುನರ್ ನಿರ್ಮಾಣ ಮಾಡಿಸುತ್ತಾನೆ. ಇವನ ಮಡದಿ ಮಾಚಿಯಕ್ಕಳು (ಮಾಚಪ್ಪೆ) ಗಂಡನ ಧರ್ಮಕಾರ್ಯಗಳಿಗೆ ಬೆಂಬಲವಾಗಿ ಮೈದಾಳದಲ್ಲಿ ಪದ್ಮಾವತಿ ಎಂಬ ಕೆರೆಯನ್ನು ಕಟ್ಟಿಸಿ ದಾನ ನೀಡಿರುವಳು.

ಇಲ್ಲಿ ಎರಡು ಬೆಟ್ಟಗಳ ನಡುವೆ ತಡೆಗೋಡೆ ನಿರ್ಮಿಸಿ ಬಹಳ ವಿಶಾಲವಾದ ಅಂಗಳದಲ್ಲಿ ನೀರು ನಿಲ್ಲುವಂತೆ ಮಾಡಲಾಗಿದೆ. ಈ ಕೆರೆಯಲ್ಲಿ ಸದಾ ನೀರಿದ್ದು ಈ ಕೆರೆಯ ಹಿಂದಿನ ಹೊಲ, ತೋಟ, ಗದ್ದೆಗಳು ಸದಾ ಹಚ್ಚ ಹಸಿರಿನಿಂದ ಕೂಡಿವೆ. ಸುತ್ತಮುತ್ತಲಿನ ರೈತರಿಗೆ ಪ್ರಮುಖ ನೀರಿನ ಆಸರೆಯಾಗಿರುವ ಇದು ತುಮಕೂರು ನಗರಕ್ಕೆ ಕುಡಿಯುವ ನೀರಿನ ಪೂರೈಕೆ ಮಾಡುತ್ತಿದ್ದು ಈ ಪರಿಸರದಲ್ಲೇ ಬಹು ಮುಖ್ಯ ಜಲಸಂಗ್ರಹವಾಗಿದೆ. ಸದಾ ನೀರಿನಿಂದ ಕೂಡಿರುವ ಈ ಕೆರೆಯು ಈವರೆಗೆ ಬರಿದಾಗಿದ್ದೇ ಇಲ್ಲ ಎಂದು ಸ್ಥಳೀಯರು ಹೇಳುತ್ತಾರೆ. ಕೆರೆಯ ತೂಬಿನ ಬಳಿ ಹಲವು ಪ್ರಾಚೀನ ದೇವತಾಮೂರ್ತಿಗಳಿದ್ದು ಅದರಲ್ಲಿ ಒಂದು ಕೆರೆಯ ನಿರ್ಮಾತೃ ಮಾಚಿಯಕ್ಕ ಎಂದು ನಂಬಲಾಗಿದೆ.

ಈ ಕೆರೆಯ ಜಲಾನಯನ ವಿವರಗಳು : ಕೆರೆಯ ಒಟ್ಟು ಅಚ್ಚುಕಟ್ಟು ಪ್ರದೇಶ ೧೮೮೯ ಎಕರೆಗಳು, **ಏರಿಯ ವಿವರ** : ಉದ್ದ ೮೧೦ ಮೀಟರ್‌ಗಳು, ಗರಿಷ್ಠ ಎತ್ತರ ೧೩.೦೮ ಮೀ.ಗಳು; ನೀರಿನ ಜಲಾವೃತ್ತ ಪ್ರದೇಶ ೨೧೩.೮೮ ಹೆಕ್ಟೇರುಗಳು, **ಕೋಡಿಯ ವಿವರ** : ಎರಡು ಕೋಡಿಗಳಿದ್ದು ಬಲಕೋಡಿ ೨೬.೫೨ ಮೀಟರ್ ಎಡಕೋಡಿ ೩೩.೮೩ ಮೀಟರ್, ತೂಬಿನ ವಿವರಗಳು : ಎರಡು ತೂಬುಗಳಿದ್ದು ಎಡದಂಡೆ ತೂಬು ೭ ಅಡಿ ಎತ್ತರವಿದೆ ಅದರ ವ್ಯಾಸ ೬೦೦ ಮಿ.ಮೀ. ಇದೆ. ಈ ವಿವರಗಳನ್ನು ಕೆರೆಯ ಬಳಿ ಬರೆಸಲಾಗಿದೆ.

ಭೈರಸಂದ್ರ ಗ್ರಾಮದ ಬಳಿಯಿರುವ ಶಾಸನ ಹರಳೂರು ಕೆರೆಯ ನಿರ್ಮಾಣದ ಕುರಿತು ಮಾಹಿತಿ ನೀಡುತ್ತದೆ. ಹೊಯ್ಸಳ ವೀರರಾಮನಾಥ ದೇವರಸರು ಕುಂದಣಿ ನಾಡನ್ನು ಆಳುತ್ತಿರಲು ಇವನ ಮಹಾಪ್ರಧಾನ ದಂಡ ನಾಯಕನು ಹೊನಸೀಗೆರೆಯ ಹೊನ್ನಮಾರಗೌಡನ ಮಗ. ಹೊನ್ನಮಾರ ಗೌಡನಿಗೆ ಗೌಡ ಗೊಡುಗೆಯಾಗಿ ಮರುಗಲುನಾಡೊಳಗಿನ ಹರಳೂರನ್ನು ಉಂಬಳಿಯಾಗಿ ನೀಡಲಾಗಿ ಅಲ್ಲಿ ಹೊನ್ನ ಮಾರಗೌಡನು ತನ್ನ ತಾಯಿ ಕಾಚೀಗೌಡಿಯ ಧರ್ಮಾರ್ಥ ವಾಗಿ ಕಾಚಸಮುದ್ರ ಎಂಬ ಕೆರೆಯನ್ನು ೧೨೦೦ ಹೊನ್ನುಗಳ ವೆಚ್ಚದಲ್ಲಿ ಕಟ್ಟಿಸಿದನು. ಇದು ಆವನಿಗೆ ತಾಯಿಯ ಮೇಲಿದ್ದ ಭಕ್ತಿಯನ್ನು ಸೂಚಿಸುತ್ತದೆ. ಇದರ ಹಿಂದಿನ ಉದ್ದೇಶ ಸ್ವರ್ಗದಲ್ಲಿರುವ ತನ್ನ ತಾಯಿಯ ಆತ್ಮಕ್ಕೆ ಶಾಂತಿ ಸಿಗಲೆಂಬುದು. ಈ ಕೆರೆಯ ಕೆಳಗೆ ಹಲವು ಖಂಡುಗ ಜಮೀನನ್ನು ದಾನ ನೀಡಿದನು. ಈ ಕೆರೆ ಈಗಲೂ ಕೃಷಿಗೆ ಯೋಗ್ಯವಾಗಿದ್ದರೂ ಬಹುತೇಕ ಜೀರ್ಣವಾಗಿದೆ.

ತುಮಕೂರಿನ ಕೆಲವೇ ಕಿಲೋಮೀಟರುಗಳ ಅಂತರ ದಲ್ಲಿರುವ, ಇತಿಹಾಸ ಪ್ರಸಿದ್ಧವಾದ ದೇವರಾಯನದುರ್ಗ ಹಚ್ಚ ಹಸಿರಿನ ಹಲವು ವೈಶಿಷ್ಟ್ಯಗಳ ನಿಸರ್ಗಧಾಮ, ಮೈಸೂರಿನ ಅರಸರಾಗಿದ್ದ ಚಿಕ್ಕದೇವರಾಯ ಒಡೆಯರ ಸ್ಮರಣಾರ್ಥ ಇದನ್ನು ದೇವರಾಯನದುರ್ಗ ಎಂದು ಕರೆಯಲಾಗಿದೆ.

ಕ್ರಿ.ಶ. ೧೪೦೧ ಶಾಸನ ತಿಳಿಸುವಂತೆ ವಿಜಯನಗರದ ಅರಸ ಶ್ರೀ ವೀರಬುಕ್ಕಣ್ಣ ಒಡೆಯರ ಅಂಗಜಾವದ ಅಲ್ಲಪ್ಪನಾಯಕನ ಮಕ್ಕಳಾದ ಪೋಲೆಯನಾಯಕ, (ಅನಿಬಿದ್ದಜ್ರಿಯ) ಊರ ಪಶ್ಚಿಮ ದಿಕ್ಕಿನಲ್ಲಿ ಬುಕ್ಕರಾಯ ಸಮುದ್ರ ಎಂಬ ಹೆಸರಿನಲ್ಲಿ ಒಂದು ಕೆರೆ ಹಾಗೂ ದಕ್ಷಿಣ ದಿಕ್ಕಿನಲ್ಲಿ ಪೋಲಸಮುದ್ರ ಎಂಬ ಮತ್ತೊಂದು ಕೆರೆಯನ್ನು ಕಟ್ಟಿಸಿದನು. ಇಲ್ಲಿ ನೈಸರ್ಗಿಕವಾದ ಜಲಗುಂಡಿಗಳಿದ್ದು, ಜಯಮಂಗಲಿ ನದಿ ಉಗಮಕ್ಕೆ ಕಾರಣವಾಗಿದೆ.

ದೇವರಾಯನದುರ್ಗದ ತಾಮ್ರಶಾಸನವೊಂದು ಚಿಕ್ಕದೇವರಾಜ ಒಡೆಯರ ಆಳ್ವಿಕೆ ಕಾಲದಲ್ಲಿ ಅವಸರದ ರಾಮಅರಸಯ್ಯನವರ ಪುತ್ರರಾದ ನಾಗರಸಯ್ಯ ಇವರ ಪುತ್ರರಾಧ ಸುಬ್ಬಯ್ಯ ಎಂಬುವವರು ದೇವರಾಯನ ದುರ್ಗವನ್ನು ಆಳುತ್ತಿರುವಾಗ ಗೋವಿಂದಯ್ಯರ ಮಗ ವೆಂಕಪ್ಪಯ್ಯ ಎಂಬುವನು ದೇವರಾಯನ ದುರ್ಗಕ್ಕೆ ಸಮೀಪದ ಚಿನುವಾಡನಹಳ್ಳಿ ಕೆರೆ ಕಟ್ಟಿಸಿ ಕೆರೆಯ ಹಿಂದಿನ ಜಮೀನನ್ನು ಲಕ್ಷ್ಮೀನರಸಿಂಹದೇವಾಲಯದ ಸಕಲ ಸೇವೆಗೆಂದು ಬಿಟ್ಟಿದ್ದನ್ನು ಶಾಸನ ತಿಳಿಸುತ್ತದೆ. ಈ ಪರಿಸರದಲ್ಲಿ ಹೆಸರಿಸಲೇಬೇಕಾದ ಮತ್ತೊಂದು ಅತಿ ಮುಖ್ಯ ಕೆರೆಯೆಂದರೆ ತುಮಕೂರಿಗೆ ೨೦ ಕಿ.ಮೀ. ಅಂತರದಲ್ಲಿರುವ ಐತಿಹಾಸಿಕ ಮಹತ್ವವಿರುವ ಹೆಬ್ಬೂರಿನದು. ಹೆಬ್ಬೂರನ್ನು ೧೦೧ ದೇವಾಲಯ, ಬಾವಿ, ಕೆರೆಗಳ ಬೀಡೆಂದು ಅಲ್ಲಿನ ಜನ ವರ್ಣಿಸುತ್ತಾರೆ. ಇದೊಂದು ಚಾರಿತ್ರಿಕ ನೆಲೆ, ಇಲ್ಲಿನ ಶಾಸನದಲ್ಲಿ ಉಲ್ಲೇಖವಾಗಿರುವಂತೆ, ಹುಣಸೇನಾಳು ನಂಜರಾಜ ಒಡೆಯರ ದೊಡ್ಡಯ್ಯ ಅರಸು ಅವರು ಶಕವರ್ಷ ೧೬೪೧ ಅಂದರೆ ಕ್ರಿ.ಶ. ೧೭೧೯ರಲ್ಲಿ ಹೆಬ್ಬೂರಿಗೆ ಪಶ್ಚಿಮದಿಕ್ಕಿನಲ್ಲಿ ದೇವಾಂಬುದಿ ಕೆರೆಯನ್ನು ನಿರ್ಮಿಸಿದರು. ಈ ಶಾಸನದ ವಿಶೇಷವೆಂದರೆ ಆ ಕೆರೆಯನ್ನು ಕಟ್ಟಿದ ವಿವಿಧ ವರ್ಗದ ಕೆಲಸಗಾರರನ್ನು ಹೆಸರಿಸಿರುವುದು ಇದು ಕೆಲವೇ ಶಾಸನಗಳಲ್ಲಿ ಕಂಡುಬರುವ ಪ್ರಮುಖ ಅಂಶ. ಏಕೆಂದರೆ ಶಾಸನಗಳು ಕೆರೆಯ ನಿರ್ಮಾತೃವನ್ನು ಹಾಗೂ ಯಾರ ಸ್ಮರಣಾರ್ಥವಾಗಿ ಮತ್ತು ಯಾವ ಉದ್ದೇಶಕ್ಕಾಗಿ ನಿರ್ಮಾಣ ಮಾಡಲಾಗಿದೆ ಎಂಬುದನ್ನು ಕುರಿತು ವಿವರ ನೀಡುತ್ತವೆಯೇ ಹೊರತು ಅಂತಹ ಬೃಹತ್ ನಿರ್ಮಾಣ ಕಾರ್ಯಕ್ಕೆ ಶ್ರಮಿಸಿದವರ ಹೆಸರುಗಳನ್ನು ಸೂಚಿಸಿರುವುದು ವಿರಳ. ಈ ಕೆರೆಯ ತೂಬನ್ನು ನಿರ್ಮಿಸಿದವ **ಗಂಟೆ ಮದನ ಬಸವ**, ಹಾಗೆಯೇ **ಗಾರೆಕೆಲಸ ಮಾಡಿದವನು ಕೋಮಾರಯ್ಯ**, ಬೃಹತ್ ಏರಿಯನ್ನು ನಿರ್ಮಿಸಿದವನು **ಕಲ್ಲುವಡ್ಡ ರಚೆನ್ನಬೋಯಿ ಮತ್ತು ಮಣ್ಣುವಡ್ಡರ ದಾಸೇಬೋಯಿ** ಎಂದು ಶಾಸನ ತಿಳಿಸಿದೆ. ಈ ಶಾಸನದ ಮತ್ತೊಂದು ವಿಶೇಷವೆಂದರೆ

ಕಲಿಯುಗ ಹುಟ್ಟಿ ೪೬೪೧ನೇ ವಿಳಂಬ ಸಂವತ್ಸರ ಎಂಬ ಸಾಲನ್ನು ಒಳಗೊಂಡಿರುವುದು. ಇದೇ ಶಾಸನದಲ್ಲಿ ಕೆರೆಯ ನೀರನ್ನು ಅಕ್ರಮವಾಗಿ ಬಳಸುವವರಿಗೆ ಅಶ್ಲೀಲ ಪದಗಳನ್ನೊಂಡ ಶಾಪಾಶಯದ ಮೂಲಕ ಎಚ್ಚರಿಸಲಾಗಿದೆ. ಈ ಕೆರೆಯು ಬಹಳ ವಿಶಾಲವಾಗಿದ್ದು ಸದಾ ಕಾಲ ನೀರಿರುತ್ತದೆ. ಈ ಕೆರೆಯ ಸಮುಚ್ಚಯದಲ್ಲಿ ಹಲವು ಐತಿಹಾಸಿಕ ದೇವಾಲಯಗಳಿದ್ದು ಕೆರೆಯ ಹಿಂದೆ ಅನೇಕ ಬಾವಿಗಳಿವೆ. ಅವು ಸಾಧಾರಣ ಬಾವಿಗಳಾಗಿರದೆ ವಿಶಿಷ್ಟ ರಚನೆಯ ಸುಂದರ ಬಾವಿಗಳಾಗಿವೆ.

ಜಲವಾಚಿ ಸ್ಥಳನಾಮಗಳು : ತುಮಕೂರು ಪ್ರಾಕೃತಿಕವಾಗಿ ಕಡಿಮೆ ಮಳೆ ಬೀಳುವ ಪ್ರದೇಶ ಕೆಲವೇ ಸಣ್ಣಪುಟ್ಟ ನದಿಗಳು ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುತ್ತವೆ. ಹಾಗಾಗಿ ಮಳೆ ನೀರನ್ನು ಸಂಗ್ರಹಿಸುವ ಕೃತಕ ಜಲಾಶಯಗಳ ಸಂಖ್ಯೆಯೇ ಜಾಸ್ತಿ ಈ ರೀತಿಯ ಜಲಸಂಗ್ರಹ ತಾಣಗಳಾದ ಕೆರೆ ಕುಂಟೆ, ಮಡು, ಸಮುದ್ರ, ಹಳ್ಳ, ಕಾಲುವೆ, ತೊರೆ ಮುಂತಾದವುಗಳು ಜಿಲ್ಲೆಯ ಅನೇಕ ಸ್ಥಳನಾಮಗಳಲ್ಲಿ ಕಾಣಿಸಿಕೊಂಡಿವೆ. ದೊಡ್ಡ ಕೆರೆಗಳನ್ನು ಸಮುದ್ರ ಎಂದು ಕರೆಯಲಾಗಿ ಅವು ಆಡುಭಾಷೆಯಲ್ಲಿ ಸಂದ್ರವಾಗಿ ಮಾರ್ಪಟ್ಟು ಅನೇಕ ಸ್ಥಳನಾಮಗಳು ಈ ಸಮುದ್ರ ಅಥವಾ ಸಂದ್ರಗಳನ್ನೊಳಗೊಂಡು ರೂಪ ತಾಳಿವೆ. ಉದಾ: ರಾಮಸಂದ್ರ, ಬೈರಸಂದ್ರ, ತಟಸಂದ್ರ, ನೀಲಸಂದ್ರ, ತಣಿಸಂದ್ರ ಇತ್ಯಾದಿ ಹಾಗೆಯೇ ಕುಂಟೆ ಪದವನ್ನು ಬಳಸಿಕೊಂಡು ನಿರ್ದೇಶಿತವಾಗಿರುವ ಕೆಲವು ಹಳ್ಳಿಗಳೆಂದರೆ ಹುಲಿಕುಂಟೆ, ಮರಳುಕುಂಟೆ, ದಾಸರಕುಂಟೆ, ಗೋಕುಂಟೆ, ತುಮಕುಂಟೆ ಇತ್ಯಾದಿ.

ಕೆರೆ ಅಥವಾ ಗೆರೆ ಪದವನ್ನು ಬಳಸಿಕೊಂಡು ರೂಪಗೊಂಡಿರುವ ಹೆಸರುಗಳು ಸಾಕಷ್ಟಿವೆ. ಉದಾ : ಅರಕೆರೆ, ಗೌಡಗೆರೆ, ಹೆಗ್ಗೆರೆ, ಮುದಿಗೆರೆ, ಎಲಚಿಗೆರೆ, ವಡ್ಡಗೆರೆ, ತಾವರೆಕೆರೆ, ನೇರಳೆಕೆರೆ, ಮಾವಿನಕೆರೆ, ಬಾಣಗೆರೆ ಇತ್ಯಾದಿ. ಈ ಹಳ್ಳಿಗಳ ಹೆಸರಿನ ಜೊತೆ ಕೆರೆಯ ಅಂಗವಾದ ಕೋಡಿಯು ಸೇರಿಕೊಂಡು ಅದು ಕೋಡಿ ಬಳಿ ಇರುವ ಊರೆಂದು ಸೂಚಿಸುವುದು. ಉದಾ : ಕೋಡಿಪಾಳ್ಯ ಕೋಡಿರಂಗಾಪುರ, ಕೋಡಿಹಳ್ಳಿ, ಕೋಡಿಗೇನಹಳ್ಳಿ ಇತ್ಯಾದಿ ಕೆರೆಯಲ್ಲಿ ಅದರ ಸಾಮರ್ಥ್ಯಕ್ಕಿಂತ ಹೆಚ್ಚು ಸಂಗ್ರಹವಾದ ನೀರು ಈ ಕೋಡಿಯ ಮೂಲಕವೇ ಹೊರಹೋಗುತ್ತದೆ.

ಕೆರೆಗಳನ್ನು ಅಮೂಲಾಗ್ರವಾಗಿ ತಾಂತ್ರಿಕತೆಯಿಂದ ನಿರ್ಮಾಣ ಮಾಡುವುದನ್ನು ಕಲಿತ ಮೇಲೆ, ಜಲಸೂತ್ರವಿದ್ಯೆ ಒಂದು ಶಾಸ್ತ್ರವಾಗಿ ಬೆಳೆಯಿತು. ಅದರಲ್ಲಿ ಪರಿಣಿತರೆನಿಸಿದವರು ಕೆಲವೇ ಮಂದಿ. ಅಂತಹವರಲ್ಲಿ ಕೋಲಾರ ಜಿಲ್ಲೆಯ ಸಿಂಗಯ್ಯಭಟ್ಟನು ಒಬ್ಬ. ಇವನು ವಿಜಯನಗರದ ಅರಸ ಬುಕ್ಕರಾಯನ ಆದೇಶದಂತೆ ಪಾಲಾರ್ ನದಿಯ ನೀರನ್ನು ಪೆನುಗೊಂಡೆಗೆ ತಿರುಗಿಸಿದ ಮಹಾತಂತ್ರಜ್ಞ. ಈ ಕೆರೆ ನಿರ್ಮಾಣದಲ್ಲಿ ಹೆಚ್ಚು ತಾಂತ್ರಿಕತೆ ಮತ್ತು ವೈಜ್ಞಾನಿಕತೆಗಳು ಬೆಳೆದು ಶಾಶ್ವತವಾದ ಮತ್ತು ದೃಢವಾದ ಕೆರೆಗಳು ನಿರ್ಮಾಣವಾಗಲು ಕಾರಣವಾಯಿತು.

ಕೆರೆ ನಿರ್ಮಾಣದ ಜೊತೆ ಬಾವಿ, ಕಲ್ಯಾಣಿಗಳ ನಿರ್ಮಾಣವು ಪವಿತ್ರವಾದ ಕಾರ್ಯವಾಗಿತ್ತು. ಕೆರೆ ಕಾಲುವೆಗಳಲ್ಲಿ ಹೆಚ್ಚು ನೀರು ಸಂಗ್ರಹವಾದಾಗ ಬಾವಿಗಳಲ್ಲಿ ಒರತೆ ಹೆಚ್ಚಾಗುತ್ತಿತ್ತು. ಆದರೆ ಇಂದು ನಗರೀಕರಣದ ಯೋಜನೆಗಳು ನೆಲಗಳ್ಳರ ಹಾವಳಿ, ಕೆರೆಯ ಒತ್ತುವರಿ, ಪಾತಾಳಕ್ಕೆ ಹೋಗಿರುವ ಅಂತರ್‌ಜಲ, ಇರುವ ನೀರನ್ನು ಮಲಿನಗೊಳಿಸುವುದು ಮುಂತಾದವು ಅಳಿದುಳಿದ ಕೆರೆಬಾವಿಗಳು ಮೂಲೆಗುಂಪಾಗಲು ಕಾರಣವಾಗುತ್ತಿವೆ. ಹೀಗೆ ನಮ್ಮ ಪೂರ್ವಜರು ಮಾಡಿದ ಪುಣ್ಯದ ಕಾರ್ಯದ ಲಾಭವನ್ನು ಸಮರ್ಥವಾಗಿ ಬಳಸಿಕೊಳ್ಳದೆ ತಾತ್ಸಾರ ಮಾಡುತ್ತಿದ್ದೇವೆ. ಈ ಬಗ್ಗೆ ಜಲಾಂದೋಲನವಾದರೆ ಸ್ವಲ್ಪಮಟ್ಟಿಗಾದರೂ ಇವುಗಳ ವಿನಾಶ ತಡೆಯಬಹುದು. 'ನೀರಿದ್ದರೆ ನಾಡು' ಎಂಬ ಮಾತಿನಲ್ಲಿ ನಂಬಿಕೆಯಿಟ್ಟು ಜಲಸಂಪನ್ಮೂಲಗಳನ್ನು ಉಳಿಸಿ, ವೃದ್ಧಿಸಿಕೊಳ್ಳಬೇಕಾಗಿದೆ.

ಆಧಾರಸೂಚಿ

೧. **ತುಮಕೂರು ಜಿಲ್ಲಾ ಗೆಜೆಟಿಯರ್.**
೨. **ಜಯಮಂಗಲಿ,** ೬೯ನೇ ಅ.ಭಾ.ಕ.ಸಾ. ಸಮ್ಮೇಳನದ ವಿಶೇಷ ಸಂಚಿಕೆ.
೩. **ಕರ್ನಾಟಕದಲ್ಲಿ ಕೆರೆ ನೀರಾವರಿ;** (ಅನು) ನೀಲತ್ತಹಳ್ಳಿ ಕಸ್ತೂರಿ.
೪. ಲಕ್ಷಣ ಎಂ.ಸಿ., **ತುಮಕೂರು ಜಿಲ್ಲೆಯ ಭೌಗೋಳಿಕ ಪರಿಸರ ಮತ್ತು ಅಭಿವೃದ್ಧಿ,** ೨೦೦೦.
೫. ರಾಜಾರಾಂ ಹೆಗಡೆ, **ಕೆರೆ ನೀರಾವರಿ ನಿರ್ವಹಣೆ : ಚಾರಿತ್ರಿಕ ಅಧ್ಯಯನ,** ಪ್ರಸಾರಾಂಗ, ಹಂಪಿ, ೨೦೦೨.
೬. **ಇತಿಹಾಸ ದರ್ಶನ.,** ಡಾ. ಪಿ.ವಿ. ಕೃಷ್ಣಮೂರ್ತಿಯವರ ಲೇಖನ ೨೦ನೇ ಸಂಚಿಕೆಯಲ್ಲಿನ ಲೇಖನ.
೭. **ತುಮಕೂರು ಜಿಲ್ಲಾ ಶಾಸನ,** ಸಂಪುಟ ೧೨ (ರೈಸ್ ಆವೃತ್ತಿ) ಮತ್ತು ೧೬.
೮. ಕೊಟ್ರಯ್ಯ ಸಿ.ಟಿ.ಎಂ., **ವಿಜಯನಗರ ಸಾಮ್ರಾಜ್ಯ ನೀರಾವರಿ ವ್ಯವಸ್ಥೆ,** ೨೦೦೨.
೯. **ಕೆರೆಯ ಹಾರ,** ಪ್ರಹ್ಲಾದ್‌ರಾವ್ (ಸಂ.), ಕೋಲಾರ ಜಿಲ್ಲೆಯ ಜಲಪರ್ವ.
೧೦. ನಾರಾಯಣಸ್ವಾಮಿ ಕೆ.ವೈ., **ನೀರ ದೀವಿಗೆ.**

ಲಿಂಗರಾಜು*

ತೊಣ್ಣೂರು ಕೆರೆಯ ವಿಶಿಷ್ಟ ಇತಿಹಾಸ

ಪೀಠಿಕೆ : ವಿಜಯನಗರದ ಪ್ರೌಢಪ್ರತಾಪದೇವರಾಯ (ಒಂದನೇ ದೇವರಾಯ)ನ ೧೪೧೧ರ ಶಾಸನದಲ್ಲಿ ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು, ದೇವಾಲಯಗಳನ್ನು ನಿರ್ಮಿಸು ಬಂಧನಕ್ಕೆ ಸಿಕ್ಕ ಅನಾಥರನ್ನು ಬಿಡಿಸು, ಸ್ನೇಹಿತರಿಗೆ ಸಹಾಯಕನಾಗು, ನಂಬಿದವರಿಗೆ ಆಶ್ರಯಧಾತನಾಗು, ಸತ್ಪುರುಷನನ್ನು ರಕ್ಷಿಸು, ಹೀಗೆ ಹಾಲುಣಿಸುತ್ತಾ ಲಕ್ಷ್ಮೀಧರ ಅಮಾತ್ಯನ ತಾಯಿ ಅವನು ಶಿಶುವಾಗಿದ್ದಾಗ ಕಿವಿಯಲ್ಲಿ ಬೋಧಿಸುತ್ತಿದ್ದ ಮಾತುಗಳಿದ್ದ ಬಗ್ಗೆ ಹೇಳಿದೆ. ಪ್ರಧಾನ ಅಮಾತ್ಯ ಲಕ್ಷ್ಮೀಧರನು ಉದಾತ್ತ ವಿಚಾರಗಳ ಸಂಸ್ಕೃತಿಯನ್ನು ಹೀಗೆ ತಾಯಿಯ ತೊಡೆಯ ಮೇಲಾಡುತ್ತಿದ್ದಾಗಲೇ ಕಲಿತನೆಂದು ಈ ಶಾಸನ ಉಲ್ಲೇಖಿಸಿದೆ. ಎಲ್ಲಾ ಸತ್ ಕಾರ್ಯಗಳ ಹಿಂದೆ ಅಂಥ ಮಹಾ ತಾಯಿಯ ಪ್ರಜಾಕಲ್ಯಾಣದ ಉದಾತ್ತ ವಿಚಾರಧಾರೆಗಳಿರುವುದು ನಮ್ಮ ಸಂಸ್ಕೃತಿಯ ತಿರುಳಾಗಿದ್ದು ಈ ಸಂಸ್ಕೃತಿಯ ತಿರುಳನ್ನು ತಾಯಿ–ಮಗನ ಪಾತ್ರದಲ್ಲಿ ನಮ್ಮ ಮುಂದಿಟ್ಟಿರುವುದು ಕವಿ ಮಧುರನ ಉದಾತ್ತ ವಿಚಾರಗಳ ಪ್ರೌಢಿಮೆಗೆ ಸಾಕ್ಷಿಯಾಗಿದೆ.[೧] ನಮ್ಮ ಪೂರ್ವಿಕರು ತಮ್ಮ ದೈನಂದಿನ ಜೀವನದಲ್ಲಿ ಪಾಲಿಸಬೇಕಾದ ನಿಯಮಗಳಲ್ಲಿ ಕೆರೆ, ಬಾವಿಗಳ ನಿರ್ಮಾಣಕ್ಕೆ ಪ್ರಥಮ ಪ್ರಾಶಸ್ತ್ಯವನ್ನು ನೀಡಿದ್ದಾರೆ.[೨]

ಕನ್ನಡಿಗರ ಔದಾರ್ಯ ಪ್ರಕಟವಾಗುವುದು ಎರಡು ವಿಷಯಗಳಲ್ಲಿ : ಒಂದು ದೇವಸ್ಥಾನ ನಿರ್ಮಾಣದಲ್ಲಿ, ಮತ್ತೊಂದು ಕೆರೆ (ತಟಾಕ)ಗಳ ನಿರ್ಮಾಣದಲ್ಲಿ. ಸಾರ್ವಜನಿಕ ಕಾರ್ಯಗಳಲ್ಲಿ ಕೆರೆ (ತಟಾಕ)ಗಳ ನಿರ್ಮಾಣ ಪ್ರಮುಖವಾದುದ್ದು. ಇಡೀ ಸಮಾಜದ ಅಭ್ಯುದಯಕ್ಕೆ ಕೆರೆ (ತಟಾಕ)ಗಳ ನಿರ್ಮಾಣ ಅತ್ಯಗತ್ಯ. ಕೆರೆಗಳು ಪ್ರಾಚೀನ ಕರ್ನಾಟಕದ ನೀರಾವರಿ ಸಾಧನಗಳಲ್ಲಿ ಅತ್ಯಂತ ಪ್ರಮುಖವಾದದ್ದು, ರಾಜರೂ, ಅಧಿಕಾರಿಗಳೂ, ಶ್ರೀಮಂತ ವರ್ತಕರೂ ಸೇರಿದಂತೆ ವಿವಿಧ ವರ್ಗದವರು ಕೆರೆಗಳನ್ನು ಕಟ್ಟಿಸಿದ ನಿದರ್ಶನಗಳಿವೆ.[೩]

ಕೆರೆಗಳ ಪ್ರಾಮುಖ್ಯತೆ : ಮಹಾಭಾರತದಲ್ಲಿ "ಯಾವ ವ್ಯಕ್ತಿ ಕಟ್ಟಿಸಿದ ಕೆರೆಯಲ್ಲಿ ಹಸು, ಪ್ರಾಣಿ, ಪಕ್ಷಿ ಹಾಗೂ ಮನುಷ್ಯರು, ನೀರನ್ನು ಕುಡಿದು ತೃಪ್ತರಾಗುವರೋ ಆ ವ್ಯಕ್ತಿ ಅಶ್ವಮೇಧಯಾಗದ ಫಲವನ್ನು ಪಡೆಯುತ್ತಾನೆಂದು" ಹೇಳಲಾಗಿದೆ. ನಾಣಿಮಯ್ಯ ನಾಯಕನು ಕೆರೆಯನ್ನು ಕಟ್ಟಿಸಿದರೆ ತನಗೆ ಮಾತ್ರವಲ್ಲ ತನ್ನ ತಂದೆ–ತಾಯಿಗಳಿಗೂ ಪುಣ್ಯ ಲಭಿಸುತ್ತದೆಯೆಂದೂ, ಕೆರೆಗಳನ್ನು ಕಟ್ಟಿಸಿದ್ದಲ್ಲದೆ, ಒಂದು ಪುಷ್ಕರಣಿಯನ್ನೂ (ಪುಷ್ಕರಣಿ ಎಂದರೆ ಅನೇಕ ದ್ವಾರಗಳಿರುವುದು) ನಿರ್ಮಿಸಿರುವುದನ್ನು ಶಾಸನದಿಂದ ತಿಳಿಯಬಹುದು.

ರಾಜಿಗಾವುಂಡನ ಹೆಂಡತಿ ಸೋರಿಗಾವುಂಡಿ ಎಂಬಾಕೆ ತನ್ನ ಮೂವರು ಮಕ್ಕಳನ್ನು ಕರೆದು 'ಎನಗೊಂದು ಪುಣ್ಯಮಪ್ಪಂತಾಗಿ' ಏನಾದರೂ ಧರ್ಮವನ್ನು ಮಾಡಿ ಎಂದು ಕೇಳಿಕೊಂಡಳಂತೆ. ತಕ್ಷಣ ಮಕ್ಕಳಿಗೆ ಹೊಳೆದ ಧಾರ್ಮಿಕ ಕಾರ್ಯವೆಂದರೆ ಜೀರ್ಣವಾಗಿದ್ದ ಕೆರೆಯೊಂದರ ಜೀರ್ಣೋದ್ಧಾರ ಕಾರ್ಯ. ತಾವು ಆ ಕೆರೆ ಸರಿಪಡಿಸುವುದಾಗಿಯೂ, ಅದರ ಉದಕದಾನದ ಫಲ ನಿಮಗೆ ಸೇರುವುದೆಂದೂ, ತಮ್ಮ ತಾಯಿಗೆ ಭರವಸೆ ಕೊಡುತ್ತಾರೆ.[೪] ಕಟ್ಟಿಸಿದ ಕೆರೆ ಬಾವಿಗಳನ್ನು ಯಾರೇ ಆಗಲೀ ನಾಶಪಡಿಸುವುದು ಅತ್ಯಂತ ಪಾಪಕರವೆಂಬ ಭಾವನೆಯಿದ್ದಿತು.[೫] 'ಕೆರೆಗೆ ಹಾರ' ಎಂಬ ಶೀರ್ಷಿಕೆಯಲ್ಲಿ ಜಾನಪದ ಗೀತೆಯೊಂದು ಹೃದಯವಿದ್ರಾವಕವಾದ ಸಂಗತಿಯೊಂದನ್ನು ಹೀಗೆ ತಿಳಿಸುತ್ತದೆ : "ಗೌಡನೊಬ್ಬನು ಕಟ್ಟಿಸಿದ ಕೆರೆಯು ಪದೇ, ಪದೇ ಒಡೆದುಹೋಗುತ್ತಿತ್ತು. ಅದು ನಿಲ್ಲಬೇಕಾದರೆ ಒಂದು ನರಬಲಿಯಾಗಬೇಕೆಂಬುದು ಆದೇಶವಾಯಿತು. ತಕ್ಷಣ ಗೌಡನ ಕಿರಿಯ ಸೊಸೆ ತಾನಾಗಿಯೇ ಮುಂದೆ ಬಂದು ಕೆರೆಗೆ ಹಾರವಾಗುತ್ತಾಳೆ. ಹೊಸದಾಗಿ ನಿರ್ಮಾಣಗೊಂಡ ಅನೇಕ ಕೆರೆ, ಕೋಟೆಗಳು, ನಿಲ್ಲಬೇಕಾದರೆ ನರಬಲಿಯನ್ನಪೇಕ್ಷಿಸುತ್ತವೆಯೆಂಬುದು ಈಗಲೂ ಹಳ್ಳಿಯ ಜನರ ನಂಬಿಕೆಯಾಗಿದೆ.[೬]

ವಿಜ್ಞಾನೇಶ್ವರನ ಮಿತಾಕ್ಷರ ಸಂಹಿತದಲ್ಲಿ (ಕ್ರಿ.ಶ. ೧೧೦೦) 'ಒಂದು ಹೊಳೆಗೆ ಅಡ್ಡಲಾಗಿ ಅಣೆಕಟ್ಟೆ ನಿರ್ಮಿಸುವುದರಿಂದ ಒಬ್ಬನ ಭೂಮಿ ನಾಶವಾದರು ಸರಿಯೇ ಅದರಿಂದಾಗುವ ನಷ್ಟ ಅಲ್ಪವಾಗಿದ್ದು ಬಹುಸಂಖ್ಯಾತರಿಗೆ ಲಾಭದಾಯಕವಾಗುವಂತಿದ್ದರೆ ಆ ಭೂಮಿಯ ಒಡೆಯ

* ಇತಿಹಾಸ ಉಪನ್ಯಾಸಕ, ಸರ್ಕಾರಿ ಮಹಾವಿದ್ಯಾಲಯ, (ಸ್ವಾಯತ್ತ), ಮಂಡ್ಯ.

ನಿರ್ಮಾಣವನ್ನು ನಿಲ್ಲಿಸಕೂಡದೆಂದು ಹೇಳಿರುವುದು ನೀರಾವರಿಯ ಪ್ರಾಮುಖ್ಯತೆಯನ್ನು ತಿಳಿಸುತ್ತದೆ. ಕೃಷ್ಣದೇವರಾಯ ತನ್ನ ಆಮುಕ್ತಮಾಲ್ಯ ಕೃತಿಯಲ್ಲಿ 'ರಾಜ್ಯ ಕಿರಿದಾಗಿದ್ದಲ್ಲಿ ಅದರ ಧರ್ಮ ಹಾಗು ಅರ್ಥಗಳೆರಡು ಹೆಚ್ಚುವುದು ಕೆರೆಗಳನ್ನು ನೀರಾವರಿ ಕಾಲುವೆಗಳನ್ನು ನಿರ್ಮಿಸಿದಾಗ ಮಾತ್ರವೆಂದು ತಿಳಿಸಿದ್ದಾನೆ.[೭]

ಕರ್ನಾಟಕದಲ್ಲಿ ಕೆರೆಗಳ ಜಾಲ ಎಷ್ಟು ವ್ಯವಸ್ಥಿತವಾಗಿತ್ತೆಂಬುದನ್ನು ಬೌರಿಂಗ್‌ರವರು ಕೆಳಗಿನಂತೆ ತಿಳಿಸಿದ್ದಾರೆ. "ಈ ನಾಡು ಸಾಮಾನ್ಯವಾಗಿ ಏರು–ತಗ್ಗುಗಳಿಂದ ಕೂಡಿದ್ದು ನಡುನಡುವೆ ಸಹಜವಾದ ಪ್ರವಾಹ ಹಾಗೂ ತೊರೆಗಳು ಹರಿಯುವ ಕಣಿವೆಗಳಿರುವುದರಿಂದ ಹಲವಾರು ಶತಮಾನಗಳ ಹಿಂದೆಯೇ ಇಲ್ಲಿನವರು ಕೆರೆ ಕಟ್ಟೆಗಳನ್ನು ಕಟ್ಟಿ ನೀರನ್ನು ಸಂಗ್ರಹಿಸಿ ಬೇಸಿಗೆಯಲ್ಲಿ ತಮ್ಮ ಹೊಲಗಳಿಗೆ ನೀರನ್ನು ಒದಗಿಸಿಕೊಳ್ಳುತ್ತಿದ್ದರು. ಎಷ್ಟೋ ಸಂದರ್ಭಗಳಲ್ಲಿ ಬೆಟ್ಟಗಳ ಕಮರಿಗಳನ್ನು ಉಪಯೋಗಿಸಿಕೊಂಡು ದೈತ್ಯಾಕಾರದ ಕಟ್ಟೆಗಳನ್ನು ನಿರ್ಮಿಸಲಾಗಿದೆ. ಶತಮಾನಗಳ ಕಾಲ ಅವು ಸಾಕಷ್ಟು ಯಶಸ್ವಿಯಾಗಿ ಪ್ರವಾಹಗಳನ್ನು ತಡೆದುಕೊಂಡು ನಿಂತಿವೆ. ಒಂದು ಜಲಾನಯನ ಪ್ರದೇಶದಲ್ಲಿ ಸರಣಿ ಕೆರೆಗಳು ನಿರ್ಮಾಣಗೊಂಡಿದ್ದು ಪ್ರತಿಯೊಂದು ಕೆರೆಯು ತನ್ನ ಮೇಲ್ಭಾಗದ ಕೆರೆಯ ಸಾಮರ್ಥ್ಯಕ್ಕಿಂತ ಹೆಚ್ಚಿನ ನೀರನ್ನು ಸಂಗ್ರಹಿಸುತ್ತಿದ್ದವೆಂದು ತಿಳಿಸಿದ್ದಾರೆ."[೮]

ಕೆರೆಗಳ ಪ್ರಾಚೀನತೆ : ನಮ್ಮ ಕೆರೆಗಳ ಇತಿಹಾಸದ ಅಧ್ಯಯನಕ್ಕೆ ಶಾಸನಗಳು ಸಹಕಾರಿಯಾಗಿವೆ. ಶಾಸನಗಳು ಕ್ರಿ.ಪೂ. ೩೦೦ ರಿಂದ ಕ್ರಿ.ಶ. ೧೮೦೦ ರವರೆಗೆ ಅಸಂಖ್ಯಾತ ಕೆರೆಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಕ್ರಿ.ಶ. ೧೫೦ರ ರುದ್ರದಾಮನ್‌ನ ಜುನಾಘಡ ಶಾಸನವು ನಿರ್ಮಿತವಾದ ಶತಮಾನಗಳ ಕಾಲ ಅಸ್ತಿತ್ವದಲ್ಲಿದ್ದ ಅಂದರೆ ಕ್ರಿ.ಪೂ. ೩೨೦ರಲ್ಲಿ ಮೌರ್ಯರ ಕಾಲದಲ್ಲಿ ಸುದರ್ಶನ ಜಲಾಶಯವು ಚಂಡಮಾರುತದಿಂದ ನಾಶಗೊಂಡ ಬಗ್ಗೆ ಹಾಗೂ ಅದರ ಪುನರ್ ನಿರ್ಮಾಣದ ಬಗ್ಗೆ ಮಾಹಿತಿ ನೀಡುತ್ತದೆ. ಮೌರ್ಯರು ಮಧ್ಯ ಕರ್ನಾಟಕದವರೆಗೂ ತಮ್ಮ ಅಧಿಪತ್ಯವನ್ನು ಸ್ಥಾಪಿಸಿದ್ದರಿಂದ ಕರ್ನಾಟಕದ ಜನತೆ ಜಲಾಶಯಗಳ (ಕೆರೆಗಳ) ನಿರ್ಮಾಣ ಮತ್ತು ಸಂರಕ್ಷಣೆಯ ಬಗ್ಗೆ ತಿಳುವಳಿಕೆಯನ್ನು ಮೌರ್ಯರಿಂದ ಕಲಿತಿರಬಹುದು[೯]. ಕರ್ನಾಟಕದಲ್ಲಿ ಜಲಾಶಯಗಳ ಪ್ರಾಚೀನತೆಯ ಬಗ್ಗೆ ಮಾಹಿತಿ ನೀಡುವ ಚಂದ್ರವಳ್ಳಿ ಶಾಸನದಿಂದ ಕದಂಬ ಸಂತತಿಯ ಸಂಸ್ಥಾಪಕ ಮಯೂರವರ್ಮನು ಚಿತ್ರದುರ್ಗದ ಚಂದ್ರವಳ್ಳಿಯಲ್ಲಿ ಮೊಟ್ಟ ಮೊದಲಿಗೆ ಒಂದು ಕೆರೆಯನ್ನು ನಿರ್ಮಿಸಿದನೆಂದು ಗೊತ್ತಾಗುತ್ತದೆ.[೧೦] ಕಾಕುಸ್ಥವರ್ಮನು ತಟಾಕವೊಂದನ್ನು ನಿರ್ಮಿಸಿದನೆಂದು ತಾಳಗುಂದ ಶಾಸನ ತಿಳಿಸುತ್ತದೆ.[೧೧]

ಕ್ರಿ.ಶ. ೧೮೦೬ರ ಕರ್ನಲ್ ಮೆಕಂಜಿಯ ವರದಿಯಿಂದ ಸಂಸ್ಥಾನದಲ್ಲಿ ೧೪೮೦೩ ಕೆರೆ ಹಾಗೂ ೮೫೬೨ ಕುಂಟೆಗಳಿದ್ದವೆಂದು ತಿಳಿದುಬಂದರೆ.[೧೨] ಕ್ರಿ.ಶ. ೧೮೭೦ ರಲ್ಲಿ ಚಾರ್ಲ್ಸ್ ಇಲಿಯಟ್‌ರವರು ರಾಜ್ಯದಾದ್ಯಂತ ಸುಮಾರು ೩೦,೦೦೦ ಕ್ಕೂ ಹೆಚ್ಚು ಕೆರೆಗಳಿದ್ದವೆಂದು ದಾಖಲಿಸಿದ್ದಾರೆ.[೧೩]

ಕೆರೆಗಳ ವರ್ಗೀಕರಣ : ಕೆರೆಗಳನ್ನು ನಾನಾ ರೀತಿಯಲ್ಲಿ ವರ್ಗೀಕರಿಸಬಹುದು. ಶಾಸನಗಳು ಕೆರೆಗಳನ್ನು ಕೆರೆ, ಕಟ್ಟೆ, ಸಾಗರ, ಸಮುದ್ರ, ತಟಾಕ, ಹಿರಿಯಕೆರೆ, ಹೆಗ್ಗೆರೆ, ಪಿರಿಯಕೆರೆ, (ದೊಡ್ಡಕೆರೆ) ಚಿಕ್ಕಕೆರೆ, (ಸಣ್ಣಕೆರೆ) ಕನ್ನೇಗೆರೆ (ಹೊಸಕೆರೆ) ಮುಂತಾಗಿ ವರ್ಣಿಸಿವೆ.[೧೪] ಸರ್ಕಾರಿ ದಾಖಲೆಗಳಲ್ಲಿ ಬುಕಾನನ್‌ನ ದಿನಚರಿ ಅತ್ಯಂತ ಪ್ರಮುಖವಾದುದ್ದು ಬುಕಾನನ್ ಕ್ರಿ.ಶ. ೧೮೦೦ ರಲ್ಲಿ ಮೈಸೂರು ಪ್ರಾಂತದಲ್ಲಿ ಪ್ರವಾಸ ಕೈಗೊಂಡಿದ್ದಾಗ ಅಂದಿನ ಕೆರೆಗಳು, ಅವುಗಳ ಸಂರಕ್ಷಣೆ, ಕೃಷಿ ಮತ್ತು ನೀರಾವರಿ ಪದ್ಧತಿ ಬಗ್ಗೆ ಮಾಹಿತಿ ನೀಡುತ್ತಾನೆ.[೧೫] ೧) ದನಕರುಗಳಿಗೆ ಕುಡಿಯಲು ನೀರೊದಗಿಸುವ ಸಣ್ಣ ಜಲಾಶಯವೇ ಕಟ್ಟೆ, ೨) ಭೂಮಿಗೆ ನೀರೊದಗಿಸುವ ದೊಡ್ಡ ಜಲಾಶಯವೇ ಕೆರೆ, ೩) ಭೂಮಿಯಲ್ಲಿ ಚೌಕಾಕಾರದಲ್ಲಿ ನಿರ್ಮಿಸಿರುವುದನ್ನು ಕುಂಟೆ ಎಂದು ಹೆಸರಿಸಿದ್ದಾನೆ. ಕ್ರಿ.ಶ. ೧೭೯೯–೧೮೦೬ರಲ್ಲಿ ಮೈಸೂರು ರಾಜ್ಯದಲ್ಲಿ ಮಾಡಲಾದ ಸಮೀಕ್ಷೆಯಲ್ಲಿ ಹಾಗೂ ಬಖೈರುಗಳಲ್ಲಿ ಕೆರೆ, ಕಟ್ಟೆ, ಕುಂಟೆಗಳ ಪಟ್ಟಿಯಿದೆ. ಆದರೆ ಕೆರೆಗಳ ಗಾತ್ರದ ಬಗ್ಗೆ ಮಾಹಿತಿಯಿಲ್ಲ.[೧೬]

ಕೆರೆಗಳಲ್ಲಿ ಎರಡು ವಿಧವಿದೆ : ೧) ನದಿ ನೀರಿನಿಂದ ತುಂಬುವ ಕೆರೆ, ೨) ಮಳೆ ನೀರಿನಿಂದ ತುಂಬುವ ಕೆರೆ. ನದಿ ನೀರಿನಿಂದ ತುಂಬುವ ಕೆರೆಗೆ ನಿದರ್ಶನ ೧೮೬೨ ರಲ್ಲಿ ಪುನರ್‌ನಿರ್ಮಿಸಲಾದ ಮದ್ದೂರು ಕೆರೆ. ಅದು ಕೆಳಗಿನ ಎಂಟು ಕೆರೆಗಳಿಗೆ ನೀರೊದಗಿಸುತ್ತದೆ ; ೨) ಮಳೆ ನೀರಿನಿಂದ ತುಂಬುವ ಕೆರೆಗೆ ನಿದರ್ಶನ ತೊಣ್ಣೂರು ಕೆರೆ. ಕಣಿವೆಗೆ ಅಡ್ಡಲಾಗಿ ಚಿಕ್ಕ ಏರಿಯನ್ನು ನಿರ್ಮಿಸಿ ನೀರನ್ನು ಸಂಗ್ರಹಿಸಿಡಲಾಗಿದೆ. ಕರ್ನಾಟಕದಲ್ಲಿ ಬಹುಪಾಲು ಕೆರೆಗಳು ಈ ವರ್ಗಕ್ಕೆ ಸೇರಿವೆ.[೧೭]

ತೊಣ್ಣೂರಿನ ಭೌಗೋಳಿಕ ಮತ್ತು ಐತಿಹಾಸಿಕ ಹಿನ್ನೆಲೆ: ತೊಣ್ಣೂರು ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನಲ್ಲಿರುವ ಪ್ರಾಚೀನ ಗ್ರಾಮ. ಮಂಡ್ಯ ಜಿಲ್ಲೆ ಕರ್ನಾಟಕ ರಾಜ್ಯದ ದಕ್ಷಿಣ ಮಧ್ಯಭಾಗದಲ್ಲಿದೆ. ಮೈಸೂರು ಜಿಲ್ಲೆಗೆ ಸೇರಿದ್ದ ಮಂಡ್ಯ ೧೯೩೯ರ ಜುಲೈ ೧ರಂದು ಸ್ವತಂತ್ರ ಜಿಲ್ಲೆಯಾಗಿ ಅಸ್ತಿತ್ವಕ್ಕೆ ಬಂದಿತು. ಜಿಲ್ಲೆಯ ಒಟ್ಟು ವಿಸ್ತೀರ್ಣ

೪೯೬.೧ ಚ.ಕಿ.ಮೀ. ಸಮುದ್ರ ಮಟ್ಟಕ್ಕಿಂತ ೭೭೨ ರಿಂದ ೯೧೪ ಮೀಟರ್ ಎತ್ತರದಲ್ಲಿದೆ.[೧೮] ವಿಷ್ಣುವರ್ಧನನ ಕಾಲದಿಂದ ಹೊಯ್ಸಳರ ಉಪರಾಜಧಾನಿಯಾಗಿತ್ತು. ಕ್ರಿ.ಶ. ೧೩೨೬ರಲ್ಲಿ ದ್ವಾರಸಮುದ್ರ ಮುಸ್ಲಿಮರ ಧಾಳಿಗೊಳಗಾದಾಗ ಮೂರನೇ ಬಲ್ಲಾಳ ತೊಣ್ಣೂರಿನಲ್ಲಿ ತಂಗಿದ್ದನೆಂದು ಚರಿತ್ರೆಯಿಂದ ತಿಳಿದುಬರುತ್ತದೆ.[೧೯] ರಾಮಾನುಜರು ಸುಮಾರು ೧೨ ವರ್ಷಗಳ ಕಾಲ ಇಲ್ಲಿ ನೆಲೆಸಿದ್ದರೆಂದು ಐತಿಹ್ಯವಿದೆ.

ಇದರ ಮತ್ತೊಂದು ಪ್ರಾಚೀನ ಹೆಸರು 'ತೊಂಡನೂರು'. 'ತೊಂಡೆ' ಎಂದರೆ ಭಕ್ತ ಎಂದರ್ಥ 'ತೊಂಡನೂರು' ಎಂದರೆ ಭಕ್ತನ ಊರು. ಅಂದರೆ ಭಕ್ತರಿದ್ದ ಊರೇ ತೊಂಡನೂರು ಎಂದಾಯಿತು. ಇದೇ ಇಂದಿನ ಕೆರೆ ತೊಣ್ಣೂರು ಆಗಿದೆ.

ತೊಣ್ಣೂರು ಕರ್ನಾಟಕದ ಶ್ರೀ ವೈಷ್ಣವ ಕೇಂದ್ರಗಳಿಗೆ ಮಾತೃಸ್ಥಾನದಲ್ಲಿದೆ. ತೊಂಡನೂರು ಹೊಯ್ಸಳರ ಕಾಲದಲ್ಲಿ ಅಗ್ರಹಾರವಾಗಿಯೂ ಪ್ರಾಮುಖ್ಯತೆ ಗಳಿಸಿಕೊಂಡಿದ್ದಿತು.

ತೊಣ್ಣೂರು ಕೆರೆಯ ನಿರ್ಮಾಣ ಮತ್ತು ವೈಶಿಷ್ಟ್ಯ : ಈ ಗ್ರಾಮದಲ್ಲಿರುವುದೇ ಐತಿಹಾಸಿಕ ತೊಣ್ಣೂರು ಕೆರೆ ಇದು ಪಾಂಡವಪುರ ತಾಲ್ಲೂಕಿನ ಅತ್ಯಂತ ದೊಡ್ಡ ಕೆರೆ[೨೦] ಕರ್ನಾಟಕದಲ್ಲಿರುವ ಎರಡನೇ ಅತ್ಯಂತ ಪ್ರಾಚೀನ ಕೆರೆ, ಕೆರೆಗಳಿಗೆ ಪೌರಾಣಿಕ ಹಿನ್ನೆಲೆಯಿರುವುದು ಅಪರೂಪ. ಆದರೆ ಈ ಕೆರೆಗೆ ಪೌರಾಣಿಕ ಹಿನ್ನೆಲೆಯೂ ಉಂಟೂ, ಇಂದ್ರನು ಅಪ್ಸರೆಯರೊಡಗೂಡಿ ಬಂದು ಕೆರೆಯಲ್ಲಿ ಜಲಕ್ರೀಡೆಯಾಡುತ್ತಿದ್ದನಂತೆ, ಆದ್ದರಿಂದಲೇ ಈ ಕೆರೆಯನ್ನು 'ಪಂಚ ಅಪ್ಸರ ತಟಾಕ' ಎಂದು ಕರೆಯುತ್ತಾರೆ. ಇಂದು ಗ್ರಾಮಸ್ಥರ ಬಾಯಲ್ಲಿ ಇದು 'ಅಪ್ಪರಸನ ಕಟ್ಟೆ' ಎಂದು ರೂಢಿಯಲ್ಲಿದೆ. ಅರ್ಜುನನ ಕಂಚಿನ ತೇರು ಅಲ್ಲಿಯೇ ಮುಳುಗಿಹೋಗಿದೆಯೆಂಬ ಪ್ರತೀತಿಯಿದೆ. ಶಿವರಾತ್ರಿಯಂದು ಸುತ್ತಮುತ್ತಲ ಗ್ರಾಮಸ್ಥರು ತಮ್ಮ ಗ್ರಾಮದ ದೇವಾನುದೇವತೆಗಳನ್ನು ಮೆರವಣಿಗೆಯಲ್ಲಿ ತಂದು ಬ್ರಾಹ್ಮಣರಿಂದ ಹೋಮ ತುಂಬಿಸಿಕೊಂಡು ಪೂಜೆ ಉತ್ಸವ ಮಾಡಿಕೊಂಡು ಹೋಗುತ್ತಾರಂತೆ.[೨೧] ಕ್ರಿ.ಶ. ೧೧ನೇ ಶತಮಾನದ ಸುಮಾರಿನಲ್ಲಿ ವೈಷ್ಣವ ಸಂತ ರಾಮಾನುಜಾಚಾರ್ಯರು ಈ ಕೆರೆಯನ್ನು ನಿರ್ಮಿಸಿದರೆಂದು ತಿಳಿದುಬರುತ್ತದೆ. ಆದ್ದರಿಂದ ಇದನ್ನು 'ರಾಮಾನುಜರ ಶ್ರೀ ಪಾದ ತೀರ್ಥ ತಟಾಕ', 'ತಿರುಮಲಸಾಗರ'ವೆಂದು ಕರೆಯುತ್ತಾರೆ.[೨೨] ಈಗ ಇದನ್ನು 'ಲಕ್ಷ್ಮೀಸಾಗರವೆಂದು' ಸಹ ಕರೆಯುತ್ತಾರೆ.[೨೩] ನಾಲ್ಕಾರು ಬೆಟ್ಟಗುಡ್ಡಗಳಿಂದ ಹರಿದುಬರುವ ಯಾದವ ನದಿ ಕಣಿವೆಗೆ ಅಡ್ಡಲಾಗಿ ಒಂದು ಕಟ್ಟೆಯನ್ನು ಕಟ್ಟಿ ಈ ಕೆರೆಯನು ನಿರ್ಮಿಸಲಾಗಿದೆ. ಕಟ್ಟೆಯು ನದಿ ತಳದಿಂದ ಸುಮಾರು ೮೦ ಅಡಿ ಎತ್ತರವಿದೆ. ಇದರ ಉದ್ದ ಸುಮಾರು ೫೦೦ ಅಡಿ, ಸಾಮಾನ್ಯವಾಗಿ ಹಳೆಯ ಕಟ್ಟೆಗಳಿರುವಂತೆ ಈ ಕಟ್ಟೆ ನೇರವಾಗಿಲ್ಲ ಹೊಳೆಗೆ ಅಭಿಮುಖವಾಗಿ ಬಾಗಿದೆ. ಇತರೆ ಕಟ್ಟೆಗಳು ತಲೆಭಾಗದಲ್ಲಿ ಬಹಳ ಅಗಲವಾಗಿರುತ್ತದೆ. ಆದರೆ ಈ ಕಟ್ಟೆ ತಲೆಭಾಗದಲ್ಲಿ ೫೦ ಅಡಿ ಅಗಲವಿದೆ. ಅಡಿಯಲ್ಲಿ ಸುಮಾರು ೨೫೦ ಅಡಿ ಅಗಲವಿದೆ. ಈ ಕಟ್ಟೆಯ ಜಲಸಂಗ್ರಹಣೆ ಸುಮಾರು ೧೮,೦೦೦ ಎಕರೆಗಾಗುವಷ್ಟಿದೆ. ಇದಕ್ಕೆ ಹೋಲಿಸಿದರೆ ನೀರಾವರಿ ಭೂಮಿ ಕೇವಲ ೮೦೦ ಎಕರೆ ಭೂಮಿ. ಇದಕ್ಕೆ ಕಾರಣ ತೂಬಿನ ತಳಭಾಗವು ಕೆರೆ ಅಂಗಳದ ಮಟ್ಟಕ್ಕಿಂತ ೪೫ ಅಡಿ ಮೇಲೆ ಇರುವುದು. ಆ ಬಾಗಿಲಿನ ಮಟ್ಟದಿಂದ ಮೇಲು ಭಾಗಕ್ಕೆ ಲಭ್ಯವಿರುವ ಜಲಸಂಗ್ರಹಣೆ ಸುಮಾರು ೨೫ ಅಡಿ ಮಾತ್ರ ಜಲಸಂಗ್ರಹಣೆಯ ಮೂರನೆಯ ಎರಡಕ್ಕೂ ಹೆಚ್ಚಿನ ಪಾಲು ಬಾಗಿಲಿನ ಕೆಳಕ್ಕಿರುವುದು ಈ ಕೆರೆಯ ಒಂದು ವೈಶಿಷ್ಟ್ಯ.[೨೪]

ರಾಮಾನುಜರು ತಮ್ಮ ತ್ರಿದಂಡದಿಂದ ಗುರುತು ಮಾಡಿ ಬೆಟ್ಟವನ್ನು ಭೇದಿಸಿ ಕೃಷಿಗೆ ನೀರು ಹೋಗಲು ಅನುವು ಮಾಡಿಕೊಟ್ಟರಂತೆ. ಆ ಜಾಗದಲ್ಲಿ ನೀರು ಜಲಪಾತದಂತೆ ಮೇಲಿನಿಂದ ಧುಮುಕುತ್ತದೆ. ಇದನ್ನು 'ರಾಮಾನುಜಗಂಗೆ', 'ತೊಣ್ಣೂರು ಮದಗ' ಎಂದೆಲ್ಲಾ ಕರೆಯುತ್ತಾರೆ. ಅಲ್ಲಿ ತಲೆಯೊಡ್ಡಿ ಸ್ನಾನ ಮಾಡಿದರೆ ಗ್ರಹಪೀಡಿತ ಸಮಸ್ತ ದೋಷಗಳು, ರೋಗರುಜಿನಗಳು, ನಿವಾರಣೆಯಾಗುತ್ತವೆಯೆಂಬ ನಂಬಿಕೆಯಿದೆ. ಕೆರೆಯ ಒಂದು ಭಾಗಕ್ಕೆ ಮೆಟ್ಟಿಲುಗಳನ್ನು ನಿರ್ಮಿಸಿ ದಡದಲ್ಲಿ ಸ್ನಾನಘಟ್ಟವನ್ನು, ತೀರ್ಥಸ್ನಾನದ ಮೆಟ್ಟಿಲುಗಳನ್ನು ರಾಮಾನುಜರೇ ನಿರ್ಮಿಸಿದ್ದಾರೆ.[೨೫]

ಈ ಕೆರೆಯ ವೈಶಿಷ್ಟ್ಯ ರಚನೆ ಸೊಗಸಾದ ಕಲ್ಲು ಕಟ್ಟಡದಿಂದ ನಿರ್ಮಿಸಿರುವ ಕೋಡಿ. ಈ ಕೋಡಿ ಕಾಲುವೆಯನ್ನು ಬೆಟ್ಟದ ಬಂಡೆಯನ್ನು ಕೊರೆದು ನಿರ್ಮಿಸಲಾಗಿದೆ. ಈ ಕೆರೆಯ ಕೋಡಿ ಮತ್ತು ಕಾಲುವೆ ತೂಬು ಒಂದೇ ಆಗಿರುವುದು ಮತ್ತೊಂದು ವಿಶೇಷ.[೨೬] ನಾಲೆಗೆ ನೀರಾವರಿ ತೂಬಿನಿಂದ ಬರುವ ನೀರನ್ನು ಬಾಗಿಲಿನಿಂದ ನಿಯಂತ್ರಿಸಲಾಗುತ್ತದೆ. ಕೆರೆ ತುಂಬಿದಾಗ ಹೆಚ್ಚುವರಿ ನೀರು ತೂಬಿನ ಮೇಲುಭಾಗದಿಂದ ತೂರಿಕೊಂಡು ನಾಲೆಗೆ ಹರಿದುಬರುತ್ತದೆ. ಮತ್ತು ಗುಡ್ಡದಿಂದ ಕೊಂಚ ದೂರದಲ್ಲಿ ನಾಲೆ ಎರಡಾಗಿ ಸಾಗುತ್ತದೆ. ಎಡಸೀಳು ಕಾಲುವೆ ನೀರಾವರಿ ಕಾಲುವೆಯಾಗಿದ್ದರೆ, ಬಲ ಸೀಳು ಕಾಲುವೆ, ಕೆರೆಕೆಳಗಿನ ನದಿ ಕಣಿವೆಗೆ ಸಂಪರ್ಕ ಹೊಂದಿದೆ.[೨೭] ಕೆರೆಯ ಮಧ್ಯೆ ಎಲ್ಲಿಯೂ ಸತ್ತೆಸದೆಯಾಗಲೀ ಪಾಚಿಯಾಗಲೀ ಬೆಳೆದುಕೊಂಡಿಲ್ಲ ನದಿಯಂತೆ ನೀರು ನಿರ್ಮಲವಾಗಿದೆ. ಕ್ರಿ.ಶ. ೧೭೪೬ರಲ್ಲಿ ದಖನ್ನಿನ ಸುಭೇದಾರನ ಮಗ ನಾಸೀರ್ ಜಂಗ್‌ನು ಚಿಕ್ಕ ಕೃಷ್ಣರಾಜ ಒಡೆಯರ ಕಾಲದಲ್ಲಿ

ಶ್ರೀರಂಗಪಟ್ಟಣದ ಮೇಲೆ ಧಾಳಿ ಮಾಡುವ ಸಂದರ್ಭದಲ್ಲಿ ತೊಣ್ಣೂರಿನಲ್ಲಿ ಬೀಡುಬಿಟ್ಟಿದ್ದಾಗ ಈ ಕೆರೆಯ ಸ್ಪಟಿಕದಂತಹ ನಿರ್ಮಲ ನೀರನ್ನು ಕಂಡು ಬೆರಗಾಗಿ ಇದಕ್ಕೆ 'ಮೋತಿ ತಲಾಬ್' ಅಥವಾ 'ಮುತ್ತಿನ ಸರೋವರ ಕೆರೆ' ಎಂದು ಕರೆದನಂತೆ.[೨೮]

ಹೊಯ್ಸಳರ ಆಳ್ವಿಕೆಯಲ್ಲಿ ನಿರ್ಮಿಸಲಾದ ಈ ಕೆರೆಯನ್ನು ಟಿಪ್ಪು ಕಾಲದಲ್ಲಿ ಪುನರ್‌ನಿರ್ಮಿಸಿ ದುರಸ್ತಿಗೊಳಿಸಲಾಯಿತೆಂದು ಸ್ಥಳ ಪ್ರತೀತಿಯಿಂದ ತಿಳಿದುಬರುತ್ತದೆ.

ಮೆಟ್ಟಿಲು ಹಾಗೂ ಕಟ್ಟೆಗೆ ಬಳಸಲಾಗಿರುವ ಕಲ್ಲುಗಳನ್ನು ಸೂಕ್ಷ್ಮವಾಗಿ ಪರಿಶೀಲನೆ ಮಾಡಿದಾಗ ಮೆಟ್ಟಿಲುಗಳಿಗೆ ಅನೇಕ ದೇವಾಲಯಗಳ ದ್ವಾರಸ್ತಂಭಗಳನ್ನು ಬಳಸಲಾಗಿದೆ. ಬೃಂದಾವನದ ಬಳಿಯ ಬಾಗಿಲುವಾಡದ ಭಾಗಗಳ ಸಮೂಹವೊಂದರಲ್ಲಿ ಚಾಳುಕ್ಯರ ಹಾಗು ಹೊಯ್ಸಳ ಕಾಲದ ಶಾಸನಗಳ ಎರಡು ತುಣುಕುಗಳು ಕಂಡಬಂದಿವೆ. ಅಲ್ಲದೆ, ನಾಲ್ಕು ಕೆತ್ತನೆ ಮಾಡಿದ ಕಲ್ಲುಗಳಿವೆ. ಇವುಗಳಲ್ಲಿ ಎರಡು ಸೂಕ್ಷ್ಮ ಕೆತ್ತನೆಯಿಂದ ಕೂಡಿವೆ. ಒಂದರಲ್ಲಿ ಗಜೇಂದ್ರಮೋಕ್ಷದ ಕಥೆಯಿದ್ದರೆ ಮತ್ತೊಂದರಲ್ಲಿ ಸಳ ಹುಲಿಯೊಡನೆ ಕಾದಾಡುವ ದೃಶ್ಯವಿದೆ. ಎರಡನೆಯದನ್ನು ಯಾವುದೋ ಶಿಥಿಲಗೊಂಡ ದೇವಾಲಯದಿಂದ ಅಥವಾ ಹಳೆಯ ಕಟ್ಟಡದಿಂದ ತಂದ ಭಾಗವಾಗಿದೆ. ಆದ್ದರಿಂದ ಈ ಕಟ್ಟೆಯನ್ನು ಹೊಯ್ಸಳರ ಕಾಲದಲ್ಲಿ ಕಟ್ಟಿರುವುದನ್ನು ಸಮರ್ಥಿಸಿದರೆ ಹುಲಿಕಾಳಗ ಪ್ರಿಯನಾಗಿದ್ದ ಟಿಪ್ಪು ಪ್ರಾಯಶಃ ಇದನ್ನು ತನ್ನ ಪುನರ್‌ನಿರ್ಮಾಣದ ಕುರುಹಾಗಿ ಎದ್ದು ಕಾಣುವಂತೆ ಜೋಡಣೆ ಮಾಡಿರಬೇಕು.[೨೯]

ಶತ್ರುಗಳ ಧಾಳಿಯ ಸಂದರ್ಭದಲ್ಲಿ ಶತ್ರುಗಳಿಗೆ ಉಪಯೋಗವಾಗದಂತೆ ಕೆರೆಗಳನ್ನು ಒಡೆದು ಹಾಕಲಾಗುತ್ತಿತ್ತು. ಕ್ರಿ.ಶ. ೧೭೬೭ರಲ್ಲಿ ಪೇಶ್ವೆ ಮಾಧವರಾಯ ಮೈಸೂರು ರಾಜ್ಯದ ಮೇಲೆ ಆಕ್ರಮಣ ಮಾಡಿದಾಗ ಹೈದರ್‌ನ ಆಜ್ಞೆಯಂತೆ ಶತ್ರು ನೀರು, ಮೇವು, ದೊರೆಯದಂತೆ ಜಲಾಶಯಗಳ ದಡಗಳನ್ನು ಒಡೆದುಹಾಕಲಾಗುತ್ತಿತ್ತು.[೩೦]

ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧದ ಸಂದರ್ಭದಲ್ಲಿ ತೊಣ್ಣೂರು ಕೆರೆ ಟಿಪ್ಪುವಿನಿಂದಲೇ ನಾಶವಾಯಿತು. ತೊಣ್ಣೂರು ಕೆರೆಯಿಂದ ಶ್ರೀರಂಗಪಟ್ಟಣದ ಸುತ್ತಮುತ್ತಲ ಪ್ರದೇಶಕ್ಕೆ ಅನುಕೂಲಕರವಾಗಿದ್ದರೂ. ಹಿಂದೆ ಆಗಿಂದಾಗ್ಗೆ ದಾಳಿ ಮಾಡುತ್ತಿದ್ದ ಶತ್ರು ಸೈನ್ಯಕ್ಕೆ ನೀರು. ಮೇವು, ಒದಗಿಸುತ್ತಿದ್ದುದರಿಂದ 'ಸಾವು ಅಥವಾ ಸಾಮ್ರಾಜ್ಯ' ವೆಂದು ನಿರ್ಧರಿಸಿದ ಟಿಪ್ಪು ಯುದ್ಧದಲ್ಲಿ ಕೆರೆ ಉಳಿಯಬಾರದೆಂದು ಭಾವಿಸಿ ಕೆರೆಯ ಏರಿಯನ್ನು ಒಡೆದು ನೀರನ್ನು ಬರಿದು ಮಾಡಲಾಯಿತಂತೆ.[೩೧] ಕ್ರಿ.ಶ. ೧೮೦೦ರಲ್ಲಿ ಪೂರ್ಣಯ್ಯನ ಕಾಲದಲ್ಲಿ ಈ ಕೆರೆಯನ್ನು ದುರಸ್ಥಿಗೊಳಿಸಲಾಯಿತು. ಈಗ ಅದರಲ್ಲಿ ಸುಮಾರು ೧೨ ಆಳು ಪ್ರಮಾಣದ ನೀರು ಅಥವಾ ಸುಮಾರು ೬೦ ಅಡಿಯಷ್ಟು ನೀರಿರುವುದು ಕಂಡುಬರುತ್ತದೆ.[೩೨]

ಆಂಧ್ರದ ಕಡಪ ಜಿಲ್ಲೆ ಒಡವೇಲು ತಾ. ಕ್ರಿ.ಶ. ೧೩೬೯ರ ಪೋರುಮಾಮಿಲ್ಲ ಶಾಸನದಲ್ಲಿ[೩೩] ಕೆರೆಗೆ ಅನಾಹುತವಾಗದಂತೆ ಎಚ್ಚರವಹಿಸಬೇಕಾದ ಅಂಶಗಳ ಬಗ್ಗೆ ಮಾಹಿತಿಯಿದೆ. ಕಟ್ಟೆಯಿಂದ ನೀರು ಜಿನುಗದಂತೆ ನೋಡಿಕೊಳ್ಳುವುದು, ಕ್ಷಾರಿಯ ಮಣ್ಣು, ಎರಡು ರಾಜ್ಯಗಳ ಸರಹದ್ದಿನಲ್ಲಿ ಕೆರೆಯಿರುವುದು, ಕೆರೆಯಂಗಳದ ನಡುವಿನ ದಿಬ್ಬ, ಅತ್ಯಲ್ಪ ಜಲ ಲಭ್ಯತೆ, ವಿಸ್ತಾರವಾದ ಅಚ್ಚುಕಟ್ಟು, ಗಟ್ಟಿಯಾದ ಜೇಡಿಮಣ್ಣಿನ ನೆಲಗಟ್ಟಿನ ಮೇಲೆ ಏರಿಯ ನಿರ್ಮಾಣ[೩೪] ಮುಂತಾದ ಅಂಶಗಳನ್ನು ತಿಳಿಸುತ್ತದೆ.

ಕೆರೆಗಳ ಪುನರುಜ್ಜೀವನ ಅತ್ಯಗತ್ಯ : ಆಧುನಿಕ ಕಾಲದಲ್ಲಿ ಸಣ್ಣ, ಮಾಧ್ಯಮ, ಹಾಗೂ ಬೃಹತ್ ನೀರಾವರಿ ಯೋಜನೆಗಳು ಪ್ರಾರಂಭವಾದಂತೆ ಗ್ರಾಮೀಣ ಜನರ ಮೂಲಭೂತ ಅವಶ್ಯಕತೆಗಳನ್ನು ಪೂರೈಸುತ್ತಿದ್ದ ಕೆರೆಗಳು ಕಣ್ಮರೆಯಾಗತೊಡಗಿದವು. ಕೆಲವು ಕೆರೆಗಳು ಬತ್ತಿ ಹೋದರೆ, ಕೆಲವು ಕೆರೆಗಳು ಒತ್ತುವರಿಯಾದರೆ, ಮತ್ತೆ ಕೆಲವು ಕೆರೆಗಳು ಹೂಳಿನಿಂದ ಮುಚ್ಚಿಹೋದವು, ನಗರ ಪ್ರದೇಶಗಳಲ್ಲಿ ಕೆರೆಗಳನ್ನು ಒಣಗಿಸಿ ಸೈಟುಗಳನ್ನಾಗಿ ಪರಿವರ್ತಿಸಲಾಗಿದೆ. ಕೆರೆಗಳು ಬಹುಕಾಲ ಉಳಿಯಬೇಕಾದರೆ ಆಗಾಗ್ಗೆ ಅವುಗಳ ಸಂರಕ್ಷಣೆಗೆ ಗಮನ ನೀಡಬೇಕು. ಕೆರೆಯನ್ನು ಯಾರೇ ಕಟ್ಟಿಸಲಿ ಅದರ ಸಂರಕ್ಷಣೆಯ ಹೊಣೆ ಗ್ರಾಮಸ್ಥರದಾಗಿದ್ದಿತು. ಕೆರೆಯ ಕಟ್ಟೆ ಒಡೆಯಬಹುದು. ತೂಬು ಹಾಳಾಗಬಹುದು. ಹೂಳಿನಿಂದ (ಮಣ್ಣು) ಕೆರೆ ಹೂತುಹೋಗಬಹುದು, ಇವುಗಳಿಂದ ಕೆರೆಯನ್ನು ಸಂರಕ್ಷಿಸಲು ಗ್ರಾಮಸ್ಥರೆಲ್ಲಾ ಸೇರಿ ಕೆರೆಗಾಗಿ ಬಿಡುತ್ತಿದ್ದ ಜಮೀನನ್ನು 'ಬಿತ್ತುವಾಟ' ಅಥವಾ 'ಬಿತ್ತುವಟ್ಟ' ವೆಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಈ ಜಮೀನಿನಿಂದ ಬರುವ ಆದಾಯವನ್ನು ಕೆರೆಯ ಸಂರಕ್ಷಣೆಗೆ ಮೀಸಲಿಡುತ್ತಿದ್ದರು. ಆಗಾಗ್ಗೆ ಕೆರೆಗೆ ಬರುತ್ತಿದ್ದ ಹೂಳನ್ನು (ಮಣ್ಣನ್ನು) ತೆಗೆಯುವ ದುರಸ್ತು ಕಾರ್ಯವನ್ನು 'ಪಡಿಸಲಿಸು' ಎಂದು ಶಾಸನಗಳು ಉಲ್ಲೇಖಿಸಿವೆ.[೩೫]

ನಮ್ಮ ಜಲಸಂಪನ್ಮೂಲವನ್ನು ರಕ್ಷಿಸುವ ವಿಶಿಷ್ಟ ಕೌಶಲ್ಯದ ಪ್ರಧಾನವಾದ ಕೆರೆ ವ್ಯವಸ್ಥೆ ಒಂದು ಕಾಲಕ್ಕೆ ನಾಡಿನ ಹೆಮ್ಮೆಯ ಸಂಗತಿಯಾಗಿತ್ತು. ಈಗ ಹಳೆಯ ವ್ಯವಸ್ಥೆಗೆ ಹೇಗೆ ಜೀವ ತುಂಬಬಹುದೆಂಬುದನ್ನು ಆಲೋಚಿಸಬೇಕಾಗಿದೆ. ಸಾಮಾನ್ಯವಾಗಿ ಕೆರೆಯ ಸಂರಕ್ಷಣೆಗೆ ಅಗತ್ಯ ಕ್ರಮಗಳೆಂದರೆ ಕೆರೆಯಂಗಳ ಹಾಗೂ ನಾಲೆಯ ತಳದಿಂದ ಕಾಲಕಾಲಕ್ಕೆ ಹೂಳು ತೆಗೆಯುವುದು. ಮಳೆಯಿಂದಾಗಲೀ ಇತರ ಕಾರಣಗಳಿಂದಾಗಲೀ ಮಣ್ಣು ಕಟ್ಟೆಗೆ ಬರದಂತೆ, ಎಲ್ಲಿಯಾದರೂ

ಹಾನಿಯಾಗಿದ್ದಲ್ಲಿ ಮಣ್ಣು ಕೆಲಸ ಮಾಡಿ ಅದನ್ನು ಸರಿಪಡಿಸುವುದು. ತೂಬು, ಕೋಡಿಗಳಿಗೆ ಏನಾದರೂ ಹಾನಿಯಾಗಿದ್ದರೆ ಕಾಲಕಾಲಕ್ಕೆ ಅದನ್ನು ದುರಸ್ತಿ ಮಾಡಿಸುವುದು. ಜಲಾನಯನ ಪ್ರದೇಶ ಒತ್ತುವರಿಯಾಗದಂತೆ ನೋಡಿಕೊಳ್ಳುವುದು. ಕೆರೆಯಾಳಕ್ಕೆ ಹರಿದುಬರುವ ಹೂಳನ್ನು ತಡೆಯಲು ವ್ಯವಸ್ಥೆ ಮಾಡುವುದು. ಪ್ರಾಚೀನ ಕಾಲದಲ್ಲಿ ಕೆರೆ ಅಥವಾ ನಾಲೆಯ ಸಂರಕ್ಷಣೆ ಮುಖ್ಯವಾಗಿ ಗ್ರಾಮ ಸಮುದಾಯದ ಹೊಣೆಯಾಗಿತ್ತು.[೩೬] ಹೀಗೆ ಕೆರೆಗಳನ್ನು ನಿರ್ಮಿಸುವುದು, ಅವುಗಳನ್ನು ದುರಸ್ಥಿಗೊಳಿಸುವುದು ಪುಣ್ಯಕಾರ್ಯಗಳೆಂದು ನಮ್ಮ ಪೂರ್ವಿಕರು ಭಾವಿಸಿದ್ದರು. ಇತ್ತೀಚೆಗೆ ರಾಜ್ಯ ಸರ್ಕಾರ ಹಳೆಯ ಕೆರೆಗಳನ್ನು ಜೀರ್ಣೋದ್ಧಾರಗೊಳಿಸುವ, ಹೂಳೆತ್ತಿಸುವ, ಕೆರೆ ಒತ್ತುವರಿಯನ್ನು ತೆರವುಗೊಳಿಸುವ ಕಾರ್ಯವನ್ನು ಹಮ್ಮಿಕೊಂಡಿರುವದು ಗಮನಾರ್ಹ ಸಂಗತಿಯಾಗಿದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿಗಳು

೧. ಡಾ. ತಿಪ್ಪೇರುದ್ರಸ್ವಾಮಿ. ಹೆಚ್., **ಕರ್ನಾಟಕ ಸಂಸ್ಕೃತಿ ಇತಿಹಾಸ**, ಪುಟ ೨೭೩, ಡಿ.ವಿ.ಕೆ. ಮೂರ್ತಿ, ಪ್ರಕಾಶಕರು, ಮೈಸೂರು, ೨೦೦೧.

೨. **ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ**., ರಾಜರಾಮ ಹೆಗಡೆ (ಸಂ), ಪುಟ ೧೪೩, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೩. ಡಾ. ಎಂ. ಚಿದಾನಂದಮೂರ್ತಿ, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, (ಕ್ರಿ.ಶ. ೪೫೦ ರಿಂದ ೧೧೫೦), ಪುಟ ಸಂಖ್ಯೆ ೩೬೭, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೬೬.

೪. ಅದೇ., ಪುಟ ೪೫೨.

೫. ಅದೇ., ಪುಟ ಸಂಖ್ಯೆ ೩೬೬.

೬ ಅದೇ., ಪುಟ ಸಂಖ್ಯೆ ೩೬೬.

೭. ನೀಲತ್ತಹಳ್ಳಿ ಕಸ್ತೂರಿ (ಅನು), (ಜಿ.ಎಸ್. ದೀಕ್ಷಿತ್, ಜಿ.ಆರ್. ಕುಪ್ಪಸ್ವಾಮಿ, ಎಸ್.ಕೆ. ಮೋಹನ್), **ಕರ್ನಾಟಕದಲ್ಲಿ ಕೆರೆ ನೀರಾವರಿ**, ಪುಟ ಸಂಖ್ಯೆ ೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ ೨೦೦೦.

೮. **ಕರ್ನಾಟಕದ ಕೈಪಿಡಿ**., ಮುಖ್ಯ ಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್, ಕರ್ನಾಟಕ ಸರ್ಕಾರ, ಪುಟ ಸಂಖ್ಯೆ ೯೫, ಪ್ರಕಟಣೆ : ೧೯೯೬.

೯. ನೀಲತ್ತಹಳ್ಳಿ ಕಸ್ತೂರಿ (ಅನು), (ಜಿ.ಎಸ್. ದೀಕ್ಷಿತ್, ಜಿ.ಆರ್. ಕುಪ್ಪಸ್ವಾಮಿ, ಎಸ್.ಕೆ. ಮೋಹನ್), **ಕರ್ನಾಟಕದಲ್ಲಿ ಕೆರೆ ನೀರಾವರಿ**, ಪುಟ ಸಂಖ್ಯೆ ೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ ೨೦೦೦.

೧೦. **ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ**., ರಾಜರಾಮ ಹೆಗಡೆ (ಸಂ). ಪುಟ ಸಂಖ್ಯೆ ೫, ಅದೇ.

೧೧. ಡಾ. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, (ಕ್ರಿ.ಸ. ೪೫೦ ರಿಂದ ೧೧೫೦). ಪುಟ ಸಂಖ್ಯೆ ೩೬೭, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೬೬.

೧೨. **ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ**., ರಾಜರಾಮ ಹೆಗಡೆ (ಸಂ). ಪುಟ ಸಂಖ್ಯೆ ೮೨, ಅದೇ.

೧೩. ಅದೇ., ಪುಟ ಸಂಖ್ಯೆ ೭೮.

೧೪. ನೀಲತ್ತಹಳ್ಳಿ ಕಸ್ತೂರಿ (ಅನು), (ಜಿ.ಎಸ್. ದೀಕ್ಷಿತ್, ಜಿ.ಆರ್. ಕುಪ್ಪಸ್ವಾಮಿ, ಎಸ್.ಕೆ. ಮೋಹನ್), **ಕರ್ನಾಟಕದಲ್ಲಿ ಕೆರೆ ನೀರಾವರಿ**, ಪು.ಸಂಖ್ಯೆ ೧೧.

೧೫. ಅದೇ., ಪುಟ ಸಂಖ್ಯೆ ೧೦.

೧೬. ಅದೇ., ಪುಟ ಸಂಖ್ಯೆ ೧೧.

೧೭. ಅದೇ., ಪುಟ ಸಂಖ್ಯೆ ೧೨.

೧೮. **ಸುವರ್ಣ ಮಂಡ್ಯ**., ಡಾ. ದೇ.ಜ.ಗೌ. (ಪ್ರೊ. ಜಯಪ್ರಕಾಶ್‌ಗೌಡ) (ಸಂ.) ಪುಟ ಸಂಖ್ಯೆ ೪೬, ಅಭಿಮಾನಿ ಪಬ್ಲಿಕೇಷನ್ಸ್ ಲಿಮಿಟೆಡ್, ಬೆಂಗಳೂರು, ೨೦೦೬.

೧೯. ಹಯವದನರಾವ್ ಸಿ. ಮೈಸೂರು ಗ್ಯಾಸೆಟಿಯರ್, ಪುಟ ಸಂಖ್ಯೆ ೮೬೧, ಸಂಪುಟ ೦೫.

೨೦. **ಸುವರ್ಣ ಮಂಡ್ಯ**., ಡಾ. ದೇ.ಜ.ಗೌ. (ಪ್ರೊ. ಜಯಪ್ರಕಾಶ್‌ಗೌಡ), (ಸಂ.) ಅದೇ, ಪುಟ ಸಂಖ್ಯೆ ೭೮.

೨೧. ಅದೇ., ಪುಟ ಸಂಖ್ಯೆ ೭೭.

೨೨. ಡಾ ಕೆ. ಅನಂತರಾಮು, **ಸಕ್ಕರೆಸೀಮೆ ಜಿಲ್ಲೆಯ ಪ್ರವಾಸ ಕಥನ**, ಪುಟ ಸಂಖ್ಯೆ ೭೬, ಪ್ರಕಟಣೆ : ೨೦೦೪.

೨೩. ರಾಜರಾಮ ಹೆಗಡೆ (ಸಂ), ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ, ಅದೇ., ಪುಟಸಂಖ್ಯೆ ೧೩೯.

೨೪. ನೀಲತ್ತಹಳ್ಳಿ ಕಸ್ತೂರಿ (ಅನು), (ಜಿ.ಎಸ್. ದೀಕ್ಷಿತ್, ಜಿ.ಆರ್. ಕುಪ್ಪುಸ್ವಾಮಿ, ಎಸ್.ಕೆ. ಮೋಹನ್), ಕರ್ನಾಟಕದಲ್ಲಿ ಕೆರೆ ನೀರಾವರಿ, ಅದೇ., ಪುಟ ಸಂಖ್ಯೆ ೧೮೧.

೨೫. ಡಾ. ಕೆ. ಅನಂತರಾಮು, **ಸಕ್ಕರೆಸೀಮೆ ಜಿಲ್ಲೆಯ ಪ್ರವಾಸ ಕಥನ,** ಪುಟ ಸಂಖ್ಯೆ ೭೬, ಪ್ರಕಟಣೆ : ೨೦೦೪.

೨೬. ನೀಲತ್ತಹಳ್ಳಿ ಕಸ್ತೂರಿ (ಅನು), (ಜಿ.ಎಸ್. ದೀಕ್ಷಿತ್, ಜಿ.ಆರ್. ಕುಪ್ಪುಸ್ವಾಮಿ, ಎಸ್.ಕೆ. ಮೋಹನ್), **ಕರ್ನಾಟಕದಲ್ಲಿ ಕೆರೆ ನೀರಾವರಿ,** ಅದೇ., ಪುಟ ಸಂಖ್ಯೆ ೯.

೨೭. ಅದೇ., ಪುಟ ಸಂಖ್ಯೆ ೧೮೧.

೨೮. ಡಾ. ಕೆ. ಅನಂತರಾಮು, **ಸಕ್ಕರೆಸೀಮೆ ಜಿಲ್ಲೆಯ ಪ್ರವಾಸ ಕಥನ,** ಅದೇ., ಪುಟ ಸಂಖ್ಯೆ ೭೬.

೨೯. ನೀಲತ್ತಹಳ್ಳಿ ಕಸ್ತೂರಿ (ಅನು), (ಜಿ.ಎಸ್. ದೀಕ್ಷಿತ್, ಜಿ.ಆರ್. ಕುಪ್ಪುಸ್ವಾಮಿ, ಎಸ್.ಕೆ. ಮೋಹನ್), ಕರ್ನಾಟಕದಲ್ಲಿ ಕೆರೆ ನೀರಾವರಿ, ಅದೇ., ಪುಟ ಸಂಖ್ಯೆ ೧೮೨.

೩೦. ಅದೇ., ಪುಟ ಸಂಖ್ಯೆ ೬೪, (ಪುಟ ೫೫೨, ವಿಲ್ಕ್ಸ್‌ರ ಹಿಸ್ಟರಿ ಆಫ್ ಮೈಸೂರು).

೩೧. ಅದೇ., ಪುಟ ಸಂಖ್ಯೆ ೬೫, (ಪುಟ ೬೧೦–೬೧೧, ವಿಲ್ಕ್ಸ್‌ರ ಹಿಸ್ಟರಿ ಆಫ್ ಮೈಸೂರು).

೩೨. ಸಿ. ಹಯವದನರಾವ್ (ಸಂ), **ಮೈಸೂರು ಗ್ಯಾಜಟಿಯರ್,** ಪುಟ ಸಂಖ್ಯೆ ೨೭೯೬, ಸಂಪುಟ ೦೨, ೧೯೩೦.

೩೩. ನೀಲತ್ತಹಳ್ಳಿ ಕಸ್ತೂರಿ (ಅನು), (ಜಿ.ಎಸ್. ದೀಕ್ಷಿತ್, ಜಿ.ಆರ್. ಕುಪ್ಪುಸ್ವಾಮಿ, ಎಸ್.ಕೆ. ಮೋಹನ್), ಕರ್ನಾಟಕದಲ್ಲಿ ಕೆರೆ ನೀರಾವರಿ, ಪುಟ ಸಂಖ್ಯೆ ೧೦೬.

೩೪. ಅದೇ., ಪುಟಸಂಖ್ಯೆ ೧೦೭.

೩೫. ಡಾ. ಎಂ. ಚಿದಾನಂದಮೂರ್ತಿ, ಅದೇ., ಪುಟ ಸಂಖ್ಯೆ ೪೫೪.

೩೬. ನೀಲತ್ತಹಳ್ಳಿ ಕಸ್ತೂರಿ (ಅನು), (ಜಿ.ಎಸ್. ದೀಕ್ಷಿತ್, ಜಿ.ಆರ್. ಕುಪ್ಪುಸ್ವಾಮಿ, ಎಸ್.ಕೆ. ಮೋಹನ್), **ಕರ್ನಾಟಕದಲ್ಲಿ ಕೆರೆ ನೀರಾವರಿ,** ಅದೇ., ಪುಟ ಸಂಖ್ಯೆ ೧೨೦.

ಜಯದೇವಪ್ಪ ಜೈನಕೇರಿ*

ಬಸವಣ್ಣವರು ಪವಾಡ ಪುರುಷರೇ ?

ಪ್ರಾಚೀನ ಕರ್ನಾಟಕದಲ್ಲಿ ವಿಶ್ವಕೋಶ ರಚಿಸಿದ ಚಾಲುಕ್ಯ ಸೋಮೇಶ್ವರ, ಕೆಳದಿ ಬಸವರಾಜ, ನಿಜಗುಣ ಶಿವಯೋಗಿ ಮುಂತಾದವರು ಅರಸರೇ ಆಗಿರುವುದು ವಿಶೇಷ. ಬಹು ಸಂಸ್ಕೃತಿ, ಬಹು ಭಾಷಿಕ ಸಮಾಜವನ್ನು ಆಳಬೇಕಾಗಿರುವ ರಾಜರಿಗೆ ಬಹುಮುಖಿ ಜ್ಞಾನದ ಅಗತ್ಯವಿದ್ದಿತು. ಸಂಗ್ರಹಿಸಿದ ಜ್ಞಾನವನ್ನು ಸಮಗ್ರವಾಗಿ ಕೃತಿಗಿಳಿಸುವ ಅನುಕೂಲತೆ, ಅವಕಾಶಗಳ ಜೊತೆಗೆ, ಪಂಡಿತರ ಸಹಕಾರವೂ ಇತ್ತು. ಇದೆಲ್ಲದರ ಫಲವಾಗಿ ವಿಶ್ವಕೋಶಗಳು ಹುಟ್ಟಿದವು. ಚಾಲುಕ್ಯ ಸೋಮೇಶ್ವರನ 'ಮಾನಸೋಲ್ಲಾಸ', ಕೆಳದಿ ಬಸವರಾಜ ಕವಿಯ 'ಶಿವತತ್ವ ರತ್ನಾಕರ', ನಿಜಗುಣ ಶಿವಯೋಗಿಗಳ 'ವಿವೇಕ ಚಿಂತಾಮಣಿ' ಕನ್ನಡ ನೆಲದಲ್ಲಿ ಮೂಡಿಬಂದವು. ಮೊದಲಿನೆರಡು ಸಂಸ್ಕೃತದಲ್ಲೂ ಮೂರನೆಯದು ಕನ್ನಡ ಭಾಷೆಯಲ್ಲೂ ರಚಿತವಾದವು. ಶಿವತತ್ವ ರತ್ನಾಕರ ಗ್ರಂಥ ೧೯೯೯ರಲ್ಲಿ ಕನ್ನಡ ವಿ.ವಿ. ಯಿಂದ ಎರಡು ಬೃಹತ್ ಸಂಪುಟಗಳಾಗಿ ಪ್ರಕಟವಾಗಿವೆ. ವಿಶ್ವಕೋಶದ ಕಲ್ಪನೆ ಭಾರತೀಯರಿಗೆ ಪ್ರಾಚೀನ ಕಾಲದಿಂದಲೂ ಇದ್ದರೂ, ಸಮಗ್ರವಾಗಿ ದಾಖಲಾಗಿರಲಿಲ್ಲ. ಆಂಗ್ಲ ಭಾಷೆಯ ಎನ್‌ಸೈಕ್ಲೋಪೀಡಿಯಾಗಳನ್ನೇ ನಂಬಿದ್ದೆವು. ಮಧ್ಯಕಾಲೀನ ಕರ್ನಾಟಕದಲ್ಲಿ ಈ ಬಗೆಯ ಎರಡು ಸಮಸ್ತ ವಸ್ತು ವಿಷಯ ಕೋಶಗಳು, ಅವೈದಿಕರಿಂದ ಸಂಸ್ಕೃತ ಭಾಷೆಯಲ್ಲಿ ರಚಿತವಾಗಿರುವುದು ವಿಶೇಷ. ಈ ಅವಧಿಯಲ್ಲಿ ಒಂದೇ ವಿಷಯ ಕುರಿತು ಕೃತಿಗಳು (ಗಜ, ಅಶ್ವ, ವೈದ್ಯ, ಜೋತಿಷ್ಯ, ಸಂಗೀತ, ನಾಟ್ಯ ಮುಂತಾದ) ಕನ್ನಡದಲ್ಲಿ ಮತ್ತು ಸಂಸ್ಕೃತದಲ್ಲಿ ರಚನೆಯಾದವು. ಇವುಗಳಿಂದಾಗಿ ಕರ್ನಾಟಕ ಸಂಸ್ಕೃತಿಯು ದಾಖಲೀಕರಣಗೊಂಡಿತು.

ಚಾವುಂಡರಾಯನ 'ಲೋಕೋಪಕಾರ' (ಕ್ರಿ.ಶ. ೧೦೨೫) ಕನ್ನಡದಲ್ಲಿ ರಚಿತವಾದ ಮೊಟ್ಟಮೊದಲ ವಿಶ್ವಕೋಶ. ಮೂರನೇ ಸೋಮೇಶ್ವರನ (ಕ್ರಿ.ಶ. ೧೦೪೫) 'ಮಾನಸೋಲ್ಲಾಸ' ಕನ್ನಡ ನೆಲದಲ್ಲಿ ಕನ್ನಡಿಗನೊಬ್ಬ ಸಂಸ್ಕೃತದಲ್ಲಿ ರಚಿಸಿದ ಮೊದಲ ಸಂಸ್ಕೃತ ವಿಶ್ವಕೋಶವೆಂದು ತಿಳಿದುಬರುತ್ತದೆ. ಮುಂದೆ ಕೆಳದಿ ಬಸವರಾಜನ (೧೬೬೮-೧೭೧೫) 'ಶಿವತತ್ವ ರತ್ನಾಕರ' ಮಹಾನ್ ವಸ್ತುವಿಷಯಕೋಶ ರಚನೆಯಾಗಿ ಸಂಕಲಿತಗೊಂಡಿದೆ. ಆಯಾ ಕಾಲಘಟ್ಟದ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಹಿತ್ಯಕ ಹಾಗೂ ಕಲೆಗಳ ಅಪೂರ್ವ ದಾಖಲೆಗಳನ್ನು 'ಶಿವತತ್ವರತ್ನಾಕರ' ಒಳಗೊಂಡಿದೆ. ಸೃಷ್ಟಿಯ ಮಹಾಕಥನದಿಂದ ಪ್ರಾರಂಭವಾಗಿ, ಲಿಂಗಾಯತ ದರ್ಶನದಿಂದ ಮುಕ್ತಾಯವಾಗಿದೆ. ಸೃಷ್ಟಿಯ ಕಥನ, ದರ್ಶನ, ರಾಜಕೀಯ ಚರಿತ್ರೆಯ ಮೇಲೆ ಬೆಳಕು ಚೆಲ್ಲುತ್ತದೆ. ಕೆಳದಿ ಅರಸು ಬಸವರಾಜ ತನ್ನ ಪುತ್ರ ಸೋಮಶೇಖರ ನಾಯಕನಿಗೆ ಜ್ಞಾನಶಾಸ್ತ್ರವನ್ನು ತಿಳಿಸುವ ಪ್ರಶ್ನೋತ್ತರ ಮಾದರಿಯಲ್ಲಿ ಕೃತಿ ರಚಿತವಾಗಿದೆ. ಈ ಕೃತಿಯನ್ನು ಸಂಕಲಿಸಲು ಆಧರಿಸಿದ ಆಕರ ಗ್ರಂಥಗಳನ್ನು ಪ್ರಾಮಾಣಿಕವಾಗಿ ದಾಖಲಿಸಿರುವುದು ಈ ಕೃತಿಯ ವಿಶೇಷ.

ಆರಂಭದಲ್ಲಿ ಶಿವಲಿಂಗ, ಆದಿಶಕ್ತಿ, ನಂದಿ, ವೀರಭದ್ರರನ್ನು ವಂದಿಸಿರುವ ಕೆಳದಿ ಬಸವಭೂಪಾಲ. ತನ್ನ ಕಾಲದಲ್ಲಿ ಲಿಂಗಾಯತ ಧರ್ಮದ ಔನ್ನತ್ಯವನ್ನು ಪ್ರಚಾರವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದ್ದ ಚತುರಾಚಾರ್ಯರಿಗೂ ತನ್ನ ವಂದನೆ ಸಲ್ಲಿಸಿರುವುದು ಕಂಡುಬರುತ್ತದೆ. ನಾಲ್ಕನೆಯ ಕಲ್ಲೋಲದ ಎಂಟನೆಯ ತರಂಗದಲ್ಲಿ, ೧೨ನೇ ಶತಮಾನದ ಸರ್ವಸಮಾನತೆಯ ಹರಿಕಾರ, ಸಮಾಜೋಧಾರ್ಮಿಕ ನೇತಾರ, ಮಹಾತ್ಮಾ ಬಸವೇಶ್ವರರ ಉಲ್ಲೇಖ ಕಂಡುಬರುತ್ತದೆ. ಭಾರತೀಯರು ಪುಣ್ಯ ಪುರುಷರನ್ನು ಪುರಾಣ ಪುರುಷರನ್ನಾಗಿ ವೈಭವೀಕರಿಸುವ ಸಂಪ್ರದಾಯವನ್ನು ಕೆಳದಿ ಬಸವರಾಜನು ಇಲ್ಲಿಯೂ ಅನುಸರಿಸಿರುವುದು ಕಂಡುಬರುತ್ತದೆ. ಶಿವತತ್ವ ರತ್ನಾಕರ ಗ್ರಂಥದಲ್ಲಿ ಉಲ್ಲೇಖವಾಗಿರುವಂತೆ, ಸಂಕೀರ್ಣ ರಾಜರಿಂದ ಉಂಟಾದ ಧರ್ಮದ ಅವನತಿಯನ್ನು ತಿಳಿಸುತ್ತಾ, ಕರುಣಾಶಾಲಿಯಾದ ಭಗವಾನ್ ಬಸವೇಶ್ವರರು ಅವತಾರ ಮಾಡಿ ಭೂಲೋಕದಲ್ಲಿ ಪೂರ್ಣವಾಗಿ ಧರ್ಮದ ಸಂಸ್ಥಾಪನೆಯನ್ನು ಮಾಡಿದರು" ಎಂದು ೧೧-೧೨ ಶ್ಲೋಕಗಳಲ್ಲಿ ಉಲ್ಲೇಖವಾಗಿದೆ. ಪ್ರಶ್ನೋತ್ತರ ರೂಪದಲ್ಲಿರುವ

* # ೮೭, ಶಾಂತಲಾ, ಕುವೆಂಪು ರಸ್ತೆ, ಶಿವಮೊಗ್ಗ.

ಮುಂದಿನ ಶ್ಲೋಕಗಳಲ್ಲಿ ಬಸವೇಶ್ವರರು ಅವತಾರವಾದ ಬಗೆಯನ್ನು ಚಿತ್ರಿಸಿದ್ದಾನೆ. ಶಿವನ ವಾಹನ ನಂದಿ, ವೃಷಭೇಶ್ವರನೇ ಎರಡನೆಯ ಶಿವ ಎಂದು ಬಸವೇಶ್ವರರು ಪ್ರಸಿದ್ಧರಾಗಿದ್ದಾರೆ. ಎಂದು ೧೮ ಮತ್ತು ೧೯ನೇ ಶ್ಲೋಕಗಳಲ್ಲಿದೆ. ನಂತರ ನಂದಿಕೇಶ್ವರಲೀಲೆ, ಲಿಂಗಪುರಾಣಗಳ ಉಲ್ಲೇಖಗಳಿವೆ.

ಒಂಭತ್ತನೇ ತರಂಗದಲ್ಲಿ ಈ ನಂದಿಯು ಭೂಮಿಯಲ್ಲಿ ಬಸವೇಶ್ವರನ ರೂಪದಿಂದ ಆವಿರ್ಭವಿಸಿದ ವೃತ್ತಾಂತವನ್ನು ತಿಳಿಸಿದ್ದಾನೆ. ಮೊದಲನೆ ಅವತಾರದಲ್ಲಿ ವೃಷಭನಾಗಿದ್ದವನ ಹೆಸರು ಮುಂದಿನ ಜನ್ಮದಲ್ಲಿ 'ಬಸವ' ಎಂದಾಗಲಿ ಯಾವ ಭಕ್ತನ ಮುಖಕಮಲದಲ್ಲಿ 'ಬಸವ' ಎಂಬ ಶಬ್ಧ ಉಚ್ಚರಿತ ವಾಗುವುದೋ, ಅಲ್ಲಿ ನಾನು ವಾಸ ಮಾಡುತ್ತೇನೆ. ನಾನು ಈ ಬಸವನನ್ನನುಸರಿಸಿ ಅವನ ಸಮಸ್ತ ಪರಿವಾರವನ್ನೂ ನನ್ನದನ್ನಾಗಿ ಮಾಡಿಕೊಳ್ಳುವೆನು, ಲಿಂಗಾತ್ಮಕನಾಗಿ ಪ್ರಾಣಗಳನ್ನು, ಜಂಗಮ ರೂಪನಾಗಿ ಐಶ್ವರ್ಯವನ್ನೂ ಗುರುರೂಪನಾಗಿ ದೇಹವನ್ನೂ ಪ್ರವೇಶಿಸಿ ಅನುಗ್ರಹಿಸುವೆನು (೩೨-೩೩ನೇ ಶ್ಲೋಕ).

'ಕೂಡಲ ಸಂಗಮ'ವೆಂಬ ಹೆಸರಿನ ಮಹಾಕ್ಷೇತ್ರ ಉಂಟು, ಬೆಳ್ಳಿಯ ಪರ್ವತ (ಕೈಲಾಸ)ವನ್ನು ಮರೆತು ಮುಕ್ಕಣ್ಣ ಶಿವನು ಅಲ್ಲಿ ನೆಲಸಿದ್ದಾನೆ. ಸಾಕ್ಷಾತ್ ಶಿವನೇ ಶಿಶುವಿಗೆ ಲಿಂಗಧಾರಣೆ ಮಾಡಿ **"ಇವನು ಬಸವರಾಜನೆಂಬ ಹೆಸರಿನಿಂದ ಭಕ್ತಿ ಭಂಡಾರಿಯೆನಿಸಿ ಬಾಳುತ್ತಾನೆ"** ಎಂದು ಹೇಳುತ್ತಾನೆ. (ಶ್ಲೋಕ ೩೯ ರಿಂದ ೬೭) **ತಂದೆ ಮಾಧವಾ ಚಾರ್ಯ (ಮಾದರಸ) ತಾಯಿ ಮಾದಲಾಂಬಿಕೆಯರು ಉಪನಯನ ಮಾಡಬಯಸಿದಾಗ, ನನ್ನ ಗುರುವಾದ ಸಂಗಮೇಶನು ಲಿಂಗಧಾರಣವನ್ನೂ, ಶಿವದೀಕ್ಷೆಯನ್ನು ಈಗಾಗಲೇ ಮಾಡಿ ಹರಸಿದ್ದಾನೆ. ನನಗೆ ಉಪನಯನಾದಿಗಳು ಉಚಿತವಲ್ಲ"** ಎಂದು ಹೇಳಿ ಹಿಂದಿನ ಆಶ್ರಮವನ್ನು ತ್ಯಜಿಸಿ ಬಸವೇಶ್ವರನು ಹೊರಟನು. ಅವನ ಅಕ್ಕ ನಾಗಾಂಬೆಯೂ ಅವನೊಡನೆ ಹೊರಟಳು. ಬಸವೇಶ್ವರನ ಸೋದರಮಾವ ಬಲದೇವ, ರಾಜಬಿಜ್ಜಳನ ಮಂತ್ರಿ ಬಸವೇಶ್ವರನನ್ನು ಮನೆಗೆ ಕರೆತಂದು ಅವನಿಗೆ ಗಂಗಾ ಎಂಬ ತನ್ನ ಮಗಳನ್ನು ಮದುವೆ ಮಾಡಿದನು. ಬಸವೇಶ್ವರನು ವಿವಾಹಾನಂತರ ಸಂಗಮೇಶ್ವರ ನೆಂಬ ಮಹಾಕ್ಷೇತ್ರದಲ್ಲಿ ನೆಲೆಸಿದನು (ಶ್ಲೋಕ ೭೨ ರಿಂದ ೭೫).

ಮಂತ್ರಿ ಬಲದೇವ ಲಿಂಗೈಕ್ಯನಾದ ನಂತರ ಬಿಜ್ಜಳ ಭೂಪಾಲನು ಗುಣಶಾಲಿಯಾದ ಅಳಿಯ ಬಸವೇಶ್ವರರನ್ನು ತಾನೇ ಭೆಟ್ಟಿಯಾಗಿ ಅರಮನೆಗೆ ಕರೆಸಿಕೊಂಡು, ತನ್ನ ಮಂತ್ರಿಯನ್ನಾಗಿ ಅಧಿಕಾರ ನೀಡುತ್ತಾನೆ. ಗುರುಲಿಂಗ ಜಂಗಮರಿಗೆ ಅಪೇಕ್ಷಿತವಾದುದನ್ನು ಅರ್ಪಿಸಿ ಎಲ್ಲರಿಗೂ ದಾಸೋಹದಿಂದ ತೃಪ್ತಿ ಮಾಡುತ್ತಿದ್ದ ಬಸವೇಶ್ವರರ ವಿರುದ್ಧ ಚಾಡಿಕೋರರು ಬಿಜ್ಜಳನಲ್ಲಿ ದೂರುತ್ತಾರೆ. ಆದರೆ ಇದರಿಂದ ಬಸವೇಶ್ವರರ ಮಹಿಮೆಯ ಉತ್ಕರ್ಷವನ್ನೇ ಬೆಳಕಿಗೆ ತೋರುವಂತಾಯಿತು. ಸುಳ್ಳು ಆಕ್ಷೇಪಗಳನ್ನು ಬಿಜ್ಜಳನಿಗೆ ಮನವರಿಕೆ ಮಾಡಿ ಷಟಸ್ಥಲವಿದ್ಯೆಯನ್ನು ಪ್ರಕಾಶಗೊಳಿಸಿ, ಕೆಟ್ಟ ವಿಚಾರಗಳನ್ನು ಖಂಡಿಸಿ, ಭೂಲೋಕದಲ್ಲಿ ಸಂಪೂರ್ಣ ವಾಗಿ ಶಿವಧರ್ಮವನ್ನು ಸಂಸ್ಥಾಪಿಸಿ ಬಸವೇಶ್ವರರು ಭಕ್ತಿ ಸಾಮ್ರಾಜ್ಯವನ್ನು ಆಳಿದರು (ಶ್ಲೋಕ ೭೬ ರಿಂದ ೮೮). ಮುಂದೆ ಬಿಜ್ಜಳನು ಶಿವದ್ರೋಹವನ್ನೆಸಗುವನು. ಜಗದೇವ ಬ್ರಹ್ಮದೇವ ಎಂಬ ಹೆಸರಿನ ಇಬ್ಬರು ಬಿಜ್ಜಳನನ್ನು ದಂಡಿಸಲು ಕಂಕಣ ತೊಡುತ್ತಾರೆ. ಇಂಥ ಸಮಯದಲ್ಲಿ ನಾನಿಲ್ಲಿರುವುದು ಉಚಿತವಲ್ಲವೆಂದು ಬಸವೇಶ್ವರನು ತನ್ನ ನಿಜಸ್ಥಾನಕ್ಕೆ ಹೊರಡುವ ಇಚ್ಛೆ ವ್ಯಕ್ತಪಡಿಸುತ್ತಾರೆ. ಈ ಭೂಮಿಯ ಮೇಲೆ ಸಮಸ್ತ ಶಿವಧರ್ಮ ಸಂಸ್ಥಾಪನ ಮಾಡುತ್ತಾ ಇಪ್ಪತ್ತನಾಲ್ಕು ವರ್ಷಗಳ ಕಾಲ ಭಕ್ತಿಭಂಡಾರಿಯೆನಿಸಿ ಭಕ್ತಿ ಸಾಮ್ರಾಜ್ಯವನ್ನನು ಭವಿಸಿ ಬಾಳಿದ ಬಸವೇಶ್ವರರು. ಕಲ್ಯಾಣವನ್ನು ತ್ಯಜಿಸಿ ಕೂಡಲ ಸಂಗಮ ಕ್ಷೇತ್ರಕ್ಕೆ ತೆರಳಲು ಬಯಸಿದಾಗ ಆತನ ಇತರ ಗಣೇಶ್ವರರು **"ನಾವೂ ಮಲಿನಗೊಂಡ ಈ ಕಲ್ಯಾಣದಲ್ಲಿ ಇರಲಾರೆವು. ನಾವು ಇರಲು ಯೋಗ್ಯವಾದ ದೇಶವಾವುದು"** ಎಂದು ಕೇಳುತ್ತಾರೆ. ಅದಕ್ಕೆ ಬಸವೇಶ್ವರರು ಗಣಗಳನ್ನು ಕುರಿತು "ಇನ್ನು ಮುಂದೆ ಧರ್ಮಗಳು ಎಲ್ಲ ಕಡೆಯೂ ಮಂಕಾಗುವುವು. ಜನರಿಗೆಲ್ಲ ವಿನಾಶವನ್ನು ಸೂಚಿಸುವ ಉತ್ಪಾತಗಳು ಜರುಗುವುವು. ಶಿವನ ಅನುಗ್ರಹದಿಂದ ವಿರುಪಾಕ್ಷನ ಪ್ರಸ್ತಾಪದಿಂದ ಈ ಭೂಲೋಕದಲ್ಲಿ ರಾಜನಿಗೆ ಪ್ರಸಿದ್ಧವಾದ ಸಿಂಹಾಸನ (ರಾಜ್ಯ) ಸಿಗುತ್ತದೆ. ಭಕ್ತಿ ವ್ಯತ್ಯಾಸಗೊಂಡರೆ ಕ್ರಮವಾಗಿ ಆ ರಾಜ್ಯವು ಕ್ಷೀಣಿಸುವುದು (ಶ್ಲೋಕ ೮೯ ರಿಂದ ೯೫) ಎನ್ನುತ್ತಾರೆ. ಆ ಬಳಿಕ ಮಲ್ಲರಾಷ್ಟ್ರದಲ್ಲಿ ನನ್ನ ಅನುಗ್ರಹಕ್ಕೆ ಪಾತ್ರನಾದ ನನ್ನ ಹೆಸರಿನ ಪ್ರಖ್ಯಾತ ಶಿವಭಕ್ತನು ಉದಯಿಸುವನು. ರಾಮೇಶ್ವರನ ಅನುಗ್ರಹದಿಂದ ಅವನ ವಂಶದಲ್ಲಿ ಹುಟ್ಟಿದವರು ಹೆಚ್ಚಿನ ರಾಜ್ಯ, ಸಂಪತ್ತು, ಬಲ, ಕೀರ್ತಿ ಮತ್ತು ಪರಾಕ್ರಮಗಳಿಂದ ವರ್ಧಿಸುವರು. ಅವರು ಲಿಂಗದೀಕ್ಷೆಯನ್ನು ಪಡೆದು ಲಿಂಗವಂತ ಆಚಾರಗಳಿಂದ ಗುರು, ಲಿಂಗ, ಜಂಗಮರಲ್ಲಿ ಅತ್ಯಂತ ಭಕ್ತಿಯಿಂದ ನಡೆದುಕೊಳ್ಳುವರು. ಅವರ ರಾಜ್ಯದಲ್ಲಿ ಧರ್ಮವು ನೆಲೆಗೊಳ್ಳುವುದು. ದುರ್ಭಿಕ್ಷ ದೂರವಾಗುವುದು. ಅಲ್ಲಿಗೆ ಹೋಗಿ ಲಿಂಗನಿಷ್ಠರಾಗಿ ಧರ್ಮದಿಂದ ಬಾಳಿರಿ" ಎಂದು ಹೇಳಿ ಬಸವೇಶ್ವರರು ತಮ್ಮ ನಿಜಸ್ಥಾನಕ್ಕೆ ಹೊರಡುತ್ತಾರೆ (ಶ್ಲೋಕ ೯೬ ರಿಂದ ೧೦೦). ಇದಿಷ್ಟು ಕೆಳದಿ ಅರಸು

ಬಸವಭೂಪಾಲ ರಚಿಸಿರುವ "ಶಿವತತ್ವರತ್ನಾಕರ"ದಲ್ಲಿ ಉಲ್ಲೇಕವಾಗಿರುವ ಬಸವಣ್ಣನವರ ವಿಚಾರಗಳು.

೧೨ನೇ ಶತಮಾನದಲ್ಲಿ ಎಲ್ಲರಂತೆ ಹುಟ್ಟಿ ಜೀವ ವಿರೋಧಿ ಸಂಪ್ರದಾಯಗಳನ್ನು ವರ್ಗ-ವರ್ಣ, ಲಿಂಗಬೇಧ ಮೇಲು-ಕೀಳುಗಳನ್ನು ವಿರೋಧಿಸಿ, ಸರ್ವ ಸಮಾನತೆಯ ಸಮಾಜ ನಿರ್ಮಾಣದ ಕನಸು ಕಂಡು, ತಮ್ಮ ವಿನೂತನ ವಿಚಾರಧಾರೆಗಳಿಂದ ಕನ್ನಡನಾಡು ಮಾತ್ರವಲ್ಲದೆ ಹೊರರಾಜ್ಯಗಳಿಂದಲೂ ಭಕ್ತರನ್ನು ಆಕರ್ಷಿಸಿದ ಮಹಾತ್ಮಾ ಬಸವೇಶ್ವರರನ್ನು ವಿಶ್ವಕೋಶದಂತಹ ಮಹತ್ವದ ಗ್ರಂಥದಲ್ಲಿ ಪವಾಡ ಪುರುಷನನ್ನಾಗಿ ಚಿತ್ರಿಸಿರುವುದು ಎಷ್ಟು ಸರಿ ? ಕಾರಣ ಏನು? ಈ ಕುರಿತು ಚಿಂತಿಸಬೇಕಾಗಿದೆ. ಜಗದೇವ, ಬ್ರಹ್ಮದೇವರು ದಂಡಿಸಲು ಕಂಕಣ ತೊಡುವುದು. ಇಂಥ ಸಮಯದಲ್ಲಿ ತಾನು ಕಲ್ಯಾಣದಲ್ಲಿರುವುದು ಉಚಿತವಲ್ಲವೆಂದು ಬಸವೇಶ್ವರರು ತಮ್ಮ ನಿಜಸ್ಥಾನಕ್ಕೆ ಹೊರಡುವ ಇಚ್ಛೆ ವ್ಯಕ್ತಪಡಿಸುತ್ತಾರೆ ಎಂಬ ಸಂಗತಿ ಡಾ. ಜಿ.ಎಸ್. ದೀಕ್ಷಿತರು ಉಲ್ಲೇಖಿಸಿರುವಂತೆ ಸತ್ಯಕ್ಕೆ ಹತ್ತಿರವಾಗಿದೆ ಎನ್ನಬಹುದು. ಶಿವತತ್ವರತ್ನಾಕರದಲ್ಲಿ ಬಸವಣ್ಣನವರನ್ನು ಹೊರತುಪಡಿಸಿ ಇತರ ಶರಣರ ಉಲ್ಲೇಖವಾಗಲಿ, ವಚನ ಸಾಹಿತ್ಯದ ಉಲ್ಲೇಖವಾಗಲಿ ಇಲ್ಲದಿರುವುದು ಆಶ್ಚರ್ಯಕರವಾಗಿದೆ.

ಡಾ. ಡಿ.ಎನ್. ಯೋಗೀಶ್ವರಪ್ಪ*

ತೋಂಟದ ಸಿದ್ಧಲಿಂಗಯತಿಗಳ ಕೊನೆಯ ದಿನಗಳು

ತೋಂಟದ ಸಿದ್ಧಲಿಂಗ ಯತಿಗಳು ತಮ್ಮ ಕೊನೆಯ ದಿನಗಳನ್ನು ಎಡೆಯೂರಿನಲ್ಲಿ ಕಳೆದು ಅಲ್ಲಿಯೇ ನಿರ್ವಿಕಲ್ಪ ಸಮಾಧಿ ಹೊಂದಿದರೆಂಬ ವಿಷಯ ಎಲ್ಲರಿಗೂ ಗೊತ್ತಿರುವ ಸಂಗತಿಯೇ ಆಗಿದೆ. ಆದರೆ ಅವರು ಆ ದಿನಗಳನ್ನು ಹೇಗೆ ಕಳೆದರು ? ಎಂಬುದು ಕುತೂಹಲಕರವಾದ ವಿಷಯವಾಗಿದೆ. ಅದರ ಸಮೀಕ್ಷೆಯನ್ನು ವಿವಿಧ ಸಾಹಿತ್ಯಕ ಕೃತಿಗಳನ್ನು ಆಧಾರವಾಗಿಟ್ಟುಕೊಂಡು ಮಾಡುವುದು ಈ ಪ್ರಬಂಧದ ಮೂಲ ಉದ್ದೇಶವಾಗಿದೆ. ಸಿದ್ಧಲಿಂಗೇಶ್ವರ ದೇವಾಲಯವೆಂದೇ ಇಂದು ಪ್ರಸಿದ್ಧಿಯಾಗಿರುವ, ಅವರ ನಿರ್ವಿಕಲ್ಪ ಸಮಾಧಿ ಇರುವ ಎಡೆಯೂರು ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕಿನ ಹೋಬಳಿ ಕೇಂದ್ರ. ಇದು ಬೆಂಗಳೂರು–ಮಂಗಳೂರು ಹೆದ್ದಾರಿಯಲ್ಲಿ ಕುಣಿಗಲ್‌ನಿಂದ ಹಾಸನ ಕಡೆಗೆ ಹೋಗುವ ಮಾರ್ಗದಲ್ಲಿ ೧೫ ಕಿ.ಮೀ.ಗಳ ಅಂತರದಲ್ಲಿ ಇದೆ. ಈ ಊರು ಕದಂಬ ನದಿಯ ಎಡತೀರದಲ್ಲಿದೆ. ಇಂತಹ ಹೊಳೆಯ ದಂಡೆಯಲ್ಲಿ ಇರುವ ಈ ಊರು ಎರಡನೇ ಅಲ್ಲಮಪ್ರಭುವೆಂದೇ ಪ್ರಸಿದ್ಧಿಯಾಗಿರುವ ತೋಂಟದ ಸಿದ್ಧಲಿಂಗೇಶ್ವರರ ಮೂಲಕ ಪ್ರಸಿದ್ಧಿಯಾಗಿದೆ. ಇವರ ಹೆಸರಿನ ಜೊತೆಗೆ ಎಡೆಯೂರು ಕೂಡಾ ಸೇರಿಕೊಂಡು ಅವರನ್ನು ಎಡೆಯೂರು ಸಿದ್ಧಲಿಂಗೇಶ್ವರರೆಂದೇ ಭಕ್ತ ಸಮುದಾಯ ಗುರುತಿಸುತ್ತದೆ. ಇಂತಹ ಸಿದ್ಧಲಿಂಗ ಯತಿಗಳನ್ನು ಎಡೆಯೂರಿನಲ್ಲೇ ಇರುವ ಸಮಕಾಲೀನ ಶಾಸನವು ಈ ರೀತಿ ವರ್ಣಿಸಿದೆ.[೧]

"ಸಿದ್ಧಲಿಂಗೇಶ್ವರರು ಒಬ್ಬ ಅಸಾಧಾರಣ ಧಾರ್ಮಿಕ ಪುರುಷರು. ಭೌತಿಕವಾಗಿ ಅವರು ಜಟಾಬಂಧ, ವಿಭೂತಿ, ರುದ್ರಾಕ್ಷಿ, ಕಂಡಲ, ಕಂತೆ, ಕಟಿಸೂತ್ರ, ಪಂಚಮುದ್ರೆ, ದಂಡ, ಕರ್ಪರ ಮಠ ಇವುಗಳನ್ನು ಹೊಂದಿದ್ದರು. ಅಭೌತಿಕವಾಗಿ ಅವರು ಜ್ಞಾನಕ್ರಿಯಾ ಸ್ವರೂಪಿ, ಸರ್ವಾಂಗಲಿಂಗಿ, ಷಟ್ಸ್ಥಲಜ್ಞಾನಿ, ಸರ್ವಾಚಾರ ಸಂಪನ್ನ, ಪಾದೋದಕ ಪ್ರತಿಷ್ಠಾಚಾರ್ಯ, ಅಷ್ಟಾವರಣಲಂಕರಣ, ದ್ವೈತಾದ್ವೈತ ತಿಮಿರ ಮಾರ್ತಾಂಡ".

ಈ ವರ್ಣನೆ ತೋಂಟದ ಸಿದ್ಧಲಿಂಗರ ವ್ಯೋಮ ಸದೃಶ ವ್ಯಕ್ತಿತ್ವವನ್ನು ಅಭಿವ್ಯಕ್ತಗೊಳಿಸುತ್ತದೆ ಎಂದು ಈಗಾಗಲೇ ವಿದ್ವಾಂಸರು ಹೇಳಿರುವುದು ಸಮಂಜಸವೇ ಆಗಿದೆ.[೨] ಇಂತಹ ಮಹೋನ್ನತ ವ್ಯಕ್ತಿತ್ವವನ್ನು ಹೊಂದಿದ್ದ ತೋಂಟದ ಸಿದ್ಧಲಿಂಗರ ಬಗೆಗೆ ಪುರಾಣಗಳು, ಸಾಂಗತ್ಯಕೃತಿಗಳೇ ಅಲ್ಲದೆ ವಿಭಿನ್ನ ಮಾದರಿಯ ಸಾಹಿತ್ಯ ರಚಿಸಲ್ಪಟ್ಟಿವೆ. ಅವುಗಳನ್ನಾಧರಿಸಿ ಈ ಪ್ರಬಂಧವನ್ನು ಹೆಣೆಯಲಾಗಿದೆ.

ಆಕರಗಳು : ತೋಂಟದ ಸಿದ್ಧಲಿಂಗಯತಿಗಳ ಜೀವಿತದ ರೂಪುರೇಷೆಗಳನ್ನು ಪುನರ್ ರಚಿಸಲು ಇರುವ ಆಕರ ಸಾಮಗ್ರಿಗಳೆಂದರೆ,

೧. ಸಂಪೂರ್ಣ ರೂಪದ ರಚನಾ ಸಾಹಿತ್ಯ
೨. ಜೀವನದ ಕೆಲವು ಘಟನೆಗಳು ಮಾತ್ರ ನಿರೂಪಿತ ವಾಗಿರುವ ಸಾಹಿತ್ಯ
೩. ಸ್ತುತಿರೂಪದ ರಚನೆಗಳು
೪. ಸಿದ್ಧಲಿಂಗರೇ ರಚಿಸಿರುವ ವಚನಗಳು
೫. ಶಾಸನಗಳು

ಮೊಟ್ಟಮೊದಲಿಗೆ ಶಾಂತೇಶನ ಸಿದ್ಧೇಶ್ವರ ಪುರಾಣದಲ್ಲಿ (ಸು. ಕ್ರಿ.ಶ. ೧೫೬೧) ದಾಖಲುಗೊಂಡ ತೋಂಟದ ಸಿದ್ಧಲಿಂಗಯತಿಗಳ ಜೀವನ ಚರಿತ್ರೆ ನಂತರ ವೀರಶೈವ ಕಾವ್ಯ ಪುರಾಣಗಳಲ್ಲಿ ಹೊಸ ಹೊಸ ತಿರುವುಗಳನ್ನು ಪಡೆಯುತ್ತಾ ಬೆಳೆದಿರುವುದನ್ನು ಗಮನಿಸಬಹುದು. ಉದಾಹರಣೆಗೆ ಕ್ರಿ.ಶ. ೧೬೦೦ರ ಸುಮಾರಿನಲ್ಲಿ ಬದುಕಿದ್ದ ತೋಂಟದ ಸಿದ್ಧಲಿಂಗರಿಗೆ ಕಿರಿಯ ಸಮಕಾಲೀನನಾಗಿದ್ದ ಸುಪ್ಪಮಲ್ಲನ ತೋಂಟದ ಸಿದ್ದೇಶ್ವರ ಸಾಂಗತ್ಯ ಹಾಗೂ ತೋಂಟದ ಸಿದ್ದೇಶ್ವರನ ತಾರಾವಳಿ, ಕ್ರಿ.ಶ. ೧೬೧೬ರಲ್ಲಿ ಜೀವಿಸಿದ್ದ ವಿರಕ್ತ ತೋಂಟದಾರ್ಯನ ಸಿದ್ಧೇಶ್ವರನ ಪುರಾಣ ಮತ್ತು ತೋಂಟದಾರ್ಯ ರಗಳೆ, ಸು. ಕ್ರಿ.ಶ. ೧೬೦೦ ರಲ್ಲಿ ಜೀವಿಸಿದ್ದ ಚನ್ನವೀರ ಜಂಗಮದೇವನ ಷಟ್‌ಸ್ಥಲ ವಲ್ಲಭ, ಕ್ರಿ.ಶ. ೧೬೩೦ರಲ್ಲಿದ್ದ ಯತಿ ಬಸವಲಿಂಗನ ತೋಂಟದ

* ಪ್ರಾಧ್ಯಾಪಕ, ಶ್ರೀ ಸಿದ್ಧಗಂಗಾ ಮಹಿಳಾ ಕಾಲೇಜು, ತುಮಕೂರು.

ಸಿದ್ಧೇಶ್ವರ ಸಾಂಗತ್ಯ, ಕ್ರಿ.ಶ. ೧೬೪೦ರಲ್ಲಿದ್ದ ಗರಣಿ ಬಸವಲಿಂಗನ ಸಿದ್ಧೇಶ್ವರನ ಮಹಿಮಾ ತಾರಾವಳಿ, ಕ್ರಿ.ಶ. ೧೭೪೦ರಲ್ಲಿ ಜೀವಿಸಿದ್ದ ಹೇರಂಬ ಕವಿಯ ಸಿದ್ಧಲಿಂಗೇಶ್ವರ ಸಾಂಗತ್ಯ ಇತ್ಯಾದಿ.

ಈ ಕೃತಿಗಳಲ್ಲಿ ತೋಂಟದ ಸಿದ್ಧಲಿಂಗರ ಚರಿತ್ರೆಯ ಬೆಳವಣಿಗೆಯಲ್ಲಿ ಉಂಟಾಗಿರುವ ಮಾರ್ಪಾಡುಗಳನ್ನು ಗುರ್ತಿಸುವುದರ ಮೂಲಕ ಅವರ ಚರಿತ್ರೆಯನ್ನು ಪುನರ್ ರಚಿಸಬೇಕಾಗಿದೆ. ಹೀಗೆ ೧೫ನೇ ಶತಮಾನದಿಂದ ಹಿಡಿದು ೧೮ನೇ ಶತಮಾನದವರೆಗಿನ ಸಾಹಿತ್ಯ ಕೃತಿಗಳಲ್ಲಿ ತೋಂಟದ ಸಿದ್ಧಲಿಂಗರ ಬಗೆಗಿನ ವಿವರಗಳು ಹಲವಾರು ಮಾರ್ಪಾಟುಗಳೊಡನೆ ಮೈದಾಳಿವೆ. ಇವುಗಳಲ್ಲಿ ಅವರ ಜೀವಿತದ ಕೊನೆಯ ದಿನಗಳ ವಿವರಗಳು ಮತ್ತು ಎಡೆಯೂರಿನ ಸಂಬಂಧವನ್ನು ಗುರ್ತಿಸುವ ಪ್ರಯತ್ನವನ್ನು ಮಾಡಲಾಗಿದೆ.

ತೋಂಟದ ಸಿದ್ಧಲಿಂಗರ ಬಗ್ಗೆ ಇದುವರೆಗೆ ಸಾಕಷ್ಟು ಅಧ್ಯಯನಗಳು ನಡೆದಿದ್ದರೂ ಅವರ ಕೊನೆಯ ದಿನಗಳ ಬಗ್ಗೆ ಹೆಚ್ಚು ವಿವರಗಳು ದಾಖಲಾಗಿಲ್ಲ. ಸಮಕಾಲೀನ ಕೃತಿಗಳು ಕೂಡಾ ಇದರಿಂದ ಹೊರತಾಗಿಲ್ಲ. ಅವರ ಬಗೆಗೆ ಬಂದಿರುವ ಸಂಪೂರ್ಣ ರೂಪದ ರಚನಾ ಸಾಹಿತ್ಯವೂ ಸಹ ಸಂಕ್ಷಿಪ್ತ ವಿವರಣೆ ನೀಡಿ ಅಂತ್ಯಗೊಂಡಿದೆ. ಅವುಗಳನ್ನೀಗ ಪರಿಶೀಲಿಸೋಣ.

ಎಡೆಯೂರಿನಲ್ಲಿ ದೊರಕಿರುವ ದಾನಿವಾಸದ ಅರಸರು ಹಾಕಿಸಿದ ಶಾಸನದಲ್ಲಿ ತೋಂಟದ ಸಿದ್ಧಲಿಂಗರ ಕೊನೆಯ ದಿನಗಳ ಬಗ್ಗೆ ಈ ರೀತಿ ದಾಖಲಾಗಿದೆ.[೩]

"ದಿವ್ಯ ಶಿವಯೋಗಿ ಎನಿಸಿದ ಸಿದ್ಧಲಿಂಗೇಶ್ವರರಿಗೆ ಸಮ್ಯಕ್ ಜ್ಞಾನೋದಯವಾಗಿ ಸಂಸಾರ ಹೇಯ ಭಾವವನ್ನು ತಾಳಿ ಶರಣು ಹೊಕ್ಕ ಶಿಷ್ಯಜನರಾದ ಸಪ್ಪೆದೇವರು, ಉಪ್ಪಿನಹಳ್ಳಿಯ ಸ್ವಾಮಿ, ಸಿದ್ದೇದೇವರು, ನಂಜೇದೇವರು, ಬೋಳಬಸವರಾಜೇ ದೇವರು, ಷಟ್ಸ್ಥಲಜ್ಞನ ಲಿಂಗಾಂಗ ಸಂಬಂಧ ಸಮರಸವನ್ನು ಬೋಧಿಸಿ ಅವರನ್ನು ಮುಕ್ತರನ್ನಾಗಿ ಮಾಡಿ ಅಲ್ಲಿಗೆ ತಾನು ಈ ಲೋಕದಲ್ಲಿ ಮಾಡಬೇಕಾಗಿದ್ದ ಕಾರ್ಯವೆಲ್ಲಾ ಮುಗಿಯಿತೆಂಬಂತೆ ಯಡೆಯೂರಿನಲ್ಲಿ ತಮಗಾಗಿ ಕಟ್ಟಿಸಿದ ಮಠದಲ್ಲಿ ಶಿವಯೋಗ ಸಮಾಧಿ ಸಂನ್ನರ್ಧರಾದರು."

ಯತಿ ಬಸವಲಿಂಗನು ತನ್ನ ಸಾಂಗತ್ಯ ಕೃತಿಯಲ್ಲಿ[೪]

ಬಂದ ಪ್ರಯೋಜನವಾದುದೆನಗೆ ಯಿಂದಿಗೆಂದೆಲ್ಲ ಭಕ್ತ
ಮಾಹೇಶ
ವೃಂದಕೆ ಪೇಳ್ವೆಚಲಾನಂದ ಯೋಗ ದೊ ।
ಳೊಂದಿರ್ಪುದೆನಗಿಚ್ಛೆಯೆನುತ

ಯೋಗಗೃಹವನುಂಟುಮಾಡಿಸಿ ಅದರೊಳು ಪದ್ಮಾಸನ ಹಾಕಿ ಯೋಗಸ್ಥನಾದನೆಂದು ದಾಖಲಾಗಿದೆ.

ಹೇರಂಬ ಕವಿಯು ತನ್ನ ಕೃತಿಯಲ್ಲಿ ಎಡೆಯೂರಿಗೆ ಬಂದು ಗವಿಮಠದಲ್ಲಿ ಯೋಗಕ್ಕೆ ಕುಳಿತರೆಂದು ಹೇಳಿ ಕಾವ್ಯವನ್ನು ಮುಗಿಸಿದ್ದಾನೆ.[೫]

ಶಾಂತೇಶನ ಸಿದ್ಧೇಶ್ವರ ಪುರಾಣದಲ್ಲಿ ತೋಂಟದ ಸಿದ್ಧಲಿಂಗೇಶ್ವರರು ಕಗ್ಗೆರೆಯಲ್ಲಿ ಮಹಾತಪಸ್ವಿಯಾಗಿ ವಾಸಿಸುತ್ತಿದ್ದರು ಎನ್ನುವವರೆಗೆ ಮಾತ್ರ ಘಟನೆಗಳು ಉಲ್ಲೇಕವಾಗಿರುವುವು. ಅವರ ಅಂತಿಮ ದಿನಗಳು ಹಾಗೂ ಎಡೆಯೂರಿನಲ್ಲಿದ್ದ ಬಗ್ಗೆ ಯಾವುದೇ ಮಾಹಿತಿಯನ್ನು ನೀಡಿಲ್ಲ.[೬]

ವಿರಕ್ತ ತೋಂಟದಾರ್ಯನ ಸಿದ್ಧೇಶ್ವರ ಪುರಾಣವು ತೋಂಟದ ಸಿದ್ಧಲಿಂಗನು ಎಡೆಯೂರಿನ ನಾಗಿಣಿ ನದಿಯ ತೀರದಲ್ಲಿನ ಶಿಲಾಮಠದಲ್ಲಿ ತನ್ನ ಶಿಷ್ಯ ಬೋಳಬಸವಾರ್ಯನಿಗೆ ಷಟ್ಸ್ಥಲಾಚಾರ್ಯ ಪಟ್ಟವನ್ನು ಕಟ್ಟಿ ಷಟ್ಸ್ಥಲಾಂತರ್ಗತವಾದ ಏಕೋತ್ತ ಶತಸ್ಥಲದ ಸಿದ್ಧಾಂತವನ್ನು ಬೋಧಿಸುವವರೆಗೆ ಘಟನೆಗಳು ಉಲ್ಲೇಖವಾಗಿವೆ.[೭] ಆದರೆ ಕವಿಯು ತೋಂಟದ ಸಿದ್ಧಲಿಂಗರು ಹೇಗೆ ಯೋಗಸ್ಥರಾದರೆಂಬುದನ್ನು ತಿಳಿಸದೆ ಹಾಗೆಯೇ ತನ್ನ ಪುರಾಣವನ್ನು ಮುಗಿಸಿದ್ದಾನೆ. ಆದರೆ ಇದಕ್ಕೆ ಅಪವಾದ ಎನ್ನುವಂತೆ ಸುವ್ವೀಮಲ್ಲನ ತೋಂಟದ ಸಿದ್ದೇಶ್ವರ ಸಾಂಗತ್ಯ ಕೃತಿ ಅತಿಹೆಚ್ಚಿನ ವಿವರಗಳನ್ನು ಕಣ್ಣಿಗೆ ಕಟ್ಟುವಂತೆ ದಾಖಲಿಸಿದೆ. ಇದಕ್ಕಾಗಿ ಒಂದು ಸಂಧಿಯೇ ಮೀಸಲಾಗಿದೆ.[೮] ಅದನ್ನು ಪ್ರಮುಖವಾಗಿ ಆಧಾರವಾಗಿಟ್ಟುಕೊಂಡು ಇತರೆ ದಾಖಲೆಗಳೊಂದಿಗೆ ಅಧ್ಯಯನ ಮಾಡುತ್ತಾ ಈ ಪ್ರಬಂಧವನ್ನು ರಚಿಸುವ ಪ್ರಯತ್ನ ಮಾಡಿದ್ದೇನೆ.

ಎಡೆಯೂರಿನ ಜನತೆಯ ಆಹ್ವಾನ : ಸಿದ್ಧಲಿಂಗೇಶ್ವರರು ಕಗ್ಗೆರೆಯಲ್ಲಿದ್ದಾಗ ಅವರ ದರ್ಶನಕ್ಕೆ ಸುತ್ತಮುತ್ತಲ ಪ್ರದೇಶದ ಜನರು ಉತ್ಸಾಹದಿಂದ ಹೋಗಿ ತಮ್ಮ ಭಕ್ತಿಯ ಕಾಣಿಕೆಯನ್ನು ಅರ್ಪಿಸಿದರು. ಹೀಗೆ ಅಪಾರ ಭಕ್ತಸಮೂಹದಲ್ಲಿ ಕಗ್ಗೆರೆಯಲ್ಲಿ ನೆಲೆಸಿದ್ದ ಸಿದ್ಧಲಿಂಗರು ಅಲ್ಲಿಂದ ಎಡೆಯೂರಿಗೆ ಹೊರಡಲು ಸಿದ್ಧರಾದರು. ಈ ಹರ್ಷದ ಸುದ್ದಿಯಿಂದ ಪುಳಕಿತರಾದ ಎಡೆಯೂರಿನ ಭಕ್ತಜನತೆ ಅವರನ್ನು ತಮ್ಮ ಊರಿಗೆ ಕರೆತರಲು ಹೇಗೆ ಸಿದ್ಧತೆ ಮಾಡಿಕೊಂಡಿದ್ದರೆಂಬುದನ್ನು ಈ ರೀತಿ ವರ್ಣಿಸಲಾಗಿದೆ.

ಅಂದಳ ಪಲ್ಲಕ್ಕಿಗಳನು ಶೃಂಗರ ಮಾಡಿ
ಹೊಂದಿಸಿ ವ್ಯಾಸನ ತೋಳುಗಳ
ಸಂದೇಹವಿಲ್ಲದೆ ಸಕಲ ಸಂಭ್ರಮದಿಂದ
ಬಂದರು ಎಡೆಯೂರವರು ॥ ೨೦ ॥
ಒಟ್ಟಾಗಿ ಶಿವಭಕ್ತರೆಲ್ಲಾ ಆ ಕ್ಷಣದೊಳು

ಕಗ್ಗೆರೆಯನು ಹೊಕ್ಕರಾಗ
ವೆಗ್ಗಳದಲಿ ಸಿದ್ಧಲಿಂಗನ ಸ್ತುತಿಸಲು
ಹೆಗ್ಗಾಳೆ ನುಡಿದವರ್ತಿಯಲಿ ॥ ೨೧ ॥[೯]

ತೋಂಟದ ಸಿದ್ಧಲಿಂಗರು ಆ ಭಕ್ತರ ಬಿನ್ನಹವನ್ನಂಗೀಕರಿಸಿ ಕಗ್ಗೆರೆಯಿಂದ ಎಡೆಯೂರಿಗೆ ಪಲ್ಲಕ್ಕಿಯಲ್ಲಿ ಕುಳಿತುಕೊಂಡು ಆಗಮಿಸಿದರು. ಇದನ್ನು ಮತ್ತೊಂದು ಸಮಕಾಲೀನ ಕೃತಿಯು ಈ ರೀತಿ ದಾಖಲಿಸಿದೆ[೧೦]. "ಎಡೆಯೂರ ಭಕ್ತರು ಕಗ್ಗೆರೆಗೆ ಬಂದು ತೋಂಟದ ಸಿದ್ಧಲಿಂಗರ ಕರದಲ್ಲಿ ವಿಭೂತಿಯ ಉಂಡೆಗಳನ್ನಿಟ್ಟು ತಮ್ಮೂರಿಗೆ ದಯಮಾಡಿಸಬೇಕೆಂದು ಬಿನ್ನವಿಸಿಕೊಂಡರೆಂದೂ ಅದಕ್ಕೊಪ್ಪಿ ಅವರು ಆಗಮಿಸಿದರೆಂದೂ ಹೇಳಲಾಗಿದೆ". ಒಟ್ಟಿನಲ್ಲಿ ತೋಂಟದ ಸಿದ್ಧಲಿಂಗರು ಎಡೆಯೂರಿನ ಜನರ ಕೋರಿಕೆಯನ್ನು ಮನ್ನಿಸಿ ಅಲ್ಲಿಗೆ ಹೋದರೆಂದು ಹೇಳಬಹುದು.

ಎಡೆಯೂರಿನ ವರ್ಣನೆ : ಎಡೆಯೂರು ನದಿಗಳಿಂದ ಸುತ್ತುವರಿದಿದ್ದು ಅಲ್ಲಿ ಹೂದೋಟ, ಕೆತ್ತುಗಲ್ಲಿನ ಬಾವಿ, ಹೊಂಬಾಳೆಯ ತನಕ ಹಬ್ಬಿದ ವಿಳೆಯದೆಲೆ ಬಳ್ಳಿಗಳನ್ನುಳ್ಳ ಅಡಕೆಮರ, ಕಿತ್ತಳೆ, ನೇರಳೆ, ಸೀಬೆ, ಮಾವು, ಬೆಲ್ವತ್ತ, ಬೇವು, ಬಾಳೆ, ಹಲಸು, ಆಲದ ಮರಗಳಿಂದ ವಿರಾಜಿಸುತ್ತಿದ್ದು, ಗರುಡ, ಹದ್ದು, ಕಬ್ಬಕ್ಕಿ, ಗಿಡುಗ, ಲಿಗಡ, ಗಿಳಿ, ಗೌಜ ಮೊದಲಾದ ಪಕ್ಷಿಗಳೂ, ಮುರುಗ, ಕೆಂಜಾಜಿ, ಸುರಹೊನ್ನೆ, ಪಾದರಿ, ಇರವಂತಿ, ಜಾಲ, ಮಲ್ಲಿಗೆ, ಮೊಲ್ಲೆ, ಸುರಗಿ, ಸೇವಂತಿಗೆ, ದವನದ ವನಗಳಿಂದ ಕಂಗೊಳಿಸಿತ್ತು ಎಂದು ಅಲ್ಲಿನ ತೋಟ, ಪಕ್ಷಿ, ಮರ, ಹೂಗಳನ್ನು ಕವಿ ಪರಿಚಯಿಸಿದ್ದಾನೆ.[೧೧] ಇಂದೂ ಹೆಚ್ಚುಕಡಿಮೆ ಇವೆಲ್ಲವೂ ಎಡೆಯೂರಿನಲ್ಲಿ ಕಂಡುಬರುತ್ತವೆ. ಅಂದು ಎಡೆಯೂರಿನಲ್ಲಿ ಕೋಟೆ, ಕೊತ್ತಳ, ಆಳ್ವೇರಿ, ಅಗಳು, ದೊಡ್ಡ ಫಿರಂಗಿಗಳಿದ್ದು ಆ ಕೋಟೆಯು ಹುಲಿಮುಖದ ಅಟ್ಟಳೆಗಳಿಂದಲೂ, ತೆನೆಗಳಿಂದಲೂ, ಅಂಬುಗಂಡಿಗಳಿಂದಲೂ, ಚೋರಗಂಡಿಗಳಿಂದಲೂ ಶೋಭಿತವಾಗಿತ್ತು. ಕೋಟೆಯ ಮೇಲೆ ಬಾವುಟಗಳನ್ನು ಏರಿಸುವ ಡೆಂಕಣಿಗಳು ಇದ್ದವು ಎನ್ನಲಾಗಿದೆ.[೧೨] ಆದರೆ ಇಂದು ಎಡೆಯೂರಿನಲ್ಲಿ ಕೋಟೆ ಸಂಪೂರ್ಣವಾಗಿ ನಾಶವಾಗಿದ್ದು ಕೇವಲ ಅದರ ದಕ್ಷಿಣದ ಬಾಗಿಲು ಮಾತ್ರ ಉಳಿದುಕೊಂಡಿದೆ. ಆ ಬಾಗಿಲು ಸುಮಾರು ೧೨ ಅಡಿ ಎತ್ತರವಿದೆ. ಕೋಟೆಯ ಕುರುಹುಗಳು ಊರಿನ ಸುತ್ತ ಅಲ್ಲಲ್ಲಿ ಕಂಡುಬರುತ್ತದೆ. ಒಟ್ಟಾರೆ ಹೇಳುವುದಾದರೆ ಕೃತಿಯಲ್ಲಿ ವಿವರಿಸಿರುವಂತೆ ಎಡೆಯೂರು ಒಂದು ಆಯಕಟ್ಟಿನ ಸ್ಥಳವಾಗಿದ್ದು ಪ್ರಾಮುಖ್ಯತೆ ಪಡೆದಿತ್ತು.

ಪಟ್ಟಣಸೆಟ್ಟಿಯ ಮನೆಯಲ್ಲಿ ವಾಸ್ತವ್ಯ : ಇಂತಹ ಎಡೆಯೂರಿಗೆ ತೋಂಟದ ಸಿದ್ಧಲಿಂಗರು ಆ ಊರನ್ನು ದಕ್ಷಿಣ ದಿಕ್ಕಿನಲ್ಲಿರುವ ಹೆಬ್ಬಾಗಿಲಿನ ಮೂಲಕ ಪ್ರವೇಶಿಸಿದರು. ಅವರನ್ನು ಅಲ್ಲಿನ ದೊರೆ, ಗೌಡ, ಸ್ಥಳದ ಶ್ಯಾನುಭೋಗ, ಹಿರಿಯರು, ಸಮಸ್ತ ಪ್ರಜೆಗಳು ವೈಭವದ ಸ್ವಾಗತ ನೀಡುವ ಮೂಲಕ ಮೆರವಣಿಗೆಯಲ್ಲಿ ಕರೆತಂದರು. ಆ ನಂತರ ಅವರನ್ನು ಎಡೆಯೂರಿನ ಪಟ್ಟಣಸೆಟ್ಟಿಯು ತನ್ನ ಮನೆಗೆ ಭಕ್ತಿ ಸಮರ್ಪಣೆಗಾಗಿ ಕರೆದುಕೊಂಡು ಹೋದನು. ಆತನ ಮನೆಯಲ್ಲಿ ತೋಂಟದ ಸಿದ್ಧಲಿಂಗರ ಎಡ, ಬಲಗಳಲ್ಲಿ ಶಿಷ್ಯರ ಸಮೂಹವಿತ್ತೆಂದು ಸುವ್ವಿಮಲ್ಲನು ತಿಳಿಸಿದರೆ,[೧೩] ಇನ್ನೊಂದು ಕೃತಿಯು ಆ ಶಿಷ್ಯರು ಯಾರು ಎಂಬುದನ್ನು ತಿಳಿಸುತ್ತದೆ. ಅದರ ಪ್ರಕಾರ ತೋಂಟದ ಸಿದ್ಧಲಿಂಗರ ಎಡಭಾಗದಲ್ಲಿ ದೊಡ್ಡಸಿದ್ದೇಶ, ಘಟ್ಟಿ ಸಿದ್ದಯ್ಯ, ಸಿದ್ಧಮಲ್ಲೇಶ, ಕಂಕಣದ್ಯೆಯ್ಯ, ಬಲಭಾಗದಲ್ಲಿ ಸಪ್ಪೇಶ, ಬತ್ತಲೆಯಯ್ಯ, ರಾಚವಟ್ಟೇಶ, ಘನಲಿಂಗಿದೇವ, ಅವರ ಮುಂದೆ ಬೋಳಬಸವೇಶ, ಚಿಟ್ಟಿಗದೇಶಿಕ, ಚಂದ್ರಶೇಖರದೇವ ಇದ್ದರು.[೧೪] ಈ ಪಟ್ಟಣಸೆಟ್ಟಿಯ ಮನೆಯಲ್ಲಿ ಯತಿಗಳು ರಾತ್ರಿಯ ಪೂಜಾಕಾರ್ಯಗಳನ್ನು ಕೈಗೊಂಡು ಅಲ್ಲಿಯೇ ವಿಶ್ರಮಿಸಿದರು.

ಎಡೆಯೂರಿನ ದೊರೆ ಬಸವನಾಯಕನ ಮನೆಗೆ ಆಗಮನ : ಮಾರನೆಯ ಬೆಳಿಗ್ಗೆ ಎಡೆಯೂರುಪುರದ ದೊರೆ/ನಾಯಕ ಬಸವೇಂದ್ರ ಪಟ್ಟಣಸೆಟ್ಟಿಯ ಮನೆಯಲ್ಲಿ ತಂಗಿದ್ದ ತೋಂಟದ ಸಿದ್ಧಲಿಂಗರ ಬಳಿಗೆ ಬಂದು ಅವರನ್ನು ತನ್ನ ಮನೆಗೆ ಬರುವಂತೆ ಆಹ್ವಾನಿಸಿದನು. ರಾಜದಂಪತಿಗಳು ಹೇಗೆ ಸ್ವಾಗತಿಸಿದರೆಂಬುದನ್ನು ಸಾಂಗತ್ಯ ಕೃತಿಯು ದಾಖಲಿಸಿದೆ.[೧೫]

ತಂದು ತಂಬಿಗೆಯಲಗ್ಗಣಿದುಂಬಿ ಗಂಗಮ್ಮ
ಬಂದೆರಗಿದಳು ಭಕ್ತಿಯಲಿ
ನಿಂದಿಹ ಹಿರಿಗಳಿಗೊಂದನೆಯನು ಮಾಡಿ
ಚಂದದಿಂ ಪಾದವ ತೊಳೆದು ॥

ಬಸವೇಂದ್ರ ಮತ್ತು ಆತನ ಸತಿ ಗಂಗಮ್ಮ ತಮ್ಮ ಮನೆಬಾಗಿಲಿಗೆ ಬಂದು ನಿಂತಿದ್ದ ತೋಂಟದ ಯತಿಗಳನ್ನು ಬಹಳ ಸಂತೋಷದಿಂದ ತಂಬಿಗೆಯಲ್ಲಿ ಅಗ್ಗವಣಿಯನ್ನು ತಂದು ಪಾದಗಳನ್ನು ತೊಳೆದು ಬರಮಾಡಿಕೊಂಡರು. ಅರಮನೆಯಲ್ಲಿ ರಾಜದಂಪತಿಗಳ ಸತ್ಕಾರವನ್ನು ಪಡೆದುಕೊಂಡು ಆನಂದದಿಂದ ಪೂಜಾ ಕಾರ್ಯವನ್ನು ನೆರವೇರಿಸಿ ಪ್ರೀತಿಯಿಂದ ಪ್ರಸಾದವನ್ನು ಸ್ವೀಕರಿಸಿದರು. ಅವರಿಗೆ ಎಂತಹ ಪ್ರಸಾದವನ್ನು ತಯಾರಿಸಲಾಗಿತ್ತೆಂದು ಸುವ್ವಿಮಲ್ಲನು ತನ್ನ ಕೃತಿಯಲ್ಲಿ ತಿಳಿಸಿದ್ದಾನೆ. "ರುಚಿಕರವಾದ ಉಪ್ಪಿನಕಾಯಿ,

ತಾಳಿಲು (ಪಲ್ಯ), ಪಚ್ಚಡಿ, ಸಣ್ಣಕ್ಕಿಯ ಅನ್ನ, ಬೇಳೆಯ ಸಾರು, ಆಮ್ರ, ಎಣ್ಣೆಯಲ್ಲಿ ಕರೆದ ಕಜ್ಜಾಯ, ಬೆಣ್ಣೆ ಕಾಸಿದ ಹೊಸ ತುಪ್ಪ, ಹಪ್ಪಳ ಸಂಡಿಗೆ".[೧೬] ಈ ವಿವರಣೆ ಆಗಿನ ಕಾಲದ ಅಡುಗೆಯನ್ನು ಪರಿಚಯಿಸಿದರೆ, ತೋಂಟದ ಯತಿಗಳು ಮತ್ತು ಅವರ ಶಿಷ್ಯರು ಇಂತಹ ಪದಾರ್ಥಗಳನ್ನೆಲ್ಲಾ ಉಪಯೋಗಿಸುತ್ತಿದ್ದರೆಂಬುದು ಗೊತ್ತಾಗುತ್ತದೆ. ನಂತರ ಯತಿಗಳು ಆ ರಾಜದಂಪತಿಗಳ ಹಣೆಗೆ ಭಸ್ಮಧರಿಸಿ ಆಶೀರ್ವಾದ ಮಾಡಿ ಆ ಊರಿನ ಹೊರಭಾಗದಲ್ಲಿ ಹರಿಯುತ್ತಿದ್ದ ಹೊಳೆಯ ಎರಡೂ ದಡಗಳ ಮಧ್ಯದಲ್ಲಿ ಇದ್ದ ವಿರಕ್ತಮಠಕ್ಕೆ ಆಗಮಿಸಿದರು.

ಎಡೆಯೂರಿನ ಪಟ್ಟಣಸೆಟ್ಟಿ, ದೊರೆ ಬಸವೇಂದ್ರ ಆತನ ಸತಿ ಗಂಗಮ್ಮ ಮೊದಲಾದ ವಿವರಗಳು ಸುವ್ವಿಮಲ್ಲನ ಕೃತಿಯನ್ನು ಬಿಟ್ಟರೆ ಸಿದ್ಧಲಿಂಗರ ಬಗ್ಗೆ ಬಂದಿರುವ ಇನ್ನಾವ ಸಾಹಿತ್ಯ ಕೃತಿಗಳಲ್ಲಿಯೂ ದಾಖಲಾಗದಿರುವುದು ಸೋಜಿಗ ವನ್ನುಂಟುಮಾಡುತ್ತದೆ. ಆದರೆ ಈ ಕೃತಿಯ ಕರ್ತೃ ತೋಂಟದ ಸಿದ್ಧಲಿಂಗರ ಕಿರಿಯ ಸಮಕಾಲೀನ ಹಾಗೂ ಜನಪದ ಕವಿ ತಾನು ನೋಡಿದ್ದನ್ನು ಹಾಗೂ ಕೇಳಿದ್ದನ್ನು ನೇರವಾಗಿ ತನ್ನದೇ ಭಾಷೆಯಲ್ಲಿ ಹೇಳುವ ಕವಿ. ಅವನಿಗೆ ಸಿದ್ಧಲಿಂಗರಲ್ಲಿ ಅಪಾರವಾದ ಭಕ್ತಿ. ಅವರ ಪ್ರತಿಯೊಂದು ವಿಚಾರಗಳನ್ನು ಸರಳವಾದ ಭಾಷೆಯಲ್ಲಿ ದಾಖಲಿಸುವ ಉತ್ಸಾಹ. ಆದ್ದರಿಂದಲೇ ಈ ಕವಿ ತೋಂಟದ ಯತಿಗಳ ಅಂತಿಮ ಕಾಲದ ವಿವರಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾನೆ. ಆದರೆ ಇನ್ನಿತರ ಸಮಕಾಲೀನ ಕೃತಿಕಾರರಿಗೆ ಇಂತಹ ವಿಷಯಗಳು ಅಮುಖ್ಯವಾಗಿ ಕಂಡಿದ್ದರಿಂದಲೇ ಅವರು ಹೆಚ್ಚು ವಿವರಿಸುವ ಪ್ರಯತ್ನ ಮಾಡಿಲ್ಲ, ಎಂದು ಹೇಳಬಹುದು.

ಈ ವಿರಕ್ತ ಮಠವು ಹೊಳೆಯ ಎರಡು ದಡದ ಮಧ್ಯದಲ್ಲಿತ್ತೆಂಬುದನ್ನು ಸುವ್ವಿಮಲ್ಲನು ದಾಖಲಿಸಿ ಅಲ್ಲಿ ಕೇವಲ ವಿರಕ್ತ ಮಠವಿದ್ದ ಸಂಗತಿಯನ್ನು ಸೂಕ್ಷ್ಮವಾಗಿ ನೀಡಿದ್ದಾನೆ.

ಹೊಳೆಯಿತ್ತಡಿಯ ವಿರಕ್ತಮಠಕೆ ಬಂದು
ಗಳಿಲನೆ ಸಿದ್ಧಲಿಂಗೇಶ
ಸುತ್ತಳ ಭಕ್ತರು ಅರ್ತಿಯಿಂದಲಿ ವಿ
ರಕ್ತ ಠಕೆ ನಡೆತಂದು[೧೭]

ಯತಿ ಬಸವಲಿಂಗನ ಕೃತಿಯು ಇದೇ ಮಠವನ್ನು ಶಿಲಾ ಮಂಟಪವೆಂದು ಕರೆಯುತ್ತದೆ.

ಕದಂಬ ತರಂಗಿಣಿಯೊತ್ತಿನ ಶಿಲೆಯ ಮಂಟಪಕೆ
ಚಿತ್ತಜಹರ ಸಿದ್ಧಪತಿ ಬಂದು ಕುಳಿತು[೧೮]

ಆದರೆ ವಿರಕ್ತ ತೋಂಟದಾರ್ಯನೂ ಕೂಡಾ ಇದನ್ನು ಶಿಲಾಮಂಟಪವೆಂದು ಕರೆಯುತ್ತಾನೆ.

ತೋಂಟದ ಸಿದ್ಧಲಿಂಗ ಯತಿ
ವರಸೊಂದು ದಿನದೆ ನಾಗಿಣಿಯ ತೀರದೊಳಗಿ
ರ್ಪುರು ಶಿಲಾಮಂಟಪದೊಳಮೆಳ್[೧೯]

ಇವೆಲ್ಲವುಗಳಿಗಿಂತ ಭಿನ್ನವಾಗಿ ಹೇರಂಬ ಕವಿಯ ಕೃತಿಯ ಎಡೆಯೂರಿನಲ್ಲಿ ಚಿತ್ತಾರ ಮಠ[೨೦] ಹಾಗೂ ಗವಿಮಠ[೨೧] ಇದ್ದ ಸಂಗತಿಯನ್ನು ದಾಖಲಿಸಿದೆ.

ಈ ಮೇಲೆ ತಿಳಿಸಿದ ಎಲ್ಲಾ ದಾಖಲೆಗಳಿಂದ ಹೇರಂಬ ಕವಿಯ ಕಾಲದವರೆಗೆ ಅಂದರೆ ಕ್ರಿ.ಶ. ೧೭೪೦ರವರೆಗೆ ಎಡೆಯೂರಿನಲ್ಲಿ ವಿರಕ್ತಮಠ, ಶಿಲಾಮಠ, ಗವಿಮಠ, ಚಿತ್ರಮಠಗಳ ಹೆಸರುಗಳು ದಾಖಲಾಗಿವೆ. ಕ್ಷೇತ್ರಕಾರ್ಯ ದಿಂದ ಇವುಗಳನ್ನು ಗುರ್ತಿಸುವ ಸಂದರ್ಭದಲ್ಲಿ ಈ ನಾಲ್ಕರಲ್ಲಿ ಈಗ ವಿರಕ್ತಮಠ ಕಂಡುಬರುವುದಿಲ್ಲ. ವಿರಕ್ತಮಠವನ್ನು ಕಲ್ಲನ್ನು ಬಳಸಿ ಕಟ್ಟಿದ್ದುದರಿಂದ ಅದನ್ನು ಕಲ್ಲುಮಠ ಅಥವಾ ಶಿಲಾಮಠ ಎಂದು ಕರೆದಿರಬಹುದು. ಹೀಗೆ ಕ್ರಿ.ಶ. ೧೬೦೦ರಲ್ಲಿ ಅಂದರೆ ಸುವ್ವಿಮಲ್ಲನ ಕೃತಿ ರಚನೆಯ ಕಾಲದಲ್ಲಿ ಇದ್ದ ವಿರಕ್ತ ಮಠವೇ ಕ್ರಮೇಣ ಕಾಲಾಂತರದಲ್ಲಿ ಗವಿಮಠ ಮತ್ತು ಚಿತ್ರಮಠ ಗಳಾಗಿರಬಹುದು. ಈಗ ಅಲ್ಲಿರುವ ಗವಿಮಠ ಮತ್ತು ಚಿತ್ರಮಠಗಳನ್ನು ಮಾರ್ಕೋನಹಳ್ಳಿ ಬಳಿ ಅಣೆಕಟ್ಟು ನಿರ್ಮಾಣ ಮಾಡಿದಾಗ ಅದರ ಹಿನ್ನೀರಿನಲ್ಲಿ ಮುಳುಗಡೆಯಾದವು. ಆದ್ದರಿಂದ ಗವಿಮಠವನ್ನು ಕಗ್ಗೆರೆಗೂ ಚಿತ್ರಮಠವನ್ನು ಮಂಡ್ಯ ಜಿಲ್ಲೆ ನಿಡಸಾಲೆಗೂ ಸ್ಥಳಾಂತರಿಸಲಾಗಿದೆ. ಈ ಅಣೆಕಟ್ಟೆಯಲ್ಲಿ ನೀರು ಕಡಿಮೆಯಾದಾಗ ಮಠಗಳ ಅವಶೇಷಗಳನ್ನು ಈಗಲೂ ಕಾಣಬಹುದು.

ವಿರಕ್ತಮಠದಲ್ಲಿ ವಾಸ್ತವ್ಯ : ಎಡೆಯೂರಿನ ದಕ್ಷಿಣ ಭಾಗದಲ್ಲಿದ್ದ ವಿರಕ್ತಮಠದಲ್ಲಿ ವಾಸ್ತವ್ಯ ಹೂಡಿದ್ದ ತೋಂಟದ ಸಿದ್ಧಲಿಂಗ ಯತಿಗಳ ದರ್ಶನಕ್ಕೆ ಸುತ್ತಮುತ್ತಲ ಪ್ರಾಂತ್ಯ ದೊಳಗಿನ ಮಠಾಧೀಶರು, ಹಿರಿಯರೂ ಸಾಗಿಬಂದರು. ಈ ಭಕ್ತಸ್ತೋಮಕ್ಕೆ ಕೊಪ್ಪಲುಗಳ ಮೂಲಕ ದಾಸೋಹ ಏರ್ಪಡಿಸಿದರು. ಆ ಸಂದರ್ಭದಲ್ಲಿ ತೋಂಟದ ಯತಿಗಳ ಮಠದಲ್ಲಿ ಮೂರು ಸಾವಿರ ವಿರಕ್ತರಿದ್ದರೆಂದು ಹೇಳಲಾಗಿದೆ.[೨೨]

ನೆರೆದುದು ಬೋಳಮಸ್ತಕ ಕಟಿದಾರದ
ಹಿರಿಗಳು ಮೂರು ಸಾವಿರವು
ಉರಸೆಜ್ಜೆ ಭಸ್ಮಾಂಗ ಚಿತ್ತ ನಿರ್ವಾಣದ
ಹಿರಿಗಳೊಪ್ಪಿರ್ದರಾ ಮಠದಿ

ತಲೆ ಬೋಳಾಗಿ, ಕೌಪೀನ ಮಾತ್ರ ಧರಿಸಿ ಎದೆಯ ಮೇಲೆ ಕರಡಿಗೆ, ದೇಹದಲ್ಲಿ ಭಸ್ಮಲೇಪ, ಕೈಯಲ್ಲಿ ಚಿತ್ತ ಹಿಡಿದು ನಿರ್ವಾಣರಾಗಿದ್ದ ಹಿರಿಯರಾದ ಮೂರು ಸಾವಿರ

ವಿರಕ್ತರು ಆ ಮಠದಲ್ಲಿ ಸೇರಿದ್ದರು. ಈ ವಿವರಣೆ ಅಂದಿನ ವಿರಕ್ತರ ವೇಷಭೂಷಣವನ್ನು ತಿಳಿಸುತ್ತದೆ.

ಉತ್ತರಾಧಿಕಾರತ್ವದ ಪಟ್ಟ : ಹಲವಾರು ದಿನಗಳ ಕಾಲ ಅಲ್ಲಿಯೇ ನೆಲಸಿದ್ದ ತೋಂಟದ ಯತಿಗಳು ಉತ್ತಾರಾಧಿಕಾರತ್ವದ ಪಟ್ಟವನ್ನು ತಮ್ಮ ಶಿಷ್ಯರಲ್ಲಿ ಒಬ್ಬನಾದ ಬೋಳಬಸವೇಶ್ವರನಿಗೆ ಕಟ್ಟಲು ನಿರ್ಧರಿಸಿದರು. ಈ ವಿಚಾರವನ್ನು ಸುವ್ವಿಮಲ್ಲನ ಕೃತಿಯು ದಾಖಲಿಸದೆ ಇದ್ದರೂ ಬೇರೆ ಸಮಕಾಲೀನ ಗ್ರಂಥಗಳು ದಾಖಲಿಸಿವೆ. ಉದಾಹರಣೆಗೆ,

ಯತಿ ಬಸವಲಿಂಗನು ತನ್ನ ಕೃತಿಯಲ್ಲಿ

ನೆಟ್ಟನೆ ಗುರುವಾಗಿ ಬೋಧಿಸೆಂದಾಚಾರ್ಯ । ಪಟ್ಟವನತಿ ಮುದದಿಂದ

ಕಟ್ಟಿ ತಾಂಬೂಲ ಪ್ರಸಾದವ ಕರುಣದಿ । ಕೊಟ್ಟನನುಭವ ಪೇಳಿಸಲು

ವಿರತರೆಲ್ಲರು ಬೋಳಬಸವನಂಘ್ರಿಗೆ[೨೩]

ಹೇರಂಬ ಕವಿಯೂ ಕೂಡ ಬೋಳಬಸವನಿಗೆ ಚಿತ್ತಾರ ಮಠದಲ್ಲಿ ಪಟ್ಟವನ್ನು ಕಟ್ಟಿದರೆಂದು ತಿಳಿಸುತ್ತಾನೆ.[೨೪] ವಿರಕ್ತ ತೋಂಟದಾರ್ಯರೂ ಕೂಡಾ ಬೋಳಬಸವನಿಗೆ ಷಟ್ಸ್ಥಲಾಚಾರ್ಯ ಪಟ್ಟ ಕಟ್ಟಿದ ವಿವರವನ್ನು ತನ್ನ ಕೃತಿಯಲ್ಲಿ ದಾಖಲಿಸಿದ್ದಾನೆ.[೨೫]

"ಗುರು ತೋಂಟದಾರ್ಯನಾ ಬೋಳಬಸವಾರ್ಯಂಗೆ
ಪರಮ ಕರುಣದೆ ಷಟ್ಸ್ಥಲಾಚಾರ್ಯ ಪಟ್ಟಮಂ
ಭರದಿಂದೆ ಕಟ್ಟಲಾತ್ಯಾನಂದದಿಂದೆ"......

ಆದರೆ ತೋಂಟದ ಯತಿಗಳ ಕಿರಿಯ ಸಮಕಾಲೀನನಾದ ಸುವ್ವಿಮಲ್ಲನು ಇಂತಹ ಮುಖ್ಯ ಸಂಗತಿಯನ್ನು ದಾಖಲಿಸದೆ ಇರುವುದು ಆಶ್ಚರ್ಯವನ್ನುಂಟು ಮಾಡುತ್ತದೆ.

ನೆಲಮಾಳಿಗೆ ನಿರ್ಮಾಣ : ಹೀಗೆ ಎಡೆಯೂರಿನ ದಕ್ಷಿಣ ದಿಕ್ಕಿನ ವಿರಕ್ತ ಮಠದಲ್ಲಿ ಹಲವಾರು ದಿನಗಳ ಕಾಲ ತಂಗಿದ್ದ ತೋಂಟದ ಯತಿಗಳು ನಿತ್ಯವೂ ಜಂಗಮರಿಗೆ ಸಮಾರಾಧನೆ ನಡೆಸಿ ತೃಪ್ತಿಪಡಿಸುತ್ತಿದ್ದರು. ಒಂದು ದಿನ ತಮ್ಮ ಶಿಷ್ಯನಾದ ಹಿರಿಯನಾದ ದೊಡ್ಡ ಸಿದ್ದೇಶನನ್ನು ಏಕಾಂತಕ್ಕೆ ಕರೆಸಿಕೊಂಡು "ಈ ಲೋಕದಲ್ಲಿ ತಾವು ಕೈಗೊಂಡ ಕಾರ್ಯವು ಮುಗಿದಿದೆ, ಶಿವ ನಿರೂಪದಂತೆ ತಾವು ನೆಲಮಾಳಿಗೆಯನ್ನು ಪ್ರವೇಶಿಸುತ್ತೇವೆ, ಅದಕ್ಕೆ ಸಮ್ಮತಿ ನೀಡಿ" ಎಂದಾಗ ಅದಕ್ಕೆ ಶಿವನಿರೂಪಕ್ಕೆ ಎದುರಾಡದೆ ಒಪ್ಪಿಗೆ ನೀಡಿದರು. ಆ ವೇಳೆಗೆ ಅದೇ ಸಮಯಕ್ಕೆ ಅಲ್ಲಿಗೆ ಎಡೆಯೂರು ಪುರದ ಶರಣರನೂ, ಯುದ್ಧ ವೀರನೂ, ಕಾಪಾಲಿಯು ಭಕ್ತನೂ ಆದ ಬಸವನಾಯಕನ ಆಗಮನವಾಯಿತು. ಆತನಿಗೆ ತೋಂಟದ ಯತಿಗಳೇ "ನಮಗಾಗಿ ಅಂದವಾದ ನೆಲಮಾಳಿಗೆಯನ್ನು ಇಂದೇ ತೆಗೆಸು ಹೋಗು" ಎಂದು ಆದೇಶಿಸಿದರು. ಅದರಂತೆ ಬಸವನಾಯಕನು ತನ್ನ ಊರಿನ ಉತ್ತರ ದಿಕ್ಕಿನಲ್ಲಿ ನೆಲಮಾಳಿಗೆಯನ್ನು ತೆಗೆಸಿ ಅದಕ್ಕೆ ಬಲವಾದ ತೊಲೆ ಮತ್ತು ಕಂಭಗಳನ್ನು ಹಾಕಿ ಮೇಲುಗಡೆ ಹಾಸುಗಲನ್ನು ಹೊದಿಸಿ ಆ ಕಲ್ಲುಗಳ ಸಂದುಗಳಿಗೆ ಗಚ್ಚುಗಾರೆಯನ್ನು ಹಾಕಿಸಿ ಸುಂದರವಾದ ಹಲಗೆಯ ಬಾಗಿಲ ಮುಚ್ಚಳವನ್ನು ಅಳವಡಿಸಿ, ಆ ನೆಲಮಾಳಿಗೆಯೊಳಗೆ ಮಜ್ಜನ ಶಾಲೆ, ಬಿಂದಿಗೆ, ಕರಿಯ ರತ್ನಗಂಬಳಿಯ ಗದ್ದುಗೆ, ಕನ್ನೈದಿಲೆ, ಸಂಪಿಗೆಯಂತಹ ಹೂಗಳನ್ನೊಳಗೊಂಡ ಹೂಬುಟ್ಟಿಯನ್ನಿಟ್ಟು ಗಂಧ, ಅಕ್ಷತೆಯನ್ನು ಅಣಿ ಮಾಡಿ ತೂಗಾಡುವ ನಾಲ್ಕು ಠಾಣ ದೀಪಗಳನ್ನು ಅಳವಡಿಸಿ ಸಿದ್ಧಗೊಳಿಸಿದನೆಂದು ಕಾವ್ಯವು ತಿಳಿಸುತ್ತದೆ.[೨೬]

ಈ ನೆಲಮಾಳಿಗೆ ಇರುವ ಸ್ಥಳ ಕೊಡಗಿಹಳ್ಳಿಯ ದೇವರಿಗೆ ಸೇರಿತ್ತು.[೨೭] ಆ ಸ್ಥಳದಲ್ಲಿ ಮಠವಿತ್ತು.[೨೮] ಆ ಮಠದ ಒಂದು ಭಾಗದಲ್ಲಿ ದೊರೆ ಬಸವನಾಯಕನು ನೆಲಮಾಳಿಗೆಯನ್ನು ನಿರ್ಮಿಸಿ ಸಿದ್ಧಲಿಂಗರಿಗೆ ಎಲ್ಲಾ ವ್ಯವಸ್ಥೆಯನ್ನು ಮಾಡಿದನೆಂದು ಹೇಳಬಹುದು.

ಪುಷ್ಪಕ ನಿರ್ಮಾಣ : ನೆಲಮಾಳಿಗೆಯನ್ನು ಸಿದ್ಧಪಡಿಸಿದ ಬಸವನಾಯಕ ತಡಮಾಡದೆ ತೋಂಟದ ಸಿದ್ಧಲಿಂಗರಲ್ಲಿಗೆ ಒಂದು ಭಿನ್ನವಿಸಿಕೊಳ್ಳಲು, ಆಗ ಅವರು ಪುಷ್ಪಕವನ್ನು ಸಿದ್ಧಗೊಳಿಸಿ ಎಂದರು. ಈ ಪುಷ್ಪಕವನ್ನು ಅಂದು ಹೇಗೆ ಸಿದ್ಧಗೊಳಿಸಿದ್ದರೆಂಬುದನ್ನು ಈ ಕೃತಿಯಲ್ಲಿ ಕವಿಯು ತಿಳಿಸುತ್ತಾನೆ.[೨೯] "ಪುಷ್ಪಕಕ್ಕೆ ಎಂಟು ದಿಕ್ಕುಗಳಲ್ಲೂ ಕಬ್ಬಿನಜಲ್ಲೆ, ಗೊನೆಬಾಳೆಯ ಕಂಬ, ಅಡಕೆಯ ಗೊನೆ ಹೂ. ಹೊಂಬಾಳೆ. ಚಿನ್ನದ ಕಳಸ, ಕಿತ್ತಲೆಹಣ್ಣಿನ ಕುಚ್ಚುಗಳನ್ನು ಕಟ್ಟಿ ಶೃಂಗಾರಗೊಳಿಸಿದ್ದರು". ಅಂದವಾದ ಪುಷ್ಪಕವನ್ನು ಸಿದ್ಧಪಡಿಸಿದ ನಂತರ ತೋಂಟದ ಯತಿಗಳು ವಿರಕ್ತ ಮಠದಲ್ಲಿ ತಮ್ಮ ಕೊನೆಯ ಕರ್ತೃ ಪ್ರಸಾದವನ್ನು ಸ್ವೀಕರಿಸಿದರು. ತನ್ನ ಗುರುವಿಗೂ, ಮಠದಲ್ಲಿದ್ ಚರಮೂರ್ತಿಗಳಿಗೂ ಶರಣು ಮಾಡಿದ ಕೂಡಲೇ ಬಂದು ಪುಷ್ಪಕದಲ್ಲಿ ಮೂರ್ತ ಮಾಡಿದರು.

ಮೆರವಣಿಗೆ : ಪುಷ್ಪಕದಲ್ಲಿ ಅಸೀನರಾಗಿದ್ದ ತೋಂಟದ ಯತಿಗಳನ್ನು ವಿರಕ್ತ ಮಠದಿಂದ ನೆಲಮಾಳಿಗೆಯವರೆಗೆ ಅಂದರೆ ಕೊಡಗಿ ಹಳ್ಳಿದೇವರ ಮಠದವರೆಗೆ ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು. ಆ ಮೆರವಣಿಗೆಯಲ್ಲಿ ಶಿವಾಗಮ ಗ್ರಂಥಗಳು, ಶಾಸ್ತ್ರ ಗ್ರಂಥಗಳು, ನೂರೊಂದು ಸ್ಥಳ ಗ್ರಂಥಗಳು, ಪಂಚೀಕರಣ, ಟೀಕಿನಗದ್ಯ, ಷಟ್ಪದಿ ಮತ್ತು ಮಿಶ್ರಾರ್ಪಣ ಗ್ರಂಥದ ವಿವರಗಳನ್ನು ಪಠಿಸುತ್ತಲೂ, ಅರ್ಥೈಸುತ್ತಲೂ ಇದ್ದ ಚರಮೂರ್ತಿಗಳ ಗುಂಪು ಸಾಗಿತ್ತು. ಮಹಾಜನಸ್ತೋಮವು

ಯತಿಗಳಿಗೆ ಜಯಕಾರ ಹಾಕುತ್ತಾ ಪುಷ್ಪಕವನ್ನು ಮೇಲೆತ್ತಿ ಹೊತ್ತುಕೊಂಡು ಸಾಗಿತು. ಅವರು ಮೌನವಾಗಿ ಎಲ್ಲವನ್ನು ಆಲಿಸುತ್ತಾ ಮಂಡಿಸಿದ್ದರು. ಮೆರವಣಿಗೆ ಎಡೆಯೂರಿನ ಒಳಗೆ ಪ್ರವೇಶಿಸಿದ ಮೇಲೆ ತೋಂಟದ ಯತಿಗಳ ಕೊನೆಯ ದರ್ಶನಕ್ಕಾಗಿ ಕಾದಿದ್ದ ಸಮಸ್ತ ಜನತೆ ಕೂಡಿಕೊಂಡಿತು. ಎಡೆಯೂರಿನ ಬೀದಿಯಲ್ಲಿ ಸಾಗಿದ ಮೆರವಣಿಗೆ ನೆಲಮಾಳಿಗೆಯ ಬಳಿ ಬಂದಿತು.

ನೆಲಮಾಳಿಗೆ ಪ್ರವೇಶ : ತೋಂಟದ ಯತಿಗಳನ್ನು ಹೊತ್ತಿದ್ದ ಪುಷ್ಪಕವು ನೆಲಮಾಳಿಗೆಯ ಬಳಿ ಬರುತ್ತಿರಲು ಭಕ್ತರು ಭಕ್ತಿಯಿಂದ ಧೂಪ ಹಾಕಲಾರಂಭಿಸಿದರು. ಆ ಧೂಪದ ಹೊಗೆಯು ಎಲ್ಲೆಲ್ಲೂ ಮುಸುಕಿತು.

ಬಲುಧೂಪದ ಹೊಗೆ ಮುಸುಕೆ
ಗಲ ಗಲ ನುಲಿದವು ಮೇಘದಿ ದುಂದುಭಿ
ಯೊಳಗಿಳಿದವು ಪುಷ್ಪಕವು
ಧೂಪದ ಹೊಗೆಯೊಳು ಪುಷ್ಪಕ ಇಳಿಯಲು
ಭೂಪ ಬಸವನಾಯಕನು
ಕಾಪಾಲಧರ ಸಿದ್ಧಲಿಂಗನ ಇದಿರಲಿ
ತಾ ಪ್ರಿಯ ಅಡ್ಡ ಬೀಳೆ
ಆ ಸಮಯದಿ ಧೂಪದ ಪೊಗೆ ಯೆಡೆಯೂರಿನ
ವಾಸಕ್ಕೆ ಹಗಲುಗತ್ತಲೆಯು
ಸಾಸಿರ ನಾಮದೊಡೆಯ ಸಿದ್ದೇಶ ಕೈ
ಲಾಸದ ಪಥಕಡರಿದನು[೨೦]

ತೋಂಟದ ಯತಿಗಳ ಮೆರವಣಿಗೆ ನೆಲಮಾಳಿಗೆಯ ಕಡೆ ನಡೆಯಲು ಆ ಕಾಲಕ್ಕೆ ಭಕ್ತರು ಹಾಕಿದ ಧೂಪದ ಹೊಗೆಯು ಮುಸುಕಲು, ಆ ಹೊಗೆಯಲ್ಲಿ ಹೊತ್ತುಕೊಂಡಿದ್ದ ಪುಷ್ಪಕವನ್ನು ಕೆಳಗಿಡಲಾಯಿತು. ಆಗ ಎಡೆಯೂರಿನ ದೊರೆ ಬಸವನಾಯಕನು ತೋಂಟದ ಯತಿಗಳಿಗೆ ಸಾಷ್ಟಾಂಗ ನಮಸ್ಕಾರ ಹಾಕಿದನು. ಆಗ ಇಡೀ ಎಡೆಯೂರಿನಲ್ಲಿ ಧೂಪದ ಹೊಗೆಯಿಂದಾಗಿ ಹಗಲುಗತ್ತಲೆ ಕವಿದಂತಾಗಿತ್ತು ಎಂದು ಸುವ್ವಿಮಲ್ಲನು ತಿಳಿಸಿದ್ದಾನೆ. ಆ ಸಮಯದಲ್ಲಿ ಸಾವಿರ ನಾಮದೊಡೆಯ ಸಿದ್ದೇಶನು ಕೈಲಾಸಪಥಕ್ಕಡರಿದನು ಮತ್ತು ಅವನು ಈಶ್ವರನ ಆಸ್ಥಾನದಲ್ಲಿ ಸುಖದಿಂದ ಇದ್ದನು ಎಂದು ಹೇಳುತ್ತಾ ಸುವ್ವಿಮಲ್ಲನು ತನ್ನ ಕಾವ್ಯದ ನಾಲ್ಕನೇ ಸಂಧಿಯನ್ನು ಮುಕ್ತಾಯ ಮಾಡುತ್ತಾನೆ.

ಈ ವಿಚಾರಗಳನ್ನೆಲ್ಲಾ ನೋಡಿದರೆ ತೋಂಟದ ಸಿದ್ಧಲಿಂಗಯತಿಗಳ ಕಿರಿಯ ಸಮಕಾಲೀನನೆಂದೇ ಭಾವಿಸಲಾಗಿರುವ ಸುವ್ವಿಮಲ್ಲನು ಆ ಯತಿಗಳ ನೆಲಮಾಳಿಗೆ ಪ್ರವೇಶದ ಸಂದರ್ಭದಲ್ಲಿ ಇದ್ದು ಅದನ್ನು ವೀಕ್ಷಿಸುವ ಸಮಯದಲ್ಲಿ ಅವನಿಗೆ ಆ ಧೂಪದ ಹೊಗೆಯಲ್ಲಿ ಅಂತಿಮ ಕಾರ್ಯಕ್ರಮಗಳು ಕಾಣಿಸದೆ ಇರುವುದರಿಂದ ಅವುಗಳನ್ನು ಸ್ಪಷ್ಟವಾಗಿ ತಿಳಿಸಲಿಕ್ಕೆ ಸಾಧ್ಯವಾಗಿಲ್ಲದೆ ಇರಬಹುದೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಏಕೆಂದರೆ ಅವನು ತನ್ನ ಕೃತಿಯಲ್ಲಿ ತೋಂಟದ ಸಿದ್ಧಲಿಂಗ ಯತಿಗಳ ಪುಷ್ಪಕವು ನೆಲಮಾಳಿಗೆಯ ವರೆಗೆ ಬಂದುದರ ವಿವರವನ್ನು ಕಣ್ಣಿಗೆ ಕಟ್ಟುವಂತೆ ತಿಳಿಸಿ ನಂತರದ ವಿವರವನ್ನು ಅವನು ತಿಳಿಸದೆ ಇರುವುದು. ಅಥವಾ ಕವಿಯು ತೋಂಟದ ಯತಿಗಳ ಸಮಾಧಿ ಪ್ರವೇಶದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದವರಿಂದ ಮಾಹಿತಿ ಸಂಗ್ರಹಿಸಿರಬಹುದೇ ?

ಅಂತಿಮವಾಗಿ ಯಾರು ತೋಂಟದ ಯತಿಗಳನ್ನು ನೆಲಮಾಳಿಗೆಯೊಂದಕ್ಕೆ ಪ್ರವೇಶಿಡವರು ? ದೊಡ್ಡ ಸಿದ್ದೇಶನೇ? ಬಸವ ನಾಯಕನೇ ? ಅಥವಾ ಸಿದ್ಧಲಿಂಗರೇ ಪುಷ್ಪಕದಿಂದ ಎದ್ದು ನೆಲಮಾಳಿಗೆಗೆ ಪ್ರವೇಶಿಸಿ ಬಾಗಿಲು ಮುಚ್ಚಿಕೊಂಡರೇ? ಎಂಬ ಪ್ರಶ್ನೆಗಳಿಗೆ ಈ ಕಾವ್ಯದಲ್ಲಿ ಉತ್ತರವಿಲ್ಲವಾಗಿದೆ. ಇದು ರಹಸ್ಯವಾಗಿಯೇ ಉಳಿದಿರುವ ಸಂಗತಿಯಾಗಿದೆ ಎನ್ನಬಹುದು.

ಒಟ್ಟಾರೆ ಈ ಪ್ರಬಂಧದಿಂದ ಒಡವಮಾಡುವ ಅಂಶಗಳೆಂದರೆ,

೧. ಕಗ್ಗೆರೆಯಲ್ಲಿದ್ದ ತೋಂಟದ ಸಿದ್ಧಲಿಂಗರು ಎಡೆಯೂರಿಗೆ ಹೊರಡಲು ಅಪೇಕ್ಷಿಸಿದಾಗ ಎಡೆಯೂರಿನ ಭಕ್ತ ಜನತೆ ಅವರನ್ನು ಸಕಲ ಗೌರವಗಳಿಂದ ಕರೆತಂದಿತು.

೨. ಎಡೆಯೂರು ಅಂದು ಆಯಕಟ್ಟಿನ ಸ್ಥಳವಾಗಿದ್ದು ಕೋಟೆ, ಕೊತ್ತಲಗಳಿಂದ ಕೂಡಿದ್ದು ಅದು ಅಮರ ನಾಯಕನೊಬ್ಬನ ಕೇಂದ್ರವಾಗಿತ್ತು. ಬಸವನಾಯಕ ಎಂಬುವನ ಹೆಸರು ವಿಜಯನಗರ ಕಾಲದ ನಾಯಕರ ಪಟ್ಟಿಯಲ್ಲಿ ಸೇರ್ಪಡೆಗೊಂಡಂತಾಯಿತು.

೩. ಎಡೆಯೂರಿಗೆ ಆಗಮಿಸಿದಾಗ ತೋಂಟದ ಸಿದ್ಧಲಿಂಗರು ಮೊದಲು ವಾಸ್ತವ್ಯ ಹೂಡಿದ್ದು ಆ ಊರಿನ ಪಟ್ಟಣ ಸೆಟ್ಟಿಯ ಗೃಹದಲ್ಲಿ.

೪. ಮಾರನೆಯ ದಿನ ಎಡೆಯೂರಿನ ದೊರೆ ಬಸವ ನಾಯಕನ ಆಹ್ವಾನ ಮನ್ನಿಸಿ ಅವರ ಮನೆಯಲ್ಲಿ ಪೂಜಾಕಾರ್ಯ ಕೈಗೊಂಡು ಅವರಿಗೆ ಆಶೀರ್ವಾದ ಮಾಡಿದುದಾಗಿದೆ.

೫. ಎಡೆಯೂರಿನ ಬಳಿ ಹರಿಯುವ ಕದಂಬ ನದಿಯ ತೀರದಲ್ಲಿದ್ದ ವಿರಕ್ತ ಮಠದಲ್ಲಿ ಹಲವು ದಿನಗಳ ಕಾಲ ನೆಲಸಿದ್ದು ಭಕ್ತರಿಗೆ ದರ್ಶನ ನೀಡಿದುದಾಗಿದೆ. ಇದರಿಂದ ಎಡೆಯೂರಿನಲ್ಲಿ ದಕ್ಷಿಣ ದಿಕ್ಕಿನ ತುದಿಯಲ್ಲಿ ಆ ಕಾಲಕ್ಕೆ ವಿರಕ್ತ ಮಠವಿದ್ದ ಸಂಗತಿ ಗೊತ್ತಾಗುತ್ತದೆ.

೬. ತೋಂಟದ ಸಿದ್ಧಲಿಂಗರ ನಂತರ ಅವರ ಸ್ಥಾನಕ್ಕೆ ಬಂದವರು ಬೋಳಬಸವೇಶ್ವರ ಎಂದು ಹೇಳ ಬಹುದು.

೭. ತೋಂಟದ ಯತಿಗಳು ನೆಲಮಾಳಿಗೆ ಪ್ರವೇಶಿಸುವ ಮೊದಲು ತಮ್ಮ ಶಿಷ್ಯರೊಂದಿಗೆ ಚರ್ಚಿಸಿ ಅದಕ್ಕೆ ಸಮ್ಮತಿ ಪಡೆದರೆಂಬ ಅಂಶ ಗೊತ್ತಾಗುತ್ತದೆ. ಆದ್ದರಿಂದ ಸಿದ್ಧಲಿಂಗರೂ ಯಾವುದೇ ವಿಷಯವನ್ನು ತಮ್ಮ ಶಿಷ್ಯರೊಂದಿಗೆ ಚರ್ಚಿಸುತ್ತಿದ್ದರೆಂದು ಹೇಳಬಹುದು.

೮. ನೆಲಮಾಳಿಗೆ ಇರುವ ಜಾಗ ಕೊಡಗಿಹಳ್ಳಿ ದೇವರಿಗೆ ಸೇರಿದ ಭೂಮಿ. ಅದಕ್ಕೆ ತಕ್ಕ ಏರ್ಪಾಟುಗಳನ್ನು ಮಾಡಿದವನು ದೊರೆ ಬಸವನಾಯಕನೆಂದು ಹೇಳಬಹುದು.

೯. ತೋಂಟದ ಸಿದ್ಧಲಿಂಗ ಯತಿಗಳ ಪುಷ್ಪಕದ ಮೆರವಣಿಗೆ ನೆಲಮಾಳಿಗೆಯ ಹತ್ತಿರ ಬರುವವರೆಗೆ ಅಲ್ಲಿನ ದೊರೆ ಬಸವನಾಯಕ ಜೊತೆಯಲ್ಲಿದ್ದು ಅದರ ಉಸ್ತುವಾರಿ ವಹಿಸಿಕೊಂಡಿದ್ದವನು ಅವನೇ ಎಂದು ಹೇಳಬಹುದು.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಎಪಿಗ್ರಾಫಿಯಾ ಕರ್ನಾಟಕ, ಸಂಪುಟ ೧೬ ಕುಣಿಗಲ್ ೪೯ ಎಡೆಯೂರು ಸಾಲು ೯ ರಿಂದ ೧೯.
೨. ಎಂ.ಎಂ. ಕಲಬುರ್ಗಿ., **ಶಾಸನಗಳಲ್ಲಿ ಶಿವಶರಣರು**, ವೀರಶೈವ ಅಧ್ಯಯನ ಸಂಸ್ಥೆ, ಗದಗ, ಪುಟ ೧೫೭, ೧೯೭೮.
೩. ಎ.ಕ. ೧೬, ಕುಣಿಗಲ್ ೪೯, ಎಡೆಯೂರ.
೪. ಯತಿ ಬಸವಲಿಂಗ, **ತೋಂಟದ ಸಿದ್ಧೇಶ್ವರ ಸಾಂಗತ್ಯ**, ಸಂಧಿ ೧೫, ಪದ್ಯ ೬೮, ೬೯.
೫. ಹೇರಂಬ, **ಸಿದ್ಧೇಶ್ವರ ಸಾಂಗತ್ಯ**, ಸಂಧಿ ೨೫, ಪದ್ಯ ೭೭.
೬ **ಶಾಂತೇಶ–ಸಿದ್ಧೇಶ್ವರ ಪುರಾಣ**, (ಸಂ) ಬಿ.ನಂ. ಚಂದ್ರಯ್ಯ, ಕರ್ನಾಟಕ ಸರ್ಕಾರ ಧಾರ್ಮಿಕ ದತ್ತಿ ಇಲಾಖೆ, ಶ್ರೀ ಸಿದ್ಧಲಿಂಗೇರ್ಶವರ ಸ್ವಾಮಿ ಕ್ಷೇತ್ರ, ಎಡೆಯೂರು, ಕ್ರಿ.ಶ. ೨೦೦೫.
೭. ವಿರಕ್ತ ತೋಂಟದಾರ್ಯ, ಸಿದ್ದೇಶ್ವರ **ಪುರಾಣ**, ಸಂ. ೩, ಸಂಪಾದಕ ಬಿ.ವಿ. ಶಿರೂರ, ಕರ್ನಾಟಕ ಸರ್ಕಾರ ಧಾರ್ಮಿಕ ದತ್ತಿ ಇಲಾಖೆ, ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಕ್ಷೇತ್ರ, ಎಡೆಯೂರು, ಸಂ. ೨, ಕ್ರಿ.ಶ. ೨೦೦೫.
೮. ಸುಪ್ಪೀಮಲ್ಲ, **ತೋಂಟದ ಸಿದ್ಧೇಶ್ವರ ಸಾಂಗತ್ಯ**, ಸಂಧಿ ೪, (ಸಂ) ಎಂ.ಎಸ್. ಬಸವರಾಜಯ್ಯ, ಸರ್ಕಾರ ಧಾರ್ಮಿಕ ದತ್ತಿ ಇಲಾಖೆ, ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಕ್ಷೇತ್ರ, ಎಡೆಯೂರು, ಕ್ರಿ.ಶ. ೨೦೫.
೯. ಅದೇ ಸಂಧಿ ೪, ಪದ್ಯ ೨೦, ೨೧.
೧೦. ಯತಿ ಬಸವಲಿಂಗ, ತೋಂಟದ ಸಿದ್ಧೇಶ್ವರ ಸಾಂಗತ್ಯ, (ಸಂ) ಎಸ್. ಶಿವಣ್ಣ, ಸಂಧಿ ೧೪, ಪದ್ಯ ೩, ೪, ೫, ಕರ್ನಾಟಕ ಸರ್ಕಾರ ಧಾರ್ಮಿಕ ದತ್ತಿ ಇಲಾಖೆ, ಸಂ. ೬, ಎಡೆಯೂರು, ಕ್ರಿ.ಶ. ೨೦೦೫.
೧೧. ಸುಪ್ಪೀಮಲ್ಲ, ತೋಂಟದ ಸಿದ್ಧೇಶ್ವರ ಸಾಂಗತ್ಯ, ಸಂಪುಟ ೬, ಸಂಧಿ ೪, ಪದ್ಯ ೨೪ ರಿಂದ ೩೨.
೧೨. ಅದೇ ಸಂಧಿ ೪, ಪದ್ಯ ೩೨ ರಿಂದ ೩೬.
೧೩. ಅದೇ ಸಂಧಿ ೪, ಪದ್ಯ ೫೯.
೧೪. ಯತಿ ಬಸವಲಿಂಗ, ತೋಂಟದ ಸಿದ್ಧೇಶ್ವರ ಸಾಂಗತ್ಯ, ಸಂಪುಟ ೬, ಸಂಧಿ ೧೪, ಪದ್ಯ ೧೮, ೧೯, ೨೦.
೧೫. ಸುಪ್ಪೀಮಲ್ಲ, ತೋಂಟದ ಸಿದ್ಧೇಶ್ವರ ಸಾಂಗತ್ಯ, ಸಂಪುಟ ೬, ಸಂಧಿ ೪, ಪದ್ಯ ೬೮.
೧೬. ಅದೇ ಸಂಧಿ ೪, ಪದ್ಯ ೭೦, ೭೧.
೧೭. ಅದೇ ಸಂಧಿ ೪, ಪದ್ಯ ೭೯ ಮತ್ತು ೮೪.
೧೮. ಯತಿ ಬಸವಲಿಂಗ, ತೋಂಟದ ಸಿದ್ಧೇಶ್ವರ ಸಾಂಗತ್ಯ, ಸಂಪುಟ ೬, ಸಂಧಿ ೧೪, ಪದ್ಯ ೧೭.
೧೯. ವಿರಕ್ತ ತೋಂಟದಾರ್ಯ, **ಸಿದ್ಧೇಶ್ವರ ಪುರಾಣ**, ಸಂಪುಟ ೬, ಸಂಧಿ ೨೫, ಪದ್ಯ ೪.
೨೦. ಹೇರಂಬ, **ಸಿದ್ಧೇಶ್ವರ ಸಾಂಗತ್ಯ**, ಸಂ. ೬, ಸಂಧಿ ೨೫, ಪದ್ಯ ೭೬.
೨೧. ಅದೇ ಪದ್ಯ ೭೭.
೨೨. ಸುಪ್ಪೀಮಲ್ಲ, **ತೋಂಟದ ಸಿದ್ಧೇಶ್ವರ ಸಾಂಗತ್ಯ**, ಸಂಪುಟ ೬, ಸಂಧಿ ೪, ಪದ್ಯ ೫೭.
೨೩. ಯತಿ ಬಸವಲಿಂಗ, ತೋಂಟದ ಸಿದ್ಧೇಶ್ವರ ಸಾಂಗತ್ಯ, ಸಂಪುಟ ೬, ಸಂಧಿ ೧೫, ಪದ್ಯ ೬೪, ೬೫.
೨೪. ಹೇರಂಬ, ತೋಂಟದ ಸಿದ್ಧೇಶ್ವರ ಸಾಂಗತ್ಯ, ಸಂಪುಟ ೬, ಸಂಧಿ ೨೫, ಪದ್ಯ ೭೬.
೨೫. ವಿರಕ್ತ ತೋಂಟದಾರ್ಯ, ಸಿದ್ಧೇಶ್ವರ ಪುರಾಣ, ಸಂಪುಟ ೬, ಸಂಧಿ ೨೫, ಪದ್ಯ ೧೦, ೧೧ ಮತ್ತು ೧.
೨೬. ಸುಪ್ಪೀಮಲ್ಲ ತೋಂಟದ ಸಿದ್ಧೇಶ್ವರ ಸಾಂಗತ್ಯ, ಸಂಪುಟ ೬, ಸಂಧಿ ೪, ಪದ್ಯ ೯೬, ೯೭, ೯೮, ೯೯.
೨೭. ಎ.ಕ. ೧೬, ಕುಣಿಗಲ್ ೪೯, ಎಡೆಯೂರು, ಸಾಲು ೧.
೨೮. ಅದೇ, ಸಾಲು ೨೫, ೨೬.
೨೯. ಸುಪ್ಪೀಮಲ್ಲ, ತೋಂಟದ ಸಿದ್ಧೇಶ್ವರ ಸಾಂಗತ್ಯ, ಸಂಪುಟ ೬, ಸಂಧಿ ೪, ಪದ್ಯ ೧೦೦, ೧೦೧.
೩೦. ಅದೇ ಪದ್ಯ ೧೧೪, ೧೧೫ ಮತ್ತು ೧೧೬.

ಕೆ.ಎಂ. ಗರಗ*

ಶ್ರೀ ಬೂದೀಶ್ವರ ಶಿವಯೋಗಿಗಳು

ಪ್ರಾಸ್ತಾವಿಕೆ : ಜಿಲ್ಲಾ ಕೇಂದ್ರ ಗದಗನಿಂದ ಪಶ್ಚಿಮಕ್ಕೆ ೧೫ ಕಿ.ಮೀ. ಅಂತರವಿರುವ ಹೊಸಳ್ಳಿಯ ಬೂದೀಶ್ವರ ಶಿವಯೋಗಿಗಳ ಮಠವು ಅದ್ವಿತೀಯ ಗಣ್ಯಸ್ಥಾನವನ್ನು ಹೊಂದಿದೆ. ಕಾಲಕಾಲಕ್ಕೆ ಅನೇಕ ಮಹಾಪುರುಷರಿಗೆ ಜನ್ಮ ನೀಡಿದ ಪುಣ್ಯಭೂಮಿ ನಮ್ಮೀ ಭಾರತ, ನಾಡು-ನುಡಿ, ಮೇಲು-ಕೀಳು ಬಡವ-ಬಲ್ಲಿದ ಇತ್ಯಾದಿಗಳ ಸೀಮೆ ದಾಟಿ ಮಾನವ ಜನಾಂಗದ ಕಲ್ಯಾಣಕ್ಕಾಗಿ ಪವಿತ್ರ ಬದುಕು: ಬದುಕಿದವರನೇಕ. ಅವರ ಬೋಧನೆ-ಸಾಧನೆ, ಸಿದ್ಧಿ, ತತ್ವ, ಅನುಭಾವಾದಿಗಳು ಅಂದು ಇಂದು ಎಂದೆಂದಿಗೂ ಉಪಯುಕ್ತ, ಅನುಕರಣೀಯ ಜೀವನದ ಮೌಲ್ಯಗಳನ್ನು ಬೆಳೆಸಲು ಸಹಕಾರಿ ಮತ್ತು ಉಪಕಾರಿ.

ಪ್ರಸ್ತಾವನೆ : ಬಸವನ ಭಕ್ತಿ, ಪ್ರಭುವಿನ ವೈರಾಗ್ಯ, ಚೆನ್ನಬಸವಣ್ಣನ ಜ್ಞಾನ ಶರಣರ ಕಾಯಕ ನಿಷ್ಠೆ, ದಾಸೋಹಂಭಾವಗಳು, ಮುಪ್ಪರಿಗೊಂಡು ೭೭೫ (!) ವರ್ಷಗಳ ದೀರ್ಘ ಅವಧಿ ಬದುಕಿದುದು ಒಂದು ಅಭೂತಪೂರ್ವ ಘಟನೆಯಾಗಿದೆ. ಇದು ನೈಜ ಘಟನೆಯಿದ್ದರೂ ಇಂದಿನ ತಾರ್ಕಿಕ, ವೈಜ್ಞಾನಿಕ ಯುಗದಲ್ಲಿ ಪ್ರಜ್ಞಾವಂತರಿಗೆ ಅತ್ಯಂತ ಕುತೂಹಲಕಾರಿಯಾಗಿದೆ. ಎಂಟು ಶತಮಾನಗಳ ಬದುಕು ಶಂಕಾಸ್ಪದವೆನಿಸಿದೆ. ಆದರೆ ಹಠಯೋಗದಿಂದ ಶಿವಯೋಗವನ್ನು ಯಶಸ್ವಿಯಾಗಿ ಸಾಧಿಸುವುದರಿಂದ ಇಚ್ಛಾಮರಣಿಗಳಾಗುವುದು ಸಾಧ್ಯವೆಂಬ ಭರವಸೆ ನಮ್ಮದು ನಮ್ಮವರದು. ಇಂದು ಅತ್ಯಂತ ಮುಂದುವರೆದ ರಾಷ್ಟ್ರವೆನಿಸಿದ ಅಮೇರಿಕೆಯ ಹಾವರ್ಡ ವಿಶ್ವವಿದ್ಯಾಲಯದ ಡಾ॥ ವ್ಯಾಲೇಸ್ ಹಾಗೂ ಡಾ॥ ಬೇನ್‌ಸನ್ ಮೊದಲಾದ ವಿಜ್ಞಾನಿಗಳು ಅನ್ವೇಷಣೆಗೈದು ಒಂಡಬಟ್ಟಿದ್ದಾರೆಂಬುದನ್ನು ಇಲ್ಲಿ ಸ್ಮರಿಸಬಹುದು.

೧೨ನೆಯ ಶತಕಾಂತ್ಯದ ಹರಿಹರ-ರಾಘವಾಂಕ-ಪದ್ಮರಸ ಮೊದಲಾದ ಕವಿಪುಂಗವರನ್ನು, ೧೫ನೆಯ ಶತಮಾನದ ಲಕ್ಕಣ್ಣ-ದಂಡೇಶ, ಜಕ್ಕಣಾಚಾರ್ಯರನ್ನು, ನೂರೊಂದು ಗುರು ವಿರಕ್ತರನ್ನು ಸಂದರ್ಶಿಸಿದ. ವಿಭೂತಿ ಪುರುಷ ಶ್ರೀ ಬೂದೀಶ, ೧೦ನೇ ಶತಮಾನದ ನವಲಗುಂದದ ಶ್ರೀ ನಾಗಲಿಂಗಯತಿ, ಗರಗದ ಶ್ರೀ ಮಡಿವಾಳ ಚನ್ನಬಸವಸ್ವಾಮಿ ಹೀಗೆ ಅನೇಕ ಪ್ರಾತಃಸ್ಮರಣೀಯರನ್ನು ಸಂದರ್ಶಿಸಿ ಅನುಭಾವದೆಡೆಯು ವಿನಿಮಯವಾದ ದಾಖಲೆಗಳಂಟು, ಉಳವಿ, ಶ್ರೀಶೈಲ, ಸಿದ್ಧಗಂಗಾ, ಎಡೆಯೂರು, ಎಲ್ಲಮ್ಮನಗುಡ್ಡ, ಕಾಶಿ, ಹಿಮವತ್ತಕೇದಾರ, ಮೊದಲಾದ ಅನೇಕ ಪವಿತ್ರ ಕ್ಷೇತ್ರಗಳಿಗೆ ಪಾದಯಾತ್ರೆಯಿಂದ ಪಯಣಗೈದು, ತಂಗಿ, ಶಾಂತಿಯ ನೆಲೆಯನ್ನು ಸಿದ್ಧಿಯನ್ನು ಪಡೆದವರಾಗಿದ್ದಾರೆ. ಬೆಂಗಳೂರು, ಧಾರವಾಡ, ಪುಲಿಗೆರೆ, ಗದ್ವಾಲ, ಪಿರಿಪಲ್ಲಿ, ಕೆಳದಿ, ಹುಬ್ಬಳ್ಳಿ, ಹೊಂಬಳ, ಬಳಗಾನೂರ, ರೋಣ ಹೀಗೆ ಎಣಿಕೆಗೆ ನಿಲುಕದಷ್ಟು ನಗರ-ಗ್ರಾಮಗಳಿಗೆ ಭೇಟಿಯಿತ್ತು ಅಮಿತ ಭಕ್ತವೃಂದ ಪಡೆದಿದ್ದಾರೆ.

ಈ ಅವಧಿಯಲ್ಲಿ ವಿವಿಧ ರೂಪಗಳನ್ನು ಧರಿಸುತ್ತಾ ಸಹಜವಾಗಿ ಅಘಟಿತ ಘಟನೆಗಳನ್ನು ಲೀಲಾಜಾಲವಾಗಿ ಗೈಯುತ್ತಾ ಪರಮವೈರಾಗಿಗಳಾಗಿ ಲೋಕಾನುಭವಿಗಳಾಗಿ ಬೆಳಗಿದರು. ನಮ್ಮೀ ನಾಯಕರು ದೃಷ್ಟಾದೃಷ್ಟಿ ಪ್ರಮಾಣಗಳಿಂದ ಶ್ರದ್ಧಾವಂತ ಭಕ್ತರ ಹೃದಯಕ್ಕೆ ಶ್ರೀಗಳ ಅಗಾಧ ಮಹಿಮೆಯ ಅನುಭವವುಂಟು. ಅಂತಲೇ ಅನೇಕ ಕಡೆಗಳಲ್ಲಿ ಬೂದಿ ಸ್ವಾಮಿಗಳ ಮಠ, ಪ್ರಭುಗದ್ದುಗೆ, ತೈಲಬಸವ, ಬೂದಿಯ ಬಸವ, ಹೊಸಳ್ಳಿ ಬೂದೀಶ ಮುಂತಾದ ಹೆಸರಿನ ಶ್ರೀಗಳ ಮಠಗಳು ಗದ್ದುಗೆಗಳು ಇಂದಿಗೂ ಪೂಜೆಗೊಳ್ಳುತ್ತಿವೆ. ತೀರ್ಥಕ್ಷೇತ್ರಗಳೆನಿಸಿ ಆಸ್ತಿಕರ ಯಾತ್ರಾಸ್ಥಳಗಳಾಗಿವೆ.

ಚಾರಿತ್ರಿಕ ಹಿನ್ನೆಲೆ : ಅನುಪಮರಾದ ಭಕ್ತಿಭಂಡಾರಿ ಬಸವಣ್ಣನವರು ಮೃತ್ಯುಲೋಕದ ಮಾನವರ ಮನದ ಮಾಲಿನ್ಯವನ್ನು ಕಳೆಲೋಸುಗ ಅವತರಿಸಿದರು. ತಮ್ಮ ಅಸಾಧಾರಣವಾದ ಶಿವಭಕ್ತಿ ಪ್ರಭಾವದಿಂದ ಕಲ್ಯಾಣದಲ್ಲಿ "ಶಿವಾನುಭವ ಮಂಟಪ"ವನ್ನು ರಚಿಸಿದರು. ಮಹಾಯೋಗಿ ಸಿದ್ಧರು ವೈರಾಗ್ಯನಿಧಿಗಳು ಆದ ಅಲ್ಲಮಪ್ರಭುಗಳು ಆ ಅನುಭವಮಂಟಪದ ಪೀಠಾಧಿಪತಿಗಳಾದರು. ಸುಜ್ಞಾನ ಚಕ್ರವರ್ತಿ ಚನ್ನಬಸವಣ್ಣನವರು ಮಾರ್ಗದರ್ಶಕರಾದರು. ಅನಂತರ ಶಿವಶರಣರ, ಶಿವಶರಣೆಯರ ಸಲಹೆ ಸಹಾಯ, ಸಹಾನುಭೂತಿಗಳಿಂದ ಅನುಭವಮಂಟಪದ ಪ್ರಭಾವವ್ರ

* ಇತಿಹಾಸ ಉಪನ್ಯಾಸಕರು, ಗ.ಸ.ಜ.ಗಿ.ಪ.ಪೂ. ಮಹಾವಿದ್ಯಾಲಯ, ಹುಲಕೋಟಿ, ಗದಗ ಜಿಲ್ಲೆ.

ಪ್ರಾಜ್ವಲ್ಯವಾಗಿ ಬೆಳೆಯಿತು. ಅನುಭವಮಂಟಪದಲ್ಲಿ ತತ್ವಜ್ಞಾನಿಗಳು, ವಿರಾಗಿಗಳು, ತ್ಯಾಗಿಗಳು, ಆತ್ಮಜ್ಞಾನಿಗಳು, ಲಿಂಗಪೂಜಾನಿಷ್ಠರು, ಭಕ್ತರು, ಭಾವುಕರು, ಅರಸರು, ಲೆಂಕರು, ಸಿದ್ಧರು, ಸಾಧಕರು, ಧ್ಯಾನ ಧಾರಣ ಯಮ ನಿಯಮ ಸಮಾಧಿ ಸಂಪನ್ನರುಗಳೆಲ್ಲರೂ ಬಂದು ಸಮ್ಮಿಳಿತರಾದರು. ಅವರಲ್ಲಿ ಹಠಯೋಗಿಗಳು, ಶಿವಯೋಗಿಗಳು, ಆದ ಬೂದೀಸ್ವಾಮಿಗಳೂ ಒಬ್ಬರು. ಅಲ್ಲಮಪ್ರಭುದೇವರ ಪರಮಶಿಷ್ಯರಾಗಿ ಹಠಯೋಗ ಶಿವಯೋಗಗಳನ್ನು ಸಾಧಿಸಿದರು.

ಸ್ಥೂಲ ಶರೀರದೊಳಗಿನ ಲೀನತೆಯನ್ನು ಸರ್ವವ್ಯಾಧಿಗಳನ್ನು ಹೊರದೂಡಿ ಬಹುಕಾಲ ಆರೋಗ್ಯದಿಂದಿರ ಬೇಕಾದರೆ ಯೋಗಾಭ್ಯಾಸವು ಮಹತ್ವದ ಸಾಧನೆಯಾಗಿದೆ. ಯೋಗ ಸಾಧನೆಯಿಂದ ಮನಸ್ಸಿನ ಚಂಚಲಸ್ವಭಾವಗಳು ಅಡಗಿ ಸಮಸ್ತ ಸಿದ್ಧಿಗಳು ಪ್ರಾಪ್ತವಾಗುತ್ತವೆ. ಶಿವಯೋಗವೆಂದರೆ ಜೀವಭಾವವು ಶಿವಭಾವದಲ್ಲಿ ಪರಿವರ್ತನೆಗೊಂಡು ಜೀವ ಪ್ರಪಂಚವೆಲ್ಲ ಶಿವ ಪ್ರಪಂಚವಾಗಿ ಮಾರ್ಪಾಡುವುದೇ ಶಿವಯೋಗದ ಗುರಿಯಾಗಿದೆ. ವೀರಶೈವ ತತ್ವಜ್ಞಾನದಲ್ಲಿ ಷಟ್‌ಸ್ಥಳ ಸಿದ್ಧಾಂತವು ಅತೀ ಮಹತ್ವವಾದುದು. ಅದರಲ್ಲಿ ಅಡಿಗಡಿಗೂ ಯೋಗದ ತತ್ವಗಳು ಅಡಕವಾಗಿವೆ. ವೀರಶೈವ ಗುರುಗಳು ಯೋಗವಿದ್ಯೆಯಲ್ಲಿ ಒಳ್ಳೆ ನಿಪುಣರಾಗಿದ್ದರು. ಯೋಗದ ಗುಟ್ಟನ್ನು ಕಂಡುಹಿಡಿದು ಅದು ಸರ್ವರಿಗೂ ಸಾಧಿಸಲು ಸಾಧ್ಯವಾಗು ವಂತೆ ಯೋಗ ಶಿವಯೋಗಗಳೆರಡನ್ನೂ ಸಮನ್ವಯ ಗೊಳಿಸಿದರು. ಯೋಗಾಭ್ಯಾಸವಿರಹಿತ ಶಿವಯೋಗ ಸಾಧನೆಯು ಕಡಿವಾಣವಿಲ್ಲದ ತುಂಟ ಕುದುರೆಯ ಸವಾರಿ ಮಾಡಿದಂತೆ. ಯೋಗಾಭ್ಯಾಸಯುಕ್ತವಾದ ಶಿವಯೋಗಿಯ ಸಾಧನೆಯು ಪಳಗಿದ ಕುದುರೆಯನ್ನೇರಿ ಸವಾರಿ ಮಾಡಿದಂತೆ.

ಹಠಯೋಗ ಶಿವಯೋಗಸಿದ್ಧರಲ್ಲಿ ಬೂದೀಸ್ವಾಮಿಗಳು ಪ್ರಖ್ಯಾತರಾಗಿದ್ದಾರೆ. ಕಲ್ಯಾಣದ ಮಹಾವೈಭವದ ಕಾಲದಲ್ಲಿ ಅನುಭವ ಮಂಟಪದಲ್ಲಿ ಬೂದೀಸ್ವಾಮಿಗಳು ಪ್ರಭುದೇವರ ಅನುಗ್ರಹಕ್ಕೆ ಪಾತ್ರರಾಗಿ ಬಸವಣ್ಣನವರಲ್ಲಿ ಚೆನ್ನಬಸವಣ್ಣನವರಲ್ಲಿ ಅಪಾರ ಭಕ್ತಿವುಳ್ಳವರಾಗಿ ಶಿವಶರಣರಲ್ಲಿ ಅಪಾರ ಭಕ್ತಿಯುಳ್ಳವರಾಗಿ ಕಿಂಕರಭಾವದಿಂದ ವರ್ತಿಸುತ್ತಿದ್ದಾರೆ.

ಒಮ್ಮೆ ಚೆನ್ನಬಸವೇಶ್ವರನು ತಾ
ನಮ್ಮಯಿ ಬೂದೀಶಯೋಗಿಗೆ
ಬಮ್ಮನದಿ ಭಸ್ಮದ ಹಸಿಬಿಯನ್ನಿಯೇ ಕೃಪೇದೊರಿ
ನೆಮ್ಮ ಬೂದಿಯ ಪಡೆದ ಯೋಗಿಯ
ಸೊಮ್ಮುಸಿದ್ಧಿಯರೂಪ ತಾಳಿರೆ
ಸುಮ್ಮನದಿ ಜನರಾತನ ಮಹಿಮೆಯನು ಬೆಳಗಿದರು.

ಶರಣ ಕರುಣಿಸಿ ಕೊಟ್ಟ ಬೂದಿಯ
ವರಮಹಿಮೆಯಿಂದಾ ಮಹಾತ್ಮನು
ಧರೆಯೊಳಾಂತನು ಬೂದೀಯೋಗಿಯುಯೆಂಬ ನಾಮವನು

ಚೆನ್ನಬಸವಣ್ಣನವರು ಕರುಣಿಸಿಕೊಟ್ಟವರ ವಿಭೂತಿಯನ್ನು ಹೋದ ಹೋದಡೆಗಳಲ್ಲಿ ಅಭಿಮಂತ್ರಿಸಿಕೊಡಲು ರೋಗರುಜಿನಗಳು, ಪಿಶಾಚಿ ಬಾಧೆಗಳು, ದುರಿತ–ಕಂಟಕಗಳು ನಿವಾರಣೆಯಾಗಿ ಸರ್ವ ಸರ್ವರ ಅಭೀಷ್ಟಗಳು ಪ್ರಾಪ್ತವಾಗುತ್ತಿದ್ದವು. ಆದರಿಂದ ಎಲ್ಲರೂ ಬೂದೀಯೋಗಿಯೆಂದು ಕರೆದ ನಾಮವೇ ಪ್ರಖ್ಯಾತವಾಗಿದೆ.

"ಕಾಲೋ ವಿಚಿತ್ರಾಗತಿಃ" ಎಂಬಂತೆ ಅನಿರೀಕ್ಷಿತವಾಗಿ ಅನಿವಾರ್ಯವಾಗಿ ಕಲ್ಯಾಣದ ಕ್ರಾಂತಿಯಾಯಿತು. ಬಸವಣ್ಣನವರು ಅಸಹನೀಯವಾದ ದುಃಖದಿಂದ ಆವೃತರಾದರು. ಚೆನ್ನಬಸವಣ್ಣನ ಕೈವಿಡಿದು.

"ನಾನು ಬಂದ ಕಾರ್ಯಕ್ಕೆ ನೀನು ಬಂದೆ
ನಾನು ನೀನು ಬಂದ ಕಾರ್ಯಕ್ಕೆ ಪ್ರಭುದೇವರು ಬಂದರು
ಕಲ್ಯಾಣವೆಂ ಪ್ರಣತಿಯಾಯಿತು
ನಾನೇ ಬತ್ತಿಯಾದೆ ನೀವೇ ತೈಲವಾದಿರಿ
ಪ್ರಭುದೇವರ ಜ್ಯೋತಿಯಾದರು."

ಆದರೆ ಒಂದು ಕಾಲಕ್ಕೆ ಕಲ್ಯಾಣವೆಂಬ ಪ್ರಣತಿ ಒಡೆಯಿತು. ಎಣ್ಣೆ ಒರೆಯಿತ್ತು. ಬತ್ತಿ ಕಂದಿತ್ತು. ಜ್ಯೋತಿ ನಂದಿತ್ತು. ಎಂದು ಸರ್ವಸ್ವವನ್ನು ಸಮಸ್ತ ಶರಣರನ್ನು ಅವರಿಗೊಪ್ಪಿಸಿ ಕೂಡಲಸಂಗಮದತ್ತ ಸಾಗಿದರು.


ಚೆನ್ನಬಸವಣ್ಣನವರು ಎಲ್ಲ ಶರಣರಿಗೆ ಕೈಮುಗಿದು ತಮತಮಗೆ ಉಚಿತವಾದ ಸುರಕ್ಷಿತವೆನಿಸುವ ಸ್ಥಳಗಳಿಗೆ ತೆರಳಬೇಕೆಂದು ಬಿನ್ನವಿಸಿಕೊಳ್ಳುತ್ತಾರೆ ಚೆನ್ನಬಸವಣ್ಣನವರು ಇನ್ನುಳಿದ ಶರಣರೊಡನೆ ಉಳವಿಗೆ ಆಗಮಿಸುತ್ತಾರೆ. ಗಣಪರ್ವವೆನ್ನೆಸುಗುತ್ತಾ ಸಕಲ ಶರಣರು ಸುಖ ಸಂತೋಷದಿಂದಿರುತ್ತಿರಲು

"ಬಳಿಕ ಶ್ರೀ ಚೆನ್ನೇಶ ಬೂದಿಗೆ
ತೊಳೆಪ ಮುಖಕಾಂತಿಯಲಿ ಪೇಳಿದನು
ಇಳೆಯೊಳೆಲ್ಲೆಡೆ ಸಂಚರಿಸಿ ಧರ್ಮವನು ಸಾರಲ್ಕೆ ॥"
ಬಸವ ತಂದೆಯ ತತ್ವಗಳ ನೀ
ವೊಸೆದು ಎಲ್ಲಡೆಗಳಲ್ಲಿ ಹಬ್ಬಿಸಿ
ಪೊಸಕಳೆಯ ಜನರಲ್ಲಿ ತುಂಬುತೆ ಸಾಗುವುದು ಮುಂದೆ ॥
ವಸುಧೆಯೊಳೇಳ್ನೂರು ಎಪ್ಪ
ತ್ತೆಸೆವ ಸಂವತ್ಸರವ ದಾಂಟಿಸಿ
ವಿಸುಪಲಿಂಗದೋಳೈಕ್ಯವಾಗುವುದೆಂದು ಬೆಸಸಿದನು ॥

ನೀವು ಏಳುನೂರೆಪ್ಪತ್ತು ವರುಷ ಪರಿಯಂತ ಅಲ್ಲಲ್ಲಿ ಸಂಚರಿಸಿ ತಪಸ್ಸನ್ನಾಚರಿಸಿ ಬಸವ ವಚನಗಳನ್ನು ತತ್ವಗಳನ್ನು ಭಕ್ತಿಯನ್ನು



ಶ್ರೀ ಶಿವಯೋಗಿ ಬೂದೀಶ್ವರ ಮಹಾಸ್ವಾಮಿಗಳು – ಹೊಸಹಳ್ಳಿ



ಶ್ರೀಮಠದ ಹಿಂದಿನ ಪೀಠಾಧಿಪತಿಗಳು
ಶ್ರೀ ಮ.ನಿ.ಪ್ರ. ಬೂದಿಮಹಾಸ್ವಾಮಿಗಳು



ಶ್ರೀ ಬೂದೀಶ್ವರ ಶಿವಯೋಗಿಗಳ ಮೂಲಸಂಸ್ಥಾನಮಠ – ಹೊಸಳ್ಳಿ

ದಾಸೋಹಂಭಾವವನ್ನು ಪ್ರಚಾರ ಮಾಡಿ ನಂತರ ಐಕ್ಯರಾಗಬೇಕೆಂದು ಹಾರೈಸುತ್ತಾರೆ.

ಶ್ರೀ ಬೂದೀಸ್ವಾಮಿಗಳು ದೀರ್ಘ ಕಾಲಾವಧಿಯವರೆಗೆ ಬಾಳಿರುವುದರಿಂದ ದೇಶದಾದ್ಯಂತ ಸಂಚರಿಸಿ ಅನಂತಲೀಲೆಗಳನ್ನೆಸಗಿದ್ದಾರೆ. ಆಯಾಯ ಕಾಲದ ತಪಸ್ವಿಗಳನ್ನು ಯೋಗಿಗಳನ್ನು ತತ್ವಜ್ಞಾನಿಗಳನ್ನು ಕವಿಗಳನ್ನು ಶರಣ ಶರಣೆಯರನ್ನು ಅನೇಕ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸಿದ್ದಾರೆ. ಅವರು ಸಂಚರಿಸಿದ ಸ್ಥಳಗಳೂ ಮತ್ತು ಮಾಡಿದ ಮಹಿಮೆಗಳು ಅಪರಿಮಿತವಾಗಿವೆ.

ಬೂದೀಸ್ವಾಮಿಗಳು ಅಸಾಧಾರಣ ತಪಶ್ಚರ್ಯದಿಂದ ಪೂಜ್ಯರಾಗಿ ಲೋಕಮಾನ್ಯರಾಗಿದ್ದಾರೆ. ಬೂದೀಸ್ವಾಮಿಗಳನ್ನು ಮನೆದೇವರೆಂದೂ ಕುಲದೇವರೆಂದು ಆರಾಧಿಸುತ್ತಲಿದ್ದಾರೆ. ಧ್ಯಾನವೆಂದರೆ ಯೋಗಸಾಧನೆಯ ಮೊದಲನೆಯ ಮೆಟ್ಟಲು. ಯಾವುದಾದರೊಂದು ವಸ್ತುವಿನಲ್ಲಿ ನಮ್ಮ ಮನಸ್ಸನ್ನು ಸಂಪೂರ್ಣವಾಗಿ ಕೇಂದ್ರೀಕರಿಸುವುದರಿಂದ ತದೇಕಚಿತ್ತದಿಂದ, ತಲ್ಲೀನವಾಗುವುದರಿಂದ ದೇಹಕ್ಕೆ ಸಂಪೂರ್ಣ ವಿಶ್ರಾಂತಿ ದೊರೆತು ಭಯೋದ್ವೇಗಗಳೆಲ್ಲಾ ನಷ್ಟವಾಗಿ ಪ್ರಸನ್ನತೆಯಿಂದ ಚಿತ್ತಶಾಂತಿ ಲಭಿಸಿ ಆನಂದದಿಂದ ಮನುಷ್ಯನ ಆಯುಷ್ಯ ವರ್ಧಿಸುತ್ತದೆ.

ಸಾಮಾನ್ಯರಾದ ನಾವು ಪ್ರಕೃತಿ ನಿಯಮಕ್ಕನುಸರಿಸಿ ಪಂಚಭೂತಗಳಿಗೆ ಅಧೀನರಾಗಿರುತ್ತೇವೆ. ಯೋಗಿಗಳು ಪ್ರಕೃತಿ ನಿಯಮಗಳನ್ನು ಮೀರಿ ಪಂಚಭೂತಗಳನ್ನೇ ತಮ್ಮ ಅಧೀನ ಮಾಡಿಕೊಂಡಿರುತ್ತಾರೆ. ಸ್ವಾಭಾವಿಕವಾಗಿ ನಮ್ಮ ಶ್ವಾಸೋಚ್ಛ್ವಾಸವು ದಿನವೊಂದಕ್ಕೆ ೨೧೬೦೦ ಗಮನಾಗಮನವುಳ್ಳದ್ದಾಗಿದೆ. ಈ ಗಮನಾಗಮದನದ ವೇಗವನ್ನು ಯೋಗಿಗಳು, ರೇಚಕ, ಪೂರಕ, ಕುಂಭಕ, ಸಾಧನೆಗಳಿಂದ ಪ್ರತಿಬಂಧಿಸಿ ಪ್ರಾಣಾವಾಯುವನ್ನು ತಮ್ಮ ಸ್ವಾಧೀನಪಡಿಸಿಕೊಂಡು ಆಯುಷ್ಯವನ್ನು ಬೆಳೆಸುತ್ತಾ ಇಚ್ಛಾರಮಣಿಗಳಾಗುತ್ತಾರೆ. ಪ್ರಕೃತಿ ನಿಯಮಾನುಸಾರವಾಗಿ ಒದಗುವ ಮರಣವನ್ನು ಗೆಲ್ಲುತ್ತಾರೆ.

ಮಹಾಯೋಗಸಿದ್ಧರಾದ ಬೂದೀಮಹಾಸ್ವಾಮಿಗಳು ಯೋಗಸಾಧನೆಯ ಸಾಮರ್ಥ್ಯದಿಂದ ೭೭೫ ವರ್ಷ ಪ್ರಭಾವ ಬೀರಿ ಬಾಳಿದರೆಂಬುದು ಹೇಳಿದರೆ ಅಸಂಭವ ಅತ್ಯುಕ್ತಿಯಲ್ಲ. ಮಹನೀಯರ ನಡೆನುಡಿಗಳು ನಮ್ಮನ್ನು ಸಂಸ್ಕರಿಸಿ ಸತ್ಕಾರ್ಯದಲ್ಲಿ ಪ್ರವೃತ್ತಿಯು ಅಸತ್ಕಾರ್ಯದಲ್ಲಿ ನಿವೃತ್ತಿಯು

ಉಂಟಾಗುವಂತೆ ಮಾಡುತ್ತವೆ. ಅರ್ಥ ಕಾಮಗಳಲ್ಲಿ ಆಸಕ್ತವಾಗಿರುವ ಜನಗಳ ಮನಸ್ಸನ್ನು ಧರ್ಮಮೋಕ್ಷಗಳನ್ನು ಒಲಿಯುವಂತೆ ಮಾಡುವುದೇ ಪುರಾಣಗಳ ಉದ್ದೇಶವಾಗಿದೆ. ಬೂದೀಸ್ವಾಮಿಗಳು ತಮ್ಮ ಅನುಪಮವಾದ ಯೋಗಸಾಧನೆಯ ಪ್ರಭಾವದಿಂದ ಘನತೆ ಗೌರವಗಳನ್ನು ಸಂಪಾದಿಸಿದರು. ಜಗವ ಪಾವನಗೊಳಿಸಿದರು.

ಶ್ರೀ ಶಿವಯೋಗಿ ಬೂದೀಬಸವ ಮಹಾಸ್ವಾಮಿಗಳೂ ಮಹಾಮಹಿಮಾಶಾಲಿಗಳಾಗಿದ್ದು, ತಮ್ಮ ಅಖಂಡ ಜೀವಿತಾವಧಿಯಲ್ಲಿ ಅನೇಕ ಅತಿಮಾನುಷವೆನಿಸುವ ಪವಾಡಗಳನ್ನು ಮೆರೆದರು. ಅವುಗಳಲ್ಲಿ ಸತ್ತ ಗೋವನ್ನು ಬದುಕಿಸಿದ್ದು ಗಬ್ಬೂರಿನ ರಥವು ತಾನಾಗಿ ಸಾಗಿ ಬಂದದ್ದು ಪ್ರಾಣಿವಧೆಗೆ ಹೇಸಿ ದೇವಿಯು ಸ್ಥಾನಪಲ್ಲಟಗೊಂಡಿದ್ದು ರೇಣುಕಾದೇವಿಗೆ ಧರ್ಮವನ್ನು ಬೋಧಿಸಿ ಮಳೆ ಸುರಿಸಿದ್ದು ಮೊದಲಾದ ಪವಾಡಗಳು ಬಹಳ ಪ್ರಭಾವಶಾಲಿಯಾಗಿವೆ. ಈ ಪವಾಡಗಳ ವರ್ಣನೆಯು ಎಂಥ ನಾಸ್ತಿಕನ ಹೃದಯದಲ್ಲಿಯೂ ಭಕ್ತಿಯನ್ನು ಹೊಮ್ಮಿಸಲು ಸಮರ್ಥವಾಗಿವೆ ಪ್ರೇರಕವಾಗಿವೆ.

"ನಡೆದಂತೆ ಭೂಮಿ ಪಾವನ ಮಹಾಶರಣು,
ಸಜಾನುಭಾವದಿಂದ
ನುಡಿದೊಡೆ ಸರ್ವಜೀವಿಗಳ ಜನ್ಮ ನಿವಾರಣ, ವೊಮ್ಮೆ
ನೋಡಿ ಕಂ-
ಡೊಡನೆ ಸತ್ಕೃತಾರ್ಥಗಳ ಕರಪಂಕಜ ಮಂಡೆಯ ಮೇಲೆ
ಬಂದು ಬೀ-
ಳ್ದೊಡೆ ಕುಲಕೋಟಿಯೆಲ್ಲಕೆ ಸಮುದ್ಧರಣಂ
ಗುರುಶಂಕರೇಶ್ವರಾ"

ಕಂಡುದೆಲ್ಲಾ ಪಾವನ ಕೇಳುವದೆಲ್ಲಾ ಪರಮ ಬೋಧೆ ಮುಟ್ಟಿದುದೆಲ್ಲಾ ಪರುಷದ ಸೋಂಕು, ಒಡನೆ ನುಡಿದವೆಲ್ಲಾ ಸದ್ಯೋನಮುಕ್ತರು, ಸುಳಿದ ಸುಳುಹೆಲ್ಲಾ ಜಗತ್ಪಾವನ, ಮೆಟ್ಟಿದ ಧರೆಯೆಲ್ಲವೂ ಅವಿಮುಕ್ತ ಕ್ಷೇತ್ರ, ಸೋಂಕಿದ ಜಲವೆಲ್ಲವೂ ಪುಣ್ಯತೀರ್ಥಂಗಳು, ಶರಣರೆಂದು ಭಕ್ತಿ ಮಾಡಿದವರೆಲ್ಲರೂ ಸಾಯುಜ್ಯರು, ಗುಹೇಶ್ವರನು ಶರಣರ ಸುಳುಹೀನ ಸೊಗಸನ್ನುಕ್ರಮಿಸಬಾರದು.

ಇಂತಹ ಮಹಾಮಾನ್ವಿತರಾದ ಬೂದೀಸ್ವಾಮಿಗಳು ದೇಶದಾದ್ಯಂತ ಸುತ್ತಿ ಸುಳಿದು ಕೊನೆಯದಾಗಿ ಸಿದ್ಧರಮಟ್ಟಿಗೆ (ಸಿದ್ಧಿ ಪುರುಷರು ನೆಲೆಸಿದ ತಾಣ ಇದು ಗದಗ ತಾಲ್ಲೂಕಿನ ಹೊಸಳ್ಳಿ ಗ್ರಾಮದಲ್ಲಿ ಸಮಾವೇಶವಾಗಿದೆ.) ಆಗಮಿಸುತ್ತಾರೆ. ಮನೋಹರವಾದ ಪ್ರಶಸ್ತವಾದ ಪ್ರಶಾಂತವಾದ ಪವಿತ್ರವಾದ ಸ್ಥಳವೆಂದು ಭಾವಿಸಿ ನೆಲೆಯಾಗಿ ನಿಲ್ಲಲು ಅಪೇಕ್ಷಿಸುತ್ತಾರೆ. ಸದ್ಭಕ್ತರ ಪ್ರಾರ್ಥನೆಯಂತೆ ಶ್ರೀಮಠವು ಪ್ರಭುಗದ್ದುಗೆಯ ೧೭೪೯ನೇ ಇಸ್ವಿಯಲ್ಲಿ ಸ್ಥಾಪಿತವಾಗುತ್ತದೆ. ಬೂದೀಸ್ವಾಮಿಗಳು ಕೆಲವು ಕಾಲಪರಿಯಂತ ತಪವನ್ನಾಚರಿಸಿ ಹಲವು ಲೀಲೆಗಳನ್ನೆಸಗಿ ಜನರನ್ನು ಪಾವನಗೊಳಿಸಿ ೧೮೬೦ನೇ ಇಸ್ವಿಯಲ್ಲಿ ಶಿವಯೋಗ ಸಮಾಧಿ ಹೊಂದುತ್ತಾರೆ. ಗದ್ದುಗೆಯ ಪ್ರಭಾವದಿಂದ ಭಕ್ತರು ತಮ್ಮ ತಮ್ಮ ಅಭೀಷ್ಟಗಳನ್ನು ಪಡೆದು ಕೃತಾರ್ಥರಾಗುತ್ತಲಿದ್ದಾರೆ.

ಕೃತ ಬೂದೀಸ್ವಾಮಿಗಳ ನಂತರ ಪೀಠವನ್ನು ಅಲಂಕರಿಸಿದರು

೨ನೇ ಪಟ್ಟಾಧಿಕಾರಿಗಳಾಗಿ – ಶ್ರೀ ಬಸವಲಿಂಗಸ್ವಾಮಿಗಳು

೩ನೇ ಪಟ್ಟಾಧಿಕಾರಿಗಳಾಗಿ – ಶ್ರೀ ಪಟ್ಟದಾರ್ಯ ಸ್ವಾಮಿಗಳು

೪ನೇ ಪಟ್ಟಾಧಿಕಾರಿಗಳಾಗಿ – ಶ್ರೀ ಸಿದ್ಧಲಿಂಗ ಸ್ವಾಮಿಗಳು

೫ನೇ ಪಟ್ಟಾಧಿಕಾರಿಗಳಾಗಿ – ಶ್ರೀ ಪ್ರಭು ಸ್ವಾಮಿಗಳು

ಶ್ರೀ ಮಠದ ಈಗಿನ ಪೀಠಾಧಿಪತಿಗಳಾದ ಶಿವಾನುಭಾವಿಗಳೆಂದೇ ಪ್ರಖ್ಯಾತರಾದ ಪೂಜ್ಯ ಶ್ರೀ ಮನ್ನಿರಂಜನ ಜಗದ್ಗುರು ಅಭಿನವ ಬೂದೀಶ್ವರ ಮಹಾಸ್ವಾಮಿಗಳು ಶಾಂತ ಶಾಂತ ಪ್ರಖರ ತೇಜಸ್ವಿನಿಂದ ಪ್ರಫುಲ್ಲಗೊಂಡ ಕಡುಗೆಂಪು, ಮುಂಜಾವದ ರವಿತೇಜದಂತಹ ವದನ, ಸನಾತನರ ಪ್ರಭಾವಳಿ, ನೂತನರ ಪ್ರಾಯೋಗಿಕ ನಿಯಮಾವಳಿ ವಿರಾಮರಹಿತ ಭಕ್ತವೃಂದದ ಜನಸೇವೆಗೈಯುತ್ತಿದ್ದಾರೆ.

(ಈ ಪ್ರಬಂಧವನ್ನು ರಚಿಸಲು ಸಹಕರಿಸಿ ಆಶೀರ್ವದಿಸಿದ ಪರಮ ಪೂಜ್ಯ ಶ್ರೀ ಮನ್ನಿರಂಜನ ಜಗದ್ಗುರು ಬೂದಿ ಮಹಾಸ್ವಾಮಿಗಳು, ಸಂಸ್ಥಾನಮಠ, ಹೊಸಳ್ಳಿ ಇವರಿಗೆ ತುಂಬು ಹೃದಯದಿಂದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಅಲ್ಲದೇ ಈ ಪ್ರಬಂಧವನ್ನು ಬರೆಯಲು ಸಹಕಾರ ನೀಡಿದ ಪ್ರೊ. ಬಿ. ವಾಯ್. ನರೇಗಲ್ ಅರ್ಥಶಾಸ್ತ್ರ ಉಪನ್ಯಾಸಕರು, ಜೆ.ಸಿ.ಟಿ.ಎಂ.ಪಿ.ಯು. ಕಾಲೇಜು ಹುಲಕೋಟಿ, ಇವರಿಗೆ ಧನ್ಯವಾದಗಳನ್ನು ಅರ್ಪಿಸುವೆನು.)

ಆಧಾರಸೂಚಿ

೧. ಡಾ. ಎಸ್.ಎನ್. ವೆಂಕಟಾಪುರ., ಶ್ರೀ ಬೂದೀಶ್ವರ ಲೀಲೆ.
೨. ವೇ॥ ಲಿಂಗ. ತಾನಯ್ಯನವರು ಹಿರೇಮಠ, ಶ್ರೀ ಬೂದೀಶ್ವರ ಮಹಾಪುರಾಣ.
೩. ತಾಳೆ ಗರಿಗಳು : ಕೆ.ಆರ್.ಐ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
೪. ಸ್ವಾಮಿರಾಮ, SWAMI AJAY, ಹಿಮಾಲಯ ಮಹಾತ್ಮರ ಸನ್ನಿಧಿಯಲ್ಲಿ, ಅನುವಾದ – ಡಿ.ಕೆ. ಶ್ಯಾಮಸುಂದರ್‌ರಾವ್.

ಡಾ. ಎಫ್.ಟಿ. ಹಳ್ಳಕೇರಿ*

ಅಲಿಖಿತ ಆಕರಗಳಲ್ಲಿ ರೇವಣಸಿದ್ಧ

ಕರ್ನಾಟಕದ ಧಾರ್ಮಿಕ ಮತ್ತು ಸಾಮಾಜಿಕ ಚರಿತ್ರೆಯಲ್ಲಿ ರೇವಣಸಿದ್ಧನದು ಬಹುದೊಡ್ಡ ಹೆಸರು. ಕುರುಬ ಹಾಗೂ ಲಿಂಗಾಯತ ಸಮಾಜಗಳೆರಡಕ್ಕೂ ಈತ ಆರಾಧ್ಯ ದೈವವಾಗಿದ್ದಾನೆ. ವಿಶೇಷವಾಗಿ ಕುರುಬ ಸಮುದಾಯಕ್ಕೆ ಕುಲಗುರುವಾಗಿರುವ ಈತನನ್ನು ಕುರಿತಂತೆ ಲಿಖಿತ ಮತ್ತು ಅಲಿಖಿತ ರೂಪದಲ್ಲಿ ಕಾವ್ಯಪುರಾಣ, ಶಾಸನ, ಕಥೆ, ಹಾಡು ಹಾಗೂ ಶಿಲ್ಪ ದೇವಾಲಯಗಳಂಥ ಸ್ಮಾರಕಗಳು ಅಧಿಕ ಪ್ರಮಾಣದಲ್ಲಿವೆ. ಕಾವ್ಯ ಪುರಾಣ ಹಾಗೂ ಶಾಸನಗಳಂಥ ಲಿಖಿತರೂಪದ ಆಕರಗಳನ್ನು ಬಳಸಿಕೊಂಡು ಈಗಾಗಲೇ ಅಲ್ಲಲ್ಲಿ ಅಧ್ಯಯನಗಳು ನಡೆದಿವೆ. ಆದರೆ ಅಲಿಖಿತರೂಪದ ಆಕರಗಳಾದ ಮೌಖಿಕರೂಪದ ಕಾವ್ಯಪುರಾಣಗಳು, ಹಾಡು, ಕಥೆ ಹಾಗೂ ಸ್ಮಾರಕಗಳನ್ನು ಬಳಸಿಕೊಂಡು ರೇವಣಸಿದ್ಧನ ಕುರಿತು ಸ್ವತಂತ್ರ ಹಾಗೂ ಸಮಗ್ರವಾದ ಅಧ್ಯಯನ ಈವರೆಗೆ ನಡೆದಿಲ್ಲ. ಈ ಹಿನ್ನೆಲೆಯಲ್ಲಿ ಕ್ಷೇತ್ರಕಾರ್ಯದ ಮೂಲಕ ನಾನು ಸಂಗ್ರಹಿಸಿರುವ ಮಾಹಿತಿಗಳನ್ನು ಪೂರಕವಾಗಿ ಬಳಸಿಕೊಂಡು ಅಲಿಖಿತ ಆಕರಗಳಲ್ಲಿ ಚಿತ್ರಿತಗೊಂಡ ರೇವಣಸಿದ್ಧನ ಚರಿತ್ರೆಯನ್ನು ಅವಲೋಕಿಸುವುದು ಈ ಸಂಪ್ರಬಂಧದ ಮುಖ್ಯ ಉದ್ದೇಶವಾಗಿದೆ.

ಮೌಖಿಕ ಕಾವ್ಯ ಪುರಾಣಗಳು : ರೇವಣಸಿದ್ದೇಶ್ವರನ ಚರಿತ್ರೆಯನ್ನು ಹೇಳುವ ಕಾವ್ಯಪುರಾಣಗಳು ಈಗಲೂ ಮೌಖಿಕ ರೂಪದಲ್ಲಿವೆ. ಅವುಗಳಲ್ಲಿ ಜನಪದ ಹಾಲುಮತ ಮಹಾಕಾವ್ಯ, ತಗರ ಪವಾಡ, ರೇವಣಸಿದ್ಧೇಶ್ವರ ಪುರಾಣಗಳು ಬಹುಮುಖ್ಯವಾಗಿವೆ. ಡೊಳ್ಳಿನ ಹಾಡುಗಳ ರೂಪದಲ್ಲಿ ಜನಪದ ಹಾಲುಮತ ಕಾವ್ಯವನ್ನು ಕುರುಬರು ಇಂದಿಗೂ ಹಾಡುತ್ತಾರೆ. ಗುಲಬರ್ಗಾ ಜಿಲ್ಲೆಯ ಶಹಪುರ ತಾಲ್ಲೂಕಿನ ಸೈದಾಪುರ ಗ್ರಾಮದ ಹಿರಿಯ ಜಾನಪದ ಕಲಾವಿದ ಸಿದ್ದಪ್ಪ ಮೇಟಿ ಸುದೀರ್ಘವಾದ ಈ ಪುರಾಣವನ್ನು ಹಾಡುತ್ತಾನೆ. ಆ ಮೂಲಕ ಆ ಮಹಾಕಾವ್ಯವನ್ನು ಜೀವಂತವಾಗಿಟ್ಟಿದ್ದಾನೆ. ಇತ್ತೀಚೆಗೆ ಜಾನಪದ ವಿದ್ವಾಂಸ ಡಾ. ವೀರಣ್ಣ ದಂಡೆ ಅವರು ಸಿದ್ದಪ್ಪ ಮೇಟಿ ಅವರಿಂದ ಈ ಪುರಾಣವನ್ನು ಸಂಗ್ರಹಿಸಿ ಪ್ರಕಟಿಸಿ ಅಧ್ಯಯನಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ.

ದಕ್ಷಿಣ ಕರ್ನಾಟಕದ ಭಾಗದಲ್ಲಿ ತಗರ ಪವಾಡ ಎಂಬ ಕೃತಿಯನ್ನು ರೇವಣಸಿದ್ಧೇಶ್ವರ ಮಠದ ಅಧಿಪತಿಗಳಾದ ಒಡೆಯರು ಪಠನ ಮಾಡುವ ಪದ್ಧತಿ ಈಗಲೂ ಇದೆ. ಈ ಕೃತಿಗೆ ರೇವಣಸಿದ್ಧೇಶ್ವರ ಮಹಾತ್ಮೆ ಎಂದೂ ಕರೆಯ ಲಾಗುತ್ತದೆ.[1] ಕುರುಬರು ಕಲ್ಯಾಣದಲ್ಲಿ ಸತ್ತ ಕುರಿ ಮಾಂಸವನ್ನು ಹಾಲಿನ ಕಂಬಿಯ ಮೇಲೆ ಹೊತ್ತು ಮಾರಿದ ಪ್ರಮಾದದಿಂದಾಗಿ ಪ್ರಜೆಗಳ ಆಗ್ರಹದ ಮೇರೆಗೆ ಬಿಜ್ಜಳನು ಅವರನ್ನು ಎಲ್ಲುಗಡಿಯಿಂದಾಚೆ ಹೊರಹಾಕಿರುತ್ತಾನೆ. ಆಗ ರೇವಣಸಿದ್ದೇಶ್ವರ ಶಾಂತಮುತ್ತಯ್ಯನ ಮೂಲಕ ಸತ್ತ ಟಗರುಗಳನ್ನು ಜೀವಂತಗೊಳಿಸಿ ಕುರುಬರನ್ನು ಮತ್ತೆ ಕಲ್ಯಾಣಕ್ಕೆ ಮರಳಿ ಪ್ರವೇಶ ಪಡೆದದ್ದು, ರೇವಣಸಿದ್ಧ ಬಿಜ್ಜಳ ಮುಂತಾದವರ ನೇತೃತ್ವದಲ್ಲಿ ಬಸವಣ್ಣ ಶಾಂತಮುತ್ತಯ್ಯನನ್ನು ಕುರುಬರ ಗುರುವೆಂದು ನಾಮಕರಣ ಮಾಡಿದ್ದು ಹೀಗೆ ಕುರುಬರಿಗೆ ಸಂಬಂಧಿಸಿದ ಅನೇಕ ಚಾರಿತ್ರಿಕ ಸಾಮಾಜಿಕ ಮತ್ತು ಧಾರ್ಮಿಕ ಘಟನೆಗಳನ್ನು ಈ ಕೃತಿ ತಿಳಿಸುತ್ತದೆ. ಹೀಗಾಗಿ ರೇವಣಸಿದ್ಧೇಶ್ವರರ ಪರಂಪರೆಯವರಾದ ಒಡೆಯರು ಕುರುಬರ ಮನೆಮನೆಗೆ ತೆರಳಿ ಈ ಕೃತಿಯನ್ನು ಪಠನ ಮಾಡಿ ಪೂಜೆ ಸಲ್ಲಿಸಿ ಆಶೀರ್ವದಿಸಿ ಅವರಿಂದ ದವಸ ಧಾನ್ಯ ಬಟ್ಟೆ ಮತ್ತು ಹಣದ ರೂಪದಲ್ಲಿ ಕಾಣಿಕೆ ತೆಗೆದುಕೊಂಡು ಬರುವ ಪದ್ಧತಿ ಈಗಲೂ ಕಾಣಬಹುದು.

ಹಾಡುಗಳು : ರೇವಣಸಿದ್ಧನನ್ನು ಕುರಿತಂತೆ ಅಲಿಖಿತ ಆಕರ ಸಾಮಗ್ರಿಗಳಲ್ಲಿ ಕಥೆ, ಹಾಡು ಪದಗಳು ಪ್ರಮುಖವಾಗಿವೆ. ಡೊಳ್ಳಿನ ಹಾಡುಗಳು, ಜಾನಪದ ಪದಗಳು, ಟಗರ ಜೋಗಿಗಳು ಹೇಳುವ ಕಥೆಗಳು ವಿಶಿಷ್ಟವಾಗಿವೆ. ನಿದರ್ಶನಕ್ಕಾಗಿ ಕೆಲವು ಹಾಡು ಪದ ಹಾಗೂ ಕಥೆಗಳನ್ನು ಅವಲೋಕಿಸಬಹುದು.

ಡೊಳ್ಳಿನ ಪದಗಳು : ಕರ್ನಾಟಕದ ಪ್ರದರ್ಶನಾತ್ಮಕ ಜನಪದ ಕಲೆಗಳಲ್ಲಿ ಡೊಳ್ಳು ಪ್ರಮುಖವಾದುದು. ಈ ಡೊಳ್ಳು ಕಲೆಯನ್ನು ಪ್ರದರ್ಶಿಸುವವರು, ಡೊಳ್ಳಿನ ಪದಗಳನ್ನು ಹಾಡುವವರು ಸಾಮಾನ್ಯವಾಗಿ ಕುರುಬರು. ಹೀಗಾಗಿ ಈ ಕಲೆ ಕುರುಬ ಸಮುದಾಯದವರ ಕೊಡುಗೆ ಎಂದೇ ಹೇಳಲಾಗುತ್ತಿದೆ. ವಿಶೇಷವಾಗಿ ಉತ್ತರ ಕರ್ನಾಟಕದ

* ಪ್ರಾಧ್ಯಾಪಕ, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಪ್ರತಿಯೊಂದು ಹಳ್ಳಿಗಳಲ್ಲಿ ಡೊಳ್ಳಿನ ಮೇಳಗಳಿವೆ ಮತ್ತು ಹಾಡುಗಾರರಿದ್ದಾರೆ. ಈ ಹಾಡುಗಾರರು ಕುರುಬ ಸಮುದಾಯದ ಪ್ರಾಚೀನತೆ, ರೇವಣಸಿದ್ಧ, ಬೀರಪ್ಪ ಮಾಳಿಂಗರಾಯ ಮುಂತಾದ ತಮ್ಮ ಆರಾಧ್ಯ ದೈವಗಳ ಮಹಿಮೆ ಸಾಧನೆ ಹಾಗೂ ಚರಿತ್ರೆಯನ್ನು ಡೊಳ್ಳಿನ ಪದಗಳ ಮೂಲಕ ಹೇಳುತ್ತಾರೆ. ಈ ಹಿನ್ನೆಲೆಯಲ್ಲಿ ಕಲಾವಿದರು ಹಾಡುವ ಡೊಳ್ಳಿನ ಪದಗಳಲ್ಲಿ ರೇವಣಸಿದ್ಧನ ವ್ಯಕ್ತಿತ್ವ ಮತ್ತು ಸಾಧನೆ ನೈಜರೂಪದಲ್ಲಿ ಅಭಿವ್ಯಕ್ತಿಗೊಂಡಿದೆ. ಡೊಳ್ಳಿನ ಪದಗಳನ್ನು ಹಾಡುವಾಗ ಪ್ರತಿಯೊಂದು ಪದ್ಯದ ಆರಂಭದಲ್ಲಿ **"ಸ್ವಾಮಿ ನಮ್ಮ್ರ ದೇವರ್ ಬಂದಾವ್ ಬನ್ನಿರೇ । ಗುರು ರೇವಣಸಿದ್ಧಗ ಶರಣೆನ್ನುವೆನು"** ಎಂದು ಹೇಳಿಯೇ ಮುಂದಿನ ಪದ್ಯಗಳಿಗೆ ಹೋಗುತ್ತಾರೆ.

ಧರಣಿಯೊಳಗ ನನ ಸಿದ್ಧರಿಗೆಲ್ಲ
ಗುರುವಾಗಿರು ಹೋಗು ಅಂದಾನು[೨]

ರೇವಣಸಿದ್ಧಪ್ಪಾ ನಿಮ್ಮ ಪಾದಕ ಶರಣಪ್ಪಾ
ಶರಣ ಮಾಡಿ ನಾವ್ ವರವ ಬೇಡತೀವಿ ನಿಮ್ಮ ಪಾದಕಪ್ಪಾ[೩]

ಕಂಬಳಿ ಗದ್ದಿಗಿ ಮ್ಯಾಲ ನಿಮ್ಮ ಶಿವಸ್ಥಾನಪ್ಪಾ
ಶಿವ ನಿನ್ನ ಶಕ್ತಿಯ ಧ್ಯಾನ ಸಾವು ಯಾವತ್ಮಾಡೇವಪ್ಪಾ[೪]

ಕರಿಯ ಕಂಬಳಿಯ ಕಂತೆ ಕರದಲ್ಲಿ ಕಪ್ಪರಾ
ವರನಾಗದ ಬೆತ್ತ ಪಿಡಿದಾವನೋ
ಜ್ಞಾನದ ನಿಧಿ ನೀನು ಧ್ಯಾನ ಮಾಡುವೆ ನಾನು
ಮಾನ ಕಾಯುವ ನೀನೇ ರೇವಣಸಿದ್ಧನೋ[೫]

ಕಲ್ಯಾಣದ ಒಳಗೆಲ್ಲ ನೂರು ಪವಾಡವ ಮಾಡಿದನು
ಮುನ್ನೂರು ಮಂದಿ ಹೆಂಡಿರ ಮದುವಾಗ್ಯಾನೋ[೬]

ಎಂಬಂಥ ನೂರಾರು ಪದಗಳಲ್ಲಿ ರೇವಣಸಿದ್ಧ ಬಸವಣ್ಣನಿದ್ದ ಕಲ್ಯಾಣಕ್ಕೆ ಬಂದದ್ದು, ಕೆರೆಯ ಕಟ್ಟಿಸಿದ್ದು, ಕುರುಬರು ಕರಿಯ ಕಥೆಯನ್ನು ಅರ್ಪಿಸಿದ್ದು ಹೀಗೆ ರೇವಣಸಿದ್ಧನ ಅನೇಕ ಸಾಧನೆ ಹಾಗೂ ಚಾರಿತ್ರಿಕವಾದ ಸಂಗತಿಗಳನ್ನು ಕಲಾವಿದರು ಕೊಂಡಾಡಿ ಹಾಡಿ ಹೊಗಳುವ ಸಂಭ್ರಮವನ್ನು ನೋಡಿಯೇ ಅನುಭವಿಸಬೇಕು. ಈ ಎಲ್ಲ ಪದಗಳನ್ನು ಒಂದೆಡೆ ಸಂಗ್ರಹಿಸಿ ಅಧ್ಯಯನಕ್ಕೊಳಪಡಿಸಿದಾಗ ರೇವಣಸಿದ್ಧೇಶ್ವರನ ಚರಿತ್ರೆಯನ್ನು ಕ್ರಮಬದ್ಧವಾಗಿ ಪುನಾರಚಿಸಬಹುದು. ಆ ಮೂಲಕ ಇತಿಹಾಸ ನಮಗೆ ಇನ್ನೂ ಸ್ಪಷ್ಟವಾಗುತ್ತದೆ.

ಜಾನಪದ ಹಾಡುಗಳು : ರೇವಣಸಿದ್ಧನಿಗೆ ಕರಿಯ ಕಂಥೆಯನ್ನು ಅರ್ಪಿಸುವ ಕುರುಬ ಆಚರಣೆ ಕುರುಬ ಸಮುದಾಯದಲ್ಲಿ ಅತ್ಯಂತ ವೈಭವದಿಂದ ಜರುಗುತ್ತದೆ. ಈ ಸಂದರ್ಭದಲ್ಲಿ ಕುರುಬರಿಗೂ ರೇವಣಸಿದ್ಧನಿಗೂ ಇರುವಂಥ ಆಪ್ತ ಸಂಬಂಧವನ್ನು ಗಂಡಸರು ಹೆಂಗಸರು ಹಾಡಿ ಹೊಗಳುತ್ತಾರೆ. ತುಮಕೂರು ಪ್ರದೇಶದಲ್ಲಿ ಇಂಥ ಹಾಡುಗಳನ್ನು ಹೇಳುವ ಕಲಾವಿದರು ಈಗಲೂ ಇದ್ದಾರೆ. ಹೀಗಾಗಿ ಈ ಹಾಡುಗಳು ಈ ಪ್ರದೇಶದಲ್ಲಿ ಮಾತ್ರ ಪ್ರಚಲಿತದಲ್ಲಿರುವುದು ಸಹಜವಾಗಿವೆ. ರೇವಣಸಿದ್ಧನು ಕುರುಬರಿಗೆ ಗುರುವಾಗಿ ಬಂದದ್ದು, ಅವರನ್ನು ಸಂರಕ್ಷಿಸಿದ ಸನ್ನಿವೇಶಗಳನ್ನು ಈ ಹಾಡುಗಳಲ್ಲಿ ನಿರೂಪಿಸಲಾಗಿದೆ. ಚಿಕ್ಕನಾಯ್ಕನಹಳ್ಳಿಯ ಹಂದನಕೆರೆ ಗ್ರಾಮದ ಸುಮಾರು ಎಂಭತ್ತು ವರ್ಷದ ಮಹಿಳೆ ಲಕ್ಷ್ಮಜ್ಜಿ ರೇವಣಸಿದ್ಧೇಶ್ವರನ ಕುರಿತು ತುಂಬ ಭಾವಭರಿತಳಾಗಿ ಹಾಡುತ್ತಾಳೆ.[೭] ಈ ಹಾಡು ಕುರುಬರು ರೇವಣಸಿದ್ಧೇಶ್ವರನಿಗೆ ಕಂತೆ ಅರ್ಪಿಸುವ ಸಂದರ್ಭವನ್ನು ಹೀಗೆ ವಿವರಿಸುತ್ತದೆ.

ತನ್ನೀರ ಮಿಂದು ಬಟ್ಟೆಯ ಪಣದೊಟ್ಟು
ಅಪ್ಪಾ ನಿನ್ನ ಮಠಕೆ ನಾವು ಬಂದು ॥ ಪಲ್ಲವಿ ॥

ಅಪ್ಪಾ ನಿನ್ನ ಮಠಕೆ ನಾವು ಬಂದು ರೇವಣ್ಣ
ಕುಂಬಳದ ಮರಿಗೆ ಹೋಗಬೇಕು
ಕುಂಬಳದ ಮರಿಗೆ ಹೋಗಬೇಕು ರೇವಣ್ಣ
ಲಿಂಗದ ಮ್ಯಾಗಳ ಹೂವ್ವ ದಯಮಾಡು ॥ ೧ ॥

ಕಂತೆಯ ನೇಯುವರು ಎಂಥ ಮನೆತನದವರೊ
ಚಾಜ ಮನೆತನ ಬರಬೇಕು
ಹೊತ್ತೀಲಿ ಬೀರಲಿಂಗನ ಕರಕೊಂಡು ರೇವಣ್ಣ
ಕುಂಬಳದ ಮರಿಗೆ ಹೊರಟಾನೆ ॥ ೨ ॥

ಹೊತ್ತೀಲಿ ಬೀರಲಿಂಗನ ಕರಕೊಂಡು
ಕುಂಬಳದ ಮರಿಯ ಹಿಡಿದಾರೆ
ಕುಂಬಳದ ಮರಿಯ ಹಿಡಿದಾರೆ ಅವರಿನ್ನು
ಕಂತೆಯ ನೇಯುತಾರೆ ॥ ೩ ॥

ಕಂತೆಯ ನೇಯುತಾರೆ ಹಳೆಕಂತೆ ಮಡಗಾಕೆ
ಅವರಿನ್ನು ಆಗ ಹೊರಟಾರೆ
ಚಂದುಳ್ಳಿ ಮಲ್ಲನ ಕಟ್ಟೆ ಚಂದುಳ್ಳಿ.....
ಶಂಬು ರೇವಣ್ಣ ಗದ್ದಿಗಾದ ॥ ೪ ॥

ತುಂಬಿಟ್ಟು ಮಾವು ಕಿರಿನಲ್ಲಿ ಮರದಡಿಯ
ಶಂಬು ರೇವಣ್ಣ ಗದ್ದಿಗಾದ
ಹಾಲದಟ್ಟೆಯ ಮೇಲೆ ಸೀಳಿ ಮರಿನಾಟಿ
ಶಂಬು ರೇವಣ್ಣ ಬರುತಾನೆ ॥ ೫ ॥

ತುಪ್ಪದಟ್ಟೆಯ ಮೇಲೆ ಸೀಳಿ ಮರಿಯನಾಟಿ
ಶಂಬು ರೇವಣ್ಣ ಬರುತಾನೆ
ಹಳೆಕಂತೆ ಮಡಿಗಾರೆ ಹೊಸಕಂತೆ ದರುಸಾರೆ
ಆಗ ರೇವಣ್ಣ ಬರುತಾನೆ ॥ ೬ ॥

ಶಿಷ್ಯರು ಆಗ ಬಂದರೆ ರೇವಣ್ಣ
ಪಟ್ಟಸಾಲೆ ದಿನಿದಿನಿ ಆಗಲಿ
ಪಟ್ಟಸಾಲೆಲ್ಲ ದಿನಿದಿನಿ ಆಗಲಿ
ಶಿಷ್ಯರು ಆಗ ಬರುತಾರೆ ॥ ೮ ॥

ಎಬ್ಬಿದರು ಬಿದುರಲ್ಲ ಗುದ್ದಿನಾಟುಗವಲ್ಲ
ಬುದ್ದಿಗೇಡಿ ಮಂಕಯ್ಯ ಗುರುವಲ್ಲ
ಬುದ್ದಿಗೇಡಿ ಮಂಕಯ್ಯ ಗುರುವಲ್ಲ ರೇವಣ್ಣ
ಹನ್ನೆರಡು ಬೀದಿ ಪಡುದಾನೆ ॥ ೯ ॥

ಹನ್ನೆರಡು ಬೀದಿ ಪಡುದಾನೆ ರೇವಣ್ಣ
ಅವನು ವಾಲಾಡಿ ಮಠಕೆ ನಡೆದಾನೆ
ವಾಲಾಡಿ ಮಠಕೆ ನಡುದಾನೆ ರೇವಣ್ಣ
ಶಂಬು ರೇವಣ್ಣ ಗದ್ದಿಗಾದ ॥ ೧೦ ॥

ಈ ಹಾಡು ರೇವಣಸಿದ್ಧೇಶ್ವರನಿಗೆ ಕರಿಯ ಕಂತೆಯನ್ನು ಅರ್ಪಿಸುವ ವಿಧಾನವನ್ನು ತಿಳಿಸುತ್ತದೆ. ಇದೇ ಕಥೆಯನ್ನು ಹೋಲುವ ಇನ್ನೊಂದು ಹಾಡು ತುಮಕೂರು ಭಾಗದಲ್ಲಿಯೇ ಪ್ರಚಲಿತದಲ್ಲಿದೆ. ಕಾಲಘಟ್ಟವೊಂದರಲ್ಲಿ ಕುರುಬರಿಗೂ ಬಣಜಿಗರಿಗೂ ನಡೆದ ಸಾಮಾಜಿಕ ಸಂಘರ್ಷದಲ್ಲಿ ರೇವಣಸಿದ್ಧ ಕುರುಬರ ಪರವಾಗಿ ಹೋರಾಡುತ್ತಾನೆ. ಈ ಹೋರಾಟದಲ್ಲಿ ಆತ ಅನುಭವಿಸಿದ ಪರಿ, ಸಾಧನೆ ಮತ್ತು ಕುರುಬರು ಸ್ವಾಮಿ ರೇವಣಸಿದ್ಧನನ್ನು ಗುರುವೆಂದು ಆರಾಧ್ಯದೈವವೆಂದು ಸ್ವೀಕರಿಸಿದ ಸಂಗತಿಗಳನ್ನು ಈ ಹಾಡು ಚೆನ್ನಾಗಿ ನಿರೂಪಿಸುತ್ತದೆ.

ಊರು ಪಡೆಯಲಿಲ್ಲ ಒಕ್ಕಲು ಪಡೆಯಲಿಲ್ಲ
ಯ್ಹೀನ ಕುರುಬರ ಪಡೆದಲ್ಲೋ
ಸೀಮೆ ಪಡೆಯಲಿಲ್ಲ ಭೂಮಿ ಪಡೆಯಲಿಲ್ಲ
ಜಿಡ್ಡು ಕುರುಬರಪಡೆದಲ್ಲೋ
ನಾಗಾಲೊನ್ನೀಗೆ ಅದಾವು ಗುರುಮಠ
ನ್ಯಾಯಗಾರರು ಕುರುಬರು
ನ್ಯಾಯಗಾರರು ಕುರುಬರ ಕೇರ್‍ಯಾಗೆ
ಆದವು ರೇವಣ್ಣರ ಗುರುಮಠ

ಕುರುಬರನ್ನು ಶಿಷ್ಯರನ್ನಾಗಿ ಮಾಡಿಕೊಂಡ ರೇವಣ ಸಿದ್ಧನಿಗೆ ಜನ ಹೀಯಾಳಿಸುವ ರೀತಿ, ಕುರುಬರ ಕೇರಿಯಲ್ಲಿ ರೇವಣಸಿದ್ಧೇಶ್ವರ ಮಠಗಳನ್ನು ಕಟ್ಟಿಸಿದ್ದು, ಪೂಜಾ ವಿಧಾನದ ವಿವರಗಳು, ಕಂತೆಸೇವೆಯ ಮಾಹಿತಿಗಳು ಈ ಹಾಡಿನಲ್ಲಿ ಯಥೇಚ್ಛವಾಗಿ ಸಂಗ್ರಹಿತವಾಗಿವೆ.[೮] ಇಂಥ ಹಾಡುಗಳ ಸಮಗ್ರವಾದ ಸಂಗ್ರಹ ಕಾರ್ಯ ತ್ವರಿತವಾಗಿ ನಡೆಯಬೇಕಾದ ಅವಶ್ಯಕತೆಯಿದೆ.

ಕಥೆಗಳು : ಕುರುಬರ ಇತಿಹಾಸ, ಸತ್ತ ಕುರಿಯನ್ನು ಬದುಕಿಸಿ ಕಲ್ಯಾಣ ಪ್ರವೇಶಿಸಿದ ಸನ್ನಿವೇಶ, ಬೀರದೇವರ ಮಹಿಮೆ, ರೇವಣಸಿದ್ಧನ ಚರಿತ್ರೆ ಹೀಗೆ ಕುರುಬರಿಗೆ ಸಂಬಂಧಿಸಿದ ಅನೇಕ ಕಥೆಗಳನ್ನು ಊರೂರಿಗೆ ಹೋಗಿ ಕುರುಬರಿಗೆ ತಿಳಿಸಿಕೊಡುವ ಕಾಯಕದವರಿಗೆ **ಟಗರ ಜೋಗಿ** ಗಳೆಂದು ಕರೆಯಲಾಗುತ್ತದೆ. ಇವರು ಬೆಂಗಳೂರು, ಕೋಲಾರ, ಮೈಸೂರು, ಚಿತ್ರದುರ್ಗ, ಮಂಡ್ಯ ರಾಮನಗರ ಹೀಗೆ ದಕ್ಷಿಣ ಕರ್ನಾಟಕದ ಭಾಗದಲ್ಲಿ ಕಂಡುಬರುತ್ತಾರೆ. ಈ ಕಥೆಯಲ್ಲಿ ರೇವಣಸಿದ್ಧ ಕುರುಬರಿಗೆ ಕುಲಗುರುವಾದದ್ದು, ಮಾಳಿಂಗರಾಯ ಬೀರಪ್ಪನ ಶಿಷ್ಯನಾಗಿ ಮೆರೆದ ಪವಾಡಗಳು, ಕಲ್ಯಾಣ ಪಟ್ಟಣದಲ್ಲಿ ಬಿಜ್ಜಳ ಬಸವಣ್ಣ ರೇವಣಸಿದ್ಧ ಶಾಂತಮುತ್ತಯ್ಯ ಸಿದ್ಧರಾಮ ಮೊದಲಾದ ಶರಣರ ಸಮ್ಮುಖದಲ್ಲಿ ನಡೆದ ಕಥೆಯನ್ನು ಇವರು ತುಂಬ ಪರಿಣಾಮಕಾರಿಯಾಗಿ ಹೇಳಿಕೊಡುತ್ತಾರೆ. ಇಂಥ ಟಗರ ಜೋಗಿಗಳ ಸಂಪ್ರದಾಯದ ಬಗೆಗೂ ನಮ್ಮಲ್ಲಿ ಅಧ್ಯಯನಗಳು ನಡೆಯಬೇಕಾಗಿವೆ.

ಆಚರಣೆಗಳು : ರೇವಣಸಿದ್ಧೇಶ್ವರನನ್ನು ವಿಶಿಷ್ಟ ಆಚರಣೆ ಉತ್ಸವ ಜಾತ್ರೆಗಳ ಮೂಲಕ ಆರಾಧಿಸುವ ಪರಂಪರೆ ಪ್ರಾಚೀನ ಕಾಲದಿಂದಲೂ ಕುರುಬ ಸಮುದಾಯದಲ್ಲಿದೆ. ದೀಪಾವಳಿ, ಶಿವರಾತ್ರಿ, ಯುಗಾದಿ ಮುಂತಾದ ಹಬ್ಬಗಳಲ್ಲಿ ಹಾಗೂ ನಿರ್ದಿಷ್ಟ ಸಮಯದಲ್ಲಿ ಈ ಆಚರಣೆಗಳು ಜರುಗುತ್ತವೆ. ಅವುಗಳಲ್ಲಿ ಕಂಥಾಧಾರಣ ಸೇವೆ, ತೋಪುಜಾತ್ರೆ, ಪಲ್ಲಕ್ಕಿಗಳ ಮೆರವಣಿಗೆ ವಿಶೇಷವಾದವುಗಳಾಗಿವೆ.

ಕಂಥಾಧಾರಣ ಸೇವೆ : ರೇವಣಸಿದ್ಧೇಶ್ವರನಿಗೆ ಕಂಥಾ ಧಾರಣ ಸೇವೆಯನ್ನು ಅರ್ಪಿಸುವವರು ಕುರುಬರು ಮಾತ್ರ. ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ ಈ ಆಚರಣೆ ತುಂಬ ವಿಜೃಂಭಣೆಯಿಂದ ಜರುಗುತ್ತದೆ. ಪವಿತ್ರವಾದ ಕಂಬಳಿಯನ್ನು ರೇವಣಸಿದ್ಧನಿಗೆ ಅರ್ಪಿಸುವ ಆಚರಣೆಯನ್ನು ಕಂಥೆಸೇವೆ ಎಂದು ಕರೆಯುತ್ತಾರೆ. ಇದಕ್ಕೆ ಕರಿಯ ಕಂತೆ ಎಂದೂ ಕರೆಯಲಾಗುತ್ತದೆ. ಕಂಥೆ ಎಂದರೆ ಕುರಿಯ ಉಣ್ಣೆಯಿಂದ ತಯಾರಿಸಿದ ವಸ್ತ್ರ ಅಥವಾ ಕಂಬಳಿ. ರೇವಣಸಿದ್ಧೇಶ್ವರನ ಪೂಜೆಗೆ ಸಂಬಂಧಿಸಿದ ಈ ವಸ್ತ್ರವನ್ನು ಸಿದ್ಧತೆ ಮಾಡಿ ಶ್ರೀಗುರು ರೇವಣಸಿದ್ಧೇಶ್ವರನಿಗೆ ಅರ್ಪಿಸುವ ವಿಧಾನ ಒಂದು ಕುತೂಹಲಕಾರಿಯಾದ ಆಚರಣೆಯೆಂದೇ ಹೇಳಬೇಕು.

ತುಮಕೂರು ಜಿಲ್ಲೆ ಚಿಕ್ಕನಾಯ್ಕನಹಳ್ಳಿಯಲ್ಲಿ ಕುರುಬರಿಗೆ ಸಂಬಂಧಿಸಿದ ರೇವಣಸಿದ್ಧೇಶ್ವರ, ಸಿದ್ಧೇಶ್ವರ, ಸಿದ್ಧರಾಮೇಶ್ವರ ಎಂಬ ಮೂರು ಮಠಗಳಿವೆ. ರೇವಣಸಿದ್ಧೇಶ್ವರನಿಗೆ ಕರಿಯ ಕಂತೆಯನ್ನು ಅರ್ಪಿಸುವ ಆಚರಣೆಯಲ್ಲಿ ಅಲ್ಲಿನ ಶ್ರೀ ಸಿ.ಕೆ. ಪರಶುರಾಮಯ್ಯನವರು ಸಕ್ರಿಯವಾಗಿ ಪಾಲ್ಗೊಂಡಂಥವರು. ಈ ಆಚರಣೆಯ ವಿಧಾನವನ್ನು ಅವರೇ ಒಂದೆಡೆ ಹೀಗೆ ಹೇಳಿದ್ದಾರೆ.[೯] "ಗುರು ರೇವಣಸಿದ್ಧನಿಗೆ ಈ ಅಚ್ಚ ಕರಿಯ ಕಂಬಳಿಯನ್ನು ಅರ್ಪಿಸುವ ಸಂಪ್ರದಾಯವು ಕುರುಬರಲ್ಲಿ ಈಗಲೂ ಆಚರಣೆಯಲ್ಲಿದೆ. ಈ ಕಾರ್ಯಕ್ರಮವನ್ನು "ಕಂಥೆಸೇವೆ" ಎಂದು ಕರೆಯುತ್ತಾರೆ. ಕಂಥೆಯನ್ನು ನೇಯುವ

ವಿಧಾನವು ಸಹ ವಿಶೇಷವಾದುದು. ಒಂದು ಹಿಂಡು ಕುರಿಯಲ್ಲಿ ಲಕ್ಷಣವಾದ ಅಚ್ಚ ಕರಿಯ ಕುರಿಮರಿಗೆ ಮಠದ ಒಡೆಯರು ಬಿಲ್ವಪತ್ರೆಯಿಂದ ತೀರ್ಥವನ್ನು ಸಂಪ್ರೋಕ್ಷಿಸಿ "ಕಂಥೆಯ ಮರಿ" ಎಂದು ನಾಮಕರಣ ಮಾಡಿ ಬರುತ್ತಾರೆ. ಆ ಕುರಿಯ ಮೊದಲ ಬೆಳೆಯ ತುಪ್ಪಟವನ್ನು ಹೊಸ ಕತ್ತರಿಯಿಂದ ತೆಗೆದು ತರುತ್ತಾರೆ. ಒಡೆಯರುಗಳು ಆ ತುಪ್ಪಟವನ್ನು ಸ್ನಾನ ಮಾಡಿ ಉಪವಾಸದೊಂದಿಗೆ, ಮಠದ ಗರ್ಭಗುಡಿಯಲ್ಲಿ ಕೈಯಲ್ಲಿ ಹಿಂಜಿ ಹಿಂಜಿ ಮಾಡಿ, ತೊಡೆಯ ಮೇಲೆಯೇ ಕೈಯಿಂದ ಹೊಸೆದು ಸಣ್ಣದಾರವನ್ನು ತೆಗೆದು, ಕೈಬೆರಳುಗಳಿಂದಲೇ ಹಾಸಿಕ್ಕಿ, ಎಳೆಕೂಡಿಸಿ ಅಚ್ಚುಕಟ್ಟಾದ ಆಕರ್ಷಕವಾದ ಮಿರುಗುವ ಚಿಕ್ಕ ಕಪ್ಪುಕಂಬಳಿ ವಸ್ತ್ರವನ್ನು ಸಿದ್ಧಪಡಿಸುತ್ತಾರೆ. ಇದೇ ಕರಿಯ ಕಂಥೆ. ಒಡೆಯರು ಉಪವಾಸವಿದ್ದು ನೇಮ ನಿಷ್ಠೆಯಿಂದ ನೇಯ್ದು ಸಿದ್ಧಪಡಿಸಿದ ಈ ಕಂಥೆಯನ್ನು ರೇವಣಸಿದ್ಧೇಶ್ವರನಿಗೆ ಅರ್ಪಿಸುವುದು ಕುರುಬರಿಗೆ ಒಂದು ಸಂಭ್ರಮದ ಆಚರಣೆಯಾಗಿದೆ. ಹಳೆಯ ಜೀರ್ಣವಾದ ಕಂಥೆ ಮತ್ತು ನೂತನ ಕಂಥೆಯನ್ನು ಬೆಳ್ಳಿಪಲ್ಲಕ್ಕಿಯಲ್ಲಿಟ್ಟು ನಗಾರಿ, ಕರಡ, ಚಮ್ಮೇಳ ಮುಂತಾದ ಮಂಗಳವಾದ್ಯದಲ್ಲಿ ಗಂಗೆಯ ತಡಿಗೆ ತಂದು, ಹಳೆಯ ಕಂಥೆಯನ್ನು ಗಂಗೆಯಲ್ಲಿ ಬಿಟ್ಟು, ಹೊಸಕಂಥೆಯನ್ನು ಪುಣ್ಯಜಲದಲ್ಲಿ ಪಾವನಗೊಳಿಸಿ, ಸೂರ್ಯೋದಯಕ್ಕೆ ಮುಂಚೆ ರೇವಣಸಿದ್ಧೇಶ್ವರನಿಗೆ ಧರಿಸಿ, ಧೂಪದೀಪಗಳಾರತಿ, ಪೂಜೆ ನೈವೇದ್ಯದ ಬೆಳ್ಳಿಪಲ್ಲಕ್ಕಿಯಲ್ಲಿ ಮಂಗಳ ವಾದ್ಯದೊಂದಿಗೆ ನಗರದ ಪ್ರಮುಖ ಬೀದಿಗಳಲ್ಲಿ ನೂತನ ಕಂಥೆಯನ್ನು ಧರಿಸಿದ ರೇವಣಸಿದ್ಧೇಶ್ವರನ ಮೆರವಣಿಗೆಯ ನಂತರ ಶ್ರೀಮಠದ ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸುತ್ತಾರೆ. ಇದು ಕುರುಬರ ಪವಿತ್ರವಾದ ಆಚರಣೆಯಾಗಿದ್ದು, ಆ ಸಂದರ್ಭದಲ್ಲಿ ಅನ್ನಸಂತರ್ಪಣೆಯನ್ನು ಏರ್ಪಡಿಸುತ್ತಾರೆ. ಕರಿಯ ಕಂಬಳಿಯಂತೂ ಕುರುಬರ ಎಲ್ಲ ಧಾರ್ಮಿಕ ಸಮಾರಂಭಗಳಲ್ಲೂ ಇರಲೇಬೇಕು. ರೇವಣಸಿದ್ಧನ ಮೂರ್ತಿಯನ್ನು ಕರಿಯ ಕಂಬಳಿಯ ಗದ್ದುಗೆಯ ಮೇಲೆ ಪ್ರತಿಷ್ಠಾಪಿಸಿದಂತೆ, ಕುಲಗುರುಗಳಾದ ಒಡೆಯರಿಗೂ ಕರಿಯ ಕಂಬಳಿಯ ಗದ್ದುಗೆಯನ್ನು ಹಾಕಲೇಬೇಕು." ಸಾಮಾನ್ಯವಾಗಿ ರೇವಣಸಿದ್ಧೇಶ್ವರ ಹಾಗೂ ಸಿದ್ಧರಾಮೇಶ್ವರ ಮಠಗಳು ಎಲ್ಲೆಲ್ಲಿ ಇವೆಯೋ ಅಲ್ಲಿ ಈ ಆಚರಣೆಯನ್ನು ಕುರುಬರು ಹನ್ನೆರಡು ವರುಷಗಳಿಗೊಮ್ಮೆ ಏರ್ಪಡಿಸುತ್ತಿರುವುದು ಸರ್ವೇಸಾಮಾನ್ಯ.

ತೋಪುಜಾತ್ರೆ : ಬೀರದೇವರ ಸಾಂಸ್ಕೃತಿಕ ಆಚರಣೆಗಳಲ್ಲಿ ತೋಪು ಜಾತ್ರೆ ಬಹಳ ಮುಖ್ಯವಾದದ್ದು. ಇದು ಕುರುಬ ಸಮುದಾಯದ ಹಲವು ಪಾರಂಪಾರಿಕ ಚಹರೆಗಳನ್ನು ತನ್ನ ಅಂತರಂಗದಲ್ಲಿ ಗುಪ್ತವಾಗಿ ಅಡಗಿಸಿಕೊಂಡು ಬಹಳ ಸೂಕ್ಷ್ಮ ನೆಲೆಯಲ್ಲಿ ಅನಾವರಣಗೊಳಿಸುತ್ತದೆ. ಈ ಜಾತ್ರೆ ದಕ್ಷಿಣ ಕರ್ನಾಟಕದ ಹಲವಾರು ಜಿಲ್ಲೆಗಳಲ್ಲಿ ಕಂಡುಬರುತ್ತದೆ. ಏಳು ದಿನಗಳ ಕಾಲ ನಡೆಯುವ ಈ ಜಾತ್ರೆಯಲ್ಲಿ ನಡೆಯುವ ಆಚರಣೆಯ ಪ್ರಕ್ರಿಯೆಗಳು ಕೆಳಗಿನಂತಿರುತ್ತವೆ. ಆರಂಭದ ದಿನದ ಬೆಳಿಗ್ಗೆ ಧ್ವಜಾರೋಹಣ, ಮಧ್ಯಾಹ್ನ ಶ್ರೀಗುರು ರೇವಣಸಿದ್ಧೇಶ್ವರ, ಗುಡಿಕಟ್ಟು ದೇವರುಗಳು ಹಾಗೂ ಗ್ರಾಮದೇವರುಗಳನ್ನು ಬರಮಾಡಿಕೊಳ್ಳುವುದು. ಎರಡನೆಯ ದಿನ ಬೆಳಗ್ಗೆ ಗಂಗೆ ಪೂಜೆ ಮತ್ತು ನವಗ್ರಹ ಪೂಜೆ. ಮಧ್ಯಾಹ್ನ ದೈವಕ್ಕೆ ಮೀಸಲು ಮತ್ತು ಗುರುಕಾಣಿಕೆ ಒಪ್ಪಿಸುವ ಕಾರ್ಯ ಆರಂಭವಾಗುತ್ತದೆ ಹಾಗೂ ಈ ಕಾರ್ಯ ಮುಕ್ತಾಯಗೊಳ್ಳುವುದು ಮೂರನೆಯ ದಿನದ ಸಾಯಂಕಾಲಕ್ಕೆ. ನಾಲ್ಕನೆಯ ದಿನ ಹೋಳೆ ಪೂಜೆ ಮತ್ತು ಪಟ್ಟ ಕಟ್ಟುವುದು. ಐದನೆಯ ದಿನ ಧಾರ್ಮಿಕ ಸಭೆ. ಆರನೆಯ ದಿನ ಕಂಡಾರ್ಚನೆ ಹಾಗೂ ಕಾಚಿಬೀರನ ಸೇವೆ. ಕೊನೆಯ ದಿನ ಮಂಗಳಾರತಿ ಮತ್ತು ಜಾತ್ರೆಗೆ ಬಂದ ದೇವರುಗಳನ್ನು ಸ್ವಸ್ಥಾನಗಳಿಗೆ ಬಿಜಯಂಗೈಯ್ಯುವುದು.

ಈ ಜಾತ್ರೆಯನ್ನು ಸಹ ಹನ್ನೆರಡು ವರುಷಕ್ಕೊಮ್ಮೆ ನಡೆಸಲಾಗುತ್ತದೆ. ಕಳೆದ ವರ್ಷ ಚಿಕ್ಕಮಗಳೂರು ಜಿಲ್ಲೆ ಕಡೂರ ತಾಲ್ಲೂಕಿನ ಹಿರೇನಲ್ಲೂರು ಗ್ರಾಮದಲ್ಲಿ ಬೀರದೇವರ ತೋಪುಜಾತ್ರೆಯನ್ನು ಅಲ್ಲಿನ ಕುರುಬ ಸಮುದಾಯದವರು ಆಯೋಜಿಸಿದ್ದರು. ಸುತ್ತಮುತ್ತಲಿನ ಹನ್ನೆರಡು ಗುಡಿಕಟ್ಟುಗಳು ಈ ಜಾತ್ರೆಗೆ ಆಗಮಿಸಿದ್ದವು. ಈ ಗುಡಿಕಟ್ಟಿಗೆ ಎಂಭತ್ತಕ್ಕೂ ಹೆಚ್ಚು ಹಳ್ಳಿಗಳು ಸೇರುತ್ತವೆ. ಈ ಎಲ್ಲಾ ಗುಡಿಕಟ್ಟುಗಳಿಗೆ ಹಿರೇಗುಡಿಕಟ್ಟು ಅಂದರೆ ಹಿರೇನಲ್ಲೂರು. ಈ ಎಲ್ಲಾ ಗುಡಿಕಟ್ಟುಗಳಿಗೆ ಎಂಭತ್ತು ಹಳ್ಳಿಗಳ ಹಾಲುಮತಸ್ಥರಿಗೆ ಅಸಂದಿ ಮಹಾಸಂಸ್ಥಾನದ ಮಠದ ರೇವಣಸಿದ್ಧೇಶ್ವರನೇ ನಾಯಕ. ಈ ಅಸಂದಿ ಮಹಾಸಂಸ್ಥಾನ ಮಠದ ಅಧಿಪತಿಗಳಾದ ಒಡೆಯರ ನೇತೃತ್ವದಲ್ಲಿ ಈ ತೋಪುಜಾತ್ರೆ ನೆರವೇರುತ್ತದೆ. ಈ ಜಾತ್ರೆಯಲ್ಲಿ ಈರಗಾರರು ಜೀವಂತವಾದ ಕುರಿಗಳ ಕುತ್ತಿಗೆಯನ್ನು ಕಚ್ಚಿ ತಿನ್ನುವ ಆಚರಣೆ ನಡೆಯುತ್ತದೆ. ಈ ಆಚರಣೆಗೆ ಐತಿಹಾಸಿಕ ಹಿನ್ನೆಲೆಯಿದೆ. ಕುರುಬರ ಸಾಂಸ್ಕೃತಿಕ ವೀರನಾದ ಪದ್ಮಗೊಂಡ ಕುರಿಗಳನ್ನು ಕಾಯುತ್ತ ಅಡವಿಯಲ್ಲಿ ಇರುವಾಗ ರಾಕ್ಷಸಿಯ ಮಗಳು ಪರಿಚಯವಾಗುತ್ತಾಳೆ. ಇಬ್ಬರಿಗೂ ಆತ್ಮೀಯ ಸಂಬಂಧ ಬೆಳೆದು ಮದುವೆ ಆಗಬೇಕೆಂದು ನಿರ್ಧರಿಸುತ್ತಾರೆ. ಈ ಮದುವೆಗೆ ರಾಕ್ಷಸಿಯ ತಾಯಿ ಅಡ್ಡ ಬರುತ್ತಾಳೆ. ಆಗ ಇಬ್ಬರೂ ಸೇರಿ ಆ ರಾಕ್ಷಸಿಯನ್ನು ಕೊಲ್ಲುತ್ತಾರೆ. ಸಾಯುವ ಸಂದರ್ಭದಲ್ಲಿ ರಾಕ್ಷಸಿಯು ಕೋಪಾವೇಶದಿಂದ "ನೀವಿಬ್ಬರೂ ಸೇರಿ ನನ್ನನ್ನು ಈ ರೀತಿ ಮೋಸದಿಂದ ಸಾಯಿಸುತ್ತಿದ್ದೀರಿ. ನಾನು ಮುಂದಿನ ಜನ್ಮದಲ್ಲಿ ತೋಳವಾಗಿ ಹುಟ್ಟಿ ನಿಮ್ಮ ಜೀವನಾಧಾರವಾದ



ರೇವಣಸಿದ್ಧನ ಮೂರ್ತಿ ಶಿಲ್ಪ
ಸಿದ್ಧಗಿರಿ, ಕೊಲ್ಲಾಪುರ



ರೇವಣಸಿದ್ಧನ ಮೂರ್ತಿ ಶಿಲ್ಪ
ಹುಲ್ಲೂರು, ಚಿತ್ರದುರ್ಗ ಜಿಲ್ಲೆ

ಕುರಿಗಳನ್ನು ನಾಶ ಮಾಡುತ್ತೇನೆ" ಎನ್ನುತ್ತಾಳೆ. ಈ ಸಂಗತಿಯನ್ನು ಹಾಲುಮತ ಪುರಾಣ ಹೀಗೆ ಉಲ್ಲೇಖಿಸುತ್ತದೆ.

ರಕ್ಕಸಿ ಪ್ರಾಣವ ಬಿಡುವ ಸಮಯದೊಳು
ಒಕ್ಕಣಿಸಿದಳು ವಾಕ್ಯದಲಿ
ಗಕ್ಕನೇ ಕುರಿಯ ಹಿಂಡಿಗೆ ನಾನು ತೋಳವಾಗಿ
ಶಿಕ್ಷೆ ಮಾಡದೆ ಬಿಡೆನೆನುತ

ಏಳು ಕೊಪ್ಪರಿಗೆಯ ಕೂಳು ತಿನ್ನುವವಳು
ತೋಳವಾಗಿ ಜನಿಸಿದಳು
ಏಳುತ ಬೀಳುತ ಕುರಿಗಳ ತಿನ್ನುತ
ಕಾಳ ರಕ್ಕಸಿಯು ಮೆರೆದಾಳು[೧೦]



ರೇವಣಸಿದ್ಧೇಶ್ವರ ದೇವಸ್ಥಾನ - ಕಳಲೆ, ಮೈಸೂರು ಜಿಲ್ಲೆ

ಹೀಗೆ ಈ ಆಚರಣೆಯ ಸಂದರ್ಭದಲ್ಲಿ ರೇವಣ ಸಿದ್ಧೇಶ್ವರ ಪೂಜಾರಿಗಳಾದ ಒಡೆಯರು ಸಂತೋಷದಿಂದ ನರ್ತನ ಮಾಡುವುದನ್ನು ಕಣ್ಣಾರೆ ನೋಡಿಯೇ ಆನಂದಿಸ ಬೇಕು. ಇದೊಂದು ಉಗ್ರ ಮತ್ತು ಹಿಂಸಾತ್ಮಕವಾದ ಆಚರಣೆ. ಆದರೂ ಈ ಜಾತ್ರೆ ಚಾರಿತ್ರಿಕ ಘಟನೆಯೊಂದನ್ನು ಪ್ರದರ್ಶನಾತ್ಮಕವಾಗಿ ತಿಳಿಸುವ ಆಚರಣೆಯಾಗಿದೆ ಎಂದು ಹೇಳಬಹುದಾಗಿದೆ.

ಪಲ್ಲಕ್ಕಿಗಳ ಮೆರವಣಿಗೆ : ಪಲ್ಲಕ್ಕಿಗಳಲ್ಲಿ ರೇವಣಸಿದ್ಧೇಶ್ವರರ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ಊರ ತುಂಬ ಮೆರವಣಿಗೆಯನ್ನು ಹೊರಡಿಸುವ ಪದ್ಧತಿ ಇಂದಿಗೂ ರೂಢಿಯಲ್ಲಿದೆ. ಯಾವುದೇ ಊರಿನ ಕುರುಬ ಸಮುದಾಯಕ್ಕೆ ಸೇರಿದ ಎಲ್ಲ ದೇವರುಗಳ ಪಲ್ಲಕ್ಕಿಗಳಲ್ಲಿ ರೇವಣಸಿದ್ಧೇಶ್ವರನ ಪಲ್ಲಕ್ಕಿಗೆ ಅಗ್ರಸ್ಥಾನ. ಒಡೆಯರ ನೇತೃತ್ವದಲ್ಲಿ ಈತನ ಪಲ್ಲಕ್ಕಿಯೇ ಮೊದಲು ಹೊರಡಬೇಕು. ನಂತರ ಉಳಿದ ದೇವರುಗಳ ಪಲ್ಲಕ್ಕಿಗಳು ಈತನ ಹಿಂದೆ ಬರುತ್ತವೆ. ವಿಶಿಷ್ಟವಾದ ಸಂದರ್ಭದಲ್ಲಿ ಕುರುಬರು ಈ ಪಲ್ಲಕ್ಕಿಗಳನ್ನು ತಮ್ಮ ಮನೆಗೆ ಬರಮಾಡಿಸಿಕೊಂಡು ಪೂಜೆ ಮಾಡಿ ತಮ್ಮ ಭಕ್ತಿಯನ್ನು ಸಲ್ಲಿಸುತ್ತಾರೆ. ಈ ಸಂದರ್ಭದಲ್ಲಿ ಒಡೆಯರು ಹರಸಿ ಆಶೀರ್ವದಿಸುತ್ತಾರೆ. ಕುರುಬರ ಆದಿಗ್ರಂಥವಾದ ತಗರ ಪವಾಡ, ರೇವಣಸಿದ್ಧೇಶ್ವರ ಮಹಾತ್ಮೆ ಅಥವಾ ರೇವಣಸಾಂಗತ್ಯ ಟಗರ ಪವಾಡ ಎಂಬ ಕೃತಿಯ ತಾಡೋಲೆ ಪ್ರತಿಗಳನ್ನು

ಪಲ್ಲಕ್ಕಿಯಲ್ಲಿಟ್ಟು ಊರ ತುಂಬ ಮೆರವಣಿಗೆ ಮಾಡುವ ಪದ್ಧತಿ ಈಗಲೂ ಇದೆ.[೧೧]

ಸ್ಮಾರಕಗಳು : ಸಾಹಿತ್ಯೇತರ ಆಕರಗಳಾದ ಮಠ ಮಂದಿರ ದೇವಾಲಯ ಶಿಲ್ಪಗಳಂಥ ಸ್ಮಾರಕಗಳಲ್ಲಿ ರೇವಣಸಿದ್ಧೇಶ್ವರ ಬಗೆಗೆ ಅನೇಕ ಕುತೂಹಲಕಾರಿಯಾದ ಸಂಗತಿಗಳು ಅಡಗಿವೆ. ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಸರೂರು, ರೇವಣಸಿದ್ಧ, ಆತನ ಶಿಷ್ಯ ಶಾಂತ ಮುತ್ತಯ್ಯರ ನೆಲೆ. ಇಲ್ಲಿ ಏಳು ಕಳಸದ ರೇವಣಸಿದ್ಧೇಶ್ವರ ದೇವಾಲಯ, ಶಾಂತಮುತ್ತಯ್ಯನ ಗದ್ದುಗೆ, ಸಿದ್ಧಮಂಕರಿಗೆ ಸಂಬಂಧಿಸಿದ ಶಾಸನಶಿಲ್ಪ ಹಾಗೂ ಮೂರ್ತಿಶಿಲ್ಪಗಳಿವೆ. ಕಾಲದ ದೃಷ್ಟಿಯಿಂದ ಸರೂರು ರೇವಣಸಿದ್ಧನ ಪ್ರಾಚೀನ ದೇವಾಲಯ ಇದಾಗಿದೆ.

ವಿಶೇಷವಾಗಿ ದಕ್ಷಿಣ ಕರ್ನಾಟಕದ ತುಮಕೂರು, ಚಿತ್ರದುರ್ಗ, ಹಾಸನ, ಚಿಕ್ಕಮಗಳೂರು ಇತ್ಯಾದಿ ಜಿಲ್ಲೆಯಲ್ಲಿ ಈತನ ಹೆಸರಿನ ಅನೇಕ ಮಠಗಳಿವೆ. ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನ ಶ್ರೀರಾಂಪುರದ ರೇವಣಸಿದ್ಧೇಶ್ವರ ಮಠದ ವಾಸ್ತುಶಿಲ್ಪ ಆ ಭಾಗದಲ್ಲಿಯೇ ಪ್ರಸಿದ್ಧವಾಗಿವೆ. ಹಿಂದಿನ ಕಾಲದಲ್ಲಿ ಈ ಮಠಕ್ಕೆ ನಾಲ್ಕುನಿಟ್ಟು ನಲವತ್ತೆಂಟು ಹರಿವಾಣ ದವರ ಗದ್ದುಗೆ ಎಂದು ಕರೆಯುತ್ತಿದ್ದರು. ಅಂದರೆ ಈಗಲೂ ನಾಲ್ಕು ದಿಕ್ಕುಗಳಿಂದ ನಲವತ್ತೆಂಟು ಹಳ್ಳಿಗಳ ಕುರುಬರು ಈ ಮಠಕ್ಕೆ ನಡೆದುಕೊಳ್ಳುತ್ತಾರೆ. ಹನ್ನೆರಡು ವರುಷಗಳಿಗೊಮ್ಮೆ ನಡೆಯುವ ಜಾತ್ರೆಯಲ್ಲಿ ಸುತ್ತಮುತ್ತಲಿನ ಹಲವಾರು ಹಳ್ಳಿಗಳಲ್ಲಿರುವ ಬೀರಲಿಂಗೇಶ್ವರ ದೇವರುಗಳು ಈ ಜಾತ್ರೆಗೆ ಆಗಮಿಸುತ್ತವೆ. ಹಾಗೆಯೇ ಪ್ರತಿ ತಿಂಗಳು ಅಮವಾಸ್ಯೆಯ ದಿನ ಅನೇಕ ಭಕ್ತರು ಇಲ್ಲಿ ಸೇರುತ್ತಾರೆ. ಈ ಮಠಕ್ಕೆ ಗದ್ದೆ ತೋಟಗಳು ಇವೆ. ಇದೇ ತಾಲ್ಲೂಕಿನ ದೊಡ್ಡತೇಕಲವಟ್ಟಿ ಗ್ರಾಮದ ಸಮೀಪವಿರುವ ಕಂಸಾಗರದ ರೇವಣಸಿದ್ಧೇಶ್ವರ ಮಠದ ವಾಸ್ತುಶಿಲ್ಪವೂ ವಿಶಿಷ್ಟವಾಗಿದೆ.

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಕಳಲೆ ಐತಿಹಾಸಿಕವಾದ ಮಹತ್ವವನ್ನು ಹೊಂದಿದ ಗ್ರಾಮ. ಇಲ್ಲಿನ ದಕ್ಷಿಣ ಭಾಗಕ್ಕಿರುವ ರೇವಣಸಿದ್ಧೇಶ್ವರ ದೇವಾಲಯ ಅಂದಾಜು ಐದನೂರು ವರ್ಷಗಳಷ್ಟು ಪುರಾತನವಾದುದು. ಈ ದೇವಾಲಯದ ಆವರಣದಲ್ಲಿ ವೀರಗಲ್ಲು ಮತ್ತು ಮಾಸ್ತಿಕಲ್ಲುಗಳಿವೆ. ಅವುಗಳಲ್ಲಿ ಹೆಚ್ಚಿನವು ಶೈವಸಂಪ್ರದಾಯಕ್ಕೆ ಸೇರಿದವುಗಳಾಗಿವೆ. ಕೆಲವು ವೀರಗಲ್ಲುಗಳ ಮೇಲೆ ಜೋಡಿ ವೀರರ ಮರಣವನ್ನು ಮತ್ತು ಅಪ್ಸರೆಯರು ಅವರನ್ನು ಕೈಲಾಸಕ್ಕೆ ಕರೆದೊಯ್ಯುತ್ತಿರುವ ಅಪರೂಪದ ಉಬ್ಬುಚಿತ್ರವನ್ನು ಇಲ್ಲಿ ನೋಡಬಹುದು. ಚಿಕ್ಕಮಗಳೂರು ಜಿಲ್ಲೆಯ ಶಿವನಿ, ಅಜ್ಜಂಪುರ, ಆಸಂದಿ, ತರೀಕೆರೆ ಮೊದಲಾದ ಸ್ಥಳಗಳಲ್ಲಿ ರೇವಣಸಿದ್ಧನ ದೇವಾಲಯಗಳು ಮಠಗಳಿದ್ದು, ನಿರ್ದಿಷ್ಟ ಅವಧಿಯಲ್ಲಿ ಉತ್ಸವಗಳು ವೈಭವದಿಂದ ನೆರವೇರುತ್ತವೆ.

ಈ ಎಲ್ಲ ಮಠಗಳು ಕುರುಬ ಸಮುದಾಯದವರ ಒಡೆತನದಲ್ಲಿವೆ. ಕುರುಬರ ಗುರುಗಳಾದ ಒಡೆಯರು ಈ ಮಠಗಳ ಅಧಿಪತಿಗಳಾಗಿ ಪೂಜಾರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕುರುಬ ಸಮುದಾಯದವರ ನಾಮಕರಣ, ದೀಕ್ಷೆ, ಮದುವೆ, ಮರಣ, ಜಾತ್ರೆ ಉತ್ಸವಗಳಂಥ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ಈ ಒಡೆಯರು ಪೌರೋಹಿತ್ಯವನ್ನು ವಹಿಸುವುದು, ಒಡೆಯರ ಮನೆತನಗಳಿಗೆ ಇಂತಿಷ್ಟು ಊರುಗಳನ್ನು ಹಂಚಿಕೆ ಮಾಡಿಕೊಂಡಿರುವುದು, ಆ ಊರುಗಳಲ್ಲಿರುವ ಕುರುಬರಿಂದ ಒಡೆಯರು ದವಸ ಧಾನ್ಯ ಬಟ್ಟೆ ಹಣ ಇತ್ಯಾದಿಗಳನ್ನು ಕಾಣಿಕೆ ರೂಪದಲ್ಲಿ ಸ್ವೀಕರಿಸುವುದು, ಒಡೆಯರು ನಿಧನರಾದ ನಂತರ ಆ ಒಡೆಯರ ಹೆಂಡಂದಿರಿಗೆ ಗುರುತನ ಬರುವುದು, ಅವಳಿಗೆ ಒಡೆಯರಮ್ಮ, ಅಮ್ಮನೋರು ಎಂದು ಕರೆಯುವುದು, ಮುತ್ತೈದೆಯ ಸಂಕೇತಗಳಾದ ಕರಿಮಣಿ ಸರ, ಕುಂಕುಮ ತೆಗೆಯದಿರುವುದು, ಕೊರಳಲ್ಲಿ ಲಿಂಗವನ್ನು ಧರಿಸುವುದು, ಕುರುಬರ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಆಕೆ ಗುರುಸ್ಥಾನದಲ್ಲಿ ನಿಂತು ಮುನ್ನಡೆಸುವುದನ್ನು ನೋಡಿದರೆ ರೇವಣಸಿದ್ಧ ಹಾಕಿಕೊಟ್ಟ ಆಚರಣೆಗಳು ಸಂಪ್ರದಾಯಗಳು ಎಷ್ಟೊಂದು ಔಚಿತ್ಯಪೂರ್ಣವಾಗಿದ್ದವು ಎಂಬುದನ್ನು ಇಲ್ಲಿ ಗಮನಿಸಬೇಕಾಗಿದೆ.[೨೨]

ಇನ್ನು ಕರ್ನಾಟಕ ಹಾಗೂ ಮಹಾರಾಷ್ಟ್ರದ ಕೆಲವು ದೇವಾಲಯಗಳಲ್ಲಿ ರೇವಣಸಿದ್ಧೇಶ್ವರನ ಮೂರ್ತಿಶಿಲ್ಪಗಳಿವೆ. ಇಂಗಳೇಶ್ವರ (ಬಿಜಾಪುರ ಜಿಲ್ಲೆ ಬಸವನಬಾಗೇವಾಡಿ ತಾಲ್ಲೂಕು), ಕನ್ಹೇರಿ (ಮಹಾರಾಷ್ಟ್ರ ರಾಜ್ಯದ ಕೊಲ್ಲಾಪುರ ಜಿಲ್ಲೆ), ರೇಣಾಪಿ (ಮಹಾರಾಷ್ಟ್ರದ ಸಾಂಗಲಿ ಜಿಲ್ಲೆ ಖಾನಾಪುರ ತಾಲ್ಲೂಕು), ಮಂಗಳವೇಢೆ (ಮಹಾರಾಷ್ಟ್ರದ ಸೊಲ್ಲಾಪುರ ತಾಲ್ಲೂಕು), ಮೇಲಣಗವಿ ಶಿವಗಂಗೆ ಬೆಟ್ಟ (ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕು), ಹೂಲಿಬೆಟ್ಟ (ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕು), ಕಾಮಧೇನು (ಧಾರವಾಡ ಜಿಲ್ಲೆ ಕಲಘಟಗಿ ತಾಲ್ಲೂಕು), ಹುಲ್ಲೂರು (ಚಿತ್ರದುರ್ಗ ಜಿಲ್ಲೆ ಮತ್ತು ತಾಲ್ಲೂಕು) ಮೊದಲಾದ ಸ್ಥಳಗಳಲ್ಲಿ ವಿಶಿಷ್ಟವಾದ ರೇವಣಸಿದ್ಧೇಶ್ವರ ಮೂರ್ತಿಶಿಲ್ಪಗಳಿವೆ. ಸಾಮಾನ್ಯವಾಗಿ ಈ ಮೂರ್ತಿಶಿಲ್ಪಗಳು ಧ್ಯಾನಸ್ಥನಾಗಿ ಕುಳಿತಿರುವ ಭಂಗಿಯಲ್ಲಿವೆ. ಈ ಎಲ್ಲ ಶಿಲ್ಪಗಳು ೧೩ನೆಯ ಶತಮಾನದಷ್ಟು ಪ್ರಾಚೀನದ್ದಾಗಿವೆ. ಹೀಗಾಗಿ ಇವು ರೇವಣಸಿದ್ಧನ ನಿಜಶಿಲ್ಪಗಳೆಂದು ಹೇಳಬಹುದಾಗಿದೆ. ಆದರೆ ಕೊಲ್ಲಿಪಾಕಿ ಶಿವಲಿಂಗದಲ್ಲಿ ಉದ್ಭವವಾದಂತೆ ವಿನ್ಯಾಸ

ಗೊಂಡಿರುವ ರೇವಣಸಿದ್ಧನ ಪ್ರಾಚೀನ ಶಿಲ್ಪ ಒಂದೂ ದೊರೆಯುವುದಿಲ್ಲ. ಈ ಹಿನ್ನೆಲೆಯಲ್ಲಿ ಎಂ.ಎಂ. ಕಲಬುರ್ಗಿ ಅವರು ಹೇಳುವಂತೆ "ಬಹುಶಃ ೧೯ನೆಯ ಶತಮಾನದಲ್ಲಿ ಮುದ್ರಿತ ಪುಸ್ತಕಗಳ ಮೂಲಕ ಶಿವಲಿಂಗದಲ್ಲಿ ಉದ್ಭವ ವಾದಂಥ ಚಿತ್ರವನ್ನು ಪ್ರಚಾರಕ್ಕೆ ತಂದು, ೨೦ನೆಯ ಶತಮಾನದಲ್ಲಿ ಪಂಚಾಚಾರ್ಯರೂ, ಅವರ ಅನುಯಾಯಿಗಳೂ ಇಂಡಿ ಸರೂರ ಆಸಂದಿ ಮೊದಲಾದ ಗ್ರಾಮಗಳಲ್ಲಿರುವ ಹಳೆಯ ದೇವಾಲಯಗಳಲ್ಲಿ ಹೊಸ ಬಿಳಿಕಲ್ಲಿನ ಶಿಲ್ಪವನ್ನು ಸ್ಥಾಪಿಸುತ್ತ ನಡೆದಿದ್ದಾರೆ. ಹೀಗಾಗಿ ನಿಜರೇವಣಸಿದ್ಧನ ಶಿಲ್ಪ ೧೩ನೆಯ ಶತಮಾನದಷ್ಟು ಪ್ರಾಚೀನ, ಕೃತಕ ರೇವಣಾಚಾರ್ಯನ ಶಿಲ್ಪ ೧೯-೨೦ನೆಯ ಶತಮಾನದಷ್ಟು ಆಧುನಿಕವೆಂದು ಹೇಳಬಹುದು."[೧೩] ಹೀಗೆ ರೇವಣಸಿದ್ಧೇಶ್ವರ ಮಠ ದೇವಾಲಯ ಮತ್ತು ಮೂರ್ತಿಶಿಲ್ಪಗಳು ಕರ್ನಾಟಕದಾದ್ಯಂತ ಕಂಡುಬರುತ್ತವೆ. ವ್ಯಾಪಕವಾದ ಸರ್ವೇಕ್ಷಣೆ ನಡೆಸಿ ಅವುಗಳ ಸ್ವರೂಪವನ್ನು ಕುರಿತು ಇನ್ನೂ ಆಳವಾದ ಸಂಶೋಧನೆ ನಡೆಸುವುದು ಅವಶ್ಯವಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಈ ಕೃತಿಯನ್ನು ಮೂರು ಹಸ್ತಪ್ರತಿಗಳ ನೆರವಿನಿಂದ ಎಂ.ಎಂ. ಕಲಬುರ್ಗಿ, ಸಿ.ಕೆ. ಪರಶುರಾಮಯ್ಯ ಮತ್ತು ಎಫ್.ಟಿ. ಹಳ್ಳಿಕೇರಿ ಅವರು ಪರಿಷ್ಕರಿಸಿ ಗದುಗಿನ ವಿದ್ಯಾನಿಧಿ ಪ್ರಕಾಶನದಿಂದ ೨೦೦೪ರಲ್ಲಿ ಪ್ರಕಟಿಸಿದ್ದಾರೆ.

೨. ಸಂ. ಶಿವಾನಂದ ಗುಬ್ಬಣ್ಣವರ, **ದೇವರ್ ಬಂದಾವ್ ಬನ್ನೀರೇ,** ಪುಟ ೯೫, ಒಕ್ಕಲ ಮಕ್ಕಳ ಪ್ರಕಾಶನ ಯಳವತ್ತಿ, ೧೯೮೦.

೩. ಸಂ. ಕಮಲ ಹೆಮ್ಮಿಗೆ, **ದೇವರಿಗೆ ಶರಣೆನ್ನುವೆನೇ,** ಪುಟ ೪೩, ಪ್ರಭಾ ಪಬ್ಲಿಷರ್ಸ್, ಧಾರವಾಡ, ೧೯೯೪.

೪. ಅದೇ., ಪುಟ ೪೩.

೫. ಸಂ. ಜಿ. ಜಿಬಾಡೆ, **ಕಾಡು ಹೂಗಲು,** ಪುಟ ೯೧, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೩.

೬ ಸಂ. ಎಸ್. ಬಸವರಾಜ, **ಡೊಳ್ಳಿನ ಹಾಡು,** ಪುಟ ೬೯, ಯಕ್ಷ ಪ್ರಕಾಶನ, ಮೈಸೂರು, ೧೯೭೮.

೭. ಲಕ್ಷ್ಮಜ್ಜಿಯು ಬೀರಪ್ಪ ಮುಂತಾದ ದೈವಗಳ ಬಗೆಗೂ ಚೆನ್ನಾಗಿ ಹಾಡುತ್ತಾಳೆ. ಆ ಹಾಡುಗಳನ್ನು ಧ್ವನಿಮುದ್ರಣ ಮಾಡಿಕೊಂಡು ಪ್ರಕಟಿಸುವ ಅಗತ್ಯವಿದೆ.

೮. ಈ ಹಾಡುಗಳ ವೈಶಿಷ್ಟ್ಯವನ್ನು ಪ್ರೊ. ಎಸ್.ಜಿ. ಸಿದ್ಧರಾಮಯ್ಯ ಅವರು ಒಂದೆಡೆ ವಿಶ್ಲೇಷಣೆಗೊಳಪಡಿಸಿದ್ದಾರೆ. ನೋಡಿ ಸಂ. ಎಂ. ಜೈಕುಮಾರ್, **ಪಾವನ,** ಪುಟ ೩೭, ಕಾಗಿನೆಲೆ ಮಹಾಸಂಸ್ಥಾನದ ಕನಕಗುರುಪೀಠ ಸ್ಥಾಪನೆಯ ಸಂಸ್ಮರಣ ಸಂಚಿಕೆ, ೧೯೯೨.

೯. ಒಡೆಯರ ಸಂಪ್ರದಾಯ ಮತ್ತು ಆಚರಣೆಗಳು, **ಕುರುಬರಗುರು ಒಡೆಯರು,** ಸಂ. ಎಫ್.ಟಿ. ಹಳ್ಳಿಕೇರಿ, ವಿಕಾಸ ಪ್ರಕಾಶನ, ಹೊಸಪೇಟೆ, ಪುಟ ೮೦, ೨೦೦೭.

೧೦. ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ, **ಹಾಲುಮತ ಪುರಾಣವು,** ಪುಟ ೩೯, ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೯.

೧೧. ೨೦೦೪ರಲ್ಲಿ ಪರಿಷ್ಕರಿಸಿ ಪ್ರಕಟಿಸಿದ **ತಗರ ಪವಾಡ** ಗ್ರಂಥವನ್ನು ರೇವಣಸಿದ್ಧೇಶ್ವರನ ಪಲ್ಲಕ್ಕಿಯಲ್ಲಿಟ್ಟು ಚಿಕ್ಕನಾಯ್ಕನಹಳ್ಳಿಯ ಎಲ್ಲ ಬೀದಿಯ ತುಂಬ ಮೆರವಣಿಗೆ ಮಾಡಿ ನಂತರ ಒಡೆಯರ ಸಮ್ಮುಖದಲ್ಲಿ ಅದನ್ನು ಬಿಡುಗಡೆ ಮಾಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

೧೨. ಒಡೆಯರ ಪರಂಪರೆಯ ಸಮಗ್ರ ವಿವರಗಳಿಗಾಗಿ ನೋಡಿ ೧. **ಕುರುಬರಗುರು ಒಡೆಯರು,** ಸಂ. ಎಫ್.ಟಿ. ಹಳ್ಳಿಕೇರಿ, ವಿಕಾಸ ಪ್ರಕಾಶನ, ಹೊಸಪೇಟೆ, ೨೦೦೭, ೨. **ಕುರುಬರ ಗುರು ಒಡೆಯರು : ಸಾಂಸ್ಕೃತಿಕ ಅಧ್ಯಯನ,** ಲೇ. ಜಿ.ಜಿ. ಬಿರಾದಾರ, ಅಪ್ರಕಟಿತ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೧೩. ರೇವಣಸಿದ್ಧನ ಚರಿತ್ರೆ : ಎರಡು ಸಂಪ್ರದಾಯಗಳು, ಲಿಂಗಾಯತ ೩-೧೩, ಪುಟ ೭, ಲಿಂಗಾಯತ ಸಂಶೋಧನ ಕೇಂದ್ರ ಗ್ರಂಥಾಲಯ, ನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ, ಮಾರ್ಚ್ ೨೦೦೯.

ಎಂ. ಶಿವಶಂಕರಯ್ಯ*

೫|| ರೇವಣಸಿದ್ಧ ಸಂಪ್ರದಾಯ ಮತ್ತು ಶಂಕರಾಚಾರ್ಯ ಪರಂಪರೆ – ಒಂದು ವಿಶ್ಲೇಷಣೆ

ಪ್ರಸ್ತಾವಿಕೆ : ಜಗದ್ಗುರು ರೇವಣಸಿದ್ಧರಿಗೆ ವೀರಶೈವ ಧರ್ಮದಲ್ಲಿ ಬಹುದೊಡ್ಡ ಹೆಸರಿದೆ. ವೀರಶೈವಧರ್ಮ ಜಗದ್ಗುರು ರೇಣುಕರಿಂದ ಸ್ಥಾಪನೆಗೊಂಡು ರೇವಣಾರಾಧ್ಯ ಮತ್ತು ರೇವಣಸಿದ್ಧರುಗಳಿಂದ ಮುಂದುವರೆದು, ಪ್ರಸ್ತುತ ಜಗದ್ಗುರುಗಳಾದ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರ ಪರ್ಯಂತರವಾಗಿ, ಪರಂಪರಾನುಗತವಾಗಿ ಮುಂದು ವರೆದಿರುವುದು ಐತಿಹಾಸಿಕ ಸತ್ಯವಾಗಿದೆ. ಈ ಜಗದ್ಗುರು ಪರಂಪರೆಯನ್ನು ಸಂಸ್ಕೃತ, ತೆಲುಗು, ಮರಾಠಿ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಮಾತ್ರವಲ್ಲದೇ, ಶಿಲಾಶಾಸನಗಳಲ್ಲಿ ಶ್ರೀ ಜಗದ್ಗುರು ರೇಣುಕರ ಪರಂಪರೆಯೆಂತಲೂ **ರೇವಣಸಿದ್ಧ ಸಂಪ್ರದಾಯ**ವೆಂದೂ ಉಲ್ಲೇಖಿಸಲ್ಪಟ್ಟಿದೆ.[೧] ಆದರೆ ಶ್ರೀಮದ್ರಾಂಭಾಪುರಿ ಪೀಠದ ಪಟ್ಟವಲ್ಲರಿಯಲ್ಲಿ ಐವರು ರೇವಣಸಿದ್ಧರ ಹೆಸರುಗಳು ಉಲ್ಲೇಖಿಸಲ್ಪಟ್ಟಿದ್ದು ಕಾಲಮಾನ ವಿವೇಚಿಸದೆ ಎಲ್ಲಾ ಘಟನೆಗಳನ್ನು ಒಬ್ಬರಿಗೇ ಅನ್ವಯ ಮಾಡಿರುವುದು ಇಂದೂ ಕೂಡ ವಿಭಿನ್ನವಾದ ನಿಲುವುಗಳು ಉಳಿದುಕೊಂಡು ಬಂದಿವೆ.

ಅಂತೆಯೇ ಅದ್ವೈತ ಸಿದ್ಧಾಂತದ ಪ್ರತಿಪಾದಕರಾದ ಶ್ರೀ ಶಂಕರಾಚಾರ್ಯರಿಂದ ಆರಂಭವಾಗಿ ವಿದ್ಯಾರಣ್ಯರಿಂದ ಮುಂದುವರೆದು ಪ್ರಸ್ತುತ ಶ್ರೀ ಭಾರತೀತೀರ್ಥ ಗುರುಗಳ ಪರ್ಯಂತರವಾಗಿ ಮುಂದುವರೆದಿರುವ ಪರಂಪರೆಯನ್ನು ಶ್ರೀ ಜಗದ್ಗುರು ಶಂಕರಾಚಾರ್ಯರ ಪರಂಪರೆ ಎಂದು ಕರೆಯ ಲಾಗುತ್ತದೆ. ಅಂತೆಯೇ ಶ್ರೀ ಜಗದ್ಗುರು ಶಂಕರಾಚಾರ್ಯರ ಕಾಲಮಾನದ ಬಗೆಗೆ ಶೃಂಗೇರಿ, ಕಂಚಿ ಮತ್ತು ದ್ವಾರಕ ಪೀಠಗಳು ಪ್ರತ್ಯೇಕ ನಿಲುವು ತಾಳಿದಂತೆ ಸಾಹಿತ್ಯಕೃತಿಗಳಲ್ಲಿ ಆದಿಶಂಕರಾಚಾರ್ಯರೆಂತಲೂ, ಶಂಕರಾಚಾರ್ಯರೆಂತಲೂ (ಭಾಷ್ಯಕೃತ) ಉಲ್ಲೇಖಗಳಿರುವುದರಿಂದ ಆದಿ ಶಂಕರಾ ಚಾರ್ಯರಿಂದ ಭಾಷ್ಯ ಶಂಕರಾಚಾರ್ಯರು ಭಿನ್ನರೇ ? ಎಂಬುದನ್ನು ಬಿಡಿಸುವ ಯತ್ನಗಳು ಆಗದೇ ಇರುವುದೂ ಸಹಾ ಗೊಂದಲಗಳು ಹಾಗೆಯೇ ಉಳಿಯುವಂತಾಗಿದೆ.

ಆದರೆ ಪ್ರಸ್ತುತ ಶಂಕರಾಚಾರ್ಯರ ಪರಂಪರೆ ಬಗ್ಗೆ ಹಾಗೂ ಶೃಂಗೇರಿ ಮಠದಲ್ಲಿ ಪರಂಪರಾನುಗತವಾಗಿ ಪೂಜೆಗೊಳ್ಳುತ್ತಿರುವ ಶ್ರೀ ಚಂದ್ರಮೌಳೀಶ್ವರ ಲಿಂಗ ಮತ್ತು ರತ್ನಗರ್ಭಗಣಪತಿ ಬಗೆಗಿನ ಗ್ರಂಥಗಳಲ್ಲಿನ ಒಳಸುಳಿವುಗಳು ಶಾಸನ ತಜ್ಞರ ಮತ್ತು ವಿದ್ವಾಂಸರ ಸಮರ್ಥನೆಗಳು ಶೃಂಗೇರಿಯ ಶ್ರೀ ಶಂಕರಾಚಾರ್ಯ ಪರಂಪರೆಯು ಶ್ರೀ ರೇವಣಸಿದ್ಧ ಪರಂಪರೆ ಅಥವಾ ಸಂಪ್ರದಾಯವೆಂಬ ಸಂಗತಿಯು ನಮ್ಮೆಲ್ಲರನ್ನು ಒಂದು ಪ್ರತ್ಯೇಕ ಜಾಡಿನಡೆಗೆ ಕೊಂಡೊಯ್ಯುತ್ತದೆ.

ಶೃಂಗೇರಿ ಮತ್ತು ಮಲ್ಲಿಕಾರ್ಜುನ ಲಿಂಗ.

ಪ್ರಸ್ತುತ ಲೇಖನಕ್ಕೆ ಬರುವ ಮೊದಲು ಶೃಂಗೇರಿಯ ಪ್ರಸಿದ್ಧಿಯ ಬಗ್ಗೆ ಅವಲೋಕನದ ಅಗತ್ಯತೆ ಇದೆ. ಮೈಸೂರು ಸಂಸ್ಥಾನದ ಆಸ್ಥಾನವಿದ್ವಾಂಸರಾಗಿದ್ದ ಶ್ರೀಯುತ ಎ.ಆರ್. ಕೃಷ್ಣಶಾಸ್ತ್ರಿಗಳು "ಶೃಂಗೇರಿ ಈಗ ಪ್ರಸಿದ್ಧವಾಗಿರುವುದು ಕ್ರಿ.ಶ. ೧೪ನೇ ಶತಮಾನದ ವಿದ್ಯಾಶಂಕರ ದೇಗುಲ ಮತ್ತು ಶಾರದಾಮಾತೆಯಿಂದ. ಆದರೆ ಕ್ರಿ.ಶ. ೮ನೇ ಶತಮಾನದಲ್ಲಿ ಶೃಂಗೇರಿ ಮಠ ಶ್ರೀ ಶಂಕರಾಚಾರ್ಯರಿಂದ ಸ್ಥಾಪಿತವಾಗಿದ್ದು ಅದಕ್ಕಿಂತ ಹಿಂದೆ ಶೃಂಗೇರಿಗೆ ಪ್ರಾಧಾನ್ಯವಿದ್ದದ್ದು ಏತರಿಂದ? ಅದು ಕಾಂಚೀ, ಬದರಿ, ಪುರಿ ಜಗನ್ನಾಥಗಳಿಗೆ ಸಮಾನ ವೆಂದು ಶಂಕರಾಚಾರ್ಯರು ಏಕೆ ಭಾವಿಸಿದರು ? ಅದು ಅಂಥ ಧರ್ಮಕ್ಷೇತ್ರವಾಗಿ ಮಾಡಿದ್ದ ದೇವತೆ ಯಾವುದು ? ಪ್ರಾಯಶಃ ಇಲ್ಲಿ ಬರುವ ಮಲ್ಲಿಕಾರ್ಜುನ ಲಿಂಗವೇ ? ಇದರಲ್ಲಿ ವಿಭಾಂಡಕ ಮುನಿಗಳು ಐಕ್ಯರಾದರೆಂದೂ, ಬೆಟ್ಟದ ಮೇಲೆ ಅವರ ಆಶ್ರಮವಿತ್ತೆಂದೂ, ಅಲ್ಲಿ ಋಷ್ಯಶೃಂಗರು ಹುಟ್ಟಿದರೆಂದೂ, ಆದ್ದರಿಂದ ಮಲ್ಲಿಕಾರ್ಜುನ ಬೆಟ್ಟಕ್ಕೆ ಶೃಂಗಗಿರಿ ಎಂದು ಹೆಸರಾಗಿ ಅದರ ಬುಡದಲ್ಲಿರುವ ಊರಿಗೆ ಆ ಹೆಸರೇ ಬಂದಿತೆಂದು ಹೇಳುತ್ತಾರೆ. ಶೃಂಗಗಿರಿ (ಶೃಂಗೇರಿ) ಎಂಬ ಹೆಸರು ಹೇಗಾದರೂ ಬಂದಿರಲಿ ಊರಿನ "ಮಲ್ಲಿಕಾರ್ಜುನ ಲಿಂಗವು ಶಂಕರಾಚಾರ್ಯರಿಗಿಂತ ಹಿಂದೆಯೇ ಪ್ರಸಿದ್ಧವಾಗಿರಬೇಕು. ಆದ್ದರಿಂದ ಶೃಂಗೇರಿಯು ಪ್ರಸಿದ್ಧ ಶೈವ ಕ್ಷೇತ್ರವಾಗಿದ್ದಿರಬೇಕು ಎಂಬುದು ಎ.ಆರ್. ಕೃಷ್ಣಶಾಸ್ತ್ರಿಗಳ ಸ್ಪಷ್ಟ ಅಭಿಪ್ರಾಯ.[೨]

* ಪ್ರಾಂಶುಂಪಾಲರು, ಗ್ರೇಡ್–೧, ಶ್ರೀ ಮೃ.ಶಿ.ಪ್ರಥಮ ದರ್ಜೆ ಕಾಲೇಜು, ಹೊನ್ನಾಳಿ.

ಎ.ಆರ್. ಕೃಷ್ಣಶಾಸ್ತ್ರಿಗಳ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಲ.ನಾ. ಶಾಸ್ತ್ರಿಗಳು ಶ್ರೀಶಂಕರಚಂದ್ರಮೌಳೀಶ್ವರ ಶೃಂಗೇರಿ (ಸಂಶೋಧನ ಪ್ರಬಂಧ) ವಿದ್ಯಾಶಂಕರ ಪ್ರಕಾಶನ ಮೈಸೂರು ಎಂಬ ಕೃತಿಯಲ್ಲಿ—

* ಶೃಂಗೇರಿ ಶಂಕರಾಚಾರ್ಯರ ಪರಂಪರೆಯಲ್ಲಿ ವಿಷ್ಣುಪರವುಳ್ಳ ೧೭ ಜನ ಆಚಾರ್ಯರ ಹೆಸರಿದ್ದು ಅಲ್ಲಿನ ಆಚಾರ್ಯರಿಗೆ ನೃಸಿಂಹ ಮಂತ್ರವೂ ಉಪದಿಷ್ಟವಾಗಿದೆ.[೩]
* ಶಿವಪೂಜೆ ಮಾಡುವುದರಿಂದ ಶೈವರಲ್ಲ, ಚಕ್ರಾರ್ಚನೆ ಮಾಡುವುದರಿಂದ ಶಾಕ್ತರಲ್ಲ, ನೃಸಿಂಹೋಪಾಸಕ ರಾದುದರಿಂದ ವೈಷ್ಣವರಲ್ಲ.[೪]
* ರೇವಣಸಿದ್ಧರ ಸಮಕಾಲೀನರು ಶ್ರೀ ಸಿಂಹಗಿರಿ ಯೆಂಬುವರು (೧೦೩೮–೧೧೯೮) ತಪೋನುಷ್ಠಾನ ನಡೆಸುತ್ತಿದ್ದ ಸಿಂಹಗಿರಿ ಅಥವಾ ಹಳೇ ಶೃಂಗೇರಿ ಎಂಬ ಅಗ್ರಹಾರವು ಶೃಂಗೇರಿಯ ನೈಋತ್ಯ ದಿಕ್ಕಿನಲ್ಲಿ ಸುಮಾರು ಅರ್ಧ ಮೈಲಿ ದೂರದಲ್ಲಿದೆ. ಆದ್ದರಿಂದ ಈಶ್ವರಲಿಂಗಾರ್ಚನೆವೊಂದರಿಂದಲೇ ಅವರ ಒಲವು ಶೈವ ಮತದ ಕಡೆಗೆ ಇದೆ ಎಂದು ಹೇಳುವುದು ಅವಾಸ್ತವಿಕ ಕಲ್ಪನೆ ಎಂಬುದು ಅವರ ವಾದ.[೫]

ಈ ವಾದಕ್ಕೆ ಪೂರಕವಾಗಿ ಶೃಂಗೇರಿ ಮಠದ ಇತಿಹಾಸಜ್ಞರಾದ ಎ.ಕೆ ಶಾಸ್ತ್ರಿಗಳು ಸಹ ಸುರೇಶ್ವರಾಚಾರ್ಯರ ಉತ್ತರಾಧಿಕಾರಿಗಳು ಶೃಂಗೇರಿಯ ಸುತ್ತಮುತ್ತಲಿನ ಪ್ರದೇಶ ಗಳಾದ ಸಿಂಹಪುರ, ವಶಿಷ್ಠಾಶ್ರಮ ಮುಂತಾದ ಕಡೆಗಳಲ್ಲಿ ಕುಟೀರಗಳನ್ನು ನಿರ್ಮಿಸಿ ಕೊಂಡು ತಮ್ಮ ಶಿಷ್ಯರೊಂದಿಗೆ ವಾಸಿಸುತ್ತಿದ್ದರೆಂಬ ಶೃಂಗೇರಿ ಚರಿತ್ರೆಯಲ್ಲಿನ ಅಭಿಪ್ರಾಯವು ಡಿ.ವಿ. ಗುಂಡಪ್ಪನವರು "ವಿದ್ಯಾರಣ್ಯರ ಕಾಲದವರೆಗೆ ಶೃಂಗೇರಿಯಲ್ಲಿ ದೊಡ್ಡ ಮಠವಾಗಲೀ, ಶ್ರೀ ಶಾರದಾದೇವಿಯ ಲೋಹದ ಪ್ರತಿಮೆಯಾಗಲೀ ಮಠಕ್ಕೆ ತಕ್ಕ ಭೂಮಿ ಮತ್ತು ಧನ ಸಂಪತ್ತಾಗಲೀ ಇರಲಿಲ್ಲವೆಂದು ವಿವಿಧ ಮೂಲಗಳಿಂದ ತಿಳಿದು ಬರುತ್ತದೆ[೬] ಎಂದಿರುವರು.

ಆದ್ದರಿಂದ ಮೇಲಿನ ಎ.ಕೆ. ಶಾಸ್ತ್ರಿಗಳ, ಡಿ.ವಿ. ಗುಂಡಪ್ಪ ನವರ ಮತ್ತು ಲ.ನಾ. ಶಾಸ್ತ್ರಿಗಳ ಹೇಳಿಕೆಗಳು ಶಂಕರಾ ಚಾರ್ಯರ ಪರಂಪರೆಯ ಗುರುಗಳು ವಿದ್ಯಾರಣ್ಯರ ಕಾಲದ ವರೆಗೆ ಪ್ರಸ್ತುತ ಶೃಂಗೇರಿಯಲ್ಲಿ ನೆಲೆಸದೆ ಇದ್ದುದು ಸ್ಪಷ್ಟವಾಗು ವುದು. ಲ.ನಾ. ಶಾಸ್ತ್ರಿಗಳು ಶಂಕರರ ಪರಂಪರೆಯಲ್ಲಿ ೧೭ ಜನ ಗುರುಗಳ ಹೆಸರು ವಿಷ್ಣು ಪರವಾದ ಹೆಸರಿದ್ದು ನೃಸಿಂಹ ಮಂತ್ರವು ಉಪದಿಷ್ಟವಾಗಿರುವುದರಿಂದ ಶಿವಪೂಜೆ ಮಾಡುವುದರಿಂದ ಅವರು ಶೈವರು, ವೈಷ್ಣವರಲ್ಲ ವೆಂದಿರುವುದನ್ನು ಪರಾಮರ್ಶಿಸಿದರೆ ಶ್ರೀ ಶಂಕರರು ಮೂಲತಃ ಕೇರಳದ ಕಾಲಟಿಯುವರು. ಹಾಗಾದರೆ ಕರ್ನಾಟಕದ ಶೃಂಗೇರಿಗೆ ಬಂದಿದ್ದಾದರೂ ಏತಕ್ಕೆ ಎನ್ನುವ ಪ್ರಶ್ನೆಯನ್ನು ಹಾಕಿಕೊಂಡಂತೆ ಕಾಣಿಸುವುದಿಲ್ಲ. ಪ್ರಾಯಶಃ ಬಾಲ್ಯದಲ್ಲಿಯೇ ಎಲ್ಲಾ ವಿದ್ಯೆಗಳನ್ನು ಅಭ್ಯಾಸ ಮಾಡಿದ್ದರೂ ಆಧ್ಯಾತ್ಮಿಕ ನೆಮ್ಮದಿಗಾಗಿ ಶೃಂಗೇರಿಗೆ ಬಂದರೇ ? ಇಲ್ಲಿ ಏಕೆ ನೆಲೆ ನಿಂತರು ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಇದನ್ನು ಆಧರಿಸಿಯೇ ಶೃಂಗೇರಿಯು ಶೈವಕ್ಷೇತ್ರವಾಗಿದ್ದಿರಬೇಕು ಎಂಬ ಅಭಿಪ್ರಾಯವು ಎ.ಆರ್.ಕೃಷ್ಣಶಾಸ್ತ್ರಿಗಳ ಲೇಖನದಲ್ಲಿ ನಾವು ಕಾಣಬಹುದಾಗಿದೆ. ಇವರ ಅಭಿಪ್ರಾಯಕ್ಕೆ ಪೂರಕವಾಗಿ ವ್ಯಾಸಭುಜ ಸ್ಥಂಭನಪ್ರಕರಣವನ್ನು ನಾವು ಪರಿಶೀಲಿಸಬಹು ದಾಗಿದೆ.

ವ್ಯಾಸಭುಜ ಸ್ಥಂಭನ

ಈ ಪ್ರಕರಣವು ಸ್ಕಂದಪುರಾಣ–ಕಾಶಿಖಂಡ–೯೫ ರಲ್ಲಿ ಉಲ್ಲೇಖಗೊಂಡಿದ್ದು, ವೇದವ್ಯಾಸರು ಕಾಶಿಯಲ್ಲಿ "ದೇವತೆ ಗಳಲ್ಲಿ ವಿಷ್ಣುವೇ ಸರ್ವೋತ್ತಮನೆಂದು" ಕೈ ಎತ್ತಿದಾಗ ನಂದಿಕೇಶ್ವರ (ಕಾಲ ಕ್ರಿ.ಶ ೩೦೦–೬೦೦) (ಪಾಣಿನಿಯ ಗುರು) ರ ದೃಷ್ಟಿಮಾತ್ರದಿಂದ ಆತನ ಕೈಯನ್ನು ಸ್ತಂಭನ ಗೊಳಿಸಿದರು. (ವ್ಯಾಸಭುಜ ಸ್ತಂಭಮುಕ್ತಿ) ಇದೇ ವಿಷಯ ವನ್ನು ಶಂಕರಾಚಾರ್ಯರೂ ಸಹ –

"ಗೋವಿಂದಾಧಿಕಂ ನ ದೈವತ ಮಿತೆ ಪ್ರೋ ಚ್ಯಾರ್ಯ
ಹಸ್ತವುಭೌ ಉದ್ಧೃತ್ಯಾಥ ಶಿವಸ್ಯ ಸನ್ನಿಧಿಗತೋ ವ್ಯಾಸೋ ಮುನೀನಾಂ ವರಃ
ಯಸ್ಯಸ್ಥಂಭಿತ ಪಾಣಿದಾನತಿಕೃತಾ ನಂದಿಕೇಶ್ವರೇಣಾಭವತ್ ತಸ್ಮಿನ್ ।
ಮೇ ಹೃದಯಂ ಸುಖೇನರ ಮತಾಂ ಸಾಂಬೇಪರಬ್ರಹ್ಮಣೇ[೭]

ಎಂಬುದಾಗಿ ಶಂಕರಾಚಾರ್ಯರು ಶಿವಪಾರಮ್ಯವನ್ನು ಸಮರ್ಥಿಸಿರುವರು.

ಅಂತೆಯೇ ಮೈಸೂರು ಗ್ಯಾಸೆಟಿಯರ್ ಸಂಪುಟಗಳ ಸಂಪಾದಕ ರಾದ ಶ್ರೀ ಬಿ.ಎಲ್.ರೈಸ್‌ರವರು ಮತ್ತು ಹಯವದನ ರಾಯರು ಸಹ ಶ್ರೀ ಶಂಕರರನ್ನು **"ಗ್ರೇಟ್ ಶೈವ ಟೀಚರ್"**[೮] ಎಂದಿರುವುದು ಶೈವರೆಂಬುದನ್ನೇ ಸಮ್ಮರ್ಥಿಸಿದರೆ, ಮಲ್ಲಿಕಾರ್ಜುನಲಿಂಗದಲ್ಲಿ ವಿಭಾಂಡಕ ಮುನಿಗಳು ಐಕ್ಯರಾದರೆಂಬ ಎ.ಆರ್. ಕೃಷ್ಣಶಾಸ್ತ್ರಿಗಳ ವ್ಯಾಖ್ಯಾನಕ್ಕೆ ಲಿಂಗೋದ್ಭವ, ಲಿಂಗೈಕ್ಯರೆಂಬ ನಂಬುಗೆ ವೀರಶೈವರಲ್ಲಿ ಮಾತ್ರವಿದೆ ಎಂಬುದನ್ನು ನಾವಿಲ್ಲಿ ಮನಗಾಣಬೇಕಿದೆ. ಆದ್ದರಿಂದ ಶಂಕರಾಚಾರ್ಯರ ಪೂರ್ವದಲ್ಲಿ ಶೃಂಗೇರಿ ಪರಿಸರವು ಪವಿತ್ರ ಶೈವಕ್ಷೇತ್ರವಾಗಿರುವುದಕ್ಕೆ ಮಲ್ಲಿಕಾರ್ಜುನ ಲಿಂಗವೆಂಬುದು ಸ್ಪಷ್ಟ. ಮಾತ್ರವಲ್ಲದೇ ವಿದ್ವಾಂಸರಾದ ಎ.ಆರ್. ಕೃಷ್ಣಶಾಸ್ತ್ರಿಗಳ

ಅಭಿಪ್ರಾಯವು ಕೇವಲ ಊಹೆಯಾಗದೇ ಐತಿಹಾಸಿಕ ಸತ್ಯವೆಂಬುದು ನಿರ್ವಿವಾದದ ಸಂಗತಿ. ಈ ಮಲ್ಲಿಕಾರ್ಜುನ ಲಿಂಗಕ್ಕೆ ಅಪಾರ ಭಕ್ತ ಸಮುದಾಯವಿದ್ದು, ಹೆಚ್ಚಿನ ಆದಾಯ ತರುವುದನ್ನು ಮನಗಂಡೇ **"ಶ್ರೀ ಮಲ್ಲಿಕಾರ್ಜುನ ಪಾರುಪತ್ಯ"** ಎಂಬ ಪ್ರತ್ಯೇಕ ವ್ಯವಸ್ಥೆಯನ್ನು ಶೃಂಗೇರಿ ಪೀಠದ ಆಡಳಿತವ್ಯವಸ್ಥೆ ಮಾಡಿದ್ದುದು ಶೃಂಗೇರಿ ಪೀಠದ ದಾಖಲೆಗಳಲ್ಲಿ ಉಲ್ಲೇಖವಾಗಿದೆ. ಆದರೆ ಇಂದು ಶೃಂಗೇರಿಯ ಮಲ್ಲಿಕಾರ್ಜುನ ಗಿರಿಯಲ್ಲಿರುವ ಮಲ್ಲಿಕಾರ್ಜುನ ಲಿಂಗವನ್ನು ಪ್ರಸ್ತುತ ಆಡಳಿತ ವ್ಯವಸ್ಥೆಯು ಮಲಾಹಾರಿನಿಕೇಶ್ವರ ಲಿಂಗವೆಂದು ಪ್ರಚಾರ ಮಾಡುತ್ತಿರುವುದು ಇತಿಹಾಸ ತಿರುಚುವ ಪ್ರಯತ್ನದ ಮುಂದುವರಿಕೆ ಎಂದು ಹೇಳಬಹುದಾಗಿದೆ.

ರೇವಣಸಿದ್ಧ ಸಂಪ್ರದಾಯ ಮತ್ತು ಶಿವತತ್ವರತ್ನಾಕರ

ಇದು ಕೆಳದಿ ಅರಸ ಬಸವಭೂಪಾಲ (ಕ್ರಿ.ಶ. ೧೬೭೭ ರಿಂದ ೧೭೧೪) ನಿಂದ ಸಂಸ್ಕೃತ ಭಾಷೆಯಲ್ಲಿ ರಚಿತಗೊಂಡು ವಿಶ್ವಕೋಶವೆಂದು ಪ್ರಸಿದ್ಧಿ ಪಡೆದಿದೆ. ಇದನ್ನು ಮದ್ರಾಸ್ ಸರ್ಕಾರದ ಹಿರಿಯ ಭಾಷಾಂತರಕಾರರಾಗಿದ್ದ ಮಾ.ರಾ.ಬಿ. ರಾಮ್‌ರಾವ್ ಎಂ.ಎ.ಎಲ್.ಎಲ್.ಬಿ. ಮತ್ತು ಮದ್ರಾಸ್ ಸರ್ಕಾರದ ಓರಿಯಂಟಲ್ ಗ್ರಂಥಾಧಿಕಾರಿಗಳಾಗಿದ್ದ ಮ.ರಾ. ವಿದ್ವಾನ್ ಸುಂದರಶಾಸ್ತ್ರಿ ಅಯ್ಯರ್‌ರವರು ಸಂಸ್ಕೃತ ಶಿವತತ್ವ ರತ್ನಾಕರ ಗ್ರಂಥವನ್ನು ದೇವನಾಗರೀಲಿಪಿಗೆ ಭಾಷಾಂತರಿಸಿ ಮುದ್ರಿಸಿ ಮೈಸೂರಿನ ಮಹಾರಾಜರಾಗಿದ್ದ ದಿವಂಗತ ನಾಲ್ವಡಿ ಕೃಷ್ಣರಾಜ ಒಡೆಯರಿಗೆ (ಕ್ರಿ.ಶ. ೧೯೪೪ ಕ್ರಿ.ಶ. ೧೯೪೦) ಅರ್ಪಿಸಿರುವರು.

ಭಾರತಸರ್ಕಾರದ ಪ್ರಾಚೀನ ಶಾಸನತಜ್ಞರೂ, ಸಂಶೋಧಕರೂ ಆಗಿದ್ದ ರಾವ್ ಬಹದ್ದೂರ್ ಹೆಚ್. ಕೃಷ್ಣಶಾಸ್ತ್ರಿ ಐಯ್ಯರ್.ಬಿ.ಎ. ಆಂಗ್ಲಭಾಷೆಯಲ್ಲಿ ಬಹು ವಿಶಾಲವಾದ ತಮ್ಮ ಪ್ರಸ್ತಾವನೆಗೈದಿರುವುದು ಇಂತಿದೆ.

"One very interesting point which must be particularly draw attention to in the story Vidyaranya as given in the 12th tharanga of the 4th Kallola is the

"ರೇವಣಸಿದ್ಧ ಸಂಪ್ರದಾಯ" which the Acharyas of Shankaracharya live that invited our Vidyaranya were then practicing at Shringeri. The ಲಿಂಗ of ಚಂದ್ರಮೌಳೀಶ್ವರ which is still worshipped as the chief deity by the Acharyas of ಶೃಂಗೇರಿಮಠ is also said to have been presented to ವಿದ್ಯಾರಣ್ಯ by the direct guru ರೇವಣಸಿದ್ಧ we know is well known saiva teacher, whom the veerasivas still claim as one of their earliest Acharyas. The Keladi chiefs who were mostly followers of veerasiva religion were devote adherants of the ಶೃಂಗೇರಿಮಠ, perhaps also for same reason viz, that the Shankaracharya's were followers of the **"ರೇವಣಸಿದ್ಧ ಸಂಪ್ರದಾಯ"** This explains perhaps why in the ಅದ್ವೈತಮತ of ಶೃಂಗೇರಿ there is still a greater bias towards Vaishnavism and Krishna worship, though the founder the great Shankaracharya respected creeds and showed no distinction between ಶಿವ and ವಿಷ್ಣು.

ಪ್ರಾಚೀನ ಸಂಶೋಧಕರ ವ್ಯಾಖ್ಯಾನಕ್ಕೆ ಆಧಾರವಾಗಿರ ಬಹುದಾದ ಅಂಶವೆಂದರೆ ಶಿವತತ್ವರತ್ನಾಕರ ಗ್ರಂಥದ ಚತುರ್ಥಕಲ್ಲೋಲದ ಹನ್ನೆರಡನೆಯ ತರಂಗದಲ್ಲಿ –

"ತತಃಸ ರೇವಣಸಿದ್ಧ ಸಂಪ್ರದಾಯ ಪ್ರವರ್ತಿನಾಂ
ಶಂಕರಾಚಾರ್ಯ ವರ್ಯಾಣಾಂ ಪಾರಂಪರ್ಯ ಕ್ರಮಾಗತಮ್"
–ಎಂದಿರುವುದು.

ಸಂಶೋಧಕರ ಪ್ರಸ್ತಾವನೆಯಲ್ಲಿನ ಪ್ರಮುಖ ಅಂಶ ಗಳನ್ನಿಲ್ಲಿ ನಾವು ಗಮನಿಸಬೇಕು.

* ರೇವಣಸಿದ್ಧರು ಪ್ರಸಿದ್ಧ ಶೈವ ಬೋಧಕರೆಂಬುದು ಮತ್ತು ಇಂದಿಗೂ ವೀರಶೈವರು ಅವರನ್ನು ಪುರಾತನ ಆಚಾರ್ಯರೆಂಬುದಾಗಿ ಪರಿಗಣಿಸಿರುವುದು.
* ಕೆಳದಿ ಅರಸರು ವೀರಶೈವ ಧರ್ಮದ ಅನುಯಾಯಿ ಗಳಾಗಿದ್ದಾಗ್ಯೂ ಸಹ ಶೃಂಗೇರಿ ಮಠಕ್ಕೆ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದುದು ಶಂಕರಾಚಾರ್ಯರು ರೇವಣಸಿದ್ಧ ಸಂಪ್ರದಾಯಕ್ಕೆ ಸೇರಿದವರಾದುದರಿಂದಲೇ ಎಂದಿರು ವುದು.
* ರೇವಣಸಿದ್ಧರು ಪ್ರದಾನ ಮಾಡಿದ ಲಿಂಗವನ್ನು ಶಂಕರಾ ಚಾರ್ಯರಿಂದ ಹಿಡಿದು ವಿದ್ಯಾರಣ್ಯರ ಪರ್ಯಂತರವಾಗಿ ಇಂದಿಗೂ ಪ್ರಧಾನವಾಗಿ ಪೂಜಿಸಲ್ಪಡುತ್ತಿರುವ ಪ್ರಮುಖ ದೈವ ಶ್ರೀಚಂದ್ರಮಾಳೇಶ್ವರಲಿಂಗ. ಇದನ್ನು ವಿದ್ಯಾರಣ್ಯರ ಗುರುಗಳು ನೇರವಾಗಿ ಕೊಟ್ಟರು ಎಂಬುದು.
* ಶೃಂಗೇರಿ ಮಠದಲ್ಲಿ ವೈಷ್ಣವಮತ ಮತ್ತು ಕೃಷ್ಣನ ಆರಾಧನೆಗೆ ಒಲವು ಅಥವಾ ನಂಬುಗೆ ತೋರದಿರು ವುದನ್ನು ಎತ್ತಿ ತೋರಿಸುತ್ತದೆ ಎಂದಿರುವ ಅಂಶಗಳು ವಿಮರ್ಶಾರ್ಹವಾಗಿವೆ.

ಆದರೆ ಲ.ನಾ. ಶಾಸ್ತ್ರೀಯವರು ತಮ್ಮ ಶ್ರೀಶಂಕರ ಚಂದ್ರಮೌಳೀಶ್ವರ ಶೃಂಗೇರಿ ಎಂಬಕೃತಿಯಲ್ಲಿ ಸ್ಮಾರ್ತರೂ, ಶೈವರೂ ಮತ್ತು ವೀರಶೈವರು ಭಸ್ಮಲೇಪನ, ರುದ್ರಾಕ್ಷಿ

ಧಾರಣೆಗಳನ್ನು ಸಮನಾಗಿ ಅಂಗೀಕರಿಸಿರುವುದರಿಂದ ವಾಸ್ತವವನ್ನೇ ಅರಿಯದೇ ಶೃಂಗೇರಿ ಮಠವು ವೀರಶೈವ ಮಠವೆಂದೂ, ರೇವಣಸಿದ್ಧ ಸಂಪ್ರದಾಯಕ್ಕೆ ಸೇರಿದ್ದೆಂದೂ ಘಟಿಸಿರುವರು". [೧೦] ಎಂದು ಉಲ್ಲೇಖಿಸಿರುವರು.

ಇಲ್ಲಿ ನಾವು ಶಿವರತ್ನಾಕರ ಗ್ರಂಥಕ್ಕೆ ಸಂಬಂಧಿಸಿದಂತೆ ಕೆಲ ಅಂಶಗಳನ್ನು ಗಮನಿಸಬೇಕಾಗಿದೆ.

* ವಿಶ್ವಕೋಶವೆಂದು ಪರಿಗಣಿಸಲ್ಪಟ್ಟ ಶಿವತತ್ವ ರತ್ನಾಕರವನ್ನು ರಚಿಸಿದ ಕೆಳದಿ ಬಸವ ಭೂಪಾಲ (೧೬೭೭–೧೭೧೪) ಶ್ರೇಷ್ಠ ವಿದ್ವಾಂಸನೆಂಬ ಖ್ಯಾತಿ ಪಡೆದಿರುವುದು.
* ದೇವನಾಗರಿ ಲಿಪಿಗೆ ತರ್ಜುಮೆ ಮಾಡಿದವರು ಮದ್ರಾಸ್ ಸರ್ಕಾರದ ಹಿರಿಯ ಭಾಷಾಂತರಕಾರರಾಗಿದ್ದ ಮಾ.ರಾ.ಬಿ. ರಾಮ್‌ರಾವ್. ಎಂ.ಎ. ಮತ್ತು ಮದ್ರಾಸ್ ಸರ್ಕಾರದ ಗ್ರಂಥಾಧಿಕಾರಿಗಳಾಗಿದ್ದ ಸುಂದರಶಾಸ್ತ್ರಿ ಅಯ್ಯರ್‌ರೆಂಬುದು.
* ಗ್ರಂಥಕ್ಕೆ ಪ್ರಸ್ತಾವನೆಗೈದಿರುವವರು ಭಾರತ ಸರ್ಕಾರದ ಪ್ರಾಚೀನ ಶಾಸನ ಸಂಶೋಧಕರೆಂಬುದು.

ಜೊತೆಗೆ ಡಾ. ಎಫ್.ಜೆ. ಷಾಡರ್ ಎಂಬ ಜರ್ಮನಿ ವಿದ್ವಾಂಸರು ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಜೊತೆಗೆ ಸಂಶೋಧಕರು ಮತ್ತು ಇತಿಹಾಸಜ್ಞರು ಆಗಿದ್ದ ದಿವಂಗತ ಜಿ.ಎಸ್. ದೀಕ್ಷಿತರು ಸಹ ಶಿವತತ್ವ ರತ್ನಾಕರದ ಶ್ರೇಷ್ಠತೆ ಮತ್ತು ವೈಶಿಷ್ಟತೆಗಳನ್ನು ಕುರಿತಾಗಿ "ಎಲ್ಲಾ ಮತಗಳಲ್ಲಿ ಶ್ರೇಷ್ಠವೆಂದೆನಿಸಿದ ವೀರಶೈವಧರ್ಮ ಮತ್ತು ದರ್ಶನಗಳ ವಿವರಣೆಯನ್ನು ರಾಜಕುಮಾರರ ಶಿಕ್ಷಣದ ಮುಖ್ಯ ಅಂಗವಾದ ರಾಜನೀತಿಯನ್ನು ಸಂಪೂರ್ಣವಾಗಿ ತಿಳಿಸುವ ಉದ್ದೇಶದಿಂದ ಬಸವ ಭೂಪಾಲನು ಬರೆದ ವೈಶಿಷ್ಟ್ಯ ಶಿವತತ್ವ ರತ್ನಾಕರದ್ದು ಎಂದಿರುವುದು ಅದರ ಘನತೆ ಮತ್ತು ಶ್ರೇಷ್ಠತೆಯನ್ನು ಎತ್ತಿಹಿಡಿಯುತ್ತದೆ.

ಆದ್ದರಿಂದ ಈ ಮೇಲಿನ ಅಂಶಗಳು ಶಿವತತ್ವರತ್ನಾಕರದಲ್ಲಿನ ವಿಷಯಗಳಾಗಲೀ ತರ್ಜುಮೆ ಮಾಡಿದವರಾಗಲೀ ಪ್ರಸ್ತಾವನೆ ಮಾಡಿದವರಾಗಲೀ, ಉನ್ನತ ಜವಾಬ್ದಾರಿ ಸ್ಥಾನಗಳಲ್ಲಿದ್ದವರು. ಶಿವತತ್ವರತ್ನಾಕರ ಗ್ರಂಥವು ಅರ್ಪಣೆಯಾಗಿರುವುದು ಮೈಸೂರು ಒಡೆಯರ್ ವಂಶದ ಆಧುನಿಕ ದೃಷ್ಟಿಕೋನ ಹೊಂದಿದ ಪ್ರಖ್ಯಾತ ಅರಸರೂ, ವಿದ್ವಾಂಸರೂ ಆದ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಎಂಬುವರಿಂದ ಮೈಸೂರು ಅರಸು ಮನೆತನದ ಮಾನ್ಯತೆಯೂ ಇದಕ್ಕಿದೆ.

ಗುರುವಂಶ ಕಾವ್ಯ

ಶಿವತತ್ವರತ್ನಾಕರದಲ್ಲಿನ ವಿಷಯಕ್ಕೆ ಸಮರ್ಥನೆಯಾಗಿ ಮೈಸೂರು ಶ್ರೀಮನ್ಮಹಾರಾಜರ ಆಸ್ಥಾನದಲ್ಲಿ ಧರ್ಮಾಧಿಕಾರಿ ಗಳಾಗಿದ್ದ ವಿದ್ಯಾವಿಶಾರದ ವೇ// ಕುಣಿಗಲ್ ರಾಮಾಶಾಸ್ತ್ರಿ ಗಳಿಂದ ಶೃಂಗೇರಿ ಪೀಠದ ಗ್ರಂಥಾಲಯದಲ್ಲಿದ್ದ ಅಪ್ರಕಟಿತ ಗುರುವಂಶಕಾವ್ಯವು ಪರಿಶೋಧಿತಗೊಂಡು ಶ್ರೀರಂಗಂ ನ ವಾಣಿವಿಲಾಸ ಪ್ರೆಸ್‌ನಲ್ಲಿ ಮುದ್ರಣಗೊಂಡಿದೆ. ಈ ಗ್ರಂಥವು ಶೃಂಗೇರಿ ಮಠದ ಗುರುಪರಂಪರೆಗೆ ಸಂಬಂಧಿಸಿದ್ದಾಗಿದ್ದು ಕ್ರಿ.ಶ. ೧೭ನೇ ಶತಮಾನದಲ್ಲಿ ಶೃಂಗೇರಿ ಪೀಠಕ್ಕೆ ಅಧಿಪತಿ ಯಾಗಿದ್ದ ಶ್ರೀ ಸಚ್ಚಿದಾನಂದ ಭಾರತೀಸ್ವಾಮಿಗಳವರ ಆದೇಶ ದಂತೆ ಅವರ ಆಸ್ಥಾನ ವಿದ್ವಾಂಸರಾಗಿದ್ದ ಕಾಶೀಲಕ್ಷ್ಮಣ ಶಾಸ್ತ್ರಿಗಳು ರಚಿಸಿರುವರು. ಈ ಗ್ರಂಥದ ಮೂರನೆಯ ಸರ್ಗದಲ್ಲಿ "ಶಂಕರಾಚಾರ್ಯರು ಸುರೇಶ್ವರಾಚಾರ್ಯರಿಗೆ ಶೃಂಗೇರಿ ಮಠದ ಪಟ್ಟಗಟ್ಟಿ ಶ್ರೀ ರೇವಣಸಿದ್ಧರು ನನಗೆ ಈ ಮೊದಲು ಅನುಗ್ರಹಿಸಿದ ಶ್ರೀ ಚಂದ್ರಮೌಳೀಶ್ವರ ಮತ್ತು ರತ್ನ ಗರ್ಭ ಗಣಪತಿಯನ್ನು ನೀನು ಪೂಜಿಸು" ಎಂದು ಅಪ್ಪಣೆ ಮಾಡಿದ ಉಲ್ಲೇಖವಿದೆ.

ಶ್ರೀ ಚಂದ್ರಮೌಳೀಶ್ವರ ಲಿಂಗಮಸ್ಮೈ ಸದ್ರತ್ನಗರ್ಭಂ ಗಣನಾಯಕಂಚ/
ಸ ವಿಶ್ವರೂಪಾಯ ಸುಸಿದ್ಧದತ್ತಂ ದತ್ವಾನ್ಯಗಾದೀಚ್ಛಿರ ಮರ್ಚಯೇತಿ //
ಸುರೇಶ್ವರಾಚಾರ್ಯ ಸರಸ್ವತೀಂತ್ವ ಸಂಪೂಜೆಯನ್ನ ಸ್ವಚಿರಾದಿಹೇತಿ/
ದತ್ವಾಭ್ಯನುಜ್ಞಾಂ ವಿನತಾಯ ತಸ್ಮೈ ಶಿಷ್ಯೈಃ ಸಮಸ್ತೈಃ ಸ ಜಗಾಮ ಕಾಂಚೀಂ//[೧೧]

ಅದೇ ಗ್ರಂಥದ ಆರನೇಯ ಸರ್ಗದ ೨ನೇ ಶ್ಲೋಕದಲ್ಲಿ–

"ಅಗ್ರೇಭಾವಿ ತ್ರಿಭುವನ ನುತೋ ವೀರ ಪೂರ್ವೋವಸಂತಃ /
ಸರ್ವಾಮುರ್ವೀಂ ಸ್ವಚಿರವಿತ ಧಾರ್ಮಿಕಃ ಸರ್ವಥೇತಿ//
ಉಕ್ತ್ವಾ ಸ್ವಪ್ನೇ ಹರಿಹರನೃಪಂ ರೇವಣಸಿದ್ಧ ಯೋಗೀದಂತರ್ಧಾನಂ
ಸಮಭಜದಥ ಪ್ರಾಬುಧತ್ಸೋಪಿ ಭೂಪಃ//[೧೨]

ಈ ಮೇಲಿನ ಎರಡೂ ಶ್ಲೋಕಗಳು ವಿಮರ್ಶಾರ್ಹವಾಗಿವೆ. ಮೂರನೇ ಸರ್ಗದ ೩೩ ನೇ ಶ್ಲೋಕದಲ್ಲಿನ ಸುಸಿದ್ಧದತ್ತಂ ಶಬ್ದಕ್ಕೆ ಕಾಶೀಲಕ್ಷ್ಮಣಶಾಸ್ತ್ರಿಗಳು ತಮ್ಮ ವ್ಯಾಖ್ಯಾನದಲ್ಲಿ ಶ್ರೀ ರೇವಣಸಿದ್ಧ ಮಹಾಯೋಗಿ ಎಂದು ಸ್ಪಷ್ಟಪಡಿಸಿದ್ದರೆ, ೬ನೇ ಸರ್ಗದ ೨ನೇ ಶ್ಲೋಕದಲ್ಲಿಯ "ರೇವಣಸಿದ್ಧಯೋಗೀ" ಎಂಬ ಪದಕ್ಕೆ "ರೇವಣಸಿದ್ಧಯೋಗೇಂದ್ರಃ" ಎಂದು ವ್ಯಾಖ್ಯಾನಿಸಿರುತ್ತಾರೆ. ಆದ್ದರಿಂದ ಈ ಎರಡೂ ಸಂಧರ್ಭಗಳಲ್ಲಿ ಗುರುವಂಶಕಾವ್ಯದ ಕರ್ತೃ ವೀರಶೈವ ಆಚಾರ್ಯರಾದ ಶ್ರೀಮದ್‌ರಂಭಾಪುರಿ ಪೀಠದ ಜಗದ್ಗುರು ರೇವಣಸಿದ್ಧರನ್ನು ಕುರಿತಾಗಿಯೇ ಉಲ್ಲೇಖಿಸಿರುವುದು ಸ್ಪಷ್ಟ ಸಂಗತಿ. ಆದ್ದರಿಂದ ಕಾಶೀಲಕ್ಷ್ಮಣಶಾಸ್ತ್ರಿಗಳ ವ್ಯಾಖ್ಯಾನವು ರೇವಣಸಿದ್ಧರ ಮತ್ತು

ಶಂಕರಾಚಾರ್ಯರ ಸಂಬಂಧಗಳನ್ನು ಗಟ್ಟಿಗೊಳಿಸು ತ್ತದೆ. ಇದಕ್ಕೆ ಸಂಬಂಧಿಸಿದ ಮತ್ತೊಂದು ಪ್ರಕರಣವನ್ನು ರೇಣುಕವಿಜಯದಲ್ಲಿ ಕಾಣಬಹುದಾಗಿದೆ.

ರೇಣುಕವಿಜಯ :– ಕ್ರಿ.ಶ ೧೦ನೇ ಶತಮಾನದ ಪೂರ್ವದಲ್ಲಿದ್ದ ರಂಭಾಪುರಿ ಪೀಠದ ಆಚಾರ್ಯರಲ್ಲಿ ಒಬ್ಬರಾಗಿದ್ದ ಶ್ರೀ ಸಿದ್ಧನಾಥ ಶಿವಾಚಾರ್ಯರು ಸಂಸ್ಕೃತ ಭಾಷೆಯಲ್ಲಿ **"ರೇಣುಕವಿಜಯ"** ಎಂಬ ಗ್ರಂಥವನ್ನು ರಚಿಸಿರುವರು. ಈ ಗ್ರಂಥವನ್ನು ಮೈಸೂರು ಶ್ರೀ ಮನ್ಮಹಾರಾಜರ ಆಸ್ಥಾನದ ವಿದ್ವಾಂಸರಾಗಿದ್ದ ಸಿರಸಿ ಗುರುಶಾಂತಶಾಸ್ತ್ರಿಗಳು ಕನ್ನಡ ಭಾಷೆಗೆ ಭಾಷಾಂತರಿಸಿರುವರು. ಪ್ರಸ್ತುತ ಈ ರೇಣುಕ ವಿಜಂಯದ ತೃತೀಂಯು ಮಂಜರಿಂಯಲ್ಲಿ ಚಂದ್ರಮೌಳೀಶ್ವರಲಿಂಗದ ಸಾಕ್ಷಾತ್ಕಾರಕ್ಕಾಗಿ ಶ್ರೀಶೈಲದ ಅರಣ್ಯದಲ್ಲಿ ಘೋರ ತಪಸ್ಸನ್ನಾಚರಿಸುವ ಸಂದರ್ಭದಲ್ಲಿ ಅಶರೀರವಾಣಿಯ ಸೂಚನೆಯಂತೆ ಮಲಯಾಚಲದಲ್ಲಿದ್ದ, ಜಗದ್ಗುರು ಶ್ರೀ ರೇವಣಸಿದ್ಧರ (ರೇಣುಕರ ಕರ್ಮಭೂಮಿ) ದರ್ಶನ ಪಡೆದು ಭಕ್ತಿಯಿಂದ ಪ್ರಾರ್ಥಿಸಿ ರೇವಣಸಿದ್ಧರಿಂದ ಶ್ರೀಚಂದ್ರಮೌಳೀಶ್ವರ ಲಿಂಗವನ್ನು ಪಡೆದುಕೊಂಡು ರೇವಣಸಿದ್ಧರ ಅಪ್ಪಣೆಯಂತೆ ತುಂಗಾತೀರದಲ್ಲಿ ನೆಲೆನಿಂತರು.[೧೩]

೧. ಈ ಘಟನೆಯು ಕ್ರಿ.ಶ. ೧೭ ನೇ ಶತಮಾನದ ನಿಟ್ಟೂರು ನಂಜಣಾರ್ಯನ ವೇದಾಂತ ವೀರಶೈವ ಚಿಂತಾಮಣಿ, ಸೋಸಲೆ ರೇವಣಾರಾಧ್ಯರ ಚೋಳ–ರೇಣುಕ ಸಂವಾದದಲ್ಲೂ ಪ್ರತಿಧ್ವನಿಗೊಂಡಿದೆ. ಅಂತೆಯೇ ಕ್ರಿ.ಶ. ೧೭೬೩ ರಲ್ಲಿ ರಚಿತವಾಗಿದ್ದು ಮೈಸೂರು ಓರಿಯಂಟಲ್ ಲೈಬ್ರರಿ ಯಿಂದ ಪ್ರಕಟವಾದ "ಕೆಳದಿ ನೃಪ ವಿಜಯದಲ್ಲೂ" ನಿರೂಪಿತಗೊಂಡಿದ್ದರೆ ಲಿಂಗಣ್ಣ ಕವಿ ವಿರಚಿತ **"ಕೆಳದಿನೃಪ ವಿಜಯಂ"** ಸಂಪಾದಕ ಆರ್. ಶಾಮಾಶಾಸ್ತ್ರಿ ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ ೧೯೭೩ ರ ಕೃತಿಯಲ್ಲಿ "ಹರಿಹರ ಬುಕ್ಕರಿಗೆ "ದುಷ್ಟನಿಗ್ರಹ ಶಿಷ್ಟಪಾಲನೆಗೆ ರಾಯ ಪಟ್ಟವಂ ಕಟ್ಟುವುದೆಂದು ಅಮ್ಮನವರಿಂದ ಸ್ವಪ್ನವಾಗಿರುವುದು"[೧೪]

೨. ಆದರೆ ಬಸವ ಭೂಪಾಲನ ಶಿವತತ್ವರತ್ನಾಕರ ಮತ್ತು ಶ್ರೀ ಲಕ್ಷ್ಮಣಶಾಸ್ತ್ರಿಗಳ ಗುರುವಂಶ ಕಾವ್ಯದಲ್ಲಿ ಸ್ವಪ್ನದಲ್ಲಿ ಹರಿಹರನಿಗೆ ಕಾಣಿಸಿಕೊಂಡವನು ರೇವಣಸಿದ್ಧನೆಂದಿದೆ ಹಾಗೂ ಶಿವತತ್ವರತ್ನಾಕರ ಮತ್ತು ಗುರುವಂಶ ಕಾವ್ಯದಲ್ಲಿ ವಿದ್ಯಾರಣ್ಯರಿಗೆ ಚಂದ್ರಮೌಳೀಶ್ವರ ಲಿಂಗವು ನೇರವಾಗಿ ರೇವಣಸಿದ್ಧರಿಂದ ಕೊಡಲ್ಪಡದೆ ಅವರ ಗುರುಗಳು (ವಿದ್ಯಾತೀರ್ಥರು) ತಮ್ಮ ಶಿಷ್ಯರಾದ ವಿದ್ಯಾರಣ್ಯರಿಗೆ ಗುರು ಪರಂಪರೆಯಿಂದ ಬಂದ ಚಂದ್ರಮೌಳೀಶ್ವರ ಲಿಂಗವನ್ನು ಕೊಟ್ಟು ನೀನು ಈ ಲಿಂಗವನ್ನು ಪೂಜಿಸು ನಿನ್ನ ಅಭೀಷ್ಟವು ಈಡೇರುತ್ತದೆ ಎಂದು ಅಪ್ಪಣೆ ಮಾಡಿರುವುದು ಒಂದೆಡೆಯಾದರೆ ಕೆಳದಿನೃಪವಿಜಯ (ಆರ್. ಶಾಮಾಶಾಸ್ತ್ರಿ ಸಂಪಾದನೆ) ದಲ್ಲಿ ರೇವಣಸಿದ್ಧರು ನೇರವಾಗಿ ವಿದ್ಯಾರಣ್ಯರಿಗೆ ಕೊಟ್ಟಿರುವ ಉಲ್ಲೇಖವಿದೆ.

೩. ಕೆಳದಿ ನೃಪವಿಜಯಂನಲ್ಲಿನ ಎ.ಆರ್.ಕೃಷ್ಣಶಾಸ್ತ್ರಿಗಳ ಉಪೋದ್ಘಾತದಲ್ಲಿ ಈ ಗ್ರಂಥರಚನೆಗೆ ಬಸವ ಭೂಪಾಲನ ಶಿವತತ್ವರತ್ನಾಕರ, ವಿದ್ಯಾರಣ್ಯರ ಪಿತಾಮಹಾ ಸಂಹಿತೆ ಮೂಲವೆಂದಿರುವರು.

ಮೇಲಿನ ಬಸವಭೂಪಾಲನ ಶಿವತತ್ವರತ್ನಾಕರ, ಲಕ್ಷ್ಮಣ ಶಾಸ್ತ್ರಿಗಳ ಗುರುವಂಶಕಾವ್ಯ ಹಾಗೂ ಕೆಳದಿಲಿಂಗಣ್ಣ ವಿರಚಿತ ಓರಿಯಂಟಲ್ ಲೈಬ್ರರಿ ಮೈಸೂರು ಪ್ರಕಟಿತ ಕೆಳದಿ ನೃಪ ವಿಜಯಂ ಮತ್ತು ಆರ್.ಶಾಮಾಶಾಸ್ತ್ರಿಗಳ ಸಂಪಾದಿತ ಕೆಳದಿ ನೃಪವಿಜಯಂ ಕೃತಿಗಳಲ್ಲಿನ ವ್ಯತ್ಯಾಸಗಳನ್ನು ಗಮನಿಸಿದರೆ ಪರಿಷ್ಕರಣೆಯ ನೆಪದಲ್ಲಿ ರೇವಣಸಿದ್ಧರ ಪ್ರಭಾವವನ್ನು ಗ್ರಂಥಗಳಿಂದ ಕೈಬಿಡುವ ಪ್ರಯತ್ನಗಳು ಆಗಿರುವುದು ಮಾತ್ರವಲ್ಲದೇ ಇತಿಹಾಸವನ್ನು ಮರೆಮಾಚುವ ಪ್ರಯತ್ನಗಳಾಗಿರುವುದು ಸ್ಪಷ್ಟವಾಗುತ್ತದೆ.

ಇದಲ್ಲದೆ ಮಧ್ಯಯುಗೀನ ಚರಿತ್ರಕೋಶ (ಮರಾಠಿ) ದಲ್ಲಿಯೂ– "ಶ್ರೀ ರೇವಣಸಿದ್ಧಯಾನೆ ಸಂಕರಾಚಾರ್ಯನಾ ಚಂದ್ರಮೌಳೀಶ್ವರಲಿಂಗ ದೀಲೇ ಅಸೀ ಪ್ರಸಿದ್ಧಿ ಆಹೇ. ಹೇ ಶಂಕರಾಚಾರ್ಯ ಮ್ಹಣಜೇ ಆದ್ಯ ಶಂಕರಾಚಾರ್ಯಹೋತ ಹಾ ಜಾತೀನೇ ಜಂಗಮಹೋತಾ".[೧೫] ಈ ಘಟನೆಯು ಮರಾಠಿಯಲ್ಲಿಯೂ ಪುನರಾವರ್ತನೆಯಾಗಿರುವುದು ಇದರ ವ್ಯಾಪಕತೆಯನ್ನು ತಿಳಿಸುತ್ತದೆ.

ಪ್ರಸ್ತುತ ಬಾಳೇಹೊನ್ನೂರಿನ ಶ್ರೀಮದ್ರಂಭಾಪುರಿ ಪೀಠದ ಗೋತ್ರಪುರುಷ ವೀರಭದ್ರ ದೇಗುಲದಲ್ಲಿ ರೇವಣ ಸಿದ್ಧರು ಶಂಕರಾಚಾರ್ಯರಿಗೆ ಶ್ರೀ ಚಂದ್ರಮೌಳೀಶ್ವರಲಿಂಗ ಪ್ರಧಾನ ಮಾಡುತ್ತಿರುವ ಶಿಲಾಮೂರ್ತಿ ಇದೆ. ಪಂಡಿತರತ್ನಂ ಬಿ.ಶಿವಮೂರ್ತಿಶಾಸ್ತ್ರಿಗಳು ಘನಲಿಂಗಿರುದ್ರಮುನಿ[೧೬] ಎಂಬ ಲೇಖನದಲ್ಲಿ ಶಿವತತ್ವರತ್ನಾಕರದಲ್ಲಿನ ರೇವಣಸಿದ್ಧ ಸಂಪ್ರದಾಯವಿರಬಹುದು. ಮತ್ತು ಕೆಳದಿ ನೃಪವಿಜಯದಲ್ಲಿ ರೇವಣಸಿದ್ಧರು, ವಿದ್ಯಾರಣ್ಯರಿಗೆ ಚಂದ್ರಮೌಳೀಶ್ವರಲಿಂಗ ಅನುಗ್ರಹಿಸಿದ ಸಂದರ್ಭವಿರಬಹುದು ಪ್ರಸ್ತುತ ಬಾಳೇ ಹೊನ್ನೂರಿನ ಶ್ರೀಮದ್ರಂಭಾಪುರಿ ಪೀಠ ಮತ್ತು ಶೃಂಗೇರಿಯ ಶಂಕರಾಚಾರ್ಯರ ಪೀಠದ ಮಧ್ಯೆ ಇರಬಹುದಾದ ಯಾವುದೋ ಒಂದು ಸಂಬಂಧ ಕಾರಣವಿರಬಹುದೆಂದು ಖಚಿತಪಡಿಸಿರುವರು.

ಶಿವತತ್ವರತ್ನಾಕರ ಗ್ರಂಥದ ಕರ್ತೃ ಕೆಳದಿಯ ಬಸವ ಭೂಪಾಲನೇ ತನ್ನ ಕೃತಿಯ ರಚನೆಗೆ ವಿದ್ಯಾರಣ್ಯ ವಿರಚಿತ ಪಿತಾಮಹ ಸಂಹಿತೆ ಮತ್ತು ಭಾರತೀ ಕೃಷ್ಣಯತಿ ವಿರಚಿತ ವಿದ್ಯಾರಣ್ಯ ಕೃತಿಗಳ ಆಧಾರದಿಂದ ಲಿಖಿಸಿರುವುದಾಗಿ ಶಿವತತ್ವ ರತ್ನಾಕರರ ಚತುರ್ಥಕಲ್ಲೋಲದ ಕೊನೆಯಲ್ಲಿ ಲಿಖಿಸಿರುವನು–

ಪುರಾಣ ಸ್ಮೃತಿ ಸಿದ್ಧಾಂತಾನ್ ಇತಿಹಾಸಾ–ವಿದ್ಯಾಶ್ರೀತಾನ್/
ವಿದ್ಯಾರಣ್ಯ ಕೃತಿಂ ಚೈವ ಪಿತಾಮಹಾ ಸು–ಸಂಹಿತಾನ್//
ವಿಲೋಕ್ಯಾಯಂ ವಿರಚಿತಃ ಕಲ್ಲೋಲೋ ಭೂ ಚ್ಚತುರ್ಥಕಃ//[೧೬]

ಅಂತೆಯೇ ಗುರುವಂಶ ಕಾವ್ಯ ರಚಿಸಿದ ಕಾಶೀಲಕ್ಷ್ಮಣ ಶಾಸ್ತ್ರಿಗಳು ಗ್ರಂಥಾರಂಭದಲ್ಲಿ–

ಪ್ರಾಯೇಣಾನ್ವಯ ಮಾರ್ಗೇಣ ವ್ಯಾಖ್ಯಾಯತ ಇಯಂ ಕೃತಿಃ/
ಪ್ರಾಚಾಮ ಸಮ್ಮತಂ ನೈವ ಲಿಖ್ಯತೇ ತ್ರ ಸಚಾಧಿಕಮ್ //[೧೭]

ಪ್ರಾಚೀನ ಗ್ರಂಥಗಳಿಗೆ ಸಮ್ಮತವಾದ ವಿಷಯವನ್ನು ನಾನು ಯಥಾವತ್ತಾಗಿ ಬರೆಯುತ್ತೇನೆ. ಹೆಚ್ಚಿನದೇನನ್ನು ಬರೆಯುವುದಿಲ್ಲವೆಂಬ ಪ್ರತಿಜ್ಞಾಪೂರ್ವಕ ಸಂಕಲ್ಪವನ್ನು ಗಮನಿಸಿದರೆ ಮೇಲಿನ ಎರಡೂ ಗ್ರಂಥಕರ್ತೃಗಳ ವಿಕಲ್ಪ ರಹಿತವಾದ, ಸಂದೇಹಕ್ಕಾಸ್ಪದವಿರದ ಸಮರ್ಪಣಾ ಭಾವನೆಗಳನ್ನು ಯಾರೂ ಪ್ರಶ್ನಿಸುವಂತಿಲ್ಲ.

ಹೀಗಿರುವಾಗ ಕಾಶೀಲಕ್ಷ್ಮಣಶಾಸ್ತ್ರಿಗಳ ಗುರುವಂಶ ಕಾವ್ಯದಲ್ಲಿನ "ಸುಸಿದ್ಧದತ್ತಂ" ಎಂಬ ಪದಕ್ಕೆ "ರೇವಣಸಿದ್ಧಾ ಮಹಾಯೋಗಿನಾ" ಎಂದಿರುವ ವ್ಯಾಖ್ಯಾನವನ್ನು ಕೈಬಿಟ್ಟು ಶಂಕರಾಚಾರ್ಯರ ಗುರುಗಳಾಗಿದ್ದ ಶ್ರೀ ಗೋವಿಂದ ಭಗವತ್ಪಾದರಿಗೆ ರೇವಣಸಿದ್ಧರೆಂಬ ಮತ್ತೊಂದು ಹೆಸರು ಇತ್ತೆಂದು ಹೇಳಬೇಕಾಗುತ್ತದೆ.[೨] ಎಂದಿರುವುದು ಗೋವಿಂದ ಭಗವತ್ಪಾದರ ಅಸ್ತಿತ್ವವಿಲ್ಲದಂತಾಗಿ ರೇವಣಸಿದ್ಧರು ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವಿತ್ತುದು ಐತಿಹಾಸಿಕ ಘಟನೆಯಾಗುವುದು ಮಾತ್ರವಲ್ಲದೇ ಶಂಕರಾಚಾರ್ಯರ ಪರಂಪರೆಯನ್ನು ರೇವಣಸಿದ್ಧ ಸಂಪ್ರದಾಯವೆಂದು ಪ್ರಸ್ತಾವನೆಗೈದಿರುವ ಭಾರತ ಸರ್ಕಾರದ ಶಾಸನ ತಜ್ಞರಾಗಿದ್ದ ರಾವ್ ಬಹಾದ್ದೂರ್ ಕೃಷ್ಣಶಾಸ್ತ್ರಿ ಐಯ್ಯರ್‌ರವರ ಅಭಿಪ್ರಾಯವು ಐತಿಹಾಸಿಕವೆನ್ನಬೇಕಾಗುತ್ತದೆ.

ಲ.ನಾ. ಶಾಸ್ತ್ರಿಗಳವರ ಪಾಂಡಿತ್ಯಪೂರ್ಣ ತರ್ಕಗಳೂ ಸಹಾ ಶೃಂಗೇರಿ ಪೀಠದ ಶಂಕರಾಚಾರ್ಯರ ಪರಂಪರೆಯನ್ನು ರೇವಣಸಿದ್ಧ ಸಂಪ್ರದಾಯವೆಂದು ಪರೋಕ್ಷವಾಗಿ ಒಪ್ಪಿಕೊಂಡಿರುವುದನ್ನು ಗಮನಿಸಬಹುದು.

ಆಧಾರಸೂಚಿ

೧. **ಕೆಳದಿ ಅರಸರ ಶಾಸನ ಸಂಪುಟ,** ಪುಟ ೧೮೩.

೨. ಕೃತಿ–ಭಾಷಣಗಳು : ಲೇಖನ ಮಲ್ಲಿಕಾರ್ಜುನ ಒಂದು ಊಹೆ–ಎ.ಆರ್. ಕೃಷ್ಣಶಾಸ್ತ್ರಿಗಳು

೩–೪–೫. ಕೃತಿ : **ಶ್ರೀಶಂಕರಚಂದ್ರಮೌಳೀಶ್ವರ** ಶೃಂಗೇರಿ ಪುಟ ೫೫–೫೬

೬. **ವೀರಶೈವ ಸಾಹಿತ್ಯ ಸಮೀಕ್ಷೆ,** ಪುಟ ೬೧೭.

೭. ಬಿ.ಎಲ್.ರೈಸ್ ಮತ್ತು ಶ್ರೀಹಯವದನರಾಯರು–*Mysore Gazetteer*, p. 1173

೮. ಎ.ಕೆ.ಶಾಸ್ತ್ರಿ – *History of Shringeri*

೯. **ಶ್ರೀ ಶಂಕರಚಂದ್ರಮೌಳೀಶ್ವರ,** ಶೃಂಗೇರಿ– ಪುಟ ೫೯

೧೦. **ಗುರುವಂಶಕಾವ್ಯ,** ೩.೩೩.೩೪

೧೧. ಅದೇ., ೬–೨ .

೧೨. **ಶ್ರೀ ರೇಣುಕವಿಜಯ ಕನ್ನಡ ಟೀಕಾ,** ಶಿರಸಿ ಗುರುಶಾಂತಶಾಸ್ತ್ರಿಗಳು– ತೃತೀಯ ಮಂಜರಿ ಪುಟ ೬೩ (ಸಿದ್ಧನಾಥಶಿವಾಚಾರ್ಯ ವಿರಚಿತ ಸಂಸ್ಕೃತ ರೇಣುಕವಿಜಯ ಕ್ರಿ.ಶ ೧೦ ನೇ ಶತಮಾನ ಮೂಲ)

೧೩. **ಕೆಳದಿ ನೃಪವಿಜಯಂ,** ಪುಟ–೧೬ (ಸಂ) ಆರ್. ಶ್ಯಾಮಾಶಾಸ್ತ್ರಿ.

೧೪. **ಮಧ್ಯಯುಗೀನ ಚರಿತ್ರಕೋಶ** (ಮರಾಠಿ) ಪುಟ–೭೧೪.

೧೫. **ಬಸವೇಶ್ವರರ ಸಮಕಾಲೀನರು**– ಪುಟ–೨೧೦– ಬಸವ ಸಮಿತಿ ಬೆಂಗಳೂರು–೧೯೮೯

೧೬. **ಶಿವತತ್ವರತ್ನಾಕರ** ಚತುರ್ಥಕಲ್ಲೋಲ ೧೨–೨೨೯ (ಹಂಪಿ ವಿಶ್ವ ವಿದ್ಯಾಲಯ ೧೯೯೯)

೧೭. **ಗುರುವಂಶ ಕಾವ್ಯ,** ೧–೩

೧೮. **ಶ್ರೀಶಂಕರ ಚಂದ್ರಮೌಳೀಶ್ವರ** ಶೃಂಗೇರಿ– ಪುಟ–೩೯.

ವಸುಂಧರಾ ದೇಸಾಯಿ ಮಹಾಪುರುಷ*

ರಂಗಾಪುರ ಸಂಸ್ಥಾನ ಮಠಾಧೀಶ್ವರ ಮಹಾದೇವಪ್ಪಯ್ಯ ಅವರಿಗೆ ಸನ್ಮಾನಗಳು, ಪತ್ರಗಳು

ಧಾರವಾಡ ಜಿಲ್ಲೆಯ ಕಲಘಟಗಿ ಸೀಮೆಯ ಹಲವು ಸಂಸ್ಥಾನಿಕರು ಸೇರಿ ಶ್ರೀ ಗುರು ಬಿಷ್ಟಪ್ಪಯ್ಯ ಅವರ ಮೊಮ್ಮಗ ಮಹಾದೇವಪ್ಪಯ್ಯ ಅವರಿಗೆ 'ಆರೆಬಸವನಕೊಪ್ಪ' ಎಂಬ ಗ್ರಾಮವನ್ನು ದಾನ ಕೊಟ್ಟಿದ್ದನ್ನು ಹಸ್ತಪ್ರತಿಯೊಂದು ಹೇಳುತ್ತಿದೆ.

ಮಹಾದೇವಪ್ಪಯ್ಯ ಅವರು ಕ್ರಿ.ಶ. ೧೭೦೧ರಲ್ಲಿ ಹುಟ್ಟಿದರು. ಮತ್ತು ತಮ್ಮ ತಾತ ಸಿದ್ಧಿಸಿಕೊಂಡಿದ್ದ ಆಯುರ್ವೇದ, ಖಗೋಲಶಾಸ್ತ್ರ, ಜ್ಯೋತಿಷ್ಯ, ಸಂಸ್ಕೃತ. ಯೋಗ ಮತ್ತು ಆಧ್ಯಾತ್ಮ ಮುಂತಾದ ವಿದ್ಯೆಗಳನ್ನೆಲ್ಲ ಅತಿ ಚಿಕ್ಕ ವಯಸ್ಸಿನಲ್ಲಿಯೇ ಸ್ವಯಂ ಅಧ್ಯಯನದಿಂದ ಕರಗತ ಮಾಡಿಕೊಂಡಿದ್ದರು.

ಕ್ರಿ.ಶ. ೧೭೧೭ರಲ್ಲಿ ತಮ್ಮ ತಾತ ನಿರ್ಮಿಸಿದ್ದ ಹಂಪಿಯ ಮುಖ್ಯ ಗೋಪುರಕ್ಕೆ ಒಂದು ಲಕ್ಷ ಜನರಿಗೆ ಅನ್ನ ಸಂತರ್ಪಣೆ ಮಾಡುವ ಮೂಲಕ ಅತ್ಯಂತ ವಿಜೃಂಭಣೆಯಿಂದ ಕಲಶ ಇಡಿಸಿದರು. ಕನ್ನಡ ವಿಶ್ವವಿದ್ಯಾಲಯ, ಹಂಪಿ ಪ್ರಕಟಿಸಿದ ವಿರೂಪಾಕ್ಷ ವಸಂತೋತ್ಸವ ಚಂಪೂ ಗ್ರಂಥವು ಈ ಕಲಶ ಸಮಾರೋಪ ಮತ್ತು ನಂತರ ತಾವು ಪುತ್ರ ಪ್ರಾಪ್ತಿಗಾಗಿ ನಡೆಸಿದ ಉತ್ಸವಗಳನ್ನೇ ನೆಪವಾಗಿಟ್ಟುಕೊಂಡು ಮಹಾದೇವಪ್ಪಯ್ಯ ಅವರೇ ರಚಿಸಿದ ಗ್ರಂಥವಾಗಿದೆ.[೧]

ಶ್ರೀ ಗುರು ಬಿಷ್ಟೇಶ್ವರ ಸ್ವಾಮಿಗಳು ಸಮಾಜಕ್ಕೆ ನೀಡಿದ ಮಹೋನ್ನತ ಕೊಡುಗೆಗಳನ್ನು ಸೇರಿಸಿ ಮಹಾದೇವಪ್ಪಯ್ಯ ಅವರಿಗೆ ವಿವಿಧ ಮಠಾಧೀಶರಿಂದ ಮತ್ತು ಉತ್ತರ ಕರ್ನಾಟಕದ ಹಲವಾರು ಸಂಸ್ಥಾನಿಕರಿಂದ ಹೇರಳವಾದ ಸನ್ಮಾನಗಳು, ಇನಾಂಗಳು ಲಭಿಸಿವೆ. ಅವುಗಳಲ್ಲಿ ಪ್ರಮುಖವಾದವುಗಳು ಇಂತಿವೆ.

೧ ಬಿಷ್ಟಪ್ಪಯ್ಯ ಅವರು ತಮ್ಮ ಬಾಳಿನ ದ್ವಿತೀಯ ಅರ್ಧವನ್ನು ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನ ರಂಗಾಪುರದಲ್ಲಿ ನೆಲೆಸುತ್ತ ಸುತ್ತಲಿನ ಹಳ್ಳಿಗಳ ಹಲವಾರು ಗುಡಿಗಳನ್ನು ಜೀರ್ಣೋದ್ಧಾರ ಗೊಳಿಸಿದ್ದರು. ಮತ್ತು ತಾವು ಆಸ್ಥೆಯಿಂದ ನಿರ್ಮಿಸಿದ ರಸಲಿಂಗವನ್ನು ಅಲ್ಲಿಯ ರಾಮೇಶ್ವರ ಗುಡಿಯಲ್ಲಿಯೇ ಸ್ಥಾಪಿಸಿದ್ದರು. ಮಹಾದೇವಪ್ಪಯ್ಯ ಅವರಿಗೆ ಉತ್ತರಾದಿ ಮಠಾಧೀಶರು 'ಮಹಾಪುರುಷ' ಸಂಸ್ಥಾನ ರಂಗಾಪುರ ಎಂಬ ಬಿರುದಿನೊಂದಿಗೆ ರಂಗಾಪುರ ಹಳ್ಳಿಯನ್ನು ಇನಾಂ ನಿಂಡಿದ್ದಾರೆ. ಅಂದಿನಿಂದ ಆ ಮನೆತನದ ವ್ಯವಹಾರಗಳೆಲ್ಲ ಅದೇ ಹೆಸರಿನಿಂದ ನಡೆದಿವೆ.

೨ ಹೀಗೆ ರಂಗಾಪುರ ಸಂಸ್ಥಾನದ ಮಠಾಧೀಶ್ವರರಾಗಿ ಮಹಾದೇವಪ್ಪಯ್ಯ ಅವರು ಕರ್ನಾಟಕದಾದ್ಯಂತ ಸಂಚರಿಸುತ್ತ ಶೃಂಗೇರಿಗೂ ಭೇಟಿ ಇತ್ತರಂತೆ. ಅಲ್ಲಿನ ಕೆಲ ವಿದ್ವಾಂಸರು ಇವರ ವಿದ್ವತ್ತಿನ ಅನುಮಾನ ವ್ಯಕ್ತಪಡಿಸುತ್ತ ತಮ್ಮೊಡನೆ ವಾದಕ್ಕೆ ಆಹ್ವಾನಿಸಿದರಂತೆ. ಆಗ ಮಹಾದೇವಪ್ಪಯ್ಯ ಅಲ್ಲಿಯೇ ಮಠದಲ್ಲಿ ನೀರು ಹೊರುತ್ತಿದ್ದ ನಾಗೇಶಭಟ್ಟ ಎಂಬ ಪರಿಚಾರಕನಿಗೆ ಉಪದೇಶ ನೀಡಿ ಮೊದಲು ಇವರನ್ನು ಸೋಲಿಸಿ ನಂತರ ತಾವು ಬರುವುದಾಗಿ ಸವಾಲು ಹಾಕಿದರಂತೆ. ಆದರೆ ಅಂದು ಏನೂ ವಿದ್ಯೆ ಇಲ್ಲದ ಆ ನಾಗೇಶ ಭಟ್ಟರು ಆ ಎಲ್ಲ ವಿದ್ವಾಂಸರನ್ನು ನಿರಾಯಾಸವಾಗಿ ಸೋಲಿಸಿದರಂತೆ. ಆಗ ಶೃಂಗೇರಿ ಜಗದ್ಗುರುಗಳು 'ನ ಪರೀಕ್ಷಣೀಯೋ ಮಹಾತ್ಮಾ ಅಘಟಿತ ಘಟನಾ ಚತುಂ ಮತ್ವಾಸಂಮಾನ್ಯ ದಂಡವನ್ನಮಸ್ಕೃತ್ಯ ಸಂಪೂಜ್ಯ' ಎಂಬ ಬಹುಮಾನ ವಾಕ್ಯ ಸಾರಿದ್ದಾರೆ ಮತ್ತು ಮಹಾದೇವಪ್ಪಯ್ಯ ಅವರ ಅಸಾಮಾನ್ಯ ಪ್ರತಿಭೆ ಗುರುತಿಸಿ ಛತ್ರ, ಚಾಮರ, ಹಗಲು ದೀವಟಿಗೆ ಮುಂತಾದ ಸನ್ಮಾನಗಳೊಡನೆ ೬೦ ಬಿರುದುಗಳನ್ನಿತ್ತು ಸನ್ಮಾನಿಸಿದ್ದಾರೆ.[೨]

೩. ಕ್ರಿ.ಶ. ೧೭೩೦ರಲ್ಲಿ ಮಹಾದೇವಪ್ಪಯ್ಯ ಒಮ್ಮೆ ಮೈಸೂರಿಗೆ ಭೇಟಿ ನೀಡಿದ್ದರಂತೆ. ಭವಿಷ್ಯ ಹೇಳುವಲ್ಲಿ ಇವರಿಗಿದ್ದ ಖ್ಯಾತಿಯನ್ನು ಕೇಳಿ ತಿಳಿದ ಮಹಾರಾಜರು ಕಂಬಳಿ ಧರಿಸಿ ಮಾರುವೇಷದಿಂದ ಇವರ ಬಳಿ ಬಂದು ತಮ್ಮ ಹಸ್ತ ತೋರಿಸಿದರಂತೆ. ಮಹಾದೇವಪ್ಪಯ್ಯ 'ಇದು ಕಟ್ಟಿಗೆ ಮಾರಿ ಜೀವಿಸುವ ಕೈ' ಎಂದು ಹೇಳಿದರಂತೆ. ಸುಮ್ಮನೇ ತೆರಳಿದ

*

ಮಹಾರಾಜರು ಮರುದಿನ ಜ್ಯೋತಿಷಿಯನ್ನು ಆಸ್ಥಾನಕ್ಕೇ ಬರಮಾಡಿ ಕೊಂಡು ಮತ್ತೆ ತಮ್ಮ ಹಸ್ತ ತೋರಿಸಿದರಂತೆ. 'ಇದು ನಾನು ನಿನ್ನೆಯೇ ನೋಡಿ ಹೇಳಿದ ಕಟ್ಟಿಗೆ ಮಾರಿ ಜೀವಿಸುವ ಕೈ' ಎಂದೇ ಉತ್ತರ ಬಂತಂತೆ. ಉಳಿದ ವಿದ್ವಾಂಸರು ಗದ್ದಲ ಮಾಡತೊಡಗಿದಾಗ ಜ್ಯೋತಿಷಿ ತುಸು ಮೇಣ ತರಿಸಿ ರಾಜರ ಎರಡೂ ವಸಡು ಗಳಲ್ಲಿರಿಸಿ ತೆಗೆದರಂತೆ. ಅಲ್ಲಿ ಶಂಖ ಮತ್ತು ಚಕ್ರ ಮೂಡಿದ್ದನ್ನು ತೋರಿಸುತ್ತ 'ಪ್ರಭುಗಳೇ ತಮ್ಮನ್ನು ರಾಜರನ್ನಾಗಿಸಿದ್ದು ಹಸ್ತರೇಖೆಗಳಲ್ಲ ಬದಲು ಈ ಶಂಖ ಚಕ್ರಗಳು' ಎಂದು ಹೇಳಿದರಂತೆ. ಆಗ ರಾಜರು 'ನೀವು ನಿಜವಾಗಿಯೂ ಮಹಾಪುರುಷರು' ಎಂದು ಪ್ರಣಾಮ ಮಾಡಿದರಂತೆ.[೩]

೪ 'ವಿರೂಪಾಕ್ಷ ವಸಂತೋತ್ಸವ ಚಂಪೂ' ಗ್ರಂಥದಲ್ಲಿ ಆ ಸಮಾರಂಭದಲ್ಲಿ ಉಪಸ್ಥಿತರಿದ್ದ ರಾಜರ ವರ್ಣನೆ ಬರುತ್ತದೆಯಷ್ಟೆ ? ಅವರಲ್ಲಿ ಹೆಚ್ಚಿನವರೆಲ್ಲ ಮಹಾದೇವಪ್ಪಯ್ಯ ಅವರಿಗೆ ಭೂಮಿಯನ್ನು ದಾನ ಮಾಡಿದ್ದಾರೆ. ಅವರು ನೀಡಿದ ಎಲ್ಲ ಭೂದಾನ ಪತ್ರಗಳು ಬಿಷ್ಟಪ್ಪಯ್ಯ ಅವರನ್ನು "ಸಾಕ್ಷಾತ್ ವಿರೂಪಾಕ್ಷವತಾರ" ಎಂದೇ ಸಂಬೋಧಿಸಿವೆ.

ಶ್ರೀರಾಶಿ (ಶಿರಹಟ್ಟಿ) ಸಂಸ್ಥಾನಿಕರು	ವಿಠ್ಠಲಾಪುರ (ಮುಂಡರಗಿ ತಾ. ಗದಗ ಜಿಲ್ಲೆ)
ಡಂಬಳ	ತಾಮ್ರಗುಂಡಿ ಕೊಪ್ಪಳ ಜಿಲ್ಲೆ
ಭುಜಂಗನರಾಧೀಶ (ಹಾವನೂರು)	ಮೇವುಂಡಿ ಹಾವೇರಿ ಜಿಲ್ಲೆ
ಕಲಘಟಗಿ, ಮಿಶ್ರಿಕೋಟಿ	ಆರೆ ಬಸವನಕೊಪ್ಪ, ಅಂಬ್ಲಿ ಕೊಪ್ಪ } ಧಾರವಾಡ ಜಿಲ್ಲೆ
ಬಳ್ಳಾರಿ	ಶಿರಗುಪ್ಪಿ ಬಳಿ ಭೂಮಿ
ಹರಪನಳ್ಳಿ	ಹನಸಿ – ಹಗರಿ ಬೊಮ್ಮನಹಳ್ಳಿ ತಾಲ್ಲೂಕು
ವಂಶನಾಮನಗರಿ (ಬಿದಿರಹಳ್ಳಿ)	ಬಿದಿರಹಳ್ಳಿ ಮುಂತಾದ ಮುಖ್ಯ ಭೂಮಿಗಳು.

ಈ ಮಹಾದೇವಪ್ಪಯ್ಯ ಅವರ ಕಾಲದಲ್ಲಿ ರಂಗಾಪುರದ ಮಹಾಪುರಷ ಸಂಸ್ಥಾನವು ಉಚ್ಛ್ರಾಯ ಸ್ಥಿತಿಯನ್ನು ತಲುಪಿತ್ತು. ಈ ಸಂಸ್ಥಾನದ ಬೆಳ್ಳಿಯ ಸಿಂಹಾಸನ ಶಿವಮೊಗ್ಗ ಜಿಲ್ಲೆಯ ಕೂಡ್ಲಿಮಠ ಸೇರಿದೆ ಎಂಬ ಮೌಖಿಕ ಪರಂಪರೆಯ ಜಾಡು ಹಿಡಿದು ಅಧ್ಯಯನ ನಡೆಸಿದಾಗ ಶಿಥಿಲಾವಸ್ಥೆಯಲ್ಲಿದ್ದ ಸಿಂಹಾಸನ ಈಚೆಗೆ ಪತ್ತೆಯಾಯಿತು.

ಮಹಾದೇವಪ್ಪಯ್ಯ ಅವರು ಗುರುಬಿಷ್ಟೇಶರು ನಿರ್ಮಿಸಿದ ರಸಲಿಂಗ ಮತ್ತು ತಮ್ಮ ಬಿರುದು ಬಾವಲಿ ಶಿಷ್ಯಗಣಗಳೊಡನೆ ವರ್ಷಕ್ಕೆರಡು ಬಾರಿ ಹಂಪಿಗೆ ಬಂದು ವಿರುಪಾಕ್ಷೋತ್ಸವವನ್ನು ವಿಜೃಂಭಣೆಯಿಂದ ನಡೆಸುವ ಪರಿಪಾಠ ಆರಂಭಿಸಿದ್ದರು. ಈ ಪದ್ಧತಿ ಪ್ರಸ್ತುತ ಈ ಆರೆಬಸವನಕೊಪ್ಪ ಮತ್ತು ಅಂಬ್ಲಿಕೊಪ್ಪಗಳಲ್ಲಿರುವ ಗುಡಿಗಳನ್ನು ಅವುಗಳ ಪರಿಸರವನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ ಗುರು ಬಿಷ್ಟೇಶ್ವರರ ಆರಂಭದ ಜೀವನ ಕ್ರಮದ ಮೇಲೂ ಬೆಳಕು ಚೆಲ್ಲುವ ಮಾಹಿತಿ ಲಭ್ಯವಾಗುತ್ತದೆಯಾದ್ದರಿಂದ ಅದನ್ನು ಕುರಿತೂ ಇಲ್ಲಿ ಸಂಕ್ಷಿಪ್ತವಾಗಿ ಹೇಳುತ್ತಿದ್ದೇನೆ.

ಈ ಎರಡೂ ಹಳ್ಳಿಗಳು ಪಶ್ಚಿಮ ಘಟ್ಟಗಳ ಶ್ರೇಣಿಯಲ್ಲಿ ಬರುತ್ತವೆ. ಒಂದೇ ಓಣಿಯ ಇಕ್ಕೆಲಗಳಲ್ಲಿರುವ ಕೆಲವೇ ಮನೆಗಳೇ ಗ್ರಾಮಗಳಾಗಿದ್ದು ಮನೆಗಳ ಹಿಂದೆ ದಿಬ್ಬಗಳ ಮೇಲೆ ಸಣ್ಣ ಗುಡಿಗಳಿವೆ. ಮಣ್ಣಿನ ಗೋಡೆ, ಕೆಂಪು ಹಂಚಿನ ಹೊದಿಕೆ ಅಲ್ಲಿರುವ ಶಿವಲಿಂಗಗಳನ್ನೇ 'ಬಿಷ್ಟೇಶ್ವರ ಸ್ವಾಮಿ' ಎಂದು ಅರ್ಚಿಸುತ್ತಾರೆ. ಆರೆ ಬಸವನ ಕೊಪ್ಪದಲ್ಲಿನ ಗುಡಿಯಲ್ಲಿ ಲಿಂಗಕ್ಕೆ ಬೆಳ್ಳಿಯ ಮುಖವಾಡವಿದೆ. ಬಿಷ್ಟಪ್ಪಯ್ಯ ಅವರ ಪಾದುಕೆಗಳಿವೆ. ಹೊಸ್ತಿಲಿಗೆ ೧೮ ಮತ್ತು ೧೯ನೆಯ ಶತಮಾನದ ಬೆಳ್ಳಿಯ, ತಾಮ್ರದ ನಾಣ್ಯಗಳನ್ನು ಹರಕೆ ರೂಪವಾಗಿ ಹೊಡೆದಿದ್ದಾರೆ.

ಬಿಷ್ಟಪ್ಪಯ್ಯ ನಿರ್ಮಿಸಿದ ರಸಲಿಂಗದ ಕೆಳಗೆ ಇರುವ ಹಿತ್ತಾಳೆ ಮಂಟಪವು 'ಕ್ರಿ.ಶ. ೧೬೩೩ರಲ್ಲಿ ಕಲಘಟಗಿ ಸೀಮೆಯ ಬಮ್ಮಿಗಟ್ಟಿಯ ಭಕ್ತರು ಮಾಡಿಸಿಕೊಟ್ಟಿದ್ದು' ಎಂಬ ಶಾಸನವನ್ನು ಹೊಂದಿದೆ. ಮತ್ತು ಅವರು ಹನಸಿ ಗ್ರಾಮದಲ್ಲಿದ್ದಾಗ ಈ ರಸಲಿಂಗ ಮಾಡಿದರೆಂದು ಹಸ್ತಪ್ರತಿ ಹೇಳುತ್ತದೆ. ಅಂದರೆ ಕ್ರಿ.ಶ. ೧೬೦೮ರಲ್ಲಿ ಹುಟ್ಟಿದ ಬಿಷ್ಟಪ್ಪಯ್ಯ ಅವರು ಉಪನಯನಾ ನಂತರ ೧೨ ವ. ತಪಸ್ಸು ಮಾಡಿದ್ದಾರೆ. ಆ ಪ್ರಯೋಗಗಳಿಗೆ ಬೇಕಾದ ಏಕಾಂತಕ್ಕೆಂದ ಮೊದಲು ತಮ್ಮ ಗ್ರಾಮ ಸೋಗಿಯಲ್ಲಿನ ಜಮೀನಿನಲ್ಲಿ ಗುಡಿ ಕಟ್ಟಿಕೊಂಡು ಸಾಧನೆ ಶುರು ಮಾಡಿದ್ದಾರೆ. ಅಲ್ಲಿ ಏಕಾಂತ ಸಾಧ್ಯವಾಗದಾಗ ಹರಪನಹಳ್ಳಿ ನಾಯಕರು ಹನಸಿಯಲ್ಲಿ ೮೦ ಎಕರೆ ಭೂಮಿ ನೀಡಿ ಅನುಕೂಲ ಮಾಡಿಕೊಟ್ಟಿದ್ದಾರೆ. ಅದರ ಮಧ್ಯದಲ್ಲಿ ಗುಡಿ ಕಟ್ಟಿಕೊಂಡು ಪ್ರಯೋಗ ಮುಂದುವರೆಸಿದ್ದಾರೆ. ಮತ್ತು

[illegible]

॥ श्री ॥ नकलु ८

॥ श्री सच्चिदानंद स्वरूप श्री विरूपाक्ष

॥ नारश्री विरूपाक्ष स्वामि गळु पुत्रकरि

॥ वप्पय्यनवर पुत्ररु महादेवप्पय्यनवर

॥ पादास्या विगे -

॥ श्री गणेशाय नमः नमस्तुंग शिरश्चुंबि चंद्र चामर चारवे त्रैलोक्य नगरारंभ मूलस्तंभाय शंभवे जयत्यादि वराहोयं येन धात्रि समुध्दताः अंगसंगादिना होपि सस्ये पुलकदंतुरा ॥ शुभमस्तु ॥ श्रीमन्नृप शालिवाहन शके १६५२ प्रवर्तमाने साधारण नाम संवत्सर दश्रावण शुध १२ बुधवार श्रीमत्

[illegible] आपस्तंब [illegible] श्री ॥ पा

[illegible]

[illegible]

नाडक र्णि मि देवर हु [illegible] र्णि सम तके ले घट्टि

गि माडकर्णि संमत तड [illegible] आन्हतम [illegible] श्री मि

त्र गोत्र दकाम काया न [illegible] वद ॥ तिंमाजि [illegible] पुत्र

मुरारि देवाद तस्तु [illegible] जि [illegible] रि बरको हदा न पट्टियंतद

दे नम [illegible] कोटी [illegible] तिउ बाळि ग्राम [illegible] गहिम

आदे आरिंव सेवन को [illegible] तुनम [illegible] [illegible] दंद श्री

हे वरववर पाद के आ [illegible] हुइ सेवे आग्राम पूर्व पश्च

मुउत्तरद क्षणद [illegible] जलपाषा [illegible] सहमूल

आगि कोहुइ सेवे श्री देवर वरुत [illegible] पुत्र पौत्र पारंपर वागि आचं

[illegible]

द्राकेस्थाइ गळागि अनुभविसिकोडु इदकेनम्म वंशापारप

र दा [illegible] देरीति नडीवेकु इदके अन्यथा वाद रे भवर कुल

स्वामि साक्षि नंमहिरेरसुकृत वे साक्षियं दुवरकोह दानप

हिपत्रवु ॥ स्वदत्ताद्वि गुणं पुण्यं परदत्तानुपालनं परदत्ता

पहारेण स्वदत्तं निष्फलं भवेतु ॥

ಅದಕ್ಕೆ ಬೇಕಾದ ಆಯುರ್ವೇದ ಸಸ್ಯಗಳನ್ನು ಹುಡುಕಿಕೊಂಡು ಪಶ್ಚಿಮ ಘಟ್ಟಗಳಿಗೆ ಬಂದಿದ್ದಾರೆ. ಅಲ್ಲಿದ್ದಾಗ ಸ್ವಂತ ಅರ್ಚನೆಗೆಂದು ಶಿವಲಿಂಗಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಅವು ಸೋಗಿ, ಹನಸಿಯ ಗುಡಿಗಳಂತೆ ಭವ್ಯವಾದ ಕಲ್ಲಿನ ಗುಡಿಗಳಲ್ಲ. ತಾತ್ಪೂರ್ತಿಕ ಗೋಡೆ, ಹೊದಿಕೆಗಳಾಗಿದ್ದು ಕಾಲಕಾಲಕ್ಕೆ ದುರಸ್ತಿ ಕಾಣುತ್ತ ಬಂದಿವೆ. ಅವರು ಆ ಬೆಟ್ಟದ ಬುಡಗಳಲ್ಲಿ ನೆಲೆನಿಂತ ನಂತರ ಅಲ್ಲಿ ಜನವಸತಿ ಬೆಳೆದು ಹಳ್ಳಿಗಾಗಿವೆ. ಆ ಹಳ್ಳಿಗಳನ್ನೇ ಮುಂದೆ ಮಹಾದೇವಪ್ಪಯ್ಯ ಅವರಿಗೆ ಆಯಾ ಸಂಸ್ಥಾನಿಕರು ದಾನ ನೀಡಿದ್ದಾರೆ ಎಂದು ಊಹಿಸಬಹುದಾಗಿದೆ. ಈ ಆರೆಬಸವನಕೊಪ್ಪದ ಜಮೀನಿನ ಉತ್ಪನ್ನವನ್ನು ಮಹಾಪುರುಷ ಕುಟುಂಬವು ಗುರು ಬಿಷ್ಟಪ್ಪಯ್ಯ ಅವರ ಆರಾಧನೆ ಮತ್ತು ರಸಲಿಂಗೇಶ್ವರನ ಅರ್ಚನೆಗಳಿಗೆಂದು ಮೀಸಲಾಗಿಟ್ಟಿದಾರೆ.

ಅನುಬಂಧ

ಶ್ರೀ

॥ ಸಚ್ಚಿದಾನಂದ ಸ್ವರೂಪ ಶ್ರೀ ವಿರೂಪಾಕ್ಷಾವತಾರ ಶ್ರೀ ಬಿಷ್ಟಪ್ಪಸ್ವಾಮಿಗಳ ಪುತ್ರರೂ ಶಿವಯ್ಯನವರ ಪುತ್ರರೂ ಮಹಾದೇವಪ್ಪಯ್ಯನವರ ಪಾದಸ್ವಾಮಿಗೆ॥ ॥ ಶ್ರೀ ಗಣೇಶಾಯ ನಮಃ । ನಮಸ್ತುಂಗಿ ಶಿರಶ್ಚುಂಬಿ ಚಂದ್ರ ಚಾಮರ ಚಾರುವೆ ತ್ರೈಲೋಕ್ಯ ನಗರಾರಂಭ ಮೂಲ ಸ್ತಂಭಾಯ ಸಂಭವೇ ಜಯಂತ್ಯಾದಿ ವರಾಹೋಯ ಯೇನ ಧಾತ್ರಿ ಸಮುದ್ಧಟಿ ತಾಃ ॥ ಅಂಗ ಸಂಗಾದಿ ನಾದ್ಯೋಪಿ ಸಸ್ಯೇ ಮಲಕ ಗಂತುರಾ ॥ ಶುಭಮಸ್ತು ಶ್ರೀನೃಪ ಶಾಲಿವಾಹನ ಶಕೆ ೧೬೫೩ ಪ್ರವರ್ತ ಮಾನೆ ಸಾಧಾರಣ ನಾಮ ಸಂವತ್ಸರದ ಶ್ರಾವಣ ಶುದ್ಧ ೧೩ ಬುಧವಾರ ಶ್ರೀಮತ್ ಯಜುರ್ವೇದಾಂತರ್ಗತ ಅಪಸಂಭ ಸೂತ್ರದ ಆತ್ರೇಯ ಗೋತ್ರದ ಶ್ರೀ ॥ ಪಾದಕ್ಕೆ ನಿಂಮ ಬಾಲಕರಾದ ಮಿಸರಿ ಕೋಟೆ ಸೀಮೆದೇಸಾಯಿ ನಾಡಗೌಡ ನಾಡಕರ್ಣಿ ಮಿ ದೇವರ ಹುಬ್ಬಳ್ಳಿ ನಾಡಗೌಡ ನಾಡಕರ್ಣಿ ಸಮಸ್ತ ಕಲಘಟಗಿ ನಾಡಕರ್ಣಿ ಸಂಮತ ತಡಸದ ಸೀಮಿ ಆಶ್ವಾಯವ ಸೂತ್ರ ವಿಶ್ವಾಮಿತ್ರ ಗೋತ್ರದ ಕಾಮಯಾನ ಪ್ರವರೋದ್ಭವದ ॥ ತಿಂಮಾಜಿ ವೆಂಕಟಾದ್ರಿ ಪುತ್ರ ಮುರಾರಿ ದೇಸಾಯಿ ತತ್ಪುತ್ರ ತಿಂಮಾಜಿ ಮುರಾರಿ ಬರಕೊಟ್ಟ ದಾನಪಟ್ಟೆ ಯಂತಂದರೆ ನಂಮ ಮಿಸರಿ ಕೋಟೆ ಸೀಮಿ ದೇಸಗತಿ ಉಂಬಳಿ ಗ್ರಾಮ ಸೀನಿಗದ್ದಿ ಮಜರೇ ಆರೆಬಸವನಕೊಪ್ಪ ಗ್ರಾಮವಂನು ನಂಮ ಆತ್ಮಸಂತೋಷದಿಂದ ಶ್ರೀ ದೇವರ ಪಾದಕ್ಕೆ ಅರ್ಪಿತ ಮಾಡಿಕೊಟ್ಟು ಇದ್ದೇವೆ. ಆ ಗ್ರಾಮದ ಪೂರ್ವ ಪಶ್ಚಿಮ ಉತ್ತರ ದಕ್ಷಣದ ಸೀಮೆ ಪರ್ವತಾದಿ ಜಲಪಾಷಾಣ ವೃಕ್ಷಾದಿ ಸಹ ಮೂಲವಾಗಿ ಕೊಟ್ಟು ಇದ್ದೇವೆ. ಶ್ರೀ ದೇವರವರೂ ತಂಮ ಪುತ್ರ ಪೌತ್ರ ಪಾರಂಪರವಾಗಿ ಆ ಚಂ ॥ ದ ಹೊದ್ದು ಇತ್ಯಾದಿ ಅರಮನಿ ಯಾ ಉಪಸರ್ಗಗಳು ಯೇನು ಬಂದದ್ದು ಪರಿಹರಿಸಿಕೊಂಡೇ ದ್ರಾರ್ಕಸ್ಥಾ ಈ ಗಳಾಗಿ ಅನುಭಾವಿಸಿಕೊಂಡು ಇದಕ್ಕೆ ನಮ್ಮ ವಂಶ ಪಾರಂಪರದಲ್ಲಿ ಇದೇ ರೀತಿ ನಡೀಬೇಕು ಇದಕ್ಕೆ ಅನ್ಯಥಾವಾದರೆ ಅವರ ಕುಲಸ್ವಾಮಿ ಸಾಕ್ಷಿ ನಂಮ ಹಿರೇರ ಸುಕೃತವೇ ಸಾಕ್ಷಿ ಯೆಂದು ಬರಕೊಟ್ಟ ದಾನಪಟ್ಟೆ ಪತ್ರವು ॥ ಸ್ವದತ್ತಾ ದ್ವಿಗುಣಂ ಪುಣ್ಯಂ ಪರದತ್ತಾನು ಪಾಲನಂ ಪರದತ್ತಾ ಪಹಾರೇಣ ಸ್ವದತ್ತಂ ನಿಷ್ಫಲಂ ಭವೇತು ॥

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ದಿನಾಂಕ : ೯.೨.೨೦೦೮ರಂದು ಮಿಥಿಕ್ ಸೊಸೈಟಿಯಲ್ಲಿ 'ಹಂಪೆ ವಿರೂಪಾಕ್ಷ ದೇಗುಲದ ಮುಖ್ಯ ಗೋಪುರ ನಿರ್ಮಾಪಕ ಬಿಷ್ಟಪ್ಪಯ್ಯ ಮಹಾಪುರುಷ' ಎಂಬ ವಿಷಯದ ಮೇಲೆ ನಾನು ನೀಡಿದ ಉಪನ್ಯಾಸದಲ್ಲಿ ಈ ಕುರಿತ ವಿವರಣೆ ನೀಡಿದ್ದೇನೆ. ಮತ್ತು ನವೆಂಬರ್ ೨. ೨೦೦೮ರಂದು ಹಂಪಿ ಉತ್ಸವದಲ್ಲಿ ಪುರಾತತ್ತ್ವ ಇಲಾಖೆ ನಡೆಸಿದ ವಿಜಯನಗರ ಅಧ್ಯಯನದ ವಿಚಾರ ಸಂಕಿರಣದಲ್ಲಿ 'ವಿರೂಪಾಕ್ಷ ವಸಂತೋತ್ಸವ ಚಂಪೂ ಗ್ರಂಥದ ನಿಜಕರ್ತೃ ಮಹಾದೇವಪ್ಪಯ್ಯ ಮಹಾಪುರುಷ' ಎಂಬ ಪ್ರಬಂಧದಲ್ಲಿ ಈ ಕುರಿತು ವಿವರಣೆ ನೀಡಿದ್ದೇನೆ.

೨. 'ಶ್ರೀ ಬಿಷ್ಟೇಶ ವಿಜಯವು' ಕಾವ್ಯದ ತೃತೀಯ ಸರ್ಗದಲ್ಲಿ ಈ ಕುರಿತ ವಿವರಣೆ ಇದೆ. ಮಹಾದೇವಪ್ಪಯ್ಯ ಅವರು ನಡೆಸಿದ ಪತ್ರವ್ಯವಹಾರಗಳೆಲ್ಲ ಈ ಬಿರುದುಗಳಿಂದಲೇ ಶುರುವಾಗಿವೆ. ಆ ಹಸ್ತಪ್ರತಿಗಳು ಲಭ್ಯ ಇವೆ.

೩. ಬಿಷ್ಟಪ್ಪಯ್ಯ ಅವರ ಭಕ್ತರು, ಆಪ್ತರು ಮತ್ತು ವಂಶಸ್ಥರೆಲ್ಲರಿಂದ ಮೌಖಿಕ ಪರಂಪರೆಯಲ್ಲಿ ಕೇಳಿದ ಈ ಘಟನೆಯು ವಿವರವಾಗಿ ಕೆ. ವಾಸುದೇವಾಚಾರ್ಯರು ಮೈಸೂರು ಅರಮನೆಯ ಕುರಿತು ಬರೆದ 'ನೆನಪುಗಳು' ಪುಸ್ತಕದಲ್ಲಿ ಕೇಳಿದ ಘಟನೆಗಳು ವಿಭಾಗದಲ್ಲಿ ದಾಖಲಾಗಿದೆ.

ಡಾ. ಕೆ. ರವೀಂದ್ರನಾಥ*

ಅಮರಕಲ್ಯಾಣದ ಸ್ಥಾಪಕ ದಿಗ್ಗಿ ಸಂಗಮನಾಥ

ಗುಲಬರ್ಗಾ ಜಿಲ್ಲೆಯ ಶಹಾಪುರ ತಾಲ್ಲೂಕಿನ ದಿಗ್ಗಿ ಸಂಗಮನಾಥ ಅತ್ತ ೧೨ನೇ ಶತಮಾನದ ಕಲ್ಯಾಣದ ಬಸವಣ್ಣನ ಹಾಗೂ ಇತ್ತ ೧೫-೧೬ನೇ ಶತಮಾನದ ಕೊಡೇಕಲ್ಲ ಬಸವಣ್ಣನ ಸಾಂಸ್ಕೃತಿಕ ರಾಯಭಾರಿಯಂತೆ ಬದುಕಿಹೋದವನು. ಅಂದರೆ, ಕಲ್ಯಾಣ ಸಂಸ್ಕೃತಿಯ ಪರಂಪರೆಯನ್ನು ಬೆಳೆಸಿಕೊಂಡು ಹೋದ ಕೊಡೇಕಲ್ಲ ಬಸವಣ್ಣ, ಆತನ ಪತ್ನಿ ನೀಲಮ್ಮ, ಮಗ ರಾಚಪ್ಪಯ್ಯ, ಗುಹೇಶ್ವರಯ್ಯಾ, ಸಂಗಪ್ಪಯ್ಯ ಮುಂದುವರಿದು ಪುತ್ರ ಸಂತಾನವಾದ ವೀರಸಂಗಪ್ಪಯ್ಯರಲ್ಲದೆ ; ನಾಗವೀ ಪರಿಸರದ ಗುಂಡಬಸವೇಶ, ಈತನ ಶಿಷ್ಯ ಕಾಲಜ್ಞಾನಿ ಈರಪ್ಪಯ್ಯಾ, ಕಕ್ಕಳಮೇಲಿ ಅಲ್ಲಮಪ್ರಭು, ಸಾಲೋಟಗಿ ಶಿವಯೋಗಿಗಳಲ್ಲದೆ; ಕರ್ನಾಟಕದ ದಕ್ಷಿಣ ಭಾಗದಲ್ಲಿ ಮಂಟೇಸ್ವಾಮಿ ಪರಂಪರೆಯನ್ನು ಬೆಳೆಸಿದ ಮೂಲ ವ್ಯಕ್ತಿ ದಿಗ್ಗಿ ಸಂಗಮನಾಥ.

ಇದುವರೆಗೆ ಸಮಯ ಕಲ್ಯಾಣವೆನಿಸಿದ ಬಸವಕಲ್ಯಾಣದ ವಚನಸಾಹಿತ್ಯ, ವಿಜಯ ಕಲ್ಯಾಣವೆನಿಸಿದ ಹಂಪಿಯ ವಚನಾಗಮ ಸಾಹಿತ್ಯ ಹಾಗೂ ಕಡೆಯ ಕಲ್ಯಾಣವೆನಿಸಿದ ಕೊಡೇಕಲ್ಲಿನ ವಚನವಾಕ್ಯ ಸಾಹಿತ್ಯವನ್ನು ಅಧ್ಯಯನಕ್ಕೆ ಒಳಪಡಿಸಲಾಯಿತೇ ಹೊರತು; ಮಿಕ್ಕೆರಡು ಕಲ್ಯಾಣಗಳಾದ ಅಮರಕಲ್ಯಾಣವೆನಿಸಿದ ದಿಗ್ಗಿ ಮತ್ತು ಧರ್ಮಕಲ್ಯಾಣವೆನಿಸಿದ ನಾಗಾವಿಯ ತತ್ತ್ವಪದ ಸಾಹಿತ್ಯವನ್ನು ಗಮನಿಸಿಯೇ ಇಲ್ಲ. ವಿಶೇಷವಾಗಿ ಅಮರಕಲ್ಯಾಣದ ದಿಗ್ಗಿ ಸಂಗಮನಾಥ, ಧರ್ಮಕಲ್ಯಾಣದ ನಾಗಾವಿಯ ಗುಂಡಬಸವೇಶ್ವರರನ್ನು ಕುರಿತು ಅಧ್ಯಯನಗಳು ಪೂರ್ಣಗೊಂಡರೆ ಕರ್ನಾಟಕದ "ಕಲ್ಯಾಣ ಸಂಸ್ಕೃತಿಯ" ಚಾರಿತ್ರಿಕ ಅಧ್ಯಯನ ಪೂರ್ಣಗೊಂಡಂತೆಯಾಗುತ್ತದೆ.

ಕೊಡೇಕಲ್ಲ ಪರಂಪರೆಯಲ್ಲಿ ಬರುವ ಕವಿ ವೀರ ಸಂಗಪ್ಪಯ್ಯನ "ನಂದಿಯಾಗಮಲೀಲೆ" ಎಂಬ ಕೃತಿ ೧೭೦೦ರಲ್ಲಿ ಪ್ರತಿಗೊಂಡಿರುವ ಕವಿನಾಮವಿಲ್ಲದ "ಗುಂಡಬಸವೇಶ್ವರ ಚರಿತೆ" ಹಾಗೂ ಕೊಡೇಕಲ್ಲ ಬಸವಣ್ಣನ ಸಾಹಿತ್ಯ, ಕೊಡೇಕಲ್ಲ ನೀಲಮ್ಮನ ಸ್ವರವಚನ ಸಾಹಿತ್ಯ, ರಾಚಪ್ಪಯ್ಯನ ಕೃತಿಗಳು, ಮಂಟೇಸ್ವಾಮಿ ಸಾಹಿತ್ಯ ಇವುಗಳ ಉಲ್ಲೇಖ ಹಾಗೂ ಕ್ಷೇತ್ರ ಕಾರ್ಯದ ಮಾಹಿತಿಯ ಸಹಾಯದಿಂದ ಅಮರಕಲ್ಯಾಣದ ಕರ್ತೃ ದಿಗ್ಗಿ ಸಂಗಮನಾಥ ಎಂಬ ಸಂಗತಿಯನ್ನು ವಿದ್ವಾಂಸರ ಗಮನಕ್ಕೆ ತರುವುದು ಈ ಪ್ರಬಂಧದ ಉದ್ದೇಶವಾಗಿದೆ.

ಒಡನಾಡಿ ಬಂದೆನು ಒಡೆಯ ಸಂಗಮನಾಥನ
ನಡೆವ ಸರ್ಪನ ಹೆಡೆಯೊಳಗಣ ಪದ್ಮದಂತೆ
ಕಡೆಯ ಆಟವು ಬಂತು ಕಲಹಕಾರಣ ಮುಂದೆ
ನುಡಿ ದುಷ್ಟಗಳ ನೋಡಿ ಕುಡಿಮಿಂಚಿನಂತೆ

ಕೊಡೇಕಲ್ಲ ಬಸವಣ್ಣನ ಸ್ವರವಚನದ ಈ ಪದ್ಯ ತನಗೆ ಒಡನಾಡಿಯಾಗಿ ಬಂದ ದಿಗ್ಗಿ ಸಂಗಮನಾಥನನ್ನು ಸ್ಮರಿಸುವುದಾಗಿದೆ. ಮನುಜರ ಅಜ್ಞಾನವನ್ನು ಹೋಗಲಾಡಿಸಿ ಸುಜ್ಞಾನವನ್ನು ತುಂಬುವಂತೆ ಸಂಗಮನಾಥ ಕೊಡೇಕಲ್ಲ ಬಸವಣ್ಣನಿಗೆ ವಾಚಸಿದ್ಧಿಯನ್ನು ಕೊಟ್ಟನು.

ಕೊಡೇಕಲ್ಲ ಬಸವಣ್ಣನ ಮಗ ರಾಚಪ್ಪಯ್ಯ ಸುವ್ವಿ ವಚನದಲ್ಲಿ ಸಂಗಮನಾಥ ಐಕ್ಯವೇರಿದ ಜಲದುರ್ಗವನ್ನು ಉಲ್ಲೇಖಿಸುತ್ತಾನೆ.

ದೇವದುರ್ಗ ಮೇಲೆ ದೇವ ಸಿಂಹಾಸನ
ದೇವೇಶ ಬಸವನೊರೆದಿಂದ ಬ್ಯಾಡರ
ಜೀವ ನಮ್ಮೊಳಗೆ ಗೆಲುವುಂಟು

ದಿಗ್ಗಿ ಸಂಗಮನಾಥ ಐಕ್ಯ ಹೊಂದಿದ್ದು ಇಂದಿನ ಜಲದುರ್ಗ. ಅದನ್ನು ಕವಿರಾಚಪ್ಪಯ್ಯ ದೇವದುರ್ಗ ಎಂದು ಕರೆದಿದ್ದಾನೆ. ಈಗಲೂ ಜಲದುರ್ಗದಲ್ಲಿ ಸಂಗಮನಾಥನ ದೇವಸ್ಥಾನವಿದೆ. ಡಾ. ಬಸವಲಿಂಗ ಸೊಪ್ಪಿಮಠ ಅವರು ಕೂಡ ನಮ್ಮ ಕವಿಗಳು ಜಲದುರ್ಗವನ್ನು ದೇವದುರ್ಗವೆಂದು ಕರೆದಿದ್ದಾರೆ ಎಂದು ಅಭಿಪ್ರಾಯಪಡುತ್ತಾರೆ. ಈಗಲೂ ಸಂಗಮನಾಥನ ಸಮಾಧಿಯೆಂದು ಜಲದುರ್ಗದ ಪೂಜಾರಿಗಳು ಹೇಳುತ್ತಾರೆ. ಹೀಗಾಗಿ ಅಮರಕಲ್ಯಾಣದಕರ್ತೃ ದಿಗ್ಗಿ ಸಂಗಮನಾಥನ ಐಕ್ಯಸ್ಥಲ ಜಲದುರ್ಗವೆಂಬುದು ಇತಿಹಾಸ ಸೇರಬೇಕಾದ ಪ್ರಮುಖ ಒಂದು ಸಂಗತಿ.

ಕರ್ನಾಟಕದಲ್ಲಿ ಕಟ್ಟುತ್ತಾ ಬಂದ ಕಲ್ಯಾಣಗಳನ್ನು ಕುರಿತು ಬಸವಕಲ್ಯಾಣ (ಸಮಯಕಲ್ಯಾಣ) ಹಂಪಿ (ವಿಜಯಕಲ್ಯಾಣ),

* ಸಹ ಪ್ರಾಧ್ಯಾಪಕರು, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.


ದಿಗ್ಗಿ ಸಂಗಮನಾಥನ ದೇವಾಲಯ


ದಿಗ್ಗಿ ಸಂಗಮನಾಥನ ಗವಿ

ದಿಗ್ಗಿ (ಅಮರಕಲ್ಯಾಣ), ನಾಗಾವಿ (ಧರ್ಮಕಲ್ಯಾಣ) ಮತ್ತು ಕೊಡೇಕಲ್ಲ (ಕಡೆಯ ಕಲ್ಯಾಣ) ಎಂಬುದು ಇದುವರೆಗೆ ಕಂಡುಕೊಂಡ ಸತ್ಯವಾಗಿದೆ. ಆದರೆ ಕೊಡೇಕಲ್ಲನ್ನು ಅಮರಕಲ್ಯಾಣವೆಂದು ಭಾವಿಸಿ, ಧರ್ಮಕಲ್ಯಾಣವನ್ನು ಗುರುತಿಸದೇ ಹೋಗಿರುವ ಕೆಲ ತಪ್ಪು ಗ್ರಹಿಕೆಗಳಿಗೆ ಇಂಬು ದೊರೆತಿದೆ. ದಿಗ್ಗಿ ಅಮರಕಲ್ಯಾಣವೆಂಬುದಕ್ಕೆ ಗುಂಡಬಸವೇಶ್ವರ ಚರಿತ್ರೆಯ ಈ ಕೆಳಗಿನ ಪದ್ಯ ಹೀಗೆ ತಿಳಿಸುತ್ತದೆ.

ಇಳೆಯೊಳು ಹಳೆಯ ಸಗರವೆಂಬ ಊರಲ್ಲಿ
ಬೆಳಗುಳ್ಳ ಗುರು ಜನಿಸಿದನು
ಕೇಳು ನೀ ಬಸವಣ್ಣ ಹೇಳುವ ಮಾತನ್ನು
ಬಾಳಲೋಚನ ಭಕ್ತನೊಬ್ಬ
ಹಳೆಯ ಸಗರದ ಹೊರಗೆ ಮಠ ಕಟ್ಟಿ ತಾ
ಇಳೆಯೊಳು ಅಮರ ಕಲ್ಯಾಣವೆನಿಸಿ

ಧರ್ಮ ಕಲ್ಯಾಣದ ಸಂಸ್ಥಾಪಕನಾದ ಗುಂಡಬಸವೇಶನಿಗೆ ತಿಪ್ಪಯ್ಯನು ಹೇಳುವ ಈ ಮೇಲಿನ ಪದ್ಯದಲ್ಲಿಯ 'ಹಳೆಯ ಸಗರ'ವೆಂದರೆ ಗುಲಬರ್ಗಾ ಜಿಲ್ಲಾ ತಾಲ್ಲೂಕು ಕೇಂದ್ರವಾಗಿರುವ 'ಶಹಾಪುರ'ದ ಹೊರಗೆ ಅಂದರೆ 'ದಿಗ್ಗಿಯಲ್ಲಿ' ಮಠ ಕಟ್ಟಿಸಿ ಅದನ್ನು ಭೂಮಂಡಲದಲ್ಲಿ ಅಮರ ಕಲ್ಯಾಣವೆನಿಸಿದನೆಂದು ತಿಳಿದುಬರುತ್ತದೆ. ಹಾಗೆಯೇ ಅಮರಗನ್ನಡ ಲಿಪಿಯನ್ನು ಶೋಧಿಸಿದ್ದು; ಅಮರಕಲ್ಯಾಣದ ಬಹು ದೊಡ್ಡ ಕೊಡುಗೆ. ಸಂಗಮನಾಥ ತನ್ನ ಕಲ್ಯಾಣದ ಅಮರಗನ್ನಡ ಲಿಪಿಯನ್ನು ಕೊಡೇಕಲ್ಲ ಬಸವಣ್ಣನಿಗೆ ತಿಳಿಸಿ ಕೊಟ್ಟನೆಂಬ ಸಂಗತಿ ಕೊಡೇಕಲ್ಲ ವಚನ ವಾಕ್ಯದಿಂದ ತಿಳಿದು ಬರುತ್ತದೆ.

ಹನ್ನೊಂದ ಅಮರಗನ್ನಡದ ಲಿಪಿ
ಉನ್ನತೋತ್ತರ ಉದಯ ಕಾಲದಿ
ನಮ್ಮನರಿತವರಿಲ್ಲಯ್ಯ ಬಸವ ಕೇಳೆಂದಾ ॥

ಈ ಅಂಶಗಳಿಗೆ ಪೂರಕವಾಗಿ ದಿಗ್ಗಿ ಸಂಗಮನಾಥನ ದೇವಾಲಯದ ಗುಡ್ಡದ ಮೇಲೆ ಸುಮಾರು ೧೫-೨೦ ಕಿ.ಮೀ. ವ್ಯಾಪ್ತಿಯಲ್ಲಿ "ಮೇಲುಗಿರಿ ಪರ್ವತ", ನೀಲಮ್ಮನ ಬಾವಿ, ನೀಲಂಕಾರ ಗುಡಿ ಮತ್ತು ಅಮರಕಲ್ಯಾಣವೆಂಬ ಪ್ರದೇಶಗಳಿರುವುದನ್ನು ಡಾ. ಎಂ.ಎಂ. ಕಲಬುರ್ಗಿ, ಲಿಂಗಣ್ಣ ಸತ್ಯಂಪೇಟೆ ಹಾಗೂ ನಾನು ಸ್ವತಃ ಕ್ಷೇತ್ರಕಾರ್ಯದ ಮೂಲಕ ಮನವರಿಕೆ ಮಾಡಿಕೊಂಡಿದ್ದೇವೆ. ಈ ಕಾರಣದಿಂದ ಇದುವರೆಗೆ ವಿದ್ವಾಂಸರ ಅಭಿಪ್ರಾಯಪಟ್ಟಂತೆ ಕೊಡೇಕಲ್ಲ ಅಮರ ಕಲ್ಯಾಣವಲ್ಲ ! ಸಗರನಾಡಿನ ದಿಗ್ಗಿ ಅಮರಕಲ್ಯಾಣವೆಂಬುದು ಇತಿಹಾಸ ಸೇರಬೇಕಾದ ಇನ್ನೊಂದು ಸಂಗತಿ.

ಶರಣರದು ವ್ಯಕ್ತಿ ಮತ್ತು ಸಮಷ್ಠಿ ಉದ್ಧಾರದ ನಿಲುವಾಗಿತ್ತು. ಇವುಗಳ ಜೊತೆಗೆ ತಮ್ಮ ಆತ್ಮ ನಿರೀಕ್ಷಣೆಗಾಗಿ ಅಥವಾ ಆತ್ಮಕಲ್ಯಾಣಕ್ಕಾಗಿ 'ಗವಿ ಸಂಪ್ರದಾಯ' ವನ್ನು ಹುಟ್ಟು ಹಾಕಿದಂತೆ ತೋರುತ್ತದೆ. ಇದು ನಿಜವೆನ್ನುವಂತೆ ಈಗಲೂ ಕೆಲವು ಶರಣರ ವಾಸಸ್ಥಳಗಳೆಂದು ತೋರಿಸುವ ಗವಿಗಳು ಬಸವಕಲ್ಯಾಣದಲ್ಲಿವೆ. ಅದೇ ರೀತಿ ಹಂಪಿಯ ನೂರೊಂದು ವಿರಕ್ತರಿಗೆ ಒಂದೊಂದು ಗವಿಗಳಿರಬಹುದೆಂದೂ ದಿ॥ ವಿ. ಶಿವಾನಂದ ಅವರು ಅಭಿಪ್ರಾಯಪಡುತ್ತಾರೆ. ಹಾಗೆಯೇ ಚಾಮರಸನ ಗವಿಯೆಂಬುದನ್ನು ಡಾ. ಚಿದಾನಂದಮೂರ್ತಿಯವರು ಶೋಧಿಸಿದ್ದಾರೆ. ಈ ಹಿನ್ನೆಲೆಯಲ್ಲಿ ವಿಜಯಕಲ್ಯಾಣವೆನಿಸಿದ ಹಂಪಿ ಶರಣರ ಗವಿಸಂಪ್ರದಾಯವನ್ನು ಅನುಷ್ಠಾನಕ್ಕೆ ತಂದಿದೆ. ಅದೇ ರೀತಿ ಅಮರಕಲ್ಯಾಣವೆನಿಸಿದ ದಿಗ್ಗಿಯ ಸಂಗಮನಾಥ ಈತನ ಗುರು ಪರಮಾನಂದರ ಸ್ಥಳ ಜಿ. ಹಬ್ಬಾಳ, ಕೊಡೇಕಲ್ಲ ಬಸವೇಶ್ವರನಲ್ಲಿ ಗವಿಗಳಿರುವುದನ್ನು ನೋಡಬಹುದು.

ಗುಂಡಬಸವೇಶನ ಚರಿತೆಯಲ್ಲಿ ಉಪ್ಪಾರ ಗುಂಡ ಬಸವೇಶನನ್ನು ಗವಿ ಎಲ್ಲಿ ಮಾಡಲೆಂದು ಪ್ರಸ್ತಾಪಿಸುತ್ತಾನೆ.

ಎಲ್ಲಿ ಮಾಡಲಿ ಗವಿಯನು ಎಂದೆನುತಲಿ
ಮೆಲ್ಲನೆ ಕೇಳಿದುಪ್ಪಾರ
ಸೊಲ್ಲಿಸಿದನು ತಾನು ತಿಪ್ಪಣ್ಣಯ್ಯಗಳೆ
ಡದಲ್ಲಿ ಬಿಡಾರ ಮಾಡೆನು ತಾ ॥

ಈ ಮೊದಲು ಮರಣ ಹೊಂದಿದ ತಿಪ್ಪಣ್ಣನ ಎಡದಲ್ಲಿ ಗವಿಯನ್ನು ಮಾಡಲು ಗುಂಡಬಸವೇಶ ತಿಳಿಸುವುದನ್ನು ನೋಡಿದರೆ ಮುಂದಿನ ಧರ್ಮಕಲ್ಯಾಣವು ಗವಿಸಂಪ್ರದಾಯ ವನ್ನು ಮುಂದುವರಿಸಿದಂತೆ ತೋರುತ್ತದೆ. ದಿಗ್ಗಿ ಸಂಗಮ ನಾಥನನ್ನು ಹೊಗಳುವ ನಂದಿಯಾಗಮ ರೀತಿಯ ಪದ್ಯವೊಂದು ಹೀಗಿದೆ.

ಎಂದ ಮಾತಿಗೆ ಗಿವಯ ಕವಾಟ
ಹೊಂದಿಸಿದ ಶಿಲೆ ಕಡೆಗೆ ಆಗಲು
ಬಂದನಾಗಲೇ ಸಂಗಮೇಶ ಬಸವ ದರುಶನಕೆ !

ಮತ್ತು

ಈ ಪರಿಯಲೀ ಸ್ತುತಿಯ ಮಾಡುತ
ಆ ಪರಂಜ್ಯೋತಿ ದಿಗ್ಗಿ ಗವಿಯೊಳು

ಎಂಬ ಉಲ್ಲೇಖಗಳಿಂದ ಬಸವಕಲ್ಯಾಣದ ಶರಣರ ಗವಿಸಂಪ್ರದಾಯವನ್ನು ದಿಗ್ಗಿ ಸಂಗಮನಾಥ ತನ್ನ ಅಮರ ಕಲ್ಯಾಣದಲ್ಲಿ ಅನುಷ್ಠಾನಕ್ಕೆ ತಂದ ಇದನ್ನು ಮುಂದೆ ಧರ್ಮ ಕಲ್ಯಾಣದ ಗುಂಡಬಸವಣ್ಣ, ಕಡೆಯ ಕಲ್ಯಾಣದ ಕೊಡೇಕಲ್ಲ ಬಸವಣ್ಣರು ಮುಂದುವರಿಸಿದರೆಂಬುದು ಇತಿಹಾಸ ಸೇರಬೇಕಾದ ಮಗದೊಂದು ಸಂಗತಿ.

ಕರ್ನಾಟಕದ ವಚನ ಚಳವಳಿಯ ಆದ್ಯರೆನಿಸಿದ ಬಸವಕಲ್ಯಾಣದ ಅದರಲ್ಲೂ ಬಸವಣ್ಣನ ಆರಾಧ್ಯ ದೈವವಾದ ಸಂಗಮನಾಥನ ಹೆಸರನ್ನು ಧಾರಣ ಮಾಡಿಕೊಂಡ ದಿಗ್ಗಿ ಸಂಗಮನಾಥ ಅಮರಕಲ್ಯಾಣದ ಸಂಸ್ಥಾಪಕ, ಅಮರಗನ್ನಡ ಲಿಪಿಶೋಧಕ ಮತ್ತು ನಾಥ, ಆರೂಢ, ಅವಧೂತಗಳನ್ನೊಳ ಗೊಂಡ ಸಮ್ಮಿಶ್ರ ಪಂಥವೊಂದನ್ನು ಹುಟ್ಟುಹಾಕಿದ ಚಾರಿತ್ರಿಕ ವ್ಯಕ್ತಿ.

ಪರಾಮರ್ಶನ ಗ್ರಂಥಗಳು

೧. **ನಂದಿಯಾಗಮ ಲೀಲೆ,** (ಸಂ.) ಇರಸಂಗಮ ಜಿ. ಕೊಡೇಕಲ್ಲಮಠ, ಶ್ರೀ ಕೊಡೇಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಕೊಡೇಕಲ್ಲ, ೨೦೦೪.

೨. **ಕೊಡೇಕಲ್ಲ ವಚನ ವಾಕ್ಯ,** (ಸಂ.) ಡಾ. ಬಸವಲಿಂಗ ಸೊಪ್ಪಿಮಠ, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ, ೧೯೬೮.

೩. **ಗುಂಡಬಸವೇಶ್ವರ ಚರಿತ್ರೆ,** (ಸಂ.) ಡಾ. ಎಂ.ಎಂ. ಕಲಬುರ್ಗಿ ಮತ್ತು ಸಂಗಪ್ಪಯ್ಯಸ್ವಾಮಿ, ಕರ್ನಾಟಕ ಸರ್ಕಾರ ಪತ್ರಾಗಾರ ಇಲಾಖೆ, ಬೆಂಗಳೂರು, ೨೦೦೭.

೪. ದಿಗ್ಗಿ ಪರಿಸರದ ಕ್ಷೇತ್ರ ಕಾರ್ಯದ ಮಾಹಿತಿ.

ಡಾ. ಬಿ. ನಂಜುಂಡಸ್ವಾಮಿ*

ದಾನಿವಾಸದ ದೊರೆಗಳು ಮತ್ತು ರಂಭಾಪುರಿ ಸಂಸ್ಥಾನ ಮಠ ಸಂಬಂಧ

ಚಿಕ್ಕಮಗಳೂರು ಜಿಲ್ಲೆ ನರಸಿಂಹರಾಜಾಪುರಕ್ಕೆ ಈ ಹಿಂದೆ ಇದ್ದ ಹೆಸರು ಎಡೇಹಳ್ಳಿ. ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರವರ ಸಹೋದರ ಯುವರಾಜರಾಗಿದ್ದ ಕಂಠೀರವ ನರಸಿಂಹರಾಜ ಒಡೆಯರ್ ಅವರು ಈ ಊರಿಗೆ ಬಂದು ಹೋದ ಜ್ಞಾಪಕಾರ್ಥವಾಗಿ ಈ ಊರಿನ ಹೆಸರನ್ನು ನರಸಿಂಹರಾಜಾಪುರ ಎಂದು ಬದಲಾಯಿಸಲಾಯಿತು. ಎಡೇಹಳ್ಳಿಯ ಬಹಳ ಸಮೀಪದಲ್ಲಿ ಇದ್ದ ದಾನಿವಾಸ ಇಂದು ಭದ್ರಾ ಹಿನ್ನೀರಿನಲ್ಲಿ ಮುಳುಗಿ ಹೋಗಿದೆ. ಈ ಹಿಂದೆ ದಾನಿವಾಸದಲ್ಲಿ ಇದ್ದ ವೀರಭದ್ರ ದೇವಾಲಯ, ಕೊಟ್ಟೂರು ಬಸವೇಶ್ವರ ದೇವಾಲಯ ಮತ್ತು ವಿಷ್ಣುದೇವಾಲಯ ನರಸಿಂಹರಾಜಾಪುರಕ್ಕೆ ಸ್ಥಳಾಂತರಗೊಂಡಿದೆ. ಈ ಊರಿನ ಗ್ರಾಮದೇವತೆ ದಾನಿವಾಸದಮ್ಮನ ದೇವಾಲಯ ಹಳೇದಾನಿವಾಸದಲ್ಲಿ ಇದೆ. ಈಗ ನಮಗೆ ದಾನಿವಾಸ ಗ್ರಾಮವನ್ನು ನೇರವಾಗಿ ನೋಡಿ ಸಂಶೋಧನೆ ಮಾಡುವ ಅವಕಾಶ ಇಲ್ಲ. ಈ ಮನೆತನದ ಉಗಮದ ಬಗ್ಗೆ ನಮಗೆ ಮಾಹಿತಿ ಲಭ್ಯವಾಗುವುದು ಚಿಕ್ಕಮಗಳೂರು ಜಿಲ್ಲೆ ನರಸಿಂಹರಾಜಾಪುರದ (E.C. XII) ೩೬ನೇ ನಂಬರಿನ ಶಾಸನ ಲಿಂಗಾಪುರದ ಅಂದರೆ ನರಸಿಂಹರಾಜಾಪುರ ಸಮೀಪ ಇದ್ದ ಲಿಂಗಾಪುರದ ಕೆರೆಯ ಏರಿಯ ಮೇಲೆ ನೆಟ್ಟಕಲ್ಲು ಶಾಸನದಲ್ಲಿ ವಿವರವಾದ ಮಾಹಿತಿ ಇದೆ. (ಇಂದು ಈ ಶಾಸನ ಆ ಸ್ಥಳದಲ್ಲಿ ನೋಡಲು ಸಿಗುತ್ತಾ ಇಲ್ಲ. ಕೆರೆಯ ಏರಿಯ ಮಣ್ಣಿನಲ್ಲಿ ಮುಚ್ಚಿಹೋಗಿರಬೇಕು.)

ಶಾಲಿವಾಹನ ಶಕ ವರುಷ ೧೪೭೪ ಸಂದ ವರ್ತಮಾನ ಪರಿಧಾನಿ ಸಂವತ್ಸರದಲ್ಲಿ ಅಂದರೆ ಕ್ರಿ.ಶ. ೧೫೫೩ರಲ್ಲಿ ಹಂಪೆಯಲ್ಲಿ ಶ್ರೀ ಸದಾಶಿವರಾಯರು ರಾಜ್ಯಭಾರ ಮಾಡುತ್ತಿದ್ದರು. ಆಗ ಶ್ರೀಮತ್ ದಾನಿವಾಸದ ವಿರೂಪಾಕ್ಷರಸರ ಮಗನಾದ ಚಂನರಾಯವೊಡೆಯರ ಮಗ ಲಿಂಗಣ ನಾಯಕರು ದಾನಿವಾಸದ ಕೆರೆಯ ಮೇಲೆ ವಿರೂಪಾಕ್ಷ ದೇವರನ್ನು ಪ್ರತಿಷ್ಠಿಸಿ ಈ ದೇವತಾ ಪೂಜೆಗೆ ಬ್ರಾಹ್ಮಣರ ಸತ್ರಕ್ಕೆ ಭೂದಾನ ಬಿಟ್ಟುದನ್ನು ಈ ಶಾಸನ ತಿಳಿಸುತ್ತದೆ. ಇಲ್ಲಿ ಬರುವ "ಹಳೇಬೀಡಿನ ಶ್ರೀ ವೀರಹೊಯಿಸಳ ಬಲ್ಲಾಳ ಮಹಾರಾಯರು ನಮಗೆ ವಂಶಾನ್ವಯವಾಗಿ ನಾಯಕತನಕೆ ಪಾಲಿಸಿದ ದಾನಿವಾಸದ ಸೀಮೆ" ಎಂಬ ವಾಕ್ಯದಿಂದ ದಾನಿವಾಸ ಸೀಮೆಯ ನಾಯಕತನ ಇವರಿಗೆ ಹೊಯ್ಸಳ ಮನೆತನದ ವಿನಾಶಕ್ಕೆ (೧೩೪೦) ಮೊದಲು ಪ್ರಾಪ್ತವಾಗಿದೆಯೆಂದು ಸ್ಪಷ್ಟವಾಗುತ್ತದೆ. ಹೀಗಾಗಿ ಈ ಮನೆತನ ೭೩೦ ವರ್ಷಗಳಷ್ಟು ಹಳೆಯದೆಂದು ಈ ಶಾಸನ ಬರೆಯಿಸಿದ ಲಿಂಗಣ್ಣನಾಯಕ ಅವರ ತಂದೆ ಚೆಂನರಾಯವೊಡೆಯ ಅವನ ತಂದೆ ವಿರೂಪಾಕ್ಷರಸ ಎಂದು ತಿಳಿದುಬರುತ್ತದೆ.

ಈ ಶಾಸನದಲ್ಲಿ ವಿಜಯನಗರದ ಅರಸನನ್ನು ಈ ರೀತಿ ಕರೆದಿದೆ "ಶ್ರೀ ಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ ಸದಾಶಿವ ರಾಯಮಹಾರಾಯರು ಹಂಪೆನೆಲೆವೀಡಿನ ಸುಕ್ಷೇತ್ರದ ವಿದ್ಯಾನಗರೀ ಸಿಂಹಾಸನದಲ್ಲಿ ಸಾಮ್ರಾಜ್ಯವವಾಳುವ ಕಾಲದಲ್ಲಿ" ಎಂದಿದೆ. ಇದೇ ಶಾಸನದಲ್ಲಿ ದಾನಿವಾಸದ ಬಗ್ಗೆ ಈ ಮಾಹಿತಿ ಇದೆ. "ದಾನಿವಾಸದ ಸೀಮೆಯೊಳಗೆ ದಾನಿವಾಸದ ಪಟ್ಟಣ ಸ್ತಳಕೆ ನಾಲು ಕಟ್ಟಿಸಿದ ಕೆರೆಯ ಮೂಡಣ ತೆವರ ಮೇಲೆ ವಿರೂಪಾಕ್ಷ ಲಿಂಗ ಪ್ರತಿಷ್ಠೆಯನು ಅಯವರು ಬ್ರಾಹ್ಮರಿಗೆ ಸತ್ರವನು ನಮ್ಮ ಮಾತಾಪಿತೃಗಳಿಗೂ ನಮಗೂ ಸಿವಸಾಯೂಜ್ಯವಾಗಬೇಕೆಂದು ......" ಈ ಶಾಸನದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

ಚಿಕ್ಕಮಗಳೂರು ಜಿಲ್ಲೆ ಬಾಳೆಹೊನ್ನೂರು ಭದ್ರಾ ತೀರದಲ್ಲಿ ನೆಲೆಸಿರುವ ಶ್ರೀಮದ್ ರಂಭಾಪುರಿ ವೀರಸಿಂಹಾಸನ ಜಗದ್ಗುರು ಪೀಠ ಶ್ರೀ ಜಗದ್ಗುರು ರೇಣುಕಾಚಾರ್ಯ ಪರಂಪರೆಯ ಮಠ. ಈ ಮಠದ ಆವರಣದಲ್ಲಿ ದಾನಿವಾಸ ದೊರೆಗಳ ಸಂಬಂಧಪಟ್ಟ ಶಿಲಾ ಶಾಸನವಿದೆ. E.C. ೧೨, ಚಿಕ್ಕಮಗಳೂರು ೧೯, ಬಾಳೇಹಳ್ಳಿ ಈ ಶಾಸನದ ಕಾಲ ಶಾಲಿವಾಹನ ಶಕ ವರುಶ ೧೪೪೯ನೆಯ ಸಂದ ವರ್ತಮಾನ ಶುಕ್ಲ ಸಂವತ್ಸರ ವೈಶಾಖ ಶು ೧೦ ಆದಿವಾರದಲ್ಲೂ ಈ ತೇದಿ ಇಂಗ್ಲಿಷ ದಿನಾಂಕ ೨೬ ಏಪ್ರಿಲ್ ೧೫೨೭ಕ್ಕೆ ಸರಿಹೊಂದುತ್ತದೆ. ಈ ಶಾಸನದ ಅಧ್ಯಯನದಿಂದ ಅಂದಿನ ದಿನಮಾನಕ್ಕೆ ಬಾಳೆಹೊನ್ನೂರು ಮಠ ಬಲಾಢ್ಯವಾದ ಮಠವಾಗಿತ್ತು ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಅಂದಿನ

* ಪಂಡಿತ್ ತಾರಾನಾಥ ಆಯುರ್ವೇದ ಚಿಕಿತ್ಸಾಲಯ, ತುಮಕೂರು ಷಾಪಿಂಗ್ ಕಾಂಪ್ಲೆಕ್ಸ್, ಬಿ.ಹೆಚ್. ರಸ್ತೆ, ತುಮಕೂರು.

ದಿನಮಾನದಲ್ಲಿ ಆಡಳಿತ ನಡೆಸುತ್ತಾ ಇದ್ದ ಅರಸು ಮನೆತನಗಳಿಗೂ ಧರ್ಮ ಸಂಬಂಧವಾದ ಮಠಗಳಿಗೂ ಇದ್ದ ಸಂಬಂಧದ ಬಗ್ಗೆ ವಿಶೇಷವಾದ ಮಾಹಿತಿ ಲಭ್ಯವಾಗುತ್ತದೆ.

"ಶ್ರೀಮತು ಬಾಳೇಹಳ್ಳಿಯ ಸಿಂಹ್ವಾಸನದ ಕೊಮಾರ ಚೆಂನಬಸವಂಣವೊಡೆಯರು ದೇವರ] ಭಂಡಾರಕೆ ದಾನಿವಾಸದ ಚೆಂನವೀರಂಣನಾಯಕರು ಲಿಂಗಂಣ ನಾಯಕರೂ ಮಲ್ಲಣನಾಯಕರೂ ಚಿಕ್ಕಮಲ್ಲಂಣ ನಾಯಕರು ದಾನಿವಾಸದ ಸೀಮೆಯ ಸಮಸ್ತ ಗಉಡ ಪ್ರಜೆಗಳು ಕೊಟ್ಟ ಗ್ರಾಮ ಸಾಧನದ ಭಿಂನವತ್ತಲೆಯ ಕ್ರಮವೆಂತೆಂದರೆ" .....ಈ ಮೇಲಿನ ಶಾಸನದ ಸಾಲಿನ ಅಧ್ಯಯನದಿಂದ ಕ್ರಿ.ಶ. ೧೫೬೯ರಲ್ಲಿ ಬಾಳೇಹಳ್ಳಿ ಸಿಂಹಾಸನದ ಮೇಲೆ ವಿರಾಜಮಾನರಾಗಿದ್ದವರು ಕೊಮಾರ ಚೆಂನಬಸವಂಣ ವೊಡೆಯರು ಇವರ ಕಾಲದಲ್ಲಿ ದಾನಿವಾಸದ ಸೀಮೆಯನ್ನು ನೋಡಿಕೊಳ್ಳುತ್ತಾ ಇದ್ದವರು ಚೆಂನವೀರಂಣನಾಯಕರು, ಲಿಂಗಂಣನಾಯಕರು, ಮಲ್ಲಣನಾಯಕರೂ, ಚಿಕ್ಕಮಲ್ಲಂಣ ನಾಯಕರೂ.

ಈ ಶಾಸನದಲ್ಲಿ ಉಲ್ಲೇಖವಾಗಿರುವ ದಾನಿವಾಸದ ಚೆಂನವೀರಂಣನಾಯಕರು ನರಸಿಂಹರಾಜಾಪುರದ ಲಿಂಗಾಪುರ ಶಾಸನದಲ್ಲು, ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಎಡೆಯೂರು ಶಾಸನದಲ್ಲು ಉಲ್ಲೇಖ ಗೊಂಡಿದ್ದಾರೆ. ಈ ಮೂರು ಶಿಲಾಶಾಸನದ ಅಧ್ಯಯನದಿಂದ ದಾನಿವಾಸ ವಂಶವನ್ನು ಈ ರೀತಿ ಗುರುತಿಸಬಹುದು.

ಚಿಕ್ಕಮಗಳೂರು ಜಿಲ್ಲೆ ಲಿಂಗಾಪುರ ಕೆರೆಯ ಏರಿಯ ಮೇಲೆ ನೆಟ್ಟಕಲ್ಲು ಕ್ರಿ.ಶ. ೧೫೫೩ E.C. XII 36 (VI ಕೊ 17)

ದಾನಿವಾಸದ ವಿರೂಪಾಕ್ಷರಸ
|
ದಾನಿವಾಸದ ಚೆಂನರಾಯವೊಡೆಯ
|
ದಾನಿವಾಸದ ಲಿಂಗಣನಾಯಕ

ಚಿಕ್ಕಮಗಳೂರು ಜಿಲ್ಲೆ ಬಾಳೇಹಳ್ಳಿ ಕ್ರಿ.ಶ. ೧೫೬೯ ಅದೇ ವೀರಭದ್ರ ದೇವಾಲಯದ ಪ್ರಾಕಾರದ ದಕ್ಷಿಣ ಕಡೆ ನಟ್ಟಿರುವ ಕಲ್ಲು E.C. XII (VI ಕೊ 5)

ವಿರೂಪಾಕ್ಷವೊಡೆಯರು
|
ಚೆಂನರಾಯವೊಡೆಯರು
|
ಅರಸಪ್ಪೊಡೆಯರು

ಈ ಮೇಲಿನ ದಾನಿವಾಸದ ಅರಸುಗಳ ತಂದೆ ಮಗ ಮೊಮ್ಮಗ ಇರಬಹುದು. ಆದರೆ ಇವರ ಬಗ್ಗೆ ನಮಗೆ ಬೇರೆ ಇನ್ನು ಯಾವ ದಾಖಲೆಯು ಲಭ್ಯವಾಗಿಲ್ಲ. ಇದೇ ಶಾಸನದಲ್ಲಿ ಕ್ರಿ.ಶ. ೧೫೬೯ರಲ್ಲಿ ಇದೆ ದಾನಿವಾಸದ ಅರಸು ಮನೆತನದ ಬಗ್ಗೆ ಇನ್ನಷ್ಟು ಮಾಹಿತಿ ಲಭ್ಯವಾಗುತ್ತದೆ.

ದಾನಿವಾಸದ ಚೆಂನವೀರಂಣನಾಯಕರು

ಲಿಂಗಂಣನಾಯಕರು ಮಲ್ಲಣನಾಯಕರು ಚಿಕ್ಕಮಲ್ಲಂಣನಾಯಕರು

ತುಮಕೂರು ಜಿಲ್ಲೆ ಅನುಬಂಧ ಸಂಪುಟ ಕುಣಿಗಲ್ ತಾಲ್ಲೂಕು ಎಡೆಯೂರು ೪೯ E.C. XVI (ಶಾಸನದಲ್ಲಿ ಕಾಲ ಉಲ್ಲೇಖವಾಗಿಲ್ಲ)

ಚೆಂನರಾಯವಡೆಯರು
|
ಲಿಂಗಪ್ಪವಡೆಯರು
|
ಚೆನ್ನವೀರಪ್ಪವಡೆಯರು – ಪರ್ವತಂಮ

ಈ ಮೇಲಿನ ಮೂರು ಶಿಲಾಶಾಸನಗಳ ಅಧ್ಯಯನದಿಂದ ಈ ಮನೆತನದ ವಂಶಾವಳಿಯನ್ನು ಹೀಗೆ ಗುರುತಿಸಬಹುದು: ಬಾಳೇಹೊನ್ನೂರಿನ ಶಿಲಾಶಾಸನದಿಂದ ಈ ಮನೆತನದ ಆದ್ಯ ವಿರೂಪಾಕ್ಷವೊಡೆಯ ಅವನ ಮಗ ಚೆಂನರಾಯವೊಡೆಯ ಅವನ ಮಗ ಅರಸಪ್ಪೊಡೆಯರು ಇರಬಹುದು ಇವರ ಕಾಲದ ಬಗ್ಗೆ ನಮಗೆ ಸರಿಯಾದ ಮಾಹಿತಿ ಇಲ್ಲ. ನರಸಿಂಹರಾಜಾಪುರದ ಲಿಂಗಾಪುರದ ಶಾಸನದಲ್ಲು ದಾನಿವಾಸ ಸೀಮೆಯನ್ನು "ಹಳೇಬೀಡ ಶ್ರೀ ವೀರಹೊಯಿಸಳ ಬಲ್ಲಾಳ ಮಹಾರಾಯ ನಮಗೆ ವಂಶಾನ್ವಯವಾಗಿ ನಾಯಕತನಕೆ ಪಾಲಿಸಿದ ದಾನಿವಾಸದ ಸೀಮೆಯೊಳಗೆ....ಎಂದಿದೆ, ಆದರೆ ವೀರಹೊಯಿಸಳ ಬಲ್ಲಾಳನಿಂದ ನಾಯಕತನ ಪಡೆದುಕೊಂಡವನ ಹೆಸರು ಶಾಸನದಲ್ಲಿ ಪ್ರಸ್ತಾಪವಾಗಿಲ್ಲ. ಆದರೆ ಈ ಶಾಸನದಲ್ಲಿ ಕ್ರಿ.ಶ. ೧೫೫೩ರಲ್ಲಿ ಸ್ಪಷ್ಟವಾಗಿ ವಿರೂಪಾಕ್ಷರಸರು ಅವನ ಮಗ ಚೆಂನರಾಯವೊಡೆಯರು ಅವರ ಮಗ ಲಿಂಗಣನಾಯಕರು ದಾನಿವಾಸಸೀಮೆಯ ರಾಜ್ಯಭಾರ ಮಾಡುತ್ತಾ ಇದ್ದದ್ದು ಸ್ಪಷ್ಟವಾಗಿ ತಿಳಿದುಬರುತ್ತದೆ. ಬಾಳೆಹೊನ್ನೂರು ಶಾಸನ ಕ್ರಿ.ಶ. ೧೫೬೯ರಲ್ಲಿ ದಾನಿವಾಸದ ಚೆಂನವೀರಂಣನಾಯಕರು ಉಲ್ಲೇಖಗೊಂಡಿದ್ದು ಅವರಿಗೆ ಮೂವರು ಮಕ್ಕಳು, ಕ್ರಮವಾಗಿ ಲಿಂಗಣನಾಯಕರು, ಮಲ್ಲಣನಾಯಕರು ಚಿಕ್ಕಮಲ್ಲಣನಾಯಕರು ಎಂದು ತಿಳಿದುಬರುತ್ತದೆ.

ಕಾಲ ಉಲ್ಲೇಖವಿಲ್ಲದ ಕುಣಿಗಲ್ ತಾಲ್ಲೂಕಿನ ಎಡೆಯೂರು ಶಿಲಾಶಾಸನದಲ್ಲಿ ಚೆಂನರಾಯವಡೆಯರು ಅವರ ಮಗ ಲಿಂಗಪ್ಪವಡೆಯರು ಅವರ ಮಗ ಚೆನ್ನವೀರಪ್ಪವಡೆಯರು ಅವರ ಧರ್ಮಪತ್ನಿ ಪರ್ವತಂಮ ಕ್ರಿ.ಶ. ೧೫೪೯ರ ಬಾಳೆಹೊನ್ನೂರು ಶಾಸನದಲ್ಲಿ ದಾನಿವಾಸದ ಚೆಂನವೀರಂಣ ನಾಯಕ = ಚೆಂನರಾಯವೊಡೆಯ, ಈತನ ಮಗ ಲಿಂಗಣನಾಯಕ = ಲಿಂಗಪ್ಪವಡೆಯರು ಇವರ ಮಗ ಚೆನ್ನವೀರಪ್ಪವಡೆಯರು – ಪರ್ವತಂಮ ದಂಪತಿಗಳ ಉಲ್ಲೇಖ ಇರುವುದು ಇದೊಂದೆ ಶಾಸನದಲ್ಲಿ ಈ ಮನೆತನದ ಬಗ್ಗೆ ನಮಗೆ ದೊರಕುವ ಕಟ್ಟಕಡೆಯ ನಾಯಕನ ಉಲ್ಲೇಖ. ಈತನ ಕಾಲ ಸುಮಾರು ಕ್ರಿ.ಶ. ೧೫೮೦ ಇರಬಹುದು.

ದಾನಿವಾಸದ ಅರಸುಮನೆತನಕ್ಕೂ ಬಾಳೆಹೊನ್ನೂರಿನ ಮಠಕ್ಕೂ ವಿಶೇಷವಾದ ಸಂಬಂಧ. ತಮಗೆ ಬೇಕಾದ ಹಣಕಾಸಿನ ಸಹಾಯವನ್ನು ಬಾಳೇಹಳ್ಳಿಯ ಸಿಂಹಾಸನದಿಂದ ಪಡೆದದ್ದು ಸ್ಪಷ್ಟವಾಗಿ ತಿಳಿದುಬರುತ್ತದೆ. ಶಾಲಿವಾಹನಶಕ ವರುಷ ೧೪೯೧ನೆಯ ಸಂದ ವರ್ತಮಾನ ಶುಕ್ಲ ಸಂವತ್ಸರದ ವೈಶಾಖ ಶು ೧೦ ಆದಿವಾರದಲ್ಲೂ ಅರ್ಥಾತ್ ಭಾನುವಾರ ಶ್ರೀಮತು ಬಾಳೇಹಳ್ಳಿಯ ಸಿಂಹಾಸನದ ಕೊಮಾರ ಚೆಂನಬಸವಂಣವೊಡೆಯರು ದೇವರ ಭಂಡಾರಕೆ ದಾನಿ ವಾಸದ ಚೆಂನವೀರಂಣನಾಯಕರು, ಲಿಂಗಂಣನಾಯಕರೂ, ಮಲ್ಲಣನಾಯುಕರೂ, ಚಿಕ್ಕಮಲ್ಲಂಣನಾಯುಕರೂ ದಾನಿವಾಸದಸೀಮೆಯ ಸಮಸ್ತಗೌಡ ಪ್ರಜೆಗಳು ಕೊಟ್ಟ ಗ್ರಾಮಸಾಧನ ಬಿಂನವತ್ತ್ಲೆ ಪತ್ರದ ಕ್ರಮವೆಂತೆಂದರೆ:

ಕೊಪ್ಪದ ಬಸವಪಯನಲಿ ನಮ್ಮ ಹಿರಿಯರು ವಿರೂಪಾಕ್ಷವೊಡೆಯರು, ಚೆಂನರಾಯವೊಡೆಯರು, ಅರಸಪ್ಪೊಡೆಯರು ಹೆಸರ ಆಡಪು ಮೈಸಾಲದ ಪತ್ರಗಳು, ನಮ್ಮ ದಾನಿವಾಸಸೀಮೆಯ ನಾಡವರ ಹೆಸರ ಪತ್ರಗಳೂ ಸಿಕ್ಕಿ ಇರಲಾಗಿ ಆ ಪತ್ರಗಳು ಬಾಳೆಹೊನ್ನೂರು ಸಿಂಹಾಸನಕ್ಕೆ ಸಂಬಂಧಪಟ್ಟದಾಗಿ ಆ ಪತ್ರಾರ್ಥದ ಸಾಲ ಗದ್ಯಾಣ ೧೨೦೦೦ (ಹನ್ನೆರಡು ಸಾವಿರ ವರಹಕ್ಕೆ ಸಲವಾಗಿ "ವೊಂದನೂರ್ ೯ । ನೂರ್ರವೊಂದರ್ರಲ್ಲಿ" ನಮ್ಮ ದಾನಿವಾಸದಸೀವೆಂಯು ಬಳಿಂಯು ಪಾಲೊಳಗಣ 'ಉಳುವರ್ಾವಿ ಗ್ರಾಮ' – ೧ 'ಚಾರುಂಬಳ್ಳಿ ಗ್ರಾಮ – ೧' 'ದೊಡ್ಡಿನಮಾನಿ ಗ್ರಾಮ – ೧' ಈ ಮೂರು ಗ್ರಾಮಗಳನ್ನು ಸಿಂಹಾಸನಕ್ಕೆ ಬಿಟ್ಟುಕೊಟ್ಟು ಸಾಲವನು ತೀರಿಸಿದೆವು. ಇಲ್ಲಿ 'ದಾನಿವಾಸದಸೀಮೆಯ ಬಳಿಯ ಪಾಲೊಳಗಣ' ಎಂದರೆ ಮೇಲೆ ಸಾಲ ತೆಗೆದುಕೊಂಡವರ ನೇರವಾದ ಸಂತತಿಯವರು ಈ ಸಾಲವನ್ನು ತೀರಿಸಿದ್ದು ಅವರಿಗೆ ದಾನಿವಾಸದ ಸೀಮೆ ಯಲ್ಲಿ ಬಂದ ಪಾಲಿನಲ್ಲಿ ಆ ಹಳ್ಳಿಗಳನ್ನು ಬಿಟ್ಟುಕೊಟ್ಟಿರಬೇಕು.

ಬಾಳೆಹೊನ್ನೂರು ಸಿಂಹಾಸನದಲ್ಲಿ ಮುಂದೆ ಬಾಳುವ ಸ್ವಾಮಿಗಳು ಅರ್ಥಾತ್ ಮುಂದೆ ಬರುವಂತಹ ಸ್ವಾಮಿಗಳಾಗಲಿ ಬಸವಪ್ಪಯ್ಯನವರ ವಂಶಸ್ಥರಾಗಲಿ ಮುಂದೆ ಬೇರೆ ಸಾಲ ಇದೆ ಎಂದು ಕೇಳಬಾರದು ಮುಂದೆ ದಾನಿವಾಸದ ನೆಲದಲ್ಲಿ ಬಾಳುವಂಥಾ ಅರಸುಗಳೂ ನಾಡವರೂ 'ಯೀ ಗ್ರಾಮ ೨ ಶಡಹ ಸಲ್ಲದು ಎಂದು' ಇದರ ಅರ್ಥ ದಾನಿವಾಸಸೀಮೆಯ ಮೂರು ಗ್ರಾಮಗಳನ್ನು ಬಾಳೆಹೊನ್ನೂರು ಸಿಂಹಾಸನಕ್ಕೆ ನೀಡಿದೆ, ಅದು ಅವರಿಗೆ ಸೇರಬಾರದು ಎಂದು ಯಾರೂ ಅಡ್ಡಿ ಪಡಿಸಬಾರದು ಎಂದು ಗ್ರಾಮ ಸಾಧನವಾಗಿ ಕೊಟ್ಟಿರುವಂತಹದು.

ಇದಕ್ಕೆ ಸಾಕ್ಷಿಗಳು ಆಡುವಳ್ಳಿ ಚಿಕ್ಕಣಹೆಗ್ಗಡೆಯವರು, ಮುಂಡೆಕಾರ ಮಲ್ಲರಸ ಹೆಗ್ಗಡೆಯವರು ಮುತ್ತೂರ ಮಾರಂಣಹೆಗ್ಗಡೆಯವರು, ವಾಬಳದ ಮಲ್ಲೆಹೆಗ್ಗಡೆಯವರು "ಇಂತಿವರುಭಮಾನ್ಮಥದಿಂ" ಅರ್ಥಾತ್ ಆತ್ಮ ಪೂರಕವಾಗಿ ಹಾಕಿದ ಸಾಕ್ಷಿ. ಇದನ್ನು ಬರೆದವನು ಸ್ಥಲದ 'ಸೇನುಭೋವ ಅಂಣರಸ.

ಈ ಪತ್ರವನ್ನು ಕೊಟ್ಟ ದಾನಿವಾಸಸೀಮೆಯ ಆಡಳಿತದ ಮೂಲಕರ್ತುಗಳೊಪ್ಪ ಚೆಂನವೀರನಾಯಕರು, ಲಿಂಗಣ ನಾಯಕರು, ಮಲ್ಲಣನಾಯಕರು, ಚಿಕ್ಕಮಲ್ಲಂಣ ನಾಯಕರು ಮುಂತಾದವರು ಒಪ್ಪಿದ್ದು ದಾನಿವಾಸದ ಸೀಮೆಯ ಸಮಸ್ತಗೌಡ ಪ್ರಜೆಗಳು ಒಪ್ಪಿತ. ಈ ಅರಸುಗಳ ಮನೆದೇವರು ದಾನಿವಾಸದ ವೀರಭದ್ರದೇವರು ಸಾಕ್ಷಿ ಯೀ ೩ ಗ್ರಾಮಕ್ಕೆ ಉಳುವರ್ಾವಿಯ ವೀರಭದ್ರ ದೇವರ ಸಾಕ್ಷಿ. ಅಡವಳ್ಳಿ ಚಿಕ್ಕಹೆಗ್ಗಡೇರೂ ಒಪ್ಪಿತಾ, ಮುಂಡೆಕಾರ ಮಲ್ಲರಸ ಹೆಗ್ಗಡೇರೂ ಒಪ್ಪಿತಾ, ವಾಬಳದ ಮಲಪಹೆಗ್ಗಡೆಯವರು ಒಪ್ಪಿತಾ ಈ ಮೂರು ಗ್ರಾಮಕು ಮುಂದೆ ಆರೊಬ್ಬರು ಅಳುಪಿದರೆ ಶ್ರೀ ವೀರಭದ್ರದೇವರ ಪಾದಕೆ ತಪ್ಪುವನು.

ಈ ಶಾಸನದಲ್ಲಿ ಪ್ರಸ್ತಾಪವಾಗಿರುವ ಎರಡು ವೀರಭದ್ರ ದೇವಾಲಯಗಳು ಇಂದಿಗೂ ಉಳಿದುಕೊಂಡು ಬಂದಿವೆ. ದಾನಿವಾಸದಲ್ಲಿ ಇದ್ದ ವೀರಭದ್ರ ನರಸಿಂಹರಾಜಾಪುರಕ್ಕೆ ಸ್ಥಳಾಂತರಗೊಂಡಿದೆ. ಉಳುವರ್ಾವಿ ವೀರಭದ್ರ ದೇವಾಲಯ ನರಸಿಂಹರಾಜಾಪುರಕ್ಕೆ ಸ್ವಲ್ಪ ದೂರದಲ್ಲಿ ಉಳಿದಿರುವಂತಹುದು.

ಬಾಳೆಹೊನ್ನೂರು ಮಠದಲ್ಲಿ ಇರುವ ದಾನಿವಾಸ ಶಾಸನದಲ್ಲಿ ಉಲ್ಲೇಖವಾಗಿರುವ ಬಾಳೇಹಳ್ಳಿಯ ಸಿಂಹಾಸನದ ಕೊಮಾರ ಚೆಂನಬಸವಂಣವೊಡೆಯರ ಬಗ್ಗೆ ಕರ್ಣಾಟಕ ಕವಿಚರಿತೆಕಾರರು ದ್ವಿತೀಯ ಸಂಪುಟದಲ್ಲಿ ವಿವರವಾಗಿ ಬರೆದಿದ್ದು ಕಾಲವನ್ನು ೧೫೫೦ ಎಂದು ನಿರ್ಧರಿಸಿದ್ದರು. ಇತ್ತೀಚಿನ ಅಧ್ಯಯನದಿಂದ ಧರ್ಮಸ್ಥಳದ ಮಂಜೂಷ ವಸ್ತು ಸಂಗ್ರಹಾಲಯದಲ್ಲಿ ಇರುವ ತಾಮ್ರಶಾಸನದ ಪಾಠ ಹಂಪಿ ವಿಶ್ವವಿದ್ಯಾಲಯದ 'ಶಾಸನ ಅಧ್ಯಯನ' ಸಂಪುಟ ೧, ಸಂಚಿಕೆ ೧ ರಲ್ಲಿ ಡಾ. ಎಸ್.ಡಿ. ಶೆಟ್ಟಿ, ಉಜಿರೆ ಇವರಿಂದ ಪ್ರಕಟಗೊಂಡಿದೆ. ಈ ತಾಮ್ರಶಾಸನದಲ್ಲಿ "ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರ್ಷ ೧೪೯೪ನೆಯ ಬಾವಸಂತ್ಸರದ ಅಶ್ವಯುಜ ಬಹುಳ ೧೧ ಚಂದ್ರವಾರ ಶ್ರೀಮತು ಬಾಳೆಹಳ ಸಿಂಹಾಸನದ ಕುಮಾರ ಚೆಂನಬಸವ

ರಾಜ ದೇವರು ಬಿದಿರೆಯ ಅಬ್ಬಕ್ಕ ದೇವಿಯರಾದ ಚೆಲುಟರಿಗು ಬಿದಿರೆಯ ನಖರದ ಹಲರು ಸೆಟ್ಟಿಗಾರರು ಸಮಸ್ತರಿಗು ಪಾಲಿಸಿದ ತಾಂಬ್ರಶಾಸನದ ....." ಈ ತಾಮ್ರಶಾಸನದ ಕಾಲ ಕ್ರಿ.ಶ. ೧೫೬೪, ಚೌಟ ಅಬ್ಬಕ್ಕ ದೇವಿಯರು ಬಾಳೇಹಳ್ಳಿಯ ಸಿಂಹಾಸನದ ಕುಮಾರ ಚೆನ್ನಬಶವರಾಜ ದೇವರು, ಬಿದಿರೆ ನಗರದ ಹಲವಾರು ಸೆಟ್ಟಿಗಾರರು ಒಟ್ಟು ಸೇರಿ ಮೂಡಬಿದಿರೆಯ ಹತ್ತಿರದ ನೆಲ್ಲೀತೀರ್ಥದಲ್ಲಿ ಶಿವಲಿಂಗವನ್ನು ಕಿತ್ತುಹಾಕಿದ್ದಕ್ಕೆ ಜಂಗಮರಿಗೂ ಬ್ರಾಹ್ಮಣರಿಗೂ ನಡೆದ ವ್ಯಾಜ್ಯವನ್ನು ಬಗೆಹರಿಸಿದಂತೆ ಈ ಶಾಸನವು ವಿವರಿಸುತ್ತದೆ.

ವಿರೂಪಾಕ್ಷ ಪಂಡಿತಾರಾಧ್ಯ (ಕ್ರಿ.ಶ. ೧೫೮೪) ವಿರಚಿತ ಚೆನ್ನಬಸವ ಪುರಾಣ ಕಾಂಡ ಐದು, ಅರವತ್ತೆರಡನೆಯ ಸಂಧಿ ೪೨ನೇ ಪದ್ಯದಲ್ಲಿ ಕುಮಾರ ಚೆನ್ನಬಸವ ಸ್ವಾಮಿಗಳ ಉಲ್ಲೇಖವಿದೆ.

ವರದಿಗಂಬರಮುಕ್ತಿಮುನಿ ದೇವರಾಜ್ಞೆಯಿಂ
ಹರುಷದಿಂದ ಸುಕುಮಾರ ಚೆನ್ನಬಸವೇಶ್ವರಂ
ಶರಣಸಂಕುಲವನುರೆ ಪಾಲಿಸುತೆ ದುಷ್ಟಪರವಾದಿಗಳ
ಸಂಹರಿಸುತೆ
ಇರುತಿರಲ್ಕಿತ್ತಲೀ ಚಿಕ್ಕ ಸಿದ್ಧೇಶ್ವರಂ
ಚರಪತಿಗಳ ಕೂಡಿಕೊಂಡು ಚರಿಸುತ್ತೆ ಬಂ
ದಿರದೆ ಶಿವಗಂಗೈತಂದು ಹೊನ್ನಾದೇವಿಯಿಂದೆ ಕಂಕಣವ
ಪಡೆವಂ

ಕುಮಾರ ಚೆನ್ನಬಸವ ರಚಿಸಿದ "ಪುರಾತನರ ಚರಿತೆ" ಕೃತಿ ಲಭ್ಯವಿದ್ದು ಮೈಸೂರಿನ ಡಾ. ವೈ.ಸಿ. ಭಾನುಮತಿ ಅವರಿಂದ ಸಂಪಾದನೆಗೊಂಡು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯದಿಂದ ೧೯೭೬ರಲ್ಲಿ ಪ್ರಕಟಗೊಂಡಿದೆ. ಈತನೆ ರಚಿಸಿದ 'ಸಾಸಲ ಭೈರವೇಂದ್ರ ಚರಿತೆ', 'ಶಂಭುಪೂಜಾವಿಧಿ' 'ವಿಭೂತಿ ಮಹಿಮೆ' ಹಸ್ತಪ್ರತಿಗಳು ಲಭ್ಯವಾಗಿಲ್ಲ.

ಪ್ರಕಟಿತ 'ಪುರಾತನ ಚರಿತೆ'ಯಲ್ಲಿ ತನ್ನ ಗುರುವಿನ ಬಗ್ಗೆ ಈ ರೀತಿ ತಿಳಿಸಿದ್ದಾನೆ.

ಜಸವೆತ್ತ ಮುಕ್ತಿಮುನಿ ಸಿಂಹಾಸನಾಧಿಪತಿ
ಯಸಮ ಸುಚರಿತ್ರಾಪ್ತ ಶಿಖಿಯಂ ಬಸವೇಶಕರ
ಬಿಸಜಸಂಜನಿತಂ ಪ್ರತಾಪಕೀರ್ತಿ ವಿರಾಜಿತ ಕುಮಾರ
ವೃಷಭೇಶ್ವರಂ
ಶಶಿಮೌಳಿಯಂಘ್ರಿಯಂ ಶಾಸ್ತ್ರೋಕ್ತ ವಿಧಿಯೊಳ
ರ್ಚಿಸುತೆ ಶಿವಭಜಕ ಜನರಿಷ್ಟಾರ್ಥನೀವುತಂ
ಬಸವೇಶ್ವರ ಪುರಾಣದೊಳು ಗುಪ್ತಮೆನಿಸುವ ಪುರಾತನರ
ಚರಿತೆಯೊರೆದಂ (೧-೨)

ಈ ಮೇಲಿನ ಪದ್ಯದ ಅಧ್ಯಯನದಿಂದ ಮುಕ್ತಿ ಮುನಿ ಸಿಂಹಾಸನಾಧಿಪತಿಯ ಪರಂಪರೆಯ ಶಿಖಿಯ ಬಸವೇಶನ ಕರಸಂಜಾತ ಅರ್ಥಾತ್ ಶಿಷ್ಯಕುಮಾರ ವೃಷಭೇಶ್ವರಂ = ಕುಮಾರ ಚೆನ್ನಬಸವ ಎಂದು ಸ್ಪಷ್ಟವಾಗುತ್ತದೆ. ಪುರಾತನರ ಚರಿತೆ ಪ್ರತಿಸಂಧಿ ಅಂತ್ಯದಲ್ಲಿ

ಇದು ಮುಕ್ತಿಮುನಿನಾಥ ವಂಶಾಂಬರಾದಿತ್ಯ
ನಧಿಕಕೀರ್ತಿಪ್ರತಾಪಂ ಶಂಬುನಿಂದಕ ಸ
ಮುದಯ ಸಮಿದಗ್ನಿ ಶಿವಭಕ್ತಕಲ್ಪದ್ರುಮಂ ಕುಮಾರ
ಚೆನ್ನಬಸವೇಶ್ವರಂ
ಮುದದಿಂದೆ ಬಸವೇಶ್ವರ ಪುರಾಣದೊಳು ಸೂಚಿ
ಸಿದ ಪುರಾತನರ ಚರಿತ್ರವನುಪಕಥೆಗಳೊಂದಿ
ಪದವಿಟ್ಟುದೊಂಬತ್ತನೆಯ ಸಂಧಿ ಶಿವಭಕ್ತಜನ
ಕರ್ಣಸೌಖ್ಯಾನುಬಂಧಿ (೯ - ೨೨)

ಈ ಎಲ್ಲಾ ಆಕರಗಳ ಅಧ್ಯಯನದಿಂದ ಕುಮಾರ ಚೆನ್ನಬಸವ. ಸುಮಾರು ಕ್ರಿ.ಶ. ೧೫೯೦ರ ತನಕ ಜೀವಿಸಿರಬಹುದು. ದಾನಿವಾಸ ಅರಸು ಮನೆತನದ ಬಗ್ಗೆಯೂ ಮತ್ತು ಬಾಳೆಹೊನ್ನೂರು ಮಠದ ಕುಮಾರ ಚನ್ನಬಸವನ ಬಗ್ಗೆಯೂ ಕ್ರಿ.ಶ. ೧೫೯೦ರ ನಂತರದ ಆಕರಗಳು ಲಭ್ಯವಿಲ್ಲ.

ದಾನಿವಾಸ ಅರಸು ಮನೆತವನ್ನು ಕ್ರಿ.ಶ. ೧೬೦೦ರಲ್ಲಿ ತರೀಕೆರೆ ಪಾಳೆಯಗಾರರು ಆಕ್ರಮಿಸಿಕೊಂಡರು. ನಂತರ ದಾನಿವಾಸ ಕೆಳದಿ ಅರಸರ ವಶವಾಗಿ ಮುಂದೆ ಹೈದರಾಲಿ ವಶಪಡಿಸಿಕೊಂಡಿದ್ದನ್ನು ಹಯವನರಾಯರು ಗ್ಯಾಜಟಿಯರ ನಲ್ಲಿ ದಾಖಲಿಸಿದ್ದಾರೆ.

ಆಧಾರಸೂಚಿ

೧. ಡಾ. ಬಿ. ನಂಜುಂಡಸ್ವಾಮಿ., ದಾನಿವಾಸ ಅರಸು ಮನೆನತ, **ಸಾರಂಗಶ್ರೀ** (ವೀರಶೈವ ಅರಸು ಮನೆತನಗಳು ಅಧ್ಯಯನ), ಸಂಪಾದಕರು : ಡಾ. ಎಂ.ಎಂ. ಕಲಬುರ್ಗಿ, ೧೯೯೪, ಪ್ರಕಾಶಕರು : ಪೂಜ್ಯ ಶ್ರೀ ಚೆನ್ನವೀರಸ್ವಾಮೀಜಿ ಪ್ರತಿಷ್ಠಾನ, ಸಾರಂಗಮಠ, ಸಿಂದಗಿ.
೨. **ವಿರೂಪಾಕ್ಷ ಪಂಡಿತಾರಾಧ್ಯ ಕೃತ.**, ಚೆನ್ನಬಸವ ಪುರಾಣ, ಸಂಪಾದಕರು : ಪ್ರೊ. ಶಿ.ಶಿ. ಬಸವನಾಳರು ಮತ್ತು ಇತರರು, ಪ್ರಕಾಶಕರು : ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ, ೧೯೩೪.
೩. ಕುಮಾರ ಚೆನ್ನಬಸವ ವಿರಚಿತ **"ಪುರಾತನರ ಚರಿತೆ"**, ಸಂಪಾದಕರು : ಡಾ. ವೈ.ಸಿ. ಭಾನುಮತಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೭೬.
೪. ದಕ್ಷಿಣ ಕನ್ನಡ ಜಿಲ್ಲೆಯ ಮೂರು ಶಾಸನಗಳು, ಡಾ. ಎಸ್.ಡಿ. ಶೆಟ್ಟಿ, ಉಜಿರೆ, **ಶಾಸನ ಅಧ್ಯಯನ**, ಸಂಪುಟ ೧, ಸಂಚಿಕೆ ೧, ೨೦೦೩, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಡಾ. ಹರಿಹರ ಶ್ರೀನಿವಾಸರಾವ್*

ಭಿಷ್ಟಪ್ಪಯ್ಯನವರ ಮನೆತನದ ದಾಖಲೆಗಳಲ್ಲಿ ಇನಾಂ ಕಮಿಷನರ್ ಹೆಚ್. ಬರ್ಡ್‌ವುಡ್

ಹಿನ್ನೆಲೆ : ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನಲ್ಲಿ ವಿಠ್ಠಲಾಪುರ ಎನ್ನುವ ಗ್ರಾಮವಿದೆ. ಹಂಪೆಯ ದ್ವಾರಗೋಪುರ ನಿರ್ಮಾತೃ ಭಿಷ್ಟಪ್ಪಯ್ಯ ಮಹಾಪುರುಷ ಅವರ ಮನೆತನದವರು ಇಲ್ಲಿ ವಾಸವಾಗಿದ್ದಾರೆ. ಪಾಂಡುರಂಗನ ದೇವಸ್ಥಾನ ಅದರಲ್ಲಿರುವ ೩೫–೪೦ ಕೆ.ಜಿ. ತೂಕದ ಅಪರೂಪದ **'ಪಾದರಸಲಿಂಗ'** ಇತ್ಯಾದಿಗಳು, ಅನೇಕ ಸಂಸ್ಕೃತ ಕನ್ನಡ/ಮರಾಠಿ ಮೋಡಿಲಿಪಿಯ ಕಾಗದ ಪತ್ರಗಳು, ಗ್ರಂಥಗಳು ಈ ಮನೆತನದಲ್ಲಿವೆ. ರಸಲಿಂಗದ ಪೀಠದಲ್ಲಿರುವ ಎರಡು ಕಂಚಿನ ಶಾಸನಗಳು, ಅವುಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಇದೇ ಲೇಖಕರು ಇತಿಹಾಸ ದರ್ಶನ ಸಂಪುಟ ೧೦/೧೯೯೫, ಪುಟ ೮೩–೮೫ ಹಾಗೂ ಸಂಪುಟ ೨೩/೨೦೦೮, ಪುಟ ೬೭–೬೮ರಲ್ಲಿ ಪ್ರಸ್ತುತಪಡಿಸಿದ್ದಾರೆ. ಇಲ್ಲಿ ಮೊದಲ ಬಾರಿಗೆ ಪ್ರಕಟವಾಗುತ್ತಿರುವ ಆಂಗ್ಲ ದಾಖಲೆಗಳಿವು. **'ತಾಮ್ರ ಗುಂಡಿ'** ಎನ್ನುವ ಸ್ಥಳದ ಜಮೀನಿನ ಒಡೆತನದ ಬಗ್ಗೆ ಸೋದರ ಸಂಬಂಧಿಗಳಲ್ಲಿ ೯೯ ವರ್ಷಗಳ ದೀರ್ಘಕಾಲ ನಡೆದ ಖಟ್ಲೆಯನ್ನು ಬಗೆಹರಿಸಲು ಆಗಿನ ಬೆಳಗಾವಿಯ ಇನಾಂ ಕಮೀಷನರ್ ಆಗಿದ್ದ ಹೆಚ್. ಬರ್ಡ್‌ವುಡ್ ಎನ್ನುವವನು ಸಾಕ್ಷಿ ಮತ್ತು ದಾಖಲೆಗಳನ್ನು ಸುದೀರ್ಘವಾಗಿ ಪರಿಶೀಲಿಸಿ ೨೦ ಪುಟಗಳ ತೀರ್ಪನ್ನು ನೀಡಿದ್ದಾನೆ. ಮಹಾರಾಷ್ಟ್ರದ ಪ್ರಾರಂಭ ಕಾಲದ ಪೇಶ್ವೆಗಳು, ಹೈದ್ರಾಬಾದಿನ ನಿಜಾಮ ಮತ್ತು ಬ್ರಿಟಿಷರು ಸೇರಿ ಮಾಡಿಕೊಂಡ ಒಪ್ಪಂದದಿಂದ ಹೈದರಾಲಿ, ಟಿಪ್ಪುವನ್ನು ಸೋಲಿಸಿದ ಈಸ್ಟ್ ಇಂಡಿಯಾ ಕಂಪೆನಿಯ ಕಾನೂನನ್ನು ಉಲ್ಲೇಖಿಸುತ್ತಲೇ ರಂಗಾಪುರ ಸಂಸ್ಥಾನದ ಭಿಷ್ಟಪ್ಪಯ್ಯ ಮಹಾಪುರುಷ ಮನೆತನದವರಿಗೇ ತಾಮ್ರಗುಂಡಿ ಜಮೀನು ಸೇರಬೇಕೆಂದು ನಿರ್ಣಯ ಕೊಡುವಾಗ ಆ ಕಾಲದ ಅನೇಕ ಚಾರಿತ್ರಿಕ ಘಟನೆಗಳ ಖಚಿತ ತಾರೀಖಿನ ಸಾಕ್ಷಿಯಾಗಿ ಇಲ್ಲಿಯ ಸಂಗತಿಗಳು ನಿರೂಪಿತವಾಗಿವೆ. ತೀರ್ಪಿನ ಅತಿ ಮುಖ್ಯ ಅಂಶಗಳನ್ನು ಮಾತ್ರ ಕನ್ನಡದಲ್ಲಿ ಕೊಡಲಾಗಿದ್ದು, ಆಂಗ್ಲ ಭಾಷೆಯ ಕೆಲವು ಛಾಯಾಪ್ರತಿಗಳನ್ನು ಇಲ್ಲಿ ಪ್ರಕಟಿಸಲಾಗಿದೆ.

ಮೂಲದಾಖಲೆಗಳ ಸಂಕ್ಷಿಪ್ತ ನೋಟ : ತಾರೀಖು ೨೫ ಅಕ್ಟೋಬರ್ ೧೮೫೧ ಸ್ಥಳ : ಬೆಳಗಾವಿ

ಭಿಷ್ಟಪ್ಪಯ್ಯ ಮಹಾಪುರುಷ ಸಂಸ್ಥಾನ ರಂಗಾಪುರ, ಕೊಪ್ಪಳ ತಾಲ್ಲೂಕು (ಇಂದಿನ ಮುಂಡರಗಿ ತಾಲ್ಲೂಕು, ಗದಗ ಜಿಲ್ಲಾ) ಇವರ ಮನೆತನಕ್ಕೆ ಸಂಬಂಧಿಸಿದಂತೆ ತಾಂಬ್ರಗುಂಡಿ ಜಮೀನಿನ ಮೇಲಿನ ವಿವಾದವನ್ನು ಬಗೆಹರಿಸುವಾಗ, ಬೆಳಗಾಂ (ಇನಾಮ್) ರೆವೆನ್ಯೂ ಕಮೀಷನರ್ ಡಬ್ಲು. ಹೂಟ್ ಬರೆದಿರುವ ನಿರ್ಧಾರಗಳು.

೧. ಈ ವ್ಯಾಜ್ಯವನ್ನು ಬಗೆಹರಿಸುವಾಗ ನನಗೆ ಕೆಲವು ಮೂಲ ದಾಖಲೆಗಳನ್ನು ಪರಿಶೀಲಿಸುವ ಅವಕಾಶ ಒದಗಿತು. ಇವುಗಳ ಪ್ರಕಾರ (ಕ್ರಿ.ಶ. ೧೭೦೨–೧೮೧೪, ೧೧೨ ವರ್ಷ) **"ಮೂಲ ಭಿಷ್ಟಪ್ಪಯ್ಯ ಮಹಾಪುರುಷ ರಂಗಾಪುರ ಸಂಸ್ಥಾನ"** ಇವರು ಈಗಿನ ಫಿರ್ಯಾದುದಾರರ ಅಜ್ಜ. ತಾಂಬ್ರಗುಂಡಿ ಹಳ್ಳಿಯು ಕ್ರಿ.ಶ. ೧೭೫೭ ಆಗಸ್ಟ್‌ನಲ್ಲಿ ದೊರೆತಿರುವ ಮೊದಲ ಆಕರದ ಪ್ರಕಾರ ಪೇಶ್ವೆ (Early Peswe) ಸರ್ಕಾರದ ಅಧೀನದಲ್ಲಿತ್ತು. ಇತ್ತೀಚಿನವರೆಗೂ ದೊರಕಿರುವ ದಾಖಲೆಗಳೂ ಈ ವಿಷಯವನ್ನು ಪುರಸ್ಕರಿಸುತ್ತವೆ.

೨. ಮೇಲಿನ ಆಧಾರದ ಪ್ರಕಾರ ಇದೇ ಮನುಷ್ಯನು ಆಸ್ತಿಯನ್ನು ಅನುಭವಿಸುತ್ತಿದ್ದನು. ಹೈದರಾಲಿಯು ಮರಾಠರ ಮೇಲೆ ದಂಡೆತ್ತಿ ಹೋಗುವ ತನಕ, ನಂತರ ಅವನ ಮಗನಾದ ಟಿಪ್ಪುವೂ ಕೂಡಾ ಈ ಮೊದಲೇ ಫಿರ್ಯಾದುದಾರರ ಸುಪರ್ದಿನಲ್ಲಿ ಅವರ ಹಿಂದಿನವರಿಂದ ಅನುಭವಿಸಲ್ಪಟ್ಟ ತಾಂಬ್ರಗಳಡಿ ಭಾಗವನ್ನು ಇನಾಂ ಜಮೀನು ಎಂದು ಕ್ರಿ.ಶ. ೧೭೫೭ ರಲ್ಲೇ ಗುರುತಿಸಿದ್ದನು. ಈ ಕ್ರಮವು ಕ್ರಿ.ಶ. ೧೭೮೬ರವರೆಗೆ ಮುಂದುವರಿಯಿತು. ಪೇಶ್ವೆಯವರೂ ಕೂಡಾ ಕೊಪ್ಪದ ಈ ಭಾಗವನ್ನು ಮಹಲ್ ಎಂದು ಕರೆಯುತ್ತಿದ್ದರು. ಕ್ರಿ.ಶ. ೧೭೮೬ರಲ್ಲಿ ಪೂರ್ತಿ ತಾಂಬ್ರಗುಂಡಿ ಹಳ್ಳಿಯು 'ಧರ್ಮಾದಾರು' ಆಗಿದ್ದರು. ಈ ವೇಳೆಯಲ್ಲಿ ಟಿಪ್ಪು ಮತ್ತೆ

* ೭೫/೧೫, ಸಮರ್ಥ, ವಿಕಾಸ್ ಹೈಸ್ಕೂಲ್ ಎದುರು, ೫ನೇ ಬ್ಲಾಕ್, ಬನಶಂಕರಿ ೩ನೇ ಹಂತ, ಬೆಂಗಳೂರು.

ಈ ಕೊಪ್ಪಳದ ಭಾಗವನ್ನು ತನ್ನದಾಗಿಸಿಕೊಂಡು (regained the Possion) ಕ್ರಿ.ಶ. ೧೭೭೯ರವರೆಗೆ ಆಳಿದ. ಆದರೆ ಮತ್ತೆ ಇದು ಅವನ ಕೈತಪ್ಪಿ ಪೇಶ್ವೆಯವರ ವಶವಾಯಿತು. ಈಗ ಇನಾಮು ತನ್ನದೆಂದು ಹೇಳಿ ಕೊಳ್ಳುತ್ತಿರುವ ಭಿಷ್ಟಪ್ಪಯ್ಯ ಪ್ರಕಾರ ಪೂರ್ತಿಹಳ್ಳಿಯು ಎರಡು ವರ್ಷ ಎಂದರೆ (ಈಸ್ಟ್ ಇಂಡಿಯಾ ಕಂಪೆನಿಯ) ಕ್ರಿ.ಶ. ೧೭೯೨ ಪಾರ್ಟಿಷಿಯನ್ ಒಪ್ಪಂದದವರೆಗೂ ಆತನೇ ಅನುಭವಿಸುತ್ತಿದ್ದನು. ಇದಾದ ನಂತರ ಈ ಜಮೀನುಗಳು ಕೊಪ್ಪಳದ ನೈಜಾಮ ಮತ್ತು ಗೋಖಲೆಯವರಿಗೆ ಸೇರಿತು. ಗೋಖಲೆ ಕ್ರಿ.ಶ. ೧೮೧೮ರಲ್ಲಿ ತೀರಿಕೊಂಡನು. ಪಾರ್ಟಿಷನ್ ಪ್ರಿಯಟಿ ಪ್ರಕಾರ ಟಿಪ್ಪುವಿನ ಅಧೀನಕ್ಕೆ ಒಳಪಟ್ಟ ನಂತರ ಅವನ ಆಡಳಿತದ ಕಾಲ್‌ಸತ್ (Kalsat) ನ ಪ್ರಕಾರ ಹಳ್ಳಿಯ ಅರ್ಧಭಾಗದ ತೆರಿಗೆ ಬೆಲೆ ರೂ. ೨೨೫ ಎಂದು ನಮೂದಿತವಾಗಿದೆ.

೩. ಫಿರ್ಯಾದುದಾರನೇ ತನ್ನ ಸಾಕ್ಷಿಯಲ್ಲಿ ಹೇಳಿರುವಂತೆ ಕ್ರಿ.ಶ. ೧೭೯೦ ರಿಂದಲೇ ತೆರಿಗೆ ವಸೂಲಿ ದಾಖಲೆ ತನ್ನ ಕಡೆ ಇದ್ದು ಅದನ್ನು 'ಸರ್ವ ಇನಾಂ' ಎಂದು ಕರೆಯಲಾಗಿದೆ. ನಂತರದ ದಾಖಲೆಗಳು ತನ್ನಲ್ಲಿ ಇಲ್ಲವೆಂದು ಹೇಳಿದ್ದಾನೆ. ಪೇಶ್ವೆ ದಾಖಲೆಗಳ ಪ್ರಕಾರ ಮತ್ತು ಮೇಲೆ ಹೇಳಿದಂತೆ ಪಾರ್ಟಿಪಾನ್ ಟ್ರಿಯಟಿ ಪ್ರಕಾರ ಈ ಹಳ್ಳಿಯ ಜಮೀನಿನ ಅರ್ಧ ಭಾಗವು ಮಾತ್ರ ಫಿರ್ಯಾದುದಾರನ ಹಿಸ್ಸೆಯಲ್ಲಿ ಇದ್ದುದರಿಂದ ನಾನು ಈ ಜಮೀನಿನಲ್ಲಿ ಬೆಳೆಯುವ ಬೆಳೆಯ ಅರ್ಧ ಭಾಗ ಅಥವಾ ಅದರ ಬೆಲೆಯಷ್ಟನ್ನು ಭಿಷ್ಟಪ್ಪಯ್ಯನಿಗೆ ಮತ್ತು ಅವರ ವಂಶೀಕರಿಗೆ ಗಂಡುಮಕ್ಕಳು ವಾರಸುದಾರರು ಇರುವವರೆಗೆ (heradtary) ಕೊಡಲು ಆಜ್ಞಾಪಿಸುತ್ತೇನೆ. ಈ ನಿರ್ಧಾರವನ್ನು ಇನಾಮ್ ಆರ್‍ವ ತಾರೀಖು ೧೫ನೇ ಮಾರ್ಚ್ ೧೮೫೧ ಸೆರ್ಷ I ಆರ್ಟಿಕಲ್ II ರೂಲ್ II ಪ್ರಕಾರ ತೆಗೆದುಕೊಳ್ಳಲಾಗಿದೆ.

ಸಹಿ
ಇನಾಂ ಕಮೀಷನರ್

ದಾಖಲೆಗಳ ಚಾರಿತ್ರಿಕ ಮಹತ್ವ : ಒಂದು ಭೂ ವಿವಾದವನ್ನು ಬಗೆಹರಿಸಬೇಕಾದರೆ ಅನೇಕ ರೀತಿಯ ಸಾಕ್ಷ್ಯಾಧಾರಗಳು ಬೇಕಾಗುತ್ತವೆ. ಅವುಗಳಲ್ಲಿ ಚಾರಿತ್ರಿಕ ದಾಖಲಾತಿಗಳೂ ಬಹುಮುಖ್ಯ ಅಂಶಗಳಾಗುತ್ತವೆ. ಈ ವಿವಾದದಲ್ಲಿ ಬರುವ ತಾಮ್ರಗುಂಡಿ ಎನ್ನುವ ಹಳ್ಳಿಯು ಅಂದಿನ ಕೊಪ್ಪಳ ತಾಲ್ಲೂಕಿನಲ್ಲಿದ್ದಿತು. ಕ್ರಿ.ಶ. ೧೭೭೯ರವರೆಗೆ ಮರಾಠ ಕರ್ನಾಟಕದ ಭಾಗವಾಗಿದ್ದು ಅದನ್ನು ಹೈದರಾಲಿ ಮತ್ತು ಟಿಪ್ಪು ಅವರುಗಳು ಆ ಪ್ರದೇಶವನ್ನು ವಶಪಡಿಸಿ ಕೊಂಡಿದ್ದರು. ಕಾಪ್ಟನ್ ಷೆಡ್ಯೂಲರ್‌ನು ನಮೂದಿಸಿರುವಂತೆ (Original accounts which Capton Schdler had) ರಂಗಾಪುರದ ಭಿಷ್ಟಪ್ಪಯ್ಯನು ಈ ಫಿರ್ಯಾದುದಾರನ ಅಜ್ಜ (Grand Father) ತಾಮ್ರಗುಂಡಿಹಳ್ಳಿ ಕ್ರಿ.ಶ. ೧೭೫೭ರಲ್ಲಿಯೂ ಭಿಷ್ಟಪ್ಪಯ್ಯನ ಅಧೀನದಲ್ಲಿತ್ತು. **ಕ್ರಿ.ಶ. ೧೭೫೭ ಪೇಶ್ವೆ ಆಡಳಿತದ ಅತ್ಯಂತ ಮೊದಲ ವರ್ಷ** ಈ ದಾಖಲೆ ತಿಳಿಸುವಂತೆ ಸರ್ವ ಇನಾಮಿನ ಹಕ್ಕುದಾರಿಕೆಯು ಇದೇ ವ್ಯಕ್ತಿಗೆ ಮುಂದುವರೆದಿದ್ದು ಕ್ರಿ.ಶ. ೧೭೭೬ರಲ್ಲಿ ಹೈದರಾಲಿಯು ಮರಾಠಿ ಕರ್ನಾಟಕವನ್ನು ಆಕ್ರಮಿಸುವವರೆಗೆ ಮುಂದುವರೆದಿದೆ. ಕ್ರಿ.ಶ. ೧೭೮೬ರಲ್ಲಿ ಪೇಶ್ವೆ ಅಧಿಕಾರಿಗಳು ಈ ಪ್ರಾಂತ್ಯವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡರು.

ಕ್ರಿ.ಶ. ೧೭೯೦ ಮತ್ತು ಕ್ರಿ.ಶ. ೧೯೯೧ ಈ ಭಾಗವು ಎಲ್ಲ ಕರೆಗಳಿಂದ ಮುಕ್ತವಾಗಿದ್ದು ಭಿಷ್ಟಪ್ಪಯ್ಯ ರಂಗಾಪುರ ಇವರ ಅಧೀನದಲ್ಲಿತ್ತು. ಎಂದರೆ ಈ ಪ್ರಾಂತ್ಯದ ಆಡಳಿತ ನಿರ್ವಹಿಸುತ್ತಿದ್ದ ಹೈದರಾಲಿ ಟಿಪ್ಪು ಕಾಲದಿಂದ ಪೇಶ್ವೆ ಕಾಲದಲ್ಲಿಯೂ ಈ ಹಳ್ಳಿಯ ಜಮೀನುಗಳ ಉತ್ಪನ್ನ / ತೆರಿಗೆಗಳು ವುಪೂರ್ಣವಾಗಿ ಭಿಷ್ಟಪ್ಪಯ್ಯ ರಂಗಾಪುರ ಇವರ ಮನೆತನದವರಿಂದಲೇ ಅನುಭವಿಸಲ್ಪಡುತ್ತಿದ್ದಿತು.


ಕ್ರಿ.ಸ. ೧೭೯೧ರಲ್ಲಿ ತಾಮ್ರಗುಂಡಿ ಹೈದ್ರಾಬಾದ್ ನೈಜಾಮನಿಗೆ ವಹಿಸಲ್ಪಟ್ಟಿತು (from fered a the origon) ಕ್ರಿ.ಶ. ೧೮೧೦ರಲ್ಲಿ ಭೀಮರಾವ್ ಮುಂಡರಗಿ ಗೋಖಲೆ ಎನ್ನುವವನು ನೈಜಾಮನ ವ್ಯಾನೇಜರ್‌ನಿಂದ ಈ ಭೂಭಾಗವನ್ನು ಪಡೆದನು. ಅಂದಿನಿಂದ ಇಲ್ಲಿಯ ಇನಾಂ ತೆರಿಗೆಯ ಅರ್ಧಭಾಗವನ್ನು ಗೋಖಲೆಗೂ, ಇನ್ನರ್ಧ ಭಾಗವನ್ನು ಭಿಷ್ಟಪ್ಪಯ್ಯ ರಂಗಾಪುರ ಅವರು ತೆಗೆದುಕೊಳ್ಳು ವಂತಾಯಿತು. ಇದು ಈಗಿನ ಹೊಸ ಗವರ್ನಮೆಂಟ್ (ಪೇಶೆ ಆಡಳಿತ ಎರಡನೇ ಬಾರಿ) ಬಂದ ನಂತರದ ಮಾರ್ಪಾಡಾಗಿದೆ.


ಕ್ರಿ.ಶ. ೧೭೯೦ರಲ್ಲಿ ಬ್ರಿಟಿಷರ ಈಸ್ಟ್ ಇಂಡಿಯಾ ಕಂಪೆನಿ ಮರಾಠರ ಪೇಶ್ವೆಗಳು ಮತ್ತು ಹೈದ್ರಾಬಾದ್ ನಿಜಾಮ ಇವರ ನಡುವೆ ಟಿಪ್ಪುವನ್ನು ಸೋಲಿಸಲು ಆಕ್ರಮಣಕಾರಿ ಅಥವಾ ರಕ್ಷಣಾಕಾರಿ (Offensive or Defensive) ತಂತ್ರಗಳನ್ನು ರೂಪಿಸಿ ಅವನನ್ನು ಹೇಗಾದರೂ ಮಾಡಿ ಹೊಡೆದೋಡಿಸ ಬೇಕೆಂಬ ಒಪ್ಪಂದದ ಪ್ರಕಾರ ಮೇಲೆ ಹೇಳಿರುವ ತೆರಿಗೆ) ಕಂದಾಯ ಎಂದರೆ ಮೊದಲಿದ್ದ ಪೂರ್ತಿ ಹಕ್ಕನ್ನು ನಿಲ್ಲಿಸಿ ತೆರಿಗೆಯ ಅರ್ಧ ಭಾಗವನ್ನು ಮಾತ್ರ ಕೊಡಬೇಕೆಂದು ನಿರ್ಧರಿಸಲಾಗಿದೆ.

ಈ ದಾಖಲೆಗಳ ಸೂಕ್ಷ್ಮ ಪರಿಶೀಲನೆಯಿಂದ ತಿಳಿದುಬರುವ ಅಂಶವೆಂದರೆ ಭಿಷ್ಟಪ್ಪಯ್ಯ ಮಹಾಪುರುಷ ರಂಗಾಪುರ ಸಂಸ್ಥಾನ ಇವರು ತಾಮ್ರಗುಂಡಿ ಜಮೀನಿನಿಂದ ಬಂದ ಉತ್ಪನ್ನ / ತೆರಿಗೆಗಳನ್ನು ಜನಸೇವೆಗೆ, ಧರ್ಮಕಾರ್ಯಗಳಿಗೆ ಬಳಸುತ್ತಿದ್ದುದರಿಂದಲೇ ಈ ತೆರಿಗೆಗಳ ಕರ ಮುಕ್ತ ಕಾನೂನು ಜಾರಿಯಲ್ಲಿತ್ತು ಎನ್ನುವುದು ಸ್ಪಷ್ಟವಾಗುತ್ತದೆ.

ರಂಗಾಪುರದ ಮೂಲ ಭಿಷ್ಟಪ್ಪಯ್ಯ ಮಹಾಪುರುಷರು ವಿಜಯನಗರದ ಪತನಾನಂತರ ಕಾಲದಿಂದಲೂ ಅನೇಕ ಗುಡಿಗೋಪುರಗಳ ನಿರ್ಮಾಣ, ಪುನರುಜ್ಜೀವನಗೊಳಿಸಿದ್ದರು. ಮದುವೆ ಮುಂಜಿ ಇತ್ಯಾದಿ ಧರ್ಮ ಕಾರ್ಯಗಳನ್ನು ಮಾಡುತ್ತಿದ್ದರು. ರಂಗಾಪುರವು ಹಿರೇಹಡಗಲಿ ತಾಲ್ಲೂಕು ಬಳ್ಳಾರಿ ಜಿಲ್ಲೆಯ ಮಾರ್ಗದಿಂದ ೩ ಕಿ.ಮೀ. ತುಂಗಭದ್ರಾ ನದಿಯ ಬಲದಂಡೆಯಲ್ಲಿದೆ. ಅಲ್ಲಿ ಈಗ ಯಾವ ಮನೆಗಳಾಗಲೀ, ಜನವಸತಿಯಾಗಲೀ ಇಲ್ಲ. ಉಗ್ರ ನಾರಸಿಂಹ, ರಾಮೇಶ್ವರ ಆಂಜನೇಯನ ದೇವಸ್ಥಾನಗಳಿವೆ. ತುಂಗಭದ್ರೆಯ ಎಡದಂಡೆ ಭಾಗದಲ್ಲಿರುವ ವಿಠ್ಠಲಾಪುರದಲ್ಲಿ ಭಿಷ್ಟಪ್ಪಯ್ಯ ಮಹಾಪುರುಷ ಇವರ ಮನೆತನದವರು ನೆಲೆಸಿದ್ದಾರೆ. ಬಿದಹರಳ್ಳಿ ಗಳಗನಾಥ ಇತ್ಯಾದಿಗಳಲ್ಲಿ ನದಿ ನೀರಿಂದ ಕೊಚ್ಚಿ ಹೋಗದಂತೆ ತಡೆಗೋಡೆಗಳನ್ನು ನಿರ್ಮಿಸಿದ್ದಾರೆ. ಭಿಷ್ಟಪ್ಪಯ್ಯನವರಿಗೆ ಕಟ್ಟಡ ಶಾಸ್ತ್ರ, ರಸವಿದ್ಯೆ, ಜ್ಯೋತಿಷ್ಯ ಶಾಸ್ತ್ರ, ಸಂಸ್ಕೃತ ಇತ್ಯಾದಿ ಅನೇಕ ಶಾಸ್ತ್ರಗಳು ಪರಿಣತಿ ಇತ್ತೆಂದವಾ ಅವರ ಚರಿತ್ರೆಯಿಂದಲೂ, ಜನಮನದ ಅನೇಕ ಐತಿಹ್ಯಗಳಿಂದಲೂ ತಿಳಿದುಬರುತ್ತದೆ. ಇದುವರೆಗೆ ಈಗಿನ ಹಂಪೆಯ ಮಹಾದ್ವಾರವನ್ನು ನಿರ್ಮಿಸಿದಾತ ಕೃಷ್ಣದೇವರಾಯನೆಂದೇ ಉಲ್ಲೇಖಿಸಲ್ಪಡುತ್ತಿದೆ. ಆದರೆ ಭಿಷ್ಟಪ್ಪಯ್ಯ ರಂಗಾಪುರ ಇವರು ತಮ್ಮ ಹೆಂಡತಿಯನ್ನೇ ಈ ಗೋಪುರ ನಿರ್ಮಾಣ ಕಾಲದಲ್ಲಿ ಬಲಿ ಕೊಟ್ಟ ವಿಷಯ ಇವು ಇನ್ನೂ ಹಂಪೆಯ ಜನರ ಬಾಯಲ್ಲಿ ಹಸಿರಾಗಿದೆ. ಇಲ್ಲಿ ಕೊಟ್ಟಿರುವ ದಾಖಲೆಗಳು ಒಂದು ಭೂಮಿಯ ವಿವಾದವನ್ನು ಬಗೆಹರಿಸಲು ಕುರಿತಾದುದು ಎಂದಿಟ್ಟುಕೊಂಡರೂ ಆ ಮನೆತನದ ಇತಿಹಾಸಕ್ಕೆ ಒಂದು ಧೃಡವಾದ ಲಿಖಿತ 'ಅಸ್ಥಿಭಾರ' ವಿದೆ ಎನ್ನುವುದನ್ನು ಓದುಗರ ಗಮನಕ್ಕೆ ತರುವುದು ಈ ಲೇಖಕನ ಉದ್ದೇಶವಾಗಿದೆ.

(ಉಪಕೃತಿ : ಈ ಮೂಲಕೃತಿ ದಾಖಲೆಗಳನ್ನು ಒದಗಿಸಿ, ಛಾಯಾಪ್ರತಿ ಮಾಡಲು ಅವಕಾಶ ಕೊಟ್ಟು ಆ ಕಾಲದ ಅನೇಕ ಪಾರಿಭಾಷಿಕ ಶಬ್ದಗಳಿಗೆ ಅರ್ಥವನ್ನು ಹುಡುಕುವಲ್ಲಿ ಸಹಕರಿಸಿದ ಇದೇ ಮನೆತನದವರಾದ ಶ್ರೀಮತಿ ಹಾಗೂ ಶ್ರೀ ಎಸ್.ಡಿ. ಮಹಾಪುರುಷ ವಿಠ್ಠಲಾಪುರ ಮುಂಡರಗಿ ತಾಲ್ಲೂಕು, ಗದಗ ಜಿಲ್ಲೆ ಇವರಿಗೆ ಕೃತಜ್ಞತೆಗಳು.)





~~came into~~ the possession of Gokhale up to the period of whose death in A.D 1818/19. from that of Tippoo's invasion & the partition Treaty, it would appear that one half of the village now claimed has been considered & brought to account as Khalsat at a valuation of Rs 225 a year or thereabouts the other half being noted as held in Inam by Beeshtappaya.

11 It appears by the claimant's own statement that his village has been subject to a tax since 1790/1 or thereabouts there is from that period no evidence on record showing, that the village now under report was recognized entirely as Surv Inam; one half having invariably been brought to account as Khalsat since the re-occupation by the Paishwa of Pargana Gootal. The Acting Asst. Inam Commissioner is therefore of opinion that the village now under report to the extent of one half should be declared the hereditary Surv Inam of the claimant Bishtappaya to be so continued so long as there shall be in existence any male offspring or male lineage of the said claimant, or that the entire village be declared his Inam subject to a Jooree tax equivalent to one half of its actual produce & value as Govt. may deem fit. Agreeably to code of Inam Rules dated 15th March 1850 No: 1 Article II of Rule II.

No 144

Dated 20th October 1851

at Belgaum

1 The above report No 4 dated 20th Sept. 1851 is submitted for the opinion of the Revenue Commissioner S. D & the decision of Government

2 On referring to the original accounts which Captain Schroder had an opportunity of examining, I find that Bushtappaya of Rangapur, who appears to have been the grandfather of the ~~deceased~~ present claimant of ~~Rangapur~~ Tambragundee, was in possession of that village in A.D 1757/8, the earliest year of the Paishwa's Govt. for which there are records forthcoming to "trace its history", & that it was then held as Surv Inam

3 The accounts show that it was continued as Surv Inam to the same person until Hyder Ali's invasion of the "Maratha carnatic" in A.D 1776/7: & again in A.D 1786/7 in which year the Paishwa officers had possession of the province.

4 With the exception of the accounts of A.D 1786/7, there are none forthcoming, for any year between Hyder's invasion, & the Paishwa's recovery of the province from his son Tipoo in A.D 1790/1.

5 In the accounts of that year (A.D 1790/1) Tambragundee is entered as held, free of all tax, by Bushtappaya Rangapur.

6 In A.D 1791/2 Sumat Kalhera, in which Tambragundee is situated, was transferred to the Nizam, from whose manager, Bheemrao Moondargee Gokhla took in A.D 1810/1; in & since which year Tambragundee has been subject to an assessed tax supposed to represent the value of half the village, one half being admitted in Gokhla's accounts as the Surva Inam of Beeshtappaya.

7 In the absence of proof of an originally valid grant, only a presumptive title can be ascribed to the holding under consideration, & this presumptive title can be ascribed to the Inam only, as it existed at the introduction of the present Government, that is, subject to its present tax, or as half the village.

8 The Inam Commissioner, therefore agrees with Captain Schroder that only half of Tambragundee should be continued as Inam to the claimant Mahadevappaya & his male heirs & thinks that the best & fairest way of continuing this half, would be for Govt. to assume the management of the whole village, & make over half of its net revenue every year to the Inamdar, this arrangt. being declared permanent so long as there shall be in existence any male descendant in male line, from the claimant.

W. Hart

Inam Commissioner

plaintiff's own [illegible] se, the def[illegible] [illegible]
have wrongfully received the payments
from the first. Undoubtedly a cause
of action was given to the plaintiff on
the death of Bhishapaya in 1863, when his
right to the haks accrued. The defendants
thereafter enjoyed the haks adversely. It is
also, we think, clear, in the circumstances
of the case, that the defendants then
refused to pay the money to the plaintiff
and we should not be justified in
holding that the first demand by the
plaintiff was made and refused only
in 1875. We, therefore, hold that the suit
is barred by time, and reverse the decree
of the lower Court and reject the claim
with costs throughout.

31st August 1891.

(Signed) H. Birdwood

(Signed) H. J. Parsons

True Copy

[signature]

Acting Deputy Registrar

[signature]

Acting Sealer

The 5th day of August 1904

[illegible]

ಡಾ. ಎಚ್.ಎಸ್.ಎಸ್. ಗೋಪಾಲರಾವ್ *

ಮಾಗಡಿ ತಾಲ್ಲೂಕಿನಲ್ಲಿ ಇತಿಹಾಸ ಆರಂಭ ಕಾಲದ ಎರಡು ಕುರುಹುಗಳು

ಈಗ ರಾಮನಗರ ಜಿಲ್ಲೆಗೆ ಸೇರಿರುವ ಮಾಗಡಿ ತಾಲ್ಲೂಕಿನ ಎಣ್ಣೆಗೆರೆ ಮತ್ತು ಬಿಟ್ಟಸಂದ್ರ ಗ್ರಾಮಗಳಲ್ಲಿ ಕಂಡ ಎರಡು ವಿಶೇಷಗಳು ಈ ಅಧ್ಯಯನಕ್ಕೆ ಪ್ರೇರಣೆ ನೀಡಿವೆ. ಎಣ್ಣೆಗೆರೆಯ ಶ್ರೀ ಗಂಗಯ್ಯನವರ ಮಗ ಶ್ರೀ ಚನ್ನಮಾರಯ್ಯ ನವರ ಜಮೀನಿನಲ್ಲಿ ದೂರಕ್ಕೆ ದೇವಾಲಯದಂತೆ ಕಾಣುವ, ಸಮೀಪದಿಂದ ಬೃಹತ್ ಶಿಲಾಯುಗದ ಸಮಾಧಿಯನ್ನು ನೆನಪಿಗೆ ತರುವ ಒಂದು ವಾಸ್ತು ಇದೆ. ಇದು ೧೧೬ ಸೆಂ.ಮೀ. ಉದ್ದ ಮತ್ತು ೧೧೦ ಸೆಂ.ಮೀ ಅಗಲ ಇರುವ ನಾಲ್ಕು ದೊಡ್ಡ ಚಪ್ಪಡಿಗಳನ್ನು ಎರಡು ಕಲ್ಲಿನ ಪೀಠದ ಮೇಲೆ ಚತುರಸ್ರಾಕಾರವಾಗಿ ಜೋಡಿಸಿ ಅದರ ಮೇಲೆ ೧೧೯ ಸೆಂ.ಮೀ. ಎತ್ತರದ ದ್ರಾವಿಡ ಶೈಲಿಯ ಕಲ್ಲಿನ ಗೋಪುರವನ್ನು ನಿರ್ಮಿಸಲಾಗಿದೆ. ಗೋಪುರದ ಮೇಲ್ಭಾಗದ ಸ್ತೂಪಿಯ ಮೇಲೆ ಕಳಶವನ್ನು ಇಡಲೂ ಅವಕಾಶ ಮಾಡಲಾಗಿದೆ. ಆದರೆ ಈಗ ಕಳಶ ಇಲ್ಲ. ಈ ಟುರ್ಮಿತಿಗೆ ಬಾಗಿಲಿಲ್ಲ. ಬಾಗಿಲಿನ ಬದಲು ಪಶ್ಚಿಮ ದಿಕ್ಕಿಗೆ ಅಭಿಮುಖವಾಗಿ ಸುಮಾರು ೬೭ ಸೆಂ.ಮೀ. ಎತ್ತರ ಮತ್ತು ೩೬ ಸೆಂ.ಮೀ. ಅಗಲ ಇರುವ ಕಿಟಕಿ ಇದೆ. ಇದಕ್ಕೂ ಅದೇ ಕಲ್ಲಿನಲ್ಲಿ ಅಡ್ಡಲಾಗಿ ಸುಮಾರು ೧೩ ಸೆಂ.ಮೀ. ಅಗಲದ ಅಡ್ಡಪಟ್ಟಿ ರಚಿಸಲಾಗಿದೆ. ದೇವಾಲಯದ ವಾಸ್ತುವನ್ನು ನೆನಪಿಗೆ ತಂದರೂ ಇದು ದೇವಾಲಯವಲ್ಲ. ಕೆಳಭಾಗ ಬೃಹತ್ ಶಿಲಾಯುಗದ ಸಮಾಧಿಯಂತೆ ಕಂಡರೂ ಇದು ಬೃಹತ್ ಶಿಲಾಯುಗದ ಸಮಾಧಿಯಲ್ಲ. ಬೃಹತ್ ಶಿಲಾಯುಗದ ಸಮಾಧಿ ಮತ್ತು ದೇವಾಲಯ ಎರಡನ್ನೂ ಒಟ್ಟಿಗೆ ನೆನಪಿಗೆ ತರುವ ಈ ನಿರ್ಮಿತಿಯು ಗ್ರಾಮದಲ್ಲಿ ಎಂದೂ ಯಾವುದೇ ರೀತಿಯಲ್ಲೂ ಪೂಜೆಗೊಳ್ಳುವುದಿಲ್ಲ. ಯಾವುದೇ ಕುಟುಂಬ ದವರೂ ಇದನ್ನು ಪೂಜಿಸುವುದಿಲ್ಲ. ಈ ನಿರ್ಮಿತಿಯ ಒಳಗೆ ಪ್ರವೇಶಿಸಲೂ ಸಾಧ್ಯವಿಲ್ಲ ಎಂದ ಮೇಲೆ ಅಲ್ಲಿ ಯಾವುದೇ ದೇವರನ್ನು ಪ್ರತಿಷ್ಠಾಪಿಸುವಂತಿಲ್ಲ. ಆದ್ದರಿಂದ ಇದು ದೇವಾಲಯವಲ್ಲ: ಅಕಸ್ಮಾತ್ ಪ್ರತಿಷ್ಠಾಪಿಸಿದರೂ, ಪೂಜಿಸಲು ಒಳಗೆ ಹೋಗುವಂತಿಲ್ಲ. ಹೊರಗಿನಿಂದಲೇ ಪೂಜೆಯನ್ನು ಸಲ್ಲಿಸಬೇಕು. ಎಡೆ (ನೈವೇದ್ಯ) ಇಡಬೇಕಾದರೂ, ಕಿಟಕಿಯಂತಹ ರಂಧ್ರದ ಮೂಲಕ ಇಡಬೇಕಷ್ಟೆ. ಬೃಹತ್ ಶಿಲಾಯುಗದ ಸಮಾಧಿ ಎನ್ನಲು ಇಲ್ಲಿ ಕಲ್ಲಿನ ಕೋಣೆ ಇದೆಯಾದರೂ, ಅದರಲ್ಲಿ ಇರಲೇಕಾದ ಹೂಜಿಯಾಕಾರದ ರಂಧ್ರವಾಗಲೀ, ಮುಚ್ಚುಚಪ್ಪಡಿಯಾಗಲೀ ಇಲ್ಲ. ಉತ್ಖನನ ನಡೆದರೆ ಕೆಳಭಾಗದಲ್ಲಿ ಅಸ್ಥಿಪಂಜರ ಅಥವಾ ಸಮಾಧಿ ಯಲ್ಲಿರಬಹುದಾದ ಯಾವುದೇ ವಸ್ತು ಲಭ್ಯವಾಗಬಹುದು ಎಂದು ನಿರೀಕ್ಷಿಸಲು, ನಿರ್ಮಿತಿಯು ಕೇವಲ ಎರಡು ಕಲ್ಲಿನ ಪೀಠದ ಮೇಲೆ ನಿಂತಿದೆ. ಕೆಳಭಾಗದಲ್ಲಿ ಮತ್ತಾವ ಭಾಗವೂ ಇರುವ ಸುಳಿವಿಲ್ಲ. ಆದ್ದರಿಂದ ಇದು ಬೃಹತ್ ಶಿಲಾಯುಗದ ಸಮಾಧಿಯಲ್ಲ ಎಂದು ಸ್ಪಷ್ಟವಾಗುತ್ತದೆ. ದೇವಾಲಯವಲ್ಲದ ಆದರೆ, ದೇವಾಲಯದಂತೆ ಕಾಣುವ, ಬೃಹತ್ ಶಿಲಾಯುಗದ ಸಮಾಧಿಯಂತೆ ಕಲ್ಲು ಚಪ್ಪಡಿಗಳಿಂದ ನಿರ್ಮಿತವಾದ ಪೆಟ್ಟಿಗೆಯಾಕಾರದ ಕೋಣೆ ಮತ್ತು ಒಂದೆಡೆ ರಂಧ್ರವಿದ್ದರೂ, ಸಮಾಧಿಯಲ್ಲದ ಈ ನಿರ್ಮಿತಿಯು ಏನು ಎಂಬ ಬಗ್ಗೆ ಸ್ಥಳೀಯರಿಗೆ ಸರಿಯಾದ ಮಾಹಿತಿ ಇಲ್ಲ. ಆದ್ದರಿಂದ ಇದು ದೇವಾಲಯದಂತೆಯೇ ನಿರ್ಮಾಣಗೊಂಡ ಸಮಾಧಿ ಇರಬಹುದು ಎಂಬ ಅನುಮಾನ ಬರುತ್ತದೆ. ಪ್ರಾಚೀನ ಸಂಸ್ಕಾರಗಳನ್ನು ನೆನಪಿಗೆ ತರುವ ಕೆಲವು ಆಚರಣೆಗಳು ಕೆಲವೆಡೆ ಇಂದಿಗೂ ಜೀವಂತವಾಗಿರುವುದನ್ನು ಹಲವು ವಿದ್ವಾಂಸರು ಗಮನಿಸಿದ್ದಾರೆ. ಡಾ॥ ಎಂ.ಎಸ್. ಕೃಷ್ಣಮೂರ್ತಿ ಮತ್ತು ಡಾ॥ ಎಂ.ಪಿ. ಮಹದೇವಯ್ಯ ಅವರು ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಸಂತೇಬಾಚಹಳ್ಳಿಯ ಪೂರ್ವಕ್ಕಿರುವ ಗುಡ್ಡದಲ್ಲಿ ಬಂಡೆಗಳ ಮೇಲೆ ಬೆಟ್ಟದ ಭಾಗಕ್ಕೆ ಹೊಂದಿಕೊಂಡಂತೆಯೇ ನಿರ್ಮಿಸಿರುವ ಅನೇಕ ಕಲ್ಲಿನ ಗೂಡುಗಳನ್ನು ಉಳಿದುಬಂದಿರುವ ಬೃಹತ್ ಶಿಲಾಯುಗದ ಪರಂಪರೆ ಎಂದು ಗುರುತಿಸಿದ್ದಾರೆ.[1] ಇಲ್ಲಿ ಅನೇಕ ಗೂಡುಗಳಿದ್ದು, ಅವು ಕೆಳಭಾಗದಲ್ಲಿ ಚೌಕ/ವೃತ್ತಾಕಾರವಾಗಿದ್ದು, ಎರಡರಿಂದ ನಾಲ್ಕು ಅಡಿಗಳಷ್ಟು ಎತ್ತರ ಇರುತ್ತದೆ ಎಂದು ಅವರು ದಾಖಲಿಸಿದ್ದಾರೆ. ಸ್ಥಳೀಯವಾಗಿ ದೊರೆಯುವ ಸಣ್ಣ ಸಣ್ಣ ಒರಟು ಕಲ್ಲುಗಳನ್ನೇ ಬಳಸಿ ನಿರ್ಮಾಣವಾಗಿರುವ ಈ ಗೂಡುಗಳ ಮೇಲ್ಭಾಗದಲ್ಲೇ ತೆರೆದ ಬಾಯಿ ಇರುತ್ತದೆ

* # ೧೪೪, 'ಸ್ವಸ್ತಿಶ್ರೀ ಸ್ಕಂದ, ಐ.ವೈ.ಡಿ. ರಸ್ತೆ, ಅರಸಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾ.ಜಿ.



ಮತ್ತು ಇವುಗಳನ್ನು ಸ್ವಾಭಾವಿಕ ಚಪ್ಪಡಿಯಿಂದ ಮುಚ್ಚಲಾಗಿರುತ್ತದೆ ಎಂದೂ ದಾಖಲಿಸಿದ್ದಾರೆ. ಎಣ್ಣೆಗೆರೆಯ ನಿರ್ಮಿತಿಯು ಹಾಗಿಲ್ಲ. ಇಲ್ಲಿ ಅಧಿಷ್ಠಾನದಂತಹ ಪೀಠದ ಮೇಲೆ ಚೌಕಾಕಾರದ ಚಪ್ಪಡಿಗಳನ್ನು ಪೆಟ್ಟಿಗೆಯ ಆಕಾರದಲ್ಲಿ ಜೋಡಿಸಿ, ಅದರ ಮೇಲೊಂದು ಚಪ್ಪಡಿ ಇಟ್ಟು, ಅದರ ಮೇಲೆ ಗೋಪುರವನ್ನು ನಿರ್ಮಿಸಲಾಗಿದೆ. ಮತ್ತು ಪಶ್ಚಿಮಾಭಿಮುಖವಾಗಿರುವ ಕಲ್ಲು ಚಪ್ಪಡಿಯಲ್ಲಿ ಕಿಟಕಿಯಂತಹ ರಚನೆ ಇದೆ. ಇದಕ್ಕೂ ನಡುವೆ ಅಡ್ಡಪಟ್ಟಿ ಇರುವುದರಿಂದ ಒಳಗೆ ಕೈ ಇಡಲೂ ಕಷ್ಟ.





ಸಾಧ್ಯವಾದರೆ ಜಾಲಂಧ್ರದಂತಹ ಆ ರಚನೆಯ ಮೂಲಕ ಒಳಗೆ ಏನನ್ನಾದರೂ ಇಡಬಹುದು. ಸಂತೇಬಾಚಹಳ್ಳಿಯ ಗುಡ್ಡದ ಮೇಲಿನ ಕಲ್ಲುಸೇವೆಯ ಗೂಡುಗಳಲ್ಲಿ ಅಸ್ತಿಪಂಜರ ದೊರೆತಿಲ್ಲವಾದ್ದರಿಂದ ಅವೆಲ್ಲವೂ ದ್ವಿತೀಯ ಹಂತದ ಶವಸಂಸ್ಕಾರದ ಪ್ರತೀಕವೆಂದು ತಿಳಿಯಲಾಗಿದೆ.[೨] ತೊನ್ನು, ಕುಷ್ಠ, ವಿಚಿತ್ರ ವ್ಯಾಧಿ, ದುರ್ಮರಣದ ಸಾವಿನ ಪ್ರಸಂಗಗಳಲ್ಲಿ ಹಾಗೂ ಗರ್ಭಿಣಿ ಮತ್ತು ಬಾಣಂತಿಯರ ಸಾವಿನ ಸಂದರ್ಭಗಳಲ್ಲಿ ಶವಗಳನ್ನು ಬೆಟ್ಟದ ಮೇಲಿಟ್ಟು, ಕೆಲವು



ದಿನಗಳ ನಂತರ ಅಲ್ಲಿ ಉಳಿದ ಅಸ್ಥಿಗಳನ್ನು ಸಂಗ್ರಹಿಸಿ ಕಲ್ಲಿನ ಗೂಡಿನಲ್ಲಿಟ್ಟು, ಅದನ್ನು ಮುಚ್ಚುತ್ತಿದ್ದರು ಎಂಬ ಹೇಳಿಕೆ ಇದೆ.[೩] ಎಣ್ಣೆಗೆರೆಯ ನಿರ್ಮಿತಿಯು ಅಂತಹ ವರ್ಗಕ್ಕೆ ಸೇರುವುದಿಲ್ಲ.

ಇಂತಹುದೇ ಪದ್ಧತಿಯನ್ನು ಮೈಸೂರು ಜಿಲ್ಲೆಯ ಟಿ. ನರಸೀಪುರ ತಾಲ್ಲೂಕಿನ ಬನ್ನೂರಿನಲ್ಲೂ ಗುರುತಿಸಲಾಗಿದೆ[೪] ಅದರೆ, ಇವು ಯಾವುವೂ ಬೃಹತ್ ಶಿಲಾಯುಗದ ಸಮಾಧಿಗಳನ್ನು ಹೋಲುವುದಿಲ್ಲ. ಬೃಹತ್ ಶಿಲಾ ಸಮಾಧಿಗಳನ್ನು ಹೋಲುವ ನಿರ್ಮಿತಿಯು ರಾಜಘಟ್ಟದಲ್ಲೂ ಕಂಡುಬಂದಿವೆ. ಅಲ್ಲಿ ಜಗಲಿಯ ಮೇಲೆ ಬೃಹತ್ ಶಿಲಾಯುಗದ ಸಮಾಧಿಯ ನಿರ್ಮಾಣವಾಗಿದೆ. ಈ ಜಗಲಿಯ ಮೇಲೆ ನಾಲ್ಕು ಕಂಬಗಳಿದ್ದು, ಅದರ ಮೇಲೆ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಾಣವಾದ ಗೋಪುರವಿದೆ. ನಿರ್ಮಾಣದ ಶೈಲಿಯ ಮೇಲೆ ಇದನ್ನು ಸುಮಾರು ಕ್ರಿ.ಶ. ೧೭ನೆಯ ಶತಮಾನಕ್ಕೆ ಸೇರಿಸಬಹುದು. ಎಣ್ಣೆಗೆರೆಯ ಬೃಹತ್ ಶಿಲಾಯುಗದ ಸಮಾಧಿಯನ್ನು ನೆನಪಿಗೆ ತರುವ ನಿರ್ಮಿತಿಯ ಮೇಲೆ ಕಲ್ಲಿನ ದ್ರಾವಿಡ ಶೈಲಿಯ ಗೋಪುರವಿದೆ. ಶೈಲಿಯ ಹಿನ್ನೆಲೆಯಲ್ಲಿ ಇದನ್ನು ಕ್ರಿ.ಶ. ಸುಮಾರು ೧೧ನೆಯ ಶತಮಾನಕ್ಕೆ ಸೇರಿಸಬಹುದು. ಇದೂ ಸಹ ಸಮಾಧಿಯಲ್ಲ; ಬದಲಿಗೆ ಸಮಾಧಿಯ ಪರಂಪರೆಯ ಅನುಕರಣೆ ಎನ್ನಬಹುದು. ಬೃಹತ್ ಶಿಲಾಯುಗದ ಸಮಾಧಿ ಪರಂಪರೆಯನ್ನು ನೆನಪಿಗೆ ತರುವ ಇಂತಹ ನಿರ್ಮಿತಿಗಳು ದೇವಾಲಯಗಳ ಆರಂಭಿಕ ಹಂತ ಎಂದು ಊಹಿಸಬಹುದು.

ಬಿಟ್ಟಸಂದ್ರ ಗ್ರಾಮವು ಎಣ್ಣೆಗೆರೆಗೆ ಸಮೀಪವೇ ಇದೆ. ಇದೂ ಸಹ ಮಾಗಡಿ ತಾಲ್ಲೂಕಿಗೇ ಸೇರುತ್ತದೆ. ಬಿಟ್ಟಸಂದ್ರವು ಅದಳ ವಂಶದ ಬಿಟ್ಟಿದೇವ ಕಟ್ಟಿಸಿದ ಕೆರೆ ಮತ್ತು ವಿಷ್ಣು ದೇವಾಲಯಗಳನ್ನೊಳಗೊಂಡಿದೆ. ಈ ಬಗ್ಗೆ ಅಲ್ಲಿನದೇ ಒಂದು ಶಾಸನ ದಾಖಲಿಸಿದೆ.[೫] ಈ ಗ್ರಾಮದ ಪಂಚಾಕ್ಷರಯ್ಯನವರ ಜಮೀನಿನಲ್ಲಿ ಸಿಕ್ಕ ಒಂದು ಬಿಡಿ ಬೆಣಚುಕಲ್ಲಿನ ಮೇಲೆ ಯಜ್ಞಕುಂಡದ ಮುಂದೆ ಎಂಟು ಮಂದಿ ನರ್ತಿಸುತ್ತಿರುವ ರೇಖಾಚಿತ್ರವಿದೆ. ಭಾಷಾ ಶಾಸ್ತ್ರದ ಹಿನ್ನೆಲೆಯಲ್ಲಿ ಇಷ್ಟಿಯು ಬಿಟ್ಟಿ ಆಗುವ ಸಾಧ್ಯತೆ ಇರುವುದರಿಂದ ಒಂದು ಕಾಲಕ್ಕೆ ಯಾಗ, ಯಜ್ಞಗಳಿಗೆ ಅವಕಾಶವಿದ್ದ ಗ್ರಾಮವೇ ಬಿಟ್ಟಸಂದ್ರ, ಗ್ರಾಮದ ವೈದಿಕ ಹೆಸರಿನ ಹಿನ್ನೆಲೆಯಲ್ಲಿ, ಇಲ್ಲಿ ದೊರೆತಿರುವ ನರ್ತಿಸುತ್ತಿರುವ ವ್ಯಕ್ತಿಗಳ ರೇಖಾಚಿತ್ರವು ಇತಿಹಾಸಪೂರ್ವ ಅಥವಾ ಇತಿಹಾಸ ಆರಂಭ ಕಾಲದ ಒಂದು ಗುರುತು ಎಂದು ತಿಳಿಯಬಹುದು. ವೈದಿಕ ಆಚರಣೆಗಳನ್ನು ಅನುಸರಿಸುತ್ತಿದ್ದ ಒಂದು ವರ್ಗವು ಇತಿಹಾಸದ ಆರಂಭ ಕಾಲದಲ್ಲಿ ಇಲ್ಲಿತ್ತು ಎಂದು ಇದರಿಂದ ಸ್ಪಷ್ಟವಾಗುತ್ತದೆ.

ಈ ಎಲ್ಲ ಕುರುಹುಗಳನ್ನು ಗಮನಿಸಿದಾಗ ಮಾಗಡಿ ತಾಲ್ಲೂಕು ಇತಿಹಾಸ ಆರಂಭ ಕಾಲದ ಬೃಹತ್ ಶಿಲಾಯುಗದ ಸಂಸ್ಕೃತಿಯ ಒಂದು ಪ್ರಮುಖ ನೆಲೆಯಾಗಿತ್ತು ಎಂದು ತಿಳಿಯುತ್ತದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿಗಳು

೧. **ಇತಿಹಾಸ ದರ್ಶನ**, ಸಂ. ೧೪, ೧೯೯೯, ಸಂ.ಎಂ.ಜಿ.ನಾಗರಾಜ್, ಪಿ.ವಿ.ಕೃಷ್ಣಮೂರ್ತಿ, ಪುಟ ೧–೩.

೨. ಪೂರ್ವೋಕ್ತ, ಪುಟ ೩.

೩. ಪೂರ್ವೋಕ್ತ, ಪುಟ ೩.

೪. ಪೂರ್ವೋಕ್ತ, ಪುಟ ೫.

೫. ಎ.ಕ IX ಮಾಗಡಿ ೭೯, ಕ್ರಿ.ಶ. ೧೫೧೧

ಡಾ. ಹೆಚ್.ಎಸ್. ಉಷಾರಾಣಿ*

ದಾನಿವಾಸ ನಾಯಕರು

ವಿಜಯನಗರದ ಸಾಮ್ರಾಟರು ಹಿಂದಿದ್ದ ಚೋಳ ಹೊಯ್ಸಳ ಆಡಳಿತ ಪದ್ಧತಿಯನ್ನೇ ಮುಂದುವರಿಸಿದ್ದರು. ಸ್ಯೂವೆಲ್[1] ತಿಳಿಸುವಂತೆ ವಿಜಯನಗರ ಸಾಮ್ರಾಜ್ಯವೂ ಭಾಗಶಃ ಸ್ವಾತಂತ್ರ್ಯ ಹೊಂದಿದ ಸಾಮಂತರಿಂದ ಕೂಡಿತ್ತು. ಅದರಲ್ಲೂ ಅಚ್ಯುತದೇವರಾಯನ ಕಾಲದಲ್ಲಿ ೨೦೦ಕ್ಕಿಂತ ಹೆಚ್ಚು ನಾಯಕರಿದ್ದರು. ಅವರನ್ನು ಸಾಮಂತರು, ದಂಡನಾಯಕರು, ನಾಯಕರು, ಒಡೆಯರ್ ಮುಂತಾದ ಹೆಸರಿನಿಂದ ಕರೆಯುತ್ತಿದ್ದರು. ರಾಜಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸುತ್ತಿದ್ದ ಪ್ರಾಂತಾಧಿಕಾರಿಗಳಾದ ದಂಡನಾಯಕರು ವರ್ಗಕ್ಕೊಳಗಾಗುತ್ತಿದ್ದರು. ಸಾಮಂತರು ಮತ್ತು ನಾಯಕರು ವರ್ಗಕ್ಕೊಳಗಾಗುತ್ತಿರಲಿಲ್ಲ. ಮೊದಲಿಗೆ ವ್ಯಕ್ತಿಗತವಾಗಿದ್ದ ನಾಯಕತನ ಕ್ರಮೇಣ ವಂಶಪಾರಂಪರ್ಯವಾಯಿತು. ಅಂತಹ ನಾಯಕರಿಗೆ ವಿಜಯನಗರ ಕಾಲದಲ್ಲಿ ಶಾಶ್ವತಭೂಮಿ ಕೊಡಲಾಗುತ್ತಿದ್ದು ಅದನ್ನು ಅಮರನಾಯಕ ಅಮರಮಾಗಣೆ ಎಂದು ಕರೆಯುತ್ತಿದ್ದರು. ನಾಯಕರು, ರಾಜನ ಆಸ್ಥಾನದಲ್ಲಿ ಇಬ್ಬರು ಪ್ರತಿನಿಧಿಗಳನ್ನು ಹೊಂದಿರುತ್ತಿದ್ದು ರಾಜಧಾನಿಯಲ್ಲಿ ನಾಯಕರ ಹಿತಾಸಕ್ತಿಗಳನ್ನು ಅವರು ನೋಡಿಕೊಳ್ಳುತ್ತಿದ್ದರು. ಈ ನಿಟ್ಟಿನಲ್ಲಿ ದಾನಿವಾಸ ನಾಯಕರ ಕಾರ್ಯವೈಖರಿ ಹೇಗಿತ್ತು ! ಎಂಬುದನ್ನು ಪರಿಶೀಲಿಸುವುದೇ ಪ್ರಸ್ತುತ ಪ್ರಬಂಧದ ಉದ್ದೇಶ.

ಮೊದಲಿಗೆ, ದಾನಿವಾಸ ನಾಯಕರು ಉದಯಿಸಿದ ಬಗೆ ಹೇಗೆ ? ಎಂಬುದನ್ನು ಪರಿಶೀಲಿಸೋಣ. ಪ್ರಾಚೀನ ಕಾಲದಿಂದಲೂ ಸೈನಿಕ ಸೇವೆಗೆ ಪ್ರತಿಯಾಗಿ ಉಂಬಳಿ ಕೊಡುವುದು ರೂಢಿಯಲ್ಲಿತ್ತು. ಅದರಂತೆ 'ಹಳೆಬೀಡಿನ ಹೊಯ್ಸಳ ವೀರಬಲ್ಲಾಳ ನಮ್ಮ ದಾನಿವಾಸ ನಾಯಕತನಕ್ಕೆ ವಂಶಾನ್ವಯವಾಗಿ ಪಾಲಿಸಿದ ಸೀಮೆ' ಎಂಬ ಉಲ್ಲೇಖ ಕ್ರಿ.ಶ. ೧೫೫೪ರ ಲಿಂಗಾಪುರ ಶಾಸನ[2]ದಲ್ಲಿದೆ. ಲಿಂಗಾಪುರ ಶಾಸನವೇ ಲಭ್ಯವಿರುವ ಇವರ ಮೊದಲ ಶಾಸನ. ಅಂದು ಅಧಿಕಾರದಲ್ಲಿದ್ದ ವಿಜಯನಗರದ ಸದಾಶಿವರಾಯ ತಮ್ಮ ಪ್ರಭುವೆಂದು ಪರಿಗಣಿಸಿ, ತಮ್ಮ ಅಧೀನತೆಯನ್ನು ತೋರಿಸಿದ್ದಾನೆ. ಸದಾಶಿವರಾಯನು ಆಳುತ್ತಿದ್ದ ಕಾಲದಲ್ಲಿ ಶ್ರೀಮತ್ ದಾನಿವಾಸದ ವಿರೂಪಾಕ್ಷರಸರ ಮಗ ಚೆಂನರಾಜ ವೊಡೆಯರ ಮಗ ಲಿಂಗಣ್ಣನಾಯಕರೆಂದೂ ಶಾಸನವು ಪ್ರಸ್ತಾಪಿಸುವುದಾದರೂ, ಅವರ ಜೀವಿತದ ಅವಧಿ, ಅಧೀನತೆ ಇತ್ಯಾದಿಗಳ ಬಗ್ಗೆ ಶಾಸನ ಮೌನವಾಗಿದೆ. ಹೀಗಾಗಿ ಬಲ್ಲಾಳನ ಕಾಲದಿಂದ ಸದಾಶಿವರಾಯನ ಕಾಲದವರೆಗಿನ ಸುಮಾರು ೨೫೦ ವರ್ಷಗಳ ನಡುವಿನ ಚಟುವಟಿಕೆಗಳು ತಿಳಿದು ಬರುವುದಿಲ್ಲ.

ಆಡಳಿತ ವಿಭಾಗಗಳಲ್ಲಿ ದಾನಿವಾಸ ಸೀಮೆ ಯಾವ ಸ್ಥಾನ ಹೊಂದಿತ್ತು ? ಎಂಬ ಪ್ರಶ್ನೆ ಸಹಜ. ವಿಜಯನಗರ ಕಾಲದ ಸ್ಥಳೀಯ ಸರ್ಕಾರಕ್ಕೆ ಸಂಬಂದಿಸಿದಂತೆ ಸಂಶೋಧನೆ ನಡೆಸಿರುವ ಡಾ. ವೆಂಕಟರತ್ನಂ[3] ಅವರು 'ಗುರುತಿಸಿರುವ ೨೪ ಆಡಳಿತ ವಿಭಾಗಗಳು ಹಾಗೂ ಪಾಳೆಯಟ್ಟುಗಳಲ್ಲಿ ಅರಗ ರಾಜ್ಯ ಒಂದು. ಅರಗ ರಾಜ್ಯಕ್ಕೆ ಇಂದಿನ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ, ನಗರ ತೀರ್ಥಹಳ್ಳಿ, ಸೊರಬ ತಾಲ್ಲೂಕುಗಳು ಹಾಗೂ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕು ಸೇರಿತ್ತು. ಅದೇ ರೀತಿ ವಸುಧಾರಯ ಸೀಮೆಗೆ ಚಿಕ್ಕಮಗಳೂರು ಜಿಲ್ಲೆ ಸೇರಿತ್ತು. ದಾನಿವಾಸ ನರಸಿಂಹ ರಾಜಪುರ ತಾಲ್ಲೂಕಿನ ಗ್ರಾಮ. ಈ ಹಿನ್ನೆಲೆಯಲ್ಲಿ ವಿಶ್ಲೇಷಿಸಿದಾಗ ದಾನಿವಾಸ ಸೀಮೆ ವಿಜಯನಗರ ಕಾಲದಲ್ಲಿ ಪ್ರಮುಖ ಸೀಮೆ ಅಥವಾ ರಾಜ್ಯದ ಸ್ಥಾನ ಗಳಿಸಿರಲಿಲ್ಲ. ರಾಜ್ಯದ ಬದಲು ಸೀಮೆ, ವಳಿತ, ವೇಂಠೆ, ಸ್ಥಳ ಪದಗಳನ್ನು ಬಳಸಿದ್ದಾರೆ. ಅವು ರಾಜ್ಯದ ಸಣ್ಣ ವಿಭಾಗಗಳನ್ನು ಸೂಚಿಸುತ್ತವೆ. ಇದರಿಂದ ದಾನಿವಾಸ ಸಣ್ಣ ಆಡಳಿತ ವಿಭಾಗವಾಗಿತ್ತೆಂದು ಅಂದಾಜು ಮಾಡಬಹುದು.

ಲಿಂಗಣ್ಣನಾಯಕನ ಕ್ರಿ.ಶ. ೧೫೫೪ರ ಲಿಂಗಾಪುರ ಶಾಸನ ದಾನಿವಾಸ ಪಟ್ಟಣಕ್ಕೆ ಕೆರೆ ಕಟ್ಟಿಸಿ ವಿರೂಪಾಕ್ಷ ಲಿಂಗ ಪ್ರತಿಷ್ಠೆ ಮಾಡಿ ಐವರು ಬ್ರಾಹ್ಮಣರಿಗೆ ಸತ್ರ ಕಟ್ಟಿಸಿ, ಬಸವೇಶ್ವರ ದೇವರಿಗೆ ಹಾಗೂ ಅನ್ನಸತ್ರಕ್ಕೆ ಭೂಮಿ ಬಿಟ್ಟದ್ದನ್ನು ತಿಳಿಸುತ್ತದೆ. ಅಲ್ಲದೆ ಬುಕ್ಕರಾಯನ ಬೇಲೂರು ಶಾಸನದ[4] ಪ್ರಕಾರ, ಅಂದು ಸಂತೆ ನಡೆಯುತ್ತಿದ್ದ ೨೨ ಪಟ್ಟಣಗಳಲ್ಲಿ ದಾನಿವಾಸ ಪಟ್ಟಣ ಸೇರ್ಪಡೆಯಾಗಿಲ್ಲ. ಬದಲಿಗೆ ಅರಗದ ಉಲ್ಲೇಖವಿದೆ.

* ಉಪನ್ಯಾಸಕರು, ಪ್ರಥಮ ದರ್ಜೆ ಕಾಲೇಜು, ಮೈಸೂರು.

ಸಾಲದ ಹೊರೆ : ದಾನಿವಾಸ ನಾಯಕರು ಅಗ್ರಹಾರ, ಸಂತೆ ನಿರ್ಮಾಣಕ್ಕೆ ಗಮನ ನೀಡದಿರಲು ಸಾಲದ ಹೊರೆಯೂ ಕಾರಣವಾಗಿರಬಹುದು ಅದರಂತೆ ಕ್ರಿ.ಶ. ೧೫೬೯ರ ಬಾಳೆಹಳ್ಳಿ ಶಾಸನವು[೫] ದಾನಿವಾಸ ನಾಯಕರ ಹಿರಿಯರಾದ ವಿರೂಪಾಕ್ಷವೊಡೆಯ ಚೆಂನರಾಜವೊಡೆಯ ಹಾಗೂ ಅರಸಪ್ಪವೊಡೆಯರ ಹೆಸರಲ್ಲಿದ್ದ 'ಅಡಪ್ರ ಮೈಸಾಲದ ಪತ್ರಗಳು ಸಿಕ್ಕಲಾಗಿ ಆ ಪತ್ರಾರ್ಥದ ಸಾಲ ಗ ೧೨೦೦೦ ವರಹಕ್ಕೆ ಸಲವಾಗಿ **ವೊಂದನೂರ್ರು ನೂರ್ರವೊಂದರಲ್ಲಿ** ನಮ್ಮ ದಾನಿವಾಸ ಸೀಮೆಯ ಬಳಿಯ ಪಾಲೊಳಗಣ ಉಳುರ್ವಾನಿ ಗ್ರಾ ೧ ಚಾರುಂಬಳಿ ಗ್ರಾ ೧ ದೊಡ್ಡಿನಮಾನಿ ಗ್ರಾ ೧ ಆ ಮೂರು ಗ್ರಾಮವನ್ನು ಬಾಳೆಹಳ್ಳಿ ಸಿಂಹಾಸನಕ್ಕೆ ಒಟ್ಟು ಸಾಲ ತೀರಿಸಿದೆವೆಂದು ಹೇಳುತ್ತದೆ. ಅಲ್ಲದೆ ಮುಂದೆ ಸಿಂಹಾಸನದಲ್ಲಿ ಬಾಳುವ ಸ್ವಾಮಿಗಳು ಕೊಪ್ಪದ ಬಸವಪ್ಪಯ್ಯನಾಗಲಿ ಬೇರೆ ಸಾಲವುಂತೆಂದು ಕೇಳಸಲ್ಲದು ಎಂದು ಕೊಟ್ಟ ಗ್ರಾಮಸಾಧನವಿದೆಂದು ಗೊತ್ತಾಗುತ್ತದೆ. ದಾನಿವಾಸ ಚೆಂನವೀರಣ್ಣ ನಾಯಕರು, ಲಿಂಗಣ್ಣನಾಯಕರು, ಮಲ್ಲಣ್ಣನಾಯಕರು ಮತ್ತು ಚಿಕ್ಕಮಲ್ಲಣ್ಣ ನಾಯಕರು ತಮ್ಮ ಮನೆದೇವರಾದ ವೀರಭದ್ರ ಹಾಗೂ ಇತರ ಗ್ರಾಮಸ್ಥರೇ ಇದಕ್ಕೆ ಸಾಕ್ಷಿ ಎಂದು ಸಾಲ ತೀರಿಸಿದ ಬಗೆಯನ್ನು ದಾಖಲಿಸಿದ್ದಾರೆ. ಲಿಂಗಾಪುರ ಶಾಸನದಲ್ಲಿ ಇಬ್ಬರು ಹಿರಿಯರು ಉಲ್ಲೇಖಗೊಂಡಿದ್ದರೆ, ಮೇಲಿನ ಬಾಳೆಹಳ್ಳಿ ಶಾಸನವು ಮತ್ತೊಬ್ಬ ಹಿರಿಯನನ್ನು ಸೇರ್ಪಡೆ ಮಾಡಿದೆ. ಅಂದರೆ ಲಿಂಗಣ್ಣನಾಯಕನಿಗೂ ಮುನ್ನ ವಿರೂಪಾಕ್ಷವೊಡೆಯ, ಚೆಂನರಾಯವೊಡೆಯ ಹಾಗೂ ಅರಸಪ್ಪವೊಡೆಯರು ಅಸ್ತಿತ್ವದಲ್ಲಿದ್ದು ಬಾಳೆಹಳ್ಳಿ ಸಿಂಹಾಸನಕ್ಕೆ ನಿಷ್ಠೆಯಿಂದಿದ ರೆಂಬುದು ವೇದ್ಯವಾಗುತ್ತದೆ. ಈ ಹಿರಿಯರ ಕಾಲದ ಘಟನಾವಳಿಗಳೊಳಗೆ ಸಂಬಂಧಿಸಿದಂತ ಸದ್ಯಕ್ಕೆ ಆಧಾರಗಳಿಲ್ಲ. ಸಾಲ ಮಾಡಲು ಕಾರಣವೇನು ? ತಮ್ಮ ಜೀವಿತದ ಅವಧಿಯಲ್ಲಿ ಸಾಲ ತೀರಿಸದಿರಲು ಸಾಧ್ಯವಾಗಲಿಲ್ಲ. ಏಕೆ ? ಇವರ ಸೈನಿಕ ನಿಷ್ಠೆ ಹೇಗಿತ್ತು ? ರಾಜಧಾನಿಯಲ್ಲಿ ಇವರ ಪ್ರತಿನಿಧಿಗಳಿದ್ದರೇ ? ಇವರ ಹಿತಾಸಕ್ತಿಯನ್ನು ಸಂರಕ್ಷಿಸಿರಲಿಲ್ಲವೇ ? ಎಂಬಿತ್ಯಾದಿ ಪ್ರಶ್ನೆಗಳು ಸಂಶೋಧಕರಿಗೆ ಮೂಡುವುದು ಸಹಜ.

ಸಾಲ ತೀರಿಸುವ ಸಂದರ್ಭದಲ್ಲಿ ನಾಲ್ಕು ಗ್ರಾಮಗಳ ಮುಖ್ಯಸ್ಥರು ಸಾಕ್ಷಿಗಳಾಗಿದ್ದರು. ಅವರಲ್ಲಿ ಆಡುವಳ್ಳಿ ಚಿಕ್ಕಣ್ಣ ಹೆಗ್ಗಡೇರು, ಮುಂಡೇಕಾರ ಮಲ್ಲರಸ ಹೆಗ್ಗಡೇರು, ಮತ್ತೂರ ಮಾರಂಣ ಹೆಗ್ಗಡೇರು, ನಾಬಳದ ಮಲ್ಲಣ್ಣ ಹೆಗ್ಗಡೇರನ್ನು ಹೆಸರಿಸಲಾಗಿದೆ. ಸ್ಥಳದ ಸೇನಬೋವ ಅಂಣರಸನ ಬರಹ ಎಂದು ಶಾಸನ ಬರೆದಾತನನ್ನು ದಾಖಲಿಸಲಾಗಿದೆ. ಇದರಿಂದ ಅಂದು ಬಾಳೆಹಳ್ಳಿಯ ಸಿಂಹಾಸನದಲ್ಲಿದ್ದ ಕುಮಾರ ಚೆಂನಬಸವಣ್ಣ ವೊಡೆಯರು, ಸಾಲದ ಮೊತ್ತ, ಬಿಟ್ಟುಕೊಟ್ಟ ಗ್ರಾಮಗಳು, ಇದಕ್ಕೆ ಸಾಕ್ಷಿ ಇತ್ಯಾದಿ ವಿವರ ದೊರತಂತಾಯಿತು. ಬಾಳೆಹಳ್ಳಿ ಸಿಂಹಾಸನಕ್ಕೆ ನಿಷ್ಠೆಯಿಂದಿದ್ದದ್ದು ಗೊತ್ತಾಗುತ್ತದೆ. ದಾನಿವಾಸ ನಾಯಕರ ಕುಟುಂಬಕ್ಕೆ ಬಳುವಳಿಯಾಗಿ ಹಿರಿಯರಿಂದ ಬಂದದ್ದು ಕೇವಲ ಸಾಲಪತ್ರಗಳಷ್ಟೆ ಎಂದು ವಿಶ್ಲೇಷಿಸಬಹುದು.

ನಷ್ಟ ಸಂತಾನದ ಭೂಮಿ ಹಾಗೂ ಭೂಕ್ರಯದಾನ : ತಾಳಿಕೋಟೆ ಯುದ್ಧ ಅಥವಾ ರಕ್ಕಸತಂಗಡಿ ಯುದ್ಧದ ಬಳಿಕ ತಮ್ಮ ಬಹುತೇಕ ಭೂಮಿಯನ್ನು ಕ್ರಯವಾಗಿ ಇವರು ನೀಡಿದಂತೆ ತೋರುತ್ತದೆ. ಈ ಭೂಮಿ ಸಂತಾನವಿಲ್ಲದೆ ಮಡಿದವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡದ್ದೆಂದು ಸ್ಪಷ್ಟವಾಗಿದೆ. ಅವುಗಳ ವಿವರ ಹೀಗಿದೆ :

೧. ಕ್ರಿ.ಶ. ೧೫೮೪ರ ಎಡಹಳ್ಳಿ ತಾಮ್ರಶಾಸನದಲ್ಲಿ[೬] ಚೆಂನವೀರಪ್ಪ ವೊಡೆಯರು ಗೇರುಸೊಪ್ಪೆಯ ಸಮಂತಭದ್ರ ದೇವರ ಶಿಷ್ಯರಾದ ಗುಣಭದ್ರದೇವರ ಶಿಷ್ಯರು ವೀರಸೇನ ದೇವರಿಗೆ ಕೊಟ್ಟ ಕೇಶಿಕೊಪ್ಪ ಗ್ರಾಮದ ಭೂಮಿಕ್ರಯಪತ್ರದ ವಿವರವಿದೆ.

೨. ಕ್ರಿ.ಶ. ೧೫೮೪ರ ಎಡಹಳ್ಳಿಯ ಮತ್ತೊಂದು ತಾವ್ರುಶಾಸನ[೭] ಅದೇ ಚೆಂನವೀರಪ್ಪವೊಡೆಯರು ಗೇರುಸೊಪ್ಪೆಯ ಸಮಂತಭದ್ರದೇವರ ಶಿಷ್ಯರು ಗುಣಭದ್ರ ದೇವರ ಶಿಷ್ಯರಾದ ವೀರಸೇನ ದೇವರಿಗೆ ಕೊಟ್ಟ ಭೂ ಕ್ರಯದಾನ ಕ್ರಮವೇನೆಂದರೆ :

ಬಾಳೆಪಾಲ ಬಂದಪ್ಪನ ಮಗ ಲಿಂಗಣ್ಣನ ನಷ್ಟ ಸಂತಾನದಿಂದ ಬಂದ ನಾಗಲಾಪುರ ಗ್ರಾಮ ಅರಮನೆಗೆ ಹರವರಿಯಾಗಿ ಬಂದದ್ದನ್ನು ವೀರಸೇನ ದೇವರಿಗೆ ಕ್ರಯವಾಗಿ ಕೊಟ್ಟೆವೆಂದು ಹೇಳಿಕೊಂಡಿದ್ದಾರಷ್ಟೆ.

೩. ಕ್ರಿ.ಶ. ೧೫೮೫ರ ಎಡಹಳ್ಳಿಯ ಇನ್ನೊಂದು ತಾಮ್ರ ಶಾಸನದಲ್ಲಿ ಚೆಂನವೀರಪ್ಪವೊಡೆರು ಬಾಳೆಪಾಲ ನಾರಸಿಂಹ ದೇವರ‍್ಯೆಯಸ ಮಗ ಬೊಂಮರ ಸಾಹೇಬನಿಂದ ಅರಮನಿಗೆ ಹರಹರಿಯಾಗಿ ಬಂದ ಭೂಮಿಯನ್ನು ಅದೇ ವೀರಸೇನ ದೇವರಿಗೆ ಶಿಷ್ಯ ಪರಂಪರೆಯಾಗಿ ಭೋಗಿಸಲು ಕೊಟ್ಟ ವಿವರವಿದೆ.

ಕ್ರಿ.ಶ. ೧೫೮೫ರ ಮತ್ತೊಂದು ತಾಮ್ರಶಾಸನ ಅದೇ ಚೆಂನವೀರಪ್ಪ ವೊಡೆಯರು ಗೇರುಸೊಪ್ಪೆಯ ಸಮಂತಭದ್ರ ದೇವರ ಶಿಷ್ಯರು ಗುಣಭದ್ರದೇವರ ಶಿಷ್ಯರು ವೀರಸೇನ ದೇವರಿಗೆ ಕೊಟ್ಟ ಭೂಮಿ ಕ್ರಯ ಪತ್ರದ ಮಾಹಿತಿ ನೀಡುತ್ತದೆ. ಹಾಗೆಯೇ ಕ್ರಿ.ಶ. ೧೫೮೫ ಎಡಹಳ್ಳಿಯ ತಾಮ್ರಶಾಸನದಲ್ಲಿ

ಬಾಳೆಪಾಲ ತಂಮಯನ ಮಗ ನರಸಪ್ಪನ ನಷ್ಟಸನದಿಂದಾಗಿ ಆತನ ಭೂಮಿ ಯೀಚಲದಾಳ ಗ್ರಾಮವು ಅರಮನಿಗೆ ಹರವರಿಯಾಗಿ ಬಂದದ್ದನ್ನು ವೀರಸೆಟದೇವರಿಗೆ ಕ್ರಯಕ್ಕೆ ಕೊಟ್ಟಿದ್ದಾಗಿದೆ.[೮]

ಅದೇ ರೀತಿ ಈ ಕುಟುಂಬದ ಬಗ್ಗೆ ಮಾಹಿತಿ ನೀಡುವ ಕ್ರಿ.ಶ. ೧೫೮೭ರ ಎಡಹಳ್ಳಿ ತಾಮ್ರಶಾಸನವು[೯] ಚೆಂನವೀರ ವೊಡೆರು **ನಾಗಲಾಪುರ** ಗ್ರಾಮದೊಳಗಿದ್ದ ಸಂಕಣ್ಣನ ಮಗ ಮಲಯನ ಭೂಮಿ ಸಲವಿಟ್ಟು ನಮ್ಮ ಅರಮನಿಗೆ ಹರವರಿಯಾಗಿ ಬಂದದ್ದನ್ನು ವೀರಸೇನದೇವರಿಗೆ ಕ್ರಯಕ್ಕೆ ಕೊಟ್ಟ ವಿವರ ನೀಡುತ್ತದೆ.

ಬಾಳೆಹಳ್ಳಿ ಸಿಂಹಾಸನಕ್ಕೆ ಸಾಲ ತೀರಿಸುವ ಸಂದರ್ಭದಲ್ಲಿ ಗ್ರಾಮಗಳನ್ನು ಬಿಟ್ಟುಕೊಟ್ಟಂತೆ ಮುಟ್ಟುಗೋಲು ಹಾಕಿದ ಭೂಮಿಯನ್ನು ಅದೇ ಸಿಂಹಾಸನಕ್ಕೆ ಕ್ರಯದಾನವಾಗಿ ನೀಡಬಹುದಿತ್ತಲ್ಲವೆ ? ಎನಿಸುತ್ತದೆ. ಆದರೆ ಅದು ಅವರ ಸ್ವವಿವೇಚನಾ ಅಧಿಕಾರವಾಗಿತ್ತು. ಹಾಗಾಗಿ ಸಾಲ ಪಡೆಯುತ್ತಿದ್ದವರು ಭೂಮಿಕ್ರಯ ಪತ್ರದ ವ್ಯವಹಾರ ನಡೆಸಲು ಇಚ್ಛಿಸಲಿಲ್ಲ ಎಂದು ಅರ್ಥೈಸಿಕೊಳ್ಳಬಹುದು. ಆ ಸಂದರ್ಭದಲ್ಲಿ ಮಠದ ಪ್ರತಿಕ್ರಿಯೆ ಏನಿರಬಹುದು ! ಪ್ರಾಯಶಃ ಧಾರ್ಮಿಕ ಸ್ವಾತಂತ್ರ್ಯವನ್ನು ಯಾರೂ ಪ್ರಶ್ನಿಸಿರಲಾರರು.

ದಾನಿವಾಸ ನಿವಾಸಿಗಳು : ಕುಣಿಗಲ್ ತಾಲ್ಲೂಕಿನ ಎಡೆಯೂರು ಸಿದ್ಧಲಿಂಗೇಶ್ವರ ದೇವಸ್ಥಾನದ ಪ್ರಾಕಾರದಲ್ಲಿ ನೆಟ್ಟಿರುವ ಕಲ್ಲಿನಲ್ಲಿರುವ ಶಾಸನವು[೧೦] ಈ ಕುಟುಂಬದವರ ಬಗ್ಗೆ ಉಲ್ಲೇಖಿಸಿರುವುದು ಹೀಗಿದೆ. ದಾನಿವಾಸ ನಿವಾಸಿಗಳಾದ ಚೆಂನರಾಯ ವಡೆಯರು ಅವರ ಮಕ್ಕಳು ಲಿಂಗಪ್ಪವಡೆಯರು ಅವರ ಮಕ್ಕಳು ಚೆಂನ್ನವೀರಪ್ಪವಡೆಯರು ಸತಿ ಪಾರ್ವತಮ್ಮ ದಂಪತಿಗಳು ತಂಮ ಭಕ್ತಿಯಿಂದ ಕಲ್ಲಮಠ, ಅಡಿಗೆಮನೆ, ಉಗ್ರಾಣದ ಮನೆಯನ್ನು ದಾಸೋಹಕ್ಕೆ ಕಟ್ಟಿಸಿದರು ಎಂಬುದಾಗಿ ದಾಖಲಿಸಿರುವುದು ಎಡೆಯೂರು ಸಿದ್ಧಲಿಂಗೇಶ್ವರನಲ್ಲಿಟ್ಟಿರುವ ಅಚಲ ಭಕ್ತಿ ಹಾಗೂ ದಾಸೋಹದ ಕಾಳಜಿಯನ್ನು ವ್ಯಕ್ತಪಡಿಸುತ್ತದೆ. ಇದರಿಂದ ಸ್ವವಿವೇಚನಾ ಅಧಿಕಾರ ಬಳಸುತ್ತಿದ್ದುದು ಸ್ಪಷ್ಟವಾಗುತ್ತದೆ. ಆ ವೇಳೆಗಾಗಲೇ ನಾಯಕರು ಆ ವಲಯದಲ್ಲಿ ನಿವಾಸಿಗಳಂತಿದ್ದರೆ ವಿನಃ ಆಳುವಂತಹವರಾಗಿರಲಿಲ್ಲ ಎಂಬುದು ಸ್ಫುಟವಾಗುತ್ತದೆ.

ಇದುವರೆಗಿನ ಶಾಸನಗಳ ಸಮೀಕ್ಷೆಯಿಂದ ದಾನಿವಾಸ ಸೀಮೆ ಅರಗ ರಾಜ್ಯದ ವಸುಧಾರಸೀಮೆಯ ಸಣ್ಣ ಭಾಗವಾಗಿತ್ತೆಂದು ನಿರ್ಧರಿಸಬಹುದು.

ಆರಗ ರಾಜ್ಯದೊಡನೆ ದಾನಿವಾಸ ನಾಯಕರ ರಾಜಕೀಯ ಸಂಬಂಧ ಕಿಂಚಿತ್ತೂ ಪ್ರಸ್ತಾಪಗೊಂಡಿಲ್ಲ. ಕ್ರಿ.ಶ. ೧೪೧೩ರ ಬಾಳೆಹಳ್ಳಿ ಶಾಸನ[೧೧] ಶ್ರೀ ವೀರಮಾರಪ್ಪ ವೊಡೆಯರ ಕುಮಾರ ಆರಗದ ಹರಿಯಪ್ಪವೊಡೆಯರು ಪ್ರಧಾನವುಲ್ಲಪ್ಪವೊಡೆಯರ ಮನೆಯ ಅಧಿಕಾರಿ ಜೊಂಮರಸರು **ವೀರೇಶ್ವರ ದೇವರಿಗೆ ಬಿಟ್ಟ ಧರ್ಮ** ಎಂದು ದಾಖಲಿಸುವಂತೆ, ದಾನಿವಾಸ ನಾಯಕರನ್ನಾಗಲಿ ಅಥವಾ ಅವರ ಪ್ರಧಾನ ಅಧಿಕಾರಿಗಳನ್ನಾಗಲಿ ಶಾಸನಗಳು ದಾಖಲಿಸಿಲ್ಲ. ಇದರಿಂದ ಸಣ್ಣ ಆಡಳಿತ ಘಟಕಗಳು ಕೇವಲ ಕುಟುಂಬಗಳ ವ್ಯವಹಾರಕ್ಕೆ ಸೀಮಿತವಾಗಿದ್ದವೆಂದು ಮನದಟ್ಟಾಗುತ್ತದೆ. ಇಂತಹ ಶ್ರೀಮಂತ ಕುಟುಂಬದವರನ್ನು ದೊಡ್ಡ ಪ್ರಾಂತ್ಯಾಧಿಕಾರಿಗಳಾಗಿ ನೇಮಿತವಿದ್ದರೂ ಸಣ್ಣ ವಿಭಾಗದ ಮುಖ್ಯಸ್ಥರೆಂದು ಪರಿಗಣಿಸಿರಬೇಕು. ಕೇವಲ ೩೫ ವರ್ಷಗಳ (೧೫೫೩ ರಿಂದ ೧೫೮೭) ತಮ್ಮ ಭದ್ರ ಅಸ್ತಿತ್ವವನ್ನು ವಿಜಯನಗರದ ಪತನ ಅವಧಿಯಲ್ಲಿ ಹೊಂದಿದ್ದಿರಬೇಕು.

ವಿಜಯನಗರ ಪತನಾನಂತರ ಕೆಳದಿ ನಾಯಕರ ಸಂಸ್ಥಾನದಲ್ಲಿ ದಾನಿವಾಸ ಸೀಮೆಯ ಉಲ್ಲೇಖ ಕ್ರಿ.ಶ. ೧೬೦೯ರವರೆಗೂ[೧೨] ಕಂಡುಬರುತ್ತದೆ. ಶೃಂಗೇರಿ ಕೈಫಿಯತ್ತಿನ ಪ್ರಕಾರ, ನಗರ ಸಂಸ್ಥಾನದಲ್ಲಿ ಸೋಮಶೇಖರ ನಾಯಕರು ಬಿಟ್ಟ ಅಗ್ರಹಾರ ದಾನಿವಾಸದಲ್ಲಿದ್ದು ಅಂದಿನ ೧೦೬ ಅಗ್ರಹಾರಗಳಲ್ಲಿ ದಾನಿವಾಸ ಅಗ್ರಹಾರವಾಗಿ ಮುಂದುವರೆದಿತ್ತೆಂದು ಗೋಚರಿಸುತ್ತದೆ.

ಹೀಗೆ ಹೊಯ್ಸಳರ ಕಾಲದಲ್ಲಿ ಪ್ರಸ್ತಾಪಿಸಲ್ಪಡುವ ದಾನಿವಾಸ ಸೀಮೆ ನಗರ ಸಂಸ್ಥಾನದಡಿಯೇ ಅಗ್ರಹಾರವಾಗಿ ಮಾರ್ಪಟ್ಟು ಹಲವು ಕುಟುಂಬಗಳಿಗೆ ಆಶ್ರಯ ನೀಡಿತ್ತೆಂಬುದು ಗಮನಾರ್ಹ.

ಆಧಾರ ಸೂಚಿ ಮತ್ತು ಅಡಿಟಿಪ್ಪಣಿಗಳು

೧. ರಾಬರ್ಟ್ ಸಿವೆಲ್. ಎ. ಫರಗಾಟನ್ ಎಂಪೈರ್, ದೆಹಲಿ ೧೯೯೫, ಪುಟ ೩೪೯.

೨. **ಎಫಿಗ್ರಾಫಿಯಾ ಕರ್ನಾಟಿಕ,** ಸಂಪುಟ ೧೨, ನರಸಿಂಹರಾಜಪುರ, ೩೬.

೩. ಡಾ. ಎ.ವಿ. ವೆಂಕಟರತ್ನಂ, **ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೭೪, ಪುಟ ೧೦-೧೧.

೪. ಎ.ಕ. ಸಂಪುಟ ೯, ಬೇಲೂರು, ೧೭೧, ಕ್ರಿಶ. ೧೩೮೨.

೫. ಎ.ಕ. ಸಂಪುಟ ೧೨, ನರಸಿಂಹರಾಜಪುರ, ೧೯.

೬. ಎ.ಕ. ಸಂಪುಟ ೧೨, ನರಸಿಂಹರಾಜಪುರ, ೧೨.

೭. ಎ.ಕ. ಸಂಪುಟ ೧೨, ನರಸಿಂಹರಾಜಪುರ, ೧೧.

೮. ಎ.ಕ. ಸಂಪುಟ ೧೨, ನರಸಿಂಹರಾಜಪುರ, ೧೪.

೯. ಎ.ಕ. ಸಂಪುಟ ೧೨, ನರಸಿಂಹರಾಜಪುರ, ೧೦.

೧೦. ಎ.ಕ. ಸಂಪುಟ ೧೬, ಸಪ್ಲಿಮೆಂಟರಿ ಶಾಸನಗಳು, ತುಮಕೂರು ಜಿಲ್ಲೆ, ಕುಣಿಗಲ್, ಪುಟ ೪೯.

೧೧. ಎ.ಕ. ಸಂಪುಟ ೧೨, ನರಸಿಂಹರಾಜಪುರ, ೨೨.

೧೨. ಎ.ಕ. ಸಂಪುಟ ೧೨, ನರಸಿಂಹರಾಜಪುರ, ೪೦.

೧೩. ಎಂ.ಎಂ. ಕಲಬುರ್ಗಿ, **'ಕರ್ನಾಟಕದ ಕೈಫಿಯತ್ತುಗಳು'**, ಪುಟ ೧೪೨-೧೪೩.

ಪ್ರಸ್ತುತ ಪ್ರಬಂಧ ಸಿದ್ಧಪಡಿಸಲು ಸ್ಫೂರ್ತಿ ನೀಡಿದ ಲೇಖನಗಳು

೧. ಡಾ. ಬಿ. ನಂಜುಂಡಸ್ವಾಮಿ, 'ದಾಸಿವಾಸ ಅರಸು ಮನೆತನ' **ವೀರಶೈವ ಅರಸು ಮನೆತನಗಳ ಅಧ್ಯಯನ** (ಸಂ) ಡಾ. ಎಂ.ಎಂ. ಕಲಬುರ್ಗಿ, ಸಿಂಧಗಿ, ೧೯೯೪, ಪುಟ ೨೬೧.

೨. ಡಾ. ಯೋಗೀಶ್ವರಪ್ಪ, "ದಾಸಿವಾಸ ವೊಡೆಯರು". 'ಮಲೆ ಕರ್ನಾಟಕದ ಅರಸು ಮನೆತನಗಳು' (ಸಂ) ರಾಜರಾಮ ಹೆಗಡೆ ಮತ್ತು ಅಶೋಕಶೆಟ್ಟರ್, ಹಂಪೆ, ೨೦೦೧, ಪುಟ ೨೭೫.

೩. ಎಂ.ಜಿ. ನಾಗರಾಜ್, 'ನಾಯಕರ ಆಡಳಿತ', **'ಕೋಲಾರ ಜಿಲ್ಲೆ ಇತಿಹಾಸ ಮತ್ತು ಪುರಾತತ್ವ'** (ಸಂ) ಡಾ. ಆರ್. ಗೋಪಾಲ್, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಹೊಸಪೇಟೆ ೨೦೦೪. ಪುಟ ೧೫೫.

ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ*

ಸುರಪುರ ಪ್ರದೇಶದ ಕಂದಾಯ ಪತ್ರಗಳು

ಸುರಪುರ ಇಂದಿನ ನೂತನ ಯಾದಗಿರಿ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರ ಇಲ್ಲಿನ ಗೋಸಲ ವಂಶದ ನಾಯಕ ಮನೆತನದವರು ಸುರಪುರವನ್ನು ಸಂಸ್ಥಾನವನ್ನಾಗಿ ಮಾಡಿಕೊಂಡು ಸುಮಾರು ಇನ್ನೂರು ವರ್ಷಗಳಿಗೂ ಅಧಿಕ ಕಾಲ ಆಳ್ವಿಕೆಯನ್ನು ನಡೆಸಿದ್ದಾರೆ. ಈ ಅರಸರಿಗೆ ಸಂಬಂಧಿಸಿದ ಮತ್ತು ಅಂದಿನ ಕಾಲದ ಸಾಕಷ್ಟು ದಾಖಲುಗಳು ಈ ಭಾಗದ ಅನೇಕ ಕಡೆಗಳಲ್ಲಿ ಈಗಲೂ ಕಾಣಸಿಗುತ್ತವೆ. ಈಗ ನನಗೆ ಕಂಡುಬಂದಿರುವ ಕಂದಾಯ ಪತ್ರ (Stamp)ಗಳು ಸುರಪುರ ಸಂಸ್ಥಾನ ಅವನತಿಯ ನಂತರದಲ್ಲಿನವು. ಈ ಪತ್ರಗಳು ಸುರಪುರದ **ಬುಜ್ಜುದೊರೆ**ಯುವರ ಮನೆಯಲ್ಲಿ ಸಂಗ್ರಹಿಸಲ್ಪಟ್ಟಿವೆ. ನಾಲ್ಕಾಣೆ ಮೌಲ್ಯದ ೧೯೧೭ನೇ ಇಸವಿಯ ಎರಡು, ಎಂಟಾಣೆ ಮೌಲ್ಯದ ೧೯೩೩ನೇ ಇಸವಿಯ ಒಂದು; ಒಟ್ಟು ಮೂರು ಪತ್ರಗಳು ಶೋಧನೆಗೊಳಪಟ್ಟಿದ್ದು, ಈ ಮೂರೂ ಪತ್ರಗಳ ಮೇಲೆ ಹೈದರಾಬಾದ ನಿಜಾಮ್ ಸರಕಾರದ ಮೊಹರಿದೆ.

ಈ ಮೂರೂ ಕಂದಾಯ ಪತ್ರಗಳು ಮೋಡಿ ಅಕ್ಷರದಲ್ಲಿದ್ದು, ಕಪ್ಪು ಮಸಿಯಿಂದ ಬರೆಯಲ್ಪಟ್ಟಿವೆ. ಈ ಪತ್ರಗಳು **ಸಾಲದ ಕುರಿತಾಗಿವೆ**. ಇಂದಿನ ಸುರಪುರವನ್ನು ಈ ಮೇಲಿನ ಕಂದಾಯ ಪತ್ರಗಳಲ್ಲಿ ಶೋರಾಪೂರ ಎಂದೇ ಕರೆಯಲಾಗಿದೆ. ಪ್ರಸ್ತುತ ಮೂರೂ ಸಾಲ ಪತ್ರಗಳನ್ನು ಗಮನಿಸಿದರೆ ಸಾಲ ಪಡೆದವರು ಬೇರೆ ಬೇರೆಯವರಾಗಿದ್ದರೆ, ಸಾಲ ನೀಡಿದ ವ್ಯಕ್ತಿ ಸುರಪುರದವರೇ ಆದ ಶ್ರೀಮಾನ್ ರಂಗಣ್ಣ ಸಾಹು ಎಂಬುದನ್ನು ಇಲ್ಲಿ ಗಮನಿಸಬಹುದಾದ ಅಂಶವಾಗಿದೆ. ಒಂದು ಶತಮಾನದಷ್ಟು ಹಳೆಯದಾದ ಈ ಕಂದಾಯ ಪತ್ರಗಳನ್ನು ಅಪರೂಪದ ದಾಖಲೆಗಳೆಂದೇ ಪರಿಗಣಿಸಬಹುದಾಗಿದೆ. ಈ ಮೂರು ಪತ್ರಗಳಲ್ಲಿ ಮುಂಬದಿ ಹಾಗೂ ಹಿಂಬದಿಗಳಲ್ಲಿ ಅಕ್ಷರಗಳು ಬರೆಯಲ್ಪಟ್ಟಿವೆ. ಪ್ರತೀ ಪತ್ರದ ವಿವರಣೆಯು ಇಂತಿದೆ.

ಪತ್ರ ಸಂಖ್ಯೆ–೧

ಪತ್ರ ಸಂಖ್ಯೆ ೧ರ ಸ್ಟ್ಯಾಂಪ್ ನಂ. ೩೮೮೦೮೨ರ ಮುಂಬದಿಯ ೧೧ ಸಾಲುಗಳನ್ನು ಒಳಗೊಂಡಿದೆ. ಪತ್ರದ ಎಡಭಾಗದಲ್ಲಿ ಸಾಲ ಪಡೆದವನ ಹೆಸರು (ಪೀರಸಾ ಪಿಂಜಾರ ಅರಿಕೇರಿ) ಮತ್ತು ಸಾಲದ ವಿವರಣೆಯನ್ನು ಬರೆಯಲಾಗಿದ್ದರೆ, ಬಲಭಾಗದಲ್ಲಿ ಸ್ಟ್ಯಾಂಪ್ ಸಂಖ್ಯೆ (೩೮೮೦೮೨) ಮುದ್ರಿತಗೊಂಡಿದೆ. ಮಧ್ಯಭಾಗದಲ್ಲಿ ೧೯೧೭ನೇ ಇಸವಿಯ ನಿಜಾಮ್ ಸರ್ಕಾರದ ವೃತ್ತಾಕಾರದ ಮೊಹರಿದೆ. ಈ ಎಲ್ಲ ವಿವರಗಳನ್ನು ಒಳಗೊಂಡಂತೆ ಪತ್ರದಲ್ಲಿ ಸಾಲ ಮತ್ತು ಮರುಪಾವತಿಸುವ ಕುರಿತಂತೆ ೧೧ ಸಾಲುಗಳನ್ನು ಬರೆಯಲಾಗಿದೆ. ಈ ಪತ್ರದ ಹಿಂಬದಿಯ ಎರಡು ಸಾಲುಗಳಲ್ಲಿ ನಾಲ್ಕಾಣೆ ಮೌಲ್ಯದ ಸ್ಟ್ಯಾಂಪ್ ಖರೀದಿಸಿದವನ (ಪೀರಸಾ ತಂದೆ ಬಡೇಸಾ) ಹೆಸರು ಮತ್ತು ಸ್ಟ್ಯಾಂಪ್ ಮಾರುವವನ ಹೆಸರಿನೊಂದಿಗೆ ಸಹಿ ಇದೆ.

ಪತ್ರದ ಸಾರಾಂಶ : ರಾಜಮಾನ್ ರಾಜಶ್ರೀ ರಂಗಣ್ಣ ತಂದೆ ರಾಮಣ್ಣ ಧರಿ ಜಾಲಹಳ್ಳಿ ಸಾ. ಶೋರಾಪುರ ಇವರ ಹತ್ತಿರ ಪೀರಸಾ ತಂದೆ ಬಡೇಸಾ ನದಾಫ್ ಸಾ. ಅರಕೇರಿ ಜಹಾಗೀರ ತಾ. ಶೋರಾಪುರ ಇವರು ತಮ್ಮ ಅವಸರ ನಿಮಿತ್ಯ ಪ್ರತಿ ರೂಪಾಯಿಗೆ ಹನ್ನೆರಡು ಸೇರು ಜೋಳದಂತೆ ಪ್ರಮಾಣ ಮಾಡಿ ಆರು ರೂಪಾಯಿ ನಾಲ್ಕಾಣೆಯನ್ನು ಸಾಲವಾಗಿ ಪಡೆಯುತ್ತಾರೆ. ಈ ಪತ್ರದಲ್ಲಿ ಮಾಡಿಕೊಂಡಿರುವ ಕರಾರಿನಂತೆ ಸನಫಸಲಿ (ನಿಜಾಮ ಕಾಲದ ವರ್ಷ) ೧೩೩೨ ಚೈತ್ರಶುದ್ಧ ೧೫ರ ನಂತರ ಪೀರಸಾ ಅವರು ಸ್ವಂತ ಊರಾದ ಅರಕೇರಿಯಲ್ಲಿ ಎಪ್ಪತ್ತೈದು ಸೇರು ಜೋಳವನ್ನು ಅಳೆದು ತಾವು ನೀಡಿದ ಕಾಗದ ಪತ್ರವನ್ನು ವಾಪಸು ಪಡೆಯಬಹುದಾಗಿದೆ ಎಂದು ಬರೆಯಲಾಗಿದೆ. ಒಂದು ವೇಳೆ ಒಪ್ಪಂದ ಮಾಡಿಕೊಂಡಿರುವಂತೆ ಎಪ್ಪತ್ತೈದು ಸೇರು ಜೋಳವನ್ನು ಕೊಡಲು ಆಗದೇ ಹೋದರೆ ಆರು ರೂಪಾಯಿ ನಾಲ್ಕಾಣೆ ಬದಲಾಗಿ ಹನ್ನೆರಡು ರೂಪಾಯಿ ಎಂಟಾಣೆ ಕೊಡಬೇಕಾಗುತ್ತದೆ ಎಂದೂ ಬರೆಯಲಾಗಿದೆ. ಶಕ ೧೮೪೪ ದುಂದುಭಿ ನಾಮ ಸಂವತ್ಸರ ಮಿತಿ ಪುಷ್ಯವದ್ಯ ೧೩೩೨ ಸನ್‌ಫಸಲಿಯಂದು ಶಾಂತಪ್ಪ ಸಾ. ಅರಕೇರಿ ಜಹಾಗೀರ ಇವರು ಪ್ರಸ್ತುತ ಸ್ಟ್ಯಾಂಪ್ ಬರೆದಿರುವರು. ಭೀಮಪ್ಪ ತಂದೆ ವೀರಪ್ಪ ನಾಯಕೋಡಿ ಸಾ. ಮಜಕೂರ ಇವರು ಈ ಸಾಲ ಪತ್ರಕ್ಕೆ ಸಾಕ್ಷಿಯಾಗಿದ್ದಾರೆ.

* ಅಧ್ಯಾಪಕರು, ದೃಶ್ಯಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪತ್ರ ಸಂಖ್ಯೆ – ೨

ಪತ್ರ ಸಂಖ್ಯೆ ಎರಡರ ಸ್ಟ್ಯಾಂಪ್ ನಂ. ೩೮೮೦೮೪ರ ಮುಂಬದಿಯ ೧೨ ಸಾಲುಗಳನ್ನು ಒಳಗೊಂಡಿದೆ. ಪತ್ರದ ಎಡಭಾಗದಲ್ಲಿ ಸಾಲ ಪಡೆದವನ ಹೆಸರು (ರಂಗಪ್ಪ ತಂದೆ ಬುನ್ನಪ್ಪ ಅಡಗೋಡ ಸಾ. ಅರಕೇರಿ ಜಾಗೀರ ತಾ. ಶೋರಾಪುರ) ಮತ್ತು ಸಾಲದ ವಿವರಣೆಯನ್ನು ಬರೆಯಲಾಗಿದ್ದರೆ, ಬಲಭಾಗದಲ್ಲಿ ಸ್ಟ್ಯಾಂಪ್ ಸಂಖ್ಯೆ (೩೮೮೦೮೪) ಮುದ್ರಿತಗೊಂಡಿದೆ. ಮಧ್ಯದಲ್ಲಿ ೧೯೧೭ನೇ ಇಸವಿಯ ನಿಜಾಮ್ ಸರ್ಕಾರದ ವೃತ್ತಾಕಾರದ ಮೊಹರಿದೆ. ಈ ಎಲ್ಲ ವಿವರಗಳನ್ನು ಒಳಗೊಂಡಂತೆ ಪ್ರಸ್ತುತ ಪತ್ರದಲ್ಲಿ ಸಾಲ ಮತ್ತು ಮರುಪಾವತಿಸುವ ಕುರಿತಾದ ೧೨ ಸಾಲುಗಳನ್ನು ಬರೆಯಲಾಗಿದೆ. ಈ ಪತ್ರದ ಹಿಂಬದಿಯ ಎರಡು ಸಾಲುಗಳಲ್ಲಿ ಸ್ಟ್ಯಾಂಪ್ ಖರೀದಿಸಿದವರ ಹೆಸರು (ರಂಗಣ್ಣ ತಂದೆ ಬುನ್ನಪ್ಪ), ನಾಲ್ಕಾಣೆ ಮೌಲ್ಯದ ಸ್ಟ್ಯಾಂಪ್‌ನ ಸಂಖ್ಯೆಯೊಂದಿಗೆ ಬಲಬದಿಯಲ್ಲಿ ಸ್ಟ್ಯಾಂಪ್ ಮಾರುವವನ ಹೆಸರು ಮತ್ತು ಸಹಿ ಬರೆಯಲ್ಪಟ್ಟಿದೆ.

ಪತ್ರದ ಸಾರಾಂಶ : ರಾಜಮಾನ್ ರಾಜಶ್ರೀ ರಂಗಣ್ಣ ತಂದೆ ರಾಮಣ್ಣ ಧರಿ ಜಾಲಹಳ್ಳಿ ಸಾ. ಶೋರಾಪುರ ಇವರ ಹತ್ತಿರ ರಂಗಪ್ಪ ತಂದೆ ಬುನ್ನಪ್ಪ ಅಡಗೋಡ ಸಾ. ಅರಕೇರಿ ಜಾಗೀರ ತಾ. ಶೋರಾಪುರ ಇವರು ತಮ್ಮ ಅವಸರ ನಿಮಿತ್ಯ ಪ್ರತಿ ರೂಪಾಯಿಗೆ ಹನ್ನೆರಡು ಸೇರು ಜೋಳದಂತೆ ಪ್ರಮಾಣ ಮಾಡಿ ಹದಿನೈದು ರೂಪಾಯಿ ನಾಲ್ಕಾಣೆಯನ್ನು ಸಾಲವಾಗಿ ಪಡೆಯುತ್ತಾರೆ. ಈ ಪತ್ರದಲ್ಲಿ ಮಾಡಿಕೊಂಡಿರುವ ಕರಾರಿನಂತೆ ಸನಫಸಲಿ (ನಿಜಾಮ ಕಾಲದ ವರ್ಷ) ೧೩೩೨ ಚೈತ್ರಶುದ್ಧ ಪೂರ್ಣಿಮೆಯ ನಂತರ ಸಾಲ ಪಡೆದ ರಂಗಪ್ಪ ಅವರು ತಮ್ಮ ಸ್ವಂತ ಊರಾದ ಅರಕೇರಿಯಲ್ಲಿ ನೂರಾ ಎಂಬತ್ತಮೂರು ಸೇರು ಜೋಳವನ್ನು ಅಳೆದು ತಾವು ನೀಡಿದ ಕಾಗದ ಪತ್ರವನ್ನು ವಾಪಸು ಪಡೆಯಬಹುದಾಗಿದೆ ಎಂದು ಬರೆಯಲಾಗಿದೆ. ಒಂದು ವೇಳೆ ಒಪ್ಪಂದ ಮಾಡಿಕೊಂಡಿರುವಂತೆ ನೂರಾ ಎಂಬತ್ತಮೂರು ಸೇರು ಜೋಳವನ್ನು ಕೊಡಲು ಆಗದೇ ಹೋದರೆ ಹದಿನೈದು ರೂಪಾಯಿ ನಾಲ್ಕಾಣೆ ಬದಲಾಗಿ ಮೂವತ್ತು ರೂಪಾಯಿ ಎಂಟಾಣೆ ಕೊಡಬೇಕಾಗುತ್ತದೆ ಎಂದೂ ಬರೆಯಲಾಗಿದೆ. ಶಕ ೧೮೪೪ ದುಂದುಭಿ ನಾಮಸಂವತ್ಸರ ಮಿತಿ ಪುಷ್ಯ ಶುದ್ಧ ಅಷ್ಟಮಿ ಸನಫಸಲಿ ೧೩೩೨ರಲ್ಲಿ ಶಾಂತಪ್ಪ ಅರಕೇರಿ ಅವರು ಈ ಸ್ಟ್ಯಾಂಪ್‌ನ್ನು ಬರೆದಿರುವರು. ಕೆಳಭಾಗದ ಬಲಬದಿಗೆ ರಂಗಣ್ಣ ತಂದೆ ಬುನ್ನಪ್ಪ ಇವರು ಸಹಿ ಮಾಡಿದ ಹೆಬ್ಬೆಟ್ಟಿನ ಗುರುತು ಇದ್ದರೆ, ಅದರ ಕೆಳಗೆ ಪತ್ರದ ಎಡಭಾಗದಲ್ಲಿ ಸಾಕ್ಷಿದಾರರಾದ ಭೀಮಪ್ಪ ತಂದೆ ವೀರಪ್ಪ ನಾಯಕೋಡಿ ಇವರ ಹೆಸರಿದೆ.

ಪತ್ರ ಸಂಖ್ಯೆ – ೩

ಪತ್ರ ಸಂಖ್ಯೆ ಮೂರರ ಸ್ಟ್ಯಾಂಪ್ ನಂ. ಎ ೭೦೩೫೯ರ ಮುಂಬದಿಯ ೧೩ ಸಾಲುಗಳನ್ನು ಒಳಗೊಂಡಿದೆ. ಈ ಹಿಂದಿನ ಎರಡು ಪತ್ರಗಳಲ್ಲಿ ಒಬ್ಬ ವ್ಯಕ್ತಿ ಮಾತ್ರ ಸಾಲದಾರನಾಗಿ ಕಂಡುಬರುತ್ತಾರೆ. ಆದರೆ ಈ ಪತ್ರದಲ್ಲಿ ಇಬ್ಬರು ಸಹೋದರರು ಏಕಕಾಲಕ್ಕೆ ಸಾಲವನ್ನು ಪಡೆಯುತ್ತಾರೆ. ಸಾಲ ನೀಡಿದ ವ್ಯಕ್ತಿ (ರಂಗಣ್ಣ ತಂದೆ ರಾಮಣ್ಣ) ಮಾತ್ರ ಒಬ್ಬನೇ ಆಗಿದ್ದಾನೆ. ಪತ್ರದ ಬಲಭಾಗದಲ್ಲಿ ಸ್ಟ್ಯಾಂಪ್ ಸಂಖ್ಯೆ (ಎ೭೦೩೫೯) ಮುದ್ರಿತಗೊಂಡಿದ್ದರೆ, ಮಧ್ಯದಲ್ಲಿ ೧೯೩೩ನೇ ಇಸವಿಯ ನಿಜಾಮ್ ಸರ್ಕಾರದ ವೃತ್ತಾಕಾರದ ಮೊಹರಿದೆ. ಈ ಎಲ್ಲ ವಿವರಗಳನ್ನು ಒಳಗೊಂಡಂತೆ ಪತ್ರದಲ್ಲಿ ಸಾಲ ಮತ್ತು ಮರುಪಾವತಿಸುವ ಕುರಿತಾದ ೧೩ ಸಾಲುಗಳನ್ನು ಬರೆಯಲಾಗಿದೆ. ಈ ಪತ್ರದ ಹಿಂಬದಿಯ ಎರಡು ಸಾಲುಗಳಲ್ಲಿ ಎಂಟಾಣೆ ಮೌಲ್ಯದ ಸ್ಟ್ಯಾಂಪ್ ನಂ., ಸ್ಟ್ಯಾಂಪ್ ಖರೀದಿಸಿದವನ (ದುರಗಯ್ಯ ತಂದೆ ಹಸನಯ್ಯ ಹೊಸೂರ) ಹೆಸರು ಮತ್ತು ಸ್ಟ್ಯಾಂಪ್ ಮಾರುವವನ ಹೆಸರಿನೊಂದಿಗೆ ಸಹಿ ಇದೆ.

ಪತ್ರದ ಸಾರಾಂಶ : ಈ ಹಿಂದಿನ ಎರಡು ಪತ್ರಗಳಲ್ಲಿ ಸಾಲ ನೀಡಿದ ವ್ಯಕ್ತಿ ರಂಗಣ್ಣ ತಂದೆ ರಾಮಣ್ಣ ಧರಿ ಎಂದಾದರೆ, ಈ ಪತ್ರದಲ್ಲಿ ರಾಮಣ್ಣನವರ ಮಗ ಈಶ್ವರಪ್ಪ ನಾಯಕ ಅವರು ಸಾಲವನ್ನು ನೀಡಿದ್ದಾರೆ. ಈ ಸಾಲ ಪತ್ರದಲ್ಲಿ ಹೀಗೆ ಬರೆಯಲಾಗಿದೆ. ರಾಜಮಾನ್ ರಾಜಶ್ರೀ ರಾಮಣ್ಣನವರ ಮಗ ಈಶ್ವರಪ್ಪ ನಾಯಕ ಮು. ಪಾಳೆ ಸಾ. ಶೋರಾಪುರ ಇವರ ಹತ್ತಿರ ಬೇಡಕುಲದ ಅಣ್ಣತಮ್ಮಂದಿರರಾದ ದುರಗಯ್ಯ ಮತ್ತು ಮಲ್ಲಯ್ಯ ತಂದೆ ಹಸನಯ್ಯ ಬುರಾಣಪುರ (ಸಾ. ಹೊಸೂರ ತಾ. ದೇವದುರ್ಗ ಜಿಲ್ಲಾ ರಾಯಚೂರು ಮುಕ್ಕಾಂ ಶೋರಾಪೂರ) ಇವರುಗಳು ತಮ್ಮ ಅವಸರ ನಿಮಿತ್ಯ ತಿಂಗಳಿಗೆ ಒಂದು ರೂಪಾಯಿಗೆ ಎಂಟಾಣೆಯಂತೆ ಎಪ್ಪತ್ತನಾಲ್ಕು ರೂಪಾಯಿ ನಾಲ್ಕಾಣೆಯನ್ನು ಸಾಲವಾಗಿ ಪಡೆಯುತ್ತಾರೆ. ಸನಫಸಲಿ ೧೩೪೭ರ ಯಳ್ಳಾಮಾಸಿಯ ಮರುದಿನ ಸ್ವತಃ ತಾವೇ ಬಂದು ಈ ಹಿಂದೆ ತಾವು ಪಡೆದ ಎಪ್ಪತ್ತನಾಲ್ಕು ರೂಪಾಯಿ ನಾಲ್ಕಾಣೆಯನ್ನು ಹಿಂತಿರುಗಿಸಬೇಕು ಎಂದು ಬರೆಯಲಾಗಿದೆ. ಒಂದು ವೇಳೆ ಈ ದಿನದ ಒಳಗಾಗಿ ಹಣವನ್ನು ಕೊಡದೇ ಹೋದರೆ ಅದರ ಎರಡು ಪಟ್ಟು; ಅಂದರೆ ೧೪೮ ರೂಪಾಯಿ ಎಂಟಾಣೆಯನ್ನು ಕೊಡಬೇಕಾಗುತ್ತದೆ ಎಂದೂ ಈ ಪತ್ರದಲ್ಲಿ ಬರೆಯಲಾಗಿದೆ. ೧೩೪೬ನೇ ಸನಫಸಲಿ ೩೦ನೇ ತಾರೀಖು ಇಸ್ವಿಂದಾರ (ಇಂದಿನ ಏಪ್ರಿಲ್) ತಿಂಗಳಲ್ಲಿ ಈ ಸ್ಟ್ಯಾಂಪ್ ಬರೆಯಲಾಗಿದೆ. ಈ ಪತ್ರದ ಕೆಳಭಾಗದ ಬಲಬದಿಯಲ್ಲಿ ಅಣ್ಣ ತಮ್ಮಂದಿರಾದ

ದುರಗಯ್ಯ ಮತ್ತು ಮಲ್ಲಯ್ಯ; ಇವರಿಬ್ಬರ ಹೆಬ್ಬೆಟ್ಟಿನ ಗುರುತಿದೆ. ಎಡಬದಿಯಲ್ಲಿ ಇಬ್ಬರು ಸಾಕ್ಷಿದಾರರ ಹೆಸರನ್ನು ಬರೆಯಲಾಗಿದ್ದು, ಇವರಲ್ಲಿ ಒಬ್ಬರ ಹೆಸರು ಮೋಡಿ ಅಕ್ಷರದಲ್ಲಿ ಬರೆಯಲ್ಪಟ್ಟದ್ದರೆ, ಇನ್ನೊಬ್ಬರ ಹೆಸರು ಕನ್ನಡದಲ್ಲಿ ಬರೆಯಲಾಗಿದೆ.

ಮೊದಲ ಪತ್ರದ ಪಾಠ

(ಸಾಲ ಪಡೆದವನ ಹೆಸರು ಮತ್ತು ಸಾಲದ ವಿವರ ಬರೆಯಲ್ಪಟ್ಟಿದೆ)

ಮುಂಬದಿ ಪುಟದಲ್ಲಿ **ಸ್ಟ್ಯಾಂಪ್ ನಂ. ೩೮೮೦೮೨**

(೧೯೧೭ನೇ ಇಸವಿಯ ನಿಜಾಮ್ ಸರಕಾರದ ವೃತ್ತಾಕಾರದ ಮೊಹರಿದೆ)

೧. ರಾಜಮಾನ್ ರಾಜಶ್ರೀ ರಂಗಣ್ಣ ವಲ್ಲದ ರಾಮಣ್ಣ ಧರಿ ಜಾಲಹಳ್ಳಿ ಸಾ. ಶೋರಾಪೂರ ಯಾಂಸಿ

೨. ದಸ್ತಾಪೀಸ್ ಬೇಸಮೀ ಪೀರಸಾ ವಲ್ಲದ ಬಡೇಸಾ ನದಾಫ್ ಸಾ. ಅರಕೇರಿ ಜಹಾಗೀರ ತಾ. ಶೋರಾಪೂರ

೩. ಮೀ ಇಹೂನ್ ದಿಲೇಲೆ ದಸ್ತಾಪೀಸ್ ಐಸಾಕಿ ಅಮಚೆ ಅವಸರ್ ಕರಿತಾ ತುಮಚೆ ಜವಳ್ ಆಜ್

೪. ದಿವಸಿ ದರ್ ರೂಪಯೇಸ್ ಬಾರಾಸೇರಾ ಪ್ರಮಾಣೆ ಜವರಿ ಠರಾವ ಕರೂನ್ ಸವಾಸಹಾ ರೂಪಯೆ

೬ ೧/೪

೫. ಯಾಣಿ ನಗದಿ ಘೇತಲೇ ಸೊ ಯಾಂಸಿ ಜವಾರಿ ದೇಣೆ ಮುದ್ದತ್ ಸನ್‌ಫಸಲಿ ಚೈತ್ರಶುದ್ಧ

೧೩೩೨ ೧೫

೬. ಪಂಚಾಹತ್ತಿ ಸೇರ್ ಜವಾರಿ ಯಾ ಅರಕೇರಿ ಮುಕ್ಕಾಮಾಂತ ಮಾಪೂನ್ ದೇವೂನ್ ದಸ್ತಾಪೀಸ್

೭. ವಾಪಸ್ ಕರಣೆ ಜರ್ ಮುದ್ದತ್ ಪ್ರಕಾರ ಹಮಹೀ ದೇಣ್ಯಾಂತ್ ಮಜ ಕಡೂಣ ನ ಜಹಾಲೇ ಸೂರತಿಂತ

೮. ದಾಮ್ ದುಪ್ಪಟ ಸಾಡೇಬಾರಾ ರೂಪಯೆ ಯಾಣಿ ದಿಲಾ ಹುಜರ್ ದೇಣೆ ಯಾಂಸ್ ಕಾಹಿಂ ಬಿಲಾ ತಕರಾರ್ ೧೨ ೧/೪

೯. ಸಾಂಗಣಾರ್ ನಾಹಿ ಮಹಣೂನ್ ಮೀ ಮಾರ್ಥು ರಘುಮಂದೀಲೆ ಲಿಹೂನ್ ದಿಲೇಲೆ ದಸ್ತಾಪೀಸ್ ಸಹಿ

೧೦. ಶಕೆ ಅಟ್ರಾಸೆ ಚೌತಾಳೀಸ್ ದುಂದುಭಿ ನಾಮ ಸಂವತ್ಸರ್ ಮಿತಿ ಪುಷ್ಯವದ್ಯ ಸನ್‌ಫಸಲಿ ದಸ್ತೂರ್

೧೮೪೪ ೮ ೧೩೨೨

೧೧. ಶಾಂತಪ್ಪ ಸಾ. ಅರಕೇರಿ ಜಹಾಗೀರ

ಹೇ ನಿಶಾನ್ ಪೀರಸಾ ವಲ್ಲದ ಬಡೇಸಾ ನದಾಫ್ ಯಾಂಥೆ ಆಹೆ ದಸ್ತೂರ ಸಜರ್

ಸಾಕ್ಷಿ

ಭೀಮಪ್ಪ ವಲ್ಲದ ವೀರಪ್ಪ ನಾಯಕೋಡಿ

ಸಾ. ಮಜಕೂರ.

ಹಿಂಬದಿ ಪುಟದಲ್ಲಿ

೦೧. ತಾರೀಖ್ ಮಾಹೆ ಆಜಾನ್ ಸನ್‌ಫಸಲಿ ನಂ. ಸ್ಟ್ಯಾಂಪ ನಂ. ಕಿಮ್ಮತ್ ಚಾರಾಣೆ ಖರೀದಿದಾರ ಪೀರಸಾ ವಲ್ಲದ

೧೯ ೧೩೩೨ ೫೫ ೩೮೮೦೮೨

೦೨. ಬಡೇಸಾ ಸಾ. ಅರಕೇರಿ ತಾ. ಶೋರಾಪೂರ

(ಸ್ಟ್ಯಾಂಪ್ ಮಾರುವವನ ಹೆಸರು, ಸಹಿ ಇದೆ)

ಎರಡನೆಯ ಪತ್ರದ ಪಾಠ

(ಸಾಲ ಪಡೆದವನ ಹೆಸರು ಮತ್ತು ಸಾಲದ ವಿವರ ಬರೆಯಲ್ಪಟ್ಟಿದೆ)

ಮುಂಬದಿ ಪುಟದಲ್ಲಿ **ಸ್ಟ್ಯಾಂಪ್ ನಂ. ೩೮೮೦೮೪**

(೧೯೧೭ನೇ ಇಸವಿಯ ನಿಜಾಮ್ ಸರಕಾರದ ವೃತ್ತಾಕಾರದ ಮೊಹರಿದೆ)

೧. ರಾಜಮಾನ್ ರಾಜಶ್ರೀ ರಂಗಣ್ಣ ವಲ್ಲದ ರಾಮಣ್ಣ ಧರಿ ಜಾಲಹಳ್ಳಿ ಸಾ. ಶೋರಾಪೂರ ತಾಲೂಕಲ ಯಾನಾ

೨. ದಸ್ತಾಪೀಸ್ ಬೇಸಮೀ ರಂಗಪ್ಪ ವಲ್ಲದ ಮುನ್ನಪ್ಪ ಅಡಗೋಡ ಸಾ. ಅರಕೇರಿ ಜಹಾಗೀರ ತಾ. ಶೋರಾಪೂರ

೩. ಮೀ ಲಿಹೂನ್ ದಿಲೆ ದಸ್ತಾಪೀಸ್ ಐಸಾಕಿ ಅಮಚೆ ಅವಸರ ಕರಿತಾ ನಿಮಿತ್ತ ಬದಲ್ ದರ್

೪. ರೂಪಿಯೇಸ್ ಬಾರಾಸೇರ್ ಯಕರಾರ್ ಕೇಲೆ ಪ್ರಮಾಣೆ ಠರಾವ್ ಕರೂನ್ ನಗದಿ ಘೇತಲೆ ರೂಪಯೆ ಸವಾ

೫. ಪಂದ್ರಾ ರೂಪಯೆ ಯಾಸಿ ಘೇತಲೆ ಅಸೋ ಯಾಂನ್ಸಿ ಜರೂರ್ ದೇಣೆ ಮುದ್ದತ್ ತೇರಾಸೆ ಬತ್ತೀಸ್
ಸನ್‌ಫಸಲಿ ಚೈತ್ರ
೬. ಶುದ್ಧ ಪೂರ್ಣಿಮಾ ಏಕಸದ ತಿರವೆ ಐಂಸಿ ಸೇರ್ ಜವಾರಿ ಅರಕೇರಿ ಮುಕ್ಕಾಮಾತ್ ಮಾಫೂನ್
೧೫ ೧೮೩
೭. ದೇವೂನ್ ಆ ದಸ್ತಾವೀಸ್ ವಾಪಸೆ ಮುಳಾವೆ ಜರ್ ಮುದ್ದತ್ ಪ್ರಕಾರ್ ಜವಾರಿ ದೇಣ್ಯಾಸ್ ಮಜಕದೇನ್
೮. ನಾಹೀತರ್ ತುಮಚೆ ಸಾಡೇತೀಸ್ ರೂಪಯೆ ಕಾಹಿಂ ಬಿಲಾ ಹುಜೂರ್ ದೇತೊ ಯಾಂಸಿ
೯. ಕಾಹಿಂ ಜಿಲಾ ತಕರಾರ್ ಸಾಂಗಣಾ ನಾಹಿ ಮಹಣೂನ್ ಮೀ ಮಾಝೆ ರಜಾಮಂದಿ ನೇ ಲಿಹೂನ್ ದಿಲೀ ಹೆ
೧೦. ದಸ್ತಾವೀಸ್ ಸಾಲ್ ಶಕೆ ಅಟ್ರಾಸೆ ಚೌತಾಳೀಸ್ ದುಂದುಭಿ ನಾಮ ಸಂವತ್ಸರ ಮಿತಿ ಪುಶ್ಯ ಶುದ್ಧ ಅಷ್ಟಮಿ
೧೮೪೪ ೮
೧೧. ಸನ್‌ಫಸಲಿ ತೇರಾಸೆ ಬತ್ತೀಸ್ ದಸ್ತೂರ್ ಶಾಂತಪ್ಪ ಅರಕೇರಿ
೧೩೩೨
೧೨. (ಹೆಬ್ಬೆಟ್ಟಿನ ಸಹಿ ಇದೆ) ಹೇ ನಿಶಾನ್ ರಂಗಣ್ಣ ವಲ್ಲದ ಮುನ್ನಪ್ಪ ಮಾಝೆ ಸದರ ಸಾ. ಅರಕೇರಿ

ಸಾಕ್ಷಿ

ಭೀಮಪ್ಪ ವಲ್ಲದ ವೀರಪ್ಪ ನಾಯಕೋಡಿ
ಸಾ. ಮಜಕೂರ

ಹಿಂಬದಿ ಪುಟದಲ್ಲಿ

೦೧. ತಾರೀಖ ಮಾಹೆ ಬಹಿಮನ್ ಸನ್‌ಫಸಲಿ ತೇರಾಸೆ ಬತ್ತೀಸ್ ಅನುಕ್ರಮ್ ನಿಶಾನ್ ಸತ್ತಾವನ್ ಸ್ಟ್ಯಾಂಪ್ ನಂ.
೧೯ ೧೩೩೨ ೩೭ ೩೮೮೦೮೪
ಕಿಮ್ಮತ್ ಸ್ಟ್ಯಾಂಪ್ ಚಾರಾಣೆ ಖರೀದಿದಾರ ರಂಗಣ್ಣ ವಲ್ಲದ ಮುನ್ನಪ್ಪ
೦೨. ಸಾಕಿನ್ ಮೊಝೆ (ಮಜಕೂರ) ಅರಕೇರಿ ಜಾಗೀರಿ ತಾಲೂಕ ಶೋರಾಪೂರ

(ಸ್ಟ್ಯಾಂಪ್ ಮಾರುವವನ ಹೆಸರು, ಸಹಿ ಇದೆ)

ಮೂರನೆಯ ಪತ್ರದ ಪಾಠ

ಮುಂಬದಿ ಪುಟದಲ್ಲಿ **ಸ್ಟ್ಯಾಂಪ್ ನಂ. ಎ೭೦೩೫೯**

(೧೯೩೩ನೇ ಇಸವಿಯ ನಿಜಾಮ್ ಸರಕಾರದ ವೃತ್ತಾಕಾರದ ಮೊಹರಿದೆ)

೧. ರಾಜಮಾನ್ ರಾಜಶ್ರೀ ಈಶ್ವರಪ್ಪ ನಾಯಕ ಫರಜಂದ್ ರಾಮಣ್ಣ ನಾಯಕ ಮುಕ್ಕಾಂ ಪಾಳೆ
೨. (ಹೆಬ್ಬೆಟ್ಟಿನ ಗುರುತಿದೆ) ಸಾ. ಶೋರಾಪೂರ ಯಾಂಸಿ
೩. ಹೇ ರೋಖಾ ಬೇಸಮಿ ದುರಗಯ್ಯ ವ. ಮಲ್ಲಯ್ಯ ವ. ಹುಸನಪ್ಪ ಬುರಾಣಪುರ ಜಾತ್
೪. ಬೇಡರ್ ಸಾ. ಹೋಸೂರ ತಾ. ದೇವದುರ್ಗ ಜಿಲ್ಲಾ ರಾಯಚೂರ ಹಾಲ್ ಮುಕ್ಕಾಮಿ
೫. ಶೋರಾಪುರ ಅಮಹೀ ಉಭಯಾತ್ ಮಿಳೂನ್ ದಿಹೂನ್ ದಿಲೇಲೆ ರೋಖಾ ಐಸಾದೇಕಿ ಸುಮಾರ
ಸನ್‌ಫಸಲಿ
೧೩೪೬
೬. ಕಾರಣೆ ಅಮಚೆ ಅವಸರ್ ಹೀ ನಿಮಿತ್ಯ ಮೂಳೆ ತುಮಹ ಜವಳ ನಗದಿ ರೂಪಯೆ ಮೊಬಲದ
೭೪
೭. ಚೌರಹತ್ರಿ ರೂಪಯೆ ಚಾರಾಣೆ ಸೂರತಿ ಘೇತಲೇ ಸೋ ಯಾಂಸಿ ವ್ಯಾಜ್ ದರ್ ಮಾಹೆ ದರ್
೮. ರೂಪಯೇಸ್ ಆಠಾಣೆ ಪ್ರಮಾಣೆ ಕರೂರ್ ಕೆಲೇಸೋ ಸದರಿ ರೂಪಯೆ ದೇಣೆಚಿ ವಾಯಝಾ
೯. ಆದ್ ಮಿತಿ ಪಾಸೂನ್ ಸನ್‌ಫಸಲಿ ಯಳ್ಳಾಮಸಿ ಸಣ್ ಜಹಾಲೇ ದೂಸರಿ ದಿವಸಿ ಖುದಿ
೧೩೪೭
೧೦. ಮಿಳೂನ್ ದೇವೂನ್ ತಮಸುಕಾ ವಾಪಸ್ ಘೆತೊ ಜರ್ ಕರಿತಾ ಮುದ್ದತ್ ಸಂಪಲ್ಯಾವರ್ ರೂಪಯೆನ

೧೧. ಬಿಲ್ಕಿಶತ್ ನಾಮ್ ಮುಸ್ಲು ರೂಪಾಯಿ ಏಕಸೆ ಮುಬಲಗ ಏಕಸೆ ಅಟ್ಯಾಹಾಸಿಶ್ ರೂಪಾಯಿ.....

೧೪೮

೧೨. ಏಕ್ ಮೋಕಾಜ ಬಿಹಿರ್ ನ ಕಾಂಗಣಾತ್ ಜಿಲಾ ತಕರಾರಣಕ ದಂಡ್ ದೇವೂಣ್ ತಕರಾರ್ ನಾಹಿ ಮಾರೆಫ ರಜಾ

೧೩. ಮಂಬಿನೆ ಅಕಲ್ ಹುಶಾರಿನೆ ಲಿಹೂನ್ ದಿಲೆ ರೋಖಾ ಸಹಿ ಫತ್ ತಾರೀಖ್ ಮಾಹೆ ಇಸ್ಫಂದಿಯಾ ಸನ್ ಫಸಲಿ

೩೦ ೧೩೪೬

ದಸ್ತೂರ್ ಚಂದಪ್ಪ

(ಹೆಬ್ಬೆರಳಿನ ಗುರುತಿದೆ) ಹೇ ನಿಶಾನ್ ದುರಗಯ್ಯ ವಲ್ಲದ ಹಸನಯ್ಯ ಬುರಾಣಪುರ


ಸಾ. ಹೊಸೂರ ಯಾಚೆ ಆಹೆ

ಹೇ ನಿಶಾನ್ ಮಲ್ಲಯ್ಯ ಹುಸನಯ್ಯ ಬುರಾಣಪುರ ಯಾಚೆ ಆಹಿ

ಹಿಂಬದಿ ಪುಟದಲ್ಲಿ

೦೧. ಸನ್ ತಾರೀಖ್ ತೀಸ್ ಇಸ್ಪಿಂದಾರ್ ೧೩೪೬ ಫಸಲಿ ಕಿಮ್ಮತ್ ಸ್ಟ್ಯಾಂಪ್ ೮ ಆಣೆ

೦೨. ಸ್ಟ್ಯಾಂಪ್ ನಂ. ಎ೭೦೩೫೮೯ ನಾಮ್ ಖರೀದದಾರ್ ದುರಗಯ್ಯ ವಲ್ಲದ ಹುಸನಯ್ಯ ಹೊಸೂರ ಸ್ವಂತ
(ಸ್ಟ್ಯಾಂಪ್ ಮಾರುವವನ ಹೆಸರು, ಸಹಿ ಇದೆ)



ಡಾ. ಬಿ.ವ್ಹಿ. ಶಿರೂರ*

ಮುಧೋಳದ ದೇಸಾಯಿ ಮನೆತನ

ಅಳಿದು ಹೋಗುತ್ತಿರುವ ಐತಿಹಾಸಿಕ ಅವಶೇಷಗಳಲ್ಲಿ ಕರ್ನಾಟಕದ ದೇಸಾಯಿ ಮನೆತನಗಳ ಚರಿತ್ರೆಯೂ ಒಂದು. ಇಂದು ಅವುಗಳಲ್ಲಿ ಬಹಳಷ್ಟು ಮನೆತನಗಳ ಚರಿತ್ರೆ ಕೇವಲ ಬಾಯಿ ಮಾತುಗಳ ಮೇಲೆ ನಿಂತಿದ್ದರೆ ಇನ್ನು ಕೆಲವಕ್ಕೆ ಆ ಭಾಗ್ಯವೂ ಇಲ್ಲ. ಹೀಗಾಗಿ ನಮ್ಮ ನಾಡಿನ ಇತಿಹಾಸವನ್ನು ರೂಪಿಸುವಲ್ಲಿ ಮಹತ್ವದ ಪಾತ್ರವಹಿಸಿರಬಹುದಾದ ದೇಸಾಯಿ ಮನೆತನಗಳು ತಮ್ಮ ಚಾರಿತ್ರಿಕ ದಾಖಲೆಗಳ ಕೊರತೆಯ ಮೂಲಕ ಇತಿಹಾಸದ ಪುಟಗಳಲ್ಲಿ ಕಾಣಿಸದೆ ಮಣ್ಣುಪಾಲಾಗುತ್ತಿರುವುದು ದುರ್ದೈವದ ಸಂಗತಿ. ಅಂಥ ಒಂದು ದುರ್ದೈವದ ಮನೆತನಗಳಲ್ಲಿ ಯಲಬುರ್ಗಿ ತಾಲ್ಲೂಕಿನ ಮುದೋಳದ ದೇಸಾಯಿ ಮನೆತನವೂ ಒಂದು. ೧೯೪೮ರಲ್ಲಿ ನಡೆದ ರಜಾಕಾರರ ಹಾವಳಿಯಲ್ಲಿ ಇದ್ದಕ್ಕಿದ್ದ ಹಾಗೆಯೇ ಬಿಟ್ಟು ಹೋದ ವಾಡೆಯನ್ನು ಮೂರು ತಿಂಗಳ ಪರ್ಯಂತರ ತಮ್ಮ ವಾಸಸ್ಥಳವಾಗಿ ಮಾಡಿಕೊಂಡ ರಜಾಕಾರರು ಅಲ್ಲಿಯ ಎಲ್ಲ ಕಾಗದಪತ್ರಗಳನ್ನು ನಾಶ ಮಾಡಿ, ಅಲ್ಲಿಯ ವಸ್ತು ಒಡವೆಗಳನ್ನೆಲ್ಲ ಒಯ್ದುಬಿಟ್ಟರು. ಹೀಗಾಗಿ ಈ ಮನೆತನದ ಎಲ್ಲ ಚಾರಿತ್ರಿಕ ದಾಖಲೆಗಳು ನಾಶವಾದವು. ಈಗಿರುವ ಒಂದೇ ಒಂದು ದಾಖಲೆ ಆ ಮನೆತನದ ಶ್ರೀ ಶಂಕ್ರಪ್ಪ ದೇಸಾಯಿ ಅವರು. ಇನ್ನೂ ಯುವಕರಾಗಿರುವ ಶ್ರೀ ಶಂಕ್ರಪ್ಪ ದೇಸಾಯಿ ಅವರಿಗೂ ಈ ಮನೆತನದ ಸಮಗ್ರ ಮಾಹಿತಿ ಇಲ್ಲ. ಆಗಾಗ ತಮ್ಮ ಪೂರ್ವಜರು ಹೇಳುತ್ತಿದ್ದ ಅಂಶಗಳನ್ನೇ ಜ್ಞಾಪಿಸಿಕೊಂಡು ಹೇಳಿದ್ದನ್ನು ಮತ್ತು ಹೆಳವರ ಕಡತಗಳನ್ನು ಆಧರಿಸಿ ಈ ಪ್ರಬಂಧವನ್ನು ರೂಪಿಸಲಾಗಿದೆ.

ಮುಧೋಳ ದೇಸಾಯಿ ಮನೆತನ-ಲಿಂಗಾಯತರ ಒಂದು ಪಂಗಡವಾದ ಗಾಣಿಗರ ವಂಶಕ್ಕೆ ಸೇರಿದುದು. ಇವರದು ಹೊನ್ನಹಳದಿ ಬೆಡಗು, ಇವರ ಗುರುಗಳು ಯಲಬುರ್ಗಿಯ ಹೂಲಿಕಂತಿ (ಹಿರೇ)ಮಠದ ಸಿದ್ಧರಾಮ ಸ್ವಾಮಿಗಳು. ಇವರು ಮನೆಯ ಜಗುಲಿಯ ಮೇಲೆ ಇಟ್ಟು ಪೂಜಿಸುವುದು ಸಿದ್ಧರಾಮೇಶ್ವರಮೂರ್ತಿಯನ್ನೇ. ವಾಡೆಯ ಒಳಗೆ ಹಿಂದಿನ ಬಲಭಾಗದ ಒಂದು ಮೂಲೆಯಲ್ಲಿ ಸಿದ್ಧರಾಮೇಶ್ವರರ ಗುಡಿ ಇಂದಿಗೂ ನೋಡಲು ದೊರೆಯುತ್ತಿದೆ.

ಈ ಮನೆತನದ ಮೂಲಪುರುಷ-ದೊಡ್ಡ ಬಸಪ್ಪ ದೇಸಾಯಿ. ಈತನು ಮೊದಲು ವಿಜಯನಗರದ ಅರಸರ ಆಶ್ರಯದಲ್ಲಿದ್ದು ವಿಜಯನಗರದ ಪತನಾನಂತರ ಅಂದರೆ, ಕ್ರಿ.ಶ. ಸುಮಾರು ೧೬೫೦ರಲ್ಲಿ ಅಲ್ಲಿಂದ 'ಆಕಳಹಟ್ಟಿ' ತೆಗೆದುಕೊಂಡು ಬಂದು ಗಜೇಂದ್ರಗಡದ ಹತ್ತಿರವಿರುವ ಕಾಲಕಾಲೇಶ್ವರದಲ್ಲಿ ನಿಂತನು. ಮುಂದೆ ಈ ಮನೆತನದವರು ಮುಧೋಳದತ್ತ ಸಾಗಿ ಅಲ್ಲಿಯ ಫಲವತ್ತಾದ ಭೂಮಿಯಿಂದ ಆಕರ್ಷಿತರಾಗಿ ಅಲ್ಲಿಯೇ ನೆಲೆನಿಂತರು. ೧೭ನೆಯ ಶತಮಾನದ ಆದಿಭಾಗಕ್ಕೆ ಈ ಸ್ಥಳಾಂತರ ನಡೆದಿರಬೇಕು ಎಂಬುದಕ್ಕೆ ಇಂದಿಗೂ ನೋಡಲು ದೊರೆಯುತ್ತಿರುವ ಮಣ್ಣಿನ ಕೋಟೆಯ ಭಾಗ ಮತ್ತು ಅದರ ಹಿಂಬದಿಗಿರುವ ಸಿದ್ಧರಾಮೇಶ್ವರ ದೇವಾಲಯ ಆಧಾರ ಒದಗಿಸುತ್ತಿವೆ. ವಿಜಯನಗರದಿಂದ ಬರುವಾಗ ಇವರೊಂದಿಗೆ ಒಂದು ಬ್ರಾಹ್ಮಣ ಮನೆತನ (ಆಶ್ರಿತ)ವೂ ಬಂದು ಮುಧೋಳದಲ್ಲಿ ವಾಸ್ತವ್ಯ ಹೂಡಿತು. ಸ್ವಾತಂತ್ರ್ಯ ಬರುವವರೆಗೂ ಈ ಮನೆತನಕ್ಕೆ ಪ್ರತಿವರ್ಷ ದೇಸಾಯಿ ಅವರ ಮನೆಯಿಂದ ಅಕ್ಕಿ, ಹಿಟ್ಟು ಮೊದಲಾದವು ಕೊಡಲ್ಪಡುತ್ತಿದ್ದವಂತೆ.

ದೊಡ್ಡಬಸಪ್ಪನ ತರುವಾಯ ಮುಂದಿನ ಹತ್ತು ತಲೆಮಾರುಗಳ ಹೆಸರು, ಹೆಳವರ ಕಡತದ ಮೂಲಕ ತಿಳಿದು ಬರುತ್ತದೆ. (ನೋಡಿ ವಂಶಾವಳಿ). ಆದರೆ ಅವರ ಚಾರಿತ್ರಿಕ ಅಂಶಗಳು ಯಾವೂ ತಿಳಿದು ಬರುವುದಿಲ್ಲ. ಶ್ರೀ ಶಂಕ್ರಪ್ಪ ದೇಸಾಯಿ ಅವರ ಪ್ರಕಾರ ಮುಧೋಳದ ದೇಸಾಯಿ ಮೆನತನದ ಮಹತ್ವದ ವ್ಯಕ್ತಿ ಶ್ರೀ ಸಿದ್ಧಗಂಗಮ್ಮ ಅವರು. ಇವರು ದೊಡ್ಡ ಬಸಪ್ಪನವರಿಂದ ೧೧ನೆಯ ತಲೆಮಾರಿನವರಾದ ಶ್ರೀ ಬಸವಂತರಾವ ದೇಸಾಯಿ ಅವರ ಕುಟುಂಬ. ಈ ಮನೆತನ ಇವರಿಂದಲೇ ಅಸ್ತಿತ್ವಕ್ಕೆ ಬಂದಿತು ಎಂದು ಹೇಳುವಷ್ಟರ ಮಟ್ಟಿಗೆ ಪ್ರಖ್ಯಾತಿ ಪಡೆದ ವ್ಯಕ್ತಿ ಇವರು. ಇವರ ಬಗೆಗಿನ ಉಳಿದ ಯಾವ ಅಂಶಗಳೂ ತಿಳಿದು ಬರುವುದಿಲ್ಲವಾದರೂ ಇವರು ಮುಧೋಳಕ್ಕೆ ಎರಡು ಮೈಲು ದೂರದಲ್ಲಿ ಸಂಕನೂರ ದಾರಿಯಲ್ಲಿ ಕಟ್ಟಿಸಿದ ಕೆರೆಗೆ 'ಅವ್ವನವರ ಕೆರೆ' ಎಂಬ ಹೆಸರೂ ಈಗಲೂ ಉಂಟು. ಇವರಿಗೆ ಮಕ್ಕಳಾಗಲಿಲ್ಲವಾದ್ದರಿಂದ ಮೈದುನ ಗದಿಗೆಪ್ಪ-ದೇಸಾಯಿ ಅವರ ಮಗನಾದ ಗುರುಸಿದ್ಧಪ್ಪನನ್ನು ದತ್ತಕ ತೆಗೆದುಕೊಂಡರು.

* # ೧೩, ಮಂಜುನಾಥ ನಗರ, ಹುಬ್ಬಳ್ಳಿ.

ಈತನೂ ಕೂಡಾ ಮುಧೋಳದ ಕಮತರ ಹೊಲದಲ್ಲಿ ಒಂದು ಕೆರೆ ಕಟ್ಟಿಸಿದ ಎಂಬ ಪ್ರತೀತಿ ಇದೆ.

ಈ ಮನೆತನದ ಇತಿಹಾಸದ ಮೇಲೆ ಖಚಿತ ಬೆಳಕು ಬೀಳುವುದು ಗುರುಸಿದ್ಧಪ್ಪನವರ ಮಕ್ಕಳಾದ ಶ್ರೀ ಶಂಕ್ರಪ್ಪ ದೇಸಾಯಿ ಅವರ ಕಾಲದಿಂದ. ೧೯೩೫ರ ಪ್ಲೇಗ್ ಕಾಲಕ್ಕೆ ತೀರಿಕೊಂಡ ಇವರು ಸಮಾಜಪ್ರೇಮಿಯಾಗಿದ್ದು, ಹಲವಾರು ಸಾಮಾಜಿಕ ಕಾರ್ಯಗಳಿಂದ ಈ ಮನೆತನದ ಹೆಸರು ಜನಮನದಲ್ಲಿ ಅಚ್ಚಳಿಯದಂತೆ ಮಾಡಿದರು. ತಮ್ಮ ಸ್ವಂತ ಖರ್ಚಿನಿಂದ ಮುದೋಳದಲ್ಲಿ ಒಂದು ಪ್ರವಾಸಿ ಮಂದಿರವನ್ನು ಕಟ್ಟಿಸಿದರು. ಮುಂದೆ ಊರ ಮಕ್ಕಳ ವಿದ್ಯಾಭ್ಯಾಸದ ಕೊರತೆ ಕಂಡು ಅದನ್ನು ಶಾಲೆಯಾಗಿ ಪರಿವರ್ತಿಸಿ ದಾನ ಮಾಡಿದರು. ಈಗಲೂ ಪ್ರಾಥಮಿಕ ಶಾಲೆ ಅಲ್ಲಿಯೇ ನಡೆಯುತ್ತಿದೆ. ಅದರ ಹಿಂದೆ ಇತ್ತೀಚೆಗೆ ಹೊಸ ಕಟ್ಟಡ ನಿರ್ಮಾಣವಾಗಿದೆ. ಮಣ್ಣಿನ ಕೋಟೆಗೆ ಹೊಂದಿಕೊಂಡು ಕಲ್ಲಿನ ಕೋಟೆಯನ್ನೂ ಹೊಸದಾಗಿ ಕಟ್ಟಿಸಿದ್ದು ಇವರ ಕಾಲದ ಅತ್ಯಂತ ಮಹತ್ವದ ಘಟನೆಯಾಗಿದೆ. ೧೯೩೦ರ ಸುಮಾರಿಗೆ ದೇಶದಲ್ಲೆಲ್ಲ ಭೀಕರ ಬರಗಾಲ ಕಾಣಿಸಿಕೊಂಡು, ಜನರು ನಿರ್ಗತಿಕರಾದಾಗ ಜನರಿಗೆ ಕೆಲಸ ಕೊಟ್ಟು ಅನ್ನಾದಿಗಳನ್ನು ಒದಗಿಸುವ ದೃಷ್ಟಿಯಿಂದ ಈ ಕೋಟೆಯನ್ನು ಕಟ್ಟಿಸತೊಡಗಿದರಂತೆ.

೪೩೦೦ ಅಡಿ ಚೌರಸ್ ಅಡಿ ವಿಸ್ತೀರ್ಣವಿರುವ ಕಲ್ಲುಗೋಡೆಯ ಕೋಟೆ ಮೂರೂ ಕಡೆ ಮುಗಿದಿದ್ದು ೧೯೩೫ರಲ್ಲಿ ಶ್ರೀ ಶಂಕ್ರಪ್ಪ ದೇಸಾಯಿ ಅವರ ಮರಣದಿಂದ ಮುಂಭಾಗದ ಮಣ್ಣಿನ ಗೋಡೆ ಹಾಗೆಯೇ ಉಳಿದಿದೆ. ನೆಲದಿಂದ ಸುಮಾರು ೫೦–೬೦ ಅಡಿ ಎತ್ತರದಲ್ಲಿರುವ ಈ ಕೋಟೆಗೆ ಏಳು ಬುರುಜುಗಳಿವೆ. ಈಗಲೂ ಕೂಡಾ ಹಿಂದಿನ ಕೋಟೆಗಳ ಸ್ಪಷ್ಟ ಕಲ್ಪನೆ ಕೊಡುವ ಹಾಗೆ ಎಳ್ಳಷ್ಟೂ ಮುಕ್ಕಾಗದೆ ಸುಂದರವಾಗಿ ನಿಂತಿದೆ. ನೀರಿಗಾಗಿ ಕೋಟೆಯ ಒಳಗೆ ಒಂದು ಬಾವಿ ಇದೆ.

ಅದರ ಪ್ರವೇಶಕ್ಕಿದ್ದ ಬಾಗಿಲನ್ನು ಅಗಸೆಯೆಂದು ಕರೆಯುತ್ತಿದ್ದರು. ಎಲ್ಲರೂ ಆ ಮೂಲಕವೇ ಈ ಕೋಟೆಯನ್ನು ಪ್ರವೇಶಿಸಬೇಕಾಗಿದ್ದಿತು. ಆದರೆ ಈಗ ಅದನ್ನು ತೆಗೆಯಲಾಗಿದೆ. ವಾಡೆಯ ಮುಂಭಾಗದಲ್ಲಿ ತೇಗು ಕಟ್ಟಿಗೆಯಿಂದ ಮಾಡಿದ ಸದರ ಇದ್ದಿತು. ಅದನ್ನೂ ಇತ್ತೀಚೆಗೆ ತೆಗೆಯಲಾಗಿದೆ. ಅದು ಇರುವವರೆಗೂ ದಸರಾ ಮುಂತಾದ ಸಮಾರಂಭ ನೆರವೇರಿಸಲು ಜನ ಸೇರುತ್ತಿದ್ದುದು ಅಲ್ಲಿಯೇ. ಅಲ್ಲಿ ದೇಸಾಯಿ ಅವರಿಗೆ ಕೂಡಲು ಸ್ವಲ್ಪ ಮೇಲ್ಭಾಗದಲ್ಲಿ ಪ್ರತ್ಯೇಕ ಜಗಲಿ ಇತ್ತು. ಅದರ ಮುಂದೆ ಸಾಮಾನ್ಯರು ಪಡಶಾಲೆಯ ಕೆಳಭಾಗದಲ್ಲಿ, ಆಮಂತ್ರಿಕರು ಅಥವಾ ವಿಶಿಷ್ಟ ಜನರು ಪಡಶಾಲೆಯ ಮೇಲ್ಭಾಗದಲ್ಲಿ ಮಣ್ಣಿನ ಕೋಟೆ ಗೋಡೆಗೆ ಆನಿಕೊಂಡು ಕೂಡುತ್ತಿದ್ದರು. ಕೋಟೆಯ ಹಿಂದೆ ಬಲಭಾಗದಲ್ಲಿರುವ ಸಿದ್ಧರಾಮೇಶ್ವರ ದೇವಾಲಯವನ್ನು ಸಂಗಕಮರಿ ಕಲ್ಲಿನಿಂದ ಕಟ್ಟಿದೆ. ಅದರ ಮುಂಭಾಗ ಐದು ಅಂಕಣಗಳ ನಾಲ್ಕು ನಾಲ್ಕು ಕಲ್ಲಿನ ಕಂಬಗಳ ಆಧಾರದ ಮೇಲೆ ನಿಂತಿದೆ. ಒಳಗೆ ಮೂರು ಗರ್ಭಗೃಹಗಳಿದ್ದು ಮೂರರಲ್ಲೂ ಶಿವ ಲಿಂಗಗಳಿವೆ. ಎದುರಿಗೆ ಬಸವಣ್ಣನ ಮೂರ್ತಿ ಇದೆ. ಹಿಂಭಾಗದಲ್ಲಿ ಪಾವಟಿಗೆಗಳಿದ್ದು ಅವುಗಳಿಂದ ದೇವಾಲಯದ ಮುತ್ತು ಮೂರನೆಯ ಹುಡೆಯ ಮೇಲ್ಭಾಗಕ್ಕೆ ಹೋಗಬಹುದಾಗಿದೆ.

೧೯೬೭ರಲ್ಲಿ ಮರಣವಪ್ಪಿದ ಶ್ರೀ ಗದಿಗೆಪ್ಪ ದೇಸಾಯಿ ಅವರು ಅಂದಿನ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಗುಲ್ಬರ್ಗಾದಲ್ಲಿ ಸೆರೆಮನೆ ವಾಸವನ್ನು ಅನುಭವಿಸಿದರು. ರಜಾಕಾರರ ಹಾವಳಿಯಲ್ಲಿಯೂ ಒಳ್ಳೆಯ ಮಹತ್ವದ ಪಾತ್ರವನ್ನು ವಹಿಸಿದರು.

ಪ್ರತೀ ಶ್ರಾವಣಮಾಸದ ಇಡೀ ತಿಂಗಳು ಗೊಗ್ಗಿಹಳ್ಳಿ ಮತ್ತು ಅಜ್ಜಿಗೇರಿ ಪಟ್ಟದ್ದೇವರನ್ನು ಕರೆಸಿ ಪೂಜೆ ಮಾಡಿಸುವ ಸಂಪ್ರದಾಯ ಇಂದಿಗೂ ಇಲ್ಲಿದೆ. ಮನೆಯಲ್ಲಿ ಏನಾದರೂ ಕಾರಣವಿದ್ದರೆ ತಮ್ಮ ಮನೆತನದ ಗುರುಗಳಾದ ಯಲಬುರ್ಗಿಯ ಹೂಲಿಕಂತಿಮಠದ ಸಿದ್ಧರಾಮಸ್ವಾಮಿಗಳನ್ನು ಕರೆಸುವುದುಂಟು. ಈ ಮನೆತನದ ಹೆಣ್ಣುಮಕ್ಕಳು ಊರಲ್ಲಿ ದೇವಾಲಯಗಳಿಗೆ, ಮತ್ತಾವುದೇ ಕೆಲಸಕ್ಕೆ ಹೋಗುವದಿದ್ದಲ್ಲಿ ಘೋಷಾ ಧರಿಸಿ ಹೋಗುವ ಪದ್ಧತಿ ಈಗಲೂ ಇದೆ. ಬೇರೆ ಊರಿಗೇ ಹೋಗಬೇಕಾದಲ್ಲಿ ಎರಡೂ ಕಡೆ ಮುಚ್ಚಿದ ಕೊಲ್ಲಾರಿಬಂಡಿಯಲ್ಲಿ ಕುಳಿತು ಊರ ಹೊರಗೆ ಹೋಗಿ ಬಸ್ ಮೊದಲಾದ ವಾಹನ ಏರುವದುಂಟು. ಬರುವಾಗ ಊರ ಹೊರಗೆಯೇ ಇಳಿದು ಎರಡೂ ಕಡೆ ಮುಚ್ಚಿದ ಬಂಡಿ ಏರಿ ಬರುವುದುಂಟು.

ಇವರು ತಮ್ಮ ಹೆಣ್ಣು–ಗಂಡಿನ ವ್ಯವಹಾರಕ್ಕಾಗಿ ಕೋಲಾರ (ವಿಜಾಪುರ ಜಿಲ್ಲೆ), ಬಬಲಾದಿ (ಮಹಾರಾಷ್ಟ್ರ), ಹೊನ್ನಾಳ (ಬೀಳಗಿ ತಾಲ್ಲೂಕು), ಕೊಣ್ಣೂರು (ಜಮಖಂಡಿ ತಾಲ್ಲೂಕು), ನಾಗನೂರು (ಲಿಂಗಸಗೂರು ತಾಲ್ಲೂಕು) ಮೊದಲಾದ ಊರುಗಳ ದೇಸಾಯಿ ಮನೆತನಗಳೊಂದಿಗೆ ಮಾತ್ರ ಸುಮಾರು ೨೦ ವರ್ಷಗಳಿಂದ ಹೊಂದಿರುವರೆಂದು ಹೇಳಲಾಗುತ್ತಿದೆ.

ಇವರಿಗೆ, ಪೂರ್ವದಲ್ಲಿ ಸುಮಾರು ೫೦೦ ಕೂರಿಗೆ (೨೦೦೦ ಎಕರೆ) ಹೊಲ ಎರೆ ಹಂಚಿನಾಳ, ಕರಮುಡಿ, ಗ್ವಾಗೇರಿ, ಹಾಲಕೆರೆ, ತೊಂಡಿಹಾಳ, ಬಂಡಿಹಾಳ ಪ್ರದೇಶಗಳಲ್ಲಿ ಇದ್ದು, ನಿಜಾಮರ ಕಾಲಕ್ಕೆ ೧೮೦ ಎಕರೆಗೆ ಇಳಿಯಿತು. ಭಾರತ ಸರಕಾರದ ಸೀಲಿಂಗ್ ಬಂದುದರಿಂದ ಈಗ ೫೪ ಎಕರೆ ಖುಷ್ಕಿ ಭೂಮಿ ಈ ಮನೆತನಕ್ಕೆ ಉಳಿದಿದೆ.

ಹೀಗೆ ಕಾಲಗತಿಗೆ ಸಿಕ್ಕು ಈ ಮನೆತನ ತನ್ನ ಮಹತ್ವ ಕಳೆದುಕೊಂಡರೂ ಇಂದಿಗೂ ಈ ಮನೆತನದ ಬಗ್ಗೆ ಜನರಲ್ಲಿ ಅತ್ಯಂತ ಭಯ–ಭಕ್ತಿ ಇದೆ. ಇಂದಿಗೂ ಕೂಡಾ ಬನ್ನಿಹಬ್ಬದಂದು ಊರ ಜನರೆಲ್ಲ ವಾಡೆಯ ಮುಂಭಾಗದಲ್ಲಿರುವ 'ಸದರ'ದಲ್ಲಿ ಸೇರಿ (ಆದರೆ ಅದನ್ನು ಇತ್ತೀಚೆಗೆ ಕೆಡವಲಾಗಿದೆ. ಹೀಗಾಗಿ ಈಗ ದೇಸಾಯಿ ಅವರು ಕಟ್ಟಿಸಿದ ಹೊಸ ಮನೆಯ ಪ್ರಾಂಗಣದಲ್ಲಿ ಜನ ಸೇರುತ್ತಾರೆ) ದೇಸಾಯಿಯವರ ಮುಖಂಡತ್ವದಲ್ಲಿ ಊರ ಮುಂದಿನ ಬನ್ನಿಗಿಡಕ್ಕೆ ಹೋಗಿ, ಬನ್ನಿ ತಂದು ಮತ್ತೆ ದೇಸಾಯಿ ಅವರ ವಾಡಕ್ಕೆ ಬಂದು ಮೊದಲು ದೇಸಾಯಿ ಅವರಿಗೆ ಬನ್ನಿ ಕೊಟ್ಟು ಬನ್ನಿ ಮುಡಿಯುವ ಕಾರ್ಯಕ್ರಮ ಪ್ರಾರಂಭವಾಗುತ್ತದೆ. ಅಲ್ಲದೆ ಊರ ತ್ರಿಲಿಂಗೇಶ್ವರ ಜಾತ್ರೆಯ ಸಮಯದಲ್ಲಿ ಪಲ್ಲಕ್ಕಿ **ದೇಸಾಯಿ ಅವರ ಮನೆಗೆ ಹೋಗಿ ದೇಸಾಯಿ ಅವರನ್ನು ಕರೆತಂದ ಮೇಲೆ, ಅವರ ಮುಖಂಡತ್ವದಲ್ಲಿಯೇ ತೇರು ಸಾಗುತ್ತದೆ. ಉತ್ಸವ ಜರುಗುತ್ತದೆ**. ಅದೇ ರೀತಿ ಮೋಹರಂ ಹಬ್ಬದಲ್ಲಿ ದೇಸಾಯಿ ಅವರ ವಾಡೇದ ಮುಂದೆಯೇ ಅಲೈ ದೇವರನ್ನು ಇಟ್ಟು ಆ ಹಬ್ಬವನ್ನು ಆಚರಿಸುವ ರೂಢಿ ಇದ್ದಿತು. ಈಗ ಇದನ್ನು ಊರ ಮಸೀದೆಯಲ್ಲಿಟ್ಟು ಆಚರಿಸುವರಾದರೂ ಎರಡು ದೇವರು ದೇಸಾಯಿ ಅವರವು, ಉಳಿದ ಮೂರು ಸಾರ್ವಜನಿಕರವು ಎಂಬ ನಂಬುಗೆ ಇದೆ. ಇದು ದೇಸಾಯಿ ಅವರು ಹೊಂದಿದ್ದ ಸರ್ವಧರ್ಮ ಸಮನ್ವಯ ಭಾವವನ್ನು ವ್ಯಕ್ತಗೊಳಿಸುತ್ತದೆ.

ಊರಲ್ಲಿ ಲಗ್ನ ಮೊದಲಾದವು ಜರುಗುವ ಪೂರ್ವದಲ್ಲಿ ದೇಸಾಯಿ ಅವರ ಅಪ್ಪಣೆ ಪಡೆಯುವ, ಅಥವಾ ಅವರಿಗೆ ತಿಳಿಸಿಯೇ ಲಗ್ನ ಏರ್ಪಡಿಸುವ ಪದ್ಧತಿ ಇತ್ತು. ಲಗ್ನಪತ್ರ ಮೊದಲಾದವನ್ನು ಕಟ್ಟುವಲ್ಲಿಯೂ ಅವರ ಅಪ್ಪಣೆ ಪಡೆದೇ ಆ ಕಾರ್ಯಕ್ರಮವನ್ನು ನೆರವೇರಿಸುತ್ತಿದ್ದರು. ಅಲ್ಲದೆ ಲಗ್ನವಾದ ಮೇಲೆ ವಧೂ–ವರರು ಆಶೀರ್ವಾದ ಪಡೆಯಲು ದೇಸಾಯಿ ಅವರ ಮನೆಗೆ ಹೋಗುವ ಪರಿಪಾಠವಿದ್ದಿತು. ಆದರೆ ಈಗ ಈ ವ್ಯವಸ್ಥೆ ಕ್ರಮೇಣ ಕಡಿಮೆ ಆಗಿದೆ. ಆದರೂ ಅವರ ಮನೆಗೆ ಬಾಬು ಕಳಿಸುವ ಪದ್ಧತಿ ಈಗಲೂ ಇದೆ.

ಮೂಲಪುರುಷರು (?)
- ದೊಡ್ಡಬಸಪ್ಪ ದೇಸಾಯಿ
  - ದೊಡ್ಡಲಿಂಗಪ್ಪ ದೇಸಾಯಿ, ಹಿರೇ ಮ್ಯಾಗೇರಿ
  - ಸಣ್ಣಲಿಂಗಪ್ಪ ದೇಸಾಯಿ
    - ಗದಿಗೆಪ್ಪ ದೇಸಾಯಿ
      - ಲಿಂಗಪ್ಪ ದೇಸಾಯಿ
        - ಮುದಿ ಬಸಪ್ಪ ದೇಸಾಯಿ
          - ಕಳಕಪ್ಪ ದೇಸಾಯಿ
            - ಸಂಗಪ್ಪ ದೇಸಾಯಿ
              - ಬಸವಂತರಾವ್ ದೇಸಾಯಿ
                - ಸಂಗಪ್ಪ ದೇಸಾಯಿ
                  - ಬಸವಂತರಾವ್ ದೇಸಾಯಿ, ಕುಟುಂಬ ಸಿದ್ಧಗಂಗಮ್ಮ, ಮಹತ್ವದ ವ್ಯಕ್ತಿ (ಅವ್ವನವರ ಕೆರೆ)
                    - ದತ್ತ ಪುತ್ರ ಗುರುಸಿದ್ಧಪ್ಪ ದೇಸಾಯಿ (ಕಪ್ಪತರ ಹೊಲದಲಿ ಕೆರೆ ಕಟ್ಟಿಸಿದ)
                      - ಶಂಕರಪ್ಪ ದೇಸಾಯಿ (ಕಲ್ಲಿನ ಕೋಟೆ ಕಟ್ಟಿಸಿದ್ದು)
                        - ಗದಿಗೆಪ್ಪ ದೇಸಾಯಿ
                          - ಶಂಕರಪ್ಪ ದೇಸಾಯಿ (ಈಗ ಇರುವವರು)
                  - ಗದಿಗೆಪ್ಪ ದೇಸಾಯಿ
        - ಬಸವಂತರಾವ್ ದೇಸಾಯಿ, ಸಂತಾನಭಿವೃದ್ಧಿ ಇಲ್ಲ
  - ಬಸವಂತರಾವ್ ದೇಸಾಯಿ, ಚಿಕ್ಕ ಮ್ಯಾಗೇರಿ
  - ಅದೃಶಪ್ಪ ದೇಸಾಯಿ, ಯಲಬುರ್ಗಾ

ಡಾ. ಶ್ರೀನಿವಾಸ ಹಾವನೂರ*

ಅಪರಿಚಿತ ಹೈದರ್

ಇತಿಹಾಸ ಗ್ರಂಥಗಳಲ್ಲಿ ಹೈದರನ ಚರಿತ್ರೆ ಬಂದಿದ್ದರೂ ಅವೆಷ್ಟೋ ವಿಷಯಗಳು ಬೆಳಕಿಗೆ ಬಂದಿಲ್ಲ. ಹಾಗೆ ಬಂದಿದ್ದರೂ ಮೋಘಮ್ ತೇಲು ಮೇಲಿನ ರೀತಿಯಲ್ಲಿ ತಿಳಿದಿರುತ್ತೇವೆ.

ಇನ್ನೊಂದೆಂದರೆ ಹೈದರ್ ಅದರಂತೆ ಟೀಪೂ ಇವರ ಬಗ್ಗೆ ಸುರುವಾಲೆಗೆ ವಿದೇಶೀ ಭಾಷೆಗಳಲ್ಲಿ ಗ್ರಂಥಗಳು ಬಂದುವು. ನಮ್ಮ ದೇಶದಲ್ಲಿ ಇವರುಗಳಷ್ಟೇ ವಿಖ್ಯಾತರಾದ ಅಶೋಕ ಚಕ್ರವರ್ತಿ, ಅಕಬರ, ನಮ್ಮ ಕೃಷ್ಣದೇವರಾಯ ಇವರ ಚರಿತ್ರೆಗಳು ಯುರೋಪಿಯನ್ ಭಾಷೆಗಳಲ್ಲಿ, ಅದೂ ಅವರು ಆಳಿ ಬಾಳಿ ಹೋದ ಕಾಲದಲ್ಲಿ ಬಂದದ್ದೇ ಇಲ್ಲ. ಈ ತಂದೆ ಮಗನ ಕುರಿತು ಗ್ರಂಥಾದಿಗಳು ಬಂದದ್ದರ ಕಾರಣ ಅವರಿಗೆ ಈ ಫ್ರೆಂಚ್, ಇಂಗ್ಲಿಶ್ ಜರ್ಮನ್ ವಿದೇಶೀಯರ ಸಂಪರ್ಕ – ಎನ್ನುವುದನ್ನು ಒಪ್ಪೋಣ. ಆದರೆ ಸಂತೋಷ ಪಡಬೇಕಾದದ್ದಿಲ್ಲ. ಯಾಕಂದರೆ ತುಂಬಾ ತಪ್ಪು ತಪ್ಪಾಗಿ ಅಲ್ಲದೇ ಪರಸ್ಪರ ವಿರುದ್ಧ ರೀತಿಯಲ್ಲಿ ಬರೆದಿದ್ದಾರೆ. ಈ ದೃಷ್ಟಿಯಿಂದಲೂ ನಮಗೆ ನಿಜವಾದ ಹೈದರನ ವ್ಯಕ್ತಿತ್ವ ತಿಳಿದುಬರುವಂತಿಲ್ಲ. ಹೈದರನಿಗೆ ಪೊದೆ ಪೊದೆಯಾಗಿ ಗಡ್ಡ ಬೆಳೆದದ್ದರ ಚಿತ್ರವೇ ಎಲ್ಲೆಡೆಗೆ ನಮ್ಮ ದೇಶದ ಪುಸ್ತಕಗಳಲ್ಲಿ ದೊರೆಯುತ್ತದೆ. ಆದರೆ ಆತ ವಾರಕ್ಕೆ ಎರಡು ಬೇರೆ ಕ್ಷೌರ ಮಾಡಿಸಿಕೊಳ್ಳುತ್ತಿದ್ದ. ಟೀಪು ಸುಲ್ತಾನ ೧೭೯೯ರಲ್ಲಿ ಹತನಾದನಷ್ಟೆ. ಮುಂದಿನ ಕೆಲವೇ ವರ್ಷಗಳಲ್ಲಿ ಯುರೋಪಿಯನ್ ಭಾಷೆಯೊಂದರಲ್ಲಿ ರಚಿಸಲ್ಪಟ್ಟ ಅವನ ಚರಿತ್ರ ಗ್ರಂಥದಲ್ಲಿ, ಅವನಿಗೂ ಗಡ್ಡ ಮೀಸೆಗಳನ್ನು ಕಟ್ಟಿ, ಆ ಚಿತ್ರದ ಕೆಳಗೆ ಟೀಪೂಸುಲ್ತಾನನ ಮರಣ ೧೭೯೭ ಎಂದು ದೊಡ್ಡದಾಗಿ ಕಾಣಿಸಲಾಗಿದೆ.

ಅಂತೂ ಹೈದರನ ಕುರಿತ ಹಲವಾರು ಅಪೂರ್ವ ಗ್ರಂಥಗಳು ಪ್ರಕಟವಾಗಿದ್ದು ಅವುಗಳ ಬಗ್ಗೆ ತುಸು ತಿಳಿದುಕೊಳ್ಳುವುದೂ ಈ ಅಪರಿಚಿತತೆಯನ್ನು ಕಡಿಮೆ ಮಾಡಿದಂತಾಗುತ್ತದೆ. ಹೈದರನನ್ನು ಕುರಿತ ಮೊತ್ತಮೊದಲಿನ ಗ್ರಂಥ ಫ್ರೆಂಚ್ ಭಾಷೆಯಲ್ಲಿದ್ದು, ಅದರ ಹೆಸರು Abreges de i Histoire d Hyder Ali ಎಂಬುದು ಪುಸ್ತಕ ಸಿಗ್ತಾ ಇಲ್ಲ. ಫ್ರಾನ್ಸಿನ ಹಳೆಯ ಲೈಬ್ರರಿಗಳಲ್ಲಿ ಬಿದ್ದುಕೊಂಡಿದೆ. ೧೭೬೦ರ ಸುಮಾರಿಗೆ ರಚಿತವಾದದ್ದು.

ಎರಡನೆಯ ಗ್ರಂಥವೂ ಫ್ರೆಂಚ್ ಭಾಷೆಯಲ್ಲಿದ್ದು, ಹೈದರ್ ಜೀವಂತ ಇದ್ದಾಗಲೇ ಎಂದರೆ ೧೭೬೯ರಲ್ಲಿ ರಚಿತವಾಯಿತು. ಲೇಖಕ ತನ್ನನ್ನು ಕರೆದುಕೊಂಡದ್ದು M.M.D.L.T. ಎಂಬ ಸಂಕ್ಷಿಪ್ತಾಕ್ಷರಗಳಿಂದ ಆತ ಹೈದರನ ಒಂದು ಸೈನ್ಯ ಭಾಗದ ಕಮಾಂಡರ್ ಇನ್ ಚೀಫ್ ಇದ್ದ. ಸುದೈವಕ್ಕೆ ಈ ಗ್ರಂಥವನ್ನು ೭–೮ ದಶಕಗಳ ಅನಂತರ (೧೮೪೮ರಲ್ಲಿ) ಗುಲಾಮ ಮಹಮ್ಮದ ಎಂಬವ ಇಂಗ್ಲಿಷಿಗೆ ಅನುವಾದಿಸಿದ್ದಾನೆ. ಗೊತ್ತಿದ್ದ ತಪ್ಪುಗಳನ್ನು ಸರಿಪಡಿಸಿದ್ದಾನೆ. ರಾಬ್‌ಸನ್ ಎಂಬ ಲೇಖಕ ಮುಂದೆ ಆ ಪ್ರೆಂಚ್ ಪುಸ್ತಕವು ತಪ್ಪುಗಳ ಸರಮಾಲೆಯನ್ನೇ ಹೊಂದಿದೆ. ಹಾಗೂ ಎಷ್ಟೋ ಮಹತ್ವದ ವಿಷಯಗಳು ಇಲ್ಲ. ಆದ್ದರಿಂದ ತಾನು ಪ್ರಾಮಾಣ್ಯ ಗ್ರಂಥವನ್ನು ಬರೆದದ್ದಾಗಿ ಹೇಳಿಕೊಂಡಿದ್ದಾನೆ. ಆತ ಇಂಗ್ಲಿಷರವ. ಫ್ರೆಂಚ್–ಇಂಗ್ಲಿಷರ ಜನ್ಮಜಾತ ಅಸಡ್ಡೆ ಇಲ್ಲಿಯೂ ಕಾಣಿಸಿಕೊಂಡ. ಅನಂತರ ಟೀಪೂಸುಲ್ತಾನನ ಸೆರೆಯಲ್ಲಿದ್ದ ಇಬ್ಬರು ತಪ್ಪಿಸಿಕೊಂಡು ಹೋಗಿ ಪ್ರದೇಶದಲ್ಲಿ ತಾವು ಪಟ್ಟ ಕಷ್ಟ–ನಷ್ಟಗಳನ್ನು ವರ್ಣಿಸಿದ ಪುಸ್ತಕಗಳು ಇಂಗ್ಲಂಡಿನಲ್ಲಿ ತುಂಬಾ ಪ್ರಸಾರಗೊಂಡವು. ಟೀಪೂ ಸುಲ್ತಾನನನ್ನು ಒಬ್ಬ ಖಳನಾಯಕನನ್ನಾಗಿ ಮಾಡಿದವು.

ನಮ್ಮ ದೇಶದಲ್ಲಿ ಮೊತ್ತಮೊದಲು ಬಂದದ್ದು Wilks History of Mysore. ೧೮೧೦ರಲ್ಲಿ ಅವನಿಗೆ ಸರಕಾರೀ ದಾಖಲೆಗಳು ಸುಲಭವಾಗಿ ಲಭ್ಯವಿದ್ದು ಹೈದರ್ ಟೀಪೂ ಬಗ್ಗೆ ತುಂಬಾ ವಿವರಗಳನ್ನು ಒದಗಿಸಿದ್ದಾನೆ. ಬ್ರಿಟಿಷರ ಪರವಾದ Prejudice ಸದ್ದಿಲ್ಲದೆ ಕಾಣಿಸಿಕೊಂಡಿದೆ. ಸ್ವಾಭಾವಿಕವೇ ಇನ್ನು ಕನ್ನಡಕ್ಕೆ ಬರೋಣ.

ಮೊತ್ತ ಮೊದಲಿನ ಗ್ರಂಥ ನಲ್ಲಪ್ಪ ಎಂಬವನ ಹೈದರ್ ನಾಮಾ. ಮೂಲತಃ ಅದೊಂದು ಬಖೈರ್ ಹೈದರ್‌ನನ್ನು ವೈಯಕ್ತಿಕವಾಗಿ ಅರಿತವನು. ಅವನು ತೀರಿಹೋದ ಎರಡೇ ವರ್ಷಗಳಲ್ಲಿ ರಚಿತವಾದದ್ದು (೧೭೮೪). ಅಷ್ಟೊಂದು ಹಿಂದಿನ ಕಾಲಕ್ಕೆ ಚರಿತ್ರೆಯೊಂದನ್ನು ಆಧುನಿಕ ರೀತಿಯಲ್ಲಿ ಬರೆದದ್ದು.

ಆದಷ್ಟು ನಿಷ್ಪಕ್ಷಪಾತವಾಗಿ ಚರಿತ್ರ ವ್ಯಕ್ತಿಯ ಬಗ್ಗೆ ಗೌರವವನ್ನಿಟ್ಟುಕೊಂಡೂ ನಲ್ಲಪ್ಪ ಅವನ ಗುಣದೋಷಗಳನ್ನು ತೋರಿಸಿದ್ದು ನಿಜಕ್ಕೂ ಮೆಚ್ಚಬೇಕಾದದ್ದು.

ಎರಡನೆಯದು 'ಜಂಗ್ ನಾಮಾ' (೧೮೯೧ರಲ್ಲಿ) ಪರ್ಶಿಯನ್ ಭಾಷೆಯಲ್ಲಿ ರಚಿತವಾದದ್ದು ಕನ್ನಡಕ್ಕೆ ಅನುವಾದಗೊಂಡಿದೆ. ಈ ಅಪೂರ್ವ ಹಸ್ತಪ್ರತಿ ಮಾಸ್ತಿಯವರ ಸಂಗ್ರಹದಲ್ಲಿ ಅಕಸ್ಮಾತ್ತಾಗಿ ದೊರೆತದ್ದು. ಮಾಸ್ತಿ ಅಧ್ಯಯನ ಪೀಠದ ವತಿಯಿಂದ ಪ್ರಕಟಿಸಲಿದ್ದಾರೆ.

ಮರುವರ್ಷ ಎಂದರೆ ೧೮೯೨ರಲ್ಲಿ ಧಾರವಾಡದ ರಾ.ಹ. ದೇಶಪಾಂಡೆಯವರು ಇವರಿಬ್ಬರ ಚರಿತ್ರೆಯನ್ನು ತಿಳಿಯಾಗಿ ಬರೆದಿದ್ದಾರೆ. ಅಲ್ಲಲ್ಲಿ ಅವರುಗಳ ಸೋಲು ಗೆಲವುಗಳ ವಿವೇಚನೆ ಮಾಡಿದ್ದಾರೆ.

ಕೊನೆಯದಾಗಿ ಹೇಳಬೇಕಾದದ್ದು ಅಪ್ಪಣ್ಣಶೆಟ್ಟಿ ಎಂಬವನು ಹೈದರ ಅಲಿ ಬಗ್ಗೆಯೇ ಬರೆದ ಗ್ರಂಥ (೧೮೯೭). ಅದಾಗಿ ಇವತ್ತಿನವರೆಗೆ ಒಂದಾದರೂ ಪ್ರತ್ಯೇಕ ಕನ್ನಡ ಗ್ರಂಥ ಅವನ ಬಗ್ಗೆ ಬಂದಿಲ್ಲವೆಂದರೆ ಆಶ್ಚರ್ಯವಾದೀತು. ಸುರುವಿಗೆ ನಾವು ಹೇಳಿದ ಅಪರಿಚಿತತೆಯೂ ಒಂದು ಕಾರಣ ಎನ್ನೋಣವೆ !

ಇನ್ನೀಗ ಹೈದರನ ವೈಯಕ್ತಿಕ ಜೀವನ ಹಾಗೂ ವ್ಯಕ್ತಿತ್ವಕ್ಕೆ ಸಂಬಂಧಿಸಿದ್ದಷ್ಟನ್ನೇ ಅದರಲ್ಲಿಯೂ ಅಪರಿಚಿತವಾದ ಕೆಲವೇ ವಿವರಗಳನ್ನು ಈ ಪ್ರಬಂಧದಲ್ಲಿ ಕೊಡಬಯಸುವೆವು.

ಮೊದಲನೆಯ ವಿಷಯ ಹೈದರನಿಗೆ ಉರ್ದು ಆಗಲಿ ಕನ್ನಡವಾಗಲಿ ಒಂದಕ್ಷರವೂ ಓದಲಿಕ್ಕೆ ಬರೀಲಿಕ್ಕೆ ಬರತಿರಲಿಲ್ಲ. ಇದು ಹೇಗೆ ಆಯಿತು ? ಕಾರಣವನ್ನು ಯಾರೂ ಹೇಳಿಲ್ಲ. ಆದದ್ದು ಇಷ್ಟು, ಹೈದರನಿಗೆ ೭ ವರ್ಷ, ಅವನ ಅಣ್ಣ ೯ ವರ್ಷದವರಿದ್ದಾಗ ಅವರ ತಂದೆ ತೀರಿಕೊಂಡ. ಆತ ೧೫೦ ಸೈನ್ಯದ ಅಧಿಪತಿಯೂ ಆಗಿದ್ದ. ಆಸ್ತಿ ಪಾಸ್ತಿ ಇತ್ತು. ಆದರೆ ಇದ್ದದ್ದನ್ನೆಲ್ಲ ಪೋಲು ಮಾಡಿ ೧೦ ಸಾವಿರ ವರಹದ ಸಾಲ ಉಳಿಸಿ ಸತ್ತ. ಆ ಸಾಲ ತೀರಿಸಲಿಕ್ಕೆ ಈ ಅಣ್ಣ ತಮ್ಮಂದಿರು ಒದ್ದಾಡಿ ಹೇಗೂ ಬಗೆಹರಿಸಿದರೂ ನಂಜರಾಜ ದಳವಾಯಿಯ ಆಶ್ರಯದಲ್ಲಿ ನೆಲೆ ನಿಂತರು. ಸಣ್ಣವನಾದ ಹೈದರ್ ಪೋಲಿಯಾಗಿ ಅಲ್ಲಿ ಇಲ್ಲಿ ತಿರುಗಾಡುತ್ತಿದ್ದ. ಕೆಲವು ವರ್ಷಗಳಾದ ಮೇಲೆ ಅಣ್ಣನೂ ತೀರಿದಾಗ ಹೈದರ್ ನೇರವಾಗಿ ಸೈನಿಕ ವೃತ್ತಿಯಲ್ಲಿ ನಿಲ್ಲಬೇಕಾಯಿತು. ಹೀಗಾಗಿ ಹೈದರನಿಗೆ ವಿದ್ಯಾಭ್ಯಾಸ ತಪ್ಪಿಹೋಯಿತು.

ಈ ಸ್ಥಿತಿಯಲ್ಲಿ ಬಲು ಬೇಗ ಪ್ರಸಿದ್ಧನಾದದ್ದರ ಮೂಲ ಕಾರಣವೆಂದರೆ ಸಣ್ಣ ಸಣ್ಣ ಪಾಳೆಯಗಾರರು ತುಂಬಾ ಜನರಿದ್ದರಲ್ಲದೆ ಅವರನ್ನು ಸುಲಿದು ದುಡ್ಡು ಮಾಡಿದ. ಅವರಿಂದ ತನ್ನ ಸೈನ್ಯವನ್ನು ವರ್ಧಿಸಿ ಇನ್ನಷ್ಟು ಪ್ರಬಲನಾದ. ಹುಟ್ಟಿನಲ್ಲಿ ಬಡವನಾಗಿದ್ದ ಹೈದರನಿಗೆ ಧನಕನಕವೆಂದರೆ ಅಸಾಧ್ಯ ಮೋಹ. ಭದ್ರವಾದ ಪೆಟ್ಟಿಗೆಗಳಲ್ಲಿ ತುಂಬಿ ತುಂಬಿ ಇಟ್ಟು. ಅವನ್ನು ನೋಡಿದಾಗೆಲ್ಲ ಹೆಮ್ಮೆಪಡುತ್ತಿದ್ದ. ಯುದ್ಧದಲ್ಲಿ ಸೋತು ಓಡಿ ಹೋಗುವುದಿದ್ದಾಗ ಮೊದಲು ಅವುಗಳನ್ನು ಗುಪ್ತವಾಗಿ ಸಾಗಿಸಿ, ಅನಂತರವೇ ಹೆಂಡತಿ ಮಕ್ಕಳ ಸುರಕ್ಷಿತತೆಗೆ ಗಮನ ಕೊಡುತ್ತಿದ್ದ.

ಮುಸಲ್ಮಾನನಾದ ಹೈದರ್ ಗಡ್ಡ ಮೀಸೆ ಇಟ್ಟುಕೊಂಡಿದ್ದನೇ ? ಅಧಿಕೃತ ಎನ್ನಬಹುದಾದ ಎರಡೂ ಬಗೆಯ ಚಿತ್ರಗಳಿವೆ. ಪೂರ್ಣವಾಗಿ ತಲೆ ಮುಖ ಬೋಳಿಸಿಕೊಂಡ ಒಂದು ಚಿತ್ರವನ್ನು ನಲ್ಲಪ್ಪ ಕೊಟ್ಟಿದ್ದಾನೆ. ಆದರೆ ಬೇರೊಂದು ದಾಖಲೆಯಲ್ಲಿ "ಹೈದರ್ ಊರಿನಲ್ಲಿದ್ದಾಗ ವಾರಕ್ಕೆ ಎರಡು ಬಾರಿ ತಪ್ಪದೇ ಕ್ಷೌರ ಮಾಡಿಸಿಕೊಳ್ಳುತ್ತಿದ್ದ. ಅದಕ್ಕಾಗಿ ಇಬ್ಬರು ಹಜಾಮರು ಹಾಜರ ಇರುತ್ತಿದ್ದರು" ಎಂದಿದೆ.

ಮಗನಾದ ಟೀಪೂಸುಲ್ತಾನನದು ದುಂಡು ಮುಖ. ಆದರೆ ಅದು ತಂದೆಯಿಂದ ಅಲ್ಲ, ತಾಯಿಯಿಂದ ಬಂದದ್ದು ಇರಬೇಕು. ಹೈದರನದು ಕೋಲು ಮುಖ, ಆದರೆ ಅವನನ್ನು ನೋಡಿದೊಡನೆ ಅವನ ಮುಖದಲ್ಲಿ ಏನೂ ಒಂದು ಬಗೆಯ ಪ್ರಖರತೆ ಕಂಡುಬರುತ್ತಿತ್ತು. ವಿಶೇಷ ಆಭರಣಗಳನ್ನೇನೂ ಧರಿಸುತ್ತಿದ್ದಿಲ್ಲ. ಫಕ್ಕನೆ ಎದ್ದು ಹೋಗಲು ಅನುಕೂಲವಾಗುವಂತಹ ಬಟ್ಟೆ ಬರೆ ಹಾಗೂ ಪಾದರಕ್ಷೆಗಳು. ಆದರೆ ಯುದ್ಧರಂಗದಲ್ಲಿಯೇ ಹೆಚ್ಚು ಸಮಯ ಕಳೆದವನಾದ್ದರಿಂದ ಮುಖದ ಬಣ್ಣ ಮಾಸಿದ್ದಿತು.

ಈಗಿನ ಕಾಲದ ಅವನ ಹೆಚ್ಚಿನ ಚಿತ್ರಗಳಿಗೆ ಹುಲುಸಾದ ಗಡ್ಡವಿರುವ ವ್ಯಕ್ತಿಯನ್ನು ಹೈದರ ನವಾಬ ಎಂದು ಹೆಸರಿಸುತ್ತಾರೆ. ಆದರೆ ಅವನ ಚರಿತ್ರೆಯೊಂದರಲ್ಲಿ ಅವನು ವಾರದಲ್ಲಿ ೨ ಬಾರಿ ಕ್ಷೌರ ಮಾಡಿಸಿಕೊಳ್ಳುತ್ತಿದ್ದನೆಂದು ಹೇಳಿದ್ದಾರೆ. ಅದಕ್ಕಾಗಿ ಇಬ್ಬರು ಹಜಾಮರು ಇಂದು ಓೀಗಾದರೆ ಓರ್ವ ಫ್ರೆಂಚ್ ಸೇನಾಪತಿಯು ಹೈದರ್‌ನನ್ನು ಸಂದರ್ಶಿಸಿದ. ಚಿತ್ರದಲ್ಲಿ ತೆಳು ಮೀಸೆ ಇದೆ. ಒಬ್ಬ ಫ್ರೆಂಚ್ ಕಲಾವಿದನು ಪ್ರತ್ಯಕ್ಷನಾಗಿ ನಿಂತು ಆ ಚಿತ್ರವನ್ನು ಬಿಡಿಸಿದ್ದರ ಸಾಧ್ಯತೆ ಇದೆ. ಟೀಪೂಸುಲ್ತಾನನಿಗೂ ಅಂಥ ಮೀಸೆ ಇದ್ದಿತು.

ಆದರೆ ಟೀಪೂ ತೀರಿಕೊಂಡ, ಎರಡೇ ವರ್ಷದಲ್ಲಿ ಜರ್ಮನ್ ಭಾಷೆಯಲ್ಲಿ ಹೈದರ್-ಟೀಪೂ ಇವರ ಚರಿತ್ರೆಯು ಪ್ರಕಟವಾಗಿದ್ದು ಅವರ ಚಿತ್ರವನ್ನು ಬಿಡಿಸಲಾಗಿದೆ. ಇಬ್ಬರಿಗೂ ಉದ್ದುದ್ದನೆಯ ಗಡ್ಡ, ಮೀಸೆಗಳು ಜೊತೆಗೆ ಹಣ್ಣು ಮುದುಕರಿಗೆ ಇದ್ದ ಹಾಗೆ ಜೋಲು ಮುಖದ ಮಡಿಕೆಗಳು. ಎಲ್ಲರಿಗೂ ತಿಳಿದಿದ್ದಂತೆ ಹೈದರ್ ತನ್ನ ೬೪ನೆಯ ವಯಸ್ಸಿನಲ್ಲಿಯೂ, ಟೀಪೂಸುಲ್ತಾನ್ ತನ್ನ ೪೯ನೇ

ವಯಸ್ಸಿನಲ್ಲಿಯೂ ಗತಿಸಿದ್ದು. ಹಣ್ಣು ಮುದುಕರಾಗೆ ಹೇಗೆ ಕಂಡಾರು ? ಚರಿತ್ರಕಾರ. ಖಂಡಿತವಾಗಿ ತನ್ನ ಕಲ್ಪನೆಯನ್ನು ಸೇರಿಸಿ ಚಿತ್ರ ಬಿಡಿಸಿದ್ದಾನಲ್ಲದೆ ಅವರನ್ನು ಯಾವ ರೀತಿಯಲ್ಲಿಯೂ ಕಂಡವನಲ್ಲ. ಇಂಥ ಹಲವಾರು ಚಿತ್ರಗಳನ್ನು ನೋಡಿದ ಮೇಲೆ, ಹೈದರ್ ಮಧ್ಯವಯಸ್ಸಿನವರೆಗೆ ನಿಯಮಿತವಾಗಿ ಕ್ಷೌರ ಮಾಡಿಸಿಕೊಳ್ಳುತ್ತಿದ್ದ. ಮೀಸೆಯನ್ನು ಮಾತ್ರ ಇಟ್ಟುಕೊಂಡಿದ್ದನೆಂದು ಅನಿಸುತ್ತಿದೆ.

ಹೈದರನಿಗೆ ಖಾಸಾ ಸ್ನೇಹಿತರು ತುಂಬಾ ಜನ ಇದ್ದರು. ಬಿಡುವಿದ್ದಾಗ ಅವರೊಡನೆ ಹರಟುವುದು ತುಂಬಾ ಸೇರುತ್ತಿತ್ತು. ಸುವರ್ ಮುಂತಾಗಿ ಮಾಮೂಲಿ ಬೈಗಳನ್ನು ಬಳಸುತ್ತಿದ್ದು. ಅವರಲ್ಲಿ ಆತ್ಮೀಯರಾದ ೩-೪ ಜನ ಯಾವಾಗಲೂ ಅವನು ಹೋದಲ್ಲೆಲ್ಲ ತಾವೂ ಹೋಗುತ್ತಿದ್ದರು.

ಒಮ್ಮೆ ಹೈದರ್ ತನಗಿಂತ ೮-೧೦ ವರ್ಷ ಹಿರಿಯನಾದ ತನ್ನ ಸಂಗಾತಿಗೆ ಹೇಳಿದನಂತೆ. "ಛೀ ಏನು ಹಾಗೆ ಗಡ್ಡ ಬೆಳೆಸಿದ್ದೀಯಲ್ಲ" ಎಂದು. ಅದಕ್ಕೆ ಆತ "ನಿನ್ನ ಹಾಗ ಮುಖ ಬೋಳಾಗಿ ಇದ್ದರೆ ಹಿಜಡಾ ಅಂತಾರೆ" ಎಂದ ಉತ್ತರ ಕೊಟ್ಟ.

ಮುಂದೊಂದು ಪ್ರಸಂಗದಲ್ಲಿ ಆ ಸಂಗಾತಿ ತನ್ನೆಲ್ಲ ಕೂದಲು ತೆಗೆಸಿ ಬೋಳು ತಲೆಯವನಾಗಬೇಕಾಗಿ ಬಂತು. ಆ ಪ್ರಸಂಗ ಹೀಗಿದೆ. ಮರಾಠರು ಬಹು ದೊಡ್ಡ ಸೈನ್ಯದೊಂದಿಗೆ ಬಂದು ಹೈದರನನ್ನು ಸೋಲಿಸಿದರು. ಇಷ್ಟೇ ಅಲ್ಲ ಅವನನ್ನು ಸೆರೆಹಿಡಿಯುವಷ್ಟು ಸಮೀಪದಲ್ಲಿ ಬಂದಿದ್ದರು. ಆಗ ಮರಾಠಾ ಸೇನಾಪತಿ ಹೇಳಿದನಂತೆ. "ನಾವು ಸುತ್ತುವರಿದ ಹೈದರನ ಸೈನಿಕರಲ್ಲಿ ಯಾರಾದರೂ ಗಡ್ಡ ಮೀಸೆ ತಲೆಗೂದಲು ತೆಗೆಸಿದವ ಕಂಡರೆ, ಅವನೇ ಹೈದರನೆಂದು ತಿಳಿಯಿರಿ. ಎಳಕೊಂಡು ಬನ್ನಿ" ಸೈನಿಕರು ಹುಡುಕತೊಡಗಿದರು. ಅಷ್ಟರಲ್ಲಿ ಒಬ್ಬ ವ್ಯಕ್ತಿ ದೊಡ್ಡದೊಂದು ಕುದುರೆಯ ಮೇಲೆ ಕುಳಿತು ತಪ್ಪಿಸಿಕೊಂಡು ಹೋಗುವವರ ಹಾಗೆ ಕಂಡ. ಗಡ್ಡ-ಮೀಸೆ ಇಲ್ಲದವ ! ಹೋ ! ಸಿಕ್ಕಾ ಹೈದರ್ ಎಂದು ಹಿಡಿಯಹೋದರು. ಆದರೆ ಆ ವ್ಯಕ್ತಿ ಈಗ ಹೇಳಿದ: ಹೈದರನ ಆಪ್ತ ಸಂಗಾತಿಯಾಗಿದ್ದೆ. ತನ್ನ ಒಡೆಯನ ಸುರಕ್ಷಿತತೆಗಾಗಿ ಕೂದಲನ್ನು ತೆಗೆಸಿದ್ದೆ. ಆ ಗದ್ದಲದಲ್ಲಿ ಹೈದರ್ ಫಕೀರನ ವೇಷ ಹಾಕಿಕೊಂಡು ಪಾರಾಗಿದ್ದ.

ಸಾವಿರ ಕುದುರೆಯ ಸವಾರ ಮನೇ ಹೆಂಡತಿ ಪಿಂಚಾರ ಎಂಬ ಒಂದು ಹಳೆಯ ಗಾದೆಯ ಮಾತಿದೆ. ಹೈದರನು ಸಹಸ್ರಗಟ್ಟಲೆ ಕುದುರೆ ದಳದ ಸರದಾರನಾಗಿದ್ದರೂ ಇಂಗ್ಲಿಷ ರಂಥ ಬಲಾಢ್ಯರನ್ನು ಬಗ್ಗಿಸಿದವನಾದರೂ, ತನ್ನ ಖಾಸಾ ಹೆಂಡತಿಗೆ ಮಾತ್ರ ಹೆದರಿ ನಡುಗುತ್ತಿದ್ದ. ಕಡಪಾದ ನವಾಬನ ಮಗಳಾಗಿದ್ದ ಆಕೆ, ಹೈದರ್ ಊರಲ್ಲಿ ಇಲ್ಲದಾಗ ಹಾಗೆ ಇರದೇ ಇದ್ದ ದಿನಗಳೇ ಜಾಸ್ತಿ. ಆಕೆ ಶ್ರೀರಂಗಪಟ್ಟಣದ ಅರಮನೆಯನ್ನು, ಜನಾನಾ, ಆಡಳಿತ, ವ್ಯವಹಾರ ಎಲ್ಲವನ್ನೂ ನೋಡಿಕೊಳ್ಳುತ್ತಿದ್ದಳು. ಒಳ್ಳೇ ಪ್ರಭಾವಶಾಲೀ ಜಬರದಸ್ತಿನ ವ್ಯಕ್ತಿತ್ವ. ಹೈದರನು ಯುದ್ಧರಂಗದಿಂದ ಮರಳಿ ಬಂದೊಡನೆ ಅವಳ ಜನಾನಾಕ್ಕೆ ಭೆಟ್ಟಿ ಕೊಡುವುದು ವಾಡಿಕೆ. ಇಂಥ ಸುದ್ದಿಗಳ ಪರಸ್ಪರ ವರದಿ. ಒಮ್ಮೆ ಹೈದರ್ ಅವಳನ್ನು ಕಂಡು, ಒಂದಾದಮೇಲೆ ತನ್ನ ಖಾಸಾ ಕೋಣೆಯಲ್ಲಿ ಕುಳಿತಿದ್ದ ಆಪ್ತ ಸ್ನೇಹಿತನೊಬ್ಬನ ಎದುರು ಅಬ್ಬಬ್ಬಾ ! ಎಂಥಾ ಹೆಂಗಸು ತುಂಬಾ ಒದರಾಡಿದಳು ! ಇನ್ನು ಏಕೆಯ ಉಸಾಬರಿಗೇ ಹೋಗುವುದಿಲ್ಲ" ಎಂದೆಲ್ಲ ಒರಲಿದನಂತೆ. ಕೈಲಾಸಂ ನಾಟಕದಲ್ಲಿ ಒಂದೆಡೆ ಬರುತ್ತದೆ. ಗಂಡ ಹೆಂಡತಿಗೆ ಹೇಳ್ತಾನೆ "ಅಬ್ಬಾ ಏನು Teribleo ನಿನ್ನ tongue". ಹೈದರನ ಆಗಿನ ಸ್ಥಿತಿ ಹಾಗೇ ಇದ್ದಿತು.

ಹೈದರನ ಜನಾನಾ ! ಈ ಪಟ್ಟದ ರಾಣಿಯಲ್ಲದೆ, ನಿಕಾ ಮಾಡಿಕೊಂಡ ಇನ್ನೂ ಕೆಲವರು ಇದ್ದರು. ಇವರಲ್ಲದೆ ಉಪಪತ್ನಿಯರು. ಹಾಗನ್ನುವದಕ್ಕಿಂತ ನಾಲ್ಕು ದಿನದ ಹೆಣ್ಣುಗಳು. ಹೈದರ್‌ಗೆ ಸ್ತ್ರೀ ವ್ಯಾಮೋಹ ಜಾಸ್ತಿ. ಹಾಗೆಂದು ಕಾಮುಕನಲ್ಲ. ಚಂದದ ಹೆಣ್ಣು ಕಣ್ಣಿಗೆ ಬಿದ್ದರಾಯಿತು. ಹೇಗಾದರೂ ಮಾಡಿ ಎಳೆದು ತರಿಸುತ್ತಿದ್ದ. ನಾಲ್ಕು ದಿನ ಉಳಿಸಿಕೊಂಡು ಅವಳನ್ನು ತನ್ನ ಬಳಗದವರಿಗೆ ಇಲ್ಲವೆ ಸೇನಾಪತಿಗಳಲ್ಲಿ ಒಬ್ಬರಿಗೆ ಕೊಟ್ಟುಬಿಡುತ್ತಿದ್ದ.

ಹೀಗೆ ಹಿಡಿದು ತಂದ ಒಬ್ಬಳನ್ನು ಮಾತ್ರ ಹೈದರ್ ಜನಾನಾದಲ್ಲೇ ಉಳಿಸಿಕೊಳ್ಳಬೇಕಾದ ಪರಿಸ್ಥಿತಿ ಬಂತು. ಹೈದರನಿಗೆ ಬತ್ತಲೆ ಕುದುರೆಯ ಮೇಲೆ ಕುಳಿತು ತಿರುಗಾಡುವುದು ಬಹಳ ಸೇರುತ್ತಿತ್ತು. ಹಾಗೊಮ್ಮೆ ಹೊರಟಾಗ ಒಬ್ಬ ಹಳ್ಳಿಯ ಹೆಂಗಸು ಕೈಯಲ್ಲಿ ಬುತ್ತಿಯ ಗಂಟನ್ನು ಹಿಡಿದುಕೊಂಡು ಹೊರಟದ್ದು ಕಾಣಿಸಿತ್ತು.

ಹೈದರ ಕೇಳಿದ "ಯಾರಾಕಿ ನೀನು ? ಎಲ್ಲಿಗೆ ಹೊರಟೇನು ? ಕೈಯಲ್ಲಿ ಏನಿದೆ ?"

"ಇದು ಬುತ್ತಿಯು ಗಂಟು. ನನ್ನ ಗಂಡನಿಗೆ ಕೊಡಲಿಕ್ಕೆಂದು ಹೊಲಕ್ಕೆ ಹೋಗುತ್ತಿದ್ದೇನೆ"

"ನನಗೆ ಕೊಡ್ತೀಯಾ"

"ಇಲ್ಲ ಇದು ನನ್ನ ಗಂಡನಿಗೆಂದೇ ತಂದದ್ದು" ನೀನು ನನ್ನ ಗಂಡನೇ ?"

"ನಾನು ಹೈದರ ಅಲ್ಲ ಖಾನ ನಿನ್ನ ಗಂಡನಾಗ್ತೇನೆ ಆಗಾದರೂ ಕೊಡ್ತೀಯ ?"

ಆಯಿತು. ಆಕೆ ಜನಾನಾ ಸೇರಿದಳು. ಆದರೆ ಬಿಟ್ಟು ಹೋಗಲಿಲ್ಲ. ಕಾರಣ ಎಂದರೆ ಅವಳಿಗೆ ಕುದುರೆ ಮುಂತಾದ

ಪ್ರಾಣಿಗಳಿಗೆ ಗಾಯವಾದರೆ, ಗುಣಪಡಿಸುವ ಸೊಪ್ಪು ಮುಂತಾದ್ದು ಗೊತ್ತಿತ್ತು. ವ್ಯವಹಾರ ಚತುರಳೂ ಇದ್ದದರಿಂದ ಜನಾನಾದಲ್ಲಿ ಒಬ್ಬ ಗಣ್ಯ ವ್ಯಕ್ತಿಯಾಗಿ ಮೆರೆದಳು"

ಈ ಘಟನೆಯನ್ನು ದಾಖಲಿಸಿದವರು, ಹೈದರನ ಆಸ್ಥಾನದಲ್ಲೇ ಇದ್ದು ನಲ್ಲಪ್ಪ ಎಂಬವರು. ಅವರು ಬರೆದ 'ಹೈದರನಾಮಾ' ಒಂದು ಅತ್ಯುತ್ತಮವಾದ ಇತಿಹಾಸ ರಚಯಿತರಿಗೆ ಮಾದರಿಯಾಗಬಲ್ಲ ಇತಿವೃತ್ತವಾಗಿದೆ. ಹೈದರ ತೀರಿಹೋದ ಎರಡನೇ ವರ್ಷದಲ್ಲಿಯ ರಚಿತವಾದದ್ದು. ಮಹತ್ವದ್ದೆಂದರೆ ನಲ್ಲಪ್ಪ ಹೈದರನ ಮೂರು ದೋಷಗಳನ್ನು ನಿರ್ದಾಕ್ಷಿಣ್ಯವಾಗಿ ಕೊಟ್ಟಿದ್ದಾನೆ. ಅವೆಂದರೆ ೧) ಸ್ತ್ರೀ ವ್ಯಾಮೋಹ, ೨) ಹಿತ್ತಾಳೆ ಕಿವಿ, ೩) ಕೊಟ್ಟ ಮಾತಿಗೆ ತಪ್ಪುವುದು. ಆದರೂ ಗೌರವಾನ್ವಿತ ವ್ಯಕ್ತಿ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಹೈದರನ ವ್ಯಕ್ತಿತ್ವದ ಇನ್ನೊಂದು ಅಂಶವನ್ನು ಹೇಳಲೇಬೇಕು. ಆತ ಜನಗಳನ್ನು ಹಿಂಸಿಸುವುದರಲ್ಲಿ ಖುಶಿ ಪಡುತ್ತಿದ್ದ. ತಮ್ಮವರೇ ಇರಲಿ ತಪ್ಪು ಮಾಡಿದ್ದರೆ ಅವರನ್ನು ತನ್ನೆದುರೆ ನಿಲ್ಲಿಸಿಕೊಂಡು ಚೋಡಾನದಿಂದ ಹೊಡೆಸುತ್ತಿದ್ದ. ನೂರು, ಇನ್ನೂರು, ಮುನ್ನೂರು ಆ ತಪ್ಪಿನ ಮೊತ್ತಕ್ಕೆ ತಕ್ಕಂತೆ ಈ ಏಟುಗಳ ಲೆಕ್ಕ. ಹೈದರನನ್ನು ಕೆಟ್ಟ ರೀತಿಯಿಂದ ಚಿತ್ರಿಸಿದ ಮಿರ್ಝಾ ಇಕಬಲ್ ಎಂಬ ಪರ್ಶಿಯನ್ ಲೇಖಕ ಮಗನಾದ ಟೀಪೂಸುಲ್ತಾನನಿಗೂ ಏಟು ಹಾಕಿಸಿದ್ದನೆಂದು ಬರೆದಿದ್ದಾನೆ. ಎಷ್ಟು ನಿಜವೋ ಗೊತ್ತಿಲ್ಲ.

ವೈರಿಗಳ ಕಡೆಯವರಿದ್ದರಂತೂ ಹಿಂಸೆಗೆ ಮಿತಿಯೇ ಇರಲಿಲ್ಲ. ಅವರು ಜೀವಂತ ಇರದಿದ್ದರೂ ಕೂಡ. ಶವವನ್ನೇ ಯಾರಾದರೂ ತಂದರೂ ಅವರಿಗೆ ಬಹುಮಾನ ಕೊಡುತ್ತಿದ್ದ.

ವಿಶೇಷವೆಂದರೆ ಇಂಥ ಹಲವು ಪ್ರಸಂಗಗಳಲ್ಲಿ ಒಂದು ರೀತಿಯ ಅಸ್ತಿಕ ಹಾಗೂ ಕುಹಕತನವೂ ಇರುತ್ತಿತ್ತು. ಮೈಸೂರಿನ ಅರಮನೆಯಲ್ಲಿ ಖಂಡೇರಾಯನೆಂಬ ಆಪ್ತ ಸರದಾರನಿದ್ದ. (ಅವನನ್ನು ಕೋನೇರಿರಾಯ ಎಂದೂ ಇತಿಹಾಸ ಗ್ರಂಥಗಳಲ್ಲಿ ಕರೆಯಲಾಗಿದೆ). ಅಲ್ಲಿಯವರಿಗೆ ವಿಶೇಷತಃ ನಂಜರಾಜ ದಳವಾಯಿಗೆ ಬಹಳ ಬೇಕಾದವ. ಹೈದರನೂ ತನ್ನ ಲೆಕ್ಕಪತ್ರ ವಿಚಾರದಲ್ಲಿ ಅವನ ಸಹಾಯವನ್ನು ಪಡೆದಿದ್ದ. ತುಂಬಾ ವಿಶ್ವಾಸ ಇರಿಸಿದ್ದ. ಇತ್ತ ಹೈದರ್ ದಿನದಿನಕ್ಕೆ ಪ್ರಬಲವಾಗುತ್ತಿರುವುದನ್ನು ಕಂಡು ನಂಜರಾಜ ಹಾಗೂ ಖಂಡೇರಾಯ ಇಬ್ಬರೂ ಸೇರಿ ಅವನನ್ನು ತಗ್ಗಿಸಬೇಕೆಂದು ನಿರ್ಧರಿಸಿದರು. ಯುದ್ಧವೇ ಜರುಗಿ ಹೈದರ್ ಸೋತ. ಆಗ ಹೈದರ್ ನಂಜರಾಜನಿಗೆ ಪತ್ರ ಬರೆದು "ತನ್ನದು ತಪ್ಪಾಯಿತು. ಇನ್ನು ಮೇಲೆ ನಿಮಗೆ ಅಧೀನನಾಗಿ ಇರುತ್ತೇನೆ. ನನ್ನದೊಂದೇ ವಿನಂತಿ. ಖಂಡೇರಾಯನನ್ನು ನನಗೆ ಒಪ್ಪಿಸುವಿರ ? ನನಗೆ ಅವನ ಸಹಾಯದ ಅಗತ್ಯವಿದೆ" ಎಂದು ಕೇಳಿದ.

ಈ ಖಂಡೇರಾಯನನ್ನು ಅರಮನೆಯಿಂದ ಹೊರ ಹೊರಡಿಸುವಾಗ ಅರಮನೆಯ ರಾಣಿವರ್ಗದವರು ಹೈದರನಿಗೆ "ಅವನನ್ನು ಗಿಳಿಯ ಹಾಗೆ ನೋಡಿಕೊಂಡೆನಪ್ಪ ಅವನ ಯೋಗಕ್ಷೇಮ ನಿನ್ನದು" ಎಂದೆಲ್ಲ ಹೇಳಿದರು. "ಆಗಲಿ ತಾಯೀ ಅವಶ್ಯವಾಗಿ ಗಿಳಿಯ ಹಾಗೆ ನೋಡಿಕೊಳ್ಳುವೆ."

ಹೈದರ್ ಮಾತು ಕೊಟ್ಟಂತೆ ಹಾಗೇ ಮಾಡಿದ. ಖಂಡೇರಾಯನಷ್ಟು ಎತ್ತರದ ಪಂಜರವನ್ನು ನಿರ್ಮಿಸಿ, ಅವನನ್ನು ಅದರಲ್ಲಿ ಬಂಧಿಸಿ, ಗಿಳಿಗೆ ಕೊಡುವಂತೆ. ಬರಿ ಹಾಲು, ಹಣ್ಣು, ಕುಡಿಯುವುದಕ್ಕೆ ಒಂದಷ್ಟು ನೀರು ಕೊಡುತ್ತಿದ್ದನಂತೆ ! ಇದು ಹೈದರ್. ಇಂಥ ಹಲವಾರು ಪ್ರಸಂಗಗಳಿವೆ.

ಹೈದರನ ಸ್ವಭಾವದ ಬಗ್ಗೆ ಇನ್ನೊಂದು ಅಪರಿಚಿತ ಪ್ರಸಂಗವನ್ನು ಹೇಳಿ ಮುಗಿಸುವೆ.

ಈ ಘಟನೆ ನಡೆದದ್ದು ಕ್ರಿ.ಶ. ೧೭೬೬ರಲ್ಲಿ, ಕೊಯಮತ್ತೂರಿನಲ್ಲಿ. ಒಮ್ಮೆ ಒಬ್ಬ ವೃದ್ಧೆ ಬಂದು ಹೈದರನಲ್ಲಿ

"ಆಘಾ ಮಹಮ್ಮದ ಎಂಬುವನು ನನ್ನ ಮಗಳನ್ನು ಓಡಿಸಿಕೊಂಡು ಹೋಗಿದ್ದಾನೆ" ಎಂದು ದೂರಿತ್ತಳು.

"ಅವನು ಇಲ್ಲಿಂದ ಹೋಗಿ ತಿಂಗಳ ಮೇಲಾಯಿತಲ್ಲ? ನೀನು ಈಗ ಬಂದಿದ್ದೀಯಾ ?" ಎಂದ ಹೈದರ್.

"ಶಹಾ ಹೈದರ್‌ರಿಗೆ (ಹೈದರ್ ಹೆಸರಿನ ಮತ್ತೊಬ್ಬ ಅಧಿಕಾರಿ) ತಕರಾರು ಹೇಳಿಕೊಂಡಿದ್ದೆ. ಅವರು ಏನೂ ಮಾಡಲಿಲ್ಲ"

ಈ ಶಹಾ ಹೈದರ್ ನವಾಬ ಹೈದರನಿಗೆ ವಿಶೇಷ ಬೇಕಾದವ. ಈ ಸಂವಾದ ನಡೆದಾಗ ಅವನು ಅಲ್ಲಿಯೇ ಇದ್ದ, ಹೀಗೆ ಉತ್ತರಿಸಿದ :

'ಸಾಹೇಬ್, ಇವರಿಬ್ಬರೂ ವೇಶ್ಯೆಯರು !'

"ಇರಬಹುದು. ಈ ವಿಷಯವನ್ನು ನನಗೆ ಏಕೆ ಹೇಳಲಿಲ್ಲ ?"

"ಪ್ರಯೋಜನ ಇಲ್ಲ ಅಂತ ಏನೂ ಹೇಳಲಿಲ್ಲ. ಮಾಫ್ ಮಾಡಬೇಕು"

"ಸಾಧ್ಯವಿಲ್ಲ. ಸಾಮಾನ್ಯ ಪ್ರಜೆಗಳಿಗೆ ರಕ್ಷಣೆ ಕೊಡುವ ಕರ್ತವ್ಯವನ್ನು ದಯಾಮಯನಾದ ಅಲ್ಲಾನೇ ರಾಜರಿಗೆ ಒಪ್ಪಿಸಿದ್ದಾನೆ. ಆ ಕರ್ತವ್ಯವನ್ನು ಅವನು ನಿರ್ವಹಿಸಿದ್ದರೆ ಜನತೆಯ ಪ್ರೀತಿ-ವಿಶ್ವಾಸಗಳಿಗೆ ಎರವಾದಂತೆಯೇ ಸೈ"


"ಯಾರಲ್ಲಿ ? ಶಹಾನಿಗೆ ೨೦೦ ಕೊರಟೆ ಪಟುಗಳನ್ನು ಕೊಡಿ !" ಇನ್ನು ಆಘಾ ಮಹಮ್ಮದ. ಅವನಿಗೆ ಆಗ ೬೦ ವರ್ಷ ವಯಸ್ಸು. ಆದರೂ ಮೋಹ. "ಅವಳನ್ನು ನನಗೆ ಮಾರಾಟ ಮಾಡು. ತುಂಬಾ ಹಣ ಕೊಡುವೆ" ಅಂದಿದ್ದ. ಆದರೆ ಮುದುಕ ಕೊಟ್ಟಿರಲಿಲ್ಲ. ಯಾಕೆಂದರೆ ಮಗಳ ವೇಶ್ಯಾವೃತ್ತಿಯಿಂದ ತನ್ನ ಉಪಜೀವನ ನಡೆಯಬೇಕು.

ಅಂತೂ ತಾಯಿಗೆ ತನ್ನ ಮಗಳನ್ನು ಒದಗಿಸಿಕೊಟ್ಟ ನಮ್ಮ ಹೈದರ್ !




Geschichte
Hyder Aly
und
dessen Sohn
Tippo Saib
Sultane von Mysur.
aus Tippo Saib eigener Handschrift
Erster Band




Geschichte
Hyder Aly
und
dessen Sohn
Tippo Sayb
Sultane von Mysur
Aus Tippo Saib eigener Handschrift
Zweyter Band
London, 180

ಡಾ. ಎ.ಕೆ. ಶಾಸ್ತ್ರಿ*

ಶೃಂಗೇರಿ ಮಠ ಮತ್ತು ಕಮಿಷನರ್ ಕಬ್ಬನ್

ಹತ್ತೊಂಬತ್ತನೇ ಶತಮಾನದ ಪೂರ್ವಾರ್ಧದ ರಾಜಕೀಯ ಬೆಳವಣಿಗೆ ಭಾರತದ ಅರಸುಗಳಿಗೆ ಅನುಕೂಲವಾಗಿರಲಿಲ್ಲ. ಕ್ರಿಶ. ೧೮೧೬ ಮತ್ತು ೧೮೨೪ರಲ್ಲಿ ಸಂಭವಿಸಿದ ಬರದಿಂದಾಗಿ ಮೈಸೂರು ರಾಜ್ಯ ತತ್ತರಿಸಿತು. ಬ್ರಿಟಿಷ್ ರೆಸಿಡೆಂಟನು ಗವರ್ನರ ಜನರಲ್ ಲಾರ್ಡ ವಿಲಿಯಂ ಬೆಂಟಿಂಕನಿಗೆ ಮೈಸೂರಿನಲ್ಲಿ ಆಡಳಿತ ವಿಫಲವಾಗಿದೆಯೆಂದು ವರದಿ ಸಲ್ಲಿಸಿದನು. ಕ್ರಿಶ. ೧೮೩೦ರಲ್ಲಿ ನಗರ ದಂಗೆಯನ್ನು ಯಶಸ್ವಿಯಾಗಿ ಹತ್ತಿಕ್ಕಲೂ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಸಾಧ್ಯವಾಗಲಿಲ್ಲ ಎಂಬ ಕಾರಣವನ್ನೂ ಮುಂದೆ ಮಾಡಿಕೊಂಡು ೧೮೩೧ರಲ್ಲಿ ವಿಲಿಯಂ ಬೆಂಟಿಂಕನು ಮೈಸೂರನ್ನು ಕಮಿಷನರರ ಆಡಳಿತಕ್ಕೆ ಒಳಪಡಿಸಿದನು. ಮುಂದೆ ೫೦ ವರ್ಷಗಳ ಕಾಲ, ಅಂದರೆ, ೧೮೩೧-೧೮೮೧ರವರೆಗೆ ಮೈಸೂರಿನಲ್ಲಿ ಕಮಿಷನರರ ಆಡಳಿತ ನಡೆಯಿತು. ಮದ್ರಾಸಿನ ಗವರ್ನರರ ಆಡಳಿತ ವ್ಯಾಪ್ತಿಯಲ್ಲಿ ಮೈಸೂರಿನಲ್ಲಿ ಕಮಿಷನರ್‌ರು ಆಡಳಿತ ನಡೆಸಿದರು.[೧] ಈ ಅವಧಿಯಲ್ಲಿ ಆಡಳಿತ ನಡೆಸಿದ ಮಾರ್ಕ್ ಕಬ್ಬನ್ (೧೮೩೪-೧೮೬೧) ಮತ್ತು ಲೂಯಿ ಬೆನ್ಥಾಮ್ ಬೌರಿಂಗರು (೧೮೬೧-೧೮೭೦) ಮಾತ್ರ, ಪ್ರಜಾಹಿತ ಕಾರ್ಯ ಮತ್ತು ಒಳ್ಳೇ ಆಡಳಿತಕ್ಕಾಗಿ ಪ್ರಸಿದ್ಧರಾದರು. ಪ್ರಸ್ತುತ ಲೇಖನ ಕಬ್ಬನ್ ಮತ್ತು ಶೃಂಗೇರಿ ಮಠದ[೨] ನಡುವಿನ ಪತ್ರ ವ್ಯವಹಾರಗಳಿಗೆ ಸಂಬಂಧಿಸಿದ್ದರಿಂದ, ದೃಷ್ಟಾಂತಕ್ಕಾಗಿ ಈ ಅವಧಿಯ ಕೆಲವೇ ಕಾಗದಪತ್ರಗಳ[೩] ಮತ್ತು ಕಡತಗಳ[೪] ಸಮೀಕ್ಷೆಯನ್ನು ಮಾಡಲಾಗಿದೆ. ಕಬ್ಬನ್ನರ ಅವಧಿಯಲ್ಲಿ ಶೃಂಗೇರಿ ಜಗದ್ಗುರು ಪೀಠವನ್ನು ಅಲಂಕರಿಸಿದವರು, ಗುರುಪರಂಪರೆಯಲ್ಲಿ ೩೨ನೆಯವರಾದ ಅಷ್ಟಮ ಶ್ರೀ ನರಸಿಂಹ ಭಾರತಿಗಳು (೧೮೧೭-೧೮೭೯).

ಕಮಿಷನರ್‌ರ ಆಡಳಿತ ಪ್ರಾರಂಭವಾಗುವ ಮುನ್ನವೇ ಬ್ರಿಟಿಷರು ಶೃಂಗೇರಿ ಮಠದೊಂದಿಗೆ ಸಂಪರ್ಕವಿರಿಸಿಕೊಂಡಿದ್ದು ಕಡತದಲ್ಲಿಯ ದಾಖಲೆ (ಕ.ದಾ.) ಯಿಂದ ಸ್ಪಷ್ಟವಾಗುತ್ತದೆ. ದ್ವಿತೀಯ ಶ್ರೀ ಅಭಿನವ ಸಚ್ಚಿದಾನಂದ ಭಾರತೀ ಸ್ವಾಮಿಗಳನ್ನು ತಮ್ಮ ತಮ್ಮ ಸ್ಥಳಗಳಲ್ಲಿ ಆದರದಿಂದ ಬರಮಾಡಿಕೊಂಡು, ಅವರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಿಕೊಡುವಂತೆ ಕೆನರಾ ಜಿಲ್ಲೆಯ ಮೆಜಿಸ್ಟ್ರೇಟರು ಅಧಿಕಾರಿಗಳಿಗೆ ವಿಧಿಸಿದ ಆಜ್ಞಾಪತ್ರದ ಪಾಠದ ಕೆಲವು ಸಾಲುಗಳು ಇಂತಿವೆ : "....ಕನಡಾ ಜಿಲ್ಲಾ ಮಜಿಸ್ಟ್ರೆಟ ಅಧಿಕಾರ ಸ್ಥಾನದಿಂದ । ಪುಲಿಸ ದರೊಗ ಸುಬೆದಾರ ಜಮಾದಾರ ದಪೆದಾರ ವಗ್ಯೆರೆಯವರಿಗೆ ಹುಕುಂ ಯೆನೆಂದರೆ ಶ್ರುಂಗೆರಿ ಮಠದ ಸ್ವಾಮಿಗಳು....ಗೋಕರ್ಣ ಮುಂತಾದ ಕ್ಷೇತ್ರಗಳ ಸಂಚಾರಾರ್ಥವಾಗಿ ತೆರಳಿ ಬರುಥಾರಾದ್ರಿಂದ ಅವರು ನಿಂಮ ನಿಂಮ ಚಕ್ಕಬಂದಿ ಠಾಂಣ್ಯಗಳ ಮಾರ್ಗವಾಗಿ ಬಂದಲ್ಲಿ ನಿಉ ಅವರ ಭೆಟ್ಟಿ ಮಾಡಿಕೊಂಡು ಅವರಿಗೆ ಬೇಕಾದ ಮಜೂರಿ ಬಾಬತ್ತು ಆಳ ಮತ್ತು ಕ್ರಯದ ಬಾಬತ್ತು ಜಿನಸು ಸಹಾ ಕೊಡಿಸಿಕೊಟ್ಟು ಸರಬರಾಯಿ ಮಾಡುವದು । ತಾರಿಕು ೨೫ನೆ ದಶಂಬರ ಸಂನ್ ೧೮೧೫ನೆ ಯಿಸವೀ ಯುವ ಸಂವತ್ಸರದ...."[೫]

ಇನಾಮು ಭೂಮಿ, ಸರ್ವಮಾನ್ಯ ಅಗ್ರಹಾರ, ದೇವಾದಾಯ, ಬ್ರಹ್ಮಾದಾಯ, ಮುಂತಾದವುಗಳಿಗೆ ಸಂಬಂಧಿಸಿ ಯಾವುದಾದರೂ ಸಂಶಯ ತೋರಿದರೆ, ಇನ್ನು ಮೇಲೆ ಕಮಿಷನರರು ವಿಚಾರಣೆ ಮಾಡುವದಾಗಿ, ದಿನಾಂಕ ೧೨-೫-೧೮೩೭ರಲ್ಲಿ ಮೈಸೂರು ಸೀಮೆಯಲ್ಲಿರುವ ಹಿಂದು-ಮುಸಲ್ಮಾನ ವಗ್ಯೆರೆ ಜನರಿಗೆ ತಿಳಿಯತಕ್ಕ ಬಗ್ಗೆ ಬರೆಸಿರುವ ಜಾಹಿರನಾಮೆ ಮಹತ್ವದ್ದಾಗಿದೆ.[೬]

ಶೃಂಗೇರಿ ಮಠಕ್ಕೆ ಮಾಫಿ ವಜನಿ ಅದದಿ ಜಿನಸು ಮತ್ತು ನವರಾತ್ರಿ ಉತ್ಸವಕ್ಕೆ ಜವಳಿಯನ್ನು ಮಠದವರು ಖರೀದಿ ಮಾಡಿಕೊಂಡು ಹೋಗುವಾಗ, ಮಠದ ಪಾರುಪತ್ಯಗಾರರ ಯಾದಾಸ್ತು ಮೇರೆಗೆ, ಸುಂಕ ಕೇಳದೆ ಬಿಡುವಂತೆ, ೧೮೨೬ನೇ ಸಪ್ಪಂಬರ್ ತಾರೀಕು ೧೨ರಂದು ರಾಜಾಸಾಹೇಬ ಬಹದರವರ ರಹದಾರಿ ಸಾದರಾದ್ದನ್ನು ಮಠದ ಪಾರುಪತ್ಯಗಾರ ಬಿಷ್ಟೈಶಾಸ್ತ್ರಿಗಳು ಹಜುರರಲ್ಲಿ ಹಾಜರು ಮಾಡಿ, ಈ ಪ್ರಕಾರ ಅಪ್ಪಣೆ ಆಗಬೇಕೆಂದು ಅರ್ಜಿ ಮಾಡಿಕೊಂಡಿದ್ದರಿಂದ, ಬಿಲಖಿಲ ಮಹಾರಾಜಾ ಸಾಹೇಬ ಬಹದರವರ ಹುಕುಂ ರಹದಾರಿ ಇರುವ ಮಾಮೂಲು

* 'ಭವಾನಿ', ಟಿ.ಎಸ್.ಎಸ್. ರೈಸ್ ಮಿಲ್ ಕೆಳಗೆ, ವಿದ್ಯಾಗಿರಿ, ಶಿರಸಿ, ಉತ್ತರ ಕನ್ನಡ.

ಮೇರೆಗೆ ನಡದುಕೊಳ್ಳುವಂತೆ, ಕಂಪನಿ ಸರಕಾರದ ಮೈಸೂರು ಪ್ರಾಂತದ ಕಮಿಷನರ್ ಇಲಾಖೆಯಿಂದ ಸಪ್ಟಂಬರ್ ೫, ೧೮೩೨ ರಂದು ಅರಮನೆ ಸೀಮೆ ಗಡಿಗಳ ಆಮಿಲ್ದಾರರು, ಕಿಲ್ಲೆದಾರರು ಮತ್ತು ಸುಂಕದವರಿಗೆ ನಿರೂಪವನ್ನು ಬರೆಸಿ ಕಳುಹಿಸಲಾಯಿತು.[೭] ಆದರೆ ಸದರಿ ಪ್ರಕಾರ ಮಠಕ್ಕೆ ಜಿನಸು, ಇತ್ಯಾದಿ ತೆಗೆದುಕೊಂಡು ಹೋಗದೆ, ಪರಭಾರೆ ಜನ ತೆಗೆದುಕೊಂಡು ಹೋದಾಗ ಮತ್ತು ಮಾರಿಕೊಂಡಾಗ, ವಾಜಿಬಿ [ಯೋಗ್ಯ] ಸುಂಕ ತೆಗೆದುಕೊಳ್ಳುವಂತೆಯೂ ನಿರೂಪದಲ್ಲಿ ನಮೂದಿಸಲಾಗಿದೆ. ಮುಮ್ಮಡಿ ಕೃಷ್ಣರಾಜ ಒಡೆಯರು ೧೮೨೬ರಲ್ಲಿ ವಿಧಿಸಿದ ಆಜ್ಞೆಯನ್ನು ಕಮಿಷನರ್ ಸಾಹೇಬರೂ ಗೌರವಿಸಿದರೆಂದು ಸದರಿ ನಿರೂಪವು ಖಚಿತಪಡಿಸುತ್ತದೆ.

ಶ್ರೀ ಶೃಂಗೇರಿ ಮಠಕ್ಕೆ ಸರ್ವಮಾನ್ಯ ಮತ್ತು ಅರ್ಧಮಾನ್ಯ ನಡದು ಬರುವ ಗ್ರಾಮದಲ್ಲಿಯ ಗಂಧವನ್ನು ಮಠದವರು ವರ್ತಕರಿಗೆ ಖರೀದಿಗೆ ಕೊಟ್ಟಿದ್ದನ್ನು ಅವರು ತೆಗೆದುಕೊಂಡು ಹೋಗುವಾಗ, ಮಾರ್ಗದ ಸುಂಕದ ಕಟ್ಟೆಯವರು ಮಾಮುಲ ಪ್ರಕಾರ ಬರತಕ್ಕ ಸುಂಕವನ್ನು ವರ್ತಕರಿಂದ ತೆಗೆದುಕೊಂಡು, ಮಠದವರನ್ನು ಯಾದಸ್ತು ದಾಖಲೆ ಮೇರೆಗೆ ಬಿಡುವ ಬಗೆಗೆ ಮಹಾರಾಜ ರಾಜಾಸಾಹೇಬ ಬಹದರವರ ರಹದಾರಿ ಇದೆ ಮತ್ತು ಆ ಪ್ರಕಾರ ಅಪ್ಪಣೆ ಆಗಬೇಕೆಂದು ಮಠದ ಪಾರುಪತ್ಯಗಾರ ಬಿಷ್ಟೈ ಶಾಸ್ತ್ರಿಗಳು ಹಜುರರಲ್ಲಿ ಅರ್ಜಿ ಮಾಡಿಕೊಂಡಿದ್ದರಿಂದ ಅಪ್ಪಣೆ ಕೊಡಿಸಿ ಇದೆ ಮತ್ತು ಇದಕ್ಕೆ ಸಂಬಂಧಿಸಿ ಮಹಾರಾಜರ ಅಸಲು (ಮೂಲ) ಹುಕುಂ ರಹದಾರಿಯನ್ನು ನೋಡಿಕೊಂಡು ಮಾಮೂಲು ಇದ್ದ ಪ್ರಕಾರ ನಡದುಕೊಳ್ಳುವಂತೆ ಅರಮನೆ ಸೀಮೆ ಗಡಿಗಳ ಆಮಿಲ್ದಾರರು, ಕಿಲ್ಲೆದಾರರು ಮತ್ತು ಸುಂಕದವರಿಗೆ ತಾರೀಕು ೫ನೇ ಮಾಹೆ ಸಪ್ಟಂಬರ್ ೧೮೩೨ರಲ್ಲಿ, ಬೆಂಗಳೂರಿನಿಂದ ನಿರೂಪ ಬರೆಸಿ ಕಳುಹಿಸಲಾಯಿತು.[೮] ಪೂರ್ವದಿಂದಲೂ ಇದ್ದ ಮಹಾರಾಜರ ಹುಕುಂ ರಹದಾರಿಯನ್ನು ಕಮಿಷನರ್‌ರು ಗೌರವಿಸಿದ್ದನ್ನು ಸದರಿ ನಿರೂಪವು ತಿಳಿಸುತ್ತದೆ.

ಶ್ರೀ ಶೃಂಗೇರಿ ಮಠದ ಶಿಷ್ಯರ ಪೈಕಿ ಯಾರಾದರೂ ಬೇವಾರಸು ಜನ ಮೃತವಾದರೆ, ಅವರ ಕಡೆಯಿಂದ ಸರಕಾರಕ್ಕೆ ಬರತಕ್ಕ ಬಾಕಿ ಇದ್ದಲ್ಲಿ ತೆಗೆದುಕೊಂಡು ನಿಂತದ್ದು ಒಂದು ಸಾವಿರ ರೂಪಾಯಿ ಒಳಗಾಗಿ ಅವರ ಜಿಂದಗಿ ಇದ್ದಲ್ಲಿ, ಅವರಿಗೆ ವಾಲೀ (ರಕ್ಷಕ) ವಾರಸು ಯಾರೂ ಇಲ್ಲದ್ದನ್ನು ಚೆನ್ನಾಗಿ ವಿಚಾರಿಸಿ, ಮಠದವರ ವಶಕ್ಕೆ ಕೊಟ್ಟು ರಶೀದಿ ತೆಗದುಕೊಳ್ಳುವದು ಮತ್ತು ಸಾವಿರ ರೂಪಾಯಿ ಮೇಲೆ ಹೆಚ್ಚಾಗಿ ಇದ್ದರೆ, ಹಜೂರರಿಗೆ ಬರೆದು ಹುಕುಂ ಪ್ರಕಾರ ನಡದುಕೊಳ್ಳುವದು, ಎಂದು ೧೮೩೨ರ ಸೆಪ್ಟಂಬರ ೫ರಂದು ಕಮಿಷನರರ ಇಲಾಖೆಯಿಂದ ನಗರ, ಅನಂತಪುರ, ಕುಮಶಿ, ಬಿದರಿ, ಹೊನ್ನಾಳಿ, ಶಿಕಾರಿಪುರ, ಹರಿಹರ, ಲಕವಳಿ, ವುಡಗಣಿ, ಆನೆವಟಿ, ಚಂದ್ರಗುತ್ತಿ, ಶಿವಮೊಗೆ, ಹೊಳೆಹೊನ್ನೂರು, ಸೊರಬ, ವಸ್ತಾರೆ, ಚನ್ನಗಿರಿ, ಬಸವಾಪಟಣ, ಯಿಕೆರಿ, ಸಾಗರ, ಮಂಡಗದೆ, ಕವಲೆದುರ್ಗ ಮತ್ತು ಕೊಪ್ಪದ ಆಮಿಲ್ದಾರರಿಗೆ, ನಿರೂಪವನ್ನು ಬರೆಸಿ ಕಳುಹಿಸಲಾಯಿತು.[೯] ಹರಿಹರಪುರ ಮಠದ ಸನ್ಯಾಸಿಗಳು ತಮಗೆ ಸಲ್ಲದ ಬಿರುದು ಬಾವಲಿಗಳನ್ನು ಧರಿಸಿದ್ದಕ್ಕೆ ಸಂಬಂಧಿಸಿ, ೧೮೩೨ರ ಮಹಾರಾಜರ ಹುಕುಂ ರಹದಾರಿಯಂತೆ ನಡದುಕೊಳ್ಳಬೇಕೆಂಬ ಅಂಶವನ್ನೂ ಸದರಿ ನಿರೂಪದಲ್ಲಿ ನಮೂದಿಸಲಾಗಿದೆ.

ಶ್ರೀ ನರಸಿಂಹಭಾರತೀ ಸ್ವಾಮಿಗಳು ಮೈಸೂರಿಗೆ ಬಂದು, ಅಲ್ಲಿಂದ ರಾಮೇಶ್ವರಕ್ಕೆ ಹೋಗಿ ಬರುವದರಿಂದ, ನಿಮ್ಮ ನಿಮ್ಮ ಗಡಿಗಳ ಮಾರ್ಗವಾಗಿ ಬಂದಲ್ಲಿ, ಅಮಲದಾರ, ಕಿಲ್ಲೆದಾರ ಮುಂತಾದವರು, ಮಾಮೂಲ ಮೇರೆಗೆ ಇಸ್ತಕಬಾಲಿಗೆ ಹೋಗಿ, ಮರ್ಯಾದೆಯಿಂದ ಕಂಡು, ಕರೆದುಕೊಂಡು ಬಂದು, ಕೈದವಾರ ಜಾಗಾದಲ್ಲಿ ಇಳಿಶಿ, ರಾತ್ರಿ ವೇಳೆಯಲ್ಲಿ ಕಳ್ಳಕಾಕರ ಉಪದ್ರವ ಆಗದಂತೆ ಖಬರದಾರಿ ಮಾಡಿಸಿ, ಇವರಿಂದ ಹಣವನ್ನು ಮಾಲಿಕರಿಗೆ ಕೊಡಿಸಿ, ವಾಜಿಬಿ ಖರೀದಿಗೆ ಹುಲ್ಲು, ಹುರುಳಿ, ಅಕ್ಕಿ, ಬ್ಯಾಳೆ, ಸವುದೆ, ಮುಂತಾದ ಸಾಮಾನುಗಳನ್ನು ಕ್ರಯಕ್ಕೆ ಕೊಡಿಸಿಕೊಟ್ಟು ಮಜೂರಿ ಆಳುಗಳು, ಭಂಡಿಗಳು, ಎತ್ತುಗಳು ದರಖಾಸ್ತು (ಬಾಡಿಗೆ) ಮಾಡಿದಲ್ಲಿ, ಅವರಿಂದ ವಾಜಿಬಿ (ಯೋಗ್ಯ) ಮಜೂರಿ ಕೊಡಿಸಿಕೊಟ್ಟು, ಕುಂಮಕಿ (ಸಹಾಯ) ಮಾಡಿಸಿಕೊಡುವಂತೆ, ಮೈಸೂರು ದೊರೆಗಳ ಸೀಮೆಯ ರಾಜ್ಯಭಾರದ ಕಮಿಷನರರು, ದುರ್ಮುಖಿ ಸಂವತ್ಸರದ ಮಾಘ ಬ. ೫ (೨೫ ಮೇ ೧೮೩೭) ರಂದು, ಮೈಸೂರು ಸೀಮೆ ಗಡಿಗಳ ಅಮಲದಾರ, ಕಿಲ್ಲೆದಾರ, ಜಹಗೀರದಾರ, ಜಮಾದಾರ, ಚೌಕಿದಾರ ಮತ್ತು ಸಾಯರ ಇಲಾಖೆಯವರಿಗೆ (ಸುಂಕದ ಇಲಾಖೆ) ನಿರೂಪವನ್ನು ಬರೆಸಿ ಕಳುಹಿಸಿದರು.[೧೦] ಇವರ ಹತ್ತಿರವಿರುವ ಆನೆ ೫, ಪಲ್ಲಕ್ಕಿ ೭, ಒಂಟೆ ೫, ಕುದುರೆ ೬೦, ಸಾಮಾನಿನ ಎತ್ತುಗಳು ೧೦೦, ಬಂದೂಕು ೫೦, ತಲವಾರು ೫೦, ಬಲೆಗಳು ೨೦, ಕಠಾರಿ ೨೦, ಬ್ರಾಹ್ಮರ ಜನ ೨೦೦, ಸೇವೆ ಮಾಡುವ ಬಾಹ್ಮರು ಜನ ೫೦, ಶೂದ್ರಜನ ೨೦೦, ಇವುಗಳ ಶಿವಾಯಿ (ಹೊರತಾಗಿ) ಛತ್ರ, ಚಾಮರ ವಗೈರೆ ಬಿರುದುಗಳು ಸಹಾ ಇರುವುದರಿಂದ, ನಿಮ್ಮ ನಿಮ್ಮ ತಾಲ್ಲೂಕುಗಳ ಉಕಡ (ಊರಿನ ಗಡಿ) ಕಣಿವೆಗಳಲ್ಲಿ ಅಟಕಾಯಿಸದೆ ಬಿಟ್ಟುಬಿಡುವುದು. ಹಾಸಲು (ಸುಂಕ), ಮಹಸೂಲು (ತೆರಿಗೆ), ಮುಂತಾದ್ದಕ್ಕೆ ಇವರಲ್ಲಿ

ಇರುವ ಗವರ್ನಮೆಂಟ್ ರಹದಾರಿ ಮೇರೆಗೆ, ಮಾಮೂಲ ಪ್ರಕಾರ ಅಟಕಾವು, ಹರಕತ್ತು ಮಾಡದೆ ಬಿಟ್ಟುಬಿಡುವದು ಮತ್ತು ಶ್ರೀಗಳವರು ಹೋಗಿಬರುವಲ್ಲಿ ಸಹಾ ನಡದುಕೊಳ್ಳುವುದು, ಎಂತಲೂ ಸದರಿ ನಿರೂಪದಲ್ಲಿ ಉಲ್ಲೇಖಿಸಲಾಗಿದೆ.

ಶೃಂಗೇರಿ ಮಠದ ಪಟೇಲ ತಿಮ್ಮಣ್ಣ ಶಾಸ್ತ್ರಿಗಳು ಗ್ರಾಂಟ್ ಸಾಹೇಬರ ಫೈಸಲು ಪ್ರಕಾರ ಮಠಕ್ಕೆ ಸಲ್ಲತಕ್ಕ ಬಾಬ್ತು ಸರಕಾರದಲ್ಲಿ ಅಮಾನತ್ (ಠೇವಣಿ) ಇರುವ ಕಂಪನಿ ರೂ. ೬೮೧೯೯–೧೩–೫ಕ್ಕೆ ಬಡ್ಡಿ ಬರುವ ಹಾಗೆ ಮಾಡಬೇಕೆಂದು ಹುಜೂರರಿಗೆ ಅರ್ಜಿ ಬರೆಕೊಂಡಿದ್ದರಿಂದ, ಸದರಿ ಐವಜು (ಉತ್ಪನ್ನ) ಕಂಪನಿಯಲ್ಲಿ ಹಾಕಿ ಬಡ್ಡಿ ಬರುವ ಹಾಗೆ ಮಾಡತಕ್ಕದ್ದಕ್ಕೆ ತಮ್ಮ ಅಪೇಕ್ಷೆ ಉಂಟೋ ಹ್ಯಾಗೆ ? ಆ ಬಗ್ಗೆ ತಿಳಿಯಪಡಿಸಬೇಕು ಎಂದು ಕಮಿಷನರ್ ಮೇಜರ್ ಜನರಲ್ ಕಬ್ಬನ್ ಸಾಹೇಬರು ಶೃಂಗೇರಿ ಶ್ರೀ ನರಸಿಂಹ ಭಾರತೀ ಸ್ವಾಮಿಗಳಿಗೆ, ೧೮೪೮ರ ಮಾರ್ಚ್ ೩೧ ರಂದು, ಬೆಂಗಳೂರು ಮೊಕ್ಕಾಮಿನಿಂದ ಪತ್ರ ಕಳುಹಿಸಿದರು.[೧೧] ತಾವು ಕುಶಲರಾಗಿದ್ದು, ಶ್ರೀಗಳವರು ತಮ್ಮ ತಪಸ್ಸಾಮ್ರಾಜ್ಯಕ್ಕೆ ಬರೆಸಿ ಕಳುಹಿಸಬೇಕಾಗಿ ಕಬ್ಬನ್‌ರು ಪ್ರಾರ್ಥಿಸಿಕೊಂಡರು. ಶೃಂಗೇರಿ ಮಠ ಕಂಪನಿ ಸರಕಾರದಲ್ಲಿ ಹಣ ಠೇವಣಿ ಇಟ್ಟು ಬಡ್ಡಿ ಪಡೆಯುತ್ತಿತ್ತೆಂಬ ಸಂಗತಿ ಸದರಿ ಪತ್ರದಿಂದ ತಿಳಿದುಬರುತ್ತದೆ.

ಶೃಂಗೇರಿ ಮಠದಿಂದಲೂ ಕಮಿಷನರ್‌ರಿಗೆ ಪತ್ರಗಳನ್ನು ರವಾನಿಸಲಾಗುತ್ತಿತ್ತು ಎಂಬ ಸಂಗತಿ, ಶೃಂಗೇರಿ ಶ್ರೀ ನರಸಿಂಹ ಭಾರತೀ ಸ್ವಾಮಿಗಳು ಪ್ಲವ (೧೮೪೨) ಸಂವತ್ಸರದ ಭಾದ್ರಪದ ಶು. ೧೫ ರಂದು ಕರ್ನಲ್ ಕಬ್ಬನ್‌ರಿಗೆ ಬರೆದ ಪತ್ರದಿಂದ ವಿದಿತವಾಗುತ್ತದೆ. ಪತ್ರದ ಮುಖ್ಯಭಾಗ ಇಂತಿದೆ:

"ಕಮಿಸಂನ್‌ರ ಕರ್ನಲ ಕಬಂನ್ ಸಾಹೆಬ ಬಹದರವರಿಗೆ ಬರದ ಪತ್ರಿಕೆ ॥ ದೊಡ ಬರದಾವಳಿ ಬರದು ಶ್ರುಂಗೆರ್‍ರಿ ಶ್ರೀ ನರಸಿಂಹ ಭಾರತ್ತಿ ಸ್ವಾಮಿಭಿಃ....ಕಬನ್ ಸಾಹೆಬ ಬಹದರವರಿಗೆ....ಅನಾದಿಶಿಥವಾದ ಯಿಾ ಧರ್ಮಸಂಸ್ಥಾನ ವಿಷಯದಲ್ಲಿ ನಡಯುವಂಥಾ ಶ್ರೀ ದೆವತ್ತಾ ಪೂಜೊತ್ಸವಾದಿ ಮಹಾಧರ್ಮಗಳು ಸರಕಾರ ಶ್ರೆಯೊಭಿಉ್ರರ್ಥವಾಗಿ ನಡದು ಬರ್‍ರಬೆಕೆಂಬ ಹಾಗೆ ಪ್ರಾಕು ರಾಜ್ಯಭಾರ್‍ರಾ ಮಾಡಿದ್ದಂಥಾ ಪ್ರಭುಗಳು ಸಕಲಾಂಕದಲ್ಲಿಯೂ ಸಾಭಿಮಾನವಿಟ್ಟು ನಡಶಿಕೊಂಡು ಬಂದದ್ದರ್‍ರಿಂದಾ ಯಿಾ ಘನವಾದ ಕುಂಫಣಿ ಧರ್ಮಪ್ರಭುಗಳು ತ್ತತ್ತೊತ್ಪತ್ತಿಶಯುವಾಗಿ ಪೂರ್ಣ ಸಾಭಿಮಾನವಿಟ್ಟು ನಡಶಿಕೊಂಡು ಬರ್‍ರುವದರ್‍ರಿಂದಾ ಯಿಲ್ಲಿ ನಡಯುವಂಥಾ ಶ್ರೀ ದೆವತ್ತಾ ಧರ್ಮ, ಮುದ್ರಾಧರ್ಮ ಮೊದಲಾದ ಮಹಾಧರ್ಮಗಳು ಅತ್ತಿಶಯುವಾಗಿ ನಡದು ಬರ್‍ರುತ್ತಾ ಯಿಥೆ ಯಿಾ ಧರ್ಮಸಂಸ್ಥಾನ ವಿಷಯದಲ್ಲಿ ಬಹುಕಾಲ ವಾರ್‍ರಭ್ಯಾ ನಡಶಿಬಂದ ಮರ್‍ರಿಯಾದೆ ಪ್ರಕಾರ್‍ರಾ ಸಮಸ್ತ ವಿಷಯಗಳಲ್ಲಿಯು ಆಗತಕ್ಕ ಕಾರ್ಯಗಳಿಗೆ ಶೆಷ ಜೊಯಿಸ ಶ್ರುತ್ತಪಡಿಶಿದ ಪ್ರಕಾರ್‍ರಾ ಹುಕ್ಕುಂ ನಿರ್‍ರೂಪಗಳ ಮಾಡ್ಶಿಕೊಟ್ಟು ಆಚಂದ್ರಾರ್ಕ ಧರ್ಮಕಿರ್‍ತಿ ಸಂಪಾದಿಶಿ ಕೊಂಬ ಹಾಗೆ ಮಾಡ್ಸಬೆಕು ಸಕಲಧರ್ಮ ಸೂಕ್ಷ್ಮಗಳಂನ್ನು ತ್ತಿಳದು ನಡಸುವಂಥಾ ಪ್ರಗ್ನಾಶಾಲಿ ಮಹಾಪ್ರಭುಗಳಿಗೆ ಪತ್ರಿಕಾ ಮುಖಾಂತ್ರ ವಿಶೆಷಾ ಬರ್‍ರಶಿ ಕಳುಹಿಶಿಕೊಡಬೆಕೆಂಬ ದೆನಿರುತ್ತಥೆ......ಪ್ಲವನಾಮ ಸಂವತ್ಸರದ ಭಾದ್ರಪತ್ತ ಶು. ೧೫ಲ್ಲು"[೧೨] ಶೃಂಗೇರಿ ಮಠದಲ್ಲಿ ಪೂರ್ವದಿಂದಲೂ ನಡೆದು ಬಂದ ದೇವತಾಧರ್ಮ, ಮುದ್ರಾಧರ್ಮ ಮತ್ತು ಮರ್ಯಾದೆಗಳನ್ನು ಪ್ರಾಕು ರಾಜ್ಯಭಾರ ಮಾಡಿದ ಪ್ರಭುಗಳಂತೆ (ಒಡೆಯರಂತೆ) ಕಬ್ಬನ್‌ರೂ ಗೌರವಿಸಿ, ಮುಂದುವರಿಸುವುದಕ್ಕೆ ಸಂಬಂಧಿಸಿ, ನಿರೂಪವನ್ನು ಹೊರಡಿಸಿ, ಧರ್ಮಕೀರ್ತಿ ಸಂಪಾದಿಸಿಕೊಳ್ಳಬೇಕೆಂಬುದೇ ಪತ್ರದ ಸಾರಾಂಶ.

ಒಟ್ಟಿನಲ್ಲಿ ಶೃಂಗೇರಿ ಮಠ ಮತ್ತು ಕಮಿಷನರ ಕಬ್ಬನ್‌ರ ನಡುವಿನ ಪತ್ರ ವ್ಯವಹಾರವನ್ನು ಗಮನಿಸಿದಾಗ, ಕೆಲವು ಅಂಶಗಳು ಸ್ಪಷ್ಟವಾಗುತ್ತವೆ. ಇನಾಮುಭೂಮಿ, ಸರ್ವಮಾನ್ಯ ಅಗ್ರಹಾರ, ದೇವಾದಾಯ, ಬ್ರಹ್ಮಾದಾಯ ಮುಂತಾದ ವಿಷಯಗಳಿಗೆ ಸಂಬಂಧಿಸಿ ಸಂಶಯ ತೋರಿದಲ್ಲಿ, ಕಮಿಷನರರೇ ವಿಚಾರಣೆ ಮಾಡುವ ಸಂಗತಿ, ಶೃಂಗೇರಿ ಮಠಕ್ಕೆ ಒಯ್ಯುವ ಜಿನಸಿನ ಮೇಲೆ ಸುಂಕ ಕೇಳದಂತೆ ನಿರೂಪ, ಶ್ರೀಮಠಕ್ಕೆ ಒಯ್ಯುವ ಗಂಧಕ್ಕೆ ಸುಂಕ ಕೇಳದಂತೆ ಆಮಿಲ, ಕಿಲ್ಲೆದಾರ ಮತ್ತು ಸುಂಕದವರಿಗೆ ಹುಕುಂ ರಹದಾರಿ, ಬೇವಾರಸು ಜಿಂದಗಿ ಮತ್ತು ಹರಿಹರಪುರ ಮಠದ ಸನ್ಯಾಸಿಗಳಿಗೆ ಸಂಬಂಧಿಸಿ ಹುಕುಂ ಹರದಾರಿ, ಶ್ರೀ ನರಸಿಂಹ ಭಾರತೀಸ್ವಾಮಿಗಳು ರಾಮೇಶ್ವರ ಯಾತ್ರೆಗೆ ಹೋಗಿ ಬರುವುದಕ್ಕೆ ಸಂಬಂಧಿಸಿ ರಹದಾರಿ, ಶ್ರೀಮಠದ ಹಣವನ್ನು ಸರಕಾರದಲ್ಲಿ ಅಮಾನತ್ ಇಟ್ಟು ಬಡ್ಡಿ ಪಡೆಯುವ ಸಮಾಚಾರ, ದೇವತಾಧರ್ಮ, ಮುದ್ರಾಧರ್ಮ ಮತ್ತು ಸಕಲ ಮರ್ಯಾದೆಗಳನ್ನು, ಮುಂದೂ ನಡೆಸಿಕೊಂಡು ಬರುವಂತೆ, ಕಬ್ಬನ್‌ರಿಗೆ ಶ್ರೀ ನರಸಿಂಹ ಭಾರತಿಗಳ ಆಶೀರ್ವಾದ ಪತ್ರ ಮುಂತಾದ ಅನೇಕ ವಿಷಯಗಳ ಮೇಲೆ ಶೃಂಗೇರಿ ಮಠದ ಕಡತಗಳಲ್ಲಿ ಮತ್ತು ಕಾಗದ ಪತ್ರಗಳಲ್ಲಿ ಲಭ್ಯವಿರುವ ದಾಖಲೆಗಳು ವಿಶೇಷ ಬೆಳಕು ಬೀರುತ್ತವೆ.[೧೩] ಈ ರೀತಿಯಾಗಿ ಶೃಂಗೇರಿ ಮಠಕ್ಕೆ ಪೂರ್ವದಿಂದಲೂ ನಡೆದು ಬಂದ ಮರ್ಯಾದೆಗಳನ್ನು ಬ್ರಿಟಿಷ್ ಅಧಿಕಾರಿಗಳೂ ಗೌರವಿಸಿ, ಮುಂದುವರಿಸಿದರೆಂದು ಚಾರಿತ್ರಿಕ ದಾಖಲೆಗಳೇ ಹೇಳುತ್ತವೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಮುಮ್ಮಡಿ ಕೃಷ್ಣರಾಜ ಒಡೆಯರ ದತ್ತಕ ಪುತ್ರ ಹತ್ತನೆಯ ಚಾಮರಾಜ ಒಡೆಯರು ೧೮೬೮ರಲ್ಲಿ ಸಿಂಹಾಸನಾರೂಢರಾದರು. ಬೌರಿಂಗರು ೧೮೭೦ರಲ್ಲಿ ಕಮಿಷನರ್ ಹುದ್ದೆಗೆ ರಾಜೀನಾಮೆ ನೀಡಿದ ನಂತರ ಕರ್ನಲ್ ರಿಚರ್ಡ್‌ಮೀಡ್, ಸಿ.ಬಿ. ಸ್ಯಾಂಡರ್ಸ್, ಜೆ.ಡಿ. ಗೋರ್ಡನ್ ಕಮಿಷನರರಾಗಿ ಕಾರ್ಯನಿರ್ವಹಿಸಿದರು. ಮೈಸೂರಿನ ಆಡಳಿತವನ್ನು ೧೮೮೧ ರಲ್ಲಿ ಒಡೆಯರಿಗೆ ಹಸ್ತಾಂತರಿಸಲಾಯಿತು. ಲಾರ್ಡ್ ರಿಪನ್‌ರು ಅಂದಿನ ವೈಸ್‌ರಾಯ್.

೨. ಶೃಂಗೇರಿ ಮಠದ ಚರಿತ್ರೆಗೆ ಸಂಬಂಧಿಸಿ ಲೇಖಕರ **'ಶೃಂಗೇರಿ ಧರ್ಮ ಸಂಸ್ಥಾನ'** ಶೃಂಗೇರಿ ಮಠ, ೧೯೮೩ ಮತ್ತು 'ಎ ಹಿಸ್ಟರಿ ಆಫ್ ಶೃಂಗೇರಿ' ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೨ ಮತ್ತು ೧೯೯೮.

೩. ಲೇಖಕರ 'ದಿ ರಿಕಾರ್ಡ್ಸ್ ಆಫ್ ದಿ ಶೃಂಗೇರಿ ಧರ್ಮಸಂಸ್ಥಾನ, (ಎಸ್.ಆರ್.) ಶೃಂಗೇರಿ ಮಠ, ೨೦೦೯, ಎಂಬ ಗ್ರಂಥದಲ್ಲಿ ಶೃಂಗೇರಿ ಧರ್ಮಸಂಸ್ಥಾನದ ಚರಿತ್ರೆಯ ಮೇಲೆ ಬೆಳಕು ಜೀರುವ ಆಯ್ದ ೩೦೨ ದಾಖಲೆಗಳನ್ನು ದಾಖಲಿಸಲಾಗಿದ್ದು, ಅವುಗಳಲ್ಲಿ ದಾ. ೨೬೪-೩೦೨ ಕಮಿಷನರರ ಕಾಲಕ್ಕೆ ಸೇರಿದವುಗಳಾಗಿರುತ್ತದೆ.

೪. 'ಕಡತ' ಇಲ್ಲವೆ 'ಕಡಿತ'ವು ಮಡಿಚಿದ ಕಪ್ಪು ಬಟ್ಟೆಯ ಪುಸ್ತಕವಾಗಿದ್ದು, ಸೀಸದಂಥ ಬಳಪದ ಕಲ್ಲಿನಿಂದ ಮೂಲ ದಾಖಲೆಗಳ ಪ್ರತಿಗಳನ್ನು ಇವುಗಳಲ್ಲಿ ಮಾಡಿಡಲಾಗುತ್ತಿತ್ತು. ಹೆಚ್ಚಿನ ಮಾಹಿತಿಗಾಗಿ ಲೇಖಕರ **'ಶೃಂಗೇರಿ ಮಠದ ಕಡತಗಳಲ್ಲಿಯ ಆಯ್ದ ಚಾರಿತ್ರಿಕ ದಾಖಲೆಗಳು'** (ಶೃಂ.ದಾ.) ಸಂ. ೧, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು, ೨೦೦೩, ಸಂ. ೨, ೨೦೦೬ ಮತ್ತು **'ಶೃಂಗೇರಿ ಮಠದ ಕಡತಗಳ ವಿಷಯ ಸೂಚಿ'**, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ೨೦೦೯, ಓದಿರಿ.

೫. ಕ. ೩೭, ದ. ೨೭.

೬ ಶೃಂ.ದಾ. ೨೫೮.

೭. ಎಸ್.ಆರ್. ೨೬೪.

೮. ಅದೇ, ೨೬೫ ಮತ್ತು ಶೃ.ದಾ. ೨೫೯.

೯. ಅದೇ., ೨೬೬.

೧೦. ಎಸ್.ಆರ್. ೨೭೫ ಮತ್ತು ಶೃಂ.ದಾ. ೨೮೧, (ಕ. ೯೦, ದಾ. ೨೨).

೧೧. ಎಸ್.ಆರ್. ೨೮೮.

೧೨. ಶೃ.ದಾ. ೨೯೩ (ಕ.೯೨, ದಾ. ೧೪೦).

೧೩. ಪ್ರಸ್ತುತ ವಿಷಯಕ್ಕೆ ಸಂಬಂಧಿಸಿ ಹೆಚ್ಚಿನ ಮಾಹಿತಿಗಾಗಿ ಲೇಖಕರ ಮೇಲ್ಕಾಣಿಸಿದ ಪುಸ್ತಕಗಳನ್ನು ಓದುವುದರ ಜೊತೆಗೆ, ಶೃಂಗೇರಿ ಮಠದಲ್ಲಿಯ ಕಡತಗಳನ್ನು ಮತ್ತು ಕಾಗದ ಪತ್ರಗಳನ್ನು ಪರಿಶೀಲಿಸುವುದು ಸೂಕ್ತ.

ಡಾ. ಎಸ್.ಎಲ್. ಶ್ರೀನಿವಾಸಮೂರ್ತಿ*

ಮೈಸೂರು ಸಂಸ್ಥಾನದ ತಾಂತ್ರಿಕ ಅಭಿವೃದ್ಧಿಯಲ್ಲಿ ಹೆರಾಲ್ಡ್ ಡಗ್ಲಸ್ ರೈಸರ ಪಾತ್ರ

ಕನ್ನಡನಾಡನ್ನು ಅಭಿವೃದ್ಧಿಗೊಳಿಸಲು ಶ್ರಮಿಸಿದ ಅನೇಕ ಮಹನೀರಯಲ್ಲಿ ಕೆಲವು ವಿದೇಶಿ ಅಧಿಕರಿಗಳೂ ಇದ್ದಾರೆ. ಅಂತಹವರಲ್ಲಿ ಹೆರಾಲ್ಡ್ ಡಗ್ಲಸ್ ರೈಸ್ ಅವರೂ ಒಬ್ಬರು. ಮೈಸೂರು ಸಂಸ್ಥಾನದ ಮುಖ್ಯ ಎಂಜಿನಿಯರ್ ಆಗಿ ಅವರು ಸಲ್ಲಿಸಿರುವ ಸೇವೆ ಗಮನಾರ್ಹವಾದದ್ದು. ಮೈಸೂರು ರಾಜ್ಯವು ಒಂದು 'ಮಾದರಿ ಸಂಸ್ಥಾನ'ವಾಗಿ ರೂಪುಗೊಳ್ಳುವಲ್ಲಿ ಡಗ್ಲಸ್ ರೈಸರು ನೀಡಿದ ಕೊಡುಗೆಯನ್ನು ಸರ್ಕಾರಿ ದಾಖಲೆಗಳು ಹಾಗೂ ಡಗ್ಲಸ್‌ರ ಖಾಸಗಿ ಕಾಗದ ಪತ್ರಗಳನ್ನು ಆಧರಿಸಿ ಹೀಗೆ ನಿರೂಪಿಸಬಹುದು :



ಹೆರಾಲ್ಡ್ ಡಗ್ಲಸ್ ರೈಸರು ೧೮೭೬ನೇ ಇಸವಿಯ ಜುಲೈ ೯ರಂದು ಬೆಂಗಳೂರಿನಲ್ಲಿ ಜನಿಸಿದರು. ಇವರ ತಂದೆ ಖ್ಯಾತ ಶಾಸನತಜ್ಞರಾದ ಬೆಂಜಮಿನ್ ಲೂಯಿ ರೈಸ್. ಇಡಿಯ ರೈಸ್ ಕುಟುಂಬ ನಾಡಿನ ಸೇವೆಗೆ ತನ್ನನ್ನು ಅರ್ಪಿಸಿಕೊಂಡಿತ್ತು. ಡಗ್ಲಸ್‌ರ ತಾತ ಬೆಂಜಮಿನ್ ರೈಸ್ ಶಿಕ್ಷಣ ತಜ್ಞರಾಗಿದ್ದರು. ಇವರ ಚಿಕ್ಕಪ್ಪ ಎಡ್ವರ್ಡ್ ಪೀಟರ್ ರೈಸ್ ಕನ್ನಡ ಸಾಹಿತ್ಯ ಚರಿತ್ರೆಯನ್ನು ರಚಿಸಿ ಪ್ರಸಿದ್ಧರಾಗಿದ್ದವರು. ಹೆರಾಲ್ಡ್ ಡಗ್ಲಸ್ ರೈಸರನ್ನು ವಿದ್ಯಾಭ್ಯಾಸದ ಸಲುವಾಗಿ ಅವರ ಎಂಟನೇ ವಯಸ್ಸಿನಲ್ಲಿ ಇಂಗ್ಲೆಂಡಿಗೆ ಕಳುಹಿಸಲಾಯಿತು. ಅಲ್ಲಿಯ ರಿಡಿಂಗ್, ಮಾಲ್ವರ್ನ್ ಮತ್ತು ಯಾರ್ಕ್‌ಶೈರ್‌ಗಳಲ್ಲಿ ಮೂಲ ವಿದ್ಯಾಭ್ಯಾಸವನ್ನು ಪಡೆದ ಅವರು ಎಂಜಿನಿಯರಿಂಗ್ ಶಿಕ್ಷಣವನ್ನು ಪಡೆಯಲೆಂದು ಲಂಡನ್ನಿನ ಪ್ರಸಿದ್ಧವಾದ 'ಕಿಂಗ್ಸ್' ಕಾಲೇಜಿಗೆ ದಾಖಲಾದರು. ಅಲ್ಲಿ ಪದವಿಯನ್ನು ಪಡೆಯುವ ಮುನ್ನವೇ ಮೈಸೂರು ಸಂಸ್ಥಾನದ ಲೋಕೋಪಯೋಗಿ ಇಲಾಖೆಯಲ್ಲಿ ಎಂಜಿನಿಯರ್ ಆಗಿ ಕೆಲಸ ದೊರೆತದ್ದರಿಂದ ಅವರು ೧೮೯೫ರಲ್ಲಿ ಭಾರತಕ್ಕೆ ಹಿಂದಿರುಗಿದರು.

ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ಪೂರೈಸುವ ಯೋಜನೆಯ ಉಪಸಹಾಯಕ ಎಂಜಿನಿಯರ್ ಆಗಿ ಡಗ್ಲಸ್ ರೈಸರು ತಮ್ಮ ವೃತ್ತಿಜೀವನವನ್ನು ಆರಂಭಿಸಿದರು. ನಂತರ ಆಗ 'ಕಡೂರು' ಎಂದು ಕರೆಯಲಾಗುತ್ತಿದ್ದ ಈಗಿನ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಉಪವಿಭಾಗದ ಎಂಜಿನಿಯರ್ ಆಗಿ ಮಲೆನಾಡಿನ ದಟ್ಟ ಕಾಡಿನ ನಡುವೆ ರಸ್ತೆಗಳನ್ನು ನಿರ್ಮಿಸುವ ಅತ್ಯಂತ ಕಠಿಣವಾದ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದರು. ಕಾಡಿನ ನಡುವೆ ಕೆಲಸ ನಿರ್ವಹಿಸುವಾಗ ಅನೇಕ ಬಾರಿ ಅವರು ಹುಲಿ, ಚಿರತೆ, ಕಾಡೆಮ್ಮೆ, ಕಾಳಿಂಗಸರ್ಪ ಮುಂತಾದ ಕ್ರೂರ ಪ್ರಾಣಿಗಳ ಬಾಯಿಗೆ ತುತ್ತಾಗುವ ಸಂದರ್ಭಗಳೂ ಇದ್ದವು. ಮೈಸೂರು ಮತ್ತು ಅರಸೀಕೆರೆ ನಡುವಣ ೮೦ ಮೈಲಿ ಉದ್ದದ ರೈಲು ಮಾರ್ಗ ಮತ್ತು ಚಾಮರಾಜನಗರ, ಮೈಸೂರು ನಡುವಣ ರೈಲುಮಾರ್ಗ ಎರಡನ್ನೂ ಡಗ್ಲಸ್ ರೈಸರೇ ನಿರ್ಮಿಸಿದವರು. ಈ ರಸ್ತೆ ಮತ್ತು ರೈಲುಮಾರ್ಗಗಳಿಂದಾಗಿ ನಾಡಿನಲ್ಲಿ ವ್ಯಾಪಾರ ವಹಿವಾಟುಗಳು ಗಣನೀಯ ಪ್ರಮಾಣದಲ್ಲಿ ಹೆಚ್ಚಿದವು.

* ಮುಖ್ಯಸ್ಥ, ಕನ್ನಡ ವಿಭಾಗ, ವಿಜಯ ಪದವಿ ಪೂರ್ವ ಕಾಲೇಜು, ಆರ್.ವಿ. ರಸ್ತೆ, ಬೆಂಗಳೂರು.

ಡಗ್ಲಸ್ ರೈಸರ ಎಂಜನಿಯರಿಂಗ್ ಕೌಶಲವನ್ನು ಕಣ್ಣಾರೆ ಕಾಣಬೇಕೆಂದರೆ ನಾವು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನಲ್ಲಿರುವ ವಾಣಿವಿಲಾಸ ಸಾಗರಕ್ಕೆ ಭೇಟಿ ನೀಡಬೇಕು. ಇಲ್ಲಿರುವ ಮಾರಿಕಣಿವೆಯಲ್ಲಿ ಹರಿಯುವ ವೇದವತಿ ನದಿಗೆ ಅಡ್ಡಲಾಗಿ ಕಟ್ಟಿರುವ ಅಣೆಕಟ್ಟೇ ವಾಣಿವಿಲಾಸ ಸಾಗರ. ಈ ಜಲಾಶಯದ ಉದ್ದ ೧೩೩೦ ಅಡಿ. ಎತ್ತರ ೧೬೨ ಅಡಿ. ಜಲಾನಯನ ಪ್ರದೇಶ ೩೪ ಚದರ ಮೈಲಿ. ಜಲಾಶಯದ ನೀರು ಶೇಖರಣಾ ಸಾಧ್ಯತೆ ೩೦ ಸಾವಿರ ಮಿಲಿಯನ್ ಕ್ಯೂಬಿಕ್ ಅಡಿಗಳು. ಈ ಜಲಾಶಯ ೨೫ ಸಾವಿರಕ್ಕೂ ಹೆಚ್ಚು ಎಕರೆ ಕೃಷಿಭೂಮಿಗೆ ನೀರುಣಿಸುತ್ತದೆ.

೧೮೯೮ರಲ್ಲಿ ಈ ಯೋಜನೆಯ ಕಾರ್ಯ ಆರಂಭವಾಯಿತು. ಸಿ.ಟಿ. ದಲಾಲ್ ಎಂಬುವವರು ಮುಖ್ಯ ಎಂಜಿನಿಯರ್ ಆಗಿದ್ದರೂ ಒಟ್ಟು ಯೋಜನೆಯ ನಿರ್ವಹಣೆಯ ಜವಾಬ್ದಾರಿ ಇದ್ದದ್ದು ಡಗ್ಲಸ್ ರೈಸರ ಹೆಗಲುಗಳ ಮೇಲೆ ಜಲಾಶಯದ ನಿರ್ಮಾಣ ಕಾಲದಲ್ಲಿ ಮಾರಿಕಣಿವೆ ಪ್ರದೇಶ ಕಾಲರಾಕ್ಕೆ ಈಡಾಯಿತು. ಸುಮಾರು ೩೦೦ ಮಂದಿ ಕುಲಿ ಕಾರ್ಮಿಕರು ಕಾಲರಾದಿಂದ ಸತ್ತರು. ಸುಮಾರು ಐದು ಸಾವಿರ ಮದಿ ಕೂಲಿಯಾಳುಗಳು ಕೆಲಸದ ಸ್ಥಳವನ್ನು ತೊರೆದು ಹೊರಟು ಹೋದರು. ಇಡಿಯ ಯೋಜನೆ ಸ್ಥಗಿತಗೊಳ್ಳುವ ಹಂತಕ್ಕೆ ಬಂತು.

ಆದರೆ ಡಗ್ಲಸ್ ರೈಸ್ ಧೃತಿಗೆಡಲಿಲ್ಲ. ಕೆಲಸಗಾರರಿಗೆ ಅಗತ್ಯವಾಗಿದ್ದ ಸೂಕ್ತ ಔಷಧೋಪಚಾರ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇತ್ಯಾದಿಗಳನ್ನು ಮೊದಲು ಕಲ್ಪಿಸಿದರು. ಹಾಗಾಗಿ ಯೋಜನೆ ಮುಂದುವರೆದು ೧೯೧೦ರಲ್ಲಿ ಯಶಸ್ವಿಯಾಗಿ ಪೂರ್ಣಗೊಂಡಿತು. ಆ ಕಾಲದಲ್ಲಿ ಅದು ವಿಶ್ವದಲ್ಲಿಯೇ ಅತಿ ಕಡಿಮೆ ಖರ್ಚಿನಲ್ಲಿ ನಿರ್ಮಿತವಾಗಿದ್ದ ಜಲಾಶಯವಾಗಿತ್ತು ಮತ್ತು ೩೪ ಚದರ ಮೈಲಿಗಳ ಆ ಸರೋವರ 'ಆ ಕಾಲಕ್ಕೆ ಜಗತ್ತಿನ ಅತಿ ದೊಡ್ಡ ಮಾನವ ನಿರ್ಮಿತ ಸರೋವರ' ಎಂಬ ಹೆಗ್ಗಳಿಕೆಯನ್ನು ಪಡೆದಿತ್ತು.

ವಾಣಿವಿಲಾಸ ಸಾಗರ ಜಲಾಶಯದ ಕಟ್ಟಡ ಇಂದಿಗೂ ನೋಡಲು ಅತ್ಯಂತ ಮೋಹಕ. ಅಣೆಕಟ್ಟಿನ ಮೇಲ್ಭಾಗದ ಉದ್ದಕ್ಕೂ ಸೊಗಸಾದ ಅಲಂಕಾರಿಕ ರಚನೆಗಳಿವೆ. ಅಣೆಕಟ್ಟಿನ ಎರಡೂ ತುದಿಗಳಲ್ಲಿ ಎರಡು ಸುಂದರವಾದ ಕಲ್ಲಿನ ಮಂಟಪಗಳನ್ನು ನಿರ್ಮಿಸಲಾಗಿದೆ. ಈ ಮಂಟಪಗಳ ಸೌಂದರ್ಯ ಎಷ್ಟೆಂದರೆ ಒಮ್ಮೆ ಈ ಜಲಾಶಯವನ್ನು ಕಾಣಲೆಂದು ಬಂದ ಬರೋಡಾದ ಗಾಯಕವಾಡ್ ಮಹಾರಾಜರು ಅವರ ವಿಶ್ರಾಂತಿಗೆಂದು ಸಿದ್ಧಗೊಳಿಸಲಾಗಿದ್ದ ವಿಶೇಷ ವ್ಯವಸ್ಥೆಯನ್ನು ನಿರಾಕರಿಸಿ ಈ ಮಂಟಪದಲ್ಲಿಯೇ ತಂಗಿ ಸಂತೋಷಪಟ್ಟಿದ್ದರು !

ಭದ್ರಾವತಿ ಉಕ್ಕಿನ ಕಾರ್ಖಾನೆಯ ಯಶಸ್ಸಿನ ಹಿಂದೆಯೂ ಡಗ್ಲಸ್ ರೈಸರ ಪರಿಶ್ರಮವಿದೆ. ಕೆಮ್ಮಣ್ಣು ಗುಂಡಿಯ ಎತ್ತರವಾದ ಪ್ರದೇಶದಿಂದ ದೂರದ ಭದ್ರಾವತಿಗೆ ಕಬ್ಬಿಣದ ಅದಿರನ್ನು ಸಾಗಿಸಲು ಅವಶ್ಯಕವಾಗಿದ್ದ 'ರೋಪ್‌ವೇ' ವ್ಯವಸ್ಥೆಯನ್ನು ಅವರು ಸಿದ್ಧಪಡಿಸಿದರು. ಅಷ್ಟೇ ಅಲ್ಲದೆ ಅದಿರನ್ನು ಕರಗಿಸಲು ಬೇಕಾಗಿದ್ದ ಇದ್ದಿಲನ್ನು ಒದಗಿಸಲು ಮೂರು ರೈಲುಮಾರ್ಗಗಳನ್ನೂ ಅವರು ಅಳವಡಿಸಿದರು.

ಶಿವನಸಮುದ್ರದಲ್ಲಿರುವ ಜಲವಿದ್ಯುತ್ ಉತ್ಪಾದನಾ ಕೇಂದ್ರ ಕೇವಲ ಭಾರತದಲ್ಲಿ ಮಾತ್ರವಲ್ಲದೆ ಇಡಿಯ ಏಷ್ಯಾ ಖಂಡದ ಅತ್ಯಂತ ಪ್ರಾಚೀನ ವಿದ್ಯುತ್ ಉತ್ಪಾದನಾ ಕೇಂದ್ರಗಳಲ್ಲಿ ಒಂದು. ೧೯೦೧ನೇ ಇಸವಿಯಲ್ಲಿ ಈ ಕೇಂದ್ರವು ನಿರ್ಮಾಣವಾಗುತ್ತಿದ್ದಾಗ ಡಗ್ಲಸ್ ರೈಸರಿಗೆ ಅಮೇರಿಕದಿಂದ ಆಮದಾಗುತ್ತಿದ್ದ ಯಂತ್ರೋಪಕರಣಗಳನ್ನು ವಿದ್ಯುತ್ ಸ್ಥಾವರಕ್ಕೆ ಸಾಗಿಸುವ ಗುರುತರವಾದ ಜವಾಬ್ದಾರಿಯನ್ನು ವಹಿಸಲಾಗಿತ್ತು. ಇಪ್ಪತ್ತೆಂಟು ಮೈಲಿ ದೂರದ ರೈಲ್ವೆ ನಿಲ್ದಾಣದಿಂದ ಭಾರವಾದ ಈ ಯಂತ್ರೋಪಕರಗಳನ್ನು ಸ್ಥಾವರಕ್ಕೆ ಸಾಗಿಸಲು ಯಾವುದೇ ಮೋಟಾರು ವಾಹನದ ವ್ಯವಸ್ಥೆ ಆಗ ಇರಲಿಲ್ಲ. ಅಂತಹ ಸಂದರ್ಭದಲ್ಲಿ ಡಗ್ಲಸ್ ರೈಸರು ೧೫೦ ಜೊತೆ ಎತ್ತುಗಳು, ೨೦ ಜೊತೆ ಕುದುರೆಗಳು ಮತ್ತು ೯ ಆನೆಗಳನ್ನು ಬಳಸಿ ಯಂತ್ರಗಳನ್ನು ಸಾಗಿಸಿದರು. ಅಷ್ಟೇ ಅಲ್ಲದೆ ಶಿವನಸಮುದ್ರದಿಂದ ಕೋಲಾರ ಚಿನ್ನದ ಗಣಿ ಪ್ರದೇಶದವರೆಗೆ, ಸುಮಾರು ೯೩ ಮೈಲಿಗಳ ದೂರದವರೆಗೆ ವಿದ್ಯುತ್ ಕಂಬಗಳನ್ನು ಅಳವಡಿಸುವ ಕಾರ್ಯವನ್ನೂ ಅವರು ನಿರ್ವಹಿಸಿದ್ದರು.

ಮೈಸೂರು ನಗರದ ಪಕ್ಕದಲ್ಲಿಯೇ ಇರುವ ಚಾಮುಂಡಿ ಬೆಟ್ಟ ಇಂದು ಬಹಳ ಪ್ರಸಿದ್ಧವಾದ ಪ್ರವಾಸಿ ಸ್ಥಳ. ಧಾರ್ಮಿಕ ಕೇಂದ್ರ ಈಗ ಪ್ರತಿ ದಿನವೂ ಸಾವಿರಾರು ಮಂದಿ ಪ್ರವಾಸಿಗರು ಅಲ್ಲಿಗೆ ಭೇಟಿ ನೀಡುತ್ತಾರೆ. ಆದರೆ ಸುಮಾರು ನೂರು ವರ್ಷಗಳ ಹಿಂದೆ ಬೆಟ್ಟದ ತುದಿಯನ್ನು ತಲುಪಬೇಕಿದ್ದರೆ ಎರಡು ಸಾವಿರ ಮೆಟ್ಟಿಲುಗಳನ್ನು ಹತ್ತಿ ಅಥವಾ ಕಾಲುದಾರಿಯಲ್ಲಿ ನಡೆಯಬೇಕಿತ್ತು. ಮೈಸೂರಿನಿಂದ ಬೆಟ್ಟದ ಮೇಲಿನವರೆಗೂ ಒಂದು ಮೋಟಾರ್ ರಸ್ತೆಯನ್ನು ನಿರ್ಮಿಸಬೇಕೆನ್ನುವ ಆಸೆಯೇನೋ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್‌ರಿಗೆ ಇತ್ತು. ಆದರೆ ಅನೇಕ ಮಂದಿ ಎಂಜನಿಯರ್‌ಗಳು 'ಇದು ಆಗದ ಕಾರ್ಯ' ಎಂದು ಕೈಚೆಲ್ಲಿದ್ದರು. ಹಾಗಾಗಿ ಮಹಾರಾಜರ ಕನಸು ಕನಸಾಗಿಯೇ ಉಳಿದಿತ್ತು. ಹಲವು ವರ್ಷಗಳ ನಂತರ ಒಂದು ದಿನ ಡಗ್ಲಸ್ ರೈಸರು ಮಹಾರಾಜರೊಂದಿಗೆ ಟೆನಿಸ್ ಆಟವಾಡುವಾಗ ಈ ವಿಷಯ ಪ್ರಸ್ತಾಪಿತವಾಯಿತು. ಡಗ್ಲಸ್ ರೈಸರು ಮಹಾರಾಜರನ್ನು ಉದ್ದೇಶಿಸಿ 'ನೀವೇಕೆ ಚಾಮುಂಡಿ ಬೆಟ್ಟಕ್ಕೆ

ಒಂದು ಟಾರ್ ರಸ್ತೆಯ ವ್ಯವಸ್ಥೆ ಮಾಡಬಾರದು ?' ಎಂದು ಪ್ರಶ್ನಿಸಿದರು. "ನನಗೂ ಆಸೆ ಇದೆ. ಆದರೆ ಹಿಂದಿನ ಎಂಜಿನಿಯರ್‌ಗಳೆಲ್ಲಾ ಇದು ಆಗದ ಕಾರ್ಯ ಎಂದಿದ್ದಾರೆ. ನೀವಾದರೂ ನನ್ನ ಆಸೆಯನ್ನು ಪೂರೈಸುತ್ತೀರಾ ?" ಎಂದು ಮಹಾರಾಜರು ಆ ಯೋಜನೆಯನ್ನು ರೈಸರಿಗೇ ವಹಿಸಿದರು. ಮರುದಿನದಿಂದಲೇ ಕೆಲಸ ಆರಂಭಿಸಿದ ಡಗ್ಲಸ್ ರೈಸ್ ಅತಿ ಕಡಿಮೆ ಸಮಯದಲ್ಲಿ ಒಂದು ಚಂದದ ರಸ್ತೆಯನ್ನು ನಿರ್ಮಿಸಿಯೇ ಬಿಟ್ಟರು. ತಮ್ಮ ಬಹುದಿನದ ಕನಸು ನನಸಾದದ್ದರಿಂದ ಸಂತೋಷಗೊಂಡ ಮಹಾರಾಜರು ಆ ಮಾರ್ಗದ ಮಧ್ಯಭಾಗದಲ್ಲಿರುವ ಒಂದು ವೃತ್ತಕ್ಕೆ ಡಗ್ಲಸ್ ರೈಸರ ಹೆಸರನ್ನೇ ಇರಿಸಿ ತಮ್ಮ ಪ್ರೀತಿಯನ್ನು ತೋರಿಸಿದರು.

ಚಾಮುಂಡಿ ಬೆಟ್ಟದ ಮೇಲಿರುವ ಲಲಿತಾದ್ರಿ ಅರಮನೆ, ಉದಕಮಂಡಲದಲ್ಲಿರುವ ಫರ್ನ್‌ಹಿಲ್ ಅರಮನೆ ಮತ್ತು ಮೈಸೂರು ನಗರದ ಮಧ್ಯಭಾಗದಲ್ಲಿರುವ ಪ್ರಧಾನ ಅರಮನೆಯ ನಿರ್ವಹಣೆಯ ಸಂಪೂರ್ಣ ಹೊಣೆಗಾರಿಕೆ ಡಗ್ಲಸ್ ರೈಸರದಾಗಿತ್ತು. ನವರಾತ್ರಿಯ ವೇಳೆಯಲ್ಲಿ ಸುಮಾರು ೧ ಲಕ್ಷಕ್ಕೂ ಹೆಚ್ಚು ಬಲ್ಬ್‌ಗಳನ್ನು ಬಳಸಿ ಇಡಿಯ ಅರಮನೆಯನ್ನು ಸಿಂಗರಿಸುವ ಕಾರ್ಯವನ್ನು ಡಗ್ಲಸ್ ರೈಸ್ ಹಲವು ವರ್ಷಗಳ ಕಾಲ ಸಂತೋಷದಿಂದ ನಿರ್ವಹಿಸಿದರು.

ಬೆಂಗಳೂರಿನ ಸಮೀಪವಿರುವ ನಂದಿ ಬೆಟ್ಟವೂ ಒಂದು ಸುಂದರ ಪ್ರವಾಸಿ ತಾಣ. ಸುಮಾರು ಎರಡು ಸಾವಿರ ಅಡಿ ಎತ್ತರದ ಈ ಬೆಟ್ಟದ ತುದಿಯನ್ನು ತಲುಪಲು ಹಿಂದೆ ಕೇವಲ ಕಾಲುದಾರಿ ಮಾತ್ರ ಇದ್ದಿತು. ಡಗ್ಲ್ ರೈಸರು ಅತ್ಯಂತ ಕಡಿಮೆ ಖರ್ಚಿನಲ್ಲಿ ಇಲ್ಲಿಗೂ ರಸ್ತೆಯ ವ್ಯವಸ್ಥೆಯನ್ನು ಮಾಡಿದರು. ಹಾಗಾಗಿ ಇಂದು ಸಾವಿರಾರು ಮಂದಿ ಪ್ರವಾಸಿಗರು ಪ್ರತಿದಿನ ಅಲ್ಲಿಗೆ ಭೇಟಿ ನೀಡುವುದು ಸಾಧ್ಯವಾಗಿದೆ.

೧೯೨೪ರಲ್ಲಿ ಮೈಸೂರು ಸರ್ಕಾರದ ಸೇವೆಯಿಂದ ನಿವೃತ್ತಿಯನ್ನು ಪಡೆದು ಡಗ್ಲಸ್ ಇಂಗ್ಲೆಂಡಿಗೆ ಹಿಂದಿರುಗಿದರು. ಆದರೆ ಇಂತಹ ನಿಷ್ಠಾವಂತ ಅಧಿಕಾರಿಯ ಸೇವೆಯನ್ನು ಕಳೆದುಕೊಳ್ಳಲು ಸಿದ್ಧವಿರದಿದ್ದ ಮೈಸೂರು ಸರ್ಕಾರ ಅವರನ್ನು 'ಇಂಗ್ಲೆಂಡಿನಲ್ಲಿ ಮೈಸೂರು ಸಕಾರದ ಅಧಿಕೃತ ವ್ಯಾಪಾರಿ' ಯಾಗಿ ನೇಮಿಸಿತು. ರಾಜ್ಯದ ಪ್ರತಿಷ್ಠಿತ ಉತ್ಪನ್ನಗಳಾದ ಶ್ರೀಗಂಧ, ಗಂಧದ ಎಣ್ಣೆ, ಗ್ರಾನೈಟ್ ಕಲ್ಲುಹಾಸು ಮುಂತಾದವು ಗಳನ್ನು ಅವರು ಸರ್ಕಾರದ ಪರವಾಗಿ ಅಲ್ಲಿ ಮಾರಾಟ ಮಾಡುತ್ತಿದ್ದರಲ್ಲದೆ ಬೇರೆ ಬೇರೆ ದೇಶಗಳಿಂದ ಆನೆ, ಜಿರಾಫೆ, ನೀರಾನೆ ಮುಂತಾದ ಅಪರೂಪದ ಪ್ರಾಣಿಗಳನ್ನು ಮೈಸೂರಿನ ಪ್ರಾಣಿ ಸಂಗ್ರಹಾಲಯಕ್ಕೆ ಒದಗಿಸಿಕೊಟ್ಟರು. ಡಗ್ಲಸ್ ರೈಸರ ಆಸಕ್ತಿಯ ಫಲವಾಗಿ ಮೈಸೂರು ಸರ್ಕಾರವು ಲಂಡನ್ನಿನಲ್ಲಿ ಒಂದು ಸುಸಜ್ಜಿತವಾದ ಮಾರಾಟ ಕಛೇರಿಯನ್ನೇ ಆರಂಭಿಸಲು ಸಾಧ್ಯವಾಯಿತು. ಇದೇ ಇಂದು ಬೆಳೆದು ಬೃಹತ್ ಸಂಸ್ಥೆಯಾಗಿ ಮಾರ್ಪಟ್ಟಿದೆ. ಲಂಡನ್ ಕಛೇರಿಯಲ್ಲಿ ಸಹಾಯಕ ಟ್ರೇಡ್ ಕಮೀಶನ್ ಆಗಿ ಡಗ್ಲಸ್ ರೈಸ್ ಮತ್ತೆ ಅನೇಕ ವರ್ಷಗಳ ಸೇವೆ ಸಲ್ಲಿಸಿದರು. ಒಟ್ಟು ೪೨ ವರ್ಷಗಳ ಸುದೀರ್ಘ ಸೇವೆಯ ನಂತರ ೧೯೩೦ರಲ್ಲಿ ವೃತ್ತಿಜೀವನದಿಂದ ಅವರು ನಿವೃತ್ತರಾದರು.

ಆದರೆ ಮೈಸೂರು ಸಂಸ್ಥಾನದ ಜನರ ಬಗೆಗಿನ ಅವರ ಪ್ರೀತಿ ಸ್ವಲ್ಪವೂ ಮಾಸಿರಲಿಲ್ಲ. ಲಂಡನ್, ಆಕ್ಸ್‌ಫರ್ಡ್, ಕೇಂಬ್ರಿಡ್ಜ್ ಮುಂತಾದ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಲೆಂದು ಮೈಸೂರಿನಿಂದ ಹೋಗುತ್ತಿದ್ದ ಎಷ್ಟೋ ಮಂದಿ ವಿದ್ಯಾರ್ಥಿಗಳಿಗೆ ಅವರು ಆಶ್ರಯದಾತರಾಗಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ್, ಕಂಠೀರವ ನರಸಿಂಹರಾಜ ಒಡೆಯರ್, ಮಿರ್ಜಾ ಇಸ್ಮಾಯಿಲ್ ಮುಂತಾದ ಗಣ್ಯರು ಇಂಗ್ಲೆಂಡಿಗೆ ಭೇಟಿ ನೀಡಿದಾಗ ಅವರಿಗೆ ಅಗತ್ಯವಾದ ಎಲ್ಲ ಸೌಕರ್ಯವನ್ನು ಅವರು ಒದಗಿಸಿ ಕೊಡುತ್ತಿದ್ದರು. ಹೀಗೆ ತಮ್ಮ ಜೀವಿತದ ಕೊನೆಯವರೆಗೆ ಹೆರಾಲ್ಡ್ ಡಗ್ಲಸ್ ರೈಸರು ಕನ್ನಡನಾಡು, ಕನ್ನಡ ಜನತೆಯ ಸೇವೆಗಾಗಿ ತಮ್ಮನ್ನು ಮುಡುಪಿಟ್ಟರು.

ಡಾ. ನಿರ್ಮಲ್‌ರಾಜ್*

ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಸೇನಾನಿ ಹಾಗೂ ಸಮಾಜ ಸುಧಾರಕ ವೆಂಕಟಕೃಷ್ಣಯ್ಯ (ತಾತಯ್ಯ)

ಮೈಸೂರು ಸಂಸ್ಥಾನದ ಪ್ರೀತಿಯ ಅಜ್ಜ ವೆಂಕಟ ಕೃಷ್ಣಯ್ಯನವರು ತಾತಯ್ಯ ಎಂದೇ ಚಿರಪರಿಚಿತರು. ಮೈಸೂರು ಸಂಸ್ಥಾನದ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರ ಲ್ಲೊಬ್ಬರಾದ ವೆಂಕಟಕೃಷ್ಣಯ್ಯನವರು ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕ ಹೀಗೆ ಹಲವು ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ತಮ್ಮ ಬದುಕನ್ನು ಸೇವೆಗೆ ಮೀಸಲಿಟ್ಟ ಕರ್ಮಯೋಗಿ ವೆಂಕಟಕೃಷ್ಣಯ್ಯ ಜನರ ಪ್ರೀತಿಯ 'ತಾತಯ್ಯ'ನಾಗಿ ಇಂದಿಗೂ ತಮ್ಮ ಸಮಾಜಮುಖಿ ಹಾಗೂ ಜನಮುಖಿ ಸೇವಾಕಾರ್ಯಗಳ ಮೂಲಕ ನೆನಪಾಗುತ್ತಿದ್ದಾರೆ.

ವೆಂಕಟಕೃಷ್ಣಯ್ಯ ದಿನಾಂಕ ೫-೯-೧೮೪೪ರಂದು ಮೈಸೂರು ಸಂಸ್ಥಾನದ ಹೆಗ್ಗಡದೇವನಕೋಟೆ ತೋರಿಸಿದ ಸಂತೇಸರಗೂರು ಹೋಬಳಿಯ ಮಗ್ಗೆಯಲ್ಲಿ ಸುಬ್ಬಯ್ಯ ಮತ್ತು ಭಾಗೀರಥಮ್ಮ ದಂಪತಿಯ ಎರಡನೇ ಮಗುವಾಗಿ ಜನಿಸಿದರು. ಇವರದು ಸಂಸ್ಕಾರವಂತ ಕುಟುಂಬ, ಬಾಲಕ ವೆಂಕಟಕೃಷ್ಣಯ್ಯನವರಿಗೆ ಮನೆಯ ವಾತಾವರಣದಲ್ಲೇ ರಾಮಾಯಣ, ಮಹಾಭಾರತ ಮುಂತಾದ ಮಹಾಕಾವ್ಯಗಳ ಸಂಸ್ಕೃತ ಶ್ಲೋಕಗಳ ಪರಿಚಯವಾಯಿತು. ತಂದೆಯ ಅಕಾಲ ಮರಣದಿಂದ ತತ್ತರಿಸಿದ ವೆಂಕಟಕೃಷ್ಣಯ್ಯನವರ ಕುಟುಂಬ ಬಡತನದಿಂದ ಬಳಲುವಂತಾಯಿತು.

ಬಾಲ್ಯದಲ್ಲಿಯೇ ಅಪಾರ ಬುದ್ಧಿಮತ್ತೆಯನ್ನು ಹೊಂದಿದ್ದ ವೆಂಕಟಕೃಷ್ಣಯ್ಯನವರು ಮುಮ್ಮಡಿ ಕೃಷ್ಣರಾಜ ಒಡೆಯರ್ ಸ್ಥಾಪಿಸಿದ್ದ ರಾಜಾಸ್ ಫ್ರೀ ಸ್ಕೂಲ್ ಸೇರಿದರು. ಆಳವಾದ ಓದು, ಅಧ್ಯಯನ, ಭಾಷಾ ಪರಿಣಿತಿಯಿಂದ ೧೯ನೇ ವರ್ಷಕ್ಕೆ ವೆಂಕಟಕೃಷ್ಣಯ್ಯನವರು ವಿದ್ವತ್‌ಅನ್ನು ಸಂಪಾದಿಸಿದರು. ಮೈಸೂರಿನ ಶಾಸ್ತ್ರೀಗಳ ಮಗಳಾದ ಸಾವಿತ್ರಮ್ಮನವರನ್ನು ವಿವಾಹವಾಗಿ ಗೃಹಸ್ಥ ಜೀವನಕ್ಕೆ ಕಾಲಿರಿಸಿದರು. ಆದರ್ಶ ಗೃಹಿಣಿಯಾಗಿದ್ದ ಸಾವಿತ್ರಮ್ಮ ಅಕಾಲ ಮರಣಕ್ಕೆ ತುತ್ತಾದಾಗ ವೆಂಕಟಕೃಷ್ಣಯ್ಯ ತುಂಬ ಅಧೀರರಾದರು. ಮೂರು ಮಕ್ಕಳನ್ನು ನೋಡಿಕೊಳ್ಳುವುದು ಕಷ್ಟವಾಯಿತು. ಆಗ ಸಾವಿತ್ರಮ್ಮನವರ ತಂಗಿ ಪುಟ್ಟಲಕ್ಷ್ಮಮ್ಮನವರನ್ನು ವಿವಾಹವಾದರು. ಪುಟ್ಟಲಕ್ಷ್ಮಮ್ಮ ಸಂಸ್ಕೃತ ಮತ್ತು ಕನ್ನಡ ಸಾಹಿತ್ಯದಲ್ಲಿ ಒಳ್ಳೆಯ ಜ್ಞಾನ ಹೊಂದಿದ್ದರು. ಪತಿಯ ಎಲ್ಲ ಕೆಲಸಗಳಿಗೆ ಬೆನ್ನೆಲುಬಾಗಿ ನಿಂತರು. ದಿವಾನ್ ರಂಗಾಚಾರ್ಲು ಮತ್ತು ವೆಂಕಟಕೃಷ್ಣಯ್ಯ ನವರದ್ದು ಅತ್ಯುತ್ತಮ ಬಾಂಧವ್ಯ ಈ ಗೆಳೆತನ ವೆಂಕಟಕೃಷ್ಣಯ್ಯ ನವರಿಗೆ ಸಾರ್ವಜನಿಕ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಹೆಚ್ಚು ಸಹಕಾರವನ್ನಿತ್ತಿತು.

ತಾತಯ್ಯ ಅವರು ತುಂಬಾ ಕಷ್ಟದ ಪರಿಸ್ಥಿತಿಯಲ್ಲಿ ವಿದ್ಯಾಭ್ಯಾಸ ಪಡೆದಿದ್ದುದರಿಂದ ಶಿಕ್ಷಣದ ಮಹತ್ವವನ್ನು ಅರಿತುಕೊಂಡು ಶಿಕ್ಷಣ ಸೌಲಭ್ಯದಿಂದ ವಂಚಿತರಾದವರಿಗಾಗಿ ಅನೇಕ ಶೈಕ್ಷಣಿಕ ಸವಲತ್ತುಗಳನ್ನು ಒದಗಿಸಿದರು. ಹಲವು ವಿರೋಧಗಳ ನಡುವೆ ವಿದ್ಯಾಸಂಸ್ಥೆಗಳನ್ನು ಕಟ್ಟಿ ಬೆಳೆಸಿದರು. ಹೆಣ್ಣುಮಕ್ಕಳು ಹಾಗೂ ಬಡಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಲವು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಲು ಪ್ರಯತ್ನಿಸಿದರು. ವೆಂಕಟಕೃಷ್ಣಯ್ಯನವರು ಮರಿಮಲ್ಲಪ್ಪ ಶಾಲೆಯ ಎರಡನೆಯ ಉಪಾಧ್ಯಾಯರಾಗಿ ೧೮೭೬ರಲ್ಲಿ ನೇಮಕಗೊಂಡರು. ನಂತರ ಮುಖ್ಯೋಪಾಧ್ಯಾಯರಾಗಿಯೇ ನೇಮಕಗೊಂಡು ಮರಿಮಲ್ಲಪ್ಪ ಶಾಲೆಯ ಜೀವನಾಡಿಯಾಗಿ ಕೆಲಸ ಮಾಡಿದರು. ಶಾಲೆಯ ಪುರೋಭಿವೃದ್ಧಿಗೆ ಅಹರ್ನಿಶಿ ದುಡಿದರು. ವೆಂಕಟಕೃಷ್ಣಯ್ಯನವರು ೧೯೧೯ರಲ್ಲಿ ಮರಿಮಲ್ಲಪ್ಪ ಶಾಲೆಯಿಂದ ನಿವೃತ್ತರಾದರು. ವೃತ್ತಿಯಿಂದ ನಿವೃತ್ತಿ. ಆದರೆ ಪ್ರವೃತ್ತಿಯಿಂದ ಅವರಿಗೆ ಬಿಡುವಿರಲಿಲ್ಲ. ಮೈಸೂರಿನ ಶಾರದಾವಿಲಾಸ ಹೈಸ್ಕೂಲಿಗೆ ನೀಲ ನಕ್ಷೆ ತಯಾರಿಸಿದರು. ವೆಂಕಟಕೃಷ್ಣಯ್ಯನವರ ಆಸಕ್ತಿಯ ಫಲವೇ ಸದ್ವಿದ್ಯಾ ಪಾಠಶಾಲೆ ಮತ್ತು ಪಂಚಭೂತ ಕೈಗಾರಿಕಾ ಪಾಠಶಾಲೆ ಆರಂಭವಾದವು. ೧೯೧೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪಿತವಾದಾಗ ಸರ್ಕಾರ ವೆಂಕಟಕೃಷ್ಣಯ್ಯ ನವರನ್ನು ವಿಶ್ವವಿದ್ಯಾನಿಲಯದ ಸೆನೆಟ್, ಅಕಾಡೆಮಿಕ್ ಕೌನ್ಸಿಲ್‌ಗೆ ಸಹಸದಸ್ಯರನ್ನಾಗಿ ನೇಮಿಸಿತ್ತು.

ಮಹಿಳಾ ವಿದ್ಯಾಭ್ಯಾಸದ ಬಗ್ಗೆ ಅಪಾರ ಕಳಕಳಿ ಹೊಂದಿದ್ದ ವೆಂಕಟಕೃಷ್ಣಯ್ಯನವರು ೧೮೮೧ರಲ್ಲಿ ಮಹಾರಾಣಿ ಬಾಲಿಕಾ ಪಾಠಶಾಲೆಯನ್ನು ಸ್ಥಾಪಿಸಿದರು. ಇದು ಮೈಸೂರಿನ ಪ್ರಥಮ ಹೆಣ್ಣು ಮಕ್ಕಳ ಶಾಲೆ ಎಂಬ ಹೆಗ್ಗಳಿಕೆಗೆ

* ಇತಿಹಾಸ ಪ್ರಾಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಪಾತ್ರವಾಯಿತು. ೧೮೯೨ರಲ್ಲಿ ಸ್ವಾಮಿ ವಿವೇಕಾನಂದರು ಮೈಸೂರಿಗೆ ಬಂದಾಗ ವೆಂಕಟಕೃಷ್ಣಯ್ಯನವರನ್ನು ಭೇಟಿಯಾಗಿದ್ದರು. ಆಗ ಸಾಮಾಜಿಕ ಸೇವೆ ಮತ್ತು ಅಸ್ಪೃಶ್ಯತಾ ನಿವಾರಣೆ ಬಗ್ಗೆ ಚರ್ಚೆ ನಡೆಯಿತು. ದಲಿತ ಜನಾಂಗದ ಅಭಿವೃದ್ಧಿಗಾಗಿ 'ಸದಾನಂದವರ್ಧಿನಿ ಸಭಾ' ಪ್ರಾರಂಭಿಸಿದರು. ಸಮಾಜ ಸೇವೆಗಾಗಿ ೧೮೯೬ರಲ್ಲಿ 'ಆರ್ಯಬಾಲ ಸಮಾಜ' ಸ್ಥಾಪಿಸಿದರು. ಮದ್ಯಪಾನ ವಿರೋಧಿ ಆಂದೋಲನ, ವರದಕ್ಷಿಣೆ ವಿರೋಧಿ ಆಂದೋಲನ, ಗೋಹತ್ಯಾ ನಿಷೇಧ ಮೊದಲಾದ ಸಾಮಾಜಿಕ ಕೆಲಸಗಳಲ್ಲಿ ವೆಂಕಟಕೃಷ್ಣಯ್ಯ ಮುಂಚೂಣಿಯಲ್ಲಿ ನಿಂತರು. ದಿವಾನ್ ರಂಗಚಾರ್ಲು ವೆಂಕಟಕೃಷ್ಣಯ್ಯನವರಿಗೆ ರಾಜಕೀಯ ಗುರುವಾಗಿದ್ದರು. ವೆಂಕಟಕೃಷ್ಣಯ್ಯ ಸ್ಥಾಯಿಸಮಿತಿ ಸದಸ್ಯರಾಗಿ ನಂತರ ಕಾರ್ಯದರ್ಶಿಯಾಗಿ ಕೆಲಸ ಮಾಡುವುದರ ಮೂಲಕ ರಾಜಕೀಯರಂಗ ಪ್ರವೇಶ ಮಾಡಿದರು. ಅಷ್ಟೊತ್ತಿಗಾಗಲೇ ಸ್ವಾತಂತ್ರ್ಯ ಚಳವಳಿಯ ಬಿರುಗಾಳಿ ಎಲ್ಲ ಕಡೆ ಬೀಸತೊಡಗಿತ್ತು. ವೆಂಕಟಕೃಷ್ಣಯ್ಯನವರು ಮೈಸೂರಿನ ಚಳವಳಿಯಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ಪತ್ರಿಕೋದ್ಯಮಿಯಾಗಿಯೂ ವೆಂಕಟಕೃಷ್ಣಯ್ಯನವರ ಕೆಲಸ ಮೆಚ್ಚುವಂತಹದ್ದು, ೧೮೮೪ರಲ್ಲಿ 'ಹಿತಬೋಧಿನಿ' ಪತ್ರಿಕೆ ಒಡೆತನ ವಹಿಸಿಕೊಂಡರು. 'ವೃತ್ತಾಂತ ಚಿಂತಾಮಣಿ' 'ಸ್ವಾಧ್ವಿ' ವಾರಪತ್ರಿಕೆಯನ್ನು 'ಮೈಸೂರು ಹೆರಾಲ್ಡ್' ಇಂಗ್ಲಿಷ್ ವಾರಪತ್ರಿಕೆಯನ್ನು ಪ್ರಾರಂಭಿಸಿದರು. ಜನಪರ ಸಮಸ್ಯೆ, ಮೈಸೂರಿನ ರಾಜಕೀಯ ಪರಿಸ್ಥಿತಿ ಹೀಗೆ ಹತ್ತು ಹಲವು ವಿಷಯಗಳ ಕುರಿತು ನಿರ್ಭೀತವಾಗಿ ಪತ್ರಿಕೆಯಲ್ಲಿ ಬರೆಯುತ್ತಿದ್ದರು. ಸತ್ಯ, ಧರ್ಮ ನೈತಿಕತೆಯ ಅಡಿಪಾಯದಲ್ಲಿ ವೆಂಕಟಕೃಷ್ಣಯ್ಯನವರು ಪತ್ರಿಕೆ ನಡೆಸಿದರು.

ಬಡವಿದ್ಯಾರ್ಥಿಗಳಿಗಾಗಿ ಪೂರ್ಣಪ್ರಮಾಣದ ಅನಾಥಾಲಯದ ಸ್ಥಾಪನೆ ವೆಂಕಟಕೃಷ್ಣಯ್ಯನವರ ಶ್ರೇಷ್ಠ ಕಾರ್ಯಗಳಲ್ಲಿ ಒಂದು. ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಅನಾಥಾಲಯ ಅವತ್ತಿನಿಂದ ಈವತ್ತಿನವರೆಗೆ ಲೆಕ್ಕವಿಲ್ಲದಷ್ಟು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ನೆರವನ್ನು ನೀಡಿ ಜೀವನನಿರ್ವಹಣೆಗೆ ಅನುವು ಮಾಡಿಕೊಡುತ್ತಿದೆ. ವಿಶ್ವಕವಿ ರವೀಂದ್ರನಾಥ ಟಾಗೂರ್ ಅವರು ೧೯೧೩ರಲ್ಲಿ ಅನಾಥಾಲಯಕ್ಕೆ ಆಗಮಿಸಿ ಅಲ್ಲಿನ ಶಿಸ್ತು, ವಿದ್ಯಾರ್ಥಿಗಳ ಚಟುವಟಿಕೆ ಕಂಡು ಸಂತೋಷಪಟ್ಟಿದ್ದರು. ಮಹಾತ್ಮಗಾಂಧಿ ೧೯೨೭ರಲ್ಲಿ ಇಲ್ಲಿಗೆ ಭೇಟಿ ಕೊಟ್ಟಿದ್ದರು. ಅನಾಥಾಲಯ ಇಂದಿಗೂ ವಿದ್ಯಾರ್ಥಿಗಳ ಭರವಸೆಯ ಆಶಾಕಿರಣವಾಗಿ ಕೆಲಸ ಮಾಡುತ್ತಿದೆ.

ಸಾಹಿತ್ಯೋಪಾಸನೆಯನ್ನು ತಾತಯ್ಯ ಜೀವನದ ಕೊನೆಯವರೆಗೂ ಮುಂದುವರೆಸಿಕೊಂಡು ಬಂದರು. ಆರೋಗ್ಯ ವಿಧಾನ ಪ್ರಕಾಶಿಕ, ಹರಿಶ್ಚಂದ್ರ ವಚನಕಾವ್ಯ, ಟೆಲಿಮಾರ್ಕಸ್ಸ್‌ನ್ ಸಾಹಸ ಚರಿತ್ರೆ–೩ ಭಾಗಗಳು, ವಿದ್ಯಾರ್ಥಿಕರ ಭೂಷಣ, ಮೊದಲಾದ ಗ್ರಂಥಗಳನ್ನು ರಚಿಸಿದರು. ೧೯೨೨ರಲ್ಲಿ ದಾವಣಗೆರೆಯಲ್ಲಿ ನಡೆದ ೮ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವರು ಮಾಡಿದ ಅಧ್ಯಕ್ಷ ಭಾಷಣ ಇಂದಿಗೂ ದಾರಿದೀವಿಗೆಯಾಗಿದೆ. ಜೀವನದ ಕೊನೆ ದಿನಗಳಲ್ಲಿ ತಾತಯ್ಯ ವೈಯಕ್ತಿಕ ಬದುಕಿನಲ್ಲಿ ಕಷ್ಟನಷ್ಟಗಳನ್ನು ಎದುರಿಸಿದರು. ಎಲ್ಲವನ್ನು ಸ್ಥಿತಪ್ರಜ್ಞೆಯಿಂದ ಸ್ವೀಕರಿಸಿದರು. ದಣಿವರಿಯದ ನಿರಂತರ ಕರ್ಮಯೋಗಿ, ವಿದ್ಯಾಭ್ಯಾಸ ಪ್ರವರ್ತಕ, ಬಡವರ ಬಂಧು ವೆಂಕಟಕೃಷ್ಣಯ್ಯ ನವರು ಅನಾರೋಗ್ಯಕ್ಕೆ ತುತ್ತಾಗಿ ೧೯೩೩ ನವೆಂಬರ್ ಎಂಟರಂದು ಇಹಲೋಕ ತ್ಯಜಿಸಿದಾಗ, ತೊಂಬತ್ತು ವರ್ಷಗಳ ಸುದೀರ್ಘ ಬದುಕು ಸಮಾಜಕ್ಕೆ ಮುಡಿಪಾಗಿ ಸಾರ್ಥಕವೆನಿಸಿಕೊಂಡಿತು.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಕೃಷ್ಣರಾವ್ ಎಂ.ವಿ. ಮತ್ತು ಹಾಲಪ್ಪ ಜಿ.ಎಸ್. (ಸಂ). **ಹಿಸ್ಟರಿ ಆಫ್ ಫ್ರೀಡಮ್ ಮೂವ್‌ಮೆಂಟ್ ಇನ್ ಕರ್ನಾಟಕ,** ಸಂ. ೧. ಬೆಂಗಳೂರು, ೧೯೭೨.

೨. ಡಾ. ಸೂರ್ಯನಾಥ್ ಯು. ಕಾಮತ್ (ಸಂ). **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು,** ಸಂ. ೩, ಬೆಂಗಳೂರು, ೧೯೮೦.

೩. ಡಾ. ಚಂದ್ರಶೇಖರ್ ಎಸ್ (ಸಂ), **ಕರ್ನಾಟಕ ಚರಿತ್ರೆ,** ಸಂ. ೭, ಹಂಪಿ, ೧೯೯೭.

೪. ಡಾ. ನಂಜರಾಜ ಅರಸ್ ಪಿ.ವಿ, **ನಾಲ್ವಡಿ ಕೃಷ್ಣರಾಜ ಒಡೆಯರ್** – ಒಂದು ದರ್ಶನ, ಮೈಸೂರು, ೧೯೯೬.

೫. ದೊರೆಸ್ವಾಮಿ ಹೆಚ್.ಎಸ್., **ಹೋರಾಟದ ದಿಟ್ಟ ಹೆಜ್ಜೆಗಳು,** ಬೆಂಗಳೂರು, ೧೯೭೨.

ಡಾ. ಇಂದುಮತಿ ಪಿ. ಪಾಟೀಲ*

ಕರ್ನಾಟಕದ ಏಕೀಕರಣ ಮತ್ತು ಭಾಲ್ಕಿ ಹಿರೇಮಠ

ಪೀಠಿಕೆ : ಕರ್ನಾಟಕದ ಐತಿಹಾಸಿಕ ಹಿರಿಮೆಯನ್ನು ಎತ್ತಿ ಹಿಡಿಯುವಲ್ಲಿ ಶ್ರೇಷ್ಠ ಸ್ಥಳವಾದ ಕಲ್ಯಾಣನಾಡು ತನ್ನದೇ ಆದ ಮಹತ್ವವನ್ನು ಹೊಂದಿದೆ. ಭೌಗೋಳಿಕವಾಗಿ ಕರ್ನಾಟಕದ ಕಳಸದಂತಿರುವ ಬೀದರ ಜಿಲ್ಲೆಯು ಐತಿಹಾಸಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ದೃಷ್ಟಿಯಿಂದ ಮಹತ್ವ ಪೂರ್ಣವಾಗಿದೆ. ರಾಜ್ಯದ ಉತ್ತರ ಭಾಗದಲ್ಲಿರುವ ಈ ಜಿಲ್ಲೆಯು ಪ್ರಾಚೀನ ಕಾಲದಿಂದಲೂ ಅನೇಕ ರೀತಿಯ ವೈವಿಧ್ಯಮಯ ಸಾಂಸ್ಕೃತಿಕ ಹಿರಿಮೆಯಿಂದ ಮೆರೆದ ನಾಡಾಗಿದೆ. ಇಲ್ಲಿ ಅನೇಕ ರಾಜಮನೆತನದವರು ಆಳಿ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಕನ್ನಡ, ಮರಾಠಿ, ತೆಲುಗು ಭಾಷೆಗಳ ಸಮ್ಮಿಲನದಿಂದ ಕೂಡಿದ ಈ ಜಿಲ್ಲೆಯು ಭಾಷಾವಾರು ಪ್ರಾಂತಗಳ ವಿಂಗಡಣೆಯಿಂದಾಗಿ ಹೈದ್ರಾಬಾದಿನ ನಿಜಾಮನ ಕಪಿಮುಷ್ಠಿಯಿಂದ ಪಾರಾಗಿ ಕರ್ನಾಟಕದಲ್ಲಿ ವಿಲೀನವಾಯಿತು. ಕನ್ನಡ ನಾಡನ್ನು ಆಳಿದ ಅನೇಕ ರಾಜ ಮನೆತನದಲ್ಲಿ ಅನನ್ಯ ಸಾಹಿತ್ಯದ ರಚನೆ ಅದರಲ್ಲೂ ವಿಶೇಷವಾಗಿ ೧೨ನೇ ಶತಮಾನದ ವಚನ ಸಾಹಿತ್ಯದ ಕೊಡುಗೆ ನೀಡಿರುವ ಕೀರ್ತಿ ಈ ಜಿಲ್ಲೆಗೆ ಸಲ್ಲುತ್ತದೆ. ಒಂದು ನಾಡಿನ ಸರ್ವಾಂಗೀಣ ಅಭಿವೃದ್ಧಿಯಾಗಬೇಕಾದರೆ ಅಲ್ಲಿನ ಭೌಗೋಳಿಕ, ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳು ಅತಿ ಮುಖ್ಯವಾದ ಪಾತ್ರವಹಿಸುತ್ತವೆ. ಆದರೆ ಸಂಸ್ಕೃತಿ ಮತ್ತು ನಾಗರಿಕತೆಯ ನಾಡೆಂದು ನಾವು ಕರೆಯಬೇಕಾದರೆ ಅಲ್ಲಿನ ಧರ್ಮವು ಅಷ್ಟೇ ಪ್ರಮುಖವಾದಂತಹ ಪಾತ್ರವಹಿಸುತ್ತದೆ.

ಸಮಾಜದ ಪರಿವರ್ತನೆಯ ಹಾದಿಯಲ್ಲಿ ಧರ್ಮವು ಮಹತ್ವದ ಪಾತ್ರವಹಿಸುತ್ತದೆ. ಧರ್ಮ ಸಮಾಜದಲ್ಲಿ ತನ್ನ ಹಿರಿಮೆಯನ್ನು ಸ್ಥಾಪಿಸಲು ಧಾರ್ಮಿಕ ಮುಖಂಡರು ಮತ್ತು ಮಠಗಳ ಪಾತ್ರ ಅತಿಮುಖ್ಯವಾಗಿರುತ್ತದೆ. ಧರ್ಮವಾದರೋ ಸಾಮಾಜಿಕ ಗೊತ್ತುಗುರಿಗಳು ಮತ್ತು ಧ್ಯೇಯಧೋರಣೆಗಳನ್ನು ಬಿಂಬಿಸುವಲ್ಲಿ ಪ್ರಮುಖ ಪಾತ್ರ ವಹಿಸುವುತ್ತದೆ. ಆದಾಗ್ಯೂ ನಮ್ಮ ಸಮಾಜದಲ್ಲಿ ಧರ್ಮದ ಹೆಸರಿನಲ್ಲಿ ಪರಂಪರಾಗತವಾಗಿ ಬೆಳೆದು ಬಂದ ಅಂಧಶ್ರದ್ಧೆ, ಅನಾಚಾರ ಗಳನ್ನು ತೊಡೆದು ಅವುಗಳನ್ನು ಸಮರ್ಥವಾಗಿ ವಿರೋಧಿಸಿ ಸಮಾಜವನ್ನು ಸುಧಾರಣೆಯತ್ತ ಕೊಂಡೊಯ್ಯ ಬೇಕಾದರೆ ಧರ್ಮ ಮತ್ತು ಧರ್ಮ ಕ್ಷೇತ್ರಗಳು ಅವಶ್ಯಕವಾಗಿವೆ. ಅಂತಾಗಿ ಧರ್ಮಕ್ಷೇತ್ರವೆನಿಸುವ ಮಠಗಳ ಪಾತ್ರ ಪ್ರಮುಖವಾಗಿದೆ.

ಮಠಮಾನ್ಯಗಳು ನಾಡಿನ ಸಾಂಸ್ಕೃತಿಕ, ಶೈಕ್ಷಣಿಕ, ಸಾಹಿತ್ಯಿಕ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ಮಹತ್ವದ ಸೇವೆ ಸಲ್ಲಿಸಿವೆ. ಇಂಥ ವಿಶಿಷ್ಟ ಜನ–ಕಲ್ಯಾಣ–ಸೇವಾ ಮಾರ್ಗವಾಗಿ ಕರ್ನಾಟಕದ ಮಠಗಳ ಹಿಂದೆ ಕರ್ತೃಶಕ್ತಿಗಳಾಗಿ, ಚೈತನ್ಯ ಮೂರ್ತಿಗಳಾಗಿ ದುಡಿದ ಸ್ವಾಮಿಗಳ, ಧರ್ಮಾಧಿಕಾರಿಗಳ ಕಾರ್ಯವು ಪರೋಕ್ಷವಾಗಿ ಭಾರತದ ಒಟ್ಟಾರೆ ಅಭಿವೃದ್ಧಿ ಮತ್ತು ವಿವೇಕವರ್ಧನೆಗೆ ಆದರ್ಶವಾಗುವಂಥದು.

ಈ ನಿಟ್ಟಿನಲ್ಲಿ ನಡೆದು ಬಂದ ಕರ್ನಾಟಕದ ಮಠಗಳಲ್ಲಿ ಬೀದರ ಜಿಲ್ಲೆಯ ಭಾಲ್ಕಿ ಪಟ್ಟಣದ ಹಿರೇಮಠವು ತನ್ನದೇ ಆದ ವಿಶಿಷ್ಟ ಸ್ಥಾನ ಹೊಂದಿದೆ. ಬೀದರ ಜಿಲ್ಲೆಯ ಲಿಂಗಾಯತ ಮಠಗಳಲ್ಲಿ ಕೇಂದ್ರ ಬಿಂದುವಾಗಿ ನಿಂತ ಭಾಲ್ಕಿಯ ಹಿರೇಮಠ ಸಂಸ್ಥಾನವು ಎಂಟುನೂರು ವರ್ಷಗಳಷ್ಟು ಪ್ರಾಚೀನ ಇತಿಹಾಸ ಹೊಂದಿದೆ. ಈ ಮಠವು ತನ್ನ ಸ್ವಚ್ಛ, ಶುದ್ಧ, ನಡೆ, ನುಡಿ, ಸೇವೆಗಳ ಮೂಲಕ ನಾಡಿನ ಗಮನ ಸೆಳೆದಿರುವ ಶತಾಯುಷಿ, ಡಾ. ಚೆನ್ನಬಸವ ಪಟ್ಟದ್ದೇವರು ಮಠದ ಗುರುವಾಗಿ ಕ್ರಿ.ಶ. ೧೯೨೪ ರಲ್ಲಿ ಆ ಸ್ಥಾನವನ್ನು ಅಲಂಕರಿಸಿದಾಗಿನಿಂದ ಸಮಾಜೋನ್ಮುಖರಾಗಿ ನಿರಂತರವಾಗಿ ಜನತೆಯ ಕಲ್ಯಾಣ ಕಾರ್ಯಗಳನ್ನು ಮಾಡಿದ್ದಾರೆ. ಆದ್ದರಿಂದ ಹಿರೇಮಠ ಸಂಸ್ಥಾನ ಭಾಲ್ಕಿಯ ಒಂದು ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನವನ್ನು ೧೯೨೪ ರಿಂದ ೨೦೦೬ ವರೆಗೆ ಕೈಗೊಳ್ಳಲಾಗಿದೆ.

ಕರ್ನಾಟಕ–ಉಗಮ, ಸ್ವರೂಪ ಮತ್ತು ವ್ಯಾಪ್ತಿ : ಕರ್ನಾಟಕ ಎಂಬ ಹೆಸರಿನ ಪದದ ಬಳಕೆ ಪ್ರಪ್ರಥಮವಾಗಿ ಮಹಾಭಾರತದಲ್ಲಿ ಕಂಡುಬಂದಿದೆ. ವಿಪುಲವಾದ ಭೌಗೋಳಿಕ ಸಂಪತ್ತನ್ನೂ, ಐತಿಹಾಸಿಕ ಪರಂಪರೆಯನ್ನೂ ಹೊಂದಿರುವ ಕರ್ನಾಟಕ, ಭಾರತದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಸಾಂಸ್ಕೃತಿಕವಾಗಿ ವಿಶ್ವಮಾನ್ಯತೆಯನ್ನು ಗಳಿಸಿದೆ. ಕಲೆ, ಸಾಹಿತ್ಯ ಮತ್ತು ಲಲಿತಕಲೆಗಳಲ್ಲಿ ತನ್ನದೇ ಆದ ವೈಶಿಷ್ಟ್ಯವನ್ನು

* ಮುಖ್ಯಸ್ಥರು, ಇತಿಹಾಸ ಅಧ್ಯಯನ ವಿಭಾಗ, ಸರಕಾರಿ ಮಹಾವಿದ್ಯಾಲಯ, ಗುಲಬರ್ಗಾ.

ಬೆಳೆಸಿಕೊಂಡಿದೆ. ಇದರ ಸಂಸ್ಕೃತಿಯ ಪರಂಪರೆ ವೈಭವಯುತ ವೈವಿಧ್ಯವಿದ್ದರೂ ಏಕತೆ, ಸಹನೆ ಮತ್ತು ಪರಸ್ಪರ ಹೊಂದಿಕೊಳ್ಳುವ ಮನೋಭಾವ, ವಿವಿಧ ಮತಗಳ ಸಮನ್ವಯ–ಇವು ಕರ್ನಾಟಕ ಸಂಸ್ಕೃತಿಯ ತಿರುಳು. ಭಾರತದ ಅನ್ಯಭಾಗಗಳಲ್ಲಿ ಕಾಣಲಾಗದ ರಾಜಮನೆತನಗಳ ಸುದೀರ್ಘ ಪರಂಪರೆ (ಕ್ರಿ.ಶ. ೨೩೦ ರಿಂದ ಕ್ರಿ.ಶ. ೧೯೪೭ರವರೆಗೆ) ಕರ್ನಾಟಕದ್ದಾಗಿದೆ. ಶಾತವಾಹನರಿಂದ ಆರಂಭಿಸಿ ಮೈಸೂರು ಒಡೆಯರವರೆಗೆ ಹಲವು ಮನೆತನಗಳು ಇದನ್ನು ಆಳಿವೆ. ಧಾರ್ಮಿಕವಾಗಿ ನೋಡಿದರೆ ಎಲ್ಲ ಮತಗಳೂ ಇಲ್ಲಿ ಆಶ್ರಯ ಪಡೆದಿವೆ. ಬಹುಭಾಷಾ ಜನರು ಇಲ್ಲಿ ಪೋಷಿಸಲ್ಪಟ್ಟಿದ್ದಾರೆ. ಬೌದ್ಧಿಕವಾಗಿ ನೋಡಿದರೆ ಕರ್ನಾಟಕ ಇಡೀ ಭಾರತದಲ್ಲೇ ವೈಚಾರಿಕ ಕ್ರಾಂತಿಯನ್ನು ಮೆರೆದ ನಾಡಾಗಿದೆ. ೧೨ನೇ ಶತಮಾನದ ಬಸವಣ್ಣನ ಕಾಯಕ ಸಿದ್ಧಾಂತದಲ್ಲಿ ೧೯ನೇ ಶತಮಾನದ ಕಾರ್ಲ್‌ಮಾರ್ಕ್ಸ್‌ನ ಸಮತಾವಾದವನ್ನು ಕಾಣಬಹುದಾಗಿದೆ. ಗಾಂಧೀಜೀಯವರ ನವೋದಯ ಮತ್ತು ಜಾತ್ಯಾತೀತ ಸಮಾಜದ ರೂಪರೇಷೆ ಕೂಡ ವಚನ ಸಾಹಿತ್ಯದಲ್ಲಿದೆ.

ಭೌಗೋಳಿಕವಾಗಿ ಕರ್ನಾಟಕ ದಕ್ಷಿಣ ಭಾರತದಲ್ಲೇ ಎತ್ತರದಲ್ಲಿರುವ ನಾಡಾಗಿದೆ. ಅದು ನರ್ಮದಾ ನದಿಯಿಂದ ಕಾವೇರಿಯವರೆಗೆ ವ್ಯಾಪಿಸಿದ್ದಿತು ಎಂಬ ಅಂಶ ಬಾದಾಮಿ ಚಾಲುಕ್ಯರ ಶಾಸನಗಳು ದೊರೆತಿರುವ ಸ್ಥಳಗಳಿಂದ ದೃಢಪಟ್ಟಿದೆ. ನಂತರದ ಅಮೋಘವರ್ಷ ನೃಪತುಂಗನ ಕವಿರಾಜ ಮಾರ್ಗದಲ್ಲಿ "ಕಾವೇರಿಯಿಂದ ಗೋದಾವರಿ ವರಮಿರ್ದ ನಾಡದಾ ಕನ್ನಡದೊಳ್" ಎಂದಿದೆ. ಎರಡು ಸಾವಿರ ವರ್ಷಗಳಲ್ಲಿ ಕರ್ನಾಟಕ ಸಾಂಸ್ಕೃತಿಕವಾಗಿ ಹಾಗೂ ರಾಜಕೀಯವಾಗಿ ತನ್ನದೇ ಆದ ಪರಂಪರೆಯನ್ನು ಉಳಿಸಿ, ಬೆಳೆಸಿಕೊಂಡು ಬಂದಿದೆ. ಈ ಸುದೀರ್ಘ ಕಾಲಾವಧಿಯಲ್ಲಿ ಶಾತವಾಹನ, ಕದಂಬ, ಗಂಗ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳ, ಸೇವುಣ ವಿಜಯನಗರ, ಕೆಳದಿ ಅರಸರು, ಮೈಸೂರು ಒಡೆಯರು ಮುಂತಾದ ಕನ್ನಡ ರಾಜವಂಶಗಳು ತಮ್ಮ ಆಳ್ವಿಕೆ ನಡೆಸಿದವು.

ಕ್ರಿ.ಶ. ೧೭೯೯ರಲ್ಲಿ ಟೀಪು ಪತನಾನಂತರ ಬ್ರಿಟಿಷರು ಮೈಸೂರು ರಾಜ್ಯವನ್ನು ಹಲವು ಭಾಗಗಳಾಗಿ ವಿಭಾಗಿಸಿ ತಮಗೆ ಟೀಪು ವಿರುದ್ಧ ನೆರವು ನೀಡಿದ್ದ ಹೈದರಾಬಾದ್ ನಿಜಾಮ, ಮರಾಠರು ಮತ್ತು ಪದಚ್ಯುತ ಒಡೆಯರುಗಳಲ್ಲಿ ಹಂಚಿದರು. ಅಖಂಡ ಕರ್ನಾಟಕ ಅನೇಕ ಸಂಸ್ಥಾನಿಕರ ಆಳ್ವಿಕೆಯಲ್ಲಿ ಹಂಚಿಹೋಯಿತು. ಇದಕ್ಕೆ ಬ್ರಿಟಿಷರ ಒಡೆದು ಆಳುವ (Divide and Rule) ನೀತಿಯೂ ಕಾರಣವಾಯಿತು. ಕರ್ನಾಟಕದಲ್ಲೇ ಕೊಡಗು, ಮುಧೋಳ, ಜಮಖಂಡಿ, ಹೈದ್ರಾಬಾದ ಸಂಸ್ಥಾನ (ಬೀದರ, ಗುಲಬರ್ಗಾ, ರಾಯಚೂರು ಇತ್ಯಾದಿ) ಹಲವಾರು ಸಣ್ಣಪುಟ್ಟ ಸಂಸ್ಥಾನಗಳಿದ್ದವು. ಇನ್ನೊಂದೆಡೆ ಬೊಂಬಾಯಿ ಮತ್ತು ಮದ್ರಾಸ್ ಪ್ರಾಂತಗಳ ಆಳ್ವಿಕೆಗೆ ಒಳಪಟ್ಟವು.

ಕರ್ನಾಟಕ ಏಕೀಕರಣದ ಮೂಲ : ಕರ್ನಾಟಕದ ವಿವಿಧ ಭಾಗಗಳು ವಿವಿಧ ಆಡಳಿತ ಶಕ್ತಿಗಳ ಅಡಿಯಲ್ಲಿ ನೆಲೆಸಿದವು. ಬ್ರಿಟಿಷರ ಆಡಳಿತದಲ್ಲಿ ಕನ್ನಡಿಗರು ಈ ರೀತಿ ವಿವಿಧ ಆಡಳಿತ ಘಟಕಗಳಲ್ಲಿ ಹರಿದು ಹಂಚಿ ಹೋಗಿದ್ದು ಇತಿಹಾಸದ ಒಂದು ದುರಂತವೆನ್ನಬಹುದಾಗಿದೆ. ಮುಂದೆ ೧೯ನೇ ಶತಮಾನದ ಕಡೆಯ ಭಾಗದಲ್ಲಿ ಮೂಡಿಸಿದ ರಾಷ್ಟ್ರೀಯತೆಯ ಪ್ರಭಾವದಿಂದಾಗಿ ಕನ್ನಡಿಗರು ವಿವಿಧ ಭಾಗಗಳ ಜನರಂತೆ ತಮ್ಮ ಪ್ರಾಂತ್ಯದ ನಿರ್ಮಾಣ ಕಾರ್ಯಕ್ಕೆ ಕಂಕಣ ತೊಟ್ಟು ನಿಂತರು. ಕನ್ನಡಿಗರ ಆ ನಿಸ್ವಾರ್ಥ, ದೀರ್ಘ ಹೋರಾಟದ ಫಲವಾಗಿ ಇಂದಿನ ಅಖಂಡ ಕರ್ನಾಟಕ ರೂಪುಗೊಳ್ಳು ವಂತಾಯಿತು.

ಭಾಷಾವಾರು ಆಧಾರದ ಮೇಲೆ ಕರ್ನಾಟಕ ಪ್ರಾಂತದ ರಚನೆಗಾಗಿ ಆರಂಭವಾದ ಆಂದೋಲನ ಸ್ವಾತಂತ್ರ್ಯ ಸಂಗ್ರಾಮದ ಜೊತೆಯಲ್ಲೇ ಮೂಡಿಬರತೊಡಗಿತು. ಏಕೀಕರಣದ ಕಲ್ಪನೆ ಮೂಲತಃ ಒಂದು ಆಂದೋಲನವಾಗಿ ರೂಪುಗೊಳ್ಳಲು ಕಾರಣರಾದವರು ಬುದ್ಧಿಜೀವಿಗಳು, ಕವಿಗಳು, ಲೇಖಕರು, ಪತ್ರಕರ್ತರು ಮೊದಲಾದವರು. ಇನ್ನೊಂದೆಡೆ ಪ್ರಗತಿಪರ ವಿಚಾರವುಳ್ಳ, ಕನ್ನಡದ ಬಗ್ಗೆ ಅಪಾರ ಅಭಿಮಾನವುಳ್ಳ ಮಠಾಧೀಶರು ಕಾರಣರಾದರು. ಇವರ ಪ್ರಯತ್ನದಿಂದಾಗಿ ಜನತೆಯಲ್ಲಿ ಮೂಡಿದ ಭಾವನಾತ್ಮಕ ವಾತಾವರಣ ದೇಶದ ಸ್ವಾತಂತ್ರ್ಯಗಳಿಗೂ ಪೂರಕವಾಗಿದ್ದರಿಂದ ಸಹಜವಾಗಿಯೇ ರಾಜಕಾರಣಿಗಳೂ ಏಕೀಕರಣದ ಸೊಲ್ಲೆತ್ತಿ ಬೆಂಬಲಿಸತೊಡಗಿದರು. ಒಟ್ಟಿನಲ್ಲಿ ಭಾರತೀಯರಲ್ಲಿ ಮೂಡಲಾರಂಭಿಸಿದ ನವೋದಯ ಹಾಗೂ ಜಾಗೃತಿ ಈ ಆಂದೋಲನದ ಮೂಲವೆನ್ನಬಹುದು.

ಪತ್ರಿಕೆಗಳ ಪಾತ್ರ : ಯಾವುದೇ ಚಳವಳಿ ಆಂದೋಲನ ಜನತೆ ವಹಿಸುವ ಪಾತ್ರವನ್ನು ಅವಲಂಬಿಸಿರುತ್ತದೆ. ಎಷ್ಟರ ಮಟ್ಟಿಗೆ ಅವರು ಪಾಲ್ಗೊಳ್ಳುವರೋ ಅಷ್ಟು ಬೇಗ ಯಶಸ್ಸು ಲಭ್ಯವಾಗುತ್ತದೆ. ಪತ್ರಿಕೆಗಳೂ ಕರ್ನಾಟಕವನ್ನು ಏಕೀಕೃತಗೊಳಿಸುವಲ್ಲಿ ಕೂಡ ಪ್ರಾಮುಖ್ಯವುಳ್ಳವಾಗಿದ್ದವು. ವಿವಿಧ ಆಡಳಿತ ಘಟಕಗಳಲ್ಲಿ ಹಂಚಿಹೋಗಿದ್ದ ಕನ್ನಡಿಗರು ಅನ್ಯ ಭಾಷೀಯರ ಪ್ರಭಾವದಲ್ಲಿ ಉಳಿದು, ಮೂಲ ಭಾಷೆಯನ್ನೇ ಮರೆತು, ಅದು ಕಣ್ಮರೆಯಾಗುವುದರಲ್ಲಿದ್ದಿತು. ಅಂತಹ ಸಂದರ್ಭದಲ್ಲಿ ಹಲವು ಪತ್ರಿಕೆಗಳು ಜನರಲ್ಲಿ ಜಾಗೃತಿ ಉಂಟು ಮಾಡಿದವು. ಉಡುಪಿ ಪ್ರದೇಶದಲ್ಲಿ 'ಸತ್ಯಾಗ್ರಹಿ'

'ನವಯುಗ' ಧಾರವಾಡ ಮತ್ತು ಹುಬ್ಬಳ್ಳಿ ಪ್ರದೇಶದಲ್ಲಿ 'ಕರ್ಮವೀರ' 'ಸಾಧನ', ಮೈಸೂರಿನಲ್ಲಿ 'ಸಾಧ್ವಿ' 'ದಿ ಸ್ಟಾರ್', ಬಾಗಲಕೋಟೆಯಲ್ಲಿ 'ಕನ್ನಡಿಗ' ಬಿಜಾಪೂರದಲ್ಲಿ 'ಕರ್ನಾಟಕ ವೈಭವ' ಮೊದಲಾದವು ಜನರ ಭಾಷಾಭಿಮಾನವನ್ನು ಕೆರಳಿಸಿ ಏಕೀಕರಣದ ಬಗ್ಗೆ ಹುರಿದುಂಬಿಸುವಲ್ಲಿ ಪ್ರಮುಖ ಪಾತ್ರವಹಿಸಿದವು.

ಭಾಲ್ಕಿಯ ಅಪ್ಪಗಳ ಮೇಲೆ ಪತ್ರಿಕೆಗಳ ಪ್ರಭಾವ : ಭಾಲ್ಕಿಯ ಪೂಜ್ಯ ಚನ್ನಬಸವ ಪಟ್ಟದ್ದೇವರು ವಿದ್ಯಾರ್ಥಿ ದೆಸೆಯಲ್ಲಿ ಔರಾದಿನ ಅಮರೇಶ್ವರ ಗುಡಿಯಲ್ಲಿ ಗಳಂಗಳಪ್ಪ ಶಾಲೆಯಲ್ಲಿ ಇದ್ದಾಗ, ಮೈಸೂರು ಸೀಮೆಯಿಂದ ಆ ಕಾಲಕ್ಕೆ (ಕ್ರಿ.ಶ. ೧೯೧೭ರಲ್ಲಿ ಪ್ರಕಟವಾಗುತ್ತಿದ್ದ ಬಹು ಪ್ರಸಿದ್ಧವಾದ 'ದಿ ಸ್ಟಾರ್' ಕನ್ನಡ ವಾರ ಪತ್ರಿಕೆ ತಪ್ಪದೆ ಓದುತ್ತಿದ್ದರು.[೬] ಕನ್ನಡ ಮತ್ತು ಸಾಹಿತ್ಯ-ಸಂಸ್ಕೃತಿಗಳ ಜೊತೆಗೆ ಸಾಮಾಜಿಕ ಮತ್ತು ಧಾರ್ಮಿಕ ಸುದ್ದಿಗಳು ಪೂಜ್ಯರ ಮೇಲೆ ವಿಶೇಷ ಪ್ರಭಾವ ಬೀರಿದವು. ಶಿವಯೋಗ ಮಂದಿರದ ಸಮಾಚಾರಗಳು ಈ ಪತ್ರಿಕೆಯಿಂದ ತಿಳಿದುಕೊಳ್ಳಲು ಅನುಕೂಲವಾಗಿತ್ತು. ಮುಂದೆ ಕ್ರಿ.ಶ. ೧೯೨೪ರಲ್ಲಿ ಭಾಲ್ಕಿ ಮಠದ ಪಟ್ಟಾಧಿಕಾರ ವಹಿಸಿಕೊಂಡ ಮೇಲೆ ಕನ್ನಡ ಪಾಠಶಾಲೆ ಆರಂಭಿಸುವ ಪ್ರಥಮ ಕಾರ್ಯ ಪೂಜ್ಯ ಶ್ರೀಗಳು ಕೈಗೊಳ್ಳಲಿಕ್ಕೆ ಈ ಪತ್ರಿಕೆಯೇ ಕಾರಣವಾಗಿದ್ದು ಇಲ್ಲಿ ಸ್ಮರಿಸಬಹುದು. ಮುಂದೆ ಕರ್ನಾಟಕ ಏಕೀಕರಣ ಆಂದೋಲನದಲ್ಲಿ ಪೂಜ್ಯ ಶ್ರೀಗಳು ನೇರವಾಗಿ ಹೋರಾಟ ಮಾಡಲಿಕ್ಕೂ ಈ ಪತ್ರಿಕೆಯೊಂದಿಗೆ ಹಲವಾರು ಪತ್ರಿಕೆಗಳು ಸಹಾಯವಾಗಿದ್ದು ಮೂಲ ಕಾರಣವಾಯಿತು. ಒಟ್ಟಿನಲ್ಲಿ ಪತ್ರಿಕೆಗಳಲ್ಲಿ ಬರುವ ಸಂಪಾದಕರ ಅಗ್ರ ಲೇಖನಗಳು ಜನಜಾಗೃತಿಯುಂಟುಮಾಡಿ ಯಶಸ್ಸು ಗಳಿಸಿದವು.

ಹೈದ್ರಾಬಾದ ಸಂಸ್ಥಾನದಲ್ಲಿ ಮಲತಾಯಿ ಧೋರಣೆ : ಹೈದ್ರಾಬಾದ ಸಂಸ್ಥಾನದ ನಿಜಾಮ ಬ್ರಿಟಿಷರ ಮಿತ್ರನಾಗಿದ್ದು, ಹಲವು ಕನ್ನಡ ಪ್ರದೇಶಗಳನ್ನು ಗಿಟ್ಟಿಸಿದ್ದ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡವರನ್ನು ಉಗ್ರ ಶಿಕ್ಷೆಗೆ ಗುರಿಪಡಿಸುತ್ತಿದ್ದ. ಇಲ್ಲಿನ ಆಡಳಿತ ಹಾಗೂ ಶಿಕ್ಷಣ ಮಾಧ್ಯಮ ಸಂಪೂರ್ಣ ಉರ್ದು. ಹೀಗಾಗಿ ಇತರೆಡೆಗಳಂತೆ ಕನ್ನಡ ಭಾಷಿಕರನ್ನೊಳಗೊಂಡ ಬೀದರ, ಗುಲಬರ್ಗಾ, ರಾಯಚೂರು ಪ್ರದೇಶಗಳು ದುಃಸ್ಥಿತಿಗೆ ಗುರಿಯಾದವು. ಇಲ್ಲಿನ ಉನ್ನತಾಧಿಕಾರಗಳೆಲ್ಲವೂ ಕನ್ನಡೇತರರ ಪಾಲು. ಶಿಕ್ಷಣ ಪೂರ್ಣ ನಿರ್ಲಕ್ಷಿತವಾಗಿತ್ತು. ೧೯೪೭ರಲ್ಲಿ ಈ ಮೂರು ಜಿಲ್ಲೆಗಳಿಗಿದ್ದ ಒಟ್ಟು ಪ್ರೌಢಶಾಲೆಗಳು ಆರು ಮಾತ್ರ! ಯಾವುದೇ ಸಾಂಸ್ಕೃತಿಕ ಅಥವಾ ಅಭಿವೃದ್ಧಿ ಕಾರ್ಯಗಳು ಇಲ್ಲಿ ಸಹಜವಾಗಿಯೇ ಇರಲಿಲ್ಲ. ಎಲ್ಲೆಡೆ ಮಲತಾಯಿ ಧೋರಣೆ ಎದ್ದು ಕಾಣುತ್ತಿದ್ದಿತು. ಇದೇ ತೆರನಾದ ಧೋರಣೆಯನ್ನು ಬ್ರಿಟಿಷ್ ಭಾರತ ಸರಕಾರ ಕೂಡ ಹೊಂದಿದ್ದಿತು. ಕೇಂದ್ರ ಶಾಸನ ಸಭೆಯಲ್ಲಿದ್ದ ೧೪೨ ಮಂದಿ ಸದಸ್ಯರಲ್ಲಿ ಬ್ರಿಟಿಷ್ ಪ್ರಾಂತದಲ್ಲಿದ್ದ ಸುಮಾರು ೬೮ ಲಕ್ಷ ಕನ್ನಡಿಗರ ಪ್ರಾತಿನಿಧ್ಯ ಒಂದೇ ಒಂದು ಮಾತ್ರ ! ಹೀಗೆ ಭಿನ್ನ ಭಿನ್ನ ಭಾಷೀಯರ ಅಧೀನದಲ್ಲಿ ಹಂಚಿಹೋದ ಕನ್ನಡಿಗರು ಹಲವು ಬಗೆಯ ತೊಂದರೆಗೆ ಒಳಗಾಗಬೇಕಾಯಿತು. ಮೇಲಾಗಿ ವಿವಿಧ ಸೌಲಭ್ಯಗಳಿಂದ ವಂಚಿತರಾಗಿದ್ದರು.

೧೯ನೇ ಶತಮಾನದ ಅಂತ್ಯದ ವೇಳೆಗೆ ರಾಷ್ಟ್ರೀಯ ಪ್ರಜ್ಞೆ ಬೆಳೆದಂತೆ ಜನರು ಬ್ರಿಟಿಷರ ಮತ್ತು ನಿಜಾಮರ ಧೋರಣೆಗಳನ್ನು ಕ್ರಮೇಣ ವಿರೋಧಿಸತೊಡಗಿದರು. ಇದರ ಫಲವಾಗಿಯೇ ಭಾಷಾವಾರು ಪ್ರಾಂತ್ಯಗಳ ರಚನೆಯ ಬಗ್ಗೆ ಚಳವಳಿ ಆರಂಭವಾಯಿತು. ೧೮೫೮ರಲ್ಲಿ ಡೆಪ್ಯುಟಿ ಚನ್ನಬಸವಪ್ಪನವರು ಇಂತಹ ಚಳವಳಿಯನ್ನು ಉತ್ತರ ಕರ್ನಾಟಕದಲ್ಲಿ ಪ್ರಾರಂಭಿಸಿದರು. ೧೯೩೬ರಲ್ಲಿ ಭಾಲ್ಕಿ ಪೂಜ್ಯ ಚನ್ನಬಸವ ಪಟ್ಟದ್ದೇವರು ಮೋರಗಿಯಲ್ಲಿ (ಆಗ ಅದು ಕರ್ನಾಟಕದಲ್ಲಿತ್ತು-ಈಗ ಆಂಧ್ರದಲ್ಲಿದೆ) ಕನ್ನಡ ಪಾಠಶಾಲೆ ಆರಂಭಿಸಿದ್ದು ಐತಿಹಾಸಿಕ ಮಹತ್ವ ಪಡೆದಿದೆ. ಪೂಜ್ಯ ಶ್ರೀಗಳು ಹೈದ್ರಾಬಾದ-ಕರ್ನಾಟಕ ಪ್ರದೇಶದಲ್ಲಿ ಕನ್ನಡವನ್ನುಳಿಸಲು ಶ್ರಮಿಸಿದವರಲ್ಲಿ ಒಬ್ಬರು. ಮನೆಗೊಬ್ಬರಾದರೂ ಕನ್ನಡ ಕಲಿಯುವಂತೆ ಪ್ರೇರಣೆ ನೀಡಿದ ಗುರುಗಳು, ಹಲವಾರು ನಿರ್ಬಂಧಗಳ ನಡುವೆ ಕನ್ನಡ ಶಾಲೆಗಳನ್ನು ನಡೆಸಿ, ಏಕೀಕರಣದಲ್ಲಿ ಭಾಗವಹಿಸಿದ್ದರು.[೭] ಭಾಲ್ಕಿಯ ಪೂಜ್ಯ ಚನ್ನಬಸವ ಪಟ್ಟದ್ದೇವರು ಮೋರಗಿ ಶಾಲೆಯಲ್ಲಿ ಬಸವಾದಿ ಶರಣರ ವಚನಗಳ ಪಠಣ ಹಾಗೂ ಸಾಮೂಹಿಕ ಪ್ರಾರ್ಥನೆಗಳಿಗೆ ಹೆಚ್ಚಿನ ಗಮನ ಕೊಡುತ್ತಿದ್ದರು. ಹೈದರಾಬಾದ-ಕರ್ನಾಟಕದಲ್ಲಿ ಕೇವಲ ಉರ್ದು ಶಿಕ್ಷಣದ ಹೊರತು ಮತ್ತಾವ ಭಾಷೆಯ ಶಿಕ್ಷಣವು ಇರಲಿಲ್ಲವಾದ್ದರಿಂದ ಜನರು ಕನ್ನಡವನ್ನು ಕಲಿಯಬೇಕು ಎಂದು ಪಣ ತೊಟ್ಟರು. ಕನ್ನಡ ಶಾಲೆಗಳ ಸ್ಥಾಪನೆಗಾಗಿ ಅನೇಕ ಕಷ್ಟ-ನಷ್ಟಗಳೂ, ಮಾನ-ಅಪಮಾನಗಳೂ ಬಂದರೂ ದಿಟ್ಟತನದಿಂದ ಮುಂದೆ ಹೆಜ್ಜೆಯನ್ನಿಡುತ್ತಿದ್ದರು.

ಕನ್ನಡದ ಮಠ-ಭಾಲ್ಕಿ ಹಿರೇಮಠ : ಕನ್ನಡದ ಉಳಿವಿಗಾಗಿ ಒಂದು ರೀತಿಯ ಭೂಗತ ಚಟುವಟಿಕೆ ನಡೆಸಿದವರು ಭಾಲ್ಕಿ ಪೂಜ್ಯ ಚನ್ನಬಸವ ಪಟ್ಟದ್ದೇವರು. ವಚನ ಸಾಹಿತ್ಯದ ಕಣಜವೆನಿಸಿದ ಬೀದರಿನಲ್ಲಿ ಶರಣರ ಕಾಲ ಕಳೆದ ಮೇಲೆ ಪರರಾಷ್ಟ್ರೀಯರ, ಪರಭಾಷಿಕರ ಆಳ್ವಿಕೆಯಿಂದ ಕನ್ನಡದ ಸ್ಥಿತಿ ನೆಲಕಚ್ಚಿತ್ತು. ಹಿರೇಮಠ ಸಂಸ್ಥಾನದ ಮೂಲಕ ೧೯೩೬ರಲ್ಲಿ ಆರಂಭಿಸಿದ ಕನ್ನಡ ಕ್ರಾಂತಿ ಅಮೋಘ. ಇದೇ ಕಾರಣದಿಂದ ಭಾಲ್ಕಿ ಹಿರೇಮಠಕ್ಕೆ

'ಕನ್ನಡ ಮಠ' ಎಂದೂ ಕರೆಯ ಲಾಗುತ್ತದೆ.[೩] ನಿಜಾಮನ ಅಟ್ಟಹಾಸದ ಆಡಳಿತದಲ್ಲಿ ಹೊರಗೆ ಉರ್ದು ಫಲಕ ಹಾಕಿ ಒಳಗೆ ಕನ್ನಡ ಕಲಿಸಿದ ಧೀರ ಚೇತನರು ಪೂಜ್ಯ ಚನ್ನಬಸವ ಪಟ್ಟದ್ದೇವರು. ಕಲ್ಯಾಣ ನಾಡಿನಲ್ಲಿ ಮತ್ತೆ ಕನ್ನಡ ಗಟ್ಟಿಯಾಗಿ ಬೆಳೆಯುವುದಕ್ಕೆ ಪೂಜ್ಯ ಪಟ್ಟದ್ದೇವರ ಬುನಾದಿ ಪ್ರಬಲ ಕಾರಣವೆಂದೇ ಹೇಳಬಹುದು.

ಕರ್ನಾಟಕ ಏಕೀಕರಣದ ಪ್ರೇರಕಾಂಶಗಳು : ಕನ್ನಡ ಭಾಷೆ ಮತ್ತು ಕಲೆಯ ಅಭಿವೃದ್ಧಿ ಹಾಗೂ ಕರ್ನಾಟಕದ ಸ್ವಾಯತ್ತತೆ ಪಡೆಯುವ ಹಿನ್ನೆಲೆಯಲ್ಲಿ ೧೮೯೦ ರಲ್ಲಿ ಧಾರವಾಡದಲ್ಲಿ 'ಕರ್ನಾಟಕ ವಿದ್ಯಾವರ್ಧಕ ಸಂಘ' ಪ್ರಾರಂಭವಾದುದು ಒಂದು ಮಹತ್ವಪೂರ್ಣವಾದ ಮೈಲುಗಲ್ಲೆನ್ನಬಹುದು. ಈ ಸಂಸ್ಥೆಯ ಹೋರಾಟದ ಪಾತ್ರ ಪ್ರಮುಖವಾದುದು. ಬೆನಗಲ್ ರಾಮರಾಯರು, ರಾ.ಹ. ದೇಶಪಾಂಡೆ ಮತ್ತು ಕುಲಪುರೋಹಿತ ಆಲೂರು ವೆಂಕಟರಾಯರು ಕರ್ನಾಟಕದ ಏಕೀಕರಣದ ಕಹಳೆಯನ್ನು ಊದಿದರು. ಏಕೀಕರಣವನ್ನೇ ತಮ್ಮ ಜೀವಿತದ ಗುರಿಯಾಗಿಸಿಕೊಂಡರು. ವಿವಿಧ ಭಾಷೆಗಳ ರಾಜ್ಯಾಡಳಿತದಲ್ಲಿ ಹಂಚಿಹೋಗಿದ್ದ ಕನ್ನಡ ನೆಲವನ್ನೆಲ್ಲ ಒಗ್ಗೂಡಿಸುವ ಪ್ರಯತ್ನಕ್ಕೆ ಪ್ರೇರಕವಾದ ಅಂಶಗಳಲ್ಲಿ ಹಲವು ಇದ್ದರೂ. ಮೊದಲನೆಯವು ವಿದ್ವಾಂಸರು ಮತ್ತು ಕವಿವರ್ಯರು ರಚಿಸಿ ಪ್ರಚುರಪಡಿಸಿದ ಗ್ರಂಥಗಳು, ಪತ್ರಿಕೆಗಳು ಮತ್ತು ಗೀತೆ (ಹಾಡು) ಗಳು ಬೆನಗಲ್ ರಾಮರಾಯರ 'ಸುವಾಸಿನಿ' ಪತ್ರಿಕೆ, ಆಲೂರು ವೆಂಕಟರಾಯರ 'ಕರ್ನಾಟಕ ಗತವೈಭವ' ಗ್ರಂಥ, ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು... 'ಗೀತೆ, ಕೆ.ವಿ. ಪುಟ್ಟಪ್ಪನವರ 'ಜೈ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ.... 'ಗೀತೆ ಇಂತಹ ಹಲವು ದೇಶಭಕ್ತಿ ಗೀತೆಗಳು ಕನ್ನಡಿಗರಲ್ಲಿ ನಾಡು, ನುಡಿಗಾಗಿ ಹೋರಾಡಲು ಪ್ರೇರೇಪಿಸುವಲ್ಲಿ ನೆರವಾದವು.

ಕನ್ನಡ ಸಾಹಿತ್ಯ ಪರಿಷತ್ತು : ಬ್ರಿಟಿಷರ ವಿಕೇಂದ್ರೀಕರಣದ ವಿರುದ್ಧ ಸೆಟೆದು ನಿಂತ ಮೊದಲ ಸಂಸ್ಥೆಗಳಲ್ಲಿ 'ಕನ್ನಡ ಸಾಹಿತ್ಯ ಪರಿಷತ್ತು'. ಒಂದಾಗಿತ್ತು. ಅಖಿಲ ಕರ್ನಾಟಕ ವ್ಯಾಪ್ತಿಯುಳ್ಳ ಈ ಸಂಸ್ಥೆಯು ೧೯೧೫ರಲ್ಲಿ ಬೆಂಗಳೂರಿನಲ್ಲಿ ಜನ್ಮತಾಳಿತು. ಮೈಸೂರು ಮಹಾರಾಜರು ಇದರ ಪೋಷಕರಾಗಿದ್ದರು. ಇದರ ಅಸ್ತಿತ್ವಕ್ಕೆ ಕಾರಣಕರ್ತೃಗಳಲ್ಲಿ ದಿವಾನ್ ಎಂ. ವಿಶ್ವೇಶ್ವರಯ್ಯನವರೂ ಒಬ್ಬರಾಗಿದ್ದರು. ಇದರ ಮೊದಲ ಅಧಿವೇಶನದಲ್ಲಿ ಕರ್ನಾಟಕ ಏಕೀಕರಣದ ಬೇಡಿಕೆಯನ್ನು ಅಂಗೀಕರಿಸಲಾಯಿತು. ಅಸಂಖ್ಯಾತ ಸದಸ್ಯರನ್ನು ಮತ್ತು ಬೆಂಬಲಿಗರನ್ನು ಪಡೆದ ಈ ಸಂಸ್ಥೆ ತನ್ನ ವಾರ್ಷಿಕ ಸಮ್ಮೇಳನಗಳ ಮೂಲಕ ಏಕೀಕರಣಕ್ಕಾಗಿ ಹೋರಾಟ ನಡೆಸತೊಡಗಿತು. ಇಲ್ಲಿಯವರೆಗೆ ಅಖಿಲ ಭಾರತ ಮಟ್ಟದಲ್ಲಿ ೭೩ ಕನ್ನಡ ಸಾಹಿತ್ಯ ಸಮ್ಮೇಳನಗಳು ಯಶಸ್ವಿಯಾಗಿ ಜರುಗಿವೆ. ಕ್ರಿ.ಶ. ೨೦೦೬ರ ಜನವರಿ ೨೭, ೨೮ ಮತ್ತು ೨೯ ರಂದು ಬೀದರನಲ್ಲಿ ಅಖಿಲ ಭಾರತ ೭೪ನೇ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಿತು. ಒಂದೊಮ್ಮೆ ಭಾಲ್ಕಿ ಹಿರೇಮಠ ಸಂಸ್ಥಾನದ ಪೂಜ್ಯ ಡಾ. ಚನ್ನಬಸವ ಪಟ್ಟದ್ದೇವರ ಬಳಿ ಕೆಲ ಕಾಲ (ಕ್ರಿ.ಶ. ೧೯೪೫–೪೮ರಲ್ಲಿ) ಇದ್ದು ವಿದ್ಯೆ ಕಲಿತ ಡಾ. ಶಾಂತರಸ ಹೆಂಬೇರಾಳು ಅವರು ಈ ಸಮ್ಮೇಳನಾಧ್ಯಕ್ಷರಾಗಿದ್ದು ಐತಿಹಾಸಿಕ ಮಹತ್ವ ಪಡೆದಂತಾಗಿದೆ. ವೇದಿಕೆಗೆ 'ಡಾ. ಚನ್ನಬಸವ ಪಟ್ಟದ್ದೇವರು ವೇದಿಕೆ' ಎಂದು ಹೆಸರಿಟ್ಟು ಗೌರವಿಸಲಾಗಿದೆ. ಗಡಿಭಾಗದಲ್ಲಿ ಕನ್ನಡ ಗಟ್ಟಿಯಾಗಿ ಉಳಿದು ಬೆಳೆಯಲಿಕ್ಕೆ ಕಾರಣ ಪುರುಷರಾದ ಪೂಜ್ಯ ಅಪ್ಪಗಳ ಕಾರ್ಯ ಕನ್ನಡಿಗರು ಹೃದಯತುಂಬಿ ಸ್ಮರಿಸಿದಂತಾಗಿದೆ.

೨೦೦೬ರ ಸರಕಾರಿ ಕ್ಯಾಲೆಂಡರ್‌ನಲ್ಲಿ ಅಪ್ಪಗಳ ಭಾವಚಿತ್ರ: ಕರ್ನಾಟಕ ಕ್ರಿ.ಶ. ೧೯೫೬ರಲ್ಲಿ ಉದಯಿಸಿ ಐವತ್ತು ವರ್ಷಗಳು ಪೂರೈಸಿದ ಸಂದರ್ಭದಲ್ಲಿ ೨೦೦೬ನೇ ವರ್ಷದ ಕ್ಯಾಲೆಂಡರ್ ಕರ್ನಾಟಕ ಸರಕಾರದ ವತಿಯಿಂದ ಪ್ರಕಟವಾದದ್ದು ಒಂದು ಅರ್ಥಪೂರ್ಣ ಕ್ಯಾಲೆಂಡರ್ ಆಗಿದೆ. ಕರ್ನಾಟಕ ಏಕೀಕರಣಕ್ಕೆ ಹೋರಾಡಿದ ಕಾರಣ ಪುರುಷರಾದ ಆಲೂರು ವೆಂಕಟರಾಯರು, ಸರ್. ಸಿದ್ಧಪ್ಪ ಕಂಬಳಿ, ಡಾ. ಚನ್ನಬಸವ ಪಟ್ಟದ್ದೇವರು, ಆರ್.ಆರ್. ದಿವಾಕರ್, ಎಸ್. ನಿಜಲಿಂಗಪ್ಪ, ಕೆ.ಬಿ. ಜನರಾಜ ಹೆಗ್ಗಡೆ, ಕೆ.ಎಫ್. ಪಾಟೀಲ, ಕೆ. ಹನುಮಂತಯ್ಯ, ಅಂದಾನಪ್ಪ ದೊಡ್ಡಮೇಟಿ, ಜಯದೇವಿತಾಯಿ ಲಿಗಾಡೆ, ರಂಜಾನ್‌ಸಾಬ್, ಕೆ.ಆರ್. ಕಾರಂತ ಮುಂತಾದವರ ದೊಡ್ಡದಾದ ವರ್ಣರಂಜಿತ ಭಾವಚಿತ್ರಗಳನ್ನು ಪ್ರಕಟಿಸಿ ಗೌರವಿಸಲಾಗಿದೆ. ಜೊತೆಗೆ ಸಂಕ್ಷಿಪ್ತದಲ್ಲಿ ಅವರ ಹೋರಾಟ ಕುರಿತಾಗಿ ಮೆಚ್ಚುಗೆ ವ್ಯಕ್ತಪಡಿಸಿ, ನಾಡಿನಾದ್ಯಂತ ಪರಿಚಯಿಸಿದ ಕಾರ್ಯ ಒಂದು ಐತಿಹಾಸಿಕ ಮೈಲುಗಲ್ಲಾಗಿದೆ. ಪ್ರತಿ ಪುಟದಲ್ಲೂ ಸಣ್ಣರೇಖಾ ಚಿತ್ರಗಳಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಹೋರಾಟ ಗೈದ ವ್ಯಕ್ತಿಗಳ ಭಾವಚಿತ್ರಗಳು ಪ್ರಕಟಿಸಿ ಸ್ಮರಿಸಲಾಗಿದೆ. ಈ ನಿಟ್ಟಿನಲ್ಲಿ ಭಾಲ್ಕಿಯ ಪೂಜ್ಯ ಚನ್ನಬಸವ ಪಟ್ಟದ್ದೇವರ ಕುರಿತಾಗಿ ಬರೆದ ಸಾಲುಗಳು ಇಂತಿವೆ. "ಮರಾಠಿ ಭಾಷಿಕರು ಮತ್ತು ರಜಾಕಾರರ ನಡುವೆ ಹಾಗೂ ವ್ಯವಹಾರದ ಮರಾಠಿ ಮತ್ತು ಆಡಳಿತ ಉರ್ದು ಭಾಷೆಗಳ ನಡುವೆ ಅನಾಥ ಸ್ಥಿತಿಯಲ್ಲಿದ್ದ ಕನ್ನಡಿಗರು ಮತ್ತು ಕನ್ನಡವನ್ನು ಉಳಿಸುವ ಕಾಯಕದಲ್ಲಿ ಯಶಸ್ವಿಯಾದ ಭಾಲ್ಕಿಯ ಹಿರೇಮಠದ ಡಾ. ಚನ್ನಬಸವ ಪಟ್ಟದ್ದೇವರು

ಹೈದರಾಬಾದ ಕರ್ನಾಟಕ ಪ್ರದೇಶದ ಪಟ್ಟದ ದೇವರೇ ಆದವರು". ಇವು 'ಕರ್ನಾಟಕ ಏಕೀಕರಣ ಆಂದೋಲನ'ದಲ್ಲಿ ಹೋರಾಟ ಮಾಡಿದ ಕಾರಣ ಪುರುಷರಿಗೆ ಸಮಸ್ತ ಕನ್ನಡಿಗರು ಅರ್ಪಿಸಿದ ಹೃದಯಾಂತರಾಳದ ಗೌರವ ಸೂಚಕ ನುಡಿನೈವೇದ್ಯ ಸಾಲುಗಳಾಗಿವೆ.

ಡಾ. ಬಿ.ಜಿ. ಹಿರೇಮಠರ ನೆನಪಿನಂಗಳದಿಂದ : ಡಾ. ಬಿ.ಜಿ. ಹಿರೇಮಠರು ೧೯೫೭ರಲ್ಲಿ ಏಳನೇ ತರಗತಿ ಪಾಸಾಗಿ ಭಾಲ್ಕಿಯ ಪೂಜ್ಯ ಚನ್ನಬಸವ ಪಟ್ಟದ್ದೇವರ ಪ್ರಸಾದ ನಿಲಯದ ವಿದ್ಯಾರ್ಥಿಯಾಗಿ ತಮ್ಮ ಪ್ರೌಢಶಾಲೆ ಶಿಕ್ಷಣವನ್ನು ಮುಂದುವರೆಸಿದರು. ಅವರ ವಿದ್ಯಾರ್ಥಿ ಜೀವನದಲ್ಲಿ ಕಂಡ ಕರ್ನಾಟಕ ಏಕೀಕರಣ ಆಂದೋಲನದ ಒಂದು ಘಟನೆ ಈ ರೀತಿ ದಾಖಲಿಸಿದ್ದಾರೆ. "೧೯೫೬ನೇ ನವ್ಹೆಂಬರ್ ೧ ರಿಂದ ಬೀದರ ಜಿಲ್ಲೆಯನ್ನು ಭಾಷಾವಾರು ಪ್ರಾಂತ ವಿಂಗಡಣೆಯ ಪ್ರಕಾರ ಹಳೇ ಮೈಸೂರಿಗೆ (ಇಂದಿನ ಕರ್ನಾಟಕ ರಾಜ್ಯ) ಸೇರಿಸಲ್ಪಟ್ಟಿತು. ಅದೇ ವರ್ಷ ಡಿಸೆಂಬರ್/ಜನವರಿಯಲ್ಲಿ ಔರಾದ ತಲ್ಲೂಕಿನ ಗಡಿಭಾಗವಾದ ಕಮಲನಗರದಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಒಂದು ದೊಡ್ಡ ಕಾರ್ಯಕ್ರಮ ಹಾಕಿಕೊಂಡಿದ್ದರು. ಔರಾದ ಮತ್ತು ಭಾಲ್ಕಿ ತಾಲ್ಲೂಕುಗಳು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂಬ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಸುದ್ದಿ ಕಾಳ್ಗಿಚ್ಚಿನಂತೆ ಬೀದರ ಜಿಲ್ಲೆ ತುಂಬಾ ಹರಡಿತು. ಹುಮನಾಬಾದ, ಜಹಿರಬಾದ, ಬೀದರ, ಭಾಲ್ಕಿ, ಔರಾದ ತಾಲ್ಲೂಕುಗಳಿಂದ ಸಾವಿರಾರು ಸಂಖ್ಯೆಯಲ್ಲಿ ಸತ್ಯಾಗ್ರಹಿಗಳು ಕಮಲನಗರಕ್ಕೆ ಬಂದು ಆ ಕಾರ್ಯಕ್ರಮಕ್ಕೆ ವಿರೋಧಿಸ ಬೇಕೆಂದು ಕರೆ ಕೊಡಲಾಗಿತ್ತು." ನನಗೆ ಚೆನ್ನಾಗಿ ನೆನಪಿದೆ. ರೈಲು ಗಾಡಿ ಭಾಲ್ಕಿ ನಿಲ್ದಾಣಕ್ಕೆ ಬಂದಾಗ ಒಳಗೆ ಕಾಲಿಡಲೂ ಕೂಡ ಜಾಗ ಇರಲಿಲ್ಲ. ಅದಕ್ಕಾಗಿ ಭಾಲ್ಕಿಯಿಂದ ನಾವೆಲ್ಲರೂ ಗಾಡಿಯ ಮೇಲೆ ಕುಳಿತು ಕಮಲನಗರಕ್ಕೆ ಸಾಯಂಕಾಲ ಬಂದೆವು".

"ಕಮಲಾನಗರ ನಿಲ್ದಾಣದಿಂದ ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಕನ್ನಡಿಗರು ಕಾರ್ಯಕ್ರಮದ ವೇದಿಕೆಯ ಕಡೆಗೆ ಜಯಘೋಷ ಮಾಡುತ್ತಾ ಮುನ್ನುಗ್ಗುತ್ತಿದ್ದರು. ಸಾವಿರಾರು ಸಂಖ್ಯೆಯಲ್ಲಿ ಮುನ್ನುಗ್ಗುತ್ತಿದ್ದ ಕನ್ನಡಿಗರ, ವಿದ್ಯಾರ್ಥಿಗಳ ಜಯಘೋಷ ಆಕಾಶ ತಲುಪುವಂತಿತ್ತು. 'ಕನ್ನಡಾಂಬೆಗೆ ಜಯವಾಗಲಿ, ಕರ್ನಾಟಕ ಮಾತಾಕಿ ಜಯ್' ಎಂಬ ಜಯಘೋಷದಿಂದ ಬಹುಶಃ ಭಯಪಟ್ಟು ಮಹಾರಾಷ್ಟ್ರ ಏಕೀಕರಣ ಸಮಿತಿಯ ಕಾರ್ಯಕರ್ತರು ರೊಚ್ಚಿಗೆದ್ದು ಕನ್ನಡಿಗರ ಮೇಲೆ ಕಲ್ಲು ತೂರಾಟ, ಬಡಿಗೆಗಳಿಂದ ಸತ್ಯಾಗ್ರಹಿಗಳ ಮೇಲೆ ಅತ್ಯಾಚಾರ ಮಾಡಲಾರಂಭಿಸಿದರು. ಅವರ ಈ ಹೀನಕೃತ್ಯದಿಂದ ನಮ್ಮಲ್ಲಿ ಅನೇಕರು ಸಿಟ್ಟಿಗೆದ್ದು ವೇದಿಕೆಗೆ ಬೆಂಕಿ ಇಟ್ಟರು. ಮರಾಠಿಗರು ಕುದುರೆ ಸವಾರಿ ಮಾಡಿ, ಕನ್ನಡ ಸತ್ಯಾಗ್ರಹಿಗಳ ಮೇಲೆ ತಮ್ಮ ಬಲ ಪ್ರಯೋಗ ಮಾಡತೊಡಗಿದರು. ಅನೇಕ ವಿದ್ಯಾರ್ಥಿಗಳು ಹೊಲಗಳಲ್ಲಿ ಬಿದ್ದಿದ್ದರು. ಕೆಲವರಂತೂ ೫-೧೦ ಕಿ.ಮೀ. ವರೆಗೆ ಓಡಿದ್ದರು. ೪೦-೫೦ ವಿದ್ಯಾರ್ಥಿಗಳು ಲಾಠಿಚಾರ್ಜಿನಿಂದ ಗಂಭೀರ ಗಾಯಗಳಾಗಿದ್ದವು. ಅವರಲ್ಲಿ ನಾನು ಕೂಡ ಒಬ್ಬನು. ಇಂತಹ ಗಂಭೀರ ಪರಿಸ್ಥಿತಿಯಲ್ಲಿ ಪೂಜ್ಯ ಶ್ರೀಗಳು ದೂರದರ್ಶಿಯಾಗಿ ಯೋಚಿಸಿಯೇ ಶಾಂತಿವರ್ಧಕ ಶಾಲೆಯಲ್ಲಿ ಔಷಧ, ಬ್ಯಾಂಡೇಜ್ ಪಟ್ಟಿ ಮುಂತಾದ ಅವಶ್ಯಕ ಸಾಮಗ್ರಿಗಳನ್ನು ಸಂಗ್ರಹಿಸಿಟ್ಟಿದ್ದರು. ಅವರ ಅನೇಕ ಶಿಷ್ಯರು ಗಾಯಗೊಂಡವರನ್ನು ಶಾಲೆಗೆ ಕರೆದುಕೊಂಡು ಬಂದು, ಚಿಕಿತ್ಸೆ ಮಾಡಿಸಿ ಅಲ್ಲಿಯೇ ಮಲಗಿಸುತ್ತಿದ್ದರು. ಪೂಜ್ಯರು ಮಾತೃಪ್ರೇಮಿ, ತಾಯಿ ಹೃದಯವಂತರು. ಇಡೀ ರಾತ್ರಿ ಎಲ್ಲರನ್ನೂ ವಿಚಾರಿಸುತ್ತ ಸೇವೆ ಮಾಡಿದ್ದನ್ನು ನಾನು ಕಣ್ಣಾರೆ ಕಂಡಿದ್ದೇನೆ". ತಾವೇ ಸ್ವತಃ ಎಲ್ಲರ ಪರಿಚಯ ಮಾಡಿಕೊಳ್ಳುತ್ತಿದ್ದರು. ಪೂಜ್ಯ ಶ್ರೀಗಳವರು ಬಸವಣ್ಣನವರ ನುಡಿ ಮುತ್ತಿನಂತೆ "ಇವನಾರವ, ಇವನಾರವ" ಎನ್ನದೆ, ಯಾವಾಗಲೂ "ಇವನಮ್ಮವ, ಇವನಮ್ಮವ" ಎಂದು ಎಲ್ಲರಿಗೆ ಸಂಬೋಧಿಸುತ್ತಿದ್ದರು.*

ಮಹಾಜನ ವರದಿಯ ಸ್ವಾಗತ : ಭಾಲ್ಕಿಯ ಶ್ರೀ ಕೇಶವರಾವ ನಿಟ್ಟೂರಕರ್ ಅವರು ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯ (ಎಂ.ಎಲ್.ಸಿ) ಆಗಿದ್ದಾಗ, ೧೨ ಡಿಸೆಂಬರ್ ೧೯೬೭ ರಂದು ಮಹಾಜನ ವರದಿಯನ್ನು ಸ್ವಾಗತಿಸಿ, ಸಮರ್ಥಿಸುತ್ತ ಮಂಡಿಸಿದ, ವಿಧಾನ ಪರಿಷತ್ತು ನಡವಳಿಕೆಗಳು ಇಂತಿವೆ. ಮೈಸೂರು ಮತ್ತು ಮಹಾರಾಷ್ಟ್ರ ಗಡಿ ಸಮಸ್ಯೆಯನ್ನು ಬಗೆಹರಿಸಲು ಮೆಹರಚಂದ ಮಹಾಜನ್ ಅವರ ಏಕ ಸದಸ್ಯ ಸಮಿತಿ ನೇಮಕ ಮಾಡಿರುವುದು ಸ್ವಾಗತಾರ್ಹ. ೨೩ ಮತ್ತು ೨೪ ಏಪ್ರಿಲ್ ೧೯೬೭ರಂದು ಮಹನೀಯರು ಬೀದರಕ್ಕೆ ಭೇಟಿ ಕೊಟ್ಟಾಗ ಇಲ್ಲಿಯ ಜಿಲ್ಲೆಯ ಸಮಗ್ರ ಚಿತ್ರಣ ಕುರಿತು ಮಾಹಿತಿ ಒದಗಿಸುವಲ್ಲಿ ಸಂಪೂರ್ಣ ಅವಕಾಶ ಒದಗಿಸಿಲ್ಲ. ೧೧೬ ಗ್ರಾಮಗಳ ಕುರಿತಾದ ಮಾಹಿತಿ ಮಾತ್ರ ನೀಡಲಾಗಿದೆ. ೧೯೫೨ರಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಿತು. ಬೀದರ ಜಿಲ್ಲೆಯಲ್ಲಿ ಕೋಮುವಾದದ ಗಲಭೆ ತಲೆ ಎತ್ತಿತ್ತು. ಶ್ರೀ ಬಿ. ರಾಮಕೃಷ್ಣರಾವ ಮಂತ್ರಿಗಳ ಅಧಿಕಾರಾವಧಿಯ ಅಂತಿಮಾವಧಿಯಲ್ಲಿ ಎಸ್.ಆರ್. ಕಮಿಷನ್ (ರಾಜ್ಯ ಪುನರ್ ವಿಂಗಡಣಾ ಸಮಿತಿ) ಬೀದರಕ್ಕೆ ಭೇಟಿ ಕೊಟ್ಟಿತು. ಫಜಲ್

---

* ಸದ್ಯ ಬಿ.ಜಿ. ಹಿರೇಮಠರು ನಿವೃತ್ತ ಪ್ರಾಚಾರ್ಯರಾಗಿದ್ದು, ಬೆಂಗಳೂರಿನ ಮಲ್ಲೇಶ್ವರಂ ನಗರದಲ್ಲಿ ಮನೆ ಮಾಡಿಕೊಂಡಿದ್ದಾರೆ.

ಅಲಿ, ಕೆ.ಎಂ. ಪಣಿಕ್ಕರ್, ಶ್ರೀ ಕುಂಜ್ರು ಬೀದರಕ್ಕೆ ಆಗಮಿಸಿದರು. ರಾಜ್ಯ ಪುನರ್ ವಿಂಗಡಣಾ ಕಾಯ್ದೆಯಂತೆ ಬೀದರನ್ನು ಆಂಧ್ರಕ್ಕೆ ಜೋಡಿಸಲಾಯಿತು.[೫] ಇದನ್ನು ವಿರೋಧಿಸಿ ಜಿಲ್ಲೆಯಲ್ಲಿ ಮತ್ತೆ ಚಳವಳಿ ಪ್ರಾರಂಭವಾಯಿತು. ನಂತರ ಈ ತ್ರಿಸದಸ್ಯರ ಸಮಿತಿ ಬೀದರ ಜಿಲ್ಲೆಯ ನಾಲ್ಕು ತಾಲ್ಲೂಕುಗಳನ್ನು ಕರ್ನಾಟಕಕ್ಕೆ ಸೇರಿಸಲು ಒಪ್ಪಿತು. ಎರಡು ತಾಲ್ಲೂಕುಗಳು ಆಂಧ್ರಕ್ಕೂ ಹಾಗೂ ಮೂರು ತಾಲ್ಲೂಕುಗಳನ್ನು ಮಹಾರಾಷ್ಟ್ರಕ್ಕೂ ಸೇರಿಸಲಾಯಿತು. ಭಾಷಾ ಆಧಾರದ ಮೇಲೆ ಕನ್ನಡ ಮಾತನಾಡುವ ನಾಲ್ಕು ತಾಲ್ಲೂಕುಗಳು ಗುಲಬರ್ಗಾ ಜಿಲ್ಲೆಗೆ ಸೇರಿಸಲಾಯಿತು. ಮತ್ತೆ ಹೋರಾಟ ಬಿರುಸು ಗೊಂಡಾಗ ಶ್ರೀ ಬಿ. ರಾಮಕೃಷ್ಣರಾವ ಅವರ ಪರಿಣಾಮಕಾರಿ ಮಧ್ಯಸ್ತಿಕೆಯಿಂದ ರಾಜ್ಯ ಪುನರ್ ವಿಂಗಡಣಾ ಕಾಯ್ದೆಗೆ ತಿದ್ದುಪಡಿ ತರಲಾಯಿತು. ಅದರಿಂದ ಇಂದಿನ ಬೀದರ ಜಿಲ್ಲೆ ಉಳಿಯುವಂತಾಯಿತು. ೧೯೫೭ರ ಚುನಾವಣೆಯ ಪೂರ್ವದಲ್ಲಿಯೇ ಹೋರಾಟ ಅಂತ್ಯಗೊಂಡಿತ್ತು.

೧೯೫೭ರಲ್ಲಿ ಎರಡನೇ ಸಲ ಚುನಾವಣೆ ನಡೆಯಿತು. ಬಾಂಬೆಯಿಂದ ಎಂ.ಇ.ಎಸ್. (ಮಹರಾಷ್ಟ್ರ ಏಕೀಕರಣ ಸಮಿತಿ) ಬೀದರಕ್ಕೆ ಆಗಮಿಸಿ ಜಿಲ್ಲೆ ಗಡಿಭಾಗದ ಮರಾಠಿ ಗ್ರಾಮಗಳನ್ನು ಮಹಾರಾಷ್ಟ್ರಕ್ಕೆ ಸೇರಿಸುವಂತೆ ಒತ್ತಾಯಿಸಿತ್ತು. ಭಾಷಾಧಾರದ ಕೋಮಗಲಭೆ ಭುಗಿಲೆದ್ದಿತ್ತು. ಜಿಲ್ಲೆಯ ವಾತಾವರಣ ಸುಧಾರಿಸಲು ಬಾರದಷ್ಟು ಹದಗೆಟ್ಟಿತ್ತು. ಎಂ.ಇ.ಎಸ್. ಹತ್ತು ವರ್ಷಗಳ ಹೋರಾಟದ ಪರಿಣಾಮವಾಗಿ ಜಿಲ್ಲೆಯ ಸಾಮಾಜಿಕ ಭದ್ರತೆ ಹಾಗೂ ಆರ್ಥಿಕ ಸ್ಥಿತಿ ಹದಗೆಟ್ಟಿತ್ತು. ಎಂ.ಇ.ಎಸ್. ಸತ್ಯಾಗ್ರಹ ಪ್ರಾರಂಭಿಸಿ ಶತ್ರು ಭಾವನೆಯನ್ನು ಮೆರೆಯಿತು. ೧೯೬೭ರ ಸಾರ್ವತ್ರಿಕ ಚುನಾವಣೆ ನಂತರ ಏಕಸದಸ್ಯ ಸಮಿತಿ ನೇಮಕಗೊಂಡಿತ್ತು. ನ್ಯಾಯಾಧೀಶ ಮಹಾಜನ್ ವರದಿ ೧೪೬ ಹಳ್ಳಿಗಳಿದ್ದ ನಾಲ್ಕು ತಾಲ್ಲೂಕುಗಳು ಸೇರಿದಂತೆ ಬೀದರ ಜಿಲ್ಲೆಯನ್ನು ಮಹಾರಾಷ್ಟ್ರಕ್ಕೆ ಸೇರಿಸಲು ಒಪ್ಪಲಿಲ್ಲ. ಮಹಾರಾಷ್ಟ್ರ ಏಕೀಕರಣ ಸಮಿತಿಯ ಬೇಡಿಕೆಯನ್ನು ಏಕಸದಸ್ಯ ಸಮಿತಿ ಅನುಮತಿಸಲಿಲ್ಲ. ಜಿಲ್ಲಾ ಕೇಂದ್ರ ಕಚೇರಿ ವ್ಯಾಪಾರ ಸಂಬಂಧ ಸರಳ ಸಾರಿಗೆ ಸಂಪರ್ಕ ಮತ್ತು ಸಮೀಪದ ದೃಷ್ಟಿಕೋನ ಇಟ್ಟುಕೊಂಡು ಬೀದರ ಪಟ್ಟಣವನ್ನು ನಾಲ್ಕು ತಾಲ್ಲೂಕುಗಳೊಂದಿಗೆ ಜಿಲ್ಲಾ ಘಟಕವನ್ನಾಗಿ ಮಾಡಲಾಯಿತು. ಹತ್ತು ಮೈಲುಗಳ ಅಂತರದಲ್ಲಿರುವ ಮಹಾರಾಷ್ಟ್ರಕ್ಕೆ ಹೊಂದಿಸುವ ಲಘು ಹೊಂದಾಣಿಕೆಯ ವಿಷಯವನ್ನು ಮಾನ್ಯ ಮಹಾಜನರು ತ್ಯಜಿಸಿದರು. ಯಾವಾಗಲೂ ಈ ಮಾತನ್ನು ಅತ್ಯಂತ ಎಚ್ಚರಿಕೆಯಿಂದ ವಿರೋಧಿಸಿದ್ದೇನೆ. ಮಾನ್ಯ ಮಹಾಜನರ ಶಿಫಾರಸ್ಸಿನಂತೆ ಬೀದರ ಜಿಲ್ಲೆ ಕರ್ನಾಟಕದಲ್ಲಿ ಉಳಿದು ಕೊಂಡಿದ್ದು, ಎಂ.ಇ.ಎಸ್. ರ ವಿಚಾರ ರಹಿತ ಮಾತಿಗೆ ಅವಕಾಶ ನೀಡದೆ ಇರುವ ಕ್ರಮವನ್ನು ಎಲ್ಲರಿಗಿಂತಲೂ ನಾನು ಅತಿಯಾಗಿ ಸಂತೋಷ ಪಡುತ್ತೇನೆ. ಬೀದರ ಜಿಲ್ಲೆಯ ಜನತೆಯ ಪರವಾಗಿ ವರದಿಯನ್ನು ಸ್ವಾಗತಿಸುತ್ತೇನೆ. ಮತ್ತು ಭಾರತ ಸರಕಾರಕ್ಕೆ ಶಿಫಾರಸ್ಸನ್ನು ಯಥಾಸ್ಥಿತಿಯಲ್ಲಿ ಅನುಷ್ಠಾನಗೊಳಿಸುವಂತೆ ಒತ್ತಾಯದ ಮನವಿ ಮಾಡುತ್ತೇನೆ".

ಕನ್ನಡ ಬದುಕಿನ ಭಾಗವಾಗಬೇಕು–ಅಪ್ಪಗಳ ಸದಾಶಯ: ಯಾವುದೇ ಭಾಷೆಯನ್ನು 'ಬೆಳೆಸುವುದು' ಎನ್ನುವುದು ಒಂದು ವಿಲಕ್ಷಣವಾದ ಮಾತು. ಭಾಷೆಯನ್ನು ಬಳಸುವುದು ಎಂದರೆ ಮನುಷ್ಯನಾಗಿ ಬದುಕುವುದು. ಹಾಗಿರುವಾಗ, ಮನುಷ್ಯನ ಬದುಕಿನಿಂದ ಹೊರಗೆ, ಭಾಷೆಯನ್ನು ಒಂದು ಗಿಡವನ್ನು ಬೆಳೆಯುವಂತೆ ಪ್ರತ್ಯೇಕವಾಗಿ ಬೆಳೆಸಲಾದೀತೆ ? ಭಾಷೆ ಬೆಳೆದಿರುವುದು. ಬೆಳೆಯುತ್ತಿರುವುದು ಮನುಷ್ಯನ ಜೊತೆಗೇ. ಮನುಷ್ಯನಿಗಾಗಿ ಭಾಷೆಯನ್ನು ಬೆಳೆಸುವುದು ಎಂದರೆ ಏನು? ಕಥೆ, ಕಾವ್ಯ, ನಾಟಕ, ಪದಕೋಶ, ವ್ಯಾಕರಣ, ಛಂದಸ್ಸು ಮುಂತಾದವುಗಳ ಸೃಷ್ಟಿ ಮತ್ತು ಬೆಳವಣಿಗೆಯನ್ನು ಸಂಗೀತ, ನೃತ್ಯ ಶಿಲ್ಪ ಚಿತ್ರಕಲೆ ಮುಂತಾದವುಗಳ ಸೃಷ್ಟಿ ಮತ್ತು ಬೆಳವಣಿಗೆಗೆ ಹೋಲಿಸಲಿಕ್ಕಾಗದು. ಆದರೂ ಸಂಗೀತ, ನೃತ್ಯ, ಶಿಲ್ಪ ಚಿತ್ರಕಲೆ ಮುಂತಾದವುಗಳು ಕೂಡ ಭಾಷೆಗಳೆ ಆಗಿವೆ. ಇವುಗಳನ್ನು ಸಂಸ್ಕೃತಿಯ ಭಾಷೆಗಳು ಎನ್ನಬಹುದು. ಸಂಸ್ಕೃತಿಯ ಭಾಷೆಯ ಆಳದಲ್ಲಿ ಲಿಖಿತ ಅಥವಾ ಅಲಿಖಿತವಾಗಿ, ವ್ಯಕ್ತವಾಗಿಯೂ ಅವ್ಯಕ್ತವಾಗಿಯೂ ಇರುವ ಭಾಷೆಯೇ 'ನಮ್ಮ ಭಾಷೆ ಅಥವಾ 'ನನ್ನ ಭಾಷೆ' ಎಂಬುದು. ನಮ್ಮ ಬಳಿ ಇವತ್ತು ಇಂಗ್ಲಿಷ್ ಇರುವುದು 'ನಮ್ಮ ಭಾಷೆ' ಅಥವಾ 'ನನ್ನ ಭಾಷೆ'ಯಾಗಿ ಅಲ್ಲ. ಒಬ್ಬ ಅಮೇರಿಕನ್ ಅಥವಾ ಬ್ರಿಟಿಷ ವ್ಯಕ್ತಿ ಯಾವುದೋ ಒಂದು ಉದ್ದೇಶಕ್ಕೆ ಕನ್ನಡ ಕಲಿತನೆಂದಿಟ್ಟುಕೊಳ್ಳೋಣ. ಆಗ ಕನ್ನಡ ಎಷ್ಟು ಮತ್ತು ಏನಾಗಿ ಆತನದಾಗಿರಬಹುದೋ, ನಾವು ಇಂಗ್ಲೀಷ ಕಲಿತಾಗಲೂ ಇಂಗ್ಲೀಷ ನಮಗೆ ಅಷ್ಟೇ ಮತ್ತು ಅದೇ ಆಗಿರುವುದು ! ವ್ಯತ್ಯಾಸ, ಎರಡನೆಯದಾದ ಭಾಷೆಯ ಮೇಲೆ ವ್ಯಕ್ತಿ ಗಳಿಸಿಕೊಂಡಿರುವ ಪ್ರಭುತ್ವದಲ್ಲಿ ಮಾತ್ರ.

ಕನ್ನಡದ ನೆಲದಲ್ಲಿ ಕನ್ನಡ ಭಾಷೆಯನ್ನು 'ಬೆಳೆಸುವುದು' ಎನ್ನುವ ಮಾತು ಮಾತ್ರವಲ್ಲ, 'ಉಳಿಸುವುದು' ಎನ್ನುವ ಮಾತು ಬಹಳ ಕಾಲದಿಂದ, ಮುಖ್ಯವಾಗಿ ಹೆಚ್ಚು ಓದಿದವರ ನಡುವೆ, ಚಾಲ್ತಿಯಲ್ಲಿದೆ. ನಮ್ಮ ಭಾಷೆಯನ್ನು ನಾವೇ ಉಳಿಸುವುದು–ಬೆಳೆಸುವುದು ಎಂದರೇನು ? ಇಂಗ್ಲೆಂಡಿನಲ್ಲಿ, ಅಮೆರಿಕೆಯಲ್ಲಿ, ಜಪಾನಿನಲ್ಲಿ. ಜರ್ಮನಿಯಲ್ಲಿ ತಮ್ಮ ಭಾಷೆಯನ್ನು ಉಳಿಸುವ ಪ್ರಯತ್ನ ಮಾಡುತ್ತಿಲ್ಲ. ಅವರದನ್ನು ಬಳಸುತ್ತಿದ್ದಾರೆ. ಅವರ ಭಾಷೆಯಿಲ್ಲದೆ ಅವರಿಂದ ಜೀವಿಸಲು ಸಾಧ್ಯವಿಲ್ಲ. ಕನ್ನಡವನ್ನು

ತ್ಯಜಿಸಿ ಅದರ ಬದಲು ಇನ್ನೊಂದು ಭಾಷೆಯನ್ನು ಸ್ವೀಕರಿಸಿಕೊಂಡು ಕನ್ನಡಿಗನಿಂದ ಜೀವಿಸಲು ಸಾಧ್ಯವೆ ಎನ್ನುವ ಕಾರಣದಿಂದ 'ಕನ್ನಡವನ್ನು ಉಳಿಸಬೇಕು; ಅದಕ್ಕಾಗಿ ಹೋರಾಟ ನಡೆಸಬೇಕಾದ್ದು ಅಗತ್ಯ' ಎಂಬ ಮಾತು ಎದ್ದಿದೆಯೆ ? ಜರ್ಮನ್ ಭಾಷೆಯಿಲ್ಲದೆ ಜರ್ಮನಿಯ ಪ್ರಜೆಗೆ ಜೀವಿಸಲು ಸಾಧ್ಯವಿಲ್ಲ. 'ಕನ್ನಡ ಇಲ್ಲದೆ ಕನ್ನಡಿಗನಿಗೆ ಜೀವಿಸಲು ಸಾಧ್ಯವಿದೆ' ಎನ್ನುವ ಸ್ಥಿತಿ ಉಂಟಾದದ್ದು ಹೇಗೆ ? ಇಂದಿನ ಜಾಗತೀಕರಣ ಮತ್ತು ಇಂಗ್ಲೀಷ ಭಾಷಾ ಆಕ್ರಮಣದ ದಿನದಲ್ಲಲ್ಲ ; ಐವತ್ತು ವರ್ಷಕ್ಕೂ ಹಿಂದೆಯೇ 'ಕನ್ನಡದ ಅಳಿವು ಉಳಿವಿ'ನ ಕುರಿತಾದ ಚರ್ಚೆ ಹೋರಾಟ ಇತ್ತಲ್ಲ ? ಆಗ ಏನಾಗಿತ್ತದಕ್ಕೆ ಕಾರಣ ? ಕನ್ನಡ ಮನೆಮಾತಾಗಿರಲಿ, ಅಲ್ಲದಿರಲಿ ಕನ್ನಡ ಭಾಷೆಯನ್ನು ತಮ್ಮ ಬದುಕಿನ ಅವಿಭಾಜ್ಯ ಅಂಗವಾಗಿ ಬಳಸುತ್ತಿದ್ದವರ ಸಂಖ್ಯೆ ಬಹಳ ಸಣ್ಣದಾಗಿತ್ತು ಎಂದು ಪರಿಭಾವಿಸಬಹುದೆ ? ಐತಿಹಾಸಿಕ ಸತ್ಯಗಳು ಮತ್ತು ಕನ್ನಡದ ಉಳಿವಿಗಾಗಿ ನಡೆಸಿದ ಹೋರಾಟದ ಫಲಾಫಲಗಳು ಏನೇ ಇರಲಿ, ಪ್ರಸಕ್ತ ಸನ್ನಿವೇಶದಲ್ಲಿ, ಕನ್ನಡವನ್ನು ಬದುಕಿನ ಭಾಗವಾಗಿ ಬೆಳೆಸುವ ದಿಸೆಯಲ್ಲಿ ನಡೆದಿರುವ ಪ್ರಯತ್ನಗಳ ಸ್ವರೂಪ ಏನು ?

ವಾಸ್ತವದಲ್ಲಿ, ಕನ್ನಡ ಭಾಷೆಯನ್ನು ಉಳಿಸುವುದು-ಬೆಳೆಸುವುದು ಎಂದರೆ, ಕನ್ನಡಿಗರು ಶಾಲೆ ಕಾಲೇಜು ಓದಿ ಕನ್ನಡವನ್ನು ತ್ಯಜಿಸಬಾರದು ಎಂದು ಅರ್ಥ, ಅರ್ಥಾತ್ ಕನ್ನಡದಲ್ಲಿ ಮಾತಾಡಬೇಕು, ಕನ್ನಡ ಪುಸ್ತಕಗಳನ್ನು ಓದಬೇಕು, ಕನ್ನಡದಲ್ಲಿ ಬರೆಯಬೇಕು ಎಂದು ಅರ್ಥ. ವಿದ್ಯಾವಂತ ರಲ್ಲದವರಿಗೆ ಕನ್ನಡವನ್ನು ತ್ಯಜಿಸಬೇಕಾದ ಪ್ರಮೇಯ ಉಂಟಾಗುವುದಿಲ್ಲ. ಆದರೆ ಅವರಿಗೆ ಕನ್ನಡದಲ್ಲಿರುವ ಆಡಳಿತದಿಂದ ತೊಂದರೆಯುಂಟಾದಾಗ, ತಾವು ಕೂಡ ಕನ್ನಡವನ್ನು ಉಳಿಸಲು-ಬೆಳೆಸಲು ಹೋರಾಡಬೇಕಾದ ಅಗತ್ಯವಿದೆ ಎನಿಸಬಹುದು. ಭಾಷೆಯನ್ನು ಬದುಕಿನಿಂದ ಪ್ರತ್ಯೇಕಿಸಿದ್ದೇ ಭಾಷೆಗೆ ಸಂಬಂಧಿಸಿ ಸೃಷ್ಟಿಯಾಗಿರುವ ಎಲ್ಲ ಅವಾಂತರಗಳಿಗೆ ಕಾರಣ.

ಒಂದು ಭಾಷೆಯನ್ನು ಬಳಸುವವರ ಸಂಖ್ಯೆ ಲಕ್ಷಗಟ್ಟಲೆ ಅಥವಾ ಕೋಟಿಗಟ್ಟಲೆ ಆದಾಗ ಆ ಭಾಷೆ ತಾನಾಗಿ ಬೆಳೆದಿರುತ್ತದೆ. ಅದನ್ನು ಪ್ರತ್ಯೇಕವಾಗಿ ಬೆಳೆಸುವ ಕೆಲಸವನ್ನು ಯಾರೂ ಮಾಡಬೇಕಾಗಿಲ್ಲ. ಭಾಷೆಯನ್ನು ಹಾಡಿ ಹೊಗಳುವ ಅಗತ್ಯ ಉಂಟಾಗುವುದಿಲ್ಲ. ಅದನ್ನು ಬೆಳೆಸಲು ಕೆರೆ, ಕೂಗು ಬೇಕಾಗುವುದಿಲ್ಲ. ನಮ್ಮ ಭಾಷೆ ನಮ್ಮ ರೊಟ್ಟಿ ಅಥವಾ ಅನ್ನ ಎಂದಾದರೆ ಅದನ್ನು ಬೆಳೆಸಲು ಕರೆ ಯಾಕೆ ? ಕೂಗು ಯಾಕೆ ? ಹಾಡು ಯಾಕೆ ?

ಎಷ್ಟೋ ಮಕ್ಕಳು ನಾಲ್ಕು-ಐದು ವರ್ಷ ಪ್ರಾಯ ವಾಗುವುದರೊಳಗಾಗಿ ತಮ್ಮ ಮನೆಭಾಷೆಯಲ್ಲಿ ಮಾತ್ರವಲ್ಲ, ತಮ್ಮ ನೆರೆಹೊರೆಯವರ ಭಾಷೆಯಲ್ಲಿ ಕೂಡ ಸುಲಲಿತವಾಗಿ ಮಾತಾಡುತ್ತಾರೆ. ಅಪ್ಪ ಅಮ್ಮನ ಭಾಷೆ ಬೇರೆ ಬೇರೆಯಾಗಿದ್ದರೆ, ಅವರ ಬಾಯಿಯಿಂದ ಅದನ್ನು ಕೇಳಿ ಕೇಳಿ ಆ ಭಾಷೆಗಳನ್ನು ಕೂಡ ಆಡುತ್ತಾರೆ. ನೆರೆಹೊರೆಯಲ್ಲಿರುವವರು ಆಡುವ ತೆಲುಗು, ತಮಿಳು, ಮಲಯಾಳಂ ತುಳು, ಕೊಂಕಣಿ ಮುಂತಾದ ಭಾಷೆಗಳನ್ನು ಮಕ್ಕಳು ಯಾವ ಪ್ರಯತ್ನವೂ ಇಲ್ಲದೆ ಆಡಲು ಕಲಿತುಕೊಳ್ಳುತ್ತಾರೆ. ಇದರ ಜೊತೆಗೆ ಶಾಲೆಯಲ್ಲೋ ಪರಿಸರದಲ್ಲೋ ಇಂಗ್ಲೀಷ್ ಇದ್ದರೆ ಇತರ ಭಾಷೆಗಳಂತೆ ಅದೂ ಮಗುವಿಗೆ ಬರುತ್ತದೆ. ಅಮೇರಿಕಾ ಇಂಗ್ಲೆಂಡುಗಳಲ್ಲಿರುವ ಲಕ್ಷಾಂತರ ಭಾರತೀಯರ ಮಕ್ಕಳಿಗೆ ಇಂಗ್ಲೀಷ್ ಬರುವುದು ಹೀಗೆ. ಮಗುವಿಗೆ ತನ್ನ ಪರಿಸರವೇ ಭಾಷಾ ಗುರುವಾಗುತ್ತದೆ. ಒಂದೆರಡು ವರ್ಷಗಳಲ್ಲಿ ಪ್ರತಿ ಭಾಷೆಯಲ್ಲಿಯೂ ಅವರ ಶಬ್ದಭಂಡಾರ ಅರ್ಥಾತ್ ವೊಕ್ಯಾಬುಲರಿ ಮೂರು-ನಾಲ್ಕು ನೂರು ಆಗಿರುತ್ತದೆ. ಆದರೆ ಇಂಗ್ಲೀಷ್ ನಮ್ಮಲ್ಲಿ ಮನೆಯೊಳಗಿಲ್ಲ, ನೆರೆಹೊರೆಯಲ್ಲಿಲ್ಲ. ಅದರಿಂಧ ಅದನ್ನು ಮಗುಗೋಸ್ಕರ ಮಗುವಿನ ಪರಿಸರದಲ್ಲಿರಿಸಬೇಕಾಗುತ್ತದೆ. ಅಂದರೆ ಶಾಲೆಯಲ್ಲಿರಿಸ ಬೇಕಾಗಿದೆ. ಕಡ್ಡಾಯ ಮಾಡಬೇಕಾಗಿಲ್ಲ. ಅದನ್ನು ಶಾಲೆಗಳಲ್ಲಿ ಇಟ್ಟುಬಿಟ್ಟರೆ ಸಾಕು. ಸಾಕಷ್ಟು ಮಾತಾಡಲು ಕಲಿತುಕೊಂಡ ಬಳಿಕ, ಓದಲು ಮತ್ತು ಅನಂತರ ಬರೆಯಲು ಕಲಿತರೆ ಸಾಕು. ಭಾಷಾರ್ಜನೆಯ ವಿಚಾರದಲ್ಲಿ ಶಾಲೆಯನ್ನು ಕೂಡ ಮಗುವಿನ ಪರಿಸರ ಎಂದು ತಿಳಿಯಬೇಕು. ಹಾಗೆ ಮಾಡದೆ 'ಅದೇನೋ ಒಂದು ಬೇರೆ' ಎಂಬಂತೆ ಗಣಿತ, ವಿಜ್ಞಾನಗಳಂತೆ ಒಂದು ಅಧ್ಯಯನ ವಿಷಯ ಎಂಬಂತೆ ಕಲಿಸುವುದೇ ಭಾಷೆಯ ಕಲಿಕೆಯಲ್ಲಿ ದೊಡ್ಡ ಅಡ್ಡಿಯಾಗಿ ಪರಿಣಮಿಸುವುದಾಗಿದೆ.

ಜನರಿರುವಲ್ಲಿಗೆ ಪುಸ್ತಕವನ್ನು ತಲುಪಿಸುವ ಕೆಲಸವನ್ನು ಸಾಹಿತ್ಯ ಪರಿಷತ್ತು ಮತ್ತು ಅಕಾಡೆಮಿಗಳು ಮಾಡಬೇಕು. ಸರಕಾರದ ಕಿವಿಹಿಂಡಿ ಊರೂರುಗಳಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸುವಂತೆ ಸಾಹಿತ್ಯ ಪರಿಷತ್ತು ಮಾಡಬೇಕು. ಕನ್ನಡ ಮಾಧ್ಯಮ ಇಂಗ್ಲೀಷ್ ಮಾಧ್ಯಮ ಎಂಬ ವ್ಯತ್ಯಾಸವಿಲ್ಲದೆ, ಎಲ್ಲಾ ಶಾಲೆ ಕಾಲೇಜುಗಳಲ್ಲಿಯೂ ಕನ್ನಡ ಸಾಹಿತ್ಯ ಮತ್ತು ಕನ್ನಡ ಭಾಷೆಯನ್ನು ವಿದ್ಯಾರ್ಥಿಗಳು ಪ್ರೀತಿಸುವಂತೆ ಮಾಡುವ ಕಾರ್ಯಕ್ರಮಗಳನ್ನು ಸಾಹಿತ್ಯ ಪರಿಷತ್ತು ಹಮ್ಮಿಕೊಳ್ಳಬೇಕು. ಲೇಖಕರನ್ನು ಮತ್ತು ಸಾಹಿತ್ಯಾಸಕ್ತರನ್ನು ಹತ್ತಿರ ಹತ್ತಿರವಾಗಿಸಿ ಸಾಹಿತ್ಯ ತಮಗೆ ಯಾಕೆ ಬೇಕು, ಪುಸ್ತಕದ ಮಹತ್ವ ಏನು ಎನ್ನುವುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳುವಂಥ ಕಾರ್ಯಕ್ರಮಗಳನ್ನು ವರ್ಷದುದ್ದಕ್ಕೂ ನಡೆಸಬೇಕು.

ನಮ್ಮ ಶಾಲಾ ಕನ್ನಡ ಪಠ್ಯಪುಸ್ತಕಗಳನ್ನು ನೋಡಬೇಕು. ಅದರಲ್ಲಿರುವ ಶಬ್ದಗಳಲ್ಲಿ ನಾವು ಇವತ್ತು ಕನ್ನಡ ಕತೆ ಕಾದಂಬರಿ ಲೇಖನಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ಕಾಣಿಸದ ಶಬ್ದಗಳ ಪಟ್ಟಿ ಮಾಡಿದರೆ ೫೦% ಶಬ್ದಗಳು ಆ ಪಟ್ಟಿಯಲ್ಲಿ ಬರುತ್ತವೆ. ಇವು ಪಠ್ಯವನ್ನು ಕೇವಲ ಅರ್ಥ ಮಾಡಿಕೊಳ್ಳಲಿಕ್ಕೆ ಮಾತ್ರ ಇರುವಂಥವುಗಳು ! ಇಂಗ್ಲೀಷ್ ಭಾಷೆಯ ಪಠ್ಯಪುಸ್ತಕದಲ್ಲಿ ಈ ಉಪದ್ವ್ಯಾಪವಿಲ್ಲ. ನಮ್ಮ ಕೆಲವು ಪ್ರಕಾಶಕರು ಪ್ರಕಟಿಸುವ ಪುಸ್ತಕಗಳ ಗುಣಮಟ್ಟ ಎಂಥದೆಂದು ತಿಳಿಯಲು ಇಂಗ್ಲೆಂಡ್, ಅಮೇರಿಕದ ಪ್ರಕಾಶಕರು ಇಂಡಿಯಾದಲ್ಲಿ ಮುದ್ರಿಸಿ ಹೊರತರುವ ಪುಸ್ತಕಗಳೊಡನೆ ಹೋಲಿಸಿ ನೋಡಬೇಕು. ಅಷ್ಟೇ ಅಲ್ಲ, ಇತ್ತೀಚೆಗೆ ಅಸ್ತಿತ್ವಕ್ಕೆ ಬಂದಿರುವ ಕೆಲವು ಪತ್ರಿಕೆಗಳು ತಮ್ಮ ದೈನಂದಿನ ಅಥವಾ ಸಾಪ್ತಾಹಿಕ ಸುದ್ದಿ ಸಂವಹನ ಮತ್ತು ವಿಚಾರ ಮಂಥನದ ಪ್ರಕ್ರಿಯೆಯಲ್ಲಿ ಕನ್ನಡ ಭಾಷಾ ಒಲುಮೆಯನ್ನು ಹೆಚ್ಚಿಸುವ ಬದಲು ಅವರ ಪಾರಂಪರಿಕ ಸತ್ವ ಸೊಗಡುಗಳನ್ನು ಸೊರಗಿಸುತ್ತಿವೆ. ಈ ಹಿನ್ನೆಲೆಯಲ್ಲಿ ಡಾ. ಚನ್ನಬಸವ ಪಟ್ಟದ್ದೇವರು ಕನ್ನಡದ ಉಳಿಕೆಗೆ ಪಟ್ಟ ಶ್ರಮ ಇನ್ನೂ ಪ್ರಖರವಾಗಿ ಕಾಣುತ್ತದೆ. ನಮ್ಮ ಮಂತ್ರಿಗಳು, ನಮ್ಮ ಅಧಿಕಾರಿಗಳು, ನಮ್ಮ ದೃಶ್ಯ ಮಾಧ್ಯಮದವರು ಕನ್ನಡ ಮಾತಾಡುವ ರೀತಿಯನ್ನು ನೋಡಬೇಕು, ಕೇಳಬೇಕು. ಕನ್ನಡದ ಹೋರಾಟ ಅಥವಾ ಕನ್ನಡಕ್ಕಾಗಿ ಹೋರಾಟದ ವಿಚಾರವಂತಿರಲಿ. ಅಳಿವು-ಉಳಿವಿನ ಅಸಂಬದ್ಧ ತರ್ಕ ಬೇಡ. ಕನ್ನಡವನ್ನು ಬೆಳೆಸುವ ಕಾಯಕದ ಬಗ್ಗೆ ಯೋಚಿಸಿದರೆ, ಕರ್ನಾಟಕ ಏಕೀಕರಣದ ಬಳಿಕ ಕನ್ನಡವನ್ನು ಬೆಳೆಸಲು ಯಾರು ಏನು ಮಾಡಿದರು ಎನ್ನುವ ಪ್ರಶ್ನೆ ಎತ್ತಬೇಕಾಗುತ್ತದೆ. ಸರಕಾರ ಏನು ಮಾಡಿತು ?

ಶಾಲೆಗಳಲ್ಲಿರುವ ಹತ್ತಿರ ಹತ್ತಿರ ಅರ್ಧ ಕೋಟಿ ವಿದ್ಯಾರ್ಥಿಗಳು ಕನ್ನಡ ಭಾಷೆಯನ್ನು ಇಷ್ಟಪಟ್ಟು ಕಲಿಯುವಂಥ, ಪ್ರೀತಿಯಿಂದ ಸವಿದು ಓದುವಂಥ ಪಠ್ಯಪುಸ್ತಕಗಳನ್ನು ಮತ್ತು ಪೂರಕ ಪಠ್ಯಗಳನ್ನು ಮಕ್ಕಳಿಗೆ ಒದಗಿಸಿತೆ ? ಕನ್ನಡ ಓದಬಲ್ಲವರು ಲಕ್ಷೋಪಲಕ್ಷ ಮಂದಿ ಇದ್ದಾರೆ. ಆದರೆ ಅವರು ಬಡವರು, ಅವರೆಲ್ಲರಿಗೆ ಬೇಕಾದಷ್ಟು ಗ್ರಂಥಾಲಯಗಳನ್ನು ಸ್ಥಾಪಿಸಿ ಕಾಲಕಾಲಕ್ಕೆ ನಿಯಮಿತವಾಗಿ ಪುಸ್ತಕಗಳನ್ನು ಒದಗಿಸುವ ವ್ಯವಸ್ಥೆ ಮಾಡಿತೆ ? ಕನ್ನಡ ಮಾಧ್ಯಮದ ಕನ್ನಡ ಪಠ್ಯ ಪುಸ್ತಕಗಳನ್ನು ನೋಡಿ ಮಕ್ಕಳು ಯಾಕೆ ಮುಖ ಸಿಂಡರಿಸುತ್ತಾರೆ ಎಂದು ತಿಳಿಯುವ ಪ್ರಯತ್ನ ಮಾಡಿತೆ ? ಸಾರ್ವಜನಿಕ ವಾರ್ಷಿಕ ಸತ್ಯನಾರಾಯಣ ಪೂಜೆಯಂತೆ ನಡೆಯುವ ಸಾಹಿತ್ಯ ಸಮ್ಮೇಳನದ ಮೂಲಕ ಕನ್ನಡ ಭಾಷೆಯ ಮೇಲೆ ಪ್ರೀತಿ ಹುಟ್ಟಿಸುವಂಥ, ತಾಯಿನುಡಿ ಯಾಕೆ ಬೇಕು ಎನ್ನುವುದನ್ನು ಮನವರಿಕೆ ಮಾಡಿಕೊಡುವಂಥ ಸಾಂಸ್ಕೃತಿಕ-ಸಾಹಿತ್ಯಿಕ ಕ್ರಿಯೆಗಳೇನು ನಡೆದವು ? ಎಷ್ಟು ನಡೆದವು ? ಲೇಖಕರಾದರೂ ಏನು ಮಾಡಿದರು ? ಕನ್ನಡದ ಮೂಲಕ ವೈಯಕ್ತಿಕ ಪ್ರತಿಷ್ಠೆ ಪಡೆದುಕೊಳ್ಳುವುದು ಮುಖ್ಯವಲ್ಲ, ಭಾಷೆಯ ಕಡೆಗೆ, ಸಾಹಿತ್ಯದ ಕಡೆಗೆ ಜನರನ್ನು ಸೆಳೆಯಬೇಕಾದ್ದು ಮುಖ್ಯ ಎಂದರಿತು, ಆ ದಿಸೆಯಲ್ಲಿ ಕೆಲಸ ಮಾಡಬೇಕು. ತಮ್ಮ ಮಕ್ಕಳು ಎಂಥ ಕನ್ನಡ ಪಠ್ಯಪುಸ್ತಕವನ್ನು ಓದುತ್ತಿದ್ದಾರೆ. ಅದರಲ್ಲಿ ಏನಿದೆ - ಏನಿರಬೇಕು - ಏನಿರಬಾರದು ಎಂದು ಕಂಡುಕೊಳ್ಳುವ ಪ್ರಯತ್ನವನ್ನು ವಿದ್ಯಾವಂತ, ಬುದ್ಧಿವಂತ, ಪ್ರಜ್ಞಾವಂತ ಶಿಕ್ಷಕರು ಮತ್ತು ಪಾಲಕರು ಮಾಡಬೇಕಾಗಿದೆ.

ಪ್ರತಿ ವರ್ಷ ಅನ್ಯ ರಾಜ್ಯಗಳಿಂದ ಕೆಲವು ಕೋಟಿ ಮೌಲ್ಯದ ತೀರಾ ಕಳಪೆಯಾದ ಮತ್ತು ತಪ್ಪು ತಪ್ಪು ಕನ್ನಡದಲ್ಲಿರುವ ಮಕ್ಕಳ ಕತೆ ಪುಸ್ತಕಗಳು ಮತ್ತು ನೋಟ ಪುಸ್ತಕ ಮತ್ತು ಪಠ್ಯ ಪುಸ್ತಕ ಕರ್ನಾಟಕಕ್ಕೆ ಬರುತ್ತವೆ. ಅದರ ಬದಲು ಕನ್ನಡದ ಮಕ್ಕಳಿಗೆ ಒಳ್ಳೆಯ ಕನ್ನಡ ಪುಸ್ತಕಗಳನ್ನು ಕೊಟ್ಟು, ಕರ್ನಾಟಕದ ಹಣ ಕರ್ನಾಟಕದಲ್ಲೇ ಉಳಿಸಿ ಕನ್ನಡ ಪುಸ್ತಕೋದ್ಯಮವನ್ನು ಬೆಳೆಸಿ ಬೇರೆ ಬೇರೆ ರಾಜ್ಯದ ಸರಕನ್ನು ಅಲ್ಲೇ ತಡೆದು ನಿಲ್ಲಿಸುವ ಪ್ರಯತ್ನವನ್ನು ನಾವು ಮಾಡಬೇಕಲ್ಲವೆ? ಇಲ್ಲ, ಯಾರೂ ಮಾಡಿಲ್ಲ ; ನಾಳೆ ಯಾರಾದರೂ ಗುಜರಾತಿನಿಂದ ಅಥವಾ ಕೇರಳದಿಂದ ಬಂದು ಅದನ್ನು ಮಾಡಿದರೆ ಕನ್ನಡದ ಜನ ಸಂಕಟಪಟ್ಟುಕೊಳ್ಳುತ್ತಾರೆ. ಗಂಟು ಕಟ್ಟಿರಿಸಿರುವ ತಮ್ಮ ಕೋಟಿಗಳನ್ನು ಆಗಲೂ ಬಿಚ್ಚುವುದಿಲ್ಲ. ಕನ್ನಡವನ್ನು ಉಳಿಸಿ-ಬೆಳೆಸಿ ಎನ್ನುವುದು ಕೇವಲ ಒಂದು ಹೋರಾಟವಾಗಿ ನಿರಂತರವಾಗಿ ನಡೆಯುತ್ತಿದ್ದರೆ, ಕನ್ನಡ ಭಾಷೆಗೇನು ಲಾಭ, ಕನ್ನಡ ಸಾಹಿತ್ಯಕ್ಕೇನು ಲಾಭ ? ಕನ್ನಡ ಬದುಕಿನ ಭಾಗವಾಗಬೇಕೆಂಬುದು ಭಾಲ್ಕಿ ಹಿರೇಮಠ ಸಂಸ್ಥಾನದ ಪೂಜ್ಯ ಅಪ್ಪಗಳ ಸದಾಶಯವಾಗಿತ್ತು. ಆ ನಿಟ್ಟಿನಲ್ಲಿ ಕನ್ನಡ ರಕ್ಷಿಸುವ ಮತ್ತು ಬೆಳೆಸುವದಕ್ಕೆ ನಾಲ್ಕು ಗಟ್ಟಿ ಹೆಜ್ಜೆ ಇಟ್ಟದ್ದು ಶ್ಲಾಘನೀಯ.

ಕರ್ನಾಟಕದ ಏಕೀಕರಣ ಸಲುವಾಗಿ ಕರ್ನಾಟಕದ ಕುಲಪುರೋಹಿತ ಆಲೂರು ವೆಂಕಟರಾವ, ಎಸ್. ನಿಜಲಿಂಗಪ್ಪ, ಡೆಪ್ಯೂಟಿ ಚನ್ನಬಸಪ್ಪ, ಫ.ಗು. ಹಳಕಟ್ಟಿ, ಪಂಜೆ ಮಂಗೇಶರಾಯ, ಶಿ.ಶಿ. ಬಸವನಾಳ, ಹರ್ಡೇಕರ್, ಕುವೆಂಪು, ಕಾರಂತ, ಬಿ.ಎಂ.ಶ್ರೀ, ಬೆನಗಲ್ ರಾಮರಾಯ, ಜಯದೇವಿತಾಯಿ ಲಿಗಾಡೆ, ಭಾಲ್ಕಿಯ ಡಾ. ಚನ್ನಬಸವ ಪಟ್ಟದ್ದೇವರು ಮುಂತಾದವರ ತ್ಯಾಗಮಯ ಹೋರಾಟಕ್ಕೆ ಕನ್ನಡಿಗರಾದ ನಾವು ಎಂದೆಂದಿಗೂ ಚಿರಋಣಿಯಾಗಿರಬೇಕು.[೬] ಭಾಲ್ಕಿ ಹಿರೇಮಠ ಸಂಸ್ಥಾನ ಈ ದೃಷ್ಟಿಯಿಂದ ತನ್ನದೇ ವೈಶಿಷ್ಟ್ಯ ಗಳನ್ನುಳ್ಳುದು. ಡಾ. ಚನ್ನಬಸವ ಪಟ್ಟದ್ದೇವರು ಮಠದ ಕರ್ಮಠ ಆಚಾರಗಳನ್ನು ತ್ಯಜಿಸಿ ಮಾನವೀಯ

ಪ್ರೇಮವನ್ನು ಎತ್ತಿಹಿಡಿದರು. ಸಕಲ ಜೀವರ ಲೇಸಿಗಾಗಿ ಗಂಧದಂತೆ ಸವೆದರು. ಜಾತೀಯತೆಯನ್ನು ಅಳಿಸಲು ಪ್ರಾಣವನ್ನು ಪಣಕ್ಕಿಟ್ಟು ಹೋರಾಡಿದರು. ಅಂತ್ಯಜರ ಹೃದಯದಲ್ಲಿ ಶಿವನಿದ್ದಾನೆಂದು ನಂಬಿ ನಡೆದರು. ಅವರಿಗೆ ನಾಡು-ನುಡಿಯೆಂದರೆ ಅತ್ಯಂತ ಪ್ರೇಮ. ನಾಡಿನ ಏಕತೆಗಾಗಿ 'ರೈಲ್ ರೋಕೊ' ಚಳವಳಿ ಮಾಡಿದರು. ಅಳಿಸಿಹೋಗುತ್ತಿದ್ದ ಕನ್ನಡಕ್ಕೆ ಮರುಜನ್ಮವಿತ್ತರು.

ಕರ್ನಾಟಕ ಏಕೀಕರಣಕ್ಕಾಗಿ ಹಾಗೂ ಗಡಿನಾಡಿನ ರಕ್ಷಣೆಗಾಗಿ ಭಾಲ್ಕಿ ಮಠವು ಕನ್ನಡ ಹೋರಾಟಗಾರರ ಪಡೆಯನ್ನೇ ನಿರ್ಮಿಸಿತ್ತು. ಅದರಲ್ಲಿ ಮೀನರಿಕೆಯ ವಿ.ಎಸ್. ಪಾಟೀಲ, ಭೀಮಣ್ಣಾ ಖಂಡ್ರೆ, ಆರ್.ವಿ. ಬಿಡಪ್ಪ, ಶಂಕರಾವ ಕಪ್ಪಿಕೇರಿ, ಗಣಪತರಾವ, ಖೂಬಾ, ಜಿ.ಬಿ. ಸಿದಬಟ್ಟೆ, ಭಾತಂಬ್ರಾದ ಇನ್ನಿತರ ಅನೇಕ ಜನರು ಭಾಗವಹಿಸಿದರು. ಆ ಸಂದರ್ಭದಲ್ಲಿ ಕನ್ನಡ ಮಾತನಾಡುವ ಈ ಪ್ರದೇಶಗಳನ್ನು ಮತ್ತು ಹಳ್ಳಿಗಳನ್ನು ಕನ್ನಡ ನಾಡಿನಲ್ಲಿ ಕೂಡಿಸಬೇಕಾಗಿತ್ತು. ವಿಶೇಷವಾಗಿ ಭಾಲ್ಕಿ, ಔರಾದ, ಪ್ರದೇಶವನ್ನು ಕರ್ನಾಟಕಕ್ಕೆ ಸೇರುವಂತೆ ಬಹಳ ಪ್ರಯತ್ನ ಪಡೆಬೇಕಾಯಿತು. ಅಲ್ಲದೆ ಮಹಾರಾಷ್ಟ್ರ ವರ್ಗೀಕರಣ ಸಮಿತಿಯವರು ಔರಾದ ಮತ್ತು ಭಾಲ್ಕಿಯನ್ನು ಕೂಡಿಸಬೇಕೆಂದು ಶತಪ್ರಯತ್ನ ಪಟ್ಟರು. ಆದರೆ ಪಟ್ಟದ್ದೇವರು ಹಾಗೂ ಅವರ ಶಿಷ್ಯರಿಂದ ಕನ್ನಡ ಭಾಷೆಯ ಅಭಿಮಾನ ಬೆಳೆಸಿ ಕೇಂದ್ರ ಸರಕಾರಕ್ಕೆ ಕನ್ನಡಿಗರ ಬಹುಮತವನ್ನು ತೋರಿಸಿದರು. ಇದಕ್ಕಾಗಿ ಅನೇಕ ಸಭೆ ಮತ್ತು ಸಮ್ಮೇಳನಗಳನ್ನು ಏರ್ಪಡಿಸಿದರು ಭಾಲ್ಕಿ ಮತ್ತು ಮೋರ್ಗಿಯಲ್ಲಿ ಕರ್ನಾಟಕ ಏಕೀಕರಣದ ಸಲುವಾಗಿ ಸಮ್ಮೇಳನಗಳಾದವು.

ಕರ್ನಾಟಕ ಕ್ರಿಯಾ ಸಮಿತಿ ರಚಿಸಿ ಹೋರಾಟ ಮಾಡಿದರು. ಅದರ ಅಧ್ಯಕ್ಷರಾದ ಆರ್.ವಿ. ಬಿಡಪ್ಪನವರು, ಉಪಾಧ್ಯಕ್ಷರಾದ ಭೀಮಣ್ಣ ಖಂಡ್ರೆ, ಕಾರ್ಯದರ್ಶಿ ವಿ.ಎನ್. ಪಾಟೀಲರು ಕರ್ನಾಟಕ ಯುವ ಸಂಘಗಳು ಅಲ್ಲಲ್ಲಿ ತಲೆಯೆತ್ತುವಂತೆ ಮಾಡಿದ್ದರು. ಈ ಸಂಘಗಳ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ನಾಡ ಹಬ್ಬಗಳನ್ನು ಸಂಯೋಜಿಸಿದ ಹಿರಿಮೆ ದಿ. ಪ್ರಭುರಾವ ವಕಿಲರಿಗೆ ಸ್ಲುತ್ತದೆ. ದಿಲ್ಲಿಯವರೆಗೆ ಈ ಏಕೀಕರಣದ ಸಲುವಾಗಿ ಭಾರತದ ಪ್ರಧಾನ ಮಂತ್ರಿ ನೆಹರು ಅವರನ್ನು ಭೇಟಿಯಾಗಿ ಚರ್ಚಿಸಿ ಬಂದರು.

ಆಧಾರಸೂಚಿ

೧. ಕಾಯಕ ಪರಿಣಾಮಿ, ಗೌರವ ಗ್ರಂಥ (೧೯೯೧), ಡಾ. ಜಿ.ಬಿ. ವಿಸಾಜಿ, ಪುಟ ೧೦.

೨. ವಿದ್ಯಾನಿಧಿ, ಶತಮಾನೋತ್ಸವ ಸಂಪುಟ (೨೦೦೫), ಸಂ. ಡಾ. ಸಾ.ಶಿ. ಮರುಳಯ್ಯ, ಲೇಖಕ ಟಿ.ಎಚ್.ಎಂ. ಬಸವರಾಜ, ಪುಟ ೨೬೦.

೩. ವಿಜಯ ಕರ್ನಾಟಕ (ಗುರುವಾರ ೨೬-೦೧-೨೦೦೬) ಸ.ದಾ. ಜೋಶಿ, ಪುಟ ೧೦.

೪. ಶಾಂತಿಕಿರಣ, ದ್ವೈಮಾಸ ಪತ್ರಿಕೆ (ಸಂಪುಟ ೨೪, ಸಂಚಿಕೆ ೧), (ಸೆಪ್ಟಂಬರ್-ಅಕ್ಟೋಬರ್ ೨೦೦೫) ಪುಟ ೩೧.

೫. ಕೇಶವರಾವ ನಿಟ್ಟೂರಕರ್ (ಜೀವನ ಚರಿತ್ರೆ), ಡಾ. ಜಿ.ಬಿ. ವಿಸಾಜಿ (ವಿಧಾನ ಪರಿಷತ್ತು ನಡವಳಿಕೆಗಳು ೧೨, ಡಿಸೆಂಬರ್, ೧೯೬೭, ಪುಟ ೧೯೯, ೨೦೦, ೨೦೧) ಪುಟ ೭೨.

೬ ಬಸವ ನೈವೇದ್ಯ, ಶ್ರೀ ಬಸವಲಿಂಗ ಪಟ್ಟದ್ದೇವರು (೨೦೦೨) ಪುಟ ೧೧೩.

ಡಾ. ಮಹಾದೇವಿ*

'ಸ್ವಾತಂತ್ರ್ಯ ಹೋರಾಟಗಾರ್ತಿ ಹಾಗೂ ಸಮಾಜ ಸುಧಾರಕಿ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರ ರಚನಾತ್ಮಕ ಕಾರ್ಯಗಳು'

ಇತಿಹಾಸದಲ್ಲಿ ಒಂದು ಮಾತಿದೆ "ಇತಿಹಾಸ ಎಂಬುದು ನಿಂತನೀರಾಗಿರದೆ, ಸದಾ ಹರಿಯುತ್ತಿರುವ ನೀರು" ಎಂಬುದು. ಹಳೆಯ ನೀರು ಹರಿದು ಹೋಗುತ್ತಲೇ ಹೊಸ ನೀರು ಸೇರಿಕೊಳ್ಳುತ್ತಲೇ ಇರುತ್ತದೆ. ಸಂಶೋಧನೆ ಎಂಬ ಸಾಗರದಲ್ಲಿ ಮುಳುಗೆದ್ದಾಗ ಅನೇಕ ತತ್ತ್ವನಿಷ್ಠೆ ಹೊಸ ಆಲೋಚನೆಗಳು ಸುಳಿಯುತ್ತವೆ. ಜಾಗತೀಕರಣವೆಂಬ ಕ್ರಿಯೆಗೆ ಒಳಗಾಗಿ ವಿಶ್ವವೇ ಸಂಕೀರ್ಣಗೊಳ್ಳುತ್ತಿರುವ ಇಂದಿನ ದಿನಗಳಲ್ಲಿ ಶ್ರೀಮತಿ ಯಶೋಧರಮ್ಮ ದಾಸಪ್ಪನವರಂತಹ ಮಾನವತಾವಾದಿ, ಸಮಾಜ ಸೇವಕಿ, ಸ್ವಾತಂತ್ರ್ಯ ಸೇನಾನಿಯ ಮೌಲ್ಯಧಾರಿತ ಸಮಾಜ ಪರವಾದ ರಚನಾತ್ಮಕ ಕಾರ್ಯಗಳು ಇಂದಿಗೂ ಎಂದೆಂದಿಗೂ ಪ್ರಸ್ತುತವಾಗಿವೆ. ಅಂದಿನ ಸಾಮಾಜಿಕ ಸಂಕೋಲೆಗಳಿಗೆ ಒಳಗಾಗಿ ತೊಳಲಾಡುತ್ತಿದ್ದ ಶೋಷಿತ ವರ್ಗಗಳ ಅದರಲ್ಲೂ ಮಹಿಳೆಯರ ಧ್ವನಿಯಾಗಿ ನಿಂತು, ಒಂದು ತುತ್ತು ಅನ್ನವನ್ನೂ ಹಂಚಿತಿಂದು, ಕಾಯಕವೇ ಕೈಲಾಸವೆಂಬ ತತ್ತ್ವಕ್ಕೆ ಬದ್ಧರಾಗಿ ಅಸಮತೋಲತೆಯಿಂದ ತೊಳಲಾಡುತ್ತಿದ್ದ ಅಸಂಖ್ಯಾತರ ಬಾಳಿನಲ್ಲಿ ಆಶಾಕಿರಣ ಮೂಡಿಸಿ, ಸಮಾನತೆ ಮತ್ತು ಸ್ವಾವಲಂಬನೆಯತ್ತ ಜನರನ್ನು ಜಾಗೃತಗೊಳಿಸಿದ ಸಾಮಾಜಿಕ ಕಳಕಳಿಯುಳ್ಳ ಹಾಗೂ ಬ್ರಿಟೀಷರ ಸಾರ್ವಭೌಮ ಅಧಿಕಾರ ಮತ್ತು ರಾಜಪ್ರಭುತ್ವದ ದ್ವಿವಿಧ ಪಾರತಂತ್ರದ ವಿರುದ್ಧ ಹೋರಾಟ ನಡೆಸಿ, ರಾಷ್ಟ್ರದ ಬಿಡುಗಡೆಗೆ ಮತ್ತು ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಹೋರಾಟದ ಮುಂಚೂಣಿಯಲ್ಲಿದ್ದು ಅನುಪಮ ಸೇವೆ ಸಲ್ಲಿಸಿದ ಮಹಿಳಾ ಸ್ವಾತಂತ್ರ್ಯ ಸೇನಾನಿ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರ ಅನನ್ಯ ಬದುಕು ಅನೇಕರಿಗೆ ತಿಳಿದಿರುವುದಿಲ್ಲ.

ಸೂರ್ಯನ ಸುತ್ತ ಸುತ್ತುವ ಇತರ ಗ್ರಹಗಳು ಪ್ರಕಾಶಮಾನವಾದಂತೆ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಗಾಂಧೀಜಿಯವರು ಕೈಗೊಂಡ ರಚನಾತ್ಮಕ ಕಾರ್ಯಕ್ರಮಗಳ ಪ್ರಭಾವಕ್ಕೆ ಒಳಗಾಗಿ, ಪ್ರಸಿದ್ಧಗೊಂಡ ಅನೇಕ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿಯರಲ್ಲಿ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರೂ ಒಬ್ಬರು. ಅವರು ಗಾಂಧೀಜಿಯವರಿಂದ ಪ್ರೇರಿತರಾಗಿ ತಾವೂ ರಚನಾತ್ಮಕ ಕಾರ್ಯಕ್ರಮಗಳನ್ನು ಕರ್ನಾಟಕದಲ್ಲಿ ಕೈಗೊಂಡಿದ್ದಲ್ಲದೆ, ಅನೇಕ ಕಾರ್ಯಕರ್ತರಿಗೆ ಮತ್ತು ಸಮಾಜ ಸೇವಕರಿಗೆ ಸ್ಫೂರ್ತಿ ತಾಯಿಯೆನಿಸಿದ್ದರು. ಪರಿಶುದ್ಧ ಅಂತಃಕರಣ, ಮಾನವಪ್ರೇಮ, ಅನುಕಂಪ ಹೃದಯಿ. ಯಶೋಧರಮ್ಮ ದಾಸಪ್ಪ ಅವರು ತಮ್ಮ ಐವತ್ತು ವರ್ಷಗಳ ಸುಧೀರ್ಘ ಸಾರ್ವಜನಿಕ ಜೀವನದಲ್ಲಿ ಸ್ವಾತಂತ್ರ್ಯ ಸಮರ, ಸಮಾಜಸೇವೆ ಆದರ್ಶರಾಜಕರಣ ಹಾಗೂ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ಷೇತ್ರಗಳಲ್ಲಿ ಸಮರ್ಪಣಾ ಭಾವದಿಂದ ಕಾರ್ಯವೆಸಗಿದವರು.

ಇಂತಹ ಅಪೂರ್ವ ಮಹಿಳಾ ರತ್ನ ಶ್ರೀಮತಿ ಯಶೋಧರಾ ಕ್ರಿ.ಶ. ೧೯೦೫ರ ಮೇ ೫ರಂದು ಜನಿಸಿದರು[೧]. ತಂದೆ ಖ್ಯಾತ ಸಮಾಜ ಸುಧಾರಕ ಕೆ.ಎಚ್. ರಾಮಯ್ಯ, ತಾಯಿ ಶ್ರೀಮತಿ ರೇವಮ್ಮ. ಇವರು ತಮ್ಮ ಕಾರ್ಯದಕ್ಷತೆ, ಪ್ರತಿಭೆ ಮತ್ತು ವರ್ಚಸ್ಸಿನಿಂದ ಆಗಿನ ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಯುವರಾಜ ಕಂಠೀರವ ನರಸರಾಜ ಒಡೆಯರ ಗಮನ ಸೆಳೆದರು. ಅಂದು ಹಿಂದುಳಿದ ವರ್ಗಗಳ ಮತ್ತು ಹರಿಜನರಲ್ಲಿ ಶೈಕ್ಷಣಿಕ ಮುನ್ನಡೆ ಸಾಧಿಸಲು ಕೆ.ಎಚ್. ರಾಮಯ್ಯನವರು ಸೂಕ್ತವಾದ ವ್ಯಕ್ತಿ ಎಂದು ನಿರ್ಧರಿಸಿ ಅವರನ್ನು ಮೈಸೂರು ಸಂಸ್ಥಾನದ ಹಿಂದುಳಿದ ವರ್ಗಗಳ ಜಾಗೃತಿಯ ಮಹಾಂದೋಲನದ ವಿಶೇಷಾಧಿಕಾರಿಗಳಾಗಿ ನೇಮಕ ಮಾಡಲಾಗಿದ್ದಿತು. ರಾಮಯ್ಯನವರು ತಮ್ಮ ವಾಕ್‌ಪ್ರತಿಭೆ, ಪ್ರಾಮಾಣಿಕತೆಯಿಂದ ಜನರಲ್ಲಿ ಬೇರು ಬಿಟ್ಟಿದ್ದ ಮೂಢನಂಬಿಕೆ, ಕಂದಾಚಾರ ಮತ್ತು ಅನಿಷ್ಟಕಾರಕ ಪದ್ಧತಿಗಳನ್ನು ಕಿತ್ತೊಗೆಯಲು ಪ್ರಯತ್ನಿಸಿದುದಲ್ಲದೆ, ಅವರಿಗೆ ಶಿಕ್ಷಣದ ಪರಿಜ್ಞಾನವನ್ನು ಮೂಡಿಸಲು ಪ್ರಯತ್ನಿಸಿದರು. ಅದಕ್ಕಾಗಿ ಅನಾಥಾಲಯಗಳನ್ನೂ, ಶಾಲೆಗಳನ್ನೂ ತೆರೆದು. ಒಕ್ಕಲಿಗರ ಮತ್ತು ಆದಿಕರ್ನಾಟಕ ಜನರ ಸಂಘಗಳನ್ನು ಸ್ಥಾಪಿಸಿ ಹಿಂದುಳಿದವರ ಮತ್ತು ಹರಿಜನರ ಏಳಿಗೆಗೆ ಕಾರಣವಾದರು. ಇಂತಹ ಆದರ್ಶ ತಂದೆಯ ಪ್ರಭಾವದಲ್ಲಿ ಬೆಳೆದು, ಸ್ವಾತಂತ್ರ್ಯ ಯೋಧರಾಗಿ, ಸಮಾಜ ಸೇವಕರಾಗಿ ತಮ್ಮ ತತ್ವನಿಷ್ಠೆ ಮತ್ತು

* ಪ್ರವಾಚಕರು, ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕ.ರಾ.ಮು.ವಿ. ಮೈಸೂರು.

ಕಾರ್ಯದಕ್ಷತೆಗೆ ಹೆಸರಾಗಿ ಗಾಂಧೀಯುಗದಲ್ಲಿ ಮೊದಲ ಪಂಕ್ತಿಯಲ್ಲಿ ಕಾಣಿಸಿಕೊಳ್ಳುವ ಮಹಿಳಾ ಹೋರಾಟಗಾರರೆಂದರೆ ಶ್ರೀಮತಿ ಯಶೋಧರಾ ದಾಸಪ್ಪನವರು.

ಅಂದು ಹಿಂದುಳಿದ ವರ್ಗಗಳ ಗಂಡು ಮಕ್ಕಳನ್ನೇ ಶಾಲೆಗಳಿಗೆ ಕಳುಹಿಸಲು ಹಿಂಜರಿಯುತ್ತಿದ್ದ ಕಾಲವದು. ಇನ್ನು ಹೆಣ್ಣು ಮಕ್ಕಳ ಪಾಲಿಗೆ ವಿದ್ಯಾಭ್ಯಾಸ ಎನ್ನುವುದು ಕಂಡರಿಯದ ಸಂಗತಿ. ಸಮಾಜ ಸುಧಾರಕರಾಗಿದ್ದ ಕೆ.ಎಚ್. ರಾಮಯ್ಯನವರು ಮಹಿಳೆಯರ ವಿದ್ಯಾಭ್ಯಾಸದಿಂದಲೇ ಸಮಾಜದ ಮುನ್ನಡೆ ಸಾಧ್ಯ ಎಂಬುದನ್ನು ಬಲವಾಗಿ ನಂಬಿ, ಅದರಂತೆ ಯಾವ ಸುಧಾರಣೆಯಾದರೂ ಮನೆಯಿಂದಲೇ ಆರಂಭವಾಗಬೇಕೆಂಬ ಸಿದ್ಧಾಂತದಲ್ಲಿ ನಂಬಿಕೆಯಿಟ್ಟಿದ್ದು ತಮ್ಮ ಮನೆಯಿಂದಲೇ ಸ್ತ್ರೀ ವಿದ್ಯಾಭ್ಯಾಸದ ಆಂದೋಲನಕ್ಕೆ ನಾಂದಿ ಹಾಡಿ ಮೇಲ್ಪಂಕ್ತಿ ಹಾಕಿದರು[2]. ಬೆಂಗಳೂರು ಚಾಮರಾಜಪೇಟೆಯ ಸರ್ಕಾರಿ ಶಾಲೆಯಲ್ಲಿ ಓದು ಮುಗಿಸಿದ ಮೇಲೆ ಯಶೋಧರಾಳನ್ನು ಬೆಂಗಳೂರಿನ ಪ್ರಸಿದ್ಧ **ಲಂಡನ್ ಮಿಷನ್ ಶಾಲೆಗೆ** ಸೇರಿಸಿದುದಲ್ಲದೆ ಆ ಶಾಲೆಯ ಪಕ್ಕದಲ್ಲೇ ಇದ್ದ ವಿದ್ಯಾರ್ಥಿನಿಯರ ಹಾಸ್ಟೆಲ್‌ಗೂ ಸೇರಿಸಿದರು. ರಾಮಯ್ಯನವರು ಸಮಾಜ ಸುಧಾರಣಾ ಕೆಲಸದಲ್ಲಿ ತೊಡಗಿದ್ದುದರಿಂದ ಅವರ ಮನೆ ಎಲ್ಲಾ ಸಾಮಾಜಿಕ ಕಾರ್ಯಚಟುವಟಿಕೆಗಳ ಕೇಂದ್ರವಾಗಿದ್ದಿತು. ಇದರಿಂದ ಯಶೋಧರಾಳ ಓದಿಗೆ ತೊಂದರೆಯಾಗಬಾರದೆಂದು ಹಾಸ್ಟೆಲ್‌ನಲ್ಲಿರಿಸಲಾಯಿತು. ಆ ಶಾಲೆಯ ಮುಖ್ಯಸ್ಥೆ ಹಾಗೂ ಹಾಸ್ಟೆಲ್‌ನ ವಾರ್ಡನ್ ಆಗಿದ್ದ ಮಿಸ್ ಬಟ್ಲರ್ ಎಂಬ ಮಹಿಳೆ ಯಶೋಧರಾ ಮೇಲೆ ತುಂಬಾ ಪ್ರಭಾವ ಬೀರಿದರು. 'ಇತಿಹಾಸ, ನಾಗರೀಕತೆ, ಸಂಸ್ಕೃತಿಗಳ ಅಧ್ಯಯನದ ಜೊತೆಗೆ ಸಮಾಜಸೇವಾ ಕಾರ್ಯದ ಬಗೆಗೂ ಮಿಸ್ ಬಟ್ಲರ್ ಅವರು ತಮ್ಮ ಮೇಲೆ ಅಚ್ಚಳಿಯದ ಪ್ರಭಾವ ಬೀರಿದರೆಂದು ಯಶೋಧರಾ ಅವರು ಹೇಳುತ್ತಿದ್ದುದಾಗಿ ಅವರನ್ನು ಅತ್ಯಂತ ಹತ್ತಿರದಿಂದ ಬಲ್ಲ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಜಿ.ಆರ್. ಪ್ರಾಣೇಶ್ ರಾವ್ ಹೇಳುತ್ತಾರೆ[3].

ಮದ್ರಾಸಿನ ಕ್ವೀನ್ಸ್‌ಮೇರಿ ಕಾಲೇಜಿನಲ್ಲಿ ಉನ್ನತ ವಿದ್ಯಾಭ್ಯಾಸದ ಓದು ಮುಗಿಸಿದ ಯಶೋಧರಾ ಮತ್ತೆ ಬೆಂಗಳೂರಿಗೆ ಬಂದು ತಮ್ಮ ತಂದೆಯ ಸಮಾಜ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡರು. ತಂದೆಯವರು ನಡೆಸುತ್ತಿದ್ದ ಸಾರ್ವಜನಿಕ ಸಭೆಗಳಲ್ಲಿ, ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಜನರ ಸಮುದಾಯದ ಕಾರ್ಯಗಳಲ್ಲಿ, ಅವರು ಕೈಗೊಳ್ಳುತ್ತಿದ್ದ ಸುಧಾರಣಾ ಪ್ರಕ್ರಿಯೆಗಳನ್ನು ಕಂಡು ಯಶೋಧರಾ ಪ್ರಭಾವಿತರಾಗಿದ್ದರು. ತಂದೆಯಂತೆ ಒಳ್ಳೆಯದಕ್ಕಾಗಿ ತಾನೂ ಹೋರಾಟ ಮಾಡಲೇಬೇಕೆಂಬ ನಿರ್ಧಾರದಿಂದ ಸಮಾಜ ಸುಧಾರಣಾ ಕಾರ್ಯದಲ್ಲಿ ಯಶೋಧರಾ ತಮ್ಮನ್ನು ತೊಡಗಿಸಿಕೊಂಡರು. ಮಗಳ ಈ ಕಾರ್ಯಕ್ಕೆ ತಂದೆಯ ಬೆಂಬಲವೂ ದೊರೆಯಿತು. ಕೆ.ಎಚ್. ರಾಮಯ್ಯನವರು ಮಗಳನ್ನು ಗಂಡು ಮಗನಂತೆ ಧೈರ್ಯ ಸ್ಥೈರ್ಯಗಳನ್ನು ತುಂಬಿ ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿದರು. ಯಶೋಧರಾ ಯಾವುದನ್ನೂ ತರ್ಕಬದ್ಧವಾಗಿ ಚರ್ಚಿಸುತ್ತ ಓರ್ವ ಶಿಸ್ತುಬದ್ಧಿನ ಹೋರಾಟಗಾರ್ತಿಯ ಮನೋಭಾವ ಬೆಳೆಸಿಕೊಂಡಿದ್ದರು. ತಂದೆಯ ನಿರೀಕ್ಷೆಗೂ ಮೀರಿದ ವ್ಯಕ್ತಿತ್ವವನ್ನು ಅವರು ರೂಢಿಸಿಕೊಂಡಿದ್ದರು.

೧೯೨೬ ಮಾರ್ಚ್ ನಾಲ್ಕರಂದು ಎಚ್.ಸಿ. ದಾಸಪ್ಪನವರೊಂದಿಗೆ ಯಶೋಧರಾ ಅವರ ವಿವಾಹವಾಯಿತು[4]. ದಾಸಪ್ಪನವರು ಆಗ ಮೈಸೂರಿನಲ್ಲಿ ಪ್ರಸಿದ್ಧ ವಕೀಲರಾಗಿದ್ದು ಜನಪ್ರಿಯತೆ ಗಳಿಸಿದ್ದರು. ದಾಸಪ್ಪನವರು ವಕೀಲಿ ವೃತ್ತಿಯಿಂದ ಕೈತುಂಬ ಹಣ ಸಂಪಾದಿಸುತ್ತಿದ್ದುದರಿಂದ ಶ್ರೀಮಂತ ಜೀವನ ನಡೆಸಬಹುದಾಗಿದ್ದಿತು. ಆದರೆ ಅಂತಹ ವೈಭವದ ಜೀವನದ ಆಸೆ ದಾಸಪ್ಪನವರಿಗಾಗಲೀ ಅವರ ಪತ್ನಿ ಯಶೋಧರಾ ಅವರಿಗಾಗಲಿ ಇರಲಿಲ್ಲ. ದಾಸಪ್ಪನವರಿಗೆ ರಾಜಕೀಯ ಹಾಗೂ ಸಾಮಾಜಿಕ ಹೋರಾಟದ ಗೀಳಿದ್ದರೆ. ಯಶೋಧರಾಗೆ ಸಮಾಜಸೇವೆ, ಕಲೆ ಮತ್ತು ಸಾಹಿತ್ಯದಲ್ಲಿ ವಿಶೇಷ ಆಸಕ್ತಿ ಇದ್ದಿತು. ಹಾಗಾಗಿ ದಾಸಪ್ಪ ಅವರು ಕೂಡ ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ವರ್ಗಗಳ ಏಳಿಗೆಗಾಗಿ ಅಂದು ನಡೆಯುತ್ತಿದ್ದ ಚಳುವಳಿಯ ಮುಂಚೂಣಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅವರು ಮೈಸೂರಿನ ಪೌರಸಭೆಯ ಸದಸ್ಯರಾಗಿ, ಪ್ರಜಾಪ್ರತಿನಿಧಿ ಸಭೆ ಮತ್ತು ಇತರ ಸಾರ್ವಜನಿಕ ಸಂಸ್ಥೆಗಳಲ್ಲಿ ಕ್ರಿಯಾತ್ಮಕ ನಾಯಕರಾಗಿ ಕೆಲಸ ಮಾಡುತ್ತಿದ್ದರು.

ರಾಜಕಾರಣಕ್ಕೆ ಸಮಾಜಸೇವೆಯ ಬುನಾದಿಯಿದ್ದರೆ ರಾಜಕೀಯ ಜೀವನ ತೃಪ್ತಿಕರವೂ ಫಲಪ್ರದವೂ ಆಗುವುದೆಂಬುದರಲ್ಲಿ ದಾಸಪ್ಪನವರಿಗೆ ನಂಬಿಕೆಯಿತ್ತು. ಅದಕ್ಕಾಗಿಯೇ ಅವರು ಪಿಂಜ್ರಾಪೋಲ್‌ನಂತಹ ಪ್ರಾಣಿದಯೇ ಸಂಸ್ಥೆಗಳಲ್ಲಿ ಅನುಕಂಪ ಪೂರ್ವಕ ಸೇವೆ ಸಲ್ಲಿಸಿದರು. ಒಕ್ಕಲಿಗರ ಸಂಘದ ಪದಾಧಿಕಾರಿಯಾಗಿ ರೈತಾಪಿ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಅನಾಥಾಲಯ ಮುಂತಾದ ಸಂಸ್ಥೆಗಳಲ್ಲಿ ಕಾರ್ಯತತ್ಪರರಾಗಿ ತತ್ವನಿಷ್ಠೆಯಿಂದ ಸೇವೆಸಲ್ಲಿಸುತ್ತಿದ್ದರು. ಬಾಲ್ಯವಿಧವೆಯರ ಸಂಕಷ್ಟಗಳನ್ನು ಕಂಡು ಅದರ ನಿರ್ಮೂಲನೆಗಾಗಿ ಕೆಲಸಮಾಡಿದರು. ವಿಧವೆಯರ ಪುನರ್‌ವಿವಾಹಕ್ಕೆ ಅವಕಾಶ ಮಾಡಿಕೊಡುವ ಮಸೂದೆ, ವಿಧವೆಯರಿಗೆ ದತ್ತು ಮಕ್ಕಳನ್ನು ಸ್ವೀಕರಿಸುವ ಹಾಗೂ ಆಸ್ತಿಯ ಹಕ್ಕನ್ನು ಪಡೆಯುವ ಮಸೂದೆ, ಹೆಣ್ಣು ಮಕ್ಕಳಿಗೂ, ಅಂಗವಿಕಲ ಮಕ್ಕಳಿಗೂ ಆಸ್ತಿಯಲ್ಲಿ

ಭಾಗ ನೀಡುವ ವಿಧಿ, ಇತ್ಯಾದಿ ಮಸೂದೆಗಳು–ಪ್ರಜಾಪ್ರತಿನಿಧಿ ಸಭೆಯಲ್ಲಿ ಅಂಗೀಕಾರವಾಗುವಂತೆ ದಾಸಪ್ಪನವರು ಹೋರಾಟ ನಡೆಸಿದರು. ದಾಸಪ್ಪರವರ ಈ ಪ್ರಭಾವಿತ ಕೆಲಸಗಳು ಯಶೋಧರಾ ಅವರು ಮೈಸೂರು ಸಂಸ್ಥಾನದ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರಭಾವ ಬೀರಿತು. ಅವರು ಮಹಿಳಾ ಸದನ, ಭಗಿನಿ ಸಮಾಜ ಮತ್ತು ವನಿತಾ ಸಮಾಜ ಮುಂತಾದ ಸಂಸ್ಥೆಗಳೊಡನೆ ಕೈಗೂಡಿಸಿ ಮಹಿಳೆಯರ ಏಳಿಗೆಗೆ ಶ್ರಮಿಸತೊಡಗಿದರು[೫]. ಈ ಸಂದರ್ಭದಲ್ಲಿ ಹಿಂದಿ ಭಾಷೆಯನ್ನು ಕಲಿತು ತನ್ಮೂಲಕ ರಾಷ್ಟ್ರೀಯ ವಿಮೋಚನಾ ಚಳುವಳಿಗಳಿಗೆ ಸ್ಪಂದಿಸುವ ಮನೋಧರ್ಮವನ್ನು ಬೆಳೆಸಿಕೊಂಡರು.

ಇದೇ ಸಂದರ್ಭದಲ್ಲಿ ಭಾರತದಲ್ಲಿ ಸ್ವಾತಂತ್ರ್ಯ ಚಳವಳಿಯ ಅಂತಿಮಘಟ್ಟವು ಗಾಂಧೀಜಿಯವರ ಆಗಮನದೊಂದಿಗೆ ಹೊಸತನವನ್ನು ಪಡೆದುಕೊಂಡಿತ್ತು. ಬುದ್ಧಿಜೀವಿಗಳಿಗೆ ಸೀಮಿತವಾಗಿದ್ದ ಸ್ವಾತಂತ್ರ್ಯ ಚಳವಳಿಯು ಜನತಾ ಚಳವಳಿಯಾಗಿ ಮಾರ್ಪಟ್ಟಿದ್ದಿತು. ಸ್ವಾತಂತ್ರ್ಯ ಚಳವಳಿಯ ಜೊತೆ ಜೊತೆಯಲ್ಲಿಯೇ ಸಮಾಜ ಸುಧಾರಣೆಯು ಸಹ ಗಾಂಧೀಜಿಯವರ ಗುರಿಯಾಗಿತ್ತು. ಇವರ ಗುರಿಯ ಸಾಧಕತೆಗಾಗಿ ರೈತರು, ಕಾರ್ಮಿಕರು, ಮಹಿಳೆಯರು ಮತ್ತು ವಿದ್ಯಾರ್ಥಿಗಳು ಪ್ರಭಾವಿತರಾಗಿ ಚಳವಳಿಯಲ್ಲಿ ಧುಮುಕಿದರು[೬]. ಈ ಸಂದರ್ಭದಲ್ಲಿ ಹಿಂದಿ ಅಧ್ಯಯನ ಮತ್ತು ಸ್ತ್ರೀಸಮಾಜಗಳ ಸಂಘಟನೆಯಲ್ಲಿ ತೊಡಗಿದ್ದ ಯಶೋಧರಾರವರಿಗೆ ಗಾಂಧೀ ತತ್ವದ ಸೆಳೆತವುಂಟಾಗಿ ಇಲ್ಲಿಂದ ಅವರು ಸ್ವಾತಂತ್ರ್ಯದ ಹೋರಾಟದ ಮುಂಚೂಣಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಈ ರೀತಿಯಲ್ಲಿ ಶ್ರೀಮತಿ ಯಶೋಧರಾ ದಾಸಪ್ಪ ಅವರು ತಂದೆ ಶ್ರೀ ಕೆ.ಎಚ್. ರಾಮಯ್ಯ, ಪತಿ ಎಚ್.ಸಿ.ದಾಸಪ್ಪ ಹಾಗೂ ಮಹಾತ್ಮ ಗಾಂಧೀಜಿಯವರ ಪ್ರಭಾವದಿಂದ ಒಬ್ಬ ಪರಿಪಕ್ವ ಹೋರಾಟಗಾರ್ತಿಯಾಗಿ ರೂಪುಗೊಂಡರು. ಅವರು ೧೯೨೮ರಲ್ಲಿ ಮೈಸೂರು ಸಂಸ್ಥಾನ ಕಾಂಗ್ರೆಸ್‌ನ ಪ್ರಮುಖ ಸದಸ್ಯೆಯಾಗಿ ನೇಮಕಗೊಂಡರು. ಶ್ರೀಮತಿ ಯಶೋಧರಾರವರು ಎಷ್ಟರಮಟ್ಟಿಗೆ ಕಾಂಗ್ರೆಸ್ಸಿನ ಒಬ್ಬ ನಿಷ್ಠಾವಂತ ಕಾರ್ಯಕರ್ತೆಯಾಗಿದ್ದರೆಂದರೆ; ಅನೇಕ ಸಂದರ್ಭಗಳಲ್ಲಿ ಪತಿಯ ವಿರುದ್ಧವೇ ಮತ ಚಲಾಯಿಸುವ ಮೂಲಕ ತತ್ವಸಿದ್ಧಾಂತಗಳಿಗೆ ಆದರ್ಶಪ್ರಾಯರಾಗಿದ್ದರು[೭]. ತಮ್ಮ ಈ ಗುಣಗಳಿಂದ ಪ್ರಜಾಪಕ್ಷದಲ್ಲಿದ್ದ ಪತಿ ಎಚ್.ಸಿ. ದಾಸಪ್ಪನವರನ್ನು ಕಾಂಗ್ರೆಸ್ಸಿಗೆ ಸೇರುವಂತೆ ಮಾಡಿದರು. ಇಲ್ಲಿಂದ ಪತಿ–ಪತ್ನಿಯರ ಹೋರಾಟ ದ್ವಿಗುಣಗೊಂಡಿತು.

೧೯೩೮ರ ಫೆಬ್ರವರಿ ತಿಂಗಳಲ್ಲಿ ಗುಜರಾತಿನ ಹರಿಹರಪುರದಲ್ಲಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಮಹಾಧಿವೇಶನದಲ್ಲಿ ಇತರ ದೇಶಿಯ ಸಂಸ್ಥಾನಗಳ ಪ್ರತಿನಿಧಿಗಳಂತೆ ಮೈಸೂರು ಸಂಸ್ಥಾನದ ಕಾಂಗ್ರೆಸ್ ನಾಯಕರುಗಳು ಭಾಗವಹಿಸಿದ್ದರು[೮]. ಈ ಅಧಿವೇಶನದಲ್ಲಿ ಕೈಗೊಂಡ ನಿರ್ಣಯದಂತೆ ಮೈಸೂರು ಕಾಂಗ್ರೆಸ್ ಹೊಸ ಅಂಗರಚನೆಯನ್ನು ರೂಪಿಸಿಕೊಂಡು, ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ತ್ರಿವರ್ಣ ಧ್ವಜವನ್ನು ಮೈಸೂರು ಕಾಂಗ್ರೆಸ್‌ನ ಧ್ವಜವೆಂದು ಅಂಗೀಕರಿಸಿ; ಆ ಧ್ವಜವನ್ನು ಹಾರಿಸುವ ಮೂಲಕ ಹೋರಾಟದ ಸಂಸ್ಥೆಯಾಗಿ ಸಂಘಟಿತವಾಗಲು ತೀರ್ಮಾನಿಸಿತು. ಅದರಂತೆ ೧೯೩೮ ಏಪ್ರಿಲ್ ೧೧ರಂದು ಮದ್ದೂರಿನ ಬಳಿಯ ಶಿವಪುರದಲ್ಲಿ ಅಂದಿನ ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದ ಶ್ರೀ ಟಿ.ಸಿದ್ದಲಿಂಗಯ್ಯನವರ ನೇತೃತ್ವದಲ್ಲಿ ಧ್ವಜ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಮೈಸೂರು ಪ್ರಾಂತ್ಯದ ಮುಂಚೂಣಿಯಲ್ಲಿದ್ದ ಅನೇಕ ನಾಯಕರು ಬಂಧನಕ್ಕೆ ಒಳಗಾದರು[೯]. ಈ ಸಂದರ್ಭದಲ್ಲಿ ಧ್ವಜವನ್ನು ಕಿತ್ತೊಗೆಯಲು ಲಾಠಿ ಹಿಡಿದು ಸಜ್ಜಾದ ಸಾವಿರಾರು ಪೋಲಿಸರನ್ನು ಲೆಕ್ಕಿಸದೆ, ಶ್ರೀಮತಿ ಯಶೋಧರಾ ದಾಸಪ್ಪರವರು ತಮ್ಮ ಎರಡು ಎಳೆಯ ಮಕ್ಕಳು ಮತ್ತು ಮಹಿಳಾ ಕಾರ್ಯಕರ್ತೆಯರಾದ ಟಿ. ಸುನಂದಮ್ಮ, ಬಳ್ಳಾರಿಸಿದ್ದಮ್ಮ, ಸುಶೀಲಾಬಾಯಿ, ತಾಯಮ್ಮ ವೀರಣ್ಣಗೌಡ, ವೆಂಕಮ್ಮಪಾಲಹಳ್ಳಿ ಮೊದಲಾದವರೊಡಗೂಡಿ ಬೆಳಿಗ್ಗೆಯಿಂದ ಸಂಜೆಯವರಿಗೂ ಧ್ವಜಸ್ತಂಭವನ್ನು ಸುತ್ತುವರಿದು, ರಾಷ್ಟ್ರಧ್ವಜದ ಗೌರವದ ರಕ್ಷಣೆಗಾಗಿ ಪ್ರಾಣದ ಹಂಗನ್ನು ತೊರೆದು ಕುಳಿತ್ತಿದ್ದರು[೧೦]. ಶಿವಪುರದಲ್ಲಿ ರಾಷ್ಟ್ರೀಯ ಧ್ವಜ ಹಾರಿಸುವ ಸತ್ಯಾಗ್ರಹ ಆರಂಭಗೊಳ್ಳುವ ಮೊದಲು ಗಾಂಧೀಜಿಯವರ ನಿರ್ದೇಶನವೂ ಅದೇ ಆಗಿದ್ದಿತು[೧೧]. ಈ ರೀತಿ ಪ್ರತಿನಿತ್ಯವೂ ಧ್ವಜಾರೋಹಣದ ಕಾರ್ಯಕ್ರಮ ನಡೆದೇ ಇತ್ತು ಮತ್ತು ಧ್ವಜಾರೋಹಣ ಮಾಡಿದವರು ಜೈಲುಸೇರುತ್ತಲೇ ಇದ್ದರು. ಆದರೆ ಧ್ವಜವು ಸದಾ ಹಾರಾಡುತ್ತಿರುವಂತೆ ಮತ್ತು ಅದನ್ನು ಪೋಲಿಸರಿಂದ ರಕ್ಷಿಸುವ ಜವಾಬ್ದಾರಿಯು ಯಶೋಧರಮ್ಮನವರ ಹೆಗಲ ಮೇಲೆ ಬಿದ್ದಿತ್ತು. ಶಿವಪುರದ ಸತ್ಯಾಗ್ರಹದಲ್ಲಿ ಭಾಗವಹಿಸಿದವರನ್ನು ಸರ್ಕಾರವು ದಸ್ತಗಿರಿ ಮಾಡಿದುದರ ವಿರುದ್ಧ ಮೈಸೂರು ರಾಜ್ಯಾದ್ಯಂತ ಪ್ರತಿಭಟನಾ ಮೆರವಣಿಗೆಗಳು ನಡೆದವು. ಅದರ ಜೊತೆಯಲ್ಲಿ ಮೈಸೂರಿನಲ್ಲೂ ಯಶೋಧರಾ ಅವರ ನೇತೃತ್ವದಲ್ಲಿ ಧ್ವಜಾರೋಹಣ ಕಾರ್ಯಕ್ರಮ ಮತ್ತು ಭಾಷಣ ಮಾಡಿ ಸೆರೆಮನೆಗೆ ಹೋಗುವುದು ನಡೆದೇ ಇತ್ತು. ಈ ಸಂದರ್ಭದಲ್ಲಿ ದಾಸಪ್ಪನವರು ಸೆರೆಮನೆಗೆ ತಳ್ಳಲ್ಪಟ್ಟರು. ಯಶೋಧರಮ್ಮನವರಿಗೆ ಮನೆಯಲ್ಲಿಯೇ ದಿಗ್ಬಂಧನ

ಹಾಕಲಾಯಿತು. ಆದರೂ ಅನೇಕ ಭೂಗತ ಕಾರ್ಯಕರ್ತರಿಗೆ ಯಶೋಧರಮ್ಮ ಮಾರ್ಗದರ್ಶನ ಮತ್ತು ಸ್ಫೂರ್ತಿ ನೀಡುತ್ತ ಚಳುವಳಿಯ ಕಾವನ್ನು ಜೀವಂತವಾಗಿರಿಸಿದ್ದರು[೧೨].

ಇಂತಹ ಸತ್ಯಾಗ್ರಹಿಗಳಲ್ಲಿ ಎಂ.ಪಿ. ಕೃಷ್ಣಪ್ಪನವರೂ ಒಬ್ಬರು. ಅವರು ಆಗಿನ ವಿದ್ಯಾರ್ಥಿ ಮುಖಂಡರಾಗಿದ್ದು, ಯಶೋಧರಮ್ಮನವರ ಬೆಂಬಲದೊಂದಿಗೆ ಭೂಗತ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಪೋಲಿಸರು ಅವರ ಬಂಧನಕ್ಕೆ ಬಲೆಬೀಸುತ್ತ ಅವರನ್ನು ಹಿಡಿದುಕೊಟ್ಟವರಿಗೆ ಐದುಸಾವಿರ ಬಹುಮಾನವನ್ನೂ ಘೋಷಿಸಿದ್ದರು. ಆದರೆ ಯಶೋಧರಾ ಅವರು ಕೃಷ್ಣಪ್ಪನವರಿಗೆ ತಮ್ಮ ಮನೆಯಲ್ಲಿಯೇ ಆಶ್ರಯ ನೀಡಿದ್ದರು. ಅವರನ್ನು ಶೋಧಿಸಲು ಮನೆಗೆ ಪೋಲಿಸರು ಬರುತ್ತಾರೆಂಬ ವಾರ್ತೆ ಕೇಳುತ್ತಲೇ, ಯಶೋಧರಮ್ಮರವರು ಎಚ್ಚೆತ್ತುಕೊಂಡು ಪೋಲಿಸರಿಗೆ "ಹೂವೀಳ್ಯಾ" ಕಾರ್ಯಕ್ರಮಕ್ಕೆ ಹೊರಗೆ ಹೋಗುತ್ತಿರುವುದಾಗಿ ತಿಳಿಸಿ, ಕೃಷ್ಣಪ್ಪನವರನ್ನು ತಮ್ಮ ಕಾರಿನ ಡಿಕ್ಕಿಯಲ್ಲಿ ಕೂರಿಸಿಕೊಂಡು ಈಗಿನ ಕುಂಬಾರಕೊಪ್ಪಲಿನಲ್ಲಿ ಬಿಟ್ಟು ಅವರನ್ನು ರಕ್ಷಿಸುವ[೧೩] ಮೂಲಕ ಸ್ವಾತಂತ್ರ್ಯ ಹೋರಾಟದಲ್ಲಿ ತಾವು ಎಂತಾ ತ್ಯಾಗಕ್ಕೂ ಸಿದ್ಧ ಎಂಬುದನ್ನು ತೋರಿಸಿಕೊಟ್ಟರು. ಇಂತಹ ಸಂಘಟನಾ ಶಕ್ತಿಯಿಂದ ಶ್ರೀಮತಿ ಯಶೋಧರಾ ದಾಸಪ್ಪ ಅವರು ರಾಷ್ಟ್ರನಾಯಕರ ಮೆಚ್ಚಿಗೆಗೆ ಪಾತ್ರರಾದರು.

೧೯೩೮ರ ಏಪ್ರಿಲ್ ೨೫ರಂದು ಮೈಸೂರು ಕಾಂಗ್ರೆಸ್ಸಿಗರ ಮುಂದಾಳತ್ವದಲ್ಲಿ ಯಶೋಧರಮ್ಮನವರೂ ಸೇರಿದಂತೆ ಇದೇ ಮಾದರಿಯಲ್ಲಿ ಕೋಲಾರದ ವಿದುರಾಶ್ವಥದಲ್ಲಿ ಧ್ವಜಸತ್ಯಾಗ್ರಹವನ್ನು ನಡೆಸಲು ಕಾಂಗ್ರೆಸ್ ಕಾರ್ಯಕರ್ತರು ಮುಂದಾದರು. ಈ ಸಂದರ್ಭದಲ್ಲಿ ಸತ್ಯಾಗ್ರಹಿಗಳ ಮತ್ತು ಪೋಲಿಸರ ನಡುವೆ ಮಾತಿನ ಚಕಮಕಿ ನಡೆದು, ತಾಳ್ಮೆ ಕಳೆದುಕೊಂಡ ಪೋಲಿಸರು ಸತ್ಯಾಗ್ರಹಿಗಳ ಮೇಲೆ ಗುಂಡಿನ ಮಳೆಗರೆದರು. ಈ ಸಂದರ್ಭದಲ್ಲಿ ಸುಮಾರು ೩೮ ಜನ ಪ್ರಾಣಕಳೆದುಕೊಂಡರು. ಅನೇಕರು ಸಾವು ನೋವುಗಳ ಮಧ್ಯೆ ಸಂಕಟ ಪಡುತ್ತಿದ್ದರು. ಇದನ್ನು ಗಮನಿಸಿ, ಪೋಲಿಸರ ಯಾವ ಕ್ರಮಕ್ಕೂ ಹೆದರದೆ ಗಾಯಾಳುಗಳ ಶುಶ್ರೂಷೆಯಲ್ಲಿ ಯಶೋಧರಾ ತಮ್ಮನ್ನು ತೊಡಗಿಸಿಕೊಂಡರು[೧೪]. ವಿದುರಾಶ್ವತ್ಥದ ಈ ಹತ್ಯಾಕಾಂಡ ಹಿಂದೆ ಜಲಿಯನ್‌ವಾಲ್ ಬಾಗ್‌ನಲ್ಲಿ ನಡೆದ ಕ್ರೂರ ಘಟನೆಯನ್ನು ನೆನಪಿಸಿಕೊಡುವಂತಹದಾಗಿತ್ತು ಎಂಬುದಾಗಿ ಅನೇಕ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಇತಿಹಾಸಜ್ಞರು ಹೇಳುತ್ತಾರೆ[೧೫].

ಹೀಗೆ ಮೈಸೂರು ಸಂಸ್ಥಾನದ ಜಿಲ್ಲಾ ಕಾಂಗ್ರೆಸ್‌ನ ಮಹಿಳಾ ಸದಸ್ಯೆಯಾಗಿ ಗಾಂಧೀ ತತ್ವಕ್ಕೆ ಹೆಚ್ಚು ಒತ್ತುಕೊಟ್ಟು, ಅವರ ತತ್ವನಿಷ್ಠೆಗೆ ಬದ್ಧರಾಗಿ ಚಳುವಳಿಯ ಮುಂಚೂಣಿಯಲ್ಲಿದ್ದ ಯಶೋಧರಾ ದಾಸಪ್ಪನವರನ್ನು ಕಂಡು ಪ್ರಭಾವಿತಹೊಂಡ ಗಾಂಧೀಜಿಯವರು ೧೯೪೪ರಲ್ಲಿ ಸೆರೆಮನೆ ವಾಸದಿಂದ ಬಿಡುಗಡೆಯಾಗಿ ಬಂದ ನಂತರ ಎಚ್.ಸಿ. ದಾಸಪ್ಪ ಮತ್ತು ಯಶೋಧರಾ ದಾಸಪ್ಪ ಇಬ್ಬರನ್ನು ಸಬರಮತಿ ಆಶ್ರಮಕ್ಕೆ ಆಹ್ವಾನಿಸಿ[೧೬], ಯಶೋಧರಾರವರಲ್ಲಿದ್ದ ಚಾಣಾಕ್ಷತನ, ದಿಟ್ಟತನ ಮತ್ತು ಲೋಕಜ್ಞಾನವನ್ನು ಪ್ರಶಂಸಿಸಿ, ಯಶೋಧರಾರಂತಹ ಬಹಾದ್ದೂರ್ ಮಹಿಳೆ ರಚನಾತ್ಮಕ ಕಾರ್ಯಕ್ಷೇತ್ರದಲ್ಲಿದ್ದರೆ ಸ್ತ್ರೀ ಶಕ್ತಿವರ್ಧನೆಗೆ ತೀವ್ರಗತಿ ಚಾಲನೆ ೧೬.೧ ಬರುತ್ತದೆಂದು ಭಾವಿಸಿ, ಮುಂದೆ ಮೈಸೂರು ಸಂಸ್ಥಾನದ ಕಸ್ತೂರ ಬಾ ಟ್ರಸ್ಟನ ಪ್ರತಿನಿಧಿಯಾಗಿ ನೇಮಿಸಿದರು[೧೭]. ಅಲ್ಲಿಂದ ಯಶೋಧರಮ್ಮನವರು ಗಾಂಧೀಜಿಯವರ ರಚನಾತ್ಮಕ ಕಾರ್ಯಗಳನ್ನು ತಮ್ಮ ಕೊನೆಯ ಕಾಲದವರೆಗೂ ಅತ್ಯಂತ ಪರಿಣಾಮಕಾರಿಯಾಗಿ ನಡೆಸಿಕೊಂಡು ಬಂದರು.

ಜೀವನದುದ್ದಕ್ಕೂ ಅನೇಕ ಸಂಕಷ್ಟಗಳನ್ನು ಅನುಭವಿಸಿದರೂ ಗ್ರಾಮೀಣ ಮಹಿಳೆಯರ ಮತ್ತು ಮಕ್ಕಳ ಅಭ್ಯುದಯದಲ್ಲಿ ತೀವ್ರ ಆಸಕ್ತಿಯನ್ನಿರಿಸಿಕೊಂಡು ಅವರಿಗಾಗಿ ಪರಿಶ್ರಮಿಸುತ್ತಿದ್ದ ಗಾಂಧೀಜಿಯವರ ಪತ್ನಿ ಕಸ್ತೂರ ಬಾ ಗಾಂಧಿಯವರು ಮರಣ ಹೊಂದಿದ್ದೂದರಿಂದ ಅವರ ಆ ಕೆಲಸಗಳನ್ನು ಮುಂದುವರಿಸಲು ಅವರ ಹೆಸರಿನಲ್ಲಿ ಒಂದು ಸ್ಮಾರಕ ಟ್ರಸ್ಟನ್ನು ಸ್ಥಾಪಿಸಲು ಕಾಂಗ್ರೆಸ್ ಕಾರ್ಯಕರ್ತರು ಮುಂದಾದರು. ಗಾಂಧೀಜಿಯವರ ಸಲಹೆಯ ಮೇರೆಗೆ "ಕಸ್ತೂರ ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ್ನು ಸ್ಥಾಪಿಸಲಾಯಿತು. ಅದರ ಪ್ರಥಮ ಅಧ್ಯಕ್ಷರಾಗಿದ್ದ ಗಾಂಧೀಜಿಯವರು ಭಾರತದ ಎಲ್ಲ ಪ್ರಾಂತಗಳಲ್ಲೂ ಟ್ರಸ್ಟ್‌ನ ಕೆಲಸಕಾರ್ಯಗಳನ್ನು ಹಮ್ಮಿಕೊಳ್ಳಲು ಕಾರ್ಯಕ್ರಮ ರೂಪಿಸಿದರು. ಒಂದೊಂದು ಪ್ರಾಂತ್ಯಕ್ಕೂ ಒಬ್ಬೊಬ್ಬ ಸಮರ್ಥ ಮಹಿಳಾ ನಾಯಕಿಯರನ್ನು ಟ್ರಸ್ಟಿನ ಪ್ರತಿನಿಧಿಗಳಾಗಿ ಗಾಂಧೀಜಿಯವರು ನೇಮಕ ಮಾಡಿದರು.

ಅದರಂತೆ ಮೈಸೂರು ಸಂಸ್ಥಾನಕ್ಕೆ ಯಶೋಧರಾ ದಾಸಪ್ಪನವರನ್ನೂ, ಉತ್ತರ ಕರ್ನಾಟಕ ವಿಭಾಗಕ್ಕೆ ಉಮಾಬಾಯಿ ಕುಂದಾಪುರ ಅವರನ್ನು ನೇಮಿಸಲ್ಪಟ್ಟರು. ಈ ಬಗೆಗೆ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರ; ಮತ್ತು ಮಕ್ಕಳ ಅಭಿವೃದ್ಧಿಗಾಗಿ ಯಾವ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂಬುದರ ಬಗೆಗೆ ಗಾಂಧೀಜಿಯವರ ಮಾರ್ಗದರ್ಶನದಲ್ಲಿ ನಡೆದ ಪೂನಾ ಶಿಬಿರದಲ್ಲಿ ತರಭೇತಿ ಪಡೆದುಕೊಂಡು ಬಂದ ಯಶೋಧರಾ ಕರ್ನಾಟಕದಲ್ಲೂ ಸ್ವಾವಲಂಬನೆಯ ಆಧಾರದ ಮೇಲೆ ಅಂತದೇ ಕಾರ್ಯಕ್ರಮಗಳನ್ನು ರೂಪಿಸಲು ಸಿದ್ಧತೆ ನಡೆಸಿದರು. ಟ್ರಸ್ಟ್‌ನ ಆರ್ಥಿಕ

ಸ್ವಾವಲಂಬನೆಗೆ ವ್ಯವಸಾಯ ಮತ್ತು ಗೃಹ ಕೈಗಾರಿಕೆಯ ಅಭಿವೃದ್ಧಿಯೇ ಮೂಲ ಮಾರ್ಗವೆಂದು ಭಾವಿಸಿ, ಅದಕ್ಕಾಗಿ ಸರ್ಕಾರದಿಂದ ಅರಸೀಕೆರೆ ಬಳಿ ಜಮೀನನ್ನು ಪಡೆದು, ಅದನ್ನು ಕೃಷಿಯೋಗ್ಯ ಭೂಮಿಯನ್ನಾಗಿ ಪರಿವರ್ತಿಸಿ, ವ್ಯವಸಾಯದ ಉದ್ಯಮಕ್ಕೆ ಒಳಪಡಿಸಿದರು. ಅಲ್ಲಿಂದ ಗಾಂಧೀಜಿಯವರ ರಚನಾತ್ಮಕ ಕಾರ್ಯಗಳ ಪರಿಕಲ್ಪನೆಯಲ್ಲಿ ಕಸ್ತೂರ ಬಾ ಗ್ರಾಮ ಸೇವಾ ಯೋಜನೆಯ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಮುಂದಾದರು.

ಮೈಸೂರು ಸಂಸ್ಥಾನದ **'ಕಸ್ತೂರ್ ಬಾ ಗಾಂಧೀ ರಾಷ್ಟ್ರೀಯ ಸ್ಮಾರಕ ಟ್ರಸ್ಟ್'ನ** ಮುಖ್ಯ ಕೇಂದ್ರವು ಅರಸೀಕೆರೆ ಬಳಿಯ ಕಸ್ತೂರು ಬಾ ಗ್ರಾಮವಾಗಿತ್ತು. ಯಶೋಧರಾ ಅವರು ಇದರ ಪ್ರತಿನಿಧಿಯಾಗಿದ್ದುದೇ ಅಲ್ಲದೆ ಮೈಸೂರು ಸಂಸ್ಥಾನದಲ್ಲಿ **'ಗಾಂಧೀ ಸ್ಮಾರಕ'** ನಿಧಿಯ ಧರ್ಮದರ್ಶಿಯೂ ಕೂಡ ಆಗಿದ್ದರು. ಕಸ್ತೂರ ಬಾ ಗಾಂಧೀ ಟ್ರಸ್ಟ್‌ನ ಸೇವಾ ಕಾರ್ಯವನ್ನು ಸಂಘಟಿಸಲು ಕಾರ್ಯೋನ್ಮುಖರಾದ ಯಶೋಧರಾ ಅವರು ರಾಜ್ಯಾದ್ಯಂತ ಸುತ್ತಾಡಿ ಗ್ರಾಮೀಣ ಪ್ರದೇಶದಲ್ಲೇ ವಾಸವಾಗಿದ್ದು ಸೇವಾ ಮನೋಭಾವ ಇರುವ ಯುವತಿಯರನ್ನು ಆರಿಸಿ ಗ್ರಾಮಸೇವೆಯಲ್ಲಿ ಶಿಕ್ಷಣ ನೀಡುವ ವ್ಯವಸ್ಥೆಗೆ ಮುಂದಾದರು. ಆ ಮೂಲಕ ಮಹಿಳಾ ಸಮಾಜಗಳ ಸ್ಥಾಪನೆ, ಕರಕೌಶಲ್ಯಗಳ ವರ್ಧನೆ, ಖಾದಿ ಗ್ರಾಮೋದ್ಯೋಗ, ಹೊಲಿಗೆ ಮುಂತಾದ ಕ್ಷೇತ್ರಗಳಲ್ಲಿ ತರಬೇತಿ ನೀಡುವುದು, ವೈಜ್ಞಾನಿಕ ಹಾಗೂ ಆರೋಗ್ಯಕರ ರೀತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಸೂತಿ ಕೇಂದ್ರಗಳನ್ನು ಸ್ಥಾಪಿಸಿ ನುರಿತ ಸೂಲಗಿತ್ತಿಯರನ್ನು ನೇಮಿಸುವುದು. ಚಿಕ್ಕಮಕ್ಕಳಿಗೆ ಶಿಶುವಿಹಾರ ಅಥವಾ ಬಾಲವಾಡಿ ನಡೆಸುವುದು ಇತ್ಯಾದಿ ಕಾರ್ಯಕ್ರಮಗಳನ್ನೂ ನಿರೂಪಿಸಿ ಪ್ರತಿನಿಧಿಗಳಿಗೆ ಸೂಕ್ತ ತರಭೇತಿ ನೀಡಲು ಮೊದಲು ಮುಂದಾದರು. ಶಿಬಿರವನ್ನು ಮೈಸೂರಿನಲ್ಲಿ ಈಗಿನ ಬಿ.ಎಂ.ಆಸ್ಪತ್ರೆಯಿರುವ ಜಾಗದಲ್ಲಿ (ಆಗ ಅದು ಬೆಂಕಿಪೊಟ್ಟಣದ ಕಾರ್ಖಾನೆಯಾಗಿದ್ದಿತು) ಏರ್ಪಡಿಸಲಾಯಿತು[೧೮]. ಈ ಕಟ್ಟಡವನ್ನು ೧೯೪೨ರ ಚಳುವಳಿಯ ಕಾಲದಲ್ಲಿ ತಾತ್ಕಾಲಿಕ ಸೆರೆಮನೆಯನ್ನಾಗಿ ಪರಿವರ್ತಿಸಲಾಗಿದ್ದಿತು. ಖೈದಿಗಳೆಲ್ಲರೂ ಬಿಡುಗಡೆಯಾದ ಮೇಲೆ ಅದು ಖಾಲಿಯಾಗಿದ್ದಿತು. ಅರಮನೆಗೆ ಸೇರಿದ ಕಟ್ಟಡವಾಗಿದ್ದರಿಂದ ಅಲ್ಲಿ ಕಸ್ತೂರ್ ಬಾ ಟ್ರಸ್ಟ್‌ನ ಕಾರ್ಯಕರ್ತೆಯರ ಶಿಕ್ಷಣಕ್ಕಾಗಿ ಅನುಮತಿ ಪಡೆದು ತರಭೇತಿ ಶಿಬಿರವನ್ನು ಯಶೋಧರಮ್ಮನವರು ನಡೆಸುತ್ತಿದ್ದರು. ಈ ಶಿಬಿರಕ್ಕೆ ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯ ಕಾಲದಲ್ಲಿ ಈಸೂರಿನ ಸ್ವಾತಂತ್ರ್ಯ ಹೋರಾಟದಲ್ಲಿ ಗ್ರಾಮಸ್ಥರು ಪಾಲ್ಗೊಂಡು ಸರ್ಕಾರದ ಶಿಕ್ಷೆಗೆ ಗುರಿಯಾಗಿದ್ದ ಕುಟುಂಬಕ್ಕೆ ಸೇರಿದ ಈಸೂರಿನ ಗೋವಿಂದಮ್ಮ ಹಾಗೂ ಈಶ್ವರಮ್ಮ ಎಂಬ ಮಹಿಳೆಯರೂ ಪಾಲ್ಗೊಂಡಿದ್ದರು. ಈ ವಿಚಾರ ತಿಳಿದ ಅರಮನೆ ಅಧಿಕಾರಿಗಳು ಕೂಡಲೇ ಅವರುಗಳನ್ನು ಶಿಬಿರದಿಂದ ಉಚ್ಚಾಟನೆ ಮಾಡಬೇಕೆಂದೂ ಇಲ್ಲವೆ ೨೪ ಗಂಟೆಯೊಳಗೆ ಶಿಬಿರದ ಆ ಜಾಗವನ್ನು ಬಿಟ್ಟು ಹೊರ ಹೋಗಬೇಕೆಂದೂ ಯಶೋಧರಮ್ಮನವರಿಗೆ ಎಚ್ಚರಿಕೆ ನೀಡಿದರು. ದಿಟ್ಟ ನಾಯಕಿಯಾಗಿದ್ದ ಯಶೋಧರಮ್ಮನವರು ಟ್ರಸ್ಟ್‌ನ ಆಶ್ರಯ ಪಡೆಯಲು ಬಂದಿದ್ದ ಗೋವಿಂದಮ್ಮ ಮತ್ತು ಈಶ್ವರಮ್ಮನವರನ್ನು ಜೊತೆಯಲ್ಲಿ ಕರೆದುಕೊಂಡು ಶಿಬಿರದ ಜಾಗವನ್ನು ಖಾಲಿ ಮಾಡಿ ಕೆಂಗೇರಿಯಲ್ಲಿದ್ದ ಸ್ವಾಮಿ ವಿಶ್ವಾನಂದರ ಗುರುಕುಲಾಶ್ರಮಕ್ಕೆ ವರ್ಗಾಯಿಸಿ ಮಹಿಳೆಯರಿಗೆ ತಾವು ನೀಡಬೇಕೆಂದಿದ್ದ ತರಭೇತಿಗಳನ್ನು ನೀಡಿ ಶಿಬಿರವನ್ನು ಪೂರ್ಣಗೊಳಿಸಿದರು[೧೯].

ಪೋಲಿಸರ ಯಾವುದೇ ಕ್ರಮಗಳಿಗೆ ಹೆದರದೆ ದಿಟ್ಟತನ ತೋರಿದ ಯಶೋಧರಾ ಅವರು ಗಾಂಧೀಜಿಯವರ ರಚನಾತ್ಮಕ ಕಾರ್ಯಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುವ ಮೂಲಕ ಕಸ್ತೂರ್ ಬಾ ಗಾಂಧೀ ಟ್ರಸ್ಟ್‌ನ ಬೆಳವಣಿಗೆಗೆ ಮೂಲ ಕಾರಣರಾದರು. ಅವರು ಈಸೂರಿನಲ್ಲಿ ಕಸ್ತೂರ್ ಬಾ ಗ್ರಾಮ ಸೇವಾ ಕೇಂದ್ರವನ್ನು ಸ್ಥಾಪಿಸಿ ಗೋವಿಂದಮ್ಮನವರನ್ನು ಆ ಕೇಂದ್ರದ ಮುಖ್ಯಸ್ಥರನ್ನಾಗಿ ನೇಮಿಸಿದರು. ಹಾಗೆಯೇ ಅವರ ಸಹೋದರಿ ಈಶ್ವರಮ್ಮನವರನ್ನು ಮಂಡ್ಯದ ಬೂದನೂರಿನ ಕೇಂದ್ರದಲ್ಲಿ ಸೇವೆ ಸಲ್ಲಿಸುವಂತೆ ಮಾಡಿದರು. ಯಶೋಧರಮ್ಮನವರಂತಹ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿಯಿಂದ ಸ್ಫೂರ್ತಿ ಪಡೆದ ಈ ಇಬ್ಬರೂ ಮಹಿಳೆಯರೂ ಸುಧೀರ್ಘಕಾಲ ಈ ಕೇಂದ್ರಗಳ ಬೆಳವಣಿಗೆಗೆ ಸೇವೆ ಸಲ್ಲಿಸಿದರು.

ಈ ರೀತಿಯಲ್ಲಿ ಕಸ್ತೂರ್ ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ಮುಖ್ಯ ಕಾರ್ಯಕರ್ತೆಯಾಗಿ ನೇಮಕಗೊಂಡ ಯಶೋಧರಮ್ಮನವರು ಆ ಹೆಸರಿನಲ್ಲಿ ಪ್ರತಿಗ್ರಾಮಗಳಲ್ಲೂ ಸೇವಾ ಕೇಂದ್ರಗಳನ್ನು ತೆರೆದು ಆ ಕೇಂದ್ರಗಳಲ್ಲಿ **ಬಾಲವಾಡಿ, ಪ್ರಸೂತಿ ಸೇವೆ**, ಮಹಿಳೆಯರ ಶಿಕ್ಷಣ, ಗೃಹಕೈಗಾರಿಕೆಗಳಲ್ಲಿ ತರಭೇತಿ, ಅಂಗವಿಕಲರಿಗೆ ಮತ್ತು ಉದ್ಯೋಗಸ್ತ ಮಹಿಳೆಯರಿಗೆ ವಸತಿ ಗೃಹಗಳನ್ನು ನಡೆಸುವುದು. ಹರಿಜನೋದ್ಧಾರ ಕೆಲಸಗಳು, ಪಾನನಿರೋಧ ಮೊದಲಾದ ರಚನಾತ್ಮಕ ಕೆಲಸಗಳನ್ನು ನಿರ್ವಹಿಸಿದರು[೨೦].

ಇವೆಲ್ಲಕ್ಕೂ ಪೂರಕವಾಗಿ ಕಸ್ತೂರ ಬಾ ಗ್ರಾಮವು, ಗ್ರಾಮ ಸೇವಕಿಯರ ತರಬೇತಿ ಕೇಂದ್ರವಾಗಿ ಬೆಳೆಯಲಾರಂಭಿಸಿತು. ಅಲ್ಲಿ ಕರ್ನಾಟಕದ ವಿವಿಧ ಭಾಗಗಳಿಂದ ಬಂದಿದ್ದ ಸಾವಿರಾರು ಗ್ರಾಮ ಸೇವಕಿಯರು ಹಾಗೂ ಸಮಾಜ

ಸೇವಾಕರ್ತರ ತರಬೇತಿ ಕಾರ್ಯಕ್ರಮ ನಡೆಸಲಾಯಿತು. ಒಂದು ವರ್ಷ ತರಭೇತಿ ಹೊಂದಿದ ಗ್ರಾಮ ಸೇವಕಿಯರನ್ನು ಕಸ್ತೂರ ಬಾ ಗಾಂಧೀ ಸ್ಮಾರಕ ಟ್ರಸ್ಟಿನ ಯೋಜನೆಯಂತೆ ಅತಿ ಹಿಂದುಳಿದ ಗ್ರಾಮಗಳಲ್ಲಿ ಮಹಿಳೆ ಮತ್ತು ಮಕ್ಕಳ ಕಲ್ಯಾಣಕ್ರಮಗಳಿಗಾಗಿ ಸೇವೆ ಮಾಡಲು ನೇಮಿಸಲಾಗುತ್ತಿತ್ತು. ಒಂದೊಂದು ಜಿಲ್ಲೆಯಲ್ಲಿಯೂ ೨–೩ ಕಸ್ತೂರ ಬಾ ಗ್ರಾಮ ಸೇವಾ ಕೇಂದ್ರಗಳನ್ನು ತೆರೆದು ರಚನಾತ್ಮಕ ಕಾರ್ಯಕ್ರಮಗಳ ಪರಿಕಲ್ಪನೆಯನ್ನು ಯಶಸ್ವಿಗೊಳಿಸಿದರು.

ಚಿಕ್ಕಮಗಳೂರು, ಶಿವಮೊಗ್ಗ, ಕೋಲಾರ, ದಾವಣಗೆರೆ, ಮೈಸೂರು ಮೊದಲಾದ ಜಿಲ್ಲೆಗಳಲ್ಲಿ ಇಂತಹ ಕೇಂದ್ರಗಳನ್ನು ತೆರೆದು ಒಂದೊಂದು ಕೇಂದ್ರದಲ್ಲಿಯೂ ಮೂರು ಜನ ಗ್ರಾಮ ಸೇವಕಿಯರಿದ್ದು ಬಾಲವಾಡಿ, ಮಹಿಳೆಯರ ಶಿಕ್ಷಣ, ಗೃಹಕೈಗಾರಿಕೆ, ಪ್ರಸೂತಿ ಸೇವಾ, ಗ್ರಾಮನೈರ್ಮಲ್ಯ, ಪಾನನಿರೋಧ ಇತ್ಯಾದಿಗಳ ಬಗೆಗೆ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಯಶೋಧರಾ ಅವರು ಮಾಡಿದರು.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿ ಹೊಸಹಳ್ಳಿ ಗ್ರಾಮವಿದೆ. ಅಲ್ಲಿ ಒಂದು ಕಸ್ತೂರ ಬಾ ಸೇವಾ ಕೇಂದ್ರವನ್ನು ಸ್ಥಾಪಿಸಲಾಯಿತು[೨೧]. ಪಾರ್ವತಮ್ಮ ಹುಚ್ಚೇಗೌಡ ಎಂಬ ಮಹಿಳೆ ಈ ಕೇಂದ್ರದ ಗೌರವ ಸಂಚಾಲಕಿಯಾಗಿದ್ದರು. ಅವರು ಈ ಕೇಂದ್ರದ ಸಂಪೂರ್ಣ ಮೇಲ್ವಿಚಾರಣೆಯ ಜವಾಬ್ದಾರಿ ವಹಿಸಿಕೊಂಡಿದ್ದರು. ಇಲ್ಲಿ ಇಬ್ಬರು ಗ್ರಾಮ ಸೇವಕಿಯರು, ಒಬ್ಬ ಪ್ರಸೂತಿ ಶಿಕ್ಷಣ ಪಡೆದ ಕಾರ್ಯಕರ್ತೆ ಯಿರುತ್ತಿದ್ದರು. ಮಲೆನಾಡಿನ ಮೂಲೆ ಗುಂಪಾದ ಈ ಪ್ರದೇಶದಲ್ಲಿ ಪ್ರಸೂತಿ ಸೇವಾ ಕಾರ್ಯ ಮೊಟ್ಟ ಮೊದಲಿಗೆ ಇಲ್ಲಿಂದಲೇ ಆರಂಭವಾಯಿತು. ಕೇಂದ್ರದ ಮಿಡ್‌ವೈಫ್ ಸಮೀಪದ ಹಳ್ಳಿ ಹಳ್ಳಿಗಳಿಗೆ ಹೋಗಿ ಮನೆಮನೆಯಲ್ಲೂ ಗರ್ಭಿಣಿಯರ ಪರೀಕ್ಷೆ ಮಾಡಿ ಸಲಹೆಗಳನ್ನು ನೀಡುತ್ತಿದ್ದರು. ಕರೆ ಬಂದಾಗ ಅವರ ಮನೆಗಳಿಗೆ ಹೋಗಿ ಹೆರಿಗೆ ಮಾಡಿ ಬರುತ್ತಿದ್ದರು. ಕೆಲವು ಗರ್ಭಿಣಿಯರು ಕೇಂದ್ರಕ್ಕೂ ಬಂದು ಹೆರಿಗೆ ಆದ ಮೇಲೆ ಹತ್ತಾರು ದಿನಗಳಿದ್ದು ವಾಪಸ್ಸು ಹೋಗುತ್ತಿದ್ದರು. ಅವರಿಗೆಲ್ಲ ಊಟ ಔಷಧೋಪಚಾರ ಉಚಿತವಾಗಿ ನಡೆಯುತ್ತಿತ್ತು.

ಶಿವಮೊಗ್ಗ ಜಿಲ್ಲೆಯಲ್ಲಿ ತೀರ್ಥಹಳ್ಳಿಯ ಬಳಿ ಬಸವಾನಿಯಲ್ಲಿ ಒಂದು ಕೇಂದ್ರವಿತ್ತು[೨೨]. ಬಸವಾನಿಯಲ್ಲಿ ಸಾವಿತ್ರಮ್ಮ ರಾಮ ಶರ್ಮ ಕಸ್ತೂರ ಬಾ ಸೇವಾ ಕೇಂದ್ರದ ಸಂಚಾಲಕಿಯಾಗಿದ್ದರು. ತುಂಗಾ ನದಿಯ ದಡದಲ್ಲಿರುವ ಈ ಹಳ್ಳಿಯಲ್ಲಿನ ಕೇಂದ್ರವು ಅ ಸುತ್ತಮುತ್ತಲ ಗ್ರಾಮಗಳ ಮಹಿಳೆಯರಿಗೆ ತುಂಬಾ ನೆರವು ನೀಡುತ್ತಿದ್ದಿತು. ಇಲ್ಲಿಯೂ ಪ್ರಸೂತಿ ಸೇವೆಯ ವ್ಯವಸ್ಥೆಯಿದ್ದು ತರಬೇತಿ ಪಡೆದ ಮಿಡ್‌ವೈಫ್ ಹಾಗೂ ಒಬ್ಬ ಗ್ರಾಮ ಸೇವಕಿಯಿರುತ್ತಿದ್ದರು. ಹೆರಿಗೆಗೆ ಬರುತ್ತಿದ್ದ ಹೆಂಗಸರ ಊಟಕ್ಕಾಗಿ ಗ್ರಾಮಸ್ಥರೇ ದವಸ ಧಾನ್ಯಗಳನ್ನು ವಂತಿಕೆಯ ರೂಪದಲ್ಲಿ ನೀಡುತ್ತಿದ್ದರು.

ಕೋಲಾರ ಜಿಲ್ಲೆಯ ಗಂಗಸಂದ್ರ ಗ್ರಾಮದಲ್ಲಿ ಒಂದು ಕೇಂದ್ರವಿತ್ತು[೨೩]. ಅಂತೆಯೇ ಚಿತ್ರದುರ್ಗ ಜಿಲ್ಲೆಯಲ್ಲಿ ಮೂರು ಕೇಂದ್ರಗಳಿದ್ದವು. ಹಿರಿಯೂರು ತಾಲ್ಲೂಕಿನ ಗನ್ನಾಯಕನ ಹಳ್ಳಿಯ ಸೇವಾ ಕೇಂದ್ರ ಪ್ರಸೂತಿ ಸೇವೆಗೆ ಹೆಸರಾಗಿದ್ದಿತು. ೧೯೪೪–೪೫ರಲ್ಲಿ ಕ್ಷಾಮ ಬಂದಿದ್ದಾಗ ಬಡ ಗರ್ಭಿಣಿಯರ ಮತ್ತು ಮಕ್ಕಳ ಪೋಷಣೆಗೆಂದು 'ಮಾತೃರಕ್ಷಾ ಮಂದಿರ' ಎಂಬ ಸಂಸ್ಥೆಯನ್ನು ಸ್ಥಾಪಿಸಲಾಗಿದ್ದಿತು. ಕ್ಷಾಮಗಾಲದಲ್ಲಿ ಅಲ್ಲಿ ಅನೇಕ ಬಡ ಗರ್ಭಿಣಿಯರಿಗೆ ರಕ್ಷಣೆ ನೀಡಿ ಉಚಿತ ಊಟ, ತಿಂಡಿ ವ್ಯವಸ್ಥೆ ಮಾಡಲಾಗಿತ್ತು. ಕ್ಷಾಮಗಾಲ ಮುಗಿದರೂ ಕಸ್ತೂರ ಬಾ ಗಾಂಧೀ ಸ್ಮಾರಕ ಟ್ರಸ್ಟಿನ ವತಿಯಿಂದ ಇನ್ನೂ ದೊಡ್ಡ ಪ್ರಮಾಣದಲ್ಲಿ ಇದೇ ಕೆಲಸವನ್ನು ಮುಂದುವರಿಸಲಾಯಿತು. ಈ ಮಾತೃ ಮಂದಿರಕ್ಕೆ ಪ್ರತಿ ವರ್ಷ ಸುಗ್ಗಿಯಲ್ಲಿ ಅಕ್ಕಪಕ್ಕದ ಹಳ್ಳಿಗಳಿಂದಲೂ ಜೋಳ ಮತ್ತಿತರ ದವಸ ಧಾನ್ಯಗಳನ್ನು ದಾನವಾಗಿ ನೀಡುತ್ತಿದ್ದರು.

ದಾವಣಗೆರೆ ತಾಲ್ಲೂಕಿನಲ್ಲಿ ಕೊಡಗನೂರಿನಲ್ಲಿ ಸೇವಾ ಕೇಂದ್ರವಿದ್ದಿತು[೨೪]. ಇಲ್ಲಿಯ ಸಂಚಾಲಕಿ ಅಚ್ಚಮ್ಮ ಸ್ವಾತಂತ್ರ್ಯ ಹೋರಾಟಗಾರ್ತಿ. ಅವರು ಗ್ರಾಮದ ಜನರಿಂದ ಚಂದಾ ವಸೂಲಿ ಮಾಡಿ ಕಸ್ತೂರ ಬಾ ಕೇಂದ್ರಕ್ಕೆ ಒಂದು ಸ್ವಂತ ಕಟ್ಟಡವನ್ನು ನಿರ್ಮಿಸಿದರು. ಜೊತೆಗೆ ಗ್ರಾಮದ ಯುವ ಶಕ್ತಿಯನ್ನು ಸಂಘಟಿಸಿದ್ದರು. ನರಗನ ಹಳ್ಳಿ ಮತ್ತೊಂದು ಕೇಂದ್ರವಾಗಿತ್ತು. ಅಲ್ಲಿಯ ಗ್ರಾಮದ ಮುಖಂಡರು ಈ ಕೇಂದ್ರದ ಬೆಳವಣಿಗೆಗೆ ಅಪಾರ ಮುತವರ್ಜಿ ವಹಿಸಿದ್ದರು. ರಧಾಬಾಯಿ ಸಂಚಾಲಕಿಯಾಗಿದ್ದರು. ಖ್ಯಾತ ಸಮಾಜ ಸೇವಕಿ ಶ್ರೀಮತಿ ಎಂ.ಆರ್. ಲಕ್ಷ್ಮಮ್ಮ ನಗರನಹಳ್ಳಿಯವರೆ ಆಗಿದ್ದರು. ಅವರು ಕೇಂದ್ರಕ್ಕಾಗಿ ಒಂದು ಮನೆಯನ್ನು ಕಟ್ಟಿಸಿಕೊಟ್ಟರು. ಇವಲ್ಲದೆ ತಿರುಪತಿ ಹಳ್ಳಿ, ಲಲಿತಾದ್ರಿಪುರ ಮುಂತಾದ ಕಡೆಗಳಲ್ಲೂ ಯಶಸ್ವಿಯಾಗಿ ಕಸ್ತೂರ ಬಾ ಕೇಂದ್ರಗಳು ಕಾರ್ಯನಿರ್ವಹಿಸಿದವು.

ಅರಸೀಕೆರೆ ಬಳಿಯಿರುವ ಕಸ್ತೂರ್ ಬಾ ಗ್ರಾಮ ಎಲ್ಲರ ಮಾತೃ ಕೇಂದ್ರವಾಗಿದ್ದಿತು[೨೫]. ಕಸ್ತೂರ್ ಬಾ ಸೇವಾ ಕೇಂದ್ರಕ್ಕೆ ನಿಯುಕ್ತರಾದ ಸ್ವಾತಂತ್ರ್ಯ ಹೋರಾಟಗಾರ ಪ್ರಾಣೇಶರಾಯರು ಅರಸೀಕೆರೆ ಕಸ್ತೂರ ಬಾ ಗ್ರಾಮದಲ್ಲಿ ಒಂದು ಪುಟ್ಟ ಹೆಂಚಿನ ಕೊಠಡಿಯಲ್ಲಿರುತ್ತಿದ್ದರು. ಆಗಿನ್ನೂ ವಿದ್ಯುಚ್ಛಕ್ತಿ ಸೌಕರ್ಯವಿರಲಿಲ್ಲ. ಪ್ರಾಣೇಶರಾಯರ ಕೆಲಸ ಕಸ್ತೂರ್ ಬಾ ಟ್ರಸ್ಟ್ ಹಾಗೂ ಗಾಂಧೀ ಸ್ಮಾರಕ ನಿಧಿಯ ಕಛೇರಿ ನೋಡಿಕೊಳ್ಳುವುದು. ಕಸ್ತೂರ ಬಾ ಗ್ರಾಮದ ಅಭಿವೃದ್ಧಿ ಹಾಗೂ ಗ್ರಾಮಾಂತರ

ಪ್ರದೇಶಗಳಲ್ಲಿ ಗ್ರಾಮ ಸೇವಾ ಕೇಂದ್ರಗಳನ್ನು ನೋಡಿಕೊಂಡು ಬರುವುದು ಅವರ ಜವಾಬ್ಧಾರಿಯಾಗಿತ್ತು.

ಈ ರೀತಿಯಲ್ಲಿ ಯಶೋಧರಮ್ಮನವರು ಕಸ್ತೂರ್ ಬಾ ಗಾಂಧೀ ಸ್ಮಾರಕ ಟ್ರಸ್ಟ್ ಹಾಗೂ ಗಾಂಧೀ ಸ್ಮಾರಕ ನಿಧಿ ಎರಡೂ ಸಂಸ್ಥೆಗಳ ಕೆಲಸ ಕಾರ್ಯಗಳ ಮೇಲ್ವಿಚಾರಣೆಯನ್ನು ಮಾಡುತ್ತಿದ್ದರು. ೧೯೫೪ರ ಹೊತ್ತಿಗೆ ಮೈಸೂರು ಸಂಸ್ಥಾನ ಶಾಖೆಯ ಗಾಂಧೀ ಸ್ಮಾರಕ ನಿಧಿಯ ಸಂಚಾಲಕರಾಗಿ ಸಿದ್ದವನ ಹಳ್ಳಿ ಕೃಷ್ಣಶರ್ಮ ನಿಯುಕ್ತರಾದರು. ಕಸ್ತೂರ ಬಾ ಗಾಂಧಿ ಸ್ಮಾರಕ ಟ್ರಸ್ಟ್‌ನ ಶಾಖೆಯ ಕಾರ್ಯದರ್ಶಿಯಾಗಿ ಪ್ರಾಣೇಶ ರಾಯರು ನೇಮಕಗೊಂಡು ಅದರ ಅಭಿವೃದ್ಧಿಗಾಗಿ ಅವರೂ ದುಡಿದರು.

ಕಸ್ತೂರ್ ಬಾ ಗ್ರಾಮದಲ್ಲಿ ಗ್ರಾಮ ಸೇವಕಿಯರ ತರಬೇತಿ ವಿದ್ಯಾಲಯದ ಜೊತೆಗೆ ಕಸ್ತೂರ ಬಾ ಕನ್ಯಾ ವಿದ್ಯಾಲಯವನ್ನೂ ಕಾಲಾಂತರದಲ್ಲಿ ಸ್ಥಾಪಿಸಲಾಯಿತು. ಕಸ್ತೂರ ಬಾ ಕನ್ಯಾ ವಿದ್ಯಾಲಯವು ವಸತಿ ವಿದ್ಯಾಕೇಂದ್ರವಾಗಿತ್ತು. ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿದ್ದ ಗ್ರಾಮ ಸೇವಕಿಯರ ಮಕ್ಕಳಿಗೆ ಸುಲಭವಾಗಿ ಶಿಕ್ಷಣ ದೊರೆಯುವಂತೆ ಮಾಡುವ ಮೊದಲ ಶಿಕ್ಷಣ ಸಂಸ್ಥೆಯಾಗಿತ್ತು. ಇಲ್ಲಿ ಸಾಮಾನ್ಯ ಶಿಕ್ಷಣದ ಜೊತೆಗೆ ನೃತ್ಯ, ಸಂಗೀತ ಶಿಕ್ಷಣವನ್ನು ಕೊಡಲಾಗುತ್ತಿತ್ತು.

ಈ ಟ್ರಸ್ಟಿನ ಅಭಿವೃದ್ಧಿಗಾಗಿ ಮತ್ತು ಟ್ರಸ್ಟಿನಲ್ಲಿ ಕೆಲಸ ನಿರ್ವಹಿಸುವವರ ಕಲ್ಯಾಣಕ್ಕಾಗಿ ಯಶೋಧರಮ್ಮನವರು ಅನೇಕ ಆರ್ಥಿಕ ಮತ್ತು ರಾಜಕೀಯ ಸಂಕಷ್ಟಗಳನ್ನು ಎದುರಿಸಬೇಕಾಯಿತು. ಅದಕ್ಕಾಗಿ ತಮ್ಮ ವಡವೆ ವಸ್ತ್ರಗಳನ್ನು ಅಡವಿಟ್ಟು ಟ್ರಸ್ಟಿನ ಕಾಯಕಕ್ಕೆ ವಿನಿಯೋಗಿಸುತ್ತಿದ್ದರು[೨೬].

೧೯೫೦ರಲ್ಲಿ ಮೈಸೂರು ಸಂಸ್ಥಾನ ಕಾಂಗ್ರೆಸ್‌ನ ಅಧ್ಯಕ್ಷರ ಚುನಾವಣೆಯಲ್ಲಿ ಸ್ಪರ್ಧಿಸಿ ದಿಗ್ವಿಜಯ ಪಡೆದ ಯಶೋಧರಾ ಅವರು ಕಾಂಗ್ರೆಸ್‌ನ ಅಧ್ಯಕ್ಷ ಪದವಿಯನ್ನು ವಹಿಸಿಕೊಂಡು ಸಾಂಸ್ಥಿಕ ಚಟುವಟಿಕೆಗಳನ್ನು ತೀವ್ರಗೊಳಿಸುವತ್ತ ಗಮನ ನೀಡಿದರು. ಖ್ಯಾತ ಗಾಂಧೀವಾದಿ ಹಾಗೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ವಿ.ಎಸ್. ನಾರಾಯಣರಾವ್ ಅವರನ್ನು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಿಕೊಂಡರು. ಕಾಂಗ್ರೆಸ್ ಮಂತ್ರಿ ಮಂಡಲದ ಕಾರ್ಯನೀತಿಯ ಬಗ್ಗೆ ವಿಶೇಷ ಆಸ್ತೆ ವಹಿಸಿ ಸಚಿವ ಸಂಪುಟವು ಕಾಂಗ್ರೆಸ್‌ನ ಧ್ಯೇಯ ಧೋರಣೆಗಳಿಗೆ ಬದ್ಧವಾಗಿ ಇರುವಂತೆ ನೋಡಿಕೊಂಡರು.

ಅದುವರೆಗೆ ಮೈಸೂರು ಸಂಸ್ಥಾನ ಕಾಂಗ್ರೆಸ್ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಾಂತೀಯ ಶಾಖೆಯಾಗಿರದೆ ಸ್ವತಂತ್ರ ಘಟಕವೇ ಆಗಿದ್ದಿತು. ಯಶೋಧರಾ ದಾಸಪ್ಪನವರು ಅಧ್ಯಕ್ಷರಾದ ಮೇಲೆ ಮೈಸೂರು ಕಾಂಗ್ರೆಸ್ ಅನ್ನು ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅವಿಭಾಜ್ಯ ಅಂಗವನ್ನಾಗಿ ಮಾಡುವತ್ತ ಕಾರ್ಯಶೀಲರಾದರು. ಅವರ ಪ್ರಯತ್ನ ಯಶಸ್ವಿಯಾಯಿತು. ಮೈಸೂರು ಸಂಸ್ಥಾನ ಕಾಂಗ್ರೆಸ್‌ಗೆ ಪ್ರದೇಶ ಕಾಂಗ್ರೆಸ್ ಸಮಿತಿಯ ಸ್ಥಾನಮಾನವನ್ನು ಎ.ಪಿ.ಸಿ.ಸಿ. ನೀಡಿ ಅದನ್ನು ರಾಷ್ಟ್ರೀಯ ಕಾಂಗ್ರೆಸ್‌ನ ಪ್ರದೇಶ ಘಟಕವನ್ನಾಗಿ ಪರಿಗಣಿಸಿತು. ಇದರಿಂದ ರಾಜ್ಯದ ರಾಜಕೀಯ ಇತಿಹಾಸದಲ್ಲಿ ಹೊಸ ಅಧ್ಯಾಯ ಆರಂಭವಾಯಿತು. ಸಂಸ್ಥಾನದ ರಾಜಕಾರಣ ರಾಷ್ಟ್ರದ ಮುಖ್ಯ ಶ್ರೇಣಿಯಲ್ಲಿ ಮಿಳಿತವಾಗಿ ಮೈಸೂರು ಪ್ರದೇಶ ಕಾಂಗ್ರೆಸ್‌ನ ಪ್ರಮುಖರು ಎ.ಐ.ಸಿ.ಸಿ.ಯಲ್ಲಿ ತಮ್ಮ ದನಿಯನ್ನು ಅಭಿವ್ಯಕ್ತಗೊಳಿಸಲು ಅವಕಾಶವಾಯಿತು.

ಮೈಸೂರು ಪ್ರದೇಶ ಕಾಂಗ್ರೆಸ್‌ಗೆ ಒಂದು ಸ್ವಂತ ಕಟ್ಟಡ ಇಲ್ಲದೆ ದೊಡ್ಡ ಕೊರತೆ ಉಂಟಾಗಿದ್ದಿತು. ಇದನ್ನು ನಿವಾರಿಸಲು ಯಶೋಧರಾ ಕ್ರಮ ಕೈಗೊಂಡರು. ಬೆಂಗಳೂರು ನಗರದ ಮಧ್ಯ ಭಾಗದಲ್ಲಿ ದೊಡ್ಡ ನಿವೇಶನವನ್ನು ಕಾಂಗ್ರೆಸ್‌ಗೆ ಪಡೆದುಕೊಂಡು ಅತಿ ಶೀಘ್ರದಲ್ಲೇ ಕಟ್ಟಡ ನಿರ್ಮಾಣದ ಕಾರ್ಯ ಮುಗಿಯುವಂತೆ ಮಾಡಿದರು. ಪ್ರದೇಶ ಕಾಂಗ್ರೆಸ್‌ನ ಮುಖ್ಯ ಕಛೇರಿ, ಮಹಿಳಾ ಮತ್ತು ಯುವಕ ವಿಭಾಗಗಳ ಕೇಂದ್ರಗಳು ಈ ಕಟ್ಟಡ ಸಮುಚ್ಛಯದಲ್ಲಿ ಕಾರ್ಯ ನಿರ್ವಹಿಸಲು ಸಾಧ್ಯವಾಯಿತು.

ಈ ರೀತಿಯಲ್ಲಿ ಯಶೋಧರಾ ದಾಸಪ್ಪನವರ ಕಾರ್ಯ ದಕ್ಷತೆ ಹಾಗೂ ಸಾರ್ವಜನಿಕ ಮತ್ತು ಸಮಾಜಸೇವಾ ಕ್ಷೇತ್ರಗಳಲ್ಲಿ ಅವರ ಸಾಧನೆಯನ್ನು ಮನಗಂಡು ಬೆಂಗಳೂರು ನಗರ ಪಾಲಿಕೆಯು ಅವಿಸ್ಮರಣೀಯ ಸಮಾರಂಭ ನಡೆಸಿ ಪೌರಮಾನ ಪತ್ರ ನೀಡಿ ಅವರನ್ನು ಗೌರವಿಸಿತು.

ಈ ಮಧ್ಯೆ ೧೯೬೨ರಲ್ಲಿ ಮೈಸೂರು ಸಂಸ್ಥಾನದಲ್ಲಿ ಮಹಾ ಚುನಾವಣೆ ಬಂದಿತು. ಈ ಚುನಾವಣೆಯಲ್ಲಿ ಸ್ಪರ್ಧಿಸಿದ ಯಶೋಧರಮ್ಮ ಜಯಭೇರಿ ಬಾರಿಸಿದರು. ಚುನಾವಣೆಯ ನಂತರ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಕ್ಯಾಬಿನೆಟ್ ದರ್ಜೆಯ ಸಚಿವೆ ಪದವಿಯನ್ನೂ ಅಲಂಕರಿಸಿದ ಏಕೈಕ ಮಹಿಳೆ ಅಂದರೆ ಶ್ರೀಮತಿ ಯಶೋಧರಾ ದಾಸಪ್ಪ ನವರು. ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯಾಗಿ–ಅವರು ಈಗಾಗಲೇ ರೂಪಿಸಿದ್ದ ಸಮಾಜ ಮುಖೀ ಕಾರ್ಯ ಗಳಿಗೆ ಹೆಚ್ಚು ಚಾಲನೆ ನೀಡಿದರು.

ಸಮಾಜ ಕಲ್ಯಾಣ ಸಚಿವರಾಗಿ ಯಶೋಧರಾ ದಾಸಪ್ಪನವರು ದಲಿತರ ಸರ್ವಾಂಗೀಣ ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಸಾಧನೆಗೂ ಹೊಸ ಹೊಸ ಕಾರ್ಯಕ್ರಮ ಗಳನ್ನು ರೂಪಿಸಿ ಅವುಗಳನ್ನು ತೀವ್ರಗತಿಯಲ್ಲಿ ಕಾರ್ಯಗತ

ಮಾಡುವ ಬಗ್ಗೆ ಗಮನ ನೀಡಿದರು. ದಲಿತ ಮಕ್ಕಳಿಗೇ ಪ್ರತ್ಯೇಕವಾದ ವಿದ್ಯಾರ್ಥಿ ನಿಲಯಗಳನ್ನು ಸರ್ಕಾರದ ವತಿಯಿಂದ ನಡೆಸಲಾಗುತ್ತಿತ್ತು. ಈ ವಿದ್ಯಾರ್ಥಿ ನಿಲಯಗಳಿಗೆ ನಿರ್ದಿಷ್ಟ ಪ್ರಮಾಣದಲ್ಲಿ ಇತರ ಹಿಂದುಳಿದ ವರ್ಗಗಳ ಹಾಗೂ ಜಾತಿಗಳ ಮಕ್ಕಳನ್ನು ಸೇರಿಸುವ ನೀತಿಯನ್ನು ರೂಪಿಸಿ ಎಲ್ಲ ಮಕ್ಕಳ ಸಂಯೋಜಿತ ಪ್ರಗತಿಗೆ ಅನುವಾಗುವಂತೆ ಯಶೋಧರಾ ದಾಸಪ್ಪನವರು ಪ್ರಯತ್ನ ಪಟ್ಟು ಯಶಸ್ಸು ಪಡೆದರು. ಈ ಮಾದರಿಯ ಸಾರ್ವಜನಿಕ ವಿದ್ಯಾರ್ಥಿ ನಿಲಯಗಳು ಇತರ ರಾಜ್ಯಗಳ ಅಧಿಕಾರಸ್ಥರ ಗಮನವನ್ನು ಸೆಳೆದುವು. ಕೆಲವು ನೆರೆ ರಾಜ್ಯಗಳು ಇದೇ ಮಾದರಿಯನ್ನು ಅನುಸರಿಸಿದುವು. ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ತಮಗಿದ್ದ ಅಪಾರ ಅನುಭವವನ್ನು ಬಳಸಿ ಮಹಿಳಾ ಸಮಾಜಗಳನ್ನೂ ಶಿಶುವಿಹಾರ ಮತ್ತು ಬಾಲವಾಡಿಗಳನ್ನೂ ವ್ಯಾಪಕವಾಗಿ ವಿಸ್ತರಿಸಿ ಅವುಗಳು ಚೈತನ್ಯಯುತವಾಗಿ ನಡೆಯುವಂತೆ ನೋಡಿಕೊಂಡರು. ಗ್ರಾಮೀಣ ಪ್ರದೇಶಗಳಲ್ಲಿ ಮಹಿಳಾಭಿವೃದ್ಧಿ ಕಾರ್ಯಗಳಿಗೆ ವಿಶೇಷ ಒತ್ತನ್ನು ನೀಡಲಾಗುತ್ತಿತ್ತು.

೧೯೬೪ರ ಆಕ್ಟೋಬರ್ ೨೪ರಂದು ಆಫ್ರಿಕಾ ಖಂಡದ ಜಾಂಬಿಯಾ ದೇಶ ಸ್ವಾತಂತ್ರ್ಯ ಪಡೆದ ಐತಿಹಾಸಿಕ ಸಮಾರಂಭದಲ್ಲಿ ಭಾರತದ ಹಿರಿಯ ನಾಯಕರು ಭಾಗವಹಿಸ ಬೇಕೆಂದು ಅಮಂತ್ರಣ ಬಂದಿತ್ತು. ಲಾಲ್ ಬಹುದೂರ್‌ಶಾಸ್ತ್ರಿ ಆಗ ಭಾರತದ ಪ್ರಧಾನ ಮಂತ್ರಿಗಳಾಗಿದ್ದರು. ಜಾಂಬಿಯಾ ದೇಶದ ಸ್ವಾತಂತ್ರ್ಯ ಹೋರಾಟದ ನಾಯಕರು ಮಹಾತ್ಮ ಗಾಂಧೀಯವರ ವಿಚಾರ ಮತ್ತು ಹೋರಾಟದ ಪ್ರಕ್ರಿಯೆಯಿಂದ ಸ್ಫೂರ್ತಿ ಪಡೆದು ಪರಕೀಯ ದಾಸ್ಯದಿಂದ ವಿಮೊಚನೆ ಪಡೆಯಲು ದಿಟ್ಟತನದಿಂದ ಹೋರಾಡಿ ಯಶಸ್ವಿಯಾಗಿದ್ದರು. ಜಾಂಬಿಯ ದೇಶದ ಸ್ವಾತಂತ್ರೋತ್ಸವದಲ್ಲಿ ಭಾರತದ ಹಿರಿಯ ಗಾಂಧೀವಾದಿ ನೇತಾರರು ಭಾಗವಹಿಸಬೇಕೆಂದು ಜಾಂಬಿಯಾ ನಾಯಕರ ಇಂಗಿತವಾಗಿದ್ದಿತು. ಭಾರತ ಮತ್ತು ಆಫ್ರಿಕಾ ಖಂಡದ ದೇಶಗಳೊಡನೆ ಉನ್ನತ ಮಟ್ಟದಲ್ಲಿ ಸ್ನೇಹ ಹಾಗೂ ಸೌಹಾರ್ದವನ್ನು ಬೆಳೆಸುವ ದೃಷ್ಟಿಯಿಂದ ಪ್ರಭಾವಯುತವಾದ ಭಾರತೀಯ ನಿಯೋಗವನ್ನು ಜಾಂಬಿಯಾಗೆ ಕಳುಹಿಸುವ ನಿರ್ಧಾರವಾಯಿತು. ತಮ್ಮ ಮಂತ್ರಿಮಂಡಲದ ಹಿರಿಯ ಸದಸ್ಯರೂ ನಿಷ್ಠಾವಂತ ಗಾಂಧೀವಾದಿಯೂ ಆಗಿದ್ದ ಶ್ರೀ ಎಚ್.ಸಿ. ದಾಸಪ್ಪನವರ ನಾಯಕತ್ವದಲ್ಲಿ ಭಾರತೀಯ ನಿಯೋಗವನ್ನು ಕಳುಹಿಸಿಕೊಡಬೇಕೆಂದು ಲಾಲ್ ಬಹಾದೂರ್‌ಶಾಸ್ತ್ರಿಯವರು ತೀರ್ಮಾನಿಸಿದರು. ಭಾರತೀಯ ನಿಯೋಗದಲ್ಲಿ ಯಶೋಧರಾ ದಾಸಪ್ಪನವರೂ ಸದಸ್ಯರಾಗಿರ ತಕ್ಕದ್ದೆಂದು ಪ್ರಧಾನಿಯವರು ನಿರ್ಧರಿಸಿದರು. ಈ ಆಯ್ಕೆಯಿಂದ ದಾಸಪ್ಪ ದಂಪತಿಗಳಿಬ್ಬರೂ ತುಂಬಾ ಸಂತೋಷವಾಯಿತು. ಜಾಂಬಿಯಾಕ್ಕೆ ಹೋಗುವುದಕ್ಕೆ ಮುನ್ನ ದಾಸಪ್ಪನವರು ಮೈಸೂರಿಗೆ ಬಂದಿದ್ದರು. ದಸರಾ ಉತ್ಸವಗಳಲ್ಲಿ ಭಾಗವಹಿಸಿ ವಿಜಯ ದಶಮಿ ದಿನ ಆಕ್ಟೋಬರ್ ೧೬ರಂದು ಪತ್ನಿ ಸಮೇತ ದೆಹಲಿಗೆ ಹೊರಟು ಅಲ್ಲಿಂದ ಭಾರತ ನಿಯೋಗದ ಇತರ ಸದಸ್ಯರೊಡಗೂಡಿ ಜಾಂಬಿಯಾಗೆ ಭೇಟಿ ನೀಡಿದರು.

ಯಶೋಧರಾ ದಾಸಪ್ಪನವರು ಉಗಾಂಡ ಮತ್ತು ಕೆನ್ಯಾ ದೇಶಗಳಲ್ಲಿ ಅನೇಕ ಮಹಿಳಾ ಸಂಘ ಸಂಸ್ಥೆಗಳ ಕಾರ್ಯಕ್ರಮಗಳನ್ನು ವೀಕ್ಷಿಸಿದರು. ಮಹಿಳಾ ಸಮುದಾಯ ಗಳನ್ನು ಉದ್ದೇಶಿಸಿ ಮಾತನಾಡುತ್ತಾ "ಜಗತ್ತಿನ ವಿವಿಧ ದೇಶಗಳನ್ನೂ ಜನಸಮೂಹಗಳನ್ನೂ ಒಟ್ಟಿಗೆ ತಂದು ಶಾಂತಿ ಮತ್ತು ಸೌಹಾರ್ದವನ್ನು ಮೂಡಿಸುವ ಕೆಲಸದಲ್ಲಿ ಪುರುಷರಿಗಿಂತ ಮಹಿಳೆಯರಿಗೇ ಹೆಚ್ಚು ಸಾಮರ್ಥ್ಯವಿರುತ್ತದೆ' ಎಂದು ಹೇಳಿ ಎಲ್ಲ ದೇಶಗಳಲ್ಲೂ ಸ್ತ್ರೀ ಶಕ್ತಿಯ ಸಂವರ್ಧನೆ ಯಾಗಿ ಮಹಿಳೆಯರು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಪಾಲುದಾರರಾಗಿ ತಮ್ಮ ಸ್ಥಾನಮಾನ ಗಳನ್ನೂ ಸಮಾಜದ ಭಧ್ರತೆಯನ್ನೂ ಬಲಗೊಳಿಸುವ ಐತಿಹಾಸಿಕ ಸನ್ನಿವೇಶ ಒದಗಿದೆ ಎಂದು ಹೇಳಿ ಆಫ್ರಿಕಾದ ಮಹಿಳೆಯರನ್ನು ಹುರಿದುಂಬಿಸಿದರು. ಆಫ್ರಿಕಾದ ಸಹೋದರಿ ಯರು ಭಾರತಕ್ಕೆ ಬಂದು ಅಲ್ಲಿನ ಮಹಿಳಾ ಚಳವಳಿಗಳನ್ನು ಅಧ್ಯಯನ ಮಾಡಬೇಕೆಂದು ಪ್ರೇಮ ಪೂರ್ವಕವಾಗಿ ಯಶೋಧರಾ ಆಹ್ವಾನ ನೀಡಿ ಮಹಿಳಾ ವೃಂದದ ಮನಸ್ಸನ್ನು ಸೂರೆಗೊಂಡರು. ಕೆನ್ಯಾದಲ್ಲಂತೂ ಯಶೋಧರಾ ದಾಸಪ್ಪನವರ ಕಾರ್ಯಚಟುವಟಿಕೆಗಳು ಉತ್ಸಾಹ ಮತ್ತು ಸಂಭ್ರಮದಿಂದ ಜರುಗಿದವು. ಕೆನ್ಯಾದ ಅಧ್ಯಕ್ಷ ಕೆನ್ಯಾಟಾ ಅವರ ಮಗಳೇ ಖುದ್ದಾಗಿ ಯಶೋಧರಾ ದಾಸಪ್ಪನವರನ್ನು ಅನೇಕ ಸಂಘ ಸಂಸ್ಥೆಗಳಿಗೆ ಕರೆದೊಯ್ದು ಅಲ್ಲಿನ ಚಟುವಟಿಕೆಗಳನ್ನು ಪರಿಚಯ ಮಾಡಿಕೊಟ್ಟರು.

ಆ ಸಂದರ್ಭದಲ್ಲಿ ಆಫ್ರೀಕಾದ ಅನಾಥ ಗೃಹ ಒಂದಕ್ಕೆ ಭೇಟಿ ನೀಡಿ, ಅಲ್ಲಿನ ನೀಗ್ರೊ ಬಾಲಕರಲ್ಲಿ ಕೆಲವರನ್ನು ದತ್ತು ತೆಗೆದುಕೊಂಡು ಸಲಹಲು ಮುಂದಾದರು. ಈ ಕಾರ್ಯ ಗಳೆಲ್ಲವೂ ಯಶೋಧರಮ್ಮನವರಲ್ಲಿ ಸಾಮಾನ್ಯ ಜನರಲ್ಲಿದ್ದ ಅತೀವ ಮಾನವೀಯತೆಯ ಅಂತಃಕರಣವನ್ನು ತೋರಿಸುವು ದಾಗಿದೆ.

ನಿಜಲಿಂಗಪ್ಪನವರ ಮಂತ್ರಿ ಮಂಡಲದಲ್ಲಿದ್ದಾಗ ಮಧ್ಯಪಾನವು ಸಮಾಜದ ಸಮಸ್ಯೆಗಳಿಗೆ, ಕುಟುಂಬಗಳ ಅಧೋಗತಿಗೆ ಮೂಲಕಾರಣವೆಂದು ಭಾವಿಸಿ ಪಾನನಿರೋಧ ಕಾಯಿದೆ ಜಾರಿಗೆ ತರಲು ಒತ್ತಾಯಿಸಿದರು. ಆದರೆ ಮಂತ್ರಿ ಮಂಡಲವು ಇದನ್ನು ವಿರೋಧಿಸಿದಾಗ ಯಶೋಧರಮ್ಮ

ನವರಿಗೆ ತುಂಬಾ ನೋವುಂಟು ಮಾಡಿತು. ಪಾನ ನಿರೋಧ ನೀತಿಯನ್ನು ರದ್ದು ಮಾಡುವುದರಿಂದ ಲಕ್ಷಾಂತರ ಬಡಜನರ, ಅದರಲ್ಲೂ ಮುಖ್ಯವಾಗಿ ಹರಿಜನ ಹಾಗೂ ದಲಿತವರ್ಗದವರ ಬಾಳು ಕಂಗಾಲಾಗುವುದೆಂದು ಅವರ ನಿಲುವಾಗಿತ್ತು. ಗಾಂಧೀ ತತ್ವಕ್ಕೆ ತಿಲಾಂಜಲಿ ನೀಡುವ ನೀತಿಗೆ ಎಂದಿಗೂ ರಾಜಿ ಇಲ್ಲವೆಂದು ತಿಳಿಸಿ ಹೋರಾಟಕ್ಕೆ ಸಿದ್ಧರಾದರು. ಇದು ಯಶೋಧರಮ್ಮನವರು ಜನರ ಬಗೆಗೆ ಮತ್ತು ಗಾಂಧಿ ತತ್ವದಲ್ಲಿ ಇಟ್ಟಿದ್ದ ನಂಬಿಕೆ ಎಂತದ್ದು ಎಂಬುದನ್ನು ವ್ಯಕ್ತಪಡಿಸುತ್ತವೆ.

೧೯೬೫ರ ಕೊನೆಯ ಹೊತ್ತಿಗೆ ನಿಜಲಿಂಗಪ್ಪನವರ ಮಂತ್ರಿ ಮಂಡಲದ ಕೆಲವು ಬಲಿಷ್ಠ ಸಚಿವರು ರಾಜ್ಯದಲ್ಲಿ ಪಾನ ನಿರೋಧ ಕಾಯಿದೆಯನ್ನು ರದ್ದುಗೊಳಿಸಿ ಮಾರುಕಟ್ಟೆಗಳಲ್ಲಿ ಮುಕ್ತವಾಗಿ ಹೆಂಡ, ಸಾರಾಯಿ ಮತ್ತಿತರ ಮದ್ಯಪಾನೀಯಗಳು ದೊರೆಯುವಂತೆ ಮಾಡಬೇಕೆಂದು ಪ್ರಸ್ತಾಪ ಮಾಡಲಾರಂಭಿಸಿದರು. ಅವರು ಮುಂದೊಡ್ಡುತ್ತಿದ್ದ ಕಾರಣಗಳು ಎರಡು ಮೊದಲನೆಯದಾಗಿ ಕಳ್ಳಭಟ್ಟಿಯನ್ನು ನಿಲ್ಲಿಸುವುದು; ಎರಡನೆಯದಾಗಿ, ಸರ್ಕಾರದ ಬೊಕ್ಕಸಕ್ಕೆ ಅಗತ್ಯವಾದ ಹಣವನ್ನು ತೆರಿಗೆ ರೂಪದಲ್ಲಿ ತುಂಬಿಕೊಳ್ಳುವುದು.

ಗಾಂಧೀ ಪರಂಪರೆಯಲ್ಲಿ ಸ್ವಾತಂತ್ರ್ಯ ಹೋರಾಟ ನಡೆಸಿ ಅವರು ದೇಶದ ಪುನರ್ ನಿರ್ಮಾಣಕ್ಕೆ ಕೈಗೊಂಡಿದ್ದ ರಚನಾತ್ಮಕ ಕಾರ್ಯಗಳಲ್ಲಿ ಪ್ರಧಾನ ಅಂಗವಾಗಿದ್ದ ಪಾನ ನಿರೋಧದ ನೀತಿಯನ್ನು ರದ್ದು ಮಾಡುವ ಮಾತು ಯಶೋಧರಾ ಅವರಿಗೆ ಆಘಾತವುಂಟು ಮಾಡಿತು. ಒಂದು ಕಾಲದಲ್ಲಿ, ಸ್ವಾತಂತ್ರ್ಯ ಹೋರಾಟದ ಮಹತ್ವ ಘಟ್ಟದಲ್ಲಿ ಚಿತ್ರದುರ್ಗ ಜಿಲ್ಲೆಯ ತುರುವನೂರಿನಲ್ಲಿ ಈಚಲು ಮರಗಳನ್ನು ಕತ್ತರಿಸಿ ಹೆಂಡದ ಗಡಿಗೆಗಳನ್ನು ಒಡೆದು ಹಾಕುವ ಸಾಮೂಹಿಕ ಸತ್ಯಾಗ್ರಹದಲ್ಲಿ ನೇತಾರರಾಗಿ ವಿಜೃಂಭಿಸಿದ್ದ ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರೇ ಈಗ ಮುಖ್ಯಮಂತ್ರಿಯಾಗಿರುವಾಗ ಪಾನ ನಿರೋಧವನ್ನು ರದ್ದು ಮಾಡುವ ಕ್ರಮಕೈಗೊಳ್ಳುವುದು ಒಂದು ದೊಡ್ಡ ಐತಿಹಾಸಿಕ ವಿಪರ್ಯಾಸ ಎಂದು ಯಶೋಧರಾ ಬಣ್ಣಿಸಿ ಪ್ರತಿಯೊಂದು ಸಚಿವ ಸಂಪುಟದ ಸಭೆಯಲ್ಲೂ ಪ್ರಬಲವಾಗಿ ವಿರೋಧಿಸುತ್ತಾ ಹೋದರು. ಮೊದಮೊದಲು ಯಶೋಧರಾರನ್ನು ಬೆಂಬಲಿಸುತ್ತಿದ್ದ ಕೆಲವು ಹಿರಿಯ ಸದಸ್ಯರು ಒಬ್ಬೊಬ್ಬರಾಗಿ ತಟಸ್ಥ ಧೋರಣೆ ತಾಳುತ್ತಾ ಬಂದರು. ಕಡೆಗೆ ಜಿ. ರಾಚಯ್ಯನವರೊಬ್ಬರು ಕಡೆಯ ತನಕ ಯಶೋಧರಾ ಅವರ ನಿಲುವನ್ನು ಸಮರ್ಥಿಸುತ್ತಿದ್ದರು. ೧೯೬೭ರ ಜೂನ್ ಹೊತ್ತಿಗೆ ಕರ್ನಾಟಕದಲ್ಲಿ ಪಾನ ನಿರೋಧ ನೀತಿಯನ್ನು ಕೈಬಿಡುವ ನಿರ್ಧಾರವನ್ನು ಮಂತ್ರಿಮಂಡಲ ಕೈಗೊಂಡಿತು. ಯಶೋಧರಾ ದಾಸಪ್ಪನವರು ತಮ್ಮ ಸಚಿವ ಪದವಿಗೆ ರಾಜೀನಾಮೆ ಪತ್ರವನ್ನು ಸಲ್ಲಿಸಿದರು[೨೭].

ಯಶೋಧರಾ ದಾಸಪ್ಪನವರ ರಾಜೀನಾಮೆಯ ಪ್ರಕರಣ ದೇಶಾದ್ಯಂತ ಪಾನನಿರೋಧ ನೀತಿಗೆ ಸಂಬಂಧಿಸಿದಂತೆ ವ್ಯಾಪಕ ಚರ್ಚೆಗೆ ಗ್ರಾಸವಾಯಿತು. ರಾಜಗೋಪಾಲಾಚಾರಿ ಸೇರಿದಂತೆ ಹಿರಿಯ ಮುತ್ಸದ್ದಿಗಳೂ ಸ್ವಾತಂತ್ರ್ಯ ಹೋರಾಟಗಾರರೂ ಸರ್ವೋದಯ ಚಳವಳಿಯ ಮುಖಂಡರೂ ಕರ್ನಾಟಕ ಸರ್ಕಾರದ ಕ್ರಮವನ್ನು ಕಟುವಾಗಿ ಖಂಡಿಸಿದರು. ಯಶೋಧರಾ ದಾಸಪ್ಪನವರ ದಿಟ್ಟತನ ಮತ್ತು ತತ್ವನಿಷ್ಠೆಯನ್ನು ಪ್ರಶಂಸಿಸಿದರು.

ಇಂತಹ ಮಾನವೀಯ ಮತ್ತು ದಿಟ್ಟತನದ ಅನುಪಮ ಗುಣಗಳುಳ್ಳ ಯಶೋಧರಮ್ಮನವರ ರಚನಾತ್ಮಕ ಕಾರ್ಯಗಳನ್ನು ಕಂಡ ಆಚಾರ್ಯ ಕೃಪಾಲಿನಿ ಅವರ 'ಯಶೋಧರಾ ತುಂ ಗಂಗಾ ಬನ್ ಗಯಾ' ಎನ್ನುವ ಅಭಿನಂದನಾ ಮಾತುಗಳಿಗೆ ಶ್ರೀಮತಿ ಯಶೋಧರ ದಾಸಪ್ಪರವರು ಅರ್ಹರಾಗಿದ್ದಂತೆ ನಮ್ಮೆಲ್ಲರಿಗೂ ಒಬ್ಬ ಸಮಾಜ ಸುಧಾರಕಿಯಾಗಿ, ದಿಟ್ಟ ಮತ್ತು ತತ್ವನಿಷ್ಠ ನಾಯಕಿಯಾಗಿ ಕಾಣಿಸಿಕೊಳ್ಳುತ್ತಾರೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. Sarojini K.Raghavendra Rao : Women freedom fighters in Karnataka, Dharwad, 1983, P.62. ಬಿ.ಆರ್. ಪ್ರಾಣೇಶ್‌ರಾವ್ ಅವರ ಪ್ರಕಾರ ಅದು ೧೯೦೫, ಮೇ ೫. ಪುಟ ೪.

೨. ಬಿ.ಆರ್. ಪ್ರಾಣೇಶ್‌ರಾವ್ : ಯಶೋಧರಾ ದಾಸಪ್ಪ ಮತ್ತು ಎಚ್.ಸಿ.ದಾಸಪ್ಪ ಜೀವನ ಮತ್ತು ಸಾಧನೆ, ಮೈಸೂರು, ೧೯೯೪. ಪುಟ ೧೪.

೩. ಅದೇ., ಪುಟ ೧೩–೧೪.

೪. ಅದೇ., ಪುಟ ೧೮.

೫. ಅದೇ., ಪುಟ ೨೫.

೬ ಡಾ. ಸೂರ್ಯನಾಥ ಕಾಮತ್ : ಸ್ವಾತಂತ್ರ ಹೋರಾಟದ ಸ್ಮೃತಿಗಳು. ಸಂಪುಟ ೨.

೭. ವಜ್ರ ಸಂಸ್ಥಾಪಕ ಒಕ್ಕಲಿಗರ ಸಂಘ ವಜ್ರ ಮಹೋತ್ಸವ ಸಂಸ್ಮರಣ ಸಂಚಿಕೆ, ಬೆಂಗಳೂರು. ೧೯೮೨. ಪುಟ ೯೬.

೮. ಜೋಯಿಸ ಎಂ.ಎನ್ : ಸ್ವಾತಂತ್ರ್ಯ ಸೇನಾನಿ ಎಂ.ಎನ್.ಜೋಯಿಸರ ಆತ್ಮಕಥನ, ಸಾಹಿತ್ಯಮಂದಿರ, ಬೆಂಗಳೂರು. ಪುಟ ೬೧-೬೩.

೯. ಅದೇ., : ಲಿಂಗಯ್ಯ.ಡಿ : ಶಿವಪುರಧ್ವಜ ಸತ್ಯಾಗ್ರಹ, ಬೆಂಗಳೂರು, ೧೯೭೯, ಪುಟ ೮೩.

೧೦. ಬಿ.ಆರ್. ಪ್ರಾಣೇಶ್‌ರಾವ್, ಪುಟ ೩೫-೩೭.

೧೧. Sarojini K.Raghavendra Rao : P-63-64.

೧೨. ಅದೇ.,

೧೩. ಅದೇ., ಪುಟ ೬೪-೬೫.

೧೪. ಬಿ.ಆರ್.ಪಿ, ಪುಟ ೩೯.

೧೫. ಅದೇ.,

೧೬. ಕೃಷ್ಣಶರ್ಮ.ಎಸ್ : ಗಾಂಧಿ ಮತ್ತು ಕರ್ನಾಟಕ, ಎಚ್.ಸಿ. ದಾಸಪ್ಪ ಸೇವಾಗ್ರಾಮ. ಪುಟ ೪೨೪-೪೨೮.

೧೭. ಅದೇ., ಇನ್ ಮೆಮೊರೀಸ್ ಆಫ್ ಮಹಾತ್ಮಗಾಂಧಿ, ೨೭ ಇಯರ್‍ಸ್ ಆಫ್ ಗಾಂಧಿ ಸ್ಮಾರಕ ನಿಧಿ, ನವದೆಹಲಿ. ಪುಟ ೫೪, ೧೪೬.

೧೮. ಡಾ. ಇಂದಿರಾ .ಬಿ.ಪಿ : ಸಾಧನೆಯ ಹಾದಿಯಲ್ಲಿ. ಮೈಸೂರು ೨೦೦೩, ಪುಟ ೩೭.

೧೯. ಬಿ.ಆರ್.ಪಿ., ಪುಟ ೭೫-೭೬.

೨೦. ಅದೇ.,

೨೧. ಬಿ.ಪಿ.ಐ., ಪುಟ ೩೬.

೨೨. ಅದೇ.,

೨೩. ಅದೇ., ಪುಟ ೩೭-೩೯.

೨೪. ಅದೇ.,

೨೫. ಅದೇ.,

೨೬. Sarojini Shintri .K.Raghavendra Rao., P. 66.

೨೭. ಬಿ.ಆರ್. ಪ್ರಾಣೇಶ್‌ರಾವ್., ಪುಟ ೧೧೮.

ಡಾ. ಸ್ಮಿತಾ ಸುರೇಬಾನಕರ*

ಬೆಳಗಾವಿಯ ಶೈಕ್ಷಣಿಕ ಸಂಸ್ಥೆಗಳು

ಗುಣವತ್ತತೆ ಮತ್ತು ಪ್ರಮಾಣ ಇವೆರಡೂ ದೃಷ್ಟಿಯಿಂದ ಬೆಳಗಾವಿಗೆ ಶೈಕ್ಷಣಿಕ ಇತಿಹಾಸದಲ್ಲಿ ಮಹತ್ವವಾದ ಸ್ಥಾನವಿದೆ. ಹತ್ತೊಂಬತ್ತನೆಯ ಶತಮಾನದಿಂದೀಚೆಗೆ ಹಲವಾರು ಶೈಕ್ಷಣಿಕ ಸಂಸ್ಥೆಗಳು ಬೆಳಗಾವಿ ನಗರದಲ್ಲಿ ತಲೆಯೆತ್ತಿ ಶೈಕ್ಷಣಿಕ ಕ್ಷೇತ್ರದಲ್ಲಿ ಗಮನೀಯ ಸಾಧನಗೈದಿವೆ. ಈ ಶೈಕ್ಷಣಿಕ ಸಂಸ್ಥೆಗಳ ಉಗಮ, ಧ್ಯೆಯೋದ್ಧೇಶ ಮತ್ತು ಬೆಳವಣಿಗೆ ಬೆಳಗಾವಿಯ ಶೈಕ್ಷಣಿಕ ಇತಿಹಾಸವನ್ನು ಪ್ರತಿಬಿಂಬಿಸುತ್ತವೆ. ಬೆಳಗಾವಿಯ ಶೈಕ್ಷಣಿಕ ನಕಾಶೆಯಲ್ಲಿ ಹೆಮ್ಮೆಯ ಸ್ಥಾನ ಪಡೆದ ಸರದಾರರ ಮಕ್ಕಳಿಗೆಂದೇ ಪ್ರಾರಂಭಿಸಲಾದ ಸರದಾರ್ಸ ಹೈಸ್ಕೂಲ್, ಜೆಸ್ಯೂಟ್ಸ ನಿಯಂತ್ರಣದ ಸೇಂಟ್ ಪಾಲ್ಸ ಮತ್ತು ಸೇಂಟ್ ಜೊಸೆಪ್ಸ್ ಹೈಸ್ಕೂಲ್ ಸೈನಿಕರ ಮಕ್ಕಳಿಗಾಗಿಯೇ ಆರಂಭಿಸುವ ಬೆನನ್ ಸ್ಮಿಥ ಹೈಸ್ಕೂಲ್ ಸಪ್ತರ್ಷಿಗಳೆನಿಸಿದ ದಾರ್ಶನಿಕರ ಪರಿಶ್ರಮದಿಂದ ಪ್ರಾರಂಭವಾದ ಲಿಂಗರಾಜ ಮಹಾವಿದ್ಯಾಲಯ ಸ್ವಾತಂತ್ರ್ಯ ಹೋರಾಟಗಾರರ ಮತ್ತು ದೇಶಭಕ್ತರ ಪರಿಶ್ರಮದಿಂದ ಸ್ಥಾಪನೆಗೊಂಡ ಬೆಳಗಾವಿಯ ಹೆಮ್ಮೆಯ ವಿದ್ಯಾ ಸಂಸ್ಥೆಯೆನಿಸಿದ ರಾಣಿ ಪಾರ್ವತಿದೇವಿ ಮಹಾವಿದ್ಯಾಲಯ, ಸಾಂಗ್ಲಿ ಸಂಸ್ಥಾನದ ದೊರೆ ಚಿಂತಾಮಣರಾವ್ ಪಟವರ್ಧನರ ಪೋಷಣೆಯಲ್ಲಿ ೧೮೬೫ರಲ್ಲಿ ಸ್ಥಾಪನೆಗೊಂಡ ಆಂಗ್ಲೋ ಸ್ಥಳೀಯ ಭಾಷಾ ಶಾಲೆ ಚಿಂತಾಮಣಿರಾವ್ ಹೈಸ್ಕೂಲ್, ಸ್ತ್ರೀ ಶಿಕ್ಷಣ ಪ್ರಸಾರಕ್ಕಾಗಿಯೇ ತಲೆ ಎತ್ತಿದ ವನಿತಾ ವಿದ್ಯಾಲಯ (೧೯೨೮), ಮಹಿಳಾ ವಿದ್ಯಾಲಯ (೧೯೪೧), ಬಾಲಿಕಾದರ್ಶ ಶಾಲೆ (೧೯೫೪)–ಇವೆ ಮುಂತಾದ ವಿದ್ಯಾಸಂಸ್ಥೆಗಳ ಉಗಮ, ವಿಕಾಸ, ಧ್ಯೇಯೋದ್ದೇಶಗಳ ವಿಸ್ತೃತ ವಿವರಣೆಗಳ ಚಿತ್ರಣ ಪ್ರಸ್ತುತ ಪ್ರಬಂಧದಲ್ಲಿದೆ.

ಜೇಮ್ಸ ಕ್ಯಾಂಬೆಲ್ ಬೆಳಗಾವಿಯಲ್ಲಿ ೧೮೮೨–೮೩ರಲ್ಲಿ ೧೮೭ ಸರ್ಕಾರಿ, ೯ ಮಿಶನರಿ ಮತ್ತು ೬ ಖಾಸಗಿ ಅಥವಾ ದೇಶಿ ಶಾಲೆಗಳಿದ್ದವೆಂದು ತಿಳಿಸುತ್ತಾರೆ. ಸರಾಸರಿ ೬ ಹಳ್ಳಿಗಳಿಗೆ ಒಂದು ಶಾಲೆ ಇತ್ತೆಂದು ತಿಳಿದು ಬರುತ್ತದೆ. ಇವುಗಳಲ್ಲಿ ೧೬೩೮೦ ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಿದ್ದು ಸರಿ ಸುಮಾರು ೧೦೪೭೦ ವಿದ್ಯಾರ್ಥಿಗಳ ಹಾಜರಾತಿ ಇರುತ್ತಿತ್ತು. ನಗರದ ಒಟ್ಟು ಜನಸಂಖ್ಯೆ (೨,೩೨,೮೬೯)ಯ ಕೇವಲ ೪.೮೯% ಜನರು ಶಾಲೆಗೆ ದಾಖಲಾಗುತ್ತಿದ್ದರು. ಒಟ್ಟು ೨೦೨ ಸರ್ಕಾರಿ ಅನುದಾನಿತ ಶಾಲೆಗಳ ಪೈಕಿ ೧೫೬ ಶಾಲೆಗಳಲ್ಲಿ ಕನ್ನಡ, ೪೨ ಶಾಲೆಗಳಲ್ಲಿ ಮರಾಠಿ ಮತ್ತು ೪ ಶಾಲೆಗಳಲ್ಲಿ ಹಿಂದುಸ್ತಾನಿ, ೧ ಶಾಲೆಯಲ್ಲಿ ಆಂಗ್ಲ ಮತ್ತು ೧ ಶಾಲೆಯಲ್ಲಿ ಸಂಸ್ಕೃತ ಮಾಧ್ಯಮದಲ್ಲಿ ಶಿಕ್ಷಣ ಕೊಡಲಾಗುತ್ತಿತ್ತು.

ಜೆಸ್ಯೂಟ್ಸರ್ ನಿಯಂತ್ರಣದಲ್ಲಿರುವ ಸೆಂಟ ಪಾಲ್ಸ ಹೈಸ್ಕೂಲ ಬೆಳಗಾವಿಯ ಪುರಾತನ ಸಂಸ್ಥೆಗಳಲ್ಲೊಂದು. ದಂಡು ಮಂಡಲದ ಪ್ರದೇಶದಲ್ಲಿ ಕಳೆದ ಶತಮಾನದ ಆರಂಭದಲ್ಲಿ ಲಂಡನ್ ಮಿಶನ್ ಮಾದರಿಯ ಶಿಕ್ಷಣ ಸಂಸ್ಥೆಯಾಗಿ ಇದು ತಲೆಯೆತ್ತಿ ನಿಂತಿದೆ. ಸುಮಾರು ಸತತ ೧೦೪ ವರ್ಷಗಳಷ್ಟು ದೀರ್ಘಕಾಲದಿಂದ ಅಕ್ಷರ ದಾಸೋಹವನ್ನು ಗೈಯುತ್ತಿರುವ ಈ ಸಂಸ್ಥೆ ಆಂಗ್ಲ ಮಾಧ್ಯಮ ಶಿಕ್ಷಣದ ಏಕಮೇವ ಪ್ರತಿಷ್ಠಿತ ಸಂಸ್ಥೆಯಾಗಿದೆ. ಬೃಹದಾಕಾರದ ಕಲ್ಲಿನ ಬೂದು ಬಣ್ಣದ ಸೌಧ ಇದಾಗಿದ್ದು ಕಾಲಕಾಲಕ್ಕೆ ಬದಲಾವಣೆ, ಆಧುನೀಕರಣ ದುರಸ್ತಿ ಹೊಂದಿದೆ. ಶಾಲೆಗೆಂದೆ ನಿರ್ಮಾಣವಾದ ಕಟ್ಟಡ ಇದಾಗಿದ್ದು ನಾಲ್ಕು ಅಂತಸ್ತುಗಳಿವೆ. ಬೆಳಗಾವಿಯ ಶೈಕ್ಷಣಿಕ ನಕಾಶೆಯಲ್ಲಿ ಹೆಮ್ಮೆಯ ಸ್ಥಾನ ಪಡೆದಿದೆ.

ಸೆಂಟ್ ಪಾಲ್ಸ ಶಾಲೆಯಿಂದ ಕೇವಲ ಕೆಲವು ಗಜ ದೂರದಲ್ಲಿರುವ ಸೆಂಟ್ ಜೊಸೆಪ್ಸ್ ಹೆಣ್ಣು ಮಕ್ಕಳ ಆಂಗ್ಲ ಮಾಧ್ಯಮಶಾಲೆ ಸ್ತ್ರೀ ಶಿಕ್ಷಣ ಪ್ರಸಾರಕ್ಕಾಗಿ ಸ್ಥಾಪನೆಗೊಂಡಿತು. ಈ ಮಿಶನರಿ ಶಾಲೆ ಉತ್ತಮವಾದ ಮತ್ತು ಸುಸ್ಥಿತಿಯಲ್ಲಿರುವ ಹಚ್ಚ ಹಸುರಿನ ಪಾರ್ಶ್ವದ ಹಿನ್ನೆಲೆಯನ್ನು ಹೊಂದಿದ್ದು ಕಂದು ಬಣ್ಣದ ಕಲ್ಲಿನ ಕಟ್ಟಡವಾಗಿದೆ ದೊಡ್ಡಗಾತ್ರದ ಪೋರ್ಚ, ಮೊಗಸಾಲೆ ಮತ್ತು ಕಮಾನುಗಳನ್ನು ಹೊಂದಿದೆ. ಅನೇಕ ಪ್ರತಿಷ್ಠಿತರ ವ್ಯಕ್ತಿತ್ವ ನಿರ್ಮಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿದೆ.

ಸರದಾರ ಹೈಸ್ಕೂಲ್ : ಸೌಧ ಮರಾಠಾ ಕಂಟ್ರಿಯಲ್ಲಿರುವ ಸರದಾರರ ಮಕ್ಕಳಿಗೆಂದೇ ೧೮೫೦ರಲ್ಲಿ ಸರದಾರ್ಸ ಹೈಸ್ಕೂಲ ಪ್ರಾರಂಭಿಸಲಾಯಿತು. ಕ್ರಮೇಣ

* ಮುಖ್ಯಸ್ಥರು, ಇತಿಹಾಸ ವಿಭಾಗ, ರಾಣಿ ಪಾರ್ವತಿದೇವಿ ಮಹಾವಿದ್ಯಾಲಯ, ಬೆಳಗಾವಿ.

ಗೌರವಾನ್ವಿತ ವ್ಯಾಪಾರಸ್ಥರು ಮತ್ತು ಜಮಿನ್ದಾರರ ಮಕ್ಕಳು ಶಾಲೆಗೆ ಸೇರಲ್ಪಟ್ಟು ತದನಂತರ ಸಾರ್ವಜನಿಕ ಶಾಲೆಯಾಯಿತು. ೧೮೭೨ರಿಂದ ಸರ್ಕಾರಿ ಶಾಲೆಯಾಗಿ ಪರಿವರ್ತನೆಗೊಂಡಿತು. ೧೯೮೨ರಲ್ಲಿ ಒಬ್ಬ ಮುಖ್ಯೋಪಾಧ್ಯಾಯರು ಮತ್ತು ೧೨ ಸಹಾಯಕ ಶಿಕ್ಷಕರಿದ್ದು ೧೫೦ ವಿದ್ಯಾರ್ಥಿಗಳ ಸರಾಸರಿ ಹಾಜರಾತಿ ಇತ್ತು. ವಿವಿಧ ಜಾತಿ ಪಂಗಡಗಳಿಗೆ ಸೇರಿದ ಮೂರನೇ ತರಗತಿ ಆಂಗ್ಲೋ-ಸ್ಥಳೀಯ ಮಾಧ್ಯಮದಲ್ಲಿ ಪಾಸಾದವರನ್ನು ಈ ಶಾಲೆಗೆ ಸೇರಿಸಿಕೊಳ್ಳಲಾಗುತ್ತಿತ್ತು. ನಾಲ್ಕನೇ ತರಗತಿಯಿಂದ ಮೆಟ್ರಿಕ್ ವರೆಗೆ ಶಿಕ್ಷಣ ಲಭ್ಯವಿತ್ತು. ಪ್ರತ್ಯೇಕ ಕೃಷಿ ಮತ್ತು ಚಿತ್ರಕಲೆ ವರ್ಗಗಳು ೧೮೮೫ರಷ್ಟು ಹಿಂದೆಯೇ ಈ ಶಾಲೆಯಲ್ಲಿದ್ದದ್ದು ವೈಶಿಷ್ಟ್ಯ. ವಂತಿಗೆಯಾಗಿ ಸಾರ್ವಜನಿಕರಿಂದ ಸಂಗ್ರಹಿಸಲಾದ ೬೦೦ ಪೌಂಡ್ ಹಣದಿಂದ ೧೮೮೨ರಲ್ಲಿ ಶಾಲೆಯ ಕಟ್ಟಡಕ್ಕೆ ವ್ಯಾಯಾಮಶಾಲೆ ಮತ್ತು ಆಟದ ಮೈದಾನ ನಿರ್ಮಿಸಲಾಯಿತು. ತಿಂಗಳಿಗೆ ಒಂದೂವರೆ ಆಣೆಯಷ್ಟು ಶುಲ್ಕವಿದ್ದು ಸೌಥ ಮರಾಠಾ ಕಂಟ್ರಿಯ ಸರದಾರರರ ದೇಣಿಗೆಯಿಂದ ಶಾಲೆ ನಡೆಯುತ್ತಿತ್ತು. ಆದರೆ ಬ್ರಿಟಿಷ್ ಸರ್ಕಾರದ ಅಧೀನದಲ್ಲಿದ್ದದ್ದಕ್ಕಾಗಿ ೧೮೮೫ರಲ್ಲಿ ಎಲ್ಲ ಸರದಾರರು ಕೊಲ್ಹಾಪುರ ರಾಜಾರಾಮ ಕಾಲೇಜಿಗೆ ತಮ್ಮ ಮಕ್ಕಳನ್ನು ಮತ್ತು ಸಂಬಂಧಿಕರನ್ನು ಕಳುಹಿಸಲು ಪ್ರಾರಂಭಿಸಿದರು. ಆಂಗ್ಲ ಭಾಷೆಯ "ಎಲ್ L" ಆಕಾರದಲ್ಲಿರುವ ಈ ಭವ್ಯ ಸೌಧದ ಕೇಂದ್ರ ಭಾಗದಲ್ಲಿ ಬೃಹದಾಕಾರದ ಪಿರಮಿಡ್ ಆಕಾರದ ಕೆಂಪು ಹೊದಿಕೆಯ ಗೋಪುರವಿದೆ. ಈಗ ಇಲ್ಲಿ ಸರಕಾರಿ ಪಾಲಿಟೆಕ್ನಿಕ್ ಮತ್ತು ಶಿಕ್ಷಕ ತರಬೇತಿ ಕಾಲೇಜಿನ ವಸತಿ ಗೃಹವಿದ್ದು, ಸ್ಕೂಲನ್ನು ಎದುರಿಗಿನ ಇನ್ನೊಂದು ಪಾರಂಪರಿಕ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ.

ಬೆನನ್-ಸ್ಮಿತ್ ಹೈಸ್ಕೂಲ್ (೧೮೩೨) : ೧೮೩೨ರಲ್ಲಿ ಸ್ಥಾಪನೆಗೊಂಡ ಬೆನನ್ ಸ್ಮಿತ್ ಹೈಸ್ಕೂಲ್ ಬೆಳಗಾವಿ ಅತ್ಯಂತ ಪುರಾತನ ಶಾಲೆ. ೧೭೫ ವರ್ಷಗಳಷ್ಟು ಪುರಾತನವಾದ ಬೆನನ್ ಸ್ಮಿಥ ಶಾಲೆಯನ್ನು ಬ್ರಿಟಿಷ್ ಸೈನ್ಯಾಧಿಕಾರಿ ರೆವರೆಂಡ್ ಟೇಲರ್, ರೆವರೆಂಡ್ ಬೆನನ್ ಮತ್ತು ರೆವರೆಂಡ್ ಸ್ಮಿಥ ಅವರು ಸೈನಿಕರ ಮಕ್ಕಳಿಗಾಗಿ ಲಂಡನ್ ಮಿಷನ್ ಮಾದರಿಯ ಶಿಕ್ಷಣವನ್ನು ನೀಡುವ ಏಕೈಕ ಶಿಕ್ಷಣ ಸಂಸ್ಥೆಯಾಗಿ ಆರಂಭಿಸಿದಾಗ ಆದ್ದರಿಂದ ಬೆನನ್ ಸ್ಮಿಥ ಎಂಬ ಹೆಸರು ಶಾಶ್ವತವಾಯಿತು. ೧೮೩೭ರಲ್ಲಿ ಇದನ್ನು ಅಮೆರಿಕನ್ ಮೆಥೊಡಿಸ್ಟ ಸಂಸ್ಥೆಗೆ ವರ್ಗಾಯಿಸಲಾಯಿತು. ಕೋಟೆಯ ತರಹ ಮಜಬೂತಾದ ಕಲ್ಲಿನ ಭವ್ಯ ಕಟ್ಟಡ ಎರಡು ಅಂತಸ್ತಿನಲ್ಲಿದೆ. ೧೫೦ ವರ್ಷಗಳಿಗೂ ಮೇಲ್ಪಟ್ಟ ಹಳೆಯದಾದ ಈ ಕಟ್ಟಡದ ಒಂದು ಭಾಗ ಸಂಪೂರ್ಣ ಶಿಥಿಲಗೊಂಡಿದ್ದರಿಂದ, ಅದನ್ನು ತೆಗೆದು ಸಾರ್ವಜನಿಕರಿಂದ ದಾನಿಗಳಿಂದ, ಸಂಘ-ಸಂಸ್ಥೆಗಳಿಂದ ಹಣ ಸಂಗ್ರಹಿಸಿ ಕಟ್ಟಡದ ಆ ಭಾಗವನ್ನು ಪುನರ್ ನಿರ್ಮಾಣ ಮಾಡಲಾಗಿದೆ. ಅದನ್ನು ೧೭೫ನೇ ವರ್ಷದ ಸ್ಮಾರಕ ಭವನವೆಂದು ಹೆಸರಿಸಲಾಗಿದೆ. ಈ ಒಂದು ಇಣಕುನೋಟ, ಕಾಲ ನಿಂತುಹೋದ ಅನುಭವವಾಯಿತ್ತದೆ. ಚೌಕಾಕಾರದ ಪೋರ್ಟಿಕೊ, ವಿಸ್ತಾರವಾದ ಕಮಾನುಗಳಿಂದ ವಿಸ್ತಾರವಾದ ಮೊಗಸಾಲೆ, ತೆರೆದ ವರಾಂಡ, ಸಾಲುಗಂಬಗಳು ಹಚ್ಚ ಹಸುರಿನಿಂದ ಸುತ್ತುವರೆದಿದ್ದು ಅಮೋಘವಾಗಿದೆ.

ಲಿಂಗರಾಜ ಕಾಲೇಜ : ಚಚಡಿಯ ಸರದಾರ ವ್ಹಿ.ಜಿ. ನಾಯಕಬಹದ್ದೂರ ದೇಸಾಯಿ, ರಾವ್‌ಬಹದ್ದೂರ ಅರಬಾಳ, ರಾವಬಹದ್ದೂರ ವ್ಹಿ.ಎ. ಅನಿಗೋಳ ಮುಂತಾದ ಸಪ್ತರ್ಷಿಗಳೆನಿಸಿದ ಏಳು ದಾರ್ಶನಿಕರಿಂದ ಸ್ಥಾಪನೆಗೊಂಡ ಈ ಮಹಾವಿದ್ಯಾಲಯ ಶಿರಸಂಗಿಯ ಶ್ರೀಮಂತ ಲಿಂಗಪ್ಪ ಜಾಯಪ್ಪ ಸರ್ ದೇಸಾಯಿಯ ಹೆಸರಿನಿಂದ ನಾಮಾಂಕಿತಗೊಂಡಿದೆ. ಆಧುನಿಕತೆ ಮತ್ತು ಪರಂಪರೆಯ ಸಮ್ಮಿಶ್ರಣವಾದ ಈ ಮಹಾವಿದ್ಯಾಲಯ ೧೯೩೭ರಲ್ಲಿ ಸ್ಥಾಪನೆಗೊಂಡು ೯೨ ವರ್ಷಗಳ ದೀರ್ಘ ಶೈಕ್ಷಣಿಕ ಸೇವೆಯನ್ನು ಪೂರೈಸಿದೆ. ತರುಣರನ್ನು ಜವಾಬ್ದಾರಿಯುತ ವ್ಯಕ್ತಿಗಳನ್ನಾಗಿ ಪರಿವರ್ತಿಸುವ "Man Making and Nation Building" ಎಂಬ ಧ್ಯೇಯೋದ್ದೇಶವನ್ನು ಹೊಂದಿದ ಲಿಂಗರಾಜ ಮಹಾವಿದ್ಯಾಲಯದ ಉತ್ತರ ಕರ್ನಾಟಕದ ಹೆಮ್ಮೆಯ ಸಂಸ್ಥೆಯಾಗಿ ತಲೆ ಎತ್ತಿ ನಿಂತಿದೆ. ೨೬ ಎಕರೆ ವಿಸ್ತೀರ್ಣದ ವಿಶಾಲ ಆವರಣದ ಮಧ್ಯ ಘನ ಗಾಂಭೀರ್ಯದಿಂದ ಕಂಗೊಳಿಸುವ ಪಾರಂಪರಿಕ ಕಟ್ಟಡ ಮತ್ತು ೧೩೧೫ ಚದರ ಮೀಟರ್ ವಿಶಾಲ ಮತ್ತು ಹಚ್ಚಹಸಿರಿನ ಉದ್ಯಾನ, ಈ ಮಹಾವಿದ್ಯಾಲಯದ ಕಲಿಸುವ-ಕಲಿಯುವ ಪ್ರಕ್ರಿಯೆಗೆ ವಾತಾವರಣ ನಿರ್ಮಿಸಿಕೊಟ್ಟಿವೆ. ಸಪ್ತರ್ಷಿಗಳೆನಿಸಿದ ದಾರ್ಶನಿಕರ ಫಲವಾಗಿ, ಬಾಂಬೆ ಪ್ರೆಸಿಡೆನ್ಸಿಯ ಗವರ್ನರ್ ಫ್ರೆಡ್ರಿಕ್ ಸೈಕ್ಸನಿಂದ ೧೯೩೭ರಲ್ಲಿ ಉದ್ಘಾಟನೆಗೊಂಡ ಲಿಂಗರಾಜ ಕಾಲೇಜ ಬೆಳಗಾವಿಯ ಶಿಕ್ಷಣ ಪರಂಪರೆಗೆ ಕಿರೀಟಪ್ರಾಯವೆನಿಸಿದೆ. ಬೆಳಗಾವಿ ನಗರದ ಕೇಂದ್ರ ಸ್ಥಾನದಲ್ಲಿದ್ದು, ವಿಸ್ತಾರವಾದ ಪ್ರದೇಶದ ಮಧ್ಯೆ ಉತ್ತಮವಾಗಿ ವಿನ್ಯಾಸಗೊಂಡ ಉದ್ಯಾನದೆದುರು ಈ ಪರಂಪರಾ ಕಟ್ಟಡ ಕಂಗೊಳಿಸುತ್ತಿದೆ. ನಾನಾ ತರಹದ ಹಣ್ಣು ಹೂವುಗಳಿರುವ ಅಪರೂಪದ ಗಿಡ ಮರಗಳನ್ನು ಹೊಂದಿರುವುದು ಈ ಕಾಲೇಜು ಆವರಣದ ವೈಶಿಷ್ಟ್ಯ.

ಈ ಸಂಸ್ಥೆಯ ಪ್ರಮುಖ ಪೋಷಕರಾದ ಶಿರಸಂಗಿ ಲಿಂಗರಾಜರ ಹೆಸರಿನಿಂದ ಕರೆಯಲ್ಪಡುವ ಈ ವಿದ್ಯಾಲಯ

ಇಂಡೊ-ರೋಮನ್-ಗೊಥಿಕ್ ವಾಸ್ತುಶಿಲ್ಪ ಶೈಲಿಯಲ್ಲಿದೆ. ಉತ್ತಮವಾಗಿ ವಿನ್ಯಾಸಗೊಳಿಸಿದ ಮರದ ಮೆಟ್ಟಿಲುಗಳು ವಿಶಾಲವಾದ ತರಗತಿ ಕೊಠಡಿಗಳು, ಮಧ್ಯಮಗಾತ್ರದ ಕಿಟಕಿಗಳು - ಇವೆಲ್ಲ ವಿದ್ಯಾವರ್ಧನೆಗೆ ಅನುಕೂಲಕರ ವಾತಾವರಣ ನಿರ್ಮಿಸಿಕೊಟ್ಟಿದ್ದು, ಇದನ್ನು ಮಾದರಿ ವಿದ್ಯಾ ಸೌಧವಾಗಿಸಿದೆ. ಅಪ್ಪಟ ದೇಶಿಯ ದಾರ್ಶನಿಕರಿಂದ ಸ್ಥಾಪಿಸಲ್ಪಟ್ಟ ಈ ಸಂಸ್ಥೆ ಸಮಕಾಲೀನ ಬ್ರಿಟಿಷ್ ವಾಸ್ತುಶಿಲ್ಪ ಶೈಲಿಯಲ್ಲಿದೆ.

ಲಿಂಗರಾಜ ವಿದ್ಯಾಲಯದ ಆವರಣದಲ್ಲಿ ಬ್ರೂಬೆನ್ ವಸತಿ ಗೃಹವಿದೆ. ಸಾಲುಗಂಬಗಳು, ವಿನ್ಯಾಸಪೂರ್ಣ ಕಮಾನುಗಳಿರುವ ಉದ್ದವಾದ ಈ ಕಟ್ಟಡ ಅದ್ಭುತವಾಗಿದೆ. ಎರಡು ಅಂತಸ್ತುಗಳಿದ್ದು ೧೦-೧೪ ಅಡಿಯ ಕೋಣೆಗಳಿವೆ. ೧೯೩೭ರಲ್ಲಿ ಪ್ರೆಡ್ರಿಕ ಸೈಕ್ಸನಿಂದ ಉದ್ಘಾಟನೆಗೊಂಡಿದ್ದು ಸರಳ, ಪುರಾತನ ವಾಸ್ತುಶೈಲಿಯನ್ನು ಪ್ರತಿಬಿಂಬಿಸುತ್ತದೆ.

ಇದಲ್ಲದೆ ಹುಡುಗರ ವಸತಿಗೃಹ ಮತ್ತು ಸುತ್ತುವರಿದ ವೃಕ್ಷಗಳು, ಕಟ್ಟಡಗಳ ಸಮೂಹಗಳನ್ನೊಳಗೊಂಡ ನಯನ ಮನೋಹರವಾದ ಆಟದ ಮೈದಾನ ಉಲ್ಲೇಖನೀಯ. ಇಡೀ ಆವರಣ ಆಧುನಿಕತೆ-ಪುರಾತನತೆಗಳ ಮೆಲೋಗರದಂತಿದೆ.

ರಾಣಿ ಪಾರ್ವತಿ ದೇವಿ ಮಹಾವಿದ್ಯಾಲಯ : ೧೯೪೦ರ ದಶಕದಲ್ಲಿ ರಾಷ್ಟ್ರದ ಪ್ರಗತಿಯ ಸಮಾನ ಧ್ಯೇಯೋದ್ದೇಶದಿಂದ ದಕ್ಷಿಣ ಕೊಂಕಣ ಭಾಗದ ಕೆಲ ದಾರ್ಶನಿಕರು "ಜ್ಞಾನದಿಂದ ವ್ಯಕ್ತಿಯ ಸಬಲೀಕರಣ" ಎಂದರಿತು ಶೈಕ್ಷಣಿಕ ಸಂಸ್ಥೆ ಪ್ರಾರಂಭಿಸಲು ಉದ್ದೇಶಿಸಿದರು. ೧೯೪೪ರಲ್ಲಿ ಎಸ್.ಕೆ.ಇ. ಸೊಸೈಟಿ, ಸಾವಂತವಾಡಿಯಲ್ಲಿ ಪ್ರಾರಂಭಿಸಲ್ಪಟ್ಟಿತು. ಮುಂದೆ ೧೯೪೫ರಲ್ಲಿ ಸಾವಂತವಾಡಿ ಯಲ್ಲಿ ಕಾಲೇಜಿನ ಸ್ಥಾಪನೆಯಾಗಿ, ಮುಖ್ಯ ಪೋಷಕರ ಹೆಸರಿನಿಂದ ರಾಣಿ ಪಾರ್ವತಿದೇವಿ ಮಹಾವಿದ್ಯಾಲಯ ಎಂದು ಹೆಸರಿಸಲಾಯಿತು. ಉತ್ತರ ಕರ್ನಾಟಕ, ಗೋವಾ ಮತ್ತು ಮಹಾರಾಷ್ಟ್ರ ಈ ಮೂರು ಭಾಗಗಳ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ೧೯೪೮ರಲ್ಲಿ ಕಾಲೇಜನ್ನು ಬೆಳಗಾವಿಗೆ ಸ್ಥಳಾಂತರಿಸಲಾಯಿತು. ಇದು ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರಾದ ಬಾಬುರಾವ್ ಠಾಕೂರ್, ಕರ್ನಾಟಕ ಕೇಸರಿ ಗಂಗಾಧರರಾವ್ ದೇಶಪಾಂಡೆ, ಶ್ರೀ ಅಣ್ಣಾಸಾಹೇಬ ಲಠ್ಠೆ, ಡಾ. ಈ. ವಿ. ಹೆರೆಕರ ಮುಂತಾದವರ ದೂರದೃಷ್ಟಿ, ಮುಂದಾಲೋಚನೆ ಮತ್ತು ಪರಿಶ್ರಮದ ಫಲ. ಸಾವಂತವಾಡಿಯ ಭೊಸ್ಲೆ ರಾಣಿ ಪಾರ್ವತಿದೇವಿ ರೂ. ೫೦,೦೦೦ ಧನಸಹಾಯಗೈದದ್ದಲ್ಲದೇ ಆಡಳಿತದ, ಲೆಕ್ಕಪತ್ರದ ಉಸ್ತುವಾರಿಯ ಜವಾಬ್ದಾರಿಯನ್ನು ಹೊತ್ತರು. ರಾಜತ್ವ, ಜ್ಞಾನ ಮತ್ತು ಗುಣಗಳನ್ನು ತನ್ನ ಹೆಸರು, ಕೃತಿ ಎರಡರಲ್ಲೂ ಅಳವಡಿಸಿಕೊಂಡ ರಾಣಿ ಪಾರ್ವತಿದೇವಿ ಮಹಾವಿದ್ಯಾಲಯ ಉತ್ತರ ಕರ್ನಾಟಕದ ಪ್ರತಿಷ್ಠಿತ ವಿದ್ಯಾಸಂಸ್ಥೆ. ನಗರದ ಕೇಂದ್ರಭಾಗದಲ್ಲಿ ಪ್ರಶಾಂತ ಮತ್ತು ಸದಾ ಹಸಿರಿನ ಪರಿಸರದಲ್ಲಿ ಈ ಸಂಸ್ಥೆ ತಲೆ ಎತ್ತಿ ನಿಂತಿದ್ದು, ಬೆಳಗಾವಿ ಭಾಗದಲ್ಲಿ ವಿದ್ಯಾರ್ಥಿಗಳ ಪ್ರಥಮ ಆಯ್ಕೆ ಎನಿಸಿದೆ. ಕಾಲೇಜು ಅನೇಕ ಪ್ರತಿಷ್ಠಿತ ವ್ಯಕ್ತಿಗಳನ್ನು ರೂಪಿಸಿದೆ. ಅದರಲ್ಲಿ ಪ್ರಮುಖರೆಂದರೆ ಜೀತೇಂದ್ರ ಅಭಿಷೇಕಿ, ಆರ್.ವ್ಹಿ. ದೇಶಪಾಂಡೆ, ಶಿಕ್ಷಣ ತಜ್ಞ ಎಮ್.ವ್ಹಿ. ಕಾಮತ್, ಆಡಳಿತಗಾರ ಎಂ. ಚೌಗುಲಾ, ಕರ್ನಲ್ ಜಾಧವ್ ಮುಂತಾದವರು ಸೇರಿದ್ದರು. ಅಧ್ಯಾಪಕವರ್ಗದಲ್ಲಿ ದಿಗ್ಗಜರೆನಿಸಿದ ಕೆ.ಜಿ. ಕುಂದಣಗಾರ, ಪು.ಲ. ದೇಶಪಾಂಡೆ, ಜಿ.ಎಸ್. ದೀಕ್ಷಿತ್, ಡಾ. ಎ.ಆರ್. ಕುಲಕರ್ಣಿ, ಶ್ರೀನಿವಾಸ ಅಯ್ಯಂಗಾರ್, ಪಿ.ಕೆ. ಭಾಗೋಜಿ, ಅರವಿಂದ ಯಾಳಗಿ, ಅನಂತ ಮನೋಹರ ಮುಂತಾದವರು. ಟಿಳಕವಾಡಿಯ ಪ್ರಶಾಂತ ವಾತಾವರಣದಲ್ಲಿ ಗಂಭೀರತೆಯೇ ತಲೆ ಎತ್ತಿ ನಿಂತಂತಿರುವ ರಾಣಿ ಪಾರ್ವತಿ ದೇವಿ ಮಹಾವಿದ್ಯಾಲಯ ಶೈಕ್ಷಣಿಕ ಕ್ಷೇತ್ರದಲ್ಲಿ ತನ್ನದೇ ಆದ ಸ್ಥಾನ ನಿರ್ಮಿಸಿಕೊಂಡಿದೆ. ಜಮಖಂಡಿಯ ಪಟವರ್ಧನರ ಬೇಸಿಗೆಯ ಅರಮನೆ ಮತ್ತು ಅದನ್ನು ಸುತ್ತುವರಿದ ಹಲವಾರು ಕಟ್ಟಡಗಳನ್ನು ತನ್ನದಾಗಿಸಿ ಕೊಂಡ ಈ ಮಹಾವಿದ್ಯಾಲಯ ೩೩ ಎಕರೆ ವಿಸ್ತಾರವಾದ ಪ್ರದೇಶ ಹೊಂದಿದೆ. ತಾಜಾತನವನ್ನು ಹೊರಸೂಸುವ ಹಚ್ಚ ಹಸುರಿಸುವ ಪಾರ್ಶ್ವಭೂಮಿ ಕಣ್ಣಿಗೆ ತಂಪೆರೆಯುತ್ತದೆ. ೧೯೧೭ರಲ್ಲಿ ಪರಶುರಾಮ ಭಾವು ಪಟವರ್ಧನರಿಂದ ನಿರ್ಮಿತವಾದುದು ಈ ವಿದ್ಯಾಸಂಸ್ಥೆ. ಈ ವಿದ್ಯಾಲಯದ ಮುಖ್ಯ ಪೋಷಕರಾದ ಗಾಯಕವಾಡ ರಾಜಕುವರಿ ಮತ್ತು ಸಾವಂತವಾಡಿಯ ಭೋಸ್ಲೆ ರಾಣಿ ಪಾರ್ವತಿ ದೇವರಿ ಹೆಸರಿನಿಂದ ಕರೆಯಲ್ಪಡುತ್ತಿದೆ.

ರಾಜತ್ವ, ದೈವತ್ವ ಮತ್ತು ಘನತೆಗಳನ್ನು ತನ್ನ ಹೆಸರಿನಲ್ಲಿ ಅಳವಡಿಸಿಕೊಂಡಿದೆ. ಸ್ಥಳೀಯವಾಗಿ ಲಭ್ಯವಿರುವ ಜಂಬಿಟ್ಟಿಗೆಯ ಎರಡಂತಸ್ತಿನ ಸೌಧ ಹವಾಪೂರಿತ ಪೋರ್ಟಿಕೊ, ದೊಡ್ಡ ಕಮಾನುಗಳು, ಶಿಸ್ತುಬದ್ಧವಾದ ಮೊಗಸಾಲೆ, ಸುಂದರ ಬಾಲ್ಕನಿ, ನುಣುಪಾದ ಮರದ ಮೇಲ್ಛಾವಣಿ, ಬಾಗಿಲ ಮೇಲಿನ ರಂಗುರಂಗಿನ ಗಾಜು, ಮರದ ಸರಳ ಮೆಟ್ಟಿಲು ಬೆಳಕಿಂಡಿಗಳು ಇವೆಲ್ಲ ಈ ಸೌಧಕ್ಕೆ ಹೆಮ್ಮೆಯ ಸ್ಥಾನ ದೊರಕಿಸಿಕೊಟ್ಟಿವೆ. ರಾಜರ ಮನೆಯಾಗಿ ನಿರ್ಮಾಣಗೊಂಡ ಸೌಧ ಅನೇಕ ಕೊಠಡಿಗಳ ಸಮೂಹದಿಂದ ಕೂಡಿದ್ದು ಉತ್ತಮ ಗುಣಮಟ್ಟದ ಮರದ ಮೇಲ್ಛಾವಣಿ ಯನ್ನು ಹೊಂದಿದೆ. ಮರದ ಸೂಕ್ಷ್ಮ ಕೆತ್ತನೆಯ ಪುಷ್ಪಗಳ ವಿನ್ಯಾಸ, ಸೂರ್ಯನ ಕೆತ್ತನೆ, ಕಬ್ಬಿಣದ ಕಟಾಂಜನ ಹಾಗೂ ಹಿಂಭಾಗದ ಬಾಲ್ಕನಿ ನಯನ ಮನೋಹರವಾಗಿದ್ದು

ವೃತ್ತಾಕಾರದ ಆಟದ ಮೈದಾನ, ಮಾವಿನ ತೋಪಿನಿಂದ, ಹಚ್ಚ–ಹಸಿರು ವೃಕ್ಷಗಳಿಂದ ಕಂಗೊಳಿಸುತ್ತಿದೆ.

ವನಿತಾ ವಿದ್ಯಾಲಯ, ಮಹಿಳಾ ವಿದ್ಯಾಲಯ, ಸ್ವಾಧ್ಯಯ ವಿದ್ಯಾ ಮಂದಿರ, ಚಿಂತಾಮಣರಾವ್ ಹೈಸ್ಕೂಲ್, ಸೆಂಟ ಜೋಸೆಫ್ ಹೈಸ್ಕೂಲ್ ಮುಂತಾದ ವಿದ್ಯಾಸಂಸ್ಥೆಗಳು ಕಳೆದ ಶತಮಾನ ಆರಂಭದಲ್ಲಿ ಸ್ಥಾಪನೆಗೊಂಡ ಸಂಸ್ಥೆಗಳಾಗಿದ್ದು ಪಾರಂಪರಿಕ ಕಟ್ಟಡಗಳಲ್ಲಿವೆ.

ಚಿಂತಾಮಣರಾವ್ ಹೈಸ್ಕೂಲ್ : ಸ್ವಾತಂತ್ರ್ಯ ಪೂರ್ವೋತ್ತರ ಕಾಲದಲ್ಲಿ ಮಹಾತ್ಮ ಜ್ಯೋತಿ ಬಾ ಪುಲೆ, ಕೋಲ್ಹಾಪುರದ ರಾಜರ್ಷಿ ಶಾಹು ಮಹಾರಾಜರಿಂದ ಪ್ರೇರಣೆ ಪಡೆದು, ಶಿಕ್ಷಣದ ಮಹತ್ವವನ್ನರಿತ ದಾರ್ಶನಿಕರಾದ ಅಣ್ಣಾಸಾಹೇಬ ಲಠ್ಠೆ, ಬಹಿರ್ಜಿ ಶಿರೋಳಕರ, ಬಾಬುರಾವ್ ಠಾಕೂರ್, ಶ್ಯಾಮರಾವ ದೇಸಾಯಿ ಮುಂತಾದವರು ಹಳ್ಳಿ ಹಳ್ಳಿ ಸಂಚರಿಸಿ ಹಣ ಕೂಡಿಸಿ ಶಿಕ್ಷಣ ಪ್ರಸಾರ ಕಾರ್ಯ ಕೈಗೊಂಡರು. ಆಗ ಶಹಾಪೂರ ಆಗಿನ ಸಾಂಗಲಿ ಸಂಸ್ಥಾನದ ಶ್ರೀಮಂತ ರಾಜಾಸಾಹೇಬ ಚಿಂತಾಮಣರಾವ್ ಪಟವರ್ಧನ ಅವರು ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸಿ, ಬ್ರಿಟಿಷ ಸರಕಾರದ ಪರವಾನಗಿ ಪಡೆದು ೧೮೬೫ರಲ್ಲಿ ೧–೩ನೇ ತರಗತಿಯವರೆಗೆ ಆಂಗ್ಲ ಮಾಧ್ಯಮ ಶಾಲೆ ಪ್ರಾರಂಭಿಸಿದರು. ಆ ಕಾಲದಲ್ಲಿ ಶ್ರೀ ಸರಂಜಾಮ ಗುರುಜಿ ವಿಶೇಷ ಮುತುವರ್ಜಿ ವಹಿಸಿ ಈ ಶಾಲೆಯ ಪ್ರಗತಿ ಸಾಧಿಸಿದರು. ಇದರಿಂದಾಗಿ ಸುತ್ತಲಿನ ವಡಗಾವಿ, ಅನಗೋಳ ಹಳೆ ಬೆಳಗಾವಿ, ಯಳ್ಳೂರ ಮುಂತಾದ ಭಾಗಗಳಿಂದ ವಿದ್ಯಾರ್ಥಿಗಳು ಶಿಕ್ಷಣ ಪಡೆಯಲು ಈ ಶಾಲೆಗೆ ಬರತೊಡಗಿದರು. ಹೆಚ್ಚುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಗಮನಿಸಿ ೧೮೯೨ರಲ್ಲಿ ಈ ಶಾಲೆಯನ್ನು First grade Anglo-vernacular Middle School ಆಗಿ ಪರಿವರ್ತಿಸಲಾಯಿತು. ಈ ಶಾಲೆಯಲ್ಲಿ ಸೇವೆ ಸಲ್ಲಿಸಿದ ಪವಾರ, ಕೋಲ್ಹಾಪುರಕರ, ಕೆ.ಎಸ್. ಕುಲಕರ್ಣಿ ಮುಂತಾದ ಸಮರ್ಥ ಮುಖ್ಯೋಪಾಧ್ಯಾಯರು ಈ ಶಾಲೆಯನ್ನು ತಮ್ಮ ಸ್ವಂತ ಪರಿವಾರವೆಂದೇ ಭಾವಿಸಿ ಶ್ರಮವಹಿಸಿ ದುಡಿದರು. ೧೯೫೧ರಲ್ಲಿ ಶ್ರೀಯುತರಾದ ಹರಿಭಾವು ಕಾಮತ್, ಸರಾಫ್, ಜೋಗ ಡಾ. ಹೆರೆಕರ ಮುಂತಾದವರು ಸಾಂಗಲಿ ಪಟವರ್ಧನರನ್ನು ಭೇಟಿಮಾಡಿ, ಪರವಾನಗಿ ಪಡೆದು ಹೈಸ್ಕೂಲು ಪ್ರಾರಂಭಿಸಿದರು. ಇದು ೧೯೨೦ರಲ್ಲಿ ಚಿಂತಾಮಣರಾವ್ ಹೈಸ್ಕೂಲು ಎಂದು ಹೆಸರು ಪಡೆಯಿತು. ೧೫ ಆಗಸ್ಟ್ ೧೯೪೭–೪೮ನೇಯ ಇಸ್ವಿಯವರಗೆ ಈ ಶಾಲೆಯ ಆಡಳಿತ ಆಗಿನ ಮುಂಬೈ ಸರಕಾರದ ಕಡೆಗೆ ಇತ್ತು. ಆನಂತರ ೧೯೪೯ರಲ್ಲಿ ಪ್ರಸಿದ್ಧ ಸೇವಾಭಾವಿ ಶಿಕ್ಷಣ ಸಂಸ್ಥೆಯಾದ ಸರಸ್ವತಿ ಸೇವಾಮಂಡಳವು ಶಾಲೆಯ ಆಡಳಿತ ವಹಿಸಿಕೊಂಡಿತು. ೧೯೬೫ರಲ್ಲಿ ಈ ಶಾಲೆಯ ಆಡಳಿತವನ್ನು ಕರ್ನಾಟಕ ಸರ್ಕಾರಕ್ಕೆ ವಹಿಸಿಕೊಡಲಾಯಿತು. ೧೯೭೫ರಲ್ಲಿ ಪದವಿ ಪೂರ್ವ ಮಹಾವಿದ್ಯಾಲಯವಾಗಿ ಪರಿವರ್ತನೆಗೊಂಡ ಈ ಸಂಸ್ಥೆ ಅತ್ಯಂತ ಸರಳ ಆದರೆ ವಿಶಾಲವಾದ ಕಟ್ಟಡದಲ್ಲಿದೆ.

ಈ ಶಿಕ್ಷಣ ಸಂಸ್ಥೆಯು ಶ್ರೇಷ್ಠ ಶಿಷ್ಯ ಪರಂಪರೆಯನ್ನು ಹೊಂದಿದೆ. ಇವುಗಳಲ್ಲಿ ಪ್ರಮುಖರೆಂದರೆ ನೌಕಾದಳದ ಪ್ರಮುಖ ಆಡಮಿರಲ್ ಬಿ.ಎಸ್. ಸೋಮಣ್ಣ, ಶಿವಾಜಿ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಅಪ್ಪಾಸಾಹೇಬ ಪವಾರ, ಗ್ವಾಲಿಯರ್ ದರ್ಬಾರಿನ ಮಾಜಿ ಕೌನ್ಸಲರ್ ಸರದಾರ ಜಾಧವ, ಡಾ. ಶಿಂಧೆ, ಉದ್ಯೋಗಪತಿ ಗೋಗಟೆ, ಖನಿಜ ಉದ್ಯಮಿ ಶಿವಾನಂದ ಚೌಗುಲೆ, ಹೈಕೋರ್ಟ್ ನ್ಯಾಯಾಧೀಶ ಶಂಕರರಾವ್ ಭೀಮರಾವ್ ಭಸ್ಮೆ ಮುಂತಾದವರು ಉಲ್ಲೇಖನಾರ್ಹರು.

ಸರಸ್ವತಿ ವಾಚನಾಲಯ : "ನಹಿ ಜ್ಞಾನೇನ ಸದೃಶ್ಯಂ ಪವಿತ್ರಮಿಹ ವಿದ್ಯತೆ" ಎಂಬ ಧ್ಯೇಯವಾಕ್ಯದಿಂದ ಪುಸ್ತಕ ಪ್ರಿಯರಾದ ಒಬ್ಬ ಶಾಲಾಶಿಕ್ಷಕರಿಂದ ಈ ಗ್ರಂಥಾಲಯ ಪ್ರಾರಂಭವಾಯಿತು. (ಈಗ ೪೬೦೦೦ ಪುಸ್ತಕಗಳಿವೆ ಅದೂ ೧೨೮೧೦ ಕನ್ನಡ ಮತ್ತು ೨೦೮೪೧ ಮತ್ತು ಇತರ ಭಾಷಾ ಗ್ರಂಥಗಳಿವೆ) ಕೇವಲ ಐದು ಪುಸ್ತಕ ಮತ್ತು ಒಂದು ಪತ್ರಿಕೆಯಿಂದ ಮಾಸ್ತರರ ಸ್ವಂತ ಮನೆಯಲ್ಲಿ ಆರಂಭಗೊಂಡು. ನಂತರ ಶಹಾಪುರ ನಗರಸಭೆಯ ಕಟ್ಟಡದಲ್ಲಿ ದಿ ನೇಟಿವ್ ಜನರಲ್ ಲೈಬ್ರರಿ ಎಂಬ ಹೆಸರಿನ ಸಾರ್ವಜನಿಕ ವಾಚನಾಲಯವಾಯಿತು. ನಂತರ ನೇಟಿವ್ ಎಂಬ ಶಬ್ದ ತೆಗದು "ದಿ ಜನರಲ್ ಲೈಬ್ರರಿ ಶಹಾಪುರ" ಎಂದು ರೂಪಾಂತರಗೊಂಡಿತು. ಸಾಂಗಲಿ ಪಟವರ್ಧನ ಸಂಸ್ಥಾನದ ಪೋಷಣೆ (ವಾರ್ಷಿಕ ಅನುದಾನ ಒಂದುನೂರು ರೂಪಾಯಿ– ಅಡ್ಮಿನಿಸ್ಟ್ರೇಟರ್ ಕ್ಯಾಪ್ಟನ್ ಬರ್ಕಿ ಅವರ ಮುಖಾಂತರ) ಶಹಾಪುರದ ಪ್ರತಿಷ್ಠಿತ ನಾಗರಿಕರಾದ ಡಾ. ಹರೇಕರ, ಶ್ರೀ ಮಧುಕರ ನಾಯಕ್, ಶ್ರೀ ಕೇಶವರಾವ್ ಕುಲಕರ್ಣಿ ಮುಂತಾದವರು ಕೊರಗೆಲ್ಲಿಯ ಸ್ಥಳ ದೊರಕಿಸುವ ಮತ್ತು ಕಟ್ಟಡಕ್ಕೆ ನಿಧಿ ಕೂಡಿಸುವ ಕಾರ್ಯವನ್ನು ಮಾಡಿದರು. ಸಾಂಗಲಿಯ ಶ್ರೀಮಂತ ಚಿಂತಾಮಣರಾವ್ ಪಟವರ್ಧನ ಒದಗಿಸಿದ ಬರಪರಿಹಾರ ನಿಧಿಯ ಉಳಿತಾಯದ ಹಣದಿಂದ ೧೯೩೪ರಲ್ಲಿ ರೂ. ೨೬೯೩೦ ವೆಚ್ಚದಲ್ಲಿ ಈ ಕಟ್ಟಡ ನಿರ್ಮಾಣಗೊಂಡಿತು. ಕಟ್ಟಡದ ಶಿಲ್ಪಿ ವಿ. ಸುಂಥಣಕರ್ ಇಂಜಿನಿಯರರು ಮತ್ತು ಕಾಂಟ್ರಾಕ್ಟರ್ ವಿ. ಜಯಣ್ಣ ಮುಚ್ಚಂಡಿ ಆಗಿದ್ದರು. ಈ ವಾಚನಾಲಯದ ಲಾಭ ಪಡೆದು ಕೃಷ್ಣಾಜಿ ಹರಿ ದೀಕ್ಷಿತ್, ವಿಷ್ಣು ಕಾಲೆ, ಬಾ.ಕೃ. ಗಲಗಲಿ, ಆಚಾರ್ಯ ಬಾಪಟ, ಮೂ.ಗ.

ಕುಂಟೆ, ಗೋವಿಂದ ಕೇಸಕರ, ಪ್ರಾಧ್ಯಾಪಕ ಪ್ರಭಾಕರ ಗಾಡಗೀಳ ಮುಂತಾದ ಖ್ಯಾತ ಸಾಹಿತಿಗಳು, ನಾಟಕಕಾರರೂ, ಕವಿಗಳೂ ಮತ್ತು ಕಾದಂಬರಿಕಾರರು ನಿರ್ಮಾಣಗೊಂಡರು.

ಬರಿ ಐದು ಪುಸ್ತಕಗಳಿಂದ ಸರಂಜಾಮ ಗುರೂಜಿ ಎಂಬ ಶಿಕ್ಷಕರಿಂದ ಪ್ರಾರಂಭವಾದ ವಾಚನಾಲಯವು ಸಾಂಗ್ಲಿ ರಾಣಿ ಸರಸ್ವತಿಯಿಂದ ಆ ಹೆಸರು ಪಡೆದುಕೊಂಡಿತು. ಗ್ರಂಥಾಲಯಕ್ಕೆಂದೇ ನಿರ್ಮಾಣವಾದ ಈ ಕಟ್ಟಡ ವಿಶಾಲವಾಗಿದ್ದು ಸಾಕಷ್ಟು ಗಾಳಿ, ಬೆಳಕು ಹೊಂದಿದೆ. ಸಾಂಗ್ಲಿ ಸರಕಾರ ಒದಗಿಸಿದ ಹಣದಲ್ಲಿ ನಿರ್ಮಾಣಗೊಂಡ ಎರಡು ಅಂತಸ್ತಿನ ಕಟ್ಟಡ ೩೪ ಅಡಿ ಎತ್ತರವಾಗಿದೆ. ಎಂಟು ಗುಂಟೆ ವಿಶಾಲ ಪ್ರದೇಶವನ್ನಾವರಿಸಿದೆ. ಇಟಾಲಿಯನ್ ಮಾರ್ಬಲ ನೆಲದ ಹಾಸು ಆಕರ್ಷಣೀಯವಾಗಿದೆ. ವಿಶಾಲವಾದ ಐದು ಓದುವ ಕೋಣೆಗಳಿದ್ದು, ಸಾತ್ರಿ ಹಾಲ್, ಕಾಮತ್ ಹಾಲ್, ವೇಲಂಗಿ ಹಾಲ್, ಮುಂತಾದ ದಾನಿಗಳ ಹೆಸರನ್ನಿಡಲಾಗಿದೆ. ಕೇಂದ್ರ ಸಭಾಗೃಹದಲ್ಲಿ ಪೋಷಕರ ಮತ್ತು ಸ್ಥಾಪಕರ ಭಾವಚಿತ್ರಗಳಿವೆ. ಎತ್ತರವಾದ ಕಮಾನಿನಾಕಾರದ ಕಿಟಕಿಗಳು, ಸುಂದರವಾದ ಬಾಲ್ಕನಿ, ಎಂಟು ಅಡಿ ಎತ್ತರದ ಕಪಾಟುಗಳು, ಕಚೇರಿಗಾಗಿ ಕೊಠಡಿ, ಮಕ್ಕಳ ವಿಭಾಗ ಮುಂತಾದವು ಗ್ರಂಥಾಲಯದ ಕ್ರಿಯಾಶೀಲತೆಗೆ ಅನುಕೂಲಕರವಾದ ವಾತಾವರಣ ನಿರ್ಮಿಸಿವೆ. ಎದುರುಗಡೆ ಸುಂದರವಾದ ಉದ್ಯಾನ, ಕಾರಂಜಿ, ಮಧ್ಯ ಕಮಲದಲ್ಲಿ ನಿಂತ ಸರಸ್ವತಿ ವಿಗ್ರಹ ಗ್ರಂಥಾಲಯದ ಸೌಂದರ್ಯವನ್ನು ಹೆಚ್ಚಿಸಿವೆ.

ಸಾರ್ವಜನಿಕ ವಾಚನಾಲಯ : ೧೮೪೮ರಲ್ಲಿ ಸ್ಥಾಪಿಸಲ್ಪಟ್ಟ ಸಾರ್ವಜನಿಕ ವಾಚನಾಲಯ ವಾಚನಾಲಯಗಳಲ್ಲೇ ಪ್ರಾಚೀನವಾದುದು. ಗಾಡಗೀಳ ಕುಟುಂಬದ ಉದಾರತೆಯಿಂದ ಗಣಪತಿಗಲ್ಲಿಯಲ್ಲಿ ಸ್ಥಾಪನೆಗೊಂಡು, ಸದಾ ಓದಲು ಬರುವ ಜನರಿಂದ ಕಿಕ್ಕಿರಿದಿರುತ್ತದೆ. ಮುಂದೆ ೮೭ ವರುಷಗಳ ನಂತರ ಅಂದರೆ ೧೯೩೫ರಲ್ಲಿ ಈಗಿದ್ದ ಇಮಾರತಿನ ನಿರ್ಮಾಣವಾಯಿತು.

ವಂಟಮುರಿ ಸಂಸ್ಥಾನದ ಶ್ರೀಮಂತ ರಾಜಾ ಲಖಮನ ಗೌಡ ಸರ್‌ದೇಸಾಯಿ ಅವರಿಂದ ಉದ್ಘಾಟನೆಗೊಂಡ, ಜನದಟ್ಟಣೆಯಿಂದ ಸದಾ ಕಿಕ್ಕಿರಿದಿರುವ ಗಣಪತಿಗಲ್ಲಿ ಬೆಳಗಾವಿಯ ಹೃದಯ ಸ್ಥಾನದಲ್ಲಿದೆ. ಮೂರು ಅಂತಸ್ತಿನ ಈ ಸೌಧದ ತಳಂತಸ್ತು ಅಂಗಡಿಗಳಿಂದ ತುಂಬಿ ಹೋಗಿದೆ. ವ್ಯಾಪಾರಿ–ವಾಣಿಜ್ಯೋದ್ಯಮಿಗಳಿಂದ ಆಕ್ರಮಿಸಿದೆ. ಎತ್ತರವಾದ ಮೆಟ್ಟಿಲುಗಳು, ವಿಶಾಲವಾದ ಓದುವ ಕೊಠಡಿ, ಗೋಡೆಯ ಒಳಗಡೆ ಇರುವ ಮರದ ಕಪಾಟುಗಳು, ನೆಲಕ್ಕೆ ಹಾಕಿದ ಹಳದಿ ಕಪ್ಪು ಬಣ್ಣದ ಇಟಾಲಿಯನ್ ನೆಲದ ಹಾಸು ಉಪಯುಕ್ತಕರ ಮತ್ತು ಅತ್ಯಾಕರ್ಷಕವಾಗಿದೆ. ಹಾಲಿನ ತುದಿಗೇರುವ ಬಾಲ್ಕನಿಗೆ ಕಬ್ಬಿಣದ ಸರಳುಗಳಿವೆ. ೨೫ ಅಡಿ ಎತ್ತರದ ವಿಶಾಲವಾದ ಗಡಿಯಾರದ ಗೋಪುರ ಅತ್ಯಂತ ವೈಶಿಷ್ಟ್ಯ ಪೂರ್ಣವಾಗಿದ್ದು ಲಂಡನ್ ನಿರ್ಮಿತಿಯ ಗಡಿಯಾರವನ್ನು ಅಳವಡಿಸಲಾಗಿದೆ. ವ್ಯಾಪಾರಿಗಳು ಕಟ್ಟಡದ ಭಾಗವನ್ನು ಆಕ್ರಮಿಸಿಕೊಂಡಿದ್ದು ನೋಟ ಮತ್ತು ಸುರಕ್ಷತೆ ಎರಡನ್ನೂ ಕೆಡಿಸಿದೆ. ಕೆಂಪು ಹಂಚಿನ ಇಳಿಜಾರದ ಮೇಲ್ಛಾವಣಿ ಇದೆ.

ಸಮಾರೋಪ : ಮೇಲಿನ ವಿವರಗಳಿಂದ ಬೆಳಗಾವಿಯಲ್ಲಿ ಶತಮಾನ ಗಳಷ್ಟು ಪುರಾತನವಿರುವ ಶೈಕ್ಷಣಿಕ ಪರಂಪರೆಯ ಪಕ್ಷಿನೋಟ ದೊರಕುತ್ತದೆ. ಇವು ಬೆಳಗಾವಿಯ ಶೈಕ್ಷಣಿಕ ಸಂಸ್ಕೃತಿಯ ಅವಿಭಾಜ್ಯ ಅಂಗಗಳಾಗಿವೆ. ಈ ಶೈಕ್ಷಣಿಕ ಸಂಸ್ಥೆಗಳು ನಮ್ಮ ಸಂಸ್ಕೃತಿಯ ಹೆಗ್ಗುರುತುಗಳಾಗಿ ಶೈಕ್ಷಣಿಕ, ಪಾರಂಪರಿಕ, ಭವನಾತ್ಮಕ ಮೌಲ್ಯಗಳ ಸಂಕೇತವಾಗಿ ಇನ್ನೂ ಅವ್ಯಾಹತವಾಗಿ ಶೈಕ್ಷಣಿಕ ಪರಂಪರೆಯನ್ನು ಮುಂದುವರಿಸಿವೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಗೇಜಿಟಿಯರ್ ಆಫ್ ಬಾಂಬೆ ಪ್ರಸಿಡೆನ್ಸಿ**, ಜೇಮ್ಸ ಕ್ಯಾಂಬೆಲ್ (ಸಂ), ಬೆಳಗಾವಿ ಡಿಸ್ಟ್ರಕ್ಟ್, ಬಾಂಬೆ, ೧೮೮೪ ಪುಟ ೪೮೧–೪೮೩.

೨. **ಬೆಳಗಾವಿ ಡಿಸ್ಟ್ರಕ್ಟ ಗೇಜಿಟಿಯರ್**, ಸೂರ್ಯನಾಥ ಕಾಮತ್ (ಸಂ), ಬೆಂಗಳೂರು, ೧೯೮೭.

೩. ಚಿಂತಾಮಣರಾವ್ ಹೈಸ್ಕೂಲಿನ ೭೫ನೇ ವರ್ಷದ ಸ್ಮರಣ ಸಂಚಿಕೆ.

೪. ಸರಸ್ವತಿ ವಾಚನಾಲಯದ ಶತಮಾನೋತ್ಸವ ಸ್ಮರಣಿಕೆ.

೫. ರಾಣಿ ಪಾರ್ವತಿದೇವಿ ಮಹಾವಿದ್ಯಾಲಯದ ದಾಖಲೆಗಳು ಮತ್ತು ಕ್ಷೇತ್ರ ಕಾರ್ಯ.

೬ ಲಿಂಗರಾಜ ಮಹಾವಿದ್ಯಾಲಯದ ದಾಖಲೆಗಳು ಮತ್ತು ಕ್ಷೇತ್ರ ಕಾರ್ಯ.

೭. ಶೈಕ್ಷಣಿಕ ಸಂಸ್ಥೆಗಳಲ್ಲಿ ಕೈಗೊಂಡ ಕ್ಷೇತ್ರ ಕಾರ್ಯ.

ಪ್ರೊ. ಶಕುಂತಲಾ ಸಿಂಧೂರ*

ಸಹಕಾರಿ ಚಳುವಳಿಯಲ್ಲಿ ಮಹಿಳೆಯರ ಪಾತ್ರ

ಭಾರತದ ಸಹಕಾರಿ ಆಂದೋಲನಕ್ಕೆ ಕೇವಲ ಒಂದು ಶತಮಾನದ ಇತಿಹಾಸವಿದೆ. ನಮ್ಮ ದೇಶವನ್ನು ಆಳುತ್ತಿದ್ದ ಬ್ರಿಟಿಷರೇ ಸಹಕಾರ ಚಳುವಳಿಯ ಬೀಜ ಬಿತ್ತಿದವರು. ಆ ಕಾಲದಲ್ಲಿಯೇ ಯುರೋಪ್ ಖಂಡದಲ್ಲಿನ ಕೆಲವು ದೇಶಗಳಲ್ಲಿ ಸಹಕಾರ ಚಳುವಳಿ ಪ್ರಾರಂಭವಾಗಿತ್ತು. ಇಂಗ್ಲೆಂಡ್‌ನಲ್ಲಿ ಗ್ರಾಹಕರ ಚಳುವಳಿ, ಜರ್ಮನಿಯಲ್ಲಿ ರೈತರ ಚಳುವಳಿಗಳು ಪ್ರಾರಂಭವಾಗಿದ್ದವು. ಜಗತ್ತಿನ ಪ್ರಥಮ ಮಹಾಯುದ್ಧದ ನಂತರ ಇಂಗ್ಲೆಂಡ್‌ನಲ್ಲಿ ದಿನಬಳಕೆಗೆ ಅತ್ಯಗತ್ಯವಾದ ದಿನಸಿ ಪದಾರ್ಥಗಳ ಬೆಲೆ ಗಗನಕ್ಕೇರಿದುದು ಮಾತ್ರವಲ್ಲ. ತೂಕ ಅಳತೆಯಲ್ಲಿ ಮೋಸ, ಅಪ್ಪಟವಾದ ಪದಾರ್ಥಗಳ ಕೊರತೆಯಿಂದಾಗಿ ಸಾಮಾನ್ಯ ಜನರಿಗೆ ತುಂಬಾ ತೊಂದರೆಯಾಗುತ್ತಿತ್ತು. ಕೆಲವು ಪ್ರಜ್ಞಾವಂತರಾದವರು ಸೇರಿ ರೈತರಿಂದ ಬೆಳೆದ ಬೆಳೆಯುನ್ನು ಖರೀದಿಸಿ ತಾವು ಹಂಚಿಕೊಳ್ಳಲು ಪ್ರಾರಂಭಿಸಿದರು. ಅದೇ ಗ್ರಾಹಕರ ಚಳುವಳಿಗೆ ಮೂಲ ಕಾರಣವಾಯಿತು.

ಜರ್ಮನಿ ದೇಶದಲ್ಲಿ ಸಣ್ಣ ಪುಟ್ಟ ರೈತರು ಕೃಷಿ ನಿರ್ವಹಣೆಗಾಗಿ ಮಾರ್ವಾಡಿಗಳಿಂದ ಹಣವನ್ನು ಸಾಲ ರೂಪದಲ್ಲಿ ಪಡೆದು ಅದಕ್ಕೆ ಅವರು ಹೇಳಿದಷ್ಟು ಬಡ್ಡಿಯನ್ನು ಕೊಡುವದು ಅನಿವಾರ್ಯವಾಗಿತ್ತು. ಆದ್ದರಿಂದ ಮಾರ್ವಾಡಿಗಳ ಕಪಿಮುಷ್ಠಿಯಿಂದ ಪಾರಾಗುವ ನಿಮಿತ್ತ ಪ್ರಮುಖರು ಒಗ್ಗಟ್ಟಾಗಿ ಸಣ್ಣ ಬಂಡವಾಳ ಹೂಡಿ ಆತ್ಮೀಯರಿಗೆ ಸಾಲ ಸೌಲಭ್ಯ ಒದಗಿಸಿ ಕಡಿಮೆ ಬಡ್ಡಿದರ ಹಾಗೂ ಸುಲಭ ಕಂತುಗಳಲ್ಲಿ ಸಾಲ ತುಂಬುವ ಕ್ರಮ ಕೈಕೊಂಡರು.

ಮಾರ್ವಾಡಿಗಳ ಹಾವಳಿಯಿಂದ ಬೇಸತ್ತ ನಮ್ಮ ಆಳರಸರು ಈ ಸಮಸ್ಯೆಯಿಂದ ರೈತರು ಮುಕ್ತರಾಗುವಂತೆ ಮಾಡಲು 'ರೈತರ ಸಾಲ ಸಹಕಾರ ಸಂಘ'ಗಳನ್ನು ಪ್ರಾರಂಭಿಸಲು ನಮ್ಮ ದೇಶದ ರೈತರಿಗೆ ಪ್ರೋತ್ಸಾಹಿಸುವ ಸಲುವಾಗಿ ರೈತರು ಎಷ್ಟು ಷೇರು ಬಂಡವಾಳ ಕೂಡಿಸಿದರೆ, ಸರ್ಕಾರವೂ ಅ ಹಣದಷ್ಟೇ ಮೊತ್ತವನ್ನು ಷೇರು ಬಂಡವಾಳವಾಗಿ ಕೊಡುವದಾಗಿ ಘೋಷಿಸಿದರು. ೧೯೦೫ರಲ್ಲಿ ಅಂದಿನ ಅವಿಭಜಿತ ಧಾರವಾಡ ಜಿಲ್ಲೆಯ ಇಂದಿನ ನೂತನ ಗದಗ ಜಿಲ್ಲೆಯ ಕಣಗಿನಹಾಳ ಗ್ರಾಮದಲ್ಲಿ ಆರಂಭವಾದ ಪ್ರಪ್ರಥಮ ಸಹಕಾರ ಸಂಘವು ಅಂದು ಬಿತ್ತಿದ ಬೀಜವು ೨೦ ನೆಯ ಶತಮಾನದಲ್ಲಿ ಮೊಳಕೆಯಾಗಿ, ಸಸಿಯಾಗಿ, ಹೆಮ್ಮರವಾಗಿ ಬೆಳೆದು, ಮನುಷ್ಯನ ನಿತ್ಯ ಜೀವನೋಪಾಯಕ್ಕೆ ಅತ್ಯವಶ್ಯವೆನಿಸುವ ಹಲವಾರು ಕ್ಷೇತ್ರಗಳಿಗೂ ವಿವಿಧ ಶಾಖೋಪಶಾಖೆಗಳಲ್ಲಿ ಹಬ್ಬಿ ಹರಡಿ ಆರ್ಥಿಕ ಸುಭದ್ರತೆ ಕಲ್ಪಿಸಿತು.

ಶತಮಾನದ ಹಿಂದೆಯಷ್ಟೇ ಪ್ರಾರಂಭವಾದ ಸಹಕಾರಿ ಆಂದೋಲನವು ಹಲವು ವಿಧದ ಏಳು-ಬೀಳುಗಳನ್ನು ಅನುಭವಿಸಿತು. ನಮ್ಮ ದೇಶ ಸ್ವಾತಂತ್ರ್ಯ ಗಳಿಸಿದ ನಂತರ ನಮ್ಮದೇ ಆದ ಸರಕಾರ ಹಲವು ಸಮಿತಿಗಳನ್ನು ನೇಮಿಸಿ ಕೂಲಂಕಷವಾಗಿ ಸಹಕಾರ ಕ್ಷೇತ್ರದ ಕಾರ್ಯವೈಖರಿಗಳನ್ನು ಪರಿಶೀಲಿಸಲು ಅನುಮೋದಿಸಿತು. ಸರ್ಕಾರದ ಆದೇಶದಂತೆ ಅನೇಕ ಸಮಿತಿಗಳಲ್ಲಿ ಸದಸ್ಯರಾಗಿದ್ದ ತಜ್ಞರು ಪ್ರತಿಯೊಂದು ಕಾರ್ಯಕಲಾಪಗಳನ್ನು ಸವಿಸ್ತಾರವಾಗಿ ಪರಿಶೀಲಿಸಿ ನಮ್ಮ ದೇಶದಲ್ಲಿ ಸಹಕಾರ ಚಳುವಳಿ ವಿಫಲಗೊಂಡಿದೆಯಾದರೂ ಈ ಚಳುವಳಿ ಮುಂದುವರೆಯುವ ಅವಶ್ಯಕತೆ ಸಾಕಷ್ಟಿದೆ. ನಿರೀಕ್ಷಿಸಿರುವಷ್ಟು ಪ್ರಗತಿಪರ ಸಾಧನೆಯ ಕೊರತೆ ಕಂಡುಬಂದರೂ ಚಳುವಳಿಯು ನಮ್ಮ ದೇಶದ ಆರ್ಥಿಕ ಶ್ರೇಯೋಭಿವೃದ್ಧಿಗೆ ಅತ್ಯಗತ್ಯ. ಬಂಡವಾಳ ಶಾಹಿಗಳ ಮತ್ತು ಎಡಪಂಥೀಯರ ನಡುವೆ ಸುವರ್ಣ ಸೇತುವೆಯಾಗುವಂತಹದೆಂದರೆ ಸಹಕಾರ ಕ್ಷೇತ್ರವೆಂದು ದೃಢ ನಿರ್ಧಾರ ಕೈಕೊಂಡರು. ಅದರ ಪರಿಣಾಮವಾಗಿ ಇಂದು ಸಹಕಾರ ಚಳುವಳಿಯು ದೇಶದ ಆರ್ಥಿಕ ಭದ್ರತೆಗೆ ಕಾರಣೀಭೂತವಾಗಿರುವುದು.

ಪುರುಷಪ್ರಧಾನವಾದ ನಮ್ಮ ದೇಶ ಹಲವಾರು ರೀತಿಯ ಮೂಢನಂಬಿಕೆಗಳ ಆಗರವಾಗಿದ್ದು, ಬಹುಸಂಖ್ಯಾತ ನಿರಕ್ಷರಿಗಳನ್ನು ಹೊಂದಿದೆಯಲ್ಲದೆ ಸಾಕ್ಷರಸ್ಥ ಸ್ತ್ರೀಯರು ಹಳ್ಳಿಗಳಲ್ಲಿ %೩ ಕ್ಕಿಂತ ಹೆಚ್ಚು ಸಿಗುತ್ತಿರಲಿಲ್ಲ. ೧೯೪೭ರ ಸ್ವಾತಂತ್ರ್ಯ ನಂತರ ಈ ಸಂಖ್ಯೆ ಕೇವಲ %೨೧ ರಷ್ಟಿತ್ತು. ೧೯೬೦ರ ನಂತರವೇ ಪಟ್ಟಣಗಳಲ್ಲಿ ಮಹಿಳೆಯರ

* ಶಿವಗಂಗಾ ನಿಲಯ, ಕರಿಯಮ್ಮ ಬಡಾವಣೆ, ರಾಜೀವಗಾಂಧಿನಗರ, ಗದಗ.

ವಿದ್ಯಾಭ್ಯಾಸ ಪ್ರಾರಂಭವಾಗಿತ್ತು. ಆಗಿನ ಕಾಲದಲ್ಲಿ ಮಹಿಳೆಯರು ಕೇವಲ ಅಡುಗೆ ಮನೆಗೆ ಮೀಸಲಾಗಿದ್ದರು. ಮಹಿಳೆ ಮನೆಯ ಹೊಸ್ತಿಲನ್ನು ದಾಟುವುದೇ ಮಹಾಪಾಪವೆಂಬ ಭಾವನೆ ಪುರುಷರಲ್ಲಿ ಹಾಗೂ ಮಹಿಳೆಯರಲ್ಲಿಯೂ ಬೇರೂರಿದ್ದ ಕಾಲದಲ್ಲಿ ಸ್ತ್ರೀಯರು ಪುರುಷ ಪ್ರಧಾನವಾಗಿದ್ದ ಸಹಕಾರ ಸಂಸ್ಥೆಗಳಲ್ಲಿ ಭಾಗವಹಿಸುವ ಕನಸು ಗಗನಕುಸುಮವಾಗಿತ್ತು. ಸಹಕಾರ ಸಂಸ್ಥೆಗಳು ಪ್ರಜಾಪ್ರಭುತ್ವದ ತತ್ವಗಳ ಮೇಲೆ ಮುಂದುವರಿಯುತ್ತಿದ್ದುದರಿಂದ ಪುರುಷರೊಡನೆ ಚುನಾವಣೆಗಳಲ್ಲಿ ಮಹಿಳೆಯರು ಸ್ಪರ್ಧಿಸುವದಂತೂ ಕನ್ನಡಿಯೊಳಗಿನ ಗಂಟಾಗಿತ್ತು. ಹೀಗಾಗಿ ಸಹಕಾರ ಸಂಸ್ಥೆಗಳಲ್ಲಿ ಮಹಿಳೆಯರು ಸದಸ್ಯರಾಗಲು ಹಿಂಜರಿಯುತ್ತಿದ್ದರು.

ಸ್ವಾತಂತ್ರ್ಯಾನಂತರ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಾತ್ರ ಕೈಬೆರಳಿನಲ್ಲಿ ಎಣಿಸುವಷ್ಟು ವಿದ್ಯಾವಂತ ಮಹಿಳೆಯರು ಸಹಕಾರ ಸಂಸ್ಥೆಗಳಲ್ಲಿ ಸಾಮಾನ್ಯ ಸದಸ್ಯತ್ವ ಪಡೆಯುವ ಸುವರ್ಣಾವಕಾಶವುಳ್ಳ ಸೌಭಾಗ್ಯಶಾಲಿಗಳಾದರು. ನೆಪಮಾತ್ರಕ್ಕೆ ಸದಸ್ಯತ್ವ ಪಡೆದು ಸದಸ್ಯರ ಸಭೆಗಳಲ್ಲಿ ಪಾಲುದಾರರಾಗುವ ಅವಕಾಶದಿಂದ ವಂಚಿತರಾಗುತ್ತಿದ್ದರು. ಕೇವಲ ಸರ್ವಸದಸ್ಯರ ಸಭೆಗೆ ಮಾತ್ರ ಹಾಜರಾಗುವ ಹೆಬ್ಬಾಗಿಲು ತೆರೆದರೂ ಕೂಡ ಚುನಾವಣೆಯಲ್ಲಿ ಪುರುಷರಿಗೆ ಮತ ಚಲಾಯಿಸುವ ಹಕ್ಕು ಮಾತ್ರ ಲಭಿಸದಂತಾಯಿತು. ಇನ್ನು ಮಹಿಳೆಯರು ಚುನಾವಣೆಗೆ ನಿಲ್ಲುವದಂತೂ ಕನಸಿನ ಕಗ್ಗಂಟಾಯಿತು.

ಮಹಿಳೆಯರ ಸಹಕಾರ ಸಂಸ್ಥೆಗಳು : ಸ್ವಾತಂತ್ರ್ಯ ಲಭಿಸಿ ೧೫ ವರ್ಷಗಳ ನಂತರ ದೇಶದ ಚಿಕ್ಕ ಪುಟ್ಟ ಗ್ರಾಮಗಳಲ್ಲಿ ಮಹಿಳೆಯರಿಗೆ ವಿದ್ಯಾಭ್ಯಾಸ ಸೌಲಭ್ಯ ಒದಗುವಂತಾಯಿತು. ವಿದ್ಯಾವಂತ ಸ್ತ್ರೀಯರು ಸಹಕಾರ ಚಳುವಳಿಯ ಮುಖ್ಯ ಉದ್ದೇಶಗಳನ್ನು ಅರ್ಥೈಸಿಕೊಂಡು ತಮ್ಮದೇ ಆದ ಸಹಕಾರ ಸಂಸ್ಥೆಗಳನ್ನು ಸ್ಥಾಪಿಸಲು ಹಾತೊರೆಯತೊಡಗಿದರು. ಅದರ ಸತ್ಫಲವಾಗಿ ಕೆಲವೊಂದು ಬೃಹತ್ ನಗರಗಳಲ್ಲಿ ದೀನ ದುರ್ಬಲ ಮಹಿಳೆಯರಿಗೆ ಆರ್ಥಿಕ ಸಹಾಯ ಮಾಡುವ ಯೋಚನೆಯಿಂದ ತಮ್ಮದೇ ಆದ ಪತ್ತಿನ ಸಹಕಾರ ಸಂಘಗಳನ್ನು ಸ್ಥಾಪಿಸಲು ಮುನ್ನುಗ್ಗಿದರು.

ಮೈಸೂರು ನಗರ ಆರ್ಯಭಗಿನಿಯರ ಪರಸ್ಪರ ಸಹಾಯ ಸಂಘ : ನಮ್ಮ ದೇಶ ಸ್ವಾತಂತ್ರ್ಯ ಪಡೆಯುವ ಪೂರ್ವದಲ್ಲಿಯೇ ಮೈಸೂರು ಪ್ರಜ್ಞಾವಂತರ ನಗರವಾಗಿತ್ತು. ಹಲವಾರು ವಿದ್ಯಾವಂತ ಸ್ತ್ರೀಯರು ಸಮಾಜ ಸುಧಾರಕರೆಂದು ಖ್ಯಾತರಾದ ಅನೇಕ ಪುರುಷರ ಬೆಂಬಲ ಪ್ರೋತ್ಸಾಹದಿಂದ ಮಹಿಳಾ ಪತ್ತಿನ ಸಹಕಾರ ಸಂಘವನ್ನು "ಆರ್ಯ ಭಗಿನಿಯರ ಪರಸ್ಪರ ಸಹಾಯ ಸಂಘ" ಎಂಬ ಹೆಸರಿನಿಂದ ಆರಂಭಿಸಿತು. ಈ ಸಂಸ್ಥೆಯು ಬಡ ಮಹಿಳೆಯರಿಗೆ ಚಿಕ್ಕ ಪುಟ್ಟ ಸಾಲವನ್ನು ಅತಿ ಕಡಿಮೆ ಬಡ್ಡಿ ದರದಲ್ಲಿ ಕೊಡುವ ಸದುದ್ದೇಶ ಹೊಂದಿತ್ತು. ಏಕೆಂದರೆ ಮಹಿಳೆಯರ ಆರ್ಥಿಕ ಸ್ಥಿತಿ ಆಗ ಚಿಂತಾಜನಕವಾಗಿತ್ತು. ಮದುವೆ-ಮುಂಜಿ, ಬಾಣಂತನ ಇತ್ಯಾದಿ ಆರ್ಥಿಕ ಕೊರತೆಯಿಂದ ಅನಾರೋಗ್ಯದಿಂದ ಬಳಲುವವರು ಮಾರ್ವಾಡಿಗಳೊಂದಿಗೆ ಸಾಲ ಪಡೆದು ಹೆಚ್ಚಿನ ಬಡ್ಡಿಯನ್ನು ತೀರಿಸಲಾಗದೆ ತೊಳಲಾಡುತ್ತಿರುವವರ ಕಷ್ಟಗಳನ್ನು ಪರಿಹರಿಸಲು ಈ ಸಹಕಾರ ಸಂಸ್ಥೆ ಆಪತ್ಬಾಂಧವವಾಯಿತು.

'ಪರೋಪಕಾರಾರ್ಥ' ಮಹದುದ್ದೇಶದಿಂದ ಆರಂಭವಾದ ಈ ಸಂಸ್ಥೆ ಇತ್ತೀಚೆಗೆ ಪ್ಲಾಟಿನಂ ಜ್ಯೂಬಿಲಿಯನ್ನು ಅದ್ದೂರಿಯಿಂದ ಆಚರಿಸಿತು. ಮಹಿಳೆಯರು ಸಹಕಾರ ಕ್ಷೇತ್ರದಲ್ಲಿ ಭಾಗವಹಿಸಲು ಹೆದ್ದಾರಿ ನಿರ್ಮಿಸಿದ ಹೆಗ್ಗಳಿಕೆಗೆ ಪಾತ್ರವಾಯಿತಲ್ಲದೆ ಇತರ ಮಹಿಳೆಯರು ಸಹಕಾರ ಕ್ಷೇತ್ರದಲ್ಲಿ ಕ್ರಿಯಾಶೀಲರಾಗಿ ಪಾತ್ರಧಾರಿಗಳಾಗಲು ಸ್ಫೂರ್ತಿಯ ಸೆಲೆಯಾಗಿರುವುದು ನಾಡಿನ ಹೆಮ್ಮೆಯ ದ್ಯೋತಕ !

ತುಮಕೂರು ಮಹಿಳಾ ಪತ್ತಿನ ಸಹಕಾರ ಸಂಘ : ಮಹಿಳಾ ಶಿಕ್ಷಕಿಯಿಂದ ಉದ್ಭವಗೊಂಡಿರುವ ಈ ಸಂಸ್ಥೆಯು ಆರು ದಶಕಗಳ ಸಾಧನೆಯ ಹಾದಿಯಲ್ಲಿ ದಾಪುಗಾಲಿಡುತ್ತಿರುವುದು ಶುಭೋದಯದ ಹೆಗ್ಗುರುತು. ತನ್ನ ಅಕ್ಕಪಕ್ಕದ ಮಹಿಳೆಯರು ಕಷ್ಟಪಡುತ್ತಿರುವುದನ್ನು ನೋಡಿ ಕೈಕಟ್ಟಿ ಕುಳಿತಕೊಳ್ಳದ ಓರ್ವ ಶಿಕ್ಷಕಿಯು ಸಹಕಾರ ಮನೋಭಾವನೆಯಿಂದ ಅತ್ಯಲ್ಪ ಷೇರು ಬಂಡವಾಳದೊಂದಿಗೆ ತಮ್ಮ ಮನೆಯಲ್ಲಿಯೇ ನಾಲ್ಕಾರು ಸಖಿಯರೊಂದಿಗೆ ಸಂಸ್ಥೆಯ ಹರಿಕಾರರಾಗಿ ಅದರ ಸಮಸ್ತ ಕಾರ್ಯಭಾರವನ್ನು ಪರಸ್ಪರರು ನಿಭಾಯಿಸುತ್ತಿದ್ದರಲ್ಲದೆ ಸಂಸ್ಥೆಗಾಗಿ ಯಾವುದೇ ರೀತಿಯ ಖರ್ಚು ಮಾಡದೇ ಕೇವಲ ಕಡುಬಡ ಸ್ತ್ರೀಯರಿಗೆ ಸಣ್ಣಪುಟ್ಟ ವ್ಯಾಪಾರಗೈಯಲು ಅಂದರೆ ಕಾಯಿಪಲ್ಲೆ ಹೂ ಹಣ್ಣು ಇತ್ಯಾದಿಗಳ ಮಾರಾಟದಿಂದ ಜೀವನೋಪಾಯ ನಿರ್ವಹಿಸಲು ಆರ್ಥಿಕ ಸಹಾಯವಾಗುವಂತಹ ಕಾರ್ಯಗಳಲ್ಲಿ ಈ ಸಂಸ್ಥೆ ಸಹಕರಿಸುತ್ತಿತ್ತು.

ಹೀಗೆ ಪುಟ್ಟದಾಗಿ ಆರಂಭವಾದ ಈ ಸಂಸ್ಥೆಯನ್ನೇ ಪಟ್ಟಣ ಸಹಕಾರ ಬ್ಯಾಂಕನ್ನಾಗಿ ಪರಿವರ್ತಿಸಿ ೧೮ ವರ್ಷಗಳು ಗತಿಸಿರುತ್ತವೆ. ಈಗ ಇದು ಇನ್ನೂ ಅಧಿಕ ರೂಪದಲ್ಲಿ ಮಹಿಳೆಯರಿಗೆ ಹೊಲಿಗೆಯಂತ್ರ, ದೋಸೆ ಹಿಟ್ಟು ರುಬ್ಬುವ ಯಂತ್ರ, ಇಸ್ತ್ರಿಪೆಟ್ಟಿಗೆ ಮೊದಲಾದವುಗಳನ್ನು ಕೊಂಡುಕೊಳ್ಳಲು ಅವಶ್ಯವಾದ ಆರ್ಥಿಕ ಸಹಕಾರವನ್ನು ಕಡಿಮೆ ಬಡ್ಡಿಯಲ್ಲಿ ಒದಗಿಸಿ ಸುಲಭ ಕಂತುಗಳಲ್ಲಿ ಸಾಲ ಮರುಪಾವತಿ ವ್ಯವಸ್ಥೆಯನ್ನು ರೂಪಿಸಿದೆ. ಇನ್ನೂ ಕೆಲವು ಸದಸ್ಯೆಯರಿಗೆ ಹಲವು ಉದ್ದಿಮೆಗಳನ್ನು ಹುಟ್ಟುಹಾಕಲು ಸಹಕರಿಸುತ್ತಲಿದೆ.

ಇದರ ಪರಿಣಾಮವಾಗಿ ಬ್ಯಾಂಕ್‌ನ ಸದಸ್ಯೆಯರು ಸ್ವಾವಲಂಬಿಗಳಾಗಿ ತಮ್ಮ ಸಬಲೀಕರಣವನ್ನು ಮಾತ್ರ ಮಾಡಿಕೊಳ್ಳದೆ ಆ ಮೂಲಕ ಸಮಾಜದ ಆರ್ಥಿಕ ಸುಧಾರಣೆಗೂ ಪ್ರೇರಕರಾಗಿದ್ದಾರೆ.

ಮಹಿಳಾ ಗ್ರಾಹಕ ಸಹಕಾರ ಸಂಘಗಳು : ಬೆಂಗಳೂರಿನಲ್ಲಿ ಕೆಲವು ಪ್ರಜ್ಞಾವಂತ ಮಹಿಳೆಯರು ಒಗ್ಗೂಡಿ ತಮ್ಮದೇ ಆದ ಗ್ರಾಹಕರ ಸಂಘಗಳನ್ನು ಸ್ಥಾಪಿಸಿ, ಕಲಬೆರಕೆಗಳಿಲ್ಲದ ಅಪ್ಪಟ ಶುದ್ಧ ಸಾಮಗ್ರಿಗಳನ್ನು ಸೂಕ್ತ ಅಳತೆ ತೂಕಗಳೊಂದಿಗೆ ವಿತರಿಸುವ ಮಹಾಸಂಕಲ್ಪದಿಂದ ಈ ಸಹಕಾರಿ ಸಂಘವನ್ನು ಮುನ್ನಡೆಸುತ್ತಲಿರುವರಲ್ಲದೆ ಗ್ರಾಹಕರಿಗೆ ದಿನನಿತ್ಯದ ಬಳಕೆಗೆ ಬೇಕಾಗಿರುವ ಗ್ರಾಹಕರ ಸಂಘಗಳನ್ನು ಕಳೆದ ೫ ದಶಕಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ.

ಶೇಷಾದ್ರಿಪುರದ ಬಡಾವಣೆಯಲ್ಲಿ ಸೋದರಿ ಸಂಘ ಗ್ರಾಹಕರ ಕೋ–ಆಪರೇಟಿವ್ ಸಂಸ್ಥೆಯನ್ನು ಸ್ಥಾಪಿಸಿ ದಳ್ಳಾಳಿಗಳ ಹಾವಳಿಗೆ ಅವಕಾಶ ಕೊಡದೇ ನೇರವಾಗಿ ಗ್ರಾಹಕರಿಗೆ ದಿನಬಳಕೆಯ ವಸ್ತುಗಳನ್ನು ಸರಬರಾಜು ಮಾಡುತ್ತಲಿರುವ ಪ್ರಜ್ಞಾವಂತ ಮಹಿಳೆಯರು ಅನುಕರಣ ಪ್ರಧಾನರಾಗಿದ್ದಾರೆ. ಭಾರತ–ಚೈನಾ ಯುದ್ಧ ನಡೆಯುತ್ತಿದ್ದ ಸಂದರ್ಭದಲ್ಲಿ ನಿತ್ಯಬಳಕೆಯ ಸಾಮಾನುಗಳ ಅಭಾವ ಉಂಟಾಗಲು ಆಗ ಸರ್ಕಾರವು ಅಗತ್ಯ ದಿನಸಿಗಳನ್ನು ಸರಬರಾಜು ಮಾಡುವ ಕಾರ್ಯಯೋಜನೆಯನ್ನು ಹಾಕಿಕೊಂಡಿತ್ತು. ಈ ಸಮಯದಲ್ಲಿ ಸಾರ್ವಜನಿಕ ವಿತರಣೆಯ ಜವಾಬ್ದಾರಿಯನ್ನು "ಸೋದರಿ ಸಂಘವು ಗ್ರಾಹಕರ ಸಹಕಾರ ಸಂಘಕ್ಕೆ" ಒಪ್ಪಿಸಿತು. ಈ ಜವಾಬ್ದಾರಿಯನ್ನು ೧/೪ ದಶಮಾನ ಕಾಲ ಈ ಸಂಸ್ಥೆಯು ಸಮರ್ಪಕವಾಗಿ ನೆರವೇರಿಸಿ ಅತ್ಯುತ್ತಮ ಕೀರ್ತಿ ಪಡೆಯಿತು. ಸೋದರಿ ಗ್ರಾಹಕರ ಸಹಕಾರ ಸಂಘವು ಕರ್ನಾಟಕದಲ್ಲಿ ಸ್ಥಾಪನೆಯಾದ ಮಹಿಳಾ ಗ್ರಾಹಕ ಸಂಘವಾಗಿರುತ್ತದೆ. ಅದರಂತೆ ಮೈಸೂರಿನಲ್ಲಿಯೂ ಹಲವಾರು ಮಹಿಳೆಯರು ಕೂಡಿ ಗ್ರಾಹಕರ ಸಂಘ ಸ್ಥಾಪಿಸಿದರು. ಇದರಿಂದ ಪ್ರಭಾವಿತರಾಗಿ ವಿವಿಧ ನಗರದವರೂ ಮಹಿಳಾ ಗ್ರಾಹಕರ ಸಹಕಾರ ಸಂಘಗಳನ್ನು ಸ್ಥಾಪಿಸಿದರು.

ಬೃಹತ್ ಕೈಗಾರಿಕೆಗಳಿಗೆ ಪೂರಕ ಸಹಕಾರಿ ಘಟಕಗಳು: ನಮಗೆ ಸ್ವಾತಂತ್ರ್ಯ ಲಭಿಸಿದ ನಂತರ ಸಾರ್ವಜನಿಕ ಕ್ಷೇತ್ರದಲ್ಲಿ ಬೆಂಗಳೂರಿನಲ್ಲಿ ಭಾರತ ದೂರವಾಣಿ ಕಾರ್ಖಾನೆ ಆರಂಭಿಸಲಾಯಿತು. ಈ ಕಾರ್ಖಾನೆಯಲ್ಲಿ ದೂರವಾಣಿ ಯಂತ್ರದ ೫೦೦ಕ್ಕೂ ಹೆಚ್ಚು ಚಿಕ್ಕ ಪುಟ್ಟ ಬಿಡಿ ಭಾಗಗಳನ್ನು ಉತ್ಪಾದಿಸಲಾಗುತ್ತಿತ್ತು. ಈ ಸಂದರ್ಭದಲ್ಲಿ ಅದರಲ್ಲಿ ಕೆಲವು ಬಿಡಿಭಾಗಗಳ ಜೋಡಣೆ ಮತ್ತು ಕಾಯಿಲ್ ವೈಂಡಿಂಗ್ ನಂತಹ ಜೋಡಣೆ ಕಾರ್ಯಗಳನ್ನು ನಿರ್ವಹಿಸಲು ನೀಳವಾದ ಕೈಬೆರಳುಗಳುಳ್ಳವರ ಅಗತ್ಯವಿತ್ತು. ಇಂಥ ಕಾರ್ಯಗಳಿಗೆ ಮಹಿಳೆಯರ ಕೈಗಳು ಸರಾಗವಾಗಿ ಕಾರ್ಯಗೈಯಲು ಯೋಗ್ಯವೆಂದು ಋಜುವಾತುಪಡಿಸಿದ್ದರಿಂದ ಕೇವಲ ೪–೫ ನೆಯ ತರಗತಿಯವರೆಗೆ ವಿದ್ಯೆ ಗಳಿಸಿರುವವರು ಅರ್ಹರೆಂದು ಭಾವಿಸಿ ಅಲ್ಪವಿದ್ಯಾವಂತರಾದರೂ ಕೂಡ ಪದಾರ್ಥಗಳನ್ನು ಗುರುತಿಸಿ ಅಂಕಿ ಸಂಖ್ಯೆಗಳನ್ನು ನೆನಪಿನಲ್ಲಿಟ್ಟುಕೊಳ್ಳುವಂತಹ ಶಕ್ತಿಶಾಲಿಗಳನ್ನು ಆಯ್ಕೆ ಮಾಡಿ ವಯಸ್ಸಿನ ನಿರ್ಬಂಧದಿಂದ ಮುಕ್ತರನ್ನಾಗಿಸಿ ಅಂತಹ ಮಹಿಳೆಯರಿಗೆ ಸ್ವತಃ ಕಾರ್ಖಾನೆಯವರೇ ಒಂದು ವಾರ ತರಬೇತಿ ಕೊಟ್ಟು ಉದ್ಯೋಗ ಒದಗಿಸುವ ಮಹದುದ್ದೇಶವುಳ್ಳವರಾಗಿರುವದರಿಂದ ಮಹಿಳೆಯರು ಆರ್ಥಿಕ ಸಬಲರಾಗಲು ಈ ಯೋಜನೆ ಪ್ರೋತ್ಸಾಹದಾಯಕವಾಗಿರುವದು. ಹೀಗಾಗಿ ಬೆಂಗಳೂರು ಪಟ್ಟಣದಲ್ಲಿ ದೂರವಾಣಿ ಕಾರ್ಖಾನೆಯಲ್ಲಿ ಪ್ರಪ್ರಥಮವಾಗಿ ಮಹಿಳಾ ಕೈಗಾರಿಕೆಯ ಸಹಕಾರ ಸಂಘವು ಪೂರಕ ಘಟಕಗಳನ್ನು ಸ್ಥಾಪಿಸಲು ಮಾರ್ಗ ಲಭಿಸಿದಂತಾಯಿತು. ಯುದ್ಧದಲ್ಲಿ ತೀರಿಹೋದ ಸೈನಿಕರ ಪತ್ನಿಯರಿಗೆ ಉದ್ಯೋಗಾವಕಾಶ ಪೂರೈಸಲು ಸಾಧ್ಯವಾಯಿತು. ಇದರ ಪ್ರಭಾವದಿಂದ ದೂರವಾಣಿ ನಗರ ಬಡಾವಣೆಯಲ್ಲಿ ಮೂರು ಪೂರಕ ಘಟಕಗಳನ್ನು ಸ್ಥಾಪಿಸಲಾಯಿತು. ಆ ಘಟಕಗಳಲ್ಲಿ ೫೦೦ಕ್ಕೂ ಹೆಚ್ಚು ಸ್ತ್ರೀಯರಿಗೆ ಉದ್ಯೋಗಾವಕಾಶಗಳು ದೊರೆತವು. ಅದರ ಪ್ರತಿಫಲವಾಗಿ ಅವರವರ ಕುಟುಂಬದ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಲು ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಸೌಲಭ್ಯ ಒದಗಿಸಲು ತುಂಬಾ ಪ್ರೇರಣೆ ಸಿಗುವಂತಾಯಿತು.

ಅದೇ ರೀತಿ ಬೆಂಗಳೂರಿನ ವಿಮಾನ ಕಾರ್ಖಾನೆಯ ಕಾರ್ಮಿಕರಿಗೆ ಅಗತ್ಯವಾದ ಸಮವಸ್ತ್ರಗಳನ್ನು ಸಿದ್ಧಪಡಿಸಲು ಒಂದು ಪೂರಕ ಘಟ್ಟವನ್ನು ಸಹಕಾರ ಪದ್ಧತಿಯಲ್ಲಿ ಆರಂಭಿಸಿದ್ದರಿಂದ ಆ ಘಟಕದಲ್ಲಿ ೧೫೦ಕ್ಕೂ ಹೆಚ್ಚು ಮಹಿಳೆಯರು ಉದ್ಯೋಗಸ್ಥರಾದರು. ಹಲವು ಖಾಸಗಿ ಕಾರ್ಖಾನೆಗಳೂ ಕೂಡ ಈ ರೀತಿಯ ಪೂರಕ ಘಟಕಗಳನ್ನು ಸ್ಥಾಪಿಸಿ ಮಹಿಳೆಯರಿಗೆ ಉದ್ಯೋಗಾವಕಾಶ ಪೂರೈಸಿದವು. ಇದರಿಂದಾಗಿ ಮಹಿಳೆಯರು ಬಿಡುವಿನ ಸಮಯದಲ್ಲಿ ಮನೆಯಲ್ಲಿಯೇ ಕುಳಿತು ಕೆಲಸ ಮಾಡಿ ಆರ್ಥಿಕ ಭದ್ರತೆ ಪಡೆಯುವಂತಾಯಿತು.

ಈ ಪೂರಕ ಘಟಕಗಳು ೧೯೬೫–೧೯೭೫ರಲ್ಲಿ ಸ್ಥಾಪಿಸಲ್ಪಟ್ಟು ಅತ್ಯುತ್ತಮ ಕಾರ್ಯಗೈದು ಯಶಸ್ಸು ಪಡೆಯುವಂತಾಯಿತು. ಇದರಿಂದ ಕೈಗಾರಿಕಾ ಕ್ಷೇತ್ರದಲ್ಲಿ ಪಾಲುದಾರ

ರಾಗುವ ಸುವರ್ಣಾವಕಾಶ ಅಸಂಖ್ಯಾತ ಮಹಿಳೆಯರಿಗೆ ಲಭಿಸಿತ್ತಲ್ಲದೆ ನಮ್ಮ ದೇಶದ ಉತ್ಪಾದನೆ ಅಧಿಕವಾಗಿ ಆರ್ಥಿಕಾಭಿವೃದ್ಧಿ ಗಳಿಸಲು ಸಾಧ್ಯವಾಗುವುದರೊಂದಿಗೆ ಪ್ರತಿಯೊಬ್ಬ ಉದ್ಯೋಗಸ್ಥ ಮಹಿಳೆಯರ ಆರ್ಥಿಕ ಸ್ಥಿತಿ ಗತಿ ಇಮ್ಮಡಿಯಾಯಿತು.

ಅಂತರಾಷ್ಟ್ರೀಯ ಮಹಿಳಾ ವರ್ಷ ಮತ್ತು ದಶಕ : ಪ್ರಪಂಚದ ಪ್ರತಿಯೊಂದು ದೇಶವೂ ತಮ್ಮ ತಮ್ಮ ದೇಶದ ಸ್ತ್ರೀಯರ ಆರ್ಥಿಕ ಹಾಗೂ ಸಾಮಾಜಿಕ ಜೀವನ ಮಟ್ಟವನ್ನು ಕೂಲಂಕಷವಾಗಿ ವಿಶ್ಲೇಷಿಸಿದ ಸಂದರ್ಭದಲ್ಲಿ ಎಲ್ಲ ದೇಶಗಳ ಜನಸಂಖ್ಯೆಯಲ್ಲಿಯೂ ೫೦%ರಷ್ಟು ಮಹಿಳೆಯರ ಪರಿಸ್ಥಿತಿ ಯಾವ ಕ್ಷೇತ್ರದಲ್ಲಿಯೂ ಹೇಳಿಕೊಳ್ಳು ವಷ್ಟು ಉತ್ತಮ ಗುಣಮಟ್ಟದ್ದಾಗಿರದ್ದರಿಂದ ಸರ್ವ ಕ್ಷೇತ್ರಗಳಲ್ಲಿಯೂ ಮಹಿಳೆಯರ ಸ್ಥಿತ್ಯಂತರ ಶ್ರೇಷ್ಠವಾದರೆ ಮಾತ್ರ ದೇಶದ ಆರ್ಥಿಕಾಭಿವೃದ್ಧಿ ಅತ್ಯುತ್ತಮವಾಗಲು ಸಾಧ್ಯ ಎಂಬ ಸದುದ್ದೇಶದಿಂದ ಮಹಿಳಾ ವಿಶ್ವ ಸಮ್ಮೇಳನವನ್ನು ೧೯೭೫ರಲ್ಲಿ ಮೆಕ್ಸಿಕೋ ದೇಶದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಸಮ್ಮೇಳನದಲ್ಲಿ ಮಹಿಳೆಯರಷ್ಟೇ ಅಲ್ಲದೆ ವಿಶ್ವದ ವಿವಿಧ ಖ್ಯಾತ ತಜ್ಞರೂ ಭಾಗಿಗಳಾಗಿದ್ದರು. ಸರ್ವರೂ ಪರಸ್ಪರ ಸಮಾಲೋಚನೆ ನಡೆಸಿ ಹಲವಾರು ಕ್ಷೇತ್ರಗಳಲ್ಲಿ ಮಹಿಳೆಯರು ಸಕ್ರಿಯವಾಗಿ ಪಾಲ್ಗೊಳ್ಳಬಹುದಾದ ವಿವಿಧ ಕಾರ್ಯಯೋಜನೆ ಗಳನ್ನು ಏರ್ಪಡಿಸಲು ಸೂಕ್ತ ಸಲಹೆ ಸೂಚನೆಗಳನ್ನು ಅಭಿವ್ಯಕ್ತಪಡಿಸಿದರು. ಅವರೆಲ್ಲರ ಸಲಹೆಯಂತೆ ಸಹಕಾರ ಕ್ಷೇತ್ರದಲ್ಲಿ ಮಹಿಳೆಯರು ಕ್ರಿಯಾಶೀಲರಾಗಿ ಪಾಲ್ಗೊಳ್ಳುವಂತೆ ಕ್ರಮ ಕೈಗೊಳ್ಳಲು ಕೇಂದ್ರ ಸರ್ಕಾರ ಆದೇಶಿಸಿತು. ಈ ಆದೇಶಗಳನ್ನು ಜಾರಿಗೊಳಿಸುವ ಕಾರ್ಯಭಾರವನ್ನು ಆಯಾ ರಾಜ್ಯಗಳ ಮಹಿಳಾ ಮತ್ತು ಮಕ್ಕಳ ಇಲಾಖೆಯೊಂದಿಗೆ ಆಯಾ ರಾಜ್ಯಗಳ ಸಹಕಾರ ಇಲಾಖೆಗಳೊಂದಿಗೆ ಒಗ್ಗೂಡಿ ಸೂಚಿಸಿರುವ ಕಾರ್ಯಯೋಜನೆಗಳು ಜಾರಿಯಲ್ಲಿ ಬರುವಂತೆ ಪ್ರಮುಖವಾಗಿ ಎರಡು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕೇಂದ್ರ ಸರ್ಕಾರವು ಆದೇಶ ಹೊರಡಿಸಿತು. ಅವುಗಳೆಂದರೆ–

೧) ಜಿಲ್ಲಾ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘಗಳು.

೨) ಜಿಲ್ಲಾ ಮಹಿಳಾ ಪಟ್ಟಣ ಸಹಕಾರಿ ಬ್ಯಾಂಕ್‌ಗಳು.

ಪ್ರತಿ ಜಿಲ್ಲೆಯಲ್ಲಿಯೂ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘಗಳನ್ನು ಸ್ಥಾಪಿಸಿ ವಿವಿಧ ರಂಗಗಳಲ್ಲಿ ಕಾರ್ಯನಿರತರಾದ ಮಹಿಳೆಯರಿಗೆ ಉದ್ಯೋಗ ಒದಗಿಸಿ ಕೊಡುವ ಮುಖೇನ ಅವರ ಆರ್ಥಿಕ ಗುಣಮಟ್ಟ ವರ್ಧಿಸುವಂತೆ ಮಾಡುವ ಸದುದ್ದೇಶವನ್ನು ಜಿಲ್ಲಾ ಮಹಿಳಾ ವಿವಿಧೋದ್ದೇಶ ಸಹಕಾ ಸಂಘಗಳು ಹೊಂದಿರುತ್ತವೆ. ಈ ಸಂಘದಲ್ಲಿ ಅಧಿಕ ಪ್ರಮಾಣದಲ್ಲಿ ಸದಸ್ಯರು ತಮ್ಮ ಆಸಕ್ತಿಗನುಗುಣವಾಗಿ ವ್ಯಾಪಾರಗೈದು ಆರ್ಥಿಕ ಪ್ರಗತಿ ಸಾಧಿಸುವದು, ತಮ್ಮ ಮನೆಯಲ್ಲಿಯೇ ತಮ್ಮ ಅಪೇಕ್ಷೆಯಂತೆ ಕರಕುಶಲ ಕಲೆಗಳನ್ನು ಸಿದ್ಧಗೊಳಿಸಿದವರಿಗೆ ಸೂಕ್ತ ಮಾರುಕಟ್ಟೆ ಹಾಗೂ ಪ್ರದರ್ಶನ ಸೌಲಭ್ಯಕ್ಕೆ ಪ್ರೋತ್ಸಾಹಿಸುವದು ಮಹಿಳೆಯರನ್ನು ಆರ್ಥಿಕವಾಗಿ ಸಬಲರನ್ನಾಗಿಸಿದರೆ ದೇಶದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಸಹಜವಾಗಿ ಲಭ್ಯವಾಗುವಂತಹ ಕಾರ್ಯಯೋಜನೆಗಳನ್ನು ರೂಪಿಸಲಾಗಿತ್ತು.

ಮಹಿಳಾ ಉದ್ಯಮಿಗಳನ್ನು ಪ್ರೇರೇಪಿಸಲು ಕೌಟುಂಬಿಕ ಕುಂದುಕೊರತೆಗಳನ್ನು ಪರಿಹರಿಸಲು ಖಾಯಿಲೆಗಳಿಗೆ ವೈದ್ಯಕೀಯ ಚಿಕಿತ್ಸೆಯ ಖರ್ಚು ನಿಭಾಯಿಸಲು, ಗೃಹೋಪಯೋಗಿ ಅಗತ್ಯ ಸಾಮಗ್ರಿಗಳನ್ನು ಖರೀದಿಸಲು, ಮದುವೆ ಮುಂಜಿ ಇತ್ಯಾದಿ ಕಾರ್ಯಕ್ರಮಗಳನ್ನು ಸರಾಗವಾಗಿ ನೆರವೇರಿಸಲು ಸಹಕರಿಸುವ ಸದುದ್ದೇಶಗಳಿಂದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಮಹಿಳೆಯರು ಪಟ್ಟಣ ಸಹಕಾರ ಬ್ಯಾಂಕ್ ಗಳನ್ನು ಹುಟ್ಟುಹಾಕಿ ತಮ್ಮ ಸದಸ್ಯೆಯರಿಗೆ ಅಗತ್ಯವಾದ ಸಾಲವನ್ನು ಕಡಿಮೆ ಬಡ್ಡಿದರದಲ್ಲಿ ಒದಗಿಸಿಕೊಡುತ್ತ ಬಂದಿರುವುದರಿಂದ ಇಂದು ಮಹಿಳೆಯರು ಪ್ರತಿಯೊಂದು ಕ್ಷೇತ್ರದಲ್ಲಿ ಸಾಧನೆಗೈಯಲು ಪೈಪೋಟಿಗಿಳಿಯಲು ಸಹಜವಾಗಿ ಸರಳ ಮಾರ್ಗ ದೊರೆತಂತಾಗಿದೆ.

ಮಹಿಳೆಯರ ಪತ್ತಿನ ಸಹಕಾರ ಸಂಘಗಳು : ರಾಜ್ಯದಾದ್ಯಂತ ಹಲವಾರು ನಗರಗಳಲ್ಲಿ ಮಹಿಳೆಯರು ತಮ್ಮದೇ ಆದ ಪತ್ತಿನ ಸಹಕಾರ ಸಂಘಗಳನ್ನು ಸ್ಥಾಪಿಸಿದ್ದಾರೆ. ಪತ್ತಿನ ಸಹಕಾರ ಸಂಘಗಳು ಕೋಟಿಗಟ್ಟಲೆ ಷೇರು ಬಂಡವಾಳ ಸಂಗ್ರಹಿಸುವ ಅವಶ್ಯವಿರುವುದಿಲ್ಲ. ಸಾಲ ಒದಗಿಸಲು ಸರಳ ನಿಯಮಾವಳಿಗಳಿರುತ್ತವೆ. ಅಲ್ಪಾವಧಿಯ ಸಾಲವನ್ನು ಸದಸ್ಯೆಯರಿಗೆ ಸರಳವಾಗಿ ಕೊಡುವ ಸೌಲಭ್ಯ ಗಳಿರುತ್ತವೆ. ಆದರೆ ಸಹಕಾರ ಬ್ಯಾಂಕ್‌ಗಳನ್ನು ಸ್ಥಾಪಿಸಲು ರಿಜರ್ವ್ ಬ್ಯಾಂಕ್ ಅಧಿಕ ನಿಯಮಗಳನ್ನು ಜಾರಿಗೊಳಿಸಿರು ತ್ತದೆ. ಅದಕ್ಕಿಂತ ಮಿಗಿಲಾಗಿ ४–೫ ಕೋಟಿ ರೂ.ಗಳಷ್ಟು ಷೇರು ಬಂಡವಾಳವನ್ನು ಹೂಡುವದು ಕಡ್ಡಾಯಗೊಳಿಸಿರು ತ್ತದೆ. ಆ ಷೇರು ಬಂಡವಾಳ ವಸೂಲು ಮಾಡಲು ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಯಲ್ಲಿ ತಂದಿರುತ್ತದೆ. ಆದ್ದರಿಂದ ಬ್ಯಾಂಕ್‌ಗಳನ್ನು ಸ್ಥಾಪಿಸುವುದು ಸಾಧನೆಯ ಹಾದಿಯಲ್ಲಿ ಮುನ್ನಡೆಸುವದು ತುಂಬಾ ಕಷ್ಟಸಾಧ್ಯವಾದುದು. ಹೀಗಾಗಿ ಪಟ್ಟಣಗಳಲ್ಲಿ ಅನೇಕ ಪತ್ತಿನ ಸಹಕಾರ ಸಂಘಗಳ ಸ್ಥಾಪನೆ ಯಾಗಿ ಮಹಿಳೆಯರ ಆರ್ಥಿಕ ಜೀವನ ಪ್ರಗತಿಪರವಾಗಲು ಅನುಕೂಲವಾಗಿರುತ್ತದೆ. ಇದರಿಂದ ಸರ್ವ ಕೌಟುಂಬಿಕ ಬದುಕು ನೆಮ್ಮದಿದಾಯಕವಾಗಿರುತ್ತವೆ.

ಗ್ರಾಮಾಂತರ ಮಹಿಳಾ ಸಹಕಾರ ಸಂಘಗಳು : ಗ್ರಾಮಾಂತರ ಪ್ರದೇಶಗಳಲ್ಲಿ ಗುಡಿ ಕೈಗಾರಿಕೆಗಳ ಅಭಿವೃದ್ಧಿಗಾಗಿ ರಾಜ್ಯದ ಖಾದಿ ನಿಮಗ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿರುತ್ತವೆ. ಉದಾ : ಬೆಂಕಿಪೊಟ್ಟಣ, ಸಾಬೂನು, ಸೀಮೆಸುಣ್ಣ, ಶುದ್ಧವಾದ ಎಣ್ಣೆಗಳನ್ನು ಗಾಣಗಳಿಂದ ಉತ್ಪಾದಿಸುವದು ಇತ್ಯಾದಿಗಳು ಅನೇಕ ಮಹಿಳೆಯರಿಗೆ ನಿರುದ್ಯೋಗ ಪರಿಹರಿಸಿ ಆರ್ಥಿಕ ಸಬಲೀಕರಣಕ್ಕೆ ನಾಂದಿ ಹಾಡಿರುತ್ತವೆ. ಬೆಂಗಳೂರಿನ ಹನುಮಂತನಗರದಲ್ಲಿ ಪಾಕೀಟ ಅಕ್ಕಿ, ಅವಲಕ್ಕಿ ತಯಾರಿಸುವ ಮಹಿಳಾ ಕಾರ್ಮಿಕರ ಸಹಕಾರ ಸಂಸ್ಥೆಯು ಜನ್ಮ ತಾಳಿ ಅತ್ಯುತ್ತಮ ಕಾರ್ಯಪ್ರವೃತ್ತವಾಗಿರುತ್ತದೆ.

ಹಾಲು ಉತ್ಪಾದನಾ ಸಹಕಾರ ಸಂಘಗಳು : ಗ್ರಾಮಾಂತರ ಪ್ರದೇಶಗಳಲ್ಲಿ ಕುರಿ ಕೋಳಿ ಸಾಕಾಣಿಕೆ ಹಾಗೂ ಪಶುಪಾಲನೆ ಮೊದಲಾದ ಕಾರ್ಯಕ್ರಮಗಳಲ್ಲಿ ಮಹಿಳೆಯರೇ ನಿರತರಾಗಿದ್ದರೂ ಅದರಿಂದ ಬರುವ ಆದಾಯದಿಂದ ವಂಚಿತರಾಗುತ್ತಿದ್ದರು. ಆದರೆ ಈಗ ೨ ದಶಕಗಳಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಹಾಲಿನ ಉತ್ಪಾದನೆ ಮತ್ತು ಸರಬರಾಜು ವ್ಯವಸ್ಥೆ ನೋಡಿಕೊಳ್ಳಲು ಮಹಿಳೆಯರು ಸಹಕಾರ ಸಂಘಗಳನ್ನು ಸ್ಥಾಪಿಸಿ ಅದರ ಪ್ರತಿಯೊಂದು ಜವಾಬ್ದಾರಿಯನ್ನು ತಾವೇ ವಹಿಸಿಕೊಂಡು ಅತ್ಯಂತ ಯಶಸ್ವಿಯಾಗಿ ಮುನ್ನಡೆಸುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿನ ಅವಿದ್ಯಾವಂತ ಮಹಿಳೆಯರೂ 'ಅರಿವೇ ಗುರು' ಎಂಬ ತತ್ವ ಅಳವಡಿಸಿಕೊಂಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿನ 'ಹೈನು ಅಭಿವೃದ್ಧಿ' ಕಾರ್ಯವನ್ನು ಸುಗಮವಾಗಿ ನಡೆಸಿ ಕ್ಷೀರ ಕ್ರಾಂತಿಯನ್ನುಂಟು ಮಾಡಿರುವದು ಶ್ಲಾಘನೀಯ. ಅದರಂತೆ ಕೋಳಿ ಸಾಕಾಣಿಕೆ ಹಾಗೂ ಮೊಟ್ಟೆಗಳ ವ್ಯಾಪಾರಗೈದು ಶ್ರೀಮಂತ ಬದುಕು ರೂಪಿಸಿಕೊಂಡಿರುವದು ಅನುಕರಣೀಯ.

ತರಕಾರಿ-ಹಣ್ಣುಗಳ ಬೆಳೆಗಾರರ ಸಹಕಾರ ಸಂಘಗಳು: ಗ್ರಾಮಾಂತರ ಪ್ರದೇಶಗಳಲ್ಲಿ ಈಗ ಹಣ್ಣು-ತರಕಾರಿಗಳನ್ನು ಬೆಳೆಯುವವರು ಮಹಿಳೆಯರೇ. ದಳ್ಳಾಳಿಗಳ ಹಾವಳಿಯನ್ನು ನಿವಾರಿಸಿ ಸ್ವತಃ ತಾವೇ ನಗರಗಳಿಗೆ ತಮ್ಮ ಉತ್ಪಾದನೆಗಳನ್ನು ಸರಬರಾಜುಗೈದು ವ್ಯವಸ್ಥಿತವಾಗಿ ಆರ್ಥಿಕ ಸುಭದ್ರತೆ ಗಳಿಸಿದ್ದಾರೆ.

ಕರ್ನಾಟಕ ರಾಜ್ಯ ಮಹಿಳಾ ಸಹಕಾರ ಮಂಡಲ : ಕರ್ನಾಟಕದಲ್ಲಿ ಈಗ ೧೨೦೦ಕ್ಕೂ ಹೆಚ್ಚು ಮಹಿಳಾ ಸಹಕಾರ ಸಂಸ್ಥೆಗಳಿರುತ್ತವೆ. ಈ ಸಹಕಾರ ಸಂಸ್ಥೆಗಳು ಹಲವಾರು ರೂಪದ ಸಮಸ್ಯೆಗಳಿಂದ ತತ್ತರಿಸುವಂತಾಗಿವೆ. ಅವುಗಳ ಪರಿಹಾರಕ್ಕಾಗಿ ರಾಜ್ಯಮಟ್ಟದ ಸಂಸ್ಥೆಯೊಂದು ಅತ್ಯವಶ್ಯವೆನಿಸಿದ್ದರಿಂದ ಸಹಕಾರ ಕ್ಷೇತ್ರದಲ್ಲಿ ಅನುಭವ ಗಳಿಸಿದ ಮಹಿಳಾ ಸಹಕಾರಿ ಸದಸ್ಯೆಯರು ಒಗ್ಗೂಡಿ ರಾಜ್ಯ ಮಹಿಳಾ ಸಹಕಾರ ಮಂಡಲವನ್ನು ಹುಟ್ಟುಹಾಕಿತು. ರಾಜ್ಯದಲ್ಲಿಯ ಸರ್ವ ಮಹಿಳಾ ಸಹಕಾರ ಸಂಘಗಳ ಸಮಸ್ಯೆಗಳನ್ನು ಅಧ್ಯಯನಗೈದು ಆಯಾ ಸಂಘಗಳ ಕೋರಿಕೆಯಂತೆ ಸೂಕ್ತ ಪರಿಹಾರ ಒದಗಿಸುವದು ಈ ಸಂಘದ ಮಹದುದ್ದೇಶ ವಾಗಿರುವದು.

ಮಹಿಳಾ ಸಹಕಾರಿಗಳು ಉತ್ಪಾದಿಸಿದ ವಸ್ತುಗಳ ಮಾರಾಟ : ಗ್ರಾಮಾಂತರ ಪ್ರದೇಶ, ಪಟ್ಟಣ ಹಾಗೂ ನಗರಗಳ ಮಹಿಳಾ ಸಹಕಾರಿಗಳು ಉತ್ಪಾದಿಸುವ ವಸ್ತುಗಳಲ್ಲಿ ವೈವಿಧ್ಯಮಯವಾದ ಭಿನ್ನತೆಗನುಗುಣವಾಗಿ ಈ ವಸ್ತುಗಳಿಗೆ ಸೂಕ್ತ ಮಾರುಕಟ್ಟೆ ಒದಗಿಸಲು ಕರ್ನಾಟಕ ರಾಜ್ಯ ಮಹಿಳಾ ಸಹಕಾರ ಮಂಡಲ ಕರ್ನಾಟಕ ರಾಜ್ಯದ ರಾಜಧಾನಿ ಬೆಂಗಳೂರು ನಗರದ ಪ್ರತಿಷ್ಠಿತ ಕೆಂಪೇಗೌಡ ರಸ್ತೆ ಬಡಾವಣೆಯ ಜನತಾ ಬಜಾರ್‌ನಲ್ಲಿ 'ಸ್ತ್ರೀ' ಎಂಬ ಮಾರಾಟ ಕೇಂದ್ರ ಆರಂಭಿಸಿ ಮಹಿಳಾ ಸಹಕಾರಿಗಳು ತಯಾರಿಸುವ ವಸ್ತುಗಳಿಗೆ ಸೂಕ್ತ ಮಾರುಕಟ್ಟೆ ಸೌಲಭ್ಯ ಒದಗಿಸಿ ಪ್ರೋತ್ಸಾಹಿಸಿರುವದು ಸ್ತುತ್ಯಾರ್ಹವಾದುದು.

ಆಹಾರ ಪದಾರ್ಥಗಳನ್ನು ತಯಾರಿಸುವ ಮಹಿಳಾ ಸಹಕಾರ ಸಂಸ್ಥೆಗಳು : ಬೆಂಗಳೂರು ಮಹಾನಗರದಲ್ಲಿರುವ ಬೃಹತ್ ಕಾರ್ಖಾನೆಗಳಲ್ಲಿನ ಕಾರ್ಮಿಕರ ಕ್ಯಾಂಟೀನ್‌ಗಳಿಗೆ ಬೇಕರಿ ಪದಾರ್ಥಗಳ ಸರಬರಾಜುಗೈಯುವ ನಿಮಿತ್ತ ಬಿ.ಇ.ಎಲ್. ಹಾಗೂ ಐ.ಟಿ.ಐ. ಕಾರ್ಖಾನೆಗಳ ಆವರಣದಲ್ಲಿ ಬೇಕರಿಗಳನ್ನು ಸಹಕಾರದಡಿಯಲ್ಲಿ ಸ್ಥಾಪಿಸಿ ನೂರಾರು ವಿಧವಾ ಕಾರ್ಮಿಕ ಪತ್ನಿಯರಿಗೆ ಹಾಗೂ ಇನ್ನಿತರ ಮಹಿಳೆಯರಿಗೆ ಉದ್ಯೋಗ ಒದಗಿಸಿರುವದರಿಂದ ದೀನದಲಿತ ಮಹಿಳೆಯರು ಸ್ವಾವಲಂಬಿ ಗಳಾಗಿ ಆರ್ಥಿಕ ಸಬಲೀಕರಣ ವುಳ್ಳವರಾಗಿರುತ್ತಾರೆ.

ಅಂತರ್‌ರಾಷ್ಟ್ರೀಯ ಸಿಕೋಪ ಸಂಸ್ಥೆ : ಕಳೆದ ದಶಕದಲ್ಲಿ ಬೆಂಗಳೂರಿನಲ್ಲಿ ದಕ್ಷಿಣ ಏಷ್ಯಾ- ಸಹಕಾರ ತರಬೇತಿ ಸಂಸ್ಥೆಯೊಂದು ಆರಂಭವಾಗಿದ್ದು ಹಲವಾರು ವಿಧದ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಿ ಮಹಿಳೆಯರು ಸ್ವಾವಲಂಬಿಗಳಾಗುವಂತೆ ಸ್ಫೂರ್ತಿಯ ಸೆಲೆಯಾಗಿರುತ್ತದೆಯಲ್ಲದೆ ಮಾರಾಟ ಮಳಿಗೆಯನ್ನೂ ಪ್ರಾರಂಭಿಸಿ ಮಹಿಳೆಯರು ಸಿದ್ಧಪಡಿಸುವ ವಸ್ತುಗಳಿಗೆ ಮಾರುಕಟ್ಟೆ ಸೌಲಭ್ಯ ನಿರ್ಮಿಸಿರುವ ಕಾರ್ಯ ಮೆಚ್ಚುವಂತಹ ದಾಗಿದೆ. ಕಾಲಕ್ರಮೇಣ ಮಹಿಳೆಯರು ಸಹಕಾರ ಕ್ಷೇತ್ರವನ್ನು ವೈವಿಧ್ಯಮಯವನ್ನಾಗಿಸಿ ಇನ್ನೂ ಅಧಿಕ ಪ್ರಮಾಣದಲ್ಲಿ ಕ್ರಾಂತಿಕಾರಿ ಯೋಜನೆಗಳನ್ನು ರೂಪಿಸಿಕೊಂಡು ದೇಶದ ಆರ್ಥಿಕ ಪ್ರಗತಿಯಲ್ಲಿ ಮೇಲುಗೈ ಸಾಧಿಸುವುದರಲ್ಲಿ ಎಳ್ಳಷ್ಟು ಸಂದೇಹವೇ ಇಲ್ಲ.

೨೦೦೪ ಅಕ್ಟೋಬರ್‌ನಲ್ಲಿ ಬೆಂಗಳೂರಿನಲ್ಲಿ ಅಂತರ್ ರಾಷ್ಟ್ರೀಯ ಮಹಿಳಾ ಸಹಕಾರಿಗಳ ಪ್ರಾದೇಶಿಕ ಸಮಾವೇಶ ಏರ್ಪಡಿಸಿದ್ದು ಇದರಲ್ಲಿ ಹಲವಾರು ವಿದೇಶಿಯ ಮಹಿಳಾ ಸಹಕಾರಿಗಳು ಭಾಗವಹಿಸಿದ್ದರು. ಇರಾನ್‌ನಂತಹ ರಾಷ್ಟ್ರದಲ್ಲಿಯೂ ಕೂಡ ಸಹಕಾರ ಪ್ರಜ್ಞೆ ಪ್ರಜ್ವಲಿಸುತ್ತಿರುವುದು ಕಂಡುಬರುತ್ತಿದೆ. ಶ್ರೀಲಂಕಾ, ಮಲೇಶಿಯಾ ರಾಷ್ಟ್ರಗಳಲ್ಲಿ ಸಹಕಾರಾಭಿವೃದ್ಧಿಗೆ ಮಹಿಳೆಯರು ಮಹತ್ವದ ಕೊಡುಗೆ ಅರ್ಪಿಸುತ್ತಿದ್ದಾರೆ. ವಿಶ್ವದ ಬಹುಪಾಲು ರಾಷ್ಟ್ರಗಳಲ್ಲಿ ಸಹಕಾರಿ ಚಳುವಳಿ ಹಬ್ಬುತ್ತಿರುವಂತೆ ಮಹಿಳೆಯರ ಸಕ್ರಿಯ ಪಾತ್ರವೂ ಹೆಚ್ಚುತ್ತಿರುವುದು ಹೃದಯಂಗಮವಾಗಿದೆ.

ಮಹಿಳಾ ಸಮಾವೇಶದಲ್ಲಿ ವಿವಿಧ ರಾಷ್ಟ್ರಗಳ ಮಹಿಳೆಯರು ಮಂಡಿಸಿದ ಯೋಜನೆಗಳನ್ನು ಹಾಗೂ ಅವರುಗಳು ನಡೆಸಿರುವ ಚಿಂತನೆಯಿಂದ ಸಹಕಾರ ಕ್ಷೇತ್ರದ ಬಗ್ಗೆ ಮಹಿಳೆಯರಿಗಿರುವ ಆಸಕ್ತಿ, ಕಾಳಜಿ ವ್ಯಕ್ತವಾಗುತ್ತದೆಯಲ್ಲದೆ ನಮ್ಮ ರಾಷ್ಟ್ರದಲ್ಲಿಯೂ ಸಹಕಾರಾಭಿವೃದ್ಧಿಯಲ್ಲಿ ಮಹಿಳೆಯರ ಸಕ್ರಿಯ ಪಾತ್ರವನ್ನು ಗುರುತಿಸಬಹುದಾಗಿದೆ. ಕರ್ನಾಟಕದಲ್ಲಂತೂ ಮಹಿಳೆಯರು ವಿಶೇಷ ಆಸಕ್ತಿಯಿಂದ ಸಹಕಾರಾಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಸುಮಾರು ೧೫೦೦ ಮಹಿಳಾ ಸಹಕಾರಿ ಸಂಘಗಳಿದ್ದು, ೨೮ ಮಹಿಳಾ ಬ್ಯಾಂಕ್‌ಗಳು ಕಾರ್ಯಪ್ರವೃತ್ತವಾಗಿರುತ್ತವೆ. ಮಹಿಳೆಯರು ಕಾರ್ಯನಿರತರಾಗಿರುವ ಬಹುಪಾಲು ಸಂಸ್ಥೆಗಳು ಅತ್ಯುತ್ತಮವಾಗಿ ಕಾರ್ಯಗೈಯುತ್ತಿರುವುದನ್ನು ಗುರುತಿಸಲಾಗಿದೆ. ಬ್ಯಾಂಕ್‌ಗಳ ಸಂಖ್ಯೆ ಹೆಚ್ಚುವ ನಿರೀಕ್ಷೆಯಿದ್ದರೂ ಕೂಡ ಅನೇಕ ಅನಿವಾರ್ಯ ಕಾರಣಗಳಿಂದ ೨೮ ಸಂಖ್ಯೆ ದಾಟಿರುವದಿಲ್ಲ. ಅದರಂತೆ ಹಾಲು ಉತ್ಪಾದಕ ಸಹಕಾರ ಸಂಘಗಳಲ್ಲಿ ಮಹಿಳೆಯರ ಪಾತ್ರ ಗಮನಾರ್ಹವಾದುದು. ಎಲ್ಲೆಲ್ಲಿ ಸಕ್ರಿಯವಾಗಿ ಮಹಿಳೆಯರು ಭಾಗಿಯಾಗಿರುವರೋ ಅಲ್ಲೆಲ್ಲ ಅತ್ಯುತ್ತಮ ಕಾರ್ಯ ಪ್ರತಿಬಿಂಬಿಸುತ್ತಲಿದೆ. ಮಹಿಳೆಯರು ಸಹಕಾರಿ ಸಂಸ್ಥೆಗಳಲ್ಲಿ ಇನ್ನೂ ಅಧಿಕ ಸಂಖ್ಯೆಯಲ್ಲಿ ಪಾಲುದಾರರಾಗುವಂತೆ ಮಾಡುವುದು ಸರ್ವರ ಆದ್ಯ ಕರ್ತವ್ಯ. ಇತ್ತೀಚಿನ ದಿನಗಳಲ್ಲಿ ಮಹಿಳೆಯರಲ್ಲಿ ಹೆಚ್ಚಿನ ಆಸಕ್ತಿ ವೃದ್ಧಿಸುತ್ತಿರುವದರಿಂದ ಅದರ ಸದುಪಯೋಗಪಡಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ.

ಮಹಿಳಾ ಸಹಕಾರ ಸಂಘಗಳ ಸ್ಥಾಪನೆ ನಿರ್ವಹಣೆ ಸಂದರ್ಭದಲ್ಲಿ ಅವರಿಗೆ ಯಾವುದೇ ಅಡೆ ತಡೆ, ಕಿರಿಕಿರಿ ಆಗದಂತೆ ನೋಡಿಕೊಳ್ಳುವುದು ಅತ್ಯವಶ್ಯ. ಯಾವುದೇ ಕಾರಣಕ್ಕೂ ಮಹಿಳೆಯರು ಬೇಸರ ಹೊಂದಿ ಸಹಕಾರ ಕ್ಷೇತ್ರದಿಂದ ದೂರವಾಗದಂತೆ ಅಗತ್ಯ ಪ್ರೋತ್ಸಾಹ ಬೆಂಬಲ ಪೂರೈಸಿದರೆ ಸಹಕಾರ ಕ್ಷೇತ್ರಕ್ಕೆ ಉಜ್ವಲ ಭವಿಷ್ಯವಿದೆ.

ಸ್ವಾತಂತ್ರ್ಯ ಹೋರಾಟ ಸಂದರ್ಭದಲ್ಲಿಯೂ ಕರ್ನಾಟಕದ ಧೀಮಂತ ಮಹಿಳೆಯರು ತಮ್ಮ ತ್ಯಾಗ, ಶೌರ್ಯ, ಸಾಹಸಗಳಿಂದ ಸೆಣೆಸಿದುದು ಚರಿತ್ರಾರ್ಹ ದಾಖಲೆಯಾಗಿದೆ. ಪುರುಷರ ದುಶ್ಚಟಗಳ ನಿರ್ಮೂಲನ, ಅಕ್ಷರಾಭ್ಯಾಸ, ಆಸ್ಪತ್ರೆ ನಿರ್ಮಾಣಗಳಂತಹ ಸಾಮಾಜಿಕ ಜವಾಬ್ದಾರಿ ನಿರ್ವಹಣೆಗೆ ಪ್ರಯತ್ನಿಸಿದ್ದಾರೆ.

ಮಹಿಳೆಯರಿಗೆ ಸ್ವಲ್ಪ ಪ್ರೋತ್ಸಾಹ ಬೆಂಬಲ ಲಭಿಸಿದರೆ ಕ್ರಿಯಾಶೀಲರಾಗಿ ಕಾರ್ಯನಿರತರಾಗುವರೆಂಬುದಕ್ಕೆ ಸಾಕ್ಷಿಗಳು ಅಸಂಖ್ಯಾತ. ೧೦-೧೫ ವರ್ಷಗಳ ಹಿಂದೆ ಈ ಕ್ಷೇತ್ರದಲ್ಲಿ ಮಹಿಳೆಯರ ಸಂಖ್ಯೆ ಕೈಬೆರಳೆಣಿಕೆಯಷ್ಟಿತ್ತಾದರೂ ಅಧಿಕ ಪ್ರೋತ್ಸಾಹ ಬೆಂಬಲದಿಂದಾಗಿ ಇಂದು ಲಕ್ಷಾಂತರ ಮಹಿಳೆಯರನ್ನು ಸಹಕಾರ ಕ್ಷೇತ್ರದಲ್ಲಿ ಕಾಣಬಹುದು. ಆದಾಗ್ಯೂ ಇನ್ನೂ ಹಲವಾರು ಮಹಿಳೆಯರಲ್ಲಿ ಕೀಳರಿಮೆ, ಅಭದ್ರತೆ ಮನೋಭಾವ ಕಂಡುಬರುತ್ತಿದೆ. ಸಹಕಾರ ಕ್ಷೇತ್ರ ಜಾತಿ, ಮತ, ಧರ್ಮ, ಲಿಂಗ ಭೇದವಿಲ್ಲದೆ ಕಾರ್ಯನಿರತವಾಗುವ ಒಂದು ವಿಶಿಷ್ಟ ಚಳುವಳಿ ಎಂಬುದನ್ನು ಸರ್ವರೂ ಅರಿತುಕೊಂಡು ಇನ್ನೂ ಜಾಗೃತರಾಗಬೇಕಾಗಿದೆ.

ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ನಿಮಿತ್ತ ಶಿಕ್ಷಣ ಪ್ರಸಾರ ಕಾರ್ಯಗಳನ್ನು ಕೈಗೊಳ್ಳಬಹುದಾಗಿದೆ. ಮಹಿಳೆಯರು ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡು ಗ್ರಾಹಕ ಚಟುವಟಿಕೆ ಬಲಪಡಿಸುವ ದಿಕ್ಕಿನಲ್ಲಿ ವಿಶೇಷ ಪ್ರಯತ್ನಗೈಯುವ ಸಣ್ಣ ಕೈಗಾರಿಕೆ ಗುಡಿ ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ಮಹತ್ತರ ಪಾತ್ರವಹಿಸುವ ಇತ್ಯಾದಿ ನೂರಾರು ವಿಪುಲ ಅವಕಾಶಗಳು ಕೈಬೀಸಿ ಕರೆಯುತ್ತಲಿದ್ದು, ಲಭ್ಯ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಸಹಕಾರ ಚಳವಳಿಯನ್ನು ಬಲಪಡಿಸಿದರೆ ಮಹಿಳೆಯರಿಗೂ ಶ್ರೇಯಸ್ಸು, ಸಮಾಜಕ್ಕೂ, ಎಲ್ಲಕ್ಕಿಂತ ಮಿಗಿಲಾಗಿ ರಾಷ್ಟ್ರಕ್ಕೂ ಅತ್ಯಂತ ಲಾಭದಾಯಕ ಎಂಬುದನ್ನು ಅರಿಯಲು ಇದು ಸಕಾಲ !

ಆಧಾರಸೂಚಿ

೧. ಕಣಗಿನಹಾಳ ಸಹಕಾರಿ ಸಂಘ ಶತಮಾನೋತ್ಸವ ಸ್ಮರಣ ಸಂಚಿಕೆ.

೨. **ಸಹಕಾರ** ಮಾಸಿಕ ಪತ್ರಿಕೆ.

೩. ಸಹಕಾರ ಶ್ರೀ ಡಿ.ಬಿ. ಚಂದ್ರೇಗೌಡ.

ಡಾ. ಎಂ.ಎಸ್. ಅನಿತ*

ಸ್ವಾತಂತ್ರ್ಯ ಪೂರ್ವ ಮೈಸೂರು ಸಂಸ್ಥಾನದಲ್ಲಿ ಇಂಗ್ಲಿಷ್ ಭಾಷೆ ಮತ್ತು ಸಾಮಾಜಿಕ ಪರಿವರ್ತನೆ - ೧೮೦೦ ರಿಂದ ೧೯೪೭

ಭಾಷೆ ಸಮಾಜದ ಒಂದು ಬಹುಮುಖ್ಯವಾದ ಹಾಗೂ ಭಾವನಾತ್ಮಕವಾದ ಅಂಶವಾಗಿದೆ. ಭಾಷೆ ಮಾನವನ ದೊಡ್ಡ ಆಸ್ತಿ. ಸಂಸ್ಕೃತಿಯ ವಾಹಕವೂ ಕೂಡ ಭಾಷೆಯೇ ಆಗಿದೆ. ಪ್ರಾಣಿಗಳಿಗೆ ಭಾಷೆಗಳಿಲ್ಲ ಆದುದರಿಂದ ಅವುಗಳಿಗೆ ಮಾನವನ ರೀತಿಯ ಸಾಮಾಜಿಕ, ಸಾಂಸ್ಕೃತಿಕ ಜೀವನವಿಲ್ಲ. ಮಾನವರು ಸಮಸ್ತ ಸೃಷ್ಟಿಯ ಅತ್ಯಂತ ಎತ್ತರದ ಜೀವಿ ಎಂದು ಪರಿಗಣಿಸಲ್ಪಟ್ಟಿರುವುದು ಆತನು ಸೃಷ್ಟಿಸಿದ ಭಾಷೆಯಿಂದ ಎಂಬುದನ್ನು ಮರೆಯುವಂತಿಲ್ಲ. ಭಾಷೆಯ ಮೂಲಕ ಕುಟುಂಬದ ಒಳಗೆ ಮತ್ತು ಸಮಾಜದ ನಾನಾ ಸ್ತರಗಳಲ್ಲಿ ಸಾಮಾಜೀಕರಣ ಕ್ರಿಯೆ ನಡೆಯುತ್ತಾ ಇರುತ್ತದೆ. ಹಾಗಾಗಿ ಭಾಷೆಯು ಎಲ್ಲಾ ಸಮಾಜಗಳಲ್ಲೂ ಬಹುಮುಖ್ಯವಾದ 'ಸಂಕೇತ ವ್ಯವಸ್ಥೆ'ಯಾಗಿದೆ. ಅಕ್ಷರ ಪೂರ್ವ ಸಮಾಜಗಳಲ್ಲಿ ಭಾಷೆಯು ಮಾತಿನ ಸ್ವರೂಪದಲ್ಲಿ ಮಾತ್ರ ಇರುವುದರಿಂದ ಅವರ ಸಂಸ್ಕೃತಿಯು ತುಂಬಾ ಇತಿಮಿತಿಗಳಿಂದ ಕೂಡಿರುತ್ತದೆ. ಆದರೆ ಆಧುನಿಕ ಸಮಾಜದಲ್ಲಿ ಭಾಷೆಯು ಲಿಖಿತ ರೂಪದಲ್ಲಿದ್ದು ಸಂಗ್ರಹಿತ ಜ್ಞಾನವಾಗಿ ಪುಸ್ತಕಗಳ ರೂಪದಲ್ಲಿ ಸಾಂಕೇತಿಸಲ್ಪಟ್ಟಿದೆ. ಯಾವುದೇ ಭಾಷೆಯ ಪುಸ್ತಕಗಳ ಸಂಗ್ರಹಣೆಯು ಶ್ರೀಮಂತ ಸಂಸ್ಕೃತಿಯೊಂದರ ಕೀಲಿಕೈ ಇದ್ದಂತೆ. ಭಾಷೆಯ ಒಂದು ರೂಪವಾದ 'ಮಾತು' ಎಂಬುದು ತಲೆಬಾಗುವುದು, ವಂದಿಸುವುದು, ಕೈಜೋಡಿಸಿ ಪ್ರಾರ್ಥಿಸುವುದು, ಹಸ್ತಲಾಘವ ನೀಡುವುದು, ಚುಂಬಿಸುವುದು, ಮುಖ ಕೆಂಪೇರುವುದು, ಕೆಂಗಣ್ಣು ಬಿಡುವುದು – ಮುಂತಾದ ಭಾವಾಭಿನಯಗಳನ್ನು ಒಳಗೊಂಡಿರುತ್ತದೆ. ಇವೆಲ್ಲವೂ ಸಂಬಂಧಿತ ಸಂಸ್ಕೃತಿಯಲ್ಲಿ ಸಾಂಕೇತಿಕ ಅರ್ಥವೀಯುತ್ತವೆ.[೧] ಪ್ರತಿಯೊಂದು ಪ್ರದೇಶವೂ ಸಹ ಸ್ಥಳೀಯವಾಗಿ ತಮ್ಮದೇ ಆದ ಭಾಷೆಯನ್ನು ಹೊಂದಿರುತ್ತದೆ. ಹಾಗೆಯೇ ಮೈಸೂರು ಸಂಸ್ಥಾನದ ಪ್ರಧಾನ ಭಾಷೆ ಕನ್ನಡವಾಗಿದೆ. ಕಾಲ ಕಾಲಕ್ಕೆ ಕನ್ನಡ ಭಾಷೆಯು ಪ್ರಾಕೃತ, ಸಂಸ್ಕೃತ, ಪರ್ಷಿಯನ್ ಭಾಷೆಗಳ ಪ್ರಭಾವಕ್ಕೊಳಗಾಗಿದೆ. ಹಾಗೆಯೇ ಕ್ರೈಸ್ತಧರ್ಮ ಹಾಗೂ ಬ್ರಿಟಿಷರ ಆಳ್ವಿಕೆಯೊಂದಿಗೆ ಇಂಗ್ಲಿಷ್ ಭಾಷೆ ಮೈಸೂರು ಪ್ರದೇಶಕ್ಕೆ ಪ್ರವೇಶಿಸಿತು. ಈ ಹಿನ್ನೆಲೆಯಲ್ಲಿ ಇಂಗ್ಲಿಷ್ ಭಾಷೆಯ ಪ್ರಭಾವವು ಸ್ವಾತಂತ್ರ್ಯ ಪೂರ್ವ ಸಂಸ್ಥಾನದಲ್ಲಿ ರಾಜಾಸ್ಥಾನದ ಪ್ರೋತ್ಸಾಹದೊಂದಿಗೆ ಪ್ರಧಾನ ಭಾಷೆಯಾಗಿ ಬೆಳವಣಿಗೆ ಹೊಂದುತ್ತಾ ಸ್ಥಳೀಯ ಭಾಷೆ ಕನ್ನಡ ಹಾಗೂ ಮೈಸೂರು ಸಂಸ್ಥಾನದ ಸಾಮಾಜಿಕ ಪ್ರಕ್ರಿಯೆಗಳಲ್ಲಿ, ಒಡನಾಟದಲ್ಲಿ ಮತ್ತು ವ್ಯವಸ್ಥೆಗಳಲ್ಲಿ ಬದಲಾವಣೆಗಳನ್ನು ತರುವ ಮೂಲಕ ಸಾಮಾಜಿಕ ಪರಿವರ್ತನೆಯ ರೂವಾರಿಯಾಗಿ ಹೇಗೆ ಆಕರ್ಷಣೆ, ತಿಕ್ಕಾಟ ಮತ್ತು ಸಮನ್ವಯತೆಗಳೊಂದಿಗೆ ತನ್ನ ಪ್ರಭುತ್ವವನ್ನು ಉಳಿಸಿಕೊಂಡು ಬಂದಿದೆ ಎಂಬುದರ ವಿಶ್ಲೇಷಣೆ ಈ ಸಂಪ್ರಬಂಧದ ಮೂಲ ಪರಿಕಲ್ಪನೆಯಾಗಿದೆ.

ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆ ಸಮಗ್ರ ಭಾರತದ ಮಟ್ಟದಲ್ಲಿ ಬೇರು ಬಿಡಲಾರಂಭಿಸಿದಾಗ 'ಇಂಗ್ಲಿಷ್' ಎಂಬ ಪಾಶ್ಚಾತ್ಯ ಸಂಸ್ಕೃತಿಯನ್ನೊತ್ತ ಭಾಷೆ ಆಡಳಿತ ಭಾಷೆಯಾಗಿ ರಾಷ್ಟ್ರಮಟ್ಟದಲ್ಲಿ ಸುಸ್ಥಾಪಿತವಾಯಿತು. ಆಡಳಿತ ವ್ಯವಸ್ಥೆಯನ್ನು ಕ್ರಮಬದ್ಧಗೊಳಿಸಿದ ಬ್ರಿಟಿಷರು ಅದನ್ನು ಸುಗಮವಾಗಿ ತಮ್ಮಿಚ್ಛೆಯಂತೆ ನಡೆಸಿಕೊಂಡು ಹೋಗಲು ಭಾರತೀಯರನ್ನೇ ದುಡಿಯುವ ಆಳುಗಳನ್ನಾಗಿ ಮಾಡಲು ನಿರ್ಧರಿಸಿ, ಅದಕ್ಕೆ ಅನುಕೂಲವೂ ಅನುರೂಪವೂ ಆದ ವಿದ್ಯಾಭ್ಯಾಸ ಪದ್ಧತಿಯನ್ನು ಜಾರಿಗೆ ತಂದರು. ಅದರಲ್ಲಿ ಅತ್ಯಂತ ಮುಖ್ಯವಾದದ್ದು ಮತ್ತು ಬಹುಕಾಲ ಪರಿಣಾಮಕಾರಿಯಾದದ್ದು – ಇಂಗ್ಲಿಷ್ ಭಾಷೆಯ ಕಲಿಕೆ ಮತ್ತು ಇಂಗ್ಲಿಷ್ ಭಾಷೆಯನ್ನೇ ಶಿಕ್ಷಣ ಮಾಧ್ಯಮವನ್ನಾಗಿ ಅಂಗೀಕರಿಸಿದ್ದು[೨].

೧೭೯೯ರಲ್ಲಿ ಟಿಪ್ಪುವಿನ ಪತನಾನಂತರ ಮೈಸೂರು ಸಂಸ್ಥಾನದಲ್ಲಿ ಬ್ರಿಟಿಷರ ಆಡಳಿತ ಮುಂದಾದಾಗ ಇಂಗ್ಲಿಷ್ ಭಾಷೆ ಸ್ವಾಭಾವಿಕವಾಗಿಯೇ ಆಡಳಿತ ಭಾಷೆಯಾಯಿತು. ಪರಿಣಾಮವಾಗಿ ಸರ್ಕಾರದ ಆಡಳಿತ ವ್ಯವಹಾರಗಳೆಲ್ಲ ಪರ್ಷಿಯನ್ ಭಾಷೆಯಿಂದ ಇಂಗ್ಲಿಷ್ ಭಾಷೆಗೆ ಬದಲಾವಣೆ ಹೊಂದಿತು. ಇದರಿಂದ ಸರ್ಕಾರಿ ಕಾಗದ ಪತ್ರಗಳು ಆಂಗ್ರೇಜಿಕರಣಗೊಳ್ಳತೊಡಗಿ ಇಂಗ್ಲಿಷ್ ಭಾಷೆಯ ಕಲಿಕೆಗೆ ಹೆಚ್ಚು ಮಹತ್ವ ದೊರಕಿತು. ಬ್ರಿಟಿಷರೊಂದಿಗೆ ವ್ಯವಹರಿಸಲು ಹಾಗೂ ಆಡಳಿತ ನಿರ್ವಹಣೆಗಾಗಿ ಮುಮ್ಮಡಿ ಕೃಷ್ಣರಾಜ

* ಆಯ್ಕೆ ಶ್ರೇಣಿ ಉಪನ್ಯಾಸಕರು, ಇತಿಹಾಸ ವಿಭಾಗ, ಮಹಾರಾಣಿ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜು, ಮೈಸೂರು.

ಒಡೆಯರಿಗೆ ಇಂಗ್ಲಿಷ್ ಕಲಿಸಲಾಯಿತು[೩]. ಅದೇ ಪರಂಪರೆ ಮೈಸೂರು ರಾಜಮನೆತನದಲ್ಲಿ ಮುಂದುವರೆದು ಹತ್ತನೆ ಚಾಮರಾಜ ಒಡೆಯರ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲಕ್ಕೆ ಉತ್ತಂಗ ಶಿಖರವನ್ನು ತಲುಪಿ ಇಂಗ್ಲಿಷ್ ಭಾಷೆಯನ್ನು ಮಾತೃಭಾಷೆಯನ್ನಾಗಿ ಹೊಂದಿದವರಿಂದಲೇ ರಾಜಕುಮಾರರಿಗೆ (ನಾಲ್ವಡಿ ಮತ್ತು ಸಹೋದರರಿಗೆ) ಇಂಗ್ಲಿಷ್ ಭಾಷೆ ಮತ್ತು ಶಿಕ್ಷಣವನ್ನು ಕಲಿಸಬೇಕೆನ್ನುವ ಮಟ್ಟವನ್ನು ಮುಟ್ಟಿತು[೪]. ಹೀಗೆ ಉತ್ತಮ ರೀತಿಯ ಇಂಗ್ಲಿಷ್ ಶಿಕ್ಷಣವನ್ನು ಪಡೆದ ಚಾಮರಾಜ ಒಡೆಯರು ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರು ಅನೇಕ ಯುರೋಪಿಯನ್ನರಿಂದಲು ಪ್ರಶಂಸೆಗೆ ಒಳಗಾಗಿದ್ದ ಉದಾಹರಣೆಗಳು ಇವೆ. ನಾಲ್ವಡಿಯವರು ತಮ್ಮ ೮ನೇ ವಯಸ್ಸಿನಲ್ಲೆ ಸೊಗಸಾದ ರೀತಿಯಲ್ಲಿ ಇಂಗ್ಲಿಷ್ ಭಾಷೆಯನ್ನಾಡುತ್ತಿದ್ದರೆಂದು ವೀರ್ ಸಾಹೇಬರಿಂದ ಪ್ರಶಂಸೆಯನ್ನು ಪಡೆದಿದ್ದರು[೫]. ತಮ್ಮ ಪಟ್ಟಾಭಿಷೇಕ ಮಹೋತ್ಸವದ ವೇಳೆಗೆ ಲಾರ್ಡ್ ಕರ್ಜನ್‌ರವರ ಅಮೋಘ ಭಾಷಣವನ್ನು ಮೀರಿಸುವಂತಹ ರೀತಿಯಲ್ಲಿ, ವಿಶೇಷ ಸಂಕೀರ್ಣ ಪದಗಳ ಸಮುಚ್ಛಯದ ವಾಕ್ಯಗಳ ಬಳಕೆಯೊಂದಿಗೆ ಮಾತನಾಡುವಷ್ಟು ಈ ಭಾಷೆಯ ಮೇಲೆ ಪ್ರೌಢಿಮೆಯನ್ನು ಬೆಳೆಸಿಕೊಂಡರು[೬]. ನಂತರ ತಮ್ಮ ಜೀವಿತಾವಧಿಯವರೆಗೂ ಮೈಸೂರು ಸಂಸ್ಥಾನದಾದ್ಯಂತ ಸಂಚರಿಸಿ ಇಂಗ್ಲಿಷ್ ಭಾಷೆಯಲ್ಲೇ ಪ್ರಧಾನವಾಗಿ ಪ್ರಜೆಗಳನ್ನು ಕುರಿತು ಭಾಷಣಗಳನ್ನು ಮಾಡುವ ಮೂಲಕ ಈ ಭಾಷೆಯ ಕಲಿಕೆಗೆ, ಬೆಳವಣಿಗೆಗೆ, ಅಳವಡಿಕೆಗೆ ಪ್ರೋತ್ಸಾಹದಾಯಕರಾಗಿ ನಿಂತರು. ಅಷ್ಟೇ ಅಲದೆ ೧೮೩೩ರಲ್ಲಿ ತಮ್ಮ ತಾತ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಆರಂಭವಾದ ಇಂಗ್ಲಿಷ್ ಶಾಲೆಯ ಸ್ಥಾಪನೆಯ ಪರಂಪರೆಯನ್ನು, ೧೮೫೪ರ ಹಾಲಿಫಾಕ್ಸ್ ವರದಿಯ[೭] ಅಂಶಗಳ ಮುಂದುವರಿಕೆಯನ್ನು ತಮ್ಮ ಆಡಳಿತಾವಧಿಯಲ್ಲಿ ಪ್ರೋತ್ಸಾಹಿಸಲು ಶಾಲೆಗಳು, ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿ[೮] ಶಿಕ್ಷಣದ ವ್ಯಾಪ್ತಿಯೊಳಗೆ ಇಂಗ್ಲಿಷ್ ಭಾಷೆಯನ್ನು ಅಳವಡಿಸುವಂತಹ ಕಾರ್ಯಯೊಜನೆಗಳನ್ನು ರೂಪಿಸಿ ಮೈಸೂರು ಸಂಸ್ಥಾನದಾದ್ಯಂತ ಪಾಶ್ಚಾತ್ಯ ಇಂಗ್ಲಿಷ್ ಭಾಷೆಯ ಬೆಳವಣಿಗೆಗೆ ಪ್ರೋತ್ಸಾಹದಾಯಕರಾಗಿ ನಿಂತರು.

ಪಾಶ್ಚಾತ್ಯ ಇಂಗ್ಲಿಷ್ ಭಾಷೆ ಮೈಸೂರು ಸಂಸ್ಥಾನದಲ್ಲಿ ಬೆಳವಣಿಗೆಗೊಳ್ಳುವಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ, ಮೈಸೂರಿನ ಒಡೆಯರು ಎಷ್ಟು ಕಾರಣರೋ ಕ್ರೈಸ್ತ ಮಿಷನರಿಗಳು ಸಹ ಅಷ್ಟೇ ಪ್ರಮುಖರಾಗಿದ್ದಾರೆ. ಕ್ರೈಸ್ತ ಧರ್ಮದ ಪ್ರಚಾರವನ್ನು ಸ್ಥಳೀಯರಲ್ಲಿ ಮನವರಿಕೆ ಮಾಡಿ ಕೊಡುವ ಹಿನ್ನೆಲೆಯಲ್ಲಿ ಅನಿವಾರ್ಯವೆನಿಸಿದ ಇಂಗ್ಲಿಷ್ ಭಾಷೆಯನ್ನು ಅಭಿವೃದ್ಧಿಪಡಿಸುವ ಹಾದಿಯಲ್ಲಿ ಹಲವಾರು ಮಿಷನರಿಗಳು ಕೆಲಸ ಮಾಡಿದವು. ಅವುಗಳಲ್ಲಿ ವೆಸ್ಲಿಯನ್ ಮಿಷನ್ ಪ್ರಮುಖ ಹಾಗೂ ಮೊದಲನೆಯದಾಗಿದ್ದು ೧೮೪೦ ರಿಂದ ೧೮೫೪ರ ಅವಧಿಯಲ್ಲಿ ಜಿಲ್ಲೆಯ ಮುಖ್ಯ ಭಾಗಗಳಲ್ಲಿ ವೆಸ್ಲಿಯನ್ ಮಿಷನ್ ಶಾಲೆಗಳನ್ನು ತೆರೆಯಿತು.[೯] ಆ ಮೂಲಕ ಸ್ಥಳೀಯವಾಗಿ ಇಂಗ್ಲಿಷ್ ಭಾಷೆಯ ಬೆಳವಣಿಗೆಗೆ ಕಾರಣೀಭೂತವಾಗಿ, ತನ್ನ ಧ್ಯೆಯವನ್ನು ಈಡೇರಿಸಿಕೊಳ್ಳಲು ಪ್ರಯತ್ನಿಸಿತು. ಇದು ಮೈಸೂರು ಸಂಸ್ಥಾನದ ಸಾಮಾಜಿಕ ಪರಿವರ್ತನೆಗೆ ಮೂಲ ಪ್ರೇರಣೆಯಾಯಿತು.

ಮೈಸೂರು ಸಂಸ್ಥಾನದ ಜನಸಮೂಹಕ್ಕೆ ಪಾಶ್ಚಾತ್ಯ ಇಂಗ್ಲಿಷ್ ಭಾಷೆಯ ಕಲಿಕೆಯ ಅನಿವಾರ್ಯತೆ ಹೆಚ್ಚಾಗಿ ಕಾಣಿಸಿಕೊಂಡಿದ್ದು ಬ್ರಿಟಿಷರು ತಮ್ಮ ಆಡಳಿತ ವ್ಯವಸ್ಥೆಗೆ ಆಡಳಿತಶಾಹಿಯನ್ನು ನೇಮಿಸಿಕೊಳ್ಳಲು ಇಂಗ್ಲಿಷ್ ಶಿಕ್ಷಣವನ್ನು ಮಾನದಂಡವಾಗಿ ಅಂಗೀಕರಿಸಿದಾಗ ಅಲ್ಲದೆ ಇಂಗ್ಲಿಷ್ ಭಾಷೆ ಬಲ್ಲವರು ಹೆಚ್ಚು ಸ್ಥಳೀಯವಾಗಿ ಸಿಗದಿದ್ದಾಗ ಆ ಕೊರತೆಯನ್ನು ನೀಗಿಸಲು ಪಕ್ಕದ ಮದ್ರಾಸ್ ಪ್ರಾಂತ್ಯದಿಂದ ಅಧಿಕಾರಿಗಳನ್ನು ಬರಮಾಡಿಕೊಳ್ಳಲಾರಂಭಿಸಿದಾಗ. ಪರಿಣಾಮವಾಗಿ ಸ್ಥಳೀಯವಾಗಿ ಸಂಸ್ಕೃತ, ಕನ್ನಡ ಕಲಿತು ವಿದ್ವಾಂಸರೆನಿಸಿಕೊಂಡು ಇದುವರೆಗೂ ಪ್ರಧಾನ ಆಡಳಿತ ಹುದ್ದೆಗಳನ್ನು ಅನುಭವಿಸುತ್ತಿದ್ದ 'ವೈದಿಕರು' ನಡೆಸುತ್ತಿದ್ದ ಪಾರಂಪರ್ಯ 'ಸುಖ ಜೀವನಕ್ಕೆ' ಸಂಚಕಾರ ಬಂದಿತು. ಅವರ ಸಂಸ್ಕೃತ ವಿದ್ಯಾಭ್ಯಾಸ ಸಡಿಲಗೊಂಡು ವೇದಾಧ್ಯಯನ, ಶಾಸ್ತ್ರಾಭ್ಯಾಸಗಳ ಆಕರ್ಷಣ ಶಕ್ತಿ ಕಡಿಮೆಗೊಳ್ಳುತ್ತಾ ಬಂದಿತು. ಸಮೃದ್ಧಿಯ ಜೀವನವೆಂದರೆ 'ಲೌಕಿಕ ಜೀವನ' ಎಂಬ ಹೊಸ ನಂಬಿಕೆ ಈ ಜನರಲ್ಲಿ ಮೂಡಿತು. ಇದರಿಂದ ವಸ್ತು–ವಿಚಾರಗಳ ಮೌಲ್ಯಗಳು ತಲೆಕೆಳಗಾಗಿ ವೈದಿಕ ಸಮಾಜವಷ್ಟೇ ಅಲ್ಲದೆ ಸಮಸ್ತ ಸಮಾಜದಲ್ಲೂ ಪ್ರಾಚೀನ ರಚನೆಗಳು ಸಡಿಲಗೊಂಡವು. ಆಚಾರ–ವಿಚಾರ, ಸಮಯ–ಸಂಪ್ರದಾಯಗಳೆಲ್ಲ ತಪತಪನೆ ಉರುಳಲಾರಂಭಿಸಿದವು. ಇಂತಹ ಪರಿವರ್ತನೆಯ ಚಂಡಮಾರುತವನ್ನು ಎದುರಿಸುವ ಶಕ್ತಿ ಸಹಜವಾಗಿ ವೈದಿಕ ಸಮಾಜ ವರ್ಗಕ್ಕೆ ಇಲ್ಲದಂತಾಯಿತು. ಈಸ್ಟ್ ಇಂಡಿಯಾ ಕಂಪನಿ ಸರ್ಕಾರದ ಐವತ್ತು ವರ್ಷಗಳ ಪ್ರಭುತ್ವದಲ್ಲಿ ಪಾಶ್ಚಾತ್ಯ ನಾಗರಿಕೆಯ ಪ್ರಭಾವ, ಆಂಗ್ಲ ಭಾಷಾಧ್ಯಯನದ ಆಕರ್ಷಣೆ ಕಲ್ಪನಾತೀತವೆನಿಸಿತು[೧೦]. ಇದರ ಪ್ರಭಾವದಿಂದ ಚತುರ್ವೇದ ವೇದಾರ್ಥ ತತ್ವಜ್ಞಾನಿಗಳೆಲ್ಲ ಜೀವನದ ಭದ್ರತೆಯ ಕಡೆಗೆ ಹೊರಳಿ 'ಹೂಣ ಭಾಷಾಭ್ಯಾಸ'ವನ್ನು ಅಪೇಕ್ಷಿಸಲಾರಂಭಿಸಿದರು. ಇದರಿಂದ ವಿದ್ಯೆಯು ಜೀವಿತದ 'ಸಾಧನೆ' ಎಂಬ ಕಲ್ಪನೆ ಬದಲಾಗಿ 'ಸಂಪಾದನೆ' ಎಂಬುದಾಗಿ ಪರಿವರ್ತನೆಗೊಂಡಿತು[೧೧]. ಮಹಾಮಹಾ ವಿದ್ವಾಂಸರ ಮನೆಗಳಲ್ಲೇ ಸಂಸ್ಕೃತ ವಿದ್ವತ್ತಿಗೆ ಈ ಕಾಲದಲ್ಲಿ ಒಂದು

ಪಾವು ಅಕ್ಕಿಕಾಳು ಸಹ ಗೀಟುವುದಿಲ್ಲ. ನೀನು ಬುದ್ಧಿವಂತ; ಇಂಗ್ಲಿಷ್ ಓದು[೧೨] ಎಂದು ತಮ್ಮ ಕಿರಿಯರನ್ನು ಪ್ರೇರೇಪಿಸುವಂತಾದರು. ಪರಿಣಾಮವಾಗಿ "ಆಂಗ್ಲ ವಿದ್ಯಾಭ್ಯಾಸ ಮಾಡುವುದರಿಂದಲೇ ನಮ್ಮ ಮೋಕ್ಷ" ಎಂದು ತಿಳಿದು ಇಂಗ್ಲಿಷ್ ಭಾಷೆ, ಶಿಕ್ಷಣದ ಕಲಿಕೆಯತ್ತ ಧಾವಿಸತೊಡಗಿದರು. ಇದರಿಂದ "ಅಂಗ್ಲೋ-ವರ್ನಾಕ್ಯುಲರ್ ಸ್ಕೂಲ್"ಗಳು ತುಂಬಿದವು ! ಆಂಗ್ಲ ಶಾಲೆಯ ಮೆಟ್ಟಿಲು ಹತ್ತುವುದೆಂದರೆ ಪರಮಪದ ಸೋಪಾನ ಹತ್ತಿದಂತೆಂಬ ಭಾವನೆ ಎಲ್ಲೆಲ್ಲೂ ವ್ಯಾಪಿಸಿ[೧೩] ಸಂಪ್ರದಾಯದ ತಡಗೋಡೆಯಂತಿದ್ದ ಸಮುದ್ರಯಾನ ನಿಷಿದ್ಧವೆಂದಾರ್ಭಟಿಸುತ್ತಿದ್ದವರ ಸದ್ದನ್ನಡಗಿಸಿ ಸುಧಾರಕರಾಗಿ,[೧೪] ಸಮುದ್ರವನ್ನು ದಾಟಿ ಸಾವಿರಾರು ಮೈಲಿ ಸಂಚರಿಸತೊಡಗಿದರು. ಹೀಗೆ ಪಾಶ್ಚಾತ್ಯ ಇಂಗ್ಲಿಷ್ ಭಾಷೆಯು ಮೈಸೂರು ಸಂಸ್ಥಾನವನ್ನು ಪ್ರವೇಶಿಸಿ ಭಾರತೀಯ ಸಂಸ್ಕೃತಿಯ ಪ್ರತೀಕವೆನಿಸಿಕೊಂಡಿದ್ದ ಸಮಾಜದ ಸಂಪ್ರದಾಯ ವರ್ಗಕ್ಕೆ ಸೇರಿದ್ದ 'ಸಂಸ್ಕೃತ' ತಮ್ಮ ಜೀವಾಳವೆಂದು ಬೇರೆಯವರು ಅದನ್ನು ಕಲಿಯಲು ಅರ್ಹರಲ್ಲವೆಂದೂ, ಪ್ರಾಚೀನ ಕಾಲದಿಂದಲೂ ಉಳಿಸಿ ಬೆಳೆಸಿಕೊಂಡು ಬಂದಿದ್ದ ವೈದಿಕರೇ ತಮ್ಮ ತಾಳೆವಾಲೆ ಗ್ರಂಥಗಳನ್ನು ಮೂಟೆಕಟ್ಟಿ ಅಟ್ಟದ ಮೇಲಿಟ್ಟು[೧೫] ಆಧುನಿಕ/ಪಾಶ್ಚಿಮಾತ್ಯ ಭಾಷೆ ಮತ್ತು ಸಂಸ್ಕೃತಿಗೆ ತಮ್ಮನ್ನು ತಾವು ತೆರೆದುಕೊಳ್ಳುವಂತಹ ಪರಿವರ್ತನೆಯನ್ನು ತರುವಲ್ಲಿ ಇಂಗ್ಲಿಷ್ ಭಾಷೆ ಪ್ರಧಾನ ಪಾತ್ರವಹಿಸಿತು.

ಇಂತಹ ಪ್ರಭಾವ ಮತ್ತು ಪರಿವರ್ತನೆ ಕೇವಲ ವೈದಿಕ ಬ್ರಾಹ್ಮಣರ ವರ್ಗಕ್ಕೆ ಸೀಮಿತಗೊಳ್ಳಲಿಲ್ಲ. ಕ್ರೈಸ್ತಧರ್ಮ ಪ್ರಚಾರಕರ ಪ್ರಭಾವದಿಂದ ಮಲೆನಾಡಿನ ಹಳ್ಳಿಗಳಲ್ಲೊಂದಾದ ಕುಪ್ಪಳ್ಳಿಗೂ ಪ್ರವೇಶಿಸಿ ಬ್ರಾಹ್ಮಣೇತರ ವರ್ಗದ ಪ್ರತಿನಿಧಿ ಎನಿಸಿಕೊಳ್ಳುವ ಕುವೆಂಪುರವರಂತಹವರ ಉದಯಕ್ಕೂ ದಾರಿ ಮಾಡಿಕೊಟ್ಟಿತು. ಆ ಮಲೆನಾಡಿನ ಕಾಡಿನ ಮೂಲೆಯ ಉಪ್ಪರಿಗೆಯ 'ಐಗಳ' ಶಾಲೆಯಲ್ಲಿ ಹುಡುಗರಿಗೆ ಅಕ್ಷರ ಕಲಿಸಿ, ಕನ್ನಡದಲ್ಲಿ ತುಸು ಬರೆಯಲು, ಓದಲು ಹೇಳಿಕೊಡಲಾಗುತ್ತಿತ್ತು. ಆದರೆ ಇನ್ನು ಮುಂದೆ ಕನ್ನಡ ಸಾಕೆ ? ಇಂಗ್ಲಿಷ್ ನವರ ಆಳ್ವಿಕೆಯಲ್ಲಿ ಇಂಗ್ಲಿಷ್ ಕಲಿಯದಿದ್ದರೆ ಆದೀತೆ ? ಆದರೆ ಇಂಗ್ಲಿಷ್ ಹೇಳಿಕೊಡುವವರಾರು ? ದೊರೆಗಳ ಭಾಷೆಯನ್ನು ? ಎಂಬಿತ್ಯಾದಿ ಪ್ರಶ್ನೆಗಳು ಅಲ್ಲಿನ ಜನರ ಮನದಾಳದಲ್ಲಿ ಉದ್ಭವಿಸುವಂತಾಗುವಲ್ಲಿ ಕ್ರೈಸ್ತ ಮಿಷನರಿಗಳ ಪಾತ್ರ ಹಿರಿದಾದದ್ದು. ಮತ ಪ್ರಚಾರ ಮತ್ತು ಮತಾಂತರದ ಉದ್ದೇಶದಿಂದ ಸಹ್ಯಾದ್ರಿಯ ಕಡೆಗೆ ಕಾಲಿಟ್ಟ ಪಾದ್ರಿಗಳು ಮೊದಲು ಕನ್ನಡ ಭಾಷೆಗೆ ಭಾಷಾಂತರಗೊಂಡಿದ್ದ ಬೈಬಲ್ಲನ್ನು ಓದಲು ಹಂಚಿ, ನಿಮ್ಮನ್ನು ಬ್ರಾಹ್ಮಣರ ದಾಸ್ಯದಿಂದ ಪಾರು ಮಾಡುತ್ತೇವೆಂದು ಬೋಧಿಸಿ, ಶೂದ್ರರ ಮಕ್ಕಳಿಗೆ ಉಚಿತ ನವೀನ ವಿದ್ಯಾಭ್ಯಾಸ, ಊಟ, ವಸತಿ, ಬಟ್ಟೆ ನೀಡುವ ಮೂಲಕ ಸ್ಥಳೀಯ ಜನರ ಗೌರವ ಕೃತಜ್ಞತೆಗಳನ್ನು ಸೂರೆಗೊಂಡು ನಂತರ ಕುಪ್ಪಳ್ಳಿಯ ಉಪ್ಪರಿಗೆಯ ವಿದ್ಯಾಸಂಸ್ಥೆಗೆ ಒಬ್ಬ ಇಂಗ್ಲಿಷ್ ಬಲ್ಲ ಕ್ರೈಸ್ತ ತರುಣನನ್ನು ಮೇಷ್ಟರನ್ನಾಗಿ ಕಳುಹಿಸುವ ಕೃಪೆ ಮಾಡಿದರು. ಪಾದ್ರಿಗಳೇ ಬರದಿದ್ದಲ್ಲಿ ಆ ಹಳ್ಳಿಗಳು ಇನ್ನೆಷ್ಟು ವರ್ಷಗಳೇ ಕಾಯಬೇಕಿತ್ತು ಇಂಗ್ಲಿಷ್ ಕಲಿಯಲು? ಕ್ರೈಸ್ತ ತರುಣನ ಆಗಮನದ ತರುವಾಯ 'ಐಗಳು' ಎಂಬ ನಾಮ ಸಂಪೂರ್ಣವಾಗಿ ಅಳಿಸಿಹೋಗಿ, 'ಮೇಷ್ಟರು' ಎಂಬ ಬಿರುದು ಪಟ್ಟಕ್ಕೇರಿತು ಮತ್ತು ಪಾಶ್ಚಾತ್ಯ ಪ್ರಭಾವದ ಆಧುನಿಕ ಪ್ರಪಂಚಕ್ಕೆ ಪ್ರವೇಶಿಸಿತು. ಕುಪ್ಪಳ್ಳಿಯ ಉಪ್ಪರಿಗೆಯ ಶಾಲೆ[೧೬]. ಬ್ರಾಹ್ಮಣೇತರರಲ್ಲಿ ಇಂಗ್ಲಿಷ್ ಕಲಿಕೆ, ಸಾಂಸ್ಕೃತಿಕ ಉನ್ನತಿ ಹಾಗೂ ಸರ್ಕಾರಿ ಉದ್ಯೋಗಗಳಿಗೆ ರಹದಾರಿ ಎಂಬುದು ಮನವರಿಕೆಯಾದುದನ್ನು ಕುರಿತು ಕುವೆಂಪುರವರು 'ಮಕ್ಕಳಾಗಿದ್ದ ನಮ್ಮ ಬದುಕಿನ ಮೇಲೆ ಅವರು ಕೈಗೂಡದ ಆ ಆಕಾಂಕ್ಷೆ ಮಹತ್ ಪ್ರಭಾವಶಾಲಿಯಾಗಿ ಪರಿಣಮಿಸಿತು. ಮಕ್ಕಳನ್ನು ಓದುವುದಕ್ಕೆ ಹಾಕಬೇಕು ಎಂಬ ಪ್ರಜ್ಞೆ ಅವರಲ್ಲಿ ಉದಿಸುವಂತೆ ಮಾಡಿತು. ಅವರಿಗೆ ಬುದ್ಧಿ ಸ್ಪಷ್ಟವಾಗಿರದಿದ್ದರೂ, ಬ್ರಿಟಿಷರ ಆಳ್ವಿಕೆಯಲ್ಲಿ, ಮುಂದೆ, ಅವರ ಭಾಷೆಯಾಗಿದ್ದ ಇಂಗ್ಲಿಷನ್ನು ಕಲಿಯದಿದ್ದರೆ, ತಮ್ಮ ಮಕ್ಕಳು ಮುಂದುವರಿಯುವುದು ಸಾಧ್ಯವಿಲ್ಲ ಎಂಬ ಭಾವನೆ ಅವರ ಹೃದಯದಲ್ಲಿ ಮೂಡಿ ಮನವರಿಕೆಯಾಗಿತ್ತು. ತತ್‌ಫಲವಾಗಿ ನಾವು ತೀರ್ಥಹಳ್ಳಿಯ ಪೇಟೆಯ ಇಸ್ಕೂಲಿಗೆ ಸೇರುವಂತಾಯಿತು'[೧೭]. ಎಂದಿದ್ದಾರೆ.

ಹಾಗೆ ತುಸು ಇಂಗ್ಲಿಷ್ ಯೆಸ್, ಪುಸ್, ಕೆಸ್ ಕಲಿತು ಬಂದ ತಮ್ಮ ಹುಡುಗರನ್ನು ನೋಡಿ, ವಯಸ್ಸಾದ ಹಿರಿಯರಿಗೂ ಇಂಗ್ಲಿಷ್ ಕಲಿಯಲು ಮನಸ್ಸಾಗಿ ಉಪ್ಪರಿಗೆಯ ಶಾಲೆಗೆ ಐಗಳನ್ನು ನೆಮಿಸಿಕೊಂಡು ಇಂಗ್ಲಿಷ್ ಅಕ್ಷರಗಳ ಪರಿಚಯ ಪಡೆದು ಮುಂದೆ ಅದರ ಬಳಕೆಯಲ್ಲಿ ತೊಡಗಿದರು. ದೊಡ್ಡಚಿಕ್ಕಪ್ಪಯ್ಯ, ಕುಪ್ಪಳಿ ರಾಮಣ್ಣಗೌಡ ಇವರೇ ಮೊದಲಾದ ಹಿರಿಯರು ಅಡಿಕೆ ವ್ಯಾಪಾರದ, ಸಾಹುಕಾರಿಕೆ ಕೈಗೊಂಡಾಗ, ಅಡಿಕೆ ತುಂಬಿದ್ದ ರವಾನೆ ಚೀಲಗಳ ಮೇಲೆ 'ಎ.ಖ.ಉ.' ಎಂದು ದೊಡ್ಡದಾಗಿ ಕೆಂಪು ಮಸಿಯಲ್ಲಿ ವಿಳಾಸ ಹಾಕುತ್ತಿದ್ದರು. ತುಂಬ ಹೆಮ್ಮೆಯಿಂದ, ಇತರ ಹಳ್ಳಿಗರಿಗೆ ತಿಳಿಯದ ಇಂಗ್ಲಿಷ್ ತಮಗೊಬ್ಬರಿಗೆ ತಿಳಿಯುವುದು ಎಂಬ ಠೀವಿಯಲ್ಲಿ ![೧೮] ಹೀಗೆ ಮಲೆನಾಡಿನ ಹಿರಿಯರನ್ನೂ ಬಿಡದೇ ಆಕರ್ಷಿಸಿತು ಈ ಇಂಗ್ಲಿಷ್ ಭಾಷೆ.

ಹೀಗೆ ಮೈಸೂರು ಸಂಸ್ಥಾನದ ಎಲ್ಲ ವರ್ಗ/ಕೋಮಿನವರ ಹೃದಯವನ್ನಾವರಿಸಿದ ಪಾಶ್ಚಾತ್ಯ ಸಂಸ್ಕೃತಿಯ ಭಾಗವಾದ ಇಂಗ್ಲಿಷ್ ಭಾಷೆಯು ಕೇವಲ ಕಲಿಕೆಯಷ್ಟಕ್ಕೇ

ಸೀಮಿತಗೊಳ್ಳದೆ ಜನಸಾಮಾನ್ಯರ ಆಡುಭಾಷೆಯಾಗಿದ್ದ ಕನ್ನಡ ಭಾಷೆಯೊಳಗೂ ಪ್ರವೇಶಿಸಿ ಕನ್ನಡೀಕರಣಗೊಂಡು ಹಲವು ಪರಿಣಾಮಗಳನ್ನುಂಟು ಮಾಡಿತು. ಸಹಜವಾಗಿ ಈ ಹೊಸ ಭಾಷೆಯ ಪ್ರಭಾವ ಮೊಟ್ಟಮೊದಲು ಕಂಡುಬಂದದ್ದು ಆಡಳಿತ ಮತ್ತು ನ್ಯಾಯಾಲಯಗಳಲ್ಲಿ. ಸಾಮಾನ್ಯ ಮನುಷ್ಯ, ಅಧಿಕಾರಿಗಳು, ಹಳ್ಳಿಗರು, ನಗರವಾಸಿಗಳು, ಮಹಾರಾಜರು–ಎಲ್ಲರೂ ಬ್ರಿಟಿಷ್ ಆಡಳಿತ ಹಾಗೂ ನ್ಯಾಯಾಡಳಿತ ವ್ಯವಸ್ಥೆಗಳ ಪ್ರಭಾವಕ್ಕೊಳಗಾದವರೆ. ಆಗ ಅನೇಕ ಶಬ್ದಗಳು – ಕಂಪನಿ, ಕೋರ್ಟ್, ಆರ್ಡರ್ ಇಂತಹವು ದಿನನಿತ್ಯದ ಭಾಷೆಯೊಳಕ್ಕೆ ಬಂದು ಸೇರತಡೊಗಿದವು. ಕೆಲವೊಮ್ಮೆ ಸಾಮಾನ್ಯ ಹಳ್ಳಿಗರ ಬಾಯಲ್ಲಿ 'ಕಂಪನಿ' ಶಬ್ದವು ಕುಂಪಣಿಯಾಗಿ,[೧೯] 'ಬೈಸಿಕಲ್' ಬೀಸೆಕಲ್ಲಾಗಿ[೨೦], 'ಕಮ್ಯಾಂಡರ್' ಕುಂದಾರಿ[೨೧]ಯಾಗಿ ಉಚ್ಚರಣೆಗೆ ಒಳಗಾದವು. ಕಾಲಕಳೆದಂತೆ ಆಡಳಿತ, ನ್ಯಾಯಾಲಯ ಮತ್ತು ಶಿಕ್ಷಣ ವ್ಯವಸ್ಥೆಗಳು ತಮ್ಮ ಪ್ರಭಾವವಲಯವನ್ನು ವಿಸ್ತರಿಸಿಕೊಂಡಂತೆ ಕನ್ನಡಕ್ಕೆ ಬಂದ ಇಂಗ್ಲಿಷ್ ಶಬ್ದಗಳು ಆ ಕಾಲದ ಪ್ರಾಥಮಿಕ ಶಾಲಾ ಉಪಾಧ್ಯಾಯರ (ಹಳ್ಳಿಗಾಡಿನಲ್ಲಿ) ಬಾಯಲ್ಲೂ ತದ್ಭವಗಳ ರೂಪದಲ್ಲಿ ನುಡಿಯಲಾರಂಭಿಸಿದವು. ಮ್ಯಾಪ್ (ಟಚಿಠಿ) 'ಮ್ಯಾಕೆ' ಆಯಿತು ! ಕೋಟ್ (ಛಿಂಚಿಣ) 'ಗೋಟ್' ಆಯಿತು! ಛಾರ್ಜು (ಅಛಿಚಿಡಿರಜ) 'ಚಾರ್ಜ್' ಆದ ! ರೆಜಿಸ್ಟರ್ (ಖಜರುಣಜಡಿ) ನಿಜಸ್ತ್ರೀ ಆದಳು ![೨೨].

ಈ ಪ್ರಕ್ರಿಯೆ ಮುಂದುವರೆದು ಸ್ಕೂಲ್, ಕಾಲೇಜ್, ಲಾಯರ್, ರಿಕಾರ್ಡ್, ಅಜರ್ನ್‌ಮೆಂಟ್, ಫೀಸ್, ಮಿಸ್ಟೇಕ್ ಇಂತಹ ಬಹುತೇಕ ಶಬ್ದಗಳು ಬಳಕೆಯಲ್ಲಿ ಕನ್ನಡ ಶಬ್ದಗಳೇ ಆದವು. ಹೊಸ ಸಂಗತಿಗಳನ್ನು ಕಂಡುಕೊಂಡಂತೆ ಮತ್ತು ವಸ್ತುಗಳನ್ನು ಸೃಷ್ಟಿ ಮಾಡಿದಂತೆ ಇಂಗ್ಲಿಷ್ ಭಾಷೆ ಬೆಳೆಯಿತು. ಹಾಗೆಯೇ ಕನ್ನಡ ಭಾಷೆಯು ನಿಸ್ಸಂಕೋಚವಾಗಿ ಹೊಸ ಶಬ್ದಗಳನ್ನು ತಾನೂ ಅಳವಡಿಸಿಕೊಂಡಿತು. ಜ್ಞಾನದ ಎಲ್ಲ ಕ್ಷೇತ್ರಗಳೂ ತಮ್ಮ ಶಬ್ದ ಭಂಡಾರದ ಶ್ರೀಮಂತಿಕೆಗೆ ಇಂಗ್ಲಿಷ್ ಭಾಷೆಗೆ ಬಹುಮಟ್ಟಿಗೆ ಋಣಿಯಾಗಿದೆ. ವಿದ್ಯಾವಂತರು ಮಾತನಾಡುವಾಗ ಹಲೋ, ಥ್ಯಾಂಕ್ಸ್, ಸಾರಿ, ಜಂಟ್ಲ್‌ಮನ್ ಶಬ್ದಗಳು ಶಿಷ್ಟಾಚಾರವನ್ನು ಸೂಚಿಸುವ ಶಬ್ದಗಳಾದವು. ಕನ್ನಡದ ವಾಕ್ಯರಚನೆಯಲ್ಲಿ ಬದಲಾವಣೆಗಳಾದವು. ಉದಾಹರಣೆಗೆ ಹಿಂದೆ 'ರಾಮನೂ, ಕೃಷ್ಣನೂ' ಎಂದು ಬರೆಯುತ್ತಿದ್ದ ಕಡೆ ಇಂಗ್ಲಿಷ್‌ನ ಪ್ರಭಾವದಿಂದಾಗಿ 'ರಾಮ ಮತ್ತು ಕೃಷ್ಣ' ಎಂದು ಬರೆಯಲಾಂಭವಾಯಿತು. ರೇಡಿಯೋ, ಫ್ಯಾನು, ಕಾಲೇಜು ಇತ್ಯಾದಿಯಾಗಿ ನೇರ ಸ್ವೀಕರಣದಿಂದಾಗಿ ಕೆಲವು ಪದಗಳು ಬಂದರೆ ಟಾರ್ಚೆಣ್ಣೆ, ಅಣುಬಾಂಬ್ ಇತ್ಯಾದಿ ಅರ್ಧಮರ್ಧ ಇಂಗ್ಲಿಷ್ ರೂಪಗಳೊಡನೆ ಕೆಲವು ಪದಗಳು ಬಂದವು[೨೩]. ಗ್ರಾಮಾಂತರ ಪ್ರದೇಶಗಳಲ್ಲಿ ಇಂಗ್ಲಿಷ್ ಕಲಿಯದ ಜನರು ಆಡಳಿತ ವ್ಯವಹಾರವೆಲ್ಲ ಆಂಗ್ಲೀಕರಣಗೊಂಡು, ಕಾಯ್ದೆ ಕಾನೂನುಗಳೆಲ್ಲ ಇಂಗ್ಲಿಷ್‌ನಲ್ಲೇ ಬರೆಯಲ್ಪಟ್ಟಿದ್ದರಿಂದ ಅವುಗಳ ಸೂಕ್ಷ್ಮತೆಯನ್ನರಿಯದೆ ಅನೇಕ ಬಾರಿ ತಪ್ಪುಗಳನ್ನೆಸಗುವುದು ಸಾಮಾನ್ಯ ಸಂಗತಿಯಾಯಿತು. ಉದಾಹರಣೆಗೆ ಮಾಸ್ತಿಯವರು ಮೈಸೂರು ಸಂಸ್ಥಾನಾಡಳಿತದಲ್ಲಿ ರೆವಿನ್ಯೂ ಅಧಿಕಾರಿಯಾಗಿದ್ದಾಗ ಕೋಲಾರದ ಬಳಿಯ ಇತ್ತಣ ಮಲ್ಲಸಂದ್ರ ಗ್ರಾಮಕ್ಕೆ ಹೋಗಿ, ಜಮಾಬಂದಿ ಪರಿವೀಕ್ಷಣೆ ನಡೆಸುತ್ತಿದ್ದಾಗ, ಆ ಗ್ರಾಮದ ರೈತನೊಬ್ಬ ಮಾಡಿದ್ದ ತಪ್ಪಿಗೆ ಸಂಬಂಧಿಸಿದಂತೆ ವಿಚಾರಣೆ ಮಾಡುವಾಗ ರೈತನು ಮುಗ್ಧನಾಗಿ "ನಿಮ್ಮ ರೂಲ್ಸು ಗೀಲ್ಸು ಎಲ್ಲಾ ಇಂಗ್ಲಿಷಿನಲ್ಲಿದೆ ಸ್ವಾಮಿ : ನಾವೇನು ತಿಳ್ಕೋಳ್ಳೊದು ? ಎಂದು ಪ್ರಶ್ನಿಸಿದ"[೨೪]. ಹೀಗೆ ಅನ್ಯದೇಶಿಯ ಭಾಷೆ ಇಂಗ್ಲಿಷ್, ಜನಸಾಮಾನ್ಯರನ್ನು ಅದರಲ್ಲೂ ಗ್ರಾಮೀಣ ಜನರನ್ನು ಅಧೀರರನ್ನಾಗಿಸಿತ್ತು.

ಮೈಸೂರು ಸಂಸ್ಥಾನದಲ್ಲಿ ಇಂಗ್ಲಿಷ್ ಭಾಷೆಗೆ ಎಂತಹ ಪ್ರಾಮುಖ್ಯತೆ ಸಿಕ್ಕಿತೆಂದರೆ "ಆಳುವವರ ಭಾಷೆಯ ವಿಚಾರದಲ್ಲಿ ಅತ್ಯಂತ ದಾಸ್ಯದ ಮನೋಧರ್ಮ ರೂಢಮೂಲವಾಗಿ ಬಿಟ್ಟಿತ್ತು! ಐರೋಪ್ಯ ವೇಷಭೂಷಣ ಹಾಕಿಕೊಂಡ ಎಂತಹ ಬೆಪ್ಪನನ್ನು ಮೇಧಾವಿ ಎಂದು ಗೌರವಿಸಿದಂತೆ, ಇಂಗ್ಲಿಷ್ ಭಾಷೆಯಲ್ಲಿ ಮಾತನಾಡುವವನನ್ನು ಅದ್ಭುತ ಜ್ಞಾನಿ ಎಂದು ಶ್ಲಾಗಿಸುತ್ತಿದ್ದರು"[೨೫] ಇಂಗ್ಲಿಷ್ ಪಾಠ ಮಾಡುವಾಗ ಕನ್ನಡದ ಪ್ರಯೋಗ ನಿಷಿದ್ಧವಾಗಿತ್ತು. ಹಾಗೇನಾದರೂ ಕನ್ನಡದಲ್ಲಿ ಮಾತನಾಡಿದರೆ ಬೋಧನೆಯ ಪವಿತ್ರತೆಗೇ ಭಂಗವೆಂದು ಭಾವಿಸಲಾಗುತ್ತಿತ್ತು. ಕನ್ನಡದಲ್ಲಿ ಮಾತನಾಡುವುದು ಅವಮಾನಕರವೆಂದೂ ಸರ್ವರೂ ಒಪ್ಪಿಕೊಂಡ ನಿರ್ಣಾಯಕ ವಿಷಯವಾಗಿತ್ತು[೨೬]. ಸಾಮಾನ್ಯವಾಗಿ ಮೊದಲನೆಯ ಪೀರಿಯಡ್ಡುಗಳೆಲ್ಲ ರಾಜಭಾಷೆಯಾದ ಇಂಗ್ಲಿಷಿಗೆ ಮೀಸಲಾಗಿರುತ್ತಿದ್ದವು. ಕನ್ನಡಕ್ಕೆ ಕೊನೆ ಕೊನೆಯ ಗಂಟೆಗಳನ್ನು ಮೀಸಲಿರಿಸಿದ್ದು ಕನ್ನಡ ಕಾಟಾಚಾರ ಮಾತ್ರದ ವಿಷಯವೆಂದು ಪರಿಗಣಿಸಲ್ಪಟ್ಟಿತ್ತು[೨೭].

ಹೀಗೆ ಪ್ರೌಢಶಿಕ್ಷಣದ ಮಟ್ಟದಲ್ಲಿ ಹಿಯ್ಯಾಳಿಕೆಗೆ ಗುರಿಯಾಗಿದ್ದ ಕನ್ನಡ ಭಾಷಾ ಶಿಕ್ಷಣವು ಕಾಲೇಜು ಮಟ್ಟದಲ್ಲಿ ಹೇಗಿತ್ತು ಎಂಬುದನ್ನು ಕುವೆಂಪುರವರು ಹೀಗೆ ವರ್ಣಿಸಿದ್ದಾರೆ. "ಆಗ ಕನ್ನಡವು ಸ್ಕೂಲುಗಳಲ್ಲಿ ವಿದ್ಯಾರ್ಥಿಗಳು ಅವಶ್ಯವಾಗಿ ಸಹಿಸಬೇಕಾಗಿದ್ದ ಒಂದು ಭಾಷಾವಸ್ತುವಾಗಿತ್ತು ಅಷ್ಟೆ ಅದನ್ನು ಪಾಠ ಹೇಳುತ್ತಿದ್ದ ಉಪಾಧ್ಯಾಯರು ವೇಷಭೂಷಣಗಳಲ್ಲಿಯಾಗಲಿ ಪಾಠ ಹೇಳುತ್ತಿದ್ದ ರೀತಿಯಲ್ಲಾಗಲಿ ತರುಣ ಹೃದಯಗಳಿಗೆ ಯಾವ ನೂತನ ದೃಷ್ಟಿಯನ್ನು ಕೊಡಬಲ್ಲವಾಗಿರಲಿಲ್ಲ. ಅವರ ಪ್ರವಚನದಲ್ಲಿ ಭಾವಪುಷ್ಟಿಯೂ

ಇರುತ್ತಿರಲಿಲ್ಲ. ಬುದ್ಧಿಪುಷ್ಟಿಯೂ ಇರುತ್ತಿರಲಿಲ್ಲ. ತರಗತಿಗಳಲ್ಲಿ ಬರಿಯ ಗಲಾಟೆ, ಹಾಸ್ಯ, ಪರಿಹಾಸ್ಯ, ಉಪಾಧ್ಯಾಯರಿಗೆ ಕಿರುಕುಳ ! ಕನ್ನಡ ಓದಿದರೇನು ? ಬಿಟ್ಟರೇನು ? ಎಂಬ ತಾತ್ಸಾರ. ಕನ್ನಡದಲ್ಲಿ ಫೇಯಿಲ್ಲಾದರೂ ಪಾಸು ಮಾಡುತ್ತಾರೆ ಎಂಬ ಮೊಂಡು ಕೆಚ್ಚು ! ಪಠ್ಯಪುಸ್ತಕಗಳನ್ನು ಕೊಂಡುಕೊಳ್ಳುವಾಗಲೂ ಇಂಗ್ಲಿಷ್ ಪುಸ್ತಕಗಳಿಗೇ ಪ್ರಧಾನಮಾನ್ಯತೆ. ಕನ್ನಡ ಪುಸ್ತಗಕಳನ್ನು ಆಮೇಲೆ ಕೊಂಡರಾಯಿತು. ದುಡ್ಡು ಉಳಿದರೆ! ಕೊಂಡುಕೊಳ್ಳದಿದ್ದರೂ ಚಿಂತೆಯಿಲ್ಲ. ಯಾರ ಹತ್ತಿರವಾದರೂ ಇದ್ದ ಪುಸ್ತಕ ಒಂದು ಚೂರು ನೋಡಿದರಾಯಿತು. ಆ ಪುಸ್ತಕಗಳಲ್ಲಿ ಇರುವುದೂ ಮಹಾ ಅಷ್ಟಕ್ಕಷ್ಟೇ ! ಒಂದು ವೇಳೆ ದುಡ್ಡು ಉಳಿದರೂ ಕಾಫಿ ತಿಂಡಿಗೆ ಖರ್ಚು ಮಾಡುವ ಬುದ್ಧಿ ! ಹಾಳು ಕನ್ನಡದ ಪುಸ್ತಕಕ್ಕೆ ಯಾಕೆ ದುಡ್ಡು ದಂಡ ಮಾಡಬೇಕು ? ಚೆನ್ನಾಗಿ ಅಚ್ಚು ಮಾಡಿದ್ದು ಒಳ್ಳೆಯ ಸೊಗಸಾದ ರಟ್ಟು ಹಾಕಿದ್ದು, ಆಕರ್ಷಕವಾಗಿ, ನಮ್ಮ ಗೌರವವನ್ನು ಸೂರೆಗೊಳ್ಳುವಂತಿದ್ದ ಇಂಗ್ಲಿಷ್ ಪಠ್ಯಪುಸ್ತಕಗಳನ್ನು ಮೊದಲು ಕೊಂಡದ್ದಾಯಿತು"[೨೮] ಹೀಗೆ ಶಿಕ್ಷಣ ವ್ಯವಸ್ಥೆಯಲ್ಲಿ ಅಲಕ್ಷ್ಯಕ್ಕೀಡಾಗಿದ್ದ ಕನ್ನಡವು ಅನಾಗರಿಕರ, ಗ್ರಾಮೀಣರ ಭಾಷೆಯಂತಾಗಿ ತಿಕ್ಕಾಟದಲ್ಲಿ ತೊಡಗಿತು.

ಹೀಗೆ 'ಇಂಗ್ಲಿಷ್' ಎಂಬ ಪಾಶ್ಚಾತ್ಯ ಭಾಷೆ, ಮೈಸೂರು ಸಮಾಜದ ವಿವಿಧ ಜನವರ್ಗಗಳ ಮೇಲೆ ವಿಭಿನ್ನವಾದ ಪ್ರಭಾವವನ್ನು ಬೀರಿ ಸಾಮಾಜಿಕ ಪರಿವರ್ತನೆಗೆ ಕಾರಣೀಭೂತವಾಗಿ ಇಂಗ್ಲಿಷ್ ಭಾಷೆ ಮತ್ತು ಶಿಕ್ಷಣ ಪಡೆದ ಹಲವಾರು ವಿದ್ಯಾವಂತರಲ್ಲೇ ಇಂಗ್ಲಿಷ್ ಬಗ್ಗೆ ವೈವಿಧ್ಯಮಯವಾದ ಮನಃಸ್ಥಿತಿ ರೂಪುಗೊಳ್ಳುವಂತೆ ಮಾಡಿತು. ಮೊದಲನೆಯದಾಗಿ "ಇಂಗ್ಲಿಷ್ ನಮಗೆ ಇಷ್ಟವೋ ಅನಿಷ್ಟವೋ, ಪ್ರಪಂಚದ ಜ್ಞಾನ ಭಂಡಾರಕ್ಕೆಲ್ಲ ಇಂದು ಕೀಲಿಕೈಯಾಗಿ ಪರಿಣಮಿಸಿದೆ"[೨೯] ಎಂಬ ಲೌಕಿಕ ನಂಬಿಕೆಯನ್ನು ಹೊಂದಿದ್ದವರು. ಎರಡನೆಯದಾಗಿ "ಇಂಡಿಯಾ ದೇಶವನ್ನು ಶೋಷಣೆ ಮಾಡಿ ದಬ್ಬಾಳಿಕೆ ನಡೆಸುತ್ತಿದ್ದ ಇಂಗ್ಲಿಷರ ಮೇಲೆ ನನಗೆ ಎಷ್ಟು ದ್ವೇಷವಿದ್ದಿತೋ ಅದಕ್ಕೆ ದ್ವಿಗುಣಿತ ತ್ರಿಗುಣಿತವಾಗಿ ಇಂಗ್ಲಿಷ್ ಭಾಷೆಯ ಮೇಲೆ ನನಗೆ ಗೌರವ ಮಮತೆಗಳಿದ್ದುವು... ಇಂಗ್ಲಿಷ್ ಜನವೆಂತೋ ಅಂತೆ ಇಂಗ್ಲಿಷ್ ಮಾತನಾಡುವವರೂ 'ಪೂಜ್ಯ'ರಾಗಿ ಬಿಟ್ಟರು. 'ದೊರೆ'ಗಳಾದರು. 'ಸಾಹೇಬ'ರೂ ಆದರು. ಈ ಕಾರಣದಿಂದಲೂ ಆ ಭಾಷೆ ನನ್ನಂತಹ ಎಳೆಯರ ಮೇಲೆ ತನ್ನ ಪ್ರಭುತ್ವಾಧಿಕಾರ ಸ್ಥಾಪಿಸಿ, ಪೂಜ್ಯ ಸ್ಥಾನವನ್ನು ಗಿಟ್ಟಿಸಿಕೊಂಡು ಬಿಟ್ಟಿತು !"[೩೦] ಎನ್ನುತ್ತಾ ಆ ಭಾಷೆಯ ಬಗ್ಗೆ ಗೌರವ, ಪ್ರೀತಿ ಬೆಳೆಸಿಕೊಂಡವರು. ಮೂರನೆಯದಾಗಿ ಆಗ ವಿದ್ಯೆ ಕಲಿತ ಜನಕ್ಕೆ ಇಂಗ್ಲಿಷು ತುಂಬಾ ಮೋಹಕವಾಗಿತ್ತು. ಅವರ ಮನಸ್ಸಿನಲ್ಲಿ ಉದಯಿಸಿದ ಭಾವನೆಗಳು ಇಂಗ್ಲಿಷ್‌ನ ಸಂಪರ್ಕದಿಂದ ಬಂದವಾಗಿದ್ದವು. ಆ ಭಾವನೆಗಳಿಗೆ ಇಂಗ್ಲಿಷ್ ಒಪ್ಪುವಷ್ಟು ಚೆನ್ನಾಗಿ ಕನ್ನಡ ಒಗ್ಗಿಬರಲಾರದು ಎಂಬುದಾಗಿ ಪಾಶ್ಚಿಮಾತೀಕರಣಕ್ಕೆ ಮೊರೆ ಹೋದವರು. ಇಂಗ್ಲಿಷ್ "ಪದ್ಯ ರಚನೆ ಮಾಡುವ ಹುಚ್ಚು ಬಹುಮಂದಿಗೆ ಹಿಡಿದಿತ್ತು. ಆ ಹುಚ್ಚು ಹೇಗೋ ನನಗೂ ಅಂಟಿತು"[೩೧] ಎನ್ನುವ ಮೂಲಕ ಸ್ಥಳೀಯ ಜನರಿಗೆ ತಾವು ಓದಿದ ಇಂಗ್ಲಿಷ್ ಕಾವ್ಯ, ನಾಟಕ, ಸಾಹಿತ್ಯಗಳಲ್ಲಿನ ಮುಖ್ಯಾಂಶಗಳನ್ನು ದೇಶೀಯ ಭಾಷಾ ಸಾಹಿತ್ಯದಲ್ಲಿ ಬರೆದು ಸಾಮಾಜಿಕ ಋಣ ತೀರಿಸಿದ ನಾಲ್ಕನೇ ವರ್ಗದವರು. ಐದನೆಯದಾಗಿ ಇಂಗ್ಲಿಷ್ ಭಾಷೆ, ಶಿಕ್ಷಣದ ಬಗ್ಗೆ ಅಪಾರ ವ್ಯಾಮೋಹ ಬೆಳೆಸಿಕೊಂಡು ತಮ್ಮ ಪ್ರಾದೇಶಿಕ, ಮಾತೃಭಾಷೆಯಾದ ಕನ್ನಡದ ಬಗ್ಗೆ ತಾತ್ಸಾರ ಹೊಂದಿದ್ದವರು. "ಅವರು ಕನ್ನಡವೂ ಒಂದು ಭಾಷೆಯೇ ?" ಎಂದು ಪ್ರಶ್ನಿಸಿ ತಿರಸ್ಕಾರ ಸೂಚಿಸಿದ್ದೂ ಉಂಟು. ವಿಶ್ವವಿದ್ಯಾನಿಲಯದ ಪದವೀಧರರಾಗಿ ದೊಡ್ಡ ದೊಡ್ಡ ಹುದ್ದೆಗಳಲ್ಲಿದ್ದ ಅವರು ಸಾರ್ವಜನಿಕ ಸಭೆಗಳಲ್ಲಿ ತಾವು ಕನ್ನಡದಲ್ಲಿ ಮಾತನಾಡುವು ದಿಲ್ಲವೆಂದು ನಿರಾಕರಿಸಿದುದಲ್ಲದೆ ಅದು ತಮ್ಮ ಸ್ಥಾನಮಾನಗಳಿಗೆ ಸಲ್ಲದ ಹೀನ ಕಾರ್ಯವೆಂದು ಧ್ವನಿ ಬರುವಂತೆ ವ್ಯವಸ್ಥಾಪಕರಿಗೆ ತಿಳಿಸಿದ್ದ ನಿದರ್ಶನಗಳಿದ್ದವು[೩೨]. ಕನ್ನಡದ ಕಣ್ವ, ಕನ್ನಡದ ಆಚಾರ್ಯ, ಕನ್ನಡದ ರಕ್ಷಾಮಣಿ ಎಂಬ ಬಿರುದುಗಳಿಸಿದ್ದ ಬಿ.ಎಂ. ಶ್ರೀಕಂಠಯ್ಯನವರನ್ನು ಕುರಿತಂತೆ ಕುವೆಂಪುರವರು "ವೇಷಭೂಷಣ ಮಾತುಕತೆ ಎಲ್ಲದರಲ್ಲಿಯೂ ಭಾರತೀಯತ್ವಕ್ಕಿಂತಲೂ ಆಂಗ್ಲೇಯತ್ವವೆ ಅವರ ವ್ಯಕ್ತಿತ್ವದ ಹೊರಭಂಗಿಯಾಗಿತ್ತು. ಸಾರ್ವಜನಿಕ ವೇದಿಕೆಯಲ್ಲಾಗಲಿ ಕನ್ನಡ ಸಂಘ ಸಂಸ್ಥೆಗಳೊಡನೆಯಾಗಲಿ, ಕಡೆಗೆ ಕಾಲೇಜು ವಿದ್ಯಾರ್ಥಿಗಳೊಡನೆಯಾಗಲಿ ಕನ್ನಡದಲ್ಲಿ ಮಾತನಾಡಿ ವ್ಯವಹರಿಸುವುದು ತಮ್ಮ ಅಂತಸ್ತಿಗೆ ತಕ್ಕುದಲ್ಲವೆಂಬಂತೆ ವರ್ತಿಸುತ್ತಿದ್ದ"[೩೩] ಪ್ರತಿಷ್ಠೆಯ ಪ್ರತಿಪಾದಕರು. ಆರನೆಯದಾಗಿ ಇಂಗ್ಲಿಷ್ ಭಾಷೆಯ ಶಿಕ್ಷಣದ ಮೂಲಕವೇ ಪಾಶ್ಚಾತ್ಯ ಆಡಳಿತದ ದಬ್ಬಾಳಿಕೆಯನ್ನು ಮನಗಂಡು ರಾಷ್ಟ್ರಾಭಿಮಾನ, ಪ್ರಾದೇಶಿಕಾಭಿಮಾನ ಮತ್ತು ಭಾಷಾಭಿಮಾನ ವನ್ನು ಬೆಳೆಸಿಕೊಂಡು ಇಂಗ್ಲಿಷ್ ಭಾಷೆಯ ಪ್ರಭಾವದಿಂದ ಸಂಪೂರ್ಣ ಜರ್ಝರಿತವಾಗುತ್ತಾ ಹೋದ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸಲು ಸಂಘ, ಸಂಸ್ಥೆಗಳನ್ನು ಕಟ್ಟಿಕೊಂಡು ಸ್ವದೇಶ, ಸ್ವಭಾಷೆ ಎಂಬುದಾಗಿ ಹೋರಾಡಲು ಮುಂದಾದ ದೇಶಾಭಿಮಾನಿ ಹಾಗೂ ಭಾಷಾಭಿಮಾನಿಗಳು.

ಈ ವರ್ಗದ ಕೆಲವರು ಸ್ವರಾಜ್ಯದ ಹಿನ್ನೆಲೆಯಲ್ಲಿ ಬ್ರಿಟಿಷರು ಸೋತ ರಾಜ್ಯಗಳ ಮೇಲೆ ತಮ್ಮ ವೇಷಭಾಷೆಗಳ ಮುದ್ರೆಯನ್ನು ಒತ್ತುವ ಮೂಲಕ ಸಾಂಸ್ಕೃತಿಕ ಸಾಮ್ರಾಜ್ಯಶಾಹಿ

ನೀತಿಯನ್ನು ಅನುಸರಿಸುತ್ತಿದ್ದಾರೆಂದು ಕಿಡಿಕಾರುತ್ತಿದ್ದರು. ನಿವೃತ್ತ ನ್ಯಾಯಾಧಿಶರಾದ ಕೆ.ಎಸ್. ಚಂದ್ರಶೇಖರಯ್ಯನವರು ಪರದೇಶ ಪ್ರಭಾವದಿಂದಾಗಿ ದೇಶೀಯ ಭಾಷೆ ಮತ್ತು ಸಂಸ್ಕೃತಿಗಳು ಹೇಗೆ ವಿನಾಶಕ್ಕೆ ಕಾರಣವಾದವು ಎಂದು ತಮ್ಮ ಭಾಷಣದಲ್ಲಿ ಹೀಗೆ ಹೇಳಿದ್ದಾರೆ "ವಿದೇಶ ರಚನೆ, ವಿದೇಶ ಸಂಪ್ರದಾಯ ಮತ್ತು ವಿದೇಶ ಭಾವೋದ್ರೇಕಪೂರಿತ ವಾದ ಪರಭಾಷೆಯನ್ನು ಶಾಲೆಗಳಲ್ಲಿ ಶಿಕ್ಷಣಕ್ಕಾಗಿ ಉಪಯೋಗಿಸಿ, ಪ್ರೌಢಶಿಕ್ಷಣವನ್ನೆಲ್ಲ ಆ ಪರಭಾಷೆಯ ಮೂಲಕವೇ ಕೊಡಲು ಮೊದಲು ಮಾಡಿದ ದಿನದಿಂದ ಸರ್ವನಾಶಕ್ಕೆ ಮೊದಲಾಯಿತು. ಅದರಿಂದಾದ ಅನಾಹುತ ಗಳಲ್ಲೆಲ್ಲಾ ದೇಶಭಾಷೆಗಳು ಸಂಪೂರ್ಣವಾಗಿ ಹಾಳಾದು ದೊಂದು. ಆಂಗ್ಲ ವಿದ್ಯಾಪಾರಂಗತರಿಗೂ ಆಂಗ್ಲ ವಾಸನಾರಹಿತರಾದ ಸಾಮಾನ್ಯ ಜನರಿಗೂ ಸೌಹಾರ್ಧ ಎಲ್ಲದರಲ್ಲೂ ಎಣ್ಣೆ ಸೀಗೆಕಾಯಿಯಂತಹ ಸಂಬಂಧ ಬಂದೊದಗಿತು. ಅಲ್ಲದೆ ಸಾಹಿತ್ಯ, ಸಂಸ್ಕೃತಿ ಬೆಳವಣಿಗೆಗೆ ಅಡ್ಡಿಗಳು ಬಂದೊದಗಿದವು. ಈ ವ್ಯಾಧಿತ್ವವನ್ನು ನಿಗ್ರಹಿಸಲು ರಾಜ ಚಿಕಿತ್ಸೆಯೆಂದರೆ ಕನ್ನಡ ಭಾಷೆ, ಸಂಸ್ಕೃತಿಗೆ ಪ್ರೋಷಣೆ ನೀಡುವುದು"[೩೪]. ಹೀಗೆ ವಿದ್ಯಾವಂತ ವರ್ಗದಲ್ಲಿ ಕನ್ನಡದ ಬಗ್ಗೆ ಕಾಳಜಿ ಹೆಚ್ಚಿತು ಹಾಗೂ ಕರ್ನಾಟಕದ ಏಕೀಕರಣದ ಕರೆ ಎಲ್ಲೆಡೆ ಕೇಳಿಬಂದು ವಿದೇಶಿ ಭಾಷೆಯ ಪ್ರಭುತ್ವದಡಿಯಲ್ಲಿ ನಲುಗಿ ಹೋಗುತ್ತಿದ್ದ ದೇಶಿ ಕನ್ನಡ ಭಾಷೆಯ ಉಳಿವಿಗಾಗಿ ಶ್ರಮಿಸಲು ಪ್ರಯತ್ನಗಳು ನಡೆದವು.

ಕನ್ನಡಿಗರೆಲ್ಲ ಒಂದಾಗಬೇಕೆಂಬ ಉದ್ದೇಶದಿಂದ ಮತ್ತು ಕರ್ನಾಟಕ ಏಕೀಕರಣ ಚಳವಳಿಯ ಹೆಸರಿನಲ್ಲಿ ವಿವಿಧ ಆಡಳಿತ ಘಟಕಗಳಲ್ಲಿ ಹಂಚಿಹೋಗಿದ್ದವರಿಗೆಲ್ಲ ಪ್ರೇರಕ ಕೇಂದ್ರ ಮತ್ತು ಸ್ಫೂರ್ತಿಯುತ ಶಕ್ತಿಯಾಗಿ ಮೈಸೂರು ಮತ್ತು ಅಂದಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಪ್ರೋತ್ಸಾಹಕರಾಗಿ ನಿಂತರು. ಆದುದ್ದರಿಂದ ಮೈಸೂರು ರಾಜ್ಯದಿಂದ ಹೊರಗಿದ್ದ ಕನ್ನಡಿಗರೂ ನಾಲ್ವಡಿಯವರ ಬಗ್ಗೆ ರಾಜಭಕ್ತಿ ಹೊಂದುವಂತಾಯಿತು. ಅವರೆಲ್ಲ ನಾಲ್ವಡಿ ಕೃಷ್ಣರಾಜರನ್ನು 'ಕನ್ನಡ ರಾಜ್ಯ ರಮಾರಮಣ' ಮತ್ತು 'ಕರ್ನಾಟಕ ಏಕೀಕರಣ ಭಾವನೆಯ ರೂಪನಿರ್ಮಾಣ ರಾಶಿಯಾತ' ಎಂದು ಭಾವಿಸಿದ್ದರು[೩೫]. ನಾಲ್ವಡಿಯವರೂ ಸಹ ದೇಶೀಯ ಭಾಷೆ ಕನ್ನಡದ ಅಧ್ಯಯನಕ್ಕೆ ವಿಶ್ವವಿದ್ಯಾನಿಲಯದಲ್ಲಿ ಆದ್ಯತೆ ನೀಡುವುದಾಗಿ ಮತ್ತು ಪ್ರಕಟಣಾಂಗದ ಮೂಲಕ ಉತ್ತಮ ಕನ್ನಡ ಕೃತಿಗಳ ಪ್ರಕಟಣೆಗೆ ಪ್ರೋತ್ಸಾಹ ನೀಡಿದರು[೩೬]. ಕನ್ನಡ ಭಾಷೆಯ ಬೆಳವಣಿಗೆಗೆ ನೆರವಾಗಲು ಸರ್ಕಾರದ ಬೆಂಬಲದಿಂದ ೧೯೧೫ರಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತನ್ನು ರಚಿಸಲಾಯಿತು. ೧೯೧೬ರಿಂದ ಕರ್ಣಾಟಕ ಸಾಹಿತ್ಯ ಪರಿಷತ್ ಪತ್ರಿಕೆ ಎಂಬ ನಿಯತಕಾಲಿಕೆಯನ್ನು ಪ್ರಕಟಿಸ ಲಾರಂಭಿಸಲಾಯಿತು. ಒಂದು ಕಾಲದಲ್ಲಿ ಕೇವಲ ಇಂಗ್ಲಿಷ್ ಭಕ್ತರಂತೆ ಇದ್ದು ಆನಂತರ ಕನ್ನಡ ಸೇವಾ ದೀಕ್ಷೆಯನ್ನು ಕೈಗೊಂಡ ಬಿ.ಎಂ.ಶ್ರೀಯವರು ಕನ್ನಡ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳನ್ನು ಪ್ರಸ್ತಾಪಿಸುತ್ತಾ "ಕನ್ನಡ ಬಹಳ ಶೋಚನೀಯವಾದ ಸ್ಥಿತಿಗೆ ಇಳಿದಿದೆ; ಅದಕ್ಕೆ ನ್ಯಾಯವಾಗಿ ಸಲ್ಲಬೇಕಾದ ಸ್ಥಾನವನ್ನು ದೊರಕಿಸಿಕೊಳ್ಳಬೇಕು ; ಅದರ ಸಾಹಿತ್ಯಸಂಪತ್ತನ್ನು ಹೆಚ್ಚಿಸಬೇಕು;" ಎಂದು ಹೇಳುವ ಮೂಲಕ ದೇಶೀಯ ಭಾಷೆ ಕನ್ನಡದ ಕಲಿಕೆಗೆ ಪ್ರೋತ್ಸಾಹ ನೀಡಿದರು[೩೭]. ಹೀಗೆ ಬಿ.ಎಂ.ಶ್ರೀ., ಕುವೆಂಪು, ಮುಂತಾದ ಕನ್ನಡ ಸಾಹಿತಿಗಳು ತಮ್ಮ ಇಂಗ್ಲಿಷ್ ಮೋಹವನ್ನು ತ್ಯಜಿಸಿ ಹೊಸಗನ್ನಡ ಸಾಹಿತ್ಯದ ಮೂಲಕ ಕನ್ನಡ ಸಾಹಿತ್ಯವನ್ನು ಪುನರುಜ್ಜೀವನಗೊಳಿಸಿ ಇಂಗ್ಲಿಷ್ ಗಳಿಸಿದ ಸ್ಥಾನವನ್ನು ಕನ್ನಡಕ್ಕೆ ಮರಳಿ ದೊರಕಿಸಿ ಕೊಡಲು ಶ್ರಮಿಸಿದರು. ಪ್ರಿನ್ಸಿಪಾಲರಾಗಿದ್ದ ಪಾಶ್ಚಿಮಾತ್ಯ ವಿದ್ವಾಂಸ ಹ್ಯಾಂಪ್ಟನ್‌ರಂತಹವರು "ಅರಿಯದ ಭಾಷೆಯ ಮುಖಾಂತರ ಜ್ಞಾನವನ್ನು ಚಿಕ್ಕಮಕ್ಕಳ ತಲೆಯಲ್ಲಿ ತುರುಕಬೇಕೆಂದು ಯತ್ನ ಮಾಡುವುದು ಪಾಪ"[೩೮] ಎಂದು ನುಡಿದರು. ಹೀಗೆ ಪಾಶ್ಚಿಮಾತ್ಯ ಸಂಸ್ಕೃತಿ ಮತ್ತು ಅದರ ಒಂದು ಅಂಶವಾದ ಇಂಗ್ಲಿಷ್ ಭಾಷೆಯ ಪ್ರಭಾವ ದಿಂದುಂಟಾದ ಅನೇಕ ಬೆಳವಣಿಗೆಗಳು ಅಂತಿಮವಾಗಿ ಕನ್ನಡದ ಜನರನ್ನು ಒಂದುಗೂಡುವಂತಾಯಿತು. ಹೀಗೆ ಸ್ವಾತಂತ್ರ್ಯ ಪೂರ್ವ ಮೈಸೂರು ಸಂಸ್ಥಾನದ ಸಮಾಜದಲ್ಲಿ ಆಕರ್ಷಣೆ, ತಿಕ್ಕಾಟ ಹಾಗೂ ಸಮನ್ವಯಗಳೊಂದಿಗೆ ಇಂಗ್ಲಿಷ್ ಭಾಷೆ ಸಾಮಾಜಿಕ ಪರಿವರ್ತನೆಯ ರುವಾರಿಯಾಗಿ ಕಾಣಿಸಿ ಕೊಳ್ಳುತ್ತಾ ಬಂದಿದೆ ಹಾಗೂ ಇಂದಿಗೂ ವಿಶ್ವಮಾನ್ಯ ಭಾಷೆಯಾಗಿ ತನ್ನ ಪ್ರಭುತ್ವವನ್ನು ಉಳಿಸಿಕೊಂಡಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಶಂಕರರಾವ್ ಸಿ.ಎನ್., ಸೋಷಿಯಾಲಜಿ, ಪ್ರೈಮರಿ ಪ್ರಿನ್ಸಿಪಲ್ಸ್ ಆಫ್ ಸೋಷಿಯಾಲಜಿ ವಿತ್ ಆನ್ ಇಂಟ್ರೊಡಕ್ಷನ್ ಟು ಸೋಷಿಯಲ್ ಥಾಟ್, ಸಂಪುಟ ೧, ನ್ಯೂ ಡೆಲ್ಲಿ, ೨೦೦೪, ಪುಟ ೨೧೬.

೨. ಕುವೆಂಪು., ನೆನಪಿನ ದೋಣಿಯಲ್ಲಿ (ಆತ್ಮ ಕಥೆ), ಉದಯರವಿ ಪ್ರಕಾಶನ, ಮೈಸೂರು, ೨೦೦೫, ಪುಟ ೨೦.

೩. ಸೂರ್ಯನಾಥ ಯು. ಕಾಮತ್., ಸಂಪಾದಕರು, **ಕರ್ನಾಟಕ ರಾಜ್ಯ ಗೆಜೆಟಿಯರ್**, ಭಾಗ-೩, ಕರ್ನಾಟಕ ಸರ್ಕಾರ, ಬೆಂಗಳೂರು, ೧೯೮೫. ಪುಟ ೩೮೫.

೪. ಹಯವದನರಾವ್ ಸಿ. (ಸಂ)., **ಮೈಸೂರ್ ಗೆಜೆಟಿಯರ್**, ಸಂಪುಟ-II, ಭಾಗ-IV, ಬೆಂಗಳೂರು, ೧೯೨೯, ಪುಟ ೨೯೯೬.

೫. ವೆಂಕಟರಾಮಯ್ಯ ಸಿ.ಕೆ., **ಆಳಿದ ಮಹಾಸ್ವಾಮಿಯವರು ಶ್ರೀಮನ್ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ ಜೀವನ ಚರಿತ್ರೆ**, ಬೆಂಗಳೂರು, ೧೯೪೧, ಪುಟ ೩೩-೩೪.

೬. ೧೯೦೨ರ ಆಗಸ್ಟ್ ೨ ವೆಸ್ಲಿನ್ ಡೈಲಿಮರ್ಕ್ಯುರಿದಿನಪತ್ರಿಕೆ, ಪ್ಯಾಲೆಸ್ ಪೇಪರ್ ಕಟಿಂಗ್ಸ್, ಪ್ರಾಂತೀಯ ಪತ್ರಾಗಾರ ಇಲಾಖೆ, ಮೈಸೂರು, ಪು. ೨೩.

೭. ಹಯವದನರಾವ್. ಸಿ. (ಸಂ)., **ಮೈಸೂರ್ ಗೆಜೆಟಿಯರ್**, ಸಂಪುಟ-IV, ಅಡ್ಮಿನಿಸ್ಟ್ರೇಟಿವ್, ಪುಟ ೪೯೪.

೮. ಶಾಮರಾವ್ ಎಂ., **ಮಾಡರ್ನ್ ಮೈಸೂರು**, ೧೮೬೮, ಟು ದ ಪ್ರೆಸೆಂಟ್ ಟೈಮ್ಸ್, ಸಂ. II, ಬೆಂಗಳೂರು, ೧೯೩೬, ಪುಟ ೨೭೭.

೯. ನಾಯ್ಡು. ಜಿ.ಎನ್., **ಇಂಟೆಲೆಕ್ಚುಯಲ್ ಹಿಸ್ಟರಿ ಆಫ್ ಕಲೋನಿಯಲ್ ಇಂಡಿಯಾ**, ಮೈಸೂರು, ೧೮೩೧-೧೯೨೦. ರಾವತ್ ಪಬ್ಲಿಕೇಷನ್, ನ್ಯೂ ಡೆಲ್ಲಿ, ೧೯೯೬, ಪುಟ ೪೮-೪೯.

೧೦. ಶರ್ಮ. ತಿ.ತಾ., **ನನ್ನ ಜೀವನ ಮತ್ತು ಧ್ಯೇಯ** (ಆತ್ಮಕಥೆ), ನವನೀತ ಪ್ರಕಾಶನ, ಬೆಂಗಳೂರು, ೨೦೦೨, ಪುಟ ೨೩.

೧೧. ಅದೇ., ಪುಟ ೨೪.

೧೨. ಅದೇ., ಪುಟ ೧೨೯

೧೩. ಅದೇ., ಪುಟ ೨೪.

೧೪. ಅದೇ., ಪುಟ ೩೪.

೧೫. ಅದೇ., ಪುಟ ೨೪.

೧೬. ಕುವೆಂಪು., **ನೆನಪಿನ ದೋಣಿಯಲ್ಲಿ** (ಆತ್ಮಕಥೆ), ಪುಟ ೨೧.

೧೭. ಅದೇ., ಪುಟ ೨೫.

೧೮. ಅದೇ.

೧೯. ಶರ್ಮ. ತಿ.ತಾ., **ನನ್ನ ಜೀವನ ಮತ್ತು ಧ್ಯೇಯ,** ಪುಟ ೨೩.

೨೦. ಕುವೆಂಪು., **ಮಲೆಗಳಲ್ಲಿ ಮದುಮಗಳು,** ಪುಟ ೧೫೩.

೨೧. ವೆಂಕಟರಾಮಯ್ಯ. ಸಿ.ಕೆ., **ಆಳಿದ ಮಹಾಸ್ವಾಮಿಯವರು,** ಪುಟ ೧೦೩.
ನೋಡಿ : ನಾಲ್ವಡಿಯವರ ಬಳಿ ಸೇವೆಯಲ್ಲಿದ್ದ ಪುಟ್ಟನಂಜಪ್ಪ ಎಂಬಾತನು ತಾನು ಇಪ್ಪತ್ನಾಲ್ಕು ಘಂಟೆಗಳ ಕಲ 'ಕುಮಂದಾರಿ' ಕೆಲಸ (ಕಮ್ಯಾಂಡರ್) ಮಾಡಿದುದಾಗಿ ಹೆಮ್ಮೆಯಿಂದ ಹೇಳುತ್ತಿದ್ದನಂತೆ. ಕುಮಂದಾರಿ ಶಬ್ದವು ಕಮ್ಯಾಂಡರ್ ಎಂಬ ಇಂಗ್ಲಿಷ್ ಭಾಷೆಯ ಪದದ ಅಪಭ್ರಂಶವಾಗಿತ್ತು. ನಾಲ್ವಡಿಯವರು ಇಂತಹ ಶಬ್ದಗಳನ್ನು ಬಾಲ್ಯದಿಂದಲೇ ಕೇಳಿ ಸಂತೋಷಗೊಳ್ಳುತ್ತಿದ್ದರು ಮತ್ತು ಅದನ್ನು ಪ್ರೋತ್ಸಾಹಿಸುತ್ತಿದ್ದರು. ಹೀಗೆ ಕೆಳಹಂತದ ನೌಕರರವರೆಗೂ ಇಂಗ್ಲಿಷ್ ಶಬ್ದಗಳ ಬಳಕೆ ಆರಂಭಗೊಂಡುದನ್ನು ಕಾಣಬಹುದು.

೨೨. ಶರ್ಮ. ತಿ.ತಾ., **ಪೂರ್ವೋಕ್ತ,** ಪುಟ ೧೧೩.

೨೩. ಸೂರ್ಯನಾಥ್ ಕಾಮತ್., (ಸಂ)., **ಕರ್ನಾಟಕ ರಾಜ್ಯ ಗ್ಯಾಸೆಟಿಯರ್,** ಭಾಗ-೩, ಪುಟ ೩೮೫.

೨೪. ಮಾಸ್ತಿ ವೆಂಕಟೇಶ ಅಯ್ಯಂಗಾರ್, ಭಾವ-೨ (ಆತ್ಮಕಥೆ), ಜೀವನ ಕಾರ್ಯಾಲಯ ಪ್ರಕಾಶನ, ಬೆಂಗಳೂರು, ೧೯೯೦. ಪುಟ ೩೮.

೨೫. ಕುವೆಂಪು., **ನೆನಪಿನ ದೋಣಿಯಲ್ಲಿ,** ಪುಟ ೧೩೬-೧೩೭.

೨೬. ಅದೇ., ಪುಟ ೧೦೮.

೨೭. ಅದೇ., ಪುಟ ೧೮೯.

೨೮. ಅದೇ., ಪುಟ ೯೩-೯೪.

೨೯. ಮೂರ್ತಿರಾವ್ ಎ.ಎನ್., **ಚಿತ್ರಗಳು ಪತ್ರಗಳು,** ಡಿ.ವಿ.ಕೆ. ಮೂರ್ತಿ, ಮೈಸೂರು, ೨೦೦೧, ಪುಟ ೮೫.

೩೦. ಕುವೆಂಪು., **ನೆನಪಿನ ದೋಣಿಯಲ್ಲಿ,** ಪುಟ ೧೨೯-೧೩೦.

೩೧. ಗುಂಡಪ್ಪ ಡಿ.ವಿ., **ಜ್ಞಾಪಕ ಚಿತ್ರಶಾಲೆ,** ಸಂ. ೧, ಸಾಹಿತಿ ಸಜ್ಜನ ಸಾರ್ವಜನಿಕರು, ಐ.ಬಿ.ಹೆಚ್.ಪ್ರಕಾಶನ, ಬೆಂಗಳೂರು, ೧೯೮೨, ಪು.೧೮-೧೯.

೩೨. ವೆಂಕಟರಾಮಯ್ಯ ಸಿ.ಕೆ., **ಕೆಲವು ನೆನಪುಗಳು,** ಪ್ರಬುದ್ಧ ಕರ್ನಾಟಕ, ಚಿನ್ನದ ಸಂಚಿಕೆ, ಸಾಹಿತ್ಯ ಸಂಪುಟ, ಮೈಸೂರು, ೧೯೭೯, ಪುಟ ೨೮.

೩೩. ಕುವೆಂಪು., **ನೆನಪಿನ ದೋಣಿಯಲ್ಲಿ,** ಪುಟ ೩೩೭-೩೩೮.

೩೪. ವಿಶ್ವಕರ್ಣಾಟಕ, ದಿನಪತ್ರಿಕೆ, ೨೪-೭-೧೯೨೭. ಪ್ಯಾಲೇಸ್ ಪೇಪರ್ ಕಟಿಂಗ್ಸ್, ಪ್ರಾಂತೀಯ ಪತ್ರಾಗಾರ ಇಲಾಖೆ, ಮೈಸೂರು.

೩೫. ವಿಶ್ವಕರ್ಣಾಟಕ, ದಿನಪತ್ರಿಕೆ, ೨೪-೭-೧೯೨೭.

೩೬. **ಸ್ಪೀಚಸ್ ಆಫ್ ಹಿಸ್ ಹೈನೆಸ್.,** ಕೃಷ್ಣರಾಜ ಒಡೆಯರ್ IV, ೧೯೦೨-೧೯೩೩, ಭಾಗ-೧, ಬೆಂಗಳೂರು, ೧೯೩೪, ಪುಟ ೧೫೭.

೩೭. ರಾಮೇಗೌಡ ಮತ್ತು ಪ್ರಧಾನ್ ಗುರುದತ್ (ಸಂ)., **ಬಿ.ಎಂ. ಶ್ರೀ ನೂರರ ನೆನಪು.,** ಮೈಸೂರು, ೧೯೮೩, ಪುಟ ೨೧೧.

೩೮. ವಿಶ್ವಕರ್ಣಾಟಕ, ದಿನಪತ್ರಿಕೆ, ೬-೨-೧೯೨೭.

ಡಾ. ಬಿ. ಲೀಲಾ *

ದಿನಕರ ದೇಸಾಯಿ (೧೯೦೯-೧೯೮೨) ಮತ್ತು ಅವರ ಕೃತಿ ಕಲ್ಯಾಣಿ ಚಾಲುಕ್ಯರ ಕಾಲದ ಮಹಾಮಂಡಲೇಶ್ವರರು

೨೦೦೮-೨೦೦೯ ಸಾಲಿನಲ್ಲಿ ಮುಂಬೈನಲ್ಲಿ, ಮುಂಬೈ ಬೆಳವಣಿಗೆಗೆ ಕಾರಣರಾದ ಮತ್ತು ದೇಶದ ಪ್ರಗತಿಗೆ ಕಾರಣರಾದ ಹಲವಾರು ಮಹನೀಯರ ಶತಮಾನೋತ್ಸವ ನಡೆಯಿತು. ಸಾಮಾಜಿಕ ಸೇವೆಗೆ ಕಾರಣರಾದ ಹಲವರನ್ನು ಸ್ಮರಿಸಲಾಯಿತು. ಇವರಲ್ಲಿ ಅತ್ಯಂತ ಪರಿಣಾಮ ಬೀರಿದ ಮತ್ತು ಸಾಮಾಜಿಕ ಚರಿತ್ರೆಯಲ್ಲಿ ಶಾಶ್ವತವಾಗಿ ಚಿತ್ರಿಸಬಹುದಾದ ಮತ್ತು ಚರಿತ್ರೆಯ ದೃಷ್ಟಿಯಿಂದ ದಿನಕರ ದೇಸಾಯಿ ವಿರಚಿತ "ಕಲ್ಯಾಣಿ ಚಾಲುಕ್ಯರ ಕಾಲದ ಮಹಾಮಂಡಲೇಶ್ವರರು" ಕೃತಿ ಬಹಳ ಮುಖ್ಯವಾಗಿದೆ.

ತಮ್ಮ ಚಿಕ್ಕ ವಯಸ್ಸಿನಲ್ಲೇ ಜಗತ್ತನ್ನು ಪ್ರೀತಿಸಿದರು ಮತ್ತು ವಿಶ್ವಶಾಂತಿ ಬಯಸಿದವರು ದಿನಕರ ದೇಸಾಯಿ. "ದೇಸಾಯಿಯವರು ಒಬ್ಬ ಖ್ಯಾತ ಸಾಹಿತಿ ಎಂಬ ಕೀರ್ತಿಯ ಬಗ್ಗೆ ನನಗೆ ಅನ್ಯಮತವಿದ್ದಿಲ್ಲ. ಅವರ ಜೀವನವು ಒಂದು ವೈಚಾರಿಕ ಸಿದ್ಧಾಂತದ ಮೇಲೆ ನಿಂತಿದೆ ಎಂದು ನನಗೀಗ ಅರ್ಥವಾಯಿತು. ಮತ್ತು ಈ ಸಿದ್ಧಾಂತದ ಪರಿಣಾಮವೇ ಅವರ ಕಾರ್ಯಸಾಧನೆಗಳಾಗಿವೆ. ದೇಸಾಯಿ ಒಬ್ಬ ಮಹಾನ್ ವ್ಯಕ್ತಿ, ನಾಡು ಅವರನ್ನು ಅರಿಯಬೇಕು[೧] ಎಂಬ ಡಿ.ವಿ. ಗುಂಡಪ್ಪನವರ ಮಾತು ಅತ್ಯಂತ ಮಹತ್ವವಾಗಿದೆ. ಇಂತಹ ಮಹಾನ್ ವ್ಯಕ್ತಿಯನ್ನು ಅವರ ಕೃತಿಗಳ ಮೂಲಕ ನೋಡಲು ಒಂದು ಕಿರು ಪ್ರಯತ್ನ ಮಾಡಲಾಗಿದೆ.

ಈ ಪ್ರಬಂಧವನ್ನು ಎರಡು ಭಾಗವಾಗಿ ವಿಂಗಡಿಸಿದೆ. ಮೊದಲಿಗೆ ದೇಸಾಯಿಯವರ ಕಿರುಪರಿಚಯ ಮತ್ತು ಸೂಕ್ಷ್ಮವಾಗಿ ಅವರ ಕೃತಿ ಕಲ್ಯಾಣಿ ಚಾಲುಕ್ಯರ ಕಾಲದ ಮಹಾಮಂಡಲೇಶ್ವರರು.

ಉತ್ತರ ಕನ್ನಡ ಜಿಲ್ಲೆಗೆ ಸೇರಿದ್ದ ಹೊನ್ನಕೇರಿ (ಅಂಕೋಲ ತಾಲ್ಲೂಕು) ಗ್ರಾಮದಲ್ಲಿ ೧೦, ಸೆಪ್ಟೆಂಬರ್ ೧೯೦೯ರಂದು ದಿನಕರರ ಜನನವಾಯಿತು. ಪ್ರೈಮರಿ ಶಾಲೆಯ ಉಪಾಧ್ಯಾಯರಾಗಿದ್ದ ಅವರ ತಂದೆ ದತ್ತಾತ್ರೇಯ ದೇಸಾಯಿ ಮಕ್ಕಳ ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಆಸಕ್ತಿ ತೋರಿದ್ದರು. ದಿನಕರ ದೇಸಾಯಿ ಹೈಸ್ಕೂಲು ವಿದ್ಯಾಭ್ಯಾಸವನ್ನು ಕಾರವಾರ, ಅಂಕೋಲಗಳಲ್ಲಿ ಮುಗಿಸಿ, ಬೆಂಗಳೂರಿನ ಇಂಟರ್ ಮೀಡಿಯೆಟ್ ಕಾಲೇಜಿಗೆ ಬಂದು ಸೇರಿದರು. ಆಗ ಅಲ್ಲಿ ಕನ್ನಡದ ಅಧ್ಯಾಪಕರಾಗಿದ್ದವರು ವಿ. ಸೀತಾರಾಮಯ್ಯ, ಇಂಟರ್ ಮೀಡಿಯೇಟ್ ಮುಗಿಸಿ, ಮೈಸೂರು ಮಹಾರಾಜ ಕಾಲೇಜಿನ ಬಿ.ಎ. ತರಗತಿಯಲ್ಲಿ ಇತಿಹಾಸ, ರಾಜ್ಯಶಾಸ್ತ್ರ ಓದಿ ಅಂತಿಮ ಪರೀಕ್ಷೆಯಲ್ಲಿ ಸರ್ವ ಪ್ರಥಮರಾಗಿ ಬಂಗಾರದ ಪದಕ ಮತ್ತು ಕ್ಯಾಂಡಿ ಪಾರಿತೋಷಕ ಪಡೆದವರು. ಪ್ರೊ|| ರೋಲೊ ಅತ್ಯಂತ ಪ್ರಭಾವ ಬೀರಿದ ಅಧ್ಯಾಪಕ ಎಂದು ದಿನಕರರು ನೆನೆದಿದ್ದಾರೆ. ಆಗಿನ ಕಾಲದಲ್ಲಿ ಇದೊಂದು ಅಪೂರ್ವ ಸಾಧನೆ. ಇದೇ ರೀತಿ ಆಗಿನ ಮತ್ತೊಬ್ಬ ಪ್ರತಿಭಾವಂತ ವಿದ್ಯಾರ್ಥಿಯೆಂದರೆ ಪ್ರೊ. ಜಿ.ಎಸ್. ದೀಕ್ಷಿತರು. ದಿನಕರ ದೇಸಾಯಿಯವರ ಎಮ್.ಎ. ಪ್ರಬಂಧ "The Mahamandalesvara under the Calukyas of Kalyani" ಪ್ರಬಂಧದ ಕರಡು ಕಾಪಿಯನ್ನು ನೋಡಿ ತಿದ್ದಿದವರು.[೨] ಮುಂಬೈ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಪ್ರತಿಭಾವಂತ ವಿದ್ಯಾರ್ಥಿ ತನ್ನ ಅಭಿರುಚಿಗೆ ತಕ್ಕಂತೆ ಸಂಶೋಧನೆ ನಡೆಸಿ ಪ್ರಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿ ಸ್ನಾತಕೋತ್ತರ ಪದವಿಯನ್ನು ಪಡೆಯಬಹುದಾಗಿತ್ತು. ಮತ್ತೊಂದು, ಎಲ್ಲರಂತೆ ಪಠ್ಯಪುಸ್ತಕ ಅಭ್ಯಾಸಿಸಿ ಪರೀಕ್ಷೆಗೆ ಕೂರುವದು. ಇದರಲ್ಲಿ ಮೊದಲನೆಯದನ್ನು ಆಯ್ದಿದ್ದ ದಿನಕರ ದೇಸಾಯಿ St. xaviers College ನಲ್ಲಿ ಇತಿಹಾಸ ಪ್ರಾಧ್ಯಾಪಕರಾದ ಈಡಿ. Henry ಊಜಡಿಛೆರವರನ್ನು ತಮ್ಮ ಗುರುಗಳನ್ನಾಗಿ, ಮಾರ್ಗದರ್ಶಿಯೆಂದು ಕಂಡುಕೊಂಡರು. ಈಡಿ. ಊಜಟಡಿಥಿ ಊಜಡಿಛೆ* ವಿಶೇಷ ಸಂಶೋಧಕರೂ, ಇತಿಹಾಸ ತಜ್ಞರಲ್ಲಿ ಮುಖ್ಯರು. ದೇಸಾಯಿ ತಮ್ಮ ಪ್ರಬಂಧ "Mahamand elesvar's under the Calukyas (೧೯೩೩) ಮುಂಬೈ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದರು. ಈ ಪ್ರಬಂಧಕ್ಕೆ ಖಣ. xaviers College ರಜತ ಪದಕ ದೊರೆಯಿತು.

---

* Fr. Henry Heras ನೆನಪಿನಲ್ಲಿ ಈಗಲೂ ಈಡಿ. Henry Collee ನಲ್ಲಿ Fr. Henry Snstsct of Indian History and culture ಸಂಸ್ಥೆ ಅನೇಕ ವಿಧವಾದ ಚರಿತ್ರೆಗೆ ಸಂಬಂಧಿಸಿದ ಹಲವಾರು ಸಂಶೋಧನ ಕಮ್ಮಟ ನಡೆಸುತ್ತಿದೆ.

*

ಉನ್ನತಮಟ್ಟದ ಪ್ರಬಂಧವೆಂದು ಚರಿತ್ರಕಾರರು ಗುರುತಿಸುವಂತಾಯ್ತು. ಈ ಪುಸ್ತಕ ೧೯೫೧ರಲ್ಲಿ ಪ್ರಕಟವಾಯ್ತು. ಮಹಾಮಂಡಲೇಶ್ವರರ ಬಗ್ಗೆ ವಿಸ್ತಾರವಾಗಿ ಬರೆದ ಮೊದಲನೆ ಪುಸ್ತಕವಿದು. ರಾಜ ಮಹಾರಾಜರ ವೈಭವೀಕರಣದ ಚರಿತ್ರೆ ಮತ್ತು ಇತಿಹಾಸವೆಂದರೆ ಯುದ್ಧಗಳ ಮತ್ತು ರಾಜಕೀಯದ ವೈಭವವೆಂದುಕೊಂಡು ನಂಬಿಕೊಂಡಿದ್ದ ಹಲವಾರು ಇತಿಹಾಸಕಾರರಿಗೆ, ರಾಜ್ಯಾಡಳಿತದ ಆಧಾರಸ್ತಂಭವಾದ ಮತ್ತು ರಾಜರುಗಳಷ್ಟೇ ಪರಾಕ್ರಮಿಗಳಾದ ಮಹಾಮಂಡಲೇಶ್ವರರ ಬಗ್ಗೆ ಸುದೀರ್ಘ ಚರಿತ್ರೆಯನ್ನು ಈ ಪುಸ್ತಕ ಪ್ರಸ್ತುತಪಡಿಸಿದೆ. ಇದು ಒಂದು ಉತ್ತಮ ಆಕರ ಗ್ರಂಥವಾಗಿದೆ.

ಇದೇ ಅವಧಿಯಲ್ಲಿ ಎಲ್.ಎಲ್.ಬಿ. ಮುಗಿಸಿದ ದಿನಕರದೇಸಾಯಿ, ಅಪ್ಪಾಪಿಕಳೆಯವರ ಸಲಹೆಯಂತೆ ಭಾರತ ಸೇವಾ ಸಂಘದ ಸದಸ್ಯತ್ವ (ಒಜಟಭಜಡಿಥಿ) ಪಡೆದು ಸಾರ್ವಜನಿಕರ ನೋವು ನಲಿವುಗಳಿಗೆ ಸ್ಪಂದಿಸಿದರು. ಭಾರತ ಸೇವಾ ಸಮಾಜದಲ್ಲಿ ನಿಷ್ಠತೆಗೆ ಆದ್ಯತೆ. ಸದಸ್ಯತ್ವ ಸಿಗುವುದು ಕಷ್ಟ ಕಟುಪರೀಕ್ಷೆಯಲ್ಲಿ ಪಾಸಾಗಿ ಸಮಾಜದ ಅಜೀವ ಸದಸ್ಯತ್ವ ಪಡೆದರು. ೧೯೩೫ರಲ್ಲಿ ಭಾರತ ಸೇವಾ ಸಂಘ ಸೇರಿದ ದಿನಕರ ದೇಸಾಯಿ ಗಿರಿಗಾವ್‌ನಲ್ಲಿದ್ದ (ಮುಂಬೈ) ಸಮಾಜದ ಕಛೇರಿಯ ಮೇಲಂತಸ್ತಿನ ಕೊಠಡಿಯಲ್ಲಿ ತಮ್ಮ ಬದುಕಿನ ಬಹುಕಾಲ ಸಾರ್ವಜನಿಕ ಸೇವೆಗೆ ಮೀಸಲಿಟ್ಟರು. ಅದಲ್ಲದೆ ಕಾವ್ಯಲೇಖನ, ವಿಷಯಗಳ ಅಭ್ಯಾಸ, ಚಿಂತನೆ, ಜನಸೇವಕ ಪತ್ರಿಕೆಯ ಕಾರ್ಯರಂಗ ಮತ್ತು ಟ್ರೇಡ್ ಯೂನಿಯನ್ ಸೆಕ್ರೆಟರಿಯಾಗಿ ರೈತ ಸಂಘಟನಾ ಚಳುವಳಿ ಪ್ರೇರಕರಾಗಿ ೧೯೪೦ರಲ್ಲಿ ಕಮ್ಯುನಿಸ್ಟ್ ಎಂದು ಮುಂಬೈ ಸರ್ಕಾರ ಅವರನ್ನು ಉತ್ತರ ಕರ್ನಾಟಕಕ್ಕೆ ಕಾಲಿಡದಂತೆ ಬಂಧಿಸಿತ್ತು. ದೇಸಾಯಿ ರಾಜಕಾರಣವನ್ನು ಜನರ ಹಿತಕ್ಕಾಗಿ ಬಳಸಿ, ಶೈಕ್ಷಣಿಕ ಕಾರ್ಯದಲ್ಲಿ ತೊಡಗಿಸಿಕೊಂಡರು.

ದಿನಕರ ದೇಸಾಯಿ ಬರೆದ ಹಲವಾರು ವರದಿಗಳು ಅತ್ಯಂತ ಪ್ರಾಮಾಣಿಕವಾಗಿದೆ. ಮುಂಬೈ ನಾವಿಕ ಸಂಘಕ್ಕೆ ಬರೆದ ವರದಿ (೧೯೬೧) ಹಿಂದುಳಿದ ವಕ್ಕಲು ಜನರಿಗೆ* ಆಗುತ್ತಿರುವ ಶೋಷಣೆ ಹೊತ್ತಿಗೆ (೧೯೪೫) ಅಂತರ ರಾಷ್ಟ್ರೀಯ ಕಾರ್ಮಿಕ ಮಹಾಪರಿಷತ್ತಿನ ಅಧಿವೇಶನದಲ್ಲಿ ಭಾರತದ ಪ್ರತಿನಿಧಿ ವರದಿ (೧೯೪೬), ಅಮಲನೇರನಲ್ಲಿ ಆದ ಗೋಲಿಬಾರ್ (೧೯೪೨), ಮುಂಬೈ ಸಾಕ್ಷರತೆರಡೆಗೆ, ಬ್ರಿಟನ್‌ನಲ್ಲಿ ಭಾರತದ ನಾವಿಕರ ನಡುವೆ (೧೯೪೨-೪೩), ಭಾರತ ಸೇವಾ ಸಮಾಜದ ಅಣತಿಯ ಮೇರೆಗೆ, ಬಿಜಾಪುರ ಬರಗಾಲ ಪರಿಹಾರ ಸಮಿತಿ ವರದಿ, ಉತ್ತರ ಕರ್ನಾಟಕದಲ್ಲಿ



ಗೇಣಿ ಪದ್ಧತಿ ಇವೆಲ್ಲಾ ಅತ್ಯಂತ ಪ್ರಾಮಾಣಿಕತೆಯಿಂದ ಬರೆದ ವರದಿಗಳು.

ಅವರ ಕವನಗಳು ಅತ್ಯಂತ ಉತ್ತಮ ಮಟ್ಟದು. ಚೌಪದಿಗಳ ಬ್ರಹ್ಮನೆಂದು ಕರೆಯಲ್ಪಟ್ಟಿದ್ದಾರೆ. ಅವರ ಕವನಗಳಲ್ಲಿ ಸಾಮಾಜಿಕ ಪ್ರಜ್ಞೆ, ನಿಸರ್ಗ, ಚಾರಿತ್ರಿಕ ವ್ಯಕ್ತಿಗಳು, ಇವೆಲ್ಲಾ ಉತ್ತಮ ಪ್ರೇರಣೆ ನೀಡಿದಂತಿವೆ.

೧೯೫೩ರಲ್ಲಿ ಸ್ಥಾಪಿತವಾದ ಅಚಿಟಿಚಿಡಿಚಿ ಘಜಟಜಿಚಿಡಿಜ ಖಿಡಿಣಾಣನ ಹಲವಾರು ಪ್ರಗತಿಪರ ಯೋಜನೆಗಳಾದ ಹರಿಜನರ ಸ್ಕೂಲು, ಹಾಸ್ಪಿಟಲ್ ಮತ್ತು ಕಾರವಾರ ಜಿಲ್ಲೆಯ ಗ್ರಾಮಾಭಿವೃದ್ಧಿ ಹೀಗಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಸರ್ವತೋಮುಖವಾಗಿ ಬೆಳೆದಿದೆ. ಪತ್ರಿಕೆಯ ಮೂಲಕ (ಜನಸೇವಕ) ಜನಸೇವೆಯೆಂದು ನಂಬಿದ ದೇಸಾಯಿ ೧೭ ವರುಷ ಕಾಲ (೧೯೫೫-೭೨) ಜನಸೇವಕ ಪತ್ರಿಕೆ ನಡೆಸಿದರು. ಇದರಲ್ಲಿ ಕರ್ನಾಟಕ ಏಕೀಕರಣ ಕಹಳೆ ಮೊಳಗಿತು. ಅತ್ಯಂತ ಪ್ರಭಾವೀ ಮಾರ್ಗ ಪತ್ರಿಕೆಯ ಮೂಲಕ ಇದು ಸೇವೆಯ ಇನ್ನೊಂದು ಮುಖವೆಂದು ತಿಳಿದಿದ್ದರು. ಆರ್ಥಿಕ ಮುಗ್ಗಟ್ಟಿನಿಂದ ಪತ್ರಿಕೆ ನಿಂತಿತು. ೧೯೬೭-೭೧

* ಇವೆಲ್ಲ ವರದಿಗಳು ಮುಂಬೈ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಇವೆ.

ಲೋಕಸಭೆಯ ಸದಸ್ಯರಾಗಿ, ಜನಪ್ರಿಯರಾದರು. ಇವರು ಮೊಟ್ಟಮೊದಲ ಶಿಕ್ಷಣ ಆಯೋಗದ ಪರಿಶೀಲನೆ ಮೆಂಬರ್ Kothari Commission Report ಇಂದಿಗೂ ಉಪಯುಕ್ತ ಮಾಹಿತಿ ಒದಗಿಸುತ್ತೆ. ಕರ್ಣಾಟಕ ಏಕೀಕರಣ (೧೯೫೪) ಕರಡು ಪ್ರತಿ ತಯಾರಿಸಿದರು ಮತ್ತು ಏಕೀಕರಣಕ್ಕೆ ದುಡಿದರು. ಕನ್ನಡ ರಾಜ್ಯಕ್ಕೆ 'ಕರ್ಣಾಟಕ' ಎಂದು ಹೆಸರಿಡಬೇಕು. ರಾಜ್ಯದ ಆಡಳಿತ ಭಾಷೆ ಕನ್ನಡವಾಗಬೇಕು ಎಂದು ಹೋರಾಡಿದರು. ಐದು ವರ್ಷಕ್ಕೊಮ್ಮೆ ಆಡಳಿತ ಶಬ್ದಕೋಶ ಪುರವಣಿ ಹೊರಬರಬೇಕು ಎಂದು ವಾದಿಸಿದವರು ದೇಸಾಯಿ.

ಮಹಾಮಂಡಲೇಶ್ವರರು ; ಕಲ್ಯಾಣ ಚಾಲುಕ್ಯರ ಕಾಲ

ದಿನಕರ ದೇಸಾಯಿ ಅವರ ಅಸಂಖ್ಯಾತ ಬರವಣಿಗೆಯಲ್ಲಿ ಅವರ ಉತ್ತಮ ಚಾರಿತ್ರಿಕ ಕೃತಿ "ಮಹಾಮಂಡಲೇಶ್ವರ; ಕಲ್ಯಾಣಿ ಚಾಲುಕ್ಯರು" ಅಷ್ಟಾಗಿ ಪ್ರಚಲಿತದಲ್ಲಿಲ್ಲ. ಬಹುಶಃ ಅವರ "ಚೌಪದಿಗಳು" ಚಾರಿತ್ರಿಕ ಕೃತಿಯನ್ನು ಹಿಂದಾಗಿಸಿರಬಹುದು. ಆದರೆ ಅವರು ಒಬ್ಬ ಶಿಷ್ಟ ಸಂಶೋಧಕ ಎಂಬುದನ್ನು ಈ ಕೃತಿ ತಿಳಿಸುತ್ತದೆ. ಇತಿಹಾಸ ಆಗಿಹೋದ ವೈಭವದ ಸಂಭ್ರಮ ಅಥವಾ ಯುದ್ಧಗಳ ವಿವರಣೆ ಎಂಬ ತಪ್ಪು ಕಲ್ಪನೆಗೆ ಇತಿಶ್ರೀ ಹಾಡಿ ಜನಸಾಮಾನ್ಯರ ಚಿತ್ರವನ್ನು ಮತ್ತು ರಾಜರಿಗಿಂತ ಕಡಿಮೆ ವರ್ಗದ ಮಂಡಲೇಶ್ವರರ ಸಂಶೋಧನೆಯನ್ನು ನಿಖರವಾಗಿ ಸಕಲ ಆಧಾರದೊಡನೆ ನಿರೂಪಿಸಿದ್ದಾರೆ. ಡಾ॥ ಫ್ಲೀಟ್‌ರವರು ಮಹಾಮಂಡಲೇಶ್ವರರ ಬಗ್ಗೆ ಬರೆದ್ದಿದ್ದರೂ, ಅದು ಮುಂಬೈ ಕರ್ಣಾಟಕಕ್ಕೆ ಮಾತ್ರ ಸೀಮಿತವಾಗಿದೆ, ದಕ್ಷಿಣ ಕರ್ಣಾಟಕದ ಶೋಧನೆ ಪೂರ್ತಿಯಾಗಿಲ್ಲ. ಬಿ.ಎಲ್. ರೈಸ್‌ರವರ ಸಂಶೊಧನೆ, ಸಾಕಷ್ಟು ಪ್ರಮಾಣದಲ್ಲಿ ನಡೆದಿಲ್ಲ. ಚಾಲುಕ್ಯ ಸಾಮ್ರಾಜ್ಯವನ್ನು ಪೂರ್ಣ ಅಭ್ಯಾಸ ಮಾಡುವ ವಿದ್ಯಾರ್ಥಿಗೆ ಪೂರ್ಣ ಅಭ್ಯಾಸ ಅವಶ್ಯಕ. ಆದ್ದರಿಂದ ಈ ಅಭ್ಯಾಸವನ್ನು ಕೈಗೊಂಡಿದ್ದಾಗಿ ಅಭಿಪ್ರಾಯಿಸಿದ್ದಾರೆ.[೩] ದೇಸಾಯಿಯವರ ಅಧ್ಯಯನ ಕರ್ಣಾಟಕಕ್ಕೆ ಸೀಮಿತವಾಗಿ, ಕೊಂಕಣದ ಶಿಲಾಹಾರರನ್ನು ಸೇರಿಸಿಲ್ಲ. ಪ್ರೊ॥ ಮೊರೆಸ್ ಹಾನಗಲ್ಲ ಮತ್ತು ಗೋವೆ ಕದಂಬರನ್ನು ತಮ್ಮ ಅಧ್ಯಯನದಲ್ಲಿ ಸೇರಿಸಿದ್ದರಿಂದ ಅದನ್ನು ಕೈಬಿಟ್ಟಿದೆ. ಸಿಂಧರು, ರಟ್ಟರು, ಪಾಂಡ್ಯರು ಮತ್ತು ಗುತ್ತರು ಈ ನಾಲ್ಕೂ ವಂಶಸ್ಥರ ಅಧ್ಯಯನ ಇಲ್ಲಿದೆ.

ಹಲವಾರು ಮುಖ್ಯ ಆಕರಗಳನ್ನೂ ಮತ್ತು ಸಾಹಿತ್ಯ ಕೃತಿಗಳಾದ ಮಾನಸೋಲ್ಲಾಸ, ವಿಕ್ರಮಾಂಕ ದೇವಚರಿತೆ ಉಪಯೋಗಿಸಿರುವುದು ಕಂಡುಬರುತ್ತೆ. ಗ್ರಂಥಾ ವಿವರಣಾ ಮತ್ತು ಪಟ್ಟಿ ಉಪಯುಕ್ತವಾಗಿದೆ. ಮೊದಲನೆ ಭಾಗದಲ್ಲಿ ಸಿಂಧರು, ರಟ್ಟರು, ಪಾಂಡ್ಯರು ಗುತ್ತರ ವಿವರವಿದೆ. ಎರಡನೆ ಭಾಗದಲ್ಲಿ ಮಹಾಮಂಡಲೇಶ್ವರರ ಪೂರ್ಣ ರಾಜ್ಯಾಡಳಿತ ವರ್ಣನೆ ಇದೆ.

ಇತಿಹಾಸ ಬರೆಯುವಾಗ ಹಲವಾರು ಕಡೆ ಸಂಶಯ ಮೂಡುತ್ತದೆ. ಮತ್ತು ಬೇರೆ ಅಭಿಪ್ರಾಯ ಮೂಡುವಂತಹ ಸಂದರ್ಭ ಒದಗುತ್ತದೆ. ಇದರಿಂದ ಇತಿಹಾಸಕಾರನು ಎಚ್ಚರಿಕೆಯಿಂದಿರಬೇಕೆಂದೂ, ಸಿಂಧರು ಕನ್ನಡಿಗರೆಂದು ತಿಳಿಸಿಕೊಟ್ಟಿದ್ದಾರೆ. ಸಿ.ವಿ. ವೈದ್ಯ ಮರಾಠರನ್ನು ಒಂದು ಕಡೆ ಆರ್ಯ ಮತ್ತು ನಾಗವಂಶಕ್ಕೆ ಸೇರಿದವರೆಂದೂ, ಆದ್ದರಿಂದ ದ್ರಾವಿಡರೆಂದು ವಾದಿಸುತ್ತಾರೆ. ಮತ್ತೊಂದು ಮರಾಠಿ ಲೇಖನದಲ್ಲಿ ಂಡಿಥಿಚಿಟಿ, ಣಂಥಿಜ ಎಂದು ಹೇಳಿದ್ದಾರೆ. ಆದ್ದರಿಂದ ಇವರ ಹೇಳಿಕೆ ವ್ಯತಿರಿಕ್ತವಾಗಿದೆ. ಬಾಗಡೆ ಶಾಸನ ಲಾಂಛನದಲ್ಲಿ ನಾಗಸರ್ಪ ತೋರಿಸಿದೆ. ನಾಗನನ್ನು ಪೂಜಿಸುವದು ಕರ್ಣಾಟಕದ ಪದ್ಧತಿ. ಎರಡನೇ ಶತಮಾನದಲ್ಲಿ ನಾಗರಪೂಜೆ ಇತ್ತೆಂದು ಶಾತವಾಹನರ ಬನವಾಸಿ ಕಾಲದ ಶಾಸನ ಹೇಳುತ್ತದೆ. ಏಳನೇ ಶತಮಾನದ ಕಡೆಯ ಶಾಸನದಲ್ಲಿ ಪಣಿಧ್ವಜ ಇತ್ತೆಂದೂ ತಿಳಿದುಬಂದಿದೆ. ಆದ್ದರಿಂದ ಸಿಂಧು ವಂಶದವರನ್ನು ಮರಾಠರು ಅವರ ಭಾಷೆ ಮರಾಠಿ ಎಂದು ಕರೆಯುವದು ಸರಿಯಲ್ಲ ಎಂದು ತಿಳಿಸಿರುವರು.[೪]

ಚಾಲುಕ್ಯರು ಕಲ್ಯಾಣದಲ್ಲಿ ಆಳುತ್ತಿದ್ದಾಗ ಅಚ್ಚುಗಿ ೨ (ಂಛಿಛಿಣಾರು ೧೧) ಅವರ ಬಲಗೈ ಆಗಿದ್ದುಪರಾಕ್ರಮಿ ಮಂಡಲೇಶ್ವರನಾಗಿ ೭ನೇ ವಿಕ್ರಮಾದಿತ್ಯನ ನಂಬಿಕೆ ಗಳಿಸಿದ್ದ. ಚಾಲುಕ್ಯ ಸಾಮ್ರಾಜ್ಯದ ಉನ್ನತಿಗೆ ಕಾರಣನಾದ ವಿಕ್ರಮಾದಿತ್ಯ ೬, ಹೊಯ್ಸಳನು ದಕ್ಷಿಣದಿಂದ, ಪಶ್ಚಿಮದಿಂದ ಗೋವೆ ಕದಂಬರು, ಉತ್ತರದಿಂದ ಕರಾಡದ ಶಿಲಾಹಾರಿಗಳು ಮತ್ತು ಪೂರ್ವದ ಉಚ್ಚಂಗಿ ಪಾಂಡ್ಯರಿಂದ ಸುತ್ತುವರಿಯಲ್ಪಟ್ಟಾಗ ಅಚ್ಚುಗಿ ಸಹಾಯ ಮಾಡಿ ಗೋವೆಯನ್ನು ಆಕ್ರಮಿಸಿ 'ಉಪ್ಪಿನಕಟ್ಟೆ'ಯನ್ನು ನಾಶ ಮಾಡಿದನು. ಮತ್ತು ಕೊಂಕಣಕ್ಕೆ ಮುತ್ತಿಗೆ ಹಾಕಿದನು.[೫] ಉಪ್ಪಿನಕಟ್ಟೆ ಒಂದು ಕಾಲದಲ್ಲಿ ಉಪ್ಪು ತಯಾರಿಸುವ ಕಾರ್ಖಾನೆಯಾಗಿತ್ತೆಂದೂ ಇಂದು ಈಗ ಉತ್ತರ ಕನ್ನಡ ಕುಮಟಾ ತಾಲ್ಲೂಕಿನ **ಶನಿಕಟ್ಟೆ,** ಉಪ್ಪು ತಯಾರಿಸುವ ಕೇಂದ್ರವಾಗಿರುವದು ತಾಳೆ ಹೊಂದುವದೆಂದು ತಿಳಿಸಿದ್ದಾರೆ. ಅಚ್ಚುಗಿ ಪರಾಕ್ರಮಿ. ಪಂಚ ಮಹಾಶಬ್ದ (ಐದುವಾದ್ಯ)ದಿಂದ ಗೌರವಿಸಲ್ಪಡುತ್ತಿದ್ದನು.

ಕಲ್ಯಾಣಿ ಚಾಲುಕ್ಯರ ಕೈಕೆಳಗಿದ್ದ ಮಹಾಮಂಡಲೇಶ್ವರರ ರಾಜ್ಯಾಡಳಿತ : ಹಲವಾರು ಅಂಶಗಳು ಅವರು ಕಲ್ಲಿನ ಮೇಲೆ ಬರೆದಿಟ್ಟಿರುವ ದಾಖಲೆಗಳಿಂದ ಸಿಗುತ್ತದೆ. ಚಾಲುಕ್ಯರ ಆಡಳಿತ ಡೆಕ್ಕನ್, ಮಹಾರಾಷ್ಟ್ರ, ಕೊಂಕಣ, ಗೋವಾದವರೆಗೆ ಹಬ್ಬಿತ್ತು. ಇಷ್ಟು ದೊಡ್ಡ ಪ್ರದೇಶವನ್ನು, ಹಲವು ಪ್ರಾಂತಗಳಾಗಿ ವಿಂಗಡಿಸಿತ್ತು. ಹೆಚ್ಚಿನ ಪ್ರದೇಶಗಳನ್ನು ಸಾಮಂತರು

ಆಳುತ್ತಿದ್ದರು. ಇವರನ್ನು ಮಹಾಮಂಡಲೇಶ್ವರರೆಂದು ಕರೆಯುತ್ತಿದ್ದರು. ಇವರು ಸ್ವತಂತ್ರರು. ಹಲವು ವೇಳೆ ತಮ್ಮ ಸ್ವಾತಂತ್ರ್ಯವನ್ನು ದುರುಪಯೋಗಿಸಿದ್ದುಂಟು.

ಮಹಾಮಂಡಲೇಶ್ವರರಿಗೆ ತಮ್ಮದೇ ಆದ ಲಾಂಛನವಿತ್ತು ಮತ್ತು ಪಂಚಾಮಹಾ ಶಬ್ದದಿಂದ ಗೌರವಿಸಲ್ಪಡುತ್ತಿದ್ದರು. ಪಂಚಮಹಾಶಬ್ದ ಎಂದರೆ ಐದು ಸಂಗೀತ ವಾದ್ಯಗಳಿಂದ ಬರಮಾಡುವಿಕೆ [ಶೃಂಗ, ತಮ್ಮಟೆ, ಶಂಖ, ಭೇರಿ, ಜಯಘಂಟೆ) (ಖಟಿಜುಚಿಟ ಂಟಿಣುಡಣಚಿಡಿಥಿ, ಫಿಖಖ ೧–೯೬]. ಮಂಡಲೇಶ್ವರರು ಆಡಳಿತದಲ್ಲಿಯೂ ಭಾಗವಹಿಸುತ್ತಿದ್ದರು.

"ಚೋಳನ ಅಹಂಕಾರವನ್ನು ಇಳಿಸಲು, ಆಂಧ್ರರನ್ನು ಹೆದರಿಸಲು, ಕಳಿಂಗವನ್ನು ಬೆಳೆಸಲು, ಅಂಗರನ್ನು, ವಂಗಮಾಗಧರನ್ನು ಮಾಳವನನ್ನು ಓಡಿಸಲು ಗುರ್ಜರ ಪಾಂಡ್ಯ ಭೂಪಾಲ ಒಬ್ಬ ಸಾಕು. ಸಾಮಂತರು ರಾಜನಿಗೆ ಬಲಗೈಯಂತೆ ಇದ್ದುದನ್ನು ಇದು ತೋರಿಸುತ್ತದೆ.

ಚಾಲುಕ್ಯರು ಮತ್ತು ಅವರ ಸಾಮಂತರು ಕರ್ಣಾಟಕದ ನಿವಾಸಿಗಳಾಗಿದ್ದು, ಕರ್ಣಾಟಕದ ಸಂಸ್ಕೃತಿಯ ಅಭಿಮಾನಿಗಳು. ಕನ್ನಡದಲ್ಲೇ ಎಲ್ಲಾ ಶಾಸನವನ್ನು ಬರೆಸಿದರು. ಮೊದಲನೆ ಬಾರಿಗೆ ನಾಡಹೆಗ್ಗಡೆ, ಮನೆವೆರ್ಗದೆ, ಹಿರಿಯಹೆಗ್ಗಡೆ, ಕಡಿತ ವೆರ್ಗದೆ, ಅಧಿಕಾರಿವರ್ಗ ಪದಗಳು ಉಲ್ಲೇಖಿಸಲ್ಪಟ್ಟಿವೆ. ಸಾಲಿಗ್ರಾಮ ಮೊದಲಿಗೆ ಸಾಲಿಪುರ ಆಗಿತ್ತು. ಆದರೆ ರಾಜನ ದುರಾಡಳಿತದಿಂದ ಅವಿಕಪುರ ಆಗಿದೆ. ಆಸ್ತಾನದ ಸುತ್ತ ಕವಿಗಳು ಸುತ್ತುವರಿದಿದ್ದು ರಾಜ್ಯಶಾಸ್ತ್ರದ ಮೇಲೆ ಬರೆದಿರುವ ಬರವಣಿಗೆಯನ್ನು ರಾಜನಿಗೆ ಮನವರಿಕೆ ಮಾಡುತ್ತಿದ್ದರು. ಕೌಟಿಲ್ಯನ ಅರ್ಥಶಾಸ್ತ್ರ ಬಳಕೆಯಲ್ಲಿತ್ತು. ರಾಜ ಸಪ್ತಾಂಗವನ್ನು ಹೊಂದಿದ್ದನು. ಸಪ್ತಾಂಗವೆಂದರೆ : ವಿದ್ವಾಂಸ, ಅಗ್ರಾಗಮಿ ಧೂತ, ಹಾಡುವವನು, ಕವಿ, ಚರಿತ್ರಕಾರ, ವಿದೂಷಕ, ಪುರಾಣ ಪಠಿಸುವವನು. ಇವರೆಲ್ಲರಿಂದ ಸುತ್ತುವರಿಯಲ್ಪಟ್ಟ ರಾಜನ ಕಛೇರಿ ಅತ್ಯಂತ ವೈಭವೋಪೇತ ವಾಗಿತ್ತು. ವಿಕ್ರಮದೇವ ಚರಿತ್ರೆಯಲ್ಲಿ ರಾಜರ ಮೋಜುಗಳು ಮತ್ತು ಆಟಗಳನ್ನು ವಿವರಿಸಿದೆ.

ಚಾಲುಕ್ಯರ ಕಾಲದಲ್ಲಿ ಪಟ್ಟಮಹಿಷಿಯರು, ಮತ್ತಿತರ ರಾಣಿಯರು ವಿದ್ಯಾವತಿಯರಾಗಿದ್ದು ಹಲವಾರು ಪ್ರದೇಶಕ್ಕೆ ಹೋಗಿ ಆಡಳಿತ ಮಾಡಿದ್ದುಂಟು.[೬] ರಾಜ್ಯಾಡಳಿತ ಅಧಿಕಾರಿಗಳು ಅಧಿಕಾರ ದಾಹದಿಂದ ಇದ್ದಾರೆಯೇ ಎಂದು ನೋಡಲು ಹಲವಾರು ಬಾರಿ ಅಧಿಕಾರಿಗಳಿಗೆ ಪರೀಕ್ಷೆ ಒಡ್ಡಿದಾಗ 'ಲತಾಸಂಧಿ ವಿಗ್ರಹ ತನ್ನ ಪ್ರಾಮಾಣಿಕತೆಯಿಂದ ಪರೀಕ್ಷೆಯನ್ನು ಗೆದ್ದನು' ದಿನಕರರು, ಶಾಸನದ ಮೂಲಕ ಹಲವಾರು ಹಳ್ಳಿಗಳನ್ನು ಗುರುತಿಸಿ, ಆ ಹಳ್ಳಿಗಳು ಉತ್ತಮ ಸ್ಥಿತಿಯಲ್ಲಿತ್ತು ಎಂದು ತೋರಿಸಿದ್ದಾರೆ. ಎಲ್ಲಾ ಹಳ್ಳಿಯಲ್ಲಿ ಒಂದು ಉದ್ಯಾನವನವಿತ್ತು. ಗಾವುಂಡ[೭] ಹಳ್ಳಿಯ ಮುಖ್ಯಸ್ಥ ಮತ್ತು ಒಡೆಯ. ಸ್ಥಳೀಯ ಸಮಸ್ಯೆಗಳನ್ನು ಯುದ್ಧಕಾಲದಲ್ಲಿ ರಕ್ಷಕನೂ ಕೂಡ. ಗಾವುಂಡ ಪದವಿ ವಂಶಪಾರಂಪರ್ಯವಾಗಿ ಬಂದದ್ದು. ಯಾವುದೇ ಗಾವುಂಡ ನಿಷ್ಪ್ರಯೋಜಕನಾದರೆ ಅವನ ಬದಲಾವಣೆ ಮಾಡಲ್ಪಡುತ್ತಿತ್ತು. ಕೆರೆ ದುರಸ್ತಿ, ರಸ್ತೆ ರಿಪೇರಿ ಮತ್ತಿತರ ಸಂರಕ್ಷಣಾ ಕಾರ್ಯವನ್ನು ಗಾವುಂಡ ಎಚ್ಚರಿಕೆಯಿಂದ ಮಾಡಿಸುತ್ತಿದ್ದ.

ಸರ್ಕಾರದ ಕಂದಾಯ ವಸೂಲಿ ತುರ್ತು ಪರಿಸ್ಥಿತಿಯಲ್ಲಿ ತೆಗೆದುಕೊಳ್ಳಬೇಕಾದ ಕ್ರಮ, ಧಾರ್ಮಿಕ ಕೆಲಸಕ್ಕೆ ಕೊಟ್ಟ ದತ್ತಿ ವರದಿ, ಎಲ್ಲವನ್ನೂ ದಾಖಲಿಸಿದೆ. ಭೂಕಂದಾಯ ಮುಖ್ಯ ಆದಾಯ ಊರಿನ ಪರಿಸ್ಥಿತಿಗೆ ತಕ್ಕಂತೆ ಆದಾಯ ನಿರ್ಣಯ ವಾಗುತ್ತಿದ್ದು **ಎಣ್ಣೆ ಕಂದಾಯ**[೮] ಪದೇ ಪದೇ ನಮೂದಿಸಿರುವುದರಿಂದ ಎಣ್ಣೆ ಉತ್ಪಾದನೆ ಹೆಚ್ಚಿನ ಪ್ರಮಾಣದಲ್ಲಿ ಇದ್ದಿತೆಂದು ಕಾಣುತ್ತದೆ ಎಂದು ದೇಸಾಯಿ ಅವರು ಅಭಿಪ್ರಾಯಪಟ್ಟಿದ್ದಾರೆ.

ಶ್ರೀಮಂತರಿಗೆ ಹಲವಾರು ವಿಧದ ತೆರಿಗೆ ವಿಧಿಸಲ್ಪಟ್ಟಿತ್ತು ಎಂದು ಶಿಕಾರಿಪುರದ ಶಾಸನ ತಿಳಿಸುತ್ತದೆ. **ಕನ್ನಡಿವಾನ** ಎಂಬ ತೆರಿಗೆ ವೇಶ್ಯೆಯರು ಉಪಯೋಗಿಸುವ ಕನ್ನಡಿ ಮೇಲೆ ಹಾಕುವ ತೆರಿಗೆ ಮತ್ತು ಮದುವೆ ಪಂದರ ಪಣ, ಇದು ಮದುವೆ ಚಪ್ಪರದ ಮೇಲೆ ಹಾಕುವ ತೆರಿಗೆಯನ್ನು ವಿಧಿಸಿರುವುದನ್ನು ತಿಳಿಸಿದೆ. ನಾಣ್ಯ, ತೂಕ ಮತ್ತು ಅಳತೆಯನ್ನು ಬರೆಯುವಾಗ ಅಳತೆಯನ್ನು ಭಾಷಾ ವಿಜ್ಞಾನದ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ ದಿನಕರರು. ವ್ಯಾಪಾರಿ ಸಂಘಗಳ ಬಗ್ಗೆ ಬರೆಯುತ್ತಾ, ಇವು ಸ್ವತಂತ್ರ ಸಂಘಗಳು ಸಾರ್ವಜನಿಕರ ಪರಿಸ್ಥಿತಿಗೆ ಅನುಗುಣವಾಗಿ ನೈತಿಕ ಮಟ್ಟದಲ್ಲಿತ್ತು. ಜನರಿಗೆ ಈ ಸಂಘಗಳಲ್ಲಿ ನಂಬುಗೆಯಿತ್ತು ಎಂದಿದ್ದಾರೆ.

ಯುದ್ಧಕಲೆ : ಮಹಾಮಂಡಲೇಶ್ವರರಿಗೆ ತಮ್ಮದೇ ಆದ ಧ್ವಜವಿತ್ತು.[೯] ಇದು ವಿಶಿಷ್ಟವಾಗಿತ್ತು. ಸಿಂಧರಿಗೆ ನೀಲಿಧ್ವಜ, ರಟ್ಟರಿಗೆ ಸುವರ್ಣಗರುಡ, ಸೇನಾವರಿಗೆ ಫಣಿಧ್ವಜ, ಕದಂಬರಿಗೆ ಕಪಿಧ್ವಜ ಮತ್ತು ಗುನರಿಗೆ ಪಾಲವೃಕ್ಷ ಗರುಡಧ್ವಜ. ಈ ಪತಾಕೆಗಳು ಸೈನಿಕರಲ್ಲಿ ಉತ್ಸಾಹ ತರುತ್ತಿತ್ತು. ಮಾನಸೋಲ್ಲಾಸದಲ್ಲಿ ಸೇನಾಪತಿಗಳ ವಿವರ ಸಿಕ್ಕುತ್ತದೆ. ಶೌರ್ಯವಂತಳಾದ ರಾಣಿ ಅಕ್ಕಾದೇವಿ ಯುದ್ಧರಂಗದಲ್ಲಿ ಭೈರವಿಯಂತೆ ಶತ್ರುಗಳನ್ನೂ, ರಾಜರನ್ನೂ ದಮನ ಮಾಡಿದಳು.[೧೦] ಜಾಗಲಾದೇವಿ ಮಹಾಸಾಮಂತನ ಹೆಂಡತಿ ನಿಲಗುಂದ ಹಳ್ಳಿಗೆ ದಂಡೆತ್ತಿ ಹೋದಳು.

ಆರ್ಥಿಕ ಸ್ಥಿತಿ : ವ್ಯಾಪಾರಿಗಳ ಮುತುವರ್ಜಿಯಿಂದ ಕೆರೆಗಳ ಪೋಷಣೆ, ಮತ್ತಿತರ ದುರಸ್ತಿಗಳ ಕಡೆ ಗಮನ ಹರಿಸುತ್ತಿದ್ದು, ದೊಡ್ಡ ದೊಡ್ಡ ಚಕ್ರಗಳನ್ನು ಬಾವಿಗೆ ನೀರು

ತೆಗೆಯಲು ಜೋಡಿಸಿದ್ದರಿಂದ ವ್ಯವಸಾಯಕ್ಕೆ ಅನುಕೂಲವಾಗಿತ್ತು. ಕೃಷಿಯನ್ನು ಶೂದ್ರರು ಮಾಡುತ್ತಿದ್ದರು. ವೈಶ್ಯರು ವ್ಯಾಪಾರ ತಮ್ಮ ಕಸುಬಾದರೂ ಜೈನ ಧರ್ಮಕ್ಕೆ ಸೇರಿದ್ದರಿಂದ, ಕಾಲಕ್ರಮೇಣ ತಮ್ಮ ಧರ್ಮಕ್ಕೆ ಅನುಗುಣವಾಗಿ ಉಳುವದು ಕ್ರಿಮಿಕೀಟಗಳಿಗೆ ತೊಂದರೆ ಕೊಟ್ಟಂತೆ ಎಂದು ತಿಳಿದು, ಕೃಷಿ ಮಾಡುವದು ನಿಲ್ಲಿಸಿರಬೇಕು. ಆದರೆ ಅನೇಕ ಬ್ರಾಹ್ಮಣರು ಕೃಷಿ ಕೈಗಾರಿಕೆ ಕೈಗೊಂಡರು. ಇದನ್ನು ದೇಸಾಯಿಯವರು ಉಲ್ಲೇಖಿಸಿದ್ದಾರೆ.

ಸಾಮಾಜಿಕ ಜೀವನ : ಮನುಷ್ಯನ ಎಲ್ಲಾ ಧಾರ್ಮಿಕ ಮತ್ತು ದೈನಂದಿನ ಚಟುವಟಿಕೆಗೆ ದೇವಾಲಯ ಮುಖ್ಯವಾಗಿತ್ತು. ದೀಪಾವಳಿ ಹಬ್ಬ ಮುಖ್ಯವಾಗಿತ್ತು. ಎಂದು ಸೌಂದತ್ತಿ ಶಾಸನ (ಶಾಂತಿವರ್ಮ) ಹೇಳುತ್ತದೆ ಮತ್ತು ಈ ಹಬ್ಬದಲ್ಲಿ ದೀಪ ಬೆಳಗುವದು ಅತ್ಯಂತ ಮುಖ್ಯ.[೧೧]

ಸಲ್ಲೇಖನ ವ್ರತ ಆಚರಣೆಯಲ್ಲಿತ್ತು. ಸಾಧ್ವಿ ಜಕ್ಕಿಯಬ್ಬೆ ತನಗೆ ವಾಸಿಯಾಗದ ಖಾಯಿಲೆ ಬಂದಾಗ ಸಲ್ಲೇಖನ ವ್ರತ ಮಾಡಿದಳು. ವೀರಗಲ್ಲುಗಳು ಇದಕ್ಕೆ ಪುಷ್ಟಿ ಕೊಡುತ್ತೆ. ಸ್ತ್ರೀಗೆ ಸ್ವಾತಂತ್ರ್ಯವಿದ್ದು ಸರ್ಕಾರದ ಆಗು ಹೋಗುಗಳಲ್ಲಿ ಭಾಗವಹಿಸುತ್ತಿದ್ದಳು. ಆಟಗಳು, ಉಡುಪುಗಳು, ಒಡವೆಗಳು, ಮನರಂಜನೆಗಳು ಮತ್ತು ಸೌಂದರ್ಯಪ್ರಜ್ಞೆ ಹೆಚ್ಚಾಗಿ ಇತ್ತೆಂದು ತಿಳಿಯಬರುತ್ತೆ. ಚಾಲುಕ್ಯರು ಶೈವ ಮತ್ತು ಜೈನ ಧರ್ಮವನ್ನು ಪ್ರೋತ್ಸಾಹಿಸಿದರು. ಶಿವನ ಉಪಾಸಕರಾದ ಕಾಳಾಮುಖರ ಬಗ್ಗೆ ಹಲವಾರು ವಿಷಯಗಳನ್ನು ದಿನಕರರು ವಿವರಿಸಿರುತ್ತಾರೆ. ಅಹಿಂಸೆಯನ್ನು ಬೋಧಿಸಿದ ಬಸವಣ್ಣನ ಮೇಲೆ ಬಿಜ್ಜಳನನ್ನು ಕೊಂದನೆಂಬ ಅಪರಾಧ ಹೊರಿಸಿದ್ದು, ಇದು ಅಸಂಭವ ಎಂದು ದೇಸಾಯಿ ಅಭಿಪ್ರಾಯಪಟ್ಟಿರುತ್ತಾರೆ.

ಶಿಕ್ಷಣದ ವ್ಯವಸ್ಥೆ : ಅಗ್ರಹಾರ, ಬ್ರಹ್ಮಪುರಿ, ಘಟಿಕಸ್ಥಾನ, ಮಠ, ದೇವಾಲಯ ಎಲ್ಲಾ ಕಡೆ ಶಿಕ್ಷಣ ಪ್ರಚಾರದ ಕಾರ್ಯ ನಡೆಯುತ್ತಿದ್ದ ವಿವರವಿದೆ. ವಿದ್ಯಾರ್ಥಿನಿಲಯ, ಅಭ್ಯಾಸ ಮಾಡತಕ್ಕ ವಿಷಯ, ಶಿಕ್ಷಕರ ಅರ್ಹತೆ ಇವುಗಳ ವರ್ಣನೆ ಸಿಕ್ಕುವದು. ರಾಜ್ಯವು ಎಲ್ಲಾ ತರಹ ಸೌಕರ್ಯವನ್ನು ವಿದ್ಯಾಸಂಸ್ಥೆಗಳಿಗೆ ಒದಗಿಸಿದ್ದರೂ ಸಂಸ್ಥೆಗಳ ಒಳ ಆಡಳಿತ ನಿರ್ವಹಣೆ, ಕಲಿಸುವ ರೀತಿಯನ್ನು ಪ್ರಶ್ನೆ ಮಾಡುತ್ತಿರಲಿಲ್ಲ. ಜೈನರು, ವೀರಶೈವರ ಮಹಿಳಾ ಶಿಕ್ಷಣವನ್ನು ಪ್ರೋತ್ಸಾಹಿಸಿದರು. ಬಸವಣ್ಣ ತಿಳಿಗನ್ನಡದಲ್ಲಿ ಬೋಧಿಸಿದ ಕಾರಣ ವಿದ್ಯೆ ಸಾರ್ವಜನಿಕರಿಗೆ ತಲುಪಿತು. ಕನ್ನಡ ಭಾಷೆಯ ಮೂಲಕ, ಮಹಿಳೆಯರು ಸಾಕಷ್ಟು ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದರು. ಬ್ರಾಹ್ಮಣರು ಪಾಠವನ್ನು ಸಂಸ್ಕೃತದಲ್ಲಿ ಕಲಿಸುತ್ತಿದ್ದರಿಂದ ಸಾಮಾನ್ಯ ಜನರನ್ನು ಅದು ತಲುಪಲೇ ಇಲ್ಲ. ಹೆಂಗಸರು ವಚನಗಳನ್ನು ಕನ್ನಡದಲ್ಲಿ ಹಾಡತೊಡಗಿದರು. ಹಲವಾರು ಕವಯಿತ್ರಿಯರ ಹೆಸರನ್ನು ಗಮನಿಸಬೇಕು. ಬಿಜ್ಜಳಾದೇವಿ, ಕಾಳವ್ವೆ, ನೀಲಮ್ಮ, ಅಕ್ಕ ಮಹಾದೇವಿ ಮುಖ್ಯಸ್ಥರು.

ಕನ್ನಡ ಭಾಷೆ ; ಸ್ಥಾನಮಾನ : ಮಹಾಮಂಡಲೇಶ್ವರರ ಕಾಲದ ಭಾಷೆಯ ಲಿಪಿ ಕನ್ನಡದಲ್ಲಿದೆ. ಕನ್ನಡದ ಮೇಲೆ ಅತ್ಯಂತ ಪ್ರಮೇವುಳ್ಳ ಚಾಲುಕ್ಯ ಮಂಡಲೇಶ್ವರರು ಶಾಸನಗಳನ್ನು ಕನ್ನಡದಲ್ಲೇ ಬರೆಸಿದರು. ದ್ರಾವಿಡ ಭಾಷೆಗಳಲ್ಲೆಲ್ಲಾ ಕನ್ನಡ ಅತ್ಯಂತ ತೇಜಿಯಲ್ಲಿತ್ತು. ಕನ್ನಡ ಆಡುಭಾಷೆಯಾಗಿದ್ದು ಧಾರವಾಡ, ಬೆಳಗಾಂ, ಬಿಜಾಪುರ, ಉತ್ತರ ಕನ್ನಡ (ಮಂಡ್ಯ ಸೇರಿತ್ತು) ಬಳ್ಳಾರಿ, ದಕ್ಷಿಣ ಕನ್ನಡ (ಮದರಾಸಿಗೆ ಸೇರಿತ್ತು) ಮೈಸೂರ ಪೂರ್ವಕ್ಕಿದ್ದ ಹೈದರಾಬಾದಿನಲ್ಲೂ ಕನ್ನಡ ಹಬ್ಬಿತ್ತು. ಕನ್ನಡ ಭಾಷೆ ಪ್ರಾಚೀನ ಭಾಷೆ. ನಾಲ್ಕು ಪ್ರಕಾರದಿಂದ ಕನ್ನಡ ಭಾಷೆಯನ್ನು ಗುರುತಿಸಬಹುದು. (೧) ಪೂರ್ವದ ಹಳೆಕನ್ನಡ, (೨) ಹಳೆ ಕನ್ನಡ, (೩) ನಡು ಕನ್ನಡ, (೪) ಹೊಸ ಕನ್ನಡ, ಕನ್ನಡಕ್ಕೆ ಸಂಸ್ಕೃತವನ್ನು ಬೆರಸದ ಕವಿಗಳನ್ನು ನೋಡುತ್ತೇವೆ. ೧೧೨೨ಏಕ ನಯಸೇನ, ನಾಗವರ್ಮ ಒಂಬತ್ತನೇ ಶತಮಾನದ ಕವಿರಾಜಮಾರ್ಗ (೪) ಅಂಡಯ್ಯನ ಕಬ್ಬಿಗರ ಕಾವ. ಮಹಾಮಂಡಲೇಶ್ವರನ ಕಾಲದಲ್ಲಿ ಸಂಸ್ಕೃತ ಬಳಕೆ ಇತ್ತಾದರೂ ಬೇರೆ ಭಾಷೆಗಳು ಕನ್ನಡದ ಮೇಲೆ ಹೆಚ್ಚಿನ ಪರಿಣಾಮ ಬೀರಿಲ್ಲ. ಹಲವೊಮ್ಮೆ ಕಾಣಿಸಿಕೊಂಡಿವೆ ಎಂದು ತಿಳಿಸಿಕೊಟ್ಟಿದ್ದಾರೆ. ಹಲವು ಮರಾಠಿ ಪದಗಳು ಶಾಸನದಲ್ಲಿ ಇರುವುದನ್ನು ಉಲ್ಲೇಖಿಸಿರುತ್ತಾರೆ.

ಹರಿಹರನ ಬಸವರಾಜ ರಗಳೆ (ಎಡಿ ೧೧೬೫) ಹಲವು ಮರಾಠಿ[೧೨] ಪದಗಳ ಪ್ರಯೋಗ,

೧) ಟೊಪ್ಪಿಗೆ (ಅಚಿ೦) ಇದೇ ಕಾವ್ಯದಲ್ಲಿ,

೨) ಚತ್ತೀಸ್ ಅಂದರೆ ಮೂವತ್ತಾರು,

೩) ಬಹತ್ತರ್ ಅಂದರೆ ಎಪ್ಪತ್ತೆರಡು.

ಉತ್ತರ ಕರ್ಣಾಟಕದ ಜನರು ಅಂಕಿಗಳನ್ನು ಎಣಿಸುವಾಗ ಮರಾಠಿಯಲ್ಲಿ ಎಣಿಸುತ್ತಾರೆ. ಬಹುಷಃ ಈ ಅಭ್ಯಾಸ ೧೨ನೇ ಶತಮಾನದಿಂದ ಬಂದಿರಬಹುದೆಂದು ಹೇಳಿದ್ದಾರೆ.

ಮರಾಠಿಯ ಮೇಲೆ ಕನ್ನಡದ ಪ್ರಭಾವ : ಚಾಲುಕ್ಯರ ರಾಜ್ಯ ಈಗಿನ ಮಹಾರಾಷ್ಟ್ರದವರೆಗೆ ಹಬ್ಬಿತ್ತು. ಈ ಭಾಗದಲ್ಲಿ ಹಲವಾರು ಶಾಸನ ದೊರೆಯುತ್ತೆ. ಮರಾಠಿ ಸಾಹಿತ್ಯ ಇನ್ನೂ ಬೆಳೆದಿರಲಿಲ್ಲ. ಕನ್ನಡದಲ್ಲೇ ವ್ಯವಹಾರ, ಆಡುಭಾಷೆ ಕನ್ನಡ, ಹಾಗಾಗಿ ಕನ್ನಡದ ಮೇಲೆ ಅಭಿಮಾನ. ಕಲ್ಯಾಣ ಪಶ್ಚಿಮ ಚಾಲುಕ್ಯರು ಕನ್ನಡ ರಾಜ್ಯದ ಭಾಷೆಯೆಂದು ಘೋಷಿಸಿದ್ದರು. ಮಹಾರಾಷ್ಟ್ರದಲ್ಲಿ ಕನ್ನಡ ಭಾಷೆ ಅಸ್ತಿತ್ವದಲ್ಲಿದ್ದು, ಅಲ್ಲಿಯ

ಊರುಗಳಿಗೆ ಕನ್ನಡದ ಹೆಸರು ಇರುವುದನ್ನು ಆಲೂರು ವೆಂಕಟರಾಯರು ಕರ್ನಾಟಕ ಗತವೈಭವದಲ್ಲಿ ತೋರಿಸಿದ್ದಾರೆ. ಜ್ಞಾನೇಶ್ವರಿಯ ಮೇಲೆ ಕನ್ನಡದ ಪ್ರಭಾವವನ್ನು ಪ್ರೊ॥ ಜಹಗೀರದಾರ ತಾವು ಲಂಡನ್‌ಗೆ ಸಾದರಪಡಿಸಿದ ಪ್ರಬಂಧದಲ್ಲಿ ತೋರಿಸಿರುತ್ತಾರೆ. ೧೧–೧೨ನೇ ಶತಮಾನದಲ್ಲಿ ತೆಲುಗು ಭಾಷೆ ಮೇಲೆ ಕನ್ನಡದ ಪ್ರಭಾವವಿತ್ತು. ರಾಜ ರಾಜ ನರೇಂದ್ರ (ಪೂರ್ವ ಚಾಲುಕ್ಯ) ಮಹಾಭಾರತದ ಕಥೆಯನ್ನು ಕನ್ನಡ–ತಮಿಳು ತೆಲುಗು ಭಾಷೆಗಳಲ್ಲಿ ತರಲು ಯತ್ನಿಸಿದ. ನಾಣಯ್ಯ ಮಹಾಭಾರತವನ್ನು ತೆಲುಗು ಭಾಷೆಯಲ್ಲಿ ಬರೆದ. ನಾರಾಯಣಭಟ್ಟ ನಾನಯ್ಯನಿಗೆ ಸಹಾಯ ಮಾಡಿದ ನಾರಾಯಣಭಟ್ಟನಿಗೆ, ಸಂಸ್ಕೃತ, ಕರ್ಣಾಟಕ, ಪ್ರಾಕಿತ, ಮತ್ತು ಪೈಶಾಚಿಕ ಗೊತ್ತಿತ್ತು. ನನ್ನೀಚೂಡಕವಿ (೧೧೫೦ಎ.ಡಿ.) ತೆಲುಗು ಪದ್ಯಗಳಿಗೆ ಕನ್ನಡ ಪದಗಳನ್ನು ಉಪಯೋಗಿಸಿದ್ದಾನೆ. ಬಹಳಷ್ಟು ಜನ ಆಂಧ್ರದಿಂದ ಕನ್ನಡನಾಡಿಗೆ ಬಂದು ಕವಿತೆಗಳನ್ನು ರಚಿಸಿದರು. ಆದಿಪಂಪ ಮತ್ತು ನಾಗವರ್ಮನನ್ನು ದೇಸಾಯಿ ಉಲ್ಲೇಖಿಸಿದ್ದಾರೆ.

೧೨ನೇ ಶತಮಾನದಲ್ಲಿ ಪಾಲ್ಕುರಿಕೆ ಸೋಮನಾಥ ಕನ್ನಡದಲ್ಲಿ ಕೃತಿ ರಚಿಸಿದ. ೧೪ನೇ ಶತಮಾನದಲ್ಲಿ ಶ್ರೀನಾಥ ಕವಿ ತನ್ನ ಶೈಲಿ ಪೂರ್ತಿಯಾಗಿ 'ಕರ್ಣಾಟಕ' ಎಂದು ಘೋಷಿಸಿರುವನು. ಅಲ್ಲಾಸಾನಿ ಪೆದ್ದಣ್ಣ ೧೫೦೯–೧೫೨೯ ತನ್ನ ಕಾವ್ಯಕ್ಕೆ ಕನ್ನಡ ಭಾಷೆ ಪ್ರೇರಣೆ ಎಂದು ತಿಳಿಸಿರುವನು. ಎಂದು ದಿನಕರ ದೇಸಾಯಿ ಉದಾಹರಿಸಿದ್ದಾರೆ. ಹೀಗೆ ಕನ್ನಡ ಭಾಷೆ ಸರ್ವತೋಮುಖವಾಗಿ ಬೆಳೆದು ತೆಲುಗು ಭಾಷೆಯ ಮೇಲೆ ಪ್ರಭಾವ ಬೀರಿದ್ದರ ಮೇಲೆ ಬೆಳಕು ಚೆಲ್ಲಿದ್ದಾರೆ.

ಸಾಹಿತ್ಯ (೯೬೦–೧೨೫೦) : ಮಂಡಲೇಶ್ವರರ ಕಾಲದಲ್ಲಿ ಸಾಹಿತ್ಯ ವಿಪುಲವಾಗಿ ವಿಸ್ತರಿಸಿತು. ಕವಿಗಳು ರಾಜಕೀಯ, ಸಾಮಾಜಿಕ ಮತ್ತು ಸಂಸ್ಕೃತಿಯ ಜೀವನದಲ್ಲಿ ಮಹತ್ತರ ಪಾತ್ರ ವಹಿಸಿದ್ದರು. ಕಾವ್ಯಮೀಮಾಂಸೆ, ಛಂದಸ್ಸು, ವ್ಯಾಕರಣ, ಔಷಧಿ, ಪಶುವೈದ್ಯ, ಗಣಿತ, ಜ್ಯೋತಿಷ್ಯಶಾಸ್ತ್ರ, ಪಾಕಶಾಸ್ತ್ರ, ಕುದುರೆ ತರಬೇತಿ, ನಿಘಂಟು ಹೀಗೆ ಹಲವಾರು ಕೃತಿಗಳನ್ನು ನೋಡಬಹುದು. ರನ್ನ ಕವಿ ಚಾಲುಕ್ಯರ ಆಸ್ಥಾನದಲ್ಲಿದ್ದನು. ಮಂಡಲೇಶ್ವರರು ಕವಿಗಳನ್ನು ಪೋಷಿಸಿದರು. ಪಾರ್ಶ್ವಪಂಡಿತ, ಬಾಲಚಂದ್ರ, ಮಾದಿರಾಜ, ರಟ್ಟರ ಆಸ್ಥಾನ ಕವಿಗಳು, ರಾವಪ್ಪಯ್ಯ ಸಿಂಧರ ಕವಿ, ಮಲ್ಲಿನಾಥ, ಸಾಂತರ ಕವಿ ಮತ್ತು ಉಚ್ಚಂಗಿ ಪಾಂಡ್ಯರು ಮಧುಸೂದನ ದೇವನ ಪೋಷಕರು. ರನ್ನಕವಿ ತನ್ನ ಗದಾಯುದ್ಧದಲ್ಲಿ ತನ್ನ ಕವಿತ್ವ ಪೋಷಣೆ ಮಹಾಮಂಡಲೇಶ್ವರರಿಂದ ಆರಂಭವಾಯ್ತು ಎಂದಿದ್ದಾನೆ. ಪ್ರತಿ ಕವಿಗೂ ಯೋಗ್ಯತಾನುಸಾರ ಪುರಸ್ಕಾರ ದೊರೆಯುತ್ತಿತ್ತು. ಹಲವಾರು ಕವಿಗಳು, ಯೋಧಕರು ಮತ್ತು ಕವಿಗಳು ಕೂಡ ಆಗಿದ್ದರು.

ಸಂಗೀತ : ಸಂಗೀತಕ್ಕೆ ಸಾಕಷ್ಟು ಪ್ರೋತ್ಸಾಹವಿತ್ತು. ಕಾರ್ತಿವೀರ್ಯ ರಟ್ಟನ ಆಸ್ಥಾನದಲ್ಲಿ ಸಪ್ತಾಂಗವಿತ್ತು. ಉದಯಾದಿತ್ಯನ ರಾಣಿ ಲಚ್ಚಲಾದೇವಿ ಸಂಗೀತ ಪ್ರವೀಣೆ. ವಿಕ್ರಮಾದಿತ್ಯನ ಹೆಂಡತಿ ಸಂಗೀತವನ್ನು ಆರಾಧಿಸಿದಳು. ಸಂಗೀತ ವಿದ್ವಾಂಸರಿಗೆ ಭೂದಾನವಿತ್ತಿದ್ದಳು. ಹಲವು ಮಠ ಮತ್ತು ಅಗ್ರಹಾರದಲ್ಲಿ ಸಂಗೀತ ಕಲಿಸುತ್ತಿದ್ದರು. ಬೆಳ್ಗಾಮೆ ವಿಶ್ವವಿದ್ಯಾನಿಲಯದಲ್ಲಿ ರವಿಗ ಎಂಬ ಸಂಗೀತ ವಿದ್ವಾಂಸನ ಸಂಗೀತ ಉತ್ತಮವಾಗಿತ್ತು. ರವಿಗನನ್ನು ವಿದ್ಯಾಧರನೆಂದು ಕರೆಯುತ್ತಿದ್ದರು. ಸಂಗೀತ ವಿದ್ವಾಂಸರ ರಕ್ಷಣೆಗೆ ಹಲವಾರು ದತ್ತಿಗಳಿದ್ದವು. ೧೦೬೫[೧೩]ರ ದಾಖಲೆ ಬೇಲೂರು ಕದಂಬ ಮುಖ್ಯಸ್ಥ 'ದಯಾಸಿಂಹ'ನಿಗೆ ಕಾವ್ಯ ಮತ್ತು ನಾಟಕಗಳನ್ನು ವಿಮರ್ಶಾತ್ಮಕವಾಗಿ ನೋಡುತ್ತಿದ್ದನೆಂದೂ ಮತ್ತು ಅವನು ತರ್ಕ, ವ್ಯಾಕರಣ, ಚಿತ್ರಕಲೆ ಮತ್ತು ಸಂಗೀತದಲ್ಲಿ ಪಂಡಿತನೆಂದು ೬೪ ಕಲೆಗಳಲ್ಲಿ ಬಹಳಷ್ಟನ್ನು ಕರಗತ ಮಾಡಿಕೊಂಡಿದ್ದನ್ನು ತಿಳಿಸಿದೆ. ಆರನೇ ವಿಕ್ರಮಾದಿತ್ಯ ಭೂಮಿಯನ್ನು ನಿಲಗುಂದ[೧೪]ದ ಭೀಮೇಶ್ವರ ದೇವಸ್ಥಾನಕ್ಕೆ ಬಿಟ್ಟದ್ದ. ಇದರಲ್ಲಿ ನೃತ್ಯ, ಹಾಡುವವರು ಮತ್ತು ವಾದ್ಯವೃಂದದವರು ವಾಸಿಸುತ್ತಿದ್ದರು. ಶಿವನೂರಿನ ದೇವಸ್ಥಾನದಲ್ಲಿ ನಾಲ್ಕು ಜನ ನೃತ್ಯಗಾತಿಯರು ಮೃದಂಗ ಮತ್ತು ಕೊಳಲು ನುಡಿಸುವವರು ಇದ್ದರು. ಇವರಿಗೆ ದತ್ತಿ ಬಿಟ್ಟಿದ್ದು ದಾಖಲಾಗಿದೆ.

ಮೇಲೆ ತಿಳಿಸಿದ ಎಲ್ಲಾ ವಿವರದಿಂದ ಚಾಲುಕ್ಯ ಮಂಡಲೇಶ್ವರನ ಕಾಲದಲ್ಲಿ ಸಂಗೀತಕ್ಕೆ ಪ್ರೋತ್ಸಾಹ ಸಿಕ್ಕಿರುವದು ಕಂಡುಬರುತ್ತೆ.

ನೃತ್ಯಕಲೆ : ನೃತ್ಯಕಲೆಯ ಬಗ್ಗೆ ದಿನಕರರು ಹೆಚ್ಚಿನದೇನೂ ಪ್ರಸ್ತಾಪಿಸಿರದಿದ್ದರೂ ಹಲವು ಅಂಶಗಳನ್ನು ಬೆಳಕಿಗೆ ತಂದಿದ್ದಾರೆ. ರಟ್ಟರ ವಂಶಕ್ಕೆ ಸೇರಿದ ರಾಜ ಕನ್ನಕೈರ ಉತ್ತಮ ನೃತ್ಯಗಾರ. (೧೨೦೮ ಎ.ಡಿ.)ರ ಸೂರತ್ ಶಾಸನ ರಾಜಾ ವೀರಬಲ್ಲಾಲ[೧೫] ಶಿವನ ಹಾಗೆ ತಾಂಡವ ನೃತ್ಯ ಮಾಡಿದ್ದನ್ನು ತಿಳಿಸುತ್ತೆ. ಹೊಯ್ಸಳರ ಕಾಲದಲ್ಲಿ ನೃತ್ಯಪಟುಗಳು ಇದ್ದರೆಂದು ತಿಳಿದುಬರುತ್ತೆ. ನೃತ್ಯಕಲೆಯು ದೇವಾಲಯದಲ್ಲಿ ಪೋಷಿಸಲ್ಪಡುತ್ತಿತ್ತು. ದೇವಾಲಯಕ್ಕೆ ಸೇರಿದ ನೃತ್ಯಗಾತಿಯರು ಅವರಿಗಾಗಿ ಬಿಟ್ಟಿದ್ದ ಜಮೀನಿನಲ್ಲಿ ವಾಸಿಸುತ್ತಿದ್ದರು.

ಚಿಕ್ಕ ವಯಸ್ಸಿನಲ್ಲಿ ನೃತ್ಯದಲ್ಲಿ ಪರಿಣತಿ ಹೊಂದಿದ ಸಮೂಹವಿದ್ದುದನ್ನು ತಿಳಿಸಿದ್ದಾರೆ. ದೇವದಾಸಿಯರು ಮಕ್ಕಳನ್ನು ಚಿಕ್ಕ ವಯಸ್ಸಿನಲ್ಲಿಯೇ ತಯಾರು ಮಾಡುತ್ತಿದ್ದರು. ವಂಶಪಾರಂಪರ್ಯವಾಗಿ ಬಂದ ಕಲೆಯನ್ನು ಉಳಿಸಿದರು. ಶ್ರೀಮಂತರು ಕಲೆಯನ್ನು ಪೋಷಿಸಿದರು.

ಬಯಲಾಟ ಪ್ರಚಲಿತದಲ್ಲಿತ್ತು. ಬಯಲಾಟ ಸ್ಥಳೀಯವಾಗಿ ಬೆಳೆದದ್ದು ಯಕ್ಷಗಾನದಲ್ಲಿ ಸಂಗೀತ, ನಾಟ್ಯ, ಕವಿತೆ, ಚಿತ್ರಕಲೆ ಇವೆಲ್ಲದರ ವೈವಿಧ್ಯಮಯವಾಗಿದೆ.

೧೨ನೇ ಶತಮಾನದ ಶಿಲ್ಪಕಲೆಯಲ್ಲಿ ಹಲವಾರು ನೃತ್ಯ ಭಂಗಿಗಳನ್ನು ಕರ್ನಾಟಕದಲ್ಲಿ ಕಾಣುತ್ತೇವೆ. ಹಲವನ್ನು ಹೆಸರಿಸಬಹುದು.

ಎ) ಬೇಲೂರಿನಲ್ಲಿರುವ ಚನ್ನಕೇಶವ ದೇವಾಲಯ ಮೂರ್ತಿ ಶಿಲ್ಪಗಳು.

ಬಿ) ದೊಡ್ಡಗುಡ್ಡದಲ್ಲಿರುವ ಲಕ್ಷ್ಮೀದೇವಾಲಯ (ಶಿವತಾಂಡವೇಶ್ವರ)

ಸಿ) ಮೊಸಲೆ, ಅವಳಿಯಲ್ಲಿರುವ ದೇವಸ್ಥಾನ.

ಡಿ) ಆನೆಗೊಂಡ ಜಾಗಟೇಶ್ವರ ದೇವಸ್ಥಾನ.

ಪಂಚಲಿಂಗ ದೇವಸ್ಥಾನದಲ್ಲಿ (ಗೋವಿಂದಹಳ್ಳಿ) ಸರಸ್ವತಿಯನ್ನು ನೃತ್ಯದ ಭಂಗಿಯಲ್ಲಿ ಕೆತ್ತಿರುತ್ತಾರೆ. ವಿಷ್ಣುವನ್ನು ನೃತ್ಯ ಭಂಗಿಯಲ್ಲಿ ಅವಳಿ ದೇವಸ್ಥಾನದಲ್ಲಿ ತೋರಿಸಿದೆ. ನಾಟ್ಯ ಗಣಪತಿಯನ್ನು ಈ ದೇವಸ್ಥಾನದಲ್ಲಿ ನೋಡಬಹುದು. ಇದಲ್ಲದೆ ಹಲವಾರು ಮನುಷ್ಯರ ನೃತ್ಯ ಭಂಗಿಗಳು ಮತ್ತು ಪ್ರಾಣಿ ಪಕ್ಷಿಗಳನ್ನು ಕೆತ್ತಿರುವುದನ್ನೂ ಕಾಣಬಹುದು ಎಂದು ವಿಶ್ಲೇಷಿಸಿರುತ್ತಾರೆ.[೧೬]

ಕೆತ್ತನೆ ಕೆಲಸ (Engraving) : ಚಾಲುಕ್ಯ ಮಂಡಲೇಶ್ವರದ ಕಾಲದಲ್ಲಿ ಹಲವಾರು ಜಾಗದಲ್ಲಿ ಕೆತ್ತನೆ ಕೆಲಸ ಕಾಣುತ್ತದೆ.

ಅಬ್ಬಲೂರಿನ ಕಲ್ಲಿನ ಶಾಸನ ಉತ್ತಮ ಉದಾಹರಣೆ ಯೆಂದು ತೋರಿಸಿಕೊಟ್ಟಿದ್ದಾರೆ. ಅಬ್ಬಲೂರಿನ ಶಾಸನದಲ್ಲಿ ರಾಮಯ್ಯನ ಕಥೆಯನ್ನು ಕೆತ್ತಿದೆ. **ಮಹಾಕಾಲ ಬ್ರಹ್ಮನೆಂದು** ಈ ಕೆತ್ತನೆಯ ಶಿಲ್ಪಿಯ ಹೆಸರು. ಕಾಲ (೧೦೬೭ ಎ.ಡಿ.) ಚಿತ್ರದುರ್ಗದಲ್ಲಿನ ಶಿಲ್ಪಿ ಕೆತ್ತಿರುವ ಶಾಸನದಲ್ಲಿ ಎದ್ದುಕಾಣು ವಂತಹ ಹೆಸರುಗಳಿವೆ. ಆನೆ, ಗಿಣಿ, ಸಿಂಹ ಇವುಗಳು ಕಂಡುಬರುತ್ತದೆ. ಮತ್ತೊಬ್ಬ ಶಿಲ್ಪಿಯ ಹೆಸರು ಅವನು ಇಕ್ಕುದೋಜ.[೧೭]

ಪರಿಸಮಾಪ್ತಿ : "ಮಹಾಮಂಡಲೇಶ್ವರ; ಕಲ್ಯಾಣಿ ಚಾಲುಕ್ಯರ ಕಾಲ" ಪ್ರಬಂಧದಲ್ಲಿ ದಿನಕರ ದೇಸಾಯಿಯವರು, ರಾಜ ಮಹಾರಾಜರನ್ನು ಚಿತ್ರಿಸುವುದೇ ಇತಿಹಾಸ ಎಂದುಕೊಂಡಿದ್ದ ಕಾಲದಲ್ಲಿ, ಸಾಮಾನ್ಯ ಜನರ ಬದುಕಿನ ಸಮಸ್ತ ಆಯಕಟ್ಟನ್ನು ಐತಿಹಾಸಿಕ ದೃಷ್ಟಿಯಿಂದ ನೋಡಿ ಆಧಾರವನ್ನೊಳಗೊಂಡ ನೈಜಚರಿತ್ರೆಯನ್ನು ಕೊಟ್ಟಿದ್ದಾರೆ. ಇದು ೧೯೩೩ರಲ್ಲಿ ರಚಿಸಿದ ಕೃತಿ ಎಂಬುದನ್ನು ಮರೆಯಬಾರದು.

ಯಾವುದೇ ಒಬ್ಬ ಇತಿಹಾಸಕಾರ ತನ್ನ ಇತಿಮಿತಿಯಲ್ಲಿ ವಸ್ತುನಿಷ್ಠೆಯನ್ನು ಚಿತ್ರಿಸಲು ಪ್ರಯತ್ನಪಡುವನು. ಇದರಲ್ಲಿ ಹಲವು ಸಂದರ್ಭದಲ್ಲಿ ತಪ್ಪುಗಳಾಗಬಹುದು. ಇದನ್ನು ಮುಂದಿನ ಪೀಳಿಗೆಯವರು ಆಧಾರದೊಂದಿಗೆ ಸರಿಪಡಿಸ ಬಹುದು. ಇದನ್ನು ಸ್ವತಃ ದಿನಕರದೇಸಾಯಿ ಒಪ್ಪುತ್ತಾರೆ.

ಡಾ॥ ಬಿ.ಆರ್. ಗೋಪಾಲರ ಪುಸ್ತಕ 'Minor Dynasties of South India Karnataka, Vol. ೧. ೧೯೮೨. ಮುನ್ನುಡಿಯಲ್ಲಿ ಹಲವಾರು ವಿದ್ವಾಂಸರು ಕಾಲಿನ್ ಮೆಕನ್‌ನಿ ಇಂದ ದಿನಕರ ದೇಸಾಯಿ ತನಕ ಚಿಕ್ಕ ಚಿಕ್ಕ ಮನೆತನದ ಚರಿತ್ರೆ ಬರೆದಿರುವರೆಂದೂ, ಆದರೆ ಇತ್ತೀಚೆಗೆ ಹಲವಾರು ತಾಮ್ರ ಶಾಸನಗಳು ಸಿಕ್ಕಿ ಚಿಕ್ಕ ಚಿಕ್ಕ ರಾಜವಂಶದವರ ಮೇಲೆ ಹೊಸ ಬೆಳಕು ಚೆಲ್ಲಿದೆಯೆಂದು ತಿಳಿಸಿರುತ್ತಾರೆ. ಹಲವಾರು ವ್ಯತ್ಯಾಸಗಳನ್ನು ತೋರಿಸಿರುತ್ತಾರೆ. ಕಾಲಗಣನೆ ಮತ್ತು ವಂಶಾವಳಿಯಲ್ಲಿ ಕೂಡ ವ್ಯತ್ಯಾಸ ಕಾಣುತ್ತದೆಂದು ತಿಳಿಸಿದ್ದಾರೆ.

೧) ದಿನಕರ ದೇಸಾಯಿ 'ಓಚಿಟಿಟುಥಿಚಿ ಖುಟಿಜಚಿ' ಸಿಂಧ ವಂಶದ ವಂಶಾವಳಿಯಲ್ಲಿ ಮೊದಲಿಗನೆಂದು ತೋರಿಸಿದ್ದಾರೆ. ಆದರೆ ಗೋಪಾಲರು ಅದನ್ನು ಒಪ್ಪುವುದಿಲ್ಲ. ಕರಸಿಗ ನಾನಯ್ಯ ಸಿಂಧನ ವಂಶಕ್ಕೆ ಸೇರಿದ್ದನೆಂಬುದಕ್ಕೆ ಮಾಹಿತಿ ಸಾಲದು ಎಂದು ವಾದಿಸಿದ್ದಾರೆ.

೨) ಮುಳಗುಂದ ಸಿಂಧ ಜಾಟರಸ ಕಡದಂಬಲಿಗೆ (೧೦೦೦ ಊತುಖುಠಟಿ) ಆಳುತ್ತಿದ್ದನು. ಮುಳಗುಂದ ಸಿಂಧ ಜಾಟರಸ ಸಿಂಧರ ವಂಶಕ್ಕೆ ಸೇರಿದವನೆಂದು ಹೇಳುವದಕ್ಕೆ ಆಗುವುದಿಲ್ಲ. (೯೯೨ ಎ.ಡಿ.) ಇದಕ್ಕೆ ಯಾವ ಪುರಾವೆ ಸಿಕ್ಕುವದಿಲ್ಲ.

೩) ರಾಚಮಲ್ಲ I (೧೧೪೬-೧೧೬೯) ಸತ್ತನು. ರಾಜಮಲ್ಲ ಖಖ ೧೧೮೧ರಲ್ಲಿ ಮರಣ ಹೊಂದಿರಬಹುದು ಎಂದು ದಿನಕರರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಬಿ.ಆರ್. ಗೋಪಾಲ್ ಕಾಲಚೂರಿಗಳು ಬಂದನಂತರವೂ ರಾಚಮಲ್ಲ ಇದ್ದನೆಂದು ವಾದಿಸಿರುವರು. ಕುರುಗೋಡಿನ ಎರಡು ಶಿಲಾಶಾಸನಗಳು (೧೭೬, ೧೭) ಕಾಲಚೂರಿಗಳಾದ ಸೋರಿದೇವ ಶಂಕರವರ್ಮ, ರಾಚಮಲ್ಲ-ಖಖ ಉಲ್ಲೇಖಿಸಿ ರಾಚಮಲ್ಲ ಕಾಲಚೂರಿಗಳನ್ನು ಚಕ್ರಾಧಿಪತಿ ಎಂದು ಒಪ್ಪಿರುವದು (೧೧೯೫ ಎ.ಡಿ.) ಬರುವೆ ಶಾಸನ ವಿನಾಯಕಶೆಟ್ಟಿ ಎಂಬುವನು ವಿನಾಯಕ ದೇವಸ್ಥಾನಕ್ಕೆ ದತ್ತಿ ಬಿಟ್ಟಿದ್ದನ್ನು ತೋರಿಸುತ್ತದೆ.

ರಾಚಮಲ್ಲ II ಇರುಂಗೋಲನ ಮಗ ಮತ್ತು ರಾಚಮಲ್ಲI ಮೊಮ್ಮಗ ಸಿಂಧವಂಶಕ್ಕೆ ಸೇರಿದವನು. ರಾಚಮಲ್ಲ ತನ್ನ ಅಜ್ಜನ ಉತ್ತರಾಧಿಕಾರಿಯಾದ ಇರಂಗೋಲ ರಾಜ್ಯಭಾರ

ಮಾಡುತ್ತಿರಲಿಲ್ಲ. ರಾಚಮಲ್ಲನ ಕಾಲ (೧೧೭೫–೧೧೯೫) ಎನ್ನುತ್ತಾನೆ.

ಇವೆಲ್ಲಾ ತರ್ಕಗಳನ್ನು ಗಮನಿಸಿದಾಗ, ನಮಗೆ ಗೋಚರವಾಗುವದು ದಿನಕರ ದೇಸಾಯಿ ತಮಗೆ ಸಿಕ್ಕಿದ ಆ ಕಾಲದ ಆಕಾರಗಳಿಂದ 'ಕಲ್ಯಾಣಿ ಚಾಲುಕ್ಯರ ಮಹಾಮಂಡಲೇಶ್ವರ ಚರಿತ್ರೆಯನ್ನು ಬರೆದಿದ್ದರೂ ಹಲವು 'ಇತಿಮಿತಿ' ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಹೊಸತನ್ನು ಹುಡುಕುವದು ಮತ್ತು ಹಳೆಯದಕ್ಕೂ ಹೊಸತನ್ನು ಸೇರಿಸುವದು, ಇದೇ ಅಲ್ಲವೆ ಇತಿಹಾಸಕಾರನ ಕರ್ತವ್ಯ !

ಯಾವುದೇ ಪ್ರಶಸ್ತಿ ಸ್ವೀಕಾರ ಮಾಡದ ದಿನಕರರು ೧೯೮೨, ನವೆಂಬರ್ ೬ ನಿಧನರಾದರು. ಅವರಿಗಾಗಿ ಮರುಗದವರೇ ಇಲ್ಲ.

"ನಾನು ಸತ್ತಾ ನೀ ಅಳಬೇಡ ಕಂದ
ನಾ ಬರೆದ ಕವಿತೆಗಳ ನೋಡು ಮುದದಿಂದ
ಈ ಕವಿತೆಯೊಳಗುಂಟು ದಿನಕರನ ಜೀವ
ಇರುಳು ಕವಿದಾಗಲೂ ಮೂಡುವದು ಭಾವ"
(ದಿನಕರ ಚೌಪದಿ, ಪುಟ ೨೫೧)

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಜನಸೇವಕ, ಸಂ. ಅಮ್ಮೆಂಬಳ ಆನಂದ, ಸಂ. ೧೮, ಸಂ. ೩೧, ಪ್ರ ೬.
ಅಂಕೋಲ (೨ಟಿ) ಶ್ರೀಪಾದಶೆಟ್ಟಿ, ದಿನಕರದೇಸಾಯಿ, ಬದುಕು ಬರಹ, ೧೯೯೫.

೨. Dinakar Desai, The Mahamandalesvara's under the Calukyas of Kalyani, Bombay, Indian Historical Research Institute, 1951.

೩. Fr. Henry Heras ನೆನಪಿನಲ್ಲಿ, ಈಗಲೂ St. Xaviers College ನಲ್ಲಿ Heras Institute of Indian History and Culture ಸಂಸ್ಥೆ ಅನೇಕ ವಿಧವಾದ ಚರಿತ್ರೆಗೆ ಸಂಬಂಧಪಟ್ಟ ಹಲವಾರು ಸಂಶೋಧನ ಕಮ್ಮಟ ನಡೆಸುತ್ತಿದೆ.

೪. ಇದೆಲ್ಲಾ ವರದಿಗಳು ಮುಂಬೈ ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ಲಭ್ಯ.

೫. Dinkar Desai, Mahamandalesvaras under the Kalyani Chalukyas-1951, P. 2.

೬ Ibid, P. 1-4.

೭. D.D. Desai, Mahamandalesvaras under the Kalyani Chalukyas, P. 81.

೮. Dinakar Desai, Mahamandalesvara under the Kalyani Chalukyas, P. 326-327.
ಚಾಮುಂಡರಾಯನ ಎರಡನೆ ಹೆಂಡತಿ ಪಟ್ಟಡದಕಲ್ಲಿನಲ್ಲಿ ಆಡಳಿತ ಮಾಡಿದಳು. ಹಾನಗಲ್ ಜಯಬ್ಬೆ ಕದಂಬ ಮಹಾಮಂಡಲೇಶ್ವರ Governer ಸಹಾಯದಿಂದ ಕಾರಬಾರ ಮಾಡುತ್ತಿದ್ದಳು. ಕೇತಲಾದೇವಿ, ಸೋಮೇಶ್ವರನ ಹೆಂಡತಿ ಪೊನ್ನವಾಡಿಯಲ್ಲಿ ಒಂದು ಅಗ್ರಹಾರ ನೋಡಿಕೊಳ್ಳುತ್ತಿದ್ದಳು. ಲಕ್ಷ್ಮೀದೇವಿ, ವಿಕ್ರಮಾದಿತ್ಯನ ಪ್ರೇಯಸಿ ೧೮ ಅಗ್ರಹಾರ ನೋಡಿಕೊಳ್ಳುತ್ತಿದ್ದಳು. ಮಲಯವರೆ ಪಿರಿಯಕೇರಿ ಅಗ್ರಹಾರವನ್ನು ನೋಡುತ್ತಿದ್ದಳು. ರಾಜ್ಯಶಾಸ್ತ್ರವನ್ನು ಹೆಣ್ಣುಮಕ್ಕಳು ಕಲಿಯುತ್ತಿದ್ದರು.

೯. Dinakar Desai, Mahamandalesvara under the Kalyani Chalukyas, 346-347.

೧೦. D.D. Desai, Mahamandalesvaras under the Kalyani Chalukyas, P. 360.

೧೧. " P. 374.

೧೨. " P. 382.

೧೩. D.D. Desai, Mahamandalesvaras under the Kalyani Chalukyas, P. 404.

೧೪. Dinakar Desai, Mahamandalesvaras under the Chalukyas of Kalyani, P. 483.

೧೫. D. Desai, Mahamandalesvaras under the Chalukyas of Kalyani, P. 513.

೧೬. Ibid P. 514, 515.

೧೭. Ibid 519.

೧೮. Dinkar Desai, Mahamandalesvaras under the Chalukyas of Kalyani, P. 521.

೧೯. Ibid, 522.

TITLE OF THE PAPERS

Presidential Speech
by Dr. M.G. Nagaraj
History has foundation, movement and culture

Dr. B.R. Gopal Epigraphy Awardee for the year 2009
Smt. Hanumakshi Gogi

1. **Cavelin painted pot pieces of early Historic Period** *-Dr. S.G. Ramadasa Reddy*
2. **The Prehistoric sites of Devarabetta Village area.** *-D. Smitha Reddy*
3. **Megalithic Sites near Pavagada** *- Pavagada Chaluvaraj*
4. **Two Inscriptions of Veerapandyadeva of Karkala** *-Dr. P.N. Narasimha Murthy*
5. **The Copper Plates of Pallava Sri Kandavarma** *-Dr. P.V. Krishnamurthy*
6. **A New Copper plate inscription from Bimanere village of Davanagere Dt.** *-Santebenuru Sumatiandra Nadig*
7. **An unpublished Nishadi inscription of Sakharaya pattana** *-Dr. K. Vasantalakshmi*
8. **A New Copper Plate of Lakumapur Hiremutt and applied aspects** *-Shivayogi Kamblimutt*
9. **The Kalajnana inscription of Bagalur** *-Dr. D.M. Nagaraj*
10. **Some Special hero stones of Kadur Tq.** *-D.H. Jayamma Kariyanna*
11. **Inscriptions and Memoral stones of Vemagal** *-Vemagal Murthy*
12. **A Veeragal Sculpture at Panchavati Malagi** *- Dr. Kareppagowda Patil*

12a. **An Unpublished cattle raid inscription of Amrutur** *-R. Shashidar*

13. **New Hero stones of Arasikere Tq.** *-Dr. Hanuma Nayak*
14. **Inscription of Renadu Cholas** *- Hiremutt Veerabhadraiah Channabasaiah*
15. **Parshwanatha Sculpture and A Pedestal inscriptions from Pashchapur** *- Dr. Appanna N. Hanje*
16. **The Inscription from Kaallurgudda** *- Dr. B.S. RamaBhatta*
17. **Inscriptions of Sadasuivaraya from Andrapradesh** *-Dr. Channakka Pavate*
18. **Deevar's Inscriptions** *-Dr. Jagadesh*
19. **Unique sculptures of Chimmalagi** *-Dr. Shivappa N. Niralagi*
20. **Newly founded Jaina sculptures at Hunagunda** *-Dr. S.K. Melakara, -Dr. R.M. Shadaksharai*
21. **A rare Harihar foot print Sculpture from Mandagadde** *-G.K. Devarajaswami*
22. **Abhimanyu Vadha Sculpture of Mahakooteshwara temple** *-Ranganatha Y., -Dr. R.H. Kulakarni*

23 **A Metalic Idol of Mother and Child** *-Raghu R.*

24. **The Rare Saptamatrike Sculpture at Chamundi Hill** *-Pro. M.V. Krishnappa, M. Vincent*
25. **A new Shoola Bramaiah Sculpture** *-Dr. C.U. Manjunath*
26. **Development of Erotic Amorous couple sculpture in Karnataka** *-Dr. M.P. Mahadevaiah, -A. Sridharamurthy*
27. **Banada Devi, Banada Mahamayi and Banashankari** *-Dr. Shilakanta Pattara*
28. **Tripuranthaka Shiva : Some vivid Scene representations** *-Dr. R.H. Kulakarni*
29. **Prahlada charite Sculptures depicted in Hoysala Narrative Panels** *-Lokesh C.E.*
30. **The Archaeological remains from Murugod** *-Munjula T. Yeligar, - S.B. Hiremutt*
31. **A Survey of antiquirial remains at Arasikere village of Harapanhalli Tq.** *-Kumbha Sadashivappa*

33. The antiquity of Agamas and temples *-M.N. Prabhakar*

34. Jataveda Muni Gadduge : An Ishwara Temple *-Dr. H. Chandrashekhar*

35. The Temples of Nijagal and its fort *-B. Arunakumari*

36. Old Shidileshwara temple of Lokadalu village *-Dr. S. Hanumantha Jois*

37. The inscriptions and architecture of Varadaraja Swamy temple of Vagata and inscriptians *-Adappa Pasodi*

38. The Eshwara temple of Kokkanur *-Dr. B.C. Rakesh*

39. The Eshwara temple of Arasikere *-Dr. K.N. Mohan*

40. The Temples of Mudigere *-Dr. B.C. Suresh*

41. The Someshwara Temple of Hasarambi Forest *-K.C. Malligavad*

42. Temple of Chitradurga Dt. in inscrtiptions *-Dr. B. Suresh*

43. The Social and Historical Settlements of Bommarabettu Environ *-K. Narayana Nayak*

44. The Donations made by the Uppara Communites to Sri Jagadguru Muruga Rajendra Brihanmutt of Chitradurga *-Dr. B. Rajashekharappa*

45. The activities of Gaundas mentioned in Krishnarajpet Tq. Inscriptions *-Dr. R. Rangaswami*

46. Nagadeva : An epigraphical Champu poet *-Dr. Dhanavantha Hajvogola*

47. The evolution and development of land tax in Arasikere Tq. Inscriptions *-Praveen. B.*

48. The evolution and development of Landlords depicted in Holenarasipura Tq. *-Mahandrakumar. K.C.*

49. The places mentioned in Halagere inscriptiones of Kunigal Tq.*-Dr. Shoba Mahesh*

50. The construction in the Temple Enclosure *- Dr. K.S. Aparna*

51. The temple pillars of Karnataka *-Dr. V. Anuradha*

52. The historical importance Holali Village *-Dr. B.S. Shamala Ratnakumari*

53. The Shivaganga 'Thirthodbhava' - A Scientific analysis *-Vedavati S. Balu*

54. Salagunde an old historical place *-Shashwataswami Mukkundimutt*

55. Haveri - an old Agrahara *-Dr. H.G. Chalavadi, Shakuntala H. Bhajantri*

56. The Agraharas of Kanambade Nadu *-B.R. Rathod, Dr. S.K. Melakara*

57. Subbaraya Dasaru and Subramanya Agrahara *-Dr. B.V. Sudhamani*

58. Madhuvanka Nadu during Vijayanagara period *-Sunkam Govardhana*

59. The hero troup of Ekkatigas *-Dr. N.R. Lalitamba*

60. The Gymnastic art at Tulu Nadu *-Dr. Indira Heggade*

61. The Queens of Yelahanka Nadaprabhus *-Kanyakumar. P.*

62. Who is 'Keshi' that corrected 'Gadayuddha' Epic of Ranna *-Dr. Malikarjuna Kambara*

63. The Gita Gowriwar manuscript of keladi Tirumala Bhatta at Alahabad *-Keladi Gundajois*

64. Historical aspectes in 'Guru Charitre' *-Dr. Jostna Kamat*

65. Remains of Keladi and Nirupa of Bhadrappa nayakas period in Chikkamagalur Dt. *-Dr. Keladi Venkatesh Jois*

66. Thagara Pavada and Siddamanka Charite *-Annapurna Gosbala*

67. The Cultural Conflict depicted in Veeresha charite of Raghavanka *-Mamatha Rani*

68. Inscribers and poets of inscriptions in Rayachoor Dt. *-Dr. S.M. Nagabhushana*

69. The inception of the titles of Royal dynasties of Karnataka *-Dr. S.K. Joshi*

70. The Nandi Gadyana Coin of Nolambadi Raja Mahendra-I *-Mandarke Nityananda Pai*

71. The Religious sects during Hoysala Veerasomeshwara period *-Dr. Annaiah Tailur*

72. **The position of Mother during Hoysala period** *- Dr. S. Malati*

73. **The Matrimonial relations among Hosyalas, Pandyas & Cholas** *-S. Parashivamurthy*

74. **The Irrigation frame work of the Kadambas** *- Dr. T.V. Nagaraj*

75. **Historical Tanks of Tumkur Region** *-Sridhar*

76. **The vivid history of Tonnur Tank** *-Lingaraju*

77. **Is Basavanna a miracle person ?** *-Jayadevappa Jainakeri*

78. **Last days of Thontada Siddhalinga Yathi** *-Dr. D.N. Yogishwarappa*

79. **Sri Boodeeshwara Shivayogi** *-K.M. Garaga*

80. **Revanasiddha as depicted in unwritten sources** *-Dr. F.T. Hallikeri*

81. **The Tradition of Revanasidda and Shankaracharya** *-M. Shivashankaraih*

82. **The Honour Rendered to Mahadevappaiah the Head of Rangapura Samsthana** *-Vasundara Desai Mahapursha*

83. **Diggi Sangamanatha, The founder of Amarakalyana** *-Dr. Ravindranatha*

84. **Relationship Bettween Rambhapuri Samsthan Mutt and Danivasa Rulers** *-Dr. B. Nanjundaswamy*

85. **Inam Commissioner H. Birdwood is the records of Bishtappayya family** *-Dr. Harihara Srinivasa Rao*

86. **Two Evidences of Proto historic period as noticed in Magadi taluk** *-Dr. H.S. Gopala Rao*

87. **The Nayakas of Danivasa** *-Dr. H.S. Usharani*

88. **The Revenue Records of Surpur Regaion** *-Dr. Mallikarjuna C. Bagodi*

89. **The Desai family of Madhol** *-Dr. B.V. Sirur*

90. **Hyder The unknown** *-Dr. Srinivasa Havanur*

91. **The Shringeri Mutt and Commissioner Cubbon** *-Dr. A.K. Shastry*

92. **The role of Herald Duglas in the technical Development of princely Mysore State** *-Dr. S.L. Srinivasamurthy*

93. **Venkatakrishniah The Freedom fighter and Social reformer of the Mysore State** *-Dr. Nirmalraj*

94. **Unification of Karnataka and Bhalki Hiremutt** *-Dr. Indumathi P. Patil*

95. **Constructive Programmes of Smt. Yashodhara Dasappa the freedom fighter and Social Reformer** *-Dr. Mahadevi*

96. **The Educational Institutions of Belagavi** *-Dr. Smitha Surebankar*

97. **The Role of Women in Cooperative movement** *-Prof. Shankuntala Sindhura*

98. **English Language and Social Transformation during Pre independence Mysore state (1800-1947)** *-Dr. M.S. Anitha*

99. **Dinakara Desai (1909-82) & his work the Mahamandaleshwaras under the Chalukyas of Kalyana** *-Dr. B. Leela*

ಇತಿಹಾಸ ದರ್ಶನ : ಲೇಖಕ-ಲೇಖನ ಸೂಚಿ

(ಸಂಪುಟ ೨೧/೨೦೦೬ ರಿಂದ ಸಂಪುಟ ೨೫/೨೦೧೦ವರೆಗೆ)

(ಮೊದಲ ಸಂಖ್ಯೆ ಸಂಪುಟವನ್ನು, ಎರಡನೆಯದು ಲೇಖನದ ಪ್ರಾರಂಭದ ಪುಟ ಸಂಖ್ಯೆಯನ್ನು ಸೂಚಿಸುತ್ತದೆ)

-ಡಾ. ಪಿ.ವಿ. ಕೃಷ್ಣಮೂರ್ತಿ

ಡಾ. ಟಿ.ವಿ. ಅಡಿವೇಶ., ಉತ್ತರ ಕರ್ನಾಟಕದಲ್ಲಿ ಉತ್ಸವಗಳು ಮತ್ತು ರಾಷ್ಟ್ರೀಯತೆ (೧೯೦೫-೧೯೧೧), ೨೧ - ೩೧೬.

ಡಾ. ಅಣ್ಣಪ್ಪ ಎನ್. ಹಂಚೆ., ಕುಂದುಗೋಳ ತಾಲ್ಲೂಕಿನ ಜೈನಾವಶೇಷಗಳು, ೨೪ - ೧೫೨ ; ಪಾಶ್ಚಾಪುರದ ಪಾರ್ಶ್ವನಾಥ ಶಿಲ್ಪ ಮತ್ತು ಪಾದಪೀಠ ಶಾಸನ, ೨೫-೭೩.

ಡಾ. ಅಣ್ಣಯ್ಯ ಟಿ.ಬಿ., ವೀರಸೋಮೇಶ್ವರನ ಕಾಲದ ಗರುಡರು, ೨೪ - ೭೩ ; ಹೊಯ್ಸಳ ವೀರಸೋಮೇಶ್ವನ ಕಾಲದ ಧಾರ್ಮಿಕ ಪಂಥಗಳು ೨೫-೩೩೦.

ಅನ್ನಪೂರ್ಣ ಗೋಸ್ಬಾಳ., ತಗರ ಪವಾಡ ಮತ್ತು ಸಿದ್ಧಮಂಕ ಚರಿತೆ, ೨೫-೩೦೭.

ಡಾ. ಎಂ.ಎಸ್. ಅನಿತ., ಸಮಕಾಲೀನರು ಕಂಡಂತೆ ಪಾಶ್ಚಿಮಾತ್ಯ ವೇಭೂಷಣಗಳು ಮತ್ತು ಮೈಸೂರು ಸಮಾಜ, ೨೪- ೩೫೪.

ಡಾ. ವಿ. ಅನುರಾಧ., ಅದ್ವಿತೀಯ ವಾಸ್ತುಕೃತಿ : ರಂಗಸ್ಥಳದ ರಂಗನಾಥಸ್ವಾಮಿ ದೇವಾಲಯ, ೨೨- ೪೪ ; ಬೆಂಗಳೂರು ಮತ್ತು ಕೋಲಾರ ಜಿಲ್ಲೆಯ ದೇವಾಲಯಗಳ ಜಾಲವಾತಾಯನಗಳು, ೨೪ - ೨೬೫ ; ಕರ್ನಾಟಕ ದೇವಾಲಯಗಳ ಸ್ತಂಭಗಳು, ೨೫-೨೫೦.

ಡಾ. ಕೂ.ಸ. ಅಪರ್ಣ., ಪದನಿರ್ಣಯ ಅಥವಾ ವಾಸ್ತುಮಂಡಲ, ೨೨ - ೩೨ ; ಶೈವ ಪರಿವಾರಾಲಯಗಳು ಮತ್ತು ಪರಿವಾರ ದೇವತೆಗಳು, ೨೩ - ೧೩೬ ; ವೈಷ್ಣವ ದೇವಾಲಯಗಳ ಪರಿವಾರ ದೇವತೆಗಳು ಹಾಗೂ ಪರಿವಾರಾಲಯಗಳು, ೨೪ - ೧೭೪ ; ದೇವಾಲಯದ ಹೊರ ಆವರಣದ ರಚನೆಗಳು, ೨೫-೨೨೫.

ಡಾ. ಅಮರೇಶ ಯತಗಲ್., ಸುರಪುರ ಸಂಸ್ಥಾನದಲ್ಲಿ ಕೊಟಗಾರರು, ೨೧ - ೨೭೨ ; ಗುಡಗುಂಟಿ ಸಂಸ್ಥಾನದ ಮೂರು ಕೂಟ ತಾಮ್ರಪತ್ರಗಳು, ೨೨ - ೧೬೮ ; ಸುರಪುರದ ನಾಲ್ವಡಿ ವೆಂಕಟಪ್ಪನಾಯಕನ ಅಂತ್ಯ, ೨೩ - ೩೫೯ ; ಸುರಪುರ ನಾಯಕ ಅರಸರ ನಾಣ್ಯಗಳು, ೨೪ - ೫೦.

ಬಿ. ಅರುಣಕುಮಾರಿ., ನಿಜಗಲ್ಲು ಮತ್ತು ನಿಜಗಲ್ಲು ದುರ್ಗದ ದೇವಾಲಯಗಳು ೨೫-೧೪೭.

ಡಾ. ಎಂ.ಎಸ್. ಅನಿತ., ಸ್ವಾತಂತ್ರ್ಯ ಮೈಸೂರು ಸಂಸ್ಥಾನದಲ್ಲಿ ಇಂಗ್ಲಿಷ್ ಭಾಷೆ ಮತ್ತು ಸಾಮಾಜಿಕ ಪರಿವರ್ತನೆ - ೧೮೦೦ ರಿಂದ ೧೯೪೭, ೨೫ - ೪೫೪.

ಅಶೋಕ ಕಂದಗಲ್ಲ., ಬೇವೂರ ಗ್ರಾಮದ ಪ್ರಾಚ್ಯಾವಶೇಷಗಳು, ೨೩- ೧೫.

ಆದಪ್ಪ ಪಾಸೋಡಿ., ಕೂಗೂರು - ಮುಗಳೂರು ಗ್ರಾಮಗಳ ಪ್ರಾಚ್ಯಾವಶೇಷಗಳು : ಅಪ್ರಕಟಿತ ಶಾಸನಗಳು, ೨೧ - ೬೨: ಇಂಡಿ ತಾಲ್ಲೂಕಿನ ಶಾಸನೋಕ್ತ ವಿದ್ಯಾ ಕೇಂದ್ರಗಳು, ೨೨- ೨೫೪ ; ಇಂಗಳೇಶ್ವರದ ಪ್ರಾಚೀನ ದೇವಾಲಯಗಳು, ೨೩ - ೧೪೬ ; ಕಾಡುಗುಡಿ ಸ್ಥಳದ ಗಂಗರ ದೇವಾಲಯ, ೨೪ - ೨೪೫ ; ವಾಗಟದ ವರದರಾಜಸ್ವಾಮಿ ದೇವಸ್ಥಾನದ ವಾಸ್ತುಶಿಲ್ಪ ಮತ್ತು ಶಾಸನಗಳು ೨೫-೧೫೨.

ಡಾ. ಇಂದಿರಾ ಹೆಗ್ಗಡೆ., ಸುರಾಲ-ಉಳ್ಳಾಲ-ಪುತ್ತಿಗೆ ರಾಜ ಕುಟುಂಬಗಳ ಬಳಿ / ವಂಶ, ೨೧ - ೨೮೦ ; ಬೆಳ್ಮಣ್ಣಿನ ತಾಮ್ರಶಾಸನ : ಒಂದು ಸಾಂಸ್ಕೃತಿಕ ನೋಟ, ೨೩ - ೧೧೪; ಕುಲಶೇಖರ ಆಳುಪೇಂದ್ರನ ಶಾಸನಗಳಲ್ಲಿ ಅಳಿಯ ಸಂತಾನ ಕುಟುಂಬ ಪದ್ಧತಿ, ೨೪ - ೧೧೪ ; ತುಳು ನಾಡಿನ ಗರಡಿ ವಿದ್ಯೆ ೨೫ - ೨೬೮.

ಡಾ. ಇಂದುಮತಿ ಪಾಟೀಲ., ಕರ್ನಾಟಕದ ಏಕೀಕರಣ ಭಾಲ್ಕಿ ಹಿರೇಮಠ, ೨೫ - ೩೦೨.

ಡಾ. ಹೆಚ್.ಎಸ್. ಉಪಾರಾಣಿ., ವರ್ತಕರು ಮತ್ತು ಅವರ ಸೈನಿಕ ಪಡೆಯ ಸಾಮಾಜಿಕ ಕಾಳಜಿ, ೨೧ - ೧೯೮ ; ತಗಡೂರ ಪ್ರಭುಗಳು, ೨೨ - ೩೦೨ ; ಪೂವಿನ ಪಡಂಗಿಲೆಯ ಮಹಾಜನರು, ೨೩ - ೨೬೫ ; ಮಲೆಯೂರು ನಿಷಿಧಿ ಶಾಸನಗಳು, ೨೪ - ೬೧ ; ದಾನಿವಾಸ ನಾಯಕರು, ೨೫ - ೩೯೮.

ಡಾ. ಉಮಾನಾಥ ಶೆಣೈ., ದೇಉಸೆಟ್ಟಿತಿಯ ಮೂಡುಬಿದಿರೆ ತಾಮ್ರ ಶಾಸನ, ೨೧ - ೭೪ ; 'ಜೈನಾಚಾರ'ದಲ್ಲಿ ಕಂಡುಬರುವ ಐತಿಹಾಸಿಕ ವಿಚಾರಗಳು, ೨೨ - ೨೯೮; ಶಂಗರಾರ್ಣವ ಚಂದ್ರಿಕಾ : ಕರ್ನಾಟಕ ಇತಿಹಾಸಕ್ಕೊಂದು ಆಕರ ಗ್ರಂಥ, ೨೩ - ೨೪೫ ; ಶ್ರೀಕ್ಷೇತ್ರ ಧರ್ಮಸ್ಥಳದ ಉಗಮ ಮತ್ತು ಬೆಳವಣಿಗೆ, ೨೪ - ೨೭೮.

ಕನ್ಯಾಕುಮಾರ್ ಪಿ., ಯಲಹಂಕ ನಾಡಪ್ರಭುಗಳ ರಾಣಿಯರು ೨೫ - ೨೭೭.

ಡಾ. ಬಿ. ಕರಿಯಪ್ಪ., ಬೇಲೂರಿನ ವೀರಗಲ್ಲುಗಳು ಮತ್ತು ಮಹಾಸತಿ ಕಲ್ಲುಗಳು, ೨೪ - ೬೫.

ಡಾ. ಕರುಣಾ ವಿಜಯೇಂದ್ರ., ಶಾಸನಗಳ ಬಿರುದಾವಳಿಗಳಲ್ಲಿ ನೃತ್ಯದ ಉಲ್ಲೇಖಗಳು, ೨೧ - ೧೨೨ ; ಕರ್ನಾಟಕದಲ್ಲಿ ವಸಂತೋತ್ಸವ, ೨೨ - ೮೦.

ಕರೆಪ್ಪಗೌಡ ಸಿ. ಪಾಟೀಲ., ಉದಪುಡಿ ಗ್ರಾಮದ ಹೊಸ ಶಾಸನ, ೨೧ - ೫೭ ; ಮದಲೂರಿನ (ಶ್ರೀರಂಗಾಪೂರ) ವೀರಗಲ್ಲು ಶಾಸನ ಶಿಲ್ಪ, ೨೩ - ೯೮ ; ಹೂಲಿ : ಒಂದು ಜೈನ ಕೇಂದ್ರ, ೨೪ - ೩೨೬ ; ಪಂಚಪಟ ಮಳಗಿಯ ವೀರಗಲ್ಲು ಶಾಸನ ಶಿಲ್ಪ, ೨೫ - ೫೬.

ಕಲ್ಲನಗೌಡ ತಿ. ಪಾಟೀಲ., ಪುರಾತನ ಚಾವಡಿಗಳು – ಅಧಿಕಾರಿಗಳು, ೨೧ – ೨೪೮ ; ಪ್ರಾಚೀನ ಕಾಲದಿಂದ ಬಂದ ಕಸಬುದಾರರು, ೨೩ – ೩೬೪ ; ಪ್ರಾಚೀನ ಕಾಲದಿಂದಲೂ ಬಂದ ವಾದ್ಯಗಳು, ೨೪ – ೩೨೨.

ಡಾ. ಜಿ.ವಿ. ಕಲ್ಲಾಪುರ., ಉಬ್ರಂಗಳ ತಾಳೆ ಹಸ್ತಪ್ರತಿ, ೨೨ – ೨೦೮ ; ಕೆಳದಿಯ ಜೈನ ಬಸದಿ, ೨೩ – ೧೯೩.

ಡಾ. ಆರ್. ಕವಿತ., ನಿಡುಗಲ್ಲು ಚೋಳರ ರಾಜಧಾನಿಗಳು, ೨೨ – ೩೦೮.

ಪಿ.ಕೆ. ಕಾರಬಾರಿ., ನವಶೋಧಿತ ಕಾಳಭೈರವನ ಶಿಲ್ಪ, ೨೪ – ೨೦೧.

ಡಾ. ಎಂ. ಕುಮಾರಸ್ವಾಮಿ., ಮೈಸೂರು ಸಂಸ್ಥಾನದಲ್ಲಿ ಮೊದಲ ಪತ್ರಿಕಾ ನಿರ್ಬಂಧ 'ದೇಶಾಭಿಮಾನಿ' ಮುಟ್ಟುಗೋಲು ಪ್ರಕರಣ, ೨೪ – ೩೬೭.

ಡಾ. ಆರ್.ಎಚ್. ಕುಲಕರ್ಣಿ., ತಿರುಮಕೂಡ್ಲಿನ ಅಪರೂಪದ ಕಾಷ್ಠ ಶಿಲ್ಪ, ೨೧ – ೧೮೦ ; ಲಕ್ಕುಂಡಿ ಕಾಶೀವಿಶ್ವೇಶ್ವರ ದೇಗುಲದ ವಾಮನ – ತ್ರಿವಿಕ್ರಮ ವಿಶಿಷ್ಟ ಕಥಾ ನಿರೂಪಣಾ ಶಿಲ್ಪ, ೨೨ – ೯೫ ; ಚಾಮುಂಡಿ ಬೆಟ್ಟ ಮತ್ತು ನಂಜನಗೂಡಿನ ದೃಶ್ಯ ಅಪರೂಪದ ಭಿತ್ತಿ ಚಿತ್ರಗಳು, ೨೨ – ೧೧೨ ; ಸೋದೆ ಶ್ರೀ ವಾದಿರಾಜರ ಅಪರೂಪದ ಸಾಂಪ್ರದಾಯಿಕ ಚಿತ್ರ, ೨೪ – ೨೨೭ ; ಮಹಾಕೂಟದ ಮಹಾಕೂಟೇಶ್ವರ ದೇವಾಲಯದ ಅಭಿಮನ್ಯು ವಧಾಶಿಲ್ಪ, ೨೫ – ೯೬ ; ತ್ರಿಪುರಾಂತಕ ಶಿವ : ದೃಶ್ಯ ನಿರೂಪಣೆ, ೨೫ – ೧೧೪.

ಡಿ.ಜಿ. ಕುಲಕರ್ಣಿ., ಹೊನ್ನತ್ತಿ ಗ್ರಾಮನಾಮ, ೨೧ – ೨೪೦; ಹಾವೇರಿ ಜಿಲ್ಲೆಯ ಪರೋಕ್ಷ ವಿನಯ / ವ್ಯಕ್ತಿನಾಮ ತ್ರಿಕೂಟ ದೇವಾಲಯಗಳು, ೨೩ – ೧೭೬ ; ಹಾನಗಲ್ಲ ನಾಡ ಹಬ್ಬ, ೨೪ – ೩೦೦.

ಎಂ.ವಿ. ಕೃಷ್ಣಪ್ಪ., ಚಾಮುಂಡಿ ಬೆಟ್ಟದ ಅಪರೂಪದ ಸಪ್ತಮಾತೃಕೆ ಶಿಲ್ಪಗಳು, ೨೫– ೧೦೨.

ಡಾ. ಪಿ.ವಿ. ಕೃಷ್ಣಮೂರ್ತಿ., ಬೆಂಗಳೂರು ಜಿಲ್ಲಾ ಪರಿಸರದ ಶಾಸನೋಕ್ತ ಕೆರೆಗಳು, ೨೧ – ೧೧೭ ; ಇಳವಂಜಿನಾಡು ಮತ್ತು ಇಳವಂಜಿರಾಯರು, ೨೨ – ೧೮೪ ; ದೊಡ್ಡಪಾಲನಹಳ್ಳಿ ವೀರಗಲ್ಲು ಶಾಸನ ಮತ್ತು ಶಿಲ್ಪ, ೨೩ – ೮೯ ; ಶ್ರೀನಿವಾಗಿಲ ತುರಗೋಳ್ ಶಿಲ್ಪ – ಶಾಸನಶೋಧ, ೨೪ – ೫೮ ; ಪಲ್ಲವ ಶ್ರೀಕಂದವರ್ಮನ ತಾಮ್ರ ಪಟಗಳು, ೨೫ – ೨೬ ; ಇತಿಹಾಸ ದರ್ಶನ ಲೇಖನ – ಲೇಖನ ಸೂಚಿ, ೨೫.

ಡಾ. ಎಂ.ಎಸ್. ಕೃಷ್ಣಮೂರ್ತಿ., ಅದ್ವಿತೀಯ ವಾಸ್ತುಕೃತಿ : ರಂಗಸ್ಥಳದ ರಂಗನಾಥಸ್ವಾಮಿ ದೇವಾಲಯ, ೨೨ – ೪೪; ತಲಕಾಡಿನಲ್ಲಿ ಮುಂದುವರೆದ ಉತ್ಖನನ – ಒಂದು ಸಂಕ್ಷಿಪ್ತ ವರದಿ, ೨೪ – ೧೩.

ಕೆಳದಿ ಗುಂಡಾ ಜೋಯಿಸ್., ಪೋರ್ಚುಗೀಸ್ ಅಸೆಂಟೋ ಸಂಪುಟಗಳಲ್ಲಿ ಕೆಳದಿ ಇತಿಹಾಸ, ೨೩ – ೩೦೭ ; ಕೆಳದಿ ಇತಿಹಾಸದಲ್ಲಿ ಇಂಗ್ಲೀಷ್ ಕಾರ್ಖಾನೆ ದಾಖಲೆಗಳು, ೨೪ – ೩೩೩ ; ಅಲಹಬಾದಿನಲ್ಲಿರುವ ಕೆಳದಿ ತಿರುಮಲಭಟ್ಟನ ಗೀತಗೌರೀವರ ಹಸ್ತಪ್ರತಿ, ೨೫– ೨೮೫.

ಡಾ. ಕೆಳದಿ ವೆಂಕಟೇಶ್ ಜೋಯಿಸ್., ನವಾಬ್ ಹೈದರಾಲಿ ಕಾಲದ ಎರಡು ದಾಖಲೆಗಳು, ೨೨ – ೩೪೯ ; ಬಾರಕೂರು ಸೂರಪ್ಪಯ್ಯನ ಮಠ, ಅಗ್ರಹಾರ ಮತ್ತು ಮನೆತನ, ೨೩ – ೩೧೬ ; ಐತಿಹಾಸಿಕ ಕಾಸರವಳ್ಳಿ ಮನೆ, ಮನೆತನ, ೨೩ – ೩೨೭ ; ಕೆಳದಿ ಕಾಲದಲ್ಲಿ ಚಿಕ್ಕರಮನೆ ಕುಟುಂಬ ಮತ್ತು ಶ್ರೀ ಭಧ್ರಾಂಭಿಕೇಶ್ವರ ದೇವಸ್ಥಾನ, ೨೪ – ೨೯೫ ; ಚಿಕ್ಕಮಗಳೂರು ಜಿಲ್ಲೆಯ ಕೆಳದಿ ಅವಶೇಷಗಳು ಮತ್ತು ಕೆಳದಿ ಭದ್ರಪ್ಪನಾಯಕನ ಕಾಲದ ನಿರೂಪ, ೨೫ – ೩೦೨.

ಕೇಶವ ಉಮರ್ಜಿ., ಹುನ್ನೂರಿನ ವೀರಭದ್ರ ಶಿಲ್ಪ, ೨೧ – ೧೬೮ ; ಹನಗಂಡಿಯ ಕಂಚುಗಾರರು – ಲೋಹ ಉದ್ಯಮ, ೨೨ – ೩೧೨ ; ಶೂರ್ಪಾಲಯ ಗ್ರಾಮ : ಒನ್ನೆಲೆ ಮತ್ತು ಇತಿಹಾಸ, ೨೪ – ೩೨೪.

ಡಾ. ಎಂ. ಕೊಟ್ರೇಶ್., ಅಲಗಿಲವಾಡದ ಹೊಸ ಶಿಲಾಶಾಸನ, ೨೨ – ೧೫೨ ; ನೂತನ ಶಿಲಾಯುಗದ ನೆಲೆ – ಗಡಿಗುಡಾಳ, ೨೧ – ೨೨.

ಡಾ. ಎಸ್.ಕೆ. ಕೊಪ್ಪ., ಕ್ಷಿತಿರುಹನೋಂಪಿ : ಒಂದು ಶಾಸನೋಕ್ತ ಅಪರೂಪದ ವ್ರತ, ೨೪ – ೯೦.

ಟಿ.ಎಸ್. ಗಂಗಾಧರ್., ತಲಕಾಡಿನಲ್ಲಿ ಮುಂದುವರೆದ ಉತ್ಖನನ – ಒಂದು ಸಂಕ್ಷಿಪ್ತ ವರದಿ, ೨೪ – ೧೩.

ಡಾ. ಕೆ.ಆರ್. ಗಣೇಶ., ಆಂಧ್ರ ಪ್ರದೇಶದ ಶಾಸನಗಳು ಮತ್ತು ಜೈನ ಬಸದಿಗಳು (ಡಾ. ಬಾ.ರಾ. ಗೋಪಾಲ ಪ್ರಶಸ್ತಿ ವಿಜೇತ ಉಪನ್ಯಾಸ), ೨೧ – ಥಥಥುತ.

ಪ್ರೊ. ಕೆ.ಎಂ. ಗರಗ., ಹುಲುಕೋಟಿಯ ಪ್ರಾಚ್ಯಾವಶೇಷಗಳು, ೨೪ – ೩೯ ; ಶ್ರೀ ಬೂದೀಶ್ವರ ಶಿವಯೋಗಿಗಳು, ೨೫ – ೩೬೨.

ಗಾಂಧೀಜಿ ಚಂದ್ರಪ್ಪಾ., ಹೈದ್ರಾಬಾದ್ ಕರ್ನಾಟಕದಲ್ಲಿ ಬೌದ್ಧಧರ್ಮ, ೨೧ – ೧೫೫.

ಕು॥ ಗಿರಿಜಾ., ಹಳೆ ದರೋಜಿಯ ಹೊಸ ಜೈನ ಶಾಸನಗಳು, ಬಂಡೆ ರೇಖಾ ಚಿತ್ರಗಳು, ೨೨ – ೧೬೦ ; ರಾಮಘಡದ ಹುಲಿಯಾನಪ್ಪನ ಮಠದ ಅವಶೇಷಗಳು ಮತ್ತು ಕೆಲವು ದಾಖಲೆಗಳು, ೨೩ – ೮೦.

ಡಾ. ಗಿರಿಜಾಪತಿ. ಎಂ., ಚಿತ್ರದುರ್ಗ ಪಾಳೇಗಾರರ ಹಿತ್ತಾಳೆ ಚೌಡಿಕೆಯ ಶಾಸನ, ೨೩ – ೭೫.

ಗುರುಮೂರ್ತಿ ಪೆಂಡಕೂರು., ಹಗರಿಬೊಮ್ಮನಹಳ್ಳಿಯಲ್ಲಿ ಮನೆತನದ ಹೆಸರುಗಳು, ೨೧ – ೨೪೪ ; ಕರ್ನಾಟಕದಲ್ಲಿ ಅಡ್ಡ ಹೆಸರುಗಳು (ನಮ್ಮೂರ ಜನರ ಪ್ರೀತಿಯ ಅಡ್ಡ ಹೆಸರುಗಳು), ೨೨ – ೨೦೫ ; ಬಳ್ಳಾರಿ ಜಿಲ್ಲೆಯ ಪಾಠಶಾಲೆ – ವಾಡ್ಲಾರ್ ಪ್ರೌಢಶಾಲೆ, ೨೩ – ೩೮೮.

ಡಾ. ಆರ್. ಗೋಪಾಲ್., ತಲಕಾಡಿನಲ್ಲಿ ಮುಂದುವರೆದ ಉತ್ಖನನ – ಒಂದು ಸಂಕ್ಷಿಪ್ತ ವರದಿ, ೨೪ – ೧೩.

ಡಾ. ಕೆ.ಜಿ. ಗೋಪಾಲಕೃಷ್ಣರಾವ್., ವಿಜಯನಗರದ ವೀರನಸಿಂಹನ ಅಂತ್ಯ ಕಾಲ : ಮರುಪರಿಶೀಲನೆ, ೨೧ – ೨೦೮.

ಡಾ. ಎಚ್.ಎಸ್. ಗೋಪಾಲರಾವ್., ಬೆಂಗಳೂರು ಜಿಲ್ಲೆಯ ತಮಿಳು ಶಾಸನಗಳು, ೨೧ – ೯೦ ; ಮಣ್ಣೆಯಲ್ಲಿ ವರ್ತಕ ಶ್ರೇಣಿ ಮತ್ತು ವೈಷ್ಣವ ಧರ್ಮ, ೨೨ – ೧೬೩ ; ಶಾಸನ ಶಾಸ್ತ್ರಾಧ್ಯಯನ : ಹಿನ್ನೋಟ ಮತ್ತು ಮುನ್ನೋಟ (ಬಾ.ರಾ. ಗೋಪಾಲ ಪ್ರಶಸ್ತಿ ದತ್ತಿ ಉಪನ್ಯಾಸ), ೨೩ – ಥಥಥುಥ., ಚಿನ್ನವಂಗಲದ ಮುಕ್ತನಾಥೇಶ್ವರ ದೇವಾಲಯಕ್ಕೆ ಹೊಂದಿಕೊಂಡ ಕೀಟ್ಬುಂಟೆ ಸಮಾಧಿ, ೨೪ – ೭೦ ; ಮಾಗಡಿ ತಾಲ್ಲೂಕಿನಲ್ಲಿ ಇತಿಹಾಸ ಆರಂಭ ಕಾಲದ ಎರಡು ಕುರುಹುಗಳು, ೨೫ – ೩೯೫.

ಡಾ. ಸಿ. ಚಂದ್ರಪ್ಪ., ಚಿತ್ರದುರ್ಗ ಪಾಳೆಯಗಾರರು, ಆರ್ಥಿಕ ಅವಲೋಕನ, ೨೨ – ೩೦೫.

ಡಾ. ಹೆಚ್. ಚಂದ್ರಶೇಖರ., ಹಾವೇರಿಯ ಹೆಗ್ಗೆರೆಯ ಬಹುಮುಖೀ ಅಧ್ಯಯನ, ೨೨ – ೧೭೯ ; ದೇವದುರ್ಗದ ಈರಣ್ಣ ದೇವರ ಗುಡ್ಡದ ಶಾಸನದ ಒಂದು ಅಧ್ಯಯನ, ೨೩ – ೧೦೦ ; ಕಿತ್ತೂರು ರಾಣಿ ವೀರಮ್ಮನ ಕೊನೆಯ ದಿನಗಳು ಮತ್ತು ಸ್ಮಾರಕಗಳು, ೨೪ – ೩೯೮ ; ಜಾತವೇದ ಮುನಿಗದ್ದುಗೆ : ಇದೊಂದು ಈಶ್ವರ ದೇವಾಲಯ, ೨೫– ೧೪೦.

ಡಾ. ಚನ್ನಕ್ಕ ಪಾವಟೆ., ಕಲಬುರ್ಗಿ ಪರಿಸರದಲ್ಲಿ ಚೀಲಾಳ ಪ್ರಸ್ತಾಪ, ೨೧ – ೧೯೫ ; ಶಾಸನಗಳಲ್ಲಿ ಬಾಹತ್ತರ ನಿಯೋಗಾಧಿಪತಿ, ೨ – ೨೪೭ ; ಶಿವಮೊಗ್ಗ ಪರಿಸರದಲ್ಲಿ ಸೂರ್ಯೋಪಾಸನೆ, ೨೩ – ೨೯ ; ಆಂಧ್ರ ಪ್ರದೇಶದಲ್ಲಿ ಸದಾಶಿವರಾಯನ ಶಾಸನಗಳು, ೨೫ – ೭೯.

ಡಾ. ಚನ್ನಬಸಪ್ಪ ಬಿ., ರಾಯಚೂರು ಜಿಲ್ಲೆ ಮಲ್ಲಟ ಗ್ರಾಮದ ಅಪ್ರಕಟಿತ ಶಾಸನಗಳು, ೨೩ – ೪೩.

ಡಾ. ಚನ್ನಬಸವ ಹಿರೇಮಠ., ಗೆಜ್ಜಲಹಟ್ಟಿ ನಾಡಗೌಡರು, ೨೧ – ೨೯೨.

ಡಾ. ಎಸ್.ಜಿ. ಚಲವಾದಿ., ಸಂಕೇಶ್ವರ ಪಾರ್ಶ್ವನಾಥ ಬಸದಿಯ ವೈಶಿಷ್ಟ್ಯಗಳು, ೨೨ – ೫೪ ; ಪ್ರಾಚೀನ ಅಗ್ರಹಾರದ ಹಾವೇರಿ, ೨೫ – ೨೪೯.

ವಿ.ಆರ್. ಚೆಲುವರಾಜನ್., ಸ್ವಾರಮ್ಮನ ದೇವಾಲಯ ಮತ್ತು ಅಪ್ರಕಟಿತ ಶಾಸನ, ೨೧ – ೧೦೫ ; ತಾಳೆಗರಿಗಳಲ್ಲಿ ನಿಡುಗಲ್ಲಿನ ಇತಿಹಾಸ, ೨೨ – ೨೨೨.

ಡಾ. ಜಗದೀಶ್ ಎಂ.ಎಚ್., ಮುಕ್ತೇನಹಳ್ಳಿಯ ಪ್ರಾಚೀನ ಅವಶೇಷಗಳು ಮತ್ತು ಅಪ್ರಕಟಿತ ಶಾಸನ, ೨೧ – ೩೭.

ಡಾ. ಜಗದೀಶ., ದೇವಾಲಯ ನಿರ್ಮಾಣದಲ್ಲಿ ರೂವಾರಿಗಳ ಕಾರ್ಯ ವಿಂಗಡಣೆ, ೨೩ – ೧೮೫ ; ಹೊಂಬುಚ ಸಾಂತರರ ಎರಡು ಹೊಸ ಶಾಸನಗಳು, ೨೪ – ೧೬೮ ; ದೀವರ ಶಾಸನಗಳು, ೨೫ – ೮೩.

ಟಿ.ಎಸ್. ಜಯದೇವ್., ಮತ್ತಿ ತಿಮ್ಮಣ್ಣನಾಯಕರ ಸಮಾಧಿ ಅವಶೇಷಗಳು, ೨೪ – ೨೯೩.

ಜಯದೇವಪ್ಪ ಜೈನಕೇರಿ., ಕೆಳದಿ ಅರಸರ ನಾಗರಿ ಲಿಪಿಯ ಎರಡು ಅಪ್ರಕಟಿತ ನಿರೂಪಗಳು, ೨೧ – ೨೨೮ ; ಹೊಸನಗರ ತಾಲ್ಲೂಕಿನ ಅಪ್ರಕಟಿತ ವೀರಗಲ್ಲು ಶಾಸನಗಳು, ೨೩ – ೯೨; ಕರ್ನಾಟಕ ಏಕೀಕರಣದಲ್ಲಿ ಕರ್ನಾಟಕ ಸಂಘಗಳ ಪಾತ್ರ, ೨೪ – ೩೭೨ ; ಬಸವಣ್ಣನವರು ಪವಾಡ ಪುರುಷರೇ ?, ೨೫ – ೩೫೨.

ಡಾ. ಬಿ. ಜಯಮ್ಮ., ಮುಂಬೈ ಕರ್ನಾಟಕದ ಕೆಲವು ಪುರಾತತ್ತ್ವ ನೆಲೆಗಳು, ೨೧ – ೨೮ ; ಧಾರವಾಡ ಜಿಲ್ಲೆಯ ಗಜಲಕ್ಷ್ಮಿ ಶಿಲ್ಪಗಳು, ೨೩ – ೧೯೯.

ಡಾ. ಎಚ್. ಜಯಮ್ಮ ಕರಿಯಣ್ಣ., ಹಲಸುಬಾಳು ಫಲಹಾರ ಮಠದ ನಾಲ್ಕು ತಾಮ್ರ ಶಾಸನಗಳು, ೨೧ – ೧೪೭ ; ನೊಳಂಬ ಅರಸಿ ದೀವಳಬ್ಬರಸಿಯ ರಚನಾತ್ಮಕ ಕಾರ್ಯಗಳು, ೨೨ – ೨೬೫ ; ಕಡೂರು ತಾಲ್ಲೂಕಿನ ಕೆಲವು ವಿಶಿಷ್ಟ ವೀರಗಲ್ಲುಗಳು, ೨೫ – ೪೬.

ಕು. ಜಯಶ್ರೀ ದೇಶಮಾನ್ಯ., ಗುಲ್ಬರ್ಗಾ ಜಿಲ್ಲೆಯ ತನ್ನೂರಿನಲ್ಲಿ ಹೊಸ ಬೌದ್ಧ ನೆಲೆ, ೨೧ – ೧೫೦.

ಡಾ. ಎಸ್.ಕೆ. ಜೋಶಿ., ಕನ್ನಡ ನೆಲದಲ್ಲಿ ನಾಗಶಿಲ್ಪಗಳು, ೨೧ – ೧೭೪ ; ಶಿವಶರಣರು ಹರಿದಾಸರು ಹಾಗೂ ಸೂಫಿಸಂತರು, ೨೨ – ೩೩೭ ; ಚೋಳರು : ಒಂದು ಚಿಂತನೆ ೨೩ – ೨೬೮ ; ಕನ್ನಡ ನೆಲದಲ್ಲಿ ಗಣಪತಿ ಶಿಲ್ಪ ಪಥ, ೨೪ – ೧೮೪; ಕರ್ನಾಟಕ ರಾಜವಂಶಗಳ ಶಿರೋನಾಮಗಳ ವ್ಯುತ್ಪತ್ತಿ, ೨೫– ೩೨೦.

ಡಾ. ಜ್ಯೋತ್ಸ್ನಾ ಕಾಮತ್., ಕನ್ನಡಿಗರ ಆಹಾರ ಸಂಸ್ಕೃತಿ, ೨೧ – ೨೨೧ ; 'ವಿಕ್ರಮಾಂಕಾಭ್ಯುದಯ'ದಲ್ಲಿ ಕರ್ನಾಟಕ (ಸುವರ್ಣ ಕರ್ನಾಟಕ ವರ್ಷದ ಸಂದರ್ಭ), ೨೨ – ೨೮೮; ಕಮಲಾದೇವಿ ಚಟ್ಟೋಪಾಧ್ಯಾಯರು ಹಾಗೂ ಒಂದು ಕಲಾ ಪ್ರಸಂಗ, ೨೪ – ೨೨೯ ; 'ಗುರುಚರಿತ್ರೆ' ಚಾರಿತ್ರಿಕ ಅಂಶಗಳು, ೨೫ – ೨೯೭.

ಡಾ. ತಮಿಳ್ ಸೆಲ್ವಿ., ತಮಿಳು ಕೈಫಿಯತ್ತು : 'ದೊಡ್ಡ ದೇವರಾಯನ ಚರಿತ್ರೆ' (ಮೆಕಂಜಿ ಸಂಗ್ರಹ), ೨೨ – ೩೪೪; ಕನ್ನಡ ಸಾಹಿತ್ಯದಲ್ಲಿ ಮೂಗು ಕತ್ತರಿಸುವ ಪ್ರಕ್ರಿಯೆ, ೨೩ – ೨೨೬.

ಡಾ. ಎಸ್. ತಿಪ್ಪೇಸ್ವಾಮಿ., ಸಂತೇಗುಡ್ಡದ ಗುಹಾ ವರ್ಣಚಿತ್ರಗಳು ಹಾಗೂ ಪ್ರಾಚ್ಯಾವಶೇಷಗಳು, ೨೧ – ೨೪ ; ಚಿತ್ರದುರ್ಗ ತಾಲ್ಲೂಕಿನ ಮತ್ತಷ್ಟು ಪ್ರಾಗೈತಿಹಾಸಿಕ ನೆಲೆಗಳು, ೨೨ – ೧೩; ಚಿತ್ರದುರ್ಗ ತಾಲ್ಲೂಕು ನೆರೇಹಾಳು ಪರಿಸರದ ಬೃಹತ್ ಶಿಲಾಯುಗದ ಸಮಾಧಿ ನೆಲೆಗಳ ಶೋಧ, ೨೩ – ೧೩.

ಡಾ. ತುಳಸಿರಾಮನಾಯಕ., ಬೆಂಗಳೂರು ನಗರದ ಕೆಂಪೇಗೌಡ ವೃತ್ತದ (ಮೆಜೆಸ್ಟಿಕ್) ಇತಿಹಾಸ, ೨೩ – ೩೫೨ ; ಬೆಂಗಳೂರಿನ ಹಿರಿಯ ಕೆಂಪೇಗೌಡ ಹಾಗೂ ವಂಶಿಕರ ಧಾರ್ಮಿಕ ದತ್ತಿಗಳು, ೨೪ – ೧೦೬.

ಎನ್. ತೇಜಸ್ವಿ., ಶ್ರೀರಂಗಪಟ್ಟಣದ ದರಿಯಾದೌಲತ್ ಬಾಗ್‌ನ ಸಂರಕ್ಷಣೆ, ೨೩ – ೩೪೩.

ದತ್ತಾತ್ರೇಯ ಜಿ. ಕುಲಕರ್ಣಿ., ರಟ್ಟಿಹಳ್ಳಿ ಕದಂಬೇಶ್ವರ ತ್ರಿಕೂಟ ದೇವಾಲಯ, ೨೨ – ೪೧.

ಡಾ. ದುರುಗಪ್ಪ ಎಂ.ಕೆ., ಹೇಮಗುಡ್ಡ : ಚಾರಿತ್ರಿಕ ನೋಟ, ೨೧ – ೨೩೦ ; ಬದಲಾವಣೆಯ ನೆಲೆಯಲ್ಲಿ ಕುಮಾರರಾಮ ದೇವಾಲಯಗಳು, ೨೩ – ೧೮೦.

ಜಿ.ಕೆ. ದೇವರಾಜಸ್ವಾಮಿ., ಹಾನಗಲ್ಲು ಕದಂಬ ಮೂರನೇ ತೈಲಪನ ಅಪ್ರಕಟಿತ ಶಾಸನ, ೨೨ – ೧೩೨ ; ಭಾನುವಳ್ಳಿಯ ವಿಶಿಷ್ಟ ಸೂರ್ಯಶಿಲ್ಪ, ೨೪ – ೧೯೬ ; ಮಂಡಗದ್ದೆಯ ಅಪೂರ್ವ ಹರಿಹರ ಪಾದ ಶಿಲ್ಪ; ೨೫ – ೯೩.

ಡಾ. ಎಸ್.ಕೆ. ದೇವೇಗೌಡ., ಮುಮ್ಮಡಿ ವೀರಬಲ್ಲಾಳನ ಕಾಲದ ಧಾರ್ಮಿಕ ನೀತಿ, ೨೩ – ೨೮೦.

ಡಾ. ಧನವಂತ ಹಾಜವಗೋಳ., ಶಾಸನಗಳಲ್ಲಿ 'ಮಹಾಜನಗಳು', ೨೧–೧೪೧; ಕಳಚೂರಿಗಳ ಕಾಲದ ತುಂಗಳ, ೨೨–೧೯೭; ನಾಗದೇವ : ಶಾಸನ ಚಂಪು ಕವಿ, ೨೫ – ೨೦೩.

ಡಾ. ಬಿ. ನಂಜುಂಡಸ್ವಾಮಿ., 'ಖಗೇಂದ್ರಮಣಿ ದರ್ಪಣ' ಕರ್ತೃ ಮೊದಲನೇ ಮಂಗರಾಜನ ಆಳ್ವಿಕೆಯ ಪ್ರದೇಶ ಮತ್ತು ಸ್ವಸ್ಥಾನ, ೨೧ – ೨೫೮ ; ನಂಜನಗೂಡು ಶಾಸನೋಕ್ತ ವೀರಭದ್ರ ದೇಗುಲ : ಕಪಿಲಾ ನದಿ ತೀರದ ಶಿವಾಲಯದ ತೋಂಟದ ಸಿದ್ಧಲಿಂಗರ ಮೂರ್ತಿ, ೨೨ – ೫೯ ; ಉರವಕೊಂಡ ಗವಿಮಠದ ಚನ್ನಬಸವಸ್ವಾಮಿಗಳಿಗೆ ಮುಮ್ಮಡಿ ಕೃಷ್ಣರಾಜ ಒಡೆಯರ ಗ್ರಾಮ ಭೂದಾನ ಪತ್ರ, ೨೩ – ೭೭; ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಮತ್ತು ಬೆಂಗಳೂರು ಕೃಷ್ಣರಾಜ ವಿಲಾಸ ಮುದ್ರಾಕ್ಷರ ಶಾಲೆ, ೨೪ – ೩೬೨ ; ದಾನಿವಾಸದ ದೊರೆಗಳು ಮತ್ತು ರಂಭಾಪುರಿ ಸಂಸ್ಥಾನ ಮಠ ಸಂಬಂಧ, ೨೫ – ೩೮೬.

ಡಾ. ಎಸ್. ನಂದೀಶ್ವರ., ಯರದ ಕಟ್ಟೆಯ ಪ್ರಾಚ್ಯಾವಶೇಷಗಳು, ೨೧ – ೩೪ ; ದ್ವಾರಾಳುವಿನ ವೀರಗಲ್ಲುಗಳು ಹಾಗೂ ಅಪ್ರಕಟಿತ ವೀರಗಲ್ಲು ಶಾಸನಗಳು, ೨೨ – ೧೫೭ ; ಚಿಕ್ಕಬಾಣಗೆರೆಯ ಒಂದು ಹೊಸ ಶಾಸನ, ೨೩ – ೪೧ ; ಸಿರಾ ತಾಲ್ಲೂಕಿನ ಕೆಲವು ಅಪ್ರಕಟಿತ ಶಾಸನಗಳು, ೨೪–೧೩೮.

ಡಾ. ಪಿ.ಎನ್. ನರಸಿಂಹಮೂರ್ತಿ., ಚಕ್ರವರ್ತಿ ಇಮ್ಮಡಿ ಹರಿಹರನ ತಿರುವೈಲು ಶಾಸನ, ೨೧ – ೯೯ ; ಪುತ್ತೂರು ಮತ್ತು ಕಾಸರಗೋಡು ತಾಲ್ಲೂಕುಗಳಲ್ಲಿ ಪ್ರಾಕ್ಚಾರಿತ್ರಿಕ ಸ್ಥಳಗಳ ಶೋಧ – ಒಂದು ಟಿಪ್ಪಣಿ, ೨೨ – ೧೭ ; ಆಳುಪ ಬಂಕಿದೇವನ ಪ್ರಮುಖ ಐತಿಹಾಸಿಕ ಸುಜೇರು ಸ್ತಂಭ ಶಾಸನ, ೨೩ – ೩೪; ಶಾಸನ ಅಧ್ಯಯನದಲ್ಲಿ ನನ್ನ ನಡೆ, ೨೪ – ಥಥಥತು, (ಡಾ. ಬಾ.ರಾ. ಗೋಪಾಲ್ ಪ್ರಶಸ್ತಿ ದತ್ತಿ ಉಪನ್ಯಾಸ); ಕಾರ್ಕಳದ ಒಂದು ಪ್ರಮುಖ ದಾನ ಶಾಸನ, ೨೪ – ೧೪೩ ; ಕಾರ್ಕಳದ ವೀರಪಾಂಡ್ಯದೇವನ ಎರಡು ಶಾಸನಗಳು, ೨೫ – ೨೧.

ಎಂ. ನರಸಿಂಹಮೂರ್ತಿ., ಭೀಮನಕಟ್ಟೆ ಶಿವಾಲಯಗಳು ಹಾಗೂ ಕಲ್ಯಾಣಿಪುರದ ಅಪ್ರಕಟಿತ ದಾಖಲೆ, ೨೨ – ೧೨೦ ; ಶಿಲ್ಪಗಳಲ್ಲಿ ಮಲ್ಲಯುದ್ಧ, ೨೩ – ೨೦೬.

ಪ್ರೊ. ಎಂ.ಎಸ್. ನರೇಗಲ್ಲ., ಕಳಚೂರಿ ದೊರೆ ಸೋವಿದೇವನ (೧೧೬೮ – ೧೧೭೭) ಲಕ್ಷ್ಮೇಶ್ವರದ ಅಪ್ರಕಟಿತ ಶಾಸನ, ೨೧ – ೮೨ ; ಶಿಂಗಟಾಲೂರಿನ ೬ನೇ ವಿಕ್ರಮಾದಿತ್ಯನ ಅಪ್ರಕಟಿತ ಶಾಸನ, ೨೨ – ೧೨೭ ; ಹೊಸೂರ ಗ್ರಾಮದ ನವಶೋಧಿತ ಸ್ಮಾರಕ ಶಾಸನಗಳು, ೨೩ – ೯೫ ; ಯಾದವ ದೊರೆ ೨ನೇ ಸಿಂಘಣದೇವನ ಅಪ್ರಕಟಿತ ಶಾಸನ, ೨೪ – ೧೩೫.

ನಿಂಗನಗೌಡ ದೇಸಾಯಿ., ಕೆಂಬಾವಿಯ ಅಪರೂಪದ ವೃಷಭನಾಥ ವಿಗ್ರಹ, ೨೧ – ೧೬೬.

ಡಾ. ನಿರ್ಮಲರಾಜ್., ನಂಜನಗೂಡು ತಾಲ್ಲೂಕು ಹಾಗೂ ಮಹಾತ್ಮಾಗಾಂಧೀ, ೨೨ – ೩೭೭, ಮಹಾತ್ಮಾಗಾಂಧಿ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್, ೨೪ – ೩೬೪ ; ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಸೇನಾನಿ ಹಾಗೂ ಸಮಾಜ ಸುಧಾರಕ ವೆಂಕಟಕೃಷ್ಣಯ್ಯ (ತಾತಯ್ಯ), ೨೫ – ೪೨೨.

ನಿರ್ಮಲಾ ಗಣೇಶ್., ಹರಿದಾಸರು ಚಿತ್ರಿಸಿದ ಕೆಲವು ಐತಿಹಾಸಿಕ ಹಾಗೂ ಸಮಕಾಲೀನ ಜನಜೀವನದ ಅಂಶಗಳು, ೨೩ – ೨೪೯.

ಡಾ. ಎಸ್.ಎಂ. ನಾಗಭೂಷಣ., ದಾವಣಗೆರೆಯ ದೇಗುಲ ವಾಸ್ತು ಮತ್ತು ಶಿಲ್ಪಗಳು, ೨೨ – ೬೮ ; ಮುಳಗುಂದದ ನಗರೇಶ್ವರ ದೇವಾಲಯದ ಕಂಬ ಶಾಸನ, ೨೪ – ೨೩೧; ರಾಯಚೂರು ಜಿಲ್ಲೆಯ ಶಾಸನ ಕವಿಗಳು ಹಾಗೂ ರೂವಾರಿಗಳು, ೨೫ – ೩೧೬.

ಡಾ. ಜೆ.ಎಂ. ನಾಗಯ್ಯ., ಶಾಸನಗಳಲ್ಲಿ ಧರ್ಮ ಸಂಘರ್ಷ, ೨೩ – ೧೦೯.

ಡಾ. ಟಿ.ವಿ. ನಾಗರಾಜ., ಡಾ. ಫ್ರಾನ್ಸಿಸ್ ಬುಖಾನನ್ ಕಂಡಂತೆ – ಕೋಲಾರ ಪ್ರದೇಶ, ೨೧ – ೨೯೭ ; ಚಿತ್ರದುರ್ಗ ಜಿಲ್ಲೆಯ ಶಾಸನೋಕ್ತ ಕೆರೆ ನೀರಾವರಿ, ೨೨ – ೨೬೯ ; ಕೆರೆಗಳ ಸಾಂದ್ರತೆ – ಒಂದು ಅವಲೋಕನ, ೨೩ – ೩೪೯; ಕದಂಬರ ನೀರಾವರಿ ಚೌಕಟ್ಟು, ೨೫ – ೩೫೯.

ಡಾ. ಎಂ.ಜಿ. ನಾಗರಾಜ್., ಕೊಡಗು, ಬೆಂಗಳೂರು, ಹಾಸನ ಜಿಲ್ಲೆಯ ಕೆಲವು ಅಪ್ರಕಟಿತ ನಿರೂಪಗಳು ಶಾಸನಗಳು ಹಾಗೂ ಪ್ರಾಚ್ಯಾವಶೇಷಗಳು, ೨೧ – ೩೩೭ ; ಶಾಸನ – ಶಿಲ್ಪ ಮತ್ತು ಜಾನಪದೀಯ ಸಾಮರಸ್ಯ, (ಡಾ. ಬಾ.ರಾ. ಗೋಪಾಲ್ ಶಾಸನ ದತ್ತಿ ಪ್ರಶಸ್ತಿ ಉಪನ್ಯಾಸ, ೨೦೦೬), ೨೨ – xxxvii; ೨೦ನೇ ಶತಮಾನದ ಮೊದಲ ದಶಕಗಳ ಎರಡು ಕೃತಿಗಳು ಗುತ್ತಲಿನ 'ಮತಾದರ್ಶ' ಮತ್ತು ಕೊಡಗಿನ ಪಟ್ಟೋಲೆ ಪಳಮೆ, ೨೩ – ೨೫೨ ; ಕೊಡಗಿನ ಆರಾಧನಾ ನೆಲೆಗಳು – ಆಚರಣೆಗಳು, ೨೪ – ೨೫೧ ; ಸಮ್ಮೇಳನಾಧ್ಯಕ್ಷ ಭಾಷಣ, ಬಾಳೇಹೊನ್ನೂರು : ಇತಿಹಾಸ ಸ್ಥಿತಿಶೀಲ, ಗತಿಶೀಲ, ಸಂಸ್ಕೃತಿಶೀಲ, ಸಂ. ೨೫–ಆರಂಭದ ಪುಟ.

ಡಾ. ಡಿ.ಎಂ. ನಾಗರಾಜು., ನಂಜನಗೂಡು ಶ್ರೀಕಂಠೇಶ್ವರ ದೇವಸ್ಥಾನದ ಧಾರ್ಮಿಕ ಶಾಸನಗಳು, ೨೨ – ೧೫೪ ; ಕಲ್ಯಾಣ ಚಾಳುಕ್ಯ ಆರನೇ ವಿಕ್ರಮಾದಿತ್ಯನ ಜೈನ ಶಾಸನಗಳು, ೨೩ – ೩೭ : ಕಲ್ಯಾಣ ಚಾಳುಕ್ಯ ಆರನೆಯ ವಿಕ್ರಮಾದಿತ್ಯನ ಶಾಸನಗಳಲ್ಲಿ ಶೈವಧರ್ಮ, ೨೪ – ೭೬ : ಬಾಗಲೂರಿನ ಕಾಲಜ್ಞಾನ ಶಾಸನ, ೨೫ – ೪೩.

ಕೆ. ನಾರಾಯಣನಾಯಕ್., ಬೊಮ್ಮರಬೆಟ್ಟು ಪರಿಸರದ ಸಾಮಾಜಿಕ ಐತಿಹಾಸಿಕ ನೆಲೆಗಳು, ೨೫ – ೧೮೩.

ಹೆಚ್. ಪದ್ಮಾ ವಿಠಲ್., ಹಗರಿ ಬೊಮ್ಮನಹಳ್ಳಿ ಮತ್ತು ತಾಲ್ಲೂಕಿನ ಐತಿಹಾಸಿಕ ಪರಂಪರೆ, ೨೩ – ೩೦೩ ; ೧೯ನೇ ಶತಮಾನದ ಕನ್ನಡತಿಯರ ವಸ್ತ್ರ ವೈಭವ, ೨೪ – ೩೫೯.

ಡಾ. ಡಿ.ವಿ. ಪರಮಶಿವಮೂರ್ತಿ., ವಾರವಧು ಮಣ್ಣನೆ ಗೌರಲೆಯ ಶಾಸನ, ೨೧ – ೮೪ ; ದಾನಚಿಂತಾಮಣಿ ಅತ್ತಿಮಬ್ಬೆಯ ಪತಿ ನಾಗದೇವನ ಅಪ್ರಕಟತ ಶಾಸನ, ೨೨ – ೧೨೫ ; ಗುಳ್ಳದಮನೆಯ ಅಪ್ರಕಟತ ಶಾಸನ, ೨೩ – ೬೨.

ಎಸ್. ಪರಶಿವಮೂರ್ತಿ., ಧರ್ಮಪುರಿಯ ಪಲ್ಲವ ನೊಳಂಬರು, ೨೩ – ೨೭೩ ; ಕಂಚುಗಲ್ಲಿನ ಚಳುಕೆಯರು, ೨೪ – ೯೮; ಹೊಯ್ಸಳ ಪಾಂಡ್ಯ, ಚೋಳರ ವೈವಾಹಿತ ಸಂಬಂಧ, ೨೫ – ೩೩೫.

ಪ್ರಕಾಶ್ ಶೇಟ್., ಒಂದನೇ ಕೃಷ್ಣವರ್ಮನ ಪೋಟಿನ್ ನಾಣ್ಯ? ೨೪ – ೪೮.

ಎಂ.ಎನ್. ಪ್ರಭಾಕರ್., ಮೂರ್ತಿ ಶಿಲ್ಪ – ವಿಷಯಾನುಪೂರ್ವಿ ಟಿಪ್ಪಣಿಗಳು, ೨೪ – ೧೭೦ ; ಆಗಮಗಳು ಮತ್ತು ದೇವಾಲಯಗಳ ಪ್ರಾಚೀನತೆ, ೨೫ – ೧೩೬.

ಪ್ರವೀಣ್ ಬಿ., ಅರಸೀಕೆರೆ ತಾಲ್ಲೂಕು ಶಾಸನಗಳಲ್ಲಿ ಕಂದಾಯದ ಉಗಮ ಮತ್ತು ಬೆಳವಣಿಗೆ, ೨೫ – ೨೦೯.

ಎಂ.ಬಿ. ಪಾಟೀಲ., ಏಕೀಕರಣ ಪೂರ್ವದ ಹೈದರಾಬಾದ ಕರ್ನಾಟಕದ ಬ್ಯಾಂಕಿಂಗ್ ಉದ್ಯಮ, ೨೧ – ೩೧೮ ; ಮೈಸೂರು ಸಂಸ್ಥಾನದಲ್ಲಿ ಸಹಕಾರ ಚಳುವಳಿಯ ಹುಟ್ಟು ಬೆಳವಣಿಗೆ (೧೯೦೫ – ೧೯೫೬), ೨೨ – ೩೭೧ ; ಆಡಳಿತ ವಿಕೇಂದ್ರೀಕರಣದ ಹರಿಕಾರ ದಿ॥ ರಾಮಕೃಷ್ಣಹೆಗಡೆ, ೨೩ – ೪೦೨.

ಸಿ.ಬಿ. ಪಾಟೀಲ., ಭಾರತೀಯ ಸಾಂಸ್ಕೃತಿಕ ಸಂಪತ್ತಿನ ನಿಷಿದ್ಧ ವ್ಯಾಪಾರ : ಜಾಗತಿಕ ಚಿಂತನೆ, ೨೩ – ೪೧೦ ; ಭಾರತೀಯ ಸಾಂಸ್ಕೃತಿಕ ಸಂಪತ್ತು ಹಾಗೂ ಕಾನೂನು ವ್ಯವಸ್ಥೆ, ೨೪ – ೩೮೫.

ಪಾವಗಡ ಚೆಲುವರಾಜ್., ಪಾವಗಡದ ಬಳಿಯ ಬೃಹತ್ ಶಿಲಾಯುಗ ಸಂಸ್ಕೃತಿಯ ತಾಣ, ೨೫ – ೧೬.

ಡಾ. ಎನ್.ಆರ್. ಪಾಸೋಡಿ., ಮುರುಂಡಿಯ ಕನ್ನಡ ಶಾಲೆಯ ತಾಮ್ರಶಾಸನ, ೨೧ – ೬೮.

ಟಿ.ಹೆಚ್.ಎಂ. ಬಸವರಾಜ., ಕರ್ನಾಟಕ ಏಕೀಕರಣಕ್ಕೆ ಹೋರಾಡಿದ ನ್ಯಾಯಮೂರ್ತಿ ಟಿ.ಹೆಚ್.ಎಂ. ಸದಾಶಿವಯ್ಯನವರು, ೨೧–೩೭೯ ; ಕರ್ನಾಟಕ ಏಕೀಕರಣಕ್ಕೆ ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘ, ೨೪ – ೩೭೦.

ಡಾ. ಎಚ್.ಈ. ಬಸವರಾಜಪ್ಪ., ಯಲಗಟಿಪುರದ ಮಲ್ಲಿಕಾರ್ಜುನ ದೇವಾಲಯ, ೨೧ – ೧೮೬ ; ಬಾದಾಮಿ ಚಾಲುಕ್ಯರ ಕಾಲದ ದಂಪತಿ ಹಾಗೂ ಮಿಥುನ ಶಿಲ್ಪಗಳು, ೨೨ – ೮೮; ಮೈಸೂರು ಸಂಸ್ಥಾನದ ಭೂ ಸಂಬಂಧಿ ಮಸೂದೆಗಳು, ೨೩ – ೩೭೩.

ಬಸವರಾಜಪ್ಪ ಪರಪ್ಪ., ಕಂದಗಲ್ಲಿನ ವೀರಗಲ್ಲುಗಳು ಮತ್ತು ಸ್ಮಾರಕಗಳು, ೨೪ – ೫೬.

ಎಸ್. ಬಾಲಚಂದ್ರ ಕರಣಿಕ., ಬಾರಕೂರು ಸೂರಪ್ಪಯ್ಯನ ಮಠ, ಅಗ್ರಹಾರ ಮತ್ತು ಮನೆತನ, ೨೩ – ೩೧೬.

ಬಿರಾದಾರ ಶ್ರೀಶೈಲ., ಸೇಡಂ : ಒಂದು ಬೌದ್ಧರ ನೆಲೆ, ೨೧ – ೧೫೪.

ಬುರುಡೆಕಟ್ಟೆ ಮಂಜಪ್ಪ, ಬುರುಡೇಕಟ್ಟೆ ಪರಿಸರದ ಗವಿವರ್ಣ ಚಿತ್ರಗಳು – ಪ್ರಾಗೈತಿಹಾಸಿಕ ಕುರುಹುಗಳು, ೨೩ – ೧ ; ದೊಡ್ಡಬಾತಿಯ ಬೃಹತ್ ಶಿಲಾಯುಗದ ಕುಳಿಭರಿತ ಶಿಲಾಸಮಾಧಿಗಳು, ೨೪ – ೭.

ಡಾ. ಕೆ.ಜಿ. ಭಟ್‌ಸೂರಿ., ನೂಲ್ವಿ ಮತ್ತು ಮಾವಳ್ಳಿ ಗ್ರಾಮದ ಎರಡು ಅಪ್ರಕಟಿತ ಶಾಸನಗಳು, ೨೧ – ೫೬ ; ಕಕ್ಕಳಮೇಲದ ನಾಲ್ಕು ಅಪ್ರಕಟಿತ ಶಾಸನಗಳು, ೨೨ – ೧೨೯.

ಡಾ. ಸಿ.ಯು. ಮಂಜುನಾಥ್., ಶೂಲಬ್ರಹ್ಮಯ್ಯಗಳ ವಿಗ್ರಹ: ನವಶೋಧ, ೨೫ – ೧೦೫.

ಡಾ. ಎಂ.ಜಿ. ಮಂಜುನಾಥ., ಹೊಯ್ಸಳರ ರಾಜಲಾಂಛನ ಯಾವುದು ? : ಪುನರ್ ಪರಿಶೀಲನೆ, ೨೧ – ೧೮೯.

ಮಂಜುಳಾ ತಿ., ಯಲಿಗಾರ, ಮುರಗೋಡದ ಪ್ರಾಚ್ಯಾವಶೇಷಗಳು, ೨೫ – ೧೨೪.

ಡಾ. ಬಿ. ಮಂಜುಳಾ., ಕನ್ನಡಿಗರು ಪರಿಚಯಿಸಿದ ಮೊಸರಿನ ಪ್ರಕಾರಗಳು, ೨೨ – ೩೧೫.

ಮಂದರ್ಕೆ ನಿತ್ಯಾನಂದ ಪೈ., ಮೈಸೂರು ಅರಸರ ಮತ್ತು ಹೊಯ್ಸಳರ ಕಾಲದ ಕೆಲ ಹೊಸ ನಾಣ್ಯಗಳು, ೨೨ – ೧೭೩; ಸಾಂತರರು, ವೀರನೊಳಂಬ ಹಾಗು ಕೆಲವು ಪಾಳೆಯಗಾರರ ನಾಣ್ಯಗಳು, ೨೩ – ೧೨೫ ; ನೊಳಂಬಾಧಿರಾಜ ಒಂದನೇ ಮಹೇಂದ್ರನ ನಂದೀ ಗದ್ಯಾಣ, ೨೫– ೩೨೮.

ಡಾ. ಮನೋಜ್., ವಿದ್ಯಾಶಂಕರ ದೇವಾಲಯದ ಗಮನಾರ್ಹ ಶಿಲ್ಪಗಳು, ೨೪ – ೨೧೨.

ಮಮತಾರಾಣಿ., ರಾಘವಾಂಕನ ವೀರೇಶ ಚರಿತ್ರೆಯಲ್ಲಿ ಸಾಂಸ್ಕೃತಿಕ ಸಂಘರ್ಷ, ೨೫ – ೩೧೩.

ಡಾ. ಮಲ್ಲಿಕಾರ್ಜುನ ಕಂಬಾರ., ಅತ್ತಿಮಬ್ಬೆಯ ಪೂರ್ವಜರು ರೋಣದವರೇ ?, ೨೧ – ೧೯೨ ; ಸೂಡಿ ಶಾಸನೋಕ್ತ 'ಪೊಂಗರಿ' – ಒಂದು ಟಿಪ್ಪಣಿ, ೨೨ – ೧೯೫ ; ಕಾಲಕಾಲೇಶ್ವರದ ಎರಡು ಅಪ್ರಕಟಿತ ಶಾಸನಗಳು, ೨೩ – ೫೫; ರೋಣದ ವೀರಗಲ್ಲು ಶಾಸನ : ರಾಷ್ಟ್ರಕೂಟರ ಮೇಲೆ ಹೊಸ ಬೆಳಕು, ೨೪–೧೧೭ ; ರನ್ನನ ಗದಾಯುದ್ಧ ತಿದ್ದಿದ 'ಕೇಶಿ' ಯಾರು ?, ೨೫ – ೨೮೩.

ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ., ರಂಗಂಪೇಟೆಯ ರುದ್ರಸ್ವಾಮಿಮಠದ ಭಿತ್ತಿ ಚಿತ್ರಗಳು, ೨೨ – ೧೦೭ ; ಸೇಡಂನ ಶ್ರೀ ಶಿವಶಂಕರಸ್ವಾಮಿ ಮಠದ ಭಿತ್ತಿಚಿತ್ರಗಳು, ೨೩ – ೨೧೩; ದತ್ತು ಪ್ರಸಂಗದ ದಾಖಲು ಪತ್ರ – ಒಂದು ವಿವೇಚನೆ, ೨೪ – ೩೫೧ ; ಸುರಪುರ ಪ್ರದೇಶದ ಕಂದಾಯ ಪತ್ರಗಳು, ೨೫ – ೪೦೨.

ಪ್ರೊ. ಕೆ.ಸಿ. ಮಲ್ಲಿಗವಾಡ., ಬದ್ನಿಗಟ್ಟಿಯ ಬಸವೇಶ್ವರ ದೇವಸ್ಥಾನದ ಪ್ರಾಚ್ಯಾವಶೇಷಗಳು, ೨೧ – ೧೮೨ ; ನೀರಲಗಿ ಗ್ರಾಮದ ಪ್ರಾಚ್ಯಾವಶೇಗಳು, ೨೨ – ೨೭, ಶ್ರೀ ಕಾಳಿಕಾದೇವಿಯ ತೇರು : ಕಂಚಿನ ದಾನ ಪತ್ರ, ೨೪ –೧೫೯; ಹಸರಂಬಿಯ ಕಾನನದ ಸೋಮೇಶ್ವರ ದೇವಾಲಯ, ೨೫ – ೧೭೧.

ಡಾ. ಎಂ.ಪಿ. ಮಹದೇವಯ್ಯ., ತಿರುಮಕೂಡ್ಲಿನ ಅಪರೂಪದ ಕಾಷ್ಠ ಶಿಲ್ಪಗಳು, ೨೧ – ೧೮೦, ಉಮ್ಮತ್ತೂರಿನ ಭುಜಂಗೇಶ್ವರ

ದೇವಾಲಯ, ೨೨ – ೫೧ ; ಚುಂಚನ ಕಟ್ಟೆಯಲ್ಲೊಂದು ಹೊಸ ಶಾಸನ, ೨೪ – ೧೩೪ ; ಕರ್ನಾಟಕದಲ್ಲಿ ದಂಪತಿ ಮಿಥುನ ಶಿಲ್ಪಗಳ ಬೆಳವಣಿಗೆ, ೨೫ – ೧೦೭.

ಡಾ. ಎಸ್. ಮಾಲತಿ., ಹೊಯ್ಸಳ ಸಮಾಜದಲ್ಲಿ ಮಾತೆಯರ ಸ್ಥಾನ, ೨೫ – ೩೩೩.

ಮುತ್ತುರಾಜು., ಮಳವಳ್ಳಿ ತಾಲ್ಲೂಕಿನ ಕೆಲವು ನವಶೋಧಿತ ಪ್ರಾಚ್ಯಾವಶೇಷಗಳು, ೨೨ – ೨೧ ; ಬೆಂಗಳೂರು ನಗರ ಮತ್ತು ರಾಮನಗರ ಜಿಲ್ಲೆಯ ಕೆಲವು ನವಶೋಧಿತ ಪ್ರಾಚ್ಯಾವಶೇಷಗಳು, ೨೩ – ೭ ; ಹಿರಿಯೂರು ತಾಲ್ಲೂಕಿನ ಕೆಲವು ಪ್ರಾಚ್ಯಾವಶೇಷಗಳ ಶೋಧ, ೨೪ –೪೩.

ಡಾ ಎಸ್.ಕೆ. ಮೇಲಕಾರ., ಚಡಚಣದ ಅಪ್ರಕಟಿತ ಶಾಸನ (೧೦೮೦ – ೧೦೮೧), ೨೩ – ೬೫ ; ನವಶೋಧಿತ ಕಾಳಭೈರವನ ಶಿಲ್ಪ, ೨೪ – ೨೦೧ ; ಕಣಂಬಡೆನಾಡಿನ ಅಗ್ರಹಾರಗಳು, ೨೫ – ೨೫೩ ; ಹುನಗುಂದದಲ್ಲಿ ಶೋಧಿತ ಜೈನ ವಿಗ್ರಹಗಳು, ೨೫ – ೮೫.

ಡಾ. ಮೈಸೂರು ನಾಗರಾಜಶರ್ಮ., ಟಿಪ್ಪು ಸುಲ್ತಾನನ ಕಾಲದ ಒಂದು ಅಪ್ರಕಟಿತ ದಾಖಲೆ, ೨೨ – ೩೬೫.

ಡಾ. ಕೆ.ಎನ್. ಮೋಹನ್., ನುಗ್ಗಿಹಳ್ಳಿ ಸದಾಶಿವ ದೇಗುಲದ ಶಿಲ್ಪಗಳು, ೨೩ – ೨೦೨ ; ಹಾಸನ ಮತ್ತು ಮಂಡ್ಯ ಜಿಲ್ಲೆಯ ಹೊಯ್ಸಳ ಸೋಮೇಶ್ವರನ ಕಾಲದ ದೇವಾಲಯಗಳ ಶಿಲ್ಪಗಳಲ್ಲಿ ಪ್ರಾಣಿ ಮತ್ತು ಸಸ್ಯ ಸಂಪತ್ತು, ೨೪ – ೨೭೩; ಅರಸೀಕೆರೆಯ ಈಶ್ವರ ದೇವಾಲಯ, ೨೫ – ೧೬೩.

ಡಾ. ಮಹಾದೇವಿ., ಸ್ವಾತಂತ್ರ್ಯ ಹೋರಾಟಗಾರ್ತಿ ಹಾಗೂ ಸಮಾಜ ಸುಧಾರಕಿ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರ ರಚನಾತ್ಮಕ ಕಾರ್ಯಗಳು, ೨೫–೪೩೩.

ಡಾ. ಡಿ.ಎನ್. ಯೋಗೀಶ್ವರಪ್ಪ., ಗುಡೇಕೋಟೆ ಪಾಳೆಯಗಾರರು, ೨೧ – ೨೬೦ ; ಹೊಯ್ಸಳರ ಬಿಳಿಗೆರೆಯ ಸಾಮಂತರ ಕುಟುಂಬ, ೨೨ – ೨೯೧ ; ತೋಂಟದ ಸಿದ್ಧಲಿಂಗಯತಿಗಳ ಕೊನೆಯ ದಿನಗಳು ೨೫ – ೩೫೫.

ರಂಗನಾಥ ವೈ., ಮಹಾಕೂಟದ ಮಹಾಕೂಟೇಶ್ವರ ದೇವಾಲಯದ ಅಭಿಮನ್ಯು ವಧಾಶಿಲ್ಪ, ೨೫ – ೯೬.

ಪ್ರೊ. ಆರ್. ರಂಗಸ್ವಾಮಿ., ಕೃಷ್ಣರಾಜಪೇಟೆ ತಾಲ್ಲೂಕು ಶಾಸನೋಕ್ತ ಶೈವ ದೇವಾಲಯಗಳು, ೨೩ – ೧೬೬ ; ಕುಂದನಹಳ್ಳಿಯ ಹೊಸ ಶಾಸನ, ೨೪ – ೧೬೬ : ಕೃಷ್ಣರಾಜಪೇಟೆ ತಾಲೂಕಿನ ಶಾಸನೋಕ್ತ ಗಾವುಂಡರ ಚಟುವಟಿಕೆಗಳು, ೨೫– ೨೦೧.

ಆರ್. ರಘು., ರಾವಳೇಶ್ವರ ಶಿಲ್ಪಗಳು, ೨೨ – ೯೮, ತಾಯಿ ಮಗುವಿನ ಮೂರ್ತಿ ಶಿಲ್ಪ, ೨೫ – ೯೮.

ಡಾ. ಕೆ. ರವೀಂದ್ರನಾಥ., ಒಂಟಿಗೋಡೆ ಮತ್ತು ಹೊಸಕೆರೆ ಮಠಗಳ ಅಪ್ರಕಟಿತ ತಾಮ್ರ ಶಾಸನಗಳು, ೨೧ – ೮೭ ; ಕಿತ್ತೂರ ಸಂಸ್ಥಾನ ಸಾಹಿತ್ಯಕ್ಕೆ ಹೊಸ ಕೊಡುಗೆ (ಕಿತ್ತೂರ ರುದ್ರಮ್ಮನ ಕಥೆ), ೨೨ – ೩೨೯ ; ಬಸವಪುರಾಣ ಪ್ರವಚನ – ಮೆರವಣಿಗೆ ವ್ಯಾಜ್ಯ, ೨೩ – ೨೪೩ ; ಮದಿಕೇರಿ ನಾಯಕನ ದಂಡಕ : ಮತ್ತೊಂದು ಪ್ರತಿ, ೨೪ – ೩೨೮; ಅಮರ ಕಲ್ಯಾಣದ ಸ್ಥಾಪಕ ದಿಗ್ಗಿ ಸಂಗಮನಾಥ, ೨೫ – ೩೮೩.

ವ. ರಮೇಶ ಕಾರಂತ., ದುರ್ಗದಫಡದ ಪರಿಸರದ ಪ್ರಾಚ್ಯಾವಶೇಷಗಳು, ೨೧ – ೪೧ ; ಸಿರಗುಪ್ಪೆಯ ಪ್ರಾಚ್ಯಾವ ಶೇಷಗಳು, ೨೨ – ೨೫ ; ವಿಶಿಷ್ಟ ಕೃತಿಗಳು : ನ್ಯಾಯದರ್ಪಣ ಮತ್ತು ಹಿಂದೂ ಧರ್ಮ ಶಾಸ್ತ್ರ, ೨೪ –೩೧೩.

ರಾಕೇಶ್ ಬಿ.ಸಿ., ಹರಿಹರ ತಾಲ್ಲೂಕು ಭೈರನ ಪಾದದ ಪ್ರಾಚೀನ ಅವಶೇಷಗಳು, ೨೩ – ೨೭ ; ಚಿಕ್ಕಗೋಣಿಗೆರೆ ಪ್ರದೇಶದ ವಾಸ್ತುಶಿಲ್ಪ ವೈಶಿಷ್ಟ್ಯ, ೨೪ – ೨೪೩ ; ಕೊಕ್ಕನೂರಿನ ಈಶ್ವರ ದೇವಾಲಯ, ೨೫ – ೧೫೯.

ಪ್ರೊ. ಕ.ವೆಂ. ರಾಜಗೋಪಾಲ್., ಹಲ್ಮಿಡಿ ಶಾಸನ ವಿವೇಚನೆ – ೨, ೨೧ – ೯೫ ; ಹಲ್ಮಿಡಿ ಶಾಸನ ಒಂದು ಟಿಪ್ಪಣಿ, ೨೨ – ೧೨೨.

ಡಿ. ರಾಜಣ್ಣ., ಚಿತ್ರದುರ್ಗ ಕೋಟೆಯ ಸಂರಕ್ಷಣೆ ಹಾಗೂ ಅಭಿವೃದ್ಧಿ, ೨೩ – ೩೪೫.

ಡಾ. ರಾಜಶೇಖರ ಇಚ್ಚಂಗಿ., ಬೆಳಗಾವಿ ಜಿಲ್ಲೆಯ ಅಪ್ರಕಟಿತ ಕಸಮಳಗಿ ಶಾಸನ, ೨೧ – ೭೯.

ಡಾ. ಬಿ. ರಾಜಶೇಖರಪ್ಪ., ಚಿತ್ರದುರ್ಗದ ಒಂದು ಅಪ್ರಕಟಿತ ತಾಮ್ರ ಶಾಸನ, ೨೧ – ೪೬ ; ಎಡೆಯೂರು ತೋಂಟದ ಸಿದ್ಧಲಿಂಗೇಶ್ವರ ಮಠದ ಶಾಸನ : ಒಂದು ಅಧ್ಯಯನ, ೨೨ – ೧೩೬ ; ಚಿತ್ರದುರ್ಗ ಪಾಳೆಯಗಾರರು ಮತ್ತು ಗುತ್ತಿ ಅರಸರ ಸಂಬಂಧದ ಒಂದು ಹೊಸ ಶಾಸನ, ೨೩ – ೬೯; ನಾಯಕನಹಟ್ಟಿ ತಿಪ್ಪೇಸ್ವಾಮಿ (ತಿಪ್ಪೇರುದ್ರಸ್ವಾಮಿ) ಚಾರಿತ್ರಿಕತೆ, ೨೪ – ೨೮೬ ; ಚಿತ್ರದುರ್ಗದ ಶ್ರೀ ಜಗದ್ಗುರು ಮುರುಘರಾಜೇಂದ್ರ ಬ್ರಹನ್ಮಠಕ್ಕೆ ಉಪ್ಪಾರ ಜನಾಂಗದವರ ಕಾನಿಕೆ, ೨೫ – ೧೯೪.

ಬಿ.ಆರ್. ರಾಠೋಡ., ಕಡಂಬಡೆ ನಾಡಿನ ಅಗ್ರಹಾರಗಳು, ೨೫ – ೨೫೩.

ಡಾ. ರಾಧಿಕಾರಂಜನಿ., ಶಿಲ್ಪಕಲೆಯಲ್ಲಿ ರಸಾಭಿನಯ, ೨೨ –೭೩.

ರಾಜೇಂದ್ರ., ಚಿತ್ರದುರ್ಗ ಕೋಟೆಯ ಸಂರಕ್ಷಣೆ ಹಾಗೂ ಅಭಿವೃದ್ಧಿ, ೨೩ – ೩೪೫.

ಶಿ. ರಾಜೇಂದ್ರಪ್ಪ., ನಂಜನಗೂಡು ತಾಲ್ಲೂಕಿನ ಶಾಸನಗಳಲ್ಲಿ ಸಾಂಸ್ಕೃತಿಕ ಅಂಶಗಳು, ೨೨ – ೨೨೫.

ರಾಜೇಶ್ವರಿ ಸಾಲಿ., ಕಲ್ಯಾಣದ ಚಾಲುಕ್ಯರು ಮತ್ತು ಗೋವೆಯ ಕದಂಬರ ಸಂಬಂಧಗಳು, ೨೩ – ೨೭೭.

ಎಸ್.ಜಿ. ರಾಮದಾಸರೆಡ್ಡಿ., ಚಳ್ಳಕೆರೆ ತಾಲ್ಲೂಕು ಪಿ. ಮಹದೇವಪುರದ ಪ್ರಾಕ್ಚಾರಿತ್ರಿಕ ಕುರುಹುಗಳು, ೨೧ – ೧೫; ಪುರ್ಲಹಳ್ಳಿಯ ಪ್ರಾಕ್ಚಾರಿತ್ರಿಕ ಕುರುಹುಗಳು, ೨೨ – ೧ ; ಹರ್ತಿಕೋಟೆಯ ಪ್ರಾಕ್ಚಾರಿತ್ರಿಕ ಅವಶೇಷಗಳು, ೨೩ – ೩ ; ಲೋಕಪಾವನಿ ನದೀ ತೀರದಲ್ಲಿ ಪ್ರಾಗೈತಿಹಾಸಿಕ ಅವಶೇಷಗಳು, ೨೪ – ೧ ; ಇತಿಹಾಸ ಆರಂಭ ಕಾಲದ ಕ್ಯಾವಲೀನ್ ಪೈಂಟೆಡ್ ಮಡಿಕೆ ಚೂರುಗಳು, ೨೫ – ೧.

ಬಿ.ಎಸ್. ರಾಮಭಟ್ಟ., ತೀರ್ಥಹಳ್ಳಿಯ ಇತಿಹಾಸದ ಮುಖಗಳು, ೨೨ – ೨೩೧ ; ಕಲ್ಲೂರು ಗುಡ್ಡದ ಶಾಸನ, ೨೫ – ೭೫.

ಡಾ. ರಾಮು ಹಸನಪ್ಪ ಸಜ್ಜನ., ಕೋಟದ ರಾಮಲಿಂಗೇಶ್ವರ

ಮತ್ತು ಹಿರೇಹೆಸರೂರ ಸಂಗಮೇಶ್ವರ ದೇವಾಲಯಗಳು, ೨೩ – ೧೫೭.
ಪ್ರೊ. ಲಕ್ಷ್ಮಣ್ ತೆಲಗಾವಿ., ಚಿತ್ರದುರ್ಗ ಪರಿಸರದ ಕುಳಿಭರಿತ ಭೀಮನ ಗುಂಡು : ಪುರಾತಾತ್ವಿಕ ಅಧ್ಯಯನ, ೨೧ – ೧; ಜನಪದ ಕಥನಗೀತೆ 'ದೊಡ್ಡೇರಿಯ ಕುಳ' ಪುನರಧ್ಯಯನ, ೨೨ – ೩೧೯ ; ಸಮ್ಮೇಳನ ಅಧ್ಯಕ್ಷರ ಭಾಷಣ, ೨೩ – ಥಥಥ.
ಲಕ್ಷ್ಮಣ್‌ಸಿಂಗ್ ಆರ್. ರಾಥೋಡ್., ಮೈಸೂರು ಸಾಂಪ್ರದಾಯಿಕ ಭಿತ್ತಿ ಚಿತ್ರಗಳಲ್ಲಿ ಶರಣರು ಮತ್ತು ಮೈಸೂರು ರಾಜರು, ೨೨ – ೧೧೬.
ಎಸ್.ಎ. ಲಕ್ಷ್ಮಿದೇವಿ., ದಕ್ಷಿಣ ಕನ್ನಡ ಜಿಲ್ಲೆಯ ಆರ್ಥಿಕ ಪ್ರಗತಿಯಲ್ಲಿ ಸಿಂಡಿಕೇಟ್ ಬ್ಯಾಂಕಿನ ಪಾತ್ರ, ೨೨ – ೩೬೮.
ಡಾ. ಎನ್.ಆರ್. ಲಲಿತಾಂಬ., ಹೊಯ್ಸಳ ವೀರಪಡೆ ಭೇರುಂಡನ ಮೊತ್ತದ ಕೂಸುಗಳು, ೨೨ – ೨೪೯ ; ಎಕ್ಕಟಿಗ ವೀರಪಡೆ, ೨೫ – ೨೬೩.
ಲಿಂಗರಾಜು., ತೊಣ್ಣೂರು ಕೆರೆಯ ವಿಶಿಷ್ಟ ಇತಿಹಾಸ, ೨೫ – ೩೪೬.
ಡಾ. ಬಿ. ಲೀಲಾ., ನವರತ್ನರಾವ್ ಮತ್ತು ಚಕ್ರವರ್ತಿ ರಾಜಗೋಲಾಚಾರ್ ಮೈತ್ರಿ ಬಾಂಧವ್ಯ, ೨೧ – ೩೨೫ ; ಬೆಂಗಳೂರು ನಾಗರತ್ನಮ್ಮ ಕಲೆ ಮತ್ತು ಸಾಮಾಜಿಕ ಅಸ್ತಿತ್ವದ ಛಾತಿಯ ಸಂಕೇತ (೧ನೇ ನವೆಂಬರ್ ೧೮೭೮–೧೮ನೇ ಮೇ ೧೯೫೨) ೨೨ – ೩೮೨ ; ಮಿರ್ಜಾ ಎಂ. ಇಸ್ಮೈಯಿಲ್ ಆಧುನಿಕ ಜಯಪುರದ ರೂವಾರಿ, ೨೩ – ೩೮೨ ; ಕರ್ಣಾಟಕದಲ್ಲಿ ೧೯–೨೦ನೇ ಶತಮಾನದ ಅಧಿಕಾರವರ್ಗ: ಒಂದು ಸಮೀಕ್ಷೆ, ೨೪ – ೩೪೪ ; ದಿನಕರ ದೇಸಾಯಿ (೧೯೦೯–೧೯೮೨) ಮತ್ತು ಅವರ ಕೃತಿ ಕಲ್ಯಾಣಿ ಚಾಲುಕ್ಯರ ಕಾಲದ ಮಹಾಮಂಡಲೇಶ್ವರರು, ೨೫ – ೪೬೧.
ಲೋಕೇಶ್ ಸಿ.ಇ., ಹೊಯ್ಸಳದಲ್ಲಿಯ ಕಥಾ ನಿರೂಪಣಾ ಶಿಲ್ಪಿಗಳು : ಪ್ರಹ್ಲಾದ ಚರಿತೆ ಶಿಲ್ಪಗಳು.
ಕು. ವನಜಾಕ್ಷಿ., ವಿಜಯನಗರೋತ್ತರ ಕಾಲದ ಹೊಸ ತಾಮ್ರಪಟ, ೨೧ – ೭೭.
ಡಾ. ಕೆ.ಜಿ. ವಸಂತಮಾಧವ., ಕರ್ನಾಟಕದ ವೈದ್ಯಕೀಯ ಚರಿತ್ರೆ ಅಧ್ಯಯನದ ಅವಲೋಕನ, ೨೪ – ೧೦೨.
ಡಾ. ಕೆ. ವಸಂತಲಕ್ಷ್ಮಿ., ಮುಳಗುಂದದ ಭೈರವ ಶಿಲ್ಪ, ೨೧ – ೧೧೦ ; ಚಿಕ್ಕಮಗಳೂರು ಜಿಲ್ಲೆಯ ಕಾಶ್ಮೀರಿ ಬ್ರಾಹ್ಮಣರು, ೨೨–೨೪೧ ; ಶಾಸನೋಕ್ತ ವಾಜಿ ವಂಶದ ಬ್ರಾಹ್ಮಣರು, ೨೪ – ೮೬ ; ಸಖರಾಯಪಟ್ಟಣದ ಅಪ್ರಕಟಿತ ನಿಷಧಿ ಶಾಸನ, ೨೫ – ೩೩.
ಡಾ. ವಸುಂಧರಾ ದೇಸಾಯಿ ಮಹಾಪುರುಷ., ಹಂಪಿಯ ಮುಖ್ಯ ಗೋಪುರ ನಿರ್ಮಾಪಕ ಶ್ರೀ ಬಿಷ್ಟಪ್ಪಯ್ಯ ಮಹಾಪುರುಷ (ಕ್ರಿ.ಶ. ೧೬೦೮ – ೯೮), ೨೩ – ೨೯೧; ಪಂಪಾಪತಿಯ ಮುಖವಾಡ ಮತ್ತು ವಿದ್ಯಾರಣ್ಯ ಶ್ರೀಗಳ ಕಿರೀಟ ಕರ್ಣಕುಂಡಲಗಳ ಕರ್ತೃ ಶ್ರೀ ಬಿಷ್ಟಪ್ಪಯ್ಯ ಮಹಾಪುರುಷ, ೨೪ – ೨೧೬; ರಂಗಾಪುರ ಸಂಸ್ಥಾನ ಮಠಾಧೀಶ್ವರ ಮಹಾದೇವಪ್ಪಯ್ಯರಿಗೆ ಸನ್ಮಾನಗಳು, ಪತ್ರಗಳು, ೨೫ – ೩೬೯.
ಡಾ. ವಸುಂಧರಾ ಫಿಲಿಯೋಜಾ., ಸಮ್ಮೇಳನ ಅಧ್ಯಕ್ಷರ ಭಾಷಣ, ೨೪ – xxix.
ಡಾ. ಸಿ.ಎಸ್. ವಾಸುದೇವನ್., ಮಧ್ಯಕಾಲೀನ ಉತ್ತರ ಕರ್ನಾಟಕದ ಸಾಮಾಜಿಕ ಕಟ್ಟುಪಾಡುಗಳು, ೨೧ – ೨೧೩.
ಫಾ॥ ಎಂ. ವಿನ್ಸೆಂಟ್., ಚಾಮುಂಡಿ ಬೆಟ್ಟದ ಅಪರೂಪದ ಸಪ್ತಮಾತೃಕಾ ಶಿಲ್ಪಗಳು, ೨೫ – ೧೦೨.
ಡಾ. ವಿರೂಪಾಕ್ಷ ಪೂಜಾರಹಳ್ಳಿ., ಚಿನ್ನಹಗರಿ ನದಿ ದಂಡೆಯ ತುರುಗಾಳಗದ ವೀರಗಲ್ಲು, ೨೨ – ೧೦೪ ; ಕೋನಸಾಗರ ಗ್ರಾಮ ಪರಿಸರದ ಪುರಾತತ್ವ ಮತ್ತು ಚರಿತ್ರೆ, ೨೩ – ೨೦.
ವಿಜಯಲಕ್ಷ್ಮಿ ಎಸ್. ಕಲಗುಡಿ., ಕರಾವಳಿ ಕರ್ನಾಟಕದಲ್ಲಿ ಕೆಳದಿ ಅರಸರ ಕಾಲದ ಧಾರ್ಮಿಕ ಸಂಘರ್ಷ ಮತ್ತು ಸಮನ್ವಯತೆ, ೨೩ – ೩೧೩.
ಎನ್.ಎಸ್. ವೀರೇಶ್ ಉತ್ತಂಗಿ., ಉತ್ತಂಗಿಯ ವೀರಗಲ್ಲುಗಳು – ನಿಸಿಧಿ ಶಾಸನಗಳು, ೨೩ – ೮೪.
ವೇದಾವರಿ ಎಸ್. ಬಾಲು., ಶಿವಗಂಗೆಯ ತೀರ್ಥೋದ್ಭವ – ಒಂದು ವೈಜ್ಞಾನಿಕ ವಿಶ್ಲೇಷಣೆ, ೨೫ – ೨೪೪.
ವೇಮಗಲ್ ಮೂರ್ತಿ., ಸೀತಿಬೆಟ್ಟದ ಭೈರವದೇವರಿಗೆ ಸಂದ ಶಾಸನೋಕ್ತ ಗ್ರಾಮದಾನದ ಊರುಗಳು – ಒಂದು ಪರಿಶೀಲನೆ, ೨೪ – ೮೧ ; ವೇಮಗಲ್ಲಿನ ಸ್ಮಾರಕ ಶಿಲ್ಪಗಳು ಹಾಗೂ ಶಾಸನಗಳು, ೨೫ – ೫೧.
ಪ್ರೊ. ಶಕುಂತಲಾ ಸಿಂಧೂರ., ಬಸವಣ್ಣನವರ ವಚನಗಳಲ್ಲಿ ಸಸ್ಯ ಸಂಪತ್ತಿನ ಚಿತ್ರ, ೨೩ – ೨೪೦.
ಡಾ. ಶಕುಂತಲಾ ಶೆಟ್ಟಿ., ರಾಷ್ಟ್ರ ನಿರ್ಮಾಣದಲ್ಲಿ ಪಂಡಿತ ತಾರಾನಾಥರು ಮತ್ತು ಹಮ್ದರ್ದ್ ಶಾಲೆ, ೨೧ – ೩೦೬.
ಶಕುಂತಲಾ ಹ. ಭಜಂತ್ರಿ, ಪ್ರಾಚೀನ ಅಗ್ರಹಾರ ಹಾವೇರಿ, ೨೫ – ೨೪೯.
ಶಲ್ವಪಿಳ್ಳೆ ಅಯ್ಯಂಗಾರ್., ವರಕೋಡು ವರದರಾಜ ದೇವಾಲಯದ ವಾಸ್ತುಶಿಲ್ಪ, ೨೩ – ೧೭೨.
ರಾ. ಶಶಿಧರ್., ಅಮೃತೂರಿನ ಅಪ್ರಕಟಿತ ತುರುಗೋಳ್ ಶಾಸನ, ೨೫ – ೫೭.
ಡಾ. ಎ.ಕೆ. ಶಾಸ್ತ್ರಿ., ಡಾ. ಜಿ.ಎಸ್. ದೀಕ್ಷಿತ – ಒಂದು ಚಿರ ನೆನಪು, ೨೧ – ೩೩೧ ; ನಂಜನಗೂಡಿನಲ್ಲಿ ಶ್ರೀ ಅಭಿನವ ಸಚ್ಚಿದಾನಂದ ಭಾರತಿಗಳ ಚಾತುರ್ಮಾಸ್ಯ, ೨೨ – ೩೨೬; ಸ್ವರ್ಣವಲ್ಲೀ ಮಠಕ್ಕೆ ಕೆಳದಿ ನಾಯಕರ ಧರ್ಮ.೨೩–೩೪೦; ಇನವಳ್ಳಿ ಗ್ರಾಮದ ಶಿಲಾಶಾಸನ ಪ್ರತಿ, ೨೪ – ೧೩೧ ; ಶೃಂಗೇರಿ ಮಠ ಮತ್ತು ಕಮಿಷನರ್ ಕಬ್ಬನ್, ೨೫ – ೪೧೫.
ಶಾಶ್ವತಸ್ವಾಮಿ ಮುಕ್ಕುಂದಿಮಠ., ಪ್ರಾಚೀನ ಐತಿಹಾಸಿಕ ನಗರಿ ಸಾಲುಗುಂದೆ, ೨೫ – ೨೪೭.
ಡಾ. ಸಿ.ಆರ್. ಶ್ಯಾಮಲ., ಡಾ. ಎ.ಸಿ. ಬರ್ನೆಲ್ (ಪ್ರಾರಂಭಿಕ ಪರಿಚಯ), ೨೧ – ೩೧೩.
ಡಾ. ಬೆಂ.ಶಾ. ಶ್ಯಾಮಲಾರತ್ನಕುಮಾರಿ., ತುಮಕೂರಿನ ಬಟವಾಡೆ ಗ್ರಾಮದ ಐತಿಹಾಸಿಕ ಪರಂಪರೆ, ೨೧ – ೨೩೪; ಬಟವಾಡೆ ಶಾಸನೋಕ್ತ ಯಿಳಕಲ್ಲ ಬೆಟ್ಟ, ೨೩ – ೧೨೨; ಹೊಳಲಿಯ ಐತಿಹಾಸಿಕ ಪ್ರಾಮುಖ್ಯತೆ, ೨೫ – ೨೪೧.

ಡಾ. ಸಿ.ಆರ್. ಶ್ಯಾಮಲ., ಕರ್ನಾಟಕದ ದೊರೆಗಳ ವಿಜಯಸ್ತಂಭಗಳು, ೨೨ – ೨೮೨.

ಡಾ. ಬಿ.ವ್ಹಿ. ಶಿರೂರ., ಸಮ್ಮೇಳನ ಅಧ್ಯಕ್ಷರ ಭಾಷಣ, ೨೧ – ಥಥತ ; ಹಸ್ತಪ್ರತಿಗಳಲ್ಲಿ ವೀರಶೈವ ಧರ್ಮ, ೨೧ – ೨೨೫; ಮುಧೋಳದ ದೇಸಾಯಿ ಮನೆತನ, ೨೫ – ೪೦೭.

ಶಿವಪ್ಪ ಎನ್. ನೀರಲಗಿ., ಮಹಾಮಂಡಳೇಶ್ವರ ವಿರುಪರಸನ ಕಾಲದ ಪರಸಮಯ ಸಂಘರ್ಷಗಳ ಐತಿಹಾಸಿಕ ನೆಲೆಗಳು, ೨೨–೨೭೩ ; ತಾಳಿಕೋಟೆಯ ದೇಗುಲಗಳು, ೨೩ – ೧೫೯; ಚಿಮ್ಮಲಗಿಯ ವಿಶಿಷ್ಟ ಶಿಲ್ಪಗಳು, ೨೫ – ೮೫.

ಶಿವಯೋಗಿ ಕಂಬಾಳಿಮಠ., ಲಕುಮಾಪುರ ಹಿರೇಮಠದ ಹೊಸ ತಾಮ್ರಶಾಸನ ಮತ್ತು ಅನ್ವಯಿಕ ಸಂಗತಿಗಳು, ೨೫–೩೭.

ಕೆ.ಎಂ. ಶಿವಲಿಂಗಯ್ಯ., ಹೊಳಗುಂದಿ ಗ್ರಾಮದ ಶಾಸನೋಕ್ತ ಸ್ಥಳನಾಮ ಹಾಗೂ ದೇವಾಲಯಗಳು, ೨೨ – ೨೦೨ ; ಶಾಸನಗಳಲ್ಲಿ ಹಿಂದುಳಿದವರಿಗೆ ತೆರಿಗೆ ವಿನಾಯಿತಿ, ೨೩ – ೧೨೦.

ಡಾ. ಎಸ್.ಎನ್. ಶಿವರುದ್ರಸ್ವಾಮಿ., ಉಚ್ಛಿಷ್ಟ ಗಣಪತಿ ಶಿಲ್ಪಗಳು, ೨೪ – ೧೮೯.

ಎಂ.ಎನ್. ಶಿವಶಂಕರಯ್ಯ., ಜ॥ ರೇವಣಸಿದ್ಧ ಸಂಪ್ರದಾಯ ಮತ್ತು ಶಂಕರಚಾರ್ಯ ಪರಂಪರೆ, ೨೫ – ೩೭೨.

ಡಾ. ಶೀಲಾಕಾಂತ ಪತ್ತಾರ., ಚಲುಕ್ಯರ ಗಜಲಕ್ಷ್ಮಿ ಶಿಲ್ಪಗಳು, ೨೪ – ೧೯೨, ಬನದೇವಿ, ಬನದ ಮಹಾಮಾಯಿ ಮತ್ತು ಬನಶಂಕರಿ, ೨೫ – ೧೧೦.

ಶ್ರೀಧರ್., ತುಮಕೂರು ಪರಿಸರದ ಐತಿಹಾಸಿಕ ಕೆರೆಗಳು, ೨೫ – ೩೪೨.

ಕೆ. ಶ್ರೀಧರಭಟ್., ಉಡುಪಿ ತಾಲ್ಲೂಕು ಜೋಗಿಬೆಟ್ಟಿನ ಮೂರು ನವಶಿಲಾಯುಗದ ಕೊಡಲಿಗಳು, ೨೨ – ೫.

ಎ. ಶ್ರೀಧರಮೂರ್ತಿ., ಕರ್ನಾಟಕದ ದೇವಾಲಯಳಲ್ಲಿ ಮಿಥುನ (ಶೃಂಗಾರ) ಶಿಲ್ಪಗಳು, ೨೪ – ೨೦೫ ; ಕರ್ನಾಟಕದಲ್ಲಿ ದಂಪತಿ (ಮಿಥುನ) ಶಿಲ್ಪಗಳ ಬೆಳವಣಿಗೆ, ೨೫ – ೧೦೭.

ಡಾ. ಶ್ರೀನಿವಾಸ ವ್ಹಿ. ಪಾಡಿಗಾರ., ಕುಂದನಹಳ್ಳಿಯ ಹೊಸ ಶಾಸನ, ೨೪ – ೧೬೬.

ಪು. ಶ್ರೀನಿವಾಸಭಟ್ಟ., ಯಕ್ಷಗಾನ ಪ್ರಸಂಗ ಸಾಹಿತ್ಯದಲ್ಲಿ ಶ್ರೀ ಧರ್ಮಸ್ಥಳದ ನೆನವರಿಕೆಗಳು, ೨೪ – ೩೩೦.

ಡಾ. ಶ್ರೀನಿವಾಸ ಹಾವನೂರ., ಡಾ. ಎ.ಸಿ. ಬರ್ನೆಲ್ (ಪ್ರಾರಂಭಿಕ ಪರಿಚಯ), ೨೧ – ೩೧೩ ; ಹರಿದಾಸರು ಚಿತ್ರಿಸಿದ ಕೆಲವು ಐತಿಹಾಸಿಕ ಹಾಗೂ ಸಮಕಾಲೀನ ಜನಜೀವನ ಅಂಶಗಳು, ೨೩ – ೨೪೯ ; ಕರ್ನಾಟಕದ ಸರ್ವಾಂಗೀಣ ಇತಿಹಾಸಕ್ಕೆ ಕಂಪ್ಯೂಟರ್ ಅಳವಡಿಕೆ, ೨೪ – ೩೭೯ ; ಅಪರಿಚಿತ ಹೈದರ್, ೨೫ – ೪೧೦.

ಶ್ರೀರಾಮ ಹ. ಸಜ್ಜನ., ನವಿಲೆಯ ಜಡೆಯ ಶಂಕರ ದೇವಾಲಯ, ೨೨ – ೫೬.

ಡಾ. ರು.ಮ. ಷಡಕ್ಷರಯ್ಯ., ಮೇವುಂಡಿಯ ವಿಜಯನಗರೋತ್ತರ ಕಾಲದ ಹೊಸ ತಾಮ್ರಪಟ, ೨೧ – ೭೭ ; ಗುಲ್ಬರ್ಗಾ ಜಿಲ್ಲೆಯ ತನ್ನೂರಿನಲ್ಲಿ ಹೊಸ ಬೌದ್ಧ.ನೆಲೆ, ೨೧ – ೧೫೦ ; ಗುಲಬರ್ಗಾ ಜಿಲ್ಲೆಯ ಮಳಖೇಡವೇ ರಾಷ್ಟ್ರಕೂಟರ ರಾಜಧಾನಿ, ೨೧ – ೨೩೭ ; ಚಡಚಣದ ಅಪ್ರಕಟಿತ ಶಾಸನ (೧೦೮೦ – ೧೦೮೧), ೨೩ – ೬೫; ಹುನಗುಂದದಲ್ಲಿ ಶೋಧಿತ ಜೈನ ಶಾಸನಗಳು, ೨೫ – ೮೯.

ಡಾ. ಶೋಭ ಮಹೇಶ್., ಶಾಸನಗಳಲ್ಲಿ ರಾಜವಂಶದ ಬಿರುದುಗಳ ವಿಸ್ಮೃತಿ, ೨೨ – ೨೪೫ ; ಶಿಲ್ಪಕಲೆಯಲ್ಲಿ ಉಡುಪಿನ ವೈವಿಧ್ಯ (ಕೆಲವು ವಿನ್ಯಾಸಗಳು), ೨೪ – ೨೦೯, ಕುಣಿಗಲ್ ತಾಲೂಕಿನ ಹಾಲಗೆರೆಯ ಶಾಸನೋಕ್ತ ಸ್ಥಳಗಳು, ೨೫ – ೨೧೯.

ಡಾ. ಎಸ್.ಎಲ್. ಶ್ರೀನಿವಾಸಮೂರ್ತಿ., ಮೈಸೂರು ಸಂಸ್ಥಾನದ ತಾಂತ್ರಿಕ ಅಭಿವೃದ್ಧಿಯಲ್ಲಿ ಹೆರಾಲ್ಡ್ ಡಗ್ಲಸ್ ರೈಸರ ಪಾತ್ರ, ೨೫ – ೪೧೯.

ಪ್ರೊ. ಶಕುಂತಲಾ ಸಿಂಧೂರ., ಸಹಕಾರಿ ಚಳುವಳಿಯಲ್ಲಿ ಮಹಿಳೆಯರ ಪಾತ್ರ, ೨೫ – ೪೪೮.

ಸಂತೇಬೆನ್ನೂರು ಸುಮತೀಂದ್ರ ನಾಡಿಗ್., ಉಪ್ಪನಾಯ್ಕನ ಹಳ್ಳಿಯ ಅಪೂರ್ವ ಮಾಸ್ತಿ ಶಿಲ್ಪಗಳು, ೨೧ – ೧೭೦ ; ಮಂತ್ರಾಲಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಕೆಲ ಹೊಸ ಶಾಸನಗಳು, ೨೨ – ೧೪೫ ; ಹೊಯ್ಸಳ ವೀರಬಲ್ಲಾಳನ ಕಾಲದ ಅಪ್ರಕಟಿತ ಶಾಸನ ಪ್ರತಿ, ೨೩ – ೫೭ ; ಚೆನ್ನಗಿರಿ ತಾಲ್ಲೂಕಿನ ಜೈನ ವಿಗ್ರಹಗಳು, ೨೪ – ೨೦೩ ; ದಾವಣಗೆರೆ ಜಿಲ್ಲೆ ಭೀಮನೆರೆ ಗ್ರಾಮದ ಒಂದು ಹೊಸ ತಾಮ್ರ ಶಾಸನ, ೨೫ – ೨೯.

ಸಂತೋಷ ಸ. ಹಾನಗಲ್ಲ., ನಿಪ್ಪಾಣಿ ವಾಡೆಯ ಒಂದು ಅವಲೋಕನ, ೨೩ – ೩೬೬.

ಕೆ. ಸತೀಶ್., ಹಂಪಸಾಗರ ಗ್ರಾಮನಾಮ ವಿವೇಚನೆ, ೨೧ – ೨೪೨ ; ಅಲಬೂರಿನ ಬ್ರಹ್ಮದೇವರ ಶಿಲ್ಪ, ೨೩ – ೨೦೪.

ಕುಂ.ಬಾ. ಸದಾಶಿವಪ್ಪ., ಬಳ್ಳಾರಿ ಜಿಲ್ಲೆ ಮೈಸೂರು ರಾಜ್ಯದಲ್ಲಿ ವಿಲೀನಗೊಂಡ ಸಂದರ್ಭದ ಹಿನ್ನೆಲೆ, ೨೨ – ೩೭೯ ; ಮೈಲಾರಲಿಂಗ ದೇವರ ಆರಾಧನೆ, ೨೩ – ೧೮೭ ; ಸವಣೂರು ನವಾಬರ, ಇತಿಹಾಸ – ಒಂದು ಪರಿಶೀಲನೆ, ೨೪ – ೩೦೨; ಹರಪನಹಳ್ಳಿ ತಾಲ್ಲೂಕು ಅರಸಿಕೆರೆ ಗ್ರಾಮದ ಪ್ರಾಚೀನ ಪರಿಸರ ಶೋಧ, ೨೫ – ೧೨೯.

ಸರಸ್ವತಿ ಎಸ್. ಭಗವತಿ., ಹಂಪೆಯ ಶಾಸನೋಕ್ತ ಬಾಗಿಲುಗಳು, ೨೧ – ೧೪೩.

ಡಾ. ಎಸ್.ಜಿ. ಸಾಮಕ್., ಒಂದನೇ ಕೃಷ್ಣವರ್ಮನ ಪೋಟಿನ್ ನಾಣ್ಯ ?, ೨೪ – ೪೮.

ಎಚ್.ಎಂ. ಸಿದ್ಧನಗೌಡರ್., ಲಕ್ಕುಂಡಿಯ ಕಾಶೀವಿಶ್ವೇಶ್ವರ ದೇಗುಲದ ವಾಮನ – ತ್ರಿವಿಕ್ರಮ ವಿಶಿಷ್ಟ ಕಥಾ ನಿರೂಪಣಾ ಶಿಲ್ಪ, ೨೨ – ೯೫.

ಸಿದ್ಧಲಿಂಗಮ್ಮ ಬಿ.ಜಿ., ಮಧ್ಯಕಾಲೀನ ಕರ್ನಾಟಕದಲ್ಲಿ ತೆಲ್ಲಿಗರು, ೨೧ – ೨೧೭ ; ಪ್ರಾಚೀನ ಸಾಹಿತ್ಯ ಹಾಗೂ ಶಾಸನಗಳಲ್ಲಿ ಸಾಲಿಗರು, ೨೨ – ೨೬೦.

ಡಿ. ಸ್ಮಿತಾರೆಡ್ಡಿ., ಹುದೂತಿ ಗ್ರಾಮದ ನವಶೋಧಿತ ಬೃಹತ್ ಶಿಲಾಯುಗದ ನೆಲೆ, ೨೪ – ೩೫ ; ದೇವರಬೆಟ್ಟ ಗ್ರಾಮ ಪರಿಸರದ ಪ್ರಾಗೈತಿಹಾಸಿಕ ನೆಲೆಗಳು, ೨೫ – ೧೨.

ಡಾ. ಸ್ಮಿತಾ ಸುರೇಬಾನಕರ., ಪಲಸಿಕಾ ಪನ್ನಿರ್ಚ್ಛಾಸಿರದಲ್ಲಿ ಶಾಸನೋಕ್ತ ಸಾರಿಗೆ ಮತ್ತು ಸಂಚಾರ ಸೌಕರ್ಯ, ೨೧ – ೧೧೪ ; ಕೊಣ್ಣೂರಿನ ಅಪರೂಪದ ಸ್ಮಾರಕ ಶಿಲ್ಪ, ೨೨ – ೧೦೭ ; ಬೆಳಗಾವಿ ಪರಿಸರದ ಶಾಸನೋಕ್ತ ತೆರಿಗೆ ಸಂಗ್ರಹಕಾರ ಅಧಿಕಾರಿ ವರ್ಗ, ೨೩ – ೧೩೩ ; ಉಚಗಾಂವ ಗ್ರಾಮದ ಸ್ಮಾರಕ ಶಿಲ್ಪಗಳ ಶೋಧ, ೨೪ – ೫೩ ; ಬೆಳಗಾವಿಯ ಶೈಕ್ಷಣಿಕ ಸಂಸ್ಥೆಗಳು, ೨೫ – ೪೪.

ಸುಂಕಂ ಗೋವರ್ಧನ., ತೇಕಲ್ ವರದರಾಜಸ್ವಾಮಿ ದೇವಾಲಯದ ಶಾಸನಗಳು, ೨೧ – ೧೩೦ ; ತೇಕಲ್‌ನಾಡು, ೨೨ – ೧೯೦ ; ವಿಜಯನಗರ ಆಡಳಿತ ಕಾಲದ ಮುಳಬಾಗಲು ರಾಜ್ಯ, ೨೩ – ೨೮೪ ; ತೆರಕಣಾಂಬಿ ರಾಜ್ಯ, ೨೪ – ೬೨; ವಿಜಯನಗರ ಆಡಳಿತ ಕಾಲದಲ್ಲಿ ಮಧುವಂಕನಾಡು, ೨೫ – ೨೫೯.

ಡಾ. ಬಿ.ವಿ. ಸುಧಾಮಣಿ., ನಂಜನಗೂಡು ಶ್ರೀಕಂಠೇಶ್ವರ ದೇಗುಲಕ್ಕೆ ಮೈಸೂರಿನ ಒಡೆಯರ ರಾಜಾಶ್ರಯ (ಕ್ರಿ.ಶ. ೧೬೧೦–೧೮೮೧), ೨೨ – ೬೨ ; ಜಟ್ಟಿ ಕಾಳಗ – ಮೈಸೂರಿನ ಒಡೆಯರ ಪ್ರೋತ್ಸಾಹ, ೨೪ – ೩೫೭ ; ಸುಬ್ಬರಾಯರು ಮತ್ತು ಸುಬ್ರಹ್ಮಣ್ಯ ಅಗ್ರಹಾರ, ೨೫ – ೨೫೫.

ಸುಭಾಷ ಕಮ್ಮಾರ., ಬಾದಾಮಿಯ ಗುಹಾಚಿತ್ರಗಳ ರೇಖಾ ಲಾಲಿತ್ಯ ಮತ್ತು ವರ್ಣಗಳ ಬಳಕೆ, ೨೧ – ೧೫೭ ; ಬಂಕಾಪುರದ ನಗರೇಶ್ವರ ದೇವಾಲಯದ ನವರಂಗದ ರೇಖಾ ಚಿತ್ರಗಳು, ೨೪ – ೨೨೦.

ಡಾ. ಸುಮಾ ಎಸ್. ನಿರ್ಣಿ., ಯಶಸ್ವಿ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಮಹಿಳೆಯರು, ೨೧ – ೩೦೩.

ಡಾ. ಬಿ. ಸುರೇಶ., ಬುರುಡಕಟ್ಟೆ ಗ್ರಾಮದ ಪ್ರಾಚ್ಯಾವಶೇಷಗಳು, ೨೩ – ೨೪ ; ಚಿತ್ರದುರ್ಗ ಜಿಲ್ಲೆಯ ಶಾಸನೋಕ್ತ ದೇವಾಲಯಗಳು, ೨೫ – ೧೭೬.

ಬಿ.ಸಿ. ಸುರೇಶ., ವರಕೋಡು ವರದರಾಜ ದೇವಾಲಯದ ವಾಸ್ತುಶಿಲ್ಪ, ೨೩ – ೧೭೨ ; ಬೇಲೂರಿನ ವೀರಗಲ್ಲುಗಳು ಮತ್ತು ಮಹಾಸತಿ ಕಲ್ಲುಗಳು, ೨೪ – ೬೫ ; ಚಿಕ್ಕಮಗಳೂರು ಜಿಲ್ಲೆಯ ದೇವಾಲಯಗಳ ವಾಸ್ತು ಶಿಲ್ಪಗಳು, ೨೪ – ೨೩೬; ಮುದಿಗೆರೆಯ ದೇವಾಲಯಗಳು, ೨೫ – ೧೬೭.

ಡಾ. ಸೂರ್ಯನಾಥ ಕಾಮತ್., ಸಮ್ಮೇಳನ ಅಧ್ಯಕ್ಷರ ಭಾಷಣ, ೨೨ – xxix.

ಡಾ. ಎಸ್.ವೈ. ಸೋಮಶೇಖರ., ಚಿತ್ರದುರ್ಗ ತಾಲ್ಲೂಕು ನೇರೇಹಾಳು ಪರಿಸರದ ಬೃಹತ್ ಶಿಲಾಯುಗದ ಸಮಾಧಿ ನೆಲೆಗಳ ಶೋಧ, ೨೩ – ೧೩.

ಹಣಮಂತ ತಾಸಗಾವಂಕರ., ಬಾಗಲಕೋಟೆಯ ರಘುವೀರ ಸಮಾಧಿ, ೨೧ – ೨೮೯.

ಡಾ. ಎಸ್. ಹನುಮಂತ ಜೋಯಿಸ್., ಕರ್ನಾಟಕದ ಇತಿಹಾಸಕ್ಕೆ ಪ್ರವೃತ್ತಿಪರ ಛಾಯಾಚಿತ್ರಗ್ರಾಹಕರ ಕೊಡುಗೆ, ೨೩ – ೩೯೧. ಲೋಕದೊಳಲುವಿನ ಪ್ರಾಚೀನ ಶಿಡಿಲೇಶ್ವರ ದೇವಾಲಯ, ೨೫ – ೧೫೦.

ಡಾ. ಹನಮಂತ ಮೇಲಿನಮನಿ., ಹಂಪೆಯ ಶಾಸನೋಕ್ತ ಬಾವಿಗಳು, ೨೧ – ೧೩೭.

ವೈ. ಹನುಮಂತರೆಡ್ಡಿ., ಹಂಡೆ ಅರಸರ ಕಾಲದ ಐತಿಹಾಸಿಕ ಭಾವಿಗಳು, ೨೩ – ೩೦೦.

ಡಾ. ಹನುಮನಾಯಕ., ಪೂರ್ವ ಮಧ್ಯಯುಗೀನ ಕರ್ನಾಟಕದಲ್ಲಿ ರಾಜತ್ವ ರಚನೆಯ ಪ್ರಕ್ರಿಯೆ : ಹೊಯ್ಸಳರು, ೨೧ – ೨೦೧; ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಯ ಕೆಲವು ಹೊಸ ಬೃಹತ್ ಶಿಲಾಯುಗದ ನೆಲೆಗಳು, ೨೨ – ೮ ; ಹದಿನೆಂಟನೇ ಶತಮಾನದ ಕರ್ನಾಟಕದ ಕೆಲವು ಅಧಿಕಾರಿಗಳು, ೨೩ – ೩೭೭ ; ಅರಸೀಕೆರೆ ತಾಲ್ಲೂಕಿನ ಪ್ರಾಗೈತಿಹಾಸಿಕ ಬಂಡೆ ಚಿತ್ರಗಳು, ೨೪ – ೯ ; ಅರಸೀಕೆರೆಯ ತಾಲ್ಲೂಕಿನ ಹೊಸ ವೀರಗಲ್ಲುಗಳು, ೨೫ – ೬೦.

ಹನುಮಾಕ್ಷಿ ಗೋಗಿ., ಲಕ್ಷ್ಮೇಶ್ವರದ ಹೊಸ ಶಾಸನಗಳು, ೨೪ – ೧೨೦ ; ಬಾ.ರಾ. ಗೋಪಾಲ್ ದತ್ತಿ ಪ್ರಶಸ್ತಿ, ೨೫–ಆರಂಭದ ಪುಟಗಳು.

ಹರಿಹರ ಎಚ್. ಶ್ರೀನಿವಾಸರಾವ್., 'ಜಟ್ಟಮತ' : ಜಲಶಾಸ್ತ್ರದ ನೆಲೆಯಿಂದ ವಿವೇಚನೆ, ೨೨ – ೨೬೭ ; ವಿಠ್ಠಲಾಪುರದ ಬಿಷ್ಟಪ್ಪಯ್ಯನವರ ಮನೆತನದಲ್ಲಿರುವ ಎರಡನೇ ಅಪ್ರಕಟಿತ ಶಾಸನ, ೨೩ – ೬೭ ; ಬಿಷ್ಟಪ್ಪಯ್ಯನವರ ಮನೆತನದ ದಾಖಲೆಗಳಲ್ಲಿ ಇನಾಂ ಕಮಿಷನರ್ ಹೆಚ್. ಬರ್ಡ್‌ವುಡ್, ೨೫ – ೩೯೦.

ಡಾ. ಎಫ್.ಟಿ. ಹಳ್ಳಿಕೇರಿ., ಅಮೋಘಸಿದ್ಧ ಪರಂಪರೆಯ ಹಾಲುಮತ ಮಠಗಳು, ೨೧ – ೨೫೦ ; ಇಟ್ಟಪ್ಪ : ಹಾಲುಮತ ಸಾಂಸ್ಕೃತಿಕ ವೀರ, ೨೨ – ೩೩೨ ; ಸಿದ್ಧರಾಮ ಪರಂಪರೆಯ ಹಾಲುಮತ ಮಠಗಳು, ೨೩ – ೨೨೦ ; ಇತಿಹಾಸ ಮತ್ತು ಸಂಸ್ಕೃತಿ ಸಂಶೋಧಕ ವಿ.ಆರ್. ಹನುಮಂತಯ್ಯ, ೨೪ – ೩೦೭ ; ಅಲಿಖಿತ ಆಕರಗಳಲ್ಲಿ ರೇವಣಸಿದ್ಧರು, ೨೫ – ೩೬೬.

ಹಿರೇಮಠ ವೀರಭದ್ರಯ್ಯ ಚನ್ನಬಸಯ್ಯ ಸಿಂಗಟಾಲೂರ., ರೇನಾಡು ಚೋಳರಾಜರ ಶಾಸನಗಳು, ೨೫ – ೬೪.

ಎಸ್.ಬಿ. ಹಿರೇಮಠ., ಮುರಗೋಡದ ಪ್ರಾಚ್ಯಾವಶೇಷಗಳು, ೨೫ – ೧೨೪.

ಕರ್ನಾಟಕ ಇತಿಹಾಸ ಅಕಾದೆಮಿ (ರಿ).

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಆವರಣ, ಬಸವನಗುಡಿ ರಸ್ತೆ,
ನರಸಿಂಹರಾಜಾ ಕಾಲೋನಿ, ಬೆಂಗಳೂರು – ೫೬೦ ೦೧೯

೨೦೦೯ನೆಯ ಸಾಲಿನ ವಾರ್ಷಿಕ ವರದಿ

ಪ್ರಿಯ ಸದಸ್ಯ ಬಂಧುಗಳೇ,

ಕರ್ನಾಟಕ ಇತಿಹಾಸ ಅಕಾದೆಮಿಯ ೨೪ನೆಯ ವಾರ್ಷಿಕ ಸಮ್ಮೇಳನಕ್ಕಾಗಿ, ಆದಿಚುಂಚನಗಿರಿಯಲ್ಲಿ ಸಮಾವೇಶಗೊಂಡಿದ್ದೇವೆ. ಇಷ್ಟು ವರ್ಷಗಳ ಕಾಲ ಅಕಾದೆಮಿಯ ಬೆಳವಣಿಗೆಗೆ ಸಹಕರಿಸಿದ ಎಲ್ಲರಿಗೆ ಅನಂತ ಧನ್ಯವಾದಗಳು. ಕಳೆದ ೨೪ ಸಮ್ಮೇಳನಗಳಿಗೆ ಆಶ್ರಯ ನೀಡಿ ಉಪಕರಿಸಿರುವ ಎಲ್ಲ ಸಂಘ-ಸಂಸ್ಥೆಗಳು ಮತ್ತು ಧರ್ಮಪೀಠಗಳಿಗೆ ಅಕಾದೆಮಿ ಕೃತಜ್ಞವಾಗಿದೆ.

ಐತಿಹಾಸಿಕ ಪರಂಪರೆ ಉಳಿಸಿ – ೨೦೦೯

೨೦೦೯ನೆಯ ಸಾಲಿನ ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹದ ಉದ್ಘಾಟನಾ ಕಾರ್ಯಕ್ರಮವನ್ನು ೧೬-೮-೨೦೦೯ರಂದು ಮಧ್ಯಾಹ್ನ ೪ ಗಂಟೆಗೆ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ವರ್ಷವೂ ಕಾರ್ಯಕ್ರಮಕ್ಕೆ ಕರ್ನಾಟಕ ರಾಜ್ಯ ಪುರಾತತ್ತ್ವ ಇಲಾಖೆಯ ಸಹಯೋಗ ಇತ್ತು. ನ್ಯಾಯಮೂರ್ತಿ (ನಿ) ಡಾ॥ ಎಂ. ರಾಮಾಜೋಯಿಸ್ ಅವರು ೨೦೦೯ನೆಯ ಸಾಲಿನ 'ಐತಿಹಾಸಿಕ ಪರಂಪರೆ ಉಳಿಸಿ' ಸಪ್ತಾಹವನ್ನು ಉದ್ಘಾಟಿಸಿದರು. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಜಯರಾಮರಾಜ ಅರಸ್ ಅವರು ಈ ವರ್ಷದ ಕಾರ್ಯಕ್ರಮಕ್ಕೆ ಕಲಾವಿದ ಶ್ರೀ ಸುಭಾಷ್ ಕಮ್ಮಾರ ಅವರು ಹೊಸದಾಗಿ ಸಿದ್ಧಪಡಿಸಿದ್ದ ಭಿತ್ತಿಪತ್ರವನ್ನು ಅನಾವರಣ ಮಾಡಿದರು. ಸಭೆಯ ಅಧ್ಯಕ್ಷತೆಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ॥ ನಲ್ಲೂರು ಪ್ರಸಾದ್ ವಹಿಸಿದ್ದರು. ಕರ್ನಾಟಕ ಇತಿಹಾಸ ಅಕಾದೆಮಿಯ ಬೆಂಗಳೂರು ಘಟಕವು ನಗರದ ಪ್ರೌಢಶಾಲೆಗಳು, ಪದವಿ ಪೂರ್ವ ಮತ್ತು ಪದವಿ ಕಾಲೇಜುಗಳ ವಿದ್ಯಾರ್ಥಿಗಳಿಗೆ ನಡೆಸಿದ ಪ್ರಬಂಧ ಮತ್ತು ಭಾಷಣ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಶ್ರೀ ದಯಾನಂದ ಸಂಸ್ಥೆಗಳ ಕಾರ್ಯದರ್ಶಿ ಶ್ರೀ ಗಾಳಿಸ್ವಾಮಿ ಬಹುಮಾನಗಳ ವಿತರಣೆ ಮಾಡಿದರು. ತಮ್ಮ ಮಗ ಅಂಗದ್‌ನ ಹೆಸರಿನಲ್ಲಿ, ಒಂದು ಪರ್ಯಾಯ ಪಾರಿತೋಷಕವನ್ನು ಪ್ರಾಯೋಜಿಸಿರುವ ಶ್ರೀ ಗಾಳಿಸ್ವಾಮಿ ವಿಜೇತರಿಗೆ ವೈಯಕ್ತಿಕ ಬಹುಮಾನಗಳನ್ನು ಪ್ರಾಯೋಜಿಸಿದರು.

ರಾಜ್ಯ ಪುರಾತತ್ವ ಇಲಾಖೆಯ ನಿರ್ದೇಶಕರಾದ ಡಾ॥ ಆರ್. ಗೋಪಾಲ್ ಸಭೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೆ ಸ್ಥಳಾವಕಾಶ ನೀಡಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಅಕಾದೆಮಿ ಕೃತಜ್ಞತೆ ಸಲ್ಲಿಸಿತು.

ಬೆಂಗಳೂರು ನಗರದಲ್ಲಿ ೨೦೦೯ರ ಐತಿಹಾಸಿಕ ಪರಂಪರೆ ಕಾರ್ಯಕ್ರಮದ ಉದ್ಘಾಟನೆ ಆಗಿ, ಈ ವರ್ಷದ ಭಿತ್ತಿಪತ್ರಗಳ ಅನಾವರಣ ಆದ ನಂತರ, ಕರ್ನಾಟಕದಾದ್ಯಂತ ವಿವಿಧ ಸ್ಥಳಗಳಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಗಳು ನಡೆದಿವೆ. ಅವರಿಗೆ ಅವರ ಕೋರಿಕೆಯ ಮೇರೆಗೆ ಭಿತ್ತಿಪತ್ರಗಳು ಮತ್ತು ಸಂಬಂಧಿಸಿದ ಸಾಹಿತ್ಯ ಮತ್ತು ಪ್ರಚಾರ ಪತ್ರಗಳನ್ನು ಕಳುಹಿಸಲಾಗಿತ್ತು. ಕರ್ನಾಟಕದಾದ್ಯಂತ ನಡೆದ ಕಾರ್ಯಕ್ರಮಗಳ ವಿವರಗಳು ಈ ಕೆಳಗಿನಂತಿವೆ:

'ಐತಿಹಾಸಿಕ ಪರಂಪರೆ ಉಳಿಸಿ'– ೨೦೦೯ನೇ ಸಾಲಿನ ವರದಿ : ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು.

ಕ್ರ.ಸಂ.	ದಿನಾಂಕ	ಸ್ಥಳ	ಅಧ್ಯಕ್ಷತೆ/ಉದ್ಘಾಟನೆ	ಮುಖ್ಯ ಅತಿಥಿಗಳು/ಉಪನ್ಯಾಸಕರು	ಇತರ ವಿಷಯಗಳು
			ಸರ್ವಶ್ರೀ	ಸರ್ವಶ್ರೀ	
೧.	೧೬.೦೮.೦೯	ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು	ನ್ಯಾಯಮೂರ್ತಿ ಡಾ. ಎಂ. ರಾಮಾಜೋಯಿಸ್ ಡಾ. ನಲ್ಲೂರು ಪ್ರಸಾದ್	ಜಯರಾಜ ಅರಸ್ ಭಿತ್ತಿಚಿತ್ರ ಅನಾವರಣ ಶ್ರೀ ಗಾಳಿಸ್ವಾಮಿ ಬಹುಮಾನ ವಿತರಣೆ	ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ–೨೦೦೯ ಕಾರ್ಯಕ್ರಮಗಳ ಉದ್ಘಾಟನೆ
೨.	೧೬.೦೮.೦೯	ಶ್ರೀ ಧ.ಮಂ. ಕಾಲೇಜು ಉಜಿರೆ	ಪ್ರೊ. ನಾಗರಾಜ ಪೂವಣಿ ಪತ್ರಕರ್ತರು	ಡಾ. ಎಸ್.ಆರ್. ವಿಘ್ನರಾಜ್ ಧರ್ಮಸ್ಥಳ	ಸಾಪ್ತಾಹಿಕ ಕಾರ್ಯಕ್ರಮ ಉದ್ಘಾಟನೆ, ಉಪನ್ಯಾಸ
೩.	೧೬.೦೮.೦೯	ಜಿ.ಎಸ್.ವೈ.ಎಸ್. ಸಭಾ ಭವನ, ಹೊಸ ತಾಲ್ಲೂಕು ಪಂಚಾಯತ್ ಕಟ್ಟಡ ಬಂಟ್ವಾಳ	ಶ್ರೀ ತಮ್ಮಯ್ಯ ಬಿ. ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಬಂಟ್ವಾಳ ಶ್ರೀ ಪ್ರದೀಪ ಕುಮಾರ್ ಕಲ್ಕೂರ್ ಅಧ್ಯಕ್ಷರು, ದ.ಕ. ಜಿಲ್ಲಾ ಕಸಾಪ ಉದ್ಘಾಟನೆ	ಡಾ. ಬಿ. ಶಿವರಾಮಶೆಟ್ಟಿ ಪ್ರವಾಚಕರು, ಕನ್ನಡ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ ಡಾ. ಅನಂತರಾಜ ಇಂದ್ರ, ಬಂಟ್ವಾಳ ಸುಬ್ರಹ್ಮಣ್ಯ ಭಟ್ಟ, ಕಾರ್ಯದರ್ಶಿ	ಉದ್ಘಾಟನೆ ಸಮಾರಂಭ ಜಾನಪದ ಸಂರಕ್ಷಣೆ ಪ್ರತಿಕ್ರಿಯೆ : ಕ್ಯೊರಾ ಬಾಳೆಪುಣಿ ನಿವೃತ್ತ ಉಪ ತಹಶೀಲ್ದಾರ್ ಶ್ರೀ ಗೋಪಾಲ ಅಂಚನ್ ಪತ್ರಿಕೋದ್ಯಮಿ
೪.	೧೭.೦೮.೦೯	ಶ್ರೀ ಧ.ಮಂ. ಕಾಲೇಜು ಉಜಿರೆ	ಡಾ. ಪಂಡರೀಕ ಎ. ಉಪನ್ಯಾಸಕರು ಶ್ರೀ ಧ.ಮಂ. ಕಾಲೇಜು ಉಜಿರೆ 'ನಾವುಜಿರೆ', ನಿವೃತ್ತ ಪ್ರಾಧ್ಯಾಪಕರು	ಶ್ರೀಪಾಣೆ ಮಂಗಳೂರು ಅನಂತರಾಜ ಇಂದ್ರರು ಪಾ. ಅನಂತರಾಜ ಡಾ. ವೈ. ಉಮಾನಾಥಶೆಣೈ	ಕ.ಇ.ಅ. ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದ ಪರಿಚಯ ಪ್ರಾಚ್ಯವನ್ನು ಸಂರಕ್ಷಣೆ ಯಾಕೆ ? ಹೇಗೆ ?
೫.	೧೭.೦೮.೦೯	– " –			
೬	೧೭.೦೮.೦೯	ಡಾ. ಶ್ರೀಶ್ರೀಶ್ರೀ ಶಿವಕುಮಾರಸ್ವಾಮಿ ಸಭಾಂಗಣ ಶ್ರೀ ಸಿದ್ಧಗಂಗಾ ಕಲೆ–ವಾಣಿಜ್ಯ ಮತ್ತು ವಿಜ್ಞಾನ ಪದವಿ ಕಾಲೇಜ್ ಬಿ.ಎಚ್. ರಸ್ತೆ ತುಮಕೂರು	ಡಾ. ಎಸ್. ಶರ್ಮಾ ಕುಲಪತಿಗಳು ತುಮಕೂರು ವಿಶ್ವವಿದ್ಯಾಲಯ ತುಮಕೂರು ಡಾ. ಎ. ಮುರಿಗೆಪ್ಪ ಕುಲಪತಿಗಳು ಕನ್ನಡ ವಿ.ವಿ. ಹಂಪಿ	ಪ್ರೊ. ಎಚ್.ಎಸ್. ನಿರಂಜನಾರಾಧ್ಯ ಪ್ರಾಚಾರ್ಯರು ಶ್ರೀ ಸಿ.ಕ.ವಾ.ವಿ.ಪ. ಕಾಲೇಜು ಡಾ. ಎಸ್.ಆರ್. ಚನ್ನವೀರಪ್ಪ ಮುಖ್ಯಸ್ಥರು, ಹಸ್ತಪ್ರತಿ ಶಾಸ್ತ್ರ ವಿಭಾಗ, ಕನ್ನಡ ವಿ.ವಿ., ಹಂಪಿ	ಡಾ. ಡಿ.ಎನ್. ಯೋಗೀಶ್ವರಪ್ಪ ಮಧ್ಯಕಾಲೀನ ಕರ್ನಾಟಕದ ಪಾಳೆಯಗಾರರು ಡಾ. ಸಿ. ನಾಗಭೂಷಣ ಅವರ ಪುಸ್ತಕಗಳ ಬಿಡುಗಡೆ ಕಲ್ಯಾಣ ಕರ್ನಾಟಕ ಸಾಹಿತ್ಯ ಸಂಸ್ಕೃತಿ ಡಾ. ಎಸ್.ಕೆ. ಅರುಣಿ ಡಾ. ಕೆ. ರವೀಂದ್ರನಾಥ, ಪುಸ್ತಕ ಪರಿಚಯ
೭.	೧೮.೦೮.೦೯	ಏರ್ಮಾಳು ಬೀಡು ಪಟ್ಟದ ಚಾವಡಿ	ದುಗ್ಗಣ್ಣ ಸಾವಂತರು ಮುಲ್ಕಿ ಅರಮನೆ	ಪಾ. ಅನಂತರಾಜ ಇಂದ್ರ ಸಂಯೋಜಕರು, ಕ.ಇ.ಅ. ಬಂಟ್ವಾಳ ರತ್ನಾಕರ್ ರಾಜ್, ಪಡುಬಿದ್ರೆ	ಕರಾವಳಿ ಪ್ರದೇಶದ ಜೈನ ಅರಸರು ಮತ್ತು ಬೀಡು ಬಳ್ಳಾಳರ ಸಮಾಲೋಚನೆ 'ಅಂದು–ಇಂದು–ಮುಂದು'

ಕ್ರ.ಸಂ.	ದಿನಾಂಕ	ಸ್ಥಳ	ಅಧ್ಯಕ್ಷತೆ/ಉದ್ಘಾಟನೆ	ಮುಖ್ಯ ಅತಿಥಿಗಳು/ಉಪನ್ಯಾಸಕರು	ಇತರ ವಿಷಯಗಳು
			ಸರ್ವಶ್ರೀ	ಸರ್ವಶ್ರೀ	
೮.	೧೮.೦೮.೦೯	ಶ್ರೀ ಧ.ಮಂ. ಕಾಲೇಜು ಉಜಿರೆ, ದ.ಕ.	ಪ್ರೊ. ಜಿ. ಪ್ರಮೋದ್‌ಕುಮಾರ್ ಉಜಿರೆ		'ನಮ್ಮ ಗ್ರಾಮದ ಪ್ರಾಚೀನ ಸ್ಮಾರಕ' ಎಂಬ ಪ್ರಬಂಧ ಸ್ಪರ್ಧೆ
೯.	೧೮.೦೮.೦೯	ಎಸ್.ಎಂ.ಆರ್. ಪದವಿ ಪೂರ್ವ ಕಾಲೇಜ್, ಕಳ್ಳಂಬೆಳ್ಳ, ಶಿರಾ ತಾಲ್ಲೂಕು	ಕೆ. ಕಾಂತರಾಜು ಶಿಕ್ಷಣ ಸಂಸ್ಥೆಯ ಅಧ್ಯಕ್ಷರು	ಡಾ. ಎಸ್.ಆರ್. ಚನ್ನವೀರಪ್ಪ ಪ್ರವಾಚಕರು ಡಾ. ಎಚ್.ಎಸ್. ಗೋಪಾಲರಾವ್ ಕೆ. ಲಕ್ಷ್ಮೀಕಾಂತ್, ಉಪಾಧ್ಯಕ್ಷರು	ಡಾ. ಎನ್. ನಂದೀಶ್ವರ ಪ್ರಾಚಾರ್ಯ
೧೦.	೧೯.೦೮.೦೯	ಶ್ರೀ ಧವಳಾ ಕಾಲೇಜು ಕಾಲೇಜು ಸಭಾಭವನ ಮೂಡಬಿದ್ರೆ	ರಮೇಶ್‌ಕುಮಾರ್ ಪ್ರಾಂಶುಪಾಲರು	ಡಾ. ವೈ. ಉಮಾನಾಥಶೆಣೈ ಖ್ಯಾತ ಇತಿಹಾಸ ಸಂಶೋಧಕರು ಡಾ. ಪುಂಡಿಕ್ಯಾ ಗಣಪತಿಭಟ್ ಇತಿಹಾಸ ವಿಭಾಗದ ಮುಖ್ಯಸ್ಥರು	ವಿದ್ಯಾರ್ಥಿಗಳಿಂದ ಪ್ರಬಂಧ ಮಂಡನೆ
೧೧.	೧೯.೦೮.೦೯	ನವೋದಯ ಪದವಿ ಪೂರ್ವ ಕಾಲೇಜು ಚಿಕ್ಕನಾಯಕನಹಳ್ಳಿ	ಪ್ರೊ. ಶೇಖರ್ ಪ್ರಾಚಾರ್ಯರು	ಡಾ. ಕೆ. ರವೀಂದ್ರನಾಥ ಪ್ರವಾಚಕರು	ಪರಂಪರೆ ಉಳಿಸಿ ಬಗ್ಗೆ ಉಪನ್ಯಾಸ
೧೨.	೧೯.೦೮.೦೯	ಸರ್ಕಾರಿ ಪ್ರೌಢಶಾಲೆ ಶಿವನಹಳ್ಳಿ, ಕನಕಪುರ ತಾ.	ಬಸವರಾಜಪ್ಪ ಮುಖ್ಯೋಪಾಧ್ಯಾಯರು	ಡಾ. ಮುನಿರಾಜಪ್ಪ, ಮುಖ್ಯಸ್ಥರು ಇ. ಮತ್ತು ಪ್ರ. ಉದ್ಯಮ ವಿಭಾಗ ರೂರಲ್ ಕಾಲೇಜು, ಕನಕಪುರ	– " –
೧೩.	೧೯.೦೮.೦೯	ಸರ್ಕಾರಿ ಪ್ರೌಢಶಾಲೆ ಅತ್ತಿಹಳ್ಳಿ, ಕನಕಪುರ ತಾ.	ರುದ್ರೇಗೌಡ ಮುಖ್ಯೋಪಾಧ್ಯಾಯರು	ಡಾ. ಮುನಿರಾಜಪ್ಪ	
೧೪.	೧೯.೦೮.೦೯	ಡಾ. ಬಿ.ಆರ್. ಅಂಬೇಡ್ಕರ್ ಪ್ರೌಢಶಾಲೆ, ಹೊಸ	ಶ್ರೀ ಪಟ್ಟಸ್ವಾಮಿ ಹಂಗಾಮಿ ಮುಖ್ಯೋಪಾಧ್ಯಾಯರು	ಡಾ. ಮುನಿರಾಜಪ್ಪ	– " –
		ಕಬ್ಬಾಳು, ಕನಕಪುರ ತಾ.	ಪ್ರೊ. ಶೇಖರ್, ಪ್ರಾಚಾರ್ಯರು	ಕೆ. ರವೀಂದ್ರನಾಥ	– " –
೧೫.	೧೯.೦೮.೦೯	ನವೋದಯ ಪದವಿ ಕಾಲೇಜು ಚಿಕ್ಕನಾಯಕನಹಳ್ಳಿ			
೧೬.	೨೦.೦೮.೦೯	ಸರ್ಕಾರಿ ಬಾಲಕಿಯರ ಪ್ರೌಢಶಾಲೆ, ಕನಕಪುರ	ಹೆಚ್.ಪಿ. ಅಪಾಜಿ ಮುಖ್ಯೋಪಾಧ್ಯಾಯರು	ಎಸ್.ಪಿ. ರಮೇಶ್, ಇತಿಹಾಸ ಉಪನ್ಯಾಸಕರು ರೂರಲ್ ಪದವಿಪೂರ್ವ ಕಾಲೇಜು, ಕನಕಪುರ	
೧೭.	೨೦.೦೮.೦೯	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಉಪ್ಪಿನಂಗಡಿ	ಪ್ರೊ. ವಸಂತಕುಮಾರಿ ಪ್ರಾಂಶುಪಾಲರು	ಡಾ. ಪೀಟರ್ ವಿಲ್ಸನ್ ಪ್ರಭಾಕರ್ ಮುಖ್ಯಸ್ಥರು, ಇತಿಹಾಸ ವಿಭಾಗ ವಿವೇಕಾನಂದ ಕಾಲೇಜು, ಪುತ್ತೂರು ಪ್ರೊ. ಸುಬ್ರಹ್ಮಣ್ಯ ಕೆ., ಪ್ರಾಧ್ಯಾಪಕರು	ಸ್ಥಳೀಯ ಇತಿಹಾಸ ಕುರಿತು ವಿದ್ಯಾರ್ಥಿಗಳಿಂದ ಪ್ರಬಂಧ ಮಂಡನೆ ವಿಮರ್ಶೆ
೧೮.	೨೦.೦೮.೦೯	ಶ್ರೀ ಧ.ಮಂ. ಕಾಲೇಜು ಉಜಿರೆ	ಡಾ. ಎ. ಪುಂಡರೀಕ	ಪ್ರೊ. ತುಕರಾಮ ಪೂಜಾರಿ ಶ್ರೀ ವೆಂ. ಕಾಲೇಜು, ಬಂಟ್ವಾಳ	ಇತಿಹಾಸ ನಿರ್ಮಾಣದಲ್ಲಿ ವಸ್ತು ಸಂಗ್ರಹಾಲಯಗಳ ಪಾತ್ರ

ಕ.ಸಂ.	ದಿನಾಂಕ	ಸ್ಥಳ	ಅಧ್ಯಕ್ಷತೆ/ಉದ್ಘಾಟನೆ	ಮುಖ್ಯ ಅತಿಥಿಗಳು/ಉಪನ್ಯಾಸಕರು	ಇತರ ವಿಷಯಗಳು
			ಸರ್ವಶ್ರೀ	ಸರ್ವಶ್ರೀ	
೧೯.	೨೦.೦೮.೦೯	ಸಿದ್ಧಾರ್ಥ ಪದವಿ ಕಾಲೇಜ್, ಸರಸ್ವತಿಪುರಂ ತುಮಕೂರು	ಪ್ರೊ. ವಿಜಯೇಂದ್ರ ಪ್ರಾಚಾರ್ಯರು	ಎನ್. ನಂದೀಶ್ವರ, ಅಧ್ಯಾಪಕರು	
೨೦.	೨೦.೦೮.೦೯	ಶ್ರೀದೇವಿ ಪದವಿ ಕಾಲೇಜು ಶಿರಾ ರಸ್ತೆ, ತುಮಕೂರು	ಡಾ. ಎಂ.ಆರ್. ಹುಲಿನಾಯ್ಕರ್ ಶಿಕ್ಷಣ ಸಂಸ್ಥೆಯ ಅಧ್ಯಾಪಕರು	ಡಾ. ಡಿ.ಎನ್. ಯೋಗೀಶ್ವರಪ್ಪ ಪ್ರಾಧ್ಯಾಪಕ ಪ್ರೊ. ರಾಮಪ್ಪ, ಪ್ರಾಚಾರ್ಯರು	ಹಂಪಿಯ ಕನ್ನಡ ವಿ.ವಿ. ಮತ್ತು ಜಿಲ್ಲಾ ಹೆರಿಟೇಜ್ ಕ್ಲಬ್, ತುಮಕೂರು
೨೧.	೨೧.೦೮.೦೯	ಶ್ರೀ ಅನಂತನಾಥಸ್ವಾಮಿ ಚೈತ್ಯಾಲಯ, ಜೈನರಪೇಟೆ ಪಾಣೆ ಮಂಗಳೂರು (ಜೈನ್ ಮಿಲನ್, ಬಂಟ್ವಾಳ)	ಮಾಣಿಕ್ಯರಾಜ್ ಜೈನ್ ಅಧ್ಯಕ್ಷರು, ಜೈನ್ ಮಿಲನ್ ಬಂಟ್ವಾಳ	ಜ್ಞಾನೇಂದ್ರ ಎಂ. ಅಧ್ಯಕ್ಷರು, ಜೈನ್ ಮಿಲನ್ ಮೂಡಬಿದ್ರೆ	ತೀರ್ಥಕ್ಷೇತ್ರಗಳ ರಕ್ಷಣೆ ಶ್ರೀಮತಿ ಗೀತಾ ಜಿನಚಂದ್ರ ಅತಿಥೇಯರು ಶಿವಪ್ರಸಾದ್, ಕಾರ್ಯದರ್ಶಿ
೨೨.	೨೧.೦೮.೦೯	ಶ್ರೀ ಧ.ಮಂ. ಕಾಲೇಜು ಉಜಿರೆ	ಡಾ. ವೈ. ಉಮಾನಾಥಶೆಣೈ	ಡಾ. ಪಿ. ಮನೋಹರಿ ಪ್ರಾಂಶುಪಾಲರು	'ಪ್ರಾಚೀನ ಭಾರತದಲ್ಲಿ ಶಿಕ್ಷಣ ಮತ್ತು ಅದರ ಉಪಯುಕ್ತತೆ' ಉಪನ್ಯಾಸ
೨೩.	೨೧.೦೮.೦೯	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ	ಪ್ರೊ. ಶಾಮಸುಂದರ ಕೋಟೆ ಪ್ರಾಚಾರ್ಯರು	ಡಾ. ಎಫ್.ಟಿ. ಹಳ್ಳಿಕೇರಿ ಪ್ರಾಧ್ಯಾಪಕರು	
೨೪.	೨೧.೦೮.೦೯	ರೂರಲ್ ಪದವಿಪೂರ್ವ ಕಾಲೇಜ್, ಕನಕಪುರ	ಚನ್ನಪ್ಪ, ಪ್ರಾಂಶುಪಾಲರು	ಡಾ. ಎಂ. ಗೋವಿಂದಪ್ಪ ಹಿರಿಯ ಶ್ರೇಣಿ ಉಪನ್ಯಾಸಕರು, ಇ. ಮತ್ತು ಪ್ರ. ಉದ್ಯಮ, ರೂರಲ್ ಕಾಲೇಜ್, ಕನಕಪುರ	
೨೫.	೨೧.೦೮.೦೯	ಜಿ.ಜಿ.ಎಸ್. ಆಂಗ್ಲ ಪ್ರೌಢಶಾಲೆ ಜೆ. ಬ್ಯಾಡರಹಳ್ಳಿ ಚನ್ನಪಟ್ಟಣ ತಾ.	ಕಾಳೇಗೌಡರು ಪ್ರಾಂಶುಪಾಲರು	ಪ್ರೊ. ಹೆಚ್. ಕೃಷ್ಣೇಗೌಡ ಸಂಶೋಧನ ವಿದ್ಯಾರ್ಥಿ ಇತಿಹಾಸ ವಿಭಾಗ, ಬೆಂಗಳೂರು ವಿ.ವಿ.	ಪರಂಪರೆ ಉಳಿಸಿ ಬಗ್ಗೆ ಉಪನ್ಯಾಸ
೨೬	೨೧.೦೮.೦೯	ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜು ಎಸ್. ನಿಜಲಿಂಗಪ್ಪ ಬಡಾವಣೆ, ದಾವಣಗೆರೆ	ಡಿ.ಎಚ್. ಪ್ಯಾಟಿ	ಡಾ. ಬಿ.ಡಿ. ಕುಮಾರ್ ಡಾ. ರಾಜೇಶ್	– " –
೨೭.	೨೧.೦೮.೦೯	ಸರಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ	ಪ್ರೊ. ಶಾಮಸುಂದರ್ ಕೋಟೆ ಪ್ರಾಚಾರ್ಯರು	ಡಾ. ಎಫ್.ಟಿ. ಹಳ್ಳಿಕೇರಿ ಪ್ರಾಧ್ಯಾಪಕರು	– " –
೨೮.	೨೨.೦೮.೦೯	ಶ್ರೀ ರಾಘವೇಂದ್ರ ಪ್ರೌಢಶಾಲೆ, ಕನಕಪುರ	ಡಾ. ಶಿವಬಸವೇಗೌಡ ಗೌರವ ಕಾರ್ಯದರ್ಶಿ ಆದಿಚುಂಚನಗಿರಿ ಮಠ, ಕನಕಪುರ	ಪ್ರೊ. ಚಿಕ್ಕಚನ್ನಯ್ಯ, ಸಂಶೋಧನ ವಿದ್ಯಾರ್ಥಿ ಇತಿಹಾಸ ವಿಭಾಗ, ಬೆಂಗಳೂರು ವಿ.ವಿ.	– " –

ಕ್ರ.ಸಂ.	ದಿನಾಂಕ	ಸ್ಥಳ	ಅಧ್ಯಕ್ಷತೆ/ಉದ್ಘಾಟನೆ	ಮುಖ್ಯ ಅತಿಥಿಗಳು/ಉಪನ್ಯಾಸಕರು	ಇತರ ವಿಷಯಗಳು
			ಸರ್ವಶ್ರೀ	ಸರ್ವಶ್ರೀ	
೨೯.	೨೨.೦೮.೦೯	ಶ್ರೀಮತಿ ಬಾಯಿ ಮೆಮೋರಿಯಲ್ ಸರಕಾರಿ ಮ್ಯೂಸಿಯಂ ಬಿಜೈ, ಮಂಗಳೂರು	ಪ್ರೊ. ರಾಧಕೃಷ್ಣ ಪ್ರಾಂಶುಪಾಲರು	ಎಂ. ಶಂಕರಭಟ್, ಮಹಾಪೌರರು ಮಂಗಳೂರು ಮಹಾನಗರ ಪಾಲಿಕೆ ಪ್ರೊ. ಚ.ನ. ಶಂಕರರಾವ್, ನಿವೃತ್ತ ಸಮಾಜಶಾಸ್ತ್ರ ಪ್ರಾಧ್ಯಾಪಕರು ಪ್ರೊ. ಸ್ಟುವರ್ಟ್ ಕ್ಯಾಡ್ರಸ್ ವಿಭಾಗದ ಮುಖ್ಯಸ್ಥರು ಪಾ. ಅನಂತರಾಜ ಇಂದ್ರ	ಹಳೆಯ ವಸ್ತುಗಳ ಸಂಗ್ರ ಮತ್ತು ಪ್ರದರ್ಶನ ಸಮಾರೋಪ ಎಚ್.ಟಿ. ತಳನಾರ್, ಉ.ನಿರ್ದೇಶಕರು ಪ್ರಾ.ವ.ಸಂ. ಇಲಾಖೆ ಮಂಗಳೂರು
೩೦.	೨೨.೦೮.೦೯	ಬೆಳ್ತಂಗಡಿ ಬಸದಿ ಗುರುನಾಯನಕೆರೆ ಬೆಳ್ತಂಗಡಿ ತಾ.	ಪದ್ಮರಾಜ ಶೆಟ್ಟಿ ರಘು ಚಂದ್ರಚೌಟ ಡಾ. ಉಮಾನಾಥ ಶೆಣೈ	ಪ್ರೊ. ಜಿ. ಪ್ರಮೋದ್‌ಕುಮಾರ್ ಶ್ರೀ ಸಂಪಂಗಿ ಭೋಜರಾಜ	ಬೆಳ್ತಂಗಡಿ ಬಸದಿಗೆ ಭೇಟಿ ಬಹುಮಾನ ವಿತರಣೆ, ಸಾಪ್ತಾಹಿಕ ಕಾರ್ಯಕ್ರಮದ ಸಮಾರೋಪ
೩೧.	೨೨.೦೮.೦೯	ಶ್ರೀ ಸಿದ್ಧಗಂಗಾ ಮಹಿಳಾ ಪದವಿ ಕಾಲೇಜು ತುಮಕೂರು	ಎಸ್.ಎಸ್. ಪೂಜಾರ ಕುಲಸಚಿವರು ಕನ್ನಡ ವಿ.ವಿ. ಹಂಪಿ	ಡಾ. ಜಿ. ನಂಜುಂಡಸ್ವಾಮಿ ಡಾ. ಟಿ.ಎಸ್. ಸಚ್ಚಿದಾನಂದಮೂರ್ತಿ	ಪರಂಪರ ಉಳಿಸಿ ಬಗ್ಗೆ ಮಾಹಿತಿ
೩೨.	೨೨.೦೮.೦೯	ಸೆಂಟ್ ಮೈಕಲ್ ಪ್ರೌಢಶಾಲೆ ಕನಕಪುರ	ಶ್ರೀಮತಿ ಥೆರಸಮ್ಮ ಕೆ. ಜೋಸೆಫ್ ಮುಖ್ಯೋಪಾಧ್ಯಾಯರು	ಡಾ. ಎಂ. ಗೋವಿಂದಪ್ಪ ಹಿರಿಯ ಶ್ರೇಣಿ ಉಪನ್ಯಾಸಕರು ಇ. ಮತ್ತು ಪ್ರ. ಉದ್ಯಮ, ರೂರಲ್ ಕಾಲೇಜ್ ಕನಕಪುರ	– " –
೩೩.	೨೨.೦೮.೦೯	ಸರ್ಕಾರಿ ಪ್ರೌಢಶಾಲೆ ಅಚ್ಚಲು, ಕನಕಪುರ ತಾ. ಕಾಲೇಜು, ಉಜಿರೆ	ಹೊನ್ನೇಗೌಡ ಮುಖ್ಯೋಪಾಧ್ಯಾಯರು	ಡಾ. ಮುನಿರಾಜಪ್ಪ, ಮುಖ್ಯಸ್ಥರು	
೩೪.	೨೨.೦೮.೦೯	ಜ್ಞಾಸಂ ಪ್ರೌಢಶಾಲೆ ಕನಕಪುರ ಎಸ್.ಎನ್.ಆರ್. ಪ್ರೌಢಶಾಲೆ	ಶ್ರೀಮತಿ ಗಂಗಾಂಬಿಕೆ ಮುಖ್ಯೋಪಾಧ್ಯಾಯರು	ಹೆಚ್.ಜಿ. ಪಾರ್ಥಸಾರಿ ಇತಿಹಾಸ ಉಪನ್ಯಾಸಕರು ರೂರಲ್ ಕಾಲೇಜ್, ಕನಕಪುರ	ಪರಂಪರೆ ಉಳಿಸಿ ಬಗ್ಗೆ ಮಾಹಿತಿ
೩೫.	೨೪.೦೮.೦೯	ಪ್ರಸಿದ್ಧಿ ಪ್ರೌಢಶಾಲೆ ಹಗರಿಬೊಮ್ಮನಹಳ್ಳಿ	ಜಯಪ್ರಕಾಶ್ ಮುಖ್ಯ ಗುರುಗಳು	ಡಾ. ಶಿವಾನಂದ, ಉಪನ್ಯಾಸಕರು ವಿಜಯನಗರ ಕಾಲೇಜ್, ಹೊಸಪೇಟೆ ರೊ॥ ಬಾದಾಮಿ ಮೃತ್ಯುಂಜಯ ಅಧ್ಯಕ್ಷರು, ರೋಟರಿ ಕ್ಲಬ್	– " –
೩೬.	೨೫.೦೮.೦೯	ಶ್ರೀ ಕೌದಿ ಮಹಂತೇಶ್ವರ ಪ್ರೌಢಶಾಲೆ	ಹೆಚ್.ಎಂ. ಕೊಟ್ರಬಸಯ್ಯ ಅಧ್ಯಕ್ಷರು ಸ್ಥಾನಿಕ ಆಡಳಿತ ಮಂಡಳಿ	ಪ್ರೊ. ಯು. ರಾಘವೇಂದ್ರರಾವ್ ಪ್ರಾಂಶುಪಾಲರು, ಥಿಯಾಸಫಿ ಮಹಿಳಾ ಕಾಲೇಜು ಹೊಸಪೇಟೆ, ರೊ॥ ಅಕ್ಕಿ ಬಸವರಾಜ, ರೋಟರಿ ಕ್ಲಬ್	

ಕ್ರ.ಸಂ.	ದಿನಾಂಕ	ಸ್ಥಳ	ಅಧ್ಯಕ್ಷತೆ/ಉದ್ಘಾಟನೆ	ಮುಖ್ಯ ಅತಿಥಿಗಳು/ಉಪನ್ಯಾಸಕರು	ಇತರ ವಿಷಯಗಳು
			ಸರ್ವಶ್ರೀ	ಸರ್ವಶ್ರೀ	
೩೭.	೨೬.೦೮.೦೯	ರೂರಲ್ ಪದವಿಪೂರ್ವ ಕಾಲೇಜ್, ಸಾತನೂರು	ರಾಮಚಂದ್ರೇಗೌಡ ಪ್ರಾಂಶುಪಾಲರು	ಹೆಚ್.ಜಿ. ಪಾರ್ಥಸಾರಥಿ ಇತಿಹಾಸ ಉಪನ್ಯಾಸಕರು, ರೂರಲ್ ಕಾಲೇಜ್ ಕನಕಪುರ	
೩೮.	೨೬.೦೮.೦೯	ಶ್ರೀ ದೇಗುಲಮಠ ಕನಕಪುರ	ನಟರಾಜಮೂರ್ತಿ ಮುಖ್ಯೋಪಾಧ್ಯಾಯರು	ಎಂ. ಷಡಕ್ಷರಸ್ವಾಮಿ, ಇತಿಹಾಸ ಉಪನ್ಯಾಸಕರು ಸರ್ಕಾರಿ ಪದವಿ ಪೂರ್ವ ಕಾಲೇಜು, ಕನಕಪುರ	
೩೯.	೨೭.೦೮.೦೯	ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಬಾಪಿಹಳ್ಳಿ, ಹೂವಿನ ಹಡಗಲಿ ತಾಲ್ಲೂಕು	ಹೇಮಗಿರಿಯಪ್ಪ ಗ್ರಾಮದ ಮುಖಂಡರು	ಹೆಚ್. ದೊಡ್ಡಕೊಟ್ರಪ್ಪ ಕೆ. ಕೊಟ್ರಪ್ಪ, ಬಿ. ಭದ್ರಗೌಡರು ವಿಶೇಷ ಆಹ್ವಾನಿತರು ಕೆ.ಎಂ. ಶಿವಲಿಂಗಪ್ಪ, ನಿವೃತ್ತ ಶಿಕ್ಷಕರು, ಹೊಳಗುಂದಿ	
೪೦.	೨೭.೦೮.೦೯	ಇಂದಿರಾಗಾಂಧಿ ಬಾಲಕಿರಯ ಪ್ರೌಢಶಾಲೆ ಹಗರಿಬೊಮ್ಮನಹಳ್ಳಿ	ಅನಂತಪದ್ಮನಾಭ ಮುಖ್ಯ ಗುರುಗಳು	ಡಾ. ಪರಮಶಿವಮೂರ್ತಿ, ಕನ್ನಡ ವಿ.ವಿ. ರೊ॥ ಡಾ. ಬಸವರಾಜಶೆಟ್ಟಿ, ಮಾಜಿ ಅಧ್ಯಕ್ಷರು ರೋಟರಿ ಕ್ಲಬ್	
೪೧.	೨೮.೦೮.೦೯	ರೂರಲ್ ಕಾಲೇಜ್ ವಾಚನಾಲಯ ಕನಕಪುರ	ಕೆ.ಜಿ. ತಿಮ್ಮಪ್ಪ ಅಧ್ಯಕ್ಷರು, ಗ್ರಾಮ ವಿದ್ಯಾ ಪ್ರಚಾರಕ ಸಂಘ, ಕನಕಪುರ	ಅರವಿಂದ ಬಿ. ಜತ್ತಿ, ಅಧ್ಯಕ್ಷರು, ಬಸವ ಸಮಿತಿ ಬೆಂಗಳೂರು ಕೆ. ರಮೇಶ್, ಗೌರವ ಕಾರ್ಯದರ್ಶಿ ಗ್ರಾಮ ವಿದ್ಯಾ ಪ್ರಚಾರ ಸಂಘ, ಕನಕಪುರ	ಸಮಾರೋಪ ಸಮಾರಂಭ : ಎಲ್ಲೇಗೌಡ ಬೆಸಗರಹಳ್ಳಿ
೪೨.	೨೮.೦೮.೦೯	ಗಂ.ಭೀ. ಸ.ಪ.ಪೂ. ಕಾಲೇಜು ಹಗರಿಬೊಮ್ಮನಹಳ್ಳಿ	ಶ್ರೀಮತಿ ಎಂ. ಸುಧಾ ಪ್ರಾಂಶುಪಾಲರು	ಡಾ. ಮೃತ್ಯುಂಜಯ ರುಮಾಲೆ ಉಪನ್ಯಾಸಕರು, ವಿಜಯನಗರ ಕಾಲೇಜ್ ಹೊಸಪೇಟೆ, ರೋ॥ ಮಹಾಂತೇಶ ಪಾಟೀಲ ಕಾರ್ಯದರ್ಶಿ, ರೋಟರಿ ಕ್ಲಬ್	
೪೩.	೩೧.೦೮.೦೯	ಸರಕಾರಿ ಪ್ರೌಢಶಾಲೆ ನಂದಿಹಳ್ಳಿ, ಹೂವಿನ ಹಡಗಲಿ ತಾಲ್ಲೂಕು	ಭೀಮಪ್ಪ, ಮುಖ್ಯೋಪಾಧ್ಯಾಯರು	ಬಿ. ಲಿಂಗಪ್ಪ ಕೆ.ಎಂ. ಶಿವಲಿಂಗಯ್ಯ ನಿವೃತ್ತ ಶಿಕ್ಷಕರು	
೪೪.	೦೨.೦೯.೦೯	ಕೆ. ಪಾಪುಸ್ವಾಮಿ ಪದವಿ ಪೂರ್ವ ಕಾಲೇಜ್ ಹಗರಿಬೊಮ್ಮನಹಳ್ಳಿ	ಸಿ. ಸಿಕಂದರ್, ಪ್ರಾಂಶುಪಾಲರು	ಡಾ. ಮಾಡ್ಲಗೇರಿ ಕೊಟ್ರೇಶ, ಕನ್ನಡ ವಿ.ವಿ. ರೊ॥ ಲಕ್ಷ್ಮೀಪತಿ ಮಾಜಿ ಅಧ್ಯಕ್ಷರು ರೋಟರಿ ಕ್ಲಬ್	
೪೫.	೦೨.೦೯.೦೯	ಸರಕಾರಿ ಪ್ರೌಢಶಾಲೆ ಇಟ್ಟಿಗಿ ಹೂವಿನ ಹಡಗಲಿ ತಾ.	ಶ್ರೀ ಚಂದ್ರಶೇಖರ ಮುಖ್ಯೋಪಾಧ್ಯಾಯರು	ಕೆ.ಎಂ. ಶಿವಲಿಂಗಯ್ಯ ಜಿ. ಬಸವರಾಜ ಮುರಾರಜಿ ಶಾಲೆಯ ಪ್ರಾಂಶುಪಾಲರು ವೀರಭದ್ರಪ್ಪ	
೪೬	೦೩.೦೯.೦೯	ಮುರಾರ್ಜಿ ದೇಸಾಯಿ ವಸತಿಯುತ ಶಾಲೆ ವಲ್ಲಭಾಪುರ	ಬಿ.ಎಲ್.ಎಸ್. ಮೂರ್ತಿ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ	ಡಾ. ಸಿ.ಎಸ್. ವಾಸುದೇವನ್, ಕನ್ನಡ ವಿ.ವಿ. ರೊ॥ ಪ್ರಹ್ಲಾದ್, ಸದಸ್ಯರು, ರೋಟರಿ ಕ್ಲಬ್	

ಕ್ರ.ಸಂ.	ದಿನಾಂಕ	ಸ್ಥಳ	ಅಧ್ಯಕ್ಷತೆ/ಉದ್ಘಾಟನೆ	ಮುಖ್ಯ ಅತಿಥಿಗಳು/ಉಪನ್ಯಾಸಕರು	ಇತರ ವಿಷಯಗಳು
			ಸರ್ವಶ್ರೀ	ಸರ್ವಶ್ರೀ	
೪೭.	೦೩.೦೯.೦೯	ಅನಂತ ಸದ್ವಿದ್ಯಾ ಶಿಕ್ಷಣ ಕಾಲೇಜು ಅರಸೀಕೆರೆ	ಪ್ರೊ. ಕಾಳೇಗೌಡರು ಪ್ರಾಂಶುಪಾಲರು. ಸ.ಕಿ. ಕಾಲೇಜು ಅರಸೀಕೆರೆ	ಎಸ್. ಪರಶಿವಮೂರ್ತಿ ಮೇಲಿನಮಠ, ಅರಸೀಕೆರೆ ಪ್ರೊ. ಮಲ್ಲೇಶಪ್ಪನವರು, ಉಪನ್ಯಾಸಕರು ಕೋಡಿಮಠ, ಪ.ಪೂ. ಕಾಲೇಜ್, ಅರಸೀಕೆರೆ ಪ್ರೊ. ಶಂಕರಪ್ಪ, ಉಪನ್ಯಾಸಕರು, ಅರಸೀಕೆರೆ	
೪೮.	೦೪.೦೯.೦೯.	ಶ್ರೀ ರೇಣುಕ ಸಮನ್ವಯ ಸಂಯುಕ್ತ ಪದವಿಪೂರ್ವ ಕಾಲೇಜ್ ಹಗರಿಬೊಮ್ಮನಹಳ್ಳಿ	ಶ್ರೀಮತಿ ಪಿ. ಇಂದುಮತಿ ಕಾರ್ಯದರ್ಶಿ ಎ.ಸಿ.ವಿ. ಪೀಠ	ಡಾ. ಬಿ.ಜಿ. ಕನಕೇಶಮೂರ್ತಿ ಸ.ಪ್ರ.ದ. ಕಾಲೇಜ್, ಹೊಸಪೇಟೆ ರೋ॥ ಬಾದಾಮಿ ಮೃತ್ಯುಂಜಯ, ಅಧ್ಯಕ್ಷರು ರೋಟರಿ ಕ್ಲಬ್	
೪೯.	೦೭.೦೯.೦೯	ಪ್ರತಿಭಾ ಪದವಿಪೂರ್ವ ಕಾಲೇಜ್, ಅರಸೀಕೆರೆ	ಪ್ರೊ. ಚಂದ್ರಶೇಖರ್ ಪ್ರಾಂಶುಪಾಲರು ಪ್ರ.ಪ.ಪೂ. ಕಾಲೇಜ್ ಅರಸೀಕೆರೆ	ಎಸ್. ಪರಶಿವಮೂರ್ತಿ ಮೇಲಿನಮಠ, ಅರಸೀಕೆರೆ ಪ್ರೊ. ಭೀಮಯ್ಯನವರು, ಇ. ಉಪನ್ಯಾಸಕರು ಪ್ರೊ. ಮಲ್ಲೇಶಪ್ಪನವರು, ಇ. ಉಪನ್ಯಾಸಕರು	ವಿದ್ಯಾರ್ಥಿಗಳಿಗೆ ಇತಿಹಾಸ ಪರಂಪರೆ ಉಳಿಸಿ ಬಗ್ಗೆ ತಿಳುವಳಿಕೆ. ವಿದ್ಯಾರ್ಥಿನಿಯರಿಂದ ಲಾವಣಿ
೫೦.	೦೮.೦೯.೦೯	ಸರ್ಕಾರಿ ಪದವಿಪೂರ್ವ ಬಾಲಕಿಯರ ಕಾಲೇಜ್ ಹೊಸಪೇಟೆ	ಶ್ರೀಕೃಷ್ಣದೇವರಾಯ ಆನೆಗೊಂದಿ ವಂಶಸ್ಥರು ಎ. ಪುರುಷೋತ್ತಮ ಪ್ರಾಚಾರ್ಯರು	ಡಾ. ಕೆ. ರವೀಂದ್ರನಾಥ, ಉಪನ್ಯಾಸ ಮಂಜುನಾಥ ಜೇಪಿನಕಟ್ಟೆ ಕೆ.ಬಿ. ಶ್ರೀನಿವಾಸರೆಡ್ಡಿ, ಸಿಂಡಿಕೇಟ್ ಸದಸ್ಯರು ಕನ್ನಡ ವಿ.ವಿ. ಟಿ. ಮಂಜುನಾಥಸ್ವಾಮಿ, ಉಪನ್ಯಾಸಕರು	
೫೧.	೦೯.೦೯.೦೯	ಸರ್ಕಾರಿ ಬಾಲಕಿಯರ ಪ್ರೌಢಶಾಲೆ (ಮಾ.ಪು) ಹೊಸಪೇಟೆ	ಕೆ. ಚಂದ್ರಪ್ಪ ಮುಖ್ಯೋಪಾಧ್ಯಾಯರು ಸ.ಬಾ.ಪ್ರೌ.ಶಾಲೆ, ಹೊಸಪೇಟೆ	ಶ್ರೀಮತಿ ಡಾ. ಬಿ. ಮಂಜುಳಾ ಕನ್ನಡ ಉಪನ್ಯಾಸಕರು, ಥಿಯೋಸಾಫಿಕಲ್ ಮಹಿಳಾ ಕಾಲೇಜ್, ಹೊಸಪೇಟೆ	ನಿರೂಪಣೆ : ನಾಗರಾಜ
೫೨.	೧೦.೦೯.೦೯	ಸರ್ಕಾರಿ ಪದವಿಪೂರ್ವ ಕಾಲೇಜ್, ಕಮಲಾಪುರ	ಮಹಮ್ಮದ್ ಜಹೀರುದ್ದೀನ್ ಪ್ರಾಚಾರ್ಯರು, ಸ.ಪ.ಪೂ. ಕಾಲೇಜ್, ಕಮಲಾಪುರ	ಡಾ. ಎಚ್.ಎಂ. ಚಂದ್ರಶೇಖರಶಾಸ್ತ್ರಿ ಇತಿಹಾಸ ಉಪನ್ಯಾಸಕರು, ವಿಜಯನಗರ ಕಾಲೇಜ್, ಹೊಸಪೇಟೆ	ನಿರೂಪಣೆ : ಶಿವಕುಮಾರ್ ಮ. ಮಠದ
೫೩.	೧೧.೦೯.೦೯	ಪಿ.ವಿ.ಎಸ್. ಜಿ.ಸಿ. ಪ್ರೌಢಶಾಲೆ, ಹೊಸಪೇಟೆ	ಹೆಚ್. ಹನುಮಂತ ಮುಖ್ಯೋಪಾಧ್ಯಾಯರು	ಕೊಟ್ರಪ್ಪ, ಶಿಕ್ಷಕರು, ರಾಷ್ಟ್ರೋತ್ಥಾನ ಪ್ರೌಢಶಾಲೆ ಹಗರಿಬೊಮ್ಮನಹಳ್ಳಿ	ನಿರೂಪಣೆ : ಸಿ. ವೀರಾಂಜನೇಯ ಮಾಧ್ಯಮಿಕ ಶಿಕ್ಷಕರ ಸಂಘದ ಜಿಲ್ಲಾ ಉಪಾಧ್ಯಕ್ಷರು ಹೊಸಪೇಟೆ

ಕ.ಸಂ.	ದಿನಾಂಕ	ಸ್ಥಳ	ಅಧ್ಯಕ್ಷತೆ/ಉದ್ಘಾಟನೆ	ಮುಖ್ಯ ಅತಿಥಿಗಳು/ಉಪನ್ಯಾಸಕರು	ಇತರ ವಿಷಯಗಳು
೫೪.	೧೨.೦೯.೦೯	ಥಿಯೋಸಾಫಿಕಲ್ ಮಹಿಳಾ ಕಾಲೇಜ್ ಹೊಸಪೇಟೆ	ಸರ್ವಶ್ರೀ ಪ್ರೊ. ಯು. ರಾಘವೇಂದ್ರರಾವ್ ಪ್ರಾಚಾರ್ಯರು	ಸರ್ವಶ್ರೀ ಡಾ. ಕಲವೀರಮನ್ವಾಚಾರ್ ಪ್ರಾಧ್ಯಾಪಕರು, ಕನ್ನಡ ವಿ.ವಿ. ರಾಜಮಾತಾ ಚಂದ್ರಕಾಂತದೇವಿರಾಯ ಆನೆಗೊಂದಿ ವಂಶಸ್ಥರು ಡಾ. ಕೆ.ಎಂ. ಸುರೇಶ್, ಕನ್ನಡ ವಿ.ವಿ. ಬಾಬುಲಾಲ್ ಜೈನ್, ರೈಲ್ವೆ ರಾಷ್ಟ್ರೀಯ ಕ್ರಿಯಾ ಸಮಿತಿ, ಸದಸ್ಯರು, ಹೊಸಪೇಟೆ ಶ್ರೀಮತಿ ಡಾ. ಬಿ. ಮಂಜುಳಾ ಕನ್ನಡ ಉಪನ್ಯಾಸಕಿ	
೫೫.	೧೯.೦೯.೦೯	ವಿವೇಕಾನಂದ ಶಿಕ್ಷಣ ಕಾಲೇಜ್, ಅರಸೀಕೆರೆ	ಪ್ರೊ. ಚಂದ್ರೇಗೌಡ ಪ್ರಭಾರಿ ಪ್ರಾಂಶುಪಾಲರು	ಎಸ್. ಪರಶಿವಮೂರ್ತಿ, ಮೇಲಿನಮಠ ಅರಸೀಕೆರೆ ಪ್ರೊ. ನಿಂಗಪ್ಪ, ಇತಿಹಾಸ ಉಪನ್ಯಾಸಕರು ವಿ.ಶಿ. ಕಾಲೇಜು, ಅರಸೀಕೆರೆ ಪ್ರೊ. ಸಿ.ಎಂ. ಕಪನೇಗೌಡ, ಕನ್ನಡ ಪ್ರಾಧ್ಯಾಪಕರು ಪ್ರೊ. ಮುದ್ದು ಮಲ್ಲೇಶ್	ಇತಿಹಾಸ ದರ್ಶನ ಸಂಚಿಕೆಗಳ ಪ್ರದರ್ಶನ, ಬಿ.ಎಡ್. ವಿದ್ಯಾರ್ಥಿನಿಯರಿಂದ ಐತಿಹಾಸಿಕ ಪರಂಪರೆ ಉಳಿಸಿ ಲಾವಣಿ ವಾಚನ
೫೬	೨೬.೦೯.೦೯	ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜ್ ಅರಸೀಕೆರೆ	ಪ್ರೊ. ನಾಗರಾಜಪ್ಪ ಪ್ರಾಂಶುಪಾಲರು	ಎಸ್. ಪರಶಿವಮೂರ್ತಿ, ಮೇಲಿನಮಠ ಅರಸೀಕೆರೆ ಪ್ರೊ. ಮಲ್ಲೇಶಪ್ಪ, ಕೋಡಿಮಠ ಪ.ಪೂ. ಕಾಲೇಜ್, ಅರಸೀಕೆರೆ	ವಿದ್ಯಾರ್ಥಿನಿಯರಿಗೆ ಐತಿಹಾಸಿಕ ಪರಂಪರೆ ಉಳಿಸಿ ಬಗ್ಗೆ ತಿಳಿವಳಿಕೆ
೫೭.	೨೮.೦೯.೦೯	ಸರ್ಕಾರಿ ಪ್ರಥಮ ದರ್ಜೆ ಕಾಲೇಜ್, ಅರಸೀಕೆರೆ	ಪ್ರೊ. ಚೆನ್ನಬಸವಯ್ಯನವರು ಪ್ರಾಂಶುಪಾಲರು	ಎಸ್. ಪರಶಿವಮೂರ್ತಿ, ಮೇಲಿನಮಠ ಅರಸೀಕೆರೆ ಪ್ರೊ. ಮಲ್ಲೇಶಪ್ಪ, ಉಪನ್ಯಾಸಕರು ಪ್ರೊ. ವಿಶ್ವನಾಥ, ಇತಿಹಾಸ ಉಪನ್ಯಾಸಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅರಸೀಕೆರೆ	ವಿದ್ಯಾರ್ಥಿಗಳಿಗೆ 'ಐತಿಹಾಸಿಕ ಪರಂಪರೆ' ಉಳಿಸಿ ಬಗ್ಗೆ ತಿಳಿವಳಿಕೆ ಮತ್ತು ಪುಸ್ತಕ ಪ್ರದರ್ಶನ

ಶಂಕರ್ ಜಿ. ಬೆಟಗೇರಿ, ಇತಿಹಾಸ ಉಪನ್ಯಾಸಕರು, ಪಿ.ಯು. ಕಾಲೇಜ್, ಸೋಗಿ, ಹೂವಿನಹಡಗಲಿ ತಾಲ್ಲೂಕು, ಅವರು ತಮ್ಮ ಕಾಲೇಜಿನಲ್ಲಿ ಮಕ್ಕಳಿಗೆ ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ಕಾರ್ಯಕ್ರಮವನ್ನು ಆಯೋಜನೆ ಮಾಡಿ ಇತಿಹಾಸದ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡಿರುವುದಾಗಿ ತಿಳಿಸಿದ್ದಾರೆ. (೩.೦೯.೦೯).

ಮೈಸೂರಿನ ಹೆಚ್.ಎಸ್. ಉಷಾರಾಣಿಯವರು ತಮ್ಮ ದಿನಾಂಕ : ೨೬.೧೧.೧೦ರ ಪತ್ರದ ಮೂಲಕ ಮೈಸೂರು ಘಟಕದ ಸದಸ್ಯರಾದ ಡಾ. ಬಿ.ಪಿ. ಇಂದಿರಾ ಅವರಿಂದ ಕೋಣನೂರಿನ ಪ್ರಥಮ ದರ್ಜೆ ಕಾಲೇಜಿನಲ್ಲಿ; ಡಾ. ಬಿ.ಪಿ. ಸುಧಾಮಣಿ ಅವರು ಕೊಳ್ಳೇಗಾಲದ ಪ್ರಥಮ ದರ್ಜೆ ಕಾಲೇಜಿನಲ್ಲಿ; ಡಾ. ಹೆಚ್.ಎಸ್. ಉಷಾರಾಣಿ ಮತ್ತು ಎಂ.ಎನ್. ಪ್ರಭಾಕರ್ ಅವರು ಟಿ. ನರಸೀಪುರದ ವಿದ್ಯೋದಯ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಅವರ ಮೂಲಕ ಎಡದೊರೆ ಗ್ರಾಮದ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದ ಮಹತ್ವ ತಿಳಿಸಿ, ಸ್ಥಳೀಯ ಅಧ್ಯಾಪಕರು ವಿದ್ಯಾರ್ಥಿಗಳಿಗೆ ತಮ್ಮ ಸುತ್ತಮುತ್ತಲಿನ ಸ್ಮಾರಕಗಳು, ಕೆರೆಗಳು, ಕಡತಗಳ ರಕ್ಷಣೆಗೆ ಶ್ರಮಿಸಲು ಕರೆ ನೀಡಿದರು ಎಂಬ ವರದಿಯನ್ನು ನೀಡಿರುತ್ತಾರೆ.

ಧಾರವಾಡದ ಡಾ. ಎಸ್.ಕೆ. ಜೋಶಿ ಅವರು ತಮ್ಮ ದಿನಾಂಕ : ೨೨.೦೮.೦೯ರ ಪತ್ರದ ಮೂಲಕ ಅವರು ಧಾರವಾಡದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಗದಗ, ರಾಜ್ಯ ನಿವೃತ್ತರ ಸಂಘ, ಆದರ್ಶ ಇಂಗ್ಲಿಷ್ ಮೀಡಿಯಂ ಸ್ಕೂಲ್, ವಾಯುವ್ಯ ಸಾರಿಗೆ ಸಂಸ್ಥೆ, ಮುಂತಾದೆಡೆಗಳಲ್ಲಿ ಭಿತ್ತಿ ಪತ್ರಗಳನ್ನು ಹಂಚಿ 'ಐತಿಹಾಸಿಕ ಪರಂಪರೆ ಉಳಿಸಿ' ಬಗ್ಗೆ ವಿವರಣೆ ನೀಡಿರುವುದಾಗಿ ತಿಳಿಸಿದ್ದಾರೆ.

ಇಪ್ಪತ್ತಮೂರನೆಯ ವಾರ್ಷಿಕ ಸಮ್ಮೇಳನ

ಬಾಳೆಹೊನ್ನೂರಿನ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ (ರಿ.)ಯ ಆಶ್ರಯದಲ್ಲಿ ೨೦೦೯ರ ಅಕ್ಟೋಬರ್ ೧೦, ೧೧ ಮತ್ತು ೧೨ರಂದು ನಡೆದ ಕರ್ನಾಟಕ ಇತಿಹಾಸ ಅಕಾದೆಮಿಯ ಇಪ್ಪತ್ತಮೂರನೆಯ ವಾರ್ಷಿಕ ಸಮ್ಮೇಳನಕ್ಕೆ ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನ ಮಹಾಸಂಸ್ಥಾನ ಪೀಠ ಆಶ್ರಯ ನೀಡಿತ್ತು.

ದಿನಾಂಕ ೧೦-೧೦-೨೦೦೯ರಂದು ಬೆಳಿಗ್ಗೆ ೧೦-೩೦ ಗಂಟೆಗೆ ಕರ್ನಾಟಕ ಸರ್ಕಾರದ ಇಂಧನ ಸಚಿವರು ಹಾಗೂ ಚಿಕ್ಕಮಗಳೂರು ಜಿಲ್ಲೆಯ ಉಸ್ತುವಾರಿ ಸಚಿವರಾದ ಮಾನ್ಯ ಶ್ರೀ ಕೆ.ಎಸ್. ಈಶ್ವರಪ್ಪ ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ಡಾ॥ ಎಂ.ಜಿ. ನಾಗರಾಜ್ ಮತ್ತು ಡಾ॥ ಪಿ.ವಿ. ಕೃಷ್ಣಮೂರ್ತಿ ಸಂಪಾದಿತ **ಇತಿಹಾಸ ದರ್ಶನ**ದ ೨೪ನೆಯ ವಾರ್ಷಿಕ ಸಂಚಿಕೆಯನ್ನು ಬೆಂಗಳೂರು ಉತ್ತರ ಕ್ಷೇತ್ರದ ಲೋಕಸಭಾ ಸದಸ್ಯರಾದ ಶ್ರೀ ಡಿ.ಬಿ. ಚಂದ್ರೇಗೌಡ ಬಿಡುಗಡೆ ಮಾಡಿದರು. ಹಿರಿಯ ಇತಿಹಾಸ ವಿದ್ವಾಂಸರೂ, ಶಾಸನ ಸಂಶೋಧಕರೂ ಆದ ಡಾ॥ ಎಂ.ಜಿ. ನಾಗರಾಜ್ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಶ್ರೀಮದ್ರಂಭಾಪುರೀ ಜಗದ್ಗುರುಗಳು ಶಾಸನ ಸಂಶೋಧಕಿ ಶ್ರೀಮತಿ ಹನುಮಾಕ್ಷಿ ಗೋಗಿ ಅವರಿಗೆ ೨೦೦೯ನೆಯ ಸಾಲಿನ ಡಾ॥ ಬಾ.ರಾ. ಗೋಪಾಲ್ ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಉದ್ಘಾಟನಾ ಸಮಾರಂಭದಲ್ಲಿ ಕಳೆದ ೨೩ನೆಯ ಸಮ್ಮೇಳನದ ನಂತರ ಪಿಎಚ್.ಡಿ. ಪದವಿ ಪಡೆದ ಅಕಾದೆಮಿಯ ೧೭ ಸದಸ್ಯರನ್ನು ಚಿಕ್ಕಮಗಳೂರು ವಿಧಾನಸಭಾ ಸದಸ್ಯರಾದ ಶ್ರೀ ಸಿ.ಟಿ. ರವಿ ಸನ್ಮಾನಿಸಿದರು. ಪಿಎಚ್.ಡಿ./ಡಿ.ಲಿಟ್. ಪದವಿಯ ಗೌರವ ಪಡೆದವರ ಪಟ್ಟಿ ಈ ಕೆಳಕಂಡಂತಿದೆ:

ಕ್ರ. ಸಂ.	ಪಿಎಚ್.ಡಿ./ಡಿ.ಲಿಟ್ ಪದವಿ ಪಡೆದವರ ಹೆಸರು	ಮಾರ್ಗದರ್ಶಕರ ಹೆಸರು	ವಿಷಯ	ವಿಶ್ವವಿದ್ಯಾಲಯ
೧	ಹರಿಹರ ಶ್ರೀನಿವಾಸರಾವ್	ಡಿ.ಲಿಟ್	ಕರ್ನಾಟಕದಲ್ಲಿ ಜಲ ವಿಜ್ಞಾನ (ಶಾಸನ ಮತ್ತು ಸಾಹಿತ್ಯ ಕೃತಿಗಳ ಆಧಾರಿತ)	ಕನ್ನಡ ವಿಶ್ವವಿದ್ಯಾಲಯ, ಹಂಪಿ
೨	ಸಂತೋಷ ಸುಭಾಷ ಹಾನಗಲ್ಲ	ಡಾ. ಎಂ.ಟಿ. ಕಾಂಬಳೆ	ಬೆಳಗಾವಿ ಜಿಲ್ಲೆಯ ವಾಡೆಗಳು - ಒಂದು ಅಧ್ಯಯನ	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೩	ಜಯಶ್ರೀ ಬಾಬುರಾವ್			ಕನ್ನಡ ವಿಶ್ವವಿದ್ಯಾಲಯ, ಹಂಪಿ
೪	ದೇವರಾಜ ಓ.	ಡಾ. ವಿಜಯ್ ಪೂಣಚ್ಚ ತಂಬಂಡ	ಮಧ್ಯಕಾಲೀನ ಕರ್ನಾಟಕ ಚರಿತ್ರೆಯಲ್ಲಿ ದಲಿತರು	ಕನ್ನಡ ವಿಶ್ವವಿದ್ಯಾಲಯ, ಹಂಪಿ
೫	ಇಂದುಮತಿ ಪಾಟೀಲ	ಡಾ. ಸುಗೀತಾ ಸುವರ್ಣ	ಹಿರೇಮಠ ಸಂಸ್ಥಾನ ಭಾಲ್ಕಿ: ಒಂದು ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ (೧೯೦೪-೨೦೦೬)	ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
೬	ಸಂತೋಷ್ ಎನ್.ಜಿ.	ಡಾ. ಅನುರಾಧಾ ಪಟೇಲ್	ದಾವಣಗೆರೆ ಜಿಲ್ಲೆಯಲ್ಲಿ ವಿಜಯನಗರ ಮತ್ತು ನಾಯಕರ ಕಾಲದ ಕೃಷಿ ವ್ಯವಸ್ಥೆ (ಕ್ರಿ.ಶ. ೧೩೩೬-೧೮೦೦)	ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
೭	ಎಂ.ಎಚ್.ವಿಜಯಕುಮಾರ್	ಪ್ರೊ. ಲಕ್ಷ್ಮಣ್ ತೆಲಗಾವಿ	ಕರ್ನಾಟಕದಲ್ಲಿ ಮರುಳ ಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು : ಒಂದು ಚಾರಿತ್ರಿಕ ಅಧ್ಯಯನ	ಕನ್ನಡ ವಿಶ್ವವಿದ್ಯಾಲಯ, ಹಂಪಿ
೮	ತುಲಸೀರಾಮ ನಾಯಕ್	ಡಾ. ಷಡಕ್ಷರಯ್ಯ	ಬೆಂಗಳೂರು ಸಂಸ್ಥಾಪಕ ಹಿರಿಯ ಕೆಂಪೇಗೌಡ ಮತ್ತು ಬೆಂಗಳೂರು ನಗರ ಬೆಳವಣಿಗೆ-ಒಂದು ಅಧ್ಯಯನ	ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೯	ಇಂದಿರಾ ಹೆಗಡೆ	ಡಿ.ಲಿಟ್.,	ತುಳುವರ ಮೂಲಸ್ಥಾನ 'ಆದಿ ಆಲಡೆ' ಆರಾಧನೆ, ಪರಂಪರೆ ಮತ್ತು ಆಧುನಿಕತೆ	ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೦	ರಂಗಸ್ವಾಮಿ ಆರ್.	ಡಾ. ಎಸ್.ಪಿ. ಪಾಡಿಗಾರ್	ಕೃಷ್ಣರಾಜಪೇಟೆ ಪ್ರದೇಶದ ದೇವಾಲಯಗಳು: ಒಂದು ಸಾಂಸ್ಕೃತಿಕ ಅಧ್ಯಯನ	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೧	ಅನಿತ ಎಂ.ಎಸ್.			ಮೈಸೂರು ವಿಶ್ವವಿದ್ಯಾಲಯ.
೧೨	ಸುರೇಶ ಬಿ.ಸಿ.	ಡಾ. ಎನ್.ಎಸ್. ರಂಗರಾಜು	ಚಿಕ್ಕಮಗಳೂರು ಜಿಲ್ಲೆಯ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪ – ಒಂದು ವಿವರಣಾತ್ಮಕ ಅಧ್ಯಯನ	ಮೈಸೂರು ವಿಶ್ವವಿದ್ಯಾನಿಲಯ ಮೈಸೂರು
೧೩	ಅನುರಾಧ ವಿ.	ಡಾ. ಎಂ.ಎಸ್. ಕೃಷ್ಣಮೂರ್ತಿ	*Development of temple architecture in Southern Karnataka (with special reference Bangalore and Kolar districts).*	ಮೈಸೂರು ವಿಶ್ವವಿದ್ಯಾನಿಲಯ ಮೈಸೂರು
೧೪	ಶಶಿಶೇಖರ್ ರೆಡ್ಡಿ ಆರ್.ಜಿ.		*The military system under Vijayanagar empire*	ಪೊಟ್ಟಿ ಶ್ರೀರಾಮುಲು ತೆಲುಗು ವಿಶ್ವವಿದ್ಯಾಲಯ, ಹೈದರಾಬಾದ್
೧೫	ಮೈಥಿಲಿ ಬಿ.ಜಿ.	ಡಾ. ಸುಧಾಮಣಿ ಬಿ.ವಿ.	*Some Kannadiga English professors in the History of Kannada rennaisance and unification movement*	ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
೧೬	ಸಿದ್ದಯ್ಯ ಮಠದ್ (ಸಿದ್ದಲಿಂಗ ಸ್ವಾಮೀಜಿ)		ವೀರಶೈವ ಧರ್ಮ	Open International University for compli mentary medicines, Colombo
೧೭	ಶೋಭಾ	ಡಾ. ಮಲ್ಲಿಕಾರ್ಜುನ	ಮಂಡ್ಯ ಜಿಲ್ಲೆಯ ಹೊಯ್ಸಳ ದೇವಾಲಯಗಳ ಹಿನ್ನೆಲೆಯಲ್ಲಿ ಅಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸ	ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಸಮ್ಮೇಳನದಲ್ಲಿ ೧೦-೧೦-೨೦೦೯ರ ಮಧ್ಯಾಹ್ನ ೨-೩೦ ಗಂಟೆಯಿಂದ ೧೨-೧೦-೨೦೦೯ರ ಮಧ್ಯಾಹ್ನ ೪ - ೩೦ ಗಂಟೆಯವರೆಗೆ ೧೪ ಗೋಷ್ಠಿಗಳು ನಡೆದು, ಒಟ್ಟು ೧೨೮ ಸಂಪ್ರಬಂಧಗಳು ಮಂಡನೆಯಾದವು. ಗೋಷ್ಠಿಗಳ ಅಧ್ಯಕ್ಷತೆಯನ್ನು ಕ್ರಮವಾಗಿ ಡಾ॥ ಅ.ಸುಂದರ, ಡಾ॥ ಬಿ. ರಾಜಶೇಖರಪ್ಪ, ಪ್ರೊ॥ ಲಕ್ಷ್ಮಣ್ ತೆಲಗಾವಿ, ಶ್ರೀ ಎಂ.ಜಿ. ಪಾಟೀಲ, ಡಾ॥ ಹೆಚ್. ಚಂದ್ರಶೇಖರ್, ಡಾ॥ ಸೂರ್ಯನಾಥ ಕಾಮತ್, ಡಾ॥ ಎ.ಕೆ.ಶಾಸ್ತ್ರಿ, ಡಾ॥ ರು.ಮ.ಷಡಕ್ಷರಯ್ಯ, ಡಾ॥ ಚೆನ್ನಕ್ಕ ಪಾವಟೆ, ಡಾ॥ ಪಿ.ವಿ. ಕೃಷ್ಣಮೂರ್ತಿ, ಡಾ॥ ಎಂ.ಜಿ. ನಾಗರಾಜ್, ಡಾ॥ ಜ್ಯೋತ್ಸ್ನ ಕಾಮತ್ ಮತ್ತು ಡಾ॥ ಪಿ.ಎನ್. ನರಸಿಂಹಮೂರ್ತಿ, ಅವರು ವಹಿಸಿದ್ದರು, ಗೋಷ್ಠಿಗಳನ್ನು ಕ್ರಮವಾಗಿ ಡಾ॥ ಎಸ್.ಎಂ.ನಾಗಭೂಷಣ, ಡಾ॥ ಎನ್.ನಂದೀಶ್ವರ, ಡಾ॥ ಹೆಚ್.ಎಸ್. ಉಷಾರಾಣಿ, ಡಾ॥ ಪಿ.ವಿ. ಕೃಷ್ಣಮೂರ್ತಿ, ಡಾ॥ ಜಗದೀಶ್, ಡಾ॥ ಎಂ.ಎಸ್. ಅನಿತ, ಶ್ರೀ ಅದಪ್ಪ ಪಾಸೋಡಿ, ಡಾ॥ ಕಲವೀರ ಮನ್ವಾಚಾರ್, ಡಾ॥ ಕೆಳದಿ ವೆಂಕಟೇಶಜೋಯಿಸ್, ಶ್ರೀ ಸಂತೇಬೆನ್ನೂರು ಸುಮತೀಂದ್ರ ನಾಡಿಗ್, ಡಾ॥ ಎಂ. ಕೊಟ್ರೇಶ್, ಡಾ॥ ಎಸ್.ಆರ್. ಲಲಿತಾಂಬ, ಮತ್ತು ಡಾ॥ ಕೆ. ವಸಂತಲಕ್ಷ್ಮಿ, ನಿರೂಪಿಸಿದರು.

ಸಮಾರೋಪ ಸಮಾರಂಭ

ದಿನಾಂಕ ೧೨-೧೦-೨೦೦೯ ರಂದು ಸಂಜೆ ೫ ಗಂಟೆಗೆ ಬಾಳೆಹೊನ್ನೂರಿನ ಶ್ರೀ ಜಗದ್ಗುರು ರಂಭಾಪುರೀ ವೀರ ಸಿಂಹಾಸನ ಮಹಾಸಂಸ್ಥಾನ ಪೀಠದ ಸಭಾಂಗಣದಲ್ಲಿ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರ ಸಾನ್ನಿಧ್ಯ ಮತ್ತು ಎಡೆಯೂರು ಕ್ಷೇತ್ರದ ಶ್ರೀಷ.ಬ್ರ.ರೇಣುಕ ಶಿವಾಚಾರ್ಯ ಸ್ವಾಮಿಗಳ ನೇತೃತ್ವದಲ್ಲಿ ಸಮ್ಮೇಳನದ ಸಮಾರೋಪ ಸಮಾರಂಭ ನಡೆಯಿತು. ಮುಖ್ಯ ಅತಿಥಿಗಳಾಗಿ ಚಿಕ್ಕಮಗಳೂರು ಲೋಕಸಭಾ ಸದಸ್ಯರಾದ ಶ್ರೀ ಡಿ.ವಿ.ಸದಾನಂದ ಗೌಡರು, ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಾದ ಶ್ರೀ ಆರ್. ನಾರಾಯಣಸ್ವಾಮಿ ಮತ್ತು ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಗಾಯತ್ರಿ ಶಾಂತೇಗೌಡ ಆಗಮಿಸಿದ್ದರು. ಭಾಷಾ ವಿಜ್ಞಾನಿಗಳೂ, ಸಂಶೋಧಕರೂ ಆದ ಡಾ॥ ಸಂಗಮೇಶ ಸವದತ್ತಿ ಮಠ ಅವರು ಸಮಾರೋಪ ಭಾಷಣ ಮಾಡಿದರು. ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿಕೊಟ್ಟುದಕ್ಕಾಗಿ ಅಕಾದೆಮಿಯು ಆಶ್ರಯದಾತ ಮಿತ್ರರಿಗೆ ಧನ್ಯವಾದಗಳನ್ನು ಸಲ್ಲಿಸಿತು.

ಸರ್ವಸದಸ್ಯರ ಸಭೆಯ ವರದಿ– ೨೦೦೮

ದಿನಾಂಕ ೧೧-೧೦-೨೦೦೯, ಭಾನುವಾರ ಸಂಜೆ ೬-೩೦ ಗಂಟೆಗೆ, ಅಕಾದೆಮಿಯ ೨೩ನೆಯ ವಾರ್ಷಿಕ ಸಮ್ಮೇಳನದ ಸಭಾಸ್ಥಾನವಾದ, ಬಾಳೆಹೊನ್ನೂರಿನ ಜಗದ್ಗುರು ಶ್ರೀಮದ್ರಂಭಾಪುರೀ ವೀರಸಿಂಹಾಸನ ಪೀಠದ ಆವರಣದಲ್ಲಿ, ಆ ಮೊದಲೇ ಸರ್ವಸದಸ್ಯರಿಗೂ ಪತ್ರಮುಖೇನ ತಿಳಿಸಿದ್ದ ಪ್ರಕಾರ, ಅಕಾದೆಮಿಯ ಅಧ್ಯಕ್ಷರಾದ ಡಾ॥ ಸೂರ್ಯನಾಥ ಕಾಮತ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸರ್ವಸದಸ್ಯರ ಸಭೆಯ ನಡವಳಿಕೆಗಳು ಈ ಕೆಳಕಂಡಂತಿವೆ.

ಸಭೆಯಲ್ಲಿ ೧೦೮ ಸದಸ್ಯರು ಹಾಜರಿದ್ದರು.

ಸರ್ವಸದಸ್ಯರ ಸಭೆಯ ತಿಳುವಳಿಕೆ ಪತ್ರವನ್ನು ಅಂಚೆಯ ಮೂಲಕ ಎಲ್ಲ ಸದಸ್ಯರಿಗೂ ಮೊದಲೇ ಕಳುಹಿಸಲಾಗಿತ್ತು; ಅಧ್ಯಕ್ಷರಾದ ಡಾ॥ ಸೂರ್ಯನಾಥ ಕಾಮತ್ ಅವರು ಸಭೆಯನ್ನು ಆರಂಭಿಸಲು ಹಾಜರಿದ್ದ ಸದಸ್ಯರ ಅನುಮತಿ ಕೇಳಿದರು. ಸರ್ವಸದಸ್ಯರ ಸಭೆಯ ಆರಂಭಕ್ಕೆ ಅನುಮೋದನೆ ನೀಡಬಹುದೆಂಬ ಶ್ರೀ ಎಂ.ಎನ್. ಪ್ರಭಾಕರ್ ಅವರ ಸೂಚನೆಯನ್ನು ಡಾ॥ ಪಿ.ಎನ್. ನರಸಿಂಹಮೂರ್ತಿ ಅನುಮೋದಿಸಿದರು. ಸರ್ವಸದಸ್ಯರೂ ಸಭೆಯ ಆರಂಭಕ್ಕೆ ಅನುಮೋದನೆ ನೀಡಿದರು.

ಸರ್ವಸದಸ್ಯರ ಸಭೆಯು ಡಾ॥ ಕೂ.ಸ. ಅಪರ್ಣ ಅವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಕಳೆದ ಸರ್ವಸದಸ್ಯರ ಸಭೆಯ ನಂತರ ಈವರೆಗೆ ನಿಧನರಾಗಿರುವ ಅಕಾದೆಮಿಯ ಸದಸ್ಯರ ನಿಧನಕ್ಕಾಗಿ ಸಭೆಯು ಒಂದು ನಿಮಿಷಗಳ ಮೌನಾಚರಣೆಯ ಮೂಲಕ ಶ್ರದ್ಧಾಂಜಲಿ ಅರ್ಪಿಸಿತು. ಶ್ರದ್ಧಾಂಜಲಿಗೆ ಪಾತ್ರರಾದವರ ಹೆಸರುಗಳು ಈ ಕೆಳಕಂಡಂತಿವೆ.

ಕರ್ನಾಟಕ ಇತಿಹಾಸ ಅಕಾದೆಮಿಯ ಸದಸ್ಯರು

೧. ಶ್ರೀ ಮಾಧವ ನಾ. ಕಟ್ಟಿ, ಮೈಸೂರು ೨. ಶ್ರೀ ಕೇಶವ ಉಮರ್ಜಿ, ಜಮಖಂಡಿ, ೩. ಶ್ರೀ ಬಸವರಾಜ ಅಮ್ಮಣಗಿ

ಸದಸ್ಯೇತರರು

೧. ಡಾ॥ ಬಿ. ನರಸಿಂಹಯ್ಯ, ಬೆಂಗಳೂರು ೨. ಡಾ॥ ಕೆ.ಆರ್. ಬಸವರಾಜ, ಧಾರವಾಡ

ಶ್ರದ್ಧಾಂಜಲಿ ಸಲ್ಲಿಕೆಯ ನಂತರ, ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರನ್ನೂ, ಅಕಾದೆಮಿಯ ಪ್ರಧಾನ ಕಾರ್ಯದರ್ಶಿ ಡಾ॥ ಎಚ್.ಎಸ್. ಗೋಪಾಲ ರಾವ್ ಸ್ವಾಗತಿಸಿದರು.

೨೦೦೮ನೆಯ ಸಾಲಿನ ವರದಿ

೨೦೦೮ನೆಯ ಸಾಲಿನ ವಾರ್ಷಿಕ ವರದಿಯನ್ನು ಪ್ರಧಾನ ಕಾರ್ಯದರ್ಶಿ ಡಾ॥ ಎಚ್.ಎಸ್. ಗೋಪಾಲರಾವ್ ಮಂಡಿಸಿದರು. ವಾರ್ಷಿಕ ವರದಿಯ ಮುದ್ರಿತ ಪ್ರತಿಗಳನ್ನು ಸಭೆಯ ಆರಂಭದಲ್ಲೇ ಹಾಜರಿದ್ದ ಎಲ್ಲ ಸದಸ್ಯರಿಗೂ ವಿತರಿಸಲಾಗಿತ್ತು. ಅದರ ವಾಚನದ ಅವಶ್ಯಕತೆ ಇದೆಯೇ ಎಂದು ಅಕಾದೆಮಿಯ ಅಧ್ಯಕ್ಷರಾದ ಡಾ॥ ಸೂರ್ಯನಾಥ ಕಾಮತ್ ಪ್ರಶ್ನಿಸಿದರು. ವಾಚನದ ಅವಶ್ಯಕತೆ ಇಲ್ಲವೆಂದು ಹಾಜರಿದ್ದ ಸದಸ್ಯರೆಲ್ಲ ಘೋಷಿಸಿದರು.

೨೦೦೮ನೆಯ ಸಾಲಿನ ವರದಿಯನ್ನು ಸ್ವೀಕರಿಸಬಹುದೆಂಬ ಶ್ರೀ ಕು.ಬಾ. ಸದಾಶಿವಪ್ಪ ಅವರ ಸೂಚನೆಯನ್ನು ಡಾ॥ ಚೆನ್ನಕ್ಕ ಪಾವಟೆ ಅನುಮೋದಿಸಿದರು.

ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಗಳ ವರದಿಗಳನ್ನು ಸಕಾಲಕ್ಕೆ ಅಕಾದೆಮಿಗೆ ತಲುಪಿಸಿದರೆ, ಅವುಗಳನ್ನು ಇತಿಹಾಸ ದರ್ಶನದಲ್ಲಿ ಪ್ರಕಟಿಸಲು ಅನುಕೂಲವಾಗುತ್ತದೆ ಎಂದು ಪ್ರಧಾನ ಕಾರ್ಯದರ್ಶಿ ಮನವಿ ಮಾಡಿದರು.

೨೦೦೮ನೆಯ ಸಾಲಿನ ಪರಿಶೋಧಿತ ಲೆಕ್ಕ ಪತ್ರ ಮಂಡನೆ

೨೦೦೮ನೆಯ ಸಾಲಿನ ವರದಿಯ ಜೊತೆಗೇ ೨೦೦೮ನೆಯ ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳ ಮುದ್ರಿತ ಪ್ರತಿಗಳನ್ನೂ ಸದಸ್ಯರಿಗೆ ನೀಡಲಾಗಿತ್ತು. ಅದನ್ನು ಕೋಶಾಧಿಕಾರಿ ಶ್ರೀ ಎಂ.ಜಿ. ಪಾಟೀಲ್ ಮಂಡಿಸಿದರು.

೨೦೦೮ನೆಯ ಸಾಲಿನ ಪರಿಶೋಧಿತ ಲೆಕ್ಕಪತ್ರಗಳನ್ನು ಒಪ್ಪಬಹುದೆಂಬ ಡಾ॥ ಎಂ.ಜಿ. ನಾಗರಾಜ್ ಅವರ ಸೂಚನೆಯನ್ನು ಪ್ರೊ॥ ಲಕ್ಷ್ಮಣ್ ತೆಲಗಾವಿ ಅನುಮೋದಿಸಿದರು.

೨೦೦೯ನೆಯ ಸಾಲಿನ ಮುಂಗಡ ಲೆಕ್ಕ ಪತ್ರಗಳು

೨೦೦೮ನೆಯ ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳ ಜೊತೆಗೇ ೨೦೦೯ನೆಯ ಸಾಲಿನ ಮುಂಗಡ ಲೆಕ್ಕ ಪತ್ರಗಳ ಪ್ರತಿಗಳನ್ನೂ ಸದಸ್ಯರಿಗೆ ನೀಡಲಾಗಿತ್ತು. ಅದನ್ನು ಕೋಶಾಧಿಕಾರಿ ಶ್ರೀ ಎಂ.ಜಿ. ಪಾಟೀಲ್ ಮಂಡಿಸಿದರು. ಸಂಸ್ಥಾ ಸದಸ್ಯತ್ವವನ್ನು ಹೆಚ್ಚಿಸಲು ಎಲ್ಲ ಸದಸ್ಯರೂ ಸಹಕರಿಸಬೇಕೆಂದು ಕೋಶಾಧಿಕಾರಿ ಮನವಿ ಮಾಡಿದರು.

೨೦೦೯ನೆಯ ಸಾಲಿನ ಮುಂಗಡ ಬಜೆಟ್ ಅನ್ನು ಒಪ್ಪಬಹುದೆಂದು ಡಾ॥ ಟಿ. ಮುರಿಗೇಶಿ ಅವರ ಸೂಚನೆಯನ್ನು ಶ್ರೀಮತಿ ಹನುಮಾಕ್ಷಿ ಗೋಗಿ ಅನುಮೋದಿಸಿದರು. ಸರ್ವ ಸದಸ್ಯರ ಅನುಮೋದನೆಯೂ ದೊರೆಯಿತು.

೨೦೦೯ನೆಯ ಸಾಲಿಗೆ ಆಡಿಟರ್ ನೇಮಕ

ಈವರೆಗೆ ಅಕಾದೆಮಿಯ ಲೆಕ್ಕಪತ್ರಗಳನ್ನು ಪರಿಶೋಧಿಸಿ ಕೊಟ್ಟಿರುವ ಶ್ರೀ ಕೆ.ವಿ. ಆಚಾರ್ಯ (ಆಚಾರ್ಯ ಅಂಡ್ ಕಂಪೆನಿ), ಬೆಂಗಳೂರು ಅವರನ್ನೇ ೨೦೦೯ನೆಯ ಸಾಲಿನ ಲೆಕ್ಕ ಪತ್ರಗಳ ಪರಿಶೋಧನೆಗೂ, ಹಿಂದಿನ ವರ್ಷ ನೀಡಿದ್ದಷ್ಟೇ ಸಂಭಾವನೆಯನ್ನು ನೀಡಿ ನೇಮಿಸಿಕೊಳ್ಳಬಹುದೆಂಬ ಶ್ರೀ ಸುಮತೀಂದ್ರ ನಾಡಿಗ್ ಅವರ ಸೂಚನೆಯನ್ನು ಪ್ರೊ॥ ಲಕ್ಷ್ಮಣ್ ತೆಲಗಾವಿ ಅನುಮೋದಿಸಿದರು.

ಠರಾವುಗಳ ಮಂಡನೆ

ಕಳೆದ ವರ್ಷ ಸಮ್ಮೇಳನದಲ್ಲಿ ಸ್ವೀಕರಿಸಲಾಗಿದ್ದ ಠರಾವುಗಳ ಫಲಿತಾಂಶದ ಬಗ್ಗೆ ಶ್ರೀಮತಿ ಹನುಮಾಕ್ಷಿ ಗೋಗಿ ಪ್ರಶ್ನಿಸಿದರು. ಅದಕ್ಕೆ ಅಧ್ಯಕ್ಷರಾದ ಡಾ॥ ಸೂರ್ಯನಾಥ ಕಾಮತ್ ಅವರು ಉತ್ತರಿಸಿ, ವಸ್ತುಸಂಗ್ರಹಾಲಯದ ಬಗ್ಗೆ ಸರ್ಕಾರ ಕೈಗೊಂಡಿರುವ ಕೆಲವು ನಿರ್ಧಾರಗಳನ್ನು ಸದಸ್ಯರ ಗಮನಕ್ಕೆ ತಂದು ಆ ಬಗ್ಗೆ ಆಶಾವಾದ ಇದೆ ಎಂದರು.

ಇತರ ವಿಷಯಗಳು

೧. ಅಕಾದೆಮಿಗೆ ದೇಣಿಗೆ ನೀಡಿದವರ ಹೆಸರುಗಳನ್ನು ಇತಿಹಾಸ ದರ್ಶನದಲ್ಲಿ ಪ್ರಕಟಿಸಬೇಕೆಂದು ಶ್ರೀ ಟಿ.ಎಚ್.ಎಂ. ಬಸವರಾಜು ಮನವಿ ಮಾಡಿದರು. ರೂ.೧,೦೦೦/-(ಒಂದು ಸಾವಿರ)ಕ್ಕಿಂತ ಹೆಚ್ಚು ದೇಣಿಗೆ ನೀಡಿದವರ ಹೆಸರನ್ನು ಇತಿಹಾಸ ದರ್ಶನದಲ್ಲಿ ಪ್ರಕಟಿಸಬಹುದೆಂಬ ತಿದ್ದುಪಡಿಯೊಂದಿಗೆ ಟಿ.ಎಚ್.ಎಂ. ಬಸವರಾಜು ಅವರ ಮನವಿಯನ್ನು ಅನುಮೋದಿಸಬಹುದೆಂಬ ಡಾ॥ ಎಂ.ಜಿ. ನಾಗರಾಜ್ ಅವರ ಸೂಚನೆಯನ್ನು ಪ್ರೊ॥ ಲಕ್ಷ್ಮಣ್ ತೆಲಗಾವಿ ಅನುಮೋದಿಸಿದರು.

   ಶ್ರೀ ಟಿ.ಎಚ್.ಎಂ. ಬಸವರಾಜು ಸ್ಥಳದಲ್ಲೇ ರೂ.೧,೦೦೦/- (ಒಂದು ಸಾವಿರ) ದೇಣಿಗೆ ನೀಡಿದರು.

೨. ಅಶೋಕನ ಶಾಸನಗಳನ್ನು ಮತ್ತು ದೊರೆತಿರುವ ಭಾವ ಶಿಲ್ಪದ ನೆರವಿನಿಂದ ಅಶೋಕನ ಶಿಲ್ಪದ ಚಿತ್ರವನ್ನು ಸಿದ್ಧಪಡಿಸಿ, ಪ್ರಚಾರಕ್ಕೆ ಬಳಸಿಕೊಳ್ಳಬೇಕು ಎಂಬ ಡಾ॥ ಜ್ಯೋತ್ಸ್ನಾ ಕಾಮತ್ ಅವರ ಸೂಚನೆಗೆ ಯಾರಿಂದಲೂ ಬೆಂಬಲ ದೊರೆಯಲಿಲ್ಲ.

೩. ಈಗಾಗಲೇ ರಚಿತವಾಗಿರುವ ಕಿತ್ತೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಬೇಗನೆ ಅಧ್ಯಕ್ಷರನ್ನು ನೇಮಕಾತಿ ಮಾಡಲು ಸಂಬಂಧಿಸಿದವರಿಗೆ ಸೂಚನೆ ನೀಡಬೇಕೆಂಬ ಶ್ರೀಮತಿ ಹನುಮಾಕ್ಷಿ ಸೂಚನೆಯನ್ನು ಡಾ॥ ಸೂರ್ಯನಾಥ ಕಾಮತ್ ಅನುಮೋದಿಸಿದರು.

೪. ಕಳೆದ ವರ್ಷದ ಸಮ್ಮೇಳನದಲ್ಲಿ ಮಂಡಿಸಲಾದ ಸಂಪ್ರಬಂಧವನ್ನು ಕಳುಹಿಸಿದ್ದರೂ, ಅದು ಇತಿಹಾಸ ದರ್ಶನ ೨೪ರಲ್ಲಿ ಪ್ರಕಟವಾಗದಿರಲು ಕಾರಣವೇನು ಎಂಬ ಡಾ॥ ಟಿ.ಮುರಿಗೇಶಿ ಅವರ ಪ್ರಶ್ನೆಗೆ ಉತ್ತರಿಸಿದ ಪ್ರಧಾನ ಕಾರ್ಯದರ್ಶಿ ಡಾ॥ ಎಚ್.ಎಸ್. ಗೋಪಾಲ ರಾವ್ ಅವರು ಯಾವ ಉದ್ದೇಶವೂ ಇಲ್ಲದೆ ಆಗಿರುವ ಅಚಾತುರ್ಯಕ್ಕೆ ಕ್ಷಮೆ ಕೇಳಿದರು.

೫. ಅಕಾದೆಮಿಯ ಕಚೇರಿಯನ್ನು ವಾರಕ್ಕೆ ಮೂರು ದಿನವಾದರೂ ತೆರೆಯಬೇಕೆಂಬ ತುಮಕೂರಿನ ಡಾ॥ ಬಿ. ನಂಜುಂಡಸ್ವಾಮಿ ಅವರ ಮನವಿಗೆ ಪ್ರತಿಕ್ರಿಯಿಸಿದ ಅಧ್ಯಕ್ಷರಾದ ಡಾ॥ ಸೂರ್ಯನಾಥ ಕಾಮತ್ ವೇತನ ಅಥವಾ ಯಾವುದೇ ತೆರನಾದ ಗೌರವ ಧನವನ್ನೂ ಪಡೆಯದೆ, ಕೇವಲ ಸ್ವಯಂ ಆಸಕ್ತಿಯಿಂದ ಕಾರ್ಯ ನಿರ್ವಹಿಸುತ್ತಿರುವ ಯಾರಿಗೂ ವಾರಕ್ಕೆ ಮೂರು ದಿನ ಬರಲು ಒತ್ತಾಯಿಸಲು ಸಾಧ್ಯವಿಲ್ಲ ಮತ್ತು ಬೆಂಗಳೂರಿನ ಸಾರಿಗೆ ಸೌಲಭ್ಯದ ಅವ್ಯವಸ್ಥೆಯಲ್ಲಿ ಇದು ಅಸಾಧು ಮತ್ತು ಅಸಾಧ್ಯ ಎಂದು ಮನವರಿಕೆ ಮಾಡಿದರು.

೬. ಕರ್ನಾಟಕದ ಕಾಲೇಜುಗಳಲ್ಲಿ ಉಪನ್ಯಾಸಕ ಹುದ್ದೆಗಳಿಗೆ ಹೊರ ರಾಜ್ಯಗಳ ಕೆಲವು ಸಂಸ್ಥೆಗಳಿಂದ ಎಂ.ಫಿಲ್ ಪದವಿ ಪಡೆದವರಿಗೆ ಆದ್ಯತೆ ದೊರೆಯುತ್ತಿರುವುದರಿಂದ, ಸ್ಥಳೀಯ ಅರ್ಹ ಅಭ್ಯರ್ಥಿಗಳಿಗೆ ಆಗುತ್ತಿರುವ ಅನ್ಯಾಯವನ್ನು ತಪ್ಪಿಸಲು ಕರ್ನಾಟಕ ಇತಿಹಾಸ ಅಕಾದೆಮಿಯು ಮುಂದಾಗಬೇಕೆಂಬ ಶಂಭುಲಿಂಗ ಶಿರೇಶಿ ಅವರ ಮನವಿಗೆ ಉತ್ತರಿಸಿದ ಡಾ॥ ಸೂರ್ಯನಾಥ ಕಾಮತ್ ನೇಮಕಾತಿಯ ವಿಷಯದಲ್ಲಿ ನ್ಯಾಯಾಂಗದ ನಿರ್ಬಂಧಗಳ ಕಾರಣ ಅಕಾದೆಮಿಯು ಯಾವುದೇ ಸೂಚನೆಯನ್ನೂ ಕೊಡಲು ಸಾಧ್ಯವಿಲ್ಲ ಎಂದು ಮನವರಿಕೆ ಮಾಡಿದರು. ಅದನ್ನು ಡಾ॥ ಹೆಚ್. ಚಂದ್ರಶೇಖರ್ ಸಮರ್ಥಿಸಿದರು.

೭ ಇತಿಹಾಸ ದರ್ಶನದ ಮುದ್ರಣಕ್ಕೆ ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ (ಐ.ಸಿ.ಹೆಚ್.ಆರ್.) ನ ಆರ್ಥಿಕ ನೆರವು ಪಡೆಯಬಹುದೆಂಬ ಡಾ॥ ಟಿ.ಪಿ. ನಾಗರಾಜ್ ಅವರ ಸೂಚನೆಗೆ ಪ್ರತಿಕ್ರಿಯಿಸಿದ ಡಾ॥ ಸೂರ್ಯನಾಥ ಕಾಮತ್, ಆರ್ಥಿಕ ನೆರವಿಗೆ ಯಾವುದೇ ಸರ್ಕಾರ ಮತ್ತು ಅಧಿಕಾರಶಾಹಿಯ ಬೆನ್ನುಹತ್ತುವುದು ಕಷ್ಟ ಎಂದು ತಿಳಿಸಿ, ಈಗಿನಂತೆ ಇನ್ನು ಮುಂದೆಯೂ ಅಕಾದೆಮಿ ತನ್ನ ಕಾರ್ಯ ಚಟುವಟಿಕೆಗಳನ್ನು ಮುಂದುವರಿಸುವ ಆಶಾಭಾವನೆಯನ್ನು ವ್ಯಕ್ತಪಡಿಸಿದರು.

ಮುಂದಿನ ೨೪ನೆಯ ವಾರ್ಷಿಕ ಸಮ್ಮೇಳನ

ಸರ್ವ ಸದಸ್ಯರ ಸಭೆಯಲ್ಲಿ ಅಕಾದೆಮಿಯ ಮುಂದಿನ ಅಂದರೆ, ೨೪ನೆಯ ವಾರ್ಷಿಕ ಸಮ್ಮೇಳನಕ್ಕೆ ಅಧಿಕೃತವಾಗಿ ಎಲ್ಲಿಂದಲೂ ಆಹ್ವಾನ ಬರದ ಕಾರಣ, ಮುಂದಿನ ದಿನಗಳಲ್ಲಿ ಆ ಬಗ್ಗೆ ಕಾರ್ಯಕಾರಿ ಸಮಿತಿಯು ಸೂಕ್ತ ನಿರ್ಧಾರ ಮಾಡುತ್ತದೆ ಎಂದು ಅಧ್ಯಕ್ಷರಾದ ಡಾ॥ ಸೂರ್ಯನಾಥ ಕಾಮತ್ ತಿಳಿಸಿದರು.

ಅಧ್ಯಕ್ಷರ ಭಾಷಣ

ಅಕಾದೆಮಿಯ ಬೆಂಗಳೂರು ಘಟಕವು ತರುಣ ಸಂಶೋಧಕರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಬೆಂಗಳೂರು ಕಟ್ಟಿದವರು ಮಾಲಿಕೆಯಲ್ಲಿ ಕಾಲೇಜುಗಳಲ್ಲಿ ಉಪನ್ಯಾಸ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದನ್ನೂ, ಮೈಸೂರು ಘಟಕವು ಪ್ರತಿ ತಿಂಗಳೂ ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿರುವುದನ್ನೂ ಸದಸ್ಯರ ಗಮನಕ್ಕೆ ತಂದು ಆಸಕ್ತರು ತಮ್ಮ ತಮ್ಮ ಊರುಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅಕಾದೆಮಿಯ ಉದ್ದೇಶಗಳನ್ನು ಸಫಲಗೊಳಿಸಬೇಕು ಎಂದು ಮನವಿ ಮಾಡಿದರು. ಎಲ್ಲ ಸದಸ್ಯರ ಸಹಕಾರದಿಂದ ಬೆಳೆದಿರುವ ಅಕಾದೆಮಿಯು ಮುಂದೆಯೂ ಹಾಗೆಯೇ ಬೆಳೆಯಬೇಕೆಂದು ಮನವಿ ಮಾಡಿದರು.

ಕೃತಜ್ಞತೆಗಳು

ಅಕಾದೆಮಿಯ ೨೩ನೆಯ ವಾರ್ಷಿಕ ಸಮ್ಮೇಳನಕ್ಕೆ ಆಶ್ರಯ ನೀಡಿ, ಎಲ್ಲ ಸದಸ್ಯರಿಗೂ ಸಂತೋಷವಾಗುವಂತೆ ಅಕಾದೆಮಿಯ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿಕೊಟ್ಟ, ಬಾಳೆಹೊನ್ನೂರಿನ ಶ್ರೀಮಠ ಮತ್ತು ವಿದ್ಯಾ ಸಂಸ್ಥೆ ಹಾಗೂ ಕಾರ್ಯಕರ್ತರಿಗೆ ಕೃತಜ್ಞತೆಗಳನ್ನು ಸಲ್ಲಿಸಿದ ಅಕಾದೆಮಿಯ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಡಾ॥ ಪಿ.ವಿ. ಕೃಷ್ಣಮೂರ್ತಿ ಕಾರ್ಯಕ್ರಮಗಳ ಯಶಸ್ಸಿಗೆ ಸಹಕರಿಸಿದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸಿದರು.

ಕಾರ್ಯಕಾರಿ ಸಮಿತಿ ಸಭೆಗಳು

೨೦೦೯ನೆಯ ಸಾಲಿನಲ್ಲಿ ಅಕಾದೆಮಿಯ ಕಾರ್ಯಕಾರೀ ಸಮಿತಿಯ ಸಭೆಯು ಒಟ್ಟು ಮೂರು ಬಾರಿ (೨೪-೩-೨೦೦೯, ೭-೭-೨೦೦೯ ಮತ್ತು, ೧೫-೯-೨೦೦೯,) ನಡೆದಿದೆ. ಸದಸ್ಯರು ಖುದ್ದು ಹಾಜರಿದ್ದು, ಅಥವಾ ಪತ್ರಮುಖೇನ ಅಥವಾ ದೂರವಾಣಿಯ ಮೂಲಕ ಸೂಚನೆಗಳನ್ನು ನೀಡಿ, ಅಕಾದೆಮಿಯ ಯಶಸ್ಸಿಗೆ ಸಹಕರಿಸುತ್ತಿದ್ದಾರೆ.

ಸದಸ್ಯಬಲ

ಈ ಸಮ್ಮೇಳನದ ಆರಂಭದ ವೇಳೆಗೆ ಕರ್ನಾಟಕ ಇತಿಹಾಸ ಅಕಾದೆಮಿಯ ಸದಸ್ಯತ್ವ ಬಲ ಈ ಕೆಳಕಂಡಂತಿದೆ.

ಆಜೀವ	ಸಾಮಾನ್ಯ	ಸಂಸ್ಥೆ	ಒಟ್ಟು
೧೪೮೫	೨	೪೯	೧೫೩೬

ಅಕಾದೆಮಿಯ ಘಟಕಗಳು

ಡಾ॥ ಜಯಮ್ಮ ಕರಿಯಣ್ಣ, ಅವರ ಅಧ್ಯಕ್ಷತೆಯಲ್ಲಿ ಬೆಂಗಳೂರು ಘಟಕವು ಕಾರ್ಯ ನಿರ್ವಹಿಸುತ್ತಿದ್ದು, ಅದು ಪ್ರತಿ ವರ್ಷದಂತೆ ಈ ವರ್ಷವೂ ಬೆಂಗಳೂರು ನಗರದ ಪ್ರೌಢಶಾಲೆಗಳು, ಪದವಿ ಪೂರ್ವ ಮತ್ತು ಪದವಿ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಪ್ರಬಂಧ ಮತ್ತು ಭಾಷಣ ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನಗಳನ್ನು ನೀಡಿ ಪ್ರೋತ್ಸಾಹಿಸುತ್ತಿದೆ.

ಈ ಸ್ಪರ್ಧೆಗಳಿಗಾಗಿ ಡಾ॥ ಜಿ.ಎಸ್. ದೀಕ್ಷಿತ್, ಡಾ॥ ಸೂರ್ಯನಾಥ ಕಾಮತ್, ಶ್ರೀ ಅಂಗದ್, ಶ್ರೀಮತಿ ಎ.ವಿ.ವರಮಹಾಲಕ್ಷ್ಮಿ, ಶ್ರೀ ಬಿ. ರಾಮಣ್ಣ ಮತ್ತು ಶ್ರೀಮತಿ ಇಂದಿರಾ ಅವರ ಹೆಸರಿನಲ್ಲಿ ಪರ್ಯಾಯ ಪಾರಿತೋಷಕಗಳನ್ನು ನೀಡಲಾಗುತ್ತಿದೆ. ಶ್ರೀ ದಯಾನಂದ ಸಾಗರ್ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಶ್ರೀ ಗಾಳಿಸ್ವಾಮಿ ಅವರು ಶ್ರೀ ಅಂಗದ್ ಸ್ಮಾರಕ ಪರ್ಯಾಯ ಪಾರಿತೋಷಕದ ಜೊತೆಗೆ ಎಲ್ಲ ಸ್ಪರ್ಧೆಗಳ ಬಹುಮಾನ ವಿಜೇತರಿಗೆ ನಗದು ಬಹುಮಾನಗಳನ್ನು ಪ್ರಾಯೋಜಿಸಿ, ಸಹಕರಿಸುತ್ತಿದ್ದಾರೆ.

ಹೊಸಪೇಟೆ ತಾಲ್ಲೂಕು ಘಟಕವು ಡಾ॥ ಕೆ.ಎಂ. ಸುರೇಶ್, ಡಾ॥ ಎಂ. ಕೊಟ್ರೇಶ್, ಡಾ॥ ಟಿ. ಮಂಜುನಾಥ್, ಡಾ॥ ಕೆ. ರವೀಂದ್ರನಾಥ್ ಮತ್ತು ಇತರ ಸ್ನೇಹಿತರ ಜೊತೆಗೂಡಿ, ಬೇರೆ ಬೇರೆ ಸ್ಥಳಗಳಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹಗಳನ್ನು ನಡೆಸುತ್ತಾ ಕ್ರಿಯಾಶೀಲವಾಗಿದೆ.

ಉಡುಪಿ ಜಿಲ್ಲಾ ಘಟಕವು ಅನೇಕ ಸ್ಥಳಗಳಲ್ಲಿ, ವಿಶೇಷವಾಗಿ, ಶಾಲಾ ಕಾಲೇಜುಗಳಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಗಳನ್ನು ಆಯೋಜಿಸಿ, ಐತಿಹಾಸಿಕ ಪ್ರಜ್ಞೆಯನ್ನು ಜಾಗೃತಗೊಳಿಸುವ ಕೆಲಸವನ್ನು ಘಟಕವು ಮಾಡುತ್ತಿದೆ.

ಶಿವಮೊಗ್ಗದ ಬೆಕ್ಕಿನ ಕಲ್ಮಠದ ಪೂಜ್ಯ ಸ್ವಾಮೀಜಿಯವರ ಪೋಷಣೆಯಲ್ಲಿ, ಮಾಜಿ ಶಾಸಕರಾದ ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ ಅವರ ಅಧ್ಯಕ್ಷತೆ, ಶ್ರೀ ಜಯದೇವಪ್ಪ ಜೈನಕೇರಿ ಅವರ ಪ್ರಧಾನ ಕಾರ್ಯದರ್ಶಿತ್ವ ಹಾಗೂ ಡಾ॥ ಎಸ್.ಜಿ. ಸಾಮಕ್, ಡಾ॥ ಬಿ. ಜಗದೀಶ, ಡಾ॥ ಜಿ.ವಿ. ಕಲ್ಲಾಪುರ ಡಾ॥ ಕೆ.ಜಿ. ವೆಂಕಟೇಶ ಜೋಯಿಸ್ ಮತ್ತು ಕೆಳದಿ ಗುಂಡಾ ಜೋಯಿಸ್ ಅವರ ಸಹಭಾಗಿತ್ವದಲ್ಲಿ ಶಿವಮೊಗ್ಗ ಘಟಕವು ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಗಳ ಜೊತೆಗೆ ಇನ್ನೂ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ.

ಮೈಸೂರು ಘಟಕವು ಮಂಡ್ಯ ಜಿಲ್ಲೆಯನ್ನೂ ಒಳಗೊಂಡು ಕಾರ್ಯಾರಂಭ ಮಾಡಿದೆ. ಪ್ರೊ॥ ಚಂದ್ರರಾಜೇ ಅರಸ್ ಅವರ ಗೌರವಾಧ್ಯಕ್ಷತೆಯಲ್ಲಿ, ಡಾ॥ ಹೆಚ್.ಎಸ್. ಉಷಾರಾಣಿ ಅಧ್ಯಕ್ಷರಾಗಿ, ಶ್ರೀ ತೈಲೂರು ವೆಂಕಟಕೃಷ್ಣ, ಡಾ॥ ಬಿ.ಪಿ.

ಇಂದಿರ, ಡಾ॥ ಎಸ್. ಸದಾಶಿವ ಉಪಾಧ್ಯಕ್ಷರಾಗಿ, ಡಾ॥ ಬಿ.ವಿ. ಸುಧಾಮಣಿ ಕಾರ್ಯದರ್ಶಿಯಾಗಿ, ಶ್ರೀ ಎಚ್.ಡಿ. ಹರೀಶ್, ಪ್ರೊ॥ ನಯೀಂ ಉರ್ ರೆಹಮಾನ್ ಅವರು ಸಹ ಕಾರ್ಯದರ್ಶಿಗಳಾಗಿ ಮತ್ತು ಡಾ॥ ಬಿ.ಎಸ್. ಸುಭದ್ರ ಖಜಾಂಚಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮೈಸೂರು ಜಿಲ್ಲಾ ಘಟಕವು ಮಾಸಿಕ ಉಪನ್ಯಾಸಗಳನ್ನು ಏರ್ಪಡಿಸುವುದರ ಜೊತೆಗೆ ಐತಿಹಾಸಿಕ ಸ್ಥಳಗಳಿಗೆ ಪ್ರವಾಸಗಳನ್ನು ಹಮ್ಮಿಕೊಳ್ಳುತ್ತಿದೆ.

ಡಾ॥ಸ್ಮಿತಾ ಸುರೇಬಾನಕರ, ಡಾ॥ ಭಾರತಿ, ಶ್ರೀ ಬಿ.ಆಯ್. ಚಿನಗೋಡಿ ಡಾ॥ ಎಚ್.ಜಿ. ಕೋಲಕಾರ, ಡಾ॥ ಜಿ.ಆರ್. ಹಂದೂರ, ಶ್ರೀ ಮಂಜುನಾಥ ಹದ್ಲಿ, ಅವರ ನೇತೃತ್ವ ಮತ್ತು ಚಚಡಿಯ ಸರದಾರ ವ್ಹಿ.ಜಿ. ದೇಸಾಯಿ ಫೌಂಡೇಶನ್‌ನ ಅಧ್ಯಕ್ಷರಾದ ಶ್ರೀ ನಾಗರಾಜ ಈಶಪ್ರಭುನಾಯಕ ದೇಸಾಯಿ ಅವರ ಸಹಕಾರದೊಂದಿಗೆ ಬೆಳಗಾವಿ ಜಿಲ್ಲಾ ಘಟಕವು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ.

ಕರ್ನಾಟಕ ಇತಿಹಾಸ ಅಕಾದೆಮಿಯ ೨೫ನೆಯ ವಾರ್ಷಿಕ ಸಮ್ಮೇಳನದಲ್ಲಿ ಬೆಂಗಳೂರಿನ ೧೦ ವಿದ್ವಾಂಸರು ಮಂಡಿಸಿದ್ದ ಕೆಲವು ಸಂಪ್ರಬಂಧಗಳನ್ನು ಬೆಂಗಳೂರಿನ ಆಕಾಶವಾಣಿ ಕೇಂದ್ರವು ಚಿತ್ತರಪಡಿಸಿತು.

ಕೃತಜ್ಞತೆಗಳು

ಕರ್ನಾಟಕ ಇತಿಹಾಸ ಅಕಾದೆಮಿಯನ್ನು ತನ್ನದೇ ಸಂಸ್ಥೆ ಎಂಬಂತೆ ಪರಿಗಣಿಸಿ ಸಹಕರಿಸುತ್ತಿರುವ ಕರ್ನಾಟಕ ರಾಜ್ಯ ಪುರಾತತ್ತ್ವ ಮತ್ತು ವಸ್ತು ಸಂಗ್ರಹಾಲಯ ನಿರ್ದೇಶನಾಲಯದ ನಿರ್ದೇಶಕರು, ಅಧಿಕಾರಿಗಳು ಹಾಗೂ ಸಿಬ್ಬಂದಿ, ಅಕಾದೆಮಿಯ ವಾರ್ಷಿಕ ಸಮ್ಮೇಳನದ ಸಂದರ್ಭ ವಸ್ತು ಪ್ರದರ್ಶನ ಏರ್ಪಡಿಸಿ ಸಹಕರಿಸುತ್ತಿರುವ ಕೇಂದ್ರ ಪುರಾತತ್ವ ಸರ್ವೇಕ್ಷಣ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ, ೨೦೧೮ನೆಯ ಸಾಲಿನ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭಕ್ಕೆ ಆಶ್ರಯ ನೀಡಿ ಸಹಕರಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಮತ್ತು ಸಿಬ್ಬಂದಿ, ಬೆಂಗಳೂರಿನ ಮಿಥಿಕ್ ಸೊಸೈಟಿ ಮತ್ತು ಬಿ.ಎಂ.ಶ್ರೀ ಪ್ರತಿಷ್ಠಾನ, ಶ್ರೀ ಬಿ.ಆರ್.ಆರ್. ಫ್ಯಾಮಿಲಿ ಟ್ರಸ್ಟ್ ಮತ್ತು ಲಕ್ಷ್ಮೀ ಮುದ್ರಣಾಲಯದ ಶ್ರೀ ಅಶೋಕ್‌ಕುಮಾರ್, ವಾಗ್ದೇವಿ ಮುದ್ರಣಾಲಯ, ಶ್ರೀ ದಯಾನಂದ ಸಾಗರ್ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಶ್ರೀ ಗಾಳಿಸ್ವಾಮಿ, ಡಾ॥ ಬಾ.ರಾ. ಗೋಪಾಲ್ ಪ್ರಶಸ್ತಿಗೆ ದತ್ತಿ ನೀಡಿರುವ ಡಾ॥ ಬಾ.ರಾ. ಗೋಪಾಲ್ ಕುಟುಂಬ ವರ್ಗ, ಸಮ್ಮೇಳನಾಧ್ಯಕ್ಷರ ಗೌರವಕ್ಕೆ ಪ್ರಾಯೋಜನೆ ಮಾಡಿರುವ ಶ್ರೀ ಕೆ. ಅಭಿಶಂಕರ್ ಕುಟುಂಬ ವರ್ಗ, ಇತಿಹಾಸ ದರ್ಶನದ ಮುದ್ರಣಕ್ಕೆ ಆಶೀರ್ವಾದಪೂರ್ವಕವಾಗಿ ಪ್ರತಿ ವರ್ಷದಂತೆ ಈ ವರ್ಷವೂ ರೂ. ೨೫,೦೦೦ (ಇಪ್ಪತ್ತೈದು ಸಾವಿರ) ನೆರವು ನೀಡಿರುವ ಬಾಳೆಹೊನ್ನೂರಿನ ಶ್ರೀಮದ್ರಂಭಾಪುರೀ ಮಹಾಸಂಸ್ಥಾನದ ಜ॥ಶ್ರೀ ಶ್ರೀ ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮೀಜಿ, ಅಕಾದೆಮಿಯ ೨೫ನೆಯ ವಾರ್ಷಿಕ ಸಮ್ಮೇಳನಕ್ಕೆ ಆಶ್ರಯ ನೀಡಿ ಸಮ್ಮೇಳನದ ಯಶಸ್ಸಿಗೆ ಕಾರಣರಾದ ಬಾಳೆಹೊನ್ನೂರಿನ ಶ್ರೀಮದ್ರಂಭಾಪುರೀ ಮಹಾಸಂಸ್ಥಾನದ ಜ॥ಶ್ರೀ ಶ್ರೀ ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮೀಜಿ, ಅವರಿಗೆ ಅಕಾದೆಮಿ ಆಭಾರಿಯಾಗಿದೆ.

ಕಾರ್ಯಕಾರಿ ಸಮಿತಿಯ ಅನುಮತಿ ಮೇರೆಗೆ

ಡಾ. ಸೂರ್ಯನಾಥ ಕಾಮತ್
ಅಧ್ಯಕ್ಷರು
ಎಂ.ಬಿ. ಪಾಟೀಲ್
ಕೋಶಾಧಿಕಾರಿ

ಡಾ ದೇವರಕೊಂಡಾರೆಡ್ಡಿ
ಡಾ. ಬಿ. ರಾಜಶೇಖರಪ್ಪ
ಉಪಾಧ್ಯಕ್ಷರು

ಡಾ. ಎಚ್.ಎಸ್. ಗೋಪಾಲರಾವ್
ಪ್ರಧಾನ ಕಾರ್ಯದರ್ಶಿ
ಡಾ. ಕೆ.ಬಿ. ಸುದರ್ಶನ್, ಡಾ. ಪಿ.ವಿ. ಕೃಷ್ಣಮೂರ್ತಿ
ಕಾರ್ಯದಶಿಗಳು

ACHARYA & CO.,
Chartered Accountants

'ANANTH KUNJ'
76, Vani Vilas Road
Banlgaore - 560 004.
Telephone: 26509606, 22422714
e-mail : acharya_co@rediffmail.com

AUDITOR'S REPORT

TO THE

THE MEMBERS OF KARNATAKA ITHIHASA ACADEMY (R)

We have audited the Balance Sheet of Karnataka Ithihasa Academy as at 31st December 2009 and Income and Expenditure Account for the year ended on that date annexed thereto and report that :

1. We have obtained all the information and explanations which to the best of our knowledge and belief were necessary for the purpose of our audit.

2. The Balance Sheet and the Income and Expenditure Account dealt with by this report are in agreement with the Books of Accounts.

3. In our opinion and to the best of our information and according to the explanation given to us the accounts give a true and fair view :

   i) In the case of Balance Sheet of the State of Affairs of the Academy as at 31st December 2009 and

   ii) In the case of Income and Expenditure Account of the Excess of Income over Expenditure for the year ended on that date.

For ACHARYA & CO.,
Chartered Accountants

(Sd)/-

BANGALORE
1st Sept. 2010.

(C.A. K.V. ACHARYA)
Partner
M.No. 13020

KARNATAKA ITHIHASA ACADEMY (REGD.) N.R. COLONY:

BANGALORE - 560 019.

ACHARYA & CO.
Chartered Accountants
BANGALORE - 560 004.

ABSTRACT OF RECEIPTS & PAYMENTS ACCOUNTS FOR THE YEAR ENDED 31ST DECEMBER 2009.

Previous Year	RECEIPTS		AMOUNT	Previous Year	PAYMENTS		AMOUNT
	To Opening Balance			250000/-	By FD with Pragathi Co-op Bank (Newly opened)		1,50,000/-
4178/-	Cash on hand	4600-50					
29262/-	Cash @ Syndicate Bank SB A/c. No.9765	37575-43		121680/-	By Printing of Ithihasa Darshana Vol. XXIV	116480/-	
1047/-	Cash at Pragathi Co-op. Bank SB A/c.No.6609	1169/-	43,344-93	49940/-	By Save Historical Heritage Week Celebration Expenses	49330/-	1,65,810/-
44250/-	To Life Membership Fees	53225/-					
300/-	To Annual Membership	300/-	53,525/-	27542/-	By Annual Conference and AGM Expenses		40,832/-
150000/-	To Fixed Deposit with Pragathi Co-op.Bank- Matured & withdrawn		1,25,000/-	20,000/-	Office Room Rent		24,000/-
				5,979/-	Office Stationery		2,439/-
157045/-	To Donations		64,425/-	8,557/-	By General & Special Conveyance:		13,340/-
75000/-	To Financial Assistance from State Govt.(For Printing of Ithihasa Darshana Vol. XXIV and save Historical Heritage Week Celebration Expenses)		75,000/-	--	Xerox & Typing Charges		187/-
				1,937/-	Postage and Courier		420/-
				5,618/-	By Audit Fees		5,515/-
	To Sale of Academy Publications:			465/-	By Bank Charges		45/-
	Members	1341/-					
7405/-	IBH Prakashana	40000/-	41,341/-	3,212/-	By Miscellaneous Payments		810/-
67652/-	To Interest on FD and SB A/c's		95,214-30				
2075/-	To Miscellaneous Receipts		1,320/-				

......2..

Previous Year	RECEIPTS	AMOUNT Rs.	Previous Year:	PAYMENTS		AMOUNT Rs.
60/-	To Dividend from Pragathi Co-op. Bank Ltd.,	95/-		By Closing Balance:		
			4600/-	By Cash on hand	8,908-50	
			37575/-	By Cash at Syndicate Bank SB A/c.No.9765	85,653-73	
			1169/-	By Cash at Pragathi Co-op. Bank SB A/c.No.6609	1,305/-	95,867-23
538274/-	TOTAL Rs.	4,99,265/23	538274/-	TOTAL Rs.		4,99,265-23

Previous year's figures are re-grouped wherever necessary and are rounded off to the nearest rupee:

BANGALORE,
01-09-2010.

(PRESIDENT) (GEN. SECRETARY) (TREASURER)

For ACHARYA & CO.,
Chartered Accountants,

(C.A. K.V.ACHARYA)
Partner.

ACHARYA & CO.
Chartered Accountants
BANGALORE - 560 004.

KARNATAKA ITHIHASA ACADEMY (REGD.)

N.R. COLONY: BANGALORE-560 019.

INCOME AND EXPENDITURE ACCOUNT FOR THE YEAR ENDED 31ST DEC. 2009.

Previous Year	EXPENDITURE	AMOUNT Rs.	Previous year:	INCOME	AMOUNT Rs.
49940/-	To Save Historical Heritage Week Celebration Expenses	49,330/-	75000/-	By State Govt.Assistant for Publication of Karnataka Ithihasa Darshana Vol.XXIV and Save Historical Heritage Week Celebrations.	75,000/-
121680/-	To Printing of Ithihasa Darshana Vol.XXIV	1,16,480/-			
27542/-	To XXIV Annual conference and AGM Expenses	40,832/-	300/-	By Annual Membership Fees	300/-
			157045/-	By Donations	64,425/-
24000/-	To Rent (Per Sch)	24,000/-	7405/-	By Sale of Academy Publications(P.S.)	41,341/-
1937/-	To Postage & Telegram	420/-	67652/-	By Interest (P.S.)	95,214-30
5515/-	To Audit Fees	5,515/-	60/-	By Dividend (P.S.)	95/-
5979/-	To Printing & Stationery	2,626/-	2075/-	By Miscellaneous Receipts	1,320/-
8557/-	To Conveyance & Travelling Expenses	13,340/-			
465/-	To Bank Charges	45/-			
3212/-	To Miscellaneous Expenses	810/-			
277/-	To Depreciation	250/-			
60433/-	To Excess of Income over-Expenditure for the year:	24,047-30			
309537/-	TOTAL Rs.	2,77,695-30	309537/-		2,77,695-30

Previous year's figures are re-grouped wherever necessary and are rounded off to the nearest rupee:

For ACHARYA & CO.,
Chartered Accountants,

BANGALORE,
01-09-2010.

(PRESIDENT) (GEN. SECRETARY) (TREASURER)

(C.A. K.V.ACHARYA)
Partner.

KARNATAKA ITHIHASA ACADEMY: BANGALORE- 560 019.

Schedules to Income and Expenditure Account for the year ended 31st December 2009.

I. INTEREST RECEIVED:

a) Interest received on FD with Pragathi Co-op.Bank Ltd.,

	F.D. A/c. No.	F.D. Amount	Maturity Date	INTEREST From	INTEREST To	AMOUNT
1.	2427	25,000/-	31-10-09	01-11-08	30-10-09	3,189/-
2.	2949	2,40,000/-	07-02-10	07-02-09	07-11-09	25,200/-
3.	4962	1,00,000/-	27-11-11	--	--	--
4.	3341	1,00,000/-	25-03-10	26-12-08	25-09-09	6,000/-
5.	3557	1,00,000/-	14-10-09	15-10-08	14-10-09	8,500/-
6.	4110	1,20,000/-	30-11-11	01-06-08	30-11-09	18,900/-
7.	4647	50,000/-	24-02-11	24-02-09	24-11-09	4,311/-
8.	4512	2,50,000/-	11-11-11	11-11-08	11-11-09	27,500/-
						93,600/-

b) Interest on Bank SB A/c:

1) Syndicate Bank SB A/c.201/9765			
	31-03-09	745-52	
	29-09-09	827-78	1,573-30
ii) Pragathi Co-op.Bank Ltd., SB A/c.6609			41/-
			95,214-30

II. DIVIDEND RECEIVED: Pragathi Co-op.Bank Ltd.,		95-00
III. SALE OF ACADEMY PUBLICATION: 1) Karnataka Ithihasa Darshana:	1,341/-	
2) Karnataka Kaigannadi(IBH Prakashana)	40,000/-	41,341/-
IV. DETAILS OF RENT PAID:		
B.M.Sri Kala Bhavana, N.R.Colony,Bangalore (Rs. 2000 x 12)	24,000/-	24,000/-

KARNATAKA ITHIHASA ACADEMY (REGD.)

BANGALORE-560 019.

ACHARYA & CO.
Chartered Accountants
BANGALORE - 560 004.

BALANCE SHEET AS AT 31ST DECEMBER - 2009.

Previous Year	LIABILITIES		AMOUNT
98050/-	Endowment Fund		98,050/-
25207/-	Unutilised Grant (Per last B/S)		25,207/-
	Life Membership Fees (Per Last B/S)	5,64,608/-	
564608/-	ADD: Collected during the year:	53,225/-	6,17,833/-
	Excess of Income over Expenditure	1,90,460-40	
190460/-	ADD: Excess of Income over Expenditure for the year:	24,047-30	2,14,507-70
5515/-	Outstanding Liabilities for Expenses (Per Sch)		5,515/-
883840/-	TOTAL Rs.		9,61,112-70

Previous year	ASSETS		AMOUNT
2495/-	Furniture & Fixture	2495-47	
	LESS: Depreciation @ 10%	250/-	2,245-47
1000/-	Investment in Pragathi Co-op.Bank Ltd.,(10 Shares at Rs.100/- each)		1,000/-
835000/-	F.D. with Pragathi Co-op. Bank Ltd., (Per Sch)		8,60,000/-
2000/-	Rental Deposits (Per Sch)		2,000/-
	CASH & BANK BALANCES:		
4600/-	Cash on hand:	8908-50	
	CASH AT A BANKS:		
37576/-	i) Syndicate Bank SB A/c. No.201/9765	85653-73	
1169/-	ii) Pragathi Co-op.Bank Ltd., SB A/c.No.6609	1305/-	95,867-23
883840/-	TOTAL Rs.		9,61,112-70

Previous years Figures are regrouped wherever necessary and are rounded off to the nearest rupee.

For ACHARYA & CO.,
Chartered Accountants,

BANGALORE,
01-09-2010.

(PRESIDENT) (GEN. SECRETARY) (TREASURER)

(C.A. K.V.ACHARYA)
Partner.

KARNATAKA ITHIHASA ACADEMY: BANGALORE - 560 019.

SCHEDULES TO BALANCE SHEET AS AT 31ST DECEMBER 2009.

I. FIXED DEPOSIT WITH PRAGATHI CO-OP. BANK LTD.,

As per Last B/S				8,35,000/-
LESS: Matured during the year:				
Date	A/c.No.	Amount		
14-10-09	3557	1,00,000/-		
31-10-09	2427	25,000/-		1,25,000/-
				7,10,000/-
ADD: Deposit made during the year				
Date	A/c.No.	Amount		
28-02-09	4647	50,000/-		
27-11-09	4962	1,00,000/-		1,50,000/-
			TOTAL Rs.	8,60,000/-

II. OUTSTANDING LIABILITIES FOR EXPENSES:

1) Audit Fees including Service Tax for 2009	5,515/-	5,515/-

III. RENTAL DEPOSIT:

M/S B.M.Sri Memorial Foundation, B.M.Sri Kala Bhavan, 3rd Main, N.R.Colony, BANGALORE-19.	2,000/-

ಅಂದಾಜು ಆಯ-ವ್ಯಯ ಪತ್ರ - ೨೦೧೦

ಕ್ರ.ಸಂ.	ನಿರೀಕ್ಷಿತ ಆದಾಯ	ರೂ.	ಅಂದಾಜು ಖರ್ಚು	ರೂ.
೧.	ಆಜೀವ ಸದಸ್ಯತ್ವ		ಸರ್ವ ಸದಸ್ಯರ ಸಭೆ, ವಾರ್ಷಿಕ	
	ವ್ಯಕ್ತಿಗಳು	೩೦,೦೦೦	ಸಮ್ಮೇಳನ ಪುದುವಟ್ಟು ನಿರ್ವಹಣೆ	
	ಸಂಸ್ಥೆಗಳು	೫,೦೦೦	ಇತ್ಯಾದಿ	೫೦,೦೦೦
	ವಾರ್ಷಿಕ ಸದಸ್ಯತ್ವ	೧,೦೦೦		
	ಸದಸ್ಯತ್ವದ ಬಾಕಿ ಹಣ	೪,೦೦೦	ಇತಿಹಾಸ ದರ್ಶನ (೨೫) ಮುದ್ರಣ	೧,೫೦,೦೦೦
೨.	ದೇಣಿಗೆ ಸದಸ್ಯರಿಂದ	೧೦,೦೦೦	ಇತರೇ ಸಮಾರಂಭಗಳು ಮತ್ತು	
	[ಇತಿಹಾಸ ದರ್ಶನ ಸಂಚಿಕೆ		ಮುದ್ರಣ ವೆಚ್ಚ	೫,೦೦೦
	೧೮ ರಿಂದ ೨೫ ಸೇರಿದಂತೆ]			
೩.	**ಆರ್ಥಿಕ ನೆರವು (ಸರ್ಕಾರದಿಂದ)**		ಲೇಖನ ಸಾಮಗ್ರಿ, ಅಂಚೆ, ಕೋರಿಯರ್	
	ರಾಜ್ಯ ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ		ಜೆರಾಕ್ಸ್ ಇತ್ಯಾದಿ ಸೇರಿದಂತೆ	೩,೦೦೦
	ನಿರ್ದೇಶನಾಲಯ			
	ಪರಂಪರೆ ಉಳಿಸಿ ಸಪ್ತಾಹ		ಪರಂಪರೆ ಉಳಿಸಿ ಸಪ್ತಾಹ (೨೦೦೮)	೭೦,೦೦೦
	ಇ. ದ. ಮುದ್ರಣ ಸಂಚಿಕೆ ೨೪	೧,೦೦,೦೦೦		
	ಶ್ರೀಮದ್ರಂಭಾಪುರಿ ವೀರಸಿಂಹಾಸನ		ಕಛೇರಿ ಬಾಡಿಗೆ	
	ಪೀಠದ ಜಗದ್ಗುರುಗಳಿಂದ		ನಿರ್ವಹಣಾ ವೆಚ್ಚ	೨೪,೦೦೦
	ವಿಶೇಷ ದೇಣಿಗೆ	೨೫,೦೦೦		
೪.	**ಠೇವಣಿಗಳ ಮೇಲಿನ ಬಡ್ಡಿ**	೭೫,೦೦೦	ಕಛೇರಿ ಸಹಾಯಕರಿಗೆ	
೫.	**ಪ್ರಕಟಣೆಗಳ ಮಾರಾಟ**		(ಗೌರವ ಸಂಭಾವನೆ)	೧೨,೦೦೦
	ಐ.ಬಿ.ಹೆಚ್. ಪ್ರಕಾಶನದಿಂದ			
	ಬಂದಿರುವುದು	೩೮,೨೫೦	ಇತರೆ ಸಂಚಾರ, ಪ್ರವಾಸ	೪,೦೦೦
			ಲೆಕ್ಕ ತಪಾಸಣಾ ಖರ್ಚು (೨೦೧೦)	೬,೦೦೦
			ಇತರೆ ಖರ್ಚುಗಳು	೫,೦೦೦
೬.	**ಇತರೇ ಆದಾಯ**	೧,೨೫೦	ಖೋತಾ ಹಣ	೩೯,೫೦೦
		೨,೮೯,೫೦೦		೨,೮೯,೫೦೦

ಎಂ.ಬಿ. ಪಾಟೀಲ್
ಕೋಶಾಧ್ಯಕ್ಷರು

೨೦೦೮ರ ದಾನಿಗಳು

೧.	ಶಾಂತಾರಾಮ್ ಪ್ರಭು, ಬೆಂಗಳೂರು	ರೂ.	೨೭೦೦/-
೨.	ಟಿ.ಹೆಚ್.ಎಂ. ಬಸವರಾಜ್, ಬಳ್ಳಾರಿ	ರೂ.	೧೦೦೦/-
೩.	ಇನ್ಫೊಸಿಸ್ ಫೌಂಡೇಶನ್, ಬೆಂಗಳೂರು	ರೂ.	೧,೦೦,೦೦೦/-
೪.	ಜಗದ್ಗುರು ರೇಣುಕಾಚಾರ್ಯ ಶಿಕ್ಷಣ ಪ್ರತಿಷ್ಠಾನ	ರೂ.	೨೫,೦೦೦/-
೫.	ಶ್ರೀಮತಿ ವರಲಕ್ಷ್ಮಿ ಅಶೋಕ್‌ಕುಮಾರ್ ಕುಟುಂಬ	ರೂ.	೧೦,೦೦೦/-
೬	ಗಾಳಿಸ್ವಾಮಿ	ರೂ.	೩,೩೦೦/-
	ಒಟ್ಟು	ರೂ.	೧,೪೨,೦೦೦

೨೦೦೯ರ ದಾನಿಗಳು

೧.	ಶಿವಪ್ಪ ಎನ್. ನೀರಲಗಿ, ಬೆಂಗಳೂರು	ರೂ.	೫,೦೦೦/-
೨.	ಜಗದ್ಗುರು ರಂಭಾಪುರಿ ಸಂಸ್ಥಾನ ಮಠ, ಬಾಳೇಹೊನ್ನೂರು	ರೂ.	೨೫,೦೦೦/-
೩.	ಶ್ರೀಮತಿ ವರಲಕ್ಷ್ಮಿ ಅಶೋಕ್‌ಕುಮಾರ್ ಕುಟುಂಬ	ರೂ.	೮,೦೦೦/-
೪.	ಗಾಳಿಸ್ವಾಮಿ	ರೂ.	೩,೫೦೦/-
೫.	ಟಿ.ಹೆಚ್.ಎಂ. ಬಸವರಾಜ್, ಬಳ್ಳಾರಿ	ರೂ.	೧,೦೦೦/-
೬	ಶೀಲಾಕಾಂತ ಪತ್ತಾರ, ಬಾದಾಮಿ	ರೂ.	೧,೦೦೦/-
	ಒಟ್ಟು	ರೂ.	೪೩,೫೦೦/-


ಕರ್ನಾಟಕ ಇತಿಹಾಸ ಅಕಾದೆಮಿ (ರಿ)
ಐತಿಹಾಸಿಕ ಪರಂಪರೆ ಉಳಿಸಿ
ಸಪ್ತಾಹ
ಇತಿಹಾಸ ಸಂಶೋಧನೆ
ನಮ್ಮ ತಿಳಿವಿನ ವರ್ಧನೆ
ಕೋಟೆ ಕೊತ್ತಲದ ಕಲ್ಲು ಕಿತ್ತರೆ
ಪ್ರಾಚೀನ ಪರಂಪರೆಯ ಪಂಚಾಂಗ ಕಿತ್ತಂತೆ
ಪ್ರಾಚೀನ ಇಗರ್ಜಿ ಮಸೀದಿ ಗುಡಿ
ನಮ್ಮ ಪರಂಪರೆಯ ಭವ್ಯ ಮುಡಿ
೨೦೦೯-೧೦
ನೆರವು : ಕರ್ನಾಟಕ ರಾಜ್ಯ ಪುರಾತತ್ವ ಇಲಾಖೆ